ಮೈಸೂರ ಗೆಜೆಟ್.

[ಸಂ. 4.] ಸರ್ಕಾರದಿಂದ ಪ್ರಾಯಿ[illegible] [ನಂ. 1.

ಬೆಂಗಳೂರು, ಗುರುವಾರ, ಜನವರಿ [illegible] 1909.

ಭಾಗಗಳನ್ನು ಪ್ರತ್ಯೇಕ [illegible] ...ಳಂತೆ ಆದ ನಿಬಂಧನ[illegible]

...ತ್ರ[illegible]ಮಗಳು, | 4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 4ನೆ ಜನವರಿ 1909.

ನಂ. 1[illegible]1—ಲೆ. ಕೌ. 1909ನೆ ಇಸವಿ ಜನವರಿ 8ನೆ ತಾರೀಖು ಶುಕ್ರವಾರ ಮಧ್ಯಾಹ್ನ 3 ಘಂಟೆಗೆ ಬೆಂಗಳೂರು ಅಠಾರಾ ಕಚೇರಿಯಲ್ಲಿ ಮೈಸೂರು ಸೀಮೆಯ ನ್ಯಾಯವಿಧಾಯಕ ಸಭೆಯು ಸೇರುವುದು.

ಹುಕುಂ ಬಮೋಜಿಬ್,

ಎಸ್. ಹಿರಿಯಣ್ಣಯ್ಯ,

ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ತಾರೀಖು 16ನೆ ಡಿಸೆಂಬರ್ 1908.

ನಂ. 5801—ಸ್ಯಾನಿಟರಿ 76-08-28, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ [illegible] ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ [illegible] ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ [illegible]ಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುವು.

ಸ್ಥಳ.			ತಾಲ್ಲೂಕು.
ಕಾಡಸೋಗೆ	...	...	[illegible]ಯಡು ಪೇ[illegible]
ಮೂಡಹಳ್ಳಿ	...	...	ಡಿಟ್ಟೋ
ಜಾವಗೆರೆ	...	...	ಹುಣಸೂರು.

ತಾರೀಖು 18ನೆ ಡಿಸೆಂಬರ 1908.

ನಂ. 5832—ಸ್ಯಾನಿಟೆರಿ 14—08—16, ಸಮಸ್ತ ಜನರ ತಿಳಿವಳಿಕೆಯು ... ಪಡಿಸುವದೇನಂದರೆ ಹಾಸನ ಡಿಸ್ಟ್ರಿಕ್ಟಿನಲ್ಲಿವ ಇದರಡಿ ನಮೂದಿಸಿರುವ ಪ್ರದೇಶಗಳು ... ಡಿಸೀಸೆಸ್ ರೆಗ್ಯು... ಎಂಬ ಸಾಂಕ್ರಾಮಿ... ಜಾಡ್ಯಗಳಿಗೆ ಸಂಬಂಧಿಸ್ಸಿ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ... ನಂಬರ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21-96 ಈ ನಂ... ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ... ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎ... ...ಪ್ಪ...

ಸ್ಥಳ				ತಾ...
ಚನ್ನರಾಯಪಟ್ಟಣ (ಹೊಲಗೇರಿ)				ಚನ್ನರಾ...
ಮಲ್ಲೇನಹಳ್ಳಿ		...	...	ಡಿಟೋ
ಚೆಲುವಗಾಲ	..	...	... ...	ಡಿಟೋ
ಜಕ್ಕನಹಳ್ಳಿ	...	...	...	ಅರಸೀಕೆರೆ
ಅಗ್ಗುಂದ	...ಸ್ಟೇಷ...	...	...	ಡಿಟೋ
[illegible]		...	...	ಹಾಸನ
[illegible]		...	...	ಡಿಟೋ
[illegible]		...	...	ಡಿಟೋ
[illegible]		...	...	ಡಿಟೋ
ತಗಡೂರು			...	ಡಿಟೋ
ಜೋಡಿ ಮುಟ್ಟಟ್ಟಿ	...		...	ಡಿಟೋ

ತಾರೀಖು 22ನೆ ಡಿಸೆಂಬರ 1908.

ನಂ. 5929—ವಿದ್ಯಾ. 7-08-2, ಬಾಲಿಕಾ ಪಾಠಶಾಲೆಗಳಿಗೆ ವಿಜಿಟರ್ಗಳ ಬೋರ್ಡುಗಳನ್ನು ಅಂದರೆ ಸದರಿ ಪಾ... ಗಳಿಗೆ ಆಗಾಗ್ಯೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ತಿಳಿದು ರಿಪೋರ್ಟು ಮಾಡುವುದಕ್ಕೋಸ್ಕರ ಒಂದು ಕಮಿಟಿಯನ್ನು ಏರ್ಪ... ಸತಕ್ಕ ವಿಷಯದಲ್ಲಿ 10357—ವಿದ್ಯಾ. 22-07-2ನೆ ನಂಬರು ಸರ್ಕಾರಿ ಹುಕುಂನಲ್ಲಿ ವಿಧಾಯಕವಾದ ನಿಬಂಧನೆ ಯಾ... ರತ್ತುಗಳಿಗನುಸಾರವಾಗಿ ಇದರಡಿ ಕಂಡ ದೊಡ್ಡಮನುಷ್ಯರುಗಳನ್ನು ಮೈಸೂರು ಮಹಾರಾಣಿಯವರ ಕಾಲೇಜಿನ ವಿಜಿಟರ್ಸ್ ಬೋರ್ಡನ್ನಾಗಿ ನೇಮಕ ಮಾಡಿರುತ್ತೆ.

1. ಮಿ॥ ಎಂ. ಕಾಂತರಾಜೆ ಅರಸಿನವರು, ಬಿ. ಎ., ಮೈಸೂರು ಡೆಪ್ಯುಟಿ ಕಮಿಷನರವರು.
2. ,, ಎ. ಮಹದೇವ ಶಾಸ್ತ್ರಿಗಳವರು, ಬಿ. ಎ., ಕ್ಯೂರೇಟರ್, ಮೈಸೂರು ಓರಿಯಂಟಲ್ ಲೈಬ್ರೇರಿ
3. ,, ಎ. ನರಸಿಹ್ಮಯ್ಯಂಗಾರ್‌ಯವರು, ರಾಯಿಬಹದ್ದೂರ್, ಹಿಜೂರ್ ದರ್ಬಾರ್ ಬಕ್ಷಿ, ಮೈಸೂರು.
4. ,, ಎಂ. ಸಿ. ರಂಗಯ್ಯಂಗಾರ್, ಬಿ. ಎ., ಯವರು ಅಡ್ವೋಕೇಟ, ಮೈಸೂರು
5. ,, ಪಂಡಿತ ಎಲ್. ಶ್ರೀನಿವಾಸಾಚಾರ್ಯರವರು, (ಓರಿಯಂಟಲ್ ಲೈಬ್ರೇರಿ)
6. ,, ಪಂಡಿತ ಚಾಮರಾಜನಗರ ರಾಮಶಾಸ್ತ್ರಿಗಳವರು, (ಸಂಸ್ಕೃತ ಕಾಲೇಜು ಮೈಸೂರು)

ತಾರೀಖು 22ನೆ ಡಿಸೆಂಬರ 1908.

ನಂ. 5947—ಮೆಡಿಕಲ್ 126—08—2, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಚಾರ್ಜಿನಲ್ಲಿರುವ ಮೆಡಿಕಲ್ ಆಫಿಸರ ಮತ್ತು ಸಿವಿಲ್ ಸರ್ಜನ ಮಿ॥ ಟ. ವಿ. ಆರ್ಮುಗಂ ಮೊದಲಿಯಾರ್ರವರಿಗೆ, ಮೈಸೂರು ಸಿವಿಲ್ ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, 1908ನೆ ಇಸವಿಯ ನವಂಬರ 25ನೆ ತಾರೀಖಿನ ಲಾಗಾಯಿತು ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮಿ॥ ಆರ್ಮುಗಂ ಮೊದಲಿಯಾರ್ರವರು ರಜಾವಿನಮೇಲೆ ಇರುವಾಗ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ವಿಕ್ಟೋರಿಯಾ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫಿಸರು ಮತ್ತು ಅಸಿಸ್ಟೆಂಟ್ ಸರ್ಜನ್ ಮಿ॥ ಸಿ. ಎ. ನಂಜಪ್ಪ, ಎಂ. ಆರ್. ಸಿ. ಎಸ್., ಎಲ್. ... ಸಿ. ಪಿ., ಯವರು ತಮ್ಮ ಕೆಲಸಕ್ಕೆ ಬಾಧಕಬಾರದಂತೆ, ವಿಕ್ಟೋರಿಯಾ ಆಸ್ಪತ್ರೆಯ ಚಾರ್ಜಿನ ಮೆಡಿಕಲ್ ಆಫಿಸರಾಗಿ ಕೆಲಸ ನೋಡತಕ್ಕದ್ದು.

ತಾರೀಖು 23ನೆ ಡಿಸೆಂಬರ 1908.

ನಂ. 5983-ಪರೀಕ್ಷೆ 8-08—6, 1908ರ ಇಸವಿ ನವಂಬರ ತಿಂಗಳಲ್ಲಿ ನಡೆದ ಮೈಸೂರು ಲೋಕಲ್ ಸರ್ವಿಸ್ ಸಿವಿಲ್ IIನೆ ಭಾಗದ ಪರೀಕ್ಷೆಯಲ್ಲಿ ಇದರಡಿ ಕಂಡವರು ತೇರ್ಗಡೆಯನ್ನು ಹೊಂದಿರುತ್ತಾರೆ :—

A ಪಟ್ಟಿ.

1ನೆ ತರಗತಿಯಲ್ಲಿ ತೇರ್ಗಡೆಯಾದವರು.

ಯೋಗ್ಯತೆ ಪ್ರಕಾರ ನಂ.	ರಿಜಿಸ್ಟರ್ ನಂಬರ.	ಹೆಸರು.	ವಿಳಾಸ.
1	723	ಶ್ರೀನಿವಾಸಯ್ಯಂಗಾರ, ಎ. ಬಿ. ...	ಕ್ಲಾರ್ಕ, ಮೈಸೂರು ಚೀಫ ಕೋರ್ಟ, ಬೆಂಗಳೂರು
2	266	ಕುಪ್ಪಸ್ವಾಮ್ಯಯ್ಯಂಗಾರ, ಸಿ. ಎಸ್.	ಅಮಲದಾರ, ಆನೇಕಲ್ಲು

2ನೆ ತರಗತಿಯಲ್ಲಿ ತೇರ್ಗಡೆಯಾದವರು.

ರಿಜಿಸ್ಟರ್ ನಂ.	ಹೆಸರು.	ವಿಳಾಸ.
54	ಭಾಷ್ಯಾಚಾರ, ಹಿರೆಮಗಳೂರು, ಪಿ. ...	ಕ್ಲಾರ್ಕ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯಟ್, ಬೆಂಗಳೂರು.
143	ಹೇಜ್, ಆಲ್ಫ್ರೆಡ್ ...	ಅಮಲ್ದಾರ, ಬೆಂಗಳೂರು ತಾಲ್ಲೂಕು.
236	ಕೃಷ್ಣರಾವ್, ಎಲ್. ...	ಡಿಸ್ಟ್ರಿಕ್ಟು ಪೋಲೀಸ ಸೂಪರಿಂಟೆಂಡೆಂಟ, ಬೆಂಗಳೂರು
245	ಕೃಷ್ಣಶಾಸ್ತ್ರಿ, ಬೆಂಗಳೂರು, ಚೆಪ್ಪಲ್ಲಿ ...	ಅಡ್ಮಿನಿಸ್ಟ್ರೇಟರ, ಶೃಂಗೇರಿ ಜಹಗೀರು, ಶೃಂಗೇರಿ
249	ಕೃಷ್ಣಸ್ವಾಮಿ ಅಯ್ಯರ, ಅಡವುನಕೋಟೆ	ಸಿ. ಎಸ್. ಗಂಗಾಧರಯ್ಯರ, ಪ್ಲೀಡರ, ಬಸವನಗುಡಿ ಬೆಂಗಳೂರು, ಪರಾಮರಿಕೆ.
278	ಲಕ್ಷ್ಮಣಶಾಸ್ತ್ರಿ, ಮುನಿಕೋಟೆ ...	ಪೋಲೀಸು ಇನ್ಸ್ಪೆಕ್ಟರ ಜನರಲರವರ ಹೆಡ್ ಕ್ವಾರ್ಟರು ಅಸಿಸ್ಟೆಂಟ, ಬೆಂಗಳೂರು.
292	ಲಿಂಗಣ್ಣಯ್ಯ, ಸಾಗರ ಕಾವಿ. ...	ಅಕೌಂಟೆಂಟ, ಎಕ್ಸೈಜು ಕಮಿಷನರ ಆಫೀಸು, ಬೆಂಗಳೂರ
	ಮಾಚಯ್ಯ, ಕೋದಂಡ ...	ಅಮಲ್ದಾರ, ಚಿತ್ರದುರ್ಗ
298	ಮಿರ್ಜಾ, ಎಂ. ಇಸ್ಮೇಲ್ ...	ಪ್ರೊಬೇಷನರಿ ಅಸಿಸ್ಟೆಂಟ ಕಮಿಷನರ, ಪ್ರೈವೇಟ ಸೆಕ್ರೆಟರಿಯವರ ಆಫೀಸು, ಮೈಸೂರು.
325		
334	ಮೂರ್ತಿರಾವ್, ನಾರಾಯಣ ...	ಕ್ಲಾರ್ಕ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯಟ್, ಬೆಂಗಳೂರು.
347	ನಂಜಪ್ಪ, ತಿಮ್ಮಸಂದ್ರ ...	ಆಕ್ಟಿಂಗ ಕ್ಲಾರ್ಕ, ರೆಸಿಡೆಂಟರವರ ಆಫೀಸು, ಬೆಂಗಳೂರು.
348	ನಂಜಪ್ಪಶೆಟ್ಟಿ, ಗಂಜಾಂ	ಮುಖ್ತ್ಯಾರ, ಮಂಡ್ಯ.
381	ನರಸಿಂಹಯ್ಯ, ಎಂ. ಎಲ್.	ಡೆಪ್ಯೂಟಿ ಮುನಷಿ, ಸಬ್ ಜಡ್ಜಿಯವರ ಕೋರ್ಟು, ಬೆಂಗಳೂರು
483	ರಾಮಚಂದ್ರಯ್ಯ, ಮೋಡೂರು	ಕಂಟ್ರಾಕ್ಟರ, ಬೇಲೂರು ಸುಂಕದಕಟ್ಟೆ.
697	ಶ್ರೀಕಂಠಯ್ಯ, ಎಳಂದೂರು, ಎ.	ಕ್ಲಾರ್ಕ, ಸಬ್ ಜಡ್ಜಿ ಕೋರ್ಟು, ಮೈಸೂರು.
703	ಶ್ರೀನಿವಾಸಾಚಾರ, ತಿರುಮಲೆ	ಅಪ್ರೆಂಟಿಸ್ ಕ್ಲಾರ್ಕ, ಮುನಸೀಫ ಕೋರ್ಟು, ಕೋಲಾರ.
712	ಶ್ರೀನಿವಾಸಯ್ಯಂಗಾರ, ಡಿಂಡಿಗಲ್ ...	ಪ್ರೊಬೇಷನರಿ ಅಸಿಸ್ಟೆಂಟ ಕಮಿಷನರ, ತುಮಕೂರು.
746	ಶ್ರೀನಿವಾಸರಾವ್, ದಾವಣಗೆರೆ ...	ಬಸವನಹಳ್ಳಿ, ಚಿಕ್ಕಮಗಳೂರು.
747	ಶ್ರೀನಿವಾಸರಾವ್, ದೇವನಹಳ್ಳಿ	ಸಬ್ ಅಸಿಸ್ಟೆಂಟ ಸೂಪರಿಂಟೆಂಡೆಂಟ, ಮೈಸೂರು ರೆವಿನ್ಯೂ ಸರ್ವೆ, ಬೆಂಗಳೂರು.
955	ವೆಂಕಟಸುಬ್ಬರಾವ್, ದೇವನಹಳ್ಳಿ ...	ಜೋಡಿದಾರ, ಕೋಟೆ, ದೇವನಹಳ್ಳಿ.

ಬಿ. ಪಟ್ಟಿ.

ಇದರಡಿ ನಮೂದು ಮಾಡಿರುವ ರಿಜಿಸ್ಟರ ನಂಬರುಗಳುಳ್ಳ ಪರೀಕ್ಷೀಯರು ಮೇಲ್ಕಂಡ ಪರೀಕ್ಷೆಯಲ್ಲಿ ತೇರ್ಗಡೆಯಾಗದವರಾಗಿಯೂ ಅಥವಾ ಗೈರ ಹಾಜರಾದವರಾಗಿಯೂ ಇರತಕ್ಕ ವಿವರ :—

a = ಸ್ಪೆಸಿಫಿಕ ರಿಲೀಫ ಆಕ್ಟು ಮತ್ತು ಲಾ ಆಫ ಮಾರ್ಟ್ಗೇಜ್.
b = ಸಿವಿಲ್ ಪ್ರೊಸೀಜರ ಕೋಡು ಮತ್ತು ಲಿಮಿಟೇಷನ ಆಕ್ಟು.
c = ಬಟ್ಟು ಸಂಖ್ಯೆಯಲ್ಲಿ ಕಮ್ಮಿ.

ತೇರ್ಗಡೆಯಾದವರು.						ಗೈರ ಹಾಜರಾದವರು.		
89	a b	437	a	590	a	131	504	612
255	c	500	a b	942	c	137	557	820
329	c	507	b	966	b	498	567	838
423	b	564	c					

ತಾರೀಖು 23ನೆ ಡಿಸೆಂಬರ್ 1908.

ನಂ. ಜ್ಯು. 1786—ಕೋರ್ಟ್ 196-08-2, ಸರ್ 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು 37ನೆ ಪ್ರಕರಣ ಮೇರಿಗೆ, ಕಡೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ॥ ಬಿ. ವೆಂಕೋಬರಾಯರವರಿಗೆ ಇದರಡಿ ಕಂಡ ಹೆಚ್ಚು ಅಧಿಕಾರಗಳನ್ನು ಕೊಟ್ಟು ಇರುತ್ತೆ:—

(1) ಒಳ್ಳೇ ನಡತೆಯಬಗ್ಗೇ ಜಾಮೀನು ಕೊಡಬೇಕೆಂದು ಹುಕುಂ ಮಾಡುವ ಅಧಿಕಾರ, ಪ್ರಕರಣ 110.

(2) ಸ್ಥಳಿಕ ಹೇಸಿಕೆಗಳ ವಿಷಯದಲ್ಲಿ ತಕ್ಕ ಹುಕುಮನ್ನು ಮಾಡತಕ್ಕ ಅಧಿಕಾರ.

(3) ಸ್ಥಳಿಕ ಅಧಿಕಾರ ಸರಹದ್ದಿನಲ್ಲಿ ಇದ್ದು ಸದರಿ ಅಧಿಕಾರದ ಸರಹದ್ದಿನ ಹೊರಗೆ ಬಂದು ತಕಸೀರನ್ನು ನಡೆಸಿದವನಿಗೆ ಪ್ರೋಸೆಸ್ಸು ಕೊಡತಕ್ಕ ಬಗ್ಗೆ ಅಧಿಕಾರ, ಪ್ರಕರಣ 186.

(4) ಫಿರ್ಯಾದು ಬರದೇನೆ ತಕಸೀರುಗಳನ್ನು ವಿಚಾರಣೆ ಮಾಡತಕ್ಕ ಬಗ್ಗೆ ಅಧಿಕಾರ, ಪ್ರಕರಣ 190.

(5) ಕಳುವಾಗಿರುತ್ತೆಂದು ಹೇಳುವದಕ್ಕೆ ಅಥವಾ ಅನುಮಾನಪಡುವದಕ್ಕೆ ಅರ್ಹವಾದ ಸ್ವತ್ತನ್ನು ಹರಾಜು ಮಾಡುವ ಅಧಿಕಾರ, ಪ್ರಕರಣ 524.

ತಾರೀಖು 26ನೆ ಡಿಸೆಂಬರ್ 1908.

ನಂ. ಜು. 1806—ಕೋರ್ಟ್ 111—08—4, ಮೈಸೂರು ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮಿ॥ ವಿ. ಎ. ರಾಜರತ್ನ ಮೊದಲಿಯಾರ್ರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ 1909ನೆ ಇಸವಿ ಜನವರಿ 4ನೆ ತಾರೀಖಿನ ಲಾಗಾಯಿತು 4 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

(2) ಮೇಲ್ಕಂಡ ರಜಾ ಕಾಲದಲ್ಲಿ ಚೀಫ್ ಕೋರ್ಟ್ ಡೆಪ್ಯುಟಿ ರಿಜಿಸ್ಟ್ರಾರ್ ಮಿ॥ ಬಿ. ಬಸವಾರಾಧ್ಯರು ತಮ್ಮ ಕೆಲಸದ ಜೊತೆಗೆ ರಿಜಿಸ್ಟ್ರಾರ್ರವರ ಚಾರ್ಜಿ ಕೆಲಸವನ್ನೂ ನಡೆಸತಕ್ಕದ್ದು.

ತಾರೀಖು 30ನೆ ಡಿಸೆಂಬರು 1908.

ನಂ. 6099—ಮ್ಯುನಿಸಿಪಲ್ 64-08-7, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ವೈಸ್ ಪ್ರೆಸಿಡೆಂಟ್ ಮಿ॥ ನಾಡಿಗ ಸುಬ್ಬರಾಯರವರಿಗೆ 1908ನೆ ನವಂಬರು 20 ತಾರೀಖಿನ ಲಾಗಾಯಿತು 15 ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ತಾರೀಖು 6ನೆ ಜನವರಿ 1909.

ನಂ. ಜು. 1894—ಕೋರ್ಟ್. 217-08-2, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಡ್ಯೂರು ಕೋಡು 12ನೆ ಪ್ರಕರಣಾನುಸಾರ, ಶಿವಮೊಗ್ಗ ಡಿಸ್ಟ್ರಿಕ್ಟು ಖಜಾನೆ ಅಸಿಸ್ಟೆಂಟ್ ಕಮಿಷನರು ಮತ್ತು 2ನೆ ಕ್ಲಾಸು ಮ್ಯಾಜಿಸ್ಟ್ರೇಟರಾದ ಮಿ॥ ಎ. ಮೃತ್ಯುಂಜಯ ಅಯ್ಯರವರನ್ನು ಫಸ್ಟ್ ಕ್ಲಾಸು ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿ ಇರುತ್ತೆ.

ತಾರೀಖು 6ನೆ ಜನವರಿ 1909.

ನಂ. ಜೆ. 1898—ಲೆಜಿಸ್, 1908ನೆ ಅಕ್ಟೋಬರು 16ರಲ್ಲಿ ಶ್ರೀಮನ್ ಮಹಾರಾಜಾ ಸಾಹೇಬ್ಬಹದುರವರ ಮಂಜೂರಾತಿಯನ್ನು ಪಡೆದ 1908ನೆ ಇಸವಿಯ 4ನೆ ನಂಬರು ಮೈಸೂರು ಗ್ರಾಮ ನೌಕರಿಗಳ ರೆಗ್ಯುಲೇಷನಿನ 1ನೆ ಪ್ರಕರಣದ (3)ನೆ ಒಳ ಪ್ರಕರಣವನ್ನನುಸರಿಸಿ ಶ್ರೀಮನ್ ಮಹಾರಾಜಾ ಸಾಹೇಬ್ಬಹದುರವರ ಸರ್ಕಾರದವರು ಸದರೀ ರೆಗ್ಯುಲೇಷನು 1909ನೆ ಜುಲೈ ಮೊದಲನೇ ತಾರೀಖಿನ ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದೆಂದು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 15ನೆ ಡಿಸೆಂಬರ್ 1908.

ನಂ. ರೆ. 3836—ಲ್ಯಾ. ರೆ. 164-08-4, ಅಸಿಸ್ಟೆಂಟ್ ಕಮಿಷನರ್ ಮಿ॥ ಬಿ. ವೆಂಕೋಬರಾವ್, ಬಿ. ಎ., ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟು ಬರುವ ಕ್ರಿಸ್ತಮಸ್ ರಜಾವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಪ್ಪಣೆ ಕೊಟ್ಟಿದೆ.

2. ಮಿ॥ ವೆಂಕೋಬರಾಯರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ, ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ರಂಗನಾಥರಾವ್ ಸಾಹೇಬ್, ಬಿ. ಎ., ಬಿ. ಎಲ್., ರವರನ್ನು ಕಡೂರು ಸಬ್ ಡಿವಿಜನಿನ ಛಾರ್ಜ್ ಬಗ್ಗೆ ಕಡೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಿ, ಸದರೀ ಕಾಲದಲ್ಲಿ ಅವರಿಗೆ ಹಂಗಾಮಿಯಾಗಿ ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಟ್ಟಿದೆ. ಇವರು ಆಕ್ಟಿಂಗ್ ಅಮಲ್ದಾರ್ ಮಿ॥ ಎಚ್. ವೆಂಕಟನರಸಯ್ಯನವರಿಗೆ ಚಾರ್ಜುಕೊಟ್ಟು ಕೂಡಲೆ ತಮ್ಮ ಕೆಲಸಕ್ಕೆ ಸೇರತಕ್ಕದ್ದು.

ತಾರೀಖು 16-17ನೆ ಡಿಸೆಂಬರ್ 1908.

ನಂ. ರೆ. 3900—ಲ್ಯಾ. ರೆ. 20-08-17, ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಡಿ. ಶ್ರೀನಿವಾಸೈಯ್ಯಂಗಾರಿ, ಬಿ. ಎ., ಯವರನ್ನು ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರ ಬಳಿ ಕೆಲಸ ಮಾಡುವ ಬಗ್ಗೆ ಆ ಡಿಸ್ಟ್ರಿಕ್ಟಿಗೆ ವರ್ಗಾಯಿಸಿ ಇದೆ. ರಜಾದಿಂದ ವಾಪಸು ಬಂದತರುವಾಯ ಕೆಲಸದಮೇಲೆ ಹೋಗತಕ್ಕದ್ದು.

ತಾರೀಖು 19ನೆ ಡಿಸೆಂಬರ್ 1908.

ನಂ. ರೆ. 3961—ಲ್ಯಾಂಡ್ ರೆ. 126-08-4, ಸರ್ 1908ನೆ ಇಸವಿ ಅಕ್ಟೋಬರು 5ನೆ ತಾರೀಖಿನ ರೆ. 2207—ಲ್ಯಾ. ರೆ. 126-08-2ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಡೆಪ್ಯುಟಿ ಕಮಿಷನರ್ ಮಿ॥ ಎಂ. ನಾರಾಯಣರಾಯರವರಿಗೆ ಮಂಜೂರಾದ ಎರಡು ತಿಂಗಳ ಪ್ರಿವಿಲೇಜ್ ರಜಾವನ್ನು ಇನ್ನೂ 13 ದಿವಸಗಳಿಗೆ ಹೆಚ್ಚಿಸಿರುತ್ತೆ.

ತಾರೀಖು 21ನೆ ಡಿಸೆಂಬರ್ 1908.

ನಂ. ಫೈ. 2776—ಎಸ್. ಆರ್. 49—07, ಸರ್ 1908ನೆ ಇಸವಿ ಸೆಪ್ಟಂಬರ್ 11ನೆ ತಾರೀಖಿನ ಫೈ. 1407 ಎಸ್. ಆರ್. 49—07—12ನೆ ನಂಬರ್ ಸರ್ಕಾರೀ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಅನ್ಯದೇಶೀಯ ಶರಾಬ್ ನಿಬಂಧನೆಗಳ VI (1)ನೆ ನಿಬಂಧನೆಯ ಮೇರೆಗೆ, ಜೂನ್ 30ಕ್ಕೆ ಆಖೈರಾಗುವ ಒಂದು ವರ್ಷಕ್ಕೆ ಅಥವಾ ವರ್ಷದ ಭಿನ್ನಾಂಶಕ್ಕೆ ಅಲ್ಲಿ ನಮೂದಿಸಲ್ಪಟ್ಟ ಲೈಸೆನ್ಸುಗಳಿಗೆ ಕೊಡಬೇಕಾದ್ದ ಫೀಜುಗಳ ದರವನ್ನು ಈ ಕೆಳಗೆ ಕಂಡಂತೆ ಗೊತ್ತುಮಾಡಿ ಇದೆ:—

(1)	ಬಟ್ಟುಗಟ್ಟಲೆ ಲೈಸೆನ್ಸು	120
(2)	ಚಿಲ್ರೆ "ಆಫ್" ಲೈಸೆನ್ಸು	150
	ಬಹಿರಂಗವಾದ ಹರಾಜಿನಲ್ಲಿ ಮಾರಲ್ಪಡದೆ ಇದ್ದಾಗ್ಯೆ.	
(3)	ಹೋಟಲ್ ಮತ್ತು ಬೋರ್ಡಿಂಗ್ ಹೌಸ್‌ಗಳ ಲೈಸೆನ್ಸ್	60
(4)	ರೈಲ್ವೆ ರಿಫ್ರೆಷಮೆಂಟ್ ರೂಮ್ ಲೈಸೆನ್ಸ್	120

(5) ಸಾಮಾನ್ಯವಾದ ರಿಫ್ರೆಷ್‌ಮೆಂಟ್ ರೂಮು ಲೈಸೆನ್ಸ್ 150
(6) ಸ್ಪೆಷಲ್ ಲೈಸೆನ್ಸ್ 150
(7) ಪ್ರೊಪ್ರೈಟರಿ ಕ್ಲಬ್‌ಗಳಿಗೂ ಮತ್ತು ಅನ್ಯೋನ್ಯ ಸಹಾಯಕ ಸಂಘಗಳಿಗೂ ಲೈಸೆನ್ಸ್ ... 60

2. ಲೈಸೆನ್ಸುಗಳನ್ನು ಕೊಡುವುದಕ್ಕೆ ಮೊದಲೇ ಮೇಲ್ಕಂಡ ರುಸುಂಗಳನ್ನು ಮುಂಗಡವಾಗಿ ಪಾವತಿ ಮಾಡಬೇಕು. ಇದಲ್ಲದೆ, 500 ಗ್ಯಾಲನ್‌ಗಳಿಗಿಂತ ಹೆಚ್ಚಾಗಿ ಮಾರುವ ಪ್ರತಿ 20 ಗ್ಯಾಲನ್‌ಗೂ ಅದರ ಭಿನ್ನಾಂಶಕ್ಕೂ 30 ರೂಪಾಯಿನಂತೆ ಹೆಚ್ಚು ಫೀಜನ್ನು ಕೊಡತಕ್ಕದ್ದು.

ಟಿಪ್ಪಣಿ.—ಬೆಂಗಳೂರು ಮತ್ತು ಮೈಸೂರು ಟವನುಗಳಲ್ಲಿ ಚಿಲ್ಲರೆ ವ್ಯಾಪಾರಕ್ಕಾಗಿ ಲೈಸೆನ್ಸು ಪಡೆದವನೇ ಆಗಲಿ ಹೊಟೇಲ್ ಅಥವಾ ರಿಫ್ರೆಷ್‌ಮೆಂಟ್ ರೂಮಿನ ಲೈಸೆನ್ಸ್ ಪಡೆದವನೇ ಆಗಲಿ ಮೇಲ್ಕಂಡಂತೆ ಲೈಸೆನ್ಸ್ ಫೀಜನ್ನೂ ಸರ್ಚಾರ್ಜು ಯಾ ಜಾಸ್ತಿ ಫೀಜನ್ನೂ ಕೊಡುವುದಲ್ಲದೆ ತಾನು ವ್ಯಾಪಾರ ಮಾಡುವ ಸ್ಥಳವನ್ನೂ ಸಹ ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರು ಮಾಡಿಸಲು ಬದ್ಧನಾಗಿರುತ್ತಾನೆ; ಮತ್ತು ಮ್ಯುನಿಸಿಪಲ್ ರೆಗ್ಯುಲೇಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನನುಸರಿಸಿ ಮ್ಯುನಿಸಿಪಾಲಿಟಿಯವರು ಗೊತ್ತುಮಾಡಬಹುದಾದ ಸಾಲಿಯಾನಾ ಫೀಜನ್ನು ಸದರಿ ರಿಜಿಸ್ಟ್ರೇಷನ್ ಸರ್ಟಿಫಿಕೇಟಿಗಾಗಿ ಮ್ಯುನಿಸಿಪಾಲಿಟಿಗೆ ಕೊಡಲೂ ಬದ್ಧನಾಗಿರುತ್ತಾನೆ.

3. ಡೈನಿಂಗ್‌ಕಾರ್ ಲೈಸೆನ್ಸಿಗೆ ಇಷ್ಟೇ ಫೀಜನ್ನು ಕೊಡಬೇಕೆಂಬ ಅಂಶವನ್ನು ಎಕ್ಸೈಜ್ ಕಮಿಷನರವರು ಅಲ್ಲಿ ನಡೆಯತಕ್ಕ ವ್ಯಾಪಾರಕ್ಕೆ ತಕ್ಕಂತೆ ಆಗಿಂದಾಗ್ಗೆ ಗೊತ್ತುಮಾಡಬಹುದು; ವರ್ಷ ಒಂದಕ್ಕೆ ಐನೂರು ಗ್ಯಾಲನ್‌ಗಳಿಗಿಂತ ಹೆಚ್ಚು ವ್ಯಾಪಾರ ನಡೆಯದೇ ಇದ್ದರೆ ಸಾಲಿಯಾನಾ 60 ರೂಪಾಯಿಗೆ ಮೀರದ ಹಾಗೂ 15 ರೂಪಾಯಿಗೆ ಕಡಮೆಯಿಲ್ಲದ ಹಾಗೂ ಒಂದು ಮೊಬಲಗನ್ನು ಗೊತ್ತು ಮಾಡಬೇಕು.

ತಾರೀಖು 23ನೆ ಡಿಸೆಂಬರ್ 1908.

ನಂ. ಫೈ. 2798—ಸೆ. ರೆ. 36—08—7, ಈಗ ಉಪಯೋಗದಲ್ಲಿರುವ ಮೂರುಕಾಸಿನ ಕಾಗದಕ್ಕೆ ಬದಲಾಗಿ ಹೊಸ ನಮೂನೆಯ ಕಾಗದವನ್ನು 1909ನೆ ಇಸವಿಯ ಮಾರ್ಚಿ 1ನೆ ತಾರೀಖಿನ ಲಾಗಾಯಿತು ಚಲಾವಣೆಯಲ್ಲಿ ತರಬೇಕೆಂದು ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ. ಆ ತಾರೀಖಿನಿಂದ ಆಚೆಗೆ ಹಳೇ ಮೂರುಕಾಸಿನ ಕಾಗದವನ್ನು ಅಂಗೀಕರಿಸುವುದಿಲ್ಲ.

ಈ ಸಂಸ್ಥಾನದಲ್ಲಿ ಛಾಪಾಕಾದಗಳನ್ನು ಬಿಕರಿ ಮಾಡುವಂಥಾವರು ಮುಂದಿನ ಫೆಬ್ರವರಿ 15ನೆ ತಾರೀಖಿನ ಲಾಗಾಯಿತು ಹಳೇ ಕಾಗದಗಳನ್ನು ವಾಪಸು ಮಾಡಿ ಅವಕ್ಕೆ ಬದಲಾಗಿಯಾಗಲೀ ಅಥವಾ ಹಣವನ್ನು ಪಾವತಿ ಮಾಡುವುದರ ಮೂಲಕವಾಗಲೀ ಹೊಸ ಕಾಗದಗಳನ್ನು ತೆಗೆದುಕೊಳ್ಳಬೇಕಲ್ಲದೆ 1909ನೆ ಇಸವಿಯ ಮಾರ್ಚಿ 1ನೆ ತಾರೀಖಿನ ಲಾಗಾಯಿತು ಜನರು ಹೊಸ ನಮೂನೆಯ ಕಾಗದವನ್ನು ಉಪಯೋಗಿಸಲು ಅನುಕೂಲಿಸುವಂತೆ ಸದರೀ ಕಾಗದವನ್ನು ಅದೇ ತಾರೀಖಿನಿಂದ ಎಂದರೆ 1909ನೆ ಇಸವಿಯ ಫೆಬ್ರವರಿ 15ನೆ ತಾರೀಖಿನಿಂದ ಬಿಕರಿ ಮಾಡಬೇಕು. ಜನರು ವಾಪಸು ಮಾಡುವ ಕಾಗದಗಳು ದೇಖೀಲು ಛಾಪಾಕಾಗದ ಮಾರುವವರ ಬಳಿ ಬಿಕರಿಯಾಗದೆ ಉಳಿದಿರುವ ಕಾಗದಗಳನ್ನು ಸದರೀಯವರು ಪರಮಾವಧಿ 1909ನೆ ಇಸವಿಯ ಏಪ್ರಿಲ್ 10ನೆ ತಾರೀಖಿನೊಳಗಾಗಿ ಖಜಾನೆಯಲ್ಲಿ ವಾಪಸುಕೊಟ್ಟು ಅವುಗಳಿಗೆ ಬದಲಾಗಿ ಹೊಸ ನಮೂನೆಯ ಕಾಗದಗಳನ್ನು ಪಡೆಯಬೇಕು. ಜನಗಳ ಬಳಿ ಹಳೇ ನಮೂನೆಯ ಕಾಗದಗಳೇನಾದರೂ ಉಪಯೋಗಿಸಲ್ಪಡದೆ ಇದ್ದಲ್ಲಿ ಅವುಗಳನ್ನು 1909ನೆ ಇಸವಿಯ ಮಾರ್ಚಿ 1ನೆ ತಾರೀಖಿನ ಲಾಗಾಯಿತು ಒಂದು ತಿಂಗಳೊಳಗಾಗಿ ಖಜಾನೆಗಳಲ್ಲಾಗಲೀ ಛಾಪಾಕಾಗದಗಳನ್ನು ಬಿಕರಿ ಮಾಡುವವರಲ್ಲಾಗಲೀ ಕೊಟ್ಟು ಅವುಗಳಿಗೆ ಬದಲಾಗಿ ಹೊಸ ನಮೂನೆಯ ಕಾಗದಗಳನ್ನು ಪಡೆಯಬಹುದು. ಯಾವ ಸಂದರ್ಭದಲ್ಲಿಯೂ ಹಳೇ ನಮೂನೆಯ ಕಾಗದಗಳ ಬೆಲೆಯನ್ನು ವಾಪಸು ಕೊಡಲಾಗುವುದಿಲ್ಲ.

ಮೇಲ್ಕಂಡ ವಾಯಿದೆಗಳು ಗತಿಸಿದ ತರುವಾಯ ಹಳೇ ಕಾಗದಗಳಿಗೆ ಬದಲಾಗಿ ಹೊಸ ನಮೂನೆಯ ಕಾಗದಗಳನ್ನು ಕೊಡುವುದಿಲ್ಲ.

ತಾರೀಖು 30ನೆ ಡಿಸೆಂಬರ್ 1908.

ನಂ ರೆವಿನ್ಯೂ. 4245—ಲ್ಯಾಂಡ್ ರೆವಿನ್ಯೂ 179-08-2, ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಎಸ್. ಪಿ. ರಾಜಗೋಪಾಲಾಚಾರ್, ಬಿ. ಎ., ಬಿ. ಎಲ್. ಯವರನ್ನು ಮೈಸೂರ್ ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿನಲ್ಲಿರುವಂತೆ ಮೊಕರರ್ ಮಾಡಿದೆ.

2. ಸದರೀ ಖಜಾನೆಯ ಚಾರ್ಜಿನಲ್ಲಿ ಹಾಲಿ ಇರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಜೆ. ಬಿ. ಹೆಬ್ಬಿಕರ್, ಬಿ. ಎ., ಎಲ್ ಎಲ್. ಬಿ. ಯವರು ಮೈಸೂರು ಡಿಸ್ಟ್ರಿಕ್ಟಿನಲ್ಲಿಯೇ ಕೆಲಸ ಮಾಡಿಕೊಂಡು ಮೊದಲನೆ ತರಗತಿಯ ಮೇಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ತಾರೀಖು 2ನೆ ಜನವರಿ 1909.

ನಂ. ರೆವಿನ್ಯೂ 4319—ವ್ಯವಸಾಯ 91-08-4.

ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ಯಾನೇ ಜಮೀನ್ ಆಬಾದಿನ ಬಗ್ಗೆ ಪಡೆಯುವ ಸಾಲಗಳ (1890ನೆ ಇಸವಿ 4ನೆ ನಂಬರ್) ರೆಗ್ಯುಲೇಷನಿನ 10ನೆ ಪ್ರಕರಣಾನುಸಾರವೂ, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ (1888ನೆ ಇಸವಿ 4ನೆ ನಂಬರ್ ರೆಗ್ಯುಲೇಷನ್) 194ನೆ ಪ್ರಕರಣಾನುಸಾರವಾಗಿಯೂ ಏರ್ಪಟ್ಟ ಸಾಮಾನ್ಯ ನಿಬಂಧನೆಗಳು.

ಜಮೀನ್ ಆಬಾದಿನ ಬಗ್ಗೆ ಪಡೆಯುವ ಸಾಲಗಳ (1890ನೆ ಇಸವಿ 4ನೆ ನಂಬರ್) ರೆಗ್ಯುಲೇಷನಿನ 10ನೆ ಪ್ರಕರಣದಿಂದಲೂ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ (1888ನೆ ಇಸವಿ 4ನೆ ನಂಬರ್ ರೆಗ್ಯುಲೇಷನ್) 194ನೆ ಪ್ರಕರಣದಿಂದಲೂ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ಚಲಾಯಿಸುವಲ್ಲಿ ಮೈಸೂರು ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದೂರವರ ಸರ್ಕಾರದವರು 1908ನೆ ಇಸವಿಯ ನವೆಂಬರ್ 18ನೆ ತಾರೀಖಿನ ರೆವಿನ್ಯೂ 3057—ವ್ಯವಸಾಯ 135-0—3ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಪ್ರಕಟವಾದ ನಿಬಂಧನೆಗಳನ್ನು ರದ್ದುಮಾಡಿ ಈ ಕೆಳಗೆ ಕಂಡ ತಿದ್ದುಪಾಟಾದ ನಿಬಂಧನೆಗಳನ್ನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ.

ಯಾವ ಯಾವ ಉದ್ದೇಶಗಳಿಗೆ ಎಷ್ಟು ಪರಿಮಿತಿಯೊಳಗಾಗಿ ಸಾಲಗಳನ್ನು ಕೊಡಬಹುದು.

1. ಈ ಕೆಳಗೆ ಕಂಡ ಉದ್ದೇಶಗಳಿಗಾಗಿ ಆಯಾಕಾಲಕ್ಕೆ ಎಷ್ಟುಮಟ್ಟಿಗೆ ಕೊಡಬಹುದೆಂದು ವಿಧಿಸಿರುತ್ತದೆಯೋ ಅಷ್ಟುಮಟ್ಟಿಗೆ ಹಿಡುವಳೀದಾರರಿಗೆ ಸಾಲಗಳನ್ನು ಕೊಡಬಹುದು :—

ಯಾವ ಯಾವ ಉದ್ದೇಶಗಳಿಗೆ ಸಾಲಗಳನ್ನು ಕೊಡಬಹುದು.	ಎಷ್ಟು ಸಾಲ ಕೊಡಬಹುದು.	
	ಪರಮಾವಧಿ.	ಕನಿಷ್ಠ ಪಕ್ಷ.
(A) 1890ನೆ ಇಸವಿ 4ನೆ ನಂಬರ್ ಜಮೀನ್ ಆಬಾದಿನ ಬಗ್ಗೆ ಪಡೆಯುವ ಸಾಲಗಳ ರೆಗ್ಯುಲೇಷನಿಗನುಸಾರವಾಗಿ.	ರೂ.	ರೂ.
ಭಾವಿಗಳನ್ನು ಯಾ ಕೆರೆಗಳನ್ನು ಕಟ್ಟಿಸುವುದಕ್ಕೆ ಯಾ ದುರಸ್ತು ಮಾಡಿಸುವುದಕ್ಕೆ; ಸಾಗುವಳಿಗೆ ಕೊಡುವುದಕ್ಕಾಗಿ ಜಮೀನಿನ ಮೌಲ್ಯವನ್ನು ಕಾಯಮಾಗಿ ವೃದ್ಧಿಪಡಿಸುವ ರೀತಿಯಲ್ಲಿ ಬಂಜರ್ ಯಾ ಇತರ ಜಮೀನನ್ನು ಆಬಾದು ಮಾಡುವುದಕ್ಕೆ; ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿನ 4ನೆ ಪ್ರಕರಣದ (a) ಕಲಮಿನಲ್ಲಿ "ಆಬಾದು" ಎಂಬುದರಲ್ಲಿ ಯಾವ ಯಾವ ವಿಷಯಗಳು ಸೇರುತ್ತವೆಯೋ ಅವಕ್ಕೆ; ಅಥವಾ ಮೇಲ್ಕಂಡ ರೆಗ್ಯುಲೇಷನಿನ ಉದ್ದೇಶಕ್ಕಾಗಿ ಸರ್ಕಾರದವರು ಆಗಿಂದಾಗ ಗೆಜೆಟ್ಟಿನಲ್ಲಿ ಇಸ್ತಿಹಾರ್ನಾಮೆಯ ಮೂಲಕ ಯಾವ ಯಾವ ವಿಷಯಗಳನ್ನು "ಆಬಾದು" ಎಂಬುದರಲ್ಲಿ ಸೇರಿಸುವರೋ ಅವಕ್ಕೆ.	ಪರಿಮಿತಿ ಇಲ್ಲ.	50
(B) ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣಕ್ಕನುಸಾರವಾಗಿ.		
(i) ಈ ಕೆಳಗೆ ಕಂಡವುಗಳನ್ನು ಕೊಂಡುಕೊಳ್ಳುವುದಕ್ಕಾಗಿ :— (a) ಬಿತ್ತನೆಯ ಕಾಳುಗಳು (ಇದರಲ್ಲಿ ಬಿತ್ತನೆಯ ಕಬ್ಬು, ಬಿತ್ತನೆಯ ಬಾಳೆಯೂ ಸೇರುತ್ತವೆ); (b) ಉಳುಮೆ ಎತ್ತುಗಳು (ಇದರಲ್ಲಿ ಕಪಿಲೆ ಹೊಡೆಯುವುದಕ್ಕೂ ಗೊಬ್ಬರ ಸಾಗಿಸುವುದಕ್ಕೂ ಬೇಕಾದ ರಾಸುಗಳು ಸೇರುತ್ತವೆ); (c) ಬೀಜದ ಕುದುರೆಗಳು, ಟಾಕಣಗಳು ಮತ್ತು ಬೀಜದ ಹೋರಿಗಳು; (d) ರಾಸುಗಳಿಗೆ ಮೇವು; (e) ಗೊಬ್ಬರ.	200	ಪರಿಮಿತಿ ಇಲ್ಲ.
(ii) ಈ ಕೆಳಗೆ ನಿರ್ದೇಶಿಸಿರುವಂಥಾ ಇತರ ವ್ಯವಸಾಯೋದ್ದೇಶಗಳಿಗೆ :— (a) ಹೊಸದಾಗಿ ಹಿಡುವಳಿಗೆ ಅವಕಾಶಕೊಟ್ಟ ಸ್ಥಳಗಳಲ್ಲಿ ಮನೆಗಳನ್ನು ಯಾ ಜೋಪಡಿಗಳನ್ನು ಕಟ್ಟಿಸುವುದು; (b) ಬೆಂಕಿಯಿಂದ ಯಾ ನೀರಿನ ಪ್ರವಾಹದಿಂದ ನಾಶವಾದ ಮನೆಗಳನ್ನು ಪುನಃ ಕಟ್ಟಿಸುವುದು; (c) ವ್ಯವಸಾಯದ ಮುಟ್ಟುಗಳು (ಬಂಡಿಗಳೂ ಸೇರಿ); (d) ವ್ಯವಸಾಯ ಪದಾರ್ಥಗಳನ್ನು ಸರಿಪಡಿಸುವುದಕ್ಕನುಕೂಲವಾದ ನೀಲಿಯ ತೊಟ್ಟಿಗಳೇ ಮುಂತಾದ ಸಾಧನಗಳನ್ನು ಕಟ್ಟಿಸುವುದು; (e) ಜೋಡು ಮೊಹಟೇ ಯಾ ನೀರು ಎತ್ತುವ ಇತರ ಸಾಧನಗಳು.	1,000	ಪರಿಮಿತಿ ಇಲ್ಲ.
(iii) (a) ಕಬ್ಬಿನ ಆಲೆಗಳನ್ನು ಹೂಡುವುದಕ್ಕೆ; ಅಥವಾ (b) ಬಾಯಿಲರುಗಳು, ಆಯಿಲ್ ಗ್ಯಾಸ್ ಎಂಜಿನಗಳು ಈ ಮುಂತಾದ ಮೇಲೆ ನಮೂದಿಸದೆ ಇರುವ ವ್ಯವಸಾಯ ಸಂಬಂಧವಾದ ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ.	5,000	ಪರಿಮಿತಿ ಇಲ್ಲ.
(iv) ದುರ್ಭಿಕ್ಷವು ಪ್ರಾಪ್ತವಾಗಿದೆ ಎಂದು ಸರ್ಕಾರದವರಿಗೆ ದೃಢವಾಗಿ ಕಂಡುಬಂದಾಗ ಮುಂದಣ ಸುಗ್ಗಿಯಲ್ಲಿ ಫಸಲು ಆಗುವ ವರೆಗೂ ಜಮೀನ್ ಹಿಡುವಳಿದಾರರೂ ಅವರ ಆಶ್ರಿತರೂ ಜೀವನ ಮಾಡಿಕೊಳ್ಳಲು ಅನುಕೂಲವಾಗಿರುವಂತೆ ದುರ್ಭಿಕ್ಷವನ್ನು ನಿವಾರಣೆ ಮಾಡುವುದಕ್ಕಾಗಿ.	200	ಪರಿಮಿತಿ ಇಲ್ಲ.

II. ಈ ಕೆಳಗೆ ನಮೂದಿಸಿರುವ ಆಫೀಸರುಗಳು ಅವರವರ ಹೆಸರಿಗೆ ಎದುರಾಗಿ ಕಾಣಿಸಿರುವ ಮೊಬಲಗಿಗೆ ಮೀರದಷ್ಟು ಸಾಲಗಳನ್ನು ಮಂಜೂರ ಮಾಡಲು ಅಧಿಕಾರವುಳ್ಳವರಾಗಿರತಕ್ಕದ್ದು:—

	ರೂ.
ಅಮಲ್ದಾರರುಗಳು, ಡೆಪ್ಯುಟಿ ಅಮಲ್ದಾರರುಗಳು	250
ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರುಗಳು	500
ಡೆಪ್ಯುಟಿ ಕಮಿಷನರುಗಳು	1,000
ರೆವಿನ್ಯೂ ಕಮಿಷನರವರು	2,500

ಟಿಪ್ಪಣಿ—ಯಾರೊಬ್ಬ ಆಫೀಸರಾಗಲೀ ಒಂದೇ ಆಸಾಮಿಗೆ ಒಂದಕ್ಕಿಂತ ಹೆಚ್ಚು ಸಾಲಗಳನ್ನು ಕೊಡಕೂಡದೆಂದು ಈ ನಿಬಂಧನೆಯಿಂದ ನಿರೋಧಿಸಲ್ಪಟ್ಟಿಲ್ಲ. ಹಾಗೆ ಕೊಡುವುದರಿಂದ ಒಟ್ಟು ಮೊಬಲಗು ಮೇಲೆ ವಿಧಿಸಲ್ಪಟ್ಟಿರುವ ಪರಮಾವಧಿಯನ್ನು ಮೀರಿದರೂ ಚಿಂತೆಯಿಲ್ಲ. ಪರಂತು ಹಾಗೆ ಕೊಡಬಹುದಾದ ಪ್ರತಿಯೊಂದು ಸಾಲವೂ ಪ್ರತ್ಯೇಕವಾದ ಉದ್ದೇಶಗಳಿಗೆ ಸಂಬಂಧಪಟ್ಟದಾಗಿರಬೇಕಲ್ಲದೆ ಅಂಥಾ ಪ್ರತಿಯೊಂದು ಸಾಲಕ್ಕೂ ಪ್ರತ್ಯೇಕವಾದ ಆಧಾರಗಳು ಇರಬೇಕು.

III. ಬಡ್ಡಿಯ ದರ. ದುರ್ಭಿಕ್ಷದ ನಿವಾರಣೆಗೋಸ್ಕರ ಕೊಟ್ಟ ಸಾಲಗಳು ವಿನಾ ಉಳಿದ ಎಲ್ಲಾ ಸಾಲಗಳ ಮೇಲೆಯೂ ಶೇಕಡಾ 5 ರಂತೆ ಬಡ್ಡಿಯನ್ನು ವಿಧಿಸತಕ್ಕದ್ದು. ದುರ್ಭಿಕ್ಷದ ನಿವಾರಣೆಯ ಸಾಲಗಳಿಗೆ ಶೇಕಡಾ 3 ರಂತೆ ಮಾತ್ರವೇ ಬಡ್ಡಿಯನ್ನು ವಿಧಿಸಬೇಕು; ಈ ಪೈಕಿ ಸಾಲವನ್ನು ತೆಗೆದುಕೊಂಡವರು ಬಡವರೆಂದು ಕಂಡುಬಂದಪಕ್ಷ ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದಲ್ಲಿ ಬಡ್ಡಿಯನ್ನು ಮಾಫ್ ಮಾಡಬಹುದು.

ಸರ್ಕಾರದವರು ತಮಗೆ ಸೂಕ್ತವೆಂದು ತೋರಿದಲ್ಲಿ ಯಾವುದಾದರೂ ವಿಶೇಷ ಕಾರಣಗಳಿದ್ದರೆ ಕಮ್ಮಿ ಬಡ್ಡಿಗಾಗಲೀ ಬಡ್ಡಿ ಇಲ್ಲದೆಯೇ ಆಗಲೀ ಸಾಲಗಳನ್ನು ಮಂಜೂರ್ ಮಾಡಬಹುದು.

IV. ಸಾಲದ ಐನ್ ಪಾವತಿ ತಾರೀಖಿನ ಲಾಗಾಯಿತು ಬಡ್ಡಿಯು ಶುರುವಾಗತಕ್ಕದ್ದು. ಸಾಲವನ್ನು ಕಂತುವಾರಾಗಿ ತೆಗೆದುಕೊಂಡಿದ್ದಲ್ಲಿ ಪ್ರತಿ ಕಂತಿನ ಮೇಲಣ ಬಡ್ಡಿಯು ಆಯಾ ಕಂತಿನ ಐನ್ ಪಾವತಿ ತಾರೀಖಿನ ಲಾಗಾಯಿತು ಶುರುವಾಗತಕ್ಕದ್ದು.

ಸಾಲಗಳನ್ನು ತೀರಿಸುವದಕ್ಕೆ ವಾಯಿದೆ ಮತ್ತು ಸಾಲಗಳನ್ನು ವಸೂಲ್ಮಾಡುವ ರೀತಿ.

V. ಈ ನಿಬಂಧನೆಗಳಿಗೆ ಲಗತ್ತಿಸಿರುವ ತಃಖ್ತೆಯ ಮೇರೆಗೆ ಆಗುವಷ್ಟು ಬಡ್ಡಿಯನ್ನೂ ಅಸಲನ್ನೂ ಸೇರಿಸಿ ಗೊತ್ತಾದ ಸಾಲೀಯಾನಾ ಕಂತುಗಳ ಮೇರೆಗೆ ಸಾಲಗಳನ್ನು ತೀರಿಸತಕ್ಕದ್ದು.

ಸಾಲ ತೀರಿಸುವುದಕ್ಕೆ ಶುರು ಮಾಡಲು ಗೊತ್ತಾದ ತಾರೀಖಿಗಿಂತ ಒಂದುವರ್ಷದ ಹಿಂದಣ ತಾರೀಖಿನ ಲಾಗಾಯಿತು ಸಾಲದಮೇಲೆ ಅಥವಾ ಸಾಲವನ್ನು ಕಂತುವಾರಾಗಿ ಕೊಟ್ಟಿದ್ದಲ್ಲಿ ಸದರೀ ಕಂತುಗಳ ಮೇಲೆ ಸರಳಬಡ್ಡಿಯನ್ನು ವಸೂಲ್ ಮಾಡತಕ್ಕದ್ದು; ಮತ್ತು ಸಾಲದ ಮೊಬಲಗನ್ನೂ ಅದರಮೇಲಣ ಬಡ್ಡಿಯನ್ನೂ ಮೇಲೆ ಹೇಳಿದ ತಃಖ್ತೆಯ ಮೇರೆಗೆ ನಿರ್ಧರಿಸಿದ ಸಾಲೀಯಾನಾ ಕಂತುಗಳಿಗನುಸಾರವಾಗಿ ವಸೂಲ್ ಮಾಡತಕ್ಕದ್ದು.

ಸಾಲಗಳನ್ನು ತೀರಿಸುವುದಕ್ಕೆ ವಾಯಿದೆಯನ್ನೂ, ಕಂತುಗಳ ಮೊಬಲಗನ್ನೂ ಡೆಪ್ಯುಟಿ ಕಮಿಷನರವರು (ಯಾ ಸಾಲವನ್ನು ಮಂಜೂರ್ಮಾಡಿದ ಇತರ ಆಫೀಸರವರು) ನಿರ್ಧರಿಸುವಲ್ಲಿ ಸಾಲ ತೆಗೆದುಕೊಂಡವನ ಸ್ಥಿತಿಗತಿಗಳನ್ನೂ, ಸಾಲದ ಉದ್ದೇಶವನ್ನೂ ಮಾಡಿಸಬೇಕೆಂದು ಉದ್ದೇಶಿಸಿರುವ ಕಾಮಗಾರಿಗಳು ಎಷ್ಟರಮಟ್ಟಿಗೆ ಸ್ಥಿರವಾಗಿರಬಹುದೆಂಬ ಅಂಶವನ್ನೂ, ಏರ್ಪಡಿಸಬೇಕೆಂದಿರುವ ಯಂತ್ರಸಾಧನಗಳ ಸ್ವಭಾವವನ್ನೂ, ಸಾಲಕ್ಕೆ ಆಧಾರವಾಗಿ ಕೊಡತಕ್ಕ ಸೊತ್ತು ಎಷ್ಟು ಬಾಳುವುದು ಮತ್ತು ಅದು ಸಾಕೇ ಎಂಬ ಈ ಅಂಶಗಳನ್ನೂ ಪರ್ಯಾಲೋಚಿಸತಕ್ಕದ್ದು. ಪರಂತು ಹಾಗೆ ನಿರ್ಧರಿಸಿದ ವಾಯಿದೆಯಾಗಲೀ ಕಂತುಗಳಾಗಲೀ ಈ ಕೆಳಗೆ ಸೂಚಿಸುವ ಪರಮಾವಧಿಯನ್ನು ಮೀರಿರಕೂಡದು—

(A) ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿಗನುಸಾರವಾದ ಸಾಲಗಳ ವಿಷಯದಲ್ಲಿ—

(i) ಭಾವಿಗಳನ್ನು ಕಟ್ಟಿಸುವುದಕ್ಕೆ ಅಥವಾ ದುರಸ್ತು ಮಾಡಿಸುವುದಕ್ಕೆ ... ... 30 ವರ್ಷಗಳು.

(ii) ಇತರ ಉದ್ದೇಶಗಳಿಗೆ :—

ಸಾಲವು 500 ರೂಪಾಯಿಗೆ ಮೀರದೆ ಇದ್ದಲ್ಲಿ ... ... 10 ,,

ಸಾಲವು 500 ರೂಪಾಯಿಗಳಿಗೆ ಮೀರಿ 1,000 ರೂಪಾಯಿಗಳಿಗೆ ಮೀರದೆ ಇದ್ದಲ್ಲಿ ... 15 ,,

ಸಾಲವು 1,000 ರೂಪಾಯಿಗಳಿಗೆ ಮೀರಿ ಇದ್ದಲ್ಲಿ ... ... 20 ,,

(B) ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣಾನುಸಾರವಾದ ಸಾಲಗಳ ವಿಷಯದಲ್ಲಿ—

(i) ಬಿತ್ತನೆಯ ಕಾಳುಗಳನ್ನು ಕೊಂಡುಕೊಳ್ಳುವುದಕ್ಕೆ ... ... 1 ವರ್ಷ.

(ii) ದುರ್ಭಿಕ್ಷವನ್ನು ನಿವಾರಣೆ ಮಾಡುವುದಕ್ಕೆ ಮತ್ತು ವ್ಯವಸಾಯದ ಮುಟ್ಟುಗಳನ್ನು ಯಾ ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ. 3 ವರ್ಷಗಳು.

(iii) ಇತರ ಯಾವುದಾದರೂ ಉದ್ದೇಶಕ್ಕೆ ... ... 10 ,,

ಸಾಲವನ್ನು ತೀರಿಸುವುದಕ್ಕಾಗಿ ಮೇಲೆ ನಿರ್ದೇಶಿಸಿರುವ ಅವಧಿಯು ಸಾಲದ ಐನ್ ಪಾವತಿಯ ತಾರೀಖಿನಿಂದ ಅಥವಾ ಆ ಸಾಲವು ಕಂತುಗಳಾಗಿ ಕೊಡಲ್ಪಟ್ಟಿರುವ ಸಂದರ್ಭದಲ್ಲಿ ಆಖೈರು ಕಂತಿನ ಐನ್ ಪಾವತಿಯ ತಾರೀಖಿನಿಂದ ಶುರುವಾಗತಕ್ಕದ್ದು; ಅಲ್ಲದೆ XIIIನೆ ಮತ್ತು XXXIIನೆ ನಿಬಂಧನೆಗಳಿಗನುಸಾರವಾಗಿ ತಿದ್ದುಪಾಟು ಆಗಲು ಒಳಗಾಗಿರತಕ್ಕದ್ದು.

ಪರಂತು ಈ ನಿಬಂಧನೆಯಲ್ಲಿರುವ ಯಾವ ಅಂಶದಿಂದಾಗಲೀ ಸಾಲವನ್ನು ತೆಗೆದುಕೊಂಡವನು ಮೇಲ್ಕಂಡ ಅವಧಿಗಿಂತ ಮುಂಚೆಯೇ ಅದನ್ನು ತೀರಿಸಕೂಡದೆಂತಾಗಲಿ, ಸಾಲೀಯಾನಾ ಕಂತಿಗಿಂತ ಹೆಚ್ಚು ಮೊಬಲಗನ್ನು ಪಾವತಿ ಮಾಡಕೂಡದೆಂತಾಗಲಿ ಭಾವಿಸಕೂಡದು. ಹಾಗೆ ಹೆಚ್ಚಾಗಿ ಪಾವತಿ ಮಾಡಿದ ಮೊಬಲಗನ್ನು ಅಸಲಿಗೆ ಜಮಾ ಕಟ್ಟಿಕೊಳ್ಳಬೇಕಲ್ಲದೆ ಅವಶ್ಯಕವಿದ್ದಲ್ಲಿ ಮುಂದಣ ಕಂತುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು; ಆದರೆ ಈ ನಿಬಂಧನೆಯ 2ನೆ ಪ್ಯಾರಾ ಮೇರೆಗೆ ವಿಧಿಸೋಣವಾದ ಕಂತುಗಳ ಮೊಬಲಗನ್ನು ಈ ಕಾರಣದಿಂದ ಕಡಮೆ ಮಾಡಕೂಡದು

VI. ಪ್ರತಿಯೊಂದು ಕಂತನ್ನೂ ಆಯಾ ತಾಲ್ಲೂಕಿನ ಜಮೀನ್ ಕಂದಾಯದ ಖಿಸ್ತಿನ ಪಾವತಿಯ ದಿವಸವೇ ವಾಪಸ್ ಕೊಡುವಂತೆ ಏರ್ಪಾಟು ಮಾಡಬೇಕು. ಆದರೆ ಮೊದಲನೆ ಕಂತಿನ ಪಾವತಿ ತಾರೀಖನ್ನು ಹೇಗೆ ಗೊತ್ತುಮಾಡಬೇಕೆಂದರೆ— ತಕ್ಕ ಜಾಗರೂಕತೆಯಿಂದ ಕೆಲಸ ಮಾಡಿಸಿದಲ್ಲಿ ಜಮೀನು ಆಬಾದಿನಿಂದ ಮೊದಲನೇ ಕಂತಿನಷ್ಟು ಮೊಬಲಗು ಎಷ್ಟು ಕಾಲದಲ್ಲಿ ಉತ್ಪತ್ತಿಯಾಗುತ್ತದೆಯೋ ಅದಕ್ಕೆ ಮುಂಚೆಯೇ ಸದರೀ ಕಂತನ್ನು ಬಲಾತ್ಕಾರವಾಗಿ ವಸೂಲ್ ಮಾಡದಂತೆ ಸದರಿ ದಿನವನ್ನು ಗೊತ್ತು ಮಾಡಬೇಕು ಮತ್ತು ಸಾಲದ ಏರ್ ಪಾವತಿಯ ತಾರೀಖಿನಿಂದ ಅಥವಾ ಸಾಲವನ್ನು ಕಂತುವಾರಾಗಿ ಕೊಟ್ಟಿದ್ದಲ್ಲಿ ಆಖೈರ್ ಕಂತಿನ ಏರ್ ಪಾವತಿಯ ತಾರೀಖಿನಿಂದ 12 ತಿಂಗಳಿಗಿಂತ ಮುಂಚೆ ಸದರೀ ಕಂತಿಗಾಗಿ ತಗಾದೆ ಮಾಡಕೂಡದು; ಅಲ್ಲದೆ $2\frac{1}{2}$ ವರ್ಷಗಳಿಗಿಂತ ಹೆಚ್ಚಾಗಿ ವಸೂಲ್ ಮಾಡದೆ ಬಿಡಕೂಡದು.

ಯಾವುದಾದರೂ ವಿಶೇಷ ಸಂದರ್ಭದಲ್ಲಿ ಸಾಲವನ್ನು ಮಂಜೂರ್ಮಾಡುವ ಆಫಿಸರು ಆಬಾದಿನ ಕಾಮಗಾರಿಯಿಂದ $2\frac{1}{2}$ ವರ್ಷಗಳೊಳಗಾಗಿ ಫಾಯಿದೆಯೇನೂ ಬರಲಾರದೆಂದು ಅಭಿಪ್ರಾಯಪಡುವ ಪಕ್ಷ ಐದು ವರ್ಷಗಳಿಗೆ ಮೀರದೆ ಇರುವ ಹೆಚ್ಚು ಅವಧಿಯನ್ನು ಕೊಡಬಹುದು. ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರರಿಂದಲಾಗಲೀ ಅಸಿಸ್ಟೆಂಟ್ ಕಮಿಷನರಿಂದಲಾಗಲೀ ಸಾಲಗಳು ಮಂಜೂರ್ ಮಾಡಲ್ಪಟ್ಟಿರುವ ಸಂದರ್ಭದಲ್ಲಿ ಮೇಲ್ಕಂಡಂತೆ ಕಾಲಾವಧಿಯನ್ನು ಹೆಚ್ಚಿಸಬೇಕಾದರೆ ಡೆಪ್ಯುಟಿ ಕಮಿಷನರವರ ಮಂಜೂರಾತಿಯನ್ನು ಪಡೆಯಬೇಕು.

ಯಾವ ಸಂದರ್ಭದಲ್ಲಿಯೇ ಆಗಲಿ ಆಖೈರ್ ಕಂತನ್ನು ಪಾವತಿಮಾಡಿದ ತಾರೀಖು ಲಾಗಾಯಿತು Vನೆ ನಿಬಂಧನೆಯಲ್ಲಿ ವಿಧಿಸಿರುವ ಪರಮಾವಧಿಯ ಕಾಲದೊಳಗಾಗಿ ಒಟ್ಟು ಸಾಲವೂ ಬಡ್ಡಿಯೂ ಸಹ ವಾಪಸ್ ಪಾವತಿಯಾಗುವುದಕ್ಕೆ ಅನುಕೂಲವಾಗುವಂತೆ ಸಾಲೀಯಾನಾ ಕಂತು ಮೊಬಲಗನ್ನು ಗೊತ್ತು ಮಾಡಬೇಕು.

ಸಾಲ ತೀರಿಸುವ ಕಾಲವನ್ನು ಹೆಚ್ಚು ಮಾಡುವುದು ಮತ್ತು ಸಾಲಗಳನ್ನು ಮಾಫ್ ಮಾಡುವುದು.

ಸಾಲ ತೀರಿಸುವುದನ್ನು ನಿಲ್ಲಿಸುವುದು.

VII. ಸಾಲ ತೆಗೆದುಕೊಂಡವನ ಬೆಳೆಯು ಆತನಿಂದ ಯಾವ ಲೋಪವೂ ಇಲ್ಲದೆ ದೈವವಶಾತ್ ಕೆಟ್ಟುಹೋಗಿ ಆತನು ಒಂದು ಕಂತನ್ನೂ ಕೊಡಲು ಶಕ್ತಿಯಿಲ್ಲದೆ ಹೋದರೆ, ಅಥವಾ ವಿಶೇಷವಾದ ಬೇರೆ ಯಾವುದಾದರೊಂದು ವಿಪತ್ತು ಸಂಭವಿಸಿದಲ್ಲಿ Vನೆ ಮತ್ತು VIನೆ ನಿಬಂಧನೆಗಳಲ್ಲಿ ಏನಿದ್ದರೂ ಸರಿಯೇ ಸದರೀ ಕಂತನ್ನೂ ಅದರಾಚೆಯ ಕಂತುಗಳನ್ನೂ ಒಂದು ಕಂತಿನ ಅವಧಿಯ ವರೆಗೆ ನಿಲ್ಲಿಸಬಹುದು.

ಸಾಲಗಳನ್ನು ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರರಾಗಲೀ, ಅಸಿಸ್ಟೆಂಟ್ ಕಮಿಷನರಾಗಲೀ ಅಥವಾ ಡೆಪ್ಯುಟಿ ಕಮಿಷನರಾಗಲೀ ಮಂಜೂರ್ಮಾಡಿರುವಾಗ ಡೆಪ್ಯುಟಿ ಕಮಿಷನರವರು ತಾವೇ ಆಗಲಿ, ತಮ್ಮ ತಾಬೇಯಲ್ಲಿರುವ ಆಫಿಸರರುಗಳ ಸಿಫಾರಸಿನ ಮೇಲಾಗಲೀ ಮಂಜೂರ್ ನಿರೀಕ್ಷಣೆಯಮೇಲೆ ಆ ರೀತಿ ನಿಲ್ಲಿಸಿ ಹುಕುಂ ಕೊಡಬಹುದು. ಆದರೆ ಅವರು ಅಂಥಾ ಸಂದರ್ಭಗಳನ್ನೆಲ್ಲಾ ರೆವಿನ್ಯೂ ಕಮಿಷನರವರಿಗೆ ರಿಪೋರ್ಟು ಮಾಡಬೇಕು; ರೆವಿನ್ಯೂ ಕಮಿಷನರವರು ಅವುಗಳ ವಿಷಯದಲ್ಲಿ ತಮಗೆ ಸೂಕ್ತ ತೋರುವಂತೆ ಹುಕುಂ ಮಾಡಬಹುದು. ಇತರ ಸಂದರ್ಭಗಳನ್ನೆಲ್ಲ ಹುಕುಂ ಬಗ್ಗೆ ರೆವಿನ್ಯೂ ಕಮಿಷನರವರಿಗೆ ಜಾಹಿರ್ ಮಾಡಬೇಕು; ಅವುಗಳ ಮೇಲೆ ಅವರು ತಮಗೆ ಯುಕ್ತ ತೋರುವಂತೆ ಹುಕುಂ ಕೊಡಲು ಅಧಿಕಾರವುಳ್ಳವರಾಗಿರತಕ್ಕದ್ದು.

ಸಾಲ ತೀರಿಸದೆ ನಿಲ್ಲಿಸುವ ಕಂತುಗಳಮೇಲೆಲ್ಲಾ ಹಾಗೆ ನಿಂತಿದ್ದ ಕಾಲಕ್ಕೆ ಶೇಕಡಾ 6 ರಂತೆ ಸರಳಬಡ್ಡಿಯನ್ನು ವಸೂಲ್ ಮಾಡಬೇಕು.

ಸಾಲವನ್ನು ಮಾಫ್ ಮಾಡುವುದು.

VIII. ಯಾವುದಾದರೊಂದು ಆಬಾದ್ ಕಾಮಗಾರಿಯು ಕೆಟ್ಟುಹೋಗುವುದರಿಂದುಂಟಾಗುವ ನಷ್ಟವನ್ನು ಸಾಲ ತೆಗೆದುಕೊಂಡವರೂ ಅವರ ಜಾಮೀನ್‌ದಾರರೂ ವಹಿಸಬೇಕು; ಅಲ್ಲದೆ ಈ ನಿಬಂಧನೆಗಳಿಗನುಸಾರವಾಗಿ ಕೊಟ್ಟ ಸಾಲವನ್ನು ಮುಂದಣ ಷರತ್ತುಗಳಿಗೊಳಪಟ್ಟು ಮಾಫ್ ಮಾಡತಕ್ಕದ್ದು.

IX. ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿಗನುಸಾರವಾಗಿ ಸಾಲ ಕೊಟ್ಟಿರುವ ಸಂದರ್ಭದಲ್ಲಿ ಆಯಾ ಕೆಲಸವು ಸಾಲ ತೆಗೆದುಕೊಂಡವನಿಂದ ಯಾವ ಲೋಪವೂ ಇಲ್ಲದೆ ದೈವವಶಾತ್ ಕೆಟ್ಟುಹೋದರೆ, ಮತ್ತು ಕಂತನ್ನು ಪೂರ್ತಿಯಾಗಿ ವಸೂಲ್ ಮಾಡುವುದರಿಂದ ಸಾಲ ತೆಗೆದುಕೊಂಡವನಿಗೆ ತುಂಬಾ ತೊಂದರೆಯುಂಟಾದರೆ ಬಾಕಿ ಇರುವ ಕಂತುಗಳನ್ನಾಗಲೀ ಅಥವಾ, ಅವುಗಳಲ್ಲಿ ಒಂದು ಭಾಗವನ್ನಾಗಲೀ 100 ರೂಪಾಯಿಗಳಿಗೆ ಮೀರದೆ ಇದ್ದರೆ ಮಾಫ್ ಮಾಡಲು ರೆವಿನ್ಯೂ ಕಮಿಷನರವರು ಅಧಿಕಾರವುಳ್ಳವರಾಗಿರತಕ್ಕದ್ದು. ಮೇಲ್ಕಂಡ ಮೊಬಲಗಿಗಿಂತ ಹೆಚ್ಚಾಗಿ ಮಾಫ್ ಮಾಡಬೇಕಾದಲ್ಲಿ ಸರ್ಕಾರದವರ ಹುಕುಂ ಪಡೆಯಬೇಕು.

X. ರೆವಿನ್ಯೂ ಸಾಲಿನ ಆಖೈರಿನೊಳಗಾಗಿ ತೀರಿಸಲ್ಪಡದೆ ಇರುವ ಪ್ರತಿ ಕಂತಿನ ಮೇಲೆಯೂ ಯಾವಾಗ ಕಂತು ಪಾವತಿಯಾಗಬೇಕಾಗಿತ್ತೋ ಆ ತಾರೀಖಿನ ಲಾಗಾಯಿತು ಶೇಕಡಾ $6\frac{1}{4}$ರ ಮೇರೆಗೆ ಬಡ್ಡಿ ವಸೂಲ್ ಮಾಡಬೇಕು. ಈ ನಿಬಂಧನೆಯ ಮೇರೆಗೆ ಒಂದು ತಿಂಗಳಿಗಿಂತ ಕಡಮೆಯಾದ ಕಾಲಕ್ಕೆ ಬಡ್ಡಿ ಲೆಕ್ಕ ಮಾಡಬೇಕಾದರೆ 15 ದಿನಗಳಿಗಿಂತ ಕಡಮೆಯಾದ ಕಾಲವನ್ನು $\frac{1}{2}$ ತಿಂಗಳಂತೆಯೂ, 15 ದಿವಸವನ್ನೂ ಮತ್ತು ಜಾಸ್ತಿ ಕಾಲವನ್ನೂ ಪೂರಾ ತಿಂಗಳಂತೆಯೂ ಭಾವಿಸಿಕೊಳ್ಳಬೇಕು; ಅಲ್ಲದೆ ಒಂದು ರೂ

ಪಾಯಿಯ ಭಿನ್ನಾಂಶವು 8 ಆಣೆಗಿಂತ ಕಡಮೆಯಾಗಿದ್ದಲ್ಲಿ ಅದನ್ನು ಅರ್ಧ ರೂಪಾಯಿಯಂತೆಯೂ 8 ಆಣೆ ಮತ್ತು ಅದಕ್ಕಿಂತ ಜಾಸ್ತಿಯನ್ನು ಪೂರಾ ರೂಪಾಯಿಯಂತೆಯೂ ಭಾವಿಸಿಕೊಳ್ಳಬೇಕು.

XI. ಸಾಲ ತೀರಿಸಬೇಕಾದರೆ ಆಬಾದ್ ಆಗಬೇಕಾದ ಜಮೀನು ಯಾವ ತಾಲ್ಲೂಕಿನಲ್ಲಿದೆಯೋ ಅಥವಾ ಸಾಲವನ್ನು ಯಾವ ತಾಲ್ಲೂಕಿನಲ್ಲಿ ಉಪಯೋಗಿಸಬೇಕಾಗಿದೆಯೋ ಆ ತಾಲ್ಲೂಕಿನ ಖಜಾನೆಗಾಗಲೀ, ಸಾಲದ ಬಾಕಿಯು ಸಾಲಗಾರನ ಖಾತೆಯಲ್ಲಿ ಸೇರಿಸಲ್ಪಟ್ಟಿದ್ದಲ್ಲಿ ಸದರೀ ಗ್ರಾಮಾಧಿಕಾರಿಗಳಿಗಾಗಲೀ ಸಲ್ಲಿಸಬಹುದು.

ಡೆಪ್ಯುಟಿ ಕಮಿಷನರವರು, ತಮಗೆ ಯುಕ್ತವೆಂದು ಕಂಡುಬಂದಲ್ಲಿ, ಸದರೀ ಡಿಸ್ಟ್ರಿಕ್ಟಿನೊಳಗಾಗಿ ಬೇರೆ ಯಾವುದಾದರೂ ಖಜಾನೆಗೆ ಸಾಲದ ಮೊಬಲಗನ್ನು ಪಾವತಿ ಮಾಡಬೇಕೆಂದೂ ಅಪ್ಪಣೆ ಮಾಡಬಹುದು. ಆಬಾದ್ ಆಗಬೇಕಾದ ಜಮೀನು ಯಾವ ತಾಲ್ಲೂಕಿನಲ್ಲಿದೆಯೋ ಅಥವಾ ಸಾಲದ ಮೊಬಲಗನ್ನು ಯಾವ ತಾಲ್ಲೂಕಿನಲ್ಲಿ ಉಪಯೋಗಿಸಬೇಕಾಗಿದೆಯೋ ಆ ತಾಲ್ಲೂಕಿನ ಖಜಾನೆಯಲ್ಲದೆ ಬೇರೆ ಖಜಾನೆಗೆ ಸಾಲದ ಮೊಬಲಗನ್ನು ಪಾವತಿ ಮಾಡಿದಲ್ಲಿ ಹಾಗೆ ಪಾವತಿ ಮಾಡುವ ಹಣದ ಜತೆಯಲ್ಲಿ, ಬಾಕಿ ಇರುವ ಮೊಬಲಗು, ಸಾಲ ಮಂಜೂರಾದ ಹುಕುಮಿನ ನಂಬರು ಮತ್ತು ತಾರೀಖು, ಸಾಲವನ್ನು ತೆಗೆದುಕೊಂಡುದು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನ್ ಮೇರೆಗೋ ಅಥವಾ ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣದ ಮೇರೆಗೋ—ಈ ವಿವರಗಳನ್ನೆಲ್ಲಾ ಒಳಗೊಂಡ ಒಂದು ಮೆಮೋರಾಂಡಮನ್ನು ಕಳುಹಿಸಿಕೊಡಬೇಕು.

ಆಧಾರ ಯಾ ಜಾಮೀನು.

ಆಧಾರ ಯಾ ಜಾಮೀನು.

XII. ಎಷ್ಟು ಮೊಬಲಗು ಸಾಲಬೇಕಾಗಿದೆಯೋ ಅದಕ್ಕಿಂತ ಕನಿಷ್ಠಪಕ್ಷ ಕಾಲು ಭಾಗ ಹೆಚ್ಚಾದ ಬೆಲೆಯುಳ್ಳ ಸೊತ್ತನ್ನು ಆಧಾರ ಮಾಡಿದರೆ ಹೊರತು ಯಾವ ಸಾಲವನ್ನಾಗಲೀ ಮಂಜೂರ್ ಮಾಡಕೂಡದು.

ಜಮೀನು ಈ ಕೆಳಗೆ ಸೂಚಿಸಿರುವಂತೆ ಇರತಕ್ಕದ್ದು:—

(A) ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿಗನುಸಾರವಾಗಿ ತೆಗೆದುಕೊಂಡ ಸಾಲಗಳ ವಿಚಾರವಾಗಿ—

ಆಬಾದಿಗೆ ತರಬೇಕಾದ ಜಮೀನು ; ಇದರಲ್ಲಿ ಕಟ್ಟಬೇಕಾಗಿರುವ ನಿವೇಶನವೂ ಸೇರಿರಬೇಕು.

ಆಬಾದಿಗೆ ತರಬೇಕಾದ ಜಮೀನಿನಲ್ಲಿ ಅರ್ಜೀದಾರನಿಗೆ ಇರುವ ಹಕ್ಕಿನ ಬೆಲೆಯು ಕೇಳುವ ಸಾಲಕ್ಕಿಂತ ಕಾಲುಭಾಗ ಹೆಚ್ಚಾಗಿಲ್ಲದೆ ಇದ್ದಲ್ಲಿ ಬೇರೆ ಒಂದು ಆಧಾರವನ್ನು ಕೊಡಬೇಕು.

ಅಂಥಾ ಪ್ರತ್ಯೇಕವಾದ ಆಧಾರವು ಯಾವುದೆಂದರೆ :—

(i) ಅರ್ಜೀದಾರನಿಗೆ ಸೇರಿದ ಇತರೆ ಜಮೀನುಗಳು ; ಅಥವಾ

(ii) ಆತನ ಜಾಮೀನ್ದಾರರಾಗಲು ಇಷ್ಟಪಡುವ ಜನರಿಗೆ ಸೇರಿದ ಜಮೀನುಗಳು ; ಅಥವಾ

(iii) ಮೇಲ್ಕಂಡ ಎರಡು ತರಹೆಯ ಜಮೀನುಗಳೂ.

(B) ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣಾನುಸಾರ ತೆಗೆದುಕೊಂಡ ಸಾಲಗಳ ವಿಚಾರವಾಗಿ—

ಅರ್ಜೀದಾರನ ಹಿಡುವಳಿಯಲ್ಲಿರುವ ಜಮೀನುಗಳಲ್ಲಿ ಆತನಿಗಿರುವ ವಿಕ್ರಯದ ಹಕ್ಕು ಆಧಾರವಾಗಿರತಕ್ಕದ್ದು. ಪರಂತು ಸದರೀ ಹಕ್ಕಿನ ಬೆಲೆಯು ಆತನು ಕೇಳಿರುವ ಸಾಲಕ್ಕಿಂತ ಕಾಲು ಭಾಗದಷ್ಟು ಹೆಚ್ಚಾಗಿಲ್ಲದೆ ಹೋದಪಕ್ಷ ಬೇರೆ ಆಧಾರವನ್ನು ತೆಗೆದುಕೊಳ್ಳಬೇಕು ; ಸದರೀ ಆಧಾರವು ಸ್ಥಿರಸ್ವತ್ತಾಗಿರಬೇಕು.

(C) ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಬಹುದಾದ ಸಾಲವನ್ನು ಯಾವುದಾದರೊಂದು ಗ್ರಾಮಕ್ಕೆ ಸೇರಿದವರೆಲ್ಲರೂ ಆಗಲೀ ಬೇಸಾಯಗಾರರ ಒಂದು ಮಂಡಲಿಯವರಾಗಲೀ ತಮ್ಮಗಳ ಜಂಟಿ ಜಾಮೀನಿನ ಮೇಲೆ ಸಾಲವನ್ನು ಅಪೇಕ್ಷಿಸಿದಲ್ಲಿ ಡೆಪ್ಯುಟಿ ಕಮಿಷನರವರು ತಮಗೆ ಸೂಕ್ತತೋರಿದಲ್ಲಿ ಸದರೀ ಜಾಮೀನಿನ ಮೇಲೆ ಸದರೀ ಅರ್ಜಿದಾರರುಗಳ ಹೆಸರುಗಳಲ್ಲಿ ದಾಖಲಾಗಿರುವ ಜಮೀನುಗಳ ಸಾಲೀಯಾನ ಕಂದಾಯದ ಐದರಷ್ಟಕ್ಕೆ ಮೀರದೆ ಇರುವ ಮೊಬಲಗನ್ನು ಸಾಲವಾಗಿ ಕೊಡಬಹುದು.

ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣಾನುಸಾರ ಡೆಪ್ಯುಟಿ ಕಮಿಷನರವರು 100 ರೂಪಾಯಿಗೆ ಮೀರದೆ ಇರುವ ಸಾಲವನ್ನು ಎರಡು ವರ್ಷಗಳೊಳಗಾಗಿ ತೀರಿಸಬೇಕೆಂಬ ಷರತ್ತಿನ ಮೇಲೆ ಬೇಸಾಯಗಾರರ ಒಂದು ಮಂಡಲಿಗೆ ಅವರ ಜಂಟಿ ಜಾಮೀನಿನ ಮೇಲೆ ಮಂಜೂರ್ ಮಾಡಬಹುದು ; ಪರಂತು ಅರ್ಜೀದಾರರ ಜಮೀನುಗಳ ಸಾಲೀಯಾನಾ ಕಂದಾಯವು ಅವರು ಅಪೇಕ್ಷಿಸುವ ಸಾಲದಲ್ಲಿ $\frac{1}{5}$ ಭಾಗಕ್ಕಿಂತ ಕಡಮೆಯಾಗಿರಕೂಡದು ; ಮತ್ತು ವಿಶೇಷ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರವರು ಮೇಲ್ಕಂಡ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಇಂಥಾ ಸಾಲಗಳನ್ನು ಒಬ್ಬೊಬ್ಬ ಅರ್ಜೀದಾರನಿಗೂ ಆತನ ಖುದ್ ಜಾಮೀನಿನ ಮೇಲೆ ಮಂಜೂರ್ ಮಾಡಬಹುದು.

XIII. ಡೆಪ್ಯುಟಿ ಕಮಿಷನರಿಗಾಗಲೀ ಅಥವಾ ಸಾಲವನ್ನು ಮಂಜೂರ್ ಮಾಡುವ ಬೇರೊಬ್ಬ ಆಫಿಸರಿಗಾಗಲೀ ಸಾಲ ಪಡೆದುಕೊಂಡವರ್ಯಾರಾದರೂ ಯಾವ ಷರತ್ತುಗಳಿಗನುಸಾರವಾಗಿ ಸಾಲವನ್ನು ಕೊಡಲಾಯಿತೋ ಆ ಷರತ್ತುಗಳಲ್ಲಿ ಯಾವುದನ್ನಾದರೂ ನಡೆಸದೆ ತಪ್ಪಿದಂತೆ ಕಂಡುಬಂದರೆ ಅವರು ಅಂಥಾ ಮನುಷ್ಯನಿಂದಾಗಲೀ ಆತನ ಜಾಮೀನ್ದಾರರುಗಳ ಪೈಕಿ ಯಾರೊಬ್ಬರಿಂದಾಗಲೀ ಅದುವರೆಗೆ ಬಾಕಿಯಲ್ಲಿರುವ ಮೊಬಲಗನ್ನೂ, ಅದರ ಮೇಲೆ ಬಡ್ಡಿಯು ಏನಾದರೂ ಬರಬೇಕಾಗಿದ್ದಲ್ಲಿ ಸದರೀ ಬಡ್ಡಿಯನ್ನೂ ಇದಕ್ಕೆ ಖರ್ಚೇನಾದರೂ ತಗಲಿದರೆ ಅದನ್ನೂ ಜಮೀನ್ ಕಂದಾಯದ ಬಾಕಿಯು ಹಾಗೆ ತಕ್ಷಣವೇ ವಸೂಲ್ ಮಾಡಿಸಬಹುದು. ಅವರು ಹೀಗೆ ಹುಕುಂ ಮಾಡಿದ್ದಕ್ಕೆ ಕಾರಣಗಳನ್ನು ಬರಹ ಮೂಲಕವಾಗಿ ರೆಕಾರ್ಡು ಮಾಡಬೇಕು. ಪರಂತು ಅಂಥಾ ಆಫಿಸರು ತಮಗೆ ಸೂಕ್ತತೋರಿದ ಪಕ್ಷ ಸಾಲದ ಪೈಕಿ ಒಟ್ಟು ಬಾಕಿಗಿಂತ ಕಡಮೆಯಾದ ಯಾವುದಾದರೊಂದು ಮೊಬಲಗನ್ನು ವಸೂಲ್ ಮಾಡಬಹುದು ; ಹೀಗೆ ಮಾಡಿದ ಮಾತ್ರಕ್ಕೇನೇ ಬಾಕಿ ಮೊಬಲಗನ್ನು ಮುಂದೆ ಯಾವಾಗಲಾದರೂ ಅವರು ವಸೂಲು ಮಾಡತಕ್ಕ ಅಧಿಕಾರಕ್ಕೆ ಯಾವ ಕುಂದುಕವೂ ಇರುವುದಿಲ್ಲ.

ಈ ನಿಬಂಧನೆಗನುಸಾರವಾಗಿ ಸದರೀ ಆಫಿಸರು ಕೊಡುವ ತೀರ್ಮಾನನ್ನು ಯಾ ಹುಕುಮನ್ನು ರೆವಿನ್ಯೂ ಕಮಿಷನರವರು ಬದಲಾಯಿಸಬಹುದು. ರೆವಿನ್ಯೂ ಕಮಿಷನರವರ ಇಂತಹ ಹುಕುಮೇ ಆಖೈರಾಗಿರತಕ್ಕದ್ದು.

ಅರ್ಜಿಹಾಕಿಕೊಳ್ಳುವ ವಿಧಾನ.

XIV. ಸಾಲವನ್ನು ಅಪೇಕ್ಷಿಸತಕ್ಕವನು ಶೇಕದಾರೀಗೆ ಕಮ್ಮಿಯಾಗಿಲ್ಲದ ದರ್ಜೆಯ ಯಾರೊಬ್ಬ ರೆವಿನ್ಯೂ ಆಫಿಸರವರಲ್ಲಿಯಾಗಲೀ ರೂಬರೂಬ್ ಕೇಳಿಕೊಳ್ಳಬಹುದು ಅಥವಾ ಬರಹಮೂಲಕ ಅರ್ಜಿಹಾಕಿಕೊಳ್ಳಬಹುದು. ಬರಹಮೂಲಕ ಅರ್ಜಿಹಾಕಿಕೊಂಡಪಕ್ಷದಲ್ಲಿ ಸದರೀ ಅರ್ಜಿಯನ್ನು ಇದಕ್ಕೆ ಲಗತ್ತಿಸಿರುವ 1ನೆ ನಂಬರ್ ನಮೂನೆಯ ಮೇರೆಗೆ ಬರೆದಿರಬೇಕು. (ಸದರೀ ನಮೂನೆಯ ಅಚ್ಚಾದ-ಪ್ರತಿಗಳನ್ನು ಎಲ್ಲಾ ತಾಲ್ಲೂಕು ಆಫೀಸುಗಳಲ್ಲಿಯೂ, ಶೇಕದಾರರು, ಶ್ಯಾನುಭೋಗರುಗಳ ಬಳಿಯಲ್ಲಿಯೂ ಉಚಿತವಾಗಿ ಪಡೆಯಬಹುದು.) ಸದರೀ ಅರ್ಜಿಯನ್ನು ರೂಬರೂಬ್ ಕೊಡಬಹುದು; ಅಥವಾ ಟಪ್ಪಾಲ್ ಮೂಲಕವಾಗಿಯಾಗಲೀ ಗ್ರಾಮದ ಪಟೇಲ ಯಾ ಶ್ಯಾನುಭೋಗರ ಮುಖಾಂತರವಾಗಿಯಾಗಲೀ ಕಳುಹಿಸಬಹುದು. ರೂಬರೂಬ್ ಅರ್ಜಿ ಮಾಡಿಕೊಂಡಲ್ಲಿ ಯಾವ ಆಫಿಸರ ಮುಂದೆ ಅರ್ಜಿ ಮಾಡಿಕೊಳ್ಳಲಾಯಿತೋ ಆ ಆಫಿಸರು ಸದರೀ ಅರ್ಜಿ ಮೇಲ್ಕಂಡ ನಮೂನೆಯಲ್ಲಿ ದಾಖಲ್‌ಮಾಡಿಸಿ ಅದಕ್ಕೆ ಅರ್ಜಿ ಮಾಡಿಕೊಂಡವನ ದಸ್ತುಖತ್ತನ್ನು ಹಾಕಿಸಬೇಕು. ಯಾವನೊಬ್ಬ ಅರ್ಜೀದಾರನಾಗಲೀ ಅರ್ಜಿ ಬರೆದುಕೊಡಬೇಕೆಂದು ಶಾನುಭೋಗರನ್ನು ಕೇಳಿಕೊಂಡಲ್ಲಿ ಅವರು ಯಾವ ವಿಧವಾದ ರುಸುಮನ್ನೂ ತೆಗೆದುಕೊಳ್ಳದೆ ಅದನ್ನು ಬರೆದುಕೊಡಬೇಕು.

ಯಾವುದಾದರೊಂದು ಸಾಲಕ್ಕೆ ಜಮೀನನ್ನಾಗಲೀ ಇತರ ಸ್ಥಿರಸ್ವತ್ತನ್ನಾಗಲೀ ಆಧಾರ ಮಾಡುವುದಾಗಿ ಅರ್ಜಿಯಲ್ಲಿ ನಮೂದಿಷ್ಟರೆ ಸದರೀ ಅರ್ಜಿಯಲ್ಲಿ ಅರ್ಜೀದಾರನಾಗಲೀ ಅಥವಾ ಸಂದರ್ಭಾನುಸಾರ ಆತನ ಜಾಮೀನ್‌ದಾರನಾಗಲೀ ತನಗೆ ತಿಳಿದಿರುವ ಮಟ್ಟಿಗೆ ಆಧಾರವಾಗಿ ಕೊಡುವಂತೆ ನಮೂದಿಸಿರುವ ಸ್ವತ್ತಿನ ವಿಚಾರವಾಗಿ ಸದರಿ ಅರ್ಜಿಯಲ್ಲಿ ನಮೂದಿಸಿರುವುದೆಲ್ಲ ವಾಸ್ತವವೆಂಬುದಾಗಿಯೂ, ಸದರೀ ಸ್ವತ್ತಿನ ಮೇಲೆ ಇನ್ಯಾವುದೂ ಇತರ ಸಾಲಗಳಿಲ್ಲವೆಂಬದಾಗಿಯೂ ನಮೂದಿಸಿ ದಸ್‌ಖತ್ ಹಾಕಬೇಕು. ಇದಲ್ಲದೆ 1ನೆ ನಂಬರ್ ನಮೂನೆಯ "ಷರಾ" ಕಲಮಿನಲ್ಲಿ ಈ ಕೆಳಗೆ ಸೂಚಿಸುವ ಅಂಶಗಳನ್ನೂ ನಮೂದು ಮಾಡಬೇಕು:—

(i) ಅರ್ಜೀದಾರನು ತೆಗೆದುಕೊಳ್ಳುವ ಸಾಲದ ಜತೆಗೆ ಸ್ವಂತ ಬಂಡವಾಳವನ್ನೇನಾದರೂ ಉಪಯೋಗಿಸಿಕೊಳ್ಳುತ್ತಾನೆಯೇ? ಹಾಗೆ ಉಪಯೋಗಿಸಿಕೊಳ್ಳುವ ಪಕ್ಷ ಎಷ್ಟರ ಮಟ್ಟಿಗೆ?

(ii) ನಡೆಸಬೇಕಾಗಿರುವ ಕಾಮಗಾರಿಗೆ ತಗಲಬಹುದೆಂದು ಅಂದಾಜಾಗಿರುವ ಒಟ್ಟು ಖರ್ಚು ಎಷ್ಟು? ಅದನ್ನು ಕಟ್ಟಿಸಬೇಕಾದರೆ ಸುಮಾರು ಎಷ್ಟುಕಾಲ ಹಿಡಿಯಬಹುದು?

(iii) ಸದರೀ ಕಾಮಗಾರಿಯಿಂದ ಯಾವ ಯಾವ ಪ್ರಯೋಜನಗಳು ಉಂಟಾಗಬಹುದು?

(iv) ಸದರೀ ಕಾಮಗಾರಿಯಿಂದ ಬಾಜೂದಲ್ಲಿರುವ ಯಾ ಇತರ ಜಮೀನುಗಳಿಗೆ ಯಾವ ರೀತಿಯಲ್ಲಿ ಎಷ್ಟರಮಟ್ಟಿಗೆ ಪ್ರಯೋಜನವಾಗಬಹುದು ಯಾ ನಷ್ಟವಾಗಬಹುದು?

ಮೇಲ್ಕಂಡ ಅಂಶಗಳು ಅರ್ಜಿಯಲ್ಲಿ ನಮೂದಿಲ್ಲದೆ ಹೋದಪಕ್ಷ ಅರ್ಜಿಯನ್ನು ತೆಗೆದುಕೊಳ್ಳುವ ಆಫಿಸರವರು ಅರ್ಜೀದಾರನನ್ನು ವಿಚಾರಿಸುವುದರ ಮೂಲಕವಾಗಿಯಾಗಲೀ ಬೇರೆ ವಿಧವಾಗಿಯಾಗಲೀ ಸದರೀ ಅಂಶಗಳನ್ನು ತಿಳಿದುಕೊಂಡು ಅವುಗಳನ್ನು ಸದರೀ ಅರ್ಜಿಯ ಮೇಲೆ ಅಥವಾ ಅದಕ್ಕೆ ಲಗತ್ತಿಸುವ ಒಂದು ಕಾಗದದಲ್ಲಿ ದಾಖಲ್ ಮಾಡಬೇಕು; ಅಲ್ಲದೆ ಅವುಗಳನ್ನು ಅರ್ಜೀದಾರನಿಗೆ ಓದಿಹೇಳಿ ಎಲ್ಲವೂ ಸರಿಯಾಗಿರುವುದೆಂಬ ಬಗ್ಗೆ ಆತನ ದಸ್ತುಖತ್ತನ್ನು ಪಡೆಯಬೇಕು.

XV. ಸ್ಥಳೀಯ ವಿಚಾರಣೆ ಇಲ್ಲದೆ ಯಾವ ಸಾಲವನ್ನಾಗಲೀ ಮಂಜೂರ್ ಮಾಡಕೂಡದು. 500 ರೂಪಾಯಿಗಳಿಗಿಂತ ಜಾಸ್ತಿ ಮೊಬಲಗಿನ ಬಗ್ಗೆ ಅರ್ಜಿ ಬಂದಾಗ ಅಮಲ್ದಾರ ಯಾ ಡೆಪ್ಯುಟಿ ಅಮಲ್ದಾರರ ದರ್ಜೆಗಿಂತ ಕಮ್ಮಿ ದರ್ಜೆಯವರಲ್ಲದ ಆಫೀಸರು ಸ್ಥಳೀಯ ವಿಚಾರಣೆಯನ್ನು ನಡೆಸಬೇಕು. ಒಂದು ಅರ್ಜಿಯು ತಮಗೆ ತಲಪಿದನಂತರ ಅಥವಾ ಒಂದು ಅರ್ಜಿಯು ತಮ್ಮ ಹುಕುಂ ಬಗ್ಗೆ ಕಳುಹಿಸಲ್ಪಟ್ಟನಂತರ ಶೇಕದಾರರಾಗಲೀ ಅಥವಾ ಅವರ ಮೇಲ್ಪಟ್ಟ ಆಫಿಸರರಾಗಲೀ ಸದರೀ ಅರ್ಜಿಯ ವಿಷಯವಾಗಿ ವಿಚಾರಣೆ ನಡೆಸುವುದಾಗಿಯೂ, ಸದರೀ ಸಾಲವನ್ನು ಮಂಜೂರ್ ಮಾಡುವ ವಿಚಾರದಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ತಿಳಿಸಿದರೆ ಆ ವಿಷಯವಾಗಿ ವಿಚಾರಣೆ ನಡಿಸುವುದಾಗಿಯೂ ಸದರೀ ಗ್ರಾಮದಲ್ಲಿ ದಂಡೋರೆಯ ಮೂಲಕ ಪ್ರಸಿದ್ಧಪಡಿಸತಕ್ಕದ್ದು. ಈ ರೀತಿ ಪ್ರಸಿದ್ಧಪಡಿಸಿದ ನಂತರ ಸಾಧ್ಯವಾದಷ್ಟು ಜಾಗ್ರತೆಯಾಗಿ ಸದರೀ ಆಫಿಸರವರು ಜಮೀನು ಯಾವುದಾದರೂ ಇದ್ದರೆ ಅದನ್ನು ಅಜಮಾಯಿಷಿ ಮಾಡಿ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳೆಲ್ಲವೂ ವಾಸ್ತವವಾದುವುಗಳೇ ಎಂಬ ವಿಚಾರದಲ್ಲಿ ಸದರೀ ಗ್ರಾಮದಲ್ಲಿ ಫ್ರೂಟ್ ವಿಚಾರಣೆ ನಡೆಸತಕ್ಕದ್ದು.

XVI. ಅರ್ಜೀದಾರನು ಖುದ್ದಾಗಿ ಹಾಜರಾಗಬೇಕಾದುದು ಅವಶ್ಯಕವಿಲ್ಲ; ಆದರೆ ಯಾವ ಸಮಯದಲ್ಲಾಗಲೀ ಆತನ ಇಷ್ಟಾನುಸಾರ ಖುದ್ದಾಗಿ ಯಾ ಅಧಿಕಾರ ಹೊಂದಿದ ಮುತಾಲೀಕನ ಮೂಲಕ ಆತನು ಹಾಜರಾಗಬೇಕೆಂದು ಇದಕ್ಕೆ ಲಗತ್ತಿಸಿರುವ 4ನೆ ನಂಬರ್ ನಮೂನೆಯ ಮೂಲಕ ಅಥವಾ ಅದೇ ತರಹೆಯ ಬೇರೆ ನಮೂನೆಯಲ್ಲಿ ಆತನಿಗೆ ನೋಟಿಸ್ ಜಾರೀ ಮಾಡಬಹುದು; ಅಲ್ಲದೆ ಅದರಂತೆ ಆತನು ಹಾಜರಾಗಲು ತಪ್ಪಿದಪಕ್ಷ ಅರ್ಜಿಯನ್ನು ತಿರಸ್ಕರಿಸಬಹುದು.

XVII. ಅರ್ಜೀದಾರನು ವಾಜಬಿಯಾಗಿ ಜಮೀನ್ ಆಬಾದಿಗಾಗಿಯೇ ಸಾಲವನ್ನು ಕೇಳುತ್ತಾನೆಯೇ ಎಂಬುದನ್ನು ಆತನು ದಡವತ್ತು ಆಸಾಮಿಯೋ ಅಲ್ಲವೇ ಎಂಬುದನ್ನೂ, ಆತನು ಕೊಡುವುದಾಗಿ ತಿಳಿಸಿರುವ ಆಧಾರವು ಸಾಕೇ ಅಲ್ಲವೇ ಎಂಬುವನ್ನೂ ತಿಳಿದುಕೊಳ್ಳುವ ವಿಚಾರದಲ್ಲಿ ವಿಶೇಷವಾಗಿ ಗಮನ ಕೊಡಬೇಕು. ಆಧಾರವಾಗಿ ಕೊಡುವಂತೆ ಹೇಳುವ ಜಮೀನುಗಳು ಅರ್ಜೀದಾರನ ಸ್ವಂತ ಜಮೀನುಗಳೇ ಅಲ್ಲವೇ ಎಂಬುದನ್ನೂ, ಸದರೀ ಜಮೀನು ಬೇರೆ ವಿಧವಾಗಿ ಅಡಮಾನವಾಗಿಲ್ಲವೆಂಬುದನ್ನೂ, ಅದರ ಮೇಲೆ ಕಂದಾಯದ ಬಾಕಿಯು ಯಾವುದೂ ಇಲ್ಲವೆಂಬುದನ್ನೂ, ಇದಕ್ಕೆ ಮುಂಚೆಯೇ ಪಡೆದುಕೊಂಡಿದ್ದ ಯಾವುದೋ ಒಂದು ಸಾಲಕ್ಕಾಗಿ ಸದರೀ ಜಮೀನು ಸರ್ಕಾರಕ್ಕೆ ಆ ಮುಂಚೆಯೇ ಅಡಮಾನವಾಗಿಲ್ಲವೆಂಬುದನ್ನು ದೃಢಪಡಿಸಿಕೊಳ್ಳತಕ್ಕ ಬಗ್ಗೆ ಜಮೀನಿನಲ್ಲಿ ಅರ್ಜೀದಾರನಿಗೆ ಎಷ್ಟರ ಮಟ್ಟಿಗೆ ಹಕ್ಕು ಇದೆ ಎಂಬ ವಿಷಯವನ್ನು ತುಂಬಾ ಎಚ್ಚರಿಕೆಯೊಡನೆ ವಿಚಾರ ಮಾಡಬೇಕು. ಜಾಮೀನ್‌ದಾರರು ಆಧಾರವಾಗಿ ಕೊಡುವಂತೆ ತಿಳಿಸುವ ಜಮೀನುಗಳ ವಿಷಯದಲ್ಲಿಯೂ ಇದೇ ವಿಧವಾದ ವಿಚಾರಣೆಯನ್ನು ನಡೆಸ

ಬೇಕು ; ಅಲ್ಲದೆ ಜಾಮೀನ್ದಾರನು ಸದರೀ ಜಮೀನಿನ ಪಟ್ಟೇದಾರನಾಗಿರುವುದು ಮಾತ್ರವೇ ಅಲ್ಲ ; ಜಮೀನು ಆತನ ಸ್ವಂತಕ್ಕೆ ಸೇರಿದೆ—ಎಂಬ ವಿಚಾರದಲ್ಲಿಯೂ, ಒಂದುವೇಳೆ ಸದರಿ ಜಮೀನಿನಲ್ಲಿ ಇತರ ಹಕ್ಕುದಾರರೊಂದಿಗೆ ಆತನಿಗೂ ಒಂದು ಭಾಗದ ಹಕ್ಕು ಮಾತ್ರವೇ ಇದ್ದಪಕ್ಷ ಜಂಟಿ ಜಮೀನ್ದಾರರ ಬರಹಮೂಲಕವಾದ ಸಮ್ಮತಿ ಇಲ್ಲದೆ ತನ್ನ ಸ್ವಂತ ಹಕ್ಕಿಗಿಂತ ಜಾಸ್ತಿಯಾದ ಭಾಗವನ್ನು ಆಧಾರ ಮಾಡಿಲ್ಲವೆಂಬ ವಿಚಾರದಲ್ಲಿಯೂ ಸರಿಯಾಗಿ ವಿಚಾರಿಸಬೇಕು. ಜಮೀನನ್ನಾಗಲೀ ಅಥವಾ ಇತರ ಸ್ಥಿರಸ್ವತ್ತನ್ನಾಗಲೀ ಜಮೀನ್ ಆಬಾದಿಗಾಗಿ ಕೊಡತಕ್ಕ ಸಾಲಗಳಿಗೆ ಸಂಬಂಧಪಟ್ಟ ಕಾನೂನಿನಮೇರೆಗೆ ಸಾಲಪಡೆಯುವ ಬಗ್ಗೆ ಅಥವಾ ಮೈಸೂರು ಲ್ಯಾಂಡ್ ರವಿನ್ಯೂ ಕೋಡಿನ 194ನೆ ಪ್ರಕರಣಕ್ಕನುಸಾರವಾಗಿ ಸಾಲಪಡೆಯುವ ಬಗ್ಗೆ ಜಾಮೀನ್ ಕೊಡುವುದಾಗಿ ತಿಳಿಸಿದಾಗ, ಡೆಪ್ಯುಟಿ ಕಮಿಷನರಾಗಲೀ ಅಥವಾ ಸದರೀ ಸಾಲವನ್ನು ಕೊಡಲು ಅಧಿಕಾರವುಳ್ಳ ಇತರ ಆಫೀಸರಾಗಲೀ ತಮಗೆ ಅಗತ್ಯ ಯಾ ಸೂಕ್ತ ಕಂಡುಬಂದರೆ ಕಾರಣಗಳನ್ನು ಬರಹ ಮೂಲಕ ರಿಕಾರ್ಡ್ ಮಾಡಿ ಇದಕ್ಕೆ ಲಗತ್ತಿರುವ VIIನೆ ನಂಬರ್ ನಮೂನೆಯಲ್ಲಿಯಾ ಅದೇ ತರಹೆಯ ಇತರ ನಮೂನೆಯಲ್ಲಿ ಯಾರ ಸ್ವತ್ತನ್ನು ಜಾಮೀನಾಗಿ ಕೊಡಲು ಒಪ್ಪಿಗೆಯಾಗಿದೆಯೋ ಅಂತಹ ಸ್ವತ್ತಿನ ವಿಚಾರವಾಗಿ ಅದು ಪರಾಧೀನವಾಗಿದೆಯೋ ಇಲ್ಲವೇ ಎಂಬ ಬಗ್ಗೆ ಸರ್ಟಿಫಿಕೇಟ್ ಪಡೆಯುವುದಕ್ಕೋಸ್ಕರ ರಿಜಿಸ್ಟ್ರೇಷನ್ ಇಲಾಖೆಗೆ ಬರೆಯಬಹುದು. ಹಾಗಿಲ್ಲದೆ, ಆಬಾದುಮಾಡತಕ್ಕ ಜಮೀನೇ ಜಾಮೀನಾಗಿ ಅಂಗೀಕರಿಸಲ್ಪಟ್ಟ ಸಂದರ್ಭಗಳಲ್ಲೆಲ್ಲಾ ಹಾಗೆ ಬರೆಯಬೇಕಾದುದಿಲ್ಲ. ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ದಾಖಲೆಗಳನ್ನು ಹುಡುಕಬೇಕಾದರೆ ಸಾಲಕ್ಕಾಗಿ ದರಖಾಸ್ತು ಬಂದ ತಾರೀಖಿನ ಹಿಂದೆ 12 ವರ್ಷಗಳ ದಾಖಲೆಗಳಲ್ಲಿ ಮಾತ್ರ ಹುಡುಕಬೇಕು.

XVIII. ಸ್ಥಳೀಯ ವಿಚಾರಣೆ ನಡೆಸುವುದರಲ್ಲಿ ಸಹಾಯ ಮಾಡುವುದಕ್ಕಾಗಿ ಸಾಧ್ಯವಾಗುವ ಕಡೆಗಳಲ್ಲೆಲ್ಲಾ ಸರ್ಕಾರಿ ಉದ್ಯೋಗಸ್ಥರಲ್ಲದಿರುವ ಖಾಸಗೀ ಜನರನ್ನೂ ನಿಯಮಿಸಿಕೊಳ್ಳಬಹುದು.

XIX. ಸಾಲಕ್ಕಾಗಿ ಬಂದ ಅರ್ಜಿಯ ವಿಚಾರವಾಗಿ ಸ್ಥಳೀಯ ವಿಚಾರಣೆಯನ್ನು ನಡೆಸುವ ಆಫೀಸರು ತಾವು ನಡೆಸಿದ ವಿಚಾರಣೆಯ ಫಲಿತಾಂಶವನ್ನೂ, ತಮ್ಮ ರೂಬರೂಬ್ ಬಂದ ಆಕ್ಷೇಪಣೆಗಳನ್ನು ಒಪ್ಪಿಕೊಂಡ ಬಗ್ಗೆ ಅಥವಾ ತಿರಸ್ಕರಿಸಿದ ಬಗ್ಗೆ ಇದಕ್ಕೆ ಲಗತ್ತಿಸಿರುವ 6ನೆ ನಂಬರ್ ನಮೂನೆಯಲ್ಲಿ ಅಥವಾ ಅದಕ್ಕೆ ಸಮನಾದ ಬೇರೊಂದು ನಮೂನೆಯಲ್ಲಿ ರಿಕಾರ್ಡು ಮಾಡಬೇಕು ; ಅಲ್ಲದೆ ಸದರೀ ಆಫೀಸರಿಗೆ ಸದರೀ ಅರ್ಜಿಯನ್ನು ತಾವೇ ವ್ಯವಸ್ಥೆಮಾಡಲು ಅಧಿಕಾರವಿಲ್ಲದಿದ್ದರೆ ಹಾಗೆ ವ್ಯವಸ್ಥೆ ಮಾಡಲು ಅಧಿಕಾರವಿರುವ ಆಫೀಸರಿಗೆ ಮೇಲ್ಕಂಡ ನಮೂನೆಯಲ್ಲಿ ಒಂದು ರಿಪೋರ್ಟನ್ನು ಜಾಹಿರ್ ಮಾಡಬೇಕು.

XX. ಭೋಗ್ಯದಾರರುಗಳು ಭೋಗ್ಯದ ಸ್ವತ್ತಿನ ಸ್ವಾಧೀನವನ್ನು ಪಡೆದಿದ್ದರೂ ಕೂಡ ಅಂಥಾವರು ಜಮೀನಿನ ಆಬಾದಿಗಾಗಿ ಸಾಲಗಳನ್ನು ಕೊಡಿಸಬೇಕೆಂದು ಅರ್ಜಿಗಳನ್ನು ಹಾಕಿಕೊಂಡಲ್ಲಿ ಅವರ ಕೋರಿಕೆ ಪ್ರಕಾರ ಸಾಲಕೊಡಕೂಡದು.

XXI. ಜಮೀನಿನ ಆಬಾದಿಗಾಗಿ ಅರ್ಜಿ ಹಾಕಿಕೊಂಡಿರತಕ್ಕವನು ಗೇಣೀದಾರನಾಗಿದ್ದು ಆಬಾದಾಗಬೇಕಾದ ಜಮೀನಿನಲ್ಲಿ ಅದನ್ನು ವರ್ಗ ಪಡಿಸಲು ಹಕ್ಕು ತನಗೆ ಇರುವುದೆಂತಲೂ, ಸದರೀ ಸಾಲಕ್ಕೆ ತನ್ನ ಹಕ್ಕನ್ನು ಅಥವಾ ಬೇರೊಂದು ಯೋಗ್ಯವಾದ ಸ್ವತ್ತನ್ನು ಆಧಾರ ಮಾಡುವುದಾಗಿಯೂ ತಿಳಿಸಿದಲ್ಲಿ ಡೆಪ್ಯುಟಿ ಕಮಿಷನರವರು ಅಥವಾ ಸಾಲವನ್ನು ಮಂಜೂರ್ಮಾಡುವ ಬೇರೊಬ್ಬ ಆಫೀಸರು ಅರ್ಜಿಯು ಬಂದಿರುವ ವಿಚಾರವಾಗಿ ಇದಕ್ಕೆ ಲಗತ್ತಿಸಿರುವ 3ನೆ ನಂಬರ್ ನಮೂನೆಯಲ್ಲಿ ಯಾ ಅದಕ್ಕೆ ಸಮನಾದ ಬೇರೆ ನಮೂನೆಯಲ್ಲಿ ಜಮೀನ್ದಾರನಿಗೆ ಪ್ರತ್ಯೇಕವಾದ ಒಂದು ನೋಟೀಸನ್ನು ಜಾರೀಮಾಡಬೇಕು ; ಹಾಗೆ ಖುದ್ದು ಜಾರಿ ಮಾಡುವುದು ಸಾಧ್ಯವಾಗದೆಹೋದಪಕ್ಷ ಸದರೀ ನೋಟೀಸನ್ನು ಆತನ ಹೆಸರಿಗೆ ಟಪಾಲ್ ಮೂಲಕ ಕಳುಹಿಸಬೇಕು ; ಅಲ್ಲದೆ ಅದರ ನಕಲನ್ನು ಆತನ ಸಾಮಾನ್ಯ ವಾಸಸ್ಥಾನದಲ್ಲಿ ಎಲ್ಲರಿಗೂ ಕಾಣಬರುವ ಸ್ಥಳದಲ್ಲಿಯೂ ಡೆಪ್ಯುಟಿ ಕಮಿಷನರವರ ಯಾ ಹಿಂದೆ ಹೇಳಿದ ಬೇರೆ ಆಫೀಸರವರ ಕಚೇರಿಯಲ್ಲಿ ಎಲ್ಲರಿಗೂ ಕಾಣಬರುವ ಸ್ಥಳದಲ್ಲಿಯೂ ಚಿಕಟಾಯಿಸಬೇಕು ; ಅಥವಾ ಆತನು ಯಾವ ಡಿಸ್ಟ್ರಿಕ್ಟಿನಲ್ಲಿ ಅರ್ಜಿ ಹಾಕಿಕೊಳ್ಳುತ್ತಾನೆಯೋ ಆ ಡಿಸ್ಟ್ರಿಕ್ಟಿನಲ್ಲಿ ವಾಸಿಸದೆ ಇದ್ದಲ್ಲಿ ಅಥವಾ ಆತನ ವಾಸಸ್ಥಾನವು ಗೊತ್ತಿಲ್ಲದೆಹೋದಲ್ಲಿ ಸದರೀ ನೋಟೀಸನ್ನು ಮೇಲ್ಕಂಡ ಜಮೀನಿನ ವಿಷಯದಲ್ಲಿ ಆತನಿಗೆ ಸ್ಥಳೀಯ ಮುತಾಲೀಕನಾಗಿರುವ ಮನುಷ್ಯನ ಮೇಲೆ ಜಾರಿಮಾಡಬೇಕು. ಅಲ್ಲದೆ ಸದರೀ ನೋಟೀಸಿನ ನಕಲನ್ನು ಜಮೀನಿನಮೇಲೆಯೂ, ಗ್ರಾಮ ಚಾವಡಿಯಲ್ಲಿಯೂ ಚಿಕಟಾಯಿಸಬೇಕು.

XXII. ಸದರೀ ನೋಟೀಸು ಜಾರಿಯಾಗಿರುತ್ತದೆಂದು ಜಮೀನ್ದಾರನಾಗಲೀ ಆತನ ಮುತಾಲೀಕನಾಗಲೀ ಒಪ್ಪಿಕೊಂಡ ರಹೂತ್ತಾರ್ ಅಥವಾ ಮೇಲೆಹೇಳಿದ ಯಾವುದಾದರೊಂದು ರೀತಿಯಲ್ಲಿ ಕ್ರಮವಾಗಿ ನೋಟೀಸು ಜಾರಿಯಾಗಿರುತ್ತದೆಂದು ಡೆಪ್ಯುಟಿ ಕಮಿಷನರವರಿಗೆ ಯಾ ಸಾಲವನ್ನು ಮಂಜೂರ್ಮಾಡುವ ಇತರ ಆಫೀಸರರಿಗೆ ತೃಪ್ತಿಕರವಾಗಿ ಕಂಡುಬಂದರ ಹೊರ್ತು ಸದರೀ ನೋಟೀಸು ಜಾರಿಯಾಗಿರುತ್ತದೆಂದು ಭಾವಿಸಕೂಡದು. ಜಮೀನು ಒಬ್ಬ ಮನುಷ್ಯನಿಗಿಂತ ಹೆಚ್ಚು ಜನರಿಗೆ ಸೇರಿದ್ದು ಆ ... ಯಾವನೊಬ್ಬ ಹಿಸ್ಸೇದಾರನಾಗಲೀ ಯಾ ಬೇರೊಬ್ಬ ಮನುಷ್ಯನಾಗಲೀ ಹಿಸ್ಸೆದಾರರ ಪರವಾಗಿ ಕಾರ್ಯನಿರ್ವಾಹಕನಾಗಿದ್ದಲ್ಲಿ ಅಂಥಾ ಕಾರ್ಯನಿರ್ವಾಹಕನಮೇಲೆ ನೋಟೀಸು ಜಾರಿಮಾಡಿದಲ್ಲಿ ಪ್ರತಿ ಒಬ್ಬ ಹಿಸ್ಸೇದಾರನಮೇಲೆಯೂ ಜಾರಿಯಾದಂತೆ ಭಾವಿಸಬೇಕು.

XXIII. ಇಂಥಾ ಪ್ರತಿ ನೋಟೀಸಿನಲ್ಲಿಯೂ ಸಾಲವಾಗಿ ಅಪೇಕ್ಷಿಸಿರುವ ಮೊಬಲಗು ಇಷ್ಟೆಂಬುದನ್ನೂ, ಮಾಡಬೇಕಾದ ಆಬಾದಿನ ತರಹೆಯು ಇಂಥಾದ್ದೆಂಬುದನ್ನೂ, ಸಾಲಕ್ಕೆ ಆಧಾರಮಾಡುವ ಅಡಮಾನವು ಇಂಥಾದ್ದೆಂಬುದನ್ನೂ ಸ್ಪಷ್ಟಪಡಿಸಬೇಕಲ್ಲದೆ ಸಾಲವನ್ನು ಮಂಜೂರ್ಮಾಡುವ ವಿಚಾರವಾಗಿ ಜಮೀನ್ ಹಿಡುವಳೀದಾರನು ಆಕ್ಷೇಪಣೆಗಳನ್ನೇನಾದರೂ ತರುವ ಇಷ್ಟವಿದ್ದಲ್ಲಿ ನೋಟೀಸ್ ಜಾರಿಯಾದ ಒಂದು ತಿಂಗಳೊಳಗಾಗಿ ಡೆಪ್ಯುಟಿ ಕಮಿಷನರವರಲ್ಲಿಗೆ ಯಾ ಸಾಲವನ್ನು ಮಂಜೂರ್ಮಾಡುವ ಇತರ ಆಫೀಸರವರಲ್ಲಿಗೆ ಸದರೀ ಆಕ್ಷೇಪಣೆಗಳನ್ನು ಬರಹಮೂಲಕವಾಗಿ ತಿಳಿಯಪಡಿಸಬೇಕು.

ಜಮೀನ್ ಹಿಡುವಳೀದಾರನಾಗಲೀ, ಆತನ ಸ್ಥಳೀಯ ಮುತಾಲೀಕನಾಗಲೀ, ಕಾರ್ಯನಿರ್ವಾಹಕನಾಗಲೀ ಆಕ್ಷೇಪಣೆಗಳನ್ನು ತಿಳಿಸದೆಹೋದಲ್ಲಿ ಅಥವಾ ಡೆಪ್ಯುಟಿ ಕಮಿಷನರವರು ಯಾ ಸಾಲವನ್ನು ಮಂಜೂರ್ಮಾಡುವ ಇತರ ಆಫೀಸರು ಸದರೀ ಆಕ್ಷೇಪಣೆಗಳನ್ನು ಪರ್ಯಾಲೋಚಿಸಿದನಂತರ ಅರ್ಜಿದಾರನು ತನ್ನ ಅರ್ಜಿಯಲ್ಲಿ ನಮೂದಿಸುವ ಜಮೀನನ್ನು ವರ್ಗಪಡಿಸುವ ಹಕ್ಕು ಆತನಿಗೆ ಉಂಟೆಂತಲೂ, ಆತನ ಹಕ್ಕಿನ ಜಮೀನಿನ ಬೆಲೆಯೊಂದೇ ಆಗಲಿ ಅಥವಾ ಅದರಜೊತೆಗೆ ಆತನು ಆಧಾರವಾಗಿ ಕೊಟ್ಟಿರುವ ಇತರ ಸ್ವತ್ತುಗಳ ಬೆಲೆಯೇ ಆಗಲಿ ಸಾಲಕ್ಕೆ ಸಾಕಾದಷ್ಟಾಗಿದ್ದರೆ ಸದರೀ ಆಫೀಸರು ಸಾಲವನ್ನು ಮಂಜೂರ್ಮಾಡಬಹುದು ; ಅಥವಾ ಅರ್ಜಿಯನ್ನು ಫೈಸಲ್ಮಾಡಲು ಅಧಿಕಾರವುಳ್ಳ ಮೇಲ್ಪಟ್ಟ ಆಫೀಸರಲ್ಲಿಗೆ ಮಂಜೂರಿಬಗ್ಗೆ ರೆಕಾರ್ಡ್ಗಳನ್ನೂ ಕಳುಹಿಸಿಕೊಡಬಹುದು.

ಅರ್ಜಿದಾರನಿಗೆ ಜಮೀನನ್ನು ವರ್ಗಪಡಿಸುವ ಹಕ್ಕು ಇಲ್ಲದೆಹೋದಲ್ಲಿ ಮತ್ತು ಆಬಾದನ್ನು ಮಾಡಿಸುವ ಹಕ್ಕನ್ನು ಗೇಣೀದಾರನು ಹೊಂದಬೇಕೇ ಜಮೀನ್ ಹಿಡುವಳೀದಾರನು ಹೊಂದಬೇಕೇ ಎಂಬ ವಿಚಾರವಾಗಿ ಅವರವರಲ್ಲಿ ಒಪ್ಪಂದವೇನೂ ಇಲ್ಲದೆಹೋದಲ್ಲಿ ಸಾಲವನ್ನು ಮಂಜೂರ್ಮಾಡಬಹುದೆಂದು ಜಮೀನ್ ಹಿಡುವಳೀದಾರನು ಒಪ್ಪಿದರ ಹೊರತು ಸಾಲವನ್ನು ಮಂಜೂರ್ಮಾಡುವದಿಲ್ಲವೆಂದು ತಿರಸ್ಕರಿಸಬೇಕು.

XXIV. ಕಾಮಗಾರಿಯನ್ನು ನಡೆಸಬೇಕಾದರೆ ಇಂಜನಿಯರ್ ಮುಂತಾದವರ ಬುದ್ಧಿ ಕುಶಲತೆಯನ್ನು ಉಪಯೋಗಿಸುವುದು ಅವಶ್ಯಕವಿರುವ ಸಂದರ್ಭದಲ್ಲಿ ಅರ್ಜೀದಾರನು ಸ್ಥಳೀಯ ವಿಚಾರಣೆಯನ್ನು ನಡೆಸುವ ಆಫೀಸರವರಲ್ಲಿಗೆ ಸದರೀ ಕಾಮಗಾರಿಯ ಯಥಾರ್ಥವಾದ ಒಂದು ನಕ್ಷೆಯನ್ನೂ, ವಿವರವನ್ನೂ, ಅಂದಾಜನ್ನೂ ಜಾಹಿರ್ಮಾಡಿಕೊಳ್ಳಬೇಕೆಂದು ಅಪೇಕ್ಷಿಸಬಹುದು. ಅಂಥಾ ನಕ್ಷೆ, ಅಂದಾಜು ಯಾ ವಿವರವನ್ನು ಅರ್ಜೀದಾರನು ಹಾಜರ್ಪಡಿಸಲಾರದೆಹೋದಲ್ಲಿ ಡೆಪ್ಯುಟಿ ಕಮಿಷನರವರು ಅವುಗಳನ್ನು ತಯಾರ್ಮಾಡುವುದಕ್ಕೆ ಸಾಕಾಗುವಷ್ಟು ಮೊಬಲಗನ್ನು ಅರ್ಜೀದಾರನು ಠೇವಣಾತಿ ಇಡಬೇಕೆಂತಲಾಗಲೀ ಅಥವಾ ಅವರಿಗೆ ಸೂಕ್ತ ತೋರುವಪಕ್ಷ ಸದರೀ ಮೊಬಲಗನ್ನು ಪಾವತಿ ಮಾಡುವ ಬಗ್ಗೆ ಜಾಮೀನ್ ಕೊಡಬೇಕೆಂತಲಾಗಲೀ ನಿರ್ಬಂಧಪಡಿಸಿದನಂತರ ಅರ್ಜೀದಾರನಪರವಾಗಿ ತಾವೇ ಅವುಗಳನ್ನು ತಯಾರ್ಮಾಡಿಸಬಹುದು. ವಿಶೇಷ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಸೂಕ್ತ ತೋರುವಪಕ್ಷ ಸದರೀ ಮೊಬಲಗನ್ನು ಮಾಫ್ ಮಾಡಬಹುದು.

XXV. ಮಂಜೂರ್ ಮಾಡಬೇಕಾಗಿರುವ ಸಾಲವು 500 ರೂಪಾಯಿಗಳಿಗೆ ಮೀರಿದರೆ ನಡೆಸಬೇಕಾಗಿರುವ ಕಾಮಗಾರಿಯು ಸಾಧ್ಯವೇ ಎಂಬ ವಿಷಯದಲ್ಲಿಯೂ, ಅದಕ್ಕಾಗಿ ತಗಲುವ ಸುಮಾರು ಖರ್ಚಿನ ವಿಷಯದಲ್ಲಿಯೂ, ಸಾಮಾನ್ಯವಾದ ಇತರ ವಿವರಗಳ ವಿಷಯದಲ್ಲಿಯೂ ಡೆಪ್ಯುಟಿ ಕಮಿಷನರವರು ಎಗ್ಜಿಕ್ಯೂಟಿವ್ ಇಂಜನಿಯರವರ ಅಭಿಪ್ರಾಯವನ್ನು ಪಡೆಯಬೇಕು. ಬೇರೆ ಸಂದರ್ಭದಲ್ಲಿಯೂ ಕೂಡ ಅವಶ್ಯವಿದ್ದರೆ ಅರ್ಜಿಯನ್ನು ವ್ಯವಸ್ಥೆ ಮಾಡುವ ಆಫೀಸರವರು ಮೇಲ್ಕಂಡಂತೆ ಇಂಜನಿಯರವರ ಅಭಿಪ್ರಾಯವನ್ನು ಪಡೆಯಲು ಅಧಿಕಾರವುಳ್ಳವರಾಗಿರತಕ್ಕದ್ದು.

ಸಾಲದ ಮಂಜೂರೀ ಬಗ್ಗೆ ಹುಕುಂ.

XXVI. ಸ್ಥಳೀಯ ವಿಚಾರಣೆಯನ್ನೂ, ಅವಶ್ಯಕವೆಂದು ತೋರುವ ಇತರ ತನಿಖೆಯನ್ನೂ ನಡೆಸಿದ ನಂತರ ಸದರೀ ಸಾಲವನ್ನು ಮಂಜೂರ್ಮಾಡಬಹುದೆಂದು ಡೆಪ್ಯುಟಿ ಕಮಿಷನರಾಗಲೀ ಸಾಲವನ್ನು ಮಂಜೂರ್ ಮಾಡುವ ಇತರ ಆಫೀಸರಾಗಲೀ ಅಭಿಪ್ರಾಯಪಟ್ಟಲ್ಲಿ ಎಷ್ಟು ಮೊಬಲಗು ಬೇಕೆಂದು ಕೇಳಿರುತ್ತದೆಯೋ ಅಷ್ಟು ಮೊಬಲಗನ್ನಾಗಲಿ, ಅದಕ್ಕಿಂತ ಕಮ್ಮಿ ಮೊಬಲಗನ್ನಾಗಲಿ ಸಾಲ ಕೊಡಬಹುದೆಂದು ರಿಕಾರ್ಡು ಮಾಡಿ ಸದರಿ ಸಾಲವನ್ನು ಮಂಜೂರ್ಮಾಡಿದ ಬಗ್ಗೆ ಕೂಡಲೇ ಹುಕುಂ ಕೊಡಬೇಕು. ಸಾಲವು 1,000 ರೂಪಾಯಿಗಳಿಗೆ ಮೀರಿದ್ದರೆ, ಡೆಪ್ಯುಟಿ ಕಮಿಷನರವರು IIನ ನಿಬಂಧನೆಯ ಮೇರೆಗೆ ಆಯಾ ಸಂದರ್ಭಾನುಸಾರ ರೆವಿನ್ಯೂ ಕಮಿಷನರವರ ಅಥವಾ ಸರ್ಕಾರದವರ ಮಂಜೂರ್ ಹುಕುಮನ್ನು ಪಡೆದು ಸಾಲವನ್ನು ಮಂಜೂರ್ಮಾಡಬಹುದು.

XXVII. ಸಾಲವನ್ನು ಮಂಜೂರ್ಮಾಡುವ ಹುಕುಮು ಇದಕ್ಕೆ ಲಗತ್ತಿಸಿರುವ 8ನೆ ನಂಬರ್ ನಮೂನೆಯಂತೆ ಇರತಕ್ಕದ್ದು; ಅಲ್ಲದೆ ಇದರಲ್ಲಿನ ಷರತ್ತುಗಳನ್ನೆಲ್ಲಾ ಅರ್ಜೀದಾರನು ತಿಳಿದುಕೊಂಡು ಅವುಗಳಿಗೆ ಒಪ್ಪಿರುತ್ತಾನೆಂಬ ಬಗ್ಗೆ ಸದರೀ ಹುಕುಮಿನಲ್ಲಿ ಆತನ ದಸ್ತಖತ್ತನ್ನು ಹಾಕಿಸತಕ್ಕದ್ದು. ಸಾಲವನ್ನು ತೆಗೆದುಕೊಳ್ಳುವವರು ಅಥವಾ ಜಾಮೀನ್‌ದಾರರು ಜಾಮೀನನ್ನಾಗಲಿ, ಜಮೀನ್ ಯಾ ಇತರ ಸ್ಥಿರಸ್ವತ್ತಿನ ಆಧಾರವನ್ನಾಗಲೀ ಕೊಡುವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಆಧಾರಪತ್ರವು ಇದಕ್ಕೆ ಲಗತ್ತಿಸಿರುವ 9 ಎ, 9 ಬಿ, 10 ಎ, 10 ಬಿ—ಈ ನಮೂನೆಗಳ ಪೈಕಿ ಯಾವುದಾದರೂ ಒಂದರ ಮೇರೆಗಾಗಲೀ ಅಥವಾ ಅದಕ್ಕೆ ಸಮನಾದ ಬೇರೊಂದು ನಮೂನೆಯ ಮೇರೆಗಾಗಲೀ ಇರತಕ್ಕದ್ದು.

ಸಾಲಕ್ಕಾಗಿ ಬಂದ ಅರ್ಜಿಯನ್ನು ತಿರಸ್ಕರಿಸಿ ಹುಕುಂ ಕೊಡಬೇಕಾದರೆ ಇದಕ್ಕೆ ಲಗತ್ತಿಸಿರುವ 5ನೆ ನಂಬರ್ ನಮೂನೆಯ ಮೇರೆಗಾಗಲೀ ಅಥವಾ ಅದಕ್ಕೆ ಸಮನಾದ ಬೇರೊಂದು ನಮೂನೆಯ ಮೇರೆಗಾಗಲಿ ಅರ್ಜೀದಾರನಿಗೆ ಸದರಿ ಸಂಗತಿಯನ್ನು ತಿಳಿಯಪಡಿಸತಕ್ಕದ್ದು.

ಸಾಲದ ಮೊಬಲಗನ್ನು ಪಾವತೀಮಾಡುವುದು.

XXVIII. ದುರ್ಭಿಕ್ಷದ ನಿವಾರಣೆಗಾಗಿ ಕೊಡುವ ಸಾಲಗಳ ವಿಷಯದಲ್ಲಿ ತಿಂಗಳಿಗೊಂದುಸಾರಿಯಂತೆಯಾಗಲೀ, ಎರಡು ತಿಂಗಳುಗಳಿಗೊಂದುಸಾರಿಯಂತೆಯಾಗಲೀ ಪಾವತೀಮಾಡಬೇಕು. ಇತರ ಸಾಲಗಳ ವಿಷಯದಲ್ಲಿ ಸಾಧಾರಣವಾಗಿ ಎರಡು ಕಂತುಗಳಲ್ಲಿ ಪಾವತಿ ಮಾಡಬೇಕು; ಪರಂತು ಅಂಥಾ ಸಾಲದ ಮೊಬಲಗು 100 ರೂಪಾಯಿಗಳಿಗೆ ಮೀರದೆ ಇದ್ದರೆ ಮಂಜೂರ್ಮಾಡುವ ಆಫೀಸರಿಗೆ ಸೂಕ್ತ ತೋರುವಪಕ್ಷ ಅದನ್ನು ಒಂದೇಸಲ ಒಟ್ಟಾಗಿ ಪಾವತಿ ಮಾಡಿಸಬಹುದು. ಯಾವುದಾದರೊಂದು ಸಾಲವನ್ನು ಮಂಜೂರ್ ಮಾಡಿರುವಬಗ್ಗೆ ಹುಕುಂ ಹುಟ್ಟಿದ್ದರೆ ಸದರೀ ಸಾಲವನ್ನು ಶೀಘ್ರವಾಗಿ ಪಡೆದುಕೊಳ್ಳುವುದಕ್ಕಾಗಿ ಬೇಕಾದ ಅನುಕೂಲತೆಗಳನ್ನೆಲ್ಲಾ ಕಲ್ಪಿಸಿಕೊಡಬೇಕು. ಸಾಲಗಳನ್ನು ಮಂಜೂರ್ ಮಾಡಲು ಅಧಿಕಾರ ಹೊಂದಿರುವ ಆಫೀಸರುಗಳು ಗ್ರಾಮಾಂತರಗಳಿಗೆ ಸಂಚಾರ ಹೊರಟಾಗ ಹಣವು ಯಾರಿಗೆ ಪಾವತಿಯಾಗಬೇಕಾಗಿದೆಯೋ ಅವರು ಫಲಾನೆಯವರೇ ಎಂಬುದನ್ನೂ, ಪಾವತಿಯಾಗಬೇಕಾಗಿರುವ ಸಾಲದ ಮೊಬಲಗನ್ನು ತಾವಾಗಲೀ ಅಥವಾ ಅಂಥಾ ಸಾಲಗಳನ್ನು ಮಂಜೂರ್ಮಾಡಲು ಅಧಿಕಾರ ಹೊಂದಿರುವ ಬೇರೊಬ್ಬರಾಗಲೀ ಮಂಜೂರ್ಮಾಡಿರುತ್ತಾರೆಂಬುದನ್ನೂ, ಪಾವತಿಯಾಗಬೇಕಾಗಿರುವ ಮೊಬಲಗು ಮೊದಲನೇ ದಫ ಕೊಡತಕ್ಕದ್ದೋ ಅಥವಾ 2, 3 ವಗೈರೆ ದಫ ಕೊಡತಕ್ಕದ್ದೋ ಎಂಬುದನ್ನೂ ದೃಢಪಡಿಸಿಕೊಂಡು ಸದರಿ ಮೊಬಲಗುಗಳನ್ನು ಪಾವತಿ ಮಾಡಿಸಬೇಕು.

XXIX. ಕ್ರಮವಾಗಿ ಮಂಜೂರ್ ಆಗಿರುವ ಸಾಲಗಳ ಮೊಬಲಗುಗಳನ್ನು ಪಾವತಿ ಮಾಡುವುದರಲ್ಲಿ ಸಹಾಯ ಮಾಡುವುದಕ್ಕಾಗಿ ಸಾಧ್ಯವಾಗುವ ಕಡೆಗಳಲ್ಲೆಲ್ಲಾ ಸರ್ಕಾರೀ ಉದ್ಯೋಗಸ್ಥರಲ್ಲದಿರುವ ಖಾಸಗೀ ಜನಗಳನ್ನೂ ನಿಯಮಿಸಿಕೊಳ್ಳಬಹುದು.

ಸಾಲಗಳ ಫೌರಾ ಮಂಜೂರಾತಿ.

XXX. ಇದಕ್ಕೆ ವಿರೋಧವಾಗಿ XIIನೆ, XIV ನೆ, XVನೆ ನಿಬಂಧನೆಗಳಲ್ಲಿ ಏನಿದ್ದರೂ ಅಸಿಸ್ಟೆಂಟ್ ಕಮಿಷನರುಗಳು ಗ್ರಾಮಾಂತರ ಸಂಚಾರ ಹೊರಟಾಗ ತತ್ರಾಪಿ ದುರ್ಭಿಕ್ಷ ಯಾ ಕ್ಷಾಮಕಾಲದಲ್ಲಿ ಬಿತ್ತನೆಯ ಕಾಳು, ದನಗಳ ಮೇವು, ಉಳುಮೆಯ ದಾಸುಗಳು ಯಾ ವ್ಯವಸಾಯ ಸಂಬಧವಾದ ಮುಟ್ಟುಗಳು ಇವುಗಳನ್ನು ಕೊಂಡುಕೊಳ್ಳುವುದೇ ಮುಂತಾದ ಜರೂರು ಉದ್ದೇಶಗಳಿಗಾಗಿ ಸಾಲವನ್ನು ಕೊಡಿಸಬೇಕೆಂದು ರೈತರುಗಳು ಜಂಟಿಯಾಗಿ ಯಾ ಒಬ್ಬೊಬ್ಬರಾಗಿ ಅರ್ಜಿ ಹಾಕಿಕೊಂಡಲ್ಲಿ ಅವರು

ಕೊಡಬಹುದಾದ ಆಧಾರವು ಸಾಕಾದುದೇ ಅಲ್ಲವೇ ಎಂಬ ವಿಚಾರವಾಗಿ ಆ ಸ್ಥಳದಲ್ಲಿಯೇ ಖುದ್ದು ವಿಚಾರಣೆ ನಡೆಸಿ ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣಾನುಸಾರ 50 ರೂಪಾಯಿಗಳಿಗೆ ಮೀರದೆ ಇರುವ ಜುಜುವಿ ಸಾಲಗಳನ್ನು ಮಂಜೂರ್ಮಾಡಬಹುದು. ಸದರೀ ಆಧಾರಗಳು ಸಾಕಾಗಿವೆ ಎಂದು ಅವರಿಗೆ ತೃಪ್ತಿಕರವಾಗಿ ಕಂಡುಬಂದಲ್ಲಿ ಸಾಲ ತೆಗೆದುಕೊಳ್ಳುವವರಿಂದ ಕ್ರಮವಾದ ಆಧಾರಪತ್ರಗಳನ್ನೂ, ಹಣ ಸಂದ ಬಗ್ಗೆ ರಸೀದಿಗಳನ್ನೂ ಪಡೆದುಕೊಂಡು ಆ ಕೂಡಲೇ ಸದರೀಯವರಿಗೆ ಹಣವನ್ನು ಪಾವತಿ ಮಾಡಿಸಬಹುದು.

ಕಾಮಗಾರಿಗಳ ಮೇಲ್ವಿಚಾರಣೆ.

XXXI. ಕಾಮಗಾರಿಗಳನ್ನೂ ಅವುಗಳಿಗಾಗಿ ಮುಟ್ಟಿಸಿದ ಖರ್ಚುಗಳಿಗಾಗಿ ಇಟ್ಟಿರುವ ಲೆಕ್ಕವನ್ನೂ ಡೆಪ್ಯುಟಿ ಕಮಿಷನರವರಾಗಲೀ, ಅವರಿಂದ ಆ ಬಗ್ಗೆ ಅಧಿಕಾರ ಹೊಂದುವ ಬೇರೊಬ್ಬ ಆಫಿಸರವರಾಗಲೀ ತನಿಖೆ ಮಾಡುವುದಕ್ಕೆ ಸಾರ್ವದಾ ಅವಕಾಶವಿರತಕ್ಕದ್ದು. ಸಾಲವು 5,000 ರೂಪಾಯಿಗಳಿಗೆ ಮೀರಿದ್ದರೆ ಸಾಲ ತೆಗೆದುಕೊಂಡವನು ಡೆಪ್ಯುಟಿ ಕಮಿಷನರವರು ವಿಧಾಯಕ ಮಾಡಬಹುದಾದ ನಮೂನೆಯಲ್ಲಿ ಲೆಕ್ಕವನ್ನು ಇಡತಕ್ಕದ್ದು.

XXXII. ಈ ನಿಬಂಧನೆಗಳಿಗನುಸಾರವಾಗಿ ಕೊಡೋಣವಾದ ಸಾಲದ ಮೊಬಲಗುಗಳನ್ನು ಯಾವ ಉದ್ದೇಶಗಳಿಗಾಗಿ ತೆಗದುಕೊಂಡರೋ ಅದೇ ಉದ್ದೇಶಗಳಿಗೇ ಉಪಯೋಗಿಸುವರೆಂಬುದನ್ನು ದೃಢಪಡಿಸಿಕೊಳ್ಳುವುದಕ್ಕೂ, ಕಾಮಗಾರಿಗಳು ನಡೆಯುತ್ತಿರುವಾಗಲೇ ಅವುಗಳನ್ನು ಕ್ರಮವಾಗಿ ಮೇಲ್ವಿಚಾರಣೆ ತಗೆದುಕೊಳ್ಳುವುದಕ್ಕೂ ಡೆಪ್ಯುಟಿ ಕಮಿಷನರವರು ಅವಶ್ಯಕವಾದ ಏರ್ಪಾಡುಗಳನ್ನು ಮಾಡತಕ್ಕದ್ದು. ಸದರಿ ಸಾಲವನ್ನು ಯಾವ ಉದ್ದೇಶಗಳಿಗಾಗಿ ತೆಗೆದುಕೊಂಡರೋ ಆ ಉದ್ದೇಶಗಳಿಗಾಗಿ ಉಪಯೋಗಿಸಲಿಲ್ಲವೆಂದು ಕಂಡುಬಂದಲ್ಲಿ ಡೆಪ್ಯುಟಿ ಕಮಿಷನರವರಾಗಲೀ ಸಾಲವನ್ನು ಮಂಜೂರ್ ಮಾಡಿದ ಬೇರೊಬ್ಬ ಆಫಿಸರಾಗಲೀ XIIIನೆ ನಿಬಂಧನೆಯ ಮೇರೆಗೆ ಸದರೀ ಸಾಲದ ಮೊಬಲಗನ್ನು ವಸೂಲ್ ಮಾಡಲು ತಕ್ಕ ಕ್ರಮ ಜರುಗಿಸಬಹುದು.

ಯಾವ ಕಾಮಗಾರಿಗಳಿಗೋಸ್ಕರ ಕಂತುವಾರಾಗಿ ಸಾಲದ ಮೊಬಲಗನ್ನು ಪಾವತಿ ಮಾಡಲಾಗುತ್ತದೆಯೋ ಅಂಥಾ ಕಾಮಗಾರಿಗಳನ್ನೆಲ್ಲಾ ಮೊದಲನೆ ಕಂತು ವಿನಹಾ ಬಾಕಿ ಪ್ರತಿ ಒಂದು ಕಂತನ್ನು ಪಾವತಿ ಮಾಡುವುದಕ್ಕೆ ಮುಂಚೆ ಅಜಮಾಯಿಷಿಮಾಡಿ ಅದರ ವಿಷಯವನ್ನು ರಿಪೋರ್ಟ್ ಮಾಡಬೇಕು. ಮುಂದಣ ಕಂತಿನ ಪಾವತಿಯನ್ನು ಮಂಜೂರ್ಮಾಡುವ ಅಧಿಕಾರವುಳ್ಳ ಆಫಿಸರು ಅಜಮಾಯಿಷಿ ನಡಿಸಿದಪಕ್ಷದಲ್ಲಿ ತಮ್ಮ ತನಿಖೆಯಲ್ಲಿ ಕಂಡುಬಂದ ವಿಷಯವನ್ನು ರಿಕಾರ್ಡುಮಾಡಿ ಮುಂದಣ ಕಂತನ್ನು ಪಾವತಿ ಮಾಡಬಹುದೆಂದು ತೃಪ್ತಿಕರವಾಗಿ ತಮಗೆ ತೋರಬಂದರೆ XXVIIIನೆ ನಿಬಂಧನೆಯಲ್ಲಿ ವಿಧಿಸಿರುವ ಮೇರೆಗೆ ಸಾಧ್ಯವಾದರೆ ಆಕೂಡಲೇ ಸದರೀ ಕಂತಿನ ಮೊಬಲಗನ್ನು ಪಾವತಿ ಮಾಡತಕ್ಕದ್ದು.

ಸಾಲವನ್ನು ಮಂಜೂರ್ ಮಾಡುವ ಹುಕುಮಿನಲ್ಲಿ ಕಾಮಗಾರಿಯು ಪೂರೈಸುವುದಕ್ಕಾಗಿ ಗೊತ್ತು ಮಾಡಿರುವ ತಾರೀಖಿನ ನಂತರ ಸಾಧ್ಯವಾದಷ್ಟು ಬೇಗನೆ ಕಾಮಗಾರಿಗಳನ್ನೆಲ್ಲಾ ಅಜಮಾಯಿಷಿಮಾಡಿ ಅವುಗಳ ವಿಷಯವಾಗಿ ರಿಪೋರ್ಟು ಕಳುಹಿಸಿಕೊಡಬೇಕು. ಬಹುಮಟ್ಟಿಗೆ ಮೊದಲು ಕೊಟ್ಟಿದ್ದ ಸಲಹೆಗಳ ಮೇರೆಗೆ ಕಾಮಗಾರಿಯನ್ನು ನಡೆಸಿಲ್ಲವೆಂದು ತಿಳಿಯಬಂದರೆ ಸಾಲವನ್ನು ಮಂಜೂರ್ ಮಾಡುವ ಆಫಿಸರು ಮೊದಲು ಮುಂಗಡವಾಗಿ ಕೊಟ್ಟಿದ್ದ ಸಾಲದ ಮೊಬಲಗೆಲ್ಲವನ್ನೂ, ಅದರ ಮೇಲೆ ಶೇಕಡಾ 5ರಂತೆ ಬಡ್ಡಿಯನ್ನೂ, ಖರ್ಚುಗಳೇನಾದರೂ ಬಿದ್ದಿದ್ದಲ್ಲಿ ಅವನ್ನು ಆ ಕೂಡಲೆ ವಾಪಸಕೊಡಬೇಕೆಂದು ಅಪ್ಪಣೆ ಮಾಡಬಹುದು; ಅಥವಾ ಕಾಮಗಾರಿಯು ಎಷ್ಟುಕಾಲ ನಡಿಯಬಹುದೋ ಅಷ್ಟು ಕಾಲದೊಳಗಾಗಿ ಸಾಲವೆಲ್ಲಾ ವಸೂಲಾಗುವಂತೆ Vನೆ ನಿಬಂಧನೆಯ ಮೇರೆಗೆ ಗೊತ್ತುಮಾಡಿದ ಕಂತಿನ ಮೊಬಲಗನ್ನು ವ್ಯತ್ಯಾಸಪಡಿಸಬಹುದು. ಇಂಥಾ ಸಂದರ್ಭಗಳಲ್ಲಿ ಸಾಧ್ಯವಾದರೆ ಸಾಲಪಡೆದ ಕೊಂಡವನಿಂದ ಷುರೂ ಹುಕುಮನ್ನು ವಾಪಸ್ ತೆಗೆದುಕೊಂಡು ಅದನ್ನು ರದ್ದುಮಾಡಿ ಹೊಸ ಹುಕುಮನ್ನು ಕೊಡಬೇಕು.

ರೆಜಿಸ್ಟರುಗಳು ಮತ್ತು ಲೆಕ್ಕಗಳು.

XXXIII. ಸಾಲಗಳನ್ನು ಮಂಜೂರ್ ಮಾಡುವ ಪ್ರತಿಯೊಬ್ಬ ಆಫಿಸರೂ ತಮ್ಮಲ್ಲಿಗೆ ಬಂದು ತಮ್ಮಿಂದ ವ್ಯವಸ್ಥೆಯಾದ ಅರ್ಜಿಗಳ ರೆಜಿಸ್ಟರನ್ನು ಇದಕ್ಕೆ ಲಗತ್ತಿಸಿರುವ 2ನೆ ನಂಬರ್ ನಮೂನೆಯಲ್ಲಿ ಇಡಬೇಕು.

XXXIV. ಪ್ರತಿಯೊಬ್ಬ ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರರೂ ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಸಾಲಗಳನ್ನೂ ಅವುಗಳು ವಾಪಸ್ ಪಾವತಿಯಾದುದನ್ನೂ ನಮೂದಿಸಿ ಇದಕ್ಕೆ ಲಗತ್ತಿಸಿರುವ 11ನೆ ನಂಬರ್ ನಮೂನೆಯಲ್ಲಿ ಒಂದು ರೆಜಿಸ್ಟರನ್ನೂ, ಇದಲ್ಲದೆ ಸರ್ಕಾರದವರು ಆಗಿಂದಾಗ ವಿಧಿಸಬಹುದಾದ ಇತರ ಲೆಕ್ಕಗಳನ್ನೂ ತಃಖ್ತೆಗಳನ್ನೂ ಇಡಬೇಕು. ಈ ರೆಜಿಸ್ಟರಿನ ನಕಲುಗಳನ್ನು ಸದರೀ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ಆಫೀಸಿನಲ್ಲಿಯೂ, ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿಯೂ ಇಟ್ಟಿರತಕ್ಕದ್ದು.

ವಿಶೇಷತರಹೆ ಆಬಾದಿಗಾಗಿ ಕೊಡುವ ಸಾಲಗಳು.

XXXV. ವಿಶೇಷತರಹೆ ಯಾ ತರಹೆಗಳ ಆಬಾದುಗಳ ವಿಷಯದಲ್ಲಿ ಸರ್ಕಾರದವರು ಅವುಗಳಿಗಾಗಿ ಸಾಲಗಳನ್ನು ಮಂಜೂರ್ಮಾಡಲು ಪ್ರತ್ಯೇಕವಾಗಿ ನಿಬಂಧನೆಗಳನ್ನು ಏರ್ಪಡಿಸಬಹುದು; ಅಲ್ಲದೆ, ಅಂಥಾ ವಿಶೇಷ ನಿಬಂಧನೆಗಳಲ್ಲಿ ಕಂಠೋಕ್ತವಾಗಿ ವಿಧಿಸಿರುವಷ್ಟರಮಟ್ಟಿಗೆಹೊರ್ತು ಈ ನಿಬಂಧನೆಗಳೆಲ್ಲವೂ ಅಂಥಾ ಸಾಲಗಳ ಮಂಜೂರಾತಿಗೂ ವಸೂಲಾತಿಗೂ ಅನ್ವಯಿಸತಕ್ಕದ್ದು.

ನಂಬರ್ 1. ಜಮೀನು ಅಭಿವೃದ್ಧಿ ಸಾಲಗಳ ರೆಗ್ಯುಲೇಷನು—ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣ ಮೇರಿಗೆ ಸಾಲಾ ಪಡಿಯುವ ಬಗ್ಗೆ ಬರುವ ದರಖಾಸ್ತು ನಮೂನೆ.

1. ದರಖಾಸ್ತುದಾರನ ಹೆಸರು, ತಂದೆ ಹೆಸರು ಮತ್ತು ವಾಸಸ್ಥಳ.
2. ಬೇಕಾಗಿರುವ ಸಾಲದ ಮೊಬಲಗು.
3. ಯಾವ ಉದ್ದೇಶಕ್ಕಾಗಿ ಸಾಲಾ ಕೇಳಿರುವದು.

ಆಬಾದಿಗೆ ಬರುವ ಜಮೀನಿನತಪ್ಸೀಲ್				ಈ ಜಮೀನಿನಲ್ಲಿ ಇತರರಿಗೆ ಇರುವ ಹಕ್ಕು.		ಕೊಡಬೇಕೆಂದಿರುವ ಆಧಾರ											
						ಇಸಂ ಜಾಮೀನಾಗಿದ್ದರೆ.	ಜಮೀನಾಗಿದ್ದರೆ.				ಇತರ ಸ್ಥಿರಸ್ವತ್ತು.						
ಗ್ರಾಮ, ಸರ್ವೆ ನಂಬರ್ ಮತ್ತು ಪೈಕಿ ನಂಬರ್ ಖುಷ್ಕಿಯೇ ಅಥವಾ ತರಿಯೇ	ವಿಸ್ತೀರ್ಣ	ಆಕಾರ.	ಜಮೀನಿನಲ್ಲಿ ದರಖಾಸ್ತುದಾರನಿಗೆ ಎಷ್ಟುಮಟ್ಟಿನ ಹಕ್ಕಿರುತ್ತದೆ ಮತ್ತು ಅದರ ಸ್ವಭಾವ ಮತ್ತು ಸದರಿ ಜಮೀನು ಇವನ ಹೆಸರಿನಲ್ಲಿ ರಿಜಿಸ್ಟರ್ ಆಗಿರುತ್ತೆಯೇ ಅಥವಾ ಇವನ ಅನುಭವದಲ್ಲಿ ಇರುತ್ತೆಯೇ.	ಹೆಸರು	ಹಕ್ಕಿನ ಸ್ವಭಾವ ಮತ್ತು ವಿಸ್ತೀರ್ಣ; ಈತನು ಜಮೀನು ಹಿಸ್ಸೇದಾರನೇ ಅಥವಾ ಭೋಗ್ಯದಾರನೇ.	ಜಾಮೀನುದಾರನ ಹೆಸರು, ತಂದೆ ಹೆಸರು ಮತ್ತು ವಾಸಸ್ಥಳ.	ಸರ್ವೆ ನಂಬರ್.	ವಿಸ್ತೀರ್ಣ.	ಆಕಾರ.	ಯಾರ ಹೆಸರಿನಲ್ಲಿ ರಿಜಿಸ್ಟರಾಗಿರುತ್ತೆ.	ವಿಸ್ತೀರ್ಣ.	ತಪ್ಸೀಲ್.	ಜಮೀನು ಆಧಾರಮಾಡಿಕೊಡುವದಕ್ಕೆ ಒಪ್ಪಿಯಿರುವ ಮನುಷ್ಯನ ಹೆಸರು ಮತ್ತು ಸದರಿ ಜಮೀನಿನಲ್ಲಿ ಅವನಿಗೆ ಇರುವ ಹಕ್ಕಿನ ಸ್ವಭಾವ	ಆಧಾರಮಾಡುವ ಇತರ ಜಮೀನಿನಮೇಲೆ ಏನಾದರೂ ಸಾಲ ಸಂಬಂಧವಿದ್ದರೆ ಅಂಥಾ ಸಾಲದ ಸ್ವಭಾವ ವಗೈರೆ.	ಅಬಾದಿಗೆ ಬರುವ ಜಮೀನು, ಮತ್ತು ಆಧಾರ ಮಾಡುವ ಜಮೀನು, ಇವುಗಳಮೇಲೆ ಕಂದಾಯದ ಬಾಕಿ ಇರುತ್ತೆಯೇ.	ಸಾಲ ತೀರಿಸಬೇಕೆಂದಿರುವ ಕಾಲ.	ಷರಾ.
1	2	3	4	5	6	7	8	9	10	11	12	13	14	15	16	17	18
	ಎ.	ರೂ.						ಎ.	ರೂ.		ಎ.						

ಟಿಪ್ಪಣಿ.—1. ಲ್ಯಾಂಡ್ ರೆವಿನ್ಯೂ ಕೋಡ್ ಅನುಸರಿಸಿ ಅಪೇಕ್ಷಿಸುವ ಸಾಲಗಳ ವಿಷಯದಲ್ಲಿ 1ರ ಲಾಗಾಯಿತು 6ನೆ ವರಿಗಿನ ಕಲಂಗಳಲ್ಲಿ ಭರ್ತಿ ಮಾಡಬೇಕಾದ್ದೇನೂ ಇರುವದಿಲ್ಲಾ ಮತ್ತು ಜಮೀನು ಅಭಿವೃದ್ಧಿ ಸಾಲದ ರೆಗ್ಯುಲೇಷನು ಪ್ರಕಾರ ಅಪೇಕ್ಷಿಸುವ ಸಾಲಗಳ ವಿಷಯದಲ್ಲಿ 7ನೆ ಕಲಂ ಭರ್ತಿ ಮಾಡಬೇಕಾದ್ದಿಲ್ಲವು.

2. ಜಮೀನು ಆಬಾದು ಮಾಡುವದಕ್ಕೆ ದರಖಾಸ್ತುದಾರನಿಗೆ ಇರುವ ಹಕ್ಕು ವಿಷಯದಲ್ಲಿ 4ನೆ ಕಲಂನಲ್ಲಿಯೂ, ಇತರ ಜಮೀನುಗಳನ್ನು ಆಧಾರಮಾಡಿ ಕೊಡುವದಕ್ಕೆ ಕಬೂಲಾಗಿರುವ ಜನಗಳಿಗೆ ಅವುಗಳಲ್ಲಿ ಇರತಕ್ಕ ಹಕ್ಕು ವಿಷಯದಲ್ಲಿ 14ನೆ ಕಲಂನಲ್ಲಿಯೂ, ಪೂರಾ ತಪಶೀಲು ಬರಿಯಬೇಕು.

3. ಸಾಲದ ಮೊಬಲಗನ್ನು ಪಡೆದ ತಾರೀಖು ಲಾಗಾಯಿತು ಎಷ್ಟು ವರುಷಗಳಲ್ಲಿ ಸದರಿ ಮೊಬಲಗನ್ನು ತೀರಿಸಲು ಒಪ್ಪುತ್ತಾನೆಂಬುವದನ್ನು 17ನೆ ಕಲಂನಲ್ಲಿ ನಮೂದಿಸಬೇಕು. ಇದರಿಂದ ಅವನಿಗೆ ಇಷ್ಟವಿದ್ದರೆ, ಇನ್ನೂ ಮುಂದಾಗಿಯೇ ಸಾಲವನ್ನು ತೀರಿಸುವದಕ್ಕೆ ಯಾವ ಅಡ್ಡಿಯೂ ಇಲ್ಲ.

4. A. ಜಮೀನು ಆಬಾದು ಸಾಲದ ರೆಗ್ಯುಲೇಷನ್ ಪ್ರಕಾರ ಭಾವಿಗಳನ್ನು ಅಥವಾ ಕೆರೆಗಳನ್ನು ಹೊಸದಾಗಿ ಕಟ್ಟುವದಕ್ಕೂ, ರಿಪೇರಿ ಮಾಡುವದಕ್ಕೂ, ಮತ್ತು ಬಂಜರು ಜಮೀನನ್ನು ಸಾಗುವಳಿ ಸ್ಥಿತಿಗೆ ತರುವದು, ಯಾ ಜಮೀನು ಸಾಗುವಳಿಗೆ ಲಾಯಖಾಗಿ ಅದರ ಬೆಲೆಯು ಕಾಯಮಾಗಿ ವೃದ್ಧಿಯಾಗತಕ್ಕ ಇತರ ಕೆಲಸಗಳು.

B. ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣದ ಮೇರೆಗೆ, ಬಿತ್ತನೆಕಾಳು, ಉಳುವೆ ಎತ್ತುಗಳು, ಬೀಜದ ಕುದುರೆ ಮತ್ತು ಟಾಕಣಾ, ಬೀಜದ ಗೂಳಿಗಳು, ಇವುಗಳನ್ನು ಖರೀದಿಗೆ ತೆಗೆದುಕೊಳ್ಳುವದಕ್ಕೂ, ದನಗಳ ಮೇವನ್ನು ಕೊಂಡುಕೊಳ್ಳುವುದಕ್ಕೂ, ಮತ್ತು ಇತರ ವ್ಯವಸಾಯ ಸಂಬಂಧ ಕೆಲಸಗಳು ಎಂದರೆ, ಬೆಂಕಿ ಅಥವಾ ನೀರಿನ ಪ್ರವಾಹದಿಂದ ನಾಶವಾದ ಮನೆಗಳನ್ನು (ಮತ್ತು ಷೆಡ್ಡುಗಳನ್ನು) ಪುನಃ ಕಟ್ಟುವುದಕ್ಕೂ, ಕಬ್ಬಿನ ಗಾಣಗಳನ್ನು ಹೂಡುವುದಕ್ಕೂ, ವ್ಯವಸಾಯ ಸಂಬಂಧ ಹಸೀ ಪದಾರ್ಥಗಳನ್ನು ಸರಿಪಡಿಸುವುದಕ್ಕೆ ಅನುಕೂಲವಾದ ನೀಲಿತೊಟ್ಟಿ ಮುಂತಾದ ಸಾಧನೆಗಳಿಗಾಗಿಯೂ, ಜೋಡುಮೊಹಟೆ ಯಾ ನೀರು ಎತ್ತುವ ಇತರ ಸಾಧನಗಳನ್ನು ಕಟ್ಟಿಸುವುದಕ್ಕೂ, ದುರ್ಭಿಕ್ಷವು ಪ್ರಾಪ್ತವಾಗಿರುತ್ತದೆಂದು ಸರ್ಕಾರದವರು ಅಂಗೀಕರಿಸಿದಾಗ ಮುಂದಿನ ಫಸಲು ಆಗುವ ವರೆಗೆ ಜಮೀನು ಹಿಡುವಳಿದಾರರು ಮತ್ತು ಅವರ ಆಶ್ರಿತರು ಜೀವನ ಮಾಡಿಕೊಳ್ಳುವುದಕೆ ಅನುಕೂಲವಾಗುವಂತೆ ದುರ್ಭಿಕ್ಷ ನಿವಾರಣಾರ್ಥ ಅವರಿಗೆ ತಕ್ಕ ಸಹಾಯವನ್ನು ಮಾಡುವುದಕ್ಕೂ, ಸರ್ಕಾರದವರು ಜಮೀನು ಹಿಡುವಳಿದಾರರಿಗೆ ಸಾಲವನ್ನು ಕೊಡುತ್ತಾರೆ.

5. ಜಮೀನು ಆಬಾದು ಸಾಲಗಳ ರೆಗ್ಯುಲೇಷನಿನಲ್ಲಿ ಇಷ್ಟು ಮೊಬಲಗಿಗಿಂತಾ ಹೆಚ್ಚಾಗಿ ಸಾಲ ಕೊಡಕೂಡದೆಂತ ವಿಧಾಯಿಸಿ ಇರುವುದಿಲ್ಲ : ಆದರೆ ಕನಿಷ್ಠಪಕ್ಷ 50 ರೂಪಾಯಿಗಳಿಗೆ ಕಮ್ಮಿಯಾಗಿ ಸಾಲ ಕೊಡುವುದಿಲ್ಲ. ರೆವಿನ್ಯೂ ಕೋಡು ಪ್ರಕಾರ ಕೊಡಲ್ಪಡುವ ಸಾಲಗಳ ವಿಷಯದಲ್ಲಿ, ದುರ್ಭಿಕ್ಷ ನಿವಾರಣೆಗಾಗಿಯೂ, ಬಿತ್ತನೆಕಾಳು, ಉಳುವೆ ಎತ್ತು, ಬೀಜದ ಕುದುರೆ ಮತ್ತು ಟಾಕಣಾ, ಬೀಜದ ಗೂಳಿಗಳೂ, ಇವುಗಳನ್ನು ಕೊಂಡುಕೊಳ್ಳುವುದಕ್ಕಾಗಿಯೂ, ಮತ್ತು ಬೆಂಕಿ ಮತ್ತು ನೀರಿನ ಪ್ರವಾಹದಿಂದ ನಾಶವಾದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೂ ಸಹ 200 ರೂಪಾಯಿಗಳಿಗೆ ಮೀರದಂತೆಯೂ, ಇತರ ವ್ಯವಸಾಯ ಸಂಬಂಧ ಕೆಲಸಗಳಿಗೆ 1,000 ರೂಪಾಯಿಗಳಿಗೆ ಮೀರದಂತೆಯೂ, ಕಬ್ಬಿನ ಗಾಣಗಳನ್ನು ಹೂಡಿಸುವದಕ್ಕಾಗಿ 5,000 ರೂಪಾಯಿಗಳಿಗೆ ಮೀರದಂತೆಯೂ ಕ್ಲುಪ್ತಪಡಿಸಿರುತ್ತದೆ. ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ಕೊಡುವ ಸಾಲಗಳ ವಿಷಯದಲ್ಲಿ ಕನಿಷ್ಠಪಕ್ಷ ಮೊಬಲಗನ್ನು ಗೊತ್ತುಮಾಡಿ ಇರುವದಿಲ್ಲ.

6. ಸಾಲದ ಬಗ್ಗೆ ಕೊಡುವ ದರಖಾಸ್ತುಗಳು ಡೆಪ್ಯುಟಿ ಅಮಲ್ದಾರ್ರ ದರ್ಜೆಗೆ ಕಮ್ಮಿ ಇಲ್ಲದ ಯಾವ ರೆವಿನ್ಯೂ ಆಫಿಸರುಗಳಿಗೇನೇ ಆಗಲಿ ಖುದ್ದಾಗಿ ಟಪ್ಪಾಲ್ ಯಾ ಇತರ ಮೂಲಕವಾಗಿ ಕೊಡಲ್ಪಡಬಹುದು. ಜುಬಾನಿಯಾಗಿಯೂ ಕೇಳಿಕೊಳ್ಳಬಹುದು. ಈ ದರಖಾಸ್ತಿಗೆ ಸ್ಟಾಂಪು ಡ್ಯೂಟಿ ಕೊಡಬೇಕಾದ್ದಿಲ್ಲ.

7. ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ದುರ್ಭಿಕ್ಷ ನಿವಾರಣೆಗಾಗಿ ಕೊಡುವ ಸಾಲಗಳ ವಿನಾ ಬಾಕಿ ಸಾಲಗಳ ಮೇಲೆ ವರುಷಕ್ಕೆ ಶೇಕಡಾ 5ರಂತೆ ಬಡ್ಡಿ ವಸೂಲ್ಮಾಡಲ್ಪಡುತ್ತದೆ ; ದುರ್ಭಿಕ್ಷ ನಿವಾರಣೆ ಸಾಲಗಳ ವಿಷಯದಲ್ಲಿ ಶೇಕಡಾ 3ರಂತೆ ವಸೂಲ್ಮಾಡಲ್ಪಡುತ್ತದೆ. ಸಾಲಾ ಪಡೆದವರು ಬಹಳ ಬಡವರೆಂದು ತಿಳಿಯ ಬಂದಾಗ ಈ ಸ್ವಲ್ಪ ಬಡ್ಡಿಯನ್ನು ಕೂಡಾ ಮಾಫ್ ಮಾಡುವ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಕೊಟ್ಟು ಇರುತ್ತದೆ.

8. ಕ್ಲುಪ್ತವಾದ ಕಾಲದ ಒಳಗಾಗಿ ಸಾಲದ ಅಸಲ್ ಮತ್ತು ಬಡ್ಡಿಯನ್ನು ಸಾಲೀಯಾನಾ ಗೊತ್ತು ಮಾಡಲ್ಪಡುವ ಕಂತುಗಳ ಮೂಲಕ ಕೊಟ್ಟು ತೀರಿಸತಕ್ಕದ್ದಾಗಿ ಇದೆ.

9. ಪೂರೈಸಲ್ಪಟ್ಟ ಕಾಮಗಾರಿಯು ತಕ್ಕಮಟ್ಟಿಗೆ ಮಜಬೂತಾಗಿ ನಡೆಸಲ್ಪಡಲಿಲ್ಲವೆಂದು ಕಂಡು ಬಂದಲ್ಲಿ ಮೊಬಲಗು ವಾಪಸು ಸಂದಾಯಮಾಡುವ ಕಾಲದ ಅವಧಿಯನ್ನು ಕಮ್ಮಿಮಾಡಲಾಗುತ್ತದೆ.

10. ಸಾಲಾ ಪಡೆದವನು ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರ ಒಂದು ಭಾಗವನ್ನಾದರೂ ಸರಿಯೋ ದುರುಪಯೋಗಪಡಿಸಿಕೊಂಡರೂ, ಸಾಲದ ಯಾವ ನಿಬಂಧನೆಗೆ ಆದರೂ ಸರಿಯೋ ತಪ್ಪಿನಡೆದರೂ, ಸಾಲದ ಪೈಕಿ ಸಂದಾಯವಾಗದೆ ಉಳಿದು ಇರುವ ಪೂರಾ ಮೊಬಲಗನ್ನು ಬಡ್ಡಿ ಮತ್ತು ಖರ್ಚು ಸಹಿತಾ ಫೌರನ್ನಾಗಿ ವಸೂಲ್ ಮಾಡಲಾಗುತ್ತದೆ.

ಜಮೀನು ಅಥವಾ ಇತರ ಸ್ಥಿರಸ್ವತ್ತುಗಳನ್ನು ಜಂಟಿ ಆಧಾರ ಮಾಡಿದ್ದಲ್ಲಿ, ಅದು ಸರಿಯಾದ್ದೆಂತ ದೃಢಪಡಿಸತಕ್ಕ ನಮೂನೆ.

ಮೇಲೆ ನಮೂದಿಸಿರುವ ಸಾಲದ ವಿಷಯದಲ್ಲಿ ದರಖಾಸ್ತುದಾರನಾದ–ಜಮೀನುದಾರನಾದ ನಾನು ಆಧಾರ ಮಾಡಲ್ಪಟ್ಟ ಸ್ವತ್ತುಗಳ ಮೇಲೆ ಇರುವ ಸಾಲಸೋಲ ವಗೈರೆಗಳ ಸ್ವಭಾವ ಮತ್ತು ಪರಿಸ್ಥಿತಿಗಳ ವಿಷಯದಲ್ಲಿ, ಮೇಲ್ಕಂಡ ದರಖಾಸ್ತಿನಲ್ಲಿ ನಮೂದಿಸಿರುವ ಸಂಗತಿ ಯಾವತ್ತೂ ನನಗೆ ಚೆನ್ನಾಗಿ ತಿಳಿದು ನಂಬಿಕೆ ಇರುವ ಮಟ್ಟಿಗೆ ವಾಸ್ತವವಾದುದೆಂತಲೂ, ಸದರಿ ಸ್ವತ್ತಿನ ಮೇಲೆ ಮತ್ಯಾವ ಸಾಲವಗೈರೆ ಇರುವದಿಲ್ಲವೆಂದು ನಂಬಿಯಿರುತ್ತೇನೆಂತಲೂ ಪ್ರಮಾಣಪೂರ್ವಕವಾಗಿ ಹೇಳುತ್ತೇನೆ.

ನಂ. 2. ಜಮೀನು ಆಬಾದು ಸಾಲಗಳ ರೆಗ್ಯುಲೇಷನ್ / ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣ ಪ್ರಕಾರ ಸಾಲಗಳ ಬಗ್ಯೆ ಬಂದ ದರಖಾಸ್ತುಗಳನ್ನು ತೋರಿಸುವ ರಿಜಿಸ್ಟರ್.

ಡಿಸ್ಟ್ರಿಕ್ಟು ..... ತಾಲ್ಲೂಕು ಬಗೆ ..... ನೆ ಸರ್ಕಾರಿ ಸಾಲಿನಲ್ಲಿ.

ದರಖಾಸ್ತಿನ ಜಂಜರು ನಂಬರು	ತಾಲ್ಲೂಕಿನಲ್ಲಿ ದರಖಾಸ್ತು ಅರ್ಜಿ ಬಂದ ತಾರೀಖು	ಇತರ ಆಫೀಸರುಗಳ ಮೂಲಕ ದರಖಾಸ್ತು ಅರ್ಜಿ ಬಂದು ಇದ್ದಲ್ಲಿ: ಯಾವ ಆಫೀಸರ ಮೂಲಕ ಬಂತು	ಇತರ ಆಫೀಸರುಗಳ ಮೂಲಕ ದರಖಾಸ್ತು ಅರ್ಜಿ ಬಂದು ಇದ್ದಲ್ಲಿ: ನಂಬರ್ ಮತ್ತು ತಾರೀಖು ನ ಚಲ್ಲಾನು	ಅರ್ಜಿದಾರನ ಹೆಸರು, ತಂದೆ ಹೆಸರು ಮತ್ತು ವಾಸಸ್ಥಳ	ಯಾವ ಗ್ರಾಮದಲ್ಲಿ ಸಾಲಾ ಮಾಡುವುದಕ್ಕೆ ಬಲಗು ಬೇಕಾಗಿರುವುದೋ ಆ ಗ್ರಾಮದ ಹೆಸರು.	ಸಾಲದ ಮೊಬಲಗು: ರೂ.	ಸಾಲದ ಮೊಬಲಗು: ಆ.	ಸಾಲದ ಮೊಬಲಗು: ಪೈ.	ಯಾವ ಕಾರ್ಯಕ್ಕಾಗಿ ಸಾಲಾ ಬೇಕಾಗಿರುತ್ತೆ	ದಾಖಲೆಗಳು: ಯಾರಿಗೆ	ದಾಖಲೆಗಳು: ದಾಖಲೆಯ ತಾರೀಖು	ದಾಖಲೆಗಳು: ವಾಪಸು ಬಂದ ತಾರೀಖು	ಅಪ್ಪಣೆಯಾಯಿತೆ ಮಾಡಿದ ಆಫೀಸರ ಹೆಸರು ಮತ್ತು ಅವರ ಅಭಿಪ್ರಾಯದ ಸಂಕ್ಷೇಪವಾಗಿ	ಸಾಲಾ ಮಂಜೂರಾತಿ ಅಥವಾ ನಿರಾಕರಣೆ ಆಜ್ಞೆ ತಾರೀಖು (ತಾಲ್ಲೂಕಿನ ಹುಕುಂ ಸಂಖ್ಯೆ ಸಹಿತವಾಗಿ) ಮೊಬಲಗು, ಕಂತುಗಳ ಸಂಖ್ಯೆ ಮತ್ತು ಮಂಜೂರಾದ ಸಾಲದ ಬಡ್ಡಿ ದರ	ಮಂಜೂರಾದ ಮೊಬಲಗು, ಬಟವಾಡೆ ಆದ ನಂಬರು ಮತ್ತು ತಾರೀಖು, ರಿಜಿಸ್ಟರ್ ನ ಪ್ರಕಾರ (11ನೇ ನಂ. ನಮೂನೆ)	ಷರಾ
1	2	3	4	5	6	7			8	9	10	11	12	13	14	15

ದರಖಾಸ್ತು ಅರ್ಜಿಗಳ ರೆಜಿಸ್ಟರಿನ ಇಂಡೆಕ್ಸ್—ಕೆಳಭಾಗದಲ್ಲಿ.

ಷರಾ :—ಫೈಸಲಾದ ದರಖಾಸ್ತುಗಳನ್ನು (19) ಇಂಥಾ ಮಂಡಲಾಕಾರದಲ್ಲಿ ಸಂಖ್ಯೆ ಹಾಕಿ ತೋರಿಸಬೇಕು.

ನಂ.	ಅಕ್ಷರಮಾಲೆ ಪ್ರಕಾರ ಗ್ರಾಮಗಳ ಹೆಸರುಗಳು	ದರಖಾಸ್ತು ರಿಜಿಸ್ಟರಿನಲ್ಲಿ ಅರ್ಜಿಯ ಸಂಖ್ಯೆಗಳು.	ಪ್ರತಿ ಒಂದು ಗ್ರಾಮದ ಒಟ್ಟು
1	2	3	4

ಷರಾ :—ಈ ರಿಜಿಸ್ಟರನ್ನು ಎರಡು ಭಾಗವಾಗಿ ಇಟ್ಟುಕೊಳ್ಳಬೇಕು. (ಆದರೆ ಒಂದೇ ಬೈಂಡುಬುಕ್ಕಿನಲ್ಲಿ ಇರಬೇಕು). ಪ್ರತಿ ಒಂದು ಕಾನೂನು ಪ್ರಕಾರ ಕೊಡುವ ಸಾಲಗಳಿಗೂ ಒಂದೊಂದು ಭಾಗದ ಮೇರೆಗೆ.

ನಂ. 3. ಜಮೀನು ಆಬಾದು ಸಾಲಗಳ ವಿಷಯಕ 1890ನೆ ಇಸವಿಯ 4ನೆ ನಂ. ರೆಗ್ಯುಲೇಷನ್ ಅಥವಾ 1888ನೆ ಇಸವಿಯ 4ನೆ ನಂಬರ್ ಲ್ಯಾಂಡ್ ರೆವಿನ್ಯು ಕೋಡ್ ರೆಗ್ಯುಲೇಷನ್.

XXIನೆ ನಂಬರು ನಿಬಂಧನೆ ಅನುಸರಿಸಿ ಜಮೀನುದಾರರಿಗೆ ಕೊಡಬೇಕಾದ ನೋಟೀಸ್.

ಹೆಸರು. ತಂದೆ ಹೆಸರು. ವಾಸಸ್ಥಳ.

ಇದರಿಂದ ನಿಮಗೆ ತಿಳಿಯಪಡಿಸುವದೇನಂದರೆ— ಗ್ರಾಮದಲ್ಲಿ ವಾಸಮಾಡುವ ಎಂಬುವನ ಮಗನಾದ ಎಂಬುವನು, ನಿಮಗೆ ಷಿಕ್ಮಿದಾರನಾಗಿ ಕೆಳಗೆ ವಿವರಿಸಿರುವ ಜಮೀನುಗಳಲ್ಲಿ ತನಗೆ ವರ್ಗದ ಹಕ್ಕು ಇರುತ್ತೆಂತ ತಿಳಿಯಬರುವದಲ್ಲದೆ, ಸರ್ಕಾರದಿಂದ ಮೊಬಲಗು ಕೆಲಸಕ್ಕೋಸ್ಕರ ಸಾಲಾ ಕೊಡಬೇಕೆಂದೂನ್ನು, ಸದರಿ ಸಾಲಕ್ಕಾಗಿ ಸದರಿ ಜಮೀನುಗಳಲ್ಲಿ ತನಗೆ ಇರುವ ಹಕ್ಕನ್ನು ಆಧಾರ ಮಾಡಿ ಕೊಡುವದಾಗಿಯೂ ಸಹಾ ನಮೂದಿಸಿ ಅರ್ಜಿ ಕೊಟ್ಟಿರುವದರಿಂದ, ಈ ಸಾಲಾ ಕೊಡತಕ್ಕ ವಿಷಯದಲ್ಲಿ ನಿಮ್ಮ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ನೋಟೀಸು ಜಾರಿಯಾದ ಲಾಗಾಯಿತು ಒಂದು ತಿಂಗಳ ಒಳಗಾಗಿ ಅಂಥಾ ಆಕ್ಷೇಪಣೆಗಳನ್ನು ಬರಹಮೂಲಕವಾಗಿ ಕೆಳಗೆ ದಸ್ಕತ್ತು ಮಾಡಿರುವವರಿಗೆ ತಿಳಿಸಬೇಕು, ಇದಕ್ಕೆ ತಪ್ಪಿದರೆ, ಈಗ ಕೊಟ್ಟಿರುವ ಆಧಾರದ ಮೇಲೆ ಸದರಿ ಯವನಿಗೆ ಸಾಲಾ ಕೊಡಲ್ಪಡುತ್ತೆ.

ಗ್ರಾಮ	ಜಮೀನು ಹೆಸರು ಮತ್ತು ನಂಬರು	ಖುಷ್ಕಿ ಯಾ ತರಿ	ವಿಸ್ತೀರ್ಣ		ಅಕಾರ			ಷರಾ
			ಎಕರ.	ಗುಂಟೆ.	ರೂ.	ಆ.	ಪೈ.	

ಮೊಕ್ಕಾಂ. ತಾರೀಖು

ಅಮಲ್ದಾರ್ ಯಾ ಡೆಪ್ಯುಟಿ ಅಮಲ್ದಾರ್.

ಷರಾ.—ಈ ನೋಟೀಸ್ ಜಾರೀ ಮಾಡುವವರು, ಜಮೀನುದಾರನಿಗೆ ಒಂದು ಕಾಪಿಯನ್ನು ಕೊಡಬೇಕು, ಒಬ್ಬರಿಗಿಂತಲೂ ಹೆಚ್ಚಾದ ಹಿಸ್ಸೇದಾರರು ಇದ್ದರೆ, ಆ ಪೈಕಿ ಒಬ್ಬರಿಗೆ ಕಾಪಿ ಕೊಡಬೇಕು. ಈ ರೀತಿ ಜಾರಿ ಮಾಡುವದಕ್ಕಾಗದೆ ಇದ್ದರೆ ಟಪ್ಪಾಲು ಮೂಲಕ ಒಂದು ಕಾಪಿಯನ್ನು ಸದರಿಯವನಿಗೆ ಕಳುಹಿಸಬೇಕು. ಮತ್ತೊಂದು ಕಾಪಿಯನ್ನು ಡೆಪ್ಯುಟಿ ಕಮಿಷನರವರ ಕಚೇರಿಯಲ್ಲಿಯೂ ಮತ್ತು ಜಮೀನುದಾರ ವಾಸಮಾಡುವ ಮನೆಯಮೇಲೂ ಬಹಿರಂಗವಾದ ಸ್ಥಳದಲ್ಲಿ ಚಿಕಟಾಯಿಸಬೇಕು. ಈತನು ಒಂದು ಗ್ರಾಮದಲ್ಲಿ ವಾಸಮಾಡದೆಯೂ ಅಥವಾ ಆತನ ವಾಸಸ್ಥಳ ಗೊತ್ತಾಗದೆಯೂ ಇದ್ದಲ್ಲಿ, ಈ ನೋಟೀಸನ್ನು, ಸದರಿ ಜಮೀನುಗಳ ವಿಷಯದಲ್ಲಿ, ಜಮೀನುದಾರನ ಸ್ಥಳೀಕ ಮುತಾಲೀಕನ ಮೇಲೆ ಜಾರಿ ಮಾಡತಕ್ಕದ್ದು. ನೋಟೀಸಿನ ಒಂದು ಕಾಪಿಯನ್ನು ಜಮೀನಿನ ಮೇಲೂ ಗ್ರಾಮದ ಚಾವಡಿಯಲ್ಲಿಯೂ ಸಹಾ ಚಿಕಟಾಯಿಸಬೇಕು.

ನಂ. 4. ಜಮೀನು ಆಬಾದು ಸಾಲಗಳ ರೆಗ್ಯುಲೇಷನ್ ಅಥವಾ ಲ್ಯಾಂಡ್ ರೆವಿನ್ಯು ಕೋಡ್ 194ನೆ ಪ್ರಕರಣ ಪ್ರಕಾರ ಅರ್ಜಿದಾರನಿಗೆ ಕೊಡಬೇಕಾದ ನೋಟೀಸ್.

ಎಂಬ ಗ್ರಾಮ ಯಾ ಹಳ್ಳಿಯಲ್ಲಿ ವಾಸಮಾಡುವ ಎಂಬವನ ಮಗನಾದ ಎಂಬುವನಿಗೆ ನೀವು (ಇಲ್ಲಿ ತಪಸೀಲ್ ನಮೂದಿಸಬೇಕು) ಮೊಬಲಗು ಸಾಲಾ ಕೊಡಬೇಕೆಂದು ಬರದುಕೊಂಡ ಅರ್ಜಿ ವಿಷಯದಲ್ಲಿ ನೀವು ಖುದ್ದು ಅಥವಾ ಏಜಂಟಮೂಲಕ ಹಾಜರಾಗಿ ಇದರಡಿ ಕಂಡ ಸಂಗತಿಯನ್ನು ತಿಳಿಸಬೇಕಾಗಿ ಇರುವದರಿಂದಲೂ, ಅಥವಾ ಅವಶ್ಯಕವಾದ ದಸ್ತಾವೇಜುಗಳನ್ನು ಬರದುಕೊಟ್ಟು ಅಪೇಕ್ಷಿಸಿದ ಸಾಲದ ಮೊಬಲಗನ್ನು ಪಡಿಯಬೇಕಾಗಿರುವವರಿಂದಲೂ, ನೀವು ಸ್ಥಳದಲ್ಲಿ ನೆ ತಾರೀಖಿನಲ್ಲಿ ರ ಸಮಕ್ಷಮ ಹಾಜರಾಗಬೇಕಾಗಿ ಇದೆ.

ನೀವು ಇದರಂತೆ ಹಾಜರಾಗದೆ ತಪ್ಪಿದರೆ ನಿಮ್ಮ ಅರ್ಜಿ ತಿರಸ್ಕರಿಸಲ್ಪಡುತ್ತೆ.

ಮೊಕ್ಕಾಂ. ತಾರೀಖು,

ನೋಟೀಸ್ ಕೊಡತಕ್ಕ ಆಫಿಸರ ಹುದ್ದೆ ಮತ್ತು ದಸ್ಕತ್ತು.

ಷರಾ:—ಈ ನೋಟೀಸನ್ನು ದ್ವಿಪ್ರತಿಯಾಗಿ ಕಳುಹಿಸಬೇಕು ಒಂದು ಕಾಪಿಯನ್ನು ಅರ್ಜಿದಾರನಿಗಾಗಲಿ ಅಥವಾ ಅವನು ವಾಡಿಕೆಯಾಗಿ ವಾಸಮಾಡುವ ಸ್ಥಳದಲ್ಲಿ ಅವನ ಕುಟುಂಬಕ್ಕೆ ಸೇರಿದ ವಯಸ್ಸಾದ ಗಂಡಸರಪೈಕಿ ಒಬ್ಬರಿಗಾಗಲಿ ಅಥವಾ ಅವನಿಂದ ನಿಯಮಿಸಲ್ಪಟ್ಟ ಏಜಂಟರಿಗಾಗಲಿ ಕೊಡಬೇಕು ; ಮತ್ತೊಂದು ಕಾಪಿಯನ್ನು, ಅರ್ಜಿದಾರನ ಅಥವಾ ಅವನ ಏಜಂಟನ ರುಜುವು ಸಹಿತ ನೋಟಿಸ್ ಕೊಟ್ಟ ಆಫೀಸರಿಗೆ ವಾಪಸು ಕಳುಹಿಸಬೇಕು. ನೋಟಿಸು ಜಾರಿ ಆಗದಿದ್ದರೆ ಹಾಗೆ ಜಾರಿ ಮಾಡದೆ ತಪ್ಪಿದ್ದಕ್ಕೆ ಕಾರಣವನ್ನು ನಮೂದ್ಮಾಡಿ ಅದನ್ನು ವಾಪಸು ಕಳುಹಿಸಬೇಕು. ಅನುಕೂಲವಿದ್ದ ಸ್ಥಳದಲ್ಲೆಲ್ಲಾ ಈ ನೋಟೀಸನ್ನು ಟಪ್ಪಾಲುಮೂಲಕ ಸದರಿ ಜನಗಳಿಗೆ ಕಳುಹಿಸಬಹುದಾಗಿ ಇರುತ್ತೆ.

ನಂ. 5. ಜಮೀನು ಆಬಾದು ಬಗ್ಯೆ ಕೊಡುವ ಸಾಲಗಳ ರೆಗ್ಯುಲೇಷನ್ ಅಥವಾ ಲ್ಯಾಂಡ್ ರೆವಿನ್ಯು ಕೋಡ್ 194ನೆ ಪ್ರಕರಣ.

ಅರ್ಜಿದಾರನಿಗೆ ತನ್ನ ಅರ್ಜಿ ತಿರಸ್ಕರಿಸಲ್ಪಟ್ಟಿತೆಂದು ತಿಳಿಯಪಡಿಸುವ ಬಗ್ಯೆ ಕೊಡಬೇಕಾದ ನೋಟಿಸ್.

ಡಿಸ್ಟ್ರಿಕ್ಟ ತಾಲ್ಲೂಕ್ ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್ ಆಫೀಸಿನಲ್ಲಿ ದರಖಾಸ್ತು ಅರ್ಜಿಗೆ ಕೊಟ್ಟ ನೆ ಇಸವಿ ಯ ನೆ ನಂಬರ್ ಎಂಬ ಗ್ರಾಮದ ಎಂಬವನಿಗೆ ತಿಳಿಯಪಡಿಸುವದೇನಂದರೆ :—ಜಮೀನು ಆಬಾದು ಸಾಲದ ರೆಗ್ಯುಲೇಷನಿನ ಅಥವಾ ಲ್ಯಾಂಡ್ ರೆವಿನ್ಯು ಕೋಡು 194ನೆ ಪ್ರಕರಣ ಪ್ರಕಾರ ಮೊಬಲಗು ಸಾಲಾ ಕೊಡಿಸಬೇಕೆಂದು ಬರದುಕೊಂಡ ಅರ್ಜಿಯನ್ನು ಕಾರಣಗಳಮೇಲೆ ತಿರಸ್ಕರಿಸಿ ಇದೆ. ನೆ ನಂಬರ್ ಅರ್ಜಿಮೇಲೆ ನೆ ತಾರೀಖಿನಲ್ಲಿ ಈ ಆಫೀಸಿನಿಂದ ಕೊಟ್ಟ ಹುಕುಮನ್ನು ನೋಡತಕ್ಕದ್ದು.

ಮೊಕ್ಕಾಂ ತಾರೀಖು.

ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್.

ಷರಾ :—ಇದನ್ನು ಎರಡುಪ್ರತಿ ತಯಾರ್ಮಾಡಿ ಆಪೈಕಿ ಒಂದನ್ನು ಪಾರ್ಟಿಗೆ ಕೊಡಬೇಕು, ಅವನು ಶಿಕ್ಕದಿದ್ದರೆ, ಅವನ ಪರವಾಗಿ ಅವನ ಸಂಸಾರದಲ್ಲಿ ವಾಸಮಾಡುವ ವಯಸ್ಸಾದ ಒಬ್ಬ ಗಂಡಸಿನ ವಶಕ್ಕಾಗಲಿ, ಅಥವಾ ಅವನು ವಾಸಮಾಡುವ ಗ್ರಾಮದ ಮುಖ್ಯಸ್ಥನ ವಶಕ್ಕಾಗಲಿ ಕೊಡಬೇಕು. ಮತ್ತೊಂದು ಕಾಪಿಯನ್ನು ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್ರಿಗೆ ವಾಪಸು ಕಳುಹಿಸಬೇಕು. ಇದರಲ್ಲಿ ನೋಟೀಸು ಯಾವರೀತಿ ಜಾರಿ ಮಾಡಿರುತ್ತೆಂಬ ಬಗ್ಯೆ ನೋಟೀಸು ಜಾರಿ ಮಾಡಿದವನ ಸ್ವಹಸ್ತದಲ್ಲಿ ಸರಟಿಫಿಕೇಟಾಗಿರಬೇಕು. ಅನುಕೂಲವಿದ್ದ ಸ್ಥಳದಲ್ಲಿ, ಈ ನೋಟೀಸನ್ನು ಟಪ್ಪಾಲುಮೂಲಕ ಕಕ್ಷಿಗೆ ಕಳುಹಿಸಬಹುದಾಗಿರುತ್ತೆ.

ನಂ. 6. ಸ್ಥಳೀಕ ತನಿಖೆ ಮಾಡಿದ ಆಫಿಸರವರ ರಿಪೋರ್ಟು ಯಾ ರಿಕಾರ್ಡ್.

ಅರ್ಜಿಯು ಜಮೀನು ಆಬಾದು ಸಾಲಗಳ ರೆಗ್ಯುಲೇಷನಿನ ಪ್ರಕಾರ ಅಥವಾ ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣ ಪ್ರಕಾರ ಬಂದಿರುತ್ತದೆಯೇ.

1. ಅರ್ಜಿಯ ಜಂಜರ್ ನಂಬರು.
2. (i) ಅರ್ಜಿದಾರನ ಗ್ರಾಮ ಮತ್ತು ಅವನ ಹೆಸರು.
   (ii) ಸಾಲದ ಮೊಬಲಗು.
3. (i) ಆಬಾದು ಮಾಡಬೇಕೆಂದಿರುವ ಜಮೀನು ಇರತಕ್ಕ ಗ್ರಾಮ, ಸರ್ವೆ ನಂಬರು, ಅದರ ವಿವರಣೆ (ಖುಷ್ಕಿ, ತರಿಯೇ) ವಿಸ್ತೀರ್ಣ, ಆಕಾರ.
   (ii) ಸಾಲ ಕೇಳುವ ಉದ್ದೇಶಗಳು.
4. (i) ಅರ್ಜಿದಾರನು ಒಬ್ಬನೇ ಜಮೀನಿನ ಪೂರಾ ಸ್ವಂತಕರ್ತನೇ ಅಥವಾ ಇವನೂ ಅಲ್ಲದೆ ಇನ್ನೂ ಇತರರು ಈ ಜಮೀನಿಗೆ ಮಾಲೀಕರಿರುತ್ತಾರೆಯೇ, ಇನ್ನೂ ಇತರರು ಇದ್ದ ಪಕ್ಷದಲ್ಲಿ, ಇವನು ಆ ಕುಟುಂಬದ ಯಜಮಾನನೇ ?
   (ii) ಅರ್ಜಿದಾರನು ಜಂಟಿ ಹಿಡುವಳಿದಾರನಾಗಿದ್ದಲ್ಲಿ, ಇತರ ಜಂಟಿ ಹಿಡುವಳಿದಾರರು ಜಮೀನು ಆಬಾದು ವಿಷಯದಲ್ಲಿ ಖರಹ ಮೂಲಕ ಒಪ್ಪಿ ಇರುತ್ತಾರೆಯೇ ? ಜಂಟಿ ಹಿಡುವಳಿಯಲ್ಲಿ ಅರ್ಜಿದಾರನಿಗೆ ಎಷ್ಟರವಟ್ಟಿಗೆ ಹಕ್ಕು ಇರುತ್ತದೆ ಮತ್ತು ಅವರುಗಳು ಅರ್ಜಿದಾರನ ಹಿಸ್ಸೆ ಪೋಡುಮಾಡುವ ವಿಷಯದಲ್ಲಿ ಒಪ್ಪುತ್ತಾರೆಯೇ ?
   (iii) ಅರ್ಜಿದಾರನು ಷಿಕ್ಮಿದಾರನಾಗಿದ್ದಪಕ್ಷದಲ್ಲಿ, ಅವನಿಗೆ ಜಮೀನಿನಲ್ಲಿ ವರ್ಗ ಹಕ್ಕು ಏನಾದರೂ ಇರುತ್ತದೆಯೇ ? ಹಾಗಿದ್ದರೆ, ಅದು ಎಂಥಾದ್ದು ? ಮತ್ತು 21ನೆ ನಿಬಂಧನೆ ಪ್ರಕಾರ ಜಮೀನುದಾರನಿಗೆ ಕೊಟ್ಟ ನೋಟೀಸು ಜಾರಿಯಾಗಿರುತ್ತೆಯೇ ? ಮತ್ತು ಇಬ್ಬರು ಸಾಕ್ಷಿಗಳಿಂದ ರುಜು ಹಾಕಿಸಿ ಖರಹ ಮೂಲಕ ತನ್ನ ಒಪ್ಪಿಕೆಯನ್ನು ಇದಕ್ಕೆ ಕೊಟ್ಟಿರುತ್ತಾನೆಯೇ ?
   (iv) ಮೈನರ್ ಪರವಾಗಿ ಅರ್ಜಿ ದಾಖಲಾಗಿದ್ದಲ್ಲಿ, ಆ ಅರ್ಜಿಗೆ ನ್ಯಾಯವಾಗಿ ಮೊಕರರಾದ ಗಾರ್ಡಿಯನ್ನರ ಸ್ಸೆನು ಆಗಿರುತ್ತೆಯೆ ? ಈ ಜಮೀನಿನಲ್ಲಿ ಮೈನರಿಗೆ ಇರುವ ಹಕ್ಕಿನ ಸ್ವಭಾವ ಮತ್ತು ಪರಿಮಿತಿ ವಿಷಯದಲ್ಲಿ ಮೇಲಿನ 3 (i)ನೆ ಕಲಂನಲ್ಲಿ ಕಂಡ ತಪಶೀಲುಗಳನ್ನು ಇಲ್ಲಿ ಬರಿಯಬೇಕು.
   (v) ಅರ್ಜಿದಾರಳು ಹಿಂದೂ ವಿಧವೆಯಾಗಿದ್ದಪಕ್ಷದಲ್ಲಿ, ಅವಳ ಉತ್ತರ ವಾರಸುದಾರರು ಈ ಆಬಾದಿಗೆ ಒಪ್ಪಿರುತ್ತಾರೆಯೇ ?
5. ಅರ್ಜಿಯು ವಾಜಬಿಯಾದ್ದೇ ಅರ್ಜೀದಾರನು ಧಡವತ್ದಾರನೇ ?
6. ಅರ್ಜಿದಾರನು ಸರ್ಕಾರಕ್ಕೆ ಕೊಡಬೇಕಾದ ಜಮೀನಿನ ಕಂದಾಯವನ್ನು ಬಾಕಿಯುಲ್ಲಿಟ್ಟುಕೊಂಡಿರುತ್ತಾನೆಯೇ ? ಅಥವಾ ಹಿಂದೆ ಪಡದ ಸಾಲದ ಕಂತು ಬಾಕಿ ಇಟ್ಟುಕೊಂಡಿದ್ದಾನೆಯೇ ?
7. ಆಧಾರ.—
   (a) ಆಬಾದಿಗೆ ತರುವದು ಜಮೀನಾಗಿದ್ದ ಪಕ್ಷದಲ್ಲಿ—
      (i) ಆಬಾದಿಗೆ ಬರುವ ಜಮೀನಿನಲ್ಲಿಯೇ ಉದ್ದೇಶಿಸಿರುವ ಅಭಿವೃದ್ಧಿಗ ಜಾಗಾ ಇರುತ್ತೆಯೇ ?
      (ii) ಸದರಿ ಜಮೀನಿನಲ್ಲಿ ಅರ್ಜಿದಾರನಿಗೆ ಇರುವ ಹಕ್ಕು ಹಾಲಿ ಎಷ್ಟು ಬಾಳುತ್ತದೆ ? ಇದಕ್ಕೆ ಕಾರಣಗಳು.
      (iii) ಇದರ ಮೇಲೆ ಹಿಂದಿನ ಸಾಲಗಳು ಏನಾದರೂ ಇರುತ್ತವೆಯೇ ? ಭೋಗ್ಯದಾರರ ಹೆಸರು ಮತ್ತು ಅವರಿಗೆ ಸಲ್ಲಬೇಕಾದ ಮೊಬಲಗು ಎಷ್ಟು.

(b) ಆಸಾಮಿ ಜಾಮಿನಾಗಿದ್ದಲ್ಲಿ—

(i) ಜಾಮಿನುದಾರರ ಹೆಸರುಗಳು, ಹುದ್ದೆ, ಅವರ ಆಸ್ತಿ ವಗೈರೆ.

(ii) ಎಷ್ಟು ಮೊಬಲಗ್ಗೆ ಜಾಮಿನು.

(c) ಆಬಾದಿಗೆ ಬರುವ ಜಮೀನಲ್ಲದೆ ಇತರ ಜಮೀನುಗಳು ಆಧಾರಮಾಡಿದ್ದರೆ.

(i) ಅಂಥಾ ಜಮೀನಿನ ಸರ್ವೆ ನಂಬರು, ವಿವರಣೆ, ವಿಸ್ತೀರ್ಣ, ಆಕಾರ, ಮತ್ತು ಅದರಲ್ಲಿ ಜಾಮಿನುದಾರನಿಗೆ ಅಥವಾ ಅರ್ಜಿದಾರನಿಗೆ ಇರುವ ಹಕ್ಕು ಎಷ್ಟರಮೌಲ್ಯ ಬಾಳತಕ್ಕದ್ದು ಇದಕ್ಕೆ ಕಾರಣಗಳು.

(ii) ಈ ಜಮೀನುಗಳು ಅರ್ಜಿದಾರನ ಅಥವಾ ಜಾಮೀನುದಾರನ ಹೆಸರಿನಲ್ಲಿ ರಿಜಿಸ್ಟರಾಗಿರುತ್ತವೆಯೆ ? ಮತ್ತು ಅವರ ಸ್ವಾಧೀನದಲ್ಲಿರುತ್ತೆಯೆ ? ಇವುಗಳ ಮೇಲೆ ಸಾಲಸೋಲಗಳು ಏನು ಇರುವದಿಲ್ಲವೆ ? ಈ ಜಮೀನುಗಳಲ್ಲಿ ಇವರಿಗೆ ಇರುವ ಹಕ್ಕಿನ ಸ್ವಭಾವ ಮತ್ತು ಪರಿಮಿತಿ.

(iii) ಜಮೀನಿನ ಮೇಲೆ ಸಾಲ ಸೋಲ ಇದ್ದರೆ, ಭೋಗ್ಯದಾರರು ಯಾರು, ಮೊಬಲಗು ಎಷ್ಟು, ಜಮೀನಿನ ಬೆಲೆಯಲ್ಲಿ ಸಾಲದ ಮೊಬಲಗು ವಜಾ ಮಾಡಿದ ಉಳಿಯುವುದು ಕೊಡಬೇಕೆಂದಿರುವ ಅಡ್ವಾನ್ಸು ಮೊಬಲಗಿಗೆ ಸರಿಯಾಗಿರುತ್ತೆಯೆ.

(d) ಜಮೀನಲ್ಲದೆ ಇತರ ಸ್ವತ್ತು ಆಧಾರ ಮಾಡಿದ್ದರೆ— ಅದರ ವಿವರಣೆ, ಇರತಕ್ಕ ಸ್ಥಳ, ಕಟ್ಟಡದ ಭಾಗಗಳು, ಭಾವಿ, ಮರ ವಗೈರೆ ಸೇರಿ ಆಗುವ ಅದರ ಬೆಲೆ. ಅದರಮೇಲೆ ಹಿಂದಿನ ಸಾಲಸೋಲಗಳು ಇದ್ದರೆ ಅವುಗಳ ಸ್ವಭಾವ ಮತ್ತು ಪರಿಮಿತಿ.

ಷರಾ.—ಅರ್ಜಿದಾರನಿಗೆ ಸೇರಿದ ಜಮೀನು ಆಧಾರಮಾಡಿಕೊಡುವದಕ್ಕೂ, ಜಾಮಿನುದಾರರು ಇತರ ಆಧಾರವನ್ನೂ ಕೊಟ್ಟಲ್ಲಿ, ಅಂಥಾ ಜಾಮಿನುದಾರರಿಗೆ ಸೇರಿದ ಜಮೀನು ಆಧಾರಮಾಡಿಕೊಡುವದಕ್ಕೂ ಭೇದವಿರುವದರಿಂದ ಅದನ್ನು ಸ್ಪಷ್ಟಪಡಿಸಬೇಕು. ಇಂಥಾ ಜಮೀನು ಒಂದು ಹೊಲದಲ್ಲಿ ಒಂದು ಭಾಗವಾಗಿದ್ದರೆ ಅದನ್ನು ಪೋಡು ಮಾಡಬೇಕು.

8. ಈ ಆಬಾದಿಗೆ 3ನೆ ಪಕ್ಷದವರ ಆಕ್ಷೇಪಣೆ ಯೇನಾದರು ಇದ್ದರೆ ಅಂಥಾ ಆಕ್ಷೇಪಣೆ.

9. ಜಮೀನಿನ ಆಬಾದಿನಿಂದ ಯಾವ ತಾರೀಖಿನ ಲಾಗಾಯಿತು ಆದಾಯ ಉಂಟಾಗಬಹುದು.

10. ಶಿಫಾರಸು ಮಾಡಲ್ಪಟ್ಟ ಸಾಲದ ಮೊಬಲಗಿನ ವಿಷಯದಲ್ಲಿ ಅಜಮಾಯಿಷಿ ಮಾಡಿದ ಆಫಿಸರುಗಳ ಅಭಿಪ್ರಾಯ.

ಆಧಾರ ಮಾಡಲ್ಪಟ್ಟ ಜಮೀನುಗಳ ವಿಷಯದಲ್ಲಿ ತಾಲ್ಲೂಕಿನ ರಿಜಿಸ್ಟ್ರೇರ್ಷ ಮತ್ತು ರೆವಿನ್ಯೂ ಆಫೀಸುಗಳಲ್ಲಿ ಏನಾದರು ದಾಖಲೆ ನೋಡಿ ದೃಢಪಡಿಸಿದ್ದರೆ ಅದರ ಫಲಿತಾಂಶ.

ಈ ಸಾಲವನ್ನು ಮಂಜೂರ್ಮಾಡುವದಕ್ಕೆ ಅಧಿಕಾರ ಹೊಂದಿದ ಆಫಿಸರ ಫೈಸಲು ಅಮಲ್ದಾರ್ರಿಗೆ ಈ ಅಧಿಕಾರವಿಲ್ಲದಿದ್ದರೆ ಅವರ ಶಿಫಾರಸು.

ಶೇಕದಾರ್ ಅಥವಾ ಅಜಮಾಯಿಷಿ ಮಾಡುವ ಇತರ ಆಫಿಸರ ದಸ್ತಖತ್ತು.

ಶೇಕದಾರ್ ಅಥವಾ ಸಾಲಾ ಮಂಜೂರ್ಮಾಡುವ ಲಾಯಖು ಅಧಿಕಾರಿಯ ದಸ್ತಖತ್ತು.

ಜಮೀನು ಆಬಾದು ಸಾಲಗಳ ರೆಗ್ಯುಲೇಷನ್
ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣ.

ಸಾಲದಬಗ್ಗೆ ಬಂದ ಅರ್ಜಿ.

ನಂಬರ್..............

ಗ್ರಾಮ

ರಿಂದ

ನಂಬರು

ತಾರೀಖು

ಅಜಮಾಯಿಷಿ ವಿಷಯದ ರಿಕಾರ್ಡು
ತನಿಖೆಯಿಂದ ಬರೆದ ರಿಪೋರ್ಟು

ನಂ. 7.—ಸಾಲಗಳಿಗಾಗಿ ಸ್ವತ್ತು ಪರಾಧೀನವಾಗಿರುತ್ತದೆಯೋ ಇಲ್ಲವೇ ಎಂಬ ವಿಷಯದಲ್ಲಿ ಸರಟಫಿಕೇಟು ಕಳುಹಿಸತಕ್ಕ ಬಗ್ಯೆ ರಿಜಿಸ್ಟ್ರೇಷನ್ ಇಲಾಖೆಗೆ ಬರೆಯತಕ್ಕ ಕ್ರಮ.

ನಂ. ತಾರೀಖು

ಸಬ್ ರಿಜಿಸ್ಟ್ರಾರ್‌ರವರಿಗೆ

ಅರ್ಜೀದಾರನ ಹೆಸರು

ಅಪೇಕ್ಷಿಸುವ ಸಾಲದ ಮೊಬಲಗು

ಯಾವ ಜಮೀನಿನ * ವಿಷಯದಲ್ಲಿ ಪರಾಧೀನತೆ ಸರ್ಟಿಫಿಕೇಟ್ ಬೇಕಾಗಿರುತ್ತದೆಯೋ ಅಂಥಾ ಜಮೀನಿನ ತಪಶೀಲು.

ಗ್ರಾಮದ ಹೆಸರು	ತರಿಯೋ ಖುಷ್ಕಿಯೋ	ಸರ್ವೆ ನಂಬರು ಮತ್ತು ಪೈಕಿ ನಂಬರು ಅಕ್ಷರ	ವಿಸ್ತೀರ್ಣ		ಆಕಾರ			ಷರಾ
			ಎಕರೆ	ಗುಂಟೆ	ರೂ.	ಆ.	ಪೈ	

ಷರಾ.

ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್.

* ಇತರ ಸ್ಥಿರಸ್ವತ್ತಾಗಿದ್ದರೆ ಅದರ ತಪಶೀಲನ್ನು ಸರಿಯಾಗಿ ವಿವರಿಸಬೇಕು.

ನಂ. 7.—ಸಾಲಗಳಿಗಾಗಿ ಸ್ವತ್ತು ಪರಾಧೀನವಾಗಿರುತ್ತದೆಯೋ ಇಲ್ಲವೇ ಎಂಬ ವಿಷಯದಲ್ಲಿ ಸರ್ಟಿಫಿಕೇಟು ಕಳುಹಿಸತಕ್ಕ ಬಗ್ಗೆ ರಿಜಿಸ್ಟ್ರೇಷನ್ ಇಲಾಖೆಗೆ ಬರೆಯತಕ್ಕ ಕ್ರಮ.

ನಂ. ತಾಲ್ಲೂಕು ಆಫೀಸು.

ತಾಲ್ಲೂಕು ಅಮಲ್ದಾರರಿಂದ. ತಾರೀಖು

ಸಬ್ ರಿಜಿಸ್ಟ್ರಾರ್‌ರವರಿಗೆ.—

ಇದರಡಿ ಕಂಡ ರೈತನು ಕಾನೂನು ಅನುಸರಿಸಿ ಸರ್ಕಾರದಿಂದ ಮೊಬಲಗು ಸಾಲಾ ಕೊಡಬೇಕೆಂದು ಅರ್ಜಿ ಕೊಟ್ಟಿರುವುದರಿಂದ, ಇದರಡಿ ನಮೂದಾಗುವ ಜಮೀನ್ನುಗಳ * ಮೇಲೆ ಸಾಲಗಳು ಆಗಿ ಪರಾಧೀನವಾಗಿರುತ್ತವೆಯೆಂಬ ಅಂಶವನ್ನು ಕಂಡು ಹಿಡಿಯುವುದಕ್ಕೆ ಅವಶ್ಯಕವಾದ ದಾಖಲೆಗಳನ್ನು ದಯವಿಟ್ಟು ಹುಡಿಕಿಸಿ ಆಬಗ್ಯೆ ಸರ್ಟಿಫಿಕೇಟನ್ನು ಜಾಗ್ರತೇಲಿ ಕಳುಹಿಸಿಕೊಡಬೇಕೆಂದು ಕೋರಿ ಇದೆ.

ನಂಬರು ಮತ್ತು ಗ್ರಾಮದ ಹೆಸರು	ಅರ್ಜೀದಾರನ ಹೆಸರು	ಆಧಾರ ಮಾಡುವ ಜಮೀನಿನ ತಪಶೀಲು								ಷರಾ
		ಖುಷ್ಕಿಯೋ ತರಿಯೋ	ಸರ್ವೆ ನಂಬರ್		ವಿಸ್ತೀರ್ಣ		ಆಕಾರ			
			ನಂಬರ್	ಅಕ್ಷರ	ಎಕರೆ	ಗುಂಟೆ	ರೂ.	ಆ.	ಪೈ	

ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ್

* ಇತರ ಸ್ಥಿರ ಸ್ವತ್ತಾಗಿದ್ದರೆ ಅದರ ತಪಶೀಲನ್ನು ಸರಿಯಾಗಿ ವಿವರಿಸಬೇಕು.

ತಾಲ್ಲೂಕ್ ಅಮಲ್ದಾರ್ರಿಂದ

ಸಬ್ ರಿಜಸ್ಟ್ರಾರ್ರವರಿಗೆ

ತಾರೀಖು

ನಂ.

ಸಂಗತಿ

ಇದರಲ್ಲಿ ಕಂಡ ಜಮೀನಿನ ವಿಷಯದಲ್ಲಿ ಪರಾಧೀನತೆ ಸರ್ಟಿಫಿಕೇಟ್ ಕಳುಹಿಸಬೇಕೆಂಬ ವಿಷಯು.

ನಂ. 8. ಜಮೀನು ಆಬಾದುಸಾಲಗಳ ರೆಗ್ಯುಲೇಷನ್ / ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣದ ಪ್ರಕಾರ ಸಾಲ ಮಂಜೂರ್ಮಾಡತಕ್ಕ ಹುಕುಂ.

ನೆ ಇಸವಿ ನಂಬರ್

1. ಸ್ಥಳದಲ್ಲಿ ವಾಸವಾಡುವ ಎಂಬುವನ ಮಗನಾದ ಜಾತಿಗೆ ಸೇರಿದ ಕಸಬು ಮಾಡುವ ಎಂಬುವನಿಗೆ ರೂಪಾಯಿಗಳನ್ನು ಎಂಬವರ ಸಂಮತಿ ಮೇಲೆ (ಸಂಬಂಧಪಟ್ಟ ರಿಕಾರ್ಡನ್ನು ಇದಕ್ಕೆ ಸೇರಿಸಿದೆ *) ಜಮೀನು ಆಬಾದು ಸಾಲಗಳ ರೆಗ್ಯುಲೇಷನು / ಲ್ಯಾಂಡ್ ರೆವಿನ್ಯೂ ಕೋಡು 194ನೆ ಪ್ರಕರಣ ಅನುಸರಿಸಿ ಕೆಲಸಕ್ಕೋಸ್ಕರ (†) ಆಬಾದಿಗಾಗಿ (‡) ಇದರಡಿ ಕಂಡ ಷರತ್ತುಗಳ ಮೇಲೆ ಸಾಲವಾಗಿ ಮಂಜೂರ್ಮಾಡಿ ಇರುತ್ತದೆ.

2. ಸದರೀ ಷರತ್ತುಗಳನ್ನು ಇದರಡಿ ನಮೂದಿಸಿರುತ್ತದೆ :—

(a) ಈ ಸಾಲದ ಮೊಬಲಗನ್ನು (ಸಾಲ ತೆಗೆದುಕೊಳ್ಳುವನ ಹೆಸರು) ಎಂಬುವನಿಗೆ ಕಂತುಗಳಾಗಿ ಅವಶ್ಯಕವಾದ ಆಧಾರ ದಸ್ತಾವೇಜುಗಳನ್ನು ಅವನಿಂದ ಬರೆಸಿಕೊಂಡನಂತರ ಪಾವತಿ ಮಾಡತಕ್ಕದ್ದು. ಮೊದಲನೆ ಕಂತು ಈ ಹುಕುಂ ಹಾಜರ್ಮಾಡಿದ ಒಡನೆಯೇ (ಮೊಬಲಗು ಪಾವತಿ ಬಗ್ಗೆ ಈ ಹುಕುಂ ಹಾಜರ್ಮಾಡಬೇಕಾದ ಸ್ಥಳವನ್ನು ಇಲ್ಲಿ ಬರೆಯಬೇಕು) ಸ್ಥಳದಲ್ಲಿ ಕೊಡಲ್ಪಡುತ್ತದೆ. ಮೊದಲನೆ ಕಂತಿನ ಮೊಬಲಗನ್ನು ಸರಿಯಾಗಿ ಉಪಯೋಗಿಸಿರುತ್ತದೆಂದು ರುಜುವಾತು ಕೊಟ್ಟನಂತರ ಎರಡನೆ ಕಂತಿನ ಮೊಬಲಗು ಕೊಡಲ್ಪಡುತ್ತದೆ.

(b) (i) ಮೊದಲನೆ ಕಂತಿನ ಮೊಬಲಗನ್ನು (ಮೊದಲನೆ ಕಂತಿನ ಮೊಬಲಗು ಎಷ್ಟು ಕಾಲದ ಒಳಗಾಗಿ ಉಪಯೋಗಿಸಬೇಕೆಂದು ಕ್ಲುಪ್ತ ಪಡಿಸಿರುತ್ತದೆಯೋ ಆ ಕಾಲವನ್ನು ಇಲ್ಲಿ ಬರೆಯಬೇಕು) ಕಾಲದ ಒಳಗಾಗಿ ಕೆಲಸಕ್ಕೆ ಉಪಯೋಗಿಸದೆ ಇದ್ದ ಪಕ್ಷದಲ್ಲಿ; ಅಥವಾ

(ii) ಸಾಲದ ಮೊಬಲಗಿನ ಪೈಕಿ ಯಾವ ಭಾಗವನ್ನಾದರೂ ಸರಿಯೇ ನಿಯಮಿತ ಕೆಲಸಕ್ಕಲ್ಲದೆ ಬೇರೆ ಕೆಲಸಗಳಿಗೆ ದುರುಪಯೋಗಪಡಿಸಿರುತ್ತದೆಂದಾಗಲಿ ಅಥವಾ ಸಾಲದ ಪೂರಾ ಮೊಬಲಗನ್ನು ನಿಯಮಿತ ಕೆಲಸಕ್ಕೆ ಸಂಪೂರ್ಣವಾಗಿ (ಪೂರಾ ಸಾಲದ ಮೊಬಲಗು ಎಷ್ಟು ಕಾಲದ ಒಳಗಾಗಿ ನಿಯಮಿತ ಕೆಲಸಕ್ಕೆ ಉಪಯೋಗಿಸಬೇಕೆಂದು ಗೊತ್ತಾಗಿರುತ್ತದೆಯೋ ಆ ಕಾಲವನ್ನು ಇಲ್ಲಿ ನಮೂದಿಸಬೇಕು) ಕಾಲದ ಒಳಗೆ ಉಪಯೋಗಿಸಿ ಇರುವುದಿಲ್ಲವೆಂತಲಾಗಲೀ, ಡೆಪ್ಯುಟಿ ಕಮಿಷನರವರಿಗೆ ತೃಪ್ತಿಕರವಾಗಿ ರುಜುವಾತಾದಲ್ಲಿ ಸಾಲದ ಪೈಕಿ ಪಾವತಿ ಮಾಡದೆ ನಿಂತ ಪೂರಾ ಮೊಬಲಗನ್ನಾಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮಿಷನರವರು ಗೊತ್ತು ಮಾಡುವ ಒಂದು ಭಾಗದ ಮೊಬಲಗನ್ನಾಗಲಿ ಶೇಕಡಾ $6\frac{1}{4}$ರಂತೆ ಬಡ್ಡಿ ಮತ್ತು ಖರ್ಚೇನಾದರೆ ಬಿದ್ದು ಇದ್ದಲ್ಲಿ ಅಂಥಾ ಖರ್ಚು ಸಹಿತ ಸರ್ಕಾರಕ್ಕೆ ತಕ್ಷಣವೇ ವಸೂಲಾಗತಕ್ಕ ಬಾಕಿಯಂತೆ ಭಾವಿಸಬೇಕು.

(iii) ಆದರೆ, ಸಾಲಾ ತೆಗೆದುಕೊಳ್ಳುವವನ ಹತೋಟಿಗೆ ಮೀರಿದ ಕಾರಣಗಳಿಂದ ಎಂದರೆ ಅವನಿಂದ ಯಾವ ಲೋಪವೂ ಇಲ್ಲದೆ ದೈವವಶಾತ್ ಕೆಲಸವು ಸಂಪೂರ್ಣವಾಗಿ ಕೆಟ್ಟುಹೋದರೆ, ಆ ಸಂಗತಿಯನ್ನು ರೆವಿನ್ಯೂ ಕಮಿಷನರವರಿಗೆ ರಿಪೋರ್ಟು ಮಾಡಿ ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರಲ್ಲಿ ಒಂದು ಭಾಗವನ್ನಾಗಲಿ ವಸೂಲ್ಮಾಡಬೇಕೆಂಬ ವಿಷಯದಲ್ಲಿ ಅವರ ಅಪ್ಪಣೆಯನ್ನು ಪಡೆಯಬೇಕು.

(c) (i) ಈ ಸಾಲದ ಮೊಬಲಗನ್ನು ಶೇಕಡಾ (¶) ರಂತೆ ಆಗುವ ಬಡ್ಡಿ (§) ಸಹಿತಾ ಸಾಲಿಯಾನಾ ರೂಪಾಯಿಗಳ ಕಂತು ಪ್ರಕಾರ 190 —190 ನೆ ರೆವಿನ್ಯೂ ಸಾಲಿನ ಖಿಸ್ತಿನಿಂದ ಪ್ರಾರಂಭಿಸಿ 190 —190 ನೆ ಸಾಲಿಗೆ ಪೂರೈಸುವ ಹಾಗೆ ಕೊಡುತ್ತಾ ಬರಬೇಕು. ಪೂರೈಸಲ್ಪಟ್ಟ ಕೆಲಸವು ಲೋನು ಆರ್ಡರಿನಲ್ಲಿ ನಮೂದಿಸಿರುವ ಕಾಲದವರೆಗೆ ಶಾಶ್ವತವಾಗಿರತಕ್ಕಷ್ಟು ಮಜಬೂತಾಗಿ ಇಲ್ಲವೆಂದು ಡೆಪ್ಯುಟಿ ಕಮಿಷನರವರಿಗಾಗಲಿ ಅಥವಾ ಸಾಲಾ ಮಂಜೂರ್ಮಾಡಿದ ಆಫಿಸರಿಗಾಗಲಿ ಕಂಡು ಬಂದಲ್ಲಿ ಅಂಥಾ ಸಾಲದ ಮೊಬಲಗನ್ನು ಕೊಡಲ್ಪಟ್ಟ ವಾಯಿದೆಗಿಂತಲೂ ಮುಂಚಿತವಾಗಿಯೇ ವಸೂಲ್ಮಾಡುವುದಕ್ಕೋಸ್ಕರ ಸಾಲಿಯಾನಾ ಕೊಡಬೇಕಾದ ಮೊಬಲಗನ್ನು ಹೆಚ್ಚಿಸುವದೂ ಅಥವಾ ಖಿಸ್ತುಗಳನ್ನು ಕಮ್ಮಿ ಮಾಡುವದೂ ಸದರೀ ಆಫಿಸರುಗಳ ಸೂಕ್ತಾನುಸಾರವಾದ ಆಲೋಚನೆಗೆ ಸೇರುತ್ತದೆ.

(ii) ಈ ರೀತಿ ಸಾಲೀಯಾನಾ ಕೊಡಬೇಕಾದ ಮೊಬಲಗನ್ನು ಸಾಲಗಾರನ ಖಾತೆಗೆ ಸೇರಿಸಿ ಇದ್ದರೆ, ಅದನ್ನು ಗ್ರಾಮ ನೌಕರರಿಗೂ ಇಲ್ಲವಾದರೆ ಅಮಲ್ದಾರರಿಗೂ ಪಾವತಿ ಮಾಡಬೇಕು. ಈ ಮೊಬಲಗು ಕಂದಾಯದ ಜತೆಗೆ ಹೆಚ್ಚಾಗಿ ಕೊಡಬೇಕಾದ್ದಾಗಿರುತ್ತದೆ. ಪರಂತು ** ಜಮೀನು ಆಬಾದು ಸಾಲಗಳ ರೆಗ್ಯುಲೇಷನಿನ 11ನೆ ಪ್ರಕರಣದಲ್ಲಿ ನಮೂದಾಗುವ ಮೇರೆಗೆ ಅಲ್ಲದೆ, ಈ ಆಬಾದಿನಿಂದ ಜಮೀನಿನ ಬೆಲೆಯು ಹೆಚ್ಚಾಗಿರುತ್ತದೆಂಬ ಕಾರಣದ ಮೇಲೆ ಮುಂದೆ ನಡೆಯುವ ರಿವಿಜನ್ ಸರ್ವೇ ಕಾಲದಲ್ಲಿ ಜಮೀನು ಕಂದಾಯವನ್ನು ಹೆಚ್ಚಿಸುವದಿಲ್ಲ.

(iii) ಸಾಲೀಯಾನಾ ಕೊಡಬೇಕಾದ ಸಾಲದ ಕಂತಿನ ಮೊಬಲಗನ್ನು ಕೊಡದೆ ತಪ್ಪಿ ಸದರೀ ಮೊಬಲಗಿನ ವಸೂಲಿಗೆ ಮತ್ಯಾವ ವಿಧದಿಂದಲೂ ರಹಾ ಇಲ್ಲದೆ ಇದ್ದರೆ, ಪಾವತಿ ಮಾಡದೆ ಉಳಿದಿರುವ ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರಲ್ಲಿ ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವ ಒಂದು ಭಾಗವನ್ನಾಗಲಿ ತಕ್ಷಣ

ಸರ್ಕಾರಕ್ಕೆ ಬರಬೇಕಾದ ಬಾಕಿಯಂತೆ ಎಣಿಸತಕ್ಕದ್ದಾಗಿದೆ. ಮತ್ತು (d) ಷರತ್ತಿನಲ್ಲಿ ಕಂಡ ಪೂರಾ ಜಮಿ‍ನನ್ನಾಗಲಿ ಅಥವಾ ಅದರಲ್ಲಿ ಡೆಪ್ಯುಟಿ ಕಮೀಷನರವರಿಗೆ ಯುಕ್ತ ತೋರುವ ಒಂದು ಭಾಗವನ್ನಾಗಲಿ ಹರಾಜ್ ಮಾಡಿ ಸಾಲದ ಮೊಬಲಗನ್ನು ಬಡ್ಡಿ ಖರ್ಚು ದೇಖೀಲು ವಸೂಲ್ಮಾಡಿಕೊಳ್ಳಬೇಕು.

(d) †† ಸಾಲದ ಮೊಬಲಗನ್ನು ಬಡ್ಡಿ ಮತ್ತು ಖರ್ಚುಗಳು ಏನಾದರೂ ಇದ್ದರೆ ಅಂಥಾ ಖರ್ಚು ದೇಖೀಲು ವಾಪಸ್ ಪಾವತಿ ಮಾಡುವ ಬಗ್ಗೆ ಇದರಡಿ ಕಂಡ ಸ್ಥಿರಸ್ವತ್ತುಗಳನ್ನು (ಯಾವ ಜಮೀನಿನ ಆಬಾದಿಗಾಗಿ ಸಾಲಾ ಕೊಟ್ಟು ಇರುತ್ತದೆಯೋ ಅಂಥಾ ಜಮೀನಿನ ಜತೆಗೆ) ‡‡ ಸರ್ಕಾರಕ್ಕೆ ಆಧಾರ ಮಾಡಿರುತ್ತದೆ.

ಸಾಲಾ ಕೊಡತಕ್ಕ ಆಫೀಸರವರ ರುಜು.

ಮೇಲೆ ನಮೂದಿಸಿರುವ ಷರತ್ತುಗಳನ್ನು ಚೆನ್ನಾಗಿ ತಿಳಿದುಕೊಂಡು ಇರುತ್ತೇನೆ. ಮತ್ತು ಆ ಷರತ್ತುಗಳಿಗೆಲ್ಲಾ ಒಪ್ಪಿ ಇರುತ್ತೇನೆ.

ಸಾಲಾತೆಗೆದುಕೊಳ್ಳುವವನ ರುಜು.

---

* ಜಮೀನನ್ನು ಅಭಿವೃದ್ಧಿಗೆ ತರುವುದಕ್ಕೆ ಹಕ್ಕುಳ್ಳವನ ಅನುಮತಿಯಿಂದ ಅಂಥಾ ಹಕ್ಕು ಇಲ್ಲದವನಿಗೆ ಸಾಲಾ ಕೊಡುವ ಸಂದರ್ಭದಲ್ಲಿ ನಮೂದಿಸತಕ್ಕದ್ದು.

† ಸಾಲಾ ಯಾವ ಕೆಲಸಕ್ಕೋಸ್ಕರ ಕೊಡಲ್ಪಡುತ್ತದೆಯೋ ಅದನ್ನು ಇಲ್ಲಿ ಚೆನ್ನಾಗಿ ವಿವರಿಸಬೇಕು.

‡ ಆಬಾದಿಗೆ ಬರುವ ಜಮೀನಿನ ತಪಶೀಲನ್ನು ಇಲ್ಲಿ ಬರೆಯಬೇಕು.

§ ಬಡ್ಡಿ ಇಲ್ಲದೆ ಸಾಲಾ ಕೊಡುವ ಸಂದರ್ಭದಲ್ಲಿ ಇದನ್ನು ಬಿಟ್ಟುಬಿಡಬೇಕು.

¶ ಇಲ್ಲಿ ಬಡ್ಡಿ ದರವನ್ನು ಬರೆಯಬೇಕು, ಸಾಧಾರಣವಾಗಿ ದುರ್ಭಿಕ್ಷ ನಿವಾರಣೆಗಾಗಿ ಸಾಲಾ ಕೊಟ್ಟು ಇದ್ದ ಪಕ್ಷದಲ್ಲಿ ಶೇಕಡಾ 3 ರಂತೆಯೂ ಇತರ ಸಂದರ್ಭಗಳಲ್ಲಿ ಶೇಕಡಾ 5 ರಂತೆಯೂ ಬಡ್ಡಿ ದಾಖಲ್ಮಾಡಬೇಕು.

** ಜಮೀನು ಆಬಾದಿಗಾಗಿ ಕೊಡತಕ್ಕ ಸಾಲಗಳ ವಿಷಯದಲ್ಲಿ ಮಾತ್ರ ಇದನ್ನು ಬರೆಯಬೇಕು.

†† ಟಿಪ್ಪಣಿ—ಸಾಲಾ ತಗೆದುಕೊಳ್ಳುವವನಿಂದ ಅಥವಾ ಜಾಮೀನುದಾರ್ ಯಾ ಜಾಮೀನುದಾರರುಗಳಿಂದ ಸಾಲಕ್ಕಾಗಿ ಆಧಾರ ಮಾಡಲ್ಪಡುವ ಸ್ಥಿರಸ್ವತ್ತುಗಳ ತಪಶೀಲನ್ನು ಲೋನ್ ಆರ್ಡರ್ (d) ಉಪಕಲಂ ಇರೇಜಿಯಲ್ಲಿ ಬರೆಯಬೇಕು. ಅಲ್ಲದೆ ಆಬಾದಿಗೆ ಬರುವ ಜಮೀನಿನ ತಪಶೀಲನ್ನು ಸಹಾ 1877ನೆ ಇಸವಿಯ ರಿಜಿಸ್ಟ್ರೇಷನ್ ಆಕ್ಟ್ 21ನೆ ಪ್ರಕರಣದಲ್ಲಿ ಹೇಳಿರುವ ಪ್ರಕಾರ ಬರೆಯಬೇಕು. ದುರ್ಭಿಕ್ಷ ನಿವಾರಣೆಗಾಗಿ ಸಾಲಾ ಕೊಟ್ಟಿದ್ದರೆ (d) ಷರತ್ತಿನಲ್ಲಿ ಬರೆದಿರುವ "ಮೊದಲನೆ ಕಂತನ್ನು" ಎಂಬ ಲಾಗಾಯಿತು, ಕೊನೆವರೆಗಿನ ಮಾತುಗಳನ್ನು ಬಿಟ್ಟು ಇವುಗಳಿಗೆ ಬದಲಾಗಿ "ತಿಂಗಳಿಗೆ ಒಂದಾವರ್ತಿ ಅಥವಾ ಎರಡು ತಿಂಗಳಿಗೆ ಒಂದಾವರ್ತಿ ಕೊಡಬೇಕು" ಎಂಬ ಪದಗಳನ್ನು ಉಪಯೋಗಿಸಬೇಕು.

‡‡ ಆವರಣ ಚಿನ್ಹೆಯಲ್ಲಿ ಇರುವ ಮಾತುಗಳನ್ನು ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣದ ಪ್ರಕಾರ ಕೊಡುವ ಸಾಲಗಳ ವಿಷಯದಲ್ಲಿ ಬಿಟ್ಟುಬಿಡತಕ್ಕದ್ದು.

8ನೆ ನಂಬರ್ ನಮೂನೆ (ಪೂರ್ವಣಿ.)

ಸಾಲದ ವಸೂಲಾತಿಗಳು.

ಪಾವತಿ ಮಾಡಬೇಕಾದ ಮೊಬಲಗು				ಗೊತ್ತಾಗಿರುವ ಕಂತಿನ ಪೈಕಿ ಬಡ್ಡಿ ಎಷ್ಟು, ಅಸಲು ಎಷ್ಟು ಎಂಬ ಬಗ್ಗೆ ವಿವರ						ವಾಪಸ್ ಪಾವತಿ ಮಾಡಿದ ಮೊಬಲಗು									ಬಾಕಿ ವಸೂಲಾಗಬೇಕಾಗಿ ರುವುದು						ಅಮಲ್ದಾರ್ರವರ ಸಂಣ ಸೈನು	ಷರಾ
ರೆವಿನ್ಯೂ ಸಾಲ್	ಮೊಬಲಗು			2ನೆ ಕಲಮಿನಲ್ಲಿ ನಮೂದಿಸಿರುವ ಮೊಬಲಗಿನ ಮೇಲೆ ಸಾಲದ ತಾರೀಖು ಲಾಗಾಯಿತ್ತು ಮೊದಲನೆ ಕಂತಿನ ತಾರೀಖು ವರೆಗೆ, ಆಚೆ ವರ್ಷಗಳಲ್ಲಿ ಒಂದು ವರ್ಷದವರೆಗೆ ಶೇಕಡಾ......ರಂತೆ ಆಗುವ ಬಡ್ಡಿ			ಅಸಲು			ಈ ಸಾಲಿನಲ್ಲಿ ಪಾವತಿ ಮಾಡಿದ ಮೊಬಲಗು			ಜಮಾ ಹಿಡಿದಿರುವುದು						ಬಡ್ಡಿ (ಎಂದರೆ 3,4ನೆ ಕಲಮುಗಳ ಒಟ್ಟಿನಲ್ಲಿ 5ನೆ ಕಲಮನ್ನು ಕಳೆದುದರಿಂದ ಬಂದ ಮೊಬಲಗು)			ಅಸಲು (ಎಂದರೆ 2ನೆ ಕಲಮಿಗೂ 7ನೆ ಕಲಮಿಗೂ ಇರುವ ವ್ಯತ್ಯಾಸ)				
													ಬಡ್ಡಿಯ ಬಾಬಿಗೆ ಎಷ್ಟು ?			ಅಸಲ್ ಬಾಬಿಗೆ ಎಷ್ಟು ?										
1	2			3			4			5			6			7			8			9			10	11
	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ	ಆ.	ಪೈ	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.		

G

ನಂಬರ್ ೨ (a).—ಸಾಲಾ ತೆಗದುಕೊಂಡವರು ಬರೆದು ಕೊಡಬೇಕಾದ ಆಧಾರ ಪತ್ರ.

ಈ ಪತ್ರ ಅಥವಾ ದಸ್ತಾವೇಜು ನೆ ಇಸವಿ ನೆ ತಾರೀಖಿನಲ್ಲಿ, (ಭೋಗ್ಯ ಅಥವಾ ಆಧಾರ ಮಾಡಿದವರೆಂದು ನಮೂದಿಸಲ್ಪಡುವ) ಗ್ರಾಮದ ಎಂಬುವರಿಂದ (ಭೋಗ್ಯಕ್ಕೆ ಅಥವಾ ಆಧಾರಕ್ಕೆ ಇಟ್ಟುಕೊಂಡವರು ಎಂದು ನಮೂದಿಸಲ್ಪಡುವ) ಮೈಸೂರು ದಿವಾನರವರ ಪರವಾಗಿ ಬರೆದುಕೊಟ್ಟು ಇರುತ್ತೆ.

ಎಂಬುವನು ನೇ ಇಸವಿ ನೇ ತಾರೀಖಿನಲ್ಲಿ ಭೋಗ್ಯ ಅಥವಾ ಆಧಾರ ಮಾಡಿಕೊಂಡವರ ತರ್ಫೆ ಡೆಪ್ಯುಟಿ ಕಮಿಷನರವರಿಂದ,

1890ನೆ ಇಸವಿ ಜಮೀನು ಅಭಿವೃದ್ಧಿ ರೆಗ್ಯುಲೇಷನು ....ಪ್ರಕಾರ ಹುಕ್ಕುಂ ಪಡೆದು ಇರುವದರಿಂದ, ಆ ಹುಕುಂ ಅನುಸರಿಸಿ,

1888ನೆ ಇಸವಿ ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣ

ಸದರಿ ಎಂಬುವರು (ಇಲ್ಲಿ ಕೆಲಸದ ತಪಶೀಲು ಅಥವಾ ಸಾಲದ ಉದ್ದೇಶವನ್ನು ಬರಿಯಬೇಕು.) ಕೆಲಸಕ್ಕೋಸ್ಕರ ಭೋಗ್ಯಕ್ಕೆ ಇಟ್ಟುಕೊಂಡವರ ಕಡೆಯಿಂದ ಒಟ್ಟು ರೂಪಾಯಿಗಳು

ಸಾಲವಾಗಿ ಪಡಿಯುವದಕ್ಕೆ ಬಾಧ್ಯತೆವುಳ್ಳವರಾಗಿ ಇರುತ್ತಾರೆ. ಸದರಿ ಸಾಲದ ಮೊಬಲಗನ್ನು ಸರಿಯಾಗಿ ನಿಯಮಿತ ಕೆಲಸಕ್ಕೆ ವಿನಿಯೋಗಿಸುವ ವಿಷಯದಲ್ಲಿಯೂ, ಸದರಿ ಸಾಲವನ್ನು ಸದರಿ ಹುಕ್ಕುಂನಲ್ಲಿ ಕಂಡ ಷರತ್ತುಗಳ ಪ್ರಕಾರ ಸರಿಯಾಗಿ ಕ್ಲುಪ್ತಕಾಲಗಳಲ್ಲಿ ವಾಪಸು ಸಂದಾಯ ಮಾಡುವ ವಿಷಯದಲ್ಲಿಯೂ ಸಹಾ, ಭೋಗ್ಯ ತೆಗದುಕೊಂಡವರು ಅಥವಾ ಅವರ ಕಡೆಯವರು ಸರಿಯಾದ ಆಧಾರ ಯಾ ಜಾಮೀನು ಅಪೇಕ್ಷಿಸುವದರಿಂದ, ಅಂಥಾ ಜಾಮೀನು ಯಾ ಆಧಾರ ಕೊಡುವದಕ್ಕಾಗಿ, ಭೋಗ್ಯ ಮಾಡಿದವರು ಈ ಕಾಗದ ಪತ್ರಗಳನ್ನು ದಸ್ಕತ್ತು ನಿಸಿ ಬರೆದುಕೊಡಲು ಒಪ್ಪಿ ಇರುತ್ತಾರೆ.

ಈ ಕಾಗದ ಪತ್ರಗಳಲ್ಲಿ ಏನು ಹೇಳಿರುತ್ತೆಯಂದರೆ ಭೋಗ್ಯ ಅಥವಾ ಆಧಾರ ಮಾಡಿದವರು ಸದರಿ ಸಾಲವನ್ನು ತೆಗದುಕೊಂಡು ಇರುವ ಕಾರಣದಿಂದಲೂ ಮತ್ತು ಸದರಿ ಕರಾರನ್ನು ಬರದುಕೊಟ್ಟು ಇರುವದರಿಂದಲೂ ಸಹಾ, ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಸ್ಥಿರಸ್ವತ್ತುಗಳನ್ನು ಅವುಗಳಿಗೆ ಲಗತ್ತಾಗಿ ಇರುವ ಕಟ್ಟಡ ಭಾವಿ ವಗೈರೆಗಳ ಸಮೇತ, ಮುಂದೆ ಹೇಳುವ ರೀತಿಯಲ್ಲಿ ಭೋಗ್ಯದಿಂದ ಬಿಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು, ಭೋಗ್ಯಕ್ಕೆ ತೆಗದುಕೊಂಡವರಿಗೂ, ಅವರ ಉತ್ತರಾಧಿಕಾರಿಗಳಿಗೂ ಮತ್ತು ಅವರಿಂದ ನಿಯಮಿಸಲ್ಪಟ್ಟವರಿಗೂ, ಈ ಪತ್ರಗಳ ಮೂಲಕ ವರ್ಗ ಮಾಡಿಕೊಟ್ಟು ಇರುತ್ತಾರೆ.

ಭೋಗ್ಯ ಮಾಡಿದವರು, ಅವರಕಡೆ ನ್ಯಾಯವಾದ ಪ್ರತಿನಿಧಿಗಳು, ಮತ್ತು ಅವರಿಂದ ನೇಮಿಸಲ್ಪಟ್ಟವರು, ಸಾಲದ ಷರತ್ತುಗಳ ಪ್ರಕಾರ ನಡೆದುಕೊಂಡು, ಸಾಲದ ಪೂರಾ ಮೊಬಲಗನ್ನು ಸಾಲದ ಹುಕ್ಕುಂನಲ್ಲಿ ನಮೂದಾಗುವ ರೀತಿಯಲ್ಲಿ ಉಪಯೋಗಿಸಿ ಸದರಿ ಭೋಗ್ಯ ಮಾಡಿದವರು, ಅವರಕಡೆ ನ್ಯಾಯವಾದ ಪ್ರತಿನಿಧಿಗಳು ಮತ್ತು ಅವರಿಂದ ನೇಮಿಸಲ್ಪಟ್ಟವರು ಸದರಿ ಸಾಲದ ಅಸಲ್ ಮೊಬಲಗನ್ನು, ಅದರಮೇಲೆ ಅಥವಾ ಅದರ ಒಂದು ಭಾಗದ ಮೇಲೆ ಆಗುವ ಬಡ್ಡಿಯನ್ನು, ಮತ್ತು ಈ ಸಾಲ ಕೊಡುವದಕ್ಕಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ಕೆಲಸಕ್ಕಾಗಲಿ ಭೋಗ್ಯಕ್ಕೆ ತೆಗೆದುಕೊಂಡವರಿಗೆ, ಇವರ ಉತ್ತರಾಧಿಕಾರಿಗಳಿಗೆ, ಮತ್ತು ಇವರಿಂದ ನೇಮಕವಾದವರಿಗೆ ಏನಾದರೂ ಖರ್ಚು ತಗಲಿದ್ದರೆ ಅಂಥಾ ಖರ್ಚನ್ನು ಸಹಾ ಸರಿಯಾಗಿ ವಾಪಸು ಸಂದಾಯ ಮಾಡಿದ ಪಕ್ಷದಲ್ಲಿ ಭೋಗ್ಯಕ್ಕೆ ತೆಗದುಕೊಂಡವರು, ಅವರ ಉತ್ತರಾಧಿಕಾರಿಗಳು ಅಥವಾ ಅವರಿಂದ ನೇಮಿಸಲ್ಪಟ್ಟವರು ಸದರಿ ಸ್ಥಿರಸ್ವತ್ತುಗಳನ್ನು ಭೋಗ್ಯಮಾಡಿದವರಿಗಾಗಲಿ ಅವರ ನ್ಯಾಯವಾದ ಪ್ರತಿನಿಧಿಗಳಿಗಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟವರಿಗಾಗಲಿ ಅಥವಾ ಇವರು ಯಾರಿಗೆ ಒಪ್ಪಿಸಿಕೊಡಬೇಕೆಂದು ಹೇಳುತ್ತಾರೆಯೋ ಅವರಿಗಾಗಲಿ ವಾಪಸು ವರ್ಗಾಯಿಸಲು ಬದ್ಧರಾಗಿರುತ್ತಾರೆಂತ ಇದರಿಂದ ಒಪ್ಪಿಕೊಂಡಿರುತ್ತದೆ.

ಪರಂತು ಭೋಗ್ಯಮಾಡಿದವರು, ಅವರ ನ್ಯಾಯವಾದ ಪ್ರತಿನಿಧಿಗಳು, ಅಥವಾ ಅವರಿಂದ ನಿಯಮಿತರಾದವರು ಸಾಲದ ಷರತ್ತುಗಳಿಗೆ ತಪ್ಪಿ, ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರ ಒಂದು ಭಾಗವನ್ನಾಗಲಿ ಸಾಲದ ಹುಕ್ಕುಂಗೆ ವಿರೋಧವಾಗಿ ಉಪಯೋಗಿಸಿದರೂ, ಅಥವಾ ಸದರಿ ಯವರು ಸದರಿ ಸಾಲದ ಪೂರಾ ಮೊಬಲಗನ್ನಾಗಲಿ ಅದರ ಒಂದು ಭಾಗವನ್ನಾಗಲಿ ಅಥವಾ ಅದರಮೇಲೆ, ಅಥವಾ ಅದರ ಒಂದು ಭಾಗದ ಮೇಲೆ ಆಗುವ ಬಡ್ಡಿ ಅಥವಾ ತಗಲಿದ ಖರ್ಚುಗಳನ್ನಾಗಲಿ ಕೊಡದೆ ತಪ್ಪಿದರೂ ಮತ್ತು ಇಂಥಾ ಇತರ ಸಂದರ್ಭದಲ್ಲಿಯೂ ಕೂಡಾ, ಭೋಗ್ಯ ಮಾಡಿಕೊಂಡವರು, ಅವರ ಉತ್ತರಾಧಿಕಾರಿಗಳು ಮತ್ತು ಅವರಿಂದ ನೇಮಿಸಲ್ಪಟ್ಟವರು ಅಥವಾ ತತ್ಕಾಲದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಸದರಿ ಸ್ಥಿರಸ್ವತ್ತುಗಳನ್ನು ಅಥವಾ ಅವುಗಳ ಪೈಕಿ ಒಂದು ಭಾಗವನ್ನು ಹರಾಜು ಮಾಡಿಸುವದು ನ್ಯಾಯವಾಗಿರುವದಲ್ಲದೆ ಸದರಿ ಹರಾಜಿನಲ್ಲಿ ಬಂದ ಮೊಬಲಗನ್ನು ಭೋಗ್ಯ ಮಾಡಿದವರ ಅವರ ನ್ಯಾಯವಾದ ಪ್ರತಿನಿಧಿಗಳ ಅಥವಾ ಅವರಿಂದ ನೇಮಿಸಲ್ಪಟ್ಟವರ ತಪ್ಪಿತದಿಂದ ಭೋಗ್ಯ ಮಾಡಿಕೊಂಡವರಿಗೆ ಅವರ ಉತ್ತರಾಧಿಕಾರಿಗಳಿಗೆ ಅಥವಾ ಅವರಿಂದ ನೇಮಿಸಲ್ಪಟ್ಟವರಿಗೆ ಉಂಟಾಗುವ ನಷ್ಟಕ್ಕೆ ಉತ್ತಾರ ಹಾಕತಕ್ಕದ್ದೆಂದು ಇದರಿಂದ ಒಪ್ಪಿಕೊಂಡಿರುತ್ತದೆ.

ಇದಕ್ಕೆ ಸಾಕ್ಷಿಯಾಗಿ ಭೋಗ್ಯ ಮಾಡಿರುವನು ಅಥವಾ ಭೋಗ್ಯ ಮಾಡಿರುವರು ಮೇಲೆ ನಮೂದಾಗಿರುವ ಸಾಲು, ಮಾಹೆ, ತಾರೀಖುಗಳಲ್ಲಿ ಈ ಕಾಗದ ಪತ್ರಗಳಿಗೆ ರುಜು ಮಾಡಿ ಇರುತ್ತಾರೆ.

ಮೇಲೆ ನಮೂದಿಸಿರುವ ಷೆಡ್ಯೂಲು.

ರಿಜಿಸ್ಟ್ರೇರ್ಷ ಡಿಸ್ಟಿಕ್ಟು	ರಿಜಿಸ್ಟ್ರೇರ್ಷ ಸಬ್ ಡಿಸ್ಟಿಕ್ಟು	ಗ್ರಾಮ	ಸ್ವತ್ತು ಮನೆಯಾಗಿದ್ದಲ್ಲಿ				ಸಾಗುವಳಿಯಾಗತಕ್ಕ ಜಮೀನಾಗಿದ್ದರೆ				
			ಸ್ವತ್ತಿನ ಎಲ್ಲೆಗಳು	ಕಟ್ಟಡಗಳ ತಪಶೀಲು ಮತ್ತು ಬೆಲೆ, ಮತ್ತು ಎಷ್ಟುಕಾಲದ ಪರಿಯಂತರ ಮುಜಬೂತಾಗಿರಬಹುದು	ಕಟ್ಟಡ ನಿವೇಶನದ ವಿಸ್ತೀರ್ಣ ಮತ್ತು ಖಾಲಿಜಾಗಾ ಅಥವಾ ಕಂಪೌಂಡಿನ ವಿಸ್ತೀರ್ಣ	ಮರಗಳು ಭಾವಿಗಳು ವಗೈರೆ	ಸರ್ವೆ ನಂಬರು	ತರಿ ಅಥವಾ ಖುಷ್ಕಿಯು	ವಿಸ್ತೀರ್ಣ	ಆಕಾರ	ಮರ, ಭಾವಿ ವಗೈರೆ
1	2	3	4	5	6	7	8	9	10	11	12

ಸಾಕ್ಷಿ ಸಾಲಾ ತೆಗದುಕೊಳ್ಳುವನ ರುಜು

(1) ಮಗ ಗ್ರಾಮ

(2) ಮಗ ಗ್ರಾಮ

ರ ಸಮಕ್ಷಮ ಮೇಲೆ ನಮೂದಾಗುವ

ರಿಂದ ಸೈನಾಗಿರುತ್ತೆ.

ನಂ. 9 (b).—ಸಾಲ ತೆಗೆದುಕೊಳ್ಳುವನಿಗಾಗಿ ಅವನ ಜಾಮೀನುದಾರನಿಂದ ಬರಸಿಕೊಳ್ಳಬೇಕಾದ ದಸ್ತಾವೇಜು.

190 ನೆ ಇಸವಿ ನೇ ತಾರೀಖಿನಲ್ಲಿ ಈ ದಸ್ತಾವೇಜು (ಭೋಗ್ಯ ಮಾಡಿದವರೆಂದು ನಮೂದಿಸಲ್ಪಡುವ) ಎಂಬುವರಿಂದ (ಭೋಗ್ಯಕ್ಕೆ ತೆಗದುಕೊಂಡವರೆಂದು ನಮೂದಿಸಲ್ಪಡುವ) ಮೈಸೂರು ದಿವಾನರವರ ಪರವಾಗಿ ಬರೆದುಕೊಟ್ಟು ಇರುತ್ತೆ.

ಎಂಬುವನು ನೆ ಇಸವಿ ನೆ ತಾರೀಖಿನಲ್ಲಿ ಭೋಗ್ಯ ಮಾಡಿಕೊಂಡವರ ತರ್ಫ ಡೆಪ್ಯುಟಿ ಕಮೀಷನರವರಿಂದ 1890ನೆ ಇಸವಿ ಜಮೀನು ಆಬಾದು ರೆಗ್ಯುಲೇಷನ್ / 1888ನೆ ಇಸವಿ ಲ್ಯಾಂಡ್ ರೆವಿನ್ಯೂ ಕೋಡ್ 194ನೆ ಪ್ರಕರಣ ಪ್ರಕಾರ ಹುಕುಂ ಪಡದು ಇರುವದರಿಂದ, ಆ ಹುಕುಂ ಅನುಸರಿಸಿ ಸದರಿ ಎಂಬುವರು (ಇಲ್ಲಿ ಕೆಲಸದ ತಪಶೀಲು ಅಥವಾ ಸಾಲದ ಉದ್ದೇಶವನ್ನು ಬರಿಯಬೇಕು) ಕೆಲಸಕ್ಕೋಸ್ಕರ ಭೋಗ್ಯಕ್ಕೆ ತೆಗೆದುಕೊಂಡವರ ಕಡೆಯಿಂದ ಒಟ್ಟು ರೂಪಾಯಿಗಳು ಸಾಲವಾಗಿ ಪಡಿಯುವದಕ್ಕೆ ಬಾಧ್ಯತೆ ವುಳ್ಳವರಾಗಿ ಇರುತ್ತಾರೆ. ಸದರಿ ಸಾಲದ ಮೊಬಲಗನ್ನು ಸರಿಯಾಗಿ ನಿಯಮಿತ ಕೆಲಸಕ್ಕೆ ಉಪಯೋಗಿಸುವ ವಿಷಯದಲ್ಲಿಯೂ, ಸದರಿ ಸಾಲವನ್ನು ಸದರಿ ಹುಕುಮಿನಲ್ಲಿ ಕಂಡ ಷರತ್ತುಗಳ ಪ್ರಕಾರ ಸರಿಯಾಗಿ ಕ್ಲುಪ್ತ ಕಾಲಗಳಲ್ಲಿ ವಾಪಸು ಸಂದಾಯ ಮಾಡುವ ವಿಷಯದಲ್ಲಿಯೂ ಸಹಾ, ಭೋಗ್ಯಕ್ಕೆ ತೆಗೆದುಕೊಂಡವರು ಅಥವಾ ಅವರ ಕಡೆಯವರು ಸರಿಯಾದ ಆಧಾರ ಯಾ ಜಾಮೀನು ಅಪೇಕ್ಷಿಸುವದರಿಂದ, ಅಂಥಾ ಜಾಮೀನು ಯಾ ಆಧಾರ ಕೊಡುವುದಕ್ಕಾಗಿ ಭೋಗ್ಯ ಮಾಡಿದವರು ಈ ಕಾಗದ ಪತ್ರಗಳನ್ನು ದಸ್ತುತ್ತು ನಿಶಿ ಬರೆದುಕೊಡಲು ಒಪ್ಪಿರುತ್ತಾರೆ.

ಈ ಕಾಗದ ಪತ್ರಗಳಲ್ಲಿ ಏನು ಹೇಳಿರುತ್ತೆ ಎಂದರೆ—ಭೋಗ್ಯ ಅಥವಾ ಆಧಾರವಮಾಡಿದವರು ಸದರಿ ಸಾಲವನ್ನು ತೆಗೆದುಕೊಂಡು ಇರುವ ಕಾರ್ಣಣದಿಂದಲೂ ಮತ್ತು ಸದರಿ ಕರಾರನ್ನು ಬರೆದುಕೊಟ್ಟು ಇರುವದರಿಂದಲೂ ಸಹಾ, ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಸ್ಥಿರ ಸ್ವತ್ತುಗಳನ್ನು ಅವುಗಳಿಗೆ ಲಗತ್ತಾಗಿ ಇರುವ ಕಟ್ಟಡ, ಭಾವಿ ವಗೈರೆಗಳ ಸಮೇತ, ಮುಂದೆ ನಮೂದಾಗಿರುವ ರೀತಿಯಲ್ಲಿ ಭೋಗ್ಯದಿಂದ ಬಿಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಭೋಗ್ಯಕ್ಕೆ ತೆಗೆದುಕೊಂಡವರಿಗೂ, ಅವರ ಉತ್ತರಾಧಿಕಾರಿಗಳಿಗೂ ಮತ್ತು ಅವರಿಂದ ನೇಮಿಸಲ್ಪಟ್ಟವರಿಗೂ, ಈ ಪತ್ರಗಳ ಮೂಲಕ ವರ್ಗ ಮಾಡಿಕೊಟ್ಟು ಇರುತ್ತಾರೆ.

ಸದರಿ ಯವರು, ಅವರಕಡೆ ನ್ಯಾಯವಾದ ಪ್ರತಿನಿಧಿಗಳು, ಮತ್ತು ಅವರಿಂದ ನೇಮಿಸಲ್ಪಟ್ಟವರು, ಸಾಲದ ಷರತ್ತುಗಳ ಪ್ರಕಾರ ನಡೆದುಕೊಂಡು ಸಾಲ ಪೂರಾ ಮೊಬಲಗನ್ನು ಸಾಲದ ಹುಕುಂನಲ್ಲಿ ನಮೂದಾಗುವ ರೀತಿಯಲ್ಲಿ ಉಪಯೋಗಿಸಿ ಸದರಿ ಯವರು ಅವರಕಡೆ ನ್ಯಾಯವಾದ ಪ್ರತಿನಿಧಿಗಳು ಮತ್ತು ಅವರಿಂದ ನೇಮಿಸಲ್ಪಟ್ಟವರು ಸದರಿ ಸಾಲದ ಅಸಲ್ ಮೊಬಲಗನ್ನು, ಅದರ ಮೇಲೆ ಅಥವಾ ಅದರ ಒಂದು ಭಾಗದ ಮೇಲೆ ಆಗುವ ಬಡ್ಡಿಯನ್ನು, ಮತ್ತು ಈ ಸಾಲ ಕೊಡುವುದಕ್ಕಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ಕೆಲಸಕ್ಕಾಗಲಿ ಭೋಗ್ಯಕ್ಕೆ ತೆಗದುಕೊಂಡವರಿಗೆ, ಅವರ ಉತ್ತರಾಧಿಕಾರಿಗಳಿಗೆ ಮತ್ತು ಇವರಿಂದ ನೇಮಿಸಲ್ಪಟ್ಟವರಿಗೆ ಏನಾದರೂ ಖರ್ಚು ತಗಲಿದ್ದರೆ ಅಂಥಾ ಖರ್ಚನ್ನು ಸಹಾ ಸರಿಯಾಗಿ ವಾಪಸು ಸಂದಾಯ ಮಾಡಿದಪಕ್ಷದಲ್ಲಿ, ಭೋಗ್ಯಕ್ಕೆ ತೆಗದುಕೊಂಡವರು ಅವರ ಉತ್ತರಾಧಿಕಾರಿಗಳು ಅಥವಾ ಅವರಿಂದ ನೇಮಿಸಲ್ಪಟ್ಟವರು ಸದರಿ ಸ್ಥಿರಸ್ವತ್ತುಗಳನ್ನು ಭೋಗ್ಯ ಮಾಡಿದವರಿಗಾಗಲಿ ಅವರ ನ್ಯಾಯವಾದ ಪ್ರತಿನಿಧಿಗಳಿಗಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟವರಿಗಾಗಲಿ ಅಥವಾ ಇವರು ಯಾರಿಗೆ ಒಪ್ಪಿಸಿಕೊಡಬೇಕೆಂದು ಹೇಳುತ್ತಾರೆಯೋ ಅವರಿಗಾಗಲಿ ಪುನಃ ವರ್ಗಾಯಿಸಲು ಬದ್ಧರಾಗಿರುತ್ತಾರೆಂತಾ ಇದರಿಂದ ಅಂಗೀಕರಿಸಲ್ಪಟ್ಟು ಇರುತ್ತೆ.

ಪರಂತು ಸದರಿ ಯವರು ಅವರ ನ್ಯಾಯವಾದ ಪ್ರತಿನಿಧಿಗಳು ಅಥವಾ ಅವರಿಂದ ನಿಯಮಿತರಾದವರು ಸಾಲದ ಷರತ್ತುಗಳಿಗೆ ತಪ್ಪಿ, ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಅದರ ಒಂದು ಭಾಗವನ್ನಾಗಲಿ ಸಾಲದ ಹುಕುಮಿಗೆ ವಿರೋಧವಾಗಿ ಉಪಯೋಗಿಸಿದರೂ, ಅಥವಾ ಸದರಿ ಸಾಲದ ಪೂರಾ ಮೊಬಲಗನ್ನಾಗಲಿ ಅದರ ಒಂದು ಭಾಗವನ್ನಾಗಲಿ ಅಥವಾ ಅದರ ಮೇಲೆ ಅಥವಾ ಅದರ ಒಂದು ಭಾಗದಮೇಲೆ ಆಗುವ ಬಡ್ಡಿ ಅಥವಾ ತಗಲಿದ ಸದರಿ ಖರ್ಚನ್ನಾಗಲಿ ಕೊಡದೆ ತಪ್ಪಿದರೂ ಮತ್ತು ಇಂಥಾ ಇತರ ಸಂದರ್ಭದಲ್ಲಿಯೂ ಕೂಡ ಭೋಗ್ಯ ಮಾಡಿಕೊಂಡವರು ಅವರ ಉತ್ತರಾಧಿಕಾರಿಗಳು ಮತ್ತು ಅವರಿಂದ ನೇಮಿಸಲ್ಪಟ್ಟವರು ಅಥವಾ ತತ್ಕಾಲದ ಡೆಪ್ಯುಟಿ ಕಮಿಷನರವರು ಸದರಿ ಸ್ಥಿರ ಸ್ವತ್ತುಗಳನ್ನು ಅಥವಾ ಅವುಗಳ ಪೈಕಿ ಒಂದು ಭಾಗವನ್ನು ಹರಾಜು ಮಾಡಿಸುವದು ನ್ಯಾಯವಾಗಿರುವದಲ್ಲದೆ ಸದರಿ ಹರಾಜಿನಲ್ಲಿ ಹುಟ್ಟಿದ ಮೊಬಲಗನ್ನು ಸದರಿ ಯುವರ, ಅವರ ನ್ಯಾಯವಾದ ಪ್ರತಿನಿಧಿಗಳ ಅಥವಾ ಅವರಿಂದ ನೇಮಿಸಲ್ಪಟ್ಟವರ ತಪ್ಪಿತದಿಂದ, ಭೋಗ್ಯ ಮಾಡಿಕೊಂಡವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ಅವರಿಂದ ನೇಮಿಸಲ್ಪಟ್ಟವರಿಗೆ ಉಂಟಾಗಬಹುದಾದ ನಷ್ಟಕ್ಕೆ ಯಾವಾಗಲಾದರೂ ಉತ್ತಾರ ಹಾಕತಕ್ಕದ್ದೆಂದು ಇದರಿಂದ ಒಪ್ಪಲ್ಪಟ್ಟು ಇರುತ್ತದೆ.

ಇದೂ ಅಲ್ಲದೆ, ಸದರಿ ಮತ್ತು ಭೋಗ್ಯಮಾಡಿದವರು ಈ ಉಭಯತ್ರರಲ್ಲಿ ಭೋಗ್ಯ ಮಾಡಿದವರು ಸದರಿ ಗೆ ಜಾಮೀನಾಗಿದ್ದಾಗ್ಯೂ, ಭೋಗ್ಯ ಮಾಡಿದವರು ಮತ್ತು ಭೋಗ್ಯಕ್ಕೆ ತೆಗದುಕೊಂಡವರು ಈ ಉಭಯತ್ರರಲ್ಲಿ, ಭೋಗ್ಯಮಾಡಿದವರು, ಈ ಮೂಲಕ ಆಧಾರ ಮಾಡಲ್ಪಟ್ಟ ಅಸಲು ಮೊಬಲಗಿಗೂ, ಬಡ್ಡಿಗೂ, ಖರ್ಚುಗಳಿಗೂ ಮುಖ್ಯ ಸಾಲಗಾರರಾಗಿ ಎಣಿಸಲ್ಪಡತಕ್ಕದ್ದು. ಮತ್ತು ಸದರಿ ಯವರಿಗೂ ಅವರ ನ್ಯಾಯವಾದ ಪ್ರತಿನಿಧಿಗಳಿಗಾಗಲಿ ವಾಯಿದೆ ಕೊಟ್ಟಮಾತ್ರಕ್ಕೇ ಆಗಲಿ ಅಥವಾ ಭೋಗ್ಯ ಮಾಡಿದವನು ಅಥವಾ ಅವರಕಡೆ ನ್ಯಾಯವಾದ ಪ್ರತಿನಿಧಿಗಳು ಸದರಿ ಯವರಿಗೆ ಮತ್ತು ಅವರ ನ್ಯಾಯವಾದ ಪ್ರತಿನಿಧಿಗಳಿಗೆ ಜಾಮೀನಾಗಿ ಇರುವ ಜವಾಬ್ದಾರಿಯನ್ನು ತಪ್ಪಿಸುವುದಕ್ಕಾಗಿ ನಡಿಸಲ್ಪಡತಕ್ಕ ಯಾವ ಪ್ರಯತ್ನ ಯಾ ಕೆಲಸಗಳು ಭೋಗ್ಯದಾರರಿಗೆ

ಅವರ ನ್ಯಾಯವಾದ ಪ್ರತಿನಿಧಿಗಳಿಗೆ ಅಸಲ್ ಹಣ, ಬಡ್ಡಿ, ಖರ್ಚು ವಗೈರೆ ವಿಷಯದಲ್ಲಿ ಇರುವ ಜವಾಬ್ದಾರಿಯು ತಪ್ಪಿಸಲಾರವು. ಇದಕ್ಕೆ ಸಾಕ್ಷಿಯಾಗಿ ಮೇಲೆ ನಮೂದಾಗುವ ಸಾಲು, ಮಾಹೆ, ತಾರೀಖುಗಳಲ್ಲಿ ಭೋಗ್ಯದಾರನು ಇದಕ್ಕೆ ತನ್ನ ಕೈ ಬರಹದಿಂದ ರುಜು ಮಾಡಿರುತ್ತಾನೆ.

ಮೇಲೆ ನಮೂದಿಸಿರುವ ಷೆಡ್ಯೂಲು.

ರಿಜಿಸ್ಟ್ರೇಷನ್ ಡಿಸ್ಟ್ರಿಕ್ಟು.	ರಿಜಿಸ್ಟ್ರೇಷನ್ ಸಬ್ ಡಿಸ್ಟ್ರಿಕ್ಟು.	ಗ್ರಾಮ.	ಸ್ವತ್ತು ಮನೆಯಾಗಿದ್ದರೆ				ಸಾಗುವಳಿ ಜಮೀನಾಗಿದ್ದರೆ				
			ಸ್ವತ್ತಿನ ಚತುರ್ಗಡಿ.	ಕಟ್ಟಡಗಳ ವಿವರಣೆ ಮತ್ತು ಬೆಲೆ ಎಷ್ಟುಕಾಲದ ವರೆಗೆ ಅವು ಮಜಬೂತಾಗಿರುವವು.	ನಿವೇಶನದ ಖಾಲಿ ಜಾಗ ಅಥವಾ ಕಂಪೌಂಡಿನ ವಿಸ್ತೀರ್ಣ.	ಗಿಡ, ಭಾವಿ, ವಗೈರೆ.	ಸರ್ವೆ ನಂ.	ಖುಷ್ಕಿ ಯಾ ತರಿಯೋ.	ವಿಸ್ತೀರ್ಣ.	ಆಕಾರ.	ಗಿಡ, ಭಾವಿ, ವಗೈರೆ.

ಸಾಕ್ಷಿಗಳು.— ಜಾಮೀನುದಾರನ ರುಜು.

(1) ತಂದೆ ಹೆಸರು. ಗ್ರಾಮದ ಹೆಸರು.

(2) ,, ,,

ವರ

ಸಮಕ್ಷಮದಲ್ಲಿ ಮೇಲ್ಕಂಡವರು ರುಜು ಮಾಡಿರುತ್ತಾರೆ.

ನಂ. 10. (a).—ಸಾಲಗಾರನಿಂದ ಬರಸಿಕೊಳ್ಳತಕ್ಕ ಆಸಾಮಿ ಜಾಮೀನು ಪತ್ರ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ :— ಗ್ರಾಮದಲ್ಲಿ ವಾಸ ಮಾಡುತ್ತಿರುವ ಜಾತಿಗೆ ಸೇರಿದ ಎಂಬುವನ ಮಗನಾದ ನಾನು ಮೈಸೂರು ದೇಶದ ದಿವಾನರವರಿಂದ ಪಡೆದ ಸಾಲದ ಮೊಬಲಗು ರೂಪಾಯಿಗಳ ವಿಷಯದಲ್ಲಿ ಸದರಿ ದಿವಾನರಿಗಾಗಲಿ ಅಥವಾ ಅವರ ಆಟರನಿಗಾಗಲಿ, ಉತ್ತರಾಧಿಕಾರಿಗಳಿಗಾಗಲಿ ಅಥವಾ ಅವರಿಂದ ಗೊತ್ತು ಮಾಡಲ್ಪಡುವವರಿಗಾಗಲಿ ಸದರಿ ಮೊಬಲಗನ್ನು ವಾಪಸು ಸಂದಾಯ ಮಾಡುವ ವಿಷಯದಲ್ಲಿ ಬದ್ಧನಾಗಿರುತ್ತೇನೆ. ಸದರಿ ಮೊಬಲಗು ಪಾವತಿ ವಿಷಯದಲ್ಲಿ ನಾನುನ್ನು, ನನ್ನ ಹಕ್ಕುದಾರರಾದ ಎಗ್ಜಿಕ್ಯೂಟರುಗಳೂ, ಅಡ್ಮಿನಿಸ್ಟ್ರೇಟರುಗಳೂ, ಮತ್ತು ನ್ಯಾಯವಾದ ಪ್ರತಿನಿಧಿಗಳೂಕೂಡ ಬದ್ಧರಾಗಿರುತ್ತೇವೆಂದು ಈ ಪತ್ರಗಳ ಮೂಲಕ ಬರದುಕೊಟ್ಟು ಇರುತ್ತೇನೆ.

ತಾರೀಖು ಇಸವಿ.

ಸಾಲ ತೀರಿಸುವುದಕ್ಕೆ ಬದ್ಧನಾಗಿರುವ ಎಂಬುವನು ನೆ ಇಸವಿ ನೇ ತಾರೀಖಿನಲ್ಲಿ, ಲ್ಯಾಂಡ್ ರವಿನ್ಯೂ ಕೋಡ್ 194ನೇ ಪ್ರಕರಣ ಪ್ರಕಾರ ಡೆಪ್ಯುಟಿ ಕಮಿಷನರವರಿಂದ ಹುಕುಂ ಪಡದು ಇರುವದರಿಂದ ಬಟ್ಟು ಮೊಬಲಗು ರೂಪಾಯಿಗಳನ್ನು ಮೈಸೂರು ಸರ್ಕಾರದಿಂದ (ಇಲ್ಲಿ ಸಾಲದ ಉದ್ದೇಶವನ್ನು ಬರಿಯಬೇಕು) ಕೆಲಸಕ್ಕಾಗಿ ಸಾಲವಾಗಿ ಪಡಿಯಲು ಅರ್ಹನಾಗಿ ಇರುತ್ತಾನೆ. ಹಾಲಿ ಮೇಲೆ ಕಂಡ ಪತ್ರದ ಷರತ್ತು ಪ್ರಕಾರ ಸಾಲದಿಂದ ಬದ್ಧನಾದ ಸದರಿ ಎಂಬುವನು ಅವನ ವಾರಸುದಾರರು, ಅವನ ಎಗ್ಜಿಕ್ಯೂಟರ್ ಯಾ ಅಡ್ಮಿನಿಸ್ಟ್ರೇಟರುಗಳು ಮತ್ತು ನ್ಯಾಯವಾದ ಪ್ರತಿನಿಧಿಗಳು ಯಾವ ಷರತ್ತುಗಳಮೇಲೆ ಸಾಲಾ ಕೊಡಲ್ಪಟ್ಟು ಇರುತ್ತೆಯೋ ಅಂಥ ಷರತ್ತುಗಳ ಮೇರೆಗೆ ನಡೆದುಕೊಂಡು, ಆ ಸಾಲದ ಪೂರಾ ಮೊಬಲಗನ್ನಾಗಲಿ ಅಥವಾ ಒಂದು ಭಾಗವನ್ನಾಗಲಿ ಸಾಲಾ ಕೊಡಲ್ಪಟ್ಟ ಕೆಲಸಗಳಿಗಲ್ಲದೆ ಇತರ ಕೆಲಸಗಳಿಗೆ ಉಪಯೋಗಿಸದೆ ಸದರಿ ಸಾಲದ ಮೊಬಲಗನ್ನು ಅದರಮೇಲೆ ಆಗುವ ಬಡ್ಡಿಯನ್ನು ನೇಮಕವಾದ ಕಂತುಗಳ ಮೇರಿಗೆ ಆಯಾಯ ಕಂತುಗಳ ಪಾವತಿಗೆ ಗೊತ್ತಾದ ತಾರೀಖುಗಳಲ್ಲಿ ಪಾವತಿ ಮಾಡತಕ್ಕದಾಗಿ ಇರುತ್ತೆ. ಅಥವಾ ಈ ರೀತಿ ಯಾವ ಸಂದರ್ಭದಲ್ಲಿಯಾಗಲಿ ನಡಿಯದೆ ತಪ್ಪಿದ ಪಕ್ಷದಲ್ಲಿ ಮೈಸೂರು ಸರ್ಕಾರಕ್ಕೆ ಇಂಥಾ ತಪ್ಪಿತಕ್ಕಾಗಿ ಸದರಿ ಯವರು ಸದರಿ ಮೊಬಲಗು ರೂಪಾಯಿಗಳಿಗೆ ಮೀರದಂತೆ ಕೊಡಬೇಕು. ಅಂಥಾ ಕಾಲದಲ್ಲಿ ಮೇಲೆ ಬರಿಯಲ್ಪಟ್ಟ ಪತ್ರವು ರದ್ದಾಗುತ್ತೆಯೇ ಹೊರ್ತು ಇತರ ಸಂದರ್ಭಗಳಲ್ಲಿ ಈ ಪತ್ರವು ರದ್ದಾಗದೆ ಜಾರಿಯಲ್ಲಿಯೆ ಇರುತ್ತೆ.

ಯವರ

ಸಮಕ್ಷಮ ಮೇಲೆ ನಮೂದಾಗುವವರಿಂದ ರುಜುವಾಗಿರುತ್ತದೆ.

10ನೆ (ಬಿ) ನಂಬರ್ ನಮೂನೆ.

ಸಾಗುವಳೀದಾರರ ಗುಂಪುಗಳಿಗೆ ಜಮೀನ್ ಆಬಾದಿಗಾಗಿ ಕೊಡುವ ಸಾಲಗಳ ರೆಗ್ಯುಲೇಷನ್ ಮೇರೆಗೆ / ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣದ ಮೇರೆಗೆ ಸಾಲವನ್ನು ಕೊಟ್ಟಲ್ಲಿ ಅವರುಗಳಿಂದ ಬರೆಯಿಸಿಕೊಳ್ಳಬೇಕಾದ ಜಾಮೀನ್ ಪತ್ರ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ ;—(ಇಲ್ಲಿ ಗ್ರಾಮದ ಹೆಸರನ್ನು ಬರೆಯಬೇಕು) ಗ್ರಾಮದಲ್ಲಿ ವಾಸಮಾಡುವ (ಇಲ್ಲಿ ಪ್ರತಿಯೊಬ್ಬರ ತಂದೆ ಹೆಸರನ್ನೂ ಬರಿಯಬೇಕು.) ಇವರುಗಳ ಮಕ್ಕಳಾದ (ಇಲ್ಲಿ ಪ್ರತಿಯೊಬ್ಬರ ಸಾಗುವಳೀದಾರನ ಕಸಬನ್ನು ಬರೆಯಬೇಕು) ಕಸಬುಗಳನ್ನು ಮಾಡುವ (ಇಲ್ಲಿ ಪ್ರತಿಯೊಬ್ಬರ ಜಾತಿಯನ್ನೂ ಹೆಸರನ್ನೂ ಬರೆಯಬೇಕು.) ಎಂಬ ನಾವುಗಳು ಮೈಸೂರು ಸೀಮೆಯ ದಿವಾನ್ ಸಾಹೇಬರವರಿಗೆ (ಇಲ್ಲಿ ಸಾಲದ ಮೊಬಲಗನ್ನು ಬರೆಯಬೇಕು.) ರೂಪಾಯಿಗಳಿಗೆ ಈ ಮೂಲಕ ಜಾಮೀನ್ ಕೊಟ್ಟಿರುತ್ತೇವೆ ಸದರೀ ಮೊಬಲಗನ್ನು ಮೇಲ್ಕಂಡ ಮೈಸೂರು ಸೀಮೆಯ ದಿವಾನ್ ಸಾಹೇಬರಿಗಾಗಲೀ, ಅವರ ಅಟಾರ್ನಿಯವರಿಗಾಗಲೀ, ಉತ್ತರಾಧಿಕಾರಿಗಳಿಗಾಗಲೀ, ಹವಾಲ್ತಿದಾರರುಗಳಿಗಾಗಲೀ ಪಾವತಿ ಮಾಡಬೇಕಾಗಿದೆ. ಸದರೀ ಮೊಬಲಗಿನ ಪಾವತಿಯ ಬಗ್ಗೆ ಖುದ್ ನಮ್ಮಗಳನ್ನೂ, ನಮ್ಮಲ್ಲಿ ಪ್ರತಿಯೊಬ್ಬರನ್ನೂ, ನಮ್ಮ ಮತ್ತು ನಮ್ಮಲ್ಲಿ ಪ್ರತಿಯೊಬ್ಬರ ವಾರಸ್‌ದಾರರುಗಳನ್ನೂ, ಎಗ್ಸಿಕ್ಯೂಟರುಗಳನ್ನೂ, ಅಡ್ಮಿನಿಸ್ಟ್ರೇಟರುಗಳನ್ನೂ, ಕಾನೂನಿಗನುಸಾರವಾದ ಪ್ರತಿನಿಧಿಗಳನ್ನೂ ಜಂಟಿಯಾಗಿಯೂ ಪ್ರತ್ಯೇಕವಾಗಿಯೂ ಒಂದು ಸಾವಿರದ ಒಂಭೈನೂರ......ನೆ ಇಸವಿ..................ಮಾಹೆ......ನೇತಾರೀಖಾದ ಈ ದಿನ ಈ ಮೂಲಕ ಬದ್ಧಪಡಿಸಿರುತ್ತೇವೆ.

ಮೇಲ್ಕಂಡಂತೆ ಬದ್ಧರಾಗಿರುವ (ಇಲ್ಲಿ ಸಾಗುವಳೀದಾರರ ಗುಂಪಿಗೆ ಸೇರಿದ ಪ್ರತಿಯೊಬ್ಬರ ಹೆಸರನ್ನೂ ನಮೂದಿಸಬೇಕು.) ಎಂಬುವರುಗಳು ಒಂದು ಸಾವಿರ ಒಂಭೈನೂರ......ನೆ ಇಸವಿ...............ಮಾಹೆ......ನೆ ತಾರೀಖಿನಲ್ಲಿ.................. ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಜಮೀನ್ ಆಬಾದಿನ ಬಗ್ಗೆ ಕೊಡುವ ಸಾಲಗಳ ರೆಗ್ಯುಲೇಷನ್ ಮೇರೆಗೆ / ಲ್ಯಾಂಡ್ ರೆವಿನ್ಯೂ ಕೋಡಿನ 194ನೆ ಪ್ರಕರಣದ ಮೇರೆಗೆ ಒಂದು ಹುಕುಮನ್ನು ಪಡೆದಿರುವುದರಿಂದಲೂ, ಸದರೀ ಹುಕುಮಿಗನುಸಾರವಾಗಿ ಅವರುಗಳು ಮೈಸೂರು ಸರ್ಕಾರದವರಿಂದ (ಇಲ್ಲಿ ಯಾವ ಕಾಮಗಾರಿ ನಡೆಸುವುದಕ್ಕಾಗಿ ಅಥವಾ ಯಾವ ಉದ್ದೇಶಕ್ಕಾಗಿ ಸಾಲವನ್ನು ತೆಗೆದುಕೊಳ್ಳಲಾಯಿತೆಂಬುದನ್ನು ವಿವರಿಸಬೇಕು.) ಎಂಬ ಉದ್ದೇಶಕ್ಕಾಗಿ (ಇಲ್ಲಿ ಸಾಲದ ಮೊಬಲಗನ್ನು ನಮೂದಿಸಬೇಕು.) ರೂಪಾಯಿಗಳನ್ನು ಪಡೆಯಲು ಹಕ್ಕುಳ್ಳವರಾಗಿರುವದರಿಂದಲೂ ಮೇಲ್ಕಂಡ ಪತ್ರದ ಷರತ್ತುಗಳು ಯಾವುವೆಂದರೆ :—

ಮೇಲ್ಕಂಡಂತೆ ಬದ್ಧರಾಗಿರುವ (ಇಲ್ಲಿ ಸಾಗುವಳೀದಾರರ ಗುಂಪಿಗೆ ಸೇರಿದ ಪ್ರತಿಯೊಬ್ಬರ ಹೆಸರನ್ನೂ ನಮೂದಿಸಬೇಕು., ಎಂಬವರುಗಳೂ, ಅವರುಗಳ ಪೈಕಿ ಪ್ರತಿಯೊಬ್ಬರೂ, ಅವರುಗಳ ಮತ್ತು ಅವರುಗಳ ಪೈಕಿ ಪ್ರತಿಯೊಬ್ಬರ ವಾರಸ್‌ದಾರರುಗಳೂ, ಎಗ್ಸಿಕ್ಯೂಟರುಗಳೂ, ಅಡ್ಮಿನಿಸ್ಟ್ರೇಟರುಗಳೂ, ಪ್ರತಿನಿಧಿಗಳೂ, ಮೇಲ್ಕಂಡ ಸಾಲವು ಯಾವ ಷರತ್ತುಗಳಮೇಲೆ ಕೊಡಲ್ಪಟ್ಟಿರುತ್ತದೆಯೋ ಅಂಥಾ ಪ್ರತಿಯೊಂದು ಷರತ್ತಿನ ಮೇರೆಗೂ ನಡೆಯತಕ್ಕದ್ದು ; ಮತ್ತು ಸದರೀ ಸಾಲವನ್ನಾಗಲೀ ಅದರ ಪೈಕಿ ಯಾವುದೊಂದು ಭಾಗವನ್ನಾಗಲೀ ಸದರೀ ಸಾಲವನ್ನು ಯಾವ ಉದ್ದೇಶಕ್ಕಾಗಿ ಕೊಡಲಾಗಿರುತ್ತದೆಯೋ ಅದು ಹೊರತು ಬೇರೆ ಯಾವುದೊಂದು ಉದ್ದೇಶಕ್ಕಾಗಲೀ ಉಪಯೋಗಿಸಕೂಡದು ; ಮತ್ತು ಸದರೀ ಸಾಲವನ್ನು ತೀರಿಸಬೇಕಾಗಿರುವ ಕಂತುಗಳ ಮೇರೆಗೆ ಆಯಾ ಕಂತಿನ ಪಾವತಿಯ ಬಗ್ಗೆ ನಿರ್ಧರವಾಗಿರುವ ಬೇರೆ ಬೇರೆ ತಾರೀಖುಗಳಲ್ಲಿ ಯಾ ತತ್ಪೂರ್ವವೇ ತೀರಿಸತಕ್ಕದ್ದು ; ಅಥವಾ ಹಾಗೆ ಯಾವ ಕಂತನ್ನಾದರೂ ತೀರಿಸದೆ ತಪ್ಪಿದಲ್ಲಿ ಮೇಲ್ಕಂಡ (ಇಲ್ಲಿ ಸಾಗುವಳೀದಾರರ ಗುಂಪಿಗೆ ಸೇರಿದ ಪ್ರತಿಯೊಬ್ಬರ ಹೆಸರನ್ನೂ ನಮೂದಿಸಬೇಕು.) ಎಂಬುವರುಗಳಾಗಲೀ ಅವರುಗಳಲ್ಲಿ ಯಾರೊಬ್ಬರಾಗಲೀ ಅಂಥಾ ತಪ್ಪಿತಕ್ಕೋಸ್ಕರ ಮೇಲ್ಕಂಡ............ ರೂಪಾಯಿಗಳಿಗೆ ಜಾಸ್ತಿಯಲ್ಲದ ಮೊಬಲಗನ್ನು ಪಾವತಿ ಮಾಡಲು ಬದ್ಧರಾಗಿರುತ್ತಾರೆ. ಹಾಗೆ ಪಾವತಿಯಾದ ಮೇಲೆ ಮೇಲ್ಕಂಡಂತೆ ಬರೆದುಕೊಟ್ಟ ಪತ್ರವು ರದ್ದಾಗತಕ್ಕದ್ದು, ಹಾಗಿಲ್ಲದ ಪಕ್ಷ ಸದರೀ ಪತ್ರವು ಜಾರಿಯಲ್ಲಿರತಕ್ಕದ್ದು.

ಮೇಲ್ಕಂಡ

ಎಂಬುವರುಗಳಿಂದ

ಇವರುಗಳ ರೂಬ್ ರೂಬ್ ದಸ್ತುಖತು ಮಾಡಲ್ಪಟ್ಟಿರುತ್ತದೆ.

(ಸಾಲ ತೆಗೆದುಕೊಳ್ಳುವವರ ಪ್ರತಿ ದಸ್ತುಖತ್ತಿಗೂ ಸಾಕ್ಷಿ ದಸ್ತುಖತ್ತನ್ನು ಏಕರೀತಿ ಮಾಡಿಸಬೇಕು.)

11ನೆ ನಂಬರ್ ನಮೂನೆ.

ಸಾಲದ ವಾಪಸ್ ಪಾವತಿ ರಿಜಿಸ್ಟರು.

(ಪ್ರತಿ ಸಾಲಕ್ಕೂ ಪ್ರತ್ಯೇಕವಾದ ಒಂದು ಪುಟವನ್ನು ಉಪಯೋಗಿಸಬೇಕು.)

ಸಾಲವನ್ನು ಮಂಜೂರ್ ಮಾಡುವ ಹುಕುಮಿನ ನಂಬರು ಮತ್ತು ತಾರೀಖು	ಸಾಲವನ್ನು ಮಂಜೂರ್‌ಮಾಡುವ ಹುಕುಮನ್ನು ಪಡೆದುಕೊಂಡಿರುವಾತನ ಹೆಸರು ಮತ್ತು ವಾಸಸ್ಥಳ	ಮಂಜೂರಾದ ಸಾಲದ ಮೊಬಲಗು	ಸಾಲದ ವಾಪಸ್ ಪಾವತಿ						ಷರಾ
			ಸಾಲವನ್ನು ಎಷ್ಟು ಕಂತುಗಳಲ್ಲಿ ತೀರಿಸಬೇಕು ?	ಕಂತಿನ ತಃಖ್ತೆಯಲ್ಲಿ ವಿಧಿಸಿರುವಂತೆ ನಿರ್ಧರಿಸೋಣವಾದ ಪ್ರತಿಯೊಂದು ಕಂತಿನ ಮೊಬಲಗು	ಪ್ರತಿಯೊಂದು ಕಂತು ಪಾವತಿಯಾಗಬೇಕಾಗಿರುವ ತಾರೀಖು	ಕಂತು ಪಾವತಿ ಆದ ತಾರೀಖು	ಪಾವತಿಯಾದ ಕಂತಿನ ಮೊಬಲಗು	ಕಂತಿನ ಬಾಕಿಯ ಮೇಲೆ ಪಾವತಿಯಾದ ಬಡ್ಡಿ	
1	2	3	4	5	6	7	8	9	10

ಟಿಪ್ಪಣಿ—VIIನೆ ನಿಬಂಧನೆಯ ಮೇರೆಗೆ ಕಂತಿನ ಪಾವತಿಗೆ ಕ್ಲುಪ್ತ ಕಾಲಕ್ಕಿಂತ ಹೆಚ್ಚು ವಾಯಿದೆಯನ್ನು ಕೊಟ್ಟಲ್ಲಿ ಅದನ್ನು, IXನೆ ನಿಬಂಧನೆಯ ಮೇರೆಗೆ ಕಂತನ್ನೇನಾದರೂ ಮಾಫ್ ಮಾಡಿದ್ದಲ್ಲಿ ಅದನ್ನು, 10ನೆ ಕಲಮಿನಲ್ಲಿ ನಮೂದಿಸಬೇಕು.

ವರ್ಷಗಟ್ಲೆ ಕಂತಿನ ತಃಖ್ತೆ—(Vನೆ ನಿಬಂಧನೆ.)

ವರ್ಷಗಳು	ಬಡ್ಡಿಯ ದರ	
	ಶೇಕಡಾ 5ರಂತೆ	ಶೇಕಡಾ 3ರಂತೆ
1	2	
1	105·000	103·000
2	53·781	52·261
3	36·727	35·363
4	28·201	......
5	25·097	......
6	19·703	......
7	17·282	......
8	15·473	......
9	14·068	......
10	12·950	......
11	12·039	......
12	11·282	......
13	10·645	......
14	10·102	......
15	9·634	......
16	9·227	......
17	8·870	......
18	8·555	......
19	8·274	......
20	8·024	......
21	7·800	......
22	7·597	......
23	7·414	......
24	7·247	......
25	7·095	......
26	6·956	......
27	6·829	......
28	6·712	......
29	6·605	......
30	6·506	......

ಟಿಪ್ಪಣಿ—(1) 100 ರೂಪಾಯಿಗಳ ಸಾಲವನ್ನು ಶೇಕಡಾ 5ರಂತೆ ಬಡ್ಡಿಯು ಸಮೇತ ವಾಪಸ್ ಪಾವತಿ ಮಾಡಬೇಕಾದರೆ ಸಾಲಿಯಾನ ಕಂತನ್ನು 2ನೆ ಕಲಮಿನಲ್ಲಿ ಸೂಚಿಸಿದೆ. ಈ ತಃಖ್ತೆಯಲ್ಲಿ ಮೊದಲನೆ ಕಂತನ್ನು ಸಾಲದ ಐಜ್ ಪಾವತಿಯ ತಾರೀಖು ಲಾಗಾಯಿತು ಒಂದು ವರ್ಷದ ನಂತರ ವಾಪಸ್ ಪಾವತಿ ಮಾಡತಕ್ಕದ್ದೆಂದು ಊಹಿಸಿಕೊಂಡಿರುತ್ತದೆ.

(2) ಅದೇರೀತಿ 100 ರೂಪಾಯಿಗಳ ಸಾಲವನ್ನು ಶೇಕಡಾ 3 ರಂತೆ ಬಡ್ಡಿಯು ಸಮೇತ ವಾಪಸ್ ಪಾವತಿ ಮಾಡ ಬೇಕಾದ ಸಾಲೀಯಾನ ಕಂತನ್ನು 3ನೆ ಕಲಮಿನಲ್ಲಿ ಸೂಚಿಸಿದೆ. ಶೇಕಡಾ 3ರಂತೆ ಬಡ್ಡಿಹಾಕಿ ಕೊಟ್ಟಿ ರುವ ಸಾಲವನ್ನು ವಾಪಸ್ ಪಾವತಿ ಮಾಡುವುದಕ್ಕೆ ಗೊತ್ತು ಮಾಡಿರುವ ಪರಮಾವಧಿಯ ಕಾಲವು 3 ವರ್ಷ ಗಳು ಮಾತ್ರವೇ ಆಗಿರುತ್ತದೆ. (IIIನೆ ನಿಬಂಧನೆಯನ್ನು ನೋಡಿ)

(3) ಸಾಲವನ್ನು ಒಂದೇ ಮೊಬಲಗಿನಲ್ಲಿ ಕೊಡುವುದಕ್ಕೆ ಬದಲಾಗಿ ಕಂತುವಾರಾಗಿ ಕೊಟ್ಟಿದ್ದ ಪಕ್ಷದಲ್ಲಿ ಅಥವಾ ಸಾಲದ ಯಾ ಆಖೈರ್ ಕಂತಿನ ಪಾವತಿಯ ತಾರೀಖಿನ ಲಾಗಾಯಿತು ಒಂದು ವರ್ಷದ ನಂತರಕ್ಕೆ ಬದಲಾಗಿ ಇನ್ನೂ ಹೆಚ್ಚುಕಾಲದ ನಂತರ ಕಂತಿನ ವಾಪಸ್ ಪಾವತಿಯನ್ನು ಆರಂಭ ಮಾಡಿರುವ ಪಕ್ಷದಲ್ಲಿ ಅಂಥಾ ಸಂದರ್ಭಗಳಲ್ಲಿಯೂ ಮೇಲ್ಕಂಡ ತಃಖ್ತೆಯನ್ನು ಉಪಯೋಗಿಸಬೇಕಾದರೆ ವಾಪಸ್ ಕೊಡುವುದಕ್ಕೆ ಗೊತ್ತು ಮಾಡಿರುವ ತಾರೀಖಿಗಿಂತ ಒಂದು ವರ್ಷದ ಹಿಂದಣ ತಾರೀಖಿನ ವರೆಗೆ ಸರಳ ಬಡ್ಡಿಯ ಮೇರೆಗೆ ಸಾಲದ ಯಾ ಕಂತಿನ ಮೊತ್ತವು ಎಷ್ಟಾಗುವದೆಂದು ಲೆಕ್ಕಮಾಡಿ ಅನಂತರ ತ್ರೈರಾಶಿಯ ಮೂಲಕ ಮೇಲ್ಕಂಡ ತಃಖ್ತೆಯ ಸಹಾಯದಿಂದ ಸದರೀ ಮೊತ್ತಕ್ಕೆ ಆಗುವ ಕಂತಿನ ಮೊಬಲಗನ್ನು ಕಂಡುಹಿಡಿಯಬಹುದು.

ಹುಕುಂ ಬಮೋಜೇಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ|| 14, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ಮ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್‌ಸ ಆಫೀಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ಮ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರೆಸಿಡೆಂಟರು ಡಿಸ್ಟ್ರಿಕ್ಟು ಮ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಸಗಳು.

3ನೆ ಭಾಗ–ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ–ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 18ನೆ ಡಿಸೆಂಬರ 1908.

ನಂ. 5832—ಸ್ಯಾನಿಟೆರಿ 14—68—16, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21–96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ					ತಾಲ್ಲೂಕು.
ಚನ್ನರಾಯಪಟ್ಟಣ (ಹೊಲಗೇರಿ)					ಚನ್ನರಾಯಪಟ್ಟಣ
ಮಲ್ಲೇನಹಳ್ಳಿ	...	...	...	...	ಡಿಟ್ಟೋ
ಚೆಲುವಗಾಲ	...	...	...	...	ಡಿಟ್ಟೋ
ಜಕ್ಕನಹಳ್ಳಿ	...	...	...	...	ಅರಸೀಕೆರೆ
ಅಗ್ಗುಂದ	...	...	...	...	ಡಿಟ್ಟೋ
ಪುರ	...	...	...	...	ಹಾಸನ
ತಿಮ್ಮನಹಳ್ಳಿ	...	...	...	...	ಡಿಟ್ಟೋ
ಕಳತಮ್ಮನಹಳ್ಳಿ	...	...	...	...	ಡಿಟ್ಟೋ
ಉದ್ದೂರು	...	...	...	...	ಡಿಟ್ಟೋ
ಕಿಟ್ಟನಕೆರೆ	...	...	...	...	ಡಿಟ್ಟೋ
ಸೋಮನಹಳ್ಳಿ	...	...	...	...	ಡಿಟ್ಟೋ

ತಾರೀಖು 22ನೆ ಡಿಸೆಂಬರ್ 1908.

ನಂ. 5926—ಸ್ಯಾನಿಟರಿ 76—08—31, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:— ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷರ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ತಗಡೂರು	ನಂಜನಗೂಡು.
ಜೋಡಿ ಮುಟ್ಟಟ್ಟಿ	ಟಿ. ನರಸೀಪುರ.

ತಾರೀಖು 8ನೆ ಜನವರಿ 1909.

ನಂ. 6327—ಸ್ಯಾನಿಟರಿ 52—08—14, ಮೈಸೂರು ಡಿಸ್ಟ್ರಿಕ್ಟ್ ಎಡತೊರೆ ತಾಲ್ಲೂಕಿನ ಚುಂಚನಕಟ್ಟೆಗೆ ಶ್ರೀರಾಮದೇವರ ಜಾತ್ರೆ ಮತ್ತು ದನಗಳ ಪರಿಶೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವವಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯುವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಜನವರಿ 10ನೆ ತಾರೀಖಿನಿಂದ ಜನವರಿ 20ನೆ ತಾರೀಖಿನ ವರಿಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 9ನೆ ಜನವರಿ 1909.

ನಂ. 6377—ಸ್ಯಾನಿಟರಿ 115—08—2, ಮೈಸೂರು ಸೀಮೆಯ ಘನವನ್ನು ಹೊಂದಿದ ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರವರ 26—12—08ನೆ ತಾರೀಖಿನ 7026ನೆ ನಂಬರ್ ಇಂಡಾರ್ಸ್ಮೆಂಟಿನೊಡನೆ ಬಂದ ಇದರಡಿ ಕಂಡ ಬೊಂಬಾಯಿ ಸರ್ಕಾರದವರ ಸೆಕ್ರೆಟರಿಯವರ 18—12—08ನೆ ಮಾರ್ಚ್ಂ 7491ನೆ ನಂಬರ್ ಲೆಟರನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪುನಃ ಪ್ರಕಟಿಸಿರುತ್ತದೆ.

ನಂ. 7491, ತಾರೀಖು 18—12—08.

ಸಿ. ಡಿ. ಕಮಿಷನರವರಿಂದ ತಲಪಿದ ಮಾಹೆ ಮಾ|| 16ನೆ ತಾರೀಖಿನ ಪಿ. 1396ನೆ ನಂಬರ್ ಟೆಲಿಗ್ರಾಂ * ಕಾಪಿಯನ್ನು (ಕೆಳಗೆ ಪ್ರಕಟಿಸಿರುತ್ತದೆ.) ತಮ್ಮ ತಿಳುವಳಿಕೆ ಬಗ್ಗೆ ಕಳುಹಿಸಿರುತ್ತದೆ. ನಾಸಿಕದಲ್ಲಿ ವಾಂತಿ ಭೇದಿ ಉಪದ್ರವ ಉಪಕ್ರಮವಾಗಿರುವುದರಿಂದ ಸಿಂಹಸ್ಥ ತಿಂಗಳಲ್ಲಿ ಉಳಿದ ದಿವಸಗಳಲ್ಲಿ ಸದರಿ ಸ್ಥಳಕ್ಕೆ ಯಾತ್ರೆಗಾಗಿ ಹೋಗಬೇಕೆಂದಿರುವವರನ್ನು ಹೋಗದಂತೆ ನಿರೋಧಿಸತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಕೋರಿ ಇದೆ.

* ಸಿ. ಡಿ. ಕಮಿಷನರವರಿಂದ ಬಂದ ಟೆಲಿಗ್ರಾಂ ನಂ. ಪಿ. 1396, ತಾರೀಖು 16ನೆ ಡಿಸೆಂಬರ್ 1908:—

"ನಾಸಿಕ ಪಟ್ಟಣದಲ್ಲಿ 10ನೆ ತಾರೀಖು ಲಾಗಾಯಿತು 13ನೆ ತಾರೀಖುವರೆಗೆ ವಾಂತಿ ಭೇದಿ ರೋಗವು 30 ಜನರಿಗೆ ತಗಲಿತ್ತೆಂದು ನಾಸಿಕದ ಕಲೆಕ್ಟರವರು ಜಾಹೀರ್ಮಾಡುತ್ತಾರೆ ಮತ್ತು ಈ ಪ್ರೆಸಿಡೆನ್ಸಿಯಿಂದಲೂ ಇತರ ಪ್ರೆಸಿಡೆನ್ಸಿಗಳಿಂದಲೂ ಯಾತ್ರಾರ್ಥವಾಗಿ ಬರಬೇಕೆಂದಿರುವವರಿಗೆ ಎಚ್ಚರಿಕೆಯನ್ನು ಕೊಡಬೇಕೆಂತ ಕೋರಿ ಇರುತ್ತಾರೆ".

ತಾರೀಖು 11ನೆ ಜನವರಿ 1909.

ನಂ. 6418—ಸ್ಯಾನಿಟರಿ 76—08—34, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷರ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಗಾಡಕೆರೆ	ಹುಣಸೂರು.
ಮೂಡಿಗಹಳ್ಳಿ	ಚಾಮರಾಜನಗರ.
ಗಣಗನೂರು	ಡಿಟ್ಟೋ.
ತೆಗಟ್ಟಿ	ಎಳಂದೂರು.
ಮೂದಹಳ್ಳಿ	ಎಡತೊರೆ.
ಹೆಬ್ಬಾಳು	ಡಿಟ್ಟೋ.

ತಾರೀಖು 12ನೆ ಜನವರಿ 1909.

ನಂ. 6500—ಸ್ಯಾನಿಟೆರಿ 76-08—35, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯು ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

	ಸ್ಥಳ.	ತಾಲ್ಲೂಕು.
1.	ಮಾರಗೌಡನಹಳ್ಳಿ	ಹುಣಸೂರು.
2.	ಹಂಗಾಲ	ಗುಂಡ್ಲುಪೇಟೆ.
3.	ಜಿನ್ನಹಳ್ಳಿ	ಹೆಗ್ಗಡದೇವನಕೋಟೆ.

ತಾರೀಖು 12ನೆ ಜನವರಿ 1909.

ನಂ. 6502—ಸ್ಯಾನಿಟೆರಿ 52-08-15, ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕಿನ ಚುಂಚನಗಿರಿ ಶ್ರೀ ಗಂಗಾಧರ ಸ್ವಾಮಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯು ವರ್ಷದ 2ನೆಯ ನಂಬರ್ ಎಪಿಡೆಮಿಕ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರು 1909ನೆಯು ವರ್ಷದ ಮಾರ್ಚಿ 2ನೆ ತಾರೀಖಿನಿಂದ 1909ನೆ ಇಸವಿ ಮಾರ್ಚಿ 8ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಜನವರಿ 1909.

ನಂ. 6504—ಸ್ಯಾನಿಟೆರಿ 108—08—3, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ:—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
ಶ್ರೀ ಗೋಪಾಲಕೃಷ್ಣದೇವರ ಜಾತ್ರೆ.	ಆಗುಂಬೆ ...	ತೀರ್ಥಹಳ್ಳಿ ...	25—1—09	1—2—09 ಉಭಯ ದಿನಗಳೂ ಸೇರಿ.
ಹಾಲಸ್ವಾಮಿ ಜಾತ್ರೆ ...	ರಾಂಪುರ	ಹೊನ್ನಾಳಿ ...	7—2—09	17—2—09 ಉಭಯ ದಿನಗಳೂ ಸೇರಿ.
ಶ್ರೀ ರೇಣುಕಮ್ಮನವರ ರಥೋತ್ಸವ.	ಚಂದ್ರಗುತ್ತಿ ...	ಸೊರಬ ...	11—2—09	17—2—09 ಉಭಯ ದಿನಗಳೂ ಸೇರಿ.
ಮಲ್ಲಿಕಾರ್ಜುನದೇವರ ಜಾತ್ರೆ ...	ತೊಗರ್ಸಿ ...	ಶಿಕಾರಿಪುರ ...	2—3—09	11—3—09 ಉಭಯ ದಿನಗಳೂ ಸೇರಿ.
ಕಾರ್ತಿಕ ಜಾತ್ರೆ ...	ಸೂಳೇಕೆರೆ ...	ಚನ್ನಗಿರಿ ...	19—2—09	23—2—09 ಉಭಯ ದಿನಗಳೂ ಸೇರಿ.

1897ನೆಯು ವರ್ಷದ 2ನೆಯ ನಂಬರ್ ಎಪಿಡೆಮಿಕ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಜನವರಿ 1909.

ನಂ. 6508—ಸ್ಯಾನಿಟೆರಿ 61-08-58, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:- ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಹೆಂಜಾರಿಸ್ವಾಮಿ ರಥೋತ್ಸವ.	ಹೇಮಾವತಿ	ಮಡಕಸಿರ	ಅನಂತಪುರ	14—2—09	27—2—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 22-12-08ನೆ ಮರ್ಸ್ಕಂ 1151-ಶಿ. ನಂಬರಿನ ಮೆಮೊ ಮೇರಿಗೆ.
				ಉಭಯ ದಿನಗಳೂ ಸೇರಿ.		
ನರಸಿಂಹಸ್ವಾಮಿ ರಥೋತ್ಸವ.	ರೊಳ್ಳ ...	ಡಿಟೋ	ಡಿಟೋ	1—3—09	10—3—09	
				ಉಭಯ ದಿನಗಳೂ ಸೇರಿ.		
ಶ್ರೀವೀರರಾಘವ ಸ್ವಾಮಿ ಮಾಸಿ ಅಮಾವಾಸ್ಯೆ ಉತ್ಸವ.	ತಿರುವಲ್ಲೂರು.	ತಿರುವಲ್ಲೂರು	ಚೆಂಗಲ್‌ಪೇಟೆ.	13—2—09	20—2—09	ಡಿಟೋ ಯವರ 22-12-08ನೆ ಮರ್ಸ್ಕಂ 1153ನೆ ನಂಬರ್ ಮೆಮೋ ಮೇರಿಗೆ.
				ಉಭಯ ದಿನಗಳೂ ಸೇರಿ.		
ತೈಪೂಸಂ ಉತ್ಸವ ಮತ್ತು ದನಗಳ ಪರಿಸೆ.	ಕಝುಗು ಮಲೆ.	ಉಟ್ಟಪಿದರಂ	ತಿನ್ನವೆಲ್ಲಿ...	21—1—09	15—2—09	ಡಿಟೋ ಯವರ 22-12-08ನೆ ಮರ್ಸ್ಕಂ 1155ನೆ ನಂಬರು ಮೆಮೋ ಮೇರಿಗೆ.
				ಉಭಯ ದಿನಗಳೂ ಸೇರಿ.		

ತಾರೀಖು 22ನೆ ಡಿಸೆಂಬರು 1908.

ನಂ. 5942—ವಿದ್ಯಾಭ್ಯಾಸ 164-08-3, ಹೈಸ್ಕೂಲಿನ ತರಗತಿಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ವಿಚಾರವಾಗಿಯೂ ಆಂಗ್ಲೋ ವರ್ನಾಕ್ಯುಲರ್ ಮಿಡಲ್ ಮತ್ತು ಹೈ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳನ್ನು ಮೇಲ್ ತರಗತಿಗಳಿಗೆ ಪ್ರಮೋಷನ್ ಮಾಡುವ ವಿಚಾರದಲ್ಲಿಯೂ ಇದರಡಿ ಕಂಡ ನಿಬಂಧನೆಗಳನ್ನು ಮಂಜೂರ್ಮಾಡಲು ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ. ಈ ನಿಬಂಧನೆಗಳು 1909ನೆ ಜನವರಿಯ ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು:—

ವಿದ್ಯಾಭ್ಯಾಸ ವಿಷಯಕ ನಿಬಂಧನೆಗಳು.

ಹೈ ಸ್ಕೂಲಿನ IV, V, VI ನೆ ತರಗತಿಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು.

I. ಹೈ ಸ್ಕೂಲಿನ IV, V, VI ನೆ ತರಗತಿಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ಸಾಮಾನ್ಯವಾಗಿ ಕ್ರಿಸ್ಮಸ್ ರಜಾನಂತರ ಸದರೀ ಹೈ ಸ್ಕೂಲು ಆರಂಭವಾಗುವ ತಾರೀಖು ಲಾಗಾಯಿತು ಒಂದು ವಾರದ ಒಳಗಾಗಿ ಸೇರಿಸಿಕೊಳ್ಳಬೇಕು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಇರುವ ವಿದ್ಯಾರ್ಥಿಗಳನ್ನು VI ನೆ ತರಗತಿಗೆ ಸೇರಿಸಿಕೊಳ್ಳಬೇಕಾದಲ್ಲಿ ಸದರೀ ಪರೀಕ್ಷಾ ಫಲಿತಾಂಶವು ಹೊರಪಟ್ಟ ಲಾಗಾಯಿತು ಹತ್ತು ದಿವಸಗಳೊಳಗಾಗಿ ಸೇರಿಸಿಕೊಳ್ಳಬೇಕು. ಕಾಯಿಲೆ ಯಾ ಇತರ ವಿಶೇಷ ಸಬಬಿನಿಂದ ಮೇಲೆ ವಿಧಿಸಿರುವ ಕಾಲಾವಧಿಯೊಳಗಾಗಿ ಯಾವನೊಬ್ಬ ವಿದ್ಯಾರ್ಥಿಯಾಗಲಿ ಸ್ಕೂಲಿಗೆ ಸೇರುವ ಬಗ್ಗೆ ಹಾಜರಾಗದೆ ಹೋದಲ್ಲಿ ಹೆಡ್ ಮಾಸ್ಟರು ತಮಗೆ ಯುಕ್ತ ತೋರಿದರೆ ಆಖೈರ್ ದಿನದೊಳಗಾಗಿ ಅಂಥಾವನಿಂದ ಆ ಬಗ್ಗೆ ದರಖಾಸ್ತನ್ನು ಬರಮಾಡಿಕೊಳ್ಳಬಹುದು. ಪರಂತು ಇಂಥಾ ಸಂದರ್ಭಗಳಲ್ಲಿ ಸದರೀ ದರಖಾಸ್ತಿನ ಆಧಾರದಮೇಲೆ ಆತನನ್ನು ಹಂಗಾಮಿಯಾಗಿ ಸೇರಿಸಿಕೊಂಡ ವಿಷಯವನ್ನೂ, ಅದಕ್ಕೆ ಕಾರಣಗಳನ್ನೂ, ಆತನು ಸ್ಕೂಲಿಗೆ ಹಾಜರಾಗಲು ಆರಂಭಿಸಿದ ತಾರೀಖನ್ನೂ ಮಂಜೂರಿ ಬಗ್ಗೆ ಸರ್ಕಲ್ ಇನ್ಸ್ಪೆಕ್ಟರವರ ಬಳಿಗೆ ರವಾನಿಸತಕ್ಕದ್ದು.

II. ಎರಡನೆ ಟರಮಿನ (ವರುಷದ 2ನೆ ಭಾಗದ ಆರಂಭದಲ್ಲಿ ಹೈ ಸ್ಕೂಲಿನ IV, V, VI ನೆ ತರಗತಿಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ಎರಡನೆ ಸೋಮವಾರ ಯಾ ಅದಕ್ಕಿಂತ ಮುಂಚೆ ಲೀವಿಂಗ್ ಸರ್ಟಿಫಿಕೇಟನ್ನು (ಹಿಂದೆ ಓದುತ್ತಿದ್ದ ಪಾಠಶಾಲೆಯನ್ನು ಬಿಟ್ಟ ಬಗ್ಗೆ ಸರ್ಟಿಫಿಕೇಟು) ಹಾಜರ್ಪಡಿಸಿದ್ದಲ್ಲದೆ ಸೇರಿಸಿಕೊಳ್ಳಕೂಡದು. ಟರಮಿನ ಆರಂಭವಲ್ಲದೆ ಬೇರೆ ಕಾಲದಲ್ಲಿ ಸದರೀ ಲೀವಿಂಗ್ ಸರ್ಟಿಫಿಕೇಟುಗಳ ಮೂಲಕ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ಅವರ ತಂದೆಗಳ ಯಾ ಪೋಷಕರ ವರ್ಗ ಯಾ ಮರಣ ಮುಂತಾದ ವಿಶೇಷ ಕಾರಣಗಳಿದ್ದರೆ ಹೊರತು ಸೇರಿಸಿಕೊಳ್ಳಕೂಡದು. ಹಾಗೆ ಸೇರಿಸಿಕೊಂಡ ಸಂದರ್ಭಗಳನ್ನೆಲ್ಲಾ ಮಂಜೂರಿ ಬಗ್ಗೆ ಸರ್ಕಲ್ ಇನ್ಸ್ಪೆಕ್ಟರಲ್ಲಿಗೆ ರಿಪೋರ್ಟು ಮಾಡಬೇಕು.

III. ಇಂಗ್ಲಿಷ್ ಭಾಷೆ ಮತ್ತು ಗಣಿತಗಳಲ್ಲಿ ಬರಹಮೂಲಕವಾದ ಪರೀಕ್ಷೆಯನ್ನು ನಡೆಸಿ ಅದರ ಫಲಿತಾಂಶದಮೇಲೆ ಹೊರತು ಅನ್ಯಥಾ ಬೇರೊಂದು ಹೈ ಸ್ಕೂಲಿನಿಂದ ಬರುವ ಯಾವ ವಿದ್ಯಾರ್ಥಿಯನ್ನಾಗಲೀ ಆತನು ಯಾವ ತರಗತಿಗೆ ಅರ್ಹನೆಂದು

ಲೀವಿಂಗ್ ಸರ್ಟಿಫಿಕೇಟಿನಲ್ಲಿ ನಮೂದಿಸಿರುತ್ತದೆಯೋ ಅದಕ್ಕಿಂತ ಕೆಳಗಿನ ತರಗತಿಗೆ ಸೇರಿಸಿಕೊಳ್ಳಕೂಡದು. ಮೇಲ್ಕಂಡ ಪರೀಕ್ಷೆಯ ಪ್ರಶ್ನೆಗಳನ್ನೂ ಉತ್ತರಗಳನ್ನೂ ಸಂವತ್ಸರಾಂತ್ಯದ ವರೆಗೆ ಸ್ಕೂಲಿನ ರಿಕಾರ್ಡಿನಲ್ಲಿ ಭದ್ರವಾಗಿಟ್ಟಿರಬೇಕು.

ಹೈ ಸ್ಕೂಲ್ ತರಗತಿಗಳ ಪರಿಮಾಣ.

ಹೈ ಸ್ಕೂಲಿನ ಯಾವ ತರಗತಿಯಲ್ಲಿಯೇ ಆಗಲಿ ರಿಜಿಸ್ಟರ್ ದಾಖಲ್ 40 ವಿದ್ಯಾರ್ಥಿಗಳು ಇರುವಾಗ ಆ ತರಗತಿಗೆ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕೆಂದರೆ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಯ ವಿನಾ ಸೇರಿಸಿಕೊಳ್ಳಕೂಡದು. ಪರಂತು ಆ ಸ್ಕೂಲನ್ನು ನಡೆಸುತ್ತಿರುವವರು ಆ ತರಗತಿಯಲ್ಲಿ 40ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಬಂದು ಸೇರಿದಾಗಿನಿಂದ ಎರಡು ತಿಂಗಳಿಗೆ ಮೀರದೆ ಇರುವ ಕಾಲದೊಳಗಾಗಿ ಆ ತರಗತಿಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸುವುದಕ್ಕೆ ಸಿದ್ಧರಾಗಿರುವ ಪಕ್ಷ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಹುದು.

ಆಂಗ್ಲೋ ವರ್ನಾಕ್ಯುಲರ್ ಮಿಡಲ್ ಮತ್ತು ಹೈ ಸ್ಕೂಲುಗಳಲ್ಲಿ ಪ್ರಮೋಷನ್ ಬಗ್ಗೆ ನಿಬಂಧನೆಗಳು

I. ಸಾಂವತ್ಸರಿಕ ಪರೀಕ್ಷಾ ಫಲಿತಾಂಶಗಳನ್ನೂ, ತರಗತಿಯ ಪಾಠಗಳಲ್ಲಿ ಸಂವತ್ಸರವೆಲ್ಲಾ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಪರ್ಯಾಲೋಚಿಸಿ ವಿದ್ಯಾರ್ಥಿಗಳನ್ನು ಮೇಲ್ತರಗತಿಗೆ ಬಡ್ತಿ ಕೊಡಬೇಕು.

II. ಸ್ಕೂಲಿನ ಸಭೆಯವರಾಗಲೀ, ಹೆಡ್ ಮಾಸ್ಟರೂ ಆಯಾ ತರಗತಿಯ ಬೋಧಕರಾಗಿರುವ ಅಸಿಸ್ಟೆಂಟ್ ಮಾಸ್ಟರುಗಳೂ ಸೇರಿ ಆಗಲೀ ಬಡತಿಗಳನ್ನು ಇತ್ಯರ್ಥ ಮಾಡಬೇಕು

III. ಇಂಗ್ಲಿಷ್ ಭಾಷೆಯಲ್ಲಿ ಶೇಕಡಾ 35ಕ್ಕಿಂತ ಮತ್ತು ಒಟ್ಟಿನಲ್ಲಿ ಶೇಕಡಾ 40ಕ್ಕಿಂತ ಕಡಮೆಯಾದ ಅಂಕಗಳನ್ನು ಪಡೆಯುವ ಯಾವ ವಿದ್ಯಾರ್ಥಿಗಳನ್ನೇ ಆಗಲಿ ಪ್ರಮೋಷನ್ ಮಾಡಕೂಡದು.

IV. ಕ್ರಿಸ್ಮಸ್ ರಜಾ ನಂತರ ಸ್ಕೂಲು ಆರಂಭವಾಗುವುದಕ್ಕೆ ಪೂರ್ವವೇ ಪ್ರಮೋಷನ್‌ಗಳನ್ನೆಲ್ಲಾ ಇತ್ಯರ್ಥ ಮಾಡಿ ಆಯಾ ವರ್ಷದಲ್ಲಿ ಸ್ಕೂಲು ಆರಂಭವಾಗುವ ದಿನ ಅವುಗಳನ್ನು ನೋಟೀಸ್ ಬೋರ್ಡಿನಮೇಲೆ ಪ್ರಸಿದ್ಧಪಡಿಸಬೇಕು. ಹಾಗೆ ಒಂದುಸಾರಿ ಪ್ರಮೋಷನ್‌ಗಳನ್ನು ನೋಟೀಸ್ ಬೋರ್ಡಿನಮೇಲೆ ಪ್ರಸಿದ್ಧಪಡಿಸಿದನಂತರ ಅವುಗಳೇ ಕಾಯಂ ಆಗಿರಬೇಕಲ್ಲದೆ ಯಾವ ಸಂದರ್ಭದಲ್ಲಿಯೇ ಆಗಲಿ ಅವುಗಳನ್ನು ಬದಲಾಯಿಸಕೂಡದು.

V. ಅಜಮಾಯಿಷಿ ತರೀಖಿನ ಯಾವ ಪ್ರಮೋಷನ್‌ಗಳನ್ನೂ ಮಾಡಕೂಡದು.

VI. ಎರಡು ವರ್ಷಗಳ ಕಾಲ ಒಂದು ತರಗತಿಯಲ್ಲಿ ಪ್ರಮೋಷನ್ ಪಡೆಯದೆ ಇರುವ ಯಾವ ವಿದ್ಯಾರ್ಥಿಯೇ ಆಗಲಿ ಒಂದೇ ಆಂಗ್ಲೋ ವರ್ನಾಕ್ಯುಲರ್ ಯಾ ಹೈ ಸ್ಕೂಲಿನ ಅದೇ ತರಗತಿಯಲ್ಲಿ ಇರುವಂತೆ ಅವಕಾಶ ಕೊಡಕೂಡದು. ಪರಂತು ಈ ನಿಬಂಧನೆಯು VIನೆ ಫಾರಮಿನ ವಿದ್ಯಾರ್ಥಿಗಳಿಗೆ ಅನ್ವಯಿಸಕೂಡದು.

ತಾರೀಖು 22ನೆ ಡಿಸೆಂಬರ್ 1908.

ನಂ. 5943—ವಿದ್ಯಾಭ್ಯಾಸ 161—08—4, ಬೆಂಗಳೂರು ಮತ್ತು ಮೈಸೂರಲ್ಲಿರುವ ಹೈಸ್ಕೂಲುಗಳು 1909ನೆ ಇಸವಿಯಲ್ಲಿ ಮಾತ್ರ ಕ್ರಿಸ್ಮಸ್ ರಜಾನಂತರ ಜನವರಿ 11ನೆ ತಾರೀಖಿನ ದಿನ ಆರಂಭವಾಗತಕ್ಕದ್ದು.

ತಾರೀಖು 6ನೆ ಜನವರಿ 1909.

ನಂ. 6238—ಪರೀಕ್ಷೆ 8—08—10, ಇದರಡಿ ಕಂಡ ಪರೀಕ್ಷೀಯರು 1908ನೆ ಇಸವಿ ನವಂಬರ್ ಮಾಹೆಯಲ್ಲಿ ನಡೆದ ಮೈಸೂರು ಲೋಕಲ್ ಸರ್ವಿಸ್ ಫಾರೆಸ್ಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ :—

ಶ್ರೇಷ್ಠತೆಯ ನಂಬರು.	ರಿಜಿಸ್ಟರ್ ನಂಬರು.	ಹೆಸರು.	ಹುದ್ದೆ ಅಥವಾ ವಿಳಾಸ.
1	447	ಪದ್ಮನಾಭರಾವ್, ಸೇಲಂ. ...	ಅಕೌಂಟೆಂಟ್, ಕಂಟ್ರೋಲರ್ ಆಫೀಸು, ಬೆಂಗಳೂರು.
2	439	ನಾರಾಯಣರಾವ್, ಯಜ್ಞ ...	ಫಾರೆಸ್ಟರ್, ಶಿವಮೊಗ್ಗ.
3	462	ರಾಘವೇಂದ್ರರಾವ್, ಹೆಗ್ಗಡದೇವನಕೋಟೆ, ಎಸ್. ...	ಫಾರೆಸ್ಟರ್, ರೇಂಜು ಫಾರೆಸ್ಟು ಆಫೀಸು, ಕಾಕನಕೋಟೆ ರೇಂಜು.
4	164	ಹಿರಿಯಣ್ಣಯ್ಯ, ಚನ್ನರಾಯಪಟ್ಣ. ...	ಕ್ಲಾರ್ಕ್, ಫಾರೆಸ್ಟ್ ಇಲಾಖೆ, ಚಿಕ್ಕಮಗಳೂರು.
5	270	ಲಕ್ಷ್ಮಣಮೂರ್ತಿ, ಪಿ. ಎಸ್. ...	ಫಾರೆಸ್ಟು ರೇಂಜ್ ಆಫಿಸರ್, ತುಮಕೂರು.
6	870	ತಿರುನಾರಣಯ್ಯಂಗಾರ್, ಎಸ್. ...	ಅಸಿಸ್ಟೆಂಟ್ ಮಾಸ್ಟರ್, ಎ. ವಿ. ಸ್ಕೂಲ್, ಸರಗೂರು.
7	53	ಭಗವಂತರಾವ್, ಬಾಳೇಪುರ ...	ಆಕ್ಟಿಂಗ್ ಹೆಡ್ ಕ್ಲಾರ್ಕ್, ಡೆಪ್ಯುಟಿ ಕಮಿಷನರವರ ಆಫೀಸು, ಕೋಲಾರ.
8	275	ಲಕ್ಷ್ಮಣರಾವ್, ರಾಮೋಹಳ್ಳಿ ...	ಎಕ್ಸ್ಟ್ರಾ ಅಸಿಸ್ಟೆಂಟ್ ಇನ್ಸ್ಪೆಕ್ಟರ್, ಚಿಕ್ಕಮಗಳೂರು.
	517	ರಾಮನರಸಯ್ಯ, ಎ. ಚನ್ನಪಟ್ಣ ...	ಕ್ಲಾರ್ಕ್, ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸು, ಬೆಂಗಳೂರು.

2. ಇದರಡಿ ಕಂಡ ರಿಜಿಸ್ಟರ್ ನಂಬರುಳ್ಳ ಪರೀಕ್ಷೀಯರು ಮೇಲ್ಕಂಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದವರಾಗಿರುತ್ತಾರೆ ಅಥವಾ ಪರೀಕ್ಷೆಗೆ ಗೈರ್‌ಹಾಜರಾದವರಾಗಿರುತ್ತಾರೆ :—

ತೇರ್ಗಡೆ ಹೊಂದದವರು.		ಗೈರ್ಹಾಜರಾದವರು.
311	572	382

ತಾರೀಖು 6ನೆ ಜನವರಿ 1909.

ನಂ. 6222–ಪರೀಕ್ಷೆ 8–08–9, ಸನ್ 1908ನೆ ಇಸವಿ ನವಂಬರ್ ತಿಂಗಳಲ್ಲಿ ನಡೆದ ಲಾ ಆಫ್ ಪ್ರಾಕ್ಟಿಸ್ ಮತ್ತು ಪ್ರೊಸಿಡ್ಯೂರು ಪರೀಕ್ಷೆಯಲ್ಲಿ ಇದರಡಿ ಕಂಡ ಪರೀಕ್ಷಿಯರು ತೇರ್ಗಡೆಯಾಗಿರುತ್ತಾರೆ.

ಯೋಗ್ಯತೆ ಪ್ರಕಾರ ನಂಬರು	ರಿಜಿಸ್ಟರ್ ನಂಬರು	ಹೆಸರು.	ಹುದ್ದೆ ಅಥವಾ ವಿಳಾಸ.
1	903	ವೆಂಕಟಾಚಾರಿ, ವಂಕಿಪುರಂ. ...	ಲಕ್ಷ್ಮೀವಾಸಂ, ಬಸವನಗುಡಿ, ಬೆಂಗಳೂರು.
2	424	ನಾರಾಯಣ ಅಯ್ಯಂಗಾರ್, ತುಮಕೂರು. ಜಿ. ...	ಫಸ್ಟ್ ಗ್ರೇಡ್ ಪ್ಲೀಡರ್, ಶಿವಮೊಗ್ಗ.
3	342	ನಾಗೇಶ್ವರ ಅಯ್ಯರ್, ಆರಣಿ, ಆರ್. ...	ಮದ್ದಗಿರಿ, ತುಮಕೂರು ಡಿಸ್ಟ್ರಿಕ್ಟು.
4	921	ವೆಂಕಟರಾಮಯ್ಯ, ಹೆರೂರು. ...	ಹೆಚ್. ಗುಂಡಪ್ಪ, ಕುಣಿಗಲ್‌ರವರ ಪರಾಮರಿಕೆ.
5	614	ಸದಾಸಿವನ್, ಅಟ್ಟುಪಾಕಂ. ...	31, ಜುಯಲರ್ಸ್ ಬೀದಿ, ಸಿವಿಲ್ ಮತ್ತು ಮಿಲೆಟರಿ ಸ್ಟೇಷನ್, ಬೆಂಗಳೂರು.
6	846	ಸೂರ್ಯಪ್ರಕಾಸ್, ಸಿರಿಯಂ, ಎನ್. ...	ಮನೋರಂಜನಿ, ಸೆಂಟ್‌ಜಾರ್ಜ್ ರೋಡ್, ಬೆಂಗಳೂರು.
7	640	ಶೇಷಗಿರಿರಾವ್, ಕುಂಭಕೋಣಂ ...	ಅಡ್ವೊಕೇಟು, ಸಿವಿಲ್ ಮತ್ತು ಮಿಲೆಟರಿ ಸ್ಟೇಷನ್ ಕೋಟೆ ರಸ್ತೆ, ಬಸವನಗುಡಿ.
8	872	ವೈದೀಶ್ವರ ಅಯ್ಯರ್, ಸಿಂಗನೆಲ್ಲೂರು, ಎ. ...	ಅಸಿಸ್ಟಂಟ್ ಎಗ್ಸಾಮಿನರ್, ಕಂಟ್ರೋಲರವರ ಆಫೀಸು, ಬೆಂಗಳೂರು
9	875	ವರದಾಚಾರ್, ಮೈಸೂರು, ಜಿ. ...	35. 2ನೆ ರಸ್ತೆ, ಚಾಮರಾಜಪೇಟೆ, ಬೆಂಗಳೂರು.
	887	ವೀರಬಸವಯ್ಯ, ಹಾಸನ, ಕೆ. ...	ಫಸ್ಟ್ ಗ್ರೇಡ್ ಪ್ಲೀಡರ್, ಚಿಕ್ಕಪೇಟೆ, ಬೆಂಗಳೂರು.
11	481	ರಾಮಚಂದ್ರಯ್ಯ, ಬೆಳಮಾರನಹಳ್ಳಿ	ಚಾಮರಾಜಪೇಟೆ, ಮೈಸೂರು.
12	909	ವೆಂಕಟಕೃಷ್ಣಯ್ಯ, ಎಳ್ಳಂಬಳಸೆ ...	ಮಿ|| ಕೆ. ಚಂದ್ರಶೇಖರಯ್ಯ, ಅಡ್ವೊಕೇಟು, ಮೈಸೂರು, ಇವರ ಪರಾಮರಿಕೆ.
13	603	ರಂಗಸ್ವಾಮೈಯ್ಯಂಗಾರ್, ಡಿ. ವಿ. ...	ಫಸ್ಟ್ ಗ್ರೇಡ್ ಪ್ಲೀಡರ್, ಮೈಸೂರು.
14	472	ರಾಜಗೋಪಾಲಯ್ಯಂಗಾರ್, ಶ್ರೀರಂಗಂ ...	ಫಸ್ಟ್ ಗ್ರೇಡ್ ಪ್ಲೀಡರ್, ಚಿಕ್ಕಬಳ್ಳಾಪುರ.

2. ಇದರಡಿ ಕಂಡ ರಿಜಿಸ್ಟರ್ ನಂಬರುಳ್ಳ ಪರೀಕ್ಷಿಯರು ಮೇಲ್ಕಂಡ ಪರೀಕ್ಷೆಗೆ ಗೈರಹಾಜರಾದವರಾಗಿರುತ್ತಾರೆ.

23	756

ತಾರೀಖು 12ನೆ ಜನವರಿ 1909.

ನಂ. ಜು. 1984—ಕೋರ್ಟು 153–08–3, 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣವನ್ನನುಸರಿಸಿ, ಇದರಡಿ ಕಂಡ ಅಮಲ್‌ದಾರುಗಳನ್ನು ಮತ್ತು ಆಕ್ಟಿಂಗ್ ಅಮಲ್ದಾರುಗಳನ್ನು ಸಹಾ 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರುಗಳನ್ನಾಗಿ ನೇಮಿಸಿ ಇರುತ್ತದೆ:—

1. ಮ|| ಎಫ್. ಎಸ್. ರಾಘವಾಚಾರ್, ಅಮಲ್‌ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟ್, ಚಿಂತಾಮಣಿ.
2. ,, ಎಂ. ಎ. ಶ್ರೀನಿವಾಸೈಯ್ಯಂಗಾರ್, ಬಿ. ಎ., ಬಿ. ಎಲ್., ಅಮಲ್‌ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟ್, ಸಿರಾ ತಾಲ್ಲೂಕು.
3. ,, ಎಂ. ಸದಾಶಿವರಾವ್, ಬಿ. ಎ., ಬಿ. ಎಲ್., ಅಮಲ್‌ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟ್, ದೊಡ್ಡಬಳ್ಳಾಪುರ ತಾಲ್ಲೂಕು.
4. ,, ಸಿ. ಎಸ್. ಕುಪ್ಪಸ್ವಾಮೈಯ್ಯಂಗಾರ್, ಅಮಲ್‌ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟ್, ಆನೆಕಲ್ ತಾಲ್ಲೂಕು.
5. ,, ಷೇಕ್ ಅಬ್ದುಲ್ಲಾ ಡಿಟ್ಟೋ ಡಿಟ್ಟೋ ನಾಗಮಂಗಲ ,,
6. ,, ಟಿ. ಎಸ್. ರಾಜಗೋಪಾಲಾಚಾರ್, ಡಿಟ್ಟೋ ಡಿಟ್ಟೋ ಕೃಷ್ಣರಾಜಪೇಟೆ ,,
7. ,, ಎಸ್. ಎನ್. ಅಪ್ಪಂಣ್ಣೈಯ್ಯಂಗಾರ್, ಬಿ. ಎ., ಬಿ. ಎಲ್., ಅಮಲ್‌ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟ್, ಹಾಸನ.
8. ,, ಇ. ಸಿ. ಸದಾಶಿವಪಿಳ್ಳೆ, ಅಮಲ್‌ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟ್, ಜಗಲೂರು ತಾಲ್ಲೂಕು.
9. ,, ವೈ. ನರಸಿಂಗರಾವ್, ಬಿ. ಎ., ಬಿ. ಎಲ್., ಆಕ್ಟಿಂಗ್ ಅಮಲ್ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟ್, ಶ್ರೀನಿವಾಸಪುರ ತಾಲ್ಲೂಕು.
10. ,, ಸೈಯದ್ ರೌಫ್, ಬಿ. ಎ., ಡಿಟ್ಟೋ ಪಾವಗಡ ತಾಲ್ಲೂಕು.
11. ,, ಎಸ್. ಶ್ರೀನಿವಾಸೈಯ್ಯಂಗಾರ್, ಡಿಟ್ಟೋ ಹುಣಸೂರು ,,
12. ,, ಸಿ. ನಾರಾಯಣರಾವ್, ಬಿ. ಎ., ಬಿ. ಎಲ್., ಡಿಟ್ಟೋ ಮಂಜರಾಬಾದ್ ,,
13. ,, ಎಸ್. ಚಕ್ರಪಾಣಿ ಐಯ್ಯಂಗಾರ್ ಡಿಟ್ಟೋ ಚಿಕ್ಕಮಗಳೂರು ,,
14. ,, ಎಂ. ಎಸ್. ಹಯಗ್ರೀವರಾವ್, ಬಿ. ಎ., ಡಿಟ್ಟೋ ಹೊನ್ನಾಳಿ ,,

ನೋಟಿಫಿಕೇಷನ್, ತಾರೀಖು 11ನೆ ಜನವರಿ 1909.

ನಂ. 6408—Ml. 341-06-137, 1908ನೆ ಇಸವಿ ಜುಲೈ 2ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ ಅಂದರೆ ಇಂಗ್ಲೀಷು ಗೆಜೆಟ್ಟಿನ 826ನೆ ಪುಟದಲ್ಲಿಯೂ ಕನ್ನಡ ಗೆಜೆಟ್ಟಿನ 436–7ನೆ ಪುಟಗಳಲ್ಲಿಯೂ ಮತ್ತು ತುಮಕೂರು ಟವರ್ನ ಮತ್ತು ಪ್ರಾಕ್ಲಮೇಷನ್ನಿನಲ್ಲಿ ನಮೂದಿರುವ ಪಾಳ್ಯಗಳ ಮುಖ್ಯವಾದ ಸ್ಥಳಗಳಲ್ಲಿ 4–8–1908ರಲ್ಲೂ ಚಿಕಟಾಯಿಸುವದರ ಮೂಲಕ ಪ್ರಸಿದ್ಧಪಡಿಸೋಣಾದ 1908ನೆ ಇಸವಿ ಜೂನ್ 22ನೆ ತಾರೀಖಿನ ಇಸ್ತಿಹಾರಿನಿಂದ, 1906ನೆ ಇಸವಿಯ viiನೆ ಮ್ಯುನಿಸಿಪಲ್ ರೆಗ್ಯುಲೇಷನ್ನಿನ 7ನೆ ಪ್ರಕರಣದಪ್ರಕಾರ ತುಮಕೂರು ಟವರ್ನ ಮತ್ತು ಅದಕ್ಕೆ ಸೇರಿದ ಪಾಳ್ಯಗಳು ಅಂದರೆ ಸದರೀ ಇಸ್ತಿಹಾರಿನಲ್ಲಿ ನಮೂದಿಸಿರುವ ಎಲ್ಲೆಗಳೊಳಗೆ ಸೇರಿರುವ ವಿಸ್ತೀರ್ಣವನ್ನು ಒಂದು ಮ್ಯುನಿಸಿಪಾಲಿಟಿಯಾಗಿ ಮಾಡಲು ಯೋಚಿಸಿರುತ್ತೆಂದು ಸದರಿ ರೆಗ್ಯುಲೇಷನಿನ 8ನೆ ಪ್ರಕರಣಕ್ಕನುಸಾರವಾಗಿ ಕ್ರಮವಾಗಿ ಪ್ರಕಟಿಸಿದ್ದರ ಮೇಲೆ ಆಕ್ಷೇಪಣೆಗಳು ಯಾವದೂ ಬಾರದೆ ಇರುವದರಿಂದ ಶ್ರೀಮನ್ ಮೈಸೂರು ಮಹಾರಾಜಾ ಸಾಹೇಬ್ಬಹದ್ದೂರ್ರವರ ಸರ್ಕಾರದವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ಅವರಿಗೆ ಉಂಟಾಗಿರುವ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸದರಿ ತುಮಕೂರು ಟವರ್ನ ಮತ್ತು ಅದಕ್ಕೆ ಸೇರಿದ ಈರೇಖಿನಲ್ಲಿ ನಮೂದಾಗುವ ಪಾಳ್ಯಗಳನ್ನು ಸೇರಿಸಿ ಒಂದು ಮ್ಯುನಿಸಿಪಾಲಿಟಿಯಾಗಿ ಮಾಡಬೇಕೆಂದು ಮತ್ತು 1908ನೆ ಇಸವಿ ಡಿಸೆಂಬರು 10ನೆ ತಾರೀಖಿನ ದಿವಸದಾರಭ್ಯ ಸದರೀ ಮ್ಯುನಿಸಿಪಾಲಿಟಿಯ ಚೆಕ್ಕುಬಂದಿಯು ಇದರಡಿ ಕಾಣಿಸಿರುವಂತೆ ಇರಬೇಕೆಂದು ಅಪ್ಪಣೆ ಮಾಡಿರುತ್ತಾರೆ.

1. ಯಕನಾತಮ್ಮನ ಪಾಳ್ಯ
2. ಹನುಮನಾಯ್ಕನ ಪಾಳ್ಯ
3. ಬಸವಣ್ಣನ ಪಾಳ್ಯ
4. ಸಾಡೇ ಪಾಳ್ಯ
5. ಅರ್ಜಿ ರಂಗಣ್ಣನಪಾಳ್ಯ
6. ಅರಳೀಮರದ ಪಾಳ್ಯ
7. ಹೊನ್ನಾಯಿಕನ ಪಾಳ್ಯ
8. ಅಮಾನುದ್ದೀನಸಾಬರ ಪಾಳ್ಯ
9. ಬಾಳೇಗೌಡನ ಪಾಳ್ಯ
10. ಕಂಬಾಳ್ಯಯ್ಯನ ಪಾಳ್ಯ
11. ಭೀಮನಾಯಿಕನ ಪಾಳ್ಯ
12. ಕಾಜೀ ಪಾಳ್ಯ
13. ಗುಡಿಯಪ್ಪನ ಪಾಳ್ಯ
14. ಹೊಲೇರಹಟ್ಟಿ
15. ಗರಡೀಚಿಕ್ಕನ ಪಾಳ್ಯ
16. ಟ್ಯಾನರಿ
17. ಮಾದಿಗರಹಟ್ಟಿ
18. ಯೋಗೇನಹಳ್ಳಿ
19. ನಾಗಯ್ಯನ ಪಾಳ್ಯ
20. ಕೆಂಪೈಯನ ಪಾಳ್ಯ
21. ಬಾರ್ಲೈನ್ ಷೆಡ್ಡು

2. ತುಮಕೂರು ಮ್ಯುನಿಸಿಪಾಲಿಟಿಯ ಸರಹದ್ದು ವಿವರಣೆ :—

ತುಮಕೂರು ಟವರ್ನ ಮ್ಯುನಿಸಿಪಾಲಿಟಿಯ ಸರಹದ್ದು, ತುಮಕೂರು ಗ್ರಾಮದ ಸರ್ವೆ 45ನೆ ನಂಬರಿಗೆ ಆಗ್ನೇಯ ಮೂಲೆಯಿಂದ ಹೊರಟು ಆ ನಂಬರಿಗೆ ದಕ್ಷಿಣವಾಗಿ, ಶೆಟ್ಟಿಹಳ್ಳಿ, ಉಪ್ಪಾರಹಳ್ಳಿ, ಮರಳೂರು, ಮತ್ತು ವೀರಸಾಗರ ಗ್ರಾಮಗಳ ಯಲ್ಲೆಗೆ ಉತ್ತರದಲ್ಲಿ ಹಾದು, ಅಲ್ಲಿಂದ ದಕ್ಷಿಣಕ್ಕೆ ತಿರುಗಿಕೊಂಡು ವೀರಸಾಗರ ಗ್ರಾಮದ ಸರ್ವೆ 5ನೆ ನಂಬರು ಎಲ್ಲೆಯನ್ನು ಸುತ್ತಿಕೊಂಡು ಸರ್ವೆ 4, 35, ಮತ್ತು 31ನೆ ನಂಬರುಗಳ ದಕ್ಷಿಣದಲ್ಲಿ ಹಾದು ಹೋಗುತ್ತೆ. ಅಲ್ಲಿಂದ ಅದೇ ಗ್ರಾಮದ 13ನೆ ನಂಬರಿನ ಪೂರ್ವ ಭಾಗದಲ್ಲಿ ಹೊರಟು 37, 33 ಮತ್ತು 29ನೆ ನಂಬರುಗಳ ದಕ್ಷಿಣ ಮತ್ತು ನೈರುತ್ಯ ಭಾಗದ ಎಲ್ಲೆಯನ್ನು ಅನುಸರಿಸಿ ಹೋಗಿ ರೈಲು ರಸ್ತೆಯನ್ನು ದಾಟಿ 27ನೆ ನಂಬರನ್ನು ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೂ ಉತ್ತರಕ್ಕೂ ಹೊರಟು ಸರ್ವೆ 27ನೆ ನಂಬರನ್ನು ಸುತ್ತಿಕೊಂಡು ಪಶ್ಚಿಮವಾಗಿ ಹೊರಟು ಸರ್ವೆ 26ನೆ ನಂಬರಿನ ಉತ್ತರ ಭಾಗದಲ್ಲಿ ಹಾದು ತುಮಕೂರು ಅಮಾನಿಕೆರೆಯ ಎಲ್ಲೆಯವರಿಗೆ ಹೋಗುತ್ತದೆ. ಅಲ್ಲಿಂದ ಉತ್ತರಕ್ಕೆ ತಿರುಗಿ ತುಮಕೂರು ಗ್ರಾಮದ ಸರ್ವೆ 124, 125, 126, ಮತ್ತು 127ನೆ ನಂಬರುಗಳ ಮತ್ತು ತುಮಕೂರು ಅಮಾನಿಕೆರೆ ಬಾಬತು ಸರ್ವೆ 140, 141, 142 ಮತ್ತು 151ನೆ ನಂಬರುಗಳಿಗೆ ಪಶ್ಚಿಮದಲ್ಲಿ ಹೋಗಿ, ಅಲ್ಲಿಂದ ಪೂರ್ವಕ್ಕೆ ತಿರುಗಿಕೊಂಡು ಸರ್ವೆ 153ನೆ ನಂಬರಿನ ಆಗ್ನೇಯ ಮೂಲೆಯ ಮೇಲೆ ಹೋಗಿ 44ನೆ ಮೈಲಿ ಕಲ್ಲು ಬಳಿ ಗುಬ್ಬಿ ರಸ್ತೆಯನ್ನು ದಾಟಿ ಅಲ್ಲಿಂದ ಉತ್ತರಕ್ಕೆ ತಿರುಗಿಕೊಂಡು ತುಮಕೂರು ಅಮಾನಿಕೆರೆ ಸರ್ವೆ 171, 172, 173, 178, 110, 54, 53, 49, 45, 43, 42ನೆ ನಂಬರುಗಳಿಗೆ ಪೂರ್ವವಾಗಿ ಹೊರಟು ದಿಬ್ಬೂರು ಗ್ರಾಮದ ಸರ್ವೆ 42ನೆ ನಂಬರಿನ ಈಶಾನ್ಯ ಮೂಲೆ ವರಿಗೆ ಹೋಗುತ್ತದೆ. ಅಲ್ಲಿಂದ ಸರ್ವೆ 4ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಪೂರ್ವಕ್ಕೆ ತಿರುಗಿಕೊಂಡು ಹೊನ್ನೇನಹಳ್ಳಿ ಗ್ರಾಮದ ದಕ್ಷಿಣ ಭಾಗದ ಎಲ್ಲೆಯ ಮೇಲೆ ಹಾದು ಅದೇ ಗ್ರಾಮದ 64ನೆ ನಂಬರಿನ ಆಗ್ನೇಯ ಮೂಲೆ ವರಿಗೂ ಬಂದು ಆ ನಂಬರಿನ ಪೂರ್ವ ಭಾಗದ ಎಲ್ಲೆಯಲ್ಲಿ ಉತ್ತರಕ್ಕೆ ತಿರುಗಿಕೊಳ್ಳುತ್ತದೆ. ಅಲ್ಲಿಂದ ಅದೇ ಗ್ರಾಮದ 63ನೆ ನಂಬರಿನ ದಕ್ಷಿಣದಲ್ಲಿ ಪೂರ್ವಕ್ಕೆ ತಿರುಗಿಕೊಂಡು ಹೊನ್ನೇನಹಳ್ಳಿ ಗ್ರಾಮದ 63, 57 ಮತ್ತು 58ನೆ ನಂಬರುಗಳ ಪೂರ್ವ ಭಾಗದಲ್ಲಿ ಉತ್ತರಕ್ಕೆ ಹೋಗುತ್ತದೆ. ಅಲ್ಲಿಂದ ಸರ್ವೆ 50ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಪೂರ್ವಕ್ಕೆ ತಿರುಗಿಕೊಂಡು ಹೊನ್ನೇನಹಳ್ಳಿ ಗ್ರಾಮದ ಸರ್ವೆ 49ನೆ ನಂಬರು ಮತ್ತು ಲಿಂಗಾಪುರ ಗ್ರಾಮದ 26ನೆ ನಂಬರಿನ ವರಿಗೂ ಪೂರ್ವವಾಗಿ ಹೋಗುತ್ತದೆ. ಅಲ್ಲಿಂದ ಉತ್ತರಕ್ಕೆ ತಿರುಗಿಕೊಂಡು ಪೂರ್ವವಾಗಿ ಹೊರಟು ಲಿಂಗಾಪುರ ಗ್ರಾಮದ ಸರ್ವೆ 25ನೆ ನಂಬರನ್ನು ಬಳಸಿಕೊಂಡು 45ನೆ ಮೈಲಿ ಕಲ್ಲಿನಿಂದ ಆಚೆಗೆ 175 ಗಜದ ಹತ್ತಿರ ಶಿರಾ ರಸ್ತೆಯನ್ನು ಸೇರುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿಕೊಂಡು ಲಿಂಗಾಪುರ ಗ್ರಾಮದ ಸರ್ವೆ 5 ಮತ್ತು 6ನೆ ನಂಬರುಗಳಿಗೂ ಮತ್ತು ಅಂತರಸನಹಳ್ಳಿ ಗ್ರಾಮದ 17ನೆ ಮತ್ತು 20ನೆ ನಂಬರುಗಳಿಗೂ ಉತ್ತರ ಭಾಗದಲ್ಲಿ ಹೋಗಿ ಅಲ್ಲಿಂದ ಅದೇ ಅಂತರಸನಹಳ್ಳಿ ಗ್ರಾಮದ ಸರ್ವೆ 21ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ದಕ್ಷಿಣಕ್ಕೆ ತಿರುಗಿಕೊಂಡು ಅಲ್ಲಿಂದ 6ನೆ ನಂಬರಿನ ಆಗ್ನೇಯ ಮೂಲೆ ವರಿಗೆ ಪೂರ್ವಕ್ಕೆ ಹೋಗಿ ಅಲ್ಲಿಂದ 7ನೆ ನಂಬರಿನ ವಾಯುವ್ಯ ಮೂಲೆ ವರಿಗೆ ದಕ್ಷಿಣಕ್ಕೆ ಹೋಗಿ ಅಲ್ಲಿಂದ ಸರ್ವೆ 8ನೆ ನಂಬರಿನ ದಕ್ಷಿಣ ಭಾಗದಲ್ಲಿ ಆಗ್ನೇಯವಾಗಿ ಸುತ್ತಿಕೊಂಡು 2ನೆ ಮೈಲಿಯ 7ನೆ ಫರಲಾಂಗು 98 ಗಜದ ಹತ್ತಿರ ಮಧುಗಿರಿ ರಸ್ತೆಯನ್ನು ಸೇರುತ್ತದೆ. ಅಲ್ಲಿಂದ ದಕ್ಷಿಣವಾಗಿ ಹೊರಟು ಅಂತರಸನಹಳ್ಳಿ ಗ್ರಾಮದ ಸರ್ವೆ 88, 87 ಮತ್ತು 76ನೆ ನಂಬರುಗಳ ಪಶ್ಚಿಮದಲ್ಲಿ ದಕ್ಷಿಣವಾಗಿ ಹೊರಟು ಅಲ್ಲಿಂದ ಪೂರ್ವಕ್ಕೆ ತಿರುಗಿಕೊಂಡು ಸರ್ವೆ 182 ಮತ್ತು 184ನೆ ನಂಬರುಗಳ ಈಶಾನ್ಯ ಸರಹದ್ದನ್ನನುಸರಿಸಿ ಹೋಗುತ್ತದೆ. ಅಲ್ಲಿಂದ ಸರ್ವೆ 184ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ದಕ್ಷಿಣಕ್ಕೆ ತಿರುಗಿಕೊಂಡು 1ನೆ ಮೈಲಿ 4ನೆ ಫರಲಾಂಗು 125 ಗಜದ ಹತ್ತಿರ ದೇವರಾಯ ದುರ್ಗದ ರಸ್ತೆಯನ್ನು ಸೇರುತ್ತವೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿಕೊಂಡು ಸತ್ಯಮಂಗಲ ಗ್ರಾಮದ, ಪಶ್ಚಿಮ, ದಕ್ಷಿಣ ಎಲ್ಲೆಯನ್ನು ವಕ್ರವಾಗಿ ಸುತ್ತಿಕೊಂಡು ತುಮಕೂರು ಗ್ರಾಮದ ಸರ್ವೆ 215ನೆ ನಂಬರಿನ ಪೂರ್ವ ಭಾಗದ ಸರಹದ್ದನ್ನು ಸೇರಿ ಅಲ್ಲಿಂದ 211ನೆ ನಂಬರಿನ ನೈರುತ್ಯ ಭಾಗದ ಸರಹದ್ದಿನ ವರಿಗೆ ದಕ್ಷಿಣಕ್ಕೆ ಹೋಗುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿಕೊಂಡು ತುಮಕೂರು ಗ್ರಾಮದ ಸರ್ವೆ 211 ಮತ್ತು 216ನೆ ನಂಬರುಗಳ ದಕ್ಷಿಣದಲ್ಲಿ ಹಾದು ಮಣ್ಣರಹಳ್ಳಿ ಭಂಡಿ ಜಾಡನ್ನು ಸೇರಿ ತುಮಕೂರು ಗ್ರಾಮದ ಸರ್ವೆ 248ನೆ ನಂಬರಿಗೆ ಉತ್ತರದಲ್ಲಿ ಹಾದು ಹೋಗುತ್ತದೆ. ಅಲ್ಲಿಂದ ದಕ್ಷಿಣಕ್ಕೆ ತಿರುಗಿಕೊಂಡು ತುಮಕೂರು ಗ್ರಾಮದ 248ನೆ ನಂಬರಿಗೆ ಪೂರ್ವವಾಗಿ ಹೊರಟು ಅಲ್ಲಿಂದ ನೈರುತ್ಯಕ್ಕೆ ತಿರುಗಿಕೊಂಡು ಅದೇ ನಂಬರಿನ ದಕ್ಷಿಣದಲ್ಲಿ ಹಾದು ಹೋಗಿ 1ನೆ ಮೈಲಿ ಕಲ್ಲಿನಿಂದ ಈಚೆ 34 ಗಜದಲ್ಲಿ ಬೆಳಗುಂಬದ ರಸ್ತೆಯನ್ನು ದಾಟುತ್ತದೆ. ಅಲ್ಲಿಂದ ತುಮಕೂರು ಗ್ರಾಮದ ಸರ್ವೆ 281, 282, 279 ಮತ್ತು 273ನೆ ನಂಬರುಗಳಿಗೆ ಪೂರ್ವ ಭಾಗದಲ್ಲಿ ಡೊಂಕಾಗಿ ಹೊರಟು 42ನೆ

ಮೈಲಿಯ 4ನೆ ಫರ್ಲಾಂಗು 135 ಗಜದಲ್ಲಿ ಬೆಂಗಳೂರು ರಸ್ತೆಯನ್ನು ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿಕೊಂಡು ಸರ್ವೆ 274ನೆ ನಂಬರಿನ ಪೂರ್ವ ಸರಹದ್ದಿನ ವರೆಗೆ ಹೋಗಿ ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಬಟವಾಡಿ ಗ್ರಾಮಕ್ಕೆ ಪಶ್ಚಿಮವಾಗಿ ಹೊರಟು ಲೈನು ಪ್ರಾರಂಭವಾದ ತುಮಕೂರು ಗ್ರಾಮದ 45ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ.

ತಾರೀಖು 12ನೆ ಜನವರಿ 1909.

ನಂ. ಜು. 1985—ಕೋರ್ಟು 153–08–4, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು 12ನೆ ಪ್ರಕರಣವನ್ನನುಸರಿಸಿ ಮದ್ದಗಿರಿ ವರ್ಕ್‌ಶೀಫ಼್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ॥ ಎ. ಕೆ. ಶ್ರೀನಿವಾಸರಾಘವಾಚಾರ್ಯರವರನ್ನು 2ನೆ ಕ್ಲಾಸು ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿ ಇರುತ್ತದೆ.

ತಾರೀಖು 12ನೆ ಜನವರಿ 1909.

ನಂ. ಜು. 1986—ಕೋರ್ಟು 153–08–5, 1859ನೆ ಇಸವಿಯ XIIIನೆ ನಂಬರ್ ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟ್ 5ನೆ ಪ್ರಕರಣಾನುಸಾರ, ಮಂಜರಾಬಾದು ತಾಲ್ಲೂಕ್ ಅಮಲ್ದಾರ್ ಮ್ಯಾಜಿಸ್ಟ್ರೇಟ್ ಮಿ॥ ಸಿ. ನಾರಾಯಣರಾವ್, ಬಿ. ಎ., ಬಿ. ಎಲ್., ರವರಿಗೆ ಸದರಿ ಆಕ್ಟಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ವಿಚಾರಣೆಯಿಂದ ಫೈಸಲ್ ಮಾಡಲು ಅಧಿಕಾರ ಕೊಟ್ಟು ಇರುತ್ತದೆ.

ತಾರೀಖು 11ನೆ ನವಂಬರ್ 1908.

ನಂ. ರೆ. 4519—ಲ್ಯಾ. ರೆ. 22—08—55, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :– ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗಾವಠಾಣಕ್ಕೆ ಸೇರಿಸಿ ಮನೆಗಳು ಕಟ್ಟುವದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಡಿಸ್ಟ್ರಿಕ್ಟು ಮೈಸೂರು ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ಯಾ ಮ್ಯುನಿಸಿಪಲ್ ನಂಬರು.	ಖುಷ್ಕಿ, ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಎಡತೊರೆ	ಮಿರ್ಲೆ	ಮೇಲೂರು	ಖಾತೆದಾರು—1ನೆ ಚನ್ನೆಗೌಡ, 2ನೆ ಮರಿಗೌಡ, 3ನೆ ಚಂನ, 4ನೆ ಚನ್ನೆಗೌಡ. ಅನುಭವದಾರು-ಪಟೇಲ್ ಮರಿಗೌಡ, ಕಾಳೇಗೌಡನ ಮಗ ಚನ್ನೆಗೌಡ.	240	ಖುಷ್ಕಿ	ಎ. ಗು. 8 36	5 ಗುಂಟೆ	ಎ. ಗು. 8 33	ರೂ. 9	ಎ. 1	ರೂ. 1	ಸರ್ವೆ 233ನೆ ಚನ್ನಮ್ಮ-ಕುಳ್ಳೆಗೌಡ ಇವರ ಜಮೀನು	ಸರ್ವೆ 241 ಈರ ಬೆ ಸಂಣ	ಊರು ಜಾಗಾ	240ನೆ ನಂಬರಿನಲ್ಲಿ ಉಳಿದ ಪ್ರದೇಶ ಕುರುಬಳ್ಳಿ ಗೌಡ
				ಬೋಳ ಬೆ ಕುಸ್ಸ	237	ಖುಷ್ಕಿ	ಎ. ಗು. 4 9	4 ಪೂಟೆ	ಎ. ಗು. 4 5	ರೂ. ಆ. 3 8	ಎ. 2	ರೂ. ಆ. 1 12	ಪೂರ್ವಕ್ಕೆ ಕೆರೆ	238ನೆ ಜರ್ಮಿ	ಗ್ರಾಮಕಟ್ಟು	237ನೆ ಪೈಕಿ ಪುಳಿಕೆ ಪ್ರದೇಶ

ತಾರೀಖು :ನೆ ಜನವರಿ 1909.

ನಂ. ಫೈ. 2883—ಜ. ಫೈ. 109–08, ಮೈಸೂರು ಸರ್ವಿಸ ರೆಗ್ಯುಲೇಷನಿನ 177ನೆ ಪ್ರಕರಣದ ಮೇರಿಗೆ ಕಂಟ್ರೋಲರವರ ಅಸಿಸ್ಟೆಂಟರಾದ ಮಿ॥ ಎಂ. ಎ. ಶ್ರೀನಿವಾಸಾಚಾರ್ಯರವರಿಗೆ 1908ನೆ ಇಸವಿ ಡಿಸೆಂಬರ್ ಮಾಹೆ 21 ಮತ್ತು 22ನೆ ತಾರೀಖುಗಳಲ್ಲಿ ಎರಡು ದಿನಗಳ ಪ್ರಿವಿಲೀಜು ರಜಾವನ್ನು ಮಂಜೂರ್ಮಾಡಲಾಯಿತು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಅಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ|| 21, ಸ್ತ್ರ 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇದರಡಿ ಕಂಡ ರಿಜಿಸ್ಟರ್ ನಂಬರುಳ್ಳ ಪರೀಕ್ಷೆಯರು ಮೇಲ್ಕಂಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆಯೂ, ಅಥವಾ ಗೈರಹಾಜರಾಗಿಯೂ ಇರತಕ್ಕ ವಿವರ.

a = ಲ್ಯಾಂಡ್ ರೆವಿನ್ಯು ಲಾ. | b = ಮೈಸೂರು ರೆವಿನ್ಯು ರೂಲ್ಸ್. | c = ಒಟ್ಟು ಅಂಕಿಗಳಲ್ಲಿ ಕಮ್ಮಿ.

ತೇರ್ಗಡೆ ಹೊಂದದವರು						ಗೈರ್‌ಹಾಜರಾದವರು.	
6	a	240	b	562	ab	17	400
7	a	262	c	573	c	28	401
32	a	272	ab	595	c	30	426
55	c	276	c	632	b	47	439
56	b	277	ab	646	ab	49	451
72	ab	283	b	685	ab	67	484
112	a	305	c	696	ab	78	606
113	c	313	ab	717	a	92	631
126	b	336	a	748	c	101	651
132	ab	357	b	750	ab	117	656
143	ab	367	a	768	a	147	758
144	ab	394	c	776	c	169	814
159	a	409	b	790	c	170	849
171	a	453	ab	795	c	178	851
172	ab	466	b	833	a	192	859
177	ab	480	b	856	c	217	891
182	a	521	b	861	b	282	912
185	c	522	ab	904	ab	338	919
218	a	531	c	947	c	392	928
222	b	555	ab	961	ab	393	941

ತಾರೀಖು 18ನೆ ಜನವರಿ 1909.

ನಂ. 6708—ವಿದ್ಯಾ. 179-08-2, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 177ನೆ ಪ್ರಕರಣದ ಮೇರೆಗೆ ಮೈಸೂರಿನಲ್ಲಿರುವ ಓರಿಯಂಟಲ್ ಲೈಬ್ರೇರಿಯ ಕ್ಯೂರೇಟರಾದ ಮಿ॥ ಎ. ಮಹದೇವಶಾಸ್ತ್ರಿ, ಬಿ. ಎ., ಯವರಿಗೆ 1909ನೆ ಇಸವಿ ಜನವರಿ 4ನೆ ತಾರೀಖಿನ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ. ಅವರ ಗೈರಹಾಜರಿ ಕಾಲದಲ್ಲಿ ಲೈಬ್ರೇರಿಯನ್ರಾದ ಮಿ॥ ಆರ್. ಶ್ಯಾಮಶಾಸ್ತ್ರಿ, ಬಿ. ಎ., ಯವರು ತಮ್ಮ ಸ್ವಂತ ಕೆಲಸದ ಜೊತೆಗೆ ಮಿ॥ ಮಹದೇವಶಾಸ್ತ್ರಿಗಳ ಚಾಲ್ತಿ ಕೆಲಸದ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 19ನೆ ಜನವರಿ 1909.

ನಂ. ಜ. 4174—ಜ. ಮಿ. 22-08-37, ಸಿ. ಷೆಡ್ಯೂಲಿಗೆ ಸೇರಿದ ಈ ಕೆಳಗಣ ಅಸಿಸ್ಟೆಂಟ್ ಕಮಿಷನರುಗಳಿಗೆ ಅವರವರ ಹೆಸರುಗಳೆದುರಿಗೆ ಕಾಣಿಸಿರುವ ತಾರೀಖಿನ ಲಾಗಾಯಿತು ಬಡತಿ ಕೊಟ್ಟಿರುತ್ತದೆ:—

1. ಮಿ॥ ಎಂ. ಶ್ರೀನಿವಾಸಮೂರ್ತಿ ಯವರಿಗೆ 1907ನೆ ಮೇ 9ನೆ ಮುರ್ಕುಂ ಲಾಗಾಯಿತು 4ನೆ ಕ್ಲಾಸಿನಿಂದ 3ನೆ ಕ್ಲಾಸಿಗೆ;

2. ಮಿ॥ ಟಿ. ಸತ್ಯರಾಜ ಶೆಟ್ಟರು ಮತ್ತು ಮಿ॥ ಎಲ್. ಬಿಸ್ಟೋಪಂತ ಬಾದಾಮಿ ಯವರು ಇವರುಗಳಿಗೆ 1908ನೆ ಡಿಸೆಂಬರ್ 1ನೆ ತಾರೀಖಿನ ಲಾಗಾಯಿತು 4ನೆ ಕ್ಲಾಸಿನಿಂದ 3ನೆ ಕ್ಲಾಸಿಗೆ;

3. ಮಿ॥ ಟಿ. ತಂಬುಶೆಟ್ಟಿ ಯವರಿಗೆ 1908ನೆ ನವಂಬರ್ 16ನೆ ತಾರೀಖಿನ ಲಾಗಾಯಿತು 5ನೆ ಕ್ಲಾಸಿನಿಂದ 4ನೆ ಕ್ಲಾಸಿಗೆ.

ತಾರೀಖು 19ನೆ ಜನವರಿ 1909.

ನಂ. 6712—ಮೆಡಿಕಲ್. 149-08-2, ಮೈಸೂರು ಸರ್ವಿಸ್ ರೆಗುಲೇಷನ್ಗಳ 177ನೆ ಪ್ರಕರಣದ ಮೇರೆಗೆ ಶಿವಮೊಗ್ಗ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಸರ್ಜನ್ ಮತ್ತು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರಾದ ಮಿ॥ ಮಹಮ್ಮದ್ ಉಸ್ಮಾನ್ ರವರಿಗೆ ಕ್ರಿಸ್ಮಸ್ ರಜಾ ದಿವಸಗಳ ಜತೆಗೆ 1909ನೆ ಜನವರಿ 3ನೆ ತಾರೀಖಿನ ಲಾಗಾಯಿತು 5 ದಿವಸಗಳ ರಜಾವನ್ನು ಕೊಟ್ಟಿತ್ತು; ಇವರ ಗೈರ್ ಹಾಜರಿ ಕಾಲದಲ್ಲಿ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಎಸ್. ಕೆ. ಹನುಮಂತರಾಯರು ಅವರ ಚಾಲ್ತಿ ಕೆಲಸದ ಚಾರ್ಜಿನಲ್ಲಿದ್ದರು.

ತಾರೀಖು 19ನೆ ಜನವರಿ 1909.

ನಂ. 6761—ವಿದ್ಯಾ. 156-08-6, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 188ನೆ ಪ್ರಕರಣದ ಮೇರೆಗೆ ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ರವರಾದ ಮಿ॥ ಎಚ್. ಜೆ. ಭಾಭಾ, ಎಂ. ಎ., ಯವರಿಗೆ 1909ನೆ ಜನವರಿ 11ನೆ ತಾರೀಖಿನ ಲಾಗಾಯಿತು 19ನೆ ತಾರೀಖಿನ ವರೆಗೆ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

(2) ಇವರು ರಜಾ ಮೇಲೆ ಇರುವಾಗಲೂ ಮತ್ತು ರಜಾ ಕಳೆದನಂತರ ಇತರ ಕೆಲಸದ ಮೇಲೆ ಇರುವಾಗಲೂ ಮಿ॥ ಸಿ. ಆರ್. ರೆಡ್ಡಿ, ಬಿ. ಎ., ಯವರು ಇವರ ಚಾಲ್ತಿ ಕೆಲಸದ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 20 ಜನವರಿ 1909.

ನಂ. ಜ್ಯು. 2113—ಕೋರ್ಟ್ಸ್. 234-08-1, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 12ನೆ ಪ್ರಕರಣವನ್ನನುಸರಿಸಿ ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಏ. ಮಾಧವರಾಯರವರನ್ನು 3ನೆ ತರಗತಿಯ ಮೇಜಿಸ್ಟ್ರೇಟರಾಗಿ ನೊಕರರೂರ್ಮಾಡಿ ಇದೆ.

ತಾರೀಖು 20ನೆ ಜನವರಿ 1909.

ನಂ. ಜ್ಯು. 2098—ಕೋ. 226-08-2, ಮೈಸೂರು ಸರ್ವಿಸ್ ರೆಗುಲೇಷನ್ಗಳ 177 ಮತ್ತು 193ನೆ ಪ್ರಕರಣಗಳ ಮೇರೆಗೆ ಸಾಗರದ ಮುನ್ಸೀಫರಾದ ಪಿ. ಮಹದೇವಯ್ಯ, ಬಿ. ಎ., ಬಿ. ಎಲ್. ಯವರಿಗೆ 1909ನೆ ಜನವರಿ 4ನೆ ತಾರೀಖಿನ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ. ಈ ಪೈಕಿ 3 ದಿವಸಗಳಿಗೆ ಅವರಿಗೆ ಪೂರಾ ತಲಬೂ ಮಿಕ್ಕ ದಿವಸಗಳಿಗೆ ಅರ್ಧ ತಲಬೂ ಸಲ್ಲತಕ್ಕದ್ದು.

ಮೇಲ್ಕಂಡ ಕಾಲದಲ್ಲಿ ಅಥವಾ ಇನ್ನೊಂದು ಹುಕುಂಕೊಡುವ ವರೆಗೆ ಚೀಫ್ ಕೋರ್ಟಿನ ಡೆಪ್ಯುಟಿ ಕ್ಲಾರ್ಕ್ ಡಿ. ಅಳಶಿಂಗ್ರಾಚಾರ್, ಬಿ. ಎ., ಬಿ. ಎಲ್., ಯವರನ್ನು ಆಖ್ತೈರು ದರ್ಜೆಯ ಮುನ್ಸೀಫರಾಗಿ ನೊಕರರೂರು ಮಾಡಿ ಸಾಗರಕ್ಕೆ ವರ್ಗಾಯಿಸಿರುತ್ತದೆ.

ತಾರೀಖು 21ನೆ ಜನವರಿ 1909.

ನಂ. ಜ್ಯು 2124—ಕೋ. 81-08-4, ಆಕ್ಟಿಂಗ್ ಅಸಿಸ್ಟೆಂಟು ಕಮಿಷನರಾಗಿ ನೊಕರರೂರು ಮಾಡಲ್ಪಟ್ಟಿರುವ ಮಿ॥ ಎಸ್. ಹಿರಿಯಣ್ಣೈಯ್ಯನವರ ಬದಲಾಗಿ 4ನೆ ಕ್ಲಾಸ್ ಮುನ್ಸೀಫರಾಗಿರುವ ಮಿ॥ ಜಿ. ಶ್ರೀನಿವಾಸೈಯ್ಯರ್, ಬಿ. ಎ., ಎಂ. ಎಲ್., ಯವರಿಗೆ 1908ನೆ ಡಿಸೆಂಬರ್ 9ನೆ ತಾರೀಖಿನ ಲಾಗಾಯಿತು 3ನೆ ಕ್ಲಾಸಿಗೆ ಬಡತಿ ಕೊಟ್ಟಿರುತ್ತದೆ.

ತಾರೀಖು 21ನೆ ಜನವರಿ 1909.

ನಂ. ರೆವಿನ್ಯೂ. 5096—ಫಾರೆಸ್ಟ್ 92-08-4, ಮೈಸೂರು ಸೀಮೆಯ ಫಾರೆಸ್ಟ್ ಸರ್ವೇ ಸೂಪರಿಂಟೆಂಡೆಂಟರಾದ ಮಿ|| ಟ. ಇ. ಎಂ. ಕ್ಲಾಡಿಯಸ್‌ರವರು 1908ನೆ ಅಕ್ಟೋಬರ್ 13ನೆ ಮುಶ್ಕಂ ರೆವಿನ್ಯೂ. 2268—ಫಾರೆಸ್ಟ್. 92-08-2ನೆ ನಂಬರ್ ಸರ್ಕಾರಿ ಹುಕುಮಿನಲ್ಲಿ ಅವರಿಗೆ ಮಂಜೂರಾಗಿದ್ದ 12 ದಿವಸಗಳ ಪೈಕಿ 7 ದಿವಸಗಳ ಪ್ರಿವಿಲೇಜ್ ರಜಾ ಮಾತ್ರ ಉಪಯೋಗಿಸಿಕೊಂಡಿರುವ ಪ್ರಯುಕ್ತ ಉಪಯೋಗಿಸಿಕೊಳ್ಳದೆ ಇದ್ದ 5 ದಿವಸಗಳ ರಜಾವನ್ನು ಈ ಮೂಲಕ ರದ್ದು ಮಾಡಿ ಇರುತ್ತದೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 22ನೆ ಜನವರಿ 1909.

ನಂ. 68—183, ವಾಟರ್ ಸಪ್ಲೈ ಮತ್ತು ಸ್ಟೋರ್ಸ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ|| ವಿ. ರಂಗಸ್ವಾಮಿ ಐಯ್ಯಂಗಾರ್ ಯವರಿಗೆ, ಈ ಆಫೀಸಿನ ಸೆ 1908ನೆ ಡಿಸೆಂಬರ್ 12ನೆ ತಾರೀಖು 1152-7889ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ನವಂಬರ್ 17ನೆ ತಾರೀಖು ಲಾಗಾಯಿತು ಕೊಟ್ಟಿದ್ದ 2 ತಿಂಗಳು ಪ್ರಿವಿಲೇಜ್ ರಜವನ್ನ ಇನ್ನೂ 21 ದಿನಗಳು ಜಾಸ್ತಿ ಮಾಡಲ್ಪಟ್ಟಿದೆ.

II. ಹಂಗಾಮಿ ತರೀಖಾಗಿ ಮಾಡಲ್ಪಟ್ಟ ಏರ್ಪಾಟು ಹಾಗೆಯೇ ನಡಿಯತಕ್ಕದ್ದು.

ಹುಕುಂ ಬಮೋಜೀಬ್,
ಡಬ್ಲ್ಯೂ. ಮುಕರ್ಜಿ,
ಮೈಸೂರು ಗವರ್ನ್ಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರಿಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ತಾರೀಖು 27ನೆ ಜನವರಿ 1909.

ನಂ. ಮಿಲಿಟರಿ. 555-6-69-08; ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜರವರು ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ಈ ಕೆಳಗೆ ಕಂಡ ಬಡ್ತಿಗಳನ್ನು 1908ನೆ ಇಸವಿ ಜೂನ್ ಗುರ್ರೆ ತಾರೀಖು ಲಾಗಾಯಿತು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಶಂಕರರಾವ್ ...	2ನೆ ಗ್ರೇಡ್ ಜಮೂದಾರ್ ...	1ನೆ ಗ್ರೇಡ್ ಜಮಾದಾರ್
ಲಕ್ಷ್ಮಣರಾವ್ ...	3ನೆ ಗ್ರೇಡ್ ಡಿಟ್ಟೋ ...	2ನೆ ಗ್ರೇಡ್ ಜಮಾದಾರ್
ಬಾಜಾಹುರ್ಸೇ ...	ಡಿಟ್ಟೋ ...	ಡಿಟ್ಟೋ
ಲಿಂಗೋಜಿ ಮೋಹಿಟೆ ...	ಡಿಟ್ಟೋ ...	ಡಿಟ್ಟೋ
ಮಹಬೂಬ್‌ಖಾನ್ ...	4ನೆ ಗ್ರೇಡ್ ಜಮಾದಾರ್ ...	3ನೆ ಗ್ರೇಡ್ ಜಮಾದಾರ್
ದೇವರಾವ್ ಸಿಂಧೆ ...	ಡಿಟ್ಟೋ ...	ಡಿಟ್ಟೋ
ಫೈಯಾಜ್ ಮಹಮದ್‌ಖಾನ್ ...	ಡಿಟ್ಟೋ ...	ಡಿಟ್ಟೋ

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 5.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ|| 4, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸ್ಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ .

ತಾರೀಖು 26ನೆ ಜನವರಿ 1909.

ನಂ. 6907—ಸ್ಯಾನಿಟರಿ 76—08–39, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ವ್ಯಾಧ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383— ಮಿಸಲೇನಿಯಸ್ ಫೈಲ್ 21–96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–95 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ			ತಾಲ್ಲೂಕು.
ಕೆಬ್ಬೆಪುರ	...	...	ಚಾಮರಾಜನಗರ.
ಇನಾಂಹೆಗ್ಗೂರು	...	...	ಮಳವಳ್ಳಿ.
ಗುಂಡ್ಲಪೇಟೆ	...	...	ಗುಂಡ್ಲಪೇಟೆ.
ಕೋಟೆಕೆರೆ ದಾಖಲೆ ಗ್ರಾಮ ಜೋಗಯ್ಯನ ಹುಂಡಿ	...	...	ಡಿಟೋ
ನಿನಿಕಟ್ಟ	...	...	ಡಿಟೋ
ರಾಘವಪುರ	...	...	ಡಿಟೋ
ಹಂಪಾಪುರ	...	...	ಎಡತೊರೆ.
ಅಲಕೆರೆ ಅಗ್ರಹಾರ	...	...	ಡಿಟೋ
ಹೆಬ್ಬಾಳು	...	...	ಡಿಟೋ
ಪೆರಿಯಾಪಟ್ಟಣ	...	...	ಹುಣಸೂರು.
ಕನಗಲ	...	...	ಡಿಟೋ
ಅಲ್ಲಿಗೋಡಿನದಾಖಲೆ ಗ್ರಾಮ ಮಾದೇಶ್ವರನಗುಡಿ ಕೊಪ್ಪಲು	...	...	ಡಿಟೋ
ಹೊಸಹಳ್ಳಿ	...	...	ಶ್ರೀರಂಗಪಟ್ಟಣ.

ತಾರೀಖು 27ನೆ ಜನವರಿ 1909

ನಂ. 6970-ಸ್ಯಾ. 129-08-3, ತುಮುಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
ಶ್ರೀ ನರಸಿಹ್ಮಸ್ವಾಮಿ ಜಾತ್ರೆ ...	ಶೀಬಿ ...	ಸಿರಾ ...	6—2—09	23—2—09
ಶ್ರೀಗುರು ಗುಂಡಬ್ರಹ್ಮೇಶ್ವರ ಸ್ವಾಮಿ ಜಾತ್ರೆ.	ಪಾತನಾಯಕನಹಳ್ಳಿ ...	ಡಿಟೋ ...	26—1—09	3—2—09

1897ನೆ ವರ್ಷದ 2ನೆ ನಂಬರ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 27ನೆ ಜನವರಿ 1909.

ನಂ. 6977—ಸ್ಯಾನಿಟರಿ 129—08—4, ತುಮುಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕಿನ ಕ್ಯಾಮೇನಹಳ್ಳಿ ಗ್ರಾಮಕ್ಕೆ ಶ್ರೀ ಆಂಜನೇಯಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಜನವರಿ 28ನೆ ತಾರೀಖಿನಿಂದ ಫೆಬ್ರುವರಿ 5ನೆ ತಾರೀಖಿನ ವರೆಗೆ (ಉಭಯ ದಿನಗಳುಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 27ನೆ ಜನವರಿ 1909.

ನಂ. 6973—ಸ್ಯಾನಿಟರಿ 14-08-19, ಸಮಸ್ತ ಜನರ ತಿಳಿವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಕಬ್ಬಾಳಿ ...	ಹಾಸನ.	ಅಗ್ಗಡಲು ...	ಬೇಲೂರು
ಕೊರವಂಗಲ ...	ಡಿಟೋ	ಚನ್ನಾಪುರ ...	ಡಿಟೋ
ಹನುಮೇಗೌಡನ ಕೊಪ್ಪಲು	ಡಿಟೋ	ಗೊಲ್ಲರಹಟ್ಟಿ ...	ಅರಸೀಕೆರೆ.
ಅನಗುವಳ್ಳಿ ...	ಡಿಟೋ	ಜಾಜೂರು ...	ಡಿಟೋ
ಬೊಮ್ಮೇನಹಳ್ಳಿ ...	ಡಿಟೋ	ಕಾಳನಕೊಪ್ಪಲು ...	ಡಿಟೋ
ಇಬ್ಬಡನ ...	ಡಿಟೋ	ನಾಗರಹಳ್ಳಿ ...	ಡಿಟೋ
ಅತ್ತಿಹಳ್ಳಿ ...	ಡಿಟೋ	ಬಿಳಿಸಿಂಧ ...	ಚನ್ನರಾಯಪಟ್ಟಣ
ಶಂಖದಹೊಸಹಳ್ಳಿ ...	ಡಿಟೋ	ಸಿವರ ...	ಡಿಟೋ
ಕಕ್ಕೆಹಳ್ಳಿ ...	ಡಿಟೋ	ಗೌಡಗೆರೆ ...	ಡಿಟೋ
ಕಲ್ಯಾಣಪುರ ...	ಬೇಲೂರು.	ಮೊರಾಸು ...	ಆಲೂರು ಸಬ್ ತಾ||
ತಟ್ಟೆಹಳ್ಳಿ ...	ಡಿಟೋ	ಹುಣಸವಳ್ಳಿ ...	ಡಿಟೋ
ಹಂಬಿಹಳ್ಳಿ ...	ಡಿಟೋ	ಕೊರುಗನಹಳ್ಳಿ ...	ಡಿಟೋ
ಪಂಡಿತನಹಳ್ಳಿ ...	ಡಿಟೋ	ಆಲ್ಲೂರು ...	ಡಿಟೋ
ಹಡಗೆರೆ ...	ಡಿಟೋ	ಶಾಮದಾಳೆ ...	ಡಿಟೋ
ಜೋಡಿಕಲ್ಲಹಳ್ಳಿ ...	ಡಿಟೋ	ಮೊರಾಸಿನಕೊಪ್ಪಲು ...	ಡಿಟೋ

ತಾರೀಖು 27ನೆ ಜನವರಿ 1909.

ನಂ. 6975—ಸ್ಯಾನಿಟೆರಿ 14-08-20, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುವು.

ಸ್ಥಳ.	ತಾಲ್ಲೂಕು.
ಹೊನ್ನೇನಹಳ್ಳಿ	ಹಾಸನ.
ಕೊಂಡಜ್ಜಿ	ಡಿಟೋ
ಹೊಸಹಳ್ಳಿ	ಅರಸಿಕೆರೆ.
ಕರೆಕೆರೆ	ಡಿಟೋ
ದೇವಸ್ಥಾನದ ಕಾಳನಹಳ್ಳಿ	ಚನ್ನರಾಯಪಟ್ಟಣ.
ನಂಬಿಹಳ್ಳಿ	ಡಿಟೋ

ತಾರೀಖು 27ನೆ ಜನವರಿ 1909.

ನಂ. 6979—ಸ್ಯಾನಿಟೆರಿ 131-08-3, ಕೋಲಾರ ಡಿಸ್ಟ್ರಿಕ್ಟು ಶಿಡ್ಲಘಟ್ಟ ತಾಲ್ಲೂಕಿನ ತಲಕಾಯಲಬೆಟ್ಟಕ್ಕೆ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಫೆಬ್ರವರಿ 5ನೆ ತಾರೀಖಿನಿಂದ ಫೆಬ್ರವರಿ 13ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 25ನೆ ಜನವರಿ 1909.

ನಂ. 6866—ಸ್ಯಾನಿಟೆರಿ 61-08-70, ಘನವೆತ್ತ ಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರವರ 1909ನೆ ಜನವರಿ 18ನೆ ತಾರೀಖಿನ 31—ಪಿ. 33—ಪಿ. 37—ಪಿ. ನೆ ನಂಬರ್ ಇಂಡಾರ್ಸ್ಮೆಂಟನೊಡನೆ ಬಂದ ಮದ್ರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್ನಾಮೆಗಳನ್ನು ಸಮಸ್ತರ ತಿಳುವಳಿಕೆ ಬಗ್ಯೆ ಪ್ರಕಟಿಸಿ ಇರುತ್ತೆ.

ತಂಜಾವೂರು ಡಿಸ್ಟ್ರಿಕ್ಟು ಕುಂಭಕೋಣ ತಾಲ್ಲೂಕು ಕುಂಭಕೋಣದಲ್ಲಿ ನಡಿಯುವ ಮಹಾ ಮಾಘಂ ಉತ್ಸವಕ್ಕೂ, ಮಹಾಮಾಘ ಕೆರೆಯಲ್ಲಿ ನಡಿಯುವ ತೆಪ್ಪೋತ್ಸವಕ್ಕೂ ಮತ್ತು ಈ ಉತ್ಸವಕಾಲದಲ್ಲಿ ಕುಂಭಕೋಣ ತಾಲ್ಲೂಕಿನ ಯಾವ ಪ್ರದೇಶದಲ್ಲಾಗಲಿ ದನಗಳ ಪರಿಷೆ ನಡಿಸಲ್ಪಟ್ಟಲ್ಲಿ ಅದಕ್ಕೂ, ಬಳ್ಳಾರಿ, ಕೊಯಿಮುತ್ತೂರು ನೀಲಗಿರಿ ಮತ್ತು ಸೇಲಂ ಡಿಸ್ಟ್ರಿಕ್ಟುಗಳ ಪೈಕಿ ಪ್ಲೇಗು ವ್ಯಾಧಿಯ ಸೋಂಕು ತಗಲಿರುವ ತಾಲ್ಲೂಕುಗಳಿಂದಲೂ, ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟು ಮಂಗಳೂರು ಮ್ಯುನಿಸಿಪಾಲಟಿಯಿಂದಲೂ, ಮೈಸೂರು ಸೀಮೆ ಮತ್ತು ಪ್ಲೇಗು ವ್ಯಾಧಿಯ ಸೋಂಕು ಇರುವದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ ಬರತಕ್ಕ ಜನರನ್ನು ಅಲ್ಲಿಗೆ ಹೋಗುವದಕ್ಕೆ ಬಿಟ್ಟರೆ ಅಲ್ಲಿ ಪ್ಲೇಗು ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾಸಮೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಭಾಸಮೇತರಾದ ಗವರ್ನರವರು ಕುಂಭಕೋಣದ ತಾಲ್ಲೂಕಿನ ಯಾವ ಪ್ರದೇಶದಲ್ಲಾಗಲಿ ದನಗಳ ಪರಿಷೆ ನಡಿಯಕೂಡದೆಂದುನ್ನೂ ಮೇಲ್ಕಂಡ ಉತ್ಸವಕ್ಕೆ ಸದರಿ ಸ್ಥಳಗಳಿಂದ ಯಾರೂ 1909ನೆ ಇಸವಿ ಫೆಬ್ರವರಿ 10ನೆ ತಾರೀಖು ಲಾಗಾಯಿತು ಮಾರ್ಚಿ 10ನೆ ತಾರೀಖು ವರಿಗೆ (ಉಭಯ ದಿನಗಳೂ ಸೇರಿ) ಹೋಗಕೂಡದೆಂದುನ್ನೂ ನಿರೋಧಿಸುವದಲ್ಲದೆ ಸದರಿ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್ವೆ ಸ್ಟೇಷನ್‌ಗಳಲ್ಲಿ ರೈಲ್ ಮಾರ್ಗವಾಗಿ ಪ್ರಯಾಣ ಮಾಡಬೇಕೆಂದಿರುವವರಿಗೂ ಯಾ ಪ್ರಯಾಣ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ:—

ಈ ಸ್ಟೇಷನ್‌ಗಳಿಂದ:—ದಕ್ಷಿಣ ಇಂಡಿಯನ್ ರೈಲ್ವೆಯ ಕ್ರಿಷ್ಣಗಿರಿ, ಮಂಗಳೂರು ಮತ್ತು ಮೆಟು ಪಾಳ್ಯಂ; ನೀಲಗಿರಿ ರೈಲ್ವೆಯ ಕುನ್ನೂರು, ಕೇಟಿ ಮತ್ತು ವೆಲ್ಲಿಂಗ್ಟನ್; ಮದ್ರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಕೊಟ್ಟೂರು, ಬೇವೂರು, ಮಾಳವಿ, ಹಗರಿಬೊಮ್ಮನಹಳ್ಳಿ, ಗುಡುಪಲ್ಲಿ, ಕುಪ್ಪಂ, ಮುಳಾನೂರು ಮತ್ತು ಪಾಚಕೂರು.

ಈ ಕೆಳಗೆ ಕಂಡ ಸ್ಟೇಷನ್‌ಗಳಿಗೆ:—ದಕ್ಷಿಣ ಇಂಡಿಯನ್ ರೈಲ್ವೆಯ ನೀಡಾಮಂಗಲ, ಕೊರಡಚೆರಿ, ಷಿಯಾಲಿ, ವೈದೀಶ್ವರನ್ ಕೊಯಿಲ್, ಅರಕಾಂಡವಪುರಂ, ಮಾಯಪುರಂ, ಕುತ್ತಾಲಂ, ನರಸಿಂಗನಪೇಟೆ, ಅಡುತುರೈ, ತಿರುವಡಮರದೂರು, ಕುಂಭಕೋಣಂ, ದಾರಾಸುರಂ, ಸುಂದರಪೆರುಮಾಳ್ ಕೊಯಿಲ್, ಪಾಪನಾಶಂ, ಪಂಡಾರವಾಡೈ, ಅದ್ಯಾಂಪೇಟೆ, ತಿಟ್ಟೈ ಮತ್ತು ತಂಜಾವೂರು.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಉತ್ಸವಕ್ಕೆ ಹೋಗತಕ್ಕವರನ್ನು ವಾಪಸ್ ಕಳುಹಿಸುತ್ತೆ.

ಇಸ್ತಿಹಾರ್ನಾಮೆ.

ಉತ್ತರ ಆರ್ಕಾಟು ಡಿಸ್ಟ್ರಿಕ್ಟ್ ಕಾಳಹಸ್ತಿ ಡಿವಿಜರ್ನಿಗೆ ಸೇರಿದ ಕಾಳಹಸ್ತಿಯಲ್ಲಿ ನಡಿಯುವ ಬ್ರಹ್ಮೋತ್ಸವ ಅಥವಾ ಮಹಾಶಿವರಾತ್ರಿ ಉತ್ಸವಕ್ಕೆ, ಬಳ್ಳಾರಿ, ಕೊಯಮುತ್ತೂರು, ಸೇಲಂ ಮತ್ತು ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟುಗಳ ಪೈಕಿ ಪ್ಲೇಗ್ ವ್ಯಾಧಿಯ ಸೋಂಕು ತಗಲಿರುವ ತಾಲ್ಲೂಕುಗಳಿಂದಲೂ, ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳಿಂದಲೂ, ಮತ್ತು ಪ್ಲೇಗ್ ವ್ಯಾಧಿಯ ಸೋಂಕು ಇರುವದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ ಜನರನ್ನು ಅಲ್ಲಿಗೆ ಹೋಗುವದಕ್ಕೆ ಬಿಟ್ಟರೆ ಅಲ್ಲಿ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾಸಮೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾಗಿರುವ ಅಧಿಕಾರಗಳನ್ನು ಚಲಾಯಿಸುವಲ್ಲಿ ಸಭಾಸಮೇತರಾದ ಗವರ್ನರವರು ಮೇಲ್ಕಂಡ ಉತ್ಸವಕ್ಕೆ ಸದರಿ ಜಾಗಾಗಳಿಂದ ಯಾರೂ 1909ನೆ ಫೆಬ್ರುವರಿ 9ನೆ ತಾರೀಖು ಲಾಗಾಯಿತು 22ನೆ ತಾರೀಖು ವರಿಗೆ (ಉಭಯ ದಿನಗಳೂ ಸೇರಿ) ಹೋಗಕೂಡದೆಂದು ನಿರೋಧಿಸಿರುವದಲ್ಲದೆ, ಸದರೀ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್ವೆ ಸ್ಟೇಷನ್‌ಗಳಲ್ಲಿ ರೈಲ್ ಮಾರ್ಗವಾಗಿ ಪ್ರಯಾಣ ಮಾಡಬೇಕೆಂದಿರುವವರಿಗೂ, ಯಾ ಪ್ರಯಾಣ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ:—

ಈ ಸ್ಟೇಷನ್‌ಗಳಿಂದ :—ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿ, ಕೃಷ್ಣಗಿರಿ, ಮಂಗಳೂರು ಮತ್ತು ಮೆಟ್ಟುಪಾಳ್ಯಂ, ನೀಲಗಿರಿ ರೈಲ್ವೆಯಲ್ಲಿ ಕುನ್ನೂರು, ಕೇಟಿ ಮತ್ತು ವೆಲ್ಲಿಂಗ್‌ಟನ್ ; ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯಲ್ಲಿ ಕೊಟೂರು, ಬೇವೂರು ಮಾಳವಿ, ಹಗರಿಬೊಮ್ಮನಹಳ್ಳಿ, ಗುಡುಪಲ್ಲಿ, ಕುಪ್ಪಂ, ಮುಳಾನೂರು ಮತ್ತು ಪಾಚೂರು.

ಈ ಕೆಳಗೆ ಕಂಡ ಸ್ಟೇಷನ್‌ಗಳಿಗೆ :—ಮದ್ರಾಸು ಮತ್ತು ದಕ್ಷಿಣ ಮರಾಟಾ ರೈಲಿನಲ್ಲಿ ಪುಡಿ, ಮಾಮಂಡೂರು, ತಿರುಪತಿ ವೆಸ್ಟ್, ತಿರುಪತಿ ಈಸ್ಟ್, ಕಿರುತ್ತಣ್ಣೂರು, ರೇಣಿಗುಂಟೆ, ಎರ್ರಪೇಡು ಕಾಳಹಸ್ತಿ, ಎಳ್ಳಕಾರು, ವೆಂಕಟಗಿರಿ ಮತ್ತು ವೆಂದೋಡು.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಉತ್ಸವಕ್ಕೆ ಹೋಗತಕ್ಕವರನ್ನು ವಾಪಸು ಕಳುಹಿಸುತ್ತೆ.

ಇಸ್ತಿಹಾರ್‌ನಾಮೆ.

ಮಧುರಾ ಡಿಸ್ಟ್ರಿಕ್ಟು ರಾಮನಾಡು ಡಿವಿಜನ್ ರಾಮೇಶ್ವರದಲ್ಲಿ ನಡಿಯುವ ತೈ ಉತ್ಸವಕ್ಕಾಗಿ, ಕೊಯಿಮುತ್ತೂರು, ನೀಲಗಿರಿ, ಸೇಲಂ ಮತ್ತು ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟುಗಳ ಪೈಕಿ ಪ್ಲೇಗ್ ವ್ಯಾಧಿಯ ಸೋಂಕು ತಗಲಿರುವ ತಾಲ್ಲೂಕುಗಳಿಂದಲೂ, ಮೈಸೂರು ಸೀಮೆಯಿಂದಲೂ, ಪ್ಲೇಗು ವ್ಯಾಧಿಯ ಸೋಂಕು ಇರುವದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ ಜನರನ್ನು ಅಲ್ಲಿಗೆ ಹೋಗುವದಕ್ಕೆ ಬಿಟ್ಟರೆ ಅಲ್ಲಿ ಪ್ಲೇಗ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾ ಸಮೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಸಭಾಸಮೇತರಾದ ಗವರ್ನರವರು 1909ನೆ ಇಸವಿ ಜನವರಿ 15ನೆ ತಾರೀಖು ಲಾಗಾಯಿತು 30ನೆ ತಾರೀಖು ವರಿಗೆ (ಉಭಯ ದಿನಗಳೂ ಸೇರಿ) ಸದರಿ ಸ್ಥಳಗಳಿಂದ ಸದರಿ ಉತ್ಸವಕೆ ಯಾರೂ ಹೋಗಕೂಡದೆಂದು ನಿರೋಧಿಸಿರುವದಲ್ಲದೆ, ಸದರಿ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್ವೆ ಸ್ಟೇಷನ್‌ಗಳಲ್ಲಿ ರೈಲ್ ಮಾರ್ಗವಾಗಿ ಪ್ರಯಾಣ ಮಾಡಬೇಕೆಂದಿರುವವರಿಗೂ, ಯಾ ಪ್ರಯಾಣ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ.

ಈ ಸ್ಟೇಷನ್‌ಗಳಿಂದ.—ಮದ್ರಾಸು ಮತ್ತು ದಕ್ಷಿಣ ಮರಾಟಾ ರೈಲ್ವೆಯ ಗುಡುಪಲ್ಲಿ, ಕುಪ್ಪ, ಮುಳಾನೂರು ಮತ್ತು ಪಾಚೂರು, ದಕ್ಷಿಣ ಇಂಡಿಯನ್ ರೈಲ್ವೆಯ ಕ್ರಿಷ್ಣಗಿರಿ, ಮೆಟ್ಟುಪಾಳ್ಯಂ ಮತ್ತು ಮಂಗಳೂರು ; ನೀಲಗಿರಿ ರೈಲ್ವೆಯ ಕೇಟಿ, ಕುನ್ನೂರು ಮತ್ತು ವೆಲ್ಲಿಂಗ್‌ಟನ್.

ಈ ಕೆಳಗೆ ಕಂಡ ಸ್ಟೇಷನ್‌ಗಳಿಗೆ.—ದಕ್ಷಿಣ ಇಂಡಿಯನ್ ರೈಲ್ವೆಯ ಮಧುರಾ, ಈಸ್ಟ್, ಸಿಲೆಮಾನ್, ತಿರಪ್ಪುವನಂ, ತಿರುಪ್ಪಚೆಟ್ಟಿ, ಮನಮದುರೈ, ಪಾರ್ತಿಪನ್ನೂರು, ಪರಮಗುಡಿ, ಸಂಡಿರ್ಕನ್‌ಮೊಮಿ, ಶಕ್ತಿರಕುಡಿ, ರಾಮನಾಡು, ವಾಳಂತರವಾಯಿ, ಉಚ್ಚಿಪುಳಿ, ಮಂಟಪಮ್, ಪಾಂಬನ್‌ಬ್ರೀಜ್, ದಾರ್ಬನ್, ತಂಗಚಿಮಡಮ್ ಮತ್ತು ರಾಮೇಶ್ವರ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಉತ್ಸವಕ್ಕೆ ಹೋಗತಕ್ಕವರನ್ನು ವಾಪಸ್ ಕಳುಹಿಸುತ್ತೆ.

ತಾರೀಖು 3ನೆ ಫೆಬ್ರುವರಿ 1909.

ನಂ. 7232—ಸ್ಯಾನಿಟರಿ 131-08-5, ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಗೆ ನಂದಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಫೆಬ್ರುವರಿ 18ನೆ ತಾರೀಖಿನಿಂದ 1909ನೆ ಇಸವಿ ಫೆಬ್ರುವರಿ 26ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 1ನೆ ಫೆಬ್ರುವರಿ 1909.

ನಂ. 7129—ಸ್ಯಾನಿಟೆರಿ 61-08-72, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಮಹಾಶಿವರಾತ್ರಿ ಉತ್ಸವ.	ನೆರಬ್ಬೈಲು ಕಾಡಿನಲ್ಲಿರುವ ತಲಕೋನ.	ವಾಯಲ್ಪಾಡು.	ಕಡಪ	14—2—09	22—2—09	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ 1909ನೆ ಇಸವಿ ಜನವರಿ 23ನೆ ಮಾರ್ಕುಂ 49ನೆ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 3ನೆ ಫೆಬ್ರುವರಿ 1909.

ನಂ. 7230—ಸ್ಯಾನಿಟೆರಿ 76-08—41, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲಡುವವು.

ಸ್ಥಳ.	ತಾಲ್ಲೂಕು.
ವಡ್ಡರಪಾಳ್ಯ	ಎಳಂದೂರು.
ಸರ್ವಮಾನ್ಯ ಹರಕೆರೆ	ಎಡತೊರೆ.
ಎಡತೊರೆ	ಡಿಟ್ಟೋ
ದೋರನಹಳ್ಳಿ	ಡಿಟ್ಟೋ
ಬೆಳ್ಳಳ್ಳಿ	ಡಿಟ್ಟೋ
ಕಾಡಹಳ್ಳಿ	ಚಾಮರಾಜನಗರ.

ಕೊಡಗು ದೇಶದ ಹಜರತ್ ಚೀಫ' ಕಮಿಷನರ್ ಸಾಹೇಬರವರು.

ಇಸ್ತಿಹಾರ್ನಾಮೆ.

ತಾರೀಖು 23ನೆ ಜನವರಿ ಸನ 1909ನೆ ಇಸವಿ.

ನಂಬರು 11. ಕೊಡಗು ದೇಶದ ಕಿಗ್ಗಟ್ಟು ನಾಡು ತಾಲ್ಲೂಕು ತಾವಲಗೆರಿ ಮೂರ್ನಾಡು ಕುರ್ಚಿ ಗ್ರಾಮದಲ್ಲಿ ಬರುವ ಮಹಾಶಿವರಾತ್ರಿ ಸಮಯದಲ್ಲಿ ನಡಿಯುವ ಇರುಪು ಜಾತ್ರೆಗೆ ಮೈಸೂರು ಮತ್ತು ಪ್ಲೇಗ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ ಚೀಫ' ಕಮಿಷನರ ಸಾಹೇಬರವರು ತಿಳಿಯುವದ್ದರಿಂದ, ಸನ 1897ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸನ 1909ನೆ ಇಸವಿ ಫೆಬ್ರುವರಿ 18 ಮತ್ತು 19ನೆ ತಾರೀಖುಗಳಲ್ಲಿ ಸದರೀ ಜಾತ್ರೆಗೆ ಮೈಸೂರು ಮತ್ತು ಪ್ಲೇಗ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ತಾರೀಖು 23ನೆ ಜನವರಿ 1909.

ನಂ. ರೆ. 5151—ಲ್ಯಾ. ರೆ. 22—08—58, ಸ್ಟ 1894ನೆ ಇಸವಿ 7ನೆ ನಂಬರ್ ರೆಗ್ಯುಲೇಷರ್ ಆದ ಲ್ಯಾಂಡ್ ಅಕ್ವಿಸಿಷರ್ ರೆಗ್ಯುಲೇಷರ್ 6ನೆ ಸೆಕ್ಷರ್ ಪ್ರಕಾರ ಮೈಸೂರು ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಎಡವನಹಳ್ಳಿ ಗ್ರಾಮ ಬಡಾವಣೆ ಬಗ್ಯೆ ಈ ಕೆಳಗೆಕಂಡ ಜಮೀನುಗಳು ಬೇಕಾಗಿರುತ್ತೆ. ಮತ್ತು ಸದರಿ ರೆಗ್ಯುಲೇಷನ್ನಿನ 7 ಮತ್ತು 3 (c) ಸೆಕ್ಷರ್‌ಗಳ ಪ್ರಕಾರ ನಂಜನಗೂಡು ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರಿಗೆ ಸದರಿ ಜಮೀನುಗಳನ್ನು ತೆಗದುಕೊಳ್ಳಲು ಅಧಿಕಾರ ಕೊಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ ಅಥವಾ ಅನುಭವದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯಿತಿ ಇವುಗಳಲ್ಲಿ ಯಾವುದು?	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಹಾಲಿ ಬೇಕಾದ್ದರ ತಖ್ತೆಲು.		ಚಾತುರ್ಸೀಮೆ.			
											ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ಎ.	ಎ. ಗು.	ರೂ.	ಎ. ಗು.	ರೂ. ಆ.				
ಮೈಸೂರು	ಗುಂಡ್ಲುಪೇಟೆ	ಬೇಗೂರು	ಎಡವನಹಳ್ಳಿ ದಾಖಲೆ ಕೊತ್ತನೂರು ಕಂಡಿ	ತಮ್ಮಡಿ ಲಿಂಗೈಯ.	1	ಖುಷ್ಕಿ	3 30	0	3 30	2	3 30	2 0	ಸರ್ವೆ 2ನೆ ನಂ.	ದಾರಿ	ಸರ್ವೆ 13ನೆ ನಂಬರು	ಗ್ರಾಮನಿವೇಶನ
				ಮಾದಾ ಉರಫ್ ತಿಮ್ಮ.	317	ಡಿಟೋ	5 2	3	4 39	3	0 20	0 5	ದಾರಿ	ಸರ್ವೆ 319ನೆ ನಂಬರು	ಸರ್ವೆ 318ನೆ ನಂಬರು	ಸರ್ವೆ 317ನೆ ನಂಬರು

ತಾರೀಖು 25ನೆ ಜನವರಿ 1909.

ನಂ. ರೆ. 5248—ಲ್ಯಾ. ರೆ. 27—08—18, ಸ್ಟ 1894ನೆ ಇಸವಿಯ VIIನೆ ಮಸೂದೆ ಮೈಸೂರು ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:— ಈ ಕೆಳಗೆ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ ಬೆಂಕೀಪುರದಲ್ಲಿ ಫಾರೆಸ್ಟು ರೇಂಜ್ ಆಫಿಸರವರಿಗೋಸ್ಕರ ಒಂದು ಬಂಗಲೆಯನ್ನು ಕಟ್ಟತಕ್ಕ ಬಗ್ಯೆ ಅವಶ್ಯವಾಗಿರುವದರಿಂದ, ಸದರಿ ಜಮೀನನ್ನು ಸರ್ಕಾರಕ್ಕೆ ಅಕ್ವಯಿರ್ ಮಾಡಿಕೊಳ್ಳಲು ಆರ್ಡರು ಪಡಿಯತಕ್ಕ ಬಗ್ಯೆ ಶಿವಮೊಗ್ಗ ಸಬ್ ಡಿವಿಜರ್ ಅಸಿಸ್ಟೆಂಟ್ ಕಮಿಷನರವರಿಗೆ ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c)ನೆ ಪ್ರಕರಣಗಳನ್ನು ಅನುಸರಿಸಿ ಅಧಿಕಾರವನ್ನು ಕೊಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಅನುಭವದಾರನ ಹೆಸರು.	ಸರ್ವೆ ನಂಬರು.	ಅಕ್ವಯಿರ್ ಮಾಡಬೇಕಾದ ಜಮೀನಿನ ವಿವರ.			ಅಕ್ವಯಿರು ಮಾಡಬೇಕಾದ ವಿಸ್ತೀರ್ಣ.	ಚಕ್ಕುಬಂದಿ.			
						ತರಹೆ.	ವಿಸ್ತೀರ್ಣ.	ಅಕಾರ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ.	ಎ.				
ಶಿವಮೊಗ್ಗ	ಶಿವಮೊಗ್ಗ	ಬೆಂಕಿಪುರ	ಬೆಂಕಿಪುರ	ಸುಲೇಮಾನ್‌ಸಾಬಿ ...	189	ಖುಷ್ಕಿ	ಸಾಗು 2 9 ಖರಾಬ್ 2 32	2	1	ತರೀಕೆರೆ ರಸ್ತೆ	ಭದ್ರಾನದಿ	ಸರ್ವೆ ನಂಬರು 199 ಮತ್ತು ಟ್ರಾವಲರ್ಸ್ ಬಂಗಲೆ	ಸರ್ವೆ ನಂಬರು 218 ಮತ್ತು ರೈಲ್ವೆ ರಸ್ತೆ

ತಾರೀಖು 25ನೆ ಜನವರಿ 1909.

ನಂ. ಫೈ. 3230—ಬ್ಯಾಂಕಿಂಗ್. 21-08-5, ಮೈಸೂರು ಸರ್ಕಾರಿ ಲೈಫ್ ಇನ್ಷ್ಯೂರೆನ್ಸ್ ನಿಬಂಧನೆಗಳ ಪೈಕಿ 19ನೆ ನಿಬಂಧನೆಗೆ ಈ ಕೆಳಗೆ ಸೂಚಿಸುವುದನ್ನು ಸೇರಿಸಬೇಕೆಂದು ಶ್ರೀಮನ್ ಮಹಾರಾಜ ರಾಜಾಸಾಹೇಬ್ಬಹದ್ದೂರ್ರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ :—

"ಇನ್ಷ್ಯೂರ್ ಮಾಡಬೇಕೆಂದಿರುವ ದರಖಾಸ್ತುದಾರನು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್ರವರ ಅರಮನೆ ಸಿಬ್ಬಂದಿಗೆ ಸೇರಿದ ನೌಕರನಾಗಿದ್ದರೆ ಅರಮನೆ ಮೆಡಿಕಲ್ ಆಫಿಸರವರು ನಡೆಸುವ ಆತನ ಪರೀಕ್ಷೆಯು ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರವರ ಅಭಿಪ್ರಾಯವಿಲ್ಲದೆಯೇ ಅಂಗೀಕರಿಸಲ್ಪಡತಕ್ಕದ್ದು; ಪರಂತು ಸದರೀ ಅರಮನೆಯ ಮೆಡಿಕಲ್ ಆಫಿಸರವರು ಸಿವಿಲ್ ಸರ್ಜನ್ ಹುದ್ದೆಯವರಾಗಿರತಕ್ಕದ್ದು.

ತಾರೀಖು 26ನೆ ಜನವರಿ 1909.

ನಂ. ಫೈ. 3267—ಎಸ್. ಆರ್. 97-08, 1908ನೆ ಡಿಸೆಂಬರ್ 8ನೆ ಮುರ್ಕ್ಕಂ ಫೈ. 2635ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಅಪ್ಪಣೆ ಮಾಡಿದ್ದ ಏರ್ಪಾಡಿಗೆ ಬ್ರತಿಯಾಗಿ ಜಗಲೂರು ತಾಲ್ಲೂಕು ಅಮಲ್ದಾರ್ ಮಿ|| ಮಹಮ್ಮದ್ ಅಬ್ದುಲ್ಲಾ ಷರೀಫ್‌ರವರನ್ನು ತುಮಕೂರು ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರಾಗಿ ನೌಕರರೂರ್ಮಾಡಿ ಇರುತ್ತದೆ.

ತಾರೀಖು 25ನೆ ಜನವರಿ 1909.

ನಂ. ರೆ. 5264—ಲ್ಯಾ. ರೆ. 39-08-30, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಹೊಳಲಕೆರೆ ತಾಲ್ಲೂಕು ಬೋರೆನಹಳ್ಳಿ ಗ್ರಾಮದ ಗಾವಠಾಣೆಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದಾವಣಗೆರೆ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಅಥವಾ ಅನುಭೋಗಿಯ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಅಥವಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಅಳೆದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಚಿತ್ರದುರ್ಗ	ಹೊಳಲಕೆರೆ	ತಾಳ್ಯ	ಬೋರೇನಹಳ್ಳಿ	ಮತ್ತಿ ಬರ್ ಲಿಂಗಪ್ಪ	ಸರ್ವೆ ನಂ. 1	ಖುಷ್ಕಿ ಜಮೀನು	ಎ. ಗು. 12 3	ಎ. ಗು. 12 3	ರೂ. ಪೈ. 12 0	ಎ. ಗು. 12 3 ಪೂರಾ ನಂಬರು	12 ರೂಪಾಯಿ.	ಸರ್ವೆ ನಂಬರು 20—21ನೆ ಜಮೀನು	ಬಂಡಾಪುರದ ಗಡಿ	ಸರ್ವೆ ನಂಬರು 18ನೆ ಜಮೀನು	ಸರ್ವೆ ನಂಬರು 2ನೆ ಜಮೀನು

ಹುಕುಂ ಬಮೋಜಿಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 6.

ಬೆಂಗಳೂರು, ಗುರುವಾರ, ಫೆಬ್ರವರಿ ತಾ|| 11, ಸ‌ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸ್ಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ .

ತಾರೀಖು 26ನೆ ಜನವರಿ 1909.

ನಂ. 6907—ಸ್ಯಾನಿಟರಿ 76—08–39, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ವ್ಯಾಧ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21–96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ			ತಾಲ್ಲೂಕು.
ಕೆಬ್ಬೆಪುರ	...	...	ಚಾಮರಾಜನಗರ.
ಇನಾಂಹೆಗ್ಗೂರು	...	...	ಮಳವಳ್ಳಿ.
ಗುಂಡ್ಲಪೇಟೆ	...	...	ಗುಂಡ್ಲಪೇಟೆ.
ಕೋಟೆಕೆರೆ ದಾಖಲೆ ಗ್ರಾಮ ಜೋಗಯ್ಯನ ಹುಂಡಿ	...	...	ಡಿಟೋ
ನಿಸಿಕಟ್ಟೆ	...	...	ಡಿಟೋ
ರಾಘವಪುರ	...	...	ಡಿಟೋ
ಹಂಪಾಪುರ	...	...	ಎಡತೊರೆ.
ಆಲಕೆರೆ ಅಗ್ರಹಾರ	...	...	ಡಿಟೋ
ಹೆಬ್ಬಾಳು	...	...	ಡಿಟೋ
ಪೆರಿಯಾಪಟ್ಟಣ	...	...	ಹುಣಸೂರು.
ಕನಗಲ	...	...	ಡಿಟೋ
ಅಲ್ಲಿಗೋಡಿನದಾಖಲೆ ಗ್ರಾಮ ಮಾದೇಶ್ವರನಗುಡಿ ಕೊಪ್ಪಲು	...	...	ಡಿಟೋ
ಹೊಸಹಳ್ಳಿ	...	...	ಶ್ರೀರಂಗಪಟ್ಟಣ.

ತಾರೀಖು 27ನೆ ಜನವರಿ 1909.

ನಂ. 6973—ಸ್ಯಾನಿಟೆರಿ 14-08-19, ಸಮಸ್ತ ಜನರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟವೆ.

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
ಕಬ್ಬಾಲಿ	...	ಹಾಸನ.	ಅಗ್ಗಡಲು	...	ಬೇಲೂರು
ಕೊರವಂಗಲ	...	ಡಿಟೋ	ಚನ್ನಾಪುರ	...	ಡಿಟೋ
ಹನುಮೇಗೌಡನ ಕೊಪ್ಪಲು		ಡಿಟೋ	ಗೊಲ್ಲರಹಟ್ಟಿ	...	ಅರಸೀಕೆರೆ
ಅನಗುವಳ್ಳಿ	...	ಡಿಟೋ	ಜಾಜೂರು	...	ಡಿಟೋ
ಬೊಮ್ಮೇನಹಳ್ಳಿ	...	ಡಿಟೋ	ಕಾಳನಕೊಪ್ಪಲು	...	ಡಿಟೋ
ಇಬಡನ	...	ಡಿಟೋ	ನಾಗರಹಳ್ಳಿ	...	ಡಿಟೋ
ಅತ್ತಿಹಳ್ಳಿ	...	ಡಿಟೋ	ಬಿಲಸಿಂಧ	...	ಚನ್ನರಾಯಪಟ್ಣ
ಶಂಬದಹೊಸಹಳ್ಳಿ	...	ಡಿಟೋ	ಸಿವರ	...	ಡಿಟೋ
ಕಕ್ಕೆಹಳ್ಳಿ	...	ಡಿಟೋ	ಗೌಡಗೆರೆ	...	ಡಿಟೋ
ಕಲ್ಯಾಣಪುರ	...	ಬೇಲೂರು.	ಮೊರಾಸು	...	ಆಲೂರು ಸಬ್ ತಾ||
ತಟ್ಟೆಹಳ್ಳಿ	...	ಡಿಟೋ	ಹುಣಸವಳ್ಳಿ	...	ಡಿಟೋ
ಹಂಬಿಹಳ್ಳಿ	...	ಡಿಟೋ	ಕೊರುಗನಹಳ್ಳಿ	...	ಡಿಟೋ
ಪಂಡಿತನಹಳ್ಳಿ	...	ಡಿಟೋ	ಆಲೂರು	...	ಡಿಟೋ
ಹಡ್ಲಗೆರೆ	...	ಡಿಟೋ	ಶಾವುದಾಳಿ	...	ಡಿಟೋ
ಜೋಡಿಕಲ್ಲಹಳ್ಳಿ	...	ಡಿಟೋ	ಮೊರಾಸಿನಕೊಪ್ಪಲು	...	ಡಿಟೋ

ತಾರೀಖು 27ನೆ ಜನವರಿ 1909.

ನಂ. 6975—ಸ್ಯಾನಿಟೆರಿ 14-08-20, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುವು.

ಸ್ಥಳ.				ತಾಲ್ಲೂಕು.
ಹೊನ್ನೇನಹಳ್ಳಿ	...	...	...	ಹಾಸನ.
ಕೊಂಡಜ್ಜಿ	...	...	...	ಡಿಟೋ
ಹೊಸಹಳ್ಳಿ	...	...	...	ಅರಸಿಕೆರೆ.
ಕರೆಕೆರೆ	...	...	...	ಡಿಟೋ
ದೇವಸ್ಥಾನದ ಕಾಲನಹಳ್ಳಿ	...	...	...	ಚನ್ನರಾಯಪಟ್ಣ.
ನಂಬಿಹಳ್ಳಿ	...	...	...	ಡಿಟೋ

ತಾರೀಖು 27ನೆ ಜನವರಿ 1909.

ನಂ. 6977—ಸ್ಯಾನಿಟೆರಿ 129—08—4, ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕಿನ ಕ್ಯಾಮೇನಹಳ್ಳಿ ಗ್ರಾಮಕ್ಕೆ ಶ್ರೀ ಆಂಜನೇಯಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಜನವರಿ 28ನೆ ತಾರೀಖಿನಿಂದ ಫೆಬ್ರವರಿ 5ನೆ ತಾರೀಖಿನ ವರೆಗೆ (ಉಭಯ ದಿನಗಳು ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 27ನೆ ಜನವರಿ 1909.

ನಂ. 6979—ಸ್ಯಾನಿಟೆರಿ 131–08–3, ಕೋಲಾರ ಡಿಸ್ಟ್ರಿಕ್ಟ್ ಶಿಡ್ಲಘಟ್ಟ ತಾಲ್ಲೂಕಿನ ತಲಕಾಯಲಬೆಟ್ಟಕ್ಕೆ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಫೆಬ್ರವರಿ 5ನೆ ತಾರೀಖಿನಿಂದ ಫೆಬ್ರವರಿ 13ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಫೆಬ್ರುವರಿ 1909.

ನಂ. 7230—ಸ್ಯಾನಿಟೇರಿ 76-08—41, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಷ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಮೂಲರಹಳ್ಳಿ	ಎಳಂದೂರು.
ಸರ್ವಮಾನ್ಯ ಹರಕೆರೆ	ಎಡತೊರೆ.
ಎಡತೊರೆ	ಡಿಟೋ
ದೋರನಹಳ್ಳಿ	ಡಿಟೋ
ಬೆಳ್ಳುಳ್ಳಿ	ಡಿಟೋ
ಕಾಡಹಳ್ಳಿ	ಚಾಮರಾಜನಗರ.

ತಾರೀಖು 3ನೆ ಫೆಬ್ರುವರಿ 1909.

ನಂ. 7232—ಸ್ಯಾನಿಟೇರಿ 131-08-5, ಕೋಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಗೆ ನಂದಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಫೆಬ್ರುವರಿ 18ನೆ ತಾರೀಖಿನಿಂದ 1909ನೆ ಇಸವಿ ಫೆಬ್ರುವರಿ 26ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಫೆಬ್ರುವರಿ 1909.

ನಂ. 7324—ಸ್ಯಾ. 131-08-6, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ.	ಗುಟ್ಟಹಳ್ಳಿ ...	ಬೌರಿಂಗ್‌ಪ್ಯಾಟೆ ...	5—2—09	18—2—09 ಉಭಯ ದಿನಗಳೂ ಸೇರಿ.
ಗಂಗಮ್ಮನ ಜಾತ್ರೆ ...	ಪೆದ್ದಪಲ್ಲಿ ...	ಡಿಟೋ ...	5—2—09	18—2—09 ಉಭಯ ದಿನಗಳೂ ಸೇರಿ.

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 6ನೆ ಫೆಬ್ರುವರಿ 1909.

ನಂ. 7366—ಸ್ಯಾನಿಟೇರಿ 98—08—4, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ

ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
ಶ್ರೀ ರಂಗನಾಥಸ್ವಾಮಿ ರಥೋತ್ಸವ.	ತಿರುಮಲೆ ...	ಮಾಗಡಿ ...	4—4—09	10—4—09 ಉಭಯ ದಿನಗಳೂ ಸೇರಿ.
ಶ್ರೀ ನರಸಿಹ್ಮಸ್ವಾಮಿ ರಥೋತ್ಸವ.	ಸುಗ್ಗನಹಳ್ಳಿ ...	ಡಿಟೋ ...	6—3—09	12—3—09 ಉಭಯ ದಿನಗಳೂ ಸೇರಿ.
ಶ್ರೀ ಚಂಪಕಧಾಮಸ್ವಾಮಿ ರಥೋತ್ಸವ.	ಬನ್ನೇರಘಟ್ಟ ...	ಆನೇಕಲ್ಲು ...	7—3—09	15—3—09 ಉಭಯ ದಿನಗಳೂ ಸೇರಿ.
ಶ್ರೀ ಮದ್ದೂರಮ್ಮನ ಜಾತ್ರೆ.	ಹುಸ್ಕೂರು ...	ಡಿಟೋ ...	12—3—09	16—3—09 ಉಭಯ ದಿನಗಳೂ ಸೇರಿ.

1897ನೆಯ ವರ್ಷದ 3ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 10ನೆ ಫೆಬ್ರವರಿ 1909.

ನಂ. 7704—ಸ್ಯಾನಿಟರಿ 76—08—43, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಸರಗೂರು	ಚಾಮರಾಜನಗರ.
ಲಾಲಂದೇವನಹಳ್ಳಿ	ಎಡತೊರೆ.

ತಾರೀಖು 10ನೆ ಫೆಬ್ರವರಿ 1909.

ನಂ. 7706—ಸ್ಯಾನಿಟರಿ. 42-08-4, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
ವೀರಭದ್ರ ದೇವರ ಜಾತ್ರೆ ...	ಕೊಟ್ಟಿದಗುಡ್ಡ ...	ಜಗಲೂರು ..	6—3—09	9—3—09
ಕಲ್ಲೇಶ್ವರ ದೇವರ ಜಾತ್ರೆ ...	ಕಲ್ಲೇದೇವರಪುರ ..	ಡಿಟೋ ...	9—4—09	12—4—09
ಕೋಣಚಕಲ್ ಗುಡ್ಡದ ರಂಗನಾಥ ದೇವರ ಜಾತ್ರೆ.	ಕೊರಟಕೆರೆ	ಡಿಟೋ ..	22—3—09	25—3—09
ಚೌಡಮ್ಮನ ಜಾತ್ರೆ ...	ಗುರುಸಿದ್ದಾಪುರ	ಡಿಟೋ ...	5—3—09	8—3—09
ರಂಗನಾಥದೇವರ ಜಾತ್ರೆ ...	ತರೆಹಳ್ಳಿ	ಡಿಟೋ ..	3—3—09	6—3—09

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ವ್ಯಾಧಿಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರ್ನಾಮೆ.

ತಾರೀಖು 23ನೆ ಜನವರಿ ಸರ್ 1909ನೆ ಇಸವಿ.

ನಂಬರು 11. ಕೊಡಗು ದೇಶದ ಕಿಗ್ಗಟ್ಟು ನಾಡು ತಾಲ್ಲೂಕು ತಾವಳಗೆರಿ ಮೂರ್ನಾಡು ಕುರ್ಚಿ ಗ್ರಾಮದಲ್ಲಿ ಬರುವ ಮಹಾ ಶಿವರಾತ್ರಿ ಸಮಯದಲ್ಲಿ ನಡೆಯುವ ಇರುಬು ಜಾತ್ರೆಗೆ ಮೈಸೂರು ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದರಿಂದ, ಸರ್ 1897ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸಾರ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸರ್ 1909ನೆ ಇಸವಿ ಫೆಬ್ರುವರಿ 18 ಮತ್ತು 19ನೆ ತಾರೀಖುಗಳಲ್ಲಿ ಸದರೀ ಜಾತ್ರೆಗೆ ಮೈಸೂರು ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧ ಪಡಿಸಿ ಇದೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವ ರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ತಾರೀಖು 27ನೆ ಜನವರಿ 1909.

ನಂ. 7005—ಮೆಡಿಕಲ್ 12-08-25, ಸರ್ 1908ನೆ ನವಂಬರ್ 18ನೆ ಮರ್ಕುಂ 4684—ಮೆಡಿಕಲ್ 12-08-21ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯ ಮೂಲಕ ತರೀಕೆರೆ ತಾಲ್ಲೂಕಿನಲ್ಲಿ ಇನಾಕ್ಯುಲೇಷನ್ ಕೆಲಸಕ್ಕಾಗಿ ಕಳುಹಿಸಲ್ಪಟ್ಟಿದ್ದ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಟಿ. ಎಸ್. ಸಿದ್ದಪ್ಪನವರನ್ನು ಮೆಡಿಕಲ್ ಇಲಾಖೆಗೆ ವಾಪಸ್ ಕರೆಸಿಕೊಂಡಪ್ರಯುಕ್ತ ಅವರನ್ನು 1909ನೆ ಜನವರಿ 8ನೆ ತಾರೀಖಿನ ಲಾಗಾಯಿತು ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡಲು ನೋಕರರನ್ನಾಗಿ ಮಾಡಿ ಇದೆ.

ತಾರೀಖು 27ನೆ ಜನವರಿ 1909.

ನಂ. 7028—ಮ್ಯುನಿಸಿಪಲ್ 41-06-142, ಸರ್ 1906ನೆ ಇಸವಿಯ 7ನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 7ನೆ ಪ್ರಕರಣದ ಮೇರೆಗೆ ತರೀಕೆರೆ ಟವನನ್ನು ಫಲಾನಾ ಸರಹದ್ದುಗಳುಳ್ಳ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿ ಇದೆ ಎಂಬದಾಗಿ ಸದರಿ ರೆಗ್ಯುಲೇಷನಿನ 6ನೆ ಪ್ರಕರಣದ ಮೇರೆಗೆ 1908ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಇಂಗ್ಲಿಷ್ ಗೆಜೆಟ್ಟಿನ 963ನೆ ಪುಟದಲ್ಲಿಯೂ, ಕನ್ನಡ ಗೆಜೆಟ್ಟಿನ 500ನೆ ಪುಟದಲ್ಲಿಯೂ ಪ್ರಸಿದ್ಧಿಪಡಿಸಿದುದಲ್ಲದೆ ತರೀಕೆರೆ ಟವನಿನ ಬಹಿರಂಗವಾದ ಸ್ಥಳಗಳಲ್ಲಿ ಚಿಕಟಾಯಿಸಿದುದರಿಂದಲೂ ಸದರೀ ಉದ್ದೇಶಕ್ಕೆ ಯಾವ ಆಕ್ಷೇಪಣೆಯೂ ಬಂದಿರುವುದಿಲ್ಲವಾದುದರಿಂದಲೂ, ಮೈಸೂರು ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದೂರವರು ಸದರೀ ರೆಗ್ಯುಲೇಷನಿನ 4 (1) ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸದರಿ ತರೀಕೆರೆ ಟವನನ್ನು ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಿ ಸದರೀ ಮ್ಯುನಿಸಿಪಾಲಿಟಿಯ ಎಲ್ಲೆಯು 1909ನೆ ಫೆಬ್ರುವರಿ ಗುರ್ರೆ ತಾರೀಖಿನ ದಿನವೂ ಆ ಅನಂತರವೂ ಮುಂದೆ ನಮೂದಿಸಿರುವ ಪ್ರಕಾರ ಇರಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ:—

ತರೀಕೆರೆ ಗ್ರಾಮದ 127ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯಲ್ಲಿ ಪೂರ್ವ ದಿಕ್ಕಿನ ಎಲ್ಲೆಯು ಪ್ರಾರಂಭವಾಗಿ ಮೇಲ್ಕಂಡ ಜಮೀನಿನ ಪೂರ್ವ ಭಾಗದಲ್ಲಿ ಉತ್ತರಾಭಿಮುಖವಾಗಿ ತಿರುಗಿ ಅಲ್ಲಿಂದ ಚಿಕ್ಕೆರೆ ಅಂಗಳದ ಕೊನೆಯಲ್ಲಿ ಹಾದು ಗಾಳಿಹಳ್ಳಿ ಗ್ರಾಮದ 50ನೆ ಜಮೀನಿನ ಪಶ್ಚಿಮ, ದಕ್ಷಿಣ ಮತ್ತು ಪೂರ್ವ ಭಾಗದಲ್ಲೂ ಮತ್ತು 57ನೆ ಸರ್ವೆ ನಂಬರಿನ ಪೂರ್ವ ದಿಕ್ಕಿನ ಎಲ್ಲೆಯ ಮೇಲೂ ಹಾದು, ಬೆಂಗಳೂರು-ಶಿವಮೊಗ್ಗಾ ರಸ್ತೆಯನ್ನೂ, ರೈಲ್ವೆ ರಸ್ತೆಯನ್ನು ದಾಟಿ ಬಸವನಹಳ್ಳಿ ಗ್ರಾಮದ ಸರ್ವೆ ನಂಬರು ನಾಲ್ಕನೇ ಜಮೀನಿನ ಈಶಾನ್ಯ ಮೂಲೆಯನ್ನು ಸೇರುತ್ತದೆ.

2. ಈ ಮೂಲೆಯಿಂದ ಉತ್ತರ ಸರಹದ್ದು ಪ್ರಾರಂಭವಾಗಿ ರೈಲ್ವೆ ರಸ್ತೆಯ ಮಾರ್ಗವಾಗಿ ತರೀಕೆರೆ ಗ್ರಾಮದ 4ನೆ ಸರ್ವೆ ನಂಬರಿನ ನೈರುತ್ಯ ಮೂಲೆಯ ವರೆಗೂ ಪಶ್ಚಿಮಾಭಿಮುಖವಾಗಿ ಹೊರಟು ನಂತರ ವಾಯುವ್ಯಕ್ಕೆ ತಿರುಗಿ ಹಳೇಕೋಟೆಯನ್ನು ತರೀಕೆರೆ ಗ್ರಾಮದ 13, 14, 15 ಮತ್ತು 19ನೆ ನಂಬರುಗಳನ್ನು ಆವರಿಸಿಕೊಂಡು ದೊಡ್ಡಕೆರೆಯ ಅಂಗಳದ ಎಲ್ಲೆಯ ಮಾರ್ಗವಾಗಿ ಹಾದು, ಅಲ್ಲಿಂದ ತರೀಕೆರೆ 18ನೆ ನಂಬರಿನ ಮತ್ತು ಮಾಚೇನಹಳ್ಳಿ 20ನೆ ನಂಬರಿನ ಉತ್ತರ ಸರಹದ್ದಿನಮೇಲೆ ಹೋಗಿ, ಕೊನೆಗೆ ರೈಲ್ವೆ ರಸ್ತೆಯನ್ನು ಪುನಹ ಸೇರಿ, ಅದರಮೇಲೆ ಹಾದು ಮಾಚೇನಹಳ್ಳಿ ಗ್ರಾಮದ 24ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ.

3. ಪಶ್ಚಿಮ ಸರಹದ್ದು ಈ ಸ್ಥಳದಿಂದ ಪ್ರಾರಂಭವಾಗಿ ರೈಲ್ವೆ ರಸ್ತೆಯನ್ನು ದಾಟಿ, ಮಾಚೇನಹಳ್ಳಿ ಗ್ರಾಮದ 101ನೆ ಸರ್ವೆ ನಂಬರಿನಮೇಲೆ ಹಾದು, ಶಿವಮೊಗ್ಗಾ-ಬೆಂಗಳೂರು ರಸ್ತೆಯನ್ನು ದಾಟಿ, ಮಾಚೇನಹಳ್ಳಿ ಗ್ರಾಮದ 10, 4 ಮತ್ತು 99ನೆ ಸರ್ವೆ ನಂಬರಿನ ಪಶ್ಚಿಮ ದಿಕ್ಕಿನ ಸರಹದ್ದಿನ ಮುಖಾಂತರ ದಳವಾಯಿ ಕೆರೆಯ ಏರಿಯನ್ನು ಸೇರುತ್ತದೆ.

4. ಏರಿಯ ಈ ಜಾಗಾದಿಂದ ದಕ್ಷಿಣ ಸರಹದ್ದು ಪ್ರಾರಂಭವಾಗಿ ಆಗ್ನೇಯ ಮಾರ್ಗವಾಗಿ ಹೊರಟು ದಳವಾಯಿ ಕೆರೆಯ ಅಂಗಳದ ಸರಹದ್ದನ್ನು ಹಿಡಿದು ಹೋಗುತ್ತದೆ. (ಅಂಗಳದ ಸರಹದ್ದು ಮಾಚೇನಹಳ್ಳಿ ಗ್ರಾಮದ 99 ಮತ್ತು 98ನೆ ನಂಬರುಗಳ, ತರೀಕೆರೆ ಗ್ರಾಮದ 95 ಮತ್ತು 96ನೆ ನಂಬರುಗಳ ಮತ್ತು ಮಾಚೇನಹಳ್ಳಿ 91 ಮತ್ತು 92ನೆ ನಂಬರುಗಳ ಎಲ್ಲೆಯ ಮೇಲೆ ಹೋಗುತ್ತದೆ.) ಅಲ್ಲಿಂದ ತರೀಕೆರೆ ಗ್ರಾಮದ 92, 96, 106, 105, 123 ಮತ್ತು 124ನೆ ನಂಬರುಗಳ ದಕ್ಷಿಣ ಸರಹದ್ದಿನಮೇಲೆ ಸದರಿ ನಂಬರುಗಳನ್ನು ಒಳಗೊಳ್ಳುವಹಾಗೆ ಹಾದು, ತರೀಕೆರೆ-ಸಂತವೇರಿ ರಸ್ತೆಯನ್ನು ದಾಟಿ, ತರೀಕೆರೆ ಗ್ರಾಮದ 127ನೆ ಸರ್ವೆ ನಂಬರಿನ ದಕ್ಷಿಣ ಸರಹದ್ದಾಗಿ ಹೊರಟಸ್ಥಳವಾದ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ.

ತಾರೀಖು 1ನೆ ಫೆಬ್ರುವರಿ 1909.

ನಂ. ಜ. 4449—ಜ. ಮಿ. 124-08-3, ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲ್ಲಾಖೆಗಳ ಸಕ್ರೆಟೆರಿಯವರಾದ ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರಿಗೆ 1909ನೆ ಇಸವಿ ಫೆಬ್ರುವರಿ 3ನೆ ತಾರೀಖು ಲಾಗಾಯಿತು 25 ದಿವಸಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇದೆ.

2. ಮಿ|| ಚಂದ್ರಶೇಖರ ಅಯ್ಯರವರು ರಜಾದಮೇಲೆ ಗೈರ್ ಹಾಜರಾಗುವ ಕಾಲದಲ್ಲಿ ಸರ್ಕಾರದ ಅಂಡರ್ ಸೆಕ್ರೆಟೆರಿಯವರಾದ ಮಿ|| ಸಿ. ಎಸ್. ಬಾಲಸುಂದರಂ ಅಯ್ಯರವರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸಕ್ರೆಟರಿ ಕೆಲಸವನ್ನು ಹಂಗಾಮಿ ತೇಕು ನೋಡತಕ್ಕದ್ದು.

ತಾರೀಖು 3ನೆ ಫೆಬ್ರುವರಿ 1909.

ನಂ. ಜು. 2229—ಕೋರ್ಟ್ಸ್ 244-08-2, ಸರ್ 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 37ನೆ ಪ್ರಕರಣದಮೇರೆಗೆ ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ನಗರ ಸುಬ್ಬರಾವ್, ಬಿ. ಎ., ಯವರಿಗೆ ಸದರೀ ಕೋಡು 110ನೆ ಪ್ರಕರಣವನ್ನನುಸರಿಸಿ ಒಳ್ಳೆ ನಡತೆಯ ಬಗ್ಯೆ ಜಾಮೀನು ಕೊಡಬೇಕೆಂದು ಹುಕುಂ ಮಾಡುವ ಹೆಚ್ಚು ಅಧಿಕಾರವನ್ನು ಕೊಟ್ಟು ಇರುತ್ತದೆ.

ತಾರೀಖು ..ನೆ ಫೆಬ್ರುವರಿ 1909.

ನಂ. ಜ. 4458—ಜ. ಮಿ. 124—08—4, ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸಕ್ರೆಟೆರಿ ಕೆಲಸದ ಚಾರ್ಜನ್ನು 1909ನೆ ಫೆಬ್ರುವರಿ ಗುರ್ರೇ ತಾರೀಖು ಸೋಮವಾರ ಮಧ್ಯಾಹ್ನತ್ತರ ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರು ಕೊಟ್ಟರು ; ಮಿ|| ಸಿ. ಎಸ್. ಬಾಲಸುಂದರಂ ಐಯ್ಯರವರು ವಹಿಸಿಕೊಂಡರು.

ತಾರೀಖು 3ನೆ ಫೆಬ್ರುವರಿ 1909.

ನಂ. 7234—ಮ್ಯು. 222-08-2, ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆ ವಿಷಯದ ನಿಬಂಧನೆಗಳನ್ನು ಈಚಿಗೆ ಅಂದರೆ 1909ನೆ ಇಸವಿ ಜನವರಿ 25ನೆ ತಾರೀಖಿನ 6859—ಮ್ಯು. 322—08—1ನೆ ನಂಬರ್ ಇಸ್ತಿಹಾರ್ನಾಮೆಯೊಂದಿಗೆ 1909ನೆ ಇಸವಿ ಜನವರಿ 28ನೆ ತಾರೀಖಿನ ಮೈಸೂರು ಗೆಜೆಟ್ಟಿನ IIIನೆ ಭಾಗದಲ್ಲಿ ಪ್ರಸಿದ್ಧಪಡಿಸಿ ಇರುವದರಿಂದ, 1906ನೆ ಇಸವಿಯ ಮ್ಯುನಿಸಿಪಲ್ ರೆಗ್ಯುಲೇಷನಿನ 17ನೆ ಪ್ರಕರಣವನ್ನನುಸರಿಸಿ, ಮೈಸೂರು ಮ್ಯುನಿಸಿಪಲ್ ಕೌನ್ಸಿಲ್‌ನಲ್ಲಿ ನಾಮಿನೇಷನ್ ಮತ್ತು ಚುನಾವಣೆ ಮೂಲಕ ನೇಮಿಸಲ್ಪಟ್ಟು ಹಾಲಿ ಇರುವ ಉಭಯ ತರಹೆಯ ಕೌನ್ಸಿಲರುಗಳ ಉದ್ಯೋಗದ ಅವಧಿಯನ್ನು 1909ನೆ ಇಸವಿ ಜೂನ್ ಆಖೈರ ವರಿಗೆ ಬಡಾಯಿಸಿ ಇರುತ್ತೆ.

ತಾರೀಖು 4ನೆ ಫೆಬ್ರುವರಿ 1909.

ನಂ. ಜು. 2249—ಕೋರ್ಟ್ಸ್ 243-08-2, ಸರ್ 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದಮೇರೆಗೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುತ್ತಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ|| ಡಿ. ಶ್ರೀನಿವಾಸೈಯ್ಯಂಗಾರ್, ಬಿ. ಎ., ಯವರನ್ನು 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ಮೊಕರರ್ಮಾಡಿ ಇರುತ್ತೆ.

ತಾರೀಖು 5ನೆ ಫೆಬ್ರುವರಿ 1909.

ನಂ. ಜು. 2257—ಪೋಲೀಸು 116—1, ಬೆಂಗಳೂರು ಸಿಟಿಯ ಪೋಲೀಸು ಚೀಫ್ ಇನ್ಸ್ಪೆಕ್ಟರ್ ಮಿ|| ಎಲ್. ಇ. ಓಡಹರ್ಟಿಯವರನ್ನು ಸಿವಿಲ್ ಸರ್ವಿಸ್ ನಿಬಂಧನೆಗಳ IX (2) ನೆ ಪ್ಯಾರಾ ಮೇರಿಗೆ ಬಿ. ಷೆಡ್ಯೂಲ್ Vನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ನೋಡುವುದಕ್ಕೆ ಹಂಗಾಮಿಯಾಗಿ ಮೊಕರ್ರ್ಮಾಡಿ ಫ್ರೆಂಚ್‌ರಾಕ್ಸ್ ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನಾಗಿ ನೇಮಕ ಮಾಡಿ ಇದೆ.

2. ಪೋಲೀಸು ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ|| ಎ. ಸಿ. ಬಸವರಾಜ ಅರಸಿನವರನ್ನು, ಇನ್ನೊಂದು ಹುಕುಂ ಕೊಡುವತನಕ ಪೋಲೀಸು ಇನ್ಸ್ಪೆಕ್ಟರ್ ಜನರಲ್‌ರವರ ಕಛೇರಿಯಲ್ಲಿ ಕೆಲಸ ಮಾಡುವ ಬಗ್ಯೆ ನೇಮಿಸಿ ಇದೆ. (ಮಿ|| ಓಡಹರ್ಟಿಯವರು ಇವರಿಂದ ಛಾರ್ಜ್ ವಹಿಸಿದ ತರುವಾಯ ಕೆಲಸದಮೇಲೆ ಹಾಜರಾಗತಕ್ಕದ್ದು.)

ತಾರೀಖು 5ನೆ ಫೆಬ್ರುವರಿ 1909.

ನಂ. ಜೆ. 4476—ಜೆ. ಎಂ. 111—08—4, ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಉದ್ಯೋಗಪ್ರಯುಕ್ತ ಅಂಡರ್ ಸಕ್ರೆಟೆರಿಯವರಾದ ಮಿ|| ಎ. ಸುಬ್ರಹ್ಮಣ್ಯೈಯ್ಯರ್ ಯವರಿಗೆ 1909ನೆ ಇಸವಿ ಫೆಬ್ರುವರಿ 19ನೆ ತಾರೀಖು ಲಾಗಾಯಿತು 9 ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

2. ಮೇಲ್ಕಂಡ ಕಾಲದಲ್ಲಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಆಫಿಷಿಯೇಟಿಂಗ್ ಸೆಕ್ರೆಟೆರಿಯವರಾದ ಮಿ|| ಸಿ. ಎಸ್. ಬಾಲಸುಂದರಂ ಅಯ್ಯರವರು ಮುಜರಾಯಿ ಸೂಪರಿಂಟೆಂಡೆಂಟರ ಚಾಲ್ತಿ ಕೆಲಸದ ಛಾರ್ಜಿನಲ್ಲಿರುವರು.

ತಾರೀಖು 6ನೆ ಫೆಬ್ರುವರಿ 1909.

ನಂ. 2267—ಕೋರ್ಟ್ಸ್ 248—08—2, ಚಿಕ್ಕಮಗಳೂರು ತಾಲ್ಲೂಕಿನ ಅಮಲ್ದಾರ್ ಮತ್ತು 2ನೆ ತರಗತಿಯ ಮಾಜಿಸ್ಟ್ರೇಟರಾದ ಮಿ|| ಎಸ್. ಚಕ್ರಪಾಣಿ ಐಯಂಗಾರ್, ಬಿ. ಎ., ಬಿ. ಎಲ್., ರವರಿಗೆ 1859ನೆ ಇಸವಿಯ 13ನೆ ನಂಬರ್ ಕರಾರಿನ ಉಲ್ಲಂಘನೆ ಆಕ್ಟಿನ 5ನೆ ಪ್ರಕರಣದ ಮೇರೆಗೆ ಸದರೀ ಆಕ್ಟಿಗೆ ಒಳಪಡುವ ಮೊಕದ್ದಮೆಗಳನ್ನು ದರ್ಯಾಫ್ತು ಮಾಡಲು ಅಧಿಕಾರ ಕೊಟ್ಟಿದೆ.

ತಾರೀಖು 6ನೆ ಫೆಬ್ರುವರಿ 1909.

ನಂ. ಜು. 2265—ಕೋರ್ಟ್ಸ್ 247-08-2, ಚಿಕ್ಕಮಗಳೂರಿನಲ್ಲಿ ಡಿಸ್ಟ್ರಿಕ್ಟು ಖಜಾನೆಯ ಛಾರ್ಜಿನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮತ್ತು ಎರಡನೆ ತರಗತಿಯ ಮಾಜಿಸ್ಟ್ರೇಟ್ ಮಿ|| ಸಿ. ರಂಗನಾಥರಾವ್ ಸಾಹೇಬ್, ಬಿ. ಎ., ಬಿ. ಎಲ್., ರವರನ್ನು 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣದ ಮೇರೆಗೆ ಮೊದಲನೇ ತರಗತಿಯ ಮಾಜಿಸ್ಟ್ರೇಟರನ್ನಾಗಿ ಮೊಕರರ್ಮಾಡಿ ಇದೆ.

ತಾರೀಖು 6ನೆ ಫೆಬ್ರುವರಿ 1909.

ನಂ. 7385—ಮ್ಯು. 206-08-5, ತೀರ್ಥಹಳ್ಳಿ ಮ್ಯುನಿಸಿಪಲ್ ಬೋರ್ಡು ಮೆಂಬರಾಗಿದ್ದ ಮಿ|| ಉಡುಪಿ ರಾಘವಾಚಾರ್ಯರು ರಾಜೀನಾಮೆ ಕೊಟ್ಟದ್ದರಿಂದಲೂ, ಸದರೀ ಬೋರ್ಡಿನ ಇನ್ನೊಬ್ಬ ಮೆಂಬರಾದ ಮಿ|| ಎಡೇಹಳ್ಳಿ ಪುಟ್ಟನಂಜಪ್ಪನವರು ಮೃತಪಟ್ಟದ್ದರಿಂದಲೂ ಸಹಾ, ಸದರೀ ಮ್ಯುನಿಸಿಪಲ್ ಬೋರ್ಡಿನಲ್ಲಿ ಖಾಲಿಬಿದ್ದ ಸ್ಥಾನಗಳಿಗೆ ಮಿ|| ಗಳಾದ ಚನ್ನಕೇಶವಯ್ಯ ಮತ್ತು ಎಚ್. ರಾಮರಾವ್, ಎಂಬುವರನ್ನು ಮೆಂಬರುಗಳಾಗಿ ಈ ಮೂಲಕ ನೇಮಕ ಮಾಡಿ ಇದೆ.

ತಾರೀಖು 6ನೆ ಫೆಬ್ರುವರಿ 1909.

ನಂ. ರೆ. 5833—ಲ್ಯಾ. ರೆ. 39-08-33, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಮತ್ತು 9—1—08ನೆ ಮರ್ಕುಂ ಮೈಸೂರು ಗೆಜೆಟ್ 247ನೆ ಪುಟದಲ್ಲಿ ಛಾಯಿಷ್ ಮಾಡಿರುವ 6—4—08ನೆ ಮರ್ಕುಂ 6459ನೆ ನಂಬರ್ ನೋಟಿಫಿಕೇಷನ್‌ಗೆ ಬದಲಾಗಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ಹಿರಿಯೂರು ಟವರ್ ಬಡಾವಣೆ ಬಗ್ಗೆ ಆವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಅಥವಾ ಅನುಭೋಗದಾರರ ಹೆಸರು.	ಸರ್ವೆ ಅಥವಾ ಹಿಸ್ಸೆ ನಂಬರು.	ಖುಷ್ಕಿ ಅಥವಾ ಬಾಗಾಯಿತು.	ಒಟ್ಟು ವಿಸ್ತೀರ್ಣ		ಖರಾಬು.	ಉಳಿದ ವಿಸ್ತೀರ್ಣ		ಕಂದಾಯ.		ತೆಗೆದುಕೊಳ್ಳಬೇಕಾದ ವಿಸ್ತೀರ್ಣ		ಕಂದಾಯ.		ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.		ಎ.	ಗು.	ರು.	ಆ.	ಎ.	ಗು.	ರು.	ಆ.				
ಚಿತ್ರದುರ್ಗ	ಹಿರಿಯೂರು	ಹಿರಿಯೂರು	ಜೋಡಿ ಸಾಕಲದಹಟ್ಟಿ	ಶ್ರೀ ಕೃಷ್ಣಸ್ವಾಮಿ ದೇವರು	73	ಖುಷ್ಕಿ	33	0	24	32	16	5	0	33	0	5	0	ಸರ್ವೆ ನಂ. 74	ರೋಡು	ಎರಡ ಕಟ್ಟೆ ಗಡಿ.	ಸರ್ವೆ ನಂ. 67
					74		45	22	0	45	22	7	0	45	22	7	0	ಸರ್ವೆ ನಂ. 75	ಸರ್ವೆ ನಂ. 73	ಸರ್ವೆ ನಂ. 77	ಸರ್ವೆ ನಂ. 66
					75		46	34	0	46	34	7	8	46	34	7	8	ಸರ್ವೆ ನಂ. 80	ಸರ್ವೆ ನಂ. 74	ಸರ್ವೆ ನಂ. 76	ಸರ್ವೆ ನಂ. 64

ತಾರೀಖು 20ನೆ ಜನವರಿ 1909.

ನಂ. ರೆ. 5018—ಫಾರೆಸ್ಟು 59-08-7, ಸರ್ 1900ನೆ ಇಸವಿಯ XIನೆ ನಂಬರು ಮೈಸೂರು ಫಾರೆಸ್ಟು ರೆಗ್ಯುಲೇಷನ್ 17ನೆ ಪ್ರಕರಣದ ನಿಯಮಗಳ ಮೇರಿಗೆ ಈ ಇಸ್ತಿಹಾರ್ನಾಮೆಗೆ ಲಗತ್ತಾಗಿರುವ ಷೆಡ್ಯೂಲಿನಲ್ಲಿ ವಿವರಿಸಿರುವ ಎಲ್ಲೆಗಳುಳ್ಳ ಪ್ರದೇಶವನ್ನು ಸದರಿ ಷೆಡ್ಯೂಲಿನ ಕೆಳಗೆ ನಮೂದಿಸಿರುವ ಹಕ್ಕುಗಳ ಚಲಾವಣೆಗೆ ವಳಪಟ್ಟು 1909ನೆ ಇಸವಿ ಮಾರ್ಚಿ 1ನೆ ತಾರೀಖು ಲಾಗಾಯಿತು ಮನ್ನಾ ಜಂಗಲಿಯನ್ನಾಗಿ ಏರ್ಪಡಿಸಿರುತ್ತೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ.	ಕಾಡಿನ ಹೆಸರು.	ಎಲ್ಲೆಗಳು.
ಚಿತ್ರದುರ್ಗ	ಚಿತ್ರದುರ್ಗ ತಾಲ್ಲೂಕು ಮತ್ತು ಹೋಬಳಿ	3·35 ಚದರ ಮೈಲಿಗಳು.	ಬಿಲ್ಲನಕೋಟೆ.	ಉತ್ತರಕ್ಕೆ — ಈ ಲೈನು ಕಳ್ಳಾಪುರ ಗ್ರಾಮದ ಸರ್ವೆ 56ನೆ ನಂಬರಿನ ಪೂರ್ವ ಮೂಲೆಯಿಂದ ಆರಂಭಿಸಿ ಈಶಾನ್ಯ ಮಾರ್ಗವಾಗಿ ಕಳ್ಳಾಪುರ ಸರ್ವೆ 55ನೆ ನಂಬರಿನಲ್ಲಿ 13 ಸರಪಣಿ ವರಿಗುನ್ನು, ಸೋಗಾಲು ಗ್ರಾಮದ ಸರ್ವೆ 96ನೆ ನಂಬರಿನಲ್ಲಿ 32 ಸರಪಣಿ ವರಿಗುನ್ನು, ಚಟ್ನಹಳ್ಳಿ ಗ್ರಾಮದ 17ನೆ ನಂಬರಿನಲ್ಲಿ 35 ಸರಪಣಿ ವರಿಗುನ್ನು ಹೊರಟು ಚಟ್ನಹಳ್ಳಿ ಗ್ರಾಮದ ಸರ್ವೆ 41ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ ; ನಂತರ ಆಗ್ನೇಯಾಭಿಮುಖವಾಗಿ ಚಟ್ನಹಳ್ಳಿ ಗ್ರಾಮದ ಸರ್ವೆ 42ನೆ ನಂಬರಿನಲ್ಲಿ 52 ಸರಪಣಿ ಫಾಸಲೆ ವರಿಗೂ ಅಲ್ಲಿಂದ ಸರ್ವೆ 44ನೆ ನಂಬರಿನ ಪಶ್ಚಿಮ ಕಡೆ ಹೊರಟು ಆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ ; ಅಲ್ಲಿಂದ ಸರ್ವೆ 43ನೆ ನಂಬರಿನ ದಕ್ಷಿಣ ಮತ್ತು ಪಶ್ಚಿಮ ಕಡೆಗಳಲ್ಲಿ ಹೊರಟು ಆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ ; ಅಲ್ಲಿಂದ ಅದೇ ನಂ

ಬರಿನ ದಕ್ಷಿಣ ಮಾರ್ಗವಾಗಿ ಆ ನಂಬರಿನ ಆಗ್ನೇಯ ಮೂಲೆಗೂ, ಅಲ್ಲಿಂದ ಅದೇ ಸರ್ವೆ ನಂಬರಿನ ಪೂರ್ವ ದಿಕ್ಕಿನಲ್ಲಿಯೂ ಹೊರಟು ಆ ನಂಬರಿನ ಈಶಾನ್ಯ ಮೂಲೆಯನ್ನು ಸೇರಿ, ಅಲ್ಲಿಂದ ಪೂರ್ವಾಭಿಮುಖವಾಗಿ 23 ಸರಪಣಿ ವರಿಗೂ ಸರ್ವೆ 83ನೆ ನಂಬರಿನಲ್ಲಿಯೂ, ಮುಸೆನಹಾಲು ಗ್ರಾಮದ ಸರ್ವೆ 19ನೆ ನಂಬರಿನಲ್ಲಿ 20 ಸರಪಣಿ ವರೆಗೆ ಹೊರಟು ಅದೇ ಗ್ರಾಮದ ಸರ್ವೆ 24ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ ; ನಂತರ ಆಗ್ನೇಯವಾಗಿ ಮುಸೆನಹಾಳ ಗ್ರಾಮದ ಸರ್ವೆ 19ನೆ ನಂಬರಿನಲ್ಲಿ ಸುಮಾರು 85 ಸರಪಣಿ ಫಾಸಲೆ ಹೊರಟು ಸುತ್ತುಕೋಟೆ, ಬನ್ನಿಕೆರೆ, ಮತ್ತು ಮುಸೇನಹಾಳ ಗ್ರಾಮುಗಳ ಮುಕ್ಕುಪ್ಪೆ ಬಾಂದುಗಳಿಗೆ ಪೂರ್ವ ಕಡೆಯಲ್ಲಿ ಸುಮಾರು 12 ಸರಪಣಿ ಫಾಸಲೆಯಲ್ಲಿ ಬಂದು ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯ ಮಾರ್ಗವಾಗಿ ಸುತ್ತುಕೋಟೆ ಗ್ರಾಮ ಸರಹದ್ದಿನ ಕಡೆಯೂ ಮತ್ತು ಬನ್ನಿಕೆರೆ ಗ್ರಾಮದ ಸರ್ವೆ 73ನೆ ನಂಬರಿನಲ್ಲಿ 80 ಸರಪಣಿ ಫಾಸಲೆ ಹೊರಟು, ಬನ್ನಿಕೆರೆ, ಬೂದಿಗೆರೆ, ಮತ್ತು ಬೀರನಕೆರೆ ಗ್ರಾಮುಗಳ ಮುಕ್ಕುಪ್ಪೆ ಬಾಂದುಗಳಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು 28 ಸರಪಣಿ ಫಾಸಲೆಯಲ್ಲಿ ಸರ್ವೆ 73ನೆ ನಂಬರಿನ ಪಶ್ಚಿಮ ಸರಹದ್ದಿನಲ್ಲಿ ಸೇರುತ್ತದೆ ; ನಂತರ ಬನ್ನಿಕೆರೆ ಗ್ರಾಮದ ಸರಹದ್ದಿನಲ್ಲಿ 43 ಸರಪಣಿ ಫಾಸಲೆ ಆಗ್ನೇಯವಾಗಿ ಹೊರಟು, ಅಲ್ಲಿಂದ ನೈರುತ್ಯಕ್ಕೆ ತಿರಿಗಿ ಬೂದಿಗೆರೆ ಗ್ರಾಮದ ಸರ್ವೆ 16ನೆ ನಂಬರಿನಲ್ಲಿ ಸುಮಾರು 20 ಸರಪಣಿ ಫಾಸಲೆಯಲ್ಲಿರುವ ಅದೇ ಗ್ರಾಮದ ಸರ್ವೆ 15ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ವಾಯುವ್ಯ ಮಾರ್ಗ ತಿರಿಗಿ ಬೂದಿಗೆರೆ ಗ್ರಾಮದ ಸರ್ವೆ 16ನೆ ನಂಬರಿನಲ್ಲಿ ಸುಮಾರು 62 ಸರಪಣಿ ಫಾಸಲೆ ಹೊರಟು, ಸರ್ವೆ 22ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರಿ, ಅದೇ ಗ್ರಾಮದ 31ನೆ ಸರ್ವೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ಅದೇ ಮಾರ್ಗವಾಗಿ ಬೀರನಕೆರೆಯ ಸರ್ವೆ 24ನೆ ನಂಬರಿನ ಮೇಲೆ ಸುಮಾರು 50 ಸರಪಣಿ ಫಾಸಲೆ ಹೋಗಿ, ಅದೇಗ್ರಾಮದ 22ನೆ ಸರ್ವೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ ; ನಂತರ ಸರ್ವೆ 23ನೆ ನಂಬರಿನ ಉತ್ತರಕಡೆಯೂ ಮತ್ತು ಸರ್ವೆ 24ನೆ ನಂಬರಿನಲ್ಲಿಯೂ ಸುಮಾರು 12 ಸರಪಣಿ ಫಾಸಲೆ ಹೊರಟು 34ನೆ ಸರ್ವೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ ; ನಂತರ ಆಗ್ನೇಯವಾಗಿ ಸರ್ವೆ 24ನೆ ನಂಬರಿನಲ್ಲಿ ಸುಮಾರು 22 ಸರಪಣಿ ಫಾಸಲೆ ಹೊರಟು ಸರ್ವೆ 14ನೆ ನಂಬರಿನ ಈಶಾನ್ಯ ಮೂಲೆ ಸೇರುತ್ತದೆ ; ಅಲ್ಲಿಂದ ಅದೇ ಸರ್ವೆ ನಂಬರಿನ ಮೇಲೆ 30 ಸರಪಣಿ ಫಾಸಲೆ ಹೊರಟು ಸರ್ವೆ 21ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ ; ನಂತರ ನೈರುತ್ಯವಾಗಿ ಸರ್ವೆ 14ನೆ ನಂಬರಿನಲ್ಲಿ ಸುಮಾರು 43 ಸರಪಣಿ ಫಾಸಲೆ ಹೊರಟು ಕುಂಚೇನಹಳ್ಳಿ ಮನ್ನಾ ಜಂಗಲಿಯ ಎಲ್ಲೆಯ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ಪಶ್ಚಿಮವಾಗಿ ಅದೇ ಎಲ್ಲೆಯಲ್ಲಿ ಹೊರಟು ಕುಂಚೇನಹಳ್ಳಿ ಗ್ರಾಮದ 37ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯಿಂದ ಪೂರ್ವಕ್ಕೆ ಸುಮಾರು 5 ಸರಪಣಿ ಫಾಸಲೆಯಲ್ಲಿರುವ ಒಂದು ಸ್ಥಾನವನ್ನು ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನು ಉತ್ತರಾಭಿಮುಖವಾಗಿ ಬೀರನಕೆರೆ ಗ್ರಾಮದ ಸರಹದ್ದಿನ ಮೇಲೆ ಹೊರಟು ಕುಂಚೇನಹಳ್ಳಿ ಗ್ರಾಮದ 37ನೆ ಸರ್ವೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ವಾಯುವ್ಯವಾಗಿ ಅದೇ ಗ್ರಾಮದ ಸರ್ವೆ 27ನೆ ನಂಬರಿನಲ್ಲಿ ಸುಮಾರು 70 ಸರಪಣಿ ಫಾಸಲೆ ಹೊರಟು ಸರ್ವೆ 26ನೆ ನಂಬರಿನ ಈಶಾನ್ಯ ಮೂಲೆ ಮುಟ್ಟಿ ಕಳ್ಳಾಪುರದ ಸರ್ವೆ 61ನೆ ನಂಬರಿನ ದಕ್ಷಿಣ ಮೂಲೆಯಿಂದ ಪೂರ್ವವಾಗಿ ಸುಮಾರು 11 ಸರಪಣಿ ದೂರದಲ್ಲಿರುವ ಒಂದು ಸ್ಥಾನವನ್ನು ಸೇರುತ್ತದೆ; ಅಲ್ಲಿಂದ ಅದೇ ಮಾರ್ಗವಾಗಿ ಸರ್ವೆ 55ನೆ ನಂಬರಿನಲ್ಲಿ ಸುಮಾರು 58 ಸರಪಣಿ ಫಾಸಲೆ ಹೊರಟು ಸರ್ವೆ 61 ಮತ್ತು 60ನೆ ನಂಬರುಗಳ ಪೂರ್ವ ಭಾಗವನ್ನು ಮುಟ್ಟಿ ಬಂದ ಸ್ಥಳ ಸೇರುತ್ತದೆ.

ಷರಾಗಳು.

A. ಈ ತಾಕಿನಲ್ಲಿ ಇದರಡಿ ಕಂಡ ದಾರಿಗಳ ಹಕ್ಕನ್ನು ಅಂಗೀಕರಿಸಿರುತ್ತೆ.

(i) ಚಟ್ನಹಳ್ಳಿಯಿಂದ ಬೀರನಕೆರೆಗೆ ಹೋಗುವ ಕಾಲುದಾರಿ, 4 ಅಡಿ ಅಗಲ ಸುಮಾರು 1 ಮೈಲಿ 1 ಫರಲಾಂಗು ಉದ್ದ ; ವರುಷವೆಲ್ಲಾ ಜನ ಜಾನ್ವಾರುಗಳಿಗೆ ಮಾತ್ರಾ ಖುಲ್ಲಾ ಬಿಟ್ಟಿರುತ್ತೆ. ಈ ಹಾದಿಯು ಜಂಗಲಿಯ ಉತ್ತರ ಸರಹದ್ದಿನಲ್ಲಿರುವ 42ನೆ ಸರ್ವೆ ನಂಬರಿನಲ್ಲಿ ಜಂಗಲಿಯನ್ನು ಪ್ರವೇಶಿಸಿ ಚಟ್ನಹಳ್ಳಿಯ 42ನೆ ಸರ್ವೆ ನಂಬರಿನಲ್ಲೂ ಮತ್ತು ಬೀರನಕೆರೆಯ 24ನೆ ನಂಬರಿನಲ್ಲೂ ಹೊರಟು ಜಂಗಲಿಯ ದಕ್ಷಿಣ ಸರಹದ್ದಿನಲ್ಲಿರುವ ಸರ್ವೆ 24ನೆ ನಂಬರಿನಲ್ಲಿ ಸದರಿ ಜಂಗಲಿಯನ್ನು ಬಿಡುತ್ತದೆ.

(ii) ಚಟ್ನಹಳ್ಳಿಯಿಂದ ಬಣ್ಣಿಕೆರೆಗೆ ಹೋಗುವ ಕಾಲುದಾರಿ, 4 ಅಡಿ ಅಗಲ ಸುಮಾರು 1 ಮೈಲಿ ಉದ್ದ ; ಜನಗಳಿಗೆ ಮತ್ತು ದನಗಳಿಗೆ ಮಾತ್ರಾ ಸದಾ ಖುಲ್ಲಾ ಇರತಕ್ಕದ್ದು. ಈ ದಾರಿ ಜಂಗಲಿಯ ಉತ್ತರ ಸರಹದ್ದಿನಲ್ಲಿರುವ 83ನೆ ಸರ್ವೆ ನಂಬರಿನಲ್ಲಿ ಜಂಗಲಿಯನ್ನು ಪ್ರವೇಶಿಸಿ, ಆಗ್ನೇಯವಾಗಿ ಅದೇ ನಂಬರಿನಲ್ಲೂ, ಮುಸೇನಹಳ್ಳಿ 19ನೆ ಸರ್ವೆ ನಂಬರಿನಲ್ಲೂ ಮತ್ತು ಬಣ್ಣಿಕೆರೆಯ 75ನೆ ಸರ್ವೆ ನಂಬರಿನಲ್ಲೂ ಹೊರಟು ಜಂಗಲಿಯ ಪೂರ್ವ ಸರಹದ್ದಿನಲ್ಲಿರುವ 73ನೆ ಸರ್ವೆ ನಂಬರಿನಲ್ಲಿ ಸದರಿ ಜಂಗಲಿಯನ್ನು ಬಿಡುತ್ತದೆ.

B. ಈ ತಾಕಿನಲ್ಲಿ ಇದರಡಿ ಕಂಡ ರಿಯಾಯಿತಿಗಳನ್ನು ಮಂಜೂರ್ಮಾಡಿದೆ.

(1) ಚಟ್ನಹಳ್ಳಿ ಮತ್ತು ಮುಸೇನಹಾಳ ಗ್ರಾಮಸ್ಥರು ತಮ್ಮ ದನಗಳನ್ನು (ಚಟ್ನಹಳ್ಳಿ ದನ 322, ಮುಸೇನಹಾಳ ದನ 193) ತಮ್ಮ ಗ್ರಾಮುಗಳಿಂದ ಜಂಗಲಿಗೆ ಸೇರಿಸಿಕೊಂಡ ಜಮೀನುಗಳಲ್ಲಿ ಮುಫತ್ತಾಗಿ ವರುಷವೆಲ್ಲಾ ಮೇಯಿಸಿಕೊಳ್ಳುವದಕ್ಕೂ, ಮುಫತ್ತಾಗಿ ವರುಷ ಒಂದಕ್ಕೆ ಒಂದು ಸಂಸಾರಕ್ಕೆ ನಾಲ್ಕು ಭಂಡಿ ಒಣಗಿದ ಸವುದೆಯನ್ನು ಮನೆ ಕೆಲಸಕ್ಕೆ ತೆಗೆದುಕೊಂಡು ಹೋಗುವದಕ್ಕೂ, ಮುಫತ್ತಾಗಿ ವರುಷ ಒಂದಕ್ಕೆ ಒಂದು ಸಂಸಾರಕೆ ಮನೆ ಚಾವಣಿ ಹುಲ್ಲನ್ನು ತೆಗೆದುಕೊಂಡು ಹೋಗುವದಕ್ಕೂ, ಬೇಲಿಗಾಗಿ ಒಂದು ವರುಷಕ್ಕೆ ಒಂದು ಸಂಸಾರಕ್ಕೆ 5 ಭಂಡಿ ಮುಳ್ಳನ್ನು ಮುಫತ್ತು ತೆಗೆದುಕೊಂಡು ಹೋಗುವದಕ್ಕೂ ಅಪ್ಪಣೆ ಕೊಟ್ಟಿದೆ ಇರುತ್ತೆ.

ಟಿಪ್ಪಣಿ.—ಅಖೈರು ಸರಹದ್ದು ಲೈನನ್ನು ಹಿಂಗಡಿಸುವಾಗ ಸಾಗುವಳೀ ಪಕ್ಕದಲ್ಲಿ ಐದು ಸರಪಣಿಯಷ್ಟು ಅಂಚನ್ನು ಬಿಡಬಹುದು.

ತಾರೀಖು 22 ಜನವರಿ 1909.

ನಂ. ರೆವಿನ್ಯೂ ಈ 11—ಫಾರೆಸ್ಟ್ 46-08-7. ಈ ಇಸ್ತಿಹಾರ್‍ನಾಮೆಗೆ ಲಗತ್ತಿಸಿರುವ ಷೆಡ್ಯೂಲಿನಲ್ಲಿ ಸವಿೂದಾದ ಚತುರ್ಗಡಿಯುಳ್ಳ ಪ್ರದೇಶವು ಇದರಡಿ ಕಂಡ ಹಕ್ಕುಬಾಧ್ಯತೆಗಳಿಗೆ ಒಳಪಟ್ಟು 1909ನೆ ಮಾರ್ಚಿ ಗುರ್‍ರೇ ತಾರೀಖಿನ ಲಾಗಾಯಿತು ಮುನ್ನಾ ಜಂಗಲಿಯಾಗಿ ಭಾವಿಸಲ್ಪಡತಕ್ಕದ್ದೆಂದು ಮೈಸೂರು ಸರ್ಕಾರದವರು 1900ನೆ ಇಸವಿಯ 11ನೆ ನಂಬರ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ ಷರತ್ತುಗಳಿಗನುಸಾರವಾಗಿ ಈ ಮೂಲಕ ಪ್ರಸಿದ್ಧಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು	ವಿಸ್ತೀರ್ಣ	ಜಂಗಲಿನ ಹೆಸರು	ಚತುರ್ಗಡಿ
ಶಿವಮೊಗ್ಗ	ಸಾಗರ	14·81 ಚದರ ಮೈಲಿ	ಜೋಗ್ ಬ್ಲಾಕು A ಮತ್ತು B.	ಉತ್ತರಕ್ಕೆ ಮತ್ತು ಪೂರ್ವಕ್ಕೆ—ಶರಾವತಿ ನದಿಯು ಉತ್ತರ ಕನ್ನಡ ಜಿಲ್ಲೆಯ ಚತುರ್ಗಡಿಯೊಡನೆ ಸೇರುವುದರಿಂದಾಗುವ ಮೂಲೆಯಿಂದ ಹೊರಟು ಗಡಿಯು ಸುಮಾರು 5 ಮೈಲುಗಳದೂರ ಶರಾವತಿ ನದಿಯ ಬಲತೀರದ ಮಾರ್ಗವಾಗಿ ಈಶಾನ್ಯ ದಿಕ್ಕಿನಲ್ಲಿ ಹೊರಟು ದಕ್ಷಿಣಕ್ಕೆ ತಿರಿಗಿ ಸುಮಾರು 2½ ಫರಲಾಂಗು ವರಿಗೆ ತಾಳಕಳಲೆ ಗ್ರಾಮದ ಸರ್ವೆ 61ನೆ ನಂಬರಿನಲ್ಲಿ ಹೊರಟು 3 ಫರಲಾಂಗುದೂರ ಪೂರ್ವದಿಕ್ಕಿನಲ್ಲಿ ಹೋಗಿ ಪುನಃ ಎರಡು ಫರಲಾಂಗು ಪರಿಯಂತರ ಈಶಾನ್ಯವಾಗಿ ತಿರಿಗಿ 60 ಎಕರೆ ಜವಿೂನು ಸುತ್ತಲೂವುಳ್ಳ ಮುಸಾಫರರ ಬಂಗಲೆಯನ್ನು ಬಿಟ್ಟು ತಾಳಕಳಲೆ ಗ್ರಾಮದ ಸರಹದ್ದಿನ ಮಾರ್ಗವಾಗಿಯೂ ಮತ್ತು ಶರಾವತಿ ನದಿಯ ಬಲದಡದ ಮಾರ್ಗವಾಗಿಯೂ ಹೋಗಿ ಕಾರಗಲ್ಲು ಗ್ರಾಮದ ಸರ್ವೆ 1ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರಿ, ನಂತರ ಆಗ್ನೇಯವಾಗಿ ಕಾರಗಲ್ಲು ಗ್ರಾಮದ ಪಶ್ಚಿಮ ಸರಹದ್ದಿನ ಮಾರ್ಗದಲ್ಲಿ A ಗುರ್ತುಳ್ಳ ಕಲ್ಲುಗುಡ್ಡೆಗೆ ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಸುಮಾರು ಒಂದು ಮೈಲಿ ವರಿಗೆ ಕಾರಗಲ್ಲು ಗ್ರಾಮದ ಸರ್ವೆ 16ನೆ ನಂಬರಿನಲ್ಲಿ ಹೊರಟು ಕಾರಗಲ್ಲು ಗ್ರಾಮದ ಸರ್ವೆ 16ನೆ ನಂಬರಿನ ಮತ್ತು ತಾಳಕಳಲೆಯ ಸರ್ವೆ 62 ಮತ್ತು 61ನೆ ನಂಬರುಗಳ ಮುಕ್ಕೂಪ್ಪೆ ಬಾಂದುಗಳಿಗೆ ಸೇರುತ್ತೆ; ನಂತರ ನೈರುತ್ಯವಾಗಿ ಸುಮಾರು 5 ಫರಲಾಂಗುಗಳ ಫಾಸಲೆಯದೂರ ತಾಳಕಳಲೆಯ ಸರ್ವೆ 61ನೆ ನಂಬರಿನಲ್ಲಿ ಹೊರಟು ಅದೇ ಗ್ರಾಮದ ಸರ್ವೆ 63ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ; ಅಲ್ಲಿಂದ ದಕ್ಷಿಣ ಮಾರ್ಗವಾಗಿ ಆ ನಂಬರಿನ ಪಶ್ಚಿಮ ಅಂಚಿನಲ್ಲಿ ಹೊರಟು 63ನೆ ಸರ್ವೆ ನಂಬರಿನ ಉತ್ತರ ಮತ್ತು ಪಶ್ಚಿಮ ಮೂಲೆಯನ್ನು ಮುಟ್ಟಿ, ಕಾರಗಲ್ಲಿನಿಂದ ತಾಳಕಳಲೆಗೆ ಹೋಗುವ ಕಾಲುದಾರಿಯನ್ನು ಅನುಸರಿಸಿ B ಗುರ್ತುಳ್ಳ ಕಲ್ಲುಗುಪ್ಪೆಗೆ ಸೇರುತ್ತದೆ, ನಂತರ ವಾಯುವ್ಯ ಮಾರ್ಗವಾಗಿ ಸರ್ವೆ 116, 74 ಮತ್ತು 76ನೆ ನಂಬರುಗಳ ಪೂರ್ವ ಕಡೆಗಳಲ್ಲಿ ಹೋಗಿ ತಾಳಕಳಲೆ ಗ್ರಾಮದ ಸರ್ವೆ 55ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಪಶ್ಚಿಮವಾಗಿ 55ನೆ ಸರ್ವೆ ನಂಬರಿನ ಉತ್ತರ ಕಡೆಯಲ್ಲಿ ಹೊರಟು ಆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ; ನಂತರ ಸರ್ವೆ 112ನೆ ನಂಬರಿನ ಪೂರ್ವ ಕಡೆಯಲ್ಲಿ ಹೊರಟು ಅದರ ಉತ್ತರ ಮೂಲೆಯನ್ನು ಸೇರುತ್ತದೆ; ನಂತರ ನೈರುತ್ಯವಾಗಿ ಸರ್ವೆ 112ನೆ ನಂಬರಿನ ಉತ್ತರ ಪಾರ್ಶ್ವ ಹೊರಟು 60 ಮತ್ತು 26ನೆ ಸರ್ವೆ ನಂಬರುಗಳಿಗೆ ಸೇರಿದ ಬಾಂದುಗಳನ್ನು ಸೇರುತ್ತದೆ; ಅಲ್ಲಿಂದ ವಾಯುವ್ಯ ಮಾರ್ಗವಾಗಿ "ಬಿ" ತಾಕಿನ ಸರಹದ್ದನ್ನನುಸರಿಸಿ ಸರ್ವೆ 26ನೆ ನಂಬರಿನ ಉತ್ತರ ಮೂಲೆಯನ್ನೂ ಅಲ್ಲಿಂದ "ಬಿ" ತಾಕನ್ನೂ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಈಶಾನ್ಯ ಮಾರ್ಗವಾಗಿ ಉತ್ತರ ಕನ್ನಡಕ್ಕೆ ಸೇರಿದ ಸೂಲಿಮಣೆ ಗ್ರಾಮದ ಸರಹದ್ದನ್ನು ಅನುಸರಿಸಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾ—ಈ ತಾಕಿನಲ್ಲಿ ಇದರಡಿ ಕಂಡ ದಾರಿ ಹಕ್ಕನ್ನು ಅಂಗೀಕರಿಸಿರುತ್ತೆ:—

(1) ಮರಕಲುಮತ್ತು ಇಲಾಖೆಯುವರಿಂದ ಕಾವಲುಗಾರಿ ನಡಿಸಲ್ಪಡುವಂಥಾ ಮತ್ತು ಸಾಗರದಿಂದ ಜೋಗ್ ಮುಸಾಫರ ಬಂಗಲೆಗೆ ಹೋಗುವ ರಸ್ತೆಯು ಎಲ್ಲಾ ಕಾಲದಲ್ಲಿಯೂ ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಸಂಚಾರಕ್ಕಾಗಿ ಖುಲ್ಲಾ ಇರತಕ್ಕದ್ದು. ಈ ದಾರಿಯು ಜಂಗಲಿಯ ಪೂರ್ವ ಸರಹದ್ದಿನಲ್ಲಿರುವ ಕಾರಗಲ್ ಗ್ರಾಮದ ಸರ್ವೆ 16ನೆ ನಂಬರಿನಲ್ಲಿ ಜಂಗಲಿಯನ್ನು ಪ್ರವೇಶಿಸಿ ಅದೇ ನಂಬರಿನಲ್ಲಿ ಸುಮಾರು 2½ ಫರಲಾಂಗುಗಳದೂರ ಹೊರಟು ಬಂಗಲೆಗೆ ಹೋಗಿ ಸೇರುತ್ತೆ.

ಬಿ: ತಾಕು.

ಉತ್ತರಕ್ಕೆ ಮತ್ತು ಪೂರ್ವಕ್ಕೆ—ತಾಳಕಳಲೆ ಗ್ರಾಮದ ಸರ್ವೆ 26ನೆ ನಂಬರಿನ ಉತ್ತರ ಮೂಲೆಯಿಂದ ಸರಹದ್ದು ಲೈನು ಆರಂಭಿಸಿ, ಆಗ್ನೇಯ ಮುಖವಾಗಿ 60ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನನುಸರಿಸಿ ತಾಳಕಳಲೆಯ 60 ಮತ್ತು 26ನೆ ಸರ್ವೆ ನಂಬರುಗಳಿಗೆ ಸೇರಿದ ಸಾಮಾನ್ಯ ಬಾಂದುಗಳನ್ನು ಸೇರುತ್ತದೆ; ನಂತರ ನೈರುತ್ಯ ಮುಖವಾಗಿ ಅದೇ ಗ್ರಾಮದ 112ನೆ ಸರ್ವೆ ನಂಬರಿನ ಪಶ್ಚಿಮಕಡೆ ಹೊರಟು ಅದರ ಪಶ್ಚಿಮ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯ ಮುಖವಾಗಿ ಸರ್ವೆ 112ನೆ ನಂಬರಿನ ಪಶ್ಚಿಮಾಭಿಮುಖವಾಗಿ ಹೊರಟು ಆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಸದರೀ ನಂಬರಿನ ಪೂರ್ವಕಡೆಯಲ್ಲಿ ಪೂರ್ವಾಭಿಮುಖವಾಗಿ ಹೋಗಿ ತಾಳಕಳಲೆ ಗ್ರಾಮದ ಸರ್ವೆ 112, 113 ಮತ್ತು 58ನೆ ನಂಬರುಗಳಿಗೆ ಸೇರಿದ ಮುಕ್ಕೂಪ್ಪೆ ಬಾಂದುಗಳ ಕಡೆ ಹೋಗುತ್ತದೆ; ನಂತರ 58, 57, 97, 111 ಮತ್ತು 44ನೆ ಸರ್ವೆ

ರಹದಾರಿ ಸ್ಟೇಷನುಗಳು.—ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಗುಡುಪಲ್ಲಿ, ಕುಪ್ಪಂ, ಮುಳಾನೂರು ಮತ್ತು ಪಾಚೂರು; ದಕ್ಷಿಣ ಇಂಡಿಯನ್ ರೈಲ್ವೆಯ ಬರಗೂರು, ಕಂಡಿಕುಪ್ಪಂ, ಕೃಷ್ಣಗಿರಿ, ಮಂಗಳೂರು, ಮೆಟ್ಟುಪಾಳ್ಯಂ, ಪೆರಿಯಾಗಾರಂ ಮತ್ತು ಪೆರಿಯಾಕಂಸಲಿ; ನೀಲಗಿರಿ ರೈಲ್ವೆಯ ಕುನ್ನೂರು, ಫರ್ನಹಿಲ್, ಕೇಟಿ, ಉದಕಮಂಡಲ ಮತ್ತು ವೆಲ್ಲಿಂಗಟನ್ ಸ್ಟೇಷನ್‌ಗಳು.

ಈ ಸ್ಟೇಷನ್‌ಗಳಿಗೆ :—ದಕ್ಷಿಣ ಇಂಡಿಯನ್ ರೈಲ್ವೆಯ ಮಧುರಾ, ಮಧುರಾ ಈಸ್ಟ್, ಸಿಲಿವರ್ನ್, ತಿರುಪ್ಪುವನಂ, ತಿರುಪ್ಪಚೆಟ್ಟಿ, ಮುತ್ತಾನೆಂಡಾಲ್, ಮಾನಮಧುರಾ, ಪರಮಕುಡಿ, ಪಂಡಿಕಣ್ಮಾಯಿ, ಸತ್ತಿರಕ್ಕುಡಿ, ರಾಮನಾಡ್, ವಲಂಟರವಾಯಿ, ಪಾರ್ಟಬನೂರು, ಉಚ್ಚಿಪ್ಪುಲ್ಲಿ, ಮಂಡಪಂ, ಪಾಂಬನ್‌ಬೀಚ್, ಪಾಂಬನ್, ತಂಗಚಿಯಮಡಂ ಮತ್ತು ರಾಮೇಶ್ವರ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಉತ್ಸವಕ್ಕೆ ಹೋಗುವವರನ್ನು ವಾಪಸ್ ಕಳುಹಿಸಲಾದೀತು.

ಇಸ್ತಿಹಾರ್‌ನಾಮೆ.

ಬಳ್ಳಾರಿ ಡಿಸ್ಟ್ರಿಕ್ಟು ಹರಪನಹಳ್ಳಿ ತಾಲ್ಲೂಕು ಕುಲಹಳ್ಳಿಯಲ್ಲಿ ಮುಂದೆ ನಡಿಯುವ ಗೋಣಿಬಸಪ್ಪನ ರಥೋತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವವರನ್ನು ಬಿಟ್ಟರೆ ಅಲ್ಲಿ ಪ್ಲೇಗು ರೋಗವು ವ್ಯಾಪಿಸುವ ಅಪಾಯವುಂಟೆಂದು ಸಭಾ ಸಮೇತರಾದ ಗವರ್ನರವರು ಖಂಡಿವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವದರಲ್ಲಿ, ಸಭಾಸಮೇತರಾದ ಗವರ್ನರವರು ಮೇಲ್ಕಂಡ ಉತ್ಸವಕ್ಕೆ ಯಾರೂ 1909ನೆ ಇಸವಿ ಫೆಬ್ರವರಿ 22ನೆ ತಾರೀಖು ಲಾಗಾಯಿತು ಮಾರ್ಚಿ 6ನೆ ತಾರೀಖು ವರಿಗೆ (ಉಭಯ ದಿನಗಳೂ ಸೇರಿ) ಹೋಗಕೂಡದೆಂದು ನಿಷೇಧಿಸಿರುತ್ತಾರಲ್ಲದೆ, ಸದರಿ ತಾರೀಖುಗಳ ಮಧ್ಯೆ ಬಳ್ಳಾರಿ ಡಿಸ್ಟ್ರಿಕ್ಟಿನ ವಳಗೆ ರೈಲ್ ಮೂಲಕ ಪ್ರಯಾಣ ಮಾಡಬೇಕೆಂದು ಇರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಯ ಬ್ಯಾಡಿಗಿ, ದೇವರಾಯಗುಡ್ಡ, ರಾಣಿಬೆನ್ನೂರು, ಚಾಲಗಿರಿ, ಹರಿಹರ ಮತ್ತು ದಾವಣಗೆರೆ ಸ್ಟೇಷನ್‌ಗಳಿಗೆ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ :—

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಉತ್ಸವಕ್ಕೆ ಹೋಗುವವರನ್ನು ವಾಪಸು ಕಳುಹಿಸಲಾದೀತು.

ತಾರೀಖು 20ನೆ ಫೆಬ್ರವರಿ 1909.

ನಂ. 8196—ಸ್ಯಾನಿಟರಿ 76-08—44, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ಕೆಸ್ತೂರ	...	...	...	ಎಳಂದೂರು.
ಬೂಚಹಳ್ಳಿ	...	...	...	ಡಿಟೋ
ಹೊನೂರು	...	...	...	ಡಿಟೋ
ಅಲಕೆರೆ ಅಗ್ರಹಾರ	...	...	...	ಡಿಟೋ
ಬ್ಯಾಡರಹಳ್ಳಿ	...	...	...	ಎಡತೊರ.
ಬೆಲ್ಲಹಳ್ಳಿ	...	...	...	ಡಿಟೋ
ಕನ್ನಗನಹಳ್ಳಿ	...	...	...	ಡಿಟೋ
ಹರವೆ	...	...	...	ಹುಣಸೂರು.
ಕಂಪಲಾಪುರ	...	...	...	ಡಿಟೋ
ಮಲ್ಲರಾಜಪಟ್ಣ	...	...	...	ಡಿಟೋ.
ತಗಡೂರು	...	...	...	ನಂಜನಗೂಡು.
ಕರೀಹುಂಡಿ	...	...	...	ಡಿಟೋ
ಕುರುಬೂರು	...	...	...	ಟಿ. ನರಸೀಪುರ.
ಸೋರಬ	...	...	...	ಡಿಟೋ
ಬೂಕಿನಕೆರೆ	...	...	...	ಕೃಷ್ಣರಾಜಪೇಟೆ.

ತಾರೀಖು 24ನೆ ಫೆಬ್ರವರಿ 1909.

ನಂ. 8290—ಸ್ಯಾನಿಟರಿ 61—03—90, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಪಂಗುಣಿಉತ್ತರಂ ಉತ್ಸವ ಮತ್ತು ದನಗಳ ಸಂತೆ.	ಮೈಲಾಂ ಮತ್ತು ಅದರ ಸುತ್ತಮುತ್ತಲಿರುವ ಗ್ರಾಮಗಳು.	ತಿಂಡಿವನಂ.	ದಕ್ಷಿಣ ಆರ್ಕಾಡು.	22—3—09	9—4—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಇಸವಿ ಫೆಬ್ರವರಿ 13ನೆ ಮರ್ಕುಂ 125ನೆ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 9ನೆ ಫೆಬ್ರವರಿ 1909.

ನಂ. ಜ್ಯು. 2317—ಕೋರ್ಟ್ಸ್ 223—08 - 4, ಸಿವಿಲ್ ಪ್ರೊಸೀಜರ ಕೋಡಿನ 269ನೆ ಪ್ರಕರಣದ 3ನೆ ಪ್ಯಾರಾವಿನ ಮೇರೆಗೆ ಚೀಫ್ ಕೋರ್ಟಿನವರು ಏರ್ಪಡಿಸಿ ಸರ್ಕಾರದವರು ಮಂಜೂರ್ಮಾಡಿರುವ ಈ ಕೆಳಗಣ ನಿಬಂಧನೆಗಳನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಕಟಪಡಿಸಿರುತ್ತದೆ:—

1. ಜಫ್ತಿಯಾಗಿರುವ ಚರಸ್ವತ್ತುಗಳನ್ನು 6 ತಿಂಗಳಿಗಿಂತ ಜಾಸ್ತಿಯಾಗಿ ಕೋರ್ಟಿನಲ್ಲಿ ಇಟ್ಟಿದ್ದ ಪಕ್ಷದಲ್ಲಿ ಕಕ್ಷಿಗಾರರೂ ಮತ್ತು ಹಕ್ಕುದಾರರೂ ಯಾರಾದರೂ ಇದ್ದರೆ ಅವರಿಗೆ ನೋಟೀಸು ಕೊಟ್ಟು, ಅವುಗಳನ್ನು ಹರಾಜ್‌ಮಾಡಿಬಿಡಬಹುದು. ಹರಾಜಿನಲ್ಲಿ ಬಂದ ಹಣದಲ್ಲಿ ಸದರಿ ನೋಟೀಸ್ ಮತ್ತು ಹರಾಜಿಗೆ ತಗಲಿದ ಖರ್ಚು ಜಾತಾ ಮಿಕ್ಕದ್ದನ್ನು ಖಜಾನೆಯಲ್ಲಿ ಇಟ್ಟಿದ್ದು ಅದನ್ನು ಜಫ್ತಿಯಾದ ಸ್ವತ್ತನ್ನು ಯಾವ ರೀತಿಯಲ್ಲಿ ವ್ಯವಸ್ಥೆಪಡಿಸುತ್ತಿತ್ತೋ ಅದೇ ರೀತಿಯಲ್ಲಿ ವ್ಯವಸ್ಥೆಪಡಿಸಬೇಕು. ಹೀಗೆ ಹರಾಜು ಮಾಡುವದಕ್ಕೆ ತಗಲುವ ಖರ್ಚನ್ನು ನಾಜರ್ರವರ ಬಳಿ ಇರುವ ಖಾಯಂ ಅಡ್ವಾನ್ಸಿನಿಂದ ತೆಗೆದುಕೊಂಡು ಹರಾಜಿನಲ್ಲಿ ಬಂದ ಹಣದಿಂದ ಅದನ್ನು ಭರ್ತಿ ಮಾಡಿಕೊಳ್ಳಬೇಕು.

2. ಜಫ್ತಿಯಾದ ಪ್ರಾಣಿಗಳ ವಿಷಯದಲ್ಲಾದರೋ ಜಡ್ಜಮೆಂಟು ದೇಣೇದಾರನು ಅವುಗಳನ್ನು ಮುಂಚಿತವಾಗಿಯೇ ಹರಾಜ್ ಮಾಡಬೇಕೆಂದು ಕೋರ್ಟಿಗೆ ಅರ್ಜಿಕೊಟ್ಟರೆ ಹೊರ್ತು ಅವು ಜಫ್ತಿಯಾದ ತಾರೀಖಿನ ಲಾಗಾಯಿತು 2 ತಿಂಗಳು ಕಳೆದ ಮಾರನೇ ದಿವಸ ಹರಾಜ್ ಮಾಡಬೇಕು. ಹರಾಜಿನಲ್ಲಿ ಬಂದ ಮೊಬಲಗಿನ ಪೈಕಿ ಖರ್ಚು ಜಾತಾ ಉಳಿಯುವುದನ್ನು ಖಜಾನೆಯಲ್ಲಿ ಡಿಪಾಜಿಟ್ ಇಟ್ಟು ಜಫ್ತಿಯಾದ ಮಾಲನ್ನು ಯಾವರೀತಿ ವ್ಯವಸ್ಥೆಪಡಿಸುತ್ತಿತ್ತೋ ಆ ರೀತಿಯಲ್ಲಿ ವ್ಯವಸ್ಥೆ ಪಡಿಸಬೇಕು.

3. ಕೋರ್ಟಿನವರು 10 ರೂಪಾಯಿಗೆ ಕಮ್ಮಿ ಬಾಳುತ್ತದೆಯೆಂದು ಅಭಿಪ್ರಾಯಪಡುವ ಯಾವ ಮಾಲನ್ನಾದರೂ ನೋಟೀಸು ಇಲ್ಲದೇನೆ ಮೇಲ್ಕಂಡಂತೆ ಗೊತ್ತಾದ ಅವಧಿಯ ನಂತರ ಹರಾಜ್ ಮಾಡಿಬಿಡಬಹುದು. ಹರಾಜಿನಲ್ಲಿ ಬಂದ ಮೊಬಲಗಿನ ಪೈಕಿ ಖರ್ಚು ಜಾತಾ ಉಳಿಯುವದನ್ನು ಜಫ್ತಿಯಾದ ಮಾಲಿನಂತೆ ಭಾವಿಸಿ ವ್ಯವಸ್ಥೆ ಪಡಿಸಬೇಕು.

4. ಯಾರ ಮಾಲನ್ನು ಜಫ್ತಿಮಾಡಿರುತ್ತದೆಯೋ ಅಥವಾ ಯಾರ ವಶದಿಂದ ಅದನ್ನು ತೆಗೆದುಕೊಂಡಿರುತ್ತದೆಯೋ, ಅಂಥಾ ಮನುಷ್ಯನು ಕೋರ್ಟಿನವರಿಗೆ ತೃಪ್ತಿಕರವಾಗಿ ಜಾಮೀನ್ ಕೊಟ್ಟರೆ, ಸದರಿ ಮಾಲನ್ನು ಆತನಿಗೆ ವಾಪಸ ಕೊಡಬಹುದು. ಜಫ್ತಿಯಾದ ಪ್ರಾಣಿಗಳನ್ನು ಜಡ್ಜಮೆಂಟು ದೇಣೇದಾರನು ಅಥವಾ ಅವುಗಳನ್ನು ಯಾರವಶದಿಂದ ತೆಗೆದುಕೊಂಡಿರುತ್ತದೆಯೋ ಆತನು ಅವುಗಳ ಪೋಷಣೆಗೂ ಮತ್ತು ವಶದಲ್ಲಿಟ್ಟುಕೊಂಡಿರುವದಕ್ಕೂ ತಕ್ಕ ಏರ್ಪಾಡುಮಾಡಲು ಇಷ್ಟಪಡದಿದ್ದರೆ, ಅವುಗಳ ಮಾಲೀಕನಿಗೆ ನೋಟೀಸುಕೊಟ್ಟನಂತರ ಅವುಗಳನ್ನು ಸದರಿ ಷರತ್ತುಗಳ ಮೇಲೆ ಜಫ್ತಿ ಮಾಡುವ ಲೇಣೇದಾರನ ವಶಕ್ಕೆ ಕೊಡಬೇಕು.

5. ಜಫ್ತಿಯಾದ ಮಾಲನ್ನು ಬಬ್ಬ ಜಾಮೀನ್ದಾರನ ವಶದಲ್ಲಿ ಇಟ್ಟಿದ್ದರೆ, ಸದರಿ ಜಾಮೀನ್ದಾರನು ಅದರ ಹರಾಜಿಗಾಗಲಿ ಅಥವಾ ತನ್ನ ಜವಾಬ್ದಾರಿಯಿಂದ ತಾನು ಬಿಡಗಡೆ ಹೊಂದುವಬಗ್ಗೆಯಾಗಲಿ ಅರ್ಜಿ ಹಾಕಿಕೊಳ್ಳಬಹುದು. ಇದರಮೇಲೆ ಕೋರ್ಟಿನವರು ಸದರಿ ಅರ್ಜಿಯ ವಿಚಾರವಾಗಿ ಜಾಮೀನ್ದಾರನ ಖರ್ಚಿನಿಂದ ಕಕ್ಷಿಗಾರರಿಗೆ ನೋಟೀಸು ಜಾರಿ ಮಾಡಿಸಬೇಕು. ಮತ್ತು ಸಂಬಂಧಪಟ್ಟ ಕಕ್ಷಿಗಾರರು ಸದರಿ ಮಾಲನ್ನು ಗೊತ್ತಾದ ಕಾಲಾವಧಿಯೊಳಗಾಗಿ ಹರಾಜು ಮಾಡಿಸುವುದಕ್ಕಾಗಲಿ, ಬಿಡಿಸಿಕೊಳ್ಳುವುದಕ್ಕಾಗಲಿ ಅಮಲನ್ನು ನಡೆಸದೆಹೋದರೆ ಅದನ್ನು ಹರಾಜು ಮಾಡಬಹುದು. ಹರಾಜಿನಲ್ಲಿ ಬಂದ ಮೊಬಲಗಿನ ಪೈಕಿ ನೋಟೀಸನ್ನು ಜಾರಿ ಮಾಡಿಸುವುದಕ್ಕೂ, ಸದರಿ ಮಾಲನ್ನು ಜಾಗರೂಕತೆಯಿಂದ ನೋಡಿಕೊಳ್ಳುವುದಕ್ಕೂ ಜಾಮೀನ್ದಾರನಿಗೆ ನ್ಯಾಯವಾಗಿ ತಗಲಿದ ಖರ್ಚನ್ನು ವಜಾಮಾಡಿ ಮಿಕ್ಕದ್ದನ್ನು ಕೋರ್ಟಿನಲ್ಲಿ ಡಿಪಾಜಿಟ್ ಇಡಬೇಕು. ಪ್ರಾಣಿಗಳ ವಿಷಯದಲ್ಲಿ ಜಾಮೀನ್ದಾರನು ಅಂಥಾ ಅರ್ಜಿಯನ್ನು ಅವು ಜಫ್ತಿಯಾದ ತಾರೀಖಿನ ಲಾಗಾಯಿತು 60 ದಿವಸಗಳೊಳಗಾಗಿ ಹಾಕಬೇಕು. ಹೀಗೆ ಮಾಡದೆ ಇದ್ದರೆ, ಆ ಕಾಲಕ್ಕಿಂತ ಜಾಸ್ತಿಯಾಗಿ ಅವುಗಳನ್ನು ಪೋಷಣೆಮಾಡಿದ ಯಾ ವಶದಲ್ಲಿಟ್ಟುಕೊಂಡಿದ್ದ ಬಗ್ಗೆ ಖರ್ಚನ್ನು ಪಡೆಯಲು ಅವರಿಗೆ ಹಕ್ಕಿರುವುದಿಲ್ಲ.

6. ಜಫ್ತಿ ಮಾಡಲ್ಪಟ್ಟ ಪ್ರಾಣಿಗಳು ಮುಂತಾದ ಮಾಲನ್ನು ವಶದಲ್ಲಿಟ್ಟುಕೊಂಡು ಜೋಪಾನವಾಗಿ ನೋಡಿಕೊಳ್ಳುವ ಬಗ್ಗೆ ಖರ್ಚು ತಗಲಿದ ಸಂದರ್ಭದಲ್ಲಿ ಎರಡು ತಿಂಗಳುಗಳಿಗಿಂತ ಜಾಸ್ತಿಕಾಲ ತಗಲಿದ ಖರ್ಚನ್ನು ಕೊಡಿಸಲಾಗುವುದಿಲ್ಲ. ಪರಂತು, ಅಂಥಾ ಖರ್ಚು ಮಾಲಿನ ಖರೀದಿಗಿಂತ ಹೆಚ್ಚಾಗಲೇಕೂಡದು. ಆದರೆ ಮಾಲನ್ನು ಹರಾಜುಮಾಡುವ ಬಗ್ಗೆ ಕಾಲಾವಧಿಯನ್ನು ಜಾಸ್ತಿ ಮಾಡಿದರೆ ಅದನ್ನು ವಶದಲ್ಲಿಟ್ಟುಕೊಂಡಿರುವ ಮನುಷ್ಯನು ಎರಡೆರಡು ತಿಂಗಳು ಕಳೆದ ನಂತರ ಅಂಥಾ ಖರ್ಚನ್ನು ಕೊಡಲು ಹುಕುಂ ಆಗಬೇಕೆಂದು ಕೋರ್ಟಿಗೆ ಅರ್ಜಿ ಹಾಕಿಕೊಳ್ಳಬಹುದು. ಜಫ್ತಿಯಾದ ಮಾಲು ತನ್ನದೆಂದು ಯಾರಾದರೂ ಹಕ್ಕು ಜಾಹಿರ್ಮಾಡಿಕೊಂಡದ್ದರಿಂದ ಅದರ ಮಾರಾಟವು ನಿಂತುಹೋಗಿ ಇದ್ದರೆ, ಹಾಗೆ ನಿಂತುಹೋದ ಕಾಲದಲ್ಲಿ ತಗಲಿದ ಖರ್ಚು ಹೇಗೆ ಪಾವತಿಯಾಗಬೇಕೆಂದರೆ:— ಅಂಥಾ ಹಕ್ಕುದಾರನು ತನ್ನ ಹಕ್ಕನ್ನು ಸ್ಥಾಪಿಸಲು ತಪ್ಪಿದರೆ ಆತನಿಂದಲೂ, ಅಂಥಾ ಹಕ್ಕು ಸ್ಥಾಪಿತವಾದರೆ ಜಫ್ತಿ ಮಾಡುವ ಲೇಣೇದಾರನಿಂದಲೂ ಪಾವತಿಯಾಗತಕ್ಕದ್ದು.

7. ಜಫ್ತಿಯಾದ ಮಾಲನ್ನು ವಶದಲ್ಲಿಟ್ಟುಕೊಂಡು ಜೋಪಾನವಾಗಿ ನೋಡಿಕೊಳ್ಳುವುದಕ್ಕಾಗಿ ತಗಲುವ ಖರ್ಚು ಮಿತಿಮೀರಿ ಜಾಸ್ತಿಯಾಗುವಹಾಗಿದ್ದರೆ, ಅದನ್ನು ತತ್‌ಕ್ಷಣವೇ ಹರಾಜ್ ಮಾಡಿಬಿಡುವ ಬಗ್ಗೆ ಸಿವಿಲ್ ಪ್ರೊಸೀಜರ ಕೋಡಿನ 269ನೆ ಪ್ರಕರಣದಲ್ಲಿರುವ ವಿಧಿಗಳನ್ನು ಜಾರಿಯಲ್ಲಿ ತರಬೇಕು.

8. ದನಗಳು ಅಥವಾ ಇತರ ಪ್ರಾಣಿಗಳು ಬಬ್ಬ ಜಾಮೀನ್ದಾರನ ಯಾ ಜಫ್ತಿ ಮಾಡುವ ಲೇಣೇದಾರನ ವಶದಲ್ಲಿದ್ದು ಆತನು ಅವುಗಳನ್ನು ತನಗೆ ಲಾಭಕರವಾಗಿ ಉಪಯೋಗಿಸಿದರೆ, ಅವುಗಳನ್ನು ವಶದಲ್ಲಿಟ್ಟುಕೊಂಡು ಪೋಷಣೆ ಮಾಡಿದ್ದಕ್ಕಾಗಿ ಆತನಿಗೆ ಸಲ್ಲತಕ್ಕ ಪ್ರತಿಫಲವನ್ನು ಕೋರ್ಟಿನವರಿಗೆ ಯುಕ್ತ ತೋರಿದಂತೆ ಎಲ್ಲವನ್ನಾಗಲಿ ಅಥವಾ ಒಂದು ಭಾಗವನ್ನಾಗಲಿ ಕೊಡಲು ನಿರಾಕರಿಸಬಹುದು.

ಈ ನಿಬಂಧನೆಗಳನ್ನು 1906ನೆ ಜುಲೈ 25ನೆ ತಾರೀಖು ಜ್ಯು. 225—ಕೋರ್ಟ್ಸ್ 202—05—6ನೆ ನಂಬರ್ ಇಸ್ತಿಹಾರ್ನಾಮೆಯಿಂದ ತಿದ್ದುಪಾಟಾದ 1899ನೆ ಅಕ್ಟೋಬರ್ 12ನೆ ತಾರೀಖು 4671-399ನೆ ನಂಬರು ಇಸ್ತಿಹಾರುನಾಮೆಯಲ್ಲಿ ಸಾದರಾದ ನಿಬಂಧನೆಗಳೊಡನೆ ಓದಿಕೊಳ್ಳಬೇಕು.

B

ತಾರೀಖು 1ನೆ ಫೆಬ್ರವರಿ 1909.

ನಂ. ಜ. 4710—ಜ. ಪಿ. 22—08—42, ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳಾದ ಮಿ|| ಎಸ್. ಪಿ. ರಾಜಗೋಪಾಲಾಚಾರಿ, ಬಿ. ಎ., ಬಿ. ಎಲ್., ಯವರನ್ನೂ, ಮಿ|| ಡಿ. ಶ್ರೀನಿವಾಸೈಯ್ಯಂಗಾರ್, ಬಿ. ಎ., ಯವರನ್ನೂ 1908ನೆ ಇಸವಿಯ ಡಿಸೆಂಬರು 6ನೆ ತಾರೀಖು ಲಾಗಾಯಿತು A ಷೆಡ್ಯೂಲಿನ ಐದನೇ ತರಗತಿಯ ಅಸಿಸ್ಟೆಂಟ್ ಕಮಿಷನರುಗಳಾಗಿ ಖಾಯಂಮಾಡಿ ಇದೆ.

ತಾರೀಖು 17ನೆ ಫೆಬ್ರವರಿ 1909.

ನಂ. ಜ್ಯು. 2422—ಕೋ. 233—08—5, 1904ನೆ ಇಸವಿ ಕ್ರಿಮಿನಲ್ ಪ್ರೊಸೀಜರ್ ಕೋಡ್ 357ನೆ ನಂಬರ್ ಪ್ರಕರಣದವರೇಗೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮತ್ತು 1ನೆ ಕ್ಲಾಸ್ ಮಾಜಿಸ್ಟ್ರೇಟರಾದ ಮಿ|| ಜಿ. ಬಿ. ಹಬ್ಲಿಕರ್, ಬಿ. ಎ., ಎಲ್. ಎಲ್. ಬಿ., ಯವರು ಸಾಕ್ಷಿಗಳ ಹೇಳಿಕೆಗಳನ್ನು ತಾವೇ ಖುದ್ದಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದುಕೊಳ್ಳಬೇಕೆಂದು ಹುಕುಂ ಮಾಡಿರುತ್ತದೆ.

ತಾರೀಖು 20ನೆ ಫೆಬ್ರವರಿ 1909.

ನಂ. 8199—ವಿದ್ಯಾ. 179-08-4, 1909ನೆ ಇಸವಿ ಜನವರಿ 18ನೆ ತಾರೀಖಿನ 6708—ವಿದ್ಯಾ. 179-08-2ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಮೈಸೂರು ಓರಿಯಂಟಲ್ ಲೈಬ್ರೇರಿ ಯಾ ಪುಸ್ತಕ ಭಂಡಾರದ ಕ್ಯೂರೇಟರವರಾದ ಮಿ|| ಎ. ಮಹದೇವ ಶಾಸ್ತ್ರಿಗಳವರಿಗೆ ಕೊಟ್ಟಿದ್ದ 15 ದಿವಸಗಳ ಪ್ರಿವಿಲೇಜ್ ರಜಾ ಜೊತೆಗೆ 5 ದಿವಸಗಳ ರಜಾವನ್ನು ಜಾಸ್ತಿಯಾಗಿ ಕೊಟ್ಟಿರುತ್ತದೆ ಈಗಿನ ಏರ್ಪಾಟುಗಳೇ ಅವರು ರಜಾದಮೇಲಿರುವಾಗ ಜಾರಿಯಲ್ಲಿರತಕ್ಕದ್ದು.

ತಾರೀಖು 19ನೆ ಫೆಬ್ರವರಿ 1909.

ನಂ. ರೆ. 6450—ಲ್ಯಾ. ರೆ. 11—08—12, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಮಾಲೂರು ಫಾರೆಸ್ಟು ಲಾಡ್ಜು ಕಂಪೌಂಡು ಬಡಾವಣೆಗಾಗಿ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮಾಲೂರು ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಯಾ ಅನುಭೋಗದಾರರ ಹೆಸರು.	ಸರ್ವೆ ಯಾ ಪೋತಿ ನಂಬರು.	ಖುಷ್ಕಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಜಮೀನು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಮಾಲೂರು	ಮಾಲೂರು	ಮಾಲೂರು	ಸಿಂಗಪ್ಪಯ್ಯ	265	ಖುಷ್ಕಿ	ಎ. 2 ಗು. 11	ಎ. 2 ಗು. 11	ರೂ. 4	ಎ. 2 ಗು. 11	ರೂ. 4	ಸರ್ವೆ ನಂಬರು 266	ಸರ್ವೆ ನಂಬರು 256	ಸರ್ವೆ ನಂಬರು 239	ಸರ್ವೆ ನಂಬರು 264

ತಾರೀಖು 16ನೆ ಫೆಬ್ರವರಿ 1909.

ನಂ. 3682—ಸೆ. ರೆ. 97—08, 1909ನೆ ಜನವರಿ 26ನೆ ಮರ್ಕೂಂನ ಫೈ. 3267-8—ಸೆ. ರೆ. 97-08ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ತುಮಕೂರು ಡಿಸ್ಟ್ರಿಕ್ಟು ಎಕ್ಸೈಜು ಆಫೀಸರಾಗಿ ನೇಮಿಸಲ್ಪಟ್ಟ ಮಿ|| ಅಬ್ದುಲ್ಲಾ ಷರೀಫರನ್ನು ಕಡೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಿ ಇದೆ. ಇದರಿಂದ 8—12—08ನೆ ಮರ್ಕೂಂನ ಫೈ. 2635—ಸೆ. ರೆ. 97—08ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮಿ|| ಸಿ. ಕೃಷ್ಣಮಾಚಾರಿಯವರನ್ನು ತುಮಕೂರಿಂದ ಚಿತ್ರದುರ್ಗಕ್ಕೂ, ಮಿ|| ಹಸನಲ್ಲಿ ಯವರನ್ನು ಚಿತ್ರದುರ್ಗದಿಂದ ಕಡೂರಿಗೂ ವರ್ಗಾಯಿಸಿ ಇರುವದನ್ನು ರದ್ದುಪಡಿಸಿ ಇರುತ್ತೆ.

ತಾರೀಖು 12ನೆ ಫೆಬ್ರವರಿ 1909.

ನಂ. ರೆ. 6095—ಫಾರೆಸ್ಟು 130-08-2, ಸನ್ 1900ನೆ ಇಸವಿ XIನೆ ನಂಬರು ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನಿನ ವಿಧಿಗಳನ್ನನುಸರಿಸಿ ಮೈಸೂರು ಸೀಮೆಯ ಧನವಸ್ಥೈರಿದ ಶ್ರೀಮನ್ ಮಹಾರಾಜಾ ರಾಜಾ ಸಾಹೇಬ್ ಬಹದೂರ್‌ರವರ ಸರ್ಕಾರದಿಂದ ಪ್ರಸಿದ್ಧಪಡಿಸುವದೇನಂದರೆ—

ಇದರಡಿ ಕಂಡ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನ್ನಂತೆ ಸ್ಟೇಟ್ ಫಾರೆಸ್ಟಾಗಿ ಏರ್ಪಾಡು ಆಗತಕ್ಕದ್ದೆಂದು ಯೋಚಿಸಿರುತ್ತೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಗ್ರಾಮ.	ಅಂದಾಜು ವಿಸ್ತೀರ್ಣ.	ಪ್ರತಿ ಜಂಗಲು.	ಸ್ಥಳ.
ಶಿವಮೊಗ್ಗ	ನಗರ, ನಗರ, ಮತ್ತಿಕ್ಕೈ	18194-9 ಎಕರೆ 28 ಚದರ ಮೈಲಿ 274 ಎಕರೆ 9 ಗುಂಟೆ	ಕೆಳಗಂಡರು	ಹೈದರ್‌ಘರ್ ಗಾಟ್, ಅಸ್ತ್ರಯು ಪಶ್ಚಿಮ ದಿಕ್ಕಿನ ಜಂಗಲಿ.

ಉತ್ತರಕ್ಕೆ—ನಗರ ತಾಲ್ಲೂಕು ಕಟ್ಟಿನಹೊಳೆ ಗ್ರಾಮದ ಸರ್ವೆ ನಂಬರು 15ರ ದಕ್ಷಿಣ ಮೂಲೆಯಿಂದ ಲೈನ್ ಹೊರಟು ಪೂರ್ವಾಭಿಮುಖವಾಗಿ ಸುಮಾರು 1 ಮೈಲಿ 1 ಫರಲಾಂಗು 5 ಸರಪಣಿ ಸದರಿ ಸರ್ವೆ ನಂಬರು ದಕ್ಷಿಣ ಭಾಗದ ಗಡಿಯನ್ನು ಅನುಸರಿಸಿ ಅದೇ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತೆ. ಮತ್ತು ಈಶಾನ್ಯವಾಗಿ ಸುಮಾರು 4 ಫರಲಾಂಗು 2 ಸರಪಣಿ ಸದರಿ ಗ್ರಾಮದ ಸರ್ವೆ ನಂಬರು 84ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಪೂರ್ವಾಭಿಮುಖವಾಗಿ ಸುಮಾರು 2 ಫರಲಾಂಗು 5 ಸರಪಣಿ ಮತ್ತಿಕ್ಕೈ ಸರ್ವೆ ನಂಬರು 138ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂಬರು 135ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 3 ಫರಲಾಂಗು ಸರ್ವೆ ನಂಬರು 134ರಲ್ಲಿ ಹಾದು ಸರ್ವೆ ನಂಬರು 131ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 131 ಮತ್ತು 130ರ ದಕ್ಷಿಣ ಗಡಿಯನ್ನನುಸರಿಸಿಯೂ ಮತ್ತು ಸರ್ವೆ ನಂಬರು 130ರ ಪೂರ್ವ ಗಡಿಯನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 4 ಫರಲಾಂಗು 5 ಸರಪಣಿ ಸರ್ವೆ ನಂಬರು 129ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 117ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಲೈನ್ ಹೊರಟು ಆಗ್ನೇಯವಾಗಿ ಸುಮಾರು 6 ಫರಲಾಂಗು ಸರ್ವೆ ನಂಬರು 116ರ ಪಶ್ಚಿಮ ಗಡಿಯನ್ನನುಸರಿಸಿ ಕಟ್ಟಿನಹೊಳೆ, ಮತ್ತಿಕ್ಕೈ, ಬ್ರಾಹ್ಮಣವಾಡ, ಕೆಳಂದೂರು ಜಂಗಲಿನ ನಾಗುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಅದೇ ದಿಕ್ಕಿಗಾಗಿ ಸುಮಾರು 5 ಫರಲಾಂಗು 5 ಸರಪಣಿ ಬ್ರಾಹ್ಮಣವಾಡಾ ಸರ್ವೆ ನಂಬರು 49ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತೆ. ಮತ್ತು ದಕ್ಷಿಣವಾಗಿ 5 ಫರಲಾಂಗು 2 ಸರಪಣಿ ಸದರಿ ಗ್ರಾಮದ ಸರ್ವೆ ನಂಬರು 42ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 53ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 54, 56 ಮತ್ತು 57 ಉತ್ತರ ಗಡಿಯನ್ನನುಸರಿಸಿ ಸರ್ವೆ ನಂಬರು 57ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 57, 58 ಮತ್ತು 54ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 54ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 69ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 2 ಫರಲಾಂಗು 5 ಸರಪಣಿ ಸರ್ವೆ ನಂಬರು 70ರ ಪಶ್ಚಿಮ ಗಡಿಯನ್ನನುಸರಿಸಿ ಮಳಲಿ ಸರ್ವೆ ನಂಬರು 48ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 47ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 48ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 59, 50, 51 ಮತ್ತು 52ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 52ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 52ರ ಪೂರ್ವದಲ್ಲೂ 53 ಮತ್ತು 57ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 57ರ ಪೂರ್ವ ಗಡಿಯನ್ನನುಸರಿಸಿ ಕೊನೇ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 8 ಸರಪಣಿ ಸರ್ವೆ ನಂಬರು 58ರಲ್ಲಿ ಹಾದು ಸರ್ವೆ ನಂಬರು 97ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 97ರ ಪಶ್ಚಿಮ ಗಡಿ ಅನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ದಕ್ಷಿಣವಾಗಿ ಸುಮಾರು 4 ಫರಲಾಂಗು 5 ಸರಪಣಿ ಸರ್ವೆ ನಂಬರು 37ರ ಪಶ್ಚಿಮ ಗಡಿಯನ್ನನುಸರಿಸಿ ಕೆರೇಮನೆ ಸರ್ವೆ ನಂಬರು 143ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 1 ಮೈಲಿ 1 ಫರಲಾಂಗು 5 ಸರಪಣಿ ಕೆರೇಮನೆ ಸರ್ವೆ ನಂಬರು 143ರ ಪಶ್ಚಿಮ ಗಡಿಯನ್ನನುಸರಿಸಿ 143, 16, 165ನೆ ಸರ್ವೆ ನಂಬರುಗಳ ಮೂಗುಪ್ಪೆ ಬಾಂದಿಗೆ ಸೇರುತ್ತದೆ. ನಂತರ ನೈರುತ್ಯವಾಗಿ ಸುಮಾರು 2 ಫರಲಾಂಗು 3 ಸರಪಣಿ ಸರ್ವೆ ನಂಬರು 165ರ ಉತ್ತರ ಗಡಿಯನ್ನನುಸರಿಸಿ ಕಾಡುಕೊಳಹಳ್ಳದ ಬಲಗಡಕ್ಕೆ ಹೋಗಿ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 1 ಮೈಲಿ 5 ಫರಲಾಂಗು ಸದರಿ ಕಾಡುಕೊಳಹಳ್ಳದ ಬಲದಡವನ್ನನುಸರಿಸಿ ಕೆರೇಮನೆ ಸರ್ವೆ ನಂಬರು 27ರ ಆಗ್ನೇಯ ಮೂಲೆಯಿಂದ ಆಗ್ನೇಯ ದಿಕ್ಕಿಗೆ 3 ಸರಪಣಿ ದೂರದಲ್ಲಿ ಒಂದು ಸ್ಥಳಕ್ಕೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಫರಲಾಂಗು ಸರ್ವೆ ನಂಬರು 178ರಲ್ಲಿ ಹಾದು ಭೈರಗುಂದದ ಸರ್ವೆ ನಂಬರು 12ರ ಈಶಾನ್ಯ ಮೂಲೆಗೆ ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಲೈನ್ ಹೊರಟು ನೈರುತ್ಯವಾಗಿ ಸುಮಾರು 1 ಮೈಲಿ 4 ಫರಲಾಂಗು ಕೆರೇಮನೆ ಮತ್ತು ಭೈರಗುಂದದ ಗ್ರಾಮಗಳ ಗಡಿಯನ್ನನುಸರಿಸಿ ದಕ್ಷಿಣ ಕನ್ನಡ ಜಿಲ್ಲೆ ಗಡಿಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನ್ ಹೊರಟು ದಕ್ಷಿಣ ಕನ್ನಡ ಜಿಲ್ಲೆ ಗಡಿಯನ್ನನುಸರಿಸಿ ಹೋಗಿ ಹೊರಟ ಸ್ಥಳಕ್ಕೆ ಸೇರುತ್ತದೆ.

ಈ ಕೆಳಗೆ ನಮೂದಿಸಿರುವ ಹಿಡುವಳಿ ಮತ್ತು ಹಿಡುವಳಿಯಲ್ಲಿಲ್ಲದ ಆಕಾರ ಕಂಡ ಜಮೀನುಗಳನ್ನು ಈ ಬ್ಲಾಕಿಗೆ ಅವರಣಗಳಾಗಿ ಭಾವಿಸಿದೆ:—

ಗ್ರಾಮದ ಹೆಸರು.	ಹಿಡುವಳಿ ಜಮೀನು.			ಹಿಡುವಳಿಯಲ್ಲಿಲ್ಲದ ಜಮೀನು.		
	ಸರ್ವೆ ನಂ.	ವಿಸ್ತೀರ್ಣ.		ಸರ್ವೆ ನಂ.	ವಿಸ್ತೀರ್ಣ.	
		ಎ.	ಗು.		ಎ.	ಗು.
ಕಟ್ಟಿನಹೊಳೆ ...	113	2	38	116	3	20
	115	1	38	119	1	36
	117	6	15	120	1	2
	118	5	14	121	1	22
	134	1	27	122	0	23
	135	2	16	123	1	28
	136	5	24	124	0	5
				109	0	22
				110	0	30
				111	2	12
				112	3	9
				114	0	8
				128	2	14
				129	8	32
				130	1	37
				137	0	30
				138	3	14
ಮಳಲಿ ...	85	12	12	86	0	37
				87	7	12
ಕೆರೇಮನೆ ...	146	6	17	175	10	18
	147	0	22	176	2	29
	148	3	38	177	7	2
	149	6	18	179	5	22
	151	4	0	180	10	14
	152	8	0			
	153	0	12			
	154	3	0			
	155	2	35			
	156	0	7			
	157	0	2			
	158	0	1			
	159	10	5			
	160	5	38			
	161	1	0			
	162	2	18			
	163	3	20			

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅನ್ಯೋನ್ಯ ಸಹಾಯಕ ಸಂಘಗಳ ರಿಜಿಸ್ಟ್ರಾರವರಾದ ಮಿ|| ಎಂ. ಶಾಮರಾಯರವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟಲ್ಮೆಂಟ್ ಆಫೀಸರಾಗಿ ನೊಕರರ್ಮಾಡಲೂ, ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟು ಸೆಟಲ್ಮೆಂಟ್ ಆಫೀಸರಿಗೆ ಸರ್ಕಾರ್ ತರಫು ಕುಮ್ಮಕ್ಕು ಮಾಡಲು ಹಾಜರಾಗುವಂತೆ ನೊಕರರ್ಮಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು, ಫಾರೆಸ್ಟು ಸೆಟ್ಲ್‌ಮೆಂಟ್ ಆಫೀಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫೀಸರಾಗಿ ನೇಮಕ ಮಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 19ನೆ ಫೆಬ್ರವರಿ 1909.

ನಂ. ರೆ. 6432—ಲ್ಯಾ. ರೆ. 22—08—62, ಸರ್ 1894ನೆಯ ವರ್ಷದ 7ನೆಯ ನಂಬರು ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮನೆ ಕಟ್ಟುವದಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಅಥವಾ ಅನುಭವದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಅಥವಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ತೆಗೆದುಕೊಂಡ ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಚಾಮರಾಜನಗರ	ಹರದ	ನಲ್ಲೂರು	ನಾಗೇಗೌಡ	215	ಖುಷ್ಕಿ	ಎ. ಗು. 6 20	ಗು. 5	ಎ. ಗು. 6 15	ರೂ. 5	ಎ. ಗು. 6 15	ರೂ. 5	ಹಳ್ಳ	ಕಾಲುದಾರಿ	ಸರ್ವೆ ನಂಬರು 214	ಸರ್ವೆ ನಂಬರು 219

ತಾರೀಖು 22ನೆ ಫೆಬ್ರವರಿ 1909.

ನಂ. ರೆ. 6492—ಲ್ಯಾ. ರೆ. 22-08-65, ಸರ್ 1894ನೆಯ 7ನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ ಅನುಸರಿಸಿ ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಅಂದರೆ, ಕಾಗಲವಾಡಿ ಕೆರೆ ಏರಿ ಬಡಾವಣೆ ಬಸ್ತೀ ಬೇಕಾಗಿರುವುದರಿಂದ ಸದರಿ ಜಮೀನುಗಳನ್ನು ಪಡೆಯಲು ನಂಜನಗೂಡು ಸಬ್ ಡಿವಿಜನಲ್ ಅಸಿಸ್ಟೆಂಟ್ ಕಮಿಷನರವರಿಗೆ ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಜಮೀನಿನ ತಪ್ಸೀಲ್. ಸರ್ವೆ ನಂ.	ಖುಷ್ಕಿ, ತರಿ ಯಾ ಬಾಗಾಯಿತು.	ವಿಸ್ತೀರ್ಣ.	ಕಂದಾಯ.	ಸರ್ಕಾರಕ್ಕೆ ತೆಗೆದುಕೊಂಡ ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಗು.	ರೂ. ಆ.	ಗು.	ಆ.				
ಮೈಸೂರು	ಚಾಮರಾಜನಗರ	ಚಂದಕವಾಡಿ	ಕಾಗಲವಾಡಿ	ಅಶ್ವತ್ಥ ನಾರಸ್ಯೆಯ್ಯ.	188/3	ಖುಷ್ಕಿ	12	0 8	12	8	ಕೆರೆ ಏರಿ	ಸರಗೂರಿಗೆ ಹೋಗತಕ್ಕ ರಸ್ತೆ	ಸರ್ವೆ ನಂ. 189	ಸರ್ವೆ ನಂ. 187
				ತಳವಾರ ಶಿದ್ಧ.	195	ಡಿಟೋ ಬಾಗಾಯಿತು.	9 5	0 4 0 8	9 5	4 8	ಕೆರೆ	ಸರ್ವೆ ನಂ. 210	ಸರ್ವೆ ನಂ. 210	ಸರ್ವೆ ನಂ. 189

ಹುಕುಂ ಬಮೋಜಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಆಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 9.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 4, ಸನ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಿಕ್ಸ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನಸ್ಪೆಕ್ಟರ್ ಜನರಲ್ಲನರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡಪ್ಯೂಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 20ನೆ ಫೆಬ್ರವರಿ 1909.

ನಂ. 8196—ಸ್ಯಾನಿಟರಿ 76-08—44, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕೆಸ್ತೂರ	ಎಳಂದೂರು.
ಬೂಚಹಳ್ಳಿ	ಡಿಟೋ
ಹೊನ್ನೂರು	ಡಿಟೋ
ಅಲಕೆರೆ ಅಗ್ರಹಾರ	ಡಿಟೋ
ಬ್ಯಾಡರಹಳ್ಳಿ	ಎಡತೊರೆ.
ಬೆಳ್ಳಹಳ್ಳಿ	ಡಿಟೋ
ಕನ್ನಗನಹಳ್ಳಿ	ಡಿಟೋ
ಹರವೆ	ಹುಣಸೂರು.
ಕಂಪಲಾಪುರ	ಡಿಟೋ
ಮಲ್ಲರಾಜಪಟ್ಟಣ	ಡಿಟೋ
ತಗಡೂರು	ನಂಜನಗೂಡು.
ಕರೀಹುಂಡಿ	ಡಿಟೋ
ಕುರುಬೂರು	ಟಿ. ನರಸೀಪುರ.
ಸೋರಬ	ಡಿಟೋ
ಬೂಕಿನಕೆರೆ	ಕೃಷ್ಣರಾಜಪೇಟೆ.

ತಾರೀಖು 17ನೆ ಫೆಬ್ರುವರಿ 1909.

ನಂ. 8095—ಸ್ಯಾನಿಟೆರಿ 14—08—22, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಮೇಲಗೊಂಡನಹಳ್ಳಿ	ಹಾಸನ.
ಮೈಲನಹಳ್ಳಿ	ಡಿಟೋ

ತಾರೀಖು 1ನೆ ಮಾರ್ಚಿ 1909.

ನಂ. 8474—ಸ್ಯಾನಿಟೆರಿ 42-08-5, ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಗ್ರಾಮಕ್ಕೆ ತಿಪ್ಪೆರುದ್ರನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 10ನೆ ತಾರೀಖಿನಿಂದ 1909ನೆ ಮಾರ್ಚಿ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 1ನೆ ಮಾರ್ಚಿ 1909.

ನಂ. 8476—ಸ್ಯಾನಿಟೆರಿ 85-08-4, ಹಾಸನ ಡಿಸ್ಟ್ರಿಕ್ಟು ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳಕ್ಕೆ ಶ್ರೀ ಗೋಮಟೇಶ್ವರ ಸ್ವಾಮಿಯ ಮಸ್ತಕಾಭಿಷೇಕೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 26ನೆ ತಾರೀಖಿನಿಂದ 1909ನೆ ಏಪ್ರಿಲ್ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಮಾರ್ಚಿ 1909.

ನಂ. 8556—ಸ್ಯಾನಿಟೆರಿ 52—08—17, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು. ಇಂದ.	ತಾರೀಖು. ಗೆ.
1. ವೈರಮುಡಿ ಜಾತ್ರೆ ...	ಮೇಲ್ಕೋಟೆ ...	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು	24—3—09	5—4—09
2. ಶ್ರೀ ಶ್ರೀಕಂಠೇಶ್ವರಸ್ವಾಮಿ ರಥೋತ್ಸವ.	ನಂಜನಗೂಡು ...	ನಂಜನಗೂಡು.	27—3—09	5—4—09
3. ಶ್ರೀ ಗುಂಜಾ ನರಸಿಹ್ಮಸ್ವಾಮಿ ರಥೋತ್ಸವ.	ಟಿ. ನರಸೀಪುರ ...	ಟಿ. ನರಸೀಪುರ.	2—4—09	4—4—09

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 23ನೆ ಫೆಬ್ರುವರಿ 1909.

ನಂ. ಜು. 2450—ಕೋರ್ಟ್ 262-08-2, ಸರ್ 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರು ಕೋಡಿನ 357ನೆ ಪ್ರಕರಣವನ್ನನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟು ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ॥ ಎ. ಮೃತ್ಯುಂಜಯ ಅಯ್ಯರ್, ಬಿ. ಎ., ಯವರು ಸಾಕ್ಷಿಗಳ ಕೈಫಿಯತ್ತುಗಳನ್ನು ಇಂಗ್ಲೀಷು ಭಾಷೆಯಲ್ಲಿ ತಮ್ಮ ಸ್ವಹಸ್ತದಲ್ಲಿ ಬರೆದುಕೊಳ್ಳಬೇಕೆಂದು ಹುಕುಂ ಮಾಡಿ ಇರುತ್ತೆ.

ತಾರೀಖು 23ನೆ ಫೆಬ್ರುವರಿ 1909.

ನಂ. ಜು. 2461—ಕೋರ್ಟ್ 274-08-2, ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರಿ ಅಸಿಸ್ಟೆಂಟ್ ಕಮಿಷನರ ಮತ್ತು ಮ್ಯಾಜಿಸ್ಟ್ರೇಟರ ಫೈಲಿನ 1908-09ನೆ ಸಾಲಿನ 16ನೆ ನಂಬರು ಕ್ರಿಮಿನಲ್ ಮೊಕದ್ದಮೆಯಲ್ಲಿ ದರೋಡೆ ತಕಸೀರನ್ನು ನಡಿಸಿರುವದಾಗಿ ಆಪಾದಿಸಲ್ಪಟ್ಟ ಬಸಪ್ಪ ವಗೈರ ಅಪರಾಧಿಗಳನ್ನು ದರ್ಯಾಫ್ತು ಮಾಡತಕ್ಕ ಬಗ್ಯೆ, 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 9ನೆ ಪ್ರಕರಣವನ್ನನುಸರಿಸಿ, ಶಿವಮೊಗ್ಗ ಸಬಾರ್ಡಿನೇಟ್ ಜಡ್ಜಿಯವರಾದ ಮಿ॥ ಡಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್., ರವರಿಗೆ, ಚಿತ್ರದುರ್ಗ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಸೆಷನ್ಸ್ ಜಡ್ಜೀರ ಅಧಿಕಾರಗಳನ್ನು (ವಿಶೇಷ ಸಂದರ್ಭದ ತರೀಖ) ಕೊಟ್ಟಿ ಇರುತ್ತೆ.

ತಾರೀಖು 23ನೆ ಫೆಬ್ರುವರಿ 1909.

ನಂ. ಜು. 2463—ಲೆಜಿಸ್ಲೆಟಿವ್, ಸರ್ 1908ನೆ ಇಸವಿಯ Vನೆ ನಂಬರು ಮೈಸೂರು ಪೋಲೀಸು ರೆಗ್ಯುಲೇಷನಿನ 56ನೆ ಪ್ರಕರಣದಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವದರಲ್ಲಿ, ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರದವರು ಸದರಿ ಪ್ರಕರಣದ ನಿಯಮಗಳನ್ನು ಬೆಂಗಳೂರು ಸಿಟಿಯಲ್ಲಿ ಜಾರಿಗೆ ತರಬೇಕೆಂದು ಹುಕುಂ ಮಾಡಿ ಇರುತ್ತಾರೆ.

ತಾರೀಖು 26ನೆ ಫೆಬ್ರುವರಿ 1909.

ನಂ. ಜ. 4925—ಜ. ಮಿ. 261-08-3, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ಪ್ರಕರಣದ ಮೇರೆಗೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುವ ಅಸಿಸ್ಟೆಂಟ್ ಕಮಿಷನರ್ ಮಿ॥ ಟಿ. ರಾಯಲುಶೆಟ್ಟಿಯವರಿಗೆ 1909ನೆ ಫೆಬ್ರುವರಿ 15ನೆ ತಾರೀಖಿನ ಲಾಗಾಯಿತು ಅಥವಾ ಅವರು ರಜಾ ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖಿನ ಲಾಗಾಯಿತು 3 ತಿಂಗಳಿನ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 1ನೆ ಮಾರ್ಚಿ 1909.

ನಂ. ಜ. 2510—ಪೋಲೀಸ್ 32-08-7, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದಮೇರೆಗೆ ಫ್ರೆಂಚ್‌ರಾಕ್ಸ್ ಆಫೀಸಿಂಗ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಎ. ಸಿ. ಬಸವರಾಜೆ ಅರಸಿನವರಿಗೆ 1909ನೆ ಇಸವಿ ಜನವರಿ 8ನೆ ತಾರೀಖು ಲಾಗಾಯಿತು 10 ದಿನಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ತಾ॥ 12ನೆ ಫೆಬ್ರುವರಿ 1909.

ನಂ. ರೆ. 6094—ಫಾ. 129-08-3, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಫಾರೆಸ್ಟು ರೆಗ್ಯುಲೇಷನ್ 35 (iii) ನೇ ಸೆಕ್ಷನ್ ಅನುಸರಿಸಿ ಇದರಡಿ ನಮೂದಿಸಿರುವ ಚೆಕ್ಕುಬಂದಿವುಳ್ಳ ಪ್ರದೇಶವನ್ನು ಮೈಸೂರು ಗೌರ್ನಮೆಂಟಿನವರು 1901ನೆ ಇಸವಿ ಅಕ್ಟೋಬರ್ 2ನೆ ಮರ್ಸುಂ 245-1300ನೆ ನಂಬರ್ ಇಸ್ತಿಹಾರ್ ಪ್ರಕಾರ ಘಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟು ಫಾರೆಸ್ಟುಗಳ ಆಡಳಿತಕ್ಕೆ ಸಂಬಂಧಪಟ್ಟ ಸಾಮಾನ್ಯ ನಿಬಂಧನೆಗಳ ಉದ್ದೇಶಕ್ಕಾಗಿ ಸರ್ಕಾರಕ್ಕೆ ಉಳಿಸಿಕೊಳ್ಳಲ್ಪಟ್ಟ ಜಮೀನಾಗಿರತಕ್ಕದ್ದೆಂದು ಶ್ರೀಮನ್ಮಹಾರಾಜಾಸಾಹೇಬ್ಬಹದ್ದೂರವರ ಸರ್ಕಾರದವರು ತೀರ್ಮಾನಿಸಿರುತ್ತಾರೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಇರುವ ಪ್ರದೇಶ.
ಮೈಸೂರು	ಗುಂಡ್ಲುಪೇಟೆ	ಎಕರೆ 2025 ಗುಂಟೆ 12	ಹೆಗ್ಗಡಾಪುರದ ಗಂಧದ ಬ್ಲಾಕು	ಬಂಡಿಪುರದ ಡಿಸ್ಟ್ರಿಕ್ಟ್ ಫಾರೆಸ್ಟಿಗೆ ಉತ್ತರದಲ್ಲಿ ಇರುವ ಬಹಳ ಅಮೂಲ್ಯವಾದ ಸಂದಲು ಪ್ರದೇಶ. ಉತ್ತರ—ಹಂಗಳಹೊಸಳ್ಳಿಯ ಸರ್ವೆ 57ನೆ ನಂಬರಿನ ನೈರುತ್ಯಮೂಲೆಯಿಂದ ಲೈನುಹೊರಟು ಪೂರ್ವಾಭಿಮುಖವಾಗಿ ಅದೇ ಸರ್ವೆ ನಂಬರು ದಕ್ಷಿಣ ಸರಹದ್ದನ್ನು ಅನುಸರಿಸಿ ಹಂಗಳಹೊಸಳ್ಳಿ, ಸರ್ವೆ 89ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ. ನಂತರ ಅದೇ ದಿಕ್ಕನ್ನು ಅನುಸರಿಸಿ ಹಂಗಳಹೊಸಳ್ಳಿ ಸರ್ವೆ 89—88 ನಂಬರುಗಳ ದಕ್ಷಿಣ ಸರಹದ್ದಿಗಾಗಿ ಹಂಗಳಹೊಸಳ್ಳಿ ಶಿದ್ದಯ್ಯನಪುರ ಮತ್ತು ಹಂಗಳ ಗ್ರಾಮಗಳ ಗಡಿ ಬಾಂದನ್ನು ಮುಟ್ಟುತ್ತದೆ. ನಂತರ ಅದೇ ದಿಕ್ಕಿನಲ್ಲಿ ಹಂಗಳದ ಸರ್ವೆ 101ನೆ ನಂಬರಿನಲ್ಲಿ 5 ಫರ್ಲಾಂಗುದೂರ ಹಾದು ಅದೇ ಗ್ರಾಮದ ಸರ್ವೆ 119ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ

ದಕ್ಷಿಣಕ್ಕೆ ತಿರಗಿ ಅದೇ ಗ್ರಾಮದ ಸರ್ವೆ 118 ಮತ್ತು 110ನೆ ನಂಬರುಗಳ ಪಶ್ಚಿಮಸರಹದ್ದು ಅನುಸರಿಸಿ $1\frac{1}{4}$ ಫರ್ಲಾಂಗು ಫಾಸಲೆ ಹೋಗುತ್ತದೆ. ನಂತರ ಸರ್ವೆ 110ನೆ ನಂಬರಿನ ದಕ್ಷಿಣ ಸರಹದ್ದು ಅನುಸರಿಸಿ ಸುಮಾರು $\frac{1}{2}$ ಫರ್ಲಾಂಗು ಫಾಸಲೆ ಹೋಗುತ್ತೆ. ನಂತರ ದಕ್ಷಿಣಕ್ಕಾಗಿ 1 ಫರ್ಲಾಂಗು ಫಾಸಲೆ ಸರ್ವೆ 109ನೆ ನಂಬರಿನ ಪಶ್ಚಿಮ ಸರಹದ್ದನ್ನು ಅನುಸರಿಸುತ್ತದೆ. ನಂತರ 102ನೆ ನಂಬರಿನ ಉತ್ತರ ಸರಹದ್ದನ್ನು ಅನುಸರಿಸಿ ಅಲ್ಲಿಂದ ಸರ್ವೆ 274ನೆ ನಂಬರಿನ ಪೂರ್ವ ಸರಹದ್ದನ್ನು ಅನುಸರಿಸಿ ನಂತರ ನೈರುತ್ಯವಾಗಿ ಅದೇ ಸರ್ವೆ ನಂಬರಿನ ಉತ್ತರ ಸರಹದ್ದು ಮಾರ್ಗವಾಗಿ ಅದರ ವಾಯವ್ಯ ಮೂಲೆಯನ್ನು ಸೇರುತ್ತದೆ. ನಂತರ ಹಂಗಳಗ್ರಾಮದ ಸರ್ವೆ 274, 275 ಮತ್ತು 276ನೆ ನಂಬರುಗಳ ಪಶ್ಚಿಮ ಯಲ್ಲೆಯನ್ನು ಅನುಸರಿಸಿ ಅದೇ ಗ್ರಾಮದ 276ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ. ನಂತರ ಸರ್ವೆ 101ನೆ ನಂಬರನ್ನು ಹಾದು ಶಿದ್ದಯ್ಯನ ಪುರದ ಸರ್ವೆ 106ನೆ ನಂಬರಿನ ವಾಯುವ್ಯ ಮೂಲೆಯನ್ನು ಮುಟ್ಟುತ್ತದೆ. ನಂತರ ಸರ್ವೆ 106 ಮತ್ತು 107ನೆ ನಂಬರಿನ ಪಶ್ಚಿಮ ಸರಹದ್ದು ಅನುಸರಿಸಿ ಕೊನೇ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ. ನಂತರ ಸರ್ವೆ 107, 108, 109, 110 ಮತ್ತು 100ನೆ ನಂಬರುಗಳ ದಕ್ಷಿಣ ಸರಹದ್ದು ಅನುಸರಿಸಿ ಶಿದ್ದಯ್ಯನಪುರದ ಸರ್ವೆ 100ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ನಂತರ ಶಿದ್ದಯ್ಯನಪುರದ ಸರ್ವೆ 100ನೆ ನಂಬರಿನ ಪೂರ್ವ ಯಲ್ಲೆಯನ್ನು ಅನುಸರಿಸಿ ಹಂಗಳಗ್ರಾಮದ ದಕ್ಷಿಣ ಸರಹದ್ದನ್ನು ಸೇರುತ್ತದೆ. ನಂತರ ಈಶಾನ್ಯಕ್ಕೆ $\frac{1}{8}$ ಫರ್ಲಾಂಗು ಫಾಸಲೆ ಅದೇ ಯಲ್ಲೆಯನ್ನು ಅನುಸರಿಸಿ ಶಿದ್ದಯ್ಯನ ಪುರದ ಸರ್ವೆ 74ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ. ನಂತರ ಆಗ್ನೇಯ ಮತ್ತು ಪೂರ್ವಾಭಿಮುಖವಾಗಿ ಹೋಗಿ ಅದೇ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಸರಹದ್ದನ್ನು ಅನುಸರಿಸಿ ಅದೇ ನಂಬರಿನ ಆಗ್ನೇಯ ಮೂಲೆಯನ್ನು ಸೇರಿ, ನಂತರ ಆಗ್ನೇಯಕ್ಕೆ, ನೈರುತ್ಯಕ್ಕೆ ಪುನಃ ಆಗ್ನೇಯಕ್ಕೆ ಹಾದು ಶಿದ್ದಯ್ಯನ ಪುರದ ಸರ್ವೆ 91—92 ಮತ್ತು 94ನೆ ಸರಹದ್ದುಗಳ ಪಶ್ಚಿಮಸರಹದ್ದು ಅನುಸರಿಸಿ ಸರ್ವೆ 94ನೆ ನಂಬರಿನ ನೈರುತ್ಯಮೂಲೆಯನ್ನು ಮುಟ್ಟುತ್ತದೆ. ನಂತರ ಪೂರ್ವ ಮತ್ತು ಆಗ್ನೇಯಕ್ಕಾಗಿ ಶಿದ್ದಯ್ಯನಪುರದ ಸರ್ವೆ 94 ಮತ್ತು 95ನೆ ನಂಬರುಗಳ ದಕ್ಷಿಣ ಸರಹದ್ದು ಮಾರ್ಗವಾಗಿ ಹೋಗಿ ನಂತರ ಸರ್ವೆ 95ನೆ ನಂಬರಿನ ಪೂರ್ವ ಸರಹದ್ದನ್ನು ಅನುಸರಿಸಿ ಅದೇ ನಂಬರಿನ ಈಶಾನ್ಯಮೂಲೆಯನ್ನು ಸೇರುತ್ತದೆ. ನಂತರ ಸರ್ವೆ 56 ಮತ್ತು 57ನೆ ನಂಬರುಗಳ ದಕ್ಷಿಣ ಸರಹದ್ದು ಅನುಸರಿಸಿ ಸರ್ವೆ 57ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ನಂತರ ದಕ್ಷಿಣ ಮತ್ತು ಪೂರ್ವಕ್ಕಾಗಿ ಶಿದ್ದಯ್ಯನಪುರದ ಸರ್ವೆ 6೦ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಸರಹದ್ದು ಅನುಸರಿಸಿ ಹಂಗಳದ ಸರ್ವೆ 68ನೆ ನಂಬರಿನ ಆಗ್ನೇಯಮೂಲೆಯಲ್ಲಿ ಮೈಸೂರು-ನೀಲಗಿರಿ ರಸ್ತೆಯನ್ನು ಮುಟ್ಟುತ್ತದೆ.

ಪೂರ್ವ :—ನಂತರ ದಕ್ಷಿಣಕ್ಕಾಗಿ ರಸ್ತೆಯನ್ನು ಅನುಸರಿಸಿ $5\frac{1}{4}$ ಫರ್ಲಾಂಗು ಫಾಸಲೆಯಲ್ಲಿ ಶಿದ್ದಯ್ಯನಪುರ ಗ್ರಾಮದ ದಕ್ಷಿಣ ಯಲ್ಲೆಯ ಹನುಮಂತರಾಯನ ಗುಡಿಬಳಿ ಸಂಧಿಸುವ ಸ್ಥಳಕ್ಕೆ ಸೇರುತ್ತದೆ.

ದಕ್ಷಿಣ :—ನಂತರ ನೈರುತ್ಯ ಮತ್ತು ಪಶ್ಚಿಮಕ್ಕಾಗಿ ಶಿದ್ದಯ್ಯನಪುರದ ದಕ್ಷಿಣ ಯಲ್ಲೆಯನ್ನು ಅನುಸರಿಸಿ ಮದಗಿತ್ತಿ ದುರ್ಗದ ಮೇಲಿರುವ ಶಿದ್ದಯ್ಯನಪುರ ಮತ್ತು ಕಳ್ಳಿಪುರ ಗ್ರಾಮಗಳ ಗಡೀ ಬಾಂದುಗಳನ್ನು ಸೇರುತ್ತದೆ.

ಪಶ್ಚಿಮ :—ನಂತರ ಈಶಾನ್ಯಕ್ಕಾಗಿ ಕಳ್ಳೀಪುರದ ಗ್ರಾಮದ ಪೂರ್ವ ಯಲ್ಲೆಯನ್ನು ಅನುಸರಿಸಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

ಷರಾ :—ಈ ಕೆಳಗೆ ನಮೂದಿರುವ ಹಿಡುವಳಿ ಜಮೀನುಗಳನ್ನು ಈ ಬ್ಲಾಕಿನಲ್ಲಿ ಆವರಣಗಳಾಗಿ ಭಾವಿಸಿದೆ.

ಸಿದ್ದೈಯ್ಯನಪುರ.

ಸರ್ವೆ ನಂಬರು.				ವಿಸ್ತೀರ್ಣ. ಎ.	ಗು.
75	...	...	...	5	24
76	...	...	...	4	32
77	...	...	...	4	2
78	...	...	...	7	25
79	...	...	...	3	39
80	...	...	...	6	21
81	...	...	...	2	14
84	...	...	...	2	30
85	...	...	...	5	16
87	...	...	...	7	...
88	...	...	...	6	4
89	...	...	...	7	38
12				64	5

ತಾರೀಖು 1ನೆ ಮಾರ್ಚಿ 1909.

ನಂ. ರೆ. 6769—ಲ್ಯಾ. ರೆ. 39—08—35, ಸನ್ 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗ್ರಾಮ ಚಾವಡಿ ಮತ್ತು ರೆಸ್ಟ್‌ಹೌಸ್ ಕಟ್ಟತಕ್ಕ ಬಗ್ಗೆ ಅವಶ್ಯಕವಾಗಿದೆ, ಮತ್ತು ಮೇಲ್ಕಂಡ ರೆಗುಲೇಷನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜಮೀನು ಯಾರ ಸ್ವಾಧೀನದಲ್ಲಿದೆ.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಖರಾಬು.	ಸಾಗುವಳಿ ವಿಸ್ತೀರ್ಣ.	ಕಂದಾಯ.	ತೆಗೆದುಕೊಳ್ಳಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
													ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಚಿತ್ರದುರ್ಗ	ಹಿರಿಯೂರು	ಧರ್ಮಪುರ	ಹರಿಯಬ್ಬೆ	ಗಾಂಚಗೊಂಡ ಬಿನ್ ಗುಂಡ	163	ಖುಷ್ಕಿ	ಎ. ಗು. 6 26	...	ಎ. ಗು. 6 26	ರೂ. 1	ಎ. ಗು. 6 26	ರೂ. 1	ಊರು	ಸರ್ವೆ ನಂ. 2	ಸರ್ವೆ ನಂಬರು 1 ಮತ್ತು 2	ಅಬ್ಬೆನಹಳ್ಳಿಯಿಂದ ಹರಿಯಬ್ಬೆಗೆ ಹೋಗುವ ರಸ್ತೆ ಮತ್ತು ಸರ್ವೆ ನಂ. 161 ಮತ್ತು 162ನೆ ಜಮೀನುಗಳು

ತಾರೀಖು 22ನೆ ಫೆಬ್ರುವರಿ 1909.

ನಂ. ರೆ. 6518—ಫಾ. 121—08—2, ಸನ್ 1900ನೇ ಇಸವಿಯ XIನೆ ನಂಬರು ಮೈಸೂರು ಶೀಮೆಯ ಫಾರೆಸ್ಟು ರೆಗ್ಯುಲೇಷನ್ 4ನೆ ಸೆಕ್ಷನಿನ ವಿಧಿಗಳನ್ನನುಸರಿಸಿ ಶ್ರೀಮನ್ಮಹಾರಾಜಾ ಸಾಹೇಬ್ರು ಹುಜೂರ್ರವರ ಸರ್ಕಾರದವರು ಪ್ರಸಿದ್ಧಪಡಿಸುವದೇನೆಂದರೆ:—ಇದರಡಿಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚೆಕ್ಕು ಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಮನ್ನಾ ಜಂಗಲಿಯಾಗಿ ಏರ್ಪಡತಕ್ಕದ್ದೆಂದು ಯೋಚಿಸಿರುತ್ತೆ.

ಷೆಡ್ಯೂಲಿ.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಲಾಕಿನ ಹೆಸರು.	ಚೆಕ್ಕು ಬಂದಿ.
ಕಡೂರು	ಚಿಕ್ಕಮಗಳೂರು ತಾಲ್ಲೂಕು ಮತ್ತು ತರೀಕೆರೆ ತಾಲ್ಲೂಕು	3 ಚದರಮೈಲಿ 303 ಎಕರೆ	ತೇಗೂರು ಗುಡ್ಡ ಬ್ಲಾಕು ಎಕ್ಸ್‌ಟೆನ್ಷನ್	ಸ್ಥಳ—ಈ ಬ್ಲಾಕು ತೇಗೂರು ಗುಡ್ಡ ಜಂಗ್ಲಿಗೆ ಪೂರ್ವದಲ್ಲಿಯೂ, ಮುತ್ತೋಡಿ ಜಂಗ್ಲಿಗೆ ದಕ್ಷಿಣ ಮತ್ತು ಪಶ್ಚಿಮ ಕಡೆಗಳಲ್ಲಿಯೂ, ಮತ್ತು ಕಾಗೇಮನಗಿರಿ ಜಂಗ್ಲಿಯ ಉತ್ತರಕ್ಕೂ ಇದೆ. ಉತ್ತರಕ್ಕೆ—ತೇಗೂರು ಗುಡ್ಡ ಮನ್ನಾ ಜಂಗಲಿಯ ಈಶಾನ್ಯ ಮೂಲೆಯಲ್ಲಿ ವಡ್ಡಹಟ್ಟಿಯಿಂದ ಕೆಟ್ಟೆಗೆ ಹೋಗುವ ಕಾಲ ದಾರಿಯು ಸೋಮವಾಹಿನಿ ನದಿಗೆ ಸಂಧಿಸುವ ಸ್ಥಳದಿಂದ ಹೊರಟು ಸೋಮವಾಹಿನಿ ನದಿಯ ಧಡದಲ್ಲಿಯೇ ಪೂರ್ವಾಭಿಮುಖವಾಗಿ ಹಿಪ್ಪಹಳ್ಳ ಮೇಲ್ಕಂಡ ನದಿಗೆ ಸಂಗಮವಾಗುವ ವರೆಗೆ ಹೋಗುತ್ತದೆ. ಪೂರ್ವಕ್ಕೆ—ಅಲ್ಲಿಂದ ಅದೇ ನದಿಯ ಧಡದಲ್ಲಿ ಮುತ್ತೋಡಿ ಮನ್ನಾ

ಜಂಗಲಿಯ ಪಶ್ಚಿಮ ಸರಹದ್ದು ಅನುಸರಿಸುತ್ತಾ ಮಾಡಾಳ್ಳ ಗ್ರಾಮದ ಸರ್ವೆ ನಂಬರು 192ರ ಆಗ್ನೇಯ ಮೂಲೆಯಲ್ಲಿ ಮೇಲ್ಕಂಡ ನದಿಯು ದಕ್ಷಿಣಕ್ಕೆ ತಿರುಗುವ ವರೆಗೆ ಹೋಗಿ ತರುವಾಯ ಸೋಮವಾಹಿನಿ ನದಿಯನ್ನು ಬಿಟ್ಟು ಮುತ್ತೋಡಿ ಮನ್ನಾ ಜಂಗಲಿಯ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಪುನಹ ಮೇಲ್ಕಂಡ ನದಿಯನ್ನು ಸೇರುತ್ತೆ.

ದಕ್ಷಿಣಕ್ಕೆ—ಅಲ್ಲಿಂದ ಉತ್ತರಾಭಿಮುಖವಾಗಿ ಕಾಗೆಮನೆ ಗಿರಿ ಮನ್ನಾ ಜಂಗಲಿಯ ಪೂರ್ವ ಎಲ್ಲೆಯಿಂದ ಸೋಮವಾಹಿನಿ ನದಿಯನ್ನೇ ಅನುಸರಿಸುತ್ತ ಕೆಳವಾಸಿ ಹಳ್ಳವು ಮೇಲ್ಕಂಡ ನದಿಗೆ ಸಂಗಮವಾಗುವ ವರೆಗೆ ಹೋಗಿ, ನಂತರ ಕಾಗಮನೆ ಗಿರಿ ಮನ್ನಾ ಜಂಗಲಿಯ ಉತ್ತರ ಎಲ್ಲೆಯಿಂದ ಕೆಳವಾಸಿ ಹಳ್ಳದ ಧಡದ ಸಮೀಪದಲ್ಲಿಯೇ ಹೊರಟು ಸೂಗಡವಾಸಿ ಗ್ರಾಮದ ಸರ್ವೆ ನಂಬರು 254ರ ಉತ್ತರ ಎಲ್ಲೆಯನ್ನು ಸೇರಿ, ಅಲ್ಲಿಂದ ಲೈನು ಪಶ್ಚಿಮಕ್ಕೆ ತಿರುಗಿ ಕಾಗೆಮನೆ ಗಿರಿ ಮನ್ನಾ ಜಂಗಲಿಯ ಡಿಮಾರ್ಕೇಷನ್

ಲೈನನ್ನು ಬಿಟ್ಟು ಹಳ್ಳವನ್ನು ದಾಟ ಸೊಗಡಪಾನಿ ಗ್ರಾಮದ ಸರ್ವೆ ನಂಬರು 254ರಲ್ಲಿ ಉತ್ತರ ಎಲ್ಲೆಯನ್ನು ಅನುಸರಿಸಿ ವಡ್ಡಿಹಟ್ಟಿ ಮನ್ನಾ ಜಂಗಲಿಯ ಆಗ್ನೇಯ ದಿಕ್ಕನ್ನು ಸೇರುತ್ತದೆ.

ಪಶ್ಚಿಮಕ್ಕೆ —ನಂತರ ವಡ್ಡಿಹಟ್ಟಿ ಮನ್ನಾ ಜಂಗಲಿಯ ಪೂರ್ವ ಸರಹದ್ದನ್ನು ಅನುಸರಿಸಿ ವಾಯುವ್ಯ ದಿಕ್ಕಿನಲ್ಲಿ ಹೊರಟು ಅದೇ ಜಂಗಲಿಯ ಈಶಾನ್ಯ ಮೂಲೆಯನ್ನು ಸೇರುತ್ತದೆ. ನಂತರ ಅದೇ ಜಂಗಲಿನ ಉತ್ತರದಲ್ಲಿ ಹೊರಟು ತೇಗೂರು ಗುಡ್ಡ ಮನ್ನಾ ಜಂಗಲಿಯ ಆಗ್ನೇಯ ಮೂಲೆಯನ್ನು ಸೇರಿ, ನಂತರ ಈಶಾನ್ಯಾಭಿಮುಖವಾಗಿ ಮೇಲ್ಕಂಡ ಮನ್ನಾ ಜಂಗಲಿಯ ಪೂರ್ವ ಸರಹದ್ದಿನಲ್ಲಿಯೇ ಹೊರಟು ಷುರು ಹೊರಟ ಸ್ಥಳವನ್ನು ಸೇರುತ್ತದೆ.

ಷರ —ಈ ಕೆಳಗೆ ನಮೂದಿರುವ ಜಮೀನುಗಳನ್ನು ಸದರಿ ಬ್ಲಾಕಿನಲ್ಲಿ ಆವರಣಗಳಾಗಿ ಭಾವಿಸಿದೆ.

ಗ್ರಾಮ	ಸರ್ವೆ ನಂ.	ಹಿಡುವಳಿ ವಿಸ್ತೀರ್ಣ.		ಸರ್ವೆ ನಂ	ಹಿಡುವಳಿಯಲ್ಲಿಲ್ಲದ ವಿಸ್ತೀರ್ಣ.	
		ಎ.	ಗು.		ಎ.	ಗು.
ಬಬಸಗ	5	3	18	1	3	10
	8	4	15	2	4	30
	17	4	19	3	1	23
	18	4	21	4	12	26
	20	2	0	6	10	32
	21	1	0	7	11	2
	29	9	15	9	7	5
	34	0	20	10	7	15
	35	5	10	11	4	6
	36	16	30	12	7	35
	43	8	30	15	8	31
	44	10	19	19	4	35
	47	4	39	24	14	28
	57	3	7	25	13	12
	58	2	32	30	5	22
	59	3	27	31	3	29
	60	4	23	32	5	30
	61	4	14	37	4	37
	62	2	31	38	2	20
	63	1	14	46	16	21
	64	5	33	48	16	25
	65	6	14	49	355	8
	66	5	28	53	6	38
	67	3	24	54	16	18
	68	4	11			
		127	17	...	516	1
		...		...	673	35

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ವೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ವೈಸೂರು ಅನ್ಯೋನ್ಯ ಸಹಾಯಕ ಸಂಘಗಳ ರಿಜಿಸ್ಟ್ರಾರ್‌ರವರಾದ ಮಿ॥ ಎಂ. ಶಾಮರಾಯರವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆ ಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಾಗಿ ನೊಕರರ್ಮಾಡಲೂ, ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಿಗೆ ಸರ್ಕಾರ್ ತರಫು ಕುಮ್ಮಕ್ ಮಾಡಲು ಹಾಜರಾಗುವಂತೆ ನೊಕರರ್ಮಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ವೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪ್ಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫೀಸರಾಗಿ ನೊಕರರ್ಮಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 1ನೆ ಮಾರ್ಚಿ 1909.

ನಂ. ರೆ. 6763—ಲ್ಯಾ. ರೆ. 44–08–14, ಸ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ನಾಗಾವಾರದ ದಾಖ್ಲೆ ವಡ್ಡರಪಾಳ್ಯದ ಸ್ಮಶಾನ ಬಡಾಯಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಕ್ರಮ ಜರುಗಿಸಲು ಅಧಿಕಾರಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಅಥವಾ ಅನುಭೋಗದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಅಥವಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
											ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಬೆಂಗಳೂರು	ಕಸಬಾ	ನಾಗಾವಾರದ ದಾಖ್ಲೆ ವಡ್ಡರಹಳ್ಳಿ	[illegible]	ಸರ್ 49	ಖುಷ್ಕಿ ಮತ್ತು ಬಾಗಾಯತು	ಎ. ಗು. 13 6	ಗುಂಟೆ 14	ಎ. ಗುಂ. 12 32	ರೂ. 14	ಗುಂ. 10	ಆ. 4	ಸರ್ವೆ 34ನೆ ನಂಬರು	ಇದೇ ನಂಬರು ಪೈಕಿ ಖಬರಸ್ತಾನ ಜಮೀನು	ಇದೇ ನಂಬರು ಪೈಕಿ ಕಾಲಿ ಜಮೀನು ಕಲ್ಲುಕ್ವಾರಿ	ಸರ್ವೆ 35ನೆ ನಂಬರು

ತಾರೀಖು 1ನೆ ಮಾರ್ಚಿ 1909.

ನಂ. ರೆ. 6765—ಲ್ಯಾ. ರೆ. 44–08–17, ಸ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6 ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ದನ ಮತ್ತು ಕುರಿಗಳನ್ನು ಕತರಾಯಿಸುವ ದೊಡ್ಡಿಗಳನ್ನು (Slaughter houses) ಕಟ್ಟುವದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕ್ಲೋಸ್‌ಪೇಟೆ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ಅಥವಾ ಸಬ್ ಡಿವಿಜನ್ ನಂಬರು.	ಖುಷ್ಕಿ, ತರಿ ಅಥವಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಖರಾಬು	ಉಳಿದ ವಿಸ್ತೀರ್ಣ.	ಕಂದಾಯ.	ಈಗಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
											ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಚನ್ನಪಟ್ಟಣ	ಚನ್ನಪಟ್ಟಣ	ಕೊತ್ತಹಳ್ಳಿ	ಜೋಡಿದಾರ	ಸರ್ವೆ ನಂ. 65	ಖುಷ್ಕಿ	ಎ. ಗು. 5 11	ಗು. 5	ಎ. ಗು. 5 6	ರೂ. ಆ. 5 8	ಗು. ಚ. ಗ. 20 40½	ಆ. 8 ಪೈ 9	ಸರ್ವೆ ನಂಬರ 65ರ ಭಾಗ	ಕೊತ್ತಹಳ್ಳಿ ಕೆರೆ	ಸರ್ವೆ ನಂಬರ 87	ಸರ್ವೆ ನಂಬರ 69

ತಾರೀಖು 2ನೆ ಮಾರ್ಚಿ 1909.

ನಂ. ರೆ. 6806—ಲ್ಯಾ. ರೆ. 22—98—68, ಸ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :— ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಬೆಳತೂರು ಗ್ರಾಮ ಠಾಣಾ ಖಡಾವಣೆ ಬಗ್ಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಯಾ ಅನುಭೋಗದಾರರ ಹೆಸರು	ಸರ್ವೆ ಯಾ ದಸ್ತಗಿ ನಂಬರು.	ಖುಷ್ಕಿ, ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಬೇಕಾದ ವಿಸ್ತೀರ್ಣ.	ಕಂದಾಯ.	ಬೇಕಾಗದ ಜಮೀನಿನ ವಿಸ್ತೀರ್ಣ	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಹೆಗ್ಗಡದೇವನಕೋಟೆ	ಸರಗೂರು	ಬೆಳತೂರು	ಖಾತೆದಾರ ಕೇಶವಯ್ಯಂಗಾರ್ಯ—ಅನುಭೋಗದಾರ ಅಣ್ಣಾಸ್ವಾಮಿಯ್ಯಂಗಾರ್	ಸರ್ವೆ ನಂಬರು 145	ಖುಷ್ಕಿ	ಎ. 7 ಗು. 4	ಎ. 7 ಗು. 4	ರೂ. 6 ಆ. 8	ಎ. 3 ಗು. 22	ರೂ. 3 ಆ. 4	ಹೊಳೆದಾರಿ	ಸರ್ವೆ 145ನೆ ನಂಬರು ಜಮೀನಿನ ಪೈಕಿ ಉಳಿದಿರುವ ಭಾಗ	ಹೊಳೆ ದಾರಿ	ಗ್ರಾಮ ಠಾಣ್ಯ

ತಾರೀಖು 2ನೆ ಮಾರ್ಚಿ 1909.

ನಂ. ರೆ. 6808—ಲ್ಯಾ. ರೆ. 9—08—43, ಸ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ, ತುಮಕೂರು ಡಿಸ್ಟ್ರಿಕ್ಟು ಶಿರಾ ತಾಲ್ಲೂಕು ಚಂಗಾವಾರ ಗ್ರಾಮ ನಿವೇಶನ ಖಡಾವಣೆ ಬಗ್ಗೆ ಅವಶ್ಯಕವಾಗಿದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮಧುಗಿರಿ ಸಬ್ ಡಿವಿಜನಿನ ಆಫಿಸರವರಿಗೆ ಸದರಿ ಸ್ವತ್ತನ್ನು ಪಡಿಯುವದಕ್ಕೆ ಅವಶ್ಯಕವಾದ ಅಮಲ್ ನಡಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರನ ಹೆಸರು.	ಸರ್ವೆ ನಂ.	ತರಿ ಖುಷ್ಕಿ ಬಾಗಾಯಿತು ಜಮೀನಿನ ತರಹೆ.	ಒಟ್ಟು ವಿಸ್ತೀರ್ಣ	ಆಕಾರ.	ತೆಗೆದುಕೊಳ್ಳಬೇಕಾದ ಜಮೀನಿನ ವಿಸ್ತೀರ್ಣ.	ಎಲ್ಲೆಗಳು ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ತುಮಕೂರು	ಶಿರಾ	ಗೌಡಗೆರೆ	ಚಂಗಾವಾರ	ಚಿಕ್ಕಣ್ಣ	412	ಬಾಗಾಯಿತು	ಎ. 1 ಗು. 38	ರೂ. 2 ಆ. 8	ಎ. 1 ಗು. 38	ಸರ್ವೆ 411ನೆ ನಂಬರು	ಸರ್ವೆ 413ನೆ ನಂಬರು	ಗ್ರಾಮ ನಿವೇಶನ	ಸರ್ವೆ 414ನೆ ನಂಬರು ಕೆರೆ ಅಂಗಳ

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಆಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 10.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 11, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯು ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟೀಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯು ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 20ನೆ ಫೆಬ್ರುವರಿ 1909.

ನಂ. 8196—ಸ್ಯಾನಿಟೆರಿ 76-08—44, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕೆಸ್ತೂರ್	ಎಳಂದೂರು.
ಬೂಚಹಳ್ಳಿ	ಡಿಟೋ
ಹೊನ್ನೂರು	ಡಿಟೋ
ಅಲಕೆರೆ ಅಗ್ರಹಾರ	ಡಿಟೋ
ಬ್ಯಾಡರಹಳ್ಳಿ	ಎಡತೊರೆ.
ಬೆಲ್ಲಹಳ್ಳಿ	ಡಿಟೋ
ಕನ್ನಗನಹಳ್ಳಿ	ಡಿಟೋ
ಹರವೆ	ಹುಣಸೂರು.
ಕಂಪಲಾಪುರ	ಡಿಟೋ
ಮಲ್ಲರಾಜಪಟ್ಣ	ಡಿಟೋ
ತಗಡೂರು	ನಂಜನಗೂಡು.
ಕಾರೀಹುಂಡಿ	ಡಿಟೋ
ಕುರುಬೂರು	ಟಿ. ನರಸೀಪುರ.
ಸೋರಬ	ಡಿಟೋ
ಬೂಕನಕೆರೆ	ಕೃಷ್ಣರಾಜಪೇಟೆ.

ತಾರೀಖು 1ನೆ ಮಾರ್ಚಿ 1909.

ನಂ. 8476—ಸ್ಯಾನಿಟೆರಿ 85-08-4, ಹಾಸನ ಡಿಸ್ಟ್ರಿಕ್ಟ್ಟು ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳಕ್ಕೆ ಶ್ರೀ ಗೋಮಟೇಶ್ವರ ಸ್ವಾಮಿಯ ಮಸ್ತಕಾಭಿಷೇಕೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗಿನ ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 2ನೆ ತಾರೀಖಿನಿಂದ 1909ನೆ ಏಪ್ರಿಲ್ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಮಾರ್ಚಿ 1909.

ನಂ. 8556—ಸ್ಯಾನಿಟೆರಿ 52—08—17, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
1. ವೈರಮುಡಿ ಜಾತ್ರೆ ...	ಮೇಲ್ಕೋಟೆ ...	ಫ್ರೆಂಚ್‌ರಾಕ್ಸ್, ಸಬ್ ತಾಲ್ಲೂಕು	24—3—09	5—4—09
2. ಶ್ರೀ ಶ್ರೀಕಂಠೇಶ್ವರಸ್ವಾಮಿ ರಥೋತ್ಸವ.	ನಂಜನಗೂಡು ...	ನಂಜನಗೂಡು.	27—3—09	5—4—09
3. ಶ್ರೀ ಗುಂಜಾ ನರಸಿಹ್ಮಸ್ವಾಮಿ ರಥೋತ್ಸವ.	ಟಿ. ನರಸೀಪುರ ...	ಟಿ. ನರಸೀಪುರ.	2—4—09	4—4—09

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 8ನೆ ಮಾರ್ಚಿ 1909.

ನಂ. 8703—ಸ್ಯಾನಿಟೆರಿ 61—08—74, ಸಮಸ್ತ ಜನರ ತಿಳಿವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ಬ್ರಹ್ಮೋತ್ಸವ.	ಕದಿರಿ.	...	ಕಡಪ.	26—2—09	18—3—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಇಸವಿ ಫೆಬ್ರುವರಿ 25ನೆ ಮರ್ಕುಂ 150ನೆ ಮೆಮೊ ಪ್ರಕಾರ.

ತಾರೀಖು 1ನೆ ಮಾರ್ಚಿ 1909.

ನಂ. 8474—ಸ್ಯಾನಿಟೆರಿ 42-08-5, ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಗ್ರಾಮಕ್ಕೆ ತಿಪ್ಪೆ ರುದ್ರನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯುವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 10ನೆ ತಾರೀಖಿನಿಂದ 1909ನೆ ಮಾರ್ಚಿ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 2ನೆ ಮಾರ್ಚಿ 1909.

ನಂ. 8499—ಮೆಡಿಕಲ್ 163—08—5, 1907ನೆ ಇಸವಿ ನವಂಬರ್ 4ನೆ ತಾರೀಖಿನ 4018—ಮೆಡಿಕಲ್ 07—07—2ನೆ ನಂಬರು ಸರ್ಕಾರಿ ಇಸ್ತಿಹಾರ್ನಾಮೆ ಜತೆಗೆ, 1906ನೆ ಇಸವಿಯ Iನೆ ನಂಬರ್ ರೆಗ್ಯುಲೇಷನಿನ 2ನೆ ಪ್ರಕರಣದ 1ನೆ ಕಲಂ ಅನುಸರಿಸಿ, ಈ ತಾರೀಖು ಲಾಗಾಯಿತು ಒಂದು ವರುಷದ ಪರಿಯಂತರ ಕೋಲಾರದ ಚಿನ್ನದ ಗಣಿಯ ಸ್ಯಾನಿಟೆರಿ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟ ಸ್ಥಳೀಕ ಪ್ರದೇಶದಲ್ಲಿ ಬಲಾತ್ಕಾರದಿಂದ ಶಿಡುಬು ಹಾಕಿಸತಕ್ಕದ್ದೆಂದು ಈ ಮೂಲಕ ಪ್ರಸಿದ್ಧಪಡಿಸಿರುತ್ತೆ.

ತಾರೀಖು 2ನೆ ಮಾರ್ಚಿ 1909.

ನಂ. 8508—ಮ್ಯು. 243—08—4, ಫವತಿಪಟ್ಟ ಮಿ|| ನಂಜುಂಡಶೆಟ್ಟಿ ಉರಫ್, ನಂಜುಂಡಯ್ಯನವರಿಗೆ ಬದಲಾಗಿ, ಮಿ|| ಪುಟ್ಟಸಾಮಿಶೆಟ್ಟಿ ಎಂಬ ವರ್ತಕರನ್ನು ತಿಪಟೂರು ಟರ್ನ ಮುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಕ ಮಾಡಿರುತ್ತೆ.

ತಾರೀಖು 3ನೆ ಮಾರ್ಚಿ 1909.

ನಂ. ಜ್ಯು. 2530—ಕೋ. 279—08—2, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 357ನೆ ಪ್ರಕರಣವನ್ನನುಸರಿಸಿ ಚಿತ್ರದುರ್ಗ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮತ್ತು 1ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಟಿ. ಧರ್ಮರಾಜ ಚೆಟ್ಟಿಯವರು ಸಾಕ್ಷಿಗಳ ಹೇಳಿಕೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ತಮ್ಮ ಸ್ವಹಸ್ತದಿಂದ ಬರೆದುಕೊಳ್ಳಬೇಕೆಂದು ಹುಕುಂ ಮಾಡಿರುತ್ತದೆ.

ತಾರೀಖು 3ನೆ ಮಾರ್ಚಿ 1909.

ನಂ. ಜ್ಯು. 2539—ಕೋ. 272—08—4, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣಕ್ಕನುಸಾರವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲಸಮಾಡುವ ಅಸಿಸ್ಟೆಂಟ್ ಕಮಿಷನರ್ ಮತ್ತು 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಎಸ್. ಪಿ. ರಾಜಗೋಪಾಲಾಚಾರ್ಯರವರನ್ನು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರೂರು ಮಾಡಿರುತ್ತದೆ. ಮತ್ತು ಸದರಿಯವರು ಅದೇ ಕೋಡಿನ 357ನೆ ಪ್ರಕರಣಕ್ಕನುಸಾರವಾಗಿ ಸಾಕ್ಷಿಗಳ ಹೇಳಿಕೆಗಳನ್ನು ತಮ್ಮ ಸ್ವಹಸ್ತದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದುಕೊಳ್ಳಬೇಕೆಂದು ಹುಕುಂ ಮಾಡಿರುತ್ತದೆ.

ತಾರೀಖು 5ನೆ ಮಾರ್ಚಿ 1909.

ನಂ. ಜ. 5037—ಜ. ಮಿ. 22—08—44, 1908ನೆ ಇಸವಿ ಡಿಸೆಂಬರ್ 4ನೆ ಮುಕ್ಕಾಂನ ಜ. 3405—ಜ. ಮಿ. 22—08—28ನೆ ನಂಬರು ಸರ್ಕಾರಿ ಇಸ್ತಿಹಾರ್ನಾಮೆಯ 3ನೆ ಪ್ಯಾರಾವನ್ನು ಬದಲಾಯಿಸಿ, ಮೈಸೂರು ಸಿವಿಲ್ ಸರ್ವಿಸ್ಸು ನಿಬಂಧನೆಗಳ ಪೈಕಿ 11ನೆ ನಿಬಂಧನೆಯ 2 (a) ಉಪಕಲಂ ಮತ್ತು XIನೆ ನಿಬಂಧನೆಯನ್ನನುಸರಿಸಿ, ಸಿ. ರಂಗನಾಥರಾವ್ ಸಾಹೇಬ್, ಬಿ. ಎ., ಬಿ. ಎಲ್., ರವರನ್ನು 1908ನೆ ಇಸವಿ ಡಿಸೆಂಬರ್ 17ನೆ ತಾರೀಖು ಲಾಗಾಯಿತು ಬಿ. ಷೆಡ್ಯೂಲಿನ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರನ್ನಾಗಿ ಮೊಕರರ್ಮಾಡಿ ಇದೆ.

ತಾರೀಖು 9ನೆ ಮಾರ್ಚಿ 1909.

ನಂ. ಜು. 2592—ಕೋರ್ಟ್ 280—08—2, ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಪ್ರಕರಣದ ಮೇರೆಗೆ, ಮೈಸೂರು ಚೀಫ್ ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರ್ ಮಿ|| ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್., ರವರಿಗೆ ಪೂರಾ ತಲಬಿನಮೇಲೆ 1909ನೆ ಇಸವಿ ಮಾರ್ಚಿ 8ನೆ ತಾರೀಖು ಲಾಗಾಯಿತು 13 ದಿನಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇದೆ.

ತಾರೀಖು 9ನೆ ಮಾರ್ಚಿ 1909.

ನಂ. ರೆ. 6995—ಲ್ಯಾ. ರೆ. 9—08—46, ಸನ್ 1894ನೆಯ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ 6ನೆಯ ಪ್ರಕರಣವನ್ನು ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಸ್ವತ್ತು ಸರ್ಕಾರಿ ಕೆಲಸಕ್ಕೆ, ಅಂದರೆ, ತುಮಕೂರು ಡಿಸ್ಟ್ರಿಕ್ಟು ಪಾವಗಡ ತಾಲ್ಲೂಕು ನಿಡಗಲ್ ಸ್ಟೇಟ್ ಫಾರೆಸ್ಟು ಖಿಡಾವಣೆ ಬಗ್ಯೆ ಅವಶ್ಯಕವಾಗಿದೆ. ಮತ್ತು ಸದರಿ

ರೆಗ್ಯುಲೇಷರ್ 3 (c) ಮತ್ತು 7ನೆ ಪ್ರಕರಣಗಳನ್ನು ಅನುಸರಿಸಿ ಮದ್ದಗಿರಿ ಸಬ್ ಡಿವಿಜನ್ ಆಫಿಸರಿಗೆ ಸ್ವತ್ತನ್ನು ಪಡಿಯುಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂ.	ತೆಗೆದುಕೊಳ್ಳುವ ಜಮೀನಿನ ತಪಶೀಲ್.	ಒಟ್ಟು ವಿಸ್ತೀರ್ಣ.		ಆಕಾರ.		ತೆಗೆದುಕೊಳ್ಳಬೇಕಾಗಿರುವ ಜಮೀನು ವಿಸ್ತೀರ್ಣ.		ಚತುರ್ಸೀಮೆ.			
													ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
							ಎ.	ಗು.	ರೂ.	ಆ.	ಎ.	ಗು.				
ತುಮಕೂರು	ಪಾವಗಡ	ನಿಡಗಲ್	ನಿಡಗಲ್	ಲಕ್ಷಮ್ಮ.	3	ಖುಷ್ಕಿ	25	24	10	0	25	24	ನಿಡಗಲ್ ಗ್ರಾಮದ ಸರ್ವೆ ನಂಬರ್ 2			
					4	,,	12	24	3	8	12	24				
					41	,,	20	38	5	0	20	38				
					42	,,	9	1	2	4	9	1				
						ಜುಮ್ಲಾ.	68	7	20	12	68	7				

ಹುಕುಂ ಬಮೋಜೀಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 25, ಸನ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯು ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕಿಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ ವ ಎಡ್ಯುಕೇಷನ ಇನಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲಬೋರ್ಡುಗ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜಿರು, ಪೋಲೀಸ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ್ದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯು ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 17ನೆ ಮಾರ್ಚಿ 1909.

ನಂ. 9080—ಸ್ಯಾನಿಟರಿ 85-08-9, ಹಾಸನ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕಿನ ಬೇಲೂರು ಷಹರಿಗೆ ಶ್ರೀ ಚನ್ನಕೇಶವ ಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 27ನೆ ತಾರೀಖಿನಿಂದ 1909ನೆ ಏಪ್ರೆಲ್ 7ನೆ ತಾರೀಖಿನ ವರಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 24ನೆ ಮಾರ್ಚಿ 1909.

ನಂ. 9282—ಸ್ಯಾನಿಟರಿ 61—02—86, ಸಮಸ್ತ ಜನರ ತಿಳಿವಳಿಕೆಯು ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯು ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.	ಷರಾ
ಶ್ರೀ ದೇವರಾಜಸ್ವಾಮಿಯವರ ನಡಭಾವಿ ಉತ್ಸವ.	ಅಯ್ಯಂಗಾರ್ ಕುಲಂ ...	ಕಂಜೀವರಂ ...	ಚಂಗಲ್‌ಪಟ್ ...	30—4—09 ಉಭಯ ದಿನಗಳೂ ಸೇರಿ.	5—5—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಇಸವಿ ಮಾರ್ಚಿ 20ನೆ ಮುರ್ಕುಂ 231ನೆ ಮೆಮೋ ಪ್ರಕಾರ.	
ಚಿತ್ರೈ ಉತ್ಸವ ಮತ್ತು ದನಗಳ ಸಂತೆ ..	ಶಿವಲಾಪೇರಿ ...	ತಿನ್ನವಲ್ಲಿ ...	ತಿನ್ನವಲ್ಲಿ ...	1—4—09 ಉಭಯ ದಿನಗಳೂ ಸೇರಿ.	30—4—09	ಡಿಟ್ಟೋ ನಂ. 233 ಪಿ.	
ಕಂದಂಬರಸ್ವಾಮಿ ರಥೋತ್ಸವ ಮತ್ತು ದನಗಳ ಸಂತೆ.	ಕುವಗಂ ಮತ್ತು ಸುತ್ತಮುತ್ತಲಿರುವ ಗ್ರಾಮಗಳು.	ತಿರುಕ್ಕಾಯಿಲೂರು ...	ದಕ್ಷಿಣ ಆರ್ಕಾಟು ...	19—4—09 ಉಭಯ ದಿನಗಳೂ ಸೇರಿ.	5—5—09	ಡಿಟ್ಟೋ ನಂ. 235 ಪಿ.	
ಸಪ್ತಸ್ಥಾನಂ ಉತ್ಸವ ...	ತಂಜಾವೂರು ಬಳಿ ಇರುವ ತಿರುವಡಿ.	ತಂಜಾವೂರು ...	ತಂಜಾವೂರು ...	18—4—09 ಉಭಯ ದಿನಗಳೂ ಸೇರಿ.	8—5—09	ಡಿಟ್ಟೋ ನಂ. 237 ಪಿ.	
ಸಿದ್ಧೇಶ್ವರಸ್ವಾಮಿ ರಥೋತ್ಸವ ...	ಉಜ್ಜಿನಿ ...	ಕೂಡ್ಲಿಗಿ ...	ಬಳ್ಳಾರಿ ...	18—4—09 ಉಭಯ ದಿನಗಳೂ ಸೇರಿ.	26—4—09	ಡಿಟ್ಟೋ ನಂ. 239 ಪಿ.	

ತಾರೀಖು 24ನೆ ಮಾರ್ಚಿ 1909.

ನಂ. 9280—ಸ್ಯಾನಿಟೇರಿ 61—08—79, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನೆಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಪಂಗುಣಿ ಉತ್ತರಂ ಉತ್ಸವ ಮತ್ತು ದಿನಗಳ ಸಂತೆ.	ಕಝುಗುಮಲೈ	ಒಟ್ಟಪಿತರಂ	ತಿನ್ನವಲ್ಲಿ	31—3—09	25—4—09	ಫಸ್ಟ್ ಅಸಿಸ್ಟೆಂಟ್ ರಸಿಡೆಂಟರವರ 1909ನೆ ಇಸವಿ ಮಾರ್ಚಿ 1 ನೆ ಮರ್ಕೂಂ 201ನೆ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 17ನೆ ಮಾರ್ಚಿ 1909.

ನಂ. ಜ. 2747—ರಿಜಿ. 27-07-5, 1903ನೆ ಇಸವಿ 1ನೆ ನಂಬರ್ ರಿಜಿಸ್ಟ್ರೇಷರ್ ರೆಗ್ಯುಲೇಷನಿನ 78ನೆ ಪ್ರಕರಣದನ್ವನುಸರಿಸಿ. ರಿಜಿಸ್ಟ್ರೇಷರ್ ಆಫೀಸುಗಳಲ್ಲಿ ದಾಖಲೆಗಳನ್ನು ಹುಡುಕುವುದಕ್ಕೂ ಮತ್ತು ಅಜಮಾಯಿಷಿ ಮಾಡುವುದಕ್ಕೂ 1906ನೆ ಇಸವಿ ಡಿಸೆಂಬರ್ 20ನೆ ತಾರೀಖಿನ ಜ. 1709-ರಿಜಿಸ್ಟ್ರೇಷರ್ 11-06-6ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ವಿಧಿಸಿರುವ ರುಸುಮು ದರಗಳಿಗೆ ಬದಲಾಗಿ ಇದರಡಿ ಕಂಡ ರುಸುಮುಗಳನ್ನು 1909ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು ದಾಖಲ್ಮಾಡಿಕೊಳ್ಳತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್ರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ.

" VIII ದಾಖಲೆಗಳನ್ನು ಹುಡುಕುವದಕ್ಕೆ ಅಥವಾ ಅಜಮಾಯಿಷಿ ಮಾಡುವುದಕ್ಕೆ ರುಸುಂ, ರೂ. 1—8—0.

1878ನೆ ಇಸವಿ ಅಗಸ್ಟ್ 12ನೆ ಮರ್ಕೂಂನ 131ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ ರುಸುಮುಗಳ ತಖ್ತೆಯನ್ನು ಇದರಂತೆ ತಿದ್ದುಪಾಟು ಮಾಡಿಕೊಳ್ಳಬೇಕು.

ತಾರೀಖು 17ನೆ ಮಾರ್ಚಿ 1909.

ನಂ. ಜ. 2750—ಕೋರ್ಟ್ 283-08-8, ಮೈಸೂರು ಚೀಫ್ ಕೋರ್ಟ್ ಚೀಫ್ ಜಡ್ಜಿಯವರಾದ ಮಿ|| ಜಸ್ಟಿಸ್ ಎಸ್. ಇಸ್ಮೆ, ಸಿ. ಎಸ್. ಐ. ಬ್ಯಾರಿಸ್ಟರ್ ಅಟ್ ಲಾ ಯವರಿಗೆ ಬರುವ ಬೇಸಿಗೆ ರಜಾ ಜತೆಗೆ 1909ನೆ ಇಸವಿ ಜೂನ್ 15ನೆ ತಾರೀಖು ಲಾಗಾಯಿತು ಅರ್ಧ ತಲಬಿನಮೇಲೆ 27 ದಿನಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇದೆ.

ತಾರೀಖು 20ನೆ ಮಾರ್ಚಿ 1909.

ನಂ. ಜ. 5345—ಜ. ಮಿ. 22-08-50, ಬಿ. ಷೆಡ್ಯೂಲಿನ 3ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾದ ಮಿ|| ಸಿ. ನಾರಾಯಣರಾಯರಿಗೆ 1909ನೆ ಇಸವಿ ಫೆಬ್ರವರಿ 6ನೆ ತಾರೀಖು ಲಾಗಾಯಿತು 2ನೆ ತರಗತಿಗೆ ಬಡ್ತಿ ಮಾಡಿರುತ್ತೆ.

ತಾರೀಖು 23ನೆ ಮಾರ್ಚಿ 1909.

ನಂ. 9225—ವಿದ್ಯಾ. 285-08—4, ಮೈಸೂರು ಸರ್ವಿಸ್ ರೆಗ್ಯುಲೇಷನಿನ 191 (b)ನೆ ಪ್ರಕರಣದ ಮೇರಿಗೆ, ಚಿತ್ರದುರ್ಗದ ಹೈ ಸ್ಕೂಲ್ ಹೆಡ್ಮಾಸ್ಟರಾದ ಮಿ|| ಆರ್ ರಘುನಾಥರಾಯರಿಗೆ, 1909ನೆ ಇಸವಿ ಫೆಬ್ರವರಿ 3ನೆ ತಾರೀಖು ಲಾಗಾಯಿತು ನೀಮ ತಲಬಿನ ಮೇಲೆ 14 ದಿವಸಗಳ ಪ್ರಿವಿಲೇಜು ರಜಾವನ್ನು ಮಂಜೂರ್ಮಾಡಿ ಇರುತ್ತೆ.

ತಾರೀಖು 24ನೆ ಮಾರ್ಚಿ 1909.

ನಂ. ಜ. 5448—ಜ. ಮಿ. 277-08—2, ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾ ಸಾಹೇಬ್ಬಹದರವರ ಅಸಿಸ್ಟೆಂಟ್ ಪ್ರೈವೇಟ್ ಸೆಕ್ರಿಟೆರಿಯವರಾದ ಮಿ|| ಪಿ. ರಾಘವೇಂದ್ರ ರಾಯರವರನ್ನು 1909ನೆ ಇಸವಿ ಏಪ್ರಿಲ್ 1ನೆ ತಾರೀಖು ಲಾಗಾಯಿತು ಹುಜೂರು ಸೆಕ್ರಿಟೆರಿ ಕೆಲಸಕ್ಕೆ ನೇಮಿಸಿ ಇರುತ್ತೆ.

ತಾರೀಖು 15ನೆ ಮಾರ್ಚಿ 1909.

ನಂ. ಫೈ. 4122-ಸ. ರೆ. 183-07-6, ಸಗ 1906ನೆ ಇಸವಿ ಫೆಬ್ರವರಿ 23ನೆ ಮರ್ಕೂಂನ ಫೈ. 5226—ಸ. ರೆ. 98-05-5ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯ ಮೂಲಕ ಪ್ರಸಿದ್ಧಪಡಿಸೋಣಾದ ನಿಬಂಧನೆಗಳನ್ನು ಬದಲಾಯಿಸಿ, ಆಗಿಂದಾಗ್ಯೆ ತಿದ್ದುಪಡಿಯಾದ 1901ನೆ ಇಸವಿಯ Vನೆ ನಂಬರ್ ಎಕ್ಸೈಜ್ ರೆಗ್ಯುಲೇಷನಿನ 24ನೆ ಪ್ರಕರಣವನ್ನನುಸರಿಸಿ, ಕೊಕೇನ್ ಮತ್ತು ನೋವೊಕೇನ್ ಎಂಬ ಪದಾರ್ಥಗಳನ್ನು ಬಿಕರಿ ಮಾಡತಕ್ಕ ಬಗ್ಗೆ ಲೈಸೆನ್ಸುಗಳನ್ನು ಕೊಡತಕ್ಕ ವಿಷಯದಲ್ಲಿ, ಇದರಡಿ ಕಂಡ ನಿಬಂಧನೆಗಳನ್ನು ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದರವರ ಸರ್ಕಾರದವರು ವಿಧಿಸಿ-ಇರುತ್ತಾರೆ :—

1. ಆಗಿಂದಾಗ್ಯೆ ತಿದ್ದುಪಡಿಯಾದ 1901ನೆ ಇಸವಿಯ Vನೆ ನಂಬರ್ ಮೈಸೂರು ಎಕ್ಸೈಜ್ ರೆಗ್ಯುಲೇಷನಿನ 15ನೆ ಪ್ರಕರಣದಲ್ಲಿ, ಕೊಕೇನ್ ಮತ್ತು ನೋವೊಕೇನ್ ಎಂಬ ಪದಾರ್ಥಗಳನ್ನು ಲೈಸೆನ್ಸ್ ಇಲ್ಲದೆ ಬಿಕರಿ ಮಾಡಕೂಡದೆಂದು ವಿಧಿಸಿರುವದಲ್ಲದೆ, ಹಾಗೆ ಬಿಕರಿ ಮಾಡುವವನು 5. ನೆ ಪ್ರಕರಣದ ಮೇರಿಗೆ ಶಿಕ್ಷೆಗೆ ಗುರಿಯಾಗುತ್ತಾನೆ.

2. ಕೊಕೇನ್ ಮತ್ತು ನೋವೊಕೇನ್ ಎಂಬ ಪದಾರ್ಥಗಳಿಗೆ ನ್ಯಾಯವಾದ ಗಿರಾಕಿ ಇರುತ್ತದೆಂದು ಹೇಳುವ ಲಾಯಖಾದ ವೈದ್ಯರಿಗೂ, ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಸಾಮಗ್ರಿಗಳನ್ನು ಬಿಕರಿ ಮಾಡತಕ್ಕವರಿಗೂ, ಸದರಿ ಕೊಕೇನ್ ಮತ್ತು ನೋವೊಕೇನ್ ಎಂಬ ಪದಾರ್ಥಗಳನ್ನು ಬಿಕರಿ ಮಾಡಲು ರುಸುಮಿಲ್ಲದೆ ಲೈಸೆನ್ಸುಗಳನ್ನು ಡೆಪ್ಯುಟಿ ಕಮಿಷನರವರು, ಎಕ್ಸೈಜ್ ಕಮಿಷನರವರ ಮಂಜೂರಾತಿಮೇಲೆ ಕೊಡಬಹುದು.

3. ಲೈಸೆನ್ಸ್ ಹೊಂದಿದ ವೆಂಡರು ಅಥವಾ ಮಾಲೀಕರಲ್ಲದ ಇತರರಿಗೆ ವೈದ್ಯರಿಂದ ಔಷಧ ಪಟ್ಟಿಯನ್ನು ತಂದರೇನೇ ಕೊಕೇನ್ ಮತ್ತು ನೋವೊಕೇನ್ ಬಿಕರಿ ಮಾಡಬೇಕು.

4. ಕೊಕೇನ್ ಅಥವಾ ನೋವೊಕೇನ್ ಎಂಬುವದರಲ್ಲಿ ಸದರಿ ಪದಾರ್ಥವನ್ನು ಮಿಶ್ರಮಾಡಿ ತಯಾರ್ಮಾಡಲ್ಪಡುವ ಪ್ರತಿ ಒಂದು ಪದಾರ್ಥವೂ ಸೇರಿರುತ್ತದೆ.

ತಾರೀಖು 15ನೆ ಮಾರ್ಚಿ 1909.

ನಂ. ಫೈ. 4129—ಸೆ. ರೆ. 188—09—7, 1901ನೆ ಇಸವಿ Vನೆ ನಂಬರ್ ಮೈಸೂರು ಎಕ್ಸೈಜು ರೆಗ್ಯುಲೇಷನಿನ 71ನೆ ಪ್ರಕರಣದಿಂದ ತಮಗೆ ಕೊಡೋಣಾದ ಅಧಿಕಾರವನ್ನು ಚಲಾಯಿಸುವದರಲ್ಲಿ, ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬ ಹದ್ದೂರವರ ಸರ್ಕಾರದವರು, ಕೊಕೇನ್ ಅಥವಾ ನೋವೊಕೇನ್ ಎಂಬ ಪದಾರ್ಥಗಳಿಂದ ತಯಾರಾದ ಯಾವ ಔಷಧ ಪದಾರ್ಥವನ್ನಾಗಲಿ ಮೈಸೂರು ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ 1909ನೆ ಇಸವಿಯ ಮೇ 1ನೆ ತಾರೀಖು ಲಾಗಾಯಿತು ಮತ್ತು ಆ ತರುವಾಯ ಡೆಪ್ಯುಟಿ ಕಮಿಷನರವರಿಂದ ಕೊಡಲ್ಪಡುವ ಲೈಸೆನ್ಸ್ ವಿನಹಾ ಮಾರಕೂಡದೆಂದು ಹುಕುಂ ಮಾಡಿ ಇರುತ್ತಾರೆ.

ತಾರೀಖು 19ನೆ ಮಾರ್ಚಿ 1909.

ನಂ. ರೆ. 7480—ಲ್ಯಾ. ರೆ. 22—08—71, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ರೇನ್ ಗೇಜನ್ನು (ಅಂದರೆ ಮಳೆ ಅಳತೆಮಾಡುವ ಸಾಧನವನ್ನು) ಕಟ್ಟಿಸುವ ಉದ್ದಿಶ್ಯ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಅಥವಾ ಇನಾಮ್ದಾರನ ಹೆಸರು.	ಸರ್ವೆ ಅಥವಾ ಇನಾಂ ನಂಬರು.	ಖುಷ್ಕಿ, ತರಿ, ಬಾಗಾಯಿತು.	ಒಟ್ಟು ವಿಸ್ತೀರ್ಣ.	ಬೇಕಾದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಂಜನಗೂಡು	ಬಿಳಿಗೆರೆ	ಬಿಳಿಗೆರೆ	ಚೆನ್ನಪ್ಪ ಬಿನ್ ಹುಚ್ಚಪ್ಪ	1	ಖುಷ್ಕಿ	ಎ. ಗು. 0 5	ಎ. ಗು. 0 5	ರೂ. 6	ಎ. ಗು. ಆ. 55 5	ಚೆನ್ನಪ್ಪ ಬಿನ್ ಹುಚ್ಚಪ್ಪನವರ ಸರ್ವೆ ನಂಬರು 2	ಗ್ರಾಮ	ರಸ್ತೆ	ಚೆನ್ನಪ್ಪ ಬಿನ್ ಹುಚ್ಚಪ್ಪನವರ ಸರ್ವೆ ನಂ. 129

ತಾರೀಖು 19ನೆ ಮಾರ್ಚಿ 1909.

ನಂ. ರೆ. 7482—ಲ್ಯಾ ರೆ. 22—08—72, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ, ಹುಣಸೂರು ತಾಲ್ಲೂಕಿನಲ್ಲಿರುವ ಆಯರಹಳ್ಳಿ ನಾಲೆಯನ್ನು ಬೇರೆ ಕಡೆಗೆ ತಿರಿಗಿಸುವ ಬಗ್ಯೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಆವಶ್ಯಕವಾದ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂ.	ಖುಷ್ಕಿ, ತರಿ, ಬಾಗಾಯಿತು.	ಒಟ್ಟು ವಿಸ್ತೀರ್ಣ.	ಬೇಕಾದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ಎ. ಗು.	ರೂ. ಆ.	ಎ. ಗು.				
ಮೈಸೂರು	ಹುಣಸೂರು	ಬಿಳಿಕೆರೆ	ಆಯರಹಳ್ಳಿ	ಹೆಣಕೆರೆ ಗೌಡನ ಮಗ ವೆಂಕಟಪ್ಪ, ಖಾತೆ ಇವನ ಮಗ ಚನ್ನೈಗೌಡ ಹಿಸ್ಸೆದಾರ ಅಪ್ಪಾಜೆಗೌಡ	27	ಖುಷ್ಕಿ	1 10	1 10	0 12	9 15	ಸರ್ವೆ 27ನೆ ನಂಬರಿನ ಬಾಕಿ ಪ್ರದೇಶ	ಸರ್ವೆ 27ನೆ ನಂಬರಿನ ಬಾಕಿ ಪ್ರದೇಶ	ನಾಲೆ	ನಾಲೆ
						ಬಾಗಾಯಿತು.	0 37	0 37	4 4	...				

ತಾರೀಖು 21ನೆ ಮಾರ್ಚಿ 1909.

ನಂ. ರೆ. 7548—ಲ್ಯಾ. ರೆ. 39—08—39, ಸನ್ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ ;—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗೋಕಟ್ಟೆ ಕಟ್ಟಿಸತಕ್ಕ ಬಗ್ಗೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನುಸರಿಸಿ ಚಿತ್ರದುರ್ಗದ ಡೆಪ್ಯುಟಿ ಕಮಿಷನರವರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರುಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ: ವಿಸ್ತೀರ್ಣ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ: ಕಂದಾಯ.	ಚೌತರ್ಫು: ಪೂರ್ವ.	ಚೌತರ್ಫು: ಪಶ್ಚಿಮ.	ಚೌತರ್ಫು: ಉತ್ತರ.	ಚೌತರ್ಫು: ದಕ್ಷಿಣ.
							ಎ. ಗು.	ಗು.	ಎ. ಗು.	ರೂ. ಆ.	ಎ. ಗು.	ರೂ. ಆ.				
ಚಿತ್ರದುರ್ಗ	ಹಿರಿಯೂರು	ಜವನಗೊಂಡನಹಳ್ಳಿ	ಬೀಲಾಲಿ	ಏಕಾಕಪ್ಪನ ಮಗ ಚಿಕ್ಕದಾಸಪ್ಪ.	81	ಖುಷ್ಕಿ	17 31	11	17 20	6 8	17 20	6 8	ಸರ್ವೆ ನಂಬರು 73ನೆ ಎಕ್ಸೆಲ್ಜು ಖರಾಬು 75ನೆ ಹಿಡುವಳಿ.	ಸರ್ವೆ ನಂಬರು 82ನೆ ಕೆರೆ	ಸರ್ವೆ ನಂಬರು 82ನೆ ಕೆರೆ.	ಸರ್ವೆ ನಂಬರು 80ನೆ ಎಕ್ಸೆಲ್ಜು ಖರಾಬು

ತಾರೀಖು 22ನೆ ಮಾರ್ಚಿ 1909.

ನಂ. ರೆ. 7556-ಲ್ಯಾ. ರೆ. 27—08—22, ಸನ್ 1894ನೆ ವರ್ಷದ VIIನೆ ನಂಬರ್ ಮೈಸೂರು ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ನಿನ 6ನೆ ಪ್ರಕರಣವನ್ನನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ :— ಈ ಕೆಳಗೆ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ ಶಿಕಾರಿಪುರ ಟವನ್ನಿನ ಮಹಮ್ಮದೀಯ ನಿವಾಸಿಗಳಿಗೆ ಕಬರಸ್ತಾನಕ್ಕೋಸ್ಕರ ಅವಶ್ಯವಾಗಿರುವದರಿಂದ, ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರುಗಿಸುವುದಕ್ಕೋಸ್ಕರ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಗೆ ಸದರಿ ರೆಗ್ಯುಲೇಷನಿನ 7 ಮತ್ತು 3 (c)ನೆ ಪ್ರಕರಣಗಳನ್ನನುಸರಿಸಿ ಅಧಿಕಾರವನ್ನು ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಅಕ್ವಯಿರ್ ಅಂದರೆ ಪಡೆಯಬೇಕಾದ ಜಮೀನಿನ ವಿವರ: ತರಹೆ.	ಅಕ್ವಯಿರ್ ಅಂದರೆ ಪಡೆಯಬೇಕಾದ ಜಮೀನಿನ ವಿವರ: ವಿಸ್ತೀರ್ಣ.	ಅಕ್ವಯಿರ್ ಅಂದರೆ ಪಡೆಯಬೇಕಾದ ಜಮೀನಿನ ವಿವರ: ಆಕಾರ.	ಅಕ್ವಯಿರು ಮಾಡಬೇಕಾದ ವಿಸ್ತೀರ್ಣ.	ಚಕ್ಕುಬಂದಿ: ಪೂರ್ವ.	ಚಕ್ಕುಬಂದಿ: ಪಶ್ಚಿಮ.	ಚಕ್ಕುಬಂದಿ: ಉತ್ತರ.	ಚಕ್ಕುಬಂದಿ: ದಕ್ಷಿಣ.
							ಎ. ಗು.	ರೂ.	ಎ. ಗು.				
ಶಿವಮೊಗ್ಗ	ಶಿಕಾರಿಪುರ	ಶಿಕಾರಿಪುರ	ಗಬ್ಬೂರು	ಜೋತಿಬಾ ...	38	ಖುಷ್ಕಿ	13 18	5	6 29	39ನೆ ಸರ್ವೆ ನಂಬರ್	37ನೆ ಸರ್ವೆ ನಂಬರ್	38ನೆ ಸರ್ವೆ ನಂಬರಿನ ಒಂದು ಭಾಗ	ಹಳೆ ರಸ್ತೆ

ತಾರೀಖು 22ನೆ ಮಾರ್ಚಿ 1909.

ನಂ. ರೆ. 7558—ಲ್ಯಾ. ರೆ. 22—08—76, ಸ್ಟ 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರ ಕೆಲಸಕ್ಕೆ ಎಂದರೆ, ಗುಂಡ್ಲುಪ್ಯಾಟೆ ತಾಲ್ಲೂಕು ಬೊಮ್ಮನಹಳ್ಳಿ ಗ್ರಾಮದಲ್ಲಿ ಮನೆ ಕಟ್ಟತಕ್ಕ ಬಗ್ಗೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಯಾ ಮಾಲೀಕನ ಹೆಸರು.	ಸರ್ವೆ ಯಾ ಮ್ಯುನಿಸಿಪಲ್ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಗುಂಡ್ಲು ಪ್ಯಾಟೆ	ತೆರಕಣಾಂಬಿ	ಬೊಮ್ಮನಹಳ್ಳಿ	ಚಿಕ್ಕ ನಂಜೇಗೌಡ, ಬಸವೇಗೌಡ, ದೇವೇಗೌಡ.	8	ಖುಷ್ಕಿ	ಎ. ಗು. 6 2	ಎ. ಗು. 6 2	ರೂ. ಆ. 4 8	ಎ. ಗು. 1 0	ಆ. 12	ದಾರಿ	ಸರ್ವೆ 8ನೆ ನಂ.	8ನೆ ನಂಬರು	ಗಾವಠಾಣಾ

ಹುಕುಂ ಬಮೋಜಿಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ವಿಶೇಷ ಪತ್ರಿಕೆ.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಏಪ್ರಿಲ್ ತಾ॥ 1, 1909.

ಪ್ರಕಟನೆ.

ವಿಶ್ವನಾಥ ಪಟ್ಣಕರ್ ಮಾಧವರಾವ್, ಸಿ. ಐ. ಇ. ಯವರು ಉದ್ಯೋಗದಿಂದ ನಿವೃತ್ತರಾದ ಪ್ರಯುಕ್ತ ಮೈಸೂರು ಸಂಸ್ಥಾನದ ದಿವಾನ್ ಕೆಲಸವು ಖಾಲಿಯಾದುದರಿಂದ ನಾವು ತಂಜಾವೂರು ಮಾಧವರಾವ್ ಆನಂದ ರಾವ್, ಬಿ. ಏ. ಯವರ ರಾಜಭಕ್ತಿ, ಕಾರ್ಯದಕ್ಷತೆ ಮತ್ತು ವಿವೇಕ ಇವುಗಳಲ್ಲಿ ಅಭಿಮಾನವಿಟ್ಟು ಮೈಸೂರು ಸಂಸ್ಥಾನದ ದಿವಾನ್ ಉದ್ಯೋಗಕ್ಕೆ ಮೇಲ್ಕಂಡ ತಂಜಾವೂರು ಮಾಧವರಾವ್ ಆನಂದರಾವ್, ಬಿ. ಏ. ಯವರನ್ನು ಈ ಮೂಲಕ ಮೊಕರರ್ ಮಾಡಿರುತ್ತೇವೆ; ಮತ್ತು ಉದ್ಯೋಗಪ್ರಯುಕ್ತ ಮಂತ್ರಾಲೋಚನಾಸಭಾಧ್ಯಕ್ಷರಾಗಿಯೂ ಸಹ ಮೇಲ್ಕಂಡ ತಂಜಾವೂರು ಮಾಧವರಾವ್ ಆನಂದರಾವ್, ಬಿ. ಏ. ಯವರನ್ನು ನಾವು ಮೊಕರರ್ ಮಾಡಿರುತ್ತೇವೆ.

ಇದೇ 1909ನೆ ಇಸವಿ ಏಪ್ರಿಲ್ ೧ನೇ ತಾರೀಖಿನ ದಿವಸ ಮೈಸೂರಲ್ಲಿ ನಮ್ಮ ಮೊಹರ್ ದಸ್ತಖತ್ ಸಿಶಿ ಕೊಡಲ್ಪಟ್ಟಿರುತ್ತದೆ.

ಕೃಷ್ಣರಾಜ ಒಡೆಯರ್.

ಮೊಹರು.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಂಯಿಷ್ ಆದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 8, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಪೋನ್ ನೋಟಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 1ನೆ ಏಪ್ರಿಲ್ 1909.

ನಂ. ಜ. 5659—ಜ. ಮಿ. 281-08-1, ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ಬಹದ್ದೂರ್ರವರು ಮಿ|| ವಿ. ಪಿ. ಮಾಧವರಾಯರವರಿಗೆ ಈ ಸಂಸ್ಥಾನದ ದೀವಾನ್ ಹುದ್ದೆಯಿಂದ ನಿವೃತ್ತರಾಗಲು ಸಮ್ಮತಿ ದಯಪಾಲಿಸಿ ಅವರು ಮೈಸೂರು ಸಂಸ್ಥಾನದಲ್ಲಿ ಮಾಡಿದ ಮೆಹನತ್ತು ಕಾರ್ಯಗಳು ತಮಗೆ ಬಹುಮತವಾಗಿದ್ದ ಸಂಗತಿಯನ್ನು ಈ ಸಮಯದಲ್ಲಿ ತಿಳಿಯಪಡಿಸಲು ಅಪೇಕ್ಷಿಸುತ್ತಾರೆ. ಮಿ|| ಮಾಧವರಾಯರವರು 1870ನೆ ಇಸವಿಯಲ್ಲಿ ಸರ್ಕಾರೀ ಉದ್ಯೋಗಕ್ಕೆ ಪ್ರವೇಶಿಸಿ 9 ವರ್ಷ ಕಾಲದೊಳಗಾಗಿಯೇ ಸಬ್ ಜಡ್ಜಿ ಕೆಲಸಕ್ಕೆ ಬಂದು 1835ನೆ ಇಸವಿಯಲ್ಲಿ ಡೆಪ್ಯುಟಿ ಕಮಿಷನರಾಗಿ ನೌಕರರಾದರು. 1892ನೆ ಇಸವಿಯಲ್ಲಿ ಪೋಲೀಸ್ ಇನ್‌ಸ್ಪೆಕ್ಟರ ಜನರಲ್ ಕೆಲಸಕ್ಕೆ ಇವರನ್ನೇ ಮುಖ್ಯವಾಗಿ ಚುನಾಯಿಸೋಣವಾಯಿತು. ಅನಂತರ 1898ನೆ ಇಸವಿಯಲ್ಲಿ ಮೈಸೂರು ಸೀಮೆಯಲ್ಲಿ ಪ್ಲೇಗು ಜಾಡ್ಯವು ತಲೆದೋರಿದ್ದಾಗ್ಯೆ ಇವರನ್ನು ಪ್ಲೇಗ್ ಕಮಿಷನರಾಗಿ ನೌಕರರ್ಮಾಡಿ ಈ ಜಾಡ್ಯವು ಬಾರದಂತೆ ತಕ್ಕ ಏರ್ಪಾಟುಗಳನ್ನು ಮಾಡುವ ಅತಿಕಷ್ಟವಾದ ಮತ್ತು ಜವಾಬ್ದಾರಿಯುಳ್ಳ ಕೆಲಸವನ್ನು ಇವರಿಗೆ ವಹಿಸಲಾಯಿತು. ಅದೇ ಸಾಲಿನಲ್ಲಿಯೇ ಇವರು ಕೌನ್ಸಿಲರಾಗಿ ನೌಕರರ್ಮಾಡಲ್ಪಟ್ಟರು. ಇವರು ಮಾಡಿದ ಶ್ಲಾಘನೀಯವಾದ ಕಾರ್ಯಗಳನ್ನು 1899ನೆ ಇಸವಿಯಲ್ಲಿ ಶ್ರೀಮದಿಂಡಿಯಾ ಸಾರ್ವಭೌಮರ ಸರ್ಕಾರದವರು ಬಹುಮತಿಸಿ ಇವರಿಗೆ ಸಿ. ಐ. ಇ. ಎಂಬ ಬಹು ಶ್ರೇಷ್ಟವಾದ ಬಿರುದನ್ನು ದಯಪಾಲಿಸಿದರು. 1904ನೆ ಇಸವಿಯಲ್ಲಿ ಮಿ|| ಮಾಧವರಾಯರವರು ಮೈಸೂರು ಸರ್ಕಾರದ ಕೆಲಸದಿಂದ ನಿವೃತ್ತರಾಗಿ ತಿರುವಾಂಕೂರು ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ದೀವಾನ್ ಪದವಿಯನ್ನು ಸ್ವೀಕರಿಸಿದರು.

ಎರಡು ವರ್ಷಗಳ ತರುವಾಯ ಅವರನ್ನು ಪುನಃ ಮೈಸೂರು ಸಂಸ್ಥಾನಕ್ಕೆ ಬರಮಾಡಿಕೊಂಡು ಇಲ್ಲಿನ ದೀವಾನ್ ಕೆಲಸಕ್ಕೆ ನೇಮಿಸೋಣವಾಯಿತು. ಇಷ್ಟು ದೀರ್ಘಕಾಲ ಇವರು ಸರ್ಕಾರೀ ಅಧಿಕಾರಗಳನ್ನು ನಡೆಸಿದ್ದರಲ್ಲಿ ಇವರು ಪ್ರಕಾಶಗೊಳಿಸಿದ ಅತ್ಯಾಸಕ್ತಿಯಿಂದಲೂ ಕಾರ್ಯನಿರ್ವಾಹಶಕ್ತಿಯಿಂದಲೂ ಬಹು ಪ್ರಖ್ಯಾತಿ ಹೊಂದಿರುತ್ತಾರೆ. ಇಂಥಾ ಶಕ್ತರಾದ ಸರ್ಕಾರೀ ಅಧಿಕಾರಿಯ ಸಹಾಯವು ತಮಗೆ ತಪ್ಪಿಹೋಯಿತಲ್ಲಾ ಎಂಬ ವಿಷಾದದೊಡನೆ ಶ್ರೀಮನ್ಮಹಾರಾಜ ರಾಜಾ ಸಾಹೇಬ್ ಬಹದ್ದೂರ್‌ರವರು ಅವರಿಗೆ ಅವರ ಉದ್ಯೋಗದಿಂದ ವಿಶ್ರಾಂತಿ ಸುಖವನ್ನನುಭವಿಸಲು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 29ನೆ ಮಾರ್ಚಿ 1909.

ನಂ. 9393—ಸ್ಯಾನಿಟರಿ 13–08–8, ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರ ತಾಲ್ಲೂಕಿನ ಎಲ್ದೂರು ಗ್ರಾಮಕ್ಕೆ ಶ್ರೀ ಕೋದಂಡರಾಮಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಏಪ್ರೆಲ್ 3ನೆ ತಾರೀಖಿನಿಂದ 1909ನೆ ಏಪ್ರೆಲ್ 12ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 27ನೆ ಮಾರ್ಚಿ 1909.

ನಂ. 9337—ಸ್ಯಾನಿಟರಿ 76–08–46, ಸಮಸ್ತ ಜನರ ತಿಳುವಳಿಕೆಯ ಜಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು:—

ಸ್ಥಳ.	ತಾಲ್ಲೂಕು.
ಅಯ್ಯನಪುರ	ಚಾಮರಾಜನಗರ.
ಮಾರಗೊಂಡನಹಳ್ಳಿ	ಎಡತೊರೆ.
ಕ್ಯಾರನಕಟ್ಟೆ	ಗುಂಡ್ಲುಪೇಟೆ.
ಅಗಟಗಂಡನಹಳ್ಳಿ	ಡಿಟ್ಟೋ
ಕೋತನೂರು	ಡಿಟ್ಟೋ.
ಕಿರಗವಾಲ್	ಮಳವಳ್ಳಿ.
ಮುತ್ತನಹಳ್ಳಿ	ಡಿಟ್ಟೋ
ದೇವರಹಳ್ಳಿ	ಡಿಟ್ಟೋ
ತರಗನಹಳ್ಳಿ	ನಂಜನಗೂಡು.
ಹುಣಸೂರು	ಹುಣಸೂರು.

ತಾರೀಖು 27ನೆ ಮಾರ್ಚಿ 1909.

ನಂ. 9335—ಲೋ. ಬೋ. 342-08-1, ಸನ್ 1902ನೆ ಇಸವಿ IIನೆ ನಂಬರ್ ಮೈಸೂರು ಲೋಕಲ್ ಬೋರ್ಡು ರೆಗ್ಯುಲೇಷನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವಲ್ಲಿ, ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದರವರ ಸರ್ಕಾರದವರು, 1903ನೆ ಇಸವಿ ಸೆಪ್ಟಂಬರ್ 9ನೆ ತಾರೀಖಿನ 30 ಲೆಜಿಸ್. 4-03ನೆ ನಂಬರು ಇಸ್ತಿಹಾರ್‌ನಾಮೆಯೊಂದಿಗೆ ಘಾಯಿಷ್ಮಾಡಿರುವ ನಿಬಂಧನೆಗಳ ಪೈಕಿ 13ನೆ ನಿಬಂಧನೆಯಲ್ಲಿ 8ನೆ ಉಪಕಲಮಾಗಿ ಇದರಡಿ ಕಾಣಿಸಿರುವದನ್ನು ದಾಖಲ್ಮಾಡಿಕೊಳ್ಳಬೇಕೆಂದು ಹುಕುಂ ದಯಪಾಲಿಸಿರುತ್ತಾರೆ.

(8) ಮೋಸ, ಭಯೋತ್ಪಾತ, ಲಂಚ ಅಥವಾ ಪ್ರಬಲವಾದ ಅಕ್ರಮ, ಈ ಕಾರಣದಮೇಲೆ ಯಾವ ಚುನಾವಣೆಯಾದರೂ ನಡೆದಿದ್ದರೆ ಅದನ್ನು ಸರ್ಕಾರದವರ ಮಂಜೂರಾತಿಮೇಲೆ, ಡೆಪ್ಯುಟಿ ಕಮಿಷನರವರು ರದ್ದುಪಡಿಸಬಹುದು; ಇಂಥಾ ಸಂದರ್ಭದಲ್ಲಿ ಹೊಸದಾಗಿ ಚುನಾವಣೆಯನ್ನು ಮಾಡಬೇಕು.

ತಾರೀಖು 31ನೆ ಮಾರ್ಚಿ 1909.

ನಂ. ಜ. 5657—ಜ. ಮಿ. 278–08–6, 1909ನೆ ಇಸವಿಯ ಮಾರ್ಚಿ 30ನೆ ತಾರೀಖು ಮಧ್ಯಾಹ್ನಾನಂತರ, ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದರವರ ಪ್ರೈವೇಟ್ ಸೆಕ್ರಿಟರಿ ಕೆಲಸದ ಛಾರ್ಜನ್ನು ಮಿ॥ ಇ. ಮೆಕಾನಕಿ, ಐ. ಸಿ. ಎಸ್. ರವರು ಕೊಟ್ಟು ಮಿ॥ ಆರ್. ಎಚ್. ಕ್ಯಾಂಬೆಲ್, ಐ. ಸಿ. ಎಸ್. ರವರು ಸದರಿ ಹುದ್ದೆಯ ಚಾರ್ಜನ್ನು ವಹಿಸಿಕೊಂಡಿರುತ್ತಾರೆ.

ತಾರೀಖು 31ನೆ ಮಾರ್ಚಿ 1909.

ನಂ. 9457—ಮೆಡಿಕಲ್ 207-08-2, ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಸಬ್ ಅಸಿಸ್ಟೆಂಟ್ ಸರ್ಜ್ಜ ಮಿ|| ಜಿ. ಆಶೀರ್ವಾದಂ ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ 1909ನೆ ಮಾರ್ಚಿ 3ನೆ ತಾರೀಖಿನ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ತಾರೀಖು 1ನೆ ಏಪ್ರೆಲ್ 1909.

ನಂ. ಜ. 5672—ಜ. ಮಿ. 261-08-6, ಮಿ|| ಟಿ. ರಾಮುಲು ಚೆಟ್ಟಿಯವರು ರಜಾವಿನ ಮೇಲೆ ಇರುವಾಗ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಅಸಿಸ್ಟೆಂಟ್ ಕಮಿಷನರ್ ಮಿ|| ಆರ್. ನಾನಾಸಾಮಿರಾಯರವರನ್ನು ಬೆಂಗಳೂರು ಸಿವಿಲ್ ಆಫೀಸರನ್ನಾಗಿ ಮೊಕರರ್ಮಾಡಿ ಇದೆ.

2. 1909ನೆ ಇಸವಿ ಮಾರ್ಚಿ 9ನೆ ತಾರೀಖಿನ ಜ. 5092—ಜ. ಮಿ. 261-08-4ನೆ ನಂಬರ್ ಸರ್ಕಾರಿ ಹುಕುಂನಲ್ಲಿ ಮಿ|| ಹೇಸ್‌ರವರನ್ನು ಸಿವಿಲ್ ಆಫೀಸರಾಗಿ ಬದಲಿ ತರೀಕು ಮೊಕರರು ಮಾಡಿರತಕ್ಕದ್ದು. ಈ ಮೂಲಕ ರದ್ದಾಗಿರುತ್ತದೆ.

ತಾರೀಖು 3ನೆ ಏಪ್ರೆಲ್ 1909.

ನಂ. ಜ್ಯು. 2925—ಕೋರ್ಟ್ಸ್. 306-08-2, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಡ್ಯುರ್ ಕೋಡಿನ 12ನೆ ಪ್ರಕರಣವನ್ನನುಸರಿಸಿ ತುಮುಕೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುತ್ತಿರುವ ರೆವಿನ್ಯೂ ಪ್ರೊಬೇಷನರ್ ಮಿ|| ಟಿ. ಹನುಮಂತರಾವ್, ಬಿ. ಎ., ಬಿ. ಎಲ್. ಯವರನ್ನು ಮೂರನೆ ತರಗತಿಯ ಮೇಜಿಸ್ಟ್ರೇಟರನ್ನಾಗಿ ಮೊಕರರ್ ಮಾಡಿ ಇದೆ.

ತಾರೀಖು 3ನೆ ಏಪ್ರೆಲ್ 1909.

ನಂ. ಜ್ಯು. 2927—ಕೋರ್ಟ್ಸ್. 311-08-2, 1904ನೆ ಇಸವಿ ಕ್ರಿಮಿನಲ್ ಪ್ರೊಸೀಡ್ಯುರ್ ಕೋಡು 37ನೆ ಪ್ರಕರಣದ ಮೇರಿಗೆ ಗುಬ್ಬಿ ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಕೆ. ಶ್ರೀನಿವಾಸರಾಯರಿಗೆ, 2 ಮತ್ತು 3ನೆ ಕ್ಲಾಸು ಮಾಜಿಸ್ಟ್ರೇಟರುಗಳು ಕೊಟ್ಟ ಶಿಕ್ಷೆ ಮೇಲೆ ಬರುವಂಥ ಅಪೀಲುಗಳನ್ನು ಫೈಸಲ್ಮಾಡುವ ಹೆಚ್ಚು ಅಧಿಕಾರವನ್ನು ಕೊಟ್ಟು ಇರುತ್ತೆ.

ತಾರೀಖು 27ನೆ ಮಾರ್ಚಿ 1909.

ನಂ. ರೆ. 7755—ಲ್ಯಾ. ರೆ. 93-08-3, ಕೆಲಸದಿಂದ ನಿವೃತ್ತರಾದ ಅಮಲ್ದಾರ್ ಮಿ|| ಸಿ. ವಿ. ನಾರಾಯಣರಾಯರಿಗೆ ಬದಲಾಗಿ ಹಾಸನದ ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮಿ|| ಬಿ. ಟಿ. ಸೀತಾರಾಮಯ್ಯನವರನ್ನು ಹೊಳೇನರಸೀಪುರದ ತಾಲ್ಲೂಕಿನ ಅಮಲ್ದಾರಾಗಿ ಬದಲಿ ತರೀಕು ಮೊಕರರ್ಮಾಡಿ ಇದೆ.

ತಾರೀಖು 27ನೆ ಮಾರ್ಚಿ 1909.

ನಂ. ರೆ. 7773—ಲ್ಯಾ. ರೆ. 152-08-6, ಬೆಂಗಳೂರು ತಾಲ್ಲೂಕು ಅಮಲ್ದಾರ್ ಮಿ|| ಹೇಸ್‌ಯವರು ಬೇರೆ ಕೆಲಸದಲ್ಲಿರುವಾಗ್ಯೆ ಬೆಂಗಳೂರು ಡೆಪ್ಯುಟಿ ಕಮಿಷನರವರ ಆಫೀಸ್ ಜುಡಿಷಿಯಲ್ ಹೆಡ್ ಮುನಷಿ ಎಂ. ವೆಂಕಣ್ಣಾಚಾರ್ರನ್ನು ಸದರೀ ತಾಲ್ಲೂಕಿನ ಅಮಲ್ದಾರರಾಗಿ ಬದಲಿ ನೋಡಲು ಮೊಕರರ್ ಮಾಡಿ ಇದೆ.

ತಾರೀಖು 31ನೆ ಮಾರ್ಚಿ 1909.

ನಂ. ರೆ. 7823—ಘಾ. 60-08-4, 1908ನೆ ಇಸವಿ ನವಂಬರ 12ನೆ ತಾರೀಖಿನ ಕನ್ನಡಾ ಮೈಸೂರು ಗೆಜೆಟ್ಟಿನ 454 ಮತ್ತು 455ನೆ ಪುಟಗಳಲ್ಲಿ ಪ್ರಕಟಿಸಲ್ಪಟ್ಟ 1908ನೆ ಸೆಪ್ಟಂಬರ್ 7ನೆ ನುರ್ಕುಂ ರೆ. 1555—ಘಾ. 60-08-2ನೆ ನಂಬರ್ ಇಸ್ತಿಹಾರನಾಮೆಗೆ ಇದರಡಿ ಕಂಡ ಶುದ್ಧಾಶುದ್ಧ ಪತ್ರಿಕೆಯನ್ನು ಜನಗಳ ತಿಳಿವಳಿಕೆ ಬಗ್ಗೆ ಪ್ರಕಟಿಸಿ ಇದೆ :—

(1) ಪೂರ್ವಮೇರೆ 3ನೆ ಪಂಕ್ತಿ "ಮುಸವಳ್ಳಿ" ಎಂಬ ಮಾತಿಗೆ ಬದಲಾಗಿ "ಕೊಳಗಾರು" ಎಂದು ಓದತಕ್ಕದ್ದು.

(2) ,, 4ನೆ ಪಂಕ್ತಿ "ಮುಸವಳ್ಳಿ" ಎಂಬ ಮಾತನ್ನು ಬಿಟ್ಟುಬಿಡತಕ್ಕದ್ದು.

(3) ,, 4ನೆ ಪಂಕ್ತಿ "ನಾಗುಪ್ಪೆ" ಎಂಬ ಮಾತಿಗೆ ಬದಲಾಗಿ ಮುಕ್ಕುಪ್ಪೆ ಎಂದು ಓದತಕ್ಕದ್ದು.

(4) ,, 13ನೆ ಪಂಕ್ತಿ "ಕಾಲುದಾರಿಯನ್ನನುಸರಿಸಿ" ಎಂಬದಕ್ಕೆ ಬದಲಾಗಿ "ಕಾಲುದಾರಿಗೆ ಸಮಾನಾಂತರವಾಗಿ" ಎಂದು ಓದತಕ್ಕದ್ದು.

(5) ದಕ್ಷಿಣ ಮೇರೆ 2ನೆ ಪಂಕ್ತಿ "ಸರ್ವೆ ನಂ. 4ರ ಉತ್ತರ ಮತ್ತು ಪಶ್ಚಿಮ ಗಡಿಗಳನ್ನು" ಎಂಬ ಮಾತುಗಳಿಗೆ ಬದಲಾಗಿ "ಸರ್ವೆ 11 ಮತ್ತು 10ನೆ ನಂಬರುಗಳ ಪಶ್ಚಿಮ ಭಾಗದಲ್ಲಿಯೂ, ಸರ್ವೆ 10ನೆ ನಂಬರಿನ ದಕ್ಷಿಣ ಭಾಗದಲ್ಲಿಯೂ ಮತ್ತು ಸರ್ವೆ 9ನೆ ನಂಬರಿನ ಪಶ್ಚಿಮ ಭಾಗದಲ್ಲಿಯೂ ಹೋಗಿ ಇದೇ 9ನೆ ನಂಬರಿನ ನೈರುತ್ಯ ಮೂಲೆಗೆ ಸೇರಿ," ಎಂಬ ಮಾತುಗಳನ್ನು ಸೇರಿಸತಕ್ಕದ್ದು.

(6) ದಕ್ಷಿಣ ಮೇರೆ 3ನೆ ಪಂಕ್ತಿ "ಸರ್ವೆ ನಂಬರ್ 8ರ" ಎಂಬ ಮಾತುಗಳಿಗೆ ಬದಲಾಗಿ "ಅವರ" ಎಂದು ಓದತಕ್ಕದ್ದು.

ತಾರೀಖು 5ನೇ ಏಪ್ರಿಲ್ 1909.

ನಂ. 9749—Ml. 192-08-17, ಸನ್ 1894ನೆಯ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನ್ 6ನೇ ಸೆಕ್ಷನ್ ಪ್ರಕಾರ ಈ ಕೆಳಗೆ ನಮೂದಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕಾಗಿ ಅಂದರೆ ಕನ್ಸರ್ವೆನ್ಸಿ ಲೇನ್ ಮಾಡಲು ಬೇಕಾಗಿರುತ್ತೆಂತ ಇದರಿಂದ ಪ್ರಕಟಪಡಿಸಿದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c)ನೇ ಪ್ರಕರಣಗಳನ್ನನುಸರಿಸಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರಿಗೆ ಸದರೀ ಸ್ವತ್ತನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ :—

ನಂಬರ್.	ಡೋರ್ ನಂ.	ಬೀದಿಯ ಹೆಸರು.	ಡಿವಿಜನ್ ನಂ.	ಮಾಲೀಕರ ಹೆಸರು.	ಸ್ವತ್ತಿನ ವಿವರ.	ಅಳತೆ.			ಚೆಕ್ಕುಬಂದಿ.			
						ಲಾಂಬಿ ಅಡಿ.	ಅಗಲ ಅಡಿ.	ವಿಸ್ತೀರ್ಣ ಚದರಡಿ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	7	ದಿವಾನ್ ಸೂರಪ್ಪನ ಗಲ್ಲಿ.	III	ಸಿದ್ದರಾಮಣ್ಣ ...	ಖಾಲಿ ಜಮೀನ್ ...	4	2	8	ರೇವಣ್ಣನವರ ಮನೆ	ದಿಬ್ಬೂರು ರುದ್ರಪ್ಪನವರ ಮನೆ	ರಾಮಚಂದ್ರಸಾಹುಜೀ ಮತ್ತು ಸುಬ್ರಾಯಸಾಹುಜೀಯವರ ಮನೆ	ಸಿದ್ದರಾಮಣ್ಣನವರ ಮನೆ
					ಡಿಟೋ ...	20	10	200				
					ಡಿಟೋ ...	27½	2	55				
					ಡಿಟೋ ..	10	7½	75				
					ಮಂಡಿಮಾಳಿಗೆ ..	27½	8	220				
2	9	ಡಿಟೋ ...	,,	ದಿಬ್ಬೂರು ರುದ್ರಪ್ಪ.	ಡಿಟೋ ...	41	10	410	ಸಿದ್ದರಾಮಣ್ಣನವರ ಮನೆ	ಗಲ್ಲಿ	ಉಳಿಯುವ ಮನೆ	ಉಳಿಯುವ ಮನೆ
3	496	ತಾಲ್ಲೂಕು ಕಚೇರಿ ರೋಡು.	,,	ಚನ್ನಶೆಟ್ಟಿ ...	ಖಾಲಿ ಜಮೀನ್ ...	8	4	32	ಚನ್ನಶೆಟ್ರ ಮನೆ	ಸಿದ್ದರಾಮಣ್ಣನವರ ಮನೆ	ಡಿಟೋ	ಡಿಟೋ

ಹುಕುಂ ಬಮೋಜಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್, ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ತಾರೀಖು 2ನೆ ಏಪ್ರೈಲ್ 1909.

ನಂ. ಮಿಲಿಟರಿ 910-1—150-08-3, ಘನವನ್ನು ಹೊಂದಿದ ಶ್ರೀಮನ್ ಮಹಿಸೂರು ಸೀಮೆಯ ಮಹಾರಾಜರವರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟ್ 'ಎ' ಸ್ಕ್ವಾಡ್ರನ್ ದಫೆದಾರ್ ಸಯದ್ ಅಬ್ದುಲ್ ರಹಮಾನ್‌ರವರನ್ನು ಅದೇ ರೆಜಿಮೆಂಟಿನಲ್ಲಿ 5ನೆ ಗ್ರೇಡ್ ಟ್ರೂಪ್ ಕಮ್ಯಾಂಡರ್ ಜಮೇದಾರ್ ರ್‍ಯಾಂಕಿಗೆ 1909ನೆ ಇಸವಿ ಮಾರ್ಚಿ ತಿಂಗಳು 25ನೆ ತಾರೀಖಿನ ಲಾಗಾಯಿತು ಬಡ್ತಿ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರೆಟರಿ.

ತಾರೀಖು 7ನೆ ಏಪ್ರೈಲ್ 1909.

ನಂ. 9797—ಸ್ಯಾನಿಟರಿ 131-08-10, ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರ ತಾಲ್ಲೂಕಿನ ರೋಣೂರು ಗ್ರಾಮಕ್ಕೆ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಏಪ್ರೈಲ್ 12ನೆ ತಾರೀಖಿನಿಂದ 1909ನೆ ಏಪ್ರೈಲ್ 21ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಅಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

೦

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 15.

ಬೆಂಗಳೂರು, ಗುರುವಾರ, ಏಪ್ರಿಲ್ ತಾ॥ 15, ಸ್ನ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟ, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು ಡಿಸ್ಟ್ರಿಕ್ಟ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು ಫಾರೆಸ್ಟ ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 27ನೆ ಮಾರ್ಚಿ 1909.

ನಂ. 9337—ಸ್ಯಾನಿಟೆರಿ 76-08-46, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು :—

ಸ್ಥಳ.	ತಾಲ್ಲೂಕು.
ಅಯ್ಯನಪುರ	ಚಾಮರಾಜನಗರ.
ಮಾರಗೊಂಡನಹಳ್ಳಿ	ಎಡತೊರೆ.
ಕ್ಯಾರನಕಟ್ಟೆ	ಗುಂಡ್ಲು ಪೇಟೆ.
ಅಗಟಗಂಡನಹಳ್ಳಿ	ಡಿಟೋ
ಕೋತನೂರು	ಡಿಟೋ
ಕಿರಗಾವಲ್	ಮಳವಳ್ಳಿ.
ಮುತ್ತನಹಳ್ಳಿ	ಡಿಟೋ
ದೇವರಹಳ್ಳಿ	ಡಿಟೋ
ತರಗನಹಳ್ಳಿ	ನಂಜನಗೂಡು
ಹುಣಸೂರು	ಹುಣಸೂರು.

ತಾರೀಖು 7ನೆ ಏಪ್ರೈಲ್ 1909.

ನಂ. 9797—ಸ್ಯಾನಿಟೆರಿ 131-08-10, ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರ ತಾಲ್ಲೂಕಿನ ರೋಣೂರು ಗ್ರಾಮಕೆ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವು ದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಏಪ್ರೈಲ್ 12ನೆ ತಾರೀಖಿನಿಂದ 1909ನೆ ಏಪ್ರೈಲ್ 21ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರೈಲ್ 1909.

ನಂ. 9983—ಸ್ಯಾನಿಟೆರಿ 61—08—113, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಸಂಗಮೇಶ್ವರ ಸ್ವಾಮಿ ರಥೋತ್ಸವ.	ಕೊಟ್ಟಚೆರವು	ಪೆನುಕೊಂಡ.	ಅನಂತಪುರ.	25—4—09	12—5—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಮಾರ್ಚಿ 27ನೆ ಮರ್ಕೂಂ 267ನೆ ನಂ. ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 14ನೆ ಏಪ್ರೈಲ್ 1909.

ನಂ. 10031—ಸ್ಯಾನಿಟೆರಿ 131—08—12, ಕೋಲಾರ ಡಿಸ್ಟ್ರಿಕ್ಟು ಬೌರಿಂಗಪೇಟೆ ತಾಲ್ಲೂಕಿನ ಬೌರಿಂಗಪೇಟೆಗೆ ಶ್ರೀ ಕೋದಂಡರಾಮಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮೇ 1ನೆ ತಾರೀಖಿನಿಂದ 1909ನೆ ಮೇ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವ ಮತ್ತು ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಏಪ್ರೈಲ್ 1909.

ನಂ. ಜ. 5701—ಜ. ಮಿ. 282-08-2, ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರು 1909ನೆ ಏಪ್ರೈಲ್ ಗುರ್ರೀ ತಾರೀಖಿನ ಪೂರ್ವಾಹ್ನದಲ್ಲಿ ಮೊದಲನೆ ಕೌನ್ಸಿಲರ್ ಕೆಲಸದ ಚಾರ್ಜನ್ನು ವಹಿಸಿಕೊಂಡರು.

ತಾರೀಖು 5ನೆ ಏಪ್ರೈಲ್ 1909.

ನಂ. ಜ. 5703—ಜ. ಮಿ. 282-08-3, ಮಿ|| ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್. ಯವರು 1909ನೆ ಏಪ್ರೈಲ್ 2ನೆ ತಾರೀಖಿನ ಪೂರ್ವಾಹ್ನದಲ್ಲಿ ಎರಡನೆ ಕೌನ್ಸಿಲರ್ ಕೆಲಸದ ಚಾರ್ಜನ್ನು ವಹಿಸಿಕೊಂಡರು.

ತಾರೀಖು 6ನೆ ಏಪ್ರೈಲ್ 1909.

ನಂ. ಜ. 5732—ಜ. ಮಿ. 287-08-1, ಮಿ|| ಟಿ. ಗೋವಿಂದಚಾರಿಯರವರನ್ನು ಮೈಸೂರು ಸೀಮೆಯ ದಿವಾನ್ ಸಾಹೇಬರವರ ಪ್ರೈವೇಟ್ ಸೆಕ್ರಿಟೆರಿಯವರನ್ನಾಗಿ ನೇಮಕ ಮಾಡಿ ಇದೆ.

ತಾರೀಖು 14ನೆ ಏಪ್ರೈಲ್ 1909.

ನಂ. 3136—ಕೊ. 320—08—3, ಕ್ರಿಮಿನಲ್ ಪ್ರೊಸೀಜರ್ ಕೋಡ್ 12ನೆ ಪ್ರಕರಣದ ಮೇರೆಗೆ ಚಿಕ್ಕಬಳ್ಳಾಪುರದ ಮುನ್ಸೀಫರಾದ ಮಿ|| ಟಿ. ವೆಂಕೋಬರಾವ್, ಬಿ. ಎ., ಬಿ. ಎಲ್., ಯವರನ್ನು 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೌಕರಿಗೆ ಮಾಡಿರುತ್ತದೆ. ಮತ್ತು ಸದರಿ ಕೋಡಿನ 206ನೆ ಪ್ರಕರಣದ ಪ್ರಕಾರ ಜನಗಳನ್ನು ಸೆಷನ್ಸ್ ಕೋರ್ಟಿಗೆ ವಿಚಾರಣೆ ಬಗ್ಗೆ ಕಳುಹಿಸುವ ಹೆಚ್ಚು ಅಧಿಕಾರವನ್ನು ಅದೇ ಕೋಡಿನ 37ನೇ ಪ್ರಕರಣದ ಮೇರೆಗೆ ಅವರಿಗೆ ವಹಿಸಿರುತ್ತದೆ.

ತಾರೀಖು 6ನೆ ಏಪ್ರೆಲ್ 1909.

ನಂ. 9779—ಲೋಕಲ್ ಬೋರ್ಡ್ಸ್ 320-08-2, ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಕೆಂಗೇರಿ, ಯಲಹಂಕ, ದೊಮ್ಮಸಂದ್ರ, ಸೂಲಿಬೆಲೆ ಈ ಯೂನಿಯನ್ನುಗಳಲ್ಲಿ ಹಾಲಿ ಇದ್ದ ಮೆಂಬರುಗಳ ಕೆಲಸದ ಅವಧಿಯು ಗತಿಸಿಹೋದುದರಿಂದ ಸದರೀ ಯೂನಿಯನ್ನುಗಳನ್ನು ಪುನಃ ಏರ್ಪಡಿಸುವ ಬಗ್ಯೆ ಇದರಡಿ ಕಂಡ ದೊಡ್ಡ ಮನುಷ್ಯರುಗಳನ್ನು ಮೆಂಬರುಗಳಾಗಿ ಮೊಕರರ್ ಮಾಡಿ ಇದೆ :—

ತಾಲ್ಲೂಕು.	ಯೂನಿಯನ್.	ಮೆಂಬರುಗಳ ಹೆಸರು.
ಬೆಂಗಳೂರು ...	ಕೆಂಗೇರಿ ...	ಅಧ್ಯಕ್ಷರು—ಬೆಂಗಳೂರು ತಾಲ್ಲೂಕು ಅಮಲ್ದಾರರು. ಮೆಂಬರುಗಳು—ಮಿ|| ನಾರಪ್ಪನವರು. ,, ಸಿದ್ದಪ್ಪನವರು. ,, ಅಬ್ದುಲ್ ರಜಾಕ್‌ರವರು. ,, ಪಟೇಲ್ ನಂಜಪ್ಪನವರು. ,, ಪಟೇಲ್ ವೀರಣ್ಣನವರು. ಶೇಕದಾರರು. ಮಿ|| ಶಾನುಭೋಗ ಲಕ್ಷ್ಮೀನರಸಪ್ಪನವರು.
	ಯಲಹಂಕ ...	ಅಧ್ಯಕ್ಷರು—ಬೆಂಗಳೂರು ತಾಲ್ಲೂಕಿನ ಅಮಲ್ದಾರ್. ಮೆಂಬರುಗಳು—ಆಸ್ಪತ್ರೆ ಅಸಿಸ್ಟೆಂಟ್. ಮಿ|| ಸುಬ್ಬರಾಯ ಶೆಟ್ಟರು. ,, ರಂಗಯ್ಯ ಶೆಟ್ಟರು. ,, ನಾರಣಪ್ಪನವರು. ,, ಫಕ್ರುದ್ದುಲ್ಲಾಬೇಗ್. ,, ಬಿಳಿ ಮುನಿಯಪ್ಪನವರು. ,, ಟಿಪ್ಪುಸಾಹೇಬ್. ಶೇಕದಾರ್.
ಆನೇಕಲ್ಲು ...	ದೊಮ್ಮಸಂದ್ರ ...	ಅಧ್ಯಕ್ಷರು—ಆನೇಕಲ್ ತಾಲ್ಲೂಕಿನ ಅಮಲ್ದಾರ್. ಮೆಂಬರುಗಳು—ಶೇಕದಾರ್. ಮಿ|| ಖಾಜಿ ಸೈಯ್ಯದ್ ಖುತ್ಬುದ್ದೀನ್ ,, ರಾಮಸ್ವಾಮಯ್ಯನವರು. ,, ನಾಗಪ್ಪನವರು. ,, ಮೃತ್ಯುಂಜಯರಾಯರು. ,, ದ್ಯಾವಣ್ಣೈಯ್ಯನವರು.
ಹೊಸಕೋಟೆ ...	ಸೂಲಿಬೆಲೆ ...	ಅಧ್ಯಕ್ಷರು—ಹೊಸಕೋಟೆ ತಾಲ್ಲೂಕಿನ ಅಮಲ್ದಾರ್. ಮೆಂಬರುಗಳು—ಮಿ|| ಕೃಷ್ಣಪ್ಪನವರು. ,, ಸಾಹೇಬ್‌ಖಾನ್. ,, ಶಂಕರಪ್ಪನವರು. ,, ಹೈದರ್‌ಖಾನರವರು. ,, ನಂಜುಂಡಪ್ಪ ಉರುಫ್ ಜುಂಜಪ್ಪನವರು.

ತಾರೀಖು 14ನೆ ಏಪ್ರೆಲ್ 1909.

ನಂ. ಜು. 3137—ಕೊ. 320-08-4, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 37ನೆ ಪ್ರಕರಣದ ಮೇರೆಗೆ ಕೋಲಾರದ ಮುನ್ಸೀಫ್ ಮತ್ತು 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಜಿ. ಶ್ರೀನಿವಾಸ ಐಯ್ಯರ್, ಬಿ. ಎ., ಎಂ. ಎಲ್. ಯವರಿಗೆ ಸದರಿ ಕೋಡಿನ 206ನೆ ಪ್ರಕರಣದ ಮೇರೆಗೆ ಜನಗಳನ್ನು ಸೆಷನ್ ಕೋರ್ಟಿಗೆ ವಿಚಾರಣೆ ಬಗ್ಯೆ ಕಳುಹಿಸುವ ಹೆಚ್ಚು ಅಧಿಕಾರವನ್ನು ವಹಿಸಿರುತ್ತದೆ.

ತಾರೀಖು 14ನೆ ಏಪ್ರೆಲ್ 1909.

ನಂ. ಜು. 3138—ಕೊ. 320—08—5, 1904ನೆ ಇಸವಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣದ ಮೇರೆಗೆ ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುತ್ತಿರುವ ರೆವಿನ್ಯೂ ಪ್ರೊಬೇಷನರ್ ಕೆ. ಲಿಂಗೋಪಂತ್ ಬಾದಾಮಿ, ಬಿ. ಎ., ಯವರನ್ನು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಿರುತ್ತದೆ.

ತಾರೀಖು 14ನೆ ಏಪ್ರೆಲ್ 1909.

ನಂ. ಜು. 3139—ಕೊ. 320—08—6, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣದ ಮೇರೆಗೆ ಗೌರೀಬಿದನೂರು ಮತ್ತು ಚಿಂತಾಮಣಿ ತಾಲ್ಲೂಕುಗಳ ಸಬ್ ರಿಜಿಸ್ಟ್ರಾರವರಾದ ಕೆ. ದೊರೆಸ್ವಾಮಿ ಅಯ್ಯಂಗಾರ್, ಬಿ. ಎ., ಮತ್ತು ಎಂ. ವೆಂಕೋಬರಾವ್ ಯವರನ್ನು ಹಂಗಾಮಿ ತರೀಖ್ 3ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಿರುತ್ತದೆ.

ತಾರೀಖು 12ನೆ ಏಪ್ರಿಲ್ 1909.

ನಂ. ಜಿ. 3092—ಪೋಲೀಸ್ 43-08-4, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆಲಸದಲ್ಲಿರುವ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮಿ॥ ಬಿ. ರಾಮಸ್ವಾಮಯ್ಯ, ಬಿ. ಎ. ಯವರಿಗೆ 1909ನೆ ಇಸವಿ ಏಪ್ರೈಲ್ ಗುರ್ರೆ ತಾರೀಖಿನ ಲಾಗಾಯಿತು ಅಥವಾ ಅವರು ರಜಾ ಉಪಯೋಗಿಸಿಕೊಳ್ಳುವ ಬೇರೆ ತಾರೀಖಿನ ಲಾಗಾಯಿತು ಒಂದು ತಿಂಗಳು ಹತ್ತೊಂಬತ್ತು ದಿನಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ ಮಾಡಲಾಗಿದೆ.

2. ಮಿ॥ ರಾಮಸ್ವಾಮಯ್ಯನವರ ಗೈರ್ ಹಾಜರಿಯಲ್ಲಿ ಅಥವಾ ಬೇರೆ ಹುಕುಂ ಕೊಡುವ ಪರಿಯಂತ ಚಿತ್ರದುರ್ಗದ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮಿ॥ ಮಹಮ್ಮದ್ ರಜಾಯವರು ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಕೆಲಸವನ್ನು ಬದಲಿ ನೋಡತಕ್ಕದ್ದು.

3. ಮಿ॥ ಮಹಮ್ಮದ್ ರಜಾಯವರು ಮೇಲ್ಕಂಡಂತೆ ಬೇರೆ ಕೆಲಸದಲ್ಲಿರುವಾಗ ಚಿತ್ರದುರ್ಗದ ಡಿಸ್ಟ್ರಿಕ್ಟು ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಕಮಿಷನರ್ ಮಿ॥ ಡಿ. ಶ್ರೀನಿವಾಸೈಯ್ಯಂಗಾರ್, ಬಿ. ಎ. ಯವರು ಚಿತ್ರದುರ್ಗದ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 14ನೆ ಏಪ್ರೈಲ್ 1909.

ನಂ. 10036—ಮ್ಯು. 254—08—9, ಸ॥ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಕಸಾಯಿ ಮನೆಯನ್ನು ಕಟ್ಟುವದಕ್ಕೋಸ್ಕರ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದಾವಣಗೆರೆ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ ಯಾ ಟರ್ವೆ.	ಖಾತೇದಾರ ಯಾ ಮಾಲೀಕನ ಹೆಸರು.	ಸರ್ವೆ ನಂಬರ್.	ಖುಷ್ಕಿ, ತರಿ ಯಾ ಬಾಗಾಯಿತು ಯಾ ಖಾಲಿ ನಿವೇಶನ.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರಾ ರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಸೀಮೆ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಚಿತ್ರದುರ್ಗ	ದಾವಣಗೆರೆ	ದಾವಣಗೆರೆ	ದಾವಣಗೆರೆ ಟರ್ವೆ ಮ್ಯುನಿಸಿಪಾಲಿಟಿ	ರಾಮಲಿಂಗಪ್ಪ ಬಿನ್ ಹನುಮಪ್ಪ ಅನುಭವದಾರ್–ಮುದರ್ಷಾ ಫಕೀರ್ ಖಾತೆದಾರ್.	40	ಖಾಲೀ ಖಣದ ನಿವೇಶನ	ಎ. ಗು. 2 14	2 ಗುಂಟೆ.	ಎ. ಗು. 2 12	ರೂ. ಆ. 1 8	ಎ. ಗು. * 0 9	ರೂ. ಆ. 0 2	41ನೆ ಸರ್ವೆ ನಂಬರ್.	ಹರಿಹರದ ಗೇಟ್ ರಸ್ತೆ.	ರೈಲ್ವೆ ಲೈನ್.	ಕುರುಬರ ಹೊನ್ನಪ್ಪನ ಖಣ.
				ಕುರುಬರ ಹೊನ್ನಪ್ಪ ಬಿನ್ ಅಡವಪ್ಪ ಅನುಭವದಾರ್–ಮುದರ್ಷಾ ಫಕೀರ್ ಖಾತೆದಾರ್	40	ಖಾಲೀ ಖಣದ ನಿವೇಶನ					ಎ. ಗು. 0 15	ರೂ. ಆ. 0 4	41ನೆ ಸರ್ವೆ ನಂಬರ್.	ಹರಿಹರದ ಗೇಟ್ ರಸ್ತೆ.	ರಾಮಲಿಂಗಪ್ಪನ ಖಣ.	ಲಾಳಿ ದೇವಣ್ಣನ ಖಣ.

ಉ. ಅ.
* ಷರಾ—75 × 14 ಚದರ ಗಜ.

ಉ. ಅ.
75 × 25 ಚದರ ಗಜ.

ರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ [illegible] ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದಾವಣಗೆರೆ ಸಬ್ ಡಿವಿಜರ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರುಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ ಯಾ ಮಾಲೀಕನ ಹೆಸರು.	ಖಾನೆಷುಮಾರಿ ನಂಬರು.	ಖುಷ್ಕಿ, ತರಿ ಯಾ ಬಾಗಾಯತು ಯಾ ಖಾಲಿ ನಿವೇಶನ.	ಪೂರ್ತಿ ವಿಸ್ತೀರ್ಣ.		ಉಳಿದ ವಿಸ್ತೀರ್ಣ.		ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಷರಾ.
							ಚ. ಗ.	ಚ. ಅ.	ಚ. ಗ.	ಚ. ಅ.	ಅ.	ಚ. ಗ.	ಚ. ಅ.					ಉ. ಅ.
ಚಿತ್ರದುರ್ಗ	ದಾವಣಗೆರೆ	ದಾವಣಗೆರೆ	ದಾವಣಗೆರೆ ಪಟ್ಟಣ ಬಸ್ತಿಪೇಟೆ	ಬಸವನಕೋಟೆ ಬೋರ-ಖಾತೇದಾರ್, ಸೂಲಗಿತ್ತಿ ಬೋರವ್ವ ಅನುಭವದಾರ್.	934	ಹುಲ್ಲು ಮನೆ	33	7	33	7	8	*10	5	ದುರ್ಗಮ್ಮನ ಗಲ್ಲಿ	ಕಂಪಳವ್ವನ ಮನೆ, ದುರ್ಗಮ್ಮನ ಗಲ್ಲಿ	ಅನುಭವದಾರಳ ಸ್ವಂತಮನೆ	ದುರ್ಗಮ್ಮನ ಗಲ್ಲಿ	[illegible] × 1[illegible]
				ಬಸವನಕೋಟೆ ದುರ್ಗ-ಖಾತೇದಾರ್, ಕಂಪಳವ್ವ ಅನುಭವದಾರ್.	932	ಡಿಟೋ	21	1	21	1	8	6	6	ಡಿಟೋ	ದುರ್ಗಮ್ಮನ ಗಲ್ಲಿ, ಬೋರವ್ವನ ಮನೆ	ಡಿಟೋ	ಡಿಟೋ	[illegible] × 1[illegible]

ತಾರೀಖು 13ನೆ ಏಪ್ರಿಲ್ 1909.

ನಂ. ರೆ. 8390-ಲ್ಯಾ. ಕೆ. 22—08—80. ಸನ್ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 4ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಪಿರಿಯಾಪಟ್ಟಣದ ಕಸಬಾ ಗ್ರಾಮದಲ್ಲಿ ಪೊಲೀಸ್ ಸ್ಟೇಷನ್ ಕಟ್ಟುವದಕ್ಕಾಗಿಯೂ ಮತ್ತು ಪೇಟೆಗೆ ಹೋಗುವದಕ್ಕೆ ಒಂದು ರಸ್ತೆ ಹಾಕುವುದಕ್ಕೋಸ್ಕರವೂ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜರ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರುಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಪೂರ್ತಿ ವಿಸ್ತೀರ್ಣ.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಷರಾಯ್ತು.
							ಎ. ಗು.	ಎ. ಗು.	ರೂ. ಆ.	ಎ. ಗು.	ರೂ. ಆ.					
ಮೈಸೂರು	ಮೈಸೂರು	ಪಿರಿಯಾಪಟ್ಟಣ	ಪಿರಿಯಾಪಟ್ಟಣ	ಪಿರಿಯಾಪಟ್ಟಣದ ನಾಗಂಣ ಶೆಟ್ಟಿ	79	ಖುಷ್ಕಿ	4 32	4 32	3 4	*0 23	0 6	81ನೆ ನಂಬರ್ ಹೊಲ	ಪೇಟೆ ಪೂರ್ವ ಜಾಗಾ ಮತ್ತು 79ನೆ ನಂಬರ್ ಪೈಕಿ ಜಮೀನು	ರಸ್ತೆ	ಪೂರ್ವ ಮತ್ತು 79ನೆ ನಂಬರು ಪೈಕಿ ಜಮೀನು.	*16 ಗುಂಟೆ [illegible]

ತಾರೀಖು 2ನೆ ಏಪ್ರೆಲ್ 1909.

ನಂ. ರೆ. 7921—ಘಾ. 16–08—4, ಅಸಿಸ್ಟೆಂಟ ಕನ್ಸರ್ವೇಟರ ಮತ್ತು ಮೈಸೂರು ಸೀಮೆಯಲ್ಲಿನ ಷಿಕಾರಿ ಜ… ಗಳ ಚಾರ್ಜಿನಲ್ಲಿರುವ ಆಫಿಸರ ಮಿ॥ ಕೆ. ಮುತ್ತಯ್ಯನವರಿಗೆ, ಮೈಸೂರು ಸರ್ವಿಸ ರೆಗ್ಯುಲೇಷನುಗಳ 177ನೆ ಪ್ರಕರಣ… ಮೇರೆಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು 25 ದಿವಸಗಳ ಪ್ರಿವಿಲೇಜ ರಜಾ ಕೊಟ್ಟಿರುತ್ತದೆ.

ತಾರೀಖು 8ನೆ ಏಪ್ರೆಲ್ 1909.

ನಂ. ಫೈ. 6545—ಜ. ಫೈ. 412–08–2, ಅಸಿಸ್ಟೆಂಟ ಕಂಟ್ರೋಲರಾದ ಮಿ॥ ಟಿ. ಸತ್ಯರಾಜ ಶೆಟ್ಟಿರವರಿಗೆ ಮೈಸೂ… ಸರ್ವಿಸ ರೆಗ್ಯುಲೇಷನ 177ನೆ ಪ್ರಕರಣದ ಮೇರೆಗೆ 1909ನೆ ಇಸವಿಯ ಏಪ್ರೆಲ 14ನೆ ತಾರೀಖಿನ ಲಾಗಾಯಿತು 4 ದಿವಸ… ಪ್ರಿವಿಲೇಜ ರಜಾ ಕೊಟ್ಟಿದೆ.

ಹುಕುಂ ಬಮೋಜಿಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 22, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡುಗ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು ; ಪೋಸ್ಟ್ಯಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮು ತ್ತು ರೆ ವಿ ನ್ಯೂ .

ತಾರೀಖು 7ನೆ ಏಪ್ರೆಲ್ 1909.

ನಂ. 9797—ಸ್ಯಾನಿಟರಿ 131-08-10, ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರ ತಾಲ್ಲೂಕಿನ ರೋಣೂರು ಗ್ರಾಮಕ್ಕೆ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಏಪ್ರೆಲ್ 12ನೆ ತಾರೀಖಿನಿಂದ 1909ನೆ ಏಪ್ರೆಲ್ 21ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 21ನೆ ಏಪ್ರೈಲ್ 1909.

ನಂ. 10416—ಸ್ಯಾನಿಟೆರಿ 61—08—122, ಸಮಸ್ತ ಜನರ ತಿಳಿವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.	ಷರಾ.
				ಇಂದ.	ಗೆ.		
ಮಾಣಿಕರಾಯಸ್ವಾಮಿ ಉತ್ಸವ ಮತ್ತು ದನಗಳ ಸಂತೆ.	ಪುಂಗನೂರು ...	ಪುಂಗನೂರು ಡಿವಿಜನ್	ಉತ್ತರ ಆರ್ಕಾಟು.	25—4—09 ಉಭಯ ದಿನಗಳೂ ಸೇರಿ	18—5—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಏಪ್ರೈಲ್ 16ನೆ ಮರ್ಕುಂ 319ನೆ ಮೆಮೋ.	ದನಗಳ ಸಂತೆಯನ್ನು ನಡೆಸುವುದನ್ನು ನಿಷೇಧಿಸಿದೆ.
ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಉತ್ಸವ ಮತ್ತು ದನಗಳ ಸಂತೆ.	ಪೆರಿಕ್ಕಾಲ್ ಮತ್ತು ಸುತ್ತಮುತ್ತಲಿರುವ ಗ್ರಾಮಗಳು.	ತಿರುಕ್ಕಾಯುಲೂರು.	ದಕ್ಷಿಣ ಆರ್ಕಾಟು...	30—4—09	14—5—09	ಡಿಟೋ ನಂ. 317	
ಹಿರಿಯಡಕ ವೀರಭದ್ರದೇವರ ದೇವಸ್ಥಾನದ ರಥೋತ್ಸವ.	ಬೊಮ್ಮರಬೆಟ್ಟು ...	ಉಡುಪಿ ...	ದಕ್ಷಿಣ ಕನ್ನಡೀಯ.	28—4—09	9—5—09	ಡಿಟೋ ನಂ. 321	
ಶ್ರೀವೇಣುಗೋಪಾಲಸ್ವಾಮಿ ರಥೋತ್ಸವ.	ತಳಿ ...	ಹೊಸೂರು ...	ಸೇಲಂ ...	25—4—09	8—5—09	ಡಿಟೋ ನಂ. 323	ಯಾತ್ರೆ ಹೋಗುವದನ್ನು ನಿರೋಧಿಸಿರುತ್ತಾರೆ.
ಶ್ರೀ ದೈವಗಲಜಾತ್ರೆ ...	ಉದಯವಾರ್ ...	ಕಾಸರಗೋಡು ...	ದಕ್ಷಿಣ ಕನ್ನಡೀಯ.	1—5—09	10—5—09	ಡಿಟೋ ನಂ. 325	

ತಾರೀಖು 14ನೆ ಏಪ್ರೆಲ್ 1909.

ನಂ. 10031—ಸ್ಯಾನಿಟರಿ 131—08—12, ಕೋಲಾರ ಡಿಸ್ಟ್ರಿಕ್ಟ್ ಬೌರಿಂಗಪೇಟೆ ತಾಲ್ಲೂಕಿನ ಬೌರಿಂಗಪೇಟೆಗೆ ಶ್ರೀ ಕೋದಂಡರಾಮಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವ ದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜ ರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರ ದವರು 1909ನೆಯ ವರ್ಷದ ಮೇ 1ನೆ ತಾರೀಖಿನಿಂದ 1909ನೆ ಮೇ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವ ಮತ್ತು ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸ ಲ್ಪಡುವರು.

ತಾರೀಖು 14ನೆ ಏಪ್ರೆಲ್ 1909.

ನಂ. 10037—ಸ್ಯಾ. (61—08—115) ಘನಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ 24—3—09ನೆ ಮರ್ಕುಂ 243 ಪಿ. ನೆ ನಂಬರು ಇಂಡಾರ್ಸುಮೆಂಟನೊಡನೆ ಬಂದ ಇಂಡಿಯಾ ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ 19—3—09ನೆ ಮರ್ಕುಂ 9131—ಸ್ಯಾ. 61—08—76ನೆ ನಂಬರ್ ಇಸ್ತಿಹಾರ್ನಾಮೆ ಜತೆಗೆ ಪ್ರಕಟಿಸಿ ಇದೆ.

"ಮದರಾಸು ಆಧಿಪತ್ಯದ ಮಧುರಾ ಡಿಸ್ಟ್ರಿಕ್ಟ್ ಮಧುರಾ ತಾಲ್ಲೂಕು ಮಧುರೆಯಲ್ಲಿ ಮುಂದೆ ನಡೆಯುವ ಚಿತ್ರೈ ಮತ್ತು ಕಳ್ಳ ಅಳಘರ್ ಉತ್ಸವ ಮತ್ತು ದನಗಳ ಪರಿಷೆಗಳಿಗೆ ಮೈಸೂರು ಸಂಸ್ಥಾನದಿಂದ ಬರುವ ಜನರನ್ನು ಅಲ್ಲಿಗೆ ಬಿಟ್ಟರೆ ಅಲ್ಲಿ ಅಪಾಯ ಕರವಾದ ಸಾಂಕ್ರಾಮಿಕ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾಸಮೇತರಾದ ಗವರ್ನರ್ ಜನರಲ್‌ರವರು ಖಂಡಿತ ವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯ 3ನೆ ನಂಬರ್ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನ 2ನೆ ಪ್ರಕರಣದ (1)ನೆ ಉಪ ಪ್ರಕರಣದಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸಮೇತರಾದ ಗವರ್ನರ್ ಜನರಲ್‌ರವರು ಮೇಲ್ಕಂಡ ಉತ್ಸವ ಕ್ಕೆ ಮತ್ತು ಪರಿಷೆಗೆ ಯಾರೂ 1909ನೆ ಇಸವಿಯ ಏಪ್ರೆಲ್ ಮಾಹೆ 19ನೆ ತಾರೀಖಿನ ಲಾಗಾಯಿತು 1909ನೆ ಮೇ ಮಾಹೆ 10ನೆ ತಾರೀಖಿನ ವರೆಗೆ (ಉಭಯದಿನಗಳೂ ಸೇರಿ) ಹೋಗಕೂಡದೆಂದು ನಿಷೇಧಿಸಿರುತ್ತಾರಲ್ಲದೆ, ಸದರೀ ತಾರೀಖುಗಳ ಮಧ್ಯೆ ರೈಲ್ ಮೂಲಕ ಪ್ರಯಾಣಮಾಡಬೇಕೆಂದಿರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಮೈಸೂರು ಸಂಸ್ಥಾನದಲ್ಲಿ ಟಿಕೆ ಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ;

ಈ ಸ್ಟೇಷನ್‌ಗಳಿಗೆ:—ಸವುತ್ ಇಂಡಿಯನ್ ರೈಲ್ವೆಯಲ್ಲಿರುವ ಅಯ್ಯಲೂರು, ವಡಮಧುರೈ, ತಾಮರೈಪಾಡಿ, ಡಿಂಡಿಗಲ್, ಅಂಬತ್ತುರೈ, ಕೊಡೈಯಕನಾಲ್‌ರೋಡ್, ವಾಡಿಪಟ್ಟಿ, ಶೋಳವಂದನ್, ಸಮಯನಲ್ಲೂರು, ಮಧುರಾ ಬ್ರಿಡ್ಜ್, ಮಧುರಾ, ಪಶು ಮಲೈ, ತಿರಪರಂಕುಂಡ್ರಂ, ಕಪ್ಪಲೂರು, ತಿರುಮಂಗಲಂ, ಶಿವರಕೋಟ್ಟೈ, ಕಲ್ಲಿಗುಡಿ."

ತಾರೀಖು 17ನೆ ಏಪ್ರೆಲ್ 1909.

ನಂ. 10214—ಸ್ಯಾನಿಟರಿ 14—08—24, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವದೇನೆಂದರೆ:— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383— ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗ ಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ	ತಾಲ್ಲೂಕು.
ಶೆಟ್ಟಿಹಳ್ಳಿ	ಹಾಸನ
ಹಳೇಬೀಡು	ಡಿಟೋ
ಸಾಸ್ವಿಹಳ್ಳಿ	ಬೇಲೂರು

ತಾರೀಖು 19ನೆ ಏಪ್ರೆಲ್ 1909.

ನಂ. 10305—ಸ್ಯಾನಿಟರಿ 76-08-48, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನೆಂ ದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂ ಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪ ಡುವವು.

ಸ್ಥಳ.	ತಾಲ್ಲೂಕು.
ಕರಿಯನಕಟ್ಟೆ	ಚಾಮರಾಜನಗರ
ಕಸ್ತೂರು	ಡಿಟೋ
ಬಡಗಲಪುರ	ಡಿಟೋ
ಚಿಕ್ಕೋನಹಳ್ಳಿ	ಕ್ರಿಷ್ಣರಾಜಪೇಟೆ
ದೊಡ್ಡಹೊಮ್ಮ	ನಂಜನಗೂಡು

ತಾರೀಖು 10ನೆ ಏಪ್ರೈಲ್ 1909.

ನಂ. 9916—ಮೆಡಿಕಲ್ 163-08-8, 1906ನೆ ಇಸವಿಯ 1ನೆ ನಂಬರ ರೆಗ್ಯುಲೇಷನಿನ 2ನೆ ಪ್ರಕರಣದ 1ನೆ ಕಲಮನ್ನನುಸರಿಸಿ ಇದರಡಿ ಕಂಡ ಮ್ಯುನಿಸಿಪಲ್ ಕೌನ್ಸಿಲುಗಳ ಯಜಮಾನ್ಯರಿಗೆ ಒಳಪಟ್ಟ ಪ್ರದೇಶಗಳಲ್ಲಿ 1909ನೆ ಜುಲೈ ಗುರ್ರೇ ತಾರೀಖಿನ ಲಾಗಾಯಿತು ಹಂಗಾಮಿತರೀಖ ಎರಡುವರ್ಷಗಳಕಾಲ ಬಲಾತ್ಕಾರವಾಗಿ ಸಿಡುಬು ಹಾಕಿಸುವ ಪದ್ಧತಿಯು ಜಾರಿಯಲ್ಲಿರತಕ್ಕದ್ದೆಂದು ಈ ಮೂಲಕ ಪ್ರಸಿದ್ಧಪಡಿಸಿ ಇರುತ್ತದೆ. ಸದರಿ ಪ್ರದೇಶಗಳು ಯಾವುವೆಂದರೆ :—

ಡಿಸ್ಟ್ರಿಕ್ಟು.		ಮ್ಯುನಿಸಿಪಲ್ ಬೋರ್ಡುಗಳು.
ಬೆಂಗಳೂರು	...	ಆನೇಕಲ್ಲು, ಮಾಗಡಿ, ಚನ್ನಪಟ್ಟಣ, ದೊಡ್ಡಬಳ್ಳಾಪುರ, ನೆಲಮಂಗಲ.
ಕೋಲಾರ	...	ಚಿಂತಾಮಣಿ, ಸಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರೀಬಿದನೂರು, ಬಾಗೇಪಲ್ಲಿ, ಗುಡಿಬಂಡೆ.
ಕಡೂರು	...	ಚಿಕ್ಕಮಗಳೂರು, ಕಡೂರು, ಬೀರೂರು, ತರೀಕೆರೆ, ಕೊಪ್ಪ, ಮೂಡಿಗೆರೆ.
ಶಿವಮೊಗ್ಗ	...	ಶಿವಮೊಗ್ಗ, ಕುಂಸಿ, ಚೆನ್ನಗಿರಿ, ಶಿಕಾರಿಪುರ, ಕಲ್ಲೂರುಕಟ್ಟೆ, ತೀರ್ಥಹಳ್ಳಿ.
ಚಿತ್ರದುರ್ಗ	...	ಹೊಸದುರ್ಗ, ಮೊಳಕಾಲ್ಮುರು, ಚಳ್ಳಕೆರೆ.

ತಾರೀಖು 12ನೆ ಏಪ್ರೈಲ್ 1909.

ನಂ. 9993—ಮ್ಯು. 430-08-1, 1903ನೆ ಇಸವಿಯ IIIನೆ ನಂಬರ್ ರೆಗ್ಯುಲೇಷನಿನ 7ನೆ ಪ್ರಕರಣದಿಂದ ಮೈಸೂರು ಶ್ರೀಮನ್ಮಹಾರಾಜಾಸಾಹೇಬ್ಬಹದ್ದರವರ ಸರ್ಕಾರದವರಿಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವಲ್ಲಿ, ಸದರಿ ರೆಗ್ಯುಲೇಷನಿನ 5ನೆ ಪ್ರಕರಣದಮೇರಿಗೆ, ಮೆ|| ಆರ್. ಹೆಚ್. ಕ್ಯಾಂಪ್‌ಬೆಲ್, ಐ. ಸಿ. ಎಸ್. ರವರನ್ನು ಮಿ|| ಇ. ಮೆಕ್ಕಾನೊಕಿ, ಐ. ಸಿ. ಎಸ್. ರವರು ತಮ್ಮ ಸ್ಥಾನವನ್ನು ಬಿಟ್ಟುಬಿಟ್ಟಿರುವುದರಿಂದ, ಅವರಿಗೆ ಬದಲಿಯಾಗಿ ಮೈಸೂರು ನಗರಾಭಿವೃದ್ಧಿ ಟ್ರಸ್ಟಿಗಳ ಬೋರ್ಡಿನಲ್ಲಿ ಟ್ರಸ್ಟಿಯನ್ನಾಗಿ ನೇಮಕಮಾಡಿರುತ್ತೆ.

ತಾರೀಖು 12ನೆ ಏಪ್ರೈಲ್ 1909.

ನಂ. 10022—ವಿದ್ಯಾ. 383-08-1, ಮಿ|| ಇ. ಮೆಕಾನೊಕಿ, ಐ. ಸಿ. ಎಸ್. ರವರು ತಮ್ಮ ಸ್ಥಾನವನ್ನು ಬಿಟ್ಟಿರುವುದರಿಂದ ಅವರಿಗೆ ಬದಲಿಯಾಗಿ, ಮಿ|| ಆರ್. ಹೆಚ್. ಕ್ಯಾಂಪ್‌ಬೆಲ್, ಐ. ಸಿ. ಎಸ್. ರವರನ್ನು, ಮೈಸೂರಲ್ಲಿರುವ ಕೈಗಾರಿಕೆ ಮತ್ತು ಇಂಜನಿಯರಿಂಗ್ ಪಾಠಶಾಲೆಗಳ ಮೇಲ್ವಿಚಾರಣೆಯ ಕಮ್ಮಿಟಿ ಮೆಂಬರಾಗಿ ನೇಮಿಸಿ ಇರುತ್ತೆ.

ತಾರೀಖು 14ನೆ ಏಪ್ರೈಲ್ 1909.

ನಂ. 10036—ಮ್ಯು. 254—08—9, ಸ್ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಕಸಾಯಿ ಮನೆಯನ್ನು ಕಟ್ಟುವದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದಾವಣಗೆರೆ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ ಯಾ ಟವ	ಖಾತೇದಾರ ಯಾ ಮಾಲೀಕನ ಹೆಸರು.	ಸರ್ವೆ ನಂಬರ್.	ಖುಷ್ಕಿ, ತರಿ ಯಾ ಬಾಗಾಯಿತು ಯಾ ಖಾಲಿ ನಿವೇಶನ.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಚಿತ್ರದುರ್ಗ	ದಾವಣಗೆರೆ	ದಾವಣಗೆರೆ	ದಾವಣಗೆರೆ ಟವನ್ ಮ್ಯುನಿಸಿಪಾಲಿಟಿ	ರಾಮಲಿಂಗಪ್ಪ ಬಿನ್ ಹನುಮಪ್ಪ ಅನುಭವದಾರ್-ಮುದರ್ ಷಾ ಫಕೀರ್ ಖಾತೆದಾರ್.	40	ಖಾಲೀ ಖಣದ ನಿವೇಶನ	ಎ. ಗು. 2 14	2 ಗುಂಟೆ.	ಎ. ಗು. 2 12	ರೂ. ಆ. 1 8	ಎ. ಗು. * 0 9	ರೂ. ಆ. 0 2	41ನೆ ಸರ್ವೆ ನಂಬರ್.	ಹರಿಹರದ ಗೇಟ್ ರಸ್ತೆ.	ರೈಲ್ವೆ ಲೈನ್.	ಕುರುಬರ ಹೊನ್ನಪ್ಪನ ಖಣ.
				ಕುರುಬರ ಹೊನ್ನಪ್ಪ ಬಿನ್ ಅಡವಪ್ಪ ಅನುಭವದಾರ್-ಮುದರ್ಷಾ ಫಕೀರ್ ಖಾತೆದಾರ್	40	ಖಾಲೀ ಖಣದ ನಿವೇಶನ					ಎ. ಗು. 0 15	ರೂ. ಆ. 0 4	41ನೆ ಸರ್ವೆ ನಂಬರ್.	ಹರಿಹರದ ಗೇಟ್ ರಸ್ತೆ.	ರಾಮಲಿಂಗಪ್ಪನ ಖಣ.	ಲಾಳಿ ದೇವಣ್ಣನ ಖಣ.

ಉ. ಅ.
* ಷರಾ—75 × 14 ಚದರ ಗಜ.

ಉ. ಅ.
75 × 25 ಚದರ ಗಜ.

ತಾರೀಖು 14ನೆ ಏಪ್ರಿಲ್ 1909.

ನಂ. ಜ. 5825—ಜ. ಮಿ. 254-08-6, ಗವರ್ನಮೆಂಟ್ ಪ್ರೆಸ್, ಸ್ಟೇಷನರಿ ಡಿಪೋ, ಮತ್ತು ಸ್ಟಾಂಪು ಕಾರ್ಖಾನೆ, ಇವುಗಳ ಸೂಪರಿಂಟೆಂಡೆಂಟರಾದ ಮಿ|| ಸಿ. ಎಚ್. ಪಿಟ್ಸ್ ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ 1909ನೆ ಮಾರ್ಚಿ 1ನೆ ತಾರೀಖಿನ ಲಾಗಾಯಿತು ಆರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮಿ|| ಸಿ. ಎಚ್. ಪಿಟ್ಸ್ ಯವರು ರಜಾವಿನಮೇಲೆ ಇರುವ ಕಾಲದಲ್ಲಿ, ಗವರ್ನಮೆಂಟ್ ಪ್ರೆಸ್ಸಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ|| ಡಿ. ಬಿ. ರಾಮಚಂದ್ರಮೊದಲಿಯಾರ್‌ರನ್ನು ಗವರ್ನಮೆಂಟ್ ಪ್ರೆಸ ಮತ್ತು ಸ್ಟೇಷನರಿ ಡಿಪೋಗಳ ಸೂಪರಿಂಟೆಂಡೆಂಟರಾಗಿ ಬದಲಿ ತರೀಕು ಮೊಕರರ್ಮಾಡಿ ಇದೆ. ಮತ್ತು ಸದರಿ ರಜಾ ಕಾಲದಲ್ಲಿ, ಸ್ಟಾಂಪ್ ಸೂಪರಿಂಟೆಂಡೆಂಟ್ ಮಿ|| ಕೆ. ಕೃಷ್ಣಯ್ಯರವರು ಸ್ಟಾಂಪ್ ಕಾರ್ಖಾನೆಯ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 14ನೆ ಏಪ್ರಿಲ್ 1909.

ನಂ. 10086 ಮ್ಯು. 121-08—8, ಚಳ್ಳಕೆರೆ ಮ್ಯುನಿಸಿಪಲ್ ಬೋರ್ಡ್ ಮೆಂಬರು ಕೆಲಸದ ಅವಧಿಯು ಪೂರೈಸಿದ ವರಿಗೆ ಬದಲಾಗಿ ಇದರಡಿ ಕಂಡವರನ್ನು ಸದರಿ ಬೋರ್ಡಿಗೆ ಮೆಂಬರುಗಳನ್ನಾಗಿ ಮೊಕ್ಕರ್ರರ್ಮಾಡಿ ಇದೆ:—

1. ಮಿ|| ಸುಬ್ಬರಾಯರಿಗೆ ಬದಲಾಗಿ ಮಿ|| ಡಿ. ಚನ್ನಪ್ಪನವರು ವರ್ತಕರು.
2. ಮಿ|| ಪಟೇಲ ಭಾಸ್ಕರಪ್ಪನವರಿಗೆ ಬದಲಾಗಿ ರಿಟೈರ್ಡ್ ಸಬ್ ಓವರ್ಸಿಯರ್ ಮಿ|| ಎಲ್. ನರಸಿಂಗರಾಯರು.
3. ಮಿ|| ಮರೆಗಪ್ಪನವರಿಗೆ ಬದಲಾಗಿ ಶಾನುಭೋಗ ಮಿ|| ಶ್ರೀಕಂಠೈಯ್ಯನವರು.
4. ಮಿ|| ಮಹಮ್ಮದ್ ಆಲಿಖಾನರಿಗೆ ಬದಲಾಗಿ ಶಾನುಭೋಗ ಮಿ|| ಸುಬ್ಬಣ್ಣನವರು.

ತಾರೀಖು 16ನೆ ಏಪ್ರಿಲ್ 1909.

ನಂ. ಜ. 5855 ಜ. ಮಿ. 22-08—54, ಇದರಡಿ ಕಂಡವರಿಗೆ ಸೀನಿಯರ್ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಬಡತಿ ಕೊಟ್ಟಿದೆ;—

1. ಮಿ|| ಮೀರ್ ಹಮ್ಜಾ ಹುಸೇನರವರು 1909ನೆ ಏಪ್ರಿಲ್ 15ನೆ ತಾರೀಖಿನ ಲಾಗಾಯಿತು, ಕೆಲಸದಿಂದ ನಿವೃತ್ತರಾದ ಮಿ|| ವೈದ್ಯನಾಥಯ್ಯರವರಿಗೆ ಬದಲಾಗಿ (ಕಾಯಂ) ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು.

2. ಸಂಸ್ಥಾನದ ಹುಜೂರು ಖಜಾನೆಯ ಚಾರ್ಜಿನಲ್ಲಿರುವ ಮಿ|| ಕೆ. ಕೃಷ್ಣಯ್ಯರವರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾದಲ್ಲಿರುವ ಮಿ|| ವಿ. ಆರ್. ತ್ಯಾಗರಾಜಯ್ಯರವರಿಗೆ ಬದಲಾಗಿ 15—2—1909ರಿಂದ 14—4—09ರ ವರಿಗೆ ಬದಲೀ ತರೀಕು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿಯೂ ಮಿ|| ಎಂ. ಶಾಮರಾಯರವರಿಗೆ (ಸೆಕಂಡೆಡ್) ಬದಲಾಗಿ 15—4—09ರ ಲಾಗಾಯಿತು ಸಬ್ ಪ್ರೊಟೆಂ ತರೀಕು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿಯೂ ಇರತಕ್ಕದ್ದು.

3. ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮಿ|| ಪಿ. ಎಫ್. ಬೌರಿಂಗ್‌ರವರು 17—2—09ರಿಂದ 14—4—09ರ ವರಿಗೆ ಕೆಲಸದಿಂದ ನಿವೃತ್ತರಾಗುವುದಕ್ಕೆ ಪೂರ್ವ ರಜಾವಿನ ಮೇಲೆ ಇದ್ದ ಮಿ| ವೈದ್ಯನಾಥಯ್ಯರವರಿಗೆ ಬದಲಾಗಿ ಬದಲಿ ತರೀಕು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿಯೂ

ರಜಾವಿನ ಮೇಲೆ ಇರುವ ಮಿ|| ತ್ಯಾಗರಾಜಯ್ಯರವರಿಗೆ ಬದಲಾಗಿ ತಾರೀಖು 15—4—09ರ ಲಾಗಾಯಿತು ಬದಲಿ ತರೀಕು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿಯೂ ಇರತಕ್ಕದ್ದು.

4. ಜನರಲ್ ಮತ್ತು ರೆವಿನ್ಯೂ ಇಲಾಖಾ ಅಂಡರ್ ಸೆಕ್ರೆಟರಿ ಮಿ|| ಸಿ. ಎಸ್. ಬಾಲಸುಂದರಂ ಐಯ್ಯರವರು (ಸೆಕೆಂಡೆಡ್) ಮಿ|| ಪಿ. ಎಫ್. ಬೌರಿಂಗರವರಿಗೆ ಬದಲಾಗಿ 15—3—09ರ ಲಾಗಾಯಿತು ಮಿ|| ತ್ಯಾಗರಾಜಯ್ಯರವರು ರಜಾವಿನಿಂದ ವಾಪಸು ಬರುವ ವರೆಗೆ ಬದಲಿ ತರೀಕು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿ ಇರತಕ್ಕದ್ದು.

5. ಜನರಲ್ ಮತ್ತು ರೆವಿನ್ಯೂ ಇಲಾಖಾ ಅಂಡರ್ ಸೆಕ್ರೆಟರಿ ಮಿ|| ಕೆ. ಮ್ಯಾಥನ್‌ರವರು (ಸೆಕೆಂಡೆಡ್) ಮಿ|| ಪಿ. ಎಫ್. ಬೌರಿಂಗರವರಿಗೆ ಬದಲಾಗಿ 17—2—09ರ ಲಾಗಾಯಿತು 14—3—09ರ ವರಿಗೆ ಬದಲಿ ತರೀಕು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು.

ತಾರೀಖು 17ನೆ ಏಪ್ರಿಲ್ 1909.

ನಂ. ಜೆ. 3180—ಕೋರ್ಟ್ಸ್ 316-08-2, 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣವನ್ನನುಸರಿಸಿ ಹೊಸದುರ್ಗ ತಾಲ್ಲೂಕು ಅಮಲ್ದಾರ್ ಮತ್ತು 3ನೆ ತರಗತಿಯ ಮೇಜಿಸ್ಟ್ರೇಟರಾದ ಮಿ|| ಜಿ. ನಾರಾಯಣರಾಯರನ್ನು 2ನೆ ತರಗತಿಯ ಮೇಜಿಸ್ಟ್ರೇಟರಾಗಿ ಮೊಕರರ್ ಮಾಡಿ ಇದೆ.

ತಾರೀಖು 17ನೆ ಏಪ್ರಿಲ್ 1909.

ನಂ. ಜೆ. 3182—ಕೋರ್ಟ್ಸ್ 319-08-2, 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣವನ್ನನುಸರಿಸಿ ಕಡೂರು ಡಿಸ್ಟ್ರಿಕ್ಟಿನಲ್ಲಿ ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮತ್ತು 2ನೆ ತರಗತಿಯ ಮೇಜಿಸ್ಟ್ರೇಟರಾದ ಮಿ|| ಜಿ. ಹನುಮಂತರಾಯರವರನ್ನು 1ನೆ ತರಗತಿಯ ಮೇಜಿಸ್ಟ್ರೇಟರಾಗಿ ಮೊಕರರ್ ಮಾಡಿ ಇರುತ್ತದೆ.

ತಾರೀಖು 17ನೆ ಏಪ್ರಿಲ್ 1909.

ನಂ. 10225—ಮೆಡಿಕಲ್ 186-08—4, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಸ್ಪೆಷಲಿಸ್ಟ್ ಡಾಕ್ಟರ್ ಎಚ್. ಬಿ. ಮೈಲ್ವಾಹನಂಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 206ನೆ ಪ್ರಕರಣವನ್ನನುಸರಿಸಿ ಡಾಕ್ಟರ್ ಸರ್ಟಿಫಿಕೇಟಿನ ಮೇಲೆ 1909ನೆ ಇಸವಿ ಜನವರಿ 5ನೆ ತಾರೀಖಿನ ಲಾಗಾಯಿತು 32 ದಿವಸಗಳ ರಜಾ ಕೊಡಲಾಯಿತು.

2. ಸದರೀ ಕಾಲದಲ್ಲಿ ಸಿವಿಲ್ ಸರ್ಜನ್ ಮಿ|| ಟಿ. ಎಸ್. ನಂಜಪ್ಪನವರು ತಮ್ಮ ಕೆಲಸಗಳ ಜತೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾಕ್ಟರ್ ಮೈಲ್ವಾಹನಂಯವರು ಮಾಡುತ್ತಿದ್ದ ಕೆಲಸಗಳ ಚಾರ್ಜಿನಲ್ಲಿದ್ದರು.

ತಾರೀಖು 17ನೆ ಏಪ್ರೆಲ್ 1909.

ನಂ. 10278—ಮ್ಯು. 206-08-10, ಶಿವಮೊಗ್ಗ ಟವರ್ನ ಮ್ಯುನಿಸಿಪಲ್ ಬೋರ್ಡಿನಲ್ಲಿ ಮೆಂಬರಾಗಿದ್ದು ರಾಜೀನಾಮೆ ಕೊಟ್ಟ ರೆವರೆಂಡ್ ಡಬ್ಲ್ಯು. ಇ. ಟಾಮ್ಲಿನ್ಸನ್ರವರಿಗೆ ಬದಲಾಗಿ ಶಿವಮೊಗ್ಗಾದಲ್ಲಿ ವೆಸ್ಲಿಯನ್ ಮಿಷನರಿಯಾಗಿರುವ ರೆವರೆಂಡ್ ಎ. ಬ್ಲಾಕ್ ಬ್ಯಾಂಕ್ ರವರನ್ನು ಸದರೀ ಬೋರ್ಡಿಗೆ ಮೆಂಬರಾಗಿ ನೊಕರರ್ಮಾಡಿರುತ್ತದೆ.

ತಾರೀಖು 6ನೆ ಏಪ್ರೆಲ್ 1909.

ನಂ. ರೆ. 8065—ಫಾರೆಸ್ಟ್ 100—08—4, 1900ನೆ ಇಸವಿಯ XIನೆ ನಂಬರ ಮೈಸೂರು ಫಾರೆಸ್ಟು ರೆಗ್ಯುಲೇಷನಿನ 30ನೆ ಪ್ರಕರಣದ ನಿಯಮಗಳನ್ನನುಸರಿಸಿ, 1896ನೆ ಇಸವಿ ನವಂಬರ್ 1ನೆ ತಾರೀಖಿನ 4186—ಫಾರೆಸ್ಟ್ 89-95ನೆ ನಂಬರ ಇಸ್ತಿಹಾರ್ನಾಮೆಯಲ್ಲಿ ಕೆಲಗಣಿ ಸಂದಲ್ ರಿಜರ್ವಿನ ಒಂದು ಭಾಗವಾಗಿ ಇರಬೇಕೆಂದು ಪ್ರಸಿದ್ಧಪಡಿಸಲ್ಪಟ್ಟ, ಇದರಡಿ ಕಂಡ ಷೆಡ್ಯೂಲಿನಲ್ಲಿ ನಮೂದಿಸಿರುವ ವಿಸ್ತೀರ್ಣವುಳ್ಳ ಜಮೀನು, ಈ ಇಸ್ತಿಹಾರ್ನಾಮೆ ತಾರೀಖು ಲಾಗಾಯಿತು ಸದರಿ ರಿಜರ್ವಿನ ಒಂದು ಭಾಗವಾಗಿ ಇರತಕ್ಕದ್ದಲ್ಲವೆಂದು, ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ.

ಷೆಡ್ಯೂಲು.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಬಿಡಬೇಕಾದ ಜಮೀನು ಸೇರಿರುವ ಕಾರೆಸ್ಟು ರಿಜರ್ವಿನ ಹೆಸರು.	ಸುಮಾರು ವಿಸ್ತೀರ್ಣ.	ಇರತಕ್ಕ ಸ್ಥಳ ಮತ್ತು ಚತುಃಸೀಮೆ.
ಕಡೂರು.	ಚಿಕ್ಕಮಗಳೂರು.	ಸಖರಾ.	ಕೆಲಗಣಿ ಸಂದಲ್ ರಿಜರ್ವ್.	46 ಎಕರೆಗಳು. 21 ಗುಂಟೆಗಳು.	ಇರತಕ್ಕ ಸ್ಥಳ—ಕೆಲಗಣಿ ಗ್ರಾಮದ ಜಮೀನುಗಳಿಂದ ಸುತ್ತಲ್ಪಟ್ಟು, ಕೆಲಗಣಿ ಸಂದಲ್ ರಿಜರ್ವಿಗೆ ಸೇರಿದ ಸರ್ವೆ 50ನೆ ನಂಬರಿನಲ್ಲಿ ಇದು ಒಂದು ಭಾಗವಾಗಿ ಇರುತ್ತದೆ. ಚತುಃಸೀಮೆ. ಉತ್ತರಕ್ಕೆ—102ನೆ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಸುಮಾರು 120 ಗಜದ ಫಾಸಲೆಯಲ್ಲಿರುವ ಒಂದು ಪ್ರದೇಶದಿಂದ ಸದರಿ ನಂಬರಿಗೆ ಪೂರ್ವ ಕಡೆಯಲ್ಲಿ ಲೈನು ಹೊರಟು, 112ನೆ ಸರ್ವೆ ನಂಬರಿನ ವಾಯುವ್ಯ ಮೂಲೆಯಿಂದ ಸುಮಾರು 55 ಗಜ ಫಾಸಲೆಯಲ್ಲಿರುವ ಅದೇ ಸರ್ವೆ ನಂಬರಿನ ಪಶ್ಚಿಮಕಡೆಯಲ್ಲಿ ಒಂದು ಸ್ಥಾನಕ್ಕೆ ಬಂದು ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ, 112, 53, 52 ಮತ್ತು 51ನೆ ಸರ್ವೆ ನಂಬರುಗಳಿಗೆ, ಪಶ್ಚಿಮಕಡೆಯಲ್ಲಿ ಹೊರಟು ಅನಂತರ ನೈರುತ್ಯ, ದಕ್ಷಿಣ, ಮತ್ತು ಆಗ್ನೇಯ ಕಡೆಗಳಲ್ಲಿ ಹೊರಟು 51ನೆ ನಂಬರಿನ ನೈರುತ್ಯ ಮೂಲೆಗೆ ಬಂದು ಸೇರುತ್ತದೆ.

ದಕ್ಷಿಣಕ್ಕೆ—ಅನಂತರ 48, 49 ಮತ್ತು 40ನೆ ಸರ್ವೆ ನಂಬರುಗಳ ಉತ್ತರ ಕಡೆಗಳಲ್ಲಿ ಲೈನು ವಾಯುವ್ಯವಾಗಿ ಹೊರಟು, 40ನೆ ನಂಬರಿನ ಪೂರ್ವ ಮೂಲೆಗೆ ಬಂದು ಸೇರುತ್ತದೆ.

ಪಶ್ಚಿಮಕ್ಕೆ—ನಂತರ 40, 109, 108 ಮತ್ತು 102ನೆ ಸರ್ವೆ ನಂಬರುಗಳ ಪೂರ್ವಕಡೆಯಲ್ಲಿ ಲೈನು ಉತ್ತರಾಭಿಮುಖವಾಗಿಯೂ, ಪೂರ್ವಾಭಿಮುಖವಾಗಿಯೂ, ಪುನಹ ಉತ್ತರಾಭಿಮುಖವಾಗಿಯೂ ಹಾದು, ಹೊರಟ ಸ್ಥಾನಕ್ಕೆ ಬಂದು ಸೇರುತ್ತದೆ.

ತಾರೀಖು 12ನೆ ಏಪ್ರೆಲ್ 1909.

ನಂ. ರೆ. 8400—ಲ್ಯಾ ರೆ. 331-08-2, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ ದೊಡ್ಡಬಳ್ಳಾಪುರದ ತಾಲ್ಲೂಕು ಅಮಲ್ದಾರ್ ಮಿ॥ ಎಂ. ಸದಾಶಿವರಾವ್, ಬಿ. ಎ., ಬಿ. ಎಲ್. ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಒಂದು ತಿಂಗಳು 27 ದಿನಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿದೆ.

2. ಸದರೀಯವರ ಗೈರ್ ಹಾಜರಿಯಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೇರಿಯಟ್ ಕಚೇರಿಯ 1ನೆ ಗ್ರೇಡ್ ಕ್ಲಾರ್ಕ್ ಎಸ್. ಮೂರ್ತಿರಾವ್, ಬಿ. ಎ. ಯವರನ್ನು ದೊಡ್ಡಬಳ್ಳಾಪುರದ ಅಮಲ್ದಾರ್ ಮತ್ತು 3ನೆ ತರಗತಿಯ ಮೇಜಿಸ್ಟ್ರೇಟರನ್ನಾಗಿ ನೊಕರರ್ಮಾಡಿ ಇರುತ್ತದೆ.

ತಾರೀಖು 13ನೆ ಏಪ್ರಿಲ್ 1909.

ನಂ. ರೆ. 842.—ಫಾರೆಸ್ಟ್. 122-08—2, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ಮೈಸೂರು 1900ನೆ ಇಸವಿ 11ನೆ ನಂಬರು ಫಾರೆಸ್ಟ್ ರೆಗ್ಯುಲೇಷನ್ 4ನೆ ಪ್ರಕರಣವನ್ನು ಅನುಸರಿಸಿ ಇದರಡಿ ನಮೂದಿಸಿರುವ ಚಕ್ಕುಬಂದಿವುಳ್ಳ ಪ್ರದೇಶವನ್ನು ಮುನ್ನು ಜಂಗಲಾಗಿ ಮಾಡಬೇಕೆಂದು ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬ ಹದೂರ್ರವರ ಸರಕಾರದವರು ಯೋಚಿಸಿರುತ್ತಾರೆ.

ಚಕ್ಕುಬಂದಿ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಸುಮಾರು ವಿಸ್ತೀರ್ಣ.	ಶೀ ಟ್ ನಂಬರು.	ವಿವರಣೆ.
ಮೈಸೂರು.	ಗುಂಡ್ಲುಪೇಟೆ.	ಹಂಗಳ ಮತ್ತು ತ್ರಯಂಬಕಪುರ.	5911 ಎಕರೆ 5 ಗುಂಟೆ.	ಹೆಗ್ಗವಾಡಿ ಬ್ಲಾಕ್ ಷೀಟ್ I.	ಇರುವ ಪ್ರದೇಶ.—ಮಾಯಾರು ಸ್ಟೇಟ್ ಫಾರೆಸ್ಟಿಗೆ ಉತ್ತರ ದಿಕ್ಕಿನಲ್ಲಿರುವ ಜಂಗಲು ಪ್ರದೇಶ.

ಚಕ್ಕುಬಂದಿ.

ಉತ್ತರ—ಬಾಚಹಳ್ಳಿ ಗ್ರಾಮದ ಸರ್ವೆ 301ನೆ ನಂಬರಿನ ಆಗ್ನೇಯ ಮೂಲೆಯಿಂದ ಲೈನು ಶುರು ಆಗಿ $8\frac{1}{2}$ ಫರಲಾಂಗುದೂರ ಸರ್ವೆ 241ನೆ ನಂಬರಿನಲ್ಲಿ ಹಾದು ಈಶಾನ್ಯಕ್ಕೆ ಹೋಗಿ ಅದೇ ಗ್ರಾಮದ ಸರ್ವೆ 148ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಪೂರ್ವಕ್ಕೆ ಬಾಚಹಳ್ಳಿ ಗ್ರಾಮದ ಸರ್ವೆ 145ನೆ ನಂಬರಿನಲ್ಲಿ $6\frac{1}{4}$ ಫರಲಾಂಗು ಫಾಸಲೆ ಬಾಚಹಳ್ಳಿ, ಎರಿಯೂರು ಗ್ರಾಮಗಳ ಮಧ್ಯ ಎಲ್ಲೇ ಮೇಲೆ ಸರ್ವೆ 142ನೆ ನಂಬರಿಗೆ ದಕ್ಷಿಣ ಸುಮಾರು $4\frac{3}{4}$ ಫರಲಾಂಗು ದೂರದಲ್ಲಿರುವ ಒಂದು "ಪಾಯಿಂಟ" ಗೆ ಸೇರಿ, ಅದೇ ದಿಕ್ಕಿನಲ್ಲಿ ಎರಿಯೂರು ಗ್ರಾಮದ ಸರ್ವೆ 92ನೆ ನಂಬರಿನಲ್ಲಿ $6\frac{1}{2}$ ಫರಲಾಂಗುದೂರ ಹರಿದು ಎರಿಯೂರು ಮತ್ತು ಹೆಗ್ಗವಾಡಿ ಗ್ರಾಮಗಳ ಸರಹದ್ದನ್ನು ಸೇರುತ್ತದೆ. ಅನಂತರ $10\frac{1}{4}$ ಫರಲಾಂಗು ಫಾಸಲೆ ಹೆಗ್ಗವಾಡಿ ಗ್ರಾಮದ ಸರ್ವೆ 238 ಮತ್ತು 22ನೆ ನಂಬರುಗಳಲ್ಲಿ ಹೊಕ್ಕು ಕುಂದಕೆರೆ ಗ್ರಾಮದ ಸರ್ವೆ 125ನೆ ನಂಬರು ದಕ್ಷಿಣ ಸರಹದ್ದು ಮತ್ತು ಹೆಗ್ಗವಾಡಿ ಮತ್ತು ಕುಂದಕೆರೆ ಗ್ರಾಮಗಳ ಮಧ್ಯ ಎಲ್ಲೆಯೊಂದಿಗೆ ಸಂಧಿಸುವ ಸ್ಥಳಕ್ಕೆ ಸೇರುತ್ತದೆ.

ಪೂರ್ವ—ಅನಂತರ $8\frac{3}{4}$ ಫರಲಾಂಗು ಫಾಸಲೆ ಕುಂದಕೆರೆ ಗ್ರಾಮದ ಸರ್ವೆ 125ನೆ ನಂಬರಿನ ದಕ್ಷಿಣ ಸರಹದ್ದು ಅನುಸರಿಸಿ ಆಗ್ನೇಯಕ್ಕೆ ಹೊರಟು ಮಾಯಾರು ಸ್ಟೇಟ್ ಫಾರೆಸ್ಟ್ ಸರಹದ್ದನ್ನು ಸಂಧಿಸುತ್ತದೆ.

ದಕ್ಷಿಣ—ಅನಂತರ ಸ್ಟೇಟ್ ಫಾರೆಸ್ಟ್ ಸರಹದ್ದು ಅನುಸರಿಸಿ ಎಲಚಟ್ಟಿ ಗ್ರಾಮ ಮತ್ತು ಮಾಯಾರು ಸ್ಟೇಟ್ ಫಾರೆಸ್ಟ್ ಸರಹದ್ದುಗಳು ಸಂಧಿಸುವ ಪಾಯಿಂಟಿಗೆ ಹೋಗುತ್ತದೆ.

ಪಶ್ಚಿಮ—ಅನಂತರ ಉತ್ತರಕ್ಕೆ ಹೊರಟು 6 ಫರಲಾಂಗು ಫಾಸಲೆ ಬಾಚಹಳ್ಳಿ ಗ್ರಾಮದ ಸರ್ವೆ 247ನೆ ನಂಬರು ಪೂರ್ವ ಎಲ್ಲೆ ಮಾರ್ಗವಾಗಿ ಹರಿದು ಬಾಚಹಳ್ಳಿ ಗ್ರಾಮದ ಸರ್ವೆ 267ನೆ ನಂಬರು ದಕ್ಷಿಣ ಮೂಲೆಯನ್ನು ತಲಪುತ್ತದೆ. ಅನಂತರ ಈಶಾನ್ಯಕ್ಕೆ ತಿರುಗಿ, ಬಾಚಹಳ್ಳಿ ಗ್ರಾಮದ ಸರ್ವೆ 246ನೆ ನಂಬರಿನಲ್ಲಿ ಹಾದು, 3 ಫರಲಾಂಗು ಫಾಸಲೆಯಲ್ಲಿ ಆ ಗ್ರಾಮದ ಸರ್ವೆ 271ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ ಸುಮಾರು 1 ಫರಲಾಂಗು ಹೊರಟು ಅದೇ ಗ್ರಾಮದ ಸರ್ವೆ 272ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಬಾಚಹಳ್ಳಿ ಗ್ರಾಮದ ಸರ್ವೆ 272ನೆ ನಂಬರಿನ ಪೂರ್ವ ಸರಹದ್ದು ಮಾರ್ಗವಾಗಿ ವಾಯವ್ಯಕ್ಕೆ ಹರಿದು ಸರ್ವೆ 279ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಅದೇ ನಂಬರಿನ ಪೂರ್ವ ಸರಹದ್ದು ಅನುಸರಿಸಿ ಉತ್ತರಕ್ಕೆ ಹೋಗಿ, ವಾಯವ್ಯ ಮಾರ್ಗವಾಗಿ 1 ಫರಲಾಂಗು ಫಾಸಲೆ ಸರ್ವೆ 286ನೆ ನಂಬರಿನ ಪೂರ್ವ ಎಲ್ಲೆ ಅನುಸರಿಸಿ ಬಾಚಹಳ್ಳಿ ಗ್ರಾಮದ ಸರ್ವೆ 289ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಬಾಚಹಳ್ಳಿ ಗ್ರಾಮದ ಸರ್ವೆ 289ನೆ ನಂಬರಿನ ಪೂರ್ವ ಸರಹದ್ದು ಮಾರ್ಗವಾಗಿ ಮೊದಲು ಹೊರಟ ಸ್ಥಳವನ್ನು ತಲಪುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅನ್ಯೋನ್ಯ ಸಹಾಯಕ ಸಂಘಗಳ ರಿಜಿಸ್ಟ್ರಾರ್ರವರಾದ ಮಿ||ಎಂ. ಶಾಮರಾಯರವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜಮೀನಿನ ಯಾವುದಾದ್ದರೂ ಜಂಗಲಿ ಉತ್ಪತ್ತಿಗೆ ಹಕ್ಕಿರುವದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆ ಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್ಮೆಂಟ್ ಆಫಿಸರಾಗಿ ನೊಕರರ್ಮಾಡಲೂ ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟು ಸೆಟ್ಲ್ಮೆಂಟ್ ಆಫಿಸರಿಗೆ ಸರ್ಕಾರ್ ತರಫು ಕುಮ್ಮಕ್ ಮಾಡಲು ಹಾಜರಾಗುವಂತೆ ನೊಕರರ್ಮಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮರ್ಮ ಮಹಾರಾಜರವರ ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟು ಸೆಟ್ಲಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫಿಸರಾಗಿ ನೊಕರರ್ಮ್ಮಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 13ನೆ ಏಪ್ರಿಲ್ 1909.

ನಂ. ರೆ. 8429—ಫಾರೆಸ್ಟ್ 122–08–3, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ:—ಮೈಸೂರು 1900ನೆ ಇಸವಿಯ 11ನೆ ನಂಬರಿನ ಫಾರೆಸ್ಟ್ ರೆಗ್ಯುಲೇಷನ್ 4ನೆ ಪ್ರಕರಣವನ್ನು ಅನುಸರಿಸಿ ಇದರಡಿ ನಮೂದಿಸಿರುವ ಚಕ್ಕು ಬಂದಿಯುಳ್ಳ ಪ್ರದೇಶವನ್ನು ಮುಸ್ನಾ ಜಂಗಲಿಯಾಗಿ ಮಾಡಬೇಕೆಂದು ಮೈಸೂರು ಶ್ರೀಮರ್ಮ ಮಹಾರಾಜಾ ಸಾಹೇಬ್ ಬಹದೂರ್ ರವರ ಸರ್ಕಾರದವರು ಯೋಚಿಸಿರುತ್ತಾರೆ.

ಚಕ್ಕುಬಂದಿ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಮ್ಯಾಪ್ ನಂಬರು.	ವಿವರಣೆ.
ಮೈಸೂರು.	ಗುಂಡ್ಲುಪೇಟೆ ಮತ್ತು ಚಾಮರಾಜನಗರ	5,010 ಎಕರೆ, 38 ಗುಂಟೆ.	ಟೊಪೊಗ್ರಾಫಿ ಷೀಟ್ II.	ಇರುವ ಪ್ರದೇಶ—ಮದ್ರಾಸು ಆಧಿಪತ್ಯಕ್ಕೆ ಉತ್ತರ ಮತ್ತು ವಾಯುವ್ಯ ದಿಕ್ಕಿನಲ್ಲಿರುವ ಜಂಗಲು ಪ್ರದೇಶ.

ಚಕ್ಕುಬಂದಿ.

ಉತ್ತರ—ಕುಂದಕೆರೆ ಗ್ರಾಮದ ಮತ್ತು ಮೊಯಾರ್ ಸ್ಟೇಟ್ ಫಾರೆಸ್ಟ್ ಸಮುಕಟ್ಟು ಎಲ್ಲೆಯಿಂದ ಲೈನ್ ಶುರು ಆಗಿ ಚಿರಕನಹಳ್ಳಿ ಸರ್ವೆ 84ನೆ ನಂಬರಿನಲ್ಲಿ ಈಶಾನ್ಯಕ್ಕೆ 5¾ ಫರ್ಲಾಂಗು ಫಾಸಲೆ ಹೋಗಿ ಚಿರಕನಹಳ್ಳಿ ಮತ್ತು ಕಡಬೂರು ಮಧ್ಯ ಎಲ್ಲೆಯನ್ನು ಸಂಧಿಸುತ್ತದೆ. ಅಲ್ಲಿಂದ ಅದೇ ದಿಕ್ಕಿನಲ್ಲಿ ಹೊರಟು 13¾ ಫರ್ಲಾಂಗುದೂರ ಕಡಬೂರು ಗ್ರಾಮದ ಸರ್ವೆ 46, 44, 76ನೆ ನಂಬರುಗಳಲ್ಲಿ ಹೋಗಿ, ಕಡಬೂರು ಎರಗನಹಳ್ಳಿ ಮತ್ತು ರಾಮೈಯ್ಯನಪುರ ಗ್ರಾಮಗಳ ಗಡಿ ಬಾಂದಿಗೆ ಸೇರುತ್ತದೆ. ಪುನಃ ಅದೇ ಮಾರ್ಗವಾಗಿ ಎರಗನಹಳ್ಳಿ ಗ್ರಾಮದ ಸರ್ವೆ 17ನೆ ನಂಬರಿನ ಮೂಲಕ 10¼ ಫರ್ಲಾಂಗುದೂರ ಹೋಗಿ ಎರಗನಹಳ್ಳಿ, ಸಿಂಡನಪುರ ಮತ್ತು ಎಣಗುಂಬ ಗ್ರಾಮಗಳ ಗಡಿ ಬಾಂದುಗಳನ್ನು ಮುಟ್ಟುತ್ತದೆ. ಪುನಃ ಅದೇ ಮಾರ್ಗವಾಗಿ 12¼ ಫರ್ಲಾಂಗುದೂರ ಹರಿದು ಎಣಗುಂಬ ಮತ್ತು ವಡ್ಡರಹಳ್ಳಿ ಗ್ರಾಮಗಳ ಮಧ್ಯ ಸರಹದ್ದನ್ನು ಸೇರಿ ಅದೇ ದಿಕ್ಕಿನಲ್ಲಿ ವಡ್ಡರಹಳ್ಳಿ ಗ್ರಾಮದ ಸರ್ವೆ 22ನೆ ನಂಬರಿನಲ್ಲಿ 7½ ಫರ್ಲಾಂಗುದೂರ ಹೋಗಿ ವಡ್ಡರಹಳ್ಳಿ ಗ್ರಾಮದ ಸರ್ವೆ 7ನೆ ನಂಬರಿನ ದಕ್ಷಿಣ ಮೂಲೆಯಲ್ಲಿ ಮದ್ರಾಸ್ ಆಧಿಪತ್ಯದ ಎಲ್ಲೆಯನ್ನು ಸೇರುತ್ತದೆ.

ಪೂರ್ವ—ಅನಂತರ ದಕ್ಷಿಣಕ್ಕೆ ತಿರುಗಿ ಮದ್ರಾಸ್ ಆಧಿಪತ್ಯದ ಎಲ್ಲೆಯನ್ನು ಅನುಸರಿಸಿ ಮೊಯಾರ್ ಸ್ಟೇಟ್ ಫಾರೆಸ್ಟ್ ಮತ್ತು ಮದ್ರಾಸ್ ಆಧಿಪತ್ಯದ ಎಲ್ಲೆಗಳು ಸೇರುವ ಸ್ಥಳದ ವರಿಗೂ ಹೋಗುತ್ತದೆ.

ದಕ್ಷಿಣ ಮತ್ತು ಪಶ್ಚಿಮ—ಅನಂತರ ಮೊಯಾರ್ ಸ್ಟೇಟ್ ಫಾರೆಸ್ಟ್ ಸರಹದ್ದು ಅನುಸರಿಸಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ ಮೈಸೂರು ಶ್ರೀಮರ್ಮ ಮಹಾರಾಜರವರ ಸರ್ಕಾರದವರು ಅನ್ಯೋನ್ಯ ಸಹಾಯಕ ಸಂಘಗಳ ರಿಜಿಸ್ಟ್ರಾರರವರಾದ ಮಿ॥ ಎಂ. ಶಾಮರಾಯರವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಾಗಿ ನೊಕರರ್ಮ್ಮಾಡಲೂ ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಿಗೆ ಸರ್ಕಾರ ತರ್ಫೆ ಕುಮ್ಮಕ್ ಮಾಡಲು ಹಾಜರಾಗುವಂತೆ ನೊಕರರ್ಮ್ಮಾಡಲೂ ಸಹ, ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮರ್ಮ ಮಹಾರಾಜರವರ ಸರ್ಕಾರದವರು, ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು, ಫಾರೆಸ್ಟ್ ಸೆಟ್ಲಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫಿಸರಾಗಿ ನೊಕರರ್ಮ್ಮಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 17ನೆ ಏಪ್ರೈಲ 1909.

ನಂ. ರೆ. 8616—ಲ್ಯಾ. ರೆ. 340—08—3, ಸನ್ 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಹಾಸನ ತಾಲ್ಲೂಕು ಕಸಬಾ ಹೋಬಳಿ ಬೂವನಹಳ್ಳಿ ಗ್ರಾಮಠಾಣಾ ಬಡಾವಣೆ ಬಗ್ಗೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹಾಸನ ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಯಾ ಸ್ವಾಧೀನದಾರನ ಹೆಸರು.	ಸರ್ವೆ ಯಾ ಪಟ್ಟೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ	ಹಾಸನ	ಕಸಬಾ	ಬೂವನಹಳ್ಳಿ	ಚಿಟ್ಟಿ ಬೀ ಕೋಂ, ಚಿಟ್ಟಿ ಬೀ ಅಬ್ಬಾಸ್‌ಗೆ.	1/3	ಖುಷ್ಕಿ	ಎ. 2 ಗು. 34	ಎ. 2 ಗು. 34	ರೂ. 3 ಆ. 12	ಎ. 2 ಗು. 34	ರೂ. 3 ಆ. 12	ಸರ್ವೆ ನಂಬರು 65	ಗ್ರಾಮಠಾಣಾ	ಸರ್ವೆ ನಂ. 67	ಸರ್ವೆ ನಂ. 2

ತಾರೀಖು 19ನೆ ಏಪ್ರೈಲ 1909.

ನಂ. ರೆ. 8647—ಲ್ಯಾ. ರೆ. 22—08—86, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಹಾರನಹಳ್ಳಿ ಹೋಬಳಿ ಕೊಪ್ಪ ಗ್ರಾಮದಲ್ಲಿ ಫಾರೆಸ್ಟ್ ಲಾಡ್ಜ್ ಕಾಂಪೌಂಡು ಬಡಾವಣೆ ಮಾಡತಕ್ಕದ್ದಕ್ಕಾಗಿ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಯಾ ಸ್ವಾಧೀನದಾರನ ಹೆಸರು.	ಸರ್ವೆ ಯಾ ಪಟ್ಟೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
													ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಹುಣಸೂರು	ಹಾರನಹಳ್ಳಿ	ಕೊಪ್ಪ	ಕಂಠೇಗೌಡ ಅನುಭವದಾರ ಹುಚ್ಚೇಗೌಡ ಮತ್ತು ಯಾಲಕ್ಕಿ.	29	ಖುಷ್ಕಿ	ಎ. 13 ಗು. 20	ಗುಂಟೆ.	ಎ. 13 ಗು. 18	ರೂ. 8 ಆ. 8	ಎಕರೆ 4⅔	7 ಆಣೆ.	ಸರ್ವೆ 28ನೆ ನಂ ಜಮೀನು	ಸರ್ವೆ 29ನೆ ನಂ ಜಮೀನು	ಸರ್ವೆ 29ನೆ ನಂ ಜಮೀನು	ಸರ್ವೆ 28ನೆ ನಂಬರು ನಂ ಜಮೀನು ಮತ್ತು ಗ್ರಾಮ

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯು ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 17.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 29, ಸ॥ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಮೈಸೂ ರು ಸೀಮೆಯ ಅನ್ಯೋನ್ಯ ಸಹಾಯಕ ಸಂಘಗಳ ರಿಜಿಸ್ಟ್ರಾರಾದ ಮೆ|| ಎಂ. ಶ್ಯಾಮರಾವ್, ಎಂ.ಎ. ಯರವರನ್ನು ಅಂಥಾ ಎಲ್ಲೆ ಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ ಜಂಗಲಿ ಉತ್ಪತ್ತಿಗೆ ಹಕ್ಕಿರು ವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆ ಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂ ಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಾಗಿ ನೇಮಕರಮ್ಮಾ ಡಲೂ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟು ಸೆಟ್ಲ್‌ಮೆಂಟ್ ಆಫೀಸರಿಗೆ ಸರ್ಕಾರ್ ತರಫು ಕುಮ್ಮಕ್ಕು ಮಾಡಲು ಹಾಜರಾಗುವಂತೆ ನೇಮಕರಮ್ಮಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟು ಸೆಟ್ಲ್‌ಮೆಂಟ್ ಆಫೀಸರು ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅ ಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫೀಸರಾಗಿ ನೇಮಕರಮ್ಮಾಡುವದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 4ನೆ ಮೇ 1909.

ನಂ. ರೆ. 9120—ಲ್ಯಾ. ರೆ. 11-08—19, ಸನ್ 1894ನೆ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧ ಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಕಪ್ಪಲಮಡಗು ವಡ್ಡಕೆರೆ ವಳಗೆರೆಗೆ ಸೇರಿಸಲು ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮಾಲೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷ್ನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ಯಾ ಜಮೀನು ನಂಬರು.	ಖುಷ್ಕಿ, ತರಿ ಯಾ ಬಾಗಾಯಿತು.	ಪೂರ್ತಾ ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ಗು.	ಎ. ಗು.	ರೂ. ಆ.	ಎ. ಗು.	ರೂ. ಆ.				
ಕೋಲಾರ	ಮುಳಬಾಗಲು	ಮುಳಬಾಗಲು	ಮೊರಂಡಹಳ್ಳಿ	ವ್ಯಾಸರಾವ್ ...	254	ಬಾಗಾಯಿತು	0 13	...	0 13	1 8	0 13	1 8	ವ್ಯಾಸರಾವ್ ಖಾತೆ	ವ್ಯಾಸರಾವ್ ಖಾತೆ	ನದಿ	ನದಿ
				ಡಿಟೋ ...	255	ಡಿಟೋ	0 11	...	0 11	1 4	0 11	1 4	ಡಿಟೋ	ನದಿ	ಡಿಟೋ	ಡಿಟೋ
				ವೆಂಕಟರಾಮು ವಗೈರೆ .	259	ತರಿ ...	1 35	...	1 35	11 0	1 13	...	ಶ್ರೀಪಾದರಾವ್ ಖಾತೆ	ನಾರಾಯಣರಾವ್ ವಗೈರೇರ ಖಾತೆ.	ಶ್ರೀಪಾದರಾವ್ ಖಾತೆ	ಮೂರ್ತಿರಾವ್ ಖಾತೆ.
				ಶ್ರೀಪಾದರಾವ್ ...	260	ಡಿಟೋ	4 6	10	3 36	24 0	3 36	24 0	ವಡ್ಡಕೆರೆ ಅಂಗಳ	ವೆಂಕಟ್ರಾಮು ವಗೈರೇರ ಖಾತೆ.	ನದಿ	ನದಿ
											5 33					
			ಅಡ್ಡಿಹಳ್ಳಿ	ನಾರಾಯಣರಾವ್ ...	58	ಬಾಗಾಯಿತು	0 15	...	0 15	2 4	0 15	2 4	ಡಿಟೋ	ರಾಮಾಚಾರ್ರ ಖಾತೆ	ಡಿಟೋ	ಡಿಟೋ
				ಸೋನಾರ ರಾಮಾಚಾರ್.	59	ಡಿಟೋ	0 23	...	0 23	3 8	0 23	3 8	ನಾರಾಯಣರಾವ್ ವಗೈರೇರ ಖಾತೆ.	ವ್ಯಾಸರಾವ್ ಖಾತೆ	ಡಿಟೋ	ಡಿಟೋ
				ವ್ಯಾಸರಾವ್ ...	60	ಡಿಟೋ	0 20	...	0 20	3 0	0 20	3 0	ರಾಮಾಚಾರ್ ಖಾತೆ	ಡಿಟೋ	ಡಿಟೋ	ಡಿಟೋ
				ಡಿಟೋ ...	61	ಡಿಟೋ	0 5	...	0 5	0 12	0 5	0 12	ವ್ಯಾಸರಾವ್ ಖಾತೆ	ಡಿಟೋ	ಡಿಟೋ	ಡಿಟೋ
				ಡಿಟೋ ...	62	ಡಿಟೋ	0 18	...	0 18	2 12	0 18	2 12	ಡಿಟೋ	ಡಿಟೋ	ಡಿಟೋ	ಡಿಟೋ
				ಡಿಟೋ ...	63	ಡಿಟೋ	0 19	...	0 19	2 12	0 19	2 12	ಡಿಟೋ	ಡಿಟೋ	ಡಿಟೋ	ಡಿಟೋ
											2 20					
										ಜುಮ್ಲಾ	8 13					

ತಾರೀಖು 12ನೆ ಮೇ 1909.

ನಂ. ರೆ. 9399—ಲ್ಯಾ. ರೆ. 115—07—97, ಸರ್ 1894ನೆ ವರ್ಷದ 7ನೆ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, 3ನೆ ಮಹಾರಾಜ ಕುಮಾರಿಯವರ ಮ್ಯಾರ್ರಿಯೇಜ್ ಗೋಸ್ಕರ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ನಂಬರ.	ಖುಷ್ಕಿ, ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಸೀಮೆ: ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮೈಸೂರು	ಕಸಬಾ ಮೈಸೂರು	ಪಡುವಾರಹಳ್ಳಿ	ಚಾಡಮ್ಮನ ಪುಟ್ಟೆಗಾಡನ ಮಗ ಚಿಕ್ಕ ಪುಟ್ಟೆ ಗಾಡ.	40/3	ಖುಷ್ಕಿ	ಎ. ಗು. 1 20	...	ಎ. ಗು. 1 20	ರೂ. 1	3 ಗುಂಟೆ.	ಆ. ಪೈ. 0 10	ಸವಾರು ಲೈನಿಗೆ ತೆಗದುಕೊಂಡು ಇರುವ 45ನೆ ನಂಬರು ಜಮೀನು.	ಕಾಳೆಗಾಡನ ಮಗ ಮಾದ್ಯೆಯ್ಯನ ಸರ್ವೆ 41ನೆ ನಂಬರು ಜಮೀನು ಮತ್ತು ನೀರು ಹರಿಯುವ ಹಳ್ಳ.	ನೀರು ಹರಿಯುವ ಹಳ್ಳ.	ಕಾಳೆಗಾಡನ ಮಗ ಮಾದ್ಯೆಯ್ಯನ 41ನೆ ನಂಬರು ಹೊಲ ಮತ್ತು ಸವಾರಲೈನಿಗೆ ತೆಗದುಕೊಂಡು ಇರುವ 43ನೆ ನಂಬರ ಜಮೀನು.
				ಚಾಡಮ್ಮನ ಪುಟ್ಟೆಗಾಡನ ಮಗ ಚಿಕ್ಕ ಪುಟ್ಟೆ ಗಾಡ.	47	ಖುಷ್ಕಿ	ಎ. ಗು. 4 5	ಗು. 17	ಎ. ಗು. 3 28	ರೂ. 4	15 ಗುಂಟೆ.	ಆ. ಪೈ. 6 3	ಸವಾರ ಲೈನಿಗೆ ತೆಗದುಕೊಂಡ ಸರ್ವೆ 48ನೆ ನಂಬರು ಖರಾಬು.	ಮುದ್ದ, ಹೊಂಬಾಳೆ, ನಂಜ, ಕಪನಿ ವಗ್ಯೆರೇರ ಸರ್ವೆ 40ನೆ ನಂಬರು ಹೊಲ ಮತ್ತು 39ನೆ ನಂಬರು ಜಮೀನು.	ಸರ್ವೆ 36ನೆ ನಂಬರು ಕೆಂಪಬೋರನ ಹೊಲ.	ಸವಾರು ಲೈನಿಗೆ ತೆಗದುಕೊಂಡ ಸರ್ವೆ 45–46ನೆ ನಂಬರು ಖರಾಬು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

ಮಿಲಿಟರಿ.

ಇಸ್ತಿಹಾರ್‌ನಾಮೆ.

ತಾರೀಖು 8ನೆ ಮೇ 1909.

ನಂ. ಮಿಲಿಟರಿ 1071-2—174-08-3, ಘನವನ್ನು ಹೊಂದಿದ ಶ್ರೀಮನ್ ಮಹಿಸೂರು ಸೀಮೆಯ ಮಹಾರಾಜರವರು ಲೋಕಲ್ ಸರ್ವಿಸ್ ರೆಜಿಮೆಂಟ್ 4ನೆ ಗ್ರೇಡ್ ಜಮಾದಾರ್ ಗೋಪಾಲರಾಯರನ್ನು ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಬಾಡಿಗಾರ್ಡಿಗೆ ವರ್ಗಾಯಿಸಿರುತ್ತಾರೆ. ಮತ್ತು ಲೋಕಲ್ ಸರ್ವಿಸ್ ರೆಜಿಮೆಂಟ್ ದಫೇದಾರ್ ಸುಬ್ಬರಾವ್ ಜವ್ಳೆ ಯವರನ್ನು ಅದೇ ರೆಜಿಮೆಂಟಿನಲ್ಲಿ 4ನೆ ಗ್ರೇಡ್ ಜಮಾದಾರ್ರಾಗಿ ಬಡ್ತಿ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಿಟರಿ.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪಾಬ್ಲಿಷ್ ಆದ್ದು. [ನಂ. 20.

ಬೆಂಗಳೂರು, ಗುರುವಾರ, ಮೇ ತಾ॥ 20, ಸ್ನ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ

ತಾರೀಖು 8ನೆ ಮೇ 1909.

ನಂ. 11131—ಸ್ಯಾನಿಟೆರಿ 61—08—127, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ವೈಕಾಸಿ ಉತ್ಸವ ಮತ್ತು ದನಗಳ ಸಂತೆ.	ಅಝುವರ್ತಿರು ನಗಿರಿ.	ಶ್ರೀವೈಕುಂಠ.	ತಿನ್ನವಲ್ಲಿ...	20—5—09	25—6—09 (ಉಭಯ ದಿನಗಳೂ ಸೇರಿ.)	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಮೇ 1ನೆ ಮರ್ಕ್ಯಂ 374ನೆ ಮೆಮೋ ಪ್ರಕಾರ.
ಬಾಬಯ್ಯ ಉರಸು.	ಪೆನುಗೊಂಡ.	ಪೆನುಗೊಂಡ.	ಅನಂತಪುರ.	25—6—09	6—7—09 (ಉಭಯ ದಿನಗಳೂ ಸೇರಿ)	ಡಿಟೋ ಏಪ್ರಲ್ 30ನೆ ಮರ್ಕುಂ 359 ಮೆಮೋ ಪ್ರಕಾರ.

ತಾರೀಖು 12ನೆ ಮೇ 1909.

ನಂ. 11264—ಸ್ಯಾ. 169-08-6, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣ ಪ್ರಕಾರ ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಪಿ. ಪಲ್ಪು ಯವರಿಗೆ 1909ನೆ ಮೇ 10ನೆ ತಾರೀಖು ಲಾಗಾಯಿತು 13 ದಿನಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿ ಇರುತ್ತೆ.

ಮಿ|| ಪಲ್ಪು ಯವರ ಗೈರ್ ಹಾಜರೀಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಕೆಮಿಕಲ್ ಎಗ್ಸಾಮಿನರ್ ಮತ್ತು ಬ್ಯಾಕ್ಟಿರಿಯಾಲಜಿಸ್ಟ್ ಅಂದರೆ ಕ್ರಿಮಿ ಶಾಸ್ತ್ರಜ್ಞರಾದ ಮಿ|| ಎ. ಕೆ. ಪಾಣಿ ಯವರು ತಮ್ಮ ಕೆಲಸದ ಜತೇಲಿ ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಕೆಲಸದ ಚಾರ್ಜನ್ನು ವಹಿಸತಕ್ಕದ್ದು.

ತಾರೀಖು 18ನೆ ಮೇ 1909.

ನಂ. 11520—ಸ್ಯಾನಿಟರಿ 76-08-50, ಸಮಸ್ತ ಜನರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.				ತಾಲ್ಲೂಕು.
ಸರಗೂರು	...	...	...	ಚಾಮರಾಜನಗರ
ಮಳವಳ್ಳಿ	...	...	...	ಡಿಟೋ
ಮುತ್ತನಹಳ್ಳಿ	...	...	...	ಮಳವಳ್ಳಿ
ಗಂಜಾಂ	...	...	...	ಶ್ರೀರಂಗಪಟ್ಣ
ಗುಂಡ್ಲ ಪೇಟೆ	...	...	...	ಗುಂಡ್ಲ ಪೇಟೆ
ಬೆಳ್ಳುಳ್ಳಿ	...	...	...	ಎಡತೊರೆ
ದೊರನಹಳ್ಳಿ	...	...	...	ಡಿಟೋ
ಕೆಂಪಲಾಪುರ	...	...	...	ಹುಣಸೂರು

ತಾರೀಖು 19ನೆ ಮೇ 1909.

ನಂ. 11553—ಸ್ಯಾನಿಟರಿ 14—08–28, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವದೇನೆಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ				ತಾಲ್ಲೂಕು.
ಕುಂಸಿಕ	...	...	...	ಹಾಸನ
ಮೂಡ್ಲ ಪುರ	...	...	...	ಡಿಟೋ

ತಾರೀಖು 13ನೆ ಮೇ 1909.

ನಂ. 11296-9—ಮ್ಯು. 192—08—20, ಸನ್ 1894ನೆ ಇಸವಿಯ VIIನೆ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಈ ಕೆಳಗೆ ನಮೂದಿಸಿರುವ ಜಮೀನು ಪಬ್ಲಿಕ್ ಉಪಯೋಗಾರ್ಥ ಅಂದರೆ ಬೆಂಗಳೂರು ಸಿಟಿಯಲ್ಲಿರುವ ಸಂಪಿಗೆ ಅವಿನ್ಯೂ ರೋಡನ್ನು ತುಮಕೂರು ರೋಡಿಗೆ ಸೇರಿಸುವದಕ್ಕಾಗಿ ಬೇಕಾಗಿರುತ್ತೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ಸೀನಿಯರ್ ವೈಸ್ ಪ್ರೆಸಿಡೆಂಟರವರಿಗೆ ಸದರಿ ಜಮೀನನ್ನು ಹೊಂದುವದಕ್ಕೆ ಕ್ರಮ ಜರಗಿಸಲು ಅಧಿಕಾರ ಕೊಟ್ಟಿದೆ.

ನಂಬರು.	ಗ್ರಾಮದ ಹೆಸರು ಮತ್ತು ತಾಲ್ಲೂಕು.	ಸರ್ವೆ ನಂ.	ಮಾಲೀಕರ ಹೆಸರು.	ಸ್ವತ್ತಿನ ವಿವರಣೆ.	ವಿಸ್ತೀರ್ಣ ಚದರಡಿ.	ಚೆಕ್ಕು ಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	ರಂಗನಾಥಪುರ (ಜೋಡಿಗ್ರಾಮ) ಬೆಂಗಳೂರು ತಾ||	1	ಖಾಯಂ ಗುತ್ತಾದಾರ್ ಆನೂರು ಕ್ರಿಷ್ಣಮಾಚಾರ್.	ಖುಷ್ಕಿ ಜಮೀನ್.	ಎ. ಗು. ಚ. ಗ. 1 15 85	ರಂಗನಾಥಪುರಕ್ಕೆ ಸೇರಿದ ಸರ್ವೆ 1ನೆ ನಂಬರ್ ಪೈಕಿ ಒಂದು ಭಾಗ	ಮಲ್ಲೇಶ್ವರದ ಎಕ್ಸ್ಟೆನ್ಷನ್	ತುಮಕೂರು ರೋಡ್	16ನೆ ಕ್ರಾಸ್ ರೋಡ್

ತಾರೀಖು 8ನೇ ಮೇ 1909.

ನಂ. ರೆ. 9265—ಫಾರೆಸ್ಟ್ 183-08-2, ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಡೆಪ್ಯುಟಿ ಕನ್ಸರವೇಟರು ಮಿ|| ಎಂ. ಜಿ. ರಾಮರಾಯರವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

2. ಮಿ|| ಎಂ. ಜಿ. ರಾಮರಾಯರವರು ರಜಾವಿನಮೇಲೆ ಇರುವಾಗ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಹೆಗ್ಗಡದೇವನಕೋಟೆಯ ಸಬ್ ಡಿವಿಜನ್ ಆಫಿಸರು ಮಿ|| ಪಿ. ಎಸ್. ಗೋವಿಂದರಾಯರವರು ತಮ್ಮ ಕೆಲಸದ ಜತೆಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಕಚೇರಿಯ ಚಾರ್ಜಿ ಕೆಲಸವನ್ನು ನೋಡತಕ್ಕದ್ದು.

ತಾರೀಖು 11ನೇ ಮೇ 1909.

ನಂ. ರೆ. 9358—ಲ್ಯಾ. ರೆ. 28-08-12, ಸಾಗರದ ಸಬ್ ಡಿವಿಜನಲ್ ಅಸಿಸ್ಟಂಟ್ ಕಮಿಷನರಾದ ಮಿ|| ಎಂ. ಶ್ರೀನಿವಾಸಮೂರ್ತಿಯವರಿಗೆ 1909ನೆ ಇಸವಿಯ ಮಾರ್ಚಿ 27ನೆ ತಾರೀಖಿನ ಲಾಗಾಯಿತು 1909ನೆ ಇಸವಿಯ ಏಪ್ರೆಲ್ 6ನೆ ತಾರೀಖಿನ ವರೆಗೆ (ಈ ಎರಡು ದಿನಗಳೂ ಸೇರಿ) 11 ದಿವಸಗಳ ಪ್ರಿವಿಲೇಜ್ ರಜಾ ಕೊಡಲಾಯಿತು.

ತಾರೀಖು 11ನೆ ಮೇ 1909.

ನಂ. ರೆ. 9374—ಲ್ಯಾ. ರೆ. 12-08-7, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದ ಮೇರೆಗೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ|| ಎಂ. ಚಂಗಯ್ಯಶೆಟ್ಟಿ ಯವರಿಗೆ ರಜಾ ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 12 ದಿನಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇರುತ್ತದೆ.

2. ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮಿ|| ಎನ್. ಸುಬ್ಬರಾಯರವರು, ಮಿ|| ಚಂಗಯ್ಯಶೆಟ್ಟಿ ಯವರ ಗೈರ್ ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ತಮ್ಮ ಕೆಲಸದ ಜತೆಯಲ್ಲಿ ಡಿಸ್ಟ್ರಿಕ್ಟಿನ ಚಾರ್ಜನ್ನು ವಹಿಸತಕ್ಕದ್ದು.

ತಾರೀಖು 11ನೆ ಮೇ 1909.

ನಂ. ರೆ. 9376—ಲ್ಯಾ. ರೆ. 28-08-14, ಸಾಗರದ ಸಬ್ ಡಿವಿಜನ್ ಅಸಿಸ್ಟಂಟ್ ಕಮಿಷನರ್ ಮಿ|| ಎಂ. ಶ್ರೀನಿವಾಸ ಮೂರ್ತಿಯವರಿಗೆ 1909ನೆ ಇಸವಿ ಮೇ 10ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ಬೇರೆ ತಾರೀಖಿನ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿದೆ.

2. ಮಿ|| ಶ್ರೀನಿವಾಸಮೂರ್ತಿಯವರು ರಜಾಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ ಅಸಿಸ್ಟೆಂಟ್ ಕಮಿಷನರ್ ಮಿ|| ಆರ್. ಟಿ. ಮಹದೇವರಾಯರವರು ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ತಾಬೆಯಲ್ಲಿ ಅವರು ಹಾಲಿ ಮಾಡುತ್ತಿರುವ ಕೆಲಸಗಳ ಜತೆಗೆ ಸಾಗರದ ಸಬ್ ಡಿವಿಜನ್ನಿನ ಚಾರ್ಜಿನಲ್ಲಿಯೂ ಇರತಕ್ಕದ್ದು.

ತಾರೀಖು 13ನೆ ಮೇ 1909.

ನಂ. ರೆ. 9461—ಲ್ಯಾ. ರೆ. 383-08-1, ಬೆಂಗಳೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಕಮಿಷನರ್ ಮಿ|| ಆರ್. ನಾನಾಸಾಮಿರಾಯರವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣಾನುಸಾರ 1909ನೆ ಮೇ 14ನೆ ತಾರೀಖಿನ ಲಾಗಾಯಿತು ಅಥವಾ ಅವರು ರಜಾ ಉಪಯೋಗಿಸಿಕೊಳ್ಳಬಹುದಾದ ಬೇರೊಂದು ತಾರೀಖಿನ ಲಾಗಾಯಿತು ಎರಡು ತಿಂಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇರುತ್ತದೆ.

ತಾರೀಖು 15ನೆ ಮೇ 1909.

ನಂ. ರೆ. 9530—ಲ್ಯಾ. ರೆ. 62-08-6, ಆಲೂರು ಸಬ್ ತಾಲ್ಲೂಕು ಬದಲಿ ಡೆಪ್ಯುಟಿ ಅಮಲ್ದಾರ್ ಮಹಮ್ಮದ್ ಸೈಯದ್ ಷರೀಫ್ ರವರನ್ನು ಕೊಪ್ಪ ತಾಲ್ಲೂಕಿನ ಅಮಲ್ದಾರ್ ಮತ್ತು ಎರಡನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ತರೀಕು ಮೊಕರರ್ಮಾಡಿ ಇದೆ. (ಈ ಕೆಲಸಕ್ಕೆ ಕೂಡಲೆ ಹೋಗಿ ಸೇರತಕ್ಕದ್ದು)

2. ಹಾಲಿ ಕೊಪ್ಪ ತಾಲ್ಲೂಕಿನಲ್ಲಿ ಬದಲಿ ತರೀಕು ಅಮಲ್ದಾರೀ ಕೆಲಸದಲ್ಲಿರುವ ಡೆಪ್ಯುಟಿ ಅಮಲ್ದಾರ್ ಎಸ್. ಅನಂತರಾಮಯ್ಯಂಗಾರ್ರವರನ್ನು ಅವರ ಖಾಯಂ ಕೆಲಸಕ್ಕೆ ವಾಪಸು ಕಳುಹಿಸಿ ಆಲೂರು ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರಾಗಿ ವರ್ಗಾಯಿಸಿ ಇದೆ. (ಕೊಪ್ಪದ ತಾಲ್ಲೂಕಿನ ಚಾರ್ಜು ಕೊಟ್ಟ ತರುವಾಯ ಈ ಕೆಲಸಕ್ಕೆ ಹೋಗತಕ್ಕದ್ದು.)

ಬೆಂಗಳೂರು ಗವರ್ನಮೆಂಟ ಸೆಂಟ್ರಲ್ ಬುಕ ಡಿಪೋವಿನಲ್ಲಿ ದೊರೆಯತಕ್ಕ ಮೈಸೂರು ಸರ್ಕಾರಿ ಪ್ರೊಸೀಡಿಂಗ್ಸಗಳ ಪಟ್ಟಿ.

ಸೀರಿಯಲ್ ನಂಬರು.	ಪ್ರೊಸೀಡಿಂಗ್ಸ ನಂಬರ ಮತ್ತು ತಾರೀಖು.	ವಿಷಯು.	ಕ್ರಯ. ರೂ.	ಆ.	ಪೈ.
1	ನಂ. 3753-5—ಎಸ್. ಆರ್. 48-02-7 ತಾ|| 30—1—1908.	ತಿರಮುಕೂಡ್ಲು ನರಸೀಪುರದ ತಾಲ್ಲೂಕು ಬಾಯಂಗುತ್ತ ಹ್ಯಾಕನೂರು ಗ್ರಾಮದ ಬಾಡಿ ಹುಟ್ಟುವಳಿಯುನ್ನು ತೀರ್ಮಾನ ಮಾಡತಕ್ಕ ಬಗ್ಗೆ.	0	0	6
2	ನಂ. ಎಫ್. ಎಲ್. 3793-806—ಬಿ. 16-07-14, ತಾ|| 1—2—08.	ಮೈಸೂರು ಸೀಮೆಯುಲ್ಲಿರುವ ವ್ಯವಸಾಯದ ಬ್ಯಾಂಕುಗಳಿಗೆ ಕೊಟ್ಟ ಸಾಲಗಳು ಮತ್ತು ಅದರ ಸಮ್ಬಂಧವಾದ ಜಮಾ ಖರ್ಚು ತಃಖ್ತೆಯನ್ನು ತೋರಿಸುವ ಪ್ರೊಸೀಡಿಂಗ್ಸ.	0	2	3
3	ನಂ. 8368-77—ಲೋ. ಬೋ. 303-07-1, ತಾ|| 22—2—08.	ಅಮೃತಮಹಲ್ ಗೂಳಿಗಳನ್ನು ಬೀಜಕ್ಕೆ ಕೊಡುವದರ ವಿಷಯವಾಗಿ ಆರ್ಡರ ಮಾಡುವ ಬಗ್ಗೆ.	0	0	6
4	ನಂ. 8651-98—ಸ್ಯಾ. 128-07-11, ತಾ|| 29—2—08.	ಮೈಸೂರು ಸೀಮೆಯುಲ್ಲಿ ಪ್ಲೇಗ ರೋಗಗ್ರಸ್ತರಾದ ಸಂಖ್ಯೆಯು ಹೆಚ್ಚಾಗಿರುವದರಿಂದ ಪ್ಲೇಗ ಸಿಡುಬು ಹಾಕಿಸುವದು ಅವಶ್ಯಕವೆಂಬ ಬಗ್ಗೆ.	0	0	6
5	ನಂ. ಆರ್. 5642-52 Ft. 183-05-2, ತಾ|| 29—2—08.	ಕಾಫಿ ಸಾಗುವಳಿಗೆ ಜಮೀನುಗಳನ್ನು ಕೊಡತಕ್ಕ ಬಗ್ಗೆ.	0	0	6
6	ನಂ. ಫೈ. 4320-9—ಎಸ್. ಆರ್. 94-07-3, ತಾ|| 29—2—08.	ಎಕ್ಸೈಸ ಇಲಾಖೆಯು 1906-07ನೆ ವರುಷದ ರಿಪೋರ್ಟು ವಿಷಯುಕವಾದ ಹುಕುಂ.	0	0	9
7	ನಂ. ಆರ್. 5911-3—ಆರ್. ಎಂ. 186-07-2, ತಾ|| 13—3—08.	ಅನಾರೋಗ್ಯ ಸಬಬು ಹಿರಿಯೂರು ಷಹರನ್ನು ಬೇರೇಜಾಗದಲ್ಲಿ ಕಟ್ಟತಕ್ಕ ಬಗ್ಗೆ.	0	0	6
8	ನಂ. ಎಲ್. ಎಫ್. 9231-41—ಎಜುಕೇಷನ 107-07-8, ತಾ|| 15-3-08.	ಮೈಸೂರು ವಿದ್ಯಾಭ್ಯಾಸದ ಅಭಿವೃದ್ಧಿ ರಿಪೋರ್ಟು ಬಗ್ಗೆ	0	0	9
9	ನಂ. ಫೈ. 4642-3—ಎಸ್. ಆರ್. 184-07-2, ತಾ|| 16—3—08.	ನೆಲಮಂಗಲ ತಾಲ್ಲೂಕು ಜೋಡಿ ಗವಿಪಾಳ್ಯ ಗ್ರಾಮದ ಕೇಂದಿ ಹುಟ್ಟುವಳಿ ಹಕ್ಕಿನ ಬಗ್ಗೆ.	0	0	6
10	ನಂ. 9624-5—ಎಜುಕೇಷನ 382—06-6, ತಾ|| 25—3—08.	ವ್ಯವಸಾಯಕ್ಷೇತ್ರವನ್ನು ಪಾಠಶಾಲಾಕ್ಷೇತ್ರವಾಗಿ ಉಪಯೋಗಿಸತಕ್ಕ ಬಗ್ಗೆ.	0	0	9
11	ನಂ. ರೆ. 6254-7—ಅಗ್ರಿ. 140-05-29, ತಾ|| 26—3—08.	ಮಿ|| ಎನ್. ನರಸಿಹ್ಮಯ್ಯಂಗಾರ್ರವರಿಂದ ರಚಿಸಲ್ಪಟ್ಟ ಪಶುವೈದ್ಯ ಸಂಗ್ರಹದ ಕಾಪಿ ರೈಟನ್ನು ರೂ. 500 ಗಳಿಗೆ ಕೊಂಡುಕೊಳ್ಳುವದನ್ನು ಮಂಜೂರ್ಮಾಡುವ ಬಗ್ಗೆ.	0	0	6
12	ನಂ. ಆರ್. 6269—ಅಗ್ರಿ. 81-07-3, ತಾ|| 26—3—08.	ಪರಿಕ್ಷಾಕ್ಷೇತ್ರಗಳ ವ್ಯವಸಾಯದ ಹತ್ಯಾರುಗಳ ವಿಷಯುದಲ್ಲಿ ಬೇಕಾದ ಹತ್ಯಾರುಗಳನ್ನು ಕೊಂಡುಕೊಳ್ಳತಕ್ಕ ಬಗ್ಗೆ.	0	0	6
13	ನಂ. ಆರ್. 6290-8—ಎಲ್. 200-07-4, ತಾ|| 27—3—08.	ರೆವಿನ್ಯೂ ನಿಬಂಧನೆಗಳಲ್ಲಿ ತಗಾದೆ ನೋಟೀಸನ್ನು ಜಾರಿ ಮಾಡುವ ಮನುಷ್ಯಗೆ ಕಂದಾಯ ಪಾವತಿ ಮಾಡುವ ಬಗ್ಗೆ.	0	0	6
14	ನಂ. ಜ. 5558-97—ಜ. ಮಿ. 12—07-53, ತಾ|| 27—3—08.	ಮೈಸೂರು ಸೀಮೆಯ ಸಿವಿಲ್ ಸರ್ವಿಸ್ಸಿಗೆ ಹೊಸ ಅಧಿಕಾರಿಗಳನ್ನು ಸೇರಿಸುವದಕ್ಕೂ ಮತ್ತು ದರ್ಜೆ ಏರ್ಪಡಿಸತಕ್ಕ ಬಗ್ಗೆ.	0	0	6
15	ನಂ. ಜಿ. 3002-12—ಕೋ. 29—07-13, ತಾ|| 28—3—08.	ಕ್ರಿಮಿನಲ ಕೋರ್ಟುಗಳಿಗೆ ಸಾಕ್ಷೀ ಕೊಡುವದಕ್ಕಾಗಿ ಬರುವ ಜನಗಳ ಭತ್ಯದ ಖರ್ಚು ಕೊಡತಕ್ಕ ಬಗ್ಗೆ.	0	0	6

ಸರಣಿ ಸಂಖ್ಯೆ.	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.		
			ರೂ.	ಆ.	ಪೈ.
16	ನಂ. ಆರ್. 6359-6—ಫಾರೆಸ್ಟು 95—07-4, ತಾ|| 31—3—08.	ಧನಗೂರು ಬ್ಲಾಕನ್ನು ಸ್ಟೇಟ್ ಫಾರೆಸ್ಟಿಗೆ ಸೇರಿಸಲಾಗುವದಿಲ್ಲವೆಂಬತಕ್ಕ ಬಗ್ಗೆ.	0	0	6
17	ನಂ. ರೆ. 6529-38—ಫಾರೆಸ್ಟ್. 50-05-6, 9—4—08.	ತರಗತಿ ವಿಂಗಡಿಸಿರುವ ಮರಗಳ ಪಟ್ಟಿಯಲ್ಲಿ ತಂಗಡಿ, ಈಚಲು, ಮತ್ತು ಸೀಗೆ ಮರಗಳನ್ನು ಸೇರಿಸಬೇಕೆಂದು ಸದರಿ ಪಟ್ಟಿ ಸಮೇತ ಒಂದು ಹೊಸ ಇಸ್ತಿಹಾರ್ನಾಮೆಯನ್ನು ಪ್ರಕಟಿಸಬೇಕೆಂದು ಅಪ್ಪಣೆಮಾಡುವಬಗ್ಗೆ.	0	1	3
18	ನಂ. 10311-20—ಲೋ. ಬೋ. 346-07-2, ತಾ|| 15—4—08.	ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ ನಡೆದ ದನಗಳ ಪ್ರದರ್ಶನದ ರಿಪೋರ್ಟನ್ನು ರಿಕಾರ್ಡು ಮಾಡಿರತಕ್ಕ ಬಗ್ಗೆ.	0	0	6
19	ನಂ. ಫೈ. 5309-14—ಎಸ್. ಆರ್. 46-05-22, ತಾ|| 18—4—08.	ಹೊಸ ನಮೂನೆಯ ವಾಟರ್ ಮಾರ್ಕು ಗುರ್ತು ಹಾಕಲ್ಪಟ್ಟ ಮೂರು ಕಾಸಿನ ಕಾಗದಗಳನ್ನು ಗವರ್ನಮೆಂಟಿನವರಿಂದ ರಾಜಬಿರುದಿನ ಚಿನ್ಹೆಯನ್ನು ಛಾಪಿಸಲು ಮಂಜೂರು ಮಾಡಿದ ವಿಷಯ.	0	0	6
20	ನಂ. ರೆ. 6799-809—ಎಲ್. ಆರ್. 225-07-5, ತಾ|| 23—4—08.	ಎಲ್ಲಾ ಡೆಪ್ಯುಟಿ ಕಮಿಷ್ನರವರುಗಳು ತಮ್ಮ ತಮ್ಮ ಡಿಸ್ಟ್ರಿಕ್ಟುಗಳ ಎಲ್ಲಾ ವಿಷಯವಾದ ಕಾಲಸ್ಥಿತಿಯ ಮತ್ತು ಇತರ ಬೆಳೆಗಳ ವಿಷಯವಾದ ಶೋಧನಾ ಕಾರ್ಯಗಳು ಜನರ ಸ್ಥಿತಿ, ಕಲಾಕೌಶಲ, ಕೈಗಾರಿಕೆ, ವ್ಯಾಪಾರ, ಮೊದಲಾದ ಕೆರೆಗಳ ವಿಷಯದಲ್ಲಿಯೂ ಸಹಾ ಕ್ಲುಪ್ತವಾದ ಕಾಲದಲ್ಲಿ ರಿಪೋರ್ಟುಗಳು ತಿಳಿಸತಕ್ಕ ವಿಷಯದಲ್ಲಿ ನಡೆದ ವಿಷಯವಾಗಿ.	0	1	3
21	ನಂ. ರೆ. 6887-96—ಲ್ಯಾ. ರೆ. 521-06-6, ತಾ|| 27—4—08.	ನಾಲಾ ಏರಿಗಳಮೇಲೆ ಬೆಳೆಯುವ ಹುಲ್ಲು ಮೇಯಿಸುವ ಹಕ್ಕನ್ನು ಅಜುಬಾಜು ಗ್ರಾಮದ ರೈತರ ಧನಗಳು ಮೇಯುವದಕ್ಕಾಗಿ ಹುಟ್ಟಿದ ಪ್ರೊಸೀಡಿಂಗ್ಸು.	0	0	6
22	ನಂ. 10979-81—ಎಲ್. ಬಿ. 350-07-2, ತಾ|| 28—4—08.	ಮುಡಕದೊರೆಯಲ್ಲಿ ದನಗಳ ಪ್ರದರ್ಶನವನ್ನು ನಡೆಸಿದ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಟಿ. ನರಸೀಪುರದ ತಾಲ್ಲೂಕಿನ ಅಮಲ್ದಾರ್ರವರು ಬರೆಸಿದ ರಿಪೋರ್ಟುಗಳನ್ನು ರಿಕಾರ್ಡು ಮಾಡುವ ಬಗ್ಗೆ.	0	0	9
23	ನಂ. 11132-33—ಎಲ್. ಬಿ. 190-06-15, ತಾ|| 1—5—08.	ಇಪ್ಪತ್ತೈದು ಮನೆಗಳಿಗಿಂತ ಕಮ್ಮಿ ಇಲ್ಲದ ಗ್ರಾಮಗಳಿಗೆಲ್ಲಾ ಗ್ರಾಮಾರೋಗ್ಯ ನಿಬಂಧನೆಗಳು ಉಗಾವಾಗುವಂತೆ ಮಾಡೋಣ.	0	0	6
24	ನಂ. ಜು. 3295-96—ಬಂದಿ. 72—06-2, ತಾ|| 2—5—08.	ಮೈಸೂರು ಸೀಮೆಯ ಬಂದೀಖಾನೆಗಳ ಇಲಾಖೆಯಲ್ಲಿ ಖರ್ಚು ಕಡಿಮೆ ಮಾಡುವದು ಹುಟ್ಟುವಳಿಯನ್ನು ಹೆಚ್ಚಿಸುವದು ಸಾಧ್ಯವೆಂದು ರಿಟ್ರೆಂಚುಮೆಂಟುಯಾನೆ ಖರ್ಚು ಕಡಿಮೆಮಾಡುವ ಕಮಿಟೀಯವರು ಬರಿಸಿದ ಯಾದಾಸ್ತಿನಮೇಲೆ ಹುಕುಂ ಮಾಡುವ ಬಗ್ಗೆ.	0	0	9
25	ನಂ. ರೆ. 7078-9—ಅಗ್ರಿ. 74-07-17, ತಾ|| 2—5—08.	1908ನೆ ಇಸವಿಯ ಫೆಬ್ರುವರಿ ತಿಂಗಳಲ್ಲಿ ಮದರಾಸಿನಲ್ಲಿ ನಡೆದ ಇಂಡಿಯಾದೇಶದ ಕೈ ಮಗ್ಗಗಳು ಪ್ರೋಟಾಪ್ರೋಟಿಯನ್ನು ನೋಡುವದಕ್ಕಾಗಿ ಕಳುಹಿಸಲ್ಪಟ್ಟ ನೇಯಿಗೆಯವರ ವಿಷಯವಾಗಿ ಮೊಳಕಾಲ್ಮುರು ತಾಲ್ಲೂಕಿನ ಅಮಲ್ದಾರ್ರವರು ಮಾಡಿದ ರಿಪೋರ್ಟನ್ನು ರಿಕಾರ್ಡುಮಾಡುವ ಬಗ್ಗೆ.	0	0	9
26	ನಂ. ಆರ್. 7098-107—ಫಾರೆಸ್ಟ್ 126-07-3, ತಾ|| 4—5—08.	ಮಲೆನಾಡಿನಲ್ಲಿ ಮುಂದೆ 2 ವರುಷಗಳ ವರೆಗೆ ಹೆಬ್ಬಿದಿರನ್ನು ಉಚಿತವಾಗಿ ಕೊಡತಕ್ಕದ್ದೆಂದು ಮರದ ನಾಟಾಗಳ ವಿಚಾರವಾಗಿ ಅಂತಹ ರಿಯಾಯತಿಯು ಅಗತ್ಯವಿಲ್ಲವೆಂದು.	0	0	6
27	ನಂ. ರೆ. 7235-9—ಲ್ಯಾ. ಸ. 10-07-4, ತಾ|| 8—5—08.	ಶಿಕಾರಿಪುರದ ತಾಲ್ಲೂಕಿನಲ್ಲಿ ರಿವಿಜನ್ ಸೆಟ್ಲ್‌ಮೆಂಟನ್ನು ಜಾರೀಗೆ ತರತಕ್ಕ ಬಗ್ಗೆ.	0	8	9

ಸೀರಿಯಲ್ ನಂಬರ್	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.		
			ರೂ.	ಆ.	ಪೈ.
28	ನಂ. 11477—ಮ್ಯು. 341-06-70, ತಾ|| 8—5—08.	ಶಿವಮೊಗ್ಗಾ ಟವರ್ನ ಒಂದು ಖಾಯಂ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂಬ ಬಗ್ಗೆ.	0	0	6
29	ನಂ. 11788-828—ಸ್ಟ್ಯಾ. 214—07-2, ತಾ|| 13—5—08.	ಸರ್ಕಾರಿ ನೌಕರಿಯಲ್ಲಿ ಸೇರಬೇಕೆಂದು ಅಪೇಕ್ಷಿಸುವವರ ಪೈಕಿ ಹತ್ತು ವರುಷಗಳ ವಯಸ್ಸಾದ ನಂತರ ಸಿಡುಬು ಹಾಕಿಸಿಕೊಳ್ಳದೆ ಯಾ ಎದ್ದಿರದೆ ಇರತಕ್ಕವರು ಎರಡನೆಯುಸಾರಿ ಸಿಡುಬು ಹಾಕಿಸಿಕೊಂಡಿರುವವರೆಂಬ ವಿಚಾರವಾಗಿ ಸರ್ಟಿಫಿಕೇಟ್ ಹಾಜರ್ಪಡಿಸಬೇಕೆಂಬಬಗ್ಗೆ	0	0	3
30	ನಂ. ಜ. 6663-702—ಜನ. 19—07-1, ತಾ|| 14—5—08.	1908ನೆ ದಸರಾ ಕ್ಯಾಲೆಂಡರ್ ಯಾ ಕಾಲನಿಯಾಮಕ ಪತ್ರಿಕೆಯನ್ನು ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಗೆ ಕಳುಹಿಸತಕ್ಕ ಬಗ್ಗೆ.	0	0	3
31	ನಂ. ಜಿ. 3429-60—ಕೋ. 133-07-2, ತಾ|| 15—5—08.	ಜೈಲುಗಳಲ್ಲಿಯೂ, ಲಾಕಪ್ಪುಗಳಲ್ಲಿಯೂ, ಮೃತಪಟ್ಟವರ ಶವಗಳ ವಿಷಯವಾಗಿ ಅತ್ಯಂತ ಸಮೀಪದ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಬೇಕೆಂದು ವಿಧಿಸುವ ಬಗ್ಗೆ.	0	0	3
32	ನಂ. 12086—ಮ್ಯು. 341-06-75, ತಾ|| 20—5—08.	ತಿರಮಕೂಡು ನರಸೀಪುರದ ಟವರ್ನ ಮತ್ತು ಇದರ ಕೇರಿಯಾದ ಆಲಗೋಡಿ ಗ್ರಾಮ ಇವುಗಳನ್ನು ಸೇರಿಸಿ ತಿರುಮಕೂಡ್ಲು ನರಸೀಪುರದ ಮ್ಯುನಿಸಿಪಾಲಟಿ ಎಂಬ ಹೆಸರಿನ ಮ್ಯುನಿಸಿಪಾಲಟಿಯನ್ನು ಏರ್ಪಡಿಸಲು ಮಂಜೂರು ಮಾಡುವ ಬಗ್ಗೆ.	0	0	3
33	ನಂ. ರೆ. 7525-6—ರೆ. ಮಿ. 193—07-2, ತಾ|| 21—5—08.	1898ರಲ್ಲಿ ಮರಾಮತ್ತು ಇಲಾಖೆಯವರು ಕಾಟೇರಿ ಕೆರೆಗೆ ಮಟ್ಟ ಕಾಮಗಾರಿ ಮಾಡಿದ್ದಕ್ಕೆ ರೈತರ ತಪ್ಪಿತವೇ ಸಂಪೂರ್ಣವಾಗಿ ಕಾರಣವಾಗದೆ ಇದ್ದಪ್ರಯುಕ್ತ ಆ ಕಾಮಗಾರಿಯ ಖರ್ಚಿನ ಬಗ್ಗೆ ಮಾಲೂರು ತಾಲ್ಲೂಕಿನ ಕಾಟೇರಿ ಮತ್ತು ಕೊಡಗಿನಬೆಲೆ ಗ್ರಾಮಗಳ ರೈತರು ಯಾವ ಮೊಬಲಗನ್ನೂ ಕೊಡತಕ್ಕದ್ದಿಲ್ಲವೆಂದು ಮಾಫ್ ಮಾಡುವ ಬಗ್ಗೆ.	0	0	3
34	ನಂ. ರೆ. 7509-18—ರೆ. ಮಿ. 125-06-9, ತಾ|| 21—5—08.	ಕೃಷ್ಣರಾಜಪೇಟೆ ತಾಲ್ಲೂಕು ತರ್ನೇನಹಳ್ಳಿ ಇನಾಂದಾರರಾದ ಮಿ|| ರಾಮೈಯ್ಯನವರು ಮದರಾಸು, ಮಿ|| ಆರ್ಬತ್‌ನಾಟ್ ಅಂಡ್ ಕೋ ಯವರಿಗೆ ಕೊಟ್ಟ ಗಣಿಗುತ್ತಿಗೆಯಲ್ಲಿ ಸೇರಿಸಿರುವ ಸದರಿ ಇನಾಂ ಗ್ರಾಮದ ಸುಮಾರು 52 ಎಕರೆ ವಿಸ್ತೀರ್ಣವುಳ್ಳ ಗೋಮಾಳ ಜಮೀನಿನ ಮೇಲೆ ಆ ಕಂಪೆನಿಯಿಂದ ವಸೂಲ್ ಮಾಡತಕ್ಕ ಕಂದಾಯಕ್ಕಾಗಿ ಜಾಹಿರ್ ಮಾಡಿರತಕ್ಕ ಹಕ್ಕನ್ನು ತಿರಸ್ಕರಿಸುವ ಬಗ್ಗೆ.	0	0	3
35	ನಂ. ರೆ. 7527-35—ಫಾ. 126-07-4, ತಾ|| 21—5—08.	ಕಬ್ಬಿನ ತೋಟಗಳಿಗೆ ಬೇಲಿಯಾಗಿ ಉಪಯೋಗಿಸುವುದಕ್ಕಾಗಿ ಜಂಗಲಿನಿಂದ ತರತಕ್ಕ ಬಿದರು ಸೀಬಿನ ಮೇಲೆ ಹಾಕಿರುವ ರುಸುಮನ್ನು ತಗ್ಗಿಸುವುದಕ್ಕೆ ಆಗುವದಿಲ್ಲವೆಂಬ ಬಗ್ಗೆ.	0	0	3
36	ನಂ. ರೆ. 7716-25—ಲ್ಯಾ. ಸ. 36-07-2, ತಾ|| 25—5—08.	1907ನೆಯ ಅಕ್ಟೋಬರ್ 31ಕ್ಕೆ ಆಖೈರಾಗುವ ಸಂವತ್ಸರದ ಮೈಸೂರು ಸಂಸ್ಥಾನದ ರೆವಿನ್ಯೂ ಇಲಾಖೆಯ ಅಭಿವೃದ್ಧಿ ಯಾ ಸಾಂವತ್ಸರಿಕ ರಿಪೋರ್ಟನ್ನು ವಿಮರ್ಶೆ ಮಾಡತಕ್ಕ ಬಗ್ಗೆ.	0	0	6
37	ನಂ. ಜ್ಯು. 3670-71—ರೆಜಿಸ್. 28-07-05, ತಾ|| 6—6—08.	5 ವರುಷಗಳ ಕಾಲಕ್ಕೆ ಮೀರದ ಮತ್ತು ವರುಷಗಟ್ಲೆಯ ಗುತ್ತಿಗೆಯು 50 ರೂಪಾಯಿಗಳಿಗೆ ಮೀರದೆ ಇರುವ ವ್ಯವಸಾಯ ಸಂಬಂಧವಾದ ಗೇಣೀ ಚೀಟಿಗಳನ್ನು ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನ್ 17ನೆ ಪ್ರಕರಣದಿಂದ ವಿನಾಯಿಸತಕ್ಕದ್ದೆಂದು ಸರ್ಕಾರದವರು ಅಪ್ಪಣೆ ದಯಪಾಲಿಸಿರುವ ಬಗ್ಗೆ.	0	0	3

ಸೀರಿಯಲ್ ನಂಬರು.	ಪ್ರೊಸೀಡಿಂಗ್ಸ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.		
			ರೂ.	ಆ.	ಪೈ.
38	ನಂ. ರೆ. 8033-42—ಲ್ಯಾ. ರೆ. 400-07-2, ತಾ॥ 11—6—08.	ಇನಾಂ ಗ್ರಾಮಗಳಲ್ಲಿಯ ಕೆರೆಗಳನ್ನು ಇನಾಂದಾರರುಗಳು ದುರಸ್ತು ಮಾಡದೆ ಅಸಡ್ಡೆ ಮಾಡುತ್ತಾ ಬಂದಿರುವುದರಿಂದ ಅವು ಹಾಳಾಗುತ್ತಾ ಬರುತ್ತವೆಯಾಗಿ ಮುಂದೆ ಡೆಪ್ಯುಟಿ ಕಮಿಷನರುಗಳು ಮರಹಮ್ಮತು ಇಲಾಖೆಯವರು ಗಮನ ಕೊಡತಕ್ಕದ್ದು ಅವಶ್ಯಕವೆಂಬ ಬಗ್ಗೆ.	0	0	6
39	ನಂ. ಫೈ. 6461-3—ಸೆ. ರೆ. 52-02, ತಾ॥ 11—6—08.	ಮೈಸೂರು ತಾಲ್ಲೂಕು ಉಡಬೂರು ಕಾಯಂಗುತ್ತಾ ಗ್ರಾಮದ ಶೇಂದಿ ಹುಟ್ಟುವಳಿಗೆ ಹಕ್ಕಿನ ವಿಚಾರವಾಗಿ ಕೊಟ್ಟಿರುವ ಸನ್ನದು ಶೇಂದಿ ಹುಟ್ಟುವಳಿಯನ್ನು ಬಿಟ್ಟುಕೊಡಬೇಕೆಂದು ಕಂಠೋಕ್ತವಾಗಿ ಹೇಳುವುದಿಲ್ಲವಲ್ಲದೆ ಇನಾಂ ಸೆಟಲ್‌ಮೆಂಟಿನಲ್ಲಿ ಅದನ್ನು ಸರ್ಕಾರಕ್ಕೆ ಉಳಿಸಿಕೊಂಡು ಇರತಕ್ಕ ಬಗ್ಗೆ.	0	0	3
40	ನಂ. ಫೈ. 6449-50—ಸೆ. ರೆ. 60—02-04, ತಾ॥ 11—6—08.	ದೇವನಹಳ್ಳಿ ತಾಲ್ಲೂಕಿನಲ್ಲಿರುವ ಅರಸನಹಳ್ಳಿ—ಪೆದ್ದನಹಳ್ಳಿ ಗ್ರಾಮಗಳ ಇನಾಂದಾರನಿಗೆ ಸದರಿ ಗ್ರಾಮದ ಶೇಂದಿ ಹುಟ್ಟುವಳಿ ಹಕ್ಕು ಉಂಟೆ ಎಂಬತಕ್ಕ ಬಗ್ಗೆ.	0	0	3
41	ನಂ. ಆರ್. 8139-48—ಎಲ್. ಆರ್. 351-07-04, ತಾ॥ 13—6—08	ಕಾಫಿ ಸಾಗುವಳಿಗೆ ಕೊಡತಕ್ಕ ಸರ್ಕಾರಿ ಬಂಜರ್ ಜಮೀನುಗಳ ವಿಷಯದಲ್ಲಿ ಹಿಡುವಳಿಯಲ್ಲಿರುವ ಕಾಫಿ ಜಮೀನುಗಳ ಪೋಡು ಬಗ್ಗೆ.	0	0	6
42	ನಂ. ಜು. 3755—ರೆಜಿಸ್ಟ್ರೇಷನ್ 43-07-2, ತಾ॥ 16—6—08.	1908ನೆ ಮಾರ್ಚಿ 31ಕ್ಕೆ ಆಖೈರಾಗುವ ಸಂವತ್ಸರದಲ್ಲಿ ಸಂಸ್ಥಾನದಲ್ಲಿ ಚಲಾವಣೆಯಲ್ಲಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳಿಗೂ ಅನ್ಯೋನ್ಯ ಸಹಾಯಕ ಸಂಘಗಳಿಗೂ ಸಂಬಂಧಪಟ್ಟ ಕಾಗದ ಪತ್ರಗಳನ್ನು ವಿಮರ್ಶಿಸತಕ್ಕ ಬಗ್ಗೆ.	0	0	3
43	ನಂ. 13131-9—ಲೋ. ಬೋ. 292-07-4, ತಾ॥ 17—6—08.	ಹರಿಹರ ಸಬ್ ತಾಲ್ಲೂಕಿನಲ್ಲಿರುವ ನಂದಿಗುಡಿ ಗ್ರಾಮದಲ್ಲಿ ದನಗಳ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನವನ್ನು ನಡೆಸಿದ ವಿಷಯವಾಗಿ ಹರಿಹರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರರವರು ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಬರೆಸಿದ ರಿಪೋರ್ಟುಗಳನ್ನು ರಿಕಾರ್ಡು ಮಾಡುವ ಬಗ್ಗೆ.	0	1	0
44	ನಂ. ಆರ್. 8324-33—ಎಲ್. ಆರ್. 295-07-3, ತಾ॥ 18—6—08.	ಅಡಿಕೆಯ ಮೇಲಿನ ಹಾಳತವನ್ನು ರದ್ದುಮಾಡಬೇಕೆಂಬ ಬಗ್ಗೆ ಹುಟ್ಟಿದ ಹುಕುಂ.	0	0	3
45	ನಂ. 13478-89—ಸ್ಯಾ. 108-07-4, ತಾ॥ 25—6—08.	ಜೊಂಬಾಯಿ ಅಧಿಪತ್ಯದಲ್ಲಿ ಜಂಪರುಗಳೆಂಬ ಹತ್ಯಾರುಗಳ ಮೂಲಕ ಭಾವಿಗಳನ್ನು ತೆಗೆಸಿದ್ದರ ಫಲಿತಾಂಶಗಳನ್ನು ಕುರಿತು ರಿಪೋರ್ಟನ್ನು ರಿಕಾರ್ಡು ಮಾಡುವುದು ಮತ್ತು ಇತರ ಅಧಿಕಾರಿಗಳಿಗೆ ಕಳುಹಿಸುವುದರ ಬಗ್ಗೆ.	0	0	6
46	ನಂ. ರೆ. 8559-68—ಫಾ. 127-07-4, ತಾ॥ 27—6—08.	ರೈತರುಗಳ ಹಕ್ಕು ಬಾಧ್ಯತೆಗಳ ವಿಚಾರವಾದ ನಿಬಂಧನೆಗಳಿಗನುಸಾರವಾಗಿ ಕಟ್ಟಡದ ಮತ್ತು ಜಿರಾಯಿತಿಯ ಕೆಲಸಗಳಿಗಾಗಿ ಸಾಮಾನುಗಳನ್ನು ಕೊಡಿಸುವುದರಲ್ಲಿ ತೋರಿಸುವ ರಿಯಾಯಿತಿಗಳನ್ನ ಮಲೆನಾಡಿನ ಮ್ಯುನಿಸಿಪಲ್ ಟೌನುಗಳ ಜಮೀನುದಾರರುಗಳಿಗೂ ಅನ್ವಯಿಸತಕ್ಕದ್ದೆಂದು ಅಪ್ಪಣೆ ಮಾಡುವ ಬಗ್ಗೆ.	0	0	6
47	ನಂ. ಜೆ. 1-40—ರಿಪೋರ್ಟ್ಸ್ 13-07-2, ತಾ॥ 1—7—08.	ದಸರಾ ಪ್ರಜಾ ಪ್ರತಿನಿಧಿ ಸಭೆಯ ಸಭಿಕರಿಗೆ ಮೈಸೂರಿನಲ್ಲಿ ಸ್ಥಳ ವಸತಿಯನ್ನು ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡತಕ್ಕ ಬಗ್ಗೆ.	0	0	3
48	ನಂ. ರೆ. 14-25—ಅಗ್ರಿ. 79-07-4, ತಾ॥ 1—7—08.	ರೈತರುಗಳ ಅಶ್ರದ್ಧೆಯ ದೆಶೆಯಿಂದ ಸರ್ಕಾರದವರು ದುರಸ್ತಾದ ಕೆರೆಗಳಿಗೆ ಮಾಡಿಸಬೇಕಾಗಿ ಬಂದ ಮಟ್ಟಿ ಕೆಲಸ ಮತ್ತು ಇತರ ದುರಸ್ತುಗಳಿಗಾಗಿ ಕೊಟ್ಟ ಅಡ್ವಾನ್ಸುಗಳನ್ನು ಯಾವ ಬಾಬಿನ ಲೆಖ್ಖಕ್ಕೆ ದಾಖಲ್ ಮಾಡಬೇಕೆಂಬ ಕ್ರಮವನ್ನು ನಿಯಮಿಸತಕ್ಕ ಬಗ್ಗೆ ಮತ್ತು ಮೇಲ್ಕಂಡ ಖರ್ಚುಬಾಬಿಗಾಗಿ ಸಾಲೀಯಾನ ಆದಾಯ ವ್ಯಯದ ಅಂದಾಜಾ ಪಟ್ಟಿಯಲ್ಲಿ ಪ್ರತ್ಯೇಕವಾದ ಅವಕಾಶವನ್ನು ಕಲ್ಪಿಸುವುದಾಗುತ್ತದೆಯಾದ ಪ್ರಯುಕ್ತ ಚಿಲ್ಲರೆ ಕೆರೆಗಳ ದುರಸ್ತಿಗಾಗಿ ವರ್ಷೇ ವರ್ಷ ತೆಗೆದಿರಿಸುವ ಫಂಡನ್ನು ಸದರಿ ಖರ್ಚಿಗೆ ಉಪಯೋಗಿಸಕೂಡದೆಂದು ಅಪ್ಪಣೆ ಮಾಡುವ ಬಗ್ಗೆ.	0	0	6

ಸೀರಿಯಲ್ ನಂಬರ.	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.		
			ರೂ.	ಆ.	ಪೈ.
49	ನಂ. ರೆ. 1-10—ಲ್ಯಾ. ರೆ. 200-07-6, ತಾ॥ 1—7—08.	1908ನೆ ಮಾರ್ಚಿ 27ನೆಯ ಮಕ್ಕಾಂ ರೆ. 62—90 ಲ್ಯಾಂಡ್ ರೆವಿನ್ಯೂ 200-07-4ನೆಯ ನಂಬರ್ ಸರ್ಕಾರಿ ಹುಕುಮಿನಿಂದ ತಿದ್ದುಪಾಟಾದ ತಗಾದೆ ನೋಟೀಸುಗಳನ್ನು ಛಾಪಿಸಬೇಕೆಂದು ಸರ್ಕಾರಿ ಛಾಪಾಖಾನೆಯ ಸೂಪರಿಂಟೆಂಡೆಂಟರವರಿಗೆ ಹುಕುಂ ಕೊಡುವ ಬಗ್ಗೆ.	0	0	3
50	ನಂ. ರೆ. 39-41-ಲ್ಯಾ. ರೆ. 581-06-7, ತಾ॥ 2—7—08.	ಚನ್ನಗಿರಿ ತಾಲ್ಲೂಕಿನಲ್ಲಿ ರಿವಿಜನ್ ಸೆಟ್ಲಮೆಂಟನ್ನು ಜಾರೀಗೆ ತಂದಾಗ ಸದರಿ ತಾಲ್ಲೂಕಿನ ಉಡುವ, ಕಬ್ಬಳ, ಸಿದ್ಧಾಪುರ, ರಾಮಗೊಂಡನಹಳ್ಳಿ, ದೊಡ್ಡಘಟ್ಟ, ಲಕ್ಷ್ಮೀಸಾಗರ ಗ್ರಾಮಗಳ ರೈತರಿಗೆ ಸೂಳೆಕೆರೆಯ ಕೆಳಗಿರುವ ಜಮೀನುಗಳಮೇಲೆ ದಾಖಲಾದ ಕಂದಾಯದ ದರಗಳ ವಿಷಯದಲ್ಲಿ ರಿಯಾಯಿತಿ ತೋರಿಸಿ; ಕೇಂದಿ ವನಗಳಾಗಿ ಸರ್ಕಾರದವರು ವುಳಸಿಕೊಳ್ಳಬೇಕಾದ ಅವಶ್ಯಕವಿಲ್ಲದ ಜಮೀನುಗಳನ್ನೆಲ್ಲಾ ಸಾಗುವಳಿಗೆ ಕೊಡಬೇಕೆಂದು ವಿಧಿಸಿ; ಸೂಳೇಕೆರೆಯ ಅಣೆಕಟ್ಟುಗಳೂ ನಾಲೆಗಳೂ ಬಹಳ ಹೀನಸ್ಥಿತಿಯಲ್ಲಿವೆ ಎಂಬ ಅಂಶಕ್ಕೆ ರೆವಿನ್ಯೂ ಕಮಿಷನರವರು ಚೀಫ್ ಇಂಜನಿಯರವರು ನಿಗೆ ಕೊಡಬೇಕೆಂದು ಕೋರುವ ಬಗ್ಗೆ.	0	2	0
51	ನಂ. ಆರ್. 77—ಅಗ್ರಿ. 18-07-12, ತಾ॥ 4—7—08.	ದನಗಳಿಗೆ ಸಾಂಕ್ರಾಮಿಕ ಜಾಡ್ಯ ಬಾರದಂತೆ ಮಾಡುವದಕ್ಕೂ ಬಂದಾಗ ತಕ್ಕ ಚಿಕಿತ್ಸೆ ಮಾಡುವದಕ್ಕೂ ಹೊಸದಾಗಿ ಏರ್ಪಟ್ಟ ಪಶುವೈದ್ಯದ ಇಲಾಖೆಯವರು ತಕ್ಕ ಏರ್ಪಾಡು ಮಾಡತಕ್ಕ ಬಗ್ಗೆ.	0	0	9
52	ನಂ. ಫೈ. 168-208—ಜೆ. ಫೈ. 184-06, ತಾ॥ 11—7—08.	1908ನೆ ಇಸವಿಯ ಫೆಬ್ರವರಿ 12ನೆ ತಾರೀಖಿನ ಫೈನಾನ್ಷಲ್ 4007—ಜನರಲ್ ಫೈನಾನ್ಸ್ 184-06ನೆ ನಂಬರ್ ಸರ್ಕಾರಿ ಹುಕುಮಿನ 4ನೆ ಪ್ಯಾರಾಪ್ರಕಾರ ಡಿಪಾಜಿಟರುಗಳು ಬರೆದು ಕೊಡಬೇಕಾದ ದಸ್ತಾವೇಜಿನ ನಮೂನೆಯನ್ನು ವಿಧಿಸುವ ಬಗ್ಗೆ.	0	0	3
53	ನಂ. ಫೈ. 282-91—ಎಸ್. ಆರ್. 173-07, ತಾ॥ 17—7—08.	ಕೇಂದಿ ಫಂಡ್ ಫಾರಂ ಪದ್ಧತಿಯು ಜಾರಿಯಲ್ಲಿದ್ದ 1892-93ನೆ ಸಾಲಿನ ಲಾಗಾಯಿತು 1896-97ನೆ ಸಾಲಿನ ವರಿಗೆ ಇನಾಂದಾರರಿಗೆ ಕೊಡತಕ್ಕ ಮೊಬಲಗಿನ ವಿಷಯದ ಬಗ್ಗೆ.	0	0	3
54	ನಂ. 584-624—ಪರೀಕ್ಷಾ. 21-07-1, ತಾ॥ 20—7—08.	ಲೋಕಲ್ ಸರ್ವಿಸ್ ಮತ್ತು ಪ್ಲೀಡರ್ಸ್ ಎಗ್ಜಾಮಿನೇಷನುಗಳ ಎಂದರೆ ಈ ಸಂಸ್ಥಾನದಲ್ಲಿ ಸರ್ಕಾರಿ ನೌಕರಿಗೂ ಪ್ಲೀಡರುಗಳಾಗಲಿಕ್ಕೂ ವಿಧಾಯಕವಾಗಿರುವ ಪರೀಕ್ಷೆಗಳ ಜತೆಗೆ ಪ್ರೀಸಿ ರೈಟಿಂಗ್ ಯಾ ಸಾರಾಂಶಲೇಖನದಲ್ಲಿ ಒಂದು ಪರೀಕ್ಷೆಯನ್ನು ಸೇರಿಸತಕ್ಕ ಮತ್ತು ಆ ವಿಚಾರವಾಗಿ ಕೆಲವು ನಿಬಂಧನೆಗಳನ್ನು ಮಂಜೂರ್ಮಾಡತಕ್ಕ ಬಗ್ಗೆ.	0	0	3
55	ನಂ. 698—ಲೋ. ಬೋ. 195-06-12, ತಾ॥ 22—7—08.	ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ಮತ್ತು 1903ನೆ ಸೆಪ್ಟಂಬರು 9ನೆಯ ಮಕ್ಕಾಂ 30ನೆ ಲಿಜೆಸ್ 4-03ನೆಯ ನಂಬರು ಇಸ್ತಿಹಾರ್ನಾಮೆಯ ಮೂಲಕ ಪ್ರಕಟಸೋಣಾದ ನಿಬಂಧನೆ ಪೈಕಿ 132ನೆ ಪ್ಯಾರಾದಲ್ಲಿ ಕಂಡ (ಎಫ್.) ಎಂಬ ಉಪಕ್ರಮಣದಲ್ಲಿ "ನಿವ್ವಳ ಹುಟ್ಟುವಳಿಯನ್ನು" ಎಂಬ ಮಾತುಗಳ ಹಿಂದೆ "ಇವಲ್ಲದೆ ರಾಸುಗಳ ಅತಿಕ್ರಮಪ್ರವೇಶದ ಕಾನೂನಿನ 18ನೆಯ ಪ್ರಕರಣಾನುಸಾರವಾದ ಯೂನಿಯನ್ನಲ್ಲಿ ಇರತಕ್ಕ ರಾಸುಗಳ ದೊಡ್ಡಿಯಿಂದ ಉತ್ಪತ್ತಿಯಾದುದರ ಪೈಕಿ ಉಳಿದಿರುವ ರುಸುಂಗಳ" ಎಂಬ ಮಾತುಗಳನ್ನು ಸೇರಿಸತಕ್ಕ ಬಗ್ಗೆ.	0	0	6

ಸೀರಿಯಲ್ ನಂಬರು.	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.		
			ರೂ.	ಆ.	ಪೈ.
56	ನಂ. ಜುಡಿಷಿಯಲ್. 288-90-ಕೋರ್ಟ್ಸ್ 176-07, ತಾ|| 24—7—08.	ಮ್ಯಾಜಿಸ್ಟ್ರೇಟರುಗಳ ರೂಬರೂಬ್ ಕೊಡಲ್ಪಡುವ ಕೈಫಿಯತ್ತುಗಳಿಗೆ ಸಾಕ್ಷಿಗಳ ರುಜುಗಳನ್ನು ತೆಗೆದುಕೊಳ್ಳಬೇಕಾದುದಿಲ್ಲವೆಂಬದಾಗಿ ಹಾಲೀ ಜಾರೀಯಲ್ಲಿರುವ ಕಾನೂನನ್ನು ಬದಲಾಯಿಸಲೂ ಯುಕ್ತವಾದ ಕಾರಣವು ಕಂಡುಬಂದಿಲ್ಲವೆಂದು ಚೀಫ್ ಕೋರ್ಟಿನವರು ತಿಳಿಸಿರುವ ಅಭಿಪ್ರಾಯವನ್ನು ಸರ್ಕಾರದವರು ಅನುಮೋದಿಸಿ ರಿಕಾರ್ಡು ಮಾಡಿರತಕ್ಕ ಬಗ್ಗೆ.	0	0	3
57	ನಂ. ಎಫ್. ಎಲ್. 535-43-ಎಸ್. ಆರ್. 68-06-4, ತಾ|| 3—8—08.	ಸಂಸ್ಥಾನದಲ್ಲೆಲ್ಲಾ ತತ್ರಾಪಿ ಮಲೆನಾಡಿನಲ್ಲಿ ಇರುವ ಸಾರಾಯಿ ಅಂಗಡಿಗಳ ಸಂಖ್ಯೆಯನ್ನು ಕಮ್ಮಿ ಮಾಡಿದುದನ್ನು ಕುರಿತು ಎಕ್ಸೈಜು ಕಮಿಷನರವರು ಕಳುಹಿಸಿದ ರಿಪೋರ್ಟನ್ನು ರಿವ್ಯೂ ಮಾಡುವ ಬಗ್ಗೆ.	0	0	9
58	ನಂ. ಫೈ. 572-612-ಎಸ್. ಮತ್ತು ಎ. 594-07-04, ತಾ|| 4—8—08.	ಭೀಮಾ ಮಾಡಲು ಲಾಯಖಾಗಿರುವ ವಿಷಯದಲ್ಲಿ ಒಬ್ಬ ಮನುಷ್ಯನು ಒಂದು ಸರ್ಟಿಫಿಕೇಟನ್ನು ಹಾಜರಿಪಡಿಸಿದರೆ ಆ ಸರ್ಟಿಫಿಕೇಟಿನಿಂದಲೇ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 31 ಮತ್ತು 32ನೆ ಆರ್ಟಿಕಲ್‌ಗಳ ಪ್ರಕಾರ ಹಾಜರ್ಮಾಡಬೇಕಾದ ವಯಸ್ಸಿನ ಮತ್ತು ಆರೋಗ್ಯದ ಸರ್ಟಿಫಿಕೇಟಿನ ಉದ್ದೇಶಗಳೆಲ್ಲಾ ನೆರವೇರಲಾರವು ಆದುದರಿಂದ ಮೇಲ್ಕಂಡ ಆರ್ಟಿಕಲ್‌ಗಳಲ್ಲಿ ನಮೂದಿರುವ ಪ್ರಕಾರ ಒಂದು ಸರ್ಟಿಫಿಕೇಟನ್ನು ಪ್ರತ್ಯೇಕ ಹಾಜರ್ಪಡಿಸುವದು ಅವಶ್ಯಕವಾಗಿದೆ ಎಂಬತಕ್ಕ ಬಗ್ಗೆ.	0	0	3
59	ನಂ. ರೆ. 931-40—ಘಾ. 129-07-4, ತಾ|| 10—8—08.	ಮಲೆನಾಡಿನ ರೈತರು ಹೊನ್ನೆಮರವನ್ನು ವ್ಯವಸಾಯ ಮುಟ್ಟುಗಳಿಗೋಸ್ಕರ ಮುಫತ್ತಾಗಿ ತೆಗೆದುಕೊಳ್ಳುವಂತೆ ಹುಕುಂ ಮಾಡಬೇಕಾದ ಅವಶ್ಯಕತೆ ಇಲ್ಲನೆಂಬದನ್ನು ಕುರಿತು.	0	0	6
60	ನಂ. ಜು. 499-509-ಲೆಜಿಸ್ಲೇಟಿವ್. 18-07-2, ತಾ|| 13—8—08.	ಈ ಸಂಸ್ಥಾನದ ಮಲೆನಾಡು ತಾಲ್ಲೂಕುಗಳಲ್ಲಿರುವ ಬೇಸಾಯಗಾರರ ಅನುಕೂಲತೆಗಾಗಿ ಷಿಕಾರಿ ಲೈಸೆನ್ಸಿಗೆ ಕೊಡಬೇಕಾದ ರುಸುಮನ್ನು 5 ರೂಪಾಯಿಗಳಿಂದ 2 ರೂಪಾಯಿಗಳಿಗೆ ಇಳಿಸಬೇಕೆಂದು ಹುಕುಂ ಮಾಡುವ ಬಗ್ಗೆ.	0	0	3
61	ನಂ. ರೆ. 1049-50-ಘಾ. 135-06-5, ತಾ|| 17—8—08.	ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಜಂಗಲಿಗಳಲ್ಲಿ ನಡೆಸಲ್ಪಡುವ ಖನಿಜಾನ್ವೇಷಣ ಕಾರ್ಯದಲ್ಲಿಯೂ ಗಣಿಗಳ ಕೆಲಸದಲ್ಲಿಯೂ ಅಲ್ಲಿನ ಮರಗಳನ್ನು ಕಡಿದು ಸಾಗಿಸಿ ಅವುಗಳ ಬೆಳವಳಿಗೆಗೆ ಹಾನಿಯುಂಟಾಗುವದರಿಂದ ಆಗುವ ನಷ್ಟಕ್ಕೆ ನ್ಯಾಯವಾದ ಪ್ರತಿಫಲವು ಸರ್ಕಾರಕ್ಕೆ ಬರುವಂತೆ ಮಾಡುವ ಹಾಗೆ ಸಂಸ್ಥಾನದ ಖನಿಜ ಸಂಪತ್ತಿನ ಅಭಿವೃದ್ಧಿಗೆ ಅನವಶ್ಯಕವಾಗಿ ಕುಂದಕವನ್ನುಂಟುಮಾಡದೆ ಸದರಿ ಜಂಗಲಿಗಳಿಗೆ ಉಂಟಾಗುವ ನಷ್ಟಕ್ಕೆ ಕೊಡಬೇಕಾದ ಪ್ರತಿಫಲದ ಸರಿಯಾದ ದರವನ್ನು ಗೊತ್ತುಮಾಡಿರತಕ್ಕ ಬಗ್ಗೆ.	0	0	9
62	ನಂ. ರೆವಿನ್ಯೂ 1109-47-ಅಗ್ರಿಕಲ್ಚರ್ 17-07-102, ತಾ|| 19-8-08.	1907ನೆಯ ಇಸವಿಯ ಮೈಸೂರು ದಸರಾ ಮಹೋತ್ಸವ ಕಾಲದಲ್ಲಿ ನಡೆದ ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನದ ರಿಪೋರ್ಟನ್ನು ರಿವ್ಯೂ ಮಾಡತಕ್ಕ ಬಗ್ಗೆ.	0	0	9
63	ನಂ. ರೆ. 1098-107-ಫಾರೆಸ್ಟ್. 52-08—2, ತಾ|| 19—8—08	1903ನೆಯ ಮೇ 14ನೆಯ ಮರ್ಕುಂ 690-6768ನೆಯ ನಂಬರು ಇಸ್ತಿಹಾರ್ನಾಮೆಯ ಮೂಲಕ ಮಂಜೂರ್ಮಾಡಲ್ಪಟ್ಟ ಮರಗಳ ತರಗತಿವಾರ್ ವಿಂಗಡವನ್ನೇ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಬಿಳಿ ಜಾಲಿಯ ವಿಷಯವಾಗಿ ಸ್ವಲ್ಪ ಬದಲಾವಣೆಯೊಡನೆ ಇನ್ನೂ ಮೂರು ವರುಷಗಳ ಕಾಲ ಜಾರಿಯಲ್ಲಿಟ್ಟಿರತಕ್ಕದ್ದೆಂತ ವಿಧಿಸುವ ಬಗ್ಗೆ.	0	0	3

ಸೀರಿಯಲ್ ನಂಬರ್.	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.		
			ರೂ.	ಆ.	ಪೈ.
64	ನಂ. ಜ. 1215-9—ಜ. ಮಿ. 85-08-2, ತಾ|| 24—8—08.	1908ನೆ ಇಸವಿಯ ನವರಾತ್ರಿ ಮಹೋತ್ಸವ ಕಾಲದಲ್ಲಿ ಹಿಂದೂ ಅತಿಥಿಗಳನ್ನು ಬರಮಾಡಿಕೊಂಡು ಅವರಿಗೆ ಉಪಚಾರ ಮಾಡುವದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಲು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯಟ್ ಕಛೇರಿಯ ರಿಜಸ್ಟ್ರಾರಾದ ಮಿ|| ಸಿ. ವೆಂಕಟರಾವ್, ಬಿ. ಎ. ಯವರನ್ನು ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೊಕರರು ಮಾಡುವ ಬಗ್ಗೆ.	0	0	3
65	ನಂ. ರೆ. 1280-9½—ರೆ. ಮಿ. 310-07-2, ತಾ|| 25—8—08.	ಯಾವನೊಬ್ಬ ಜಮೀನ್ದಾರನಾಗಲೀ ತನ್ನ ಹಿಡುವಳಿ ಜಮೀನಿನ ಮೂಲಕ ಹರಿಯುತ್ತಿರುವ ಜಂಗಲಿಯ ಹೊಳೆಯ ನೀರನ್ನು ಸಾಗುವಳಿಗಾಗಿ ಉಪಯೋಗಿಸುವದಕ್ಕೋಸ್ಕರ ಅದಕ್ಕೆ ಕಟ್ಟೆಯನ್ನು ಹಾಕಿಸಿದಲ್ಲಿ ಆತನ ಕರ್ತವ್ಯಗಳು ಯಾವುವೆಂಬ ವಿಚಾರವಾಗಿ ಹುಕುಂ ಮಾಡುವ ಬಗ್ಗೆ.	0	0	3
66	ನಂ. ಜುಡಿಷಿಯಲ್ 627-29—ಪೋಲೀಸ್ 24-08-2, ತಾ|| 26—8—08	ಬೆಂಗಳೂರು ಸಿಟಿಯಲ್ಲಿಯೂ, ದಂಡಿನಲ್ಲಿಯೂ ನಡೆದ ಖೂನಿಗಳ ಸಂಬಂಧದಲ್ಲಿ ಸಿಟಿ ಪೋಲೀಸಿನವರ ನಡತೆಯ ವಿಚಾರವಾಗಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರವರು ಇಲಾಖೆಯ ಮುಖಾಂತರ ನಡೆಸಿದ ವಿಚಾರಣೆಯ ವಿಷಯದಲ್ಲಿ ಒಂದು ರಿಪೋರ್ಟು ನಿಸಿ ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರು ಜಾಹಿರ್ ಮಾಡಿದ 1908ನೆ ಇಸವಿ ಜುಲೈ 25ನೆ ಮರ್ಕುಂಮಿನ ಲೆಟರಿನ ಮೇಲೆ ಹುಕುಂ ಮಾಡುವ ಬಗ್ಗೆ.	0	1	9
67	ನಂ ಫೈ. 1017-8—ಸೆ. ರೆ. 36-08-4, ತಾ|| 26—8—08.	ಸ್ಟಾಂಪು ವೆಂಡರ್ಸ್ ಯಾನೆ ಸ್ಟಾಂಪು ಬಿಕರಿದಾರರ ಬಳಿಯು ಪ್ರಜಾಸಾಮಾನ್ಯದ ಬಳಿಯೂ ಉಪಯೋಗಿಸಲ್ಪಡದೆ ನಿಂತಿರುವ ಈಗಿನ ಮೂರುಕಾಸಿನ ಕಾಗದದ ದಾಸ್ತಾನನ್ನು ವಾಪಸು ತರಿಸಿಕೊಂಡು ಅದಕ್ಕೆ ಬದಲಾಗಿ ಹೊಸ ಕಾಗದವನ್ನು ಕೊಡಬೇಕೆಂದು ಸ್ಟಾಂಪು ಕಮಿಷನರವರು ಕೊಟ್ಟ ಸಲಹೆಯನ್ನು ಮಂಜೂರು ಮಾಡುವ ಬಗ್ಗೆ.	0	0	3
68	ನಂ. ರೆ. 1328-37—ಲ್ಯಾ. ರೆ. 457-07-2, ತಾ|| 27—8—08.	ಲ್ಯಾಂಡ್ ರೆವಿನ್ಯೂ ನಿಬಂಧನೆಗಳ ಪೈಕಿ 75ನೆಯ ನಿಬಂಧನೆಯು ಯಾವ ಯಾವ ಅಂಶಗಳಿಗೆ ಅನ್ವಯಿಸುವುದೆಂಬುದನ್ನು ವಿವರಿಸತಕ್ಕ ಬಗ್ಗೆ.	0	0	6
69	ನಂ. 906, ತಾ|| 28—8—08.	ಬೆಂಗಳೂರು ಮಾಮೂಲ್‌ಪೇಟೆಯಲ್ಲಿರುವ ಜಂಗಮ ಮಠ ಮತ್ತು ಅದಕೆ ಸಂಬಂಧಪಟ್ಟ ಎಲ್ಲಾ ಸ್ವತ್ತುಗಳನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಂಡು ಮಠಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಸರ್ಕಾರದವರ ವಿಚಾರಣೆಯಲ್ಲಿಟ್ಟುಕೊಳ್ಳುವ ಬಗ್ಗೆ.	0	0	6
70	ನಂ. ಜೆ. 759—ಪ್ರಿ. 61-07-6, ತಾ|| 7—9—08.	ಪ್ರತಿಯೊಬ್ಬ ತಕ್ಸೀರು ಸಾಬೀತಾದ ಕೈದಿಗೂ ದೇಹಸ್ಥಿತಿ ಲಾಯಖಾಗಿದ್ದರೆ ಅವನು ಜೈಲಿಗೆ ದಾಖಲಾದಾಗ ಪ್ಲೇಗು ಸಿಡುಬೆಬ್ಬಿಸಬೇಕೆಂದು ಒಂದು ನಿಬಂಧನೆಯನ್ನು ಜೈಲು ಮ್ಯಾನ್ಯುಯಲ್‌ನಲ್ಲಿ ಸೇರಿಸುವದನ್ನು ಮಂಜೂರ್ ಮಾಡುವ ಬಗ್ಗೆ.	0	0	3
71	ನಂ. ಜ. 1600-39—ಜ. ಮಿ. 1-08-2, ತಾ|| 7—9—08.	ಮುಜರಾಯಿ ಇಲಾಖೆಯನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯಟ್ ಕಛೇರಿಗೆ ಸೇರಿಸಿ, ಸದರಿ ಇಲಾಖೆಯ ಕಾರ್ಯ ನಿರ್ವಾಹ ಮತ್ತು ಆಡಳಿತಗಳ ಚಾರ್ಜಿನಲ್ಲಿರತಕ್ಕ ಬಾಬೆ ಮುಜರಾಯಿ ಸೂಪರಿಂಟೆಂಡೆಂಟರನ್ನು ನೊಕರರ್ಮಾಡಿ ಮುಜರಾಯಿ ವಿಷಯಗಳಲ್ಲಿ ಡೆಪ್ಯೂಟಿ ಕಮಿಷನರುಗಳೂ, ಇತರ ಸ್ಥಳಾಧಿಕಾರಿಗಳೂ, ಮುಜರಾಯಿ ಸೂಪರಿಂಟೆಂಡೆಂಟರೂ ಮತ್ತು ಸರ್ಕಾರ ಇವರುಗಳ ಅಧಿಕಾರಗಳನ್ನು ಕರ್ತವ್ಯಗಳನ್ನು ಕ್ಲುಪ್ತ ಮಾಡುವ ಬಗ್ಗೆ.	0	0	9

ಸೀರಿಯಲ್ ನಂಬರು.	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು	ವಿಷಯ.	ಕ್ರಯ.		
			ರೂ.	ಆ.	ಪೈ.
72	ನಂ. ರೆ. 1563-72—ರೆ. ಮಿ. 26-08-2, ತಾ॥ 7—9—08.	1907ನೆ ಸಂವತ್ಸರದಲ್ಲಿ ಆದ ಮಳೆಯ ರಿಪೋರ್ಟನ್ನು ವಿಮರ್ಶೆ ಮಾಡುವ ಬಗ್ಗೆ.	0	0	3
73	ನಂ. ರೆ. 1579-1619-ಲ್ಯಾ. ರೆ. 589-07-1, ತಾ॥ 7—9—0-.	ಸ್ಟೇಟ್ ಹುಜೂರು ಖಜಾನೆಯ ಆಡಳಿತವನ್ನು ಸರ್ಕಾರದ ಕಂಟ್ರೋಲರವರ ಮೇಲ್ವಿಚಾರಣೆಗೆ ಒಳಪಡಿಸಿ ಸದರಿ ಟ್ರೆಜರಿ ಆಫಿಸರನ್ನ ಕಂಟ್ರೋಲರವರ ತಾಬೇದಾರಿಯಲ್ಲಿರುವಂತೆ ನಿಯಮಿಸತಕ್ಕ ಬಗ್ಗೆ.	0	0	3
74	ನಂ. ರೆ. 1630-ಲ್ಯಾ. ರೆ. 97-08-2, ತಾ॥ 8—9—08.	1908ನೆ ಇಸವಿ ಜನವರಿ ಲಾಗಾಯಿತು ಜೂನ್ ಆಖೈರುವರೆಗಿನ ಕಾಲವನ್ನು ಒಳಕೊಂಡ 3ನೆ ಸರ್ವೆನಲ್ಲಿ ಶೀಕದಾರಿ ಸ್ಕೂಲಿನಲ್ಲಿ ನಡೆದ ಕೆಲಸ ವಿಷಯದ ರಿಪೋರ್ಟನ್ನು ವಿಮರ್ಶೆ ಮಾಡುವ ಬಗ್ಗೆ.	0	0	3
75	ನಂ. 2433—ಸ್ಯಾ. 15-08-3 ತಾ॥ 8—9—08.	ಮೈಸೂರು ಸಂಸ್ಥಾನದ ಸ್ಯಾನಿಟೆರಿ ಕಮಿಷನರವರ 1907ನೆ ಸಾಲಿನ ರಿಪೋರ್ಟಿನ ಮೇಲೆ ಆದ ರಿವ್ಯೂ.	0	0	3
76	ನಂ. 2487-500—ಮೆಡಿ. 18-07-31, ತಾ॥ 11—9—08.	ಲೋಕಲ್ ಫಂಡು ಆಸ್ಪತ್ರೆಗಳ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟರುಗಳಿಗೆ ಸದರಿ ಆಸ್ಪತ್ರೆಗೆ ಸೇರಿದ ಕಾಹಿಲೆ ಜನರ ವಾರ್ಡ್ಸನ್ನು ವಾಸಕ್ಕೆ ಉಪಯೋಗಿಸಿಕೊಳ್ಳಲು ಅವಕಾಶ ಕೊಡಬಹುದೆಂಬತಕ್ಕ ಬಗ್ಗೆ.	0	0	3
77	ನಂ. ರೆ. 1700-9—ಅಗ್ರಿ. 137-06-2, ತಾ॥ 11—9—08.	ಪ್ರತ್ಯೇಕವಾಗಿ ಫ್ಯಾಮಿನ್ ಕಮಿಷನರ್ ನೌಕರರೂ ಆಗಿದೆ ಇದ್ದ ಕಾಲದಲ್ಲಿ ಫ್ಯಾಮಿನ್ ಕೋಡು ಅನುಸರಿಸಿ ಕ್ಷಾಮ ಬಾರದಹಾಗೆ ಮುಂಜಾಗ್ರತೆ ಏರ್ಪಾಡು ಮಾಡುವದಕ್ಕೂ ಕ್ಷಾಮ ಪ್ರಾಪ್ತವಾದ ಕಾಲದಲ್ಲಿ ತನ್ನಿವಾರಣೆಗಾಗಿ ಜನಗಳಿಗೆ ಸಹಾಯ ಮಾಡಲು ತಕ್ಕ ಏರ್ಪಾಡು ಮಾಡುವದಕ್ಕೂ ಸಹಾ ರೆವಿನ್ಯೂ ಕಮಿಷನರವರೇ ಜವಾಬ್ದಾರರೆಂದು ಸರ್ಕಾರದವರು ಹುಕುಂ ಮಾಡಿರತಕ್ಕ ಬಗ್ಗೆ.	0	0	3
78	ನಂ. 2617-26-ಎಲ್. ಬಿ. 389-07-2, ತಾ॥ 12—9—08.	ಹಿಂದೂ ವೈದ್ಯಶಾಲೆಗಳ ಛಾರ್ಜಿನಲ್ಲಿರುವ ಪಂಡಿತರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ ಪ್ರಕಾರ ಫುಂಟಾಗುವ ಪ್ರಿವಿಲೇಜ್ ರಜಾ ವಗೈರೆ ಹಕ್ಕುಗಳನ್ನು ಕೊಡಲು ತಿರಸ್ಕರಿಸೋಣಾದ ಬಗ್ಗೆ.	0	0	3
79	ನಂ. 2660-700—ಮೆಡಿ. 191-07-4, ತಾ॥ 14—9—08.	ಮೈಸೂರು ಲೋಕಲ್ ಸರ್ವಿಸ್ ಮತ್ತು ಪ್ಲೀಡರ್ ಪರೀಕ್ಷೆಗಳ ನಿಬಂಧನೆಗಳ 11ನೆ ನಿಯಮದಲ್ಲಿ ವಿಧಾಯಕವಾಗಿರುವ ದೇಹಧಾರಢ್ಯ ಸರಟಫಿಕೇಟನ್ನು ಪರೀಕ್ಷೆಗೆ ಹೋಗುವವರು ಹಾಜರ್‌ಮಾಡುವುದು ಇನ್ನುಮೇಲೆ ಅವಶ್ಯಕವಿಲ್ಲವೆಂದು ಹುಕುಂ ಮಾಡುವ ಬಗ್ಗೆ.	0	0	3
80	ನಂ. 1783-91—ಲ್ಯಾ. ರೆ. 69-08-2, ತಾ॥ 14—9—08.	ಕಂದಾಯದ ಬಾಕೀಗಾಗಿ ನಡದ ಹರಾಜಿನಲ್ಲಿ ವಿಕ್ರಯದಾರನಿಗೆ ಆಯಾಂ ಕಾಲ ಮೀರಿಹೋದ ಜಮೀನು ಸುಫರ್ದು ಮಾಡಿದಲ್ಲಿ ಆ ಸಾಲಿನ ಕಂದಾಯ ಅವನು ಕೊಡಬೇಕೇ ಇಲ್ಲವೆ ಎಂಬ ವಿಷಯದಲ್ಲಿ ಹುಕುಂ ಮಾಡುವ ಬಗ್ಗೆ.	0	0	3
81	ನಂ. ರೆ. 1924-63—ಲ್ಯಾ. ರೆ. 92-08-6, ತಾ॥ 17—9—08.	ಇಲಾಖೆಗಳ ಮುಖ್ಯೋಸರುಗಳಿಗೆ ತಮ್ಮ ಇಲಾಖಾ ತಾಬೆದಾರಿ ನವುಕರರಿಗೆ ಪರೀಕ್ಷೆ ರಜಾ ಕೊಡುವ ಅಧಿಕಾರದ ವಿಷಯದ ಬಗ್ಗೆ.	0	0	3
82	ನಂ. 3079-87-ಮ್ಯು. 150-08-1, ತಾ॥ 22—9—08.	1906ನೆ ಇಸವಿ VIIನೆ ನಂಬರ್ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಪ್ರಕಾರ ಏರ್ಪಡಿಸಿರುವ ಬೆಂಗಳೂರು ಮತ್ತು ಮೈಸೂರು ಮ್ಯುನಿಸಿಪಾಲಿಟಿಗಳ ವಿಷಯ, ಇತರ ಮ್ಯುನಿಸಿಪಾಲಿಟಿಗಳಲ್ಲಿ ಮ್ಯುನಿಸಿಪಲ್ ಸಭೆಯ ಮೆಂಬರುಗಳನ್ನು ನಿಯಮಿಸತಕ್ಕ ಬಗ್ಗೆ.	0	0	3

ಸೀರಿಯಲ್ ನಂಬರ.	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.		
			ರೂ.	ಆ.	ಪೈ.
83	ನಂ. ಆರ್. 2036-96—ಎಲ್. ಆರ್. 585-07-11, ತಾ॥ 24—9—08	ಇರ್ರಿಗೇಷನ್ ಸೆಸ್ ಫಂಡ್ ಆಡಳಿತದ ವಿಷಯದಲ್ಲಿಯೂ ಅದಕ್ಕೆ ಸಂಬಂಧಪಟ್ಟ ಅಂದಾಜಾ ಪಟ್ಟಿಗಳನ್ನು ತಯಾರ್ಮಾಡತಕ್ಕ ವಿಷಯದಲ್ಲಿಯೂ ನಿಬಂಧನೆಯನ್ನು ವಿಧಿಸುವ ಬಗ್ಗೆ.	0	0	3
84	ನಂ. ಜಿ. 2129-65—ಜ. ಐ. 131-08-1, ತಾ॥ 24—9—08.	ಸರ್ಕಾರಿ ಆಫೀಸರುಗಳಿಗೆ ಕೊಟ್ಟಿರುವ ಸರ್ಕಾರಿ ಡೇರೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿರುವುದಕ್ಕೆ ನಿಯಮಗಳನ್ನ ವಿಧಿಸುವ ಬಗ್ಗೆ	0	0	6
85	ಕ್ಯಾಂಪ್ ನಂ. 1, ತಾ॥ 28—9—08.	1908ನೆಯ ನವಂಬರ್ 1ನೇ ತಾರೀಖಿನ ಲಾಗಾಯಿತು ಸಂಸ್ಥಾನದಲ್ಲಿಯ ಎಲ್ಲಾ ಸರ್ಕಾರಿ ಸ್ಕೂಲ್‌ಗಳಲ್ಲಿಯೂ ಕಾಲೇಜುಗಳಲ್ಲಿಯೂ ಮತ ಸಂಬಂಧವಾದ ಮತ್ತು ನೀತಿಬೋಧಕವಾದ ಶಿಕ್ಷಣವು ಜಾರಿಯಲ್ಲಿ ಬರುವಂತೆ ಹುಕುಂ ಮಾಡುವ ಬಗ್ಗೆ.	0	0	6
86	ಕ್ಯಾಂಪ್ ನಂ. ಜಿ. 1, ತಾ॥ 2-10-08.	ಮೈಸೂರಿನಲ್ಲಿ ಪ್ರಕಟವಾಗುತ್ತಿದ್ದ "ಜಗದ್ಗುರು" ಪತ್ರಿಕೆಯನ್ನು ಇನ್ನು ಮುಂದೆ ಪ್ರಕಟಿಸಕೂಡದೆಂದು ಹುಕುಂ ಮಾಡುವ ಬಗ್ಗೆ.	0	0	6
87	ನಂ. ಜೆ. 1047-49—ಕೋ. 261-07-1, ತಾ॥ 8—10—08.	ಸರ್ಕಾರದವರು ನಡೆಸುವ ಕ್ರಿಮಿನಲ್ ವ್ಯವಹರಣೆಗಳಲ್ಲಿ ಸಾಕ್ಷ್ಯ ಕೊಡಲು ಸಮನ್ ಮಾಡಲ್ಪಡುವ ಸರ್ಕಾರಿ ನೌಕರರಲ್ಲದ ಲಾ ಅಥವಾ ವೈದ್ಯದ ಕಸಬುದಾರರಿಗೆ 15 ರೂಪಾಯಿಗೆ ಮೀರದಂತೆ ಅಲೋವೆನ್ಸನ್ನು ಕೊಡಲು ಹುಕುಂ ಮಾಡುವ ಬಗ್ಗೆ.	0	0	3
88	ನಂ. 3519-29—ಮೆ. 297-05—31, ತಾ॥ 14—10—08.	ಸೂಲಗಿತ್ತಿಯರು ತಮ್ಮ ಹೆಡ್ ಕ್ವಾರಟರ್ ಜಾಗಾ ಬಿಟ್ಟು 5 ಮೈಲಿ ಫಾಸಲೆ ವಳಗೆ ರೋಗಿಗಳಿಗೆ ಚಿಕಿತ್ಸೆ ಮಾಡಬೇಕಾಗಿ ಬಂದು ಇವರ ಸಹಾಯವನ್ನು ಅಪೇಕ್ಷಿಸುವರಿಂದ ಫಂಡಿ ಒದಗಿಸಲ್ಪಡದೆ ಹೋಗುವ ಸಂದರ್ಭಗಳಲ್ಲಿ ಇವರುಗಳಿಗೆ ಮೈಲಿ ಒಂದಕ್ಕೆ ಎರಡಾಣೆಯಂತೆ ಮೈಲೇಜ್ ಭತ್ತಾ ಕೊಡಬೇಕೆಂದು ಸೀನಿಯರ್ ಸರ್ಜನ್‌ರವರು ಕೊಟ್ಟ ಸಲಹೆಯನ್ನು ಮಂಜೂರು ಮಾಡುವ ಬಗ್ಗೆ.	0	0	3
89	ನಂ. 3568-72—ವಿದ್ಯಾ. 2-08-2, ತಾ॥ 14—10—08.	ಮೈಸೂರು ದೇಶದ ಲಿಂಗಾಯಿತ ಜನರ ವಿದ್ಯಾಭಿವೃದ್ಧಿಗಾಗಿ ಒಂದು ಲಕ್ಷ ರೂಪಾಯಿನ ವರಿಗೂ ಸರ್ಕಾರ ಖಜಾನೆಯಲ್ಲಿ ರಿಯಾಯಿತಿ ದರ ಬಡ್ಡಿ ಮೇಲೆ ಡಿಪಾಜಿಟ್ ಇಡಲೂ ಅವಕಾಶ ಕೊಡಬೇಕೆಂದು ಬೆಂಗಳೂರಲ್ಲಿರುವ ಮೈಸೂರು ಲಿಂಗಾಯಿತ್ ಎಜುಕೇಷನ್ ಫಂಡಿನ ಪ್ರೆಸಿಡೆಂಟರು ಕೋರಿದುದರ ಮೇಲೆ ಸರ್ಕಾರದವರು ಮಾಡಿದ ಹುಕುಂ.	0	0	3
90	ನಂ. ರೆ. 2291—ರೆ. ಮಿ. 225-07-6, ತಾ॥ 15—10—08.	ಗುಬ್ಬಿ ತಾಲ್ಲೂಕು ಸೋಮಲಾಪುರ ದಾಖಲೆ ಗ್ರಾಮದ ಪಟೇಲಿ ವಿಷಯದಲ್ಲಿ ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರವರು ಮಾಡಿದ್ದ ಹುಕುಮನ್ನು ರದ್ದುಮಾಡಿ 3ನೆ ಅಪೀಲ್ ವಾದಿ ರಂಗೆಗೌಡನ ಹೆಸರಿನಲ್ಲಿ ಸದರಿ ಗ್ರಾಮದ ಪಟೇಲಿ ಕೆಲಸವನ್ನು ರಿಜಿಸ್ಟರ್ ಮಾಡುವ ಬಗ್ಗೆ.	0	0	6
91	ನಂ. ಜುಡಿಷಲ್ 17—ಲೆಜಿಸ್. ತಾ॥ 15-10—08.	ಸರ್ಕಾರದವರು ನ್ಯಾಯವಿಧಾಯಕ ಸಭೆಗೆ ನೇಮಿಸುವ ಬಗ್ಗೆ ಪ್ರಜಾ ಪ್ರತಿನಿಧಿ ಸಭೆಯವರು ತಮ್ಮ ಪೈಕಿ ಇಬ್ಬರನ್ನು ಚುನಾಯಿಸುವುದನ್ನು ಮುಂದಿನ ವರುಷ ಸರ್ಕಾರದವರು ಇಸ್ತಿಹಾರ್ನಾಮೆಯ ಮೂಲಕ ಪ್ರಕಟಿಸುವ ತಾರೀಖಿನಲ್ಲಿ ನಡೆಸಬಹುದೆಂದು ಹುಕುಂ ಮಾಡುವ ಬಗ್ಗೆ.	0	0	3

ಸರಣಿಯ ನಂಬರು.	ಪ್ರೊಸೀಡಿಂಗ್ಸ ನಂಬರ ಮತ್ತು ತಾರೀಖು.	ವಿಷಯ.	ಕ್ರಯ. ರೂ. ಆ. ಪೈ.
92	ನಂ. 3643-4-ವಿದ್ಯಾ. 274-07-6, ತಾ|| 17—10—08.	ವಿದ್ಯಾ ಇಲಾಖೆಯ ಬಡ್ಜೆಟ್ಟಿನಲ್ಲಿ ಗ್ರಂಥ ಕರ್ತರ ಪ್ರೋತ್ಸಾಹಕ್ಕಾಗಿ ದಾಖಲಾಗಿರುವ ಮೊಬಲಗನ್ನು ವಿದ್ಯಕ್ಕೆ ಸಂಬಂಧಪಟ್ಟ ಗ್ರಂಥಗಳಿಗೆ ಮಾತ್ರವೇ ಉಪಯೋಗಿಸಬೇಕೆಂತ ಹುಕುಂ ಮಾಡುವ ಬಗ್ಗೆ.	0 0 3
93	ನಂ. 92-96-ಮುಜರೈ. 54-08-1, ತಾ|| 27—10—08.	ಅರಮನೆ ವಿಚಾರಣೆಯಲ್ಲಿರುವ ಮುಜರೈ ಧರ್ಮಶಾಲೆಗಳ ಆಡಳಿತ ಮತ್ತು ಮೇಲ್‌ವಿಚಾರಣೆಯನ್ನು ಮುಜರೈ ಇಲಾಖೆಯಿಂದ ತಪ್ಪಿಸಿ ಅರಮನೆ ಇಲಾಖೆದವರೇ ಇಟ್ಟುಕೊಂಡು ಇರತಕ್ಕ ಬಗ್ಗೆ.	0 0 3
94	ನಂ. ರೆ. 2496-505—ವ್ಯವಸಾಯ. 38-08-4, ತಾ|| 28—10—08.	1908—09ನೆ ಸಾಲಿನಲ್ಲಿ (1) ಸಾಗುವಳಿ ಭಾವಿ ಸಾಲಕ್ಕೂ (2) ಲ್ಯಾಂಡ್ ಇಂಪ್ರೂವ್‌ಮೆಂಟ್ ರೆಗ್ಯುಲೇಷನ ಪ್ರಕಾರ ಜಮೀನು ಅಭಿವೃದ್ಧಿ ಸಾಲಕ್ಕೂ (3) ತಕಾವಿ ಅಡ್ವಾನ್ಸಿಗೂ ಎಲ್ಲಾ ಡಿಸ್ಟ್ರಿಕ್ಟುಗಳಿಗೆ ಒಟ್ಟು 90,750 ರೂಪಾಯಿಗಳನ್ನು ಹಂಚಿಕೆ ಮಾಡಿಕೊಡುವದಕ್ಕೂ ಮತ್ತು ಸಾಲಗಳ ವಿಷಯದಲ್ಲಿ ರೆವಿನ್ಯೂ ಹುದ್ದೇದಾರರಿಗೆ ಕೆಲವು ಸಂಗತಿಗಳನ್ನು ತಿಳಿಯಪಡಿಸುವದಕ್ಕೂ ಹುಕುಂ ಮಾಡುವ ಬಗ್ಗೆ.	0 0 3
95	ನಂ. 101-10-ಮುಜರೈ. 68-08-2, ತಾ|| 29—10—08.	ಮಠಗಳ ಬಿರದಾವಳಿಗಳ ಸಂಬಂಧವಾದ ವಿವಾದಗಳನ್ನು ಸರ್ಕಾರದವರು ತೀರ್ಪು ಮಾಡತಕ್ಕ ಬಗ್ಗೆ.	0 0 6
96	ನಂ. ರೆ. 2518—ಘಾ. 7-08-2, ತಾ|| 29—10—08.	ಅಮೃತ ಮಹಲ್ ಇಲಾಖೆಯ 1907-08ನೆ ಸಾಲಿನ ರಿಪೋರ್ಟನ್ನು ವಿಮರ್ಶೆ ಮಾಡತಕ್ಕ ಬಗ್ಗೆ.	0 0 3
97	ನಂ. ಫೈ. 2022-9—ಸ. ರೆ. 54-08-2 ತಾ|| 31—10—08.	ಒಂದು ಸಾಲವನ್ನು ಎರಡು ಅಥವಾ ಹೆಚ್ಚು ಭಾಗವಾಗಿ ಮಾಡಿಕೊಂಡು ಆಯಾ ಭಾಗಕ್ಕೆ ಪ್ರತ್ಯೇಕವಾಗಿ ದಸ್ತೈವಜುಗಳನ್ನು ಬರೆದುಕೊಡುವುದರ ಮೂಲಕ ಕೊಂಚ ಸ್ಟ್ಯಾಂಪು ಫೀ ಉಳಸಿಕೊಳ್ಳುವುದು ಸ್ಟ್ಯಾಂಪು ರೆಗ್ಯುಲೇಷನಿಗೆ ವಿರೋಧವಲ್ಲವೆಂದು ಹುಕುಂ ಮಾಡುವ ಬಗ್ಗೆ.	0 0 3
98	ನಂ. 2541-51-ಅಗ್ರಿ. 69-08-6, ತಾ|| 31—10—08.	ಮಳೆಬೆಳೆ ಇಲ್ಲದೆ ಕಾಲಸ್ಥಿತಿಯೂ ಕೆಟ್ಟುಹೋಗಿರುವ ಕಾರಣ ಕುಡಿಯುವ ನೀರಿನ ಭಾವಿಗಳ ಮೊದಲಾದ ಸರ್ವಜನೋಪಯುಕ್ತವಾದ ಕಾಮಗಾರಿಗಳಿಗಾಗಿ ಲೋಕಲ್ ಫಂಡಿನಿಂದ 20,000 ರೂಪಾಯಿಗಳನ್ನು ಸಣ್ಣ ಕೆರೆಗಳಿಗೆ ಮಟ್ಟು ಕಾಮಗಾರಿ ಮಾಡಿಸುವದಕ್ಕೋಸ್ಕರ ರೈತರಿಗೆ ಅಡ್ವಾನ್ಸು ಕೊಡುವದಕಾಗಿ 1,00,000 ರೂಪಾಯಿಗಳನ್ನು ಮಂಜೂರ್ಮಾಡುವ ಬಗ್ಗೆ.	0 0 3
99	ನಂ. ರೆ. 2584-92-ಅಗ್ರಿ. 41-08-45, ತಾ|| 3—11—08.	ಕಾಲಸ್ಥಿತಿ ಮಳೆ ವಗೈರೆಗಳನ್ನು ಕುರಿತು ಪ್ರತಿದಿನವೂ ಸರ್ಕಾರದವರಿಗೆ ರಿಪೋರ್ಟು ಜಾಹಿರ್ ಮಾಡಬೇಕಾದ ಪ್ರಕೃತವಿಲ್ಲವೆಂದು ನಮೂದಿಸಿ ಕಾಲಸ್ಥಿತಿಯಲ್ಲಿ ವಿಶೇಷ ವ್ಯತ್ಯಾಸಗಳು ಕಂಡುಬಂದಾಗ ಪ್ರತ್ಯೇಕವಾಗಿ ಒಂದು ರಿಪೋರ್ಟನ್ನು ಜಾಹಿರ್ಮಾಡಬೇಕೆಂದು ಹುಕುಂ ಮಾಡುವ ಬಗ್ಗೆ.	0 0 3
100	ನಂ. ಜು. 1237-47-ಕೋ. 83-08-2, ತಾ|| 3—11—08.	ಎಳೇ ಶಿಶುಗಳನ್ನು ಕೊಂದ ತಾಯಿಯರ ಮೇಲೆ ಖೂನಿ ತಕ್ಸೀರು ಸಾಬೀತಾಗುವ ಮೊಕದ್ದಮೆಗಳಲ್ಲಿ ಕಾನೂನು ಮೇರೆಗೆ ವಿಧಾಯಕವಾದ ಶಿಕ್ಷೆಯನ್ನು ಕಮ್ಮಿಮಾಡುವದು ಯುಕ್ತವೇ ಅಲ್ಲವೆ ಎಂಬ ಭಾಗದಲ್ಲಿ ಚೀಫ್ ಕೋರ್ಟಿನ ಮುಖಾಂತರ ಸರ್ಕಾರದವರು ಹುಕುಂ ಪಡೆಯತಕ್ಕ ಬಗ್ಗೆ.	0 0 3
101	ನಂ. 164-5—ಮು. 13-08-2, ತಾ|| 9—11—08.	ತೀರ್ಥಹಳ್ಳಿಯಲ್ಲಿರುವ ಶ್ರೀಮಾಧವ ಸ್ವಾಮಿ ದೇವಸ್ಥಾನದಲ್ಲಿ ಬಾಬುವಾರು ಖರ್ಚಿನ ದರವನ್ನು ಗೊತ್ತು ಮಾಡುವ ಬಗ್ಗೆ.	0 0 6

ಸೀರಿಯಲ್ ನಂಬರ	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯ.	ಕ್ರಯ.
			ರೂ. ಆ. ಪೈ.
102	ನಂ. 186-7—ಮು. 112-08-2, ತಾ|| 10—11—08.	ತಿರುನಕ್ಷತ್ರ ಮತ್ತು ಸೇವಾರ್ಥ ದಿನಗಳಲ್ಲಿ ಜೀಯರ ವಿಗ್ರಹವನ್ನು ತಿರುಮಕೂಡಲು ನರಸೀಪುರದ ಬೀದಿಗಳಲ್ಲಿ ಉತ್ಸವದಿಂದ ತೆಗೆದುಕೊಂಡು ಹೋಗುವ ವಿಚಾರದಲ್ಲಿ ಹುಕುಂ ಮಾಡುವ ಬಗ್ಗೆ.	0 0 3
103	ನಂ. ರೆ. 3149-51—ಲ್ಯಾ. ರೆ. 41-08—2, ತಾ|| 20—11—08.	ಚಳ್ಳಕೆರೆ ತಾಲ್ಲೂಕಿನಲ್ಲಿರುವ ತಿಪ್ಪಯ್ಯನ ಕೋಟೆ ಕೆರೆಯ ಕೆಳಗಿರುವ ಹೊಸಹಳ್ಳಿ ಗ್ರಾಮದ ಜಮೀನುಗಳಿಗೆ ರಿವಿಜನ್ ಸೆಟ್ಲ್‌ಮೆಂಟ್ ಕಾಲದಲ್ಲಿ ವಿಧಿಸಿದ ಕಂದಾಯದ ದರಗಳನ್ನು ಸದರಿ ಜಮೀನುಗಳಿಗೆ ಕ್ರಮವಾಗಿ ನೀರುಸರಬರಾಯಿ ಆಗುವಂತೆ ಏರ್ಪಾಡು ಮಾಡುವ ವರೆಗೂ ಜಾರಿಯಲ್ಲಿ ತರಕೂಡದೆಂದು ಅಪ್ಪಣೆ ಮಾಡುವ ಬಗ್ಗೆ.	0 0 3
104	ನಂ. ಆರ್. 3218-9-ಆರ್. ಎಂ. 22-06-9, ತಾ|| 21—11—08.	ಕುಣಿಗಲ್ ತಾಲ್ಲೂಕಿಗೆ ಸಂಕೇನಪುರದ ಅಣೆಯ ಕೆಳಗೂ ಅದಕ್ಕೆ ಸೇರಿದ 8 ಸಾಲು ಕೆರೆಗಳ ಕೆಳಗೂ ಜಮೀನನ್ನು ಪಡೆದಿರುವ ರೈತರುಗಳಿಂದ ಸಾಲಿಯಾನಾ ಎಕರೆ 1ಕ್ಕೆ 8 ಆಣೆ ರುಸುಮನ್ನು ವಸೂಲ್ ಮಾಡಬಹುದೆಂದೂ ಮಂಜೂರ್ ಮಾಡಿ ಇನ್ನು ಮುಂದೆ ಈ ನೀರಾವರಿ ಕಾಮಗಾರಿಗಳನ್ನು ಸರಿಯಾದ ದುರಸ್ತಿನಲ್ಲಿಟ್ಟಿರುವ ಕೆಲಸವನ್ನು ಮರಹಮ್ಮತ್ ಇಲಾಖೆಯವರು ನಡೆಸಬೇಕೆಂದು ಹುಕುಂ ಮಾಡುವ ಬಗ್ಗೆ.	0 0 3
105	ನಂ. ರೆ. 3198-9—ಥಾ. 153-07-5, ತಾ|| 21—11—08.	ಆಯಾ ಗ್ರಾಮಗಳಲ್ಲಿ ಪಾಠಶಾಲಾ ಕಟ್ಟಡಗಳನ್ನು ಕಟ್ಟಿಸುವ ರೈತರಿಗೆ ಟಿಂಬೀನೆಯನ್ನು ಬಿದರನ್ನು ಅರ್ಧ ಖರೀದಿಗೆ ಕೊಡಲು ಮಂಜೂರು ಮಾಡುವ ಬಗ್ಗೆ.	0 0 3
106	ನಂ. ಆರ್. 3319-28-ಅಗ್ರಿ. 38-08-9, ತಾ|| 25—11—08.	ಸಂಸ್ಥಾನದ ತಮಾಂ ಡಿಸ್ಟ್ರಿಕ್ಟುಗಳಲ್ಲಿಯೂ ತಕಾವಿ ವಗೈರೆ ಸಾಲಗಳನ್ನು ಕೊಡುವ ಬಗ್ಗೆ ಮೊದಲು ಮಂಜೂರಾದ ಮೊಬಲಗಿನ ಜತೆಗೆ ಮತ್ತೊಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವ ಬಗ್ಗೆ.	0 0 3
107	ನಂ. ರೆ. 3309-18—ಅಗ್ರಿ. 62-08-6, ತಾ|| 25—11—08.	ದುರ್ಭಿಕ್ಷ ಪ್ರಾಪ್ತವಾದ ಜಾಗಗಳಲ್ಲಿ ನೇಯಿಗೆಯವರು ಮುಂತಾದ ಕೈಗಾರಿಕೆ ಕೆಲಸಗಾರರಿಗೆ ಹಣ ಸಾಲಕೊಡುವ ಉದ್ದೇಶ್ಯ 27,000 ರೂಪಾಯಿ ಮೊಬಲಗು ಮಂಜೂರ್ಮಾಡುವ ಬಗ್ಗೆ.	0 0 3
108	ನಂ. ರೆ. 3383-92—ವ್ಯವಸಾಯ. 69-08-7, ತಾ|| 28—11—08.	ಸಂಸ್ಥಾನದಲ್ಲಿ ದುರ್ಭಿಕ್ಷವು ಪ್ರಾಪ್ತವಾಗಿರುವ ಪ್ರದೇಶಗಳಲ್ಲಿ ಕುಡಿಯುವ ನೀರಿನ ಭಾವಿಗಳನ್ನು ಕಟ್ಟಿಸುವುದಕ್ಕೂ ಜನರಿಗೆ ಉಪಯುಕ್ತವಾದ ಇತರ ಕೆಲಸಗಳಿಗೂ ಇದುವರೆಗೆ ಮಂಜೂರು ಮಾಡಿರುವ ಹಣದ ಜತೆಗೆ ಇನ್ನೂ 50,000 ರೂಪಾಯಿಗಳನ್ನು ಹೆಚ್ಚಾಗಿ ಮಂಜೂರ್ ಮಾಡುವ ಬಗ್ಗೆ.	0 0 3
109	ನಂ. 3523—ಲ್ಯಾ. ರೆ. 160-08-2, ತಾ|| [illegible]—12—08.	ಪಹಣಿ ತಖ್ತೆ ತಯಾರ್ಮಾಡತಕ್ಕ ವಿಷಯದಲ್ಲಿ ರೆವಿನ್ಯೂ ಕಮಿಷನರವರು ಹೆಚ್ಚು ಅಂಶಗಳನ್ನು ಸಮೂದಿಸಿ ಕೊಟ್ಟ ಸರ್ಕ್ಯುಲರ್ ಮಂಜೂರು ಮಾಡತಕ್ಕ ಬಗ್ಗೆ.	0 0 3
110	ನಂ. ರೆ. 3530-8—ಫಾರೆಸ್ಟ್ 47-08—5, ತಾ|| 3—12—08.	ಸಿಂಗರಾಟೋಯಿ ದೊಡ್ಡಿ ಗ್ರಾಮದ ರೈತರಿಗೆ ಮನೆಕಟ್ಟುವದಕ್ಕೆ ಮುಫತ್ತಾಗಿ ಮರಸಾಮಾನುಗಳನ್ನ ಮಂಜೂರು ಮಾಡತಕ್ಕ ಬಗ್ಗೂ ಇಂಥಾ ಸಂದರ್ಭಗಳಲ್ಲಿ ಸಾವಕಾಶ ಮಾಡದೆ ಅರ್ಜಿಗಳನ್ನು ಕಳುಹಿಸಬೇಕೆಂತಲೂ ಹುಕುಂ ಮಾಡತಕ್ಕ ಬಗ್ಗೆ.	0 0 3
111	ನಂ. ರೆ. 3695-3703—ವ್ಯವ. 64-08-4, ತಾ|| 10—12—08.	1907—08ನೆ ಸಾಲಿನಲ್ಲಿ ಮೈಸೂರು ಸೀಮೆಯಲ್ಲಿ ರಾಸುಗಳೊಳಗೆ ಉಂಟಾದ ಮರಣ ಸಂಖ್ಯೆಯನ್ನು ಕುರಿತು ರೆವಿನ್ಯೂ ಕಮಿಷನರವರು ವಿಮರ್ಶೆ ಮಾಡಿರುವುದನ್ನು ಕೆಲವು ಷರಾಗಳೊಡನೆ ರಿಕಾರ್ಡು ಮಾಡತಕ್ಕ ಬಗ್ಗೆ.	0 0 3

ಸೀರಿಯಲ್ ನಂಬರ	ಪ್ರೊಸೀಡಿಂಗ್ಸ್ ನಂಬರ ಮತ್ತು ತಾರೀಖು.	ವಿಷಯ.	ಕ್ರಯ.
			ರೂ. ಆ. ಪೈ.
112	ನಂ. 418-ಮುಜರಾಯಿ. 4-08-14, ತಾ|| 11—12—08.	ಮೈಸೂರು ಆಯುರ್ವೇದ ಪಾಠಶಾಲೆಯಲ್ಲಿ ಅಭ್ಯಾಸ ಮಾಡತಕ್ಕ ಕ್ರಮದ ವಿಚಾರವಾಗಿ ಸರ್ಕಾರದವರು ಅಜಮಾಯಿಷಿ ತರೀಕ್ ಪಟ್ಟಿಯಲ್ಲಿ ಕಂಡಂತೆ ಅನುಸರಿಸತಕ್ಕದ್ದೆಂದು ಹುಕುಂ ಮಾಡಿರುತ್ತಾರೆ.	0 0 6
113	ನಂ. ಜುಡಿಷಿಯಲ್. 1689-ಕೋರ್ಟ್ಸ್. 133-08-3, ತಾ|| 12—12—08	1907—08ನೆ ಸಾಲಿನ ಮೈಸೂರು ಸಿವಿಲ್ ಕೋರ್ಟುಗಳ ಆಡಳಿತ ವಿಷಯಕವಾದ ರಿಪೋರ್ಟನ್ನು ಪುನರ್ವಿಮರ್ಶೆ ಮಾಡತಕ್ಕ ಬಗ್ಗೆ.	0 0 6
114	ನಂ. ರೆ. 3742-3—ವ್ಯವಸಾಯ. 81-08-2, ತಾ|| 12—12—08.	ದುರಸ್ತಾದ ದೊಡ್ಡ ಕೆರೆಗಳಿಗೆ ಮಟ್ಟುಕಾಮಗಾರಿ ಮಾಡಿಸುವದಕ್ಕೆ ರೈತರೇ ಬದ್ಧರಾಗಿದ್ದಾಗ್ಯೂ ಕಾಲಸ್ಥಿತಿ ಕೆಟ್ಟುಹೋದ್ದರಿಂದಲಾಗಲಿ ಇತರ ಮತ್ಯಾವುದಾದರೂ ಅನಿವಾರ್ಯ ಕಾರಣಗಳಿಂದಲಾಗಲಿ ಅವರಿಗೆ ಸದರಿ ಕಾಮಗಾರಿಯನ್ನು ಮಾಡಿಸುವದಕ್ಕೆ ಶಕ್ತಿ ಇಲ್ಲದ ಸಂದರ್ಭಗಳಲ್ಲಿಯೂ ಅಥವಾ ಅಂಥಾ ಕಾಮಗಾರಿಗಳನ್ನು ಮಾಡಿಸಿದರೆ ಅಲ್ಲಿನ ಬಡಜನರಿಗೆ ಸಹಾಯ ಉಂಟಾಗಬಹುದಾದ ಸಂದರ್ಭಗಳಲ್ಲಿಯೂ ಸದರಿ ಮಟ್ಟು ಕಾಮಗಾರೀ ಬಗ್ಗೆ ರೈತರಿಗೆ ಸಾಲಾ ಕೊಡುವಂತೆ ಅಧಿಕಾರ ಕೊಡುವ ಬಗ್ಗೆ.	0 0 3
115	ನಂ. ರೆ. 3747-56—ರೆ. ಮಿ. 71-08—3, ತಾ|| 12—12—08.	ಮಳೆಬೆಳೆ ಇಲ್ಲದೆ ಪೈರು ಕೆಟ್ಟು ಹೋಗಿರುವ ಸ್ಥಳಗಳಲ್ಲಿ ಶಾನುಭೋಗರಿಗೂ, ಪಟೇಲರಿಗೂ ಡೆಪ್ಯುಟಿ ಕಮಿಷನರಿಗೆ ಯುಕ್ತ ತೋರುವಂತೆ ಮೂರು ತಿಂಗಳಿಗೊಂದಾವರ್ತಿ ಪೋಟಗಿಯನ್ನು ಅಡ್ವಾನ್ಸಾಗಿ ಕೊಡಬಹುದೆಂದು ಹುಕುಂ ಮಾಡುವ ಬಗ್ಗೆ.	0 0 3
116	ನಂ. ರೆ. 3913-23—ವ್ಯವ. 42-08-4, ತಾ|| 18—12—08.	1907—08ನೆ ಸಾಲಿಗೆ ಮೈಸೂರು ಸೀಮೆಯ ಅಗ್ರಿಕಲ್ಚರಲ್ ಕೆಮಿಸ್ಟರವರು ಬರೆಸಿದ ರಿಪೋರ್ಟನ್ನು ಪುನರ್ವಿಮರ್ಶೆ ಮಾಡುವ ಬಗ್ಗೆ.	0 0 3
117	ನಂ. ಜ. 4206-17-ಜ. ಮಿ. 208-8-5, ತಾ|| 21—1—09.	ಮುಖ್ಯವಾದ ಸರ್ಕಾರಿ ಹುಕುಂಗಳ ಮತ್ತು ಇತರ ಸರ್ಕಾರಿ ಕಾಗದ ಪತ್ರಗಳ ಕನ್ನಡ ನಕಲುಗಳನ್ನು ಬಿಕರಿ ಮಾಡಬೇಕೆಂದು 1908ನೆ ಇಸವಿ ಜನವರಿ 24ನೆ ತಾರೀಖಿನ ಜ. 4320-61—ಜ. ಮಿ 174-07-4ನೆ ನಂಬರ್ ಸರ್ಕಾರಿ ಹುಕುಂನಲ್ಲಿ ಮಂಜೂರಾದ ಹಂಗಾಮಿ ಏರ್ಪಾಡನ್ನು 1908—09ನೆ ಸಾಲಾಖೈರ್ ವರಿಗೂ ಜಾರಿಯಲ್ಲಿಟ್ಟು ಪರೀಕ್ಷಿಸಬೇಕೆಂದುನ್ನು ಬಿಕರಿಗೆ ದೊರಿಯುವ ಇಂಥಾ ಹುಕುಂಗಳ ಪಟ್ಟಿಗಳನ್ನು ಸರ್ಕಾರಿ ಕನ್ನಡ ಗೆಜೆಟ್ಟಿನಲ್ಲಿಯೂ ಆಗಿಂದಾಗ್ಯೆ ಪ್ರಾಯಿಷ್ ಮಾಡಬೇಕೆಂದು ಹುಕುಂ ಮಾಡುವ ಬಗ್ಗೆ.	0 0 3
118	ನಂ. 4422-30-ಜಿ. ಎಂ. 87-08-130, ತಾ|| 30—1—09.	ಸುಭಾಷಣಿ ಎಂಬ ಮಾಸಪತ್ರಿಕೆಯನ್ನು ಮುಂದೆಯೂ ತಯಾರಿಸಿ ಪ್ರಚುರಪಡಿಸುವುದಕ್ಕೂ ಅದನ್ನು ಮೈಸೂರಿನಲ್ಲಿರುವ ಕರ್ರ್ನಿ ಪ್ರೆಸ್ ಎಂಬ ಛಾಪಖಾನೆಯಲ್ಲಿ ಛಾಪಿಸುವುದಕ್ಕೂ ಮೈಸೂರು ವರ್ತಮಾನಪತ್ರಿಕೆಗಳ ರೆಗ್ಯುಲೇಷನಿನ ಮೇರೆಗೆ ಅಪ್ಪಣೆ ಕೊಡಬೇಕೆಂದು ಚನ್ನಪಟ್ಣದ ಮಿ|| ಎಸ್. ಎಸ್. ಶರ್ಮ ಎಂಬುವರು ಗುಜರಾಯಿಸಿಕೊಂಡ ಅರ್ಜಿಯ ಮೇಲೆ ಹುಕುಂ ಮಾಡುವ ಬಗ್ಗೆ.	0 0 6
119	ನಂ. ರೆ. 5505-45-ವ್ಯವ. 122-08-2, ತಾ|| 1—2—09.	ಕ್ಷಾಮ ನಿವಾರಣೆಗಾಗಿ ಖರ್ಚಾಗುವ ಮೊಬಲಗನ್ನು ಕ್ರಮಪಡಿಸುವ ವಿಷಯದಲ್ಲಿ ಕಂಟ್ರೋಲರವರು ಕೊಟ್ಟ ಸಲಹೆಯ ಮೇಲೆ ಆದ ಹುಕುಂ.	0 1 6

ಸೀರಿಯಲ್ ನಂಬರ್.	ಪ್ರೊಸೀಡಿಂಗ್ಸ್ ನಂಬರ್ ಮತ್ತು ತಾರೀಖು.	ವಿಷಯು.	ಕ್ರಯು.
			ರೂ. ಆ. ಪೈ.
120	ನಂ. ರೆ. 5647-86—ಲ್ಯಾ. ರೆ. 221-08-1, ತಾ॥ 1—2—09.	ಟವಾಲು ಮೂಲಕ ಕಳುಹಿಸಲ್ಪಡುವ ಅರ್ಜಿಗಳ ವಿಷಯದಲ್ಲಿ ಅಂಥಾ ಅರ್ಜಿಗಳು ಯಾರಿಗೆ ಬರೆದುಕೊಳ್ಳಲ್ಪಟ್ಟಿರುತ್ತೊ ಅಂಥಾ ಆಫೀಸರಿಗೆ ಸೇರಿ ಇರುತ್ತೆಂಬದನ್ನು ಅರ್ಜಿದಾರ್ರುಗಳಿಗೆ ತಿಳಿಸತಕ್ಕ ಬಗ್ಯೆ ರಶೀತಿಗಳನ್ನ ಕೊಡತಕ್ಕದ್ದೆಂದು ಹುಕುಂ ಮಾಡುವ ಬಗ್ಗೆ.	0 0 3
121	ನಂ. 5828-9-ಫಾರೆಸ್ಟ್. 143-08-1, ತಾ॥ 6—2—09.	ಕರಡಿಬೆಟ್ಟ ಮತ್ತು ಬೆಳಂದೂರು ಜಂಗಲಿಗಳಿಂದ ಬೆಲ್ಲ ತಯಾರು ಮಾಡುವುದಕ್ಕಾಗಿ ತೆಗೆದುಕೊಂಡು ಹೋಗುವ ಸಾಮೆಯ ಮೇಲಿನ ತೆರಿಗೆಯನ್ನು ಛಂಡಿ ಒಂದಕ್ಕೆ 2 ಆಣೆಗೆ ತಗ್ಗಿಸಿ ಇದೆ ಎಂದು ಹುಕುಂ ಮಾಡತಕ್ಕ ಬಗ್ಗೆ.	0 0 3
122	ನಂ. ರೆ. 5865-6-ಜಂಗ್ಲಿ. 146-08-1, ತಾ॥ 9—2—09.	ಸೊರಬ, ಸಾಗರ ಮತ್ತು ಶಿಕಾರಿಪುರದ ತಾಲ್ಲೂಕುಗಳಲ್ಲಿ ನೇಗಲುಗಳಿಗಾಗಿಯೂ, ವ್ಯವಸಾಯದ ಮುಟ್ಟುಗಳಿಗಾಗಿಯೂ ಹೊನ್ನೆ ಮರಗಳ ತುದಿಗಳನ್ನು ಕೊಂಬೆಗಳನ್ನು ಮುಫತ್ತಾಗಿ ಕೊಡುವ ವಿಚಾರವಾಗಿ ಪ್ರಜಾಪ್ರತಿನಿಧಿ ಸಭೆಯ ನಡವಳಿಕೆಗಳ 129ನೆ ವಿಷಯದಲ್ಲಿ ಹುಕುಂ ಕೊಡುವ ಬಗ್ಗೆ.	0 0 3
123	ನಂ. ರೆ. 5997-9-ವ್ಯವ. 31-08-26, ತಾ॥ 11—2—09.	ಈ ಸಂಸ್ಥಾನದ ಉಕ್ಕಡಗಳಲ್ಲಿ ಕಾವಲು ಇರುವ ತೋಟಿಗಳಿಗೂ ಮತ್ತು ತಳಾರಿಗಳಿಗೂ 1909ನೆ ಇಸವಿ ಜನವರಿ 1ನೆ ತಾರೀಖು ಲಾಗಾಯತು ಮೂರು ತಿಂಗಳವರಿಗೆ ಮಾಹೇಯಾನ ಒಂದು ರೂಪಾಯಿನಂತೆ ಅಲೋಯರ್ನ್ಸನ್ನು ಕೊಡಬೇಕೆಂದು ಹುಕುಂ ಮಾಡತಕ್ಕ ಬಗ್ಗೆ.	0 0 3
124	ನಂ. ರೆ. 5987-96-ವ್ಯವ. 119-08-2, ತಾ॥ 11—2—09.	ರೈತರು ವ್ಯವಸಾಯ ಬ್ಯಾಂಕುಗಳ ಸಂಬಂಧದಲ್ಲಿ ತಮ್ಮ ಜಮಿನುಗಳನ್ನು ಅಡಮಾನ ಮಾಡಿದ್ದರೂ ಅವುಗಳ ಅಥವಾ ಅವರ ಖುದ್ದು ಜಮೀನ ಮೇಲೆ ವಿಶೇಷ ಸಂದರ್ಭಗಳಲ್ಲಿ ತಕಾವಿ ಸಾಲಗಳನ್ನು ಕೊಡುವ ವಿಚಾವಾಗಿ ಹುಕುಂ ಮಾಡುವ ಬಗ್ಗೆ.	0 0 3
125	ನಂ. ರೆ. 6040-50-ವ್ಯವ. 147-08-2, ತಾ॥ 11—2—09.	ಮೈಸೂರು ಸಂಸ್ಥಾನದಲ್ಲಿ ದುರ್ಭಿಕ್ಷ ಪ್ರಾಪ್ತವಾಗಿರುವ ಸ್ಥಳಗಳಿಗೆ ಆಹಾರ ಧಾನ್ಯಗಳನ್ನು ಮತ್ತು ದನಗಳ ಮೇವನ್ನು ಸುಲಭವಾಗಿ ತರಿಸಿಕೊಳ್ಳತಕ್ಕ ವಿಷಯದಲ್ಲಿ ಮದ್ರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯ ಜನರಲ್ ಟ್ರಾಫಿಕ್ ಮ್ಯಾನೇಜರವರು ರೈಲ್ವೆ ಚಾರ್ಜಿನ ದರಗಳನ್ನು ಕಮ್ಮಿ ಮಾಡಿರುವುದನ್ನು ಮಂಜೂರ್ಮಾಡತಕ್ಕ ಬಗ್ಗೆ.	0 0 9
126	ನಂ. ರೆ. 6589-97-ಲ್ಯಾ. ರೆ. 262-08-1, ತಾ॥ 25—2—09.	ಹಿಡುವಳಿ ಜಮಿನುಗಳ ಬಿರ್ ರಾಜಿನಾಮೆಗಳನ್ನು ಅಂಗೀಕರಿಸುವದಕ್ಕೆ ಮುಂಚೆ ಅಂಥಾ ಹಿಡುವಳಿಗಳ ವಿಷಯದಲ್ಲಿ ಸ್ಪೆಷಲ್ ನೋಟೀಸ್ ರಿಜಿಸ್ಟರಿನಲ್ಲಿ ಯಾರ ಹೆಸರುಗಳು ದಾಖಲಾಗಿರುತ್ತವೆಯೋ ಅವರುಗಳಿಗೆ ನೋಟೀಸ್ ಕೊಡಬೇಕೆಂದು ಹುಕುಂ ಮಾಡುವ ಬಗ್ಗೆ.	0 0 3

ಹುಕುಂ ಬಮೋಜಬ್,

ಕೆ. ಎಸ್. ಚಂದ್ರಶೇಖರ ಅಯ್ಯರ್,

ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಸ್ಟ್ ಆದ್ದು. [ನಂ. 21.

ಬೆಂಗಳೂರು, ಗುರುವಾರ, ಮೇ ತಾ|| 27, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಯಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 18ನೆ ಮೇ 1909.

ನಂ. 11520—ಸ್ಯಾನಿಟರಿ 76-08-50, ಸಮಸ್ತ ಜನರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಸರಗೂರು	ಚಾಮರಾಜನಗರ
ಮಳವಳ್ಳಿ	ಡಿಟೋ
ಮುತ್ತನಹಳ್ಳಿ	ಮಳವಳ್ಳಿ
ಗಂಜಾಂ	ಶ್ರೀರಂಗಪಟ್ಣ
ಗುಂಡ್ಲಪೇಟೆ	ಗುಂಡ್ಲಪೇಟೆ
ಬೆಳ್ಳುಳ್ಳಿ	ಎಡತೊರೆ
ದೊರನಹಳ್ಳಿ	ಡಿಟೋ
ಕೆಂಪಲಾಪುರ	ಹುಣಸೂರು

ತಾರೀಖು 17ನೆ ಮೇ 1909.

ನಂ. ಜು. 3524—ಪೋಲೀಸು. 178–08—2, 1890ನೆ ಇಸವಿಯ 6ನೆ ನಂಬರ್ ಮೈಸೂರು ಆಯುಧಗಳ ರೆಗ್ಯುಲೇಷನಿನ 25ನೆ ಪ್ರಕರಣದ ಮೇರೆಗೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಹರಿಹರ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರವರನ್ನು, ಸದರಿ ಸಬ್ ತಾಲ್ಲೂಕಿನಲ್ಲಿ ಮೇಲ್ಕಂಡ ರೆಗ್ಯುಲೇಷನಿನ 14ನೆ ಪ್ರಕರಣದ (e) ಕಲಮಿನ ಮೇರೆಗೆ ಶಿಕ್ಷಿಸಲ್ಪಡತಕ್ಕ ತಪ್ಪಿತಗಳ ವಿಚಾರವಾಗಿ ಶೋಧನೆಗಳನ್ನು ನಡಿಸತಕ್ಕ ಆಫಿಸರನ್ನಾಗಿ ಮೊಕರರ್ಮಾಡಲು ಹುಕುಂ ದಯಪಾಲಿಸಿರುತ್ತಾರೆ.

ತಾರೀಖು 20ನೆ ಮೇ 1909.

ನಂ. ಜ. 6550—ಜ. ಮಿ. 313–08—2, ಮೈಸೂರು ಶಾಸನಾನ್ವೇಷಣದ ಇಲಾಖೆಯ ಚಾರ್ಜಿನಲ್ಲಿರುವ ಆಫೀಸರ ಮಿ|| ಆರ್. ನರಸಿಂಹಾಚಾರ್, ಎಂ. ಎ. ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದ ಮೇರೆಗೆ, 1909ನೆ ಇಸವಿಯ ಏಪ್ರಿಲ್ 20ನೆ ತಾರೀಖಿನ ಲಾಗಾಯಿತು 8 ದಿವಸಗಳ ಪ್ರಿವಿಲೇಜ್ ರಜಾ ಕೊಡಲಾಯಿತು.

ತಾರೀಖು 18ನೆ ಮೇ 1909.

ನಂ. ರೆ. 9589—ಫಾ. 110—06—7, ಸರ್ 1900ನೆ ಇಸವಿ 11ನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣವನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್ರವರ ಸರಕಾರದವರು ಪ್ರಸಿದ್ಧಪಡಿಸುವದೇನಂದರೆ:—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿ ಉಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ 1909ನೆ ಜೂನ್ ಗುರ್ರೇ ತಾರೀಖಿನಿಂದ ಸ್ಟೇಟ್ ಫಾರೆಸ್ಟಾಗಿ ಏರ್ಪಡಿಸಲ್ಪಟ್ಟಿರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟ್.	ತಾಲ್ಲೂಕು.	ಪ್ಲಾಟಿನ ಹೆಸರು.	ಸುಮಾರು ವಿಸ್ತೀರ್ಣ.	ಚಕ್ಕುಬಂದಿ.
ಚಿತ್ರದುರ್ಗ.	ಹೊಸದುರ್ಗ.	ಯರ್ರಮ್ಮನಹಳ್ಳಿ.	1,525 ಎಕರೆ, 22 ಗುಂಟೆ.	ಉತ್ತರಕ್ಕೆ—ತಿಪ್ಪೈಯ್ಯನದುರ್ಗ ಸರ್ವೆ 40ನೆ ನಂಬರಿನ ಈಶಾನ್ಯ ಮೂಲೆಯಿಂದ ಲೈನು ಹೊರಟು ಈಶಾನ್ಯ ದಿಕ್ಕಾಗಿ ತಿಪ್ಪಗಾನಹಳ್ಳಿ, ಸರ್ವೇ 47ನೆ ನಂಬರಿನ ದಕ್ಷಿಣ ಗಡಿ ಮೇಲೆ ಹೋಗುತ್ತದೆ. ಅಲ್ಲಿಂದ ಈಶಾನ್ಯ ದಿಕ್ಕಾಗಿ ಸರ್ವೆ ನಂಬರು 47ರ ಆಗ್ನೇಯದಲ್ಲಿ ಹೋಗುತ್ತದೆ. ಅಲ್ಲಿಂದ ಹೊಸದುರ್ಗದ ಸರ್ವೆ 92ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಪೂರ್ವಕ್ಕೆ ಅದೇ ಸರ್ವೆ 92ನೆ ನಂಬರು ಆಗ್ನೇಯ ಮೂಲೆಗೆ ಬರುತ್ತದೆ. ಅಲ್ಲಿಂದ ವಾಯವ್ಯಕ್ಕೆ ಅದೇ ಸರ್ವೆ ಪೂರ್ವಕಡೆಯಲ್ಲಿ ಬಂದು ಅದೇ ಗ್ರಾಮದ ಸರ್ವೆ 89ನೆ ನಂಬರು ನೈರುತ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಪೂರ್ವಕ್ಕೆ ಅದೇ ಸರ್ವೆ ನಂಬರಿನ ದಕ್ಷಿಣ ದಿಕ್ಕಿನಲ್ಲಿ ಬಂದು ಅದರ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ ಅದೇ ಸರ್ವೆ ನಂಬರಿನ ಪೂರ್ವ ದಿಕ್ಕಿನಲ್ಲಿ ಬಂದು ಆ ಗ್ರಾಮದ 90ನೆ ಸರ್ವೆ ನಂಬರಿನ ನೈರುತ್ಯ ಮೂಲೆಗೆ ತಗಲುತ್ತದೆ. ಅಲ್ಲಿಂದ ಪೂರ್ವಕ್ಕೆ ಅದೇ ಹೊಸದುರ್ಗದ ಗ್ರಾಮದ ಸರ್ವೆ 90, 87, 84 ಮತ್ತು 83ನೆ ನಂಬರುಗಳ ಮೇಲೆ ಹೊರಟು ಸರ್ವೆ 83ನೆ ನಂಬರಿನ ಆಗ್ನೇಯ ಮೂಲೆಗೆ ಕೂಡುತ್ತದೆ.

ಪೂರ್ವಕ್ಕೆ—ತರುವಾಯ ಲೈನು ದಕ್ಷಿಣಕ್ಕೆ ಮತ್ತು ಪಶ್ಚಿಮವಾಗಿ ಹೊರಟು ಹೊಸದುರ್ಗದ 88ನೆ ಸರ್ವೆ ನಂಬರು, ಸೂಳೆನಾಯಿಕನಹಳ್ಳಿಯ 46ನೆ ಸರ್ವೆ ನಂಬರು ಇವುಗಳಲ್ಲಿ ಹೊಸದುರ್ಗದಿಂದ ಯರ್ರಮ್ಮನಹಳ್ಳಿಗೆ ಹೋಗುವ ಬಂಡಿ ಜಾಡಿನಮೇಲೆಯೇ ಹೊರಟು ಸೂಳೆನಾಯಕನಹಳ್ಳಿಯ ಸರ್ವೆ ನಂಬರು 46ರ ಪಶ್ಚಿಮ ಎಲ್ಲೆ ಕಟ್ಟನ್ನು ಕೊನೇಲಿ ಕಂಡ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಸುಮಾರು 2 ಫರಲಾಂಗುದೂರದಲ್ಲಿ ಸೇರುವ ವರೆಗೂ ಹೋಗುತ್ತದೆ. ತರುವಾಯ ಸೂಳೆನಾಯಿಕನಹಳ್ಳಿಯ ಸರ್ವೆ ನಂಬರು 46, ಯರ್ರನಹಳ್ಳಿಯ ಸರ್ವೆ ನಂಬರುಗಳು 11 ಮತ್ತು 10 ಇವುಗಳ ಪಶ್ಚಿಮ ಪಾರ್ಶ್ವದ ಮೇಲೆಯೇ ಮೇಲ್ಕಂಡ ಬಂಡಿ ಜಾಡನ್ನು ಅನುಸರಿಸಿ ಆಗ್ನೇಯವಾಗಿ ಹೋಗಿ ತರುವಾಯ ಯರ್ರಮ್ಮನಹಳ್ಳಿಯ ಸರ್ವೆ ನಂಬರು 12ರಲ್ಲಿ ಕೊನೇಲಿ ಕಂಡ ಗ್ರಾಮದ ಸರ್ವೆ ನಂಬರು 9ರ ವಾಯವ್ಯ ಮೂಲೆಯನ್ನು ಮುಟ್ಟುವ ವರೆಗೂ ಹೋಗುತ್ತದೆ.

ದಕ್ಷಿಣಕ್ಕೆ—ಅನಂತರದಲ್ಲಿ ಲೈನು ನೈರುತ್ಯವಾಗಿ ಯರ್ರಮ್ಮನಹಳ್ಳಿಯ ಸರ್ವೆ ನಂಬರು 9 ಮತ್ತು 14 ಇವುಗಳ ಪಶ್ಚಿಮ ಪಾರ್ಶ್ವದ ಮೇಲೆ ಹೊರಟು ತರುವಾಯ ಮೇಲ್ಕಂಡ ಗ್ರಾಮದ ಸರ್ವೆನಂಬರು 14 ಮತ್ತು 16 ಇವುಗಳ ಉತ್ತರ ಪಾರ್ಶ್ವಗಳಲ್ಲಿ ನೈರುತ್ಯಾಭಿಮುಖವಾಗಿ ಹೋಗಿ ಕಡೇ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯವ್ಯಕ್ಕೆ ಸರ್ವೆ 35ನೆ ನಂಬರು ಪೂರ್ವ ದಿಕ್ಕಿನ ಉದ್ದಕ್ಕೂ ಬಂದು ಅದರ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ನೈರುತ್ಯಕ್ಕಾಗಿ ಅದೇ ಸರ್ವೆ ನಂಬರಿನ ಉತ್ತರ ಕಡೇಲಿ ಬಂದು ಅಲ್ಲೀದ ಅದರ ವಾಯವ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ದಕ್ಷಿಣಕ್ಕೆ, ಅದೇ ಸರ್ವೆ ನಂಬರಿನ ಪಶ್ಚಿಮ ಕಡೇಲಿ ಹೊರಟು ಅದರ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ಸರ್ವೆ 40, 39ನೆ ನಂಬರುಗಳ ಉತ್ತರ ಪಾರ್ಶ್ವಗಳಲ್ಲಿ ಅದೇ ಗ್ರಾಮದ ಸರ್ವೆ 38ನೆ ನಂಬರು ಆಗ್ನೇಯ ಮೂಲೆಯನ್ನು ಸೇರುವ ವರಿಗೂ ಹೋಗುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಯರ್ರಮ್ಮನಹಳ್ಳಿ ಸರ್ವೆ ನಂಬರು 38ರ ಪೂರ್ವ ದಿಕ್ಕಿನಲ್ಲಿ ಹೊರಟು ಅದೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ವಾಯವ್ಯ ಮುಖವಾಗಿ ತಿಪ್ಪೈಯ್ಯ ದುರ್ಗದ ಸರ್ವೆ ನಂಬರು 43ರ ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಹೊರಟು ಅದೇ ಗ್ರಾಮದ 42ನೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ತರುವಾಯ 42ನೆ ಸರ್ವೆ ನಂಬರಿನ ಪೂರ್ವಕ್ಕೆ ಉತ್ತರದಲ್ಲಿ ಹೋಗಿ ಅಲ್ಲಿಂದ ಪಶ್ಚಿಮಕ್ಕಾಗಿ ಅದೇ ಸರ್ವೆ 42ನೆ ನಂಬರಿನ ಪಕ್ಕದಲ್ಲಿ ಬಂದು ಅದೇ ಗ್ರಾಮದ 39ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಕೂಡುವ ವರೆಗೂ ಹೋಗುತ್ತದೆ. ಅಲ್ಲಿಂದ ಉತ್ತರಕ್ಕೂ, ಈಶಾನ್ಯಕ್ಕೂ ಬಾಗಿಕೊಂಡು ಬಂದು ಸರ್ವೆ 39 ಮತ್ತು 40ನೆ ನಂಬರುಗಳ ಪೂರ್ವದಿಕ್ಕಿನಲ್ಲಿ ಕಡೇಲಿ ಹೊರಟು ಹಾದು ಹೊರಟ ಸ್ಥಳವನ್ನು ಕೂಡುತ್ತದೆ.

ಷರಾ.

ಈ ಕೆಳಗೆ ಕಂಡ ದಾರಿಗಳಲ್ಲಿ ತಿರುಗುವ ಹಕ್ಕನ್ನು ಮಂಜೂರು ಮಾಡಿದೆ.

1ನೇದು ಜನ ಜಾನವಾರುಗಳಿಗೆ.

2ನೇದು ಜಾನುವಾರುಗಳಿಗೆ.

1. ಯರ್ರಮ್ಮನಹಳ್ಳಿಯ ಸರ್ವೆ 12 ಸೂಳೆನಾಯಿಕನಹಳ್ಳಿಯ ಸರ್ವೆ 46 ಮತ್ತು ಹೊಸದುರ್ಗ ಸರ್ವೆ 36 ಈ ನಂಬರುಗಳ ಮೇಲೆ ಯರ್ರಮ್ಮನಹಳ್ಳಿಯಿಂದ ಹೊಸದುರ್ಗಕ್ಕೆ ಹೋಗುವ ದಾರಿ—6 ಗಜ ಅಗಲ 12 ಫರಲಾಂಗು ಉದ್ದ ಇದು ಯರ್ರಮ್ಮನಹಳ್ಳಿ ಸರ್ವೆ 9ನೆ ನಂಬರಿನ ವಾಯುವ್ಯ ಮೂಲೆಯಲ್ಲಿ ಸೇರಿ ಫಾರೆಸ್ಟನ್ನು ಪ್ರವೇಶಿಸಿ ಈಶಾನ್ಯಮುಖವಾಗಿ ಹೋಗಿ ಹೊಸದುರ್ಗದ ಸರ್ವೆ 83ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

2. ಸರ್ವೆ 12ನೆ ನಂಬರಿನಲ್ಲಿ ಕುಂಟೆಗೆ ನೀರಿಗೆ ದನಗಳನ್ನ ತೆಗೆದುಕೊಂಡು ಹೋಗಲು ಹೊಸದುರ್ಗದ ರೈತರಿಗೆ ದಾರಿ ಹಕ್ಕು. ಈ ದಾರಿ ಸರ್ವೆ 89ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಸ್ಟೇಟು ಫಾರೆಸ್ಟನ್ನು ಪ್ರವೇಶಿಸಿ ಆಗ್ನೇಯ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂಬರು 88 ಮತ್ತು ಯರ್ರಮ್ಮನಹಳ್ಳಿ ಸರ್ವೆ 12ನೆ ನಂಬರು ಮೇಲೆ ಹೊರಟು ಕಡೇ ಸರ್ವೆ ನಂಬರಿನ ಆಗ್ನೇಯ ಮೂಲೇಲಿ ಇರುವ ಕುಂಟೆಗೆ ಹೋಗುತ್ತದೆ. 150 ಅಡಿ ಅಗಲ, ಉದ್ದ ಸುಮಾರು 10 ಫರಲಾಂಗು.

B. ಈ ಕೆಳಗೆ ಕಂಡ ಜಮೀನಿನ ಮೇಲೆ ಪಟ್ಟೆ ಹಕ್ಕು ಮಂಜೂರು ಮಾಡಿದೆ. ಈ ಜಮೀನನ್ನು ಫಾರೆಸ್ಟಿಗೆ ಸೇರಿಸಿಕೊಳ್ಳದೆ ಡಿಮಾರ್ಕೇಷನ್ ಲೈನ್ ಮಾಡಿಸಿ ಆವರಣವಾಗಿ ಬಿಟ್ಟಿರುತ್ತದೆ.

ಗ್ರಾಮ.	ನಂಬರು.	ಎಕರೆ.	ಗುಂಟೆ.	ಷರಾ.
ಯರ್ರಮ್ಮನಹಳ್ಳಿ.	13	...	...	ಈ ಜಮೀನಿಗೆ ಜನಗಳು ಮತ್ತು ಉಳುವ ದನಗಳು ಫಾರೆಸ್ಟು ಮೂಲಕ ಪ್ರವೇಶಿಸುವುದಕ್ಕೆ ಅಪ್ಪಣೆ ಇರುತ್ತದೆ. ಅಗಲ 4 ಅಡಿ ಯರ್ರಮ್ಮನಹಳ್ಳಿ ಸರ್ವೆ 12ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಸ್ಟೇಟ್ ಫಾರೆಸ್ಟಿಗೆ ಪ್ರವೇಶಿಸುವ ಬಂದು ದಾರಿಯು ಪೂರ್ವಾಭಿಮುಖವಾಗಿ $2\frac{1}{2}$ ಫರ್ಲಾಂಗುದೂರ ಹೋಗಿ ಸದರೀ ಜಮೀನನ್ನು ಸೇರುತ್ತದೆ.

ಹುಕುಂ ಬಮೋಜಿಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟೆರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 22.

ಬೆಂಗಳೂರು, ಗುರುವಾರ, ಜೂನ್ ತಾ॥ 3, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೆ ಭಾಗ–ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ ಆಫಿಸರಗಳು, ಫಾರೆಸ್ಟ್, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರು ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿಯರು, ಡಿಸ್ಟ್ರಿಕ್ಟ್, ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿಯರು, ಪೋಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟ್ ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಪಾಪೀಸ್ ನೋಟಿಸಗಳು.

3ನೆ ಭಾಗ–ಲೆಜಿಸ್‌ಲೇಟಿವ್ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು

4ನೆ ಭಾಗ–ಸರ್ಕಾರೀ ಕಾಗದ ಪತ್ರಗಳು

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ಇಸ್ತಿಹಾರ್ನಾಮೆ.

ತಾರೀಖು 31ನೆ ಮೇ 1909ನೆ ಇಸವಿ.

ನಂ. ರೆ. 10113—ವ್ಯವಸಾಯ 175–08–15.

1908–09ನೆ ಕೀಲಕ ಸಾಲಿನ ಜಮೀನು ಕಂದಾಯವನ್ನು ರಿಮಿಷನ್ ಮಾಡತಕ್ಕ ಮತ್ತು ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸತಕ್ಕ ವಿಷಯದಲ್ಲಿ ಪುನರ್ವಿಮರ್ಶೆಮಾಡಿ ಸಾದರ್ಮಾಡಿರುವ ಇದರಡಿ ಕಂಡ 1909ನೆ ಇಸವಿ ಮೇ 30ನೆ ಮುರ್ಕ್ಕಂನ ಕ್ಯಾಂಪು 20–30ನೆ ನಂಬರ್ ಸರ್ಕಾರಿ ಹುಕುಮನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಾಯಿಷ್ಮಾಡಿ ಇರುತ್ತದೆ.

ಹುಕುಂ ಬಮೋಜಿಬ್,

ಕೆ. ಎಸ್. ಚಂದ್ರಶೇಖರ ಅಯ್ಯರ್,

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ.

ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ಬಹದರವರ ಸರ್ಕಾರಿ ಹುಕ್ಕುಂ.

1908–09ನೆ ಕೀಲಕ ಸಂವತ್ಸರದ ಜಮೀನು ಕಂದಾಯದ ಬಾಕಿಯನ್ನು ರಿಮಿಷನ್ ಕೊಡತಕ್ಕ ವಿಷಯದಲ್ಲಿಯೂ ಅದನ್ನು ಕೆಲವು ಕಾಲದವರಿಗೆ ವಸೂಲ್ಮಾಡದೆ ನಿಲ್ಲಿಸತಕ್ಕ ವಿಷಯದಲ್ಲಿಯೂ ಹೆಚ್ಚು ರಿಯಾಯಿತಿಗಳನ್ನು ತೋರಿಸತಕ್ಕ ವಿಷಯದಲ್ಲಿ ಮೈಸೂರು ಸೀಮೆಯ ರೆವಿನ್ಯೂ ಕಮಿಷನರವರು ಬರೆಸಿದ 1909ನೆ ಇಸವಿ ಏಪ್ರಿಲ್ 14ನೆ ತಾರೀಖಿನ ಡಿಮೋ ಲೇಖನವನ್ನು ಪರಾಂಬರಿಸಲಾಯಿತು.

2. ಇದೇ ವಿಷಯವಾಗಿ ಸಾದರಾದ ಇದರಡಿ ಕಂಡ ಸರ್ಕಾರಿ ಹುಕ್ಕುಂಗಳನ್ನು ಸಹಾ ಪುನಹಾ ಓದಲಾಯಿತು :—

(a) 1909ನೆ ಇಸವಿ ಜನವರಿ 4ನೆ ಮರ್ಕ್ಕುಂನ 4332ನೆ ನಂಬರ್ ಹುಕ್ಕುಂ.
(b) 1909ನೆ ಮಾರ್ಚಿ 3ನೆ ಮರ್ಕ್ಕುಂನ 6859ನೆ ನಂಬರ್ ಹುಕ್ಕುಂ.
(c) 1909ನೆ ಮಾರ್ಚಿ 20ನೆ ಮರ್ಕ್ಕುಂನ 7506ನೆ ನಂಬರ್ ಹುಕ್ಕುಂ.
(d) 1909ನೆ ಏಪ್ರೈಲ್ 7ನೆ ಮರ್ಕ್ಕುಂನ 8156ನೆ ನಂಬರ್ ಹುಕ್ಕುಂ.
(e) 1909ನೆ ಮೇ 1ನೆ ಮರ್ಕ್ಕುಂನ 9058ನೆ ನಂಬರ್ ಹುಕ್ಕುಂ.

ಕ್ಯಾಂಪು ನಂಬರ್ 20-30, ಮೊಕ್ಕಾಂ ಮೈಸೂರು.

ತಾರೀಖು 30ನೆ ಮೇ 1909ನೆ ಇಸವಿ.

1908–09ನೆ ಕೀಲಕ ಸಂವತ್ಸರದಲ್ಲಿ ಕಾಲಸ್ಥಿತಿ ಸುಭಿಕ್ಷವಾಗಿಲ್ಲದರಿಂದ, ಆ ಸಾಲಿನ ಜಮೀನು ಕಂದಾಯವನ್ನು ರಿಮಿಷನ್ ಯಾ ಮುಜರೆ ಕೊಡತಕ್ಕ ಮತ್ತು ಅದನ್ನು ವಸೂಲ್ಮಾಡದೆ ಕೆಲವುಕಾಲ ನಿಲ್ಲಿಸತಕ್ಕ ವಿಷಯದಲ್ಲಿ, ಸಮ್ಮಂಧಪಟ್ಟ ಸಮಸ್ತಜನಗಳ ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ಇದರಡಿ ಕಂಡ ಅನುಜ್ಞೆಗಳನ್ನು ಮೇಲೆ ನಮೂದಾಗುವ ಸರ್ಕಾರಿ ಹುಕ್ಕುಂಗಳಲ್ಲಿ ಕಂಡವುಗಳಿಗೆ ಬದಲಾಗಿ ಸಾದರ್ಮಾಡೋಣಾಗಿರುತ್ತೆ :—

1. ತರೀ ಜಮೀನಾಗಿ ವಿಂಗಡಿಸಲ್ಪಟ್ಟ ಜಮೀನುಗಳ ಕಂದಾಯ.—ನೀರಿನ ಆಸರೆ ಯಾವ ಮೂಲಕವಾಗಿಯಾದರೂ ಇರಲಿ, ತರಿಯಾಗಿ ವಿಂಗಡಿಸಲ್ಪಟ್ಟ ಜಮೀನುಗಳಲ್ಲಿ 1908–09ನೆ ಕೀಲಕ ಸಾಲಿನಲ್ಲಿ ತರೀ ಫಸಲು ಶುದ್ಧಾಂಗವಾಗಿ ಆಗದೆ ಇದ್ದರೂ ಅಥವಾ ಸಾಧಾರಣ ಸಾಲಿನ ಫಸಲಿನಲ್ಲಿ ಶೇಕಡಾ 25ರ ಭಾಗಕ್ಕೆ ಮೀರದಷ್ಟು ಫಸಲು (ಅಂದರೆ ಸಾಧಾರಣ 16 ಆಣೆ ಬೆಳೆ ಪೈಕಿ 4 ಆಣೆಗೆ ಮೀರದಷ್ಟು ಫಸಲು) ಆಗಿದ್ದರೂ ಸರಿಯೆ, ಅರ್ಧ ಕಂದಾಯವನ್ನು ರಿಮಿಷನ್ ಯಾ ಮುಜರೆ ಕೊಟ್ಟು ಬಾಕೀ ಅರ್ಧ ಕಂದಾಯವನ್ನು ವಸೂಲ್ಮಾಡತಕ್ಕದ್ದು.

ಉತ್ತರಕ್ಕೆ— ಸರಹದ್ದು ಲೈನು ತೂಕಂತಹಳ್ಳಿಯ ಸರ್ವೆ 6ನೆ ನಂಬರಿನಲ್ಲಿರುವ ಸುಬೇದಾರ ಕುಂಟೆಯ ನೈರುತ್ಯ ಮೂಲೆಯಿಂದ ಹೊರಟು ಪೂರ್ವಾಭಿಮುಖವಾಗಿ ತೂಕಂತಹಳ್ಳಿಯ ಸರ್ವೆ 6 ಮತ್ತು 7ನೆ ನಂಬರುಗಳ ಮೇಲೆ ಹಾದು, ಯರಕುಂತಹಳ್ಳಿಯ ಸರ್ವೆ 5ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ ; ನಂತರ ಈಶಾನ್ಯಾಭಿಮುಖವಾಗಿ ಸುಮಾರು 4 ಫರಲಾಂಗು ಮತ್ತು 2 ಸರಪಣಿಗಳ ದೂರದವರಿಗೆ ಯರಕುಂತಹಳ್ಳಿಯ ಸರ್ವೆ 5ನೆ ನಂಬರಿನ ದಕ್ಷಿಣಕಡೆ ಹೊರಟು, ಅಲ್ಲಿಂದಾ ದಕ್ಷಿಣಾಭಿಮುಖವಾಗಿ ಗುಡಿಸಿಹಳ್ಳಿಯ ಸರ್ವೆ 17ನೆ ನಂಬರಿನ ಮೇಲೆ ಹೋಗಿ ಗುಡಿಸಿಹಳ್ಳಿಯ ಸರ್ವೆ 22ನೆ ನಂಬರಿನ ವಾಯುವ್ಯ ಮೂಲೆಯಿಂದ ಸುಮಾರು 2 ಸರಪಣಿದೂರದಲ್ಲಿ ಒಂದು ಸ್ಥಾನವನ್ನು ಮುಟ್ಟುತ್ತದೆ ; ನಂತರ ನೈರುತ್ಯಾಭಿಮುಖವಾಗಿ ಸರ್ವೆ 17ನೆ ನಂಬರಿನ ಮೇಲೆ ಹೊರಟು, ಗುಡಿಸಿಹಳ್ಳಿಯ 16ನೆ ಸರ್ವೆ ನಂಬರಿನ ಪಶ್ಚಿಮ ಮೂಲೆಯನ್ನು ಬಂದು ಸೇರುತ್ತದೆ ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 16 ಮತ್ತು 15ನೆ ನಂಬರುಗಳ ನೈರುತ್ಯ ಕಡೆ ಹೋಗಿ, ಗುಡಿಸಿಹಳ್ಳಿಯ 14ನೆ ಸರ್ವೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ ; ನಂತರ ದಕ್ಷಿಣಾಭಿಮುಖವಾಗಿ ಅದೇ ಗ್ರಾಮದ ಸರ್ವೆ 14ನೆ ನಂಬರಿನ ಪಶ್ಚಿಮಕಡೆ ಹೊರಡುತ್ತದೆ ; ನಂತರ ದಕ್ಷಿಣ ಮತ್ತು ನೈರುತ್ಯಾಭಿಮುಖವಾಗಿ ಯಡಾರ್ಲಹಳ್ಳಿ ಜೋಡಿ ಗ್ರಾಮದ ಸರಹದ್ದಿನ ವಾಯುವ್ಯ ಕಡೆಯಲ್ಲಿ ಹೋಗಿ ನಾಲಕದೂರೇನಹಳ್ಳಿ ಗ್ರಾಮದ ಸರ್ವೆ 44ನೆ ನಂಬರಿನ ಉತ್ತರ ಮೂಲೆಯನ್ನು ಸೇರುತ್ತದೆ ; ನಂತರ ಸರ್ವೆ 6ನೆ ನಂಬರಿನ ಪಶ್ಚಿಮ ಕಡೆಯಲ್ಲಿ ಹೊರಟು ಮೇಲ್ಕಂಡ ಗ್ರಾಮದ ಸರ್ವೆ 12ನೆ ನಂಬರಿನ ಉತ್ತರ ಮೂಲೆಯನ್ನು ಸೇರುತ್ತದೆ ; ನಂತರ ನೈರುತ್ಯಾಭಿಮುಖವಾಗಿ ಸರ್ವೆ 6 ಮತ್ತು 20ನೆ ನಂಬರುಗಳಲ್ಲಿ ಹೊರಟು ಸರ್ವೆ 19ನೆ ನಂಬರಿನ ಪಶ್ಚಿಮ ಮೂಲೆಯನ್ನು ಸೇರುತ್ತದೆ ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 23ನೆ ನಂಬರಿನ ಮೇಲೆ ಸುಮಾರು 5 ಫರಲಾಂಗುದೂರ ಹೋಗಿ ನಂತರ ಈಶಾನ್ಯಾಭಿಮುಖವಾಗಿ ಅದೇ ಸರ್ವೆ ನಂಬರಿನ ಮೇಲೆ ಹೋಗಿ ಸರ್ವೆ 43ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 23, 29, 28 ಮತ್ತು 27ನೆ ನಂಬರುಗಳ ಮೇಲೆ ಹೋಗಿ ಮೇಲ್ಕಂಡ ಗ್ರಾಮದ ಸರ್ವೆ 27ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ ; ನಂತರ ಆಗ್ನೇಯಾಭಿಮುಖವಾಗಿ ಸುಮಾರು $1\frac{1}{2}$ ಸರಪಣಿದೂರ ಅದೇ ಗ್ರಾಮದ ಸರ್ವೆ 26ನೆ ನಂಬರಿನ ಮೇಲೆ ಹೋಗಿ ನಂತರ ಈಶಾನ್ಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ 24ನೆ ನಂಬರಿನ ಮೇಲೆ ಹೋಗಿ, ನಲ್ಲಕದರೇನಹಳ್ಳಿ, ಜೋಳದರಾಸಿ ಮತ್ತು ಜೋಡಿ ಯಡಾರ್ಲಹಳ್ಳಿ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳನ್ನು ಸೇರುತ್ತದೆ ; ನಂತರ ಆಗ್ನೇಯಾಭಿಮುಖವಾಗಿಯೂ ಈಶಾನ್ಯಾಭಿಮುಖವಾಗಿಯೂ ಜೋಡಿ ಯಡಾರ್ಲಹಳ್ಳಿ ಗ್ರಾಮದ ದಕ್ಷಿಣಕಡೆಯಲ್ಲಿ ಹೊರಟು ನಲ್ಲಪ್ಪನಹಳ್ಳಿ ಗ್ರಾಮದ ನೈರುತ್ಯದ ಮೂಲೆಯನ್ನು ಸೇರತ್ತದೆ ; ನಂತರ ಕಡೇ ಗ್ರಾಮದ ದಕ್ಷಿಣಕಡೆಯಲ್ಲಿ

ಸುಮಾರು ಒಂದು ಫರಲಾಂಗುದೂರ ಹೋಗಿ, ನಂತರ ಆಗ್ನೇಯಾಭಿಮುಖವಾಗಿ ಕಾಚಕರದಿತ ಗ್ರಾಮದ ಸರ್ವೆ 64ನೆ ನಂಬರಿನ ಮೇಲೆ ಹೋಗಿ ಸರ್ವೆ 63ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಕಾಚಕರದಿತ ಗ್ರಾಮದ ಸರ್ವೆ 63, 62 ಮತ್ತು 61ನೆ ಸರ್ವೆ ನಂಬರುಗಳ ಮತ್ತು ಅಡಗಲ್ಲು ಗ್ರಾಮದ ಸರ್ವೆ 2 ಮತ್ತು 104ನೆ ನಂಬರುಗಳ ದಕ್ಷಿಣಕಡೆಯಲ್ಲಿ ಹೊರಟು ಕಡೆಯಲ್ಲಿ ಹೇಳಿದ ಗ್ರಾಮದ 104ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯಾಭಿಮುಖವಾಗಿ ಬಿಷಗರಹಳ್ಳಿಯ ಸರ್ವೆ 19ನೆ ನಂಬರಿನ ಪಶ್ಚಿಮಕಡೆಯಲ್ಲಿ ಹೊರಟು ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯವಾಗಿಯೂ ನೈರುತ್ಯವಾಗಿಯೂ ಕರಿಗಾನಪಾಳ್ಯದ ಸರ್ವೆ 57ನೆ ನಂಬರ ಮೇಲೆ ಹೋಗಿ ಗೊಲ್ಲದೊಡ್ಡಿಯ ಉತ್ತರ ಮೂಲೆಯನ್ನು ಸೇರುತ್ತದೆ; ನಂತರ ನೈರುತ್ಯ ಮತ್ತು ವಾಯುವ್ಯಾಭಿಮುಖವಾಗಿ ಗೊಲ್ಲದೊಡ್ಡಿಯ ಉತ್ತರ ಗಡಿಯಲ್ಲಿ ಹೊರಟು ಆ ಗ್ರಾಮದ ವಾಯುವ್ಯಮೂಲೆಯನ್ನು ಸೇರುತ್ತದೆ; ನಂತರ ದಕ್ಷಿಣಾಭಿಮುಖವಾಗಿ ಗೊಲ್ಲದೊಡ್ಡಿಯ ಪಶ್ಚಿಮ ಕಡೆಯಲ್ಲಿ ಹೊರಟು ಕೊನೇಲಿ ಹೇಳಿದ ಜೋಡಿ ಗ್ರಾಮದ ನೈರುತ್ಯ ಮೂಲೆಯನ್ನು ಸೇರುತ್ತದೆ; ನಂತರ ನೈರುತ್ಯ ಮತ್ತು ಪಶ್ಚಿಮಾಭಿಮುಖವಾಗಿ ಮಾರಪ್ಪನಹಳ್ಳಿಯ ಸರ್ವೆ 8, 78 ಮತ್ತು 8ನೆ ನಂಬರುಗಳ ಮೇಲೂ ಮತ್ತು ಕೇತೇನಹಳ್ಳಿಯ 96ನೆ ನಂಬರಿನ ಮೇಲೂ ಹೋಗಿ ನರಸಿಂಹದೇವರ ಬೆಟ್ಟದ ಜಂಗಲಿ 3ನೆ ತಾಕಿನ ಈಶಾನ್ಯ ಮೂಲೆಯನ್ನು ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಮನ್ನಾ ಜಂಗಲಿ 3ನೆ ತಾಕಿನ ಉತ್ತರಕಡೆಯಲ್ಲಿ ಹೊರಟು, ದಂಡಿಗಾನಹಳ್ಳಿಯ ಸರ್ವೆ 12ನೆ ನಂಬರಿನ ನೈರುತ್ಯ ಮೂಲೆಯಿಂದ ಸುಮಾರು 3 ಫರಲಾಂಗು ಮತ್ತು 5 ಸರಪಣಿಗಳ ಫಾಸಲೆಯಲ್ಲಿರುವ ನಲ್ಲಾದ ಉತ್ತರಕಡೆಯ ಒಂದು ಸ್ಥಾನವನ್ನು ಬಂದು ಸೇರುತ್ತದೆ; ನಂತರ ವಾಯುವ್ಯಾಭಿಮುಖವಾಗಿ ಸರ್ವೆ 12 ಮತ್ತು 30ನೆ ನಂಬರುಗಳ ಮೇಲೆ ಹೋಗಿ ಕೊನೆಯ ಗ್ರಾಮದ 47ನೆ ಸರ್ವೆ ನಂಬರಿನ ಉತ್ತರ ಮೂಲೆಯನ್ನು ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಉತ್ತರಾಭಿಮುಖವಾಗಿ ದಂಡಿಗಾನಹಳ್ಳಿಯ 30ನೆ ನಂಬರಿನ ಮೇಲೆಯೂ ಮತ್ತು ಮಿಣಕನ ಗುರ್ಕಿ ಗ್ರಾಮದ 30ನೆ ಸರ್ವೆ ನಂಬರಿನ ಮೇಲೆಯೂ ಒಂದು ಫರಲಾಂಗು ಮತ್ತು 5 ಸರಪಣಿಗಳ ವರಿಗೂ ಹೋಗುತ್ತದೆ; ನಂತರ ವಾಯುವ್ಯಾಭಿಮುಖವಾಗಿ ಕಡೆ ಸರ್ವೆ ನಂಬರಿನ ಮೇಲೆ 5 ಸರಪಣಿಗಳದೂರದ ವರಿಗೆ ಹೋಗುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಮಿಣಕನಗುರ್ಕಿ ಗ್ರಾಮದ ಸರ್ವೆ 212 ಮತ್ತು 211ನೆ ನಂಬರುಗಳ ಮೇಲೆ 6 ಫರಲಾಂಗುಗಳದೂರದ ವರಿಗೂ ಹೋಗುತ್ತದೆ; ನಂತರ ಪಶ್ಚಿಮಾಭಿಮುಖವಾಗಿಯೂ ಮತ್ತು ಈಶಾನ್ಯಾಭಿಮುಖವಾಗಿಯೂ ಅದೇ ಗ್ರಾಮದ 211ನೆ ಸರ್ವೆ ನಂಬರಿನ ಮೇಲೆ ಸುಮಾರು 5 ಫರಲಾಂಗುದೂರದ ವರಿಗೆ ಉಭಯ ಕಡೆಯಲ್ಲಿಯೂ ಹೋಗಿ ಪಿಡಚನಹಳ್ಳಿಯ ಸರ್ವೆ 28ನೆ ನಂಬರಿನ ಆಗ್ನೇಯ ಮೂಲೆಯಿಂದ ಸುಮಾರು ಒಂದು ಫರಲಾಂಗು ಮತ್ತು 5 ಸರಪಣಿಗಳ ಫಾಸಲೆಯಲ್ಲಿರುವ ಪಿಡಚನಹಳ್ಳಿಯ ಸರ್ವೆ 29ನೆ ನಂಬರಿನ ದಕ್ಷಿಣ ಗಡಿಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಸರ್ವೆ 29ನೆ ನಂಬರ ಮೇಲೆ ಹೊರಟು ಪಿಡಚನಹಳ್ಳಿಯ 29ನೆ ಸರ್ವೆ ನಂಬರಿನ ವಾಯುವ್ಯ ಮೂಲೆಯಿಂದ ಸುಮಾರು 3 ಫರಲಾಂಗು ಮತ್ತು 7 ಸರಪಣಿಗಳ ದೂರದಲ್ಲಿರುವ ತಾಕಲಹಳ್ಳಿಯ ಸರ್ವೆ 50ನೆ ನಂಬರಿನ ದಕ್ಷಿಣ ಗಡಿಯಲ್ಲಿನ ಒಂದು ಸ್ಥಾನವನ್ನು ಸೇರುತ್ತದೆ; ನಂತರ ವಾಯುವ್ಯಾಭಿಮುಖವಾಗಿ ತಾಕಲಹಳ್ಳಿಯ ಸರ್ವೆ 50 ಮತ್ತು 45ನೆ ನಂಬರುಗಳ ಮೇಲೆ ಹೋಗಿ ಅದೇ ಗ್ರಾಮದ ಸರ್ವೆ 46ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ 44ನೆ ನಂಬರಿನ ಮೇಲೆ ಹೋಗಿ ನಾಮಗೊಂಡ್ಲು ಗ್ರಾಮದ ಸರ್ವೆ 110ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ವಾಯುವ್ಯಾಭಿಮುಖವಾಗಿ ನಾಮಗೊಂಡ್ಲು ಗ್ರಾಮದ ಸರ್ವೆ 110ನೆ ನಂಬರಿನ ಪೂರ್ವಗಡಿಯ ಮೇಲೆ ಹೋಗಿ ಕೊಲ್ಮಿಹಳ್ಳಿಯ ಸರ್ವೆ 3ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಕೊಲ್ಮಿಹಳ್ಳಿಯ ಸರ್ವೆ 3 ಮತ್ತು 2ನೆ ನಂಬರು ಮತ್ತು ಐಮನಕೆರೆಯ ಪೂರ್ವಗಡಿ ಪೂರ್ವ ಕಡೆಯಲ್ಲಿ ಹೊರಟು ಐಮನಕೆರೆ, ತಾಕಂತಹಳ್ಳಿ ಮತ್ತು ನಲಕಾರನಹಳ್ಳಿಯ ಮುಕ್ಕಾಪ್ಪೆ ಬಾಂದುಗಳನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ತಾಕಂತಹಳ್ಳಿಯ ಸರ್ವೆ 6ನೆ ನಂಬರಿನ ಮೇಲೆ ಹೋಗಿ ಮೊದಲು ಹೊರಟ ಸ್ಥಾನವನ್ನು ಸೇರುತ್ತದೆ.

ಷರಾಗಳು.

A. ಇದರಡಿ ಕಂಡ ಹಕ್ಕುಗಳನ್ನು ಈ ಜಂಗಲಿಯಲ್ಲಿ ಅಂಗೀಕರಿಸಿರುತ್ತದೆ.

(1) ದಾರಿಯ ಹಕ್ಕು—20 ಗಜ ಅಗಲ, ಕೇತೇನಹಳ್ಳಿಯ ಸರ್ವೆ 7ನೆ ನಂಬರಿನ ಮೇಲೆ ಹೋಗಿ 7ನೆ ನಂಬರಿನಲ್ಲಿರುವ ಜಂಬುಹಳ್ಳವನ್ನು ಮುಟ್ಟುತ್ತದೆ. ದುರ್ಭಿಕ್ಷ ಕಾಲದಲ್ಲಿ ನೀರಿಗಾಗಿ ರಾಸುಗಳನ್ನು ಈ ಹಳ್ಳಕ್ಕೆ ತೆಗೆದುಕೊಂಡು ಹೋಗಬಹುದು.

(2) ಧಾರಿಯ ಹಕ್ಕು—20 ಗಜ ಅಗಲ, ಸಾದೇನಹಳ್ಳಿ ರೈತರು ಸರ್ವೆ 45ನೆ ನಂಬರಾಗಿರುವ ಕೆರೆಯಲ್ಲಿ ತಮ್ಮ ರಾಸುಗಳಿಗೆ ನೀರನ್ನು ಕುಡಿಸಬಹುದು. ಈ ಕೆರೆಯನ್ನು ರೈತರು ದುರಸ್ತಿನಲ್ಲಿ ಇಟ್ಟುಕೊಳ್ಳಬೇಕು.

(3) ಭಂಡಿದಾರಿ—ಗದ್ದಮಗಾನಹಳ್ಳಿಯಿಂದ ಯರ್ರಮಾರೇನಹಳ್ಳಿಗೆ ಹೋಗುತ್ತೆ. ಜನಗಳ, ರಾಸುಗಳ ಮತ್ತು ಭಂಡಿಗಳ ಸಂಚಾರಕ್ಕೆ ಖುಲ್ಲಾ ಇರುತ್ತೆ. ತೇಕಲಹಳ್ಳಿಯ ಸರ್ವೆ 45ನೆ ನಂಬರಿನಲ್ಲಿಯೂ ಯರ್ರಮಾರೇನಹಳ್ಳಿಯ ಸರ್ವೆ 31ನೆ ನಂಬರಿನಲ್ಲಿಯೂ ದಾರಿ ಹೋಗುತ್ತೆ.

(4) ಯಡೇರಹಳ್ಳಿಯಿಂದ ಕೊತ್ತೂರಿಗೆ ಆನೆಮಡಗು ಗ್ರಾಮದ ಸರ್ವೆ 74 ಮತ್ತು 73ನೆ ನಂಬರುಗಳ ಮೇಲೆ ಹೋಗುವ ಭಂಡಿದಾರಿ.

(5) ಮಾರಪ್ಪನಹಳ್ಳಿಯಿಂದ ಕೋಟೇನಹಳ್ಳಿಗೆ, ಸಾದೇನಹಳ್ಳಿಯ ಸರ್ವೆ 17 ಮತ್ತು 15ನೆ ನಂಬರುಗಳ ಮೇಲೆಯೂ ಕೇತೇನಹಳ್ಳಿಯ ಸರ್ವೆ 20ನೆ ನಂಬರಿನ ಮೇಲೆಯೂ ಹೋಗುವ ಭಂಡಿದಾರಿ, ಜನಗಳ, ರಾಸುಗಳ ಮತ್ತು ಭಂಡಿಗಳ ಉಪಯೋಗಕ್ಕೆ ಖುಲ್ಲಾ ಇರತಕ್ಕದ್ದು.

(6) ಮೇಲ್ಕಂಡ ದಾರಿ ಸಾದೇನಹಳ್ಳಿ ಸರ್ವೆ 15ನೆ ನಂಬರಿನಲ್ಲಿ ಒಡದು ಆನೆಮಡಗು ಮತ್ತು ಯರ್ರಮಾರೇನಹಳ್ಳಿ ಮೇಲೆ ಬಿಡಿಕೇನಹಳ್ಳಿಗೆ ಹೋಗುವ ಬಂಡಿದಾರಿ.

(7) ದಂಡಿಗಾನಹಳ್ಳಿಯಿಂದ ಕೇತನಹಳ್ಳಿಗೆ ಹೋಗುವ ಕಾಲುದಾರಿ. ಜನಗಳ ಮತ್ತು ಜಾನವರುಗಳ ಉಪಯೋಗಕ್ಕೆ ಖುಲ್ಲಾ. ಈ ದಾರಿ ದಂಡಿಗಾನಹಳ್ಳಿ ಸರ್ವೆ 12ನೆ ನಂಬರಿನಲ್ಲಿಯೂ ಕೇತನಹಳ್ಳಿಯ ಸರ್ವೆ 45 ಮತ್ತು 7ನೆ ನಂಬರುಗಳಲ್ಲಿಯೂ ಹೋಗುತ್ತೆ.

(೮) ಮೇಲ್ಕಂಡ 5ನೆ ನಂಬರು ಬಂಡಿದಾರಿಯಿಂದ ವಡದು ಕೇತನಹಳ್ಳಿಯ ಸರ್ವೆ 42ನೆ ನಂಬರಿನ ಮೇಲೆ ಹೋಗುವ ಕಾಲುದಾರಿ.

B. ಇದರಡಿ ಕಂಡ ಜಮೀನುಗಳನ್ನು ಈ ಜಂಗಲಿಗೆ ಆವರಣಗಳಾಗಿ ಭಾವಿಸಬೇಕು. ಇವುಗಳಲ್ಲಿ ಕಾತೇನಹಳ್ಳಿ, ಸಾದೇನಹಳ್ಳಿ, ಆನೆಮಡಗು ಮತ್ತು ಯರ್ರಮಾರೇನಹಳ್ಳಿ ಗ್ರಾಮಗಳ ರೈತರು ಮಾಮೂಲಿನಂತೆ ತಮ್ಮ ಜಾನವರುಗಳನ್ನು ಮುಫತ್ತಾಗಿ ಮೇಯಿಸಿಕೊಳ್ಳುವದಕ್ಕೂ ಮತ್ತು ಮನೆ ಕೆಲಸಗಳಿಗಾಗಿ ಸೌದೆ ಮತ್ತು ಮರಸಾಮಾನುಗಳನ್ನು ತೆಗೆದುಕೊಂಡು ಹೋಗುವದಕ್ಕೂ ಹಕ್ಕುಳ್ಳವರಾಗಿರುತ್ತಾರೆ.

ಕೇತೇನಹಳ್ಳಿ.

ಖರಾಬು ಸರ್ವೆ ನಂಬರ್‌ಗಳು 10, 36, 40, 52, 72, 75, 81, 101ರ ಭಾಗ, 117, 145ರಲ್ಲಿ ಒಂದು ಭಾಗ, 152, 180.

ಗೋಮಾಳ ಸರ್ವೆ ನಂಬರುಗಳು 6, 25, 34, 42ರಲ್ಲಿ ಒಂದು ಭಾಗ, 50, 54, 87, 96ರಲ್ಲಿ ಒಂದು ಭಾಗ, 102, 104, 110, 142, 151, 158, 159, 160 ಮತ್ತು 189 ಮತ್ತು ಗ್ರಾಮದ ಹಿಡುವಳಿಯಲ್ಲಿ ಇರುವ ಮತ್ತು ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಎಲ್ಲಾ ಜಮೀನುಗಳು.

ಆನೆಮಡಗು.

ಖರಾಬು ಸರ್ವೆ ನಂಬರು 3, 82, 93, 113ರಲ್ಲಿ ಒಂದು ಭಾಗ.

ಗೋಮಾಳ, 5, 6, 20, 31, (ಒಂದು ಭಾಗ), 61, 73 (ಒಂದು ಭಾಗ) ಮತ್ತು ಹಿಡುವಳಿಯಲ್ಲಿರುವ ಮತ್ತು ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಗ್ರಾಮದ ಎಲ್ಲಾ ಜಮೀನುಗಳು.

ಸಾದೇನಹಳ್ಳಿ.

ಖರಾಬು ನಂಬರು 15, 3, 11, 18, 21, 17.

ಗೋಮಾಳ ನಂಬರು 26 ಮತ್ತು ಗ್ರಾಮದ ಆಕಾರ ಕಂಡ ಹಿಡುವಳಿಯಲ್ಲಿ ಇರುವ ಮತ್ತು ಹಿಡುವಳಿಯಲ್ಲಿ ಇಲ್ಲದ ತಮಾಂ ಜಮೀನುಗಳು.

ಯರ್ರಮಾರೇನಹಳ್ಳಿ.

ಖರಾಬು 29 (ಭಾಗ), 30, 41, 45, 47, 61, 106, 108 (ಭಾಗ).

ಗೋಮಾಳ 7, 17 (ಭಾಗ) 63, 84 ಮತ್ತು 133 ಮತ್ತು ಗ್ರಾಮದ ಆಕಾರ ಕಂಡ ಹಿಡುವಳಿಯಲ್ಲಿ ಇರುವ ಮತ್ತು ಹಿಡುವಳಿಯಲ್ಲಿ ಇಲ್ಲದ ತಮಾಂ ಜಮೀನುಗಳು.

ತಾರೀಖು 26ನೆ ಆಗಸ್ಟು 1909.

ನಂ. ರೆ. 1786—ಫಾ. 12-09-4. ಸನ್ 1909ನೆ ಜುಲೈ 24ನೆ ಮುರ್ಕಂ ರೆ. 771—ಫಾ. 12-09-2ನೆ ನಂಬರ ಇಸ್ತಿಹಾರ್ನಾಮೆಯಿಂದ ಕೊಡೋಣವಾದ 15 ದಿವಸಗಳ ಪ್ರಿವಿಲೇಜ್ ರಜಾವನ್ನು ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟು ಡೆಪ್ಯುಟಿ ಕನ್ಸರವೇಟರ್ ಮಿ॥ ಟಿ. ಅಬ್ದುಲ್‌ಕರೀಂರವರು 1909ನೆ ಆಗಸ್ಟು 2ನೆ ತಾರೀಖು ಪೂರ್ವಾಹ್ನದ ಲಾಗಾಯಿತು ಉಪಯೋಗಿಸಿಕೊಂಡು ಅದೇ ಮಾಹೆ 13ನೆ ತಾರೀಖಿನ ಮಧ್ಯಾಹ್ನದಮೇಲೆ ಕೆಲಸದಮೇಲೆ ಹಾಜರಾಗಿರುವುದರಿಂದ ಅವರು ಉಪಯೋಗಿಸಿಕೊಳ್ಳದೆ ನಿಂತಿರುವ 4 ದಿವಸಗಳ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 26ನೆ ಆಗಸ್ಟು 1909.

ನಂ. ರೆ. 1791—ಲ್ಯಾ. ರೆ. 65-09-5, ಸೀನಿಯರ ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ. ಎ. ನಾರಾಯಣೈಯ್ಯಂಗಾರ್, ಬಿ.ಎ.,ಬಿ.ಎಲ್. ಯವರಿಗೆ 1909ನೆ ಆಗಸ್ಟು 7ನೆ ಮುರ್ಕಂ ರೆ. 1219—ಲ್ಯಾ. ರೆ. 65-09-2ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಕೊಟ್ಟ 14 ದಿವಸಗಳ ಪ್ರಿವಿಲೇಜ್ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 27ನೆ ಆಗಸ್ಟು 1909.

ನಂ. ರೆ. 1853—ಲ್ಯಾ. ರೆ. 96-09-2, ಚಾಮರಾಜನಗರ ತಾಲ್ಲೂಕು ಅಮಲ್ದಾರ್ ಮಿ॥ ಎಸ್. ವೆಂಕಟರಮಣ ಶಾಸ್ತ್ರಿ ಬಿ.ಎ. ಯವರಿಗೆ ಮರುಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇರುತ್ತದೆ.

2. ಸದರೀಯವರು ರಜಾಮೇಲೆ ಇರುವಾಗ ಅಥವಾ ಬೇರೆ ಹುಕುಂ ಕೊಡುವ ವರೆಗೆ ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಜುಡಿಷಿಯಲ್ ಹೆಡ್ ಮುನ್ಷಿ ಮಿ॥ ಎನ್. ಶ್ರೀನಿವಾಸಯ್ಯಂಗಾರ್, ಬಿ.ಎ. ಯವರನ್ನು ಚಾಮರಾಜನಗರ ತಾಲ್ಲೂಕು ಅಮಲ್ದಾರ ಮತ್ತು 3ನೆ ತರಗತಿ ಮೇಜಿಸ್ಟ್ರೇಟರನ್ನಾಗಿ ಮೊಕರರ್ಮಾಡಿ ಇದೆ.

ತಾರೀಖು 28ನೇ ಆಗಸ್ಟು 1909.

ನಂ. ರೆ. 1864—ಫಾರೆಸ್ಟ್ 4-09-3, ಸನ್ 1900ನೇ ಇಸವಿ XIನೇ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನಿನ 4ನೇ ಸೆಕ್ಷನ್ನಿನ ವಿಧಿಗಳನ್ನು ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್ರವರ ಸರ್ಕಾರದಿಂದ ಪ್ರಸಿದ್ಧಪಡಿಸುವದೇನೆಂದರೆ :—

ಇದರಡಿ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಚೆಕ್ಕು ಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನ್ನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟಾಗಿ ಏರ್ಪಾಡು ಆಗತಕ್ಕದ್ದೆಂದು ಯೋಚಿಸಿರುತ್ತೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೋಕು, ಹೋಬಳಿ, ಗ್ರಾಮ.	ಅಂದಾಜು ವಿಸ್ತೀರ್ಣ.	ಪ್ರಾಂತ ಹೆಸರು.	ಸ್ಥಳ ಚೆಕ್ಕು ಬಂದಿ.
ಶಿವಮೊಗ್ಗ.	ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೋಕುಗಳು.	12,522 ಎಕರೆ. ಅಥವಾ 19 ಸ್ಕ್ವೇರ್ 362 ಎಕರೆ.	ಸೂಳೆಕೆರೆ ಬ್ಲಾಕ್.	ಚನ್ನಗಿರಿ-ಮಳೇಬೆನ್ನೂರು ರಸ್ತೆಯ ವಾಯುವ್ಯದಲ್ಲಿರುವ ಡಿಸ್ಟ್ರಿಕ್ಟು ಜಂಗಲ್.

ಉತ್ತರಕ್ಕೆ—ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 9ರ ಈಶಾನ್ಯ ಮೂಲೆಯಿಂದ ಲೈನ್ ಹೊರಟು ಪೂರ್ವದಿಕ್ಕಾಗಿ 4 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ ದಕ್ಷಿಣಗಡಿಯನ್ನು ಅನುಸರಿಸಿ ದಾಗಿನಕಟ್ಟೆ, ಬುಳ್ಳನಾಯ್ಕನಹಳ್ಳಿ, ಶ್ರೀಂಗಾರಬಾಗ್ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಉತ್ತರದಿಕ್ಕಾಗಿ 2 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ, ಶ್ರೀಂಗಾರಬಾಗ್, ಗಡಿಯನ್ನು ಅನುಸರಿಸಿ, ಶ್ರೀಂಗಾರಬಾಗಿನ ಸರ್ವೆ ನಂಬರು 17ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 3 ಫರ್ಲಾಂಗುಗಳು ಶ್ರೀಂಗಾರಬಾಗ್ ಸರ್ವೆ ನಂಬರು 16ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 25ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 1 ಫರ್ಲಾಂಗು 8 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರು 16ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 24ರ ನೈರುತ್ಯಮೂಲೆಗೆ ಸೇರುತ್ತದೆ. ಪುನಃ ಅದೇ ದಿಕ್ಕಾಗಿ 4 ಫರ್ಲಾಂಗು 5 ಸರಪಣಿಗಳು ಸದರಿ ಸರ್ವೆ ನಂಬರು 16ರಲ್ಲಿ ಹಾದು, ಸರ್ವೆ ನಂಬರು 31ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 2 ಫರ್ಲಾಂಗು 7 ಸರಪಣಿಗಳು ಶ್ರೀಂಗಾರಬಾಗ್ ಸರ್ವೆ ನಂಬರು 16–15ರಲ್ಲಿ ಹಾದು, ಮೈಲಪುರದ ಸರ್ವೆ ನಂಬರು 35ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಮೈಲಿ 1 ಫರ್ಲಾಂಗು 5 ಸರಪಣಿಗಳು ಮೈಲಪುರದ ಸರ್ವೆ ನಂಬರು 28ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 26ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 3 ಫರ್ಲಾಂಗು 5 ಸರಪಣಿಗಳು, ಸದರಿ ಗ್ರಾಮದ ಸರ್ವೆ ನಂಬರು 25ರ ಪಶ್ಚಿಮಗಡಿಯನ್ನು ಅನುಸರಿಸಿ ಮೈಲಿಪುರ, ಜನಕನಹಳ್ಳಿ, ಮೊಹರ್ದಿಪುರ ಕಾವಲ್ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಈಶಾನ್ಯವಾಗಿ 6 ಫರ್ಲಾಂಗು 3 ಸರಪಣಿಗಳು ಮೈಲಿಪುರ ಸರ್ವೆ ನಂಬರು 25ರ ದಕ್ಷಿಣಗಡಿಯನ್ನು ಅನುಸರಿಸಿ ಮೈಲಿಪುರ, ಮೊಹರ್ದಿಪುರ, ಹೊಸಹಳ್ಳಿ, ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಲೈನ್ ಹೊರಟು ಆಗ್ನೇಯವಾಗಿ 3 ಫರ್ಲಾಂಗು 3 ಸರಪಣಿಗಳು ದಕ್ಷಿಣವಾಗಿ 3 ಫರ್ಲಾಂಗು 2 ಸರಪಣಿಗಳು ಪುನಃ ಆಗ್ನೇಯವಾಗಿ 1 ಮೈಲಿ, 7 ಫರ್ಲಾಂಗು ಸೂಳೆಕೆರೆಯ ಪಶ್ಚಿಮಗಡಿಯನ್ನು ಅನುಸರಿಸಿ ಮೊಹರ್ದಿಪುರ ಕಾವಲ್, ರುದ್ರಾಪುರ ಕಾವಲ್, ಮತ್ತು ಸೂಳೆಕೆರೆ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 6 ಫರ್ಲಾಂಗು ಸೂಳೆಕೆರೆ ಪಶ್ಚಿಮಗಡಿಯನ್ನು ಅನುಸರಿಸಿಯೂ, ನೈರುತ್ಯವಾಗಿ 4 ಫರ್ಲಾಂಗು ದಕ್ಷಿಣವಾಗಿ 3 ಫರ್ಲಾಂಗು ಅರಶಿನಗಟ್ಟ ಗ್ರಾಮದ ಉತ್ತರ ಮತ್ತು ಪಶ್ಚಿಮಗಡಿಯನ್ನು ಅನುಸರಿಸಿ ಅರಶಿನಗಟ್ಟ, ರುದ್ರಾಪುರ ಕಾವಲ್, ಸಿದ್ದಾಪುರ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಪೂರ್ವವಾಗಿ 2 ಫರ್ಲಾಂಗು 5 ಸರಪಣಿಗಳು ಅರಶಿನಗಟ್ಟ ಗ್ರಾಮದ ದಕ್ಷಿಣ ಗಡಿಯನ್ನು ಅನುಸರಿಸಿ, ಸಿದ್ದಾಪುರ, ಅರಶಿನಗಟ್ಟ, ಸೋಮಶೆಟ್ಟಹಳ್ಳಿ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅಲ್ಲಿಂದ ನೈರುತ್ಯ ಮತ್ತು ಆಗ್ನೇಯವಾಗಿ ಸುಮಾರು 1 ಮೈಲಿ 2 ಫರ್ಲಾಂಗುಗಳು ಸೋಮಶೆಟ್ಟಹಳ್ಳಿ ಪಶ್ಚಿಮಗಡಿಯನ್ನು ಅನುಸರಿಸಿ, ಸಿದ್ದಾಪುರ, ಸೋಮಶೆಟ್ಟಹಳ್ಳಿ, ಲಿಂಗದಹಳ್ಳಿ ಗ್ರಾಮಗಳ ಮುಕ್ಕುಪ್ಪೆ ಬಾಂದಿನ (ವಾಯುವ್ಯ 26 ಸರಪಣಿಗಳ ದೂರದಲ್ಲಿ ಸಿದ್ದಾಪುರ ಸೋಮಶೆಟ್ಟಹಳ್ಳಿ ಗಡಿಯಲ್ಲಿನ ಒಂದು ಕೋಣಕ್ಕೆ ಸೇರುತ್ತದೆ.)

ದಕ್ಷಿಣಕ್ಕೆ—ಅಲ್ಲಿಂದ ಲೈನ್ ಹೊರಟು ವಾಯುವ್ಯವಾಗಿ 7 ಫರ್ಲಾಂಗು ಸಿದ್ದಾಪುರ ಸರ್ವೆ ನಂಬರು 32ರಲ್ಲಿ ಹಾದು, ಸಿದ್ದಾಪುರ, ಲಿಂಗದಹಳ್ಳಿ, ಮಧರನಾಯ್ಕನಹಳ್ಳಿ, ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 1 ಮೈಲಿ ಮದರನಾಯ್ಕನಹಳ್ಳಿ ಸರ್ವೆ ನಂಬರು 16ರಲ್ಲಿ ಹಾದು, ನಂತರ ಪಶ್ಚಿಮವಾಗಿ 3 ಫರ್ಲಾಂಗು 7 ಸರಪಣಿಗಳು ನೈರುತ್ಯವಾಗಿ 3 ಫರ್ಲಾಂಗು 2 ಸರಪಣಿಗಳು ವಾಯುವ್ಯವಾಗಿ 2 ಫರಲಾಂಗು ಮದರನಾಯ್ಕನಹಳ್ಳಿ ಸರ್ವೆ ನಂಬರು 16ರ ಉತ್ತರ ಗಡಿಯನ್ನು ಅನುಸರಿಸಿ ಸದರಿ ನಂಬರಿನ ವಾಯುವ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಶುದ್ಧಪಶ್ಚಿಮವಾಗಿ 1 ಮೈಲಿ 1 ಫರ್ಲಾಂಗು 7 ಸರಪಣಿಗಳು ಕೊಮಾರನಹಳ್ಳಿ ಸರ್ವೆ ನಂಬರು 29ರಲ್ಲಿ ಹಾದು, ಸದರಿ ಗ್ರಾಮದ 28ನೇ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು 7 ಸರಪಣಿಗಳು ಕೊಮಾರನಹಳ್ಳಿ, ಸರ್ವೆ ನಂಬರು 28ರಲ್ಲಿ ಹಾದು, ಸರ್ವೆ ನಂಬರು 41ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರ್ಲಾಂಗು 5 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರುಗಳು 41,

40, 38ರ ಪಶ್ಚಿಮಗಡಿಯನ್ನನುಸರಿಸಿ, ಸರ್ವೆ ನಂಬರು 38ರ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಫರ್ಲಾಂಗು ಕೊಮಾರನಹಳ್ಳಿ ಸರ್ವೆ ನಂಬರು 37ರ ಪಶ್ಚಿಮಗಡಿಯನ್ನು ಅನುಸರಿಸಿ ಸದರಿ ನಂಬರಿನ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇದಿಕ್ಕಾಗಿ 1 ಮೈಲಿ ಕೊಮಾರನಹಳ್ಳಿ ಸರ್ವೆ ನಂಬರು 28 ಮಲಿಗೇನಹಳ್ಳಿ ಸರ್ವೆ ನಂಬರು 16ರಲ್ಲಿ ಹಾದು, ಮಲಿಗೇನಹಳ್ಳಿ ಸರ್ವೆ ನಂಬರು30ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರ್ಲಾಂಗು 5 ಸರಪಣಿಗಳು ಮಲಿಗೇನಹಳ್ಳಿ ಸರ್ವೆ ನಂಬರು 16–9ಗಳಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 28ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 5 ಫರ್ಲಾಂಗು ಸದರಿ ಗ್ರಾಮದ ಸರ್ವೆ ನಂಬರು 9ರಲ್ಲಿ ಹಾದು ಗೂಂಡಕಟ್ಟೆಯ ಉತ್ತರಗಡಿಯಲ್ಲಿ ಒಂದು ಕೋಣಕ್ಕೆ ಸೇರುತ್ತದೆ. ಅಲ್ಲಿಂದ ನೈರುತ್ಯವಾಗಿಯೂ, ದಕ್ಷಿಣವಾಗಿಯೂ, ಸುಮಾರು 3 ಮೈಲಿ 3 ಫರ್ಲಾಂಗು ಸೈದನಕಲ್ಲಹಳ್ಳಿ ಉತ್ತರಗಡಿಯನ್ನು ಅನುಸರಿಸಿ ತ್ಯಾಗದಕಟ್ಟೆ ಸರ್ವೆ ನಂಬರು 6ರ ಆಗ್ನೇಯಮೂಲೆಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನ್ ಹೊರಟು ಈಶಾನ್ಯವಾಗಿ 6 ಫರಲಾಂಗು 3 ಸರಪಣಿಗಳು ತ್ಯಾಗದಕಟ್ಟೆ ಸರ್ವೆ ನಂಬರು 22ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 20ರ(ಕೆರೆ) ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 1 ಫರ್ಲಾಂಗು 8 ಸರಪಣಿಗಳು ಸದರಿ ಸರ್ವೆ ನಂಬರಿನ ಪೂರ್ವಗಡಿಯನ್ನು ಅನುಸರಿಸಿ ಸದರಿ ನಂಬರಿನ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 4 ಫರ್ಲಾಂಗುಗಳು ಸರ್ವೆ ನಂಬರು 22ರಲ್ಲಿ ಹಾದು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಪೂರ್ವ ಉತ್ತರ, ಪಶ್ಚಿಮವಾಗಿ ಸುಮಾರು 2 ಮೈಲಿ 3 ಫರ್ಲಾಂಗು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ದಕ್ಷಿಣ, ಪೂರ್ವ ಮತ್ತು ಉತ್ತರಗಡಿಗಳನ್ನು ಅನುಸರಿಸಿ ಸದರಿ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರದಲ್ಲಿರುವ ಸ್ಥಳಕ್ಕೆ ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ 4 ಫರ್ಲಾಂಗುಗಳು ಚೀಲಾಪುರ ಸರ್ವೆ ನಂಬರು 8ರಲ್ಲಿಹಾದು ಸದರಿ ಗ್ರಾಮದ ಉತ್ತರಗಡಿಯಲ್ಲಿ ಸರ್ವೆ ನಂಬರು 10ರ ಈಶಾನ್ಯಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರವಿರುವ ಸ್ಥಳಕ್ಕೆ ಸೇರುತ್ತದೆ. ನಂತರ ವಾಯುವ್ಯವಾಗಿ ಸುಮಾರು ಒಂದು ಮೈಲಿ ಘಾಸಲೆ ಬೈರನಹಳ್ಳಿ ಸರ್ವೆ ನಂಬರು 7ರಲ್ಲಿ ಹಾದು ಬೈರನಹಳ್ಳಿ ಸರ್ವೆ ನಂಬರು 8ರ ಈಶಾನ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಉತ್ತರವಾಗಿ 6 ಫರ್ಲಾಂಗು 8 ಸರಪಣಿಗಳು ಬೈರನಹಳ್ಳಿ ಸರ್ವೆ ನಂಬರು 7, ಚನ್ನೇನಹಳ್ಳಿ ಸರ್ವೆ ನಂಬರು 23ರಲ್ಲಿ ಹಾದು ಚನ್ನೇನಹಳ್ಳಿ, ಕುಳಗಟ್ಟೆ, ನಿಲುವಗಲ್ಲು ಮತ್ತು ಕಂಚುಗಾರನಹಳ್ಳಿ ಗ್ರಾಮಗಳ ನಾಗುಪ್ಪೆ ಬಾಂದಿಗೆ ಸೇರುತ್ತದೆ. ನಂತರ ವಾಯುವ್ಯವಾಗಿ 1 ಮೈಲಿ 3 ಫರ್ಲಾಂಗು 5 ಸರಪಣಿಗಳು ಕುಳಗಟ್ಟೆ, ಕಂಚುಗಾರನಹಳ್ಳಿ ಗಡಿಯನ್ನು ಅನುಸರಿಸಿ ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ವಾಯುವ್ಯವಾಗಿ 1 ಫರ್ಲಾಂಗು 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಪೂರ್ವ ಗಡಿಯನ್ನು ಅನುಸರಿಸಿ 143ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 7 ಫರ್ಲಾಂಗುಗಳು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಮೈಲಿ 3 ಫರ್ಲಾಂಗು 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 35, ನಿಲುವಗಲ್ಲು ಸರ್ವೆ ನಂಬರು 15 ಇವುಗಳಲ್ಲಿ ಹಾದು ನಿಲುವಗಲ್ಲು ಸರ್ವೆ ನಂಬರು 14ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 14–13ರ ದಕ್ಷಿಣಗಡಿಯನ್ನು ಅನುಸರಿಸಿ 13ನೆ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಈಶಾನ್ಯವಾಗಿ 5 ಫರ್ಲಾಂಗು 5 ಸರಪಣಿಗಳು ನಿಲುವಗಲ್ಲು ಸರ್ವೆ ನಂಬರು 15ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 48ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 5 ಸರಪಣಿಗಳು ಸರ್ವೆ ನಂಬರು 48ರ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ನಂಬರಿನ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 7 ಸರಪಣಿಗಳು ನಿಲುವಗಲ್ಲು ಸರ್ವೆ ನಂಬರು 36ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 47ರ ಆಗ್ನೇಯಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯುವ್ಯವಾಗಿ 7 ಫರ್ಲಾಂಗು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 39ರ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ ಸುಮಾರು 7 ಫರ್ಲಾಂಗು ನಿಲುವಗಲ್ಲು ಸರ್ವೆ ನಂಬರು 36 ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 11ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 19ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು 3 ಸರಪಣಿಗಳು ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರಿನ 11ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ಸರ್ವೆ ನಂಬರು 10ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 3 ಫರ್ಲಾಂಗು 3 ಸರಪಣಿಗಳು ಸರ್ವೆ ನಂಬರು 10 ಮತ್ತು 9ರ ಪೂರ್ವಗಡಿಯನ್ನು ಅನುಸರಿಸಿ ಹೊರಟ ಸ್ಥಳಕ್ಕೆ ಹೋಗಿ ಸೇರುತ್ತದೆ.

ಬೆಂಕೇನಹಳ್ಳಿ ಗ್ರಾಮದ ಇದರಡಿ ಕಂಡ ಜಮೀನುಗಳನ್ನು ಈ ಫಾರೆಸ್ಟ್ ತಾಕಿಗೆ ಆವರಣಗಳಾಗಿ ಎಣಿಸತಕ್ಕದ್ದು :—

ಸರ್ವೆ ನಂ.		ವಿಸ್ತೀರ್ಣ.		ತರಗತಿ.
1	...	26·4	...	ಖುಷ್ಕಿ
2	...	29·22	...	ಡಿಟೋ
3	...	25·28	..	ಇದರಪೈಕಿ 1·15 ತರಿ
4	...	10·1	...	ಖುಷ್ಕಿ
6	...	20·1	...	ಡಿಟೋ
7	...	32·38	...	ಡಿಟೋ
8	...	8·16	...	ಡಿಟೋ
9	...	5·28	...	ಡಿಟೋ
10	...	19·30	...	ಡಿಟೋ
11	...	20·27	...	ಡಿಟೋ
12	...	25·20	...	ಡಿಟೋ
15	...	6·3	...	ಡಿಟೋ
16	...	15·17	...	ಡಿಟೋ
17	...	12·20	...	ಡಿಟೋ
18	...	336·6	...	ಡಿಟೋ

ಸರ್ವೆ ನಂ.		ವಿಸ್ತೀರ್ಣ.		ತರಗತಿ.
				(ಗೋಮಾಳ)
19	...	5·37	...	ಡಿಟೋ
20	...	10·7	...	ಡಿಟೋ
21	...	12·15	...	ಡಿಟೋ
22	...	8·25	...	ಡಿಟೋ
23	...	14·11	...	ಡಿಟೋ
24	...	32·1	...	ಡಿಟೋ
25	...	15·15	...	ಡಿಟೋ
26	...	13·10	...	ಡಿಟೋ
28	...	16·15	...	ಡಿಟೋ
29	...	·26	...	ಡಿಟೋ

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಮಿ॥ ಸಿ. ವೆಂಕಟರಾವ್, ಬಿ.ಎ. ಯವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜಮೀನಿನ ಯಾವುದಾದರೂ, ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನೂ, ಅವುಗಳ ಸ್ವಭಾವವನ್ನೂ ಮತ್ತು ಪರಿಮಾಣವನ್ನೂ ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ ಎರಡನೆಯ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಾಗಿ, ಮೊಕರರ್ರಮ್ಮಾಡಲೂ, ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಿಗೆ ಸರ್ಕಾರ್ ತರಫು ಕುಮ್ಮಕ್ ಮಾಡಲು ಹಾಜರಾಗುವಂತೆ ಮೊಕರರ್ರಮ್ಮಾಡಲೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ಕೊಡಲ್ಪಟ್ಟಿರುವ ಅಧಿಕಾರಗಳನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು, ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಹಿಡಿಯುವ ರೆವಿನ್ಯೂ ಆಫೀಸರಾಗಿ ಮೊಕರರ್ರಮ್ಮಾಡುವುದಕ್ಕೂ ಸಹ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 30ನೆ ಆಗಸ್ಟ್ 1909.

ನಂ. ರೆ. 1892—ಲ್ಯಾ. ರೆ. 101-09-2, ಕೋಲಾರದ ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ ಮಿ॥ ಎ. ವೇದಾಂತದೇಶಿಗಂ ಅಯ್ಯಂಗಾರ್ರಿಗೆ 1909ನೆ ಜುಲೈ 26ನೆ ತಾರೀಖಿನಿಂದ 15 ದಿವಸಗಳ ಪ್ರಿವಿಲೇಜ್ ರಜಾ ಕೊಡಲಾಯಿತು.

2. ಮೇಲ್ಕಂಡ ರಜಾ ಕಾಲದಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಎಸ್. ಶಾಮಣ್ಣ, ಬಿ.ಎ. ಯವರು ಸದರಿ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿದ್ದರು.

ತಾರೀಖು 2ನೆ ಸೆಪ್ಟಂಬರ 1909.

ನಂ. ರೆ. 1934—ಲ್ಯಾ ರೆ. 89-09-2, ರೆವಿನ್ಯೂ ಕಮಿಷನರವರ 1909ನೆ ಆಗಸ್ಟ್ 11ನೆಯ ಮರ್ಕೂಂ 2005ನೆ ನಂಬರ್ ಇಸ್ತಿಹಾರ್ನಾಮೆಯನ್ನನುಸರಿಸಿ 15 ದಿವಸಗಳ ಪ್ರಿವಿಲೇಜ್ ರಜಾಮೇಲಿರುವ ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮಿ॥ ಪಿ. ಸುಬ್ಬರಾಯುಲು ನಾಯಿಡುಯವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಸಿರಸ್ತೆದಾರ್ ಕೆ. ಎನ್. ರಾಮಚಂದ್ರಯ್ಯನವರನ್ನು ಸದರೀ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್ ಮತ್ತು 3ನೆ ತರಗತಿಯ ಮೇಜಿಸ್ಟ್ರೇಟರನ್ನಾಗಿ ಮೊಕರರ್ರಮ್ಮಾಡಿ ಇದೆ

ತಾರೀಖು 2ನೆ ಸೆಪ್ಟಂಬರ್ 1909.

ನಂ. ರೆ. 1945—ಲ್ಯಾ. ರೆ. 115-09-2, ಮೈಸೂರು ಸರ್ವಿಸ್ ರೆಗ್ಯುಲೇಷನ್ನಿನ 177ನೆ ಪ್ರಕರಣವನ್ನನುಸರಿಸಿ, ಆನೆಕಲ್ಲು ತಾಲ್ಲೂಕು ಅಮಲ್ದಾರ್ ಮಿ॥ ಸಿ. ಎಸ್. ಕುಪ್ಪುಸ್ವಾಮಿ ಅಯ್ಯಂಗಾರ್ರವರಿಗೆ 1909ನೆ ಇಸವಿ ಸೆಪ್ಟಂಬರು ಗುರ್ರೆ ತಾರೀಖು ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇರುತ್ತದೆ.

ಕಾಯಂ ಅಮಲ್ದಾರ್ರು ರಜಾದಮೇಲೆ ಗೈರ್ ಹಾಜರಾಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್‌ನಲ್ಲಿ 1ನೆಯ ದರ್ಜೆ ಕ್ಲಾರ್ಕ್ ಮಿ॥ ಎನ್. ಮೂರ್ತಿರಾವ್, ಬಿ.ಎ. ಯವರನ್ನು ಆನೆಕಲ್ ತಾಲ್ಲೂಕು ಅಮಲ್ದಾರ್ ಮತ್ತು 3ನೆ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ಹಂಗಾಮಿ ತರೀಕ್ ನೇಮಿಸಿ ಇರುತ್ತದೆ.

ತಾರೀಖು 7ನೆ ಸೆಪ್ಟಂಬರ್ 1909.

ನಂ. ಮಿಲಿಟರಿ 331-3—53—09-2, ಘನವನ್ನು ಹೊಂದಿದ ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರು ಮೈಸೂರು ಪೈದಲ್ ಮೊದಲನೆ ಪಟಾಲಂ 2ನೆ ಗ್ರೇಡ್ ಸುಬೇದಾರ್ ಕೇಶವನಾಯಕರನ್ನು ಅದೇ ಪಟಾಲಂನಲ್ಲಿ ಮೊದಲನೆ ಗ್ರೇಡ್ ಸುಬೇದಾರರಾಗಿ 1909ನೆ ಇಸವಿ ಜುಲೈ ತಿಂಗಳು 31ನೆ ತಾರೀಖು ಲಾಗಾಯ್ತು ಬಡ್ತಿ ಮಾಡಿರುತ್ತಾರೆ.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 37.

ಬೆಂಗಳೂರು, ಗುರುವಾರ, ಸೆಪ್ಟಂಬರ ತಾ॥ 16, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಜ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್‌ರವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ ಸೂಪರಿಂಟೆಂಡೆಂಟರು ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 26ನೆ ಆಗಸ್ಟು 1909.

ನಂ. 1949—ಸ್ಯಾನಿಟರಿ 4—09—15, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ನಂಜದೇವನಪುರ	...	...	...	ಚಾಮರಾಜನಗರ.
ಅರಳಿಕಟ್ಟೆ	...	...	...	ಡಿಟೋ

ತಾರೀಖು 26ನೆ ಆಗಸ್ಟು 1909.

ನಂ. 1951—ಸ್ಯಾನಿಟರಿ. 4—09—16, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.				ತಾಲ್ಲೂಕು.
ಮಲ್ಲಯ್ಯನಪುರ	...	...	...	ಚಾಮರಾಜನಗರ
ಹೊಸೂರು	...	...	...	ಗುಂಡ್ಲುಪೇಟೆ.

ತಾರೀಖು 4ನೆ ಸೆಪ್ಟೆಂಬರ್ 1909.

ನಂ. 2203—ಸ್ಯಾನಿಟರಿ 4-09-18, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ	ತಾಲ್ಲೂಕು.
ಪಂಜನಹಳ್ಳಿ	ಗುಂಡ್ಲು ಪೇಟೆ.
ರಾಮಪುರ	ನಂಜನಗೂಡು.
ನಂಜನಗೂಡು	ಡಿಟೋ
ಮರಿಯಾಲ	ಚಾಮರಾಜನಗರ.
ಫ್ರೆಂಚ್‌ರಾಕ್ಸ್	ಫ್ರೆಂಚ್‌ರಾಕ್ಸ್ ಸಬ್ ತಾ||
ಮೂಗೂರು	ಟಿ. ನರಸೀಪುರ.
ಗಾಜನೂರು	ಮಳವಳ್ಳಿ.
ಚಿಕ್ಕೋಡನಹಳ್ಳಿ	ಹುಣಸೂರು.
ಚಲ್ಲಹಳ್ಳಿ	ಡಿಟೋ

ತಾರೀಖು 6ನೆ ಸೆಪ್ಟೆಂಬರ್ 1909.

ನಂ. 2231—ವಿದ್ಯಾ. 3-09-4, ಬಾಲಿಕಾ ಪಾಠಶಾಲೆಗಳಿಗೆ ಬೋರ್ಡ್ ಆಫ್ ವಿಸಿಟರ್ಸ್ ಯಾ ಅಜಮಾಯಿಷಿ ಸಂಘವನ್ನು ಏರ್ಪಡಿಸುವ ವಿಷಯದಲ್ಲಿ 1908ನೆ ಇಸವಿ ಏಪ್ರಿಲ್ 16ನೆ ಮರ್ಕ್ಕಂನ 10357—ವಿದ್ಯಾ. 229-07-2ನೆ ನಂಬರ್ ಸರ್ಕಾರಿ ಹುಕುಮಿನಲ್ಲಿ ಮಂಜೂರ್ಮಾಡಿರುವ ನಿಬಂಧನೆಗಳನ್ನನುಸರಿಸಿ, ಡಿಸ್ಟ್ರಿಕ್ಟು ಕಸಬಾ ಸ್ಥಳಗಳಲ್ಲಿರುವ ಬಾಲಿಕಾ ಪಾಠಶಾಲೆಗಳಿಗೆ, ಇದರಡಿ ಕಂಡಂತೆ ಅಜಮಾಯಿಷಿ ಸಂಘಗಳನ್ನು ಏರ್ಪಡಿಸಬೇಕೆಂದು ಸರ್ಕಾರದವರು ಹುಕುಂ ಮಾಡಿ ಇರುತ್ತಾರೆ :—

ಬೆಂಗಳೂರು ಸರ್ಕಾರಿ ಆರ್ಯ ಬಾಲಿಕಾ ಪಾಠಶಾಲೆ, ಬೆಂಗಳೂರು ಚಾಮರಾಜಪೇಟೆ ಸರ್ಕಾರಿ ಬಾಲಿಕಾಪಾಠಶಾಲೆ ಮತ್ತು ಮಲ್ಲೇಶ್ವರದ ಸರ್ಕಾರಿ ಬಾಲಿಕಾ ಪಾಠಶಾಲೆ, ಇವುಗಳ ಅಜಮಾಯಿಷಿ ಸಂಘ—

1. ಮಿ|| ಎಸ್. ವಿ. ರಾಮಸ್ವಾಮಯ್ಯಂಗಾರ್ರವರ ಕುಟುಂಬ.
2. ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು (ಉದ್ಯೋಗ ಪ್ರಯುಕ್ತ).
3. ಸರ್ಕಾರಿ ಹೈ ಸ್ಕೂಲಿ ಹೆಡ್ಮಾಸ್ಟರವರು (ಉದ್ಯೋಗ ಪ್ರಯುಕ್ತ).
4. ಮಿ|| ಎ. ವೆಂಕಟೇಶಯ್ಯಂಗಾರ್ರವರು, ಬಿ.ಎ., ಮಿಟಿಯೊರೊಲಾಜಿಕಲ್ ಇಲಾಖಾ ಚಾರ್ಜಿನಲ್ಲಿರುವ ಚೀಫ್ ಅಬ್‌ಜರ್ವರವರು.
5. ,, ಆರ್. ನರಸಿಂಹಾಚಾರ್ರವರು, ಎಂ.ಎ., ಶಾಸನಾನ್ವೇಷಣ ಇಲಾಖಾ ಚಾರ್ಜಿನ ಆಫಿಸರವರು.
6. ,, ಡಿ. ವೆಂಕಟ್ರಾಮಯ್ಯನವರು, ಬಿ.ಎ., ಅಡ್ವೊಕೇಟ್.

ಬೆಂಗಳೂರು ಸರ್ಕಾರಿ ಹಿಂದೂಸ್ತಾನಿ ಬಾಲಿಕಾ ಪಾಠಶಾಲೆಯ ಬೋರ್ಡು—

1. ಮಿ|| ಟಿ. ಅಬ್ದುಲ್‌ಕರೀಂ ಸಾಹೇಬರು, ಫಾರೆಸ್ಟ್ ಡೆಪ್ಯುಟಿ ಕನ್ಸರ್‌ವೇಟರ್.
2. ,, ಖಾಜಿ ಅಬ್ದುಲ್ ಬಾಸೀತ್ ಪರೀಕ್ಷರವರು.
3. ,, ಮಹಮ್ಮದ್‌ಗೌಸ್ ಸಾಹೇಬ್ ರಜ್ವಿರವರು.
4. ,, ಯಾಕೂಬ್ ಹರ್ಸಸೇಟರವರು.
5. ,, ಮಹಮ್ಮದ್ ಅಬ್ಬಾಸ್‌ಖಾನ್ ಸಾಹೇಬರು.

ಸರ್ಕಾರಿ ಕನ್ನಡ ಬಾಲಿಕಾಪಾಠಶಾಲೆ, ಕೋಲಾರ—

1. ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು (ಉದ್ಯೋಗ ಪ್ರಯುಕ್ತ).
2. ಮುನಸಿಫರು (ಉದ್ಯೋಗಪ್ರಯುಕ್ತ).
3. ಹೈಸ್ಕೂಲ್ ಹೆಡ್ಮಾಸ್ಟರ್ (ಉದ್ಯೋಗಪ್ರಯುಕ್ತ).
4. ಮಿ|| ಬಾಪೂರಾಯರು, ಬಿ.ಎ.,ಬಿ.ಎಲ್., ಅಡ್ವೊಕೇಟ್.
5. ,, ಬಿಂದಮಾಳ ಲಕ್ಷ್ಮೀನಾರಾಯಣ ಶೆಟ್ಟರು.

ಸರ್ಕಾರಿ ಹಿಂದೂಸ್ತಾನಿ ಬಾಲಿಕಾ ಪಾಠಶಾಲೆ, ಕೋಲಾರ—

1. ಮಿ|| ಮೀರ್ ಫಂಜಾಹುಸೇನ್‌ಸಾಹೇಬರು, ಬಿ.ಎ.,ಬಿ.ಎಲ್.
2. ,, ಅಮೀರ್ ಹುಸೇನ್‌ಸಾಹೇಬರು, ನಿವೃತ್ತರಾದ ಸುಬೇದಾರ್ ಬಹದೂರವರು.
3. ಹೈಸ್ಕೂಲಿನ ಹಿಂದೂಸ್ತಾನಿ ಮುನಷೀರು.
4. ಆಂಗ್ಲೋ ಹಿಂದೂಸ್ತಾನಿ ಹುಡುಗರ ಪಾಠಶಾಲೆಯ ಹೆಡ್ಮಾಸ್ಟರವರು.

ಸರ್ಕಾರಿ ಕನ್ನಡ ಬಾಲಿಕಾ ಪಾಠಶಾಲೆ, ಚಿತ್ರದುರ್ಗ—

1. ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು (ಉದ್ಯೋಗಪ್ರಯುಕ್ತ).
2. ಮುನಸೀಫರು (ಉದ್ಯೋಗಪ್ರಯುಕ್ತ).
3. ಹೈಸ್ಕೂಲ್ ಹೆಡ್ಮಾಸ್ಟರವರು (ಉದ್ಯೋಗಪ್ರಯುಕ್ತ).
4. ಮಿ|| ಅನಂತಶೆಟ್ಟರು, ಅಡ್ವೊಕೇಟ್.
5. ,, ರಾಘವೇಂದ್ರರಾಯರು, ಬ್ಯಾಂಕ್ ಏಜಂಟ್.

ಸರ್ಕಾರಿ ಹಿಂದೂಸ್ತಾನಿ ಬಾಲಿಕಾ ಪಾಠಶಾಲೆ, ಚಿತ್ರದುರ್ಗ—

1. ಮಿ|| ಹಸನಲ್ಲಯವರು, ಎಕ್ಸೈಜ್ ಅಸಿಸ್ಟೆಂಟ್ ಕಮಿಷನರವರು.
2. ,, ಟಿ. ಅಬ್ದುಲ್ ರಹಿಮಾನ್ ಸಾಹೇಬರು, ಪಿಂಛನ್ ಪಡೆದಿರುವ ಡೆಪ್ಯುಟಿ ಕ್ಲಾರ್ಕ.
3. ಹೈಸ್ಕೂಲ್ ಹಿಂದೂಸ್ತಾನಿ ಮುನಷೀರು (ಉದ್ಯೋಗಪ್ರಯುಕ್ತ).
4. ಆಂಗ್ಲೋ ಹಿಂದೂಸ್ತಾನಿ ಸ್ಕೂಲ್ ಹೆಡ್ಮಾಸ್ಟರವರು (ಉದ್ಯೋಗಪ್ರಯುಕ್ತ).
5. ವ್ಯಾಕ್ಸಿನೇಷನ್ ಡೆಪ್ಯುಟಿ ಇನಸ್ಪೆಕ್ಟರವರು.

ಸರ್ಕಾರಿ ಕನ್ನಡ ಬಾಲಿಕಾ ಪಾಠಶಾಲೆ, ಶಿವಮೊಗ್ಗ—

1. ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು (ಉದ್ಯೋಗಪ್ರಯುಕ್ತ).
2. ಮುನಸೀಫರು (ಉದ್ಯೋಗಪ್ರಯುಕ್ತ).
3. ಹೈಸ್ಕೂಲ್ ಹೆಡ್ಮಾಸ್ಟರವರು (ಉದ್ಯೋಗಪ್ರಯುಕ್ತ).
4. ಮಿ|| ಸೀತಾರಾಮಯ್ಯನವರು, ಅಡ್ವೊಕೇಟ್.
5. ,, ತಿರುಪಾಲ್ಯ ವೆಂಕಟಪ್ಪನವರು, ಸಾಹುಕಾರ್.
6. ,, ಚಂದಪ್ಪನವರು, ಸಾಹುಕಾರ್.

ಸರ್ಕಾರಿ ಹಿಂದೂಸ್ತಾನಿ ಬಾಲಿಕಾ ಪಾಠಶಾಲೆ ಶಿವಮೊಗ್ಗ—

1. ಮಿ|| ಮುಹಮ್ಮದ್ ಮುಸ್ತಫಾರವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರವರು.
2. ,, ಸೈಯದ್ ಅಹಮ್ಮದರವರು, ರಿಟೈರಾದ ಟಾರ್ ಕನ್ಟ್ರಾಕ್ಟರ್.
3. ಹೈಸ್ಕೂಲಿನ ಹಿಂದೂಸ್ತಾನಿ ಮುನಷೀರು (ಉದ್ಯೋಗಪ್ರಯುಕ್ತ).
4. ಸರ್ಕಾರಿ ಹಿಂದೂಸ್ತಾನಿ ಬಾಲಕರ ಪಾಠಶಾಲೆಯ ಹೆಡ್ಮಾಸ್ಟರವರು.
5. ಮಿ|| ಅಬ್ದುಲ್ಲಾ ಸೇಟರವರು, ಸಾಹುಕಾರ್.
6. ,, ಖಾಜಿ ಮೀರ್ ಮುಹಮ್ಮದ್ ಸಾಹೇಬರು.

ಸರ್ಕಾರಿ ಕನ್ನಡ ಬಾಲಿಕಾ ಪಾಠಶಾಲೆ, ಚಿಕ್ಕಮಗಳೂರು—

1. ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು (ಉದ್ಯೋಗಪ್ರಯುಕ್ತ).
2. ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು (ಉದ್ಯೋಗಪ್ರಯುಕ್ತ).
3. ಸರ್ಕಾರಿ ಹೈಸ್ಕೂಲ್ ಹೆಡ್ಮಾಸ್ಟರವರು (ಉದ್ಯೋಗಪ್ರಯುಕ್ತ).
4. ಮಿ|| ತರೀಕೆರೆರಾಯರು, ಪ್ಲೀಡರ್.
5. ,, ಮೈಸೂರು ನರಸಿಂಹಶೆಟ್ಟರು, ವರ್ತಕ.
6. ,, ತಾಲೂರು ಚನ್ನಬಸಪ್ಪ ಶೆಟ್ಟರು, ವರ್ತಕ.

ಸರ್ಕಾರಿ ಹಿಂದೂಸ್ತಾನಿ ಬಾಲಿಕಾ ಪಾಠಶಾಲೆ, ಚಿಕ್ಕಮಗಳೂರು—

1. ಹಿಂದುಸ್ತಾನಿ ಬಾಲಕರ ಪಾಠಶಾಲೆ ಹೆಡ್ಮಾಸ್ಟರವರು (ಉದ್ಯೋಗಪ್ರಯುಕ್ತ).
2. ಹೈಸ್ಕೂಲಿನ ಹಿಂದೂಸ್ತಾನಿ ಮುನಷೀರು (ಉದ್ಯೋಗಪ್ರಯುಕ್ತ).
3. ಹಜರತ ಸೈದ್ ಮುರ್ತಜಾಷಾಖಾದ್ರಿ, ಸಜ್ಜಾದಾ ಬುರ್ಡರವರು, ನಗರ.
4. ಮಿ|| ಅಬ್ದುಲ್ ಖಲಿಕರವರು, ಮ್ಯುನಸಿಪಲ್ ಕಮಿಷನರ್.
5. ,, ಅಬ್ದುಲ್ ಅಜೀಜರವರು, ರಿಟೈರಾದ ಸುಬೇದಾರ್.

ಸರ್ಕಾರಿ ಬಾಲಿಕಾ ಪಾಠಶಾಲೆ, ತುಮಕೂರು—

1. ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರು (ಉದ್ಯೋಗಪ್ರಯುಕ್ತ).
2. ಮುನಸೀಫರು (ಉದ್ಯೋಗಪ್ರಯುಕ್ತ).
3. ಹೈಸ್ಕೂಲ್ ಹೆಡ್ಮಾಸ್ಟರು (ಉದ್ಯೋಗಪ್ರಯುಕ್ತ).
4. ಮಿ|| ವೈ. ರಾಮರಾಯರು, ಪ್ಲೀಡರ್.
5. ,, ಕೋದಂಡರಾಮಶೆಟ್ಟರು, ಸಾಹುಕಾರ್.
6. ,, ಗಟ್ಟಿ ಗುರುಸಿದ್ದಪ್ಪನವರು.

ಸರ್ಕಾರಿ ಹಿಂದೂಸ್ತಾನಿ ಬಾಲಿಕಾ ಪಾಠಶಾಲೆ, ತುಮಕೂರು—

1. ಮಿ|| ಗುಲಾಂಮುಹಮ್ಮದ್ ಸಾಹೇಬರು, ಹಕೀಂ.
2 ,, ಹೈಸ್ಕೂಲ್ ಹಿಂದೂಸ್ತಾನಿ ಮುನಷೀರು.
3 ,, ಸರ್ಕಾರಿ ಹಿಂದೂಸ್ತಾನಿ ಬಾಲಕರ ಪಾಠಶಾಲೆಯ ಹೆಡ್ಮಾಸ್ಟರವರು.

ತಾರೀಖು 8ನೆ ಸಪ್ಟಂಬರ್ 1909.

ನಂ. ಜು. 701—ಪೊಲೀಸ 8-09-6, ಮೈಸೂರು ಸರ್ವಿಸ ರಗ್ಯುಲೇಷನುಗಳ 177, 207 ಮತ್ತು 155ನೆ ಪ್ರಕರಣಗಳ ಮೇರೆಗೆ ಪ್ರೊಬೇಷನರಿ ಪೊಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ಎ. ಸಿ. ಬಸವರಾಜ ಅರಸಿನವರಿಗೆ ಅವರು ಚಾರ್ಜು ಕೊಡುವ ತಾರೀಖಿನ ಲಾಗಾಯಿತು 2 ತಿಂಗಳು 19 ದಿವಸಗಳ ಪ್ರಿವಿಲೇಜ್ ರಜಾವನ್ನೂ ಅದರ ಜತೆಗೆ ಸ್ವಂತ ಕೆಲಸದಮೇಲೆ 3 ತಿಂಗಳು 11 ದಿವಸಗಳ ರಜಾವನ್ನೂ ಕೊಟ್ಟಿರುತ್ತದೆ.

ತಾರೀಖು 8ನೆ ಸಪ್ಟಂಬರ 1909.

ನಂ. ಜ. 1491—ಜ. ರಿ. 25-08-13, ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡಮನುಷ್ಯರ ಪಟ್ಟಿಯನ್ನು ಸಮಸ್ತರ ತಿಳುವಳಿಕೆ ಬಗ್ಗೆ ಇದರಡಿ ಪ್ರಕಟಿಸಿ ಇರುತ್ತದೆ.

ಬೆಂಗಳೂರು ಡಿಸ್ಟ್ರಿಕ್ಟು.

ಚುನಾವಣಿ ಪ್ರದೇಶ.		ಪ್ರತಿನಿಧಿಗಳ ಹೆಸರು.	ಕಸಬು.
ಬೆಂಗಳೂರು ತಾಲ್ಲೂಕು ...	1.	ಮಿ|| ಜಿ. ವಿ. ಸ್ಲೊವೆಲ್ ...	ಜಮಿನ್‌ದಾರು
	2.	,, ಚಿಕ್ಕಗುರವರೆಡ್ಡಿ ...	ಡಿಟೋ
	3.	,, ಅಗರ ಸುಬ್ಬರಾಯಪ್ಪ ...	ಶ್ಯಾನುಭಾಗ
ಹೊಸಕೋಟೆ ತಾಲ್ಲೂಕು ...	1.	,, ಶ್ಯಾನಭಾಗ ಸೀನಪ್ಪ ...	ಖಾಸಗಿ ದೊಡ್ಡಮನುಷ್ಯರು
	2.	,, ಚನ್ನಬಸವೇಗೌಡ ...	ಪಟೇಲ್
	3.	,, ಹನುಮಂತೇಗೌಡ ...	ಪಟೇಲ್ ಮತ್ತು ಜಮೀನ್ದಾರು
ದೊಡ್ಡಬಳ್ಳಾಪುರ ತಾಲ್ಲೂಕು ...	1.	,, ಸರಾಫ ಪುಟ್ಟಣ್ಣ ...	ಸಾಹುಕಾರು
	2.	,, ಕೋಳೂರು ರಾಮಪ್ಪ ...	ಜಮೀನ್ದಾರು
	3.	,, ರುಮಾಲೆ ರುದ್ರಪ್ಪ ...	ವರ್ತಕ
ನೆಲಮಂಗಲ ತಾಲ್ಲೂಕು ...	1.	,, ನರಹರ್ಯೈಯ ...	ಶ್ಯಾನುಭಾಗ
	2.	,, ಬಿ. ಗಂಗಯ್ಯ ...	ಪೆನ್ಷನ್‌ದಾರ್
	3.	,, ಚನ್ನಲಿಂಗಪ್ಪ ...	ಜಮೀದಾರು
ಕಾನಕಾನಹಳ್ಳಿ ತಾಲ್ಲೂಕು ...	1.	,, ಗುರುಕಾರ್ ತಿಮ್ಮೆಗೌಡ ...	ಡಿಟೋ
	2.	,, ಸೈದ್‌ಸಾಬ್ ...	ಡಿಟೋ
	3.	,, ಬಾಜಿರಾವ್ ಸಿಂಧೆ ...	ಪಟೇಲ್
ಮಾಗಡಿ ತಾಲ್ಲೂಕು ...	1.	,, ಎಂ. ಕೆ. ಕೃಷ್ಣಮೂರ್ತಿರಾವ್	ಜಮೀನ್ದಾರು
	2.	,, ಟಿ. ಗುಂಡಪ್ಪ ...	ಶಾನುಭಾಗ
	3.	,, ಭಾಸ್ಕರ ರಂಗಶೆಟ್ಟಿ ...	ವರ್ತಕ
ಚನ್ನಪಟ್ಣ ತಾಲ್ಲೂಕು ...	1.	,, ರಾಮಸಂಜೀವಯ್ಯ ...	ರೇಷ್ಮೆ ವ್ಯಾಪಾರ
	2.	,, ಪುಟ್ಟೇಗೌಡ ...	ಪಟೇಲ
ಕ್ಲೋಸಪೇಟೆ ಸಬ್ ತಾಲ್ಲೂಕು ...	1.	,, ಕರೆಭಾವು ನರಸಿಹ್ಮಶೆಟ್ಟರು ...	ವರ್ತಕ
ಆನೇಕಲ್ಲು ತಾಲ್ಲೂಕು ...	1.	,, ಧಾಳಪ್ಪ ...	ಜಮಿನುದಾರು
	2.	,, ಚಂದಾರಡ್ಡಿ ...	ಜಮೀನ್ದಾರು ಮತ್ತು ಪಟೇಲ್
	3.	,, ರಾಮಸ್ವಾಮಿಯ್ಯಂಗಾರ್ ...	ಜಮೀನ್ದಾರ್ ಮತ್ತು ಶ್ಯಾನುಭಾಗ
ದೇವನಹಳ್ಳಿ ತಾಲ್ಲೂಕು ...	1.	,, ಡಿ. ಎಸ್. ಹನುಮಂತರಾವ್ ...	ಶ್ಯಾನುಭಾಗ
	2.	,, ಚನ್ನಬಸವ ಒಡೆಯರ್ ...	ಜೋಡಿದಾರ್
	3.	,, ಡಿ. ಶ್ರೀಕಂಠರಾವ್ ...	ಶೇಂದಿ ಕಂಟ್ರಾಕ್ಟರ್
ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನ್	1.	,, ಡಿ. ವೆಂಕಟರಾಮಯ್ಯ ...	ಅಡ್ವೊಕೇಟ್
	2.	,, ಸಿ. ಎಸ್. ದೊರಸಾಮಿ ಅಯ್ಯರ್, ಬಿ.ಎ, ಬಿ.ಎಲ್.	ಡಿಟೋ
	3.	,, ಎಂ. ಕೆ. ಕೃಷ್ಣಮೂರ್ತಿರಾವ್	ಜಮಿನುದಾರು
	4.	,, ಬಿ. ಉಸ್ಮಾನ್‌ಖಾನ್ ...	ವರ್ತಕ
ದೇವನಹಳ್ಳಿ ಮ್ಯುನಿಸಿಪಾಲಿಟಿ ...	1.	,, ಚಿಕ್ಕ ಆದೆಪ್ಪ ...	ಡಿಟೋ
ದೊಡ್ಡಬಳ್ಳಾಪುರ ಮ್ಯುನಿಸಿಪಾಲಿಟಿ ...	1.	,, ಡಿ. ಪಾಪಣ್ಣ ...	ಡಿಟೋ
ಚನ್ನಪಟ್ಣ ಮ್ಯುನಿಸಿಪಾಲಿಟಿ ...	1.	,, ಅಬ್ದುಲ್‌ಖುದುಸ್ ...	ಡಿಟೋ
ಕ್ಲೋಸಪೇಟೆ ಮ್ಯುನಿಸಿಪಾಲಿಟಿ ...	1.	,, ಅಲಮೇಳದ ಕೃಷ್ಣಪ್ಪ ...	ಡಿಟೋ
ಆನೇಕಲ್ಲು ಮ್ಯುನಿಸಿಪಾಲಿಟಿ ...	1.	,, ಬಾಬುಸಾಬ್ ...	ಡಿಟೋ
ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡು ...	1.	,, ಎಸ್. ದಾಸಪ್ಪ ...	ಜಮೀನ್ದಾರು
	2.	,, ಗುಂಡೂರಾವ್ ...	ಡಿಟೋ
ಬೆಂಗಳೂರು ಲಾ ಅಸೋಸಿಯೇಷನ್ ...	1.	,, ಡಿ. ವೆಂಕಟರಾಮಯ್ಯ, ಬಿ.ಎ.	ಅಡ್ವೊಕೇಟ್
ಮೈಸೂರು ಸೆಂಟ್ರಲ್ ಮಹಮ್ಮದನ್ ಅಸೋಸಿಯೇಷನ್, ಬೆಂಗಳೂರು.	1.	,, ಗುಲಾಂ ಅಹಮ್ಮದ್‌ಖಾನ್ ...	ಕಂಟ್ರಾಕ್ಟರ್

ತಾರೀಖು 8ನೆ ಸೆಪ್ಟಂಬರ್ 1909.

ನಂ. ಜ. 1431—ಜ. ಮಿ. 22-08-79, ನಂಜನಗೂಡು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮಿ|| ಟಿ. ಕೆ. ಸುಂದರರಾಜಯ್ಯಂಗಾರ್ರವರಿಗೆ 1909ನೆ ಜೂನ್ 18ನೆ ತಾರೀಖಿನ ಲಾಗಾಯಿತು ಬಿ. ಷೆಡ್ಯೂಲ್ ಅಸಿಸ್ಟೆಂಟ್ ಕಮಿಷನರುಗಳ 5ನೆ ತರಗತಿಯಿಂದ 4ನೆ ತರಗತಿಗೆ ಬಡ್ತಿ ಕೊಟ್ಟಿರುತ್ತದೆ.

ತಾರೀಖು 8ನೆ ಸೆಪ್ಟಂಬರ್ 1909.

ನಂ. ಜ. 1489—ಜ. ರಿ. 25-08-12, ಇದರಡಿ ಕಂಡವರು ಪ್ರಜಾಪ್ರತಿನಿಧಿ ಸಭೆಗೆ ಬೆಂಗಳೂರು ತಾಲ್ಲೂಕಿನಲ್ಲಿ ಮೆಂಬರಾಗಿ ಚುನಾಯಿಸಲ್ಪಡಲು ಅರ್ಹರಾಗಿರುತ್ತಾರೆಂಬ ಸಂಗತಿಯನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಕಟಿಸಿ ಇರುತ್ತದೆ.

ಹೆಸರು.	ವಾಸಸ್ಥಳ.	ಕಸಬು.
ಮಿ|| ಸುಬ್ಬರಾಯಪ್ಪ ...	ಅಗರ.	ವ್ಯಾಪಾರ ಭಾಗ.

ತಾರೀಖು 8ನೆ ಸೆಪ್ಟಂಬರ್ 1909.

ನಂ. 2302—ವಿದ್ಯಾ. 76-09-2, ಮೈಸೂರು ಸರ್ವಿಸ್ಸು ರೆಗ್ಯುಲೇಷನಿನ 221 ಮತ್ತು 222 (*b*) ಪ್ರಕರಣಗಳನ್ನನುಸರಿಸಿ, ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಚರಿತ್ರೆ ಪಂಡಿತರಾದ ಮಿ|| ಟಿ. ಡೆನ್‌ಹಮ್, ಎಂ.ಎ. ಯವರಿಗೆ 1909ನೆ ಇಸವಿ ಸೆಪ್ಟಂಬರ್ 20ನೆ ತಾರೀಖು ಲಾಗಾಯಿತು 9 ತಿಂಗಳ ಫರ್ಲೋ ರಜಾವನ್ನು ಮಂಜೂರ್ಮಾಡಿ ಇರುತ್ತೆ.

2. ಮಿ|| ಟಿ. ಡೆನ್‌ಹಮ್‌ರವರು ರಜಾದಮೇಲೆ ಗೈರುಹಾಜರಾಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಮಿ|| ಸಿ. ರಾಮಲಿಂಗರೆಡ್ಡಿ ಎಂ.ಎ. ರವರನ್ನು ಮೈಸೂರು ಮಹಾರಾಜರ ಕಾಲೇಜಿನ ಚರಿತ್ರೆಯ ಪಂಡಿತರನ್ನಾಗಿ ಹಂಗಾಮಿ ತರೀಕು ನೇಮಿಸಿ ಇರುತ್ತೆ.

ತಾರೀಖು 9ನೆ ಸೆಪ್ಟಂಬರ್ 1909.

ನಂ. ಜ. 1504—ಜ. ಮಿ. 42—09—18, ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ|| ಎಂ. ಪಿ. ವಿಶ್ವನಾಥರಾಯರಿಗೆ ಬಿ. ಷೆಡ್ಯೂಲಿನ ಅಸಿಸ್ಟೆಂಟು ಕಮಿಷನರುಗಳಲ್ಲಿ 5ನೆ ತರಗತಿಯಿಂದ 4ನೆ ತರಗತಿಗೆ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು ಬಡ್ತಿ ಕೊಟ್ಟು ಇರುತ್ತೆ.

ತಾರೀಖು 9ನೆ ಸೆಪ್ಟಂಬರ್ 1909.

ನಂ. ಜ. 1506—ಜ. ಮಿ. 42-09-19, ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ|| ಎಸ್. ನಾರಾಯಣರಾಯರಿಗೆ ಬಿ. ಷೆಡ್ಯೂಲಿನ ಅಸಿಸ್ಟೆಂಟ್ ಕಮಿಷನರುಗಳಲ್ಲಿ 5ನೆ ತರಗತಿಯಿಂದ 4ನೆ ತರಗತಿಗೆ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು ಬಡ್ತಿ ಕೊಟ್ಟು ಇರುತ್ತೆ.

ತಾರೀಖು 9ನೆ ಸೆಪ್ಟಂಬರ್ 1909.

ನಂ. 2324—ಲೋ. ಬೋ. 32-09-5, 1902ನೆ ಇಸವಿಯ 11ನೆ ನಂಬರ್ ಲೋಕಲ್ ಬೋರ್ಡ್ ರೆಗ್ಯುಲೇಷನಿನ ಪ್ರಕಾರ ಮಾಡಲ್ಪಟ್ಟ ನಿಬಂಧನೆಗಳ 20ನೆ ನಿಬಂಧನೆಯ ಮೇರೆಗೆ, ತಿಮ್ಮಪ್ಪನಹಳ್ಳಿ ಪಟೇಲ ಮಿ|| ವಿರುಪಣ್ಣನವರನ್ನು ರಾಜಿನಾಮೆ ಕೊಟ್ಟ ಮಿ|| ಕೋಮಟಿ ನಾರಣಪ್ಪನವರಿಗೆ ಬದಲಾಗಿ ಚಳ್ಳಕೆರೆ ತಾಲ್ಲೂಕು ಬೋರ್ಡಿನ ಮೆಂಬರಾಗಿ ಮೊಕರರ್ಮಾಡಿ ಇದೆ.

ತಾರೀಖು 10ನೆ ಸೆಪ್ಟಂಬರ್ 1909.

ನಂ. 2373—ಲೋ. ಬೋ. 28-09-4, ದಾವಣಗೆರೆ ತಾಲ್ಲೂಕು ಲೋಕೀಕೆರೆ ಯೂನಿಯನ್ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟ ಶ್ಯಾನುಭೋಗ್ ಮಿ|| ಹನುಮಂತಪ್ಪನವರ ಸ್ಥಾನದಲ್ಲಿ ಸದರಿ ಲೋಕೀಕೆರೆ ವಾಸಿಯಾದ ಮಿ|| ಎಲ್. ಶ್ರೀನಿವಾಸರಾಯರನ್ನು ಮೆಂಬರಾಗಿ ಮೊಕರರ್ಮಾಡಿ ಇದೆ.

ತಾರೀಖು 11ನೆ ಸೆಪ್ಟಂಬರ್ 1909.

ನಂ. 2380—ಲೋ. ಬೋ. 81-09-2, 1902ನೆ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ ರೆಗ್ಯುಲೇಷನ್ ಅನುಸರಿಸಿ ಸಾದರ್ಮಾಡೋಣಾದ ನಿಬಂಧನೆಗಳ ಪೈಕಿ 8 (e) ಮತ್ತು 20ನೆ ಪ್ಯಾರಾಗಳ ಮೇರಿಗೆ, ಘವತಿಪಟ್ಟ ಗುಡಿಬಂಡೆಯ ಮಿ|| ಶೆಟ್ಟಿ ಚಿಕ್ಕಣ್ಣನವರಿಗೆ ಬದಲಿಯಾಗಿ, ಬಾಗೇಪಲ್ಲಿ ತಾಲ್ಲೂಕಿನಲ್ಲಿರುವ ಮಿ|| ಬಾಲರೆಡ್ಡಿಪಲ್ಲಿ ವೆಂಕಟರೆಡ್ಡಿಯವರನ್ನು ಕೋಲಾರದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ನೇಮಿಸಿ ಇರುತ್ತೆ.

ತಾರೀಖು 13ನೆ ಸೆಪ್ಟಂಬರ್ 1909.

ನಂ. ಜ. 1624—ಜ. ಮಿ. 52-09-5, ಮೈಸೂರು ಸೀಮೆಗೆ ಅನ್ವಯವಾಗುವ 1872ನೆ ಇಸವಿಯ ಇಂಡಿಯಾ ದೇಶದ ಕ್ರೈಸ್ತ ವಿವಾಹಕ್ಕೆ ಸಂಬಂಧಪಟ್ಟ ಕಾನೂನಿನ 6ನೆ ಪ್ರಕರಣವನ್ನನುಸರಿಸಿ ವಿವಾಹಗಳನ್ನು ನಡಿಸುವದಕ್ಕೂ ಮತ್ತು 9ನೆ ಪ್ರಕರಣವನ್ನನುಸರಿಸಿ ಸರಟಿಫಿಕೇಟುಗಳನ್ನು ಕೊಡುವದಕ್ಕೂ ಸಹಾ ಮೆಥಡಿಸ್ಟ್ ಎಪಿಸ್ಕೋಪಲ್ ಮಿಷನ್‌ಗೆ ಸೇರಿದ ರೆವರೆಂಡು ಎಂ. ಟಿಂಡೇಲ್ ರವರಿಗೆ 1905ನೆ ಇಸವಿ ಮಾರ್ಚಿ 18ನೆ ತಾರೀಖಿನ ಜ. 5241—ಜ. ಮಿ. 79-04-16ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಲೈಸೆನ್ಸನ್ನು 1872ನೆ ಇಸವಿಯ ಇಂಡಿಯಾ ದೇಶದ ಕ್ರೈಸ್ತ ವಿವಾಹಕ್ಕೆ ಸಂಬಂಧಪಟ್ಟ ಕಾನೂನಿನ 6 ಮತ್ತು 9ನೆ ಪ್ರಕರಣಗಳ ಮೇರಿಗೆ ಇದರಿಂದ ರದ್ದುಪಡಿಸಿ ಇರುತ್ತದೆ.

ತಾರೀಖು 4ನೆ ಸೆಪ್ಟಂಬರ್ 1909.

ನಂ. ರೆ. 2013—ಲ್ಯಾ. ರೆ. 100-09-2, ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರ್ ಮಿ|| ಹೆಚ್. ಎಸ್. ವೆಂಕಟಾಚಾರ್ರವರಿಗೆ ರೆವಿನ್ಯೂ ಕಮಿಷನರವರ 1909ನೆ ಆಗಸ್ಟ್ 16ನೆ ಮರ್ಕೂಂನ 2229ನೆ ನಂಬರ್ ಹುಕುಂ ಪ್ರಕಾರ ಮಂಜೂರಾಗಿರುವ ರಜಾದ ಮೇಲೆ ಅವರು ಗೈರು ಹಾಜರಾಗುವ ಕಾಲದಲ್ಲಿ, ತಾಲ್ಲೂಕು ಶಿರಸ್ತೆದಾರ್ರಾದ ಸಿ. ಎಸ್. ತಾತಯ್ಯಂಗಾರ್ರವರನ್ನು ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರ್ ಮತ್ತು 3ನೆ ತರಗತಿ ಮ್ಯಾಜಿಸ್ಟ್ರೇಟಾಗಿ ಹಂಗಾಮಿ ತರೀಕ ನೇಮಿಸಿ ಇರುತ್ತೆ.

ತಾರೀಖು 3ನೆ ಸೆಪ್ಟಂಬರ 1909.

ನಂ. ರೆ. 1971—ಫಾರೆಸ್ಟ್. 166-08-9, 1900ನೆ ಇಸವಿಯ 11ನೆ ನಂಬರ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, ಈ ಇಸ್ತಿಹಾರ್ನಾಮೆಗೆ ಲಗತ್ತಾಗಿರುವ ಷೆಡ್ಯೂಲಿನಲ್ಲಿ ವಿವರಿಸಿರುವ ಸರಹದ್ದುಗಳುಳ್ಳ ಪ್ರದೇಶವು ಸದರಿ ಷೆಡ್ಯೂಲಿನ ಕೆಳಭಾಗದಲ್ಲಿ ನಮೂದಿಸಿರುವ ಹಕ್ಕುಗಳ ಚಲಾವಣೆಗೆ ಬಳಪಟ್ಟು 1909ನೆ ಇಸವಿ ಅಕ್ಟೋಬರು ಗುರ್ರೆ ಲಾಗಾಯಿತು ಮನ್ನಾ ಜಂಗಲಿಯಾಗಿ ಇರತಕ್ಕದ್ದೆಂದು ಮೈಸೂರು ಸರ್ಕಾರದವರು ಹುಕುಂ ಮಾಡಿ ಇರುತ್ತಾರೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ತಾಕಿನ ಹೆಸರು.	ಸರಹದ್ದುಗಳು.
ಶಿವಮೊಗ್ಗ	ಶಿವಮೊಗ್ಗ	7.44 ಚದರ ಮೈಲಿಗಳು	ಕಾಕನಹಸೂಡಿ	(ಕೆಳಗೆ ನೋಡಿ)

ಉತ್ತರಕ್ಕೆ—ಇನಾಂ ಚಿತಿಮಾನೆ, ಷಿಡ್ಡಾಜಿ ಹೊಸೂರು ಮತ್ತು ಕೈತೊಟ್ಲು ಗ್ರಾಮಗಳ ಮುಕ್ಕಪ್ಪೆ ಬಾಂಡುಗಳಿಂದ ಸರಹದ್ದು ಲೈನು ಆರಂಭವಾಗಿ, ಆಗ್ನೇಯಾಭಿಮುಖವಾಗಿ ಕೈತೊಟ್ಲು ಗ್ರಾಮದ ಗಡಿಯಲ್ಲಿ ಸುಮಾರು 11 ಸರಪಣಿಗಳ ದೂರದವರಿಗೆ ಹೋಗಿ ನಂತರ ಈಶಾನ್ಯಾಭಿಮುಖವಾಗಿ ಕೈತೊಟ್ಲು ಗ್ರಾಮದ ಸರ್ವೆ 21ನೆ ನಂಬರಿನಮೇಲೆ ಸುಮಾರು 66 ಸರಪಣಿಗಳ ದೂರದವರಿಗೂ ಹೋಗಿ ಅದೇ ಗ್ರಾಮದ ಸರ್ವೆ 22ನೆ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತದೆ; ನಂತರ ಉತ್ತರಾಭಿಮುಖವಾಗಿ ಸರ್ವೆ 21ನೆ ನಂಬರಿನಮೇಲೆ ಸುಮಾರು 10 ಸರಪಣಿಗಳ ದೂರದವರಿಗೆ ಹೋಗಿ ಸರ್ವೆ 20ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಸರ್ವೆ 20 ಮತ್ತು 19ನೆ ನಂಬರುಗಳ ಪೂರ್ವಕಡೆಯಲ್ಲಿ ಹೊರಟು ಕಡೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ಉತ್ತರಾಭಿಮುಖವಾಗಿ ಕೈತೊಟ್ಲು ಗ್ರಾಮದ ಸರ್ವೆ 12ನೆ ನಂಬರಿನಮೇಲೆ ಸುಮಾರು 28 ಸರಪಣಿಗಳ ದೂರದವರಿಗೆ ಹೋಗಿ ಸರ್ವೆ 9ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ವಾಯುವ್ಯಾಭಿಮುಖವಾಗಿ ಕೈತೊಟ್ಲು ಗ್ರಾಮದ ಸರ್ವೆ 10ನೆ ನಂಬರಿನ ಪೂರ್ವಕಡೆಯಲ್ಲಿ ಹೊರಟು ಸದರಿ ನಂಬರಿನ ಉತ್ತರ ಮೂಲೆಯನ್ನು ಸೇರುತ್ತದೆ; ನಂತರ ಪೂರ್ವಾಭಿಮುಖವಾಗಿ ಅದೇ ಗ್ರಾಮದ ಸರ್ವೆ 11ನೆ ನಂಬರಿನಮೇಲೆ ಸುಮಾರು 80 ಸರಪಣಿಗಳ ದೂರದವರಿಗೂ ಹೋಗಿ, ಆಗ್ನೇಯವಾಗಿ ಹುರಳಿಹಳ್ಳಿಯ ಸರ್ವೆ 30ನೆ ನಂಬರಿನಮೇಲೆ ಸುಮಾರು 105 ಸರಪಣಿಗಳ ದೂರ ಹೋಗಿ, ಹುರಳಿಹಳ್ಳಿಯಿಂದ ಗಣೇದಹಾಳು ಮತ್ತು ಉಂಬಳೆಬೈಲು ಗ್ರಾಮಗಳಿಗೆ ಹೋಗುವ ಭಂಡಿದಾರಿಯನ್ನು ಮುಟ್ಟುತ್ತದೆ, ಅಲ್ಲಿ ಚೋರ್ಡನಹಳ್ಳಿ ಮನ್ನಾ ಜಂಗಲಿಯ ಗಡಿಯನ್ನು ಸಂಧಿಸುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯಾಭಿಮುಖವಾಗಿ ಗಣೇದಹಾಳು ಗ್ರಾಮದ ಸರ್ವೆ 7ನೆ ನಂಬರಿನಮೇಲೆ ಸುಮಾರು 50 ಸರಪಣಿಗಳ ದೂರದವರಿಗೂ ಹೋಗಿ ಸಾರಿಗೆರೆ ಗ್ರಾಮದ ಸರ್ವೆ 28ನೆ ನಂಬರಿನ ಉತ್ತರಮೂಲೆಯನ್ನು ಸೇರುತ್ತದೆ; ನಂತರ ಪಶ್ಚಿಮಾಭಿಮುಖವಾಗಿ ಅದೇ ಗ್ರಾಮದ ಸರ್ವೆ 29ನೆ ನಂಬರಿನಮೇಲೆ ಸುಮಾರು 35 ಸರಪಣಿಗಳ ದೂರದವರಿಗೆ ಹೋಗಿ ಸಾರಿಗೆರೆ ಗ್ರಾಮದ ಸರ್ವೆ 32ನೆ ನಂಬರಿನ ವಾಯುವ್ಯಮೂಲೆಯನ್ನು ಸೇರುತ್ತದೆ; ನಂತರ ನೈರುತ್ಯಾಭಿಮುಖವಾಗಿ ಸರ್ವೆ 29ನೆ ನಂಬರಿನಮೇಲೆ ಸುಮಾರು 25 ಸರಪಣಿಗಳ ದೂರ ಹೋಗಿ ಅದೇ ಗ್ರಾಮದ ಸರ್ವೆ 30ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ; ನಂತರ ದಕ್ಷಿಣಾಭಿಮುಖವಾಗಿ ಸರ್ವೆ 29ನೆ ನಂಬರಿನಮೇಲೆ ಸುಮಾರು 25 ಸರಪಣಿಗಳ ದೂರದವರಿಗೆ ಹೋಗಿ ಸಾರಿಗೆರೆ ಗ್ರಾಮದ ಸರ್ವೆ 4ನೆ ನಂಬರಿನ ವಾಯುವ್ಯಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 4ನೆ ನಂಬರಿನ ಪಶ್ಚಿಮಕಡೆಯಲ್ಲಿ ಹೊರಟು ಅದರ ನೈರುತ್ಯಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಸರ್ವೆ 13ನೆ ನಂಬರಿನಮೇಲೆ ಸುಮಾರು 50 ಸರಪಣಿಗಳದೂರ ಹೋಗಿ ಸಾರಿಗೆರೆಯ ಸರ್ವೆ 14ನೆ ನಂಬರಿನ ವಾಯುವ್ಯಮೂಲೆಯನ್ನು ಸೇರುತ್ತದೆ; ನಂತರ ಸರ್ವೆ 14ನೆ ನಂಬರಿನ ಪಶ್ಚಿಮ, ದಕ್ಷಿಣ ಮತ್ತು ಪೂರ್ವಕಡೆಗಳಲ್ಲಿ ಹೊರಟು ಅದೇ ಗ್ರಾಮದ ಸರ್ವೆ 15ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಸಾರಿಗೆರೆಯ ಸರ್ವೆ 28ನೆ ನಂಬರಿನಮೇಲೆ ಸುಮಾರು 40 ಸರಪಣಿಗಳ ದೂರ ಹೋಗಿ ಉಂಬಳೆಬೈಲಿನ ಸರ್ವೆ 27ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ; ನಂತರ ದಕ್ಷಿಣಾಭಿಮುಖವಾಗಿ ಉಂಬಳೆಬೈಲಿನ ಸರ್ವೆ 13ನೆ ನಂಬರಿನಮೇಲೆ ಸುಮಾರು 50 ಸರಪಣಿಗಳ ದೂರ ಹೋಗಿ ಶಿವಮೊಗ್ಗದಿಂದ ಎಡಹಳ್ಳಿಗೆ ಹೋಗುವ ಪಬ್ಲಿಕ್ ರಸ್ತೆ ಮತ್ತು ಹಳ್ಳ ಸಹ ಸಂಧಿಸುವ ಸ್ಥಳದಿಂದ ಪಶ್ಚಿಮಕ್ಕೆ ಸುಮಾರು 15 ಸರಪಣಿಗಳ ಫಾಸಲೆಯಲ್ಲಿನ ಸ್ಥಾನವನ್ನು ಸೇರುತ್ತದೆ; ನಂತರ ಪೂರ್ವಾಭಿಮುಖವಾಗಿ ಹಳ್ಳದಮೇಲೆ ಹೊರಟು ಮೇಲ್ಕಂಡ ಹಳ್ಳವು ಮತ್ತು ರಸ್ತೆಯು ಸಂಧಿಸುವ ಸ್ಥಳವನ್ನು ಸೇರುತ್ತದೆ; ನಂತರ ದಕ್ಷಿಣಾಭಿಮುಖವಾಗಿ ರಸ್ತೆಯ ಪಕ್ಕದಲ್ಲಿ ಉಂಬಳೆಬೈಲು ಗ್ರಾಮದ ಸರ್ವೆ 13 ಮತ್ತು 12ನೆ ನಂಬರುಗಳ ಮೇಲೆ ಸುಮಾರು 80 ಸರಪಣಿಗಳ ದೂರದ ವರೆಗೂ ಹೋಗಿ (ಶಿವಮೊಗ್ಗ ಡಿಸ್ಟ್ರಿಕ್ಟು) ಉಂಬಳೆಬೈಲು, ಬೊಮ್ಮೇನಹಳ್ಳಿ ಮತ್ತು ನಾಲಾಕಟ್ಟೆ (ಕಡೂರು ಡಿಸ್ಟ್ರಿಕ್ಟು) ಗ್ರಾಮಗಳ ಮುಕ್ಕಪ್ಪೆ ಬಾಂಡುಗಳಿಗೆ ಸುಮಾರು 80 ಸರಪಣಿಗಳ ದೂರದಲ್ಲಿರುವ ಸ್ಥಾನವನ್ನು ಸೇರಿ ಅಲ್ಲಿ ಅರಂಬಳ್ಳಿ ಮನ್ನಾ ಜಂಗಲಿಯನ್ನು ಮುಟ್ಟುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ನೈರುತ್ಯ, ಪಶ್ಚಿಮ ಮತ್ತು ನೈರುತ್ಯಾಭಿಮುಖವಾಗಿ ಬೊಮ್ಮೇನಹಳ್ಳಿ (ಕಡೂರು ಡಿಸ್ಟ್ರಿಕ್ಟು) ಯಾ ಪಶ್ಚಿಮಗಡಿಯಲ್ಲಿ ಹೊರಟು ಕಾಕನಹಸೂಡಿ, ಲಿಂಗಾಪುರ ಮತ್ತು ಬೊಮ್ಮೇನಹಳ್ಳಿ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳನ್ನು ಸೇರುತ್ತದೆ; ನಂತರ ಪಶ್ಚಿಮಾಭಿಮುಖವಾಗಿ ದೊಡ್ಡನತಾಳ (ಕಡೂರು ಡಿ||) ಉತ್ತರಗಡಿಯಲ್ಲಿ ಹೊರಟು ಲಿಂಗಾಪುರ, ದೊಡ್ಡನತಾಳ ಮತ್ತು ಕೋರ್ಲಕೊಪ್ಪ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳನ್ನು ಮತ್ತು ಅರಂಬಳ್ಳಿ ಮನ್ನಾ ಜಂಗಲಿಯ ಉತ್ತರಗಡಿಯನ್ನು ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ವಾಯುವ್ಯಾಭಿಮುಖವಾಗಿ ಕೋರ್ಲಕೊಪ್ಪ ಗ್ರಾಮದ ಗಡಿಯಲ್ಲಿ ಹೊರಟು ಲಿಂಗಾಪುರ ಗ್ರಾಮದ ಸರ್ವೆ 15ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಸರ್ವೆ 15ನೆ ನಂಬರಿನ ದಕ್ಷಿಣಗಡಿಯಲ್ಲಿ ಹೋಗಿ ಕಾಕನಹಸೂಡಿ ಗ್ರಾಮದ ಸರ್ವೆ 19ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ; ನಂತರ ಆಗ್ನೇಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ 18ನೆ ನಂಬರಿನಮೇಲೆ ಸುಮಾರು 50 ಸರಪಣಿಗಳ ದೂರದವರಿಗೆ ಹೋಗಿ ಸರ್ವೆ 17ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಸರ್ವೆ 9ನೆ ನಂಬರಿನಮೇಲೆ ಸುಮಾರು 35 ಸರಪಣಿಗಳ ದೂರ ಹೋಗಿ ಸರ್ವೆ 11ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಆ ನಂಬರಿನ ಪೂರ್ವಕಡೆಯಲ್ಲಿ ಹೊರಟು ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ಪಶ್ಚಿಮಾಭಿಮುಖವಾಗಿ ಸರ್ವೆ 11ನೆ ನಂಬರಿನ ಉತ್ತರಕಡೆಯಲ್ಲಿ ಹೊರಟು ಸರ್ವೆ 10ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ನಂತರ ಅದರ ಪೂರ್ವಕಡೆಯಲ್ಲಿ ಹೊರಟು ಅದರ ಈಶಾನ್ಯಮೂಲೆಯನ್ನು ಸೇರುತ್ತದೆ; ನಂತರ ವಾಯುವ್ಯಾಭಿಮುಖವಾಗಿ ಕಾಕನಹಸೂಡಿಯ ಸರ್ವೆ 8ನೆ ನಂಬರಿನಮೇಲೆ ಸುಮಾರು 50 ಸರಪಣಿಗಳ ದೂರದವರಿಗೆ ಹೋಗಿ ಕಾಕನಹಸೂಡಿ ಗ್ರಾಮದ ಸರ್ವೆ 5ನೆ ನಂಬರಿನ ಈಶಾನ್ಯ ಮೂಲೆಯಿಂದ ವಾಯುವ್ಯಕ್ಕೆ ಸುಮಾರು 18 ಸರಪಣಿಗಳ ಫಾಸಲೆಯಲ್ಲಿರುವ ಹಳ್ಳವನ್ನು ಸೇರುತ್ತದೆ; ನಂತರ ಅದೇ ಹಳ್ಳದಮೇಲೆಯೂ ಮತ್ತು ಕಾಕನಹಸೂಡಿಯ ಸರ್ವೆ 8 ಮತ್ತು 29ನೆ ನಂಬರು ಮತ್ತು ಲಿಂಗಾಪುರದ 6ನೆ ನಂಬರು ಇವುಗಳಮೇಲೆ ಸುಮಾರು 130 ಸರಪಣಿಗಳ ದೂರದವರಿಗೆ ಹೋಗಿ, ಕೋರ್ಲಕೊಪ್ಪ, ಲಿಂಗಾಪುರ ಮತ್ತು ಷಿಡ್ಮಾಜಿ ಹೊಸೂರು, ಈ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳನ್ನು ಸೇರುತ್ತದೆ; ನಂತರ ವಾಯುವ್ಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ 7ನೆ ನಂಬರಮೇಲೆ ಸುಮಾರು 50 ಸರಪಣಿಗಳ ದೂರ ಹೋಗಿ ಸರ್ವೆ 1ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ; ನಂತರ ಈಶಾನ್ಯಾಭಿಮುಖವಾಗಿ ಷಿಡ್ಮಾಜಿ ಹೊಸೂರು ಗ್ರಾಮದ ಸರ್ವೆ 22ನೆ ನಂಬರಿನ ಪೂರ್ವಕಡೆಯಲ್ಲಿ ಹೊರಟು ಹೊರಟ ಸ್ಥಾನವನ್ನು ಬಂದು ಸೇರುತ್ತದೆ.

ಷರಾಗಳು—

ಬಿ. ಈ ತಾಕಿನಲ್ಲಿ ಇದರಡಿ ಕಂಡ ರಿಯಾಯಿತಿಗಳನ್ನು ಮಂಜೂರ್ಮಾಡಿ ಇರುತ್ತದೆ.

(1) 1 ಕೈತೊಟ್ಲು, 2 ಸಾರಿಗೆರೆ, 3 ಗಣೇದಹಾಳು, 4 ಕಾಕನಹಸೂಡಿ, 5 ಲಿಂಗಾಪುರ, 6 ಷಿಡ್ಮಾಜಿಹೊಸೂರು, 7 ಉಂಬಲಿಬೈಲು, 8 ಹೊಳಲೂರು, 9 ಬ್ಯಾಡರಹೊಸಹಳ್ಳಿ, 10 ಸಾರಗೂರು, 11 ಗುಳ್ಳಾಪುರ, 12 ಗೊರವಿಕಟ್ಟೆ ಮತ್ತು 13 ಕೂಡ್ಲಿ ಈ ಗ್ರಾಮಸ್ಥರು ಸೌದೆಗಾಗಿ ಒಣಗಿದ ಮರವನ್ನು, ವ್ಯವಸಾಯದ ಕೆಲಸಗಳಿಗಾಗಿ ಮನ್ನಾಜಾತಿಗೆ ಸೇರದ ಮರವನ್ನು ಮುಳ್ಳುಗಿಡಗಳನ್ನು ಮುಫತ್ತಾಗಿ ತೆಗೆದುಕೊಂಡು ಹೋಗಲು ಅಪ್ಪಣೆಕೊಟ್ಟು ಇರುತ್ತೆ.

(2) ಮೇಲ್ಕಂಡ ಗ್ರಾಮಸ್ಥರು ಕಬ್ಬಿನರಸದಿಂದ ಬೆಲ್ಲ ತಯಾರ್ಮಾಡುವದಕ್ಕಾಗಿ ಗೊತ್ತಾದ ಪ್ರದೇಶಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರರಿಂದ ಸ್ಪೆಷಲ್ ರಹದಾರಿ ಪಡದು, ಹಸಿ ಸವುದೆಯನ್ನು ಸಹಾ ತೆಗೆದುಕೊಂಡು ಹೋಗಲು ಅಪ್ಪಣೆ ಕೊಟ್ಟು ಇರುತ್ತೆ. ಆದರೆ ಸೌದೆ ಮೊತ್ತವನ್ನು ಅಮಲ್ದಾರ್ರು ಠರಾಯಿಸಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರರಿಗೆ ಶಿಫಾರ್ಸು ಮಾಡಬೇಕು.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಲಾಗಾಯಿತು 5 ಘಂಟೆಯ ವರೆಗೆ ದಿವಾನ್‌ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಕಾಯಿಷ್ ಆದ್ದು. **[ನಂ. 38.**

ಬೆಂಗಳೂರು, ಗುರುವಾರ, **ಸೆಪ್ಟಂಬರ** ತಾ॥ 23, ಸ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕ್ ವರಕ್ಸ್ ಆಫೀಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ ಜನರಲ್‌ರವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ .

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 4ನೆ ಸೆಪ್ಟಂಬರ 1909.

ನಂ. 2203—ಸ್ಯಾನಿಟೆರಿ 4-09-18, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ				ತಾಲ್ಲೂಕು.
ಪೆಂಜನಹಳ್ಳಿ	...	...	...	ಗುಂಡ್ಲುಪೇಟೆ.
ರಾಮಪುರ	...	...	...	ನಂಜನಗೂಡು.
ನಂಜನಗೂಡು	...	...	...	ಡಿಟೋ
ಮರಿಯಾಲ	...	...	...	ಚಾಮರಾಜನಗರ.
ಫ್ರೆಂಚ್‌ರಾಕ್ಸ್	...	...	...	ಫ್ರೆಂಚ್‌ರಾಕ್ಸ್ ಸಬ್ ತಾ॥
ಮೂಗೂರು	...	...	...	ಟಿ. ನರಸೀಪುರ.
ಗಾಜನೂರು	...	...	...	ಮಳವಳ್ಳಿ.
ಚಿಕ್ಕೇನಹಳ್ಳಿ	...	...	...	ಹುಣಸೂರು.
ಚಿಲ್ಲಹಳ್ಳಿ	...	...	...	ಡಿಟೋ

ತಾರೀಖು 20ನೆ ಸೆಪ್ಟಂಬರ 1909.

ನಂ. 2758—ಸ್ಯಾನಿಟೆರಿ 7—09—6, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷರ್ಷ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಚಂಗ್ರವಲ್ಲಿ	ಹಾಸನ.
ತಮ್ಮನಗೋಮಹಳ್ಳಿ	ಡಿಟೋ
ಹರೆಬೇಲಿಕೊಪ್ಪಲು	ಡಿಟೋ
ತಾವರೆದಕೊಪ್ಪಲು	ಡಿಟೋ
ಕಾತಿಹಳ್ಳಿ	ಡಿಟೋ
ಸಿದ್ದಹೊಸಹಳ್ಳಿ	ಡಿಟೋ

ತಾರೀಖು 22ನೆ ಸೆಪ್ಟಂಬರ 1909.

ನಂ. 2862—ಸ್ಯಾನಿಟೆರಿ 9-09-2, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷರ್ಷ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ದುರುವೇಗೆರೆ	ಚನ್ನಗಿರಿ ತಾಲ್ಲೂಕು.

ತಾರೀಖು 11ನೆ ಸೆಪ್ಟಂಬರ 1909.

ನಂ. ಜು. 737—ಪೊಲೀಸ್ 49-09-2, 1908ನೆ ಇಸವಿ ಅಕ್ಟೋಬರು 17ನೆ ತಾರೀಖಿನ ಜು. 1125—ಪೊಲೀಸ್ 43-08-2ನೆ ನಂಬರ ಇಸ್ತಿಹಾರ್ನಾಮೆಯಲ್ಲಿ, ಚಿತ್ರದುರ್ಗದ ಡಿಸ್ಟ್ರಿಕ್ಟು ಪೊಲೀಸು ಅಸಿಸ್ಟೆಂಟು ಸೂಪರಿಂಟೆಂಡೆಂಟರಾದ ಮಿ|| ಬಿ. ರಾಮಸ್ವಾಮಯ್ಯ, ಬಿ.ಎ. ಯವರಿಗೆ ಕೊಡೋಣಾಗಿ ಇದ್ದ ಒಂದು ತಿಂಗಳು ಮತ್ತು 19 ದಿನಗಳ ಪ್ರಿವಿಲೇಜು ರಜಾವನ್ನು, ಇವರು ಉಪಯೋಗಿಸಿಕೊಳ್ಳಲಿಲ್ಲವಾಗಿ ಅದನ್ನು ಇದರಿಂದ ರದ್ದುಪಡಿಸಿ ಇರುತ್ತದೆ.

ತಾರೀಖು 11ನೆ ಸೆಪ್ಟಂಬರ 1909.

ನಂ. 2387—ವಿದ್ಯಾ. 487-08-9, ಸರ್ಕಾರದ ಕೆಲಸದ ಅನುಕೂಲಕ್ಕೋಸ್ಕರ ಇದರಡಿ ಕಂಡ ಪಾಠಶಾಲೆಗಳ ಡೆಪ್ಯುಟಿ ಇನ್ಸ್ಪೆಕ್ಟರುಗಳ ಮೊಕರರಾತಿಗಳನ್ನು ಮತ್ತು ವರ್ಗಾವರ್ಗಿಗಳನ್ನು ಸಹಾ ಮಂಜೂರ್ಮಾಡಿ ಇರುತ್ತದೆ.

1. ಮೈಸೂರು ಮಹಾರಾಜರ ಕಾಲೇಜಿನ ಉಪನ್ಯಾಸಕರಾದ ಮಿ|| ಬಿ. ದಾಸಪ್ಪ, ಬಿ.ಎ. ಯವರು ಕೆಲಸದಿಂದ ನಿವೃತ್ತರಾದ ಮಿ|| ಎಸ್. ರಂಗಾಚಾರ್ಲು ಯವರಿಗೆ ಬದಲಾಗಿ ಪಾಠಶಾಲೆಗಳ ಡೆಪ್ಯುಟಿ ಇನ್ಸ್ಪೆಕ್ಟರಾಗಿ ಬೆಂಗಳೂರು ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರಬೇಕು.
2. ಮಿ|| ಕೆ. ಎನ್. ವೀರಭದ್ರಯ್ಯನವರು, ಬೆಂಗಳೂರಿಂದ ಹಾಸನ ಡಿಸ್ಟ್ರಿಕ್ಟಿಗೆ.
3. „ ಎಂ. ಕೆ. ತಿರುಮಲಾಚಾರ್ಯರವರು ಹಾಸನದಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ.
4. „ ಎನ್. ಶ್ಯಾಮರಾಯರವರು ಚಿತ್ರದುರ್ಗದಿಂದ ಕಡೂರು ಡಿಸ್ಟ್ರಿಕ್ಟಿಗೆ.
5. „ ಎಚ್. ವೆಂಕಟರಮಣಯ್ಯನವರು ಕಡೂರಿನಿಂದ ತುಮಕೂರು ಡಿಸ್ಟ್ರಿಕ್ಟಿಗೆ-ಕೆಲಸದಿಂದ ನಿವೃತ್ತರಾದ ಮಿ|| ರಂಗಾಚಾರ್ಲು ಯವರಿಗೆ ಬದಲಿಯಾಗಿ.

ತಾರೀಖು 13ನೆ ಸೆಪ್ಟಂಬರ 1909.

ನಂ. ಜು. 759—ಪ್ರಿಜನ 18-09-2, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣವನ್ನನುಸರಿಸಿ, ಮೈಸೂರು ಡಿಸ್ಟ್ರಿಕ್ಟು ಜೈಲಿನ ಆವರಣದವಳಗೆ ನಡೆಯುವ ತಕಶೀರುಗಳ ವಿಷಯದಲ್ಲಿ, ಸದರಿ ಜೈಲಿನ ಆಕ್ಟಿಂಗ ಸೂಪರಿಂಟೆಂಡೆಂಟರಾದ ಮಿ|| ಟಿ. ಎಸ್. ನಂಜಪ್ಪನವರನ್ನು 2ನೆ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿ ಇರುವದಲ್ಲದೆ, ಅದೇ ಕೋಡಿನ 37ನೆ ಪ್ರಕರಣವನ್ನನುಸರಿಸಿ ಸರ್ಕಾರದವರು ಸದರಿ ತರಗತಿಯ ಮ್ಯಾಜಿಸ್ಟ್ರೇಟರಿಗೆ ಜಾಸ್ತಿಯಾಗಿ ಕೊಡಬಹುದಾದ 4ನೆ ಷೆಡ್ಯೂಲಿನಲ್ಲಿ ನಮೂದಾಗಿರುವ ಅಧಿಕಾರ ಅಂದರೆ 32ನೆ ಪ್ರಕರಣದ ಮೇರಿಗೆ ಛಡಿ ಸಜಾ ವಿಧಿಸತಕ್ಕ ಅಧಿಕಾರವನ್ನು ಸಹಾ ಇವರಿಗೆ ಕೊಟ್ಟು ಇರುತ್ತದೆ.

ತಾರೀಖು 15ನೆ ಸೆಪ್ಟಂಬರ 1909.

ನಂ. ಜ. 1684—ಜ. ಮಿ. 36-09-4, ಲೆಫ್ಟಿನೆಂಟ ಕರ್ನಲ ಆರ. ಜಿ. ಜೋನ್ಸರವರು 1909ನೆ ಇಸವಿ ಆಗಸ್ಟು 8ನೆ ತಾರೀಖಿನ ಪೂರ್ವಾಹ್ನದಲ್ಲಿ ಬೆಂಗಳೂರಿಗೆ ಬಂದು ಕೆಲಸದ ಮೇಲೆ ಹಾಜರಾಗಿ ಇರುವದರಿಂದ 25—7—08ನೆ ಮರ್ಕೂಂನ ಜ. 598—ಜ. ಮಿ. 22-07-23ನೆ ನಂಬರ ಇಸ್ತಿಹಾರ್ನಾಮೆಯಲ್ಲಿ ಅವರಿಗೆ ಮಂಜೂರ್ಮಾಡಿ ಇದ್ದ ರಜಾಪೈಕಿ ಉಪಯೋಗಿಸಿಕೊಳ್ಳದೆ ಹೋದ ಭಾಗದ ರಜಾವನ್ನು ಇದರಿಂದ ರದ್ದುಪಡಿಸಿ ಇರುತ್ತದೆ.

ತಾರೀಖು 13ನೆ ಸೆಪ್ಟಂಬರ್ 1909.

ನಂ. ಜ. 1623—ಜ. ಮಿ. 111-09-2, ಇಂಡ್ಯಾ ದೇಶದಿಂದ ನೇಟಾಲ್ ರಾಜ್ಯಕ್ಕೆ ಯಾವ ರಾಸುಗಳನ್ನೇ ಆಗಲಿ ಸಾಗಿಸಕೂಡದೆಂಬ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟು ಹೋಂ ಡಿಪಾರ್ಟುಮೆಂಟಿನಿಂದ ಸಾದರಾದ ಈ ಕೆಳಗಣ 1909ನೆ ಆಗಸ್ಟ್ 13ನೆ ತಾರೀಖು 3013ನೆ ನಂಬರು ಇಸ್ತಿಹಾರುನಾಮೆಯನ್ನು ಸಮಸ್ತ ಜನಗಳ ತಿಳುವಳಿಕೆಗೋಸ್ಕರ ಪ್ರಸಿದ್ಧಪಡಿಸಿರುತ್ತದೆ.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸಕ್ರೆಟರಿ.

ಸಿಂಲಾ, ನಂ. 3013, ತಾರೀಖು 13ನೆ ಆಗಸ್ಟು 1909.

ಹೋಂ ಡಿಪಾರ್ಟುಮೆಂಟು.

ಇಸ್ತಿಹಾರ್‌ನಾಮೆ.

ಇಂಡ್ಯಾ ದೇಶದಿಂದ ನೇಟಾಲ್ ರಾಜ್ಯಕ್ಕೆ ಯಾವ ರಾಸುಗಳನ್ನೂ ಸಾಗಿಸಕೂಡದೆಂಬ ಬಗ್ಗೆ 1909ನೆ ಆಗಸ್ಟ್ 5ನೆ ತಾರೀಖಿನಲ್ಲಿ ಸೆಕ್ರೆಟರಿ ಆಫ್ ಸ್ಟೇಟರವರು ಕೊಟ್ಟಿರುವ ತಂತಿ ವರ್ತಮಾನವನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸಿರುತ್ತದೆ.

ತಂತಿ—ಲಂಡನ್, 5ನೆ ಆಗಸ್ಟ್ 1909.

ಸೆಕ್ರೆಟೇರಿ ಆಫ್ ಸ್ಟೇಟರವರಿಂದ ವೈಸರಾಯಿ ಯವರಿಗೆ—

ಇಂಡ್ಯಾ ದೇಶದಲ್ಲಿ ಸೂರ್ರಾ ಎಂಬ ಜಾಡ್ಯ ಪ್ರಾಪ್ತವಾಗಿರುವ ಪ್ರಯುಕ್ತ ಅಲ್ಲಿಂದ ಯಾವ ರಾಸುಗಳನ್ನೂ ನೇಟಾಲ್ ರಾಜ್ಯಕ್ಕೆ ಖಂಡಿತವಾಗಿ ಸಾಗಿಸಕೂಡದೆಂದು ನಿರೋಧಿಸಿದೆ ಎಂದು ಕಲೋನಿಯಲ್ ಆಫೀಸಿನಿಂದ ವರ್ತಮಾನ ಬಂದಿದೆ.

ಎಚ್. ಎ. ಸ್ಟೂವರ್ಟ್,
ಇಂಡ್ಯಾ ಗವರ್ನಮೆಂಟಿನ ಸೆಕ್ರೆಟರಿ.

ತಾರೀಖು 15ನೆ ಸೆಪ್ಟಂಬರ್ 1909.

ನಂ. ಜ. 1685—ಜ. ಮಿ. 36-09-5, ಲೆಫ್ಟಿನೆಂಟ್ ಕರ್ನಲ್ ಆರ್. ಜಿ. ಜೋನ್ಸ್ ಯವರನ್ನು ಶ್ರೀಮನ್ ಮಹಾರಾಜಾ ಸಾಹೇಬ್ಬಹದರವರ ಮಿಲಿಟರಿ ಸೆಕ್ರೆಟರಿಯವರನ್ನಾಗಿ ಮೊಕರರ್‌ಮಾಡಿ ಇರುತ್ತದೆ.

ತಾರೀಖು 15ನೆ ಸೆಪ್ಟಂಬರ್ 1909.

ನಂ. ಜ. 1687—ಜ. ರಿ. 21-08-20, 1909ನೆ ಇಸವಿ ಸೆಪ್ಟಂಬರ್ 1ನೆ ತಾರೀಖಿನ ಜ. 1361—ಜ. ರಿ. 21-08-18ನೆ ನಂಬರ್ ಇಸ್ತಿಹಾರ್‌ನಾಮೆಯ ಜತೆಯಲ್ಲಿ ಪ್ರಕಟಿಸಲ್ಪಟ್ಟ ಮೈಸೂರು ಡಿಸ್ಟ್ರಿಕ್ಟಿನ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪಟ್ಟಿಗೆ ಇದರಡಿ ಕಂಡ ಹೆಸರನ್ನು ಹೊಸದಾಗಿ ಸೇರಿಸಿದೆ ಎಂಬ ಸಂಗತಿಯನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಕಟಿಸಿ ಇರುತ್ತದೆ.

ಚುನಾವಣೆ ಪ್ರದೇಶ.	ಪ್ರತಿನಿಧಿ ಹೆಸರು.	ಕಸಬು.
ಚಾಮರಾಜನಗರದ ಮ್ಯುನಿಸಿಪಾಲಿಟಿ ...	ಮಿ॥ ನರಸಿಂಹಯ್ಯ ...	ಜಮೀನ್ದಾರ್

ತಾರೀಖು 15ನೆ ಸೆಪ್ಟಂಬರ್ 1909.

ನಂ. 2638—ವಿದ್ಯಾ. 465-08-4, ಮೈಸೂರು ಸರ್ವಿಸ್ಸು ರೆಗ್ಯುಲೇಷನಿನ 177 ಮತ್ತು 194ನೆ ಪ್ರಕರಣಗಳನ್ನನುಸರಿಸಿ, ಬೆಂಗಳೂರು ಸರ್ಕಲ್ ಪಾಠಶಾಲೆಗಳ ಇನ್ಸ್‌ಪೆಕ್ಟರಾದ ಮಿ॥ ಟಿ. ಆರ್. ವೆಂಕಟಸಾಮಿ ನಾಯಿಡು, ಬಿ.ಎ. ಯವರಿಗೆ 1909ನೆ ಇಸವಿ ಆಗಸ್ಟ್ 21 ಮತ್ತು 30ನೆ ತಾರೀಖಿನಲ್ಲಿ ಪೂರಾ ತಲಬಿನಮೇಲೆ ಪ್ರಿವಿಲೀಜು ರಜಾ ಮಂಜೂರ್‌ಮಾಡಿ ಇರುತ್ತದೆ.

ತಾರೀಖು 16ನೆ ಸೆಪ್ಟಂಬರ್ 1909.

ನಂ. 2670—ಲೋ. ಬೋ. 84-09-2, ಕುಣಿಗಲ್ ತಾಲ್ಲೂಕು ಬೋರ್ಡಿನ ಸ್ಥಳೀಯ ಸರಹದ್ದಿನಲ್ಲಿ ಹಾಜರಿಲ್ಲದೆ ಹೋದ ಸಬಬಿನಮೇಲೆ ವಜಾ ಮಾಡಲ್ಪಟ್ಟ ಮಿ॥ ಶ್ರೀನಿವಾಸಯ್ಯಂಗಾರ್ರವರಿಗೆ ಬದಲಾಗಿ ಮಿ॥ ಮೊಕುಂ ಭದ್ರಯ್ಯಶೆಟ್ಟಿ ಎಂಬವರನ್ನು, ಸದರಿ ಕುಣಿಗಲ್ ತಾಲ್ಲೂಕಿನ ಬೋರ್ಡಿನಲ್ಲಿ ತಮ್ಮ ಕಡೆ ಪ್ರತಿನಿಧಿಯನ್ನಾಗಿ ಕುಣಿಗಲ್ ಮುನಿಸಿಪಲ್ ಸಭೆಯವರು ಚುನಾಯಿಸಿ ಇರುವದನ್ನು ಸರ್ಕಾರದವರು ಅಂಗೀಕರಿಸಿ ಇರುತ್ತಾರೆ.

ತಾರೀಖು 20ನೆ ಸೆಪ್ಟಂಬರ್ 1909.

ನಂ. 2740—ಲೋ. ಬೋ. 60-09-5, 1902ನೆ ಇಸವಿಯ 2ನೆ ನಂಬರು ಲೋಕಲ್ ಬೋರ್ಡು ರೆಗ್ಯುಲೇಷನಿನ 19ನೆ ಪ್ರಕರಣದ ಮೇರೆಗೆ, ಕುಣಿಗಲ್‌ನಲ್ಲಿರುವ ಓವರ್ಸಿಯರ್ ವಾಸಮಾಡತಕ್ಕ ಸರ್ಕಾರಿ ಕಟ್ಟಡವನ್ನು ತುಮಕೂರು ಡಿಸ್ಟ್ರಿಕ್ಟು ಬೋರ್ಡಿನ ಅಧಿಕಾರಕ್ಕೆ ವಳಪಡಿಸಿ ಇರುತ್ತೆಂಬದನ್ನು ಇದರಿಂದ ಪ್ರಸಿದ್ಧಪಡಿಸಿ ಇರುತ್ತದೆ.

ತಾರೀಖು 21ನೆ ಸೆಪ್ಟಂಬರ್ 1909.

ನಂ. ಜು. 840—ಕೋರ್ಟ್ಸ್ 72-09-2, ಚಿತ್ರದುರ್ಗದ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ॥ ಎ. ಮೃತ್ಯುಂಜಯ ಐಯ್ಯರ್, ಬಿ.ಎ. ಯವರಿಗೆ 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 37ನೆ ಪ್ರಕರಣವನ್ನನುಸರಿಸಿ ಇದರಡಿ ನಮೂದಿಸುವ ಅಧಿಕಾರಗಳನ್ನು ಹೆಚ್ಚಾಗಿ ಕೊಟ್ಟಿರುತ್ತದೆ:—

(1) ಒಳ್ಳೆಯ ನಡತೆಯ ಬಗ್ಗೆ ಜಾಮೀನ್ ಕೇಳುವ ಅಧಿಕಾರ—110ನೆ ಪ್ರಕರಣ.
(2) ಬಹಿರಂಗವಾದ ಜಾಗಾಗಳಲ್ಲಿ ಹೇಸಿಗೆ ಮಾಡಿದರೆ ಆ ಬಗ್ಗೆ ಹುಕುಂ ಮಾಡುವ ಅಧಿಕಾರ—133ನೆ ಪ್ರಕರಣ.
(3) ಮ್ಯಾಜಿಸ್ಟ್ರೇಟರ ಅಧಿಕಾರ ಸರಹದ್ದಿನ ಹೊರಗೆ ತಕ್ಸೀರು ನಡೆಸಿದ್ದ ಮನುಷ್ಯನಿಗೆ ಅಧಿಕಾರ ಸರಹದ್ದಿನೊಳಗೆ ಪ್ರಾಸೆಸ್ಸು ಕೊಡುವ ಅಧಿಕಾರ—186ನೆ ಪ್ರಕರಣ.
(4) ಕಳವಿನ ಮಾಲೆಂದು ತಿಳಿಸಲ್ಪಟ್ಟ ಅಥವಾ ಸಂಶಯಪಟ್ಟ ಸ್ವತ್ತನ್ನು ಮಾರುವ ಅಧಿಕಾರ—524ನೆ ಪ್ರಕರಣ.
(5) ಖುಲಾಸೆಯಾದ ಕೈದಿಗಳ ವಾಸಸ್ಥಳವನ್ನು ತಿಳಿಸುವಂತೆ ಅವರಿಗೆ ಹುಕುಂ ಮಾಡುವ ಅಧಿಕಾರ—565ನೆ ಪ್ರಕರಣ.

ತಾರೀಖು 21ನೆ ಸೆಪ್ಟಂಬರ 1909.

ನಂ. 2835—ಮೆಡಿಕಲ್ 76-08-17, ವೈದ್ಯ ಇಲಾಖೆಯಲ್ಲಿ ಇದರಡಿ ಕಂಡಂತೆ ಬಡ್ತಿ, ಬಹಲ್ ಮತ್ತು ಹೊಸ ನೊಕರರಾತಿಗಳನ್ನು ಮಂಜೂರ್ಮಾಡಿ ಇರುತ್ತದೆ.

ನಂ.	ಹುದ್ದೇದಾರರ ಹೆಸರು.	ಹಾಲಿ ಇರತಕ್ಕ ದರ್ಜೆ ಮತ್ತು ತರಗತಿ.	ಯಾವ ದರ್ಜೆ ಯಾ ತರಗತಿಗೆ ನೊಕರ ರ್ಮಾಡಿರುವದು, ಅಥವಾ ಬಡ್ತಿ ಕೊಟ್ಟಿರುವದು ಅಥವಾ ಬಹಲ್ ಇಟ್ಟಿರುವದು.	4ನೆ ಕಲಂನಲ್ಲಿ ಕಂಡ ತರಗತಿಗೆ ನೇಮಕವಾದ, ಅಥವಾ ಬಡ್ತಿಯಾದ, ಅಥವಾ ಬಹಲ್ ಇಡಲ್ಪಟ್ಟ ತಾರೀಖು.	ಷರಾ.
1	ಮಿ|| ಎ. ಶೇಷಗಿರಿರಾವ್, ಎಲ್. ಎಂ. ಎಸ್.	ಅಸಿಸ್ಟೆಂಟ್ ಸರ್ಜ್ಜನ್, 4ನೆ ತರಗತಿ ಹಂಗಾಮಿ.	ಅಸಿಸ್ಟೆಂಟ್ ಸರ್ಜನ್, 4ನೆ ತರಗತಿ ಕಾಯಂ.	2ನೆ ಮೇ. 1908.	
2	,, ಎಸ್. ಕೆ. ಹನುಮಂತರಾವ್, ಎಂ. ಬಿ. ಮತ್ತು ಸಿ. ಎಂ.	ಸಬ್ ಅಸಿಸ್ಟೆಂಟ್ ಸರ್ಜ್ಜನ್, 1ನೆ ತರಗತಿ...	4ನೆ ತರಗತಿ ಅಸಿಸ್ಟೆಂಟ್ ಸರ್ಜ್ಜನ್ (ಕಾಯಂ)	14ನೆ ಜುಲೈ 1908.	
3	,, ಟ. ಎಸ್. ಸಿದ್ದಪ್ಪ, ಎಲ್. ಎಂ. ಎಸ್.	ಡಿಟೋ ...	ಡಿಟೋ ...	ಡಿಟೋ	
4	,, ಎಫ್. ಫರನಾಂಡೆಜ್, ಎಲ್. ಆರ್, ಸಿ. ಪಿ. ಮತ್ತು ಎಸ್. ಎಲ್. ಎಫ್. ಪಿ. ಎಸ್.	ಹಂಗಾಮಿ ಸಬ್ ಅಸಿಸ್ಟೆಂಟ್ ಸರ್ಜ್ಜ, 5ನೆ ತರಗತಿ.	ಸಬ್ ಅಸಿಸ್ಟೆಂಟ್ ಸರ್ಜ್ಜನ್, 3ನೆ ತರಗತಿ (ಕಾಯಂ).	12ನೆ ಆಗಸ್ಟು 1907.	
5	,, ಎಸ್. ನಾರಾಯಣರಾವ್, ಬಿ. ಎ., ಎಂ. ಬಿ. ಸಿ. ಎಂ.	ಡಿಟೋ ...	ಡಿಟೋ ...	6ನೆ ಸೆಪ್ಟಂಬರ 1907.	
6	,, ಬಿ. ನಂಜಪ್ಪ, ಎಂ. ಬಿ. ಸಿ. ಎಂ.	...	ಡಿಟೋ ...	21ನೆ ಜೂನ್ 1909 (ಕೆಲಸಕ್ಕೆ ಸೇರಿದ ತಾರೀಖು)	ಹೊಸದಾಗಿ ನೊಕರರ್ಮಾಡಿರುತ್ತೆ.
7	,, ಏ. ಎಸ್. ನಂಜುಂಡಯ್ಯ, ಎಲ್. ಎಂ. ಎಸ್.	ಹಂಗಾಮಿ ಸಬ್ ಅಸಿಸ್ಟೆಂಟ್ ಸರ್ಜ್ಜನ್, 3ನೆ ತರಗತಿ.	3ನೆ ತರಗತಿಯ ಸಬ್ ಅಸಿಸ್ಟೆಂಟ್ ಸರ್ಜ್ಜನರ ಗ್ರೇಡಿನಲ್ಲಿ ಖಾಲಿ ಇದ್ದ ಕಾಯಂ ನೌಕರಿಗೆ ನೊಕರರ್.	...	1909ನೆ ಆಗಸ್ಟು 9ನೆ ತಾರೀಖು ಲಾಗಾಯಿತು ಒಂದು ವರುಷ ತನಕ ಅಜಮಾಯಿಷಿ ತರೀಕಾಗಿ ಎಣಿಸಬೇಕು.
8	,, ಟಿ. ಬಾಲಕೃಷ್ಣ ಮೊದಲಿಯಾರ್, ಎಲ್. ಎಂ. ಎಸ್.	...	3ನೆ ತರಗತಿಯ ಸಬ್ ಅಸಿಸ್ಟೆಂಟ್ ಸರ್ಜ್ಜನರಾಗಿ ನೊಕರರ್ (ಕಾಯಂ).	1909ನೆ ಆಗಸ್ಟು 11ನೆ ತಾರೀಖು ಲಾಗಾಯಿತು (ಕೆಲಸಕ್ಕೆ ಸೇರಿದ ತಾರೀಖು)	ಹೊಸ ನೊಕರರ್ಮಾಡಿರುತ್ತೆ.

ತಾರೀಖು 16ನೆ ಸೆಪ್ಟಂಬರ್ 1909.

ನಂ. ರೆ. 2407—ಲ್ಯಾ. ರೆ. 259-08-1, ಸ್ 1888ನೆ ಇಸವಿಯ ಲ್ಯಾಂಡ್ ರೆವಿನ್ಯೂ ಕೋಡಿನ 39ನೆ ಪ್ರಕರಣದ ಮೇರೆಗೆ, ವಿಶೇಷ ಕೆಲಸಗಳಿಗೋಸ್ಕರ ಜಮೀನುಗಳನ್ನು ವಿಂಗಡಿಸಿಡುವ ವಿಷಯದಲ್ಲಿಯೂ, ಹಾಗೆ ವಿಂಗಡಿಸಲ್ಪಟ್ಟ ಜಮೀನುಗಳನ್ನು ಉಪಯೋಗಿಸುವ ಅಥವಾ ಕೊಡುವ ವಿಷಯದಲ್ಲಿಯೂ ಸಹ ರೆವಿನ್ಯೂ ಕಮಿಷನರವರ ಅಧಿಕಾರವನ್ನು ನಿಷ್ಕರ್ಷೆ ಮಾಡುವುದಕ್ಕಾಗಿ ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್ರವರ ಸರ್ಕಾರದವರು ಸದರಿ ಲ್ಯಾಂಡ್ ರೆವಿನ್ಯೂ ಕೋಡಿನ 233ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಇದರಡಿ ಕಂಡ ನಿಬಂಧನೆಯನ್ನು ವಿಧಿಸಿ, ಅದನ್ನು 1907ನೆ ಜನವರಿ 9ನೆ ಮರ್ಕುಂ ರೆ. 6732—ಲ್ಯಾ. ರೆ. 212-06-16ನೆ ನಂಬರಿ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ನಿಬಂಧನೆಗಳ 11 (b) ನಿಬಂಧನೆಗೆ ಬದಲಾಗಿ ಸೇರಿಸತಕ್ಕದ್ದೆಂದು ಹುಕುಂ ಮಾಡುತ್ತಾರೆ :—

"11 (b) (i) ಜಂಗಲಿಗೋಸ್ಕರ ಜಮೀನುಗಳನ್ನು ಉಳಿಸಿಡತಕ್ಕ ಕೆಲಸವು (1900ನೆ ಇಸವಿಯ 11ನೆ ನಂಬರು) ಮೈಸೂರು ಫಾರೆಸ್ಟ್ ರೆಗ್ಯುಲೇಷನಿನಿಂದ ಕ್ರಮಪಟ್ಟಿರುವುದರಿಂದ, ಈಬಗ್ಗೆಗಾಗಿ ರೆವಿನ್ಯೂ ಕಮಿಷನರವರು ಯಾವ ಜಮೀನುಗಳನ್ನೂ ವಿಂಗಡಿಸಿಡಬೇಕಾದ ಅವಶ್ಯವಿಲ್ಲ.

(ii) ಸರ್ಕಾರಕ್ಕೆ ತೆಗೆದುಕೊಳ್ಳಲ್ಪಟ್ಟ ಜಮೀನುಗಳಿಗೆ ಸರ್ಕಾರದವರು ಕಂಪೆನ್ಸೇಷನ್ ಕೊಡಬೇಕಾಗಿಲ್ಲದ ಸಂದರ್ಭದಲ್ಲಿ ಪ್ರೊವಿನ್ಷಿಯಲ್ ಅಥವಾ ಲೋಕಲ್ ಫಂಡ್ ರಸ್ತೆಗಳಿಗೂ, ಪಾಠಶಾಲೆಗಳಿಗೂ ಮತ್ತು ಇತರ ಸರ್ಕಾರೀ ಕೆಲಸಗಳಿಗೂ ಸಹ ವಿಸ್ತೀರ್ಣದಲ್ಲಿ 50 ಎಕರೆಗಳಿಗೆ ಮೀರದೆಯೂ ಬಜಾರ್ ಖರೀದಿಯಲ್ಲಿ 100 ರೂಪಾಯಿಗೆ ಮೀರದೆಯೂ ಮತ್ತು ಕಂದಾಯ ದಾಖಲಾಗದೆಯೂ ಇರುವ ಬಂಜರು ಜಮೀನನ್ನು ಉಪಯೋಗಿಸಿಕೊಳ್ಳುವಂತೆ ಮಂಜೂರ್ಮಾಡುವ ಬಗ್ಗೆ ರೆವಿನ್ಯೂ ಕಮಿಷನರವರಿಗೆ ಅಧಿಕಾರ ಕೊಟ್ಟಿರುತ್ತದೆ. ಹಾಗೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವಂತೆ ರೆವಿನ್ಯೂ ಕಮಿಷನರವರು ಮಂಜೂರ್ಮಾಡಿದ ಜಮೀನುಗಳ ಲೆಕ್ಕವನ್ನು ಆರು ತಿಂಗಳಿಗೆ ಒಂದಾವರ್ತಿ ಅವರು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(iii) ಹಾಗೆ ಪ್ರತ್ಯೇಕವಾಗಿ ವಿಂಗಡಿಸಿಡುವ ಬಗ್ಗೆ ಕಂದಾಯ ದಾಖಲಾಗದೇ ಇರುವ ಜಮೀನು ಇನ್ನೂ ಹೆಚ್ಚಾಗಿಯೇ ಕಾದರೂ ಅಥವಾ ಕಂದಾಯ ಕರಾರಾದ ಜಮೀನು ಎಷ್ಟೇ ವಿಸ್ತೀರ್ಣವುಳ್ಳದ್ದು ಬೇಕಾದರೂ ಪೂರ್ವಭಾವಿಯಾಗಿ ಸರ್ಕಾರದವರ ಮಂಜೂರಾತಿಯನ್ನು ಪಡೆಯಬೇಕು.

(iv) ಸರ್ಕಾರದವರ ಮಂಜೂರಾತಿನಿಶಿ ಫಲಾನೆ ಉದ್ದೇಶಕ್ಕೋಸ್ಕರ ಕೊಡಲ್ಪಟ್ಟ ಜಮೀನುಗಳನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಬೇಕಾದ ಸಂದರ್ಭದಲ್ಲಿಯೂ ಕೂಡ ಅದೇ ರೀತಿಯಾಗಿ ಸರ್ಕಾರದವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡೆಯಬೇಕು.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಲಾಗಾಯಿತು 5 ಘಂಟೆಯ ವರೆಗೆ ದಿವಾನ್‌ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 39.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 30, ಸ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕ್ ವರಕ್ಸ್ ಆಫೀಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್‌ರವರು, ಮ್ಯುನಿಸಿಪಲ್ ಬೋರ್ಡುಗಳ ಪ್ರೆಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 22ನೆ ಸೆಪ್ಟಂಬರ್ 1909.

ನಂ. 2861—ಸ್ಯಾನಿಟೇರಿ 14–09–11, ಘನಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ ಮಾಹೆ ಮಜಕೂರು 1 ನೆ ಮುಕ್ಕಾಂ 698—ಪಿ. ನೆ ನಂಬರ್ ಇಂಡಾರ್ಸುಮೆಂಟಿನೊಡನೆ ಬಂದ ಮದರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ.

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಡಿಸೆಂಬರು 13ನೆ ತಾರೀಖಿನಿಂದ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 16ನೆ ನವಂಬರ್ 1909.

ನಂ. ಜ. 2652—ಜ. ಮಿ. 131-09-39, ಘನವನ್ನು ಹೊಂದಿದ ಇಂಡಿಯಾದೇಶದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್‌ರವರ ಸವಾರಿಯು ಮೈಸೂರು ಸಂಸ್ಥಾನದ ರಾಜಧಾನಿಗೆ ಚಿತ್ತೈಸುತ್ತದೆಯಾದ್ದರಿಂದ ಈ ಸಂತೋಷ ಸೂಚನಾರ್ಥವಾಗಿ ಮೈಸೂರು ಷಹರಿನಲ್ಲಿರುವ ಸರ್ಕಾರಿ ಕಚ್ಚೇರಿಗಳಿಗೂ, ಕೋರ್ಟುಗಳಿಗೂ ಮತ್ತು ವಿದ್ಯಾಶಾಲೆಗಳಿಗೂ 1909ನೆ ಇಸವಿ ನವಂಬರ್ ಮಾಹೆ 25ನೆ ತಾರೀಖು ಬೃಹಸ್ಪತಿವಾರ, 26ನೆ ತಾರೀಖು ಶುಕ್ರವಾರ ಮತ್ತು 27ನೆ ತಾರೀಖು ಶನಿವಾರ—ಈ ದಿವಸಗಳಲ್ಲಿ ಜನರಲ್ ರಜಾ ಕೊಡತಕ್ಕದ್ದೆಂದು ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ.

2. ಆದರೆ ಇಲಾಖಾ ಮೊಕ್ತೇಸರರು, ಜರೂರಾತಿ ಕೆಲಸ ನಡೆಯಲು ತಕ್ಕ ಏರ್ಪಾಡುಗಳನ್ನು ಮಾಡತಕ್ಕದ್ದು.

ತಾರೀಖು 17ನೆ ನವಂಬರು 1909.

ನಂ. ಜು. 1346-51—ಕೋರ್ಟ್. 108-09-2, 1909ನೆ ಇಸವಿ ಅಕ್ಟೋಬರ್ ಮಾಹೆ 31ನೆ ಮರ್ಕೂಮಿನ ಕ್ಯಾಂಪು 102-107—Vನೆ ನಂಬರ್ ಸರ್ಕಾರಿ ಹುಕುಂ ಅನುಸರಿಸಿ ಮಿ|| ಪಿ. ಎಫ್. ಬೌರಿಂಗ್ ಸಾಹೇಬರು ಘನಹೊಂದಿದ ವೈಸಿರಾಯಿರವರ ಆಗಮನ ಸಂದರ್ಭದಲ್ಲಿ ಸ್ಪೆಷಲ್ ಡ್ಯೂಟಿ ಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರ್ಯಂತ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತು 1ನೆ ತರಗತಿ ಮ್ಯಾಜಿಸ್ಟ್ರೇಟರಾಗಿರುವ ಮಿ|| ಟಿ. ಚೊಕ್ಕಣ್ಣನವರನ್ನು ಕೋಲಾರ ಭಂಗಾರದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟ್ ಚಾರ್ಜಿಗೆ ವರ್ಗಾಯಿಸಿದೆ.

ತಾರೀಖು 23ನೆ ನವಂಬರ್ 1909.

ನಂ. ಜು. 1430—ಕೋರ್ಟ್ಸ್ 5-09-11, ಬೆಂಗಳೂರು ಸಿಟಿಯಲ್ಲಿ ಆನರರಿ ಬೆಂಚು ಮ್ಯಾಜಿಸ್ಟ್ರೇಟರುಗಳನ್ನು ಮೊಕರರ್ಮಾಡುವ ಬಗ್ಗೆ ಸಾದರಾದ 1909ನೆ ಇಸವಿಯ ಸೆಪ್ಟಂಬರ್ 2ನೆ ಮರ್ಕೂಂ ಜು. 696—ಕೋರ್ಟ್ಸ್ 5-09-6ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ :—

"12ನೆ ಪ್ರಕರಣವನ್ನನುಸರಿಸಿ" ಎಂಬ ಮಾತುಗಳಿಗೆ ಬದಲಾಗಿ "14ನೆ ಪ್ರಕರಣವನ್ನನುಸರಿಸಿ" ಎಂದು ಓದಿಕೊಳ್ಳತಕ್ಕದ್ದು ;

"2ನೆ ತರಗತಿಯ ಮ್ಯಾಜಿಸ್ಟ್ರೇಟರುಗಳನ್ನಾಗಿ ನೇಮಿಸಿ ಇರುತ್ತದೆ" ಎಂಬ ಮಾತುಗಳಿಗೆ ಬದಲಾಗಿ "ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳನ್ನಾಗಿ ನೇಮಿಸಿ 2ನೆ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೊಟ್ಟು ಇದೆ" ಎಂದು ಓದಿಕೊಳ್ಳತಕ್ಕದ್ದು; ಮತ್ತು "ಮಿ|| ಆರ್. ಅಬ್ಬಾಸ್‌ಖಾನ್ (ಚೌಬೀನೆ ವ್ಯಾಪಾರಿ)" ಎಂಬ ಮಾತುಗಳಿಗೆ ಬದಲಾಗಿ "ಮಿ|| ಮಹಮದ್ ಅಬ್ಬಾಸ್‌ಖಾನ್ (ಚೌಬೀನೆ ವ್ಯಾಪಾರಸ್ಥರು" ಎಂದು ಓದಿಕೊಳ್ಳತಕ್ಕದ್ದು.

ತಾರೀಖು 25ನೆ ನವಂಬರ್ 1909.

ನಂ. ಜು. 1432—ಕೋರ್ಟ್ಸ್ 5-09-12, ಬೆಂಗಳೂರು-ಮೈಸೂರು ಷಹರುಗಳಿಗೆ ಆನರರಿ ಬೆಂಚ್ ಮೇಜಿಸ್ಟ್ರೇಟರುಗಳಾಗಿ ನೇಮಕವಾಗಿರುವಂಥಾವರುಗಳು ಅವರು ನೇಮಕವಾದ ತಾರೀಖು ಲಾಗಾಯಿತು 3 ವರ್ಷ ಕಾಲ ಕೆಲಸ ನೋಡತಕ್ಕದ್ದೆಂದು ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹದುರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 2 ನೆ ನವಂಬರ್ 1909.

ನಂ. ಜು. 1436—ಕೋರ್ಟ್ಸ್ 5-09-13, 1909ನೆ ಆಗಸ್ಟು 23ನೆ ಮರ್ಕೂಂ ಜು. 587—ಕೋರ್ಟ್ಸ್ 5-09-3ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ವಿಧಿಸಿದ್ದುದಕ್ಕೆ ಪ್ರತಿಯಾಗಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ 14 ಪ್ರಕರಣವನ್ನನುಸರಿಸಿ ಇದರಡಿ ಕಂಡ ದೊಡ್ಡ ಮನುಷ್ಯರುಗಳನ್ನು 2ನೆ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರವುಳ್ಳ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳನ್ನಾಗಿ ನೇಮಿಸಲು ಸರ್ಕಾರದವರು ಅಪ್ಪಣೆ ದಯಪಾಲಿಸಿರುವುದಲ್ಲದೆ ಅದೇ ಪ್ರಕರಣದ 15ನೆ ಪ್ರಕರಣದ ಮೇರೆಗೆ ಅವರುಗಳ ಪೈಕಿ ಇಬ್ಬರು ಯಾ ಹೆಚ್ಚು ಜನರು ಬೆಂಚ್ ಮ್ಯಾಜಿಸ್ಟ್ರೇಟರುಗಳಾಗಿದ್ದುಕೊಂಡು ಮೈಸೂರು ಷಹರಿಗೆ ಸಂಬಂಧಪಟ್ಟು ಮೈಸೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರು ವರ್ಗಾಯಿಸಬಹುದಾದ ಯಾ ಗೊತ್ತು ಮಾಡುವಂಥಾ ತರಹೆಯ ಮೊಕದ್ದಮೆಗಳನ್ನು ದರ್ಯಾಫ್ತು ಮಾಡಬೇಕೆಂದು ಅಪ್ಪಣೆ ಮಾಡಿರುತ್ತಾರೆ :—

1. ಮಿ|| ಸಿ. ಕೃಷ್ಣರಾಯರು, ಪಿಂಚನ್ ಅಸಿಸ್ಟೆಂಟ್ ಕಮಿಷನರುಗಳು.
2. ,, ಬಾದಾಮಿ ಕೃಷ್ಣರಾಯರು, ಡಿಟೋ
3. ,, ಮಹಮ್ಮದ್ ಜಾಫರ್‌ಯವರು, ಪಿಂಚನ್ ಪೊಲೀಸ್ ಸೂಪರಿಂಟೆಂಡೆಂಟರು.
4. ,, ಪುಟ್ಟಯ್ಯಾಜಿ ಅರಸಿನವರು.
5. ,, ಮಿರ್ ನೈಜಾಮುದ್ದೀನ್ ಅಲೀಖಾನ್‌ರವರು, ಪಿಂಚನ್ ಅಸಿಸ್ಟೆಂಟ್ ಕಮಿಷನರವರು.
6. ,, ಅಂಬಳೆ ಅಣ್ಣಯ್ಯ ಪಂಡಿತರು.
7. ರೆವರೆಂಡ್ ಜಿ. ಡಬ್ಲ್ಯೂ. ಸಾಡೇಯವರು.
8. ಮಿ|| ಬಸವಯ್ಯನವರು.
9. ,, ಜಹಗೀರ್‌ದಾರ್ ಮಾದಪ್ಪನವರು.
10. ,, ಅನಂತರಾಜಯ್ಯನವರು.

ತಾರೀಖು 23ನೆ ನವಂಬರ್ 1909.

ನಂ. ಜು. 1438—ಕೋರ್ಟ್ಸ್ 5-09-14, ಮೈಸೂರು ಷಹರಿಗಾಗಿ ನೇಮಕವಾಗಿರುವ ಆನರರಿ ಬೆಂಚ್ ಮೇಜಿಸ್ಟ್ರೇಟರುಗಳಿಗೆ 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 261ನೆ ಪ್ರಕರಣವನ್ನನುಸರಿಸಿ ಸದರೀ ಪ್ರಕರಣದಲ್ಲಿ ವಿವರಿಸಿರುವ ತವಮಾಂ ಅಥವಾ ಆ ಪೈಕಿ ಯಾವುದಾದರೂ ತಕ್ಸೀರುಗಳನ್ನು ಪೂರಾಗಿ ದರ್ಯಾಫ್ತು ಮಾಡುವ ಅಧಿಕಾರವನ್ನು ಸರ್ಕಾರದವರು ದಯಪಾಲಿಸಿರುತ್ತಾರೆ.

ತಾರೀಖು 24ನೆ ನವಂಬರು 1909.

ನಂ. ಜು. 1444—ಕೋರ್ಟ್ಸ್ 113-09-2, 1904ನೆ ಇಸವಿಯ ಕ್ರಿಮಿಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣದ ಮೇರೆಗೆ, ಮಾಲೂರು ಸಬ್ ಡಿವಿಜನ್ನಿನ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮತ್ತು ಎರಡನೆ ತರಗತಿಯ ಮ್ಯಾಜಿಸ್ಟ್ರೇಟರಾದ ಮಿ|| ಮಹಮದ್ ಒಬೀದುಲ್ಲಾ ಯವರನ್ನು ಹಂಗಾಮಿಯಾಗಿ, ಅವರು ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿರುವ ಪರ್ಯಂತ, ಮೊದಲನೇ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ಮೊಕರರ್ಮಾಡಿ ಇದೆ.

ತಾರೀಖು 24ನೆ ನವಂಬರ್ 1909.

ನಂ. ರೆ. 3940—ಲ್ಯಾ. ರೆ. 29-09-22, ಸ್ತ 1894ನೆ ವರ್ಷದ 7ನೆ ನಂಬರ್ **ಲ್ಯಾಂಡ್ ಆಕ್ವಿಜಿಷನ್ ರೆಗ್ಯುಲೇಷನಿನ** 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗ್ರಾಮಠಾಣಾ ಬಿಡಾವಣೆಗೋಸ್ಕರವಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಪ್ರಕರಣವನ್ನನುಸರಿಸಿ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಅಥವಾ ಅನುಭೋಗದಾರರ ಹೆಸರು.	ಸರ್ವೆ ನಂಬರು ಅಥವಾ ಹಿಸ್ಸಾ ನಂ.	ಖುಷ್ಕಿ ತರಿ ಅಥವಾ ಬಾಗಾಯತು.	ಪೂರಾ ವಿಸ್ತೀರ್ಣ.		ಖರಾಬು.	ಉಳಿದ ವಿಸ್ತೀರ್ಣ.		ಕಂದಾಯ.		ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಕಂದಾಯ.		ಚತುರ್ಗಡಿ.			
																		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ	ಗು	ಗು	ಎ	ಗು	ರೂ	ಆ	ಎ	ಗು	ರೂ	ಆ				
ಮೈಸೂರು	ನಂಜನಗೂಡು	ಬಿಳಿಗೆರೆ	ಕಸ್ತೂರಂಬ	ದೇವೈಯ ಬಿನ್ ಮಾದೇಗೌಡ	96	ಖುಷ್ಕಿ	7	37	0	7	37	9	8	0	6	0	4	ಸರ್ವೆ ನಂ. 62	ಸರ್ವೆ ನಂ. 1	ಸರ್ವೆ ನಂ. 27	ಸರ್ವೆ ನಂ. 97
				ಡಿಟೋ	97	ಡಿಟೋ	3	29	2	3	27	5	0	1	10	1	12	ಸರ್ವೆ ನಂ. 95	ಗ್ರಾಮ	ಸರ್ವೆ ನಂ. 96	ಸರ್ವೆ ನಂ. 98
				ಬಸವೈಯ್ಯ ತಾಯಿ ಲಿಂಗಮ್ಮ	98	ಡಿಟೋ	3	35	0	3	35	5	0	0	32	1	0	ಡಿಟೋ	ಗ್ರಾಮ	ಸರ್ವೆ ನಂ. 97	ಸರ್ವೆ ನಂ. 99

ಮೈಸೂರು, ತಾರೀಖು 29ನೆ ಮಾಹೆ ಅಕ್ಟೋಬರ್ 1909ನೆ ಇಸವಿ.

ಕ್ಯಾಂಪ್ ನಂಬರ್ R. 28—Ft.

ಕಾಕನಕೋಟೆಯಿಂದ ಮಾಸ್ತಿಗುಡಿಗೆ ಹೋಗುವ ರಸ್ತೆಯನ್ನು ಕೆಡ್ಡಾ ಏರ್ಪಾಟಗೋಸ್ಕರ 1909ನೆ ನವಂಬರ್ ಗುರ್ರೈಲಾಗಾಯಿತು ಡಿಸೆಂಬರು 3ನೆ ತಾರೀಖಿನ ವರೆಗೆ ಆಮದುರಫ್ತು ಗಾಡಿಗಳು ತಿರುಗಾಡದಂತೆ ಬಂದುಮಾಡಿ ಇರುತ್ತದೆ ಎಂದು ಈ ಮೂಲಕ ಪ್ರಕಟಿಸಿ ಇದೆ. ಸರ್ಕಾರಕ್ಕೆ ಅಥವಾ ಸರ್ಕಾರೀ ನೌಕರರಿಗೆ ಸೇರಿದ ನಾಟಾ ಸಾಗಿಸುವ ಗಾಡಿಗಳು ಶಿವಾಯಿ ಇತರ ಗಾಡಿಗಳನ್ನು ಪ್ರಯಾಣಿಕರ ಗಾಡಿಗಳನ್ನೂ ಹಗಲುಹೊತ್ತಿನಲ್ಲಿ ಸದರಿ ರಸ್ತೆಯಲ್ಲಿ ತಿರುಗಾಡುವುದಕ್ಕೆ ಬಿಡಲಾಗುವುದು. ಇತರ ಗಾಡಿಗಳನ್ನು ಮಾಸ್ತಿಗುಡಿ ಮತ್ತು ಕಾಕನಕೋಟೆ ಕೆಡ್ಡಾ ಕ್ಯಾಂಪುಗಳ ಚಾರ್ಜಿನಲ್ಲಿರುವ ಫಾರೆಸ್ಟ್ ಆಫಿಸರುಗಳ ಅಪ್ಪಣೆಯ ಮೇರೆಗೆ ಮಾತ್ರವೇ ಸದರಿ ರಸ್ತೆಯಲ್ಲಿ ಬಿಡಲಾಗುವುದು.

ತಾರೀಖು 20ನೆ ನವಂಬರ್ 1909.

ನಂ. 1299—ಮುಜರಾಯಿ F. 278–09–2, ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಸೌಮ್ಯ ಸಂವತ್ಸರದಲ್ಲಿ ನಡದ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರು, ಪರೀಕ್ಷಿಸಲ್ಪಟ್ಟ ಶಾಸ್ತ್ರ, ಇವುಗಳನ್ನು ಈ ಕೆಳಗೆ ನಮೂದಿಸಿರುತ್ತೆ :—

ನಂಬರ್.	ಹೆಸರು.	ಪರೀಕ್ಷಿತ ವಿಷಯ.	ಬಹುಮಾನ	ಷರಾ.
1	ಪುದುಕೋಟೆ ಗೋಕರ್ಣೇಶ್ವರ ...	ಋಗ್ವೇದ ...	60	
2	ಗಣೇಶಭಟ್ಟ, ಜಿಮೂಘೆ ...	ಡಿಟೋ ...	100	
3	ವಾಸುದೇವಭಟ್ಟ, ಜಿಘಣಸೇ ...	ಡಿಟೋ ...	100	
4	ಕುಂಭಕೋಣದ ಶ್ರೀನಿವಾಸದೀಕ್ಷಿತ ...	ಯಜುರ್ವೇದ ...	100	ಶಾಲುಜೋಡಿ ಸಹ.
5	ಗರ್ಗೇಶ್ವರಿ ಗುಂಡಭಟ್ಟ ...	ಸಾಮವೇದ ...	100	
6	ಅಶ್ವತ್ಥನಾರಾಯಣಜೋಯಿಸ ...	ಜ್ಯೋತಿಷ ದ್ವಿತೀಯ ಭಾಗ.	85	
7	ಸೂರ್ಯನಾರಾಯಣಜೋಯಿಸ ...	ಡಿಟೋ ಡಿಟೋ ...	85	ಪ್ರಥಮ ಭಾಗದಲ್ಲಿ 1906ರಲ್ಲಿ ತೇರ್ಗಡೆಯಾದರು
8	ನಂಜನಗೂಡು ರಂಗಸ್ವಾಮಿಶರ ...	ಡಿಟೋ ಪ್ರಥಮ ಭಾಗ.	40	
9	ಶ್ರೀರಂಗಪಟ್ಟಣದ ಸತ್ಯನಾರಾಯಣಶಾಸ್ತ್ರಿ	ಜ್ಯೋತಿಷ ದ್ವಿತೀಯಭಾಗ.	85	ಪ್ರಥಮ ಭಾಗದಲ್ಲಿ 1906ರಲ್ಲಿ ತೇರ್ಗಡೆಯಾದರು.
10	ಶ್ರೀನಿವಾಸರಂಗಾಚಾರ್ಯ ...	ಡಿಟೋ ಡಿಟೋ ...	85	ಪ್ರಥಮ ಭಾಗದಲ್ಲಿ 1908ರಲ್ಲಿ ತೇರ್ಗಡೆಯಾದರು.
11	ಪಂಚಲಾಲಶರ್ಮ ...	ಜ್ಯೋತಿಷ ಪ್ರಥಮ ದ್ವಿತೀಯ ಭಾಗಗಳು.	125	
12	ಅರ್ಜುನಮಿಶ್ರ ...	ಡಿಟೋ ...	125	
13	ಶಿರೋಮಣಿಝಾ ...	ಡಿಟೋ ...	125	
14	ಬುದ್ಧಿನಾಥಝಾ ...	ಡಿಟೋ ...	125	
15	ಪೀತಾಂಬರಝಾ ...	ಡಿಟೋ ...	125	
16	ಪಾಥೂಝಾ ...	ವ್ಯಾಕರಣ ಪ್ರಥಮ ದ್ವಿತೀಯ ಭಾಗಗಳು.	125	
17	ಪರಮೇಶ್ವರಝಾ ...	ಡಿಟೋ ...	125	
18	ಜಯಕೃಷ್ಣಶರ್ಮ ...	ಡಿಟೋ ...	125	
19	ಗೋಪಾಲಕೃಷ್ಣಮಾಚಾರ್ಯ ...	ತರ್ಕ ಪ್ರಥಮ ಭಾಗ	40	
20	ತಿರುವೇಂಕಟಾಚಾರ್ಯ ...	ಡಿಟೋ ...	40	
21	ಬಾಲಕೃಷ್ಣಶರ್ಮ ...	ತರ್ಕ ಪ್ರಥಮ ದ್ವಿತೀಯ ಭಾಗಗಳು.	125	
22	ಯದುನಾಥಶರ್ಮ ...	ಡಿಟೋ ...	125	
23	ಆನಂದತೀರ್ಥಾಚಾರ್ಯ ...	ವೇದಾಂತ ದ್ವೈತ ದ್ವಿತೀಯ ಭಾಗ.	85	ಪ್ರಥಮ ಭಾಗದಲ್ಲಿ 1908ರಲ್ಲಿ ತೇರ್ಗಡೆಯಾದರು.
24	ಪಾವಗಡದ ಕೃಷ್ಣಾಚಾರ್ ...	ಡಿಟೋ ...	85	ಪ್ರಥಮ ಭಾಗದಲ್ಲಿ 1907ರಲ್ಲಿ ತೇರ್ಗಡೆಯಾದರು.
25	ನಾಮಗುಂಡ್ಲು ವಾಸುದೇವಾಚಾರ್ ...	ಡಿಟೋ ...	40	
26	ಗ್ರಾಮಂ ವೆಂಕಟಾಚಾರ್ ...	ವೇದಾಂತ ವಿಶಿಷ್ಟಾದ್ವೈತ ಪ್ರಥಮ ಭಾಗ.	40	
27	ಲಕ್ಷ್ಮಣಾಚಾರ್ಯ ...	ಡಿಟೋ ...	40	
28	ಜೊನ್ನವಾಡ ಕೃಷ್ಣಮಾಚಾರ್ಯ ...	ಡಿಟೋ ...	40	
29	ನದೀಪುರಂ ಕೃಷ್ಣಮಾಚಾರ್ಯ ...	ವೇದಾಂತ ವಿಶಿಷ್ಟಾದ್ವೈತ ದ್ವಿತೀಯ ಭಾಗ.	40	
30	ಪುರೋಹಿತಭಟ್ಟರ ತಿರುನಾರಣಯ್ಯಂಗಾರ್	ಡಿಟೋ ...	75	ಪ್ರಥಮ ಭಾಗದಲ್ಲಿ 1901ರಲ್ಲಿ ತೇರ್ಗಡೆಯಾದರು.
31	ಶ್ರೀನಿವಾಸಗೋವಿಂದಪ್ಪಂಗಾರ್ ...	ಡಿಟೋ ...	40	
32	ಸಾರಾನಾಥಾಚಾರ್ಯ ...	ವೇದಾಂತ ವಿಶಿಷ್ಟಾದ್ವೈತ ಪ್ರಥಮ ದ್ವಿತೀಯ ಭಾಗಗಳು.	125	
33	ಅಘಲಯಂ ಶ್ರೀನಿವಾಸಾಚಾರ್ಯ ...	ವೇದಾಂತ ವಿಶಿಷ್ಟಾದ್ವೈತ ಪ್ರಥಮ ಭಾಗ.	85	ದ್ವಿತೀಯಭಾಗದಲ್ಲಿ 1907ರಲ್ಲಿ ತೇರ್ಗಡೆಯಾದರು.
34	ಗುಮ್ಮಗಟ್ಟ ವೆಂಕಟನರಸಿಂಹಶಾಸ್ತ್ರಿ ...	ವೇದಾಂತ ಅದ್ವೈತ ಪ್ರಥಮ ಭಾಗ.	40	

ನಂಬರ.	ಹೆಸರು.	ಪರೀಕ್ಷಿತ ವಿಷಯ.	ಬಹುವಮಾನ	ಷರಾ.
35	ಪಾಂಡುರಂಗಶಾಸ್ತ್ರಿ ...	ವೇದಾಂತ ಅದ್ವೈತ ದ್ವಿತೀಯ ಭಾಗ.	40	
36	ಎಡತೊರೆ ಲಕ್ಷ್ಮೀನರಸಿಹ್ಮಶಾಸ್ತ್ರಿ ...	ಸಾಹಿತ್ಯ ಪ್ರಥಮ ಭಾಗ.	40	
37	ಜನಾರ್ದನಯ್ಯಂಗಾರ್ ...	ಡಿಟೋ ...	40	
38	ಹೆಮ್ಮಿಗೆ ಶ್ರೀನಿವಾಸಯ್ಯಂಗಾರ್ ...	ಡಿಟೋ ...	40	
39	ಹೆಮ್ಮಿಗೆ ತಿರುನಾರಣಯ್ಯಂಗಾರ್ ...	ಡಿಟೋ ...	40	
40	ದೇವನೂರು ನರಸಿಹ್ಮಾಚಾರ್ಯ ...	ಸಾಹಿತ್ಯ ದ್ವಿತೀಯ ಭಾಗ.	85	ಪ್ರಥಮ ಭಾಗದಲ್ಲಿ 1907ರಲ್ಲಿ ತೇರ್ಗಡೆಯಾದರು.
41	ಪರವೈಕಾಂತಿ ರಾಮಾನುಜಯ್ಯಂಗಾರಿ ...	ಸಾಹಿತ್ಯ ಪ್ರಥಮ ಭಾಗ.	40	

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 4 ಘಂಟೆ ಲಾಗಾಯಿತು 5 ಘಂಟೆಯು ವರೆಗೆ ದಿವಾನ್‌ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,

ಕೆ. ಎಸ್. ಚಂದ್ರಶೇಖರ ಅಯ್ಯರ್,

ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 47.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 2, ಸ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ.

	ಪುಟಸಂಖ್ಯೆ.
Iನೆ ಭಾಗ—ಮೈಸೂರು ಸೀಮೆಯ ಶ್ರೀಮರ್ತ ಮಹಾರಾಜಾ ಸರ್ಕಾರದ ಆಯಾಯ ಇಲಾಖಾದವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು	435—441
IIನೆ ಭಾಗ—ರೆವಿನ್ಯೂ ಸರ್ವೆ, ಅಮೃತಮಹಲ್, ಫಾರೆಸ್ಟು, ರೆವಿನ್ಯೂ, ಸರ್ಕಾರಿ ಪ್ರಕಟನೆಗಳು	877—883
IIIನೆ ಭಾಗ—ಲೆಜಿಸ್ಲೆಟಿವ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.	
IVನೆ ಭಾಗ—ಸರ್ಕಾರಿ ಕಾಗದಪತ್ರಗಳು–1909ನೆ ವರ್ಷದ 45ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯೂ ಕಾಲಗತಿಯನ್ನು ತೋರಿಸುವ ವರದಿ ...	497—505

I ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ತ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 23ನೆ ನವಂಬರು 1909.

ನಂ. 4318—ಸ್ಯಾನಿಟರಿ 9–09–4, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳಿಗಿಂತ ಜಾಸ್ತಿಕಾಲದಿಂದಲೂ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಅರಳೀಹಳ್ಳಿ	ಶಿಕಾರಿಪುರ.
ಚೆನ್ನಗಿರಿ ಟವುನ್	ಚೆನ್ನಗಿರಿ.
ಚಿಕ್ಕ ಹುಲಿಕೆರೆ	ಡಿಟೋ
ಹೊಳಲೂರು	ಶಿವಮೊಗ್ಗ.
ಗಾಜನೂರು	ಡಿಟೋ
ಅರಬಿಳಚಿ	ಡಿಟೋ
ಅರಕೆರೆ	ಡಿಟೋ
ಗುಡುಮಗಟ್ಟೆ	ಡಿಟೋ
ನಗರ	ನಗರ.
ಕುಂಸಿ ಟವುನ್	ಕುಂಸಿ ಸಬ್ ತಾಲ್ಲೂಕು.

ತಾರೀಖು 26ನೆ ನವಂಬರ್ 1909.

ನಂ. 4472—ಸ್ಯಾನಿಟರಿ 14—09—39; ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ಮತ್ತು ಯಾತ್ರೆ ಹೋಗುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
1. ವೀರಭದ್ರಸ್ವಾಮಿ ರಥೋತ್ಸವ ...	ಮೋರಬ ...	ಕೂಡ್ಲಿಗಿ ...	ಬಳ್ಳಾರಿ ...	8—1—1910 ಉಭಯ ದಿನಗಳೂ ಸೇರಿ.	20—1—1910	ಮೈಸೂರು ಸೀಮೆಯ ರೆಸಿಡೆಂಟರ 1ನೆ ಅಸಿಸ್ಟೆಂಟರವರ 20-11-09ನೆ ಮರ್ಕುಮಿನ 829ನೆ ನಂಬರ್ ಎಂಡಾರ್ಸ್‌ಮೆಂಟ್.
2. ಉತ್ಸವ ಮತ್ತು ದನಗಳ ಸಂತೆ ...	ಕಿರುಊರ ...	ಕುರುಂಬ್ರನಾಡ ...	ಮಲಬಾರ ...	5—12—09 ಉಭಯ ದಿನಗಳೂ ಸೇರಿ.	20—12—09	ಡಿಟೋ ಆಫಿಸರವರ 20-11-09ನೆ ಮರ್ಕುಮಿನ 831ನೆ ನಂಬರ್ ಎಂಡಾರ್ಸ್‌ಮೆಂಟ್.
3. ರಥೋತ್ಸವ ...	ಕೊಡುವಯೂರ ...	ಪಾಲಘಾಟ ...	ಡಿಟೋ ...	23—12—09 ಉಭಯ ದಿನಗಳೂ ಸೇರಿ.	10—1—1910	ಡಿಟೋ ಆಫಿಸರವರ 20-11-09ನೆ ಮರ್ಕುಮಿನ 833ನೆ ನಂಬರ್ ಎಂಡಾರ್ಸ್‌ಮೆಂಟ್.
4. ಕಾರ್ತಿಗೈ ಉತ್ಸವ ...	ಕೊಟ್ಟೂರ ...	ಕೂಡ್ಲಿಗಿ ...	ಬಳ್ಳಾರಿ ...	19—12—09 ಉಭಯ ದಿನಗಳೂ ಸೇರಿ.	31—12—09	ಡಿಟೋ ಆಫಿಸರವರ 20-11-09ನೆ ಮರ್ಕುಮಿನ 837ನೆ ನಂಬರ್ ಎಂಡಾರ್ಸ್‌ಮೆಂಟ್.

ತಾರೀಖು 24ನೆ ನವಂಬರ 1909.

ನಂ. 4407—ಸ್ಯಾನಿಟರಿ 18-09-2, ಹಾಸನ ಡಿಸ್ಟ್ರಿಕ್ಟ್ ಅರಕಲಗೂಡು ತಾಲ್ಲೂಕಿನ ರಾಮನಾಥಪುರಕ್ಕೆ ಬರುವ ಶ್ರೀ ಸುಬ್ರಹ್ಮಣ್ಯಸ್ವಾಮಿಯ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅನಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಡಿಸೆಂಬರು 13ನೆ ತಾರೀಖಿನಿಂದ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 26ನೆ ನವಂಬರ 1909.

ನಂ. 4471—ಸ್ಯಾ. 14-09-38, ಘನಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ ನವಂಬರ 20 ಮತ್ತು 22ನೆ ಮಕ್ಕಾಂ 835—ಪಿ. ಮತ್ತು 844ನೆ ನಂಬರ್ ಇಂಡಾರ್ಸ್ಮೆಂಟಿನೊಡನೆ ಬಂದ ಮದರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್ನಾಮೆಗಳನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ:—

ಇಸ್ತಿಹಾರ್ನಾಮೆ.

ನಂ. 228—ಪಿ., ಮದ್ರಾಸ್ ಫೋರ್ಟ್ ಸೆಂಟ್ ಜಾರ್ಜ್, ತಾರೀಖು 30ನೆ ಅಕ್ಟೋಬರ 1909.

ತಿರುಚನಾಪಲ್ಲಿ ಡಿಸ್ಟ್ರಿಕ್ಟು ತಿರುಚನಾಪಲ್ಲಿ ಮತ್ತು ಶ್ರೀರಂಗಂನಲ್ಲಿ ಮುಂದೆ ನಡೆಯುವ ಶ್ರೀರಂಗಂ ವೈಕುಂಠ ಏಕಾದಶಿ ಉತ್ಸವಕ್ಕೆ ಕೊಯಿಮುತ್ತೂರು, ಮಲಬಾರು, ನೀಲಗಿರಿ, ಸೇಲಂ ಮತ್ತು ದಕ್ಷಿಣ ಕನರಾ ಡಿಸ್ಟ್ರಿಕ್ಟುಗಳ ಪೈಕಿ ಪ್ಲೇಗು ವ್ಯಾಧಿಯ ಸೋಂಕು ಇರುವ ತಾಲ್ಲೂಕುಗಳಿಂದಲೂ, ಮೈಸೂರು ಸಂಸ್ಥಾನದಿಂದಲೂ ಮತ್ತು ಪ್ಲೇಗು ವ್ಯಾಧಿಯ ಸೋಂಕು ಇರುವುದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ ಬರುವ ಜನರನ್ನು ಅಲ್ಲಿಗೆ ಬಿಟ್ಟರೆ ಅಲ್ಲಿ ಪ್ಲೇಗು ರೋಗವು ವ್ಯಾಪಿಸುವ ಅಪಾಯವುಂಟೆಂದು ಸಭಾ ಸಮೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸಮೇತರಾದ ಗವರ್ನರವರು ಮೇಲ್ಕಂಡ ಉತ್ಸವಕ್ಕೆ ಸದರೀ ಸ್ಥಳಗಳಿಂದ ಯಾರೂ 1909ನೆ ಇಸವಿಯ ಡಿಸೆಂಬರ ಮಾಹೆ 3ನೆ ತಾರೀಖಿನ ಲಾಗಾಯಿತು 1910ನೆ ಜನವರಿ ಮಾಹೆ 1ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಹೋಗಕೂಡದೆಂದು ನಿಷೇಧಿಸಿರುತ್ತಾರಲ್ಲದೆ, ಸದರೀ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್ ಸ್ಟೇಷನ್‌ಗಳಲ್ಲಿ ರೈಲ್ ಮೂಲಕ ಪ್ರಯಾಣ ಮಾಡಬೇಕೆಂದಿರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ;

ಈ ಸ್ಟೇಷನ್‌ಗಳಿಂದ:—ಮದ್ರಾಸು ಮತ್ತು ದಕ್ಷಿಣ ಮರಾಟಾ ರೈಲ್ವೆಗಳ ಗುಡುಪಲ್ಲಿ, ಕುಪ್ಪಂ, ಮುಳಾನೂರು ಮತ್ತು ಪಾಚೂರು, ದಕ್ಷಿಣ ಇಂಡಿಯನ್ ರೈಲ್ವೆಯ ಸಿಂಗನಲ್ಲೂರು, ಪೋದನೂರು, ಕೊಯಿಮುತ್ತೂರು, ತುಡಿಯಲೂರು ಮೆಟ್ಟುಪಾಳ್ಯಂ, ಮಂಗಳೂರು, ಪಾಲಘಾಟು, ಪೊಲ್ಲಕ್ಕಾಟ್ ಮತ್ತು ಪಾರ್ಲಿ; ನೀಲಗಿರಿ ರೈಲ್ವೆಯ ಫರ್ನ್‌ಹಿಲ್ ಮತ್ತು ಉದಕಮಂಡಲ.

ಈ ಸ್ಟೇಷನ್‌ಗಳಿಗೆ:—ದಕ್ಷಿಣ ಇಂಡಿಯನ್ ರೈಲ್ವೆಯ ತಿರುಚನಾಪಲ್ಲಿ ಜಂಕ್ಷನ್, ತಿರುಚನಾಪಲ್ಲಿ, ಪಾಲಕಾರೆ, ತಿರುಚನಾಪಲ್ಲಿ ಕೋಟೆ, ಶ್ರೀರಂಗಂ ರಸ್ತೆ, ಮುರುಂಗಪಟ್ಟಿ, ತಿರುಚಾಂದುರೆ, ಎಲಮನೂರು, ಪೆರುಂಗಮಣಿ, ಷೋಲಗಂಪಟ್ಟಿ, ತಿರುವೆರಾಂಬೂರು, ಪುಂಗುಡಿ, ಕೊಲತ್ತೂರು ದಕ್ಷಿಣ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಉತ್ಸವಕ್ಕೆ ಹೋಗುವವರನ್ನು ವಾಪಸ್ ಕಳುಹಿಸಲಾದೀತು.

ಇಸ್ತಿಹಾರ್ನಾಮೆ.

ನಂ. 229—ಪಿ., ಮದರಾಸು ಫೋರ್ಟ್ ಸೆಂಟ್ ಜಾರ್ಜ್, ತಾರೀಖು 30ನೆ ಅಕ್ಟೋಬರ 1909.

ತಿರುಚನಾಪಲ್ಲಿ ಡಿಸ್ಟ್ರಿಕ್ಟು ತಿರುಚನಾಪಲ್ಲಿ ತಾಲ್ಲೂಕು ಸಾಮಯವಾರಂ ಎಂಬ ಸ್ಥಳದಲ್ಲಿ ಮುಂದೆ ನಡೆಯುವ ದನಗಳ ಪರಿಷೆಗೆ ಮೈಸೂರು ಸೀಮೆಯಿಂದಲೂ, ಸೇಲಂ ಡಿಸ್ಟ್ರಿಕ್ಟು ಹೊಸೂರು ತಾಲ್ಲೂಕಿನಿಂದಲೂ, ಮತ್ತು ಪ್ಲೇಗು ವ್ಯಾಧಿಯ ಸೋಂಕು ಇರುವದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ, ಬರುವ ದನಗಳ ಮಾಲೀಕರನ್ನು ಮತ್ತು ಇತರರನ್ನು ಅಲ್ಲಿಗೆ ಬಿಟ್ಟರೆ ಅಲ್ಲಿ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾಸಮೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಭಾ ಸಮೇತರಾದ ಗವರ್ನರವರು ಮೇಲ್ಕಂಡ ಪರಿಷೆಗೆ ಸದರಿ ಸ್ಥಳಗಳಿಂದ ಯಾರೂ 1909ನೆ ಇಸವಿ ಡಿಸೆಂಬರ 18ನೆ ತಾರೀಖು ಲಾಗಾಯಿತು 30ನೆ ತಾರೀಖು ವರಿಗೆ ಉಭಯ ದಿನಗಳೂ ಸೇರಿ ಹೋಗಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಪರಿಷೆಗೆ ಹೋಗುವವರನ್ನು ವಾಪಸ್ ಕಳುಹಿಸಲಾದೀತು.

ಇಸ್ತಿಹಾರ್ನಾಮೆ.

ನಂ. 230—ಪಿ., ಫೋರ್ಟ ಸೆಂಟ್ ಜಾರ್ಜ್, ತಾರೀಖು 30ನೆ ಅಕ್ಟೋಬರ 1909ನೆ ಇಸವಿ.

1897ನೆ ಇಸವಿಯು ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂತ ತವುಗೆ ಕೊಡೋಣಾದ್ಧ ಅಧಿಕಾರಗಳನ್ನು ಚಲಾಯಿಸುವ ದರಲ್ಲಿ, ಸಭಾ ಸವೇತರಾದ ಗವರ್ನರವರು, ತಿರುಚನಾಪಲ್ಲಿ ಕೋಟೆ, ತಿರುಚನಾಪಲ್ಲಿ ಜಂಕ್ಷನ್, ಶ್ರೀರಂಗಂ ರಸ್ತೆ ಮತ್ತು ತಿರುಚನಾಪಲ್ಲಿ ಪಾಲಕರಾಯಿ ರೈಲ್ವೆ ಸ್ಟೇಷನ್‌ಗಳು; ಪ್ರೆಸಿಡೆನ್ಸಿ ಟವನಿನ ಹೊರಗೆ ಜಾರೀಲಿರುವ ಮದ್ರಾಸು ಪ್ಲೇಗು ರೆಗ್ಯುಲೇಷನಿನ 16ನೆ ನಿಬಂಧನೆಯು ಮೇರಿಗೆ, 1909ನೆ ಇಸವಿ ಡಿಸೆಂಬರ 3ನೆ ತಾರೀಖು ಲಾಗಾಯಿತು 1910ನೆ ಇಸವಿ ಜನವರಿ 1ನೆ ತಾರೀಖಿನ ವರಿಗೆ ಅಜಮಾಯಿಷಿ ಸ್ಟೇಷನ್‌ಗಳಾಗಿರತಕ್ಕದ್ದೆಂದು ಹುಕ್ಕುಂ ಮಾಡಿರುತ್ತಾರೆ.

ಇಸ್ತಿಹಾರ್‌ನಾಮೆ.

ನಂ. 227—ಪಿ., ದಕ್ಷಿಣ ಆರ್ಕಾಡು ಡಿಸ್ಟ್ರಿಕ್ಟು ಚಿದಂಬರಂ ತಾಲ್ಲೂಕು ಚಿದಂಬರದಲ್ಲಿ ಮುಂದೆ ನಡೆಯುವ ಆರುದ್ರ ದರ್ಶನಂ ಉತ್ಸವಕ್ಕೆ ಕೊಯಿಮುತ್ತೂರು, ಮಲಬಾರ್, ನೀಲಗಿರಿ, ಸೇಲಂ ಮತ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟುಗಳ ಪೈಕಿ ಪ್ಲೇಗ್ ವ್ಯಾಧಿಯ ಸೋಂಕು ಇರುವ ತಾಲ್ಲೂಕುಗಳಿಂದಲೂ, ಮೈಸೂರು ಸಂಸ್ಥಾನದಿಂದಲೂ ಮತ್ತು ಪ್ಲೇಗ್ ವ್ಯಾಧಿಯಸೋಂಕು ಇರುವುದಾಗಿ ಪ್ರಕಟವಾಗಿರುವ ಇತರ ಜಾಗಾಗಳಿಂದಲೂ ಬರುವ ಜನರನ್ನು ಅಲ್ಲಿಗೆ ಬಿಟ್ಟರೆ ಅಲ್ಲಿ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾ ಸವೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯು ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾ ಸವೇತರಾದ ಗವರ್ನರವರು ಮೇಲ್ಕಂಡ ಉತ್ಸವಕ್ಕೆ ಸದರೀ ಸ್ಥಳಗಳಿಂದ ಯಾರೂ 1909ನೆ ಇಸವಿಯ ಡಿಸೆಂಬರ ಮಾಹೆ 13ನೆ ತಾರೀಖಿನ ಲಾಗಾಯಿತು ಡಿಸೆಂಬರ ಮಾಹೆ 27ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಹೋಗಕೂಡದೆಂದು ನಿಷೇಧಿಸಿರುತ್ತಾರಲ್ಲದೆ, ಸದರಿ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್ ಸ್ಟೇಷನ್‌ಗಳಲ್ಲಿ ರೈಲ್ ಮೂಲಕ ಪ್ರಯಾಣ ಮಾಡಬೇಕೆಂದಿರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ;

ಈ ಸ್ಟೇಷನ್‌ಗಳಿಂದ:—ದಕ್ಷಿಣ ಇಂಡಿಯನ್ ರೈಲ್ವೆಯ ಸಿಂಗನಲ್ಲೂರು, ಪೋದನೂರು, ಕೊಯಿಮುತ್ತೂರು, ತುಡಿಯಲೂರು, ಮೆಟ್ಟುಪಾಳ್ಯಂ, ಮಂಗಳೂರು, ಪಾಲಘಾಟ್, ಪೊಲಿವಕಾಟ್ ಮತ್ತು ಪಾರ್ಲಿ, ಮದರಾಸ್ ಮತ್ತು ದಕ್ಷಿಣ ಮರಾಟಾ ರೈಲ್ವೆಯು ಗುಡುಪಲ್ಲಿ, ಕುಪ್ಪಂ, ಮುಳಾನೂರು ಮತ್ತು ಪಾಚೂರು, ನೀಲಗಿರಿ ರೈಲ್ವೆಯ ಫರ್ನಹಿಲ್, ಮತ್ತು ಉದಕಮಂಡಲ.

ಈ ಸ್ಟೇಷನ್‌ಗಳಿಗೆ:—ದಕ್ಷಿಣ ಇಂಡಿಯನ್ ರೈಲ್ವೆಯ ಅಲಪ್ಪಾಕಂ, ಪುದುಚಟ್ಟಿರಂ, ಪೋರ್ಟನೊವೊ, ಕಿಲ್ಲೆ, ಚಿದಂಬರಂ, ಕೋಲರೂನ್, ಅರಸೂರು ಮತ್ತು ಷಿಯಾಲಿ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಉತ್ಸವಕ್ಕೆ ಹೋಗುವವರನ್ನು ವಾಪಸ್ ಕಳುಹಿಸಲಾಗೀತು.

ತಾರೀಖು 23ನೆ ನವಂಬರ 1909.

ನಂ. 4325—ಲೋ. ಬೋ. 91-09-6, ಲೋಕಲ್ ಬೋರ್ಡ್ ರೆಗ್ಯುಲೇಷನ್ ಮೇರಿಗೆ ಹುಟ್ಟಿದ ನಿಬಂಧನೆಗಳ ಪೈಕಿ 20ನೆ ಪ್ಯಾರಾ ಮತ್ತು 7ನೆ ಪ್ಯಾರಾದ (h) ಕಲಂ ಮೇರಿಗೆ, ಮಾಸ್ತಿ ಗ್ರಾಮದ ವಾಸಸ್ಥರಾದ ಮಿ|| ಕೆ. ರಾಮಸ್ವಾಮೈಯಂಗಾರ್ರವರನ್ನು, ವಜಾ ಆದ ಮಿ|| ನಿದರಮಂಗಲದ ಶ್ಯಾನುಭೋಗ ಶೀನಪ್ಪನವರ ಬದಲಿನಲ್ಲಿ ಮಾಲೂರು ತಾಲ್ಲೂಕು ಬೋರ್ಡ್ ಮೆಂಬರಾಗಿ ಮೊಕರರ್ಮಾಡಿ ಇರುತ್ತೆ.

ತಾರೀಖು 23ನೆ ನವಂಬರ 1909.

ನಂ. 4335—ವಿದ್ಯಾ. 139-09-2, ಮೈಸೂರು ಸರ್ವಿಸ್ ರೆಗ್ಯುಲೇಷನ್ಸಿನ 177 ಮತ್ತು 194ನೆ ಪ್ರಕರಣಗಳ ಮೇರೆಗೆ, ಬೆಂಗಳೂರು ಸರ್ಕಲ್ ಸ್ಕೂಲ್ ಇನ್ಸ್‌ಪೆಕ್ಟರಾದ ಮಿ|| ಟಿ. ಆರ್. ವೆಂಕಟಸ್ವಾಮಿ ನಾಯಿಡು, ಬಿ.ಎ. ಯವರಿಗೆ 1909ನೆ ಇಸವಿ ಅಕ್ಟೋಬರ ಮಾಹೆ 11ನೆ ತಾರೀಖಿನ ದಿವಸ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ತಾರೀಖು 23ನೆ ನವಂಬರ 1909.

ನಂ. 4350—ಲೋ. ಬೋ. 160-09-2, ಫವತಿಪಟ್ಟ ಸಿಂಗ್ರಿ ನಂಜಪ್ಪನವರಿಗೆ ಬದಲಾಗಿ ಮಿ|| ಸಿಂಗ್ರಿ ನಂಜಪ್ಪ ಉರ್ಫ ಚೆನ್ನಪ್ಪ ಎಂಬವರು ತುಮಕೂರು ಡಿಸ್ಟ್ರಿಕ್ಟ ಬೋರ್ಡಿನ ಮೆಂಬರಾಗಿ ಲೋಕಲ್ ಬೋರ್ಡ್ ರೆಗ್ಯುಲೇಷನ್ ಅನುಸರಿಸಾದರಾದ ನಿಬಂಧನೆಗಳ ಪೈಕಿ 20 ಮತ್ತು 8 (d) ನೆ ಪ್ಯಾರಾ ಮೇರಿಗೆ ಚುನಾಯಿಸಲ್ಪಟ್ಟು ಇರುತ್ತಾರೆ, ಮತ್ತು ಫವತಿಪಟ್ಟ ತಿಪಟೂರಿನ ಹೊನ್ನವಳ್ಳಿ ಕಂದಾಚಾರ್ ಸುಬ್ಬರಾಯರಿಗೆ ಬದಲಾಗಿ, ಅದೇ ನಿಬಂಧನೆಗಳ 20 ಮತ್ತು 8 (e) ಪ್ಯಾರಾಗಳ ಮೇರಿಗೆ ತಿಪಟೂರು ತಾಲ್ಲೂಕು ಹೊನ್ನವಳ್ಳಿಯಲ್ಲಿರುವ ಪ್ಲೀಡರ್ ಮತ್ತು ಜಮೀಂದಾರ್ ಮಿ|| ಹೆಚ್. ರಾಮಸ್ವಾಮಯ್ಯನವರನ್ನು ಅದೇ ಬೋರ್ಡಿನ ಮೆಂಬರಾಗಿ ಮೊಕರರ್ಮಾಡಿ ಇರುತ್ತದೆ.

ತಾರೀಖು 24ನೆ ನವಂಬರ 1909.

ನಂ. 4360—ಮೆಡಿಕಲ್ 96-09-3; ಅಸಿಸ್ಟೆಂಟ್ ಸರ್ಜನ್ನಾದ ಮಿ|| ಮಹಮ್ಮದ್ ಉಸ್ಮಾನರವರು ಬೇರೆ ಕೆಲಸದಮೇಲೆ ಶಿವಮೊಗ್ಗಿಯಿಂದ ಗೈರ ಹಾಜರಾಗಿರುವ ಕಾಲದಲ್ಲಿ, ಶಿವಮೊಗ್ಗ ಡಿಸ್ಟ್ರಿಕ್ಟು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಸರ್ಜನರಾದ ಮಿ|| ಎಸ್. ಕೆ. ಹನುಮಂತರಾಯರು ಸದರೀ ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ ಚಾರ್ಜ್ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 24ನೆ ನವಂಬರ 1909.

ನಂ. 4402—ವಿದ್ಯಾ. 138-09, ಸರ್ಕಾರಿ ಕೆಲಸಗಳ ಅನುಕೂಲತೆ ಬಗ್ಯೆ ಇದರಡಿ ಕಂಡ ಸ್ಕೂಲ್ ಡೆಪ್ಯುಟಿ ಇನಸ್ಪೆಕ್ಟರುಗಳ ವರ್ಗಾವರ್ಗಿಗಳನ್ನು ಹುಕುಂ ಮಾಡಿದೆ :—

(1) ಹಾಲಿ ಕಡೂರು ಡಿಸ್ಟ್ರಿಕ್ಟಿಗೆ ವರ್ಗವಾಗಿರುವ ಮಿ|| ಎ. ಶ್ಯಾಮರಾವ್, ಬಿ.ಎ. ಯವರನ್ನು ಶಿವಮೊಗ್ಗ ಡಿಸ್ಟ್ರಿಕ್ಟಿಗೆ.

(2) ಮಿ|| ಬಿ. ತಿರುಮಲಾಚಾರ್, ಬಿ.ಎ. ಯವರನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಿಂದ ಕೋಲಾರ ಡಿಸ್ಟ್ರಿಕ್ಟಿಗೆ.

(3) ಮಿ|| ಎಸ್. ಗೋಪಾಲರಾಯರನ್ನು ಕೋಲಾರ ಡಿಸ್ಟ್ರಿಕ್ಟಿನಿಂದ ಕಡೂರು ಡಿಸ್ಟ್ರಿಕ್ಟಿಗೆ.

ತಾರೀಖು 24ನೆ ನವಂಬರ 1909.

ನಂ. 4403—ವಿದ್ಯಾ. 3-09-7, 1909ನೆ ಇಸವಿ ಸೆಪ್ಟಂಬರ್ ಮಾಹೆ 6ನೆ ತಾರೀಖಿನ 2231—ವಿದ್ಯಾ. 3-09-4ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯ 39ನೆಯ ಪಜ್ತಿಯಲ್ಲಿ (1909ನೆ ಇಸವಿ ಸೆಪಟಂಬರ್ ಮಾಹೆ 16ನೆ ತಾರೀಖಿನ ಕನ್ನಡ ಗೆಜೆಟ್, 1ನೆ ಭಾಗ, 362ನೆ ಪುಟ) "ಮಿ|| ಟಿ. ಅಬ್ದುಲ್ ರಹಿಮಾನ್ ಸಾಹೇಬರು, ಪಿಂಛನ್ ಪಡೆದಿರುವ ಡೆಪ್ಯುಟಿ ಕ್ಲಾರ್ಕ" ಎಂಬುದಕ್ಕೆ ಬದಲಾಗಿ "ಸಿ. ಎಂ. ಅಬ್ದುಲ್ ರಹಿಮಾನ್ ಸಾಹೇಬರು, ರಿಟೈರಾದ ಡೆಪ್ಯುಟಿ ಕ್ಲಾರ್ಕ" ಎಂದು ಓದಿಕೊಳ್ಳಬೇಕು ; ಮತ್ತು "ತುಮಕೂರಲ್ಲಿರುವ ಸರ್ಕಾರಿ ಹಿಂದೂಸ್ತಾನಿ ಬಾಲಿಕಾ ಪಾಠಶಾಲೆ" ಯ ವಿಷಯಿಕವಾದ ಆಖೈರ್ ನಾಲ್ಕು ಪಜ್ತಿಗಳನ್ನು ವಜಾ ಮಾಡಬೇಕು.

ತಾರೀಖು 29ನೆ ನವಂಬರ್ 1909.

ನಂ. 4548—ವೈದ್ಯ. 97-09-2, ಮೈಸೂರು ಸರ್ವಿಸ್ ರೆಗ್ಯುಲೇಷನಿನ 159 ಮತ್ತು 177ನೆ ಪ್ರಕರಣಗಳ ಮೇರೆಗೆ, ಹಂಗಾಮಿ ಸಬ್ ಅಸಿಸ್ಟೆಂಟ್ ಸರ್ಜನ್ರಾದ ಮಿ|| ಕೆ. ಕುರುವಿಲ್ಲಾ ಯವರಿಗೆ 1909ನೆ ಇಸವಿ ಡಿಸೆಂಬರ ಮಾಹೆ 1ನೆ ತಾರೀಖಿನ ಲಾಗಾಯಿತು 23 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ; ಮತ್ತು ಈ ರಜಾ ಜತೆಗೆ ಕ್ರಿಸ್ತಮಸ್ ರಜಾವನ್ನು ಸಹ ಉಪಯೋಗಿಸಿಕೊಳ್ಳಲು ಅವರಿಗೆ ಅಪ್ಪಣೆ ಕೊಟ್ಟಿದೆ.

ತಾರೀಖು 27ನೆ ನವಂಬರ 1909.

ನಂ. ರೆ. 3963—ಲ್ಯಾ. ರೆ. 39-08-50, ಸ್ ೯ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಹದಡಿ ಗ್ರಾಮದಲ್ಲಿ ಗೊಬ್ಬರ ಹಾಕತಕ್ಕ ಬಗ್ಯೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಪ್ರಕರಣವನ್ನನುಸರಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಮತ್ತು ಅನುಭವದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯ್ತು.	ಒಟ್ಟು ವಿಸ್ತೀರ್ಣ.		ಖರಾಬು.	ಉಳಿದ ವಿಸ್ತೀರ್ಣ.		ಕಂದಾಯ.		ಸರ್ಕಾರಕ್ಕೆ ಬೇಕಾಗುವ ವಿಸ್ತೀರ್ಣ.		ಚತುರ್ಗಡಿ.			
																ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ	ಗು	ಗು	ಎ	ಗು	ರೂ	ಆ	ಎ	ಗು				
ಚಿತ್ರದುರ್ಗ	ದಾವಣಗೆರೆ	ಹದಡಿ	ಹದಡಿ [illegible]	1. ಕೆಂಚ, ದೇವೇರ್ರಿ, ಅಗಸರ, ಖಾತೇದಾರ್ ಮತ್ತು ಅನುಭವದಾರ್.	325	ಖುಷ್ಕಿ	6	29	1	6	28	4	0	0	15	ಸರ್ವೆ ನಂ. 326.	ಸರ್ವೆ ನಂ. 323	ಸರ್ವೆ ನಂ. 4 ಮತ್ತು 3	ಸರ್ವೆ ನಂ. 324 ಮತ್ತು ಗ್ರಾಮದ ಸರಹದ್ದು
				2. ಸಿದ್ದಬಿನ ದಳವಾಯಿ ಕುರುಬರ, ಖಾತೆದಾರ್ ಮತ್ತು ಅನುಭವದಾರ್	326	ಡಿಟೋ	13	11	2	13	9	7	8	0	33	ಸರ್ವೆ ನಂ. 327	ಸರ್ವೆ ನಂ. 325	ಸರ್ವೆ ನಂ. 3	ಗ್ರಾಮದ ಸರಹದ್ದು
				3. ನೀಲಗಬಿನ ಹನುಮವ್ವೆನರ್, ಗಾರ್ಡಿಯನ್ ತಾಯಿ ಹಾಲವ್ವೆ.	327	ಡಿಟೋ	6	32	1	6	31	4	0	0	16	ಸರ್ವೆ ನಂ. 328	ಸರ್ವೆ ನಂ. 326	ಸರ್ವೆ ನಂ. 2	ಡಿಟೋ
				4. ಮಲ್ಲಪ್ಪಬಿನ ದೊಡ್ಡೀರಪ್ಪ ಖಾತೆದಾರ್ ಮತ್ತು ಅನುಭವದಾರ್.	328	ಡಿಟೋ	7	6	1	7	5	4	0	0	16	ಸರ್ವೆ ನಂ. 329	ಸರ್ವೆ ನಂ. 327	ಸರ್ವೆ ನಂ. 2	ಡಿಟೋ

ತಾರೀಖು 23ನೆ ಜೂನ್ 1909.

ನಂ. ಜ. 7248—ಜ. ವಿ. 25-08-92, ಸರ್ಕಾರಿ ನೌಕರಿ ಬಗ್ಯೆ ಗವರ್ನಮೆಂಟಿಗೆ ಕೊಡುವ ಅರ್ಜಿಗಳನ್ನು ಈ ಕೆಳಗೆ ತೋರಿಸಿರುವ ನಮೂನೆಯು ಅಚ್ಚು ಹಾಕಿದ ಕಾಗದಗಳಲ್ಲಿ ಬರೆಯತಕ್ಕದ್ದೆಂದು ಈ ಮೂಲಕ ಸಮಸ್ತರ ತಿಳಿವಳಿಕೆಯು ಬಗ್ಯೆ ಪ್ರಕಟಿಸಿ ಇದೆ. ಹಾಗೆ ಬರೆಯಲ್ಪಡದೆ ಇರುವ ಅರ್ಜಿಗಳನ್ನು ತಿರಸ್ಕರಿಸಲಾದೀತು.

ಸರ್ಕಾರೀ ನೌಕರಿಯ ಬಗ್ಯೆ ಕೊಡಬೇಕಾದ ಅರ್ಜಿ.

.....................................ಗೆ...ಬರೆದುಕೊಂಡ ಅರ್ಜಿ

ಸರ್ಕಾರಿ ನೌಕರಿಯನ್ನು ಪಡೆಯುವ ಬಗ್ಯೆ ಇದರಡಿ ಕಂಡ ತಪಶೀಲುಗಳ ನಿಶಿ ಈ ಅರ್ಜಿಯನ್ನು ಜಾಹಿರ್ಮಾಡಿರುತ್ತೇನೆ. ನನ್ನ ಯೋಗ್ಯತಾ ಪತ್ರಗಳ ನಕಲುಗಳನ್ನು ಫೂಲ್ಸ್‌ಕ್ಯಾಪ್ ಅಳತೆಯ ಅರ್ಧಹಾಳೆ ಯಾ ಫಾರ್ (ಷೀಟ್) ಕಾಗದದಮೇಲೆ ಇಂಗ್ಲೀಷ್ ಮತ್ತು ಕನ್ನಡದಲ್ಲಿ ನನ್ನ ಬರವಣಿಗೆಯ ನಮೂನೆಯನ್ನೂ ಇದಕ್ಕೆ ಲಗತ್ತು ಮಾಡಿರುತ್ತೇನೆ.

ತಮ್ಮ ವಿಧೇಯ,

(ಅರ್ಜಿದಾರನ ರುಜು) ....

(1) ಅರ್ಜೀದಾರನ ಹೆಸರು.
(2) ಹುಟ್ಟಿದ ತಾರೀಖು (ಸುಮಾರಾಗಿ).
(3) ತಂದೆಯ ಹೆಸರು.
(4) ಜಾತಿ ವಗೈರೆ.
(5) ವಾಸಸ್ಥಳ ಮತ್ತು ವಿಳಾಸ.
(6) ಹಾಲಿ ಯಾವುದಾದರೂ ನೌಕರಿ ಮಾಡುತ್ತಿದ್ದರೆ ಆ ನೌಕರಿ ಮತ್ತು ಸಂಬಳ.
(7) ಈಗ ಯಾವ ನೌಕರಿ ಬೇಕು?
(8) ಸಂಸ್ಥಾನದ ನೌಕರಿಯಲ್ಲಿ ಹಿಂದೆಯಿದ್ದ ಅಥವಾ ಈಗ ಇರುವ ಉದ್ಯೋಗಸ್ಥರ ಸಂಬಂಧದಮೇಲೆ ಅರ್ಜೀದಾರನಿಗೆ ಸರ್ಕಾರೀ ನೌಕರಿ ಪಡೆಯಲು ಇರುವ ಹಕ್ಕು.
(9) (ಬದಲಿ ಅಥವಾ ಹಂಗಾಮಿ ನೌಕರಿಗಳಲ್ಲಿ ಕೆಲಸಮಾಡಿದ್ದ ವಗೈರೆಯಿಂದುಂಟಾದ) ಸ್ವಂತ ಹಕ್ಕು.
(10) ಅರ್ಜೀದಾರನ ವಿದ್ಯಾ ಸಂಬಂಧವಾದ ಯೋಗ್ಯತೆ ಎಂದರೆ ಯಾವ ಯಾವ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾನೆ ವಗೈರೆ.
(11) ಅರ್ಜೀದಾರನು ನಮೂದಿಸಲಪೇಕ್ಷಿಸುವ ಇತರ ಸಂಗತಿಗಳು.

ಮೈಸೂರು, ತಾರೀಖು 29ನೆ ಮಾಹೆ ಅಕ್ಟೋಬರ್ 1909ನೆ ಇಸವಿ.

ಕ್ಯಾಂಪ್ ನಂಬರ್ R. 28—Ft.

ಕಾಕನಕೋಟೆಯಿಂದ ಮಾಸ್ತಿಗುಡಿಗೆ ಹೋಗುವ ರಸ್ತೆಯನ್ನು ಕೆಡ್ಡಾ ಏರ್ಪಾಟಿಗೋಸ್ಕರ 1909ನೆ ನವಂಬರ್ ಗುರ್ರ್ಯ್ಲಾಗಾಯಿತು ಡಿಸೆಂಬರು 3ನೆ ತಾರೀಖಿನ ವರೆಗೆ ಆಮದುರಫ್ತು ಗಾಡಿಗಳು ತಿರುಗಾಡದಂತೆ ಬಂದುಮಾಡಿ ಇರುತ್ತದೆ ಎಂದು ಈ ಮೂಲಕ ಪ್ರಕಟಿಸಿ ಇದೆ. ಸರ್ಕಾರಕ್ಕೆ ಅಥವಾ ಸರ್ಕಾರೀ ನಾಕರರಿಗೆ ಸೇರಿದ ನಾಟಾ ಸಾಗಿಸುವ ಗಾಡಿಗಳು ಶಿವಾಯಿ ಇತರ ಗಾಡಿಗಳನ್ನೂ ಪ್ರಯಾಣಿಕರ ಗಾಡಿಗಳನ್ನೂ ಹಗಲುಹೊತ್ತಿನಲ್ಲಿ ಸದರಿ ರಸ್ತೆಯಲ್ಲಿ ತಿರುಗಾಡುವುದಕ್ಕೆ ಬಿಡಲಾಗುವುದು. ಇತರ ಗಾಡಿಗಳನ್ನು ಮಾಸ್ತಿಗುಡಿ ಮತ್ತು ಕಾಕನಕೋಟೆ ಕೆಡ್ಡಾ ಕ್ಯಾಂಪುಗಳ ಚಾರ್ಜಿನಲ್ಲಿರುವ ಫಾರೆಸ್ಟ್ ಆಫಿಸರುಗಳ ಅಪ್ಪಣೆಯ ಮೇರೆಗೆ ಮಾತ್ರವೇ ಸದರಿ ರಸ್ತೆಯಲ್ಲಿ ಬಿಡಲಾಗುವುದು.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಲಾಗಾಯಿತು 5 ಘಂಟೆಯ ವರೆಗೆ ದಿವಾನಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಯೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

ಫೈನಾನ್ಷಿಯಲ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 17ನೆ ನವಂಬರ್ 1909.

ನಂ. ಫೈ. 2433—ಜ. ಫೈ. 207-09-1, 1907ನೆ ಇಸವಿ ಮೇ 6ನೆ ಮರ್ಕುಮಿನ ಫೈ. 8334-72ನೆ ನಂಬರ್ ಹುಕ್ಕುಂ ಮೇರಿಗೆ.

(1) ಸಂಬಳ ಮತ್ತು ಅಲೋಯನ್ಸ್ ಯಾನೆ ವೇತನಗಳು, ಪೆನ್ಷನ್ ಮತ್ತು ಗ್ರಾಟ್ಯೂಟಿ ಸಹಾ.

(2) ಅಂದಾಜಾಗಳು.

(3) ಲೆಕ್ಕಗಳನ್ನು ಬಾಬುವಾರು ವಿಂಗಡಿಸುವುದು.

(4) ಲೆಕ್ಕಗಳು.

(5) ಆಡಿಟ್ ಮತ್ತು ಬಾಬು ಹೊರಳೆ ಮಾಡುವುದು.

(6) ಫೈನಾನ್ಷಿಯಲ್ ನಿಬಂಧನೆಗಳ ಅರ್ಥವಿವರಣೆ ಮತ್ತು ಅವುಗಳ ಅನ್ವಯ.

(7) ಜಮಾಖರ್ಚಿನ ಹಣದ ವಿಷಯ.

(8) ಸಾಲಗಳು ಮತ್ತು ಸರ್ಕಾರಿ ಹಣವನ್ನು ಇನ್‌ವೆಸ್ಟ್ ಮಾಡುವದು ಯಾನೆ ಉಪಯೋಗಿಸುವುದು.

(9) ವ್ಯಾಪಾರಸಂಬಂಧ ಮತ್ತು ಫೈನಾನ್ಷಿಯಲ್ ಸಂಬಂಧ ಏರ್ಪಾಡುಗಳ ಆದಾಯ ಖರ್ಚು ಬಾಬನ್ನು ಪರ್ಯಾಲೋಚಿಸುವುದು.

ಈ ಬಾಬುಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸರ್ಕಾರದ ಫೈನಾನ್ಷಿಯಲ್ ಸೆಕ್ರಿಟೆರಿಯವರ ವಿಳಾಸಕ್ಕೆ ಬರೆದು ರವಾನಿಸಬೇಕೆಂದು ಹುಕ್ಕುಂ ಸಾದರಾಗಿರುತ್ತದೆ. ಆದರೂ ಈಚಿಗೆ ಕೆಲವು ಸಂದರ್ಭಗಳಲ್ಲಿ ಈ ವಿಷಯಗಳಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಸರ್ಕಾರದ ಇತರ ಸೆಕ್ರಿಟೆರಿಗಳ ವಿಳಾಸಕ್ಕೆ ಬರೆದು ಕಳುಹಿಸುತ್ತಾ ಇದ್ದಾರೆ. ಈರೀತಿ ಕಾಗದಪತ್ರಗಳನ್ನು ತಪ್ಪು ವಿಳಾಸಕ್ಕೆ ರವಾನಿಸುತ್ತಿರೋಣದರಿಂದ ಸರ್ಕಾರೀ ಕೆಲಸಗಳು ಸಲೀಸು ನಡೆಯದೆ ಸಾವಕಾಶಕ್ಕೂ, ಅನಾನುಕೂಲಕ್ಕೂ ಆಸ್ಪದವಾಗುತ್ತಿದೆ. ಆದುದರಿಂದ ಇಲಾಖೆಗಳ ಮೊಖ್ತೇಸರರು, ಡೆಪ್ಯುಟಿ ಕಮಿಷನರುಗಳು ಮತ್ತು ಇತರರು ಮೇಲ್ಕಂಡ ಸರ್ಕಾರಿ ಹುಕ್ಕುಂಮಿನ 3ನೆ ಪ್ಯಾರಾದಲ್ಲಿ ನಮೂದಾಗುವ ತಿಳುವಳಿಕೆಗಳಿಗೆ ಗಮನಕೊಡಬೇಕು ; ಮತ್ತು ಐಯಿಂದ ಸರ್ಕಾರಕ್ಕೆ ಕಳುಹಿಸಿಕೊಡತಕ್ಕ ಕಾಗದಪತ್ರಗಳ ವಿಷಯಗಳಲ್ಲಿ ಈ ತಿಳುವಳಿಕೆಗಳನ್ನು ಖಂಡಿತವಾಗಿ ಜಾರಿಯಲ್ಲಿ ತರಲು ತರದೂದು ನಡೆಸಬೇಕೆಂದು ಕೋರಿ ಇದೆ.

ಹುಕುಂ ಬಮೋಜೀಬ್,

ಜೆ. ಎಸ್. ಚಕ್ರವರ್ತಿ,

ಫೈನಾನ್ಷಿಯಲ್ ಸೆಕ್ರಿಟೆರಿ.

// ಮೈಸೂರ ಗೆಜೆಟ್.

ಸಪ್ಲಿಮೆಂಟ್.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 9, ಸರ್ 1909.

ಮೈಸೂರು ನ್ಯಾಯವಿಧಾಯಕ ಸಭೆಯ ನಡವಳಿಕೆಗಳ ಸಾರಾಂಶ.

ಸರ್ 1909ನೆ ಸೆಪ್ಟಂಬರು 2ನೆ ತಾರೀಖು ಗುರುವಾರ ಮಧ್ಯಾಹ್ನಾತ್ಪರ 1 ಘಂಟೆಗೆ, ಬೆಂಗಳೂರು ಪಬ್ಲಿಕ್ ಆಫೀಸೆಸ್ ಯೂಅಠಾರಾ ಕಚೇರಿಯಲ್ಲಿರುವ ಸಭಾಮಂದಿರದಲ್ಲಿ ಸಭೆಯು ಸೇರಿತು.

ಹಾಜರಿದ್ದವರು.

ಮಿ॥ ಟಿ. ಆನಂದರಾಯರವರು, ಬಿ.ಎ., ದಿವಾನ್‌ರವರು (ಸಭಾಧ್ಯಕ್ಷರು).

ಉದ್ಯೋಗಪ್ರಯುಕ್ತ ಮೆಂಬರುಗಳಾದವರು.

ಮಿ॥ ಕೆ. ಪಿ. ಪುಟ್ಟಣ್ಣ ಶೆಟ್ಟರವರು (ಮೊದಲನೆ ಕೌನ್ಸಿಲರ್).

„ ಎಚ್. ವಿ. ನಂಜುಂಡಯ್ಯನವರು, ಎಂ.ಎ., ಎಂ.ಎಲ್. (ಎರಡನೇ ಕೌನ್ಸಿಲರ್).

ಹೆಚ್ಚಾಗಿ ಸೇರಿಸಿಕೊಳ್ಳಲ್ಪಟ್ಟ ಮೆಂಬರುಗಳು.

ಸರ್ಕಾರಿ ಉದ್ಯೋಗಸ್ಥರಾದವರು.

ಮಿ॥ ಕೆ. ಎಸ್. ಚಂದ್ರಶೇಖರ ಅಯ್ಯರವರು, ಬಿ.ಎ., ಬಿ.ಎಲ್.

„ ರಾಜಕಾರ್ಯಪ್ರವೀಣ ಎ. ರಂಗಸ್ವಾಮಿ ಅಯ್ಯಂಗಾರ್ರವರು, ಬಿ.ಎ., ಬಿ.ಎಲ್.

„ ಎಸ್. ನಾರಾಯಣರಾಯರವರು.

„ ಡಿ. ದೇವರಾಜ ಅರಸಿನವರು.

„ ಡಿ. ಶಾಮರಾಯರವರು.

„ ರಾವ್‌ಬಹದ್ದೂರ್ ಎಂ. ಮುತ್ತಣ್ಣನವರು.

ಸರ್ಕಾರಿ ಉದ್ಯೋಗಸ್ಥರಲ್ಲದವರು.

ಮಿ॥ ರಾಜಮಂತ್ರಪ್ರವೀಣ ಸಿ. ಶ್ರೀನಿವಾಸಯ್ಯಂಗಾರ್ರವರು.

„ ಬಿ. ನಾಗಪ್ಪನವರು, ಬ್ಯಾರಿಸ್ಟರ್ ಅಟ್ ಲಾ.

„ ಸೈಯದ್ ಅಮೀರ್ ಹಸನ್‌ರವರು.

„ ಬಿ. ತಿರುಮಲಾಚಾರ್‍ರವರು, ಬಿ.ಎಲ್.

ಗೈರ್‌ಹಾಜರಾದವರು.

ಸರ್ಕಾರಿ ಉದ್ಯೋಗಸ್ಥರಲ್ಲದವರು.

ಮಿ॥ ಎಂ. ಸಿ. [illegible]ಯ್ಯಂಗಾರ್‌ರವರು, ಬಿ.ಎ.

ಹಾಜರಿದ್ದವರು.

ಮಿ॥ ಎಸ್. ಹಿರಿಯಣ್ಣಯ್ಯನವರು, ಎಂ.ಎ., ಬಿ.ಎಲ್. (ಸೆಕ್ರಿಟೆರಿ).

ನ್ಯಾಯವಿಧಾಯಕ ಸಭೆಗೆ ಹೊಸದಾಗಿ ನೇಮಿಸಲ್ಪಟ್ಟ ಇದರಡಿ ಕಂಡ ಅಡಿಷನಲ್ ಮೆಂಬರುಗಳು ಸಭೆಯಲ್ಲಿ ಈ ದಿನ ಪ್ರಥಮತಃ ಹಾಜರಾದರೆಂದು ಸೆಕ್ರಿಟೆರಿಯವರು ತಿಳಿಯಪಡಿಸಿದರು:—

ಸರ್ಕಾರಿ ಉದ್ಯೋಗಸ್ಥರು.

ಮಿ॥ ರಾಜಕಾರ್ಯಪ್ರವೀಣ ಎ. ರಂಗಸ್ವಾಮಿ ಅಯ್ಯಂಗಾರ್‍ರವರು, ಬಿ.ಎ., ಬಿ.ಎಲ್.

,, ಎಸ್. ನಾರಾಯಣರಾಯರವರು.

,, ಡಿ. ದೇವರಾಜ ಅರಸಿನವರು.

,, ಡಿ. ಶಾಮರಾಯರವರು.

,, ರಾವಬಹದ್ದೂರ್ ಎಂ. ಮುತ್ತಣ್ಣನವರು.

ಸರ್ಕಾರಿ ಉದ್ಯೋಗಸ್ಥರಲ್ಲದವರು.

ಮಿ॥ ರಾಜಮಂತ್ರಪ್ರವೀಣ ಸಿ. ಶ್ರೀನಿವಾಸಯ್ಯಂಗಾರ್‌ರವರು.

,, ಬಿ. ನಾಗಪ್ಪನವರು, ಬ್ಯಾರಿಸ್ಟರ್ ಅಟ್ ಲಾ.

,, ಸೈಯದ್ ಅಮೀರ್ ಹಸನ್‌ರವರು.

,, ಬಿ. ತಿರುಮಲಾಚಾರ್‌ರವರು, ಬಿ.ಎಲ್.

1888ನೆ ಇಸವಿಯ 4ನೆ ರೆಗ್ಯುಲೇಷನಾದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ಪುನಃ ತಿದ್ದುಪಾಟುಮಾಡುವ ಬಗ್ಯೆ ಹುಟ್ಟಿದ ಮಸೂದೆಗೂ 1903ನೆ ಇಸವಿಯ ಮೈಸೂರು ನಗರಾಭಿವೃದ್ಧಿಯ ರೆಗ್ಯುಲೇಷನನ್ನು ಪುನಃ ತಿದ್ದುಪಾಟುಮಾಡುವ ಬಗ್ಯೆ ಹುಟ್ಟಿದ ಮಸೂದೆಗೂ ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದರವರು 1909ನೆ ಜನವರಿ 11ನೆ ತಾರೀಖಿನ ದಿನ ಮಂಜೂರಾತಿಯನ್ನು ದಯಪಾಲಿಸಿದರೆಂದು ಸೆಕ್ರಿಟೆರಿಯವರು ರಿಪೋರ್ಟು ಮಾಡಿದರು.

ಸಭಾಧ್ಯಕ್ಷರವರು.—ರೆವಿನ್ಯೂ ಕಮಿಷನರವರಾದ ರಾಜಕಾರ್ಯಪ್ರವೀಣ ಮಿ॥ ಎ. ರಂಗಸ್ವಾಮಿ ಅಯ್ಯಂಗಾರ್‍ರವರ ಅನುಕೂಲತೆಗಾಗಿ, ತಮ್ಮಗಳ ಅನುಮತಿಯಿಂದ, ಪ್ರಕೃತ ಪರ್ಯಾಲೋಚಿಸಬೇಕಾದ ವಿಷಯಗಳ ಕ್ರಮದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಬೇಕಾಗಿದೆ. ಸಭಾ ಕಾರ್ಯನಿರ್ವಾಹಕ್ರಮದ ಪಟ್ಟಿಯ 14ನೆ ಅಂಶವನ್ನು ಮಿ॥ ರಂಗಸ್ವಾಮಿ ಅಯ್ಯಂಗಾರ್‍ರವರು ಈಗಲೇ ಪ್ರಸ್ತಾಪಿಸಬೇಕಾಗಿ ಕೋರುತ್ತೇವೆ.

ಮೈಸೂರು ಸೀಮೆಯಲ್ಲಿ ಸಿಕ್ಕಿದ ನಿಕ್ಷೇಪಕ್ಕೆ ಸಂಬಂಧಪಟ್ಟು ಕಾನೂನ್ ಏರ್ಪಡಿಸುವ ಬಗ್ಯೆ ಹುಟ್ಟಿದ ಮಸೂದಾ.

ಅನಂತರ ರಾಜಕಾರ್ಯಪ್ರವೀಣ ಮಿ॥ ಎ. ರಂಗಸ್ವಾಮಿ ಅಯ್ಯಂಗಾರ್‍ರವರು ಮೈಸೂರು ಸೀಮೆಯಲ್ಲಿ ಸಿಕ್ಕಿದ ನಿಕ್ಷೇಪಕ್ಕೆ ಸಂಬಂಧಪಟ್ಟು ಕಾನೂನ್ ಏರ್ಪಡಿಸುವ ಬಗ್ಯೆ ಹುಟ್ಟಿದ ಬಿಲ್ಲಿನ ವಿಚಾರವಾಗಿ ಸಿಲೆಕ್ಟ್ ಕಮಿಟಿ ಯಾ ನಿಯುಕ್ತ ಸಮಾಜದವರು ಕಳುಹಿಸಿದ ರಿಪೋರ್ಟನ್ನೂ, ಸದರೀ ಸಮಾಜದವರು ತಿದ್ದುಪಾಟು ಮಾಡಿದ ಬಿಲ್ಲನ್ನೂ ಪರ್ಯಾಲೋಚನೆ ಬಗ್ಯೆ ತೆಗೆದುಕೊಳ್ಳಬೇಕೆಂದು ವಿಜ್ಞಾಪಿಸಿ ಹೇಳಿದ್ದೇನೆಂದರೆ:—

ನಿಕ್ಷೇಪದ ಬಿಲ್ಲನ್ನು ಕುರಿತು ನಿಯುಕ್ತ ಸಮಾಜದವರು ಕಳುಹಿಸಿರುವ ರಿಪೋರ್ಟನ್ನು ಈ ಸಭೆಗೆ ಒಪ್ಪಿಸುವಲ್ಲಿ ನಾನು ಹೇಳಬೇಕಾದ್ದೇನೆಂದರೆ—1908ನೆ ಇಸವಿಯ ಡಿಸೆಂಬರ್ 16ನೆ ತಾರೀಖಿನ ದಿನ ಈ ಸಭೆಯು ಸೇರಿದ್ದಾಗ ಈ ಬಿಲ್ಲು ನನ್ನಿಂದ ಪ್ರಸ್ತಾಪಿಸಲ್ಪಟ್ಟು, ಅನಂತರ ಸಭೆಯಲ್ಲಿ ಒಪ್ಪಲ್ಪಟ್ಟಿತಲ್ಲದೆ ಇದನ್ನು ಪರ್ಯಾಲೋಚಿಸುವ ಬಗ್ಯೆ ಒಂದು ನಿಯುಕ್ತ ಸಮಾಜವನ್ನು ಮೊಕರರ್ ಮಾಡೋಣಾಯಿತು. ಸದರೀ ನಿಯುಕ್ತ ಸಮಾಜದವರು ಅನೇಕ ಮೀಟಿಂಗುಗಳನ್ನು ನಡೆಸಿ ಈ ಬಿಲ್ಲಿನ ನಿಯಮಗಳನ್ನೆಲ್ಲಾ ಚೆನ್ನಾಗಿ ಪರಿಶೋಧಿಸಿ ಅವಶ್ಯಕವೆಂದು ತೋರಿದ ಕಡೆ ಕೆಲವು ಬದಲಾವಣೆಗಳನ್ನು ಮಾಡಿ ಕೆಲವು ನಿಯಮಗಳನ್ನು ಹೊಸದಾಗಿ ಸೇರಿಸಿ ಇರುತ್ತಾರೆ. ಈ ಪೈಕಿ ಮಿ॥ ನಾಗಪ್ಪನವರು ಒಂದು ಬದಲಾವಣೆಯ ವಿಷಯದಲ್ಲಿ ಭಿನ್ನಾಭಿಪ್ರಾಯ ಬರೆದಿರುವುದು ಹೊರತಾಗಿ ಮಿಕ್ಕ ಬದಲಾವಣೆಗಳನ್ನು ನಿಯುಕ್ತ ಸಮಾಜದವರೆಲ್ಲರೂ ಅನುಮೋದಿಸಿರುತ್ತಾರೆ. ಈ ತಿದ್ದುಪಾಟಾದ

ಬಿಲ್ಲನ್ನು ತಪಶೀಲ್‌ವಾರ್ ರಿಪೋರ್ಟುನಿಶೀ 1909ನೆ ಇಸವಿಯ ಜುಲೈ 13ನೆ ತಾರೀಖಿನ 13ನೇ ನಂಬರ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಲಾಯಿತು. ಹೀಗೆ ಈ ತಿದ್ದುಪಾಟಾದ ಬಿಲ್ಲು ಪ್ರಜೆಗಳ ತಿಳಿವಳಿಕೆಗೆ ಬಂದು ಆರು ವಾರಗಳಿಗಿಂತ ಜಾಸ್ತಿಯಾಗಿಯೇ ಇದೆ; ಆದರೂ ಇಲ್ಲಿನ ತನಕ ಇದರ ವಿಷಯದಲ್ಲಿ ಯಾವ ಫಿರ್ಯಾದಾಗಲಿ ಆಕ್ಷೇಪಣೆಯಾಗಲಿ ಬಂದಿರುವುದಿಲ್ಲ.

ನಿಯುಕ್ತ ಸಮಾಜದವರು ಈ ಬಿಲ್ಲಿನಲ್ಲಿ ಮಾಡಿರುವ ಬದಲಾವಣೆಗಳನ್ನು ತಿಳಿಸುವುದಕ್ಕೆ ಮುಂಚೆ, ಈ ಬಿಲ್ಲಿಗೂ ಇಂಡಿಯಾ ಸರ್ಕಾರದ 1878ನೆ ಇಸವಿಯ 6ನೆ ಆಕ್ಟಿಗೂ ಇರುವ ವ್ಯತ್ಯಾಸವನ್ನು ತೋರ್ಪಡಿಸುವುದಕ್ಕೋಸ್ಕರ ಈ ಬಿಲ್ಲನ್ನು ಇಲ್ಲಿ ಏರ್ಪಡಿಸಲು ಕಾರಣ ವಗೈರೆಗಳನ್ನು ಸ್ವಲ್ಪಮಟ್ಟಿಗೆ ಸೂಚಿಸುತ್ತೇನೆ.

1867ನೆ ಇಸವಿಯ ಏಪ್ರಿಲ್ 17ನೆ ತಾರೀಖಿನಲ್ಲಿ ಚೀಫ್ ಕಮಿಷನರ್ ಸಾಹೇಬರವರು ಸಾದರ್ಮಾಡಿದ 6ನೆ ಇಸ್ತಿಹಾರ್ನಾಮೆಯಲ್ಲಿ ನಿಕ್ಷೇಪವನ್ನು ಕುರಿತು ನಮೂದಿರುವ ಕಾನೂನೇ ಹಾಲಿ ಜಾರಿಯಲ್ಲಿದೆಯೆಂಬುವುದು ಸಭಾಸದರಾದ ತಮ್ಮಗಳಿಗೆಲ್ಲಾ ವೇದ್ಯವೇ ಇದೆ. ಮದರಾಸು ಕೋಡಿನಲ್ಲಿರುವ 1832ನೆ ಇಸವಿಯ 11ನೆ ರೆಗ್ಯುಲೇಷನನ್ನು ಅನುಸರಿಸಿ ಮೇಲ್ಕಂಡ ಕಾನೂನನ್ನು ಏರ್ಪಡಿಸಿದೆ. ಈ ಕಾನೂನು ಏರ್ಪಟ್ಟ ತರುವಾಯ, ಇಂಡಿಯಾ ಸರ್ಕಾರದವರು ಯೂರೋಪು ದೇಶದ ಸಂಸ್ಥಾನಗಳಲ್ಲಿ ನಿಕ್ಷೇಪದ ವಿಚಾರವಾಗಿ ಜಾರಿಯಲ್ಲಿರುವ ಕಾನೂನುಗಳನ್ನು ಚೆನ್ನಾಗಿ ಪರ್ಯಾಲೋಚಿಸಿ 1878ನೆ ಇಸವಿಯ 6ನೆ ಇಂಡಿಯಾ ಆಕ್ಟನ್ನು ಮಂಜೂರ್ಮಾಡಿದರೆಂದು ಘನಹೊಂದಿದ ಸರ್ ಎಡ್ವರ್ಡ್ ಬೇಲಿಯವರ ಬರವಣಿಗೆಯಿಂದ ತಿಳಿಯಬರುತ್ತದೆ.

ಚೀಫ್ ಕಮಿಷನರ್ ಸಾಹೇಬರವರು ಸಾದರ್ಮಾಡಿದ ಮೇಲ್ಕಂಡ ಇಸ್ತಿಹಾರ್ನಾಮೆಯು ಕಾನೂನಿನ ಬಲವುಳ್ಳದಾಗಿಲ್ಲವೆಂದು ಬಹಳ ಹಿಂದೆಯೇ ಎಂದರೆ 1886ನೆ ಇಸವಿಯಲ್ಲಿಯೇ ಆಕ್ಷೇಪಣೆ ಬಂತು; ಈ ವಿಚಾರವಾಗಿ ಒಂದು ರೆಗ್ಯುಲೇಷನನ್ನು ಶೀಘ್ರದಲ್ಲಿ ಮಂಜೂರ್ಮಾಡುವುದು ಅತ್ಯವಶ್ಯಕವೆಂತಲೂ ಅಂಗೀಕರಿಸೋಣಾಯಿತು. ಆದರೂ ಸದರೀ ಇಸ್ತಿಹಾರ್ನಾಮೆಯಲ್ಲಿ ಕಂಡ ನಿಯಮಗಳು ಬಹುಕಾಲದಿಂದ ಜಾರಿಯಲ್ಲಿದ್ದ ಸಬಬು ಆಗಿನ ಸರ್ಕಾರದವರು ಸದರೀ ನಿಯಮಗಳನ್ನು ಬದಲಾಯಿಸಲು ಇಷ್ಟಪಡಲಿಲ್ಲ. ಅನೇಕ ಮಸೂದೆಗಳನ್ನು ಹಂಗಾಮಿಯಾಗಿ ತಯಾರ್ಮಾಡಿಸಿ ಪರ್ಯಾಲೋಚಿಸಲಾಯಿತು. ಕಡೆಗೆ ಬ್ರಿಟಿಷ್ ಕಾನೂನನ್ನೇ ತಕ್ಕ ಬದಲಾವಣೆ ಸಹಿತ ಜಾರಿಗೆ ತರಬೇಕೆಂದು ನಿಶ್ಚಯಿಸಲಾಯಿತು. ಅದೇ ಪ್ರಕಾರ ಒಂದು ಮಸೂದೆ ರೆಗ್ಯುಲೇಷನನ್ನು ತಯಾರ್ಮಾಡಿ ಈ ಸಭೆಯ ಮುಂದಿಡೋಣಾಯಿತು. ಆ ಬಿಲ್ಲು ಈಗ ನಿಯುಕ್ತ ಸಮಾಜದವರಿಂದ ಜಾಸ್ತಿಯಾಗಿ ತಿದ್ದುಪಾಟು ಮಾಡಲ್ಪಟ್ಟು ತಮ್ಮಗಳ ಪರ್ಯಾಲೋಚನೆಗೆ ಬಂದಿದೆ.

ಮಸೂದಾ ಬಿಲ್ಲಿನ ಇರೇಬಿಯಲ್ಲಿ ಷರಾಗಳನ್ನು ಛಾಪಿಸಿರುವುದರಿಂದಲೂ, ಕಲಮುಗಳನ್ನು ಬೇರೆ ಬೇರೆ ತರಹೆಯ ಅಕ್ಷರಗಳಲ್ಲಿ ಮುದ್ರಿಸಿರುವುದರಿಂದಲೂ ಸಹಾ ಈ ಬಿಲ್ಲಿನಲ್ಲಿ ಮಾಡಿರುವ ಬದಲಾವಣೆಗಳನ್ನು ಸಭಿಕರು ತಿಳಿದುಕೊಂಡು ಅವು ಸರಿಯಾಗಿವೆಯೇ ಇಲ್ಲವೇ ಎಂದು ಯೋಚಿಸಬಹುದಾಗಿದೆ. ಈಗ ಈ ಬದಲಾವಣೆಗಳನ್ನು ಕ್ರಮವಾಗಿ ವಿವರಿಸುತ್ತೇನೆ.

ನಾವು ಮೊದಲು ಗಮನಿಸತಕ್ಕ ಬದಲಾವಣೆಯು ಯಾವುದೆಂದರೆ,—3ನೆ ಕಲಮಿನಲ್ಲಿ "ಕಂಡು ಹಿಡಿದವನು" ಎಂಬ ಮಾತಿನ ಅರ್ಥವಿವರಣೆಯನ್ನು ಹೊಸದಾಗಿ ಸೇರಿಸಿದುದು. ಈ ಮಾತಿನ ಅರ್ಥವು ತಕ್ಕಮಟ್ಟಿಗೆ ಸುಲಭವಾಗಿಯೂ ಸ್ಪಷ್ಟವಾಗಿಯೂ ಇದ್ದರೂ ಕೂಡ ಕೆಲವು ಸಂದರ್ಭಗಳಲ್ಲಿ ನಿಕ್ಷೇಪವನ್ನು ವಾಸ್ತವವಾಗಿ ಕಂಡುಹಿಡಿದವರು ಯಾರು ಎಂದು ತೀರ್ಮಾನಿಸುವುದು ಕಷ್ಟವಾಗಬಹುದಾದ ಕಾರಣ "ಕಂಡು ಹಿಡಿದವನು" ಎಂಬ ಮಾತಿಗೆ ಯಾವ ಅರ್ಥವಿರಬೇಕು ಎಂಬುವುದನ್ನು ತಿಳಿಯಪಡಿಸುವುದು ಅವಶ್ಯಕವೆಂದು ತೋರಿತು. ಈ ಅರ್ಥವಿವರಣೆ ಯಾ ಟಿಪ್ಪಣಿಯಲ್ಲಿ—ಯಾವ ಮನುಷ್ಯನಾದರೂ ತನ್ನ ಯಜಮಾನನ ಅಪ್ಪಣೆ ಪ್ರಕಾರ ಕೆಲಸ ಮಾಡುತ್ತಿದ್ದಾಗ ನಿಕ್ಷೇಪ ಸಿಕ್ಕಿದ ಸಂದರ್ಭದಲ್ಲಿ ಅಂಥಾ ಯಜಮಾನನನ್ನೇ ನಿಕ್ಷೇಪವನ್ನು ಕಂಡು ಹಿಡಿದವನೆಂದು ಭಾವಿಸಬೇಕೆಂತ ಸೂಚಿಸಿ ಇದೆ. ಶಾಸನದ ಇಲಾಖೆಯವರೂ ಇತರರೂ ಪೂರ್ವದ ಲೇಖನ ವಗೈರೆಗಳನ್ನು ಹುಡುಕುವ ಕಾಲದಲ್ಲಿ ಸಿಕ್ಕುವ ಪದಾರ್ಥಗಳನ್ನು ಕೆಲವುವೇಳೆ ನಿಕ್ಷೇಪಗಳೆಂದು ಭಾವಿಸಬೇಕಾಗುವ ಕಾರಣ ಮೇಲ್ಕಂಡ ಅರ್ಥವಿವರಣೆಯು ಅವಶ್ಯಕವಾದದ್ದೆಂದು ತಿಳಿಯಬರುತ್ತದೆ.

ಸರ್ಕಾರಿ ಜಮೀನಿನಲ್ಲಿ ನಿಕ್ಷೇಪವು ಸಿಕ್ಕಿದ ಸಂದರ್ಭಗಳಲ್ಲಿ, ಸದರೀ ನಿಕ್ಷೇಪದ ಪೈಕಿ ಒಂದು ಹಿಸ್ಸೆಯನ್ನು ಪಡೆಯಲು ಸರ್ಕಾರದವರಿಗೆ ಹಕ್ಕನ್ನು ಉಳಿಸಿಕೊಳ್ಳಬೇಕೆಂದು ನಿಯುಕ್ತ ಸಮಾಜದವರು ಅಭಿಪ್ರಾಯಪಟ್ಟರು. ಅದೇ ಪ್ರಕಾರ ಸರ್ಕಾರಿ ಜಮೀನಿನಲ್ಲಿ ನಿಕ್ಷೇಪಸಿಕ್ಕಿದಾಗ ಜಮೀನ್ ಮಾಲೀಕರೆಂದು ಹೇಳಿಕೊಳ್ಳಲು ಸರ್ಕಾರದವರಿಗೆ ಹಕ್ಕುಂಟೆಂಬ ಅಂಶವನ್ನು ಕಂಠೋಕ್ತವಾಗಿ ನಮೂದಿಸಿ "ಮಾಲೀಕ" ಎಂಬ ಮಾತಿನ ಅರ್ಥವಿವರಣೆಗೆ ಹೊಸದಾಗಿ ಒಂದು ಕಲಮನ್ನು ಸೇರಿಸಲಾಯಿತು. ಈ ನಿಯಮವನ್ನು ಕುರಿತು ಪುನಃ ತಪಶೀಲಾಗಿ ಮಾತನಾಡುತ್ತೇನೆ.

ನಿಕ್ಷೇಪವು ಸಿಕ್ಕಿದ ತಾರೀಖಿಗೆ ಮುಂಚೆ 100 ವರ್ಷಗಳೊಳಗಾಗಿ ಅದನ್ನು ಬಚ್ಚಿಡೋಣಾಯಿತೆಂದು ನಂಬಲು ಕಾರಣವಿದ್ದಾಗ ಹೊರತು ಸದರೀ ನಿಕ್ಷೇಪಕ್ಕೆ ಮಾಲೀಕರೇ ಇಲ್ಲವೆಂದು ಭಾವಿಸಬೇಕೆಂಬದಾಗಿ 1878ನೆ ಇಸವಿಯ 6ನೆ ಆಕ್ಟಿನ 8-9ನೆ ಪ್ರಕರಣಗಳಲ್ಲಿ ವಿಧಿಸಿ ಇದೆ. ಆದರೆ ನಿಕ್ಷೇಪವನ್ನು ಹಿಂದಿನ ನೂರು ವರ್ಷಗಳೊಳಗಾಗಿಯೇ ಬಚ್ಚಿಡೋಣಾಯಿತೆಂದು ರುಜುವಾತು ಮಾಡುವುದು ಯಾರಿಗೂ ಕಷ್ಟ; ಅಲ್ಲದೆ ನಿಕ್ಷೇಪವನ್ನು ಆ ಕಾಲದೊಳಗಾಗಿಯೇ ಬಚ್ಚಿಡಲಾಯಿತೆಂದು ತೃಪ್ತಿಕರವಾಗಿ ರುಜುವಾತು ಮಾಡುವುದು ಸಾಧ್ಯವಲ್ಲದಿದ್ದರೂ ಒಬ್ಬ ಮನುಷ್ಯನು ಸದರೀ ನಿಕ್ಷೇಪಕ್ಕೆ ತಾನು ಹಕ್ಕುದಾರನೆಂದು ಕೆಲವು ಸಂದರ್ಭಗಳಲ್ಲಿ ರುಜುವಾತು ಮಾಡಬಹುದು. ಈ ಕಾರಣಗಳಿಂದ ಅಂಥಾ ಹಕ್ಕುಗಳನ್ನು ಕಾಪಾಡುವುದಕ್ಕೋಸ್ಕರ—(i) 11ನೆ ಕಲಮಿನಲ್ಲಿರುವ "ಸ್ಥಳದ ಮಾಲೀಕನೆಂಬ ಸಬಬಿನ ಮೇಲೆ" ಎಂಬ ಮಾತುಗಳ ತರುವಾಯ "ಅಥವಾ ಇತರ ಸಬಬಿನ ಮೇಲೆ" ಎಂಬ ಮಾತುಗಳನ್ನೂ; (ii) 12 (b) ಕಲಮಿನ ನಿಯಮದಲ್ಲಿರುವ "ನಿಕ್ಷೇಪ ಸಿಕ್ಕಿದ ಸ್ಥಳದ ಮಾಲೀಕ" ಎಂಬ ಮಾತುಗಳಿಗೆ ಬದಲಾಗಿ "ನಿಕ್ಷೇಪಸಿಕ್ಕಿದ ಸ್ಥಳದ ಮಾಲೀಕನೂ ಅಥವಾ ಇತರ ಮನುಷ್ಯರೂ ಇವರುಗಳ ಹೊರತು" ಎಂಬ ಮಾತುಗಳನ್ನೂ; (iii) 13ನೆ ಕಲಮಿನಲ್ಲಿ "ನಿಕ್ಷೇಪ ಸಿಕ್ಕಿದ ಸ್ಥಳದ ಮಾಲೀಕನೆಂದು" ಎಂಬ ಮಾತುಗಳ ತರುವಾಯ "ಅಥವಾ ಇತರ ವಿಧವಾಗಿ ಹಕ್ಕುದಾರನೆಂದು" ಎಂಬ ಮಾತುಗಳನ್ನೂ ಸೇರಿಸಲಾಯಿತು.

ಈಗ ನಾನು ಬಿಲ್ಲಿನ 16ನೆ ಕಲಮನ್ನು ಕುರಿತು ಪ್ರಸ್ತಾಪಿಸಲಪೇಕ್ಷಿಸುತ್ತೇನೆ. ಈ ನಿಯಮವು 1867ನೆ ಇಸವಿಯ ನಿಬಂಧನೆಗಳಲ್ಲಿ ಇತ್ತು. ಇದನ್ನು ಹೊಸ ಕಾನೂನಿನಲ್ಲಿಯೂ ಇಡುವುದು ಯುಕ್ತವೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ. ನಾನು ಹಿಂದೆ ತಿಳಿಸಿದಂತೆ ನಿಯುಕ್ತ ಸಮಾಜದ ಮೆಂಬರುಗಳ ಪೈಕಿ, ಇಬ್ಬರು ಆಕ್ಷೇಪಣೆಯ ಷರಾ ಬರೆದುದು ಈ ನಿಯಮದ ವಿಷಯವಾಗಿಯೇ.

ಈಗ ನಾನು ಮೊದಲು 16ನೆ ಕಲಮಿನ ವಿಚಾರವಾಗಿ ಪ್ರಸ್ತಾಪಿಸಿ ಅನಂತರ 12ನೆ ಕಲಮಿನ ವಿಷಯವಾಗಿ ಮಾತನಾಡಬೇಕಾಗಿದೆ. ಯಾಕೆಂದರೆ 16ನೆ ಕಲಮನ್ನು ಇಟ್ಟುಕೊಂಡದ್ದರಿಂದಲೇ 12ನೆ ಕಲಮಿನಲ್ಲಿ ಬದಲಾವಣೆ ಮಾಡಬೇಕಾಯಿತು ; ಮತ್ತು 16ನೆ ಕಲಮನ್ನು ನೋಡಿದಹೊರತು 12ನೆ ಕಲಮಿನಲ್ಲಿ ಮಾಡಿರುವ ಬದಲಾವಣೆಯು ಸ್ಪಷ್ಟವಾಗಿ ತಿಳಿಯುವುದಿಲ್ಲ. ಈ 16ನೆ ಕಲಮು ಮುಖ್ಯವಾದದ್ದಾಗಿಯೂ 1878ನೆ ಇಸವಿಯ 6ನೆ ಆಕ್ಟಿನ ಉದ್ದೇಶಕ್ಕೆ ವ್ಯತಿರಿಕ್ತವಾದದ್ದಾಗಿಯೂ ಇರುವುದರಿಂದ ಇದನ್ನು ಕೊಂಚಮಟ್ಟಿಗೆ ವಿಸ್ತಾರವಾಗಿ ವಿಚಾರ ಮಾಡುವುದು ಅವಶ್ಯಕವೆಂದು ತೋರುತ್ತದೆ. ಘನಹೊಂದಿದ ಸರ್ ಎಡ್ವರ್ಡ್ ಬೇಲಿಯವರು ಇಂಡಿಯಾ ಸರ್ಕಾರದ ನ್ಯಾಯವಿಧಾಯಕ ಸಭೆಯಲ್ಲಿ ಸಿಕ್ಕಿದ ನಿಕ್ಷೇಪದ ಬಿಲ್ಲನ್ನು ಪ್ರಸ್ತಾಪಿಸಿದಾಗ ಈ ವಿಷಯದಲ್ಲಿ ಜಾರಿಯಲ್ಲಿದ್ದ ನಾನಾ ಕಾನೂನುಗಳ ಉದ್ದೇಶಗಳನ್ನು ಸೂಚಿಸಿ ಹೇಳಿದ್ದೇನೆಂದರೆ:—"ಯೂರೋಪ ಖಂಡದಲ್ಲಿ ಕ್ರಿ. ಶ. 6ನೆ ಶತಮಾನದಿಂದ 14ನೆ ಶತಮಾನದವರೆಗೆ ಜಾರಿಯಲ್ಲಿದ್ದ ಕಾನೂನೇ ಹಾಲಿ ಇಂಡಿಯಾ ದೇಶದಲ್ಲಿ ಜಾರಿಯಲ್ಲಿದೆಯೆಂದು ಹೇಳಬಹುದು." "ಈ ಕಾನೂನಿನಲ್ಲಿ ಸಂಸ್ಥಾನಕ್ಕೆ ಹಕ್ಕುಂಟೆಂದು ಅಂಗೀಕರಿಸಿದ್ದಾಗ್ಯೂ ಸದರೀ ಹಕ್ಕನ್ನು ಕೆಲವು ಷರತು ನಿಶೀ ನಿಕ್ಷೇಪ ಕಂಡು ಹಿಡಿದವನಿಗೆ ಬಿಟ್ಟುಬಿಟ್ಟಿದೆಯೆಂದು ಹೇಳಬಹುದಾಗಿದೆ." "ನಿಕ್ಷೇಪವನ್ನು ಪಡೆಯಲು ಫಲಾನೆಯವರಿಗೆ ಪ್ರಥಮ ಬಾಧ್ಯತೆಯುಂಟೆಂದು ರುಜುವಾತು ಮಾಡುವುದು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ಸದರೀ ಸ್ವತ್ತು ಸರ್ಕಾರಿ ಖಜಾನೆಗೆ ಜಮೆಯಾಗಿ ಪ್ರಜೆಗಳ ಪ್ರಯೋಜನಾರ್ಥ ಉಪಯೋಗಿಸಲ್ಪಡಬೇಕೆಂದು ಹೇಳುವುದು ನ್ಯಾಯವಾಗಿದೆ." ಸದರೀಯವರು ನಿಯುಕ್ತ ಸಮಾಜದವರ ರಿಪೋರ್ಟನ್ನು ಪರ್ಯಾಲೋಚನೆ ಬಗ್ಗೆ ನ್ಯಾಯವಿಧಾಯಕ ಸಭೆಯವರಿಗೆ ಒಪ್ಪಿಸಿದಾಗ—"ಸಿಕ್ಕಿದ ಎಲ್ಲಾ ನಿಕ್ಷೇಪಗಳಮೇಲೂ ಸರ್ಕಾರಕ್ಕೆ ಹಕ್ಕಿರಬೇಕಲ್ಲದೆ ಸದರೀ ನಿಕ್ಷೇಪಗಳು ಸರ್ಕಾರಕ್ಕೇನೆ ಸೇರಬೇಕು ಎಂಬ ನಿಯಮಕ್ಕೆ ಅನುಗುಣವಾಗಿ ಹಾಲಿ ಜಾರಿಯಲ್ಲಿರುವ ಕಾನೂನು ಏರ್ಪಟ್ಟಿದೆ. ಸಾಮಾನ್ಯ ನ್ಯಾಯರೀತ್ಯಾ ನೋಡುವಲ್ಲಿ ಈ ನಿಯಮದಮೇಲೆ ಆಕ್ಷೇಪಣೆಗಳನ್ನು ತರುವುದು ಅಸಾಧ್ಯ" ಎಂದು ಹೇಳಿದರು. ಸದರೀ ಬಿಲ್ಲನ್ನು ಇಂಡಿಯಾ ಸರ್ಕಾರದ ನ್ಯಾಯವಿಧಾಯಕ ಸಭೆಯಲ್ಲಿ ಪ್ರಸ್ತಾಪಿಸಿದಾಗ—"ನಿಕ್ಷೇಪವನ್ನು ಹೊಂದಲು ಸರ್ಕಾರಕ್ಕೇ ಸಾಮಾನ್ಯವಾದ ಹಕ್ಕು ಉಂಟು, ಪರಂತು ಸದರೀ ಸ್ವತ್ತಿನ ಬೆಲೆಯು ಒಂದು ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಇಲ್ಲದೇ ಇದ್ದಲ್ಲಿ ಅದರಮೇಲಿನ ಹಕ್ಕನ್ನು ಕೆಲವು ಷರತ್ತು ನಿಶೀ ನಿಕ್ಷೇಪ ಕಂಡು ಹಿಡಿದವನಿಗೆ ಕೊಡಬೇಕು ಎಂಬುವುದೇ ಇದಕ್ಕೆ ಸಂಬಂಧಪಟ್ಟ ಕಾನೂನಿನ ತಾತ್ಪರ್ಯವೆಂದು ಹೇಳಬಹುದಾಗಿದೆ. ಆದರೆ ಈ ಕಾನೂನಿನಿಂದ ಸರ್ಕಾರಿ ಖಜಾನೆಗೆ ಒಂದು ರೂಪಾಯಿಕೂಡ ಬರಲಿಲ್ಲ" ಎಂದು ಹೇಳಿದರು. ಸರ್ಕಾರಕ್ಕೇ ನಿಕ್ಷೇಪದಮೇಲೆ ಹಕ್ಕಿರಬೇಕೆಂಬ ಅಂಶವು ಹೀಗೆ ಸ್ಪಷ್ಟವಾಗಿ ಅಂಗೀಕೃತವಾಗಿದ್ದಾಗ್ಯೂ ಈ ಹಕ್ಕನ್ನು ಬಿಡೋಣದರಿಂದ ನಿಕ್ಷೇಪ ಸಿಕ್ಕಿದಾಗಲೆಲ್ಲಾ ಅದು ಸಿಕ್ಕಿದವರು ಕೂಡಲೇ ಸರ್ಕಾರಕ್ಕೆ ರಿಪೋರ್ಟು ಮಾಡಿಯಾರೆಂಬ ನಿರೀಕ್ಷಣೆಯಿಂದ ಈ ಹಕ್ಕನ್ನು ಬಿಟ್ಟುಬಿಡಲಾಯಿತು. ನಿಕ್ಷೇಪ ಸಿಕ್ಕಿದ ಸ್ಥಳಗಳು, ಸರ್ಕಾರಕ್ಕೆ ರಿಪೋರ್ಟು ಮಾಡಲ್ಪಟ್ಟ ಸಂದರ್ಭಗಳು ವಗೈರೆ ಲೆಕ್ಕಗಳು ದೊರೆಯುವುದಿಲ್ಲವಾದುದರಿಂದ ಮೇಲ್ಕಂಡ ನಿರೀಕ್ಷೆಯು ಎಷ್ಟರಮಟ್ಟಿಗೆ ನೆರವೇರಿತೆಂದು ಹೇಳಲಾಗುವುದಿಲ್ಲ. ಆದರೆ ಸರ್ಕಾರಿ ಹಕ್ಕುಗಳನ್ನು ಬಿಟ್ಟುಕೊಡುವುದರಿಂದ ಯಾವ ವಿಧದಲ್ಲಿಯೂ ಪ್ರಯೋಜನವಿಲ್ಲವೆಂಬುವುದು ಇತರ ಕಾರಣಗಳಿಂದ ಸ್ಪಷ್ಟಪಡುತ್ತದೆ. ಈ ಕಾರಣಗಳನ್ನು ಮುಂದೆ ವಿವರಿಸುವೆನು.

ನಿಕ್ಷೇಪದ ಬೆಲೆಯು ಒಂದು ಲಕ್ಷ ರೂಪಾಯಿಗಳಿಗಿಂತ ಜಾಸ್ತಿಯಾಗಿ ಇಲ್ಲದೇ ಇದ್ದರೆ ಸರ್ಕಾರದವರಿಗೆ ಅದರಲ್ಲಿ ಹಿಸ್ಸೇ ಕೊಡಬೇಕಾದುದಿಲ್ಲ. ನಿಕ್ಷೇಪ ಸಿಕ್ಕಿದುದನ್ನು ಸರ್ಕಾರದವರಿಗೆ ರಿಪೋರ್ಟು ಮಾಡಲು ಇಂಥಾ ಭಾರೀ ಮೊಬಲಗು ದೊರೆಯುವುದೆಂಬ ಆಸೆಯೇ ಸಾಲದೇಹೋದರೆ ಹೆಚ್ಚಿಗೆ ಮೊಬಲಗಿನಮೇಲೆ ಹಾಲಿ ಸರ್ಕಾರದವರು ಉಳಿಸಿಕೊಂಡಿರುವ ಹಕ್ಕನ್ನು ಬಿಟ್ಟುಬಿಡುವುದರಿಂದ ಅಂಥಾ ರಿಪೋರ್ಟುಗಳು ಜಾಸ್ತಿಯಾಗಿ ಬರುತ್ತವೆಂಬ ಭರವಸೆಯೂ ಇಲ್ಲ. ಈ ಪರ್ಯಂತ ಇಂಡಿಯಾ ದೇಶದಲ್ಲಿ ಒಂದು ಲಕ್ಷಕ್ಕಿಂತ ಜಾಸ್ತಿ ಮೊಬಲಗಿನ ನಿಕ್ಷೇಪವು ದೊರೆತಹಾಗೆ ರಿಪೋರ್ಟು ಬಂದಿಲ್ಲ ; ಆದರೂ ಇಂಡಿಯಾ ದೇಶದಲ್ಲಿ ಅಂಥಾ ನಿಕ್ಷೇಪಗಳು ಮುಂದೆ ಸಿಕ್ಕುವುದೇ ಇಲ್ಲವೆಂದು ದೃಢವಾಗಿ ಹೇಳುವುದಕ್ಕಾಗಲಾರದು. ಮಿ॥ ಬೇಲಿಯವರೇ—"ಇಂಡಿಯಾ ದೇಶದಲ್ಲಿ ಎಷ್ಟೋ ಕಡೆ ನಿಕ್ಷೇಪಗಳಿವೆ, ಈ ದೇಶದ ನಾನಾ ಭಾಗಗಳಲ್ಲಿ ನಿಕ್ಷೇಪಗಳು ಸಿಕ್ಕುತ್ತಲೇ ಇವೆ, ಈ ಪೈಕಿ ಬಹುಭಾಗ ಭಾರಿಯಾಗಿಯೇ ಇವೆ" ಎಂದು ಹೇಳಿರುತ್ತಾರೆ. ಸರ್ಕಾರದವರು ತಮ್ಮ ಹಕ್ಕುಗಳನ್ನು ಬಿಟ್ಟುಬಿಡುವುದಾದರೂ ಇತರರ ಹಕ್ಕುಗಳನ್ನು ಅವರು ಗಣನೆಗೆ ತೆಗೆದುಕೊಳ್ಳದೆ ಇರುವುದಕ್ಕಾಗುವುದಿಲ್ಲ : ಇಂಥಾ ಹಕ್ಕುದಾರರು ಬಂದು ನಿಕ್ಷೇಪ ಕಂಡವನಿಗೆ ಶುದ್ಧಾಂಗವಾಗಿ ಹಣವೇ ಇಲ್ಲದಂತೆ ಮಾಡಬಹುದೆಂಬ ಭಯದಿಂದ ಕೊಂಚಮಟ್ಟಿಗೂ, ನಿಕ್ಷೇಪವು ನ್ಯಾಯವಾಗಿ ತಮ್ಮ ವಶಕ್ಕೆ ಬಂದಾಗ ಕೂಡ ಆ ಸಂಗತಿಯನ್ನು ತಿಳಿಸದೆ ಗುಟ್ಟಾಗಿಟ್ಟುಕೊಳ್ಳುವ ನಮ್ಮ ಜನಗಳ ಸ್ವಭಾವದಿಂದ ಕೊಂಚಮಟ್ಟಿಗೂ ಸಹಾ ನಿಕ್ಷೇಪ ಸಿಕ್ಕಿದ ಸಂಗತಿಯು ತಿಳಿದುಬರುವುದೇ ಇಲ್ಲ. ಸರ್ಕಾರದವರು ತಮ್ಮ ಹಕ್ಕನ್ನು ಬಿಟ್ಟುಕೊಡುವುದರಿಂದ ನಿಕ್ಷೇಪ ಕಂಡವನು ಅದು ಸಿಕ್ಕಿದ ಸಂಗತಿಯನ್ನು ಸರ್ಕಾರದವರಿಗೆ ರಿಪೋರ್ಟು ಮಾಡಲು ಸಹಕಾರಿಯಾಗಬಹುದೇ ಹೊರತು, ಮತ್ತೇನೂ ಪ್ರಯೋಜನವಾಗಲಾರದು. ಹಾಗೆ ರಿಪೋರ್ಟು ಮಾಡದೇ ತಪ್ಪಿದ ಬಗ್ಗೆ ವಿಧಿಸಿರುವ ಶಿಕ್ಷೆಯಾದರೋ ಬಹು ಕಠಿಣವಾಗಿರುವುದರಿಂದ ಮೇಲ್ಕಂಡ ಲಾಭದ ಆಸೆಗಿಂತಲೂ ಈ ಶಿಕ್ಷೆಯ ಭಯದಿಂದಲೇ ನಿಕ್ಷೇಪ ಸಿಕ್ಕಿದ ಸಂಗತಿಯು ಸರ್ಕಾರದವರಿಗೆ ರಿಪೋರ್ಟಾಗಬೇಕಾಗಿದೆ. ಈ ಆಸೆ ಮತ್ತು ಭಯ ಇವುಗಳಿಂದಲೇ ಪ್ರಯೋಜನವಾಗದೇಹೋದಪಕ್ಷದಲ್ಲಿ ಸರ್ಕಾರದವರು ಒಂದು ಲಕ್ಷಕ್ಕಿಂತ ಹೆಚ್ಚಾದ ಮೊಬಲಗಿನಮೇಲೆ ತಮಗಿರುವ ಹಕ್ಕನ್ನು ಬಿಟ್ಟುಕೊಡುವುದರಿಂದ ಯಾವ ಪ್ರಯೋಜನವೂ ಆಗಲಾರದೆಂದು ತೋರುತ್ತದೆ.

ಆದಕಾರಣ ಸರ್ಕಾರದವರ ಹಕ್ಕನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಈ ಸಂಸ್ಥಾನದಲ್ಲಿ ಬಹುಕಾಲದಿಂದ ಜಾರಿಯಲ್ಲಿದ್ದ ಕಾನೂನನ್ನು ಬದಲಾಯಿಸುವುದರಿಂದ ಏನೂ ಲಾಭವಿಲ್ಲವೆಂದು ದೃಢವಾಗಿ ಹೇಳಬಹುದಾಗಿದೆ.

ಅಲ್ಲದೆ ಈ ಸಂಸ್ಥಾನದ ದೊಡ್ಡ ಆಫೀಸರುಗಳೆಲ್ಲರೂ ಎಂದರೆ ಮಿ|| ತಂಬುಶೆಟ್ಟಿರವರು, ಮಿ|| ಚೆಂಚಲರಾಯರವರು, ಸರ್ ಶೇಷಾದ್ರಿ ಅಯ್ಯರವರು, ಸರ್ ಪಿ. ಎನ್. ಕೃಷ್ಣಮೂರ್ತಿಯವರು ಮುಂತಾದವರೆಲ್ಲರೂ ಪ್ರಕೃತವಿಷಯದಲ್ಲಿ 1878ನೇ ಇಸವಿಯ 6ನೆ ಆಕ್ಟನ್ನು ಅನುಸರಿಸುವುದಕ್ಕಿಂತ ಹಾಲಿ ಜಾರಿಯಲ್ಲಿರುವ ನಿಬಂಧನೆಗಳ ಅಭಿಪ್ರಾಯವನ್ನು ಅನುಸರಿಸುವುದೇ ಮೇಲೆಂದು ತಾತ್ಪರ್ಯ ಪಟ್ಟಿರುತ್ತಾರೆ.

ಮೇಲ್ಕಂಡ ಮಾತುಗಳಲ್ಲಿ ಮಿ|| ನಾಗಪ್ಪನವರ ಆಕ್ಷೇಪಣೆಗಳಿಗೆ ಸಾಕಾದಷ್ಟು ಸಮಾಧಾನವಿದೆಯೆಂದು ತೋರುತ್ತದೆ. ಯೂರೋಪ್ ಖಂಡದಲ್ಲಿ ಕ್ರಿ. ಶ. 6ನೆ ಶತಮಾನದಿಂದ 14ನೆ ಶತಮಾನದ ವರೆಗೆ ಜಾರಿಯಲ್ಲಿದ್ದ ಕಾನೂನೇ ಬ್ರಿಟಿಷ್ ಇಂಡಿಯಾ ಸೀಮೆಯಲ್ಲಿ (1878ನೆ ಇಸವಿಯ 6ನೆ ಆಕ್ಟು) ಜಾರಿಯಲ್ಲಿದೆ ಎಂದು ಹೇಳಬಹುದೆಂಬದಾಗಿ ಮಿ|| ನಾಗಪ್ಪನವರು ಅಭಿಪ್ರಾಯಪಡುತ್ತಾರೆ. ಇದು ಅಷ್ಟು ಸರಿಯಾಗಿಲ್ಲವೆಂದು ಹೇಳಬೇಕಾಗಿದೆ. ಯೂರೋಪ್ ಖಂಡದ ಕಾನೂನು ಇಂಡಿಯಾ ದೇಶದ ಕಾನೂನಿಗೆ ವ್ಯತಿರಿಕ್ತವಾಗಿದೆಯೆಂದು ಘನಹೊಂದಿದ ಸರ್ ಎಡ್ವರ್ಡ್ ಬೇಲಿಯವರು ವಿವರಿಸಿರುತ್ತಾರೆ.

ಮೇಲ್ಕಂಡ ಉದ್ದೇಶವನ್ನು ಜಾರಿಯಲ್ಲಿ ತರುವ ಅಭಿಪ್ರಾಯದಿಂದ 12ನೆ ಪ್ರಕರಣದ 2ನೆ ಪ್ಯಾರಾವಿನಲ್ಲಿ ಸ್ವಲ್ಪ ಬದಲಾವಣೆ ಮಾಡಲಾಯಿತು; ಮತ್ತು ನಿಕ್ಷೇಪ ಕಂಡುಹಿಡಿದವನಿಗೆ ಅದರ ಪೈಕಿ ಮುಕ್ಕಾಲುಭಾಗವನ್ನು ಕೊಡಬೇಕೆಂದು 1878ನೆ ಇಸವಿಯ 6ನೆ ಆಕ್ಟಿನಲ್ಲಿ ಇದ್ದ ನಿಯಮವನ್ನು ಬದಲಾಯಿಸಿ ಆತನಿಗೆ ಅರ್ಧ ಹಿಸ್ಸೆ ಕೊಡಬೇಕೆಂದು ವಿಧಿಸಿ ಇದೆ. ಈ ಬದಲಾವಣೆಯನ್ನು, ನಮ್ಮ ಸಂಸ್ಥಾನದ ನಾನಾ ಆಫೀಸರುಗಳ ಅಭಿಪ್ರಾಯಾನುಸಾರ, ಷುರೂ ಮಸೂದೆಯಲ್ಲೇ ಮಾಡಿ ಈ ಸಭೆಯವರ ಮುಂದಿಡೋಣಾಯಿತು.

ಈ ರೆಗ್ಯುಲೇಷನ್ ಮೇರೆಗೆ ಅನುಸರಿಸಬೇಕಾದ ನಡವಳಿಕೆಗಳನ್ನು ಸ್ಪಷ್ಟಪಡಿಸುವುದಕ್ಕೋಸ್ಕರವೂ ಮತ್ತು ತಮ್ಮ ತಪ್ಪಿನಿಂದಲ್ಲದ ನ್ಯಾಯವಾದ ಕಾರಣಗಳ ಮೇಲೆ ಡೆಪ್ಯುಟಿ ಕಮಿಷನರವರ ಇಸ್ತಿಹಾರ್ನಾಮೆಯಲ್ಲಿ ನಮೂದಾದ ಕಾಲದೊಳಗಾಗಿ ಹಾಜರಿದ್ದು ಹಕ್ಕು ಸ್ಥಾಪಿಸದೆ ಹೋದವರ ಹಕ್ಕುಗಳನ್ನು ಕಾಪಾಡುವುದಕ್ಕೋಸ್ಕರವೂ ಸಹಾ 19ನೆ ಕಲಮಿನಲ್ಲಿ ನಿಯಮವನ್ನು ಏರ್ಪಡಿಸಿ ಇದೆ.

ಇನ್ನು ಒಂದು ಅಂಶವನ್ನು ಸಭೆಯವರು ಚೆನ್ನಾಗಿ ಪರ್ಯಾಲೋಚಿಸಬೇಕೆಂದು ಸೂಚಿಸಬೇಕಾಗಿದೆ. ಅದೇನೆಂದರೆ—ನಿಕ್ಷೇಪ ಕಂಡುಹಿಡಿದವನಿಗೆ ಎಂಥಾ ಸಂದರ್ಭದಲ್ಲಿಯೂ ಪರಿಹಾರದ್ರವ್ಯವನ್ನು ಕೊಡಬೇಕು, ಮತ್ತು ನಿಕ್ಷೇಪ ಕಂಡುಹಿಡಿದುದರಿಂದ ಆತನಿಗೆ ಇತರವಿಧವಾಗಿ ಪ್ರಯೋಜನವುಂಟಾಗದೇ ಹೋದಪಕ್ಷದಲ್ಲಿ ಅದನ್ನು ಕಂಡುಹಿಡಿಯುವ ಬಗ್ಗೆ ಆತನಿಗೆ ನಿಜವಾಗಿ ತಗಲಿದ ಖರ್ಚುಗಳ ದೇಖೀಲು ನ್ಯಾಯವಾದ ಪರಿಹಾರವನ್ನು ಕೊಡಿಸಬೇಕೆಂದು ನಿಯುಕ್ತಸಮಾಜದವರು ಶಿಫಾರಸ್ಸು ಮಾಡಿರುತ್ತಾರೆ. ಇದನ್ನು ಸಭೆಯವರು ಚೆನ್ನಾಗಿ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ಹಾಲಿ ಜಾರಿಯಲ್ಲಿರುವ ನಿಬಂಧನೆಗಳಲ್ಲಿ ಈ ಬಗ್ಗೆ ನಿಯಮವಿದೆ. ಅಲ್ಲದೆ ನಿಕ್ಷೇಪ ಕಂಡುಹಿಡಿದವನಿಗೆ ಪರಿಹಾರದ್ರವ್ಯವನ್ನು ಕೊಡುವದು ನ್ಯಾಯಸಮ್ಮತವಾಗಿಯೂ ಇದೆ; ಮತ್ತು ಅದನ್ನು ಕೊಡುವುದರಿಂದ ನಿಕ್ಷೇಪ ದೊರೆತ ವರ್ತಮಾನವನ್ನು ಹಜಂ ಮಾಡದೇ ಇರಲು ಪ್ರೋತ್ಸಾಹವೂ ಉಂಟು.

ಆಖೈರಿನಲ್ಲಿ ಹೇಳಬೇಕಾದುದೇನೆಂದರೆ: ನಾವು ಮುಖ್ಯವಾಗಿ ಬ್ರಿಟಿಷ್ ಇಂಡಿಯಾ ದೇಶದಲ್ಲಿ ಜಾರಿಯಲ್ಲಿರುವ ಕಾನೂನನ್ನೇ ಅನುಸರಿಸಿರುತ್ತೇವೆ. ನಾವು ಮಾಡಿರುವ ಬದಲಾವಣೆಗಳಿಂದ ನಿಕ್ಷೇಪ ಕಂಡುಹಿಡಿದವನ ಹಕ್ಕು ಬಾಧ್ಯತೆಗಳಿಗೆ ವಿಶೇಷ ಬಾಧಕವುಂಟಾಗುವುದಿಲ್ಲ; ಮತ್ತು ಸದರೀ ಬದಲಾವಣೆಗಳ ನಿಮಿತ್ತ ನಿಕ್ಷೇಪ ದೊರೆತ ವರ್ತಮಾನವನ್ನು ತಿಳಿಯಪಡಿಸಲು ಆತನಿಗೆ ಉತ್ಸಾಹವೂ ಕಡಮೆಯಾಗುವುದಿಲ್ಲ. ಆದ್ದರಿಂದ ಈ ಬಿಲ್ಲನ್ನೂ ರಿಪೋರ್ಟನ್ನೂ ಕೂಡಲೇ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಈ ಸಭಾಕಾರ್ಯನಿರ್ವಾಹದ ಬಗ್ಗೆ ಏರ್ಪಟ್ಟ ನಿಬಂಧನೆಗಳ ಪೈಕಿ 46ನೆ ನಿಬಂಧನೆಯ ಮೇರೆಗೆ ವಿಜ್ಞಾಪಿಸುತ್ತೇನೆ.

ರಾಜಮಂತ್ರಪ್ರವೀಣ ಮಿ|| ಸಿ. ಶ್ರೀನಿವಾಸಯ್ಯಂಗಾರ್ರವರು ಮೇಲ್ಕಂಡ ವಿಜ್ಞಾಪನೆಯನ್ನು ಅನುಮೋದಿಸಿದರು.

ಮಿ|| ಎಚ್. ವಿ. ನಂಜುಂಡಯ್ಯನವರು ಈ ಅಭಿಪ್ರಾಯವನ್ನು ಅನುಮೋದಿಸಿ ಹೇಳಿದ್ದೇನೆಂದರೆ:—ಈ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಮಸೂದೆಯ 11 ಮತ್ತು 12ನೆ ಕಲಮುಗಳಲ್ಲಿ "ಅಥವಾ ಇತರ ಸಬಬಿನ ಮೇಲೆ" ಎಂಬ ಮಾತುಗಳನ್ನು ಸೇರಿಸಿರುವುದರ ವಿಷಯವಾಗಿ ವಿಶೇಷ ವಿವಾದವು ಹುಟ್ಟಬಹುದೆಂತ ನನಗೆ ತೋರುತ್ತದೆ. ಈ ಸಂದರ್ಭದಲ್ಲಿ ಲಿಮಿಟೇಷನ್ ಪ್ರಶಂಸೆಯು ಬರುವುದಿಲ್ಲ. ಯಾಕೆಂದರೆ, ನಿಕ್ಷೇಪವು ಅದನ್ನು ಹೂತಿಟ್ಟವನ ಯಾ ಆತನ ವಾರಸುದಾರನ ಸ್ವಾಧೀನದಲ್ಲಾಗಲಿ ಅಥವಾ ನ್ಯಾಯವಾದ ಹಕ್ಕುದಾರನಿಗೆ ವಿರೋಧವಾಗಿ ಅದು ಯಾವ ಜಮೀನಿನಲ್ಲಿ ಸಿಕ್ಕಿತೋ ಆ ಜಮೀನು ಮಾಲೀಕನ ಸ್ವಾಧೀನದಲ್ಲಾಗಲಿ ಇತ್ತೆಂದು ಹೇಳಲಾಗುವುದಿಲ್ಲ. ಆದರೆ ಬ್ರಿಟಿಷ್ ಇಂಡಿಯಾ ಆಕ್ಟನ್ನು ಮಂಜೂರ್ಮಾಡಿದಾಗ್ಯೂ 100 ವರ್ಷಗಳೊಳಗಾಗಿ ಹಕ್ಕು ಸ್ಥಾಪಿಸಿಕೊಳ್ಳುವ ಬಗ್ಗೆ ದಾವಾ ತರಬಹುದೆಂದು ಒಂದು ಲಿಮಿಟೇಷನ್ ಅವಧಿಯನ್ನು ಗೊತ್ತುಮಾಡಿದ್ದು ಕೆಲಸದ ಅನುಕೂಲತೆಗೋಸ್ಕರವೆಂದು ನನಗೆ ತೋರುತ್ತದೆ. 100 ವರ್ಷಗಳ ಹಿಂದೆ ಹೂತಿಟ್ಟ ನಿಕ್ಷೇಪವು ತಮ್ಮ ಪೂರ್ವಿಕರಿಗೆ ಸೇರಿದ್ದೆಂದು ರುಜುವಾತು ಮಾಡುವುದೇನೋ ಯಾರಿಗೂ ಸುಲಭವಲ್ಲ. 11, 12ನೆ ಕಲಮುಗಳಲ್ಲಿ "ಅಥವಾ ಇತರ ಸಬಬಿನಮೇಲೆ" ಎಂಬ ಮಾತುಗಳನ್ನು ಉಪಯೋಗಿಸಿರುವುದರಿಂದ ಈ ಲಿಮಿಟೇಷನ್ ಅವಧಿಯನ್ನು ತೆಗೆದುಹಾಕಿದಂತೆ ಆಗುವುದಲ್ಲದೆ, ಬಹುಕಾಲದ ಹಿಂದೆ ಹೂತಿಟ್ಟದ್ದ ಸ್ವತ್ತು ತಮ್ಮ ಪೂರ್ವಿಕರಿಗೆ ಸೇರಿರಬಹುದೆಂದು ಜನಗಳು ರುಜುವಾತು ಮಾಡುವುದಕ್ಕೆ ಅವಕಾಶ ಉಂಟಾಗುತ್ತದೆ. ಆದರೆ ನಾನು ಈ ಮೊದಲೇ ಹೇಳಿದ ಪ್ರಕಾರ ಈ ವಿಷಯದಲ್ಲಿ ಸರಿಯಾದ ರುಜುವಾತ್ ಕೊಡುವುದು ಬಹಳ ಕಷ್ಟ. ಆದಕಾರಣ "ಅಥವಾ ಇತರ ಸಬಬಿನಮೇಲೆ" ಎಂಬ ಮಾತುಗಳನ್ನು ಇಟ್ಟದ್ದರಿಂದ ಬಾಧಕವಿಲ್ಲವೆಂದು ಈ ಮಸೂದೆಯ ಪ್ರಸ್ತಾಪಕರು ಹೇಳುವುದನ್ನು ನಾನು ಅನುಮೋದಿಸುತ್ತೇನೆ.

ಇಂಥಾ ನಿಕ್ಷೇಪದ ವಿಚಾರದಲ್ಲಿ ಹಿಂದೂ ಲಾವಿನಲ್ಲಿ ಏನು ಹೇಳುತ್ತದೆ ಎಂಬುವುದನ್ನು ತಿಳಿಯಲು ಸಭೆಯವರಿಗೆ ಪ್ರಾಯಶಃ ಕುತೂಹಲವಿರಬಹುದು. ಹಿಂದೂ ಲಾವಿನ ಪ್ರಕಾರ ನಿಕ್ಷೇಪದ ವಿಚಾರದಲ್ಲಿ ಲಿಮಿಟೇಷನ್ ನಿರ್ಬಂಧವೇ ಇಲ್ಲ; ನಿಕ್ಷೇಪವನ್ನು ಹೂತಿಟ್ಟು ಎಷ್ಟು ಶತಮಾನಗಳಾಗಿದ್ದರೂ ಹಕ್ಕನ್ನು ಸ್ಥಾಪಿಸಿಕೊಳ್ಳಬಹುದು. ನಿಕ್ಷೇಪವನ್ನು ಪಡೆಯಲು ತಾನು ಹಕ್ಕುದಾರನೆಂದು ಯಾವ ಮನುಷ್ಯನಾದರೂ ಸ್ಥಿರಪಡಿಸಿದರೆ ರಾಜನೂ ಅದರಲ್ಲಿ ಷಷ್ಠಾಂಶವನ್ನಾಗಲಿ ದ್ವಾದಶಾಂಶವನ್ನಾಗಲಿ ತೆಗದುಕೊಂಡು ಉಳಿದ ಭಾಗವನ್ನು ಆತನಿಗೆ ಕೊಡಬೇಕೆಂದು ಹಿಂದೂ ಲಾವಿನಲ್ಲಿ ವಿಧಿಸಿ ಇದೆ. ಯಾರಿಗೂ ತಿಳಿಯದಂತೆ ಭೂಮಿಯಲ್ಲಿ ಹೂಳಿಟ್ಟ ನಿಕ್ಷೇಪವು ಯಾವ ಮನುಷ್ಯನಿಗೆ ಸಿಕ್ಕುತ್ತದೆಯೋ ಅವನ ಗುಣ, ಜಾತಿ ಮುಂತಾದವುಗಳಿಗೆ ಅನುಸಾರವಾಗಿ ಹೆಚ್ಚು ಅಥವಾ ಕಮ್ಮಿ ಭಾಗವನ್ನು ರಾಜನು ತೆಗದುಕೊಳ್ಳುತ್ತಿದ್ದನೆಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಮಾಲೀಕರ ಹಕ್ಕಿನ ವಿಚಾರದಲ್ಲಿ ವಾಯಿದೆ ಯಾವುದನ್ನೂ ಗೊತ್ತುಮಾಡಿ ಇಲ್ಲ. ಯಾವ ಸ್ವತ್ತಿಗೆ ಮಾಲೀಕನೇ ಗೊತ್ತಿಲ್ಲವೋ ಅಂಥಾ ಸ್ವತ್ತನ್ನು ಮಾತ್ರವೇ ನಿಕ್ಷೇಪವೆಂದು ಭಾವಿಸಬೇಕೆಂತ ವಿಧಿಸಿ ಇದೆ. ನಿಕ್ಷೇಪವು ಯಾವನಿಗಾದರೂ ಸಿಕ್ಕಿದರೆ ಆ ಸಂಗತಿಯನ್ನು ಕುರಿತು ಅವನು ರಾಜನಿಗೆ ತಿಳಿಸಬೇಕೆಂತಲೂ ಹಾಗೆ ತಿಳಿಸದೆ ತಪ್ಪಿದರೆ ಅವನು ಕಳ್ಳನಂತೆ ಶಿಕ್ಷೆಗೆ ಗುರಿಯಾಗಬೇಕೆಂತಲೂ ಸಹ ನಿಯಮವನ್ನು ಮಾಡಿ ಇದೆ. ಹಿಂದೂ ಲಾ ಮೇರೆಗೆ ಜಮೀನಿನ ಮಾಲೀಕನಿಗೆ ನಿಕ್ಷೇಪದಲ್ಲಿ ಯಾವ ಭಾಗಕ್ಕೂ ಹಕ್ಕಿಲ್ಲ. ರಾಜನಿಗೆ ಅರ್ಧಭಾಗಕ್ಕೆ ಹಕ್ಕುಂಟು; ಪರಂತು ನಿಕ್ಷೇಪವು ಬ್ರಾಹ್ಮಣನಿಗೆ ಸಿಕ್ಕಿದ ಪಕ್ಷದಲ್ಲಿ ರಾಜನಿಗೆ ಅದರಲ್ಲಿ ಯಾವ ಭಾಗಕ್ಕೂ ಹಕ್ಕಿಲ್ಲ. ಇವುಗಳೇ ಹಿಂದೂ ಲಾವಿನಲ್ಲಿರುವ ಮುಖ್ಯವಾದ ನಿಯಮಗಳು. ಇವುಗಳನ್ನು ನೋಡಿದರೆ ಹಿಂದೂ ಲಾವಿಗೂ ಈಗಿನ ಕಾನೂನಿಗೂ ಏನೂ ವ್ಯತ್ಯಾಸವಿರುವಂತೆ ಕಾಣುಬರುವುದಿಲ್ಲ; ಮತ್ತು ಯೂರೋಪು ಖಂಡದಲ್ಲಿ ಈ ವಿಚಾರದಲ್ಲಿ ಈಗ ಇರುವ ಕಾನೂನಿಗೂ, ಹಿಂದೆ ಕ್ರಿಸ್ತಶಕ 6ನೆ ಶತಮಾನದಿಂದ 14ನೆ ಶತಮಾನದ ವರೆಗೆ ಜಾರಿಯಲ್ಲಿದ್ದ ಕಾನೂನಿಗೂ ಏನೂ ವ್ಯತ್ಯಾಸವಿರುವಂತೆಯೂ ತೋರುವುದಿಲ್ಲ.

ಸಿಕ್ಕಿದ ನಿಕ್ಷೇಪವು ಲಕ್ಷಕ್ಕಿಂತ ಜಾಸ್ತಿಯಾಗಿದ್ದರೆ ಆ ಜಾಸ್ತಿ ಭಾಗಕ್ಕೆ ಸರ್ಕಾರದವರು ತಮ್ಮ ಹಕ್ಕನ್ನು ಬಿಟ್ಟುಬಿಡಬೇಕೆಂದು ಮಿ॥ ಬಿ. ನಾಗಪ್ಪನವರು ಸೂಚಿಸುವ ತಿದ್ದುಪಾಟನ್ನು ಕುರಿತು ಆಲೋಚಿಸುವುದು ಮತ್ತೊಂದು ಅಂಶವಾಗಿದೆ. ರೆವಿನ್ಯೂ ಕಮಿಷನರವರು ಹೇಳುವಂತೆ ಒಂದು ಲಕ್ಷ ರೂಪಾಯಿಗೆ ಮೇಲ್ಪಟ್ಟ ಬೆಲೆಯುಳ್ಳ ನಿಕ್ಷೇಪಗಳು ಸಿಕ್ಕುವುದೇ ಬಹಳ ಅಪರೂಪ. ವಸ್ತುತಃ ಹಾಗೆ ಸಿಕ್ಕಿದ ಸಂದರ್ಭ ಯಾವುದೂ ನಮ್ಮ ತಿಳಿವಳಿಕೆಗೆ ಬಂದಿಲ್ಲ. ಈ ಪ್ರಕರಣದಲ್ಲಿ ಕೇವಲ ಊಹಾಕಲ್ಪಿತವಾದ ಸಂದರ್ಭಗಳಿಗೆ ನಿಯಮವನ್ನು ಏರ್ಪಡಿಸಿರುವ ಪ್ರಯುಕ್ತ ಈ ರೆಗ್ಯುಲೇಷನಿನಲ್ಲಿ ಈಗ ಗೊತ್ತುಮಾಡಿರುವ ಒಂದು ಲಕ್ಷ ರೂಪಾಯಿನ ಅವಧಿಯನ್ನು ಇಟ್ಟರೂ ಬಾಧಕವಿಲ್ಲ.

ಈ ಕಾರಣಗಳಿಂದ, ರೆವಿನ್ಯೂ ಕಮಿಷನರವರು ಪ್ರಸ್ತಾಪಿಸಿರುವ ಸಂಗತಿಯನ್ನು ನಾನು ಅನುಮೋದಿಸುತ್ತೇನೆ.

ಮಿ॥ ತಿರುಮಲಾಚಾರ್ರವರು.—ಮಿ॥ ರಂಗಸ್ವಾಮ್ಯೈಯ್ಯಂಗಾರ್ರವರು ಹೇಳುವುದನ್ನು ನಾನೂ ಸಹ ಅನುಮೋದಿಸುತ್ತೇನೆ. ಈಗ ಪರ್ಯಾಲೋಚನೆಯಲ್ಲಿರುವ ಮಸೂದೆಯ 16ನೆ ಕಲಮನ್ನು ಕುರಿತು ಮಿ॥ ನಾಗಪ್ಪನವರು ತಿಳಿಸಿದ ಅಂಶಗಳ ವಿಷಯದಲ್ಲಿ ನಾನು ಹೇಳುವುದೇನೆಂದರೆ—ಈ ವಿಷಯವಾಗಿ ಪೂರ್ವದ ರೋಮನ್ ಚಕ್ರವರ್ತಿಗಳ ಕಾಲದಲ್ಲಿ ಕಾನೂನು ಏನೇ ಇರಲಿ, ಯೂರೋಪ್ ಖಂಡದಲ್ಲಿ ಕ್ರಿಸ್ತಶಕ 6 ಮತ್ತು 14ನೆ ಶತಮಾನಗಳ ಮಧ್ಯ ಕಾಲದಲ್ಲಿ ಯಾವ ವಿಧವಾದ ಕಾನೂನೇ ಇರಲಿ, ನಿಕ್ಷೇಪವು ಸಿಕ್ಕಿದರೆ ಅದರಲ್ಲಿ ಅರ್ಧಭಾಗವನ್ನು ರಾಜನು ತೆಗೆದುಕೊಳ್ಳಬಹುದೆಂದು ಪುರಾತನವಾದ ನಮ್ಮ ಹಿಂದೂ ಲಾವಿನಲ್ಲೇನೋ ಉಕ್ತವಾಗಿರುತ್ತದೆ. ಈಗತಾನೇ ಮಿ॥ ನಂಜುಂಡಯ್ಯನವರು ಸೂಚಿಸಿದಂತೆ ಮನುಧರ್ಮಶಾಸ್ತ್ರದಲ್ಲಿ ಇಂಥಾ ನಿಕ್ಷೇಪದ ಪೈಕಿ ರಾಜನಿಗೆ ಅರ್ಧ ಭಾಗವು ಸಲ್ಲತಕ್ಕದ್ದೆಂದು ಸ್ಪಷ್ಟವಾಗಿ ನಿಯಮವು ಏರ್ಪಟ್ಟಿರುತ್ತದೆ. ಮನುಧರ್ಮಶಾಸ್ತ್ರದ ಸದರಿ ನಿಯಮಗಳನ್ನು ನಾನು ಹೇಳುವುದಕ್ಕಿಂತ ಮೊದಲೇ ಅವರೇ ಭಾಷಾಂತರಮಾಡಿ ಹೇಳಿರುತ್ತಾರೆ. ಈ ಧರ್ಮಶಾಸ್ತ್ರದಲ್ಲಿ ಮತ್ತೊಂದು ಶ್ಲೋಕವಿರುತ್ತದೆ. ಅದನ್ನು ಸಭೆಯವರ ಮುಂದೆ ಅರಿಕೆ ಮಾಡುತ್ತೇನೆ:—

ನಿಧೀನಾಂತು ಪುರಾಣಾನಾಂ ಧಾತೂನಾಮೇವಚಕ್ಷಿತೌ।
ಅರ್ಧಭಾಗ್ರಕ್ಷಣಾದ್ರಾಜಾ ಭೂಮೇರಧಿಪತಿರ್ಹಿಸಃ॥

ಅರ್ಥ:—ರಾಜನು ಸಂರಕ್ಷಣೆ ಮಾಡುವುದರಿಂದಲೂ ಭೂಮಿಗೆ ಅಧಿಪತಿಯಾಗಿರುವುದರಿಂದಲೂ ಸಹ ಭೂಮಿಯಲ್ಲಿ ಸಿಕ್ಕಿದ ನಿಧಿ, ನಿಕ್ಷೇಪ, ಧಾತು ಮೊದಲಾದುವುಗಳಲ್ಲಿ ಅರ್ಧ ಭಾಗವು ಅವನಿಗೆ ಸೇರುತ್ತದೆ. (ಮನುಧರ್ಮಶಾಸ್ತ್ರ, 8ನೆ ಅಧ್ಯಾಯ, 39ನೆ ಶ್ಲೋಕ).

ಮಿ॥ ನಂಜುಂಡಯ್ಯನವರು ಇದೇ ಅಧ್ಯಾಯದಲ್ಲಿ ಅದರ ಹಿಂದಿನ ಶ್ಲೋಕದ ಅಭಿಪ್ರಾಯವನ್ನು ಹೇಳಿದರು.

ಮಮಾಯಮಿತಿಯೋಬ್ರೂಯಾನ್ನಿಧಿಂ ಸತ್ಯೇನಮಾನವಃ।
ತಸ್ಯಾದದೀತ ಷಡ್ಭಾಗಂ ರಾಜಾದ್ವಾದಶಮೇವವಾ॥

ಅರ್ಥ:—ಸಿಕ್ಕಿದ ನಿಕ್ಷೇಪವು ತನ್ನದೆಂದು ಯಾವ ಮನುಷ್ಯನಾದರೂ ಸತ್ಯವಾಗಿ ಹೇಳಿದರೆ ಅಂಥಾ ನಿಕ್ಷೇಪದಲ್ಲಿ ಆರನೆ ಒಂದು ಅಂಶವನ್ನಾಗಲಿ ಹನ್ನೆರಡನೆ ಒಂದು ಅಂಶವನ್ನಾಗಲಿ ರಾಜನು ತೆಗೆದುಕೊಳ್ಳಬಹುದು. (ಮನುಧರ್ಮಶಾಸ್ತ್ರ, 8ನೆ ಅಧ್ಯಾಯ, 35ನೆ ಶ್ಲೋಕ)

ಮಿ॥ ರಂಗಸ್ವಾಮ್ಯೈಯ್ಯಂಗಾರ್ರವರು ವಿವರಿಸಿದ ಮೇರೆಗೆ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚು ಬೆಲೆಯುಳ್ಳ ನಿಕ್ಷೇಪವು ಸಿಕ್ಕುವುದು ಬಹಳ ಅಪರೂಪ. ಅಂಥಾ ಸಂದರ್ಭವು ಹತ್ತುಸಾವಿರಕ್ಕೆ ಒಂದೂ ಇರಲಾರದು. ಅಂಥಾ ಸಂದರ್ಭದಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗಿ ನಿಕ್ಷೇಪವೆಲ್ಲಾ ಕಂಡು ಹಿಡಿದ ಮನುಷ್ಯನಿಗೇ ಸೇರಿಹೋಗುತ್ತದೆ. ರಾಜನಿಗೆ ಸ್ವಲ್ಪವೂ ಸೇರಲಾರದೆಂತಲೇ ಹೇಳಬಹುದು. ಆದಕ್ಕಾರಣ 16ನೆ ಪ್ರಕರಣದಲ್ಲಿರುವ ನಿಯಮವು ಒಳ್ಳೆಯದು. ಅದು ಹಾಗೆಯೇ ಇರಬೇಕೆಂದು ನಾನು ಹೇಳುತ್ತೇನೆ. ಯಾಕೆಂದರೆ—ರಾಜನು ಏನನ್ನೂ ತೆಗೆದುಕೊಳ್ಳಕೂಡದೆಂದು ಮನುವೂ ಕೂಡ ಹೇಳಿರುವುದಿಲ್ಲ; ಇಂಥಾ ಎಲ್ಲಾ ಸಂದರ್ಭಗಳಲ್ಲಿಯೂ ಅರ್ಧಭಾಗವನ್ನು ರಾಜನು ತೆಗೆದುಕೊಳ್ಳಬೇಕೆಂದು ಕಂಠೋಕ್ತವಾಗಿ ವಿಧಿಸಿರುತ್ತಾನೆ. ಈ ಕಾನೂನು ಬಹಳ ಪುರಾ-

ತನವಾದದ್ದು. ಇದರ ತರುವಾಯ 6 ಮತ್ತು 14ನೆ ಶತಮಾನಗಳ ಮಧ್ಯಕಾಲದ ಕಾನೂನು ಜಾರಿಯಲ್ಲಿ ಬಂದಿರುತ್ತದೆ. ನಿಕ್ಷೇಪವು ಸಿಕ್ಕಿದ ಮನುಷ್ಯನಿಗೆ ಒಂದು ಲಕ್ಷ ರೂಪಾಯಿನವರೆಗೆ ಕೊಡಬಹುದೆಂತಲೂ ಅದಕ್ಕೆ ಹೆಚ್ಚಾದದ್ದನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳತಕ್ಕದ್ದೆಂತಲೂ ಈಗ ಮೈಸೂರು ಸಂಸ್ಥಾನದಲ್ಲಿ ನಿಯಮವನ್ನು ಏರ್ಪಡಿಸಿರುವುದು ಬಹಳ ಕ್ಷೇಮಕರವಾಗಿರುತ್ತದೆ.

ಸೆಲೆಕ್ಟ್ ಕಮಿಟಿಯವರ ರಿಪೋರ್ಟನ್ನು ಪರ್ಯಾಲೋಚಿಸಬೇಕೆಂಬ ಸಲಹೆಯನ್ನೂ ಅವರು ತಿದ್ದುಪಾಟುಮಾಡಿದ ಮಸೂದೆಯನ್ನೂ ಸಭೆಯವರು ಆಲೋಚಿಸತಕ್ಕದ್ದೆಂದು ಮಾಡಿದ ಸಲಹೆಯು ಮಂಜೂರಾಯಿತು.

ತರುವಾಯ ರಾಜಕಾರ್ಯಪ್ರವೀಣ ಮಿ॥ ರಂಗಸ್ವಾಮಯ್ಯಂಗಾರ್ರವರು ಮೇಲ್ಕಂಡ ಬಿಲ್ಲಿನ 8ನೆ ಕಲಮಿಗೆ ಇವರಡಿ ಕಂಡ ನಿಯಮವನ್ನು ಸೇರಿಸಬೇಕೆಂದು ವಿಜ್ಞಾಪಿಸಿದರು:—

"ಪರಂತು, ಹಕ್ಕುದಾರನು ದಾವೆಯಲ್ಲಿ ತನ್ನ ಪರವಾಗಿ ತೀರ್ಮಾನವನ್ನು ಹೊಂದುವ ಪಕ್ಷದಲ್ಲಿ, ಸದರಿ ನಿಕ್ಷೇಪದಲ್ಲಿ ನಾಲ್ಕರಲ್ಲಿ ಒಂದುಭಾಗದ ಬೆಲೆಗೆ ಮೀರದಷ್ಟು ಭಾಗವನ್ನು ಕಂಡುಹಿಡಿದ ಮನುಷ್ಯನಿಗೆ ಕೊಡಿಸುವುದಕ್ಕೆ ಸಿವಿಲ್ ಕೋರ್ಟನವರಿಗೆ ಯುಕ್ತಿಯಾರಿ ಇರತಕ್ಕದ್ದು."

ಈ ಪ್ರಕಾರವಾಗಿ ವಿಜ್ಞಾಪಿಸಿ ಅವರು ಹೇಳಿದ್ದೇನೆಂದರೆ—

ಈ ಸಭೆಯ ಮೆಂಬರುಗಳಿಗೆಲ್ಲಾ ಚೆನ್ನಾಗಿ ತಿಳಿದಿರುವ ಪ್ರಕಾರ, ನಿಕ್ಷೇಪಕ್ಕೆ ಮಾಲೀಕನು ಯಾರೂ ಇಲ್ಲವೆಂದು ಸ್ಥಿರಪಟ್ಟಾಗ ಈಗಿನ ಮಸೂದೆಯ ಪ್ರಕಾರ, ಸದರಿ ನಿಕ್ಷೇಪದಲ್ಲಿ ಅರ್ಧಭಾಗವು ಕಂಡುಹಿಡಿದ ಮನುಷ್ಯನಿಗೆ ಸೇರುತ್ತದೆ. ಹೀಗೆ ಅರ್ಧಭಾಗವು ಅವನಿಗೆ ಬರುವುದರಿಂದ, ಸಿಕ್ಕಿದ ನಿಕ್ಷೇಪವನ್ನು ಕುರಿತು ಸರ್ಕಾರಕ್ಕೆ ತಿಳಿಸುವಂತೆ ಅವನಿಗೆ ತಕ್ಕಷ್ಟು ಪ್ರೋತ್ಸಾಹ ಉಂಟಾಗುವುದಲ್ಲದೆ, ಅವನ ಶ್ರಮೆಗೂ ಸಹ ತಕ್ಕ ಪ್ರತಿಫಲವಾಗುತ್ತದೆ. ಆದರೆ, 8ನೆ ಕಲಂ ಮೇರೆಗೆ ನಿಕ್ಷೇಪದ ಹಕ್ಕುದಾರನು ಸಿವಿಲ್ ಕೋರ್ಟಿಗೆ ಹೋಗಬೇಕೆಂದು ಹುಕುಂ ಹುಟ್ಟಿ, ಅವನು ಸದರಿ ಸ್ವತ್ತಿಗೆ ತಾನೇ ಮಾಲೀಕನೆಂದಾಗಲಿ ಅಥವಾ ಪುರೂ ಮಾಲೀಕನ ವಾರಸುದಾರನೆಂದಾಗಲಿ ಸದರಿ ಕೋರ್ಟನಲ್ಲಿ ಸ್ಥಿರಪಡಿಸಿಕೊಂಡರೆ, ಆಗ್ಯೆ ಸದರಿ ನಿಕ್ಷೇಪದ ಸ್ವತ್ತೆಲ್ಲಾ ಆ ಹಕ್ಕುದಾರನಿಗೆ ಸೇರತಕ್ಕದ್ದೆಂದು ಸಿವಿಲ್ ಕೋರ್ಟನವರು ಡಿಕ್ರಿ ಕೊಡಬೇಕೇ ಹೊರತು ಬೇರೆ ಮಾರ್ಗವಿಲ್ಲ. ಆದ್ದರಿಂದ ನಿಕ್ಷೇಪವನ್ನು ಕಂಡುಹಿಡಿದ ಮನುಷ್ಯನಿಗೆ ಏನೂ ಇಲ್ಲದೆ ಅವನ ಕಷ್ಟಕ್ಕೆ ಪ್ರತಿಫಲವೇ ಇಲ್ಲದೇ ಹೋಗುತ್ತದೆ. ನಿಕ್ಷೇಪವು ಸಿಕ್ಕಿದರೆ, ಅದನ್ನು ಸರ್ಕಾರಕ್ಕೆ ತಿಳಿಸುವಂತೆ ಜನಗಳಿಗೆ ಪ್ರೋತ್ಸಹ ಕೊಡಬೇಕೆಂಬುವುದೇ ಈ ಹೊಸ ಕಾನೂನಿನ ಉದ್ದೇಶವಾಗಿರುತ್ತದೆ. ನಿಕ್ಷೇಪವನ್ನು ಕಂಡುಹಿಡಿದ ಮನುಷ್ಯನಿಗೆ ಪ್ರತಿಫಲವೂ ದೊರೆಯದೆ ಸಿಕ್ಕಿದ ಸಂಗತಿಯನ್ನು ಬಹಿರಂಗಪಡಿಸಿದ ಪಕ್ಷದಲ್ಲಿ ಹಕ್ಕುದಾರನು ಯಾರಾದರೂ ಬಂದು ಎಲ್ಲವನ್ನೂ ಪಡೆದುಕೊಳ್ಳಲು ಅವಕಾಶವೂ ಇದ್ದರೆ ನಿಕ್ಷೇಪ ಕಂಡುಹಿಡಿದವನು ಅದನ್ನು ಹೊರಪಡಿಸದೆ ಮರೆಮಾಚುವುದಕ್ಕೆ ಪ್ರಯತ್ನಪಡುವನೇ ಹೊರತು ತನಗೆ ಅದು ಸಿಕ್ಕಿದ ಸಂಗತಿಯನ್ನು ಸರ್ಕಾರಕ್ಕೆ ತಿಳಿಸುವುದಿಲ್ಲ. ಆದ ಕಾರಣ ಅಂಥಾ ನಿಕ್ಷೇಪದಲ್ಲಿ ಅವನಿಗೂ ಒಂದು ಭಾಗವನ್ನು ಕೊಟ್ಟರೆ ತಾನು ಕಂಡುಹಿಡಿದದ್ದನ್ನು ಬಹಿರಂಗಪಡಿಸಲು ಅವನಿಗೆ ಪ್ರೋತ್ಸಾಹ ಉಂಟಾಗುತ್ತದೆ.

ಈ ಉದ್ದೇಶದಿಂದಲೇ ಸೆಲೆಕ್ಟ್ ಕಮಿಟಿಯವರು ಸದರಿ ಮಸೂದೆಗೆ ಕೆಲವು ವಿಷಯಗಳನ್ನು ಹೆಚ್ಚಾಗಿ ಸೇರಿಸಬೇಕೆಂದು ಶಿಫಾರ್ಸು ಮಾಡಿದರು. ಆದರೆ, ಆಗಲೇ ಸದರಿ ವಿಷಯಗಳನ್ನು ಹೆಚ್ಚಾಗಿ ಸೇರಿಸುವುದು ನ್ಯಾಯವಲ್ಲವೆಂದು ತೋರಿ ಅವರ ಉದ್ದೇಶವನ್ನು ಕಾರ್ಯತಃ ಜಾರಿಗೆ ತರುವುದಕ್ಕೆ ಮೊದಲು ಅದರ ವಿಷಯದಲ್ಲಿ ಸಭೆಯವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಅಪೇಕ್ಷಿಸಿದರು.

ಈಗ ಸಭೆಯವರು ಅಪ್ಪಣೆಕೊಟ್ಟರೆ ಈ ಮಸೂದೆಯ 8ನೆ ಕಲಮಿಗೆ ಈ ಕಲಮನ್ನು ಹೆಚ್ಚಾಗಿ ಸೇರಿಸಬೇಕೆಂದು ಸಲಹೆ ಮಾಡುತ್ತೇನೆ.

ಮಿ॥ ಸಿ. ಶ್ರೀನಿವಾಸೈಯ್ಯಂಗಾರ್ರವರು.—ನಿಕ್ಷೇಪಕ್ಕೆ ಜಮೀನ್ ಮಾಲೀಕನೂ ಹಕ್ಕು ಸ್ಥಾಪಿಸದೆ ಹಕ್ಕುದಾರನಾದ ಇತರ ಯಾವ ಮನುಷ್ಯನೂ ಇಲ್ಲದೆ ಹೋದರೆ, 11ನೆ ಕಲಮಿನ ಮೇರೆಗೆ ಆ ನಿಕ್ಷೇಪವೆಲ್ಲಾ ಅದನ್ನು ಕಂಡು ಹಿಡಿದ ಮನುಷ್ಯನಿಗೇ ಸೇರಿ ಹೋಗುತ್ತದೆ. 12ನೆ ಕಲಮಿನ ಮೇರೆಗೆ, ನಿಕ್ಷೇಪ ಕಂಡುಹಿಡಿದ ಮನುಷ್ಯನು ಜಮೀನ್ ಮಾಲೀಕನಿಗಾಗಲಿ, ನಿಕ್ಷೇಪಕ್ಕೆ ಇತರವಿಧವಾಗಿ ತನ್ನ ಹಕ್ಕನ್ನು ಸ್ಥಾಪಿಸಿಕೊಂಡ ಮನುಷ್ಯನಿಗಾಗಲಿ ಹಿಸ್ಸೆ ಕೊಡಬೇಕಾಗಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ, ಎಂದರೆ, 8ನೆ ಕಲಮಿನಲ್ಲಿ ನಮೂದಿಸಲ್ಪಟ್ಟ ಸಂದರ್ಭಗಳಲ್ಲಿ ಮಾತ್ರ ನಿಕ್ಷೇಪ ಕಂಡು ಹಿಡಿದವನಿಗೆ ಅದರಲ್ಲಿ ಯಾವ ಭಾಗವೂ ಸಲ್ಲುವುದಿಲ್ಲ. ಯಾವನಾದರೂ ಮನುಷ್ಯನು ನಿಕ್ಷೇಪವು ತನಗೆ ಸೇರತಕ್ಕದ್ದೆಂತಲೂ, ಅದನ್ನು ತಾನೇ ಆಗಲಿ ಅಥವಾ ತನಗೆ ಯಾರಮೂಲಕ ಹಕ್ಕುಂಟಾಯಿತೋ ಅವರೇ ಆಗಲಿ ನೂರು ವರ್ಷಗಳ ಈಚೆಗೆ ಅದನ್ನು ಹೂತಿಟ್ಟದ್ದರೆಂತಲೂ ರುಜುವಾತು ಮಾಡಿದರೆ, ಸದರಿ ನಿಕ್ಷೇಪದ ಸ್ವಾಧೀನ ಹೊಂದಲು ಅವನಿಗೆ ಹಕ್ಕುಂಟೆಂದು ಸಿವಿಲ್ ಕೋರ್ಟನವರು ಡಿಕ್ರಿ ಕೊಡತಕ್ಕದ್ದಾಗಿದೆ. ಅಂಥಾ ಸಂದರ್ಭಗಳಲ್ಲಿ ನಿಕ್ಷೇಪ ಕಂಡುಹಿಡಿದ ಮನುಷ್ಯನಿಗೆ ಅದರಲ್ಲಿ ಏನೂ ಸಲ್ಲುವುದಿಲ್ಲ. ಅವನು ಇದಕ್ಕಾಗಿ ಹಣವನ್ನೂ ಖರ್ಚು ಮಾಡಿರಬಹುದು. ಆ ಬಗ್ಗೆ ತಕ್ಕ ಪರಿಹಾರವು ಅವನಿಗೆ ಸಲ್ಲಬೇಕಾದ್ದು ನ್ಯಾಯ. ಅವನ ಖರ್ಚಿಗೆ ತಕ್ಕ ಪರಿಹಾರವನ್ನು ಇನಾಮು ತರೀಕಾಗಿ ಕೊಡುವುದಕ್ಕೂ ಕೂಡ ಹಾಲಿ ಜಾರಿಯಲ್ಲಿರುವ ನಿಬಂಧನೆಗಳಲ್ಲಿ ಏರ್ಪಾಡು ಮಾಡಿದೆ. ಆದ್ದರಿಂದಲೇ ಮಸೂದೆಯಲ್ಲಿ ಈ ಬಗ್ಗೆ ಒಂದು ನಿಯಮವನ್ನು ಸೇರಿಸುವುದು ಯುಕ್ತವೆಂದು ಸೆಲೆಕ್ಟ್ ಕಮಿಟಿಯವರು ಅಭಿಪ್ರಾಯಪಟ್ಟರು. ಅವರು ಮಾಡಿದ ಶಿಫಾರ್ಸನ್ನು ಸರ್ಕಾರದವರು ಅನುಮೋದಿಸಿರುವುದು ಸಂತೋಷಕರವಾಗಿದೆ.

ಈ ಕಾರಣಗಳಿಂದ ಮೇಲ್ಕಂಡ ಸಲಹೆಯನ್ನು ನಾನು ಅನುಮೋದಿಸುತ್ತೇನೆ.

8ನೆ ಕಲಮಿಗೆ ಒಂದು ನಿಯಮವನ್ನು ಸೇರಿಸಬೇಕೆಂದು ಸಭೆಯವರೆಲ್ಲರೂ ಏಕಕಂಠರಾಗಿ ಸಮ್ಮತಿಕೊಟ್ಟರು.

ಮಿ॥ ನಾಗಪ್ಪನವರು.—ಮೇಲ್ಕಂಡ ಮಸೂದೆಯ 16ನೆ ಕಲಮನ್ನೂ, 12ನೆ ಕಲಮಿನಲ್ಲಿ ಬರುವ "ಎಂದರೆ ಕಿಮ್ಮತ್ತಿನಲ್ಲಾಗಲಿ ಬೆಲೆಯಲ್ಲಾಗಲಿ ಒಂದು ಲಕ್ಷ ರೂಪಾಯಿಗೆ ಮೀರದಷ್ಟು ಮೊಬಲಗನ್ನು" ಎಂಬ ಮಾತುಗಳನ್ನೂ ತೆಗೆದುಹಾಕಬೇಕೆಂದು ನಾನು ಸೂಚಿಸುತ್ತೇನೆ.

ಈ ಮಸೂದೆಯ ಪ್ರಸ್ತಾಪಕರಾದ ಮಿ॥ ರಂಗಸ್ವಾಮೈಯ್ಯಂಗಾರ್ರವರು ಸೂಚಿಸಿದ ಮೇರೆಗೆ, 16ನೆ ಕಲಮಿನಲ್ಲಿ ಮಾಡಿ

ರುವ ನಿಯಮವು ಇಂಡಿಯಾ ಆಕ್ಟಿನಲ್ಲಿಲ್ಲ; ಹೊಸದಾಗಿ ಸೇರಿಸಿರುವುದಾಗಿರುತ್ತದೆ. ಇಂಡಿಯಾ ಸರ್ಕಾರದವರು ನಿಕ್ಷೇಪದ ಪೈಕಿ ಯಾವ ಹಿಸ್ಸೆಯೂ ತಮಗೆ ಬರಬೇಕಾದ್ದಿಲ್ಲವೆಂದು ನಮೂದಿಸಿದರೆ ಅದನ್ನು ಕಂಡುಹಿಡಿದವನು ಆ ಸಂಗತಿಯನ್ನು ತಾನಾಗಿಯೇ ತಿಳಿಯಪಡಿಸಬಹುದೆಂಬ ನಿರೀಕ್ಷಣೆಯಿಂದ ಆ ರೀತಿ ನಿಯಮಮಾಡಿದರೆಂತಲೂ ಅದು ನನ್ನ ಸಲಹೆಗೆ ಪ್ರತಿಕೂಲವೆಂತಲೂ ಬಿಲ್ಲಿನ ಪ್ರಸ್ತಾಪಕರಾದ ಮಿ॥ ರಂಗಸ್ವಾಮಯ್ಯಂಗಾರ್ರವರ ಮಾತುಗಳಿಂದ ತಿಳಿಯಬಂತು.

ಇದಕ್ಕೆ ಜವಾಬಾಗಿ ನಾನು ಹೇಳತಕ್ಕದ್ದೇನೆಂದರೆ—ನಿಕ್ಷೇಪ ಕಂಡುಹಿಡಿದ ಮನುಷ್ಯನು ಆ ಸಂಗತಿಯನ್ನು ಸರ್ಕಾರಕ್ಕೆ ತಿಳಿಸದೆ ಹೋಗುವ ಭಾಗದಲ್ಲಿ ಅವನಿಗೆ ಈ ರೆಗ್ಯುಲೇಷನಿನಲ್ಲಿ ವಿಧಿಸಿರುವ ಶಿಕ್ಷೆಯು ಬಹಳ ಕಠಿಣವಾಗಿರುವುದರಿಂದ ಅವನು ಆ ಸಂಗತಿಯನ್ನು ತಿಳಿಸದೆ ಇರುವುದಿಲ್ಲ. ಹಾಗೆ ತಿಳಿಸದೆ ಇದ್ದರೆ, ಅವನು ನಿಕ್ಷೇಪವನ್ನು ಕಳೆದುಕೊಳ್ಳುವುದು ಮಾತ್ರವೇ ಅಲ್ಲದೆ ಕ್ರಿಮಿನಲ್ ಪ್ರಾಸಿಕ್ಯೂಷನಿಗೂ ಗುರಿಯಾಗುವನು. ಆದ್ದರಿಂದ, ಬ್ರಿಟಿಷ್ ಇಂಡಿಯಾದಲ್ಲಿ ಸರ್ ಎಡ್ವರ್ಡ್ ಬೇಲಿಯವರು ಸದರಿ ಹಕ್ಕನ್ನು ಪರಿತ್ಯಾಗ ಮಾಡುವುದಕ್ಕೆ ಇದ್ದ ಕಾರಣಕ್ಕೆ ಪ್ರತಿಯಾಗಿ ಈ ರೆಗ್ಯುಲೇಷನಿನಲ್ಲಿ ವಿಧಿಸಿರುವ ಶಿಕ್ಷೆಯು ಸಾಕಾದ ಸಮಜಾಯಿಷಿಯಾಗಿದೆ.

16ನೆ ಕಲಮಿನಲ್ಲಿ ನಮೂದಿರುವ ನಿಯಮವು ಬಹಳ ವರ್ಷಗಳಿಂದ ಜಾರಿಯಲ್ಲಿರುತ್ತದೆಯೆಂತಲೂ, ಇದನ್ನು ರಾಜನೀತಿ ನಿಪುಣರಾದ ಅನೇಕ ದೊಡ್ಡ ಮನುಷ್ಯರು ಅನುಮೋದಿಸಿರುತ್ತಾರೆಂತಲೂ, ಆದಕಾರಣ ಇದನ್ನು ಬಿಟ್ಟು ಈಗ ಬೇರೆ ಮಾರ್ಗದಲ್ಲಿ ಪ್ರವರ್ತಿಸುವುದಕ್ಕೆ ಯಾವ ಕಾರಣವೂ ಇಲ್ಲವೆಂತಲೂ ಸಹ ಬಿಲ್ಲಿನ ಪ್ರಸ್ತಾಪಕರು ಮತ್ತೊಂದು ಕಾರಣವನ್ನು ಹೇಳಿರುತ್ತಾರೆ.

ಈ ವಿಷಯದಲ್ಲಿ ನಾನು ಸಭೆಯವರ ಜಾಹಿರಾತಿಗೆ ತರತಕ್ಕ ಅಂಶವೇನೆಂದರೆ—1867ನೆ ಇಸವಿಯ ಇಸ್ತಿಹಾರ್‌ನಾಮೆಗೆ ಇಂಡಿಯಾ ಸರ್ಕಾರದವರ ಮಂಜೂರಾತಿಯು ಆಗಿಲ್ಲವಾದಕಾರಣ ಸದರಿ ಇಸ್ತಿಹಾರ್‌ನಾಮೆಯು ಕಾನೂನಿನ ಬಲವುಳ್ಳದ್ದಾಗಿದೆಯೇ ಎಂಬುವುದು ಸಂದೇಹಾಸ್ಪದವಾಗಿದೆ. ಹಾಗಿದ್ದಾಗ್ಯೂ ಇದಕ್ಕೆ ಆಕ್ಷೇಪಣೆಯು ಯಾತಕ್ಕೆ ಬರಲಿಲ್ಲವೆಂದರೆ ಈ ನಿಬಂಧನೆಯನ್ನು ಜಾರಿಗೆ ತರುವುದಕ್ಕೆ ತಕ್ಕ ಸಂದರ್ಭಗಳು ಉಂಟಾಗದೇ ಇದ್ದದ್ದೇ ಕಾರಣ. ಕಾನೂನಿನ ಬಲವುಳ್ಳದ್ದಾಗಿರುವುದೇ ಸಂದೇಹಾಸ್ಪದವಾಗಿರುವ ಇಸ್ತಿಹಾರ್ನಾಮೆಯನ್ನು ಮುಖ್ಯವಾಗಿ ನಂಬಿಕೊಂಡು ಅದನ್ನು ಜಾರಿಗೆ ತರಬೇಕು ಎಂದು ಹೇಳುವುದು ಬಹಳ ಬಲಹೀನವಾದ ಕಾರಣವೆಂತ ನನಗೆ ತೋರುತ್ತದೆ.

ಬ್ರಿಟಿಷ್ ಇಂಡಿಯಾವಿನಲ್ಲಿ ಜಾರಿಯಲ್ಲಿರುವ ಕಾನೂನು ಕ್ರಿಸ್ತಶಕ 6 ಮತ್ತು 14ನೆ ಶತಮಾನಗಳ ಮಧ್ಯಕಾಲದಲ್ಲಿದ್ದ ಕಾನೂನೆಂತ ನಾನು ಅಭಿಪ್ರಾಯಪಟ್ಟದ್ದರಲ್ಲಿ ನನ್ನ ತಿಳುವಳಿಕೆಯು ತಪ್ಪೆಂತ ಪಸ್ತಾಪಕರು ಅಪ್ಪಣೆ ಕೊಡಿಸಿದರು. ನಾನು ಹೇಳಿದ್ದು ನಿಜವಾದ್ದೆಂಬುವುದಕ್ಕೆ ಆನರಬಲ್ ಸರ್ ಎಡ್ವರ್ಡ್ ಬೇಲಿಯವರು ಹೇಳಿದ ಮಾತನ್ನೇ ಪ್ರಸ್ತಾಪಕರಿಗೆ ದಾಖಲೆಯಾಗಿ ತೋರಿಸಿದರೆ ಸಾಕಾಗಿರುತ್ತದೆ. ಅದೇನೆಂದರೆ :—

"ಇಂಡಿಯಾ ದೇಶದಲ್ಲಿ ಈ ವಿಚಾರವಾಗಿ ಯಾವುದಾದರೂ ಕಾನೂನು ಜಾರಿಯಲ್ಲಿ ಇತ್ತೆಂದು ಹೇಳಬಹುದಾದರೆ ಅಂಥಾ ಕಾನೂನಿನಲ್ಲೆಲ್ಲಾ ಯೂರೋಪಿನಲ್ಲಿ ಕ್ರಿಸ್ತಶಕ 6 ಮತ್ತು 14ನೆ ಶತಮಾನಗಳ ಮಧ್ಯಕಾಲದಲ್ಲಿದ್ದ ನಿಯಮವನ್ನೇ ವಸ್ತುತಃ ಅನುಸರಿಸಿತ್ತೆಂದು ಹೇಳಬಹುದಾಗಿದೆ. ಸದರೀ ಕಾನೂನು ಪ್ರಕಾರ ಸರ್ಕಾರಕ್ಕೆ ಹಕ್ಕುಂಟೆಂದು ಅಂಗೀಕರಿಸಿದ್ದಾಗ್ಯೂ ಸದರಿ ಹಕ್ಕನ್ನು ಕೆಲವು ಷರತ್ತಿನಿಂದ ನಿಕ್ಷೇಪ ಕಂಡುಹಿಡಿದವನಿಗೆ ಬಿಟ್ಟು ಬಿಟ್ಟದ್ದೆ ಎಂದು ಹೇಳಬಹುದಾಗಿದೆ. ಧರ್ಮನಿಯಮಗಳ ಪ್ರಕಾರ ಈ ಕ್ರಮವು ಸರಿಯಾದದ್ದೆಂತ ನಾನು ತಿಳಿದುಕೊಂಡಿದ್ದೇನೆ. ನಿಕ್ಷೇಪವನ್ನು ಪಡೆಯಲು ಫಲಾಸೆಯವರಿಗೆ ಪ್ರಥಮಬಾಧ್ಯತೆಯುಂಟೆಂದು ರುಜುವಾತು ಮಾಡುವುದು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ಸದರೀ ಸ್ವತ್ತು ಎಷ್ಟೇ ಬೆಲೆಯುಳ್ಳದಾದರೂ ಸರ್ಕಾರಿ ಖಜಾನೆಗೆ ಜಮೆಯಾಗಿ ಪ್ರಜೆಗಳ ಪ್ರಯೋಜನಾರ್ಥ ಉಪಯೋಗಿಸಲ್ಪಡಬೇಕೆಂದು ಹೇಳುವುದು ನ್ಯಾಯವಾಗಿದೆ. ಈ ನಿಯಮವನ್ನು ಅನುಸರಿಸಕೂಡದೆಂದು ಆಕ್ಷೇಪಿಸುವುದಕ್ಕೆ ಕಾರಣವೇನೆಂದರೆ—ಅದನ್ನು ಜಾರಿಯಲ್ಲಿ ತರುವುದು ಸಾಧ್ಯವಲ್ಲ. ಜಾರಿಯಲ್ಲಿ ತರುವುದಕ್ಕೆ ಅಸಾಧ್ಯವಾದ ಇತರ ಕಾನೂನುಗಳಂತೆಯೇ ಇದೂಕೂಡ ನಿಷ್ಪ್ರಯೋಜನವಾದದ್ದು ಮಾತ್ರವೇ ಅಲ್ಲದೆ, ಕೆಡುಕನ್ನುಂಟುಮಾಡುವಂಥಾದ್ದಾಗಿದೆ. ಇಂಗ್ಲೆಂಡಿನ ಕಾನೂನನ್ನೇ ಆಗಲಿ ಅದರಿಂದ ಹುಟ್ಟಿದ ಇಂಡಿಯಾದೇಶದ ಕಾನೂನನ್ನೇ ಆಗಲಿ ಈ ನಿಯಮದ ಆಧಾರದ ಮೇಲೆಯೇ ಏರ್ಪಡಿಸಿರುತ್ತದೆಂದು ನಾನು ಖಂಡಿತವಾಗಿ ಹೇಳಲಾರೆನು. ಇಂಡಿಯಾ ದೇಶದ ಕಾನೂನನ್ನು ಜಮೀನ್ದಾರೀ ಕ್ರಮದ (Feudal System) ಮೇಲೆ ಏರ್ಪಡಿಸಿರುತ್ತದೆಂದು ನಾನು ನಂಬಿದ್ದೇನೆ. ಸದರಿ ಜಮೀನ್ದಾರೀ ಕ್ರಮವನ್ನು ಇಲ್ಲಿ ಪ್ರಸ್ತಾಪಿಸಬೇಕಾದ ಪ್ರಕೃತವಿಲ್ಲ. ಹೇಡ್ರಿಯನ್ ಚಕ್ರವರ್ತಿಗಳ ಕಾಲದ ಪುರಾತನವಾದ ರೋಮನ್ ಕಾನೂನಿನ ನಿಯಮಗಳ ಮೇಲೂ, ಫ್ರೆಂಚ್ ಮತ್ತು ಲೂಸೇನಿಯನ್ ಕೋಡುಗಳಮೇಲೂ, ಸ್ವಲ್ಪಮಟ್ಟಿಗೆ ಡೆನ್ಮಾರ್ಕ್ ದೇಶದ ಈಗಿನ ಕಾನೂನಿನ ಮೇಲೂ ಪ್ರಕೃತ ಬಿಲ್ಲನ್ನು ಏರ್ಪಡಿಸಬೇಕೆಂದು ಉದ್ದೇಶಿಸಿ ಇದೆ."

ಒಂದು ಲಕ್ಷಕ್ಕಿಂತ ಜಾಸ್ತಿ ಬೆಲೆಯ ನಿಕ್ಷೇಪ ಸಿಕ್ಕುವುದು ಬಹಳ ಅಪರೂಪವೆಂಬುವುದೇ ನನ್ನ ತಿದ್ದುಪಾಟು ಅಗತ್ಯವಿಲ್ಲವೆಂಬ ಬಗ್ಗೆ ತಂದ 4ನೆ ಕಾರಣವಾಗಿರುತ್ತದೆ. ಆದರೆ, ಅಂಥಾ ನಿಕ್ಷೇಪ ಸಿಕ್ಕುವುದು ಅಪರೂಪವೆಂಬ ಕಾರಣದಮೇಲೆ ಆ ನಿಯಮವನ್ನೇ ಬಿಟ್ಟುಬಿಡಬಾರದು. ಸರ್ಕಾರಕ್ಕೆ ಅಂಥಾ ಸ್ವತ್ತಿಗೆ ಹಕ್ಕೇನಾದರೂ ಉಂಟೇ ಎನ್ನುವುದೇ ಆ ನಿಯಮ. ನಿಕ್ಷೇಪದ ಮಾಲೀಕನಿಗೆ ಅದರಮೇಲೆ ಪ್ರಥಮಬಾಧ್ಯತೆ ಉಂಟೆಂದು ಮಸೂದೆಯಲ್ಲಿ ವಿಶದವಾಗಿ ನಿಯಮವನ್ನು ಏರ್ಪಡಿಸಿದೆ. ಹಾಗೆ ಏರ್ಪಡಿಸಿದಮೇಲೆ "ಒಂದು ಲಕ್ಷ ರೂಪಾಯಿನ ವರೆಗೆ ಮಾತ್ರವೇ ನಿನ್ನ ಹಕ್ಕನ್ನು ಅಂಗೀಕರಿಸುತ್ತೇವೆ" ಎಂದು ಸರ್ಕಾರದವರು ಹೇಳುವುದಕ್ಕೆ ಹ್ಯಾಗೆ ಆಗುತ್ತದೆ? ಅಂಥಾ ನಿಕ್ಷೇಪಕ್ಕೆ ಸರ್ಕಾರದವರು ಹಕ್ಕನ್ನು ಪೂರ್ತಿಯಾಗಿ ಬಿಟ್ಟುಬಿಡುವುದು ನ್ಯಾಯವಾಗಿದೆ.

ರಾಜಮಂತ್ರಪ್ರವೀಣ ಮಿ॥ ಸಿ. ಶ್ರೀನಿವಾಸಯ್ಯಂಗಾರ್ರವರು—16ನೆ ಕಲಮಿನಲ್ಲಿ ಪ್ರಸ್ತಾಪಿಸಿರುವುದು ನಿಕ್ಷೇಪ ಕಂಡವನ ವಿಷಯವಾಗಿದೆಯೇ ಹೊರತು ನಿಕ್ಷೇಪದ ಮಾಲೀಕನ ವಿಷಯವಲ್ಲ.

ರಾಜಕಾರ್ಯಪ್ರವೀಣ ಮಿ॥ ಎ. ರಂಗಸ್ವಾಮಯ್ಯಂಗಾರ್ರವರು—ಒಂದು ಲಕ್ಷ ರೂಪಾಯಿಗಿಂತ ಹೆಚ್ಚಾದ ಸ್ವತ್ತನ್ನು ಕೊಡುವುದಿಲ್ಲವೆಂಬುವುದು ನಿಕ್ಷೇಪಕಂಡ ಮನುಷ್ಯನ ವಿಷಯದಲ್ಲಿ ಮಾತ್ರವೇ. (ಅದಕ್ಕಿಂತ ಹೆಚ್ಚಾದದ್ದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತದೆ.) ನಿಕ್ಷೇಪದ ಮಾಲೀಕನಾದವನು ತನ್ನ ಹಕ್ಕನ್ನು ಸ್ಥಾಪಿಸಿದರೆ ಅದನ್ನೆಲ್ಲಾ ಅವನಿಗೇ ಕೊಡುವುದಾಗುತ್ತದೆ.

ಮಿ|| ಬಿ. ನಾಗಪ್ಪನವರು.—ಮಾಲೀಕನ ಹಕ್ಕನ್ನು ಅಂಗೀಕರಿಸದೆ ಹೋದಾಗ ಮಾತ್ರವೇ ಕಂಡುಹಿಡಿದವನ ಹಕ್ಕನ್ನು ಯೋಚಿಸಬೇಕಾಗುತ್ತದೆ. ಸಿಕ್ಕಿದ ನಿಕ್ಷೇಪದ ವಿಷಯವಾಗಿ ಮನುಧರ್ಮಶಾಸ್ತ್ರದಲ್ಲಿ ವಿಧಿಸಿರುವ ಕಾನೂನ್ ಭಾಗವನ್ನು ನಮ್ಮ ಮಿತ್ರರಾದ ಮಿ|| ತಿರುಮಲಾಚಾರ್‍ರವರು ಹೇಳಿರುತ್ತಾರೆ. ಆದರೆ, ಆ ಕಾನೂನನ್ನು ಯಾವಾಗಲಾದರೂ ಜಾರಿಯಲ್ಲಿ ತಂದಿತ್ತೆಂಬುವುದೇ ನನಗೆ ಸಂದೇಹವಾಗಿದೆ. ಹೂತಿಟ್ಟ ನಿಕ್ಷೇಪವು ಯಾರಿಗಾದರೂ ಸಿಕ್ಕಿದರೆ ಅದರಲ್ಲಿ ಸರ್ಕಾರಕ್ಕೆ ಹಕ್ಕು ಇರಕೂಡದೆಂದು ಎಲ್ಲಾ ದೇಶಗಳಲ್ಲಿಯೂ ಈಗಿನ ಕಾಲದಲ್ಲಿ ಅಭಿಪ್ರಾಯವಿರುತ್ತದೆ. ಈ ವಿಚಾರವಾಗಿ ಇಗ್ಲೆಂಡಿನಲ್ಲಿ ಇರುವ ಕಾನೂನೇ ಬೇರೆ, ಬ್ರಿಟಿಷ್ ಇಂಡಿಯಾದಲ್ಲಿ ಇರುವ ಕಾನೂನೇ ಬೇರೆ. ಇಂಗ್ಲಿಷ್ ಕಾನೂನಿನಲ್ಲಿ ಬಹಳಮಟ್ಟಿಗೆ ಜಮೀನ್‌ದಾರೀ (Feudal) ಪದ್ಧತಿಯನ್ನೇ ಅನುಸರಿಸಿರುತ್ತದೆ; ಇಂಗ್ಲಿಷ್ ಕಾನೂನನ್ನು ಇಂಡಿಯಾ ದೇಶಸ್ಥಿತಿಗೆ ಸಾದೃಶ್ಯವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ; ಇಲ್ಲಿನ ಜಮೀನ್ ಹಿಡುವಳಿ ಕ್ರಮಕ್ಕೂ ಅಲ್ಲಿನ ಕ್ರಮಕ್ಕೂ ಬಹಳ ವ್ಯತ್ಯಾಸವಿದೆ. ಸಾಮಾನ್ಯ ನ್ಯಾಯರೀತ್ಯಾ ವಿಚಾರಿಸಿದರೆ ಅಂಥಾ ನಿಕ್ಷೇಪದಲ್ಲಿ ಸರ್ಕಾರದವರು ಸ್ವಲ್ಪ ಭಾಗವನ್ನೂ ತೆಗೆದುಕೊಳ್ಳಕೂಡದು

ಈ ಸಲಹೆಯನ್ನು ಯಾರೂ ಅನುಮೋದಿಸದೆ ಇದ್ದ ಪ್ರಯುಕ್ತ ಇದು ವಜಾ ಆಯಿತು.

ರಾಜಕಾರ್ಯಪ್ರವೀಣ ಮಿ|| ಎ. ರಂಗಸ್ವಾಮೈಯ್ಯಂಗಾರ್‍ರವರು.—ನಾನು ಮತ್ತೊಂದು ವಿಷಯವನ್ನು ವಿಜ್ಞಾಪಿಸಿಕೊಳ್ಳಬೇಕಾಗಿದೆ; ಅದೇನೆಂದರೆ, ಈಗ ತಿದ್ದುಪಾಟಾದ ಮಸೂದೆಯನ್ನು ಸಭೆಯು ಮತ್ತೊಂದಾವರ್ತಿ ಸೇರಿದಾಗ್ಯೆ ಮಂಜೂರ್ಮಾಡಬೇಕು.

ಸಮಸ್ತರ ತಿಳಿವಳಿಕೆಯ ಬಗ್ಯೆ ಪ್ರಕಟಿಸಿ ಸಭೆಯವರ ಮುಂದೆ ಇಟ್ಟಿರುವ ಈ ತಿದ್ದುಪಾಟಾದ ಮಸೂದೆಯನ್ನು ನಾವುಗಳು ಸಂಪೂರ್ಣವಾಗಿ ಚರ್ಚಿಸಿ ವಿಮರ್ಶೆಮಾಡಿರುತ್ತೇವಷ್ಟೆ. ಮಿ|| ಬಿ. ನಾಗಪ್ಪನವರು ಈ ಮಸೂದೆಯ ಪೈಕಿ ಒಂದು ವಿಷಯವನ್ನು ಕುರಿತು ನಿಯುಕ್ತ ಸಮಾಜದಲ್ಲಿ ಭಿನ್ನಾಭಿಪ್ರಾಯವನ್ನು ಬರೆದಿಟ್ಟು, ಅದೇ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಗಿ ಅವರ ಅಭಿಪ್ರಾಯವನ್ನು ಯಾರೂ ಅನುಮೋದಿಸಲಿಲ್ಲ. ಈ ವಿಷಯವಾಗಿ ಪ್ರಜೆಗಳೂ ಕೂಡ ಯಾವ ಆಕ್ಷೇಪಣೆಯನ್ನೂ ಸರ್ಕಾರಕ್ಕೆ ಜಾಹಿರ್ಮಾಡಿಕೊಂಡಿಲ್ಲವೆಂತ ತೋರುತ್ತದೆ. ಆದ್ದರಿಂದ, ನ್ಯಾಯವಾದಷ್ಟು ಕಾಲವು ಗತಿಸಿದನಂತರ ಇದನ್ನು ಮಂಜೂರ್ಮಾಡಬಹುದಾಗಿದೆ. ಆದಕಾರಣ, ಸಭೆಯವರು ಮುಂದಿನಸಾರಿ ಸೇರಿದಾಗ್ಯೆ ಈ ಮಸೂದೆಯನ್ನು ಮಂಜೂರ್ಮಾಡಬೇಕೆಂತ ಸಲಹೆ ಮಾಡುತ್ತೇನೆ.

ರಾಜಮಂತ್ರಪ್ರವೀಣ ಮಿ|| ಸಿ. ಶ್ರೀನಿವಾಸೈಯ್ಯಂಗಾರ್‍ರವರು, ಇದನ್ನು ಅನುಮೋದಿಸಿದರು.

ಈ ವಿಷಯವನ್ನು ಸಭೆಯವರ ಮುಂದೆ ಇಟ್ಟು ಮಂಜೂರ್ಮಾಡಲಾಯಿತು.

ಸಿವಿಲ್ ಪ್ರೊಸೀಜರ್ ಕೋಡನ್ನು ಪುನಃ ತಿದ್ದು ಪಾಟುಮಾಡುವ ಬಗ್ಯೆ ಹುಟ್ಟಿದ ಬಿಲ್ಲು.

ಮಿ|| ಎಸ್. ನಾರಾಯಣರಾಯರವರು:—ಈಗ ಜಾರಿಯಲ್ಲಿರುವ ಸಿವಿಲ್ ಪ್ರೊಸೀಜರ್ ಕೋಡಿನ 310 A ಪ್ರಕರಣವನ್ನು ತಿದ್ದುಪಾಟು ಮಾಡಬೇಕೆಂಬದಾಗಿ ಒಂದು ಬಿಲ್ಲನ್ನು 1908ನೇ ಇಸವಿ ಫೆಬ್ರುವರಿ 21ನೆ ತಾರೀಖು ಸೋಮವಾರದದಿನ ನಡೆದ ಸಭೆಯಲ್ಲಿ ಪ್ರಸ್ತಾಪಿಸಿತ್ತಷ್ಟೆ. ಆ ಬಿಲ್ಲನ್ನು ವಾಪಸು ತೆಗದುಕೊಳ್ಳಲು ಅಪ್ಪಣೆ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ಸದರೀ ಸಭೆಯಲ್ಲಿ ಈ ಬಿಲ್ಲನ್ನು ಪ್ರಸ್ತಾಪಿಸಿದಾಗ್ಯೆ ಬ್ರಿಟಿಷ್ ಇಂಡಿಯಾ ದೇಶದ ನ್ಯಾಯವಿಧಾಯಕ ಸಭೆಯವರು ತಮ್ಮ ಸಿವಿಲ್ ಪ್ರೊಸೀಜರ್ ಕೋಡನ್ನೇ ಸಂಪೂರ್ಣವಾಗಿ ಬದಲಾಯಿಸಬೇಕೆಂದು ಯೋಚಿಸುತ್ತಿದ್ದರು. ಅವರು ಈಚೆಗೆ ಸಿವಿಲ್ ಪ್ರೊಸೀಜರ್ ಕೋಡನ್ನು ತಿದ್ದುಪಾಟು ಮಾಡಿ ಅದರಪೈಕಿ ಕೆಲವು ಭಾಗಗಳನ್ನು ಬೇರೆ ಹೊಸ ನಿಯಮಗಳಿಗೆ ಅನುಸಾರವಾಗಿ ಕ್ರಮಪಡಿಸಿ ಅದನ್ನು 1908ನೆ ಇಸವಿಯ 5ನೆ ಆಕ್ಟಾಗಿ ಮಂಜೂರ್ಮಾಡಿರುತ್ತಾರೆ. ಈ ಆಕ್ಟಿಗನುಸಾರವಾಗಿ ಈ ಸಂಸ್ಥಾನದ ಸಿವಿಲ್ ಪ್ರೊಸೀಜರ್ ಕೋಡನ್ನೂ ಒಟ್ಟುಗೂಡಿಸಿ ತಿದ್ದುಪಾಟು ಮಾಡುವ ಬಗ್ಯೆ ಒಂದು ಮಸೂದೆಯನ್ನು ಮುಂದೆ ಪ್ರಸ್ತಾಪಿಸಬೇಕಾಗಿರುವ ಕಾರಣ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳುವುದು ಯುಕ್ತವಾಗಿ ಕಾಣುತ್ತದೆ. ಆದ್ದರಿಂದ ಇದನ್ನು ವಾಪಸು ತೆಗೆದುಕೊಳ್ಳಲು ಅಪ್ಪಣೆ ಕೊಡಬೇಕಾಗಿ ಕೋರುತ್ತೇನೆ.

ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರು ಸದರೀ ವಿಜ್ಞಾಪನೆಯನ್ನು ಅನುಮೋದಿಸಿದರು.

ಸಭೆಯವರ ಅಭಿಪ್ರಾಯ ಕೇಳಿದ್ದರಲ್ಲಿ ಈ ವಿಜ್ಞಾಪನೆಯು ಅಂಗೀಕೃತವಾಯಿತು.

ಮೈಸೂರು ಸೀಮೆಯಲ್ಲಿ ಸಿವಿಲ್ ಅಧಿಕಾರ ನಡೆಸುವ ಕೋರ್ಟುಗಳ ನಡವಳಿಕೆಗೆ ಸಂಬಂಧಪಡುವ ಕಾನೂನುಗಳನ್ನು ಒಟ್ಟುಗೂಡಿಸುವುದಕ್ಕೂ, ತಿದ್ದುಪಾಟು ಮಾಡುವುದಕ್ಕೂ ಹುಟ್ಟಿದ ಮಸೂದೆ.

ಮೇಲ್ಕಂಡ ಮಸೂದೆಯನ್ನು ಪ್ರಸ್ತಾಪಿಸುವುದಕ್ಕೆ ಅಪ್ಪಣೆಯನ್ನು ಕೇಳಿ ಮಿ|| ಎಚ್. ವಿ. ನಂಜುಂಡೈಯ್ಯನವರು ಹೇಳಿದುದೇನೆಂದರೆ:—

ಬ್ರಿಟಿಷ್ ಇಂಡಿಯಾದ 1908ನೆ ಇಸವಿಯ 5ನೆ ಆಕ್ಟ್ ಎಂದರೆ ಸಿವಿಲ್ ಪ್ರೊಸೀಜರ್ ಕೋಡಿಗೆ ಅನುಸಾರವಾಗಿ ನಮ್ಮ ಸಂಸ್ಥಾನದಲ್ಲಿಯೂ ಒಂದು ಕಾನೂನನ್ನು ಏರ್ಪಡಿಸಬೇಕೆಂಬುವುದೇ ನಾನು ಈಗ ಪ್ರಸ್ತಾಪಿಸಬೇಕೆಂದಿರುವ ಬಿಲ್ಲಿನ ಉದ್ದೇಶವಾಗಿದೆ. ಸದರಿ ಬ್ರಿಟಿಷ್ ಆಕ್ಟನ್ನು ಬಹು ಸಮರ್ಥರಾದ ದೊಡ್ಡ ಮನುಷ್ಯರು ಒಂದು ಕಮ್ಮಿಟಿಯಾಗಿ ಸೇರಿ ಬಹಳಕಾಲ ಯೋಚಿಸಿ ಏರ್ಪಡಿಸಿರುತ್ತಾರೆ. ಈ ಕಮ್ಮಿಟಿಯಲ್ಲಿ ಈಗಿನ ನಮ್ಮ ಚೀಫ್ ಜಡ್ಜಿಯವರೂ ಪ್ರಮುಖ-ಮೆಂಬರಾಗಿದ್ದರು. ಹಾಲಿ ಜಾರಿಯಲ್ಲಿರುವ ಕೋಡಿನಲ್ಲಿ 653 ಪ್ರಕರಣಗಳಿವೆ; ಆದರೆ ಪ್ರಸಕ್ತ ಮಸೂದೆಯನ್ನು ಓದಿ ನೋಡಿದರೆ ಪ್ರಕರಣಗಳ ಸಂಖ್ಯೆ

ಯನ್ನು 158ಕ್ಕೆ ತಗ್ಗಿಸಿರುತ್ತೆಂಬ ಅಂಶವು ಗೊತ್ತಾಗುವುದು. ಇದರಿಂದ ಹೊಸ ಕೋಡು ಹಳೇ ಕೋಡಿನಲ್ಲಿ ನಾಲ್ಕನೆ ಒಂದು ಭಾಗದಷ್ಟು ಮಾತ್ರ ಆಗುತ್ತದೆ. ಈ ಹೊಸ ಕೋಡಿನ ವಿಷಯಾನುಕ್ರಮಣಿಕೆಯನ್ನೂ ಹಾಲಿ ಜಾರಿಯಲ್ಲಿರುವ ಕೋಡಿನ ವಿಷಯಾನುಕ್ರಮಣಿಕೆಯನ್ನೂ ಹೋಲಿಸಿ ನೋಡಿದರೆ ಅನೇಕ ಪ್ರಕರಣಗಳು ಬಿಟ್ಟುಹೋಗಿರುವುದೂ, ಅನೇಕ ಬದಲಾವಣೆಗಳು ಆಗಿರುವುದೂ ಕಾಣಬರುವುವು.

ನೆಪಮಾತ್ರಕ್ಕೆ ಬದಲಾವಣೆಗಳಂತೆ ತೋರಬರುವ ಈ ತಿದ್ದುಪಾಟುಗಳಿಂದ ತಾವುಗಳು ಗಾಬರಿಗೊಂಡು ಯಾವುದೋ ಒಂದು ಹೊಸ ನ್ಯಾಯನಿಬಂಧನೆಯನ್ನು ತಮ್ಮಗಳ ಆಲೋಚನೆ ಬಗ್ಗೆ ಪ್ರಸ್ತಾಪಿಸುತ್ತೇವೆಂದು ಭಾವಿಸಲಾಗದು. ಕಾನೂನಿನ ಒಳ ಭಾಗದಲ್ಲಿದ್ದ ಅನೇಕ ಪ್ರಮೇಯಗಳನ್ನು ತೆಗೆದು ಅವುಗಳನ್ನು ಕಾನೂನಿನ ಕೊನೆಯಲ್ಲಿ ಹುಕುಂಗಳಂತೆ ಸೇರಿಸಿದೆ. ಇವು ಒಟ್ಟು 564 ಪ್ರಕರಣಗಳಾಗುತ್ತವೆ; ಏವಂಚ ಈ ದೊಡ್ಡ ಕಾನೂನಿನ ಪರಿಮಾಣವೇನೋ ಕಮ್ಮಿಯಾದಂತೆ ಆಗಲಿಲ್ಲ. ಕೋಡಿನ ರಚನಾಕ್ರಮವನ್ನು ಈರೀತಿ ಸಮಗ್ರವಾಗಿ ಬದಲಾಯಿಸುವುದು ಯಾತಕ್ಕೆ ಎಂದು ಕೇಳಬಹುದು. ಏಕೆಂದರೆ, ಚಾಲತಿ ಕೆಲಸಗಳಿಗೆ ಅನೇಕವೇಳೆ ನೋಡಬೇಕಾಗುತ್ತಿರುವ ಈ ಕೋಡಿನ ರಚನಾಕ್ರಮವನ್ನೂ, ಇದುವರೆಗೂ ರೂಢಿಗೆ ಬಂದಿದ್ದ ಪ್ರಕರಣಗಳ ಸಂಖ್ಯೆಯನ್ನೂ ಬದಲಾಯಿಸುವುದರಿಂದ ಬಹು ತೊಂದರೆಯಾಗುವುದರಲ್ಲಿ ಸಂದೇಹವೇನೋ ಇಲ್ಲ. ಹಳೇ ಕೋಡನ್ನು ಕಲಿತವರು ತಮ್ಮ ಜ್ಞಾಪಕಶಕ್ತಿಯಿಂದ ಫಲಾನೆ ನಿಬಂಧನೆಯು ಹಳೇ ಕೋಡಿನ ಇಂಥಾ ಸ್ಥಳದಲ್ಲಿರುತ್ತದೆಂದು ಹೇಳಬಲ್ಲರಾದಾಗ್ಯೂ ಸದರೀ ನಿಬಂಧನೆಯು ಹೊಸ ಕೋಡಿನಲ್ಲಿ ಎಲ್ಲಿದ ಎಂಬುದನ್ನು ಪತ್ತೇಮಾಡಬೇಕಾದರೆ ಸ್ವಲ್ಪ ತೊಂದರೆಯಾಗುತ್ತದೆ. ಪ್ರಕಟಿಸಲ್ಪಟ್ಟಿರುವ ಫಲಾನೆ ತೀರ್ಮಾನವು ಪೂರ್ವದ ಅಭಿಪ್ರಾಯಗಳಿಗೆ ಅನುಸಾರವಾಗಿದೆಯೋ ಇಲ್ಲವೇ ಎಂಬ ಸಂಗತಿಯನ್ನು ತಿಳಿದುಕೊಳ್ಳಬೇಕಾದರೆ ಒಂದು ಅನುಕ್ರಮಣಿಕಾ ಪಟ್ಟಿಯು ಅವಶ್ಯಕವಾಗಿರುತ್ತದೆ. ಇಂಡಿಯಾ ಸರ್ಕಾರದ ನ್ಯಾಯವಿಧಾಯಕ ಅಧಿಕಾರಿಗಳು ಎರಡು ಉದ್ದೇಶಗಳನ್ನು ಇಟ್ಟುಕೊಂಡು ಈ ಬದಲಾವಣೆಗಳನ್ನು ಮಾಡಿರುವಂತೆ ತೋರುತ್ತದೆ. ಹಳೇ ಕೋಡಿನಲ್ಲಿ ಒಂದು ವಿಧ ಸಮಂಜಸರೀತಿಯಾಗಿಯೇ ವಿಷಯಗಳು ಏರ್ಪಟ್ಟಿರುವುದು ವಾಸ್ತವವೇ ಸರಿ. ಆದರೂ, ಮುಖ್ಯ ಮುಖ್ಯ ವಿಷಯಗಳು ಒಂದು ಕಡೆ, ಇತರ ವಿಷಯಗಳು ಮತ್ತೊಂದು ಕಡೆ—ಈರೀತಿಯಾಗಿ ಅಷ್ಟು ವಿಚಕ್ಷಣೆಯಿಂದ ಕ್ರಮಪಡಿಸಿರುವುದಿಲ್ಲ. ಬಹು ಅಪರೂಪವಾಗಿ ಬದಲಾಯಿಸಲ್ಪಡುವ ಮುಖ್ಯವಾದ ವ್ಯವಹಾರವಿಧಿಗಳನ್ನೂ, ನಿಯಮಗಳು ಸ್ವಲ್ಪಕಾಲ ಜಾರಿಯಲ್ಲಿದ್ದು ತನ್ಮೂಲಕ ಉಂಟಾಗುವ ಅನುಭವಗಳಿಗೆ ಅನುಸಾರವಾಗಿಯೂ ಸ್ಥಳವಿದ್ಯಮಾನಗಳಿಗೆ ಅನುಸಾರವಾಗಿಯೂ ಆಗಿಂದಾಗ್ಗೆ ಬದಲಾವಣೆ ಹೊಂದುವ ಅಷ್ಟು ಮುಖ್ಯವಲ್ಲದ ಚಿಲ್ಲರೆ ನಿಬಂಧನೆಗಳನ್ನೂ ಹಳೆ ಕೋಡಿನಲ್ಲಿ ವಿಮರ್ಶೆ ಇಲ್ಲದೆ ಒಟ್ಟಿಗೆ ಒಂದೇಕಡೆ ಸೇರಿಸಿ ಇದೆ. ಚರ್ಚಾಸ್ಪದವಾದ ಬದಲಾವಣೆಗೆ ಕಾರಣಭೂತವಾದ ಎರಡನೆಯ ಅಂಶವ್ಯಾವುದೆಂದರೆ—ಈ ಇಂಡಿಯಾದೇಶವು ತುಂಬಾ ವಿಸ್ತಾರವಾಗಿಯೂ ಅನೇಕ ಸಂಸ್ಥಾನಗಳನ್ನು ಒಳಗೊಂಡಿರುವುದಾಗಿಯೂ ಇದೆಯಲ್ಲದೆ, ಜನಗಳ ಬುದ್ಧಿ ಕುಶಲತೆ, ಅಭಿವೃದ್ಧಿ ಸ್ಥಿತಿ, ನ್ಯಾಯಾಧಿಕಾರಿಗಳು, ಲಾಯರುಗಳು ವಗೈರೆಯವರ ಯೋಗ್ಯತೆಗಳು ಇವೇ ಮೊದಲಾದ ವಿದ್ಯಮಾನಗಳು ಒಂದೊಂದು ಸೀಮೆಯಲ್ಲಿ ಒಂದೊಂದು ವಿಧವಾದ್ದರಿಂದ, ಇಂಡ್ಯಾ ದೇಶಕ್ಕೆಲ್ಲಾ ಒಂದೇ ಕಾನೂನನ್ನೇ ಏರ್ಪಡಿಸುವುದು ಯುಕ್ತವಲ್ಲ. ಅಷ್ಟು ಮುಖ್ಯವಲ್ಲದ ವಿಷಯಗಳಲ್ಲಿ ಆಯಾ ಪ್ರಾಂತ್ಯದವರು ಆಯಾ ಸ್ಥಳದ ವಿದ್ಯಮಾನಗಳಿಗೆ ಅನುಸಾರವಾಗಿ ಅವಶ್ಯಕವಾದ ನಿಬಂಧನೆಗಳನ್ನು ಆಚರಿಸಲು ಅನುಕೂಲ ಕಲ್ಪಿಸಿಕೊಡುವುದು ಅತ್ಯವಶ್ಯಕವೆಂದು ಯೋಚಿಸಿರುತ್ತಾರೆ. ಆದರೆ ಎಲ್ಲಾ ಭಾಗಗಳೂ ಪ್ರಾಯಶಃ ಏಕರೀತಿಯಾಗಿರುವ ಈ ನಮ್ಮ ಸಂಸ್ಥಾನಕ್ಕೆ ಈ ಎರಡನೆಯ ಕಾರಣವು ಅನ್ವಯಿಸುವುದಿಲ್ಲ; ಮೊದಲನೆಯ ಕಾರಣವು ಬ್ರಿಟಿಷ್ ಇಂಡಿಯಾದಲ್ಲಿನಂತೆ ನಮ್ಮ ಸಂಸ್ಥಾನಕ್ಕೂ ಬಹು ಮುಖ್ಯವಾದುದಾಗಿದೆ. ಇದೂ ಅಲ್ಲದೆ ಇಲ್ಲಿ ಈ ನ್ಯಾಯವಿಧಾಯಕ ಸಭೆಯು ಸ್ಥಾಪಿತವಾಗಿರುವುದರಿಂದ ಯಾವುದಾದರೂ ಒಂದು ಕಾನೂನನ್ನು ಬದಲಾಯಿಸಬೇಕಾದರೆ ಮೊದಲಿಗಿಂತಲೂ ಈ ನಿರ್ಬಂಧಗಳು ಹೆಚ್ಚಾಗಿವೆ. ನ್ಯಾಯಶಾಸ್ತ್ರಗಳಲ್ಲಿ ಅನುಭವಸ್ಥರಾದ ಲಾಯರುಗಳಿಗೆ ಸ್ತೋಕ್ತ ತೋರುವ ಕಾರಣಗಳಿಂದ ಬದಲಾಯಿಸಬೇಕಾಗುವ ನಡವಳಿಕೆಗೆ ಸಂಬಂಧಪಡುವ ಕೆಲವು ಚಿಲ್ಲರೆ ನಿಬಂಧನೆಗಳ ವಿಚಾರದಲ್ಲಿಯೂ ಕೂಡ ಸಂಸ್ಥಾನದ ನ್ಯಾಯವಿಧಾಯಕ ಸಭೆಯವರ ಮುಖಾಂತರವೇ ತಿದ್ದುಪಾಟುಗಳು ನಡೆಯತಕ್ಕದ್ದು ಅನಾವಶ್ಯಕ. ಲಾಯರ್‌ಕೆಲಸ ಮಾಡತಕ್ಕವರಿಗೆ ಮತ್ತೊಂದು ಅನುಕೂಲ ಉಂಟು. ಅದೇನೆಂದರೆ, ಇವರು ವಾದಿಸುವವೇಳೆ ಬ್ರಿಟಿಷ್ ನ್ಯಾಯಸ್ಥಾನಗಳಲ್ಲಿ ಆದ ತೀರ್ಮಾನಗಳನ್ನೂ, ಬ್ರಿಟಿಷ್ ಇಂಡ್ಯಾದಲ್ಲಿ ಪ್ರಕಟವಾಗುತ್ತಿರುವ ವ್ಯಾಖ್ಯಾನಗಳನ್ನೂ ಪ್ರಸ್ತಾಪಿಸಲು ಸುಲಭವಾಗಿರುತ್ತದೆ.

ಮಸೂದೆಯ ನಿಯಮಗಳನ್ನು ಕುರಿತು ಈಗ ಪ್ರಸ್ತಾಪಿಸುತ್ತೇನೆ. ನಾನು ಮೊದಲೇ ಅರಿಕೆ ಮಾಡಿರುವಂತೆ ಹಾಲಿ ಜಾರಿಯಲ್ಲಿರುವ ಸಿವಿಲ್ ಪ್ರೊಸೀಡ್ಯೂರ್ ಕೋಡಿಗೂ ಈ ಮಸೂದೆಗೂ ವಿಶೇಷ ವ್ಯತ್ಯಾಸಗಳೇನೂ ಇಲ್ಲ. ಇಂಡಿಯಾದಲ್ಲಿ ಹೊಸದಾಗಿ ಜಾರಿಗೆ ಬಂದಿರುವ ಕೋಡಿನ ಮೇಲೆ ತಹಲ್‌ವರೆಗೆ ಅನೇಕ ಟೀಕೆಗಳು ಪ್ರಕಟವಾಗಿವೆ. ಈ ಪೈಕಿ ಯಾವುದೊಂದನ್ನು ನೋಡಿದರೂ ಈ ಅಂಶವು ಸ್ಪಷ್ಟಪಡುತ್ತದೆ. ಈ ಮಸೂದೆಯನ್ನು ಮಂಜೂರ್ಮಾಡುವುದಕ್ಕೆ ಪೂರ್ವ ಸದರೀ ವ್ಯತ್ಯಾಸಗಳನ್ನು ನಾವೆಲ್ಲರೂ ಸಾವಧಾನದಿಂದ ಪರ್ಯಾಲೋಚಿಸುತ್ತೇವೆಂಬುದರಲ್ಲಿ ಸಂದೇಹವೇನೂ ಇಲ್ಲ. ತಮ್ಮಗಳ ಪರ್ಯಾಲೋಚನೆಗೆ ಬಂದಿರುವ ಮಸೂದೆಯಲ್ಲಿ ಇಂಡಿಯಾ ದೇಶದ ಕೋಡು ನಮ್ಮ ಸಂಸ್ಥಾನಕ್ಕೆ ಅನ್ವಯಿಸುವಂತೆ ಕೆಲವು ಮಾತುಗಳ ಬದಲಾವಣೆಯನ್ನು ಮಾತ್ರ ಮಾಡಿರುತ್ತದೆ. ಮೈಸೂರು ದೇಶಕ್ಕೆ ಮಾತ್ರವೇ ಅನ್ವಯಿಸುವಂಥಾ ಕೆಲವು ವಿಶೇಷ ನಿಯಮಗಳನ್ನು ಬದಲಾಯಿಸದೆ ಹಾಗೆಯೇ ಇಟ್ಟಿರುತ್ತೇವೆ.

ಈ ನಿಯಮಗಳನ್ನು ಪ್ರಸಕ್ತ ಮಸೂದೆಯ ಇರೇಜಿನಲ್ಲಿ ಸೂಚಿಸಿರುವ ಪ್ರಕರಣ ಸಂಖ್ಯೆಯಿಂದಲಾಗಲಿ ಬ್ರಿಟಿಷ್ ಆಕ್ಟಿನಲ್ಲಿ ನಾವು ಮಾಡಿಕೊಂಡಿರುವ ಬದಲಾವಣೆಗಳನ್ನು ಸೂಚಿಸುವ ಸಣ್ಣ ಪತ್ರಿಕೆಯಿಂದಲಾಗಲಿ ತಿಳಿದುಕೊಳ್ಳಬಹುದು. ಸದರಿ ವಿಶೇಷ ನಿಯಮಗಳ ಪೈಕಿ ಕೆಲವು ಯಾವುವೆಂದರೆ:—(1) 43ನೆ ಪ್ರಕರಣದ ವಿವರಣೆ; (2) ಬಾರ್ ಮತ್ತು ಸಿಲ್ಲೇದಾರ್ ಫೌಜಿನವರು ದಸ್ತಗಿರಿಯಿಂದ ವಿನಾಯಿಸಲ್ಪಟ್ಟಿರುವುದು (55ನೆ ಪ್ರಕರಣ); (3) 60ನೆ ಪ್ರಕರಣಕ್ಕೆ ಸೇರಿಸಿರುವ 3 ಕಲಮುಗಳು—ಈ

ಪೈಕಿ ಕಡೇದು ಮಿಲಿಟರಿ ಇಲಾಖೆಯ ರಿಟೈರಿಂಗ್ ಫಂಡಿಗೆ ಸಂಬಂಧಪಟ್ಟು ಹೊಸದಾಗಿ ಸೇರಿಸಿದ ಕಲಂ ಆಗಿರುತ್ತದೆ; (4) ಸರ್ಕಾರದವರಮೇಲೆ ದಾವೆ ತರುವುದಕ್ಕೆ ಸಂಬಂಧಪಟ್ಟ ನಿಯಮವನ್ನು ಬಿಟ್ಟಿರುತ್ತದೆ (17ನೆ ಕಲಂ); (5) ವಿದ್ಯಮಾನಗಳ ಸಬಬು 2ನೆ ಅಪೀಲು ಉಂಟೆಂದು ವಿಧಿಸುವುದು (21ನೆ ಕಲಂ); (6) 2ನೆ ಅಪೀಲ್ ಬಗ್ಗೆ ವಿಧಿಸಲ್ಪಟ್ಟದ್ದ ಮೊಬಲಗಿನ ಪರಿಮಿತಿಯನ್ನು ಬದಲಾಯಿಸುವುದು (22ನೆ ಕಲಂ); ಜ್ಯುಡಿಷಿಯಲ್ ಇಲಾಖೆಯ ಆಫೀಸರುಗಳ ಪರವಾಗಿ ನಿಯಮಿತವಾಗಿರುವ ವಿನಾಯಿತಿ ಕಾನೂನು (37ನೆ ಕಲಂ). ರೂಲ್ಸ್ ಕಮಿಟಿ ಏರ್ಪಾಡಿನಬಗ್ಗೆ 123ನೆ ಪ್ರಕರಣದಲ್ಲಿ (25ನೆ ಕಲಂ) ಕಾಣಿಸಿರುವ ಪಟ್ಟಿಯು ಹಂಗಾಮಿ ತರೀಕ ಸೇರಿಸಿದ್ದಾಗಿದೆ, ಇದನ್ನು ನಾವು ಮಂಜೂರ್‌ಮಾಡುವುದಕ್ಕೆ ಮುಂಚೆ ಚನ್ನಾಗಿ ಯೋಚಿಸಬೇಕು.

ಸಿವಿಲ್ ಅಧಿಕಾರ ನಡೆಸುವ ಕೋರ್ಟುಗಳ ನಡವಳಿಕೆಗೆ ಸಂಬಂಧಪಡುವ ಕಾನೂನುಗಳನ್ನು ಒಟ್ಟುಗೂಡಿಸಿ, ತಿದ್ದುಪಾಟು ಮಾಡುವುದಕ್ಕೆ ಏರ್ಪಟ್ಟಿರುವ ಈ ಮಸೂದೆಯನ್ನು ಸಭೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಮಿ|| ಎಸ್. ನಾರಾಯಣರಾಯರವರು ಮೇಲ್ಕಂಡ ಸೂಚನೆಯನ್ನು ಅನುಮೋದಿಸಿ ಹೇಳಿದುದೇನೆಂದರೆ;—

ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವ ಸಿವಿಲ್ ಪ್ರೊಸೀಡ್ಯುರ್ ಕೋಡಿಗೆ ಅನುಸಾರವಾಗಿರುವ ಕೋಡನ್ನೇ ಈ ಸಂಸ್ಥಾನದಲ್ಲಿಯೂ ಜಾರಿಗೆ ತರುವುದರಿಂದ ಜಡ್ಜಿಗಳಿಗೂ ಲಾಯರುಗಳಿಗೂ ಒಂದು ವಿಶೇಷ ಪ್ರಯೋಜನವುಂಟು; ಅದು ಯಾವುದೆಂದರೆ, ಇಲ್ಲಿನ ಜಡ್ಜಿಗಳೂ ಲಾಯರುಗಳೂ ಇಂಡಿಯಾ ದೇಶದ ಇತರ ಕೋರ್ಟುಗಳ ತೀರ್ಪುಗಳನ್ನು ಅನೇಕವೇಳೆ ದಾಖಲೆ ನೋಡಬೇಕಾಗುತ್ತದೆ; ಇಲ್ಲಿಯೂ ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವ ಕೋಡನ್ನೇ ಜಾರಿಗೆ ತಂದರೆ ಆರೀತಿ ತೀರ್ಪುಗಳನ್ನು ನೋಡಿಕೊಳ್ಳುವುದು ಸುಲಭವಾಗಿರುತ್ತದೆ. ಹಳೇ ಕೋಡಿಗೂ ಹೊಸಕೋಡಿಗೂ ಅಷ್ಟೇನೂ ವಿಶೇಷ ವ್ಯತ್ಯಾಸಗಳು ಇರುವುದಿಲ್ಲ. ಹಳೇಕೋಡನ್ನು ಯಾವ ಕ್ರಮದಲ್ಲಿ ಜಾರಿಗೆ ತರಲಾಗಿದೆಯೋ ಹೊಸ ಕೋಡೂ ಸಹ ಅದೇ ರೀತಿಯಲ್ಲಿ ಏರ್ಪಟ್ಟಿದೆ; ಕೆಲವು ಪ್ರಕರಣಗಳಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಬದಲಾವಣೆಗಳಾಗಿವೆ. ಇವುಗಳೆಲ್ಲವನ್ನೂ ಈ ಸಭೆಯಲ್ಲಿ ವಿಶದವಾಗಿ ಚರ್ಚಿಸಲಾಗುವುದು.

ಮಿ|| ಬಿ. ನಾಗಪ್ಪನವರು.—ಈಗತಾನೇ ಮಾಡೋಣಾದ ಸೂಚನೆಯನ್ನು ಅನುಮೋದಿಸಲು ನಾನು ತುಂಬಾ ಸಂತೋಷವುಳ್ಳವನಾಗಿದ್ದೇನೆ. ಈ ಕೋಡನ್ನು ಈಗ ಪ್ರಸ್ತಾಪಿಸಿ ಪರ್ಯಾಲೋಚನೆಗೆ ತೆಗೆದುಕೊಂಡುದು ಕೇವಲ ಜಾಗ್ರತೆಯೆಂದು ಭಾವಿಸಲು ಆಗುವುದಿಲ್ಲ; ಈ ಕಾನೂನು ಬ್ರಿಟಿಷ್ ಇಂಡ್ಯಾದಲ್ಲಿ 1909ನೆ ಇಸವಿ ಜನವರಿ ಗುರ್‍ರೇ ತಾರೀಖಿನಿಂದಲೇ ಜಾರಿಗೆ ಬಂದಿರುತ್ತದೆ. ಈ ಕೋಡಿನ ಪ್ರಸ್ತಾಪಕರು ಮಸೂದಾ ಬಿಲ್ಲಿನಲ್ಲಿ ಈ ಸಂಸ್ಥಾನಕ್ಕೆ ಮಾತ್ರವೇ ವಿಶೇಷವಾಗಿ ಅನ್ವಯಿಸುವ ನಿಯಮಗಳೆಲ್ಲವನ್ನೂ ತತ್ರಾಪಿ ಮೊಕದ್ದಮಾ ವಿದ್ಯಮಾನಗಳ ಮೇಲೆ ಎರಡನೆ ಅಪೀಲುಗಳನ್ನು ತರುವ ವಿಚಾರವಾದ ಮತ್ತು 43ನೆ 17ನೆ ಪ್ರಕರಣಗಳಿಗೆ ಸಂಬಂಧಪಟ್ಟ ನಿಯಮಗಳನ್ನು ಸೇರಿಸಿರುವ ಪ್ರಯುಕ್ತ ಈ ಮಸೂದಾ ಕಾನೂನು ಲಾಯರುಗಳೆಲ್ಲರಿಂದಲೂ ಸಂಪೂರ್ಣವಾಗಿ ಅನುಮೋದಿಸಲ್ಪಡತಕ್ಕುದಾಗಿದೆ ಎಂದು ನಾನು ಭಾವಿಸುತ್ತೇನೆ.

ಈ ವಿಚಾರದಲ್ಲಿ ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಸಭೆಯವರಿಂದ ಅನುಮೋದಿತವಾಯಿತು.

ಮೈಸೂರು ಸಂಸ್ಥಾನದಲ್ಲಿ ದಾವಾ ವಗೈರೆಗಳ ಲಿಮಿಟೇಷನ್ ವಿಚಾರವಾದ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವ ಬಗ್ಗೆ ಹುಟ್ಟಿದ ಮಸೂದಾ ಬಿಲ್ಲು.

ಮೇಲ್ಕಂಡ ಮಸೂದಾ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಕೇಳಿ ಮಿ|| ಎಚ್. ವಿ. ನಂಜುಂಡಯ್ಯನವರು ಹೇಳಿದುದೇನೆಂದರೆ:—

ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ಲಿಮಿಟೇಷನ್ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವ ಬಗ್ಗೆ ಒಂದು ಮಸೂದಾ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಬೇಡುತ್ತೇನೆ. ಈ ಮಸೂದೆಯಲ್ಲಿ ಇದುವರೆಗೆ ಜಾರಿಯಲ್ಲಿದ್ದ ವಿಷಯಗಳನ್ನು ಒಟ್ಟುಗೂಡಿಸಿದೆಯೇ ಹೊರತು ವಿಶೇಷ ಬದಲಾವಣೆಗಳನ್ನೇನೂ ಮಾಡಿಲ್ಲ: ಭಿನ್ನಾಭಿಪ್ರಾಯಕ್ಕೆ ಆಕರವಾಗಿದ್ದ ಕೆಲವು ಅಂಶಗಳ ವಿಚಾರವಾಗಿ ಕೋರ್ಟುಗಳಲ್ಲಿ ಕೊಡಲ್ಪಟ್ಟಿರುವ ಫೈಸಲಾತಿಗಳನ್ನನುಸರಿಸಿ ಕೆಲವು ಜುಜುವಿ ಬದಲಾವಣೆಗಳನ್ನು ಮಾತ್ರ ಮಾಡಿದೆ. ಪ್ರಕೃತದಲ್ಲಿ ತಪಶೀಲ್ ವಿವರಗಳನ್ನು ಪ್ರಸ್ತಾಪಿಸುವುದು ಅನವಶ್ಯಕ.

ಮೇಲ್ಕಂಡ ಸೂಚನೆಯನ್ನು ಮಿ|| ಎಸ್. ನಾರಾಯಣರಾಯರವರು ಅನುಮೋದಿಸಿದರು; ಮಿ|| ನಾಗಪ್ಪನವರೂ ಒಪ್ಪಿದರು. ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಸಭೆಯವರಿಂದ ಅನುಮೋದಿತವಾಯಿತು.

ಮೈಸೂರು ಸಂಸ್ಥಾನದಲ್ಲಿ ಇನ್‌ಸಾಲ್ವೆನ್ಸಿ ಯಾನೆ ದಿವಾಳಿ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವ ಬಗ್ಗೆ ಹುಟ್ಟಿದ ಮಸೂದಾ ಬಿಲ್ಲು.

ಮೇಲ್ಕಂಡ ಮಸೂದಾ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಕೇಳಿ ಮಿ|| ಎಚ್. ವಿ. ನಂಜುಂಡಯ್ಯನವರು ಹೇಳಿದುದೇನೆಂದರೆ:—

ಈಗಿನ ಕಾಲದಲ್ಲಿ ವ್ಯಾಪಾರಕ್ಕೆ ಸಂಬಂಧಪಟ್ಟ ಕಾನೂನುಗಳ ಪೈಕಿ ದಿವಾಳಿ ಸಂಬಂಧವಾದ ಕಾನೂನು ಬಹು ಕ್ರಮವನ್ನು ಹೊಂದಿದ ಸ್ಥಿತಿಯಲ್ಲಿರುತ್ತದೆ. ಸದರೀ ಕಾನೂನಿನ ಮುಖ್ಯ ಉದ್ದೇಶವೇನೆಂದರೆ,—ತನ್ನ ಸಾಲಗಳನ್ನು ಪ್ರಾಮಾಣಿಕತನದಿಂದ ತೀರಿಸಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಿದರೂ ತನ್ನಿಂದ ಯಾವ ಲೋಪವೂ ಇಲ್ಲದೆ ಒದಗುವ ಸಂದರ್ಭ ವಶಾತ್ ಹಾಗೆ ತೀರಿಸಲು ಅಶಕ್ತನಾಗಿರುವ ಒಬ್ಬ ಪ್ರಾಮಾಣಿಕನಾದ ದೇಣೇದಾರನಿಗೆ ಸದರೀ ಸಾಲವೇ ಸಾರ್ವದಾ ಒಂದು ಹೊರೆಯಾಗಿ ಪರಿಣಮಿಸುವಂತೆ ಮಾಡದೆ ಆತನು ಬೇರೊಂದು ಉದ್ಯೋಗದಲ್ಲಿ ನಿರತನಾಗಿ ಪೂರ್ವ ಸ್ಥಿತಿಗೆ ಬರುವಂತೆ ಅವಕಾಶ ಕೊಡುವುದೇ ಈ ಕಾ

ನೂನಿನ ಮುಖ್ಯ ಉದ್ದೇಶವು. ಈ ಕಾನೂನಿನ ಪ್ರಯೋಜನವನ್ನು ಪ್ರಾಮಾಣಿಕತನದಿಂದ ಉದ್ಯೋಗ ಮಾಡುತ್ತಿರುವವರು ಎಷ್ಟು ಜನರು ಪಡೆಯುವರೋ ಕಡೇಪಕ್ಷ ಅಷ್ಟೇ ಜನ ಅಪ್ರಾಮಾಣಿಕರಾದವರು ಸದರಿ ಪ್ರಯೋಜನವನ್ನು ಪಡೆಯುವುದು ನಮ್ಮ ಅನುಭವಕ್ಕೆ ಬಂದ ವಿಷಯವೇ ಆಗಿದೆ. ಕೊಟ್ಟ ಸಾಲವನ್ನು ತೀರಿಸಿದಲ್ಲದೆ ಋಣಮುಕ್ತರಾಗುವುದಿಲ್ಲವೆಂಬ ಪೂರ್ವಕಾಲದ ಅಭಿಪ್ರಾಯವನ್ನು ಈಗಲೂ ನಮ್ಮವರಲ್ಲನೇಕರು ಅನುಸರಿಸುತ್ತಾ ಇರುವುದು ಸ್ತೋತ್ರಾರ್ಹವಾದ ಅಂಶವಾಗಿದೆ ; ಇನ್ನೂ ಅನೇಕರು ದಿವಾಳಿಯೆನ್ನಿಸಿಕೊಳ್ಳುವುದೆಂದರೆ ಕೇವಲ ಅವಮಾನಕರವೆಂದು ಭಾವಿಸುವ ಪ್ರಯುಕ್ತ ದಿವಾಳೀ ವಿಚಾರವಾದ ಕಾನೂನಿನ ಪ್ರಯೋಜನವನ್ನು ಪಡೆಯುವುದಕ್ಕೆ ಹಿಂದೆಗೆಯುತ್ತಾರೆ.

ಈ ವಿಷಯದಲ್ಲಿ ಹಾಲಿ ಜಾರಿಯಲ್ಲಿರುವ ಕಾನೂನೆಲ್ಲವೂ ಸಿವಿಲ್ ಪ್ರೊಸೀಡ್ಯುರ್ ಕೋಡಿನ 20ನೆ ಅಧ್ಯಾಯದಲ್ಲಿ ಅಡಗಿರುತ್ತದೆ ; ಆದರೆ ಸದರೀ ಅಧ್ಯಾಯದಲ್ಲಿ ಈ ವಿಷಯವನ್ನು ಸಂಕ್ಷೇಪವಾಗಿ ಪ್ರಸ್ತಾಪಿಸಲಾಗಿದೆ. ಒಂದು ಡಿಕ್ರಿಯ ಜಾರೀ ಬಗ್ಗೆ ಸಾಕ್ಷಾತ್ತಾಗಿ ದಸ್ತಗಿರಿ ಮಾಡಲ್ಪಟ್ಟಿರುವ ದೇಣೇದಾರನೂ, ತನ್ನ ಪರವಾಗಿ ಒಂದು ಡಿಕ್ರಿಯನ್ನು ಪಡೆದುಕೊಂಡಿರುವ ಲೇಣೇದಾರನೂ ಹೊರತು ಇತರರು ಯಾರೂ ಈ ಕಾನೂನಿನ ಪ್ರಯೋಜನಗಳನ್ನು ಪಡೆಯಲು ಅವಕಾಶವಿಲ್ಲ. ಈಗ ಹೊಸದಾಗಿ ಏರ್ಪಡಿಸಲುದ್ದೇಶಿಸಿರುವ ಕಾನೂನಿನಮೇರೆಗಾದರೋ ಅನೇಕ ಸಂದರ್ಭಗಳಲ್ಲಿ ದೇಣೇದಾರರೂ ಲೇಣೇದಾರರೂ ಸಹಾ ಅಂಥಾ ಪ್ರಯೋಜನಗಳನ್ನು ಪಡೆಯಲು ಅವಕಾಶವುಂಟು. ಈ ಸಂಸ್ಥಾನದ ಪ್ರಜೆಗಳು ಎಂದೂ ಕಾಣದ ವ್ಯಾಪಾರಗಳಲ್ಲಿ ಮನಸ್ವಿ ಪ್ರವರ್ತಿಸುವ ಸ್ವಭಾವದವರಲ್ಲವಾದುದರಿಂದ ಅವರುಗಳು ದಿವಾಳಿ ಸರ್ಟಿಫಿಕೇಟ್ ಬಗ್ಗೆ ಅನೇಕಸಾರಿ ಕೋರ್ಟುಗಳಿಗೆ ಹೋಗುವ ಸಂಭವವಿರಲಾರದು. ಅನೇಕರು ದಿವಾಳಿಗಳಾಗೋಣದರಿಂದ ಅವರನ್ನು ನೋಡಿಕೊಂಡು ಇತರರು ತಾವು ತೀರಿಸುವುದಕ್ಕೆ ಅಸಾಧ್ಯವಾಗಿರುವ ಸಾಲಗಳಿಂದ ಮುಕ್ತರಾಗಿ ಪುನಃ ಹೊಸದಾಗಿ ವ್ಯಾಪಾರ ಮುಂತಾದುದನ್ನು ಆರಂಭಿಸುವುದರಿಂದ ಪ್ರಯೋಜನವುಂಟೆಂತಲೂ, ಹೀಗೆ ಮಾಡಿದರೆ ಅವಮಾನವೇನೂ ಇಲ್ಲವೆಂತಲೂ ಭಾವಿಸಲು ಕಾರಣವಾಗುತ್ತದೆ. ಅದೃಷ್ಟವಶಾತ್ ನಮ್ಮ ಸಂಸ್ಥಾನದಲ್ಲಿ ಈರೀತಿ ದಿವಾಳಿಗಳಾಗಿ ಇತರರೆನ್ನೂ ತಮ್ಮ ಮಾರ್ಗಕ್ಕೆ ಎಳೆಯುವ ಜನರು ವಿರಳವಾದುದರಿಂದ ಈ ಹೊಸ ಕಾನೂನು ಬಹು ಕಾಲದವರೆಗೆ ವಿಶೇಷ ಉಪಯೋಗದಲ್ಲಿರಲಾರದು. ಆದರೂ ದಿವಾಳಿಯಾಗೋಣವನ್ನು ಕುರಿತ ನಿಯಮಗಳನ್ನು ಹೊಸ ಮಸೂದಾ ಕಾನೂನಿನಲ್ಲಿ ಸೇರಿಸದೆ ಬಿಟ್ಟುಬಿಟ್ಟಿರುವ ಪ್ರಯುಕ್ತ ಅವುಗಳನ್ನೆಲ್ಲಾ ಹಾಲಿ ಇರುವ ರೀತಿಯಲ್ಲಿ ಜಾರೀಲಿರುವಂತೆ ಮಾಡಬೇಕಾದುದು, ಇಲ್ಲವಾದರೆ ಬೇರೆ ರೀತಿಯಲ್ಲಿ ಕಾನೂನಾಗಿ ಏರ್ಪಡಿಸುವುದು ಅಗತ್ಯವಾಗಿರುತ್ತದೆ. ಹೇಗೂ ಕಾನೂನೇನೋ ಅಗತ್ಯವಾಗಿರುವುದರಿಂದ ಆ ಪೈಕಿ ಅನೇಕ ಭಾಗ ಸದ್ಯಕ್ಕೆ ಚಾಲ್ತಿ ಉಪಯೋಗದಲ್ಲಿರದೆ ಇದ್ದರೂ ವಿವರವಾಗಿ ಕಾನೂನನ್ನು ಏರ್ಪಡಿಸುವುದು ಉತ್ತಮವಾಗಿರುತ್ತದೆ ; ಪರಂತು ಈ ವಿಷಯವು ಸಿವಿಲ್ ಪ್ರೊಸೀಡ್ಯುರ್ ಕೋಡಿಗೆ ಸಂಬಂಧಪಟ್ಟುದಲ್ಲವಾದುದರಿಂದ ಅದನ್ನು ಬ್ರಿಟಿಷ್ ಇಂಡಿಯಾ ಕಾನೂನಿಗನುಸಾರವಾಗಿರುವಂತೆ ಹೊಸ ಕಾನೂನಾಗಿ ಏರ್ಪಡಿಸುವುದು ಯುಕ್ತವೆಂದು ತೋರುತ್ತದೆ.

ಸದ್ಯದಲ್ಲಿ ಈ ಮಸೂದಾ ಕಾನೂನಿನ ನಿಯಮಗಳನ್ನು ವಿವರಿಸಬೇಕಾದ ಅಗತ್ಯವಿಲ್ಲ. ಈ ಕಾನೂನನ್ನು ಮಂಜೂರ್ ಮಾಡುವುದಕ್ಕೆ ಮುಂಚೆ ಅವುಗಳನ್ನೆಲ್ಲಾ ವಿವರವಾಗಿ ಪರ್ಯಾಲೋಚಿಸುವುದೇ ಆಗುತ್ತದೆ. ಪ್ರಕೃತದಲ್ಲಿ ಸದರೀ ಮಸೂದೆಯನ್ನು ಈ ಸಭೆಯಲ್ಲಿ ಪ್ರಸ್ತಾಪಿಸಲು ಅಪ್ಪಣೆ ಬೇಡುತ್ತೇನೆ.

ಮಿ॥ ಎಸ್. ನಾರಾಯಣರಾಯರು.—ಈಗತಾನೇ ಈ ಸಭೆಯವರು ಅನುಮೋದಿಸಿರುವ ಹೊಸ ಸಿವಿಲ್ ಪ್ರೊಸೀಡ್ಯುರ್ ಕೋಡಿನಲ್ಲಿ ಹಳೇ ಕೋಡಿನ 20ನೆ ಅಧ್ಯಾಯವನ್ನು ಬಿಟ್ಟುಬಿಟ್ಟಿರುವುದರಿಂದ ದಿವಾಳಿಯಾಗೋಣವನ್ನು ಕುರಿತ ಮಸೂದೆಯೊಂದನ್ನು ಜಾರಿಗೆ ತರಬೇಕಾದುದು ಅಗತ್ಯವಾಗಿರುತ್ತದೆ. ಆದಕಾರಣ ನಾನು ಮೇಲ್ಕಂಡ ಸೂಚನೆಯನ್ನು ಅನುಮೋದಿಸುತ್ತೇನೆ.

ಸದರೀ ಸೂಚನೆಯ ವಿಚಾರದಲ್ಲಿ ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಅದನ್ನು ಸಭೆಯವರು ಅಂಗೀಕರಿಸಿದರು.

ಮೈಸೂರು ಸಂಸ್ಥಾನದಲ್ಲಿ ಗಾರ್ಡಿಯನ್ಸ್ ಮತ್ತು ವಾರ್ಡುಗಳಿಗೆ ಸಂಬಂಧಪಟ್ಟ ಯಾನೆ ಅಪ್ರಾಪ್ತವಯಸ್ಕರನ್ನು ಪೋಷಣೆ ಮಾಡಿ ಅವರ ಸ್ವತ್ತುಗಳನ್ನು ಕಾಪಾಡುವುದಕ್ಕೆ ಸಂಬಂಧಪಟ್ಟ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಡಿ ಮಾಡುವ ಬಗ್ಗೆ ಹುಟ್ಟಿದ ಮಸೂದೆ.

ಮಿ॥ ಕೆ. ಎಸ್. ಚಂದ್ರಶೇಖರ ಅಯ್ಯರವರು.—ಮೈಸೂರು ಸಂಸ್ಥಾನದಲ್ಲಿ ಕಂ ವಯಸ್ಸಿನವರಿಗೆ ಸೇರಿದ ಸ್ವತ್ತಿನ ರಕ್ಷಣೆಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಡಿ ಮಾಡುವ ಬಗ್ಗೆ ಹುಟ್ಟಿದ ಮಸೂದೆಯನ್ನು ಪ್ರಸ್ತಾಪಿಸಲು ಅಪ್ಪಣೆ ದಯಪಾಲಿಸಬೇಕೆಂದು ಬೇಡುತ್ತೇನೆ.

ಈ ವಿಚಾರದಲ್ಲಿ ಹಾಲಿ ಜಾರಿಯಲ್ಲಿರುವ ಕಾನೂನೆಲ್ಲವೂ ಈಗ್ಗೆ ಬಹುಕಾಲಕ್ಕೆ ಹಿಂದೆ ಎಂದರೆ 1872ನೆ ಇಸವಿಯಲ್ಲಿಯೇ ಇಂಡಿಯಾ ಸರ್ಕಾರದವರ ಮಂಜೂರಾತಿಯನ್ನು ಪಡೆದು ಸಾದರ್ ಮಾಡಿಸಲಾದ ನಿಬಂಧನೆಗಳಲ್ಲಿ ಅಡಗಿರುತ್ತದೆ. ಈ ನಿಬಂಧನೆಗಳು ಹುಚ್ಚರಿಗೂ ಸಹ ಅನ್ವಯಿಸುತ್ತವೆ ; ಇವುಗಳಲ್ಲಿ ಹಲವು ನ್ಯೂನತೆಗಳು ಕಂಡುಬಂದಿರುವುದರಿಂದ ಈ ಪೈಕಿ ಮೈನರುಗಳ ರಕ್ಷಣೆಗೆ ಸಂಬಂಧಪಟ್ಟ ನಿಬಂಧನೆಗಳಿಗೆ ಪ್ರತಿಯಾಗಿ ಈ ವಿಚಾರವಾಗಿ ಹೆಚ್ಚು ವಿವರಗಳನ್ನು ಒಳಗೊಂಡಿರುವ ಇಂಡಿಯಾ ದೇಶದ 1890ನೆ ಇಸವಿಯ 8ನೆ ನಂಬರು ಗಾರ್ಡಿಯನ್ಸ್ ಮತ್ತು ವಾರ್ಡ್ಸ್ ಆಕ್ಟನ್ನನುಸರಿಸಿರುವಂತೆ ಒಂದು ರೆಗ್ಯುಲೇಷನನ್ನು ಏರ್ಪಡಿಸಲು ಉದ್ದೇಶಿಸಿದೆ.

ಹುಚ್ಚರ ವಿಷಯವಾಗಿ ಬೇರೆ ಕಾನೂನನ್ನು ಏರ್ಪಡಿಸಲಾಗುವುದು. ಹಾಗೆ ಏರ್ಪಡಿಸುವವರೆಗೂ ಹಿಂದೆ ಸೂಚಿಸಿದ 1872ನೆ ಇಸವಿಯ ನಿಬಂಧನೆಗಳ ಪೈಕಿ ಇವರುಗಳಿಗೆ ಅನ್ವಯಿಸುವಷ್ಟು ಭಾಗವನ್ನು ಜಾರಿಯಲ್ಲಿಟ್ಟಿರಬೇಕಾಗಿದೆ.

ಇಂಡಿಯಾ ದೇಶದ ಆಕ್ಟನ್ನು ಇಲ್ಲಿನ ಸ್ಥಳ ವಿದ್ಯಮಾನಗಳಿಗೆ ಅನುಗುಣವಾಗಿರುವ ಹಾಗೆ ಬದಲಾಯಿಸಲಿಕ್ಕಾಗಿ ಮಾಡಿದ ವ್ಯತ್ಯಾಸಗಳನ್ನೆಲ್ಲಾ ವಿವರಿಸಲು ತಮ್ಮಗಳನ್ನು ನಿಲ್ಲಿಸಿಕೊಳ್ಳಲು ನಾನು ಅಪೇಕ್ಷಿಸುವುದಿಲ್ಲ; ಈ ಬಿಲ್ಲನ್ನು ಈ ಸಭೆಯಲ್ಲಿ ಪ್ರಸ್ತಾಪಿಸುವ ಸಂದರ್ಭ ಬಂದಾಗ ಅವುಗಳನ್ನೆಲ್ಲಾ ವಿವರಿಸಬಹುದಾಗಿದೆ. ಆದರೆ ಮೆಜಾರಿಟಿ ವಯಸ್ಸಿನ ವಿಚಾರವಾದ ಒಂದಂಶವನ್ನು ಮಾತ್ರ ಈಗ ಸೂಕ್ಷ್ಮವಾಗಿ ಸೂಚಿಸಬೇಕಾಗಿದೆ. ಹಾಲಿ ಜಾರಿಯಲ್ಲಿರುವ ನಿಬಂಧನೆಗಳ ಮೇರೆಗೆ 18 ವಯಸ್ಸಾದರೆ ಮೆಜಾರಿಟಿ ಎಂದು ವಿಧಿ ಇದೆ; ಸಾಧ್ಯವಾಗುವ ಸಂದರ್ಭಗಳಲ್ಲೆಲ್ಲಾ ಅಥವಾ ಕಡೇ ಪಕ್ಷ ಮೈನರುಗಳ ಮತ್ತು ಅವರ ಸ್ವತ್ತಿನ ರಕ್ಷಣೆಯ ಬಗ್ಗೆ ಕೋರ್ಟುಗಳವರು ಏರ್ಪಾಡು ಮಾಡಬೇಕಾಗಿರುವ ಸಂದರ್ಭಗಳಲ್ಲಿ ಇದನ್ನು 18ರಿಂದ 21ಕ್ಕೆ ಬಡಾಯಿಸಿದರೆ ಪ್ರಯೋಜನವುಂಟು. ಈ ವಿಷಯವು ತುಂಬಾ ಪ್ರಾಮುಖ್ಯವಾದುದಾಗಿದೆ. ಮಸೂದೆಯನ್ನು ವಿವರವಾಗಿ ಚರ್ಚೆ ಮಾಡುವಾಗ ಈ ಸಭೆಯವರು ಇದನ್ನು ಚೆನ್ನಾಗಿ ಪರ್ಯಾಲೋಚಿಸುವರೆಂದು ನಂಬುತ್ತೇನೆ.

ಮಿ॥ ಎಚ್. ವಿ. ನಂಜುಂಡಯ್ಯನವರು.—ನಾನು ಮೇಲ್ಕಂಡ ಸಲಹೆಯನ್ನು ಅನುಮೋದಿಸುತ್ತೇನೆ. ಮೆಜಾರಿಟಿಗೆ ಸಂಬಂಧಪಟ್ಟ ವಿಷಯ ಒಂದು ಮಾತ್ರ ಪರ್ಯಾಲೋಚಿಸತಕ್ಕದಾಗಿರುವುದು. ಇದು ತುಂಬಾ ಪ್ರಾಮುಖ್ಯವಾದ ವಿಷಯವಾದುದರಿಂದ ಮಸೂದೆಯನ್ನು ಮಂಜೂರ್ ಮಾಡುವುದಕ್ಕೆ ಮುಂಚಿತವಾಗಿ ಸಭೆಯವರು ಇದನ್ನು ಚೆನ್ನಾಗಿ ಪರ್ಯಾಲೋಚಿಸಬೇಕಾಗಿದೆ. ಸದ್ಯಕ್ಕೆ ಇದನ್ನು ನಾನು ವಿವರಿಸಬೇಕಾದ ಆಗತ್ಯವಿಲ್ಲ.

ಈ ಸೂಚನೆಯ ವಿಚಾರದಲ್ಲಿ ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಇದನ್ನು ಸಭೆಯವರು ಅಂಗೀಕರಿಸಿದರು.

1884ನೆ ಇಸವಿಯ 1ನೆ ನಂಬರ್ ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನನ್ನು ತಿದ್ದುಪಡಿ ಮಾಡುವುದಕ್ಕಾಗಿ ಏರ್ಪಟ್ಟ ಮಸೂದೆ.

ಮಿ॥ ಎಚ್. ವಿ. ನಂಜುಂಡಯ್ಯನವರು ಹೇಳಿದ್ದೇನೆಂದರೆ —ಮೈಸೂರು ಚೀಫ್ ಕೋರ್ಟಿಗೆ ಸಂಬಂಧಪಟ್ಟ 1884ನೆ ಇಸವಿಯ 1ನೆ ರೆಗ್ಯುಲೇಷನಿನ 3ನೆ ಪ್ರಕರಣದಲ್ಲಿ 'ಫುಲ್ ಬೆಂಚ್' ಎಂದರೆ ಚೀಫ್ ಕೋರ್ಟಿನ ಎಲ್ಲಾ ಜಡ್ಜಿಗಳೂ ಸೇರಿದ ಬೆಂಚು ಎಂದು ಅರ್ಥ ವಿವರಿಸಿದೆ. ಈಚೆಗೆ ಹಂಗಾಮಿಯಾಗಿ ಒಬ್ಬ ಜಡಿಯರನ್ನು 4ನೆ ಜಡ್ಜಿ ಸ್ಥಾನಕ್ಕೆ ನೇಮಿಸಿದಾಗ ಫುಲ್ ಬೆಂಚಿನ ರೂಲ್ ರೂಲ್ ಮೊಕದ್ದಮೆಗಳ ವ್ಯವಸ್ಥೆ ಬಗ್ಗೆ ಬಂದ ಸಂದರ್ಭದಲ್ಲಿ ಕೆಲವು ತೊಂದರೆಗಳು ಕಂಡು ಬಂದವು. ಅದು ಹೇಗೆಂದರೆ,—ಜಡ್ಜಿಗಳ ಸಂಖ್ಯೆಯು ಉಭಯಪಕ್ಷಗಳಲ್ಲಿಯೂ ಸಮವಾದರೆ, ರೆಗ್ಯುಲೇಷನ್ ಪ್ರಕಾರವಾಗಿಯಾಗಲೀ ಸಿವಿಲ್ ಪ್ರೊಸೀಡ್ಯೂರ್ ಕೋಡಿನ ಪ್ರಕಾರವಾಗಿಯಾಗಲೀ ತೊಂದರೆಯನ್ನು ಪರಿಹಾರ ಮಾಡುವುದು ಸಾಧ್ಯವಲ್ಲದ್ದರಿಂದ ಮೊಕದ್ದಮೆ ವಿಷಯದಲ್ಲಿ ಮುಂದಿನ ಅಮಲ್ ನಡೆಸಲು ಆತಂಕವುಂಟಾದಂತಾಯಿತು. 575ನೆ ಪ್ರಕರಣದ 4ನೆ ಪ್ಯಾರಾದಲ್ಲಿ ಯಾವ ಡಿಕ್ರಿಯನ್ನಾಗಲೀ ಬದಲಾಯಿಸುವುದಕ್ಕೆ ಯಾ ರದ್ದು ಮಾಡುವುದಕ್ಕೆ ಜಡ್ಜಿಗಳಲ್ಲಿ ಬಹು ಪಕ್ಷದವರು ಅನುಮೋದಿಸದಿದ್ದರೆ ಆ ಡಿಕ್ರಿಯನ್ನು ಸ್ಥಿರಪಡಿಸಬಹುದೆಂದು ಸೂಚಿಸಿದೆ. ಇದೇ ಸಾಕಾಗಿತ್ತು. ಆದರೆ 1892ನೆ ಇಸವಿಯ 7ನೆ ರೆಗ್ಯುಲೇಷನ್ನನುಸರಿಸಿ ಹೊಸದಾಗಿ ಸೇರಿಸಲ್ಪಟ್ಟ ಪ್ಯಾರಾದ ಮೇರೆಗೆ ಯಾವ ಮೊಕದ್ದಮೆಯಲ್ಲಿಯಾದರೂ ಜಡ್ಜಿಗಳಿಗೆ ಭಿನ್ನಾಭಿಪ್ರಾಯವುಂಟಾದರೆ ಚೀಫ್ ಕೋರ್ಟು ರೆಗ್ಯುಲೇಷನ್ ನಿಯಮಗಳನ್ನನುಸರಿಸಬೇಕೆಂದು ವಿಧಾಯಕವಾಯಿತು. ಇದರಿಂದ ಮೇಲ್ಕಂಡ 4ನೆ ಪ್ಯಾರಾವು ರದ್ದಾದಂತಾಯಿತು.

ಆದರೆ, ಚೀಫ್ ಕೋರ್ಟಿನಿಂದ ಸಲಹೆ ಬಂದಿರುವ ಪ್ರಕೃತವಿಷಯದಲ್ಲಿ 3 ಜನ ಜಡ್ಜಿಗಳೂ ಒಂದೇ ಅಭಿಪ್ರಾಯಕೊಟ್ಟಿರುವುದರಿಂದ ಮೇಲೆ ಸೂಚಿಸಿದ ತೊಂದರೆಯು ವಾಸ್ತವವಾಗಿ ಸಂಭವಿಸಲಿಲ್ಲ. ಪ್ರಕೃತದಲ್ಲಿ 3 ಜನ ಜಡ್ಜಿಗಳು ಮಾತ್ರ ಇರುತ್ತಾರೆ. ನಮ್ಮ ಶ್ರೀಮನ್ ಮಹಾರಾಜರವರ ಸರಕಾರದವರು ಸದ್ಯಕ್ಕೆ ಈ ಸಂಖ್ಯೆಯನ್ನು ಜಾಸ್ತಿ ಮಾಡುವ ಹಾಗೆ ಇಲ್ಲ. ಆದ್ದರಿಂದ ಈ ಕಾನೂನನ್ನು ತಿದ್ದುಪಾಟು ಮಾಡುವ ಅವಶ್ಯಕತೆಯು ಸದ್ಯಕ್ಕೆ ತಪ್ಪಿಹೋದರೂ, ಫುಲ್ ಬೆಂಚಿಗೆ 3 ಜನ ಜಡ್ಜಿಗಳು ಸಾಕೆಂದು ನಮ್ಮ ಚೀಫ್ ಕೋರ್ಟಿಗಿಂತಲೂ ಹೆಚ್ಚಾಗಿ ಜಡ್ಜಿಗಳಿರುವ ಕೆಲವು ಕೋರ್ಟುಗಳು ಒಪ್ಪಿಕೊಂಡಿರುವುದರಿಂದ, ಈ ಸಂಖ್ಯೆಯೇ ಸಾಕು ಎಂದು ಅರ್ಥವಾಗುವಂತೆ ಅರ್ಥ ವಿವರಣೆಯನ್ನು ಏರ್ಪಡಿಸಬೇಕಾಗಿ ತೋರುತ್ತದೆ.

ಜಡ್ಜಿಗಳ ಸಂಖ್ಯೆಯು ಈಗಿನಂತೆ ಮುಂದಕ್ಕೂ ಇರುವುದಾದರೆ ಯಾವವಿಧವಾದ ಬಾಧಕವೂ ಉಂಟಾಗಲಾರದು. ಹಾಗಿಲ್ಲದೆ ಮುಂದೆ ಹಂಗಾಮಿಯಾಗಾಗಲೀ ಕಾಯಮಾಗಿ ಆಗಲೀ ಈ ಸಂಖ್ಯೆಯನ್ನು ಹೆಚ್ಚಿಸಿದ್ದೇ ಆದರೆ ಮೇಲೆ ಹೇಳಿದ ತೊಂದರೆಯು ಪುನಃ ಉಂಟಾಗದಂತೆ ಒಂದು ನಿಯಮವು ಜಾರಿಯಲ್ಲಿದ್ದಂತಾಗುತ್ತದೆ.

ಆದ್ದರಿಂದ ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನನ್ನು ತಿದ್ದುಪಡಿಮಾಡಲು ಹುಟ್ಟಿದ ಒಂದೇ ಒಂದು ಪ್ರಕರಣವುಳ್ಳ ಈ ಮಸೂದೆಯನ್ನು ಈ ಸಭೆಯಲ್ಲಿ ಓದಬೇಕೆಂದು ವಿಜ್ಞಾಪಿಸುತ್ತೇನೆ.

ಮಿ॥ ಎಸ್. ನಾರಾಯಣರಾಯಣರವರು ಇದನ್ನು ಅನುಮೋದಿಸಿದರು.

ಎಲ್ಲರ ಅನುಮತಿಯನ್ನೂ ಪಡದಮೇಲೆ ಸೆಕ್ರೆಟರಿಯವರು ಮಸೂದೆಯನ್ನು ಓದಿದರು. ಅನಂತರ ಮಿ॥ ಎಚ್. ವಿ. ನಂಜುಂಡಯ್ಯನವರು ಈ ಮಸೂದೆಯನ್ನು ನಿಯುಕ್ತ ಸಮಾಜದವರ ಪರ್ಯಾಲೋಚನೆ ಬಗ್ಗೆ ಒಪ್ಪಿಸಬೇಕಾದ್ದಿಲ್ಲವೆಂತಲೂ ಸಭೆಯ ಕಾರ್ಯನಿರ್ವಾಹಕ್ಕಾಗಿ ಏರ್ಪಟ್ಟಿರುವ ಸಾಧಾರಣ ನಿಬಂಧನೆಗಳನ್ನು ಸದ್ಯಕ್ಕೆ ಅನುಸರಿಸದೆ ಸದರೀ ಮಸೂದೆಯನ್ನು ಪರ್ಯಾಲೋಚಿಸಿ ಮಂಜೂರ್ಮಾಡಬೇಕೆಂತಲೂ ಹೇಳಿದರು.

ಮಿ॥ ಎಸ್. ನಾರಾಯಣರಾಯರು ಇದನ್ನು ಅನುಮೋದಿಸಿದ್ದರ ಮೇಲೆ ಸಭೆಯವರು ಆಲೋಚಿಸಿ ಎಲ್ಲರೂ ಇದಕ್ಕೆ ಒಪ್ಪಿದರು.

ಪುನಃ ಮಿ|| ಎಚ್. ವಿ. ನಂಜುಂಡಯ್ಯನವರು ಸದರಿ ಮಸೂದೆಯನ್ನು ಸಭೆಯವರು ಪರ್ಯಾಲೋಚಿಸಿ ಜಾರಿಗೆ ತರಬೇಕೆಂದು ವಿಜ್ಞಾಪಿಸಿದರು. ಇದನ್ನು ಮಿ|| ಎಸ್. ನಾರಾಯಣರಾಯರು ಅನುಮೋದಿಸಿದರು.

ಅನಂತರ ಮಸೂದೆಯು ಚೆನ್ನಾಗಿ ಚರ್ಚಿಸಲ್ಪಟ್ಟು ಸಭೆಯಲ್ಲಿ ಮಂಜೂರಾಯಿತು.

ಮೈಸೂರು ಸಂಸ್ಥಾನದಲ್ಲಿ ಆಸ್ತಿಯುಳ್ಳವರಾಗಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯ ವಿಲೇವಾರಿ ವಿಷಯದಲ್ಲಿ ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವುಂಟೆಂದು ಅಂಗೀಕರಿಸುವ ಬಗ್ಗೆ ಹುಟ್ಟಿದ ಬಿಲ್ಲು.

ಈ ಬಿಲ್ಲನ್ನು ಸಭೆಯಲ್ಲಿ ಓದಬೇಕೆಂದು ವಿಜ್ಞಾಪಿಸುವುದಕ್ಕೆ ಮೊದಲು, ಮಿ|| ಚಂದ್ರಶೇಖರ ಅಯ್ಯರವರು ಹೊಸದಾಗಿ ಮೊಕರರ್ಮಾಡಲ್ಪಟ್ಟ ಮೆಂಬರುಗಳ ತಿಳಿವಳಿಕೆಗೋಸ್ಕರ ಈ ಬಿಲ್ಲನ್ನು ಜಾರಿಗೆ ತರಬೇಕಾದ ಅವಶ್ಯಕತೆಯನ್ನು ಸಂಕ್ಷೇಪವಾಗಿ ವಿವರಿಸಿ—ಈ ಬಿಲ್ಲಿನಿಂದ ಯಾರ ಸ್ವಂತ ಹಕ್ಕು ಬಾಧ್ಯತೆಗಳಿಗೂ ವಿರೋಧವಿಲ್ಲದೆ ಇರುವುದರಿಂದಲೂ, ಇದರಿಂದ ಸರ್ಕಾರದ ವರಮಾನಕ್ಕೆ ನಷ್ಟವಿಲ್ಲದೇ ಇರುವುದರಿಂದಲೂ, ಹಿಂದೆ ಚೆನ್ನಾಗಿ ಚರ್ಚಿಸಿ ತೀರ್ಮಾನಮಾಡಿದ್ದ ಅಂಶವನ್ನು ಕ್ರಮಪ್ರಕಾರ ಜಾರಿಗೆ ತರುವುದು ಮಾತ್ರವೇ ಈ ಬಿಲ್ಲಿನ ಉದ್ದೇಶವಾಗಿರುವುದರಿಂದಲೂ ಸಹಾ ಇದನ್ನು ನಿಯುಕ್ತ ಸಮಾಜದವರಿಗೆ ವಹಿಸದೆ ಸಭೆಯವರೇ ಪರ್ಯಾಲೋಚಿಸಿ ಮಂಜೂರ್ಮಾಡಬಹುದೆಂದು ವಿಜ್ಞಾಪಿಸಿದರು.

ಮೇಲ್ಕಂಡ ವಿಜ್ಞಾಪನೆಯನ್ನು ಮಿ|| ನಾಗಪ್ಪನವರು ಅನುಮೋದಿಸಿದರು. ಅನಂತರ ಬಿಲ್ಲನ್ನು ಸಭಾ ಸೆಕ್ರೆಟೆರಿಯವರು ಓದಿ ಸಭಿಕರು ಪರ್ಯಾಲೋಚಿಸಿದರು.

ಮೈಸೂರು ಸಂಸ್ಥಾನದಲ್ಲಿ ಪ್ರೊಬೇಟನ್ನಾಗಲೀ ಅಡ್ಮಿನಿಸ್ಟ್ರೇಷನ್ ಲೆಟರುಗಳನ್ನಾಗಲೀ ಮೊದಲೇ ತೆಗೆದುಕೊಂಡಿರುವಂಥಾವರಿಗೂ ಆ ತರುವಾಯ ಬರುವ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೂ ಪೋಟಾಪೋಟಿ ಬರಬಹುದೆಂಬ ಅಂಶದಲ್ಲಿ ಸ್ವಲ್ಪಮಟ್ಟಿಗೆ ಚರ್ಚೆ ನಡೆದ ತರುವಾಯ ಮಿ|| ಚಂದ್ರಶೇಖರ ಅಯ್ಯರವರು ಹೇಳಿದ್ದೇನೆಂದರೆ :—

" ಇದುವರೆಗೆ ಚರ್ಚೆ ನಡೆದದ್ದರಲ್ಲಿಯೂ ಈ ವಿಷಯವನ್ನು ಪುನಃ ಪರ್ಯಾಲೋಚಿಸಿದ್ದರಲ್ಲಿಯೂ ಸಹಾ ಈ ಬಿಲ್ಲನ್ನು ನಿಯುಕ್ತ ಸಮಾಜದಲ್ಲಿ ತಪಶೀಲಾಗಿ ಚರ್ಚಿಸುವುದು ಯುಕ್ತವೆಂದು ತೋರುತ್ತದೆ. ಆದ್ದರಿಂದ ಮೇಲಿನ ಸಲಹೆಯನ್ನು ವಾಪಸು ತೆಗೆದುಕೊಂಡು ಈ ಬಿಲ್ಲನ್ನು ಮಿ|| ಎಚ್. ವಿ. ನಂಜುಂಡಯ್ಯನವರೂ, ರಾಜಮಂತ್ರಪ್ರವೀಣ ಮಿ|| ಸಿ. ಶ್ರೀನಿವಾಸಯ್ಯಂಗಾರ್‌ರವರೂ, ಮಿ|| ಎಸ್. ನಾರಾಯಣರಾಯರವರೂ, ಮಿ|| ಬಿ. ನಾಗಪ್ಪನವರೂ ನಾನೂ ಸಹಾ ಸೇರಿರುವ ನಿಯುಕ್ತ ಸಮಾಜಕ್ಕೆ ಪರ್ಯಾಲೋಚನೆ ಬಗ್ಗೆ ವಹಿಸಬೇಕು " ಎಂದು ವಿಜ್ಞಾಪಿಸಿದರು.

ಮಿ|| ಸಯ್ಯದ್ ಅಮೀರ್ ಹಸನ್‌ರವರು ಈ ವಿಜ್ಞಾಪನೆಯನ್ನು ಅನುಮೋದಿಸಿದರು ; ಸಭೆಯವರೂ ಸಮ್ಮತಿಸಿದರು.

ಈ ನಿಮಿತ್ತ ಬಿಲ್ಲನ್ನು ಪರ್ಯಾಲೋಚಿಸಿ ಮಂಜೂರ್ಮಾಡಬೇಕೆಂಬ ವಿಜ್ಞಾಪನೆಯು ವಜಾ ಆಯಿತು.

ಎಲ್ಲಾ ತರಹೆಯ ವಿಷಪದಾರ್ಥಗಳನ್ನೂ ಸಂಸ್ಥಾನದ ಕೆಲವು ಸ್ಥಳಗಳಲ್ಲಿ ಸ್ವಾಧೀನದಲ್ಲಿಟ್ಟುಕೊಂಡಿರುವುದು ; ಮುಖ್ಯವಾಗಿ ಇಲೀಪಾಷಾಣವನ್ನು ಆಮದು ಮಾಡಿಕೊಳ್ಳುವುದು, ಸ್ವಾಧೀನದಲ್ಲಿಟ್ಟುಕೊಂಡಿರುವುದು ಮತ್ತು ಬಿಕರಿ ಮಾಡುವುದು—ಇವುಗಳನ್ನು ಕ್ರಮಪಡಿಸುವ ಬಗ್ಗೆ ಹುಟ್ಟಿದ ಬಿಲ್ಲು.

ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರು :— ವಿಷಪದಾರ್ಥಗಳನ್ನು ಕುರಿತ ಬಿಲ್ಲಿನ ವಿಚಾರವಾಗಿ ನಿಯುಕ್ತ ಸಮಾಜದವರು ಬರೆಸಿರುವ ರಿಪೋರ್ಟನ್ನು ಈ ಸಭೆಯವರಿಗೆ ಜಾಹಿರ್ಮಾಡುವುದಕ್ಕೆ ಮುಂಚೆ ಕೆಲವು ಅಂಶಗಳನ್ನು ತಿಳಿಸಲಪೇಕ್ಷಿಸುತ್ತೇನೆ. ನಿಯುಕ್ತ ಸಮಾಜದವರು ಈ ಬಿಲ್ಲಿನಲ್ಲಿ ವಿಶೇಷ ಬದಲಾವಣೆಗಳನ್ನು ಮಾಡಿ ಇಲ್ಲ. ಇದು ಮೊದಲಿದ್ದಂತೆಯೇ ಇದೆ, ಎಂದರೆ ಇದೇ ವಿಷಯದಲ್ಲಿ ಬ್ರಿಟಿಷ್ ಇಂಡಿಯಾ ದೇಶದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಇದೆ. ಈ ಬಿಲ್ಲಿನ 10ನೆ ಕಲಮಿನ (2)ನೆ ಒಳಕಲಮಿನಲ್ಲಿ ಮಾತ್ರ ಸ್ವಲ್ಪ ಬದಲಾವಣೆ ಮಾಡಿ ಸಾಮಾನ್ಯ ವೈದ್ಯರೂ, ಪಶುವೈದ್ಯರೂ, ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್‌ಗಳೂ ವಿಷಪದಾರ್ಥಗಳ ವ್ಯಾಪಾರ ವಗೈರೆ ಮಾಡುವುದನ್ನು ಸ್ವಲ್ಪಮಟ್ಟಿಗೆ ಹತೋಟಿಯಲ್ಲಿ ತರಲು ಯತ್ನಿಸಿರುತ್ತೇವೆಂಬ ಅಂಶವನ್ನು ಈ ವಿಚಾರವಾಗಿ ನಾನು ಕೊಟ್ಟ ಮೊದಲನೇ ಉಪನ್ಯಾಸದಲ್ಲಿ ತಿಳಿಸಿ ಇರುತ್ತೇನೆ. ಮೇಲ್ಕಂಡ ಬದಲಾವಣೆಗೆ ಕಾರಣಗಳು ಯಾವುವೆಂಬುವುದನ್ನು ಇಲ್ಲಿ ಪುನಃ ವಿವರಿಸಬೇಕಾದ ಅವಶ್ಯಕವಿಲ್ಲ. ನಿಯುಕ್ತ ಸಮಾಜದವರು ಮೇಲ್ಕಂಡ ಬದಲಾವಣೆಯನ್ನು ಕ್ರಮವಾಗಿ ಪರ್ಯಾಲೋಚಿಸಿ ಅದನ್ನು ಹಾಗೆಯೇ ಇಟ್ಟಿರಬೇಕೆಂದು ತೀರ್ಮಾನಿಸಿರುತ್ತಾರೆ ಎಂಬಿಷ್ಟನ್ನು ಇಲ್ಲಿ ಹೇಳಿದರೆ ಸಾಕಾಗಿದೆ. ಆದರೆ ಈ ನಿಯಮವು ಯಾವಯಾವ ಅಂಶಗಳಿಗೆ ಅನ್ವಯಿಸುತ್ತದೆ ಎಂಬುವುದನ್ನು ಸ್ಪಷ್ಟಪಡಿಸುವುದಕ್ಕೋಸ್ಕರ ಸದರೀ ಸಮಾಜದವರು ಅದರಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿರುತ್ತಾರೆ. ಈ ಬಿಲ್ಲಿನ ಮಸೂದೆಯು ಮೊದಲು ತಯಾರಾದ ಕಾಲದಲ್ಲಿ ಸಾಧಾರಣ ವೈದ್ಯರೂ, ಪಶುವೈದ್ಯರೂ, ಕೆಮಿಸ್ಟ್ ಮತ್ತು ಡ್ರಗ್ಗಿಸ್ಟುಗಳೂ ವಿಷಪದಾರ್ಥಗಳ ಸಂಬಂಧವಾಗಿ ನಡೆಸುವ ಸಮಸ್ತ ಆಡಳಿತಗಳನ್ನೂ ಕ್ರಮಪಡಿಸಬೇಕೆಂಬ ಉದ್ದೇಶವು ಸರ್ಕಾರದವರಿಗೆ ಇತ್ತೆಂಬ ವಿಷಯವು ತಮ್ಮಗಳಿಗೆ ಜ್ಞಾಪಕವಿರಬಹುದು. " ಸಮಸ್ತ ಕಾರ್ಭಾರು " ಎಂಬ ಮಾತಿನ ವ್ಯಾಪ್ತಿಯು ತುಂಬಾ ಜಾಸ್ತಿ ಎಂದು ತೋರಬಂದುದರಿಂದ ವಿಷಪದಾರ್ಥಗಳ ಬಿಕರಿಯನ್ನು ಮಾತ್ರ 10ನೆ ಕಲಮಿನ (2)ನೆ ಒಳಕಲಮಿಗೆ ಒಳಪಡಿಸಿದರೆ ಸಾಕೆಂಬುದಾಗಿ ನಮ್ಮ

ಲ್ಲಿಗೆ ಜಾಹಿರ್ ಆಯಿತು. ನಿಯುಕ್ತ ಸಮಾಜದವರು ಈ ಅಭಿಪ್ರಾಯವನ್ನು ಅನುಮೋದಿಸಿ ಅದಕ್ಕನುಗುಣವಾಗಿ ಈ ಬಳಕಲಮನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿರುತ್ತಾರೆ.

ಸಾಮಾನ್ಯ ವೈದ್ಯರೂ ಪಶುವೈದ್ಯರೂ ಸಹಾ ಅವಶ್ಯಬಿದ್ದಾಗ ರೋಗಿಗಳಿಗೆ ಕೊಡುವುದಕ್ಕೋಸ್ಕರ ತಾವು ರೋಗಪರೀಕ್ಷೆ ಮಾಡುವ ಸ್ಥಳಗಳಲ್ಲಿಯೂ ತಮ್ಮ ಕೈಯಲ್ಲಿ ತೆಗೆದುಕೊಂಡು ಹೋಗುವ ಔಷಧಿಯ ಚೀಲಗಳಲ್ಲಿಯೂ ಸ್ವಲ್ಪಮಟ್ಟಿಗೆ ವಿಷಪದಾರ್ಥಗಳನ್ನಿಟ್ಟುಕೊಂಡಿರುವ ವಾಡಿಕೆಯುಂಟೆಂದು ತಿಳಿಯಬರುತ್ತದೆ. ಹೀಗೆ ವಿಷಪದಾರ್ಥಗಳನ್ನಿಟ್ಟುಕೊಂಡಿರುವುದು ಕಾನೂನಿಗೆ ವಿರುದ್ಧವೆಂದು ಈ ಬಿಲ್ಲಿನಲ್ಲಿ ನಮೂದಿಸಿ ಇಲ್ಲ ; ಹಾಗೆ ಇಟ್ಟುಕೊಂಡಿರುವುದನ್ನು ಕ್ರಮಪಡಿಸಬೇಕೆಂದಾಗಲಿ ಹತೋಟಿಯಲ್ಲಿ ತರಬೇಕೆಂದಾಗಲಿ ಉದ್ದೇಶಿಸಿಯೂ ಇಲ್ಲ ಎಂಬ ಅಂಶವನ್ನು ಇಲ್ಲಿ ಸೂಚಿಸಬಹುದು. ಮೇಲ್ಕಂಡ ವೈದ್ಯರು ಆ ವಿಷಪದಾರ್ಥಗಳನ್ನು ಜನರಿಗೆ ಕ್ರಮವಾಗಿ ಬಿಕರಿಮಾಡಿದ ಸಂದರ್ಭದಲ್ಲಿ ಮಾತ್ರ ಸದರೀ ಬಿಲ್ಲಿನ ನಿಯಮಗಳಿಗೆ ಒಳಪಡುತ್ತಾರೆ. ಇದರಿಂದ ನಿಜವಾಗಿ ವೈದ್ಯವನ್ನೂ ಪಶುವೈದ್ಯವನ್ನೂ ಮಾಡುವಂಥಾವರಿಗೆ ಇದುವರೆಗೆ ಇದ್ದ ಸ್ವಾತಂತ್ರ್ಯಕ್ಕೆ ಸ್ವಲ್ಪವೂ ಕುಂದಕ ಬಾರದಹಾಗೆ ನಾವುಗಳು ಕಾನೂನು ಏರ್ಪಡಿಸಿರುತ್ತೇವೆಂಬುವುದು ವ್ಯಕ್ತಪಡುತ್ತದೆ. ಇದೇ ಅಭಿಪ್ರಾಯವನ್ನು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟೆರಿ ಕಮಿಷನರಾದ ಕರ್ನಲ್ ಸ್ಮಿತ್‌ರವರು ಅನುಮೋದಿಸಿರುತ್ತಾರೆಂದು ಇಲ್ಲಿ ತಿಳಿಸಬಹುದಾಗಿದೆ. ಈ ಬಿಲ್ಲಿನಲ್ಲಿ ಆಗಿರುವ ಇತರ ತಿದ್ದುಪಾಟುಗಳು ಬರೇಮಾತಿನ ಬದಲಾವಣೆಗಳು ಅಥವಾ ಮೇಲ್ಕಂಡ ತಿದ್ದುಪಾಟು ನಡೆದ ಪ್ರಯುಕ್ತ ಅವಶ್ಯಕವಾದಂಥಾವುಗಳು.

ಆದ್ದರಿಂದ ಈ ರಿಪೋರ್ಟನ್ನೂ ತಿದ್ದುಪಾಟಾದ ಬಿಲ್ಲನ್ನೂ ಸಹಾ ಸಭೆಯವರು ಪರ್ಯಾಲೋಚನೆಗೆ ತೆಗೆದು ಕೊಳ್ಳಬಹುದೆಂದು ವಿಜ್ಞಾಪಿಸುತ್ತೇನೆ.

ಮಿ॥ ಎಸ್. ನಾರಾಯಣರಾಯರವರು ಮೇಲ್ಕಂಡ ವಿಜ್ಞಾಪನೆಯನ್ನು ಅನುಮೋದಿಸಿದರು.

ಅನಂತರ ನಿಯುಕ್ತಸಮಾಜದವರ ರಿಪೋರ್ಟನ್ನೂ ಅವರು ತಿದ್ದುಪಾಟುಮಾಡಿದ ಬಿಲ್ಲನ್ನೂ ಸಹಾ ಸಭೆಯವರು ಚರ್ಚಿಸಿದರು ; 10 (2)ನೆ ಕಲಮಿನಲ್ಲಿ ನಿಯುಕ್ತ ಸಮಾಜದವರು ಮಾಡಿದ ಬದಲಾವಣೆಯನ್ನು ಕೆಲವುಮಟ್ಟಿಗೆ ಚರ್ಚಿಸಿದ ತರುವಾಯ ಸದರೀ ಬಿಲ್ಲನ್ನು ಇನ್ನೊಂದು ಮೀಟಿಂಗಿನಲ್ಲಿ ಪುನಃ ಪರ್ಯಾಲೋಚಿಸಬೇಕೆಂದು ಸಭೆಯವರು ತೀರ್ಮಾನಿಸಿದರು.

ಅನಂತರ ಸಭೆಯು ಬರಖಾಸ್ತಾಯಿತು.

ಟಿ. ಆನಂದರಾವ್,

ಸಭಾಧ್ಯಕ್ಷರು.

442

ಮೈಸೂರ ಗೆಜೆಟ್.

ಂ. 44.] ಸರ್ಕಾರದಿಂದ ಛಾಯಿಸ್ ಆದ್ದು. [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 9, ಸ॥ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

	ಪುಟಸಂಖ್ಯೆ.
ಸಪ್ಲಿಮೆಂಟ್—ಮೈಸೂರು ನ್ಯಾಯವಿಧಾಯಕ ಸಭೆಯ ನಡವಳಿಕೆಗಳ ಸಾರಾಂಶ ...	1—15
Iನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದ ಆಯಾಯ ಇಲಾಖಾದವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು	442—444
IIನೆ ಭಾಗ—ಫಾರೆಸ್ಟ್, ರೆವಿನ್ಯೂ ಸರ್ವೆ, ರೆವಿನ್ಯೂ, ಸರ್ಕಾರಿ ಪ್ರಕಟನೆಗಳು ...	884—889
IIIನೆ ಭಾಗ—ಲೆಜಿಸ್ಲೆಟಿವ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು ...	51—53
IVನೆ ಭಾಗ—ಸರ್ಕಾರಿ ಕಾಗದಪತ್ರಗಳು—1909ನೆ ವರ್ಷದ 45ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ ...	506—513

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 23ನೆ ನವಂಬರು 1909.

ನಂ. 4318—ಸ್ಯಾನಿಟರಿ 9-09-4, ಸಮಸ್ತ ಜನರ ತಿಳವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಈ ಕೆಳಗೆ ನಮೂದಿಸಿರುವ ಸ್ಥಳಗ... ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಸಲ್ಪಟ್ಟದ್ದು ... ಎರಡು ತಿಂಗಳಿಗಿಂತ ಜಾಸ್ತಿಕಾಲದಿಂದಲೂ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ...ವಜಾ ಮಾಡಲ್ಪಟ್ಟವೆ.

ಸ್ಥಳ.				ತಾಲ್ಲೂಕು.
ಅರಳೇಹಳ್ಳಿ	...	...	...	ಷಿಕಾರಿಪುರ.
ಚೆನ್ನಗಿರಿ ಟರ್ವ	...	...	...	ಚೆನ್ನಗಿರಿ.
ಚಿಕ್ಕ ಹುಲಿಕೆರೆ	...	...	...	ಡಿಟೋ
ಹೊಳಲೂರು	...	...	...	ಶಿವಮೊಗ್ಗ.
ಗಾಜನೂರು	...	...	...	ಡಿಟೋ
ಅರಬಿಳಚೆ	...	...	...	ಡಿಟೋ
ಅರಕೆರೆ	...	...	...	ಡಿಟೋ
ಗುಡುಮಗಟ್ಟೆ	...	...	...	ಡಿಟೋ
ನಗರ	...	...	...	ನಗರ.
ಕುಂಸಿ ಟರ್ವ	...	...	...	ಕುಂಸಿ ಸಬ್ ತಾಲ್ಲೂಕು.

ತಾರೀಖು 24ನೆ ನವಂಬರ್ 1909.

ನಂ. 4407—ಸ್ಯಾನಿಟೇರಿ 18-09-2, ಹಾಸನ ಡಿಸ್ಟ್ರಿಕ್ಟ್ ಅರಕಲಗೂಡು ತಾಲ್ಲೂಕಿನ ರಾಮನಾಥಪುರಕ್ಕೆ ಬರುವ ಶ್ರೀ ಸುಬ್ರಹ್ಮಣ್ಯಸ್ವಾಮಿಯ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಡಿಸೆಂಬರು 13ನೆ ತಾರೀಖಿನಿಂದ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 4ನೆ ಡಿಸೆಂಬರ್ 1909.

ನಂ. 4771—ಸ್ಯಾನಿಟೇರಿ 7-09-8, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ		ತಾಲ್ಲೂಕು.
ಅರಸೀಕೆರೆ	... ...	ಅರಸೀಕೆರೆ.

ತಾರೀಖು 3ನೆ ಡಿಸೆಂಬರ್ 1909.

ನಂ. 4769—ಮ್ಯು. 281-09-8, ಸನ್ 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ, ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ರಸ್ತೆ ಹಾಕುವುದಕ್ಕೋಸ್ಕರ ಆವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಪ್ರಕರಣವನ್ನನುಸರಿಸಿ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ಯಾ ಖಾನೇಷುಮಾರಿ ನಂಬರು.	ಜಮೀನಿನ ತರಹೆ.	ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
					ಖಾ. ನಂ.		ಚದರ ಗಜ				
ಚಿತ್ರದುರ್ಗ	ದಾವಣಗೆರೆ	ದಾವಣಗೆರೆ	ದಾವಣಗೆರೆ ಪೇಟೆ	ಖಾತೇದಾರ ಮಾಗಾನಹಳ್ಳಿ ಈಶಪ್ಪ ಅನುಭವದಾರ ಹೊಳಲ್ಕೆರೆ ವಿರುಪಾಕ್ಷಪ್ಪ.	733	ಖಾಲಿ ನಿವೇಶನ.	222	ಮೆಸ್ತ್ರಿ ವೀರಬಸಯ್ಯನ ನಿವೇಶನ.	ಮೆಸ್ತ್ರಿ ವೀರಬಸಯ್ಯನ ಮನೆ.	ವಿರುಪಣ್ಣನ ಖಾಲಿ ನಿವೇಶನ ಮತು ವೀರಬಸ್ಯೈಯ್ಯನ ನಿವೇಶನ.	ಬ್ರಹ್ಮಪ್ಪನವರ ಬೀದಿ.
				ಖಾತೇದಾರ ಮಾಗಾನಹಳ್ಳಿ ಈಶಪ್ಪ ಅನುಭವದಾರ ಹೊಳಲ್ಕೆರೆ ವಿರುಪಣ್ಣ.	726	ಡಿಟೋ	96	ಡಿಟೋ ...	ಸೋಮಣ್ಣ ಮತ್ತು ಕೊಟ್ರಪ್ಪನ ಮನೆ ಹಳ್ಳ.	ಗುಡ್ಡಲಿಂಗಪ್ಪನ ಖಾಲಿ ನಿವೇಶನ.	ವಿರುಪಾಕ್ಷಪ್ಪನ ಖಾಲಿ ನಿವೇಶನ.
				ಸಾಲಗಾವಿ ಗುಡ್ಡಲಿಂಗಪ್ಪ ಖಾತೆದಾರ ಮತ್ತು ಅನುಭವದಾರ.	2614	ಡಿಟೋ	108	ಕಡ್ಡಿಪುಡಿ ಗುರುಶಾಂತಪ್ಪನ ನಿವೇಶನ.	ಮೆಸ್ತ್ರಿ ವೀರಬಸಯ್ಯನ ಖಾಲಿ ನಿವೇಶನ ಮತ್ತು ಮುದ್ದಬಸಪ್ಪನ ಮನೆ.	ಬೆಳ್ಳುಳ್ಳಿ ಮರಿಗಪ್ಪನ ಬೀದಿ.	ವಿರುಪಣ್ಣನ ಖಾಲಿ ನಿವೇಶನ.

ತಾರೀಖು 3ನೆ ಡಿಸೆಂಬರ್ 1909.

ನಂ. ಜ. 1517—ಕೋರ್ಟ್ಸ್ 134-09, ಮಿ॥ ಎಸ್. ಎಸ್. ಸೇಟ್ಲೂರ್ರವರು ಚೀಫ್ ಕೋರ್ಟಿನ ಜಡ್ಜಿಯವರ ಸ್ಥಾನದಿಂದ ಈ ಮಾಹೆ 4ನೆ ತಾರೀಖಿನ ದಿವಸ ನಿವೃತ್ತರಾಗಿರುವ ಪ್ರಯುಕ್ತ, ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರ್ ಬಿ.ಎ., ಬಿ. ಎಲ್. ರವರು ಮತ್ತೊಂದು ಹುಕುಂ ಕೊಡುವತನಕ ಚೀಫ್ ಕೋರ್ಟಿನ ಜಡ್ಜಿಯವರಾಗಿ ಬದಲಿ ನೋಡತಕ್ಕದ್ದೆಂತಲೂ,

ಮಿ॥ ಸಿ. ಎಸ್. ಬಾಲಸುಂದರಂ ಐಯ್ಯರವರು ಮತ್ತೊಂದು ಹುಕುಂ ಕೊಡುವ ತನಕ ಜನರಲ್ ಮತ್ತು ರೆವಿನ್ಯು ಇಲಾಖೆಯ ಸೆಕ್ರೆಟರಿ ಕೆಲಸ ಬದಲಿ ನೋಡತಕ್ಕದ್ದೆಂತಲೂ ಶ್ರೀಮನ್ಮಹಾರಾಜಾ ಸಾಹೇಬ್ಬಹದ್ದರವರು ಹುಕುಂ ದಯಪಾಲಿಸಿರುತ್ತಾರೆ.

ತಾರೀಖು 7ನೆ ಡಿಸೆಂಬರ್ 1909.

ನಂ. 4836—ಲೋ. ಬೋ. 169-09-2, ಕೋಲಾರದ ಚಿನ್ನದ ಗಣಿಗಳ ಮೆಡಿಕಲ್ ಮತ್ತು ಹೆಲ್ತ್ ಆಫಿಸರರಾದ ಮಿ॥ ಜಾಂಷಿದ್ ಮುನಸಿಫ್, ಎಂ. ಆರ್. ಸಿ. ಪಿ., ಎಫ್. ಆರ್. ಸಿ. ಎಸ್., ಡಿ. ಪಿ. ಹೆಚ್. ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದ ಮೇರಿಗೆ, ಕ್ರಿಸ್ಮಸ್ ರಜಾ ಜತೆಗೆ 15 ದಿನಗಳ ಪ್ರಿವಿಲೇಜು ರಜಾವನ್ನು ಕೊಟ್ಟಿರುತ್ತೆ. ಇವರು ರಜಾದ ಮೇಲೆ ಗೈರು ಹಾಜರಾಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರರಾದ ಮಿ॥ ಟಿ. ವಿ. ಕುಪ್ಪಸಾಮಿ ಮೊದಲಿಯಾರ್ರವರು ತಮ್ಮ ಸ್ವಂತ ಕೆಲಸದೊಂದಿಗೆ ಹೆಲ್ತ್ ಆಫಿಸರವರ ಕೆಲಸದ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 8ನೆ ಡಿಸೆಂಬರ್ 1909.

ನಂ. ಜ್ಯು. 1563—ಕೋರ್ಟ್ಸ್ 131-09-2, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣದ ಮೇರೆಗೆ ಮೈಸೂರು ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜಿನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಎಸ್. ವೆಂಕಟರಂಗಂ, ಬಿ.ಎ., ಬಿ.ಎಲ್. ಯವರನ್ನು 3ನೆ ತರಗತಿಯ ಮ್ಯಾಜಿಸ್ಟ್ರೇಟರಾಗಿ ಸೊಕರರು ಮಾಡಿರುತ್ತದೆ.

ತಾರೀಖು 8ನೆ ಡಿಸೆಂಬರ್ 1909.

ನಂ. 4657—ಮ್ಯು. 85-08-20, ಸರ್ 1909ನೆ ಜೂನ್ 24ನೆ ತಾರೀಖಿನ ಮೈಸೂರು ಗೆಜೆಟಿನ 1ನೆ ಭಾಗದ 233-234ನೆ ಪುಟಗಳಲ್ಲಿ ಪ್ರಾಯಿಷಾಗಿರುವ 19—6—09ನೆ ಮುಕರ್ರಮಿನ 12797—ಮ್ಯು. 85-08-14ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ನಮೂದಿಸಿರುವ ಸ್ವತ್ತುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೋಸ್ಕರ ಕ್ರಮ ಜರಿಗಿಸಲು ಸರ್ 1894ನೆ ಇಸವಿಯ 7ನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 7ನೆ ಪ್ರಕರಣದ ಮೇರಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಅಧಿಕಾರವನ್ನು ಕೊಟ್ಟು ಇರುತ್ತೆ.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಲಾಗಾಯಿತು 5 ಘಂಟೆಯ ವರೆಗೆ ದಿವಾನ್ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಸ್ ಆದ್ದು. [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 16, ಸನ್ 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

	ಪುಟಸಂಖ್ಯೆ.
Iನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದ ಆಯಾಯು ಇಲಾಖಾದವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು	445—448
IIನೆ ಭಾಗ—ಮೈಸೂರು ಚೀಫ್ ಕೋರ್ಟ್, ಫಾರೆಸ್ಟು, ರೆವಿನ್ಯೂ, ಮ್ಯುನಿಸಿಪಲ್, ಸರ್ಕಾರಿ ಪ್ರಕಟನೆಗಳು	890—909
IVನೆ ಭಾಗ—ಸರ್ಕಾರಿ ಕಾಗದಪತ್ರಗಳು—1909ನೆ ವರ್ಷದ 49ನೆಯು ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ ...	514—522

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 15ನೆ ಡಿಸೆಂಬರ್ 1909.

ನಂ. 5167—ಸ್ಯಾನಿಟರಿ 6—09—2, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಕುಚ್ಚಂಗಿ	ತುಮಕೂರು.

ತಾರೀಖು 8ನೆ ಡಿಸೆಂಬರ್ 1909.

ನಂ. 4920—ಸ್ಯಾ. 94-09-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮಿ॥ ಪಿ. ಪಲ್ಪು, ಎಲ್. ಎಂ. ಎಸ್., ಮತ್ತು ಡಿ. ಪಿ. ಎಚ್. ರವರಿಗೆ, ಬರುವ ಕ್ರಿಸ್ಮಸ್ ರಜದಿನ ಜತೆಗೆ 1910ನೆ ಇಸವಿ ಜನವರಿ 3ನೆ ತಾರೀಖಿನಿಂದ ಅಥವಾ ಅವರು ಪ್ರಿವಿಲೇಜ್ ರಜಾವನ್ನು ಉಪಯೋಗಿಸಿಕೊಳ್ಳುವ ದಿವಸದಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

2. ಇವರು ರಜಾಮೇಲೆ ಇರುವಾಗ, ಮೈಸೂರು ಸರ್ಕಾರದ ಬ್ಯಾಕ್ಟೀರಿಯಾಲಜಿಸ್ಟ್ ಮತ್ತು ಕೆಮಿಕಲ್ ಎಗ್ಜಾಮಿನರಾಗಿ ಬದಲಿ ನೋಡುತ್ತಿರುವ ಮಿ॥ ಎ. ಕೆ. ಪಾಣಿಯವರು ತಮ್ಮ ಕೆಲಸದ ಜೊತೆಗೆ ಡೆಪ್ಯುಟಿ ಸ್ಯಾನಿಟರಿ ಕಮಿಷನರ ಕೆಲಸವನ್ನು ನೋಡತಕ್ಕದ್ದು.

ತಾರೀಖು 7ನೆ ಡಿಸೆಂಬರ 1909.

ನಂ. ಜ. 3093—ಜ. ಮಿ. 129–09–2, ಜನರಲ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ ಕೆಲಸದ ಚಾರ್ಜನ್ನು 1909ನೆ ಇಸವಿ ಡಿಸೆಂಬರ 4ನೆ ತಾರೀಖು ಅಪರಾಹ್ನ ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರು ಒಪ್ಪಿಸಿ ಮಿ|| ಸಿ. ಎಸ್. ಬಾಲಸುಂದರಂ ಅಯ್ಯರವರು ಗ್ರಹಿಸಿದರು.

ತಾರೀಖು 8ನೆ ಡಿಸೆಂಬರ 1909.

ನಂ. ಜು. 1565—ಕೋರಟ್ಸ 127–09–2, ಸನ 1904ನೆ ಇಸವಿಯ ಕ್ರಿಮಿನಲ ಪ್ರೊಸಿಡ್ಯೂರ ಕೋಡಿನ 12ನೆ ಪ್ರಕರಣದ ಮೇರೆಗೆ, ಮೊಳಕಾಲ್ಮುರು ತಾಲ್ಲೂಕಿನ ಅಮಲ್ದಾರ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟರಾದ ಮಿ|| ಕೆ. ಶ್ರೀನಿವಾಸರಾವ್, ಬಿ.ಎ. ಯವರನ್ನು 2ನೆ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ನೇಮಕರ್ಮಾಡಿ ಇರುತ್ತೆ.

ತಾರೀಖು 8ನೆ ಡಿಸೆಂಬರ 1909.

ನಂ. ಜು. 1566—ಕೋರ್ಟ್ಸ 128–09–2, 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರು ಕೋಡಿನ 37ನೆ ಪ್ರಕರಣದ ಮೇರಿಗೆ, ಚಿತ್ರದುರ್ಗ ಡಿಸ್ಟ್ರಿಕ್ಟ ಅಸಿಸ್ಟೆಂಟ್ ಕಮಿಷನರ ಮತ್ತು 2ನೆ ತರಗತಿಯ ಮ್ಯಾಜಿಸ್ಟ್ರೇಟರಾದ ಮಿ|| ಡಿ. ಶ್ರೀನಿವಾಸಯ್ಯಂಗಾರ, ಬಿ.ಎ. ಯವರಿಗೆ ಅದೇ ಕೋಡಿನ 206ನೆ ಪ್ರಕರಣವನ್ನನುಸರಿಸಿ ಸೆಷನ ಕೋರ್ಟಿಗೆ ದರ್ಯಾಫ್ತು ಬಗ್ಗೆ ಜನಗಳನ್ನು ಕಳುಹಿಸಿಕೊಡತಕ್ಕ ಹೆಚ್ಚು ಅಧಿಕಾರವನ್ನು ಕೊಟ್ಟು ಇರುತ್ತೆ.

ತಾರೀಖು 8ನೆ ಡಿಸೆಂಬರ 1909.

ನಂ. 4841—ಲೋ. ಬೋ. 1–09–4, ಚಿಕ್ಕಮಗಳೂರು ತಾಲ್ಲೂಕು ಬೋರ್ಡಿನ ಮೆಂಬರುಗಳು ಇಲ್ಲಿಂದ ವರ್ಗವಾಗಿರುವ ಸಬ ರಿಜಿಸ್ಟ್ರಾರ ಮಿ|| ರಾಮದಾಸಪ್ಪನವರಿಗೆ ಬದಲಾಗಿ ಚಿಕ್ಕಮಗಳೂರಲ್ಲಿರುವ ಮುಜರಾಯಿ ಸಬ್ ಡಿವಿಜನ ಆಫೀಸರ ಮಿ|| ಎಂ. ರಾಘವೇಂದ್ರರಾಯರನ್ನು ವೈಸ ಪ್ರೆಸಿಡೆಂಟಾಗಿ ಚುನಾಯಿಸಿಕೊಂಡಿದ್ದಾರೆ.

ತಾರೀಖು 8ನೆ ಡಿಸೆಂಬರ 1909.

ನಂ. 4843—ಲೋ. ಬೋ. 4–09–4, ಚಿಕ್ಕಮಗಳೂರು ತಾಲ್ಲೂಕು ಅಂಬ್ಳೆ ಯೂನಿಯನಿನಲ್ಲಿ ಈಗ ಖಾಲಿ ಇರುವ ಸ್ಥಳಗಳಿಗೆ ಇದರಡಿ ಕಂಡ ಜನಗಳನ್ನು ಮೆಂಬರರನ್ನಾಗಿ ನೇಮಕರ್ಮಾಡಿ ಇದೆ:—

ಮಿ|| ವೆಂಕಟಕೃಷ್ಣಯ್ಯನವರು (ಶಾನಭೋಗ)

,, ತಿಮ್ಮಪ್ಪಯ್ಯನವರು (ಪಟೇಲ)

,, ಸೋಮೆಗೌಡರು.

ತಾರೀಖು 11ನೆ ಡಿಸೆಂಬರ 1909.

ನಂ. ಜು. 1593—ಕೋರ್ಟ್ಸ 90–09–4, ಇದರಡಿ ಕಂಡ ಮುನಸಿಫರುಗಳ ವರ್ಗಾವರ್ಗಿಗಳನ್ನು ಮಂಜೂರ್ಮಾಡಿರುತ್ತದೆ.

(1) ಮಿ|| ಜಿ. ಶ್ರೀನಿವಾಸ ಅಯ್ಯರ, ಬಿ.ಎ., ಎಂ.ಎಲ. ರವರು ಕೋಲಾರದಿಂದ ಬೆಂಗಳೂರಿಗೆ ಪ್ರಿನ್ಸಿಪಲ ಮುನಸಿಫ ಕೆಲಸಕ್ಕೆ.

(2) ಮಿ|| ಎಂ.ಎಲ. ಶ್ರೀಕಂಠೇಶಗೌಡರು, ಬಿ.ಎ., ಬಿ.ಎಲ. ಬೆಂಗಳೂರಿಂದ ಕೋಲಾರಕ್ಕೆ.

ಈ ಆಫಿಸರುಗಳು ತಮ್ಮ ತಮ್ಮ ವರ್ಗಸ್ಥಳಗಳಿಗೆ ಕ್ರಿಸ್ಮಸ ರಜಾ ಪೂರೈಸಿದ ನಂತರ ಕೋರ್ಟು ತೆಗಿಯುವಾಗ್ಯೆ ಹೋಗಿ ಸೇರಬೇಕು.

ತಾರೀಖು 11ನೆ ಡಿಸೆಂಬರ 1909.

ನಂ. ಜ. 3190—ಜ. ಮಿ. 182–09–1, ಸನ 1909ನೆ ಇಸವಿ ಡಿಸೆಂಬರ 24ನೆ ತಾರೀಖು ಶುಕ್ರವಾರ ಲಾಗಾಯಿತು 1910ನೆ ಇಸವಿ ಜನವರಿ 2ನೆ ತಾರೀಖು ಭಾನುವಾರದ ವರೆಗೆ (ಉಭಯ ದಿನಗಳೂ ಸೇರಿ) ಈ ಸಂಸ್ಥಾನದ ದರೋಬಸ್ತು ಸರ್ಕಾರಿ ಕಚೇರಿಗಳು, ಕೋರ್ಟುಗಳು ಮತ್ತು ವಿದ್ಯಾಶಾಲೆಗಳು ಕ್ರಿಸ್ಮಸ ರಜಾ ಉದ್ದೇಶ್ಯ ಮುಚ್ಚಲ್ಪಡತಕ್ಕದ್ದು.

2. ಇಲಾಖೆಯ ಮುಖ್ಯಸ್ಥರುಗಳು ಜರೂರಿಯಾತ ಕೆಲಸಗಳಿಗೆ ತಕ್ಕ ಏರ್ಪಾಟು ಮಾಡಬೇಕು.

3. ತಾಲ್ಲೂಕು ಸಿಬ್ಬಂದಿಯವರಿಗೂ, ಜಮಾಬಂದಿ ಮತ್ತು ಪ್ಲೇಗ ಕೆಲಸಗಳಲ್ಲಿ ಇರುವ ಆಫಿಸರುಗಳಿಗೂ ಇದು ಅನ್ವಯಿಸುವದಿಲ್ಲ.

ತಾರೀಖು 11ನೆ ಡಿಸೆಂಬರ 1909.

ನಂ. 5016—ಮ್ಯು. 54–09–16, ಫ್ರೇಂಚರಾಕ್ಸ ಮ್ಯುನಿಸಿಪಲ ಬೋರ್ಡ ಮೀಟಿಂಗುಗಳ ಪೈಕಿ ಅವಿಚ್ಛಿನ್ನವಾಗಿ 3 ಮೀಟಿಂಗುಗಳಿಗೆ ಮಿ|| ರಾಜಾರಾಯರೆಂಬ ಮೆಂಬರು ಬಾರದೇಹೋದಪ್ರಯುಕ್ತ ತಮ್ಮ ಸ್ಥಾನವನ್ನು ಕಳೆದುಕೊಂಡದ್ದರಿಂದ ಅವರ ಐವಜಿಗೆ ಮಿ|| ಚಾಖುಮಿಯಾ ಸಾಬರನ್ನು ನೇಮಕರೂರು ಮಾಡಿರುತ್ತದೆ.

ತಾರೀಖು 13ನೆ ಡಿಸೆಂಬರ 1909.

ನಂ. ಜು. 1598—ಕೋರ್ಟ 137–09–2, ಚಿಕ್ಕಬಳ್ಳಾಪುರದ ಮುನಸಿಫರಾದ ಮಿ|| ಟಿ. ವೆಂಕೋಬರಾವ್, ಬಿ.ಎ., ಬಿ.ಎಲ. ರವರಿಗೆ 1909ನೆ ಇಸವಿ ಡಿಸೆಂಬರ 9ನೆ ತಾರೀಖು ಲಾಗಾಯಿತು ಅಥವಾ ಉಪಯೋಗಿಸಿಕೊಳ್ಳುವ ಮತ್ತೊಂದು ತಾರೀಖು ಲಾಗಾಯಿತು 15 ದಿನಗಳ ಪ್ರಿವಿಲೇಜು ರಜಾವನ್ನು ಮಂಜೂರ್ಮಾಡಿ ಇರುತ್ತದೆ. ಕ್ರಿಸ್ಮಸ ರಜಾವನ್ನು ಸಹಾ ಉಪಯೋಗಿಸಿಕೊಳ್ಳುವದಕ್ಕೆ ಇವರಿಗೆ ಅಪ್ಪಣೆ ಕೊಟ್ಟು ಇರುತ್ತೆ.

2. ಮಿ|| ಟಿ. ವೆಂಕೋಬರಾಯರು ರಜಾದಮೇಲೆ ಗೈರುಹಾಜರಾಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಚೀಫ ಕೋರ್ಟು ಡೆಪ್ಯುಟಿ ಕ್ಲಾರ್ಕ ಡಿ. ಅಳಿಂಗ್ರಾಚಾರ, ಬಿ.ಎ., ಬಿ.ಎಲ. ರವರನ್ನು ಕಡೆ ತರಗತಿಯ ಮುನಸಿಫರಾಗಿ ಆಕ್ಟಿಂಗ ತರೀಖು ಕೆಲಸ ನೋಡಲು ನೇಮಿಸಿ, ಚಿಕ್ಕಬಳ್ಳಾಪುರಕ್ಕೆ ಕಳುಹಿಸಿ ಇರುತ್ತೆ.

ತಾರೀಖು 13ನೆ ಡಿಸೆಂಬರ್ 1909.

ನಂ. ಜು. 1599—ಕೋರ್ಟ್ಸ್ 125–09–2, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177 ಮತ್ತು 190ನೆ ಪ್ರಕರಣಗಳ ಮೇರೆಗೆ, ನಂಜನಗೂಡು ಮುನಸೀಫರಾದ ಮಿ|| ಡಿ. ಕೆ. ರಾಮರಾವ್, ಬಿ.ಎ., ಬಿ. ಎಲ್. ರವರಿಗೆ 1909ನೆ ಡಿಸೆಂಬರ್ 9ನೆ ತಾರೀಖು ಲಾಗಾಯಿತು 15 ದಿನಗಳ ಪ್ರಿವಿಲೀಜ್ ರಜಾವನ್ನು ಮಂಜೂರ್ಮಾಡಿರುವದಲ್ಲದೆ ಕ್ರಿಸಮಸ್ ರಜಾವನ್ನು ಉಪಯೋಗಿಸಿಕೊಳ್ಳುವದಕ್ಕೂ ಅಪ್ಪಣೆ ಕೊಟ್ಟಿರುತ್ತೆ.

2. ಮಿ|| ಡಿ. ಕೆ. ರಾಮರಾಯರವರು ರಜಾದಮೇಲೆ ಗೈರುಹಾಜರಾಗುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಅಡ್ವೋಕೇಟರಾದ ಮಿ|| ಎಸ್. ಕೆ. ಶ್ರೀನಿವಾಸರಾವ್, ಬಿ.ಎ., ಬಿ.ಎಲ್. ರವರನ್ನು ನಂಜನಗೂಡು ಮುನಸೀಫರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡಬಹು ನೇಮಿಸಿ ಇರುತ್ತೆ.

ತಾರೀಖು 13ನೆ ಡಿಸೆಂಬರ್ 1909.

ನಂ. ಜ. 1600—ಪೋಲೀಸ್. 8–09–9, 1909ನೆ ಇಸವಿ ಆಗಸ್ಟ್ 18ನೆ ಮಾರ್ಕುಮಿನ ಜ. 512—ಪೋಲೀಸು 8–09—4ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ, ಪ್ರೊಬೇಷನರಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ|| ಟಿ. ಎಸ್. ಅಲ್ಲಿಖಾನ್‌ರವರಿಗೆ ಕೊಟ್ಟಿದ್ದ ಜಂಟಿ ರಜಾ ಜತೆಗೆ ಬಗರು ತಲಬಿನ ಎಕ್ಸ್ಟ್ರಾ ಆರ್ಡಿನರಿಯಾದ ವಿಶೇಷ ರಜಾವನ್ನು 1910ನೆ ಜೂನ್ 30ನೆ ತಾರೀಖು ವರಿಗೆ ಮಂಜೂರ್ಮಾಡಿ ಇರುತ್ತೆ.

ತಾರೀಖು 13ನೆ ಡಿಸೆಂಬರು 1909.

ನಂ. 5090—ಮ್ಯು. 55–09–14, 1906ನೆ ಇಸವಿಯ 7ನೆ ನಂಬರ್ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ ಮೇರೆಗೆ ಸಿರಾ ಟವನನ್ನು ಖಾಯಂ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸುವ ಪರ್ಯಂತ ಇದರಡಿ ಕಂಡ ದೊಡ್ಡ ಮನುಷ್ಯರನ್ನು ಸಿರಾ ಟವನ್ ಮ್ಯುನಿಸಿಪಲ್ ಬೋರ್ಡಿಗೆ ಮೆಂಬರುಗಳನ್ನಾಗಿ ಮೊಕರರ್ಮಾಡಿ ಇದೆ :—

(1) ಹೊಸದಾಗಿ ಮೊಕರರರಾದವರು.

1. ಮಿ|| ಯರಗುಂಟಪ್ಪನವರ ಕೆಲಸದ ಮಾಯಿದೆಯು ಪೂರೈಸಿದ್ದರಿಂದ ಅವರಿಗೆ ಬದಲಾಗಿ ಮಿ|| ಫಜಲುಲ್ಲಾಖಾನ್‌ರವರು.

(2) ಪುನಃ ಮೊಕರರಾದವರು.

2. ಮಿ|| ಶಿವನಗೆರೆ ವೆಂಕಟೇಶಯ್ಯನವರು.

3. ,, ಸೂರಪ್ಪನವರು.

ತಾರೀಖು 14ನೆ ಡಿಸೆಂಬರ್ 1909.

ನಂ. ಜ. 3236—ಜ. ಮಿ. 187–09–1, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ, ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಂಡರ್ ಸೆಕ್ರೆಟರಿಗಳಾದ ಮಿ|| ಪಿ. ಜಿ. ಡಿಸೂಜಾ ಯವರಿಗೆ 1909ನೆ ಡಿಸೆಂಬರ್ 13ನೆ ತಾರೀಖು ಲಾಗಾಯಿತು ಅಥವಾ ರಜಾ ಉಪಯೋಗಿಸಿಕೊಳ್ಳಬಹುದಾದ ಮತ್ತೊಂದು ತಾರೀಖು ಲಾಗಾಯಿತು 10 ದಿನಗಳ ಪ್ರಿವಿಲೀಜ್ ರಜಾವನ್ನು ಮಂಜೂರ್ಮಾಡಿ ಇರುತ್ತದೆ.

ತಾರೀಖು 14ನೆ ಡಿಸೆಂಬರ್ 1909.

ನಂ. 5116—ಮೆಡಿಕಲ್. 104–09–2, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ, ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಸರ್ಜನ್ ಮಿ|| ಟಿ. ಎಸ್. ಸಿದ್ದಪ್ಪನವರಿಗೆ ಬರುವ ಕ್ರಿಸಮಸ್ ರಜಾ ಜತೆಗೆ ಎರಡು ತಿಂಗಳ ಪ್ರಿವಿಲೇಜು ರಜಾವನ್ನು ಮಂಜೂರ್ಮಾಡಿ ಇರುತ್ತದೆ.

2. ಮೈಸೂರು ಸಿಟಿಯಲ್ಲಿ ಇನಾಕ್ಯುಲೇಷನ್ ಕೆಲಸದಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮಿ|| ಟಿ. ಬಾಲಕೃಷ್ಣ ಮೊದಲಿಯಾರ್ರವರು ಮೆಡಿಕಲ್ ಇಲಾಖೆಗೆ ವಾಪಸು ಬರಬೇಕು, ಮತ್ತು ಮಿ|| ಟಿ. ಎಸ್. ಸಿದ್ದಪ್ಪನವರು ರಜಾದ ಮೇಲೆ ಗೈರ್ ಹಾಜರಾಗಿರುವ ವರಿಗೆ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ಮಾಡಬೇಕು.

ತಾರೀಖು 8ನೆ ಡಿಸೆಂಬರ್ 1909.

ನಂ 4070—ಫಾ. 1–09–6, ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ|| ಎಂ. ಎ. ವರದಾಚಾರ್‍ರವರಿಗೆ 1909ನೆ ಆಗಸ್ಟ್ 13ನೆ ಮರ್ಕುಂ ರೆ. 1380—ಫಾ. 1–09–2ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮಂಜೂರಾದ ಪ್ರಿವಿಲೇಜ್ ರಜಾವನ್ನು ಸದರಿಯವರು ಸಾಲ್ ಮಜಕೂರು ಆಗಸ್ಟ್ ಮಾಹೆ 21ನೆ ತಾರೀಖಿನಿಂದ ಉಪಯೋಗಿಸಿಕೊಂಡು ನವಂಬರ್ 12ನೆ ತಾರೀಖಿನ ಪೂರ್ವಾಹ್ನ ಕೆಲಸದಮೇಲೆ ವಾಪಸು ಹಾಜರಾಗಿರುವ ಪ್ರಯುಕ್ತ ಅವರು ಉಪಯೋಗಿಸಿಕೊಳ್ಳದೇ ಇರುವ 9 ದಿವಸಗಳ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 13ನೆ ಡಿಸೆಂಬರ್ 1909.

ನಂ. ಫ್ಯ. 2818—ಸೆ. ರೆ. 39–09–6, ಇದರಡಿ ಕಂಡ ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರುಗಳ ವರ್ಗಾವರ್ಗಿಗಳನ್ನು ಮಂಜೂರ್ಮಾಡಿ ಇರುತ್ತದೆ :—

1. ಮಿ|| ಹಸನಲ್ಲಿಯವರು ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಕಡೂರು ಡಿಸ್ಟ್ರಿಕ್ಟಿಗೆ.
2. ,, ಅಬ್ದುಲ್ಲಾಷರೀಫರವರು ಕಡೂರಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದೇಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಲಾಗಾಯಿತು 5 ಘಂಟೆಯ ವರೆಗೆ ದಿವಾನ್ ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಆಫಿಷಿಯೇಟಿಂಗ್ ಸೆಕ್ರಟೆರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೊ.

ತಾರೀಖು 11ನೆ ಡಿಸೆಂಬರ್ 1909.

ನಂ. 1092—9229, ಸನ್ 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಸಿದ್ಧಾಪುರದ ತಲಾವಿಗೆ ಹೋಗುವ ನಾಲಾ ಬಗ್ಗೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಚಿತ್ರದುರ್ಗದ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಅಥವಾ ಸ್ವಾಧೀನದಾರನ ಹೆಸರು.	ಸರ್ವೆ ಅಥವಾ ಸಬ್ ಡಿವಿಜನ್ ನಂಬರು.	ಖುಷ್ಕಿ ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಬೇಕಾದ ವಿಸ್ತೀರ್ಣ.	ಕಂದಾಯ.	ಬೀಳು ಖರಾಬು ಸಾಗುವಳಿ ವಿಸ್ತೀರ್ಣ.	ಚತುರ್ಸೀಮಾ.			
											ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ಎ. ಗು.	ರೂ. ಆ.	ಎ. ಗು.				
ಚಿತ್ರದುರ್ಗ	ಹೊಳಲ್ಕಲ್ಲು	ಹೊಳಲ್ಕಲ್ಲು	ಸಾಗನಹಳ್ಳಿ	ಎತ್ತಿ ರಾಜು ರುದ್ರಪ್ಪ ಬಿನ್ ರಾಜಪ್ಪ	ಸರ್ವೆ ನಂಬರ್ 293ನೆ ಫ್ಲಾಟ್ 1	ಖುಷ್ಕಿ	1 10	1 10	0 12	...	ಇದೇ ಫ್ಲಾಟು ನಂಬ್ರು 293ನೆ 2ನೆ ಫ್ಲಾಟು	ಸರ್ವೆ ನಂಬರು 256 ನಂಬ್ರು ಇದೇ ಫ್ಲಾಟು	ಜಿನಗಿಹಳ್ಳ	ಸರ್ವೆ ನಂಬರು 293ನೆ ಫ್ಲಾಟ್ 2ನೆ ಬಡಾವಣೆ
						ತರೀ	3 26	3 26	17 0	1 10				

ಹುಕುಂ ಬಮೋಜೀಬ್,
ವೈ. ಶ್ರೀನಿವಾಸರಾವ್,
ಅಂಡರ್ ಸೆಕ್ರಟರಿ, ಮೈಸೂರು ಗವರ್ನ್ಮೆಂಟ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್ಮೆಂಟ್.

ಮೈಸೂರ ಗೆಜೆಟ್.

[ಸಂ. 44.] ಸರ್ಕಾರದಿಂದ ಛಾಯಿಸ್ಪ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 23, ಸನ್ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

	ಪುಟಸಂಖ್ಯೆ.
Iನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದ ಆಯಾಯ ಇಲಾಖಾದವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು	449—453
IIನೆ ಭಾಗ—ಮೈಸೂರು ಚೀಫ್ ಕೋರ್ಟ್, ಫಾರೆಸ್ಟು, ರೆವಿನ್ಯೂ, ಮ್ಯುನಿಸಿಪಲ್, ಲೋಕಲ್ ಬೋರ್ಡ್, ಸರ್ಕಾರಿ ಪ್ರಕಟನೆಗಳು	910—930
ಸರ್ಕಾರಿ ಕಾಗದಪತ್ರಗಳು—1909ನೆ ವರ್ಷದ 50ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ ...	523—533

...ಗ.

...ವರಿಗೆ 1909ನೆ ಡಿಸೆಂ

ತಾರೀಖು 15ನೆ ಡಿಸೆ...

ಮೈಸೂರ. 5167—ಸ್ಯಾನಿಟರಿ 6—09—2, ಸಮಸ್ತ ಜನರ ತಿಳುವಳಿಕೆಯ... ...ರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್... ...ಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 189...ನೆ ವರ್ಷದ ಫೆಬ್ರು... ಇದರಿಂದ ಪ್ರಸಿದ್ಧಿಪಡಿಸುವುದೇನೆಂದರೆ :— ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ...ಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ...ನೆಯ ತಾರೀಖಿನ ನಂಬರ್ 9383— ...ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ I ... ತುಮಕೂರಿಸಲ್ಪಡುವದು.

ಸ್ಥಳ.	
ಕುಣಿಗಲ್	

ತಾರೀಖು 20ನೆ ಡಿಸೆಂಬರ್ 1909.

ನಂ. 5290—ಸ್ಯಾನಿಟರಿ 17-09-3, ಮೈಸೂರು ಡಿಸ್ಟ್ರಿಕ್ಟು ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮಕ್ಕೆ ಶ್ರೀ ತ್ರಿಪುರಸುಂದರಿ ಅಮ್ಮನವರ ಜಾತ್ರೆಯ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯುವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1910ನೆಯ ವರ್ಷದ ಜನವರಿ ತಿಂಗಳು 10ನೆ ತಾರೀಖಿನಿಂದ ಅದೇ ತಿಂಗಳು 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 2(ನೆ ಡಿಸೆಂಬರ್ 1909.

ನಂ. 5289—ಸ್ಯಾನಿಟರಿ 21—09—2, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯುವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ.			ಗೆ.		
1. ಎಲ್ಲಮೂವಯ ಶ್ರೀರಾಮೇಶ್ವರ ದೇವರ ರಥೋತ್ಸವ.	ತೀರ್ಥಹಳ್ಳಿ ...	ತೀರ್ಥಹಳ್ಳಿ ...	2	1	1910	18	1	1910
2. ಶ್ರೀ ಗೋಪಾಲಕೃಷ್ಣಸ್ವಾಮಿ ರಥೋತ್ಸವ.	ಆಗುಂಬೆ ...	ಡಿಟೋ ...	4	2	1910	20	2	1910
3. ಕಾಲಸ್ವಾಮಿ ಜಾತ್ರೆ ...	ರಾಂಪುರ ...	ಹೊನ್ನಾಳಿ ...	26	2	1910	7	3	1910

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಡಿಸೆಂಬರ್ 1909.

ನಂ. 5291—ಸ್ಯಾನಿಟರಿ 17-09-4, ಮೈಸೂರು ಡಿಸ್ಟ್ರಿಕ್ಟ್ ಎಡತೊರೆ ತಾಲ್ಲೂಕಿನ ಚುಂಚನಕಟ್ಟೆಗೆ ಶ್ರೀ ರಾಮದೇವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು [illegible]ಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾ[illegible]ರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು [illegible]ಸೂರು [illegible]ವರ ಸರ್ಕಾರದವರು 191[illegible] ವರ್ಷದ ಜನವರಿ ತಿಂಗಳು 1[illegible]ರಾಜರವರ [illegible] ದಿನಗಳೂ [illegible]ರುವ [illegible]

ತಾರೀಖು 21ನೆ ಡಿಸೆಂಬರ್ 1909.

ನಂ. 526[illegible]—ಸ್ಯಾ. 84-09-[illegible]909ನೆ ಇಸವಿ ಏಪ್ರಿಲ್ 10ನೆ ತಾರೀಖಿನ •9916—ಮೆಡಿಕಲ್. 163-08-8ನೆ ನಂಬರ್ ಮತ್ತು 2—6—09ನೆ ಮಾರ್ಚ್[illegible] 12085—ಸ್ಯಾ. 91-08-2ನೆ ನಂಬರ್ ಸರ್ಕಾರಿ ಹುಕುಂಗಳ ಜತೆಗೆ, 1906ನೆ ಇಸವಿಯ 1ನೆ ನಂಬರ್ ರೆಗ್ಯುಲೇ[illegible]ನ 2ನೆ ಪ್ರಕರಣದ 1ನೆ ಕಲಮನ್ನನುಸರಿಸಿ ಇದರಡಿ ಕಂಡ ಮ್ಯುನಿಸಿಪಲ್ ಬೋರ್ಡುಗಳ ಯಜಮಾನ್ಯರಿಗೆ ಒಳಪಟ್ಟ ಪ್ರದೇಶಗಳಲ್ಲಿ 1910ನೆ ಫೆಬ್ರುವರಿ ಗುರ್ರೇ ತಾರೀಖಿನ ಲಾಗಾಯಿತು ಹಂಗಾಮಿ ತರೀಕ್ ಎರಡು ವರ್ಷಗಳ ಕಾಲ ಬಲಾತ್ಕಾರವಾಗಿ ದೇವೀ ಹಾಕಿಸುವ ಪದ್ಧತಿಯು ಜಾರಿಯಲ್ಲಿರತಕ್ಕದ್ದೆಂದು ಈ ಮೂಲಕ ಪ್ರಸಿದ್ಧಪಡಿಸಿ ಇರುತ್ತದೆ. ಸದರಿ ಪ್ರದೇಶಗಳು ಯಾವುವೆಂದರೆ :—

1. ಚಾಮರಾಜನಗರ.	6. ನಂಜನಗೂಡು.
2. ಶ್ರೀರಂಗಪಟ್ಟಣ.	7. ತಿರುಮಕೂಡ್ಲು ನರಸೀಪುರ.
3. ಹುಣಸೂರು.	8. ಮಳವಳ್ಳಿ.
4. ಯಡತೊರೆ.	9. ಮಂಡ್ಯ.
5. ಗುಂಡ್ಲುಪೇಟೆ.	10. ಕೃಷ್ಣರಾಜಪೇಟೆ.

ತಾರೀಖು 22ನೆ ಡಿಸೆಂಬರ್ 1909.

ನಂ. 5403—ಸ್ಯಾನಿಟರಿ 15-09-2, ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯಕ್ಕೆ ಸುಬ್ರಹ್ಮಣ್ಯಸ್ವಾಮಿ ಜಾತ್ರೆಯ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮ ಮಹಾರಾಜರವರ ಸರ್ಕಾರದವರು 1910ನೆಯ ವರ್ಷದ ಜನವರಿ ತಿಂಗಳು 15ನೆ ತಾರೀಖಿನಿಂದ ಅದೇ ತಿಂಗಳು 25ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 15ನೆ ಡಿಸೆಂಬರ್ 1909.

ನಂ. 5177—ಮ್ಯು. 256-09-8, ಸ್ 1894ನೆ ಇಸವಿ [illegible] VIIನೆ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನ್ 6ನೆ ಸೆಕ್ಷನ್ ಮೇರಿಗೆ ಈ ಕೆಳಗೆ ನಮೂದಿರುವ ಜಮೀನುಗಳು ಮತ್ತು ಕಟ್ಟಡಗಳು ಸರ್ಕಾರಿ ಕೆಲಸಕ್ಕೆ ಅಂದರೆ, ಬೆಂಗಳೂರು ಸಿಟಿ 3ನೆ ಡಿವಿಜನ್ ಮಾಮೂಲ್‌ಪೇಟೆಯಲ್ಲಿ ಒಂದು ಕ[illegible]ರ್ವೆನ್ಸಿ ಗಲ್ಲಿ ನಿರ್ಮಾಣ ಮಾಡುವದಕ್ಕಾಗಿ [illegible]ಕಾಗಿರುತ್ತೆಂದು ಇದರಿಂದ ಪ್ರಕಟಿಸಡಿಸಿವೆ. ಮತ್ತು ಸದರಿ ರೆಗ್ಯುಲೇಷನ್ 7ನೆ ಸೆಕ್ಷನ್ ಮೇರಿಗೆ ಸದರೀ ಸ್ವತ್ತುಗಳನ್ನು ಪಡಿಯಲು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು ಕ್ರಮ [illegible]ಜರಿಗಿಸತಕ್ಕದ್ದು.

ನಂಬರ್.	ಡಿವಿಜನ್ ನಂ.	ಬೀದಿಯ ಹೆಸರು.	ಖಾನೇ ನಂ.	ಮಾಲೀಕರ ಹೆಸರು.	ಸ್ವತ್ತಿನ ವಿವರಣೆ.	ಅಳತೆ.			ಚಕ್ಕು ಬಂದಿ.			
						ಉದ್ದ ಅಡಿ.	ಅಗಲ ಅಡಿ.	ಚದರ ಅಡಿ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	3ನೇ ಡಿವಿಜನ್	ಮಾಮೂಲ್‌ಪೇಟೆ ರಸ್ತೆ	78	ಜವರಾಯಪ್ಪ ...	ಮಾಳಿಗೆ ಮನೆ	21	9	189	ಗಲ್ಲಿ	ನಂಜುಂಡಪ್ಪನವರ ಖಾಲಿ ಜಮೀನು.	ಮಲ್ಲಪ್ಪನವರ ಖಾಲಿ ಜಮೀನು.	ಉಳಿಯುವ ಮನೆ
2			77–78	ನಂಜುಂಡಪ್ಪ ...	ಡಿಟ್ಟೋ ...	47	9	423	ಉಳಿಯುವ ಮನೆ ಮತ್ತು ಜಮೀನು	ಪುಟ್ಟಸಾವಪ್ಪನವರ ಮನೆ.	ಮಾಮೂಲ್‌ಪೇಟೆ ರಸ್ತೆ.	ಜವರಾಯಪ್ಪನವರ ಮನೆ.
					ಖಾಲಿ ಜಮೀನು ...	35	10	350	ನಂಜುಂಡಪ್ಪನವರ ಖಾಲಿ ಜಮೀನು.	ಪುಟ್ಟಪ್ಪನವರ ಮನೆ ಮತ್ತು ಜಮೀನು.	ನಂಜುಂಡಪ್ಪನವರ ಮನೆ.	ಡಿಟ್ಟೋ
					ಡಿಟ್ಟೋ	23	18	414	ಜವರಾಯಪ್ಪನವರ ಮನೆ	ನಂಜುಂಡಪ್ಪನವರ ಜಮೀನು.	ನಂಜುಂಡಪ್ಪನವರ ಜಮೀನು.	ನಂಜುಂಡಪ್ಪನವರ ಜಮೀನು ಮತ್ತು ಜವರಾಯಪ್ಪನವರ ಮನೆ.

ತಾರೀಖು 18ನೆ ಡಿಸೆಂಬರ್ 1909.

ನಂ. 5234—ಮೆಡಿಕಲ್ 40–09–6, ಮಿ|| ಎಸ್. ನಾರಾಯಣರಾವ್, ಬಿ.ಎ., ಎಂ.ಬಿ., ಸಿ.ಎಂ. ಯವರಿಗೆ ಸಬ್ ಅಸಿಸ್ಟೆಂಟ್ ಸರ್ಜನ್ 3ನೆ ತರಗತಿಯಿಂದ 2ನೆ ತರಗತಿಗೆ 1909ನೆ ಇಸವಿ ಸೆಪ್ಟಂಬರ್ 6ನೆ ತಾರೀಖು ಲಾಗಾಯಿತು ಬಡ್ತಿ ಕೊಟ್ಟು ಇರುತ್ತೆ.

ತಾರೀಖು 20ನೆ ಡಿಸೆಂಬರ್ 1909.

ನಂ. ಜ. 3352—ಜ. ಮಿ. 190–09–1, ಸ೯ 1909ನೆ ಇಸವಿ ಆಗಸ್ಟು 12ನೆ ಮುಕ್ಕಾಮಿನ ರೆ. 1375—ಫಾ. 190–08–3ನೆ ನಂ. ರ್ ಸರ್ಕಾರಿ ಇಸ್ತಿಹಾರ್ನಾಮೆಯ ಮೇರಿಗೆ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರಾಗಿ ನೇಮಿಸಲ್ಪಟ್ಟ ಮಿ|| ಸಿ. ವೆಂಕಟರಾವ್, ಬಿ.ಎ. ಯವರಿಗೆ ಬದಲಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಅಮಲ್ದಾರ್ ಮಿ|| ಎಚ್. ರಾಮರಾವ್, ಬಿ.ಎ., ಬಿ.ಎಲ್. ರವರನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಆಫೀಸು ರಿಜಿಸ್ಟ್ರಾರಾಗಿ ನೌಕರರ್ಮಾಡಿ ಇರುತ್ತದೆ.

ತಾರೀಖು 20ನೆ ಡಿಸೆಂಬರ್ 1909.

ನಂ. 5287—ಮ್ಯು. 59–09–10, ಚಿಕ್ಕಮಗಳೂರು ಟವನು ಮ್ಯುನಿಸಿಪಲ್ ಕೌನ್ಸಿಲಿಗೆ ಇದರಡಿ ಕಂಡ ದೊಡ್ಡ ಮನುಷ್ಯರನ್ನು ಮ್ಯುನಿಸಿಪಲ್ ಕೌನ್ಸಿಲರನ್ನಾಗಿ ಚುನಾಯಿಸಿದೆ ಅಥವಾ ನೇಮಕಮಾಡಿದೆ :—

I. 10 (1) (a) ಪ್ರಕರಣದ ಮೇರೆಗೆ ಚುನಾಯಿಸಲ್ಪಟ್ಟವರು.

ಇಲ್ಲ.

II. ನೇಮಕಮಾಡಲ್ಪಟ್ಟವರು.

A. 10 (1) (b) (i)ನೆ ಪ್ರಕರಣದಮೇರೆಗೆ.

1. ಮಿ|| ಹಾಜಿ ಭದ್ರುದ್ದೀನ್‌ಖಾನ್‌ರವರು.
2. ರೆವರೆಂಡ್. ಜೆ. ರೆಡ್ಮಂಡ್‌ರವರು.
3. ಫಾದರ್ ಗಿರ್ಯಾಂಡ್‌ರವರು.
4. ಮಿ|| ಎಂ. ನರಸಿಂಹಶೆಟ್ಟಿ.
5. ,, ಎಚ್. ಕೇಶವಾಚಾರು, (ರಿಟೈರ್ಡ್ ಅಮಲ್ದಾರ್).
6. ,, ಟಿ. ಚನ್ನಬಸಪ್ಪಶೆಟ್ಟಿ.

B. 10 (1) (b) (ii)ನೆ ಪ್ರಕರಣದ ಮೇರೆಗೆ.

1. ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು, (ಪ್ರೆಸಿಡೆಂಟ್).
2. ಟ್ರೆಜರಿ ಅಸಿಸ್ಟೆಂಟ್ ಕಮಿಷನರು, (ವೈಸ್ ಪ್ರೆಸಿಡೆಂಟ್).
3. ಕಡೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರು.
4. ಕಡೂರು ಡಿಸ್ಟ್ರಿಕ್ಟು ಸ್ಯಾನಿಟರಿ ಆಫೀಸರು.
5. ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್.

C. 10 (2)ನೆ ಪ್ರಕರಣದ ಮೇರೆಗೆ.

... ...ಯ್ಯಂಗಾರು, ಎಲ್. ಸಿ. ಇ.
2. ,, ಯು. ಎಸ್. ಶಿವರಾಯರು.
3. ,, ಜಿ. ಅಬ್ದುಲ್‌ಖಾಲಿಕ್‌ರವರು.
4. ,, ಎಸ್. ಮಂಜಯ್ಯನವರು.
5. ,, ಸಿ. ವಾಸುದೇವರಾಯರು.
6. ,, ಬಿ. ಕೇಶವಯ್ಯನವರು.

ತಾರೀಖು 21ನೆ ಡಿಸೆಂಬರ್ 1909.

ನಂ. ಜ. 3367—ಜ. ಮಿ. 192–09–1, ಜನರಲ್ ಮತ್ತು ರೆವಿನ್ಯೂ ಇಲಾಖೆಗಳಲ್ಲಿ ಸರ್ಕಾರಕ್ಕೆ ಅಂಡರ್ ಸೆಕ್ರೆಟರಿಯವರಾಗಿರುವ ಮಿ|| ಕೆ. ಮ್ಯಾಥ್ಯೂ, ಬಿ.ಎ. ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ ಕ್ರಿಸ್‌ಮಸ್ ರಜಾ ಜೊತೆಗೆ 1910ನೆ ಜನವರಿ 3ನೆ ತಾರೀಖಿನ ಲಾಗಾಯಿತು ಎರಡು ತಿಂಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಲಾಗಿದೆ.

ತಾರೀಖು 22ನೆ ಡಿಸೆಂಬರ್ 190 .

ನಂ. ಜು 1741—ಕೋರ್ಟ್. 143–09–2, ಮೈಸೂರು ಸರ್ವಿಸ್ ರೆಗ್ಯುಲೇಷನಿನ 209ನೆ ಪ್ರಕರಣವನ್ನನುಸರಿಸಿ ಬೆಂಗಳೂರು ಸಬ್ ಜಡ್ಜಿಯವರಾದ ಮಿ|| ಬಿ. ನಾಗಪ್ಪ, ಬ್ಯಾರಿಸ್ಟರ್ ಅಟ್ ಲಾ ಯವರಿಗೆ 1910ನೆ ಜನವರಿ 3ನೆ ತಾರೀಖು ಲಾಗಾಯಿತು 5 ದಿನಗಳ ಏಗರು ತಲಬು ವಿಶೇಷ ರಜಾವನ್ನು ಮಂಜೂರ್ಮಾಡಿರುತ್ತದೆ.

ತಾರೀಖು 22ನೆ ಡಿಸೆಂಬರ್ 1909.

ನಂ. ಜು. 1743—ಕೋರ್ಟ್ಸ್ 113–09–3, ಮಾಲೂರು ಸಬ್ ಡಿವಿಜನಿನ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟರಾದ ಮಿ|| ಮಹಮ್ಮದ್ ಒಬೇದುಲ್ಲಾ ಯವರು ಮೊದಲನೆ ತರಗತಿಯ ಮಾಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸುತ್ತಿರುವ ಪರ್ಯಂತ ಸಾಕ್ಷಿಗಾರರ ಸಾಕ್ಷ್ಯವನ್ನು ಸ್ವತಃ ಇಂಗ್ಲೀಷು ಭಾಷೆಯಲ್ಲಿ ಬರೆಯಬೇಕೆಂದು 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 357ನೆ ಪ್ರಕರಣದ ಮೇರೆಗೆ ಹುಕುಂ ಮಾಡೋಣಾಗಿದೆ.

ತಾರೀಖು 22ನೆ ಡಿಸೆಂಬರ್ 1909.

ನಂ. 5428—ಲೋ. ಬೋ. 180–09–2, ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ಸಬ್ ತಾಲ್ಲೂಕು ಕೂಟಗಲ್ ಹೋಬಳಿಗೆ ಸೇರಿದ ಜಾಲಮಂಗಲವೆಂಬ ಗ್ರಾಮವು 1902ನೆ ಇಸವಿ ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್‌ಗೆ ಒಳಪಟ್ಟ ಯೂನಿಯನ್ ಆಗಿರತಕ್ಕದ್ದು.

ತಾರೀಖು 21 ಡಿಸೆಂಬರ್ 1909.

ನಂ. ರೆ. 4304—ಲ್ಯಾ. ರೆ. 28-09-12, ಸರ್ 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡೀ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ ತುಮಕೂರು ಡಿಸ್ಟ್ರಿಕ್ಟು ಮದ್ದುಗಿರಿ ತಾಲ್ಲೂಕು ಅಗ್ರಹಾರದ ಮಜರೆ ಹೊಸಪಾಳ್ಯದ ನೂತನ ಗಾಮಠಾಣೆ ಬಗ್ಗೆ ಅವಶ್ಯಕವಾಗಿ ಇದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಪ್ರಕರಣವನ್ನನುಸರಿಸಿ ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ಸದರೀ ಜಮೀನನ್ನು ಪಡೆಯಲು ಕ್ರಮ ಜರುಗಿಸುವದಕ್ಕೆ ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ತೆಗದುಕೊಳ್ಳತಕ್ಕ ಜಮೀನಿನ ತರಹೆ.	ಒಟ್ಟು ವಿಸ್ತೀರ್ಣ.	ಆಕಾರ.	ತೆಗದುಕೊಳ್ಳತಕ್ಕ ಜಮೀನಿನ ವಿಸ್ತೀರ್ಣ.	ಎಲ್ಲೆಗಳು.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ಮದ್ದುಗಿರಿ	ಪುರವರ	ಅಗ್ರಹಾರದ ಮಜರೆ ಹೊಸಪಾಳ್ಯ.	ಮುಳ್ಳುಬಾಗಲಿಗ	36-3	ಖುಷ್ಕಿ ಖರಾಬ್. ಬಾಕಿ ...	ಎ. ಗು. 9 39 0 30 9 9	ರೂ. ಆ. 5 4	ಎ. ಗು. 2 1	ಸರ್ವೆ ನಂಬರುಗಳು 36-2 ಮತ್ತು 37	ಸರ್ವೆ ನಂಬರುಗಳು 32 ಮತ್ತು 44	ಸರ್ವೆ ನಂಬರು 34-2	ಸರ್ವೆ ನಂಬರುಗಳು 39 ಮತ್ತು 43-2

ತಾರೀಖು 22ನೆ ಡಿಸೆಂಬರ್ 1909.

ನಂ. ರೆ. 4338—ಲ್ಯಾ. ರೆ. 31-09-8, ಸರ್ 1894ನೆ ಇಸವಿಯ VIIನೆ ಮಸೂದೆ ಮೈಸೂರು ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನ್ನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಈ ಕೆಳಗೆ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ, ಶಿಕಾರಿಪುರ ತಾಲ್ಲೂಕು ಬಳ್ಳೂರು ಗ್ರಾಮದಲ್ಲಿ ಕುಂಬಾರರಿಗೆ ಎರೆ ಮಣ್ಣು ತೆಗದುಕೊಳ್ಳುವದಕ್ಕೆ ಅವಶ್ಯಕವಾಗಿರುವದರಿಂದ ಸದರಿ ಜಮೀನನ್ನು ಸರ್ಕಾರಕ್ಕೆ ಅಕ್ವಯಿರ್ ಮಾಡಿಕೊಳ್ಳಲು ಕ್ರಮ ಜರುಗಿಸುವದಕ್ಕೆ ಮೇಲ್ಕಂಡ ಮಸೂದೆಯ 7ನೆ ಪ್ರಕರಣವನ್ನನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ಅಧಿಕಾರವನ್ನು ಕೊಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಅಕ್ವೈರ್ ಮಾಡಬೇಕಾದ ಜಮೀನಿನ ವಿವರ.			ಅಕ್ವೈರ್ ಮಾಡಬೇಕಾದ ವಿಸ್ತೀರ್ಣ.	ಚಕ್ಕುಬಂದಿ.				ಷರಾ.
						ತರಹೆ.	ವಿಸ್ತೀರ್ಣ.	ಆಕಾರ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
ಶಿವಮೊಗ್ಗ	ಶಿಕಾರಿಪುರ	ಹೊಸೂರು	ಬಳ್ಳೂರು	ಕರಬಸವ ಬಿನ್ ಬಸಪ್ಪ	೦ ಸರ್ವೆ ನಂಬರು 81	ಖುಷ್ಕಿ	ಎ. ಗು. 5 23	ರೂ. 6	ಎ. 1	ಸರ್ವೆ ನಂಬರು 81	[illegible] ನಂಬರು 67	[illegible]ಬರು 67	[illegible] 81	[illegible]

ನೋಟಿಸ್.

ಮಾಹೆ ಮಜಕೂರು 30ನೆ ತಾರೀಖಿನಲ್ಲಿ ಕ್ರಿಸಮಸ್ ರಜಾ ದಿನಗಳ ದೆಸೆಯಿಂದ ಮೈಸೂರು ಗೆಜೆಟು ಛಾಪಿಸಲ್ಪಡುವದಿಲ್ಲವು.

ಸಿ. ಎಚ್. ಯೇಟ್ಸ್,
ಕಂಪೈಲರ್, ಮೈಸೂರು ಗೆಜೆಟ.

ತಾರೀಖು 23ನೆ ಡಿಸೆಂಬರ್ 1909.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ। 7, ಸನ್ 1909

IIನೆ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂಟ್ ಡಿಪಾರ್ಟ್ಮೆಂಟು.

ಇಸ್ತಿಹಾರ್‌ನಾಮೆ.

ನಂಬರ್ 426, ತಾರೀಖು 11ನೆ ಡಿಸೆಂಬರ್ 1908.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದ ತಾಲ್ಲೂಕಿಗೆ ಸೇರಿದ 174 ಸರಕಾರಿ ಗ್ರಾಮಗಳಿಗೆ ರಿವಿಜನ್ ಯಾನೆ ತಿದ್ದುಪಡಿಯಾದ ಆಕಾರವನ್ನು ಗವರ್ನಮೆಂಟನವರು ಮಂಜೂರ್ಮಾಡಿರುವದರಿಂದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಪ್ರಕಾರ ಸದರಿ ತಿದ್ದುಪಡಿಯಾದ ಆಕಾರವನ್ನು ಘಾಯಿಷ್ ಮಾಡತಕ್ಕ ರಿವಿಜನ್ ಸೆಟ್ಲ್ಮೆಂಟ್ ಕೆಲಸವು ಕಸಬಾ ಶಿಕಾರಿಪುರದ ಮೊಕ್ಕಾಂನಲ್ಲಿ 1909ನೆ ಜನವರಿ ತಾರೀಖು 11 ರಲ್ಲು ಅಥವಾ ಆ ಸುಮಾರಿಗೆ ಪ್ರಾರಂಭಿಸಲ್ಪಡುವದು

ಡಿ. ಶಾಮರಾವ್,
ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂಟ್ ಸೂಪರಿಂಟೆಂಡೆಂಟ್.

ಫಾರೆಸ್ಟು ಇಲಾಖಾ.

ಇಸ್ತಿಹಾರ್.

ತಾರೀಖು 31ನೆ ಡಿಸೆಂಬರ್ 1 08.

ಇದರಿಂದ ತಿಳಿಯಪಡಿಸುವುದೇನಂದರೆ—ಈ ಕೆಳಗೆ ನಮೂದಿರತಕ್ಕ ಮಾಲುಗಳು ಚನ್ನಗಿರಿ ರೇಂಜು ಕುಕ್ವಾಡ ಉಬ್ರಾಣಿ ಮನ್ನಾ ಮತ್ತು ಡಿಸ್ಟ್ರಿಕ್ಟು ಜಂಗ್ಲಿಯಲ್ಲಿ ಶಿಕ್ಕಿವೆ. ಯಾರಾದರೂ ವಾರಸ್ದಾರರು ಇದ್ದರೆ ಈ ಇಸ್ತಿಹಾರ್ ತಾರೀಖಿನಿಂದ ಒಂದು ತಿಂಗಳು ವಾಯಿದೆ ವಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ರೂಬರೂ ಹಾಜರಾಗಬೇಕು. ಹಾಗೆ ಯಾರೂ ಹಾಜರಾಗದೇ ಇದ್ದರೆ ಸದರಿ ಮಾಲುಗಳು ಸರ್ಕಾರಕ್ಕೆ ಸೇರಿಸಲ್ಪಡುತ್ತೆ. ನಂತರ ಯಾವ ಹಕ್ಕೂ ಅಂಗೀಕರಿಸಲ್ಪಡುವುದಿಲ್ಲಾ.

ಮಾಲಿನ ವಿವರ.	ಅದದು.	ಸಲೆ ಅಡಿ	ಎಲ್ಲಿ ಸಿಕ್ಕಿದ್ದು.	ಯಾರ ಸುಫರ್ದಿನಲ್ಲಿದೆ.
ಚಕಡೀ ಗಾಡಿ (ಎರಡು ಎತ್ತಿನದು).	1	...	ಕುಕ್ವಾಡ ಉಬ್ರಾಣಿ ಮನ್ನಾ ಜಂಗ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು.	ಲಕೆ ಹಳ್ಳಿ ಪಟೇಲ್ ಕರಿಬಸಪ್ಪ
ಸಾಗುವಾನಿ ಬೆಲಗು ...	7	$38\frac{1}{2}$	ಡಿಟೋ ...	ಡಿಟೋ
ಡಿಟೋ ...	2	$7\frac{1}{2}$	ಮರುವಂಜಿ ಡಿಸ್ಟ್ರಿಕ್ಟು ಜಂಗ್ಲಿ ಚನ್ನಗಿರಿ ರೇಂಜ್.	ಮರುವಂಜಿ ಪಟೇಲ ಮರಳು ಶಿದ್ದಪ್ಪ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 20ನೆ ಡಿಸೆಂಬರ 1908.

ಈ ಕೆಳಗೆ ನಮೂದಿಸಿರುವ ಇಸ್ತಿಹಾರನ್ನು ಸರ್ವರ ತಿಳುವಳಿಕೆ ಬಗ್ಗೆ ಘಾಯಿಷ್ವಮಾಡಿ ಇದೆ:—ಚಿತ್ರದುರ್ಗದ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಮನ್ನಾ ಜಂಗಲುಗಳು, ಮತ್ತು ಪ್ಲಾಂಟೇಷನ್‌ಗಳು, 1909ನೆ ಇಸವಿ ಜನವರಿ ಮಾಹೆ 1ರ ಲಾಗಾಯತು 1909ನೆ ಇಸವಿ ಜೂನ್ ಆಖೈರು ವರೆಗೆ ಬೇಟಿ, ಷಿಕಾರಿ, ವಗೈರೆ ಕೆಲಸಗಳು ಮಾಡದಂತೆ ಬಂದುಮಾಡಿ ಇರುತ್ತೆ. ಸದರಿ ಮನ್ನಾ ಜಂಗಲು ಮತ್ತು ಪ್ಲಾಂಟೇಷನ್‌ಗಳನ್ನು ಮೈಸೂರು ಸೀಮೆಯ ಕನ್ಸರ್ವೇಟರ್ ಸಾ॥ ರವರಿಂದಲಾಗಲಿ ಅಥವಾ ಅಧಿಕಾರ ಹೊಂದಿದ ಇತರ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರಿಂದಲಾಗಲಿ ಕ್ರಮವಾಗಿ ಅಧಿಕಾರ ಹೊಂದದ ಯಾವ ಮನುಷ್ಯನು ಪ್ರವೇಶಿಸಕೂಡದು. ಅಕ್ರಮವಾಗಿ ಪ್ರವೇಶ ಮಾಡಿದವರನ್ನು 1900ನೆ ಇಸವಿ XIನೆ ಫಾರೆಸ್ಟು ರೆಗ್ಯುಲೇಷನ್ 24ನೆ ಸೆಕ್ಷನ್ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುವದು.

2. ಸ್ಟೇಟ್ ಫಾರೆಸ್ಟಿನಲ್ಲಿ ಯಾವ ಹಕ್ಕನ್ನಾದರೂ ಚಲಾಯಿಸುವ ಅಥವಾ ಅಂತಾ ಫಾರೆಸ್ಟಿನಲ್ಲಿ ಮರಮುಟ್ಟನ್ನು ಕಡದು ಸಾಗಿಸಲು ಅಥವಾ ದನಕರುವನ್ನು ಮೇಯಿಸಲು ಅಥವಾ ಅಲ್ಲಿಂದ ಯಾವದಾದರೂ ಫಾರೆಸ್ಟುತ್ಪತ್ತಿಯನ್ನು ತೆಗದುಕೊಳ್ಳಲು ಅಪ್ಪಣೆ ಪಡೆದ ಪ್ರತಿ ಮನುಷ್ಯನು, ಆ ಸ್ಟೇಟ್ ಫಾರೆಸ್ಟಿನಲ್ಲಿ ಯಾರಾದರೂ ಅವನ ಚಾಕರೀಲಿರುವ ಪ್ರತಿ ಮನುಷ್ಯನು, ಮತ್ತು ಸರ್ಕಾರದ ನೌಕರೀಲಿರುವ ಅಂತಾ ಫಾರೆಸ್ಟಿಗೆ ಹತ್ತರದ ಯಾವದಾದರೂ ಗ್ರಾಮದಲ್ಲಿರುವ ಪ್ರತಿ ಮನುಷ್ಯನು ಅಥವಾ ಆ ಗ್ರಾಮದ ಪ್ರತಿ ನೌಕರನೂ ಅನವಶ್ಯಕವಾದ ಸಾವಕಾಶವಿಲ್ಲದೆ ಅಂತಾ ಫಾರೆಸ್ಟಿನಲ್ಲಿ ಅಥವಾ ಅದರ ಸಮೀಪದಲ್ಲಿ ಬೆಂಕಿಬಿದ್ದ ವಿಚಾರವಾಗಿಯಾಗಲೀ ಯಾವದಾದರೂ ಫಾರೆಸ್ಟು ತಕ್ಸೀರ್ ನಡದ ಅಥವಾ ನಡಿಸಬೇಕೆಂಬ ಉದ್ದೇಶ್ಯದ ವಿಚಾರವಾಗಿಯಾಗಲೀ ತನಗೆ ದೊರಕಿರಬಹುದಾದ ಯಾವ ವರ್ತಮಾನವನ್ನಾದರೂ ಅತ್ಯಂತ ಸಮೀಪದಲ್ಲಿರುವ ಫಾರೆಸ್ಟಾಫಿಸರಿಗೆ ಅಥವಾ ಪೋಲೀಸಾಫಿಸರಿಗೆ ಕೊಡಲು ಬದ್ಧನಾಗಿರತಕ್ಕದ್ದಲ್ಲದೆ ತನ್ನ ಸಹಾಯವನ್ನು ತಗಾದೆ ಮಾಡುವ ಯಾವ ಫಾರೆಸ್ಟು ಅಥವಾ ಪೋಲೀಸಾಫಿಸರಿಗಾಗಲೀ—

(a) ಅಂತಾ ಫಾರೆಸ್ಟಿನಲ್ಲಿ ಸಂಭವಿಸುವ ಯಾವ ಬೆಂಕಿಯನ್ನಾದರೂ ಆರಿಸೋಣದರಲ್ಲಿ,

(b) ಅಂತಾ ಫಾರೆಸ್ಟಿನ ಆಸ್ಪಾಸಿನಲ್ಲಿ ಸಂಭವಿಸಬಹುದಾದ ಯಾವ ಬೆಂಕಿಯಾಗಲೀ ಅಂತಾ ಫಾರೆಸ್ಟಿನೊಳಕ್ಕೆ ವಿಸ್ತರಿಸದಂತೆ ತಪ್ಪಿಸೋಣದರಲ್ಲಿ,

(c) ಅಂತಾ ಫಾರೆಸ್ಟಿನಲ್ಲಿ ಯಾವ ಫಾರೆಸ್ಟು ತಕ್ಸೀರು ನಡಿಯದಂತೆ ಅಡ್ಡಿ ಮಾಡೋಣದರಲ್ಲಿ, ಮತ್ತು

(d) ಅಂತಾದ್ದು ಯಾವದಾದರೂ ತಕ್ಸೀರ್ ಅಂತಾ ಫಾರೆಸ್ಟಿನಲ್ಲಿ ನಡದಿರುತ್ತೆಂದು ನಂಬಲು ಕಾರಣವಿರುವಾಗ, ಅಪರಾಧಿಯನ್ನು ಕಂಡುಹಿಡಿದು ಅವನನ್ನು ದಸ್ತಗಿರಿ ಮಾಡೋಣದರಲ್ಲಿ ಸಹ ಕುಮ್ಮಕ್ಕು ಮಾಡತಕ್ಕದ್ದು. (1900ನೆ ಇಸವಿ 11ನೆ ಫಾರೆಸ್ಟು ರೆಗ್ಯುಲೇಷನ್ 29ನೆ ಸೆಕ್ಷನ್.)

(a) ಸ್ಟೇಟು ಫಾರೆಸ್ಟು—

(1)	ಜೋಗಿಮಟ್ಟಿ ಮನ್ನಾ ಜಂಗಲಿ ಬಡಾವಣೆ ಸಹ ...	ಚಿತ್ರದುರ್ಗ, ಹಿರಿಯೂರು ಮತ್ತು ಹೊಳಲ್ಕೆರೆ ತಾಲ್ಲೂಕುಗಳು.
(2)	ನೀರ್ಥಡಿ ಡಿಟ್ಟೋ ...	ಚಿತ್ರದುರ್ಗ, ಹೊಳಲ್ಕೆರೆ ಮತ್ತು ದಾವಣಗೆರೆ ತಾಲ್ಲೂಕುಗಳು.
(3)	ಮಲೆ ಬೆನ್ನೂರು	ಹರಿಹರ ಸಬ್ ತಾಲ್ಲೂಕು, ಹೊನ್ನಾಳಿ ತಾಲ್ಲೂಕು.
(4)	ಕುದುರೆಕಣಿವೆ	ಹೊಸದುರ್ಗ, ಚಿಕ್ಕನಾಯಿಕನಹಳ್ಳಿ ತಾಲ್ಲೂಕುಗಳು.
(5)	ಕಮರಾಕಾವಲು	ಮೊಳಕಾಲ್ಮುರು ತಾಲ್ಲೂಕು.
(6)	ಹಿರೇ ಅಡವಿ	ಡಿಟ್ಟೋ
(7)	ಸಂಜೀವರಾಯನಕೋಟೆ	ಡಿಟ್ಟೋ
(8)	ಕೃಷ್ಣರಾಜಪುರ	ಡಿಟ್ಟೋ
(9)	ಬಾಂಡರಾವಿ	ಡಿಟ್ಟೋ
(10)	ರಂಗಯ್ಯನದುರ್ಗ	ಜಗಲೂರು ತಾಲ್ಲೂಕು.
(11)	ಅಣಬೂರು	ಡಿಟ್ಟೋ
(12)	ದೇವರಗುಡ್ಡ	ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳು.
(13)	ಗರಗಾ ಕಾವಲು	ಹೊಳಲ್ಕೆರೆ ತಾಲ್ಲೂಕು
(14)	ಜಾನಕಲ್ಲು	ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳು.
(15)	ಲಕ್ಕಿಹಳ್ಳಿ	ಹಿರಿಯೂರು, ಹೊಸದುರ್ಗ ತಾಲ್ಲೂಕುಗಳು.
(16)	ಮಾರೀಕಣಿವೆ	ಡಿಟ್ಟೋ
(17)	ಜೇವಿನಹಳ್ಳಿ	ಚಿತ್ರದುರ್ಗ, ದಾವಣಗೆರೆ ಮತ್ತು ಜಗಲೂರು ತಾಲ್ಲೂಕುಗಳು.

(b) ಪ್ಲಾಂಟೇಷನ್‌ಗಳು—

(1)	ನೇರ್ಲಗುಂದಿ	ಚಿತ್ರದುರ್ಗ ತಾಲ್ಲೂಕು.
(2)	ಪಿಳ್ಳೇಕೆರೇನಹಳ್ಳಿ	ಡಿಟ್ಟೋ
(3)	ಚಳ್ಳಕೆರೆ	ಚಳ್ಳಕೆರೆ ತಾಲ್ಲೂಕು.
(4)	ಮೊಳಕಾಲ್ಮುರು	ಮೊಳಕಾಲ್ಮುರು ತಾಲ್ಲೂಕು.
(5)	ಜಗಲೂರು ಕ್ಯಾಸರೀನಾ ಪ್ಲಾಂಟೇಷನ್ ...	ಜಗಲೂರು ತಾಲ್ಲೂಕು.

ವೈ. ಶೀತಾರಾಮೈಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ, ಚಿತ್ರದುರ್ಗ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಲಕ್ಕೇನಹಳ್ಳಿ ಕಾಯಂಗುತ್ತಾದಾರ್ ಕೃಷ್ಣಯ್ಯಂಗಾರ್ರಿಂದ ಬರಬೇಕಾದ ಜಮೀನ್ ಜೋಡೀ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಮಾರ್ಚಿ 23ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907—08ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 139—5—1 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೋಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಅಂದಾಜು ಕಿಮ್ಮತ್ತು.	ಸ್ವತ್ತಿನ ತಪ್ಸೀಲ್. ಜಮೀನು. ಸರ್ವೆ ನಂಬರು ಅಥವಾ ಜಮೀನಿನ ಹೆಸರು.	ಸ್ವತ್ತಿನ ತಪ್ಸೀಲ್. ಜಮೀನು. ಹಿಸ್ಸೆ ಅಥವಾ ಭಾಗ ಹೌದೆ.	ಸ್ವತ್ತಿನ ತಪ್ಸೀಲ್. ಜಮೀನು. ವಿಸ್ತೀರ್ಣ.	ಸ್ವತ್ತಿನ ತಪ್ಸೀಲ್. ಜಮೀನು. ಕಂದಾಯ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲ್ಲತಕ್ಕ ಕಂದಾಯ ಜೋಡೀ ಬಾಬು ಮುಂತಾದ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ಒಟ್ಟು ಖರ್ಚು ಸಹ ಬಾಕಿ ಮೊಬಲಗು.
					ರೂ.			ಎ. ಗು.	ರೂ. ಆ.			
ನೆಲಮಂಗಲ	ದಾಸನಪುರ	ಕಾಯಂಗುತ್ತಾ ಲಕ್ಕೇನಹಳ್ಳಿ	ಕಾಯಂಗುತ್ತಾದಾರ್ ಕೃಷ್ಣಯ್ಯಂಗಾರ್	ಮನೆಗಳು	331	ಪೂರಾ ಗ್ರಾಮ	ಪರಂಪೋಕು	35 8	0 8	ರೂ. 1,331	ರೂ. ಆ. ಪೈ. 138 5 —	ರೂ. ಆ. ಪೈ. 139 5 1
							ಖುಷ್ಕಿ ...	189 1	118 9			
							ತರಿ ...	12 35	52 11			
							ಬಾಗಾಯತು.	13 36	71 0			
							ಜುಮ್ಲಾ ...	251 0	242 12			
							ಗ್ರಾಮದ ಅಂದಾಜು 1,000—0—0					

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ನಾರಾಯಣರಾವ್ ಪಾಳ್ಯದ ನರಸಿಂಹೈಯ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಮಾರ್ಚಿ 23ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907—08ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 69—8—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಅಂದಾಜು ಕಿಮ್ಮತ್ತು.	ಸ್ವತ್ತಿನ ತಪ್ಸೀಲ್. ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಸ್ವತ್ತಿನ ತಪ್ಸೀಲ್. ಜಮೀನು. ಖುಷ್ಕಿ, ತರೀ ಯಾ ಬಾಗಾಯತು.	ಸ್ವತ್ತಿನ ತಪ್ಸೀಲ್. ಜಮೀನು. ವಿಸ್ತೀರ್ಣ (ಎ. ಗು.)	ಸ್ವತ್ತಿನ ತಪ್ಸೀಲ್. ಜಮೀನು. ಆಕಾರ. (ರೂ. ಆ.)	ಅಂದಾಜು ಕಿಮ್ಮತ್ತು. (ರೂ.)	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು. (ರೂ. ಆ.)	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. (ರೂ. ಆ. ಪೈ.)
ನೆಲಮಂಗಲ	ನೆಲಮಂಗಲ	ಖಾಯಂಗುತ್ತಾ ನಾರಾಯಣರಾವ್ ಪಾಳ್ಯ	ನರಸಿಂಹೈಯ್ಯ ವಗೈರೇರು	...	...	ಗ್ರಾಮ ಪೂರ್ತಿಯಾಗಿ	ಪರಂಪೋಕು	29 29	0 8	100	68 0	68 8 0 ಹಿಂದಿನ ಸಾಲ್ ಬಾಕಿ.
							ಖುಷ್ಕಿ ...	98 32	108 0			0 8 0 ನೋಟಸ್ ಫೀ
							ತರಿ ...	...	...			0 8 0 ಹರಾಜು ಇಸ್ತಿಹಾರ್.
							ಬಾಗಾಯತು	...	...			
							ಜಮ್ಲಾ ...	128 21	108 8			69 8 0 ಚಾಲ್ತಿವರಿಗಿನ ಬಡ್ಡಿ ಸಹಾ ಬರಬೇಕು.

ಬಿ. ಜೆ. ಕೊಮಾರಸ್ವಾಮಿ ನಾಯಿಕ್,
ಡೆಪ್ಯುಟಿ ಕಮಿಷನರ್.

ಪ್ರಕಟನೆ.

ತಾರೀಖು 15ನೆ ಡಿಸೆಂಬರ್ 1908.

ಇದರಡಿ ವಿವರಿಸಿ ಇರುವ ಎಲ್ಲೆಗಳುಳ್ಳ ದೊಡ್ಡಬಳ್ಳಾಪುರ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರಿ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ದೊಡ್ಡಬಳ್ಳಾಪುರ ಟವ್ನ ಎಲ್ಲೆಯು ತಿಗಳ ಬಾಗಾಯಿತು ಗ್ರಾಮದ ಸರ್ವೆ 57ನೆ ನಂಬರಿನ ವಾಯವ್ಯ ಮೂಲೆಯಿಂದ ಪ್ರಾರಂಭಿಸಿ ಮೇಲ್ಕಂಡ ತಿಗಳ ಬಾಗಾಯಿತು ಸರ್ವೆ 57—58—59—60—61—62—63—64—65—66 ಮತ್ತು 67ನೆ ನಂಬರುಗಳ ಉತ್ತರ ಗಡೀಮಾರ್ಗವಾಗಿ ಹೋಗುತ್ತೆ.

II. ಅಲ್ಲಿಂದ ಎಲ್ಲೆಯು ಬೆಂಗಳೂರು-ದೊಡ್ಡಬಳ್ಳಾಪುರ ರಸ್ತೆಯನ್ನು ಹಾದು ಉತ್ತರಕ್ಕೆ ತಿರುಗಿ ಸದರೀ ರಸ್ತೆಯ ಮಾರ್ಗವಾಗಿ ತಿಗಳಬಾಗಾಯಿತು ಸರ್ವೆ 24ನೆ ನಂಬರಿನ ನೈರುತ್ಯ ಮೂಲೆಯನ್ನು ಸಂಧಿಸಿ ಮೇಲ್ಕಂಡ ಗ್ರಾಮದ ಸರ್ವೆ 24ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಗಡಿ ಮಾರ್ಗವಾಗಿಯು ಸರ್ವೆ 35—20—16ನೆ ನಂಬರುಗಳ ಪಶ್ಚಿಮಗಡಿ ಮಾರ್ಗವಾಗಿಯು ಮತ್ತು ಸರ್ವೆ 11ನೆ ನಂಬರಿನ ದಕ್ಷಿಣ ಮಾರ್ಗವಾಗಿಯು ಹೋಗಿ ಅಲ್ಲಿಂದ ಎಲ್ಲೆಯು ಬೆಂಗಳೂರು-ದೊಡ್ಡಬಳ್ಳಾಪುರ ರಸ್ತೆಯ ಪೂರ್ವ ಬಾಜೂದಲ್ಲಿ ಹೊರಟು ಸದರೀ ರಸ್ತೆಯನ್ನು ಹಾದು ರೋಜೀಪುರ ಗ್ರಾಮದ ಸರ್ವೆ 82ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತೆ.

III. ಇಲ್ಲಿಂದ ಎಲ್ಲೆಯು ರೋಜೀಪುರ ಗ್ರಾಮದ 82—83 ಮತ್ತು 86ನೆ ನಂಬರುಗಳ ದಕ್ಷಿಣ ಮಾರ್ಗವಾಗಿ ಹೋಗಿ ಸರ್ವೆ 106ನೆ ನಂಬರು ತಿಮ್ಮನಕುಂಟೆ ಕೆರೆಯ ಆಗ್ನೇಯ ಮೂಲೆಯನ್ನು ಬಳಸಿಕೊಂಡು ರೋಜೀಪುರ ಗ್ರಾಮದ ಸರ್ವೆ 102—101ನೆ ನಂಬರುಗಳ ದಕ್ಷಿಣ ಏಕ್ಕಿನಲ್ಲಿ ಹೊರಟು ನಂದೀದುರ್ಗಕ್ಕೆ ಹೋಗುವ ರಸ್ತೆಯನ್ನು ಹಾದು ಗಂಗಾಧರಪುರ ಗ್ರಾಮದ ಸರ್ವೆ 14ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸಿ ಅಲ್ಲಿಂದ ಉತ್ತರಕ್ಕೆ ತಿರುಗಿ ಸದರೀ ಸರ್ವೆ ನಂಬರಿನ ಪೂರ್ವಕಡೆ ಹೊರಟು ಗಂಗಾಧರಪುರ ಗ್ರಾಮದ ಸರ್ವೆ 13ನೆ ನಂಬರಿನ ದಕ್ಷಿಣ ಗಡಿಯನ್ನು ಸೇರುತ್ತೆ. ಅಲ್ಲಿಂದ ಸರ್ವೆ 13ನೆ ನಂಬರಿನ ದಕ್ಷಿಣಮಾರ್ಗವಾಗಿಯು ಸರ್ವೆ 12—15—16ನೆ ನಂಬರುಗಳ ಪೂರ್ವ ಮಾರ್ಗವಾಗಿಯು ಹೊರಟು ಗಂಗಾಧರಪುರ ಗ್ರಾಮದ ಸರ್ವೆ 16ನೆ ನಂಬರು ಆಗ್ನೇಯ ಮೂಲೆಯನ್ನು ಸೇರುತ್ತೆ. ಇಲ್ಲಿಂದ ಸರ್ವೆ 16ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಗಂಗಾಧರಪುರ ಗ್ರಾಮದ ಸರ್ವೆ 17ನೆ ನಂಬರು ಪೂರ್ವಗಡಿಯನ್ನು ಸಂಧಿಸುತ್ತೆ.

IV. ಇಲ್ಲಿಂದ ಎಲ್ಲೆಯು ಕೋಳೂರುನಿಂದ ಬರತಕ್ಕ ಬಂಡಿರ್ಯಾಡೆಯನ್ನು ಹಾದು ದಕ್ಷಿಣಾಭಿಮುಖವಾಗಿ ಹೋಗಿ ಗಂಗಾಧರಪುರ ಗ್ರಾಮದ ಸರ್ವೆ 17ನೆ ನಂಬರಿನ ಪೂರ್ವಗಡಿ ಮಾರ್ಗವಾಗಿ ಹೊರಟು ಕುರುಬರಹಳ್ಳಿಯಿಂದ ಬರತಕ್ಕ ಮತ್ತೊಂದು ಬಂಡಿರ್ಯಾಡೆಯನ್ನು ಸಂಧಿಸುತ್ತೆ.

ಇಲ್ಲಿಂದ ಎಲ್ಲೆಯು ಸದರೀ ಬಂಡಿರ್ಯಾಡೆ ಮಾರ್ಗವಾಗಿ ಹೊರಟು ರೋಜೀಪುರ ಗ್ರಾಮದ ಸರ್ವೆ 87ನೆ ನಂಬರಿನ ಉತ್ತರ ಕೊನೆಯನ್ನು ಸೇರುತ್ತೆ. ಇಲ್ಲಿಂದ ಮೇಲ್ಕಂಡ 87ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಗಡಿ ಮಾರ್ಗವಾಗಿ ಹೊರಟು ಕುರುಬರಹಳ್ಳಿಯಿಂದ ಬರತಕ್ಕ ಬಂಡಿರ್ಯಾಡೆಯನ್ನು ಹಾದು ಪೂರ್ವಕ್ಕೆ ತಿರುಗಿ ವೀರಭದ್ರನಪಾಳ್ಯದ ಸರ್ವೆ 70ನೆ ನಂಬರಿನ ಉತ್ತರಗಡಿ ಮಾರ್ಗವಾಗಿ ಹೊರಡುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣಾಭಿಮುಖವಾಗಿ ಸರ್ವೆ 70—71—72—3ನೆ ನಂಬರುಗಳ ಪೂರ್ವಕ್ಕೆ ಹೊರಟು ಕರೇನಹಳ್ಳಿಯಿಂದ ಬರತಕ್ಕ ಬಂಡಿರ್ಯಾಡೆಯನ್ನು ಹಾದು ಸರ್ವೆ 4ನೆ ನಂಬರು ಪೂರ್ವಗಡಿ ಮಾರ್ಗವಾಗಿ ಹೊರಡುತ್ತೆ. ಇಲ್ಲಿ ನೆಲಮಂಗಲದ ರಸ್ತೆಯನ್ನು ಹಾದು ತಿಗಳ ಬಾಗಾಯಿತು ಗ್ರಾಮದ ಸರ್ವೆ 57ನೆ ನಂಬರು ವಾಯವ್ಯ ಮೂಲೆಯನ್ನು ಸೇರುತ್ತೆ.

3. ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ದೊಡ್ಡಬಳ್ಳಾಪುರ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಸೇರಿರುತ್ತೆ :-

ಖಾಸ್‌ಬಾಗ್ ಗ್ರಾಮದ ಸರ್ವೆ ನಂಬರು 1ರ ಲಾಗಾಯಿತು 18ರ ವರಿವಿಗೆ ಮತ್ತು ಸದರೀ ಗ್ರಾಮದ ಗಾವುಠಾಣ.

ತಿಗಳಬಾಗಾಯಿತು ಗ್ರಾಮದ ಸರ್ವೆ 1—3—4—5—6—7—20—21—22—23—26—27—28—29—30—31 ಮತ್ತು 54.

ರೋಜೀಪುರ ಗ್ರಾಮದ ಸರ್ವೆ ನಂಬರು 87ರ ಲಾಗಾಯಿತು 99ರ ವರಿವಿಗೆ

ಗಂಗಾಧರಪುರ ಗ್ರಾಮದ ಸರ್ವೆ 14—18—19—20 ಮತ್ತು ಹೊಲೆಯರಹಟ್ಟಿ.

ತಾರೀಖು 15ನೆ ಡಿಸೆಂಬರ್ 1908.

ಇದರಡಿ ವಿವರಿಸಿ ಇರುವ ಎಲ್ಲೆಗಳುಳ್ಳ ದೇವನಹಳ್ಳಿ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರಿ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ದೇವನಹಳ್ಳಿ ಟವನಿನ ಎಲ್ಲೆಯು ಸರ್ವೆ 351ನೆ ನಂಬರು ಈಶಾನ್ಯ ಮೂಲೆಯಲ್ಲಿ ಪ್ರಾರಂಭವಾಗಿ ದಕ್ಷಿಣ ಮತ್ತು ಪೂರ್ವ ಮಾರ್ಗವಾಗಿ ಮೇಲ್ಕಂಡ 351ನೆ ನಂಬರಿನ ಪೂರ್ವ ಎಲ್ಲೆಯ ಮಾರ್ಗವಾಗಿ ಹೊರಟು ಸರ್ವೆ 352ನೆ ನಂಬರಿನ ಪೂರ್ವ ಮತ್ತು ದಕ್ಷಿಣ ಎಲ್ಲೆಗಳ ಮಾರ್ಗವಾಗಿಯು ಮತ್ತು ದೇವನಹಳ್ಳಿಯಿಂದ ವಡಿಗೇನಹಳ್ಳಿಗೆಹೋಗುವ ಹಳೇರಸ್ತೆ ಮಾರ್ಗವಾಗಿಯು ಹೋಗಿ ಗೋಕೆರೆ ಗ್ರಾಮಕ್ಕೆ ಹೋಗುವ ಕಾಲುದಾರಿಯನ್ನು ಹಾಯುತ್ತೆ; ಅಲ್ಲಿಂದ ಸರ್ವೆ 385—386—387—518—519ನೆ ನಂಬರುಗಳ ಪೂರ್ವಎಲ್ಲೆ ಮಾರ್ಗವಾಗಿ ಹೊರಟು, ಬೂದಿಹಾಳು ಗ್ರಾಮಕ್ಕೆ ಹೋಗುವಕಾಲುದಾರಿಯನ್ನು ಹಾದು ದಕ್ಷಿಣಾಭಿಮುಖವಾಗಿ ಸರ್ವೆ 515—462ನೆ ನಂಬರಿನ ಪೂರ್ವಎಲ್ಲೆ ಮಾರ್ಗವಾಗಿ ಅಲ್ಲಿಂದ ಸ್ವಲ್ಪ ಪಶ್ಚಿಮಕ್ಕೆ ತಿರುಗಿ ಸರ್ವೆ 463ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸಿ ಅಲ್ಲಿಂದ ದಕ್ಷಿಣ ಮಾರ್ಗವಾಗಿ ಸರ್ವೆ 464ನೆ ನಂಬರಿನ ಪೂರ್ವ ಎಲ್ಲೆ ಹಿಡಿದು ಮೇಲ್ಕಂಡ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತೆ.

II. ಅಲ್ಲಿಂದ ಎಲ್ಲೆಯು ಸರ್ವೆ 464—507—508ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿಹೋಗಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ಸರ್ವೆ 543ನೆ ನಂಬರಿನ ಪೂರ್ವದ ಎಲ್ಲೆ ಮಾರ್ಗವಾಗಿಹೊರಟು ಸರ್ವೆ 543—544—72ನೆ ನಂಬರುಗಳ ದಕ್ಷಿಣದಲ್ಲಿರುವ ಹಳ್ಳದ ಮಾರ್ಗವಾಗಿ ಹೋಗಿ ಬೆಂಗಳೂರು-ಬಳ್ಳಾರಿ ರಸ್ತೆಯನ್ನುಹಾದು ಸರ್ವೆ 68—67ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಸೀದಾಹೋಗಿ ಸರ್ವೆ 67ನೆ ನಂಬರಿನ ನೈರುತ್ಯಮೂಲೆಯನ್ನು ಸಂಧಿಸುತ್ತೆ.

III. ಅಲ್ಲಿಂದ ಎಲ್ಲೆಯು ಉತ್ತರಕ್ಕೆ ತಿರುಗಿ ಸರ್ವೆ 67—66—65—64—57—56—55—48—45 ಮತ್ತು 44ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಅಲ್ಲಿಂದ ಕೊಂಚ ಪೂರ್ವಕ್ಕೆ ತಿರುಗಿ ಸರ್ವೆ 44—40ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿಯು 39—31ನೆ ನಂಬರುಗಳ ಪಶ್ಚಿಮಎಲ್ಲೆ ಮಾರ್ಗವಾಗಿಯು ಅಲ್ಲಿಂದ ಸರ್ವೆ 30ನೆ ನಂಬರು ಕುಡಿಯುವ ನೀರು ಕೆರೆಯ ಪಶ್ಚಿಮ ಕಟ್ಟೆಮೇಲೆ ಹೊರಟು ಒಂದು ಹಳ್ಳವನ್ನು ಹಾದು ಉತ್ತರಾಭಿಮುಖವಾಗಿ ಸರ್ವೆ 136—142—143ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿಕೊಂಡುಹೋಗಿ ಸರ್ವೆ 143ನೆ ನಂಬರಿನ ವಾಯುವ್ಯ ಮೂಲೆಬಳಿ ಕೋಲಾರ-ದೊಡ್ಡಬಳ್ಳಾಪುರ ರಸ್ತೆಯನ್ನು ಸಂಧಿಸುತ್ತೆ.

IV. ಅಲ್ಲಿಂದ ಎಲ್ಲೆಯು ಪೂರ್ವಮಾರ್ಗವಾಗಿ ಸರ್ವೆ 143—144—146—147—148—202—201—206—207 ಈ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸಿ ಒಂದು ಹಳ್ಳವನ್ನು ಹಾದು ಸರ್ವೆ 209—210—211ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೊರಟು ಬೆಂಗಳೂರು-ಬಳ್ಳಾರಿ ರಸ್ತೆಯನ್ನುಹಾದು ಸರ್ವೆ 217—218—351ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಸರ್ವೆ 351ನೆ ನಂಬರಿನ ಈಶಾನ್ಯಮೂಲೆಯನ್ನು ಸೇರುತ್ತೆ.

3. ಇದರಿಂದ ಈ ಕೆಳಗೆಕಂಡ ಕಸಬಾ ದೇವನಹಳ್ಳಿಗೆ ಸೇರಿದ ನಂಬರುಗಳು ದೇವನಹಳ್ಳಿ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ ಸೇರಿರುತ್ತೆ.

ಸರ್ವೆ 1ರ ಲಾಗಾಯಿತು 29 ಮತ್ತು 30 (ಕುಡಿಯುವನೀರು ಕೆರೆ), ಸರ್ವೆ 31ರ ಲಾಗಾಯಿತು 72ರ ವರಿವಿಗೂ 136ರ ಲಾಗಾಯಿತು 144ರವರಿವಿಗು 146ರ ಲಾಗಾಯಿತು 202ರ ವರಿವಿಗು 206ರ ಲಾಗಾಯಿತು 218ರ ವರಿವಿಗು 351—352—354ರ ಲಾಗಾಯಿತು 372ರ ವರಿವಿಗು 374ರಲಾಗಾಯಿತು 387ರ ವರಿವಿಗೂ 462—463—464—507ನೆ ನಂಬರು ಲಾಗಾಯಿತು 515ರ ವರಿವಿಗು 518ರ ಲಾಗಾಯಿತು 545ರ ವರಿವಿಗೂ 547ರ ಲಾಗಾಯಿತು 552ರ ವರಿವಿಗು.

ಎನ್. ಮಾಧವರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

1908ನೆ ಡಿಸೆಂಬರ್ ಮಾಹೆ 10.

ಗೌರ್ನ್ಮೆಂಟಿನಿಂದ ಸಾದರಾಗಿರುವ 17—9—1907ನೆ ಮುರ್ರಂ 2585-95—L. B. 462-06—3ನೆ ನಂಬರ್ ಪ್ರೊಸೀಡಿಂಗ್ಸು ಅನುಸರಿಸಿ 1909ನೆ ಜನವರಿ ಮಾಹೆ 15ನೆ ತಾರೀಖು ಲಾಗಾಯಿತು ಮೂರು ದಿವಸಗಳ ವರಿವಿಗೆ ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ಶ್ರೀರಾಮದೇವರ ರಥೋತ್ಸವ ಕಾಲದಲ್ಲಿ ಒಂದು ದನಗಳ ಪ್ರದರ್ಶನವು ಏರ್ಪಡಿಸಿದೆ.

2. ಚುಂಚನಕಟ್ಟೆ ಬಂಗ್ಲೆ ಮೈದಾನದಲ್ಲಿ ಮೇಲ್ಕಂಡ ಪ್ರದರ್ಶನವು ನಡೆಯುತ್ತೆ.

3. ಪ್ರದರ್ಶನಕ್ಕೆ ಸೇರುವದನಗಳಿಗೆ ಇರೇಸಿಯಲ್ಲಿ ಕಂಡಂತೆ ಫೀ ಯಾರುಸುಮನ್ನು ಕೊಡಬೇಕು.

ದೊಡ್ಡ ಎತ್ತುಗಳ ಜೊತೆ 1ಕ್ಕೆ 8 ಆಣೆ.
ಸಣ್ಣ ಡಿಟೋ 4 ,,
ಬೀಜದ ಹೋರಿ 1ಕ್ಕೆ 4 ,,

4. ಈ ಕೆಳಗೆ ವಿವರಿಸಿರುವಂತೆ ಇನಾಂಗಳು, ಯೋಗ್ಯತಾಪತ್ರಗಳೊಡನೆ, ಕೊಡಲ್ಪಡುತ್ತವೆ :—

ವಿವರಾ.	ಮೊದಲನೆ ಇನಾಂ.	ಎರಡನೆ ಇನಾಂ.	ಮೂರನೆ ಇನಾಂ.	ಜುಮ್ಲಾ.	
				ಇನಾಂ ಸಂಖ್ಯೆ.	ಮೊಬಲಗು.
	ರೂ.	ರೂ.	ರೂ.		ರೂ.
I. ಉತ್ತಮವಾದ ಎತ್ತುಗಳ ಜೋಡಿ	35	25	20	3	80
II. ಬೆಟ್ಟದಪುರದ ಡಿಟೋ	10	...	...	1	10
III. ಬೀಜದ ಹೋರಿ	30	15	...	2	45
IV. ನಾಡು ದನ	10	...	...	1	10
V. ಗಂಡುಕರು	20	10	5 ರೂ. ನಂತೆ ಮೂರು ಇನಾಂ.	5	45
VI. ಬೆಟ್ಟದಪುರದ ದನ	10	...	...	1	10

5. ದನಗಳ ಪರೀಕ್ಷೆಯನ್ನು ತಿಳಿದವರ ಪೈಕಿ ಕೆಲವರನ್ನು ಒಂದು ಕಮಿಟಿಯನ್ನಾಗಿ ನೇಮಕಮಾಡುತ್ತೆ. ಸದರೀ ಕಮಿಟಿ ಮೆಂಬರುಗಳು ಇನಾಂಗೆ ಅರ್ಹವಾದ ದನಗಳನ್ನು ಪ್ರದರ್ಶನ ಸೈದಾದಕೂಡ್ಲೆ ಚುನಾಯಿಸುತ್ತಾರೆ.

6. ಒಂದು ತರಗತಿಯಲ್ಲಿ ಇನಾಂ ಹೊಂದಲು ಲಾಯಖಾದ ದನಗಳು ಇಲ್ಲದಿರುವ ಸಂದರ್ಭದಲ್ಲಿ ಆ ಬಹುಮಾನವನ್ನು ಬೇರೆ ತರಗತಿಗೆ ಸೇರಿರುವ ಲಾಯಖಾದ ದನಗಳಿಗೆ ಕೊಡಲು ಕಮಿಟಿಯವರಿಗೆ ಅಧಿಕಾರವಿರುತ್ತೆ.

7. ದನಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು ಪ್ರದರ್ಶನ ಮೊದಲಾಗುವದಕ್ಕೆ ಎರಡು ದಿವಸ ಮುಂಚಿತವಾಗಿ ತಮ್ಮ ಹೆಸರನ್ನು ಮತ್ತು ದನಗಳ ತಪ್ಸೀಲನ್ನು ತಾಲ್ಲೂಕು ಅಮಲ್ದಾರ್‌ರವರಿಗೆ ಆಗಲಿ ಅಥವಾ ಅವರಿಂದ ನೇಮಕವಾದ ಇತರ ಆಫೀಸರಿಗೆ ಆಗಲೀ ತಿಳಿಸತಕ್ಕದ್ದು.

8. ದನಗಳ ಸ್ವಂತಗಾರರು ದನಗಳನ್ನು ಪ್ರದರ್ಶನ ಕಾಲದಲ್ಲಿ ನೋಡಿಕೊಳ್ಳಲು ಏರ್ಪಾಡು ಮಾಡಬೇಕು.

9. ದನಗಳಿಗೆ ಚಾರಾವನ್ನು ಸ್ವಂತಗಾರರೆ ನೋಡಿಕೊಳ್ಳಬೇಕು.

10. ಜಾತ್ರೆಯಲ್ಲಿ ಬಹುಜನ ಸೇರುವದರಿಂದ ದನಗಳ ವ್ಯಾಪಾರಗಾರರಿಗೆ ಇದು ಒಳ್ಳೇಸಮಯವಾಗಿರುತ್ತೆ.

11. ಹಿಂದಿನ ವರ್ಷಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಇನಾಂ ಹೊಂದಿದ ದನಗಳಿಗೆ ಈ ವರುಷ ಇನಾಂ ಕೊಡಲಾಗದು.

ಜಿ. ಬಿ. ಹೆಬ್ಲಿಕಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 7ನೆ ಡಿಸೆಂಬರ್ 1908.

ಹಾಸನದ ತಾಲ್ಲೂಕು ಸಾಲಗಾಮೆ ಹೋಬಳಿ ಜೋಡಿ ಕಾಮೇನಹಳ್ಳಿ ಗ್ರಾಮವು ಜೋಡಿದಾರು ಬಾಳಾಚಾರ್ ವಗೈರೆರಿಂದ ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ಹಾಸನ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಫೆಬ್ರವರಿ ಮಾಹೆ 22ನೆ ತಾರೀಖು ಲಾಗಾಯಿತು ಬಹಿರಂಗವಾಗಿ ಹರಾಜುಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪಶೀಲ್ ಬಗ್ಯೆ 1908ನೆ ಇಸವಿ ಡಿಸೆಂಬರು 17ನೆ ತಾರೀಖು ಮೈಸೂರು ಗೆಜೆಟ್ಟಿನ IIನೆ ಭಾಗದ 766ನೆ ಪುಟವನ್ನು ನೋಡತಕ್ಕದ್ದು.

ಸಿ. ದೇವರಾಜ ಅರಸ್,
ಫಾರ್ ಡೆಪ್ಯುಟಿ ಕಮಿಷನರ್.

ನೋಟಿಸ.

ತಾರೀಖು 21ನೆ ಡಿಸೆಂಬರ್ 1908, ಹಾಸನ.

ಹಾಸನ ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕ ಡಿಪಾಜಿಟರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ, 1907—08ನೆ ಸಾಲ್ ಬಡ್ಡಿ ದಾಖಲ್ಮಾಡತಕ್ಕ ಬಗ್ಗೆ ಪ್ಯಾಸ್ ಬುಕ್ಕುಗಳನ್ನು ಅವರಿಗೆ ಸಮ್ಮಂಧಪಟ್ಟ ಟ್ರೆಜರೀಲಿ ಹಾಜರ್ಪಡಿಸತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಡೆಪ್ಯುಟಿ ಕಮಿಷನರ್, ಟ್ರೆಜರಿ ಡಿಪಾರ್ಟ್‌ಮೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 27ನೆ ಡಿಸೆಂಬರ್ 1908.

ಸನ್ 1909ನೆ ಇಸವಿ ಮಾರ್ಚಿ ಮಾಹೆ 23ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ ಶಿವಮೊಗ್ಗ ತಾಲ್ಲೂಕು ಕೂಡ್ಲಿಯಲ್ಲಿ ನಡೆಯುವ ಶ್ರೀ ಸಂಗಮೇಶ್ವರದೇವರ ರಥೋತ್ಸವ ಕಾಲದಲ್ಲಿ ಗವರ್ನ್ಮೆಂಟಿನಿಂದ ತಲ್ಪಿರುವ 22—12—06ನೆ ಮರ್ಸ್ಲಂ 5540-1—L. F. 495-05-4ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ದಣಾಯಿಕಪುರದಬಳಿ ಹೊಳೆಹೊನ್ನೂರಿಗೆ ಹೋಗುವ ಹಳೆ ರಸ್ತೆಬಳಿ ಇರುವ ತೋಪಿನಲ್ಲಿ ಪ್ರದರ್ಶನ ನಡಿಯಲು ಏರ್ಪಡಿಸುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೇ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಹಸು 1ಕ್ಕೆ ಒಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಎಮ್ಮೆ 1ಕ್ಕೆ ಒಂದನೆ ಬಹುಮಾನ 10 ರೂಪಾಯಿ ಈರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನ ಮುಗಿದ ಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರೆಯುತ್ತದೆ.

6. ಇನಾಂಪಡೆಯಲು ಲಾಯಖಾದ ಜಾನವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲಿ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು ಶಿವಮೊಗ್ಗ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ ಪ್ರದರ್ಶನ ಶುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮಿ ಇಲ್ಲದೆ ಅವಕಾಶವಿರುವಂತೆ ಬರದು ತಮ್ಮ ಹೆಸರು ಜಾನವಾರು ತಪಶೀಲು ದಾಖಲ್ಮಾಡಿಸಿಕೊಳ್ಳಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ ಅಥವಾ ಅವುಗಳಿಂದ ಜನಗಳಿಗೆ ಆಗಲಿ ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೇ ನೋಡಿಕೊಳ್ಳುವದು ಒಳ್ಳೇದು.

10. ಕೂಡ್ಲಿ ಜಾತ್ರೆಗೆ ಬಹಳ ಜನಗಳು ಮತ್ತು ಜಾನವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡಿಯುತ್ತೆ.

1908ನೆ ಫೆಬ್ರುವರಿ ತಿಂಗಳಲ್ಲಿ ಹೊನ್ನಾಳಿ ತಾಲ್ಲೂಕು ರಾಂಪುರ ಗ್ರಾಮದ ಜಾತ್ರೆ ಕಾಲದಲ್ಲಿ ನಡೆದ ಪ್ರದರ್ಶನದಲ್ಲಿ ಬಹುಮಾನ ಕೊಟ್ಟಿದ್ದರ ತಪಶೀಲು ಈ ಕೆಳಗೆ ನಮೂದಿಸಿ ಇರುತ್ತೆ :—

ನಂಬರು.	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲು.		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟಿದ್ದು.	ಮೊಬಲಗು.	ಬಹುಮಾನದ ತರಗತಿ.
					ರೂ.	
1	ಬಸಲಿಂಗಪ್ಪ ಬಿನ್ ಮುದಕಪ್ಪ.	ಕುಕ್ಕವಾಡ ...	ದಾವಣಗೆರೆ ...	ಉಳುವ ಎತ್ತುಗಳ ಜೊತೆ.	20	1ನೆ ಬಹುಮಾನ
2	ಕರಿಬಸಪ್ಪ ಬಿನ್ ಚನ್ನಬಸಪ್ಪ.	ತ್ಯಾವಣಿಗೆ ...	ಚನ್ನಗಿರಿ ...	ಡಿಟೋ ...	10	2ನೆ ಡಿಟೋ
3	ರಾಘವೇಂದ್ರಪ್ಪ ಬಿನ್ ನರಸಪ್ಪ.	ಹೊನ್ನಾಳಿ ...	ಹೊನ್ನಾಳಿ ...	ಗಾಡಿ ಎತ್ತಿನ ಜೊತೆ ...	20	1ನೆ ಡಿಟೋ
4	ಫಕೀರಪ್ಪ ಬಿನ್ ಬಸಪ್ಪ...	ಮಲೆಬೆನ್ನೂರು.	ಹರಿಹರ ಸಬ್ ತಾಲ್ಲೂಕು.	ಡಿಟೋ ...	10	2ನೆ ಡಿಟೋ
5	ರಾಮಣ್ಣ ಬಿನ್ ಹನುಮಣ್ಣ	ಸುಂಕದಕಟ್ಟೆ.	ಹೊನ್ನಾಳಿ ...	ಬೀಜದ ಹೋರಿ ಒಂದಕ್ಕೆ	15	1ನೆ ಡಿಟೋ

ಕೆ. ಚಾಂಡಿ,
ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮತ್ತು ಡಿ|| ಬೋ|| ಪ್ರೆಸಿಡೆಂಟ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ.

ತಾರೀಖು 10ನೆ ಡಿಸೆಂಬರ್ 1908.

ಇದರಿಂದ ತಿಳಿಯಪಡಿಸುವದೇನಂದರೆ :—ಸನ್ 1909ನೆ ಇಸವಿ ಫೆಬ್ರುವರಿ 1ನೆ ತಾರೀಖು ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿಗೆ (ಆ ಎರಡು ದಿನಗಳೂ ಸೇರಿ) 12 ತಿಂಗಳು ತನಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಮೂಳೆ ಇಲ್ಲದ ಮಾಂಸ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವದಕ್ಕಾಗಿ ಕವರಿನಲ್ಲಿ ಮೊಹರು ಮಾಡಿದ ದರಖಾಸ್ತುಗಳನ್ನು ಸನ್ 1909ನೆ ಇಸವಿ ಜನವರಿ 16ನೆ ತಾರೀಖು ಶನಿವಾರ ಬೆಳಿಗ್ಯೆ 10 ಘಂಟೆ ವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಘಾಯಿಷ್ ಮಾಡಿದೆ.

ಸರಬರಾಯಿ ಆಗಬೇಕಾದ ಸವುದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1908ನೆ ಇಸವಿ ಡಿಸೆಂಬರ್ 24ನೆ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿ ಇರುತ್ತೆ.

ತಾರೀಖು 10ನೆ ಡಿಸೆಂಬರ್ 1908.

ಇದರಿಂದ ತಿಳಿಯಪಡಿಸುವದೇನಂದರೆ :—ಸನ್ 1909ನೆ ಇಸವಿ ಫೆಬ್ರುವರಿ 1ನೆ ತಾರೀಖು ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿಗೆ (ಆ ಎರಡು ದಿನಗಳೂ ಸೇರಿ) 12 ತಿಂಗಳ ತನಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಸವುದೆ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವದಕ್ಕಾಗಿ ಕವರಿನಲ್ಲಿ ಮೊಹರುಮಾಡಿದ ದರಖಾಸ್ತು

ಗಳನ್ನು ಸ್ 1909ನೆ ಇಸವಿ ಜನವರಿ 16ನೆ ತಾರೀಖು ಶನಿವಾರ ಬೆಳಿಗ್ಗೆ 10 ಘಂಟೆ ವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಘಾಯಿಷ್ ಮಾಡಿದೆ.

ಸರಬರಾಯಿ ಆಗಬೇಕಾದ ಸವುದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1908ನೆ ಇಸವಿ ಡಿಸೆಂಬರ್ 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿ ಇರುತೆ.

ತಾರೀಖು 10ನೆ ಡಿಸೆಂಬರ್ 1908.

ಇದರಿಂದ ತಿಳಿಯಪಡಿಸುವದೇನಂದರೆ :—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸ್ 1909ನೆ ಇಸವಿ ಫೆಬ್ರವರಿ ಗುರ್ರೆ ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿಗೆ ಧಾನ್ಯ, ಮಸಾಲೆ ಜಿನಸುಗಳೂ ಮತ್ತು ಇತರ ಅವಶ್ಯಕವಾದ ಪದಾರ್ಥಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರವರಿಂದ ಸ್ 1909ನೆ ಇಸವಿ ಜನವರಿ ತಾರೀಖು 16ನೆ ಶನಿವಾರ ಪ್ರಾತಃಕಾಲ 10 ಘಂಟೆ ವರಿಗೂ ತೆಗೆದುಕೊಳ್ಳಲ್ಪಡುವವು.

ಸರಬರಾಯಿ ಆಗತಕ್ಕ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1908ನೆ ಇಸವಿ ಡಿಸೆಂಬರ್ 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿರುತ್ತೆ.

ತಾರೀಖು 10ನೆ ಡಿಸೆಂಬರ್ 1908.

ನೋಟೀಸ್ ಮೂಲಕ ತಿಳಿಯಪಡಿಸುವದೇನಂದರೆ :—1909ನೆ ಇಸವಿ ಫೆಬ್ರವರಿ ಗುರ್ರೆ ತಾರೀಖು ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನು ಹಾಜರ್ಮಾಡಲು ಕಂಟ್ರಾಕ್ಟು ಪಡಿಯಲು ಇಷ್ಟವುಳ್ಳವರಿಂದ ಹಾಜರ್ಮಾಡಲ್ಪಡುವ ಸೀಲ್ಡು ಕವರು ನಿಶಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರವರು 1909ನೆ ಇಸವಿ ಜನವರಿ 16ನೆ ಶನಿವಾರ ದಿವಿ 10 ಘಂಟೆ ವರಿಗೂ ಅಂಗೀಕರಿಸುವರು.

ಕಂಟ್ರಾಕ್ಟಿಗೆ ಸಂಬಂಧವಾದ ತಪಶೀಲ್‌ವಾರ್ ಷರತ್ತುಗಳು 1908ನೆ ಇಸವಿ ಡಿಸೆಂಬರ್ 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಿರುತ್ತದೆ.

ಪಿ. ಎಸ್. ಅಚ್ಯುತರಾವ್,
ಸೂಪರ್ರಿಂಟೆಂಡೆಂಟ್.

ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋ.

ಸರ್ 1909ನೆ ಇಸವಿ ಜನವರಿ ತಾರೀಖು 4.

ಬೆಂಗಳೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸರ್ 1879ನೆ ಇಸವಿಯ 12ನೆ ನಂಬರ ಆಕ್ಟು.	36	0	11	0	1	0
4	1871ನೆ ಇಸವಿಯ ದನಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ (1904)	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟು ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಅಫೀಂ ಆಕ್ಟು.	17	0	1	3	0	6
14	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ...	3	0	0	6	0	6
15	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
16	ಇಂಡಿಯನ್ ಕಂಟ್ರಾಕ್ಟು ಆಕ್ಟು ...	213	1	5	0	3	6
17	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
18	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
19	,, ಟೆಲಿಗ್ರಾಫ್ ಆಕ್ಟು	18	0	1	6	1	0
20	,, ರೈಲ್ವೆ ಆಕ್ಟು	20	0	1	9	1	0
21	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು (ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
22	ಲ್ಯಾಂಡ್ ಆಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
23	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
24	ಡಿಟೋ. (ಹಳೇ ಛಾಪಾ) ...	206	2	8	0	5	0
25	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
26	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
27	ಮೈಸೂರು ರೈಲ್‌ವೆಗಳ ರೆಗ್ಯುಲೇಷನ್	50	0	6	0	2	0
28	ಪಟೇಲ್ ರೂಲ್ಸು	1	0	0	3	0	6
29	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
30	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
31	ತಾಲಿಂಖಾನಾ ರೂಲ್ಸು	1	0	0	3	0	6
32	ಗ್ರಾಮ ಪೋಲೀಸ್ ರೂಲ್ಸು	15	0	1	0	0	6
33	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
34	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ Iನೆ ರೆಗ್ಯುಲೇಷನ್).	6	0	0	6	0	6
35	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
36	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6
37	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
38	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6
39	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
40	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಿಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
41	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗೌರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್ ...	5	0	1	0	0	6
42	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
43	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
44	1895ನೆ ಇಸವಿ IIIನೆ ನಂ. ರೆಗ್ಯುಲೇಷನ್ ಮೈಸೂರು ಕಂಪೆನಿಗಳ ರೆಗ್ಯುಲೇಷನ್.	105	1	0	0	3	0
45	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷನ್.	8	0	1	3	0	6
46	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
47	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
48	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಯೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
49	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
50	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
51	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
52	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
53	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
54	ಡಿಟೋ 1905	185	0	14	0	6	0
55	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
56	ಡಿಟೋ 1907 ...	143	1	0	0	6	0
57	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0
58	ಜಾರೀ ಇಲಾಖೆಯ ವಿಧಾನ	55	0	8	0	1	6
59	ಸನ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
60	ಇಸ್ತಿಹಾರ್‍ನಾಮ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು.	1	0	0	6	0	6

ರೆಜಿಸ್ಟ್ರೇಷನ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ತಾರೀಖು 6ನೆ ನವಂಬರ್ 1908.

ತುಮಕೂರು ತಾಲ್ಲೂಕು ಊರಡಗೆರೆ ಸಮ್ಮತು ಮೋರಗಾನಳ್ಳಿ ಗ್ರಾಮದ ಪಟೇಲ್ ಪುಟ್ಟಬಸಪ್ಪನ ಹವಾಲ್:-ನಮ್ಮ ಖಾಸಾ ತಂದೆ ಸಿದ್ದಪ್ಪನೆಂಬುವರು 95 ತೊಂಭತ್ತೈದು ವರುಷ ವಯಸ್ಸುಳ್ಳವರಾಗಿದ್ದಾರೆ ಮತ್ತು ಬಂಗಿಸೊಪ್ಪು ಈಗ 6–7 ವರುಷಗಳಿಂದ ಸೇದಿ ಜ್ಞಾನ ಅಜ್ಞಾನವಾಗಿ ಈತನ ಚೇಷ್ಟೆಗೆ ಒಳಪಟ್ಟು ನನಗೆ ಆಗದ ಕೆಲವು ದ್ವೇಷಿಗಳು ಈತನಿಗೆ ಜ್ಞಾನಸ್ವಾಧೀನವಿಲ್ಲವೆಂಬುವದನ್ನು ತಿಳಿದು ಇಲ್ಲದ ದುರ್ಬೋಧನೆಯನ್ನು ಹೇಳಿ ತುಮಕೂರಿಗೆ ಕರೆದುಕೊಂಡುಹೋಗಿ ನಮ್ಮ ಆಸ್ತಿಗಳ ಪೈಕಿ ಕೆಲವು ಜಮೀನುಗಳನ್ನು ಕ್ರಯ ವಗ್ಯೆರೆ ಮಾಡುವದಾಗಿ ವರ್ತಮಾನ ಕೇಳುತ್ತೇನೆ. ಈತ 6–7 ವರುಷಗಳಿಂದಲೂ ಜ್ಞಾನ ಸ್ವಾಧೀನವಿಲ್ಲದೆ ನಮ್ಮ ಅನುಮತಿಯಂತೆ ಬಾರದೇಲೂ ತನ್ನ ಸ್ವಯಿಚ್ಛೆಯಂತೆ ನಮ್ಮ ಸಂಸಾರದ ಬಗೆ 2–3 ಸಾವಿರ ರೂಪಾಯಿಗಳು ತನ್ನ ಸ್ವಾಧೀನವಲ್ಲಿದ್ದದ್ದು ನಮ್ಮಗಳಿಂದಲೂ ತೆಗೆದುಕೊಂಡು ಸ್ವಯಿಚ್ಛೆಯಾಗಿ ತಿರುಗುತ್ತಾನೆ. ಈತನಿಗೆ ಹೆಂಡತಿಯಿಲ್ಲ, ಅಜ್ಞಾನ ಜಾಸ್ತಿ ಆದ್ದರಿಂದ ಇವರು ಮಾಡುವ ಕ್ರಯ, ದಾನ, ಭೋಗ್ಯ ಸ್ಥಿರವಾದದ್ದಲ್ಲ. ಸ್ವತ್ತುಗಳ್ಯಾವತ್ತು ಬಹಳ ದಿವಸಗಳಿಂದ ನಾನೂ ನನ್ನಮಗ ವಗ್ಯೆರೇರ ಸ್ವಾಧೀನದಲ್ಲಿ ಇದೆ. ಇವರು ಮಾಡುವ ಕ್ರಯ ವಗ್ಯೆರೆ ಸ್ಥಿರವಾದ್ದಲ್ಲ ಯಾಕಂದರೆ ಜ್ಞಾನ ಸ್ವಾಧೀನವಿಲ್ಲದೆ ಇರುವಕಾರಣ ಇವರ ಬಳಿ ಕ್ರಯ ವಗ್ಯೆರೆ ಯಾರು ಮಾಡಿಕೊಂಡಾಗ್ಯೂ ಅವರಿಗೆ ಏನೊಂದು ಫಲವೂ ಇರುವದಿಲ್ಲಾ. ಆ ಕ್ರಯಗಳೂ ನ್ಯಾಯವಾದದ್ದಲ್ಲಾ. ಈ ಮೂಲಕ ತಿಳಿಸುತ್ತೇನೆ.

ಪಟೇಲ್ ಪುಟ್ಟಬಸಪ್ಪನ ರುಜು.

ನೋಟೀಸ್.

ಬೆಂಗಳೂರು ಡಿಸ್ಟ್ರಿಕ್ಟು ಚನ್ನಪಟ್ಣ ತಾಲ್ಲೂಕು ಕಸಬಾ ಚನ್ನಪಟ್ಣದಲ್ಲಿರುವ ಕುಂದಾಪುರದ ಶ್ರೀಮದ್ವ್ಯಾಸರಾಜ ಸಂಸ್ಥಾನಾಧಿಪತಿಗಳಾದ ಶ್ರೀಮಲ್ಲಕ್ಷ್ಮೀಪ್ರಿಯತೀರ್ಥ ಶ್ರೀಪಾದಂಗಳವರು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಕೊಯಮತ್ತೂರು ಜಿಲ್ಲ ಧಾರಾಪುರ ತಾಲ್ಲೂಕು ಕಸಬ ಧಾರಾಪುರದಲ್ಲಿರುವ ಎಂ. ಕೃಷ್ಣ ಗೋಪಾಲಸ್ವಾಮಿರಾಯರೆಂಬುವರು ನಮ್ಮ ಸಂಸ್ಥಾನದ ಆಡಳಿತ ನಡಿಸುವದಕ್ಕಾಗಿ 1899ನೆ ಇಸವಿ ನವಂಬರು 1ರಲ್ಲು ನಮ್ಮಿಂದ ಜನರಲ್ ಪವರ್ ಆಫ್ ಅಟರ್ನಿ ಪಡದುಕೊಂಡು ಅದರಲ್ಲಿ ಕಂಡಂತೆ ಹುಟ್ಟುವಳಿಯಲ್ಲಿ ಖರ್ಚು ಜಾತಾ ಶೇಕಡಾ ಹದಿನೈದು ರೂಪಾಯಿನಂತೆ ಕಮೀರ್ಷ ತೆಗದುಕೊಳ್ಳುವದು ಎಂಬ ಅಂಶ ರದ್ದುಮಾಡಿ ಈಚೆಗೆ 1900ನೆ ಇಸವಿ ಜೂನ್ ತಾರೀಖು 29ರಲ್ಲು ಮಾಹೇಯಾನಾ ಇಪ್ಪತ್ತು ರೂಪಾಯಿನಂತೆ ತಲಬು ತೆಗದುಕೊಂಡು ಸಂಸ್ಥಾನದ ಕೆಲಸ ನಡಸಿಕೊಂಡು ಬರುತ್ತೇನೆಂತ ಕರಾರು ಬರದುಕೊಟ್ಟಿದ್ದರು. ಈಚೆಗೆ ಅದರಂತೆ ನಮ್ಮ ಸಂಸ್ಥಾನದ ಕೆಲಸಗಳು ನಮಗೆ ತೃಪ್ತಿಕರವಾಗಿ ನಡಿಯಲಿಲ್ಲವಾದ್ದರಿಂದ ಅವರಿಗೆ ಕೊಟ್ಟಿದ್ದ ಪವರು ಪೂರ್ವದಲ್ಲೇ ರದ್ದುಮಾಡಿ ಅವರಿಗು ಮತ್ತು ಆ ಸ್ಥಳದಲ್ಲಿ ನಮ್ಮ ಜನಗಳಿಗು ತಿಳಸಿದ್ದೇವೆ. ಆ ಲಾಗಾಯಿತು ಡಿಟೋ ಗೋಪಾಲಸ್ವಾಮಿರಾಯರು ನಮ್ಮ ಸಂಸ್ಥಾನದಲ್ಲಿ ನಮ್ಮ ಕೆಲಸಗಳು ಯಾವದು ನಡಿಸಿರುವದಿಲ್ಲ ಆದಾಗ್ಯು ಈಚೆಗೆ ನಮ್ಮ ಮಠದ ಗ್ರಾಮಗಳಿಗೆ ಪ್ರವೇಶಿಸಿ ಕೆಲವು ಕೆಲಸ ನಡಿಸಿರುವದಾಗಿ ನಮ್ಮ ತಿಳಿವಳಿಕೆಗೆ ಬರುತ್ತಾದ್ದರಿಂದ ಡಿಟೋ ಗೋಪಾಲಸ್ವಾಮಿ ರಾಯರಿಗು ನಮ್ಮ ಮಠಕ್ಕು ಏನೂ ಸಂಬಂಧ ಇರುವದಿಲ್ಲ ಇವರು ಯಾವ ಕಾರ್ಯ ನಡಸಿದಾಗ್ಯು ನಾವು ಅಂಗೀಕರಿಸುವದಿಲ್ಲ ಅದಕ್ಕೆ ನಾವು ಜವಾಬ್ದಾರರಲ್ಲ ಎಂತ ಇದರ ಮೂಲಕ ಪ್ರಸಿದ್ಧಪಡಿಸಿರುತ್ತೆ. ಇವರನ್ನು ಶಾರ್ವರಿ ಸಂವತ್ಸರದ ಶ್ರಾವಣ ಮಾಸದಲ್ಲಿ ಕೆಲಸದಿಂದ ವಜಾಮಾಡಿ ಇಧೇವೆಂತ ರಿಜಿಸ್ಟ್ರು ಮೂಲಕ ಬರದು ತಿಳಸಿ ಇರುತ್ತೇವೆ.

ತಾ॥ 17ನೆ ಡಿಸೆಂಬರು 1908ನೆ ಇಸವಿ.

ಶ್ರೀಮಲ್ಲಕ್ಷ್ಮೀಪ್ರಿಯತೀರ್ಥ ಶ್ರೀಪಾದಂಗಳವರು.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಪಿಸ್ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ॥ 14, ಸರ್ 1909.

II ನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರ್ಫ.

ಸರ್ 1908ನೆ ಇಸವಿ ಡಿಸೆಂಬರ 22ನೆ ಮರ್ಕೂಂ 81ನೆ ನಂಬರು, ರೂಲ್ ಆಫ್ ಪ್ರಾಕ್ಟಿಸ.

ಆರ್ಡರ ಷೀಟನ್ನು ಇಡುವ ವಿಚಾರದಲ್ಲಿ, ಚೀಫ್ ಕೋರ್ಟನವರು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು 554ನೆ ಸೆಕ್ಷನ್ ಅನುಸರಿಸಿ, ಗವರ್ನ್ಮೆಂಟನವರ ಸಮ್ಮತಿಯಿಂದ, ಈ ಕೆಳಗೆ ನಮೂದು ಮಾಡಿರುವ ರೂಲ್ಸನ್ನು ಏರ್ಪಡಿಸಿ, ವಿಧಾಯಕ ಮಾಡಿರುತ್ತಾರೆ.

1. ಎಲ್ಲಾ ಕ್ರಿಮಿನಲ್ ಕೋರ್ಟುಗಳಲ್ಲಿಯೂ, ಇದಕ್ಕೆ ಜಂಟಿಸಿರುವ ನಮೂನೆಯಲ್ಲಿ ಕಂಡಂತೆ, ಒಂದು ಆರ್ಡರ ಷೀಟನ್ನು ರೆಗ್ಯುಲರ್ ಯಾ ಮಿಸಲೇನಿಯಸ್ ಮೊಕದ್ದಮೆಗಳಲ್ಲೆಲ್ಲಾ ಇಡತಕ್ಕದ್ದು.

2. ವಿಚಾರಣೆ ಷುರುವಾದ ಲಾಗಾಯತು ಆಖೈರು ಆಗುವ ವರಿವಿಗೂ ನಡೆದ ನಡವಳಿಕೆಗಳನ್ನೆಲ್ಲಾ ಕಾಲಕ್ರಮಾನುಸಾರವಾಗಿ ಆರ್ಡರ ಷೀಟನಲ್ಲಿ ಪೂರ್ತಿಯಾಗಿ ಬರದಿರಬೇಕು ; ಮತ್ತು ವಿಚಾರಣೆ ಕಾಲದಲ್ಲಿ ಆದ ಪ್ರತಿಒಂದು "ಇಂಟರಲುಕ್ಯುಟರಿ ಆರ್ಡರನ್ನು" (ವಿಚಾರಣೆ ಷುರುವಾದ ಮೇಲೆ ಜಡ್ಜಮೆಂಟು ಹೇಳುವದಕ್ಕೆ ಪೂರ್ವ ಮಾಡಿದ ಆರ್ಡರನ್ನು) ಇದರಲ್ಲಿ ನಮೂದಿರಬೇಕು. ಇದನ್ನು ಕಟ್ಟಿನ "ಫೇಸಿಂಗಷೀಟ" ಮುಖಫರ್ದಿನ (ಕಾಗದದ) ಬಾಜೂದಲ್ಲಿಯೆ ಇಡತಕದ್ದು.

3. "ಚೀಫ್ ಮಿನಿಸ್ಟೀರಿಯಲ್ ಆಫಿಸರ" (ಮುಖ್ಯ ನೌಕರು) ಆರ್ಡರು ಷೀಟನ್ನು ಬರಿಯಬಹುದು ; ಆದರೆ ಜಡ್ಜಿ ಯಾ ಮ್ಯಾಜಿಸ್ಟ್ರೇಟರು (ಆರ್ಡರು ಷೀಟನಲ್ಲಿ) ಬರದಿರತಕ್ಕದ್ದು ಸರಿಯಾಗಿ ಇಧೆ ಎಂದು ನಿರ್ಧರಪಡಿಸಿಕೊಂಡನಂತರ ಆಯಾಯ ದಿನದ ನಡವಡಿಕೆಗಳ ಕೆಳಭಾಗದಲ್ಲಿ ರುಜು ಮಾಡತಕ್ಕದ್ದು.

4. "ಸರ್ 1885ನೆ ಇಸವಿ ನವಂಬರು 20ನೆ ಮರ್ಕೂಂ 42ನೆ ನಂಬರು, 1887ನೆ ಇಸವಿ ಜೂನ್ 16ನೆ ಮರ್ಕೂಂ 47ನೆ ನಂಬರು, ಮತ್ತು 1891ನೆ ಇಸವಿ ಮೇ 23ನೆ ಮರ್ಕೂಂ 55ನೆ ನಂಬರು ರೂಲ್ಸ್ ಆಫ್ ಪ್ರಾಕ್ಟಿಸಗಳು ಮತ್ತು 1897ನೆ ಇಸವಿ ಆಗಸ್ಟ 6ನೆ ಮರ್ಕೂಂ 137ನೆ ನಂಬರು ಸರಕ್ಯುಲರ ಲೆಟರು ಸಹ ಈ ಮೂಲಕ ರದ್ದು ಮಾಡಲ್ಪಟ್ಟಿರುತ್ತವೆ.

ಆರ್ಡರ್ ಷೀಟ.

..................ಕೋರ್ಟಿನಲ್ಲಿ........................190..........ನೇ ಇಸವಿ..........ನೆ ನಂಬರು

ಫಿರ್ಯಾದಿ..................................ಅಪರಾದಿ.

ಆರ್ಡರಿನ ಜಂಜರ ನಂಬರ್.	ಪ್ರೊಸಿಡಿಂಗ್ಸ್‌ನ ಯಾ ಆರ್ಡರಿನ ತಾರೀಖು.	ಆರ್ಡರ ಯಾ ಪ್ರೊಸಿಡಿಂಗ್ಸ ಜಡ್ಜಿಯವರ ದಸ್ತಖತ್ತು ನಿಶಿ.	ಕಕ್ಷಿಗಾರರ ಯಾ ಅವಶ್ಯಬಿದ್ದಲ್ಲಿ ಪ್ಲೀಡರಗಳ ರುಜು.

ತಮ್ಮ ವಿಧೇಯ,

ಏ. ಎ. ರಾಜರತ್ನ ಮೊದಲಿಯಾರ್,

ರಿಜಿಸ್ಟ್ರಾರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ.

ತಾರೀಖು ನೆ ಜನವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟು ಮಾಲೂರು ರೇಂಜು ಪ್ಲಾಂಟೇಷನ್‌ಗಳಲ್ಲಿ ಈ ಕೆಳಗೆ ನಮೂದಿಸಿರುವ ತಪಶೀಲು ಮೇರೆ ಬೆಳೆಸಿದ ಕ್ಯಾಸರೀನಾ ಮರಗಳನ್ನು ಕಡದು ಲಾಟು ಹಾಕಿರುವದು 1909ನೆ ಇಸವಿ ಫೆಬ್ರುವರಿ ಮಾಹೆಯಲ್ಲಿ ಈ ಕೆಳಗೆ ಕಂಡ ಪಟ್ಟೀಲಿ ನಮೂದು ಇರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಮಧ್ಯಾಹ್ನ 2 ಘಂಟೆಗೆ ಮಾಲೂರು ಫಾರೆಸ್ಟು ರೇಂಜಾಫಿಸರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ :—

ನಂಬರು.	ಪ್ಲಾಂಟೇಷನ್ ಹೆಸರು ಅಥವಾ ಸ್ಥಳ.	ಬಿಕರಿಯಾಗುವ ಸ್ಥಳಕ್ಕೆ ಯಾ ಸಮೀಪಿಸುವ ರೈಲ್ವೆ ಸ್ಟೇಷನ್‌ಗೆ ಫಾಸಲೆ.	ಹರಾಜು ಸ್ಥಳ.	ಹರಾಜು ತಾರೀಖು.	ಷರಾ.
1	ಬೆಳ್ಳಾವಿ ...	4 ಮೈಲಿ ಮಾಲೂರಿಗೆ ...	ಮಾಲೂರು.	3—2—09	ಒಂದೊಂದು ಲಾಟು ಸುಮಾರು 25–30 ಗಾಡಿ ಸೌದೆ ಬರುತ್ತದೆ.
2	ಕಾಡಮುತ್ಸಂದ್ರ ...	8 ಡಿಟೋ ...			
3	ರಾಮಚಂದ್ರಪುರ ...	4 ಡಿಟೋ ...			
4	ಮಲ್ಲಪ್ಪನಹಳ್ಳಿ ...	3 ಡಿಟೋ ...	ಮಲ್ಲಪ್ಪನಹಳ್ಳಿ ಪ್ಲಾಂಟೇಷನ್‌ನಲ್ಲಿ.	4—2—09	
5	ಹೊಸಕುರಂಡಹಳ್ಳಿ ...	4 ಡಿಟೋ ...	ಹೊಸಕುರಂಡಹಳ್ಳಿ ಪ್ಲಾಂಟೇಷನ್.	5—2—09	
6	ಲಕ್ಷ್ಮಿಸಾಗರ ...	10 ಡಿಟೋ ...	ಯಶವಂತಪುರ ಪ್ಲಾಂಟೇಷನ್ನಲ್ಲಿ.	6—2—09	
7	ಯಶವಂತಪುರ ...	11 ಡಿಟೋ ...			
8	ವಕ್ಕಲೇರಿ ...	10 ಡಿಟೋ ...	ವಕ್ಕಲೇರಿ ಪ್ಲಾಂಟೇಷನ್ನಲ್ಲಿ.	8—2—09	
9	ಬೈಯಪ್ಪನಹಳ್ಳಿ ...	5 ಮೈಲಿ ಕೋಲಾರಕ್ಕೆ.	ಪ್ಲಾಂಟೇಷನ್ನಲ್ಲಿ.	9—2—09	

2. ಸದರಿ ಸವುದೇ ಕೊಂಡುಕೊಳ್ಳಲು ಇಷ್ಟವುಳ್ಳವರು ಲಾಟುವಾರು ಅಥವಾ ಒಟ್ಟು ಲಾಟುಗೆ ಇಷ್ಟೆಂದು ದರಖಾಸ್ತು ಮಾಡಬಹುದು.

3. ಹರಾಜು ಮಾಡುವ ಆಫಿಸರು ಯಾವ ಸವಾಲನ್ನೆ ಆಗಲಿ ಯಾವ ಕಾರಣವೂ ನಮೂದಿಸದೇ ತಿರಸ್ಕರಿಸಲು ಸ್ವತಂತ್ರರಾಗಿರುತ್ತಾರೆ.

4. ಹರಾಜು ಖೈದಾದ ಕೂಡ್ಲೇ ಅಂಗೀಕರಿಸಲ್ಪಟ್ಟ ಸವಾಲುದಾರನು ಹರಾಜು ಮೊಬಲಗಿನಲ್ಲಿ ಕಾಲು ಹಿಸ್ಸೆಯನ್ನ ಪಾವತಿ ಮಾಡಿ ಬಾಕಿಯನ್ನ ಹರಾಜು ಮಂಜೂರಾದ ಸಂಗತಿ ತಿಳಿಸಿದ ಮೂರು ದಿವಸದೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದರೆ ಸವಾಲುದಾರನು ಪಡೆದ ಸವುದೆಯು ಪುನಃ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ಲುಕಸಾನಿಗೆ ಮೊದಲು ಸವಾಲ್ದಾರನನ್ನು ಗುರಿಪಡಿಸಲ್ಪಡುತ್ತೆ. ನಫೆ ಬಂದಲ್ಲಿ ಈತನ ಬಾಧ್ಯತೆ ಏನೂ ಇರುವದಿಲ್ಲ. ಶಿವಾಯಿ ಈತನ ಠೇವಣಿ ಯಾ ಪಾವತಿ ಮಾಡಿದ ಇತರೇ ಮೊಬಲಗು ಸಹಾ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

5. ಪೂರಾ ಮೊಬಲಗು ಪಾವತಿ ಮಾಡಿದ ನಂತರ ಸದರಿ ಸವಾಲುದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ಬದ್ಧನಾಗಿ ಒಂದು ಕರಾರು ಬರದುಕೊಡತಕ್ಕದ್ದು :—

(1) ತಾನು ಕಿತ್ತಾವಾರು ಸಾಗಿಸುವ ಸವುದೆಗೆ ರೇಂಜು ಆಫಿಸರು ಯಾ ಚಾರ್ಜಿನಲ್ಲಿರುವ ಫಾರೆಸ್ಟರಿಂದ ರಹದಾರಿ ಪಡದು ಸಾಗಿಸುವೆನೆಂದು,

(2) ಸೂರ್ಯಾಸ್ತಮಯ ನಂತರವಾಗಲಿ ಸೂರ್ಯೋದಯಕ್ಕೆ ಪೂರ್ವವಾಗಲಿ ಸವುದೆ ಸಾಗಿಸುವದಿಲ್ಲವೆಂದು,

(3) ತಾನಾಗಲಿ ತನ್ನ ಕಡೆಯವರಾಗಲಿ ಸವುದೆ ಸಾಗಿಸುವಲ್ಲಿ ಪ್ಲಾಂಟೇಷನ್‌ನಲ್ಲಿನ ಗಿಡಮರಗಳು ಕಡಿಯುವದು ಯಾ ಹಾನಿಪಡಿಸುವದಿಲ್ಲವೆಂದು,

(4) ತಾನಾಗಲಿ ತನ್ನ ಕಡೆಯವರಾಗಲಿ ಪ್ಲಾಂಟೇಷನ್ ಸರಹದ್ದಿನಲ್ಲಿ ಅಡಿಗೆ ಮಾಡುವದು ಮತ್ತು ಬೆಂಕಿ ಹೊತ್ತಿಸುವದಿಲ್ಲವೆಂದು,

(5) ತಾನು ಸಾಗಿಸುವ ಸವುದೆ ಗಾಡಿಗಳು ರಹದಾರಿ ಸಹಿತ ಡಿಸ್ಟ್ರಿಕ್ಟು ಯಾ ಫಾರೆಸ್ಟು ಆಫಿಸರು ವಿಧಾಯಿಸುವ ಸ್ಥಳಗಳಲ್ಲಿ ಅಜಮಾಯಿಷಿ ಬಗ್ಗೆ ಹಾಜರು ಪಡಿಸುತ್ತೇನೆಂದು,

(6) ತಾನು ಪಡದ ಖಿಸ್ತು ಸವುದೆಯನ್ನ 1909ನೆ ಇಸವಿ ಏಪ್ರಿಲ್ ಆಖೈರು ವಳಗಾಗಿ ಸಾಗಿಸಿಕೊಳ್ಳುತ್ತೇನೆಂದೂ, ಆರೀತಿ ಮಾಡಲು ತೃಪ್ತಿಕರವಾದ ಕಾರಣವಿಲ್ಲದೆ ತಪ್ಪಿದಲ್ಲಿ ಉಳಿಯುವ ಸೌದೆ ಸರ್ಕಾರಕ್ಕೆ ಸೇರಿಸಿಕೊಳ್ಳಬಹುದೆಂದು,

6. ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾದರೂ ತಪ್ಪಿದರೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಗೆ ಯುಕ್ತ ತೋರಿದಂತೆ ಹರಾಜುದಾರನನ್ನು ಜುಲ್ಮಾನೆಗೆ ಯಾ ಫಾರೆಸ್ಟು ರೆಗ್ಯುಲೇಷನ್‌ನಲ್ಲಿ ನಮೂದಿರುವ ಶಿಕ್ಷೆಗೆ ಗುರಿಪಡಿಸಲ್ಪಡುತ್ತೆಂದು.

ಹೆಚ್. ರಾಮಯ್ಯ,

ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ, ಕೋಲಾರ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರ ಕ ಟ ನೆ.

ತಾರೀಖು 15ನೆ ಡಿಸೆಂಬರ್ 1908.

ಇದರಡಿ ವಿವರಿಸಿ ಇರುವ ಎಲ್ಲೆಗಳುಳ್ಳ ದೊಡ್ಡಬಳ್ಳಾಪುರ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರಿ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ದೊಡ್ಡಬಳ್ಳಾಪುರ ಟವರ್ ಎಲ್ಲೆಯು ತಿಗಳೆ ಬಾಗಾಯಿತು ಗ್ರಾಮದ ಸರ್ವೆ 57ನೆ ನಂಬರಿನ ವಾಯುವ್ಯ ಮೂಲೆಯಿಂದ ಪ್ರಾರಂಭಿಸಿ ಮೇಲ್ಕಂಡ ತಿಗಳೆ ಬಾಗಾಯಿತು ಸರ್ವೆ 57—58—59—60—61—62—63—64—65—66 ಮತ್ತು 67ನೆ ನಂಬರುಗಳ ಉತ್ತರ ಗಡೀಮಾರ್ಗವಾಗಿ ಹೋಗುತ್ತೆ.

II. ಅಲ್ಲಿಂದ ಎಲ್ಲೆಯು ಬೆಂಗಳೂರು-ದೊಡ್ಡಬಳ್ಳಾಪುರ ರಸ್ತೆಯನ್ನು ಹಾದು ಉತ್ತರಕ್ಕೆ ತಿರುಗಿ ಸದರೀ ರಸ್ತೆಯ ಮಾರ್ಗವಾಗಿ ತಿಗಳೆಬಾಗಾಯಿತು ಸರ್ವೆ 24ನೆ ನಂಬರಿನ ನೈರುತ್ಯ ಮೂಲೆಯನ್ನು ಸಂಧಿಸಿ ಮೇಲ್ಕಂಡ ಗ್ರಾಮದ ಸರ್ವೆ 24ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಗಡಿ ಮಾರ್ಗವಾಗಿಯು ಸರ್ವೆ 35—20—16ನೆ ನಂಬರುಗಳ ಪಶ್ಚಿಮಗಡಿ ಮಾರ್ಗವಾಗಿಯು ಮತ್ತು ಸರ್ವೆ 11ನೆ ನಂಬರಿನ ದಕ್ಷಿಣ ಮಾರ್ಗವಾಗಿಯು ಹೋಗಿ ಅಲ್ಲಿಂದ ಎಲ್ಲೆಯು ಬೆಂಗಳೂರು-ದೊಡ್ಡಬಳ್ಳಾಪುರ ರಸ್ತೆಯ ಪೂರ್ವ ಬಾಜೂದಲ್ಲಿ ಹೊರಟು ಸದರೀ ರಸ್ತೆಯನ್ನು ಹಾದು ರೋಜೀಪುರ ಗ್ರಾಮದ ಸರ್ವೆ 82ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತೆ.

III. ಇಲ್ಲಿಂದ ಎಲ್ಲೆಯು ರೋಜೀಪುರ ಗ್ರಾಮದ 82—83 ಮತ್ತು 86ನೆ ನಂಬರುಗಳ ದಕ್ಷಿಣ ಮಾರ್ಗವಾಗಿ ಹೋಗಿ ಸರ್ವೆ 106ನೆ ನಂಬರು ತಿಮ್ಮನಕುಂಟೆ ಕೆರೆಯ ಆಗ್ನೇಯ ಮೂಲೆಯನ್ನು ಬಳಸಿಕೊಂಡು ರೋಜೀಪುರ ಗ್ರಾಮದ ಸರ್ವೆ 102—101ನೆ ನಂಬರುಗಳ ದಕ್ಷಿಣ ದಿಕ್ಕಿನಲ್ಲಿ ಹೊರಟು ನಂದೀದುರ್ಗಕ್ಕೆ ಹೋಗುವ ರಸ್ತೆಯನ್ನು ಹಾದು ಗಂಗಾಧರಪುರ ಗ್ರಾಮದ ಸರ್ವೆ 14ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸಿ ಅಲ್ಲಿಂದ ಉತ್ತರಕ್ಕೆ ತಿರುಗಿ ಸದರೀ ಸರ್ವೆ ನಂಬರಿನ ಪೂರ್ವಕಡೆ ಹೊರಟು ಗಂಗಾಧರಪುರ ಗ್ರಾಮದ ಸರ್ವೆ 13ನೆ ನಂಬರಿನ ದಕ್ಷಿಣ ಗಡಿಯನ್ನು ಸೇರುತ್ತೆ. ಅಲ್ಲಿಂದ ಸರ್ವೆ 13ನೆ ನಂಬರಿನ ದಕ್ಷಿಣಮಾರ್ಗವಾಗಿಯು ಸರ್ವೆ 12—15—16ನೆ ನಂಬರುಗಳ ಪೂರ್ವ ಮಾರ್ಗವಾಗಿಯು ಹೊರಟು ಗಂಗಾಧರಪುರ ಗ್ರಾಮದ ಸರ್ವೆ 16ನೆ ನಂಬರು ಆಗ್ನೇಯ ಮೂಲೆಯನ್ನು ಸೇರುತ್ತೆ. ಇಲ್ಲಿಂದ ಸರ್ವೆ 16ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಗಂಗಾಧರಪುರ ಗ್ರಾಮದ ಸರ್ವೆ 17ನೆ ನಂಬರು ಪೂರ್ವಗಡಿಯನ್ನು ಸಂಧಿಸುತ್ತೆ.

IV. ಇಲ್ಲಿಂದ ಎಲ್ಲೆಯು ಕೋಳೂರಿನಿಂದ ಬರತಕ್ಕ ಬಂಡಿಝಾಡೆಯನ್ನು ಹಾದು ದಕ್ಷಿಣಾಭಿಮುಖವಾಗಿ ಹೋಗಿ ಗಂಗಾಧರಪುರ ಗ್ರಾಮದ ಸರ್ವೆ 17ನೆ ನಂಬರಿನ ಪೂರ್ವಗಡಿ ಮಾರ್ಗವಾಗಿ ಹೊರಟು ಕುರುಬರಹಳ್ಳಿಯಿಂದ ಬರತಕ್ಕ ಮತ್ತೊಂದು ಬಂಡಿಝಾಡೆಯನ್ನು ಸಂಧಿಸುತ್ತೆ.

ಇಲ್ಲಿಂದ ಎಲ್ಲೆಯು ಸದರೀ ಬಂಡಿಝಾಡೆ ಮಾರ್ಗವಾಗಿ ಹೊರಟು ರೋಜೀಪುರ ಗ್ರಾಮದ ಸರ್ವೆ 87ನೆ ನಂಬರಿನ ಉತ್ತರ ಕೊನೆಯನ್ನು ಸೇರುತ್ತೆ. ಇಲ್ಲಿಂದ ಮೇಲ್ಕಂಡ 87ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಗಡಿ ಮಾರ್ಗವಾಗಿ ಹೊರಟು ಕುರುಬರಹಳ್ಳಿಯಿಂದ ಬರತಕ್ಕ ಬಂಡಿಝಾಡೆಯನ್ನು ಹಾದು ಪೂರ್ವಕ್ಕೆ ತಿರುಗಿ ವೀರಭದ್ರನಪಾಳ್ಯದ ಸರ್ವೆ 70ನೆ ನಂಬರಿನ ಉತ್ತರಗಡಿ ಮಾರ್ಗವಾಗಿ ಹೊರಡುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣಾಭಿಮುಖವಾಗಿ ಸರ್ವೆ 70—71—72—3ನೆ ನಂಬರುಗಳ ಪೂರ್ವಕ್ಕೆ ಹೊರಟು ಕರೇನಹಳ್ಳಿಯಿಂದ ಬರತಕ್ಕ ಬಂಡಿಝಾಡೆಯನ್ನು ಹಾದು ಸರ್ವೆ 4ನೆ ನಂಬರು ಪೂರ್ವಗಡಿ ಮಾರ್ಗವಾಗಿ ಹೊರಡುತ್ತೆ. ಇಲ್ಲಿ ನೆಲಮಂಗಲದ ರಸ್ತೆಯನ್ನು ಹಾದು ತಿಗಳೆ ಬಾಗಾಯಿತು ಗ್ರಾಮದ ಸರ್ವೆ 57ನೆ ನಂಬರು ವಾಯುವ್ಯ ಮೂಲೆಯನ್ನು ಸೇರುತ್ತೆ.

3. ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ದೊಡ್ಡಬಳ್ಳಾಪುರ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆಸೇರಿರುತ್ತೆ:—

ಖಾಸ್‌ಬಾಗ್ ಗ್ರಾಮದ ಸರ್ವೆ ನಂಬರು 1ರ ಲಾಗಾಯಿತು 18ರ ವರಿವಿಗೆ ಮತ್ತು ಸದರೀ ಗ್ರಾಮದ ಗಾವುಠಾಣ.

ತಿಗಳೆಬಾಗಾಯಿತು ಗ್ರಾಮದ ಸರ್ವೆ 1—3—4—5—6—7—20—21—22—23—26—27—28—29—30—31 ಮತ್ತು 54.

ರೋಜೀಪುರ ಗ್ರಾಮದ ಸರ್ವೆ ನಂಬರು 87ರ ಲಾಗಾಯಿತು 99ರ ವರಿವಿಗೆ

ಗಂಗಾಧರಪುರ ಗ್ರಾಮದ ಸರ್ವೆ 14—18—19—20 ಮತ್ತು ಹೊಲೆಯರಹಟ್ಟಿ.

ತಾರೀಖು 15ನೆ ಡಿಸೆಂಬರ್ 1908.

ಇದರಡಿ ವಿವರಿಸಿ ಇರುವ ಎಲ್ಲೆಗಳುಳ್ಳ ದೇವನಹಳ್ಳಿ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರಿ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ದೇವನಹಳ್ಳಿ ಟವನಿನ ಎಲ್ಲೆಯು ಸರ್ವೆ 351ನೆ ನಂಬರು ಈಶಾನ್ಯ ಮೂಲೆಯಲ್ಲಿ ಪ್ರಾರಂಭವಾಗಿ ದಕ್ಷಿಣ ಮತ್ತು ಪೂರ್ವ ಮಾರ್ಗವಾಗಿ ಮೇಲ್ಕಂಡ 351ನೆ ನಂಬರಿನ ಪೂರ್ವ ಎಲ್ಲೆಯು ಮಾರ್ಗವಾಗಿ ಹೊರಟು ಸರ್ವೆ 352ನೆ ನಂಬರಿನ ಪೂರ್ವ ಮತ್ತು ದಕ್ಷಿಣ ಎಲ್ಲೆಗಳ ಮಾರ್ಗವಾಗಿಯು ಮತ್ತು ದೇವನಹಳ್ಳಿಯಿಂದ ವಡಿಗೇನಹಳ್ಳಿಗೆಹೋಗುವ ಹಳೇರಸ್ತೆ ಮಾರ್ಗವಾಗಿಯು ಹೋಗಿ ಗೋಕೆರೆ ಗ್ರಾಮಕ್ಕೆ ಹೋಗುವ ಕಾಲುದಾರಿಯನ್ನು ಹಾಯುತ್ತೆ; ಅಲ್ಲಿಂದ ಸರ್ವೆ 385—386—387—518—519ನೆ ನಂಬರುಗಳ ಪೂರ್ವಎಲ್ಲೆ ಮಾರ್ಗವಾಗಿ ಹೊರಟು, ಬೂದಿಹಾಳು ಗ್ರಾಮಕ್ಕೆ ಹೋಗುವಕಾಲುದಾರಿಯನ್ನು ಹಾದು ದಕ್ಷಿಣಾಭಿಮುಖವಾಗಿ ಸರ್ವೆ 515—462ನೆ ನಂಬರಿನ ಪೂರ್ವಎಲ್ಲೆ ಮಾರ್ಗವಾಗಿ ಅಲ್ಲಿಂದ ಸ್ವಲ್ಪ ಪಶ್ಚಿಮಕ್ಕೆ ತಿರುಗಿ ಸರ್ವೆ 463ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸಿ ಅಲ್ಲಿಂದ ದಕ್ಷಿಣ ಮಾರ್ಗವಾಗಿ ಸರ್ವೆ 464ನೆ ನಂಬರಿನ ಪೂರ್ವ ಎಲ್ಲೆ ಹಿಡಿದು ಮೇಲ್ಕಂಡ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತೆ.

II. ಅಲ್ಲಿಂದ ಎಲ್ಲೆಯು ಸರ್ವೆ 464—507—508ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿಹೋಗಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ಸರ್ವೆ 543ನೆ ನಂಬರಿನ ಪೂರ್ವದ ಎಲ್ಲೆ ಮಾರ್ಗವಾಗಿಹೊರಟು ಸರ್ವೆ 543—544—72ನೆ ನಂಬರುಗಳ ದಕ್ಷಿಣದಲ್ಲಿರುವ ಹಳ್ಳದ ಮಾರ್ಗವಾಗಿ ಹೋಗಿ ಬೆಂಗಳೂರು-ಬಳ್ಳಾರಿ ರಸ್ತೆಯನ್ನುಹಾದು ಸರ್ವೆ 68—67ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಸೀದಾಹೋಗಿ ಸರ್ವೆ 67ನೆ ನಂಬರಿನ ನೈರುತ್ಯಮೂಲೆಯನ್ನು ಸಂಧಿಸುತ್ತೆ.

III. ಅಲ್ಲಿಂದ ಎಲ್ಲೆಯು ಉತ್ತರಕ್ಕೆತಿರುಗಿ ಸರ್ವೆ 67—66—65—64—57—56—55—48—45 ಮತ್ತು 44ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಅಲ್ಲಿಂದ ಕೊಂಚ ಪೂರ್ವಕ್ಕೆತಿರುಗಿ ಸರ್ವೆ 44—40ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿಯು 39—31ನೆ ನಂಬರುಗಳ ಪಶ್ಚಿಮಎಲ್ಲೆ ಮಾರ್ಗವಾಗಿಯು ಅಲ್ಲಿಂದ ಸರ್ವೆ 30ನೆ ನಂಬರು ಕುಡಿಯುವ ನೀರು ಕೆರೆಯ ಪಶ್ಚಿಮ ಕಟ್ಟೆಮೇಲೆ ಹೊರಟು ಒಂದು ಹಳ್ಳವನ್ನು ಹಾದು ಉತ್ತರಾಭಿಮುಖವಾಗಿ ಸರ್ವೆ 136—142—143ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿಕೊಂಡುಹೋಗಿ ಸರ್ವೆ 143ನೆ ನಂಬರಿನ ವಾಯುವ್ಯ ಮೂಲೆಬಳಿ ಕೋಲಾರ-ದೊಡ್ಡಬಳ್ಳಾಪುರ ರಸ್ತೆಯನ್ನು ಸಂಧಿಸುತ್ತೆ.

IV. ಇಲ್ಲಿಂದ ಎಲ್ಲೆಯು ಪೂರ್ವಮಾರ್ಗವಾಗಿ ಸರ್ವೆ 143—144—146—147—148—202—201—206—207 ಈ ನಂಬರುಗಳ ಉತ್ತರೆ ಎಲ್ಲೆಯನ್ನು ಅನುಸರಿಸಿ ಒಂದು ಹಳ್ಳವನ್ನು ಹಾದು ಸರ್ವೆ 209—210—211ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೊರಟು ಬೆಂಗಳೂರು-ಬಳ್ಳಾರಿ ರಸ್ತೆಯನ್ನುಹಾದು ಸರ್ವೆ 217—218—351ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಸರ್ವೆ 351ನೆ ನಂಬರಿನ ಈಶಾನ್ಯಮೂಲೆಯನ್ನು ಸೇರುತ್ತೆ.

3. ಇದರಿಂದ ಈ ಕೆಳಗೆಕಂಡ ಕಸಬಾ ದೇವನಹಳ್ಳಿಗೆ ಸೇರಿದ ನಂಬರುಗಳು ದೇವನಹಳ್ಳಿ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ ಸೇರುತ್ತೆ.

ಸರ್ವೆ 1ರ ಲಾಗಾಯಿತು 29 ಮತ್ತು 30 (ಕುಡಿಯುವನೀರು ಕೆರೆ), ಸರ್ವೆ 31ರ ಲಾಗಾಯಿತು 72ರ ವರಿವಿಗೂ 136ರ ಲಾಗಾಯಿತು 144ರವರಿವಿಗು 146ರ ಲಾಗಾಯಿತು 202ರ ವರಿವಿಗು 206ರ ಲಾಗಾಯಿತು 218ರ ವರಿವಿಗು 351—352—354ರ ಲಾಗಾಯಿತು 372ರ ವರಿವಿಗು 374ರಲಾಗಾಯಿತು 387ರ ವರಿವಿಗೂ 462—463—464—507ನೆ ನಂಬರು ಲಾಗಾಯಿತು 515ರ ವರಿವಿಗು 518ರ ಲಾಗಾಯಿತು 545ರ ವರಿವಿಗೂ 547ರ ಲಾಗಾಯಿತು 552ರ ವರಿವಿಗು.

ತಾರೀಖು 8ನೆ ಜನವರಿ 1909.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಆನೆಕಲ್ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರೀ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ಆನೆಕಲ್ ಟವನ್ ಎಲ್ಲೆಯು ಸದರಿ ಗ್ರಾಮದ ಸರ್ವೆ 517ನೆ ನಂಬರು ಈಶಾನ್ಯ ಮೂಲೆಯಲ್ಲಿರುವ 1ನೆ ನಂಬರ ಗಡಿ ಕಲ್ಲಿನಿಂದ ಪ್ರಾರಂಭಿಸಿ ಸರ್ವೆ 523, 524ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ದೊಡ್ಡಕೆರೆಬಾಗಲು ರಸ್ತೆಯನ್ನು ಹಾದು ಸರ್ವೆ 525, 526ನೆ ನಂಬರುಗಳ ಪಶ್ಚಿಮ ಎಲ್ಲೆಯ ಮಾರ್ಗವಾಗಿ ಹೊರಟು ಸರ್ವೆ 526ನೆ ನಂಬರು ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿ ಸರ್ವೆ 548ನೆ ನಂಬರಿನ ಮುಖಾಂತರ ಸದರಿ ನಂಬರಿನ ಹೊಲಗೆರೆಯನ್ನು ಮಿಕ್ಕ ಭಾಗದಿಂದ ಪ್ರತ್ಯೇಕಿಸಿಕೊಂಡು ಅಲ್ಲಿಂದ ಸರ್ವೆ 546, 547, 542ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ರೆವೆನ್ಯೂ ಸರ್ವೆ 549ನೆ ನಂಬರಿನ ಪಶ್ಚಿಮ ಎಲ್ಲೆಯನ್ನು ಸಂಧಿಸಿ ಅದೇ 549ನೆ ನಂಬರು ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಅಲ್ಲಿಂದ ಬೆಂಗಳೂರು ರಸ್ತೆಯನ್ನು ಹಾದು ಸರ್ವೆ ನಂಬರು 1, 2, 562, 563, 564, 565, 567, 77 ಈ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ರೆವಿನ್ಯೂ ಸರ್ವೆ 568, 80, 81ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ತಿರುಗಿ ಸರ್ವೆ 81ನೆ ನಂಬರು ದಕ್ಷಿಣ ಮತ್ತು ಪೂರ್ವ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 82, 85ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಅಲ್ಲಿಂದ ಸರ್ವೆ 85, 86ನೆ ನಂಬರುಗಳ ಪೂರ್ವಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 87ನೆ ನಂಬರಿನ ನೈರುತ್ಯ ಮೂಲೆಯಲ್ಲಿರುವ ದಕ್ಷಿಣ ಎಲ್ಲೆಯನ್ನು ಸೇರಿ ಅಲ್ಲಿಂದ ತಿರುಗಿ 87ನೆ ಸರ್ವೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು 88ನೆ ನಂಬರಿನ ಈಶಾನ್ಯ ಮೂಲೆಯಲ್ಲಿರುವ 2ನೆ ನಂಬರು ಗಡಿ ಕಲ್ಲನ್ನು ಸೇರುತ್ತೆ.

II. ಇಲ್ಲಿಂದ ಎಲ್ಲೆಯು ದಕ್ಷಿಣಕ್ಕೆ ತಿರಿಗಿ ಸರ್ವೆ 91ನೆ ನಂಬರು ಪಶ್ಚಿಮಗಡಿ ಮಾರ್ಗವಾಗಿ ಹೊರಟು ಸರ್ಜಾಪುರದ ರಸ್ತೆಯನ್ನು ಹಾದು ಸರ್ವೆ 111ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಬಿದರಗೆರೆಗೆ ಹೋಗುವ ರಸ್ತೆಯನ್ನು ದಾಟಿ ಸರ್ವೆ 113ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರಿ ಅಲ್ಲಿಂದ ಪಶ್ಚಿಮಕ್ಕೆ ತಿರಿಗಿ ಸದರಿ ನಂಬರಿನ ಉತ್ತರ ಮತ್ತು ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಅಲ್ಲಿಂದ ಅದರ ದಕ್ಷಿಣ ಎಲ್ಲೆಯನ್ನು ಸ್ವಲ್ಪದೂರ ಅನುಸರಿಸಿ ಸರ್ವೆ 127ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 127, 125, 124, 142, 143, 144, 145, 146, 202 ಮತ್ತು 199 ಈ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು 197ನೆ ನಂಬರಿನ ಪಶ್ಚಿಮ, ಉತ್ತರ, ಪೂರ್ವ ಎಲ್ಲೆಗಳನ್ನು ಬಳಸಿಕೊಂಡು 196ನೆ ನಂಬರಿನ ಉತ್ತರ ಮತ್ತು ಪೂರ್ವ ಎಲ್ಲೆಗಳ ಮಾರ್ಗವಾಗಿ ಬಂದು ಸದರಿ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸುತ್ತೆ.

III. ಇಲ್ಲಿಂದ ಎಲ್ಲೆಯು ರೆವಿನ್ಯೂ ಸರ್ವೆ 196, 192ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಉತ್ತರ ದಿಕ್ಕಿಗೆ ತಿರಿಗಿ ರೆವಿನ್ಯೂ ಸರ್ವೆ 192ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಸರ್ವೆ 191ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತೆ. ಇಲ್ಲಿಂದ ಎಲ್ಲೆಯು ಪಶ್ಚಿಮಕ್ಕೆ ತಿರಿಗಿ ಸರ್ವೆ 191, 200, 201, 203, 141 ಈ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಮತ್ತಿಕೆರೆ ರಸ್ತೆಯನ್ನು ಹಾದು ರೆವಿನ್ಯೂ ಸರ್ವೆ 138ನೆ ನಂಬರಿನ ಆಗ್ನೇಯ ಮೂಲೆಯಲ್ಲಿರುವ 3ನೆ ನಂಬರು ಗಡಿ ಕಲ್ಲನ್ನು ಸೇರುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 139ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಎಲ್ಲೆಗಳ ಮಾರ್ಗವಾಗಿ ಹೊರಟು 137, 135, 134ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 251ನೆ ನಂಬರು ಚಿಕ್ಕಕೆರೆಯ ಪೂರ್ವ ದಕ್ಷಿಣ ಮತ್ತು ಪಶ್ಚಿಮ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 258, 257, 256, 561, 234, 389, 509 ಮತ್ತು 510ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 510ನೆ ನಂಬರು ವಾಯುವ್ಯ ಮೂಲೆಯಲ್ಲಿರುವ 4ನೆ ನಂಬರು ಗಡಿ ಕಲ್ಲನ್ನು ಸೇರುತ್ತದೆ.

IV. ಈ ಗಡಿ ಕಲ್ಲಿನಿಂದ ಎಲ್ಲೆಯು ಉತ್ತರಾಭಿಮುಖವಾಗಿ ಹೊರಟು ಸರ್ವೆ 513, 514, 515ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಗುಮ್ಮಳಾಪುರದ ರಸ್ತೆಯನ್ನು ಹಾದು ಸರ್ವೆ 516ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಸರ್ವೆ 516, 517ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ 1ನೆ ನಂಬರು ಗಡಿ ಕಲ್ಲನ್ನು ಸೇರುತ್ತೆ.

ಇದರಿಂದ ಈ ಕೆಳಗೆ ಕಂಡ ಸರ್ವೆ ನಂಬರುಗಳು ಆನೆಕಲ್ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ ಸೇರಿರುತ್ತವೆ. ರೆವಿನ್ಯೂ ಸರ್ವೆ 548ನೆ ನಂಬರು ಹೊಲಗೆರೆಗೆ ತೆಗೆದುಕೊಂಡು ಇರುವಷ್ಟು ಭಾಗವು ರೆವಿನ್ಯೂ ಸರ್ವೆ 550, 569, 89, 88, 90, 112, 128, 129, 130, 131, 132, 133, 138, 192, 196, 197, 252, 253, 254, 255, 553, 554, 555, 556, 557, 558, 559, 560 ಮತ್ತು 251 (ಚಿಕ್ಕರೆ).

ಎ. ಮಾಧವರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 27ನೆ ನವಂಬರ್ 1908.

ಚಾಮರಾಜನಗರದ ಮ್ಯುನಿಸಿಪಲ್ ಟೌನಿಗೆ ರಾಮಸಮುದ್ರ ಗ್ರಾಮವನ್ನು ಸೇರಿಸಿ 1906ನೆ ಇಸವಿ VIIನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8 (1)ನೆ ಪ್ರಕರಣವನ್ನು ಅನುಸರಿಸಿ ಮ್ಯುನಿಸಿಪಾಲಿಟಿಯನ್ನಾಗಿ ಮಾಡಲು ಉದ್ದೇಶಿಸಿ ಇರುವದ್ದರಿಂದ ಈ ಇಸ್ತಿಹಾರು ಮೈಸೂರು ಗೆಜೆಟಿನಲ್ಲಿ ಮೊದಲಾವರ್ತಿ ಪ್ರಾಯಿಷಾದ ಎರಡು ತಿಂಗಳುಗಳೊಳಗಾಗಿ ಈ ಏರ್ಪಾಡಿಗೆ ಆಕ್ಷೇಪಿಸುವವರೆಲ್ಲಾ ಅಂಥಾ ಆಕ್ಷೇಪಣೆಗಳನ್ನು ಕಾರಣ ಸಹಿತವಾಗಿ ಬರಹಮೂಲಕ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ತಿಳಿಸಬೇಕು. ಏರ್ಪಡಿಸಲು ಉದ್ದೇಶಿಸಿರುವ ಚಾಮರಾಜನಗರದ ಮ್ಯುನಿಸಿಪಾಲಿಟಿಯ ಚಾತುರ್ಸೀಮೆಗಳನ್ನು ಸಮಸ್ತರಿಗೂ ತಿಳಿಯಪಡಿಸಲು ಈ ಕೆಳಗೆ ವಿವರಿಸಿ ಇರುತ್ತದೆ.

ಸದರೀ ಮ್ಯುನಿಸಿಪಾಲಿಟಿಯ ಸರಹದ್ದು ಚಾಮರಾಜನಗರಕ್ಕೆ ವಾಯುವ್ಯ ದಿಕ್ಕಿನಲ್ಲಿರುವ ನಂಜನಗೂಡು, ಹಾಸನೂರು ಘಾಟಿ ರಸ್ತೆಯ ಎಡಪಕ್ಕದಲ್ಲಿ ಸರ್ವೆ 23ನೆ ನಂಬರಿನ ಆಗ್ನೇಯ ಮೂಲೆಯಬಳಿ ಪ್ರಾರಂಭವಾಗಿ 24—21—3 ಮತ್ತು 1ನೆ ನಂಬರುಗಳ ದಕ್ಷಿಣ ದಿಕ್ಕಿನ ಬೇಲಿ ಹೊರಗಡಿ ಸರ್ವೆ 1ನೆ ನಂಬರಿನ ಜಮೀನು ಆಗ್ನೇಯ ಮೂಲೆವರಿಗೆ ಬಂದು ಉತ್ತರಕ್ಕೆ ಟಿ. ನರಸೀಪುರದ ರಸ್ತೆಕಡೆಗೆ ತಿರುಗಿ ಸರ್ವೆ 1—5—6—7 ಮತ್ತು 13ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದು ಹೊರಗೆ ಸದರಿ 13ನೆ ನಂಬರು ಜಮೀನಿನ ಉತ್ತರ ಭಾಗದಲ್ಲಿರುವ ಹಳ್ಳದವರೆಗೆ ಹೋಗಿ ಸದರೀ ರಸ್ತೆಯನ್ನು ದಾಟಿ ನಂತರ ಸರ್ವೆ 342 ಮತ್ತು 343ನೆ ನಂಬರುಗಳ ಪಶ್ಚಿಮ ಭಾಗದ ಬೇಲಿಹೊರಗೆ ಸ್ವಲ್ಪದೂರ ಬಂದು ಪೂರ್ವಕ್ಕೆ ತಿರುಗಿ 343—344ನೆ ನಂಬರು ಪೈಕಿ ಓಣಿಗೆ ದಕ್ಷಿಣವಾಗಿರುವ ಭಾಗವನ್ನು ಮತ್ತು 354ನೆ ನಂಬರು ಪೈಕಿ ಓಣಿಗೆ ದಕ್ಷಿಣವಾಗಿಯೂ ಪಶ್ಚಿಮವಾಗಿಯೂ ಇರುವ ಭಾಗವನ್ನು ಒಳಗೊಂಡು ದಕ್ಷಿಣಕ್ಕೆ ತಿರುಗಿ 356—360—361 ಮತ್ತು 359ನೆ ನಂಬರು ಪೂರ್ತಾ ಜಮೀನುಗಳನ್ನು ಒಳಗೊಂಡು ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪೂರ್ವಕ್ಕೆ ರಾಮಸಮುದ್ರದ ರಸ್ತೆಗೆ ಉತ್ತರ ಭಾಗದಲ್ಲಿರುವ ಚಾಮರಾಜನಗರದ ಗ್ರಾಮದ ಸರ್ವೆ 358—412—298—296—295 ಮತ್ತು ರಾಮಸಮುದ್ರ ಗ್ರಾಮದ ಸರ್ವೆ 613 ಈ ನಂಬರು ಜಮೀನುಗಳ ದಕ್ಷಿಣ ದಿಕ್ಕಿನ ಬೇಲಿ ಹೊರಗಿನಿಂದ ಬಂದು ಸರ್ವೆ 612—618—619—620—629—623

ಈ ನಂಬರುಗಳನ್ನು ಮತ್ತು 623—624ನೆ ನಂಬರುಗಳ ಮಧ್ಯೇ ಇರುವ ಓಣಿಯನ್ನು ಸರ್ವೆ 624—625ನೆ ನಂಬರುಗಳನ್ನು ಒಳಗೊಂಡು 626ನೆ ನಂಬರಿನ ಪೂರ್ವ ದಿಕ್ಕಿನ ಬೇಲಿಹೊರಗೆ ಉತ್ತರಕ್ಕೆ ತಿರುಗಿ 652ನೆ ನಂಬರಿನ ದಕ್ಷಿಣ ಭಾಗದ ಬೇಲಿ ಹೊರಗೊಂಡು 661ನೆ ನಂಬರಿನ ಪಶ್ಚಿಮ ದಿಕ್ಕಿನ ಬೇಲಿಹೊರಗೆ ಸ್ವಲ್ಪದೂರವೂ ದಕ್ಷಿಣ ದಿಕ್ಕಿನ ಬೇಲಿಯಲ್ಲಿ ಪೂರ್ತಾ ನಂಬರು 662ನೆ ನಂಬರು ಒಳಗೊಂಡು ದಕ್ಷಿಣೋತ್ತರವಾಗಿ ಇರುವ ಓಣಿಗೆ ಅಡ್ಡಲಾಗಿ ಬಂದು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಭಾಗದ ಬೇಲಿಹೊರಗಿನಿಂದ ಹೊರಟು ಹಳ್ಳವನ್ನು ದಾಟಿ ದಕ್ಷಿಣಕ್ಕೆ ತಿರುಗಿ ಸರ್ವೆ 112 ಮತ್ತು 114ನೆ ನಂಬರು ಜಮೀನುಗಳ ಪಶ್ಚಿಮ ದಿಕ್ಕಿನ ಸರಹದ್ದಿನಲ್ಲಿ ಬಂದು 116 ಮತ್ತು 118ನೆ ನಂಬರು ಜಮೀನುಗಳನ್ನು ಸುತ್ತಿಕೊಂಡು 118ನೆ ನಂಬರಿನ ನೈರುತ್ಯ ಮೂಲೆಯಲ್ಲಿ ಓಣಿಯನ್ನು ದಾಟಿ ಪಶ್ಚಿಮಕ್ಕೆ ತಿರುಗಿ 563—564—565—585—584—585ನೆ ನಂಬರುಗಳ ಉತ್ತರ ಭಾಗದ ಬೇಲಿಹೊರಗೆ ಬಂದು ಆಬಳಿ ಇರುವ ಓಣಿಗೆ ಅಡ್ಡಲಾಗಿ ಸರ್ವೆ 609 ಮತ್ತು 611ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದುಹೊರಗೆ ಹೋಗಿ ಚಾಮರಾಜನಗರ, ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ 611—609—601—600 ಮತ್ತು ಚಾಮರಾಜನಗರದ ಸರ್ವೆ 391—390—388—387—386—385—366ನೆ ನಂಬರುಗಳ ಉತ್ತರ ದಿಕ್ಕಿನ ಸರಹದ್ದು ಹೊರಗೆಬಂದು ದಕ್ಷಿಣಕ್ಕೆ ತಿರುಗಿ 366—367ನೆ ನಂಬರುಗಳ ಪಶ್ಚಿಮ ದಿಕ್ಕಿನ ಬೇಲಿ ಮಾರ್ಗವಾಗಿಯೂ ಮತ್ತು 369ನೆ ನಂಬರಿನ ಉತ್ತರ 4[illegible]ನೆ ನಂಬರಿನ ಪೂರ್ವ ಮತ್ತು ಉತ್ತರ 429ನೆ ನಂಬರಿನ ಉತ್ತರ ಮತ್ತು ಪಶ್ಚಿಮಬೇಲಿ ಮಾರ್ಗವಾಗಿ ಬಂದು ಓಣಿಯನ್ನು ದಾಟಿ 427ನೆ ನಂಬರಿನ ಉತ್ತರ, ಪಶ್ಚಿಮ ಮತ್ತು 433—434ನೆ ನಂಬರಿನ ಪಶ್ಚಿಮದ ಬೇಲಿ ಮಾರ್ಗವಾಗಿ ಹಾಸನೂರುಘಾಟಿ ರಸ್ತೆಗೆ ಸೇರುತ್ತದೆ. ನಂತರ ಸರ್ವೆ 434—436ನೆ ನಂಬರುಗಳ ರಸ್ತೆಪಕ್ಕದ ಬೇಲಿ ಮಾರ್ಗವಾಗಿ ಮತ್ತು ಸರ್ವೆ 444ನೆ ನಂಬರಿನ ಸದರೀ ಬೇಲಿಯಲ್ಲಿ ಸ್ವಲ್ಪದೂರಕ್ಕೆ ಹೋಗಿ ಹಾಸನೂರುಘಾಟಿ ರಸ್ತೆಯನ್ನುದಾಟಿ 458—459 ಮತ್ತು 461ನೆ ನಂಬರುಗಳ ಉತ್ತರದಿಕ್ಕಿನ ಎಲ್ಲೆ ಹೊರಗಡೆಬಂದು 462—463—464 ಮತ್ತು 467ನೆ ನಂಬರುಗಳನ್ನು ಒಳಗೊಂಡು ಗುಂಡ್ಲುಪೇಟೆರಸ್ತೆಗೆ ಸೇರುತ್ತದೆ. ಮುಂದಕ್ಕೆ ಸರ್ವೆ 470ನೆ ನಂಬರಿನ ಪಶ್ಚಿಮ ಸರಹದ್ದು ಹೊರಗೆ ನೈರುತ್ಯ ಮೂಲೆವರೆಗೆ ಬಂದು ಸದರೀ ರಸ್ತೆಯನ್ನು ದಾಟಿ 471—472—466ನೆ ನಂಬರುಗಳ ಪೂರ್ವ ದಿಕ್ಕಿನ ಬೇಲಿಹೊರಗೊಂಡು ಪಶ್ಚಿಮಕ್ಕೆ ತಿರುಗಿ 466—473ನೆ ನಂಬರುಗಳ ಉತ್ತರದಿಕ್ಕಿನ ಬೇಲಿ ಮಾರ್ಗವಾಗಿಯೂ 475ನೆ ನಂಬರು ಕೆರೆ ಏರಿಯ ಆಗ್ನೇಯಮೂಲೆಗೆ ಸೇರಿ ಸದರಿ ಕೆರೆ ಪೂರ್ವದಿಕ್ಕಿನ ಏರಿಯನ್ನು ಒಳಗೊಂಡು ಸರ್ವೆ 672ನೆ ನಂಬರಿನ ದಕ್ಷಿಣ ಮತ್ತು 672—673ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗಡೆಯಿಂದ ಸರ್ವೆ 701—702—703—704—679—705 ಮತ್ತು 706ನೆ ನಂಬರುಗಳನ್ನು ಒಳಗೊಂಡು 688 ಮತ್ತು 689ನೆ ನಂಬರುಗಳ ದಕ್ಷಿಣ ಭಾಗದ ಬೇಲಿಯ ಹೊರಗೂ ಮತ್ತು 689—686ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗೆಬಂದು 686ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ನಂಜನಗೂಡು, ಹಾಸನೂರುಘಾಟಿ ರಸ್ತೆಗೆ ಸೇರಿ ಸರ್ವೆ 686—685 ಮತ್ತು 659ನೆ ನಂಬರುಗಳ ಉತ್ತರಭಾಗದ ಎಲ್ಲೆ ಹೊರಗಡೆಹೋಗಿ ಸದರೀ ರಸ್ತೆಯನ್ನು ದಾಟಿ ಮೊದಲು ಪ್ರಾರಂಭಿಸಿದ ಸ್ಥಳಕ್ಕೆ ಅಂದರೆ 2[illegible]ನೆ ನಂಬರಿನ ಆಗ್ನೇಯ ಮೂಲೆಬಳಿಗೆ ಸೇರುತ್ತದೆ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವೆ ಪ್ರಸಿದ್ಧಪತ್ರಿಕೆ.

ತಾರೀಖು 22ನೆ ಡಿಸೆಂಬರ್ 1908.

1. ಕಂದಾಯದ ಬಾಕೀದಾರರಾದ ಬೆಂಗಳೂರಿನಲ್ಲಿರುವ ಮಾನ್ಯದಾರ್ ಭೀಮರಾಯರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಮೈಸೂರು ಸಬ್ ಡಿವಿಜನ್ ಆಫೀಸಿನಲ್ಲಿ ಸಬ್ ಡಿವಿಜನ್ ಆಫೀಸರವರಿಂದ 1—4—09ರಲ್ಲು ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ. ಹರಾಜು ಸದರಿ ತಾರೀಖು ಬಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907—08ನೆ ಸಾಲಿಗೆ ಪೂರ್ತಿಯಾಗಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಶೀಲ್ ಮೇರಿಗೆ ರೂಪಾಯಿ 1,060—9—8 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡಬೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವವಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು, ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್‌ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ	ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
								ಎ. ಗು.	ರೂ. ಆ.		ರೂ. ಆ. ಪೈ.	ರೂ. ಆ. ಪೈ.
ಮೈಸೂರು	ವರುಣ	ಜೋಡಿ ಹೊಸಹಳ್ಳಿ	ಮಾನ್ಯದಾರ್ ಭೀಮರಾಯರು	...	ಜೋಡಿ ಗ್ರಾಮದ ವಿಸ್ತೀರ್ಣ—	...	ಪರಂಪೋಕು ಖುಷ್ಕಿ ... ತರಿ ... ಬಾಗಾಯಿತು	403 10 687 39 21 29 41 13 1154 11	12 0 561 15 92 4 152 4 818 7	ರೂ. 3,000	685 5 4	ಪ್ಲವಂಗದ ಆಖೈರು ವರಿಗೆ— 1059 1 8 ಐನ್ 1 8 0 ಖರ್ಚು 1060 9 8 ಬಡ್ಡಿ ಸಹಾ ಬರಬೇಕು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

1908ನೆ ಇಸವಿ ನವಂಬರ್ ಮಾಹೆ ತಾರೀಖು 28ನೆ ತಾರೀಖು ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ|| ಎಂ. ಕಾಂತರಾಜೆ ಅರಸಿನವರು (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
3. ,, ಕೆ. ಚಂದ್ರಶೇಖರೈಯ್ಯನವರು.
4. ,, ಅಂಬಳೆ ಅಣ್ಣಯ್ಯ ಪಂಡಿತರವರು.
5. ,, ಎಚ್. ಶ್ರೀಕಂಠೈಯ್ಯನವರು.
6. ,, ಎಂ. ಸಿ. ರಂಗೈಯ್ಯಂಗಾರ್ರವರು.
7. ,, ಎ. ಸುಬ್ಬಣ್ಣನವರು
8. ,, ಎಂ. ನರಸಿಂಹಸ್ವಾಮಿಗಳವರು.
9. ,, ಎಂ. ಕೃಷ್ಣಪ್ಪಾಜಿ ಅರಸಿನವರು.
10. ,, ತಿರುವೆಂಗಡ ಮೊದಲಿಯಾರ್ರವರು.
11. ,, ಅನಂತರಾಜೈಯ್ಯನವರು.
12. ,, ರಹಿಮತ್ತುಲ್ಲಾ ಅಹಮ್ಮದ್ ಸೇಟರವರು.
13. ,, ಮಾದಪ್ಪನವರು.

ಗೈರ್ ಹಾಜರು.

1. ಮಿ|| ಬಿ. ಸುಬ್ಬರಾಯರವರು (ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ರವರು).
2. ,, ಡಾಕ್ಟರು ಇ. ಎಸ್. ಕೃಷ್ಣಸ್ವಾಮಿ ಐಯ್ಯರವರು, (ಸಿವಿಲ್ ಸರ್ಜನ್).

3. ಮಿ|| ಜೆ. ವಿಯರ್ ಸಾಹೇಬರವರು (ಮಹಾರಾಜಾ ಕಾಲೇಜ್ ಪ್ರಿನ್ಸಿಪಲ್).
4. ,, ಸೈದ್ ಯಾಕ್ಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
5. ,, ಎಂ. ವೆಂಕಟಕೃಷ್ಣಯ್ಯನವರು.
6. ,, ಹಸೇನಲ್ಲಿಬೇಗ್ ಸಾಹೇಬರವರು.
7. ,, ಸೈದ್ ಮೊಹದೀನ್ ಸಾಹೇಬರವರು.

I. 1908ನೆ ಇಸವಿ ಅಕ್ಟೋಬರ್ ಮಾಹೆಯ ಜಮಾ ಖರ್ಚು ಲೆಖ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಖ್ಖಗಳು.

ಪ್ಯಾಸ್‌ಮಾಡಿದೆ.

II. 1908ನೆ ಇಸವಿ ನವಂಬರ್ ಮಾಹೆಯ ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

III. ಡಿಸ್ಇನ್ಫೆಕ್ಷನ್ ಕೆಲಸವನ್ನು ಮ್ಯುನಿಸಿಪಲ್ ಕನ್ಸರ್ವೆನ್ಸಿ ಡಿಪಾರ್ಟುಮೆಂಟಿಗೆ ನೇಮಿಸಿ ಡಿಸ್ಇನ್ಫೆಕ್ಷನ್ ಲವಾಜಮೂ ಪೂರ್ತಾ ಯಾಕೆ ವಜಾ ಮಾಡಬಾರದೆಂದು ಗವರ್ನಮೆಂಟಿನಿಂದ ಸಾದರಾಗಿರುವ 14—10—08ನೆ ಮಕ್ರುಂ 3551-3—San. 67–08–2ನೆ ನಂಬರ್ ಪ್ರೊಸೀಡಿಂಗ್ಸು.

ಮುಂದಿನ ಮೀಟಿಂಗಿಗೆ ಅಡ್ಜರ್ನ ಮಾಡಿದೆ.

IV. ಮೈಸೂರು ಕೋಟೆಯಲ್ಲಿರುವ ಬಾಲಬೋಧಿನಿ ಗರ್ಲ್ಸ್ ಸ್ಕೂಲಿಗೆ ಮಾಹೆಯಾನಾ 12 ರೂಪಾಯಿ ಗ್ರ್ಯಾಂಟನೇಡು ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 31—10—08ನೆ ಮಕ್ರುಂ 4063–4—Ml. 83–08–4ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

V. ದೊಡ್ಡ ಹೊಲಗೇರಿಯಲ್ಲಿ ಹೊಸದಾಗಿ ಪಡಖಾನಾ ಕಟ್ಟತಕ್ಕ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿ ರಿಜಲ್ಯೂಷನ್.

10 ರೂಪಾಯಿ ಬಾಡಿಗೆಯನ್ನು ಕೊಡಲು ಕಂಟ್ರ್ಯಾಕ್ಟರು ಸಿದ್ಧನಾಗಿರುವದ್ದರಿಂದ ಪಡಖಾನಾವನ್ನು ಕಟ್ಟತಕ್ಕದ್ದೆಂದು ತೀರ್ಮಾನಿಸಿದೆ.

VI. ಮೈಸೂರು ಷಹರಿನಲ್ಲಿ ಜನರಲ್ ವಾಟರ್ ಟ್ಯಾಕ್ಸು ಹಾಕತಕ್ಕ ವಿಷಯದಲ್ಲಿ ಮೈಸೂರು ಗೌರ್ನಮೆಂಟು ಜನರಲ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟುಗಳ ಸೆಕ್ರೆಟರಿಯವರಿಂದ ತಲಪಿರುವ 8—6—08ನೆ ಮಕ್ರುಂ 12816—Ml. 530-07–2ನೆ ನಂಬರ್ ಲೆಟರ್.

ಷಹರ್‌ವಾಟರ್ ಸಪ್ಲೈಯು ತುಂಬಾ ಖಾತರಿಯಾಗಿಯೂ ಮತ್ತು ತೃಪ್ತಿಕರವಾಗಿಯೂ ಆಗುವ ಪರಿಯಂತರ ಜನರಲ್ ವಾಟರ್ ಟ್ಯಾಕ್ಸು ಹಾಕುವದನ್ನು ನಿಲ್ಲಿಸಬೇಕೆಂತಲೂ ತನ್ಮಧ್ಯೆ ಈ ಸಂಬಂಧವಾದ ಇತರ ನಡವಳಿಕೆಯನ್ನು ನಡೆಸತಕ್ಕದ್ದೆಂತಲೂ ತೀರ್ಮಾನಿಸಿದೆ.

VII. ಮ್ಯುನಿಸಿಪಲ್ ರೆಗ್ಯುಲೇಷನ್ 144ನೆ ಸೆಕ್ಷನ್ ಕೆಳಗಿನ ಅಧಿಕಾರಗಳನ್ನು ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಕೊಡತಕ್ಕ ವಿಷಯದಲ್ಲಿ ಗೌರ್ನಮೆಂಟನವರನ್ನು ಕೇಳಿಕೊಳ್ಳತಕ್ಕದ್ದು ಅವಶ್ಯಕವೇ ಎಂಬ ಭಾಗದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ರಿಪೋರ್ಟ್.

ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸ್ಸನ್ನು ಅನುಮೋದಿಸತಕ್ಕದ್ದೆಂದು ತೀರ್ಮಾನಿಸಿದೆ.

VIII. ಕೋಟೆ ಸ್ಯಾನಿಟರಿ ಇಂಪ್ರೂವ್‌ಮೆಂಟು ವಿಷಯದಲ್ಲಿ 360 ಮನೆಗಳನ್ನು 6,12,620 ರೂಪಾಯಿಗಳಲ್ಲಿ ಅಕ್ವೈರು ಮಾಡಲು ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 20—11—08ನೆ ಮರ್ಕ್ರುಂ 4741-46–Ml. 69-08-5ನೆ ನಂಬರ್ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡುಮಾಡಿ ಇದೆ.

IX. ಮೈಸೂರು ಷಹರಿಗೆ ಕುಕ್ಕರಹಳ್ಳಿ ನೀರು ಸರಬರಾಯಿ ಮಾಡತಕ್ಕ ವಿಷಯದಲ್ಲಿ ಚೀಫ್ ಇಂಜನಿಯರವರಿಂದ ತಲಪಿರುವ ಇದೇ ಮಾಹೆ 20ನೆ ಮಕ್ರುಂ 1059-7285ನೆ ನಂಬರು ಲೆಟರ್ ಸಂಗಡ ತಲಪಿರುವ ನಡವಳಿಕೆ.

ರಿಕಾರ್ಡು ಮಾಡಿದೆ.

ಎಂ. ಕಾಂತರಾಜೇ ಅರಸ್,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 21ನೆ ಡಿಸೆಂಬರ್ 1908, ಹಾಸನ.

ಹಾಸನ ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ, 1907—08ನೆ ಸಾಲ್ ಬಡ್ಡಿ ದಾಖಲ್ಮಾಡತಕ್ಕ ಬಗ್ಗೆ ಪ್ಯಾಸ್ ಬುಕ್ಕುಗಳನ್ನು ಅವರಿಗೆ ಸಮ್ಮಂಧಪಟ್ಟ ಟ್ರೆಜರೀಲಿ ಹಾಜರ್ಪಡಿಸತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಡೆಪ್ಯುಟಿ ಕಮಿಷನರ್, ಟ್ರೆಜರಿ ಡಿಪಾರ್ಟ್‌ಮೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 27ನೆ ಡಿಸೆಂಬರ 1908.

ಸರ್ 1909ನೆ ಇಸವಿ ಮಾರ್ಚಿ ಮಾಹೆ 23ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ ಶಿವಮೊಗ್ಗ ತಾಲ್ಲೂಕು ಕೂಡ್ಲಿಯಲ್ಲಿ ನಡೆಯುವ ಶ್ರೀ ಸಂಗಮೇಶ್ವರದೇವರ ರಥೋತ್ಸವ ಕಾಲದಲ್ಲಿ ಗವರ್ನ್ಮೆಂಟಿನಿಂದ ತಲ್ಪಿರುವ 22—12—06ನೆ ಮರ್ಸ್ಲಂ 5540-1—L. F. 495-05-4ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ದಣಾಯಿಕಪುರದಬಳಿ ಹೊಳೆಹೊನ್ನೂರಿಗೆ ಹೋಗುವ ಹಳೆ ರಸ್ತೆ ಬಳಿ ಇರುವ ತೋಪಿನಲ್ಲಿ ಪ್ರದರ್ಶನ ನಡೆಯಲು ಏರ್ಪಡಿಸುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೇ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಹಸು 1ಕ್ಕೆ ಒಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಎಮ್ಮೆ 1ಕ್ಕೆ ಒಂದನೆ ಬಹುಮಾನ 10 ರೂಪಾಯಿ ಈರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನ ಮುಗಿದ ಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರೆಯುತ್ತದೆ.

6. ಇನಾಂಪಡೆಯಲು ಲಾಯಖಾದ ಜಾನವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲಿ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು ಶಿವಮೊಗ್ಗ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ ಪ್ರದರ್ಶನ ಷುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ ಬರದು ತಮ್ಮ ಹೆಸರು ಜಾನವಾರು ತಪಶೀಲು ದಾಖಲ್ಮಾಡಿಸಿಕೊಳ್ಳಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ ಅಥವಾ ಅವುಗಳಿಂದ ಜನಗಳಿಗೆ ಆಗಲಿ ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೇ ನೋಡಿಕೊಳ್ಳುವದು ಒಳ್ಳೇದು.

10. ಕೂಡ್ಲಿ ಜಾತ್ರೆಗೆ ಬಹಳ ಜನಗಳು ಮತ್ತು ಜಾನವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡೆಯುತ್ತೆ.

1908ನೆ ಫೆಬ್ರುವರಿ ತಿಂಗಳಲ್ಲಿ ಹೊನ್ನಾಳಿ ತಾಲ್ಲೂಕು ರಾಂಪುರ ಗ್ರಾಮದ ಜಾತ್ರೆ ಕಾಲದಲ್ಲಿ ನಡೆದ ಪ್ರದರ್ಶನದಲ್ಲಿ ಬಹುಮಾನ ಕೊಟ್ಟದ್ದರ ತಪಶೀಲು ಈ ಕೆಳಗೆ ನಮೂದಿಸಿ ಇರುತ್ತೆ:—

ನಂಬರು.	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲು.		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಮೊಬಲಗು.	ಬಹುಮಾನದ ತರಗತಿ.
					ರೂ.	
1	ಬಸಲಿಂಗಪ್ಪ ಬಿನ್ ಮುದಕಪ್ಪ.	ಕುಕ್ಕವಾಡ ...	ದಾವಣಗೆರೆ ...	ಉಳುವ ಎತ್ತುಗಳ ಜೊತೆ.	20	1ನೆ ಬಹುಮಾನ
2	ಕರಿಬಸಪ್ಪ ಬಿನ್ ಚನ್ನಬಸಪ್ಪ.	ತ್ಯಾವಣಿಗೆ ...	ಚನ್ನಗಿರಿ ...	ಡಿಟೋ ...	10	2ನೆ ಡಿಟೋ
3	ರಾಘವೇಂದ್ರಪ್ಪ ಬಿನ್ ನರಸಪ್ಪ.	ಹೊನ್ನಾಳಿ ...	ಹೊನ್ನಾಳಿ ...	ಗಾಡಿ ಎತ್ತಿನ ಜೊತೆ ...	20	1ನೆ ಡಿಟೋ
4	ಫಕೀರಪ್ಪ ಬಿನ್ ಬಸಪ್ಪ...	ಮಲೆಬೆನ್ನೂರು.	ಹರಿಹರ ಸಬ್ ತಾಲ್ಲೂಕು.	ಡಿಟೋ ...	10	2ನೆ ಡಿಟೋ
5	ರಾಮಣ್ಣ ಬಿನ್ ಹನುಮಣ್ಣ	ಸುಂಕದಕಟ್ಟೆ.	ಹೊನ್ನಾಳಿ ...	ಬೀಜದ ಹೋರಿ ಒಂದಕ್ಕೆ	15	1ನೆ ಡಿಟೋ

ಕೆ. ಚಾಂಡಿ,
ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ ಮತ್ತು ಡಿ|| ಬೋ|| ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 4ನೆ ಜನವರಿ 1909.

1. ಕಂದಾಯದ ಬಾಕೀದಾರರಾದ ಬಾಳವಾರು ಗ್ರಾಮದ ಮಂಕಾಳು ಸರಸ್ವತಮ್ಮನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಹಿಡುವಳಿ ಹುಕ್ಕು ಬಾಧ್ಯತೆ ಕಳದುಕೊಂಡಿರುವದಾಗಿ ಕಂಠೋಕ್ತವಾಗಿ ಹುಕುಂ ಮಾ

ಡಲ್ಪಟ್ಟ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಬಾಳವಾರು ಗ್ರಾಮದಲ್ಲಿ ಅಮಲ್ದಾರು 6—2—09ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಖಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1905-06—06-07—07-08ನೆ ಸಾಲಿಗೆ ಪೂರ್ತಿಯಾಗಿ ಸರಿಯುವರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ ರೂಪಾಯಿ 65—11—6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಖಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8 ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ಅಥವಾ ಹಿಸ್ಸಾ ನಂಬರು.	ಜಮೀನು. ಖುಷ್ಕಿ ತರಿ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.		ಜಮೀನು. ಕಂದಾಯ.		ಅಂದಾಜು ಕಿಮ್ಮತ್ತು.	[illegible]	[illegible]
								ಎ.	ಗು.	ರೂ.	ಆ.	ರೂ	ರೂ.	ರೂ. ಆ. ಪೈ.
ಮೂಡಿಗೆರೆ	ಬಾಳವಾರು	ಬಾಳವಾರು	ಮಂಗಳೂರು ಕರಸ್ತನ್ನು ಕೈಲಾಂ ಗಡೀನಾಬ್	...	...	25	ಕಾಫಿ ...	6	29	6	8	60	...	64 3 6 ಐನ್
						26	ಖುಷ್ಕಿ ...	0	14	0	4	1		1 8 0 ನೂ॥
						27	ಕಾಫಿ ...	0	37	1	0	10		
						28	ಡಿಟೋ ...	1	6	1	12	20		65 11 6
						29—2	ಡಿಟೋ ...	7	9	7	4	75		ಹರಾಜು ಡೇಟು ವರಿಗಿನ ಬಡ್ಡಿ ಬರಬೇಕು.
						32	ತರಿ ...	1	37	4	8	5		
						33	ಡಿಟೋ ...	0	25	1	8	2		
						34	ಕಾಫಿ ...	30	30	31	0	320		
						8		49	27	53	12			

ಸರ್ವೆ 25ನೆ ಜಮೀನಿನಲ್ಲಿರತಕ್ಕ ಖಾತೇದಾರ್ರು ಮಂಗಳೂರು ಹೆಂಚಿನ ಬಂಗಲಾ 1ಕ್ಕೆ ... ರೂ. 150
ಮಂಗಳೂರು ಹೆಂಚಿನ ಅಡಿಗೆ ಮನೆ 1ಕ್ಕೆ ... ... ರೂ. 25
ಹುಲ್ಲಿನ ದನವಿನ ಕೊಟ್ಟಿಗೆ 1ಕ್ಕೆ ... ... ರೂ. 1
ಸರ್ವೆ 27ನೆ ಜಮೀನಿನಲ್ಲಿ ಮಂಗಳೂರು ಹೆಂಚಿನ ಮನೆ 1ಕ್ಕೆ ... ರೂ. 20
ಸರ್ವೆ 28ನೆ ಜಮೀನಿನಲ್ಲಿ ಮಂಗಳೂರು ಹೆಂಚಿನ ಲೈನು ಮನೆ 1ಕ್ಕೆ ... ರೂ. 15

ಜಮ್ಲಾ ಅಂದಾಜಾ ... 211

ಸಿ. ರಂಗನಾಥರಾವ್ ಸಾಹೇಬ್,
ಫಾರ್ ಡೆಪ್ಯುಟಿ ಕಮಿಷನರ್.

ಸರ್ 1908ನೆ ಇಸವಿ ನವಂಬರ ತಾರೀಖು 28ನೆ ಭಾನುವಾರ ನಡದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ನಡವಳಿಕೆಗಳು.

ಹಾಜರು.

1. ಕೆ. ಆರ್. ಶ್ರೀನಿವಾಸೈಯ್ಯಂಗಾರ್ರು, ಎಸ್ಕ್ವೈಯರ್, ಎಂ. ಎ., ಪ್ರೆಸಿಡೆಂಟರು.

ಉದ್ಯೋಗ ಪ್ರಯುಕ್ತ ಮೆಂಬರುಗಳು.

2 ಮತ್ತು 3. ಮಿ|| ಬಿ. ವೆಂಕೋಬರಾಯರು, ಡಿವಿಜನಲ್ ಅಸಿಸ್ಟೆಂಟು ಕಮಿಷನರು ಮತ್ತು ಇನ್‌ಛಾರ್ಜ್ ಟ್ರೆಜರಿ ಆಫಿಸರ.

4. ,, ವಿ. ಮುತ್ತುಸಾಮಿದಾಸ್, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.

5. ,, ಹೆಚ್. ಎನ್. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು.

ಗೈರ್ ಹಾಜರು.

6. ಮಿ|| ಎಂ. ರಾಮರಾವ್, ಎಗ್ಸಿಕ್ಯೂಟಿವ ಇಂಜಿನಿಯರವರು.

ಉದ್ಯೋಗ ಪ್ರಯುಕ್ತವಲ್ಲದ ಮೆಂಬರುಗಳು.

ಹಾಜರು.

7. ಮಿ|| ಎ. ಶಾಮರಾಯರು.
8. ,, ಜೆ. ಜೆ. ಹ್ಯಾಮಿಲ್‌ಟನ್ ಸಾಹೇಬರು.
9. ,, ಬಾಬೂಸಾಹೇಬರು.
10. ,, ಹೆಚ್. ಕೇಶವಾಚಾರ್ರು.
11. ,, ಬಿ. ರಂಗಣ್ಣನವರು.
12. ,, ಹೆಚ್. ವಾಟ್ಸನ್ ಸಾಹೇಬರು.
13. ,, ಸಿ. ಶ್ರೀನಿವಾಸರಾಯರು.
14. ,, ಎಚ್. ಫಿಲ್‌ಕಿಂಗ್‌ಟನ್ ಸಾಹೇಬರು.
15. ,, ಜಾವಳಿ ಗಣೇಶರಾಯರು.
16. ,, ಪಟ್ಟಗೆರೆ ರಂಗಣ್ಣನವರು.

ಗೈರ್ ಹಾಜರು.

17. ಮಿ|| ಯಜಮಾನ ರಾಂಭಟ್ಟರು.
18. ,, ನಾಡಿಗ ಭಿಷ್ಟಪ್ಪನವರು.
19. ,, ಆನವಟ್ಟಿ ರಂಗರಾಯರು.
20. ,, ಟಿ. ಶ್ರೀನಿವಾಸಯ್ಯಂಗಾರ್ರು.
21. ,, ಪುರದಪ್ಪನವರು.
22. ,, ಶಾಂತಪ್ಪ ಶೆಟ್ಟರು.
23. ,, ಚನ್ನಕೇಶವರಾಯರು.
24. ,, ಟಿ. ನರಸಿಂಹೈಯ್ಯಂಗಾರ್ರು.
25. ಖಾಲಿ.

I. ಸರ್ 1908ನೆ ಇಸವಿ ಸೆಪ್ಟಂಬರ ಮಾಹೆ ಆಖೈರು ವರಿಗಿನ ಈ ಕೆಳಗೆ ನಮೂದಿಸಿರುವ ಗೋಷ್ವಾರೆಯುಳ್ಳ ಡಿಸ್ಟ್ರಿಕ್ಟು ಫಂಡು ಜಮಾ ಖರ್ಚು ಲೆಖ್ಖಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

		ರೂ.	ಆ.	ಪೈ.
1.	1908ನೆ ಜುಲೈ 1ರಲ್ಲು ನಿಂತ ಶಿಲ್ಕು	15,203	2	11
2.	1908ನೆ ಸೆಪ್ಟಂಬರ ಆಖೈರುವರಿಗಿನ ಜಮಾ	5,911	1	3
	ಜುಮ್ಲಾ ...	21,114	4	2
3.	ಸೆಪ್ಟಂಬರ ಆಖೈರು ವರಿಗಿನ ಖರ್ಚು	8,072	9	7
	ಜಾತಾ ಬಾಕಿ ...	13,041	10	7

II. 1908ನೆ ಜುಲೈ 1ರ ಲಾಗಾಯಿತು ಸೆಪ್ಟಂಬರ ಆಖೈರ ವರಿಗೆ ಚಿಕ್ಕಮಗಳೂರು—ತರೀಕೆರೆ—ಮತ್ತು ಬೀರೂರು ವೈದ್ಯಶಾಲೆಗಳಲ್ಲಿ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಗಳನ್ನು ತೋರಿಸತಕ್ಕ ಲೆಖ್ಖಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

ಸದರಿ ಲೆಖ್ಖಗಳ ಪ್ರಕಾರ ರೋಗಿಗಳ ಸಂಖ್ಯೆ 4,816—2,796 ಮತ್ತು 2,808 ಇದ್ದವು. ಹಿಂದಿನ ಸಾಲಿನಲ್ಲಿ ಪರಸ್ಪರ 3,841—2,843 ಮತ್ತು 3,304 ಇದ್ದವು.

III. ಬೀರೂರಿನಿಂದ ಯಗಟಿಗೂ ಮತ್ತು ಯಗಟಿಯಿಂದ ಅಂತರಗಟ್ಟೆಗೂ ಹೋಗುವ ರಸ್ತೆಯನ್ನು ಅಜಮಾಯಿಷಿ ಮಾಡಿ ಸದರಿ ರಸ್ತೆಯ ಸಾಲಾಬಾದು ರಿಪೇರಿಗೆ ಮೈಲಿ ಒಂದರ 50 ರೂಪಾಯಿನಂತೆ ಒಟ್ಟು 23 ಮೈಲಿಗಳಿಗೆ ತಗಲುವ ಮೊಬಲಗನ್ನ ಕೊಡಿಸಬೇಕಾಗಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಇನ್‌ಸ್ಪೆಕ್ಷನ್ ನೋಟು ಮಲಪೂಫಿಸಿ ಬಂದ ಎಕ್ಸಿಕ್ಯೂಟಿವ್ ಇಂಜಿನಿಯರವರ 9—10—1907ನೆ ಮರ್ಕುಂ 293ನೆ ಮಿಮೋ ಓದಲಾಗಿ ಮೈಲಿ ಒಂದರ 10 ರೂಪಾಯಿ ಪ್ರಕಾರ 23 ಮೈಲಿಗೆ ತಗಲುವ ಲಾಗವಡು 230 ರೂಪಾಯಿಗಳನ್ನ ಈ ರಸ್ತೆ ಸಾಲಾಬಾದ್ ರಿಪೇರಿ ಬಗ್ಗೆ ಬಾಬಾಬುರ್ದ ರಸ್ತೆ ಸಾಲಾಬಾದ್ ರಿಪೇರಿ ಐಟಂ ಪೈಕಿ ಡಿಸ್ಟ್ರಿಕ್ಟ್ ಫಂಡ್ಸಿಗೆ ಮಂಜೂರಾದ ಗ್ರ್ಯಾಂಟ್‌ಇನ್‌ಏಡ್ ಮೊಬಲಗಿನಿಂದ ಚಾಲ್ತಿ ಸಾಲಿಗೆ ಮಂಜೂರ್ಮಾಡಿ ಕೊಡಿಸಬಹುದೆಂತಲೂ ಸದರಿ ಹಣವನ್ನು ರಸ್ತೆಯು ಯಾವ ಯಾವ ಗ್ರಾಮದ ಮುಖಾಂತರ ಹಾದು ಹೋಗುತ್ತೊ ಆಯಾಯ ಗ್ರಾಮದ ಪಟೇಲರ ಸುಫರ್ದುಮಾಡಿ ರಸ್ತೆಯನ್ನು ಒಳ್ಳೇ ಸ್ಥಿತಿಯಲ್ಲಿಡುವದಕ್ಕೆ ಸದರಿ ಪಟೇಲರನ್ನೆ ಜವಾಬ್ದಾರರನ್ನಾಗಿ ಮಾಡುವದು ಯುಕ್ತವೆಂತಲೂ ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

IV. ಬಲಾತ್ಕಾರಪಡಿಸಿ ಸಿಡಬು ಹಾಕತಕ್ಕ ಪದ್ಧತಿಯನ್ನು ಜಾರಿಗೆ ತರುವ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ತಿಳಿಸಬೇಕಾಗಿ ತಲಪಿದ ಸೆಕ್ರೆಟರಿಯವರ 27—1—08ನೆ ಮರ್ಕುಂ 7346-55–Med. (67–07)—5ನೆ ಡಾಕೆಟ್ ಓದಲಾಗಿ ಪ್ರತಿ ಒಂದು ಮ್ಯುನಿಸಿಪಾಲಿಟಿಗೆ 5 ಮೈಲಿ ಫಾಸಲೆ ಒಳಗಿರತಕ್ಕ ಸ್ಥಳದಲ್ಲಿಯೂ ಸಿಡಬು ಹಾಕತಕ್ಕ ಕೆಲಸವನ್ನ ಮಾಡತಕ್ಕ ಆಸ್ಪಿಟಲ್ ಅಸಿಸ್ಟೆಂಟ್ ಅಥವಾ ವ್ಯಾಕ್ಸಿನೇಟರ್ ಕಾಯಂ ಆಗಿ ವಾಸವಾಗಿರುವ ಸ್ಥಳಗಳಲ್ಲಿ 2 ವರುಷಗಳ ವರಿಗೆ ಅಜಮಾಯಿಷಿ ತರೀಖು ನಿರ್ಬಂಧದಿಂದ ಶಿಡಬು ಹಾಕುವ ಪದ್ಧತಿ ಜಾರಿಗೆ ತರಬಹುದೆಂದು ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

V. 1908—09ನೆ ಸಾಲ್ ಪ್ಲೇಗ್ ಬಡ್ಜೆಟ್ಟಿನಲ್ಲಿ ದಾಖಲ್ಮಾಡಿದ ಮೊಬಲಗು ತಗ್ಗಿಸುವ ವಿಚಾರದಲ್ಲಿ ಸ್ಯಾನಿಟರಿ ಕಮಿಷನರವರು ಪಟ್ಟ ಅಭಿಪ್ರಾಯಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಚರ್ಚಿಸಿ ಅದರಲ್ಲಿನ ಪ್ರತಿ ಒಂದು ಅಂಶದಲ್ಲಿಯೂ ಬೋರ್ಡಿನವರ ಅಭಿಪ್ರಾಯ ಪಡದು ಕಳುಹಿಸಬೇಕಾಗಿ ಗೌರ್ನಮೆಂಟಿನಿಂದ ತಲಪಿದ 1—8—08ನೆ ಮರ್ಕುಂ 1201–10—ಸ್ಯಾ. (250–07)—3ನೆ ಆರ್ಡರು ಬೋರ್ಡಿನಲ್ಲಿ ಓದಿ ಚರ್ಚಿಸಲಾಯಿತು.

(i) ಪ್ರತ್ಯೇಕ ಪೋಲೀಸು ಶಿಬ್ಬಂದಿ ನೌಕರರೂ ಮಾಡಕೂಡದು ಎಂಬ ವಿಚಾರದಲ್ಲಿ ಪ್ಲೇಗು ಪ್ರಾಪ್ತವಾದ ಸಂದರ್ಭದಲ್ಲಿ ಹಾಲಿ ಇರತಕ್ಕ ಪೋಲೀಸ್ ಸಿಬ್ಬಂದಿಯು ಸಾಲದು ಎಂಬ ಸಂದರ್ಭದಲ್ಲಿ ವಿನಹ ಬಾಕಿಯಂತೆ ಹೆಚ್ಚಿನ ಪೋಲೀಸ್ ಸಿಬ್ಬಂದಿ ನೇಮಕ ಮಾಡಿಕೊಳ್ಳುವ ಅವಶ್ಯಕತೆಯಿಲ್ಲವಾಗಿಯೂ—

(ii) ಸದರಿ ಲೆಟರಿನಲ್ಲಿ ನಮೂದಾಗುವ 2-3ನೆ ಅಂಶಗಳ ವಿಚಾರದಲ್ಲಿ ಸ್ಯಾನಿಟರಿ ವಗೈರೆ ಹೆಚ್ಚು ಖರ್ಚುಗಳನ್ನು ಸಾಧ್ಯವಾದಮಟ್ಟಿಗೂ ಡಿಸ್ಟ್ರಿಕ್ಟ್ ಫಂಡಿನಿಂದಲೇ ಸಹಿಸುವದಾಗಿಯೂ ಡಿಸ್‌ಇನ್‌ಫೆಕ್ಷನ್ ಅಥವಾ ಇತರ ಹೆಚ್ಚು ಖರ್ಚುಗಳ ಬಗ್ಗೆ ಡಿಸ್ಟ್ರಿಕ್ಟ್ ಫಂಡಿನಲ್ಲಿ ಕಾರಣಾಂತರಗಳಿಂದ ಹಣ ದೊರಿಯದೆ ಇರುವ ಸಂದರ್ಭದಲ್ಲಿ ಹೊರತು ಬಾಕಿಯಂತೆ ಮೇಲ್ಕಂಡ ಖರ್ಚಿಗೆ ಬೇರೆ ಸಹಾಯದ ಬಗ್ಗೆ ಕೇಳಿಕೊಳ್ಳುವದಿಲ್ಲವಾಗಿಯೂ,

(iii) ಪ್ಲೇಗ್ ಬಡ್ಜೆಟ್ಟಿನಲ್ಲಿ ನಮೂದು ಮಾಡಿರುವ ಅಂಟು ರೋಗಗಳ ಖರ್ಚು ಬಗ್ಗೆ ಚಂದಾ ಕೊಡುವ ವಿಚಾರದಲ್ಲಿ ಸ್ಯಾನಿಟರಿ ವಗೈರೆ ಹೆಚ್ಚು ಖರ್ಚುಗಳನ್ನು ಡಿಸ್ಟ್ರಿಕ್ಟ್ ಫಂಡಿನಿಂದಲೇ ಸಹಿಸುತ್ತಾ ಇರೋಣದರಿಂದ ಡಿಸ್ಟ್ರಿಕ್ಟ್ ಫಂಡಿನಿಂದ ಚಂದಾ ಕೊಡಲು ಕಾರಣವಿಲ್ಲವಾಗಿಯೂ ಮತ್ತು ಹಾಲಿ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣ ಕಡಿಮೆಯಾಗಿರೋಣದರಿಂದ ಈ ಡಿಸ್ಟ್ರಿಕ್ಟ್ ಫಂಡಿನಿಂದ ಚಂದಾ ಮೊಬಲಗು ಕೊಡಲು ಅವಕಾಶವಿಲ್ಲವೆಂಬದಾಗಿಯೂ ಬೋರ್ಡಿನವರು ತೀರ್ಮಾನ ಮಾಡಿರುತ್ತಾರೆ.

VI. ಈ ಕೆಳಗೆ ನಮೂದಾಗುವ ಸರ್ಕಾರಿ ಹುಕುಂಗಳನ್ನ ಓದಿ ರಿಕಾರ್ಡು ಮಾಡಲಾಯಿತು.

(a) ತರೀಕೆರೆ ಹಿಂದೂ ವೈದ್ಯಶಾಲಾ ಕಂಟಿಂಜೆಂಟ್ ಮೊಬಲಗನ್ನ ಮಾಹೇಯಾನಾ 9 ರೂಪಾಯಿನಿಂದ 15 ರೂಪಾಯಿಗೆ ಹೆಚ್ಚಿಸಿರುವದಾಗಿಯೂ ಸದರಿ ಹೆಚ್ಚು ಮೊಬಲಗನ್ನ ದಾಮಾಷಾಯಿ ಪ್ರಕಾರ ಮ್ಯುನಿಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ್ ಫಂಡಿನಿಂದ ಸಹಿಸತಕ್ಕದ್ದಾಗಿಯೂ ತಲಪಿದ 19—8—08ನೆ ಮರ್ಕುಂ 1723–4—ಸ್ಯಾ. (481–6)—11ನೆ ಹುಕುಂ.

(b) 4260 ಹೆಲ್ತ್ ಆಲ್ಮನಕ್ ಪ್ರತಿಗಳು ಕೊಂಡುಕೊಳ್ಳುವದನ್ನ ಮಂಜೂರ್ಮಾಡಿರುವದಾಗಿಯೂ ಮತ್ತು ಸದರಿ ಖರ್ಚು ಬಗ್ಗೆ ಈ ಡಿಸ್ಟ್ರಿಕ್ಟ್ ಬೋರ್ಡಿನಿಂದ ರೂ. 29—9—4 ಚಂದಾ ಕೊಡಬೇಕೆಂತಲೂ ಸಹ ತಲಪಿದ 4—9—08ನೆ ಮರ್ಕುಂ 2300–40—ಸ್ಯಾ. (11–08)—2ನೆ ಸರ್ಕಾರಿ ಹುಕುಂ.

VII. ಮೈಸೂರು ಲೋಕಲ್ ಬೋರ್ಡ್ 36ನೆ ನಿಬಂಧನೆ ಪ್ರಕಾರ ಪ್ರೆಸಿಡೆಂಟರವರು ಮಂಜೂರ್ಮಾಡಿರುವ ಈ ಕೆಳಗಿನ ಕಾಮಗಾರಿಗಳನ್ನ ಬೋರ್ಡಿನವರು ಒಪ್ಪಿರುತ್ತಾರೆಂದು ತೀರ್ಮಾನಿಸಲಾಯಿತು.

(1) ಅಜ್ಜಂಪುರದ ದೊಡ್ಡಿ ಕಾಮಗಾರಿ ಬಗ್ಗೆ ಮಂಜೂರಾದ 50 ರೂಪಾಯಿನ ಅಂದಾಜಾ.

(2) ಕಳಸಾಪುರದಲ್ಲಿ ತಿಮ್ಮಪ್ಪನಾಯಕನ ಕೆರೆ ಸುಳುವಿನಲ್ಲಿರುವ ಇಳಿಯುವ ಭಾವಿಯನ್ನು ತೋಡತಕ್ಕ ಬಗ್ಗೆ ಮಂಜೂರ್ಮಾಡಿದ 50 ರೂಪಾಯಿನ ಅಂದಾಜಾ.

(3) ಚಿಕ್ಕ ಪಟ್ಟಣಗೆರೆಯಲ್ಲಿ ಸೇದುವಭಾವಿ ತೆಗಿಯಲು ಮಂಜೂರಾದ 460 ರೂಪಾಯಿನ ಅಂದಾಜಾ.

(4) ಚಿಕ್ಕಮಗಳೂರು ತಾಲ್ಲೂಕು ಹುಲುವಳಿಯಲ್ಲಿ ಸೇದುವಭಾವಿ ತೆಗಿಯಲು ಮಂಜೂರ್ಮಾಡಿದ 315 ರೂಪಾಯಿನ ಅಂದಾಜ ಮತ್ತು ಲೋಕಲ್ ಫಂಡ್ಸ್ ಜನರಲ್‌ನಿಂದ ಮಂಜೂರ್ಮಾಡಲ್ಪಟ್ಟ ಈ ಕೆಳಗೆ ನಮೂದು ಮಾಡಿರುವ ಕಾಮಗಾರಿಗಳನ್ನು ಸಹ ಒಪ್ಪಿರುತ್ತೆಂಬದಾಗಿ ನಿರ್ಧರಿಸಲಾಯಿತು.

(1) ಕಡೂರು ತಾಲ್ಲೂಕು ಆನಂದಿಯಲ್ಲಿ ಸೇದುವ ಭಾವಿ ರಿಪೇರಿ ಬಗ್ಗೆ ಮಂಜೂರ್ಮಾಡಿದ 390 ರೂಪಾಯಿನ ಅಂದಾಜಾ.

(2) ಚಿಕ್ಕಮಗಳೂರು ತಾಲ್ಲೂಕು ಹಂಚಿಹಳ್ಳಿಯಲ್ಲಿ ಸೇದೋಭಾವಿ ತೆಗಿಸತಕ್ಕ ಬಗ್ಗೆ ಮಂಜೂರ್ಮಾಡಿದ 218 ರೂಪಾಯಿನ ಅಂದಾಜಾ.

(3) ತರೀಕೆರೆ ತಾಲ್ಲೂಕು ದೇವಿ ಹೊಸೂರಲ್ಲಿ ಸೇದೋಭಾವಿ ತೆಗಿಸತಕ್ಕ ಬಗ್ಗೆ ಮಂಜೂರ್ಮಾಡಿದ 495 ರೂಪಾಯಿನ ಅಂದಾಜಾ.

(4) ಚಿಕ್ಕಮಗಳೂರು ತಾಲ್ಲೂಕು ಹೊಸಕೋಟೆಯಲ್ಲಿ ಸೇದೋಭಾವಿ ರಿಪೇರಿ ಬಗ್ಗೆ ಮಂಜೂರ್ಮಾಡಿದ 307 ರೂಪಾಯಿನ ಅಂದಾಜಾ.

VIII. ಈ ಕೆಳಗೆ ನಮೂದಾಗುವ ಗೌರ್ನ್ಮೆಂಟ್ ಆರ್ಡರುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1) ಸಕ್ಕರೆ ಪಟ್ಟಣದಲ್ಲಿರುವ ಹಳೇ ಟ್ರಾವಲರ್ಸ್ ಬಂಗ್ಲೋವನ್ನು ಡಿ. ಪಿ. ಡಬ್ಲ್ಯು. ಇಲಾಖಾದವರು ಸುಫರ್ದು ಪಡಿಸಿಕ್ಕೊಂಡು ಅವರೇ ಆದರ ಸಾಲಾಖಾದು ರಿಪೇರಿ ಮಾಡಿಕೊಳ್ಳತಕ್ಕದ್ದೆಂದು ನಮೂದಾಗುವ 18—9—08ನೆ ಮರ್ಕುಂ 2987-9—ಲೋ. ಬೋ. (56-08)—2ನೆ ಗೌರ್ನಮೆಂಟ್ ಆರ್ಡರು.

(2) ಬೀರೂರು ಟ್ರಾವಲರ್ಸ್ ಬಂಗ್ಲೋವನ್ನು 3ನೆ ಕ್ಲಾಸಿನಿಂದ 2ನೆ ಕ್ಲಾಸಿಗೆ ಹೆಚ್ಚಿಸಲು ಆಗುವದಿಲ್ಲವೆಂತ ನಮೂದಿರುವ 4—11—08ನೆ ಮರ್ಕುಂ ಜಿ. 2622—ಜಿ. ಎಂ. (93-07)—2ನೆ ಗವರ್ನಮೆಂಟ್ ಆರ್ಡರು.

IX. ಹಳೇ ಕೋಟೆ-ಮೇಗರಮಕ್ಕಿ, ಧಾರದಹಳ್ಳಿ, ಜೋಗಣ್ಣನ ಕೆರೆ ವಗ್ಯೆರೆ ಗ್ರಾಮಗಳ ಜನರು ಮೂಡಿಗೆರೆ-ಬೈದವಳ್ಳಿ ರಸ್ತೆಯ ಮಾರ್ಗವಾಗಿ ತಮ್ಮ ಸಾಮಾನುಗಳನ್ನು ಸಂತೆಗೆ ತೆಗದುಕ್ಕೊಂಡು ಹೋಗುತ್ತಾರಾದ್ದರಿಂದ ಈ ರಸ್ತೆಯು ಬಹಳ ಉಪಯೋಗವಾದದ್ದು, ಆದ್ದರಿಂದ ಈ ರಸ್ತೆಯು ಡಿಸ್ಟ್ರಿಕ್ಟು ಫಂಡಿನಿಂದ ಇಡಲ್ಪಡಲು ಅರ್ಹವಾದದ್ದೆಂತ ನಮೂದಾಗುವ ಮೂಡಿಗೆರೆ ತಾಲ್ಲೂಕು ಅಮಲ್ದಾರ್ರ 7—10—1908ನೆ ಮರ್ಕುಂ 66ನೆ ರಿಪೋರ್ಟು ಓದಲಾಗಿ ಡಿಸ್ಟ್ರಿಕ್ಟು ಬೋರ್ಡಿನವರು 14-8-08ನೆ ಮರ್ಕುಂ ಮೀಟಿಂಗಿನಲ್ಲಿ ಮಾಡಿದ ರೆಜಲ್ಯೂಷನು ಬದಲಾಯಿಸಿ ಸದರಿ ರಸ್ತೆ ವಿಚಾರದಲ್ಲಿ ಅಮಲ್ದಾರರು ನಮೂದಿಸುವ ಕಾರಣಗಳಿಗಾಗಿ ಈ ರಸ್ತೆಯನ್ನು ಡಿಸ್ಟ್ರಿಕ್ಟು ಫಂಡಿನಿಂದಲೇ ಇಡತಕ್ಕದ್ದೆಂದು ತೀರ್ಮಾನಿಸಲಾಯಿತು.

X. ಬಾಬಾಬುಡನ್ ರಸ್ತೆ ಸಾಲಾಖಾದ್ ರಿಪೇರಿ ಮೊಬಲಗು ಪೈಕಿ 2 ವರುಷಗಳ ಪರ್ಯಂತರ 2,500 ರೂಪಾಯಿಗಳನ್ನು ಡಿಸ್ಟ್ರಿಕ್ಟು ಫಂಡ್ಸಿಗೆ ಗ್ರಾಂಟ್ ಇನ್ಏಡ್ ತರೀಕ್ ಮಂಜೂರ್ಮಾಡಿರುವ 12—9—08ನೆ ಮರ್ಕುಂ 2612-6—ಲೋ. ಬೋ. (363-07)—4ನೆ ಗೌರ್ನಮೆಂಟ್ ಆರ್ಡರನ್ನು ಓದಲಾಗಿ ಗೌರ್ನಮೆಂಟನವರು ಡಿಸ್ಟ್ರಿಕ್ಟು ಫಂಡಿನ ಸಹಾಯಕ್ಕಾಗಿ 2,500 ರೂಪಾಯಿಗಳನ್ನು ಮಂಜೂರ್ಮಾಡಿದ್ದಕ್ಕೋಸ್ಕರ ಬೋರ್ಡಿನವರು ತಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿರುತ್ತಾರೆ.

XI. ಈ ಕೆಳಗೆ ನಮೂದು ಮಾಡಿರುವ ಗೌರ್ನಮೆಂಟು ಆರ್ಡರುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1) ಪ್ಲೇಗು ಶಿಡಖು ಹಾಕಿಕೊಳ್ಳತಕ್ಕ ಬಗ್ಗೆ ಆರುತಿಂಗಳ ಪರ್ಯಂತರ ಪ್ರತಿ ಒಬ್ಬ ಗಂಡಸಿಗೆ 4 ಆಣೆಯಂತೆಯೂ ಪ್ರತಿ ಒಂದು ಮಗುವಿಗೆ 2 ಆಣೆಯಂತೆಯೂ ಬಹುಮಾನ ಕೊಡಬಹುದೆಂಬದಾಗಿಯೂ ಮತ್ತು ಈ ಖರ್ಚನ್ನು ಪ್ಲೇಗ್ ಡಿಪಾರ್ಟುಮೆಂಟನಿಂದ ಸಹಿಸಬೇಕೆಂತಲೂ ಸಹ ಸೀನಿಯರ್ ಸರ್ಜನ್‌ರವರು ಅಭಿಪ್ರಾಯಪಟ್ಟದ್ದನ್ನು ಗೌರ್ನಮೆಂಟನವರು ಅನುಮೋದಿಸಿರುವದಾಗಿ ತಿಳ್ಸಿದ 18—9—08ನೆ ಮರ್ಕುಂ 2950-62—ಸ್ಯಾ. (63-08)ನೆ ಆರ್ಡರು.

(2) 1—11—1908ರ ಲಾಗಾಯಿತು ಎಡೆಹಳ್ಳಿ-ಶಿವಮೊಗ್ಗಾ ರಸ್ತೆಯಲ್ಲಿರುವ ಹಳೇ ದಾಸಿವಾಸದ ಹತ್ತರ "ಟೋಲ್" ವಸೂಲ್ಮಾಡುವದನ್ನು ಮಂಜೂರ್ಮಾಡಿರುವದಾಗಿ ತಿಳ್ಸಿದ 23—9—08ನೆ ಮರ್ಕುಂ 3107-8—ಲೋ. ಬೋ. (366-07—4ನೆ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

XII. ಲಕ್ಕವಳ್ಳಿ ಯೂನಿಯನ್‌ಗೆ ಇರತಕ್ಕ 2 ಜನ ಝಾಡಮಾಲಿಗಳ ಸಂಬಳವನ್ನು ಮಾಹೇಯಾನಾ 5 ರೂಪಾಯಿನಿಂದ 6 ರೂಪಾಯಿಗೆ ಹೆಚ್ಚಿಸಬೇಕೆಂದು ತಿಳಿಪಿದ ತರೀಕೆರೆ ತಾಲ್ಲೂಕು ಅಮಲ್ದಾರ್ರವರ 30—9—08ನೆ ಮರ್ಕುಂ 67ನೆ ರಿಪೋರ್ಟು ಓದಲಾಗಿ ಝಾಡಮಾಲಿಗಳ ಸಂಬಳವನ್ನು ಮಾಹೇಯಾನಾ 6 ರೂಪಾಯಿಗಳಿಗೆ ಹೆಚ್ಚಿಸಬಹುದೆಂಬದಾಗಿ ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

XIII. ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ 22ನೆ ಚಟ್ಟದ ಪ್ರಕಾರ.

(1) ಕಡೂರು ಡಿಸ್ಟ್ರಿಕ್ಟ್ ಸಬ್ ಡಿವಿಜನಲ್ ಅಸಿಸ್ಟೆಂಟ್ ಕಮಿಷನರವರು.
(2) ಎಕ್ಸಿಕ್ಯುಟಿವ್ ಇಂಜನಿಯರ್.
(3) ಮಿ॥ ವಾಟ್ಸನ್ ಸಾಹೇಬರು.
(4) „ ಸಿ. ಶ್ರೀನಿವಾಸರಾಯರು.
(5) „ ಕೇಶವಾಚಾರ್ ಇವರುಗಳನ್ನು ಫೈನಾನ್ಸ್ ಕಮಿಟಿ ಮೆಂಬರುಗಳಾಗಿರಬೇಕೆಂದು ತೀರ್ಮಾನ ಮಾಡಲಾಯಿತು.

XIV. ಮುಂದಿನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ 1909ನೆ ಇಸವಿ ಫೆಬ್ರವರಿ 12ನೆ ತಾರೀಖು ಶುಕ್ರವಾರ ನಡಿಯಬೇಕಾಗಿ ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸ್ಯೆಯ್ಯಂಗಾರ್,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1908—09ನೆ ಇಸವಿ ಮಿ॥ ಅರ್ಜೀ ನಂಬರು 576.

ಬೆಂಗಳೂರು ತಾಲ್ಲೂಕು ಯಡೂರಲ್ಲಿ ವಾಸವಾಗಿದ್ದು ಫವತಿಪಟ್ಟ ಬೀಗಮುದ್ರೆ ಗೋಪಾಲಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಳೇಪೇಟೆಬಳಿ ಉಪ್ಪಾರಪೇಟೇಲಿರುವ ಬೀಗಮುದ್ರೆ ಗೋಪಾಲಪ್ಪನ ಮಗ ಸೂರಪ್ಪ, ಮೃತಪಟ್ಟ ಸದರೀ ಗೋಪಾಲಪ್ಪನಿಗೆ ಖಾಸ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಗೋಪಾಲಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 376—9—6 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೂರಪ್ಪನ ಅರ್ಜಿಯನ್ನು ಸರ್ 1909ನೆ ಇಸವಿ ಜನವರಿ 15ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೋಪಾಲಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1908ನೆ ಇಸವಿ ಡಿಸೆಂಬರು ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 586.

ಬೆಂಗಳೂರಲ್ಲಿದ್ದು ಫವತಿಪಟ್ಟ ವಿ. ವೆಂಕಟರಮಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಸುಬ್ಬಮ್ಮ, ಮೃತಪಟ್ಟ ಸದರೀ ವಿ. ವೆಂಕಟರಮಣಯ್ಯನವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ವಿ. ವೆಂಕಟರಮಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 565 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಮ್ಮನ ಅರ್ಜಿಯನ್ನು 1909ನೆ ಇಸವಿ ಜನವರಿ 15ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಿ. ವೆಂಕಟರಮಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1908ನೆ ಇಸವಿ ಡಿಸೆಂಬರ್ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1908-09ನೆ ಇಸವಿ ಮಿ॥ ಅರ್ಜೀ ನಂಬರ್ 590.

ಬೆಂಗಳೂರು ಅರಳೇಪೇಟೇಲಿದ್ದು ಫವತಿಪಟ್ಟ ಪಂಚಾಡಶೆಟ್ಟಿ, ಗೌರಮ್ಮ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಅರಳೇಪೇಟೆಗೆ ಸೇರಿದ ಜವರಾಯಶೆಟ್ಟಿ ಪೇಟೇಲಿರುವ ಸುಬ್ಬಮ್ಮನು, ಮೃತಪಟ್ಟ ಸದರೀ ಪಂಚಾಡಶೆಟ್ಟಿ ವಗೈರೇರಿಗೆ ಮುಖ್ಯ ವಾರಸ್ದಾರರಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಪಂಚಾಡಶೆಟ್ರ ಜಿಂದಗಿ ಬಗ್ಯಾಗಿ ಬರತಕ 100—0—0 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಮ್ಮನ ಅರ್ಜಿಯನ್ನು ಸರ್ 1909ನೆ ಇಸವಿ ಜನವರಿ 15ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಂಚಾಡಶೆಟ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1908ನೆ ಇಸವಿ ಡಿಸೆಂಬರ್ 22ನೆ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ಅರ್ಜೀ ನಂಬರು 591.

ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿದ್ದು ಫವತಿಪಟ್ಟ ವಿ. ಆರ್. ಪೆರವಾಳ್ ನಾಯಿಡುಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ತೋಪ್ಪುಮೊದಲಿಯಾರ್ ಸ್ಟ್ರೀಟಿನಲ್ಲಿರುವ ಪಾಪಾ ಲಕ್ಷ್ಮಮ್ಮನವರು, ಮೃತಪಟ್ಟ ಸದರೀ ಪೆರವಾಳ್ ನಾಯಿಡುಯವರಿಗೆ ಖಾಸ ತಾಯಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಪೆರವಾಳ್ ನಾಯಿಡುಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತಾರೆ.

ಸದರೀ ದರಖಾಸ್ತುದಾರರಾದ ಪಾಪಾ ಲಕ್ಷ್ಮಮ್ಮನ ಅರ್ಜಿಯನ್ನು ಸರ್ 1909ನೆ ಇಸವಿ ಜನವರಿ 8ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪೆರವಾಳ್ ನಾಯಿಡುಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1908ನೆ ಇಸವಿ ಡಿಸೆಂಬರ್ 23ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ|| ಅರ್ಜೀ ನಂಬರ್ 606.

ಬೆಂಗಳೂರು ಚಿಕ್ಕಪೇಟೇಲಿದ್ದು ಫವತಿಪಟ್ಟ ಮಿ|| ಸಿ. ನಾಗೇಶ್ವರೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಿಕ್ಕಪೇಟೇಲಿರುವ ಸಿ. ಎಸ್. ಐ. ಗಂಗಾಧರೈಯ್ಯನವರು, ಮೃತಪಟ್ಟ ಸದರೀ ನಾಗೇಶ್ವರೈಯ್ಯನವರಿಗೆ ಮುಖ್ಯ ವಾರಸ್ದಾರರು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಾಗೇಶ್ವರೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 5,000—0—0 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಂಗಾಧರೈಯ್ಯನವರ ಅರ್ಜಿಯನ್ನು ಸರ್ 1909ನೆ ಇಸವಿ ಜನವರಿ 8ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗೇಶ್ವರೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1908ನೆ ಇಸವಿ ಡಿಸೆಂಬರ್ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟಿನ ಮೋಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಂ ಐಯ್ಯರ್,
ಸಬ್ ಜಡ್ಜಿ.

ಬೆಂಗಳೂರು ಡಿವಿಜನ್ ಸೆಂಟ್ರಲ್ ರಿಕಾರ್ಡ್ ಆಫೀಸ್.

ರಿಕಾರ್ಡುಗಳನ್ನ ನಾಶ ಪಡಿಸುವಿಕೆ.

ತಾರೀಖು 6ನೆ ಜನವರಿ 1909.

ಮೈಸೂರು ಚೀಫ್ ಕೋರ್ಟ್ಟು 1905ನೆ ಇಸವಿ ಸೆಪ್ಟಂಬರು 26ನೆ ಮರ್ಕ್ಯುಂ 122ನೆ ನಂಬರು ರೂಲ್ಸ್ ಆಫ್ ಪ್ರಾಕ್ಟೀಸ್ ಅನುಸರಿಸಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—

ಈ ಡಿವಿಜನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1907ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ ದಾಖಲಾದ ಈ ಕೆಳಗೆ ವಿವರಿಸಿರುವ ಮೊಖದ್ದಮೆಗಳ ಪೈಕಿ ಫೈಸಲಾದವುಗಳಲ್ಲಿ ಕಕ್ಷಿಗಾರರಿಂದಲೂ ಮತ್ತು ಸಾಕ್ಷಿಗಳಿಂದಲೂ ಸಹಾ ಹಾಜರ್ಮಾಡಲ್ಪಟ್ಟ ವಿಶಿಷ್ಟ ದಸ್ತೈವಜುಗಳು ಮೊದಲೇ ವಾಪಸು ತೆಗದುಕೊಳ್ಳಲ್ಪಡದೇ ಇದ್ದಪಕ್ಷದಲ್ಲಿ ಮೇಲ್ಕಂಡ ರೂಲ್ಸ್ ಆಫ್ ಪ್ರಾಕ್ಟೀಸಿನಲ್ಲಿ ಉದಹರಿಸಿರುವ ವಾಯಿದೆ ನಂತರ ನಾಶಪಡಿಸಲ್ಪಡುತ್ತೆ ತಿಳಿಯುವುದು.

ಕೋರ್ಟುಗಳ ಹೆಸರು.	ಇಸವಿ.	ಮೊಕದ್ದಮೆಗಳ ಸ್ವಭಾವ.		
		ಸಿವಿಲ್ ಮೊಕದ್ದಮೆಗಳು.	ಅಮಲ್ದಾರಿ.	ಮಿಸಲೇನಿಯಸ್.
ಬೆಂಗಳೂರು ಸಬ್ ಜಡ್ಜಿಯವರ ಕೋರ್ಟು.	1907-08	1ರ ಲಾಗಾಯಿತು 1069ರ ವರಿಗೆ.	1ರ ಲಾಗಾಯಿತು 1186ರ ವರಿಗೆ.	1ರ ಲಾಗಾಯಿತು 1135ರ ವರಿಗೆ.
ಬೆಂಗಳೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟ್.	ಡಿಟೋ	1ರ ಲಾಗಾಯಿತು 1442ರ ವರಿಗೆ.	1ರ ಲಾಗಾಯಿತು 2223ರ ವರಿಗೆ.	1ರ ಲಾಗಾಯಿತು 857ರ ವರಿಗೆ.
ಬೆಂಗಳೂರು ಅಡಿಷನಲ್ ಮುನ್ಸಿಫ್ ಕೋರ್ಟ್.	ಡಿಟೋ	1ರ ಲಾಗಾಯಿತು 854ರ ವರಿಗೆ.	1ರ ಲಾಗಾಯಿತು 1978ರ ವರಿಗೆ.	1ರ ಲಾಗಾಯಿತು 651ರ ವರಿಗೆ.
ತುಮಕೂರು ಮುನ್ಸಿಫ್ ಕೋರ್ಟ್.	ಡಿಟೋ	1ರ ಲಾಗಾಯಿತು 1260ರ ವರಿಗೆ.	1ರ ಲಾಗಾಯಿತು 1288ರ ವರಿಗೆ.	1ರ ಲಾಗಾಯಿತು 619ರ ವರಿಗೆ.
ಮದ್ದಗಿರಿ ಮುನ್ಸಿಫ್ ಕೋರ್ಟ್.	ಡಿಟೋ	1ರ ಲಾಗಾಯಿತು 690ರ ವರಿಗೆ.	1ರ ಲಾಗಾಯಿತು 503ರ ವರಿಗೆ.	1ರ ಲಾಗಾಯಿತು 300ರ ವರಿಗೆ.
ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟ್.	ಡಿಟೋ	1ರ ಲಾಗಾಯಿತು 1326ರ ವರಿಗೆ.	1ರ ಲಾಗಾಯಿತು 1346ರ ವರಿಗೆ.	1ರ ಲಾಗಾಯಿತು 774ರ ವರಿಗೆ.
ಕೋಲಾರ ಮುನ್ಸಿಫ್ ಕೋರ್ಟ್.	ಡಿಟೋ	1ರ ಲಾಗಾಯಿತು 713ರ ವರಿಗೆ.	1ರ ಲಾಗಾಯಿತು 811ರ ವರಿಗೆ.	1ರ ಲಾಗಾಯಿತು 428ರ ವರಿಗೆ.
ಕೋಲಾರದ ಗಣಿ ಮುನ್ಸಿಫ್ ಕೋರ್ಟ್.	ಡಿಟೋ	1ರ ಲಾಗಾಯಿತು 1504ರ ವರಿಗೆ.	1ರ ಲಾಗಾಯಿತು 2200ರ ವರಿಗೆ.	1ರ ಲಾಗಾಯಿತು 578ರ ವರಿಗೆ.

ಟಿ. ಇ. ಜಯರಾಮ ಐಯ್ಯರ್,
ಆಫಿಸರ್ ಇನ್ ಛಾರ್ಜ್ ಆಫ್ ಸೆಂಟ್ರಲ್ ರಿಕಾರ್ಡ್ಸ್, ಬೆಂಗಳೂರು ಡಿವಿಜನ್.

ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ
ಗಂಗಡಿಕಾರ ಲಂಕೆಗೌಡನ ಮಗ ನಡಕೆರಿಗೌಡ ಉರಫ್ ಕೊಂನಾರಿ ಅರ್ಜಿ ವಿಷಯದಲ್ಲಿ—

ಸರ್ 1908—09ನೆ ಇಸವಿ ದಿವಾಳಿ ಕೇಸ ನಂಬರು 391

ಹುಕ್ಕುಂ

ಅರ್ಜಿದಾರ ನಡಕೆರಿ ಗೌಡನು ಮೇಲ್ಕಂಡ ನಂಬರಿನಲ್ಲಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂಬ್ ಅರ್ಜೀದಾರರಾದ ನಡಕೆರಿಗೌಡನ ಪರವಾಗಿ ಮಿ॥ ವೆಂಕಟರಾಮಯ್ಯನವರನ್ನು ಮತ್ತು ಸದರೀ ಯಾವರ ಲೇಣೇದಾರರಾದ 1ನೆ ಚೌಬೀನೆ ಶಿದ್ದಯ್ಯ, 2ನೆ ರಾಚೆಗೌಡ ಉರುಫ್ ಚಿಕ್ಕಹೈದ ಇವರು ಗೈರಹಾಜರು ಸಬಬು ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ ನೋಟೀಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅರ್ಜಿದಾರ ನಡಕೆರಿಗೌಡ ಉರಫ್ ಕೊಂನಾರಿಯು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲ ಕ್ಕೋಸ್ಕರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ ಮಾಡಲಾಗಿರುತ್ತೆ ಎಂದು ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸರ್ 1909ನೆ ಇಸವಿ ಜನವರಿ 8ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ.	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಅಸಲುಗು.	ಬಡ್ಡಿ ಮೊದಲಾದ ಖರ್ಚು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.			
1	ಶ್ರೀರಂಗಪಟ್ಟಣದಲ್ಲಿರುವ ಚೌಬೀನೆ ಶಿದ್ದಯ್ಯನವರ ಮೊಮ್ಮಗ ಶಿದ್ದಯ್ಯ.	85– 4–11	...	ಈ ಕೋರ್ಟು ಸಿವಿಲ್ 395-05-6ನೆ ನಂಬರು ಡಿಕ್ರಿ ಬಾಬತು.	
2	ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ ರಾಚೆಗೌಡ ಉರಫ್ ಚಿಕ್ಕಹೈದ.	94–13– 9	..	ಸಿವಿಲ್ 1376-04-5ನೆ ನಂಬರು ಡಿಕ್ರಿ ಬಾಬತು.	

ಎಸ್. ಕೃಷ್ಣರಾವ್,
ಮುನ್ಸೀಫ್.

ಯಾದಾಸ್ತು ಮೈಸೂರು ಶಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿಗೆ.

ಮ್ಯುನಿಸಿಪಲ್ ಅಕೌಂಟ್ಸ್ ಆಡಿಟರ್ಸ್ ರಿಪೋರ್ಟು.

ತಾರೀಖು 26ನೆ ನವಂಬರ್ 1908.

ಈ ತಾರೀಖಿನಲ್ಲಿ ಅಕೌಂಟುಗಳು ನೋಡಿದೆವು—ವೋಚರ್ಸ್ಸು ಬಿಲ್ಲು ಪೇಮೆಂಟು ವಗೈರೆ ಲೆಖ್ಖಗಳು ಸರಿಯಾಗಿದೆ.

ಆಕ್ಟ್ರಾಯಿ ವಸೂಲಿ ಗುದಸ್ತಾ ಈ ತಿಂಗಳಿಗೂ ಮಜಕೂರಿಗೂ ಜವಳಿ 461 ರೂಪಾಯಿ, ತುಪ್ಪಾ 150 ರೂಪಾಯಿ, ತಂಬಾಕು 83 ರೂಪಾಯಿ, ಕೆರಸನಾಯಲ್ 91 ಈ ಮೇರೆ ಕಮ್ಮಿಯಾಗಿದೆ. ಈ ವರುಷ ದೇವರ ದಯದಿಂದ ಪ್ಲೇಗು ವಗೈರೆ ರೋಗಾದಿಗಳು ಇಲ್ಲದೆ ಇದ್ದರೂ ಕಮ್ಮಿಯಾಗಿರುವದರಿಂದ ಈ ವಿಚಾರ ಸೂಪ್ರವೀಷ್ಣ ಹೆಚ್ಚಬೇಕಾಗಿದೆ. ವಸೂಲಿಗುದಸ್ತಾ ಕಿಂತ ಜಾಸ್ತಿಯಾಗಿದ್ದರು ಲವಾಜಮಾ ಮಾಹೆಯಾನಾ 140 ರೂಪಾಯಿ ಜಾಸ್ತಿಯಾಗಿರುವದರಿಂದ ಇನ್ನೂ ಹೆಚ್ಚು ವಸೂಲಾಗಬೇಕಾಗಿತ್ತು. ಈ ವಿಷಯದಲ್ಲಿ ತೃಪ್ತಿಕರವಾದ ಏರ್ಪಾಡು ಆಗಬೇಕಾಗಿದೆಯಾದ ಮಜಕೂರು ಸೂಚಿಸಿದೆ.

(ಸೈಂಡ್) ಎಂ. ಹುಸೇನಅಲ್ಲಿ ಬೇಗ್.
(ಸೈಂಡ್) ಎಂ. ಅನಂತರಾಜಯ್ಯ,

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ್.

ತಾರೀಖು 10ನೆ ಡಿಸೆಂಬರ 1908.

ಇದರಿಂದ ತಿಳಿಯಪಡಿಸುವದೇನಂದರೆ :—ಸರ್ 1909ನೆ ಇಸವಿ ಫೆಬ್ರುವರಿ 1ನೆ ತಾರೀಖು ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿಗೆ (ಆ ಎರಡು ದಿನಗಳೂ ಸೇರಿ) 12 ತಿಂಗಳು ತನಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಮೂಳೆ ಇಲ್ಲದ ಮಾಂಸ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವದಕ್ಕಾಗಿ ಕವರಿನಲ್ಲಿ ಮೊಹರು ಮಾಡಿದ ದರಖಾಸ್ತುಗಳನ್ನು ಸರ್ 1909ನೆ ಇಸವಿ ಜನವರಿ 16ನೆ ತಾರೀಖು ಶನಿವಾರ ಬೆಳಿಗ್ಗೆ 10 ಘಂಟೆ ವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಖಾಯಿಷ್ ಮಾಡಿದೆ.

ಸರಬರಾಯಿ ಆಗಬೇಕಾದ ಸವುದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1908ನೆ ಇಸವಿ ಡಿಸೆಂಬರ್ 24ನೆ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿ ಇರುತ್ತೆ.

ತಾರೀಖು 10ನೆ ಡಿಸೆಂಬರ್ 1908.

ಇದರಿಂದ ತಿಳಿಯಪಡಿಸುವದೇನಂದರೆ :—ಸರ್ 1909ನೆ ಇಸವಿ ಫೆಬ್ರುವರಿ 1ನೆ ತಾರೀಖು ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿಗೆ (ಆ ಎರಡು ದಿನಗಳೂ ಸೇರಿ) 12 ತಿಂಗಳ ತನಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಸವುದೆ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವದಕ್ಕಾಗಿ ಕವರಿನಲ್ಲಿ ಮೊಹರುಮಾಡಿದ ದರಖಾಸ್ತುಗಳನ್ನು ಸರ್ 1909ನೆ ಇಸವಿ ಜನವರಿ 16ನೆ ತಾರೀಖು ಶನಿವಾರ ಬೆಳಿಗ್ಗೆ 10 ಘಂಟೆ ವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಖಾಯಿಷ್ ಮಾಡಿದೆ.

ಸರಬರಾಯಿ ಆಗಬೇಕಾದ ಸವುದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1908ನೆ ಇಸವಿ ಡಿಸೆಂಬರ್ 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿ ಇರುತ್ತೆ.

ತಾರೀಖು 10ನೆ ಡಿಸೆಂಬರ್ 1908.

ಇದರಿಂದ ತಿಳಿಯಪಡಿಸುವದೇನಂದರೆ :—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸರ್ 1909ನೆ ಇಸವಿ ಫೆಬ್ರುವರಿ ಗುರ್ರೆ ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿಗೆ ಧಾನ್ಯ, ಮಸಾಲೆ ಜಿನಸುಗಳೂ ಮತ್ತು ಇತರ ಅವಶ್ಯಕವಾದ ಪದಾರ್ಥಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಸರ್ 1909ನೆ ಇಸವಿ ಜನವರಿ ತಾರೀಖು 16ನೆ ಶನಿವಾರ ಪ್ರಾತಃಕಾಲ 10 ಘಂಟೆ ವರಿಗೂ ತೆಗೆದುಕೊಳ್ಳಲ್ಪಡುವವು.

ಸರಬರಾಯಿ ಆಗತಕ್ಕ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1908ನೆ ಇಸವಿ ಡಿಸೆಂಬರ್ 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿರುತ್ತೆ.

ತಾರೀಖು 10ನೆ ಡಿಸೆಂಬರ್ 1908.

ನೋಟೀಸ್ ಮೂಲಕ ತಿಳಿಯಪಡಿಸುವದೇನಂದರೆ :—1909ನೆ ಇಸವಿ ಫೆಬ್ರುವರಿ ಗುರ್ರೆ ತಾರೀಖು ಲಾಗಾಯಿತು 1910ನೆ ಇಸವಿ ಜನವರಿ 31ನೆ ತಾರೀಖು ವರಿವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನು ಹಾಜರ್ಮಾಡಲು ಕಂಟ್ರಾಕ್ಟು ಪಡಿಯಲು ಇಷ್ಟವುಳ್ಳವರಿಂದ ಹಾಜರ್ಮಾಡಲ್ಪಡುವ ಸೀಲ್ಡ್ ಕವರು ನಿಶಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1909ನೆ ಇಸವಿ ಜನವರಿ 16ನೆ ಶನಿವಾರ ದಿವಿ 10 ಘಂಟೆ ವರಿಗೂ ಅಂಗೀಕರಿಸುವರು.

ಕಂಟ್ರಾಕ್ಟಿಗೆ ಸಂಬಂಧವಾದ ತಪಶೀಲವಾರ್ ಷರತ್ತುಗಳು 1908ನೆ ಇಸವಿ ಡಿಸೆಂಬರ್ 24ನೆ-ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಖಾಯಿಷ್ ಮಾಡಿರುತ್ತದೆ.

ಪಿ. ಎಸ್. ಅಚ್ಯುತರಾವ್,
ಸೂಪರಿಂಟೆಂಡೆಂಟ್.

ಮೈಸೂರು ಗವರ್ನ್‌ಮೆಂಟ ಕೋ ಆಪರೇಟಿವ ಸೊಸೈಟಿಗಳ ರಿಜಿಸ್ಟ್ರಾರ್‌ವರ ಆಫೀಸ್, ಬೆಂಗಳೂರು.

ಸರ್‌ಕ್ಯುಲರ್ ನಂ. 369—Cs. 24, ತಾರೀಖು 11-12ನೆ ಜನವರಿ 1909ನೆ ಇಸವಿ.

ಮೈಸೂರು ಗವರ್ನ್ಮೆಂಟ ಕೋ ಆಪರೇಟಿವ ಸೊಸೈಟಿಗಳ ರೆಗ್ಯುಲೇಷರ್ಷ ಅನುಸರಿಸಿ ರಿಜಿಸ್ಟರಾದ ಕೋ ಆಪರೇಟಿವ ಸೊಸೈಟಿಗಳು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಪಬ್ಲಿಕ್ ಅಕೌಂಟನ್ನು ಇಡಬಹುದೆಂದು ಇಂಡಿಯಾ ಗವರ್ನ್ಮೆಂಟನವರು ಅಪ್ಪಣೆ ಮಾಡಿರುತ್ತಾರೆ. ಸದರಿ ಗವರ್ನಮೆಂಟನವರಿಂದ ಬದಲಾಯಿಸಲ್ಪಟ್ಟ ಪೋಸ್ಟ್ ಆಫಿಸ ಸೇವಿಂಗ್ಸ್ ಬ್ಯಾಂಕಿನ 42 (b)ನೆ ರೂಲು ಈ ಕೆಳಗೆ ವಿವರಿಸುವಂತೆ ಇರುತ್ತೆ:—

"ಇಂಡಿಯಾ ಕೋ ಆಪರೇಟಿವ ಕ್ರೆಡಿಟ್ ಸೊಸೈಟಿಗಳ ಆಕ್ಟು ಮತ್ತು ನೇಟಿವ ಸಂಸ್ಥಾನಗಳಲ್ಲಿ ಜಾರಿಯಲ್ಲಿರುವ ಅದೇ ಸಂಬಂಧವಾದ ಕಾನೂನು-ಇವುಗಳನ್ನನುಸರಿಸಿ ರಿಜಿಸ್ಟರು ಮಾಡಲ್ಪಡುವ ಸೊಸೈಟಿಗಳ ಸೆಕ್ರಿಟರಿಗಳು, ಖಜಾಂಚಿಯವರು, ಅಥವಾ ಮ್ಯಾನೇಜರುಗಳು ಹಣವನ್ನು ಡಿಪಾಜಿಟ್ ಇಡಬಹುದು."

2. ಸೊಸೈಟಿಗಳಿಗೆ ಪಬ್ಲಿಕ್ ಅಕೌಂಟನ್ನು ಪೋಸ್ಟಾಫೀಸ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಡುವದರಿಂದ ಈ ಕೆಳಗೆ ನಮೂದಿಸಿರುವ ರಿಯಾಯತಿಗಳು ದೊರಿಯುವವು.

ಯಾವ ಸೊಸೈಟಿಯೇ ಆಗಲಿ ಯಾವಾಗಲೂ 10,000 ರೂಪಾಯಿಗೆ ಮೀರಿ ಡಿಪಾಜಿಟ್ಟು ಇಡಕೂಡದು, ಮತ್ತು 10,000 ರೂಪಾಯಿಗೆ ಮೀರಿದ ಮೊಬಲಗಿಗೆ ಬಡ್ಡಿ ದೊರಿಯುವದಿಲ್ಲ. ಡಿಪಾಜಿಟ್ಟನ್ನು ವಾಪಸು ತೆಗದುಕೊಳ್ಳಬೇಕಾದರೆ ಚಾಲ್ತಿ ಡಿಪಾಜಿಟ್ಟನಿಂದ ಮಾಹೆಯಾನಾ 1,000 ರೂಪಾಯಿಗೆ ಮೀರಿ ವಾಪಸು ಅಪೇಕ್ಷಿಸಕೂಡದು. ಆದರೆ ಇದಕ್ಕಿಂತಲೂ ಜಾಸ್ತಿ ಮೊಬಲಗು ವಾಪಸು ತೆಗೆಯಬೇಕಾದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ಪೋಸ್ಟು ಮಾಸ್ಟರಿಗೆ ಲಿಖಿತ ಮೂಲಕ ತಿಳಿಯಪಡಿಸಿ ಆ ರೀತಿ ತೆಗದುಕೊಳ್ಳಬಹುದು. ಎರಡು ಮೂರು ಸಲ ಕಿತ್ತಾವಾರಾಗಿ ಹಣವನ್ನಪೇಕ್ಷಿಸುವ ಪಕ್ಷದಲ್ಲಿ ಎಷ್ಟುಕಿತ್ತಾ ಎಂಬುವದನ್ನೂ, ಯಾವ ತಾರೀಖುಗಳಲ್ಲಿ ಬೇಕಾಗುತ್ತೆಂಬುವದನ್ನೂ ನಮೂದಿಸಬೇಕು.

3. ಇಂಥ "ಪಬ್ಲಿಕ್ ಅಕೌಂಟನ್ನು" ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಲು ಅಪೇಕ್ಷೆಪಡುವ ಸೊಸೈಟಿಗಳು ಈ ಆಫೀಸು ಮೂಲಕ ಪೋಸ್ಟು ಮಾಸ್ಟರ್ ಜನರಲ್ ರವರಿಗೆ ಅದಕ್ಕಾಗಿರುವ ನಮೂನೆಯಲ್ಲಿ ದರಖಾಸ್ತು ಬರೆದುಕೊಳ್ಳಬಹುದು.

4. ಈ ಪಬ್ಲಿಕ್ ಅಕೌಂಟನ ವಿಷಯವಾಗಿ ಇನ್ನೂ ವಿಶೇಷ ತಿಳಿಯಬೇಕಾದರೆ ಪೋಸ್ಟಲ್ ಗೈಡು (ಏಪ್ರೆಲ್ 1908ನೆ ಇಸವಿ) 194-195ನೆ ಪುಟಗಳನ್ನು ನೋಡಬೇಕು.

ಎಂ. ಶ್ಯಾಮರಾವ್,
ಕೋ ಆಪರೇಟಿವ ಸೊಸೈಟಿಗಳ ರಿಜಿಸ್ಟ್ರಾರ್.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ

ಇಸ್ತಿಹಾರ್‌ನಾಮೆ.

ದರಜಾಗಾ, ಬೆಂಗಳೂರು, ತಾರೀಖು 7ನೆ ಜನವರಿ 1909ನೆ ಇಸವಿ.

ನಂ. 7. ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸ್ 1909ನೆ ಇಸವಿ ಏಪ್ರೆಲ್ ತಾರೀಖು 1ರ ಲಾಗಾಯಿತು 1910ನೆ ಇಸವಿ ಮಾರ್ಚಿ ತಾರೀಖು 31ರ ವರಿವಿಗೆ ಕೊಡಗು ಸೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ಮ್ಯಾರಿಗೆ ಹರಾಜು ಮಾಡಲ್ಪಡುವದು.

(i) 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಮಡಿಕೇರಿಯಲ್ಲಿ ಮಡಿಕೇರೆ ತಾಲ್ಲೂಕು ಸುಬೇದಾರರ ಮುಂದೆ.

(ii) 1909ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ವೀರರಾಜಪ್ಯಾಟೆಯಲ್ಲಿ ಎಡಿನಾಲ್ಕುನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1909ನೆ ಇಸವಿ ಮಾರ್ಚಿ 7ನೆ ತಾರೀಖಿನಲ್ಲಿ ಗೋಣಿಕೊಪ್ಪಲಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತದೆ. ಅವರು ಯಾವಕಾರಣವೂ ನಮೂದಿಸದೆ ಚಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

3. ತಾನು ಮೊದಲೇ ದರಖಾಸ್ತು ಮಾಡಿದ ಮೊಬಲಗನ್ನು ಕೊಟ್ಟಿದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಫಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. ತೊಲ ಒಂದರ 4 ಆಣೆ ಮೇರೆ 80 ತೊಲದ ಸೇರಿಗೆ 20 ರೂಪಾಯಿ ಮ್ಯಾರಿಗೆ ಕಮಿಷನರವರಿಂದ ಲೈಸೆನ್ಸದಾರನಿಗೆ ಅಫೀಂ ಕೊಡಲ್ಪಡುತ್ತೆ.

5. ತೊಲ ಒಂದರ 9 ಆಣೆ ಮೇರೆ 80 ತೊಲದ ಸೇರಿಗೆ ಒಂದೇ ಬೆಲೆಯಾಗಿ 45 ರೂಪಾಯಿ ಮ್ಯಾರಿಗೆ ಅಫೀಮನ್ನು ಲೈಸೆನ್ಸದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು. ಅವು ಯಾವವೆಂದರೆ:—

ಮಡಿಕೇರಿಯಲ್ಲಿ ಒಂದು.
ವೀರರಾಜಪ್ಯಾಟೆಯಲ್ಲಿ ಒಂದು.
ಗೋಣಿಕೊಪ್ಪಲಲ್ಲಿ ಒಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಯಾಪ್ತು ಮಾಡಿ ತಿಳಿದುಕೊಳ್ಳಬಹುದು.

ಟಿ. ಬಿ. ಕೋಪ್‌ಲ್ಯಾಂಡ್,
ಚೀಫ್ ಕಮಿಷನರವರ ಸೆಕ್ರೆಟೆರಿಯವರು.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಸಪ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 21, ಸನ್ 1909.

IIನೆ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರಫ್.

ತಾರೀಖು 22ನೆ ಡಿಸೆಂಬರು 1908.

ಸನ್ 1907ನೆ ಇಸವಿ ಡಿಸೆಂಬರು 7ನೆ ಮರ್ಕೂಂ 77ನೆ ನಂಬರು ರೂಲ್ ಆಫ್ ಪ್ರಾಕ್ಟೀಸ್ಸಿನ ತಿದ್ದುಪಾಟು.

ಸದರಿ ರೂಲ್ ಆಫ್ ಪ್ರಾಕ್ಟೀಸ್ ಅಪೆಂಡಿಕ್ಸ್ 'ಡಿ' ಯಲ್ಲಿ ಕಂಡುಬರುವ ಹಾಲೀ ಪಟ್ಟೀಗೆ ಬದಲಾಗಿ ಈ ಕೆಳಗೆ ನಮೂದಿಸಿರುವ ಪಟ್ಟಿಯನ್ನು ಪ್ರತ್ಯಾಮ್ನಾಯವಾಗಿ ಉಪಯೋಗಿಸಬೇಕೆಂದು ಚೀಫ್ ಕೋರ್ಟಿನವರು ಆಜ್ಞಾಪಿಸುತ್ತಾರೆ :—

ನಂಬರು.	ಕೋರ್ಟಿನ ರಿಜಿಸ್ಟರುಗಳು, ಪುಸ್ತಕಗಳು ಮತ್ತು ಕಾಗದಗಳ ವಿವರಣೆ.	ರಿಜಿಸ್ಟರುಗಳು ಮೊದಲಾದವುಗಳನ್ನು ನಿಲ್ಲಿಸಿಕೊಳ್ಳಬೇಕಾದ ಸಂವತ್ಸರಗಳ ಅವಧಿ.
1	ರದ್ದು ಮಾಡಲ್ಪಟ್ಟಿರುವ ಆಕ್ಟುಗಳು ಅಥವಾ ರೆಗ್ಯುಲೇಷನ್‌ಗಳು ...	ಖಾಯಂ
2	ಕ್ಯಾಷ್ ಬುಕ್ಕು ಮತ್ತು ಲೆಡ್ಜರು	10
3	ಅಸಲು ಮೊಕದ್ದಮೆಗಳ ಮತ್ತು ಅಪೀಲುಗಳ ರಿಜಿಸ್ಟರು	ಖಾಯಂ
4	ಕಾಪೀಸ್ಟ್ ರಿಜಿಸ್ಟರುಗಳು ಮತ್ತು ಪ್ರೋಸೆಸ್ ನೌಕರರ ರಿಜಿಸ್ಟರುಗಳು ...	3
5	ಇತರ ರಿಜಿಸ್ಟರುಗಳು ... ... ಕ್ಯಾಷ್‌ಬುಕ್ಕು ಮತ್ತು ಲೆಡ್ಜರ್ ಅಲ್ಲದ ಇತರ ಅಕೌಂಟು ಬುಕ್ಕುಗಳು ... ಕಕ್ಷಿಗಾರರಿಗೆ ದಸ್ತೈವಜಗಳನ್ನು ವಾಪಸು ಮಾಡುವ ಬಗ್ಯೆ ಇಡಲ್ಪಟ್ಟ ರಸೀತಿ ಬುಕ್ಕುಗಳು. ಸ್ಟೇಷನರಿ ಲೆಖ್ಖಗಳು ... ... ಟಪ್ಪಾಲು ಹಾಸಲುಗಳ ಲೆಖ್ಖ ... ... ಜುರ್ಮಾನೆಗಳ ಮತ್ತು ದಂಡಗಳನ್ನು ತೋರಿಸುವ ಲೆಖ್ಖ ... ... ಸಾದಲ್ವಾರು ಬಿಲ್ಲುಗಳು ಮತ್ತು ರಿಜಿಸ್ಟರುಗಳು ... ... ಜಪ್ತಿ ಆದ ಚರ ಸ್ಥಿರ ಸ್ವತ್ತುಗಳ ರಿಜಿಸ್ಟರು ... ... ಕಮಿಷನ್‌ಗಳು ಕೊಟ್ಟದ್ದನ್ನು ತೋರಿಸುವ ರಿಜಿಸ್ಟರು ...	3
6	ಚೆರ್ಲ ಮತ್ತು ಚೆಕ್ ಬುಕ್ಕುಗಳು	10
7	ಮೇಜಿಸ್ಟ್ರೇಟರ ಕೋರ್ಟಿನ "ಇಂದಾ" "ಗೆ" ಕಾಗದಗಳನ್ನು ಬಾರ್ ಮಾಡುವ ರಿಜಿಸ್ಟರುಗಳು.	5

ನಂಬರು.	ಕೋರ್ಟಿನ ರಿಜಿಸ್ಟರುಗಳು, ಪುಸ್ತಕಗಳು ಮತ್ತು ಕಾಗದಗಳ ವಿವರಣೆ.	ರಿಜಿಸ್ಟರುಗಳು ಮೊದಲಾದವುಗಳನ್ನು ನಿಲ್ಲಿಸಿಕೊಳ್ಳಬೇಕಾದ ಸಂವತ್ಸರಗಳ ಅವಧಿ.
8	ಇತರ ಕೋರ್ಟು ಅಥವಾ ಆಫೀಸ್ ಪುಸ್ತಕಗಳು ಮತ್ತು ರಿಜಿಸ್ಟರುಗಳು ...	3
9	ಮೈಸೂರು ಗೆಜೆಟ್	ಖಾಯಂ
10	ಇತರ ಗೆಜೆಟ್ಟುಗಳು, ಬಂದಿದ್ದರೆ	3
11	ಮೇಲೆ ಹೇಳಲ್ಪಟ್ಟವುಗಳು ಅಥವಾ ಮುಂದೆ ವಿಧಾಯಕವಾಗವುಗಳು ವಿನಹಾ ಇತರ ಚೀಫ್ ಕೋರ್ಟು ಮತ್ತು ಗೌರ್ನ್ಮೆಂಟಿನಿಂದ ಬಂದ ಕಾಗದಗಳು ಮತ್ತು ಹುಕುಂಗಳು ಅಡ್ಮಿನಿಸ್ಟ್ರೇಷನ್ ರಿಪೋರ್ಟುಗಳು.	20
12	ಪೂರೈಸಿದ ಸಂಗತಿಗಳ ವಿಷಯವಾಗಿ ನಡದ ಇತರ ಆಫೀಸಿಗೆ ಸಂಬಂಧಪಟ್ಟ ಕಾಗದಗಳು.	3
13	ಸಾಲೀಯಾನಾ ಮತ್ತು ಚಷ್ಮಾಹೆ ತಃಖ್ತೆಗಳು	5
14	ಮಾಹೇಯಾನ ಮತ್ತು ಮೂರು ತಿಂಗಳ ತಃಖ್ತೆಗಳು ಟಪ್ಪಾಲು ಹಾಸಲು ಮತ್ತು ದಂಡಗಳನ್ನು ತೋರಿಸುವ ಲೆಖ್ಖಗಳು ಸಹಾ.	3
15	ರಜಾ ಬಗ್ಗೆ ಕೊಟ್ಟ ದರಖಾಸ್ತುಗಳು ಮತ್ತು ಅವುಗಳ ಮೇಲೆ ಆದ ಆರ್ಡರು ನೌಕರಿ ಬಗ್ಗೆ ಉಮೇದಾರರಿಂದ ಬಂದ ಅರ್ಜಿಗಳು ಮತ್ತು ಕೋರ್ಟು ನಡವಳಿಕೆಗೆ ಸಂಬಂಧವಿಲ್ಲದ ಅರ್ಜಿಗಳ ಮೇಲೆ ಆದ ರಿಪೋರ್ಟುಗಳು.	1
16	ಮೇಜಿಸ್ಟ್ರೇಟರಿಗೆ ಸಂಬಂಧಪಟ್ಟ ಡೈರಿಗಳು, ಪೋಲೀಸ್ ದಸ್ತಗಿರಿ ಸ್ಟೇಟ್ಮೆಂಟುಗಳು, ಪೋಲೀಸು ಅಕರ್ರಾಸು ರಿಪೋರ್ಟುಗಳು (Iನೆ ಭಾಗಕ್ಕೆ ಸೇರಿದವುಗಳು ಮತ್ತು ಅಸಹಜವಾದ ಮತ್ತು ಆಕಸ್ಮಿಕವಾದ ಮರಣಗಳ ಪೋಲೀಸ್ ರಿಪೋರ್ಟುಗಳು ವಿನಹ).	3
17	ಅರ್ಜಿಗಳ ರಿಜಿಸ್ಟರು	12
18	ಬರಾವರ್ದುಗಳು	35

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್

ಫಾರೆಸ್ಟು ಇಲಾಖಾ.

ನೋಟಿಸ್.

ಕೋಲಾರ ಡಿಸ್ಟ್ರಿಕ್ಟು ಮಾಲೂರು ರೇಂಜಿಗೆ ಸೇರಿದ ಪ್ಲಾಂಟೇಷನ್ಗಳಲ್ಲಿ ಒಣಗಿದ ಕ್ಯಾಸರೀನಾ ಕಟ್ಟಿಗೆ ಹರಾಜು ವಿಷಯದಲ್ಲಿ, 1909ನೆ ಇಸವಿ ಜನವರಿ 14ನೆ ಮಂಗಳವಾರ ಮೈಸೂರು ಗೆಜೆಟ್ 2ನೆ ಭಾಗದ 14ನೆ ನಂಬರು ಪುಟದಲ್ಲಿ ಪ್ರಕಟಿಸಿರುವದಕ್ಕೆ ಎಲ್ಲರೂ ನಿಗಾ ಕೊಡತಕ್ಕದ್ದು.

ಎಚ್. ರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ ನೆಲಮಂಗಲ ತಾಲ್ಲೂಕು ದಾಸನಪುರದ ಹೋಬಳಿ ಖಾಯಂಗುತ್ತಾ ಲಕ್ಕೇನಹಳ್ಳಿ ಗ್ರಾಮವು 1909ನೆ ಇಸವಿ ಮಾರ್ಚಿ 23ನೆ ತಾರೀಖಿನಲ್ಲಿ ನೆಲಮಂಗಲ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ—ಹೆಚ್ಚು ತಪಶೀಲಿಗೆ ಸರ್ 1909ನೆ ಇಸವಿ ಜನವರಿ 7ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 3ನೆ ಪುಟದಲ್ಲಿ ಪ್ರಕಟಿಸಿ ಆಗಿರುವ ಇಸಿಹಾರ್ನಾಮೆಯನ್ನು ನೋಡಬಹುದು.)

ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ ನೆಲಮಂಗಲ ತಾಲ್ಲೂಕು ಕಸಬ ಹೋಬಳಿ ಕಾಯಂಗುತ್ತಾ ನಾರಾಯಣರಾವ ಪಾಳ್ಯ ಗ್ರಾಮವು 1909ನೆ ಇಸವಿ ಮಾರ್ಚಿ ಮಾಹೆ 23ನೆ ತಾರೀಖಿನಲ್ಲಿ ನೆಲಮಂಗಲ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಷರಾ—ಹೆಚ್ಚು ಅಪ್ಶೀಲಿಗೆ ಸರ್ 1909ನೆ ಇಸವಿ ಜನವರಿ ಮಾಹೆ 7ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 4ನೆ ಪುಟದಲ್ಲಿ ಪ್ರಕಟಿಸಿರುವ ಇಸ್ತಿಹಾರ್ನಾಮೆಯನ್ನು ನೋಡಬೇಕು.

ಬಿ. ಜೆ. ಕುಮಾರಸಾಮಿ ನಾಯಕ್,
ಡೆಪ್ಯುಟಿ ಕಮಿಷನರ್.

ತಾರೀಖು 8ನೆ ಜನವರಿ 1909.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಆನೇಕಲ್ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರೀ ರೆಗ್ಯುಲೇಷನ್ 6ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯು ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ಆನೇಕಲ್ ಟೌನ್ ಎಲ್ಲೆಯು ಸದರಿ ಗ್ರಾಮದ ಸರ್ವೆ 517ನೆ ನಂಬರು ಈಶಾನ್ಯ ಮೂಲೆಯಲ್ಲಿರುವ 1ನೆ ನಂಬರ್ ಗಡಿ ಕಲ್ಲಿನಿಂದ ಪ್ರಾರಂಭಿಸಿ ಸರ್ವೆ 523, 524ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ದೊಡ್ಡಕೆರೆಬಾಗಲು ರಸ್ತೆಯನ್ನು ಹಾದು ಸರ್ವೆ 525, 526ನೆ ನಂಬರುಗಳ ಪಶ್ಚಿಮ ಎಲ್ಲೆಯು ಮಾರ್ಗವಾಗಿ ಹೊರಟು ಸರ್ವೆ 526ನೆ ನಂಬರು ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿ ಸರ್ವೆ 548ನೆ ನಂಬರಿನ ಮುಖಾಂತರ ಸದರಿ ನಂಬರಿನ ಹೊಲಗೆರೆಯನ್ನು ಮಿಕ್ಕ ಭಾಗದಿಂದ ಪ್ರತ್ಯೇಕಿಸಿಕೊಂಡು ಅಲ್ಲಿಂದ ಸರ್ವೆ 546, 547, 542ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ರೆವಿನ್ಯೂ ಸರ್ವೆ 549ನೆ ನಂಬರಿನ ಪಶ್ಚಿಮ ಎಲ್ಲೆಯನ್ನು ಸಂಧಿಸಿ ಅದೇ 549ನೆ ನಂಬರು ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಅಲ್ಲಿಂದ ಬೆಂಗಳೂರು ರಸ್ತೆಯನ್ನು ಹಾದು ಸರ್ವೆ ನಂಬರು 1, 2, 562, 563, 564, 565, 567, 77 ಈ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ರೆವಿನ್ಯೂ ಸರ್ವೆ 568, 80, 81ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ತಿರುಗಿ ಸರ್ವೆ 81ನೆ ನಂಬರು ದಕ್ಷಿಣ ಮತ್ತು ಪೂರ್ವ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 82, 85ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಅಲ್ಲಿಂದ ಸರ್ವೆ 85, 86ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 87ನೆ ನಂಬರಿನ ನೈರುತ್ಯ ಮೂಲೆಯಲ್ಲಿರುವ ದಕ್ಷಿಣ ಎಲ್ಲೆಯನ್ನು ಸೇರಿ ಅಲ್ಲಿಂದ ತಿರುಗಿ 87ನೆ ಸರ್ವೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು 88ನೆ ನಂಬರಿನ ಈಶಾನ್ಯ ಮೂಲೆಯಲ್ಲಿರುವ 2ನೆ ನಂಬರು ಗಡಿ ಕಲ್ಲನ್ನು ಸೇರುತ್ತೆ.

II. ಇಲ್ಲಿಂದ ಎಲ್ಲೆಯು ದಕ್ಷಿಣಕ್ಕೆ ತಿರಿಗಿ ಸರ್ವೆ 91ನೆ ನಂಬರು ಪಶ್ಚಿಮಗಡಿ ಮಾರ್ಗವಾಗಿ ಹೊರಟು ಸರ್ಜಾಪುರದ ರಸ್ತೆಯನ್ನು ಹಾದು ಸರ್ವೆ 111ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಬಿದರಗೆರೆಗೆ ಹೋಗುವ ರಸ್ತೆಯನ್ನು ದಾಟಿ ಸರ್ವೆ 113ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರಿ ಅಲ್ಲಿಂದ ಪಶ್ಚಿಮಕ್ಕೆ ತಿರಿಗಿ ಸದರಿ ನಂಬರಿನ ಉತ್ತರ ಮತ್ತು ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಅಲ್ಲಿಂದ ಅದರ ದಕ್ಷಿಣ ಎಲ್ಲೆಯನ್ನು ಸ್ವಲ್ಪದೂರ ಅನುಸರಿಸಿ ಸರ್ವೆ 127ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 127, 125, 124, 142, 143, 144, 145, 146, 202 ಮತ್ತು 99 ಈ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು 197ನೆ ನಂಬರಿನ ಪಶ್ಚಿಮ, ಉತ್ತರ, ಪೂರ್ವ ಎಲ್ಲೆಗಳನ್ನು ಬಳಸಿಕೊಂಡು 196ನೆ ನಂಬರಿನ ಉತ್ತರ ಮತ್ತು ಪೂರ್ವ ಎಲ್ಲೆಗಳ ಮಾರ್ಗವಾಗಿ ಬಂದು ಸದರಿ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸುತ್ತೆ.

III. ಇಲ್ಲಿಂದ ಎಲ್ಲೆಯು ರೆವಿನ್ಯೂ ಸರ್ವೆ 196, 192ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಉತ್ತರ ದಿಕ್ಕಿಗೆ ತಿರಿಗಿ ರೆವಿನ್ಯೂ ಸರ್ವೆ 192ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಸರ್ವೆ 191ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತೆ. ಇಲ್ಲಿಂದ ಎಲ್ಲೆಯು ಪಶ್ಚಿಮಕ್ಕೆ ತಿರಿಗಿ ಸರ್ವೆ 191, 200, 201, 203, 141 ಈ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಮತ್ತಿಕೆರೆ ರಸ್ತೆಯನ್ನು ಹಾದು ರೆವಿನ್ಯೂ ಸರ್ವೆ 139ನೆ ನಂಬರಿನ ಆಗ್ನೇಯ ಮೂಲೆಯಲ್ಲಿರುವ 3ನೆ ನಂಬರು ಗಡಿ ಕಲ್ಲನ್ನು ಸೇರುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 139ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಎಲ್ಲೆಗಳ ಮಾರ್ಗವಾಗಿ ಹೊರಟು 137, 135, 134ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 251ನೆ ನಂಬರು ಚಿಕ್ಕಕೆರೆಯ ಪೂರ್ವ ದಕ್ಷಿಣ ಮತ್ತು ಪಶ್ಚಿಮ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 258, 257, 256, 264, 284, 389, 509 ಮತ್ತು 510ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 510ನೆ ನಂಬರು ವಾಯುವ್ಯ ಮೂಲೆಯಲ್ಲಿರುವ 4ನೆ ನಂಬರು ಗಡಿ ಕಲ್ಲನ್ನು ಸೇರುತ್ತದೆ.

IV. ಈ ಗಡಿ ಕಲ್ಲಿನಿಂದ ಎಲ್ಲೆಯು ಉತ್ತರಾಭಿಮುಖವಾಗಿ ಹೊರಟು ಸರ್ವೆ 513, 514, 515ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಗುಮಳಾಪುರದ ರಸ್ತೆಯನ್ನು ಹಾದು ಸರ್ವೆ 516ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಸರ್ವೆ 516, 517ನೆ ನಂಬರುಗಳ ಪೂರ್ವ ಎಲೆ ಮಾರ್ಗವಾಗಿ ಹೋಗಿ 1ನೆ ನಂಬರು ಗಡಿ ಕಲ್ಲನ್ನು ಸೇರುತ್ತೆ.

ಇದರಿಂದ ಈ ಕೆಳಗೆ ಕಂಡ ಸರ್ವೆ ನಂಬರುಗಳು ಆನೇಕಲ್ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ ಸೇರಿರುತ್ತವೆ. ರೆವಿನ್ಯೂ ಸರ್ವೆ 548ನೆ ನಂಬರು ಹೊಲಗೆರೆಗೆ ತೆಗೆದುಕೊಂಡು ಇರುವಷ್ಟು ಭಾಗವು ರೆವಿನ್ಯೂ ಸರ್ವೆ 550, 569, 89, 88, 90, 112, 128, 129, 130, 131, 132, 133, 138, 192, 196, 197, 252, 253, 254, 255, 553, 554, 555, 556, 557, 558, 559, 560 ಮತ್ತು 251 (ಚಿಕ್ಕೆರೆ).

ಎ. ಮಾಧವರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 27ನೆ ನವಂಬರ್ 1908.

ಚಾಮರಾಜನಗರದ ಮ್ಯುನಿಸಿಪಲ್ ಟೌನಿಗೆ ರಾಮಸಮುದ್ರ ಗ್ರಾಮವನ್ನು ಸೇರಿಸಿ 1906ನೆ ಇಸವಿ VIIನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8 (1)ನೆ ಪ್ರಕರಣವನ್ನು ಅನುಸರಿಸಿ ಮ್ಯುನಿಸಿಪಾಲಿಟಿಯನ್ನಾಗಿ ಮಾಡಲು ಉದ್ದೇಶಿಸಿ ಇರುವದ್ದರಿಂದ ಈ ಇಸ್ತಿಹಾರು ಮೈಸೂರು ಗೆಜೆಟಿನಲ್ಲಿ ಮೊದಲಾವರ್ತಿ ಪ್ರಾಯಿಷಾದ ಎರಡು ತಿಂಗಳುಗಳೊಳಗಾಗಿ ಈ ಏರ್ಪಾಡಿಗೆ ಆಕ್ಷೇಪಿಸುವವರೆಲ್ಲಾ ಅಂಥಾ ಆಕ್ಷೇಪಣೆಗಳನ್ನು ಕಾರಣ ಸಹಿತವಾಗಿ ಬರಹಮೂಲಕ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ತಿಳಿಸಬೇಕು. ಏರ್ಪಡಿಸಲು ಉದ್ದೇಶಿಸಿರುವ ಚಾಮರಾಜನಗರದ ಮ್ಯುನಿಸಿಪಾಲಿಟಿಯ ಚತುರ್ಸೀಮೆಗಳನ್ನು ಸಮಸ್ತರಿಗೂ ತಿಳಿಯಪಡಿಸಲು ಈ ಕೆಳಗೆ ವಿವರಿಸಿ ಇರುತ್ತದೆ.

ಸದರೀ ಮ್ಯುನಿಸಿಪಾಲಿಟಿಯ ಸರಹದ್ದು ಚಾಮರಾಜನಗರಕ್ಕೆ ವಾಯುವ್ಯ ದಿಕ್ಕಿನಲ್ಲಿರುವ ನಂಜನಗೂಡು, ಹಾಸನೂರು ಘಾಟ ರಸ್ತೆಯ ಎಡಪಕ್ಕದಲ್ಲಿ ಸರ್ವೆ 23ನೆ ನಂಬರಿನ ಆಗ್ನೇಯ ಮೂಲೆಯಬಳಿ ಪ್ರಾರಂಭವಾಗಿ 24—21—3 ಮತ್ತು 1ನೆ ನಂಬರುಗಳ ದಕ್ಷಿಣ ದಿಕ್ಕಿನ ಬೇಲಿ ಹೊರಗಡೆ ಸರ್ವೆ 1ನೆ ನಂಬರಿನ ಜಮೀನು ಆಗ್ನೇಯ ಮೂಲೆವರಿಗೆ ಬಂದು ಉತ್ತರಕ್ಕೆ ಟಿ. ನರಸೀಪುರದ ರಸ್ತೆಕಡೆಗೆ ತಿರುಗಿ ಸರ್ವೆ 1—5—6—7 ಮತ್ತು 13ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದು ಹೊರಗೆ ಸದರಿ 13ನೆ ನಂಬರು ಜಮೀನಿನ ಉತ್ತರ ಭಾಗದಲ್ಲಿರುವ ಹಳ್ಳದವರೆಗೆ ಹೋಗಿ ಸದರೀ ರಸ್ತೆಯನ್ನು ದಾಟಿ ನಂತರ ಸರ್ವೆ 342 ಮತ್ತು 343ನೆ ನಂಬರುಗಳ ಪಶ್ಚಿಮ ಭಾಗದ ಬೇಲಿಹೊರಗೆ ಸ್ವಲ್ಪದೂರ ಬಂದು ಪೂರ್ವಕ್ಕೆ ತಿರುಗಿ 343—314ನೆ ನಂಬರು ಪೈಕಿ ಓಣಿಗೆ ದಕ್ಷಿಣವಾಗಿರುವ ಭಾಗವನ್ನು ಮತ್ತು 354ನೆ ನಂಬರು ಪೈಕಿ ಓಣಿಗೆ ದಕ್ಷಿಣವಾಗಿಯೂ ಪಶ್ಚಿಮವಾಗಿಯೂ ಇರುವ ಭಾಗವನ್ನು ಒಳಗೊಂಡು ದಕ್ಷಿಣಕ್ಕೆ ತಿರುಗಿ 356—360—361 ಮತ್ತು 359ನೆ ನಂಬರು ಪೂರ್ತಾ ಜಮೀನುಗಳನ್ನು ಒಳಗೊಂಡು ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪೂರ್ವಕ್ಕೆ ರಾಮಸಮುದ್ರದ ರಸ್ತೆಗೆ ಉತ್ತರ ಭಾಗದಲ್ಲಿರುವ ಚಾಮರಾಜನಗರದ ಗ್ರಾಮದ ಸರ್ವೆ 358—412—298—296—295 ಮತ್ತು ರಾಮಸಮುದ್ರ ಗ್ರಾಮದ ಸರ್ವೆ 613 ಈ ನಂಬರು ಜಮೀನುಗಳ ದಕ್ಷಿಣ ದಿಕ್ಕಿನ ಬೇಲಿ ಹೊರಗಿನಿಂದ ಬಂದು ಸರ್ವೆ 612—618—619—620—629—623 ಈ ನಂಬರುಗಳನ್ನು ಮತ್ತು 623—624ನೆ ನಂಬರುಗಳ ಮಧ್ಯೆ ಇರುವ ಓಣಿಯನ್ನು ಸರ್ವೆ 624—625ನೆ ನಂಬರುಗಳನ್ನು ಒಳಗೊಂಡು 626ನೆ ನಂಬರಿನ ಪೂರ್ವ ದಿಕ್ಕಿನ ಬೇಲಿಹೊರಗೆ ಉತ್ತರಕ್ಕೆ ತಿರುಗಿ 652ನೆ ನಂಬರಿನ ದಕ್ಷಿಣ ಭಾಗದ ಬೇಲಿ ಹೊರಗೊಂಡು 661ನೆ ನಂಬರಿನ ಪಶ್ಚಿಮ ದಿಕ್ಕಿನ ಬೇಲಿಹೊರಗೆ ಸ್ವಲ್ಪದೂರವೂ ದಕ್ಷಿಣ ದಿಕ್ಕಿನ ಬೇಲಿಯಲ್ಲಿ ಪೂರ್ತಾ ನಂಬರು 662ನೆ ನಂಬರು ಒಳಗೊಂಡು ದಕ್ಷಿಣೋತ್ತರವಾಗಿ ಇರುವ ಓಣಿಗೆ ಅಡ್ಡಲಾಗಿ ಬಂದು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಭಾಗದ ಬೇಲಿಹೊರಗಿನಿಂದ ಹೊರಟು ಹಳ್ಳವನ್ನು ದಾಟಿ ದಕ್ಷಿಣಕ್ಕೆ ತಿರುಗಿ ಸರ್ವೆ 112 ಮತ್ತು 114ನೆ ನಂಬರು ಜಮೀನುಗಳ ಪಶ್ಚಿಮ ದಿಕ್ಕಿನ ಸರಹದ್ದಿನಲ್ಲಿ ಬಂದು 116 ಮತ್ತು 118ನೆ ನಂಬರು ಜಮೀನುಗಳನ್ನು ಸುತ್ತಿಕೊಂಡು 118ನೆ ನಂಬರಿನ ನೈರುತ್ಯ ಮೂಲೆಯಲ್ಲಿ ಓಣಿಯನ್ನು ದಾಟಿ ಪಶ್ಚಿಮಕ್ಕೆ ತಿರುಗಿ 563—564—565—585—584—585ನೆ ನಂಬರುಗಳ ಉತ್ತರ ಭಾಗದ ಬೇಲಿಹೊರಗೆ ಬಂದು ಆಬಳಿ ಇರುವ ಓಣಿಗೆ ಅಡ್ಡಲಾಗಿ ಸರ್ವೆ 609 ಮತ್ತು 611ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದುಹೊರಗೆ ಹೋಗಿ ಚಾಮರಾಜನಗರ, ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ 611—609—601—600 ಮತ್ತು ಚಾಮರಾಜನಗರದ ಸರ್ವೆ 391—390—388—387—386—385—366ನೆ ನಂಬರುಗಳ ಉತ್ತರ ದಿಕ್ಕಿನ ಸರಹದ್ದು ಹೊರಗೆಬಂದು ದಕ್ಷಿಣಕ್ಕೆ ತಿರುಗಿ 366—367ನೆ ನಂಬರುಗಳ ಪಶ್ಚಿಮ ದಿಕ್ಕಿನ ಬೇಲಿ ಮಾರ್ಗವಾಗಿಯೂ ಮತ್ತು 369ನೆ ನಂಬರಿನ ಉತ್ತರ 428ನೆ ನಂಬರಿನ ಪೂರ್ವ ಮತ್ತು ಉತ್ತರ 429ನೆ ನಂಬರಿನ ಉತ್ತರ ಮತ್ತು ಪಶ್ಚಿಮಬೇಲಿ ಮಾರ್ಗವಾಗಿ ಬಂದು ಓಣಿಯನ್ನು ದಾಟಿ 427ನೆ ನಂಬರಿನ ಉತ್ತರ, ಪಶ್ಚಿಮ ಮತ್ತು 433—434ನೆ ನಂಬರಿನ ಪಶ್ಚಿಮದ ಬೇಲಿ ಮಾರ್ಗವಾಗಿ ಹಾಸನೂರುಘಾಟಿ ರಸ್ತೆಗೆ ಸೇರುತ್ತದೆ. ನಂತರ ಸರ್ವೆ 434—436ನೆ ನಂಬರುಗಳ ರಸ್ತೆಪಕ್ಕದ ಬೇಲಿ ಮಾರ್ಗವಾಗಿ ಮತ್ತು ಸರ್ವೆ 444ನೆ ನಂಬರಿನ ಸದರೀ ಬೇಲಿಯಲ್ಲಿ ಸ್ವಲ್ಪದೂರಕ್ಕೆ ಹೋಗಿ ಹಾಸನೂರುಘಾಟಿ ರಸ್ತೆಯನ್ನುದಾಟಿ 458—459 ಮತ್ತು 461ನೆ ನಂಬರುಗಳ ಉತ್ತರದಿಕ್ಕಿನ ಎಲ್ಲೆ ಹೊರಗಡೆಬಂದು 462—463—464 ಮತ್ತು 467ನೆ ನಂಬರುಗಳನ್ನು ಒಳಗೊಂಡು ಗುಂಡುಪೇಟೆರಸ್ತೆಗೆ ಸೇರುತ್ತದೆ. ಮುಂದಕ್ಕೆ ಸರ್ವೆ 470ನೆ ನಂಬರಿನ ಪಶ್ಚಿಮ ಸರಹದ್ದು ಹೊರಗೆ ನೈರುತ್ಯ ಮೂಲೆವರೆಗೆ ಬಂದು ಸದರೀ ರಸ್ತೆಯನ್ನು ದಾಟಿ 471—472—466ನೆ ನಂಬರುಗಳ ಪೂರ್ವ ದಿಕ್ಕಿನ ಬೇಲಿಹೊರಗೊಂಡು ಪಶ್ಚಿಮಕ್ಕೆ ತಿರುಗಿ 466—473ನೆ ನಂಬರುಗಳ ಉತ್ತರದಿಕ್ಕಿನ ಬೇಲಿ ಮಾರ್ಗವಾಗಿಯೂ 475ನೆ ನಂಬರು ಕೆರೆ ಏರಿಯ ಆಗ್ನೇಯಮೂಲೆಗೆ ಸೇರಿ ಸದರಿ ಕೆರೆ ಪೂರ್ವದಿಕ್ಕಿನ ಏರಿಯನ್ನು ಒಳಗೊಂಡು ಸರ್ವೆ 672ನೆ ನಂಬರಿನ ದಕ್ಷಿಣ ಮತ್ತು 672—673ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗಡೆಯಿಂದ ಸರ್ವೆ 701—702—703—704—679—705 ಮತ್ತು 706ನೆ ನಂಬರುಗಳನ್ನು ಒಳಗೊಂಡು 688 ಮತ್ತು 689ನೆ ನಂಬರುಗಳ ದಕ್ಷಿಣ ಭಾಗದ ಬೇಲಿಯ ಹೊರಗೂ ಮತ್ತು 689—686ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗೆಬಂದು 686ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ನಂಜನಗೂಡು, ಹಾಸನೂರುಘಾಟಿ ರಸ್ತೆಗೆ ಸೇರಿ ಸರ್ವೆ 686—685 ಮತ್ತು 659ನೆ ನಂಬರುಗಳ ಉತ್ತರಭಾಗದ ಎಲ್ಲೆ ಹೊರಗಡೆಹೋಗಿ ಸದರೀ ರಸ್ತೆಯನ್ನು ದಾಟಿ ಮೊದಲು ಪ್ರಾರಂಭಿಸಿದ ಸ್ಥಳಕ್ಕೆ ಅಂದರೆ 23ನೆ ನಂಬರಿನ ಆಗ್ನೇಯ ಮೂಲೆಬಳಿಗೆ ಸೇರುತ್ತದೆ.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

ಇಸ್ತಿಹಾರ್ನಾಮೆ.

ತಾರೀಖು 8ನೆ ಜನವರ 1909.

ಮೈಸೂರು ತಾಲ್ಲೂಕು ವರುಣದ ಹೋಬಳಿಗೆ ಸೇರಿದೆ ಜೋಡಿ ಹೊಸಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀ ಗೋಸ್ಕರವಾಗಿ ಮೈಸೂರು ಸಬ್ ಡಿವಿಜನ್ ಆಫೀಸಿನಲ್ಲಿ ಸರ್ 1909ನೆ ಏಪ್ರೈಲ್ ಮಾಹೆ 1ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪ್ಸೀಲು ಬಗ್ಯೆ ಸರ್ 1909ನೆ ಇಸವಿ ಜನವರಿ 14ನೆ ಮರ್ಕೂಂ 2ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 18—19ನೆ ಪೇಜ್ ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 21ನೆ ಡಿಸೆಂಬರ್ 1908, ಹಾಸನ.

ಹಾಸನ ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕ ಡಿಪಾಜಿಟರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ, 1907—08ನೆ ಸಾಲ ಬಡ್ಡಿ ದಾಖಲ್ಮಾಡತಕ್ಕ ಬಗ್ಗೆ ಪ್ಯಾಸ್ ಬುಕ್ಕುಗಳನ್ನು ಅವರಿಗೆ ಸಮ್ಮಂಧಪಟ್ಟ ಟ್ರೆಜರೀಲಿ ಹಾಜರ್ಪಡಿಸತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಡೆಪ್ಯುಟಿ ಕಮಿಷನರ್, ಟ್ರೆಜರಿ ಡಿಪಾರ್ಟಮೆಂಟ.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 27ನೆ ಡಿಸೆಂಬರ್ 1908.

ಸರ್ 1909ನೆ ಇಸವಿ ಮಾರ್ಚಿ ಮಾಹೆ 23ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ ಶಿವಮೊಗ್ಗ ತಾಲ್ಲೂಕು ಕೂಡ್ಲಿಯಲ್ಲಿ ನಡೆಯುವ ಶ್ರೀ ಸಂಗಮೇಶ್ವರದೇವರ ರಥೋತ್ಸವ ಕಾಲದಲ್ಲಿ ಗವರ್ನ್ಮೆಂಟಿನಿಂದ ತಲ್ಪಿರುವ 22—12—06ನೆ ಮರ್ಕೂಂ 5540-1—L. F. 495-05-4ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ದಣಾಯಿಕಪುರದಬಳಿ ಹೊಳೆಹೊನ್ನೂರಿಗೆ ಹೋಗುವ ಹಳೆ ರಸ್ತೆ ಬಳಿ ಇರುವ ತೋಪಿನಲ್ಲಿ ಪ್ರದರ್ಶನ ನಡಿಯಲು ಏರ್ಪಡಿಸುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೇ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಹಸು 1ಕ್ಕೆ ಒಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಎಮ್ಮೆ 1ಕ್ಕೆ ಒಂದನೆ ಬಹುಮಾನ 10 ರೂಪಾಯಿ ಈರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನ ಮುಗಿದ ಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರಿಯುತ್ತದೆ.

6. ಇನಾಂಪಡೆಯಲು ಲಾಯಖಾದ ಜಾನವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲಿ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು ಶಿವಮೊಗ್ಗ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ ಪ್ರದರ್ಶನ ಷುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ ಬರದು ತಮ್ಮ ಹೆಸರು ಜಾನವಾರು ತಪಶೀಲು ದಾಖಲ್ಮಾಡಿಸಿಕೊಳ್ಳಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ ಅಥವಾ ಅವುಗಳಿಂದ ಜನಗಳಿಗೆ ಆಗಲಿ ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೇ ನೋಡಿಕೊಳ್ಳುವದು ಒಳ್ಳೇದು.

10. ಕೂಡ್ಲಿ ಜಾತ್ರೆಗೆ ಬಹಳ ಜನಗಳು ಮತ್ತು ಜಾನವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡಿಯುತ್ತೆ.

1908ನೆ ಫೆಬ್ರುವರಿ ತಿಂಗಳಲ್ಲಿ ಹೊನ್ನಾಳಿ ತಾಲ್ಲೂಕು ರಾಂಪುರ ಗ್ರಾಮದ ಜಾತ್ರೆ ಕಾಲದಲ್ಲಿ ನಡೆದ ಪ್ರದರ್ಶನದಲ್ಲಿ ಬಹುಮಾನ ಕೊಟ್ಟಿದ್ದರ ತಪಶೀಲು ಈ ಕೆಳಗೆ ನಮೂದಿಸಿ ಇರುತ್ತೆ :—

ನಂಬರ್.	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲು.		
18. ತೀರ್ಥಹಳ್ಳಿ ತಾಲ್ಲೂಕಿನ ಸಬ್ ರಿಜಿಸ್ಟ್ರಾರ್‌ರನ್ನು ತಾಲ್ಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ನೇಮಕ ಮಾಡುವ ವಿಷಯದಲ್ಲಿ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ 1908ನೆ ಇಸವಿ ಅಕ್ಟೋಬರ್ 29ನೆ ತಾರೀಖಿನ 831ನೆ ಯಾದಿ ಓದಲಾಗಿ ಈ ವಿಷಯ ಮುಂದಿನ ಮೀಟಿಂಗಿನಲ್ಲಿ ಚರ್ಚಿಸಲ್ಪಡುವದಕ್ಕೆ ಇಟ್ಟಿರುತ್ತೆಂತ ತೀರ್ಮಾನಿಸಲಾಯಿತು.

19. ಕೌಲೆ ದುರ್ಗದಲ್ಲಿ ಒಂದು ದೊಡ್ಡಿ ಏರ್ಪಾಡು ಮಾಡತಕ್ಕ ವಿಷಯದಲ್ಲಿ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ 1908ನೆ ನವಂಬರ್ 23ನೆ ತಾರೀಖಿನ 1042ನೆ ಯಾದಿ ಓದಲಾಗಿ ಅದೇಹಳ್ಳಿಯಲ್ಲಿ ವಾಸಮಾಡತಕ್ಕ ಜನಗಳು ತಮ್ಮ ಸ್ವಂತ ಖರ್ಚಿನಿಂದ ದೊಡ್ಡಿ ಕಟ್ಟಿದಲ್ಲಿ ಮಂಜೂರು ಮಾಡಬಹುದೆಂತ ತೀರ್ಮಾನಿಸಲಾಯಿತು.

20. (a) ಈ ಕೆಳಗಿನ ಅಂದಾಜಾಗಳು ಓದಲ್ಪಟ್ಟವು.

ತಾಲ್ಲೂಕು	ಹೆಸರು	ಮೊಬಲಗು	ಷರಾ
		ರೂ.	
ಕುಂಸಿ ...	ಹಾರ್ನಹಳ್ಳಿ ಯೂನಿಯನ್ನಿನಲ್ಲಿ ರಸ್ತೆ ರಿಪೇರಿ.	50	ಮಂಜೂರ್ಮಾಡಿದೆ.
	ಹಾರ್ನಹಳ್ಳಿ ಯೂನಿಯನ್‌ಗೆ ದೀಪದ ಕಂಭ ಮತ್ತು ಲಾಂದರಗಳು.	54	ಡಿಟೋ
ಹೊನ್ನಾಳಿ ...	ಸಾಸ್ವೆಹಳ್ಳಿ ದೊಡ್ಡಿ ...	178	ಹಳೇದೊಡ್ಡಿಯು 80 ರೂಪಾಯಿ ಲಾಗುವಡಿನಿಂದ ರಿಪೇರಿ ಮಾಡಬಹುದಾಗಿ ಹೇಳುವದ್ದರಿಂದ ಈ ಮೊಬಲಗು ಮಂಜೂರ್ಮಾಡಿದಲ್ಲಿ ಒಟ್ಟು 98 ರೂಪಾಯಿ ಮಂಜೂರ್ಮಾಡಿದಂತೆ ಆಗುತ್ತೆ.
	ಕುಲಂಬಿ ಬಾವಿಗೆ ಸುತ್ತು ಗೋಡೆ ಕಟ್ಟುವದಕ್ಕೆ.	120	ಬಿಟ್ಟಿದೆ. ಅಮಲ್ದಾರರು, ಆಸ್ಥಳೀಕರು ಈ ಬಾವಿ ವಿಷಯದಲ್ಲಿ ಆತುರರಲ್ಲವಾದ್ದರಿಂದಲೂ ಈ ವರ್ಷ ಈ ಕೆಲಸ ತೆಗದುಕೊಳ್ಳಲು ಆಗುವದಿಲ್ಲ.
	ಚನ್ನಮಾಂಬಾಪುರದ ಬಾವಿ ...	435	ಮಂಜೂರ್ಮಾಡಿದೆ.
	ಚಿನ್ನಿಕಟ್ಟೆ ಬಾವಿ ...	650	ಡಿಟೋ
ಶಿಕಾರಿಪುರ ...	ಚಿಕ್ಕಜಂಬೂರೆ ಬಾವಿ ...	1,110	ಡಿಟೋ
ಹೊನ್ನಾಳಿ ...	ಸೌಳಂಗದ ಮುಸಾಫರ್‌ಖಾನೆ ರಿಪೇರಿ ...	220	ಮಂಜೂರ್ಮಾಡಿರುವ ಹಣದಿಂದ ಕೆಲಸ ಪ್ರಾರಂಭಿಸಬಹುದು.
ತೀರ್ಥಹಳ್ಳಿ ...	ಆಗುಂಬೆ ಡಿಟೋ ...	154	ಮಾಲೂರು ಮುಸಾಫರ್‌ಖಾನೆಗೆ ಕೊಟ್ಟ ಮೊಬಲಗಿನಿಂದ ಮಾಲೂರು, ತೀರ್ಥಹಳ್ಳಿ, ಆಗುಂಬಿ ಮುಸಾಫರ್‌ಖಾನೆಗೆ ಹಂಚಬೇಕೆಂತ ತೀರ್ಮಾನಿಸಲಾಯಿತು.
ಚನ್ನಗಿರಿ ...	ಹೊದಿಗ್ಗೆರೆ ಯೂನಿಯನ್ನಿನಲ್ಲಿ ಹೊಸ ರಸ್ತೆ.	50	ಮಂಜೂರ್ಮಾಡಿದೆ.
	ಪಾಂಡವಮಟ್ಟಿ ಡಿಟೋ ...	240	ಡಿಟೋ
	ತಾವರೆಕೆರೆ ಡಿಟೋ ...	100	ಡಿಟೋ
	ದುರ್ವಿಗೆರೆ ಡಿಟೋ ...	50	ಡಿಟೋ

20 (b). ಈ ಕೆಳಗಿನ ಅಂದಾಜಾಗಳು ಬೋರ್ಡಿನವರ ಒಪ್ಪಿಗೆ ನಿರೀಕ್ಷಣೆಯಿಂದ ಪ್ರೆಸಿಡೆಂಟರವರಿಂದ ಮಾಡಲ್ಪಟ್ಟಿದ್ದವು ಅನುಮೋದಿಸಲ್ಪಟ್ಟವು :—

ತಾಲ್ಲೂಕು	ಹೆಸರು	ಮೊಬಲಗು	ಷರಾ
		ರೂ.	
ಸೊರಬ ...	ಚಂದ್ರಗುತ್ತಿಯಲ್ಲಿ ಆನಂದ ಮಠದ ಹತ್ತರವಿರುವ ಬಾವಿ ರಿಪೇರಿ ...	60	
ಡಿಟೋ ...	ಸೊರಬದ ಮುಸಾಫರ್‌ಖಾನೆ	50	
ಸಾಗರ ...	ತಾಳಗುಪ್ಪ ಡಿಟೋ	50	
ಕುಂಸಿ ...	ಕುಂಸಿ ಡಿಟೋ	49	
ಸೊರಬ ...	ಉಳವಿ-ಕಡಸೂರು ರಸ್ತೆ ರಿಪೇರಿ	120	
	ಸೊರಬ–ಚಂದ್ರಗುತ್ತಿ ಗಾಡಿ ದಾರಿ	180	

21. ಗ್ರಾಮಾಂತರಗಳ ಆರೋಗ್ಯಸ್ಥಿತಿ ಮತ್ತು ಇತರ ಕಾಮಗಾರಿಗೋಸ್ಕರವಾಗಿ ಡಿಸ್ಟ್ರಿಕ್ಟು ಫಂಡ್ ಹಣದಿಂದ 8,000 ರೂಪಾಯಿಗಳನ್ನು ಮಂಜೂರ್ಮಾಡತಕ್ಕ ವಿಷಯವಾಗಿ ಕೆಲವು ಸಂಗತಿಗಳನ್ನು ತಿಳಿಸಬೇಕೆಂತ 1908ನೆ ನವಂಬರ್ 4ನೆ ತಾರೀಖಿನ 4179—ಲೋ. ಬೋ. 82-08-3ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಒದಲಾಗಿ ದುರ್ಭಿಕ್ಷಕಾಲದಿಂದ ಕಂದಾಯವನ್ನು ಕಡಿಮೆ ಮಾಡುವ ಸಂದರ್ಭವಿರುವದರಿಂದ ಪ್ರೆಸಿಡೆಂಟರವರಿಂದ ತೋರಿಸಲ್ಪಟ್ಟ ಹೆಚ್ಚಿಗೆ ಶಿಲ್ಕಿನಿಂದ 6,100 ರೂಪಾಯಿಯನ್ನು ಸ್ಯಾಂಕ್ಷನ್ ಮಾಡುವದಕ್ಕೆ ಗವರ್ನಮೆಂಟಿನವರನ್ನ ಕೇಳಿಕೊಳ್ಳಬೇಕೆಂತಲೂ ತಾಲ್ಲೂಕುಗಳಿಂದ ಕಳುಹಿಸಿರುವ ಅಂದಾಜಾಗಳನ್ನು ಸ್ಯಾಂಕ್ಷನ್ ಬಗ್ಗೆ ಗವರ್ನಮೆಂಟಿಗೆ ಕಳುಹಿಸಬೇಕೆಂತಲೂ ಇದೇ ಮೊಬಲಗಿನಿಂದ ಇನ್ ಕಂಪ್ಲೀಟ್ ಕೆಲಸಗಳಿಗೆ ಮೊಬಲಗು ಕೊಡಬೇಕೆಂತಲೂ ತೀರ್ಮಾನಿಸಲಾಯಿತು.

22. ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪದ ಯೂನಿಯನ್ನಲ್ಲಿರುವ 4 ಗಂಡು ಝಾಡಮಾಲಿಗಳಿಗೆ ಸಂಬಳ ಜಾಸ್ತಿ ಮಾಡತಕ್ಕ ವಿಷಯದಲ್ಲಿ ತಿರಸ್ಕಾರ ಮಾಡಿರುವ ನಂಬರು 4796—ಲೋ. ಬೋ. 140-08-2ನೆ ಮುಕ್ಕಾಂ 21-11-08ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಒದಲಾಗಿ, ಸದ್ಯಕ್ಕೆ ಗ್ರೇನ್ ಅಲೋವೆನ್ಸು ಸದರಿ ಝಾಡಮಾಲಿಗಳಿಗೆ ಕೊಡೋಣದರಿಂದಲೂ ಸ್ಥಳಿಕರು ಝಾಡಮಾಲಿ ಕೆಲಸ ಮಾಡುವದಕ್ಕೆ ತಿರಸ್ಕರಿಸುತ್ತಾರೆಂತಲೂ, ಕೆಲಸ ಮಾಡತಕ್ಕವರನ್ನ ಬೇರೆ ಸ್ಥಳದಿಂದ ಕರೆಸಬೇಕೆಂತಲೂ ತಾಲ್ಲೂಕು ಅಮಲ್ದಾರರು ಹೇಳುವದರಿಂದ ಮುಂದಿನ ವರುಷದ ಬಡ್ಜೆಟ್ಟಿನಲ್ಲಿ ರಿಪೋರ್ಟು ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

23. ಶ್ರೀಮನ್ ಮಹಾರಾಜ್ಞಿಯವರ ಪ್ರಸಿದ್ಧಪತ್ರಿಕೆಯ 50ನೆ ವರುಷ ವರ್ಧಂತಿಯ ದಿನ ಖರ್ಚಿಗೋಸ್ಕರ ಡಿಸ್ಟ್ರಿಕ್ಟು ಫಂಡಿನಿಂದ ಕಂಟ್ರಿಬ್ಯೂಷನ್ ಕೊಡುವ ವಿಷಯದಲ್ಲಿ ಡಿಸ್ಟ್ರಿಕ್ಟು ಬೋರ್ಡಿನ ತೀರ್ಮಾನವನ್ನು ತಿಳಿಸಬೇಕೆಂತ ತಲ್ಪಿದ ನಂಬರು 4919-26—ಲೋ. ಬೋ. 117-08ನೆ ಮುಕ್ಕಾಂ 25—11—08ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಒದಲಾಗಿ ಸದರಿ ಖರ್ಚನ್ನು ಕೊಡುವದಕ್ಕೆ ಬೋರ್ಡಿನವರು ಒಪ್ಪಿಕೊಂಡಿರುವದಾಗಿ ತೀರ್ಮಾನಿಸಲಾಯಿತು.

24. 1908ನೆ ಇಸವಿ ನವಂಬರು ತಾರೀಖು 15 ರಿಂದ ಗೆರಸೊಪ್ಪಾ ಜಲಪಾತಕ್ಕೆ ಹೋಗತಕ್ಕ ನದಿಯನ್ನು ಡಿಸ್ಟ್ರಿಕ್ಟು ಬೋರ್ಡು ಸ್ವಾಧೀನ ಇಟ್ಟುಕೊಳ್ಳುವದಕ್ಕೂ ಮತ್ತು ಅಲ್ಲಿರುವ ರಸ್ತೆ ರಿಪೇರಿ ಮುಂತಾದ ಖರ್ಚುಗಳಿಗೆ ಪ್ರಾವಿನ್ಷಿಯಲ್ ಫಂಡಿನಿಂದ ಹಣ ಒದಗಿಸತಕ್ಕ ವಿಷಯದಲ್ಲಿ ತಲ್ಪಿದ ನಂಬರು 5131-40—ಲೋ. ಬೋ. 343-07-4ನೆ ಮುಕ್ಕಾಂ 30—11—08ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಒದಲ್ಪಟ್ಟು ರಿಕಾರ್ಡು ಮಾಡಲಾಯಿತು.

25. ಪ್ರೆಸಿಡೆಂಟರವರ ಆಫೀಸಿನಲ್ಲಿ 1908ನೆ ಸಾಲಿನ ಹೆಲ್ತ್ ಆಲ್ಮನಕ್ಕಿನ ಒಂದು ಪ್ರತಿಯನ್ನು ರಿಕಾರ್ಡಿನಲ್ಲಿಡುವದಕ್ಕೆ ಕಳುಹಿಸಿರುತ್ತೆಂತ ತಲ್ಪಿದ ಸ್ಯಾನಿಟೇರಿ ಕಮಿಷನರವರ ನಂಬರು 2000 ಮುಕ್ಕಾಂ 18—11—08ನೆ ಡಾಕೆಟ್ ಒದಲಾಗಿ, ರಿಕಾರ್ಡು ಮಾಡಲಾಯಿತು, ಮತ್ತು ಈ ವರುಷವಾಗುತ್ತಾ ಬಂದದ್ದರಿಂದ ಸದರಿ ಪ್ರತಿಗಳು ಅವಶ್ಯಕವಿಲ್ಲವೆಂತ ತೀರ್ಮಾನಿಸಲಾಯಿತು.

ಕೆ. ಚಾಂಡಿ, ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 4ನೆ ಜನವರಿ 1909.

1. ಕಂದಾಯದ ಬಾಕೀದಾರರಾದ ಬಾಳೂರು ಗ್ರಾಮದ ಮಂಕಾಲು ಸರಸ್ವತಮ್ಮನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಬಾಳೂರು ಗ್ರಾಮದಲ್ಲಿ 1909ನೆ ಫೆಬ್ರವರಿ 6ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಬಾಕಿ ತಪಶೀಲನ್ನು 1909ನೆ ಇಸವಿ ಜನವರಿ 14ನೆ ಮುಕ್ಕಾಂ ಮೈಸೂರ್ ಗೆಜೆಟಿನ 2ನೆ ಭಾಗದ 22ನೆ ನಂಬರ್ ಪೇಜಿನಿಂದ ತಿಳಿಯಬೇಕು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಖ್ತೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಅಂದಾಜಾ ಕಿಮ್ಮತ್ತು. ರೂ	ಸರ್ಕಾರಕ್ಕೆ ಸಾಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂ ಗುತ್ತಾ ಮೊಬಲಗು. ರೂ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. ರೂ. ಆ. ಪೈ.
ಮೂಡಿಗೆರೆ	ಬಾಳೂರು	ಬಾಳೂರು	ಮಂಕಾಲು ಸರಸ್ವತಮ್ಮ ಕೋಂ ಗಣೇಶರಾವ್	ಸರ್ವೆ ನಂಬರು 25ರಲ್ಲಿ ಮತ್ತು ಸರ್ವೆ ನಂ. 27–29ರಲ್ಲಿರುವ ಮನೆಗಳ	ಅಂದಾಜಾ ರೂ. 211	25	ಕಾಫಿ …	6	29	6	8	60	…	64 3 6 ಐನ್
						26	ಖುಷ್ಕಿ …	0	14	0	4	1		1 8 0 ನೊ
						27	ಕಾಫಿ …	0	37	1	0	10		65 11 6
						28	ಡಿಟ್ಟೋ …	1	6	1	12	20		ಹರಾಜು ಜೇಟಿನ ವರಿಗಿನ ಬಡ್ಡಿ ಬರಬೇಕು.
						29-2	ಡಿಟ್ಟೋ …	7	9	7	4	75		
						32	ತರಿ …	1	37	4	8	5		
						33	ಡಿಟ್ಟೋ …	0	25	1	8	2		
						34	ಕಾಫಿ …	30	30	31	0	320		
						8	ನಂಬರುಗಳು	49	27	53	12			

ಸಿ. ರಂಗನಾಥರಾವ್ ಸಾಹೆಬ್, ಫಾರ್ ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 23ನೆ ಜನವರಿ 1909.

ಚಿತ್ರದುರ್ಗ ಡಿಸ್ಟ್ರಿಕ್ಟಿನ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿರುವ ದಸ್ತಾವೇಜುಗಳು ಎರಡು ವರ್ಷಗಳಿಗೆ ಮೇಲ್ಪಟ್ಟು ಬೇವಾರಸ್ಸಾಗಿ ನಿಂತಿವೆ. ಈ ಇಸ್ತಿಹಾರ್ ಘಾಯಿಷಾದ ಲಾಗಾಯಿತು ಒಂದು ತಿಂಗಳಿನೊಳಗಾಗಿ ಅವುಗಳನ್ನ ಸಮ್ಮಂಧಪಟ್ಟವರು ಆಯಾ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ವಾಪಸು ಪಡಿಯಬಹುದು. ಹಾಗೆ ತೆಗೆದುಕೊಳ್ಳುವದಕ್ಕೆ ತಪ್ಪಿದರೆ ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ಸದರಿ ದಸ್ತಾವೇಜುಗಳನ್ನು ನಾಶಪಡಿಸುತ್ತೇವೆಂದು ಇದರಿಂದ ತಿಳಿಯಪಡಿಸಿದೆ:—

ಜಂಜರ್ ನಂಬರು.	ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು.	ರಿಜಿಸ್ಟ್ರು ಬುಕ್ಕಿನ ನಂ.	ದಸ್ತಾವೇಜಿನ ನಂ.	ದಸ್ತಾವೇಜನ್ನು ಬರೆದ ತಾರೀಖು.	ರಿಜಿಸ್ಟ್ರಾರ್ಧ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರದುಕೊಟ್ಟವರ ಹೆಸರು ಮತ್ತು ವಿಳಾಸ.	ಬರಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ.
1	ಚಿತ್ರದುರ್ಗ ...	I	493 / 1905—06	4-5-05	26-5-05	ಚಿತ್ರದುರ್ಗ ತಾಲ್ಲೂಕು ಇನಾಮುದ್ರದ ವಾಸಸ್ಥ ಸಂಗಪ್ಪ.	ಚಿತ್ರದುರ್ಗ ತಾಲ್ಲೂಕು ಇನಾಮುದ್ರದ ಕೊಟ್ರಪ್ಪಯಾನೆ ಪಟ್ಟದದೇವರು.	268 ರೂಪಾಯಿನ ಸ್ವಾಧೀನ ಅಡವು ಪತ್ರ.
2	ಹೊಳಲ್ಕೆರೆ ...	I	29 / 1906—07	22-7-06	24-7-06	ಹೊಳಲ್ಕೆರೆ ಜಡಿಯಪ್ಪನ ನಿಂಗಪ್ಪನ ಮಗ ಜಡಿಯಪ್ಪ.	ಹೊಳಲ್ಕೆರೆ ಜೋಯಿಸರ ವೆಂಕಟರಮಣಭಟ್ಟರ ಹೆಂಡತಿ ರಂಗಮ್ಮ.	50 ರೂಪಾಯಿನ ಗೇಣಿ ಕರಾರು.

ಡಿ. ಶ್ರೀನಿವಾಸೈಯ್ಯಂಗಾರ್,
ಘಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1908—09ನೆ ಇಸವಿ ಮಿ|| ಅರ್ಜೀ ನಂಬರ್ 619.

ಬೆಂಗಳೂರು ಗವೀಪುರದ ಗುಟ್ಟಹಳ್ಳೀಲಿದ್ದು ಫವತಿಪಟ್ಟ ತಿಮ್ಮಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತಿಮ್ಮಯ್ಯ ಮೈನರ್, ಗಾರ್ಡಿಯರ್ ನರಸಮ್ಮ, ಮೃತಪಟ್ಟ ಸದರೀ ತಿಮ್ಮಪ್ಪನಿಗೆ ಖಾಸಾ ಮಗನು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ತಿಮ್ಮಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 146—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಿಮ್ಮಯ್ಯ ಮೈನರ್, ಗಾರ್ಡಿಯರ್ ನರಸಮ್ಮನ ಅರ್ಜಿಯನ್ನು ಸನ್ 1909ನೆ ಇಸವಿ ಜನವರಿ 29ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ಜನವರಿ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಂ ಐಯ್ಯರ್,
ಸಬ್ ಜಡ್ಜ್.

ಬೆಂಗಳೂರು ಡಿವೀಜನ್ ಸೆಂಟ್ರಲ್ ರಿಕಾರ್ಡ್ ಆಫೀಸ್.

ರಿಕಾರ್ಡುಗಳನ್ನು ನಾಶ ಪಡಿಸುವಿಕೆ.

ತಾರೀಖು 6ನೆ ಜನವರಿ 1909.

ಮೈಸೂರು ಚೀಫ್ ಕೋರ್ಟು 1905ನೆ ಇಸವಿ ಸೆಪ್ಟಂಬರು 26ನೆ ಮರ್ಸ್ಯುಂ 122ನೆ ನಂಬರು ರೂಲ್ಸ್ ಆಫ್ ಪ್ರ್ಯಾಕ್ಟೀಸ್ ಅನುಸರಿಸಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—

ಈ ಡಿವಿಜನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1907ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ ದಾಖಲಾದ ಈ ಕೆಳಗೆ ವಿವರಿಸಿರುವ ಮೊಖದ್ದಮೆಗಳ ಪೈಕಿ ಫೈಸಲಾದವುಗಳಲ್ಲಿ ಕಕ್ಷಿಗಾರರಿಂದಲೂ ಮತ್ತು ಸಾಕ್ಷಿಗಳಿಂದಲೂ ಸಹಾ ಹಾಜರ್ಮಾಡಲ್ಪಟ್ಟ ವಿಶಿಷ್ಟ ದಸ್ತೈವಜುಗಳು ಮೊದಲೇ ವಾಪಸು ತೆಗದುಕೊಳ್ಳಲ್ಪಡದೇ ಇದ್ದಪಕ್ಷದಲ್ಲಿ ಮೇಲ್ಕಂಡ ರೂಲ್ಸ್ ಆಫ್ ಪ್ರ್ಯಾಕ್ಟೀಸಿನಲ್ಲಿ ಉದಹರಿಸಿರುವ ವಾಯಿದೆ ನಂತರ ನಾಶಪಡಿಸಲ್ಪಡುತ್ತೆ ತಿಳಿಯುವುದು.

ಕೋರ್ಟುಗಳ ಹೆಸರು.	ಇಸವಿ.	ಮೊಕದ್ದಮೆಗಳ ಸ್ವಭಾವ.		
		ಸಿವಿಲ್ ಮೊಕದ್ದಮೆಗಳು.	ಅಮಲ್ಜಾರಿ.	ಮಿಸಲೇನಿಯಸ್.
ಬೆಂಗಳೂರು ಸಬ್‌ಜಡ್ಜಿಯವರ ಕೋರ್ಟು.	1907-08	1ರ ಲಾಗಾಯಿತು 1069ರ ವರಿಗೆ.	1ರ ಲಾಗಾಯಿತು 1186ರ ವರಿಗೆ.	1ರ ಲಾಗಾಯಿತು 1135ರ ವರಿಗೆ.
ಬೆಂಗಳೂರು ಪ್ರಿನ್ಸಿಪಾಲ್ ಮುನ್ಸೀಫ್ ಕೋರ್ಟು.	ಡಿಟೋ	1ರ ಲಾಗಾಯಿತು 1442ರ ವರಿಗೆ.	1ರ ಲಾಗಾಯಿತು 2223ರ ವರಿಗೆ.	1ರ ಲಾಗಾಯಿತು 857ರ ವರಿಗೆ.
ಬೆಂಗಳೂರು ಅಡಿಷನಲ್ ಮುನ್ಸೀಫ್ ಕೋರ್ಟು.	ಡಿಟೋ	1ರ ಲಾಗಾಯಿತು 854ರ ವರಿಗೆ.	1ರ ಲಾಗಾಯಿತು 1078ರ ವರಿಗೆ.	1ರ ಲಾಗಾಯಿತು 651ರ ವರಿಗೆ.
ತುಮಕೂರು ಮುನ್ಸೀಫ್ ಕೋರ್ಟು.	ಡಿಟೋ	1ರ ಲಾಗಾಯಿತು 1260ರ ವರಿಗೆ.	1ರ ಲಾಗಾಯಿತು 1283ರ ವರಿಗೆ.	1ರ ಲಾಗಾಯಿತು 619ರ ವರಿಗೆ.
ಮದ್ದಗಿರಿ ಮುನ್ಸೀಫ್ ಕೋರ್ಟು.	ಡಿಟೋ	1ರ ಲಾಗಾಯಿತು 690ರ ವರಿಗೆ.	1ರ ಲಾಗಾಯಿತು 03ರ ವರಿಗೆ.	1ರ ಲಾಗಾಯಿತು 300ರ ವರಿಗೆ.
ಚಿಕ್ಕಬಳ್ಳಾಪುರದ ಮುನ್ಸೀಫ್ ಕೋರ್ಟು.	ಡಿಟೋ	1ರ ಲಾಗಾಯಿತು 1326ರ ವರಿಗೆ.	1ರ ಲಾಗಾಯಿತು 1346ರ ವರಿಗೆ.	1ರ ಲಾಗಾಯಿತು 774ರ ವರಿಗೆ.
ಕೋಲಾರ ಮುನ್ಸೀಫ್ ಕೋರ್ಟು.	ಡಿಟೋ	1ರ ಲಾಗಾಯಿತು 713ರ ವರಿಗೆ.	1ರ ಲಾಗಾಯಿತು 811ರ ವರಿಗೆ.	1ರ ಲಾಗಾಯಿತು 428ರ ವರಿಗೆ.
ಕೋಲಾರದ ಗಣಿ ಮುನ್ಸೀಫ್ ಕೋರ್ಟು.	ಡಿಟೋ	1ರ ಲಾಗಾಯಿತು 1504ರ ವರಿಗೆ.	1ರ ಲಾಗಾಯಿತು 2200ರ ವರಿಗೆ.	1ರ ಲಾಗಾಯಿತು 578ರ ವರಿಗೆ.

ಟಿ. ಇ. ಜಯರಾಮ ಐಯ್ಯರ್,
ಆಫಿಸರ್ ಇನ್ ಛಾರ್ಜ್ ಆಫ್ ಸೆಂಟ್ರಲ್ ರಿಕಾರ್ಡ್ಸ್, ಬೆಂಗಳೂರು ಡಿವಿಜನ್.

ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ ಗಂಗಡಿಕಾರ ಲಂಕೆಗೌಡನ ಮಗ ನಡಕೆರಿಗೌಡ ಉರುಫ್ ಕೋಣನಾರಿ ಅರ್ಜಿ ವಿಷಯದಲ್ಲಿ—

ಸನ್ 1908—09ನೆ ಇಸವಿ ದಿವಾಳಿ ಕೇಸ್ ನಂಬರು 391

ಹುಕುಂ.

ಅರ್ಜಿದಾರ ನಡಕೆರಿ ಗೌಡನು ಮೇಲ್ಕಂಡ ನಂಬರಿನಲ್ಲಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂಬ್ ಅರ್ಜೀದಾರರಾದ ನಡಕೆರಿಗೌಡನ ಪರವಾಗಿ ಮಿ॥ ವೆಂಕಟರಾಮೈಯ್ಯನವರನ್ನು ಮತ್ತು ಸದರೀಯವರ ಲೇಣೇದಾರರಾದ 1ನೆ ಚಾಬೀನೆ ಶಿದ್ದಯ್ಯ, 2ನೆ ರಾಜೆಗೌಡ ಉರುಫ್ ಚಿಕ್ಕಹೈದ ಇವರು ಗೈರಹಾಜರು ಸಬಬು ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅರ್ಜಿದಾರ ನಡಕೆರಿಗೌಡ ಉರುಫ್ ಕೋಣನಾರಿಯು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ ಮಾಡಲಾಗಿರುತ್ತೆ ಎಂದು ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸರ್ 1909ನೆ ಇಸವಿ ಜನವರಿ 8ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	[illegible]	[illegible]	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.			
1	ಶ್ರೀರಂಗಪಟ್ಟಣದಲ್ಲಿರುವ ಚಾಬೀನೆ ಶಿದ್ಧಯ್ಯನವರ ಮೊಮ್ಮಗನ್ನಯ್ಯ.	85– 4–11	...	ಈ ಕೋರ್ಟು ಸಿವಿಲ್ 395-05-6ನೆ ನಂಬರು ಡಿಕ್ರಿ ಬಾಬತು.	
2	ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ ರಾಚೆಗೌಡ ಉರಫ್ ಚಿಕ್ಕಹೈದ.	94–13– 9	...	ಸಿವಿಲ್ 1376–04–5ನೆ ನಂಬರು ಡಿಕ್ರಿ ಬಾಬತು.	

ಎಸ್. ಕೃಷ್ಣರಾವ್,
ಮುನ್ಸೀಫ್.

ಮೈಸೂರು ಅಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ.

ನೋಟಿಸ್.

ತಾರೀಖು 21ನೆ ಜನವರಿ 1909.

ಸರ್ 1908—09ನೆ ಇಸವಿ ಸಿವಿಲ್ ನಂಬರು 376.

ಸರ್ 1908—09ನೆ ಇಸವಿ ಮಿಸ್ ನಂಬರು 605.

ವಾದೀರು. ಪ್ರತಿವಾದೀರು.

ಎಡತೊರೆ ತಾಲ್ಲೂಕು ಕಸಬಾ ಹೋಬಳಿ ಮಾರ್ಚಹಳ್ಳಿ ಗ್ರಾಮದ ವಾಸಸ್ಥರಾದ ಹತ್ತು ಜನ ರೈತರು ಇವರಿಗೋಸ್ಕರ—

(1) ಹೆಗ್ಗಡಿಗಳ ಜಾತಿ ಆನಂಧೂರು ಮರಿಗೌಡನ ಬೊಚ್ಚೇಗೌಡ, (2) ರಾಚಾವಾರದ ದಾಸರಾಜು ಮಗ ಗುರ್ರಾಜು, (3) ಹೆಗ್ಗಡಿ ಜಾತಿ ಹೊಂಬೇಗೌಡನ ಮಗ ಶಿದ್ದೇಗೌಡ, (4) ಪರಿವಾರದ ದ್ಯಾವನಾಯಿಕನ ಮಗ ಶಿದ್ದನಾಯಿಕ ಉರಫ್ ಚಿಕ್ಕಹೈದಾ, (5) ಹೆಗ್ಗಡಿಜಾತಿ ಜೊಕ್ಕೇಗೌಡನ ಮಗ ಮಾಲೇಗೌಡ.

ಡಿಟೋ ಸ್ಥಳದವರು 1ನೆ ಶ್ಯಾನುಭೋಗ ನರಸಯ್ಯನವರ ಮಗ ತಿಪ್ಪಯ್ಯ, 2ನೆ ಇವನ ತಮ್ಮ ಕೃಷ್ಣಪ್ಪ, 3ನೆ—1ನೆ ಪ್ರತಿವಾದಿ ಭಾವಮೈದ ಶಾಮೈಯ್ಯನ ಮಗ ಅನಂತರಾಮೈಯ್ಯ, 4ನೆ ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಬೆಂಕೀಪುರದಲ್ಲಿರುವ ಶಿವಾಚಾರದ ಜಾತಿ ದೋಳಪ್ಪನ ಮಗ ರಾಮೈಯ್ಯ.

ಇದರಿಂದ ಸಮಸ್ತ ಜನಗಳಿಗೂ ಸಿವಿಲ್ ಪ್ರೊಸೀಡ್ಯೂರ್ ಕೋಡು 30ನೆ ಸೆಕ್ಷನ್ ಪ್ರಕಾರ ಬಹಿರಂಗಪಡಿಸುವದೇನೆಂದರೆ—

ಮೇಲ್ಕಂಡ ನಂಬರು ಮೊಕದ್ದಮೆಯಲ್ಲಿ ವಾದೀರು ಎಡತೊರೆ ತಾಲ್ಲೂಕು ಕಸಬಾ ಹೋಬಳಿ ಮಾರ್ಚಹಳ್ಳಿ ಗ್ರಾಮಸ್ಥರಿಂದ ಹತ್ತು ಜನ ರೈತರಿಗೋಸ್ಕರ ತಾವು ದಾವಾ ಮಾಡಿರುತ್ತಾರೆ. ಸದರೀ ಮಾರ್ಚಹಳ್ಳಿ ಗ್ರಾಮಸ್ಥರಾದ ಹತ್ತು ಜನರಿಗೆ ಶೇರಿರುವ ಅಂದರೆ ಬಸವೇಶ್ವರ ದೇವರಿಗಾಗಿ ಏರ್ಪಡಿಸಲ್ಪಟ್ಟು ಇರುವ ಈ ಕೆಳಗೆ ಕಂಡ ಷೆಡ್ಯೂಲು ಮನೆಯನ್ನು 1—2—3ನೆ ಪ್ರತಿವಾದೀರು ತಮಿಗೆ 4ನೆ ಪ್ರತಿವಾದಿಯಿಂದ ಖರೀದಿ ಆಗಿರುತ್ತೆ. ತಾವು ವಾದೀರಿಗೆ ಅವರು ರಿಪೇರಿ ಮಾಡುವದಕ್ಕೆ ಬಂದವೇಳೆಯಲ್ಲಿ ಮನೆ ಬಿಡುವದಿಲ್ಲವೆಂದು ಖಾಲೀ ತಕರಾರು ನಡಿಸಿದ ನಿಮಿತ್ಯ ಸದರೀ ಮನೆಯನ್ನು ಬರಮಾಡಿಕೊಳ್ಳಲು ಈ ದಾವಾ ತರಲ್ಪಟ್ಟಿರುತ್ತೆ. ಸದರೀ ದಾವಾಕ್ಕೆ ಪಾರ್ಟಿಯಾಗಿ ಸೇರಬೇಕೆಂದು ಅಪೇಕ್ಷಿಸುವಂಥಾವರು ಈ ಸಿವಿಲ್ ಕೇಸು ಹಿಯರಿಂಗು ಇರತಕ್ಕ 1909ನೆ ಇಸವಿ ಫೆಬ್ರುವರಿ ಎಂಟನೆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಮನವೇ ಮಾಡಿಕೊಳ್ಳತಕ್ಕದ್ದು.

ಷೆಡ್ಯೂಲು.

ಎಡತೊರೆ ತಾಲ್ಲೂಕು ಕಸಬಾ ಹೋಬಳಿ ಮಾರ್ಚಹಳ್ಳಿ ಗ್ರಾಮದಲ್ಲಿರುವ ಪೂರ್ವಕ್ಕೆ—ದಾರೀ, ಪಶ್ಚಿಮಕ್ಕೆ—ಗಲ್ಲಿ ಮತ್ತು ನಂಜಯ್ಯನ ಮನೆ, ದಕ್ಷಿಣಕ್ಕೆ—ರಾಜ ಬೀದಿ, ಉತ್ತರಕ್ಕೆ—ಹತ್ತು ಜನಗಳು ನೀರು ಸೇದಿಕೊಳ್ಳುವ ಭಾವಿವುಳ್ಳ ಕೊಳದ ಕಟ್ಟಡ, ಈ ಮಧ್ಯೆ ಹುಲ್ಲು ಮನೆ ಅಂಕಣ 5, ಇದಕ್ಕೆ ಸೇರಿದ ಹಿಂಭಾಗದ ಹಿತ್ತಲೂ ಸಹ ಉಳ್ಳಮನೆ.

ಕೆ. ಲಕ್ಷ್ಮೀನಾರಣೈಯ್ಯ,
ಅಡಿಷನಲ್ ಮುನ್ಸೀಫ್.

ಮೈಸೂರು ಗವರ್ನಮೆಂಟ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ರವರ ಆಫೀಸ್, ಬೆಂಗಳೂರು.

ಸರ್ಕ್ಯುಲರ್ ನಂ. 369—Cs. 24, ತಾರೀಖು 11–12ನೆ ಜನವರಿ 1909ನೆ ಇಸವಿ.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರಾದ ಕೋ ಆಪರೇಟಿವ್ ಸೊಸೈಟಿಗಳು ಪೋಸ್ಟ್ ಆಫೀಸ ಸೇವಿಂಗ್ಸ ಬ್ಯಾಂಕುಗಳಲ್ಲಿ ಪಬ್ಲಿಕ್ ಅಕೌಂಟನ್ನು ಇಡಬಹುದೆಂದು ಇಂಡಿಯಾ ಗವರ್ನಮೆಂಟನವರು

ಅಪ್ಪಣೆ ಮಾಡಿರುತ್ತಾರೆ. ಸದರಿ ಗವರ್ನಮೆಂಟನವರಿಂದ ಬದಲಾಯಿಸಲ್ಪಟ್ಟ ಪೋಸ್ಟ್ ಆಫಿಸ ಸೇವಿಂಗ್ಸ್ ಬ್ಯಾಂಕಿನ 42 (b)ನೆ ರೂಲು ಈ ಕೆಳಗೆ ವಿವರಿಸುವಂತೆ ಇರುತ್ತೆ:—

"ಇಂಡಿಯಾ ಕೋ ಆಪರೇಟವ್ ಕ್ರೆಡಿಟ್ ಸೊಸೈಟಿಗಳ ಆಕ್ಟ್ ಮತ್ತು ನೇಟವ್ ಸಂಸ್ಥಾನಗಳಲ್ಲಿ ಜಾರಿಯಲ್ಲಿರುವ ಅದೇ ಸಂಬಂಧವಾದ ಕಾನೂನು—ಇವುಗಳನ್ನನುಸರಿಸಿ ರಿಜಿಸ್ಟರು ಮಾಡಲ್ಪಡುವ ಸೊಸೈಟಿಗಳ ಸೆಕ್ರಿಟರಿಗಳು, ಖಜಾಂಚಿಯವರು, ಅಥವಾ ಮ್ಯಾನೇಜರುಗಳು ಹಣವನ್ನು ಡಿಪಾಜಿಟ್ ಇಡಬಹುದು."

2. ಸೊಸೈಟಿಗಳಿಗೆ ಪಬ್ಲಿಕ್ ಅಕೌಂಟನ್ನು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಡುವದರಿಂದ ಈ ಕೆಳಗೆ ನಮೂದಿಸಿರುವ ರಿಯಾಯತಿಗಳು ದೊರೆಯುವವು.

ಯಾವ ಸೊಸೈಟಿಯೇ ಆಗಲಿ ಯಾವಾಗಲೂ 10,000 ರೂಪಾಯಿಗೆ ಮೀರಿ ಡಿಪಾಜಿಟ್ಟು ಇಡಕೂಡದು, ಮತ್ತು 10,000 ರೂಪಾಯಿಗೆ ಮೀರಿದ ಮೊಬಲಗಿಗೆ ಬಡ್ಡಿ ದೊರೆಯುವದಿಲ್ಲ. ಡಿಪಾಜಿಟ್ಟನ್ನು ವಾಪಸು ತಗದುಕೊಳ್ಳಬೇಕಾದರೆ ಚಾಲ್ತಿ ಡಿಪಾಜಿಟ್ಟಿನಿಂದ ಮಾಹೆಯಾನಾ 1,000 ರೂಪಾಯಿಗೆ ಮೀರಿ ವಾಪಸು ಅಪೇಕ್ಷಿಸಕೂಡದು. ಆದರೆ ಇದಕ್ಕಿಂತಲೂ ಜಾಸ್ತಿ ಮೊಬಲಗು ವಾಪಸು ತೆಗೆಯಬೇಕಾದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ಪೋಸ್ಟು ಮಾಸ್ಟರಿಗೆ ಲಿಖಿತ ಮೂಲಕ ತಿಳಿಯಪಡಿಸಿ ಆ ರೀತಿ ತೆಗದುಕೊಳ್ಳಬಹುದು. ಎರಡು ಮೂರು ಸಲ ಕಿಸ್ತುವಾರಾಗಿ ಹಣವನ್ನಪೇಕ್ಷಿಸುವ ಪಕ್ಷದಲ್ಲಿ ಎಷ್ಟು ಕಿಸ್ತು ಎಂಬುವದನ್ನೂ, ಯಾವ ತಾರೀಖುಗಳಲ್ಲಿ ಬೇಕಾಗುತ್ತೆಂಬುವದನ್ನೂ ನಮೂದಿಸಬೇಕು.

3. ಇಂಥ "ಪಬ್ಲಿಕ್ ಅಕೌಂಟನ್ನು" ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಲು ಅಪೇಕ್ಷೆಪಡುವ ಸೊಸೈಟಿಗಳು ಈ ಆಫೀಸು ಮೂಲಕ ಪೋಸ್ಟು ಮಾಸ್ಟರ್ ಜನರಲ್ ರವರಿಗೆ ಅವಕಾಗಿರುವ ನಮೂನೆಯಲ್ಲಿ ದರಖಾಸ್ತು ಬರೆದುಕೊಳ್ಳಬಹುದು.

4. ಈ ಪಬ್ಲಿಕ ಅಕೌಂಟಿನ ವಿಷಯವಾಗಿ ಇನ್ನೂ ವಿಶೇಷ ತಿಳಿಯಬೇಕಾದರೆ ಪೋಸ್ಟಲ್ ಗೈಡು (ಏಪ್ರೆಲ್ 1908ನೆ ಇಸವಿ) 194-195ನೆ ಪುಟಗಳನ್ನು ನೋಡಬೇಕು.

ಎಂ. ಶ್ಯಾಮರಾವ್,
ಕೋ ಆಪರೇಟವ್ ಸೊಸೈಟಿಗಳ ರಿಜಿಸ್ಟ್ರಾರ್.

ಕೊಡಗು ಚೀಫ್ ಕಮಿಷನರವರಿಂದ ಹೊರಡೋಣಾದ

ಇಸ್ತಿಹಾರ್‌ನಾಮೆ.

ದರ್ಬಜಾಗ್ಗಾ, ಬೆಂಗಳೂರು, ತಾರೀಖು 7ನೆ ಜನವರಿ 1909ನೆ ಇಸವಿ.

ನಂ. 7. ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1909ನೆ ಇಸವಿ ಏಪ್ರೆಲ್ ತಾರೀಖು 1ರ ಲಾಗಾಯಿತು 1910ನೆ ಇಸವಿ ಮಾರ್ಚಿ ತಾರೀಖು 31ರ ವರಿವಿಗೆ ಕೊಡಗು ಸೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗೆಯುವದಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ಮ್ಯಾರಿಗೆ ಹರಾಜು ಮಾಡಲ್ಪಡುವದು.

(i) 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಮಡಿಕೇರಿಯಲ್ಲಿ ಮಡಿಕೇರಿ ತಾಲ್ಲೂಕು ಸುಬೇದಾರರ ಮುಂದೆ.

(ii) 1909ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ವೀರರಾಜಪ್ಯಾಟೆಯಲ್ಲಿ ಎಡಿನಾಲ್ಕುನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1909ನೆ ಇಸವಿ ಮಾರ್ಚಿ 7ನೆ ತಾರೀಖಿನಲ್ಲಿ ಗೋಣಿಕೊಪ್ಪಲಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತದೆ. ಅವರು ಯಾವಕಾರಣವೂ ನಮೂದಿಸದೆ ಹಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

3. ತಾನು ಮೊದಲೇ ದರಖಾಸ್ತು ಮಾಡಿದ ಮೊಬಲಗನ್ನು ಕೊಟ್ಟಿದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಫಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. ತೊಲ ಒಂದರ 4 ಆಣೆ ಮೇರೆ 80 ತೊಲದ ಸೇರಿಗೆ 20 ರೂಪಾಯಿ ಮ್ಯಾರಿಗೆ ಕಮಿಷನರವರಿಂದ ಲೈಸೆನ್ಸದಾರನಿಗೆ ಅಫೀಂ ಕೊಡಲ್ಪಡುತ್ತೆ.

5. ತೊಲ ಒಂದರ 9 ಆಣೆ ಮೇರೆ 80 ತೊಲದ ಸೇರಿಗೆ ಒಂದೇ ಬೆಲೆಯಾಗಿ 45 ರೂಪಾಯಿ ಮ್ಯಾರಿಗೆ ಅಫೀಮನ್ನು ಲೈಸೆನ್ಸದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು. ಅವು ಯಾವವಂದರೆ:—

ಮಡಿಕೇರಿಯಲ್ಲಿ ಒಂದು.
ವೀರರಾಜಪ್ಯಾಟೆಯಲ್ಲಿ ಒಂದು.
ಗೋಣಿಕೊಪ್ಪಲಲ್ಲಿ ಒಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

ಟಿ. ಬಿ. ಕೋಪ್‌ಲ್ಯಾಂಡ್,
ಚೀಫ್ ಕಮಿಷನರವರ ಸೆಕ್ರಿಟೆರಿಯವರು.

ಮೈಸೂರು ಡಿಸ್ಟ್ರಿಕ್ಟ್

ನೋಟಿಸ.

ತಾರೀಖು 18ನೆ ಜನವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

I. ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಮುಡಕತೊರೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಮುಡಕತೊರೆಯಲ್ಲಿ 1909ನೆ ಇಸವಿ ಜನವರಿ 30ನೆ ತಾರೀಖು ಲಾಗಾಯಿತು 1909ನೆ ಇಸವಿ ಫೆಬ್ರುವರಿ 5ನೆ ತಾರೀಖು ವರಿವಿಗೆ ದನಗಳ ಪ್ರದರ್ಶನವು ನಡೆಸಲ್ಪಡುತ್ತದೆ.

II. ಉತ್ತಮವಾದ ರಾಸುಗಳನ್ನು ತರತಕ್ಕವರಿಗೆ ಈ ಕೆಳಗೆ ನಮೂದಾಗುವ ಬಹುಮಾನಗಳು ದೊರೆಯುತ್ತವೆ:—

ಎ. ಕ್ಲಾಸ ಎತ್ತುಗಳು ...	1ನೆ ಬಹುಮಾನ ...	20	ರೂಪಾಯಿಗಳು.	ಎ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 55.
	2ನೆ ಡಿಟೋ ...	15	ಡಿಟೋ	
	3ನೆ ಡಿಟೋ ...	10	ಡಿಟೋ	
	4ನೆ ಡಿಟೋ ...	10	ಡಿಟೋ	
ಬಿ. ಕ್ಲಾಸ ಜೋಡದ ಹೋರಿಗಳು.	1ನೆ ಡಿಟೋ ...	15	ಡಿಟೋ	ಬಿ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 25.
	2ನೆ ಡಿಟೋ ...	10	ಡಿಟೋ	
ಸಿ. ಕ್ಲಾಸ ಕರುಗಳು ...	ಪ್ರತಿಯೊಂದಕ್ಕೂ 5 ರೂಪಾಯಿನ ಮೇರೆ 4 ಬಹುಮಾನಗಳು.			ಸಿ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 20.
		ಜುಮ್ಲಾ ...		100

III. ಬಹುಮಾನಗಳ ತೀರ್ಮಾನವನ್ನು ಪರೀಕ್ಷಾ ಕರ್ತರಾದ ಪಂಚಾಯಿತರು ವುಳ್ಳ ಒಂದು ಕಮಿಟಿಯವರು ಮಾಡುತ್ತಾರೆ. ಕಮಿಟಿಯವರ ತೀರ್ಮಾನವೇ ಆಖೈರು ತೀರ್ಮಾನವಾಗಿರುತ್ತಲ್ಲದೆ ಸದರೀ ತೀರ್ಮಾನಕ್ಕೆ ಅವರು ಕಾರಣಗಳನ್ನು ಕೊಡತಕ್ಕ ಅವಶ್ಯಕವಿರುವದಿಲ್ಲಾ.

IV. ಪ್ರದರ್ಶನ ನಡೆಯುವ ಸ್ಥಳದಲ್ಲಿ ದನಗಳಿಗೆ ಮೇವನ್ನು ನಗದು ಖರೀದಿಗೆ ಸರಬರಾಯಿ ಮಾಡಲು ಏರ್ಪಾಡು ಮಾಡಲ್ಪಡುತ್ತದೆ. ಆದರೆ ದನಗಳ ಮಾಲೀಕರು ಈ ವಿಚಾರದಲ್ಲಿ ಅವರ ಸ್ವಂತ ಏರ್ಪಾಡು ಮಾಡಿಕೊಂಡರೆ ತುಂಬಾ ಅನುಕೂಲವಾಗಿರುತ್ತೆ.

V. ರಾಸುಗಳನ್ನು ಪ್ರದರ್ಶನಕ್ಕೆ ಕಳುಹಿಸಲು ಇಷ್ಟ ಪಡುವವರ ಟಿ. ನರಸೀಪುರ ತಾಲ್ಲೂಕು ಅಮಲ್ದಾರ್ರವರಿಗೆ ರಾಸುಗಳ ತಪಶೀಲು ವಗೈರೆ ನಮೂದಿಸಿ ಪ್ರದರ್ಶನ ಷುರುವಾಗುವದಕ್ಕೆ ಕಡೇಪಕ್ಷ ಎರಡು ದಿವಸಗಳ ಮುಂಚಿತವಾಗಿಯೇ ಅರ್ಜಿ ಮೂಲಕ ತಿಳಿಯಪಡಿಸಿಕೊಳ್ಳಬಹುದು.

VI. ಪ್ರದರ್ಶನಕ್ಕಾಗಿ ಚುನಾಯಿಸಿರುವ ಜಾಗವು ನೀರು ನೆರಳಿನಿಂದ ಅನುಕೂಲವಾಗಿರುವದಲ್ಲದೆ ಈ ಜಾತ್ರೆಗೆ ಮೈಸೂರು ಸೀಮೆಯ ಅನೇಕ ಸ್ಥಳಗಳಿಂದಲೂ ಬ್ರಿಟಿಷ್ ಸೀಮೆಯಿಂದಲೂ ಹೇರಳವಾಗಿ ಜನಗಳು ಬಂದು ಸೇರುವದರಿಂದ ದನಗಳ ವ್ಯಾಪಾರಕ್ಕೆ ವಿಶೇಷ ಅನುಕೂಲತೆಯುಳ್ಳದ್ದಾಗಿದೆ.

ಎಸ್. ಪಿ. ರಾಜಗೋಪಾಲಾಚಾರ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 5.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 4, ಸನ್ 1909.

II ನೆ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು..

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್, ತಾರೀಖು 10ನೆ ಜನವರಿ 1909.

ಮೊಕ್ಕಾಂ ಕಾನಕಾನಹಳ್ಳಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಇದರಡಿ ಕಂಡ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳು ರಿಜರ್ವ್ ಫಾರೆಸ್ಟು ಮತ್ತು ರೆವಿನ್ಯೂ ಪ್ಲಾಂಟೇಷನ್‌ಗಳು ಸಹಾ 1909ನೆ ಇಸವಿ ಜನವರಿ ಗುರ್ರೆ ತಾರೀಖು ಲಾಗಾಯಿತು ಮೇ ಮಾಹೆ ಆಖೈರು ವರಿವಿಗೆ ಬಂದುಮಾಡಿ ಇರುತ್ತೆ. ಮೈಸೂರು ಸೀಮೆಯ ಫಾರೆಸ್ಟು ಕನ್ಸರ್ವೇಟರ ಸಾಹೇಬರವರಿಂದಲಾಗಲೀ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದಲಾಗಲೀ ಲಿಖಿತಮೂಲಕವಾದ ಅಪ್ಪಣೆ ಇಲ್ಲದೆ ಸ್ಟೇಟ್ ಫಾರೆಸ್ಟುಗಳಲ್ಲಾಗಲೀ ಪ್ಲಾಂಟೇಷನ್‌ಗಳಲ್ಲಾಗಲೀ ಅಥವಾ ರಿಜರ್ವ್ ಫಾರೆಸ್ಟು ಮತ್ತು ರೆವಿನ್ಯೂ ಪ್ಲಾಂಟೇಷನ್‌ಗಳಲ್ಲಾಗಲೀ ಷಿಕಾರಿ ಮುಂತಾದ ಬೇಟೆಗಳಿಗಾಗಿ ಪ್ರವೇಶ ಮಾಡಕೂಡದು. ಅಕ್ರಮಪ್ರವೇಶ ಮಾಡಿದವರಮೇಲೆ 1900ನೆ ಇಸವಿ XIನೆ ಫಾರೆಸ್ಟು ರೆಗ್ಯುಲೇಷನ್ 24ನೆ ಸೆಕ್ಷನ್ ರೀತ್ಯಾ ಪ್ರಾಸಿಕ್ಯೂಷನ್ ನಡಿಸಲ್ಪಡುತ್ತದೆ.

ನಂಬರು	ಸ್ಟೇಟ್ ಫಾರೆಸ್ಟು, ಪ್ಲಾಂಟೇಷನ್, ರಿಜರ್ವ್ ಫಾರೆಸ್ಟು, ರೆವಿನ್ಯೂ ಪ್ಲಾಂಟೇಷನ್‌ಗಳ ಹೆಸರು.	ತಾಲ್ಲೂಕು ಹೆಸರು.
1	ಬಸವನಬೆಟ್ಟ ಸ್ಟೇಟ್ ಫಾರೆಸ್ಟು	ಮಳವಳ್ಳಿ.
2	ಬಿಳೀಕಲ್ ಡಿಟೋ	ಕಾನಕಾನಹಳ್ಳಿ.
3	ಬಾಣಂತಮಾರಿ ಡಿಟೋ	ಡಿಟೋ
4	ಚಿಲಂದಾಡಿ ಡಿಟೋ	ಡಿಟೋ
5	ಮುಗ್ಗೂರು ಡಿಟೋ	ಡಿಟೋ
6	ಕಬ್ಬಾಳದುರ್ಗ ಡಿಟೋ	ಡಿಟೋ
7	ರಾಗಿಹಳ್ಳಿ ಡಿಟೋ	ಆನೆಕಲ್.
8	ದಿಬಿ ಗಿರಿ ಡಿಟೋ	ದೇವನಹಳ್ಳಿ.
9	ಸೋಲದೇವನಹಳ್ಳಿ ಡಿಟೋ	ನೆಲಮಂಗಲ.
10	ದೇವರಬೆಟ್ಟ ಡಿಟೋ	ದೊಡ್ಡಬಳ್ಳಾಪುರ.
11	ಮೇಲನಾಯ್ಕನಹಳ್ಳಿ ಡಿಟೋ	ಡಿಟೋ
12	ಮಾಕಳಿದುರ್ಗ ಡಿಟೋ	ಡಿಟೋ
13	ಉಜನಿ ಡಿಟೋ	ಡಿಟೋ
14	ಹುಲ್ಕಡಿ ಡಿಟೋ	ಡಿಟೋ

ನಂಬರು	ಸ್ಟೇಟ್ ಫಾರೆಸ್ಟು, ಪ್ಲಾಂಟೇಷನ್, ರಿಜರ್ವ್ ಫಾರೆಸ್ಟು, ರೆವಿನ್ಯೂ ಪ್ಲಾಂಟೇಷನ್ ಗಳ ಹೆಸರು.	ತಾಲ್ಲೂಕುಗಳ ಹೆಸರು.
15	ತೆಂಗಿನಕಲ್ ಸ್ಟೇಟ್ ಫಾರೆಸ್ಟ್	ಚನ್ನಪಟ್ಣ.
16	ಮಾಕಳಿ ಡಿಟೋ	ಡಿಟೋ
17	ದೊಡ್ಡಮಣ್ಣುಗುಡ್ಡೆ ಡಿಟೋ	ಡಿಟೋ
18	ಚಿಕ್ಕಮಣ್ಣುಗುಡ್ಡೆ ಡಿಟೋ	ಡಿಟೋ
19	ಹಂದಿಗೊಂದಿ ಡಿಟೋ	ಡಿಟೋ
20	ಹುಲಿತಾರು ಡಿಟೋ	ಡಿಟೋ
21	ಕುಂಬಳಗೋಡು ಡಿಟೋ	ಡಿಟೋ
22	ಸಾವನದುರ್ಗ ಡಿಟೋ	ಮಾಗಡಿ.
23	ಅದರಂಗಿ ಡಿಟೋ	ಡಿಟೋ
24	ಕೂರ್ನಗೆರೆ ಡಿಟೋ	ಚನ್ನಪಟ್ಣ
25	ಕಾಡಗುಡಿ ಸ್ಟೇಟ್ ಪ್ಲಾಂಟೇಷನ್	ಹೊಸಕೋಟೆ.
26	ತಿಂಡ್ಲು ಡಿಟೋ	ಡಿಟೋ
27	ತತ್ತನೂರು ಡಿಟೋ	ಡಿಟೋ
28	ಹೊಸಬಡಿಗೇನಹಳ್ಳಿ ಡಿಟೋ	ಡಿಟೋ
29	ಹಳೇಬಡಿಗೇನಹಳ್ಳಿ ಡಿಟೋ	ಡಿಟೋ
30	ನಲ್ಲಾಲ್ "A" "B" and "C" ಸ್ಟೇಟ್ ಪ್ಲಾಂಟೇಷನ್ ...	ಡಿಟೋ
31	ಅಪ್ಪಸಂದ್ರ ಡಿಟೋ	ಡಿಟೋ
32	ಪಿಣ್ಯಾಮುತ್ತು ಜಾಲಹಳ್ಳಿ ಡಿಟೋ	ಬೆಂಗಳೂರು.
33	ಬೆಟ್ಟಹಳ್ಳಿ ಡಿಟೋ	ಡಿಟೋ
34	ಕೊಂಡಗಹಳ್ಳಿ "A" "B" ಡಿಟೋ	ಡಿಟೋ
35	ಜಾರಕಬಂಡೆ "A" "B" ಡಿಟೋ	ಡಿಟೋ
36	ಹೆಬ್ಬಾಳ್ ಬೆಟ್ಸ್ ಡಿಟೋ	ಡಿಟೋ
37	ಕೆಂಚೇನಹಳ್ಳಿ ಡಿಟೋ	ಡಿಟೋ
38	ಮಲ್ಲತ್ತಹಳ್ಳಿ ಡಿಟೋ	ಡಿಟೋ
39	ನಾಗರಭಾವಿ ಡಿಟೋ	ಡಿಟೋ
40	ಗಂಡ್ರಗೊಳಿಪುರ ಡಿಟೋ	ದೊಡ್ಡಬಳ್ಳಾಪುರ.
41	ಜನ್ನಸಂದ್ರ ಡಿಟೋ	ಡಿಟೋ
42	ಕೆಂಚನಪುರ ಡಿಟೋ	ನೆಲಮಂಗಲ.
43	ಕೃಷ್ಣರಾಜಪುರ ಡಿಟೋ	ಡಿಟೋ
44	ಜಕ್ಕಸಂದ್ರ ಡಿಟೋ	ಡಿಟೋ
45	ಮಾವಿನಕೋಮನಹಳ್ಳಿ ಡಿಟೋ	ಡಿಟೋ
46	ಮಾಕೋಹಳ್ಳಿ ಡಿಟೋ	ಡಿಟೋ
47	ಕಲ್ಲುಪಾಳ್ಯ ಡಿಟೋ	ಡಿಟೋ
48	ಗೋವಿಂದಪುರ ಡಿಟೋ	ಡಿಟೋ
49	ಬಂಟನಾಳು ರಿಜರ್ವ್ ಫಾರೆಸ್ಟು ...	ಕಾನಕಾನಹಳ್ಳಿ.
50	ದುರ್ಗದಕಲ್ ಡಿಟೋ	ಡಿಟೋ
51	ಗಂಗಾಧರನಗುಡ್ಡೆ ಡಿಟೋ	ಡಿಟೋ
52	ಅನಮಾನಹಳ್ಳಿ ಡಿಟೋ	ಡಿಟೋ
53	ಅಚ್ಚಲ್‌ಬೆಟ್ಟ ಡಿಟೋ	ಡಿಟೋ
54	ರಾಮದೇವರಬೆಟ್ಟ ಡಿಟೋ	ಡಿಟೋ
55	ಮಾಜನತ್ತಕಾಡು ಡಿಟೋ	ಡಿಟೋ
56	ಬೆಟ್ಟಹಳ್ಳಿವಾಡೆ ಗರಳಾಪುರದ ಸಂದಲ್ ರಿಜರ್ವ್ ಫಾರೆಸ್ಟು ...	ಡಿಟೋ
57	ಚೂಚಿ ಡಿಟೋ	ಡಿಟೋ
58	ಮುನೇಶ್ವರನಬೆಟ್ಟ ಡಿಟೋ	ಡಿಟೋ
59	ತೈಲೂರು ಡಿಟೋ	ಡಿಟೋ
60	ನಿಜಗಲ್ ಡಿಟೋ	ನೆಲಮಂಗಲ.
61	ಕೋರಮಂಗಲ ಡಿಟೋ	ದೇವನಹಳ್ಳಿ.
62	ಬೆಟ್ಟಕೊಂಡಿ ಡಿಟೋ	ಡಿಟೋ
63	ಮಹದೇಶ್ವರ ಡಿಟೋ	ಆನೇಕಲ್.
64	ಮುದಿಗೆರೆ ರೆವಿನ್ಯೂ ಪ್ಲಾಂಟೇಷನ್	ಚನ್ನಪಟ್ಣ.
65	ಕೋಳೂರು ಡಿಟೋ	ದೊಡ್ಡಬಳ್ಳಾಪುರ.
66	ಪಾಲಾಜೋಗಿಹಳ್ಳಿ ಡಿಟೋ	ಡಿಟೋ
67	ಮುದ್ದೇನಹಳ್ಳಿ ಡಿಟೋ	ಡಿಟೋ
68	ಬಳ್ಳಗೆರೆ ಡಿಟೋ	ನೆಲಮಂಗಲ.

ನಂಬರು	ಸ್ಟೇಟ್ ಫಾರಸ್ಟು, ಪ್ಲಾಂಟೇಷನ್, ರಿಜರ್ವ್ ಫಾರೆಸ್ಟು, ರೆವಿನ್ಯೂ ಪ್ಲಾಂಟೇಷನ್‌ಗಳ ಹೆಸರು.	ತಾಲ್ಲೂಕುಗಳ ಹೆಸರು.
69	ಬೊಮ್ಮನಹಳ್ಳಿ ರೆವಿನ್ಯೂ ಪ್ಲಾಂಟೇಷನ್.	ನೆಲವಂಗಲ.
70	ಬೈರಶೆಟ್ಟಹಳ್ಳಿ (ಗೊಲ್ಲಹಳ್ಳಿ) ಡಿಟೋ	ಡಿಟೋ
71	ಗಂಟಗಾನಹಳ್ಳಿ ರೆವಿನ್ಯೂ ಪ್ಲಾಂಟೇಷನ್	ಬೆಂಗಳೂರು.
72	ಜಕ್ಕೂರು, ಅಳಾಳಸಂದ್ರ ಡಿಟೋ	ಡಿಟೋ
73	ಸೂಲಿಕೆರೆ ರೆವಿನ್ಯೂ ಪ್ಲಾಂಟೇಷನ್	ನೆಲವಂಗಲ.
74	ಅರಳೇಮಾಕನಹಳ್ಳಿ ಡಿಟೋ	ಹೊಸಕೋಟೆ.
75	ಗೊಲ್ಲಹಳ್ಳಿ ಡಿಟೋ	ಡಿಟೋ
76	ಯಾಗಯ್ಯನಕೆರೆ ಡಿಟೋ	ಚೆನ್ನಪಟ್ಣ.
77	ಕಲ್ಲಗೋಪನಹಳ್ಳಿ ಡಿಟೋ	ಡಿಟೋ
78	ರಾಯಸಂದ್ರ ಡಿಟೋ	ದೇವನಹಳ್ಳಿ.
79	ಬೂವನಹಳ್ಳಿ ಡಿಟೋ	ಡಿಟೋ
80	ಯರ್ತಿಗಾನಹಳ್ಳಿ ಡಿಟೋ	ಡಿಟೋ
81	ಅಕ್ಕೂಪೇಟೆ ಡಿಟೋ	ಡಿಟೋ
82	ನವಾಬ್‌ಬಾಗ್ ಡಿಟೋ	ಡಿಟೋ
83	ಸಾವಕನಹಳ್ಳಿ ಡಿಟೋ	ಡಿಟೋ
84	ಮಂಚಿಲಿ ಡಿಟೋ	ಡಿಟೋ
85	ಸೋಣ್ಣಪ್ಪನಹಳ್ಳಿ ಡಿಟೋ	ಡಿಟೋ
86	ಕುಂಬಾರನಹಳ್ಳಿ ಡಿಟೋ	ಆನೆಕಲ್.
87	ಕನ್ನಮಾನಹಳ್ಳಿ ಡಿಟೋ	ಡಿಟೋ
88	ಬ್ರಹ್ಮಸಂದ್ರ ಡಿಟೋ	ಬೆಂಗಳೂರು.

ಟಿ. ಅಬ್ದುಲ್‌ಕರೀಂ,
ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟು, ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್‌ವ ಪ್ರಸಿದ್ಧಪತ್ರಿಕೆ.

1. ಲೋನ್ ಬಾಕೀದಾರರಾದ ಜೋಡಿದಾರ್ ಮಿ|| ಪಾರ್ಟ್ರಿಡ್ಜ್‌ರವರಿಂದ ಬರಬೇಕಾದ ಲೋನ್ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಲೋನ್ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 18,499—10—9 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮಿಷನರವರಿಂದ ಸೈನ್-ಮೊಹರ್ ಮಾಡಲ್ಪಟ್ಟ ಒಂದು ಹರಾಜು

ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಾಲೀಯಾನಾ ಕೊಡಬೇಕಾದ ಜೋಡೀ ಯಾ ಕಾಯಂ ಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
					ರೂ.			ಎ. ಗು.	ರೂ. ಆ.		ರೂ. ಆ. ಪೈ.	ರೂ. ಆ. ಪೈ.
ಬೆಂಗಳೂರು	ಯಲಹಂಕ	ಗೊಲ್ಲಹಳ್ಳಿ	ಮಿ॥ ಪಾರ್ಟ್ರಿಡ್ಜ್	(1) ಭಾವಿಗಳು 9, (2) ಮನೆಗಳು 11, (3) ಮಾವಿನ ಮರಗಳು 400 (ಚಿಕ್ಕದು ಮತ್ತು ದೊಡ್ಡದು).	(1) 3,200 (2) 264 (3) 3,000 ಜುಮ್ಲಾ 6,464	ಪೂರಾ ಗ್ರಾಮ	ಪರಂಪೋಕು	145 25	2 0	3,544 Value of the Lands. 6 ಮತ್ತು 11ನೆ ಕಾಲಮಿನ ಜುಮ್ಲಾ ರೂ. 10,008	ಗುತ್ತಿಗೆ ... 12 0 0 ಸೆಸ್ಸ್ ... 0 12 0	18,499 10 9
							ಖುಷ್ಕಿ ...	64 29	51 4			
							ತರಿ ...	12 14	26 0			
							ಬಾಗಾಯತು.	2 30	8 0			
							ಜುಮ್ಲಾ ...	225 18	87 4			

ನೋಟಿಸ್.

ತಾರೀಖು 30ನೆ ಜನವರಿ 1909, ಬೆಂಗಳೂರು.

ಚೆನ್ನಪಟ್ಟಣದಲ್ಲಿರುವ 2ನೆ ಕ್ಲಾಸ್ ಮುಸಾಫರ್ ಬಂಗ್ಲೆಗೆ ರಿಪೇರಿ ಮಾಡಬೇಕಾಗಿರುವದ್ದರಿಂದ ಅದರಲ್ಲಿ 1909ನೆ ಇಸವಿ ಫೆಬ್ರುವರಿ 1ನೆ ತಾರೀಖು ಲಾಗಾಯಿತು ಮಾರ್ಚಿ ಅಖೈರ ವರಿಗೆ ಯಾರೊಬ್ಬ ಪ್ರಯಾಣೀಕರು ಇಳಿಯುವದಕ್ಕೆ ಅವಕಾಶವಿರುವದಿಲ್ಲಾ.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.

1908ನೆ ಇಸವಿ ನವಂಬರ್ 14ನೆ ತಾರೀಖಿನಲ್ಲಿ ನಡೆದ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ಪ್ರೊಸಿಡಿಂಗ್ಸ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಹಾಜರು.

ಬಿ. ಜೆ. ಕೋಮಾರಸಾಮಿನಾಯಿಕ್, ಎಸ್ಕ್ವಾಯರ್, ಪ್ರೆಸಿಡೆಂಟರು.
ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರು ಮತ್ತು ವೈಸ್ ಪ್ರೆಸಿಡೆಂಟರು ಮಿ॥ ಎಲ್. ಮಾಧವರಾವ್.
ಬೆಂಗಳೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು, ಮಿ॥ ಸಿ. ರಾಮರಾಯರು.
ದೊಡ್ಡ ಬಳ್ಳಾಪುರ ಸಬ್ ಡಿವಿಜನ್ ಅಸಿಸ್ಟೆಂಟು ಕಮಿಷನರು, ಮಿ॥ ಎಂ. ಎ. ನಾರಣಯ್ಯಂಗಾರ್ರವರು.

ಗೈರ ಹಾಜರು.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು, ಮಿ॥ ಟಿ. ಚೊಕ್ಕಣ್ಣನವರು.
ಬೆಂಗಳೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರು, ಮಿ॥ ಕೆ. ಕೃಷ್ಣಯ್ಯಂಗಾರ್ರವರು.
ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು ಮಿ॥ ಜಿ. ಎಸ್. ಡೇವಿಡ್‌ರವರು.
ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರು ಮಿ॥ ಕೆ. ಎಲ್. ವೀರಭದ್ರಪ್ಪನವರು.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ಮಿ॥ ಚಿಕ್ಕ ಗುರುವಾರಡ್ಡಿ.
,, ಜೋಡಿದಾರ ಶೀನಪ್ಪನವರು.
,, ಕೋಲೂರು ರಾಮಣ್ಣ.
,, ನರಹರಯ್ಯ.
,, ಶಾಮಯ್ಯ.
,, ರಾಮಚಂದ್ರರಾವ್.
,, ಕರೆಭೀಮಾ ನರಸಿಂಹ ಶೆಟ್ಟಿ.
,, ರಾಮಸಂಜೀವಯ್ಯ.
,, ಧಾಳಪ್ಪ.

ಮಿ॥ ಗುಂಡೂರಾವ್.
,, ಸಿ. ಜೆ. ಹಾರ್ಡಿ ಸಾಹೇಬರವರು.
,, ಕೆ. ಸುಬ್ಬಣ್ಣನವರು.
,, ಎಸ್. ದಾಸಪ್ಪನವರು.
,, ಮಸ್ತಾನ್ ಸಾಬರು.
,, ಪುಟ್ಟಪ್ಪ.
,, ಎ. ರಾಮಣ್ಣ.
,, ಚನ್ನಲಿಂಗಪ್ಪ.

ಗೈರ್ಹಾಜರು.

ಯಾರೂ ಇಲ್ಲ

1. ಡಿಸ್ಟ್ರಿಕ್ಟು ಫಂಡ್ ಬೋರ್ಡಿಗೆ ಸಂಬಂಧಪಟ್ಟ ಫೈನಾನ್ಸು ಕಮಿಟಿ ಏರ್ಪಡಿಸುವ ವಿಚಾರದಲ್ಲಿ.

ಬೋರ್ಡಿನವರು ಏಕಮತ್ಯದಿಂದ ಡಿಸ್ಟ್ರಿಕ್ಟು ಟ್ರೆಜರಿ ಆಫಿಸರನ್ನು ಮತ್ತು ಮಿ॥ ದಾಸಪ್ಪನವರನ್ನು, ಮಿ॥ ಕಾಚರಕನಹಳ್ಳಿ ಸುಬ್ಬಣ್ಣನವರನ್ನು ಸಹ ಫೈನಾನ್ಸ್ ಕಮಿಟಿ ಮೆಂಬರಾಗಿ ಚುನಾಯಿಸಿರುತ್ತಾರೆ.

2. ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟೆರಿಯವರು ಸ್ಯಾನಿಟೆರಿ ಕಮಿಷನರವರ ಮುಖಾಂತರ ದೇವಿ ಹಾಕಲು ಬಲಾತ್ಕರಿಸುವುದು ಇಷ್ಟವೆ ಎಂಬ ವಿಚಾರದಲ್ಲಿ ರಿಪೋರ್ಟು ಮಾಡಬೇಕೆಂತಲೂ ಹಾಗೆ ಇಷ್ಟವಾಗಿ ಇರುವ ಪಕ್ಷ ಯಾವಯಾವ ಸ್ಥಳದಲ್ಲಿ ಮತ್ತು ಎಷ್ಟು ದಿವಸಗಳ ವರಿವಿಗೆ ಬಲಾತ್ಕರಿಸಬಹುದು ತಿಳಿಸಬೇಕಲ್ಲದೆ ಡಿಸ್ಟ್ರಿಕ್ಟು ಮತ್ತು ಮುನಿಸಿಪಲ್ ಬೋರ್ಡುಗಳ ರೆಜಲ್ಯೂಷನ್‌ಗಳು ಕಳುಹಿಸಬೇಕೆಂತ ಬರೆಸಿದ 27-1-08ನೆ ಮರ್ಕುಂ 7346-55—ಮೆಡಿ. 67-07-5ನೆ ನಂಬರು ಡಾಕೆಟ್ ಓದಲಾಯಿತು.

ಈ ಡಿಸ್ಟ್ರಿಕ್ಟು ತಾಲ್ಲೂಕು ಆಮಳಿ ಎರಡು ಹೋಬಳಿಗಳಲ್ಲಿ ಅಂದರೆ ಕಸಬಾ ಹೋಬಳಿ ಮತ್ತು ಅದರ ಸಮೀಪದ ಹೋಬಳಿಯಲ್ಲಿ ಹಂಗಾಮಿಯಾಗಿ ಒಂದು ವರುಷದವರಿವಿಗೆ ದೇವಿ ಹಾಕುವುದು ಬಲಾತ್ಕರಿಸಬಹುದೆಂತ ತೀರ್ಮಾನಮಾಡಲಾಯಿತು.

3. ಆನೆಕಲ್ ತಾಲ್ಲೂಕು ಚಂದಾಪುರಸಂತೆ ವಿಚಾರದಲ್ಲಿ ದಾಮಾಷಾಯಿ ಹುಟ್ಟುವಳಿ ಮತ್ತು ಖರ್ಚಿನ ತಿದ್ದುಪಡಿ ಪ್ರಪೋಜಲ್ ಕಳುಹಿಸಬೇಕೆಂತ ತಲಪಿದ 18-4-08ನೆ ಮರ್ಕುಂ 10367—ಲೋ. ಬೋ. 336-07-2ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸ್ ಓದಲಾಯಿತು.

ಸಂತೆ ಹಾಲಿ ಈಗ ನಡಿಯುತ್ತಿರುವ ಹಿಡುವಳಿ ಜಮೀನ್ ಅನುಕೂಲಿಸಿದರೆ ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂತಲೂ ಅಥವಾ ಈ ಜಮೀನಿಗೆ ಸಮೀಪದಲ್ಲಿರುವ ಗೋಮಾಳ ಜಮೀನಲ್ಲಿ ನಡಿಸಬಹುದೆಂತಲೂ ತೀರ್ಮಾನ ಮಾಡಲಾಯಿತು.

4. ಆಸ್ಪತ್ರೆ ಅಸಿಸ್ಟೆಂಟರುಗಳಿಗೂ ಮತ್ತು ಸೂಲಗಿತ್ತಿಯರಿಗೂ ವಾಸಕ್ಕೆ ಕ್ವಾರ್ಟರು (ಮನೆ) ಗಳು ಕಟ್ಟಿಸಲು ಡಿಸ್ಟ್ರಿಕ್ಟು ಫಂಡ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ಕಂಟ್ರಿಬ್ಯೂಷನ್ ಕೊಡತಕ್ಕ ವಿಚಾರದಲ್ಲಿ ಡಿಟ್ಟೋ ಬೋರ್ಡುಗಳ ಅಭಿಪ್ರಾಯ ತಿಳಿಸಬೇಕೆಂತ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟರಿ ಸಾಹೇಬರವರಿಂದ ತಲಪಿದ 6-8-08ನೆ ಮರ್ಕುಂ 1327-34—ಮೆಡಿ. 18-07ನೆ ನಂಬರು ಲೆಟರು ಓದಲಾಯಿತು.

ಡಿಸ್ಟ್ರಿಕ್ಟು ಬೋರ್ಡಿನವರು ಇದಕ್ಕಾಗಿ $\frac{1}{3}$ ಮೂರರಲ್ಲಿ ಒಂದು ಭಾಗ ಕೊಡಬಹುದೆಂತ ತೀರ್ಮಾನ ಮಾಡಲಾಯಿತು.

5. ಏತರ್ಮರಲ್ಲಿ ಅನುಕೂಲವಾಗಿ ಕಟ್ಟಡ ಕಟ್ಟುವವರಿಗೂ ವೈಟ್ ಫೀಲ್ಡ್‌ನಲ್ಲಿಯೇ ಡಿಸ್ಪೆನ್ಸರಿ ಇರಬೇಕೆಂತ ತಲಪಿದ 24-8-08ನೆ ಮರ್ಕುಂ 1847-50—ಲೋ. ಬೋ. (165-06)—16ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸ್ ಓದಲಾಯಿತು.

ರಿಕಾರ್ಡು ಮಾಡಲಾಯಿತು.

6. ಬೆಂಗಳೂರು ತಾಲ್ಲೂಕು ಆಂಜೆಪಾಳ್ಯಕೆ ಕುಡಿಯುವ ನೀರಿನ ನಲ್ಲಿಯನ್ನು ವಿಸ್ತರಿಸುವುದಕ್ಕೆ ತಗಲುವ ಖರ್ಚು ಬೋರ್ಡಿನವರು ವಹಿಸಲು ಒಪ್ಪುತ್ತಾರೆಯೆ ಎಂಬ ವಿಚಾರದಲ್ಲಿ ಬೋರ್ಡ್ ತೀರ್ಮಾನ ಕಳುಹಿಸಬೇಕೆಂತ 3-9-08ನೆ ಮರ್ಕುಂ 2220—ಮ್ಯು. 21-08-7ನೆ ನಂಬರು ಡಾಕೆಟ್ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟರಿ ಸಾಹೇಬರವರಿಂದ ತಲಪಿದ್ದು ಓದಲಾಯಿತು.

ಬೋರ್ಡಿನವರು ಏಕಮತ್ಯವಾಗಿ ಇದಕ್ಕೆ ತಗಲುವ ಖರ್ಚು ಡಿಸ್ಟ್ರಿಕ್ಟು ಫಂಡಿನಿಂದ ವಹಿಸಬಹುದೆಂತ ತೀರ್ಮಾನ ಮಾಡಲಾಯಿತು.

7. ಆಸ್ಪತ್ರೆ ಅಸಿಸ್ಟೆಂಟರುಗಳು ಅವರಿಗೆ ಅನುಕೂಲವಾದ ಕ್ವಾರ್ಟರುಗಳನ್ನು ಕಟ್ಟಿಸಿ ಕೊಡಿಸುವವರೆಗೂ ಅವರು ಆಸ್ಪತ್ರೆಗಳಿಗೆ ಸೇರಿದ ರೋಗಿಗಳು ಇರತಕ್ಕ ಕೊಠಡಿ (Wards) ಯಲ್ಲಿ ಇರಬಹುದೆಂತ ತಲಪಿದ 11-9-08ನೆ ಮರ್ಕುಂ 2487-500—ಮೆಡಿ. 18-07-3ನೆ ನಂಬರು ಗೌರ್ನಮೆಂಟು ಆರ್ಡರು ಓದಲಾಯಿತು.

ರಿಕಾರ್ಡು ಮಾಡಲಾಯಿತು.

8. ಹಿಂದಿನ ಡಿಸ್ಟ್ರಿಕ್ಟು ಬೋರ್ಡು ಮೆಂಬರು ಮಿ॥ ಕೃಷ್ಣಮೂರ್ತಿರಾಯರ ಟ್ರಾವಲಿಂಗ್ ಅಲೋಯನ್ಸ್ ವಿಚಾರದಲ್ಲಿ ತಲಪಿದ 16-9-08ನೆ ಮರ್ಕಂ 2902—ಲೋ. ಬೋ. (60-08)—2ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ಈ ಕೃಷ್ಣಮೂರ್ತಿರಾಯರು ಖಾಯಂ ಆಗಿ ಬೆಂಗಳೂರಲ್ಲಿಯೇ ವಾಸವಾಗಿರುವದ್ದರಿಂದ ಮಾಗಡಿಗೆ ತಮ್ಮ ಸ್ವಂತ ಕೆಲಸಕ್ಕೆ ಆಗಾಗ್ಯೆ ಹೋಗಿ ಮೀಟಿಂಗಿಗೆ ಹಾಜರಾಗಲು ತಗಲುವ ದಾರಿ ಖರ್ಚು ಕೇಳಲಾಗದೆಂತ ತೀರ್ಮಾನ ಮಾಡಲಾಯಿತು.

9. ಈ ಡಿಸ್ಟ್ರಿಕ್ಟು ಉಪಯೋಗಕ್ಕಾಗಿ ಇನ್ನು 2 ಡಜನ್ ಅಬಿಸೀನಿಯನ್ ಟ್ಯೂಬ್‌ವೆಲ್ಸ್ ಖರೀದಿಗೆ ತಗೆದುಕೊಳ್ಳುವ ವಿಚಾರದಲ್ಲಿ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟೆರಿ ಸಾಹೇಬರವರಿಂದ ತಲಪಿದ 13-10-08ನೆ ಮರ್ಕಂ 3513—ಲೋ. ಬೋ. 413-06-8ನೆ ನಂಬರು ಲೆಟರು ಓದಲಾಯಿತು.

ಹಾಲಿ ಈಗ ಕ್ಷಾಮಕಾಲವಾಗಿರುವುದರಿಂದ ಈ ಟ್ಯೂಬು ವೆಲ್ಸುಗಳನ್ನು ಉಪಯೋಗಿಸುವ ಸಂಭವ ಹೆಚ್ಚಾಗಿ ಕಾಣಬರುವುದಿಲ್ಲ. ಆದರೂ ಇವುಗಳನ್ನು ಖರೀದಿಗೆ ತೆಗೆದುಕೊಳ್ಳುವುದಕ್ಕೆ ಮುಂದಿನ ಸಾಲು ಬಜೆಟ್ಟಿನಲ್ಲಿ ಪ್ರಾವಿಜನ್ ಮಾಡಬೇಕೆಂತ ತೀರ್ಮಾನ ಮಾಡಲಾಯಿತು.

10. ಸೂಲಗಿತ್ತಿಯರಿಗೆ ಟ್ರಾವಲಿಂಗ್ ಅಲೋಯನ್ಸ್ ಇಷ್ಟು ಕೊಡಬೇಕೆಂತ ಗೌರ್ನಮೆಂಟಿನಲ್ಲಿ ಆರ್ಡರಾಗಿ ತಲಪಿದ 14-10-08ನೆ ಮರ್ಕಂ 3518-29—ಮೆಡಿ. 297-05ನೆ ನಂಬರು ಪ್ರೊಸೀಡಿಂಗ್ಸ್ ಓದಲಾಯಿತು.

ರಿಕಾರ್ಡು ಮಾಡಲಾಯಿತು.

11. ಬೆಂಗಳೂರು ಡಿವಿಜನ್ ಎಗ್ಜಿಕ್ಯುಟಿವ್ ಇಂಜನೀಯರಿಂದ ಬಿಡದಿ ಸಮೀಪದಲ್ಲಿ ಇರುವ ಕಾಲಗೋಪಹಳ್ಳಿಯಿಂದ ಕಾರ್ಕಾರ್ಹಳ್ಳಿ ತಾಲ್ಲೂಕು ಮುದವಾಡಿಗೆ ಹೋಗುವ ಬಂಡಿರ್ಹಾದಿ ಇಂಪ್ರೂವ್ ಮಾಡತಕ್ಕ ವಿಚಾರದಲ್ಲಿ ತಲಪಿದ 1-9-08ನೆ ಮರ್ಕಂ 3667-1155ನೆ ನಂಬರು ಡಾಕೆಟ್ ಓದಲಾಯಿತು.

ಬೋರ್ಡಿನವರು ಅನುಕೂಲ ಪಡಿಸಬೇಕಾಗಿರುವ ಇನ್ನೂ ಇತರ ಮುಖ್ಯವಾದ ಕಾಂಗಾರಿಗಳು ಇರುವ ಪ್ರಯುಕ್ತ ಈ ಕಾಂಗಾರಿಯನ್ನು ಸ್ಥದ್ಯಕ್ಕೆ ನಿಲ್ಲಿಸಬಹುದೆಂತ ತೀರ್ಮಾನ ಮಾಡಲಾಯಿತು.

12. ಸೀನಿಯರ್ ಸರ್ಜನ್ ಸಾಹೇಬರವರಿಂದ ವೈಟ್ ಫೀಲ್ಡಿನಲ್ಲಿ ಆಸ್ಪತ್ರೆ ಇಟ್ಟಿರುವ ಕಟ್ಟಡಕ್ಕೆ ಬಾಡಿಗೆ 3-0-0 ನಿಂದ 5-0-0ಗೆ ಜಾಸ್ತಿ ಮಾಡಿಸಿಕೊಡಬೇಕೆಂತ ತಲಪಿದ 18-9-08ನೆ ಮರ್ಕಂ 1536ನೆ ನಂಬರು ಡಾಕೆಟ್ ನೋಡಲಾಯಿತು.

ವರ್ತೂರಲ್ಲಿ ಹೊಸದಾಗಿ ಒಂದು ಕಟ್ಟಡ ಕಟ್ಟಿ ಅಲ್ಲಿ ಆಸ್ಪತ್ರೆ ಇಡುವವರಿಗೂ ಹಾಲಿ ಇಟ್ಟಿರುವ ವೈಟ್ ಫೀಲ್ಡಿನ ಕಟ್ಟಡಕ್ಕೆ 3-0-0 ನಿಂದ 5-0-0 ಬಾಡಿಗೆ ಕೊಡಬಹುದೆಂತ ತೀರ್ಮಾನ ಮಾಡಲಾಯಿತು.

13. ಕ್ಲೋಸ್ ಪ್ಯಾಟೇಲಿ ಇರುವ ಮುಸಾಫರ್‌ಖಾನೆ ಕಾಂಪೌಂಡ್ ಗೋಡೆ ರಿಪೇರಿ ಮಾಡತಕ್ಕ ವಿಚಾರದಲ್ಲಿ ಮಂಜೂರಾತಿ ಬಗ್ಯೆ ಕಳುಹಿಸಿದ ಅಂದಾಜ ತಲಪಿದ 27-8-08ನೆ ಮರ್ಕಂ 124ನೆ ನಂಬರು ಡೆಪ್ಯುಟಿ ಅಮಲ್ದಾರ್ರವರ ರಿಪೋರ್ಟು ಓದಲಾಯಿತು.

ಮಂಜೂರ್ಮಾಡಬಹುದೆಂತ ತೀರ್ಮಾನ ಮಾಡಲಾಯಿತು.

14. ವೈಟ್ ಫೀಲ್ಡಿನಲ್ಲಿ ಇರುವ ಸೆಟ್ಲರ್ಸ್ ಉಪಯೋಗಕ್ಕೆ ಅಲ್ಲಿ ಒಂದು ದೊಡ್ಡಿ ಮನೆ ಕಟ್ಟಿಸಿಕೊಡಬೇಕೆಂತ ಯುರೇಷಿಯನ್ ಮತ್ತು ಆಂಗ್ಲೊ ಇಂಡಿಯನ್ ಅಸೋಸಿಯೇಷನ್ ಆನರೆರಿ ಸೆಕ್ರಿಟೆರಿಯವರಿಂದ ತಲಪಿದ 16-6-08ನೆ ಮರ್ಕಂ 22ನೆ ನಂಬರು ಲೆಟರ್ ಓದಲಾಯಿತು.

ವೈಟ್ ಫೀಲ್ಡಿನಲ್ಲಿ ಸೆಟ್ಲರ್ಸ್ ಉಪಯೋಗಕ್ಕೆ ಒಂದು ದೊಡ್ಡಿ ಮನೆ ಕಟ್ಟಲು ಸ್ಯಾಂಕ್ಷನ್ ಮಾಡಲಾಯಿತು.

15. ಕಾರ್ಕಾರ್ಹಳ್ಳಿ ಟ್ರಾವಲರ್ಸ್ ಬಂಗ್ಲೆ ಮತ್ತು ಮುಸಾಫರ್‌ಖಾನೆ ಜವಾನರುಗಳಿಗೆ ಒಂದೊಂದು ರೂಪಾಯಿ ಬಡ್ತಿ ಕೊಡಿಸಲು ಶಿಫಾರಸು ಮಾಡಿದ ಕ್ಲೋಸ್‌ಪೇಟೆ ಡಿವಿಜನ್ ಆಫಿಸರವರ 4-8-08ನೆ ಮರ್ಕಂ 161ನೆ ನಂಬರು ಯಾದಿ ಓದಲಾಯಿತು.

ಬಂಗ್ಲೋ ಮತ್ತು ಮುಸಾಫರ್‌ಖಾನೆ ಜವಾನರುಗಳಿಗೆ 5 ರೂಪಾಯಿ ಸಂಬಳದಮೇಲೆ ನೌಕರರೂರು ಮಾಡಿದ್ದಾಗ್ಗಿಂತ ಈಚಿಗೆ ಪದಾರ್ಥಗಳ ಖರೀದಿ ಬಹಳ ಜಾಸ್ತಿಯಾಗಿರುವುದರಿಂದ ಎಲ್ಲಾ 3ನೆ ಕ್ಲಾಸ್ ಬಂಗ್ಲೋ ಮತ್ತು ಮುಸಾಫರ್‌ಖಾನೆ ಜವಾನರುಗಳಿಗೆ ಒಂದೇಸಮವಾಗಿ ಇರುವಹಾಗೆ ಹಾಲಿ ಇರುವ 5 ರೂಪಾಯಿ ತಲಬಿನಿಂದ 6 ರೂಪಾಯಿಗೆ ಬಡ್ತಿ ಮಾಡಲು ಶಿಫಾರ್ಸು ಮಾಡಬೇಕೆಂತ ತೀರ್ಮಾನ ಮಾಡಲಾಯಿತು.

16. ಅರ್ಧ ಖರೀದಿಗೆ ಬೀಜದ ಹೋರಿಯನ್ನು ಪಾಪಣ್ಣನಿಗೆ ಕೊಡಿಸಬೇಕೆಂತ ಶಿಫಾರ್ಸು ಮಾಡಿ ಬೆಂಗಳೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಬರೆದ 14—9—08ನೆ ಮರ್ಕಂ 194ನೆ ನಂಬರು ಯಾದಿ ಓದಲಾಯಿತು.

ಈತನಿಗೆ ಅರ್ಧ ಖರೀದಿಗೆ ಒಂದು ಬೀಜದ ಹೋರಿ ಕೊಡಿಸಬೇಕೆಂತ ಗವರ್ನಮೆಂಟಿಗೆ ಶಿಫಾರಸು ಮಾಡಬೇಕೆಂತ ತೀರ್ಮಾನ ಮಾಡಲಾಯಿತು.

17. ಹೊಡಿ, ಗುರುವಾರಡ್ಡಿಗೆ ಒಂದು ಬೀಜದ ಹೋರಿ ಅರ್ಧ ಖರೀದಿಗೆ ಕೊಡಿಸಲು ಶಿಫಾರಸು ಮಾಡಿ ಬೆಂಗಳೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಬರೆದ 14-9-08ನೆ ಮರ್ಕಂ 199ನೆ ನಂಬರು ಯಾದಿ ಓದಲಾಯಿತು.

ಸಬ್‌ಜಕ್ಟ್ ನಂಬರು 16ರಲ್ಲಿ 16ರಲ್ಲಿ ತೀರ್ಮಾನವಾಗಿರುವುದನ್ನೆ ಇದಕ್ಕೂ ಅನ್ವಯಿಸಿಕೊಳ್ಳಬೇಕೆಂತ ತೀರ್ಮಾನವಾಯಿತು.

18. ಬೋರ್ಡಿನವರ ಮಂಜೂರಾತಿಬಗ್ಯೆ ಡಿಸ್ಟ್ರಿಕ್ಟ್ ಫಂಡ್ ಬಜೆಟ್ ಕಾಮಗಾರಿಗಳ ಅಂದಾಜಾಗಳು ಓದಲಾಯಿತು.

ಮಂಜೂರ್ಮಾಡಲಾಯಿತು.

19. ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ಹೋಗುವ ರೋಡು ರಿಪೇರಿ ವಿಚಾರದಲ್ಲಿ ತಲಪಿದ 20-2-08ನೆ ಮುರ್ಕುಂ 8317-9—ಲೋ. ಬೋ. 228-06-6ನೆ ನಂಬರು ಗವರ್ನ್ಮೆಂಟ ಪ್ರೊಸೀಡಿಂಗ್ಸ್ ಓದಲಾಯಿತು.

ಈರೋಡು ರಿಪೇರಿಯನ್ನು ಮುಜರಾಯಿ ಫಂಡಿನಿಂದ ಮುಜರಾಯಿ ಡಿಪಾರ್ಟಮೆಂಟನವರು ಮಾಡಿಕೊಳ್ಳತಕ್ಕದ್ದೆಂದು ತೀರ್ಮಾನ ಮಾಡಲಾಯಿತು.

20. ಪಶುವೈದ್ಯ ಸಂಬಂಧವಾದ ಆಸ್ಪತ್ರೆಗಳ ಸ್ಥಾಪನೆ ಛಾರ್ಜು 1908-09ನೆ ಸಾಲಿನದು ಎಷ್ಟೆಷ್ಟು ಭಾಗ ಡಿಸ್ಟ್ರಿಕ್ಟು ಫಂಡಿನಿಂದಲೂ ಮ್ಯುನಿಸಿಪಲ್ ಫಂಡಿನಿಂದಲೂ ವಹಿಸಬೇಕೆಂಬುವ ವಿಚಾರದಲ್ಲಿ ಆಯಾಯ ಬೋರ್ಡಿನಲ್ಲಿ ಯೋಚಿಸಬೇಕೆಂತಲೂ ಮತ್ತು ಹಾಲಿ ಸಾಲಿಗೆ ಮಂಜೂರಾಗಿರುವ ಬಜೆಟ್ಟು ಯಾವ ಐಟಂನಲ್ಲಿ ಇದನ್ನು ವಹಿಸಬೇಕೆಂಬುವದನ್ನು ತೋರಿಸಬೇಕೆಂತ ಜನರಲ್ ಮತ್ತು ರವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರೆಟರಿ ಸಾ|| ರವರಿಂದ ತಲಪಿದ 25-7-08ನೆ ಮುರ್ಕುಂ 888-95—ಲೋ. ಬೋ 455-07-3ನೆ ನಂಬರು ಡಾಕೆಟ ಓದಲಾಯಿತು.

ಡಿಸ್ಟ್ರಿಕ್ಟು ಫಂಡಿನಿಂದ ಮೂರರಲ್ಲಿ ಒಂದುಭಾಗ ವಹಿಸಬಹುದೆಂತಲೂ ಈ ಮೊಬಲಗು ಹಾಲಿ ನಡಿಯುವ ವರುಷದ ಬಜೆಟ್ಟನಲ್ಲಿ ಸೆಂಟ ಮಾರ್ತಾಸ್ ಆಸ್ಪತ್ರೆಗೆ ಕಂಟ್ರಿಬ್ಯೂಷನ್ ಕೊಡಲು ಮಂಜೂರಾಗಿರುವ ಮೊಬಲಗಿನಿಂದ ಖರ್ಚು ಬೀಳಬಹುದೆಂತಲೂ ತೀರ್ಮಾನ ಮಾಡಲಾಯಿತು.

21. ಪಂಪಿಂಗ್ ಸ್ಟೇಷನ್ ಉಪಯೋಗಕ್ಕಾಗಿ ಚಿಕ್ಕಬಾಣಾವಾರದಲ್ಲಿ ಒಂದು ದೊಡ್ಡಿಮನೆ ಸ್ಥಾಪಿಸಬೇಕೆಂತ ವಾಟರ ಸಪ್ಲೈ ಮತ್ತು ಸ್ಟೋರ್ ಡಿವಿಜನ್ ಎಗ್ಜಿಕ್ಯುಟೀವ ಇಂಜನಿಯರು ಬರೆಸಿದ 9—10-5-08ನೆ ಮುರ್ಕುಂ 1121ನೆ ಮೆಮೊ ಓದಲಾಯಿತು.

ಚಿಕ್ಕ ಬಾಣಾವಾರದಲ್ಲಿ ಒಂದು ದೊಡ್ಡಿಮನೆ ಸ್ಥಾಪಿಸಬಹುದೆಂತ ತೀರ್ಮಾನ ಮಾಡಲಾಯಿತು.

22. ಕೃಷ್ಣರಾಜಪುರ-ವೈಟಫೀಲ್ಡ್ ರೋಡು ರಿಪೇರಿ ವಿಚಾರದಲ್ಲಿ ಬೆಂಗಳೂರು ಸಬ್ ಡಿವಿಜನ್ ಅಸಿಸ್ಟೆಂಟು ಕಮಿಷನರ ವರಿಂದ ತಲಪಿದ 16-10-08ನೆ ಮುರ್ಕುಂ 334ನೆ ನಂಬರು ಯಾದಿ ಓದಲಾಯಿತು.

ಮುಂದಿನಸಾಲ್ ಬಜೆಟ್ಟು ಕಾಲದಲ್ಲಿ ಇದನ್ನು ಯೋಚಿಸಬಹುದೆಂತ ತೀರ್ಮಾನ ಮಾಡಲಾಯಿತು.

23. ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೇಲಿ ತಿರುಗಿ ಸಂತೆ ಮಾಡತಕ್ಕ ವಿಚಾರದಲ್ಲಿ ದೊಡ್ಡಬಳ್ಳಾಪುರ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರು ಬರೆಸಿದ 17-10-08ನೆ ಮುರ್ಕುಂ 468ನೆ ನಂಬರು ಯಾದಿ ಓದಲಾಯಿತು.

ತೂಬಗೆರೇಲಿ ಪುನಃ ಸಂತೆ ನಡಿಸಬಹುದೆಂತ ತೀರ್ಮಾನ ಮಾಡಲಾಯಿತು.

24. ನೆಲಮಂಗಲ ತಾಲ್ಲೂಕು ಸೊಂಡೇಕೊಪ್ಪ ಮತ್ತು ದೊಡ್ಡಬೆಲೆ ಯೂನಿಯನ್‌ಗಳ ಮನೆ 1907-08ನೆ ಸಾಲಿನ ಕಂದಾಯ ಮಾಫ್ ಮಾಡಲು ಶಿಫಾರಸು ಮಾಡಿ ದೊಡ್ಡಬಳ್ಳಾಪುರ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರು ಬರೆಸಿದ 8-9-08ನೆ ಮುರ್ಕುಂ 321 ಮತ್ತು 322ನೆ ನಂಬರು ಮೆಮೋಗಳು ಓದಲಾದವು.

ಈ ಯೂನಿಯನ್‌ಗಳಲ್ಲಿ 1907-08ನೆ ಸಾಲಿನ ಕಂದಾಯ ಮಾಫ್ ಮಾಡತಕ್ಕ ವಿಚಾರದಲ್ಲಿ ತಕ್ಕಷ್ಟು ಕಾರಣಗಳು ಇಲ್ಲವಾಗಿ ಮಾಫ್ ಮಾಡಲಾಗಲಾರದೆಂತ ತೀರ್ಮಾನ ಮಾಡಲಾಯಿತು.

25. ಹೆಸರುಘಟ್ಟ ಗ್ರಾಸ್ ಫಾರಂನಲ್ಲಿ 4 ದೊಡ್ಡಿ ಮನೆಗಳನ್ನು ಕಟ್ಟಿಸುವ ವಿಚಾರದಲ್ಲಿ ಬೆಂಗಳೂರು ತಾಲ್ಲೂಕು ಅಮಲ್ದಾರ್ರವರಿಂದ ತಲಪಿದ 5-11-08ನೆ ಮುರ್ಕುಂ 56ನೆ ನಂಬರು ಇತ್ತಿಲ್ಲೆ ಓದಲಾಯಿತು.

ಹೆಸರುಘಟ್ಟ ಗ್ರಾಸ್ ಫಾರಂನಲ್ಲಿ 2 ದೊಡ್ಡಿ ಮನೆಗಳನ್ನು ಕಟ್ಟಿಸಬೇಕೆಂತ ತೀರ್ಮಾನ ಮಾಡಲಾಯಿತು.

ಮುಂದಿನ ಮೀಟಿಂಗ 1909ನೆ ಇಸವಿ ಫೆಬ್ರುವರಿ 15ಕ್ಕೆ ನಡಿಯಬೇಕೆಂತ ತೀರ್ಮಾನ ಮಾಡಲಾಯಿತು.

1908ನೆ ನವಂಬರು ತಿಂಗಳಲ್ಲಿ ಬೋರ್ಡಿನವರು ಸ್ಯಾಂಕ್ಷನ್ ಮಾಡಿದ ಬಜೆಟ್ಟನಲ್ಲಿ ಮಂಜೂರಾಗಿರುವ ಕಾಂಗಾರಿಗಳ ಅಂದಾಜಾಗಳು :—

		ರೂ.
1.	ಮಾಗಡೀ ತಾಲ್ಲೂಕು ಕೊಂಡಹಳ್ಳೀಲಿ ಒಂದು ಶೀನೀರುಭಾವಿ ತೆಗಿಸುವುದು ...	300
2.	ಮಾಗಡೀ ತಾಲ್ಲೂಕು ತಿರುಮಲೆಬಳಿ ಇರುವ ಸೋಮನಕಟ್ಟೇಲಿ ಹೂಳು ತೆಗಿಸಲು ...	50
3.	ಡಿಟೋ ತಾಲ್ಲೂಕು ಚಕ್ರಭಾವೀಲಿ ಒಂದು ಭಾವಿ ತೆಗಿಸುವುದು ...	300
4.	ನೆಲಮಂಗಲ ತಾಲ್ಲೂಕು ಹೊನ್ನಸಂದ್ರದಲ್ಲಿ ಒಂದು ಭಾವಿ ತೆಗಿಸುವುದು ..	227
5.	ಬೆಂಗಳೂರು ತಾಲ್ಲೂಕು ಕಾಕೋಳು ಚಾವಡಿ ರಿಪೇರಿ ಮಾಡಲು	13
6.	ಡಿಟೋ ಬ್ಯಾತಾ ಚಾವಡಿ ರಿಪೇರಿ ಮಾಡಲು ...	12
7.	ಬೆಂಗಳೂರು ತಾಲ್ಲೂಕು ಯಲಹಂಕದ ಯೂನಿಯನ್‌ನಲ್ಲಿ ಚರಂಡಿಗಳು ರಿಪೇರಿ ಮಾಡುವದು ಮತ್ತು ಹೊಸದಾಗಿ ಕಟ್ಟಲು ವಗೈರೆಗೆ	350
8.	ಬೆಂಗಳೂರು ತಾಲ್ಲೂಕು ಕೆಂಗೇರಿ ಯೂನಿಯನ್‌ನಲ್ಲಿ ರೋಡುಗಳ ರಿಪೇರಿಬಗ್ಯೂ ಮತ್ತು ವಿ. ತರಹಾ (V.-shaped) ಚರಂಡಿ ಮಾಡಲು	250
9.	ಬೆಂಗಳೂರು ತಾಲ್ಲೂಕು ಯಶವಂತಪುರದಲ್ಲಿ ಒಂದು ದೊಡ್ಡಿಮನೆ ಕಟ್ಟುವುದು ..	350
10.	ಡಿಟೋ ಅಬ್ಬಿಗಾನಹಳ್ಳೀಲಿರುವ ದೊಡ್ಡಿಮನೆ ರಿಪೇರಿ ಮಾಡಲು ..	25
11.	ಡಿಟೋ ತಾಲ್ಲೂಕು ರಾಜಾನುಕುಂಟೆ-ಕಾಕೋಳು ರಸ್ತೆ ರಿಪೇರಿ ಮಾಡುವುದು ..	200
12.	ಬೆಂಗಳೂರು ತಾಲ್ಲೂಕು ಬೇಗೂರು ಯೂನಿಯನ್‌ನಲ್ಲಿ ರೋಡು ಮಾಡುವುದಕ್ಕೂ ಮತ್ತು ಇಂಪ್ರೂವ್ ಮಾಡುವುದಕ್ಕೂ ಸಹ	100

ಗೌರ್ನಮೆಂಟನವರು 20-6-08ನೆ ಮುರ್ಕುಂ 13337-5—ಲೋ. ಬೋ. 307-07-19ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ಲೋಕಲ್ ಫಂಡ ಜನರಲ್‌ನಿಂದ ಮಂಜೂರ್ಮಾಡಿದ (ಬಜೆಟ) ಕಾಂಗಾರಿಗಳು :—

1.	ನೆಲಮಂಗಲ ತಾಲ್ಲೂಕು ಬರಗೂರಲ್ಲಿ ಒಂದು ಭಾವಿ ತೆಗಿಸಲು ..	250
2.	ದೊಡ್ಡಬಳ್ಳಾಪುರ ತಾಲ್ಲೂಕು ಬೀಡಿಕೆರೇಲಿ ಒಂದು ಭಾವಿ ತೆಗಿಸಲು ...	267
3.	ಬೆಂಗಳೂರು ತಾಲ್ಲೂಕು ಸಾರಕ್ಕಿ ರಸ್ತೇಲಿ ಒಂದು ಚಿಕ್ಕ ಸೇತುವೆ ಕಟ್ಟುವುದಕ್ಕೆ ...	120
4.	ಸೊಣ್ಣೇನಹಳ್ಳೀಲಿ ದೊಡ್ಡಿಮನೆ ರಿಪೇರಿ ಮಾಡಲು ...	30

ಗೌರ್ನಮೆಂಟನವರು 31-10-08ನೆ ಮುರ್ಕುಂ 2541-51—ಅಗ್ರಿ. 69-08-3ನೆ ನಂಬರು ಪ್ರೊಸೀಡಿಂಗ್ಸನಲ್ಲಿ ಮಂಜೂರ್ಮಾಡಿದ (ಸ್ಪೆಷಲ ಗ್ರಾಂಟ) ಕಾಂಗಾರಿಗಳು.

1.	ದೊಡ್ಡಬಳ್ಳಾಪುರ ಮ್ಯುನಿಸಿಪಾಲಿಟಿಯಲ್ಲಿ ಶೇಷಮ್ಮನ ಭಾವಿ ಇಳಿಸಲು ...	304
2.	ಡಿಟೋ ಮ್ಯುನಿಸಿಪಾಲಿಟಿಯಲ್ಲಿ ಹೊಲೆಯರ ಭಾವಿ ಇಳಿಸಲು ...	284

ಬಿ. ಜೆ. ಕೊಮಾರಸಾಮಿನಾಯಿಕ್, ಪ್ರೆಸಿಡೆಂಟ.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮುಳಬಾಗಲ್ ತಾಲ್ಲೂಕು ಮಲ್ಲಸಾಯಿಕನಹಳ್ಳಿ ಹೋಬಳಿ ಕಾಯುಂಗುತ್ತಾ ಜಂಗಂಹೊಸಹಳ್ಳಿ ಗ್ರಾಮವು 1909ನೆ ಇಸವಿ ಫೆಬ್ರುವರಿ 22ನೆ ತಾರೀಖಿನಲ್ಲಿ ಮುಳಬಾಗಲ್ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ—ಹೆಚ್ಚು ತಪ್ಶೀಲಿಗೆ ಸರ್ 1909ನೆ ಇಸವಿ ಜನವರಿ 28ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 46ನೆ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮುಳಬಾಗಲ್ ತಾಲ್ಲೂಕು ಆವನಿ ಹೋಬಳಿ ಜೋಡಿ ವೀರಶೆಟ್ಟಿಹಳ್ಳಿ ಗ್ರಾಮವು ಸರ್ 1909ನೆ ಇಸವಿ ಫೆಬ್ರುವರಿ 23ನೆ ತಾರೀಖಿನಲ್ಲಿ ಮುಳಬಾಗಲ್ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ—ಹೆಚ್ಚು ತಪ್ಶೀಲಿಗೆ ಸರ್ 1909ನೆ ಇಸವಿ ಜನವರಿ 28ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 47ನೆ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮುಳಬಾಗಲ್ ತಾಲ್ಲೂಕು ಆವನಿ ಹೋಬಳಿ ಜೋಡಿ ದೇವರಾಯಸಂದ್ರ ಗ್ರಾಮವು 1909ನೆ ಇಸವಿ ಫೆಬ್ರುವರಿ 22ನೆ ತಾರೀಖಿನಲ್ಲಿ ಮುಳಬಾಗಲ್ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ—ಹೆಚ್ಚು ತಪಶೀಲಿಗೆ ಸರ್ 1909ನೆ ಇಸವಿ ಜನವರಿ 28ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 45ನೆ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಮಾಲೂರು ತಾಲ್ಲೂಕು ನರಸಾಪುರ ಹೋಬಳಿ ಜೋಡಿ ಬೆಳ್ಳೂರು ಗ್ರಾಮವು 1909ನೆ ಇಸವಿ ಫೆಬ್ರುವರಿ 26ನೆ ತಾರೀಖಿನಲ್ಲಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ ಹೆಚ್ಚು ತಪ್ಶೀಲಿಗೆ ಸರ್ 1909ನೆ ಇಸವಿ ಜನವರಿ 28ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 48ನೆ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.)

ಎಸ್. ಶಾಮಣ್ಣ,
ಫೋರ್ ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸರ್ 1908ನೆ ಇಸವಿ ಡಿಸೆಂಬರ್ ತಿಂಗಳು 4ರಲ್ಲಿ ನಡದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಮ|| ರಾ|| ರಾ|| ಎಂ. ಚಂಗಯ್ಯ ಶೆಟ್ಟರವರು, (ಪ್ರೆಸಿಡೆಂಟ್).

ಅಫಿಷಿಯಲ್ ಮೆಂಬರುಗಳು.

(1) ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.
(2) ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(3) ಚಿತ್ರದುರ್ಗದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(4) ಬೋರ್ಡಿನ ವೈಸ್ ಪ್ರೆಸಿಡೆಂಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮ|| ಪಿ. ನಂಜುಂಡಪ್ಪನವರು.
2. ,, ಮಹಮದ್ ದಸ್ತಗಿರಿ ಸಾಹೇಬರು.
3. ,, ಶಾನುಭೋಗ ಸುಬ್ಬಣ್ಣನವರು.
4. ,, ಬೆಳಗಟ್ಟೆ ಅಜ್ಜಪ್ಪನವರು.
5. ,, ನಾಡಿಗ ಸಿದ್ದರಾಮಯ್ಯನವರು.
6. ,, ಯಲೆ ಬಸಪ್ಪನವರು.
7. ,, ಕುಬಾಜಿ ದುರ್ಗಪ್ಪನವರು.
8. ,, ಭಾರಿ ರುದ್ರಪ್ಪನವರು.
9. ,, ನಾಡಿಗ ಬಾಲಕೃಷ್ಣರಾಯರು.
10. ,, ಹಾಳೇದಹಳ್ಳಿ ನಾಗಪ್ಪನವರು.
11. ,, ಬಿ. ವಿ. ನಾರಾಯಣರಾವ್.
12. ,, ಬಿಳಿಚೋಡು ಮೂಪ್ಲಗಿರಿಯಪ್ಪನವರು.

ಗೈರ್ ಹಾಜರು.

ಆಫಿಷಿಯಲ್ ಮೆಂಬರುಗಳು.

(1) ಚಿತ್ರದುರ್ಗದ ಡಿವಿಜ಼ರ್ ಎಗ್ಸಿಕ್ಯೂಟಿವ ಇಂಜನಿಯರ ಸಾಹೇಬರವರು.
(2) ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲ್ ಇಲಾಖಾ ಡಪ್ಯುಟಿ ಇನ್ಸ್‌ಪೆಕ್ಟರವರು.

ನಾನ್ ಆಫಿಷಿಯಲ್ ಮೆಂಬರುಗಳು.

1. ಮೆ|| ಎಂ. ಅನಂತಶೆಟ್ಟರವರು.
2. ,, ಮುತ್ತುಗದೂರು ಪರ್ವತಪ್ಪನವರು.
3. ,, ಶಾನುಭೋಗ ಚನ್ನಗೌರಯ್ಯನವರು.
4. ,, ಸಿ. ವಿರೂಪಾಕ್ಷಪ್ಪನವರು.
5. ,, ನಬೀ ಸಾಹೇಬರು.
10. ,, ಹೆಚ್. ಸುಬ್ಬರಾವ.

ಜಗಲೂರು ತಾಲ್ಲೂಕು ಅಮಲ್‌ದಾರ್ರು ಮತ್ತು ಹರಿಹರದ ಸಬ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ರು ವಿನಹ ಬಾಕಿ ತಾಲ್ಲೂಕಿನ ಅಮಲ್‌ದಾರ್ರು ಹಾಜರಾಗಿದ್ದರು.

I. ಗತ ಸಾಲಿನ ಲೋಕಲ ಕಾಮಗಾರಿಗಳನ್ನು ಪೂರೈಸಲು ಚಾಲ್ತಿ ಸಾಲಿನ ಅಪ್ರೋಪ್ರಿಯೇಷನ್ ಸ್ಟೇಟ್‌ಮೆಂಟು ಗವರ್ನ್ಮೆಂಟಿನಿಂದ ಮಂಜೂರಾಗಿ ಬಂದಿರುವದನ್ನು ಓದಿ ಈ ಅಂಶವನ್ನು ಸಂಬಂಧಪಟ್ಟ ಅಮಲ್‌ದಾರ್ರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

II. ಮೈಸೂರಿನಲ್ಲಿ ಒಂದು "ಆಯುರ್ವೇದಿಕ ಕಾಲೇಜು" ಯಾ ವೈದ್ಯಶಾಲೆಯನ್ನು ಸ್ಥಾಪಿಸುವದನ್ನು ಮಂಜೂರ್ಮಾಡಿರುವದಾಗಿ ಗವರ್ನ್ಮೆಂಟಿನಿಂದ ತಲ್ಪಿರತಕ್ಕ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

III. ರೈತರಿಗೆ ರಿಯಾಯಿತಿ ದರದಲ್ಲಿ ಅಮೃತಮಹಲ ಹೋರಿಗಳನ್ನು ಸಪ್ಲೈ ಮಾಡಿಸತಕ್ಕ ವಿಚಾರದಲ್ಲಿ ಗವರ್ನ್ಮೆಂಟಿನಿಂದ ಸಾದರಾದ ಪ್ರೊಸೀಡಿಂಗ್ಸನ್ನು ಓದಲಾಯಿತು.

ರೆಜಲ್ಯೂಷನ್—ಈ ಅಂಶವನ್ನು ಸಂಬಂಧಪಟ್ಟ ಜನಗಳಿಗೆ ತಿಳಿಸಬೇಕಾಗಿ ತೀರ್ಮಾನಿಸಲಾಯಿತು.

IV. ಚಿತ್ರದುರ್ಗದಲ್ಲಿ ಚಾಮರಾಜ ಮೆಮೋರಿಯಲ್ ಹಾಲಗೆ ಲೈಟಿಂಗ ಕಂಡಕ್ಟರು ಇಡತಕ್ಕ ಬಗ್ಗೆ ಎಗ್ಸಿಕ್ಯೂಟಿವ ಇಂಜನಿಯರ ಸಾಹೇಬರವರಿಂದ ತಲ್ಪಿದ 555 ರೂಪಾಯಿನ ಅಂದಾಜವನ್ನು ಓದಲಾಯಿತು.

ರೆಜಲ್ಯೂಷನ್—ಇದನ್ನು ಮಂಜೂರಿ ಬಗ್ಗೆ ಗವರ್ನ್ಮೆಂಟಿಗೆ ಕಳುಹಿಸಬೇಕಾಗಿಯೂ ಈ ಬಾಬತು ಮೊಬಲಗನ್ನು ಡಿಸ್ಟ್ರಿಕ್ಟ ಫಂಡ ಬಡ್‌ಜಟಿನಲ್ಲಿ ಡಿ. ಪಿ. ಡಬ್ಲಿಯೂ ಅಲಾಟ್‌ಮೆಂಟ ಪೈಕಿ ಕೊಡಬೇಕಾಗಿಯೂ ನಿರ್ಧರಿಸಲಾಯಿತು.

V. ಸ್ಯಾನಿಟರಿ ಇನ್ಸ್‌ಪೆಕ್ಟರೊಂದಿಗೆ ವರು ಇನ್ಸ್‌ಪೆಕ್ಟರನ್ನು ಇಟ್ಟುಕೊಳ್ಳತಕ್ಕ ಬಾಬೆ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿದ ಪ್ರೊಪೋಜಲನ್ನು ತಿರಸ್ಕರಿಸಿ ವರ್ತ್ತ ಇನ್‌ಸ್ಪೆಕ್ಟರುಗಳ ಐವಜಿಗೆ ಸ್ಯಾನಿಟರಿ ಇನ್ಸ್‌ಪೆಕ್ಟರುಗಳನ್ನು ಜಾಗ್ರತೆಯಾಗಿ ನೌಕರರ್ಮಾಡಬೇಕಾಗಿ ಗವರ್ನ್ಮೆಂಟಿನಿಂದ ತಲ್ಪಿರತಕ್ಕ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

VI. ಅರಸಿನಗುಂಡಿ ಗೋಕಟ್ಟೆ ರಿಪೇರಿ ಬಗ್ಗೆ ಎಗ್ಸಿಕ್ಯೂಟಿವ ಇಂಜನಿಯರ ಸಾಹೇಬರವರ 30—11—08ನೆ ಮುಸ್ಕಂ 1246ನೆ ನಂಬರು ಡಾಕೆಟ್ಟಿನೊಂದಿಗೆ ತಲ್ಪಿರತಕ್ಕ 1,770 ರೂಪಾಯಿನ ರಿವೈಜ್ಡು ಅಂದಾಜವನ್ನು ಓದಲಾಯಿತು.

ರೆಜಲ್ಯೂಷನ್—ಇದನ್ನು ಅಪ್ರೂವಮಾಡಿ ಮಂಜೂರಿ ಬಗ್ಗೆ ಗವರ್ನ್ಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

VII. ಬೋರ್ಡಿನವರ ಮಂಜೂರು ನಿರೀಕ್ಷಣೆ ಮೇಲೆ ಪ್ರೆಸಿಡೆಂಟರವರು ಮಂಜೂರ್ಮಾಡಿದ್ದ ಕಾಮಗಾರಿಗಳ ಲಿಸ್ಟನ್ನು ಓದಲಾಯಿತು.

ರೆಜಲ್ಯೂಷನ್—ಅಪ್ರೂವ ಮಾಡಿರುತ್ತೆ.

VIII. ಮುಂದಿನ ಮೀಟಿಂಗ 1909ನೆ ಫೆಬ್ರುವರಿ 19ನೆ ತಾರೀಖಿನ ದಿವಸ ನಡಿಯಬೇಕಾಗಿ ತೀರ್ಮಾನಿಸಲಾಯಿತು.

ಎಂ. ಚೆಂಗೈಯ್ಯ ಶೆಟ್ಟಿ,
ಪ್ರೆಸಿಡೆಂಟ.

ಮೈಸೂರು ಗವರ್ನಮೆಂಟ ಕೋ ಆಪರೇಟಿವ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ.

ಬೆಂಗಳೂರು, ತಾರೀಖು 26–27ನೆ ಜನವರಿ 1909ನೆ ಇಸವಿ.

ನೋಟಿಫಿಕೇಷನ ನಂ. 396—C. S. 145–148.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ ಸೊಸೈಟಿಗಳ ರೆಗ್ಯುಲೇಷನ 6ನೆ ಸೆಕ್ಷನ (2)ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ:—

ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
ಬೆಂಗಳೂರು ಸೆಂಟ್ರಲ್ ಕೋ ಆಪರೇಟಿವ ಬ್ಯಾಂಕ್, ಲಿಮಿಟೆಡ.	ಬೆಂಗಳೂರು ಸಿಟಿ.	17ನೆ ಡಿಸೆಂಬರು 1908ನೆ ಇಸವಿ
ಹಾಲಗೋನಹಳ್ಳಿ ಕೋ ಆಪರೇಟಿವ ಸೊಸೈಟಿ, ಲಿಮಿಟೆಡ.	ಹಾಲಗೋನಹಳ್ಳಿ, ಜೋಡಿ ಗ್ರಾಮ, ಕುಣಿಗಲ್ ತಾಲ್ಲೂಕು.	14ನೆ ಜನವರಿ 1909ನೆ ಇಸವಿ.

ಎಂ. ಶಾಮರಾವ,
ರಿಜಿಸ್ಟ್ರಾರ, ಕೋ ಆಪರೇಟಿವ ಸೊಸೈಟೀಸ.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1908—09ನೆ ಇಸವಿ ಮಿ॥ ಅರ್ಜೀ ನಂಬರ್ 547.

ಅರ್ಜೀದಾರರು ಬೌರಿಂಗಪೇಟೇಲಿರುವ ಷೇಕ್ ಮಹಮ್ಮದ್ ಸಾಹೇಬರ ಮಗ ಕಂಟ್ರಾಕ್ಟರ್ ಮಹಮ್ಮದ್ ದಸ್ತಗೀರಸಾಬಿ, ಮೈನರಾದ 1ನೆ ಅಮೀನಾಬೇಗಂ, 2ನೆ ಸೈದಾಬೇಗಂ ಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಅಮೀನಾಬೇಗಂ, 2ನೆ ಸೈದಾಬೇಗಂ ಯವರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕಿನಮೇಲೆ ಬವರಿಂಗಪೇಟೆ ಸ್ಥಳದ ಅರ್ಜದಾರರು ಸದರೀ ಮೈನರ್ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜೆ ಹಿಯರಿಂಗ್ ಬಗ್ಯೆ 1909ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 12ರಲ್ಲು ಮೊಕರರು ಮಾಡಿ ಇರುವುದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸರ್ 1909ನೆ ಇಸವಿ ಜನವರಿ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ಅರ್ಜೀ ನಂಬರ್ 641.

ಬೆಂಗಳೂರಲ್ಲಿ Mid-wife ಆಗಿದ್ದು ಮೃತಪಟ್ಟ ಗ್ರೆಸ ಕುಪ್ಪಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು Clement son of Augustine ಮೈನರ್, ಗಾರ್ಡಿಯನ್ Rev. S. J. Cox C. & M. Station, Bangalore, ಮೃತಪಟ್ಟ ಗ್ರೆಸ ಕುಪ್ಪಮ್ಮನಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಕುಪ್ಪಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ 23 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ Clement Minor, ಗಾರ್ಡಿಯನ್ Rev. S. J. Cox ಎಂಬುವರ ಅರ್ಜಿಯನ್ನು ಸರ್ 1909ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 12 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಪ್ಪಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1908ನೆ ಇಸವಿ ಜನವರಿ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1908–09ನೆ ಇಸವಿ ಮಿ॥ ಅರ್ಜೀ ನಂಬರು 642.

ಮೈಸೂರು ರೆವಿನ್ಯು ಸರ್ವೆ ಹೆಡ್‌ಕ್ವಾರ್ಟರ್ ಆಫೀಸಿನಲ್ಲಿದ್ದು ಬೆಂಗಳೂರು ಮಾಗಡಿ ಕ್ಯಾಂಪಿನಲ್ಲಿ ಪ್ಲೇಗಿನಲ್ಲಿ ಮೃತಪಟ್ಟ ಶ್ರೀನಿವಾಸಕೃಷ್ಣ, ಹೊನ್ನಾವರ ಕಾರಕೂನ್, ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜದಾರ್ ಚಿಂತಾಮಣಿಲಿರುವ ಶೀತಾಬಾಯಿ ಉರ್ಫ್ ಪದ್ಮಾವತಿಬಾಯಿ ಮೈನರ್, ಗಾರ್ಡಿಯನ್ ತಾಯಿ ರಾಜಿಬಾಯಿ ಮೃತಪಟ್ಟ ಸದರೀ ಶ್ರೀನಿವಾಸ ಕೃಷ್ಣಯವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸ ಕೃಷ್ಣರ ಜಿಂದಗಿ ಬಗ್ಯಾಗಿ ಬರತಕ್ಕ 420—0—0 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೀತಾಬಾಯಿ ವುರ್ಫ್ ಪದ್ಮಾವತಿ ಬಾಯಿಯವರ ಅರ್ಜಿಯನ್ನು ಸರ್ 1909ನೆ ಇಸವಿ ಫೆಬ್ರುವರಿ 5ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸ ಕೃಷ್ಣ ಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಜನವರಿ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ಅರ್ಜೀ ನಂಬರು 643.

ದಿಂಡುಗಲ್ ತಾಲ್ಲೂಕು ಲಕ್ಷ್ಮೀಪುರದಲ್ಲಿದ್ದು ಮೃತಪಟ್ಟ ಎಂ. ಎಸ್. ವೆಂಕಟರಮಣೈಯ್ಯಂಗಾರರು ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಶ್ರೀನಿವಾಸೈಯ್ಯಂಗಾರರು, 2ನೆ ನಾರಣೈಯ್ಯಂಗಾರರು, 3ನೆ ಕೃಷ್ಣಸ್ವಾಮೈಯ್ಯಂಗಾರರು, 4ನೆ ಅಂಕಾಜೈಯ್ಯಂಗಾರರು, 5ನೆ ತಿರುಮಲೈಯ್ಯಂಗಾರರು, ಮೃತಪಟ್ಟ ಸದರೀ ಎಂ. ಎಸ್. ವೆಂಕಟರಮಣೈಯ್ಯಂಗಾರರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿಮೇಲೆ ಲಕ್ಷ್ಮೀಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣೈಯ್ಯಂಗಾರರು ಜಿಂದಗಿ ಬಗ್ಯಾಗಿ ಬರತಕ್ಕ 315 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಶ್ರೀನಿವಾಸೈಯ್ಯಂಗಾರರು ವಗೈರೇರ ಅರ್ಜಿಯನ್ನು ಸರ್ 1909ನೆ ಇಸವಿ ಫೆಬ್ರುವರಿ 12ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣೈಯ್ಯಂಗಾರರು ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಜನವರಿ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯರ್,
ಸಬ್ ಜಡ್ಜ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಪಿಸಿ ಆದ್ದು. [ನಂ. 6.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ. 11, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜಿ ಯವರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಡಿ. ನಂಬರು 25ನೆಯ ಪ್ರಕಟನ ಪತ್ರಿಕೆ, ಸನ್ 1909ನೆಯ ಇಸವಿ ಫೆಬ್ರುವರಿ ತಾರೀಖು 3.

ಇದರಡೀ ಕಂಡ ಭಾಷಾ ಗ್ರಂಥಗಳು ಸನ್ 1910ನೆಯ ಇಸವಿ ನವೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ.—

ಗದ್ಯ— } ನಿಯಮಿಸಲ್ಪಟ್ಟಿರುವ ಭಾಗವು ಇಲಾಖೆಯವರಿಂದ ಮುದ್ರಿಸಲ್ಪಡುವುದು.
ಪದ್ಯ— }

ಮೊದಲನೆಯ ಭಾಷೆ.

ಸಂಸ್ಕೃತ—

1. ಚಂಪುರಾಮಾಯಣ ಕಾಂಡಗಳು 4 ಮತ್ತು 5.
2. ಭಾರವಿ ಸರ್ಗಗಳು 5, 6 ಮತ್ತು 7.

ಎರಡನೆಯ ಭಾಷೆ.

ನಿಯಮಿಸಲ್ಪಟ್ಟಿರುವ ಭಾಗವು ಇಲಾಖೆಯವರಿಂದ ಮುದ್ರಿಸಲ್ಪಡುವುದು.

ತೆಲುಗು—ಗದ್ಯ.—ರಾಜಶೇಖರಚರಿತೆ, ಮೊದಲನೆ ಐದು ಪ್ರಕರಣಗಳು (ರಾಜಮಂದಿರಿ ವೀರೇಶಲಿಂಗಂ ಪಂತಲು ಯವರಿಂದ ರಚಿಸಲ್ಪಟ್ಟದ್ದು).

ಪದ್ಯ.—ನಳಚರಿತ್ರಮು. (ನನ್ನಯ್ಯಭಟ್ಟರಿಂದ ರಚಿಸಲ್ಪಟ್ಟು ಮದರಾಸ್ ಪುಷ್ಪರಥ ಚೆಟ್ಟಿಯವರಿಂದ ಮುದ್ರಿಸಲ್ಪಟ್ಟದ್ದು.)

ಲ್ಯಾಟಿನ್—ಸೀಜರ್ ಡಿ ಬೆಲ್ಲೊ ಗ್ಯಾಲಿಕೊ, IIನೆಯ ಪುಸ್ತಕ.

ಉರ್ದು—ಗದ್ಯ.—ಗುಲ್ದಸ್ತ-ಇ-ತಹಜೀಬ್ (ಲಾಲಾಶಂಕರ್‌ದಾಸ್ ತೇಂಜಯವರಿಂದ ರಚಿಸಲ್ಪಟ್ಟು ಲಾಹೋರ್ ರಿಫಾಹಿ-ಆಂ-ಸ್ಟೀಂ ಮುದ್ರಾಲಯದಲ್ಲಿ ಮುದ್ರಿತವಾದದ್ದು.)

ಪುಟಗಳು 1 ರಿಂದ 117 ವರೆಗೆ (ಜನವರಿ ಜೆಷ್ ವರೆಗೆ).

ಪದ್ಯ.—ಮಜ್‌ಮೂಎ-ನಜ್‌ಮ್-ಆಜಾದ್ (ಶಂಸ್-ಉಲ್-ಉಲ್ಮಾ ಮೌಲ್ವಿ ಮಹಮ್ಮದ್ ಹುಸೈನ್ ಸಾಹೆಬ್ ಆಜಾದ್ ರವರಿಂದ ರಚಿಸಲ್ಪಟ್ಟು, ಲಾಹೋರ್ ರಿಫಾಹಿ ಆಂ-ಸ್ಟೀಂ ಮುದ್ರಾಲಯದಲ್ಲಿ ಮುದ್ರಿತವಾದದ್ದು).

ಪುಟಗಳು 27 ರಿಂದ 83 ವರೆಗೆ (ಪಿರ್-ಐ-ಇನ್‌ಸಾಫ್ ವರೆಗೆ).

ಮೊದಲನೆಯ ಭಾಷೆ.

ಫಾರಸಿ—

ಸರ್ಮ್ಮಾಎ—ಖಿರದ್, ಪಂಜಾಬ್. (ಸಿಕಂದರ್ ನಾಮಾದಿಂದ ನಿಯಮಿಸಲ್ಪಟ್ಟ ಭಾಗಗಳು ವಿನಹ).

ಮೈಸೂರು ಗೌರ್ನ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋ.

ಸ್ 1909ನೆ ಇಸವಿ ಜನವರಿ ತಾರೀಖು 30.

ಬೆಂಗಳೂರು ಗೌರ್ನ್‌ಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯುತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸ್ 1879ನೆ ಇಸವಿಯ 12ನೆ ನಂಬರ್ ಆಕ್ಟು.	36	0	11	0	1	0
4	1871ನೆ ಇಸವಿಯ ರಾಸುಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ (1904)	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟು ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಅಫೀಂ ಆಕ್ಟು	17	0	1	3	0	6
14	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ...	3	0	0	6	0	6
15	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು ...	10	0	0	3	0	6
16	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
17	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
18	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
19	,, ಟೆಲಿಗ್ರಾಫ್ ಆಕ್ಟು	18	0	1	6	1	0
20	,, ರೈಲ್ವೆ ಆಕ್ಟು	20	0	1	9	1	0
21	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು (ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
22	ಲ್ಯಾಂಡ್ ಅಕ್ವಿಜೆಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
23	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
24	ಡಿಟೋ (ಹಳೇ ಛಾಪಾ)	206	2	8	0	5	0
25	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
26	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
27	ಮೈಸೂರು ರೈಲ್ವೆಗಳ ರೆಗ್ಯುಲೇಷನ್	50	0	6	0	2	0
28	ಪಟೇಲ್ ರೂಲ್ಸು	1	0	0	3	0	6
29	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
30	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
31	ತಾಲಿಂಖಾನಾ ರೂಲ್ಸು	1	0	0	3	0	6
32	ಗ್ರಾಮ ಪೊಲೀಸ್ ರೂಲ್ಸು	15	0	1	0	0	6
33	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
34	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ 1ನೆ ರೆಗ್ಯುಲೇಷನ್).	6	0	0	6	0	6
35	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
36	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6
37	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
38	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
39	1894ನೆ ಇಸವಿಯ Vನೆ ನಂ. ರೆಗ್ಯುಲೇಷರ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷರ್.	5	0	1	0	0	6
40	1894ನೆ ಇಸವಿ VIIIನೆ ನಂ. ರೆಗ್ಯುಲೇಷರ್ ರಿಜಸ್ಟ್ರೇಷರ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್.	1	0	0	3	0	6
41	1894ನೆ ಇಸವಿ IXನೆ ನಂ. ರೆಗ್ಯುಲೇಷರ್ ಗಾರ್ವಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷರ್ ...	5	0	1	0	0	6
42	1894ನೆ ಇಸವಿಯ XIನೆ ನಂ. ರೆಗ್ಯುಲೇಷರ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷರ್.	20	0	3	0	1	0
43	1895ನೆ ಇಸವಿಯ Iನೆ ನಂ. ರೆಗ್ಯುಲೇಷರ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್.	3	0	0	6	0	6
44	1895ನೆ ಇಸವಿ IIIನೆ ನಂ. ರೆಗ್ಯುಲೇಷರ್ ಮೈಸೂರು ಕಂಪೆನಿಗಳ ರೆಗ್ಯುಲೇಷರ್.	105	1	0	0	3	0
45	1896ನೆ ಇಸವಿ IIನೆ ನಂ. ರೆಗ್ಯುಲೇಷರ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷರ್.	8	0	1	3	0	6
46	1897ನೆ ಇಸವಿಯ Iನೆ ನಂ. ರೆಗ್ಯುಲೇಷರ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷರನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್, ಮತ್ತು IIನೆ ನಂ. ರೆಗ್ಯುಲೇಷರ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
47	1897ನೆ ಇಸವಿಯ IVನೆ ನಂ. ರೆಗ್ಯುಲೇಷರ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷರ್.	2	0	0	6	0	6
48	1898ನೆ ಇಸವಿಯ Iನೆ ನಂ. ರೆಗ್ಯುಲೇಷರ್ ಮೈಸೂರು ಶೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಯೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷರ್.	1	0	0	3	0	6
49	1898ನೆ ಇಸವಿಯ IIನೆ ನಂ. ರೆಗ್ಯುಲೇಷರ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷರ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್.	1	0	0	3	0	6
50	1901ನೆ ಇಸವಿಯ Vನೆ ನಂ. ರೆಗ್ಯುಲೇಷರ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷರ್.	26	0	4	0	1	6
51	1902ನೆ ಇಸವಿಯ IIನೆ ನಂ. ರೆಗ್ಯುಲೇಷರ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
52	1906ನೆ ಇಸವಿಯ VIIನೆ ನಂ. ರೆಗ್ಯುಲೇಷರ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಯೆ ಹುಟ್ಟಿದ ರೆಗ್ಯುಲೇಷರ್.	106	1	2	0	4	0
53	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
54	ಡಿಟೋ 1905 ...	185	0	14	0	6	0
55	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
56	ಡಿಟೋ 1907 ...	143	1	0	0	6	0
57	ಇಂಡಿಯರ್ ಲಿಮಿಟೇಷರ್ ಆಕ್ಟು	86	0	5	6	1	0
58	ಜಾರೀ ಇಲಾಖೆಯ ವಿಧಾನ	55	0	8	0	1	6
59	ಸರ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟ್ಯಾಂಪು ರೆಗ್ಯುಲೇಷರ್.	103	0	10	0	2	0
60	ಇಸ್ತಿಹಾರ್ನಾಮ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು.	1	0	0	6	0	6
61	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡಾದುದು ...	475	2	0	0	4	6

ರಜಿಸ್ಟ್ರೇಷರ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಎರಡನೆಯ ಭಾಷೆ.

ಗುಲ್‌ದಸ್ತ-ಎ-ದಾನಿಷ್. (ಮುಫೀದಿ-ಆಮ್ ಮುದ್ರಾಲಯ, ಲಾಹೋರ್).

ಪುಟಗಳು 1—125. (ಬಾಬ್-ಎ-ದು ಅವ್ ವರೆಗೆ).

ಇದರಡೀ ಕಂಡ ಭಾಷಾ ಗ್ರಂಥಗಳು ಸ್ಗ 1910ನೆಯ ನವಂಬರ್ ತಿಂಗಳಲ್ಲಿ ನಡೆಯುವ ಅಪ್ಪರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ—ಗದ್ಯ.—(1) ಅದ್ಭುತ ರಾಮಾಯಣ.

(2) ವಚನ ಕಾದಂಬರಿ.

ಪದ್ಯ.—(1) ರಾಘವಾಂಕನಿಂದ ರಚಿಸಲ್ಪಟ್ಟ ಹರಿಶ್ಚಂದ್ರ ಕಾವ್ಯ. ಸ್ಥಲಗಳು 2—4.

(2) ಅಭಿನವದಶಕುಮಾರಚರಿತ್ರೆ ಆಶ್ವಾಸಗಳು 1—3.

(3) ಎನ್. ಶ್ರೀಕಂಠಶಾಸ್ತ್ರಿಗಳಿಂದ ರಚಿಸಲ್ಪಟ್ಟ ಪ್ರಿಯದರ್ಶಿಕ ನಾಟಕ.

IV. 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನ್ನಿಗನುಸಾರವಾಗಿ ಮ್ಯುನಿಸಿಪಲ್ ಕೌನ್ಸಿಲ್ಲಿನ ಮೀಟಿಂಗಿನ ಪ್ರೊಸೀಡಿಂಗ್ಸು ಮತ್ತು ವಿಷಯಗಳನ್ನು ಚರ್ಚೆ ಮಾಡತಕ್ಕ ಬಾಬಿನಲ್ಲಿ ಕೊಂಚ ಬದಲಾವಣೆಯೊಡನೆ ರೂಲ್ಸು ಅನುಮೋದಿಸಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 28—11—08ನೆ ಮಕ್ಕಾಂ 5057-8—Ml. 569-06-5ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

V. ಕಳೆದ ದಸರಾ ಮತ್ತು ಇಂಡಸ್ಟ್ರಿಯಲ್ ಎಗ್ಜಿಬಿಷನ್ನಲ್ಲಿ ನಿಯಾಮಕ ಮಾಡಿಕೊಂಡಿದ್ದ ಕನ್ಸರ್ವೆನ್ಸಿ ಹಂಗಾಮಿ ಶಿಬ್ಬಂದಿ ಬಾಬತು 83-4-1ರ ಬಿಲ್ಲು ಸಮೇತ ಹೆಲ್ತಾಫಿಸರವರಿಂದ ತಲಪಿರುವ 28-11-08ನೆ ಮಕ್ಕಾಂ 1111ನೆ ನಂಬರ ಡಾಕೆಟ್.

ಪ್ಯಾಸ್ ಮಾಡಿದೆ.

VI. ಮೈಸೂರು ಷಹರಿಗೆ ಎಲೆಕ್ಟ್ರಿಕ್ ಪವರ್ ಮೂಲಕ ಕಾವೇರಿ ನದಿಯಿಂದಲೇ ಸೀದಾ ನೀರು ಸರಬರಾಯಿ ಮಾಡಲು ಆಗಲಾರದೆಂತ ಚೀಫ್ ಇಂಜನಿಯರವರು ಅಭಿಪ್ರಾಯಪಡುತ್ತಾರೆಂದು ಗೌರ್ನಮೆಂಟಿನಿಂದ ಸಾದರಾಗಿರುವ 28—11—08ನೆ ಮಕ್ಕಾಂ 5059-60—Ml. 140-08—4ನೆ ನಂಬರ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

VII. ಸ್ಯಾನಿಟರಿ ಮತ್ತು ಆಸಿಸ್ಟೆಂಟ್ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ತಾಬೇದಾರೀ ವಿಷಯದಲ್ಲಿ ಸ್ಯಾನಿಟರಿ ಕಮಿಷನರವರ ಮತ್ತು ಕಡೂರು ಡಿಸ್ಟ್ರಿಕ್ಟು ಮತ್ತು ಮ್ಯುನಿಸಿಪಲ್ ಬೋರ್ಡುಗಳ ಪ್ರೆಸಿಡೆಂಟರವರ ನಡವಳಿಕೆ ಕಾಪಿನಿಂ ಅಭಿಪ್ರಾಯದ ಬಗ್ಗೆ ಗೌರ್ನಮೆಂಟಿನಿಂದ ಸಾದರಾಗಿರುವ 5—12—08ನೆ ಮಕ್ಕಾಂ 5424-35—Ml. 42507—3ನೆ ನಂಬರ ಪ್ರೊಸೀಡಿಂಗ್ಸು.

ಬೋರ್ಡಿನವರ ಅಭಿಪ್ರಾಯ ಅವಶ್ಯಕವೇ ಎಂಬುವದನ್ನು ಡೆಪ್ಯುಟಿ ಕಮಿಷನರವರನ್ನು ವಿಚಾರಿಸಿ ತಿಳಿದುಕೊಂಡ ನಂತರ ಅವಶ್ಯವಿದ್ದರೆ ಈ ವಿಷಯವನ್ನು ಕೌನ್ಸಿಲ್ಲಿಗೆ ತರತಕ್ಕದ್ದೆಂದು ತೀರ್ಮಾನಿಸಿದೆ.

VIII. ಅರ್ಜಿಯಲ್ಲಿ ನಮೂದಿಸಿರುವ ಕಾರಣಗಳಿಗೋಸ್ಕರ ಮಾಹೆಯಾನಾ ಕಂಟ್ರಾಕ್ಟು ಮೊಬಲಗನ್ನು ಕಮ್ಮಿ ಮಾಡಿಕೊಡಬೇಕೆಂದು ದೇವರಾಜ ಮಾರ್ಕೆಟ್ ಡೈಲೀಫೀಸ್ ಕಂಟ್ರಾಕ್ಟರ್ ಗಂಗೈಯ್ಯನು ಕೊಟ್ಟಿರುವ ಅರ್ಜಿ.

ಅರ್ಜಿದಾರನ ಪ್ರಾರ್ಥನೆಯಂತೆ ಕಂಟ್ರಾಕ್ಟು ಮೊಬಲಗಿನಲ್ಲಿ ಕಮ್ಮಿ ಮಾಡುವದಕ್ಕೆ ಕೌನ್ಸಿಲ್ಲಿನವರಿಗೆ ಕಾರಣ ತೋರಿಬರುವದಿಲ್ಲವೆಂದು ತೀರ್ಮಾನಿಸಿದೆ.

IX. ಟ್ರಸ್ಟು ಬೋರ್ಡಿನಿಂದ ಕಳುಹಿಸಿದ್ದ 3,530 ರೂಪಾಯಿನ ಅಂದಾಜಕ್ಕೆ ಬದಲಾಗಿ 3ನೆ ಡ್ರೈನೇಜ್ ಆವರಣದಲ್ಲಿ ಫ್ಲಡ್ ವಾಟರ್ ಡ್ರೈನ್ ಅಭಿವೃದ್ಧಿಗೋಸ್ಕರ ಬಂದು ಅಂದಾಜ ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 7—12—08ನೆ ಮಕ್ಕಾಂ 5474-8—Ml. 229—07ನೆ ನಂಬರ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

X. ಅಪ್ಲಿಕೇಷನ್ನಲ್ಲಿ ನಮೂದಿಸಿರುವ ಕಾರಣಗಳಿಗೋಸ್ಕರ ಕನ್ವೆಯನ್ಸ್ ಅಲೋಯನ್ಸ್ ಮಾಹೆಯಾನಾ 20 ರೂಪಾಯಿನಿಂದ 30 ರೂಪಾಯಿಗೆ ಜಾಸ್ತಿ ಮಾಡಿಕೊಡಬೇಕೆಂದು ಮ್ಯುನಿಸಿಪಲ್ ಎಗ್ಜಿಕ್ಯೂಟಿವ್ ಇಂಜನಿಯರವರು ಕೊಟ್ಟಿರುವ ಅಪ್ಲಿಕೇಷನ್.

ಮಾಹೆಯಾನ 20 ರೂಪಾಯಿನಿಂದ 30 ರೂಪಾಯಿಗೆ ಕನ್ವೆಯನ್ಸು ಅಲೋಯನ್ಸು ಜಾಸ್ತಿ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

XI. ಕಳೆದ ದಸರಾದಲ್ಲಿ ಜಾಸ್ತಿಯಾಗಿ ನಿಯಾಮಕ ಮಾಡಿಕೊಂಡಿದ್ದ ಡಿಸ್‌ಇನ್‌ಫೆಕ್ಷನ್ ಕೂಲಿಗಳ ಬಾಬತು 42-7-7ರ ಬಿಲ್ಲು ಸಮೇತ ಹೆಲ್ತಾಫಿಸರವರಿಂದ ತಲಪಿರುವ 11—12—08ನೆ ಮಕ್ಕಾಂ 972ನೆ ನಂಬರ ಡಾಕೆಟ್.

ಪ್ಯಾಸ್ ಮಾಡಿದೆ.

XII. ಚಿಕ್ಕಪೇಟೆ ಎಕ್ಸ್‌ಟೆನ್‌ಷನ್ ಸಮೀಪ ಇರುವ ಮುಹಮ್ಮದೀಯರ ಸ್ಮಶಾನವನ್ನು ಬೇರೆಕಡೆಗೆ ತೆಗೆದುಹಾಕತಕ್ಕ ವಿಷಯದಲ್ಲಿ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಛೇರ್ಮನ್‌ರವರಿಂದ ತಲುಪಿರುವ 21-12-08ನೆ ಮುರ್ಖಂ. 324ನೆ ನಂಬರ್ ಲೆಟರ್.

ಮಿ|| ರಹಿಮುತ್ತುಲ್ಲಾ ಅಹಮ್ಮದ್ ಸೇಟರವರು, ಮಿ|| ಮೊಹದೀನ್ ಸಾಹೇಬರವರು, ಮಿ|| ಹಸೇನಲ್ಲಿಬೇಗ್ ಸಾಹೇಬರವರು ಮತ್ತು ಮೈಸೂರು ತಾಲ್ಲೂಕು ಅಮಲ್ದಾರ್ರವರು ಸಹ ವುಳ್ಳ ಸಬ್ ಕಮಿಟಿಗೆ ಇನ್‌ಸ್ಪೆಕ್ಷನ್ ಮಾಡಿ ರಿಪೋರ್ಟು ಮಾಡಲು ರಿಫರ್ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1908—09ನೆ ಇಸವಿ ಮಿ|| ಅರ್ಜೀ ನಂಬರ್ 668.

ಅರ್ಜೀದಾರು ಶಿಡ್ಲಘಟ್ಟದಲ್ಲಿರುವ ದಿಬ್ಬಗಿರಿ ಬಸಪ್ಪ, ಈರಪ್ಪ, ಮುನಿರುದ್ರಮ್ಮ ಮೈನರಾದ ಶಿಡ್ಲಘಟ್ಟ ಸ್ಥಳದ ಈರಪ್ಪ ವಗೈರೇರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಈರಪ್ಪ ವಗೈರೇರಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಶಿಡ್ಲಘಟ್ಟ ಸ್ಥಳದ ಸದರೀ ಮೈನರಿನ ಆಸ್ತೀ ಕಾಪಾಡುವುದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1909ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 26ರಲ್ಲು ಮುಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸರ್ 1909ನೆ ಇಸವಿ ಫೆಬ್ರುವರಿ ತಿಂಗಳ 8ನೆ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತುಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯರ್, ಸಬ್ ಜಡ್ಜ್.

ತಿ. ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಸಿದ್ದಲಿಂಗಣ್ಣನವರ ಮಕ್ಕಳು ಸಿದ್ದಲಿಂಗಮರಿದೇವರು ಇದರಿಂದ ತಿಳಿಸುವುದೇನಂದರೆ—

ಅವಿಭಕ್ತ ಕುಟುಂಬಿಯಾದ ನಮ್ಮ ಅಣ್ಣ ಭೋಗ ನಂಜಪ್ಪನವರ ಮಗ ಬಸವಣ್ಣನ ಹೆಂಡತಿ ಬಸವಮ್ಮನು ಮಕ್ಕಳಿಲ್ಲದವಳಾಗಿ ನನ್ನ ಪೋಷಣೆಯಲ್ಲಿಯೇ ಇದ್ದು, ಕೆಲವರು ತುಂಟಜನರ ದುರ್ಬೋಧನೆಯಿಂದ ಸ್ವತಂತ್ರಿಸಿ ನಡೆಯುತ್ತಾ ಸೋಸಲೆ ಗ್ರಾಮದಲ್ಲಿ ನನ್ನ ಸ್ವಾಧೀನಾನುಭವದಲ್ಲಿರುವ ಜಮೀನುಗಳ ಪೈಕಿ 1ನೆ ನಂಬರ್ ಖಾತೆಯು ತನ್ನ ಹೆಸರಿನಲ್ಲಿದೆ ಎಂಬದರಮೇಲೆ ಸರ್ವೆ ನಂಬರು 1, 7, 15-2, 643 ಜಮೀನುಗಳನ್ನು ಆಧಾರ, ಭೋಗ್ಯ, ಕ್ರಯ, ಗೇಣಿ ಮೊದಲಾದ ವ್ಯವಹಾರ ನಡಿಸುವದಾಗಿ ತಿಳಿಯುಬರುತ್ತೆ. ಇವಳಿಗೆ ಈ ಹಕ್ಕು ಇರುವುದಿಲ್ಲವಾಗಿ ಮೇಲ್ಕಂಡ ಜಮೀನುಗಳ ಸಂಬಂಧವಾಗಿ ಅಥವಾ ಬೇರೆ ವಿಧವಾಗಿ ಇವಳು ಮಾಡಿದ ಲೇವಾದೇವಿಗೆ ನಾನು ಮತ್ತು ಕುಟುಂಬದ ಚರ, ಸ್ಥಿರ ಆಸ್ತಿಗಳು ಈಡಾಗಲಾರವೆಂದು ಸಮಸ್ತರಿಗೂ ಇದರಿಂದ ತಿಳಿಸಿರುತ್ತೇನೆ.

ತಾರೀಖು 9ನೆ ಫೆಬ್ರುವರಿ 1909. ಸಿದ್ದಲಿಂಗಮರಿದೇವರು.

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್, ತಾರೀಖು 15ನೆ ಫೆಬ್ರುವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಶಿವಮೊಗ್ಗ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಾಗುವ ಡಿಪೋಗಳ ಬಾಬತು ಚೌಬೀನೆಯನ್ನು ಇದರಡಿ ಕಂಡ ತಪಸೀಲ್ ಮೇರೆಗೆ ಆಯಾಯ ಡಿಪೋಗಳ ಬಾಜೂದಲ್ಲಿ ಕಾಣುವ ತಾರೀಖುಗಳಲ್ಲಿ ...ಗರ ಸಬ್ ಡಿವಿಜನ್ ಫಾರೆಸ್ಟು ಆಫೀಸರವರಿಂದಾಗಲಿ ಅವರಿಂದ ನೇಮಿಸಲ್ಪಟ್ಟ ಇತರ ಆಫೀಸರವರಿಂದಾಗಲಿ ಹರಾಜು ಮಾಡಿಸಲ್ಪಡುತ್ತೆ.

ಡಿಪೋ	ಹರಾಜು ತಾರೀಖು.	ಸಾಗುವಾನಿ ಚೆಲಗು. ನಂಬರು	ಸಾಗುವಾನಿ ಚೆಲಗು. ಸಲೆ ಅಡಿ	ಮತ್ತಿ. ನಂಬರು	ಮತ್ತಿ. ಸಲೆ ಅಡಿ	ನಂದಿ. ನಂಬರು	ನಂದಿ. ಸಲೆ ಅಡಿ	ಎತ್ತಿಗ. ನಂಬರು	ಎತ್ತಿಗ. ಸಲೆ ಅಡಿ	ಹುನಾಲ್. ನಂಬರು	ಹುನಾಲ್. ಸಲೆ ಅಡಿ	ಕಡವಾಲ್. ನಂಬರು	ಕಡವಾಲ್. ಸಲೆ ಅಡಿ	ನೇರ್ಲು. ನಂಬರು	ನೇರ್ಲು. ಸಲೆ ಅಡಿ	ಹಸರು ಗನ್ನಿ. ನಂಬರು	ಹಸರು ಗನ್ನಿ. ಸಲೆ ಅಡಿ
...ಕಾರ ...ಪುರ	25-2-09	618	2731½	45	928¼	6	154¼	10	282¼	7	182	1	28¼	7	185¼	2	31½
...ಳಿ ...ಪ್ಪ	27-2-09	34	582¾	...	...	33	755¼	9	124¾	13	420½	3	64	4	49¾	...	...

ಡಿಪೋ	ಜಂಬೀ. ನಂಬರು	ಜಂಬೀ. ಸಲೆ ಅಡಿ	ಹೊನ್ನೆ. ನಂಬರು	ಹೊನ್ನೆ. ಸಲೆ ಅಡಿ	ಬೀಟೆ. ನಂಬರು	ಬೀಟೆ. ಸಲೆ ಅಡಿ	ಬೆಳ್ಳಟ್ಟಿ. ನಂಬರು	ಬೆಳ್ಳಟ್ಟಿ. ಸಲೆ ಅಡಿ	ಕಾಡುಜಾತಿ ಚೆಲಗು. ನಂಬರು	ಕಾಡುಜಾತಿ ಚೆಲಗು. ಸಲೆ ಅಡಿ	ಮಸಿ. ನಂಬರು	ಮಸಿ. ಸಲೆ ಅಡಿ	ಕಾಲಾದ್ರಿ. ನಂಬರು	ಕಾಲಾದ್ರಿ. ಸಲೆ ಅಡಿ
...ಕಾರ ...ಪುರ	4	96¼	11	286½	3	27¼	1	19¼	3	13¼	...	...	...	...
...ಳಿ ...ಪ್ಪ	13	191	14	169¾	...	...	...	...	...	...	9	154	3	69¾

ಡಿಪೋ	ಹೆಬ್ಬಲಸು. ನಂಬರು	ಹೆಬ್ಬಲಸು. ಸಲೆ ಅಡಿ	ದೇವದ್ದಾರಿ. ನಂಬರು	ದೇವದ್ದಾರಿ. ಸಲೆ ಅಡಿ	ಕಾಡಬೆಳಲು. ನಂಬರು	ಕಾಡಬೆಳಲು. ಸಲೆ ಅಡಿ	ತಡಸಲ್. ನಂಬರು	ತಡಸಲ್. ಸಲೆ ಅಡಿ	ಕಿರಿಬಿದರು. ನಂಬರು	ಹೆಬ್ಬಿದರು. ಸಲೆ ಅಡಿ	ಷರಾ.
...ಕಾರ ...ಪುರ	...	...	...	...	...	...	...	...	355	32	ಸ್ವಲ್ಪ ಹೆಚ್ಚು ಕಡಮೆ
...ಳಿ ...ಪ್ಪ	7	114	1	59¾	6	109½	1	4	...	...	

ಹರಾಜ್ ಷರತ್ತು :—ಸಮೀಪವಾದ ಖಜಾನೆಗೆ ಪ್ರತಿ ಲಾಟು ತೆಗೆದುಕೊಂಡ ಹರಾಜುದಾರನು ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಹಣವನ್ನು ಹರಾಜು ತಾರೀಖು ಲಾಗಾಯಿತು 3 ದಿವಸಗಳೊಳಗೆ ಜಮೆ ಮಾಡಿಸಬೇಕು. ತಪ್ಪಿದಲ್ಲಿ 2ನೆ ಹರಾಜು ...ಮಾಡಿಸಿ ನಷ್ಟದ ಮೊಬಲಗಿಗೆ ಅವಲ್ ಹರಾಜುದಾರನಿಗೆ ಗುರಿಪಡಿಸುತ್ತೆ. ಷುರು ಹರಾಜಿನ ಹಣಕ್ಕಿಂತ ಜಾಸ್ತಿ ಬಂದಲ್ಲಿ ಅಂಥಾ ಹಣಕ್ಕೆ ಅವಲ್ ಹರಾಜ್‌ದಾರನು ಅರ್ಹನಲ್ಲಾ.

(2) ಬಾಕೀ ಹಣವನ್ನು ಹರಾಜು ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಪಾವತಿ ಮಾಡಬೇಕು. ತಪ್ಪಿದಲ್ಲಿ ಷುರುಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತೆ. ಅಲ್ಲದೇ ಮೇಲೆ ನಮೂದಿಸಿದಂತೆ ದುಸರಾ ಹರಾಜು ಮಾಡಿಸುತ್ತೆ.

(3) ಪೂರಾ ಹಣ ಪಾವತಿ ಮಾಡಿ ಲೈಸೆನ್ಸು ಪಡೆದ ವಿನಹ ಯಾವ ಚೌಬೀನೆಯನ್ನಾಗಲಿ ರಫ್ತು ಮಾಡಿಕೊಳ್ಳಕೂಡದು.

(4) ಹರಾಜಾದ ಚೌಬೀನೆಯನ್ನು ಹರಾಜು ತಾರೀಖು ಲಾಗಾಯಿತು 90 ದಿವಸಗಳೊಳಗೆ ರಫ್ತು ಮಾಡದೇ ಬಿಟ್ಟಲ್ಲಿ ಹರಾಜುದಾರ್ರು ಡಿಪೋ ಬಾಡಿಗೆಯನ್ನು ಹರಾಜು ಮೊಬಲಗಿನ ಮೇಲೆ ಸಾಲಿಯಾನಾ ಶೇಕಡಾ 12 ರೂಪಾಯಿನಂತೆ ಹರಾಜು ತಾರೀಖು ...ಗಾಯಿತು ವಸೂಲ್ಮಾಡಲ್ಪಡುತ್ತೆ.

ಎ. ಪೊನ್ನುಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್, ಶಿವಮೊಗ್ಗ ಡಿಸ್ಟ್ರಿಕ್ಟು

ಮೈಸೂರ ಗೆಜೆಟ್.

ಸಂ 44.] ಸರ್ಕಾರದಿಂದ ಖಾಯಿಷ್ ಆದ್ದು. [ನಂ. 8.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 25, ಸನ್ 1909.

II ನೆ ಭಾಗ

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಫಾರೆಸ್ಟು ಇಲಾಖಾ.

1908ನೆ ಇಸವಿ ಏಪ್ರಿಲ್ 24.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಜಂಗಲ್ ಪಸಾರೆ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ಸ್ಥಳ.	ಹರಾಜು ತಾರೀಖು.	ಹರಾಜು ಮಾಡಿಸುವ ಆಫಿಸರವರ ಹೆಸರು.	ಪಸಾರೆ ಜಿನಸಿ ಮೊತ್ತ.			
				ಅವ್ವಲ್ ಅರಗು.		ಅಳಲೆಕಾಯಿ.	
				ಮಣ.	ಪ.	ಮಣ.	ಪ.
1	ಶ್ರೀರಂಗಪಟ್ಟಣದ ಕೋಠಿ ...	13—3—1909	ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು.	100	0	1,600	0

ಷರತ್ತು :—1887ನೆ ಇಸವಿ ಜೂನ್ 18ನೆ ಮುಕ್ಕಾಂ ಮೈಸೂರು ಗೆಜೆಟ್ಟಿನ 287—288ನೆ ಪುಟಗಳಲ್ಲಿ ಇರುವ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂನ್ 11ನೆ ಮುಕ್ಕಾಂ ನೋಟಿಫಿಕೇಷನನ್ನು ನೋಡಿ.

ಇಸ್ತಿಹಾರ್ನಾಮಾ, ತಾರೀಖು 12ನೆ ಫೆಬ್ರವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉಡ್ಯಾರ್ಡ್.	11—3—09	ಸಾಗ್ವಾನಿ ನಾಟು ...	800	25,000	—
			ಡಿಟೋ ಜಂತಿಗಳು ...	400	5,000	
			ಹೊನ್ನೆ ನಾಟು ...	150	4,000	
			ಡಿಟೋ ಜಂತಿಗಳು ...	20	1,000	
			ಮತ್ತಿ ನಾಟು	200	5,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟು ...	25	1,000	
			ಕಾಡು ನಾಟು ...	25	500	
2	ನಂಜನಗೂಡು ಡಿಪೋ	12—3—09	ಸಾಗುವಾನಿ ನಾಟು ...	100	3,000	[illegible]
			ಡಿಟೋ ಜಂತಿಗಳು ...	100	1,000	
			ಹೊನ್ನೆ ನಾಟು	100	2,000	
			ಡಿಟೋ ಜಂತಿಗಳು ...	100	500	
			ಮತ್ತಿ ನಾಟು ...	100	1,500	
			ಡಿಟೋ ಜಂತಿಗಳು ...	10	120	
			ಬೀಟೆ ನಾಟು ..	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟು ...	20	500	

ಹರಾಜು ಷರತ್ತುಗಳು.

1. ಜಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರೆ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 12ನೆ ಫೆಬ್ರವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ನಮೂದಾಗುವ ತಪಶೀಲ್ ಮೇರಿಗೆ ಶಿವಮೊಗ್ಗಾ ಡಿಪೋದಲ್ಲಿರುವ ಚೌಬೀನೆಯನ್ನು ತಾರೀಖು 10ನೆ ಮಾರ್ಚಿ 1909ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಆಫಿಸರವರಿಂದಲಾಗಲಿ ಹರಾಜು ಮಾಡಿಸಲ್ಪಡುತ್ತೆ :—

(1) ಸಾಗುವಾನಿ ನಾಟ ...	300	(5) ಸಾಗುವಾನಿ ಜಲಗು ...	50
(2) ಇತರ ಮನ್ನಾ ಜಾತಿ ನಾಟ ...	300	(6) ಕಾಡುಜಾತಿ ಜಲಗು ...	100
(3) ಮತ್ತಿನಾಟ ...	200	(7) ಕಿರಿಬಿದರು ...	2,000
(4) ಇತರ ಕಾಡುಜಾತಿ ನಾಟ ...	300	(8) ಹೆಬ್ಬಿದರು ...	800

ಹರಾಜು ಷರತ್ತು:—ಸವಿಾಪವಾದ ಖಜಾನೆಗೆ ಪ್ರತಿ ಲಾಟು ತೆಗದುಕೊಂಡ ಹರಾಜುದಾರನು ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಹಣವನ್ನು ಹರಾಜು ತಾರೀಖು ಲಾಗಾಯಿತು 5 ದಿವಸಗಳೊಳಗೆ ಜನೆ ಮಾಡಿಸಬೇಕು. ತಪ್ಪಿದಲ್ಲಿ 2ನೆ ಹರಾಜು ಮಾಡಿಸಿ ನಷ್ಟದ ಮೊಬಲಗಿಗೆ ಅವಲ್ ಹರಾಜುದಾರನಿಗೆ ಗುರಿಪಡಿಸುತ್ತೆ. ಷುರು ಹರಾಜಿಗಿಂತ ಜಾಸ್ತಿ ಹಣ ಬಂದಲ್ಲಿ ಅಂಥಾ ಹಣಕ್ಕೆ ಅವಲ್ ಹರಾಜುದಾರನು ಅರ್ಹನಲ್ಲ.

(2) ಬಾಕೀ ಹಣವನ್ನು ಹರಾಜು ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಪಾವತಿ ಮಾಡಬೇಕು. ತಪ್ಪಿದಲ್ಲಿ ಷುರು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತೆ. ಅಲ್ಲದೆ ಮೇಲೆ ನಮೂದಿಸಿದಂತೆ ದುಸರಾ ಹರಾಜು ಮಾಡಿಸುತ್ತೆ.

(3) ಪೂರಾ ಹಣ ಪಾವತಿ ಮಾಡಿ ಲೈಸೆನ್ಸ್ ಪಡದ ವಿನಹ ಯಾವ ಚೌಬೀನೆಯನ್ನಾಗಲಿ ರಫ್ತು ಮಾಡಿಕೊಳ್ಳಕೂಡದು.

(4) ಹರಾಜಾದ ಚೌಬೀನೆಯನ್ನು ಹರಾಜು ತಾರೀಖು ಲಾಗಾಯಿತು 90 ದಿವಸಗಳೊಳಗೆ ರಫ್ತು ಮಾಡದೆ ಬಿಟ್ಟಲ್ಲಿ ಹರಾಜುದಾರರು ಡಿಪೋ ಬಾಡಿಗೆಯನ್ನ ಹರಾಜು ಮೊಬಲಗಿನಮೇಲೆ ಸಾಲಿಯಾನ ಶೇಕಡ 12 ರೂಪಾಯಿನಂತೆ ಹರಾಜು ತಾರೀಖು ಲಾಗಾಯಿತು ವಸೂಲ್ ಮಾಡಲ್ಪಡುತ್ತೆ.

ಎ. ಪೊನ್ನಸಾವಿು ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

ಸರ್ 1909ನೆ ಇಸವಿ ಜನವರಿ 30 ರಲ್ಲು.

ಸರ್ 1909ನೆ ಏಪ್ರಿಲ್ ಮಾಹೆ 2ನೆ ತಾರೀಖು ಲಾಗಾಯಿತು 3ನೆ ತಾರೀಖು ವರಿವಿಗೆ ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವ ನಡೆಯುವ ಕಾಲದಲ್ಲಿ, ಸದರೀ ಸ್ಥಳದಲ್ಲಿ ಒಂದು ದನಗಳ ಪ್ರದರ್ಶನ ನಡಿಯುತ್ತೆ.

II. ಪ್ರದರ್ಶನದಲ್ಲಿ ಉತ್ತಮ ದನಗಳಿಗೆ ಈ ಕೆಳಗೆ ಕಂಡಂತೆ ಬಹುಮಾನಗಳು ದೊರೆಯುತ್ತೆ.

A ಕ್ಲಾಸ್. ವ್ಯವಸಾಯದ ಎತ್ತುಗಳು.	1ನೆ ಬಹುಮಾನ	...	20	A ಕ್ಲಾಸ್. ಒಟ್ಟು ರೂಪಾಯಿ	55
	2ನೆ ,,	...	15		
	3ನೆ ,,	...	10		
	4ನೆ ,,	...	10		
B ಕ್ಲಾಸ್. ಬೀಜದ ಗೂಳಿಗಳು.	1ನೆ ಬಹುಮಾನ	...	15	B ಕ್ಲಾಸ್. ಒಟ್ಟು ರೂಪಾಯಿ	25
	2ನೆ ,,	...	10		
C ಕ್ಲಾಸ್. ಕರುಗಳು.	ಪ್ರತಿಯೊಂದಕ್ಕೂ 5 ರೂಪಾಯಿನಂತೆ ನಾಲ್ಕು ಬಹುಮಾನ.			C ಕ್ಲಾಸ್. ಒಟ್ಟು ರೂಪಾಯಿ	20
D ಕ್ಲಾಸ್. ಬಳ್ಳೆ ಕರುಗಳನ್ನು ಕೊಡುವ ಹಸು.	1ನೆ ಬಹುಮಾನ	...	10	D ಕ್ಲಾಸ್. ಒಟ್ಟು ರೂಪಾಯಿ	10
				ಒಟ್ಟು ಜುಮ್ಲಾ ರೂ.	110

III. ಬಹುಮಾನವನ್ನು ಕೊಡಲು ಒಂದು ಕಮಿಟಿಯನ್ನು ಏರ್ಪಡಿಸುತ್ತೆ. ಸದರೀ ಕಮಿಟಿಯು ತೀರ್ಮಾನವು ಅಖೈರಾಗಿರುತ್ತೆ. ಕಮಿಟಿಯುವರ ತೀರ್ಮಾನಕ್ಕೆ ಕಾರಣ ಕೇಳಕೂಡದು.

IV. ಸ್ಥಳದಲ್ಲಿ ಹುಲ್ಲು ದೊರೆಯುಲು ಏರ್ಪಾಡು ಇಡುತ್ತೆ. ಆದರೆ ದನಗಳ ಸ್ವಂತಗಾರರೂ ತಮ್ಮ ಜಾಗರೂಕತೆಯಲ್ಲಿ ಇರುವದು ಅನುಕೂಲ.

V. ಪ್ರದರ್ಶನಕ್ಕೆ ದನಗಳನ್ನು ತರಲು ಇಷ್ಟವುಳ್ಳವರು ನಂಜನಗೂಡು ತಾಲ್ಲೂಕು ಆವಿಾಲರವರಿಗೆ ಜಾತ್ರೆ ಮೊದಲಾಗುವದಕ್ಕೆ ಕೊನೇಪಕ್ಷ 2 ದಿವಸ ಮೊದಲಾಗಿ ಬರೆದುಕೊಳ್ಳಬೇಕು.

VI. ಪ್ರದರ್ಶನ ನಡೆಯುವ ಸ್ಥಳವು ದನಗಳು ಸೇರಲು ಅನುಕೂಲವಾದ್ದಾಗಿದೆ. ಮೈಸೂರು ಮತ್ತು ಬ್ರಿಟಿಷ್ ಶೀಮೆಯಿಂದ ಅನೇಕ ಜನಗಳು ಸೇರುವದ್ದರಿಂದ, ದನಗಳ ವ್ಯಾಪಾರ ಚನ್ನಾಗಿ ನಡೆಯುಬಹುದು.

ಇಸ್ತಿಹಾರ್ನಾಮೆ.

ತಾರೀಖು 27ನೆ ಜನವರಿ 1909.

ಎಡತೊರೆ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಚಾಮುಲಾಪುರ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಸದರಿ ಜೋಡಿ ಚಾಮುಲಾಪುರ ಗ್ರಾಮದಲ್ಲಿ 1909ನೆ ಏಪ್ರಿಲ್ ಮಾಹೆ 12ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ. ಮೇಲ್ಕಂಡ ತಾರೀಖಿನಲ್ಲಿ ಹರಾಜು ಅಪ್ಪರ್ಕ ಆದಲ್ಲಿ ಮಾರನೇ ದಿವಸ ಎಡತೊರೆ ತಾಲ್ಲೂಕು ಕಛೇರಿಯಲ್ಲಿ ಹರಾಜು ನಡಿಸಲ್ಪಡುತ್ತೆ.

ಹೆಚ್ಚು ತಖ್ಸೀಲಿಗೆ ಸರ್ 190 ನೆ ಇಸವಿ ಫೆಬ್ರುವರಿ 11ನೆ ಮರ್ಕೂಂ ಮೈಸೂರು ಗಜೆಟ್ಟಿನ 2ನೆ ಭಾಗದ 81ನೆ ಪೇಜು ನೋಡತಕ್ಕದ್ದು.

ತಾರೀಖು 27ನೆ ಜನವರಿ 1909.

ಎಡತೊರೆ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಸರ್ವಮಾನ್ಯ ದಿಡ್ಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಎಡತೊರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಏಪ್ರೆಲ್ 5ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಸೀಲಿಗೆ ಸರ್ 1909ನೆ ಇಸವಿ ಫೆಬ್ರುವರಿ 11ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 32ನೆ ಪೇಜು ನೋಡತಕ್ಕದ್ದು.

ತಾರೀಖು 29ನೆ ಜನವರಿ 1909.

ಹುಣಸೂರು ತಾಲ್ಲೂಕು ಪೆರಿಯಾಪಟ್ಟಣದ ಹೋಬಳಿಗೆ ಸೇರಿದ ಜೋಡಿ ಗುಡ್ಡೇನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಗುಡ್ಡೇನಹಳ್ಳಿ ಗ್ರಾಮದಲ್ಲಿ 1909ನೆ ಏಪ್ರೆಲ್ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಸೀಲು ಬಗ್ಗೆ ಸರ್ 1909ನೆ ಇಸವಿ ಫೆಬ್ರುವರಿ 11ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 80ನೆ ಪೇಜು ನೋಡತಕ್ಕದ್ದು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ.

ಹಾಸನ ಡಿಸ್ಟ್ರಿಕ್ಟು.

ಸರ್ 1908ನೆ ಇಸವಿ ಡಿಸೆಂಬರ್ ಮಾಹೆ ತಾರೀಖು 14ರಲ್ಲಿ ನಡೆದ ಹಾಸನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ ಪ್ರೊಸೀಡಿಂಗ್ಸ್.

ಹಾಜರು.

ಟಿ. ಆರ್. ಡಬ್ಲ್ಯು. ವೆದರಾಲ್, ಎಸ್‌ಕ್ವೈರ್, ಪ್ರೆಸಿಡೆಂಟರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮ|| ನರಸಿಂಗರಾವ್ ಪೂರ್ಣಯ್ಯನವರು, ಬಿ. ಎ., ವೈಸ್ ಪ್ರೆಸಿಡೆಂಟರವರು.
,, ಸಿ. ದೇವರಾಜೇ ಅರಸ್, ಜನರಲ್ ಅಸಿಸ್ಟೆಂಟ್ ಕಮಿಷನರವರು.
,, ಎ. ಕೃಷ್ಣಸ್ವಾಮಿ ಐಯ್ಯಂಗಾರ್, ಬಿ. ಎ., ಅಸಿಸ್ಟೆಂಟ್ ಕಮಿಷನರವರು, ಸಕಲೇಶಪುರ.
,, ಎಚ್. ಜೆ. ಮೊಲ್ಲಾಯಿ, ಎಗ್ಜಿಕ್ಯೂಟಿವ್ ಇಂಜಿನಿಯರ್, ಹಾಸನದ ಡಿವಿಜನ್.
,, ಸಿ. ರಾಜಾರಾಮರಾವ್, ಎಲ್. ಎಂ. ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
,, ಎಂ. ಕೆ. ತಿರುಮಲಾಚಾರ್ಯರು, ಬಿ. ಎ., ಸ್ಕೂಲುಗಳ ಡೆಪ್ಯುಟಿ ಇನಸ್ಪೆಕ್ಟರು, ಹಾಸನ.

ನಾನ್ ಅಫಿಷಿಯಲ್ ಮೆಂಬರುಗಳು.

ಮ|| ಎಂ. ಲಕ್ಷ್ಮೀನರಸಿಹ್ಮಾಚಾರ್ಯರು, ಹಾಸನ.
,, ಕೇಣಿ ಮಹದೇವಪ್ಪನವರು, ಹಾಸನ.
,, ಡಬ್ಲ್ಯು. ಎಲ್. ಕ್ರಾಫರ್ಡ್, ಮಂಜರಾಬಾದ್.
,, ಐಗೂರು ಮಲ್ಲೇಗೌಡರು, ಮಂಜರಾಬಾದು.
,, ಪುಟ್ಟೇಗೌಡ ಉರುಫ್ ನಂಜೇಗೌಡರು, ಮಂಜರಾಬಾದು.
,, ಹೆಚ್. ದಾಸಪ್ಪನವರು, ಅರಸೀಕೆರೆ.
,, ಕೆಂಚರಾಯ ಶೆಟ್ಟರು, ಅರಸೀಕೆರೆ.
,, ಜೆ. ತಿರುನಾರಣೈಯ್ಯಂಗಾರ್ರವರು, ಚನ್ನರಾಯಪಟ್ಣ.
,, ಧರಣೈಯ್ಯಶೆಟ್ಟರು, ಚನ್ನರಾಯಪಟ್ಣ.
,, ನಂಜಂಣನವರು, ಚನ್ನರಾಯಪಟ್ಣ.
,, ಎಸ್. ಡಿ. ವೆಂಕಟರಾಮೈಯ್ಯನವರು, ಹೊಳೇನರಸೀಪುರ.
,, ಕೆ. ರಾಮುಶೆಟ್ಟರು, ಹೊಳೇನರಸೀಪುರ.
,, ಅಬ್ದುಲ್ಲಾಸಾಬರು, ಅರಕಲಗೂಡು.
,, ಮಹಲಿಂಗೇಗೌಡರು, ಅರಕಲಗೂಡು.

ಗೈರ್ ಹಾಜರು.

ಮ|| ತಮ್ಮೈಯ್ಯನವರು, ಬೇಲೂರು.
,, ಹಬೀಬುಲ್ಲಸಾಬರು, ಬೇಲೂರು.
,, ಸೂರ್ಯನಾರಾಯಣಶೆಟ್ಟರು, ಅರಕಲಗೂಡು.
,, ಗುರುಲಿಂಗೇಗೌಡರು, ಆಲೂರು.

I. (*a*) ಅರಸೀಕೆರೆ ತಾಲ್ಲೂಕು ಕೆಂಕೆರೆ ಯೂನಿಯನ್ನಿಗೆ ಸೇರಿದ ಮಾವಿನಕೆರೆ ಗ್ರಾಮದ ತಿಮ್ಮೇಗೌಡ ವಗೈರೇರು ತಮ್ಮ ಗ್ರಾಮವನ್ನು ಕೆಂಕೆರೆ ಯೂನಿಯನ್ನಿಗೆ ಸೇರಿಸಕೂಡದೆಂದು ಬರಮಾಡಿಕೊಂಡ ಅರ್ಜಿಯನ್ನು ಫೈಸಲ್ ಬಗ್ಯೆ ಕಳುಹಿಸಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ 30—9—08ರ ಮರ್ಕುಂ 3442—L. B. 40-08-5ನೆ ನಂಬರ್ ಓದಲಾಯಿತು.

(*b*) ಮಾವಿನಕೆರೆ ಗ್ರಾಮವು ಅಸಲಿ ಗ್ರಾಮವಾದ ಕೆಂಕೆರೆ ಗ್ರಾಮಕ್ಕೆ ಸಮೀಪವಾಗಿರುವದರಿಂದಲೂ ಮತ್ತು ದಾಖಲೆ ಗ್ರಾಮವಾಗಿರುವದರಿಂದಲೂ ಇದನ್ನು ಕೆಂಕೆರೆ ಯೂನಿಯನ್ನಿಗೆ ಸೇರಿಸಿಕೊಳ್ಳಬಹುದಾಗಿಯೂ ಮತ್ತು ಇತರ ಗ್ರಾಮಗಳನ್ನು ಈ ಯೂನಿಯನ್ನಿಗೆ ಸೇರಿಸದೆ ಬಿಡಬಹುದೆಂಬ ಕೆಂಕೆರೆ ಯೂನಿಯನ್ ಪಂಚಾಯಿತದ ಮತ್ತು ಅರಸೀಕೆರೆ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ರವಾನಿಸಿರುವ ಅರಸೀಕೆರೆ ತಾಲ್ಲೂಕು ಅಮಲ್ದಾರ್ರು 19—10—08ರ ಮರ್ಕುಂ 161—1506ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ—ಅಸಲಿ ಗ್ರಾಮವಾದ ಕೆಂಕೆರೆ ಗ್ರಾಮವನ್ನು ಒಳಗೊಂಡಿರುವ ಈ ಯೂನಿಯನ್ನಿಗೆ ಮಾವಿನಕೆರೆ ದಾಖಲೆ ಗ್ರಾಮವನ್ನು ಸೇರಿಸಿಕೊಳ್ಳತಕ್ಕದ್ದು ಅವಶ್ಯವೆಂತಲು ಮತ್ತು ಮಿಕ್ಕ 5 ದಾಖಲೆ ಗ್ರಾಮಗಳು ಅಸಲಿ ಗ್ರಾಮಕ್ಕೆ ಎಷ್ಟು ಫಾಸಲೆಯಲ್ಲಿವೆ ಮತ್ತು ಈ ಪ್ರತಿ ಗ್ರಾಮದ ಪ್ರಜಾ ಸಂಖ್ಯೆ ಸಹಾ ತಿಳಿಯಬೇಕಾಗಿ ತೀರ್ಮಾನಿಸಲಾಯಿತು.

II. ಇರಗೇಷನ್ ಸೆಸ್ಸು ಫಂಡ್ಸು ವಿಲೆವಾರಿ ವಿಚಾರದಲ್ಲಿ ಮತ್ತು ಈ ಬಗ್ಯೆ ಅಂದಾಜುಗಳು ತಯಾರುಮಾಡತಕ್ಕ ವಿಚಾರದಲ್ಲಿ ಕಾನೂನುಗಳನ್ನು ವಿಧಾಯಕಮಾಡಿ ಬಂದ 24—9—08ರ ಮರ್ಕುಂ 2080-96—L. R. 585-07-1ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು.

ತೀರ್ಮಾನ—ಈ ಮೊದಲೆ ಕೇಳಿರುವ ತಪಸೀಲುಗಳು ತಾಲ್ಲೂಕು ಬೋರ್ಡುಗಳಿಂದ ಬಂದ ನಂತರ ಗವರ್ನ್ಮೆಂಟಿಗೆ ಜವಾಬು ಬರಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

III. ಅರ್ಕಲಗೂಡು-ಕೊಡ್ಲಿಪೇಟೆ-ಮಂಜರಾಬಾದು ರೋಡುಮೇಲೆ ಕೆರೋಡಿ ಸಮೀಪದಲ್ಲಿ ಮೈಸೂರು ಟೋಲ್‌ಗೇಟು ಇರುವದರಿಂದ ಎಡೆಹಳ್ಳಿಯಲ್ಲಿರುವ ತಮ್ಮ ಟೋಲು ಗೇಟಿನ ಉತ್ಪತ್ತಿ ಕಮ್ಮಿ ಆಗುವದೆಂದು ಕುರ್ಗು ಡಿಸ್ಟ್ರಿಕ್ಟು ಬೋರ್ಡಿನವರು ಆಕ್ಷೇಪಿಸುವದಾಗಿಯು ಮತ್ತು ಈ ಟೋಲು ಗೇಟನ್ನು ಇದು ಹಾಲಿ ಇರುವ ಜಂಕ್ಷನ್ನಿಗು ಮತ್ತು ಮೈಸೂರು-ಕೊಡಗು ಎಲ್ಲೆ-ಯಸಳೂರುಪೇಟೆ ಮೂಲಕ ಗಾಡಿಗಳು ನಿರ್ಬಂಧವಿಲ್ಲದೆ ಸಾಗುವದಕ್ಕೆ ಅನುಕೂಲವಾಗುವ ಜಾಗಾವಲ್ಲಿಗೂ ನಡುವೆಯಲ್ಲಿ ಯಾದರು ಸ್ಥಾಪಿಸುವ ವಿಚಾರದಲ್ಲಿ ಹಾಸನದ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರ ಮತ್ತು ಬೋರ್ಡಿನವರ ಅಭಿಪ್ರಾಯ ತಿಳಿಸಬೇಕಾಗಿ ಬಂದ ಗೌರ್ನಮೆಂಟು ರೆವಿನ್ಯೂ ಮತ್ತು ಜನರಲ್ ಸೆಕ್ರೆಟರಿಯವರ 19-20—10—08ರ ಮರ್ಕುಂ 3746—L. B. 128-08-2ನೆ ನಂಬರ್ ಲೆಟರ್ ಓದಲಾಯಿತು.

ತೀರ್ಮಾನ.—ಕೊಡಗಿನ ಎಡೆಹಳ್ಳಿ ಟೋಲ್‌ಗೇಟು ಈ ಬೋರ್ಡಿನ ಅನುಮತಿ ಇಲ್ಲದೆ ಸ್ಥಾಪಿಸಲ್ಪಟ್ಟಿರುವದಾಗಿ ಈ ಬೋರ್ಡಿನವರು ಅಭಿಪ್ರಾಯಪಟ್ಟಿರುವದರಿಂದಲೂ ಮತ್ತು ಯಸಳೂರು-ಕೆರೋಡಿ ರಸ್ತೆ ರಿಪೇರಿ ವಗೈರೆ ಕಾಂಗಾರಿ ಲಾಗೋಡು ಈ ಬೋರ್ಡಿನಿಂದಲೆ ಕೊಡಬೇಕಾಗಿರುವದರಿಂದಲೂ ಈ ರಸ್ತೆ ಮೇಲೆ ಸಾಗುವ ಗಾಡಿಗಳ ಮೇಲಿನ ಟೋಲನ್ನು ಬಿಡಲಿಕ್ಕೆ ಸಾಕಾದಷ್ಟು ಕಾರಣ ಕಂಡು ಬಂದಿರುವದಿಲ್ಲ ಆದರೆ ಕೆರೋಡಿ ಟೋಲ್ ಗೇಟನ್ನು ಹಾಲಿ ಇರುವ ಸ್ಥಳದಿಂದ ತಪ್ಪಿಸಿ ಕ್ಯಾತೆಹೊಳೆ ಕೊಡಗು ಎಲ್ಲೆ ಬಳಿ ಇಡುವದಕ್ಕೆ ಬದಲಾಗಿ ಎಡೆಹಳ್ಳಿ ಟೋಲ್ ಗೇಟಿನಲ್ಲಿ ಟೋಲು ಪಾವತಿ ಮಾಡಿದ ಬಗ್ಯೆ ರಶೀತಿಯನ್ನು ಹಾಜರ್ಪಡಿಸತಕ್ಕ ಗಾಡಿಗಳು ಕೆರೋಡಿ ಟೋಲುಗೇಟು ಬಳಿ ಪುನಹ ಟೋಲು ಪಾವತಿ ಮಾಡತಕ್ಕ ನಿರ್ಬಂಧವನ್ನು ವಜಾ ಮಾಡಬಹುದಾಗಿಯೂ 1909ನೆ ಇಸವಿ ಏಪ್ರೆಲ್ ತಾರೀಖು 1ಕ್ಕೆ ಎಡೆಹಳ್ಳಿ ಟೋಲುಗೇಟು ಕಂಟ್ರಾಕ್ಟಿನ ಕ್ಲುಪ್ತಕಾಲ ಪೂರೈಸುವದರಿಂದ ಈ ಏರ್ಪಾಡು ಆ ತಾರೀಖು ವರಿಗೂ ಜಾರಿಯಲ್ಲಿ ಇರತಕ್ಕದ್ದು ಮತ್ತು ಇದರಂತೆ ರಿಯಾಯಿತಿ ಎಡೆಹಳ್ಳಿ ಟೋಲುಗೇಟಿನಲ್ಲಿ ತೋರಿಸಲ್ಪಡುವದಾದರೆ ಮೇಲ್ಕಂಡಂತೆ ಏರ್ಪಾಡು ಇಡಬಹುದಾಗಿ ಅಭಿಪ್ರಾಯ ಪಡಲಾಯಿತು.

IV. (*a*) ಹಾಲಿ ಕ್ಷಾಮಕಾಲವಾಗಿರುವದರಿಂದ ಕುಡಿಯುವ ನೀರಿನ ಭಾವಿಗಳೇ ಮೊದಲಾದ ಸಮಸ್ತ ಜನಗಳಿಗೂ ಉಪಯೋಗವಾಗುವ ಕೆಲಸಕ್ಕೋಸ್ಕರ ಲೋಕಲ್ ಫಂಡ್ಸು ಜನರಲ್‌ನಿಂದ 20,000 ರೂಪಾಯಿಗಳನ್ನು ಮಂಜೂರ್ಮಾಡಿರುತ್ತೆಂಬ 31—10—08ರ ಮರ್ಕುಂ ರೆ. 2541-51—ಅಗ್ರಿ. 69-08-3ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು

(*b*) ಲೋಕಲ್ ಫಂಡ್ಸು ಜನರಲ್‌ನಿಂದ ಕೊಟ್ಟಿರುವ 20,000 ರೂಪಾಯಿಗಳ ಪೈಕಿ 2,500 ರೂಪಾಯಿಗಳನ್ನು ಅರಸೀಕೆರೆ ಮತ್ತು ಚನ್ನರಾಯಪಟ್ಣ ತಾಲ್ಲೂಕುಗಳಲ್ಲಿ ಭಾವಿಗಳನ್ನು ತೆಗೆಯುವದಕ್ಕೋಸ್ಕರ ಹಂಚಿಕೊಟ್ಟಿರುತ್ತೆಂಬ ರೆವಿನ್ಯೂ ಕಮಿಷನರ್ ಸಾಹೇಬರವರ 16—11—08ರ ಮರ್ಕುಂ ಡಿ. 23-34ನೆ ನಂಬರ್ ಸರ್ಕ್ಯುಲರ್ ಓದಲಾಯಿತು.

(*c*) ಈ ಎರಡು ತಾಲ್ಲೂಕುಗಳಲ್ಲಿಯೂ ಮೇಲ್ಕಂಡ ಗ್ರಾಂಟಿನಿಂದ ಮಂಜೂರಾದ ಭಾವಿ ಕಾಂಗಾರಿಗಳ ಪಟ್ಟಿ ಓದಲಾಯಿತು.

(*d*) ನೀರಿಗೆ ತುಟಾಗ್ರಿಯಾಗಿರುವ ಪ್ರದೇಶಗಳಲ್ಲಿ ಕುಡಿಯುವ ನೀರಿಗೋಸ್ಕರ ಇನ್ನು ಕೆಲವು ಭಾವಿಗಳು ತೋಡಿಸುವದಕ್ಕೋಸ್ಕರ ಸದ್ಯಕ್ಕೆ 3,000 ರೂಪಾಯಿಗಳನ್ನು ಮಂಜೂರ್ಮಾಡಿರುತ್ತೆಂಬ ರೆವಿನ್ಯೂ ಕಮಿಷನರ್ ಸಾಹೇಬರವರ 10—12—08ರ ಮರ್ಕುಂ 107—ಡಿ. ನೆ ನಂಬರು ಅಫಿಷಿಯಲ್ ಮೆಮೊರಾಂಡಂ ಓದಲಾಯಿತು.

ತೀರ್ಮಾನ—ಈ ಕ್ಷಾಮ ಕಾಲದಲ್ಲಿ ಅತ್ಯವಶ್ಯಕವಾಗಿಯು ಮತ್ತು ಜರೂರಾಗಿಯೂ ನಡಿಯಬೇಕಾದ ಕೆಲಸಗಳಿಗೋಸ್ಕರ ದಯಾಳುಗಳಾದ ಗೌರ್ನಮೆಂಟಿನವರು ಡಿಸ್ಟ್ರಿಕ್ಟು ಫಂಡ್ಸಿಗೆ ಗ್ರಾಂಟ್ ಇನ್‌ಏಡ್ ಆಗಿ ಲೋಕಲ್ ಫಂಡ್ಸು

ಜನರಲ್‌ನಿಂದ ವಿಶೇಷವಾಗಿ ಹಣ ಮಂಜೂರ್ಮಾಡಿರುವದಕ್ಕಾಗಿ ಈ ಬೋರ್ಡಿನವರು ಮನಃಪೂರ್ವಕವಾದ ವಂದನೆಗಳನ್ನು ಗವರ್ನಮೆಂಟಿಗೆ ಸಮರ್ಪಿಸಬೇಕೆಂತ ತೀರ್ಮಾನಿಸಲಾಯಿತು. ಮತ್ತು ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿರುವ ಅಂದಾಜಗಳನ್ನು ಒಪ್ಪಲಾಯಿತು.

V. ಕೊಡಗಿನ ಜ್ಯುರಿಸಡಿಕ್ಷನ್‌ನಲ್ಲಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಈ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರುಗಳು ಚುನಾಯಿಸತಕ್ಕ ಒಂದು ಜಾಗಾದಲ್ಲಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ಒಂದು ಟೋಲು ಗೇಟನ್ನು ಸ್ಥಾಪಿಸುವದಕ್ಕೆ ಅವಕಾಶ ಕೊಡಬೇಕಾಗಿಯು ಈ ಟೋಲು ಗೇಟು ಉತ್ಪತ್ತಿಯು ಆಯಾಯ ಬೋರ್ಡಿನ ಮೈಲೇಜಿಗೆ ಅನುಸಾರವಾಗಿ ಹಂಚಲ್ಪಡಬೇಕಾಗಿಯು ಇದರಂತೆ ಏರ್ಪಾಡಾಗಬೇಕಾದರೆ ಆಯಾಯ ಸ್ಥಳೀಯ ಅಧಿಕಾರಿಗಳು ಇನ್ನು 5 ಸಾಲುಗಳ ಒಳಗಾಗಿ ಮೈಲಿ 1ಕ್ಕೆ 1,000 ರೂಪಾಯಿಗಳಿಗೆ ಕಮ್ಮಿ ಇಲ್ಲದಂತೆ ಖರ್ಚು ಮಾಡತಕ್ಕದ್ದೆಂದು ಕೊಡಗಿನ ಚೀಫ್ ಕಮಿಷನರ್ ಸಾಹೇಬರವರು ಸೂಚಿಸಿ ಇರುತ್ತಾರೆಯಾಗಿಯು ಈ ಏರ್ಪಾಡು ಈ ಬೋರ್ಡಿನವರಿಗೆ ಸಮರ್ಪಕವಾಗಿದೆಯೆ ಈ ವಿಚಾರದಲ್ಲಿ ಬೋರ್ಡಿನವರ ತೀರ್ಮಾನವನ್ನು ನಿಸಿ ರಿಪೋರ್ಟು ತಿಳಿಸಬೇಕೆಂಬ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ 21—11—08ರ ಮರ್ಸ್ಕಂ 479—ಲೋ. ಬೋ. 177-08-2ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಕೊಡಗಿನ ಡಿಸ್ಟ್ರಿಕ್ಟ್ ಬೋರ್ಡಿನವರು ಸೂಚಿಸಿ ಇರುವಂತೆ ಬರುವ 5 ಸಾಲು ಒಳಗಾಗಿ ಅರ್ಕಲಗೂಡು ತಾಲ್ಲೂಕಿನಲ್ಲಿರುವ 8 ಮೈಲಿ ರಸ್ತೆಗೆ ಮೈಲಿ 1ಕ್ಕೆ 1,000 ರೂಪಾಯಿನಂತೆ ಖರ್ಚು ಮಾಡಲು ಹಾಲಿ ಡಿಸ್ಟ್ರಿಕ್ಟ ಫಂಡು ಉತ್ಪತ್ತಿ ಜಾಸ್ತಿಯಾಗಿಲ್ಲವಾಗಿ ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು.

VI. ಪ್ಲೇಗು ಕಾಲದಲ್ಲಿ ಜನಗಳು ಊರು ಹೊರಗೆ ವಾಸಮಾಡುವದನ್ನು ಪ್ರೋತ್ಸಾಹಪಡಿಸಬೇಕೆಂಬ 1908ನೆ ದಸರಾ ಪ್ರಜಾ ಪ್ರತಿನಿಧಿ ಸಭೆ 249ನೆ ನಂಬರು ವಿಷಯದಲ್ಲಿ ಪ್ರಪೋಸಲ್‌ಗಳು ಕೇಳಿಬಂದ ರೆವಿನ್ಯೂ ಕಮಿಷನರ್ ಸಾಹೇಬರವರ 26-11-08ರ ಮರ್ಸ್ಕಂ 2125-32ನೆ ನಂಬರು ಮೆಮೋ ಓದಲಾಯಿತು.

ತೀರ್ಮಾನ—ಈ ಏರ್ಪಾಡು ಜನಗಳಿಗೆ ಬಹಳ ಪ್ರಯೋಜನವಾದ್ದಾದರೂ ಇದಕ್ಕೆ ಡಿಸ್ಟ್ರಿಕ್ಟ್ ಫಂಡ್ಡಿನಿಂದ ಹಣವದಗಿಸಬೇಕಾದರೆ ಸಾಧ್ಯವಾಗಲಾರದಾಗಿಯು ಆದರೆ ಪ್ಲೇಗು ಫಂಡ್ಡಿನಿಂದ ಹಣ ಕೊಡುವದಾದರೆ ಸಾಧ್ಯವಾದೀತೆಂದು ಈ ಬೋರ್ಡಿನವರು ಅಭಿಪ್ರಾಯಪಡುತ್ತಾರಾಗಿ ತೀರ್ಮಾನಿಸಲಾಯಿತು.

VII. ಬೋರ್ಡಿನವರ ತಿಳುವಳಿಕೆ ಬಗ್ಗೆ ಈ ಕೆಳಗೆ ಕಂಡವುಗಳನ್ನು ಓದಲಾಯಿತು.

(1) 1908ನೆ ನವಂಬರು ಗುರ್ರೆ ಲಾಗಾಯಿತು ಎಲ್ಲಾ ಗೌರ್ನಮೆಂಟು ಸ್ಕೂಲುಗಳಲ್ಲಿಯೂ ಮತ್ತು ಕಾಲೇಜುಗಳಲ್ಲಿಯೂ ಮತಸಂಬಂಧವಾದ ನೀತಿಬೋಧನೆ ಮಾಡತಕ್ಕದ್ದನ್ನು ಜಾರಿಯಲ್ಲಿ ತರಬೇಕೆಂಬ 28—9—08ರ ಮರ್ಸ್ಕಂ ಕ್ಯಾಂಪ್ 1ನೆ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸು.

(2) ಡಿಸ್ಟ್ರಿಕ್ಟು ಮತ್ತು ಮುನಿಸಿಪಲ್ ಫಂಡಿನಿಂದ ನಡಿಸುವ ಲೋಕಲ್ ಫಂಡ್ ಡಿಸ್ಪೆನ್ಸರಿಗಳಲ್ಲಿ ರೋಗಿಗಳ ಹಾಸಿಗೆ ಉಡುಪು ಮತ್ತು ತಿಂಡಿ ಖರ್ಚು ವಿನಿಷ್ಟವನ್ನು ಸಿಬ್ಬಂದಿ ಖರ್ಚು ಬಾಬಾಷಾದಂತೆ ಆಯಾಯ ಫಂಡುಗಳಿಗೇನೆ ಖರ್ಚು ತೋರಿಸಬೇಕಾಗಿಯು, ಆದರೆ ಇದು ಮೈಸೂರು ಸಿಟಿಯಲ್ಲಿರುವ ಬ್ರಾಂಚು ಡಿಸ್ಪೆನ್ಸರಿಗೆ ಲಗಾವಾಗುವದಿಲ್ಲವೆಂಬ 28—10—08ರ ಮರ್ಸ್ಕಂ 3276-93—ಮ್ಯೂ. 102-06-15ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸು.

(3) ಮೈಸೂರಿನಲ್ಲಿ ಒಂದು ಆಯುರ್ವೇದದ ವಿದ್ಯಾನಿಲಯವನ್ನು ಸ್ಥಾಪಿಸತಕ್ಕದ್ದನ್ನು ಮಂಜೂರ್ಮಾಡಿ ಬಂದ 6—10—08ರ ಮರ್ಸ್ಕಂ 1-42—ಮುಜ್ರೈ. ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸು.

(4) ಸೂಲಗಿತ್ತಿಯರು ತಮ್ಮ ಹೆಡ್ ಕ್ವಾರ್ಟರು ಬಿಟ್ಟು ಹೊರಗೆ ಹೊರಟಾಗ ಇವರ ಸಹಾಯ ಅಪೇಕ್ಷಿಸತಕ್ಕವರು ಗಾಡಿ ಒದಗಿಸಿಕೊಡದೆ ಹೋದ ಸಂಭವಗಳಲ್ಲಿ 5 ಮೈಲಿ ಒಳಗಿರತಕ್ಕ ಫಾಸಲೆಗೆ ಮೈಲಿ ಒಂದಕ್ಕೆ 2 ಆಣೆ ಮೇರೆ ಮೈಲೇಜು ಕೊಡುವದನ್ನು ಮಂಜೂರ್ಮಾಡಿರುತ್ತೆಂಬ 14—10—08ರ ಮರ್ಸ್ಕಂ 3518-29—ಮೆಡಿ. 297-005ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸು.

(5) ಮೈಸೂರು ಸಂಸ್ಥಾನದಲ್ಲಿನ ಲೋಕಲ್ ಫಂಡು ಡಿಸ್ಪೆನ್ಸರಿಗಳ ಕಟ್ಟಡ ಮತ್ತು ರಿಪೇರಿಗೋಸ್ಕರ ತಗಲುವ ಲಾಗೋಡನ್ನು ಹ್ಯಾಗೆ ಖರ್ಚು ತೋರಿಸಬೇಕೊ ಆ ವಿಧಾನವನ್ನು 13—7—08ನೆ ಮರ್ಸ್ಕಂ 6690-702—ಮೆಡಿ. 28-07-5ನೆ ನಂಬರು ಗೌರ್ನಮೆಂಟ್ ಪ್ರೊಸಿಡಿಂಗ್ಸಿನಲ್ಲಿ ಹೇಳಿರುವದನ್ನು ಖಬ್ಲಾಯಿಸಿ ನಿಯಾಮಕಮಾಡಿ ಬಂದ 28—10—08ರ ಮರ್ಸ್ಕಂ 3891-902—ಲೋ. ಬೋ. 112-08-2ನೆ ನಂಬರು ಪ್ರೊಸೀಡಿಂಗ್ಸು.

(6) ಸ್ಪೆಷಲ್ ಮೀಟಿಂಗು ನಡಿಯುವದನ್ನ ಮೀಟಿಂಗ್ ನಡಿಯುವ ತಾರೀಖಿಗೆ 6 ದಿವಸಗಳಿಗೆ ಕಮ್ಮಿ ಇಲ್ಲದೆ ಬಂದುವಾಯಿದೆ ಒಳಗಾಗಿ ನೋಟೀಸು ಮೂಲಕ ಬೋರ್ಡಿನ ಪ್ರತಿಮೆಂಬರಿಗು ತಿಳಿಯಪಡಿಸತಕ್ಕದ್ದೆಂಬ 25—11—08ರ ಮರ್ಸ್ಕಂ 4919-26—ಲೋ. ಬೋ. 117-08ನೆ ನಂಬರು ಪ್ರೊಸೀಡಿಂಗ್ಸು.

ತೀರ್ಮಾನ—ಓದಲಾಯಿತು ಮತ್ತು ವಿಲೆಯಿಡಿಸಲಾಯಿತು.

VIII. ಕೆಲಸಗಳು ಸಲೀಸು ನಡಿಯಲು ಅನುಕೂಲಿಸುವಂತೆ ಕೂಲಿಗಳಿಗೆ ಹಣ ಕೊಡುವದಕ್ಕೋಸ್ಕರ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕು ಬೋರ್ಡುಗಳು 200 ರೂಪಾಯಿ ಇಂಪ್ರೆಸ್ಟ್ ಇಟ್ಟುಕೊಳ್ಳಬಹುದೆಂಬ 21—11—08ನೆ ಮರ್ಸ್ಕಂ 4815-6—ಲೋ. ಬೋ. 173-03-3ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸನ್ನು ತಿಳುವಳಿಕೆ ಬಗ್ಗೆ ರವಾನಿಸಿರುತ್ತೆಂಬ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ 8—12—08ರ ಮರ್ಸ್ಕಂ 5504-10—ಲೋ. ಬೋ. 178-08-3ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ:—ಓದಿ ವಿಲೆ ಇಡಿಸಲಾಯಿತು ಮತ್ತು ಅವಶ್ಯಕ ಕಂಡುಬಂದಲ್ಲಿ ಈ ಡಿಸ್ಟ್ರಿಕ್ಟಿನಲ್ಲಿ ಕ್ಷಾಮ ಪೀಡಿತವಾದ ಕೆಲವು ತಾಲ್ಲೂಕುಗಳಿಗೆ ಇದರಂತೆಯೆ ರಿಯಾಯಿತಿ ತೋರಿಸಲು ಗೌರ್ನಮೆಂಟ್ ಸ್ಯಾಂಕ್ಷನ್ ಪಡಿಯಬೇಕೆಂದು ತೀರ್ಮಾನಿಸಲಾಯಿತು.

IX. ಸಕ್ಲೇಶಪುರದಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿಯ ಇನ್‌ಪೇಷೆಂಟ್ ವಾರಡನ್ನು ತಾವು ಇನ್ಸ್ಪೆಕ್ಟ್ ಮಾಡಿದ ಕಾಲದಲ್ಲಿ ರೋಗಿಗಳಿಗೆ ಶುಚಿಯಾದ ಹಾಸಿಗೆಗಳು ಕೊಡಲ್ಪಟ್ಟಿರಲಿಲ್ಲವೆಂತಲೂ ಈ ಡಿಸ್ಪೆನ್ಸರಿಗೆ ಹೊಸ ಹಾಸಿಗೆಗಳು ಸರಬರಾಜು ಆಗದೆ ಇರುವದು ಮತ್ತು ಈ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಇವುಗಳನ್ನು ಕೊಂಡುಕೊಳ್ಳಲು ಅಧಿಕಾರ ಇಲ್ಲದೆ ಇರುವದು ಮತ್ತು ಇಂಥಾ ಮುಖ್ಯವಾದ ಆಸ್ಪತ್ರೆಗೆ 5 ರೂಪಾಯಿ ಮಾತ್ರ ಅಲಾಟ್‌ಮೇಂಟ್ ಇರುವದು ಇದಕ್ಕೆ ಕಾರಣವೆಂದು ತಿಳಿಯಬಂತೆಂಬ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 1-3—12—08ರ ಮರ್ಸ್ಸಂ 346ನೆ ನಂಬರು ಲೆಟರು ಓದಲಾಯಿತು.

ತೀರ್ಮಾನ—ರೋಗಿಗಳಿಗೆ ತಿಂಡಿಗೋಸ್ಕರ ಇನ್ನು ಹೆಚ್ಚಾಗಿ ಹಣ ಕೊಡಬೇಕಾಗಿ ಇದೆಯೆ ಈ ಬೋರ್ಡಿನಲ್ಲಿ 8—8—08ರ ಮರ್ಸ್ಸಂ ಮತ್ತು 22—9—06ರ ಮರ್ಸ್ಸಂ XII ಮತ್ತು VIನೆ ನಂಬರು ತೀರ್ಮಾನಗಳು ಆಗಿರುವದಾಗ್ಯೂ ಮತ್ತು ಡಿಸ್ಟ್ರಿಕ್ಟು ಫಂಡ್ಸಿನಿಂದ ಪ್ರತಿ ಡಿಸ್ಪೆನ್ಸರಿಗೂ ಹಾಸಿಗೆ ಹೊದ್ದಿಗೆಗಾಗಿ ಹತ್ತು ರೂಪಾಯಿಗಳು ಕೊಡುತ್ತೆಯಾಗಿ ಸಕ್ಲೇಶಪುರದ ಡಿಸ್ಪೆನ್ಸರಿಗು ಮತ್ತು ಹಾಸಿಗೆ ಹೊದಿಗೆ ಕೇಳುವ ಇತರ ಡಿಸ್ಪೆನ್ಸರಿಗಳು ಸಹ ಹಾಸಿಗೆ ಹೊದ್ದಿಗೆ ಸರಬರಾಜು ಮಾಡುವದಕ್ಕೆ ಈ ವರುಷದ ಇಂಡೆಂಟಿನಲ್ಲಿ ಅವಶ್ಯಕವಾದ ಆರಡರುಗಳು ಮಾಡಬೇಕಾಗಿ ಸೀನಿಯರ್ ಸರ್ಜನ್ ಸಾಹೇಬರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

X. ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟರಿ ಇನ್ಸ್ಪೆಕ್ಟರುಗಳನ್ನು ನೇಮಕಮಾಡಿ ಇವರುಗಳಿಂದ ಕೆಲಸ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ನಡವ ಸ್ಯಾನಿಟರಿ ಕಮಿಷನರ್ ಸಾಹೇಬರವರ 4—5—08ರ ಮರ್ಸ್ಸಂ 4328ನೆ ನಂಬರು ಲೆಟರು ಅಂತ್ಯವಾಗಿವುಳ್ಳ ರಿಕಾರ್ಡಿನ ನಕಲು ಕಳುಹಿಸಿ ಈ ವಿಚಾರದಲ್ಲಿ ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯ ಕೇಳಿಬಂದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ 5—12—08ರ ಮರ್ಸ್ಸಂ 5424-35—ಮ್ಯು. 425-07ನೆ ನಂಬರ್ ಮೆಮೋ ಓದಲಾಯಿತು.

(2) ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್ಸ್ಪೆಕ್ಟರುಗಳು ಯಾರ ತಾಬೆಯಲ್ಲಿರಬೇಕೆಂಬ ವಗೈರೆ ವಿಚಾರದಲ್ಲಿ ಅಲಾಯಿದಾ ಹುಕುಂ ಕೊಡಲ್ಪಡುತ್ತೆಂಬ 16—11—08ರ ಮರ್ಸ್ಸಂ 4628-37—ಲೋ. ಜೋ. 107-07-2ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸು ಕಡೆ ಪ್ಯಾರಾ ಸಹಾ ಓದಲಾಯಿತು.

ತೀರ್ಮಾನ—ಸ್ಯಾನಿಟೆರಿ ಇಲಾಖೆಯು ಕೇವಲ ತಿಳುವಳಿಕೆ ಹೇಳತಕ್ಕ ಇಲಾಖೆಯೆ ಹೊರ್ತು ಕಾರ್ಯನಿರ್ವಾಹಕವಾದ್ದಲ್ಲವೆಂದು ಈ ಮೊದಲೆ ಗವರ್ನ್ಮೆಂಟಿನವರು ಇತ್ಯರ್ಥ ಪಡಿಸಿರುತ್ತಾರೆಯಾಗಿ ತಾಲ್ಲೂಕು ಬೋರ್ಡುಗಳಿಂದ ನೇಮಕ ಮಾಡಲ್ಪಟ್ಟ ಸ್ಯಾನಿಟರಿ ಮತ್ತು ಅಸಿಸ್ಟೆಂಟ್ ಸ್ಯಾನಿಟರಿ ಇನ್ಸ್ಪೆಕ್ಟರುಗಳನ್ನು ಈ ಇಲಾಖೆಯ ತಾಬೆಗೆ ಕೊಡಲು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ 11—3—08ರ ಮರ್ಸ್ಸಂ 1248ನೆ ನಂಬರು ಲೆಟರಿನಲ್ಲಿ ಉಕ್ತವಾಗಿ ಕಾರಣಗಳಿಗೋಸ್ಕರ ಸಾಧ್ಯವಿಲ್ಲವೆಂದು ಬೋರ್ಡಿನವರು ಈಗಲು ಅಭಿಪ್ರಾಯಪಡುತ್ತಾರೆ ಅಲ್ಲದೆ ಸ್ಯಾನಿಟರಿ ಕಮಿಷನರ್ ಸಾಹೇಬರವರು ಪಡುವ ಅಭಿಪ್ರಾಯವನ್ನು ಈ ಬೋರ್ಡಿನವರು ಅನುಮೋದಿಸಲಾರರೆಂದು ವಿಷಾದಪಡುತ್ತಾರಾಗಿ ತೀರ್ಮಾನಿಸಲಾಯಿತು.

XI. ನಾಲ್ಕು ಚಕ್ರದ ಮತ್ತು ಎರಡು ಚಕ್ರದಗಾಡಿಗಳ ಮೇಲೆ ಟೋಲನ್ನು ಕಮ್ಮಿ ದರದಂತೆ ವಸೂಲ್ಮಾಡುವದನ್ನು ಅಜಮಾಯಿಷಿ ತರೀಖು ಇನ್ನು ಎರಡುವರುಷದವರಿಗೆ ಮಂಜೂರ್ಮಾಡಿರುವದಾಗಿ ಈ ಅವಧಿ ಕಳೆದ ನಂತರ ಫಲಿತಾಂಶಕ್ಕೆ ರಿಪೋರ್ಟು ಮಾಡಬೇಕಾಗಿಯೂ ಸಹ ಬಂದ 11—12—06ರ ಮರ್ಸ್ಸಂ 4914-5—ಎಲ್. ಎಫ್. 137-06-2ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸ್.

ತೀರ್ಮಾನ—ಸ್ಪ್ರಿಂಗ್ ಗಾಡಿಗಳ ಮೇಲೆ ಹಾಲಿ ವಸೂಲಾಗುತ್ತಿರುವ ಟೋಲು ದರವೆ ಸರಿಯಾಗಿರುತ್ತೆಯಾಗಿ ಇದನ್ನೇ ಖಾಯಂ ಮಾಡಬೇಕಾಗಿ ಗವರ್ನ್ಮೆಂಟಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

XII. ಹಾನಬಾಳು ಮುಸಾಫರಖಾನಾ ರಿಪೇರಿ ಬಗ್ಯೆ ಪ್ರೊವೈಡು ಆಗಿರತಕ್ಕ 170 ರೂಪಾಯಿಗಳ ಪೈಕಿ 60 ರೂಪಾಯಿಗಳು ಮುಟ್ಟಿಸಿ ಐಗೂರು-ಹೆತ್ತೂರು-ಕೆರೋಡಿ ರಸ್ತೆಗೆ ಜರೂರಾಗಿ ಬೇಕಾಗಿ ಇರುವ ರಿಪೇರಿ ಕೆಲಸಗಳನ್ನು (ಬಜೆಟ್ಟಿನಲ್ಲಿ ಕಾಣಿಸದೆ ಇರತಕ್ಕ ಕೆಲಸ) ನಡಿಸುವದನ್ನ ಮಂಜೂರ್ಮಾಡಿ ಬಂದ 25—11—08ರ ಮರ್ಸ್ಸಂ 4917-8—ಲೋ. ಬೋ. 165-08-2ನೆ ನಂಬರು ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—ಕೇಳಿ ಫೈಲ್ ಇಡಿಸಲಾಯಿತು. ಈ ರಸ್ತೆ ಕೆಲಸ ಷುರುಮಾಡಲು ಈ ಮೊದಲೆ ಹುಕುಂ ಕೊಟ್ಟಿರುತ್ತೆ.

XIII. ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯದಂತೆ ಕೊಣನೂರು ಯೂನಿಯನ್ನಲ್ಲಿ ಇಬ್ಬರು ಝಾಡ ಮಾಲಿಗಳನ್ನು ವಜಾಮಾಡಿ ಮಾಹೆಯಾನ ಹತ್ತು ರೂಪಾಯಿನ ತಲಪಿನ ಮೇಲೆ ಒಂದು ಗಾಡಿಯನ್ನು ಇಟ್ಟುಕೊಳ್ಳುವದನ್ನು ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ತಲ್ಪಿದ 30—11—08ರ ಮರ್ಸ್ಸಂ 5143-4—ಲೋ. ಬೋ. 166-08-2ನೆ ನಂಬರು ಪ್ರೊಸೀಡಿಂಗ್ಸು ಓದಲಾಯಿತು.

ತೀರ್ಮಾನ—ಇದನ್ನನುಸರಿಸಿ ಜಾರಿಲಿ ತರಬೇಕೆಂತ ಅರ್ಕಲಗೂಡು ತಾಲ್ಲೂಕು ಅಮಲ್ದಾರ್ರಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

XIV. ಡಿಸ್ಟ್ರಿಕ್ಟು ಫಂಡ್ಸಿನಿಂದ ವೈದ್ಯಶಾಲೆಗಳಿಗೆ ಮಂಜೂರಾಗಿರುವ ಹಣವು ಗ್ರ್ಯಾಂಟು ಇನ್‌ಏಡ್ ತರೀಖಾದ್ದರಿಂದ ವೈದ್ಯಶಾಲೆಗಳ ಛಾರ್ಜಿನಲ್ಲಿರುವ ಪಂಡಿತರುಗಳು ಖಾಯಂ ನವುಕರರೆಂದು ಭಾವಿಸಲಾರದೆಂದು ವಗೈರೆ ಬಂದ 12—9—08ರ ಮರ್ಸ್ಸಂ 2617-26—ಲೋ. ಬೋ. 329-07ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು.

ತೀರ್ಮಾನ—ಸಮ್ಮಂಧಪಟ್ಟ ಪಂಡಿತರುಗಳಿಗೆ ತಿಳಿಸತಕ್ಕ ಬಗ್ಯೆ ಈ ಗೌರ್ನಮೆಂಟ್ ಆರ್ಡರನ್ನು ತಾಲ್ಲೂಕು ಬೋರ್ಡುಗಳಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು. ಮತ್ತು 13—6—07ರ ಮರ್ಸ್ಸಂ 11782-4—ಲೋ. ಬೋ. 444-06-2ನೆ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಈ ಡಿಸ್ಟ್ರಿಕ್ಟಿನ ವೈದ್ಯಶಾಲಾ ಪಂಡಿತರುಗಳನ್ನು ಖಾ

ಯಂ ಮಾಡಿರುತ್ತೆಯಾಗಿ ನಮೂದು ಇರುತ್ತೆಯಾಗಿ ಇದರ ಆಧಾರದ ಮೇಲೆ ಹಾರ್ನಹಳ್ಳಿ ವೈದ್ಯಶಾಲಾ ಹಕೀಂ ಇನ್ಷ್ಯೂರೆನ್ಸು ಪ್ರೊಪೋಸಲ್ ಕಳುಹಿಸಿದ್ದ ಅವನ್ನು ಇನ್ಷ್ಯೂರೆನ್ಸು ಕಂಪೆನಿಯವರು ಒಪ್ಪಿಕೊಂಡು ಇರುತ್ತಾರೆಯಾಗಿ ಈ ವಿಚಾರವನ್ನು ಗೌರ್ನಮೆಂಟಿನವರ ಜಾಹಿರಾತಿಗೆ ತರಬೇಕೆಂದು ಸಹ ತೀರ್ಮಾನಿಸಲಾಯಿತು.

XV. ಹಿರಿಸಾವೆ IIIನೆ ಕ್ಲಾಸು ಟ್ರಾವಲರ್ಸ್ಸ ಬಂಗ್ಲಾ ರಿಪೇರಿ ಬಗ್ಯೆ ಹಣವನ್ನು ಬೇರೆ ಹೆಡ್ಡಿನಿಂದ ವರ್ಗಾವರ್ಗಿ ಮಾಡುವದನ್ನು ಮಂಜೂರ್ಮಾಡಿ ಬಂದ 5—12—08ರ ಮರ್ಕ್ಹಂ 5405-08—ಲೋ. ಬೋ. 183-08-೧ನೆ ನಂಬರ್ ಗೌರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ತೀರ್ಮಾನ—ಈ ಕಟ್ಟಡಕ್ಕೆ ರಿಪೇರಿ ಕೆಲಸವು ಅತಿ ಜರೂರಾಗಿ ಆಗಬೇಕಾಗಿರುವದರಿಂದ ಈ ರಿಪೇರಿ ಕೆಲಸವನ್ನು ಜಾಗ್ರತೆಯಾಗಿ ಪ್ರಾರಂಭ ಮಾಡಿಸಲು ಹಾಸನದ ಡಿವಿಜನ್ ಎಗ್ಸಿಕ್ಯೂಟಿವ್ ಇಂಜೆನಿಯರ್‌ರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

XVI. ಸಕ್ಲೇಶಪುರದ ಆಸ್ಪತ್ರೆ ಮುಂಭಾಗದಲ್ಲಿ ಪೋರ್ಟಿಕೋಯೆಂಬ ಕಟ್ಟಡವನ್ನು ಕಟ್ಟತಕ್ಕ ಬಾಬತು ಕಾಂಗಾರಿ ಅಂದಾಜವನ್ನು 160 ರೂಪಾಯಿಗೆ ತಯಾರ್ಮಾಡಿಸಿ ಇಲ್ಲಿನ ಕೌಂಟರ್ ಸಿಗ್ನೇಚರ್ ಬಗ್ಯೆ ಮಲಘೂಫಿಸಿಯು ಈ ಬಾಬತು ಕಾಂಗಾರಿಗೆ ಡಿಸ್ಟ್ರಿಕ್ಟು ಫಂಡ್ ಮತ್ತು ಮುನಿಸಿಪಲ್ ಫಂಡುಗಳಿಂದ ಬರತಕ್ಕ ಛಂದಾ ಮೊಬಲಗನ್ನು ಪ್ರೊವಿನ್ಷಿಯಲ್ ಫಂಡಿಗೆ ಜಮಾ ಮಾಡಿಸಬೇಕೆಂದು ನಮೂದಿಸಿಯು ತಲ್ಪಿರುವ ಹಾಸನ ಡಿಸ್ಟ್ರಿಕ್ಟು ಎಗ್ಸಿಕ್ಯೂಟಿವ್ ಇಂಜೆನಿಯರ್ ಸಾಹೇಬರವರ 28-9-08—3-10-08ನೆ ಮರ್ಕ್ಹಂ 232ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಕಾಂಗಾರಿ ಬಗ್ಯೆ ಅಂದಾಜದ ಮೂರನೆ ಭಾಗವನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕಾಗುವದಕ್ಕೆ ಹಾಲ್‌ಸಾಲ್ ಬಡ್ಜೆಟ್ಟಿನಲ್ಲಿ ಹಣವಿಲ್ಲವಾದ್ದರಿಂದಲೂ ಮತ್ತು ಈ ಕೆಲಸವು ಅಷ್ಟು ಜರೂರಾಗಿ ನಡಿಸಬೇಕಾದ ಆವಶ್ಯಕತೆ ತೋರುವದಿಲ್ಲವಾಗಿಯು ಮುಂದಿನ ಸಾಲು ವರಿವಿಗೂ ನಿಲ್ಲಿಸಬಹುದಾಗಿ ತೀರ್ಮಾನಿಸಲಾಯಿತು.

XVII. ಅರೆಹಳ್ಳಿ ಲೋಕಲ್ ಫಂಡು ಡಿಸ್ಪೆನ್ಸರಿ ರಿಪೇರಿ ಬಗ್ಯೆ 139 ರೂಪಾಯಿ ಅಂದಾಜ ತಯಾರ್ಮಾಡಿಸಿ ಇಲ್ಲಿನ ಕೌಂಟರ್ ಸಿಗ್ನೇಚರ್‌ನಿಸಿ ಸೀನಿಯರ್ ಸರ್ಜನ್ ಸಾಹೇಬರವರಿಗೆ ಕಳುಹಿಸುವಂತೆಯು ಈ ಕಾಂಗಾರಿ ಬಗ್ಯೆ ಡಿಸ್ಟ್ರಿಕ್ಟು ಫಂಡು ಬಾಬತು ಛಂದಾ ಮೊಬಲಗನ್ನು ಜಮಾ ಮಾಡಿಸತಕ್ಕ ಬಗ್ಯೆ ಏರ್ಪಾಡು ಮಾಡಬೇಕೆಂದು ನಮೂದಿಸಿಯು ಎಗ್ಸಿಕ್ಯೂಟಿವ್ ಇಂಜೆನಿಯರವರಿಂದ ತಲ್ಪಿರುವ 20-24—10—08ನೆ ಮರ್ಕ್ಹಂ 238ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ವಿಷಯದಲ್ಲಿನ ನಡವಳಿಕೆಯು ಕಂಟ್ರೋಲರ್ ಸಾಹೇಬರವರ ತೀರ್ಮಾನಕ್ಕೆ ಒಳಪಟ್ಟು ಈ ವಿಷಯವನ್ನು ಮುಂದಿನ ಮೀಟಿಂಗಿನಲ್ಲಿ ಇಡತಕ್ಕದ್ದೆಂದು ತೀರ್ಮಾನಿಸಲಾಯಿತು.

XVIII. ಮಿ|| ಪಿಟಕ್ ಸಾಹೇಬರವರಿಗೋಸ್ಕರವಾಗಿ ಚುನಾಯಿಸಲ್ಪಟ್ಟ ಅಮೃತಮಹಲ್ ಗೂಳಿ ಬಾಬತು ಅರ್ಧ ಖರೀದಿ ಮೊಬಲಗು 37—8—0 ಯು ಸದರಿ ಸಾಹೇಬರವರಿಂದ ಇರಸಾಲಾಗಿ ಡಿಸ್ಟ್ರಿಕ್ಟು ಫಂಡಿಗೆ ಜಮಾ ದಾಖಲಾಗಿರುತ್ತೆಂಬ 10—12—08ರ ಮರ್ಕ್ಹಂ 247—2102ನೆ ನಂಬರು ಬೇಲೂರು ತಾಲ್ಲೂಕು ಅಮಲ್ದಾರ್ರ ರಿಪೋರ್ಟು ಆಖೈರಾಗಿವುಳ್ಳ ನಡವಳಿಕೆಯನ್ನು ಓದಲಾಯಿತು. ಇನ್ನೊಂದು ಗೂಳಿಯನ್ನು ಡಿಸ್ಟ್ರಿಕ್ಟು ಬೋರ್ಡಿನವರ ಉಪಯೋಗಕ್ಕೆ ಹಾಸನ ತಾಲ್ಲೂಕು ಅಮಲ್ದಾರ್ರಿಂದ ಚುನಾಯಿಸಿರುತ್ತೆಂಬ ವಿಷಯವು ಸೂಚಿಸಲಾಯಿತು.

ತೀರ್ಮಾನ—ಈ ಮೇಲ್ಕಂಡ ಎರಡು ಗೂಳಿಗಳ ಖರೀದಿ ಮೊಬಲಗು 150 ರೂಪಾಯಿಯನ್ನು ಡಿಸ್ಟ್ರಿಕ್ಟು ಫಂಡಿನಿಂದ ಉಪಯೋಗಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

XIX. ಸುತ್ತುಮುತ್ತಲು ಸಮೀಪದಲ್ಲಿ ಎಲ್ಲಿಯು ಸಂತೆಗಳು ನಡಿಯುವದಿಲ್ಲವಾಗಿ ಸಿದ್ಧಾಪುರದ ಬಳಿ ಪ್ರತಿ ವಾರದಲ್ಲಿಯು ಸಂತೆ ನಡಿಯುವಂತೆ ಏರ್ಪಡಿಸಬೇಕೆಂದು ಅಪೇಕ್ಷಿಸಿ ಆಲೂರು ತಾಲ್ಲೂಕು ಬೋರ್ಡಿನವರ ತೀರ್ಮಾನ ನಿಸಿ ತಲ್ಪಿರುವ ಡೆಪ್ಯುಟಿ ಅಮಲ್ದಾರ್ರ 29—10—08ನೆ ಮರ್ಕ್ಹಂ 361—1619ನೆ ನಂಬರು ರಿಪೋರ್ಟು ಆಖೈರುಳ್ಳ ನಡವಳಿಕೆ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಸಂತೆಯನ್ನು ದೂರಸ್ಥಳವಾಗಿಯು ಮತ್ತು ಮೂಲೆಯಾಗಿಯು ಇರುವ ಸಿದ್ಧಾಪುರದ ಬಳಿ ಏರ್ಪಡಿಸುವದಕ್ಕೆ ಬದಲಾಗಿ ಡಿಸ್ಟ್ರಿಕ್ಟು ಫಂಡು ರಸ್ತೆ ಹಾಯುವ ಕುಂದೂರು ಬಳಿ ಸಂತೆಯನ್ನು ಯಾತಕ್ಕೆ ಏರ್ಪಡಿಸಬಾರದೆಂಬ ಬಗ್ಯೆ ಖಾಯಂ ಡೆಪ್ಯುಟಿ ಅಮಲ್ದಾರ್ರ ಅಭಿಪ್ರಾಯ ನಿಸಿ ರಿಪೋರ್ಟು ಬರಲು ರಿಕಾರ್ಡು ವಾಪಸು ಬರತಕ್ಕದ್ದೆಂದು ತೀರ್ಮಾನಿಸಲಾಯಿತು.

XX. ಹೆರಗು ಮತ್ತು ಬೂವನಳ್ಳಿ ದೊಡ್ಡಿಗಳ ಕಾಂಗಾರಿಗಳನ್ನು ಪೂರ್ತಿ ಮಾಡುವದಕ್ಕಾಗಿ 170 ರೂಪಾಯಿ ಮಂಜೂರಾಗಬೇಕೆಂದು ಅಪೇಕ್ಷಿಸಿ ಹಾಸನ ತಾಲ್ಲೂಕು ಬೋರ್ಡಿನವರ ತೀರ್ಮಾನದೊಂದಿಗೆ ತಲ್ಪಿರುವ ಹಾಸನ ತಾಲ್ಲೂಕು ಅಮಲ್ದಾರ್ರ 30—11—08ನೆ ಮರ್ಕ್ಹಂ 428—1957ನೆ ನಂಬರು ರಿಪೋರ್ಟು ಆಖೈರಾಗುಳ್ಳ ನಡವಳಿಕೆ ಓದಲಾಯಿತು.

ತೀರ್ಮಾನ—ಮೇಲ್ಕಂಡ ಬೂವನಳ್ಳಿ ದೊಡ್ಡಿ ಕಾಂಗಾರಿ ಬಗ್ಯೆ 110 ರೂಪಾಯಿಯನ್ನು ಮತ್ತು ಹೆರಗು ದೊಡ್ಡಿ ಕಾಂಗಾರಿ ಬಗ್ಯೆ 60 ರೂಪಾಯಿಯನ್ನು ಚಾಲ್ತಿ ಸಾಲು ಡಿಸ್ಟ್ರಿಕ್ಟು ಫಂಡು ಬಡ್ಜೆಟ್ಟಿನ "I ಒರಿಜನಲ್ ನೀಂಕಲಾ ಮತ್ತು ಇತರ ಕಾಂಗಾರಿಗಳು" ಎಂಬ ಹೆಡ್ಡಿನಲ್ಲಿ ದಾಖಲಾಗಿರುವ 1,000 ರೂಪಾಯಿ ಪೈಕಿ ಉಳಿದಿರುವ ಮೊಬಲಗಿನಲ್ಲಿ ಉಪಯೋಗಿಸಿಕೊಳ್ಳತಕ್ಕದ್ದೆಂದುನ್ನು ಈ ಬಗ್ಯೆ ಗವರ್ನಮೆಂಟ್ ಮಂಜೂರಾತಿ ಪಡಿಯತಕ್ಕದ್ದೆಂದುನ್ನು ತೀರ್ಮಾನಿಸಲಾಯಿತು.

XXI. ಗವರ್ನಮೆಂಟ್ ಮಂಜೂರಾತಿಯನ್ನು ಮುಂಚಿತವಾಗಿ ಪಡಿಯದೆ ಹಾಲ್‌ಸಾಲ್ ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ಟಿನಲ್ಲಿ ದಾಖಲಾಗಿ ಡಿಸ್ ಅಲೋ ಆಗಿದ್ದ ಹೊಸದಾಗಿ ಕಟ್ಟಲ್ಪಟ್ಟ ಮಲ್ಲಿಪಟ್ಟಣದ ಮುಸಾಫರಖಾನೆ ಉಸ್ತುವಾರಿಗಾಗಿ ಮಾಹೆಯಾನಾ 6 ರೂಪಾಯಿ ತಲಬಿನಮೇಲೆ ಒಬ್ಬ ನಿಗೇವಾನಿ ಇಸಂ ನೌಕರರಾಗಬೇಕೆಂದು ಸೂಚಿಸಿ ತಲ್ಪಿರುವ 18—11—08ರ ಮರ್ಕ್ಹಂ 433—1879ನೆ ನಂಬರು ಅರ್ಕಲಗೂಡು ತಾಲ್ಲೂಕು ಅಮಲ್ದಾರ್ರ ರಿಪೋರ್ಟು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಮುಸಾಫರಖಾನಾ ಉಸ್ತುವಾರಿಗಾಗಿ ಒಬ್ಬ ನಿಗೇವಾನಿ ಇಸಂನ ನೇಮಿಸಿಕೊಳ್ಳಲು ಗವರ್ನಮೆಂಟ್ ಮಂಜೂರಾತಿಯನ್ನು ಪಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

XXII. ಬಡ್ಜೆಟ್ಟಿನಲ್ಲಿ ನಮೂದಾಗದೆ ಇರತಕ್ಕ ಶ್ರೀ ರಾಮದೇವರ ಕಟ್ಟೆ ಬಳಿ ಇರುವ ಮುಸಾಫರ್‌ಖಾನಾ ರಿಪೇರಿಗಾಗಿ 70 ರೂಪಾಯಿನ ಅಂದಾಜವನ್ನು ತಯಾರ್ಮಾಡಿಸಿ ಮಂಜೂರು ಬಗ್ಗೆ ಹೊಳೇ ನರಸೀಪುರದ ತಾಲ್ಲೂಕು ಬೋರ್ಡಿನವರ ತೀರ್ಮಾನದೊಂದಿಗೆ ಮಲಫೂಪಿಸಿ ಸದರಿ ಖರ್ಚನ್ನು ಹೊಳೇನರಸೀಪುರದ ಮುಸಾಫರಖಾನಾ ರಿಪೇರಿಗಾಗಿ ದಾಖಲಾಗಿದ್ದ 150 ರೂಪಾಯಿನ ಪೈಕಿ ಉಳದಿರುವ ಮೊಬಲಗಿನಲ್ಲಿ ಸಂಭಸತಕ್ಕದ್ದೆಂದು ವಗೈರೆ ಸೂಚಿಸಿ ತಲ್ಪಿರುವ 8—10—08ರ ಮರ್ಕುಂ 520—1418ನೆ ನಂಬರು ಜನರಲ್ ಅಸಿಸ್ಟಂಟ್ ಕಮಿಷನರ್ ಸಾಹೇಬರವರ ಯಾದಿ ಆಖೈರಾಗಿವುಳ್ಳ ನಡವಳಿಕೆಯನ್ನು ಓದಲಾಯಿತು.

ತೀರ್ಮಾನ—ಬೋರ್ಡಿನವರಿಂದ ಮೊದಲೆ ಮಂಜೂರಾಗಿರುವ ಬಡ್ಜೆಟ್ಟು ದಾಖಲಾಗಿರುವ ಹೊಳೇನರಸೀಪುರದ ಮುಸಾಫರಖಾನಾ ರಿಪೇರಿ ಬಾಬತು 80 ರೂಪಾಯಿ ಅಂದಾಜಾ ಮೊಬಲಗು ಜಾತಾ 150 ರೂಪಾಯಿ ಪೈಕಿ ಉಳಿದಿರುವ 70 ರೂಪಾಯಿನಲ್ಲಿ ಪ್ರಸಕ್ತವಾದ ಕಟ್ಟಡದ ರಿಪೇರಿಯನ್ನು ಮಾಡಿಸತಕ್ಕ ಬಗ್ಗೆ ಗೌರ್ನಮೆಂಟ್ ಮಂಜೂರಾತಿ ಬಗ್ಗೆ ಬರಸತಕ್ಕದ್ದೆಂದು ತೀರ್ಮಾನಿಸಲಾಯಿತು.

XXIII. ನೀರಿನ ತುತಾರ ಬಹಳವಾಗಿ ಇರುವ ಆಲೂರು ಸಬ್ ತಾಲ್ಲೂಕು ಹಂಚಿಹಳ್ಳಿಯಲ್ಲಿ ಬಾಳೇಗೌಡನೆಂಬುವನಿಂದ ತೆಗಿಸಲ್ಪಟ್ಟ (ಸದರಿಯವನು ಸರ್ಕಾರಕ್ಕೆ ವಹಿಸಲು ಒಪ್ಪಿ ಇರುವ) ಒಂದು ಭಾವಿಯನ್ನು ಇಳಿಸಿ ಕಲ್ಲು ಕಟ್ಟಿಸತಕ್ಕ ಬಗ್ಗೆ ಲೋಕಲ್ ಫಂಡ್ ಜನರಲ್‌ನಿಂದ 260 ರೂಪಾಯಿಗಳನ್ನು ಮಂಜೂರ್ಮಾಡತಕ್ಕ ವಿಷಯ ಸೂಚಿಸಿಯೂ ಆರೀತಿ ಆಗಲು ಸಾಧ್ಯವಿಲ್ಲದೆ ಹೋದಲ್ಲಿ ವೆಂಕಟೇಗೌಡನ ಕೊಪ್ಪಲ ಬಳಿ ಭಾವಿ ತೆಗಿಯತಕ್ಕ ಬಗ್ಗೆ ದಾಖಲಾಗಿರುವ 250 ರೂಪಾಯಿಯನ್ನು ಉಪಯೋಗಪಡಿಸತಕ್ಕದ್ದೆಂದು ಸೂಚಿಸಿ ಆಲೂರು ತಾಲ್ಲೂಕು ಬೋರ್ಡಿನವರ ತೀರ್ಮಾನದೊಂದಿಗೆ ತಲ್ಪಿದ ಆಲೂರು ಡೆಪ್ಯುಟಿ ಅಮಲ್ದಾರ್ರ 1—12—08ನೆ ಮರ್ಕುಂ 364—1977ನೆ ನಂಬರು ರಿಪೋರ್ಟು ಆಖೈರುಳ್ಳ ನಡವಳಿಕೆಯನ್ನು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಬಡ್ಜೆಟ್ಟಿನಲ್ಲಿ ದಾಖಲಾಗದೆ ಇರುವ ಕಾಂಗಾರಿಯನ್ನು ಪ್ರತ್ಯೇಕದ ನೀರಿನ ತುತಾರೆ ಸ್ಥಿತಿಯಲ್ಲಿ ಬಹಳ ಜರೂರಾಗಿ ನಡಿಸತಕ್ಕ ಅವಶ್ಯಕತೆ ಇರುವದರಿಂದ 250 ರೂಪಾಯಿನ ಖರ್ಚಿನಲ್ಲಿ ನಡಿಸತಕ್ಕ ಬಗ್ಗೆ ಗವರ್ನಮೆಂಟ್ ಮಂಜೂರಾತಿ ಪಡಿಯತಕ್ಕದ್ದೆಂತಲು ಸದರಿ ಖರ್ಚು ಬಗ್ಗೆ ಹಾಲ್‌ಸಾಲ್ ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ಟಿನಲ್ಲಿ ದಾಖಲಾಗಿರುವ ನಾಕಲಗೂಡು ಬಳಿ ಇರುವ ವೆಂಕಟೇಗೌಡನಕೊಪ್ಪಲ್ ಭಾವಿ ಕಾಂಗಾರಿಗಾಗಿ ದಾಖಲಾಗಿರುವ 250 ರೂಪಾಯಿಯನ್ನು ಸದರಿ ಕಾಂಗಾರಿಯನ್ನು ಮುಂದಿನ ಸಾಲ್ ವರಿಗೂ ನಿಲ್ಲಿಸಿ ಉಪಯೋಗಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

XXIV. ಬಡ್ಜೆಟ್ಟಿನಲ್ಲಿ ದಾಖಲಾಗಿರತಕ್ಕ ಹಾಲಿ ಮಂಜೂರಿ ಬಗ್ಗೆ ತಲ್ಪಿರುವ ಕಾಂಗಾರಿಗಳ ಅಂದಾಜ ಪಟ್ಟಿಯನ್ನು ಓದಲಾಯಿತು.

ತೀರ್ಮಾನ—ಕೇಳಿ ಮಂಜೂರ್ಮಾಡಲಾಯಿತು.

XXV. ಕಣಕಟ್ಟೆ, ಕಿತ್ತನಕೆರೆ, ಹಾರ್ನಹಳ್ಳಿ ಬಳಿ ಕ್ಷಾಮ ಪೀಡಿತರಾದ ಕೂಲಿಗಳಿಗೆ ಕೆಲಸ ಒದಗಿಸುವದಕ್ಕಾಗಿ ಪ್ರೆಸಿಡೆಂಟರಿಂದ ಮಂಜೂರ್ಮಾಡಲ್ಪಟ್ಟ ಕಾಂಗಾರಿಗಳ ಪಟ್ಟಿಯನ್ನು ಓದಲಾಯಿತು.

ತೀರ್ಮಾನ—ಮೇಲ್ಕಂಡ ಜರೂರಾತಿ ಸಂಭವಗಳನ್ನನುಸರಿಸಿ ಪ್ರೆಸಿಡೆಂಟರವರು ಮಾಡಿರುವ ಏರ್ಪಾಡನ್ನು ಒಪ್ಪಿರುವಂತೆ ತೀರ್ಮಾನಿಸಲಾಯಿತು. ಬಡ್ಜೆಟ್ಟಿನಲ್ಲಿ ದಾಖಲಾಗಿರುವ ಕೆಲಸಗಳಿಗೆ ಗವರ್ನಮೆಂಟ್ ಮಂಜೂರಿ ಪಡಿಯಬೇಕು.

XXVI. ಮೀಟಿಂಗಿಗೆ ಹಾಜರಾಗಲು ಅನಾನುಕೂಲಗಳನ್ನು ಸೂಚಿಸಿ ತಲ್ಪಿರುವ ಈ ಕೆಳಗೆ ನಮೂದಿಸಿ ಇರುವ ಮೆಂಬರುಗಳ ಲೆಟರುಗಳನ್ನು ಓದಲಾಯಿತು.

ಮಿ|| ಕೆ. ತಮ್ಮಯ್ಯನವರು, ಬೇಲೂರು ತಾಲ್ಲೂಕು.
,, ಹಬಿಬುಲ್ಲಾ ಸಾಬರು, ಡಿಟೋ
,, ಸೂರ್ಯನಾರಾಯಣ ಶೆಟ್ರು, ಅರ್ಕಲಗೂಡು.

ತೀರ್ಮಾನ—ವಿಲೇ ಇಡಿಸಲಾಯಿತು.

XXVII. ಮುಂದಿನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗನ್ನು ಬರುವ 1909ನೆ ಇಸವಿ ಫೆಬ್ರವರಿ 22ನೆ ತಾರೀಖು ಸೋಮವಾರ ಮಧ್ಯಾನ್ಹ 1 ಘಂಟೆಗೆ ನಡಿಸಲ್ಪಡಕ್ಕದ್ದೆಂದು ತೀರ್ಮಾನಿಸಲಾಯಿತು.

ತಾಲ್ಲೂಕಿನ ಹೆಸರು ಮತ್ತು ಕೆಲಸದ ಹೆಸರು.	ಅಂದಾಜಾ ಮೊಬಲಗು.
ಮಂಜರಾಬಾದು ತಾಲ್ಲೂಕು.	ರೂ.
ಹೊಸಕೋಟೆ-ಈಚಲುಬೀಡು ರಸ್ತೆ ರಿಪೇರಿ	40
ಹನಸೆ-ಶನಿವಾರಸಂತೆ ರಸ್ತೆ ರಿಪೇರಿ	40
ಹರ್ಬಾಳು ಮುಸಾಫರ್‌ಖಾನ ರಿಪೇರಿ	110
ಚೆಂಗಡಿಹಳ್ಳಿಯಲ್ಲಿ ಒಂದು ಸೇದೋ ಭಾವಿ	250
ಎಸಳೂರು ಪೇಟೆಯಲ್ಲಿ ಮಸೀತಿಯಿಂದ ಕೆರೆಗೆ ಹೋಗುವ ರಸ್ತೆ ರಿಪೇರಿ	50
ಬೇಲೂರು ತಾಲ್ಲೂಕು.	
ಹಳೇಬೀಡು ದೊಡ್ಡಿ ರಿಪೇರಿ	100
ಬಿಕ್ಕೋಡಿನಿಂದ ಆಲೂರು ಜಂಕ್ಷನ್ ವರಿಗಿನ ರಸ್ತೆ ಸರಿಪಡಿಸುವದು ...	100
ಹಗರೆಯಿಂದ ಹಳೇಬೀಡು ವರಿಗಿನ ಗಾಡಿಜಾಡು ರಿಪೇರಿ	200
ಅರಸೀಕೆರೆ ತಾಲ್ಲೂಕು.	
ಹಂದ್ರಾಳುನಲ್ಲಿ ಒಂದು ಸೇದೋಭಾವಿಗೋಸ್ಕರ	330
ಜೋತಿ ಮಲ್ಲಾಪುರದಲ್ಲಿ ಡಿಟೋ	320
ದೊಡ್ಡಮೇಟಿಕುರಿಕೆಯಲ್ಲಿರುವ ಭಾವಿಗೆ ಕಲ್ಲುಕಟ್ಟುವದಕ್ಕೋಸ್ಕರ	125

ಪಿ. ಆರ್. ಡಬ್ಲ್ಯು. ವೆದರಾಲ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟು ಬೋರ್ಡು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ 1908—09ನೆ ಇಸವಿ ಮಿ|| ಅರ್ಜೀ ನಂಬರ್ 723.

ಆನೆಕಲ್ ತಾಲ್ಲೂಕು ಇಂಡ್ಲ ಬೆಲೆಯಲ್ಲಿದ್ದು ಫವತಿಪಟ್ಟ ಮುನಿಯಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಆನೆಕಲ್ ತಾಲ್ಲೂಕು ಜಿಗಣಿ ಹೋಬಳಿ ನಂಜಾಪುರದಲ್ಲಿರುವ ಇಂಡ್ಲ ಬೆಲೆ ಮುನಿಯಮ್ಮನ ಮಗಳು ಕೆಂಪಕ್ಕ, ಮೃತಪಟ್ಟ ಸದರೀ ಮುನಿಯಮ್ಮನಿಗೆ ಖಾಸಾ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಇಂಡ್ಲ ಬೆಲೆ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಮುನಿಯಮ್ಮನ ಜೆಂದಗಿ ಬಗ್ಯಾಗಿ ಬರತಕ್ಕ 10) ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಕ್ಕನ ಅರ್ಜಿಯನ್ನು ಸ್ 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಯಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1909ನೆ ಇಸವಿ ಫೆಬ್ರವರಿ 16ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯರ್,
ಸಬ್ ಜಡ್ಜ್.

ಮೈಸೂರ ಗೆಜೆಟ್.

ಸಂ. 44. ಸರ್ಕಾರದಿಂದ ಛಾಯಿಷ್ ಆದ್ದು. [ನಂ. 9.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ ೪, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲಿನ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದ ಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಫೈನಾನ್ಷಿಯಲ್ ಸೆಕ್ರೆಟರಿ.

ವಿದ್ಯಾಭ್ಯಾಸದ ಇಲಾಖೆ.

ಸರ್ 1909ನೆಯ ಇಸವಿ ಫಿಬ್ರುವರಿ ತಾರೀಖು 16ನೆಯ ಡಿ. ನಂಬರು 28.

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ಸರ್ 1909ನೆಯ ಇಸವಿ ನವೆಂಬರ್ ತಿಂಗಳಲ್ಲಿ ನಡೆಯುವ ಅಪ್ಪರ್ ಸೆಕಂಡರಿ ಪರೀಕ್ಷೆಗೆ ಇಂಗ್ಲಂಡ್ ಚರಿತ್ರೆಯ ಪಾಠದ ಭಾಗವು ಪ್ರಾರಂಭದಿಂದ 1858ನೆ ಇಸವಿ ವರೆಗೆ ಎಂಬುದಕ್ಕೆ ಬದಲಾಗಿ ಪ್ರಾರಂಭದಿಂದ 1485ನೆಯ ಇಸವಿ ವರೆಗೆ ಎಂದು ನಿಯಮಿಸಲ್ಪಟ್ಟಿದೆ.

ಸರ್ 1909ನೆಯ ಇಸವಿ ಫಿಬ್ರುವರಿ ತಾರೀಖು 16ನೆಯ ಡಿ. ನಂಬರು 29.

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ಈ ಕೆಳಗಿನ ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಯ ತಿದ್ದಿದ ಏರ್ಪಾಡುಗಳು.

ಸರ್ 1910ನೆಯ ಇಸವಿ ನವೆಂಬರ್ ಪರೀಕ್ಷೆಯು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು.

1. ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಯು, ಪ್ರತಿ ವರ್ಷವೂ ನವೆಂಬರು ತಿಂಗಳ 3ನೆಯ ಸೋಮವಾರದಲ್ಲಿ ಆರಂಭವಾಗಿ ಆ ದಿವಸದಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯ ಸ್ಥಳದಲ್ಲಿಯೂ ಚನ್ನಪಟ್ಟಣ ಮತ್ತು ಚಿಕ್ಕಬಳ್ಳಾಪುರ ಈ ಸ್ಥಳಗಳಲ್ಲಿಯೂ ನಡೆಯಿಸಲ್ಪಡುವುದು.

2. ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಗೆ ಕೆಳಗೆ ವಿವರಿಸಲ್ಪಟ್ಟಿರುವವರು ಸೇರಬಹುದು :—

(*a*) ಸರ್ಕಾರದ, ಮ್ಯುನಿಸಿಪಾಲಿಟಿಯ, ದ್ರವ್ಯ ಸಹಾಯದ ಅಥವಾ ಇತರ ಅಂಗೀಕೃತವಾದ ಸ್ಕೂಲುಗಳಲ್ಲಿ ದೇಶಭಾಷೆಯ IV ಮತ್ತು Vನೆ ವರ್ಗಗಳಿಗೆ ಪಾಠ ಹೇಳುತ್ತಿರುವ ಹೆಡ್ಮಾಸ್ಟರುಗಳು ಮತ್ತು ಅಸಿಸ್ಟೆಂಟ್ ಮಾಸ್ಟರುಗಳು.

(*b*) ನಾರ್ಮಲ್ ಸ್ಕೂಲಿನ ವಿದ್ಯಾರ್ಥಿಗಳು.

(*c*) ದೇಶ ಭಾಷೆಯ ಅಥವಾ ಸಂಸ್ಕೃತದ ಅಪ್ಪರ್ ಸೆಕಂಡರಿ ಸ್ಕೂಲಗಳ ವಿದ್ಯಾರ್ಥಿಗಳು.

(*d*) ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಇತರ ಜನಗಳು : ಇವರು ಸ್ವಂತ ವ್ಯಾಸಂಗಿಗಳು (Private Candidates) ಎಂದು ಭಾವಿಸಲ್ಪಡುವರು. ಆದರೆ ದೇಶೀಯ ಪರೀಕ್ಷಾ ನಿರ್ವಾಹಕ ಸಭಾಧ್ಯಕ್ಷರು, ಯೋಗ್ಯರಾದ ಪರೀಕ್ಷ್ಯರನ್ನು (Candidates), ಸರ್ಕಾರದ, ಮ್ಯುನಿಸಿಪಾಲಿಟಿಯ, ದ್ರವ್ಯಸಹಾಯದ ಅಥವಾ ಇತರ ಅಂಗೀಕೃತವಾದ ಸ್ಕೂಲುಗಳಲ್ಲಿ ಅವರು ಮೂರು ವರುಷಕ್ಕೆ ಕಡಮೆ ಇಲ್ಲದೆ ಉಪಾಧ್ಯಾಯರಾಗಿದ್ದ ಪಕ್ಷದಲ್ಲಿ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕೆಂಬ ನಿರ್ಬಂಧದಿಂದ ಬಿಡುಗಡೆ ಮಾಡುವರು.

3. ಮದರಾಸ್ ಯೂನಿವರ್ಸಿಟಿಯ ಅಂಡರ್ ಗ್ರಾಜ್ಯುಯೇಟುಗಳು ಅಂದರೆ ಮೆಟ್ರಿಕ್ಯುಲೇಷನ್ ಅಥವಾ ಎಫ್. ಏ. ಪರೀಕ್ಷೆಯಾಗಿರುವವರು, ಭಾಷೆಯ ಮತ್ತು ಶಾಸ್ತ್ರದ ಭಾಗಗಳಲ್ಲಿ ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಗೆ ಸೇರಬಹುದು.

4. ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಗೆ ಸೇರಬೇಕೆಂಬುವರು ಬೆಂಗಳೂರಲ್ಲಿರುವ ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ ಆಗಸ್ಟು 15ನೆ ತಾರೀಖನ್ನು ಅತಿಕ್ರಮಿಸದೆ ತಲಪುವಂತೆ ದರಖಾಸ್ತುಗಳನ್ನು ಛಾಪಿಸಿರುವ ನಮೂನೆಗಳಲ್ಲಿ (Printed forms) ಬರೆದು ಕಳುಹಿಸಬೇಕು. ಈ ನಮೂನೆಗಳನ್ನು (forms) ಬೆಂಗಳೂರಲ್ಲಿರುವ ದೇಶೀಯ ಪರೀಕ್ಷಾ ಆಫೀಸಿನಿಂದ ತರಿಸಿಕೊಳ್ಳಬಹುದು.

5. ಪರೀಕ್ಷ್ಯನು ಉಪಾಧ್ಯಾಯ ಅಥವಾ ವಿದ್ಯಾರ್ಥಿಯಾಗಿದ್ದಲ್ಲಿ 5 ರೂಪಾಯಿ ವೇತನವನ್ನೂ ಸ್ವಂತ ವ್ಯಾಸಂಗಿಯಾಗಿದ್ದಲ್ಲಿ 7 ರೂಪಾಯಿ ವೇತನವನ್ನೂ ಮುಂದೆಯೇ ಕೊಟ್ಟ ಹೊರತು ಅವನ ಹೆಸರು ದಾಖಲ್ಮಾಡಲ್ಪಡುವದಿಲ್ಲ.

6. ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷ್ಯರು ಕೆಳಗೆ ಹೇಳುವ ವಿಷಯಗಳಲ್ಲಿ ಪರೀಕ್ಷಿಸಲ್ಪಡುವರು.

I. ಪ್ರಥಮಭಾಷೆ—ಕನ್ನಡ, ಮೂರು ಪ್ರಶ್ನಪತ್ರಿಕೆಗಳು : ನೇಮಿಸಲ್ಪಟ್ಟಿರುವ ಗ್ರಂಥಗಳ ವಿಷಯವಾಗಿ 3 ಘಂಟೆಯ ಕಾಲದ 1 ಪತ್ರಿಕೆ : ಆರಿಸಿ ಕೇಳಿದ ಗ್ರಂಥ ಭಾಗಗಳ ಅರ್ಥವಿವರಣ ; ವ್ಯಾಕರಣ, ಭಾಷಾಶೈಲಿ (Idiom) ಮತ್ತು ವಿಭಜನೆ, ಈ ವಿಷಯವಾದ ಪ್ರಶ್ನೆಗಳು ಈ ಪತ್ರಿಕೆಗೆ ಸೇರಿವೆ.

ಶಬ್ದಮಣಿದರ್ಪಣ, ಪಂಡಿತ ಶ್ರೀನಿವಾಸ ರಾಘವಾಚಾರ್ಯರವರ ಛಂದೋಮಾಲಿಕೆ, ಆರ್. ರಘುನಾಥರಾಯರ ಕನ್ನಡ ಉಪನ್ಯಾಸಮಂಜರಿಯ ಪ್ರಥಮಭಾಗ, ಈ ಪುಸ್ತಕಗಳಲ್ಲಿರುವಂತೆ ಪ್ರೌಢವ್ಯಾಕರಣ, ಶಬ್ದಲಕ್ಷಣ, ಛಂದಸ್ಸು ಇವುಗಳ ವಿಷಯವಾಗಿ 2 ಘಂಟೆಯ ಕಾಲದ 1 ಪತ್ರಿಕೆ.

ಪ್ರಬಂಧರಚನೆಯ ವಿಷಯವಾದ 1 ಘಂಟೆಯ ಕಾಲದ 1 ಪತ್ರಿಕೆ.

ಅಥವಾ ಉರ್ದು—ಮೂರು ಪ್ರಶ್ನ ಪತ್ರಿಕೆಗಳು : ನೇಮಿಸಲ್ಪಟ್ಟಿರುವ ಗ್ರಂಥಗಳ ವಿಷಯವಾಗಿ 3 ಘಂಟೆಯ ಕಾಲದ 1 ಪತ್ರಿಕೆ : ಆರಿಸಿ ಕೇಳಿದ ಗ್ರಂಥ ಭಾಗಗಳ ಅರ್ಥವಿವರಣ ; ವ್ಯಾಕರಣ, ಭಾಷಾಶೈಲಿ (Idiom) ಮತ್ತು ವಿಭಜನೆ, ಈ ವಿಷಯವಾದ ಪ್ರಶ್ನೆಗಳು ಈ ಪತ್ರಿಕೆಗೆ ಸೇರಿವೆ.

(1) ಅನ್‌ಜುಮಾನಿ ತರಗ್ಗಿಯುರುದು ಇಂದ ಪರಿಷ್ಕರಿಸಲ್ಪಟ್ಟ ಮಿಸ್‌ಬಾಲ್‌ಕವಾಯದ್ (2) ತಚ್‌ಕೀರ್‌ತುಲ್‌ ಬಲಾಘಟ್ ಇದರಲ್ಲಿ ಬಯಾನ್ ಮತ್ತು ಬದಿ ವಿಷಯಕವಾದ 2 ಭಾಗಗಳು. ಈ ಪುಸ್ತಕಗಳಲ್ಲಿರುವಂತೆ ಪ್ರೌಢವ್ಯಾಕರಣ, ಶಬ್ದಲಕ್ಷಣ, ಛಂದಸ್ಸು ಇವುಗಳ ವಿಷಯವಾಗಿ 2 ಘಂಟೆಯ ಕಾಲದ 1 ಪತ್ರಿಕೆ.

ಪ್ರಬಂಧರಚನೆಯ ವಿಷಯಕವಾದ 1 ಘಂಟೆಯ ಕಾಲದ 1 ಪತ್ರಿಕೆ.

II. ದ್ವಿತೀಯಭಾಷೆ—(*a*) ಸಂಸ್ಕೃತ. ದ್ವಿತೀಯ ಭಾಷೆಯಲ್ಲಿ 2 ಪತ್ರಿಕೆಗಳು. ನೇಮಿಸಲ್ಪಟ್ಟಿರುವ ಗ್ರಂಥಗಳ ವಿಷಯವಾಗಿಯೂ ಭಂಡಾರ್ಕರ ಮೊದಲನೇ ಪುಸ್ತಕದಲ್ಲಿ ಇರುವಂತ ವ್ಯಾಕರಣ, ಪದವಿನ್ಯಾಸ, (Structure), ಭಾಷಾಶೈಲಿ ಇವುಗಳ ವಿಷಯವಾಗಿಯೂ 3 ಘಂಟೆಯ ಕಾಲದ ಒಂದು ಪತ್ರಿಕೆ.

ಕನ್ನಡಕ್ಕೆ ಭಾಷಾಂತರ ಮಾಡುವದಕ್ಕೋಸ್ಕರ ಪರೀಕ್ಷ್ಯರು ನೋಡದೆ ಇರುವ ಒಂದು ಸಂಸ್ಕೃತ ಭಾಗವನ್ನೂ, ಸಂಸ್ಕೃತಕ್ಕೆ ಭಾಷಾಂತರ ಮಾಡುವುದಕ್ಕೋಸ್ಕರ ಕನ್ನಡದಿಂದ ವಿಶೇಷ ಉದ್ದವೂ ಕಷ್ಟವೂ ಇಲ್ಲದ ಮತ್ತು ಪರೀಕ್ಷ್ಯರು ನೋಡದೆ ಇರುವ ಕಥಾರೂಪವಾದ ಒಂದು ಭಾಗವನ್ನೂ ಮತ್ತು ವಾಕ್ಯಗಳನ್ನೂ ಒಳಕೊಂಡಿರುವ ಎರಡು ಘಂಟೆಯುಕಾಲದ ಒಂದು ಪತ್ರಿಕೆ.

(b) (1) ಪರ್ಷಿಯನ್—ಒಂದು ಪ್ರಶ್ನೆ ಪತ್ರಿಕೆ: ನೇಮಿಸಲ್ಪಟ್ಟಿರುವ ಗ್ರಂಥಗಳ ವಿಷಯವಾಗಿ 3 ಘಂಟೆಯ ಕಾಲದ ಒಂದು ಪತ್ರಿಕೆ: ಇದರಲ್ಲಿ ಸೇರಿರುವುದು: ಉರ್ದುಗೆ ಭಾಷಾಂತರ ಮಾಡುವಿಕೆ, ಆರಿಸಿಕೇಳಿದ ಗ್ರಂಥಭಾಗಗಳ ಅರ್ಥ ವಿವರಣ, ವ್ಯಾಕರಣ ಭಾಷಾಶೈಲಿ ಮತ್ತು ವಾಕ್ಯವಿಭಜನೆ ಅಹ್‌ಸನ್-ಅಲ್-ಖವೈದ್ ಗ್ರಂಥದ ಶಬ್ದಲಕ್ಷಣ ವಾಕ್ಯಲಕ್ಷಣಗಳಲ್ಲಿರುವಂತೆ; ಮತ್ತು ಉರ್ದು ಭಾಷೆಯಿಂದ ಪರ್ಷಿಯನ್ ಭಾಷೆಗೆ ಭಾಷಾಂತರ ಮಾಡುವಿಕೆ.

(2) ಅರಾಬಿಕ್—ಒಂದು ಪತ್ರಿಕೆ. ತರೀಖತ-ಉಲ್-ಮುಜ್‌ತೆಹರ-I, IIನೆಯ ಭಾಗಗಳೂ ಈ ಗ್ರಂಥದ ವಿಷಯವಾಗಿ 3 ಘಂಟೆಯ ಕಾಲದ ಒಂದು ಪತ್ರಿಕೆ: ಇದರಲ್ಲಿ ಭಾಷಾಂತರ ಮಾಡುವಿಕೆ, ಅರ್ಥವಿವರಣ. ಮಿಪ್ತ-ಉಲ್-ಅದಬ್‌ನಲ್ಲಿರುವಂತೆ, ವ್ಯಾಕರಣ, ಪದವಿನ್ಯಾಸ ಮತ್ತು ಭಾಷಾಶೈಲಿ: ಮತ್ತು ಉರ್ದುಭಾಷೆಯಿಂದ ಅರಾಬಿಕ್ ಭಾಷೆಗೆ ಭಾಷಾಂತರ ಮಾಡುವಿಕೆ-ಸಹ ಸೇರುತ್ತೆ.

III. ಗಣಿತಶಾಸ್ತ್ರ:—(a) ಅಂಕಗಣಿತ—ಶುದ್ಧ ದಶಮಾಂಶಗಳು, ಆವರ್ತ ದಶಮಾಂಶಗಳು, ಗುಣಕಾರ ಭಾಗಹಾರಗಳಲ್ಲಿ ಕಷ್ಟವನ್ನು ಕಡಮೆ ಮಾಡುವ ಮಾರ್ಗಗಳು. ರೂಢಿಗಣಿತ: ತ್ರೈರಾಶಿಕ, ಸಂಯುಕ್ತ ತ್ರೈರಾಶಿಕ: ಸರಳಬಡ್ಡಿ, ಚಕ್ರಬಡ್ಡಿ: ಚದರ ಮತ್ತು ಘನ ಅಳತೆ, ವರ್ಗಮೂಲ, ಘನಮೂಲ, "ಮೆಟ್ರಿಕ್ ಸಿಸ್ಟಂ" ಎಂಬ ತೂಕ ಮತ್ತು ಅಳತೆಯ ಕೋಷ್ಟ್ಯಗಳು. ("The Matric System"): ಪಾಲಿನ ವ್ಯಾಪಾರ, ಶೇಕಡಾ ಕ್ರಮ ಸರಾಸರಿ ಲಾಭ ನಷ್ಟ. ತಾತ್ಕಾಲಿಕ ಮೌಲ್ಯ, ಉತ್ತಾರ, ಭಂಡವಾಳ. 3 ಘಂಟೆಯ ಕಾಲದ ಒಂದು ಪತ್ರಿಕೆ.

(b) ರೇಖಾಗಣಿತ.

1. ವ್ಯಾವಹಾರಿಕ ಭಾಗ.

ಕೊಡಲ್ಪಟ್ಟ ವಿಷಯಗಳಿಗನುಸಾರವಾಗಿ ರೇಖೆಗಳನ್ನೂ, ಕೋಣಗಳನ್ನೂ, ವೃತ್ತಗಳನ್ನೂ, ಲಂಬಗಳನ್ನೂ, ಸಮಾನಾಂತರ ಸರಳ ರೇಖೆಗಳನ್ನೂ, ತ್ರಿಭುಜಗಳನ್ನೂ, ಸಮವಾದ ರೇಖೆ ಮತ್ತು ಕೋಣಗಳುಳ್ಳ ವಿಶೇಷಾಕೃಗಳನ್ನೂ ನಿರ್ಮಾಣಮಾಡುವಿಕೆ. ಕೋರಲ್ಪಟ್ಟ ರೀತಿಯಾಗಿ ರೇಖೆಗಳನ್ನು ಭಾಗಿಸುವಿಕೆ, ಕೋಣಗಳನ್ನು ಸಮವಾಗಿ ಎರಡು ಭಾಗ ಮಾಡುವಿಕೆ.

2. ಶಾಸ್ತ್ರೀಯ ಭಾಗ.

ಒಂದು ಬಿಂದುವಿನಲ್ಲಿನ ಕೋಣಗಳು. ಸಮಾನಾಂತರ ಸರಳ ರೇಖೆಗಳು. ತ್ರಿಭುಜಗಳು ಮತ್ತು ಸರಳರೇಖಾಕೃತಿಗಳು. ಕ್ಷೇತ್ರಫಲಗಳು. ವ್ಯಾವಹಾರಿಕ ರೇಖಾಗಣಿತದಲ್ಲಿನ ನಿರ್ಮಾಣಗಳಿಗೆ ಬೇಕಾಗಿರುವ ಪ್ರಮಾಣಗಳು. ಸುಲಭವಾದ ರೀತಿ ಪ್ರಶ್ನೆಗಳು.

(ವಿಶದವಾಗಿ ತಿಳಿಯಬೇಕಾದ ಅಂಶಗಳಿಗೆ ಪರಿಶಿಷ್ಟವನ್ನು ನೋಡು).

[ಟಿಪ್ಪಣಿ—ಪರೀಕ್ಷ್ಯರು, ರೇಖಾಗಣಿತಕ್ಕೆ ಪ್ರತಿಯಾಗಿ ಮದರಾಸ್ ಟೆಕ್ನಿಕಲ್ ಪರೀಕ್ಷೆಯ ಮೊದಲನೆಯ ಅಂತಸ್ತಿಗೆ ನಿಯಮಿಸಲ್ಪಟ್ಟಿರುವ ಸರಳ (ಸುಲಭ) ಹಸ್ತನಕ್ಷೆಯ ಬರವಣಿಗೆಯನ್ನು (Free hand outline drawing) ತೆಗದುಕೊಳ್ಳಬಹುದು.

ಈ ವಿಷಯಕ್ಕೆ ನಿಯಮಿತವಾಗಿರುವ ಅಂಕಗಳು 50.

ಸರಳಹಸ್ತ ನಕ್ಷೆ ಬರವಣಿಗೆಯ ಪ್ರಥಮ ಪರೀಕ್ಷೆಯ ಅಂಶಗಳು ಯಾವುವೆಂದರೆ:—

ಪರೀಕ್ಷೆಯು ಕಾರ್ಯತಃ ಪರೀಕ್ಷೆಯಾಗಿ (Practical Examination) ಯೂ ಮತ್ತು ಕೆಳಗೆ ಸೂಚಿಸಿರುವ ಭಾಗಗಳನ್ನು ಒಳಕೊಂಡೂ ಇರುವುದು.

(1) ಚಪ್ಪಟೆಯಾದ ಮಾದರಿಗಳಿಂದ ಬರೆಯುವ $1\frac{1}{4}$ ಘಂಟೆ ಕಾಲದ ಒಂದು ಪರೀಕ್ಷೆ. ಕೊಡಲ್ಪಟ್ಟ ನಕ್ಷೆಯನ್ನಾಗಲಿ ಅಥವಾ ಆಭರಣದ ನಮೂನೆಯನ್ನಾಗಲಿ ಇಟ್ಟುಕೊಂಡು ಕೈವಾರದ (Compass) ಅಥವಾ ಇತರ ಯಂತ್ರೋಪಕರಣಗಳ ಸಹಾಯವಿಲ್ಲದೆಯೇ ಮಾತೃಕೇಗಿಂತ ಸ್ವಲ್ಪ ಹೆಚ್ಚಾದ ಅಥವಾ ಸ್ವಲ್ಪ ಕಡಿಮೆಯಾದ ಪರಿಮಾಣಕ್ಕೆ ಸರಿಯಾದ ರೇಖಾವಿನ್ಯಾಸವುಳ್ಳ ಒಂದು ಆಕೃತಿಯನ್ನು ನಿರ್ಮಿಸುವುದು.

(2) ಮಾದರಿ ನಕ್ಷೆಯ $1\frac{1}{4}$ ಘಂಟೆಯ ಕಾಲದ ಪರೀಕ್ಷೆ, ಹೂಜಿ ಮತ್ತು ಬೋಗಣಿ; ಟೀ ಬಟ್ಲು ಮತ್ತು ತಟ್ಟೆಗಳು, ಪೆಟ್ಟಿಗೆ, ಪುಸ್ತಕಗಳು, ಕಲಶಗಳು ಅಥವಾ ಘನಾಕೃತಿ (Cube) ಕ್ರಕಚಾಯತ (Prism) ಗೋಪುರಾಕಾರ (Pyramid) ಶಂಕು (Cone) ಮತ್ತು ಸ್ತಂಭಾಕಾರ (Cylinder) ಮೊದಲಾದ ಸರಳವಾದ ಮಾದರಿಗಳು ಇವೇ ಮೊದಲಾದ ಸರಳವಾದ ಆಕೃತಿಯುಳ್ಳ ಒಂದು ಅಥವಾ ಎರಡು ಸಾಧಾರಣವಾದ ಪದಾರ್ಥಗಳ ಹೊರವೆಯನ್ನು ಮಾತ್ರ ರೇಖಾ ವಿನ್ಯಾಸದಿಂದ ಲೇಖಿಸುವುದು.

[ಇದಕ್ಕಾಗಿ ಶಿಫಾರಸ್ ಮಾಡಲ್ಪಟ್ಟ ಗ್ರಂಥಗಳು ಯಾವುವೆಂದರೆ:—ಪಾಯಿಂಟರ್ ಸಾಹೇಬರವರಿಂದ ರಚಿಸಲ್ಪಟ್ಟ ಸೌತ್ ಕೆನ್ಸಿಂಗ್ಟನ್ ಡ್ರಾಯಿಂಗ್ ಪುಸ್ತಕಗಳು] [ಆಭರಣ ಪುಸ್ತಕಗಳು II, III, IV, ಮತ್ತು ಪ್ರಥಮ ಅಥವಾ ಸುಲಭವಾದ ಆಕಾರ I ಮತ್ತು II) ಮತ್ತು ಮದರಾಸ್ ಸ್ಕೂಲ್ ಆಫ್ ಆರ್ಟ್ಸ್ ನಕ್ಷೆಯ ಪುಸ್ತಕ.]

IV. ಶಾಸ್ತ್ರ—(a) ಪ್ರಾರಂಭಕಶಾಸ್ತ್ರ (Elementary Science.-(1) ರಾವ ಬಹದೂರ ಕೇರೋಲಕ್ಷ್ಮಣ ಛತ್ರೆಯವರು ಮಾಡಿರುವ ಪದಾರ್ಥವಿಜ್ಞಾನ ಶಾಸ್ತ್ರದ ಆದಿ ಪುಸ್ತಕದ (Primer of Physics) ಭಾಷಾಂತರ. (2) ಕುಕ ಎಂಬುವರ ಪದಾರ್ಥವಿಜ್ಞಾನದ ಲಘುಪುಸ್ತಕ (Manual of Natural Philosophy). (3) ಲೋವರ್ ಸೆಕೆಂಡರಿ ಸ್ಕೂಲುಗಳಲ್ಲಿ ಕೃಷಿ ಶಾಸ್ತ್ರವನ್ನೂ ((Agriculture) ಆರೋಗ್ಯ ಶಾಸ್ತ್ರವನ್ನೂ ಬೋಧಿಸುವುದಕ್ಕೆ ತಿಳಿಯಬೇಕಾದಷ್ಟು ರಸಾಯನಶಾಸ್ತ್ರ (Chemistry) ಪದಾರ್ಥವಿಜ್ಞಾನ ಶಾಸ್ತ್ರ (Physics), ವನಸ್ಪತಿ ಶಾಸ್ತ್ರ (Botany) ಭೂಗರ್ಭಶಾಸ್ತ್ರ (Geology) ಇವುಗಳ ಅಂಶಗಳು, ತಿಳಿಯಬೇಕಾದ ಅಂಶಗಳಿಗೆ ಪರಿಶಿಷ್ಟವನ್ನು (Appendix) ನೋಡು. 2 ಘಂಟೆಯ ಕಾಲದ 1 ಪತ್ರಿಕೆ.

(b) ಆರೋಗ್ಯಶಾಸ್ತ್ರ :—ಹಿಂದೂ ಗೃಹಕಾರ್ಯ ನಿರ್ವಾಹವಿದ್ಯೆ (Indian Domestic Economy) ಮತ್ತು ಆರೋಗ್ಯಶಾಸ್ತ್ರ. 2 ಘಂಟೆಯ ಕಾಲದ 1 ಪತ್ರಿಕೆ.

(c) ಕೃಷಿಶಾಸ್ತ್ರ, (ತಿಳಿಯಬೇಕಾದ ಅಂಶಗಳಿಗೆ ಪರಿಶಿಷ್ಟವನ್ನು ನೋಡು) 2 ಘಂಟೆಯ ಕಾಲದ 1 ಪತ್ರಿಕೆ.

ಅಥವಾ

ಹೊಲಿಗೆ ಅಥವಾ ಸಂಗೀತ. (ಪರೀಕ್ಷ್ಯೆಯರಿಗೆ ಮಾತ್ರ (Female Candidates) ಸಂಗೀತಕ್ಕೆ (1) ಗಾನ, ಅಥವಾ (2) ವಾದನದಲ್ಲಿ ವೀಣೆ, ಪಿಟೀಲು ಪಿಯಾನೊ ಈ ವಾದ್ಯಗಳೊಳಗೆ ಯಾವುದಾದರೂ ಒಂದು. ಹೀಗೆ ತೆಗದುಕೊಂಡಲ್ಲಿ ಸಾಕು. ತಿಳಿಯಬೇಕಾದಂಶಗಳಿಗೆ ಪರಿಶಿಷ್ಟವನ್ನು ನೋಡು.

V. ಚರಿತ್ರೆ ಮತ್ತು ಭೂಗೋಳ—

(a) ಭೂಗೋಳಶಾಸ್ತ್ರ (1) ಗೈಕಿಯವರ ಪ್ರಾಕೃತಿಕ ಭೂಗೋಳ ಶಾಸ್ತ್ರದ ಆದಿ ಪುಸ್ತಕ (Primer of Physical Geography). (2) ಸಾಮಾನ್ಯ ಭೂವಿವರಣೆ, ಮುಖ್ಯವಾಗಿ ಹಿಂದೂದೇಶದ ಭೂವಿವರಣೆ. (3) ಭೂಪಟ ಬರೆಯುವುದು. ಯಾವುದಾದರೂ ಒಂದು ದೇಶದ, ಅಥವಾ ಒಂದು ಭೂಖಂಡದ ಭಾಗದ ಪಟವನ್ನು ಬಾಹ್ಯ ರೇಖೆಗಳಿಲ್ಲದೆ ಇದಕ್ಕಾಗಿ ತಯಾರ್ಮಾಡಿಸಿರುವ ನಕ್ಷೆಗಳ ಮೇಲೆ ಬರೆಯುವುದು (on Prepared projections without outlines). 3 ಘಂಟೆಯ ಕಾಲದ 1 ಪತ್ರಿಕೆ. [ಉಪಾಧ್ಯಾಯರ ಉಪಯೋಗಕ್ಕಾಗಿ ಮಾರಿಸ್‌ರವರ ಹೊಸ ಇಂಡಿಯಾ ಭೂಗೋಳ ಶಾಸ್ತ್ರವೂ ಮತ್ತು ಲಾಂಗ್‌ಮ್ಯಾನ್ಸ ರವರ ಭೂಗೋಳಶಾಸ್ತ್ರಗಳ ಪೈಕಿ IIIನೆಯ ಪುಸ್ತಕವೂ ಶಿಫಾರಸ್ ಮಾಡಲ್ಪಟ್ಟಿವೆ.]

(b) ಚರಿತ್ರೆ. (1) ಸ್ 1876ನೆ ಇಸವಿ ವರೆಗೆ ಹಿಂದೂದೇಶದ ಚರಿತ್ರೆ ಮತ್ತು ಸರವಿಲಿಯಂ ಲೀವಾರ್ನರರವರ "ದಿ ಸಿಟಿಜನ್ ಆಫ್ ಇಂಡಿಯಾ" (1906ನೆ ಇಸವಿ ಹೊಸ ಛಾಪು) ಎಂಬುದರಲ್ಲಿ I, II, III (18 & 19 ಪ್ಯಾರಾಗಳು), V, VI, VII, VIII, XIII, & XVI ಅಧ್ಯಾಯಗಳು. 2½ ಘಂಟೆಯ ಕಾಲದ 1 ಪತ್ರಿಕೆ.

7. ದೇಶಭಾಷೆಯ ಅಪ್ಪರ್ ಸೆಕೆಂಡರಿ ಪರೀಕ್ಷೆಯು ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕಾಲ ವಿಷಯ ಕ್ರಮದಾನುಸಾರವಾಗಿ ನಡೆಯುವುದು: ಈ ಪಟ್ಟಿಯಲ್ಲಿ ಕೊಟ್ಟಿರುವಂತೆಯೇ ಪ್ರತಿ ವಿಷಯಕ್ಕೂ ಅಂಕ ಸಂಖ್ಯೆಯನ್ನು ಇಟ್ಟುಕೊಳ್ಳಬೇಕು :—

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೇ ದಿನ	10—1	ಪ್ರಥಮಭಾಷೆ —ಕನ್ನಡ ಅಥವಾ ಉರ್ದು ಗ್ರಂಥಗಳು ...	50	120
	2—4	ಅದೇ ಡಿಟೋ ಪ್ರಾಢವ್ಯಾಕರಣ ...	40	
	4·5—5·5	ಅದೇ ಡಿಟೋ ಪ್ರಬಂಧರಚನೆ ..	30	
ಎರಡನೇ ದಿನ	10—1	ಸಂಸ್ಕೃತ ಗ್ರಂಥಗಳು ಮತ್ತು ವ್ಯಾಕರಣ ..	40	80
		ಫಾರಸಿ ಗ್ರಂಥಗಳು, ವ್ಯಾಕರಣ ಮತ್ತು ಭಾಷಾಂತರ ...	40	
	2—4	ಸಂಸ್ಕೃತ ಮತ್ತು ಕನ್ನಡ ಭಾಷಾಂತರ ...	40	
	2—5	ಅರಾಬಿಕ ಗ್ರಂಥಗಳು, ವ್ಯಾಕರಣ ಮತ್ತು ಭಾಷಾಂತರ ...	40	
ಮೂರನೇ ದಿನ	10—1	ಅಂಕಗಣಿತ	50	100
	2—4·30	ರೇಖಾಗಣಿತ ..	50	
		ಸರಳಹಸ್ತ ನಕ್ಷೆಯ ಬರವಣಿಗೆ (Free hand drawing)	50	
ನಾಲ್ಕನೇ ದಿನ	10—12	ಪ್ರಾರಂಭಕ ಶಾಸ್ತ್ರ (Elementary science)	40	120
	1—3	ಆರೋಗ್ಯಶಾಸ್ತ್ರ	40	
	3·5—5·5	ಕೃಷಿಶಾಸ್ತ್ರ	40	
ಐದನೇ ದಿನ	10—1	ಭೂಗೋಳ ಶಾಸ್ತ್ರ	40	80
	2—4·30	ಹಿಂದೂ ದೇಶದ ಚರಿತ್ರೆ	40	
			ಜುಮ್ಲಾ	500

ಪರೀಕ್ಷ್ಯೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಆರನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿನಡೆಯುವುದು.

8. (1) ಪ್ರಥಮ ಭಾಷೆಗೆ ನಿಯಮಿತವಾಗಿರುವ ಪೂರ್ಣಾಂಕದಲ್ಲಿ ಶೇಕಡಾ 35ನ್ನೂ,

(2) ಇತರ ವಿಷಯಗಳಲ್ಲಿ ಒಂದೊಂದರಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 30 ನ್ನೂ ಪಡೆಯದವರು ತೇರ್ಗಡೆಯಾಗುವುದಿಲ್ಲ.

ತೇರ್ಗಡೆಯಾದವರೊಳಗೆ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಮೆಯಿಲ್ಲದೆ ಅಂಕಗಳನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ, ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

9. ತೇರ್ಗಡೆಯಾದವರಲ್ಲಿ ಒಬ್ಬೊಬ್ಬರಿಗೂ ದೇಶೀಯ ಪರೀಕ್ಷಾ ನಿರ್ವಾಹಕ ಸಭಾಧ್ಯಕ್ಷರು ರುಜು ಮಾಡಿದ ಒಂದು ನಿರ್ಣಯ ಪತ್ರಿಕೆಯು ಕೊಡಲ್ಪಡುವುದು.

ಇದರಲ್ಲಿ ಪರೀಕ್ಷೆಯ ಕಾಲ, ತೇರ್ಗಡೆಯಾದವನು ಪರೀಕ್ಷಿಸಲ್ಪಟ್ಟ ಪ್ರಥಮ ದ್ವಿತೀಯ ಭಾಷೆಗಳು ಮತ್ತು ಇತರ ವಿಷಯಗಳು, ಅವನನ್ನು ಸೇರಿಸಿರುವ ವರ್ಗ, ಈ ಅಂಶಗಳೆಲ್ಲಾ ವಿವರಿಸಲ್ಪಡುವವು.

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರೀ ಪರೀಕ್ಷೆ.

ಪರಿಶಿಷ್ಟ.—ತಿಳಿಯಬೇಕಾದ ಅಂಶಗಳು.

I. ರೇಖಾಗಣಿತ.

ಒಂದು ಬಿಂದುವಿನಲ್ಲಿನ ಕೋಣಗಳು :

ಒಂದು ಸರಳ ರೇಖೆಯೊಡನೆ ಏಕಪಾರ್ಶ್ವದಲ್ಲಿ ಮತ್ತೊಂದು ಸರಳರೇಖೆಯು ಕೂಡಿ ಮಾಡುವ ಕೋಣಗಳು ಎರಡೂ ಸೇರಿ ಎರಡು ಸಮಕೋಣಗಳಿಗೆ ಸಮಾನವಾಗಿರುವುವು.

ಇದರ ವಿಲೋಮ ಪ್ರತಿಜ್ಞೆ.

ಎರಡು ಸರಳರೇಖೆಗಳು ಒಂದನ್ನು ಒಂದು ಛೇದಿಸಿದರೆ ಶೃಂಗಾಭಿಮುಖ ಕೋಣಗಳು ಸಮಾನವಾಗಿರುವುವು.

ಸಮಾನಾಂತರ ಸರಳ ರೇಖೆಗಳು :—

ಒಂದು ಸರಳ ರೇಖೆಯು ಮತ್ತೆರಡು ಸರಳ ರೇಖೆಗಳಮೇಲೆ ಬಿದ್ದು,

1. ಪರಸ್ಪರ ಕೋಣಗಳನ್ನು ಒಂದಕ್ಕೊಂದು ಸಮಾನವಾಗುವಂತೆ ಮಾಡಿದರೆ,

2. ಒಂದು ಬಾಹ್ಯಕೋಣವನ್ನು ತತ್ಪಾರ್ಶ್ವದಲ್ಲಿರುವ ಅಂತರಸ್ಥಾಭಿಮುಖ ಕೋಣಕ್ಕೆ ಸಮಾನವಾಗುವಂತೆ ಮಾಡಿದರೆ,

3. ಏಕಪಾರ್ಶ್ವದಲ್ಲಿರುವ ಅಂತರಸ್ಥ ಕೋಣದ್ವಯವನ್ನ ಎರಡು ಸಮಕೋಣಗಳಿಗೆ ಸಮಾನವಾಗಿ ಮಾಡಿದರೆ,

ಈ ಎರಡು ಸರಳ ರೇಖೆಗಳು ಸಮಾನಾಂತರವನ್ನುಳ್ಳದ್ದಾಗಿರುವುವು.

ಇದರ ವಿಲೋಮ ಪ್ರತಿಜ್ಞೆ.

ಒಂದು ಸರಳರೇಖೆಗೆ ಸಮಾನಾಂತರವುಳ್ಳ ಸರಳ ರೇಖೆಗಳು ಒಂದಕ್ಕೊಂದು ಸಮಾನಾಂತರ ರೇಖೆಗಳಾಗಿರುವುವು.

ತ್ರಿಭುಜಗಳು ಮತ್ತು ಸರಳರೇಖಾಕೃತಿಗಳು.

ಪ್ರತಿ ತ್ರಿಭುಜದ ಕೋಣತ್ರಯವು ಎರಡು ಸಮಕೋಣಗಳಿಗೆ ಸಮಾನವಾಗಿರುವುವು—

ಎರಡು ಸಮಕೋಣಗಳಿಗೆ ಕಡಿಮೆಯಾಗಿರುವ ಅಂತರಸ್ಥ ಕೋಣಗಳನ್ನುಳ್ಳ ಒಂದು ಸರಳರೇಖಾಕೃತಿಯ ರೇಖೆಗಳನ್ನು ವರ್ರಸೆಯಾಗಿ ಲಂಬಿಸುವದರಿಂದುಂಟಾಗುವ ಬಾಹ್ಯಕೋಣಗಳೆಲ್ಲವೂ ನಾಲ್ಕು ಸಮಕೋಣಗಳಿಗೆ ಸಮಾನವಾಗಿರುವುವು.

ಎರಡು ತ್ರಿಭುಜಗಳಲ್ಲಿ, ಒಂದರ ಎರಡು ಬಾಹುಗಳು ಮತ್ತೊಂದರ ಎರಡು ಬಾಹುಗಳಿಗೆ ಒಂದಕ್ಕೊಂದು ಸಮವಾಗಿ, ಆ ಬಾಹುಗಳ ಮಧ್ಯಸ್ಥ ಕೋಣಗಳು ಒಂದಕ್ಕೊಂದು ಸಮವಾಗಿದ್ದರೆ, ಎರಡು ತ್ರಿಭುಜಗಳೂ ಎಲ್ಲ ಭಾಗಗಳಲ್ಲಿಯೂ ಒಂದಕೊಂದು ಸಮಾನವಾಗಿರುವುವು.

ಎರಡು ತ್ರಿಭುಜಗಳಲ್ಲಿ ಒಂದರ ಎರಡು ಕೋಣಗಳು ಮತ್ತೊಂದರ ಎರಡು ಕೋಣಗಳಿಗೆ ಅದಕ್ಕದುಸಮವಾಗಿ, ಒಂದರ ಒಂದು ಬಾಹುವು ಅದಕ್ಕನುಸಾರವಾದ ಮತ್ತೊಂದರ ಬಾಹುವಿಗೆ ಸಮವಾಗಿದ್ದರೆ, ಎರಡು ತ್ರಿಭುಜಗಳೂ ಎಲ್ಲ ಭಾಗಗಳಲ್ಲಿಯೂ ಒಂದಕ್ಕೊಂದು ಸಮಾನವಾಗಿರುವುವು.

ಒಂದು ತ್ರಿಭುಜದ ಎರಡು ಬಾಹುಗಳು ಒಂದಕ್ಕೊಂದು ಸಮಾನವಾಗಿದ್ದರೆ, ಆ ಬಾಹುಗಳ ಅಭಿಮುಖ ಕೋಣಗಳು ಒಂದಕ್ಕೊಂದು ಸಮಾನವಾಗಿರುವುವು.

ಇದರ ವಿಲೋಮ ಪ್ರತಿಜ್ಞೆಯು.

ಒಂದು ತ್ರಿಭುಜದ ಮೂರು ಬಾಹುಗಳು ಮತ್ತೊಂದು ತ್ರಿಭುಜದ ಮೂರು ಬಾಹುಗಳಿಗೆ, ಅದಕ್ಕದು ಸಮಾನವಾಗಿದ್ದರೆ, ಎರಡು ತ್ರಿಭುಜಗಳು ಎಲ್ಲ ಭಾಗಗಳಲ್ಲಿಯೂ ಒಂದಕ್ಕೊಂದು ಸಮಾನವಾಗಿರುವುವು.

ಎರಡು ಸಮಕೋಣ ತ್ರಿಭುಜಗಳಲ್ಲಿ, ಒಂದರ ಕರ್ಣವು ಮತ್ತೊಂದರ ಕರ್ಣಕ್ಕೆ ಸಮವಾಗಿಯೂ, ಒಂದರ ಒಂದು ಬಾಹುವು ಮತ್ತೊಂದರ ಒಂದು ಬಾಹುವಿಗೆ ಸಮವಾಗಿಯೂ ಇದ್ದರೆ, ತ್ರಿಭುಜಗಳು ಎರಡೂ ಎಲ್ಲ ಭಾಗಗಳಲ್ಲಿಯೂ ಒಂದಕ್ಕೊಂದು ಸಮಾನವಾಗಿರುವುವು.

ಒಂದು ತ್ರಿಭುಜದ ಎರಡು ಬಾಹುಗಳು ಒಂದಕ್ಕೊಂದು ಅಸಮಾನವಾಗಿದ್ದ ಪಕ್ಷದಲ್ಲಿ, ದೀರ್ಘತರ ಬಾಹುವು ಗುರುತರ ಕೋಣಕ್ಕೆ ಅಭಿಮುಖವಾಗಿರುವುದು.

ಇದರ ವಿಲೋಮ ಪ್ರತಿಜ್ಞೆ.

ಒಂದು ಸರಳ ರೇಖೆಗೆ ಅದರ ಹೊರಗೆ ಕೊಡಲ್ಪಟ್ಟ ಬಿಂದುವಿನಿಂದ ಎಳೆಯಲ್ಪಟ್ಟ ಸರಳ ರೇಖೆಗಳ ಪೈಕಿ ಲಂಬವಾಗಿ ಎಳೆಯಲ್ಪಟ್ಟ ರೇಖೆಯೇ ಅತ್ಯಂತ ಚಿಕ್ಕದಾಗಿರುವುದು.

ಸಮಾನಾಂತರ ಕ್ಷೇತ್ರಾಭಿಮುಖ ಬಾಹುಗಳೂ, ಕೋಣಗಳೂ ಒಂದಕ್ಕೊಂದು ಸಮವು; ಕರ್ಣವು ಆ ಕ್ಷೇತ್ರವನ್ನು ಅರ್ಧಿಸುತ್ತದೆ, ಮತ್ತು ಆ ಕ್ಷೇತ್ರದ ಎರಡು ಕರ್ಣಗಳೂ ಒಂದರಿಂದ ಮತ್ತೊಂದು ಅರ್ಧಿಸಲ್ಪಡುತ್ತವೆ.

ಮೂರು ಅಥವಾ ಹೆಚ್ಚು ಸಮಾನಾಂತರ ರೇಖೆಗಳಿಂದ ಛೇದಿಸಲ್ಪಟ್ಟ ಒಂದು ಸರಳರೇಖೆಯ ಭಾಗಗಳು ಒಂದಕ್ಕೊಂದು ಸಮಾನವಾಗಿದ್ದರೆ, ಅವುಗಳಿಂದಲೇ ಛೇದಿಸಲ್ಪಟ್ಟ ಮತ್ತಾವ ಸರಳರೇಖೆಯ ಭಾಗಗಳೂ ಒಂದಕ್ಕೊಂದು ಸಮಾನವಾಗಿರುವುವು.

ಕ್ಷೇತ್ರಫಲ:—

ಏಕಪಾದದಮೇಲೆ ಅಥವಾ ಸಮಪಾದಗಳ ಮೇಲೆ ಸಮಾನಾಂತರ ಸರಳ ರೇಖೆಗಳ ಮಧ್ಯೆ ಇರುವ ಸಮಾನಾಂತರ ಕ್ಷೇತ್ರಗಳು ಒಂದಕ್ಕೊಂದು ಸಮ.

ಏಕಪಾದದಮೇಲೆ ಅಥವಾ ಸಮಪಾದಗಳ ಮೇಲೆ ಸಮಾನಾಂತರ ಸರಳರೇಖೆಗಳ ಮಧ್ಯೆ ಇರುವ ತ್ರಿಭುಜಗಳು ಒಂದಕ್ಕೊಂದು ಸಮ.

ಏಕಪಾದದಮೇಲೆ ಅಥವಾ ಸಮಪಾದಗಳ ಮೇಲೆ ಇರುವ ಸಮಾನ ತ್ರಿಭುಜಗಳು ಏಕಸಮಾನಾಂತರ ಸರಳರೇಖೆಗಳ ಮಧ್ಯೆ ಇರುವುವು.

ಒಂದು ಸಮಕೋಣ ತ್ರಿಭುಜದಲ್ಲಿ, ಕರ್ಣದಮೇಲೆ ಲಿಖಿತವಾದ ಸಮಚತುರ್ಭುಜವು, ಸಮಕೋಣವನ್ನೇರ್ಪಡಿಸುವ ಬಾಹುಗಳ ಮೇಲೆ ಲಿಖಿತವಾದ ಸಮಚತುರ್ಭುಜದ್ವಯಕ್ಕೆ ಸಮವು.

II. ವ್ಯವಸಾಯಶಾಸ್ತ್ರ.

(1) ವ್ಯವಸಾಯದ ಉದ್ದೇಶಗಳು ಮತ್ತು ಸ್ಥಿತಿಗಳು.

(2) ಮಣ್ಣುಗಳು:—ಉತ್ಪತ್ತಿ. ಪ್ರಾಕೃತಿಕ ಲಕ್ಷಣಗಳು. ಫಲವತ್ತು ಮತ್ತು ಬಂಜರು. ಮಣ್ಣಿನ ಕ್ಷಯ, ಮಳೆ ಬಿಸಿಲು ಮುಂತಾದವುಗಳಿಂದ ಸ್ವಾಭಾವಿಕವಾಗಿ ಮಣ್ಣಿನಲ್ಲಾಗುವ ಬದಲಾವಣೆಗಳು. ಕೆಳಮಣ್ಣು. ಚೌಳಭೂಮಿಯ ಉತ್ಪತ್ತಿ ಮತ್ತು ಕ್ಷಯ.

(3) ನೆಲವನ್ನು ಹದಗೊಳಿಸುವಿಕೆ:—ಹದಗೊಳಿಸುವದರ ಉದ್ದೇಶಗಳು. ಆಳವಾಗಿ ಮತ್ತು ತೇಲಿಸಿ ಹದಗೊಳಿಸುವಿಕೆ. ತರಿ, ಖುಷ್ಕಿ ಭೂಮಿಗಳನ್ನು ಹದಗೊಳಿಸುವಿಕೆ. ಉಳುವುದು, ಹಲುವೆ ಹೊಡೆಯುವುದು, ಕೆಳಮಣ್ಣುಳುವುದು. ಗುಂಟಿ ಹೊಡೆಯುವುದು ಬದುಗಳನ್ನು ಕಟ್ಟುವುದು, ತಿರುಮರ ಹೊಡೆವುದು, ಹದಗೊಳಿಸುವುದಕ್ಕೂ ಮತ್ತು ಬಿತ್ತುವುದಕ್ಕೂ ಬೇಕಾದ ಕೃಷ್ಯುಪಕರಣಗಳು; ಪೈರು ಹಾಕಿದಮೇಲೆ ನಡೆಯಬೇಕಾದ ಕೃಷಿ.

(4) ಗೊಬ್ಬರ ಹಾಕುವಿಕೆ:—ಧನಕರಗಳ ಗೊಬ್ಬರವನ್ನು ಕೂಡಿಹಾಕುವುದು ಮತ್ತು ಉಪಯೋಗಿಸುವುದು. ಹಸುರೆಲೆ ಗೊಬ್ಬರ ಹಾಕುವಿಕೆ, ದಕ್ಷಿಣ ಹಿಂದುಸ್ಥಾನದಲ್ಲಿ ಸಾಧಾರಣವಾಗಿ ದೊರೆಯುವ ಹಿಂಡಿ, ಪೆಟ್ಲುಪ್ಪು, ಎಲುಬು, ಸುಣ್ಣ ಮೊದಲಾದ ವಿಶೇಷ ಗೊಬ್ಬರಗಳ ಉಪಯೋಗ. ಮೇಲ್ಗೊಬ್ಬರ ಹಾಕುವಿಕೆ.

(5) ನೀರಾವರಿ:—ನೀರಿನ ಮಿತವ್ಯಯ, ಉಪಯೋಗ ಮತ್ತು ಉಪಯೋಗಿಸುವುದು. ವಾಡಿಕೆಯಲ್ಲಿರುವ ಜಲಯಂತ್ರಗಳು, ಚಿಲಿಮೆಗಳ ಉತ್ಪತ್ತಿ, ಭಾವಿ ತೋಡುವುದು.

(6) ಬೆಳೆಗಳು:—ಪರಿವರ್ತನೆ ಮತ್ತು ಬೆರಕೆ ಪೈರು, ಬೀಳು ಬಿಡುವುದು, ಬೀಜ, ಅಂಕುರೋದ್ಭವ ಮತ್ತು ಅಂಕುರೋದ್ಭವಕ್ಕೆ ಬೇಕಾದ ಅನುಕೂಲ ಸ್ಥಿತಿಗಳು. ಬೀಜದ ಅನುಸ್ಯೂತ ಗುಣಗಳು, ಬೀಜವನ್ನು ಕೂಡಿ ಹಾಕುವಿಕೆ, ಬೀಜವನ್ನು ಬದಲಾಯಿಸುವಿಕೆ, ಬೀಜ ಬಿತ್ತುವುದು, ದಟ್ಟವಾಗಿ ಮತ್ತು ವಿರಳವಾಗಿ ಬಿತ್ತುವಿಕೆ. ಆಳವಾಗಿ ಮತ್ತು ತೇಲಿಸಿ ಬಿತ್ತುವಿಕೆ, ಬೀಜದ ಪರೀಕ್ಷೆ, ಬೀಜವನ್ನು ಹದಗೊಳಿಸುವುದು, ನಾಟಿ ಹಾಕುವುದು.

ರಾಗಿ, ಭತ್ತ, ಸಜ್ಜೆ, ನವಣೆ, ಜೋಳ, ಮೆಕ್ಕೆಜೋಳ, ಅವರೆ, ಕಡಲೆ, ಹುರುಳಿ, ಉದ್ದು, ಹೆಸರು, ನೆಲಗಡಲೆ, ಹರಳು, ಎಳ್ಳು, ಹತ್ತಿ, ನೀಲಿ, ಕಬ್ಬು, ಹೊಗೆಯಸೊಪ್ಪು, ಬಾಳೆ ಮುಂತಾದ ಧಾನ್ಯ, ದ್ವಿದಳ, ಕೈಗಾರಿಕೆ ಮತ್ತು ಮೇವು ಪೈರುಗಳು, ಹುಲ್ಲುಗಾವಲು ಮತ್ತು ಅವರ ಸಂರಕ್ಷಣೆ, ಮೇವು ಕೂಡಿಹಾಕುವುದು.

(7) ಕಾಲ್ನಡೆ:—ಸಂವರ್ಧನೆ. ದನಕುರಿಗಳ ಪೋಷಣೆ ಮತ್ತು ಉಪಚಾರ. ದಕ್ಷಿಣ ಹಿಂದುಸ್ಥಾನದ ಜಾತಿಗಳು, ಕರಾವು.

ಷರಾ.—ಮೇಲೆ ಹೇಳಿದ ವಿಷಯವನ್ನೆಲ್ಲಾ ಸಾಧ್ಯವಾದಷ್ಟುಗೂ ಕಡವೆಯಾಗಿ ರಸಾಯನ ಶಾಸ್ತ್ರವನ್ನು ಉಪಯೋಗಿಸಿ ಅನುಭವರೀತ್ಯಾ ಬೋಧಿಸಬೇಕು.

ಪದಾರ್ಥವಿಜ್ಞಾನ ಮತ್ತು ರಸಾಯನ ಶಾಸ್ತ್ರ (ಸಂಕ್ಷೇಪವಾಗಿ).

ಭೂಗರ್ಭಶಾಸ್ತ್ರ.

ಪದಾರ್ಥಗಳ ಮೂರು ಅವಸ್ಥೆಗಳು, ಪರಮಾಣುಗಳು, ಘನ (ಕಠಿಣ), ದ್ರವ, (ತರಳ), ವಾಯುಪದಾರ್ಥಗಳ ಗುಣಗಳು. ಪ್ರಕೃತಿಯ ಶಕ್ತಿಗಳ ಸಂಕ್ಷೇಪ ವಿವರಣೆ ಮತ್ತು ಉದಾಹರಣೆ, ಉಷ್ಣ, ಉಷ್ಣೋತ್ಪಾದಕಗಳು, ಉಷ್ಣೋತ್ಪಾದ್ಯಗಳು, ಉಷ್ಣಸಂಚಾಲನ, ಉಷ್ಣಮಾಪಕಯಂತ್ರ ಮೂಲವಸ್ತುಗಳು, ಮತ್ತು ಸಂಯೋಗ ಜನ್ಯ ವಸ್ತುಗಳು, ಸಂಯೋಗ

ಜನ್ಯಗಳು ಮತ್ತು ಸಂಸರ್ಗ ಜನ್ಯಗಳು, ವಿಲೀನತೆ ಮತ್ತು ಲಂಬಮಾನತೆ, ಸಂಯೋಗವು ಕ್ಲಿಪ್ತಪ್ರಮಾಣದಿಂದಾಗುವ ರೀತಿ, ಮಣ್ಣು ಮತ್ತು ಸಸ್ಯಗಳಲ್ಲಿ ಇರುವ ಪದಾರ್ಥಗಳ ಮೂಲವಸ್ತುಗಳು, ಮಣ್ಣು ಸಸ್ಯ ಮತ್ತು ಗೊಬ್ಬರಗಳಲ್ಲಿ ಸೇರಿರುವ ಸಂಯೋಗ ವಸ್ತುಗಳು. ಆಮ್ಲ, ಕ್ಷಾರ, ಲವಣ ಪದಾರ್ಥಗಳ ಸಾಮಾನ್ಯ ಗುಣಗಳು.

ಮುಖ್ಯವಾದ ಮೂಲವಸ್ತುಗಳು.—ಆಕ್ಸಿಜನ್, ಹೈಡ್ರೋಜನ್, ನೈಟ್ರೋಜನ್, ಕಾರ್ಬನ್, ಕ್ಲೋರಿನ್, ಗಂಧಕ, ಫಾಸ್ಫೋರಸ್, ಸಿಲಿಕನ್, ಕಬ್ಬಿಣ, ಅಲುಮಿನಿಯಂ, ಕ್ಯಾಲ್ಸಿಯಂ, ಮ್ಯಾಗ್ನಿಷಿಯಂ, ಸೋಡಿಯಂ, ಪೊಟಾಸಿಯಂ.

ನೀರು :— ಹೈಡ್ರೋಜನ್, ಇದನ್ನ ಪಡೆಯುವ ಕ್ರಮ. ಇದರ ಗುಣಗಳು ಮುಂತಾದುವು ಆಕ್ಸಿಜನ್, ಇದನ್ನು ಪಡೆಯುವ ಕ್ರಮ, ಇದರ ಗುಣಗಳು ಮುಂತಾದುವು.

ವಾಯು :—ನೈಟ್ರೋಜನ್, ಇದನ್ನು ಪಡೆಯತಕ್ಕ ಕ್ರಮ. ಇದರ ಗುಣಗಳು ಮುಂತಾದುವು. ಅಂಗಾರ ದ್ರಾವಕ. ಇದನ್ನು ಪಡೆಯುವ ಕ್ರಮ, ಇದರ ಗುಣಗಳು ಮುಂತಾದುವು.

ಭೂಗರ್ಭಶಾಸ್ತ್ರ (ಸಂಕ್ಷೇಪವಾಗಿ.)

ಶಿಲಾವಿವರಣೆ. —ಜಲಜ ಶಿಲೆಗಳು, ಜಂತುಜ ಶಿಲೆಗಳು, ಅಗ್ನಿಜ ಶಿಲೆಗಳು. ಬೆಣಚುಕಲ್ಲು, ಕ್ಷೇತ್ರಸ್ಫಟಿಕ ಸಮೂಹ, ಅಭ್ರಕ ಸಮೂಹ, ಶೃಂಗಕಾಂತ ಮತು ಬೀಪ್ತ ಶಿಲಾಸಮೂಹ, ತಪಶಿಲೆಗಳು ಇವುಗಳಲ್ಲಿ ಸಂಯುಕ್ತವಾಗಿರುವ ಪದಾರ್ಥಗಳು. ಮೇಲೆ ಹೇಳಿದುವುಗಳನ್ನ ದೃಷ್ಟಾಂತಮೂಲಕ ತಿಳಿಸಬೇಕು. ಗೆಜೆಟಿಯರ್ ಪುಸ್ತಕದಲ್ಲಿ ಹೇಳಿರುವ ಮೇರೆ ಮೈಸೂರು ದೇಶದ ಭೂಗರ್ಭವಿವರಣೆ.

ವನಸ್ಪತಿಶಾಸ್ತ್ರ (ಸಂಕ್ಷೇಪವಾಗಿ)

ಸಸ್ಯಗಳ ಜೀವಮಾನ. ಬೇರು. ಕಾಂಡ. ಪತ್ರಗಳು. ಹೂಗಳು. ಪ್ರಸವನ ವಿಧಾನ. ಬೀಜ, ಭ್ರೂಣ ಅಥವಾ ಪಿಂಡ, ಅಂಕುರೋದ್ಭವ, ಸಸ್ಯಗಳ ಪೋಷಣೆ, ಸಸ್ಯಗಳಲ್ಲಿ ಸಂಯುಕ್ತವಾಗಿರುವ ಪದಾರ್ಥಗಳು.

III. ಹೊಲಿಗೆಗೆ ತಿಳಿಯಬೇಕಾದ ಅಂಶಗಳು.

ಸಾದಾ ಹೊಲಿಗೆ :—

ಅಂಚು ಕಟ್ಟುವುದು	ಟಬ್ಬು ಹಾಕುವುದು	ತೇಪೆ ಹಾಕುವುದು
ಗೋಟು ಕಟ್ಟುವುದು	ಗುಂಡಿ ಕಾಜಾಗಳನ್ನು ಮಾಡುವುದು	ರಫ್ಪು ಮಾಡುವುದು

ಕೊಡಲ್ಪಡುವ ಮಾದರಿಯಂತೆ ಕತರಿಸಿಕೊಂಡು 15 ಅಂಗುಲ ಉದ್ದವುಳ್ಳ ಒಂದು ನೂಲಿನ ಬಟ್ಟೆಯ ಜುಬ್ಬವನ್ನು ತಯಾರ್ಮಾಡುವುದು.

ಪಟ್ಟೆಯ ಮೇಲೆ ನೆರಿಗೆ ಹಿಡಿಯುವುದು ; ಬಗುಡಿ ಹೊಲಿಗೆ.

ಕೊಡಲ್ಪಡುವ ಮಾದರಿಯಂತೆ ಕತ್ತರಿಸಿಕೊಂಡು 18 ಅಂಗುಲ ಉದ್ದವುಳ್ಳ ಒಂದು ನೂಲಿನ ಬಟ್ಟೆಯ ಹುಡುಗನ ಕೋಟನ್ನು ತಯಾರ್ಮಾಡುವುದು.

ಕಸೂತಿ ಕೆಲಸ :—

ಕ್ರೋಷೆ ಕೆಲಸ.

ಹೆಣಿಗೆ.

ಕ್ರೂಯಲ್ ಕೆಲಸ.

ಒಂದು ಹುಡುಗನ ಕತ್ತಿನ ಪಟ್ಟಿಯನ್ನು ಕ್ರೋಷೆ ಕೆಲಸದಿಂದಾಗಲಿ ಹೆಣಿಗೆಯಿಂದಾಗಲಿ ತಯಾರ್ಮಾಡುವುದು.

ಒಂದು ಜೋಡಿ ಮಕ್ಕಳ ಕಾಲುಚೀಲವನ್ನು ಕ್ರೋಷೆ ಕೆಲಸದಿಂದಾಗಲಿ ಹೆಣಿಗೆಯಿಂದಾಗಲಿ ತಯಾರ್ಮಾಡುವುದು.

ಒಂದು ಜೋಡಿ ಹುಡುಗನ ಕಾಲುಚೀಲವನ್ನು ಹೆಣಿಗೆಯಿಂದ ತಯಾರ್ಮಾಡುವುದು.

ಒಂದು ಹುಡುಗನ ಟೋಪಿಯನ್ನು ಕ್ರೂಯಲ್ ಕೆಲಸದಿಂದ ಕಸೂತಿ ಮಾಡುವುದು.

IV. *The Pianoforte.*

Hamilton or Hemy's Pianoforte Instructor (complete).

Major, minor and chromatic scales.

Ten short easy pieces from series like E. Rimbault's "The Young Pupil," W. Smallwood's "Home Treasures," James Bellak's "Dew Drops," &c.

Ten pieces of Dance Music (duets and solo) and ten easy accompaniments, such as those of English ballads, Irish and Scotch songs.

Theory of Music.—Names of various terms, meanings of various signs

V. ಗಾನಕ್ಕೆ ತಿಳಿಯಬೇಕಾದ ಅಂಗಗಳು.

(1) ಸರಳಿ.

ರಾಗ.	ತಾಳ.	
ಮಾಯಾಮಾಳವಗೌಳ.	ಆದಿತಾಳ.	ಸರಿಗಮ ಪಧನಿಸ | ಸನಿಧಪ ಮಗರಿಸ ॥
		(2) ವರಿಸೆಗಳು.
ಡಿಟೋ	ಡಿಟೋ	ಸರಿಗಮ, ಸರಿಗಮ, ಸರಿಗಮ, ಪಧನಿಸ ॥
ಡಿಟೋ	ಡಿಟೋ	ಸರಿಗಮ, ಸರಿ, ಸರಿ, ಸರಿಗಮ, ಪಧನಿಸ ॥
ಡಿಟೋ	ಡಿಟೋ	ಸರಿಗ, ಸರಿಗ, ಸರಿ, ಸರಿಗಮ, ಪಧನಿಸ ॥
ಡಿಟೋ	ಡಿಟೋ	ಸರಿಗಮ, ಪಾ, ಸರಿ, ಸರಿಗಮ, ಪಧನಿಸ ॥
ಡಿಟೋ	ಡಿಟೋ	ಸರಿಗಮ, ಪಮಗರಿ, ಸರಿಗಮ, ಪಧನಿಸ ॥
ಡಿಟೋ	ಡಿಟೋ	ಸರಿಗಮ, ಪಮಧಪ, ಸರಿಗಮ, ಪಧನಿಸ ॥
ಡಿಟೋ	ಡಿಟೋ	ಸರಿಗಮ, ಪಮಧಪ, ಸನಿರಿಸ, ಸನಿಧಪ, ॥
ಡಿಟೋ	ಡಿಟೋ	ಮಗರಿಗ, ಸರಿಗಮ, ಪಮಗಮ, ರಿಗಮಪ ॥

ರಾಗ.	ತಾಳ.	
		(3) ಜಂಟಿ ವರಸೆಗಳು.
ಡಿಟೋ	ಡಿಟೋ	ಸಸ, ರಿರಿ, ಗಗ, ಮಮ, ಪಪ, ಧಧ, ನಿನಿ, ಸಸ ॥
ಡಿಟೋ	ಡಿಟೋ	ಸಸ, ರಿರಿ, ಗಗ, ಮಮ, ರಿರಿ, ಗಗ, ಮಮ, ಪಪ ॥
ಡಿಟೋ	ಡಿಟೋ	ಸಸ, ರಿರಿ, ಗಗ, ರಿರಿ, ಸಸ, ರಿರಿ, ಗಗ, ಮಮ ॥
ಡಿಟೋ	ಡಿಟೋ	ಸಾಸಸ, ರೀರಿರಿ, ಗಾಗಗ, ಮಾಮಮ, ಪಾಪಪ, ಧಾಧಧ, ನೀನಿನಿ, ಸಾಸಸ ॥
ಡಿಟೋ	ಡಿಟೋ	ಸಾಸಸ, ರೀರಿರಿ, ಗಾಗಗ, ಮಾಮಮ, ರೀರಿರಿ, ಗಾಗಗ, ಮಾಮಮ, ಪಾಪಪ ॥
ಡಿಟೋ	ಡಿಟೋ	ಸಾಸಸ, ರೀರಿರಿ, ಗಾಗಗ, ರೀರಿರಿ, ಸಾಸಸ, ರೀರಿರಿ, ಗಾಗಗ, ಮಾಮಮ ॥
ಡಿಟೋ	ಡಿಟೋ	ಸಸರಿ, ಸಸರಿ, ಸರಿ, ಸಸ, ರಿರಿ, ಗಗ, ಮಮ ॥
ಡಿಟೋ	ಡಿಟೋ	ಸಸರಿ, ಸಸರಿ, ಸರಿ, ಸಾಸಸ, ರೀರಿರಿ, ಗಾಗಗ, ಮಾಮಮ ॥
		(4) ಅಲಂಕಾರಗಳು.
ಡಿಟೋ	ಧ್ರುವತಾಳ	ಸರಿಗಮ, ಗರಿ, ಸರಿಗರಿ, ಸರಿಗಮ ॥
ಡಿಟೋ	ಮಠ್ಯತಾಳ	ಸರಿಗರಿ, ಸರಿ, ಸರಿಗಮ ॥
ಡಿಟೋ	ರೂಪಕತಾಳ	ಸರಿ, ಸರಿಗಮ ॥
ಡಿಟೋ	ಝಂಪತಾಳ	ಸರಿಗ, ಸರಿ, ಸರಿಗಮಾ ॥
ಡಿಟೋ	ತ್ರಿಪುಟತಾಳ	ಸರಿಗ, ಸರಿಗಮ ॥
ಡಿಟೋ	ಅಟತಾಳ	ಸರೀಗಾ, ಸಾರಿಗಾ, ಮಾ, ಮಾ ॥
ಡಿಟೋ	ಏಕತಾಳ	ಸರಿಗಮ, ರಿಗಮಪ ॥

ರಾಗ.	ತಾಳ.	
		(5) ಗೀತಗಳು
ಮಲಹರಿ ರಾಗ	ರೂಪಕತಾಳ	ಸರಿಮಾಗರಿ, ಸರಿಗರಿಸಾ
ನಾಟ	ಏಕತಾಳ	ಸಸಸನಿ, ಪಸಸನಿ
ಮೋಹನ	ಡಿಟೋ	ಗಪಧಸ, ಧಧರಿಸ
ಕಾಂಬೋಜಿ	ಡಿಟೋ	ಸಾನಿಪ, ಧಧಸಾ
ಸುರಟ	ತ್ರಿಪುಟತಾಳ	ನಿಸರಿ, ಮಗರೀ, ರೀರಿಸ, ನಿಸಾ
ಕಲ್ಯಾಣಿ	ಡಿಟೋ	ಸಸ, ಸನಿ, ಧನಿಸನಿ, ಧಪ, ಧಪಮಪ
ಬೇಗಡೆ	ಡಿಟೋ	ಮಗಮ, ಪಾಧಪ, ನಿಧಪ, ಮಗಮಪ
ಆನಂದಭೈರವಿ	ಏಕತಾಳ	ನಿಧನಿಸ, ಸಾಸಸ, ಗರಿಸನಿ ನಿಧಪಮ
ಶ್ರೀರಾಗ	ತ್ರಿಪುಟ	ಸನಿಸ, ರಿಮಮಪ, ಪಮರಿ, ರಿಗರಿಸ
ಮಧ್ಯಮಾವತಿ	ಏಕತಾಳ	ಸಾನಿನಿ, ಪಾಮರಿ, ಪಪಮಾ, ರಿರಿಸಾ
		(6) ಸ್ವರಜತಿಗಳು.
ಕನ್ನಡ	ಆದಿತಾಳ	ಸಾ, ನೀಸಧಾಪಮ, ಗಾಮಧಾ
ಹಂಸಧ್ವನಿ	ರೂಪಕ	ಸಾ, ಸನಿಪ, ಗರಿಸಾ, ನಿಪನಿಸಾ
ಆರಭಿ	ಆದಿತಾಳ	ಸಾ, ಸನಿಧಧ, ಪಪಮಗ, ರಿರಿಸಾ
ಕಾಪಿ	ರೂಪಕ	ಪಾ, ಧನಿಪಮಾ, ಧಪಮರೀ, ಗಮರಿಸಾ
ಸಾರಂಗ	ಡಿಟೋ	ಸಾ, ಸನಿಧಪ, ಮರೀ, ಗಮರಿಸಾ
		(7) ವರ್ಣಗಳು.
ಕಲ್ಯಾಣಿ	ಆದಿತಾಳ	ವನಜಾಕ್ಷಿರೊ
ಸಾರಂಗ	ಡಿಟೋ	ಇಂತ ಮೋಡಿಶಾಯ
ಶ್ರೀರಾಗ	ಡಿಟೋ	ಸಾಮಿನಿನ್ನೇಕೋರಿ
ಶಂಕರಾಭರಣ	ಡಿಟೋ	ಸಾಮಿನಿನ್ನೇಕೋರಿ
ಕಮಾಚು	ಡಿಟೋ	ಸರಸಮು ದೆಲುಪುರ
		(8) ಕೀರ್ತನೆಗಳು.
ಕಮಾಚು	ಆದಿತಾಳ	ಸಾರಸಸಮಮುಖ
ಜನರಂಜನಿ	ಡಿಟೋ	ಸ್ಮರಣೇಸುಖಂ
ಆನಂದಭೈರವಿ	ಚಾಪು	ಹಿಮಾಚಲತನಯ ಬ್ರೋ
ನಾರಾಯಣಿ	ಡಿಟೋ	ಮಹಿಷಾಸುರಮರ್ದಿನಿ ನಮಾಮಿ
ಖರಹರಪ್ರಿಯ	ರೂಪಕ	ರಘುವೀರ ರಣಧೀರ
ಡಿಟೋ	ಡಿಟೋ	ಒಕಮಾಟ ಒಕಬಾಣಮು
ಘರ್ಜು	ಚಾಪು	ತ್ರಿಲೋಕಮಾತನನುಬ್ರೋವು
ಪೂರ್ಣಷಡ್ಜ	ರೂಪಕ	ಲಾವಣ್ಯರಾಮ ಕನುಲಾರಜೂಡರೆ
ಗರುಡಧ್ವನಿ	ಆದಿತಾಳ	ಆನಂದಸಾಗರ ಮಿಾದನಿ
ಮಾಂಜಿ	ರೂಪಕ	ರಾಮಚಂದ್ರೇಣ ಸಂರಕ್ಷಿತೋಹಂ
		ಕಾಯ್ಯೆ ಶ್ರೀಗೌರಿ (ಇಂಗ್ಲಿಷ ಮಟ್ಟು)
		(9) ಮಟ್ಟುಗಳು.
ಬೇಹಾಗು	ರೂಪಕ	ತ್ರಿಪುರಸುಂದರೀ, ತಾರಾಧೀಶನಿಭಾನನೆ
ಘರ್ಜು	ಆದಿತಾಳ	ಮಂಗಳಂ ಶಂಕರಿ ದೇಹಿಮೇ
ಕಮಾಚು	ರೂಪಕ	ಪಾಲಿಸು ಶ್ರೀಪ್ರಾಲೇಯಪರ್ವತಬಾಲೆ
ಕಾಪಿ	ಆದಿತಾಳ	ಪರಿಪಾಹಿನಂದಗೋಪಬಾಲ
ಸುರಟ	ಡಿಟೋ	ಶ್ರೀಶಂಭೋ ಕಲ್ಯಾಣಮೂರ್ತೇ
ಭೈರವ	ರೂಪಕ	ಶಂಕರಿ ಮಾಂ ಪಾಲಯಾಶು
ಬೇಹಾಗು	ಡಿಟೋ	ಸುವ್ವಿಸುವ್ವಿಯನುಚುಬಾಡರೆ
ಖರಹರಪ್ರಿಯ	ಡಿಟೋ	ರಘುಕುಲನಾಯಕಾ ನತೇಪ್ಸಿತಾರ್ಥದಾಯಕ
ಜಾಂಜಾಟಿ	ಡಿಟೋ	ಇಂದಿರೇ ಮಾಮಕೀನ ಮಂದಿರನಿವಸಸದಾ
ಖರಹರಪ್ರಿಯ	ಡಿಟೋ	ಕಂತುಕ ಖೇಲನಂ ಕಲಯ ಕಮಲ ಲೋಚನ

VI. ವೀಣೆ, ಪಿಟೀಲು ಇವುಗಳ ವಾದನಕ್ಕೆ ತಿಳಿಯಬೇಕಾದ ಅಂಶಗಳು.

ಗಾನಕ್ಕೆ ಕೊಟ್ಟಿರುವ ಪಟ್ಟಿಯಂತೆಯೇ; ಆದರೆ (9) ನೆ ಪ್ರಕರಣದ ಕೆಳಗೆ ಕೊಟ್ಟಿರುವ ಮಟ್ಟುಗಳಿಗೆ ಬದಲಾಗಿ ಕೆಳಗೆ ತಿಳಿಸಿರುವ 45 ತಾನಗಳನ್ನು ಬಾಜಿಸಬೇಕು.

ತಾನಗಳು (45)

	ಸಂಖ್ಯೆ.	
ನಾಟಿ	10	
ಗೌಳ	5	
ವರಾಳಿ	5	
ಆರಭಿ	5	
ಶ್ರೀರಾಗ	5	
ನಾರಾಯಣಗೌಳ	5	
ರೀತಿಗೌಳ	5	
ಕೇದಾರ	5	

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟು ಇಲಾಖಾ.

ಇಸ್ತಿಹಾರ್ನಾಮಾ, ತಾರೀಖು 12ನೆ ಫೆಬ್ರವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲಿ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉದ್ಯಾನ್ ದುರ್ಗ.	11—3—09	ಸಾಗ್ವಾನಿ ನಾಟಾ ...	800	25,000	
			ಡಿಟೋ ಜಂತಿಗಳು ...	400	5,000	
			ಹೊನ್ನೆ ನಾಟಾ ...	150	4,000	
			ಡಿಟೋ ಜಂತಿಗಳು ...	20	1,000	
			ಮತ್ತಿ ನಾಟಾ ...	200	5,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟಾ ...	25	1,000	
			ಕಾಡು ನಾಟಾ ...	25	500	
2	ನಂಜನಗೂಡು ಡಿಪೋ	12—3—09	ಸಾಗುವಾನಿ ನಾಟಾ ...	100	3,000	ಬಿಡಿ ಕಟ್ಟಿಗೆ
			ಡಿಟೋ ಜಂತಿಗಳು ...	100	1,000	
			ಹೊನ್ನೆ ನಾಟಾ ...	100	2,000	
			ಡಿಟೋ ಜಂತಿಗಳು ...	100	500	
			ಮತ್ತಿ ನಾಟಾ ...	100	1,500	
			ಡಿಟೋ ಜಂತಿಗಳು ...	10	120	
			ಬೀಟೆ ನಾಟಾ ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟಾ ...	20	500	

ಹರಾಜು ಷರತ್ತುಗಳು.

1. ಜಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮಾಂಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

1908ನೆ ಇಸವಿ ಏಪ್ರೆಲ್ 24.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಜಂಗಲ್ ಪಸಾರೆ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ಸ್ಥಳ.	ಹರಾಜು ತಾರೀಖು.	ಹರಾಜು ಮಾಡಿಸುವ ಆಫಿಸರವರ ಹೆಸರು.	ಪಸಾರೆ ಜಿನಸಿ ಮೊತ್ತ.			
				ಅವ್ವಲ್ ಅರಗು.		ಅಳಲೆಕಾಯಿ.	
				ಮಣ.	ಪ.	ಮಣ.	ಪ.
1	ಶ್ರೀರಂಗಪಟ್ಟಣದ ಕೋಠಿ ...	13—3—1909	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	100	0	1,600	0

ಷರತ್ತು :—1887ನೆ ಇಸವಿ ಜೂನ 18ನೆ ಮರ್ಕುಂ ಮೈಸೂರು ಗೆಜೆಟ್ಟಿನ 287—288ನೆ ಪುಟಗಳಲ್ಲಿ ಇರುವ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂನ 11ನೆ ಮರ್ಕುಂ ನೋಟಿಫಿಕೇಷನನ್ನು ನೋಡಿ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ.

ತಾರೀಖು 28ನೆ ಫೆಬ್ರುವರಿ 1909.

ಎಲ್ಲಾ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನ ಡಿಸ್ಟ್ರಿಕ್ಟಿನಲ್ಲಿ ಜಮಾಯಿಸಲ್ಪಟ್ಟು ಅರಸಿಕೆರೆ ಡಿಪೋದಲ್ಲಿ ಇಡಿಸಿರುವ (ಹತ್ತುಸಾವಿರ) 10,000 ಮಣ (ಸ್ವಲ್ಪ ಹೆಚ್ಚುಕಡಿಮೆ) ಅಳಲೆಕಾಯಿ ಅರಸಿಕೆರೆಯಲ್ಲಿ 1909ನೆ ಏಪ್ರೆಲ್ 5ನೆ ತಾರೀಖು ಸೋಮವಾರ ಮಧ್ಯಾಹ್ನ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಹರಾಜ್ ಮಾಡಿಸುತ್ತಾರೆ.

ಸದರಿ ಹರಾಜ್ ಹಜರತ್ ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟದ್ದಾಗಿರುತ್ತೆ. ಮತ್ತು ಸದರಿ ಅಳಲೆಕಾಯಿಯನ್ನು 1,000 ಮಣಕ್ಕೆ ಒಂದು ಲಾಟಾಗಿ ಮಾಡಿಕೊಂಡು ಹರಾಜ್ ಮಾಡಿಸುತ್ತೆ.

ಹರಾಜು ಷರತ್ತುಗಳು.

1. ಛಡ ದರಖಾಸ್ತುದಾರನು ಹರಾಜು ಖೈದಾದ ಒಡನೆ ಹರಾಜು ಮೊಬಲಗು ಪೈಕಿ ಶೇಕಡ 25ರಂತೆ ಆಗುವ ಮೊಬಲಗನ್ನು ಅರಿಸಿಕೆರೆ ತಾಲ್ಲೂಕು ಖಜಾನೆಗೆ ಕಟ್ಟಿ ಸದರೀ ಟ್ರೆಜರಿ ರಶೀತಿಯನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಲ್ಲಿ ಹಾಜರ್ಮಾಡಬೇಕು. ತಪ್ಪಿದಲ್ಲಿ ಮಾಲನ್ನು ದುಸರೇ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಪರಂತು ಫಾಯಿದೆ ಆದಲ್ಲಿ ಅದರಲ್ಲಿ ಅವನಿಗೆ ಹಕ್ಕು ವುಂಟಾಗಲಾರದು.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ಮುವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೆ ಕಟ್ಟಿರುವ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ಧಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬನ್ನು ಒಂದನೇ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರೆ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಬಾಬಿನ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಬಾಬನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳ ಮೇಲ್ಪಟ್ಟು ಬಾಬುಗಳನ್ನು ಡಿಪೋದಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಮಣ ಒಂದಕ್ಕೆ ತಿಂಗಳು ಒಂದಕೆ ಆರು ಪೈ ಮೇರೆ ಡಿಪೋ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಮಾಲ್ ಸಂರಕ್ಷಣೆಗೆ ಸರ್ಕಾರದವರು ನ್ಯಾಯವಾದ ಏರ್ಪಾಡನ್ನು ಮೇಲ್ಕಂಡ ಮಾಯಿದೆ ಕಳೆದ ನಂತರವು ಮಾಡಿಯು, ಮಾಲು ವಹಿಸಿಕೊಳ್ಳುವಾಗ ಅದು ಯಾವ ಸ್ಥಿತೀಲಿ ಇರುತ್ತೋ ಆ ಸ್ಥಿತೀಲಿ ಅದನ್ನು ವಹಿಸಿಕೊಳ್ಳುವದು ಹರಾಜುದಾರನ ಕರ್ತವ್ಯವಾಗಿರುತ್ತೆ.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 1ನೆ ಮಾರ್ಚಿ 1909, ಚಿಕ್ಕಮಗಳೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಡೂರು ಡಿಸ್ಟ್ರಿಕ್ಟ್ ಬಾಬತು ಆಯಾಯ ಡಿಪೋಗಳ ಕೆಳಗೆ ಕಂಡ ನಾಟಾಗಳನ್ನು ಆಯಾಯ ಡಿಪೋಗಳ ಕೆಳಗಡೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂ.	ನಾಟಾ ವಿವರ.	ಹೆಬ್ಬೆ ಡಿಪೋ 20—3—09		ದಾನಿವಾಸ ಡಿಪೋ 23—3—09		ಶಿವಮೊಗ್ಗ ಡಿಪೋ 26—3—09		ಬೆಂಕೀಪುರದ ಡಿಪೋ 27—3—09		ತರೀಕೆರೆ ಡಿಪೋ 29—3—09		ಕಡೂರು ಡಿಪೋ 31—3—09		ಷರಾ.
		ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	
1	ಸಾಗುವಾನಿ	30	1,500	10	200	...	...	...	...	200	4,500	25	750	
2	ಹೊನ್ನೆ	9	300	36	1,300	...	...	40	1,000	10	200	25	500	
3	ಬೀಟೆ	50	1,800	5	250	...	...	16	400	78	1,900	30	650	
4	ಮತ್ತಿ	120	4,000	214	10,100	10	200	170	4,500	130	3,500	25	650	
5	ನಂದಿ	40	1,200	5	200	20	500	16	500	70	1,800	...	...	
6	ಹುನಾಲು	70	2,500	100	3,000	25	1,000	50	1,000	86	2,000	...	...	
7	ಜಿಲ್ಲಾರ	...	...	...	...	...	...	...	...	1	10	6	150	
8	ಯತ್ತೆಗ	4	70	20	1,500	20	500	63	1,800	33	1,200	...	...	[illegible]
9	ತಡಸಲು	30	800	2	60	10	200	...	...	15	300	...	...	
10	ಬಾಗೆ	4	100	...	...	...	...	...	...	...	...	...	...	
11	ಜಂಬೆ	800	15,000	20	600	15	325	10	200	56	900	...	...	
12	ಸಾಗುವಾನಿ ತೀರು	177	200	...	...	...	...	...	...	2,290	1,800	...	...	
13	ಡಿಟೋ ಹಲಿಗೆ	153	900	...	...	...	...	...	...	...	...	...	...	
14	ಡಿಟೋ ರಿಪೀಸು	ರ. ಅ.	800	...	...	...	...	...	...	...	...	...	...	
15	ಜಂಬೆ ಹಲಿಗೆ	53	100	...	...	...	...	...	...	...	...	...	...	
16	ನೆರಲು	...	...	30	1,200	...	...	18	500	4	100	...	...	

ಹರಾಜು ಷರತ್ತುಗಳು :—(1) ಚಡ ದರಖಾಸ್ತುದಾರನು ಹರಾಜು ನಡೆದ ಐದು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗು ಸಮೀಪದಲ್ಲಿರುವ ಖಜಾನೆಗೆ ಜಮಾ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಬಾಬು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಹರಾಜುದಾರರನ್ನು ಗುರಿಪಡಿಸುತ್ತೆ.

(2) ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಜಮಾಮಾಡಿಸಿರುವ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ನಾಟಾಗಳನ್ನು 1ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ದುಸರಾ ಹರಾಜು ಮಾಡಿಸಿ ಉಂಟಾಗುವ ಲುಕ್ಸಾನು ಮೊಬಲಗನ್ನು ಅವಲ್ ಹರಾಜುದಾರನಿಂದ ವಸೂಲ್ಮಾಡಲ್ಪಡುತ್ತೆ.

(3) ಹರಾಜಿನಲ್ಲಿ ಪಡದಿರುವ ನಾಟಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ನಾಟಾಗಳನ್ನ ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲು ರಫ್ತು ಮಾಡಕೂಡದು.

(4) ಹರಾಜು ತಾರೀಖು ಲಾಗಾಯಿತು (90)ತೊಂಭತ್ತು ದಿವಸಗಳ ಮೇಲ್ಪಟ್ಟು ಮರಗಳನ್ನ ಡಿಪೋದಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನಮೇಲೆ ವರ್ಷ 1ಕ್ಕೆ ಶೇಕಡ 12 ರೂಪಾಯಿನಂತೆ ಡಿಪೋ ಭಾಡಾ ವಸೂಲ್ ಮಾಡಲ್ಪಡುತ್ತೆ.

ಬಿ. ಹಿರಾಸಿಂಗ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಕಡೂರು ಡಿಸ್ಟ್ರಿಕ್ಟ್.

ತಾರೀಖು 23ನೆ ಫೆಬ್ರುವರಿ 1909.

ಸಂಬಾರಗಿಡ ಕಾವಲ್ ಫಾರೆಸ್ಟು, ಕೋಲಾರ ಡಿಸ್ಟ್ರಿಕ್ಟು.

ಸರ್ 1900ನೆ ಇಸವಿಯ XIನೆ ನಂಬರು ಫಾರಸ್ಟು ರೆಗ್ಯುಲೇಷರ್ 5ನೆ ಸೆಕ್ಷರ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷರ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನಮೆಂಟನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು ರೆ. 5794—ಫಾರೆಸ್ಟ. 128—08—2, 5—2—08; 11—2—09ನೆ ಇಸವಿಯ ಗೆಜೆಟ್ಟನಲ್ಲಿ ಪ್ರಾಯಿಷ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೋಕು, ಹೋಬಳಿ	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಕೋಲಾರ	ಚಿಕ್ಕಬಳ್ಳಾಪುರದ ತಾಲ್ಲೋಕು ಸಂಡಿ ಹೋಬಳಿ	2 ಚದರಮೈಲಿ 118 ಎಕರೆ ಮತ್ತು 9 ಗುಂಟೆ	ಸಂಬಾರಗಿಡ ಕಾವಲು	ಸ್ಥಳ—ಈ ಫಾರೆಸ್ಟ ಚಿಕ್ಕಬಳ್ಳಾಪುರ ಟವರ್‌ಗೆ ಆಗ್ನೇಯದ ಕಡೆ 4 ಮೈಲಿ ಫಾಸಲೆಯಲ್ಲಿರುತ್ತೆ. ಉತ್ತರ—ಲೈನು ಚೀಡಚಿಕ್ಕನಹಳ್ಳಿ, ಬನ್ನಿಕುಪ್ಪೆ ಮತ್ತು ಸಂಬಾರಗಿಡ ಕಾವಲ್ ಈ ಗ್ರಾಮಗಳ ಮುಕ್ಕುಪ್ಪೆಯಿಂದ ಆಗ್ನೇಯವಾಗಿ ಹೊರಟು ಬನ್ನಿಕುಪ್ಪೆ, ಅಜ್ಜವಾರ ಗ್ರಾಮಗಳ ದಕ್ಷಿಣ ದಿಕ್ಕಿನಲ್ಲಿ ಹಾದು—ಅಜ್ಜವಾರ, ನುಗತಿಹಳ್ಳಿ ಹಾಲಿ ಇರುವ ಸಂಬಾರಗಿಡ ಪ್ಲಾಂಟೇಷರ್ ಮತ್ತು ಸಂಬಾರ ಗಿಡ ಕಾವಲ್ ಈ ಗ್ರಾಮಗಳ ಕೂಡವಳಿ ಬಾಂದಿಗೆ ಸೇರುತ್ತದೆ. ಪೂರ್ವ—ಅಲ್ಲಿಂದ ಲೈನು ನೈರುತ್ಯಕ್ಕೆ ತಿರುಗಿ ಸಂಬಾರಗಿಡ ಪ್ಲಾಂಟೇಷರ್ ಪಶ್ಚಿಮ ದಿಕ್ಕಿನಲ್ಲಿಯೂ, ಖಾಯಂಗುತ್ತ ಗೊಲ್ಲಪಡೆ ಗ್ರಾಮದ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿನಲ್ಲಿಯೂ, ತಿಮ್ಮಸಹಳ್ಳಿ ವಾಯುವ್ಯ ದಿಕ್ಕಿನಲ್ಲಿಯೂ, ಹಾದು ತಿಮ್ಮನಹಳ್ಳಿ, ಕಣತಿಹಳ್ಳಿ ಮತ್ತು ಸಂಬಾರಗಿಡ ಕಾವಲ್ ಇವುಗಳ ಮುಕ್ಕುಪ್ಪೆಗೆ ಸೇರುತ್ತದೆ.

ದಕ್ಷಿಣ—ಅಲ್ಲಿಂದ ಲೈನು ಪಶ್ಚಿಮಕ್ಕೆ ತಿರುಗಿ ಕಣತಿಹಳ್ಳಿ ಉತ್ತರದಿಕ್ಕಿನಲ್ಲಿ ಹಾದು ಉತ್ತರಕ್ಕೆ ತಿರುಗಿ ತಾಡನಹಳ್ಳಿ ಪೂರ್ವ ಎಲ್ಲೆಯಲ್ಲಿ ಹಾದೂ ನಂತರ ಪಶ್ಚಿಮಕ್ಕೆ ತಿರುಗಿ ತಾಡನಹಳ್ಳಿ ಸಕ್ಕನಹಳ್ಳಿ ಮತ್ತು ಬಷ್ಯೆಹಳ್ಳಿ ಉತ್ತರ ಎಲ್ಲೆಯಲ್ಲಿ ಹರಿದು ಸಕ್ಕನಹಳ್ಳಿ, ದೊಡ್ಡಕಾಡಿಗಾನಹಳ್ಳಿ ಮತ್ತು ಸಂಬಾರಗಿಡ ಇವುಗಳ ಮುಕ್ಕುಪ್ಪೆಗೆ ಸೇರುತ್ತದೆ.

ಪಶ್ಚಿಮ—ಅಲ್ಲಿಂದ ಲೈನು ಈಶಾನ್ಯ ಮತ್ತು ವಾಯುವ್ಯ ದಿಕ್ಕಿಗೆ ತಿರುಗಿ ದೊಡ್ಡ ಕಾಡಿಗಾನಹಳ್ಳಿ ಪೂರ್ವ ಮತ್ತು ಉತ್ತರ ಎಲ್ಲೆಯಲ್ಲಿಯೂ, ಚಿಕ್ಕ ಕಾಡಿಗಾನಹಳ್ಳಿ ಮತ್ತು ಚೀಡಚಿಕ್ಕನಹಳ್ಳಿಯ ಪೂರ್ವ ಎಲ್ಲೆಯಲ್ಲಿಯೂ ಹರಿದು ಹೊರಟ ಸ್ಥಳಕ್ಕೆ ಸೇರುತ್ತೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಪ್ರಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಪ್ರಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷರ್ ಮಾಡಕೂಡದು, ಸಾಗುವಳಿಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವವನ್ನೂ ಕಡಿಯಕೂಡದು ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡವನ್ನಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವಧಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಛಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನು ಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇಥೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟುರಮಟ್ಟಿಗೆ ಇಥೆಯನ್ನ ತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲಿ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,

ಫಾರೆಸ್ಟು ಸೆಟಲ್‌ಮೆಂಟ್ಸ್ ಆಫಿಸರ್ ಇನ್ ಮೈಸೂರು.

ಮೈಸೂರು ಡಿಸ್ಟ್ರಿಕ್ಟು.

1909ನೆ ಇಸವಿ ಫೆಬ್ರುವರಿ ತಾರೀಖು 13ನ್ಯೆ ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳವರ ಸ್ಪೆಷಲ್ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

(1) ಮಿ॥ ಎಂ. ಕಾಂತರಾಜೇ ಅರಸಿನವರು, (ಪ್ರೆಸಿಡೆಂಟ್).
(2) ,, ಎಂ. ಜಿ. ಕೃಷ್ಣಸ್ವಾಮಿರಾಯರವರು, (ವೈಸ್ ಪ್ರೆಸಿಡೆಂಟ್).
(3) ,, ಸೈಯದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
(4) ,, ಎಂ. ಸಿ. ರಂಗೈಯ್ಯಂಗಾರ್‍ಯರು.
(5) ,, ಎಂ. ವೆಂಕಟಕೃಷ್ಣಯ್ಯನವರು.
(6) ,, ಎಂ. ನರಸಿಂಹಸ್ವಾಮಿಗಳವರು.
(7) ,, ಎನ್. ಶ್ರೀಕಂಠೈಯ್ಯನವರು.
(8) ,, ಕೃಷ್ಣಪ್ಪಾಜಿ ಅರಸಿನವರು.
(9) ,, ತಿರುವೆಂಗಡ ಮೊದಲಿಯಾರ್‍ಯರು.
(10) ,, ಅಂಬಳೆ ಅಣ್ಣಯ್ಯಪಂಡಿತರವರು.

ಗೈರ್ಹಾಜರು.

(1) ,, ಬಿ. ಸುಬ್ಬರಾಯರವರು, (ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರು).
(2) ,, ಪಿ. ಎಲ್ ಮಾಂಕರ್, (ಮೈಸೂರು ಸಿಟಿ ಹೆಲ್ತ್ ಆಫೀಸರ್).
(3) ,, ಕೆ. ಚಂದ್ರಶೇಖರೈಯ್ಯನವರು.
(4) ,, ಎ. ಸುಬ್ರಹ್ಮಣ್ಯನವರು.
(5) ,, ಮಾದಪ್ಪನವರು.
(6) ,, ರಹಿಮತ್ತುಲ್ಲಾ ಅಹಮ್ಮದ್‌ಸೇಟರವರು.
(7) ,, ಅನಂತರಾಜೈಯ್ಯನವರು.
(8) ,, ಹಸೇನಲ್ಲಿಬೇಗ್ ಸಾಹೇಬರವರು.
(9) ,, ಸೈದ್ ಮೊಹದೀನ್ ಸಾಹೇಬರವರು.

I. ಸೆಕೆಂಡರಿ ವಿದ್ಯಾಭ್ಯಾಸಕ್ಕೋಸ್ಕರ ಈಗ ಕೊಡುತ್ತಾ ಇರುವ ಗ್ರಾಂಟುಗಳನ್ನು ಮ್ಯುನಿಸಿಪಾಲಿಟಿಯಿಂದ ಬಿಡುಗಡೆ ಮಾಡತಕ್ಕ ವಿಷಯದಲ್ಲಿ ಗವರ್ನ್ಮೆಂಟಿಗೆ ಬರಿಸತಕ್ಕ ವಿಚಾರ.

ಸೆಕೆಂಡರಿ ವಿದ್ಯಾಭ್ಯಾಸಕ್ಕೋಸ್ಕರ ಮ್ಯುನಿಸಿಪಾಲಿಟಿಯಿಂದ ಈಗ ಕೊಡುತ್ತಿರುವ ಖರ್ಚನ್ನು ವಜಾಮಾಡಿ ವಿದ್ಯಾಭ್ಯಾಸಕ್ಕೋಸ್ಕರ ಬಡ್ಜೆಟ್ಟಿನಲ್ಲಿರುವ ಎಲ್ಲಾ ಮೊಬಲಗನ್ನು ಪ್ರೈಮರಿ ವಿದ್ಯಾಭ್ಯಾಸಕ್ಕೆ ಉಪಯೋಗಿಸಲು ಅಪ್ಪಣೆ ಬೇಡಿ ಗವರ್ನ್ಮೆಂಟಿಗೆ ಬರಿಯಬೇಕೆಂದು ತೀರ್ಮಾನಿಸಿದೆ.

II. ಬೆಂಗಳೂರು ಮುನಿಸಿಪಲ್ ಇಂಜನಿಯರ ಕೆಲಸಕ್ಕೆ ಕೊಟ್ಟಿರುವ ತಮ್ಮ ಅಪ್ಲಿಕೇಷನ್ನು ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲ್ ಪ್ರಸಿಡೆಂಟರವರಿಗೆ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿ ಮ್ಯುನಿಸಿಪಲ್ ಎಗ್ಜಿಕ್ಯುಟಿವ್ ಇಂಜನಿಯರ್ ಮಿ|| ಎಚ್. ಆರ್. ವೆಂಕಟಸುಬ್ಬರಾಯರವರು ಬರೆದುಕೊಂಡಿರುವ ಲೆಟರ್.

ಮ್ಯುನಿಸಿಪಲ್ ಇಂಜನಿಯರವರ ಅಪ್ಲಿಕೇಷನನ್ನು ಸುಮ್ಮುಖಾವಲೋಚನೆ ಬಗ್ಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಪ್ರಸಿಡೆಂಟರವರಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಪ್ರಕಟನೆ.

ಸ್ 1909ನೆ ಜನವರಿ 7ರಲ್ಲು.

ಮಂಡ್ಯದ ತಾಲ್ಲೂಕು ಮಂಡ್ಯದ ಗ್ರಾಮವನ್ನು ಅದರ ಆಸ್‌ಪಾಸ್ ಇರುವ ಕಲ್ಲಹಳ್ಳಿ, ಚಂದಿಗಿರಿದೊಡ್ಡಿ, ಚಿಕ್ಕಮಂಡ್ಯ, ಮೊಟ್ಟಲಿಂಗನದೊಡ್ಡಿ, ದ್ಯಾವೆಗೌಡನದೊಡ್ಡಿ, ಹೊಸಹಳ್ಳಿ ಎಂಬ ಈ ಆರು ಗ್ರಾಮಗಳನ್ನು ಸೇರಿಸಿ 1906ನೆ ಇಸವಿ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8 (1)ನೆ ಪ್ರಕರಣವನ್ನನುಸರಿಸಿ ಒಂದು ಮ್ಯುನಿಸಿಪಾಲಿಟಿಯನ್ನಾಗಿ ಮಾಡಲು ಉದ್ದೇಶಿಸಿರುತ್ತೆ. ಈ ಏರ್ಪಾಡಿಗೆ ಆಕ್ಷೇಪಿಸುವವರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಮೊದಲಾವರ್ತಿ ಛಾಯಿಷಾದ 2 ತಿಂಗಳ ಒಳಗಾಗಿ ಅಂಥಾ ಆಕ್ಷೇಪಣೆಗಳನ್ನು ಕಾರಣ ಸಹಿತವಾಗಿ ಬರಹ ಮೂಲಕ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ತಿಳಿಸಬೇಕು. ಮೇಲ್ಕಂಡ ಆರು ಉಪ ಗ್ರಾಮಗಳನ್ನು ಸೇರಿದ ಮಂಡ್ಯ ಪಟ್ಟಣದ ಚತುರ್ಗಡಿಗಳು ಈ ಕೆಳಗೆ ತೋರಿಸಲ್ಪಟ್ಟಿವೆ.

ಮಂಡ್ಯ ಮ್ಯುನಿಸಿಪಾಲಿಟಿಯ ಸರಹದ್ದು ಬನ್ನೂರು ರಸ್ತೆಯ ಹತ್ತಿರ ಇರುವ ಮಂಡ್ಯ ಗ್ರಾಮದ ಸರ್ವೆ 120ನೆ ನಂಬರಿನ ನೈರುತ್ಯ ಮೂಲೆಯ ಹತ್ತಿರ ಪ್ರಾರಂಭವಾಗಿ ಸರ್ವೆ 120—121 ಮತ್ತು 122ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ವಾಯುವ್ಯಾಭಿಮುಖವಾಗಿ ಹೊರಟು ಸರ್ವೆ 124—125—126 ಮತ್ತು 127ನೆ ನಂಬರುಗಳ ದಕ್ಷಿಣ ಸರಹದ್ದನ್ನು ಸರ್ವೆ 128ನೆ ನಂಬರಿನ ನೈರುತ್ಯಮೂಲೆಯನ್ನು ಸೇರುವ ವರಿವಿಗೂ ಹೋಗುತ್ತದೆ. ಇಲ್ಲಿಂದ ಮುಂದಕ್ಕೆ ಸರ್ವೆ 215ನೆ ನಂಬರಿನ ವಾಯುವ್ಯ ಮೂಲೆಯ ವರಿವಿಗೂ ಉತ್ತರಾಭಿಮುಖವಾಗಿ ಹೋಗಿ ಅಲ್ಲಿಂದ ವಾಯುವ್ಯಾಭಿಮುಖವಾಗಿ ಸರ್ವೆ 216—223 ಮತ್ತು 224ನೆ ನಂಬರುಗಳ ದಕ್ಷಿಣ ಸರಹದ್ದನ್ನು ಅನುಸರಿಸಿ ಮೈಸೂರು ರಸ್ತೆಯನ್ನು ದಾಟಿಕೊಂಡು ಸರ್ವೆ 226ನೆ ನಂಬರಿನ ನೈರುತ್ಯ ಮೂಲೆಯ ವರಿವಿಗೂ ಹೋಗುತ್ತದೆ. ಅಲ್ಲಿಂದ ಮುಂದಕ್ಕೆ ಈಶಾನ್ಯಮುಖವಾಗಿ ಸರ್ವೆ 390ನೆ ನಂಬರಿನ ಆಗ್ನೇಯ ಸರಹದ್ದಿನ ಮೂಲೆಯ ವರಿವಿಗೂ ಕಲ್ಲಹಳ್ಳಿಯ ಕೆರೆಯ ಧಡವನ್ನು ವಳಗೊಂಡು ವಾಯುವ್ಯಕ್ಕೆ ತಿರಿಗಿ ಕಲ್ಲಹಳ್ಳಿ ಕೆರೆಯ ಏರಿಯನ್ನು ಅನುಸರಿಸುತ್ತದೆ. ತರುವಾಯ ಸರ್ವೆ 327ನೆ ನಂಬರಿನ ಬಳಿಯಲ್ಲಿ ಕಲ್ಲಹಳ್ಳಿ ಕೆರೆಯ ಎಡಭಾಗದ ಕೋಡಿಯನ್ನು ದಾಟಿ ಸರ್ವೆ 330—333—335ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಪಣಕನಹಳ್ಳಿ ಗ್ರಾಮದ ಎಲ್ಲೆಯನ್ನು ಸರ್ವೆ 336ನೆ ನಂಬರಿನ ಮಧ್ಯಭಾಗದಲ್ಲಿ ಪಣಕನಹಳ್ಳಿಗೆ ಹೋಗತಕ್ಕ ಭಂಡೀದಾರಿಯ ಬಳಿ ಸೇರುತ್ತದೆ. ನಂತರ ಸರ್ವೆ 336ನೆ ನಂಬರಿನ ಈಶಾನ್ಯ ಎಲ್ಲೆಯನ್ನು ಅನುಸರಿಸಿ ಸರ್ವೆ 455ನೆ ನಂಬರಿನ ವಾಯುವ್ಯ ಮೂಲೆಯ ವರಿವಿಗೂ ಹೋಗಿ ಶಿವಹಳ್ಳಿ ರಸ್ತೆಯ ವರಿವಿಗೂ ನೆಟ್ಟಗೆ ಹೋಗಿ ಸದರಿ ರಸ್ತೆಯನ್ನು ದಾಟಿ ಸರ್ವೆ 456ನೆ ನಂಬರಿನ ಉತ್ತರ ಎಲ್ಲೆಯನ್ನು ಅನುಸರಿಸಿ ಸದರೀ ನಂಬರಿನ ಆಗ್ನೇಯ ಮೂಲೆಯ ವರಿವಿಗೂ ಹೋಗುತ್ತದೆ. ತರುವಾಯ ಉತ್ತರಕ್ಕೆ ಹೊರಟು ಸರ್ವೆ 877—458—471—475—875—476—481ನೆ ನಂಬರುಗಳ ಪಶ್ಚಿಮ ಎಲ್ಲೆಯಾಗಿ ಸರ್ವೆ 482ನೆ ನಂಬರಿನ ವಾಯುವ್ಯ ಮೂಲೆಯ ವರಿವಿಗೂ ಹೋಗಿ ಪುನಹ ಪಶ್ಚಿಮಕ್ಕೆ ತಿರಿಗಿ ಸರ್ವೆ 484 ಮತ್ತು 872ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ನಂತರ ಉತ್ತರಾಭಿಮುಖವಾಗಿ ಹೊರಟು ಸರ್ವೆ 525ನೆ ನಂಬರಿನ ಉತ್ತರ ಮೂಲೆಯ ವರಿವಿಗೂ ಸರ್ವೆ 486—495—520—523—524 ಮತ್ತು 525ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಅಲ್ಲಿ ಬಸರಾಳು ರಸ್ತೆಯನ್ನು ದಾಟಿಕೊಂಡು ಪೂರ್ವಾಭಿಮುಖವಾಗಿಯೇ ಸರ್ವೆ 528, 529, 530, 531, 532, 533, 534, 537, 538, 546 ಮತ್ತು 548ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ತರುವಾಯ ದಕ್ಷಿಣಕ್ಕೆ ತಿರಿಗಿ ಸರ್ವೆ 561ನೆ ನಂಬರಿನ ಉತ್ತರ ಮತ್ತು ಪೂರ್ವದ ಸರಹದ್ದನ್ನು ಅನುಸರಿಸಿ ಪೂರ್ವಕ್ಕೆ ತಿರಿಗಿಕೊಂಡು ಸರ್ವೆ 563 ಮತ್ತು 573ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ಅಲ್ಲಿಂದ ಮಂಡ್ಯ ಮತ್ತು ಗೋಪಾಲಪುರದ ಕೆರೆಗಳ ಕೋಡಿ ಹಳ್ಳಗಳ ಧಡಗಳನ್ನು ಅನುಸರಿಸಿ ಸರ್ವೆ 598ನೆ ನಂಬರಿನ ಈಶಾನ್ಯ ಮೂಲೆಯ ವರಿವಿಗೂ ಹೋಗುತ್ತದೆ. ಇಲ್ಲಿ ದಕ್ಷಿಣಾಭಿಮುಖವಾಗಿ ಸರ್ವೆ 56ನೆ ನಂಬರಿನಲ್ಲಿ ಗುತ್ತಲುಗ್ರಾಮದ ಎಲ್ಲೆ ಬಳಿ ಆಗ್ನೇಯ ಮೂಲೆಯ ವರಿವಿಗೂ ಮಂಡ್ಯದ ಗ್ರಾಮದ ಸರಹದ್ದನ್ನು ಅನುಸರಿಸಿ ಪಶ್ಚಿಮಕ್ಕೆ ತಿರುಗಿ ಸರ್ವೆ 56, 57, 58, 59, 60, 118 ಮತ್ತು 119ನೆ ನಂಬರುಗಳ ದಕ್ಷಿಣ ಸರಹದ್ದಿನ ಎಲ್ಲೆಯನ್ನನುಸರಿಸಿ ಬನ್ನೂರು ರಸ್ತೆಯನ್ನು ದಾಟಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

ಜೆ. ಬಿ. ಹೆಬ್ಲಿಕಾರ್,
ಫಾರ್ ಡೆಪ್ಯುಟಿ ಕಮಿಷನರ್.

1909ನೆ ಇಸವಿ ಜನವರಿ ತಾರೀಖು 30ನೆ ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸಿನವರು (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ ಪ್ರೆಸಿಡೆಂಟ್).
3. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
4. ,, ವಿ. ಎಲ್. ಮಾಂಕರ್ರವರು (ಮೈಸೂರು ಸಿಟಿ ಹೆಲ್ತಾಫೀಸರ್)
5. ,, ಎಂ. ಸಿ. ರಂಗೈಯ್ಯಂಗಾರ್ರವರು.
6. ,, ಎಂ. ವೆಂಕಟಕೃಷ್ಣಯ್ಯನವರು.
7. ,, ಅಂಬಳೆ ಅಣ್ಣಯ್ಯ ಪಂಡಿತರವರು.
8. ,, ಎಂ. ನರಸುಬ್ರಹ್ಮಸ್ವಾಮಿಗಳವರು.
9. ,, ಎಂ. ಅನಂತರಾಜೈಯ್ಯನವರು.
10. ,, ಎಂ. ಕೃಷ್ಣಪ್ಪಾಜಿ ಅರಸಿನವರು.
11. ,, ಎ. ಸುಬ್ಬಣ್ಣನವರು
12. ,, ತಿರುವೆಂಗಡ ಮೊದಲಿಯಾರ್ರವರು.
13. ,, ರಹಿಮತ್ತುಲ್ಲಾ ಅಹಮ್ಮದ್ ಸೇಟರವರು.
14. ,, ಎಚ್. ಶ್ರೀಕಂಠೈಯ್ಯನವರು.

ಗೈರ್ ಹಾಜರು.

1. ,, ಬಿ. ಸುಬ್ಬರಾಯರವರು (ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ರವರು).
2. ,, ಕೆ. ಚಂದ್ರಶೇಖರೈಯ್ಯನವರು.
3. ,, ಸೈದ್ ಮೊಹಿದೀನ್ ಸಾಹೇಬರವರು.
4. ,, ಹಸೇನಲ್ಲಿಬೇಗ್ ಸಾಹೇಬರವರು.
5. ,, ಮಾದಪ್ಪನವರು.

I. 1908ನೆ ಇಸವಿ ನವಂಬರು ಮತ್ತು ಡಿಸೆಂಬರು ಮಾಹೆಯ ಜಮಾ ಖರ್ಚು ಲೆಖ್ಖ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಖ್ಖಗಳು.

ಓದಿ ಪ್ಯಾಸ್ ಮಾಡಲಾಯಿತು.

II. ಡಿಸಿನ್ಫೆಕ್ಷನ್ ಶಿಬ್ಬಂದಿಯನ್ನು ಇಟ್ಟುಕೊಳ್ಳತಕ್ಕ ವಿಷಯದಲ್ಲಿ ಹೆಲ್ತಾಫೀಸರವರಿಂದ ತಲಪಿರುವ 25—11—08ನೆ ಮುಕ್ಕಾಂ 1089ನೆ ನಂಬರ್ ಡಾಕೆಟ್ ಮತ್ತು ಇದಕ್ಕೆ ಸಂಬಂಧಪಟ್ಟ ನಡವಳಿಕೆ.

ಹೆಲ್ತಾಫೀಸರವರು ಕೊಟ್ಟಿರುವ ಕಾರಣಗಳಿಗೋಸ್ಕರ ಈ ಸಿಬ್ಬಂದಿಯನ್ನು ಇಟ್ಟುಕೊಳ್ಳಬೇಕೆಂದು ತೀರ್ಮಾನಿಸಿದೆ.

III. ಪ್ಲೇಗ್ ಆಸ್ಪತ್ರೆ ನೌಕರರಿಗೆ ಉಡುಪನ್ನು ಮತ್ತು ಮೋಜಾಗಳನ್ನು ಸರಬರಾಜುಮಾಡಿ ಅದರ ಖರ್ಚನ್ನು ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ವಿನಹಾ ಪ್ಲೇಗು ಫಂಡಿಗೆ ಹಾಕತಕ್ಕದ್ದೆಂದು ಗವರ್ನಮೆಂಟಿನಿಂದ ಸಾದರಾಗಿರುವ 26—12—08ನೆ ಮುಕ್ಕಾಂ 6015—ಸ್ಯಾ. 04-08-5ನೆ ನಂಬರು ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

IV. ಹೆಲ್ತ್ ಇಲಾಖೆಯ 1907—08ನೆ ಸಾಲಿನ ರಿಪೋರ್ಟು.

ಒಪ್ಪಿದೆ.

V. ವಾಣೀವಿಳಾಸ ವಾಟರ್ ವರ್ಕ್ಸ್ ಮೇಂಟಿನೆನ್ಸಿಗೋಸ್ಕರವಾಗಿ 1908-09ನೆ ಸಾಲಿಗೆ 15,000 ಸಾವಿರ ರೂಪಾಯಿಗಳ ಅಂದಾಜಾ ಪಟ್ಟಿಯನ್ನು ಮಂಜೂರ್ಮಾಡಿ ಈ ಛಾರ್ಜನ್ನು ಮ್ಯುನಿಸಿಪಲ್ ಕೌನ್ಸಿಲ್ ಫಂಡಿಗೆ ಹಾಕತಕ್ಕದ್ದೆಂದು ಗವರ್ನಮೆಂಟಿನಿಂದ ಸಾದರಾಗಿರುವ 6—1—09ನೆ ಮುಕ್ಕಾಂ 6240-52—ಮ್ಯು. 40-08-5ನೆ ನಂಬರು ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

VI. ವೀವರ್ಸ್ಲೈನ್ ಆಸ್ಪತ್ರೆಯಲ್ಲಿ ಗೆಜ್ಜಲಿಗೆ ಆಸ್ಪದವಿಲ್ಲದಂತೆ ಮಾಡತಕ್ಕ ಬಗ್ಯೆ ತಯಾರಾಗಿರತಕ್ಕ 350 ರೂಪಾಯಿನ ಅಂದಾಜಾ ಪಟ್ಟಿ ಮತ್ತು ಇದಕ್ಕೆ ಸಂಬಂಧಪಟ್ಟ ನಡವಳಿಕೆ.

ಪ್ಯಾಸ್ ಮಾಡಿದೆ.

VII. ಬೈಲಾಗಳ ವಿಚಾರ.

ಬೈಲಾಗಳನ್ನು ಸೆಕ್ಷನ್‌ವಾರು ಆಲೋಚನೆಗೆ ತೆಗೆದುಕೊಳ್ಳತಕ್ಕ ಬಗ್ಯೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳನ್ನು ಸಬ್ ಕಮಿಟಿ ಮೆಂಬರುಗಳಾಗಿ ನಿಯಾಮಕ ಮಾಡಿದೆ.

ವೈಸ್ ಪ್ರೆಸಿಡೆಂಟ್.

ಹೆಲ್ತಾಫೀಸರ್.

ಮಿ॥ ಎಂ. ಸಿ. ರಂಗೈಯ್ಯಂಗಾರ್ರವರು.

VIII. ಮ್ಯುನಿಸಿಪಲ್ ರೆಗ್ಯುಲೇಷನ್ 27–28ನೆ ಸೆಕ್ಷನ್‌ಗನುಗುಣವಾಗಿ ಮ್ಯಾನೇಜಿಂಗ್ ಕಮಿಟಿಯನ್ನು ರಿ-ಕಾನ್ಸ್ಟಿಟ್ಯೂಟ್ ಮಾಡತಕ್ಕ ವಿಚಾರದಲ್ಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಮೆಮೊ.

ಮ್ಯಾನೇಜಿಂಗ್ ಕಮಿಟಿ ಮತ್ತು ಹೆಲ್ತ್ ಕಮಿಟಿಗೆ ಬೇರೆ ಬೇರೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳನ್ನು ಮೆಂಬರುಗಳಾಗಿ ನಿಯಾಮಕ ಮಾಡಿರುತ್ತೆಂದು ತೀರ್ಮಾನಿಸಿದೆ :—

ಫೈನಾನ್ಷಿಯಲ್ ಕಮಿಟಿ.	ಮ್ಯಾನೇಜಿಂಗ್ ಕಮಿಟಿ.	ಹೆಲ್ತ್ ಕಮಿಟಿ.
ಮಿ|| ಶ್ರೀಕಂಠೈಯ್ಯನವರು.	ವೈಸ್ ಪ್ರೆಸಿಡೆಂಟರವರು.	ಹೆಲ್ತಾಫೀಸರವರು.
,, ಕೃಷ್ಣಪ್ಪಾಜಿ ಅರಸಿನವರು.	ಮಿ|| ಎಂ. ಸಿ. ರಂಗೈಯ್ಯಂಗಾರ್ರವರು.	ಮಿ|| ವೆಂಕಟಕೃಷ್ಣಯ್ಯನವರು.
	,, ತಿರುವೆಂಗಡ ಮೊದಲಿಯಾರ್ರವರು.	,, ನರಸಿಹ್ಮಸ್ವಾಮಿಗಳವರು.
	,, ಶ್ರೀಕಂಠೈಯ್ಯನವರು.	,, ರಹಿಮತ್ತುಲ್ಲಾ ಸೇಟರವರು.
	,, ಅಣ್ಣಯ್ಯಪಂಡಿತರವರು.	,, ಮಾದಪ್ಪನವರು.

IX. ಯುನಾನಿ ಹಕೀಂ ಸ್ಯೆಯದ್ ಮುಸ್ತಾಫಾ ಸಾಹೇಬರವರು ತಮ್ಮ ಸಂಬಳವನ್ನು 60 ರೂಪಾಯಿಗೆ ಬಡ್ತಿ ಮಾಡಬೇಕೆಂದು ಬರೆದುಕೊಂಡಿರುವ ಅರ್ಜಿ ವಿಚಾರದಲ್ಲಿ ಸಿವಿಲ್ ಸರ್ಜನರವರಿಂದ ಬಂದಿರತಕ್ಕ 10—12—08ನೆ ಮಕ್ಕಾಂ 1067ನೆ ನಂಬರ್ ಮೆಮೊ.

ಸಿವಿಲ್ ಸರ್ಜನರವರ ಶಿಫಾರಸ್ ಅನುಮೋದಿಸಿ ಪ್ರಮೋಷನ್ ಕೊಡತಕ್ಕದ್ದೆಂದು ತೀರ್ಮಾನಿಸಿದೆ.

X. ಬೆಂಗಳೂರು ಸಿಟಿಯಲ್ಲಿ ಜಾರೀಲಿರುವ ಜನನ ಮರಣ ರಿಜಿಸ್ಟ್ರೇಷನ್ ಬೈಲಾಗಳನ್ನು ಮೈಸೂರು ಸಿಟಿಯಲ್ಲೂ ಅಂಗೀಕರಿಸತಕ್ಕದ್ದೆಂದು ಮಂಜೂರ್ಮಾಡಿ ಇರತಕ್ಕ 11—1—09ನೆ ಮಕ್ಕಾಂ 6412—ಮ್ಯು. 214-08ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

XI. 11—5—08ನೆ ಮಕ್ಕಾಂ 11612-5—ಮ್ಯು. 152–08ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ಮಂಜೂರಾಗಿರತಕ್ಕ ಕೆಲವು ಅಂದಾಜಾ ಪಟ್ಟಿಗಳಲ್ಲಿರುವ ಎಸ್ಟಾಬ್ಲಿಷಮೆಂಟ್ ಮತ್ತು ಅಹನಿ ಸರಂಜಾಮುಗಳ ಖರ್ಚುಗಳನ್ನು ಬಿಟ್ಟುಬಿಡತಕ್ಕದ್ದೆಂದು ಬಂದಿರುವ 5—1—09ನೆ ಮಕ್ಕಾಂ 6203-5—ಮ್ಯು. 115–08ನೆ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

XII. ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

XIII. ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳ ಹೆಲ್ತಾಫಿಸರುಗಳನ್ನು ಪಬ್ಲಿಕ್ ಹೆಲ್ತ್‌ಗೆ ಸಂಬಂಧಪಟ್ಟ ವಿಷಯಗಳಲ್ಲಿ ಎಕ್ಸ್‌ಅಫಿಷಿಯೋ ವೈಸ್ ಪ್ರೆಸಿಡೆಂಟರಾಗಿ ನಿಯಾಮಕ ಮಾಡಿರುವ ವಿಷಯದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 12—1—09ನೆ ಮಕ್ಕಾಂ 6483-6—ಮ್ಯು. 127–07–13ನೆ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

ಎಂ. ಕಾಂತರಾಜೇ ಅರಸ್, ಪ್ರೆಸಿಡೆಂಟ್.

ಮೆಮೋ.

ಮೈಸೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರ ಆಫೀಸಿಗೆ ನವೆಂಬರು ಮತ್ತು ಡಿಸೆಂಬರು ಮಾಹೆ ಅಕೌಂಟುಗಳನ್ನು 1909ನೆ ಜನವರಿ ತಾರೀಖು 21ರಲ್ಲು ಇನ್ಸ್‌ಪೆಕ್ಷನ್ ಮಾಡಿದ್ದರ ವಿವರ—

ಡಿಸೆಂಬರು ಮಾಹೆ ಆಕ್ಟ್ರಾಯಿ ವಸೂಲಿ ಗುದಸ್ತಾ ಸಾಲ್ ಈ ಮಾಹೇಲಿ ಆದದ್ದಕ್ಕಿಂತ ಎಂಭತ್ತೆಂಟು ಚಿಲ್ಲರೆ ಕಮ್ಮಿಯಾದದ್ದು ಹೆಚ್ಚಲ್ಲಾ. ದವಸಗಳ ತುಟಾರಿಯೇ ಕಾರಣವೆಂದು ಎಣಿಸಬೇಕಾಗಿದೆ.

ಆದರೆ ಕುರಿಗಳ ಬಿಕರಿ ಆಮದು ಮಾಮೂಲಿಗೆ ಕಮ್ಮಿಯಾಗಿಲ್ಲ. ಇದರ ಆಮದು ಖರ್ಚುಗಳಲ್ಲಿ ವ್ಯತ್ಯಸ್ಥ ನಡಿಯಲು ಮಾರ್ಗವಿದೆ. ಹ್ಯಾಗಂದರೆ ಬಂದ ಕುರಿಗಳನ್ನ ಚಿಲ್ಲರೆ ಬಂದರೆ ಕಟ್ಟೆಗಳಲ್ಲೂ, ಬಟ್ಟು ಸಾಯರ್ ಕಚೇರಿಯಲ್ಲೂ ಸಹ ಹಾಸಲು ತೀರಿ ಅನುಗಳು ಈ ಷಹರಿನಲ್ಲೇ ನಿಂತು ಖರ್ಚಾಗತಕದ್ದು. ಸ್ಲಾಟರ್ ಹೌಸಿಗೂ ನಿಲ್ಲತಕ್ಕವು ಇಲ್ಲಿಂದಲೇ ಮೇವು ಬಗ್ಗೆ ಊರು ಹೊರಗೆ ಹೋಗುತ್ತಲೇ ಇದೆ. ಕೆಲವು ಕೆಲವು ಸಂದರ್ಭಗಳಲ್ಲಿ ಮೇವಿಗೆ ಹೋಗುವ ರಾಸುಗಳಲ್ಲಿ ಹೊಸ ಆಮದು ರಾಸುಗಳು ಸೇರಿ ಹೋಗಿ ಹಾಸಲು ವಸೂಲಿಗೆ ವಂಚನೆ ನಡಿಯುತ್ತೆ. ಸ್ಲಾಟರು ಹಾಸಿನ ಖರ್ಚು ಲೆಖ್ಖ ಇಟ್ಟಿರುವದರಲ್ಲಿ ಮೇಲೆ ನಾನು ಹೇಳಿದ ಗಲಾಟೆಗೆ ಕಾರಣವಾಗಿ ಹಾಸಲು ವಸೂಲಿ ಕಮ್ಮಿ ಆಗಲು ಕಾರಣವಾಗಿದೆ. ಷಹರಿಗೆ ಬಂದೇ ಸ್ಲಾಟರು ಮನೆ ಇರುವದ್ದರಿಂದ ಆಯಾಯ ಖರ್ಚಿನ ರಾಸುಗಳ ಹಾಸಲು ಆಯಾವಡನೆ ವಸೂಲಾಗಿ ಸ್ಲಾಟರ್ ಹೌಸಿಗೆ ಹೋಗದೆ ಷಹರಿನಲ್ಲಿ ಚಿಲ್ಲರೆ ಹಬ್ಬಗಳಲ್ಲಿ ವಿನಿಯೋಗವಾಗತಕ್ಕ ರಾಸುಗಳ ಹಾಸಲು ಕಟ್ಟೆಯವರೇ ವಸೂಲು ತೆಗೆದುಕೊಳ್ಳಬೇಕು. ಸ್ಲಾಟರ್ ಹೌಸಿಗಾಗಿ ಹೋಗತಕ್ಕವುಗಳ ಚೀಟಿ ಈಗಿನ ಮಾಮೂಲ್‌ಮೇರೆ ಸ್ಲಾಟರ್ ಮನೆಬಳಿ ಇರುವ ದರೋಗರಲ್ಲಿ ಹಾಸಲು ವಸೂಲಾಗಬೇಕಾದ ವಗೈರೆ ಕೆಲಸ ಏರ್ಪಾಡು ಆದರೆ ಈ ವಸೂಲಿ ಜಾಸ್ತಿಯಾಗಲು ಕಾರಣವಾಗುತ್ತೆ. ಅಥವಾ ಈ ಬಾಬು ನಮ್ಮ ಸಾಲೀಯಾನಾ ಆಮದು ಆವರೇಜು ನೋಡಿ ಹರಾಜು ಮಾಡೋಣಾದರೆ ಈ ಬಗೆ ಹುಟ್ಟುವಳಿ ವಸೂಲಾಗಿ ಇದೇಬಗ್ಗೆ ಇರತಕ್ಕ ಲವಾಜಮೇಲಿ ನೂರಾರು ರೂಪಾಯಿಖರ್ಚು ಕಮ್ಮಿಯಾಗಲು ಕಾರಣವಾಗಿದೆ.

2. ಲೈಟಿಂಗು ಛಾರ್ಜು ವಿಷಯ—

ಷಹರಿಗೆ ಎಲೆಕ್ಟ್ರಿಕ್ ದೀಪಗಳು ಆದರೂ ನಮಗೆ ಈಗಿನ ಮಂತಲಿ 400 ಚಿಲ್ಲರೆ ಸಾಲೀಯಾನಾ 5,000 ರೂಪಾಯಿಗಳು ಉಂಟಾಗುತ್ತೆ. ಆದ್ದರಿಂದ ಈ ಮೊಬಲಗು ಆ ಇಲಾಖೆಯವರು ವಹಿಸಿಕ್ಕೊಂಡು ಇರತಕ್ಕ ದೀಪಗಳ ಸ್ಥಳದಲ್ಲಿ ಎಲೆಕ್ಟ್ರಿಕ್ ದೀಪಗಳು ಇಡುವ ಏರ್ಪಾಡಾಗತಕ್ಕದ್ದು ಯುಕ್ತವಾಗಿದೆ.

3. ಮೊಹತರ್ಫಾ ಷಹರ್ ಬಾಬು ಹೇರಳವಾಗಿ ಲವಾಜಮೆ ಜಾಸ್ತಿ ಮೊಕರರಾಯ್ತು. ಈ ತಿಂಗಳ ಲವಾಜಮೆ ಖರ್ಚು 375, ವಸೂಲಿ 1,600 ಆಗಿರುವದು ಬಹಳ ಕಮ್ಮಿಯಾಗಿದೆ.

ಬಾಕಿ ಜಮಾ ಖರ್ಚು ಸರಿಯಾಗಿದೆ.

(ಸೈನ್ಡ್) ಎಂ. ಹಸನ್ ಅಲ್ಲಿ ಬೇಗ್, ಮ್ಯುನಿಸಿಪಲ್ ಕೌನ್ಸಿಲರ್.

ಶಿವಮೊಗ್ಗಾ ಡಿವೀಜನ್ ಸೆಂಟ್ರಲ್ ರಿಕಾರ್ಡ್ ಆಫೀಸ್.

ರಿಕಾರ್ಡುಗಳನ್ನು ನಾಶಪಡಿಸುವಿಕೆ.

ಶಿವಮೊಗ್ಗ, ತಾರೀಖು 19ನೆ ಫೆಬ್ರುವರಿ 1909.

ಮೈಸೂರು ಚೀಫ್ ಕೋರ್ಟು 1905ನೆ ಇಸವಿ ಸೆಪ್ಟಂಬರು 26ನೆ ಮರ್ಕ್ಕಂ 122ನೆ ನಂಬರು ರೂಲ್ಸು ಆಫ್ ಪ್ರಾಕ್ಟಿಸ್ ಅನುಸರಿಸಿ ಇದರಿಂದ ಸಮಸ್ತರಿಗು ತಿಳಿಯಪಡಿಸುವದೇನಂದರೆ—.

ಈ ಡಿವೀಜನ್ನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1905ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1906ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ ದಾಖಲಾದ ಈ ಕೆಳಗೆ ವಿವರಿಸಿ ಇರುವ ಮೊಕದ್ದಮೆಗಳ ಪೈಕಿ ಫೈಸಲಾದವುಗಳಲ್ಲಿ ಕಕ್ಷಿಗಾರರಿಂದಲೂ ಮತ್ತು ಸಾಕ್ಷಿಗಳಿಂದಲೂ ಸಹಾ ಹಾಜರ್ಮಾಡಲ್ಪಟ್ಟ ವಿಸಿಷ್ಟ ದಸ್ತೈವಜುಗಳು ಮೊದಲ ವಾಪಸು ತೆಗದುಕೊಳ್ಳಲ್ಪಡದೆ ಇದ್ದ ಪಕ್ಷದಲ್ಲಿ ಮೇಲ್ಕಂಡ ರೂಲ್ಸ್ ಆಫ್ ಪ್ರಾಕ್ಟಿಸ್‌ನಲ್ಲಿ ಉದಹರಿಸಿರುವ ವಾಯಿದೆ ನಂತರ ನಾಶಪಡಿಸಲ್ಪಡುತ್ತವೆ ತಿಳಿಯುವದು ಅಂದರೆ ಫೈಸಲಾದ ಮೂರು ವರುಷದ ವಳಗೆ.

ಕೋರ್ಟುಗಳ ಹೆಸರು.	ಫೈಸಲ್ ಆದ ಸಾಲು	ಮೊಕದ್ದಮೆಗಳ ಸ್ವಭಾವ.			
		ಸಿವಿಲ್ ಸೂಟುಗಳು.	ಅಮಲ್ಜಾರಿ.	ಮಿಸಲೇನಿಯಸ್.	ಅಪೀಲು.
ಶಿವಮೊಗ್ಗ ಡಿಸ್ಟ್ರಿಕ್ಟು ಕೋರ್ಟು.	1905—1906	1ರ ಲಾ|| 3ರ ವರಿಗೆ	1ರ ಲಾ|| 28ರ ವರಿಗೆ	1ರ ಲಾ|| 226ರ ವರಿಗೆ	1ರ ಲಾ|| 215ರ ವರಿಗೆ
ಶಿವಮೊಗ್ಗ ಸಬ್ ಜಡ್ಜಿ ಕೋರ್ಟು.		1ರಿಂದ 154	1ರಿಂದ 124	1ರಿಂದ 100	1ರಿಂದ 212
ಶಿವಮೊಗ್ಗ ಮುನ್ಸೀಫ್ ಕೋರ್ಟು.		1ರಿಂದ 920	1ರಿಂದ 1620	1ರಿಂದ 1062	ಡಿಟೋ
ಚಿತ್ರದುರ್ಗ ಮುನ್ಸೀಫ್ ಕೋರ್ಟು.		1ರಿಂದ 1430	1ರಿಂದ 1696	1ರಿಂದ 1061	ಡಿಟೋ
ಸಾಗರ ಮುನ್ಸೀಫ್ ಕೋರ್ಟು.		1ರಿಂದ 540	1ರಿಂದ 910	1ರಿಂದ 660	ಡಿಟೋ
ಚಿಕ್ಕಮಗಳೂರು ಮುನ್ಸೀಫ್ ಕೋರ್ಟು.		1ರಿಂದ 705	1ರಿಂದ 993	1ರಿಂದ 662	ಡಿಟೋ
ಲೇಟ ಎಡೆಹಳ್ಳಿ ಮುನ್ಸೀಫ್ ಕೋರ್ಟು.		1ರಿಂದ 427	1ರಿಂದ 620	1ರಿಂದ 425	ಡಿಟೋ

ಆರ್. ಬಿ. ಪ್ಲಮ್ಮರ್, ಆಫೀಸರ್ ಇನ್ ಛಾರ್ಜ್ ಸೆಂಟ್ರಲ್ ರಿಕಾರ್ಡ್, ಶಿವಮೊಗ್ಗ ಡಿವಿಜನ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1908—09ನೆ ಇಸವಿ ಮಿ|| ಅರ್ಜೀ ನಂಬರ್ 728.

ಮಾಗಡಿ ರೇಂಜಿನಲ್ಲಿ ಸಬ್ ಇನ್ಸ್ಪೆಕ್ಟರಾಗಿದ್ದು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲಿ ಫವತಿಪಟ್ಟ ಎನ್. ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕೋಟೇಲಿ ಬಿ. ಸ್ಟ್ರೀಟಿನಲ್ಲಿ ಇರುವ ಫವತಿ ಸುಬ್ಬರಾಯರ ಹೆಂಡತಿ ಕ್ರಿಷ್ಣಮ್ಮ, ಮೃತಪಟ್ಟ ಸದರೀ ಎನ್. ಸುಬ್ಬರಾಯರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯರ ಜಿಂದಗಿ ಬಗ್ಯಾಗಿ ಬರತಕ್ಕ 308 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಕ್ರಿಷ್ಣಮ್ಮನ ಅರ್ಜಿಯನ್ನು ಸನ್ 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಶ್ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ಫೆಬ್ರುವರಿ 19ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯರ್, ಸಬ್ ಜಡ್ಜ್.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ್ ನಂಬರ್ 511-C. S. 24—ಬೆಂಗಳೂರು, ತಾರೀಖು 23-24ನೆ ಫೆಬ್ರುವರಿ 1909ನೆ ಇಸವಿ.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ (2)ನೆ ಬಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

	ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1.	ಶ್ರೀ ಹರಿಹರೇಶ್ವರ ಕೋ ಆಪರೇಟೀವ ಸೊಸೈಟಿ, ಲಿಮಿಟೆಡ್.	ಹರಿಹರ.	10ನೆ ಫೆಬ್ರುವರಿ 1909ನೆ ಇಸವಿ.
2.	ಕೋಲಾರ ಕೋ ಆಪರೇಟೀವ ಸೊಸೈಟಿ, ಲಿಮಿಟೆಡ್.	ಕೋಲಾರ.	10ನೆ ಫೆಬ್ರುವರಿ 1909ನೆ ಇಸವಿ.

ಎಂ. ಶಾಮರಾವ್, ಮೈಸೂರು ಗವರ್ನಮೆಂಟ್ ಕೋ ಆಪ್ಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್.

ಮೈಸೂರು ಗವರ್ನಮೆಂಟ ಸೆಂಟ್ರಲ್ ಬುಕ್ಕು ಡಿಪ್ಪೋ.

ಸರ್ 1909ನೆ ಇಸವಿ ಫೆಬ್ರುವರಿ ತಾರೀಖು 1.

ಬೆಂಗಳೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪ್ಪೋವಿನಲ್ಲಿ ದೊರಿಯುತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸರ್ 1879ನೆ ಇಸವಿಯ 12ನೆ ನಂಬರ್ ಆಕ್ಟು.	36	0	11	0	1	0
4	1871ನೆ ಇಸವಿಯ ರಾಸುಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ (1904)	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟ್ ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ ...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
18	,, ಟೆಲಿಗ್ರಾಫ್ ಆಕ್ಟು	18	0	1	6	1	0
19	,, ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು (ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್‌ವೆಗಳ ರೆಗ್ಯುಲೇಷನ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೊಲೀಸ್ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ Iನೆ ರೆಗ್ಯುಲೇಷನ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
38	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಿಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗೌರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ಸಕ್ಷಿಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
43	1895ನೆ ಇಸವಿ IIIನೆ ನಂ. ರೆಗ್ಯುಲೇಷನ್ ಮೈಸೂರು ಕಂಪೆನಿಗಳ ರೆಗ್ಯುಲೇಷನ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷನ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟಿನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಶೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಗೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿಗ ರೆಗ್ಯುಲೇಷನ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	9	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟೋ 1905 ...	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟ್ಟೋ 1907 ...	143	1	0	0	6	0
56	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸನ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
59	ಇಸ್ತಿಹಾರ್ನಾಮ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು.	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡಾದುದು ...	475	2	0	0	4	6

ರೆಜಿಸ್ಟ್ರೇಷನ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಷ್ ಮಾಹೀ ಯಾ ಕ್ವಾರ್ಟರಿಗೆ			ದಾಮೂಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲತಿ ವರುಷದ ಗೆಜೆಟ ಕಾಪಿ 1ಕೆ, ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಕುಂ 155ನೆ ನಂಬರ್ ಉಳ್ಳ ಗವರ್ನಮೆಂಟ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನ ಇಸವಿ ಜೂನ್ 21ನೆ ಮರ್ಕುಂ 24205—6—ಜಿ. 6200ನೆ ನಂಬರಿ ಗವರ್ನಮೆಂಟ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮರ್ಕುಂ 2633—41 ಮಿಸ್. 558ನೆ ನಂಬರ ಗವರ್ನಮೆಂಟ ಪ್ರೊಸೀಡಿಂಗ್ಸ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ ಅಥವಾ ಕನ್ನಡ ಗೆಜೆಟ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

	ರೂ.	ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಫಿಕೇಟ ಬಗ್ಯೆ ನೋಟಿಸಗಳು :—		
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ ..	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ ..	2	8

ಸಿವಿಲ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ ಪ್ರಕಟಿಸಲ್ಪಡುತ್ತವೆ.

		ರೂ.	ಆ.
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗೈರ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—

		ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ - ಡಿಟೋ	ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0	4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಆದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಕಂಪೈಲರ್, ಮೈಸೂರು ಗೆಜೆಟ.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಾಯಿಸ್ ಆದ್ದು. [ನಂ. 10.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 11, ಸ್ 1909.

IIನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಫೈನಾನ್ಷಿಯಲ್ ಸೆಕ್ರೆಟರಿ.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 1ನೆ ಮಾರ್ಚಿ 1909, ಚಿಕ ಮಗಳೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಡೂರು ಡಿಸ್ಟ್ರಿಕ್ಟ್ ಬಾಬತು ಆಯಾಯ ಡಿಪೋಗಳ ಕೆಳಗೆ ಕಂಡ ನಾಟಾಗಳನ್ನು ಆಯಾಯ ಡಿಪೋಗಳ ಕೆಳಗಡೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂ.	ನಾಟಾ ವಿವರ.	ಹೆಬ್ಬೆ ಡಿಪೋ 20—3—09		ದಾನಿವಾಸ ಡಿಪೋ 23—3—09		ಶಿವಮೊಗ್ಗ ಡಿಪೋ 26—3—09		ಬೆಂಕೀಪುರದ ಡಿಪೋ 27—3—09		ತರೀಕೆರೆ ಡಿಪೋ 29—3—09		ಕಡೂರು ಡಿಪೋ 31—3—09		ಷರಾ.
		ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	
1	ಸಾಗುವಾನಿ	30	1,500	10	200	...	...	...	...	200	4,500	25	750	
2	ಹೊನ್ನೆ	9	300	36	1,300	...	...	40	1,000	10	200	25	500	
3	ಬೀಟೆ	50	1,800	5	250	...	...	16	400	78	1,900	30	650	
4	ಮತ್ತಿ	120	4,000	214	10,100	10	200	170	4,500	130	3,500	25	650	
5	ನಂದಿ	40	1,200	5	200	20	500	16	500	70	1,800	...	...	
6	ಹುನಾಲು	70	2,500	100	3,000	25	1,000	50	1,000	86	2,000	...	...	[illegible]
7	ಜಿಲ್ವಾರ	...	...	...	...	...	...	...	...	1	10	6	150	
8	ಯತ್ತಾಗ	4	70	20	1,500	20	500	63	1,800	33	1,200	...	...	
9	ತಡಸಲು	30	800	2	60	10	200	...	...	15	300	...	...	
10	ಬಾಗೆ	4	100	...	...	...	...	...	...	...	...	...	...	
11	ಜಂಬೆ	800	15,000	20	600	15	325	10	200	56	900	...	...	
12	ಸಾಗುವಾನಿ ತೀರು	177	200	...	...	...	...	...	...	2,290	1,800	...	...	
13	ಡಿಟ್ಟೋ ಹಲಿಗೆ	153	900	...	...	...	...	...	...	...	...	...	..	
14	ಡಿಟ್ಟೋ ರಿಪೀಸು	ರ. ಅ.	800	...	...	...	...	...	...	...	...	...	...	
15	ಜಂಬೆ ಹಲಿಗೆ	53	100	...	...	...	...	...	...	...	...	...	...	
16	ನೆರಲು	...	...	30	1,200	...	...	18	500	4	100	...	...	

ಹರಾಜು ಷರತ್ತುಗಳು:—(1) ಕಡೆ ದರಖಾಸ್ತುದಾರನು ಹರಾಜು ನಡೆದ ಐದು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗು ಸಮೀಪದಲ್ಲಿರುವ ಖಜಾನೆಗೆ ಜಮಾ ಮಾಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಬಾಬು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಹರಾಜುದಾರರನ್ನು ಗುರಿಪಡಿಸುತ್ತೆ.

(2) ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನ ಹರಾಜು ತಾರೀಖು ಲಾಗಾಯಿತು (30) ಮೂವ್ವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಜಮಾಮಾಡಿಸಿರುವ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ನಾಟಾಗಳನ್ನು 1ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ದುಸರಾ ಹರಾಜು ಮಾಡಿಸಿ ಉಂಟಾಗುವ ಲುಕ್ಸಾನು ಮೊಬಲಗನ್ನು ಅವಲ್ ಹರಾಜುದಾರನಿಂದ ವಸೂಲ್ಮಾಡಲ್ಪಡುತ್ತೆ.

(3) ಹರಾಜಿನಲ್ಲಿ ಪಡದಿರುವ ನಾಟಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ನಾಟಾಗಳನ್ನ ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲು ರಫ್ತು ಮಾಡಕೂಡದು.

(4) ಹರಾಜು ತಾರೀಖು ಲಾಗಾಯಿತು (90)ತೊಂಭತ್ತು ದಿವಸಗಳ ಮೇಲ್ಪಟ್ಟು ಮರಗಳನ್ನ ಡಿಪೋದಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನಮೇಲೆ ವರ್ಷ 1ಕ್ಕೆ ಶೇಕಡ 12 ರೂಪಾಯಿನಂತೆ ಡಿಪೋ ಭಾಡಾ ವಸೂಲ್ ಮಾಡಲ್ಪಡುತ್ತೆ.

ಬಿ. ಹಿರಾಸಿಂಗ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 28ನೆ ಫೆಬ್ರುವರಿ 1909.

ಎಲ್ಲಾ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಹಾಸನ ಡಿಸ್ಟ್ರಿಕ್ಟಿನಲ್ಲಿ ಜಮಾಯಿಸಲ್ಪಟ್ಟು ಅರಸಿಕೆರೆ ಡಿಪೋದಲ್ಲಿ ಇಡಿಸಿರುವ (ಹತ್ತುಸಾವಿರ) 10,000 ಮಣ (ಸ್ವಲ್ಪ ಹೆಚ್ಚುಕಡಿಮೆ) ಅಳಲೆಕಾಯಿ ಅರಸಿಕೆರೆಯಲ್ಲಿ 1909ನೆ ಏಪ್ರಿಲ್ 5ನೆ ತಾರೀಖು ಸೋಮವಾರ ಮಧ್ಯಾಹ್ನ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಹರಾಜ್ ಮಾಡಿಸುತ್ತಾರೆ.

ಸದರಿ ಹರಾಜ್ ಹಜರತ್ ಕನ್ಸರ್‌ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟದ್ದಾಗಿರುತ್ತೆ. ಮತ್ತು ಸದರಿ ಅಳಲೆಕಾಯಿಯನ್ನು 1,000 ಮಣಕ್ಕೆ ಒಂದು ಲಾಟಾಗಿ ಮಾಡಿಕೊಂಡು ಹರಾಜ್ ಮಾಡಿಸುತ್ತೆ.

ಹರಾಜು ಷರತ್ತುಗಳು.

1. ಛಡ ದರಖಾಸ್ತುದಾರನು ಹರಾಜ್ ಖೈದಾದ ಒಡನೆ ಹರಾಜು ಮೊಬಲಗು ಪೈಕಿ ಶೇಕಡ 25ರಂತೆ ಆಗುವ ಮೊಬಲಗನ್ನು ಅರಸಿಕೆರೆ ತಾಲ್ಲೂಕು ಖಜಾನೆಗೆ ಕಟ್ಟಿ ಸದರೀ ಟ್ರೆಜರಿ ರಶೀತಿಯನ್ನು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಲ್ಲಿ ಹಾಜರ್‌ಮಾಡಬೇಕು. ತಪ್ಪಿದಲ್ಲಿ ಮಾಲನ್ನು ದುಸರೇ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಪರಂತು ಫಾಯಿದೆ ಆದಲ್ಲಿ ಅದರಲ್ಲಿ ಅವನಿಗೆ ಹಕ್ಕು ವುಂಟಾಗಲಾರದು.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ಮುವತ್ತು ದಿವಸಗಳಲ್ಲಿ ಫಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲ ಕಟ್ಟಿರುವ ಡಿಪಾಜಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬನ್ನು ಒಂದನೇ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರೆ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಬಾಬಿನ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಬಾಬನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಪ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳ ಮೇಲ್ಪಟ್ಟು ಬಾಬುಗಳನ್ನು ಡಿಪೋದಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಮಣ ಒಂದಕ್ಕೆ ತಿಂಗಳು ಒಂದಕ್ಕೆ ಆರು ಪೈ ಮೇರೆ ಡಿಪೋ ಬಾಡಿಗೆ ವಸೂಲ್‌ಮಾಡಲ್ಪಡುತ್ತೆ. ಮಾಲ್ ಸಂರಕ್ಷಣೆಗೆ ಸರ್ಕಾರದವರು ನ್ಯಾಯವಾದ ಏರ್ಪಾಡನ್ನು ಮೇಲ್ಕಂಡ ವಾಯಿದೆ ಕಳೆದ ನಂತರವು ಮಾಡಿಯು ಮಾಲು ವಹಿಸಿಕೊಳ್ಳುವಾಗ ಅದು ಯಾವ ಸ್ಥಿತೀಲಿ ಇರುತ್ತೋ ಆ ಸ್ಥಿತೀಲಿ ಅದನ್ನು ವಹಿಸಿಕೊಳ್ಳುವದು ಹರಾಜುದಾರನ ಕರ್ತವ್ಯವಾಗಿರುತ್ತೆ.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್, ಹಾಸನ ಡಿಸ್ಟ್ರಿಕ್ಟು.

ಪ್ರಕಟನೆ.

ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಹೋಬಳಿ ಸಂಬಾರಗಿಡ ಕಾವಲ್ ಫಾರೆಸ್ಟನ್ನು ಮನ್ನಾಜಂಗಲಿ ಮಾಡುವ ವಿಷಯವನ್ನು 1909ನೆ ಇಸವಿ ಮಾರ್ಚಿ 4ನೆ ತಾರೀಖಿನ ಮೈಸೂರು ಕನ್ನಡ ಗೆಜೆಟ್ಟಿನ IIನೆ ಭಾಗದ 120—121ನೆ ಪೇಜಿನಲ್ಲಿ ವಿಶದವಾಗಿ ತಿಳದುಕೊಳ್ಳಬಹುದು.

ಎಂ. ಶ್ಯಾಮರಾವ್,
ಫಾರೆಸ್ಟು ಸೆಟ್ಲಮೆಂಟ್ ಆಫೀಸರ್ ಇನ್ ಮೈಸೂರು.

ಮೈಸೂರು ಡಿಸ್ಟ್ರಿಕ್ಟು.

ಪ್ರಕಟನೆ.

ಸನ್ 1909ನೆ ಜನವರಿ 7ರಲ್ಲು.

ಮಂಡ್ಯದ ತಾಲ್ಲೂಕು ಮಂಡ್ಯದ ಗ್ರಾಮವನ್ನು ಅದರ ಆಸುಪಾಸ್ ಇರುವ ಕಲ್ಲಹಳ್ಳಿ, ಚಿಂದಗಿರಿದೊಡ್ಡಿ, ಚಿಕ್ಕಮಂಡ್ಯ, ಮೊಟ್ಟಲಿಂಗನದೊಡ್ಡಿ, ದ್ಯಾವೆಗೌಡನದೊಡ್ಡಿ, ಹೊಸಹಳ್ಳಿ ಎಂಬ ಈ ಆರು ಗ್ರಾಮಗಳನ್ನು ಸೇರಿಸಿ 1906ನೆ ಇಸವಿ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8 (1)ನೆ ಪ್ರಕರಣವನ್ನನುಸರಿಸಿ ಒಂದು ಮ್ಯುನಿಸಿಪಾಲಿಟಿಯನ್ನಾಗಿ ಮಾಡಲು ಉದ್ದೇಶಿಸಿರುತ್ತೆ. ಈ ಏರ್ಪಾಡಿಗೆ ಆಕ್ಷೇಪಿಸುವವರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಮೊದಲಾವರ್ತಿ ಛಾಯಿಷಾದ 2 ತಿಂಗಳ ಒಳಗಾಗಿ ಅಂಥಾ ಆಕ್ಷೇಪಣೆಗಳನ್ನು ಕಾರಣ ಸಹಿತವಾಗಿ ಬರಹ ಮೂಲಕ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಗೆ ತಿಳಿಸಬೇಕು. ಮೇಲ್ಕಂಡ ಆರು ಉಪ ಗ್ರಾಮಗಳನ್ನು ಸೇರಿದ ಮಂಡ್ಯ ಪಟ್ಟಣದ ಚತುರ್ಗಡಿಗಳು ಈ ಕೆಳಗೆ ತೋರಿಸಲ್ಪಟ್ಟಿವೆ.

ಮಂಡ್ಯ ಮ್ಯುನಿಸಿಪಾಲಿಟಿಯ ಸರಹದ್ದು ಬನ್ನೂರು ರಸ್ತೆಯ ಹತ್ತರ ಇರುವ ಮಂಡ್ಯ ಗ್ರಾಮದ ಸರ್ವೆ 120ನೆ ನಂಬರಿನ ನೈರುತ್ಯ ಮೂಲೆಯ ಹತ್ತರ ಪ್ರಾರಂಭವಾಗಿ ಸರ್ವೆ 120—121 ಮತ್ತು 122ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ವಾಯುವ್ಯಾಭಿಮುಖವಾಗಿ ಹೊರಟು ಸರ್ವೆ 124—125—126 ಮತ್ತು 127ನೆ ನಂಬರುಗಳ ದಕ್ಷಿಣ ಸರಹದ್ದನ್ನು ಸರ್ವೆ 128ನೆ ನಂಬರಿನ ನೈರುತ್ಯಮೂಲೆಯನ್ನು ಸೇರುವ ವರಿವಿಗೂ ಹೋಗುತ್ತದೆ. ಇಲ್ಲಿಂದ ಮುಂದಕ್ಕೆ ಸರ್ವೆ 215ನೆ ನಂಬರಿನ ವಾಯುವ್ಯ ಮೂಲೆಯ ವರಿವಿಗೂ ಉತ್ತರಾಭಿಮುಖವಾಗಿ ಹೋಗಿ ಅಲ್ಲಿಂದ ವಾಯವ್ಯಾಭಿಮುಖವಾಗಿ ಸರ್ವೆ 216—223 ಮತ್ತು 224ನೆ ನಂಬರುಗಳ ದಕ್ಷಿಣ ಸರಹದ್ದನ್ನು ಅನುಸರಿಸಿ ಮೈಸೂರು ರಸ್ತೆಯನ್ನು ದಾಟಿಕೊಂಡು ಸರ್ವೆ 226ನೆ ನಂ

ಬರಿನ ನೈರುತ್ಯ ಮೂಲೆಯು ವರಿವಿಗೂ ಹೋಗುತ್ತದೆ. ಅಲ್ಲಿಂದ ಮುಂದಕ್ಕೆ ಈಶಾನ್ಯಮುಖವಾಗಿ ಸರ್ವೆ 390ನೆ ನಂಬರಿನ ಆಗ್ನೇಯ ಸರಹದ್ದಿನ ಮೂಲೆಯು ವರಿವಿಗೂ ಕಲ್ಲಹಳ್ಳಿಯ ಕೆರೆಯ ಧಡವನ್ನು ವಳಗೊಂಡು ವಾಯುವ್ಯಕ್ಕೆ ತಿರಿಗಿ ಕಲ್ಲಹಳ್ಳಿ ಕೆರೆಯ ಏರಿಯನ್ನು ಅನುಸರಿಸುತ್ತದೆ. ತರುವಾಯ ಸರ್ವೆ 327ನೆ ನಂಬರಿನ ಬಳಿಯಲ್ಲಿ ಕಲ್ಲಹಳ್ಳಿ ಕೆರೆಯ ಎಡಭಾಗದ ಕೋಡಿಯನ್ನು ದಾಟ ಸರ್ವೆ 330—333—335ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಪಣಕನಹಳ್ಳಿ ಗ್ರಾಮದ ಎಲ್ಲೆಯನ್ನು ಸರ್ವೆ 336ನೆ ನಂಬರಿನ ಮಧ್ಯಭಾಗದಲ್ಲಿ ಪಣಕನಹಳ್ಳಿಗೆ ಹೋಗತಕ್ಕ ಭಂಡೀದಾರಿಯ ಬಳಿ ಸೇರುತ್ತದೆ. ನಂತರ ಸರ್ವೆ 336ನೆ ನಂಬರಿನ ಈಶಾನ್ಯ ಎಲ್ಲೆಯನ್ನು ಅನುಸರಿಸಿ ಸರ್ವೆ 455ನೆ ನಂಬರಿನ ವಾಯುವ್ಯ ಮೂಲೆಯು ವರಿವಿಗೂ ಹೋಗಿ ಶಿವಹಳ್ಳಿ ರಸ್ತೆಯು ವರಿವಿಗೂ ನೆಟ್ಟಗೆ ಹೋಗಿ ಸದರಿ ರಸ್ತೆಯನ್ನು ದಾಟಿ ಸರ್ವೆ 456ನೆ ನಂಬರಿನ ಉತ್ತರ ಎಲ್ಲೆಯನ್ನು ಅನುಸರಿಸಿ ಸದರೀ ನಂಬರಿನ ಆಗ್ನೇಯ ಮೂಲೆಯು ವರಿವಿಗೂ ಹೋಗುತ್ತದೆ. ತರುವಾಯ ಉತ್ತರಕ್ಕೆ ಹೊರಟು ಸರ್ವೆ 877—458—471—475—875—476—481ನೆ ನಂಬರುಗಳ ಪಶ್ಚಿಮ ಎಲ್ಲೆಯಾಗಿ ಸರ್ವೆ 482ನೆ ನಂಬರಿನ ವಾಯುವ್ಯ ಮೂಲೆಯು ವರಿವಿಗೂ ಹೋಗಿ ಪುನಹ ಪಶ್ಚಿಮಕ್ಕೆ ತಿರಿಗಿ ಸರ್ವೆ 484 ಮತ್ತು 872ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ನಂತರ ಉತ್ತರಾಭಿಮುಖವಾಗಿ ಹೊರಟು ಸರ್ವೆ 525ನೆ ನಂಬರಿನ ಉತ್ತರ ಮೂಲೆಯು ವರಿವಿಗೂ ಸರ್ವೆ 486—495—520—523—524 ಮತ್ತು 525ನೆ ನಂಬರುಗಳ ಪಶ್ಚಿಮ ಸರಹದ್ದನ್ನು ಅನುಸರಿಸಿ ಅಲ್ಲಿ ಬಸರಾಳು ರಸ್ತೆಯನ್ನು ದಾಟಿಕೊಂಡು ಪೂರ್ವಾಭಿಮುಖವಾಗಿಯೇ ಸರ್ವೆ 528, 529, 530, 531, 532, 533, 534, 537, 538, 546 ಮತ್ತು 548ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ತರುವಾಯ ದಕ್ಷಿಣಕ್ಕೆ ತಿರಿಗಿ ಸರ್ವೆ 561ನೆ ನಂಬರಿನ ಉತ್ತರ ಮತ್ತು ಪೂರ್ವದ ಸರಹದ್ದನ್ನು ಅನುಸರಿಸಿ ಪೂರ್ವಕ್ಕೆ ತಿರಿಗಿಕೊಂಡು ಸರ್ವೆ 563 ಮತ್ತು 573ನೆ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸುತ್ತದೆ. ಅಲ್ಲಿಂದ ಮಂಡ್ಯ ಮತ್ತು ಗೋಪಾಲಪುರದ ಕೆರೆಗಳ ಕೋಡಿ ಹಳ್ಳಗಳ ಧಡಗಳನ್ನು ಅನುಸರಿಸಿ ಸರ್ವೆ 598ನೆ ನಂಬರಿನ ಈಶಾನ್ಯ ಮೂಲೆಯು ವರಿವಿಗೂ ಹೋಗುತ್ತದೆ. ಇಲ್ಲಿ ದಕ್ಷಿಣಾಭಿಮುಖವಾಗಿ ಸರ್ವೆ 56ನೆ ನಂಬರಿನಲ್ಲಿ ಗುತ್ತಲು ಗ್ರಾಮದ ಎಲ್ಲೆ ಬಳಿ ಆಗ್ನೇಯ ಮೂಲೆಯು ವರಿವಿಗೂ ಮಂಡ್ಯದ ಗ್ರಾಮದ ಸರಹದ್ದನ್ನು ಅನುಸರಿಸಿ ಪಶ್ಚಿಮಕ್ಕೆ ತಿರುಗಿ ಸರ್ವೆ 56, 57, 58, 59, 60, 118 ಮತ್ತು 119ನೆ ನಂಬರುಗಳ ದಕ್ಷಿಣ ಸರಹದ್ದಿನ ಎಲ್ಲೆಯನ್ನನುಸರಿಸಿ ಚನ್ನೂರು ರಸ್ತೆಯನ್ನು ದಾಟ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

ಜೆ. ಬಿ. ಹೆಬ್ಲಿಕಾರ್,
ಫಾರ್ ಡೆಪ್ಯುಟಿ ಕಮಿಷನರ್.

ಪ್ರಕಟನೆ.

ತಾರೀಖು 5ನೆ ಮಾರ್ಚಿ 1909.

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟ್ ಕೃಷ್ಣರಾಜಪೇಟೆ ತಾಲ್ಲೂಕು ರೆಕಾರ್ಡಿನಲ್ಲಿ ತಹಲ್ ವರಿವಿಗೂ ಭದ್ರಪಡಿಸಿಟ್ಟಿದ್ದ 1813 ಲಾಗಾಯಿತು 1833ನೆ ಸಾಲ್ ವರಿವಿಗಿನ ಕುಳವಾರ್ ಚಿಟ್ಟಗಳನ್ನು ಈ ಲಾಗಾಯಿತು ಮೂರು ತಿಂಗಳು ಕಳೆದನಂತರ ರೂಲ್ಸು ಪ್ರಕಾರ ನಾಶಪಡಿಸಲ್ಪಡುತ್ತೆಯಾದ್ದರಿಂದ ಇವುಗಳ ಕಾಪಿಯನ್ನು ಅಪೇಕ್ಷಿಸುವವರು ವಾಯಿದೆ ಅಂದರ್ ಅರ್ಜಿಕೊಟ್ಟು ಕಾಪಿ ಪಡೆಯಬಹುದಾಗಿರುತ್ತೆ.

ಎಂ. ಕಾಂತರಾಜೇ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿವಿಜನ್ ಸೆಂಟ್ರಲ್ ರಿಕಾರ್ಡ್ ಆಫೀಸ್.

ರಿಕಾರ್ಡುಗಳನ್ನು ನಾಶಪಡಿಸುವಿಕೆ.

ಶಿವಮೊಗ್ಗ, ತಾರೀಖು 19ನೆ ಫೆಬ್ರುವರಿ 1909.

ಮೈಸೂರು ಚೀಫ್ ಕೋರ್ಟು 1905ನೆ ಇಸವಿ ಸೆಪ್ಟಂಬರು 26ನೆ ಮರ್ಕಂ 122ನೆ ನಂಬರು ರೂಲ್ಸು ಆಫ್ ಪ್ರಾಕ್ಟೀಸ್ ಅನುಸರಿಸಿ ಇದರಿಂದ ಸಮಸ್ತರಿಗು ತಿಳಿಯಪಡಿಸುವದೇನಂದರೆ —

ಈ ಡಿವಿಜನ್ನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1905ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1906ನೆ ಇಸವಿ ಜೂನ್ 30ನೆ ತಾರೀಖಿನ ವರೆಗೆ ದಾಖಲಾದ ಈ ಕೆಳಗೆ ವಿವರಿಸಿ ಇರುವ ಮೊಕದ್ದಮೆಗಳ ಪೈಕಿ ಫೈಸಲಾದವುಗಳಲ್ಲಿ ಕಕ್ಷಿಗಾರರಿಂದಲೂ ಮತ್ತು ಸಾಕ್ಷಿಗಳಿಂದಲೂ ಸಹಾ ಹಾಜರ್ಮಾಡಲ್ಪಟ್ಟ ವಿಸಿಷ್ಟ ದಸ್ತೈವಜುಗಳು ಮೊದಲೆ ವಾಪಸು ತೆಗದುಕೊಳ್ಳಲ್ಪಡದೆ ಇದ್ದ

ಪಕ್ಷದಲ್ಲಿ ಮೇಲ್ಕಂಡ ರೂಲ್ಸ್ ಆಫ್ ಪ್ರಾಕ್ಟಿಸ್‌ನಲ್ಲಿ ಉದಹರಿಸಿರುವ ಮಾಯಿದೆ ನಂತರ ನಾಶಪಡಿಸಲ್ಪಡುತ್ತವೆ ತಿಳಿಯುವದು ಅಂದರೆ ಫೈಸಲಾದ ಮೂರು ವರುಷದ ಒಳಗ.

ಕೋರ್ಟುಗಳ ಹೆಸರು.	ಯಾವ ವರುಷ	ಮೊಕದ್ದಮೆಗಳ ಸ್ವಭಾವ.			
		ಸಿವಿಲ್ ಸೂಟುಗಳು.	ಅಮಲ್ಜಾರಿ.	ಮಿಸಲೇನಿಯಸ್.	ಅಪೀಲು.
ಶಿವಮೊಗ್ಗ ಡಿಸ್ಟ್ರಿಕ್ಟು ಕೋರ್ಟು.	1905—1906	1ರ ಲಾ॥ 3ರ ವರಿಗೆ	1ರ ಲಾ॥ 28ರ ವರಿಗೆ	1ರ ಲಾ॥ 226ರ ವರಿಗೆ	1ರ ಲಾ॥ 215ರ ವರಿಗೆ
ಶಿವಮೊಗ್ಗ ಸಬ್ ಜಡ್ಜಿ ಕೋರ್ಟು.		1ರಿಂದ 154	1ರಿಂದ 124	1ರಿಂದ 100	1ರಿಂದ 212
ಶಿವಮೊಗ್ಗ ಮುನ್ಸೀಫ್ ಕೋರ್ಟು.		1ರಿಂದ 920	1ರಿಂದ 1620	1ರಿಂದ 1062	ಡಿಟೋ
ಚಿತ್ರದುರ್ಗ ಮುನ್ಸೀಫ್ ಕೋರ್ಟು.		1ರಿಂದ 1430	1ರಿಂದ 1696	1ರಿಂದ 1061	ಡಿಟೋ
ಸಾಗರ ಮುನ್ಸೀಫ್ ಕೋರ್ಟು.		1ರಿಂದ 540	1ರಿಂದ 910	1ರಿಂದ 660	ಡಿಟೋ
ಚಿಕ್ಕಮಗಳೂರು ಮುನ್ಸೀಫ್ ಕೋರ್ಟು.		1ರಿಂದ 705	1ರಿಂದ 993	1ರಿಂದ 662	ಡಿಟೋ
ಲೇಟ ಎಡೆಹಳ್ಳಿ ಮುನ್ಸೀಫ್ ಕೋರ್ಟು.		1ರಿಂದ 427	1ರಿಂದ 620	1ರಿಂದ 425	ಡಿಟೋ

ಆರ್. ಬಿ. ಪ್ಲಮ್ಮರ್, ಆಫೀಸರ್ ಇನ್ ಛಾರ್ಜ್ ಸೆಂಟ್ರಲ್ ರಿಕಾರ್ಡ್, ಶಿವಮೊಗ್ಗ ಡಿವಿಜನ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1908—09ನೆ ಇಸವಿ ಮಿ॥ ಅರ್ಜೀ ನಂಬರು 649.

ಮೈಸೂರು ಗವರ್ನಮೆಂಟನಲ್ಲಿ ಆಸ್ಪಿಟಲ್ ಅಸಿಸ್ಟೆಂಟರಾಗಿ ಗುಬ್ಬಿಯಲ್ಲಿದ್ದು ಬೆಂಗಳೂರಲ್ಲಿ 29—10—08ರಲ್ಲಿ ಫವತಿಪಟ್ಟ ಡಿ. ಬಿ. ಲಕ್ಷ್ಮಣ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಕುಪ್ಪುಸಾಮಿ ಮೊದಲಿಯಾರ್ರು, 2ನೆ ಜಗನ್ನಾಥ ಮೊದಲಿಯಾರ್ರು ಮೈನರ್, ಗಾರ್ಡಿಯನ್ ಡಿ. ಬಿ. ರಾಮಚಂದ್ರ ಮೊದಲಿಯಾರ್ರು, ಮೃತಪಟ್ಟ ಸದರೀ ಲಕ್ಷ್ಮಣ ಮೊದಲಿಯಾರ್ರಿಗೆ ಮುಖ್ಯ ವಾರ್ಸುದಾರರಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಣ ಮೊದಲಿಯಾರ್ರ ಜಿಂದಗಿ ಬಗ್ಗ್ಯಾಗಿ ಬರತಕ್ಕ 2,395—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಚಂದ್ರ ಮೊದಲಿಯಾರ್ರ ಅರ್ಜಿಯನ್ನು ಸನ್ 1909ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಣ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ಮಾರ್ಚಿ 2ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನನ್ನ ದಸ್ತಖತ್ತೂಡನೆ ಕೊಡೋಣಾಗಿದೆ.

ಸನ್ 1908—09ನೆ ಇಸವಿ ಮಿ॥ ಅರ್ಜೀ ನಂಬರು 742.

ಬೆಂಗಳೂರು ತಾಲ್ಲೂಕು ಹೊರಮಾವು ಅಗರದಲ್ಲಿದ್ದು ಫವತಿಪಟ್ಟ ಸುಂಕಾರಡ್ಡಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಮುನಿಯಪ್ಪನ ಮಗ ಸಂಜೀವರಡ್ಡಿ, ಮೃತಪಟ್ಟ ಸದರೀ ಸುಂಕಾರಡ್ಡಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊರಮಾವು ಅಗರದ ಸ್ಥಳದಲ್ಲಿ ಮೃತಪಟ್ಟ ಸುಂಕಾರಡ್ಡಿ ಜಿಂದಗಿ ಬಗ್ಗ್ಯಾಗಿ ಬರತಕ್ಕ 338—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಜೀವರಡ್ಡಿ ಅರ್ಜಿಯನ್ನು ಸನ್ 1909ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಂಕಾರಡ್ಡಿ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ಮಾರ್ಚಿ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನನ್ನ ದಸ್ತಖತ್ತೂಡನೆ ಕೊಡೋಣಾಗಿದೆ.

ಸನ್ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 746.

ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿದ್ದು ಫವತಿಪಟ್ಟ ವೆಂಕಟರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ನಗರ್ತರ ಪ್ಯಾಟೇಲಿರುವ ವೆಂಕಟ್ರಾಯರ ಹೆಂಡತಿ ಅಮ್ಮಂಣಿಯಮ್ಮ, ಮೃತಪಟ್ಟ ಸದರೀ ವೆಂಕಟರಾಯರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಯರ ಜೆಂದಗಿ ಬಗ್ಗ್ಯಾಗಿ ಬರತಕ್ಕ 480—0—0 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಮ್ಮಂಣಿಯಮ್ಮನ ಅರ್ಜಿಯನ್ನು 1909ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಕೊಡಿವತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ಮಾರ್ಚಿ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1908-09ನೆ ಇಸವಿ ಮಿ॥ ಅರ್ಜೀ ನಂಬರ್ 748.

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಹೋಬಳಿ ಸುಲ್ತಾನಪೇಟೇಲಿದ್ದು ಫವತಿಪಟ್ಟ ಮಾಳಂ ರುಕ್ಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 2ನೆ ಮಾಕಂ ಪುಟ್ಟೆಯ್ಯಶೆಟ್ಟಿ, 1ನೆ ಸುಬ್ಬರಾಯಶೆಟ್ಟಿ, 3ನೆ ರಾಮಸ್ವಾಮಿಶೆಟ್ಟಿ, 4ನೆ ಕ್ರಿಷ್ಣಯ್ಯಶೆಟ್ಟಿ, 5ನೆ ರಂಗೈಯಶೆಟ್ಟಿ, ಮೈನರ್, ಗಾರ್ಡಿಯನ್ ಸುಬ್ಬರಾಯಶೆಟ್ಟಿ, ಮೃತಪಟ್ಟ ಸದರೀ ರುಕ್ಮಯ್ಯನವರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಸುಲ್ತಾನಪೇಟೇಲಿ ವಾಸಸ್ಥರಾಗಿ ಮೃತಪಟ್ಟ ರುಕ್ಮಯ್ಯನವರ ಜೆಂದಗಿ ಬಗ್ಗ್ಯಾಗಿ ಬರತಕ್ಕ 6,900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬರಾಯಶೆಟ್ಟಿ ವಗೈರೇರ ಅರ್ಜಿಯನ್ನು ಸನ್ 1909ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಕೊಡಿವತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರುಕ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ಮಾರ್ಚಿ 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯ್ಯರ್,
ಸಬ್ ಜಡ್ಜ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
			ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ, ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್ಕ್ಕಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಪೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮುರ್ಕ್ಕಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮುರ್ಕ್ಕಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸಗಳು :—

	ರೂ.	ಅ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ:—

ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ:—

ಮೊದಲನೇ ಸಲಕ್ಕೆ ಪುಟ 1ಕ್ಕೆ ..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

	ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ ..	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಛಾರ್ ಕಂಪೈಲರ್, ಮೈಸೂರು ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 12.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 25, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖೆ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟು ಇಲಾಖಾ.

ತಾರೀಖು 20ನೆ ಮಾರ್ಚಿ 1909.

ಕೇಳಂದೂರು, ಶಿವಮೊಗ್ಗ.

ಸ್ 1900ನೆ ಇಸವಿಯ XIನೆ ನಂಬರು ಫಾರಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು ರ. 6095—ಫಾರೆಸ್ಟ್. 130—08—2, 12—2—09 ; 25—2—09ನೆ ಇಸವಿಯ ಗೆಜೆಟ್ಟಿನಲ್ಲಿ ಖಾಯಿಷ್ಮಾಪಲ್ಪಟ್ಟ ರೀತ್ಯಾ :—

ಷೆಡ್ಯೂಲ್.

ಡಿಸ್ಟ್ರಿಕ್ಟ್.	ತಾಲ್ಲೂಕು, ಹೋಬಳಿ ಗ್ರಾಮ.	ಅಂದಾಜು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ.
ಶಿವಮೊಗ್ಗ	ನಗರ, ನಗರ, ಮತ್ತಿಕೈ	18194—9 ಎಕರೆ 28 ಚದರ ಮೈಲಿ 274 ಎಕರೆ 9 ಗುಂಟೆ	/ ಕೇಳಂದೂರು	ಹೈದರಘರ್ ಗಾಟ್ ರಸ್ತೆಯ ಪಶ್ಚಿಮ ದಿಕ್ಕಿನ ಜಂಗಲಿ.

ಉತ್ತರಕ್ಕೆ—ನಗರ ತಾಲ್ಲೂಕು ಕಟ್ಟಿನಹೊಳೆ ಗ್ರಾಮದ ಸರ್ವೆ ನಂಬರು 15ರ ದಕ್ಷಿಣ ಮೂಲೆಯಿಂದ ಲೈನ್ ಹೊರಟು ಪೂರ್ವಾಭಿಮುಖವಾಗಿ ಸುಮಾರು 1 ಮೈಲಿ 1 ಫರಲಾಂಗು 5 ಸರಪಣಿ ಸದರಿ ಸರ್ವೆ ನಂಬರು ದಕ್ಷಿಣ ಭಾಗದ ಗಡಿಯನ್ನು ಅನುಸರಿಸಿ ಅದೇ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಮತ್ತು ಈಶಾನ್ಯವಾಗಿ ಸುಮಾರು 4 ಫರಲಾಂಗು 2 ಸರಪಣಿ ಸದರಿ ಗ್ರಾಮದ ಸರ್ವೆ ನಂಬರು 84ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಪೂರ್ವಾಭಿಮುಖವಾಗಿ ಸುಮಾರು 2 ಫರಲಾಂಗು 5 ಸರಪಣಿ ಮತ್ತಿಕೈ ಸರ್ವೆ ನಂಬರು 138ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂಬರು 135ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 131 ಮತ್ತು 130ರ ದಕ್ಷಿಣ ಗಡಿಯನ್ನನುಸರಿಸಿಯೂ ಮತ್ತು ಸರ್ವೆ ನಂಬರು 130ರ ಪೂರ್ವ ಗಡಿಯನ್ನನುಸರಿಸಿ ಸದರಿ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 4 ಫರಲಾಂಗು 5 ಸರಪಣಿ ಸರ್ವೆ ನಂಬರು 129ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 117ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಲೈನ್ ಹೊರಟು ಆಗ್ನೇಯವಾಗಿ ಸುಮಾರು 6 ಫರಲಾಂಗು ಸರ್ವೆ ನಂಬರು 116ರ ಪಶ್ಚಿಮ ಗಡಿಯನ್ನನುಸರಿಸಿ ಕಟ್ಟಿನಹೊಳೆ, ಮತ್ತಿಕೈ, ಬ್ರಾಹ್ಮಣವಾಡ, ಕೇಳಂದೂರು ಜಂಗಲಿನ ನಾಗುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಅದೇ ದಿಕ್ಕಿಗಾಗಿ ಸುಮಾರು 5 ಫರಲಾಂಗು 5 ಸರಪಣಿ ಬ್ರಾಹ್ಮಣವಾಡಾ ಸರ್ವೆ ನಂಬರು 49ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ಮತ್ತು ದಕ್ಷಿಣವಾಗಿ 5 ಫರಲಾಂಗು 2 ಸರಪಣಿ ಸದರಿ ಗ್ರಾಮದ ಸರ್ವೆ ನಂಬರು 42ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 53ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 57, 58 ಮತ್ತು 54ರ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 54ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 69ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 2 ಫರಲಾಂಗು 5 ಸರಪಣಿ ಸರ್ವೆ ನಂಬರು 70ರ ಪಶ್ಚಿಮ ಗಡಿಯನ್ನನುಸರಿಸಿ ಮಳಲಿ ಸರ್ವೆ ನಂಬರು 48ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸರ್ವೆ ನಂಬರು 47ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 59, 50, 51 ಮತ್ತು 52ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 52ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 52ರ ಪೂರ್ವದಲ್ಲೂ ಮತ್ತು 53 ಮತ್ತು 57ರ ದಕ್ಷಿಣ ಗಡಿಯನ್ನನುಸರಿಸಿ ಸರ್ವೆ ನಂಬರು 57ರ ಪೂರ್ವ ಗಡಿಯನ್ನನುಸರಿಸಿ ಕೊನೇ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 8 ಸರಪಣಿ ಸರ್ವೆ ನಂಬರು 58ರಲ್ಲಿ ಹಾದು ಸರ್ವೆ ನಂಬರು 97ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 97ರ ಪಶ್ಚಿಮ ಗಡಿಯನ್ನನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ದಕ್ಷಿಣವಾಗಿ ಸುಮಾರು 4 ಫರಲಾಂಗು 5 ಸರಪಣಿ ಸರ್ವೆ ನಂಬರು 37ರ ಪಶ್ಚಿಮ ಗಡಿಯನ್ನನುಸರಿಸಿ ಕೇರೇಮನೆ ಸರ್ವೆ ನಂಬರು 143ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 1 ಮೈಲಿ 1 ಫರಲಾಂಗು 5 ಸರಪಣಿ ಕೇರೇಮನೆ ಸರ್ವೆ ನಂಬರು 143ರ ಪಶ್ಚಿಮ ಗಡಿಯನ್ನನುಸರಿಸಿ 143, 16, 165ನೆ ಸರ್ವೆ ನಂಬರುಗಳ ಮುಕುಪ್ಪ ಬಾಂದಿಗೆ ಸೇರುತ್ತದೆ. ನಂತರ ನೈರುತ್ಯವಾಗಿ ಸುಮಾರು 2 ಫರಲಾಂಗು 3 ಸರಪಣಿ ಸರ್ವೆ ನಂಬರು 165ರ ಉತ್ತರ ಗಡಿಯನ್ನನುಸರಿಸಿ ಕಾಡುಕೊಳೆಹಳ್ಳದ ಬಲಗಡಕ್ಕೆ ಹೋಗಿ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 1 ಮೈಲಿ 5 ಫರಲಾಂಗು ಸದರಿ ಕಾಡುಕೊಳೆಹಳ್ಳದ ಬಲದಡವನ್ನನುಸರಿಸಿ ಕೇರೇಮನೆ ಸರ್ವೆ ನಂಬರು 27ರ ಆಗ್ನೇಯ ಮೂಲೆಯಿಂದ ಆಗ್ನೇಯ ದಿಕ್ಕಿಗೆ ಮೂರು ಸರಪಣಿ ದೂರದಲ್ಲಿ ಒಂದು ಸ್ಥಳಕ್ಕೆ ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಲೈನ್ ಹೊರಟು ನೈರುತ್ಯವಾಗಿ ಸುಮಾರು 1 ಮೈಲಿ 4 ಫರಲಾಂಗು ಕೇರೇಮನೆ ಮತ್ತು ಭೈರಗುಂಡದ ಗ್ರಾಮಗಳ ಗಡಿಯನ್ನನುಸರಿಸಿ ದಕ್ಷಿಣ ಕನ್ನಡ ಜಿಲ್ಲೆ ಗಡಿಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನ್ ಹೊರಟು ದಕ್ಷಿಣ ಕನ್ನಡ ಜಿಲ್ಲೆ ಗಡಿಯನ್ನನುಸರಿಸಿ ಹೋಗಿ ಹೊರಟ ಸ್ಥಳಕ್ಕೆ ಸೇರುತ್ತದೆ.

ಈ ಕೆಳಗೆ ನಮೂದಿಸಿರುವ ಹಿಡುವಳಿ ಮತ್ತು ಹಿಡುವಳಿಯಲ್ಲಿಲ್ಲದ ಆಕಾರ ಕಂಡ ಜಮೀನುಗಳನ್ನು ಈ ಬ್ಲಾಕಿಗೆ ಆವರಣಗಳಾಗಿ ಭಾವಿಸಿದೆ :—

ಗ್ರಾಮದ ಹೆಸರು.	ಹಿಡುವಳಿ ಜಮೀನು.			ಹಿಡುವಳಿಯಲ್ಲಿಲ್ಲದ ಜಮೀನು.		
	ಸರ್ವೆ ನಂ.	ವಿಸ್ತೀರ್ಣ.		ಸರ್ವೆ ನಂ.	ವಿಸ್ತೀರ್ಣ.	
		ಎ.	ಗು.		ಎ.	ಗು.
ಕಟ್ಟೈಹೊಳೆ ...	113	2	38	116	3	20
	115	1	38	119	1	36
	117	6	15	120	1	2
	118	5	14	121	1	22
	134	1	27	122	0	23
	135	2	16	123	1	28
	136	5	24	124	0	5
				109	0	22
				110	0	30
				111	2	12
				112	3	9
				114	0	8
				128	2	14
				129	8	32
				130	1	37
				137	0	30
				138	3	14
ಮಳಲಿ ...	85	12	12	86	0	37
				87	7	12
ಕೇರೇಮನೆ ...	146	6	17	175	10	18
	147	0	22	176	2	29
	148	3	38	177	7	2
	149	6	18	179	5	22
	151	4	0	180	10	14
	152	8	0			
	153	0	12			
	154	3	0			
	155	2	35			
	156	0	7			
	157	0	2			
	158	0	1			
	159	10	5			
	160	5	38			
	161	1	0			
	162	2	18			
	163	3	20			

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು.

ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟು ಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. I. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತು ಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

3. II. (a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಛಾಯಿಸಲಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನು ಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇಧೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರಮಟ್ಟಿಗೆ ಇಧೆಯನ್ನ ತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲಿ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 20ನೆ ಮಾರ್ಚಿ 1909.

ಮಾಡ ಬಾ ಕ್, ಕಡೂರು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರಾದೇಶವು ನಂಬರು ರೆ. 6518—Ft. 121—08—2, 22—2—09 ; 4—3—09ನೆ ಇಸವಿಯ ಗೆಜೆಟಿನಲ್ಲಿ ಛಾಯಿಸ್ಮಾಡಲ್ಪಟ್ಟಿರುತ್ತೆ :-

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಚಕ್ಕು ಬಂದಿ.
ಕಡೂರು	ಚಿಕ್ಕಮಗಳೂರು ಮತ್ತು ತರೀಕೆರೆ ಸಬ್ ತಾಲ್ಲೂಕು	3 ಚದರಮೈಲಿ ಮತ್ತು 303 ಎಕರೆ	ತೇಗೂರು ಗುಡ್ಡ ಮನ್ನಾ ಫಾರೆಸ್ಟ್	ಉತ್ತರಕ್ಕೆ—ತೇಗೂರು ಗುಡ್ಡ ಮನ್ನಾ ಜಂಗಲಿಯ ಈಶಾನ್ಯ ಮೂಲೆಯಲ್ಲಿ ವಡ್ಡಿ ಹಟ್ಟಿಯಿಂದ ಹೆಬ್ಬೆಗೆ ಹೋಗುವ ಕಾಲುದಾರಿಯು ಸೋಮವಾಹಿನಿ ನದಿಗೆ ಸಂಧಿಸುವ ಸ್ಥಳದಿಂದ ಹೊರಟು ಸೋಮವಾಹಿನಿ ನದಿಯ ಧಡದಲ್ಲಿಯೇ ಪೂರ್ವಾಭಿಮುಖವಾಗಿ ಹಿಪ್ಲಹಳ್ಳ ಮೇಲ್ಕಂಡ ನದಿಗೆ ಸಂಗಮವಾಗುವ ವರೆಗೆ ಹೋಗುತ್ತದೆ. ಪೂರ್ವಕ್ಕೆ—ಅಲ್ಲಿಂದ ಅದೇ ನದಿಯ ಧಡದಲ್ಲಿ ಮುತ್ತೋಡಿ ಮನ್ನಾ ಜಂಗಲಿಯ ಪಶ್ಚಿಮ ಸರಹದ್ದು ಅನುಸರಿಸುತ್ತಾ ಮಾಡಾಲ್ಲ ಗ್ರಾಮದ ಸರ್ವೆ ನಂಬರು 12ರ ಆಗ್ನೇಯ ಮೂಲೆಯಲ್ಲಿ ಮೇಲ್ಕಂಡ ನದಿಯು ದಕ್ಷಿಣಕ್ಕೆ ತಿರುಗುವ ವರೆಗೂ ಹೋಗಿ ತರುವಾಯ ಸೋಮವಾಹಿನಿ ನದಿಯನ್ನು ಬಿಟ್ಟು ಮುತ್ತೋಡಿ

ಮನ್ನಾ ಜಂಗಲಿಯ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಪುನಹ ಮೇಲ್ಕಂಡ ನದಿಯನ್ನು ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಉತ್ತರಾಭಿಮುಖವಾಗಿ ಕಾಗೆಮನೆ ಗಿರಿ ಮನ್ನಾ ಜಂಗಲಿಯ ಪೂರ್ವ ಎಲ್ಲೆಯಿಂದ ಸೋಮವಾಹಿನಿ ನದಿಯನ್ನೇ ಅನುಸರಿಸುತ್ತ ಕೆಳವಾಸಿ ಹಳ್ಳವು ಮೇಲ್ಕಂಡ ನದಿಗೆ ಸಂಗಮವಾಗುವ ವರೆಗೆ ಹೋಗಿ, ನಂತರ ಕಾಗೆಮನೆ ಗಿರಿ ಮನ್ನಾ ಜಂಗಲಿಯ ಉತ್ತರ ಎಲ್ಲೆಯಿಂದ ಕೆಳವಾಸಿ ಹಳ್ಳದ ಧಡದ ಸಮೀಪದಲ್ಲಿಯೇ ಹೊರಟು ಸೊಗಡವಾನಿ ಗ್ರಾಮದ ಸರ್ವೆ ನಂಬರು 254ರ ಉತ್ತರ ಎಲ್ಲೆಯನ್ನು ಸೇರಿ ಅಲ್ಲಿಂದ ಲೈನ ಪಶ್ಚಿಮಕ್ಕೆ ತಿರುಗಿ ಕಾಗೆಮನೆ ಗಿರಿ ಮನ್ನಾ ಜಂಗಲಿಯ ಡಿಮಾರ್ಕೇಷನ ಲೈನನ್ನು ಬಿಟ್ಟು ಹಳ್ಳವನ್ನು ದಾಟಿ ಸೊಗಡವಾನಿ ಗ್ರಾಮದ ಸರ್ವೆ ನಂಬರು 254ರ ಉತ್ತರ ಎಲ್ಲೆಯನ್ನನುಸರಿಸಿ ವಡ್ಡಿಹಟ್ಟಿ ಮನ್ನಾ ಜಂಗಲಿಯ ಆಗ್ನೇಯ ದಿಕ್ಕನ್ನು ಸೇರುತ್ತದೆ.

ಪಶ್ಚಿಮಕ್ಕೆ—ನಂತರ ವಡ್ಡಿಹಟ್ಟಿ ಮನ್ನಾ ಜಂಗಲಿಯ ಪೂರ್ವ ಸರಹದ್ದನ್ನು ಅನುಸರಿಸಿ ವಾಯುವ್ಯ ದಿಕ್ಕಿನಲ್ಲಿ ಹೊರಟು ಅದೇ ಜಂಗಲಿನ ಈಶಾನ್ಯ ಮೂಲೆಯನ್ನು ಸೇರುತ್ತದೆ. ನಂತರ ಅದೇ ಜಂಗಲಿನ ಉತ್ತರದಲ್ಲಿ ಹೊರಟು ತೇಗೂರು ಗುಡ್ಡ ಮನ್ನಾ ಜಂಗಲಿನ ಆಗ್ನೇಯ ಮೂಲೆಯನ್ನು ಸೇರಿ, ನಂತರ ಈಶಾನ್ಯಾಭಿಮುಖವಾಗಿ ಮೇಲ್ಕಂಡ ಮನ್ನಾ ಜಂಗಲಿಯ ಪೂರ್ವ ಸರಹದ್ದಿನಲ್ಲಿಯೇ ಹೊರಟು ಷುರು ಹೊರಟ ಸ್ಥಳವನ್ನು ಸೇರುತ್ತದೆ.

ಷರಾ—ಈ ಕೆಳಗೆ ನಮೂದಿರುವ ಜಮೀನುಗಳನ್ನು ಸದರಿ ಬ್ಲಾಕಿನಲ್ಲಿ ಆವರಣಗಳಾಗಿ ಭಾವಿಸಿದೆ.

ಗ್ರಾಮ	ಸರ್ವೆ ನಂ.	ಹಿಡುವಳಿ ವಿಸ್ತೀರ್ಣ.		ಸರ್ವೆ ನಂ.	ಹಿಡುವಳಿಯಲ್ಲಿಲ್ಲದ ವಿಸ್ತೀರ್ಣ.	
		ಎ	ಗು.		ಎ.	ಗು.
	5	3	18	1	3	10
	8	4	15	2	4	30
	17	4	19	3	1	23
	18	4	21	4	12	26
	20	2	0	6	10	32
	21	1	0	7	11	2
	29	9	15	9	7	5
	34	0	20	10	7	15
	35	5	10	11	4	6
	36	16	30	12	7	35
ಹಿಡಕ	43	8	30	15	8	31
	44	10	19	19	4	35
	47	4	39	24	14	28
	57	3	7	25	13	12
	58	2	32	30	5	22
	59	3	27	31	3	29
	60	4	23	32	5	30
	61	4	14	37	4	37
	62	2	34	38	2	20
	63	1	14	46	16	21
	64	5	33	48	16	25
	65	6	14	49	355	8
	66	5	28	53	6	38
	67	3	24	54	16	18
	68	4	11			

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮೆದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವುದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ ಮಾಡಕೂಡದು, ಸಾಗುವಳೀಗೋಸ್ಕರವಾಗಲಿ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. I. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅವರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತು ಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

3. II. (*a*) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(*b*) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(*c*) ಈ ಬಗ್ಗೆಗಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(*d*) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(*e*) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(*f*) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಪ್ರಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬಗೆಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್ ಮೆಂಟ್ ಆಫಿಸರ.

ಮೈಸೂರು ಡಿಸ್ಟ್ರಿಕ್ಟು.

ಪ್ರಕಟನೆ.

ತಾರೀಖು 5ನೆ ಮಾರ್ಚಿ 1909.

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ರೆಕಾರ್ಡಿನಲ್ಲಿ ತಹಲ್ ವರೆವಿಗೂ ಭದ್ರಪಡಿಸಿಟ್ಟಿದ್ದ 1813 ಲಾಗಾಯಿತು 1883ನೆ ಸಾಲ್ ವರೆವಿಗಿನ ಕುಳವಾರ್ ಚಿಟ್ಟೆಗಳನ್ನು ಈ ಲಾಗಾಯಿತು ಮೂರು ತಿಂಗಳು ಕಳೆದನಂತರ ರೂಲ್ಸು ಪ್ರಕಾರ ನಾಶಪಡಿಸಲ್ಪಡುತ್ತೆಯಾದ್ದರಿಂದ ಇವುಗಳ ಕಾಪಿಯನ್ನು ಅಪೇಕ್ಷಿಸುವವರು ಮಾಮೂಲಿದೆ ಅಂದರ್ ಅರ್ಜಿಕೊಟ್ಟು ಕಾಪಿ ಪಡಿಯಬಹುದಾಗಿರುತ್ತೆ.

ಎಂ. ಕಾಂತರಾಜೇ ಅರಸ್,
ಡೆಪ್ಯುಟಿ ಕಮಿಷನರ.

1909ನೆ ಇಸವಿ ಫೆಬ್ರುವರಿ ತಾರೀಖು 27ನೆ ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲುರವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ|| ಎಂ. ಕಾಂತರಾಜೇ ಅರಸಿನವರು (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
3. ,, ಬಿ. ಸುಬ್ಬರಾಯರವರು (ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ರವರು).
4. ,, ವಿ. ಎಲ್. ಮಾಂಕರ್‍ರವರು (ಮೈಸೂರು ಸಿಟಿ ಹೆಲ್ತಾಫಿಸರ್)
5. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
6. ,, ಎಂ. ವೆಂಕಟಕೃಷ್ಣಯ್ಯನವರು.

7. ಮಿ॥ ಎಂ. ಸಿ. ರಂಗೈಯ್ಯಂಗಾರ್ರವರು.
8. ,, ಎಂ. ನರಸುಹ್ಮಸ್ವಾಮಿಗಳವರು.
9. ,, ಎ. ಸುಬ್ಬಣ್ಣನವರು.
10. ,, ಎಂ. ಕೃಷ್ಣಪ್ಪಾಜಿ ಅರಸನವರು.
11. ,, ಅಂಬಳೆ ಅಣ್ಣಯ್ಯ ಪಂಡಿತರವರು.
12. ಮಿ॥ ತಿರುವೆಂಗಡ ಮೊದಲಿಯಾರ್ರವರು.
13. ,, ಹಸೇನಲ್ಲಿಬೇಗ್ ಸಾಹೇಬರವರು.
14. ,, ರಹಿಮತ್ತುಲ್ಲಾ ಅಹಮ್ಮದ್ ಸೇಟರವರು.
15. ,, ಮಾದಪ್ಪನವರು.

ಗೈರ್ ಹಾಜರು.

1. ಮಿ॥ ಕೆ. ಚಂದ್ರಶೇಖರೈಯ್ಯನವರು.
2. ,, ಎಂ. ಅನಂತರಾಜೈಯ್ಯನವರು.
3. ಮಿ॥ ಸೈದ್ ಮೊಹದೀನ್ ಸಾಹೇಬರವರು.
4. ,, ಎನ್. ಶ್ರೀಕಂಠೈಯ್ಯನವರು.

I. 1909ನೆ ಇಸವಿ ಜನವರಿ ಮಾಹೆಯ ಜಮಾ ಖರ್ಚು ಲೆಖ್ಖ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಖ್ಖಗಳು.

ಓದಿ ಪ್ಯಾಸು ಮಾಡಲಾಯಿತು.

ಕಲೆಕ್ಷನ್ ವಿಷಯದಲ್ಲಿ ಆಡಿಟರವರ ರಿಪೋರ್ಟಿನಲ್ಲಿ ಮಾಡಿರುವ ಸಲಹೆಗಳನ್ನು ಅನುಮೋದಿಸಿ ಕೂಡಲೆ ಜಾರೀಲಿ ತರಬೇಕೆಂತಲೂ ಇಂಪ್ರೆಸ್ಟಿನಿಂದ ಕೊಟ್ಟಿರತಕ್ಕ ಬಹಳ ದಿವಸಗಳಿಂದ ಬಾಕಿ ಇರುವ ಅಡ್ವಾನ್ಸು ಮೊಬಲಗನ್ನು ಜಾಗ್ರತೆಯಾಗಿ ಅಡ್ಜಸ್ಟು ಮಾಡಲು ವೈಸ್ ಪ್ರೆಸಿಡೆಂಟರವರು ತಕ್ಕ ಏರ್ಪಾಡು ಮಾಡಬೇಕೆಂತಲೂ ಸಹ ತೀರ್ಮಾನಿಸಿದೆ.

II. ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

III. ಅಪಾಥಿಕೆರಿ ಎಸ್. ವೆಂಕೋಬರಾಯರನ್ನು ಕರ್ನಾಟಕ ವೈದ್ಯಶಾಲೆಯ ಚಾರ್ಜಿನಲ್ಲಿಡತಕ್ಕ ವಿಷಯದಲ್ಲಿ ಸಿವಿಲ್ ಸರ್ಜನರವರ ಪ್ರಪೋಜಲ್

ಮುಂದಿನ ಮೀಟಿಂಗಿಗೆ ಅಡ್ಜರ್ನ ಮಾಡಿದೆ.

ಪ್ರಾಪೋಜಲ್ಷನ್ನು ತಪ್ಸೀಲು ತಿಳಿಸತಕ್ಕ ಬಗ್ಯೆ ಸಿವಿಲ್ ಸರ್ಜನ್ ರವರನ್ನು ಮೀಟಿಂಗಿಗೆ ದಯಮಾಡಬೇಕೆಂದು ಕೇಳಬೇಕು.

IV. ಮೈಸೂರು ಸಿಟಿ ಇಂಪ್ರೂವ್ಮೆಂಟು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರು ಹೌಸ್ ಕನೆಕ್ಷನ್‌ಗಳಿಗೋಸ್ಕರ ತಯಾರ್ಮಾಡಿರುವ ಟೈಪ್ ಪ್ಲಾನ್ ಮೇಲೆ ಮ್ಯಾನೇಜಿಂಗ್ ಕಮಿಟಿಯವರು ಮಾಡಿರುವ ಶಿಫಾರಸ್ಸು.

ಬದಲಾವಣೆ ಮಾಡಿರುವ ಪ್ರಕಾರ ಟೈಪ್ ಪ್ಲಾನ್ನು ಅನುಮೋದಿಸತಕ್ಕದ್ದೆಂದು ತೀರ್ಮಾನಿಸಿದೆ.

V. ಪೂರ್ವದಲ್ಲಿ ಶಿಫಾರಸ್ಸು ಮಾಡಿದ್ದ ಪ್ರಕಾರ ಕರ್ನಾಟಕ ವೈದ್ಯಶಾಲೆಯ ಕಾಂಪೌಂಡರ್ ವಿಶ್ವನಾಥೈಯ್ಯನವರಿಗೆ 5 ರೂಪಾಯಿ ತಲಬು ಇಜಾಫೆ ಮಾಡತಕ್ಕ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸ್ಸು.

ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸ್ಸನ್ನು ಅನುಮೋದಿಸತಕ್ಕದ್ದೆಂದು ತೀರ್ಮಾನಿಸಿದೆ.

VI. ಇತರರ ಪಯಾಲ್ ಸ್ಕೂಲುಗಳಿಗೆ ಪರೀಕ್ಷಾ ಫಲಿತಾಂಶದ ಮೇಲೆ ಗ್ರಾಂಟು ಪಾವತಿ ಮಾಡಬೇಕೆಂಬ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸ್ಸು.

ಒಪ್ಪಿದೆ.

VII. ಮೈಸೂರು ಬಕ್ಷಿ ನರಸಪ್ಪನವರ ಅಗ್ರಹಾರದಲ್ಲಿ ವೆಂಕಣ್ಣಾಚಾರ್ರೆಂಬುವರು ಅಕ್ರಮವಾಗಿ ಮನೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವ ಭಾಗದಲ್ಲಿ ಅವರ ಮೇಲೆ ದಾವಾ ಮಾಡತಕ್ಕ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲ್ಲಿನವರ ಅಭಿಪ್ರಾಯವನ್ನು ತೆಗೆದು ರಿಕಾರ್ಡು ಮಾಡಬೇಕೆಂದು ಗೌರ್ನಮೆಂಟಿನಿಂದ ಸಾದರಾಗಿರುವ ಕಳೆದ ಜನವರಿ 18ನೆ ಮರ್ಕುಂ 6696-7—Ml. 155-07- ನೆ ನಂಬರ್ ಪ್ರೊಸೀಡಿಂಗ್ಸು

ಅಭಿಪ್ರಾಯ ಮತ್ತು ಅಡ್ವೈಸ್ ಬಗ್ಯೆ ನಡವಳಿಕೆ ಕಟ್ಟನ್ನು ಮಿ॥ ಎಂ. ಸಿ. ರಂಗೈಯ್ಯಂಗಾರ್ರವರಿಗೆ ರಿಫರ್ ಮಾಡಬೇಕೆಂದು ತೀರ್ಮಾನಿಸಿದೆ.

VIII. ಅಕ್ಕಿ ಮಿಷನ್ ಇಡುವದಕ್ಕೋಸ್ಕರ ನೆಪ ಮಾತ್ರ ಕ್ರಯಕ್ಕೆ ಬಕ್ಷಿ ಜೀವಣರಾಯರ ಕಟ್ಟೆ ವಳಾಯವನ್ನು ಕೊಡಿಸಬೇಕೆಂದು ರಿಟೈರ್ಡ್ ಅಸಿಸ್ಟೆಂಟು ಕಮಿಷನರ್ ಮಿ॥ ಕೆ. ಶ್ರೀಕಂಠೈಯ್ಯನವರು ಕೊಟ್ಟಿರುವ ಅರ್ಜಿ ಕೇಷಾನಿಸಿ ಕೌನ್ಸಿಲಿನವರ ಅಭಿಪ್ರಾಯದ ಬಗ್ಯೆ ಮೈಸೂರು ಸಿಟಿ ಇಂಪ್ರೂವ್ಮೆಂಟ್ ಟ್ರಸ್ಟುಬೋರ್ಡು ಛೇರ್ಮನರವರಿಂದ ತಲಪಿರುವ 1[illegible]—[illegible]—09ನೆ ಮರ್ಕುಂ 100ನೆ ನಂಬರ್ ಲೆಟರ್.

ಅವಶ್ಯಕವಾದ ಷರತ್ತುಗಳಿಗೆ ಒಳಪಡಿಸಿ ಪ್ಲಾನಲ್ಲಿ ನಮೂದು ಮಾಡಿರುವಂತೆ ದಕ್ಷಿಣ ಭಾಗದಲ್ಲಿ ಹಳ್ಳದವರಿಗೆ ಜಾಗ ಕೊಡಲು ಮ್ಯುನಿಸಿಪಲ್ ಕೌನ್ಸಿಲ್ಲಿನವರ ಆಕ್ಷೇಪಣೆ ಇಲ್ಲವೆಂದು ತೀರ್ಮಾನಿಸಿದೆ.

ಕಟ್ಟಡದ ತಪ್ಸೀಲು ಪ್ಲಾನನ್ನು ಟ್ರಸ್ಟ್ ಬೋರ್ಡಿಗೆ ಹಾಜರು ಮಾಡುವಂತೆ ಮಿ॥ ಶ್ರೀಕಂಠೈಯ್ಯನವರನ್ನು ಕೇಳಬೇಕು.

IX. ಮಾಹೆಯಾನಾ 20 ರೂಪಾಯಿಗಿಂತ ಜಾಸ್ತಿಯಾಗದ ತಲಬು ಇರತಕ್ಕ ಎಲ್ಲಾ ನೌಕರಮಾನೇರಿಗೂ ಗೌರ್ನಮೆಂಟಿನಿಂದ ಮಂಜೂರಾಗಿರುವ ಗ್ರೇನ್ ಕಂಪನ್ಸೇಷನ್ ಅಲೋಯನ್ಸಿಯಾನೆ ಮಂಗೈ ಭತ್ಯವನ್ನು ಚಾಲ್ತಿ ಸಾಲ್ ಬಡ್ಜೆಟ್ಟಿನಲ್ಲಿ ಯಾವ ಬಾಬಿಗೆ ಛಾರ್ಜು ಮಾಡತಕ್ಕದ್ದೆಂಬುವದನ್ನು ರಿಪೋರ್ಟು ಮಾಡಬೇಕೆಂದು ಮೈಸೂರು ಗೌರ್ನಮೆಂಟು ರೆವಿನ್ಯೂ ಮತ್ತು ಜನರಲ್ ಡಿಪಾರ್ಟುಮೆಂಟುಗಳ ಸೆಕ್ರೆಟರಿಯವರಿಂದ ತಲಪಿರುವ 1—2—1909ನೆ ಮರ್ಕುಂ 7148-57—Mi. 215-0[illegible]-11ನೆ ನಂಬರ್ ಡಾಕೆಟ್.

ಈ ಅಲೋಯನ್ಸನ್ನು ಯಾವ ಬಾಬಿನಿಂದ ಕೊಡತಕ್ಕದ್ದೆಂಬುವದನ್ನು ವೈಸ್ ಪ್ರೆಸಿಡೆಂಟರವರು ತೋರಿಸಬೇಕೆಂದು ತೀರ್ಮಾನಿಸಿದೆ.

X. ಮೈಸೂರು ಸಿಟಿ ವಾಟರ್ ವರ್ಕ್ಸ್ ಪಂಪಿಂಗ್ ಪ್ಲಾಂಟ್ ಎಲೆಕ್ಟ್ರಿಫಿಕೇಷನ್‌ಗೆ ಬೇಕಾಗಿರುವ ಅಂದಾಜು ಮೊಬಲಗು ಪೂರ್ತಾ 50,000 ರೂಪಾಯಿಗಳನ್ನು ಶೇಕಡಾ ಸಾಲೀಯಾನಾ [illegible] ರೂಪಾಯಿ ಬಡ್ಡಿಯಂತೆ ಮ್ಯುನಿಸಿಪಲ್ ಕೌನ್ಸಿಲಿನವರಿಗೆ ಸಾಲವಾಗಿ ಕೊಟ್ಟಿರುವದಾಗಿಯೂ ಸದರೀ ಸಾಲವನ್ನು ತೀರಿಸಲು ಉತ್ಪತ್ತಿಯ ಪೈಕಿ ಯಾವ ಬಾಬನ್ನು ಈಡುಮಾಡುತ್ತೇಂಬುವದನ್ನು ಮತ್ತು ಸದರೀ ಸಾಲವನ್ನು ತೀರಿಸತಕ್ಕ ಕಾಲವನ್ನು ಸಹ ರಿಪೋರ್ಟು ಮಾಡಬೇಕೆಂದು ಗವರ್ನಮೆಂಟಿನಿಂದ ಸಾದರಾಗಿರುವ 3—2—09ನೆ ಮರ್ಕುಂ 3[illegible]65-8—ಮ್ಯೂ. 421-07ನೆ ನಂಬರ್ ಪ್ರೊಸೀಡಿಂಗ್ಸು.

ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳ ಸಬ್ ಕಮಿಟಿಗೆ ಬಹಳ ಜಾಗ್ರತೆಯಾಗಿ ರಿಪೋರ್ಟು ಮಾಡತಕ್ಕ ಬಗ್ಯೆ ಈ ವಿಷಯವನ್ನು ರಿಫರ್ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

ವೈಸ ಪ್ರೆಸಿಡೆಂಟರವರು. | ಎಗ್ಜಿಕ್ಯೂಟಿವ್ ಇಂಜನಿಯರವರು.

ಮಿ॥ ಎಂ. ಸಿ. ರಂಗೈಯ್ಯಂಗಾರ್ರವರು. | ಮಿ॥ ಅಣ್ಣಯ್ಯಪಂಡಿತರವರು. | ಮಿ॥ ವೆಂಕಟಕೃಷ್ಣಯ್ಯನವರು.

XI. ಮೈಸೂರು ಷಹರಿನಲ್ಲಿ ಹೌಸ್ ಕನೆಕ್ಷನ್ ರಿಪೇರಿ ವಿಷಯದಲ್ಲಿ ವಾಟರಸಪ್ಲೈ ಮತ್ತು ಸ್ಯೂಯರ್ಸ್ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರವರು ತಯಾರು ಮಾಡಿರುವ ರೂಲ್ಸು ಮೇಲೆ ಮ್ಯಾನೇಜಿಂಗ್ ಕಮಿಟಿಯವರು ಮಾಡಿರುವ ತಿದ್ದುಪಾಟುಗಳು.

ಒಪ್ಪಿದೆ.

XII. ಷಹರಿನಲ್ಲಿರತಕ್ಕ ಪೈಪುಗಳು ಮತ್ತು ಟ್ಯಾಪುಗಳ ರಿಪೇರಿ ವಿಷಯದಲ್ಲಿ (ಚೀಫ್ ಇಂಜನಿಯರವರ ಅನುಮತಿಯಿಂದ) ಬೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂದು 1908ನೆ ಇಸವಿ ದಸರಾ 412ನೆ ನಂಬರ ಸಬ್ಜೆಕ್ಟ್ ಕಾಪಿನಿಸಿ ಗೌರ್ನಮೆಂಟು ಸೆಕ್ರೆಟರಿಯವರಿಂದ ತಲಪಿರುವ 5—2—09ನೆ ಮರ್ಸ್ಕಂ 7338-9—Ml. 304-08—2ನೆ ನಂಬರ್ ಡಾಕೆಟ್.

ಮ್ಯುನಿಸಿಪಾಲಿಟಿಯಿಂದ ಲೈಸೆನ್ಸ್ ಪಡೆದ ಪ್ಲಂಬರಗಳಿಂದ ಪೈಪು ಮತ್ತು ಟ್ಯಾಪುಗಳಿಗೆ ಅವಶ್ಯಕವಾದ ರಿಪೇರಿಗಳನ್ನು ಮನೆ ಮಾಲೀಕರು ಮಾಡಿಸಿಕೊಳ್ಳಲು ಅಪ್ಪಣೆ ಕೊಡಬಹುದೆಂದು ತೀರ್ಮಾನಿಸಿದೆ.

XIII. ಬಡ್ಜೆಟ್ ಗ್ರಾಂಟುಗಳ ರಿ ಅಪ್ರೋಪ್ರಿಯೇಷನ್ ಸ್ಟೇಟಮೆಂಟ್.

ಒಪ್ಪಿದೆ.

XIV. ಈ ಷಹರಿನ ನಾಮಿನೇಟೆಡ್ ಮತ್ತು ಎಲೆಕ್ಟೆಡ್ ಮ್ಯುನಿಸಿಪಲ್ ಕೌನ್ಸಿಲರುಗಳು 1909ನೆ ಜೂನ್ ಆಖೈರು ವರಿಗೆ ಇರುವಂತೆಯೇ ಇರತಕ್ಕದ್ದೆಂದು ಗೌರ್ನಮೆಂಟಿನಿಂದ ಸಾದರಾಗಿರುವ 3—2—09ನೆ ಮರ್ಸ್ಕಂ 7234ನೆ ನಂಬರ್ ನೋಟಿಫಿಕೇಷನ್.

ರಿಕಾರ್ಡು ಮಾಡಿದೆ.

XV. ಮೈಸೂರು ಷಹರಿನಲ್ಲಿ ಸಿಡುಬು ಹಾಕತಕ್ಕದ್ದಕ್ಕೆ ಒಂದು ತಿಂಗಳು ಪರಿಯಂತರ 4 ಜನ ವ್ಯಾಕ್ಸಿನೇಟರುಗಳನ್ನು ನಿಯಾಮಕ ಮಾಡಿಕೊಳ್ಳಬೇಕೆಂದು ಹೆಲ್ತಾಫಿಸರವರು ಮಾಡಿರುವ ಪ್ರಪೋಜಲ್.

ಈ ಹಂಗಾಮಿ ವ್ಯಾಕ್ಸಿನೇಟರುಗಳನ್ನು ಪ್ರೆಸಿಡೆಂಟರವರು ಸ್ಯಾಂಕ್ಷನ್ ಮಾಡಿರುವ ಪ್ರಕಾರ ಒಪ್ಪಿದೆ ಮತ್ತು ಅವಶ್ಯವಾದಲ್ಲಿ ಇವರುಗಳನ್ನು ಇನ್ನು ಹೆಚ್ಚುಕಾಲ ಇಟ್ಟುಕೊಳ್ಳಬಹುದೆಂಬುವದನ್ನು ಪ್ರೆಸಿಡೆಂಟರವರ ಆಲೋಚನೆಗೆ ಬಿಟ್ಟು ಇದೆ ಎಂದು ತೀರ್ಮಾನಿಸಿದೆ.

XVI. ಷಹರಿನಲ್ಲಿ ಹೌಸ್ ಕನೆಕ್ಷನ್‌ಗಳಿಗೆ ವಾಟರ್ ಮೀಟರ್ ಇಡುವ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸ ಮತ್ತು ಇದಕ್ಕೆ ಸಂಬಂಧಪಟ್ಟ ನಡವಳಿಕೆ.

ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸನ್ನು ಒಪ್ಪಿದೆ ಎಂದು ತೀರ್ಮಾನಿಸಿದೆ.

XVII. ಸ್ಯಾನಿಟರಿ ವಿಷಯಗಳಲ್ಲಿ ಹೆಲ್ತಾಫಿಸರವರು ವೈಸ್ ಪ್ರೆಸಿಡೆಂಟರಾಗಿ ಏನೇನು ಕೆಲಸ ಮಾಡಬೇಕೆಂತಲೂ ಮತ್ತು 12—1—09ನೆ ಮರ್ಸ್ಕಂ 6483-6—ಮ್ಯು. 127-07ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸ್ 4 ಮತ್ತು 5ನೆ ಪ್ಯಾರಾಗಳ ಪ್ರಕಾರ ಪಬ್ಲಿಕ್ ಹೆಲ್ತ್ ಗೋಸ್ಕರ ಫಂಡ್ಸು ಗೊತ್ತು ಮಾಡಬೇಕೆಂತಲೂ ಹೆಲ್ತಾಫಿಸರವರಿಂದ ತಲಪಿರುವ 13—2—09ನೆ ಮರ್ಸ್ಕಂ 1604ನೆ ನಂಬರ್ ಡಾಕೆಟ್.

ವಾಪಸು ತೆಗೆದುಕೊಂಡಿದಾರೆ.

XVIII. ಚಾಮರಾಜ ಮೊಹಲಾದಲ್ಲಿ ಮಿ॥ ಅಂಬಳೆ ಅಣ್ಣಯ್ಯಪಂಡಿತರವರ ಮನೆಗೆ ಪಶ್ಚಿಮ ಭಾಗದಲ್ಲಿರುವ ಖಾಲೀ ಜಾಗವನ್ನು ತೋಳಸೀತೋಟಕ್ಕೆ ಕೊಡಿಸಬೇಕೆಂದು ಮೈಸೂರು ಅರಮನೆ ಅಂಬಾವಿಲಾಸ ಮೊಖ್ತೇಸರ್ ಮಿ॥ ವೆಂಕಟರಮಣಯ್ಯನವರು ಕೊಟ್ಟಿರುವ ಅಪ್ಲಿಕೇಷನ್.

ಚರ್ಚಾಸ್ಪದವಾದ ಖಾಲೀ ಜಾಗವನ್ನು ಖಂಡಿತವಾದ ಷರತ್ತುಗಳಮೇಲೆ ದರಖಾಸ್ತುದಾರರಿಗೆ ಕೊಡತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಕಾಂತರಾಜ ಅರಸ್, ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರವರ ಆಫೀಸಿಗೆ.

ಮ್ಯುನಿಸಿಪಲ್ ಆಡಿಟರ ರಿಪೋರ್ಟು.

ತಾರೀಖು 20ನೆ ಫೆಬ್ರುವರಿ 1909.

ಈ ತಿಂಗಳು 19—2—09ರಲ್ಲಿ ಜನವರಿ ಮಾಹೆ ಲೆಖ್ಖಗಳನ್ನು ಮತ್ತು ವೌಚರು ರಶೀತಿ ವಗೈರೆಯನ್ನು ಆಡಿಟ್ ಮಾಡಲಾಯಿತು.

1. ಮೊಹತರ್ಫಾ ವಗೈರೆ ಜನವರಿ ಮಾಹೆಯಲ್ಲಿ ಎಲ್ಲಾ ಮೊಹಲಾದಿಂದ ಸುಮಾರು 1,400 ರೂಪಾಯಿಗಳು ವಸೂಲಾಗಿರುತ್ತೆ. ಇದು ಕ್ರಮವಾಗಿ ನಡೆಯಬೇಕೆಂದು ಪ್ರತಿ ವಸೂಲಿ ಮುತ್ಸದ್ದಿಗಳಿಗೂ ಜವಾನರನ್ನು ಕೊಟ್ಟಿರುತ್ತೆ. ಹೀಗಿರುವಲ್ಲಿ ಮೇಲ್ಕಂಡ ಮೊಬಲಗು ವಸೂಲಿ ಇದರ ಸಿಬ್ಬಂದಿ ಸುಮಾರು 375 ರೂಪಾಯಿ ಆಗುತ್ತೆ. ಇದರಿಂದ ವಸೂಲಿ ವಿಷಯ ತೃಪ್ತಿಕರವಾಗಿ ಕೆಲಸ ನಡೆಯುವದಿಲ್ಲಾ. ದುಬಾರಿ ಸಿಬ್ಬಂದಿ ಖರ್ಚು ಆಗುತ್ತಾ ಇದೆ.

2. ಆಫೀಸಿನಲ್ಲಿ ಎಲ್ಲಾ ಮೊಹಲ್ಲಾ ಜನರಲ್ ಖಾತೆ ಇಡಿಸಿ ಆಯಾಯ ದಿವಸ ವಸೂಲಾದ ಮೊಬಲಗನ್ನು ಆಯಾಯ ದಿವಸ ವಸೂಲಿ ಮುತ್ಸದ್ದಿರವರು ದಾಖಲು ಮಾಡಬೇಕು. ಇದನ್ನು ಕಲೆಕ್ಟರು ಸರಿಯಾದ ಚೆಕ್ಕು ಮಾಡಬೇಕು.

3. ವಸೂಲಿ ಮುತ್ಸದ್ದಿರವರಲ್ಲಿ ಖಾತೆ ಮತ್ತು ಖಿರದಿ ಪುಸ್ತಕಗಳನ್ನು ಕೊಡುವದಕ್ಕೆ ಬದಲಾಗಿ ಬಿಲ್ಲುಗಳನ್ನು ಕೊಟ್ಟು ವಸೂಲಿ ಕ್ರಮ ನಡೆಸಿ ಚೆಕ್ಕು ಸರಿಯಾಗಿ ಮಾಡಿದರೆ ವಸೂಲಾತಿ ಸರಿಯಾಗಿ ನಡೆಯುತ್ತೆ.

4. ಈಗ ಹಾಲಿ ಮುತ್ಸದ್ದೀರವರಲ್ಲಿ ಇರುವ ಖಾತೆ ಮತ್ತು ಖಿರದಿ ಪುಸ್ತಕಗಳು ಪ್ರಿಂಟೆಡ್ ನಂಬರಿನಲ್ಲಿ ಇಲ್ಲಾ ಮತ್ತು ಬಹಳವಾಗಿ ಚಿತ್ತು ವಗೈರೆ ಇರುತ್ತೆ ಮತ್ತು ಲೆಖ್ಖಾ ಸಮಜಾಯಿಷಿ ಸಹ ಆಗುವದು ಕಷ್ಟವಾಗಿರುತ್ತೆ. ಇದನ್ನು ಸರಿಯಾಗಿ ಕ್ರಮಪಡಿಸಬೇಕು.

5. ಇಂಪ್ರೆಸ್ಟು ಮೊಬಲಗು ಈ ಕೆಳಗೆ ನಮೂದು ಮಾಡಿರುವವರಿಂದ ಬಹುಕಾಲದಿಂದ ಯಾತಕ್ಕೆ ವಸೂಲಾಗಿಲ್ಲಾ. ಡಾ॥ ಸಾಹೇಬರವರಿಂದ ರೂ. 69, ಎ. ಕೆ. ಸ್ವಾಮಿ ರೂ. 10, ಶೇಕದಾರು ರೂ. 3, ಪಬ್ಲಿಕ್ ಪ್ರಾಸಿಕ್ಯೂಟರು ರೂ. 69—8—6, ಕಲೆಕ್ಟರು ರೂ. 10, ಕಂಠೀರವಾಚಾರು ರೂ. 5.

(ಸೈನ್ಡ್) ಎನ್. ಶ್ರೀಕಂಠೈಯ್ಯಾ.

(ಸೈನ್ಡ್) ಕೃಷ್ಣಪ್ಪಾಜಿ ಅರಸ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 10ನೆ ಮಾರ್ಚಿ 1909, ಚಿಕ್ಕಮಗಳೂರು.

ಈ ಡಿಸ್ಟ್ರಿಕ್ಟಿನ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿರುವ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಬೇವಾರ್ಸಾಗಿ ನಿಂತಿವೆ. ಈ ಇಸ್ತಿಹಾರ್ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಅವುಗಳನ್ನು ಸಂಬಂಧಪಟ್ಟವರು ವಾಪಸು ಪಡೆಯಬಹುದು. ಹಾಗೆ ತೆಗೆದುಕೊಳ್ಳುವವಕ್ಕೆ ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ಸದರೀ ದಸ್ತಾವೇಜುಗಳನ್ನು ನಾಶಪಡಿಸುತ್ತೇವೆಂದು ಇದರಿಂದ ತಿಳಿಯಪಡಿಸಿದೆ.

ನಂಬರು.	ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು.	ರಿಜಿಸ್ಟರು ಪುಸ್ತಕದ ನಂಬರು	ದಸ್ತಾವೇಜಿನ ನಂಬರು	ದಸ್ತಾವೇಜನ್ನು ಬರೆದ ತಾರೀಖು.	ರಿಜಿಸ್ಟ್ರಾದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು ಮತ್ತು ವಿಳಾಸ.	ಬರೆಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ.
1	ಚಿಕ್ಕಮಗಳೂರು	I	233 / 1905—06	16—8—05	16—9—05	ವೆಂಕಟಸುಬ್ಬಯ್ಯ, ಮರ್ಲೆ ಗ್ರಾಮದ ಶ್ಯಾನುಭೋಗ ಕೇಶವಯ್ಯನವರ ಮಗ.	ಸಣ್ಣರಾಮೇಗೌಡ, ಮರ್ಲೆ ತಿಮ್ಮನಹಳ್ಳಿಯಲ್ಲಿರುವ ಕಂಟ್ರಾಕ್ಟರ್ ದೊಡ್ಡರಾಮೇಗೌಡರ ಮಗ.	150 ರೂಪಾಯಿನ ಆಧಾರ ಪತ್ರ.
2	ಡಿಟೋ ...	I	529 / 1905—06	2—12—05	5—12—05	ನಂಜಪ್ಪ, ಚಿಕ್ಕಮಗಳೂರು ಟವನಿನಲ್ಲಿರುವ ಬಳೆಗಾರ ಮಲ್ಲಪ್ಪನ ಮಗ.	ಶಿವಪೂಜೆ ಕಲ್ಲಮ್ಮ, ಚಿಕ್ಕಮಗಳೂರು ಟವರ್ ಬಳೆಗಾರ ರುದ್ರಶೆಟ್ಟಿ ಹೆಂಡತಿ.	ಕಿಮ್ಮತ್ತು ನಮೂದಿಲ್ಲದ ಖುಲಾಸೆ ಪತ್ರ
3	ಡಿಟೋ ...	I	1147 / 1905—06	10—5—06	12—5—06	1. ದೇವೇಗೌಡ, 2. ದೇವೇಗೌಡ, ಚಿರಣಗೋಡಲ್ಲಿರುವ ಹೊಸಕೊಡಗಿ ಅಂಣೇಗೌಡರ ಮಕ್ಕಳು	ಗಂಗಮ್ಮ, ಬೆಟ್ಟದಮಳಲಿಯಲ್ಲಿರುವ ಮರಿಯಶೆಟ್ಟಿ ಮಗಳು.	350 ರೂಪಾಯಿನ ಆಧಾರ ಪತ್ರ.
4	ತರೀಕೆರೆ ...	IV	11 / 1905—06	24—7—05	24—7—05	ರಾಂಪುರದ ಅಮೀರ್ ಯಾನೆ ಮುನಪ್ಪನು.	ತರೀಕೆರೆ ಸಾಹುಕಾರ್ ಪೀರ್‌ಸಾಹೇಬರ ಮಗ ಮಹಮ್ಮದ್ ಮಸ್ತಾನ್‌ಸಾಹೇಬ್.	ನೌಕರಿ ಕರಾರು.
5	ಡಿಟೋ ...	I	224 / 1905—06	21—11—05	22—11—05	ಅನುವನಹಳ್ಳಿಯಲ್ಲಿರುವ ಮಠದ ಮುಳ್ಳಪ್ಪನ ಮಗ ಗಂಗಪ್ಪ.	ಅಂಣಿಗೆರೆ ತಮ್ಮಂಣಪ್ಪನ ಮಗ ಕರಿಬಸಪ್ಪ.	ಆಧಾರ ಪತ್ರ.

ನಂಬರು	ಸಬ್ ರಿಜಿಸ್ಟ್ರಿ ಅಫೀಸಿನ ಹೆಸರು.	ರಿಜಿಸ್ಟರ್ ಬುಕ್ ನಂ.	ದಸ್ತಾವೇಜಿನ ನಂ.	ದಸ್ತಾವೇಜನ್ನು ಬರೆದ ತಾರೀಖು.	ರಿಜಿಸ್ಟ್ರಾರದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು ಮತ್ತು ವಿಳಾಸ.	ಬರಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ.
6	ತರೀಕೆರೆ ...	IV	43 / 1905—06	10—10—03	19— 4—06	ಅಜ್ಜಂಪುರದ ಮಣೇಗಾರ್ ಸುಬ್ಬಣ್ಣನ ಹೆಂಡತಿ ಲಕ್ಷ್ಮಮ್ಮ.	ಬಾಗೂರು ನಂಜುಂಡೈಯ್ಯನವರ ಮಗ ಸುಬ್ಬಣ್ಣ.	ರಶೀತಿ.
7	ಡಿಟೋ ...	I	736 / 1905—06	6— 3—06	3— 7—06	ಅಜ್ಜಂಪುರದ ಪದ್ಮಾಜಿ ಮಗ ಪಲ್ಲಾಜೀ.	ಅಜ್ಜಂಪುರದ ಚನ್ನೋಜಿ ಮಗ ಚನ್ನಣ್ಣ.	ಕ್ರಯ ಪತ್ರ.
8	ಮೂಡಿಗೆರೆ ...	IV	19 / 1904—05	29— 4—05	30— 6—05	ಬೇಲೂರು ವೆಳಗೋಡು ಶ್ರೀನಿವಾಸೈಯ್ಯಂಗಾರ್ರ ಮಗ ರಾಮಸ್ವಾಮಯ್ಯಂಗಾರ್.	ನಂದೀಪುರದಲ್ಲಿರುವ ಲಿಂಗೇಗೌಡರ ಮಗ ಸುಬ್ಬೇಗೌಡ.	499—9—4 ಗೆ ರಶೀತಿ.
9	ಡಿಟೋ ...	I	40 / 1905—06	22— 5—05	15— 9—05	ಕಳಸದ ಮಾಗಣಿ ಕೆಳಗೂರು ಗ್ರಾಮದ ತಾರಕೇಶ್ವರದಲ್ಲಿರುವ ಪುಟ್ಟೇಗೌಡನ ಮಗ ತಿಮ್ಮೇಗೌಡ ಮೈನರ್, ಗಾರ್ಡಿಯನ್ ತಾಯಿ ಮಂಜಮ್ಮ ಹೆಗ್ಗಡತಿ.	ಕಳಸದ ಮಾಗಣಿ ಕೆಳಗೂರು ದಾಖಲೆ ಹ್ಯಾರಗದ್ದೆಯಲ್ಲಿರುವ ಕೃಷ್ಣಯ್ಯ ಹೆಬ್ಬಾರ್ರ ಮಗ ಸುಬ್ಬಯ್ಯ ಹೆಬ್ಬಾರ್ರು.	ಸಾಲಿಯಾನಾ 40 ರೂಪಾಯಿ ಕ್ರಯವುಳ್ಳ ಫಸಲು ಕೊಡತಕ್ಕ ಜಮೀನನ್ನು ಅನುಭವಿಸಿಕೊಂಡು ಹಾರಕ್ಕೆ ಗ್ರಾಮದ ಜಟ್ಟಿಗ, ಭೂತ, ಗಣಪತಿ, ಅಮ್ಮನವರು ಈ ದೇವರುಗಳ ಪೂಜೇ ಮಾಡಿಕೊಂಡು ಬರುವುದೆಂಬದಾಗಿ ಕರಾರು.
10	ಶೃಂಗೇರಿ ...	I	155 / 1905—06	28— 5—06	31— 5—06	ಶೃಂಗೇರಿ ಶಂಕರಭಟ್ಟರ ಮಗ ಶಿವರಾಂ ಭಟ್ಟ.	ಕೊಪ್ಪ ತಾಲ್ಲೂಕು ಕಿಗ್ಗ ಮಾಗಣಿ ಹುಲುಗಾರು ವಾಸಿ ಚನ್ನಕೇಶವರಾಯರು.	236 ರೂಪಾಯಿನ ಸ್ಥಿರಸ್ವತ್ತಿನ ಭೋಗ್ಯ ಪತ್ರ.

ಜೆ. ಹನುಮಂತರಾವ್,
ಫಾರ್ ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 16ನೆ ಮಾರ್ಚಿ 1909.

ಮೈಸೂರು ಶೀಮೆಯ ಲೇಟ ಚೀಫ ಕಮಿಷನರವರಿಂದ ಕೊಡಲ್ಪಟ್ಟ 17—4—1867ನೆ ಮರ್ಕ್ಯುಂ 6ನೆ ನಂಬರು ಭೂಮಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಶಿವಮೊಗ್ಗಾ ಡಿಸ್ಟ್ರಿಕ್ಟು ಸಾಗರದ ತಾಲ್ಲೂಕು ಅನಂತಪುರದ ಗ್ರಾಮದಲ್ಲಿ ಬಸವಣ್ಣಪ್ಪನೆಂಬುವನು ತನ್ನ ಸ್ವಂತ ಖಾತೆ ಪಾಳು ನಿವೇಶನವನ್ನು ಮನೆ ಕಟ್ಟುವ ಉದ್ದಿಶ್ಯ ನೆಲಗಟ್ಟು ಮಾಡಿಸುತ್ತಿರುವಾಗ್ಯೆ ಈ ಕೆಳಗೆ ವಿವರಿಸಿರುವ ನಿಧಿಯು ಸಿಕ್ಕಿತು.

ಭಂಗಾರದ ವರಹಾ ನಾಣ್ಯಗಳು 94.

ಭಂಗಾರದ ಬಾಬಿತು ಅರ್ಧವರಹ ನಾಣ್ಯಗಳು 51.

ಮತ್ತು ನಾಣ್ಯದಲ್ಲಿ ಕತ್ತರಿಸಿದ 2 ತುಂಡು. ಇವುಗಳಲ್ಲಾ ಸೇರಿ ಒಟ್ಟು ನಾಣ್ಯಗಳ ತೂಕ 35 ರೂಪಾಯಿ 4 ಆಣೆ.

ಭಂಗಾರದ ವಂಕಿ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 9 ರೂಪಾಯಿ 12 ಆಣೆ ಮತ್ತು 4 ಗುಲಗಂಜಿ.

(ಇದು ಸಿಕ್ಕಿದ ನಾಣ್ಯಗಳಿಂದ ತಯಾರಾಗಿರತಕ್ಕದ್ದು).

ಇವುಗಳೆಲ್ಲಾ ಭೂಮಿಯಲ್ಲಿ ಸಿಕ್ಕದ ನಾಣ್ಯಗಳಿಂದ ತಯಾರಾದ್ದು.

ಭಂಗಾರದ ಹಿಂಬಳೆ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 5 ರೂಪಾಯಿ 12 ಆಣೆ 4 ಗುಂಜಿ ಕಡಮೆ.

ಭಂಗಾರದ ತಂತಿರೇಖು ಚೂರು ಮತ್ತು ಬೆಸಿಗೆ ಚೂರುಗಳು ಸಹ ತೂಕ 1 ರೂಪಾಯಿ 12 ಆಣೆ ಹಳೇ ಇಕ್ಕೇರಿ ಬಂಣ.

ಭಂಗಾರದ ಗಟ್ಟಿ ಒಂದು ಚೂರುಗಳು ಸಹ ಸೇರಿ 3 ರೂಪಾಯಿಗೆ 2 ಆಣೆ ಮತ್ತು 5 ಗುಲಗಂಜಿ ತೂಕ ಕಡಮೆ ಇದೆ. ಹಳೇ ಇಕ್ಕೇರಿ ಬಂಣ.

ಭಂಗಾರದ ಸುತ್ತುಂಗರ ಒಂದು 1 ವರಹಾ ತೂಕವಿರುತ್ತೆ ಬಂಣ ಇಕ್ಕೇರಿ ವರಹ.

ನಗದು 30 ರೂಪಾಯಿಗಳು ಈ ರೂಪಾಯಿಗಳು ಸಿಕ್ಕಿದ ನಾಣ್ಯಗಳ ಮಾರಾಟದಿಂದ ಉತ್ಪತ್ತಿ ಆದ್ದು.

2. ಸದರಿ ವಿಶಿಷ್ಟ ನಿಧಿಯೇ ಆಗಲಿ ಅಥವಾ ಅದರ ಭಾಗಕ್ಕಾಗಲಿ ಹಕ್ಕುದಾರರೆಲ್ಲರೂ ಈ ಇಸ್ತಿಹಾರ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು 6 ತಿಂಗಳೊಳಗೆ ತಮ್ಮ ಹಕ್ಕು ಇರತಕ್ಕ ಬಗ್ಯೆ ದರಖಾಸ್ತು ಕೊಟ್ಟು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಯೆ ಖುದ್ದಾಗಿಯಾಗಲಿ ಏಜಂಟರ ಮೂಲಕವಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಆರ್. ಟಿ. ಮಹದೇವರಾವ್,
ಫಾರ ಡೆಪ್ಯುಟಿ ಕಮಿಷನರ.

ನೋಟಿಸ.

ಚನ್ನಪಟ್ಣ ತಾಲ್ಲೂಕು ಕಛೇರಿಯಿಂದ.

ತಾರೀಖು 16–18ನೆ ಮಾರ್ಚಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಾಲ್ಲೂಕು ಮಜಕೂರು ರಿಕಾರ್ಡಿನ ವಿಲೆಯಲ್ಲಿ ಇರುವ ಮೌಜೆವಾರ ಡಿಟ್ಟಂಚಿಟ್ಟಾ–ಕುಳವಾರು ಚಿಟ್ಟಾ ಯಾನೆ ಅವ್ವಲ್ ನಂಬರು ದುಯ್ಯಂ ನಂಬರು ವಗೈರೆ ಹಳೆ ಲೆಕ್ಕಗಳನ್ನು ಗವರ್ನಮೆಂಟು 11—3—95ನೆ ಮರ್ಕುಂ 14523-30—R. F. 157–93ನೆ ನಂಬರು ಪ್ರೊಸಿಡಿಂಗ್ಸಿನಲ್ಲಿ ನಮೂದಿರುವ ಮೇರೆಗೆ ಸರ್ವೆ ಆದ 12 ವರುಷಗಳ ಕಾಲ ಕಳದು ಇರುವದ್ದರಿಂದ ನಾಶಪಡಿಸುವದಕ್ಕಾಗಿ ಸಾರ್ಟ ಮಾಡಿಸಿಟ್ಟಿರುತ್ತೆ. ಇವುಗಳಿಗೆ ಸಮ್ಮಂಧಪಟ್ಟ ದಾಖಲೆಗಳು ಅವಶ್ಯಕ ಇರತಕ್ಕವರು ಯಾರಿದ್ದರು ಈ ಇಸ್ತಿಹಾರ ಪ್ರಾಯಿಷ ತಾರೀಖು ಲಾಗಾಯಿತು (ಮೂರು, ತಿಂಗಳ ವಳಗಾಗಿ ತಾಲ್ಲೂಕಿಗೆ ಕ್ರಮವಾಗಿ ಅಪ್ಲಿಕೇಷನ ಕೊಟ್ಟು ಕಾಪಿ ಪಡದುಕೊಳ್ಳಬಹುದು. ಈ ವಾಯಿದೆ ಕಳದ ಕೂಡಲೆ ಸದರಿ ರಿಕಾರ್ಡುಗಳೆಲ್ಲವು ನಾಶಪಡಿಸುವದ್ದರಿಂದ ನಂತರ ದಾಖಲೆ ದೊರಿಯಲಾರದು ತಿಳಿಯುವದು.

ಹೆಚ್. ವೆಂಕಟನರಸಯ್ಯ,
ಆಕ್ಟಿಂಗ್ ಅಮಲ್ದಾರ.

ಬೆಂಗಳೂರು ಸಬ ಜಡ್ಜಿಯವರ ಕೋರ್ಟಿನಲ್ಲಿ.

ಸ್ನ 1908—09ನೆ ಇಸವಿ ಮಿ|| ಅರ್ಜೀ ನಂಬರ 741.

ತುಮಕೂರಿನಲ್ಲಿ ಡಿಸ್ಟ್ರಿಕ್ಟು ಶಿರಸ್ತೆದಾರರಾಗಿದ್ದು ಫವತಿಪಟ್ಟ ಎ. ಅನಂತರಾಮೈಯ್ಯಂಗಾರರ

ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಳೇಪೇಟೆಲಿರುವ ಅನಂತರಾಮೈಯ್ಯಂಗಾರ್ರ ಮಗಳು ಅಮ್ಮೈಯ್ಯಮ್ಮ, ಸದರೀ ಮೃತಪಟ್ಟ

ಎ. ಅನಂತರಾವ್ಮೈಯ್ಯಂಗಾರ್ರಿಗೆ ಖಾಸಾ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಅನಂತರಾವ್ಮೈಯ್ಯಂಗಾರ್ರ ಜಿಂದಗಿ ಬಗ್ಗ್ಯಾಗಿ ಬರತಕ್ಕ 4,093—0—2 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಮ್ಮೈಯ್ಯಮ್ಮನ ಅರ್ಜಿಯನ್ನು ಸರ್ 1909ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅನಂತರಾವ್ಮೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಮಾರ್ಚಿ 11ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸಖತ್ತೊಡನೆ ಕೊಡೋಣಾಗಿದೆ.

1908—09ನೆ ಇಸವಿ ಮಿ॥ ಅರ್ಜೀ ನಂಬರ್ 750.

ವೆಲ್ಲೂರಿನಲ್ಲಿದ್ದು ಫವತಿಪಟ್ಟ ವಿ. ಪಿ. ಕೃಷ್ಣಸ್ವಾಮಿ ನಾಯಿಡುಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ Sent Merchants 133ನೆ ನಂಬರು ಸಪಿಂಗ್ಸ್ ರೋಡಿನಲ್ಲಿರುವ ವಿ. ಪಿ. ಲಕ್ಷ್ಮಣಸ್ವಾಮಿ ನಾಯಿಡು, ಮೃತಪಟ್ಟ ಸದರೀ ವಿ. ಪಿ. ಕೃಷ್ಣಸ್ವಾಮಿ ನಾಯಿಡುಯುವರಿಗೆ ಮುಖ್ಯ ವಾರಸ್ದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಕೃಷ್ಣಸ್ವಾಮಿ ನಾಯಿಡುಯುವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 1,000 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಲಕ್ಷ್ಮಣಸ್ವಾಮಿ ನಾಯಿಡುಯುವರ ಅರ್ಜಿಯನ್ನು ಸರ್ 1909ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಸ್ವಾಮಿ ನಾಯಿಡುಯುವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಮಾರ್ಚಿ 10ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 757.

ಅರ್ಜಿದಾರರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಸಪಿಂಗ್ಸ್ ರೋಡ್ 133ನೆ ನಂಬರ್ ಮನೇಲಿರುವ ವಿ. ಪಿ. ಲಕ್ಷ್ಮಣಸ್ವಾಮಿನಾಯಿಡು, ಮೈನರಾದ 1ನೆ ಗೋವಿಂದರಾಜುಲು, 2ನೆ ಲಕ್ಷ್ಮಿದೇವಮ್ಮಾಳ್, 3ನೆ ಕುನ್ನಮ್ಮಾಳ್, ಕೃಷ್ಣಸ್ವಾಮಿ ನಾಯಿಡುಯುವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಗೋವಿಂದರಾಜುಲು ವಗೈರೇರಿಗೆ ಖಾಸಾ ತಂದೆ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗ್ಯೆ ಸರ್ 1909ನೆ ಇಸವಿ ಮಾರ್ಚಿ ತಾರೀಖು 26ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸರ್ 1909ನೆ ಇಸವಿ ಮಾರ್ಚಿ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ಅರ್ಜೀ ನಂಬರು 775.

ಚನ್ನಪಟ್ಟಣದಲ್ಲಿದ್ದು ಫವತಿಪಟ್ಟ ಸಬಿನಾಬಿ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಚನ್ನಪಟ್ಟಣದ ಕಸಬಾ ಕುಂಬಾರ್ರ ಬೀದೀಲಿರುವ ಸೈಯದ್ ಹುಸೇನ್ ಸಾಬಿ ಮಗ ಸೈಯದ್ ಹೈದರಸಾಬಿ, ಮೃತಪಟ್ಟ ಸದರೀ ಸಬಿನಾಬಿಗೆ ಖಾಸಾ ತಂದೆ ಆಗಬೇಕೆಂಬ ಹಕ್ಕುದಾರಿಮೇಲೆ ಚನ್ನಪಟ್ಟಣದಲ್ಲಿ ವಾಸಸ್ಥರಾಗಿ ಮೃತಪಟ್ಟ ಸಬಿನಾಬಿ ಜಿಂದಗಿ ಬಗ್ಗ್ಯಾಗಿ ಬರತಕ್ಕ 143 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಸೈಯದ್ ಹೈದರ್‌ಸಾಬಿ ಅರ್ಜಿಯನ್ನು ಸರ್ 1909ನೆ ಇಸವಿ ಏಪ್ರೆಲ್ 2ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಬಿನಾಬಿ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಮಾರ್ಚಿ 11ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ಅರ್ಜೀ ನಂಬರು 779.

ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿ ಜೂನಿಯರ್ ಅಕೌಂಟೆಂಟ್ ಆಗಿದ್ದು ಫವತಿಪಟ್ಟ ಕೃಷ್ಣರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಳೇಪೇಟೆ ಡೋರ್ 95ನೆ ನಂಬರು ಮನೆಯಲ್ಲಿರುವ ಕೃಷ್ಣರಾವ್ ಹೆಂಡತಿ ಅಮ್ಮೈಯ್ಯಮ್ಮ ಮೈನರ್ ಗಾರ್ಡಿಯನ್ ಬಿ. ಶಾಮರಾವ್, ಮೃತಪಟ್ಟ ಸದರೀ ಕೃಷ್ಣರಾಯರಿಗೆ ಮುಖ್ಯ ವಾರಸ್ದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರ್ರು ವಾಸಸ್ಥರಾಗಿ ಮೃತಪಟ್ಟ ಕೃಷ್ಣರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ 739 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಅಮ್ಮೈಯ್ಯಮ್ಮ ಮೈನರ್, ಗಾರ್ಡಿಯನ್ ಬಿ. ಶಾಮರಾವ್ ಅರ್ಜಿಯನ್ನು ಸರ್ 1909ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಮಾರ್ಚಿ 10ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾವ್ಮೈಯರ್,
ಸಬ್ ಜಡ್ಜ್.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರ್ಟರಿಗೆ			ದಾಮೆಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲ್ತಿ ವರುಷದ ಗೆಜೆಟ ಕಾಪಿ 1ಕೆ. ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಸ್ಕುಂ 155ನೆ ನಂಬರ್ ಉಳ್ಳ ಗೆವರ್ನಮೆಂಟ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮರ್ಸ್ಕುಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮರ್ಸ್ಕುಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

	ರೂ.	ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ ಬಗ್ಗೆ ನೋಟಿಸಗಳು :—		
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರ್ ಚಾರ್ಜು ಪ್ರಕಟಿಸಲ್ಪಡುತ್ತವೆ.

		ರೂ.	ಆ.
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫೀಸರಗಳು ಕೊಡುವ ನೋಟಿಸಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜು ಮಾಡಲ್ಪಡುತ್ತೆ:—

		ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ	ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0	4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಫಾರ್ ಕಂಪೈಲರ್, ಮೈಸೂರು ಗೆಜೆಟ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ನಂ. 13.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 1, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನ್‌ಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರೈಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು,
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗೆದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟು ಇಲಾಖಾ.

ನೋಟಿಸ.

ತಾರೀಖು 20ನೆ ಮಾರ್ಚಿ 1909.

ಈ ಕೆಳಗೆ ನಮೂದಿರತಕ್ಕ ತರಹೇದ ಮರವು ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕು ಬೆಳಕವಾಡಿ ಜಹಗೀರ್ ಕಚೇರಿ ಬಳಿ ಬಿದ್ದಿರುತ್ತದೆ. ಇದಕ್ಕೆ ವಾರಸುದಾರ್ರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ವಾರಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರವು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

ತರಹೆ.

ನಂ. 1— ಮಾವಿನ ಮರ—ಸಲೆ ಅಡಿ $8' \times 1\frac{1}{2}' \times 16'$

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಪ್ರ ಕ ಟ ನೆ .

ಶಿವಮೊಗ್ಗೆ ಡಿಸ್ಟ್ರಿಕ್ಟು ನಗರದ ತಾಲ್ಲೂಕಿನಲ್ಲಿರುವ ಕೇಳಂದೂರು ಫಾರೆಸ್ಟನ್ನು ಮುನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1909ನೆ ಇಸವಿ ಮಾರ್ಚಿ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 149—150—151ನೆ ಪೇಜುಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ಮತ್ತು ಎಡೆಹಳ್ಳಿ ಸಬ್ ತಾಲ್ಲೂಕಿನಲ್ಲಿರುವ ಮಾಡ್ಲ-ತೇಗೂರುಗುಡ್ಡ ಎಕ್ಸ್‌ಟೆನ್ಷನ್, ಫಾರೆಸ್ಟನ್ನು ಮುನ್ನಾ ಜಂಗಲಿ ಮಾಡಬೇಕೆಂದು ಇರುವ ವಿಷಯದಲ್ಲಿ 1909ನೆ ಇಸವಿ ಮಾರ್ಚಿ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 151—152—153ನೆ ಪೇಜುಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಎಂ. ಶ್ಯಾಮರಾವ್,
ಫಾರೆಸ್ಟು ಸೆಟ್ಲಮೆಂಟ್ ಆಫಿಸರ್ ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರ ಕ ಟ ನೆ .

ತಾರೀಖು 20ನೆ ಮಾರ್ಚಿ 1909.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಕ್ಲೋಸಪೇಟೆ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವಿತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರೀ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ಕ್ಲೋಸಪೇಟೆ ಟವನ್ ಸರಹದ್ದು ಮದರಾಸ್-ಕೆನಾನೂರು ರಸ್ತೆಗೆ ಲಗತ್ತಾಗಿರುವ ಸದರೀ ಗ್ರಾಮದ ಸರ್ವೆ 168ನೆ ನಂಬರಿನ ವಾಯವ್ಯ ದಿಕ್ಕಿನಲ್ಲಿ ಪ್ರಾರಂಭಿಸಿ ಸರ್ವೆ 168, 169, 170, 171, 172, 173ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಬಂದು ಕೊತ್ತಿಪುರ, ಅಮಾನಿಕೆರೆಗೆ ಹೋಗುವ ಓಣಿ ದಾಟಿ ಸರ್ವೆ 186 ಮತ್ತು 32ನೆ ನಂಬರುಗಳ ಪಶ್ಚಿಮ ದಿಕ್ಕಿನಲ್ಲಿ ಹೊರಡುತ್ತೆ. ಇಲ್ಲಿಂದ ಪೂರ್ವಕ್ಕೆ ತಿರುಗಿ ಸರ್ವೆ 32ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಕೊತ್ತಿಪುರಕ್ಕೆ ಹೋಗುವ ಓಣಿ ದಾಟಿ ಸೀದಾ ದಕ್ಷಿಣ ಮಾರ್ಗವಾಗಿ ಸರ್ವೆ 31ನೆ ನಂಬರಿನ ಪಶ್ಚಿಮ ಎಲ್ಲೆ ಮೇಲೆ ಮೈಸೂರು-ಬೆಂಗಳೂರು ರೈಲ್ವೆ ಹಾದಿಯನ್ನು ದಾಟುತ್ತೆ. ಇಲ್ಲಿಂದ ಹೊಲಗೆರೆಯನ್ನು ಬಳಸಿಕೊಂಡು ಸರ್ವೆ 30ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿಯು ಸರ್ವೆ 203ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಹೊರಟು ಹುಣಸಿನ ಹಳ್ಳಿಗೆ ಹೋಗುವ ಕಾಲುದಾರಿಯನ್ನು ದಾಟಿ ಪಶ್ಚಿಮಕ್ಕೆ ತಿರುಗಿ ಸರ್ವೆ 103, 29ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೊರಟು ಸರ್ವೆ 73ನೆ ನಂಬರಿನ ಉತ್ತರ ಎಲ್ಲೆಯನ್ನು ಸೇರುತ್ತೆ. ಅಲ್ಲಿಂದ ಮೇಲೆ ನಮೂದಿಸಿದ ರೈಲ್ವೆ ಹಾದಿಯನ್ನು ಪುನಃ ದಾಟಕೊಂಡು ಸರ್ವೆ 72ನೆ ನಂಬರಿನ ಈಶಾನ್ಯ ಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣ ಮಾರ್ಗವಾಗಿ ತಿರಿಗಿ ಮೈಸೂರು-ಬೆಂಗಳೂರು ರೈಲ್ವೆ ಹಾದಿ ಮಾರ್ಗವಾಗಿರುವ ಸರ್ವೆ 72, 21, 27 ಮತ್ತು 63ನೆ ನಂಬರುಗಳ ಪೂರ್ವ ಎಲ್ಲೆಯು ಮಾರ್ಗವಾಗಿ ಹೊರಟು ಸರ್ವೆ 62ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತೆ.

II. ಅಲ್ಲಿಂದ ಎಲ್ಲೆಯು ಸರ್ವೆ 62, 52ನೆ ನಂಬರುಗಳ ಉತ್ತರ ಮಾರ್ಗವಾಗಿ ಹೊರಟು ಅರ್ಕಾವತಿನದಿಗೆ ಹೋಗುವ ಓಣಿಯನ್ನು ದಾಟಿ ಸರ್ವೆ 51ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಅರ್ಕಾವತಿನದಿಗೆ ಹೋಗುವ ಓಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 24ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 25, 23ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಈ ಎರಡು ನಂಬರುಗಳ ಮಧ್ಯೆ ಇರುವ ಓಣಿಯನ್ನು ದಾ

ಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 23ನೆ ನಂಬರಿನ ಉತ್ತರ ಮಾರ್ಗವಾಗಿ ಹೊರಟು ನದಿಗೆ ಹೋಗುವ ಓಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 22ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ನದಿಗೆ ಹೋಗುವ ಓಣಿಯನ್ನು ದಾಟಿ ಸರ್ವೆ 20ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು 19ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿಯು ಹೋಗುತ್ತೆ. ಅಲ್ಲಿಂದ ಸರ್ವೆ 17ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 16, 15, 14, 11, 10, 9, 8ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 14, 11, 10ನೆ ನಂಬರುಗಳ ಮಧ್ಯೆ ಅರ್ಕಾವತಿ ನದಿಗೆ ಹೋಗುವ ಎರಡು ಓಣಿಗಳನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಸರ್ವೆ 33ನೆ ನಂಬರಿನ ಮೂರು ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 116ನೆ ನಂಬರಿನ ಈಶಾನ್ಯ ಎಲ್ಲೆ ಮಾರ್ಗವಾಗಿಯು ಸರ್ವೆ 7ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಸರ್ವೆ 4ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಹೋಗಿ ಮೈಸೂರು-ಬೆಂಗಳೂರು ರಸ್ತೆ ಹತ್ತಿರ ಅರ್ಕಾವತಿ ನದಿಯ ಬಳಿಯುಳ ಸೇತುವೆಯನ್ನು ಸಂಧಿಸುತ್ತೆ.

III. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ದಾಟಿಕೊಂಡು ಸರ್ವೆ 117, 118ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಅರ್ಕಾವತಿ ಪೂರ್ವದಡದ ಮಾರ್ಗವಾಗಿಯು ಹೋಗಿ ಸರ್ವೆ 119ನೆ ನಂಬರಿನ ನೈರುತ್ಯ ಎಲ್ಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 119-5ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರಿಗಿ ಸರ್ವೆ 120ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 123, 124ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿಯು ಹೊರಟು ಮೇಲೆ ನಮೂದಿಸಿದ ಎರಡು ನಂಬರುಗಳ ಮಧ್ಯೆ ನದಿಗೆ ಹೋಗುವ ಓಣಿಯನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರಿಗಿ ಸರ್ವೆ 4ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಅರ್ಕಾವತಿಗೆ ಹೋಗುವ ಓಣಿಯನ್ನು ಹಾದು ಸರ್ವೆ 133ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 136ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿಯು ನದಿಗೆ ಹೋಗುವ ಓಣಿಯನ್ನು ಪುನಃ ಹಾದು ಸರ್ವೆ 139ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಸರ್ವೆ 140ನೆ ನಂಬರಿನ ದಕ್ಷಿಣಕ್ಕೆ ಹೋಗಿ ವಡೇರಹಳ್ಳಿಗೆ ಹೋಗುವ ಕಾಲುದಾರಿ ಮಾರ್ಗವಾಗಿ ಕೊಂಚದೂರ ಹೋಗಿ ಮೇಲೆ ನಮೂದಿಸಿದ ಕಾಲುದಾರಿಯನ್ನು ಹಾದು ಸರ್ವೆ 141ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ಹಾದು ಸರ್ವೆ 148ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತೆ.

ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ಕ್ಲೋಸ್‌ಪೇಟೆ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಸೇರಿರುತ್ತೆ.

ರೆವಿನ್ಯೂ ಸರ್ವೆ 1, 2, 3, 5, 27, 28, 63, 71, 72, 117, 118, 119ನೆ ನಂಬರುಗಳು ಮತ್ತು ಸರ್ವೆ 141 ದಾಖಲೆ ಶೆಟ್ಟಿಹಳ್ಳಿ.

ಟಿ. ರಾಯಲು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ಸ್ 1909ನೆ ಮಾರ್ಚಿ ಮಾಹೆ 23ರಲ್ಲು.

ನಂಜನಗೂಡು ಟವನ್ನಲ್ಲೂ ಮತ್ತು ಆಸಪಾಸ್ ಗ್ರಾಮದಲ್ಲೂ ದನಗಳಿಗೆ ದೊಡ್ಡರೋಗವು ವ್ಯಾಪಿಸಿರುವದರಿಂದ, ಸ್ 1909ನೆ ಇಸವಿ ಫೆಬ್ರುವರಿ ಮಾಹೆ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 257ನೆ ಪೇಜಿನಲ್ಲಿ ಪ್ರಾಯಿಷಾಗಿರುವ ಇಸ್ತಿಹಾರಲ್ಲಿ ಕಂಡಂತೆ, ನಂಜನಗೂಡು ಟವನ್ನಲ್ಲಿ ಬರುವ ಏಪ್ರೈಲ್ ಮಾಹೆ 2 ಮತ್ತು 3ನೆ ತಾರೀಖುಗಳಲ್ಲಿ ದನಗಳ ಪ್ರದರ್ಶನವು ನಡೆಯುವದಿಲ್ಲವೆಂದು ಇದರಿಂದ ಬಹಿರಂಗ ಪಡಿಸಿದೆ.

ಜೆ. ಬಿ. ಹೆಬ್ಲಿಕಾರ್,
ಫಾರ್ ಡೆಪ್ಯುಟಿ ಕಮಿಷನರ್.

ಸ್ 1909ನೆ ಇಸವಿ ಫೆಬ್ರುವರಿ 13ನೆ ತಾರೀಖಿನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ಸೇರಿ ನಡೆಸಿದ ಪ್ರೊಸೀಡಿಂಗ್ಸು.

ಹಾಜರು.

1. ಎಂ. ಕಾಂತರಾಜೆ ಅರಸಿನವರು, ಎಸ್ಕ್ವಯರ್, ಬಿ. ಎ., ಪ್ರೆಸಿಡೆಂಟ್.

ಎಕ್ಸ್ ಅಫಿಷಿಯೋ ಮೆಂಬರುಗಳು.

2. ಎಸ್. ವೈದ್ಯನಾಥೈಯ್ಯರ್, ಎಸ್ಕ್ವಯರ್, ನಂಜನಗೂಡು ಸಬ್ ಡಿವಿಜನ್ ಆಫಿಸರು.
3. ಟಿ. ಕೆ. ಸುಂದರರಾಜೈಯ್ಯಂಗಾರ್, ಎಸ್ಕ್ವಯರ್, ಮೈಸೂರು ಸಬ್ ಡಿವಿಜನ್ ಆಫಿಸರು.
4. ಸಿ. ನಾರಾಯಣರಾವ್, ಎಸ್ಕ್ವಯರ್, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರು.
5. ಎಸ್. ಪಿ. ರಾಜಗೋಪಾಲಾಚಾರಿ, ಎಸ್ಕ್ವಯರ್, ಬಿ. ಎ., ಬಿ. ಎಲ್., ಟ್ರೆಜರಿ ಆಫಿಸರು, ವೈಸ್ ಪ್ರೆಸಿಡೆಂಟ್.
6. ಬಿ. ಸುಬ್ಬರಾವ್, ಎಸ್ಕ್ವಯರ್, ಎಲ್. ಸಿ. ಇ., ಮೈಸೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರ್.
7. ಇ. ಎಸ್. ಕೃಷ್ಣಸ್ವಾಮಿ ಐಯ್ಯರ್, ಎಸ್ಕ್ವಯರ್, ಬಿ. ಎ., ಎಂ. ಬಿ., ಸಿ. ಎಂ., ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರು.
8. ಎಂ. ರಾಮಸ್ವಾಮಯ್ಯ, ಎಸ್ಕ್ವಯರ್, ಬಿ. ಎ., ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್.

ನಾನ್ ಅಫಿಷಿಯಲ್ ಮೆಂಬರುಗಳು.

I. ಲೋಕಲ್ ಬೋರ್ಡ್ಸ್ ರೂಲ್ಸ್ 8ನೆ ಪ್ಯಾರಾದ (d) ಕ್ಲಾಸ್ ಮೇರೆ—

9. ಮಿ॥ ಲಿಂಗೇಗೌಡರು, ಮೈಸೂರು.
10. ,, ಉಂಡವಾಡಿ ನರಸಿಂಗರಾಯರು, ಹುಣಸೂರು.
11. ,, ಪಡುವಕೋಟೆ ಸುಬ್ಬರಾಯರು, ಹೆಗ್ಗಡದೇವನಕೋಟೆ.
12. ,, ಗುರಿಕಾರ್ ನಂಜಪ್ಪನವರು, ಗುಂಡ್ಲುಪೇಟೆ.
13. ,, ಶಾಮೈಯ್ಯಂಗಾರ್ರು, ಚಾಮರಾಜನಗರ.
14. ,, ಟಿ. ಎಸ್. ಕೃಷ್ಣರಾಯರು, ನಂಜನಗೂಡು.
15. ,, ಗಂಜಾಂ ವೆಂಕಟರಮಣಶೆಟ್ಟರು, ಟಿ. ನರಸೀಪುರ.
16. ,, ಬಿ. ನರಸಿಂಗರಾಯರು, ಶ್ರೀರಂಗಪಟ್ಣ.
17. ,, ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ.
18. ,, ಶಂಕರಯ್ಯನವರು, ಮಳವಳ್ಳಿ.
19. ,, ಎಂ. ಜಿ. ಶಾಮೈಯ್ಯಂಗಾರ್ರು, ಫ್ರೆಂಚ್‌ರಾಕ್.

II. ಲೋಕಲ್ ಬೋರ್ಡ್ಸ್ ರೂಲ್ಸ್ 8ನೆ ಪ್ಯಾರಾದ (e) ಕ್ಲಾಸ್ ಮೇರೆ—

20. ಮಿ॥ ವಿ. ರಾಘವಾಚಾರ್ರು, ಅಡ್ವೋಕೇಟ್, ಮೈಸೂರು.
21. ,, ಬಳೆ ಬಸವಣ್ಣನವರು, ಜಹಗೀರದಾರ್ರು, ಮೈಸೂರು.
22. ,, ಅಂಬಳೆ ಅಂಣೈಯ್ಯಪಂಡಿತರು, ಜಹಗೀರದಾರ್ರು, ಮೈಸೂರು.
23. ,, ಹಾರ್ನಹಳ್ಳಿ ಸುಬ್ಬರಾಯರು, ಹುಣಸೂರು.
24. ,, ವೆಂಕಟಶಾಮೈಯ್ಯನವರು, ಚಾಮರಾಜನಗರ.
25. ,, ರೆವರೆಂಡ್ ಡಿ. ಎಫ್. ಲಾರೆಂಟ್ ಸಾಹೇಬರವರು, ಕ್ಯಾತಲಿಕ್ ಪ್ರೀಸ್ಟ್ ಗಂಜಾಂ.
26. ,, ಕೃಷ್ಣಮಾಚಾರ್ಯರು, ಅಹೋಬಲಮಠದ ಏಜಂಟರು, ಟಿ. ನರಸೀಪುರ.

(Note) ನಾಗಮಂಗಲ, ಕೃಷ್ಣರಾಜಪೇಟೆ ಮತ್ತು ಮಳವಳ್ಳಿ ತಾಲ್ಲೂಕುಗಳ ವಿನಾಯಿಸಿ ಉಳಿದ ತಾಲ್ಲೂಕುಗಳ ಅಮಿಲ್ದಾರುಗಳು.

ಗೈರ್ ಹಾಜರ್.

ನಾನ್ ಅಫಿಷಿಯಲ್ ಮೆಂಬರುಗಳು.

I. ಲೋಕಲ್ ಬೋರ್ಡ್ಸ್ ರೂಲ್ಸ್ 8ನೆ ಪ್ಯಾರಾದ (d) ಕ್ಲಾಸ್ ಮೇರೆ—

27. ಮಿ॥ ಷಡಗೋಪಾಲಾಚಾರ್ಯರು, ಎಡತೊರೆ, (ಮೃತಪಟ್ಟಿರುತ್ತಾರೆ ಐವಜಿಗೆ ನೇಮಿಸಿಲ್ಲಾ.)
28. ,, ಚಂದ್ರಶೇಖರೈಯ್ಯನವರು, ನಾಗಮಂಗಲ.
29. ,, ಬಸರಾಳ್ ಲಿಂಗಣ್ಣೈಯ್ಯನವರು, ಮಂಡ್ಯ.

II. ಲೋಕಲ್ ಬೋರ್ಡ್ಸ್ ರೂಲ್ಸ್ 8ನೆ ಪ್ಯಾರಾದ (e) ಕ್ಲಾಸ್ ಮೇರೆ—

30. ಮಿ॥ ಟಿ. ಎ. ಮಿರ್‌ಕಮಾಲುದ್ದೀನ್ ಅಲ್ಲೀಖಾನ್ ಸಾಹೇಬರವರು, ಅರಮನೆ ಮುಸಾಹೇಬ್, ಮೈಸೂರು.

ಈ ಕೆಳಗೆ ಕಂಡ ಗವರ್ನಮೆಂಟ್ ಆರ್ಡರುಗಳು ಓದಿ ರಿಕಾರ್ಡು ಮಾಡಲ್ಪಟ್ಟವು :—

I. (1) ಮೂರನೇ ತರಗತಿ ಟ್ರಾವೆಲರ್ಸ್ ಬಂಗ್ಲೆಗಳ ಮತ್ತು ಮುಸಾಫರ್‌ಖಾನೆಗಳ ಉಪಯೋಗಕ್ಕಾಗಿ ಪಾತ್ರೆಗಳನ್ನು ಮತ್ತು ಇತರ ಸಾಮಾನುಗಳನ್ನು ಕೊಂಡುಕೊಳ್ಳಲು ತಗಲುವ ಖರ್ಚನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಒಂದು ಸಲಕ್ಕೆ 100 ರೂಪಾಯಿಗಳಿಗೆ ಮೀರದಂತೆ ಕೊಡಬಹುದೆಂದು ತಿಳುಪಿರುವ 30-11-08ನೆ ಮರ್ಕುಂ 5123-32—L. B. 377-07-4ನೆ ನಂಬರ್ ಗವರ್ನಮೆಂಟ್ ಆರ್ಡರ್.

(2) ಶಿವಮೊಗ್ಗ ಡಿಸ್ಟ್ರಿಕ್ಟ್ ಹೊಳೆಹೊನ್ನೂರಿನಲ್ಲಿ ವೈದ್ಯಶಾಲೆಯನ್ನಿಡಿಸುವದಕ್ಕಾಗಿ ಒಂದು ಕಟ್ಟಡವನ್ನು ಬಾಡಿಗೆಗೆ ತೆಗದುಕೊಳ್ಳಲು ಖರ್ಚನ್ನು ಮಂಜೂರ್ಮಾಡಲಾಗುವದಿಲ್ಲವೆಂದು ತಿಳುಪಿರುವ 3—12—08ನೆ ಮರ್ಕುಂ 5331-8—L. B. 109-08—2ನೆ ನಂಬರ್ ಗವರ್ನಮೆಂಟ್ ಆರ್ಡರ್.

(3) ಸೀನಿಯರ್ ಸರ್ಜನ್‌ರವರು ಹಾಲಿ ಕಳುಹಿಸುತ್ತಿರುವ ಆಸ್ಪತ್ರೆ ಮತ್ತು ಡಿಸ್ಪೆನ್ಸರಿಗಳ ವಾರ್ಷಿಕ ರಿಪೋರ್ಟಿನಲ್ಲಿ ಇನ್ನು ಮುಂದೆ ಯೂನಾನಿ ಡಿಸ್ಪೆನ್ಸರಿ ಮತ್ತು ವೈದ್ಯಶಾಲೆಗಳ ವಿಷಯವನ್ನೂ ಸೇರಿಸಬೇಕೆಂದು ತಿಳುಪಿರುವ 14-12-08ನೆ ಮರ್ಕುಂ 5739-50—Med. 133-08-1ನೆ ನಂಬರ್ ಗವರ್ನಮೆಂಟ್ ಆರ್ಡರ್.

(4) ಇರಿಗೇಷನ್ ಸೆಸ್ ಬಾಬಿನಲ್ಲಿ ಜಮಾ ಖರ್ಚು ಅಂದಾಜನನ್ನು ತಯಾರ್ಮಾಡತಕ್ಕ ಭಾಗದಲ್ಲಿ ಕೆಲವು ವಿಷಯಗಳನ್ನು ತಿಳಿಸಿರುವ 16—12—08ನೆ ಮರ್ಕುಂ R. 3842-50—L. R. 161-08-4ನೆ ನಂಬರ್ ಗವರ್ನಮೆಂಟ್ ಆರ್ಡರ್.

(5) ಅಡಕೆ ಮೇಲಿನ ಹಾಸಲ್ ತೆಗದುಹಾಕಿದ್ದಕ್ಕಾಗಿ ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಭವಿಸಿದ ನಷ್ಟಕ್ಕೆ ಲೋಕಲ್ ಫಂಡ್ಸ್ ಜನರಲಿಂದಾಗಲಿ ಅಥವಾ ಸ್ಟೇಟ್ ಫಂಡಿನಿಂದಾಗಲಿ ಗ್ರಾಂಟ್ ಕೊಡಿಸಬೇಕೆಂದು ಕೇಳಿರುವ ಬೋರ್ಡಿನವರ ಅಭಿಪ್ರಾಯವನ್ನು ಆಗುವದಿಲ್ಲವೆಂದು ತಿರಸ್ಕರಿಸಿ ಬಂದಿರುವ 19—12—08ನೆ ಮರ್ಕುಂ 5373-81—L. B. 176-08-2ನೆ ನಂಬರ ಗವರ್ನಮೆಂಟ್ ಆರ್ಡರ್.

(6) ಅಮೃತ ಮಹಲ್ ಇಲಾಖೆಯ ಹೋರಿಗಳನ್ನು ಹಸುಗಳ ಮೇಲೆ ಹಾರಿಸಿದಾಗ ಪ್ರತಿ ಸಲಕ್ಕೂ ಕೊಡಬೇಕಾದ ರುಸುಮಿನ ದರವನ್ನು ಮಂಜೂರ್ಮಾಡಿರುವ 16—1—09ನೆ ಮರ್ಸ್ಕಂ 6645-53—L. B. 170-07—13ನೆ ನಂಬರ್ ಗೌರ್ನಮೆಂಟ್ ಆರ್ಡರ್.

(7) ಕೃಷ್ಣರಾಜಪೇಟೆ ತಾಲ್ಲೂಕು ಸಿಂದಘಟ್ಟದಲ್ಲಿ ಒಬ್ಬ ಹಕೀಮನಿಗೆ ಮಾಹೇಯಾನ 5 ರೂಪಾಯಿ ತಲಬನ್ನು ಕೊಡಬಹುದೆಂದು ಮಂಜೂರಾಗಿ ಬಂದಿರುವ 21—11—08ನೆ ಮರ್ಸ್ಕಂ 4788-91—L. B. 433-07ನೆ ನಂಬರು ಗೌರ್ನಮೆಂಟ್ ಆರ್ಡರ್.

(8) ತಿರುಮುಕೂಡ್ಲು ನರಸೀಪುರದ ತಾಲ್ಲೂಕು ತಲಕಾಡಿನಲ್ಲಿ ಒಬ್ಬ ನೇಟೀವ್ ವೈದ್ಯನಿಗೆ ಮಾಹೇಯಾನ 10 ರೂಪಾಯಿ ಅಲೋಯನ್ಸನ್ನು ಹಂಗಾಮಿಯಾಗಿ ಮಂಜೂರ್ಮಾಡಿರುತ್ತೆಂದು ತಲಪಿರುವ 15—1—09ನೆ ಮರ್ಸ್ಕಂ 6619-21-L. B. 197-08-2ನೆ ನಂಬರ್ ಗೌರ್ನಮೆಂಟ್ ಆರ್ಡರ್.

(9) ನಂಜನಗೂಡು ಮತ್ತು ಮುಡುಕುದೊರೆ ಈ ಸ್ಥಳಗಳಲ್ಲಿ ನಡೆಯಬಹುದಾದ ದನಗಳ ಪ್ರದರ್ಶನಗಳ ಪ್ರತಿಯೊಂದಕ್ಕೂ ಡಿಸ್ಟ್ರಿಕ್ಟ್ ಫಂಡಿನಿಂದ 50 ರೂಪಾಯಿನಂತೆ ಕೊಡಬಹುದೆಂದು ಮಂಜೂರಾಗಿ ಬಂದಿರುವ 8—2—09ನೆ ಮರ್ಸ್ಕಂ 7496-8—L. B. 396-07-6ನೆ ನಂಬರ್ ಗೌರ್ನಮೆಂಟ್ ಆರ್ಡರ್.

(10) ಪ್ರತಿ ಸಾಲಿನಲ್ಲಿಯೂ ರಿಪೇರಿ ಮಾಡಬೇಕಾದ ಡಿಸ್ಪೆನ್ಸರಿ ಕಟ್ಟಡಗಳ ಹೆಸರನ್ನು ತೋರಿಸುವ ಪಟ್ಟಿಯನ್ನು ಎಕ್ಸಿಕ್ಯೂಟಿವ್ ಇಂಜನಿಯರಿಂದ ತರಿಸಿಕೊಳ್ಳಬೇಕೆಂದು ತಲಪಿರುವ ಛೀಫ್ ಇಂಜನಿಯರವರ 27—1—09ನೆ ಮರ್ಸ್ಕಂ 694ನೆ ನಂಬರ್ ಲೆಟರ್.

(11) ಪುಂಜೂರ್-ಬೇಡಗಳ್ಳಿ-ಹೊಂದರಬಾಳು-ಚಾಮರಾಜನಗರದ ರಸ್ತೆ ಅಂತ್ಯಭಾಗದಲ್ಲಿ 9½ ಮೈಲಿ ರಸ್ತೆಯನ್ನು ಓರ್ಪ ಮಾಡುವದಕ್ಕೆ 23,976 ರೂಪಾಯಿಗಳನ್ನು ಲೋಕಲ್ ಫಂಡ್ಸ್ ಜನರಲಿನಿಂದ ಮಂಜೂರ್ಮಾಡಿರುತ್ತೆಂದು ತಲಪಿರುವ ಚೀಫ್ ಇಂಜನಿಯರ್ ಸಾಹೇಬರವರ 10—2—09ನೆ ಮರ್ಸ್ಕಂ 179—1156ನೆ ನಂಬರ್ ಮೆಮೋ.

II. ಮೈಸೂರ್ ಸಿಟಿಯಲ್ಲಿ ನಾಲ್ಕು ಡಿಸ್ಪೆನ್ಸರಿ ಕಟ್ಟಡಗಳನ್ನು ಕಟ್ಟಲು ಖರ್ಚಿನಲ್ಲಿ ಸ್ವಲ್ಪ ಭಾಗವನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದ ಕೊಡಿಸುವ ಭಾಗದಲ್ಲಿ ಬೋರ್ಡಿನ ಅಭಿಪ್ರಾಯವನ್ನು ತಿಳಿಸಬೇಕೆಂದು ತಲಪಿರುವ 10—7—08ನೆ ಮರ್ಸ್ಕಂ 296-Med. 162-07-4ನೆ ನಂಬರ್ ಗೌರ್ನಮೆಂಟ್ ಡಾಕೆಟನ್ನು ಓದಲಾಯಿತು.

ಕೊಡಬಹುದೆಂದೂ ಮತ್ತು ಎರಡು ಕಟ್ಟಡಗಳನ್ನು ಕಟ್ಟುವುದಕ್ಕೆ ಬೇಕಾಗುವ ಮೊಬಲಗನ್ನು ಮುಂದಲ ಸಾಲ್ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಬಹುದೆಂದೂ ತೀರ್ಮಾನವಾಯಿತು.

III. ಶಿವನ ಸಮುದ್ರದ ಹತ್ತಿರ ಇರುವ ಬ್ಲಫ್ ವಾಸಿಗಳಿಗಾಗಿ ರೊಟ್ಟಿ ಕಟ್ಟೆಯಲ್ಲಿ ವಾರಕ್ಕೊಂದಾವರ್ತಿ ಸಂತೆಯನ್ನು ಏರ್ಪಡಿಸಬಹುದೆಂದು ಗೌರ್ನಮೆಂಟಿನಿಂದ ತಲಪಿರುವ 27—11—08ನೆ ಮರ್ಸ್ಕಂ 4987—L. B. 182-08-2ನೆ ನಂಬರ್ ಡಾಕೆಟನ್ನು ಓದಲಾಯಿತು.

ಮೇಲ್ಕಂಡ ಜಾಗದಲ್ಲಿ ಸಂತೆಯನ್ನು ಏರ್ಪಡಿಸಬಹುದೆಂದು ತೀರ್ಮಾನವಾಯಿತು.

IV. ಮಳವಳ್ಳಿಯಿಂದ ಬೊಪ್ಪೇಗೌಡನ ಪುರಕ್ಕೆ ಗಾಡಿ ಮಾರ್ಗವನ್ನು ಏರ್ಪಡಿಸಿದಲ್ಲಿ ಬೋರ್ಡಿನವರು ಕಾಪಾಡಿಕೊಳ್ಳುವರೇ ಎಂದು ಕೇಳಿ ಬಂದಿರುವ 27—1—09ನೆ ಮರ್ಸ್ಕಂ 7014—L. B. 136-08-1ನೆ ನಂಬರು ಗೌರ್ನಮೆಂಟ್ ಡಾಕೆಟ್ ಓದಲಾಯಿತು.

ಸದರೀ ರಸ್ತೆಯನ್ನು ಏರ್ಪಾಡು ಮಾಡಿದಲ್ಲಿ ಬೋರ್ಡಿನವರು ಕಾಪಾಡಿಕೊಳ್ಳುತ್ತಾರೆಂದು ತೀರ್ಮಾನವಾಯಿತು.

V. ನಂಜನಗೂಡು—ಟಿ. ನರಸೀಪುರದ ರಸ್ತೆಯಲ್ಲಿ ಮೋಹರಿಗಳನ್ನು ಕಟ್ಟುವದಕ್ಕಾಗಿ 1,221 ರೂಪಾಯಿಗಳಿಗೆ ಒಂದು ಅಂದಾಜವನ್ನು ತಯಾರ್ಮಾಡಿ ಮಂಜೂರಿ ಬಗ್ಯೆ ಕಳುಹಿಸಿರುವ ಮೈಸೂರ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರ 7-1-09ನೆ ಮರ್ಸ್ಕಂ 30ನೆ ನಂಬರ್ ಡಾಕೆಟ್ ಓದಲಾಯಿತು.

ಸದರೀ ಅಂದಾಜಾವು ಮಂಜೂರಾಗಬಹುದೆಂದೂ ಖರ್ಚನ್ನು ಸಾಲ್ ಆಖೈರಿನಲ್ಲಿ ಬಾಕಿ ನಿಲ್ಲುವ ಮೊಬಲಗಿನಿಂದ ಕೊಡಬಹುದೆಂದೂ ತೀರ್ಮಾನವಾಯಿತು.

VI. ಹಾಸನ-ಪೆರಿಯಾಪಟ್ಣ-ಕನ್ನಾನೂರ್ ರಸ್ತೆಗೆ ಜಲ್ಲಿ ಹಾಕಿಸತಕ್ಕ ಬಗ್ಯೆ 11,685 ರೂಪಾಯಿಗಳಿಗೆ ಒಂದು ಅಂದಾಜಾವನ್ನು ತಯಾರ್ಮಾಡಿ ಕಳುಹಿಸಿರುವ ಮೈಸೂರ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರವರ 16—3—08 ಮರ್ಸ್ಕಂ 291ನೆ ನಂಬರ್ ಡಾಕೆಟ್ ಓದಲಾಯಿತು.

ಸದರೀ ಕಾಮಗಾರಿಯು 3 ಮೂರು ವರುಷಗಳಲ್ಲಿ ಮುಗಿಸಲ್ಪಡಬೇಕೆಂದು ಕಂಡುಬಂದಕಾರಣ ಅಂದಾಜಾವನ್ನು ಮಂಜೂರ್ಮಾಡಬಹುದೆಂದೂ, ಚಾಲ್ತಿ ಸಾಲಿನಲ್ಲಿ ಉಳಿಯುವ ಮೊಬಲಗಿನಿಂದ ಈ ಸಾಲಿಗೆ ಸ್ವಲ್ಪ ಹಣವನ್ನು ಕೊಡಬಹುದೆಂದೂ ತೀರ್ಮಾನವಾಯಿತು.

VII. ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿಯಲ್ಲಿ ಒಬ್ಬ ನೇಟಿವ್ ವೈದ್ಯನನ್ನು ನೇಮಿಸತಕ್ಕ ಭಾಗದಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರವರ ಅಭಿಪ್ರಾಯವನ್ನು ತಿಳಿಸಿ ಬಂದಿರುವ 13—1—09ನೆ ಮರ್ಸ್ಕಂ 1967ನೆ ನಂಬರ್ ಡಾಕೆಟ್ ಓದಲಾಯಿತು.

ಚನ್ನಾಗಿ ತರಪೇತಾದ ಒಬ್ಬ ವೈದ್ಯನನ್ನು ಮಾಹೇಯಾನ 10 ರೂಪಾಯಿ ತಲಬಿನಂತೆ ನೌಕರರ್ಮಾಡಬಹುದೆಂದು ತೀರ್ಮಾನವಾಯಿತು.

VIII. ಹುಣಸೂರ್ ತಾಲ್ಲೂಕು ಬೆಟ್ಟದಪುರದಲ್ಲಿ ಒಬ್ಬ ನೇಟಿವ್ ವೈದ್ಯನನ್ನು ನೇಮಿಸತಕ್ಕ ವಿಚಾರದಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರವರ ಅಭಿಪ್ರಾಯವನ್ನು ತಿಳಿಸಿ ಬಂದಿರುವ 8—1—09ನೆ ಮರ್ಸ್ಕಂ 171ನೆ ನಂಬರ್ ಡಾಕೆಟ್ ಓದಲಾಯಿತು.

ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಪ್ರಕಾರ ಸದರೀ ಗ್ರಾಮವನ್ನು ಯೂನಿಯನ್ ಆಗಿ ಮಾಡುವ ವರಿಗೆ ಈ ವಿಷಯವನ್ನು ಮುನ್ನಾ ಮಾಡಬೇಕೆಂದು ತೀರ್ಮಾನವಾಯಿತು.

IX. ಮಂಡ್ಯ ತಾಲ್ಲೂಕು ಶಿವಪುರದಲ್ಲಿ ಮುಸಾಫರ್‌ಖಾನೆಯನ್ನು ಬಡಾವಣೆ ಮಾಡತಕ್ಕ ಬಗ್ಗೆ 1,645 ರೂಪಾಯಿಗಳಿಗೆ ಒಂದು ಅಂದಾಜಾವನ್ನು ತಯಾರ್ಮಾಡಿ ಮಂಜೂರಾಗಲು ಇಲ್ಲಿಗೆ ಕಳುಹಿಸಿರುವ ಮಂಡ್ಯ ತಾಲ್ಲೂಕು ಅಮಿಲ್ದಾರ 9-1-09ನೆ ಮರ್ಸ್ತಂ 644ನೆ ನಂಬರು ರಿಪೋರ್ಟನ್ನು ಓದಲಾಯಿತು.

ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರವರು ಮಿಾಟಿಂಗಿನ ಕಾಲದಲ್ಲಿ ಹಾಜರಿದ್ದು ಸದರೀ ಅಂದಾಜವನ್ನು ಮತ್ತು ಪ್ಲಾನನ್ನು ನೋಡಿ ಒಪ್ಪಿರುವರಾದ ಕಾರಣ ಮೇಲ್ಕಂಡ ಅಂದಾಜವನ್ನು ಮಂಜೂರ್ಮಾಡಬಹುದೆಂದೂ ಖರ್ಚನ್ನು ಚಾಲ್ತಿ ಸಾಲಿನ ಬಡ್ಜೆಟ್ಟಿನಲ್ಲಿ "Building repairs" ಹೆಡ್ಡಿಗೆ ಪ್ರೊವೈಡಾಗಿರುವ ಮೊಬಲಗಿನಿಂದ ಕೊಡಬಹುದೆಂದು ತೀರ್ಮಾನವಾಯಿತು.

X. ಮೇಲ್ಕೋಟೆಯಲ್ಲಿ ಒಬ್ಬ ನೇಟಿವ್ ವೈದ್ಯನಿಗೆ ಅಲೋಯನ್ಸ್ ಕೊಡಿಸಬೇಕೆಂದು ಶಿಫಾರಸಾಗಿ ಬಂದಿರುವ ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫಿಸರವರ 8—12—08ನೆ ಮರ್ಸ್ತಂ 143ನೆ ನಂಬರ್ ಯಾದಿ ಓದಲಾಯಿತು.

ಸದರೀ ಸ್ಥಳದಲ್ಲಿ ಒಂದು ಡಿಸ್ಪೆನ್ಸರಿಯನ್ನು ಏರ್ಪಡಿಸುವದಕ್ಕಾಗಿ ಕೂಡ್ಲೆ ಗೌರ್ನಮೆಂಟಿಗೆ ಬರಿಸಬೇಕೆಂದು ತೀರ್ಮಾನವಾಯಿತು.

XI. ಕಳೆದ ಮಿಾಟಿಂಗಿನಿಂದೀಚೆಗೆ ಪ್ರೆಸಿಡೆಂಟರಿಂದ ಮಂಜೂರಾದ 500 ರೂಪಾಯಿಗಳಿಗೆ ಕಮ್ಮಿಯುಳ್ಳ ಕಾಂಗಾರಿಗಳ ಪಟ್ಟಿಯನ್ನು ಬೋರ್ಡಿನವರಿಂದ ಒಪ್ಪಿಕೊಳ್ಳಲಾಯಿತು.

XII. ಮೇಲ್ಕೋಟೆಯಲ್ಲಿ ವೈರಮುಡಿ ಜಾತ್ರೆ ಕಾಲದಲ್ಲಿ ನೀರನ್ನು ಅನುಕೂಲ ಪಡಿಸತಕ್ಕ ಬಗ್ಗೆ, ಚಾಲ್ತಿ ಸಾಲಿನ ಬಡ್ಜೆಟ್ಟಿನಲ್ಲಿ ಪ್ರೊವೈಡಾಗಿರುವ ಡಿಸ್ಟ್ರಿಕ್ಟು ಫಂಡು ಗ್ರಾಂಟಿನಿಂದ 500 ರೂಪಾಯಿಗಳನ್ನು ಕೊಡಲು ಮಂಜೂರಾಗಬಹುದೆಂದು ತೀರ್ಮಾನವಾಯಿತು.

XIII. 1909—1910ನೆ ಸಾಲಿಗೆ ಎಲ್ಲಾ ತಾಲ್ಲೂಕು ಬೋರ್ಡುಗಳಿಂದಲೂ ತಲಪಿರುವ ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ ಅಂದಾಜಾಗಳನ್ನು ಓದಲಾಯಿತು.

ಅಲಾಯಿದಾ ಮೆಮೊದಲ್ಲಿ ಉದಹರಿಸಿರುವಂತೆ ತಿದ್ದುಪಾಟುಗಳೊಡನೆ ಸದರೀ ಬಡ್ಜೆಟ್ಟುಗಳನ್ನು ಮಂಜೂರ್ಮಾಡಬಹುದೆಂದು ತೀರ್ಮಾನವಾಯಿತು.

ಕೆಳಗೆ ನಮೂದಿಸಿರುವಂತೆ ಗೋಷ್ವಾರೆಯನ್ನು ಬೋರ್ಡಿನವರಿಂದ ಪ್ಯಾಸ್ ಮಾಡಲಾಯಿತು.

	ರೂ.
1909—1910ನೆ ಸಾಲಿಗೆ ತರಬಹುದಾದ ಕಳೆದ ಸಾಲ್ ಬಾಕಿ	59,406
1909—1910ನೆ ಸಾಲಿಗೆ ಅಂದಾಜಾ ಪ್ರಕಾರ ಜಮಾ ಮೊಬಲಗು ...	1,62,400
ಜುಮ್ಲಾ ...	2,21,816

ಖರ್ಚು ಬಾಬುಗಳು.

A. ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ	73,932
B. ರೆವಿನ್ಯೂ ಡಿಪಾರ್ಟುಮೆಂಟಿನಿಂದ	61,621
C. ಸಿವಿಲ್ ಛಾರ್ಜುಗಳು	66,246
ಜುಮ್ಲಾ ಖರ್ಚು ...	2,01,806
ಸಾಲ್ ಅಖೈರು ಬಾಕಿ ...	20,000

XIV. ಬೋರ್ಡಿನ ಮುಂದಿನ ಮಿಾಟಿಂಗು 1909ನೆ ಇಸವಿ ಮೇ ಮಾಹೆ 29ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಗೆ ನಡೆಯುವದೆಂದು ತೀರ್ಮಾನವಾಯಿತು.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 16ನೆ ಮಾರ್ಚಿ 1909.

ಮೈಸೂರು ಶೀಮೆಯ ಲೇಟ್ ಚೀಫ್ ಕಮಿಾಷನರವರಿಂದ ಕೊಡಲ್ಪಟ್ಟ 17—4—1867ನೆ ಮರ್ಸ್ತಂ 6ನೆ ನಂಬರು ಭೂಮಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಶಿವಮೊಗ್ಗಾ ಡಿಸ್ಟ್ರಿಕ್ಟು ಸಾಗರದ ತಾಲ್ಲೂಕು ಅನಂತಪುರದ ಗ್ರಾಮದಲ್ಲಿ ಬಸವಂಣಪ್ಪನೆಂಬುವನು ತನ್ನ ಸ್ವಂತ ಖಾತೆ ಪಾಳು ನಿವೇಶನವನ್ನು ಮನೆ ಕಟ್ಟುವ ಉದ್ದಿಶ್ಯ ನೆಲಗಟ್ಟು ಮಾಡಿಸುತ್ತಿರುವಾಗ್ಯೆ ಈ ಕೆಳಗೆ ವಿವರಿಸಿರುವ ನಿಧಿಯು ಸಿಕ್ಕಿತು.

ಭಂಗಾರದ ವರಹಾ ನಾಣ್ಯಗಳು 94.

ಭಂಗಾರದ ಬಾಬತು ಅರ್ಧವರಹ ನಾಣ್ಯಗಳು 51.

ಮತ್ತು ನಾಣ್ಯದಲ್ಲಿ ಕತ್ತರಿಸಿದ 2 ತುಂಡು; ಇವುಗಳೆಲ್ಲಾ ಸೇರಿ ಒಟ್ಟು ನಾಣ್ಯಗಳ ತೂಕ 35 ರೂಪಾಯಿ 4 ಆಣೆ.

ಭಂಗಾರದ ವಂಕಿ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 9 ರೂಪಾಯಿ 12 ಆಣೆ ಮತ್ತು 4 ಗುಲಗಂಜಿ.

(ಇದು ಸಿಕ್ಕಿದ ನಾಣ್ಯಗಳಿಂದ ತಯಾರಾಗಿರತಕ್ಕದ್ದು).

ಇವುಗಳೆಲ್ಲಾ ಭೂಮಿಯಲ್ಲಿ ಸಿಕ್ಕಿದ ನಾಣ್ಯಗಳಿಂದ ತಯಾರಾದದ್ದು.

ಭಂಗಾರದ ಹಿಂಬಳಿ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 5 ರೂಪಾಯಿ 12 ಆಣೆ 4 ಗುಂಜಿ ಕಡಮೆ.

ಭಂಗಾರದ ತಂತಿರೇಖು ಚೂರು ಮತ್ತು ಬೆಸಿಗೆ ಚೂರುಗಳು ಸಹ ತೂಕ 1 ರೂಪಾಯಿ 12 ಆಣೆ ಹಳೇ ಇಕ್ಕೇರಿ ಬಂಣ.

ಭಂಗಾರದ ಗಟ್ಟಿ ಒಂದು ಚೂರುಗಳು ಸಹ ಸೇರಿ 3 ರೂಪಾಯಿಗೆ 2 ಆಣೆ ಮತ್ತು 5 ಗುಲಗಂಜಿ ತೂಕ ಕಡಮೆ ಇದೆ. ಹಳೇ ಇಕ್ಕೇರಿ ಬಂಣ.

ಭಂಗಾರದ ಸುತ್ತುಂಗರ ಒಂದು 1 ವರಹಾ ತೂಕವಿರುತ್ತೆ ಬಂಣ ಇಕ್ಕೇರಿ ವರಹ.

ನಗದು 30 ರೂಪಾಯಿಗಳು ಈ ರೂಪಾಯಿಗಳು ಸಿಕ್ಕಿದ ನಾಣ್ಯಗಳ ಮಾರಾಟದಿಂದ ಉತ್ಪತ್ತಿ ಆದ್ದು.

2. ಸದರಿ ವಿಶಿಷ್ಟ ನಿಧಿಯೇ ಆಗಲಿ ಅಥವಾ ಅದರ ಭಾಗಕ್ಕಾಗಲಿ ಹಕ್ಕುದಾರರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು 6 ತಿಂಗಳೊಳಗೆ ತಮ್ಮ ಹಕ್ಕು ಇರತಕ್ಕ ಬಗ್ಗೆ ದರಖಾಸ್ತು ಕೊಟ್ಟು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಗೆ ಖುದ್ದಾಗಿಯಾಗಲಿ ಏಜಂಟರ ಮೂಲಕವಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಆರ್. ಟಿ. ಮಹದೇವರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಸ್ 1909ನೆ ಇಸವಿ ಫೆಬ್ರುವರಿ ತಾರೀಖು 12ನೆ ಶುಕ್ರವಾರ ನಡದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ನಡವಳಿಕೆಗಳು.

ಹಾಜರು.

1. ಕೆ. ಆರ್. ಶ್ರೀನಿವಾಸೈಯ್ಯಂಗಾರ್ರು, ಎಸ್‌ಕ್ವೈಯರ್, ಎಂ. ಎ., ಪ್ರೆಸಿಡೆಂಟರು.

ಉದ್ಯೋಗ ಪ್ರಯುಕ್ತರಾದ ಮೆಂಬರುಗಳು.

ಹಾಜರು.

2. ಮಿ|| ಸಿ. ರಂಗನಾಥರಾವ್ ಸಾಹೇಬ್, ಟ್ರೆಜರಿ ಅಸಿಸ್ಟೆಂಟ್ ಕಮಿಷನರು.
3. ,, ವಿ. ಮುತ್ತುಸಾಮಿದಾಸ್, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.

ಗೈರ್ ಹಾಜರು.

4. ,, ಬಿ. ವೆಂಕೋಬರಾವ್, ಡಿವಿಜನಲ್ ಅಸಿಸ್ಟೆಂಟು ಕಮಿಷನರು.
5. ,, ಹೆಚ್. ಎಲ್. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು.
6. ,, ಎಲ್. ರಾಮರಾವ್, ಎಗ್ಜಿಕ್ಯೂಟಿವ್ ಇಂಜಿನಿಯರವರು.

ಉದ್ಯೋಗ ಪ್ರಯುಕ್ತರಲ್ಲದ ಮೆಂಬರುಗಳು.

ಹಾಜರು.

7. ಮಿ|| ಬಾಬಾಸಾಹೇಬರು.
8. ,, ಹೆಚ್. ಕೇಶವಾಚಾರ್ರು.
9. ,, ಬಿ. ರಂಗಂಣನವರು.
10. ,, ಹೆಚ್. ವಾಟ್ಸನ್ ಸಾಹೇಬರು.
11. ,, ಸಿ. ಶ್ರೀನಿವಾಸರಾಯರು.
12. ,, ಯಜಮಾನ ರಾಂಭಟ್ಟರು.
13. ,, ನಾಡಿಗ ಭಿಷ್ಟಪ್ಪನವರು.
14. ,, ಆನವಟ್ಟಿ ರಂಗರಾಯರು.
15. ,, ಟಿ. ಶ್ರೀನಿವಾಸಯ್ಯಂಗಾರ್ರು.
16. ,, ಪುರದಪ್ಪನವರು.
17. ,, ಟಿ. ನರಸಿಂಹೈಯ್ಯಂಗಾರ್ರು.

ಗೈರ ಹಾಜರು.

18. ಮಿ|| ಎ. ಶಾಮರಾವ್.
19. ,, ಜೆ. ಜಿ. ಹ್ಯಾಮಿಲ್ಟನ್ ಸಾಹೇಬರು.
20. ,, ಎಚ್. ಫಿಲ್‌ಕಿಂಗ್‌ಟನ್ ಸಾಹೇಬರು.
21. ,, ಜಾವಳಿ ಗಣೇಶರಾಯರು.
22. ,, ಪಟ್ಟಣಗೆರೆ ರಂಗಣ್ಣನವರು.
23. ,, ಶಾಂತಪ್ಪ ಶೆಟ್ಟರು.
24. ,, ಚನ್ನಕೇಶವರಾಯರು.
25. ಖಾಲಿ.

I. ಸ್ 1908ನೆ ಡಿಸೆಂಬರ ಮಾಹೆ ಆಖೈರು ವರಿಗಿನ ಈ ಕೆಳಗೆ ನಮೂದಿಸಿರುವ ಗೋಷ್ವಾರೆ ಪ್ರಕಾರ ಡಿಸ್ಟ್ರಿಕ್ಟ್ ಫಂಡು ಜಮಾ ಖರ್ಚು ಲೆಕ್ಕಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

		ರೂ.	ಆ.	ಪೈ.
1.	ಸ್ 1908ನೆ ಜುಲೈ ಗುರ್ರೇ ಶಿಲ್ಕು	15,203	2	11
2.	ಸ್ 1908ನೆ ಡಿಸೆಂಬರ ಆಖೈರು ವರಿಗಿನ ಜಮಾ	8,421	6	7
	ಜುಮ್ಲಾ ...	23,624	9	6
3.	ಡಿಸೆಂಬರ ಆಖೈರ ವರಿಗಿನ ಖರ್ಚು	19,699	15	5
	ಜಾತಾ ಬಾಕಿ ...	3,924	10	1

II. 1908ನೆ ಜುಲೈ ಗುರ್ರೇ ಲಾಗಾಯಿತು ಡಿಸೆಂಬರ ಆಖೈರ ವರಿಗಿನ ಚಿಕ್ಕಮಗಳೂರು, ತರೀಕೆರೆ ಮತ್ತು ಬೀರೂರು ವೈದ್ಯಶಾಲೆಗಳಲ್ಲಿ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಗಳನ್ನು ತೋರಿಸತಕ್ಕ ಲೆಕ್ಕಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

ಸದರಿ ಲೆಕ್ಕಗಳ ಪ್ರಕಾರ ರೋಗಿಗಳ ಸಂಖ್ಯೆ 9,909, 5,879 ಮತ್ತು 5,577 ಇತ್ತು. ಹಿಂದಿನ ಸಾಲಿನಲ್ಲಿ ಪರಸ್ಪರ 9,090, 6,036, 6,394 ಇದ್ದವು.

III. ಫೈನಾನ್ಸ್ ಕಮಿಟಿಯವರು ತಯಾರ್ಮಾಡಿದ 1909—1910ನೆ ಸಾಲ ಡಿಸ್ಟ್ರಿಕ್ಟ್ ಫಂಡು ಬಡ್ಜೆಟ್ಟುಗಳನ್ನು ಓದಲಾಗಿ ಸದರಿ ಬಡ್ಜೆಟ್ಟನ್ನು ಬೋರ್ಡಿನವರು ಅನುಮೋದಿಸಿ ಗವರ್ನಮೆಂಟಿಗೆ ಕಳುಹಿಸಬಹುದೆಂತಲೂ ಸದರಿ ಬಡ್ಜೆಟ್ಟಿನಲ್ಲಿ ಈ ಕೆಳಗೆ ನಮೂದಿಸಿರುವ ಪ್ರಕಾರ ರಸ್ತೆಗಳ ಬಗ್ಗೆ ಇಟ್ಟ ಹಣದ ಪೈಕಿ 1,000 ರೂಪಾಯಿಗಳನ್ನು ಕಡಿಮೆಮಾಡಿರುವದನ್ನು ಸಹ ಬೋರ್ಡಿನವರು ಒಪ್ಪಿರುತ್ತಾರೆಂದು ತೀರ್ಮಾನಿಸಲಾಯಿತು.

1. ಆನೆ ಮಹಲ್-ಮೂಡಿಗೆರೆ ರಸ್ತೆ.
2. ಮಾಗಡಿ-ಜಾವಗಲ್ಲು ರಸ್ತೆ.
3. ಬೀರೂರು—ಅಜ್ಜಂಪುರದ ರಸ್ತೆ.
4. ಸೊಳ್ಳೆಬೈಲು-ಬಾಳೆಹೊಳೆ ರಸ್ತೆ.
5. ಎಡೇಹಳ್ಳಿ-ಬಾಳೆ ಹೊನ್ನೂರು ರಸ್ತೆ.

4. 1908—09ನೆ ಸಾಲ ಸಪ್ಲಿಮೆಂಟಲ್ ಬಡ್ಜೆಟ್ ಓದಲಾಗಿ ಸದರಿ ಬಡ್ಜೆಟ್ ಮಂಜೂರಾಗಬಹುದೆಂತ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

5. ಮೂಡಿಗೆರೆ ತಾಲ್ಲೂಕು ಕಳಸ ಆಸ್ಪತ್ರೆಗೆ ಮಿಡ್‌ವೈಫ್ ನೇಮಕರ್ಮಾಡಬೇಕೆಂಬದಾಗಿ ಕೇಳಿಕೊಂಡ 14-11-08ನೆ ಮರ್ಕುಂ ಮಿ|| ಇ. ಸಿ. ಕೆಂಟ್ ಸಾಹೇಬರ ಲೆಟರ್ ಓದಲಾಗಿ ಡಿಸ್ಟ್ರಿಕ್ಟ್ ಫಂಡಿನ ಹಾಲಿ ಇರತಕ್ಕ ಬಡತನದ ಸ್ಥಿತಿಯಲ್ಲಿ ಕಳಸಕ್ಕೆ ಪ್ರತ್ಯೇಕ ಮಿಡ್‌ವೈಫ್ ನೇಮಕನಮಾಡಲು ಅನುಕೂಲವಿಲ್ಲ ಎಂಬ ವಿಚಾರದಲ್ಲಿ ಬೋರ್ಡಿನವರು ವಿಷಾದಿಸುತ್ತಾರೆ.

6. ಮಿ|| ಹ್ಯಾಗರ್ನ್ ಸಾಹೇಬರ ಬೇರುಕೊಡಗಿ ಎಸ್ಟೇಟಿನಲ್ಲಿ ಒಂದು ದೊಡ್ಡಿ ಸ್ಥಾಪಿಸುವ ವಿಚಾರದಲ್ಲಿ ಜರುಗಿದ ಡಿವಿಜನಲ್ ಆಸಿಸ್ಟೆಂಟ್ ಕಮಿಷನರ 4—1—09ನೆ ಮರ್ಕುಂ 180ನೆ ಯಾದಿಗೆ ಆಖೈರು ಪ್ರಕರಣವಾಗಿರುವ ರಿಕಾರ್ಡು ಓದಲಾಗಿ ಬೇರುಕೊಡಗಿ ಗ್ರಾಮಕ್ಕೆ ½ ಮೈಲಿ ಫಾಸಲೆಯಲ್ಲಿರುವ ಕ್ಯರಡು ಹಿತ್ತಲುನಲ್ಲಿ ಒಂದು ದೊಡ್ಡಿಯು, ಮತ್ತು ಸದರಿ ಎಸ್ಟೇಟಿಗೆ 1 ಮೈಲಿ ಫಾಸಲೆಯಲ್ಲಿರುವ ಕೊಪ್ಪ ಎಸ್ಟೇಟಿನಲ್ಲಿ ಒಂದು ದೊಡ್ಡಿಯು ಸಹ ಇರುವದರಿಂದ ಬೇರುಕೊಡಗಿ ಎಸ್ಟೇಟಿನಲ್ಲಿ ಬೇರೆ ದೊಡ್ಡಿ ಸ್ಥಾಪಿಸುವದು ಅನವಶ್ಯಕವೆಂಬದಾಗಿ ಅಭಿಪ್ರಾಯಪಟ್ಟ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಿರುತ್ತಾರೆ.

7. ಅಂಬಳೆ ಮತ್ತು ಮರ್ಲೆ ಈ ಎರಡು ಯೂನಿಯನ್‌ಗಳ ಝಾಡಮಾಲಿಗಳ ತಲಬನ್ನು 5 ರಿಂದ 6 ರೂಪಾಯಿಗೆ ಹೆಚ್ಚಿಸಬೇಕಾಗಿ ಕೇಳಿದ ಚಿಕ್ಕಮಗಳೂರು ಅಮಲ್ದಾರ 13—1—09ನೆ ಮರ್ಕುಂ 465ನೆ ರಿಪೋರ್ಟು ಓದಲಾಗಿ ಮರ್ಲೆ ಮತ್ತು ಅಂಬಳೆ ಈ ಎರಡು ಯೂನಿಯನ್ ಝಾಡಮಾಲಿಗಳ ಸಂಬಳವನ್ನು ಮಾಹೆಯಾನಾ ಆರು ರೂಪಾಯಿನಂತೆ ಕೊಡಿಸಬಹುದಾಗಿ ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

8. ಮಿ॥ ಇ. ಎಂ. ಪ್ಲೇಫೇರ್ ಸಾಹೇಬರ ಉರಸೆ ಎಸ್ಟೇಟಿನಲ್ಲಿ ಒಂದು ದೊಡ್ಡಿ ಸ್ಥಾಪಿಸಬೇಕಾಗಿ ಶಿಫಾರ್ಸು ಮಾಡಿದ 8—12—08ನೆ ಮರ್ಕುಂ ಮೂಡಿಗೆರೆ ಅಮಲ್‌ದಾರಿ 108ನೆ ರಿಪೋರ್ಟು ಓದಲಾಗಿ, ಸದರಿ ಎಸ್ಟೇಟಿನ 2 ಮೈಲಿ ಫಾಸಲೆಯೊಳಗೇನೆ 2 ದೊಡ್ಡಿಗಳು ಹಾಲಿ ಇರುವದರಿಂದ, ಸದರಿ ಉರಸೆ ಎಸ್ಟೇಟಿನಲ್ಲಿ ಮತ್ತೊಂದು ದೊಡ್ಡಿ ಸ್ಥಾಪಿಸುವದು ಅನವಶ್ಯಕವೆಂತ ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

9. ಕೊಪ್ಪ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸ್ಥಳ ಕೊಡುವ ವಿಚಾರದಲ್ಲಿ ಸೀನಿಯರ್ ಸರ್ಜರವರ 6—10—08ನೆ ಮರ್ಕುಂ 251ನೆ ಲೆಟರ ಮಲಫೂಫಿನ ಬಂದ ಸೆಕ್ರೆಟರಿಯವರ 5—11—08ನೆ ಮರ್ಕುಂ 4207—ಮೆಡಿಕಲ್ 95-08-2ನೆ ಡಾಕೆಟ್ ಓದಲಾಯಿತು. ಮತ್ತು ಅದರಲ್ಲಿ ಉಕ್ತವಾಗುವ ಪ್ರಕಾರ ಕೊಪ್ಪ ಆಸ್ಪತ್ರೆ ಅಸಿಸ್ಟೆಂಟರಿಗೆ ವಾಸಕ್ಕೆ ಪ್ರತ್ಯೇಕ ಸ್ಥಳ ನಿಷ್ಕರ್ಷಿಸುವವರಿಗೆ ಹಾಲಿ ಇರತಕ್ಕ ಮುಸಾಫರ್ ಖಾನೆಯ ಒಂದು ಭಾಗವನ್ನು ಸದರಿಯವರ ವಾಸಕ್ಕೆ ಕೊಡಬಹುದೆ ಎಂಬ ಅಂಶವನ್ನು ಸಹ ಬೋರ್ಡಿನಲ್ಲಿ ಚರ್ಚಿಸಲಾಗಿ, ಪ್ರಯಾಣೀಕರ ಉಪಯೋಗಕ್ಕೇನೆ ಏರ್ಪಾಡಾಗಿರುವ ಮುಸಾಫರ್‌ಖಾನೆಯನ್ನೇ ಆಗಲಿ ಅಥವಾ ಅದರ ಒಂದು ಭಾಗವನ್ನೇ ಆಗಲಿ ಆಸ್ಪತ್ರೆ ಅಸಿಸ್ಟೆಂಟರ ವಸತಿಗೆ ಕೊಡುವದರಿಂದ ಪ್ರಯಾಣೀಕರಿಗೆ ಕೇವಲ ಅನಾನುಕೂಲವಾಗುವ ಪ್ರಯುಕ್ತ ಆ ರೀತಿ ಮಾಡುವದು ಸೂಕ್ತವಲ್ಲವಾಗಿ ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

10. ಈ ಕೆಳಗೆ ನಮೂದು ಮಾಡಿರುವ ಗವರ್ನಮೆಂಟ್ ಆರ್ಡರುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1) ಮೂರನೇ ಕ್ಲಾಸ್ ಬಂಗಲೆಗಳು ಮತ್ತು ಮುಸಾಫರ್‌ಖಾನೆಗಳ ಉಪಯೋಗಕ್ಕೆ ಪಾತ್ರೆಗಳು ವಗೈರೆ ಸಾಮಾನುಗಳನ್ನು 100 ರೂಪಾಯಿಗೆ ಮೀರದಂತೆ ಕೊಂಡುಕೊಳ್ಳುವ ಅಧಿಕಾರವನ್ನು ಡಿಸ್ಟ್ರಿಕ್ಟು ಬೋರ್ಡಿಗೆ ಕೊಟ್ಟಿರುತ್ತಾಗಿ ನಮೂದಾಗುವ 30—11—08ನೆ ಮರ್ಕುಂ 5123-32—ಲೋ. ಬೋ. 377-07-4ನೆ ಗವರ್ನಮೆಂಟ್ ಆರ್ಡರು.

(2) ಅಡಿಕೆ ಹಾಳತ ವಜಾ ಮಾಡಿದ್ದರಿಂದ ಉಂಟಾದ ಲುಕ್ಸಾನು ಬಗ್ಯೆ ಇತರ ವಿಧವಾದ ಉತ್ಪತ್ತಿಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಏರ್ಪಡಿಸಿಕೊಳ್ಳಬೇಕೆಂದು ನಮೂದಾಗುವ 19—12—08ನೆ ಮರ್ಕುಂ 5873-81—L. B. 176-08-2ನೆ ಗೌರ್ನಮೆಂಟ್ ಆರ್ಡರು.

(3) ತರೀಕೆರೆ ತಾಲ್ಲೂಕು ಲಕ್ಕವಳ್ಳಿ ಯೂನಿಯನ್ನು ಎರಡು ಜನ ಝಾಡಮಾಲಿಗಳ ತಲಬಿಗೆ ಮಾಹೆಯಾನಾ ಒಂದು ರೂಪಾಯಿ ಹೆಚ್ಚು ಮಾಡಿರುತ್ತೆಂದು ನಮೂದಿರುವ 11—1—09ನೆ ಮರ್ಕುಂ 6465-6—L. B. 207 03-1ನೆ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

(4) ಅಮೃತ ಮಹಲ್ ಹೋರಿಗಳಿಗೆ ಹಾಕುವ ದರವನ್ನು ನಿಷ್ಕರ್ಷೆ ಮಾಡಿರುವ 16—1—09ನೆ ಮರ್ಕುಂ 6645-53—L. B. 170-07-13ನೆ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

(5) ಹರಿಹರಪುರದ ಆಸ್ಪತ್ರೆಯನ್ನು ಬಾಳೂರಿಗೆ ವರ್ಗಮಾಡಿ ಅಲ್ಲಿನ ಜನಗಳಿಗೆ ಅನಾನುಕೂಲ ಪಡಿಸುವದಕ್ಕಿಂತ ಬಾಳೂರಲ್ಲಿ ಪ್ರತ್ಯೇಕ ಕಟ್ಟಡ ಏರ್ಪಾಡಾಗುವ ವರಿಗೂ ಹರಿಹರಪುರದ ಆಸ್ಪತ್ರೆ ವರ್ಗಾಯಿಸಬೇಕಾದ ಅವಶ್ಯಕತೆ ಇಲ್ಲವಾಗಿ ನಮೂದಾಗುವ 6—2—09ನೆ ಮರ್ಕುಂ 7387-8—L. B. 145-08-12ನೆ ಗೌರ್ನಮೆಂಟ್ ಪ್ರೊಸೀಡಿಂಗ್ಸ್.

11. ತರೀಕೆರೆ ಆಸ್ಪತ್ರೆಗೆ ಒಂದು ಹೊಸ ಆಸ್ಪತ್ರೆ ಕಟ್ಟುವ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ಪಡೆದು ರಿಪೋರ್ಟು ಮಾಡಬೇಕೆಂತ ಕೇಳಿರುವ ಸೀನಿಯರ್ ಸರ್ಜರವರ 3—11—08ನೆ ಮರ್ಕುಂ 2246ನೆ ಲೆಟರ ಓದಲಾಗಿ ಬೋರ್ಡಿನ ಈಗಿನ ಸ್ಥಿತಿಯಲ್ಲಿ ಹೊಸಕಟ್ಟಡ ಕಟ್ಟತಕ್ಕ ಬಗ್ಯೆ ಚಂದಾಕೊಡಲು ಅವಕಾಶವಿಲ್ಲವಾಗಿಯೂ, ಸದರಿ ಆಸ್ಪತ್ರೆಯನ್ನು ಬೇರೆ ಕಟ್ಟಡಕ್ಕೆ ವರ್ಗಾಯಿಸತಕ್ಕ ವಿಚಾರದಲ್ಲಿ ತರೀಕೆರೆ ತಾಲ್ಲೂಕು ಬೋರ್ಡಿನವರ ಮತ್ತು ಸೀನಿಯರ್ ಸರ್ಜರವರ ಅಭಿಪ್ರಾಯವನ್ನೆ ಅನುಮೋದಿಸುತ್ತೇವೆಂತಲೂ ಸಹ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

12. ಪ್ರೆಸಿಡೆಂಟರು ಮಂಜೂರ್ಮಾಡಿದ ಈ ಕೆಳಗೆ ನಮೂದಾಗುವ ಅಂದಾಜಾಗಳನ್ನು ಬೋರ್ಡಿನವರು ಒಪ್ಪಿರುತ್ತಾರೆ.

(1) ಚಿಕ್ಕಮಗಳೂರು ತಾಲ್ಲೂಕು ಚಂದ್ರಕಟ್ಟೆ ರಿಪೇರಿ ಬಗ್ಯೆ ತಯಾರಾದ 495 ರೂಪಾಯಿನ ಅಂದಾಜಾ.

(2) ಭೂತನಹಳ್ಳಿಲಿ ಭಾವಿ ತೋಡಿಸತಕ್ಕ ಬಗ್ಯೆ ತಯಾರಾದ 35 ರೂಪಾಯಿನ ಅಂದಾಜಾ.

(3) ಕಡೂರು ತಾಲ್ಲೂಕು ಗಂಗನಹಳ್ಳಿ ಭಾವಿಗೆ ಕಲ್ಲುಕಟ್ಟತಕ್ಕ ಬಗ್ಯೆ ತಯಾರಿಸಿದ 345 ರೂಪಾಯಿನ ಅಂದಾಜಾ.

13. ಮುಂದಿನ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು 1909ನೆ ಮೇ ತಿಂಗಳು 22ನೆ ತಾರೀಖು ಶನಿವಾರ ನಡೆಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸಯ್ಯಂಗಾರ್,
ಪ್ರೆಸಿಡೆಂಟ್.

ನೋಟಿಸ್.

ಚನ್ನಪಟ್ಣ ತಾಲ್ಲೂಕು ಕಛೇರಿಯಿಂದ.

ತಾರೀಖು 16-18ನೆ ಮಾರ್ಚಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಾಲ್ಲೂಕು ಮಜಕೂರು ರಿಕಾರ್ಡಿನ ವಿಲೆಯಲ್ಲಿ ಇರುವ ಮೌಜೆವಾರ್ ಡಿಟ್ಟಂಚಿಟ್ಟು-ಕುಳವಾರು ಚಿಟ್ಟು ಯಾನೆ ಅವ್ವಲ್ ನಂಬರು ದುಯ್ಯಂ ನಂಬರು ವಗೈರೆ ಹಳೆ ಲೆಕ್ಕಗಳನ್ನು ಗವರ್ನಮೆಂಟು 11—3—95ನೆ ಮರ್ಕುಂ 14523-30—R. F. 157-93ನೆ ನಂಬರು ಪ್ರೊಸಿಡಿಂಗ್ಸಿನಲ್ಲಿ ನಮೂದಿರುವ ಮೇರಿಗೆ ಸರ್ವೆ ಆದ 12 ವರುಷಗಳ ಕಾಲ ಕಳೆದು ಇರುವದ್ದರಿಂದ ನಾಶಪಡಿಸುವದಕ್ಕಾಗಿ ಸಾರ್ಟ್ ಮಾಡಿಸಿಟ್ಟಿರುತ್ತೆ. ಇವುಗಳಿಗೆ ಸಮ್ಮಂಧಪಟ್ಟ ದಾಖಲೆಗಳು ಅವಶ್ಯಕ ಇರತಕ್ಕವರು ಯಾರಿದ್ದರು ಈ ಇಸ್ತಿಹಾರ್ ಪ್ರಾಯಿಷ ತಾರೀಖು ಲಾಗಾಯಿತು (ಮೂರು) ತಿಂಗಳ ವಳಗಾಗಿ ತಾಲ್ಲೂಕಿಗೆ ಕ್ರಮವಾಗಿ ಅಪ್ಲಿಕೇಷನ್ ಕೊಟ್ಟು ಕಾಪಿ ಪಡಮಕೊಳ್ಳಬಹುದು. ಈ ವಾಯಿದೆ ಕಳೆದ ಕೂಡ್ಲೆ ಸದರಿ ರಿಕಾರ್ಡುಗಳೆಲ್ಲವು ನಾಶಪಡಿಸುವದ್ದರಿಂದ ನಂತರ ದಾಖಲೆ ದೊರಿಯಲಾರದು ತಿಳಿಯುವದು.

ಹೆಚ್. ವೆಂಕಟನರಸಯ್ಯ,
ಆಕ್ಟಿಂಗ್ ಅಮಲ್ದಾರ್.

ಮೈಸೂರು ಗೌರ್ನ್ಮೆಂಟ್ ಸೆಂಟ್ರಲ್ ಬುಕ್ಕು ಡಿಪ್ಪೋ.

ಸನ್ 1909ನೆ ಇಸವಿ ಏಪ್ರಿಲ್ ತಾರೀಖು 1.

ಬೆಂಗಳೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪ್ಪೋವಿನಲ್ಲಿ ದೊರಿಯುತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸನ್1879ನೆ ಇಸವಿಯ 12ನೆ ನಂಬರ್ ಆಕ್ಟು.	36	0	11	0	1	0
4	1871ನೆ ಇಸವಿಯ ದನಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ (1904)	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟ್ ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	„ ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	„ ರಿಜಿಸ್ಟ್ರೇಷನ್ ಆಕ್ಟು	37	0	4	0	2	0
18	„ ಟೆಲಿಗ್ರಾಫ್ ಆಕ್ಟು	18	0	1	6	1	0
19	„ ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು(ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟ್ಟೋ (ಹಳೇ ಛಾಪಾ)	206	2	8	0	5	0
24	ಡಿಟ್ಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್‌ವೆಗಳ ರೆಗ್ಯುಲೇಷನ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	6
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೊಲೀಸ್ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ Iನೆ ರೆಗ್ಯುಲೇಷನ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
38	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗಾರ್ನವೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
43	1895ನೆ ಇಸವಿ IIIನೆ ನಂ. ರೆಗ್ಯುಲೇಷನ್ ಮೈಸೂರು ಕಂಪೆನಿಗಳ ರೆಗ್ಯುಲೇಷನ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷನ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟಿನದ್ದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಶೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಗೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿಗ ರೆಗ್ಯುಲೇಷನ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು-ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟ್ಟೋ 1905	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟ್ಟೋ 1907	143	1	0	0	6	0
56	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸನ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
59	ಇಸ್ತಿಹಾರ್ನಾಮ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು.	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡಾದುದು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908.	203	1	0	0	6	0

ರಜಿಸ್ಟ್ರೇಷನ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ ಮಾಹೇ ಯಾ ಕ್ವಾರಟರಿಗೆ		ದಾಮಾಷಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ ಕಾಪಿ 1ಕೆ, ರೆಗ್ಯುಲೇಷನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜ ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮುರ್ಕಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ 21ನೇ ಮುರ್ಕಂ 24205—6—ಜಿ. 6200ನೇ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

1900ನೇ ಇಸವಿ ಆಗಸ್ಟ 21ನೇ ಮುರ್ಕಂ 2633—41 ಮಿಸ. 558ನೇ ನಂಬರ ಗವರ್ನಮೆಂಟ ಪ್ರೊಸೀಡಿಂಗ್ಸ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ ಅಥವಾ ಕನ್ನಡ ಗೆಜೆಟ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

			ರೂ. ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೇ ಇಸವಿ VIIನೇ ರೆಗ್ಯುಲೇಷನ ಅನುಸರಿಸಿ ಸರ್ಟಿಫಿಕೇಟ ಬಗ್ಗೆ ನೋಟಿಸಗಳು :—			
ಮೊದಲನೇ ದಫಾ ಫಾಯಿಷ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ		..	2 8
ಎರಡನೇ ಸಲ ವ ಆತರುವಾಯು ಪ್ರತಿ ಆವರ್ತಿಗೂ ಡಿಟೋ		..	1 4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೇ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಗೆ ನೋಟಿಸಗಳಿಗೆ:—			
ಮೊದಲನೇ ಸಲಕ್ಕೆ ..	..	..	5 0
ಎರಡನೇ ವ ಆತರುವಾಯು ಪ್ರತಿ ದಫಾಕ್ಕೆ	..	..	2 8
ಸಿವಿಲ ಪ್ರೊಸಿಡ್ಯೂರ ಕೋಡಿನ 354ನೇ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತ್ತವೆ.			
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10 0
ಎರಡನೇ ಸಲ ವ ಆತರುವಾಯು ಪ್ರತಿ ಸಲಕ್ಕೂ	,,	..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—

			ರೂ. ಆ.
ಮೊದಲನೇ ದಫೆ ಇಂಗ್ಲೀಷ ಅಥವಾ ಕನ್ನಡಕ್ಕೆ		ಪಂಕ್ತಿ 1ಕ್ಕೆ ..	0 8
ಎರಡನೇ ದಫಾ	ಡಿಟೋ	ಡಿಟೋ	0 6
ಮೂರನೇ ವ ಆತರುವಾಯು ಪ್ರತಿ ಸಲಕ್ಕೆ	..	..	0 4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇವರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯು ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಆದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಛಾರ ಕಂಪೈಲರ, ಮೈಸೂರು ಗೆಜೆಟ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಮಿಷ್ ಆದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 8, ಸನ 1909.

II ನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ-ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು,
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗೆದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟು ಇಲಾಖಾ.

ನೋಟೀಸ.

ತಾರೀಖು 20ನೆ ಮಾರ್ಚಿ 1909.

ಈ ಕೆಳಗೆ ನಮೂದಿರತಕ್ಕ ತರಹೇದ ಮರವು ಮೈಸೂರು ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕು ಬೆಳಕವಾಡಿ ಜಹಗೀರ್ ಕಚೇರಿ ಬಳಿ ಬಿದ್ದಿರುತ್ತದೆ. ಇದಕ್ಕೆ ವಾರಸುದಾರರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ವಾರಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರವು ಸರ್ಕಾರೀದ್ದೇತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

ತರಹೆ.

ನಂ. 1— ಮಾವಿನ ಮರ—ಸಲೆ ಅಡಿ $8' \times 1\frac{1}{2}' \times 16'$.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಪ್ರಕಟನೆ.

ಶಿವಮೊಗ್ಗ ಡಿಸ್ಟ್ರಿಕ್ಟು ನಗರದ ತಾಲ್ಲೂಕಿನಲ್ಲಿರುವ ಕೇಳಂದೂರು ಫಾರೆಸ್ಟನ್ನು ಮುನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1909ನೆ ಇಸವಿ ಮಾರ್ಚಿ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 149—150—151ನೆ ಪೇಜುಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ಮತ್ತು ಎಡೆಹಳ್ಳಿ ಸಬ್ ತಾಲ್ಲೂಕಿನಲ್ಲಿರುವ ಮಾಡ್ಲ-ತೇಗೂರುಗುಡ್ಡ ಎಕ್ಸ್‌ಟೆನ್ಷನ್, ಫಾರೆಸ್ಟನ್ನು ಮುನ್ನಾ ಜಂಗಲಿ ಮಾಡಬೇಕೆಂದು ಇರುವ ವಿಷಯದಲ್ಲಿ 1909ನೆ ಇಸವಿ ಮಾರ್ಚಿ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 151—152—153ನೆ ಪೇಜುಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಎಂ. ಶ್ಯಾಮರಾವ್,
ಫಾರೆಸ್ಟ್ ಸೆಟ್ಲಮೆಂಟ್ ಆಫಿಸರ್ ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಕಟನೆ.

ತಾರೀಖು 20ನೆ ಮಾರ್ಚಿ 1909.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಕ್ಲೋಸ್‌ಪೇಟೆ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರೀ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ಕ್ಲೋಸ್‌ಪೇಟೆ ಟೌನ್ ಸರಹದ್ದು ಮದರಾಸ್-ಕನ್ನನೂರು ರಸ್ತೆಗೆ ಲಗತ್ತಾಗಿರುವ ಸದರೀ ಗ್ರಾಮದ ಸರ್ವೆ 168ನೆ ನಂಬರಿನ ವಾಯುವ್ಯ ದಿಕ್ಕಿನಲ್ಲಿ ಪ್ರಾರಂಭಿಸಿ ಸರ್ವೆ 168, 169, 170, 171, 172, 173ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಬಂದು ಕೊತ್ತಿಪುರ, ಆಮಾನಿಕೆರೆಗೆ ಹೋಗುವ ಹಣಿ ದಾಟಿ ಸರ್ವೆ 186 ಮತ್ತು 32ನೆ ನಂಬರುಗಳ ಪಶ್ಚಿಮ ದಿಕ್ಕಿನಲ್ಲಿ ಹೊರಡುತ್ತೆ. ಇಲ್ಲಿಂದ ಪೂರ್ವಕ್ಕೆ ತಿರುಗಿ ಸರ್ವೆ 32ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಕೊತ್ತಿಪುರಕ್ಕೆ ಹೋಗುವ ಹಣಿ ದಾಟಿ ಸೀದಾ ದಕ್ಷಿಣ ಮಾರ್ಗವಾಗಿ ಸರ್ವೆ 31ನೆ ನಂಬರಿನ ಪಶ್ಚಿಮ ಎಲ್ಲೆ ಮೇಲೆ ಮೈಸೂರು-ಬೆಂಗಳೂರು ರೈಲ್ವೆ ಹಾದಿಯನ್ನು ದಾಟುತ್ತೆ. ಅಲ್ಲಿಂದ ಹೊಲಗೆರೆಯನ್ನು ಬಳಸಿಕೊಂಡು ಸರ್ವೆ 30ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿಯು ಸರ್ವೆ 203ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಹೊರಟು ಹುಣಸಿನಹಳ್ಳಿಗೆ ಹೋಗುವ ಕಾಲುದಾರಿಯನ್ನು ದಾಟಿ ಪಶ್ಚಿಮಕ್ಕೆ ತಿರಿಗಿ ಸರ್ವೆ 103, 29ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೊರಟು ಸರ್ವೆ 73ನೆ ನಂಬರಿನ ಉತ್ತರ ಎಲ್ಲೆಯನ್ನು ಸೇರುತ್ತೆ. ಅಲ್ಲಿಂದ ಮೇಲೆ ನಮೂದಿಸಿದ ರೈಲ್ವೆ ಹಾದಿಯನ್ನು ಪುನಃ ದಾಟಿಕೊಂಡು ಸರ್ವೆ 72ನೆ ನಂಬರಿನ ಈಶಾನ್ಯ ಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣ ಮಾರ್ಗವಾಗಿ ತಿರಿಗಿ ಮೈಸೂರು-ಬೆಂಗಳೂರು ರೈಲ್ವೆ ಹಾದಿ ಮಾರ್ಗವಾಗಿರುವ ಸರ್ವೆ 72, 21, 27 ಮತ್ತು 63ನೆ ನಂಬರುಗಳ ಪೂರ್ವ ಎಲ್ಲೆಯು ಮಾರ್ಗವಾಗಿ ಹೊರಟು ಸರ್ವೆ 62ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತೆ.

II. ಅಲ್ಲಿಂದ ಎಲ್ಲೆಯು ಸರ್ವೆ 62, 52ನೆ ನಂಬರುಗಳ ಉತ್ತರ ಮಾರ್ಗವಾಗಿ ಹೊರಟು ಅರ್ಕಾವತಿನದಿಗೆ ಹೋಗುವ ಹಣಿಯನ್ನು ದಾಟಿ ಸರ್ವೆ 51ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಅರ್ಕಾವತಿನದಿಗೆ ಹೋಗುವ ಹಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 24ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 25, 23ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಈ ಎರಡು ನಂಬರುಗಳ ಮಧ್ಯೆ ಇರುವ ಹಣಿಯನ್ನು ದಾ

ಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 23ನೆ ನಂಬರಿನ ಉತ್ತರ ಮಾರ್ಗವಾಗಿ ಹೊರಟು ನದಿಗೆ ಹೋಗುವ ಓಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 22ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ನದಿಗೆ ಹೋಗುವ ಓಣಿಯನ್ನು ದಾಟಿ ಸರ್ವೆ 20ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು 19ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿಯು ಹೋಗುತ್ತೆ. ಅಲ್ಲಿಂದ ಸರ್ವೆ 17ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 16, 15, 14, 11, 10, 9, 8ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 14, 11, 10ನೆ ನಂಬರುಗಳ ಮಧ್ಯೆ ಅರ್ಕಾವತಿ ನದಿಗೆ ಹೋಗುವ ಎರಡು ಓಣಿಗಳನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಸರ್ವೆ 33ನೆ ನಂಬರಿನ ಮೂರು ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 116ನೆ ನಂಬರಿನ ಈಶಾನ್ಯ ಎಲ್ಲೆ ಮಾರ್ಗವಾಗಿಯು ಸರ್ವೆ 7ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಸರ್ವೆ 4ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಹೋಗಿ ಮೈಸೂರು-ಬೆಂಗಳೂರು ರಸ್ತೆ ಹತ್ತಿರ ಅರ್ಕಾವತಿ ನದಿಯ ಬಳಿಯಣ ಸೇತುವೆಯನ್ನು ಸಂಧಿಸುತ್ತೆ.

III. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ದಾಟಿಕೊಂಡು ಸರ್ವೆ 117, 118ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಅರ್ಕಾವತಿ ಪೂರ್ವದಡದ ಮಾರ್ಗವಾಗಿಯು ಹೋಗಿ ಸರ್ವೆ 119ನೆ ನಂಬರಿನ ನೈರುತ್ಯ ಎಲ್ಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 119-5ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರಿಗಿ ಸರ್ವೆ 120ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 123, 124ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿಯು ಹೊರಟು ಮೇಲೆ ನಮೂದಿಸಿದ ಎರಡು ನಂಬರುಗಳ ಮಧ್ಯೆ ನದಿಗೆ ಹೋಗುವ ಓಣಿಯನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರಿಗಿ ಸರ್ವೆ 4ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಅರ್ಕಾವತಿಗೆ ಹೋಗುವ ಓಣಿಯನ್ನು ಹಾದು ಸರ್ವೆ 133ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 136ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿಯು ನದಿಗೆ ಹೋಗುವ ಓಣಿಯನ್ನು ಪುನಃ ಹಾದು ಸರ್ವೆ 139ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಸರ್ವೆ 140ನೆ ನಂಬರಿನ ದಕ್ಷಿಣಕ್ಕೆ ಹೋಗಿ ವಡೇರಹಳ್ಳಿಗೆ ಹೋಗುವ ಕಾಲುದಾರಿ ಮಾರ್ಗವಾಗಿ ಕೊಂಚದೂರ ಹೋಗಿ ಮೇಲೆ ನಮೂದಿಸಿದ ಕಾಲುದಾರಿಯನ್ನು ಹಾದು ಸರ್ವೆ 141ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ಹಾದು ಸರ್ವೆ 148ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತೆ.

ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ಕ್ಲೋಸ್‌ಪೇಟೆ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಸೇರಿರುತ್ತೆ.

ರೆವಿನ್ಯೂ ಸರ್ವೆ 1, 2, 3, 5, 27, 28, 63, 71, 72, 117, 118, 119ನೆ ನಂಬರುಗಳು ಮತ್ತು ಸರ್ವೆ 141 ದಾಖಲೆ ಕೆಟ್ಟಿಹಳ್ಳಿ.

ಟಿ. ರಾಯಲು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ಸ೯ 1909ನೆ ಮಾರ್ಚಿ ಮಾಹೆ 23ರಲ್ಲು.

ನಂಜನಗೂಡು ಟವನ್ನಲ್ಲೂ ಮತ್ತು ಆಸಪಾಸ ಗ್ರಾಮದಲ್ಲೂ ದನಗಳಿಗೆ ದೊಡ್ಡರೋಗವು ವ್ಯಾಪಿಸಿರುವದರಿಂದ, ಸ೯ 1909ನೆ ಇಸವಿ ಫೆಬ್ರವರಿ ಮಾಹೆ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 257ನೆ ಪೇಜಿನಲ್ಲಿ ಪ್ರಕಟಿಸಲ್ಪಟ್ಟಿರುವ ಇಸ್ತಿಹಾರಲ್ಲಿ ಕಂಡಂತೆ, ನಂಜನಗೂಡು ಟವನ್ನಲ್ಲಿ ಬರುವ ಏಪ್ರಿಲ್ ಮಾಹೆ 2 ಮತ್ತು 3ನೆ ತಾರೀಖುಗಳಲ್ಲಿ ದನಗಳ ಪ್ರದರ್ಶನವು ನಡೆಯುವದಿಲ್ಲವೆಂದು ಇದರಿಂದ ಬಹಿರಂಗ ಪಡಿಸಿದೆ.

ಜಿ. ಬಿ. ಹೆಬ್ಲಿಕಾರ್,
ಫಾರ್ ಡೆಪ್ಯುಟಿ ಕಮಿಷನರ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 20ನೆ ಮಾರ್ಚಿ 1909.

1. ಕಂದಾಯದ ಬಾಕೀದಾರನಾದ ರಾಮಪುರದ ಜೋಡಿದಾರ್ ತಿರುಮಲಾಚಾರ್ಯರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಜೋಡಿ ರಾಮಪುರದ ಸಬ್ ತಾಲ್ಲೂಕು ಕಛೇರಿಲಿ 1909ನೆ ಇಸವಿ ಮೇ 7ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಕಸದರಬಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907-08ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ ರೂಪಾಯಿ 80-11-3 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕು. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡ... ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ವಿವರ.						ಅಂದಾಜಾ ಕಿಮ್ಮತ್ತು.	ಸರಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
				ಕಟ್ಟಡಗಳು.		ಜಮೀನು.						
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.			
								ಎ. ಗು.	ರೂ. ಆ. ಪೈ.			ರೂ. ಆ. ಪೈ.
ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು	ಮೇಲುಕೋಟೆ	ಜೋಡಿ ರಾಮಪುರ	ತಿರುಮಲಾಚಾರ್	...	...	1ರ ಲಾಗಾಯಿತು 52	ಖುಷ್ಕಿ ... ಬಾಗಾಯಿತು ತರಿ ... ಖರಾಬ ...	143 11 0 27 14 23 158 21 347 16	134 4 0 1 8 0 50 0 0 185 12 0	ರೂ. 1,500	ರೂ. ಆ. ಪೈ. 73 11 9	5 7 6 ಪ್ಲವಂಗ 73 11 9 ಪರಾಭವ 1 8 0 ನೋಟಿಸ್ 80 11 3 ಶೀದಾ ಈ ಬಡ್ಡಿ ಬೇರೆ ಬರಬೇಕು.

ಎಂ. ಕಾಂತರಾಜೇ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 16ನೆ ಮಾರ್ಚಿ 1909.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ 17—4—1867ನೆ ಸರ್ಕ್ಯುಲರ್ 6ನೆ ನಂಬರು ಭೂಮಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

ಶಿವಮೊಗ್ಗಾ ಡಿಸ್ಟ್ರಿಕ್ಟು ಸಾಗರದ ತಾಲ್ಲೂಕು ಅನಂತಪುರದ ಗ್ರಾಮದಲ್ಲಿ ಬಸವಂಣಪ್ಪನೆಂಬುವನು ತನ್ನ ಸ್ವಂತ ಖಾತೆ ವಾಳು ನಿವೇಶನವನ್ನು ಮನೆ ಕಟ್ಟುವ ಉದ್ದಿಶ್ಯ ನೆಲಗಟ್ಟು ಮಾಡಿಸುತ್ತಿರುವಾಗ್ಯೆ ಈ ಕೆಳಗೆ ವಿವರಿಸಿರುವ ನಿಧಿಯು ಸಿಕ್ಕಿತು.

ಭಂಗಾರದ ವರಹಾ ನಾಣ್ಯಗಳು 94.

ಭಂಗಾರದ ಬಾಖತು ಅರ್ಧವರಹ ನಾಣ್ಯಗಳು 51.

ಮತ್ತು ನಾಣ್ಯದಲ್ಲಿ ಕತ್ತರಿಸಿದ 2 ತುಂಡು. ಇವುಗಳೆಲ್ಲಾ ಸೇರಿ ಒಟ್ಟು ನಾಣ್ಯಗಳ ತೂಕ 35 ರೂಪಾಯಿ 4 ಆಣೆ.

ಭಂಗಾರದ ವಂಕಿ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 9 ರೂಪಾಯಿ 12 ಆಣೆ ಮತ್ತು 4 ಗುಲಗಂಜಿ.

(ಇದು ಸಿಕ್ಕಿದ ನಾಣ್ಯಗಳಿಂದ ತಯಾರಾಗಿರತಕ್ಕದ್ದು).

ಇವುಗಳೆಲ್ಲಾ ಭೂಮಿಯಲ್ಲಿ ಸಿಕ್ಕಿದ ನಾಣ್ಯಗಳಿಂದ ತಯಾರಾದದ್ದು.

ಭಂಗಾರದ ಹಿಂಬಳೆ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 5 ರೂಪಾಯಿ 12 ಆಣೆ 4 ಗುಂಜಿ ಕಡಮೆ.

ಭಂಗಾರದ ತಂತಿರೇಖು ಚೂರು ಮತ್ತು ಬಿಸಿಗೆ ಚೂರುಗಳು ಸಹ ತೂಕ 1 ರೂಪಾಯಿ 12 ಆಣೆ ಹಳೇ ಇಕ್ಕೇರಿ ಬಂಣ.

ಭಂಗಾರದ ಗಟ್ಟಿ ಒಂದು ಚೂರುಗಳು ಸಹ ಸೇರಿ 3 ರೂಪಾಯಿಗೆ 2 ಆಣೆ ಮತ್ತು 5 ಗುಲಗಂಜಿ ತೂಕ ಕಡಮೆ ಇದೆ. ಹಳೇ ಇಕ್ಕೇರಿ ಬಂಣ.

ಭಂಗಾರದ ಸುತ್ತುಂಗರ ಒಂದು 1 ವರಹಾ ತೂಕವಿರುತ್ತೆ ಬಂಣ ಇಕ್ಕೇರಿ ವರಹ.

ನಗದು 30 ರೂಪಾಯಿಗಳು ಈ ರೂಪಾಯಿಗಳು ಸಿಕ್ಕಿದ ನಾಣ್ಯಗಳ ಮಾರಾಟದಿಂದ ಉತ್ಪತ್ತಿ ಆದದ್ದು.

2. ಸದರಿ ವಿಶಿಷ್ಟ ನಿಧಿಯೇ ಆಗಲಿ ಅಥವಾ ಅದರ ಭಾಗಕ್ಕಾಗಲಿ ಹಕ್ಕುದಾರರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಪ್ರಯಿಪ್ರಾದ ತಾರೀಖು ಲಾಗಾಯಿತು 6 ತಿಂಗಳೊಳಗೆ ತಮ್ಮ ಹಕ್ಕು ಇರತಕ್ಕ ಬಗ್ಯೆ ದರಖಾಸ್ತು ಕೊಟ್ಟು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಯೆ ಖುದ್ದಾಗಿಯಾಗಲಿ ಏಜಂಟರ ಮೂಲಕವಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ನರರವರ ಆಫೀಸಿನಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಆರ್. ಟಿ. ಮಹದೇವರಾವ್,
ಫಾರ ಡೆಪ್ಯುಟಿ ಕಮಿಷನರ.

1909ನೆ ಇಸವಿ ಫೆಬ್ರುವರಿ 6ನೆ ಶನಿವಾರ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮಿಾಟಿಂಗ ಪ್ರೊಸೀಡಿಂಗ್ಸ ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗಸ್ಥ ಮೆಂಬರುಗಳು.

1. ಮಿ|| ಎಂ. ನಾರಾಯಣರಾಯರವರು, ಡೆಪ್ಯುಟಿ ಕಮಿಷನರ ಮತ್ತು ಪ್ರೆಸಿಡೆಂಟರು.
2. ,, ಟಿ. ತಂಬುಶೆಟ್ರು, ಬಿ. ಎ. ಶಿವಮೊಗ್ಗ ಡಿವಿಜನ ಅಸಿಸ್ಟೆಂಟ ಕಮಿಷನರು.
3. ,, ಎಂ. ಶ್ರೀನಿವಾಸ ಮೂರ್ತಿಗಳು ಸಾಗರ ಡಿವಿಜನ ಅಸಿಸ್ಟೆಂಟ ಕಮಿಷನರವರು.
4. ,, ಎ. ಮೃತ್ಯುಂಜಯ ಐಯ್ಯರ್, ಟ್ರೆಜರಿ ಅಸಿಸ್ಟೆಂಟ ಕಮಿಷನರ ಮತ್ತು ವೈಸ ಪ್ರೆಸಿಡೆಂಟರು.
5. ,, ಆರ್. ವಿ. ಸುಂದರಂ ಐಯ್ಯರ್, ಬಿ. ಎ., ಬಿ. ಸಿ. ಇ., ಶಿವಮೊಗ್ಗ ಡಿವಿಜನ ಎಗ್ಜಿಕ್ಯೂಟಿವ ಇಂಜನಿಯರವರು.
6. ,, ಮಹಮದ ಉಸ್ಮಾನ್ ಸಾಹೇಬರು, ಡಿಸ್ಟ್ರಿಕ್ಟು ಮೆಡಿಕಲ ಆಫಿಸರು.
7. ,, ತಿರುಮಲಾಚಾರ್ರು, ಶಿವಮೊಗ್ಗ ಡಿಸ್ಟ್ರಿಕ್ಟು ಸ್ಕೂಲ ಡೆಪ್ಯುಟಿ ಇನಸ್ಪೆಕ್ಟರವರು.

ಉದ್ಯೋಗಸ್ಥರಲ್ಲದ ಮೆಂಬರುಗಳು.

8. ಮಿ|| ನಾಡಿಗ ಶೀತಾರಾಮಪ್ಪನವರು, ಶಿವಮೊಗ್ಗ.
9. ,, ಉಬ್ರಾಣಿ ಶ್ಯಾನುಭೋಗ ಅಪ್ಪಾಜಪ್ಪನವರು, ಚನ್ನಗಿರಿ.
10. ,, ನಾಡಿಗ ಗೋಪಾಲಪ್ಪನವರು, ಹೊನ್ನಾಳಿ.
11. ,, ಸಾಲೂರ ಭವಾನಿರಾಯರು, ಶಿಕಾರಿಪುರ.
12. ,, ಬರದವಳ್ಳಿ ಗುರಪ್ಪಗೌಡರು, ಸಾಗರ ತಾಲ್ಲೂಕು.
13. ,, ಹೆಚ್. ರಾಮರಾಯರು, ಹುಮಚದಕಟ್ಟೆ, ತೀರ್ಥಹಳ್ಳಿ ತಾಲ್ಲೂಕು.
14. ,, ಸಿ. ಸುಬ್ಬರಾಯರು, ಬಿ. ಎ., ಬಿ. ಎಲ್., ಅಡ್ವೋಕೇಟ, ಶಿವಮೊಗ್ಗ.
15. ,, ತಾಗರ್ತಿ ದೇವಪ್ಪನವರು, ಶಿಕಾರಿಪುರ.
16. ,, ರಟ್ಟೆಹಳ್ಳಿ ಪುಟ್ಟಪ್ಪನವರು, ಸಾಗರ ತಾಲ್ಲೂಕು.
17. ,, ದೇವಂಗಿ ರಾಮಣ್ಣಗೌಡರು, ತೀರ್ಥಹಳ್ಳಿ.
18. ,, ಎ. ನರಸಿಂಹೈಯ್ಯಂಗಾರ್ರು, ಸಾಗರ.

ಗೈರ್ ಹಾಜರು.

1. ಮಿ॥ ನಾಡಿಗ ಭಾಸ್ಕರರಾಯರು, ಸೊರಬ ತಾಲ್ಲೂಕು.
2. ,, ಶ್ಯಾಮಣ್ಣ ಉಡುಪರು, ನಗರ ತಾಲ್ಲೂಕು.
3. ,, ನಾಡಿಗ ರಾಘವೇಂದ್ರಪ್ಪನವರು, ಕುಂಸಿ ಸಬ್ ತಾಲ್ಲೂಕು.
4. ,, ಖಾಜಿ ಸೈಯದ್ ಮಹಮ್ಮದ್ ಸಾಹೇಬರು, ಶಿವಮೊಗ್ಗ.
5. ,, ರೆವೆರೆಂಡ್ ಡಬ್ಲಿಯು ಟಾಂಲಿನ್ಸನ್ ರವರು, ಶಿವಮೊಗ್ಗ.
6. ,, ರೆವರೆಂಡ್ ಫಾದರ್ ಎಫ್. ಪೌಲ್ಸಿಯುವರು, ಶಿವಮೊಗ್ಗ.
7. ,, ವಾಮನರಾಯರು, ಸಾಹುಕಾರ್, ನಗರ.

1. ಸುಪಾರಿ ಹಾಳತದಮೇಲೆ ವಿಧಿಸಿದ್ದ ಒಂದು ಆಣೆ ಸೆಸ್ಸಿನ ಶೇಕಡಾ 76 ಅಂಶವು ವಜಾ ಆಗಿರುವದರಿಂದ ಉಂಟಾದ ನಷ್ಟಕ್ಕೆ ಪ್ರತಿಯಾಗಿ ನಂಬರು 1684-93—ಲ್ಯಾ. ರೆ. 490-06-3ನೆ ಮುಕ್ಕಾಂ 1907ನೆ ಇಸವಿ ಸೆಪ್ಟಂಬರ್ ತಾರೀಖು 2ನೆ ಗವರ್ನ್ಮೆಂಟ್ ಪ್ರೊಸೀಡಿಂಗ್ಸಿನಿಂದ ತೋಟಗಳ ಮೇಲೆ ವಿಧಿಸಿರುವ ಸ್ಪೆಷಲ್ ಸುಂಕದ ಶೇಕಡ 76 ಅಂಶವನ್ನು ಡಿಸ್ಟ್ರಿಕ್ಟ್ ಫಂಡಿಗೆ ಕೊಡುವದಕ್ಕೆ ಆಗುವದಿಲ್ಲವಾಗಿ ನಂಬರು 5873-81—ಲೋ. ಬೋ. 176-08-2ನೆ 1908ನೆ ಇಸವಿ ಡಿಸೆಂಬರ 19ನೆ ತಾರೀಖು ಮುಕ್ಕಾಂ ಗವರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ರಿಕಾರ್ಡು ಮಾಡಲಾಯಿತು. ಮತ್ತು ಸುಪಾರಿ ಹಾಳತವನ್ನು ವಜಾ ಮಾಡಿರುವದ್ದರಿಂದ ಡಿಸ್ಟ್ರಿಕ್ಟ್ ಫಂಡಿಗೆ ಉಂಟಾದ ಉತ್ಪನ್ನದ ನಷ್ಟಕ್ಕೆ ಬೇರೆ ಯಾವ ವಿಧದಿಂದ ಹಣ ಬರುವಹಾಗೆ ಮಾಡಬೇಕೆಂಬ ವಿಷಯವು ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

2. ಹೊಳೆಹೊನ್ನೂರು ನೇಟಿವ್ ವೈದ್ಯಶಾಲೆ ಪಂಡಿತರಿಗೆ ವೈದ್ಯಶಾಲಾ ಮನೆ ಬಾಡಿಗೆ ಕೊಡುವುದಕ್ಕೆ ಆಗುವದಿಲ್ಲವಾಗಿ ನಂಬರು 5331-8—ಲೋ. ಬೋ. 109-08-2ನೆ ಮುಕ್ಕಾಂ 1908ನೆ ಡಿಸೆಂಬರು 3ನೆ ಗವರ್ನ್ಮೆಂಟು ಪ್ರೊಸೀಡಿಂಗ್ಸು ಓದಲಾಗಿ ರಿಕಾರ್ಡು ಮಾಡಲಾಯಿತು. ಸದರಿ ವೈದ್ಯರು ಆ ಸ್ಥಳ ನಿವಾಸಿಕರಲ್ಲದಿರುವದರಿಂದ, ಅವರಿಗೆ ಸಲ್ಲುವ ಸಂಬಳದಿಂದ ಮನೆ ಬಾಡಿಗೆ ಕೊಡಬಹುದೆಂತ ಭಾವಿಸುವದಕ್ಕಾಗುವದಿಲ್ಲವೆಂತಲೂ, ಸದರಿ ಬಾಡಿಗೆಯು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡತಕ್ಕದ್ದು ಯುಕ್ತವೆಂತ ತೀರ್ಮಾನಿಸಲಾಯಿತು.

3. ತಾಲ್ಲೂಕುಗಳಿಗೆ ನೇಮಿಸುವದಕ್ಕೆ ತರಪೇತಾದ ಸ್ಯಾನಿಟರಿ ಮತ್ತು ಅಸಿಸ್ಟೆಂಟ್ ಸ್ಯಾನಿಟರಿ ಇನ್ಸ್ಪೆಕ್ಟರುಗಳನ್ನು ಕಳುಹಿಸುವ ವಿಷಯದಲ್ಲಿ ತಲ್ಪಿದ ನಂಬರು 2859ನೆ ಮುಕ್ಕಾಂ 1909ನೆ ಜನವರಿ 16ನೆ ಸ್ಯಾನಿಟರಿ ಕಮಿಷನರವರ ಲೆಟರು ಓದಲಾಗಿ ರಿಕಾರ್ಡು ಮಾಡಲಾಯಿತು.

4. 1908-09ನೆ ಸಾಲಿನ ಬಡ್ಜೆಟ್ ಗ್ರಾಂಟನ್ನು ಉಪಯೋಗಿಸುವ ವಿಷಯದಲ್ಲಿ ಹೊಸ ಸ್ಟೇಟ್ಮೆಂಟನೊಡನೆ ತಲ್ಪಿದ ಶಿವಮೊಗ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರ ನಂಬರು 39—11-1-09ನೆ ಡಾಕೆಟ್ ಓದಲಾಗಿ ಸ್ಯಾಂಕ್ಷನ್ ಮಾಡಲಾಯಿತು. ಮತ್ತು ಇದರಂತೆ ಉಪಯೋಗಿಸುವದರಿಂದ ಇನ್ನು ಹೆಚ್ಚಿಗೆ ಮೊಬಲಗಿನ ಖರ್ಚಿಗೆ ಆಸ್ಪದ ಕೊಡಕೂಡದೆಂತ ತೀರ್ಮಾನಿಸಲಾಯಿತು.

5. ತೀರ್ಥಹಳ್ಳಿ ತಾಲ್ಲೂಕು ಸಬ್ ರಿಜಿಸ್ಟ್ರಾರನ್ನು ಅಲ್ಲಿ ತಾಲ್ಲೂಕು ಬೋರ್ಡು ವೈಸ್ ಪ್ರೆಸಿಡೆಂಟರನ್ನಾಗಿ ನೇಮಿಸಬೇಕೆಂತ ತಲ್ಪಿದ ಸದರಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು 831—29-10-08ನೆ ಇತ್ತಿಲ್ಲೆ ಓದಲಾಗಿ, ಲೋಕಲ್ ಬೋರ್ಡು ರೂಲ್ಸಿನ 9ನೆ ಸೆಕ್ಷನ್ 2ನೆ ಕ್ಲಾಜನ್ನು ಅನುಸರಿಸಿ ಸದರಿ ವೈಸ್ ಪ್ರೆಸಿಡೆಂಟರನ್ನು ಚುನಾಯಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

6. ಆಗಸ್ಟು ತಿಂಗಳಲ್ಲಿ 5 ದಿವಸ ಹೊನ್ನಾಳಿ ನದಿಯ ಜಂಗಾಲು ದುರಸ್ತಿಗಾಗಿ ಡಿ. ಪಿ. ಡಬ್ಲ್ಯೂ. ಯವರ ಸ್ವಾಧೀನವಿತ್ತಾದ್ದರಿಂದ ಸದರಿ ದಿವಸಗಳ ಬಾಬ್ತು 50 ರೂಪಾಯಿಗಳನ್ನು ಕಂಟ್ರಾಕ್ಟು ಮೊಬಲಗಿನಿಂದ ವಜಾ ಮಾಡಬಹುದೆಂತ ತಲ್ಪಿದ ತಾಲ್ಲೂಕು ಅಮಲ್ದಾರರವರ ನಂಬರು 129—5-11-08ನೆ ಇತ್ತಿಲ್ಲೆ ಓದಲಾಗಿ ಸದರಿ ದಿವಸಗಳಲ್ಲಿ ಜಂಗಾಲು ಉಪಯೋಗದಲ್ಲಿರಲಿಲ್ಲವಾದ್ದರಿಂದ 50 ರೂಪಾಯಿಗಳು ವಜಾ ಮಾಡಬಹುದೆಂತ ತೀರ್ಮಾನಿಸಲಾಯಿತು.

7. ಹೊನ್ನಾಳಿ ನದಿಯು ಈ ವರುಷ ಹಿಂದಿನ ವರುಷಗಳಿಗಿಂತಲೂ ಮುಂಚಿತವಾಗಿ ದೋಣಿಗಳ ಸಹಾಯವಿಲ್ಲದೆ ದಾಟಬಹುದಾಗಿರುವದ್ದರಿಂದ ಈ ವರುಷ ಕಂಟ್ರಾಕ್ಟು ಮೊಬಲಗಿನಲ್ಲಿ $\frac{1}{4}$ ಅಂಶವನ್ನು ಮಾಫು ಮಾಡಬಹುದೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1162—878 ತಾರೀಖು 21—1—09ನೆ ಯಾದಿ ಓದಲಾಗಿ ಸದರಿ ಕಂಟ್ರಾಕ್ಟುದಾರರ ಅರ್ಜಿಯನ್ನು ತಾಲ್ಲೂಕು ಬೋರ್ಡಿನವರ ಅಭಿಪ್ರಾಯಕ್ಕೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

8. ಶಿವಮೊಗ್ಗ ತಾಲ್ಲೂಕು ವಡ್ಡರಹಟ್ಟಿ ಭಾವಿಯ ಕಂಟ್ರಾಕ್ಟುದಾರ್ ಅಂಬಳೆ ಶಾಮಣ್ಣನವರು ತಮಗೆ ರಿವೈಜ್ಡು ದರದಂತೆ ತಾವು ಮಾಡಿದ ಕಾಮಗಾರಿಯ ಹಣ ಕೊಡಿಸಬೇಕಾಗಿ ಕೇಳಿಕೊಳ್ಳುವ ವಿಷಯದಲ್ಲಿ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಅಭಿಪ್ರಾಯಕ್ಕೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

9. ಹೊಳೆಹೊನ್ನೂರು ಯೂನಿಯನ್ನಿನ ಟೋಲ್ ಗುತ್ತಾ ಮೊಬಲಗನ್ನು ಸದರಿ ಯೂನಿಯನ್ ಫಂಡಿಗೆ ಕೊಡಿಸಬೇಕೆಂತ ಶಿವಮೊಗ್ಗ ತಾಲ್ಲೂಕು ಬೋರ್ಡಿನವರ ತೀರ್ಮಾನದೊಂದಿಗೆ ತಲ್ಪಿದ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟು ಕಮಿಷನರವರ ನಂಬರು 1064—1-1-09ನೆ ಯಾದಿ ಓದಲ್ಪಟ್ಟು ಲೋಕಲ್ ಬೋರ್ಡು ರೆಗ್ಯುಲೇಷನ್ ಅನುಸರಿಸಿ ಯೂನಿಯನ್ ಗಳಿಗೆ ಟೋಲ್ ಗುತ್ತಾ ಮೊಬಲಗು ಸೇರತಕ್ಕದ್ದಲ್ಲವೆಂತ ತೀರ್ಮಾನಿಸಲಾಯಿತು.

10. ನಗರ ತಾಲ್ಲೂಕು ಕೆಂಚನಾಲಿ ಗ್ರಾಮದಲ್ಲಿ ಒಂದು ದೊಡ್ಡಿ ಸ್ಥಾಪಿಸುವ ವಿಷಯದಲ್ಲಿ ತಲ್ಪಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 399—13-9-08ನೆ ಯಾದಿ ಓದಲಾಗಿ ಸ್ಯಾಂಕ್ಷನ್ ಮಾಡಲಾಯಿತು.

11. ಕುಂಸಿ ಸಬ್ ತಾಲ್ಲೂಕು ವಾಸಸ್ಥ ತೋಟಪ್ಪಯ್ಯನವರಿಗೆ ಒಂದು ಅಮೃತಮಹಲ್ ಹೋರಿಯನ್ನು ಕೊಡಿಸಕೊಡ ಬಹುದೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರ ನಂಬರು 1108—12-1-09ನೆ ಯಾದಿ ಬದಲಾಗಿ ಅನುಮೋದಿಸಲ್ಪಟ್ಟಿತು.

12. ಶೃಂಗೇರಿ ಜಹಗೀರಿಗೆ ಸೇರಿದ ಶಿವಮೊಗ್ಗ ತಾಲ್ಲೂಕಿನಲ್ಲಿರುವ ಕೆಲವು ಇನಾಂ ಗ್ರಾಮಗಳನ್ನ ಯೂನಿಯನ್ನಾಗಿ ಮಾ ಡುವ ವಿಷಯದಲ್ಲಿ ತಲ್ಪಿದ ಶೃಂಗೇರಿ ಜಹಗೀರ್ ಅಸಿಸ್ಟೆಂಟ ಕಮಿಷನರವರ ನಂಬರು 613—13-1-09ನೆ ಯಾದಿ ಬದಲಾಗಿ ಸದರಿ ವಿಷಯದಲ್ಲಿ ಇನ್ನೂ ಕೆಲವು ಸಂಗತಿಗಳು ತಿಳಿಯಬೇಕೆಂತಲೂ ಮುಂದಿನ ಮೀಟಿಂಗಿನಲ್ಲಿ ಪುನಃ ಚರ್ಚಿಸತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

13. (1) ನಗರ ತಾಲ್ಲೂಕು ಕೋಸೂರು ಮತ್ತು ಕಂಪಿಕಟ್ಟೆಯ ಮುಸಾಫರಖಾನೆಗಳ ರಖವಾಲಿದಾರರಿಗೆ ಗ್ರೇನ್ ಕಂ ಪನ್‌ಸೇಷನ್ ಅಲೋವೆನ್ಸು ಕೊಡಬಹುದೇ ಎಂಬ ವಿಷಯ ಸದರಿ ನವ ರುಗಳು ಪೂರಾಕಾಲ ಉದ್ಯೋಗಸ್ಥರಾದ್ದರಿಂದ ಕೊಡಬ ಹುದೆಂತಲೂ (2) ಹೊಳೆಹೊನ್ನೂರು ನೇಟಿವ ವೈದ್ಯಶಾಲಾಪಂಡಿತರ ವಿಷಯದಲ್ಲಿ ಸದರಿಯವರು ಆ ರೀತಿ ನವುಕರರಲ್ಲದ್ದರಿಂದ ಅಲೋವೆನ್ಸು ಕೊಡಕೂಡದೆಂತಲೂ ತೀರ್ಮಾನಿಸಲಾಯಿತು.

14. ರೆವರೆಂಡ ಮಿಸ್ಟರ ಟಾಂಲಿನ್ಸನ್‌ರವರು ತಾವು ಫರ್ಲೋರಜಾದಮೇಲೆ ವಿಲಾಯಿತಿಗೆ ಹೋಗುವದ್ದರಿಂದ ಡಿಸ್ಟ್ರಿಕ್ಟು ಬೋರ್ಡು ಮೆಂಬರತನಕ್ಕೆ ರಾಜೀನಾಮಾಕೊಟ್ಟಿರುವದಾಗಿಯೂ ತನ್ನ ಬದಲಿಗೆ ಬಂದಿರತಕ್ಕ ರೆವರೆಂಡ ಮಿಸ್ಟರ ಬ್ರೋಕ ಬ್ಯಾಂಕರನ್ನ ನೇಮಕಮಾಡಬಹುದಾಗಿ ಬರೆದ ತಾರೀಖು 27—1—09ನೆ ಲೆಟರು ಬದಲಾಗಿ ರೆವರೆಂಡ ಮಿಸ್ಟರ ಟಾಂಲಿನ್ಸನ್ ಸಾಹೇಬರವರ ರಾಜೀನಾಮೆ ಸ್ವೀಕರಿಸಬೇಕಾಗಿಯೂ ಮತ್ತು ಅವರಿಗೆ ಬದಲಿ ರೆವರೆಂಡ ಮಿಸ್ಟರ ಬ್ರೋಕಬ್ಯಾಂಕ ಸಾಹೇಬರವರ ನ್ನ ನೇಮಕಮಾಡಬಹುದಾಗಿ ತೀರ್ಮಾನಿಸಲ್ಪಟ್ಟಿತು.

15. ಜನರಲ್ ಮತ್ತು ರೆವಿನ್ಯು ಸೆಕ್ರೆಟೆರಿಯವರು ಹಾಸನದ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರವರಿಗೆ ವೆಟರಿನರಿ ಆಸ್ಪ ತ್ರೆಗಳ ಸಾಲೀಯಾನ ಖರ್ಚಿನ ಮೊಬಲಗನ್ನ ಮುಂದಿನಸಾಲಿನ ಬಡ್ಜೆಟ್ಟಿನಲ್ಲಿ ಒದಗಿಸುವ ವಿಷಯದಲ್ಲಿ ಬರೆಸಿದ ನಂಬರು 6865-26-1-09ನೆ ಲೆಟರಿನ ಕಾಪಿಯೊಡನೆ ತಲ್ಪಿದ ಸದರಿಯವರ ನಂಬರು 6876-82—26-1-09ನೆ ಮೆಮೋರಾಂಡಂ ಬದಲಾಗಿ ಸಾಗರದಲ್ಲಿಯೂ ಮತ್ತು ಶಿವಮೊಗ್ಗದಲ್ಲಿಯೂ ಸ್ಥಾಪಿಸತಕ್ಕ ಆಸ್ಪತ್ರೆಗಳಿಗೋಸ್ಕರ 300 ಒದಗಿಸಬೇಕೆಂತ ತೀರ್ಮಾನಿಸಲಾ ಯಿತು.

16. ಹೊನ್ನಾಳಿ ತಾಲ್ಲೂಕು ಅರೆಬಗಟ್ಟೆ ಮತ್ತು ಬಸವನಹಳ್ಳಿ ಇವುಗಳ ಯೂನಿಯನ್ನಿಗೆ ಬದಲಾಗಿ ಅರಬಗಟ್ಟೆ ಮತ್ತು ಸುಂಕದಕಟ್ಟೆ ಎಂಬ ಗ್ರಾಮಗಳನ್ನ ಸೇರಿಸಿ ಒಂದು ಯೂನಿಯನ್ನಾಗಿ ಮಾಡತಕ್ಕ ವಿಷಯದಲ್ಲಿ ನಂಬರು 7208—ಎಲ್. ಬಿ. 69-08-5 ಮಾರ್ಕಂ 3—2—09ನೆ ನೋಟಿಫಿಕೇಷನೊಡನೆ ತಲ್ಪಿದ ಸೆಕ್ರೆಟೆರಿಯವರ ನಂಬರು 7209 ಮಾರ್ಕಂ 3-2-09ನೆ ಮೆಮೊ ಬದಲಾಗಿ ರಿಕಾರ್ಡು ಮಾಡಲಾಯಿತು.

17. ಈ ಡಿಸ್ಟ್ರಿಕ್ಟಿನಲ್ಲಿರುವ ಲೋಕಲ್ ಫಂಡ ಡಿಸ್ಪೆನ್ಸರಿಗಳ ಕಾಂಪೌಂಡುಗೋಡೆ ಕಟ್ಟಡಗಳಿಗೋಸ್ಕರ 1909-10ನೆ ಸಾಲಿನ ಬಡ್ಜೆಟ್ಟಿನಲ್ಲಿ ಹಣವದಗಿಸುವ ವಿಷಯದಲ್ಲಿ ಪ್ರೆಸಿಡೆಂಟರವರ ಆಫೀಸಿನಿಂದ ಸೀನಿಯರ್ ಸರ್ಜನ್ ಸಾಹೇಬರವರಿಗೆ ಬರೆದ ನಂಬ ರು 749 ಮಾರ್ಕಂ 5—6—08ನೆ ಡಾಕೆಟ್ ಬದಲಾಗಿ ಹಾಲಿ ಹಣವಿಲ್ಲದ್ದರಿಂದ ಈ ವಿಷಯವು ಸದ್ಯಕ್ಕೆ ಅಮಾನತ್ತಿನಲ್ಲಿರತಕ್ಕ ದ್ದೆಂತ ತೀರ್ಮಾನಿಸಲಾಯಿತು.

18. ಶಿವಮೊಗ್ಗಾ ಡಿಸ್ಟ್ರಿಕ್ಟ ಫಂಡು ಫೈನಾನ್ಸ್ ಕಮಿಟಿಯವರಿಂದ ತಯಾರಿಸಲ್ಪಟ್ಟ ಡಿಸ್ಟ್ರಿಕ್ಟು ಫಂಡಿನ 1909-10ನೆ ಸಾಲಿನ ಜಮಾ ಖರ್ಚಿನ ಬಜೆಟ್ ಅಂದಾಜಾಗಳು ಒದಲ್ಪಟ್ಟು ಈ ಕೆಳಗೆ ನಮೂದಿಸಿರುವ ಗೋಷ್ವಾರೆಯುಳ್ಳ ಡಿಸ್ಟ್ರಿಕ್ಟ ಫಂಡ ಬಜೆಟ ಅಂದಾಜಾ ಪ್ಯಾಸ್ ಮಾಡಲ್ಪಟ್ಟು ಜುಪ್ಪಿ ಸಾಲ್ಯಾಖೈರ್ ಬಾಕಿ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವು ಬಡ್ಜೆಟ್ಟು ಅಂ ದಾಜಾಗಳಿಗೆ ಲಗತ್ತು ಮಾಡಿರುವ ವಿವರಣೆ ಪತ್ರಿಕೆ ಇಲ್ಲಿ ನಮೂದಿಸಿರುತ್ತೆ.

		ರೂ.
ಗೋಷ್ವಾರೆ :—ಬರಬಹುದಾದ ಸಾಲು ಷುರು ಸಿಲ್ಕು	... ...	4,425
ಬರಬಹುದಾದ ಜಮಾ	... ...	96,920
ಸಿಲ್ಕು ಸಹಿತ ಒಟ್ಟು ಜಮಾ	...	...101,345
ಖರ್ಚಾಗಬಹುದಾದ ಮೊಬಲಗು A. P. W. D. ಡಿಪಾರ್ಟುಮೆಂಟ ಮೂಲಕ ನಡಿಸುವ ಕಾಮಗಾರಿಗಳಿಗೆ ಆಗಬಹುದಾದ ಖರ್ಚು.		52,215
B ರೆವಿನ್ಯೂ ಮೂಲಕ ಡಿಟೋ	... ...	11,910
C. ಸಿವಿಲ್ ಚಾರ್ಜ್	... ...	32,574
	ಒಟ್ಟು ...	96,699
ಉಳಿಯಬಹುದಾದ ಸಾಲಾಖೈರು ಶಿಲ್ಕು	... ...	4,646

19. ಇರಿಗೇಷನ್ ಸೆಸ್ ಫಂಡನ್ನು ಯಾವ ರೀತಿ ಉಪಯೋಗಿಸಬೇಕೆಂಬ ಬಗ್ಗೆ ಮತ್ತು ಯಾವ ರೀತಿ ಅದಕ್ಕೆ ಸಮ್ಮಂಧ ಪಟ್ಟ ಅಂದಾಜಾಗಳನ್ನ ತಯಾರಿಸಬೇಕೆಂಬ ವಿಷಯದಲ್ಲಿ ತಲ್ಪಿದ ನಂಬರು 2086—ಎಲ್. ಬಿ. 585-07-11 ಮಾರ್ಕಂ 24—9—08ನೆ ಗವರ್ನ್‌ಮೆಂಟ ಪ್ರೊಸೀಡಿಂಗ್ಸು ಬದಲಾಗಿ ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

20. ಈ ಕೆಳಗೆ ನಮೂದಿಸಿರುವ ಅಂದಾಜಾಗಳನ್ನು ಮಂಜೂರು ಮಾಡಲ್ಪಟ್ಟವು.

ತಾಲ್ಲೂಕು ಹೆಸರು.	ಕಾಮಗಾರಿಗಳು.	ಮೊಬಲಗು.
		ರೂ.
ಸೊರಬ ...	1. ಚಿಟ್ಟೂರು ದೊಡ್ಡಿ ರಿಪೇರಿ	67
	2. ಆನವಟ್ಟಿ ಭಾವಿ ರಿಪೇರಿ	37
	3. ಕಮರೂರು ದೊಡ್ಡಿ ಮನೆ	188
ಶಿವಮೊಗ್ಗ ...	1. ಹೊಳೇಹೊನ್ನೂರು ಯೂನಿಯನ್ನಿನಲ್ಲಿ ಮೈಲಾರದೇವರ ದೇವಸ್ಥಾನದ ರಸ್ತೆ ರಿಪೇರಿ.	27
	2. ಹಂಚಿನ ಸಿದ್ದಾಪುರದಲ್ಲಿ ಭಾವಿ ತೋಡುವದು	386
ನಗರ ...	1. ಸೋಮಯ್ಯನ ಸಾರಕ್ಕೆ ಸುತ್ತುಗೋಡೆ ಕಟ್ಟುವದು	18
	2. ಶಿವೇಶ್ವರ ಭಾವಿ ರಿಪೇರಿ	119

21. ಬೋರ್ಡಿನವರ ಒಪ್ಪಿಗೆ ನಿರೀಕ್ಷಣೆಯ ಮೇಲೆ ಪ್ರೆಸಿಡೆಂಟರವರಿಂದ ಸ್ಯಾಂಕ್ಷನ್ ಮಾಡಲ್ಪಟ್ಟ ಈ ಕೆಳಗೆ ನಮೂದಿಸಿರುವ ಅಂದಾಜಾಗಳು ಓದಲ್ಪಟ್ಟು ಅನುಮೋದಿಸಲ್ಪಟ್ಟವು.

ನಂಬರು	ತಾಲ್ಲೂಕು.	ಕಾಮಗಾರಿ.	ಮೊಬಲಗು.
			ರೂ.
1	ಚನ್ನಗಿರಿ ...	ಬಸವಾಪಟ್ಟಣ ಯೂನಿಯನ್ನಿನಲ್ಲಿ ರಸ್ತೆಗಳ ಕಾಮಗಾರಿ	35
2	ಡಿಟ್ಟೋ ...	ಹೋದಿಗೆರೆ ಡಿಟ್ಟೋ	47
3	ಡಿಟ್ಟೋ ...	ದುರ್ವಿಗೆರೆ ಡಿಟ್ಟೋ	50
4	ಡಿಟ್ಟೋ ...	ತಾವರೆಕೆರೆ ಡಿಟ್ಟೋ	92
5	ಡಿಟ್ಟೋ ...	ಪಾಂಡವಮಟ್ಟಿ ಡಿಟ್ಟೋ	222
6	ಶಿಕಾರಿಪುರ ...	ಕಡೆನಂದಿಹಳ್ಳಿ ಯೂನಿಯನ್ನಿನಲ್ಲಿ ರಸ್ತೆ ರಿಪೇರಿ	67
7	ಡಿಟ್ಟೋ ...	ಸಾಲೂರು ಡಿಟ್ಟೋ	30
8	ಡಿಟ್ಟೋ ...	ಬೆಳಗಾವಿ ಡಿಟ್ಟೋ	72
9	ಡಿಟ್ಟೋ ...	ಪುಡಗಣಿ ಡಿಟ್ಟೋ	56

22. ಈ ಕೆಳಗೆ ನಮೂದಿಸಿರುವ ಅಂದಾಜಾಗಳು ಬೋರ್ಡಿನವರು ಸ್ಯಾಂಕ್ಷನ್ ನಿರೀಕ್ಷಣೆ ಮೇರೆ ಪ್ರೆಸಿಡೆಂಟರವರಿಂದ ಕೌಂಟರ್ ಸೈನ್ ಮಾಡಲ್ಪಟ್ಟ ಎಗ್ಜಿಕ್ಯುಟಿವ್ ಇಂಜನೀಯರ್ ರವರಿಗೆ ವಾಪಸು ಮಾಡಲ್ಪಟ್ಟವುಗಳು ಅನುಮೋದಿಸಲ್ಪಟ್ಟವು.

ನಂಬರು.	ಕಾಮಗಾರಿ.	ಮೊಬಲಗು.
		ರೂ.
1	ಎಡೂರು ಇನ್‌ಸ್ಪೆಕ್ಷನ್ ಲಾಡ್ಜು ರಿಪೇರಿ	53
2	ಕೊಡಚಾದ್ರಿ ಮುಸಾಫರ ಬಂಗ್ಲೆ ರಿಪೇರಿ	148
3	ನಗರ ಡಿಟ್ಟೋ	154
4	ಮೇಗರವಳ್ಳಿ ಡಿಟ್ಟೋ	95
5	ಮಾಳೂರು ಡಿಟ್ಟೋ	66
6	ಹುಮುಚಕಟ್ಟೆ ಡಿಟ್ಟೋ	44
7	ಆವಿನಹಳ್ಳಿ ಡಿಟ್ಟೋ	26
8	ಪುಳವಿ ಡಿಟ್ಟೋ	30

23. ಮುಂದಿನ ಮೀಟಿಂಗು ಏಪ್ರೆಲ್ ತಾರೀಖು 23ರಲ್ಲಿ ನಡೆಯಬೇಕೆಂತ ತೀರ್ಮಾನಿಸಲ್ಪಟ್ಟಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಬೆಂಗಳೂರು ಸಿಟಿ ಮುನಿಸಿಪಾಲಿಟಿ.

ನೋಟಿಸ್.

ತಾರೀಖು 27ನೆ ಮಾರ್ಚಿ 1909.

1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 48ನೇ ಪ್ರಕರಣದ ಎರಡನೆ ಉಪಪ್ರಕರಣಕ್ಕೆ ಅನುಸಾರವಾಗಿ ಮಾಡಲ್ಪಟ್ಟ ಮ್ಯುನಿಸಿಪಲ್ ಸಭೆಯವರಿಂದ ಮಂಜೂರು ಹೊಂದಿರುವಂಥ ಕೆಳಗೆ ಕಾಣಿಸಿರುವ ಉಪನಿಬಂಧನೆಗಳನ್ನು 1909ನೆ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯಿತು ಜಾರಿಗೆ ತರುವ ವಿಷಯದಲ್ಲಿ ಯಾವವಿಧವಾದ ಆಕ್ಷೇಪಣೆಗಳು ಇದ್ದಲ್ಲಿ ಆಲೋಚಿಸ ಲಾಗುವುದು.

I. 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನಿನ 48ನೆ (ಸಿ) ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ರೊಟ್ಟಿ ಗಡಂಗು, ಮತ್ತು ಮಿಠಾಯಿ ಅಂಗಡಿಗಳಿಗೆ ಸಂಬಂಧವಾದ ಮಸೂದೆ ಉಪನಿಬಂಧನೆಗಳು.

(1) ಪ್ರೆಸಿಡೆಂಟರವರಿಂದ ವಾರ್ಷಿಕ ಲೈಸೆನ್ಸು ಪಡಿಯದೆ ಯಾವ ಸ್ಥಳವನ್ನು ರೊಟ್ಟಿ ಗಡಂಗಿಗಾಗಲಿ ಅಥವಾ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸಲ್ಪಡಲಾಗದು.

(2) ಕಟ್ಟಡವು ವಿಸ್ತಾರವಾಗಿಯೂ ತಕ್ಕದ್ದಾಗಿಯೂ ಇದ್ದ ವಿನಹ ರೊಟ್ಟಿ ಗಡಂಗಿಗಾಗಲಿ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸುವ ಬಗ್ಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

II. (1) ವಾರ್ಷಿಕ ಲೈಸೆನ್ಸನ್ನು ಕೇಳಿಕೊಳ್ಳುವದಕ್ಕೆ ಮುಂಚಿತವಾಗಿ ಕಟ್ಟಡದಲ್ಲಿನ ಉಪಯೋಗಕ್ಕಾಗಿ ನೀರಿನ ನಲ್ಲಿಯನ್ನು ಇಡಿಸಿಕೊಳ್ಳಲು ಹಾಗೆ ಇಡಿಸಿದ ನಲ್ಲಿಯನ್ನು ಅದಕ್ಕೆ ಸಂಬಂಧಿಸಿದ ಎಲ್ಲ ಅಜಬಾಬುಗಳನ್ನು ಸರಿಯಾಗಿಯೂ ಸಾರ್ವದಾ ಉಪಯೋಗಿಸುವ ಸ್ಥಿತಿಯಲ್ಲಿಯೂ ಇಟ್ಟುಕೊಂಡಿರಬೇಕು. ಕಟ್ಟಡವನ್ನು ಚೆನ್ನಾಗಿ ತೊಳೆದು ಶುಚಿಯಾಗಿ ಇಟ್ಟುಕೊಂಡಿರುವದಕ್ಕೆ ಅವಶ್ಯವಾದಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕು.

III. (1) ಪ್ರತಿ ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯ ಗೋಡೆಗಳಿಗೆ ತ್ಯಾವ ನೀರಕೊಡದಂತೆ ನೆಲದಮಟ್ಟದಿಂದ ನಾಲ್ಕಡಿ ಎತ್ತರದ ವರಿಗೆ ಸಿಮೆಂಟಿನಿಂದ ಗಾರೆ ಮಾಡಿಸಿರತಕ್ಕದ್ದು, ಮತ್ತು ಮಿಕ್ಕ ಭಾಗಕ್ಕೆಲ್ಲ ಸುಣ್ಣದಿಂದ ಇಲಾಯಿ ಮಾಡಿಸಿ ಸುಣ್ಣ ಬಳಿಸಬೇಕು. ಸದರಿ ಕಟ್ಟಡದ ನೆಲವು ಸಂಪೂರ್ತಿಯಾಗಿ ಸಿಮೆಂಟಿನಿಂದ ಗಾರೇ ಮಾಡಿಸಲ್ಪಟ್ಟಿರತಕ್ಕದ್ದು. ಅಥವಾ ಕಡಪ ಕಲ್ಲುಗಳು ಹಾಸಲ್ಪಟ್ಟು ಸಿಮೆಂಟು ಗಾರೆ ಮಾಡಿಸಿರಬೇಕು.

(2) ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯ ಯಾವ ಭಾಗವೂ ಪಾಯಿಖಾನೆಗುಂಡಿ ಅಥವಾ ಕಕ್ಕಸಿನ 30 ಅಡಿಗಳಿಗಿಂತ ಕಮ್ಮಿಯಾದ ಫಾಸಲೆಯಲ್ಲಾಗಲಿ ಅಥವಾ ದುರ್ವಾಸನೆ ಹೊಡಿಯತಕ್ಕ ಸಮೀಪವಾದ ಪ್ರದೇಶದಲ್ಲಿರಕೂಡದು.

IV. ರೊಟ್ಟಿ ಗಡಂಗಿನ ಬಗ್ಗೂ ಮತ್ತು ಮಿಠಾಯಿ ಅಂಗಡಿಯ ಬಗ್ಗೂ ಉಪಯೋಗಿಸಲ್ಪಡುವ ಸ್ಥಳವನ್ನು ಇತರ ಮತ್ಯಾವ ಉದ್ದೇಶಕ್ಕೂ ಉಪಯೋಗಿಸಕೂಡದು.

V. ಎಲ್ಲಾ ಪಾತ್ರೆಗಳು ಮತ್ತು ಇತರ ಸಾಮಾನುಗಳು ಶುಭ್ರವಾಗಿ ಇಡಲ್ಪಟ್ಟಿರಬೇಕು.

VI. ರೊಟ್ಟಿ ಮತ್ತು ಮಿಠಾಯಿ ತಯಾರಿ ಬಗ್ಗೆ ಉಪಯೋಗಿಸಲ್ಪಡುವ ಹಿಟ್ಟು, ಸಕ್ಕರೆ, ತುಪ್ಪ, ನೀರು, ಮತ್ತು ಇತರ ಪದಾರ್ಥಗಳು ಉತ್ತಮವಾದ್ದಾಗಿಯೂ ಆರೋಗ್ಯಕರವಾಗಿಯೂ ಇರಬೇಕು. ಹಿಟ್ಟು ಮತ್ತು ಸಕ್ಕರೆ ದಾಸ್ತಾನಿನ ಬಗ್ಗೆ ಪ್ರತ್ಯೇಕವಾದ ಉಗ್ರಾಣ ಅಥವಾ ಪಾತ್ರೆ (ಆಶಯ) ಉಂಟಾಗಿರತಕ್ಕದ್ದು ಮತ್ತು ಹಿಟ್ಟನ್ನಾಗಲಿ ಅಥವಾ ಸಕ್ಕರೆಯನ್ನಾಗಲಿ ರೊಟ್ಟಿ ಗಡಂಗಿನ ಯಾ ಮಿಠಾಯಿ ಅಂಗಡಿಯ ಯಾವಭಾಗದ ನೆಲದಮೇಲೂ ಅಥವಾ ಗೋಡೆಗೆ ಸೇರಿಕೆಯಾಗಿಯೂ ಹಾಕಿರಕೂಡದು.

VII. ಸದರಿ ಆವರಣದಲ್ಲಿನ ಯಾ ಆಸ್‌ಪಾಸಿನಲ್ಲಿನ ಕಸ ಮತ್ತು ಕಶ್ಮಲವು ಚೆನ್ನಾಗಿ ಗುಡಿಸಲ್ಪಡುತ್ತಿರಬೇಕು. ಮತ್ತು ಮೋಹರಿಯನ್ನು ನೀರಿನಿಂದ ಚೆನ್ನಾಗಿ ಶುಭ್ರಪಡಿಸಬೇಕು. ಮತ್ತು ಸದರಿ ಆವರಣವನ್ನು ಸರ್ವಕಾಲದಲ್ಲೂ ನಿರ್ಮಲವಾದ ಮತ್ತು ಹಸನು ಯಾ ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು.

VIII. ಸಾಂಕ್ರಾಮಿಕವಾದ ಅಥವಾ ಅಸಹ್ಯಕರವಾದ ರೋಗದಿಂದ ಅನುಭವಿಸುವಂಥಾ ಅಥವಾ ಅಂಥಾ ರೋಗಿಷ್ಟನ ಹಾಜರಾತಿಯಲ್ಲಿ ಹೊಸದಾಗಿರುವ ಮನುಷ್ಯನನ್ನು ಅಥವಾ ಮೈತೊಳೆಯದೇಲೂ ಯಾ ಬೇರೆರೀತಿಯಲ್ಲಿಯೂ ಅಶುಚಿಯಾದಂಥಾ ಯ್ಯಾವ ಮನುಷ್ಯನನ್ನು ರೊಟ್ಟಿ ಗಡಂಗಿನಲ್ಲಾಗಲಿ ಮಿಠಾಯಿ ಅಂಗಡಿಯಲ್ಲಾಗಲಿ ನೌಕರಿ ಬಗ್ಗೆ ಇಟ್ಟುಕೊಳ್ಳಕೂಡದು. ಮತ್ತು ಹಿಟ್ಟು ನಾದಲು ನೇಮಿಸಲ್ಪಡುವಂಥಾ ವಿಶಿಷ್ಟರು ಅವರ ಶರೀರದ ಮುಂಭಾಗವನ್ನು ಸಂಪೂರ್ಣವಾಗಿ ಮುಚ್ಚುವ ರೀತ್ಯಾ ಕುತ್ತಿಗೆಯಿಂದ ಮೊಣಕಾಲಿನ ವರೆಗೆ ಬೆಳ್ಳಗಿರುವ ಮತ್ತು ಶುಭ್ರವಾದ ನಾರು ಅಥವಾ ಅರಳೇ ಬಟ್ಟೆಯನ್ನು ಧರಿಸಿಕೊಳ್ಳಬೇಕು.

IX. ರೊಟ್ಟಿ ಗಡಂಗು ಅಥವಾ ಮಿಠಾಯಿ ಅಂಗಡಿ ಎಂಬುವದು ಬಿಕರಿಗೋಸ್ಕರ ರೊಟ್ಟಿಯನ್ನು ಸುಡುವದಕ್ಕೂ ಸೀಪದಾರ್ಥಗಳನ್ನು ತಯಾರ್ಮಾಡುವುದಕ್ಕೂ ಉಪಯೋಗಿಸಲ್ಪಡುವ ಒಂದು ಕಟ್ಟಡ ಅಥವಾ ಅಂಥಾ ಕಟ್ಟಡದ ಒಂದುಭಾಗ ಸೇರಿಕೊಂಡಿರುತ್ತದೆ.

X. ಯಾವ ಮನುಷ್ಯನು ರೊಟ್ಟಿಯನ್ನಾಗಲಿ ಮಿಠಾಯನ್ನಾಗಲಿ ಮುಚ್ಚಲ್ಪಟ್ಟ ಗಾಡಿ ಅಥವಾ ಮುಚ್ಚಳವುಳ್ಳ ಮಕ್ಕರಿ, ಟಿನ್ನು ಅಥವಾ ಇತರ ಆಶಯಗಳು ವಿನಹ ಒಂದು ಸ್ಥಳದಿಂದ ಇತರ ಯಾವ ಸ್ಥಳಕ್ಕೂ, ಸಾಗಿಸಕೂಡದು ಅಂಥಾ-ಪ್ರತಿ ಬಂಡಿಯೂ ಮಕ್ಕರಿಯೂ ಟಿನ್ನೂ ಅಥವಾ ಇತರ ಪಾತ್ರೆಗಳೂ ಸರ್ವದಾ ಸಂಪೂರ್ಣ ಶುಚಿಯಾಗಿ ಇಡಲ್ಪಟ್ಟಿರಬೇಕು. ಹಾಗೆ ಸಾಗಿಸಲ್ಪಡತಕ್ಕ ರೊಟ್ಟಿಯನ್ನಾಗಲಿ ಮಿಠಾಯಾಗಲಿ ಕೊಳೆ ಅಥವಾ ಅನಾರೋಗ್ಯವಾಗುವಂತೆ ಯಾವ ಕಾರ್ಯವೂ ನಡಿಸಕೂಡದು.

XI. ರೊಟ್ಟಿ-ಮಿಠಾಯಿ ವಗೈರೆ ಕಟ್ಟಲು ಉಪಯೋಗಿಸತಕ್ಕ ಕಾಗದಗಳು ಮತ್ತು ಹಚ್ಚಿಬೆ ಎಲೆಗಳು ವಿಶಿಷ್ಟವು ಶುಚಿಯಾಗಿರಬೇಕಲ್ಲದೆ ಅವುಗಳು ನಿರ್ಮಲವಾದ (ಗಡಗಂಚಿ) ಹಂದರದಲ್ಲಿ ದಾಸ್ತಾನ್ ಇಟ್ಟಿರಬೇಕು.

XII. ರೊಟ್ಟಿ, ಮಿಠಾಯಿ ವಗೈರೆಯನ್ನು ಬಿಕರಿಗೋಸ್ಕರ ಗಾಜಿನ ಸಮ್ಮುಖದ ಪೆಟ್ಟಿಗೆಯಲ್ಲಿ ಸಂಗ್ರಹಿಸಿ ಇಡಲ್ಪಟ್ಟಿರಬೇಕು, ಮತ್ತು ನೊಣಗಳಿಂದಾಗಲಿ, ಧೂಳಿನಿಂದಾಗಲಿ ಮತ್ತು ಕೆಟ್ಟವಾಸನೆಯಿಂದ ಮಲಿನತ್ವ ಹೊಂದದಂತೆ ಯುಕ್ತವಾದ ವಿಶಿಷ್ಟ ಎಚ್ಚರಿಕೆಯನ್ನ ತೆಗೆದುಕೊಳ್ಳತಕ್ಕದ್ದು. ಯಾವ ಮನುಷ್ಯನೇ ಆಗಲಿ ಒಂದು ರೊಟ್ಟಿ ಗಡಂಗಿನ ಸ್ವಾಧೀನ (ವಶ)ಗಾರನಂತೆ ಕೆಲಸಮಾಡುವ ಅಥವಾ ಪ್ರವರ್ತನೆಮಾಡುವಂತೆ ಕಂಡುಬರುವ ಯಾವ ಮನುಷ್ಯನನ್ನಾದರೂ ಸದರಿ ಗಡಂಗಿನ ಯಾ ಅಂಗಡಿಯ ಮಾಲೀಕ ಅಥವಾ ಯಜಮಾನನೆಂದು ಭಾವಿಸಲ್ಪಟ್ಟು ಅದರಂತೆ ಎಣಿಸಲಾಗುತ್ತೆ.

XIII. ಅಂಥಾ ರೊಟ್ಟಿಗಡಂಗು ಅಥವಾ ಮಿಠಾಯಿ ಅಂಗಡಿ ಲೈಸೆನ್ಸು ಹೊಂದಲ್ಪಟ್ಟಿರುತ್ತೆಂಬುದನ್ನು ತೋರಿಸುವ ಬಗ್ಗೆ ಒಂದು ಬೋರ್ಡ್ (ಗುರ್ತಿನ ಹಲಿಗೆ) ನ್ನು ಹಾಕಿಸಿರಬೇಕು.

XIV. ಯಾವನಾದರೂ ಈ ಉಪನಿಬಂಧನೆಗಳಲ್ಲಿ ನಿಯಾಮಕವಾಗಿರುವಂತೆ ಲೈಸೆನ್ಸು ಪಡಿಯದೆ ರೊಟ್ಟಿ ಗಡಂಗಿಗೋಸ್ಕರ ಅಥವಾ ಮಿಠಾಯಿ ಅಂಗಡಿಗೋಸ್ಕರ ಯಾವ ಸ್ಥಳವನ್ನಾದರೂ ಉಪಯೋಗಿಸಿದಲ್ಲಿ ಅಂಥವನು ತಪ್ಪು ಸ್ಥಾಪನೆಯಿಂದ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆ ತೆರಲು ಗುರಿಯಾಗುವನು. ಮತ್ತು ತಪ್ಪು ಸ್ಥಾಪನೆ ಆದನಂತರ ಅಂಥಾ ಸ್ಥಳವನ್ನು ಉಪಯೋಗಿಸುವ ಪ್ರತಿದಿನಕ್ಕೂ ಐದು ರೂಪಾಯಿಗಳ ವರಿವಿಗೆ ಹೆಚ್ಚು ಜುರ್ಮಾನೆ ತೆರಲು ಗುರಿಯಾಗುವನು.

1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ 48ನೆ (ಬಿ) ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ದೇಶೀಯ ಹೋಟಲ್ ಅಥವಾ ಭೋಜನ ಶಾಲಾಗಳಿಗೆ ಸಂಬಂಧಪಟ್ಟ ಮಸೂದೆ ಉಪ ನಿಬಂಧನೆಗಳು.

I. (1) ಒಂದು ಭೋಜನಶಾಲೆ ಅಥವಾ ಹೋಟಲ್ ಎಂಬುವುದು ಬಿಕರಿಬಗ್ಗೆ ತಯಾರುಮಾಡಿ ಇಡಲ್ಪಟ್ಟ ಪಕ್ವ ಮಾಡಿದ ಅಕ್ಕಿ, ಕುರಿಮಾಂಸ, ದನದಮಾಂಸ, ಕೋಳಿ, ತರಕಾರಿಗಳು, ಬ್ಯಾಳೆ ಮತ್ತು ತಿಂಡೀ ಸಾಮಾನುಗಳು, ಅಥವಾ ಚಪಾತಿ, ದೋಸೆ, ಟೀ, ಕಾಫಿ ವಗೈರೆ ಫಲಹಾರದ ಸಾಮಾನುಗಳುಳ್ಳ ಮನೆ ಅಥವಾ ಸ್ಥಳ ಸೇರಿದ್ದಾಗಿರುತ್ತೆ.

(2) ಪ್ರೆಸಿಡೆಂಟರವರಿಂದ ವಾರ್ಷಿಕ ಲೈಸೆನ್ಸು ಪಡಿಯದೆ ಯಾವ ಸ್ಥಳವೂ ಭೋಜನಶಾಲೆ ಯಾ ಹೋಟಲ್ ಬಗ್ಗೆ ಉಪಯೋಗಿಸಲ್ಪಡಕೂಡದು.

(3) ಭೋಜನಶಾಲೆಗೆ ಉಪಯೋಗಿಸಲ್ಪಡುವ ಕಟ್ಟಡವು ವಿಸ್ತಾರವಾಗಿಯೂ ತಕ್ಕದ್ದಾಗಿಯೂ ಇದ್ದವಿನಹ ಈ ಬಗ್ಗೆ ಲೈಸೆನ್ಸು ಕೊಡಲ್ಪಡುವುದಿಲ್ಲ.

II. (1) ಮೇಲ್ಕಂಡ ವ್ಯಾಪಾರವು ಹೇರಳವಾಗಿ ನಡೆಯುತ್ತೆಂದು ಪ್ರೆಸಿಡೆಂಟರವರು ಊಹಿಸಿದ ಸ್ಥಳಕ್ಕೆ ನೀರಿನ ನಲ್ಲಿಯನ್ನ ಇಡಿಸಲು ನಿರ್ಬಂಧಪಡಿಸಲಾಗುತ್ತೆ.

(2) ಸದರೀ ಕಟ್ಟಡದಲ್ಲಿ ಪಾನಕ್ಕಾಗಿ ಉಪಯೋಗಿಸುವ ನೀರು ಪಬ್ಲಿಕ್ ನೀರಿನ ಸರಬರಾಯಿ (ಹೆಸರುಪಟ್ಟದ) ಯಿಂದ ತರಲ್ಪಟ್ಟಿರಬೇಕು ಮತ್ತು ಸದರೀ ನೀರು ಕುದಿಸಲ್ಪಟ್ಟು, ಮುಚ್ಚಳುವುಳ್ಳ ನಿರ್ಮಲವಾದ ಪಾತ್ರೆಯಲ್ಲಿ ತೇಲಾಡುವ ಮಲಿನ ಪದಾರ್ಥ ಇಲ್ಲದ ರೀತ್ಯಾ ಶುಭ್ರವಾಗಿಟ್ಟಿರಬೇಕು. ಅಂಥಾ ನೀರಿನ ಪಾತ್ರೆಗಳು ನೀರು ತೆಗಿಯಲು ಟ್ಯಾಪ್ (ತಿರುಪು) ಉಳ್ಳವುಗಳಾಗಿರಬೇಕು, ಮತ್ತು ಅವುಗಳು ನೆಲದ ಮಟ್ಟಕ್ಕಿಂತ ಒಂದಡಿ ಯತ್ತರದಲ್ಲಿ ಶುಚಿಯಾದ ಸ್ಥಳದಲ್ಲಿ ಇಡಲ್ಪಟ್ಟಿರಬೇಕು.

III. (1) ಪ್ರತಿ ಭೋಜನಶಾಲೆ ಗೋಡೆಗಳಿಗೆ ತ್ಯಾವ ಸೇರಗೊಡದಂತೆ ಗಾರೆ ಹಾಕಲ್ಪಟ್ಟು ನೆಲಕ್ಕೆ ಕಲ್ಲು ಹಾಸಲ್ಪಟ್ಟಿರಬೇಕು.

(2) ಅಡಿಗೆಮನೆ ಮತ್ತು ನೀರಿನ ಮನೆಗಳು ಒಳ್ಳೇ ಘಾಳಿಯಾಡುವ ಸಾಧನೆಗಳುಳ್ಳವುಗಳಾಗಿರಬೇಕು, ಮತ್ತು ಇವುಗಳ ಹೊಗೆಯು ಇತರವಾಸದ ಕೊಠಡಿಗಳಿಗೆ ವ್ಯಾಪಿಸದಂತೆ ಹೊಗೇದ್ವಾರಗಳುಳ್ಳವುಗಳಾಗಿರಬೇಕು, ಭೋಜನಶಾಲೆ, (ಹೋಟಲ್) ಯಲ್ಲಿನ ಕೊಠಡಿಗಳೆಲ್ಲವೂ ಚೆನ್ನಾಗಿ ಬೆಳಕು ವುಳ್ಳವುಗಳಾಗಿಯೂ ಘಾಳಿಯಾಡಲು ಸಾಧನೆಗಳುಳ್ಳವುಗಳಾಗಿರಬೇಕು.

(3) ಸದರೀ ಭೋಜನಶಾಲಾ ವಶಗಾರನು ಅಥವಾ ಎಜಮಾನನು ಊಟದ ನಡುಮನೆ ವಿನಹ ಇನ್ಯಾವ ಸ್ಥಳದಲ್ಲಿಯೂ ಯಾರನ್ನೂ ಭೋಜನ ಮಾಡಗೊಳಿಸಕೂಡದು.

IV. (1) ಎಲ್ಲಾ ಪಾತ್ರೆಗಳನ್ನು ಇತರ ಸಾಮಾನುಗಳನ್ನು ಶುಭ್ರವಾಗಿಟ್ಟಿರತಕ್ಕದ್ದು, ಮತ್ತು ಪಕ್ವ ಮಾಡುವುದಕ್ಕಾಗಲಿ ಅಥವಾ ತಿನ್ನುವ ಪದಾರ್ಥಗಳಿಡುವದಕ್ಕಾಗಲಿ ಉಪಯೋಗಿಸುವ ಎಲ್ಲಾ ಲೋಹ ಪಾತ್ರೆಗಳು ಅಖಂಡ ಟಿನ್ ಕಲಾಯಿಗಳುಳ್ಳವುಗಳಾಗಿರಬೇಕು, ಮತ್ತು ಯಾವ ತರಹೆ ಸೀಸದ ಪಾತ್ರೆಗಳನ್ನು ಯಾವಬಗ್ಯೂ ಉಪಯೋಗಿಸಕೂಡದು, ಮನುಷ್ಯನ ಆಹಾರಕ್ಕೆ ನಿಯಮಿತವಾದ ಪಕ್ವಮಾಡಿದ ತಿಂಡಿ ಸಾಮಾನು, ಹಿಟ್ಟಿನ ಪದಾರ್ಥ (ಹೋಳಿಗೆ ವಗೈರೆ) ಅಥವಾ ಮಿಠಾಯಿ, ಫಲಹಾರದ ಸಾಮಾನು, ಕೆಡದಂತೆ ಭದ್ರಮಾಡಿದ ಒಣಗಿಸದ ಅಥವಾ ಕೊಯಿದ ಹಣ್ಣುಗಳು ಸಹಾ ನೊಣಗಳಿಂದಲಾಗಲೀ, ಧೂಳಿನಿಂದಾಗಲಿ ಮತ್ತು ಕೆಟ್ಟವಾಸನೆಯಿಂದಾಗಲೀ ಮಲಿನತ್ವ ಯಾ ಕೆಡದಂತೆ ಯುಕ್ತವಾದ ಎಚ್ಚರಿಕೆಯು ತೆಗೆದುಕೊಳ್ಳಲ್ಪಡತಕ್ಕದ್ದು.

(2) ಮನುಷ್ಯ ಆಹಾರಕ್ಕೆ ಯಾವವಿಧವಾಗಿ ಯೋಗ್ಯವಲ್ಲದ ಹಳೇದಾದ (ತಂಗಳು) ಅನಾರೋಗ್ಯವುಳ್ಳ ಕೆಡಕಾದ ಯಾವ ತರಹೆ ತಿಂಡಿ ಪದಾರ್ಥಗಳನ್ನೂ ಸದರಿ ವಠಾರದಲ್ಲಿ ದಾಸ್ತಾನ್ ಇಡಕೂಡದು, ಮತ್ತು ಬಿಕರಿಗೆ ಹೊರಪಡಿಸಕೂಡದು.

(3) ಸದರಿ ಆವರ್ಣದಲ್ಲಿನ ಯಾ ಆಸುಪಾಸಿನಲ್ಲಿನ ಕಶ್ಮಲವು ಚನ್ನಾಗಿ ಗುಡಿಸಲ್ಪಡುತ್ತಿರಬೇಕು. ಮತ್ತು ಮೋಹರಿಯನ್ನು ನೀರಿನಿಂದ ಚನ್ನಾಗಿ ಶುಭ್ರಪಡಿಸಬೇಕು, ಮತ್ತು ಸದರಿ ಕಟ್ಟಡವನ್ನ ಎಲ್ಲಾ ಕಾಲದಲ್ಲೂ ನಿರ್ಮಲವಾಗಿಯೂ, ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು. ಮತ್ತು ಸದರೀ ಕಟ್ಟಡಕ್ಕೆ ಅವಶ್ಯವಾದಷ್ಟು ಮಲವಿಸರ್ಜನೇ ಸ್ಥಳದ ಅನುಕೂಲತೆ ಉಂಟಾಗಿರತಕ್ಕದ್ದು, ಮತ್ತು ಮಲವಿಸರ್ಜನೆ ಸ್ಥಳವನ್ನ ನಿರ್ಮಲವಾಗಿಟ್ಟಿರಬೇಕಲ್ಲದೆ, ಮಲವು ಬೂದಿಯಿಂದಾಗಲೀ ಮಣ್ಣಿನಿಂದಾಗಲೀ ಮುಚ್ಚಲ್ಪಟ್ಟಿರಬೇಕು.

V. ಸಾಂಕ್ರಾಮಿಕವಾದ ಅಥವಾ ಅಸಹ್ಯಕರವಾದ ರೋಗದಿಂದ ಅನುಭವಿಸುವಂಥ ಅಥವಾ ಅಂಥಾ ರೋಗಿಷ್ಟನ ಹಾಜರಾತಿಯಲ್ಲಿ ಈಚಿಗೆ ಇದ್ದಂಥಾ ಮನುಷ್ಯನನ್ನು ಅಥವಾ ಮೈ ತೊಳೆಯದೇಲೂ ಯಾ ಬೇರೇ ರೀತಿಯಲ್ಲಿ ಅಶುಚಿಯಾದಂಥ ಯಾವ ಮನುಷ್ಯನನ್ನೂ ಹೋಟೆಲ್‌ನಲ್ಲಿ ನೌಕರಿ ಬಗ್ಗೆ ಇಟ್ಟುಕೊಳ್ಳಕೂಡದು.

VI. (1) ಮಠಾರ ವಿಶಿಷ್ಟವೂ ಮತ್ತು ಪಕ್ವಮಾಡಿದ ಮತ್ತು ಹಸೀದಾದ ಪದಾರ್ಥಗಳೆಲ್ಲವೂ ಮತ್ತು ಪಾತ್ರೆಗಳು ಪ್ರೆಸಿಡೆಂಟರವರಿಂದಾಗಲೀ ಹೆಲ್ತ್ ಆಫಿಸರವರಿಂದಾಗಲಿ ಅಥವಾ ಇವರಪಕ್ಷವಾಗಿ ಅಧಿಕಾರಹೊಂದಿದ ಯಾವ ಆಫಿಸರಿಂದಾಗಲಿ ಅಜಮಾಯಿಷಿ ಮಾಡಲ್ಪಡಲು ತೆರೆಯಲ್ಪಟ್ಟಿರತಕ್ಕದ್ದು.

(2) ಅಪಾಯಕರವಾದ ಸಾಂಕ್ರಾಮಿಕ ರೋಗಗಳಿಂದ (ಅಂದರೆ) ಕಲರಾ, ಪ್ಲೇಗ್ ಮತ್ತು ಬೊಬ್ಬೆಯೇಳುವ ಜ್ವರಗಳು ಅಂದರೆ ಸಿಡುಬು, ಸೀತಾಳೆ, ಗೊಬ್ಬರ ಮತ್ತು ಏಳು ದಿನಗಳಿಗಿಂತ ಪರಿಮಾಣವುಳ್ಳ ಜ್ವರಗಳ ವಿದ್ಯಮಾನಗಳನ್ನು ತಕ್ಷಣ ಪ್ರೆಸಿಡೆಂಟರವರಿಗೆ ತಿಳಿಸತಕ್ಕದ್ದು.

VII. (1) ಯಾವ ಮನುಷ್ಯನು ಈ ಉಪ ನಿಬಂಧನೆಗಳು ಜಾರಿಗೆ ತರಲ್ಪಟ್ಟ ತರುವಾಯ ಅಂಥಾ ಭೋಜನಶಾಲೆ ಯಾ ಹೋಟೆಲನ್ನು ಇಡಲು ಅಥವಾ ನಡೆಸಲು ಉಪಕ್ರಮಿಸಿದ ಏಳು ದಿನಗಳೊಳಗಾಗಿ ಲೈಸೆನ್ಸು ಪಡೆಯದೆ ಭೋಜನಶಾಲೆ ಯಾ ಹೋಟೆಲ್ ಇಡಕೂಡದು. ಯಾ ನಡಿಸಕೂಡದು. ಈ ಉಪ ನಿಬಂಧನೆಗಳನ್ನು ಜಾರಿಗೆ ತರುವ ಕಾಲದಲ್ಲೇ ಇಡಲ್ಪಟ್ಟಿರುವ ಯಾ ನಡಸಲ್ಪಡುತ್ತಿರುವ ಹೋಟೆಲ್‌ಗಳ ವಿಷಯದಲ್ಲಿ ಈ ಉಪ ನಿಬಂಧನೆಗಳು ಜಾರಿಗೆ ತರಲ್ಪಟ್ಟ ಮುವ್ವತ್ತು ದಿನಗಳೊಳಗಾಗಿ ಲೈಸೆನ್ಸು ಪಡಿಯದೆ ಇಡಕೂಡದು.

(2) ಒಂದು ಹೋಟೆಲ್ ಮನೆಯ ಸ್ವಾಧೀನಗಾರನಂತೆ ಕೆಲಸಮಾಡುವ ಅಥವಾ ಪ್ರವರ್ತನೆ ಮಾಡುವಂತೆ ಕಂಡುಬರುವ ಯಾವ ಮನುಷ್ಯನನ್ನಾದರೂ ಸದರಿ ಹೋಟೆಲಿನ ಮಾಲೀಕ ಅಥವಾ ಎಜಮಾನನೆಂದು ಭಾವಿಸಲ್ಪಟ್ಟು ಅದರಂತೆ ಎಣಿಸಲಾಗುತ್ತೆ.

VIII. ಸದರಿ ದೇಶೀಯ ಹೋಟೆಲ್ ಯಾ ಭೋಜನಶಾಲೆಯು ಲೈಸೆನ್ಸು ಹೊಂದಲ್ಪಟ್ಟಿರುತ್ತೆ ಎಂಬುದನ್ನ ತೋರಿಸಲು ಬೋರ್ಡು (ಗುರ್ತಿನ ಹಲಿಗೆ) ಯನ್ನ ಹಾಕಿಸಲ್ಪಟ್ಟಿರತಕ್ಕದ್ದು.

IX. ಈ ಉಪ ನಿಬಂಧನೆಗಳಲ್ಲಿ ನಿಯಾಮಕವಾಗಿರುವಂತೆ ಲೈಸೆನ್ಸು ಪಡಿಯದೆ ಯಾವ ಸ್ಥಳವನ್ನಾದರು ಹೋಟೆಲ್ ಬಗ್ಗೆ ಉಪಯೋಗಿಸಿದಲ್ಲಿ ಅಂಥವನು ತಪ್ಪು ಸ್ಥಾಪನೆಯಿಂದ 50 ರೂಪಾಯಿಗಳಿಗೆ ಮಿಾರದ ಜುಲ್ಮಾನೆ ತೆರಲು ಗುರಿಯಾಗುವನು. ಮತ್ತು ತಪ್ಪು ಸ್ಥಾಪನೆಯಾದನಂತರ ಅಂಥಾ ಸ್ಥಳವನ್ನು ಉಪಯೋಗಿಸುವ ಪ್ರತಿ ದಿನಕ್ಕೂ 5 ರೂಪಾಯಿನ ವರಿವಿಗೆ ಹೆಚ್ಚು ಜುಲ್ಮಾನೆ ತೆರಲು ಗುರಿಯಾಗುವನು.

ಸನ 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನ 48 (*c*) ನೆ ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ಮಂಜಿನ ಗಡ್ಡೆ ಮತ್ತು ಸೋಡಾ ವಾಟರ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ವಿಷಯದ ಮಸೂದೆ ಉಪನಿಬಂಧನೆಗಳು.

(1) ಮಂಜಿನಗಡ್ಡೆ ಅಥವಾ ಸೋಡಾ ವಾಟರ್ಸ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ಬಗ್ಯೆ ಲೈಸೆನ್ಸು ಹೊಂದಿದ ಹೊರ್ತು ಯಾವ ಸ್ಥಳವೂ ಉಪಯೋಗಿಸಲ್ಪಡಕೂಡದು.

(2) ಮೇಲ್ಕಂಡ ಬಗ್ಯಾಗಿ ಯಾವ ಮಠಾರವನ್ನಾದರು ಉಪಯೋಗಿಸಲಪೇಕ್ಷಿಸುವ ಮನುಷ್ಯನು ಲೈಸೆನ್ಸು ಹೊಂದಲು ಪ್ರೆಸಿಡೆಂಟರವರಿಗೆ ಅರ್ಜಿ ಬರೆದುಕೊಳ್ಳಬೇಕು. ಪ್ರೆಸಿಡೆಂಟರವರು ಅಂಥಾ ಲೈಸೆನ್ಸನ್ನೂ ಅವರಿಗೆ ಯುಕ್ತ ತೋರುವ ರೀತ್ಯಾ ಕೊಡಬಹುದು ಅಥವಾ ತಿರಸ್ಕರಿಸಬಹುದು.

(3) ಈ ಉಪನಿಬಂಧನೆ ಮೇರಿಗೆ ಕೊಡಲ್ಪಟ್ಟ ಲೈಸೆನ್ಸುಗಳನ್ನ ರಿನ್ಯೂ ಮಾಡಲು (ನವಿಕರಿಸಲು) ಪ್ರತಿ ಸರ್ಕಾರಿ ಸಾಲಿನ ಮೊದಲ ಮಾಹೆ ಆಖ್ಯೆರ್ ಒಳಗಾಗಿ ಪ್ರೆಸಿಡೆಂಟರವರಿಗೆ ಅರ್ಜಿ ಬರೆದುಕೊಳ್ಳಬೇಕಾಗಿರುತ್ತೆ.

(4) ಈ ಉಪನಿಬಂಧನೆಗಳನುಸಾರವಾಗಿ ಕೊಡಲ್ಪಡುವ ಮಂಜಿನ ಗಡ್ಡೆಯ ಕಾರ್ಖಾನೆ ಲೈಸೆನ್ಸು ಬಗ್ಯೆ 50 ರೂಪಾಯಿನಂತೆಯೂ, ಸೋಡಾ ವಾಟರ್ಸ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ಕಾರ್ಖಾನೆಯ ಬಗ್ಯೆ 100 ರೂಪಾಯಿನಂತೆಯೂ ಲೈಸೆನ್ಸು ಫೀ ದಾಖಲ್ಮಾಡಲಾಗುತ್ತೆ.

ಈ ಉಪನಿಬಂಧನೆ ಮೇರಿಗೆ ಕೆಳಗೆ ನಮೂದಿರುವ ಬಾಬುಗಳಿಗೆ ಕೊಡಲ್ಪಡುವ ಲೈಸೆನ್ಸುಗಳಿಗೆ ಇದರಡಿ ಕಂಡ ಷರತ್ತುಗಳು ಲಗಾವಾಗಿರತಕ್ಕದ್ದು.

(1). ಮಂಜಿನಗಡ್ಡೆ ಕಾರ್ಖಾನೆ ಬಗ್ಯೆ.

(*a*) ಮಂಜಿನ ಗಡ್ಡೆಯಾಗಿ ಮಾಡಲು ಉಪಯೋಗಿಸಲ್ಪಡುವ ನೀರನ್ನ ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡುವ ಜಾಗದಿಂದ ತರಲ್ಪಡತಕ್ಕದ್ದು.

(*b*) ಅಂಥಾ ನೀರನ್ನ ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡದ ಪಕಾಲೆಯಲ್ಲಾಗಲಿ ಅಥವಾ ಇತರ ಇನ್ಯಾವ ಪಾತ್ರೆಯಲ್ಲಾಗಲಿ ತರಕೂಡದು.

(*c*) ಅಂಥಾ ನೀರನ್ನ ತರಲು ನೇಮಿಸಲ್ಪಡತಕ್ಕ ಬಂಡಿಗಳು ಆವರ್ಣದಲ್ಲಿ ಇಡಲ್ಪಟ್ಟಿರಬೇಕು. ಮತ್ತು ಅಂಥಾ ಕಾರ್ಖಾನೆಯ ವಿಳಾಸವು ನೀರಿನ ಪೀಪಾಯಿನ ಮೇಲೆ ಬಣ್ಣದಿಂದ ಬರೆಯಲ್ಪಟ್ಟಿರಬೇಕು, ಮತ್ತು ಅಂಥಾ ಬಂಡಿಗಳು ಸರ್ವ ಕಾಲದಲ್ಲೂ ಸರಿಯಾದ ಶುಚಿಯಾದ ಸ್ಥಿತಿಯಲ್ಲಿ ಇಡಲ್ಪಟ್ಟಿರತಕ್ಕದ್ದು.

(*d*) ಮಂಜಿನಗಡ್ಡೆ ಕಾರ್ಖಾನೆಯ ಆವರ್ಣವು ಸರಿಯಾದ ಶುಚಿಯಾದ ಸ್ಥಿತಿಯಲ್ಲಿ ಇಡಲ್ಪಟ್ಟಿರಬೇಕು. ಮತ್ತು ಕಶ್ಮಲ ನೀರು ವಿಶಿಷ್ಟವೂ ಸಂಪೂರ್ಣವಾಗಿ ಹರಿದು ಹೋಗುವಂತೆ ಮೋಹರಿವುಳ್ಳದ್ದಾಗಿರಬೇಕು.

(*e*) ಹೆಲ್ತ್ ಆಫಿಸರೇ ಆಗಲಿ ಅಥವಾ ಯಾವ ಮ್ಯುನಿಸಿಪಲ್ ಸ್ಯಾನಿಟೆರಿ ಇನ್‌ಸ್ಪೆಕ್ಟರೇ ಆಗಲಿ ಮಂಜಿನ ಗಡ್ಡೆ ತಯಾರಿ ಅಥವಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಯಾವ ಸ್ಥಳವನ್ನೂ ಅದು ತೆರೆಯಲ್ಪಟ್ಟಿರುವಾಗ ಯಾವ ಕಾಲದಲ್ಲಾಗಲಿ ಪ್ರವೇಶಿಸುವದಕ್ಕೂ ಸದರಿ ಸ್ಥಳದಲ್ಲಿ ತಯಾರಾದಂಥ ಅಥವಾ ಬಿಕರಿ ಬಗ್ಯೆ ಇಟ್ಟಿರತಕ್ಕಂಥಾ ಮಂಜಿನಗಡ್ಡೆಯನ್ನೂ ಅಜಮಾಯಿಷಿ ಮಾಡುವದಕ್ಕೂ ಅಥವಾ ಅಂಥಾದರ ಮಾದರಿಯನ್ನ ತೆಗದುಕೊಳ್ಳುವದಕ್ಕೂ ನ್ಯಾಯವಾಗಿರತಕ್ಕದ್ದು. ಮತ್ತು ಅಂಥಾ ಮಾದರಿಯನ್ನು ತೆಗೆದುಕೊಳ್ಳುವದಕ್ಕೆ ಅಪ್ಪಣೆ ಕೊಡಲು ತಿರಸ್ಕರಿಸುವಂಥಾ ಅಂಥಾ ಸ್ಥಳದ ಸ್ವಾಧೀನಗಾರನಾಗಲಿ ಅಥವಾ ಯಜಮಾನನಾಗಲಿ ಒಂದು ಅಪರಾಧಕ್ಕೆ ಒಳಪಡುವನು (ತಪ್ಪಿತಸ್ಥನಾಗುವನು) ಅಂಥಾ ಮಾದರಿಯು ಗೌರ್ನಮೆಂಟು ಕೆಮಿಕಲ್ ಎಗ್ಜಾಮಿನರ್ ಮತ್ತು ಬ್ಯಾಕ್ಟರಿಯಾಲೊಗಿಸ್ಟ್ ಯವರಿಗೆ ಕಳ್ಳೆ ಕಳುಹಿಸಲ್ಪಟ್ಟು ಅಂಥಾ ಮಾದರಿಯು ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ಅವರಿಂದ ಕೊಡಲ್ಪಡುವ ಸರಟಫಿಕೇಟಿನಿಂದ ತಿಳಿಯಬಂದಲ್ಲಿ ಈ ಬಗ್ಯೆ ವಿರೋಧವನ್ನ ಸಿದ್ಧಾಂತಪಡಿಸುವವರಿಗೂ ಅದು ಹಾಗೆ ಅಯೋಗ್ಯವೆಂಬುವದಕ್ಕೆ ಅದೇ ತಕ್ಕ ರುಜುವಾತಾಗಿರತಕ್ಕದ್ದು. ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ರುಜುವಾತಾಗಿರುವ ಮಾದರಿಯು ಯಾವ ಸ್ಥಳದಿಂದ ತರಲ್ಪಟ್ಟಿತೋ ಅಂಥಾ ಮಂಜಿನ ಗಡ್ಡೆ ತಯಾರಿ ಯಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಸ್ಥಳದ ಯಜಮಾನನು ಅಥವಾ ಕಾರ್ಯನಿರ್ವಾಹಕನು ಒಂದು ಅಪರಾಧ ನಡಿಸಿದವನಾಗುವನು (ತಪ್ಪಿತಸ್ಥನಾಗುವನು).

(2) ಸೋಡಾ ವಾಟರ್ ಲೆಮನೇಡ್‌ಯಾನೆ ಎರೇಟೆಡ್ ವಾಟರ್ಸ್‌ನ ಕಾರ್ಖಾನೆ ಬಗ್ಯೆ.

(*a*) ಎರೇಟೆಡ್ ವಾಟರ್ಸ್ ತಯಾರಿ ಮಾಡುವ ಬಗ್ಯೆ ಉಪಯೋಗಿಸುವ ನೀರು ವಿಶಿಷ್ಟವು ಅದು ಹಾಗೆ ಉಪಯೋಗಿಸಲ್ಪಡುವದಕ್ಕೆ ಮುಂಚಿತವಾಗಿ ಕುದಿಸಲ್ಪಟ್ಟಿರಬೇಕು. ಮತ್ತು ಅಂಥಾ ನೀರು ತಣ್ಣಗಾಗುವ ವೇಳೆ ಅದನ್ನು ಲಾಯಖಾದ ಮುಚ್ಚಳವುಳ್ಳ ಪಾತ್ರೆಯಲ್ಲಿ ಇಡಲ್ಪಟ್ಟಿರಬೇಕು.

(*b*) ಕುದಿಸಿದ ನಂತರ ನೀರು ಶೋಧಿಸಬೇಕಾಗಿದ್ದಲ್ಲಿ ಶೋಧಿಸುವ ಪಾತ್ರೆಗಳು ಮತ್ತು ಸಾಮಾನುಗಳು ಪ್ರೆಸಿಡೆಂಟರವರು ಅಪ್ಪಣೆ ಕೊಡುವ ಪ್ರಕಾರ ಮತ್ತು ಕಾಲಗಳಲ್ಲಿ ಕ್ರಿಮಿ ಸೇರದಂತೆ ಶುದ್ಧಿಮಾಡಬೇಕು.

(*c*) ಶೀಸೆ ಯಾ ಬುಡ್ಡಿಗಳನ್ನು ತೊಳೆಯಲು ಉಪಯೋಗಿಸಲ್ಪಡುವ ನೀರು ವಿಶಿಷ್ಟ ಮುಚ್ಚಲ್ಪಟ್ಟ ಕಬ್ಬಿಣ ಪಾತ್ರೆಗಳಲ್ಲಿ ದಾಸ್ತಾ ಮಾಡಲ್ಪಟ್ಟಿರಬೇಕು. ಮತ್ತು ಅಂಥಾ ನೀರೂ ಉಪಯೋಗಿಸುವದಕ್ಕೆ ಮುಂಚೆ ಪ್ರೆಸಿಡೆಂಟರವರಿಂದ ಅಪ್ಪಣೆ ಕೊಡುವ ಮೇರಿಗೆ ಪರಮಾಂಗನೇಟ್ ಆಫ಼ ಪೊಟಾಶಿಯಂ ಎಂಬ ಉಪ್ಪಿನಿಂದ ಶುದ್ಧಿ ಮಾಡಲ್ಪಡತಕ್ಕದ್ದು.

(*d*) ಎರೇಟೆಡ್ ವಾಟರ್ಸ್ ತಯಾರ್ಮಾಡುವ ಕೋಡಿಯು ಕ್ರಮವಾದ ಛಾವಣಿವುಳ್ಳದ್ದಾಗಿರಬೇಕು, ನಿರ್ಮಲವಾಗಿಟ್ಟಿರಬೇಕು. ಮತ್ತು ಒಳ್ಳೆ ರಿಪೇರಿ ಆದ ಸ್ಥಿತಿಯಲ್ಲಿರತಕ್ಕದ್ದು ಗೋಡೆಗಳು ಗಾರೆಯಿಂದ ಗಿಲಾವ್ ಮಾಡಲ್ಪಟ್ಟಿರಬೇಕು. ಮತ್ತು ಮೂರು ತಿಂಗಳಿಗೊಂದಾವರ್ತಿಯಾದರು ಸುಣ್ಣ ಬಳಿಸಲ್ಪಟ್ಟಿರತಕ್ಕದ್ದು. ನೀರು ನೆಲದಲ್ಲಿ ನಿಲ್ಲದಂತೆ ನೆಲಕ್ಕೆ ಶಿಮೆಂಟುಗಾರೆ ಅಥವಾ ಹೆಂಚು ಅಥವಾ ಕಲ್ಲೂ ಹಾಕಲ್ಪಟ್ಟಿರಬೇಕು. ಮತ್ತು ನೀರು ಕ್ರಮವಾಗಿ ಹರಿದು ಹೋಗುವಂತೆ ಏರ್ಪಡಿಸಿರಬೇಕು.

(*e*) ಎರೇಟೆಡ್ಡು ವಾಟರ್ಸ್ ತಯಾರಿ ಬಗ್ಯೂ ಮತ್ತು ಬುಡ್ಡಿಗಳನ್ನು ತೊಳೆಯುವ ಬಗ್ಯೂ ಉಪಯೋಗಿಸಲ್ಪಡುವ ನೀರು, ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡುವ ಸ್ಥಳದಿಂದಲೇ ತರಲ್ಪಡತಕ್ಕದ್ದು.

(*f*) ಅಂಥಾ ನೀರು, ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡದ ಪಕಾಲಿಯಲ್ಲಾಗಲಿ ಅಥವಾ ಇತರ ಇನ್ಯಾವ ಪಾತ್ರೆಯಲ್ಲಾಗಲಿ ತರಲ್ಪಡಕೂಡದು.

(*g*) ಅಂಥಾ ನೀರನ್ನು ತರಲು ನೇಮಿಸಲ್ಪಡತಕ್ಕ ಭಂಡಿಗಳು ಆ ಆವರ್ಣದಲ್ಲೆ ಇಡಲ್ಪಟ್ಟಿರಬೇಕು. ಅಂಥಾ ಕಾರ್ಖಾನೆಯ ವಿಳಾಸವು ನೀರಿನ ಪಿಪಾಯಿ ಮೇಲೆ ಬಣ್ಣದಿಂದ ಬರೆಯಲ್ಪಟ್ಟಿರಬೇಕು. ಮತ್ತು ಅಂಥಾ ಭಂಡಿಗಳನ್ನೂ ಸರ್ವಕಾಲದಲ್ಲೂ ಸರಿಯಾದ ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು.

(*h*) ಕಾರ್ಖಾನೆಯ ಆವರ್ಣವು ಮತ್ತು ತಯಾರು ಮಾಡಲು ಉಪಯೋಗಿಸಲ್ಪಡುವ ಅಜಬಾಬುಗಳು ಪ್ರೆಸಿಡೆಂಟರವರಿಂದಾಗಲಿ ಹೆಲ್ತ್ ಆಫಿಸರವರಿಂದಾಗಲಿ ಅಥವಾ ಇನ್ಯಾವ ಮ್ಯುನಿಸಿಪಲ್ ಆಫಿಸರವರಿಂದಾಗಲಿ ನ್ಯಾಯವಾದ ಕಾಲಗಳಲ್ಲಿ ಅಜಮಾಯಿಷಿ ಮಾಡಲು ತೆರೆಯಲ್ಪಟ್ಟಿರಬೇಕು.

(*i*) ಕಾರ್ಖಾನೆಯ ಯಜಮಾನನ ಪೂರಾ ಹೆಸರು ಮತ್ತು ವಿಳಾಸ, ನಮೂದುಳ್ಳ ಕ್ರಮವಾದ ಲೇಬಿಲ್ (ಚೀಟಿ) ಯನ್ನ ಪ್ರತಿ ಬುಡ್ಡಿಯ ಮೇಲೆ ಹಚ್ಚಿಸದೆ ಯಾವ ತರಹೇ ಎರೇಟೆಡ್ ನೀರೂ ಕಾರ್ಖಾನೆಯಿಂದ ಕೊಡಲ್ಪಡಕೂಡದು.

ಹೆಲ್ತ್ ಆಫಿಸರೇ ಆಗಲಿ ಅಥವಾ ಯಾವ ಮ್ಯುನಿಸಿಪಲ್ ಸ್ಯಾನಿಟೆರಿ ಇನ್‌ಸ್ಪೆಕ್ಟರೇ ಆಗಲಿ ಎರೇಟೆಡ್ ವಾಟರ್ಸ್ ತಯಾರಿ ಅಥವಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಯಾವ ಸ್ಥಳವನ್ನೂ ಅದು ತೆರೆಯಲ್ಪಟ್ಟಿರುವಾಗ ಯಾವ ಕಾಲದಲ್ಲಾಗಲಿ ಪ್ರವೇಶಿಸುವದಕ್ಕೂ ಸದರಿ ಸ್ಥಳದಲ್ಲಿ ತಯಾರಾದಂಥಾ ಅಥವಾ ಬಿಕರಿ ಬಗ್ಯೆ ಇಟ್ಟಿರುವ ಎರೇಟೆಡ್ ವಾಟರ್ಸ್‌ನ್ನು ಅಜಮಾಯಿಷಿ ಮಾಡುವದಕ್ಕೂ ಅಥವಾ ಅಂಥಾದರ ಮಾದರಿಯನ್ನು ತೆಗೆದುಕೊಳ್ಳುವದಕ್ಕೂ ನ್ಯಾಯವಾಗಿರತಕ್ಕದ್ದು. ಮತ್ತು ಅಂಥಾ ಮಾದರಿಯನ್ನು ತೆಗದುಕೊಳ್ಳಲು ಅಪ್ಪಣೆ ಕೊಡಲು ತಿರಸ್ಕರಿಸುವ ಅಂಥಾ ಸ್ಥಳದ ಸ್ವಾಧೀನಗಾರನಾಗಲಿ ಅಥವಾ ಯಜಮಾನನಾಗಲಿ ಒಂದು ಅಪರಾಧಕ್ಕೆ ಒಳಪಡುವನು (ತಪ್ಪಿತಸ್ಥ ನಾಗುವನು) ಅಂಥಾ ಮಾದರಿಯು ಗೌರ್ನಮೆಂಟ್ ಕೆಮಿಕಲ್ ಎಗ್ಜಾಮಿನರ್ ಮತ್ತು ಬ್ಯಾಕ್ಟರಿಯಾಲೊಗಿಸ್ಟ್ ಯವರಿಗೆ ಕಳ್ಳೆ ಕಳುಹಿಸಲ್ಪಟ್ಟು ಅಂಥಾ ಮಾದರಿಯು ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ಅವರಿಂದ

ಕೊಡಲ್ಪಡುವ ಸರಟಿಫಿಕೇಟನಿಂದ ತಿಳಿಯಬಂದಲ್ಲಿ ಈ ಬಗ್ಗೆ ವಿರೋಧವನ್ನು ಸಿದ್ಧಾಂತಪಡಿಸುವವರಿಗೂ ಅದು ಹಾಗೆ ಅಯೋಗ್ಯ ವೆಂಬುವದಕ್ಕೆ ಅನೇ ತಕ್ಕ ರುಜುವಾತ್ತಾಗಿರತಕ್ಕದ್ದು. ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ರುಜುವಾತ್ತಾಗಿರುವ ಯಾವ ಸ್ಥಳದಿಂದ ತರಲ್ಪಟ್ಟಿತೋ ಅಂಥಾ ಎರೇಟೆಡ್ ವಾಟರ್ಸ್ ತಯಾರಿ ಯಾ ವಿಕರಿ ಮಾಡಲು ಉಪಯೋಗಿಸಲ್ಪಡುವ ಸ್ಥಳದ ಯಜಮಾನನು ಅಥವಾ ಕಾರ್ಯ ನಿರ್ವಾಹಕನು ಒಂದು ಅಪರಾಧ ನಡಿಸಿದವನಾಗುವನು. (ತಪ್ಪಿತಸ್ಥನಾಗುವನು).

ಮಂಜೆನಗಡ್ಡೆ ಕಾರ್ಖಾನೆಗಾಗಲಿ ಅಥವಾ ಎರೇಟೆಡ್ ವಾಟರ್ಸ್ ಕಾರ್ಖಾನೆಗಾಗಲಿ ಈ ಉಪನಿಬಂಧನೆ ಮೇರಿಗೆ ಕೊಡಲ್ಪಡುವ ಲೈಸೆನ್ಸಿನ ಯಾವ ಷರತ್ತಿಗಾಗಲಿ ತಪ್ಪಿ ನಡಕೊಂಡಲ್ಲಿ ಅಂಥಾ ಲೈಸೆನ್ಸು ಹೊಂದಿರುವ ಮನುಷ್ಯನು ಮತ್ತು ಲೈಸೆನ್ಸು ಕೊಡಲ್ಪಟ್ಟಿರುವಂಥಾ ಸ್ಥಳದ ಸ್ವಾಧೀನಗಾರನು ಸಹ ತಪ್ಪು ಸ್ಥಾಪನೆಯಿಂದ 20 ರೂಪಾಯಿಗಳಿಗೆ ಮೀರದ ಒಂದು ಜಲ್ಮಾನೆಗೆ ಗುರಿಯಾಗುವರು ಮತ್ತು ಆಪಾದನೆ ಆದನಂತರ ಮೇಲ್ಕಂಡ ಷರತ್ತುಗಳಿಗೆ ತಪ್ಪಿ ನಡಕೊಂಡ ಪ್ರತಿದಿನಕ್ಕೂ 5 ರೂಪಾಯಿ ವರಿಗೂ ಜುಲ್ಮಾನೆ ತೆರಲು ಗುರಿಯಾಗುವರು.

ಬಿ. ಕೃಷ್ಣರಾವ್,
ಹೆಲ್ತ್ ಆಫಿಸರ್.

ನೋಟಿಸ್.

ಚನ್ನಪಟ್ಣ ತಾಲ್ಲೂಕು ಕಛೇರಿಯಿಂದ.

ತಾರೀಖು 16–18ನೆ ಮಾರ್ಚಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಾಲ್ಲೂಕು ಮಜಕೂರು ರಿಕಾರ್ಡಿನ ವಿಲೆಯಲ್ಲಿ ಇರುವ ಮೌಜೆವಾರ್ ಡಿಟ್ಟಂಚಿಟ್ಟಾ–ಕುಳವಾರು ಚಿಟ್ಟಾ ಯಾನೆ ಅವ್ವಲ್ ನಂಬರು ದುಯ್ಯಂ ನಂಬರು ವಗೈರೆ ಹಳೆ ಲೆಕ್ಕಗಳನ್ನು ಗವರ್ನಮೆಂಟು 11—3—95ನೆ ಮುರ್ಕುಂ 14523–30—R. F. 157–93ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ನಮೂದಿರುವ ಮೇರಿಗೆ ಸರ್ವೆ ಆದ 12 ವರುಷಗಳ ಕಾಲ ಕಳೆದು ಇರುವದ್ದರಿಂದ ನಾಶಪಡಿಸುವದಕ್ಕಾಗಿ ಸಾರ್ಟ್ ಮಾಡಿಸಿಟ್ಟಿರುತ್ತೆ. ಇವುಗಳಿಗೆ ಸಮ್ಮಂಧಪಟ್ಟ ದಾಖಲೆಗಳು ಅವಶ್ಯಕ ಇರತಕ್ಕವರು ಯಾರಿದ್ದರು ಈ ಇಸ್ತಿಹಾರ್ ಫಾಯಿಷ್ ತಾರೀಖು ಲಾಗಾಯಿತು (ಮೂರು) ತಿಂಗಳುವಳಗಾಗಿ ತಾಲ್ಲೂಕಿಗೆ ಕ್ರಮವಾಗಿ ಅಪ್ಲಿಕೇಷನ್ ಕೊಟ್ಟು ಕಾಪಿ ಪಡದುಕೊಳ್ಳಬಹುದು. ಈ ವಾಯಿದೆ ಕಳದ ಕೂಡ್ಲೆ ಸದರಿ ರಿಕಾರ್ಡುಗಳೆಲ್ಲವು ನಾಶಪಡಿಸುವದ್ದರಿಂದ ನಂತರ ದಾಖಲೆ ದೊರಿಯಲಾರದು ತಿಳಿಯುವದು.

ಹೆಚ್. ವೆಂಕಟನರಸಯ್ಯ,
ಆಕ್ಟಿಂಗ್ ಅಮುಲ್ದಾರ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಿಷ್ ಮಾಹೇ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕೆ, ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್ಕುಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾಗಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಪೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮುರ್ಕುಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮುರ್ಕುಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸುಗಳು:—

	ರೂ. ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2 8

			ರೂ.	ಆ.
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ		..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 317ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟೀಸುಗಳಿಗೆ:—				
ಮೊದಲನೇ ಸಲಕ್ಕೆ	.. ..	..	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	..	..	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫೀಸರುಗಳು ಕೊಡುವ ನೋಟೀಸುಗಳಿಗೆ:—				
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..		0	8
ಎರಡನೇ ದಫಾ ಡಿಟೋ	ಡಿಟೋ	–	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	..	..	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಫಾರ್ ಕಂಪೈಲರ್, ಮೈಸೂರು ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಕಾಶ್ ಆದ್ದು. [ನಂ. 15.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 15, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರ್ಫು.

ಸನ್ 1904ನೆ ಇಸವಿ ಫೆಬ್ರುವರಿ 1ನೆ ತಾರೀಖಿನ 72ನೆ ನಂಬರಿನ ರೂಲ್ ಆಫ್ ಪ್ರಾಕ್ಟಿಸಿಗೆ ಅನುಬಂಧನೆ.

1909ನೆ ಇಸವಿ ಮಾರ್ಚಿ ತಿಂಗಳು 23ನೆ ತಾರೀಖು.

ಮೇಲ್ಕಂಡ ರೂಲ್ ಆಫ್ ಪ್ರಾಕ್ಟಿಸಿಗೆ ಲಗತ್ತಾದ ಫಾರಂಗಳ ಪಟ್ಟಿಗೆ ಈ ಕೆಳಗೆ ಕೊಟ್ಟಿರುವ ಫಾರಮನ್ನು ಸೇರಿಸತಕ್ಕದ್ದು.

ಫಾರಮಿನ ನಂಬರು.	ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಥವಾ ಇತರ ಕಾನೂನಿನ ಸೆಕ್ಷನ್.	ಫಾರಮಿನ ಹೆಸರು.	ಇಂಗ್ಲೀಷಿನಲ್ಲೋ ಅಥವಾ ಕನ್ನಡದಲ್ಲೋ.
86	ಕ್ರಿ-ಪ್ರೊ-ಕೋ 68 & 69. ...	ಜರಿವಾನೆ ವಸೂಲಾದದ್ದನ್ನು ಜೈಲಿಗೆ ತಿಳುಹಿಸುವುದು.	ಎರಡರಲ್ಲಿಯು.

ಏ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರೈಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮುಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಎಕ್ಸೈಜ್ ಇಲಾಖೆ.

ಇಸ್ತಿಹಾರನಾಮೆ.

ಅಬ್ಕಾರಿ ಮತ್ತು ಅಫೀಮಿಗೆ ಸಮ್ಮಂಧಪಟ್ಟ ಬಟ್ಟು ಸ್ವಾತಂತ್ರ್ಯದ ಹರಾಜು ನೋಟೀಸು.

ನಂಬರ್ 9011, ಬೆಂಗಳೂರು, 7ನೆ ಏಪ್ರೆಲ್ 1909.

I. ನಿಯಾಮಕವಾದ ಮತ್ತು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಅಂಗಡಿಗಳಲ್ಲಿ ಷರಾಬು, ಮದಕ ಪದಾರ್ಥಗಳು ಮತ್ತು ಅಫೀಮನ್ನು 1909ನೆ ಇಸವಿ ಜುಲೈ ಗುರ್ರೆ ಲಾಗಾಯತು 1910ನೆ ಇಸವಿ ಜೂನ್ 30 ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಬಿಕರಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಬಳಪಟ್ಟು ಡೆಪ್ಯುಟಿ ಕಮಿಷನರವರು ಯಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರವರು ಯಾ ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರು ಯಾ ಡೆಪ್ಯುಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರು ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಆ ತಃಖ್ತೆಯಲ್ಲಿ ನಮೂದುಕಂಡ ತಾಲ್ಲೂಕ್ ಯಾ ಸಬ್ ತಾಲ್ಲೂಕ್ ಕಸಬಾಗಳಲ್ಲಿ ಹರಾಜುಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿರುತ್ತೆ. ಹರಾಜುಗಳು ನೇಮಿಸಲ್ಪಟ್ಟ ತಾರೀಖುಗಳಲ್ಲಿ ಪೂರೈಸದೆಹೋದಲ್ಲಿ ಮಾರನೇ ದಿವಸಗಳಲ್ಲಿಯೂ (ರಜಾದಿವಸಗಳು ಹೊರತಾಗಿ) ಹಾಕಲ್ಪಡುವವು.

ಹರಾಜಿನ ಷರತ್ತುಗಳು.

II. ಪ್ರತಿ ಸವಾಲ್‌ದಾರನೂ ಹರಾಜಿಗೆ ಪೂರ್ವವೇ ಠೇವಣಾತಿಯನ್ನು ಕಟ್ಟತಕ್ಕದ್ದು ಮತ್ತು ಹರಾಜಿನ ತಾರೀಖಿನ ದಿವಸ ಹರಾಜು ಮಾಡುವ ಆಫಿಸರಿಂದ ಸದರಿ ಠೇವಣಿ ಮೊಬಲಗು ತೆಗದುಕೊಳ್ಳಲ್ಪಡುವದು. ಯಾವ ಮನುಷ್ಯನೂ ಮುಖ್ಯವಾದ ಅಂಗಡಿ ಯಾ ಅನೇಕ ಅಂಗಡಿಗಳಿಗಾಗಿ ಸವಾಲ್ ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅಂಥಾವನು ಸಾಧಾರಣವಾಗಿ 50 ರೂಪಾಯಿ ಠೇವಣಿಯನ್ನಿಡತಕ್ಕದ್ದು. ಸವಾಲು 2 ಯಾ 3 ಅಂಗಡಿಗಳಿಗೆ ವಿಚಾರದಲ್ಲಿಯೂ ಮತ್ತು ಅವುಗಳ ಮಾಹೆಯಾನ ಬಟ್ಟು ಗುತ್ತಾ ಮೊಬಲಗು 50 ರೂಪಾಯಿ ಅಥವಾ ಅದಕ್ಕೆ ಕಮ್ಮಿಯಾಗಿಯೂ ಇದ್ದಪಕ್ಷದಲ್ಲಿ ಸವಾಲುದಾರನ ಠೇವಣಿಯು 20 ರೂಪಾಯಿಗಳಿಗೆ ತಗ್ಗಿಸಲ್ಪಡುವದು ಮತ್ತು ಬಂದೊಂದು ಚಿಕ್ಕ ಅಂಗಡಿಗೆ ದರಖಾಸ್ತು ಮಾಡುವ ಸವಾಲ್‌ದಾರರ ಠೇವಣಿಯು 5 ರೂಪಾಯಿಗೆ ತಗ್ಗಿಸಲ್ಪಡುವದು. ಯಾವದಾದರೂ ಅಂಗಡಿಗಳ ಮಾಹೆಯಾನ ಸರಾಸರಿ ಗುತ್ತಾ ಮೊಬಲಗು ಕೇವಲ ಕಮ್ಮಿಯಾಗಿದ್ದಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರು ಸದರಿ ಅಂಗಡಿಗಳ ಬಗ್ಯೆ ತಮ್ಮ ಯುಕ್ತಾನುಸಾರ ಇತರ ನ್ಯಾಯವಾದ ಠೇವಣಿ ಮೊಬಲಗನ್ನು ಗೊತ್ತುಮಾಡಬಹುದು.

III. ಹರಾಜು ನಡಿಸತಕ್ಕ ಆಫಿಸರರಿಗೆ ಷೆಡ್ಯೂಲ್‌ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಕ್ರಮ ನಂಬರನ್ನು ಬದಲಾಯಿಸಲು ಕಾರಣ ತೋರುವ ಸಂದರ್ಭದಲ್ಲಿ ಹೊರತು ಆ ಪಟ್ಟಿಯಲ್ಲಿ ಕಂಡ ಕ್ರಮ ನಂಬರಿನಂತೆಯೇ ಅಂಗಡಿಗಳನ್ನು ಹರಾಜು ಮಾಡತಕ್ಕದ್ದು. ಹರಾಜು ನಡಿಸತಕ್ಕ ಆಫಿಸರರು ತಮಗೆ ಯುಕ್ತ ತೋರುವಂತೆ ಸರ್ಕಾರದ ಸವಾಲನ್ನು ಗೊತ್ತುಮಾಡತಕ್ಕದ್ದು. ಅಂಗಡಿಗಳಮೇಲೆ ಸರ್ಕಾರದಿಂದ ನಿಷ್ಕರಿಷೆ ಮಾಡಲ್ಪಟ್ಟ ಮೊಬಲಗನ್ನು ಘಾಯಿಷ್ ಮಾಡುವದಿಲ್ಲ ; ಆದರೆ ಸವಾಲುದಾರರ ತಿಳುವಳಿಕೆ ಬಗ್ಯೆ ಹಿಂದಿನ ಮೂರು ಸಾಲುಗಳ ಗುತ್ತಾ ಮೊಬಲಗೂ, ಬಿಕರಿಯ ಮೊತ್ತವೂ ಘಾಯಿಷ್ ಮಾಡಲ್ಪಡುವದು.

ಷರಾ—1. ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಶೇಂದಿ ಮಾರಾತಕ್ಕ ಹಕ್ಕು ಬಂದೊಂದು ಅಂಗಡಿಗೆ ವರುಷ 1ಕ್ಕೆ 12 ರೂಪಾಯಿಗೆ ಕಮ್ಮಿ ಇಲ್ಲದಂತೆ ಗೊತ್ತಾದ ಮೊಬಲಗ್ಗೆ ಕಾಫಿಪ್ಲಾಂಟರಿಗೆ ಮಾರಲ್ಪಡಬಹುದು.

ಷರಾ—2. ಶೇಂದಿ ಹುಟ್ಟುವಳಿಗೆ ಇರತಕ್ಕ ಹಕ್ಕು ಮಂಜೂರಾಗಿರುವ ಅಥವಾ ಇನ್ನೂ ತೀರ್ಮಾನವಾಗಿಲ್ಲದೆ ಇರುವ ಇನಾಂ ಗ್ರಾಮಗಳಲ್ಲಿರತಕ್ಕ ಶೇಂದಿ ಅಂಗಡಿಗಳು ಪ್ರತ್ಯೇಕವಾಗಿಯೇ ಹರಾಜ್ ಮಾಡಲ್ಪಡಬೇಕಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗನ್ನು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

IV. ಸಾಧಾರಣವಾಗಿ ಪ್ರತಿಯೊಂದು ಅಂಗಡಿಯೂ ಪ್ರತ್ಯೇಕವಾಗಿ ಹರಾಜು ಮಾಡಲ್ಪಡತಕ್ಕದ್ದು. ನಿರ್ವಾಹವಿಲ್ಲದೇ ಇರುವ ಸಂದರ್ಭದಲ್ಲಿ ಮಾತ್ರವೇ ಅಂಗಡಿಗಳನ್ನು ಗುಂಪಾಗಿ ಸೇರಿಸಬಹುದು. ಆದರೆ ಹಾಗೆ ಗುಂಪಾಗಿ ಸೇರಿಸುವಾಗಲೂ ಆಗಿನ ಸಂದರ್ಭಕ್ಕೆ ಎಷ್ಟು ಅಂಗಡಿಗಳನ್ನು ಸೇರಿಸುವದು ಅವಶ್ಯಕವಾಗಿದೆಯೋ ಅಷ್ಟನ್ನು ಮಾತ್ರವೇ ಗುಂಪು ಸೇರಿಸತಕ್ಕದ್ದು.

V. ಮೊಖ್ತ್ಯಾರ್‌ನಾಮೆಯನ್ನು ಪಡೆದ ಹೊರ್ತು ಯಾರೊಬ್ಬನೂ ಇತರರಿಗೋಸ್ಕರ ಸವಾಲು ಮಾಡಕೂಡದು.

VI. ಯಾವ ಅಂಗಡಿಯೂ ಇಬ್ಬರು ಆಸಾಮಿಗಳ ಯಾ ಇಬ್ಬರಿಗಿಂತ ಹೆಚ್ಚಾದ ಆಸಾಮಿಗಳ ಹೆಸರಿನಲ್ಲಿ (ಸದರಿಯವರು ಮೊಖ್ತ್ಯಾರ್‌ನಾಮೆಯ ಮೂಲಕ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪೆನಿ ಯಾ-ಫರ್ಮ್‌ನವರೆಂದು ತೋರಿಸಿದಹೊರ್ತು) ಭಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ನಡಿಸತಕ್ಕ ಆಫಿಸರರು ಯಾರ ಹೆಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

VII. ಯಾವನಾದರೊಬ್ಬ ಮನುಷ್ಯನ ಸವಾಲು ಕೇವಲ ಕಮ್ಮಿಯಾಗಿದೆ ಎಂಬ ಕಾರಣದಮೇಲೂ, ಅಥವಾ ಕ್ರಿಮಿನಲ್ ಕೋರ್ಟಿನಲ್ಲಿ ದರಿಯಾಫ್ತಾಗಿ ಆತನ ಮೇಲೆ ತಪ್ಪು ಸಾಬೀತು ಆಗಿರುವದ್ದರಿಂದಲೂ, ಅಥವಾ ಒಂದು ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗೆ ಅನುಸಾರವಾಗಿ ನಡಿಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಆತನು ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರಿ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ನ್ಯಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜ್ ನಡಿಸತಕ್ಕ ಆಫಿಸರು ಅವರಿಗೆ ಯುಕ್ತತೋರಿದಲ್ಲಿ ಅಂಥಾ ಮನುಷ್ಯನ ಸವಾಲನ್ನು ತಿರಸ್ಕರಿಸಬಹುದು. ಸದರೀ ಸ್ವಾತಂತ್ರ್ಯದ ಹಕ್ಕನ್ನು ಇತರರಿಗೆ ಬಿಕರಿಮಾಡಿ ಫಾಯಿದೆ ಪಡೆಯಬೇಕೆಂಬ ಉದ್ದೇಶದಿಂದ ಮಾತ್ರವೇ ಮಾಡಲ್ಪಟ್ಟಿತೆಂದು ತೋರುವ ಸವಾಲನ್ನು ಹರಾಜು ಆಫಿಸರು ಅದಕ್ಕೆ ಕಾರಣವನ್ನು ಬರಹಮೂಲಕವಾಗಿ ರಿಕಾರ್ಡುಮಾಡಿ, ತಿರಸ್ಕರಿಸಬಹುದು.

VIII. ಸದರಿ ಅಂಗಡಿಗಳು ಭಡಸವಾಲುದಾರನಿಗೆ ಕೊಡಲ್ಪಡುವವು ; ಆದರೆ ಹರಾಜು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು ಡೆಪ್ಯುಟಿ ಕಮಿಷನರವರು ಸದರಿ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರವಾಗಿರುತ್ತಾರೆ. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಯಾದರೆ ಆ ಮಂಜೂರಾತಿಯು ಗವರ್ನಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಟ್ಟಾಗ ಹೊರ್ತು ದರಖಾಸ್ತು ಅಂಗೀಕಾರವಾದಂತೆ ಭಾವಿಸಲ್ಪಡತಕ್ಕದ್ದು. ಡೆಪ್ಯುಟಿ ಕಮಿಷನರವರು ಖುದ್ದಾಗಿಯಾಗಲೀ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರರೇ ಆಗಲೀ ಹರಾಜು ನಡಿಸಿದ್ದರೂ ಅಂಥಾ ಕ್ರಮವಾದ ಮಂಜೂರಾತಿಯು ಅವಶ್ಯಕವಾಗಿರುವದು.

IX. ಹರಾಜು ಕಾಲದಲ್ಲಿ ತಕರಾರು ಬಂದ ಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರ ತೀರ್ಮಾನವು ಆಖೈರು ತೀರ್ಮಾನವಾಗಿರತಕ್ಕದ್ದು. ಮತ್ತು ಯಾವಕಾರಣದಿಂದಲಾದರೂ ಭಡ ಸವಾಲನ್ನು ತಿರಸ್ಕರಿಸಿದ ಪಕ್ಷದಲ್ಲಿ ತದನಂತರದ ಭಡಸವಾಲ್ ಅಂಗೀಕರಿಸಲ್ಪಡುವದು, ಅಥವಾ ಅಂಗಡಿಯು ಅವರ ಯುಕ್ತಾನುಸಾರ ದುಸರೆ ಹರಾಜು ಹಾಕಲ್ಪಡುವದು.

X. ಹರಾಜು ಮುಗಿದಮೇಲೆ ದರಖಾಸ್ತು ಸಾಮಾನ್ಯವಾಗಿ ಅಂಗೀಕರಿಸಲ್ಪಡುವದಿಲ್ಲ. ಮೊದಲಿನ ಹರಾಜಿನಲ್ಲಿ ವಿಕ್ರಯವಾಗದ ಅಂಗಡಿಗಳು ಸಾಧಾರಣವಾಗಿ ಆತರುವಾಯ ದುಸರೆ ಹರಾಜಿನಲ್ಲಿ ವಿಲೇವಾರಿ ಮಾಡಲ್ಪಡುವವು. ಆದರೆ ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ತಮ್ಮ ಸೂಕ್ತಾನುಸಾರ ನಡಿಸಲು ಸ್ವತಂತ್ರರಾಗಿರುತ್ತಾರೆ.

XI. ಪ್ರತಿದಿನ ಹರಾಜು ಪೂರೈಸಿದ ಕೂಡಲೆ ನಾ ಮಂಜೂರಾದ ಸವಾಲುದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುವವು. ಹರಾಜು ನಡಿಯುತ್ತಿರುವಾಗ, ಯಾರ ಸವಾಲು ಅಂಗೀಕರಿಸಲ್ಪಡುತ್ತೋ ಅಂಥವನು ಹರಾಜು ನಡಿಸತಕ್ಕ ಆಫಿಸರರು ಕೇಳಿದಲ್ಲಿ ತತ್‌ಕ್ಷಣವೇ ಅಥವಾ ಆ ದಿನದ ಹರಾಜು ಖೈದಾದನಂತರ (IIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಅಲ್ಲದೆ) ಒಂದು ತಿಂಗಳ ಗುತ್ತಿಗೆ ಹಣದಲ್ಲಿ ಅರ್ಧವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು 2 ತಿಂಗಳ ಗುತ್ತಿಗೆ ಹಣಕ್ಕೆ ಸಮ ಯಾ ಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲ್ಕಂಡ IIನೆ ಷರತ್ತಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರಿ ಅಂಗಡಿಗಳು ಪುನಃ ತತ್‌ಕ್ಷಣವೇ ಹರಾಜು ಆಫಿಸರವರಿಂದ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜ್ ಮಾಡಲ್ಪಡುವದು ಅಥವಾ ಡೆಪ್ಯುಟಿ ಕಮಿಷನರವರಿಂದ ಅನ್ಯಥಾ ವಿಲೇವಾರಿ ಮಾಡಲ್ಪಡುವದು ; ಅಲ್ಲದೆ ತಪ್ಪಿತಸ್ಥನು ಈ ಅಂಗಡಿ ಯಾ ಇತರ ಅಂಗಡಿಗಳ ಬಗ್ಯೆ ಪುನಃ ಸವಾಲು ಮಾಡಲು ನಿಷೇಧಿಸಲ್ಪಟ್ಟಿರುತ್ತಾನೆ.

XII. ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಯಾರು ಮೇಲಿನ II ವ XIನೆ ಷರತ್ತುಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನು ಕಟ್ಟಿರುತ್ತಾರೋ ಅವರು, ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರುಗಳಲ್ಲಿ ಕೊಟ್ಟುಹೋಗತಕ್ಕದ್ದು. ಮತ್ತು ಅವರು 2 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನು ಮೊದಲು ಕಟ್ಟಿರುವ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು * ಠೇವಣಿಯಾಗಿ ಇಡತಕ್ಕದ್ದು. ಡೆಪ್ಯುಟಿ ಕಮಿಷನರವರ ಮಂಜೂರಾತಿಯು ನೋಟೀಸು ಮೂಲಕ ಅವರಿಗೆ ಅಥವಾ ಸದರಿ ವಿಳಾಸದ ಸ್ಥಳದಲ್ಲಿ ಅವರ ಮನೆಗಳಲ್ಲಿರತಕ್ಕ ಇತರ ವಯಸ್ಸಾದ ಗಂಡಸಿಗೆ ಮಾವತಿಯಾಗೇ ಆಗಲೀ ಅಥವಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲೀ ಜಾರಿಯಾದ ಏಳು ದಿವಸಗಳೊಳಗಾಗಿ ತಾಲ್ಲೂಕು

* ಠೇವಣಿಗಳು ನಗದಾಗಿಯೇ ಆಗಲಿ ಅಥವಾ ಅಂಗೀಕರಿಸಲ್ಪಟ್ಟ ಇತರ ಸೆಕ್ಯೂರಿಟಿ ರೂಪದಲ್ಲಿಯಾಗಲಿ ಇರಬಹುದು.

ಖಜಾನೆಗೆ ಅಂಥಾ ಠೇವಣಾತಿಗಳನ್ನು ಪಾವತಿ ಮಾಡತಕ್ಕದ್ದು. ಅನಂತರ ಅವರು ಅನಾವಶ್ಯಕವಾಗಿ ಸಾವಕಾಶಮಾಡದೆ ಅಗತ್ಯವಾದ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಲೈಸೆನ್ಸುಗಳನ್ನು ತೆಗೆದುಕೊಳ್ಳತಕ್ಕದ್ದು. ಒಡಂಬಡಿಕೆಗಳನ್ನು ರುಜುಮಾಡಿದ ಮೇಲೆ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸದಾರರು ಯಾ ಅವನಿಂದ ಹಕ್ಕು ಪಡೆದವರು ಅದಕ್ಕೆ ಜವಾಬ್‌ದಾರರಾಗಿರತಕ್ಕದ್ದು. ಪ್ರಾರಂಭದಲ್ಲಿಟ್ಟಿರತಕ್ಕ ಠೇವಣಿ ಮೊಬಲಗು ಈ ಷರತ್ತಿನಮೇರಿಗೆ ಠೇವಣಿ ಇಡಬೇಕಾಗುವ ಮೊಬಲಗಿಗಿಂತಲು ಹೆಚ್ಚಾಗಿ ಇದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಈ ಕೆಳಗೆ ಬರುವ XIIIನೆ ಷರತ್ತಿನ ಪ್ರಕಾರ 2 ರಷ್ಟು ಹೆಚ್ಚಾಗಿಠೇವಣಿಯನ್ನು ಕಟ್ಟಬೇಕಾಗಿರುವ ಸಂದರ್ಭದಲ್ಲಿ ವಿನಾ ಖರೀದಿದಾರನಿಗೆ ವಾಪಸು ಕೊಡಲ್ಪಡುವದು.

XIII. ಹರಾಜಿನನಂತರ ವಿಚಾರಿಸಿದ್ದರಲ್ಲಿ ಖರೀದಿದಾರ್ ಜೀವಾಳಸ್ಥನೆಂಬುವದು ಅನುಮಾನಕ್ಕೆ ಗುರಿಯಾಗಿಯೂ ಅಥವಾ ಅವನು ಮೈಸೂರು ಸೀಮೆಯಲ್ಲಿ ಸಾಕಾದಷ್ಟು ಜಿಂದಿಗೆಯನ್ನು ಉಂಟಾಗದೆ ಇರುವ ಅನ್ಯದೇಶದವನಾಗಿಯೂ ಕಂಡುಬಂದಲ್ಲಿ ಮೇಲಿನ XIIನೆ ಷರತ್ತಿನಲ್ಲಿ ನಮೂದಿಸಿರುವದಕ್ಕೆ 2 ರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನು ಅನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನೂ ಕ್ರಮವಾಗಿ ಪಾವತಿ ಮಾಡಲುಳ್ಳವನೆಂದು ಜಾಮೀನುಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಗಳುಳ್ಳವನಾಗಿರುವ ಒಬ್ಬ ಜಾಮೀನುದಾರನನ್ನು ಯಾ ಜಾಮೀನುದಾರರನ್ನು ಹಾಜರುಮಾಡುವದಕ್ಕಾಗಿ ಆತನನ್ನು ಕೇಳಬಹುದು. ಜಾಮೀನು ತಮಸೂಕಿಗೆ 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟಾಂಪು ರೆಗ್ಯುಲೇಷನ್ 1ನೆ ಷೆಡ್ಯೂಲ್ 32ನೆ ಆರ್ಟಿಕಲ್ ಪ್ರಕಾರ ಸ್ಟಾಂಪು ಹಾಕಲ್ಪಡಬೇಕು. ಜಾಮೀನು ಮೊಬಲಗು 1,000 ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಖರೀದಿದಾರನ ಖರ್ಚಿನಿಂದಲೇ ಅದು ರಿಜಿಸ್ಟರ್ ಮಾಡಿಸಲ್ಪಡಬೇಕು.

XIV. ಹರಾಜು ಪೂರೈಸಿದಕೂಡಲೆ ಹರಾಜು ನಡಸತಕ್ಕ ಆಫೀಸರರು ಸಂಬಂಧಪಟ್ಟ ತಾಲ್ಲೂಕು ಅಮಲ್‌ದಾರರಿಗೆ ಹರಾಜಿನಲ್ಲಿ ಪಡದ ಸವಾಲುದಾರರ ಹೆಸರಿನ ಒಂದು ಪಟ್ಟಿಯನ್ನು ಕಳುಹಿಸತಕ್ಕದ್ದು. ಅಮಲ್ದಾರರು ಪ್ರತಿ ಖರೀದಿದಾರನೂ ಜೀವಾಳಸ್ಥನೆಂಬುವದನ್ನು ವಿಚಾರಿಸಿ ಆತನಿಂದ ಪಾವತಿಯಾಗಬೇಕಾದ ಠೇವಣೀ ಮೊಬಲಗು ಅಥವಾ ಜಾಮೀನನ್ನು ದಾಖಲ್ಮಾಡತಕ್ಕದ್ದು. ಅವರು ತಯಾರು ಮಾಡಿದ ಸದರಿ ಪಟ್ಟಿಯನ್ನು ಅವರಿಗೆ ಅದು ತಲ್ಪಿದ 5 ದಿವಸಗಳೊಳಗಾಗಿ ಹರಾಜು ನಡಿಸತಕ್ಕ ಆಫೀಸರರಿಗೆ ರವಾನಿಸತಕ್ಕದ್ದು. ಇವರು ತಾಮಸ ಮಾಡದೆ ಸದರಿ ಪಟ್ಟಿಯಲ್ಲಿ ತಮ್ಮ ಷರಾನಿಸಿ ಅದನ್ನು ಮಂಜೂರಾತಿಬಗ್ಗೆ ಡೆಪ್ಯುಟಿ ಕಮಿಷನರವರಿಗೆ ರವಾನಿಸತಕ್ಕದ್ದು.

XV. ಮೇಲ್ಕಂಡ XIIನೆ ಷರತ್ತಿನ ಪ್ರಕಾರ ಠೇವಣಿ ಇಡುವದಕ್ಕೆ ಯಾ ಮೇಲ್ಕಂಡ XIIIನೆ ಷರತ್ತಿನ ಪ್ರಕಾರ ನಡದುಕೊಳ್ಳಲಿಕ್ಕೆ ಯಾ ಏದರು ಒಡಂಬಡಿಕೆಯನ್ನು ಬರದುಕೊಡಲಿಕ್ಕೆ ಯಾ ಮೇಲ್ಕಂಡಂತೆ ಲೈಸೆನ್ಸ್ ಪಡೆಯಲಿಕ್ಕೆ ಯಾವನಾದರೂ ತಪ್ಪಿದರೆ, ಅವನು ಮೊದಲು ಪಾವತಿ ಮಾಡಿರುವ ಠೇವಣಾತಿಗಳು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು, ಡೆಪ್ಯುಟಿ ಕಮಿಷನರವರಿಗೆ ಯುಕ್ತತೋರುವಂತೆ ಅಂಗಡಿಯು ಪುನಃ ಹರಾಜು ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು.

XVI. ಮೇಲ್ಕಂಡ XVನೆ ಷರತ್ತನ್ನು ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿಯಮೇಲೆ ನಡಿಯುತ್ತವೆ. ಈ ದುಸರೆ ಹರಾಜಿನಿಂದ ಬರುವ ಆದಾಯವನ್ನೆಲ್ಲಾ ಆತನು ಕಳದುಕೊಂಡವನಾಗುತ್ತಾನೆ ಮತ್ತು ನಷ್ಟಸಂಭವಿಸುವ ಪಕ್ಷಕ್ಕೆ ಮೂರೂ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೆ ಹರಾಜುದಾರರಲ್ಲಿ ಛಡಸವಾಲುದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದನ್ನು ಆತನು ಭರ್ತಿಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೆ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರಿ ಠೇವಣಿ ಮೊಬಲಗು ದುಸರೆ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿ ಇದ್ದರೆ, ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ಜಮಾ ಮಾಡಿಕೊಳ್ಳತಕ್ಕದ್ದು ಸ್ವಾತಂತ್ರ್ಯದ ಹಕ್ಕು ದುಸರಾ ಹರಾಜಿನಿಂದಲ್ಲದೆ ಅನ್ಯಥಾ ವಿಲೇವಾರಿಯಾಗಿ ಅಂಥಾ ವಿಲೇವಾರಿಯನ್ನು ಮೂರೂ ಹರಾಜಿಗೆ ಹೋಲಿಸಿ ನೋಡಿದ್ದರಲ್ಲಿ ಸರ್ಕಾರಕ್ಕೆ ನಷ್ಟವಾದರೆ ತಪ್ಪಿತಸ್ಥನು ಈ ನಷ್ಟಕ್ಕೆ ಗುರಿಯಾಗಿರತಕ್ಕದ್ದು.

XVII. ಸ್ವತಂತ್ರದಹಕ್ಕನ್ನು ಕೊಂಡುಕೊಂಡವನು ಕ್ರಮವಾದ ಲೈಸೆನ್ಸು ಕೊಡಲ್ಪಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡದರೆ ಆ ಬಗ್ಗೆ ವಿಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರತಕ್ಕದ್ದು.

XVIII. XII ಅಥವಾ XIIIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತೆ. ಅಮಲ್ದಾರರು ಮತ್ತು ಲೈಸೆನ್ಸುದಾರನು ಹಾಗೆ ಒಪ್ಪಿದರೆ ಲೈಸೆನ್ಸ್‌ದಾರನು ಕೊಡತಕ್ಕ ಆಖೈರು ಕಿಸ್ತು ಮೊಬಲಗಿಗೋಸ್ಕರ ಸದರಿ ಠೇವಣಿ ಮೊಬಲಗು ಜಮಾ ಮಾಡಿಕೊಳ್ಳಲ್ಪಡತಕ್ಕದ್ದು.

XIX. ಮೇಲೆ ನಮೂದಿಸಿರುವಂತೆ ಕೊಡಲ್ಪಡುವ ಲೈಸೆನ್ಸುಗಳಲ್ಲಿ ಎಲ್ಲಾ ಅಬ್ಕಾರಿ ಮತ್ತು ಆಫೀಂ ಲೈಸೆನ್ಸುಗಳಿಗೆ ಲಗಾವಾಗುವ ಮುಂದೆ ನಮೂದುಮಾಡಿರುವ ಸಾಧಾರಣ ಷರತ್ತುಗಳನ್ನೂ ಮತ್ತು ಪ್ರತಿ ಒಂದು ಮುಖ್ಯಬಾಬಿಗೆ ಈ ಕೆಳಗೆ ಗೊತ್ತುಮಾಡಿರುವ ವಿಶೇಷ ಷರತ್ತುಗಳನ್ನೂ ವಿವರಿಸಿರುತ್ತೆ:—

ಆಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಸಾಧಾರಣ ಷರತ್ತುಗಳು.

1. ಸಾರಾಯಿ ಯಾ ಇತರ ಸ್ವದೇಶ ಷರಾಬನ್ನು ತಯಾರ್‍ಮಾಡುವವರೂ, ಷರಾಬ್ ಬಾಂಡೆಡ್ ಕೋಠಿ ಲೈಸೆನ್ಸದಾರರೂ, ಸಾರಾಯಿಯು ಚಿಲ್ಲರೆ ಮಾರಾಟದಲ್ಲಿಯೂ ಇತರ ಮದತ್ ಪದಾರ್ಥಗಳ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು. ಈ ನಿರ್ಬಂಧವು ವಿಶೇಷ ಷರಾಬು ಮತ್ತು ರೆಕ್ಟಿಫೈಡ್ ಸಾರಾಯಿಯನ್ನು ತಯಾರ್‍ಮಾಡಿ ಲೈಸೆನ್ಸದಾರ್‍ರಿಗೆ ಒಟ್ಟೊಟ್ಟಾಗಿ ಸರಬರಾಯಿ ಮಾಡತಕ್ಕವರಿಗೆ ಅನ್ವಯಿಸುವದಿಲ್ಲ.

2. ಆಬ್ಕಾರಿ ಯಾ ಅಫೀಂ ಲೈಸೆನ್ಸುಗಳ ಷರತ್ತಿನಮೇರೆಗೆ, ಷರಾಬುವಗೈರೆ ಮದ್ಯಗಳನ್ನೂ, ಅಫೀಮನ್ನೂ ಮಾರತಕ್ಕ ಸರಹದ್ದುಗಳು ಲೈಸೆನ್ಸು ಕೊಡತಕ್ಕ ಕಾಲದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತುಮಾಡಲ್ಪಡುತ್ತೆ. ಲೈಸೆನ್ಸದಾರ್‍ರಲ್ಲದವರಿಗೆ ಲಗಾವಾಗುವ ನಿಬಂಧನೆಗಳಿಗನುಸಾರವಾಗಿ ಹೊರತು, ಷರಾಬು, ಮದತ್ ಪದಾರ್ಥಗಳು ಯಾ ಅಫೀಮನ್ನು ಡೆಪ್ಯುಟಿ ಕಮ್ಮಿಷನರವರ ವಿಶೇಷ ಅಪ್ಪಣೆ ಶಿವಾಯಿ, ಸದರಿ ಸರಹದ್ದುಗಳ ಹೊರಗಡೆ ಮಾರೋಣವೂ, ಯಾ ಇಟ್ಟುಕೊಂಡಿರೋಣವೂ ಅಡ್ಡಿಮಾಡಲ್ಪಟ್ಟಿದೆ.

3. ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ನಡೆಸಲ್ಪಡತಕ್ಕದ್ದು. ಸದರಿ ಕಟ್ಟಡದ ಪೂರಾ ಅಥವಾ ಒಂದು ಭಾಗವು ಡೆಪೋ ಅಥವಾ ಅಂಗಡಿಯ ಉಪಯೋಗಕ್ಕೋಸ್ಕರವೇ ಪ್ರತ್ಯೇಕವಾಗಿ ಬಿಡಲ್ಪಟ್ಟಿರಬೇಕು. ಡೆಪೋ ಅಥವಾ ಅಂಗಡಿಗೂ ಮತ್ತು ಪಕ್ಕದಲ್ಲಿರುವ ವಾಸದಮನೆಗೂ ಬಾಗಲು ಇದ್ದಲ್ಲಿ ರಾತ್ರೆಕಾಲದಲ್ಲಿ ಬೀಗ ಹಾಕಿರತಕ್ಕದ್ದು. 5,000 ಅಥವಾ ಹೆಚ್ಚಾಗಿ ಪ್ರಜಾಸಂಖ್ಯೆಯುಳ್ಳ ಮ್ಯುನಿಸಿಪಾಲಿಟಿಗಳು ಅಥವಾ ಪಟ್ಟಣಗಳಲ್ಲಿರುವ ಷರಾಬು ಅಂಗಡಿಗಳಿಗೆ ರಸ್ತೆಯಿಂದ ಹೊರ್ತಾಗಿ ಇನ್ನ್ಯಾವ ಕಡೆಯಿಂದಲೂ ಬಾಗಲುಗಳು ಇರಕೂಡದು. ಹಿಂಭಾಗಗಳಲ್ಲಿಯಾದರೂ, ಪಕ್ಕಗಳಲ್ಲಿಯಾದರೂ, ಕಿಟಕಿಯಾಗಲಿ, ಗಂಡಿಯಾಗಲಿ ಇರಕೂಡದು. ಇನ್ನ್ಯಾವಕಡೆಗೂ ಹೋಗಲೂ ಬರಲೂ ಪ್ರವೇಶಗಳಿರಕೂಡದು. ಬಿಕರಿ ಮಾಡುವ ಜಗಲಿಯು ಬಾಗಲಿಗೆ ಎದುರಾಗಿ ಇರತಕ್ಕದ್ದಲ್ಲದೆ, ಅಂಗಡಿಯ ಒಳಗಡೆಯಿರುವ ಎಲ್ಲಾ ಜನಗಳು ಬೀದಿಯಲ್ಲಿ ತಿರುಗಾಡುವ ಜನಗಳಿಗೆ ಕಾಣುವಹಾಗಿರಬೇಕು. ಶಿವಾಯಿ, ಬೇರೇಕೊಠಡಿಯು ಬಿಕರಿಗಾಗಿ ಉಪಯೋಗಿಸಲ್ಪಡಕೂಡದು, ಅಥವಾ ಪಾನಮಾಡುವವರಿಗೆ ತೆಗದಿರಕೂಡದು. ಅಂಗಡಿಯ ಒಳಭಾಗದಲ್ಲಿ ಹಗಲಿನಲ್ಲಿ ಚನ್ನಾಗಿ ಬೆಳಕಿರಬೇಕು. ಬಿಕರಿದಾರ ಮತ್ತು ಅವನ ಮನೇ ಜನರು ಅಥವಾ ಕಾವಲುಗಾರರು ಇವರುಗಳು ಶಿವಾಯಿ ಮತ್ತ್ಯಾರಾದರೂ ಅದರಲ್ಲಿ ವಾಸವಾಗಿರಕೂಡದು.

4. ಎರಡು ಅಥವಾ ಹೆಚ್ಚು ಪರಾಯಿದೇಶದ ಮದ್ಯಗಳನ್ನು ಮಾರುವ ಲೈಸೆನ್ಸುಗಳು ಒಬ್ಬನಿಂದಲೇ ಪಡೆದಿರತಕ್ಕ ಸಂದರ್ಭ ಶಿವಾಯಿ ಪ್ರತಿ ಒಂದು ಲೈಸೆನ್ಸಿನ ಬಿಕರಿಯು ಪ್ರತ್ಯೇಕ ಕಟ್ಟಡಗಳಲ್ಲಿ ನಡೆಸಲ್ಪಡತಕ್ಕದ್ದು. (ರಸಾಯನಶಾಸ್ತ್ರಜ್ಞರು, ಮತ್ತು ಇಂಗ್ಲೀಷ್ ಔಷಧವನ್ನು ಮಾರುವವರು ಮತ್ತು ಮೆಡಿಕಲ್ ಪ್ರಾಕ್ಟಿಷನರು ಶಿವಾಯಿ) ಲೈಸೆನ್ಸ್ ಕಟ್ಟಡಗಳಲ್ಲಿ ಲೈಸೆನ್ಸಿಗೆ ಸಂಬಂಧಪಟ್ಟದ್ದು ಶಿವಾಯಿ ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನಾಗಲಿ, ಯಾ ಷರಾಬಿಗೆ ಬಣ್ಣ ಕೊಡಲು ಅಥವಾ ರುಚಿ ಹೆಚ್ಚುಮಾಡಲು ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ಯಾವ ಸಾರ ಅಥವಾ ವಸ್ತುವನ್ನಾಗಲಿ ಇಟ್ಟುಕೊಂಡಿರುವದು ಅಡ್ಡಿಮಾಡಲ್ಪಟ್ಟಿದೆ. ಅಫೀಂ ಬಿಕರಿಗಾಗಿ ಲೈಸೆನ್ಸಕೊಟ್ಟಿರುವ ಅಂಗಡಿಗಳಲ್ಲಿ ಮಾರ್ಫಿಯ ಅಥವಾ ಹೊಗೆಸೇದಲು ಉಪಯೋಗಿಸಲ್ಪಡುವ ಪದಾರ್ಥಗಳು ಹೊರ್ತು ಅಫೀಂನಿಂದ ಮಾಡಲ್ಪಟ್ಟ ಮದತ್ ಪದಾರ್ಥಗಳು ತಯಾರ್‍ಮಾಡಲ್ಪಡಬಹುದು. ಯಾ ಮಾರಲ್ಪಡಬಹುದು.

5. ಬಿಕರಿಮಾಡಲ್ಪಡುವ ಲೈಸೆನ್ಸಿನ ತರಹೆ ಮತ್ತು ನಂಬರು, ಲೈಸೆನ್ಸದಾರನ ಹೆಸರು ಮತ್ತು (ಪರಾಯಿದೇಶದ ಮದ್ಯ ಅಥವಾ ವಿಶೇಷ ಮದ್ಯಗಳಿಗೆ ಶಿವಾಯಿ) ಬಿಕರಿಯ ದರ ಇವುಗಳನ್ನು ನಮೂದು ಮಾಡಿರುವ ಹಲಿಗೆಯು ಪ್ರತಿ ಡೆಪೋ ಅಥವಾ ಅಂಗಡಿಯ ಮುಂಭಾಗದಲ್ಲಿ ತಗಲಿಹಾಕಲ್ಪಟ್ಟಿರಬೇಕು. ಈ ವಿವರಗಳು ಸ್ವದೇಶಭಾಷೆಯಲ್ಲಿ ಸ್ಫುಟವಾಗಿ ಬರೆಯಲ್ಪಟ್ಟಿರಬೇಕು. ಲೈಸೆನ್ಸು ಅಂಗಡಿಯ ಒಳಗಡೆ ಎಲ್ಲರಿಗೂ ಕಾಣುವಕಡೆ ತಗಲಿಹಾಕಲ್ಪಟ್ಟಿರಬೇಕು.

6. ಮಾರಲ್ಪಡುವ ಯಾ ಮಾರಲಿಕ್ಕೆ ಇಟ್ಟುಕೊಂಡಿರುವ ಎಲ್ಲಾ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಒಳ್ಳೇದಾಗಿರಬೇಕು ಮತ್ತು ಕಲಬೆರಿಕೆಯಿಲ್ಲದೆ ಇರಬೇಕು. ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಮದತ್ ಪದಾರ್ಥಗಳನ್ನು ತಯಾರ್‍ಮಾಡುವದು ಶಿವಾಯಿ ಅವುಗಳ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವದಕ್ಕಾಗಲಿ ಅಥವಾ ಇನ್ನ್ಯಾವ ಕಾರಣಗಳಿಗಾಗಲಿ, ಅವುಗಳಿಗೆ ಏನೂ ಸೇರಿಸಕೂಡದು. ಕೋಠಿಗಳನ್ನೂ, ಅಂಗಡಿಗಳನ್ನೂ ತನಿಖೆ ಮಾಡುವದಕ್ಕೆ ಅಧಿಕಾರವುಳ್ಳ ಆಫಿಸರುಗಳು (25ನೆ ಷರತ್ತನ್ನು ನೋಡಿ) ಪಾನಮಾಡುವದಕ್ಕೂ, ಅಥವಾ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಅಥವಾ ಕೆಡಿಸಿದ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನು ಖರ್ಚುಮಾಡಕೂಡದೆಂದು ಅಪ್ಪಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಕ್ಸೈಜ್ ಕಮಿಷನರವರೂ, ಡೆಪ್ಯುಟಿ ಕಮಿಷನರವರೂ ಮತ್ತು ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರವರೂ ಈ ರೀತಿಯಲ್ಲಿ ಪಾನಮಾಡಲಿಕ್ಕಾಗಲಿ, ಉಪಯೋಗಿಸಲಿಕ್ಕಾಗಲಿ ನಾಲಾಯಖಾಗಿರುವದನ್ನು ನಾಶಪಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

7. 16 ವರುಷಕ್ಕೆ ಕಮ್ಮಿ ವಯಸ್ಸುಳ್ಳವರಿಂದಲೇ ಆಗಲಿ ಅಥವಾ ಕುಷ್ಟರೋಗದಿಂದ ಅಥವಾ ಇತರ ಅಂಟುರೋಗದಿಂದ ಪೀಡಿತರಾದ ಜನಗಳಿಂದ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಮಾರಲ್ಪಡಕೂಡದು. ಅಥವಾ ಮಯ್ಯಲ್ಪಡಕೂಡದು. ಅಂಗಡಿ ಯಾ ಡೆಪೋಗಳಲ್ಲಿ ಬಿಕರಿ ಬಗ್ಗೆ ಅಂಥಾ ಜನಗಳನ್ನು ನೇಮಿಸೋಣವು ಅಡ್ಡಿಮಾಡಲ್ಪಟ್ಟಿದೆ. ಡೆಪೋಗಳಲ್ಲಿ ಅಥವಾ ಅಂಗಡಿಗಳಲ್ಲಿ ನೇಮಕಮಾಡಲ್ಪಟ್ಟ ಯಾ ನೇಮಕಮಾಡಲ್ಪಡಲು ಉದ್ದೇಶಿಸಲ್ಪಟ್ಟ ಜನಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರವರು ಅವಶ್ಯಕಕಂಡರೆ ತರಸಿಕೊಂಡು ಅವರು ಒಪ್ಪದೇ ಇರತಕ್ಕ ಯಾವ ಮನುಷ್ಯನಿಂದಾಗಲಿ ಷರಾಬು, ಮದತ್ ಪದಾರ್ಥಗಳು ಅಫೀಂ ಮಾರೋಣವನ್ನು ಅಡ್ಡಿಮಾಡಬಹುದು.

8. ವಿಶೇಷವಾದ ಅಪ್ಪಣೆಹೊಂದಿದ ಶಿವಾಯಿ ಸೂರ್ಯೋದಯಕ್ಕೆ ಮುಂಚೆ ಯಾವ ಡಿಪೋ ಮತ್ತು ಅಂಗಡಿಯು ತೆಗೆಯಲ್ಪಡಕೂಡದು. ಮತ್ತು ರಾತ್ರೆ *9 ಘಂಟೆನಂತರ ತೆಗಿಯಲ್ಪಟ್ಟಿರಕೂಡದು.

9. ಡಿಪೋ ಯಾ ಅಂಗಡಿಗಳಲ್ಲಿ ಯಾವ ವಿಧವಾದ ನಿಷಾ ಬಂದಿರೋಣ, ಯಾ ಗಲಾಟೆ ಯಾ ಜೂಜಾಟ ಇವುಗಳಿಗೆ ಆಸ್ಪದಕೊಡಕೂಡದು. ಡಿಪೋ ಅಥವಾ ಅಂಗಡಿಗಳಲ್ಲಿ ಯಾವ ವಿಧವಾದ ವಿನೋದಗಳು ಅಡ್ಡಿಮಾಡಲ್ಪಟ್ಟಿದೆ.

10. ಲೈಸೆ೯ಸದಾರನು ಚೋರರು, ಕಳ್ಳರು, ಪೋಲಿ ಮನುಷ್ಯರು, ದೊಂಬಿಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು, ಫೌಜಿನಿಂದ ಪರಾರಿಯಾಗಿಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟದ್ದಂಥವರು ಇಂಥವರಿಗೆ ಡಿಪೋ ಅಥವಾ ಅಂಗಡಿಗಳಲ್ಲಿ ಆಶ್ರಯಕೊಡಕೂಡದು. ಅಂಥ ಜನರು ಅಲ್ಲಿಗೆ ಬಂದರೆ ಸಮೀಪದಲ್ಲಿರುವ ಮ್ಯಾಜಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರ್‌ಗೆ ವರ್ತಮಾನಕೊಡತಕ್ಕದ್ದು.

11. ರಾತ್ರೆಕಾಲದಲ್ಲಿ ಯಾವ ಡಿಪೋ ಅಥವಾ ಅಂಗಡಿಯಲ್ಲಾಗಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು.

12. ಯೂರೋಪಿಯರ್ಯ ಅಥವಾ ನೇಟಿವ್ ಸೈನ್ಯದ ರಿಜಮೆಂಟ್ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ, ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿಯೂ ಆ ಮಾರ್ಗದ ಸಮೀಪದಲ್ಲಿರುವ ಡಿಪೋ ಮತ್ತು ಅಂಗಡಿಗಳನ್ನು ಡೆಪ್ಯುಟಿ ಕಮಿಷನರವರು ಅಪ್ಪಣೆ ಮಾಡಿದಲ್ಲಿ ಮುಚ್ಚಿಬಿಡಬೇಕು. ಮತ ಸಂಬಂಧವಾದ ಗಲಾಟೆ ಅಥವಾ ತೊಂದರೆಕಾಲಗಳಲ್ಲಿ ಹಂಗಾಮಿಯಾಗಿ ಡೆಪ್ಯುಟಿ ಕಮಿಷನರವರು ಅಥವಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರವರು ಯಾವ ಅಂಗಡಿಗಳನ್ನಾದರೂ ಮುಚ್ಚಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. ಸಮೀಪದಲ್ಲಿ ದೊಂಬಿ ಅಥವಾ ತೊಂದರೆ ಇದ್ದಲ್ಲಿ, ಪ್ರತಿ ಡಿಪೋ ಮತ್ತು ಅಂಗಡಿಕಾರನು ತನ್ನ ಡಿಪೋ ಮತ್ತು ಅಂಗಡಿಯನ್ನು ತಾನೇ ಮುಚ್ಚಬಹುದು.

13. ಡೆಪ್ಯುಟಿ ಕಮಿಷನರವರು ಡಿಪೋ ಮತ್ತು ಅಂಗಡಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇನ್ನೂರು ಗಜಗಳ ಒಳಗಾಗಿ ವರ್ಗಾಯಿಸಬಹುದು. ಅಥವಾ ಅವುಗಳನ್ನು ಮುಚ್ಚಬೇಕೆಂದು ಹುಕುಂ ಮಾಡಬಹುದು. ಎಕ್ಸೈಸ್ ಕಮಿಷನರವರ ಮಂಜೂರಾತಿ ಶಿವಾಯಿ ಹೊಸ ಅಂಗಡಿಗಳನ್ನು ಇಡಕೂಡದು.

14. ಕ್ರಮವಾಗಿ ಲೈಸೆ೯ನ್ಸ್ ಪಡೆದ ಅಂಗಡಿಗಳು ಸಮೀಪದಲ್ಲಿಲ್ಲದೆ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಶರಾಬು, ಮದತ್ ಪದಾರ್ಥಗಳು ಮತ್ತು ಅಫೀಮನ್ನು ಬಿಕರಿ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆ೯ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಉಳಿಸಿಕೊಂಡಿರುತ್ತೆ. ಅಂಥಾ ಲೈಸೆ೯ಸುಗಳನ್ನು ಸಾಧಾರಣವಾಗಿ ಸದರಿ ಪ್ರದೇಶದವರೆಗೆ ಮಾಮೂಲಾಗಿ ಸರಬರಾಯಿ ಮಾಡುವ ದುಕಾ೯ದಾರರಿಗೆ ಅಥವಾ ಲೈಸೆ೯ಸದಾರನ ಪ್ರತಿನಿಧಿಗಳಿಗೇನೇ ಕೊಡತಕ್ಕದ್ದು. ಸದರಿ ಲೈಸೆ೯ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು. ಹರಾಜು ಮೂಲಕವಾಗಿಯೂ ವಿಲೇವಾರ ಮಾಡಲು ಡೆಪ್ಯುಟಿ ಕಮಿಷನರವರು ತೀರ್ಮಾನಿಸಬಹುದು.

15. (a) ಡಿವಿಜ೯ ಕಮ್ಯಾಂಡಿಂಗ್ ಆಫಿಸರವರ (ಸ್ವತಂತ್ರ ಬ್ರಿಗೇಡ್ ಕಮ್ಯಾಂಡಿಂಗ್ ಆಫಿಸರವರ) ಅಥವಾ ಕಂಟೋನ್ಮೆಂಟ್ ಅಥವಾ ಕ್ಯಾಂಪ್ ಕಮ್ಯಾಂಡಿಂಗ್ ಆಫಿಸರವರ ಅನುಮತಿ ಪಡೆದಿರುವ ಅಂಗಡಿಗಳಲ್ಲಿ ಶಿವಾಯಿ ಮತ್ತು ಲೈಸೆ೯ಸಿನಲ್ಲಿ ನಮೂದಿರುವ ಸ್ಥಳೀಕ ಅಬ್ಕಾರಿ ಇಲಾಖೆಯವರೊಂದಿಗೆ ಮೇಲೆ ಹೇಳಿರುವ ಸದರಿ ಆಫಿಸರುಗಳೂ ಒಪ್ಪಿರುವ ಷರಾಬುಗಳಿಗೆ ಶಿವಾಯಿ

(1) ನಾವಿಕರೂ, ಶಿಪಾಯಿಗಳೂ ಮತ್ತು ಅವರ ಮನೆ ಜನರು.

(2) ಬ್ಯಾರಾಕ್‌ನಲ್ಲಿ ವಾಸ ಮಾಡುವ ಇತರ ಮನುಷ್ಯರು.

(b) ಕೆಲಸದ ಮೇಲಿರುವ :—

(1) ಮೊಕ್ಕಾಂಗಳೊಡನೆ ಹೋಗುವವನು, ಪೊಲೀಸಿನವನು ಅಥವಾ ಎಕ್ಸೈಜ್ ನೌಕರನು.

(2) ರೈಲ್ವೆ ಕಂಪೆನಿಗೆ ಸೇರಿದವನು ಅಥವಾ

(c) ಯಾವ ಸಂದರ್ಭದಲ್ಲಾದರೂ ;—

(1) ಪೊಲೀಸ್ ಮೊಹಸಲೆಯಲ್ಲಿರುವ ಯೂರೋಪಿಯರ್ಯ ತಿರುಕನಿಗೂ

(2) 16 ವರುಷದ ಒಳಗಾಗಿರುವ ಮನುಷ್ಯನಿಗೂ

(3) ಹುಚ್ಚನಿಗೂ

(4) ನಿಷಾ ಆಗಿರುವದೆಂದು ತಿಳಿದಿರುವ ಅಥವಾ ಕಂಡು ಬರುವ ಮನುಷ್ಯನಿಗೂ, ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಂ ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

16. ಸರಬರಾಯಿ ಮಾಡುವ ಅಥವಾ ಮಾರುವ ಹಕ್ಕುದಾರಿಯು ಎಕ್ಸೈಜ್ ಕಮಿಷನರವರ ಅಪ್ಪಣೆ ಶಿವಾಯಿ ಮಾರಲ್ಪಡಕೂಡದು. ವರ್ಗ ಮಾಡಲ್ಪಡಕೂಡದು ಮತ್ತು ಶಿಕ್ಮಿ ಇಜಾರೆಗೆ ಕೊಡಲ್ಪಡಕೂಡದು. ಮತ್ತು ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದಲ್ಲಿ ಅವರ ಅನುಮತಿ ಇಲ್ಲದೆ ಯಾವ ಹಕ್ಕಿನ ಆಡಳಿತಕ್ಕಾದರೂ ಯಾವ ಮುತಾಲೀಕನು ಮೊಕ್ತರೂರಾಗಕೂಡದು.

---

* ಬೆಂಗಳೂರು ಸಿಟಿಯಲ್ಲಿ ರಾತ್ರೆ $9\frac{1}{2}$ ಘಂಟೆ.

* ಸಾರಾಯಿ ಬಾಂಡೆಂಡ್ ಡಿಪೋಗಳಲ್ಲಿ ರಾತ್ರೆ 8 ಘಂಟೆ.

17. ಯಾವ ಆಬ್ಕಾರಿ ಅಥವಾ ಅಫೀಂ ಲೈಸೆನ್ಸದಾರನು ಎಕ್ಸೈಜ್ ಕಮಿಷನರವರ ಬರಹಮೂಲಕವಾದ ಅಪ್ಪಣೆ ಶಿವಾಯಿ ಮೈಸೂರು ಶೀಮೆಯ ಹೊರಗಡೆ ಅಥವಾ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಯಾವ ಆಬ್ಕಾರಿ ಮತ್ತು ಅಫೀಂ ಲೈಸೆನ್ಸಿನಲ್ಲಿ ಯಾವ ವಿಧವಾದ ಸಂಬಂಧವನ್ನು ನೇರಾಗಿಯಾಗಲಿ ಪರೋಕ್ಷವಾಗಿ ಯಾಗಲಿ ಇಟ್ಟುಕೊಳ್ಳಕೂಡದು. ಮತ್ತು ಇಟ್ಟುಕೊಂಡಿರಕೂಡದು.

18. ಮೇಲೆ ಹೇಳಿರುವ 12 ಮತ್ತು 13ನೇ ಷರತ್ತುಗಳಿಗನುಸಾರವಾಗಿ ಹಂಗಾಮಿಯಾಗಾಗಲಿ ಅಥವಾ ಖಾಯಮಾಗಾಗಲಿ ಮುಚ್ಚುವ ಸಂದರ್ಭಗಳಲ್ಲಿ ವಿನಹಾ ಡಿಪೋ ಮತ್ತು ಅಂಗಡಿಗಳು ತೆಗದಿರಬೇಕು. ಡೆಪ್ಯುಟಿ ಕಮಿಷನರವರು ಸ್ಥಳದ ಉಪಯೋಗಕ್ಕೆ ಅವಶ್ಯಕವಾಗಿರುವದೆಂದು ತಿಳಿದು ಅಪ್ಪಣೆ ಮಾಡಿರುವಷ್ಟು ಷರಾಬು ಮದಕ್ ಪದಾರ್ಥಗಳು ಮತ್ತು ಅಫೀಮನ್ನು ಅಂಗಡಿಗಳಲ್ಲಿ ಇಟ್ಟಿರಬೇಕು. ಜುಲೈ ಗುರ್ರೆಯಲ್ಲಿ ತೆರೆಯದಿರುವ ಅಂಗಡಿಗಳು ಲೈಸೆನ್ಸದಾರ್ರನ್ನು ಲುಕ್ಸಾನಿಗೆ ಬಳಪಡಿಸಿ ಪುನಃ ಹರಾಜು ಮಾಡಲ್ಪಡುವದು.

19. ಷರಾಬು, ಮದಕ್ ಪದಾರ್ಥ ಯಾ ಅಫೀಂ ಅಂಗಡಿಗಳಲ್ಲಿ ನಗದು ಮೊಬಲಗಿಗೆ ಶಿವಾಯಿ ಮಾರಲ್ಪಡಕೂಡದು. ನಗದು ಶಿವಾಯಿ ಬೇರೇ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಲೈಸೆನ್ಸುದಾರನು ಸಮೀಪದಲ್ಲಿರುವ ಮೇಜಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರಿಗೆ ವರ್ತಮಾನ ಕೊಡಲು ಬದ್ಧನಾಗಿರುತ್ತಾನೆ. ಈ ಷರತ್ತು ಅಂಗಡಿಯ ಹೊರಗಡೆ ಕುಡಿಯುವದಕ್ಕಾಗಿ ಅಂಗಡಿದಾರ್ರಿಂದಲೂ ಯಾ ಮಾತಬರ ಘರಂಗಳಿಂದಲೂ ವ್ಯಾಪಾರ ಮೂಲಕವಾಗಿ ಕೊಡಲ್ಪಡುವ ಪರಾಯಿ ದೇಶದ ಮತ್ತು ವಿಶೇಷ ಷರಾಬುಗಳನ್ನು ಸಾಲವಾಗಿ ಮಾರತಕ್ಕದ್ದನ್ನು ಅಡ್ಡಿ ಪಡಿಸುವದಿಲ್ಲ.

20. ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನುರೀತ್ಯಾ ಬಿಕರಿಮಾಡಲು ಗೊತ್ತುಮಾಡಿರುವ ಪರಮಾವಧಿ ಕನಿಷ್ಠ ಯಾ ನಿಷ್ಕರ್ಷೆಯಾದ ದರಗಳಿಗಿಂತಲೂ ಹೆಚ್ಚಾಗಿಯಾಗಲಿ, ಕಮ್ಮಿಯಾಗಿ ಯಾಗಲಿ ಯಾವ ಷರಾಬು, ಮದಕ್ ಪದಾರ್ಥ ಅಥವಾ ಅಫೀಂ ಮಾರಲ್ಪಡಕೂಡದು.

ಷರಾ—1. 20ಂ ಷರಾಬು—1 ಡ್ರಾಂಗೆ 2 ಆಣೆ.

2. ಗಾಂಜಾ—1 ತೊಲೆಗೆ 2 ಆಣೆ.

3. ಅಫೀಂ—1 ತೊಲೆಗೆ 9 ಆಣೆ.

4. ಶೇಂದಿ—ಷೆಡ್ಯೂಲಿನಲ್ಲಿ ಫಾಯಿಸ್ಲ್ ಮಾಡಿರುವ ಕಮ್ಮಿ ದರ.

21. ಲೈಸೆನ್ಸಿಲ್ಲದೆ ಇಟ್ಟುಕೊಳ್ಳಬಹುದಾಗಿರುವ ಮೊತ್ತಕ್ಕಿಂತಲೂ ಹೆಚ್ಚಾಗಿ ಯಾವ ಷರಾಬು ಮದಕ್ ಪದಾರ್ಥ ಯಾ ಅಫೀಮು ವಿಧಾಯಕವಾದ ಪರ್ಮಿಟ್ಟಿಲ್ಲದೆ ಲೈಸೆನ್ಸ್ ಪಡೆದ ಅಂಗಡಿಯಿಂದ ಒಂದೇ ಕಾಲದಲ್ಲಿ ಯಾವ ಮನುಷ್ಯನಿಂದಲಾದರೂ ತೆಗದುಕೊಂಡು ಹೋಗಲ್ಪಡಕೂಡದು.

ಷರಾ—ಸಾರಾಯಿ—ರೆಪ್ಯೂಟೆಡ್ ಕ್ವಾರ್ಟ್.
ಶೇಂದಿ—2 ಸೇರು.
ಗಾಂಜಾ—4 ತೊಲಾ.
ಅಫೀಮು—3 ತೊಲಾ.
ಪರಾಯಿ ಷರಾಬು—2 ಗ್ಯಾಲನ್.

22. ಪ್ರತಿ ದಿನವೂ ಆಗತಕ್ಕ ಜಮಾ ಖರ್ಚನ್ನು ವಿಧಾಯಕವಾದ ನಮೂನೆಯಲ್ಲಿ ಶಾಯಿಯಲ್ಲಿ ಬರೆದಿಡಬೇಕು. ಈ ಲೆಕ್ಕದ ಪುಸ್ತಕಗಳನ್ನೂ ಮತ್ತು ಪರ್ಮಿಟ್ ಪುಸ್ತಕಗಳನ್ನೂ ಸರ್ಕಾರೀ ಖಜಾನೆಯಲ್ಲಿ ಖರೀದಿ ಮೊಬಲಗನ್ನು ಜಮಾ ಮಾಡಿಸಿದ್ದ ರಶೀತಿಗಳನ್ನು ಹಾಜರ್ಮಾಡಿದ್ದಲ್ಲಿ ಸ್ಥಳೀಕ ಆಬ್ಕಾರಿ ನೌಕರಮಾನೇರಿಂದ ಪಡೆಯಬಹುದು. ಜಮಾ ಬಂದ ಷರಾಬು, ಮದಕ್ ಪದಾರ್ಥಗಳು ಅಥವಾ ಅಫೀಮಿನ ಪರ್ಮಿಟ್ಟುಗಳೂ, ಖರ್ಚಾದ ಪರ್ಮಿಟ್ಟುಗಳ ಕೌಂಟರ್ ಫಾಯಿಲುಗಳೂ ಎಚ್ಚರಿಕೆಯಾಗಿ ಫೈಲ್ ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರ್ಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ, ರುಜು ಮಾಡ್ಡುವದನ್ನು ನಿಷೇಧಿಸಿದೆ. ಈ ಲೆಖ್ಖಗಳನ್ನೂ, ಪರ್ಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ ಲೈಸೆನ್ಸಿನಲ್ಲಿ ಕಂಡವಾಯಿದೆಯು ಕಳೆದ ಒಂದು ವರುಷದವರಿಗೂ ಇಟ್ಟುಕೊಂಡಿರತಕ್ಕದ್ದು. ಅಸಿಸ್ಟೆಂಟು ಇನ್ಸ್‌ಪೆಕ್ಟರ ದರ್ಜೆಗೆ ಕಮ್ಮಿ ಯಾಗಿರದ ಯಾವ ಎಕ್ಸೈಜ್ ಆಫಿಸರು ಕೇಳಿದರೂ ಸದರಿ ಲೆಖ್ಖಗಳನ್ನು ಹಾಜರ್ಮಾಡಬೇಕು.

23. ಅಸಿಸ್ಟೆಂಟ್ ಇನ್ಸ್‌ಪೆಕ್ಟರ ದರ್ಜೆಗಿಂತಲೂ ಕಮ್ಮಿ ಇಲ್ಲದ ಎಕ್ಸೈಜ್ ಆಫಿಸರುಗಳು ಆಗಿಂದಾಗ್ಯೆ ಅಪೇಕ್ಷಿಸುವಂಥ ಯಾವ ಲೆಖ್ಖಗಳನ್ನಾಗಲಿ, ವರ್ತಮಾನಗಳನ್ನಾಗಲಿ ಲೈಸೆನ್ಸದಾರರು ತಡೆಮಾಡದೆ ಕೊಡಬೇಕು.

24. ಎಕ್ಸೈಜ್ ಕಮ್ಮಿಷನರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಪ್ರಮಾಣದ ತೂಕದ ಮತ್ತು ಅಳತೆ ಸಾಧನಗಳನ್ನು ಮಾತ್ರವೇ ಎಲ್ಲಾ ಲೈಸೆನ್ಸ್ ಪಡೆದ ಅಂಗಡಿಗಳಲ್ಲಿ ಇಟ್ಟುಕೊಂಡಿರಬೇಕು, ಮತ್ತು ಉಪಯೋಗಿಸಬೇಕು. ಯಾವ ಲೈಸೆನ್ಸ್ ಪಡೆದ ಅಂಗಡಿಗಳಲ್ಲಾದರೂ ಕರಾರ್ವಾರ್ಕಾಗಿಲ್ಲದ ತೂಕದ ಮತ್ತು ಅಳತೆ ಸಾಧನಗಳನ್ನು ಇಟ್ಟುಕೊಂಡಿರೋಣವು ಅಥವಾ ಉಪಯೋಗಿಸೋಣವು ಲೈಸೆನ್ಸದಾರನನ್ನು ಶಿಕ್ಷೆಗೆ ಗುರಿಮಾಡುತ್ತೆ.

25. ಸಬ್ ಇನ್ಸ್‌ಪೆಕ್ಟರ ಹುದ್ದೆಗಿಂತಲೂ ಕಮ್ಮಿಯಾಗಿರದ ಯಾವ ಆಬ್ಕಾರೀ ನೌಕರನಾದರೂ ಲೈಸೆನ್ಸ ಪಡೆದ ಅಂಗಡಿಗಳನ್ನೂ ಮತ್ತು ಡಿಪೋಗಳನ್ನೂ ತನಿಖೆಮಾಡಲು ಅಧಿಕಾರವುಳ್ಳವನಾಗಿರುತ್ತಾನೆ. ಸದರಿ ಅಂಗಡಿಗಳನ್ನು ಪ್ರವೇಶಮಾಡಿ ತನಿಖೆಮಾಡುವದಕ್ಕೂ, ಉಪಯೋಗದಲ್ಲಿರುವ ತೂಕದ ಮತ್ತು ಅಳತೆ ಸಾಧನೆಗಳನ್ನೂ, ಷರಾಬು, ಮದಕ್ ಪದಾರ್ಥಗಳು, ಅಫೀಮನ್ನೂ ಅಜಮಾಯಿಷಿ ಮಾಡಲಿಕ್ಕೂ ಅಂಗಡಿಯಲ್ಲಿ ಯಾ ಡಿಪೋದಲ್ಲಿಟ್ಟಿರತಕ್ಕ ಲೆಖ್ಖಗಳನ್ನು ಕೇಳಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ. ಪೋಲೀಸ್ ಆಫಿಸರರುಕೂಡ ತಮ್ಮ ಕೆಲಸಕ್ಕೆ ಸಂಬಂಧಪಟ್ಟಿರುವ ಮಟ್ಟಿಗೆ ತನಿಖೆ ಮಾಡಬಹುದು.

26. ಕ್ರಮವಾಗಿ ನಂಬರು ಹಾಕಲ್ಪಟ್ಟ ಪುಟಗಳುಳ್ಳ ಇನ್ಸ್ಪೆಕ್ಷನ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರಿ ಪುಸ್ತಕವನ್ನು ರೇಂಜ್ ಛಾರ್ಜಿನಲ್ಲಿರುವ ಅಬಕಾರಿ ಇನ್ಸ್ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ಯಾವ ಆಫಿಸರರೇ ಆಗಲಿ ರಶೀತಿ ಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

27. ಸ್ವತಂತ್ರ ಹಕ್ಕನ್ನು ಪಡೆದದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರೀ ಖಜಾನೆಯಲ್ಲಿ ಜುಲೈ ಮಾಹೆ ಲಾಗಾಯಿತು ಪ್ರತಿ ತಿಂಗಳಲ್ಲಿಯೂ 20ನೆ ತಾರೀಖು ಅಥವಾ ಅದರ ವಳಗೆ ಸರಿಯಾದ ತಿಂಗಳಗಟ್ಲೆ 12 ಖಿಸ್ತುಗಳಲ್ಲಿ ಪಾವತಿ ಮಾಡುತ್ತಾ ಬರತಕ್ಕದ್ದು. ಜಾತ್ರೆ ಅಂಗಡಿಯ ಲೈಸೆನ್ಸದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೇ ಸದರಿ ಅಂಗಡಿಯ ಗುತ್ತಾ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

ಷರಾ—ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ತಾವೇ ಲೈಸೆನ್ಸದಾರರಲ್ಲದೆ ಇರುವ ಸಂದರ್ಭಗಳಲ್ಲಿ ಗ್ರಾಮದ ಪಟೇಲರು ಯಾವ ಮನುಷ್ಯನಿಂದಲಾಗಲೀ ಒಂದುಸಾರಿಗೆ 50 ರೂಪಾಯಿಗಳಿಗೆ ಮೀರದಂತೆ ಮೊಬಲಗನ್ನು ತೆಗದುಕೊಳ್ಳಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡಬಹುದು.

28. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಮಾಡಬೇಕೆಂದು ಯಾ ಇಜಾರೆ ಮೊಬಲಗನ್ನು ಕಮ್ಮಿ ಮಾಡಲ್ಪಡಬೇಕೆಂದು ಕೇಳಲ್ಪಡಕೂಡದು.

29. ಜಮೀನ್ ಕಂದಾಯದ ಬಾಕಿ ವಸೂಲಿ ಬಗ್ಗೆ ಆಯಾ ಕಾಲದಲ್ಲಿ ಜಾರೀಲಿರುವ ಕಾನೂನು ಮೇರೆಗೆ ಲೈಸೆನ್ಸದಾರನಿಂದ ಬರಬೇಕಾದ ಮೊಬಲಗು ಆತನ ಯಾ ಆತನ ಜಾಮೀನ್ದಾರನ ಸ್ವತ್ತುಗಳ ಜಫ್ತಿ ಮತ್ತು ಹರಾಜಿನಿಂದ ವಸೂಲ್ಮಾಡಲ್ಪಡುವದು. ಅಥವಾ ಇಜಾರೆಯು ಪ್ರಾರಂಭದಲ್ಲಿ ಆತನಿಂದ ಕೊಡಲ್ಪಟ್ಟ ಠೇವಣಿ ಮೊಬಲಗು ಇದ್ದಲ್ಲಿ ವಜಾ ಹಾಕಲ್ಪಡುವದು. ಅಮಲ್ದಾರ್ರಿಂದ ಕೊಡಲ್ಪಟ್ಟ ನೋಟೀಸ್ ಜಾರಿಯಾದ 15 ದಿವಸಗಳ ವಳಗಾಗಿ ಠೇವಣಿ ಮೊಬಲಗಿನಿಂದ ವಜಾ ಮಾಡಲ್ಪಟ್ಟ ಮೊಬಲಗನ್ನು ಪುನಃ ಭರ್ತಿ ಮಾಡಲು ಬದ್ಧನಾಗಿರುತ್ತಾನೆ.

30. ವಿಧಾಯುಕವಾದ ತಾರೀಖುಗಳ ವಳಗಾಗಿ ಖಿಸ್ತುಗಳನ್ನು ಅಥವಾ (ಶೇಂದಿಯ) ಮರತೆರಿಗೆಯನ್ನು ಕೊಡದೆ ತಪ್ಪಿದಲ್ಲಿ ಲೈಸೆನ್ಸುಗಳನ್ನು ಸಸ್ಪೆಂಡ್ ಮಾಡಲು ರೆವಿನ್ಯೂ ಆಫಿಸರುಗಳಿಗೆ ಅಧಿಕಾರವನ್ನು ಉಳಿಸಿಕೊಂಡಿರುತ್ತೆ. ಷರಾಬು ಶೇಂದಿ ಮತ್ತು ಮದ್ದತ್ ಅಂಗಡಿಗಳ ವಿಷಯದಲ್ಲಿ ಈ ಅಧಿಕಾರವು ಅಮಲ್ದಾರುಗಳಿಂದಲೂ ಇತರ ಸಂದರ್ಭಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಚಲಾಯಿಸಲ್ಪಡುತ್ತೆ.

31. ಮೇಲ್ಕಂಡ ಷರಾಬು, ಶೇಂದಿ, ಮದ್ದತ್ ಪದಾರ್ಥಗಳ ಲೈಸೆನ್ಸದಾರನು ಖಿಸ್ತು ಬಾಕೀ ಬೀಳುವ ತಿಂಗಳ ಆಖೈರ್ ವಳಗಾಗಿ ಖಿಸ್ತು ಕೊಡದೆ ತಪ್ಪಿದಲ್ಲಿ ಅಮಲ್ದಾರು ಡೆಪ್ಯುಟಿ ಕಮ್ಮಿಷನರವರ ಬರಹಮೂಲಕವಾದ ಅಪ್ಪಣೆ ಪಡೆದು ಲೈಸೆನ್ಸನ್ನು ರದ್ದುಮಾಡಿ ಮುಂದಿನ ತಿಂಗಳ ಗುರ್ರೆ ತಾರೀಖಿನದಿವಸ (ರಜಾ ದಿವಸಗಳು ಶಿವಾಯಿ) ಸದರಿ ಹಕ್ಕನ್ನು ಹೊಸ ಬಿಕರೀದಾರನಿಗೆ ಲೈಸೆನ್ಸ್ ಕೊಟ್ಟ ತಾರೀಖು ಲಾಗಾಯಿತು ಬಿಕರಿಯ ಸ್ವತಂತ್ರ ಹಕ್ಕನ್ನು ಪುನಃ ಹರಾಜು ಮಾಡಬಹುದು. ಅಥವಾ ಸದರಿ ಹಕ್ಕು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರುವ ರೀತ್ಯಾ ಇತರ ವಿಧವಾಗಿ ವಿಲೇವಾರಿ ಮಾಡಬಹುದು. ಸದರಿ ಹಕ್ಕನ್ನು ರದ್ದುಮಾಡುವದರಿಂದ ಮತ್ತು ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲೇವಾರಿ ಮಾಡುವದರಿಂದ ಉಂಟಾಗುವ ಎಲ್ಲಾ ನಷ್ಟಕ್ಕೂ ತಪ್ಪಿತಸ್ಥನು ಗುರಿಯಾಗಿರುತ್ತಾನೆ. ಆದರೆ ಏನಾದರೂ ಲಾಭ ಬಂದಲ್ಲಿ ಅದಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಇಜಾರೆ ಪ್ರಾರಂಭದಲ್ಲಿ ಇಡಲ್ಪಟ್ಟ ಠೇವಣಿ ಏನಾದರೂ ಇದ್ದಲ್ಲಿ, ಇದರ ಪೂರಾ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸನ್ನು ಸಸ್ಪೆಂಡು ಮಾಡಲಿಕ್ಕೆ ಅಧಿಕಾರವುಳ್ಳ ಆಫಿಸರು ತಮಗೆ ಯುಕ್ತ ಕಂಡರೆ ಪುನಃ ಹರಾಜು ಅಥವಾ ಇತರ ವಿಲೇವಾರಿ ಆಗುವ ವರಿವಿಗೂ ಬಿಕರಿ ನಡೆಸಲು ಅವಕಾಶ ಕೊಡಬಹುದು.

32. ಬಾಕೀ ಬೀಳುವ ಎಲ್ಲಾ ಮೊಬಲಗಿನಮೇಲೂ ತಿಂಗಳು 1ಕ್ಕೆ ಅಥವಾ ಅದರ ಭಾಗಕ್ಕೆ ರೂಪಾಯಿ 1ಕ್ಕೆ 1ಪೈ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡಬೇಕು.

33. ಲೈಸೆನ್ಸದಾರನಾಗಲಿ ಅಥವಾ ಆತನಿಂದ ನೇಮಿಸಲ್ಪಟ್ಟ ಯಾವ ಮನುಷ್ಯನಾಗಲಿ ಲೈಸೆನ್ಸಿನ ಯಾವ ಷರತ್ತುಗಳಿಗೆ ವಿರೋಧವಾಗಿ ನಡೆದರೆ, ಲೈಸೆನ್ಸದಾರನಿಗೆ—

(a) 50 ರೂಪಾಯಿನವರಿಗೆ ಜುರ್ಮಾನೆ ಅಥವಾ (b) ಠೇವಣಿಗಳೇನಾದರೂ ಇದ್ದಲ್ಲಿ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಲೈಸೆನ್ಸು ರದ್ದುಮಾಡಲ್ಪಡುವದು ಮತ್ತು ಲೈಸೆನ್ಸದಾರ್ರನ್ನು ನಷ್ಟಕ್ಕೆ ಗುರಿಮಾಡಿ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಅಥವಾ ಇತರ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಈ ಮೇಲ್ಕಂಡ ಅಂಶಗಳಿಗೆ ಲೈಸೆನ್ಸದಾರನು ಒಳಗಾಗಿರುತ್ತಾನೆ.

ಲೈಸೆನ್ಸದಾರನು/ಅಥವಾ ಆತನ ಮುತಾಲೀಕನು ಆತನು ಮಾಡಿರುವ ತಕ್ಸೀರಿಗೆ ಆಪಾದನೆ ಮಾಡಲ್ಪಡಬಹುದು. ಈ ಷರತ್ತಿನಂತೆ ಇಜಾರೆಯು ರದ್ದು ಮಾಡಲ್ಪಟ್ಟರೆ ಇಜಾರೆಯ ಪೂರಾ ಮೊಬಲಗು ಕೂಡ್ಲೆ ಬಾಕಿ ಬೀಳುವದು.

ಷರಾ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪುಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

34. ಲೈಸೆನ್ಸದಾರನು ಎಕ್ಸೈಜ್ ರೆಗ್ಯುಲೇಷನ್ ಯಾ ಅಫೀಂ ಆಕ್ಟಿಗೆ ವಿರೋಧವಾಗಿ ಅಥವಾ ಇಂಡಿಯನ್ ಪೆನಲ್ ಕೋಡಿನಲ್ಲಿ ನಮೂದಿಸಿರುವ ಯಾವ ತಕ್ಸೀರಿಗಾದರೂ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದಲ್ಲಿ, ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸದಾರನಾಗಿರಲು ನಾಲಾಯಖೆಂದು ಕಂಡುಬಂದಲ್ಲಿ, ಯಾವ ಲೈಸೆನ್ಸಾದರೂ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ ಅವನ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹಕ್ಕುದಾರಿಯು ಹರಾಜು ಮುಂಜೂರಾದನಂತರ ಕ್ರಮವಾದ ಲೈಸೆನ್ಸು ಕೊಡುವದಕ್ಕೆ ಮುಂಚೆಯಾದ

ರೂ ಕೂಡ ಹಕ್ಕನ್ನು ಕೊಂಡುಕೊಂಡವನು ಮೇಲೆ ನಮೂದಿಸಿರುವ ಯಾವ ತಕ್ಸೀರಿಗಾದರೂ ಸಾಬೀತು ಮಾಡಲ್ಪಟ್ಟಲ್ಲಿ ಈ ಷರತ್ತಿನಲ್ಲಿ ನಿಬಂಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರುತ್ತಾನೆ. ಈ ಷರತ್ತಿನ ಮೇರೆ ಲೈಸೆನ್ಸ್ ದಂಡವಾಗಿ ತೆಗದುಕೊಳ್ಳಲ್ಪಡೋಣವು, ಇಜಾರೆ ಷರತ್ತಿನ ಪ್ರಕಾರ ಸರ್ಕಾರಕ್ಕೆ ಪಾವತಿಯಾಗಬೇಕಾದ ಮೊಬಲಗು ಜಾತಾ ಉಳಿಯುವ ಎಲ್ಲಾ ಠೇವಣಿಗಳು ದಂಡವಾಗಿ ತೆಗೆದುಕೊಳ್ಳಲ್ಪಡುವುದಕ್ಕೂ ಲೈಸೆನ್ಸ್‌ದಾರನನ್ನು ಗುರಿಮಾಡುತ್ತದೆ.

35. ಷರಾಬು, ಮದತ್ ಪದಾರ್ಥಗಳು ಮತ್ತು ಅಫೀಮನ್ನು ಬಯ್ಯುವ, ತಯಾರ್ಮಾಡುವ ಅಥವಾ ಬಿಕರಿ ಮಾಡುವದರಲ್ಲಿ ತಮ್ಮಿಂದ ನೌಕರರಾಗ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಅಥವಾ ಅಫೀಂ ಕಾನೂನುಗಳಿಗೆ ಅಥವಾ ಅವರ ಒಪ್ಪಂದಗಳಿಗೆ ವಿರೋಧವಾಗಿ ನಡೆದದ್ದು ತಮಗೆ ತಿಳಿದುಬಂದರೆ ಲೈಸೆನ್ಸ್‌ದಾರರು ಡೆಪ್ಯುಟಿ ಕಮಿಷನರವರಿಗೆ ಇಂಥಾ ಎಲ್ಲಾ ಸಂದರ್ಭಗಳನ್ನು ರಿಪೋರ್ಟು ಮಾಡುವದಕ್ಕೂ ಮತ್ತು ಅಂಥವರನ್ನು ಇನ್ನೂ ಕೆಲಸದಲ್ಲಿಟ್ಟುಕೊಂಡಿರುವ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ಕೊಡುವ ಹುಕುಮಿನಂತೆ ಜಾರೀಲಿ ತರುವುದಕ್ಕೂ ಬದ್ಧರಾಗಿರುತ್ತಾರೆ. ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಯಾವ ತಪ್ಪಿತಕ್ಕಾದರೂ ಸಾಬೀತಾದ ಮನುಷ್ಯರನ್ನು ಷರಾಬು, ಮದತ್ ಪದಾರ್ಥ ಮತ್ತು ಅಫೀಮನ್ನು ಬಯ್ಯುವದಕ್ಕೆ ಡೆಪ್ಯುಟಿ ಕಮಿಷನರವರ ಅಪ್ಪಣೆ ಇಲ್ಲದೆ ನೇಮಿಸಕೂಡದು.

36. ಲೈಸೆನ್ಸ್‌ದಾರರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಯಾವ ವಿಧವಾದ ಹಣಸಂಬಂಧವಾದ ಲೇವಾದೇವಿಯನ್ನು ಖಂಡಿತವಾಗಿಯೂ ಇಟ್ಟುಕೊಳ್ಳಕೂಡದು.

37. ಎಕ್ಸೈಜ್ ಕಮಿಷನರವರ ಅಪ್ಪಣೆ ಪಡೆದು ಲೈಸೆನ್ಸ್ ಮೋಖೂಫ್ ಬಗ್ಗೆ 15 ದಿವಸಗಳ ಮುಂಚಿನ ನೋಟೀಸ್ ಕೊಟ್ಟು ಡೆಪ್ಯುಟಿ ಕಮಿಷನರವರು ತಮ್ಮ ಯುಕ್ತ್ಯಾನುಸಾರ ಯಾವ ಲೈಸೆನ್ಸನ್ನಾದರೂ ಮೋಖೂಫ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಅದಕ್ಕಾಗುವ ದಾಮಾಷಾಯ ಗುತ್ತಾ ಮೊಬಲಗು ವಾಪಸು ಕೊಡಲ್ಪಡಬೇಕು.

38. ಎಲ್ಲಾ ಲೈಸೆನ್ಸ್‌ದಾರರು ಸರ್ಕಾರದಿಂದ ಎಕ್ಸೈಜ್ ಅಥವಾ ಅಫೀಂ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ಜಾಸ್ತಿ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧರಾಗಿರತಕ್ಕದ್ದು. ಡೆಪ್ಯುಟಿ ಕಮಿಷನರವರು ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರವರು ಸರಿಪಡಿಸುವ ಯಾ ಹೊಸ ಲೈಸೆನ್ಸನ್ನು ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

39. ಲೈಸೆನ್ಸಿಗೆ ಸಂಬಂಧಪಡದ ಷರಾಬು ಯಾ ಮದತ್ ಪದಾರ್ಥಗಳ ವಿಷಯದಲ್ಲಿ ಯಾವದಾದರೂ ಏರ್ಪಾಡು ಮಾಡಲ್ಪಡುವ ಪಕ್ಷದಲ್ಲಿ ಲೈಸೆನ್ಸ್‌ದಾರರಿಗೆ ಪರಿಹಾರ ದ್ರವ್ಯಕ್ಕೂ ಯಾ ರಿಮಿಷನ್ ಯಾನೆ ಸೋಡಿಗೂ ಹಕ್ಕು ಇರಲಾರದು.

40. ಯಾವ ತರಹೆ ಷರಾಬು ಅಂಗಡಿಯ ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ವಾಯಿದೆ ಒಳಗೆ ಅಲ್ಲಿಂದ 5 ಮೈಲಿ ಒಳಗೆ ಇತರ ಷರಾಬುಗಳನ್ನು ಮಾರತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು ಮತ್ತು ತನ್ನ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಅಂಥಾ ಯಾವ ಮನುಷ್ಯನನ್ನೂ ಪಾಲುಗಾರನನ್ನಾಗಲಿ ಅಥವಾ ಸಂಬಂಧವುಳ್ಳವನನ್ನಾಗಲಿ ಮಾಡಲು ಅವಕಾಶ ಕೊಡಕೂಡದು.

XX. ಸಾರಾಯಿ ಲೈಸೆನ್ಸಿಗೆ ಲಗಾವಾಗುವ ಷರತ್ತುಗಳು.

1. ಈ ಲೈಸೆನ್ಸಿಂದ ಕೊಡಲ್ಪಟ್ಟ ಹಕ್ಕು ಸಾಧಾರಣವಾಗಿ 20° ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವುದಕ್ಕೂ ಮತ್ತು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫೀಸರರ ಅಪ್ಪಣೆಯಿಂದ 30° ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವುದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರದೇಶೀಯ ಮದ್ಯಗಳನ್ನು ಮಾರತಕ್ಕ ಅಂಗಡಿಗಳಿಲ್ಲದೇ ಇರತಕ್ಕ ಪ್ರದೇಶಗಳಲ್ಲಿಯೂ ಅಥವಾ ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ವಿಶೇಷ ಮದ್ಯಗಳನ್ನೂ, ಯಾ ಪರದೇಶೀಯ ಮದ್ಯಗಳ ಅಂಗಡೀದಾರರು ಎಕ್ಸೈಜ್ ಕಮಿಷನರವರಿಂದ ನಿರ್ಣಯಿಸಲ್ಪಟ್ಟ ಜೋರುಳ್ಳ ವಿಶೇಷ ಅಥವಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಮಾರದೇ ಇರತಕ್ಕ ಸ್ಥಳಗಳಲ್ಲಿಯೂ ಒಪ್ಪಿತವಾದ ನಡತೆಯುಳ್ಳ ಸಾರಾಯಿ ಅಂಗಡಿ ಲೈಸೆನ್ಸುದಾರನು ಎಕ್ಸೈಜ್ ಕಮಿಷನರವರ ಮಂಜೂರು ಹುಕುಂ ಪಡದು ಸದರೀ ಮದ್ಯಗಳನ್ನು ಕ್ರಮವಾಗಿ ಬಿರಟೆ ಮೊಹರು ಆಗಿರುವ ಶೀಶೆಗಳಲ್ಲಿ ಎಕ್ಸೈಜ್ ಕಮಿಷನರ್ ಗೊತ್ತುಮಾಡಿದ ಖರೀದಿ ದರದಮೇರೆಗೆ ಮತ್ತು ಸಾರಾಯಿ ಮಾರಾಟಕ್ಕೆ ಸಂಬಂಧಪಟ್ಟ ಷರತ್ತುಗಳಿಗೆ ಒಳಪಟ್ಟು ಅಂಗಡಿಯ ಆವರಣದಲ್ಲಿ ಕುಡಿಯದಂತೆ ಮಾರಲು ಅಪ್ಪಣೆ ಕೊಡಲ್ಪಡಬಹುದು. ಅದೇಮೇರೆಗೆ ಬೆಲ್ಲದ ಸಾರಾಯಿ ಅಥವಾ ವಿಶೇಷ ಮದ್ಯಗಳನ್ನು ಮಾರುವುದಕ್ಕೆ ಪ್ರತ್ಯೇಕ ಅಂಗಡಿಗಳ ಲೈಸೆನ್ಸಿಲ್ಲದೆ ಇದ್ದ ಪ್ರದೇಶಗಳಲ್ಲಿ ಷರಾಬು ಅಂಗಡಿ ಯವನು ರೆಪ್ಯೂಟೆಡ್ ಪಾಯಿಂಟ್ ಅಥವಾ ಕ್ವಾರ್ಟ್ ಶೀಷೆಗಳಲ್ಲಿ ಬೆಲ್ಲದ ಸಾರಾಯಿಯನ್ನು ಮಾರಲು ಅಪ್ಪಣೆ ಕೊಡಬಹುದು.

2. ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಕೋಠಿಗಳಿಂದ ಮದ್ಯಗಳನ್ನು ಈ ಕೆಳಗೆ ನಮೂದಿಸಿರುವ ದರಗಳಂತೆ ಕೊಂಡುಕೊಳ್ಳಬಹುದು :—

(1) ತಾಟಿಬೆಲ್ಲ ಮತ್ತು ಕಾಕಂಬಿ ಸಾರಾಯಿ 20° ಡಿಗ್ರಿಯುಳ್ಳ ಗ್ಯಾಲನ್ 1ಕ್ಕೆ ರೂಪಾಯಿ 0-10-11 ಪೈ ಪ್ರಕಾರ.

(2) ಕಬ್ಬಿನಬೆಲ್ಲದ ಸಾರಾಯಿಯು ಬಿರಟೆಹಾಕಿ, ಶೀಲು ಹಾಕಿರುವ ಶೀಷೆಗಳನ್ನು 20° ಡಿಗ್ರಿಯ ಗ್ಯಾಲನ್ 1ಕ್ಕೆ ರೂಪಾಯಿ 1—6—5 ಪೈ ಅಥವಾ ಆಗಿಂದಾಗ್ಯೆ ಗೊತ್ತುಮಾಡುವ ಇತರ ದರ.

(3) ಮೇಲೆ ನಮೂದಿಸಿರುವ ವಿಶೇಷ ಮದ್ಯಗಳು ತಯಾರ್ಮಾಡುವವರಿಂದ ಗೊತ್ತುಮಾಡಲ್ಪಡುವ ಖರೀದಿಗಳಮೇರೆಗೆ.

(4) ಒಂದೇಸಾರಿಗೆ ಕೊಂಡುಕೊಳ್ಳತಕ್ಕ ಮೊತ್ತವು ಷರಾಬಿಗೆ ಒಂದು ಗ್ಯಾಲನ್ನಿಗಿಂತಲೂ, ಇತರವಿಧವಾದ ಮದ್ಯಗಳಿಗೆ ಮೂರು ಶೀಷೆಗಳೂ ಯಾ ಆರು ಪೈಂಟ್‌ಗಳಿಗಿಂತಲೂ ಕಮ್ಮಿಯಾಗಿರಕೂಡದು.

(5) ಬಾಂಡೆಡ್ ಡಿಪೋದಿಂದ ಷರಾಬನ್ನು ಒಯ್ಯುವದಕ್ಕಿಂತಮುಂಚೆ ತಾಟಿಬೆಲ್ಲ, ಕಾಕಂಬಿಸಾರಾಯಿ, ಕಬ್ಬಿನಬೆಲ್ಲದ ಸಾರಾಯಿ ಮತ್ತು ವಿಶೇಷ ಮದ್ಯಗಳು ಇವುಗಳಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿಗಳು ಶಿವಾಯಿ 20೦ ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ 4¾ ರೂಪಾಯಿನ ದರದಂತೆಯೂ, ಸದರಿ ಜೋರಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಸಾರಾಯಿಗಳಿಗೆ ಅವುಗಳ ದಾಮಾಷಾಯಿ ದರದಂತೆಯೂ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಪೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗದುಕೊಳ್ಳುವುದಕ್ಕಾಗಿ ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನು ಇದ್ದಲ್ಲಿ ಆತನ ವಶಕ್ಕೆ, ಅಥವಾ ಡೆಪ್ಯುಟಿ ಕಮ್ಮಿಷನರ್ ಇದಕ್ಕಾಗಿ ಮೊಕರರ್ಮಾಡಿರುವ ಇನ್ಯಾವ ನೌಕರನಿಗಾದರೂ ಪಾವತೀ ಮಾಡಿ ಗೊತ್ತುಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನು ಹಾಜರ್ಮಾಡಿದರೆ ಬಾಂಡೆಡ್ ಡೆಪೋ ಜಿಮ್ಮೇದಾರನು ಟ್ರೆಜರಿ ಆಫೀಸರರ ರಸೀತಿಯಲ್ಲಿ ನಮೂದು ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಮದ್ಯವನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಮದ್ಯವು ರವಾನೆ ಆದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಡೆಪ್ಯುಟಿ ಕಮ್ಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡೆಪೋದಿಂದ ಮದ್ಯವನ್ನು ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್ ಬಾಟ್ಲು ಯಾನೆ ಮಾದ್ರಿಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು 20೦ ಡಿಗ್ರಿ ಅಂಡರ್ ಪ್ರೂಫ್ ಜೋರಿನ ತಾಟೀ ಬೆಲ್ಲದ ಮತ್ತು ಕಾಕುಂಬೆ ಸಾರಾಯಿಯನ್ನು ಗ್ಯಾಲನ್ 1ಕ್ಕೆ 6-6-0 ಯಂತೆಯೂ ಅಥವಾ ಗ್ಯಾಲನ್ನಿನ 1—51ನೆ ಭಾಗವಾದ ಒಂದು ಡ್ರ್ಯಾಂಗೆ 2 ಆಣೆಯಂತೆಯೂ ಕಬ್ಬಿನ ಬೆಲ್ಲದ ಸಾರಾಯಿಯನ್ನು ಒಂದು ರೆಪ್ಯೂಟೆಡ್ ಕ್ವಾರ್ಟ್ ಶೀಶೆ 1ಕ್ಕೆ 1—3—10 ರಂತೆಯೂ ಅಥವಾ ಆಗಿಂದಾಗ್ಯೆ ಗೊತ್ತುಮಾಡುವ ಖರೀದಿ ದರದಂತೆಯೂ ಸದರಿ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

(8) ಲೈಸೆನ್ಸ್ದಾರನು 1909ನೆ ಇಸವಿ ಜುಲೈ 1ನೆ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸ್ದಾರನ ಬಾಬತು ದಾಸ್ತಾ ಮದ್ಯವನ್ನು ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(9) ಅಂಗಡಿಗಳ ಸಮುದಾಯವನ್ನು ಕೊಂಡುಕೊಂಡಿರುವವರು ಎಕ್ಸೈಜ್ ಕಮ್ಮಿಷನರವರ ವಿಶೇಷ ಅಪ್ಪಣೆಯನ್ನು ಪಡೆದು ಸರಿಯಾದ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಕೋಠಿಯನ್ನು ಇಟ್ಟುಕೊಂಡು ಅಲ್ಲಿಗೆ ಬಾಂಡೆಡ್ ಕೋಠಿಯಲ್ಲಿ ವಿಕ್ರಯಿಸಿರುವ ಸರಕನ್ನು ತೆಗಿಸಿಕೊಂಡು ಹೋಗಿ ಅಲ್ಲಿಂದ ತಮ್ಮ ಅಂಗಡಿಗಳಿಗೆ ಅವಶ್ಯಕವಾಗಿರುವ ಸರಬರಾಯಿಯನ್ನು ಮಾಡಿಕೊಳ್ಳಬಹುದು. ಇಂಥಾ ಅಪ್ಪಣೆಯನ್ನು ತಿರಸ್ಕರಿಸಲು ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಸ್ವಾತಂತ್ರವುಳ್ಳವರಾಗಿರುತ್ತಾರೆ.

(10) ಬ್ರಿಟಿಷ್ ರಾಜ್ಯದ ದ್ವಾರಾ ಒಯ್ಯಲ್ಪಟ್ಟು ಅಂಗಡಿಗಳಿಗೆ ಬರತಕ್ಕ ಸಾರಾಯಿಯ ಮೊಹರನ್ನು ಸರ್ಕಾರದಿಂದ ಸರಕು ಮೊಖಾಬಿಲೆ ಬಗ್ಗಾಗಿ ನೇಮಿಸಲ್ಪಟ್ಟಿರುವ ನೌಕರಮಾನೇರಿಂದ ಸದರಿ ಸರಕು ಮೊಕಾಬಿಲೆ ಮಾಡಲ್ಪಡುವ ವರೆಗೂ ಒಡೆಯಕೂಡದು.

(11) ಷರಾಬ್ ಬಿಕರೀ ಆಗುವ ದುಕಾನಿನಲ್ಲಾಗಲೀ ಯಾ ಲೈಸೆನ್ಸ್ದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ ಯಾ ಅಂಥಾವನ ದುಕಾನಿನ ನೌಕರರ ಬಳಿಯಲ್ಲಾಗಲೀ, ಅಥವಾ ಅವರ ಸ್ವಾಧೀನದಲ್ಲಾಗಲೀ, ಷರಾಬ್ ವಿನಹ ಇತರ ಯಾವ ಮದ್ಯವಾಗಲಿ ಸೀರೇ ಆಗಲಿ ಯಾ ಇತರ ಪಾನವಾಗಲೀ ಎಷ್ಟುಮಟ್ಟಿಗೂ ಇರತಕ್ಕದ್ದಲ್ಲವು, ಮತ್ತು ಮಾರತಕ್ಕದ್ದಲ್ಲವು.

(12) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ವರುಷ 1ಕ್ಕೆ 180 ರೂಪಾಯಿ ದರದ ಮೇರೆಗೆ ಮುನಿಸಿಪಲ್ ಕಾನೂನ್ ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಮುಂಗಡವಾಗಿ ಕೊಡಬೇಕು. ಮತ್ತು ಆತನು ಪ್ರತಿ ತಿಂಗಳಲ್ಲಿಯೂ ಅಂಥಾ ಪ್ರತಿ ಅಂಗಡಿಯಲ್ಲೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಸರ್ಚಾರ್ಜ್ ಫೀಯನ್ನು ಸಹ ಕೊಡಬೇಕು. ಸದರಿ ಮೊಬಲಗು ಮ್ಯುನಿಸಿಪಲ್ ಕಮ್ಮಿಟಿ ಪ್ರೆಸಿಡೆಂಟರವರಿಂದ ನೇಮಿಸಲ್ಪಡುವ ಆಫೀಸರವರಿಗೆ ಪಾವತಿ ಮಾಡಲ್ಪಡಬೇಕು.

XXI. ಶೇಂದಿ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಲೈಸೆನ್ಸ್ ಪ್ರಕಾರ ಕೊಡಲ್ಪಟ್ಟ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ತೆಂಗು ಮತ್ತು ಬಗನಿ ವ ದಡಸಾಲ್ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸದಾರನು, ಬಗನಿ ಮರಗಳನ್ನು ಬಗನಿ ಶೇಂದಿ ಅಂಗಡಿ ಲೈಸೆನ್ಸದಾರನು ಈಚಲು ಮರಗಳನ್ನು ಕಟ್ಟಕೂಡದು, ಆದರೆ ಈ ಉಭಯ ಲೈಸೆನ್ಸದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳನ್ನು ಕಟ್ಟಬಹುದು.

(2) ಲೈಸೆನ್ಸ್‌ದಾರನು ತನ್ನ ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸ್‌ನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವುದಕ್ಕೆ ಸ್ವತಂತ್ರನಾಗಿರುತ್ತಾನೆ. ಆದರೆ ಅಂಥಾ ಮರಗಳು ಆತನ ಇಜಾರೆಗೆ ಸಂಬಂಧಪಡದ ಅಂಗಡಿಯ ಸಮೀಪದಲ್ಲಿ ಯಾ ಸರಹದ್ದಿನೊಳಗೆ ಇದ್ದಪಕ್ಷದಲ್ಲಿ ಸದರಿ ಮರಗಳನ್ನು ಉತಾರ್ಮಾಡಲು ದರಖಾಸ್ತು ಮಾಡುವದಕ್ಕೆ ಮುಂಚೆ ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರವರ ಮಂಜೂರಾತಿಯನ್ನು ಪಡೆಯಬೇಕು. ಲೈಸೆನ್ಸ್‌ದಾರನು ಇನ್ಸ್‌ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಯೆ ಅವರಿಂದ ಅಪ್ಪಣೆ ಚೀಟಿ ಪಡದು ಇತರ ಶೇಂದಿ ದುಕಾಣದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು, ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್‌ಪೆಕ್ಟರವರು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ.

(3) ಸರಿಯಾದ ಲೈಸೆನ್ಸ್ ಪಡೆದು, ಆ ಲೈಸೆನ್ಸುಮೇರೆ ಉತಾರ್ಮಾಡಿರುವ ಮರಗಳ ಶೇಂದಿ ವಿನಹಾ ಮತ್ತ್ಯಾವ ವಿಧವಾದ ಶೇಂದಿಯನ್ನು ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(4) ಉತಾರ್ ಲೈಸೆನ್ಸುಗಳ ಷರತ್ತುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಲೈಸೆನ್ಸ್‌ದಾರನು, ತನ್ನ ಹೆಸರಿನಲ್ಲಿಯೂ, ಅಥವಾ ಅವನ ವಾರಸುದಾರನ ಹೆಸರಿನಲ್ಲಿಯೂ ದರಖಾಸ್ತಿನ ಮೇಲೆ ಕೊಡಲ್ಪಟ್ಟ ಉತಾರ್ ಲೈಸೆನ್ಸುಗಳಿಗಾಗಿ ಕೊಡಬೇಕಾದ ಎಲ್ಲಾ ತೆರಿಗೆಗಳ ಖಿಸ್ತುಗಳಿಗೂ ಸರ್ಕಾರಕ್ಕೆ ಜವಾಬ್ದಾರನಾಗಿರುತ್ತಾನೆ.

(5) ನಿರ್ಣಯಿಸಿದ ಕಾಲದೊಳಗಾಗಿ ಯಾವ ಖಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೆ ಸೆಕ್ಷನ್ ಮೇರೆಗೆ ಉತಾರ್ ಲೈಸೆನ್ಸ್ ರದ್ದು ಯಾ ಹಂಗಾಮಿಯಾಗಿ ಮೋಕೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(6) ಮೇಲ್ಕಂಡಂತೆ ನಡೆಯಲು ತಪ್ಪಿದಲ್ಲಿ ಅಮಲ್‌ದಾರರು ಡೆಪ್ಯುಟಿ ಕಮಿಷನರವರ ಅಥವಾ ಡೆಪ್ಯುಟಿ ಕಮಿಷನರವರಿಂದ ಇದಕ್ಕಾಗಿ ನೇಮಕಮಾಡಲ್ಪಡುವ ಇತರ ಆಫಿಸರವರ ಹುಕುಂ ಪಡದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವ ವರಿಗೂ ಉತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರ ನೋಟೀಸು ತನಗೆ ಬಂದಿದ್ದರಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇನೇ ಇದ್ದಲ್ಲಿ ನ್ಯಾಯವಿರುದ್ಧವಾಗಿ ಉತಾರು ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(7) ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಉತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಕಾಲದಲ್ಲಿ ಸಾಲಿಯಾನಾ ಮರ ಒಂದಕ್ಕೆ 4 ಆಣೆ 3 ಪೈ ಪ್ರಕಾರ ಮರದ ಮಾಲ್ಕಿ ಮೊಬಲಗು ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು, ಇನಾಂವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗತಕ್ಕದ್ದು.

(8) ಈಚಲು ಮರಗಳನ್ನು ಉತ್ತಾರ್ಮಾಡುವದು ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು:—

(a) ಈಚಲು ಮರಗಳು ಕಸಬುದಾರ್ರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮಾರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನ ಕೆಡಿಸಕೂಡದು.

(d) ಡೆಪ್ಯುಟಿ ಕಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು ಮತ್ತು ಅದರ ಉದ್ದವೂ 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಶೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಿಶೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ್ಖಮಾಡಿದರೆ ಎರಡು ವರಿಶೆಗಳಿಗೆ ಕಮ್ಮಿಯಾಗಿರಕೂಡದು; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸುದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸ್‌ದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೇ ಕಾಲದಲ್ಲಿ ಆಗಲಿ ಅಥವಾ ಗುತ್ತಿಗೆ ಪೂರೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿ

ಹೋದ ಮರಗಳು ಆತನಿಗೆ ಸಂಖ್ಯೆಹಾಕಿ ಕೊಡಲ್ಪಟ್ಟ ಬಿಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕ್ಕೂ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ. ಆತನು ಉತಾರಿಗಾಗಿ ತಯಾರ್ಮಾಡುವ ಪ್ರತಿ ಒಂದು ಮರಕ್ಕೂ ಅದು ಸದರಿ ತಯಾರಿಯಿಂದ ಉತಾರಾಗುವದಕ್ಕೆ ಮುಂಚೆ ನಾಶವಾದಲ್ಲಿ ಅದೇ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(j) ಜನಗಳ ಉಪಯೋಗಾರ್ಥವಾಗಿ ವಾಪಸು ತೆಗೆದುಕೊಂಡ ಯಾ ತೆಗೆದುಕೊಳ್ಳಲ್ಪಟ್ಟ ಮರಗಳೂ, ಇಂಜನಿಯರ್ ಇಲಾಖೆಯವರ ಆಡಳಿತಕ್ಕೆ ಶೇರಿರುವ (ಇರ್ರಿಗೇಷನ್) ತಕಾವಿ ಕಾಂಗಾರಿಗಳಿಗೆ ಶೇರಿದ ಪ್ರದೇಶಗಳಲ್ಲಿರುವ ಮರಗಳೂ, ಇಂಜನಿಯರ್ ಇಲಾಖೆಯವರು ಸದರಿ ಮರಗಳ ಎಲೆಗಳನ್ನೂ, ಕೊಂಬೆಗಳನ್ನೂ ಕತ್ತರಿಸಬೇಕಾದ ಸಂದರ್ಭಗಳಲ್ಲಿ ಲೈಸೆನ್ಸದಾರನಿಗೆ ಅಂಥಾ ಮರಗಳಿಗಾಗಿ ಯಾವ ಪರಿಹಾರದ್ರವ್ಯಕ್ಕೂ ಹಕ್ಕಿರುವುದಿಲ್ಲ.

(k) ಲೈಸೆನ್ಸ್‌ದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ದುಸರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(9) ಚಾಪೇ ಮಾಡುವುದಕ್ಕಾದರೂ ಹಗ್ಗ ಮಾಡುವುದಕ್ಕಾದರೂ ಗೂಡೆಗಳು ಮಾಡುವುದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸ್‌ದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(10) ಡೆಪ್ಯುಟಿ ಕಮ್ಮಿಷನರುಗಳು ಆಗಾಗ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಠಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ್ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಠಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇಗ್ರಾಮದ ಮರಗಳನ್ನು ದಾಖಲ್‌ಮಾಡಬೇಕೆಂದು ಹುಕುಂ-ಮಾಡಬಹುದು.

(11) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(12) ಅಂಗಡಿಗಳ ಸಮುದಾಯದ ಲೈಸೆನ್ಸ್‌ದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೊಡಲ್ಪಟ್ಟ ಪ್ಯಾಸುಗಳು ಅದಕ್ಕಾಗಿ ಅಧಿಕಾರ ಹೊಂದಿದ ಆಫಿಸರುಗಳ ಪರೀಕ್ಷೆ ವ ತನಿಖೆ ಬಗ್ಯೆ ಗುರಿಯಾಗತಕ್ಕದ್ದು.

(13) ಶೇಂದಿಯನ್ನು ಗಿಡದ ಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನ್ ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತದೆ. ಪರಂತು ಬಗನೀ ಮರಗಳಿರತಕ್ಕ ಪ್ರದೇಶಗಳಲ್ಲಿ ಬಗನೀ ಶೇಂದಿಯು ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸ್‌ದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರಿ ಬಗ್ಯೂ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರಗಳನ್ನು ಉತಾರ್ಮಾಡಲು ಅಪ್ಪಣೆ ಕೊಡಬಹುದು.

(14) ಯಾವ ಲೈಸೆನ್ಸ್‌ದಾರ ಯಾ ಆತನ ಬಿಕರೀದಾರರೇ ಆಗಲಿ ಮೂರು ಅಳೆಯುವ ಶೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು; ಶೇಂದಿಯು ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಮಾರಲ್ಪಡಕೂಡದು. ಒಂದು ಇಂಪೀರಿಯಲ್ ಗ್ಯಾಲನ್ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನಮಾಡಲಿಕ್ಕೆ ಶೇಂದಿಯನ್ನು ತೆಗದುಕೊಂಡು ಹೋಗಲು ಅವಕಾಶ ಕೊಡಬಹುದು.

(15) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗ್ರಹಿಸಿದ ಸಾರ ರೇವನ್ನು ಯಾ ಪಾಣೆಯನ್ನು ಅಜಮಾಯಿಷಿ ಮಾಡಲಿಕ್ಕೆ ಉತಾರ್‌ದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(16) ಲೈಸೆನ್ಸ್‌ದಾರ್ ಶೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಯೆ ಹಿಡಿಯಲ್ಪಡಕೂಡದು.

(17) ಈ ಕೆಳಗೆ ನಮೂದಿಸಿರುವ ನಿಬಂಧನೆಗಳು 1901ನೆ ಇಸವಿಯ ಮೈಸೂರು ಎಕ್ಸೈಜ್ Vನೆ ರಗ್ಯುಲೇಷನಿನ 12ನೆ ಸೆಕ್ಷನ್ ಮೇರೆಗೆ ಶೇಂದಿ ಮರಗಳನ್ನು ಕಟ್ಟುವದಕ್ಕೂ, ಮತ್ತು ಶೇಂದಿಯನ್ನು ಉತಾರ್ಮಾಡುವದಕ್ಕೂ ಕೊಡಲ್ಪಡಬೇಕಾದ ಲೈಸೆನ್ಸುಗಳನ್ನು ಕ್ರಮಪಡಿಸುತ್ತ :—

(1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಯೆ ಲೈಸೆನ್ಸಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ್ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ.

(b) ಮದ್ರಾಸ್ ಆಧಿಪತ್ಯಕ್ಕೆ ಶೇರಿದ ಶೇಂದಿ ಅಂಗಡಿಕಾರರ ಅಥವಾ ಗುತ್ತಿಗೆದಾರರ.

(c) ಸನ್ 1898ನೆ ಇಸವಿ ಜೂನ್ 20ನೆ ಮುಕ್ಕಾಂ 11897—906—Ex. 485ನೆ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರ್ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿ ತೋಟಗಳಲ್ಲಿಯೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಖಾಗಗಳಲ್ಲಿಯೂ ಇರುವ ಮರಗಳ ಮಾಲೀಕರು, —

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನು ಸಂಬಂಧಪಟ್ಟ ಎಕ್ಸೈಜ್ ಇನ್ಸ್‌ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿಂದ ಪಡೆಯಬಹುದು. ದರಖಾಸ್ತುದಾರರು ತಾವು ಅಪೇಕ್ಷಿಸುವ ಸರ್ಕಾರೀ ಮರಗಳಿಗಾಗಿ ಮೊದಲನೇ ಕಿಸ್ತಿನ ಮರ ತೆರಿಗೆಯನ್ನೂ ಮರದ ಮಾಲ್ಕಿಯನ್ನು ಮೊದಲೇ ಪಾವತಿ ಮಾಡಬೇಕು.

(3) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರ ತೆರಿಗೆಯು ಮೈಸೂರು ಸರ್ಕಾರಕ್ಕೆ ಜಮಾ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸ್‌ಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್‌ದಾರ್ರಿಗೆ ಒಂದೇ ಕಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್‌ದಾರರು ವಿಧಾಯುಕವಾದ ಚಲನ್ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸ್‌ಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ-ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತಗದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್‌ಪೆಕ್ಟರವರಿಂದ ರವಾನೆಯ ಪರ್ಮಿಟ್ಟನ್ನು ಪಡೆಯತಕ್ಕದ್ದು.

(4) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟು ರೇಂಜ್ ಆಫಿಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ನೇಮಿಸಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಅಥವಾ ವಿಶೇಷ ಸಂದರ್ಭಗಳಲ್ಲಿ ಸಬ್ ಇನ್ಸ್‌ಪೆಕ್ಟರ ದರ್ಜೆಗೆ ಕಮ್ಮಿಯಾಗಿಲ್ಲದೆ ಇರತಕ್ಕ ನೌಕರನಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದ್ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳ ಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫಿಸರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟಿಸ್ ಕೊಟ್ಟ ತರುವಾಯ ಹಾಗೆ ಮಾಡಲು ಅವರು ತಪ್ಪಿದರ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟಕೂಡಲೆ ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗರಿಗಳನ್ನು ತೆಗೆದುಹಾಕಲಿಕ್ಕೂ, ಪಾಣೆ ಯಾ ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(7) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಅಂದರೆ ಉತಾರ್ ಲೈಸೆನ್ಸಿಗೆ ದರಖಾಸ್ತು ಯಾವ ಕಾಲದಲ್ಲಿ ಕೊಡಲ್ಪಡಲಿ, ಜುಲೈ ಗುರ್ರೇ ಲಾಗಾಯಿತು ಜೂನ್ ಆಖ್ಯೆರ್ ವರಿಗೆ ಆಗಿರುತ್ತೆ. ಲೈಸೆನ್ಸ್‌ದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖ್ಯೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಲೈಸೆನ್ಸ್ ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(8) ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಮರಕ್ಕೂ ಈ ಕೆಳಗೆ ನಮೂದು ಮಾಡಿರುವ ತೆರಿಗೆಗಳು ಪಾವತಿಯಾಗತಕ್ಕದ್ದು :—

ಮರದ ತರಹೆ—	ಮರ ಒಂದಕ್ಕೆ ವರುಷ ಒಂದಕ್ಕೆ ಕೊಡಬೇಕಾದ ಮರತೆರಿಗೆ. ರೂ.	ಆ.	ಪೈ.
ಈಚಲು	1	4	0
ತೆಂಗು	2	2	0
ತಾಳೆ	1	9	6
ಬಗನಿ	2	0	0
ದ್ಡಡಸಾಲು	0	8	6

ಟಿಪ್ಪಣಿ.—ಮೇಲೆ ನಮೂದಿಸಿರುವ 17 (1) (c)ನೆ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(9) ಎಕ್ಸೈಜ್ ಕಮ್ಮಿಷನರ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆ ಮೊಬಲಗು ಈ ಕೆಳಗೆ ನಮೂದ ಮಾಡಿರುವ ಖಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು :—

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರತೆರಿಗೆ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಗುರ್ರೆ ತಾರೀಖಿನಲ್ಲಿ ಪಾವತಿಯಾಗಬೇಕಾದ ಮರ ತೆರಿಗೆ ದಾಮಾಷಾಯಿ.
1909ನೆ ಇಸವಿ ಜುಲೈ ಗುರ್ರೆ ಲಾಗಾಯಿಯಿತು 1910ನೆ ಏಪ್ರೈಲ 30ನೆ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದು ಭಾಗ.	ಉಳಿದ ಮೂರರಲ್ಲಿ ಎರಡು ಭಾಗವು.
1910ನೆ ಇಸವಿ ಮೇ ಗುರ್ರೆ ಲಾಗಾಯಿತು 1910ನೆ ಜೂನ 30ನೆ ತಾರೀಖಿನ ವಳಗಾಗಿ.	ಎಲ್ಲಾ.	ಇಲ್ಲಾ.

XXII. ಗಾಂಜಾ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.—

(1) ಗಾಂಜಾ ಲೈಸೆನ್ಸಿನಿಂದ ಗಾಂಜಾ ಮತ್ತು ಭಂಗಿ ಗಿಡದಿಂದ ತಯಾರ್‍ಮಾಡಲ್ಪಟ್ಟ ಇತರ ಮದತ್ ಪದಾರ್ಥಗಳ ಬಿಕರಿಗೆ ಮಾತ್ರ ಹಕ್ಕು ಉಂಟಾಗುತ್ತೆ.

(2) (ಇನ್‌ಸ್ಪೆಕ್ಟರ ಅಪ್ಪಣೆ ಮೇರೆಗೆ ಬಿಕರಿದಾರನ ಜವಾಬ್ದಾರಿಮೇಲೂ ಅವನ ಲುಕ್ಸಾನಿಗೂ ಒಳಪಟ್ಟು ಬಾಜಾರಿ ಜನಗಳಿಗೆ ವಿಕ್ರಯಿಸುವ ಬಗ್ಗೆ ಚಿಲ್ಲರೆ ಪುರೋಖುದಾರನಲ್ಲಿರತಕ್ಕ ಪುಡಿಯಿಂದ ತಯಾರ್‍ಮಾಡಲ್ಪಟ್ಟ ಹಲ್ವಾ ಶಿವಾಯಿ) ತಮಾಂ ಗಾಂಜಾ ಅಥವಾ ಅದರ ತಯಾರಿಗಳೂ ಮತ್ತು ಮಿಲಾವಣಿಗಳೂ ಸರ್ಕಾರದಿಂದ ಮಾತ್ರವೇ ಕೊಂಡುಕೊಳ್ಳಲ್ಪಡತಕ್ಕವು. ಮತ್ತು ಇದಕ್ಕೆ ವಿಧಾಯಕವಾದ ಫಾರಂನಲ್ಲಿ ಒಂದು ಪರ್ಮಿಟ ಇರತಕ್ಕದ್ದು.

(3) 80 ತೊಲೆಗಳುಳ್ಳ ಶೇರು 1ಕ್ಕೆ ಗಾಂಜಾವಿನ ಖರೀದಿಯು ರೂಪಾಯಿ 1—0—0 ಪ್ರಕಾರವೂ, ಮಾಜುಮಿನ ಖರೀದಿಯು ರೂ. 0—6—6 ಪ್ರಕಾರವೂ ಇರತಕ್ಕದ್ದು; ಈ ಖರೀದಿಗಳು (ಲೋಕಲ ಸೆಸ್ಸೂ ಸೇರಿ) ಗಾಂಜಾ ಶೇರು 1ಕ್ಕೆ ರೂ. 5—0—0 ಮತ್ತು ಮಾಜುಂ ಶೇರು 1ಕ್ಕೆ ರೂ. 1—1—0 ಪ್ರಕಾರದ ಹಾಸಲಲ್ಲದೆ ಪ್ರತ್ಯೇಕವಾಗಿ ಪಾವತಿಯಾಗತಕ್ಕದ್ದು.

(4) ಲೈಸೆನ್ಸುದಾರನು ಮೇಲ್ಕಂಡ ಹಾಸಲನ್ನೂ ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಪಾವತಿಮಾಡಿ ಗೊತ್ತುಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನು ತಾಲ್ಲೂಕು ಖಜಾನೆಯಲ್ಲಿ ಹಾಜರ್‍ಮಾಡಿದರೆ ಖಜಾನೆಯವರು ಸದರಿ ರಶೀತಿಯಲ್ಲಿ ನಮೂದು ಮಾಡಿರುವ ಹಾಸಲು ಮತ್ತು ಖರೀದಿ ಮೊಬಲಗಿಗೆ ಸರಿಯಾದ ಗಾಂಜಾ ಯಾ ಮಾಜುಮನ್ನು ಸರಬರಾಯಿ ಮಾಡತಕ್ಕದ್ದು. ಮತ್ತು ಗಾಂಜಾ ಯಾ ಮಾಜುಮನ್ನು ಲೈಸೆನ್ಸ ಪಡೆದ ಅಂಗಡಿಗೆ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(5) ಗಾಂಜಾ 80 ತೊಲೆ ಶೇರು 1ಕ್ಕೆ 10 ರೂಪಾಯಿ ಪ್ರಕಾರವೂ ಯಾ ತೊಲೆ 1ಕ್ಕೆ ಎರಡಾಣೆ ಪ್ರಕಾರವೂ ಮಾಜುಂ ಶೇರು 1ಕ್ಕೆ ರೂ. 1—10—8 ಪ್ರಕಾರವೂ, ಲೈಸೆನ್ಸದಾರನಿಂದ ವಿಕ್ರಯಿಸಲ್ಪಡತಕ್ಕದ್ದು.

(6) ಲೈಸೆನ್ಸದಾರನು 1909ನೆ ಇಸವಿ ಜುಲೈ ಗುರ್ರೇಯಲ್ಲಿ ಹಳೇ ಲೈಸೆನ್ಸದಾರನ ಬಾಬತು ದಾಸ್ತಾನ ಇರಬಹುದಾದ ಮದತ್ ಪದಾರ್ಥಗಳನ್ನು ಡೆಪ್ಯುಟಿ ಕಮ್ಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿಮಾಡಿ ತೆಗೆದುಕೊಳ್ಳಲು ಗುರಿಯಾಗತಕ್ಕದ್ದು.

(7) ಲೈಸೆನ್ಸದಾರನು ಯಾವ ಮನುಷ್ಯನಿಗೂ, ಯಾವ ನೆಪದಮೇಲೂ ಒಂದು ದಿನದಲ್ಲಿ ನಾಲ್ಕು ತೊಲೆಗಳಿಗಿಂತಲೂ ಹೆಚ್ಚಾಗಿ ಗಾಂಜಾವನ್ನು ವಿಕ್ರಯಿಸಕೂಡದು.

(8) ಅಂಗಡಿಯಲ್ಲಿ ಗಾಂಜಾವನ್ನು ಸೇವನೆ ಮಾಡುವದಕ್ಕೂ, ಹೊಗೆಬತ್ತಿ ಸೇದುವದಕ್ಕೂ, ಯಾ ಗಾಂಜಾ ಮುಂತಾದ್ದನ್ನು ಸೇವನೆ ಮಾಡುವದಕ್ಕೂ ಜನಗಳು ಸೇರುವ ಗಾಂಜಾಖಾನೆಗಳನ್ನೂ, ಅಥವಾ ಅಂತರಂಗಸ್ಥಳಗಳನ್ನೂ ಇಟ್ಟಿರುವ ಜನಗಳಿಗೆ ಗಾಂಜಾವನ್ನು ವಿಕ್ರಯಿಸುವದು ಅಡ್ಡಿಪಡಿಸಲ್ಪಟ್ಟಿದೆ.

(9) ಮದತ್ ಪದಾರ್ಥಗಳನ್ನು ಮಾರಲಿಕ್ಕೆ ಯಾವ ಹೆಂಗಸನ್ನೂ ಇಡಕೂಡದು.

XXIII. ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಸರ್ಕಾರದ ಮತ್ತು ಎಕ್ಸೈಜ್ ಕಮ್ಮಿಷನರವರ ಇಸ್ತಿಹಾರ್‍ನಾಮೆಗಳಲ್ಲಿಯೂ ಮತ್ತು ಆಗಿಂದಾಗ್ಯೆ ಸಾದರಾಗುವ ಸಾಧಾರಣ ಯಾ ವಿಶೇಷ ಕಾನೂನುಗಳಲ್ಲಿಯೂ ಹಾಲಿ ಜಾರೀಲಿರುವ ಅಫೀಂ ಆಕ್ಟು ಅಥವಾ ಇತಃಪರ ವಿಧಿಸಲ್ಪಡುವ ಇತರ ಕಾನೂನುಗಳಲ್ಲಿಯೂ ಇರುವ ನಿಬಂಧನೆಗಳನ್ನು ಅನುಸರಿಸಲು ಲೈಸೆನ್ಸದಾರನು ಬದ್ಧನಾಗಿರತಕ್ಕದ್ದು.

2. ಬಿಕರಿಗಾಗಿ ಲೈಸೆನ್ಸ ಪಡೆದಿರುವ ಅಂಗಡಿಗಳಲ್ಲಿ ಅಫೀಂ ಅಥವಾ ಯಾವ ವಿಧವಾದ ಅದರ ತಯಾರೀಯನ್ನು ಹೊಗೆ ಶೇದುವದೂ ಯಾ ಶೇವನೆ ಮಾಡುವದೂ, ಮಾರ್ಫಿಯು ಅಥವಾ ಶೇದುವದಕ್ಕೆ ತಯಾರ್ಮಾಡಲ್ಪಟ್ಟವುಗಳನ್ನು ಬಿಕರಿ ಮಾಡುವದೂ ಅಡ್ಡಿಪಡಿಸಲ್ಪಟ್ಟಿರುತ್ತೆ.

(3) ಡೆಪ್ಯುಟಿ ಕಮ್ಮಿಷನರವರಿಂದ ಲೈಸೆನ್ಸನ್ನು ಪಡೆಯದೆ ಯಾವ ಅಂಗಡಿಯೂ ಇಡಲ್ಪಡಕೂಡದು. ಲೈಸೆನ್ಸದಾರುಗಳಿಂದ ವಾಡಿಕೆಯಾದ ಎದುರು ಒಡಂಬಡಿಕೆಗಳು ಬರೆದುಕೊಡಲ್ಪಡತಕ್ಕದ್ದು.

(4) ಸ್ವಾಧೀನದಲ್ಲಿ ಇಟ್ಟುಕೊಳ್ಳಬಹುದಾದ ಮೊತ್ತಕ್ಕಿಂತಲೂ ಹೆಚ್ಚಾಗದಂತೆ ಮದಕ ಪದಾರ್ಥಗಳನ್ನು ಮತ್ತು ಶೇದುವ ತಯಾರೀ ಸಾಮಾನುಗಳನ್ನು ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಮಾತ್ರ ಖಾಸಗಿ ಯಾ ಖುಷ್‌ಬಾಷ್ ಜನರು ತಯಾರ್ ಮಾಡಿಕೊಳ್ಳಲು ಅಪ್ಪಣೆ ಕೊಟ್ಟದೆ.

(5) ಅಂಗಡಿದಾರರು 80 ತೊಲೆಯ ಒಂದು ಶೇರಿಗೆ ರೂ. 37—8—0 ಪ್ರಕಾರ ಒಂದುಸಾರಿಗೆ 24 ತೊಲೆಗೆ ಕಮ್ಮಿ ಇಲ್ಲದಂತೆ ಖಜಾನೆಯಿಂದ ಅಫೀಮನ್ನು ಪಡೆದುಕೊಳ್ಳಬಹುದು. ಈ ವಿಕ್ರಯವು ವಿಧಾಯಕವಾದ ನಮೂನೆಯಲ್ಲಿ ರಹದಾರಿಯೊಂದಿಗೆ ಇರತಕ್ಕದ್ದು.

(6) ಮೇಲೆ ನಮೂದಿಸಿರುವಂತೆ ಪಡೆದ ಅಫೀಂ ಶಿವಾಯಿ ಇನ್ಯಾವ ಅಫೀಮೂ ದುಕಾನದಾರ್ರಿಂದ ವಿಕ್ರಯಿಸಲ್ಪಡಕೂಡದು, ತೆಗೆದುಕೊಳ್ಳಲ್ಪಡಕೂಡದು, ಯಾ ಸ್ವಾಧೀನದಲ್ಲಿಟ್ಟು ಕೊಳ್ಳಲ್ಪಡಕೂಡದು. ಯಾವ ಚಿಲ್ಲರೆ ಅಫೀಂ ಅಂಗಡಿಯಲ್ಲಿಯೂ ಆಹಾರ ಅಥವಾ ಪಾನದ ಯಾವ ಸಾಮಾನುಗಳೂ ವಿಕ್ರಯಿಸಲ್ಪಡಕೂಡದು.

(7) ಈ ಸ್ವತಂತ್ರದ ಹಕ್ಕು ಕ್ರಮವಾಗಿ ಮಂಜೂರಾದ ದುಕಾನಗಳಲ್ಲಿ (*a*) ಅಫೀಮಿನ ಚಿಲ್ಲರ ಬಿಕರಿಗೂ ಮತ್ತು (*b*) ಮಾರ್ಫಿಯ ಮತ್ತು ಶೇದುವದಕ್ಕೆ ತಯಾರ್ಮಾಡಲ್ಪಟ್ಟಿರುವ ಪದಾರ್ಥ ಇವುಗಳು ಶಿವಾಯಿ ಅಫೀಂ ಅಥವಾ ಗಸಗಸೆಯಿಂದ ಮಾಡಲ್ಪಟ್ಟ ಮದಕ ಪದಾರ್ಥಗಳನ್ನೂ ತಯಾರ ಮಾಡುವದಕ್ಕೂ ಮತ್ತು ಚಿಲ್ಲರೆ ಬಿಕರಿ ಮಾಡುವದಕ್ಕೂ ಅನ್ವಯಿಸುತ್ತೆ.

(8) ಲೈಸೆನ್ಸುದಾರನು ಅಫೀಮನ್ನು ಜನಗಳಿಗೆ 80 ತೊಲೆಯ ಶೇರು 1ಕ್ಕೆ 45 ರೂಪಾಯಿ ಯಾ ತೊಲೆ 1ಕ್ಕೆ 9 ಆಣೆ ದರದ ಮೇರೆಗೆ ಮಾರತಕ್ಕದ್ದು.

(9) ಲೈಸೆನ್ಸ ದುಕಾನದಾರನು ಯಾವ ಮನುಷ್ಯನಿಗೂ ಒಂದೇ ಸಾರಿಗೆ 3 ತೊಲೆಗಿಂತಲೂ ಹೆಚ್ಚಾಗಿ ಅಫೀಂ ಅಥವಾ ಮದಕ ಪದಾರ್ಥಗಳನ್ನು ಮಾರಕೂಡದು.

(10) ಲೈಸೆನ್ಸನ್ನು ಕೊಡುವ ಕಾಲದಲ್ಲಿ ಡೆಪ್ಯುಟಿ ಕಮ್ಮಿಷನರವರು ಗೊತ್ತು ಮಾಡುವ ಮೊತ್ತಕ್ಕಿಂತಲೂ ಹೆಚ್ಚಾಗಿ ಮಾರ್ಫಿಯ ಅಥವಾ ಶೇದುವದಕ್ಕೆ ತಯಾರ್ಮಾಡಲ್ಪಟ್ಟಿರುವ ಪದಾರ್ಥಗಳು ಶಿವಾಯಿ ಅಫೀಮನ್ನು ಯಾ ಮದಕ ಪದಾರ್ಥಗಳನ್ನೂ ಲೈಸೆನ್ಸುದಾರನು ಇಟ್ಟುಕೊಂಡಿರಕೂಡದು.

(11) ಲೈಸೆನ್ಸುದಾರನು 1909ನೆ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ಹಳೇ ಲೈಸೆನ್ಸದಾರನ ಬಾಬತು ದಾಸ್ತಾ ಇರಬಹುದಾದ ಅಫೀಂ ಯಾ ಅದರ ತಯಾರಿಯು ಯಾ ಅಫೀಂ ಶೇರಿದ ಪದಾರ್ಥಗಳು ಯಾ ಗಸಗಸೆಯಿಂದ ತಯಾರ್ಮಾಡಲ್ಪಟ್ಟ ಮದಕ ಪದಾರ್ಥಗಳನ್ನು ಡೆಪ್ಯುಟಿ ಕಮ್ಮಿಷನರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಸಾವತಿ ಮಾಡಿ ತೆಗೆದುಕೊಳ್ಳಲು ಬದ್ಧನಾಗಿರತಕ್ಕದ್ದು.

1909—1910ನೆ ವರುಷಕ್ಕಾಗಿ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟೀಸ್.

ನಂ.　　, ತಾರೀಖು 13ನೆ ಏಪ್ರೆಲ್ 1909.

1. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರಟರನ್ನು 1909ನೆ ಇಸವಿ ಜುಲೈ ಗುರ್ರೆ ತಾರೀಖಿಗೆ ಪ್ರಾರಂಭವಾಗಿ 1910ನೆ ಇಸವಿ ಜೂನ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಏಟ್ಟು ಸ್ವತಂತ್ರದ ಹಕ್ಕನ್ನು ಆ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಈ ಕೆಳಗೆ ನಮೂದು ಮಾಡಿರುವ ಸ್ಥಳದಲ್ಲಿ ಮತ್ತು ತಾರೀಖಿನಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟದೆ.

2. ಸದರಿ ಸ್ವತಂತ್ರ ಹಕ್ಕು ಬೌರಿಂಗ್‌ಪೇಟೆ ಮತ್ತು ಕೋಲಾರ್ ಚಿನ್ನದ ಗಣಿಗಳಲ್ಲಿನ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಮೇರೆಗೆ ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರ್ರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವುದಕ್ಕೆ ಮುಂಚಿತವಾಗಿ 250 ರೂಪಾಯಿ, ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉಪಹರಿಸದೇ ಮಂಜೂರು ಯಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನ್ಮೆಂಟಿನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ ಮುಖ್ತಾಲೀಕರನ್ನ ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡ್ಲೆ ನಾ ಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುತ್ತದೆ.

6 ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ಮಂಜೂರಾದ್ದನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ ಅವರ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರ್ರವರಲ್ಲಿ ಕೊಡತಕ್ಕದ್ದು. ಮತ್ತು 7ದಿನಗಳೊಳಗಾಗಿ ಸದರೀ ನೋಟೀಸು ಅವರಿಗೆ ಖುದ್ದಾಗಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿರುವ ವಯಸ್ಸಾದ ಕುಟುಂಬಕ್ಕೆ ಸಂಬಂಧಪಟ್ಟ ಗಂಡಸಿಗೆ ಆಗಲೀ ಜಾರೀಯಾದ ನಂತರ, ಯಾ ಸದರೀ ಮನೆಗೆ ಅಂಟಿಸಿದ ನಂತರ ಯಾ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ ತರುವಾಯ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯು ಬೆಲೆಗನುಸಾರವಾಗಿ ಡೆಪ್ಯುಟಿ ಕಮಿಷನರ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನು ಅವರ ಮೊದಲನೆ ಠೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನು ಪಡಿಯತಕ್ಕದ್ದು, ಮತ್ತು ಎದರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸು ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರೀಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನು ಹೊಂದಿರುತ್ತೆ.

7. ಮೇಲಿನ 6ನೆ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಅಥವಾ ಇತರೇ ವಿಧವಾದ ವಿಲೇವಾರಿ ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದಲ್ಲಿ ಅಥವಾ ಇತರೇ ವಿಧವಾಗಿ ವಿಲೇವಾರಿ ಆದಲ್ಲಿ ಚಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನು ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ಅಥವಾ ಇತರೇವಿಧವಾದ ವಿಲೇವಾರಿಯಿಂದ ಆಗುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ, ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು:—

8. ಮೇಲಿನ 6ನೆ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ, ಬ್ರೂಯರಿಗಳಲ್ಲಿಯಾಗಲಿ ಅಥವಾ ಕಿರ್ಕಿಯಲ್ಲಿ ಮಾರ್ಕ್ ಅಂಡ್ ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಏಬ್ರಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ, ಕಂತ್ರಿ ಬೀರು ಯಾ ಪೋರ್ಟರನ್ನು ಮಾರುವುದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯೂ ಡೆಪ್ಯುಟಿ ಕಮಿಷನರ್ ನಿಯಮಿಸುವ ಹಾಲೀ ಜಾರೀಲಿರುವ ಅಂಗಡಿ ವಳಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಪೀಪಾಯಿಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನು ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(4) ಲೈಸೆನ್ಸ್‌ದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೆ ಎರಡಾಣೆ ಒಂದುವರೆ ಪೈ ಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸ್‌ದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು, ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯನ್ನು ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡೆದ ಇತರ ಆಫೀಸರ್ರು ಸರಕನ್ನು ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸದಾರನು 1909ನೆ ಇಸವಿ ಜುಲೈ ಗುರ್‍ನೇ ತಾರೀಖಿನಲ್ಲಿ ಹಳೇ ಲೈಸೆನ್ಸದಾರನ ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯಗಳನ್ನು ಹಳೇ ಲೈಸೆನ್ಸದಾರನಿಗೆ ಪಾವತಿ ಮಾಡಿ ತೆಗೆದುಕೊಳ್ಳಲು ಗುರಿಯಾಗಿರತಕ್ಕದ್ದು.

(8) ಈ ಗುತ್ತಿಗೆ ಎಕ್ಸೈಜ್ ಕಮಿಷನರ್ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ, ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(9) ದುಕಾನ್‌ದಾರನು ಲೈಸೆನ್ಸದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ, ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(10) ಅವನು ಮಂಜೂರ್ ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಕೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ನಾಲ್ಕು ಶೇರುಗಳಿಗಿಂತಾ ಹೆಚ್ಚಾಗಿರಕೂಡದು.

(11) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮಿಷನ್‌ಡ್ ಆಫಿಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾ ಹತ್ತಿ ಬೀಳುವಂತೆ ಮಾಡಕೂಡದು. ಮತ್ತು ಅವರು ಅಕ್ರಮವಾಗಿ ನಡಿಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು. ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫಿಸರ್ ಯಾ ಮೇಜಿಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ ಹುಚ್ಚರಿಗೆ ಆಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂ ಕೂಡದು.

(12) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ್ ಮತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(13) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗೆದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರಿಗೆ ನಗದಾಗಿ ಹಣ ತೆಗೆದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ ಮಾಡಬೇಕು.

(14) ಈ ಲೈಸೆನ್ಸ ಪ್ರಕಾರ ಮಾರುವ ಬೀರು ಯಾ ಪೋರ್ಟರ್ ಒಳ್ಳೆ ಸಾಮಗ್ರಿಯುಗಳಿಂದ ಮಾಡಲ್ಪಟ್ಟದ್ದಾಗಿರಬೇಕು ಮತ್ತು ಅದರ ಗುಣವು ಎಕ್ಸೈಜು ಕಮಿಷನರವರಿಗೆ ಸಮರ್ಪಕ ಉಂಟುಮಾಡತಕ್ಕದ್ದಾಗಿರಬೇಕು. ಮತ್ತು ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು. ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟಿಯು 1073 ಸಂಖ್ಯೆಯನ್ನು ಮೀರಕೂಡದು, ಬೀರು ಮತ್ತು ಪೋರ್ಟರನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನ್‌ಗೆ ಗುರಿಯಾಗಿರುವನು, ಇಂಥಾ ಬೀರ್ ಯಾ ಪೋರ್ಟರ್‌ವುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯುವರು ಅಪೇಕ್ಷಿಸಿದಾಗ ಅಜಮಾಯಿಷೀ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(15) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಆವಶ್ಯಕವಾಗಿ ಲೈಸೆನ್ಸದಾರನಿಂದಲೂ ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸ್ಟಾಟಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(16) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆವೋಲೆ ಹೊರ್ತು ಬೆಳಿಗ್ಯೆ ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಿಲು ತೆಗಿಯಕೂಡದು.

(17) ಕಮ್ಮಿಸರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(18) ಸದರಿ ಅಂಗಡಿಗೆ ಒಂದೇ ಬಾಗಲಿರಬೇಕು. ಹಿಂಭಾಗದಲ್ಲಾದರೂ ಕೊನೇಭಾಗಗಳಲ್ಲಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದಿಲಿ ತಿರುಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಸ್ಥಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

(19) ಲೈಸೆನ್ಸದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸಧಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರುಗಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1909ನೆ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ ರದ್ದು ಮಾಡಲ್ಪಟ್ಟರೆ ಷೆಡ್ಯೂಲ್ ಪ್ರಕಾರ ಹಿಂದಿನ ಮೂರು ಸಾಲು ದಾಮೂಷಾ ಮೇಲೆ ಗುತ್ತಿಗೆ ಸಾಲಿನ ಬಾಕೀ ಅವಧಿಗೆ ಆಗುವ ಬಿಕರಿ ಮೊತ್ತಕ್ಕೆ ಹರಾಜು ದರದ ಪ್ರಕಾರ ಫೀ ಮೊಬಲಗು, ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಹರಾಜು ತಾರೀಖು.

ಬೌರಿಂಗ್‌ಪೇಟೆ ಮತ್ತು ಭಂಗಾರದ ಗಣಿ ಅಂಗಡಿಗಳು.	ಭಂಗಾರದಗಣಿ ಮಾಜಿಸ್ಟ್ರೇಟ್ ಕೋರ್ಟಿನಲ್ಲಿ ...	1909ನೆ ಮೇ 20.

1909—10ನೇ ಸಾಲಿಗೆ ಬೀರು ಅಂಗಡಿಗಳ ಷೆಡ್ಯೂಲ್ ಪಟ್ಟಿ.

ಅಂಗಡಿಯ ನಂಬರು ಮತ್ತು ಇರತಕ್ಕ ಸ್ಥಳ.	ಬಿಕರಿಯ ಮೊತ್ತ			54 ಗ್ಯಾಲಗಳುಳ್ಳ ಪ್ರತಿ ಒಂದು ಹಾಗ್ಸ್ ಹೆಡ್‌ಗೆ ಛಡಸವಾಲು			ಷರಾ
	1905-6	1906-7	1907-8	1906-7	1907-8	1908-9	
1	2	3	4	5	6	7	8
	ಹಾಗ್ಸ್‌ಹೆಡ್	ಹಾಗ್ಸ್‌ಹೆಡ್	ಹಾಗ್ಸ್‌ಹೆಡ್	ರೂ.	ರೂ.	ರೂ.	
1 ರಾಬರ್ಟ್ಸನ್‌ಪೇಟೆ (ಕೋಲಾರ ಭಂಗಾರದ ಗಣಿ) ...	207	43	64	79	52	70	
2 ಬೌರಿಂಗ್‌ಪೇಟೆ ...	21	5	12	57	35	35	

ಹೆಚ್. ಹೆಚ್. ಸ್ಪಾರ್ಕ್ಸ್,
ಎಕ್ಸೈಜ್ ಕಮಿಷನರ್.

ಲೈಸೆಸ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(7) ಲೈಸೆಸ್ಸದಾರನು 1909ನೆ ಇಸವಿ ಜುಲೈ ಗುರ್ಲೇ ತಾರೀಖಿನಲ್ಲಿ ಹಳೇ ಲೈಸೆಸ್ಸದಾರನ ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ ಸಾಹೇಬರವರು ಗೊತ್ತುಮಾಡಬಹುದಾದ ಪರಿಹಾರ ದ್ರವ್ಯಗಳನ್ನು ಹಳೇ ಲೈಸೆಸ್ಸದಾರನಿಗೆ ಪಾವತಿ ಮಾಡಿ ತೆಗೆದುಕೊಳ್ಳಲು ಗುರಿಯಾಗಿರತಕ್ಕದ್ದು.

(8) ಈ ಗುತ್ತಿಗೆ ಎಕ್ಸೈಜ್ ಕಮಿಷನರ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ, ಅಥವಾ ಅನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(9) ದುಕಾನದಾರನು ಲೈಸೆಸ್ಸದಾರನಂತೆಯೇ ಈ ಲೈಸೆಸ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ, ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(10) ಅವನು ಮಂಜೂರ್ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಶೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ನಾಲ್ಕು ಶೇರುಗಳಿಗಿಂತಾ ಹೆಚ್ಚಾಗಿರಕೂಡದು.

(11) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮಿಷನ್ಡ್ ಆಫಿಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾ ಹತ್ತಿ ಬೀಳುವಂತೆ ಮಾಡಕೂಡದು. ಮತ್ತು ಅವರು ಅಕ್ರಮವಾಗಿ ನಡಿಯುವಂತೆಯೂ ಅಂಗಡಿಯಲ್ಲಿ ಜೂಜುವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು. ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫಿಸರ್ ಯಾ ಮೇಜಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ ಹುಚ್ಚರಿಗೆ ಆಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂ ಕೂಡದು.

(12) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(13) ಅವನು ಯಾವ ದಿನಸು ಯಾ ನಗನನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗೆದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರಿಗೆ ನಗದಾಗಿ ಹಣ ತೆಗೆದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

(14) ಈ ಲೈಸೆನ್ಸ್ ಪ್ರಕಾರ ಮಾರುವ ಬೀರು ಯಾ ಪೋರ್ಟರ್ ಒಳ್ಳೆ ಸಾಮಗ್ರಿಯುಗಳಿಂದ ಮಾಡಲ್ಪಟ್ಟದ್ದಾಗಿರಬೇಕು ಮತ್ತು ಅದರ ಗುಣವು ಎಕ್ಸೈಜು ಕಮಿಷನರವರಿಗೆ ಸಮರ್ಪಕ ಉಂಟುಮಾಡತಕ್ಕದ್ದಾಗಿರಬೇಕು. ಮತ್ತು ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು. ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟಿಯು 1073 ಸಂಖ್ಯೆಯನ್ನು ಮೀರಕೂಡದು, ಬೀರು ಮತ್ತು ಪೋರ್ಟರನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರನಲ್ಲಿ ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನ್‌ಗೆ ಗುರಿಯಾಗಿರುವನು, ಇಂಥಾ ಬೀರ್ ಯಾ ಪೋರ್ಟರ್‌ವುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷೀ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(15) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸದಾರನಿಂದಲೂ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(16) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ... ಲಿ ಹೊರ್ತು ಬೆಳಿಗ್ಯೆ ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಿಲು ತೆಗಿಯಕೂಡದು.

(17) ಕಮ್ಮಿಸರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(18) ಸದರಿ ಅಂಗಡಿಗೆ ಒಂದೇ ಬಾಗಲಿರಬೇಕು. ಹಿಂಭಾಗದಲ್ಲಾದರೂ ಕೊನೇಭಾಗಗಳಲ್ಲಾದರೂ ಕಿಟಿಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದಿಲಿ ತಿರುಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಮಾಸೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

(19) ಲೈಸೆನ್ಸದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸದಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1909ನೆ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖಿಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಷೆಡ್ಯೂಲ್ ಪ್ರಕಾರ ಹಿಂದಿನ ಮೂರ್ರು ಸಾಲು ದಾಮೂಷಾ ಮೇಲೆ ಗುತ್ತಿಗೆ ಸಾಲಿನ ಬಾಕೀ ಅವಧಿಗೆ ಆಗುವ ಬಿಕರಿ ಮೊತ್ತಕ್ಕೆ ಹರಾಜು ದರದ ಪ್ರಕಾರ ಫೀ ಮೊಬಲಗು ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ಖರ್ಚುಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಹರಾಜು ತಾರೀಖು.

ಬೌರಿಂಗ್‌ಪೇಟೆ ಮತ್ತು ಭಂಗಾರದ ಗಣಿ ಅಂಗಡಿಗಳು. ಭಂಗಾರದಗಣಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ... 1909ನೆ ಮೇ 20.

1909—10ನೇ ಸಾಲಿಗೆ ಬೀರು ಅಂಗಡಿಗಳ ಷೆಡ್ಯೂಲ್ ಪಟ್ಟಿ.

ಅಂಗಡಿಯ ನಂಬರು ಮತ್ತು ಇರತಕ್ಕ ಸ್ಥಳ.	ಬಿಕರಿಯ ಮೊತ್ತಾ			54 ಗ್ಯಾಲನುಗಳುಳ್ಳ ಪ್ರತಿ ಒಂದು ಹಾಗ್ಸ್ ಹೆಡ್‌ಗೆ ಛಡಸವಾಲು.			ಷರಾ
	1905-6	1906-7	1907-8	1906-7	1907-8	1908-9	
1	2	3	4	5	6	7	8
	ಹಾಗ್ಸ್ ಹೆಡ್	ಹಾಗ್ಸ್ ಹೆಡ್	ಹಾಗ್ಸ್ ಹೆಡ್	ರೂ.	ರೂ.	ರೂ.	
1 ರಾಬರ್ಟ್ಸನ್‌ಪೇಟೆ (ಕೋಲಾರ ಭಂಗಾರದ ಗಣಿ) ...	207	43	64	79	52	70	
2 ಬೌರಿಂಗ್‌ಪೇಟೆ ...	21	5	12	57	35	35	

ಹೆಚ್. ಹೆಚ್. ಸ್ಪಾರ್ಕ್ಸ್.
ಎಕ್ಸೈಜ್ ಕಮಿಷನರ್.

ಫಾರೆಸ್ಟು ಇಲಾಖಾ.

ನೋಟಿಸ.

ತಾರೀಖು 20ನೆ ಮಾರ್ಚಿ 1909.

ಈ ಕೆಳಗೆ ನಮೂದಿರತಕ್ಕ ತರಹೇದ ಮರವು ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕು ಬೆಳಕವಾಡಿ ಜಹಗೀರ್ ಕಚೇರಿ ಖಳಿ ಬಿದ್ದಿರುತ್ತದೆ. ಇದಕ್ಕೆ ವಾರಸುದಾರ್ರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ವಾರಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರವು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

ತರಹೆ.

ನಂ. 1—ಮಾವಿನ ಮರ—ಸಲೆ ಅಡಿ $8' \times 1\frac{1}{2}' \times 16'$.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ತಂಗಡಿ ಮತ್ತು ಕಕ್ಕೆ ಚಕ್ಕೆ, ಇಸ್ತಿಹಾರ್.

ತಾರೀಖು 8ನೆ ಏಪ್ರೈಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ ಫಾರಸ್ಟುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು 1909ನೆ ಇಸವಿ ಮೇ ತಾರೀಖು 21ರಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರಿಂದಲೂ ಮತ್ತು ಡೆಪ್ಯುಟಿ ಕಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಲೂ ಸಹ ಚಿತ್ರದುರ್ಗದ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟು.	ಜಮಾಯಿಸತಕ್ಕ ಕಾಲ.	ಷರಾ.
1	ಹಿರಿಯೂರು ತಾಲ್ಲೂಕು ...		ಇನಾಂ, ಜೋಡಿ, ಕಾಯಂಗುತ್ತಾ ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರ ಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.
2	ಚಳ್ಳಕೆರೆ ತಾಲ್ಲೂಕು ..		
3	ಹೊಳಲ್ಕೆರೆ ತಾಲ್ಲೂಕು ಗಗ್ಗಾ ಕಾವಲು ಸಹಾ.		
4	ದಾವಣಗೆರೆ ತಾಲ್ಲೂಕು ...		
5	ಮೊಳಕಾಲ್ಮುರು ತಾ|| ಮತ್ತು— (1) ಬಾಂಡರಾವಿ ... (2) ಕೃಷ್ಣರಾಜಪುರ ... (3) ಕಮರಾ ಕಾವಲು ... (4) ಹಿರೀ ಅಡವಿ ... ಸ್ಟೇಟ್ ಫಾರೆಸ್ಟುಗಳು ಸಹ ...		
6	ಹೊಸದುರ್ಗ ತಾಲ್ಲೂಕು ಕುದರೆಕಣಿವೆ ಸ್ಟೇಟ್ ಫಾರೆಸ್ಟು ಸಹ.	1909ನೆ ಜುಲೈ ಗುರ್ರೆ ಲಾಗಾಯಿತು 1911ನೆ ಜೂನ್ ಆಖೈರು ವರಿಗೆ.	
7	ಜಗಲೂರು ತಾಲ್ಲೂಕು ರಂಗೈನದುರ್ಗ—ಅಣಬೂರು ಸ್ಟೇಟ್ ಫಾರೆಸ್ಟುಗಳು ಸಹ.		
8	ಚಿತ್ರದುರ್ಗ ತಾಲ್ಲೂಕು ...		
9	ಹರಿಹರ-ಮಲೆಬೆನ್ನೂರು ಸ್ಟೇಟ್ ಫಾರೆಸ್ಟು ಸಹ.		
10	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟು ಬೇವಿನಹಳ್ಳಿ ಸಹ.		
11	ನಿರುಥಡಿ ಡಿಟೋ ...		
12	ಜಾನಕಲ್ಲು ಡಿಟೋ ...		
13	ದೇವರಗುಡ್ಡ ಡಿಟೋ ...		
14	ಮಾರಿಕಣಿವೆ ಡಿಟೋ ...		
15	ಲಕ್ಕಿಹಳ್ಳಿ ಡಿಟೋ ...		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1909ನೆ ಸಾಲ್ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ ತಾರೀಖು 30ರ ವರಿಗಿನ 24 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 100 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟಿಯಿದ್ದ ಡಿಪ್ಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲುಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಖು ಹರಾಜು ಮಾಡುತ್ತಾಯಿದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸುವಂತೆ ನಡಿಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಯೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೆ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

7. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ಮೂರು ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಮೊದಲು ಕೊಟ್ಟ ಹಣವನ್ನು ದಂಡವಾಗಿ ಸರಕಾರಕ್ಕೆ ಶೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

8. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಖಿಸ್ತು	...	...	...	30ನೆ ಸೆಪ್ಟಂಬರ್ 1909.
2ನೆ ಖಿಸ್ತು	...	...	...	31ನೆ ಮಾರ್ಚಿ 1910.
3ನೆ ಖಿಸ್ತು	...	...	...	30ನೆ ಸೆಪ್ಟಂಬರ್ 1910.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೀ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನ ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಾನುಯೂ ಇಜಾರೆದಾರನಿಗೆ ಶೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

ಫಾರೆಸ್ಟು ಇಲಾಖಾ.

ನೋಟಿಸ.

ತಾರೀಖು 20ನೆ ಮಾರ್ಚಿ 1909.

ಈ ಕೆಳಗೆ ನಮೂದಿರತಕ್ಕ ತರಹೇದ ಮರವು ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕು ಬೆಳಕವಾಡಿ ಜಹಗೀರ್ ಕಚೇರಿ ಬಳಿ ಬಿದ್ದಿರುತ್ತದೆ. ಇದಕ್ಕೆ ವಾರಸುದಾರ್ರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ವಾರಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರವು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

ತರಹೆ.

ನಂ. 1—ಮಾವಿನ ಮರ—ಸಲಿ ಅಡಿ 8' × 1½' × 16'.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ತಂಗಡಿ ಮತ್ತು ಕಕ್ಕೆ ಚಕ್ಕೆ, ಇಸ್ತಿಹಾರ.

ತಾರೀಖು 8ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರಸ್ಟುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಜುಲೈ ತಾರೀಖು 1ರೆ ಲಾಗಾಯತು 1911ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು 1909ನೆ ಇಸವಿ ಮೇ ತಾರೀಖು 21ರಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರಿಂದಲೂ ಮತ್ತು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಲೂ ಸಹ ಚಿತ್ರದುರ್ಗದ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬ್ರ	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟು.	ಜಮಾಯಿಸತಕ್ಕ ಕಾಲ.	ಷರಾ.
1	ಹಿರಿಯೂರು ತಾಲ್ಲೂಕು ...	1909ನೆ ಜುಲೈ ಗುರ್ರು ಲಾಗಾಯಿತು 1911ನೆ ಜೂನ್ ಆಖೈರು ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರ ಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.
2	ಚಳ್ಳಕೆರೆ ತಾಲ್ಲೂಕು ..		
3	ಹೊಳಲ್ಕೆರೆ ತಾಲ್ಲೂಕು ಗರ್ಗಾ ಕಾವಲು ಸಹಾ.		
4	ದಾವಣ್ಣಗೆರೆ ತಾಲ್ಲೂಕು ...		
5	ಮೊಳಕಾಲ್ಮುರು ತಾ॥ ಮತ್ತು— (1) ಬಾಂಡರಾವಿ ... (2) ಕೃಷ್ಣರಾಜಪುರ ... (3) ಕಮರಾ ಕಾವಲು ... (4) ಹಿರೀ ಅಡವಿ ... ಸ್ಟೇಟ್ ಫಾರೆಸ್ಟುಗಳು ಸಹ ...		
6	ಹೊಸದುರ್ಗ ತಾಲ್ಲೂಕು ಕುದರೆಕಣಿವೆ ಸ್ಟೇಟ್ ಫಾರೆಸ್ಟು ಸಹ.		
7	ಜಗಲೂರು ತಾಲ್ಲೂಕು ರಂಗೈನದುರ್ಗ–ಅಣಬೂರು ಸ್ಟೇಟ್ ಫಾರೆಸ್ಟುಗಳು ಸಹ.		
8	ಚಿತ್ರದುರ್ಗ ತಾಲ್ಲೂಕು ...		
9	ಹರಿಹರ-ಮಲೆಬೆನ್ನೂರು ಸ್ಟೇಟ್ ಫಾರೆಸ್ಟು ಸಹ.		
10	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟು ಬೇವಿನಹಳ್ಳಿ ಸಹ.		
11	ನಿರುಥಡಿ ಡಿಟೋ ...		
12	ಜಾನಕಲ್ಲು ಡಿಟೋ ...		
13	ದೇವರಗುಡ್ಡ ಡಿಟೋ ...		
14	ಮಾರಿಕಣಿವೆ ಡಿಟೋ ...		
15	ಲಕ್ಕಿಹಳ್ಳಿ ಡಿಟೋ ...		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1909ನೆ ಸಾಲ್ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ ತಾರೀಖು 30ರ ವರಿಗಿನ 24 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 100 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಕೈದಾದ ಕೂಡಲೇ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟಿಯಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲುಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾಯಿದ್ದ ಆಫೀಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಯೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೆ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

7. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ಮೂರು ದಿನಗಳ ವಳಗಾಗಿ ಬರೆದುಕೊಡತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಮೊದಲು ಕೊಟ್ಟ ಹಣವನ್ನು ದಂಡವಾಗಿ ಸರಕಾರಕ್ಕೆ ಶೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

8. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಖಿಸ್ತು	...	...	...	30ನೆ ಸೆಪ್ಟಂಬರ್ 1909.
2ನೆ ಖಿಸ್ತು	...	...	...	31ನೆ ಮಾರ್ಚಿ 1910.
3ನೆ ಖಿಸ್ತು	...	...	...	30ನೆ ಸೆಪ್ಟಂಬರ್ 1910.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನ ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಾನು ಇಜಾರೆದಾರನಿಗೆ ಶೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನ ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಳೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1911ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟ್ನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿವರಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಚೆಂಗಯ್ಯ ಚೆಟ್ಟಿ,
ಡೆಪ್ಯುಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 20ನೆ ಮಾರ್ಚಿ 1909.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಕ್ಲೋಸಪೇಟೆ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯನ್ನಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರೀ ರೆಗ್ಯುಲೇಷನ್ ೬ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ಕ್ಲೋಸಪೇಟೆ ಟವನ್ ಸರಹದ್ದು ಮದರಾಸ್-ಕೆನಾನೂರು ರಸ್ತೆಗೆ ಲಗತ್ತಾಗಿರುವ ಸದರೀ ಗ್ರಾಮದ ಸರ್ವೆ 168ನೆ ನಂಬರಿನ ವಾಯವ್ಯ ದಿಕ್ಕಿನಲ್ಲಿ ಪ್ರಾರಂಭಿಸಿ ಸರ್ವೆ 168, 169, 170, 171, 172, 173ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಬಂದು ಕೊತ್ತಿಪುರ, ಅಮಾನಿಕೆರೆಗೆ ಹೋಗುವ ಬಣಿ ದಾಟಿ ಸರ್ವೆ 186 ಮತ್ತು 32ನೆ ನಂಬರುಗಳ ಪಶ್ಚಿಮ ದಿಕ್ಕಿನಲ್ಲಿ ಹೊರಡುತ್ತೆ. ಇಲ್ಲಿಂದ ಪೂರ್ವಕ್ಕೆ ತಿರುಗಿ ಸರ್ವೆ 32ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಕೊತ್ತಿಪುರಕ್ಕೆ ಹೋಗುವ ಬಣಿ ದಾಟಿ ಸೀದಾ ದಕ್ಷಿಣ ಮಾರ್ಗವಾಗಿ ಸರ್ವೆ 31ನೆ ನಂಬರಿನ ಪಶ್ಚಿಮ ಎಲ್ಲೆ ಮೇಲೆ ಮೈಸೂರು-ಬೆಂಗಳೂರು ರೈಲ್ವೆ ಹಾದಿಯನ್ನು ದಾಟುತ್ತೆ. ಇಲ್ಲಿಂದ ಹೊಲಗೆರೆಯನ್ನು ಬಳಸಿಕೊಂಡು ಸರ್ವೆ 30ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿಯು ಸರ್ವೆ 203ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಹೊರಟು ಹುಣಸಿನ ಹಳ್ಳಿಗೆ ಹೋಗುವ ಕಾಲುದಾರಿಯನ್ನು ದಾಟಿ ಪಶ್ಚಿಮಕ್ಕೆ ತಿರಿಗಿ ಸರ್ವೆ 103, 29ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೊರಟು ಸರ್ವೆ 73ನೆ ನಂಬರಿನ ಉತ್ತರ ಎಲ್ಲೆಯನ್ನು ಸೇರುತ್ತೆ. ಅಲ್ಲಿಂದ ಮೇಲೆ ನಮೂದಿಸಿದ ರೈಲ್ವೆ ಹಾದಿಯನ್ನು ಪುನಃ ದಾಟಿಕೊಂಡು ಸರ್ವೆ 72ನೆ ನಂಬರಿನ ಈಶಾನ್ಯ ಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣ ಮಾರ್ಗವಾಗಿ ತಿರಿಗಿ ಮೈಸೂರು-ಬೆಂಗಳೂರು ರೈಲ್ವೆ ಹಾದಿ ಮಾರ್ಗವಾಗಿರುವ ಸರ್ವೆ 72, 21, 27 ಮತ್ತು 63ನೆ ನಂಬರುಗಳ ಪೂರ್ವ ಎಲ್ಲೆಯ ಮಾರ್ಗವಾಗಿ ಹೊರಟು ಸರ್ವೆ 62ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತೆ.

II. ಅಲ್ಲಿಂದ ಎಲ್ಲೆಯು ಸರ್ವೆ 62, 52ನೆ ನಂಬರುಗಳ ಉತ್ತರ ಮಾರ್ಗವಾಗಿ ಹೊರಟು ಅರ್ಕಾವತಿನದಿಗೆ ಹೋಗುವ ಬಣಿಯನ್ನು ದಾಟಿ ಸರ್ವೆ 51ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಅರ್ಕಾವತಿನದಿಗೆ ಹೋಗುವ ಬಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 24ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕ್ಕೊಂಡು ಸರ್ವೆ 25, 23ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಈ ಎರಡು ನಂಬರುಗಳ ಮಧ್ಯೆ ಇರುವ ಬಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 23ನೆ ನಂಬರಿನ ಉತ್ತರ ಮಾರ್ಗವಾಗಿ ಹೊರಟು ನದಿಗೆ ಹೋಗುವ ಬಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 22ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ನದಿಗೆ ಹೋಗುವ ಬಣಿಯನ್ನು ದಾಟಿ ಸರ್ವೆ 20ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು 19ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿಯು ಹೋಗುತ್ತೆ. ಅಲ್ಲಿಂದ ಸರ್ವೆ 17ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕ್ಕೊಂಡು ಸರ್ವೆ 16, 15, 14, 11, 10, 9, 8ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 14, 11, 10ನೆ ನಂಬರುಗಳ ಮಧ್ಯೆ ಅರ್ಕಾವತಿ ನದಿಗೆ ಹೋಗುವ ಎರಡು ಬಣಿಗಳನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಸರ್ವೆ 33ನೆ ನಂಬರಿನ ಮೂರು ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 116ನೆ ನಂಬರಿನ ಈಶಾನ್ಯ ಎಲ್ಲೆ ಮಾರ್ಗವಾಗಿಯು ಸರ್ವೆ 7ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಸರ್ವೆ 4ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಹೋಗಿ ಮೈಸೂರು-ಬೆಂಗಳೂರು ರಸ್ತೆ ಹತ್ತಿರ ಅರ್ಕಾವತಿ ನದಿಯ ಬಳಿಯಣ ಸೇತುವೆಯನ್ನು ಸಂಧಿಸುತ್ತೆ.

III. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ದಾಟಿಕೊಂಡು ಸರ್ವೆ 117, 118ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಅರ್ಕಾವತಿ ಪೂರ್ವದಡದ ಮಾರ್ಗವಾಗಿಯು ಹೋಗಿ ಸರ್ವೆ 119ನೆ ನಂಬರಿನ ನೈರುತ್ಯ ಎಲ್ಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 119-5ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರಿಗಿ ಸರ್ವೆ 120ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 123, 124ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿಯು ಹೊರಟು ಮೇಲೆ ನಮೂದಿಸಿದ ಎರಡು ನಂಬರುಗಳ ಮಧ್ಯೆ ನಡಿಗೆ ಹೋಗುವ ಒಣಿಯನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರಿಗಿ ಸರ್ವೆ 4ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಅರ್ಕಾವತಿಗೆ ಹೋಗುವ ಒಣಿಯನ್ನು ಹಾದು ಸರ್ವೆ 133ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 136ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿಯು ನದಿಗೆ ಹೋಗುವ ಒಣಿಯನ್ನು ಪುನಃ ಹಾದು ಸರ್ವೆ 139ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಸರ್ವೆ 140ನೆ ನಂಬರಿನ ದಕ್ಷಿಣಕ್ಕೆ ಹೋಗಿ ವಡೇರಹಳ್ಳಿಗೆ ಹೋಗುವ ಕಾಲುದಾರಿ ಮಾರ್ಗವಾಗಿ ಕೊಂಚದೂರ ಹೋಗಿ ಮೇಲೆ ನಮೂದಿಸಿದ ಕಾಲುದಾರಿಯನ್ನು ಹಾದು ಸರ್ವೆ 141ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ಹಾದು ಸರ್ವೆ 146ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತೆ.

ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ಕ್ಲೋಸ್‌ಪೇಟೆ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಸೇರಿರುತ್ತೆ.

ರೆವಿನ್ಯೂ ಸರ್ವೆ 1, 2, 3, 5, 27, 28, 63, 71, 72, 117, 118, 119ನೆ ನಂಬರುಗಳು ಮತ್ತು ಸರ್ವೆ 141 ದಾಖಲೆ ಶೆಟ್ಟಿಹಳ್ಳಿ.

ಟಿ. ರಾಯಲು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.
ಇಸ್ತಿಹಾರ್‌ನಾಮೆ.

ತಾರೀಖು 2ನೆ ಏಪ್ರೆಲ್ 1909.

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಮೇಲ್ಕೋಟೆ ಹೋಬಳಿಗೆ ಸೇರಿದ ಜೋಡಿ ರಾಮಪುರ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಚೇರಿಯಲ್ಲಿ 1909ನೆ ಮೇ ಮಾಹೆ 7ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಏಪ್ರೆಲ್ ತಾರೀಖು 8ನೆ ಮರ್ಕೂಂ 14ನೆ ನಂಬರ್ ಮೈಸೂರು ಗೆಜೆಟ್ಟಿನ 11ನೆ ಭಾಗದ 175—176ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್.

ತಾರೀಖು 6ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ನಾಗಮಂಗಲ ತಾಲ್ಲೂಕು ಸಮ್ಮಂಧಪಟ್ಟ 1856ನೆ ಸಾಲ್ ಲಾಗಾಯಿತು 1883ನೆ ಸಾಲ್ ವರಿಗಿನ ಕುಳವಾರ್ ಚೀಟಿಗಳನ್ನು ಹಾಲಿ ಜಾರೀಲಿ ಇರುವ ರೂಲ್ಸು ಅನುಸರಿಸಿ ಚಕಲಾಯಿಸಲ್ಪಡುತ್ತೆ. ಇವುಗಳ ದಾಖಲೆಗಳನ್ನು ಅಪೇಕ್ಷಿಸತಕ್ಕವರು ಈ ಲಾಗಾಯಿತು ಮೂರು ತಿಂಗಳು ಒಳಗಾಗಿ ದರಖಾಸ್ತು ಕೊಟ್ಟು ಕಾಪಿಗಳನ್ನು ಪಡೆದುಕೊಳ್ಳಬಹುದು.

ಎಂ. ಕಾಂತರಾಜೆ ಅರಸ,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 11ನೆ ಮಾರ್ಚಿ 1909ನೆ ಇಸವಿ.

ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರ ತಾಲ್ಲೂಕು ಹುಣಸೇಕೊಪ್ಪದ ಗ್ರಾಮದ ಸರಕಾರಿ ಜಮೀನಿನಲ್ಲಿ ಒಂದು ಹುಣಸೇಮರದ ಹತ್ತಿರ ಭೂಮಿಯ ಅಡಿಯಲ್ಲಿ ಸಿಕ್ಕಿದ, ಸುಮಾರು ರೂಪಾಯಿ 909—8—0 ಬೆಲೆಯುಳ್ಳ ಈ ಕೆಳಗೆ ಕಾಣಿಸಿರುವ ಬೆಳ್ಳಿ ಮತ್ತು ಬಂಗಾರದ ಮಾಲುಗಳು 1909ನೆ ಇಸವಿ ಮೇ ಮಾಹೆ 1ನೆ ತಾರೀಖು ಶನಿವಾರ ದಿವಸ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಂದಾಗಲಿ, ಅಥವಾ ಅವರ ಗೈರ್ ಹಾಜರಿಯಲ್ಲಿ ಡಿಸ್ಟ್ರಿಕ್ಟು ಟ್ರೆಜರಿ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರಿಂದಾಗಲಿ ಹರಾಜ್ ಮೂಲಕ ವಿಲೇವಾರಿ ಮಾಡಲ್ಪಡುತ್ತೆ.

ಹರಾಜು ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಸದರೀ ತಾರೀಖು ಹಗಲು 11 ಘಂಟೆಗೆ ಪ್ರಾರಂಭವಾಗುವದು. ಈ ಮಾಲುಗಳು ಪ್ರತ್ಯಪ್ರತ್ಯೇಕವಾಗಿ ಹರಾಜು ಹಾಕಿಸಲ್ಪಟ್ಟು ಅತ್ಯಧಿಕವಾದ ಮೊಬಲಗಿಗೆ ಸವಾಲು ಮಾಡುವವ

ರಿಗೆ ಕೊಡಲ್ಪಡುವದು. ಅವುಗಳನ್ನು ಹರಾಜಿನಲ್ಲಿ ಪಡಿಯುವವರು ಹರಾಜು ಮುಗಿದಕೂಡಲೇ ಪೂರಾ ಹರಾಜು ಮೊಬಲಗನ್ನು ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಮೊದಲನೆ ಹರಾಜ್‌ದಾರನನ್ನು ನಷ್ಟಕ್ಕೆ ಗುರಿಪಡಿಸಿ ದುಸರಾ ಹರಾಜ್ ಮಾಡಿಸಲಾದೀತು.

ಮಾಲುಗಳ ವಿವರ.		ಅಂದಾಜ ಕ್ರಯ. ರೂ.	ಆ.
53 ಭಂಗಾರದ ನಾಣ್ಯಗಳು	... ...	338	0
ತಾಳಿ ಇರುವ ಕುತ್ತಿಗೆಗೆ ಹಾಕುವ ಭಂಗಾರದ ಸರಗಿ	... ...	105	0
ಒಂದು ಜೊತೆ ಬೆಳ್ಳಿಯ ಬಳೆ	... ...	48	0
ಎರಡು ಭಂಗಾರದ ಹೊನ್ನು ಹುವ್ವು	... ...	12	0
ಡಿಟೋ ಡಿಟೋ	... ...	9	0
ಒಂದು ಭಂಗಾರದ ಕರಡಿಗೆ	... ...	264	0
ಡಿಟೋ ಕರಡಿಗೆಯ ಖುರಡಿಗಳು	.. ..	10	0
ಒಂದು ಭಂಗಾರದ ಶಾವಂತಿಗೇ ಹುವ್ವು	... ...	60	0
ಒಂದು ಜೊತೆ ಭಂಗಾರದ ಕಾಶೀತಾಳೀಗುಂಡು	...	6	0
ಒಂದು ಜೊತೆ ಭಂಗಾರದ ಚಳತುಂಬು	... ...	9	0
ಒಂದು ಜೊತೆ ಭಂಗಾರದ ಕಪ್ಪ	... ...	15	0
ಒಂದು ಭಂಗಾರದ ಚೌಕ	... ...	16	0
ಒಂದು ಭಂಗಾರದ ವಾಲೆ ಕಲಶ	... ...	16	0
ಒಂದು ಭಂಗಾರದ ಖುಗಡೀ ಕಲಶ	... ...	1	8
	ಜುಮ್ಲಾ ...	909	8

ಕೆ. ಚಾಂಡಿ,
ಡೆಪ್ಯುಟಿ ಕಮಿಷನರ್.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸಿನಿಂದ.

ಕ್ಲೋಸ್‌ಪೇಟೆ, ತಾರೀಖು 31ನೆ ಮಾರ್ಚಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಸಬ್ ಡಿವಿಜನ್ ಮಜಕೂರು ಬಾಬತು ಜೋಡಿ, ಖಾಯಂಗುತ್ತ, ಇನಾಂ, ಸರ್ವಮಾನ್ಯ ವಗೈರೆ ಗ್ರಾಮಗಳ ಬಾಬತು ಆಯಾಯ ಇನಾಂದಾರ್ರಿಗೆ ಸಲ್ಲತಕ್ಕ ಟಾಡಿ ಹುಟ್ಟುವಳಿ ಹಕೀಯತ್ತನ್ನು ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ವಿಚಾರಣೆ ಮಾಡಲ್ಪಡುತ್ತೆ. ಆಯಾಯ ಗ್ರಾಮಗಳಿಗೆ ಸಮ್ಮಂಧಪಟ್ಟ ಇನಾಂದಾರರುಗಳು ಸಾಕ್ಷ್ಯ ಮತ್ತು ತಮ್ಮಲ್ಲಿರತಕ್ಕ ದಾಖಲಾತುಗಳೊಡನೆ ಕ್ಲೋಸ್‌ಪೇಟೆ ಮೊಕ್ಕಾಂಗೆ ದಿಪಿ 11 ಘಂಟೆಗೆ ಹಾಜರಾಗತಕ್ಕದ್ದು—ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸುಮೇರೆ ಕ್ರಮ ಜರಗಿಸಲ್ಪಡುತ್ತೆ ನಂತರ ಬರುವ ಯಾವ ತಕರಾರನ್ನು ಅಂಗೀಕರಿಸಲಾಗಲಾರದು ತಿಳಿಯುವದು.

ತಾಲ್ಲೂಕು.	ಗ್ರಾಮ.	ಹೀರಿಂಗ್ ತಾರೀಖು.	ಇನಾಂದಾರರ ಹೆಸರು.
ಕ್ಲೋಸ್‌ಪೇಟೆ ...	ತಾಳವಾಡಿ ಇನಾಂ ...	1909ನೇ ಇಸವಿ ಮೇ 25ನೇ	ಕೆಂಪನಂಜಮ್ಮಣ್ಣಿಯವರು.
ಮಾಗಡಿ ...	ಹುಲುವೇನಹಳ್ಳಿ ...		ಚಂದ್ರಶೇಖರಶಾಸ್ತ್ರಿ.
ಮಾಗಡಿ ...	ಬಸವಾಪಟ್ಣ ...		ರಾಮಸ್ವಾಮಿಶಾಸ್ತ್ರಿ, ಸುಬ್ಬಮ್ಮ.

ಬಿ. ವೆಂಕೋಬರಾವ್,
ಸಬ್ ಡಿವಿಜನ್ ಆಫಿಸರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟನಲ್ಲಿ.

ಸನ್ 1908—09ನೆ ಇಸವಿ ಮಿ|| ಅರ್ಜಿ ನಂಬರ 786.

ಬೆಂಗಳೂರು ರೆವಿನ್ಯೂ ಸರ್ವೆ ಆಫೀಸಿನಲ್ಲಿ ಕಾರಕೂನ ಆಗಿದ್ದು ಫವತಿಪಟ್ಟ ಶ್ರೀನಿವಾಸ ರಂಗೋಕಕ್ಕೇರಿ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹನುಮವ್ವ, ಮೃತಪಟ್ಟ ಸದರೀ ಶ್ರೀನಿವಾಸ ರಂಗೋಕಕ್ಕೇರಿ ಯವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕು ದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸರಂಗೋಕಕ್ಕೇರಿ ಯವರ ಜೆಂದಗಿ ಬಗ್ಯಾಗಿ ಬರತಕ್ಕ 390 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹನುಮವ್ವನ ಅರ್ಜಿಯನ್ನು 1909ನೆ ಇಸವಿ ಜೂನ 11ನೆ ತಾರೀಖಿನಲ್ಲಿ ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸರಂಗೋಕಕ್ಕೇರಿ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಕೋರ್ಟನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯುಪಡಿಸಿ ಇದೆ.

ಸನ್ 1909ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೋರ್ಟು ಮೊಹರ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ್1908-09ನೆ ಇಸವಿ ಮಿ|| ಅರ್ಜೀ ನಂಬರ 800.

ಕೋಲಾರದ ತಾಲ್ಲೂಕು ಚೊಕ್ಕಹಳ್ಳೀಲಿದ್ದು ಫವತಿಪಟ್ಟ ಲಕ್ಷ್ಮಣಮೂರ್ತಿ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಸುಂದರವ್ಮ ಮೈನರ, ಗಾರ್ಡಿಯನ ಶ್ರೀನಿವಾಸರಾವ್ ಅಲ್ಲಾ ಎಂ. ಎಸ್. ನಾರಾಯಣರಾವ್, ಮೃತಪಟ್ಟ ಸದರಿ ಲಕ್ಷ್ಮಣಮೂರ್ತಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಣಮೂರ್ತಿ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರಟಫಿಕೇಟ ಬಗ್ಯೆ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಂದರವ್ಮನ ಅರ್ಜಿಯನ್ನು ಸನ್ 1909ನೆ ಇಸವಿ ಜೂನ 18ನೆ ತಾರೀಖಿನಲ್ಲಿ ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀಮೃತಪಟ್ಟ ಲಕ್ಷ್ಮಣಮೂರ್ತಿಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ಮಾರ್ಚಿ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ್ 1908—09ನೆ ಇಸವಿ ಮಿ|| ನಂಬರ 814.

ಬೆಂಗಳೂರಲ್ಲಿದ್ದು ಫವತಿಪಟ್ಟ ಇನಾಂ ಆಫೀಸಿನಲ್ಲಿ ಕ್ಲಾರ್ಕ ಆಗಿದ್ದ ತಿರುಮಲಾಚಾರ್ರು ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶೀನಪ್ಪ, ಕಿಟ್ಟಪ್ಪ ಮೈನರ, ಗಾರ್ಡಿಯನ ತಾಯಿ ರಂಗನಾಯಿಕವ್ಮ, ಇವರಕಡೆ ಇನಾಂ ಆಫೀಸಿನಲ್ಲಿರುವ ಮ್ಯಾನೇಜರ, ದೇಶಿಕಾಚಾರ ಮೃತಪಟ್ಟ ಸದರೀ ತಿರುಮಲಾಚಾರ್ರಿಗೆ ಮುಖ್ಯ ವಾರಸದಾರ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ತಿರುಮಲಾಚಾರ್ರು ಜೆಂದಗಿ ಬಗ್ಯಾಗಿ ಬರತಕ್ಕ 1,700—0—0 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳಲು 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಶೀನಪ್ಪ ವಗೈರೇರ ಅರ್ಜಿಯನ್ನ 1909ನೆ ಇಸವಿ ಜೂನ 18ನೆ ತಾರೀಖಿನಲ್ಲಿ ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಲಾಚಾರ್ರು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯುಪಡಿಸಿ ಇದೆ.

ಸನ್ 1909ನೆ ಇಸವಿ ಮಾರ್ಚಿ ತಿಂಗಳು 26ನೆ ತಾರೀಖಿನಲ್ಲಿ ಕೋರ್ಟು ಮೊಹರ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯ್ಯರ,
ಸಬ್ ಜಡ್ಜಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ತಾರೀಖು 12ನೆ ಏಪ್ರಿಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮು॥ ಕುರ್ಣಂ 17691-L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಮಲ್ಲೇಶ್ವರ ಎಕ್ಸ್‌ಟೆನ್ಷನ್‌ಗೆ ಸೇರಿದ ಕಟ್ಟಡಕಟ್ಟತಕ್ಕ ಸೈಟುಗಳನ್ನ 1909ನೆ ಇಸವಿ ಏಪ್ರಿಲ್ ತಾರೀಖು 20ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಖಡಿ ಸವಾಲು ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಖಡಿ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಖಡಿ ಸವಾಲ್ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಮಲ್ಲೇಶ್ವರ ಎಕ್ಸ್‌ಟೆನ್ಷನ್.

ಬಂಗ್ಲೆ ಸೈಟುಗಳು	143	215 × 50
,,	144	214 × 160
,,	132	217 × 340
,,	133	217 × 226
,,	134	
,,	135	
,,	136	216 × 227
,,	137	
,,	138	
ಹಿಂದೂ ಬ್ಲಾಕ್	118	
,,	306	
,,	307	
,,	308	100 × 30
,,	466	
,,	467	
,,	546	
,,	547	
ಮಹಮ್ಮದೀಯರ ಬ್ಲಾಕ್	139	
,,	140	
,,	161	100 × 30
,,	162	
,,	167	

1. ಹರಾಜು ಖೈದಾದ ಕೂಡಲೆ ಖಡಿ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಖಡಿ ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಖಡಿಸವಾಲ್ ಮೊಬಲಗಿಗೆ ಭರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಖಡಿಸವಾಲ್‌ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಖಡಿಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡಲೆ ಸೈಟನ್ನ ಖಡಿಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೇನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ ಮಾಡಿದ ಹೊರ್ತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮುಕ್ತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕೆ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರರಾಗುವದಿಲ್ಲ.

ಎಸ್. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ನೋಟಿಸ್.

ತಾರೀಖು 27ನೆ ಮಾರ್ಚಿ 1909.

1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 48ನೆ ಪ್ರಕರಣದ ಎರಡನೆ ಉಪಪ್ರಕರಣಕ್ಕೆ ಅನುಸಾರವಾಗಿ ಮಾಡಲ್ಪಟ್ಟ ಮ್ಯುನಿಸಿಪಲ್ ಸಭೆಯವರಿಂದ ಮಂಜೂರು ಹೊಂದಿರುವಂಥ ಕೆಳಗೆ ಕಾಣಿಸಿರುವ ಉಪನಿಬಂಧನೆಗಳನ್ನು 1909ನೆ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯಿತು ಜಾರಿಗೆ ತರುವ ವಿಷಯದಲ್ಲಿ ಯಾವವಿಧವಾದ ಅಕ್ಷೇಪಣೆಗಳು ಇದ್ದಲ್ಲಿ ಆಲೋಚಿಸಲಾಗುವುದು.

1. 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನಿನ 48ನೆ (ಸಿ) ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ರೊಟ್ಟಿ ಗಡಂಗು, ಮತ್ತು ಮಿಠಾಯಿ ಅಂಗಡಿಗಳಿಗೆ ಸಂಬಂಧವಾದ ಮಸೂದೆ ಉಪನಿಬಂಧನೆಗಳು.

(1) ಪ್ರಸಿಡೆಂಟರವರಿಂದ ವಾರ್ಷಿಕ ಲೈಸೆನ್ಸು ಪಡಿಯದೆ ಯಾವ ಸ್ಥಳವನ್ನು ರೊಟ್ಟಿ ಗಡಂಗಿಗಾಗಲಿ ಅಥವಾ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸಲ್ಪಡಲಾಗದು.

(2) ಕಟ್ಟಡವು ವಿಸ್ತಾರವಾಗಿಯೂ ತಕ್ಕದ್ದಾಗಿಯೂ ಇದ್ದ ವಿನಹ ರೊಟ್ಟಿ ಗಡಂಗಿಗಾಗಲಿ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸುವ ಬಗ್ಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

II. (1) ವಾರ್ಷಿಕ ಲೈಸೆನ್ಸನ್ನು ಕೇಳಿಕೊಳ್ಳುವದಕ್ಕೆ ಮುಂಚಿತವಾಗಿ ಕಟ್ಟಡದಲ್ಲಿನ ಉಪಯೋಗಕ್ಕಾಗಿ ನೀರಿನ ನಲ್ಲಿಯನ್ನು ಇಡಿಸಿಕೊಳ್ಳಲು ಹಾಗೆ ಇಡಿಸಿದ ನಲ್ಲಿಯನ್ನ ಅದಕ್ಕೆ ಸಂಬಂಧಿಸಿದ ಎಲ್ಲ ಅಜಬಾಬುಗಳನ್ನು ಸರಿಯಾಗಿಯೂ ಸಾರ್ವದಾ ಉಪಯೋಗಿಸುವ ಸ್ಥಿತಿಯಲ್ಲಿಯೂ ಇಟ್ಟುಕೊಂಡಿರಬೇಕು. ಕಟ್ಟಡವನ್ನು ಚೆನ್ನಾಗಿ ತೊಳೆದು ಶುಚಿಯಾಗಿ ಇಟ್ಟುಕೊಂಡಿರುವದಕ್ಕೆ ಅವಶ್ಯವಾದಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕು.

III. (1) ಪ್ರತಿ ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯ ಗೋಡೆಗಳಿಗೆ ತ್ಯಾವ ಸೇರಕೊಡದಂತೆ ನೆಲದಮಟ್ಟದಿಂದ ನಾಲ್ಕಡಿ ಎತ್ತರದ ವರಿಗೆ ಸಿಮೆಂಟನಿಂದ ಗಾರೆ ಮಾಡಿಸಿರತಕ್ಕದ್ದು, ಮತ್ತು ಮಿಕ್ಕ ಭಾಗಕ್ಕೆಲ್ಲ ಸುಣ್ಣದಿಂದ ಇಲಾಯಿ ಮಾಡಿಸಿ ಸುಣ್ಣ ಬಳಿಸಬೇಕು. ಸದರಿ ಕಟ್ಟಡದ ನೆಲವು ಸಂಪೂರ್ತಿಯಾಗಿ ಸಿಮೆಂಟನಿಂದ ಗಾರೇ ಮಾಡಿಸಲ್ಪಟ್ಟಿರತಕ್ಕದ್ದು. ಅಥವಾ ಕಡಪ ಕಲ್ಲುಗಳು ಹಾಸಲ್ಪಟ್ಟು ಸಿಮೆಂಟು ಗಾರೆ ಮಾಡಿಸಿರಬೇಕು.

(2) ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯು ಯಾವ ಭಾಗವೂ ಪಾಯಿಖಾನೆಗುಂಡಿ ಅಥವಾ ಕಕ್ಕಸಿನ 30 ಅಡಿಗಳಿಗಿಂತ ಕಮ್ಮಿಯಾದ ಫಾಸಲೆಯಲ್ಲಾಗಲಿ ಅಥವಾ ದುರ್ವಾಸನೆ ಹೊಡಿಯತಕ್ಕ ಸಮೀಪವಾದ ಪ್ರದೇಶದಲ್ಲಿರಕೂಡದು.

IV. ರೊಟ್ಟಿ ಗಡಂಗಿನ ಬಗ್ಗೂ ಮತ್ತು ಮಿಠಾಯಿ ಅಂಗಡಿಯ ಬಗ್ಗೂ ಉಪಯೋಗಿಸಲ್ಪಡುವ ಸ್ಥಳವನ್ನು ಇತರ ಮತ್ಯಾವ ಉದ್ದೇಶಕ್ಕೂ ಉಪಯೋಗಿಸಕೂಡದು.

V. ಎಲ್ಲಾ ಪಾತ್ರೆಗಳು ಮತ್ತು ಇತರ ಸಾಮಾನುಗಳು ಶುಭ್ರವಾಗಿ ಇಡಲ್ಪಟ್ಟಿರಬೇಕು.

VI. ರೊಟ್ಟಿ ಮತ್ತು ಮಿಠಾಯಿ ತಯಾರಿ ಬಗ್ಗೆ ಉಪಯೋಗಿಸಲ್ಪಡುವ ಹಿಟ್ಟು, ಸಕ್ಕರೆ, ತುಪ್ಪ, ನೀರು, ಮತ್ತು ಇತರ ಪದಾರ್ಥಗಳು ಉತ್ತಮವಾದ್ದಾಗಿಯೂ ಆರೋಗ್ಯಕರವಾಗಿಯೂ ಇರಬೇಕು. ಹಿಟ್ಟು ಮತ್ತು ಸಕ್ಕರೆ ದಾಸ್ತಾನಿನ ಬಗ್ಗೆ ಪ್ರತ್ಯೇಕವಾದ ಉಗ್ರಾಣ ಅಥವಾ ಪಾತ್ರೆ (ಆಶಯ) ಉಂಟಾಗಿರತಕ್ಕದ್ದು ಮತ್ತು ಹಿಟ್ಟನ್ನಾಗಲಿ ಅಥವಾ ಸಕ್ಕರೆಯನ್ನಾಗಲಿ ರೊಟ್ಟಿ ಗಡಂಗಿನ ಯಾ ಮಿಠಾಯಿ ಅಂಗಡಿಯ ಯಾವಭಾಗದ ನೆಲದಮೇಲೂ ಅಥವಾ ಗೋಡೆಗೆ ಸೇರಿಕೆಯಾಗಿಯೂ ಹಾಕಿರಕೂಡದು.

VII. ಸದರಿ ಆವರಣದಲ್ಲಿನ ಯಾ ಆಸ್ಪಾಸ್‌ನಲ್ಲಿನ ಕಸ ಮತ್ತು ಕಶ್ಮಲವು ಚನ್ನಾಗಿ ಗುಡಿಸಲ್ಪಡುತ್ತಿರಬೇಕು. ಮತ್ತು ಮೋರಿಯನ್ನು ನೀರಿನಿಂದ ಚನ್ನಾಗಿ ಶುಭ್ರಪಡಿಸಬೇಕು. ಮತ್ತು ಸದರಿ ಆವರಣವನ್ನು ಸರ್ವಕಾಲದಲ್ಲೂ ನಿರ್ಮಲವಾದ ಮತ್ತು ಹಸನು ಯಾ ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು.

VIII. ಸಾಂಕ್ರಾಮಿಕವಾದ ಅಥವಾ ಅಸಹ್ಯಕರವಾದ ರೋಗದಿಂದ ಅನುಭವಿಸುವಂಥಾ ಅಥವಾ ಅಂಥಾ ರೋಗಿಷ್ಟನ ಹಾಜರಾತಿಯಲ್ಲಿ ಹೊಸದಾಗಿರುವ ಮನುಷ್ಯನನ್ನು, ಅಥವಾ ವ್ಯಕ್ತಿತೊಳೆಯದೇಲೂ ಯಾ ಬೇರೆರೀತಿಯಲ್ಲಿಯೂ ಅಶುಚಿಯಾದಂಥಾ ಯಾವ ಮನುಷ್ಯನನ್ನು ರೊಟ್ಟಿ ಗಡಂಗಿನಲ್ಲಾಗಲಿ ಮಿಠಾಯಿ ಅಂಗಡಿಯಲ್ಲಾಗಲಿ ನೌಕರಿ ಬಗ್ಗೆ ಇಟ್ಟುಕೊಳ್ಳಕೂಡದು. ಮತ್ತು ಹಿಟ್ಟು ನಾದಲು ನೇಮಿಸಲ್ಪಡುವಂಥಾ ವಿಶಿಷ್ಟರು ಅವರ ಶರೀರದ ಮುಂಭಾಗವನ್ನು ಸಂಪೂರ್ಣವಾಗಿ ಮುಚ್ಚುವ ರೀತ್ಯಾ ಕುತ್ತಿಗೆಯಿಂದ ಮೊಣಕಾಲಿನ ವರೆಗೆ ಬೆಳ್ಳಗಿರುವ ಮತ್ತು ಶುಭ್ರವಾದ ನಾರು ಅಥವಾ ಅರಳೇ ಬಟ್ಟೆಯನ್ನ ಧರಿಸಿಕೊಳ್ಳಬೇಕು.

IX. ರೊಟ್ಟಿ ಗಡಂಗು ಅಥವಾ ಮಿಠಾಯಿ ಅಂಗಡಿ ಎಂಬುವದು ಬಿಕರಿಗೋಸ್ಕರ ರೊಟ್ಟಿಯನ್ನು ಸುಡುವದಕ್ಕೂ ಸೀಪದಾರ್ಥಗಳನ್ನು ತಯಾರುಮಾಡುವುದಕ್ಕೂ ಉಪಯೋಗಿಸಲ್ಪಡುವ ಒಂದು ಕಟ್ಟಡ ಅಥವಾ ಅಂಥಾ ಕಟ್ಟಡದ ಒಂದುಭಾಗ ಸೇರಿಕೊಂಡಿರುತ್ತದೆ.

X. ಯಾವ ಮನುಷ್ಯನು ರೊಟ್ಟಿಯನ್ನಾಗಲಿ ಮಿಠಾಯನ್ನಾಗಲಿ ಮುಚ್ಚಲ್ಪಟ್ಟ ಗಾಡಿ ಅಥವಾ ಮುಚ್ಚಳವುಳ್ಳ ಮಕ್ಕರಿ, ಟಿನ್ನು ಅಥವಾ ಇತರ ಆಶಯಗಳು ವಿನಹ ಒಂದು ಸ್ಥಳದಿಂದ ಇತರ ಯಾವ ಸ್ಥಳಕ್ಕೂ ಸಾಗಿಸಕೂಡದು ಅಂಥಾ ಪ್ರತಿ ಭಂಡಿಯೂ ಮಕ್ಕರಿಯೂ ಟಿನ್ನೂ ಅಥವಾ ಇತರ ಪಾತ್ರೆಗಳೂ ಸರ್ವದಾ ಸಂಪೂರ್ಣ ಶುಚಿಯಾಗಿ ಇಡಲ್ಪಟ್ಟಿರಬೇಕು. ಹಾಗೆ ಸಾಗಿಸಲ್ಪಡತಕ್ಕ ರೊಟ್ಟಿಯನ್ನಾಗಲಿ ಮಿಠಾಯಾಗಲಿ ಕೊಳೆ ಅಥವಾ ಅನಾರೋಗ್ಯವಾಗುವಂತೆ ಯಾವ ಕಾರ್ಯವೂ ನಡಿಸಕೂಡದು.

XI. ರೊಟ್ಟಿ-ಮಿಠಾಯಿ ವಗೈರೆ ಕಟ್ಟಲು ಉಪಯೋಗಿಸತಕ್ಕ ಕಾಗದಗಳು ಮತ್ತು ಹಚ್ಚಿಬೆ ಎಲೆಗಳು ವಿಶಿಷ್ಟವು ಶುಚಿಯಾಗಿರಬೇಕಲ್ಲದೆ ಅವುಗಳು-ನಿರ್ಮಲವಾದ (ಗಡಗಂಚಿ) ಹಂದರದಲ್ಲಿ ದಾಸ್ತಾ ಇಟ್ಟಿರಬೇಕು.

XII. ರೊಟ್ಟಿ, ಮಿಠಾಯಿ ವಗೈರೆಯನ್ನು ಬಿಕರಿಗೋಸ್ಕರ ಗಾಜಿನ ಸಂಮುಖದ ಪೆಟ್ಟಿಗೆಯಲ್ಲಿ ಸಂಗ್ರಹಿಸಿ ಇಡಲ್ಪಟ್ಟಿರಬೇಕು, ಮತ್ತು ನೊಣಗಳಿಂದಾಗಲಿ, ಧೂಳಿನಿಂದಾಗಲಿ ಮತ್ತು ಕೆಟ್ಟವಾಸನೆಯಿಂದ ಮಲೀನತ್ವ ಹೊಂದದಂತೆ ಯುಕ್ತವಾದ ವಿಶಿಷ್ಟ ಎಚ್ಚರಿಕೆಯನ್ನು ತೆಗದುಕೊಳ್ಳತಕ್ಕದ್ದು, ಯಾವ ಮನುಷ್ಯನೇ ಆಗಲಿ ಒಂದು ರೊಟ್ಟಿ ಗಡಂಗಿನ ಸ್ವಾಧೀನ (ವಶ)ಗಾರನಂತೆ ಕೆಲಸಮಾಡುವ ಅಥವಾ ಪ್ರವರ್ತನೆಮಾಡುವಂತೆ ಕಂಡುಬರುವ ಯಾವ ಮನುಷ್ಯನನ್ನಾದರೂ ಸದರಿ ಗಡಂಗಿನ ಯಾ ಅಂಗಡಿಯ ಮಾಲೀಕ ಅಥವಾ ಯಜಮಾನನೆಂದು ಭಾವಿಸಲ್ಪಟ್ಟು ಅದರಂತೆ ಎಣಿಸಲಾಗುತ್ತೆ.

XIII. ಅಂಥಾ ರೊಟ್ಟಿಗಡಂಗು ಅಥವಾ ಮಿಠಾಯಿ ಅಂಗಡಿ ಲೈಸೆನ್ಸು ಹೊಂದಲ್ಪಟ್ಟಿರುತ್ತೆಂಬುದನ್ನು ತೋರಿಸುವ ಬಗ್ಗೆ ಒಂದು ಬೋರ್ಡ್ (ಗುರ್ತಿನ ಹಲಿಗೆ) ನ್ನು ಹಾಕಿಸಿರಬೇಕು.

XIV. ಯಾವನಾದರೂ ಈ ಉಪನಿಬಂಧನೆಗಳಲ್ಲಿ ನಿಯಮಕವಾಗಿರುವಂತೆ ಲೈಸೆನ್ಸು ಪಡಿಯದೆ ರೊಟ್ಟಿ ಗಡಂಗಿಗೋಸ್ಕರ ಅಥವಾ ಮಿಠಾಯಿ ಅಂಗಡಿಗೋಸ್ಕರ ಯಾವ ಸ್ಥಳವನ್ನಾದರೂ ಉಪಯೋಗಿಸಿದಲ್ಲಿ ಅಂಥವನು ತಪ್ಪು ಸ್ಥಾಪನೆಯಿಂದ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆ ತೆರಲು ಗುರಿಯಾಗುವನು. ಮತ್ತು ತಪ್ಪು ಸ್ಥಾಪನೆ ಆದನಂತರ ಅಂಥಾ ಸ್ಥಳವನ್ನು ಉಪಯೋಗಿಸುವ ಪ್ರತಿದಿನಕ್ಕೂ ಐದು ರೂಪಾಯಿಗಳ ವರಿವಿಗೆ ಹೆಚ್ಚು ಜುರ್ಮಾನೆ ತೆರಲು ಗುರಿಯಾಗುವನು.

1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ 48ನೆ (ಬಿ) ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ದೇಶೀಯ ಹೋಟಲ್ ಅಥವಾ ಭೋಜನ ಶಾಲಾಗಳಿಗೆ ಸಂಬಂಧಪಟ್ಟ ಮಸೂದೆ ಉಪ ನಿಬಂಧನೆಗಳು.

I. (1) ಒಂದು ಭೋಜನಶಾಲೆ ಅಥವಾ ಹೋಟಲ್ ಎಂಬುವುದು ಬಿಕರಿಬಗ್ಗೆ ತಯಾರ್ಮಾಡಿ ಇಡಲ್ಪಟ್ಟ ಪಕ್ವ ಮಾಡಿದ ಅಕ್ಕಿ ಕುರಿಮಾಂಸ, ದನದಮಾಂಸ, ಕೋಳಿ, ತರಕಾರಿಗಳು, ಬ್ಯಾಳಿ ಮತ್ತು ತಿಂಡೀ ಸಾಮಾನುಗಳು, ಅಥವಾ ಚಪಾತಿ, ದೋಸೆ, ಟೀ, ಕಾಫಿ ವಗೈರೆ ಫಲಹಾರದ ಸಾಮಾನುಗಳುಳ್ಳ ಮನೆ ಅಥವಾ ಸ್ಥಳ ಸೇರಿದ್ದಾಗಿರುತ್ತೆ.

(2) ಪ್ರೆಸಿಡೆಂಟರವರಿಂದ ವಾರ್ಷಿಕ ಲೈಸೆನ್ಸು ಪಡಿಯದೆ ಯಾವ ಸ್ಥಳವೂ ಭೋಜನಶಾಲೆ ಯಾ ಹೋಟಲ್ ಬಗ್ಗೆ ಉಪಯೋಗಿಸಲ್ಪಡಕೂಡದು.

(3) ಭೋಜನಶಾಲೆಗೆ ಉಪಯೋಗಿಸಲ್ಪಡುವ ಕಟ್ಟಡವು ವಿಸ್ತಾರವಾಗಿಯೂ ತಕ್ಕದ್ದಾಗಿಯೂ ಇದ್ದವಿನಹ ಈ ಬಗ್ಗೆ ಲೈಸೆನ್ಸು ಕೊಡಲ್ಪಡುವುದಿಲ್ಲ.

II. (1) ಮೇಲ್ಕಂಡ ವ್ಯಾಪಾರವು ಹೇರಳವಾಗಿ ನಡಿಯುತ್ತೆಂದು ಪ್ರೆಸಿಡೆಂಟರವರು ಊಹಿಸಿದ ಸ್ಥಳಕ್ಕೆ ನೀರಿನ ನಲ್ಲಿಯನ್ನ ಇಡಿಸಲು ನಿರ್ಬಂಧಪಡಿಸಲಾಗುತ್ತೆ.

(2) ಸದರೀ ಕಟ್ಟಡದಲ್ಲಿ ಪಾನಕ್ಕಾಗಿ ಉಪಯೋಗಿಸುವ ನೀರು ಪಬ್ಲಿಕ್ ನೀರಿನ ಸರಬರಾಯಿ (ಹೆಸರುಘಟ್ಟದ) ಯಿಂದ ತರಲ್ಪಟ್ಟಿರಬೇಕು ಮತ್ತು ಸದರೀ ನೀರು ಕುದಿಸಲ್ಪಟ್ಟು, ಮುಚ್ಚಳವುಳ್ಳ ನಿರ್ಮಲವಾದ ಪಾತ್ರೆಯಲ್ಲಿ ತೇಲಾಡುವ ಮಲಿನ ಪದಾರ್ಥ ಇಲ್ಲದ ರೀತ್ಯಾ ಶುಭ್ರವಾಗಿಟ್ಟಿರಬೇಕು. ಅಂಥಾ ನೀರಿನ ಪಾತ್ರೆಗಳು ನೀರು ತೆಗಿಯಲು ಟ್ಯಾಪ್ (ತಿರುಪು) ಉಳ್ಳವುಗಳಾಗಿರಬೇಕು, ಮತ್ತು ಅವುಗಳು ನೆಲದ ಮಟ್ಟಕ್ಕಿಂತ ಒಂದಡಿ ಯತ್ತರದಲ್ಲಿ ಶುಚಿಯಾದ ಸ್ಥಳದಲ್ಲಿ ಇಡಲ್ಪಟ್ಟಿರಬೇಕು.

III. (1) ಪ್ರತಿ ಭೋಜನಶಾಲೆ ಗೋಡೆಗಳಿಗೆ ತ್ಯಾವ ಸೇರಗೊಡದಂತೆ ಗಾರೆ ಹಾಕಲ್ಪಟ್ಟು ನಲಕ್ಕೆ ಕಲ್ಲು ಹಾಸಲ್ಪಟ್ಟಿರಬೇಕು.

(2) ಅಡಿಗೆಮನೆ ಮತ್ತು ನೀರಿನ ಮನೆಗಳು ಒಳ್ಳೇ ಥೊಳಿಯಾಡುವ ಸಾಧನೆಗಳುಳ್ಳವುಗಳಾಗಿರಬೇಕು, ಮತ್ತು ಇವುಗಳ ಹೊಗೆಯು ಇತರವಾಸದ ಕೊಠಡಿಗಳಿಗೆ ವ್ಯಾಪಿಸದಂತೆ ಹೊಗೇದ್ವಾರಗಳುಳ್ಳವುಗಳಾಗಿರಬೇಕು, ಭೋಜನಶಾಲೆ, (ಹೋಟಲ್) ಯಲ್ಲಿನ ಕೊಠಡಿಗಳೆಲ್ಲವೂ ಚೆನ್ನಾಗಿ ಬೆಳಕು ವುಳ್ಳವುಗಳಾಗಿಯೂ ಥೊಳಿಯಾಡಲು ಸಾಧನೆಗಳುಳ್ಳವುಗಳಾಗಿರಬೇಕು.

(3) ಸದರೀ ಭೋಜನಶಾಲಾ ವಶಗಾರನು ಅಥವಾ ಎಜಮಾನನು ಊಟದ ನಡುಮನೆ ವಿನಹ ಇನ್ಯಾವ ಸ್ಥಳದಲ್ಲಿಯೂ ಯಾರನ್ನೂ ಭೋಜನ ಮಾಡಗೊಳಿಸಕೂಡದು.

IV. (1) ಎಲ್ಲಾ ಪಾತ್ರೆಗಳನ್ನು ಇತರ ಸಾಮಾನುಗಳನ್ನು ಶುಭ್ರವಾಗಿಟ್ಟಿರತಕ್ಕದ್ದು, ಮತ್ತು ಪಕ್ವ ಮಾಡುವುದಕ್ಕಾಗಲಿ ಅಥವಾ ತಿನ್ನುವ ಪದಾರ್ಥಗಳಿಡುವದಕ್ಕಾಗಲಿ ಉಪಯೋಗಿಸುವ ಎಲ್ಲಾ ಲೋಹ ಪಾತ್ರೆಗಳು ಅಖಂಡ ಟಿನ್ ಕಲಾಯಿಗಳುಳ್ಳವುಗಳಾಗಿರಬೇಕು, ಮತ್ತು ಯಾವ ತರಹ ಸೀಸದ ಪಾತ್ರೆಗಳನ್ನು ಯಾವಬಗ್ಗೂ ಉಪಯೋಗಿಸಕೂಡದು, ಮನುಷ್ಯನ ಆಹಾರಕ್ಕೆ ನಿಯಮಿತವಾದ ಪಕ್ವಮಾಡಿದ ತಿಂಡಿ ಸಾಮಾನು, ಹಿಟ್ಟಿನ ಪದಾರ್ಥ (ಹೋಳಿಗೆ ವಗೈರೆ) ಅಥವಾ ಮಿಠಾಯಿ, ಫಲಹಾರದ ಸಾಮಾನು, ಕೆಡದಂತೆ ಭದ್ರಮಾಡಿದ ಒಣಗಿಸದ ಅಥವಾ ಕೊಯಿದ ಹಣ್ಣುಗಳು ಸಹಾ ನೊಣಗಳಿಂದಲಾಗಲೀ, ಧೂಳಿನಿಂದಾಗಲಿ ಮತ್ತು ಕೆಟ್ಟವಾಸನೆಯಿಂದಾಗಲೀ ಮಲೀನತ್ವ ಯಾ ಕೆಡದಂತೆ ಯುಕ್ತವಾದ ಎಚ್ಚರಿಕೆಯು ತೆಗೆದುಕೊಳ್ಳಲ್ಪಡತಕ್ಕದ್ದು.

(2) ಮನುಷ್ಯ ಆಹಾರಕ್ಕೆ ಯಾವವಿಧವಾಗಿ ಯೋಗ್ಯವಲ್ಲದ ಹಳೇದಾದ (ತಂಗಳು) ಅನಾರೋಗ್ಯವುಳ್ಳ ಕೆಡಕಾದ ಯಾವ ತರಹೆ ತಿಂಡಿ ಪದಾರ್ಥಗಳನ್ನೂ ಸದರಿ ವಠಾರದಲ್ಲಿ ದಾಸ್ತಾನ್ ಇಡಕೂಡದು, ಮತ್ತು ಬಿಕರಿಗೆ ಹೊರಪಡಿಸಕೂಡದು.

(3) ಸದರಿ ಆವರ್ಣದಲ್ಲಿನ ಯಾ ಆಸುಪಾಸಿನಲ್ಲಿನ ಕಶ್ಮಲವು ಚೆನ್ನಾಗಿ ಗುಡಿಸಲ್ಪಡುತ್ತಿರಬೇಕು. ಮತ್ತು ಮೋರಿಯನ್ನು ನೀರಿನಿಂದ ಚೆನ್ನಾಗಿ ಶುಭ್ರಪಡಿಸಬೇಕು, ಮತ್ತು ಸದರಿ ಕಟ್ಟಡವನ್ನ ಎಲ್ಲಾ ಕಾಲದಲ್ಲೂ ನಿರ್ಮಲವಾಗಿಯೂ, ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು. ಮತ್ತು ಸದರೀ ಕಟ್ಟಡಕ್ಕೆ ಅವಶ್ಯವಾದಷ್ಟು ಮಲವಿಸರ್ಜನೇ ಸ್ಥಳದ ಅನುಕೂಲತೆ ಉಂಟಾಗಿರತಕ್ಕದ್ದು, ಮತ್ತು ಮಲವಿಸರ್ಜನೆ ಸ್ಥಳವನ್ನ ನಿರ್ಮಲವಾಗಿಟ್ಟಿರಬೇಕಲ್ಲದೆ, ಮಲವು ಬೂದಿಯಿಂದಾಗಲೀ ಮಣ್ಣಿನಿಂದಾಗಲೀ ಮುಚ್ಚಲ್ಪಟ್ಟಿರಬೇಕು.

V. ಸಾಂಕ್ರಾಮಿಕವಾದ ಅಥವಾ ಅಸಹ್ಯಕರವಾದ ರೋಗದಿಂದ ಅನುಭವಿಸುವಂಥ ಅಥವಾ ಅಂಥಾ ರೋಗಿಷ್ಟನ ಹಾಜರಾತಿಯಲ್ಲಿ ಈಚಿಗೆ ಇದ್ದಂಥಾ ಮನುಷ್ಯನನ್ನು ಅಥವಾ ಮೈ ತೊಳೆಯದೇಲೂ ಯಾ ಬೇರೇ ರೀತಿಯಲ್ಲಿ ಅಶುಚಿಯಾದಂಥ ಯಾವ ಮನುಷ್ಯನನ್ನೂ ಹೋಟಲ್‌ನಲ್ಲಿ ನೌಕರಿ ಬಗ್ಗೆ ಇಟ್ಟುಕೊಳ್ಳಕೂಡದು.

VI. (1) ಆಹಾರ ವಿಶಿಷ್ಟವೂ ಮತ್ತು ಪಕ್ವಮಾಡಿದ ಮತ್ತು ಹಸೀದಾದ ಪದಾರ್ಥಗಳೆಲ್ಲವೂ ಮತ್ತು ಪಾತ್ರೆಗಳು ಪ್ರೆಸಿಡೆಂಟರವರಿಂದಾಗಲೀ ಹೆಲ್ತಾಫಿಸರವರಿಂದಾಗಲಿ ಅಥವಾ ಇವರಪಕ್ಷವಾಗಿ ಅಧಿಕಾರಹೊಂದಿದ ಯಾವ ಆಫಿಸರಿಂದಾಗಲಿ ಅಜಮಾಯಿಷಿ ಮಾಡಲ್ಪಡಲು ತೆರೆಯಲ್ಪಟ್ಟಿರತಕ್ಕದ್ದು.

(2) ಅಪಾಯಕರವಾದ ಸಾಂಕ್ರಾಮಿಕ ರೋಗಗಳಿಂದ (ಅಂದರೆ) ಕಲರಾ, ಪ್ಲೇಗ ಮತ್ತು ಬೊಬ್ಬೆಯೇಳುವ ಜ್ವರಗಳು ಅಂದರೆ ಸಿಡುಬು, ಸೀತಾಳ, ಗೊಬ್ಬರ ಮತ್ತು ಏಳು ದಿನಗಳಿಗಿಂತ ಪರಿಮಾಣವುಳ್ಳ ಜ್ವರಗಳ ವಿದ್ಯಮಾನಗಳನ್ನು ತಕ್ಷಣ ಪ್ರೆಸಿಡೆಂಟರವರಿಗೆ ತಿಳಿಸತಕ್ಕದ್ದು.

VII. (1) ಯಾವ ಮನುಷ್ಯನು ಈ ಉಪ ನಿಬಂಧನೆಗಳು ಜಾರಿಗೆ ತರಲ್ಪಟ್ಟ ತರುವಾಯ ಅಂಥಾ ಭೋಜನಶಾಲೆ ಯಾ ಹೋಟಲನ್ನು ಇಡಲು ಅಥವಾ ನಡೆಸಲು ಉಪಕ್ರಮಿಸಿದ ಏಳು ದಿನಗಳೊಳಗಾಗಿ ಲೈಸೆನ್ಸು ಪಡೆಯದೆ ಭೋಜನಶಾಲೆ ಯಾ ಹೋಟಲ್ ಇಡಕೂಡದು. ಯಾ ನಡಿಸಕೂಡದು. ಈ ಉಪ ನಿಬಂಧನೆಗಳನ್ನು ಜಾರಿಗೆ ತರುವ ಕಾಲದಲ್ಲೀ ಇಡಲ್ಪಟ್ಟಿರುವ ಯಾ ನಡೆಸಲ್ಪಡುತ್ತಿರುವ ಹೋಟಲ್‌ಗಳ ವಿಷಯದಲ್ಲಿ ಈ ಉಪ ನಿಬಂಧನೆಗಳು ಜಾರಿಗೆ ತರಲ್ಪಟ್ಟ ಮುವ್ವತ್ತು ದಿನಗಳೊಳಗಾಗಿ ಲೈಸೆನ್ಸು ಪಡಿಯದೆ ಇಡಕೂಡದು.

(2) ಒಂದು ಹೋಟಲ್ ಮನೆಯ ಸ್ವಾಧೀನಗಾರನಂತೆ ಕೆಲಸಮಾಡುವ ಅಥವಾ ಪ್ರವರ್ತನೆ ಮಾಡುವಂತೆ ಕಂಡುಬರುವ ಯಾವ ಮನುಷ್ಯನನ್ನಾದರೂ ಸದರಿ ಹೋಟಲಿನ ಮಾಲೀಕ ಅಥವಾ ಯಜಮಾನನೆಂದು ಭಾವಿಸಲ್ಪಟ್ಟು ಅದರಂತೆ ಎಣಿಸಲಾಗುತ್ತೆ.

VIII. ಸದರಿ ದೇಶೀಯ ಹೋಟಲ್ ಯಾ ಭೋಜನಶಾಲೆಯು ಲೈಸೆನ್ಸು ಹೊಂದಲ್ಪಟ್ಟಿರುತ್ತೆ ಎಂಬುದನ್ನು ತೋರಿಸಲು ಬೋರ್ಡು (ಗುರ್ತಿನ ಹಲಿಗೆ) ಯನ್ನು ಹಾಕಿಸಲ್ಪಟ್ಟಿರತಕ್ಕದ್ದು.

IX. ಈ ಉಪ ನಿಬಂಧನೆಗಳಲ್ಲಿ ನಿಯಾಮಕವಾಗಿರುವಂತೆ ಲೈಸೆನ್ಸು ಪಡಿಯದೆ ಯಾವ ಸ್ಥಳವನ್ನಾದರು ಹೋಟಲ್‌ಬಗ್ಗೆ ಉಪಯೋಗಿಸಿದಲ್ಲಿ ಅಂಥವನು ತಪ್ಪು ಸ್ಥಾಪನೆಯಿಂದ 50 ರೂಪಾಯಿಗಳಿಗೆ ಮೀರದ ಜುಲ್ಮಾನೆ ತೆರಲು ಗುರಿಯಾಗುವನು. ಮತ್ತು ತಪ್ಪು ಸ್ಥಾಪನೆಯಾದನಂತರ ಅಂಥಾ ಸ್ಥಳವನ್ನು ಉಪಯೋಗಿಸುವ ಪ್ರತಿ ದಿನಕ್ಕೂ 5 ರೂಪಾಯಿನ ಪರಿಮಿಗೆ ಹೆಚ್ಚು ಜುಲ್ಮಾನೆ ತೆರಲು ಗುರಿಯಾಗುವನು.

ಸನ್ 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನ್ 48 (c) ನೆ ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ಮಂಜಿನ ಗಡ್ಡೆ ಮತ್ತು ಸೋಡಾ ವಾಟರ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ವಿಷಯದ ಮಸೂದೆ ಉಪನಿಬಂಧನೆಗಳು.

(1) ಮಂಜಿನಗಡ್ಡೆ ಅಥವಾ ಸೋಡಾ ವಾಟರ್ಸ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ಬಗ್ಯೆ ಲೈಸೆನ್ಸು ಹೊಂದಿದ ಹೊರ್ತು ಯಾವ ಸ್ಥಳವೂ ಉಪಯೋಗಿಸಲ್ಪಡಕೂಡದು.

(2) ಮೇಲ್ಕಂಡ ಬಗ್ಯಾಗಿ ಯಾವ ಆಹಾರವನ್ನಾದರು ಉಪಯೋಗಿಸಲಪೇಕ್ಷಿಸುವ ಮನುಷ್ಯನು ಲೈಸೆನ್ಸು ಹೊಂದಲು ಪ್ರೆಸಿಡೆಂಟರವರಿಗೆ ಅರ್ಜಿ ಬರೆದುಕೊಳ್ಳಬೇಕು. ಪ್ರೆಸಿಡೆಂಟರವರು ಅಂಥಾ ಲೈಸೆನ್ಸನ್ನೂ ಅವರಿಗೆ ಯುಕ್ತ ತೋರುವ ರೀತ್ಯಾ ಕೊಡಬಹುದು ಅಥವಾ ತಿರಸ್ಕರಿಸಬಹುದು.

(3) ಈ ಉಪನಿಬಂಧನೆ ಮೇರಿಗೆ ಕೊಡಲ್ಪಟ್ಟ ಲೈಸೆನ್ಸುಗಳನ್ನ ರಿನ್ಯೂ ಮಾಡಲು (ನವೀಕರಿಸಲು) ಪ್ರತಿ ಸರ್ಕಾರಿ ಸಾಲಿನ ಮೊದಲ ಮಾಹೆ ಆಖೈರ್ ಒಳಗಾಗಿ ಪ್ರೆಸಿಡೆಂಟರವರಿಗೆ ಅರ್ಜಿ ಬರೆದುಕೊಳ್ಳಬೇಕಾಗಿರುತ್ತೆ.

(4) ಈ ಉಪನಿಬಂಧನೆಗಳನುಸಾರವಾಗಿ ಕೊಡಲ್ಪಡುವ ಮಂಜಿನ ಗಡ್ಡೆಯ ಕಾರ್ಖಾನೆ ಲೈಸೆನ್ಸು ಬಗ್ಯೆ 50 ರೂಪಾಯಿನಂತೆಯೂ, ಸೋಡಾ ವಾಟರ್ಸ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ಕಾರ್ಖಾನೆಯ ಬಗ್ಯೆ 100 ರೂಪಾಯಿನಂತೆಯೂ ಲೈಸೆನ್ಸು ಫೀ ದಾಖಲ್ಮಾಡಲಾಗುತ್ತೆ.

ಈ ಉಪನಿಬಂಧನೆ ಮೇರಿಗೆ ಕೆಳಗೆ ನಮೂದಿರುವ ಬಾಬುಗಳಿಗೆ ಕೊಡಲ್ಪಡುವ ಲೈಸೆನ್ಸುಗಳಿಗೆ ಇದರಡಿ ಕಂಡ ಷರತ್ತುಗಳು ಲಗಾವಾಗಿರತಕ್ಕದ್ದು.

(1) ಮಂಜಿನಗಡ್ಡೆ ಕಾರ್ಖಾನೆ ಬಗ್ಯೆ.

(a) ಮಂಜಿನ ಗಡ್ಡೆಯಾಗಿ ಮಾಡಲು ಉಪಯೋಗಿಸಲ್ಪಡುವ ನೀರನ್ನ ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡುವ ಜಾಗದಿಂದ ತರಲ್ಪಡತಕ್ಕದ್ದು.

(b) ಅಂಥಾ ನೀರನ್ನು ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡದ ಪಖಾಲೆಯಲ್ಲಾಗಲಿ ಅಥವಾ ಇತರ ಇನ್ಯಾವ ಪಾತ್ರೆಯಲ್ಲಾಗಲಿ ತರಕೂಡದು.

(c) ಅಂಥಾ ನೀರನ್ನ ತರಲು ನೇಮಿಸಲ್ಪಡತಕ್ಕ ಭಂಡಿಗಳು ಆವರ್ಣದಲ್ಲಿ ಇಡಲ್ಪಟ್ಟಿರಬೇಕು. ಮತ್ತು ಅಂಥಾ ಕಾರ್ಖಾನೆಯ ವಿಳಾಸವು ನೀರಿನ ಪೀಪಾಯಿನ ಮೇಲೆ ಬಣ್ಣದಿಂದ ಬರೆಯಲ್ಪಟ್ಟಿರಬೇಕು, ಮತ್ತು ಅಂಥಾ ಬಂಡಿಗಳು ಸರ್ವ ಕಾಲದಲ್ಲೂ ಸರಿಯಾದ ಶುಚಿಯಾದ ಸ್ಥಿತಿಯಲ್ಲಿ ಇಡಲ್ಪಟ್ಟಿರತಕ್ಕದ್ದು.

(d) ಮಂಜಿನಗಡ್ಡೆ ಕಾರ್ಖಾನೆಯ ಆವರ್ಣವು ಸರಿಯಾದ ಶುಚಿಯಾದ ಸ್ಥಿತಿಯಲ್ಲಿ ಇಡಲ್ಪಟ್ಟಿರಬೇಕು. ಮತ್ತು ಕಶ್ಮಲ ನೀರು ವಿಶಿಷ್ಟವೂ ಸಂಪೂರ್ಣವಾಗಿ ಹರಿದು ಹೋಗುವಂತೆ ಮೋಹರಿವುಳ್ಳದ್ದಾಗಿರಬೇಕು.

(e) ಹೆಲ್ತ್ ಆಫಿಸರೇ ಆಗಲಿ ಅಥವಾ ಯಾವ ಮ್ಯೂನಿಸಿಪಲ್ ಸ್ಯಾನಿಟೆರಿ ಇನ್ಸ್ಪೆಕ್ಟರೇ ಆಗಲಿ ಮಂಜಿನ ಗಡ್ಡೆ ತಯಾರಿ ಅಥವಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಯಾವ ಸ್ಥಳವನ್ನೂ ಅದು ತೆರೆಯಲ್ಪಟ್ಟಿರುವಾಗ ಯಾವ ಕಾಲದಲ್ಲಾಗಲಿ ಪ್ರವೇಶಿಸುವದಕ್ಕೂ ಸದರಿ ಸ್ಥಳದಲ್ಲಿ ತಯಾರಾದಂಥ ಅಥವಾ ಬಿಕರಿ ಬಗ್ಯೆ ಇಟ್ಟಿರತಕ್ಕಂಥಾ ಮಂಜಿನಗಡ್ಡೆಯನ್ನೂ ಅಜಮಾಯಿಷಿ ಮಾಡುವದಕ್ಕೂ ಅಥವಾ ಅಂಥಾದರ ಮಾದರಿಯನ್ನ ತೆಗದುಕೊಳ್ಳುವದಕ್ಕೂ ನ್ಯಾಯವುಳ್ಳವನಾಗಿರತಕ್ಕದ್ದು. ಮತ್ತು ಅಂಥಾ ಮಾದರಿಯನ್ನು ತೆಗೆದುಕೊಳ್ಳುವದಕ್ಕೆ ಅಪ್ಪಣೆ ಕೊಡಲು ತಿರಸ್ಕರಿಸುವಂಥಾ ಅಂಥಾ ಸ್ಥಳದ ಸ್ವಾಧೀನಗಾರನಾಗಲಿ ಅಥವಾ ಯಜಮಾನನಾಗಲಿ ಒಂದು ಅಪರಾಧಕ್ಕೆ ಒಳಪಡುವನು (ತಪ್ಪಿತಸ್ಥನಾಗುವನು) ಅಂಥಾ ಮಾದರಿಯು ಗೌರ್ನಮೆಂಟು ಕೆಮಿಕಲ್ ಎಗ್ಸಾಮಿನರ್ ಮತ್ತು ಬ್ಯಾಕ್ಟಿರಿಯಾಲೊಗಿಸ್ಟ ಯವರಿಗೆ ಕಡ್ಡೆ ಕಳುಹಿಸಲ್ಪಟ್ಟು ಅಂಥಾ ಮಾದರಿಯು ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ಅವರಿಂದ ಕೊಡಲ್ಪಡುವ ಸರಟಫಿಕೇಟನಿಂದ ತಿಳಿಯಬಂದಲ್ಲಿ ಈ ಬಗ್ಯೆ ವಿರೋಧವನ್ನು ಸ್ಥಾಪಿಸುವವರಿಗೂ ಅದು ಹಾಗೆ ಅಯೋಗ್ಯವೆಂಬುವದಕ್ಕೆ ಅದೇ ತಕ್ಕ ರುಜುವಾತಾಗಿರತಕ್ಕದ್ದು. ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ರುಜುವಾತಾಗಿರುವ ಮಾದರಿಯು ಯಾವ ಸ್ಥಳದಿಂದ ತರಲ್ಪಟ್ಟಿತೋ ಅಂಥಾ ಮಂಜಿನ ಗಡ್ಡೆ ತಯಾರಿ ಯಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಸ್ಥಳದ ಯಜಮಾನನು ಅಥವಾ ನಿರ್ವಾಹಕನು ಒಂದು ಅಪರಾಧ ನಡಿಸಿದವನಾಗುವನು (ತಪ್ಪಿತಸ್ಥನಾಗುವನು).

(2) ಸೋಡಾ ವಾಟರ್ ಲೆಮನೇಡ್‌ಯಾನೆ ಎರೇಟೆಡ್ ವಾಟರ್ಸ್‌ನ ಕಾರ್ಖಾನೆ ಬಗ್ಯೆ.

(a) ಎರೇಟಡ್ ವಾಟರ್ಸ್ ತಯಾರಿ ಮಾಡುವ ಬಗ್ಯೆ ಉಪಯೋಗಿಸುವ ನೀರು ವಿಶಿಷ್ಟವು ಅದು ಹಾಗೆ ಉಪಯೋಗಿಸ ಲ್ಪಡುವದಕ್ಕೆ ಮುಂಚಿತವಾಗಿ ಕುದಿಸಲ್ಪಟ್ಟಿರಬೇಕು. ಮತ್ತು ಅಂಥಾ ನೀರು ತಂಣಗಾಗುವ ವೇಳೆ ಅಗನ್ನು ಲಾಯಖಾದ ಮುಚ್ಚಳವುಳ್ಳ ಪಾತ್ರೆಯಲ್ಲಿ ಇಡಲ್ಪಟ್ಟಿರಬೇಕು.

(b) ಕುದಿಸಿದ ನಂತರ ನೀರು ಶೋಧಿಸಬೇಕಾಗಿದ್ದಲ್ಲಿ ಶೋಧಿಸುವ ಪಾತ್ರೆಗಳು ಮತ್ತು ಸಾಮಾನುಗಳು ಪ್ರೆಸಿಡೆಂಟರ ವರು ಅಪ್ಪಣೆ ಕೊಡುವ ಪ್ರಕಾರ ಮತ್ತು ಕಾಲಗಳಲ್ಲಿ ಕ್ರಿಮಿ ಸೇರದಂತೆ ಶುದ್ಧಿಮಾಡಬೇಕು.

(c) ಶೀಸೆ ಯಾ ಬುಡ್ಡಿಗಳನ್ನು ತೊಳೆಯಲು ಉಪಯೋಗಿಸಲ್ಪಡುವ ನೀರು ವಿಶಿಷ್ಟು ಮುಚ್ಚಲ್ಪಟ್ಟ ಕಬ್ಬಿಣ ಪಾತ್ರೆಗ ಳಲ್ಲಿ ದಾಸ್ತಾ ಮಾಡಲ್ಪಟ್ಟಿರಬೇಕು. ಮತ್ತು ಅಂಥಾ ನೀರೂ ಉಪಯೋಗಿಸುವದಕ್ಕೆ ಮುಂಚೆ ಪ್ರೆಸಿಡೆಂಟರವ ರಿಂದ ಅಪ್ಪಣೆ ಕೊಡುವ ಮೇರಿಗೆ ಪರಮಾಂಗನೇಟ್ ಆಫ್ ಪೊಟಾಶಿಯಂ ಎಂಬ ಉಪ್ಪಿನಿಂದ ಶುದ್ಧಿ ಮಾಡಲ್ಪಡ ತಕ್ಕದ್ದು.

(d) ಎರೇಟೆಡ್ ವಾಟರ್ಸ್ ತಯಾರ್ಮಾಡುವ ಕೊಠಡಿಯು ಕ್ರಮವಾದ ಛಾವಣಿವುಳ್ಳದ್ದಾಗಿರಬೇಕು, ನಿರ್ಮಲವಾಗಿಟ್ಟಿರ ಬೇಕು. ಮತ್ತು ಒಳ್ಳೆ ರಿಪೇರಿ ಆದ ಸ್ಥಿತಿಯಲ್ಲಿರತಕ್ಕದ್ದು ಗೋಡೆಗಳು ಗಾರೆಯಿಂದ ಗಿಲಾವ್ ಮಾಡಲ್ಪಟ್ಟಿರಬೇ ಕು. ಮತ್ತು ಮೂರು ತಿಂಗಳಿಗೊಂದಾವರ್ತಿಯಾದರು ಸುಂಣ ಬಳಿಸಲ್ಪಟ್ಟಿರತಕ್ಕದ್ದು. ನೀರು ನೆಲದಲ್ಲಿ ನಿಲ್ಲದಂತೆ ನೆಲಕ್ಕೆ ಶಿಮೆಂಟುಗಾರೆ ಅಥವಾ ಹೆಂಚು ಅಥವಾ ಕಲ್ಲೂ ಹಾಕಲ್ಪಟ್ಟಿರಬೇಕು. ಮತ್ತು ನೀರು ಕ್ರಮವಾಗಿ ಹ ರಿದು ಹೋಗುವಂತೆ ಏರ್ಪಡಿಸಿರಬೇಕು.

(e) ಎರೇಟೆಡ್ಡು ವಾಟರ್ಸ್ ತಯಾರಿ ಬಗ್ಯೂ ಮತ್ತು ಬುಡ್ಡಿಗಳನ್ನು ತೊಳೆಯುವ ಬಗ್ಯೂ ಉಪಯೋಗಿಸಲ್ಪಡುವ ನೀ ರು, ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡುವ ಸ್ಥಳದಿಂದಲೇ ತರಲ್ಪಡತಕ್ಕದ್ದು.

(f) ಅಂಥಾ ನೀರು, ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡದ ಪ್ರಕಾಲಿಯಲ್ಲಾಗಲಿ ಅಥವಾ ಇತರ ಇನ್ಯಾವ ಪಾತ್ರೆಯ ಲ್ಲಾಗಲಿ ತರಲ್ಪಡಕೂಡದು.

(g) ಅಂಥಾ ನೀರನ್ನು ತರಲು ನೇಮಿಸಲ್ಪಡತಕ್ಕ ಭಂಡಿಗಳು ಆ ಆವರ್ಣದಲ್ಲೆ ಇಡಲ್ಪಟ್ಟಿರಬೇಕು. ಅಂಥಾ ಕಾ ರ್ಖಾನೆಯ ವಿಳಾಸವು ನೀರಿನ ಪಿಪಾಯಿ ಮೇಲೆ ಬಣ್ಣದಿಂದ ಬರೆಯಲ್ಪಟ್ಟಿರಬೇಕು. ಮತ್ತು ಅಂಥಾ ಭಂಡಿಗಳ ನ್ನೂ ಸರ್ವಕಾಲದಲ್ಲೂ ಸರಿಯಾದ ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು.

(h) ಕಾರ್ಖಾನೆಯ ಆವರ್ಣವು ಮತ್ತು ತಯಾರು ಮಾಡಲು ಉಪಯೋಗಿಸಲ್ಪಡುವ ಅಜಬಾಬುಗಳು ಪ್ರೆಸಿಡೆಂಟರ ವರಿಂದಾಗಲಿ ಹೆಲ್ತ್ ಆಫಿಸರವರಿಂದಾಗಲಿ ಅಥವಾ ಇನ್ಯಾವ ಮ್ಯುನಿಸಿಪಲ್ ಆಫಿಸರವರಿಂದಾಗಲಿ ನ್ಯಾಯವಾದ ಕಾಲಗಳಲ್ಲಿ ಅಜಮಾಯಿಷಿ ಮಾಡಲು ತೆರೆಯಲ್ಪಟ್ಟಿರಬೇಕು.

(i) ಕಾರ್ಖಾನೆಯ ಯಜಮಾನನ ಪೂರಾ ಹೆಸರು ಮತ್ತು ವಿಳಾಸ, ನಮೂದುಳ್ಳ ಕ್ರಮವಾದ ಲೇಬಿಲ್ (ಚೀಟಿ) ಯ ನ್ನ ಪ್ರತಿ ಬುಡ್ಡಿಯ ಮೇಲೆ ಹಚ್ಚಸದೆ ಯಾವ ತರಹೇ ಎರೇಟೆಡ್ ನೀರೂ ಕಾರ್ಖಾನೆಯಿಂದ ಕೊಡಲ್ಪಡ ಕೂಡದು.

ಹೆಲ್ತ್ ಆಫಿಸರೇ ಆಗಲಿ ಅಥವಾ ಯಾವ ಮ್ಯುನಿಸಿಪಲ್ ಸ್ಯಾನಿಟೆರಿ ಇನ್ಸ್‌ಪೆಕ್ಟರೇ ಆಗಲಿ ಎರೇಟೆಡ್ ವಾಟರ್ಸ್ ತಯಾರಿ ಅಥ ವಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಯಾವ ಸ್ಥಳವನ್ನೂ ಅದು ತೆರೆಯಲ್ಪಟ್ಟಿರುವಾಗ ಯಾವ ಕಾಲದಲ್ಲಾಗಲಿ ಪ್ರವೇಶಿಸು ವದಕ್ಕೂ ಸದರಿ ಸ್ಥಳದಲ್ಲಿ ತಯಾರಾದಂಥಾ ಅಥವಾ ಬಿಕರಿ ಬಗ್ಯೆ ಇಟ್ಟಿರುವ ಎರೇಟೆಡ್ ವಾಟರ್ಸನ್ನು ಅಜಮಾಯಿಷಿ ಮಾಡುವ ದಕ್ಕೂ ಅಥವಾ ಅಂಥಾದರ ಮಾದರಿಯನ್ನು ತೆಗೆದುಕೊಳ್ಳುವದಕ್ಕೂ ನ್ಯಾಯವಾಗಿರತಕ್ಕದ್ದು. ಮತ್ತು ಅಂಥಾ ಮಾದರಿಯನ್ನು ತೆಗೆದುಕೊಳ್ಳಲು ಅಪ್ಪಣೆ ಕೊಡಲು ತಿರಸ್ಕರಿಸುವ ಅಂಥಾ ಸ್ಥಳದ ಸ್ವಾಧೀನಗಾರನಾಗಲಿ ಅಥವಾ ಯಜಮಾನನಾಗಲಿ ಒಂದು ಅಪ ರಾಧಕ್ಕೆ ಒಳಪಡುವನು (ತಪ್ಪಿತಸ್ಥನಾಗುವನು) ಅಂಥಾ ಮಾದರಿಯು ಗೌರ್ನಮೆಂಟ್ ಕೆಮಿಕಲ್ ಎಗ್ಜಾಮಿನರ್ ಮತ್ತು ಬ್ಯಾಕ್ಟರಿ ಯಾಲೊಗಿಸ್ಟ್ ಯವರಿಗೆ ಕೂಡ್ಲೆ ಕಳುಹಿಸಲ್ಪಟ್ಟ ಅಂಥಾ ಮಾದರಿಯು ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ಅವರಿಂದ ಕೊಡಲ್ಪಡುವ ಸರಟಿಫಿಕೇಟಿನಿಂದ ತಿಳಿಯಬಂದಲ್ಲಿ ಈ ಬಗ್ಯೆ ವಿರೋಧವನ್ನ ಸಿದ್ಧಾಂತಪಡಿಸುವವರಿಗೂ ಅದು ಹಾಗೆ ಅಯೋಗ್ಯ ವೆಂಬುವದಕ್ಕೆ ಅವೇ ತಕ್ಕ ರುಜುವಾತ್ತಾಗಿರತಕ್ಕದ್ದು. ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ರುಜುವಾತ್ತಾಗಿರುವ ಯಾವ ಸ್ಥಳದಿಂದ ತರಲ್ಪಟ್ಟಿತೋ ಅಂಥಾ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಸ್ಥಳದ ಯಜ ಮಾನನು ಅಥವಾ ಕಾರ್ಯ ನಿರ್ವಾಹಕನು ಒಂದು ಅಪರಾಧ ನಡಿಸಿದವನಾಗುವನು. (ತಪ್ಪಿತಸ್ಥನಾಗುವನು).

ಮಂಜಿನಗಡ್ಡೆ ಕಾರ್ಖಾನೆಗಾಗಲಿ ಅಥವಾ ಎರೇಟೆಡ್ ವಾಟರ್ಸ್ ಕಾರ್ಖಾನೆಗಾಗಲಿ ಈ ಉಪನಿಬಂಧನೆ ಮೇರಿಗೆ ಕೊಡಲ್ಪ ಡುವ ಲೈಸೆನ್ಸಿನ ಯಾವ ಷರತ್ತಿಗಾಗಲಿ ತಪ್ಪಿ ನಡಕೊಂಡಲ್ಲಿ ಅಂಥಾ ಲೈಸೆನ್ಸು ಹೊಂದಿರುವ ಮನುಷ್ಯನು ಮತ್ತು ಲೈಸೆನ್ಸು ಕೊಡಲ್ಪಟ್ಟಿರುವಂಥಾ ಸ್ಥಳದ ಸ್ವಾಧೀನಗಾರನು ಸಹ ತಪ್ಪು ಸ್ಥಾಪನೆಯಿಂದ 20 ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಗುರಿಯಾಗುವರು ಮತ್ತು ಅಪಾದನೆ ಆದನಂತರ ಮೇಲ್ಕಂಡ ಷರತ್ತುಗಳಿಗೆ ತಪ್ಪಿ ನಡಕೊಂಡ ಪ್ರತಿದಿನಕ್ಕೂ 5 ರೂಪಾಯಿ ವರಿ ವಿಗೂ ಜುಲ್ಮಾನೆ ತೆರಲು ಗುರಿಯಾಗುವರು.

ಬಿ. ಕೃಷ್ಣರಾವ್,
ಹೆಲ್ತ್ ಆಫಿಸರ್.

ನಮ್ಮ ಚಿಕ್ಕಪ್ಪನ ಮಗ ಶ್ರೀನಿವಾಸ ರಂಗಾಚಾರ್ರೆಂಬವರು 10—12 ಸಾವಿರ ರೂಪಾಯಿನ ಆಸ್ತಿಯನ್ನು ಬಿಟ್ಟು ಅಪುತ್ರ ವಂತರಾಗಿ ಕಾಲವಾದಮೇಲೆ ಸದರಿ ಯವರ ಕುಟುಂಬ ಲಕ್ಷ್ಮಮ್ಮನವರಿಂದ ಕೆಲವು ಜಮೀನುಗಳನ್ನು ದಾನ, ಕ್ರಯ ಮಾಡಿಕೊಂ ಡಿರುವರ್ದಾಯು ಇನ್ನು ಮುಂದೆ ಮಾಡುವದರ ಪ್ರಯತ್ನ ನಡಿಯುವದಾಗಿಯು ವರ್ತಮಾನ ಕೇಳುತ್ತೇನೆ. ಇವಳ ಕಾಲಾನಂತರ ನಾವು ನಮ್ಮ ಸಂತತಿಯವರು ಲಾ ಪ್ರಕಾರ ವಾರಸುದಾರರಾಗುತ್ತೇವೆ. ಆದ್ದರಿಂದ ಇವಳಿಂದ ಮಾಡಿಕೊಳ್ಳುವ ಪರಾಧೀನವು ಊರ್ಜಿ ತವಾಗಲಾರದೆಂದು ಇದರಿಂದ ತಿಳಿಸಿದೆ.

20—3—1909. ತಿರು. ತಿರು ಶ್ರೀನಿವಾಸಗೋಪಾಲಾಚಾರ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಹ ಮಾಹೇ ಯಾ ಕ್ವಾರ್ಟರಿಗೆ			ದಾಮ್ಮಾಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ, ರೆಗ್ಯುಲೇಷರ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್‍ಕ್ಕಂ 155ನೆ ನಂಬರ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್‍ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮುರ್‍ಕ್ಕಂ 24205—6—ಜಿ. 6200ನೆ ನಂಬರಿ ಗವರ್ನಮೆಂಟ್ ಆರ್ಡರಿ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟ್ 21ನೆ ಮುರ್‍ಕ್ಕಂ 2633—41 ಮಿಸ್. 558ನೆ ನಂಬರ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

			ರೂ.	ಆ.
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷರ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸ್‌ಗಳು :—				
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ			2	8
ಎರಡನೇ ಸಲ ವ ಆತರುವಾಯು ಪ್ರತಿ ಆವರ್ತಿಗೂ ಡಿಟೋ			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ :—				
ಮೊದಲನೇ ಸಲಕ್ಕೆ			5	0
ಎರಡನೇ ವ ಆತರುವಾಯು ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಛಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :				
ಮೊದಲನೇ ಸಲಕ್ಕೆ	ಪುಟ 1ಕ್ಕೆ		10	0
ಎರಡನೇ ಸಲ ವ ಆತರುವಾಯು ಪ್ರತಿ ಸಲಕ್ಕೂ	,,		5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ	0	8
ಎರಡನೇ ದಫಾ	ಡಿಟೋ	ಡಿಟೋ	0	6
ಮೂರನೇ ವ ಆತರುವಾಯು ಪ್ರತಿ ಸಲಕ್ಕೆ			0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜ್ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯು ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಛಾರ್ ಕಂಪೈಲರ್, ಮೈಸೂರು ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 22, ಸ 1909.

II ನೆ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದ ಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಎಕ್ಸೈಜ್ ಇಲಾಖೆ.

ಇಸ್ತಿಹಾರ್‌ನಾಮೆ.

ಆಬ್ಕಾರಿ ಮತ್ತು ಅಫೀಮಿಗೆ ಸಮ್ಮಂಧಪಟ್ಟ ಒಟ್ಟು ಸ್ವಾತಂತ್ರ್ಯದ ಹರಾಜು ನೋಟೀಸು.

ನಂಬರ್ 9011, ಬೆಂಗಳೂರು, 7ನೆ ಏಪ್ರಿಲ್ 1909.

I. ನಿಯಾಮಕವಾದ ಮತ್ತು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಅಂಗಡಿಗಳಲ್ಲಿ ಷರಾಬು, ಮದತ ಪದಾರ್ಥಗಳು ಮತ್ತು ಅಫೀಮನ್ನು 1909ನೆ ಇಸವಿ ಜುಲೈ ಗುರ್ರೆ ಲಾಗಾಯತು 1910ನೆ ಇಸವಿ ಜೂನ್ 30 ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಬಿಕರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಡೆಪ್ಯುಟಿ ಕಮಿಷನರವರು ಯಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರವರು ಯಾ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರು ಯಾ ಡೆಪ್ಯುಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರು ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಆ ತಃಖ್ತೆಯಲ್ಲಿ ನಮೂದುಕಂಡ ತಾಲ್ಲೂಕ್ ಯಾ ಸಬ್ ತಾಲ್ಲೂಕ್ ಕಸಬಾಗಳಲ್ಲಿ ಹರಾಜುಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿರುತ್ತೆ. ಹರಾಜುಗಳು ನೇಮಿಸಲ್ಪಟ್ಟ ತಾರೀಖುಗಳಲ್ಲಿ ಪೂರೈಸದೆಹೋದಲ್ಲಿ ಮಾರನೇ ದಿವಸಗಳಲ್ಲಿಯೂ (ರಜಾದಿವಸಗಳು ಹೊರತಾಗಿ) ಹಾಕಲ್ಪಡುವವು.

ಹರಾಜಿನ ಷರತ್ತುಗಳು.

II. ಪ್ರತಿ ಸವಾಲ್‌ದಾರನೂ ಹರಾಜಿಗೆ ಪೂರ್ವವೇ ಠೇವಣಾತಿಯನ್ನು ಕಟ್ಟತಕ್ಕದ್ದು ಮತ್ತು ಹರಾಜಿನ ತಾರೀಖಿನ ದಿವಸ ಹರಾಜು ಮಾಡುವ ಆಫಿಸರಿಂದ ಸದರಿ ಠೇವಣಿ ಮೊಬಲಗು ತೆಗದುಕೊಳ್ಳಲ್ಪಡುವದು. ಯಾವ ಮನುಷ್ಯನೂ ಮುಖ್ಯವಾದ ಅಂಗಡಿ ಯಾ ಅನೇಕ ಅಂಗಡಿಗಳಿಗಾಗಿ ಸವಾಲ್ ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅಂಥಾವನು ಸಾಧಾರಣವಾಗಿ 50 ರೂಪಾಯಿ ಠೇವಣಿಯನ್ನಿಡತಕ್ಕದ್ದು. ಸವಾಲು 2 ಯಾ 3 ಅಂಗಡಿಗಳಿಗೆ ವಿಚಾರದೆಯೂ ಮತ್ತು ಅವುಗಳ ಮಾಹೆಯಾನ ಒಟ್ಟು ಗುತ್ತಾ ಮೊಬಲಗು 50 ರೂಪಾಯಿ ಅಥವಾ ಅದಕ್ಕೆ ಕಮ್ಮಿಯಾಗಿಯೂ ಇದ್ದಪಕ್ಷದಲ್ಲಿ ಸವಾಲುದಾರನ ಠೇವಣಿಯು 20 ರೂಪಾಯಿಗಳಿಗೆ ತಗ್ಗಿಸಲ್ಪಡುವದು ಮತ್ತು ಒಂದೊಂದು ಚಿಕ್ಕ ಅಂಗಡಿಗೆ ದರಖಾಸ್ತು ಮಾಡುವ ಸವಾಲ್‌ದಾರರ ಠೇವಣಿಯು 5 ರೂಪಾಯಿಗೆ ತಗ್ಗಿಸಲ್ಪಡುವದು. ಯಾವದಾದರೂ ಅಂಗಡಿಗಳ ಮಾಹೆಯಾನ ಸರಾಸರಿ ಗುತ್ತಾ ಮೊಬಲಗು ಕೇವಲ ಕಮ್ಮಿಯಾಗಿದ್ದಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರು ಸದರಿ ಅಂಗಡಿಗಳ ಬಗ್ಯೆ ತಮಗೆ ಯುಕ್ತಾನುಸಾರ ಇತರ ನ್ಯಾಯವಾದ ಠೇವಣಿ ಮೊಬಲಗನ್ನು ಗೊತ್ತುಮಾಡಬಹುದು.

III. ಹರಾಜು ನಡಿಸತಕ್ಕ ಆಫಿಸರರಿಗೆ ಷೆಡ್ಯೂಲ್‌ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಕ್ರಮ ನಂಬರನ್ನು ಬದಲಾಯಿಸಲು ಕಾರಣ ತೋರುವ ಸಂದರ್ಭದಲ್ಲಿ ಹೊರತು ಆ ಪಟ್ಟಿಯಲ್ಲಿ ಕಂಡ ಕ್ರಮ ನಂಬರಿನಂತೆಯೇ ಅಂಗಡಿಗಳನ್ನು ಹರಾಜು ಮಾಡತಕ್ಕದ್ದು. ಹರಾಜು ನಡಿಸತಕ್ಕ ಆಫಿಸರರು ತಮಗೆ ಯುಕ್ತ ತೋರುವಂತೆ ಸರ್ಕಾರದ ಸವಾಲನ್ನು ಗೊತ್ತುಮಾಡತಕ್ಕದ್ದು. ಅಂಗಡಿಗಳಮೇಲೆ ಸರ್ಕಾರದಿಂದ ನಿಷ್ಕರಿಷೆ ಮಾಡಲ್ಪಟ್ಟ ಮೊಬಲಗನ್ನು ಖಾಯಿಷ್ ಮಾಡುವದಿಲ್ಲ ; ಆದರೆ ಸವಾಲುದಾರರ ತಿಳುವಳಿಕೆ ಬಗ್ಯೆ ಹಿಂದಿನ ಮೂರು ಸಾಲುಗಳ ಗುತ್ತಾ ಮೊಬಲಗೂ, ಬಿಕರಿಯ ಮೊತ್ತವೂ ಖಾಯಿಷ್ ಮಾಡಲ್ಪಡುವದು.

ಷರಾ—1. ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಶೇಂದಿ ಮಾರತಕ್ಕ ಹಕ್ಕು ಒಂದೊಂದು ಅಂಗಡಿಗೆ ವರುಷ 1ಕ್ಕೆ 12 ರೂಪಾಯಿಗೆ ಕಮ್ಮಿ ಇಲ್ಲದಂತೆ ಗೊತ್ತಾದ ಮೊಬಲಗ್ಗೆ ಕಾಫಿಪ್ಲಾಂಟರಿಗೆ ಮಾರಲ್ಪಡಬಹುದು.

ಷರಾ—2. ಶೇಂದಿ ಹುಟ್ಟುವಳಿಗೆ ಇರತಕ್ಕ ಹಕ್ಕು ಮಂಜೂರಾಗಿರುವ ಅಥವಾ ಇನ್ನೂ ತೀರ್ಮಾನವಾಗಿಲ್ಲದೆ ಇರುವ ಇನಾಂ ಗ್ರಾಮಗಳಲ್ಲಿರತಕ್ಕ ಶೇಂದಿ ಅಂಗಡಿಗಳು ಪ್ರತ್ಯೇಕವಾಗಿಯೇ ಹರಾಜ್ ಮಾಡಲ್ಪಡಬೇಕಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗನ್ನು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

IV. ಸಾಧಾರಣವಾಗಿ ಪ್ರತಿಯೊಂದು ಅಂಗಡಿಯೂ ಪ್ರತ್ಯೇಕವಾಗಿ ಹರಾಜು ಮಾಡಲ್ಪಡತಕ್ಕದ್ದು. ನಿರ್ವಾಹವಿಲ್ಲದೇ ಇರುವ ಸಂದರ್ಭದಲ್ಲಿ ಮಾತ್ರವೇ ಅಂಗಡಿಗಳನ್ನು ಗುಂಪಾಗಿ ಸೇರಿಸಬಹುದು. ಆದರೆ ಹಾಗೆ ಗುಂಪಾಗಿ ಸೇರಿಸುವಾಗಲೂ ಆಗಿನ ಸಂದರ್ಭಕ್ಕೆ ಎಷ್ಟು ಅಂಗಡಿಗಳನ್ನು ಸೇರಿಸುವದು ಅವಶ್ಯಕವಾಗಿದೆಯೋ ಅಷ್ಟನ್ನು ಮಾತ್ರವೇ ಗುಂಪು ಸೇರಿಸತಕ್ಕದ್ದು.

V. ಮೊಖ್ತ್ಯಾರ್‌ನಾಮೆಯನ್ನು ಪಡೆದ ಹೊರ್ತು ಯಾರೊಬ್ಬನೂ ಇತರರಿಗೋಸ್ಕರ ಸವಾಲು ಮಾಡಕೂಡದು.

VI. ಯಾವ ಅಂಗಡಿಯೂ ಇಬ್ಬರು ಆಸಾಮಿಗಳ ಯಾ ಇಬ್ಬರಿಗಿಂತ ಹೆಚ್ಚಾದ ಆಸಾಮಿಗಳ ಹೆಸರಿನಲ್ಲಿ (ಸದರಿಯವರು ಮೊಖ್ತ್ಯಾರ್‌ನಾಮೆಯ ಮೂಲಕ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರ್ಮಿನವರೆಂದು ತೋರಿಸಿದಹೊರ್ತು) ಛಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. - ಹರಾಜು ನಡಿಸತಕ್ಕ ಆಫಿಸರರು ಯಾರ ಹಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

VII. ಯಾವನಾದರೊಬ್ಬ ಮನುಷ್ಯನ ಸವಾಲು ಕೇವಲ ಕಮ್ಮಿಯಾಗಿದೆ ಎಂಬ ಕಾರಣದಮೇಲೂ, ಅಥವಾ ಕ್ರಿಮಿನಲ್ ಕೋರ್ಟಿನಲ್ಲಿ ದರಿಯಾಫ್ತಿಯಾಗಿ ಆತನ ಮೇಲೆ ತಪ್ಪು ಸಾಬೀತು ಆಗಿರುವದ್ದರಿಂದಲೂ, ಅಥವಾ ಒಂದು ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗೆ ಅನುಸಾರವಾಗಿ ನಡಿಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಆತನು ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರಿ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ಯಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜ್ ನಡಿಸತಕ್ಕ ಆಫಿಸರು ಅವರಿಗೆ ಯುಕ್ತತೋರಿದಲ್ಲಿ ಅಂಥಾ ಮನುಷ್ಯನ ಸವಾಲನ್ನು ತಿರಸ್ಕರಿಸಬಹುದು. ಸದರೀ ಸ್ವಾತಂತ್ರ್ಯದ ಹಕ್ಕನ್ನು ಇತರರಿಗೆ ಬಿಕರಿಮಾಡಿ ಫಾಯಿದೆ ಪಡೆಯಬೇಕೆಂಬ ಉದ್ದೇಶದಿಂದ ಮಾತ್ರವೇ ಮಾಡಲ್ಪಟ್ಟಿತೆಂದು ತೋರುವ ಸವಾಲನ್ನು ಹರಾಜು ಆಫಿಸರು ಅದಕ್ಕೆ ಕಾರಣವನ್ನು ಬರಹಮೂಲಕವಾಗಿ ರಿಕಾರ್ಡುಮಾಡಿ, ತಿರಸ್ಕರಿಸಬಹುದು.

VIII. ಸದರಿ ಅಂಗಡಿಗಳು ಛಡಸವಾಲುದಾರನಿಗೆ ಕೊಡಲ್ಪಡುವವು; ಆದರೆ ಹರಾಜು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಡೆಪ್ಯುಟಿ ಕಮಿಷನರವರು ಸದರಿ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರವಾಗಿರುತ್ತಾರೆ. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಯಾದರೆ ಆ ಮಂಜೂರಾತಿಯು ಗವರ್ನ್ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಟ್ಟಾಗ ಹೊರ್ತು ದರಖಾಸ್ತು ಅಂಗೀಕಾರವಾದಂತೆ ಭಾವಿಸಲ್ಪಡತಕ್ಕದ್ದು. ಡೆಪ್ಯುಟಿ ಕಮಿಷನರವರು ಖುದ್ದಾಗಿಯಾಗಲೀ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರರೇ ಆಗಲೀ ಹರಾಜು ನಡಿಸಿದ್ದರೂ ಅಂಥಾ ಕ್ರಮವಾದ ಮಂಜೂರಾತಿಯು ಅವಶ್ಯಕವಾಗಿರುವದು.

IX. ಹರಾಜು ಕಾಲದಲ್ಲಿ ತಕರಾರು ಬಂದ ಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರ ತೀರ್ಮಾನವು ಆಖೈರು ತೀರ್ಮಾನವಾಗಿರತಕ್ಕದ್ದು. ಮತ್ತು ಯಾವಕಾರಣದಿಂದಲಾದರೂ ಛಡ ಸವಾಲನ್ನು ತಿರಸ್ಕರಿಸಿದ ಪಕ್ಷದಲ್ಲಿ ತದನಂತರದ ಛಡಸವಾಲ್ ಅಂಗೀಕರಿಸಲ್ಪಡುವದು, ಅಥವಾ ಅಂಗಡಿಯು ಅವರ ಯುಕ್ತಾನುಸಾರ ದುಸರೆ ಹರಾಜು ಹಾಕಲ್ಪಡುವದು.

X. ಹರಾಜು ಮುಗಿದಮೇಲೆ ದರಖಾಸ್ತು ಸಾಮಾನ್ಯವಾಗಿ ಅಂಗೀಕರಿಸಲ್ಪಡುವದಿಲ್ಲ. ಮೊದಲಿನ ಹರಾಜಿನಲ್ಲಿ ವಿಕ್ರಯವಾಗದ ಅಂಗಡಿಗಳು ಸಾಧಾರಣವಾಗಿ ಆತರುವಾಯ ದುಸರೆ ಹರಾಜಿನಲ್ಲಿ ವಿಲೇವಾರಿ ಮಾಡಲ್ಪಡುವವು. ಆದರೆ ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ತಮ್ಮ ಸೂಕ್ತಾನುಸಾರ ನಡಿಸಲು ಸ್ವತಂತ್ರರಾಗಿರುತ್ತಾರೆ.

XI. ಪ್ರತಿದಿನ ಹರಾಜು ಪೂರೈಸಿದ ಕೂಡಲೆ ನಾ ಮಂಜೂರಾದ ಸವಾಲುದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುವವು; ಹರಾಜು ನಡಿಯುತ್ತಿರುವಾಗ, ಯಾರ ಸವಾಲು ಅಂಗೀಕರಿಸಲ್ಪಡುತ್ತೋ ಅಂಥವನು ಹರಾಜು ನಡಿಸತಕ್ಕ ಆಫಿಸರರು ಕೇಳಿದಲ್ಲಿ ತತ್‌ಕ್ಷಣವೇ ಅಥವಾ ಆ ದಿನದ ಹರಾಜು ಖೈದಾದನಂತರ (IIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಅಲ್ಲದೆ) ಒಂದು ತಿಂಗಳ ಗುತ್ತಿಗೆ ಹಣದಲ್ಲಿ ಅರ್ಧವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು 2 ತಿಂಗಳ ಗುತ್ತಿಗೆ ಹಣಕ್ಕೆ ಸಮ ಯಾ ಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲ್ಕಂಡ IIನೆ ಷರತ್ತಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರಿ ಅಂಗಡಿಗಳು ಪುನಃ ತತ್‌ಕ್ಷಣವೇ ಹರಾಜು ಆಫಿಸರವರಿಂದ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜ್ ಮಾಡಲ್ಪಡುವದು ಅಥವಾ ಡೆಪ್ಯುಟಿ ಕಮಿಷನರವರಿಂದ ಅನ್ಯಥಾ ವಿಲೇವಾರಿ ಮಾಡಲ್ಪಡುವದು; ಅಲ್ಲದೆ ತಪ್ಪಿತಸ್ಥನು ಈ ಅಂಗಡಿ ಯಾ ಇತರ ಅಂಗಡಿಗಳ ಬಗ್ಯೆ ಪುನಃ ಸವಾಲು ಮಾಡಲು ನಿಷೇಧಿಸಲ್ಪಟ್ಟಿರುತ್ತಾನೆ.

XII. ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಯಾರು ಮೇಲಿನ II ವ XIನೆ ಷರತ್ತುಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನು ಕಟ್ಟಿರುತ್ತಾರೋ ಅವರು, ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರುಗಳಲ್ಲಿ ಕೊಟ್ಟುಹೋಗತಕ್ಕದ್ದು. ಮತ್ತು ಅವರು 2 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನು ಮೊದಲು ಕಟ್ಟಿರುವ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು * ಠೇವಣಿಯಾಗಿ ಇಡತಕ್ಕದ್ದು. ಡೆಪ್ಯುಟಿ ಕಮಿಷನರವರ ಮಂಜೂರಾತಿಯು ನೋಟೀಸು ಮೂಲಕ ಅವರಿಗೆ ಅಥವಾ ಸದರಿ ವಿಳಾಸದ ಸ್ಥಳದಲ್ಲಿ ಅವರ ಮನೆಗಳಲ್ಲಿರತಕ್ಕ ಇತರ ವಯಸ್ಸಾದ ಗಂಡಸಿಗೆ ಪಾವತಿಯಾಗೇ ಆಗಲೀ ಅಥವಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲೀ ಜಾರಿಯಾದ ಏಳು ದಿವಸಗಳೊಳಗಾಗಿ ತಾಲ್ಲೂಕು

* ಠೇವಣಿಗಳು ನಗದಾಗಿಯೇ ಆಗಲಿ ಅಥವಾ ಅಂಗೀಕರಿಸಲ್ಪಟ್ಟ ಇತರ ಸೆಕ್ಯೂರಟಿ ರೂಪದಲ್ಲಿಯಾಗಲಿ ಇರಬಹುದು.

ಖಜಾನೆಗೆ ಅಂಥಾ ಠೇವಣಾತಿಗಳನ್ನು ಪಾವತಿ ಮಾಡತಕ್ಕದ್ದು. ಅನಂತರ ಅವರು ಅನಾವಶ್ಯಕವಾಗಿ ಸಾವಕಾಶವಾಡದ ಅಗತ್ಯವಾದ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಲೈಸೆನ್ಸುಗಳನ್ನು ತೆಗೆದುಕೊಳ್ಳತಕ್ಕದ್ದು. ಒಡಂಬಡಿಕೆಗಳನ್ನು ರುಜುಮಾಡಿದ ಮೇಲೆ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸದಾರರು ಯಾ ಅವನಿಂದ ಹಕ್ಕು ಪಡೆದವರು ಅದಕ್ಕೆ ಜವಾಬ್‌ದಾರರಾಗಿರತಕ್ಕದ್ದು. ಪ್ರಾರಂಭದಲ್ಲಿಟ್ಟಿರತಕ್ಕ ಠೇವಣಿ ಮೊಬಲಗು ಈ ಷರತ್ತಿನಮೇರಿಗೆ ಠೇವಣಿ ಇಡಬೇಕಾಗುವ ಮೊಬಲಗಿಗಿಂತಲು ಹೆಚ್ಚಾಗಿ ಇದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಈ ಕೆಳಗೆ ಬರುವ XIIIನೆ ಷರತ್ತಿನ ಪ್ರಕಾರ 2 ರಷ್ಟು ಹೆಚ್ಚಾಗಿ ಠೇವಣಿಯನ್ನು ಕಟ್ಟಬೇಕಾಗಿರುವ ಸಂದರ್ಭದಲ್ಲಿ ವಿನಾ ಖರೀದಿದಾರನಿಗೆ ವಾಪಸು ಕೊಡಲ್ಪಡುವದು.

XIII. ಹರಾಜಿನನಂತರ ವಿಚಾರಿಸಿದ್ದರಲ್ಲಿ ಖರೀದಿದಾರ್ ಜೇವಾಳಸ್ಥನೆಂಬುವದು ಅನುಮಾನಕ್ಕೆ ಗುರಿಯಾಗಿಯೂ ಅಥವಾ ಅವನು ಮೈಸೂರು ಸೀಮೆಯಲ್ಲಿ ಸಾಕಾದಷ್ಟು ಜಿಂದಿಗೆಯನ್ನು ಉಂಟಾಗದ ಇರುವ ಅನ್ಯದೇಶದವನಾಗಿಯೂ ಕಂಡುಬಂದಲ್ಲಿ ಮೇಲಿನ XIIನೆ ಷರತ್ತಿನಲ್ಲಿ ನಮೂದಿಸಿರುವದಕ್ಕೆ 2 ರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನು ಅನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನೂ ಕ್ರಮವಾಗಿ ಪಾವತಿ ಮಾಡಲುಳ್ಳವನೆಂದು ಜಾಮೀನುಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಗಳುಳ್ಳವನಾಗಿರುವ ಒಬ್ಬ ಜಾಮೀನುದಾರನನ್ನು ಯಾ ಜಾಮೀನುದಾರರನ್ನು ಹಾಜರುಮಾಡುವದಕ್ಕಾಗಿ ಆತನನ್ನು ಕೇಳಬಹುದು. ಜಾಮೀನು ತಮಸೂಕಿಗೆ 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟಾಂಪು ರೆಗ್ಯುಲೇಷನ್ 1ನೆ ಷೆಡ್ಯೂಲ್ 32ನೆ ಆರ್ಟಿಕಲ್ ಪ್ರಕಾರ ಸ್ಟಾಂಪು ಹಾಕಲ್ಪಡಬೇಕು. ಜಾಮೀನು ಮೊಬಲಗು 1,000 ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಖರೀದಿದಾರನ ಖರ್ಚಿನಿಂದಲೇ ಅದು ರಿಜಸ್ಟರ್ ಮಾಡಿಸಲ್ಪಡಬೇಕು.

XIV. ಹರಾಜು ಪೂರೈಸಿದಕೂಡಲೆ ಹರಾಜು ನಡಸತಕ್ಕ ಆಫೀಸರರು ಸಂಬಂಧಪಟ್ಟ ತಾಲ್ಲೂಕು ಅಮಲ್‌ದಾರರಿಗೆ ಹರಾಜಿನಲ್ಲಿ ಪಡೆದ ಸವಾಲುದಾರರ ಹೆಸರಿನ ಒಂದು ಪಟ್ಟಿಯನ್ನು ಕಳುಹಿಸತಕ್ಕದ್ದು. ಅಮಲ್ದಾರರು ಪ್ರತಿ ಖರೀದಿದಾರನೂ ಜೇವಾಳಸ್ಥನೆಂಬುವದನ್ನು ವಿಚಾರಿಸಿ ಆತನಿಂದ ಪಾವತಿಯಾಗಬೇಕಾದ ಠೇವಣೀ ಮೊಬಲಗು ಅಥವಾ ಜಾಮೀನನ್ನು ದಾಖಲುಮಾಡತಕ್ಕದ್ದು. ಅವರು ತಯಾರು ಮಾಡಿದ ಸದರಿ ಪಟ್ಟಿಯನ್ನು ಅವರಿಗೆ ಅದು ತಲ್ಪಿದ ೫ ದಿವಸಗಳೊಳಗಾಗಿ ಹರಾಜು ನಡಿಸತಕ್ಕ ಆಫೀಸರರಿಗೆ ರವಾನಿಸತಕ್ಕದ್ದು. ಇವರು ತಾಮಸ ಮಾಡದೆ ಸದರಿ ಪಟ್ಟಿಯಲ್ಲಿ ತಮ್ಮ ಷರಾನಿಸಿ ಅದನ್ನು ಎಂಜಾರಾತಿಬಗ್ಗೆ ಡೆಪ್ಯುಟಿ ಕಮಿಷನರವರಿಗೆ ರವಾನಿಸತಕ್ಕದ್ದು.

XV. ಮೇಲ್ಕಂಡ XIIನೆ ಷರತ್ತಿನ ಪ್ರಕಾರ ಠೇವಣಿ ಇಡುವದಕ್ಕೆ ಯಾ ಮೇಲ್ಕಂಡ XIIIನೆ ಷರತ್ತಿನ ಪ್ರಕಾರ ನಡದುಕೊಳ್ಳಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರದುಕೊಡಲಿಕ್ಕೆ ಯಾ ಮೇಲ್ಕಂಡಂತೆ ಲೈಸೆನ್ಸ ಪಡೆಯಲಿಕ್ಕೆ ಯಾವನಾದರೂ ತಪ್ಪಿದರೆ, ಅವನು ಮೊದಲು ಪಾವತಿ ಮಾಡಿರುವ ಠೇವಣಾತಿಗಳು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು, ಡೆಪ್ಯುಟಿ ಕಮಿಷನರವರಿಗೆ ಯುಕ್ತತೋರುವಂತೆ ಅಂಗಡಿಯು ಪುನಃ ಹರಾಜು ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು.

XVI. ಮೇಲ್ಕಂಡ XVನೆ ಷರತ್ತನ್ನು ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿಯಮೇಲೆ ನಡಿಯುತ್ತವೆ. ಈ ದುಸರೆ ಹರಾಜಿನಿಂದ ಬರುವ ಆದಾಯವನ್ನೆಲ್ಲಾ ಆತನು ಕಳೆದುಕೊಂಡವನಾಗುತ್ತಾನೆ ಮತ್ತು ನಷ್ಟಸಂಭವಿಸುವ ಪಕ್ಷಕ್ಕೆ ಷುರೂ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೆ ಹರಾಜುದಾರರಲ್ಲಿ ಛಡಸವಾಲುದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದನ್ನು ಆತನು ಭರ್ತಿಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೆ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ಮಜಾಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರಿ ಠೇವಣಿ ಮೊಬಲಗು ದುಸರೆ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿ ಇದ್ದರೆ, ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ಜಮಾ ಮಾಡಿಕೊಳ್ಳತಕ್ಕದ್ದು ಸ್ವಾತಂತ್ರ್ಯದ ಹಕ್ಕು ದುಸರಾ ಹರಾಜಿನಿಂದಲ್ಲದೆ ಅನ್ಯಥಾ ವಿಲೇವಾರಿಯಾಗಿ ಅಂಥಾ ವಿಲೇವಾರಿಯನ್ನು ಷುರೂ ಹರಾಜಿಗೆ ಹೋಲಿಸಿ ನೋಡಿದ್ದರಲ್ಲಿ ಸರ್ಕಾರಕ್ಕೆ ನಷ್ಟವಾದರೆ ತಪ್ಪಿತಸ್ಥನು! ಈ ನಷ್ಟಕ್ಕೆ ಗುರಿಯಾಗಿರತಕ್ಕದ್ದು.

XVII. ಸ್ವತಂತ್ರದಹಕ್ಕನ್ನು ಕೊಂಡುಕೊಂಡವನು ಕ್ರಮವಾದ ಲೈಸೆನ್ಸು ಕೊಡಲ್ಪಡದಿದ್ದಾಗ್ಯು ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡದರೆ ಆ ಬಗ್ಗೆ ವಿಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರತಕ್ಕದ್ದು.

XVIII. XII ಅಥವಾ XIIIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತೆ. ಅಮಲ್ದಾರು ಮತ್ತು ಲೈಸೆನ್ಸುದಾರನು ಹಾಗೆ ಒಪ್ಪಿದರೆ ಲೈಸೆನ್ಸದಾರನು ಕೊಡತಕ್ಕ ಆಖೈರು ಖಿಸ್ತು ಮೊಬಲಗಿಗೋಸ್ಕರ ಸದರಿ ಠೇವಣಿ ಮೊಬಲಗು ಜಮಾ ಮಾಡಿಕೊಳ್ಳಲ್ಪಡತಕ್ಕದ್ದು.

XIX. ಮೇಲೆ ನಮೂದಿಸಿರುವಂತೆ ಕೊಡಲ್ಪಡುವ ಲೈಸೆನ್ಸುಗಳಲ್ಲಿ ಎಲ್ಲಾ ಅಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಮುಂದೆ ನಮೂದುಮಾಡಿರುವ ಸಾಧಾರಣ ಷರತ್ತುಗಳನ್ನೂ ಮತ್ತು ಪ್ರತಿ ಒಂದು ಮುಖ್ಯಬಾಬಿಗೆ ಈ ಕೆಳಗೆ ಗೊತ್ತುಮಾಡಿರುವ ವಿಶೇಷ ಷರತ್ತುಗಳನ್ನೂ ವಿವರಿಸಿರುತ್ತೆ :—

ಅಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಸಾಧಾರಣ ಷರತ್ತುಗಳು.

1. ಸಾರಾಯಿ ಯಾ ಇತರ ಸ್ವದೇಶ ಷರಾಬನ್ನು ತಯಾರ್‌ಮಾಡುವವರೂ, ಷರಾಬ್ ಬಾಂಡೆಡ್ ಕೋಠಿ ಲೈಸೆನ್ಸದಾರರೂ, ಸಾರಾಯಿಯ ಚಿಲ್ಲರೆ ಮಾರಾಟದಲ್ಲಿಯೂ ಇತರ ಮದಕ ಪದಾರ್ಥಗಳ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು. ಈ ನಿರ್ಬಂಧವು ವಿಶೇಷ ಷರಾಬು ಮತ್ತು ರೆಕ್ಟಿಫೈಡ್ ಸಾರಾಯಿಯನ್ನು ತಯಾರ್‌ಮಾಡಿ ಲೈಸೆನ್ಸದಾರರಿಗೆ ಒಟ್ಟೊಟ್ಟಾಗಿ ಸರಬರಾಯಿ ಮಾಡತಕ್ಕವರಿಗೆ ಅನ್ವಯಿಸುವದಿಲ್ಲ.

2. ಅಬ್ಕಾರಿ ಯಾ ಅಫೀಂ ಲೈಸೆನ್ಸುಗಳ ಷರತ್ತಿನಮೇರೆಗೆ, ಷರಾಬುವಗೈರೆ ಮದ್ಯಗಳನ್ನೂ, ಅಫೀಮನ್ನೂ ಮಾರತಕ್ಕ ಸರಹದ್ದುಗಳು ಲೈಸೆನ್ಸು ಕೊಡತಕ್ಕ ಕಾಲದಲ್ಲಿ ಡೆಪ್ಯುಟಿ ಕಮಿಷನರವರಿಂದ ಗೊತ್ತುಮಾಡಲ್ಪಡುತ್ತೆ. ಲೈಸೆನ್ಸದಾರ್ರಲ್ಲದವರಿಗೆ ಲಗಾವಾಗುವ ನಿಬಂಧನೆಗಳಿಗನುಸಾರವಾಗಿ ಹೊರತು, ಷರಾಬು, ಮದಕ ಪದಾರ್ಥಗಳು ಯಾ ಅಫೀಮನ್ನು ಡೆಪ್ಯುಟಿ ಕಮಿಷನರವರ ವಿಶೇಷ ಅಪ್ಪಣೆ ಶಿವಾಯಿ, ಸದರಿ ಸರಹದ್ದುಗಳ ಹೊರಗಡೆ ಮಾರೋಣವೂ, ಯಾ ಇಟ್ಟುಕೊಂಡಿರೋಣವೂ ಅಡ್ಡಿಮಾಡಲ್ಪಟ್ಟಿದೆ.

3. ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ನಡೆಸಲ್ಪಡತಕ್ಕದ್ದು. ಸದರಿ ಕಟ್ಟಡದ ಪೂರಾ ಅಥವಾ ಒಂದು ಭಾಗವು ಡಿಪೋ ಅಥವಾ ಅಂಗಡಿಯ ಉಪಯೋಗಕ್ಕೋಸ್ಕರವೇ ಪ್ರತ್ಯೇಕವಾಗಿ ಬಿಡಲ್ಪಟ್ಟಿರಬೇಕು. ಡಿಪೋ ಅಥವಾ ಅಂಗಡಿಗೂ ಮತ್ತು ಪಕ್ಕದಲ್ಲಿರುವ ವಾಸದಮನೆಗೂ ಬಾಗಲು ಇದ್ದಲ್ಲಿ ರಾತ್ರೆಕಾಲದಲ್ಲಿ, ಬೀಗ ಹಾಕಿರತಕ್ಕದ್ದು. 5,000 ಅಥವಾ ಹೆಚ್ಚಾಗಿ ಪ್ರಜಾಸಂಖ್ಯೆಯುಳ್ಳ ಮ್ಯುನಿಸಿಪಾಲಿಟಿಗಳು ಅಥವಾ ಪಟ್ಟಣಗಳಲ್ಲಿರುವ ಷರಾಬು ಅಂಗಡಿಗಳಿಗೆ ರಸ್ತೆಯಿಂದ ಹೊರ್ತಾಗಿ ಇನ್ನಾವ ಕಡೆಯಿಂದಲೂ ಬಾಗಲುಗಳು ಇರಕೂಡದು. ಹಿಂಭಾಗಗಳಲ್ಲಿಯಾದರೂ, ಪಕ್ಕಗಳಲ್ಲಿಯಾದರೂ, ಕಿಟಕಿಯಾಗಲಿ, ಗಂಡಿಯಾಗಲಿ ಇರಕೂಡದು. ಇನ್ನಾವಕಡೆಗೂ ಹೋಗಲೂ ಬರಲೂ ಪ್ರವೇಶಗಳಿರಕೂಡದು. ಬಿಕರಿ ಮಾಡುವ ಜಗಲಿಯು ಬಾಗಲಿಗೆ ಎದುರಾಗಿ ಇರತಕ್ಕದ್ದಲ್ಲದೆ, ಅಂಗಡಿಯ ಒಳಗಡೆಯಿರುವ ಎಲ್ಲಾ ಜನಗಳು ಬೀದಿಯಲ್ಲಿ ತಿರುಗಾಡುವ ಜನಗಳಿಗೆ ಕಾಣುವಹಾಗಿರಬೇಕು. ಶಿವಾಯಿ, ಬೇರೇಕೊಠಡಿಯು ಬಿಕರಿಗಾಗಿ ಉಪಯೋಗಿಸಲ್ಪಡಕೂಡದು, ಅಥವಾ ಪಾನಮಾಡುವವರಿಗೆ ತೆಗದಿರಕೂಡದು. ಅಂಗಡಿಯ ಒಳಭಾಗದಲ್ಲಿ ಹಗಲಿನಲ್ಲಿ ಚನ್ನಾಗಿ ಬೆಳಕಿರಬೇಕು ಬಿಕರಿದಾರ ಮತ್ತು ಅವನ ಮನೇ ಜನರು ಅಥವಾ ಕಾವಲುಗಾರರು ಇವರುಗಳು ಶಿವಾಯಿ ಮತ್ತ್ಯಾರಾದರೂ ಅದರಲ್ಲಿ ವಾಸವಾಗಿರಕೂಡದು.

4. ಎರಡು ಅಥವಾ ಹೆಚ್ಚು ಪರಾಯಿದೇಶದ ಮದ್ಯಗಳನ್ನು ಮಾರುವ ಲೈಸೆನ್ಸುಗಳು ಒಬ್ಬನಿಂದಲೇ ಪಡೆದಿರತಕ್ಕ ಸಂದರ್ಭ ಶಿವಾಯಿ ಪ್ರತಿ ಒಂದು ಲೈಸೆನ್ಸಿನ ಬಿಕರಿಯು ಪ್ರತ್ಯೇಕ ಕಟ್ಟಡಗಳಲ್ಲಿ ನಡೆಸಲ್ಪಡತಕ್ಕದ್ದು. (ರಸಾಯನಶಾಸ್ತ್ರಜ್ಞರು, ಮತ್ತು ಇಂಗ್ಲೀಷ್ ಔಷಧವನ್ನು ಮಾರುವವರು ಮತ್ತು ಮೆಡಿಕಲ್ ಪ್ರಾಕ್ಟಿಷನರು ಶಿವಾಯಿ) ಲೈಸೆನ್ಸ್ ಕಟ್ಟಡಗಳಲ್ಲಿ ಲೈಸೆನ್ಸಿಗೆ ಸಂಬಂಧಪಟ್ಟದ್ದು ಶಿವಾಯಿ ಯಾವ ಷರಾಬು, ಮದಕ ಪದಾರ್ಥ ಅಥವಾ ಅಫೀಮನ್ನಾಗಲಿ, ಯಾ ಷರಾಬಿಗೆ ಬಣ್ಣ ಕೊಡಲು ಅಥವಾ ರುಚಿ ಹೆಚ್ಚುಮಾಡಲು ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ಯಾವ ಸಾರ ಅಥವಾ ವಸ್ತುವನ್ನಾಗಲಿ ಇಟ್ಟುಕೊಂಡಿರುವದು ಅಡ್ಡಿ ಮಾಡಲ್ಪಟ್ಟಿದೆ. ಅಫೀಂ ಬಿಕರಿಗಾಗಿ ಲೈಸೆನ್ಸಕೊಟ್ಟಿರುವ ಅಂಗಡಿಗಳಲ್ಲಿ ಮಾರ್ಫಿಯ ಅಥವಾ ಹೊಗೇಸೇದಲು ಉಪಯೋಗಿಸಲ್ಪಡುವ ಪದಾರ್ಥಗಳು ಹೊರ್ತು ಅಫೀಂನಿಂದ ಮಾಡಲ್ಪಟ್ಟ ಮದಕ ಪದಾರ್ಥಗಳು ತಯಾರ್‌ಮಾಡಲ್ಪಡಬಹುದು ಯಾ ಮಾರಲ್ಪಡಬಹುದು.

5. ಬಿಕರಿಮಾಡಲ್ಪಡುವ ಲೈಸೆನ್ಸಿನ ತರಹೆ ಮತ್ತು ನಂಬರು, ಲೈಸೆನ್ಸದಾರನ ಹೆಸರು ಮತ್ತು (ಪರಾಯಿದೇಶದ ಮದ್ಯ ಅಥವಾ ವಿಶೇಷ ಮದ್ಯಗಳಿಗೆ ಶಿವಾಯಿ) ಬಿಕರಿಯ ದರ ಇವುಗಳನ್ನು ನಮೂದು ಮಾಡಿರುವ ಹಲಿಗೆಯು ಪ್ರತಿ ಡಿಪೋ ಅಥವಾ ಅಂಗಡಿಯ ಮುಂಭಾಗದಲ್ಲಿ ತಗಲಿಹಾಕಲ್ಪಟ್ಟಿರಬೇಕು. ಈ ವಿವರಗಳು ಸ್ವದೇಶಭಾಷೆಯಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು. ಲೈಸೆನ್ಸು ಅಂಗಡಿಯ ಒಳಗಡೆ ಎಲ್ಲರಿಗೂ ಕಾಣುವಕಡೆ ತಗಲಿಹಾಕಲ್ಪಟ್ಟಿರಬೇಕು.

6. ಮಾರಲ್ಪಡುವ ಯಾ ಮಾರಲಿಕ್ಕೆ ಇಟ್ಟುಕೊಂಡಿರುವ ಎಲ್ಲಾ ಷರಾಬು, ಮದಕ ಪದಾರ್ಥಗಳು ಅಥವಾ ಅಫೀಂ ಒಳ್ಳೇದಾಗಿರಬೇಕು. ಮತ್ತು ಕಲಬೆರಿಕೆಯಿಲ್ಲದೆ ಇರಬೇಕು. ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಮದಕ ಪದಾರ್ಥಗಳನ್ನು ತಯಾರ್‌ಮಾಡುವದು ಶಿವಾಯಿ ಅವುಗಳ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವದಕ್ಕಾಗಲಿ ಅಥವಾ ಇನ್ನಾವ ಕಾರಣಗಳಿಗಾಗಲಿ, ಅವುಗಳಿಗೆ ಏನೂ ಸೇರಿಸಕೂಡದು. ಕೋಠಿಗಳನ್ನೂ, ಅಂಗಡಿಗಳನ್ನೂ ತನಿಖೆ ಮಾಡುವದಕ್ಕೆ ಅಧಿಕಾರವುಳ್ಳ ಆಫಿಸರುಗಳು (25ನೆ ಷರತ್ತನ್ನು ನೋಡಿ) ಪಾನಮಾಡುವದಕ್ಕೂ, ಅಥವಾ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಅಥವಾ ಕೆಡಿಸಿದ ಷರಾಬು, ಮದಕ ಪದಾರ್ಥ ಅಥವಾ ಅಫೀಮನ್ನು ಖರ್ಚುಮಾಡಕೂಡದೆಂದು ಅಪ್ಪಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಕ್ಸೈಜ್ ಕಮಿಷನರವರೂ, ಡೆಪ್ಯುಟಿ ಕಮಿಷನರವರೂ ಮತ್ತು ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರವರೂ ಈರೀತಿಯಲ್ಲಿ ಪಾನಮಾಡಲಿಕ್ಕಾಗಲಿ, ಉಪಯೋಗಿಸಲಿಕ್ಕಾಗಲಿ ನಾಲಾಯಖಾಗಿರುವದನ್ನು ನಾಶಮಾಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

7. 16 ವರುಷಕ್ಕೆ ಕಮ್ಮಿ ವಯಸ್ಸುಳ್ಳವರಿಂದಲೇ ಆಗಲಿ ಅಥವಾ ಕುಷ್ಟರೋಗದಿಂದ ಅಥವಾ ಇತರ ಅಂಟುರೋಗದಿಂದ ಪೀಡಿತರಾದ ಜನಗಳಿಂದ ಷರಾಬು, ಮದಕ ಪದಾರ್ಥಗಳು ಅಥವಾ ಅಫೀಂ ಮಾರಲ್ಪಡಕೂಡದು. ಅಥವಾ ವಯ್ಯಲ್ಪಡಕೂಡದು. ಅಂಗಡಿ ಯಾ ಡಿಪೋಗಳಲ್ಲಿ ಬಿಕರಿ ಬಗ್ಗೆ ಅಂಥಾ ಜನಗಳನ್ನು ನೇಮಿಸೋಣವು ಅಡ್ಡಿಮಾಡಲ್ಪಟ್ಟಿದೆ. ಡಿಪೋಗಳಲ್ಲಿ ಅಥವಾ ಅಂಗಡಿಗಳಲ್ಲಿ ನೇಮಕಮಾಡಲ್ಪಟ್ಟ ಯಾ ನೇಮಕಮಾಡಲ್ಪಡಲು ಉದ್ದೇಶಿಸಲ್ಪಟ್ಟ ಜನಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರವರು ಅವಶ್ಯಕಕಂಡರೆ ತರಿಸಿಕೊಂಡು ಅವರು ಒಪ್ಪದೇ ಇರತಕ್ಕ ಯಾವ ಮನುಷ್ಯನಿಂದಾಗಲಿ ಷರಾಬು, ಮದಕ ಪದಾರ್ಥಗಳು ಅಫೀಂ ಮಾರೋಣವನ್ನು ಅಡ್ಡಿಮಾಡಬಹುದು.

8. ವಿಶೇಷವಾದ ಅಪ್ಪಣೆಹೊಂದಿದ ಶಿವಾಯಿ ಸೂರ್ಯೋದಯಕ್ಕೆ ಮುಂಚೆ ಯಾವ ಡೆಪೋ ಮತ್ತು ಅಂಗಡಿಯು ತೆಗೆಯಲ್ಪಡಕೂಡದು. ಮತ್ತು ರಾತ್ರೆ *9 ಘಂಟೆನಂತರ ತೆಗೆಯಲ್ಪಟ್ಟಿರಕೂಡದು.

9. ಡೆಪೋ ಯಾ ಅಂಗಡಿಗಳಲ್ಲಿ ಯಾವ ವಿಧವಾದ ನಿಷಾ ಖಂದಿರೋಣ, ಯಾ ಗಲಾಟೆ ಯಾ ಜೂಜಾಟ ಇವುಗಳಿಗೆ ಆಸ್ಪದಕೊಡಕೂಡದು. ಡೆಪೋ ಅಥವಾ ಅಂಗಡಿಗಳಲ್ಲಿ ಯಾವ ವಿಧವಾದ ವಿನೋದಗಳು ಅಡ್ಡಿಮಾಡಲ್ಪಟ್ಟದೆ.

10. ಲೈಸೆನ್ಸದಾರನು ಜೋರರನ್ನು, ಕಳ್ಳರು, ಪೋಲಿ ಮನುಷ್ಯರು, ದೊಂಬಿಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು, ಫೌಜಿನಿಂದ ಪರಾರಿಯಾಗಿಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟದ್ದಂಥವರು, ಇಂಥವರಿಗೆ ಡೆಪೋ ಅಥವಾ ಅಂಗಡಿಗಳಲ್ಲಿ ಆಶ್ರಯಕೊಡಕೂಡದು. ಅಂಥ ಜನರು ಅಲ್ಲಿಗೆ ಬಂದರೆ ಸಮೀಪದಲ್ಲಿರುವ ಮ್ಯಾಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫೀಸರಿಗೆ ವರ್ತಮಾನಕೊಡತಕ್ಕದ್ದು.

11. ರಾತ್ರೆಕಾಲದಲ್ಲಿ ಯಾವ ಡೆಪೋ ಅಥವಾ ಅಂಗಡಿಯಲ್ಲಾಗಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು.

12. ಯೂರೋಪಿಯನ್ ಅಥವಾ ನೇಟಿವ್ ಸೈನ್ಯದ ರಿಜಮೆಂಟ-ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ, ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿಯೂ ಆ ಮಾರ್ಗದ ಸಮೀಪದಲ್ಲಿರುವ ಡೆಪೋ ಮತ್ತು ಅಂಗಡಿಗಳನ್ನು ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಮಾಡಿದಲ್ಲಿ ಮುಚ್ಚಿಬಿಡಬೇಕು. ಮತ ಸಂಬಂಧವಾದ ಗಲಾಟೆ ಅಥವಾ ತೊಂದರೆಕಾಲಗಳಲ್ಲಿ ಹಂಗಾಮಿಯಾಗಿ ಡೆಪ್ಯುಟಿ ಕಮ್ಮಿಷನರವರು ಅಥವಾ ರೆವಿನ್ಯು ಅಸಿಸ್ಟೆಂಟ ಕಮ್ಮಿಷನರವರು ಯಾವ ಅಂಗಡಿಗಳನ್ನಾದರೂ ಮುಚ್ಚಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. ಸಮೀಪದಲ್ಲಿ ದೊಂಬಿ ಅಥವಾ ತೊಂದರೆ ಇದ್ದಲ್ಲಿ, ಪ್ರತಿ ಡೆಪೋ ಮತ್ತು ಅಂಗಡಿಕಾರನು ತನ್ನ ಡೆಪೋ ಮತ್ತು ಅಂಗಡಿಯನ್ನು ತಾನೇ ಮುಚ್ಚಬಹುದು.

13. ಡೆಪ್ಯುಟಿ ಕಮ್ಮಿಷನರವರು ಡೆಪೋ ಮತ್ತು ಅಂಗಡಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇನ್ನೂರು ಗಜಗಳ ಒಳಗಾಗಿ ವರ್ಗಾಯಿಸಬಹುದು. ಅಥವಾ ಅವುಗಳನ್ನು ಮುಚ್ಚಬೇಕೆಂದು ಹುಕುಂ ಮಾಡಬಹುದು. ಎಕ್ಸೈಜ್ ಕಮ್ಮಿಷನರವರ ಮಂಜೂರಾತಿ ಶಿವಾಯಿ ಹೊಸ ಅಂಗಡಿಗಳನ್ನು ಇಡಕೂಡದು.

14. ಕ್ರಮವಾಗಿ ಲೈಸೆನ್ಸ ಪಡೆದ ಅಂಗಡಿಗಳು ಸಮೀಪದಲ್ಲಿಲ್ಲದೆ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಶರಾಬು, ಮದಕ ಪದಾರ್ಥಗಳು ಮತ್ತು ಅಫೀಮನ್ನು ಬಿಕರಿ ಮಾಡಲು ತಕ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಉಳಿಸಿಕೊಂಡಿರುತ್ತೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರಿ ಪ್ರದೇಶದವರಿಗೆ ಮಾಮೂಲಾಗಿ ಸರಬರಾಯಿ ಮಾಡುವ ದುಕಾನದಾರರಿಗೆ ಅಥವಾ ಲೈಸೆನ್ಸದಾರನ ಪ್ರತಿನಿಧಿಗಳಿಗೇನೇ ಕೊಡತಕ್ಕದ್ದು. ಸದರಿ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಮಾಮತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು. ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮ್ಮಿಷನರವರು ತೀರ್ಮಾನಿಸಬಹುದು.

15. (a) ಡಿವಿಜನ್ ಕಮ್ಯಾಂಡಿಂಗ್ ಆಫಿಸರವರ (ಸ್ವತಂತ್ರ ಬ್ರಿಗೇಡ್ ಕಮ್ಯಾಂಡಿಂಗ್ ಆಫಿಸರವರ) ಅಥವಾ ಕಂಟೋನ್ಮೆಂಟ ಅಥವಾ ಕ್ಯಾಂಪ್ ಕಮ್ಯಾಂಡಿಂಗ್ ಆಫಿಸರವರ ಅನುಮತಿ ಪಡೆದಿರುವ ಅಂಗಡಿಗಳಲ್ಲಿ ಶಿವಾಯಿ ಮತ್ತು ಲೈಸೆನ್ಸಿನಲ್ಲಿ ನಮೂದಿರುವ ಸ್ಥಳೀಕ ಅಬ್ಕಾರಿ ಇಲಾಖೆಯವರೊಂದಿಗೆ ಮೇಲೆ ಹೇಳಿರುವ ಸದರಿ ಆಫಿಸರುಗಳೂ ಒಪ್ಪಿರುವ ಶರಾಬುಗಳಿಗೆ ಶಿವಾಯಿ

(1) ನಾವಿಕರೂ, ಶಿಪಾಯಿಗಳೂ ಮತ್ತು ಅವರ ಮನೆ ಜನರು.

(2) ಬ್ಯಾರಾಕ್‌ನಲ್ಲಿ ವಾಸ ಮಾಡುವ ಇತರ ಮನುಷ್ಯರು.

(b) ಕೆಲಸದ ಮೇಲಿರುವ :—

(1) ಮೊಕ್ಕಾಂಗಳೊಡನೆ ಹೋಗುವವನು, ಪೊಲೀಸಿನವನು ಅಥವಾ ಎಕ್ಸೈಜ್ ನೌಕರನು.

(2) ರೈಲ್ವೆ ಕಂಪನಿಗೆ ಸೇರಿದವನು ಅಥವಾ

(c) ಯಾವ ಸಂದರ್ಭದಲ್ಲಾದರೂ ;—

(1) ಪೊಲೀಸ್ ಮೊಹಸಲೆಯಲ್ಲಿರುವ ಯೂರೋಪಿಯನ್ ತಿರುಕನಿಗೂ

(2) 16 ವರುಷದ ಒಳಗಾಗಿರುವ ಮನುಷ್ಯನಿಗೂ

(3) ಹುಚ್ಚನಿಗೂ

(4) ನಿಷಾ ಆಗಿರುವದೆಂದು ತಿಳಿದಿರುವ ಅಥವಾ ಕಂಡು ಬರುವ ಮನುಷ್ಯನಿಗೂ, ಯಾವ ಶರಾಬು, ಮದಕ ಪದಾರ್ಥ ಅಥವಾ ಅಫೀಂ ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

16. ಸರಬರಾಯಿ ಮಾಡುವ ಅಥವಾ ಮಾರುವ ಹಕ್ಕುದಾರಿಯು ಎಕ್ಸೈಜ್ ಕಮಿಷನರವರ ಅಪ್ಪಣೆ ಶಿವಾಯಿ ಮಾರಲ್ಪಡಕೂಡದು. ವರ್ಗ ಮಾಡಲ್ಪಡಕೂಡದು ಮತ್ತು ಪಿಕ್ಕಿ ಇಜಾರೆಗೆ ಕೊಡಲ್ಪಡಕೂಡದು. ಮತ್ತು ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದಲ್ಲಿ ಅವರ ಅನುಮತಿ ಇಲ್ಲದೆ ಯಾವ ಹಕ್ಕಿನ ಆಡಳಿತಕ್ಕಾದರೆ ಯಾವ ಮುತಾಲೀಕನು ಮೊಕರರಾಗಕೂಡದು.

---

* ಬೆಂಗಳೂರು ಸಿಟಿಯಲ್ಲಿ ರಾತ್ರೆ 9½ ಘಂಟೆ.

* ಸಾರಾಯಿ ಬಾಂಡ್ ಡೆಪೋಗಳಲ್ಲಿ ರಾತ್ರೆ 8 ಘಂಟೆ.

17. ಯಾವ ಅಬ್ಕಾರಿ ಅಥವಾ ಅಫೀಂ ಲೈಸೆನ್ಸುದಾರನು ಎಕ್ಸೈಜ್ ಕಮಿಷನರವರ ಬರಹಮೂಲಕವಾದ ಅಪ್ಪಣೆ ಶಿವಾಯಿ ಮೈಸೂರು ಶೀಮೆಯ ಹೊರಗಡೆ ಅಥವಾ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಯಾವ ಅಬ್ಕಾರಿ ಮತ್ತು ಅಫೀಂ ಲೈಸೆನ್ಸಿನಲ್ಲಿ ಯಾವ ವಿಧವಾದ ಸಂಬಂಧವನ್ನು ನೇರಾಗಿಯಾಗಲಿ ಪರೋಕ್ಷವಾಗಿ ಯಾಗಲಿ ಇಟ್ಟುಕೊಳ್ಳಕೂಡದು. ಮತ್ತು ಇಟ್ಟುಕೊಂಡಿರಕೂಡದು.

18. ಮೇಲೆ ಹೇಳಿರುವ 12 ಮತ್ತು 13ನೇ ಷರತ್ತುಗಳಿಗನುಸಾರವಾಗಿ ಹಂಗಾಮಿಯಾಗಾಗಲಿ ಅಥವಾ ಖಾಯುಮಾಗಾಗಲಿ ಮುಚ್ಚುವ ಸಂದರ್ಭಗಳಲ್ಲಿ ವಿನಹಾ ಡಿಪೋ ಮತ್ತು ಅಂಗಡಿಗಳು ತೆಗೆದಿರಬೇಕು. ಡೆಪ್ಯುಟಿ ಕಮಿಷನರವರು ಸ್ಥಳದ ಉಪಯೋಗಕ್ಕೆ ಅವಶ್ಯಕವಾಗಿರುವದೆಂದು ತಿಳಿದು ಅಪ್ಪಣೆ ಮಾಡಿರುವಷ್ಟು ಷರಾಬು ಮದಕ ಪದಾರ್ಥಗಳು ಮತ್ತು ಅಫೀಮನ್ನು ಅಂಗಡಿಗಳಲ್ಲಿ ಇಟ್ಟಿರಬೇಕು. ಜುಲೈ ಗುರ್ರೆಯಲ್ಲಿ ತೆರೆಯದಿರುವ ಅಂಗಡಿಗಳು ಲೈಸೆನ್ಸುದಾರರನ್ನು ಲುಕ್ಸಾನಿಗೆ ಒಳಪಡಿಸಿ ಪುನಃ ಹರಾಜು ಮಾಡಲ್ಪಡುವದು.

19. ಷರಾಬು, ಮದ ಪದಾರ್ಥ ಯಾ ಅಪಿಂ ಅಂಗಡಿಗಳಲ್ಲಿ ನಗದು ಮೊಬಲಗಿಗೆ ಶಿವಾಯಿ ಮಾರಲ್ಪಡಕೂಡದು. ನಗದು ಶಿವಾಯಿ ಬೇರೇ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಲೈಸೆನ್ಸುದಾರನು ಸಮೀಪದಲ್ಲಿರುವ ಮೇಜಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರಿಗೆ ವರ್ತಮಾನ ಕೊಡಲು ಬದ್ಧನಾಗಿರುತ್ತಾನೆ. ಈ ಷರತ್ತು ಅಂಗಡಿಯ ಹೊರಗಡೆ ಕುಡಿಯುವದಕ್ಕಾಗಿ ಅಂಗಡಿದಾರರಿಂದಲೂ ಯಾ ಮಾತಬರ ಘರಂಗಳಿಂದಲೂ ವ್ಯಾಪಾರ ಮೂಲಕವಾಗಿ ಕೊಡಲ್ಪಡುವ ಪರಾಯಿ ದೇಶದ ಮತ್ತು ವಿಶೇಷ ಷರಾಬುಗಳನ್ನು ಸಾಲವಾಗಿ ಮಾರತಕ್ಕದ್ದನ್ನು ಅಡ್ಡಿ ಪಡಿಸುವದಿಲ್ಲ.

20. ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನುರೀತ್ಯಾ ಬಿಕರಿಮಾಡಲು ಗೊತ್ತುಮಾಡಿರುವ ಪರಮಾವಧಿ ಕನಿಷ್ಠ ಯಾ ನಿಷ್ಕರ್ಷೆಯಾದ ದರಗಳಿಗಿಂತಲೂ ಹೆಚ್ಚಾಗಿಯಾಗಲಿ, ಕಮ್ಮಿಯಾಗಿ ಯಾಗಲಿ ಯಾವ ಷರಾಬು, ಮದಕ ಪದಾರ್ಥ ಅಥವಾ ಅಫೀಂ ಮಾರಲ್ಪಡಕೂಡದು

ಷರಾ—1. 20o ಷರಾಬು—1 ಡ್ರಾಂಗೆ 2 ಅಣೆ.

2. ಗಾಂಜಾ—1 ತೊಲೆಗೆ 2 ಅಣೆ.

3. ಅಫೀಂ—1 ತೊಲೆಗೆ 9 ಆಣೆ.

4. ಶೇಂದಿ—ಷೆಡ್ಯೂಲಿನಲ್ಲಿ ಘಾಯಿಷ್ ಮಾಡಿರುವ ಕಮ್ಮಿ ದರ.

21. ಲೈಸೆನ್ಸಿಲ್ಲದೆ ಇಟ್ಟುಕೊಳ್ಳಬಹುದಾಗಿರುವ ಮೊತ್ತಕ್ಕಿಂತಲೂ ಹೆಚ್ಚಾಗಿ ಯಾವ ಷರಾಬು ಮದಕ ಪದಾರ್ಥ ಯಾ ಅಫೀಮು ವಿಧಾಯುಕವಾದ ಪರ್ಮಿಟ್ಟಿಲ್ಲದೆ ಲೈಸೆನ್ಸ್ ಪಡೆದ ಅಂಗಡಿಯಿಂದ ಒಂದೇ ಕಾಲದಲ್ಲಿ ಯಾವ ಮನುಷ್ಯನಿಂದಲಾದರೂ ತೆಗೆದುಕೊಂಡು ಹೋಗಲ್ಪಡಕೂಡದು.

ಷರಾ—ಸಾರಾಯಿ—1 ರೆಪ್ಯೂಟೆಡ್ ಕ್ವಾರ್ಟ್.
ಶೇಂದಿ—2 ಸೇರು.
ಗಾಂಜಾ—4 ತೊಲಾ.
ಅಫೀಮು—3 ತೊಲಾ.
ಪರಾಯಿ ಷರಾಬು—2 ಗ್ಯಾಲನ್

22. ಪ್ರತಿ ದಿನವೂ ಆಗತಕ್ಕ ಜಮಾ ಖರ್ಚನ್ನು ವಿಧಾಯುಕವಾದ ನಮೂನೆಯಲ್ಲಿ ಶಾಯಿಯಲ್ಲಿ ಬರೆದಿಡಬೇಕು. ಈ ಲೆಕ್ಕದ ಪುಸ್ತಕಗಳನ್ನೂ ಮತ್ತು ಪರ್ಮಿಟ್ ಪುಸ್ತಕಗಳನ್ನೂ ಸರ್ಕಾರೀ ಖಜಾನೆಯಲ್ಲಿ ಖರೀದಿ ಮೊಬಲಗನ್ನು ಜಮಾ ಮಾಡಿಸಿದ್ದ ರಶೀತಿಗಳನ್ನು ಹಾಜರ್ಮಾಡಿದ್ದಲ್ಲಿ ಸ್ಥಳೀಕ ಅಬ್ಕಾರಿ ನೌಕರಮಾನೇರಿಂದ ಪಡೆಯಬಹುದು. ಜಮಾ ಬಂದ ಷರಾಬು, ಮದಕ ಪದಾರ್ಥಗಳು ಅಥವಾ ಅಫೀಮಿನ ಪರ್ಮಿಟ್ಟುಗಳೂ, ಖರ್ಚಾದ ಪರ್ಮಿಟ್ಟುಗಳ ಕೌಂಟರ್ ಘಾಯಿಲುಗಳೂ ಎಚ್ಚರಿಕೆಯಾಗಿ ಫೈಲ್ ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರ್ಮಿಟ್ಟುಗಳನ್ನೂ, ಕೌಂಟರ್ ಘಾಯಿಲುಗಳನ್ನೂ, ರುಜು ಮಾಡುವದನ್ನು ನಿಷೇಧಿಸಿದೆ. ಈ ಲೆಖ್ಖಗಳನ್ನೂ, ಪರ್ಮಿಟ್ಟುಗಳನ್ನೂ, ಕೌಂಟರ್ ಘಾಯಿಲುಗಳನ್ನೂ ಲೈಸೆನ್ಸಿನಲ್ಲಿ ಕಂಡವಾಯಿದೆಯು ಕಳೆದ ಬಂದು ವರುಷದವರಿಗೂ ಇಟ್ಟುಕೊಂಡಿರತಕ್ಕದ್ದು. ಅಸಿಸ್ಟೆಂಟು ಇನ್ಸ್‌ಪೆಕ್ಟರ ದರ್ಜೆಗೆ ಕಮ್ಮಿ ಯಾಗಿರದ ಯಾವ ಎಕ್ಸೈಜ್ ಆಫಿಸರು ಕೇಳಿದರೂ ಸದರಿ ಲೆಖ್ಖಗಳನ್ನು ಹಾಜರ್ಮಾಡಬೇಕು.

23. ಅಸಿಸ್ಟೆಂಟ್ ಇನ್ಸ್‌ಪೆಕ್ಟರ ದರ್ಜೆಗಿಂತಲೂ ಕಮ್ಮಿ ಇಲ್ಲದ ಎಕ್ಸೈಜ್ ಆಫಿಸರುಗಳು ಆಗಿಂದಾಗ್ಯೆ ಅಪೇಕ್ಷಿಸುವಂಥ ಯಾವ ಲೆಖ್ಖಗಳನ್ನಾಗಲಿ, ವರ್ತಮಾನಗಳನ್ನಾಗಲಿ ಲೈಸೆನ್ಸುದಾರರು ತಡೆಮಾಡದೆ ಕೊಡಬೇಕು.

24. ಎಕ್ಸೈಜ್ ಕಮಿಷನರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಪ್ರಮಾಣದ ತೂಕದ ಮತ್ತು ಅಳತೆ ಸಾಧನಗಳನ್ನು ಮಾತ್ರವೇ ಎಲ್ಲಾ ಲೈಸೆನ್ಸ್ ಪಡೆದ ಅಂಗಡಿಗಳಲ್ಲಿ ಇಟ್ಟುಕೊಂಡಿರಬೇಕು, ಮತ್ತು ಉಪಯೋಗಿಸಬೇಕು. ಯಾವ ಲೈಸೆನ್ಸ್ ಪಡೆದ ಅಂಗಡಿಗಳಲ್ಲಾದರೂ ಕರಾರ್ವಾಕಾಗಿಲ್ಲದ ತೂಕದ ಮತ್ತು ಅಳತೆ ಸಾಧನೆಗಳನ್ನು ಇಟ್ಟುಕೊಂಡಿರೋಣವು ಅಥವಾ ಉಪಯೋಗಿಸೋಣವು ಲೈಸೆನ್ಸುದಾರನನ್ನು ಶಿಕ್ಷೆಗೆ ಗುರಿಮಾಡುತ್ತೆ.

25. ಸಬ್ ಇನ್ಸ್‌ಪೆಕ್ಟರ ಹುದ್ದೆಗಿಂತಲೂ ಕಮ್ಮಿಯಾಗಿರದ ಯಾವ ಅಬ್ಕಾರೀ ನೌಕರನಾದರೂ ಲೈಸೆನ್ಸ್ ಪಡೆದ ಅಂಗಡಿಗಳನ್ನೂ ಮತ್ತು ಡಿಪೋಗಳನ್ನೂ ತನಿಖೆಮಾಡಲು ಅಧಿಕಾರವುಳ್ಳವನಾಗಿರುತ್ತಾನೆ. ಸದರಿ ಅಂಗಡಿಗಳನ್ನು ಪ್ರವೇಶಮಾಡಿ ತನಿಖೆಮಾಡುವದಕ್ಕೂ, ಉಪಯೋಗದಲ್ಲಿರುವ ತೂಕದ ಮತ್ತು ಅಳತೆ ಸಾಧನೆಗಳನ್ನೂ, ಷರಾಬು, ಮದಕ ಪದಾರ್ಥಗಳು, ಅಫೀಮನ್ನೂ ಅಜಮಾಯಿಷಿ ಮಾಡಲಿಕ್ಕೂ ಅಂಗಡಿಯಲ್ಲಿ ಯಾ ಡಿಪೋದಲ್ಲಿಟ್ಟಿರತಕ್ಕ ಲೆಖ್ಖಗಳನ್ನು ಕೇಳಿ ತನಿಖೆಮಾಡುವದಕೂ ಅಧಿಕಾರವುಳ್ಳವರಾಗಿರುತ್ತಾರೆ. ಪೊಲೀಸ್ ಆಫಿಸರರುಕೂಡ ತಮ್ಮ ಕೆಲಸಕ್ಕೆ ಸಂಬಂಧಪಟ್ಟಿರುವ ಮಟ್ಟಿಗೆ ತನಿಖೆ ಮಾಡಬಹುದು.

26. ಕ್ರಮವಾಗಿ ನಂಬರು ಹಾಕಲ್ಪಟ್ಟ ಪುಟಗಳುಳ್ಳ ಇನ್‌ಸ್ಪೆಕ್‌ಷನ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರಿ ಪುಸ್ತಕವನ್ನು ರೇಂಜ್ ಛಾರ್ಜಿನಲ್ಲಿರುವ ಆಬ್ಕಾರಿ ಇನ್‌ಸ್ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ಯಾವ ಆಫಿಸರರೇ ಆಗಲಿ ರಶೀತಿ ಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

27. ಸ್ವತಂತ್ರ ಹಕ್ಕನ್ನು ಪಡೆದದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರೀ ಖಜಾನೆಯಲ್ಲಿ ಜುಲೈ ಮಾಹೆ ಲಾಗಾಯಿತು ಪ್ರತಿ ತಿಂಗಳಲ್ಲಿಯೂ 20ನೆ ತಾರೀಖು ಅಥವಾ ಅದರ ವಳಗೆ ಸರಿಯಾದ ತಿಂಗಳಗಟ್ಲೆ 12 ಖಿಸ್ತುಗಳಲ್ಲಿ ಪಾವತಿ ಮಾಡುತ್ತಾ ಬರತಕ್ಕದ್ದು. ಜಾತ್ರೆ ಅಂಗಡಿಯ ಲೈಸೆನ್ಸ್‌ದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೇ ಸದರಿ ಅಂಗಡಿಯ ಗುತ್ತಾ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

ಷರಾ—ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ತಾವೇ ಲೈಸೆನ್ಸ್‌ದಾರರಲ್ಲದೆ ಇರುವ ಸಂದರ್ಭಗಳಲ್ಲಿ ಗ್ರಾಮದ ಪಟೇಲರು ಯಾವ ಮನುಷ್ಯನಿಂದಲಾಗಲೀ ಒಂದುಸಾರಿಗೆ 50 ರೂಪಾಯಿಗಳಿಗೆ ಮೀರದಂತೆ ಮೊಬಲಗನ್ನು ತೆಗದುಕೊಳ್ಳಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡಬಹುದು.

28. ಲೈಸೆನ್ಸ್‌ದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಮಾಡಬೇಕೆಂದು ಯಾ ಇಜಾರೆ ಮೊಬಲಗನ್ನು ಕಮ್ಮಿ ಮಾಡಲ್ಪಡಬೇಕೆಂದು ಕೇಳಲ್ಪಡಕೂಡದು.

29. ಜಮೀನ್ಕಂದಾಯದ ಬಾಕಿ ವಸೂಲಿ ಬಗ್ಗೆ ಆಯಾ ಕಾಲದಲ್ಲಿ ಜಾರೀಲಿರುವ ಕಾನೂನು ಮೇರೆಗೆ ಲೈಸೆನ್ಸ್‌ದಾರನಿಂದ ಬರಬೇಕಾದ ಮೊಬಲಗು ಆತನ ಯಾ ಆತನ ಜಾಮೀನ್‌ದಾರನ ಸ್ವತ್ತುಗಳ ಜಫ್ತಿ ಮತ್ತು ಹರಾಜಿನಿಂದ ವಸೂಲ್ಮಾಡಲ್ಪಡುವದು. ಅಥವಾ ಇಜಾರೆಯು ಪ್ರಾರಂಭದಲ್ಲಿ ಆತನಿಂದ ಕೊಡಲ್ಪಟ್ಟ ಠೇವಣಿ ಮೊಬಲಗು ಇದ್ದಲ್ಲಿ ವಜಾ ಹಾಕಲ್ಪಡುವದು. ಅಮಲ್ದಾರ್ರಿಂದ ಕೊಡಲ್ಪಟ್ಟ ನೋಟೀಸ್ ಜಾರಿಯಾದ 15 ದಿವಸಗಳ ವಳಗಾಗಿ ಠೇವಣಿ ಮೊಬಲಗಿನಿಂದ ವಜಾ ಮಾಡಲ್ಪಟ್ಟ ಮೊಬಲಗನ್ನು ಪುನಃ ಭರ್ತಿಮಾಡಲು ಬದ್ಧನಾಗಿರುತ್ತಾನೆ.

30. ವಿಧಾಯುಕವಾದ ತಾರೀಖುಗಳ ವಳಗಾಗಿ ಖಿಸ್ತುಗಳನ್ನು ಅಥವಾ (ಶೇಂದಿಯ) ಮರತೆರಿಗೆಯನ್ನು ಕೊಡದೆ ತಪ್ಪಿದಲ್ಲಿ ಲೈಸೆನ್ಸುಗಳನ್ನು ಸಸ್ಪೆಂಡ್ ಮಾಡಲು ರೆವಿನ್ಯೂ ಆಫಿಸರುಗಳಿಗೆ ಅಧಿಕಾರವನ್ನು ಉಳಿಸಿಕೊಂಡಿರುತ್ತೆ. ಷರಾಬು ಶೇಂದಿ ಮತ್ತು ಮದ್ದಕ್ ಅಂಗಡಿಗಳ ವಿಷಯದಲ್ಲಿ ಈ ಅಧಿಕಾರವು ಅಮಲ್ದಾರುಗಳಿಂದಲೂ ಇತರ ಸಂದರ್ಭಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಚಲಾಯಿಸಲ್ಪಡುತ್ತೆ.

1. ಮೇಲ್ಕಂಡ ಷರಾಬು, ಶೇಂದಿ, ಮದ್ದಕ್ ಪದಾರ್ಥಗಳ ಲೈಸೆನ್ಸ್‌ದಾರನು ಖಿಸ್ತು ಬಾಕೀ ಬೀಳುವ ತಿಂಗಳ ಆಖೈರ್ ವಳಗಾಗಿ ಖಿಸ್ತು ಕೊಡದೆ ತಪ್ಪಿದಲ್ಲಿ. ಅಮಲ್ದಾರ್ರು ಡೆಪ್ಯುಟಿ ಕಮ್ಮಿಷನರವರ ಬರಹಮೂಲಕವಾದ ಅಪ್ಪಣೆ ಪಡೆದು ಲೈಸೆನ್ಸನ್ನು ರದ್ದುಮಾಡಿ ಮುಂದಿನ ತಿಂಗಳ ಗುರ್ರೆ ತಾರೀಖಿನದಿವಸ (ರಜಾ ದಿವಸಗಳು ಶಿವಾಯಿ, ಸದರಿ ಹಕ್ಕನ್ನು ಹೊಸ ಬಿಕರೀದಾರನಿಗೆ ಲೈಸೆನ್ಸ್ ಕೊಟ್ಟ ತಾರೀಖು ಲಾಗಾಯಿತು ಬಿಕರಿಯ ಸ್ವತಂತ್ರ ಹಕ್ಕನ್ನು ಪುನಃ ಹರಾಜು ಮಾಡಬಹುದು. ಅಥವಾ ಸದರಿ ಹಕ್ಕು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರುವ ರೀತ್ಯಾ ಇತರ ವಿಧವಾಗಿ ವಿಲೇವಾರಿ ಮಾಡಬಹುದು. ಸದರಿ ಹಕ್ಕನ್ನು ರದ್ದುಮಾಡುವದರಿಂದ ಮತ್ತು ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲೇವಾರಿ ಮಾಡುವದರಿಂದ ಉಂಟಾಗುವ ಎಲ್ಲಾ ನಷ್ಟಕ್ಕೂ ತಪ್ಪಿತಸ್ಥನು ಗುರಿಯಾಗಿರುತ್ತಾನೆ. ಆದರೆ ಏನಾದರೂ ಲಾಭ ಬಂದಲ್ಲಿ ಅದಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಇಜಾರೆ ಪ್ರಾರಂಭದಲ್ಲಿ ಇಡಲ್ಪಟ್ಟ ಠೇವಣಿ ಏನಾದರೂ ಇದ್ದಲ್ಲಿ, ಇದರ ಪೂರಾ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸನ್ನು ಸಸ್ಪೆಂಡು ಮಾಡಲಿಕ್ಕೆ ಅಧಿಕಾರವುಳ್ಳ ಆಫಿಸರು ತಮಗೆ ಯುಕ್ತ ಕಂಡರೆ ಪುನಃ ಹರಾಜು ಅಥವಾ ಇತರ ವಿಲೇವಾರಿ ಆಗುವ ವರಿವಿಗೂ ಬಿಕರಿ ನಡೆಸಲು ಅವಕಾಶ ಕೊಡಬಹುದು.

32. ಬಾಕೀ ಬೀಳುವ ಎಲ್ಲಾ ಮೊಬಲಗಿನಮೇಲೂ ತಿಂಗಳು 1ಕ್ಕೆ ಅಥವಾ ಅದರ ಭಾಗಕ್ಕೆ ರೂಪಾಯಿ 1ಕ್ಕೆ 1ಪೈ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡಬೇಕು.

33. ಲೈಸೆನ್ಸ್‌ದಾರನಾಗಲಿ ಅಥವಾ ಅತನಿಂದ ನೇಮಿಸಲ್ಪಟ್ಟ ಯಾವ ಮನುಷ್ಯನಾಗಲಿ ಲೈಸೆನ್ಸಿನ ಯಾವ ಷರತ್ತುಗಳಿಗೆ ವಿರೋಧವಾಗಿ ನಡೆದರೆ, ಲೈಸೆನ್ಸ್‌ದಾರನಿಗೆ—

(a) 50 ರೂಪಾಯಿನವರೆಗೆ ಜುರ್ಮಾನೆ ಅಥವಾ (b) ಠೇವಣಿಗಳೇನಾದರೂ ಇದ್ದಲ್ಲಿ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಲೈಸೆನ್ಸು ರದ್ದುಮಾಡಲ್ಪಡುವದು ಮತ್ತು ಲೈಸೆನ್ಸ್‌ದಾರ್ರನ್ನು ನಷ್ಟಕ್ಕೆ ಗುರಿಮಾಡಿ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಅಥವಾ ಇತರ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಈ ಮೇಲ್ಕಂಡ ಅಂಶಗಳಿಗೆ ಲೈಸೆನ್ಸ್‌ದಾರನು ಒಳಗಾಗಿರುತ್ತಾನೆ.

ಲೈಸೆನ್ಸ್‌ದಾರನು ಅಥವಾ ಆತನ ಮುತಾಲೀಕನು ಆತನು ಮಾಡಿರುವ ತಕ್ಸೀರಿಗೆ ಆಪಾದನೆ ಮಾಡಲ್ಪಡಬಹುದು. ಈ ಷರತ್ತಿನಂತೆ ಇಜಾರೆಯು ರದ್ದು ಮಾಡಲ್ಪಟ್ಟರೆ ಇಜಾರೆಯ ಪೂರಾ ಮೊಬಲಗು ಕೂಡ್ಲೆ ಬಾಕಿ ಬೀಳುವದು.

ಷರಾ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪುಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

34. ಲೈಸೆನ್ಸ್‌ದಾರನು ಎಕ್ಸೈಜ್ ರೆಗ್ಯುಲೇಷನ್ ಯಾ ಅಫೀಂ ಆಕ್ಟಿಗೆ ವಿರೋಧವಾಗಿ ಅಥವಾ ಇಂಡಿಯನ್ ಪೆನಲ್ ಕೋಡಿನಲ್ಲಿ ನಮೂದಿಸಿರುವ ಯಾವ ತಕ್ಸೀರಿಗಾದರೂ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದಲ್ಲಿ, ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸ್‌ದಾರನಾಗಿರಲು ನಾಲಾಯಖೆಂದು ಕಂಡುಬಂದಲ್ಲಿ, ಯಾವ ಲೈಸೆನ್ಸಾದರೂ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ ಅವನ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹಕ್ಕುದಾರಿಯ ಹರಾಜು ಮಂಜೂರಾದನಂತರ ಕ್ರಮವಾದ ಲೈಸೆನ್ಸು ಕೊಡುವದಕ್ಕೆ ಮುಂಚೆಯಾದ

ರೂ ಕೂಡ ಹಕ್ಕನ್ನು ಕೊಂಡುಕೊಂಡವನು ಮೇಲೆ ನಮೂದಿಸಿರುವ ಯಾವ ತಕ್ಷೀರಿಗಾದರೂ ಸಾಬೀತು ಮಾಡಲ್ಪಟ್ಟಲ್ಲಿ ಈ ಷರತ್ತಿನಲ್ಲಿ ನಿಬಂಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರುತ್ತಾನೆ. ಈ ಷರತ್ತಿನ ಮೇರೆ ಲೈಸೆನ್ಸ್ ದಂಡವಾಗಿ ತೆಗೆದುಕೊಳ್ಳಲ್ಪಡೋಣವು, ಇಜಾರೆ ಷರತ್ತಿನ ಪ್ರಕಾರ ಸರ್ಕಾರಕ್ಕೆ ಪಾವತಿಯಾಗಬೇಕಾದ ಮೊಬಲಗು ಜಾತಾ ಉಳಿಯುವ ಎಲ್ಲಾ ಠೇವಣಿಗಳು ದಂಡವಾಗಿ ತೆಗೆದುಕೊಳ್ಳಲ್ಪಡುವುದಕ್ಕೂ ಲೈಸೆನ್ಸ್‌ದಾರನನ್ನು ಗುರಿಮಾಡುತ್ತದೆ.

35. ಷರಾಬು, ಮದತ್ ಪದಾರ್ಥಗಳು ಮತ್ತು ಅಫೀಮನ್ನು ಬಯ್ಯುವ, ತಯಾರ್ಮಾಡುವ ಅಥವಾ ಬಿಕರಿ ಮಾಡುವದರಲ್ಲಿ ತಮ್ಮಿಂದ ನೊಕರೂರ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಅಥವಾ ಅಫೀಂ ಕಾನೂನುಗಳಿಗೆ ಅಥವಾ ಅವರ ಒಪ್ಪಂದಗಳಿಗೆ ವಿರೋಧವಾಗಿ ನಡೆದದ್ದು ತಮಗೆ ತಿಳಿದುಬಂದರೆ ಲೈಸೆನ್ಸ್‌ದಾರರು ಡೆಪ್ಯುಟಿ ಕಮ್ಮಿಷನರವರಿಗೆ ಇಂಥಾ ಎಲ್ಲಾ ಸಂದರ್ಭಗಳನ್ನು ರಿಪೋರ್ಟು ಮಾಡುವದಕ್ಕೂ ಮತ್ತು ಅಂಥವರನ್ನು ಇನ್ನೂ ಕೆಲಸದಲ್ಲಿಟ್ಟುಕೊಂಡಿರುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರು ಕೊಡುವ ಹುಕುಮಿನಂತೆ ಜಾರೀಲಿ ತರುವುದಕ್ಕೂ ಬದ್ಧರಾಗಿರುತ್ತಾರೆ. ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಯಾವ ತಪ್ಪಿತಕ್ಕಾದರೂ ಸಾಬೀತಾದ ಮನುಷ್ಯರನ್ನು ಷರಾಬು, ಮದತ್ ಪದಾರ್ಥ ಮತ್ತು ಅಫೀಮನ್ನು ಬಯ್ಯುವದಕ್ಕೆ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಇಲ್ಲದೆ ನೇಮಿಸಕೂಡದು.

36. ಲೈಸೆನ್ಸ್‌ದಾರರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಯಾವ ವಿಧವಾದ ಹಣಸಂಬಂಧವಾದ ಲೇವಾದೇವಿಯನ್ನು ಖಂಡಿತವಾಗಿಯೂ ಇಟ್ಟುಕೊಳ್ಳಕೂಡದು.

37. ಎಕ್ಸೈಜ್ ಕಮ್ಮಿಷನರವರ ಅಪ್ಪಣೆ ಪಡೆದು ಲೈಸೆನ್ಸ್ ಮೋಖೂಫ್ ಬಗ್ಗೆ 15 ದಿವಸಗಳ ಮುಂಚಿನ ನೋಟೀಸ್ ಕೊಟ್ಟು ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತ್ಯಾನುಸಾರ ಯಾವ ಲೈಸೆನ್ಸನ್ನಾದರೂ ಮೋಖೂಫ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಅದಕ್ಕಾಗುವ ದಾಮಾಷಾಯಿ ಗುತ್ತಾ ಮೊಬಲಗು ವಾಪಸು ಕೊಡಲ್ಪಡಬೇಕು.

38. ಎಲ್ಲಾ ಲೈಸೆನ್ಸ್‌ದಾರರು ಸರ್ಕಾರದಿಂದ ಎಕ್ಸೈಜ್ ಅಥವಾ ಅಫೀಂ ಕಾನೂನುಗಳನ್ನನುಸರಿಸಿ ಮಾಡಲ್ಪಡುವ ಜಾಸ್ತಿ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧರಾಗಿರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರವರು ಸರಿಪಡಿಸುವ ಯಾ ಹೊಸ ಲೈಸೆನ್ಸನ್ನು ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

39. ಲೈಸೆನ್ಸಿಗೆ ಸಂಬಂಧಪಡದ ಷರಾಬು ಯಾ ಮದತ್ ಪದಾರ್ಥಗಳ ವಿಷಯದಲ್ಲಿ ಯಾವದಾದರೂ ಏರ್ಪಾಡು ಮಾಡಲ್ಪಡುವ ಪಕ್ಷದಲ್ಲಿ ಲೈಸೆನ್ಸ್‌ದಾರರಿಗೆ ಪರಿಹಾರ ದ್ರವ್ಯಕ್ಕೂ ಯಾ ರಿಮಿಷನ್ ಯಾನೆ ಸೋಡಿಗೂ ಹಕ್ಕು ಇರಲಾರದು.

40. ಯಾವ ತರಹೆ ಷರಾಬು ಅಂಗಡಿಯು ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ಮಾಯಿದೆ ಒಳಗೆ ಅಲ್ಲಿಂದ 5 ಮೈಲಿ ಒಳಗೆ ಇತರ ಷರಾಬುಗಳನ್ನು ಮಾರತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು ಮತ್ತು ತನ್ನ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಅಂಥಾ ಯಾವ ಮನುಷ್ಯನನ್ನೂ ಪಾಲುಗಾರನನ್ನಾಗಲಿ ಅಥವಾ ಸಂಬಂಧವುಳ್ಳವನನ್ನಾಗಲಿ ಮಾಡಲು ಅವಕಾಶ ಕೊಡಕೂಡದು.

XX. ಸಾರಾಯಿ ಲೈಸೆನ್ಸಿಗೆ ಲಗಾವಾಗುವ ಷರತ್ತುಗಳು.

1. ಈ ಲೈಸೆನ್ಸಿಂದ ಕೊಡಲ್ಪಟ್ಟ ಹಕ್ಕು ಸಾಧಾರಣವಾಗಿ 20ಂ ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವುದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫಿಸರರ ಅಪ್ಪಣೆಯಿಂದ 30ಂ ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವುದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರದೇಶೀಯ ಮದ್ಯಗಳನ್ನು ಮಾರತಕ್ಕ ಅಂಗಡಿಗಳಿಲ್ಲದೇ ಇರತಕ್ಕ ಪ್ರದೇಶಗಳಲ್ಲಿಯೂ ಅಥವಾ ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ವಿಶೇಷ ಮದ್ಯಗಳನ್ನೂ, ಯಾ ಪರದೇಶೀಯ ಮದ್ಯಗಳ ಅಂಗಡೀದಾರರು ಎಕ್ಸೈಜ್ ಕಮ್ಮಿಷನರವರಿಂದ ನಿರ್ಣಯಿಸಲ್ಪಟ್ಟ ಜೋರುಳ್ಳ ವಿಶೇಷ ಅಥವಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಮಾರದೇ ಇರತಕ್ಕ ಸ್ಥಳಗಳಲ್ಲಿಯೂ ಒಪ್ಪಿತವಾದ ನಡತೆಯುಳ್ಳ ಸಾರಾಯಿ ಅಂಗಡಿ ಲೈಸೆನ್ಸುದಾರನು ಎಕ್ಸೈಜ್ ಕಮ್ಮಿಷನರವರ ಮಂಜೂರು ಹುಕುಂ ಪಡದು ಸದರೀ ಮದ್ಯಗಳನ್ನು ಕ್ರಮವಾಗಿ ಬಿರಟೆ ಮೊಹರು ಆಗಿರುವ ಸೀಸೆಗಳಲ್ಲಿ ಎಕ್ಸೈಜ್ ಕಮ್ಮಿಷನರ್ ಗೊತ್ತುಮಾಡಿದ ಖರೀದಿ ದರದಮೇರೆಗೆ ಮತ್ತು ಸಾರಾಯಿ ಮಾರಾಟಕ್ಕೆ ಸಂಬಂಧಪಟ್ಟ ಷರತ್ತುಗಳಿಗೆ ಒಳಪಟ್ಟು ಅಂಗಡಿಯ ಆವರಣದಲ್ಲಿ ಕುಡಿಯದಂತೆ ಮಾರಲು ಅಪ್ಪಣೆ ಕೊಡಲ್ಪಡಬಹುದು. ಅದೇಮೇರೆಗೆ ಬೆಲ್ಲದ ಸಾರಾಯಿ ಅಥವಾ ವಿಶೇಷ ಮದ್ಯಗಳನ್ನು ಮಾರುವುದಕ್ಕೆ ಪ್ರತ್ಯೇಕ ಅಂಗಡಿಗಳ ಲೈಸೆನ್ಸಿಲ್ಲದೆ ಇದ್ದ ಪ್ರದೇಶಗಳಲ್ಲಿ ಷರಾಬು ಅಂಗಡಿ ಯವನು ರೆಪ್ಯೂಟೆಡ್ ಪಾಯಿಂಟ್ ಅಥವಾ ಕ್ವಾರ್ಟ್ ಶೀಷೆಗಳಲ್ಲಿ ಬೆಲ್ಲದ ಸಾರಾಯಿಯನ್ನು ಮಾರಲು ಅಪ್ಪಣೆ ಕೊಡಬಹುದು.

2. ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಕೋಠಿಗಳಿಂದ ಮದ್ಯಗಳನ್ನು ಈ ಕೆಳಗೆ ನಮೂದಿಸಿರುವ ದರಗಳಂತೆ ಕೊಂಡುಕೊಳ್ಳಬಹುದು :—

(1) ತಾಟಿಬೆಲ್ಲ ಮತ್ತು ಕಾಕಂಬಿ ಸಾರಾಯಿ 20ಂ ಡಿಗ್ರಿಯುಳ್ಳ ಗ್ಯಾಲಾ 1ಕ್ಕೆ ರೂಪಾಯಿ 0-10-11 ಪೈ ಪ್ರಕಾರ.

(2) ಕಬ್ಬಿನಬೆಲ್ಲದ ಸಾರಾಯಿಯು ಬಿರಟೆಹಾಕಿ, ಶೀಲು ಹಾಕಿರುವ ಶೀಷೆಗಳನ್ನು 20ಂ ಡಿಗ್ರಿಯ ಗ್ಯಾಲಾ 1ಕ್ಕೆ ರೂಪಾಯಿ 1—6—5 ಪೈ ಅಥವಾ ಆಗಿಂದಾಗ್ಯೆ ಗೊತ್ತುಮಾಡುವ ಇತರೆ ದರ.

(3) ಮೇಲೆ ನಮೂದಿಸಿರುವ ವಿಶೇಷ ಮದ್ಯಗಳು ತಯಾರ್ಮಾಡುವವರಿಂದ ಗೊತ್ತುಮಾಡಲ್ಪಡುವ ಖರೀದಿಗಳಮೇರೆಗೆ.

(4) ಒಂದೇಸಾರಿಗೆ ಕೊಂಡುಕೊಳ್ಳತಕ್ಕ ಮೊತ್ತವು ಷರಾಬಿಗೆ ಒಂದು ಗ್ಯಾಲಾಕ್ಕಿಂತಲೂ, ಇತರವಿಧವಾದ ಮದ್ಯಗಳಿಗೆ ಮೂರು ಶೀಷೆಗಳೂ ಯಾ ಆರು ಪೈಂಟಗಳಿಗಿಂತಲೂ ಕಮ್ಮಿಯಾಗಿರಕೂಡದು.

(5) ಬಾಂಡೆಡ್ ಡಿಪೋದಿಂದ ಶರಾಬನ್ನು ಒಯ್ಯುವದಕ್ಕಿಂತಮುಂಚೆ ತಾಟಿಬೆಲ್ಲ, ಕಾಕಂಬಿಸಾರಾಯಿ, ಕಬ್ಬಿನಬೆಲ್ಲದ ಸಾರಾಯಿ ಮತ್ತು ವಿಶೇಷ ಮದ್ಯಗಳು ಇವುಗಳಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿಗಳು ಶಿವಾಯಿ 20೦ ಡಿಗ್ರಿ ಅಂಡರ್ ಪ್ರೂಫ್ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ $4\frac{3}{4}$ ರೂಪಾಯಿನ ದರದಂತೆಯೂ, ಸದರಿ ಜೋರಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಸಾರಾಯಿಗಳಿಗೆ ಅವುಗಳ ದಾಮಾಷಾಯಿ ದರದಂತೆಯೂ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗದುಕೊಳ್ಳುವುದಕ್ಕಾಗಿ ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಶರಾಫನು ಇದ್ದಲ್ಲಿ ಆತನ ವಶಕ್ಕೆ, ಅಥವಾ ಡೆಪ್ಯುಟಿ ಕಮ್ಮಿಷನರ್ ಇದಕ್ಕಾಗಿ ನೊಕರರ್ಮಾಡಿರುವ ಇನ್ಯಾವ ನೌಕರನಿಗಾದರೂ ಪಾವತೀ ಮಾಡಿ ಗೊತ್ತುಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನು ಹಾಜರ್ಮಾಡಿದರೆ ಬಾಂಡೆಡ್ ಡೆಪೋ ಜಿಮ್ಮೇದಾರನು ಟ್ರೆಜರಿ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಮದ್ಯವನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಮದ್ಯವು ರವಾನೆ ಆದ ತಾರೀಖು ಮತ್ತು ಘಂಟೆಯನ್ನ ನಮೂದುಮಾಡಿ ಡೆಪ್ಯುಟಿ ಕಮ್ಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡೆಪೋ ಜಿಮ್ಮೇದಾರನು ಬಾಂಡೆಡ್ ಡೆಪೋದಿಂದ ಮದ್ಯವನ್ನು ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್ ಬಾಟ್ಲು ಯಾನೆ ಮಾದ್ರಿಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು 20೦ ಡಿಗ್ರಿ ಅಂಡರ್ ಪ್ರೂಫ್ ಜೋರಿನ ತಾಟೀ ಬೆಲ್ಲದ ಮತ್ತು ಕಾಕುಂಬಿ ಸಾರಾಯಿಯನ್ನು ಗ್ಯಾಲನ್ 1ಕ್ಕೆ 6-6-0 ಯಂತೆಯೂ ಅಥವಾ ಗ್ಯಾಲನ್ನಿನ 1—51ನೆ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ ಕಬ್ಬಿನ ಬೆಲ್ಲದ ಸಾರಾಯಿಯನ್ನು ಒಂದು ರೆಪ್ಯೂಟೆಡ್ ಕ್ವಾರ್ಟ್ ಶೀಶೆ 1ಕ್ಕೆ 1—3—10 ರಂತೆಯೂ ಅಥವಾ ಆಗಿಂದಾಗ್ಯೆ ಗೊತ್ತುಮಾಡುವ ಖರೀದಿ ದರದಂತೆಯೂ ಸದರಿ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

(8) ಲೈಸೆನ್ಸ್ದಾರನು 1909ನೆ ಇಸವಿ ಜುಲೈ 1ನೆ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸ್ದಾರನ ಬಾಬತು ದಾಸ್ತಾನ್ ಮದ್ಯವನ್ನು ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(9) ಅಂಗಡಿಗಳ ಸಮುದಾಯವನ್ನು ಕೊಂಡುಕೊಂಡಿರುವವರು ಎಕ್ಸೈಜ್ ಕಮ್ಮಿಷನರವರ ವಿಶೇಷ ಅಪ್ಪಣೆಯನ್ನು ಪಡೆದು ಸರಿಯಾದ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಕೋಠಿಯನ್ನು ಇಟ್ಟುಕೊಂಡು ಅಲ್ಲಿಗೆ ಬಾಂಡೆಡ್ ಕೋಠಿಯಲ್ಲಿ ವಿಕ್ರಯಿಸಿರುವ ಸರಕನ್ನು ತೆಗಿಸಿಕೊಂಡು ಹೋಗಿ ಅಲ್ಲಿಂದ ತಮ್ಮ ಅಂಗಡಿಗಳಿಗೆ ಅವಶ್ಯಕವಾಗಿರುವ ಸರಬರಾಯಿಯನ್ನು ಮಾಡಿಕೊಳ್ಳಬಹುದು. ಇಂಥಾ ಅಪ್ಪಣೆಯನ್ನು ತಿರಸ್ಕರಿಸಲು ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಸ್ವಾತಂತ್ರವುಳ್ಳವರಾಗಿರುತ್ತಾರೆ.

(10) ಬ್ರಿಟಿಷ್ ರಾಜ್ಯದ ದ್ವಾರಾ ಒಯ್ಯಲ್ಪಟ್ಟ ಅಂಗಡಿಗಳಿಗೆ ಬರತಕ್ಕ ಸಾರಾಯಿಯ ಮೊಹರನ್ನು ಸರ್ಕಾರದಿಂದ ಸರಕು ಮೊಕಾಬಿಲೆ ಬಗ್ಗೆ ನೇಮಿಸಲ್ಪಟ್ಟಿರುವ ನೌಕರರಮಾನೇರಿಂದ, ಸದರಿ ಸರಕು ಮೊಕಾಬಿಲೆ ಮಾಡಲ್ಪಡುವ ವರೆಗೂ ಒಡೆಯಕೂಡದು.

(11) ಶರಾಬ್ ಬಿಕರೀ ಆಗುವ ದುಕಾನಿನಲ್ಲಾಗಲೀ ಯಾ ಲೈಸೆನ್ಸ್ದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ ಯಾ ಅಂಥಾವನ ದುಕಾನಿನ ನೌಕರರ ಬಳಿಯಲ್ಲಾಗಲೀ, ಅಥವಾ ಅವರ ಸ್ವಾಧೀನದಲ್ಲಾಗಲೀ, ಶರಾಬ್ ವಿನಹ ಇತರ ಯಾವ ಮದ್ಯವಾಗಲಿ ನೀರೇ ಆಗಲಿ ಯಾ ಇತರ ಪಾನವಾಗಲೀ ಎಷ್ಟುಮಟ್ಟಿಗೂ ಇರತಕ್ಕದ್ದಲ್ಲವು, ಮತ್ತು ಮಾರತಕ್ಕದ್ದಲ್ಲವು.

(12) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ವರುಷ 1ಕ್ಕೆ 180 ರೂಪಾಯಿ ದರದ ಮೇರೆಗೆ ಮುನಿಸಿಪಲ್ ಕಾನೂನ್ ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಮುಂಗಡವಾಗಿ ಕೊಡಬೇಕು. ಮತ್ತು ಆತನು ಪ್ರತಿ ತಿಂಗಳಲ್ಲಿಯೂ ಅಂಥಾ ಪ್ರತಿ ಅಂಗಡಿಯಲ್ಲೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕೆ 4 ಆಣೆ ಪ್ರಕಾರ ಸರ್ಚಾರ್ಜ್ ಫೀಯನ್ನು ಸಹ ಕೊಡಬೇಕು. ಸದರಿ ಮೊಬಲಗು ಮ್ಯುನಿಸಿಪಲ್ ಕಮ್ಮಿಷನ್ ಪ್ರೆಸಿಡೆಂಟರವರಿಂದ ನೇಮಿಸಲ್ಪಡುವ ಆಫೀಸರವರಿಗೆ ಪಾವತಿ ಮಾಡಲ್ಪಡಬೇಕು.

XXI. ಶೇಂದಿ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಲೈಸೆನ್ಸ್ ಪ್ರಕಾರ ಕೊಡಲ್ಪಟ್ಟ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ತೆಂಗು ಮತ್ತು ಬಗನಿ ವ ಬಡಶಾಳ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸದಾರನು, ಬಗನಿ ಮರಗಳನ್ನು ಬಗನಿ ಶೇಂದಿ ಅಂಗಡಿ ಲೈಸೆನ್ಸದಾರನು ಈಚಲು ಮರಗಳನ್ನು ಕಟ್ಟಕೂಡದು, ಆದರೆ ಈ ಉಭಯ ಲೈಸೆನ್ಸದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳನ್ನು ಕಟ್ಟಬಹುದು.

(2) ಲೈಸೆನ್ಸದಾರನು ತನ್ನ ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ; ಮತ್ತು ಆಪಸನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್‍ಮಾಡಿಕೊಳ್ಳುವುದಕ್ಕೆ ಸ್ವತಂತ್ರನಾಗಿರುತ್ತಾನೆ. ಆದರೆ ಅಂಥಾ ಮರಗಳು ಆತನ ಇಜಾರೆಗೆ ಸಂಬಂಧಪಡದ ಅಂಗಡಿಯ ಸಮೀಪದಲ್ಲಿ ಯಾ ಸರಹದ್ದಿನೊಳಗೆ ಇದ್ದಪಕ್ಷದಲ್ಲಿ ಸದರಿ ಮರಗಳನ್ನು ಉತಾರ್‍ಮಾಡಲು ದರಖಾಸ್ತು ಮಾಡುವದಕ್ಕೆ ಮುಂಚೆ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರವರ ಮಂಜೂರಾತಿಯನ್ನು ಪಡೆಯಬೇಕು. ಲೈಸೆನ್ಸದಾರನು ಇನ್ಸ್‌ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಗೆ ಅವರಿಂದ ಅಪ್ಪಣೆ ಚೀಟಿ ಪಡೆದು ಇತರ ಶೇಂದಿ ದುಕಾನದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು, ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್‌ಪೆಕ್ಟರವರು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ.

(3) ಸರಿಯಾದ ಲೈಸೆನ್ಸ ಪಡೆದು, ಆ ಲೈಸೆನ್ಸುಮೇರೆ ಉತಾರ್‍ಮಾಡಿರುವ ಮರಗಳ ಶೇಂದಿ ವಿನಹಾ ಮತ್ಯಾವ ವಿಧವಾದ ಶೇಂದಿಯನ್ನು ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(4) ಉತಾರ ಲೈಸೆನ್ಸುಗಳ ಷರತ್ತುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಲೈಸೆನ್ಸದಾರನು, ತನ್ನ ಹೆಸರಿನಲ್ಲಿಯೂ, ಅಥವಾ ಅವನ ವಾರಸುದಾರನ ಹೆಸರಿನಲ್ಲಿಯೂ ದರಖಾಸ್ತಿನ ಮೇಲೆ ಕೊಡಲ್ಪಟ್ಟ ಉತಾರ ಲೈಸೆನ್ಸುಗಳಿಗಾಗಿ ಕೊಡಬೇಕಾದ ಎಲ್ಲಾ ತೆರಿಗೆಗಳು, ಕಿಸ್ತುಗಳಿಗೂ ಸರ್ಕಾರಕ್ಕೆ ಜವಾಬ್ದಾರನಾಗಿರುತ್ತಾನೆ.

(5) ನಿರ್ಣಯಿಸಿದ ಕಾಲದೊಳಗಾಗಿ, ಯಾವ ಕಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೆ ಸೆಕ್ಷನ್ ಮೇರೆಗೆ ಉತಾರ ಲೈಸೆನ್ಸ ರದ್ದು ಯಾ ಹಂಗಾಮಿಯಾಗಿ ಮೋಕೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(6) ಮೇಲ್ಕಂಡಂತೆ ನಡೆಯಲು ತಪ್ಪಿದಲ್ಲಿ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರವರ ಅಥವಾ ಡೆಪ್ಯುಟಿ ಕಮ್ಮಿಷನರವರಿಂದ ಇದಕ್ಕಾಗಿ ನೇಮಕಮಾಡಲ್ಪಡುವ ಇತರ ಆಫಿಸರವರ ಹುಕುಂ ಪಡೆದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವ ವರಿಗೂ ಉತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರ ನೋಟೀಸು ತನಗೆ ಬಂದಿದ್ದರಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇನೇ ಇದ್ದಲ್ಲಿ ನ್ಯಾಯವಿರುದ್ಧವಾಗಿ ಉತಾರು ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(7) ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಉತಾರ ಲೈಸೆನ್ಸಿಗೆ ದರಖಾಸ್ತು ಕೊಡುವಕಾಲದಲ್ಲಿ ಸಾಲಿಯಾನಾ ಮರ ಒಂದಕ್ಕೆ 4 ಆಣೆ 3 ಪೈ ಪ್ರಕಾರ ಮರದ ಮಾಲ್ಕಿ ಮೊಬಲಗು ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು, ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರತೆರಿಗೆ ವಸೂಲ್‌ಮಾಡಲಿಕ್ಕೆ ಗುರಿಯಾಗತಕ್ಕದ್ದು.

(8) ಈಚಲು ಮರಗಳನ್ನು ಉತಾರ್‍ಮಾಡುವದು ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು:—

(a) ಈಚಲು ಮರಗಳು ಕಸಬುದಾರ್‌ರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮಾರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್‍ಮಾಡಿ ಮರಗಳನ್ನು ಕೆಡಿಸಕೂಡದು.

(d) ಡೆಪ್ಯುಟಿ ಕಮ್ಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು ಮತ್ತು ಅದರ ಉದ್ದವೂ 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಸೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಿಸೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ್ಖಮಾಡಿದರೆ ಎರಡು ವರಿಸೆಗಳಿಗೆ ಕಮ್ಮಿಯಾಗಿರಕೂಡದು; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್‍ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸುದಾರನು ಲೈಸೆನ್ಸ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೆ ಕಾಲದಲ್ಲಿ ಆಗಲಿ ಅಥವಾ ಗುತ್ತಿಗೆ ಪೂರ್ವೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ ಮಾಡಿದ್ದರಿಂದ ಒಣಗಿ

ಹೋದ ಮರಗಳು ಆತನಿಗೆ ಸಂಖ್ಯೆಹಾಕಿ ಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕಊ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ. ಆತನು ಉತಾರಿಗಾಗಿ ತಯಾರ್ಮಾಡುವ ಪ್ರತಿ ಒಂದು ಮರಕ್ಕೂ ಅದು ಸದರಿ ತಯಾರಿಯಿಂದ ಉತಾರಾಗುವದಕ್ಕೆ ಮುಂಚೆ ನಾಶವಾದಲ್ಲಿ ಅದೇ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(j) ಜನಗಳ ಉಪಯೋಗಾರ್ಥವಾಗಿ ವಾಪಸು ತೆಗೆದುಕೊಂಡ ಯಾ ತೆಗೆದುಕೊಳ್ಳಲ್ಪಟ್ಟ ಮರಗಳೂ, ಇಂಜನಿಯರ್ ಇಲಾಖೆಯವರ ಆಡಳಿತಕ್ಕೆ ಶೇರಿರುವ (ಇರಿಗೇಷನ್) ತಕಾವಿ ಕಾಂಗಾರಿಗಳಿಗೆ ಶೇರಿದ ಪ್ರದೇಶಗಳಲ್ಲಿರುವ ಮರಗಳೂ, ಇಂಜನಿಯರ್ ಇಲಾಖೆಯವರು ಸದರಿ ಮರಗಳ ಎಲೆಗಳನ್ನೂ, ಕೊಂಬೆಗಳನ್ನೂ ಕತ್ತರಿಸಬೇಕಾದ ಸಂದರ್ಭಗಳಲ್ಲಿ ಲೈಸೆನ್ಸ್ ದಾರನಿಗೆ ಅಂಥಾ ಮರಗಳಿಗಾಗಿ ಯಾವ ಪರಿಹಾರದ್ರವ್ಯಕ್ಕೂ ಹಕ್ಕಿರುವುದಿಲ್ಲ.

(k) ಲೈಸೆನ್ಸ್ದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ದುಸರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(9) ಚಾಪೇ ಮಾಡುವುದಕ್ಕಾದರೂ ಹಗ್ಗ ಮಾಡುವುದಕ್ಕಾದರೂ ಗೂಡೆಗಳು ಮಾಡುವುದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸ್ದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(10) ಡೆಪ್ಯುಟಿ ಕಮ್ಮಿಷನರುಗಳು ಅಬ್ಕಾರಿ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಠಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ್ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಠಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇಗ್ರಾಮದ ಮರಗಳನ್ನು ದಾಖಲ್ಮಾಡಬೇಕೆಂದು ಹುಕುಂ ಮಾಡಬಹುದು.

(11) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(12) ಅಂಗಡಿಗಳ ಸಮುದಾಯದ ಲೈಸೆನ್ಸ್ದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೊಡಲ್ಪಟ್ಟ ಪ್ಯಾಸುಗಳು ಅದಕ್ಕಾಗಿ ಅಧಿಕಾರ ಹೊಂದಿದ ಆಫೀಸರುಗಳ ಪರೀಕ್ಷೆ ವ ತನಿಖೆ ಬಗ್ಯೆ ಗುರಿಯಾಗತಕ್ಕದ್ದು.

(13) ಶೇಂದಿಯನ್ನು ಗಿಡದ ಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನು ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡಿ ಮಾಡಲ್ಪಟ್ಟಿರುತ್ತದೆ. ಪರಂತು ಬಗನೀ ಮರಗಳಿರತಕ್ಕ ಪ್ರದೇಶಗಳಲ್ಲಿ ಬಗನೀ ಶೇಂದಿಯ ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸ್ದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರಿ ಬಗ್ಯೆ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರಗಳನ್ನು ಉತಾರ್ಮಾಡಲು ಅಪ್ಪಣೆ ಕೊಡಬಹುದು.

(14) ಯಾವ ಲೈಸೆನ್ಸ್ದಾರ ಯಾ ಆತನ ಬಿಕರೀದಾರರೇ ಆಗಲಿ ಮೂರು ಅಳೆಯುವ ಶೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು; ಶೇಂದಿಯು ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಮಾರಲ್ಪಡಕೂಡದು. ಒಂದು ಇಂಪೀರಿಯಲ್ ಗ್ಯಾಲಾ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನಮಾಡಲಿಕ್ಕೆ ಶೇಂದಿಯನ್ನು ತೆಗದುಕೊಂಡು ಹೋಗಲು ಅವಕಾಶ ಕೊಡಬಹುದು.

(15) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ರೇವನ್ನು ಯಾ ಪಾಣೆಯನ್ನು ಅಜಮಾಯಿಷಿ ಮಾಡಲಿಕ್ಕೆ ಉತಾರ್ದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(16) ಲೈಸೆನ್ಸ್ದಾರ್ ಶೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಯೆ ಹಿಡಿಯಲ್ಪಡಕೂಡದು.

(17) ಈ ಕೆಳಗೆ ನಮೂದಿಸಿರುವ ನಿಬಂಧನೆಗಳು 1901ನೆ ಇಸವಿಯ ಮೈಸೂರು ಎಕ್ಸೈಜ್ Vನೆ ರೆಗ್ಯುಲೇಷನಿನ 12ನೆ ಸೆಕ್ಷನ್ ಮೇರೆಗೆ ಶೇಂದಿ ಮರಗಳನ್ನು ಕಟ್ಟುವದಕ್ಕೂ, ಮತ್ತು ಶೇಂದಿಯನ್ನು ಉತಾರ್ಮಾಡುವದಕ್ಕೂ ಕೊಡಲ್ಪಡಬೇಕಾದ ಲೈಸೆನ್ಸುಗಳನ್ನು ಕ್ರಮಪಡಿಸುತ್ತೆ:—

(1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಯೆ ಲೈಸೆನ್ಸ್‌ಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ್ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ.

(b) ಮದ್ರಾಸ್ ಆಧಿಪತ್ಯಕ್ಕೆ ಶೇರಿದ ಶೇಂದಿ ಅಂಗಡಿಕಾರರ ಅಥವಾ ಗುತ್ತಿಗೆದಾರರ.

(c) ಸನ್ 1898ನೆ ಇಸವಿ ಜೂನ್ 20ನೆ ಮಾರ್ಕಂ 11897—906—Ex. 485ನೆ ನಂಬರುಳ್ಳ ಗವರ್ನ್ಮೆಂಟ್ ಇಸ್ತಿಹಾರ್ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲೆನಾಡಿನಲ್ಲಿರುವ ಕಾಫಿ ತೋಟಗಳಲ್ಲಿಯೂ—ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಖರ್ಗಗಳಲ್ಲಿಯೂ ಇರುವ ಮರಗಳ ಮಾಲೀಕರು.—

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನು, ಸಂಬಂಧಪಟ್ಟ ಎಕ್ಸೈಜ್ ಇನ್ಸ್‌ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿಂದ ಪಡೆಯಬಹುದು. ದರಖಾಸ್ತುದಾರರು ತಾವು ಅಪೇಕ್ಷಿಸುವ ಸರ್ಕಾರೀ ಮರಗಳಿಗಾಗಿ ಮೊದಲನೇ ಖಿಸ್ತಿನ ಮರ ತೆರಿಗೆಯನ್ನೂ ಮರದ ಮಾಲ್ಕಿಯನ್ನು ಮೊದಲೇ ಪಾವತಿ ಮಾಡಬೇಕು.

(3) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರ ತೆರಿಗೆಯು ಮೈಸೂರು ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸ್‌ಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರ್ರಿಗೆ ಒಂದೇ ಖಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್ದಾರರು ನಿಧಾಯಕವಾದ ಚರ್ಲ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸ್‌ಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿಗಳಿಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್‌ಪೆಕ್ಟರವರಿಂದ ರವಾನೆಯ ಪರ್ಮಿಟ್ಟನ್ನು ಪಡೆಯತಕ್ಕದ್ದು.

(4) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟ್ ರೇಂಜ್ ಆಫೀಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಅಥವಾ ವಿಶೇಷ ಸಂದರ್ಭಗಳಲ್ಲಿ ಸಬ್ ಇನ್ಸ್‌ಪೆಕ್ಟರ ದರ್ಜೆಗೆ ಕಮ್ಮಿಯಾಗಿಲ್ಲದೆ ಇರತಕ್ಕ ನೌಕರನಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದ್ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳ ಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫೀಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟಿಸ್ ಕೊಟ್ಟ ತರುವಾಯ ಹಾಗೆ ಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟಕೂಡಲೆ ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗರಿಗಳನ್ನು ತೆಗೆದುಹಾಕಲಿಕ್ಕೂ, ಪಾಣೆ ಯಾ ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(7) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಅಂದರೆ ಉತಾರ್ ಲೈಸೆನ್ಸಿಗೆ ದರಖಾಸ್ತು ಯಾವ ಕಾಲದಲ್ಲಿ ಕೊಡಲ್ಪಡಲಿ, ಜುಲೈ ಗುರ್ರೇ ಲಾಗಾಯಿತು ಜೂನ್ ಆಖೈರ್ ವರಿಗೆ ಆಗಿರುತ್ತೆ. ಲೈಸೆನ್ಸ್‌ದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟ ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖ್ಯೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಲೈಸೆನ್ಸ್ ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(8) ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಮರಕ್ಕು ಈ ಕೆಳಗೆ ನಮೂದು ಮಾಡಿರುವ ತೆರಿಗೆಗಳು ಪಾವತಿಯಾಗತಕ್ಕದ್ದು:—

ಮರದ ತರಹೆ—	ಮರ ಒಂದಕ್ಕೆ ವರುಷ ಒಂದಕ್ಕೆ ಕೊಡಬೇಕಾದ ಮರತೆರಿಗೆ. ರೂ.	ಆ.	ಪೈ.
ಈಚಲು	1	4	0
ತೆಂಗು	2	2	0
ತಾಳೆ	1	9	6
ಬಗನಿ	2	0	0
ದಡಸಾಲು	0	8	6

ಟಿಪ್ಪಣಿ.—ಮೇಲೆ ನಮೂದಿಸಿರುವ 17 (1) (c)ನೆ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(9) ಎಕ್ಸೈಜ್ ಕಮಿಷ್ನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮುರತೆರಿಗೆ ಮೊಬಲಗು ಈ ಕೆಳಗೆ ನಮೂದ್ ಮಾಡಿರುವ ಕಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು :—

ಲೈಸೆನ್ಸುಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮುರತೆರಿಗೆ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಗುರ್ರೈ ತಾರೀಖಿನಲ್ಲಿ ಪಾವತಿಯಾಗಬೇಕಾದ ಮುರ ತೆರಿಗೆ ದಾಮಾಷಾಯಿ.
1909ನೆ ಇಸವಿ ಜುಲೈ ಗುರ್ರೈ ಲಾಗಾಯಿಯಿತು 1910ನೆ ಏಪ್ರೈಲ್ 30ನೆ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದು ಭಾಗ.	ಉಳಿದ ಮೂರರಲ್ಲಿ ಯರಡುಭಾಗವು.
1910ನೆ ಇಸವಿ ಮೇ ಗುರ್ರೈ ಲಾಗಾಯಿತು 1910ನೆ ಜೂನ್ 30ನೆ ತಾರೀಖಿನ ವಳಗಾಗಿ.	ಎಲ್ಲಾ.	ಇಲ್ಲಾ.

XXII. ಗಾಂಜಾ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.—

(1) ಗಾಂಜಾ ಲೈಸೆನ್ಸಿನಿಂದ ಗಾಂಜಾ ಮತ್ತು ಭಂಗಿ ಗಿಡದಿಂದ ತಯಾರ್ಮಾಡಲ್ಪಟ್ಟ ಇತರ ಮದಕ ಪದಾರ್ಥಗಳ ಬಿಕರಿಗೆ ಮಾತ್ರ ಹಕ್ಕು ಉಂಟಾಗುತ್ತೆ.

(2) (ಇನ್ಸ್ಪೆಕ್ಟರ ಅಪ್ಪಣೆ ಮೇರೆಗೆ ಬಿಕರಿದಾರನ ಜವಾಬ್ದಾರಿಮೇಲೂ ಅವನ ಲುಕ್ಸಾನಿಗೂ ಒಳಪಟ್ಟು ಬಾಜಾರಿ ಜನಗಳಿಗೆ ವಿಕ್ರಯಿಸುವ ಬ್ಯ ಚಿಲ್ಲರೆ ಪುರೋಖುತ್ತದಾರನಲ್ಲಿರತಕ್ಕ ಪುಡಿಯಿಂದ ತಯಾರ್ಮಾಡಲ್ಪಟ್ಟ ಹಲ್ವಾ ಶಿವಾಯಿ) ತಮಾಂ ಗಾಂಜಾ ಅಥವಾ ಅದರ ತಯಾರಿಗಳೂ ಮತ್ತು ಮಿಲಾವಣಿಗಳೂ ಸರ್ಕಾರದಿಂದ ಮಾತ್ರವೇ ಕೊಂಡುಕೊಳ್ಳಲ್ಪಡತಕ್ಕವು ಮತ್ತು ಇದಕ್ಕೆ ವಿಧಾಯಕವಾದ ಫಾರಂನಲ್ಲಿ ಒಂದು ಪರ್ಮಿಟ್ ಇರತಕ್ಕದ್ದು.

(3) 80 ತೊಲೆಗಳುಳ್ಳ ಶೇರು 1ಕ್ಕೆ ಗಾಂಜಾವಿನ ಖರೀದಿಯು ರೂಪಾಯಿ 1—0—0 ಪ್ರಕಾರವೂ, ಮಾಜುಮಿನ ಖರೀದಿಯು ರೂ. 0—6—6 ಪ್ರಕಾರವೂ ಇರತಕ್ಕದ್ದು ; ಈ ಖರೀದಿಗಳು (ಲೋಕಲ್ ಸೆಸ್ಸ್ ಶೇರಿ) ಗಾಂಜಾ ಶೇರು 1ಕ್ಕೆ ರೂ. 5—0—0 ಮತ್ತು ಮಾಜುಂ ಶೇರು 1ಕ್ಕೆ ರೂ. 1—1—0 ಪ್ರಕಾರದ ಹಾಸಲಲ್ಲದೆ ಪ್ರತ್ಯೇಕವಾಗಿ ಪಾವತಿಯಾಗತಕ್ಕದ್ದು.

(4) ಲೈಸೆನ್ಸುದಾರನು ಮೇಲ್ಕಂಡ ಹಾಸಲನ್ನೂ ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಪಾವತಿಮಾಡಿ ಗೊತ್ತುಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನು ತಾಲ್ಲೂಕು ಖಜಾನೆಯಲ್ಲಿ ಹಾಜರ್ಮಾಡಿದರೆ ಖಜಾನೆಯವರು ಸದರಿ ರಶೀತಿಯಲ್ಲಿ ನಮೂದು ಮಾಡಿರುವ ಹಾಸಲು ಮತ್ತು ಖರೀದಿ ಮೊಬಲಗಿಗೆ ಸರಿಯಾದ ಗಾಂಜಾ ಯಾ ಮಾಜುಮನ್ನು ಸರಬರಾಯಿ ಮಾಡತಕ್ಕದ್ದು. ಮತ್ತು ಗಾಂಜಾ ಯಾ ಮಾಜುಮನ್ನು ಲೈಸೆನ್ಸ್ ಪಡೆದ ಅಂಗಡಿಗೆ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(5) ಗಾಂಜಾ 80 ತೊಲೆ ಶೇರು 1ಕ್ಕೆ 10 ರೂಪಾಯಿ ಪ್ರಕಾರವೂ ಯಾ ತೊಲೆ 1ಕ್ಕೆ ಎರಡಾಣೆ ಪ್ರಕಾರವೂ ಮಾಜುಂ ಶೇರು 1ಕ್ಕೆ ರೂ. 1—10—8 ಪ್ರಕಾರವೂ, ಲೈಸೆನ್ಸದಾರನಿಂದ ವಿಕ್ರಯಿಸಲ್ಪಡತಕ್ಕದ್ದು.

(6) ಲೈಸೆನ್ಸದಾರನು 1909ನೆ ಇಸವಿ ಜುಲೈ ಗುರ್ರೈಯಲ್ಲಿ ಹಳೇ ಲೈಸೆನ್ಸದಾರನ ಬಾಬತು ದಾಸ್ತಾನ್ ಇರಬಹುದಾದ ಮದಕ ಪದಾರ್ಥಗಳನ್ನು ಡೆಪ್ಯುಟಿ ಕಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿಮಾಡಿ ತೆಗೆದುಕೊಳ್ಳಲು ಗುರಿಯಾಗತಕ್ಕದ್ದು.

(7) ಲೈಸೆನ್ಸದಾರನು ಯಾವ ಮನುಷ್ಯನಿಗೂ, ಯಾವ ನೆಪದಮೇಲೂ ಒಂದು ದಿನದಲ್ಲಿ ನಾಲ್ಕು ತೊಲೆಗಳಿಗಿಂತಲೂ ಹೆಚ್ಚಾಗಿ ಗಾಂಜಾವನ್ನು ವಿಕ್ರಯಿಸಕೂಡದು.

(8) ಅಂಗಡಿಯಲ್ಲಿ ಗಾಂಜಾವನ್ನು ಸೇವನೆ ಮಾಡುವದಕ್ಕೂ, ಹೊಗೆಬತ್ತಿ ಸೇದುವದಕ್ಕೂ, ಯಾ ಗಾಂಜಾ ಮುಂತಾದ್ದನ್ನು ಸೇವನೆ ಮಾಡುವದಕ್ಕೂ ಜನಗಳು ಸೇರುವ ಗಾಂಜಾಖಾನೆಗಳನ್ನೂ, ಅಥವಾ ಅಂತರಂಗಸ್ಥಳಗಳನ್ನೂ ಇಟ್ಟಿರುವ ಜನಗಳಿಗೆ ಗಾಂಜಾವನ್ನು ವಿಕ್ರಯಿಸುವದು ಅಡ್ಡಿಪಡಿಸಲ್ಪಟ್ಟಿದೆ.

(9) ಮದಕ ಪದಾರ್ಥಗಳನ್ನು ಮಾರಲಿಕ್ಕೆ ಯಾವ ಹೆಂಗಸನ್ನೂ ಇಡಕೂಡದು.

XXIII. ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಸರ್ಕಾರದ ಮತ್ತು ಎಕ್ಸೈಜ್ ಕಮಿಷನರವರ ಇಸ್ತಿಹಾರ್ನಾಮೆಗಳಲ್ಲಿಯೂ ಮತ್ತು ಆಗಿಂದಾಗ್ಯೆ ಸಾದರಾಗುವ ಸಾಧಾರಣ ಯಾ ವಿಶೇಷ ಕಾನೂನುಗಳಲ್ಲಿಯೂ ಹಾಲಿ ಜಾರೀಲಿರುವ ಅಫೀಂ ಆಕ್ಟು ಅಥವಾ ಇತಃಪರ ವಿಧಿಸಲ್ಪಡುವ ಇತರ ಕಾನೂನುಗಳಲ್ಲಿಯೂ ಇರುವ ನಿಬಂಧನೆಗಳನ್ನು ಅನುಸರಿಸಲು ಲೈಸೆನ್ಸದಾರನು ಬದ್ಧನಾಗಿರತಕ್ಕದ್ದು.

2. ಬಿಕರಿಗಾಗಿ ಲೈಸೆನ್ಸ ಪಡೆದಿರುವ ಅಂಗಡಿಗಳಲ್ಲಿ ಅಫೀಂ ಅಥವಾ ಯಾವ ವಿಧವಾದ ಅದರ ತಯಾರೀಯನ್ನು ಹೊಗೆ ಸೇದುವದೂ ಯಾ ಸೇವನೆ ಮಾಡುವದೂ, ಮಾರ್ಫಿಯ ಅಥವಾ ಸೇದುವದಕ್ಕೆ ತಯಾರ್ಮಾಡಲ್ಪಟ್ಟವುಗಳನ್ನು ಬಿಕರಿ ಮಾಡುವದೂ ಅಡ್ಡಿಪಡಿಸಲ್ಪಟ್ಟಿರುತ್ತೆ.

(3) ಡೆಪ್ಯುಟಿ ಕಮಿಷ್ನರವರಿಂದ ಲೈಸೆನ್ಸನ್ನು ಪಡೆಯದೆ ಯಾವ ಅಂಗಡಿಯೂ ಇಡಲ್ಪಡಕೂಡದು. ಲೈಸೆನ್ಸದಾರರುಗಳಿಂದ ವಾಡಿಕೆಯಾದ ಎದುರು ಒಡಂಬಡಿಕೆಗಳು ಬರೆದುಕೊಡಲ್ಪಡತಕ್ಕದ್ದು.

(4) ಸ್ವಾಧೀನದಲ್ಲಿ ಇಟ್ಟುಕೊಳ್ಳಬಹುದಾದ ಮೊತ್ತಕ್ಕಿಂತಲೂ ಹೆಚ್ಚಾಗದಂತೆ ಮದಕ ಪದಾರ್ಥಗಳನ್ನು ಮತ್ತು ಸೇದುವ ತಯಾರೀ ಸಾಮಾನುಗಳನ್ನು ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಮಾತ್ರ ಖಾಸಗಿ ಯಾ ಖುಷ್‌ಖಾಷ್ ಜನರು ತಯಾರ್ ಮಾಡಿಕೊಳ್ಳಲು ಅಪ್ಪಣೆ ಕೊಟ್ಟಿದೆ.

(5) ಅಂಗಡಿದಾರರು 80 ತೊಲೆಯ ಒಂದು ಸೇರಿಗೆ ರೂ. 37—8—0 ಪ್ರಕಾರ ಒಂದು ಸಾರಿಗೆ 24 ತೊಲೆಗೆ ಕಮ್ಮಿ ಇಲ್ಲದಂತೆ ಖಜಾನೆಯಿಂದ ಅಫೀಮನ್ನು ಪಡೆದುಕೊಳ್ಳಬಹುದು. ಈ ವಿಕ್ರಯವು ವಿಧಾಯಕವಾದ ನಮೂನೆಯಲ್ಲಿ ರಹದಾರಿಯೊಂದಿಗೆ ಇರತಕ್ಕದ್ದು.

(6) ಮೇಲೆ ನಮೂದಿಸಿರುವಂತೆ ಪಡೆದ ಅಫೀಂ ಶಿವಾಯಿ ಇನ್ಯಾವ ಅಫೀಮೂ ದುಕಾನ್‌ದಾರರಿಂದ ವಿಕ್ರಯಿಸಲ್ಪಡಕೂಡದು, ತೆಗೆದುಕೊಳ್ಳಲ್ಪಡಕೂಡದು, ಯಾ ಸ್ವಾಧೀನದಲ್ಲಿಟ್ಟುಕೊಳ್ಳಲ್ಪಡಕೂಡದು. ಯಾವ ಚಿಲ್ಲರೆ ಅಫೀಂ ಅಂಗಡಿಯಲ್ಲಿಯೂ ಆಹಾರ ಅಥವಾ ಪಾನದ ಯಾವ ಸಾಮಾನುಗಳೂ ವಿಕ್ರಯಿಸಲ್ಪಡಕೂಡದು.

(7) ಈ ಸ್ವತಂತ್ರದ ಹಕ್ಕು ಕ್ರಮವಾಗಿ ಮಂಜೂರಾದ ದುಕಾನ್‌ಗಳಲ್ಲಿ (a) ಅಫೀಮಿನ ಚಿಲ್ಲರೆ ಬಿಕರಿಗೂ ಮತ್ತು (b) ಮಾರ್ಫಿಯ ಮತ್ತು ಸೇದುವದಕ್ಕೆ ತಯಾರ್ಮಾಡಲ್ಪಟ್ಟಿರುವ ಪದಾರ್ಥ ಇವುಗಳು ಶಿವಾಯಿ ಅಫೀಂ ಅಥವಾ ಗಸಗಸೆಯಿಂದ ಮಾಡಲ್ಪಟ್ಟ ಮದಕ ಪದಾರ್ಥಗಳನ್ನೂ ತಯಾರ್ ಮಾಡುವದಕ್ಕೂ ಮತ್ತು ಚಿಲ್ಲರೆ ಬಿಕರಿ ಮಾಡುವದಕ್ಕೂ ಅನ್ವಯಿಸುತ್ತೆ.

(8) ಲೈಸೆನ್ಸುದಾರನು ಅಫೀಮನ್ನು ಜನಗಳಿಗೆ 80 ತೊಲೆಯ ಸೇರು 1ಕ್ಕೆ 45 ರೂಪಾಯಿ ಯಾ ತೊಲೆ 1ಕ್ಕೆ 9 ಆಣೆ ದರದ ಮೇರೆಗೆ ಮಾರತಕ್ಕದ್ದು.

(9) ಲೈಸೆನ್ಸ್ ದುಕಾನ್‌ದಾರನು ಯಾವ ಮನುಷ್ಯನಿಗೂ ಒಂದೇ ಸಾರಿಗೆ 3 ತೊಲೆಗಿಂತಲೂ ಹೆಚ್ಚಾಗಿ ಅಫೀಂ ಅಥವಾ ಮದಕ ಪದಾರ್ಥಗಳನ್ನು ಮಾರಕೂಡದು.

(10) ಲೈಸೆನ್ಸನ್ನು ಕೊಡುವ ಕಾಲದಲ್ಲಿ ಡೆಪ್ಯುಟಿ ಕಮಿಷ್ನರವರು ಗೊತ್ತು ಮಾಡುವ ಮೊತ್ತಕ್ಕಿಂತಲೂ ಹೆಚ್ಚಾಗಿ ಮಾರ್ಫಿಯ ಅಥವಾ ಸೇದುವದಕ್ಕೆ ತಯಾರ್ಮಾಡಲ್ಪಟ್ಟಿರುವ ಪದಾರ್ಥಗಳು ಶಿವಾಯಿ ಅಫೀಮನ್ನು ಯಾ ಮದಕ ಪದಾರ್ಥಗಳನ್ನೂ ಲೈಸೆನ್ಸುದಾರನು ಇಟ್ಟುಕೊಂಡಿರಕೂಡದು.

(11) ಲೈಸೆನ್ಸುದಾರನು 1909ನೆ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ಹಳೇ ಲೈಸೆನ್ಸದಾರನ ಬಾಬತು ದಾಸ್ತಾನ್ ಇರಬಹುದಾದ ಅಫೀಂ ಯಾ ಅದರ ತಯಾರಿಯು ಯಾ ಅಫೀಂ ಸೇರಿದ ಪದಾರ್ಥಗಳು ಯಾ ಗಸಗಸೆಯಿಂದ ತಯಾರ್ಮಾಡಲ್ಪಟ್ಟ ಮದಕ ಪದಾರ್ಥಗಳನ್ನು ಡೆಪ್ಯುಟಿ ಕಮಿಷ್ನರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿ ಮಾಡಿ ತೆಗೆದುಕೊಳ್ಳಲು ಬದ್ಧನಾಗಿರತಕ್ಕದ್ದು.

1909—1910ನೆ ವರುಷಕ್ಕಾಗಿ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟೀಸ್.

ನಂ. , ತಾರೀಖು 13ನೆ ಏಪ್ರೆಲ್ 1909.

1. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರ್ಟರನ್ನು 1909ನೆ ಇಸವಿ ಜುಲೈ ಗುರ್ರೆ ತಾರೀಖಿಗೆ ಪ್ರಾರಂಭವಾಗಿ 1910ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಒಟ್ಟು ಸ್ವತಂತ್ರದ ಹಕ್ಕನ್ನು ಆ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಈ ಕೆಳಗೆ ನಮೂದು ಮಾಡಿರುವ ಸ್ಥಳದಲ್ಲಿ ಮತ್ತು ತಾರೀಖಿನಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಬೌರಿಂಗ್‌ಪೇಟೆ ಮತ್ತು ಕೋಲಾರ್ ಚಿನ್ನದ ಗಣಿಗಳಲ್ಲಿನ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಮೇರೆಗೆ ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರ್ರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವುದಕ್ಕೆ ಮುಂಚಿತವಾಗಿ 250 ರೂಪಾಯಿ, ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನ್ಮೆಂಟಿನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ, ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫೆ ಮುತಾಲೀಕರನ್ನ ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುತ್ತದೆ.

6 ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ಮಂಜೂರಾದ್ದನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ ಅವರ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರ್ರವರಲ್ಲಿ ಕೊಡತಕ್ಕದ್ದು. ಮತ್ತು 7ದಿನಗಳೊಳಗಾಗಿ ಸದರೀ ನೋಟೀಸು ಅವರಿಗೆ ಖುದ್ದಾಗಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿರುವ ವಯಸ್ಸಾದ ಕುಟುಂಬಕ್ಕೆ ಸಂಬಂಧಪಟ್ಟ ಗಂಡಸಿಗೆ ಆಗಲೀ ಜಾರೀಯಾದ ನಂತರ, ಯಾ ಸದರೀ ಮನೆಗೆ ಅಂಟಿಸಿದ ನಂತರ ಯಾ ರಿಜಸ್ಟರ್ಡ್ ಪೋಸ್ಟ ಮೂಲಕ ಕಳುಹಿಸಿದ ತರುವಾಯ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯ ಬೆಲೆಗನುಸಾರವಾಗಿ-ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನು ಅವರ ಮೊದಲನೆ ಠೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನು ಪಡಿಯತಕ್ಕದ್ದು. ಮತ್ತು ಎವರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎವರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರೀಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನು ಹೊಂದಿರುತ್ತೆ.

7. ಮೇಲಿನ 6ನೆ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಅಥವಾ ಇತರೇ ವಿಧವಾದ ವಿಲೇವಾರಿ ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಪರತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದಲ್ಲಿ ಅಥವಾ ಇತರೇ ವಿಧವಾಗಿ ವಿಲೇವಾರಿ ಆದಲ್ಲಿ ಕಡೆ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನು ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ಅಥವಾ ಇತರೇವಿಧವಾದ ವಿಲೇವಾರಿಯಿಂದ ಆಗುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕೇನೆ ಜಮಾ ಮಾಡಿಕೊಳ್ಳತಕ್ಕದ್ದು :—

8. ಮೇಲಿನ 6ನೆ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಬ್ರೂಯರಿಗಳಲ್ಲಿಯಾಗಲಿ ಅಥವಾ ಕಿರ್ಕಿಯಲ್ಲಿ ಮಿರ್ಕಿ ಅಂಡ್ ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಏಬ್ರಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ, ಕಂತ್ರಿ ಬೀರು ಯಾ ಪೋರ್ಟರನ್ನು ಮಾರುವುದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯೂ ಡೆಪ್ಯುಟಿ ಕಮಿಷನರ್ ನಿಯಮಿಸುವ ಹಾಲೀ ಜಾರೀಲಿರುವ ಅಂಗಡಿ ಒಳಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಪೀಪಾಯಿಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದಹಾಗೆ ಪಾವತಿ ಮಾಡಲಿಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿ ನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನು ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(4) ಲೈಸೆನ್ಸದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೆ ಎರಡಾಣೆ ಒಂದುವರೆ ಪೈ ಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು, ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ ಎಂಬ ರಹದಾರಿಯನ್ನು ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮಿಷನರ್ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡೆದ ಇತರ ಆಫಿಸರು ಸರಕನ್ನ ಲೈಸೆನ್ಸದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲಿಕ್ಕರ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಬರಿಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸದಾರನು 1909ನೆ ಇಸವಿ ಜುಲೈ ಗುರ್ಲೇ ತಾರೀಖಿನಲ್ಲಿ ಹಳೇ ಲೈಸೆನ್ಸದಾರನ ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾನ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯಗಳನ್ನು ಹಳೇ ಲೈಸೆನ್ಸದಾರನಿಗೆ ಪಾವತಿ ಮಾಡಿ ತೆಗೆದುಕೊಳ್ಳಲು ಗುರಿಯಾಗಿರತಕ್ಕದ್ದು.

(8) ಈ ಗುತ್ತಿಗೆ ಎಕ್ಸೈಜ್ ಕಮಿಷನರ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ, ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(9) ದುಕಾನದಾರನು ಲೈಸೆನ್ಸದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ, ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(10) ಅವನು ಮಂಜೂರ್ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಕೀಸೆವರವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯುವಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನಗಳು ಅಂದರೆ ನಾಲ್ಕು ಶೀಸೆಗಳಿಗಿಂತಾ ಹೆಚ್ಚಾಗಿರಕೂಡದು.

(11) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ ಕಮಿಷನ್ಡ ಆಫಿಸರಿಗಾದರೂ, ಪ್ರೈವೇಟ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ ಅಥವಾ ಈಸ್ಟಿಂಡಿಯನ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾ ಹತ್ತಿ ಬೀಳುವಂತೆ ಮಾಡಕೂಡದು. ಮತ್ತು ಅವರು ಅಕ್ರಮವಾಗಿ ನಡಿಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು. ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫಿಸರ್ ಯಾ ಮೇಜಿಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ ಹುಡುಗರಿಗೆ ಆಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂ ಕೂಡದು.

(12) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(13) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗೆದುಕೊಳ್ಳಕೂಡದು. ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರಿಗೆ ನಗದಾಗಿ ಹಣ ತೆಗೆದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಬರೀದಿ ವಸೂಲ್ಮಾಡಬೇಕು.

(14) ಈ ಲೈಸೆನ್ಸ ಪ್ರಕಾರ ಮಾರುವ ಬೀರು ಯಾ ಪೋರ್ಟರ್ ಒಳ್ಳೆ ಸಾಮಗ್ರಿಯುಗಳಿಂದ ಮಾಡಲ್ಪಟ್ಟದ್ದಾಗಿರಬೇಕು ಮತ್ತು ಅದರ ಗುಣವು ಎಕ್ಸೈಜು ಕಮಿಷನರವರಿಗೆ ಸಮರ್ಪಕ ಉಂಟುಮಾಡತಕ್ಕದ್ದಾಗಿರಬೇಕು. ಮತ್ತು ಮಾರ್ಲ್ಪಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು. ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟೆಯು 1073 ಸಂಖ್ಯೆಯನ್ನು ಮೀರಕೂಡದು. ಬೀರು ಮತ್ತು ಪೋರ್ಟರನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರನಲ್ಲಿ ಮೊತ್ತದಲ್ಲಿ ಶೇಕಡಾ 3ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ ಷರಾಬಿನ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ ಪರಮಾಣತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನಿಗೆ ಗುರಿಯಾಗಿರುವನು, ಇಂಥಾ ಬೀರ್ ಯಾ ಪೋರ್ಟರುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷೀ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(15) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫೀಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು. ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸ್‌ದಾರನಿಂದಲೂ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(16) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆಮೇಲೆ ಹೊರ್ತು ಬೆಳಿಗ್ಗೆ ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಿಲು ತೆಗಿಯಕೂಡದು.

(17) ಕಮ್ಮಿಸರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(18) ಸದರಿ ಅಂಗಡಿಗೆ ಒಂದೇ ಬಾಗಲಿರಬೇಕು. ಹಿಂಭಾಗದಲ್ಲಾದರೂ ಕೊನೇಭಾಗಗಳಲ್ಲಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದಿಲಿ ತಿರುಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಪಾಸೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

(19) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸ್‌ದಾರನ ಯಾ ಆತನತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರುಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇವೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನು ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1909ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಷೆಡ್ಯೂಲ್ ಪ್ರಕಾರ ಹಿಂದಿನ ಮೂರು ಸಾಲು ದಾಮಾಷಾ ಮೇಲೆ ಗುತ್ತಿಗೆ ಸಾಲಿನ ಬಾಕೀ ಅವಧಿಗೆ ಆಗುವ ಬಿಕರಿ ಮೊತ್ತಕ್ಕೆ ಹರಾಜು ದರದ ಪ್ರಕಾರ ಫೀ ಮೊಬಲಗು ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸ್‌ದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಹರಾಜು ತಾರೀಖು.

ಬೌರಿಂಗ್‌ಪೇಟೆ ಮತ್ತು ಭಂಗಾರದ ಗಣಿ ಅಂಗಡಿಗಳು.	ಭಂಗಾರದಗಣಿ ಮಾಜಿಸ್ಟ್ರೇಟ್ ಕೋರ್ಟಿನಲ್ಲಿ ...	1909ನೆ ಮೇ 20.

1909–10ನೇ ಸಾಲಿಗೆ ಬೀರು ಅಂಗಡಿಗಳ ಷೆಡ್ಯೂಲ್ ಪಟ್ಟಿ.

ಅಂಗಡಿಯ ನಂಬರು ಮತ್ತು ಇರತಕ್ಕ ಸ್ಥಳ.	ಬಿಕರಿಯ ಮೊತ್ತ			54 ಗ್ಯಾಲನುಗಳುಳ್ಳ ಪ್ರತಿ ಒಂದು ಹಾಗ್ಸ್ ಹೆಡ್‌ಗೆ ಛಡಸವಾಲು			ಷರಾ
	1905-6	1906-7	1907-8	1906-7	1907-8	1908-9	
1	2	3	4	5	6	7	8
	ಹಾಗ್ಸ್‌ಹೆಡ್	ಹಾಗ್ಸ್‌ಹೆಡ್	ಹಾಗ್ಸ್‌ಹೆಡ್	ರೂ.	ರೂ.	ರೂ.	
1 ರಾಬರ್ಟ್ಸನ್‌ಪೇಟೆ (ಕೋಲಾರ ಭಂಗಾರದ ಗಣಿ) ...	207	43	64	79	52	70	
2 ಬೌರಿಂಗ್‌ಪೇಟೆ ...	21	5	12	57	35	35	

1909ರ ಲಾಗಾಯಿತು 1912ನೆ ಸಾಲಿನ ವರಿಗೂ ಅಂದರೆ 3 ವರುಷಗಳಿಗಾಗಿ ಈಚಲು ಶೇಂದಿ ಅಂಗಡಿಗಳಿಗೆ ಸಮ್ಮಂಧಪಟ್ಟ ಬಿಟ್ಟಿ ಸ್ವಾತಂತ್ರ್ಯದ ಹರಾಜು ನೋಟೀಸು.

ನಂಬರ 9012, ಬೆಂಗಳೂರು, 7ನೆ ಏಪ್ರೆಲ್ 1909.

I. ನಿಯಾಮಕವಾದ ಮತ್ತು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಅಂಗಡಿಗಳಲ್ಲಿ ಶೇಂದಿಯನ್ನು 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1912ನೆ ಇಸವಿ ಜೂನ 30ಕ್ಕೆ ಅಂತ್ಯವಾಗುವ ಮೂರು ವರುಷಗಳ ಕಾಲಕ್ಕಾಗಿ ಬಿಕರಿ ಮಾಡತಕ್ಕ ಬಿಟ್ಟಿ ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಡೆಪ್ಯುಟಿ ಕಮಿಷನರವರು ಯಾ ರೆವಿನ್ಯೂ ಅಸಿಸ್ಟೆಂಟ ಕಮಿಷನರವರು ಯಾ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರು ಯಾ ಡೆಪ್ಯುಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡತಕ್ಕ ಹಾದಾದ ಇತರ ಆಫಿಸರು ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಆ ತಃಖ್ತೆಯಲ್ಲಿ ನಮೂದುಕಂಡ ತಾಲ್ಲೂಕು ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ ಮೂಲಕ ಪ್ರಕಟಸಲ್ಪಟ್ಟಿರುತ್ತೆ. ಹರಾಜುಗಳು ನೇಮಿಸಲ್ಪಟ್ಟ ತಾರೀಖುಗಳಲ್ಲಿ ಪೂರ್ವ್ಯಸದೆಹೋದಲ್ಲಿ ಮಾರನೇ ದಿವಸಗಳಲ್ಲಿಯೂ (ರಜಾ ದಿವಸಗಳು ಹೊರತಾಗಿ) ಹಾಕಲ್ಪಡುವವು.

ಹರಾಜಿನ ಷರತ್ತುಗಳು.

II. ಪ್ರತಿ ಸವಾಲ್ದಾರನೂ ಹರಾಜಿಗೆ ಪೂರ್ವವೇ ಠೇವಣಾತಿಯನ್ನು ಕಟ್ಟತಕ್ಕದ್ದು ಮತ್ತು ಹರಾಜಿನ ತಾರೀಖಿನ ದಿವಸ ಹರಾಜು ಮಾಡುವ ಆಫಿಸರಿಂದ ಸದರಿ ಠೇವಣಿ ಮೊಬಲಗು ತೆಗದುಕೊಳ್ಳಲ್ಪಡುವದು. ಯಾವ ಮನುಷ್ಯನು ಮುಖ್ಯವಾದ ಅಂಗಡಿ ಯಾ ಅನೇಕ ಅಂಗಡಿಗಳಿಗಾಗಿ ಸವಾಲ್ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅಂಥಾವನು ಸಾಧಾರಣವಾಗಿ 50 ರೂಪಾಯಿ ಠೇವಣಿ ಯನ್ನಿಡತಕ್ಕದ್ದು. ಸವಾಲು 2 ಯಾ 3 ಅಂಗಡಿಗಳಿಗೆ ವಿಾರದೆಯೂ ಮತ್ತು ಅವುಗಳ ಮಾಹೆಯಾನ ಬಿಟ್ಟಿ ಗುತ್ತಾ ಮೊಬಲಗು 50 ರೂಪಾಯಿ ಅಥವಾ ಅದಕ್ಕೆ ಕಮ್ಮಿಯಾಗಿಯೂ ಇದ್ದಪಕ್ಷದಲ್ಲಿ ಸವಾಲುದಾರನ ಠೇವಣಿಯು 20 ರೂಪಾಯಿಗಳಿಗೆ ತಗ್ಗಿಸಲ್ಪಡುವದು ಮತ್ತು ಒಂದೊಂದು ಚಿಕ್ಕ ಅಂಗಡಿಗೆ ದರಖಾಸ್ತು ಮಾಡುವ ಸವಾಲ್ದಾರರ ಠೇವಣಿಯು 5 ರೂಪಾಯಿಗೆ ತಗ್ಗಿಸಲ್ಪಡುವದು. ಯಾವದಾದರೂ ಅಂಗಡಿಗಳ ಮಾಹೆಯಾನ ಸರಾಸರಿ ಗುತ್ತಾ ಮೊಬಲಗು ಕೇವಲ ಕಮ್ಮಿಯಾಗಿದ್ದಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರು ಸದರಿ ಅಂಗಡಿಗಳ ಬಗ್ಯೆ ತಮ್ಮ ಯುಕ್ತಾನುಸಾರ ಇತರ ನ್ಯಾಯವಾದ ಠೇವಣಿ ಮೊಬಲಗನ್ನು ಗೊತ್ತು ಮಾಡಬಹುದು.

III. (a) ಹರಾಜು ನಡಿಸತಕ್ಕ ಆಫಿಸರರಿಗೆ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಕ್ರಮ ನಂಬರನ್ನು ಬದಲಾಯಿಸಲು ಕಾರಣತೋರುವ ಸಂದರ್ಭದಲ್ಲಿ ಹೊರತು ಆ ಪಟ್ಟಿಯಲ್ಲಿ ಕಂಡ ಕ್ರಮ ನಂಬರಿನಂತೆಯೇ ಅಂಗಡಿಗಳನ್ನು ಹರಾಜು ಮಾಡತಕ್ಕದ್ದು. ಹಿಂದಿನ ಮೂರು ಸಾಲುಗಳ ಸರಾಸರಿ ಗುತ್ತಾ ಮೊಬಲಗೇ ಹರಾಜು ಹಾಕತಕ್ಕ ಅಂಗಡಿ ಯಾ ಅಂಗಡಿಗಳ ಸರ್ಕಾರೀ ಸವಾಲಾಗಿರುತ್ತೆ. ಈ ಸವಾಲು ಮೊಬಲಗು ಕಮ್ಮಿ ಮಾಡತಕ್ಕದ್ದಿಲ್ಲವು; ಮತ್ತು ಅದಕ್ಕೆ ಸಮವಾದ ಯಾ ಹೆಚ್ಚಾದ ಸವಾಲು ಬಾರದೇ ಇದ್ದಪಕ್ಷದಲ್ಲಿ ಅಂಗಡಿ ಯಾ ಅಂಗಡಿಗಳು ಸಾಧಾರಣವಾಗಿ ಒಂದೇ ವರುಷಕ್ಕೆ ಮಾತ್ರ ಮಾರಲ್ಪಡುವವು. ಅಂಥಾ ಸಂದರ್ಭದಲ್ಲಿ ಈ ಅಂಗಡಿಗಳಿಗೆ ಒಂದು ವರುಷಕ್ಕೆ ಮಾತ್ರ ಹರಾಜು ಹಾಕಲ್ಪಡುವ ಶೇಂದಿ ಅಂಗಡಿ ಹಕ್ಕಿಗೆ ಸಲ್ಲತಕ್ಕ ಷರತ್ತುಗಳು ಲಗಾವಾಗುತ್ತೆ.

(b) ಒಂದೊಂದು ಅಂಗಡಿಗೆ ಪ್ರತ್ಯೇಕವಾಗಿ ಹಿಂದಿನ ಮೂರು ವರುಷಗಳ ಸರಾಸರಿ ಗುತ್ತಾ ಮೊಬಲಗಿಗೆ ಸಮವಾದ ಮೊಬಲಗು ಬಾರದೇ ಇದ್ದಾಗ್ಯೂ, ತಾಲ್ಲೂಕು ಬಿಟ್ಟಿಗೆ ಹಿಂದಿನ ಮೂರು ಸಾಲುಗಳ ಸರಾಸರಿ ಗುತ್ತಾ ಮೊಬಲಗಿಗೆ ಕಮ್ಮಿ ಇಲ್ಲದಂತೆ ಬಂದಪಕ್ಷದಲ್ಲಿ ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಮೂರು ವರುಷಗಳ ಹಕ್ಕನ್ನು ಹರಾಜು ಹಾಕಬಹುದು.

(c) ಸವಾಲ್ದಾರರ ತಿಳುವಳಿಕೆ ಬಗ್ಯೆ ಹಿಂದಿನ ಮೂರು ಸಾಲುಗಳ ಗುತ್ತಾ ಮೊಬಲಗೂ, ಬಿಕರಿಯ ಮೊತ್ತವೂ ಮತ್ತು ಗುತ್ತೆ, ಬಿಕರಿ ಇವುಗಳಿಗೆ ಆ ಮೂರು ವರ್ಷಗಳಿಗೆ ಆಗುವ ಸರಾಸರಿಯೂ ಘಾಮಿಷ್ ಮಾಡಲ್ಪಡುತ್ತೆ.

(d) ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಹಕ್ಕು ಒಂದೊಂದು ಅಂಗಡಿಗೆ ವರುಷ 1ಕ್ಕೆ 12 ರೂಪಾಯಿಗೆ ಕಮ್ಮಿ ಇಲ್ಲದ್ದಂತೆ ಗೊತ್ತಾದ ಮೊಬಲಗ್ಗೆ ಕಾಫಿ ಪ್ಲಾಂಟರಿಗೆ ಮಾರಲ್ಪಡಬಹುದು.

(e) ಶೇಂದಿ ಹುಟ್ಟುವಳಿಗೆ ಇರತಕ್ಕ ಹಕ್ಕು ಮಂಜೂರಾಗಿರುವ ಅಥವಾ ಇನ್ನೂ ತೀರ್ಮಾನವಾಗಿಲ್ಲದೆ ಇರುವ ಇನಾಂ ಗ್ರಾಮಗಳಲ್ಲಿರತಕ್ಕ ಶೇಂದಿ ಅಂಗಡಿಗಳು ಪ್ರತ್ಯೇಕವಾಗಿಯೇ ಹರಾಜ್ ಮಾಡಲ್ಪಡಬೇಕಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗನ್ನು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

IV. ಸಾಧಾರಣವಾಗಿ ಪ್ರತಿಯೊಂದು ಅಂಗಡಿಯೂ ಪ್ರತ್ಯೇಕವಾಗಿ ಹರಾಜು ಮಾಡಲ್ಪಡತಕ್ಕದ್ದು. ನಿರ್ವಾಹವಿಲ್ಲದೇ ಇರುವ ಸಂದರ್ಭದಲ್ಲಿ ಮಾತ್ರವೇ ಅಂಗಡಿಗಳನ್ನು ಗುಂಪಾಗಿ ಸೇರಿಸಬಹುದು. ಆದರೆ ಹಾಗೆ ಗುಂಪಾಗಿ ಸೇರಿಸುವಾಗಲೂ ಆಗಿನ ಸಂದರ್ಭಕ್ಕೆ ಎಷ್ಟು ಅಂಗಡಿಗಳನ್ನು ಸೇರಿಸುವದು ಅವಶ್ಯಕವಾಗಿದೆಯೋ ಅಷ್ಟನ್ನು ಮಾತ್ರವೇ ಗುಂಪು ಸೇರಿಸತಕ್ಕದ್ದು.

V. ಮೊಖ್ತ್ಯಾರ್‌ನಾಮೆಯನ್ನು ಪಡೆದ ಹೊರ್ತು ಯಾರೊಬ್ಬನೂ ಇತರರಿಗೋಸ್ಕರ ಸವಾಲು ಮಾಡಕೂಡದು.

VI. ಯಾವ ಅಂಗಡಿಯೂ ಇಬ್ಬರು ಆಸಾಮಿಗಳ ಯಾ ಇಬ್ಬರಿಗಿಂತ ಹೆಚ್ಚಾದ ಆಸಾಮಿಗಳ ಹೆಸರಿನಲ್ಲಿ (ಸದರಿಯವರು ಮೊಖ್ತ್ಯಾರ್‌ನಾಮೆಯ ಮೂಲಕ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪೆನಿ ಯಾ ಫರ್ಮ್ನವರೆಂದು ತೋರಿಸಿದಹೊರ್ತು) ಛಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ನಡಿಸತಕ್ಕ ಆಫಿಸರರು ಯಾರ ಹೆಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

VII. ಯಾವನಾದರೊಬ್ಬ ಮನುಷ್ಯನ ಸವಾಲು ಕೇವಲ ಕಮ್ಮಿಯಾಗಿದೆ ಎಂಬ ಕಾರಣದಮೇಲೂ, ಅಥವಾ ಕ್ರಿಮಿನಲ್ ಕೋರ್ಟಿನಲ್ಲಿ ದರಿಯಾಫ್ತಿಯಾಗಿ ಆತನ ಮೇಲೆ ತಪ್ಪು ಸಾಬೀತು ಆಗಿರುವದ್ದರಿಂದಲೂ, ಅಥವಾ ಒಂದು ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗೆ ಅನುಸಾರವಾಗಿ ನಡಿಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಆತನು ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರಿ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ನಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜ್ ನಡಿಸತಕ್ಕ ಆಫಿಸರು ಅವರಿಗೆ ಯುಕ್ತತೋರಿದಲ್ಲಿ ಅಂಥಾ ಮನುಷ್ಯನ ಸವಾಲನ್ನು ತಿರಸ್ಕರಿಸಬಹುದು. ಸದರೀ ಸ್ವಾತಂತ್ರ್ಯದ ಹಕ್ಕನ್ನು ಇತರರಿಗೆ ಬಿಕರಿಮಾಡಿ ಫಾಯಿದೆ ಪಡೆಯಬೇಕೆಂಬ ಉದ್ದೇಶದಿಂದ ಮಾತ್ರವೇ ಮಾಡಲ್ಪಟ್ಟಿತೆಂದು ತೋರುವ ಸವಾಲನ್ನು ಹರಾಜು ಆಫಿಸರು ಅದಕ್ಕೆ ಕಾರಣವನ್ನು ಬರಹಮೂಲಕವಾಗಿ ರಿಕಾರ್ಡುಮಾಡಿ, ತಿರಸ್ಕರಿಸಬಹುದು.

VIII. ಸದರಿ ಅಂಗಡಿಗಳು ಛಡಸವಾಲುದಾರನಿಗೆ ಕೊಡಲ್ಪಡುವವು ; ಆದರೆ ಹರಾಜು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಡೆಪ್ಯುಟಿ ಕಮಿಷನರವರು ಸದರಿ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರವಾಗಿರುತ್ತಾರೆ. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಯಾದರೆ ಆ ಮಂಜೂರಾತಿಯು ಗವರ್ನ್ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಟ್ಟಹೊರ್ತು ದರಖಾಸ್ತು ಅಂಗೀಕಾರವಾದಂತೆ ಭಾವಿಸಲ್ಪಡತಕ್ಕದ್ದು. ಡೆಪ್ಯುಟಿ ಕಮಿಷನರವರು ಖುದ್ದಾಗಿಯಾಗಲೀ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರರೇ ಆಗಲೀ ಹರಾಜು ನಡಿಸಿದ್ದರೂ ಅಂಥಾ ಕ್ರಮವಾದ ಮಂಜೂರಾತಿಯು ಅವಶ್ಯಕವಾಗಿರುವದು.

IX. ಹರಾಜು ಕಾಲದಲ್ಲಿ ತಕರಾರು ಬಂದ ಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರ ತೀರ್ಮಾನವು ಆಖೈರು ತೀರ್ಮಾನವಾಗಿರತಕ್ಕದ್ದು. ಮತ್ತು ಯಾವಕಾರಣದಿಂದಲಾದರೂ ಛಡ ಸವಾಲನ್ನು ತಿರಸ್ಕರಿಸಿದ ಪಕ್ಷದಲ್ಲಿ ತದನಂತರದ ಛಡಸವಾಲ್ ಅಂಗೀಕರಿಸಲ್ಪಡುವದು, ಅಥವಾ ಅಂಗಡಿಯು ಅವರ ಯುಕ್ತಾನುಸಾರ ದುಸರೆ ಹರಾಜು ಹಾಕಲ್ಪಡುವದು.

X. ಹರಾಜು ಮುಗಿದಮೇಲೆ ದರಖಾಸ್ತು ಸಾಮಾನ್ಯವಾಗಿ ಅಂಗೀಕರಿಸಲ್ಪಡುವದಿಲ್ಲ. ಮೊದಲಿನ ಹರಾಜಿನಲ್ಲಿ ವಿಕ್ರಯವಾಗದ ಅಂಗಡಿಗಳು ಸಾಧಾರಣವಾಗಿ ಆತರುವಾಯ ದುಸರೆ ಹರಾಜಿನಲ್ಲಿ ವಿಲೇವಾರಿ ಮಾಡಲ್ಪಡುವವು. ಆದರೆ ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ತಮ್ಮ ಸೂಕ್ತಾನುಸಾರ ನಡಿಸಲು ಸ್ವತಂತ್ರರಾಗಿರುತ್ತಾರೆ.

XI. ಪ್ರತಿದಿನ ಹರಾಜು ಪೂರೈಸಿದ ಕೂಡಲೆ ನಾ ಮಂಜೂರಾದ ಸವಾಲುದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುವವು. ಹರಾಜು ನಡಿಯುತ್ತಿರುವಾಗ, ಯಾರ ಸವಾಲು ಅಂಗೀಕರಿಸಲ್ಪಡುತ್ತೋ ಅಂಥವನು ಹರಾಜು ನಡಿಸತಕ್ಕ ಆಫಿಸರರು ಕೇಳಿದಲ್ಲಿ ತತ್‌ಕ್ಷಣವೇ ಅಥವಾ ಆ ದಿನದ ಹರಾಜು ಖೈದಾದನಂತರ (IIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಅಲ್ಲದೆ) ಎರಡು ತಿಂಗಳ ಗುತ್ತಿಗೆ ಹಣವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು 6 ತಿಂಗಳ ಗುತ್ತಿಗೆ ಹಣಕ್ಕೆ ಸಮ ಯಾ ಹೆಚ್ಚು ಇದ್ದಾಗ ಶಿವಾಯಿ ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲ್ಕಂಡ IIನೆ ಷರತ್ತಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರಿ ಅಂಗಡಿಗಳು ಪುನಃ ತತ್‌ಕ್ಷಣವೇ ಹರಾಜು ಆಫಿಸರವರಿಂದ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜ್ ಮಾಡಲ್ಪಡುವದು ಅಥವಾ ಡೆಪ್ಯುಟಿ ಕಮಿಷನರವರಿಂದ ಅನ್ಯಥ ವಿಲೇವಾರಿ ಮಾಡಲ್ಪಡುವದು ; ಅಲ್ಲದೆ ತಪ್ಪಿತಸ್ಥನು ಈ ಅಂಗಡಿ ಯಾ ಇತರ ಅಂಗಡಿಗಳ ಬಗ್ಯೆ ಪುನಃ ಸವಾಲು ಮಾಡಲು ನಿಷೇಧಿಸಲ್ಪಟ್ಟಿರುತ್ತಾನೆ.

XII. ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಯಾರು ಮೇಲಿನ II ವ XIನೆ ಷರತ್ತುಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನು ಕಟ್ಟಿರುತ್ತಾರೋ ಅವರು, ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರುಗಳಲ್ಲಿ ಕೊಟ್ಟುಹೋಗತಕ್ಕದ್ದು. ಮತ್ತು ಅವರು 6 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನು ಮೊದಲು ಕಟ್ಟಿರುವ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು * ಠೇವಣಿಯಾಗಿ ಇಡತಕ್ಕದ್ದು. ಡೆಪ್ಯುಟಿ ಕಮಿಷನರವರ ಮಂಜೂರಾತಿಯು ನೋಟೀಸು ಮೂಲಕ ಅವರಿಗೆ ಅಥವಾ ಸದರಿ ವಿಳಾಸದ ಸ್ಥಳದಲ್ಲಿ ಅವರ ಮನೆಗಳಲ್ಲಿರತಕ್ಕ ಇತರ ವಯಸ್ಸಾದ ಗಂಡಸಿಗೆ ಪಾವತಿಯಾಗೇ ಆಗಲೀ ಅಥವಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲೀ ಜಾರಿಯಾದ ಏಳು ದಿವಸಗಳೊಳಗಾಗಿ ತಾಲ್ಲೂಕು

---

* ಠೇವಣಿಗಳು ನಗದಾಗಿಯೇ ಆಗಲಿ ಅಥವಾ ಅಂಗೀಕರಿಸಲ್ಪಟ್ಟ ಇತರ ಸೆಕ್ಯೂರಿಟಿ ರೂಪದಲ್ಲಿಯಾಗಲಿ ಇರಬಹುದು.

ಖಜಾನೆಗೆ ಅಂಥಾ ಠೇವಣಾತಿಗಳನ್ನು ಪಾವತಿ ಮಾಡತಕ್ಕದ್ದು. ಅನಂತರ ಅವರು ಅನಾವಶ್ಯಕವಾಗಿ ಸಾವಕಾಶಮಾಡದೆ ಅಗತ್ಯವಾದ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಲೈಸೆನ್ಸುಗಳನ್ನು ತೆಗೆದುಕೊಳ್ಳತಕ್ಕದ್ದು. ಒಡಂಬಡಿಕೆಗಳನ್ನು ರುಜುಮಾಡಿದ ಮೇಲೆ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸದಾರರು ಯಾ ಅವನಿಂದ ಹಕ್ಕು ಪಡೆದವರು ಅದಕ್ಕೆ ಜವಾಬ್‌ದಾರರಾಗಿರತಕ್ಕದ್ದು. ಪ್ರಾರಂಭದಲ್ಲಿಟ್ಟಿರತಕ್ಕ ಠೇವಣಿ ಮೊಬಲಗು ಈ ಷರತ್ತಿನಮೇರಿಗೆ ಠೇವಣಿ ಇಡಬೇಕಾಗುವ ಮೊಬಲಗಿಗಿಂತಲು ಹೆಚ್ಚಾಗಿ ಇದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಈ ಕೆಳಗೆ ಬರುವ XIIIನೆ ಷರತ್ತಿನ ಪ್ರಕಾರ 2 ರಷ್ಟು ಹೆಚ್ಚಾಗಿ ಠೇವಣಿಯನ್ನು ಕಟ್ಟಬೇಕಾಗಿರುವ ಸಂದರ್ಭದಲ್ಲಿ ವಿನಾ ಖರೀದಿದಾರನಿಗೆ ವಾಪಸು ಕೊಡಲ್ಪಡುವದು.

XIII. ಹರಾಜಿನನಂತರ ವಿಚಾರಿಸಿದ್ದರಲ್ಲಿ ಖರೀದಿದಾರ್ ಜೇವಾಳಸ್ಥನೆಂಬುವದು ಅನುಮಾನಕ್ಕೆ ಗುರಿಯಾಗಿಯೂ ಅಥವಾ ಅವನು ಮೈಸೂರು ಸೀಮೆಯಲ್ಲಿ ಸಾಕಾದಷ್ಟು ಜಿಂದಿಗೆಯನ್ನು ಉಂಟಾಗದೆ ಇರುವ ಅನ್ಯದೇಶದವನಾಗಿಯೂ ಕಂಡುಬಂದಲ್ಲಿ ಮೇಲಿನ XIIನೆ ಷರತ್ತಿನಲ್ಲಿ ನಮೂದಿಸಿರುವದಕ್ಕೆ 2 ರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನು ಅನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನೂ ಕ್ರಮವಾಗಿ ಪಾವತಿ ಮಾಡಲುಳ್ಳವನೆಂದು ಜಾಮೀನುಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಗಳುಳ್ಳವನಾಗಿರುವ ಒಬ್ಬ ಜಾಮೀನುದಾರನನ್ನು ಯಾ ಜಾಮೀನುದಾರರನ್ನು ಹಾಜರುಮಾಡುವದಕ್ಕಾಗಿ ಆತನನ್ನು ಕೇಳಬಹುದು. ಜಾಮೀನು ತಮಸೂಕಿಗೆ 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟಾಂಪು ರೆಗ್ಯುಲೇಷನ್ 1ನೆ ಷೆಡ್ಯೂಲ್ 32ನೆ ಆರ್ಟಿಕಲ್ ಪ್ರಕಾರ ಸ್ಟಾಂಪು ಹಾಕಲ್ಪಡಬೇಕು. ಜಾಮೀನು ಮೊಬಲಗು 1,000 ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಖರೀದಿದಾರನ ಖರ್ಚಿನಿಂದಲೇ ಅದು ರಿಜಿಸ್ಟರ್ ಮಾಡಿಸಲ್ಪಡಬೇಕು.

XIV. ಹರಾಜು ಪೂರೈಸಿದಕೂಡಲೆ ಹರಾಜು ನಡಸತಕ್ಕ ಆಫೀಸರರು ಸಂಬಂಧಪಟ್ಟ ತಾಲ್ಲೂಕು ಅಮಲ್‌ದಾರರಿಗೆ ಹರಾಜಿನಲ್ಲಿ ಪಡದ ಸವಾಲುದಾರರ ಹೆಸರಿನ ಒಂದು ಪಟ್ಟಿಯನ್ನು ಕಳುಹಿಸತಕ್ಕದ್ದು. ಅಮಲ್ದಾರರು ಪ್ರತಿ ಖರೀದಿದಾರನೂ ಜೇವಾಳಸ್ಥನೆಂಬುವದನ್ನು ವಿಚಾರಿಸಿ ಆತನಿಂದ ಪಾವತಿಯಾಗಬೇಕಾದ ಠೇವಣೀ ಮೊಬಲಗು ಅಥವಾ ಜಾಮೀನನ್ನು ದಾಖಲ್ಮಾಡತಕ್ಕದ್ದು. ಅವರು ತಯಾರು ಮಾಡಿದ ಸದರಿ ಪಟ್ಟಿಯನ್ನು ಅವರಿಗೆ ಅದು ತಲ್ಪಿದ 5 ದಿವಸಗಳೊಳಗಾಗಿ ಹರಾಜು ನಡಿಸತಕ್ಕ ಆಫೀಸರರಿಗೆ ರವಾನಿಸತಕ್ಕದ್ದು. ಇವರು ತಾಮಸ ಮಾಡದೆ ಸದರಿ ಪಟ್ಟಿಯಲ್ಲಿ ತಮ್ಮ ಷರಾನಿಸಿ ಅದನ್ನು ಮಂಜೂರಾತಿಬಗ್ಯೆ ಡೆಪ್ಯುಟಿ ಕಮಿಷನರವರಿಗೆ ರವಾನಿಸತಕ್ಕದ್ದು.

XV. ಮೇಲ್ಕಂಡ XIIನೆ ಷರತ್ತಿನ ಪ್ರಕಾರ ಠೇವಣಿ ಇಡುವದಕ್ಕೆ ಯಾ ಮೇಲ್ಕಂಡ XIIIನೆ ಷರತ್ತಿನ ಪ್ರಕಾರ ನಡದುಕೊಳ್ಳಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರದುಕೊಡಲಿಕ್ಕೆ ಯಾ ಮೇಲ್ಕಂಡಂತೆ ಲೈಸೆನ್ಸ್ ಪಡೆಯಲಿಕ್ಕೆ ಯಾವನಾದರೂ ತಪ್ಪಿದರೆ, ಅವನು ಮೊದಲು ಪಾವತಿ ಮಾಡಿರುವ ಠೇವಣಾತಿಗಳು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು, ಡೆಪ್ಯುಟಿ ಕಮಿಷನರವರಿಗೆ ಯುಕ್ತತೋರುವಂತೆ ಅಂಗಡಿಯು ಪುನಃ ಹರಾಜು ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು.

XVI. ಮೇಲ್ಕಂಡ XVನೆ ಷರತ್ತನ್ನು ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿಯಮೇಲೆ ನಡಿಯುತ್ತವೆ. ಈ ದುಸರೆ ಹರಾಜಿನಿಂದ ಬರುವ ಆದಾಯವನ್ನೆಲ್ಲಾ ಆತನು ಕಳದುಕೊಂಡವನಾಗುತ್ತಾನೆ ಮತ್ತು ನಷ್ಟಸಂಭವಿಸುವ ಪಕ್ಷಕ್ಕೆ ಮುರೂ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ಮಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೆ ಹರಾಜುದಾರರಲ್ಲಿ ಫಡಸವಾಲುದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದನ್ನು ಆತನು ಭರ್ತಿಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೆ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರಿ ಠೇವಣಿ ಮೊಬಲಗು ದುಸರೆ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿ ಇದ್ದರೆ, ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ಜಮಾ ಮಾಡಿಕೊಳ್ಳತಕ್ಕದ್ದು. ಸ್ವಾತಂತ್ರ್ಯದ ಹಕ್ಕು ದುಸರಾ ಹರಾಜಿನಿಂದಲ್ಲದೆ ಅನ್ಯಥಾ ವಿಲೇವಾರಿಯಾಗಿ ಅಂಥಾ ವಿಲೇವಾರಿಯನ್ನು ಮುರೂ ಹರಾಜಿಗೆ ಹೋಲಿಸಿ ನೋಡಿದ್ದರಲ್ಲಿ ಸರ್ಕಾರಕ್ಕೆ ನಷ್ಟವಾದರೆ ತಪ್ಪಿತಸ್ಥನು ಈ ನಷ್ಟಕ್ಕೆ ಗುರಿಯಾಗಿರತಕ್ಕದ್ದು.

XVII. ಸ್ವತಂತ್ರದಹಕ್ಕನ್ನು ಕೊಂಡುಕೊಂಡವನು ಕ್ರಮವಾದ ಲೈಸೆನ್ಸು ಕೊಡಲ್ಪಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡದರೆ ಆ ಬಗ್ಯೆ ವಿಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರತಕ್ಕದ್ದು.

C

XVIII. XII ಅಥವಾ XIIIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತೆ. ಅಮಲ್ದಾರರು ಮತ್ತು ಲೈಸೆನ್ಸುದಾರನು ಹಾಗೆ ಒಪ್ಪಿದರೆ ಲೈಸೆನ್ಸ್‌ದಾರನು ಕೊಡತಕ್ಕ ಆಖ್ಯೆರು ಖಿಸ್ತು ಮೊಬಲಗಿಗೋಸ್ಕರ ಸದರಿ ಠೇವಣಿ ಮೊಬಲಗು ಜಮಾ ಮಾಡಿಕೊಳ್ಳಲ್ಪಡತಕ್ಕದ್ದು.

XIX. ಮೇಲೆ ನಮೂದಿಸಿರುವಂತೆ ಕೊಡಲ್ಪಡುವ ಲೈಸೆನ್ಸುಗಳಲ್ಲಿ ಎಲ್ಲಾ ಆಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಮುಂದೆ ನಮೂದುಮಾಡಿರುವ ಸಾಧಾರಣ ಷರತ್ತುಗಳನ್ನೂ ಮತ್ತು ಶೇಂದಿ ಲೈಸೆನ್ಸುಗಳಿಗೆ ಈ ಕೆಳಗೆ ಗೊತ್ತುಮಾಡಿರುವ ವಿಶೇಷ ಷರತ್ತುಗಳನ್ನೂ ವಿವರಿಸಿರುತೆ :—

ಅಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಸಾಧಾರಣ ಷರತ್ತುಗಳು.

1. ಸಾರಾಯಿ ಯಾ ಇತರ ಸ್ವದೇಶ ಷರಾಬನ್ನು ತಯಾರ್‍ಮಾಡುವವರೂ, ಷರಾಬ್ ಬಾಂಡೆಡ್ ಕೋಠಿ ಲೈಸೆನ್ಸದಾರರೂ, ಸಾರಾಯಿಯ ಚಿಲ್ಲರೆ ಮಾರಾಟದಲ್ಲಿಯೂ ಇತರ ಮದತ್ ಪದಾರ್ಥಗಳ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟು ಕೊಳ್ಳಕೂಡದು. ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು. ಈ ನಿರ್ಬಂಧವು ವಿಶೇಷ ಷರಾಬು ಮತ್ತು ರೆಕ್ಟಿಫೈಡ್ ಸಾರಾಯಿಯನ್ನು ತಯಾರ್‍ಮಾಡಿ ಲೈಸೆನ್ಸದಾರ್‍ರಿಗೆ ಒಟ್ಟೊಟ್ಟಾಗಿ ಸರಬರಾಯಿ ಮಾಡತಕ್ಕವರಿಗೆ ಅನ್ವಯಿಸುವದಿಲ್ಲ.

2. ಅಬ್ಕಾರಿ ಯಾ ಅಫೀಂ ಲೈಸೆನ್ಸುಗಳ ಷರತ್ತಿನ ಮೇರೆಗೆ, ಷರಾಬುವಗೈರೆ ಮದ್ಯಗಳನ್ನೂ, ಅಫೀಮನ್ನೂ ಮಾರತಕ್ಕ ಸರಹದ್ದುಗಳು ಲೈಸೆನ್ಸು ಕೊಡತಕ್ಕ ಕಾಲದಲ್ಲಿ ಡೆಪ್ಯುಟಿ ಕಮಿಷನರವರಿಂದ ಗೊತ್ತುಮಾಡಲ್ಪಡುತ್ತೆ. ಲೈಸೆನ್ಸದಾರ್‍ರಲ್ಲದವರಿಗೆ ಲಗಾವಾಗುವ ನಿಬಂಧನೆಗಳಿಗನುಸಾರವಾಗಿ ಹೊರತು, ಷರಾಬು, ಮದತ್ ಪದಾರ್ಥಗಳು ಯಾ ಅಫೀಮನ್ನು ಡೆಪ್ಯುಟಿ ಕಮಿಷನರವರ ವಿಶೇಷ ಅಪ್ಪಣೆ ಶಿವಾಯಿ, ಸದರಿ ಸರಹದ್ದುಗಳ ಹೊರಗಡೆ ಮಾರೋಣವೂ, ಯಾ ಇಟ್ಟುಕೊಂಡಿರೋಣವೂ ಅಡ್ಡಿಮಾಡಲ್ಪಟ್ಟಿದೆ.

3. ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ನಡೆಸಲ್ಪಡತಕ್ಕದ್ದು. ಸದರಿ ಕಟ್ಟಡದ ಪೂರಾ ಅಥವಾ ಒಂದು ಭಾಗವು ಡೆಪೋ ಅಥವಾ ಅಂಗಡಿಯ ಉಪಯೋಗಕ್ಕೋಸ್ಕರವೇ ಪ್ರತ್ಯೇಕವಾಗಿ ಬಿಡಲ್ಪಟ್ಟಿರಬೇಕು. ಡೆಪೋ ಅಥವಾ ಅಂಗಡಿಗೂ ಮತ್ತು ಪಕ್ಕದಲ್ಲಿರುವ ವಾಸದಮನೆಗೂ ಬಾಗಲು ಇದ್ದಲ್ಲಿ ರಾತ್ರಿಕಾಲದಲ್ಲಿ ಬೀಗ ಹಾಕಿರತಕ್ಕದ್ದು. 5,000 ಅಥವಾ ಹೆಚ್ಚಾಗಿ ಪ್ರಜಾಸಂಖ್ಯೆಯುಳ್ಳ ಮ್ಯುನಿಸಿಪಾಲಿಟಿಗಳು ಅಥವಾ ಪಟ್ಟಣಗಳಲ್ಲಿರುವ ಷರಾಬು ಅಂಗಡಿಗಳಿಗೆ ರಸ್ತೆಯಿಂದ ಹೊರತಾಗಿ ಇನ್ನಾವ ಕಡೆಯಿಂದಲೂ ಬಾಗಲುಗಳು ಇರಕೂಡದು. ಹಿಂಭಾಗಗಳಲ್ಲಿಯಾದರೂ, ಪಕ್ಕಗಳಲ್ಲಿಯಾದರೂ, ಕಿಟಿಕಿಯಾಗಲಿ, ಗಂಡಿಯಾಗಲಿ ಇರಕೂಡದು. ಇನ್ನಾವಕಡೆಗೂ ಹೋಗಲೂ ಬರಲೂ ಪ್ರವೇಶಗಳಿರಕೂಡದು. ಬಿಕರಿ ಮಾಡುವ ಜಗಲಿಯು ಬಾಗಲಿಗೆ ಎದುರಾಗಿ ಇರತಕ್ಕದ್ದಲ್ಲದೆ, ಅಂಗಡಿಯ ಒಳಗಡೆಯಿರುವ ಎಲ್ಲಾ ಜನಗಳು ಬೀದಿಯಲ್ಲಿ ತಿರುಗಾಡುವ ಜನಗಳಿಗೆ ಕಾಣುವಹಾಗಿರಬೇಕು. ಶಿವಾಯಿ, ಬೇರೇಕೊಠಡಿಯು ಬಿಕರಿಗಾಗಿ ಉಪಯೋಗಿಸಲ್ಪಡಕೂಡದು, ಅಥವಾ ಪಾನಮಾಡುವವರಿಗೆ ತೆಗೆದಿರಕೂಡದು. ಅಂಗಡಿಯ ಒಳಭಾಗದಲ್ಲಿ ಹಗಲಿನಲ್ಲಿ ಚೆನ್ನಾಗಿ ಬೆಳಕಿರಬೇಕು. ಬಿಕರಿದಾರ ಮತ್ತು ಅವನ ಮನೇ ಜನರು ಅಥವಾ ಕಾವಲುಗಾರರು ಇವರುಗಳು ಶಿವಾಯಿ ಮತ್ತ್ಯಾರಾದರೂ ಅದರಲ್ಲಿ ವಾಸವಾಗಿರಕೂಡದು.

4. ಎರಡು ಅಥವಾ ಹೆಚ್ಚು ಪರಾಯಿದೇಶದ ಮದ್ಯಗಳನ್ನು ಮಾರುವ ಲೈಸೆನ್ಸುಗಳು ಒಬ್ಬನಿಂದಲೇ ಪಡೆದಿದ್ದರತಕ್ಕ ಸಂದರ್ಭ ಶಿವಾಯಿ ಪ್ರತಿ ಒಂದು ಲೈಸೆನ್ಸಿನ ಬಿಕರಿಯು ಪ್ರತ್ಯೇಕ ಕಟ್ಟಡಗಳಲ್ಲಿ ನಡೆಸಲ್ಪಡತಕ್ಕದ್ದು. (ರಸಾಯನಶಾಸ್ತ್ರಜ್ಞರು, ಮತ್ತು ಇಂಗ್ಲೀಷ್ ಔಷಧವನ್ನು ಮಾರುವವರು ಮತ್ತು ಮೆಡಿಕಲ್ ಪ್ರಾಕ್ಟಿಷನರು ಶಿವಾಯಿ) ಲೈಸೆನ್ಸ್ ಕಟ್ಟಡಗಳಲ್ಲಿ ಲೈಸೆನ್ಸಿಗೆ ಸಂಬಂಧಪಟ್ಟದ್ದು ಶಿವಾಯಿ ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನಾಗಲಿ, ಯಾ ಷರಾಬಿಗೆ ಬಣ್ಣ ಕೊಡಲು ಅಥವಾ ರುಚಿ ಹೆಚ್ಚುಮಾಡಲು ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ಯಾವ ಸಾರ ಅಥವಾ ವಸ್ತುವನ್ನಾಗಲಿ ಇಟ್ಟುಕೊಂಡಿರುವದು ಅಡ್ಡಿ ಮಾಡಲ್ಪಟ್ಟಿದೆ. ಅಫೀಂ ಬಿಕರಿಗಾಗಿ ಲೈಸೆನ್ಸುಕೊಟ್ಟಿರುವ ಅಂಗಡಿಗಳಲ್ಲಿ ಮಾರ್ಫಿಯ ಅಥವಾ ಹೊಗೆಸೇದಲು ಉಪಯೋಗಿಸಲ್ಪಡುವ ಪದಾರ್ಥಗಳು ಹೊರ್ತು ಅಫೀಂನಿಂದ ಮಾಡಲ್ಪಟ್ಟ ಮದತ್ ಪದಾರ್ಥಗಳು ತಯಾರ್‍ಮಾಡಲ್ಪಡಬಹುದು. ಯಾ ಮಾರಲ್ಪಡಬಹುದು.

5. ಬಿಕರಿಮಾಡಲ್ಪಡುವ ಲೈಸೆನ್ಸಿನ ತರಹೆ ಮತ್ತು ನಂಬರು, ಲೈಸೆನ್ಸದಾರನ ಹೆಸರು ಮತ್ತು (ಪರಾಯಿದೇಶದ ಮದ್ಯ ಅಥವಾ ವಿಶೇಷ ಮದ್ಯಗಳಿಗೆ ಶಿವಾಯಿ) ಬಿಕರಿಯ ದರ ಇವುಗಳನ್ನು ನಮೂದು ಮಾಡಿರುವ ಹಲಿಗೆಯು ಪ್ರತಿ ಡೆಪೋ ಅಥವಾ ಅಂಗಡಿಯ ಮುಂಭಾಗದಲ್ಲಿ ತಗಲಿಹಾಕಲ್ಪಟ್ಟಿರಬೇಕು. ಈ ವಿವರಗಳು ಸ್ವದೇಶಭಾಷೆಯಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು. ಲೈಸೆನ್ಸು ಅಂಗಡಿಯ ಒಳಗಡೆ ಎಲ್ಲರಿಗೂ ಕಾಣುವಕಡೆ ತಗಲಿಹಾಕಲ್ಪಟ್ಟಿರಬೇಕು.

6. ಮಾರಲ್ಪಡುವ ಯಾ ಮಾರಲಿಕ್ಕೆ ಇಟ್ಟುಕೊಂಡಿರುವ ಎಲ್ಲಾ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಒಳ್ಳೇದಾಗಿರಬೇಕು. ಮತ್ತು ಕಲಬೆರಿಕೆಯಿಲ್ಲದೆ ಇರಬೇಕು. ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಮದತ್ ಪದಾರ್ಥಗಳನ್ನು ತಯಾರ್‍ಮಾಡುವದು ಶಿವಾಯಿ ಅವುಗಳ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವದಕ್ಕಾಗಲಿ ಅಥವಾ ಇನ್ನಾವ ಕಾರಣಗಳಿಗಾಗಲಿ, ಅವುಗಳಿಗೆ ಏನೂ ಬೆರಿಸಕೂಡದು. ಕೋಠಿಗಳನ್ನೂ, ಅಂಗಡಿಗಳನ್ನೂ ತನಿಖೆ ಮಾಡುವದಕ್ಕೆ ಅಧಿಕಾರವುಳ್ಳ ಆಫೀಸರುಗಳು (25ನೆ ಷರತ್ತನ್ನು ನೋಡಿ) ಪಾನಮಾಡುವದಕ್ಕೂ, ಅಥವಾ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಅಥವಾ ಕೆಡಿಸಿದ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನು ಖರ್ಚುಮಾಡಕೂಡದೆಂದು ಅಪ್ಪಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಕ್ಸೈಜ್ ಕಮಿಷನರವರೂ, ಡೆಪ್ಯುಟಿ ಕಮಿಷನರವರೂ ಮತ್ತು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರವರೂ ಈರೀತಿಯಲ್ಲಿ ಪಾನಮಾಡಲಿಕ್ಕಾಗಲಿ, ಉಪಯೋಗಿಸಲಿಕ್ಕಾಗಲಿ ನಾಲಾಯಖಾಗಿರುವದನ್ನು ನಾಶಪಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

7. 16 ವರುಷಕ್ಕೆ ಕಮ್ಮಿ ವಯಸ್ಸುಳ್ಳವರಿಂದಲೇ ಆಗಲಿ ಅಥವಾ ಕುಷ್ಠರೋಗದಿಂದ ಅಥವಾ ಇತರ ಅಂಟುರೋಗದಿಂದ ಪೀಡಿತರಾದ ಜನಗಳಿಂದ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಮಾರಲ್ಪಡಕೂಡದು. ಅಥವಾ ವಯ್ಯಲ್ಪಡಕೂಡದು. ಅಂಗಡಿ ಯಾ ಡೆಪೋಗಳಲ್ಲಿ ಬಿಕರಿ ಬಗ್ಯೆ ಅಂಥಾ ಜನಗಳನ್ನು ನೇಮಿಸೋಣವು ಅಡ್ಡಿಮಾಡಲ್ಪಟ್ಟಿದೆ. ಡೆಪೋಗಳಲ್ಲಿ ಅಥವಾ ಅಂಗಡಿಗಳಲ್ಲಿ ನೇಮಕಮಾಡಲ್ಪಟ್ಟ ಯಾ ನೇಮಕಮಾಡಲ್ಪಡಲು ಉದ್ದೇಶಿಸಲ್ಪಟ್ಟ ಜನಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರವರು ಅವಶ್ಯಕಕಂಡರೆ ತರಸಿಕೊಂಡು ಅವರು ಒಪ್ಪದೇ ಇರತಕ್ಕ ಯಾವ ಮನುಷ್ಯನಿಂದಾಗಲಿ ಷರಾಬು, ಮದತ್ ಪದಾರ್ಥಗಳು ಅಫೀಂ ಮಾರೋಣವನ್ನು ಅಡ್ಡಿಮಾಡಬಹುದು.

8. ವಿಶೇಷವಾದ ಅಪ್ಪಣೆಹೊಂದಿದ ಶಿವಾಯಿ ಸೂರ್ರ್ಯೋದಯಕ್ಕೆ ಮುಂಚೆ ಯಾವ ಡೆಪೋ ಮತ್ತು ಅಂಗಡಿಯು ತೆಗೆಯಲ್ಪಡಕೂಡದು. ಮತ್ತು ರಾತ್ರಿ *9 ಘಂಟೆನಂತರ ತೆಗಿಯಲ್ಪಟ್ಟಿರಕೂಡದು.

9. ಡೆಪೋ ಯಾ ಅಂಗಡಿಗಳಲ್ಲಿ ಯಾವ ವಿಧವಾದ ನಿಷಾ ಖಂದಿರೋಣ, ಯಾ ಗಲಾಟೆ ಯಾ ಜೂಜಾಟ ಇವುಗಳಿಗೆ ಆಸ್ಪದಕೊಡಕೂಡದು. ಡೆಪೋ ಅಥವಾ ಅಂಗಡಿಗಳಲ್ಲಿ ಯಾವ ವಿಧವಾದ ವಿನೋದಗಳು ಅಡ್ಡಿಮಾಡಲ್ಪಟ್ಟಿದೆ.

10. ಲೈಸೆನ್ಸದಾರನು ಚೋರರು, ಕಳ್ಳರು, ಪೋಲಿ ಮನುಷ್ಯರು, ದೊಂಬಿಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು, ಫೌಜಿನಿಂದ ಪರಾರಿಯಾಗಿಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟದ್ದಂಥವರು ಇಂಥವರಿಗೆ ಡೆಪೋ ಅಥವಾ ಅಂಗಡಿಗಳಲ್ಲಿ ಆಶ್ರಯಕೊಡಕೂಡದು. ಅಂಥ ಜನರು ಅಲ್ಲಿಗೆ ಬಂದರೆ ಸಮೀಪದಲ್ಲಿರುವ ಮ್ಯಾಜಿಸ್ಟ್ರೇಟರಿಗೆ ಯಾ ಪೊಲೀಸ ಆಫಿಸರಿಗೆ ವರ್ತಮಾನಕೊಡತಕ್ಕದ್ದು.

11. ರಾತ್ರಿಕಾಲದಲ್ಲಿ ಯಾವ ಡೆಪೋ ಅಥವಾ ಅಂಗಡಿಯಲ್ಲಾಗಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು.

12. ಯೂರೋಪಿಯನ್ ಅಥವಾ ನೇಟಿವ್ ಸೈನ್ಯದ ರಿಜಮೆಂಟ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ, ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿಯೂ ಆ ಮಾರ್ಗದ ಸಮೀಪದಲ್ಲಿರುವ ಡೆಪೋ ಮತ್ತು ಅಂಗಡಿಗಳನ್ನು ಡೆಪ್ಯುಟಿ ಕಮಿಷನರವರು ಅಪ್ಪಣೆ ಮಾಡಿದಲ್ಲಿ ಮುಚ್ಚಿಬಿಡಬೇಕು. ಮತ ಸಂಬಂಧವಾದ ಗಲಾಟೆ ಅಥವಾ ತೊಂದರೆಕಾಲಗಳಲ್ಲಿ ಹಂಗಾಮಿಯಾಗಿ ಡೆಪ್ಯುಟಿ ಕಮಿಷನರವರು ಅಥವಾ ರೆವಿನ್ಯು ಅಸಿಸ್ಟೆಂಟ ಕಮಿಷನರವರು ಯಾವ ಅಂಗಡಿಗಳನ್ನಾದರೂ ಮುಚ್ಚಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. ಸಮೀಪದಲ್ಲಿ ದೊಂಬಿ ಅಥವಾ ತೊಂದರೆ ಇದ್ದಲ್ಲಿ, ಪ್ರತಿ ಡೆಪೋ ಮತ್ತು ಅಂಗಡಿಕಾರನು ತನ್ನ ಡೆಪೋ ಮತ್ತು ಅಂಗಡಿಯನ್ನು ತಾನೇ ಮುಚ್ಚಬಹುದು.

13. ಡೆಪ್ಯುಟಿ ಕಮಿಷನರವರು ಡೆಪೋ ಮತ್ತು ಅಂಗಡಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇನ್ನೂರು ಗಜಗಳ ಒಳಗಾಗಿ ವರ್ಗಾಯಿಸಬಹುದು. ಅಥವಾ ಅವುಗಳನ್ನು ಮುಚ್ಚಬೇಕೆಂದು ಹುಕುಂ ಮಾಡಬಹುದು. ಎಕ್ಸೈಸ ಕಮಿಷನರವರ ಮಂಜೂರಾತಿ ಶಿವಾಯಿ ಹೊಸ ಅಂಗಡಿಗಳನ್ನು ಇಡಕೂಡದು.

14. ಕ್ರಮವಾಗಿ ಲೈಸೆನ್ಸ ಪಡೆದ ಅಂಗಡಿಗಳು ಸಮೀಪದಲ್ಲಿಲ್ಲದೆ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಶರಾಬು, ಮದಕ ಪದಾರ್ಥಗಳು ಮತ್ತು ಅಫೀಮನ್ನು ಬಿಕರಿ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಉಳಿಸಿಕೊಂಡಿರುತ್ತೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರಿ ಪ್ರದೇಶದವರಿಗೆ ಮಾಮೂಲಾಗಿ ಸರಬರಾಯಿ ಮಾಡುವ ದುಕಾನದಾರರಿಗೆ ಅಥವಾ ಲೈಸೆನ್ಸದಾರನ ಪ್ರತಿನಿಧಿಗಳಿಗೇನೇ ಕೊಡತಕ್ಕದ್ದು. ಸದರಿ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು. ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮಿಷನರವರು ತೀರ್ಮಾನಿಸಬಹುದು.

15. (a) ಡಿವಿಜನ ಕಮ್ಯಾಂಡಿಂಗ ಆಫಿಸರವರ (ಸ್ವತಂತ್ರ ಬ್ರಿಗೆಡ ಕಮ್ಯಾಂಡಿಂಗ ಆಫಿಸರವರ) ಅಥವಾ ಕಂಟೋನ್ಮೆಂಟ ಅಥವಾ ಕ್ಯಾಂಪ ಕಮ್ಯಾಂಡಿಂಗ ಆಫಿಸರವರ ಅನುಮತಿ ಪಡೆದಿರುವ ಅಂಗಡಿಗಳಲ್ಲಿ ಶಿವಾಯಿ ಮತ್ತು ಲೈಸೆನ್ಸಿನಲ್ಲಿ ನಮೂದಿರುವ ಸ್ಥಳೀಕ ಆಬ್ಕಾರಿ ಇಲಾಖೆಯವರೊಂದಿಗೆ ಮೇಲೆ ಹೇಳಿರುವ ಸದರಿ ಆಫಿಸರುಗಳೂ ಒಪ್ಪಿರುವ ಷರಾಬುಗಳಿಗೆ ಶಿವಾಯಿ.

(1) ನಾವಿಕರೂ, ಶಿಪಾಯಿಗಳೂ ಮತ್ತು ಅವರ ಮನೆ ಜನರು.
(2) ಬ್ಯಾರಾಕನಲ್ಲಿ ವಾಸ ಮಾಡುವ ಇತರ ಮನುಷ್ಯರು.

(b) ಕೆಲಸದ ಮೇಲಿರುವ :—

(1) ಮೊಕ್ಕಾಂಗಳೊಡನೆ ಹೋಗುವವನು, ಪೊಲೀಸಿನವನು ಅಥವಾ ಎಕ್ಸೈಜ ನೌಕರನು.
(2) ರೈಲ್ವೆ ಕಂಪೆನಿಗೆ ಸೇರಿದವನು ಅಥವಾ

(c) ಯಾವ ಸಂದರ್ಭದಲಾದರೂ ;—

(1) ಪೊಲೀಸ ಮೊಹಸಲೆಯಲ್ಲಿರುವ ಯೂರೋಪಿಯನ್ ತಿರುಕನಿಗೂ
(2) 16 ವರುಷದ ಒಳಗಾಗಿರುವ ಮನುಷ್ಯನಿಗೂ
(3) ಹುಚ್ಚನಿಗೂ
(4) ನಿಷಾ ಆಗಿರುವದೆಂದು ತಿಳಿದಿರುವ ಅಥವಾ ಕಂಡು ಬರುವ ಮನುಷ್ಯನಿಗೂ, ಯಾವ ಷರಾಬು, ಮದಕ ಪದಾರ್ಥ ಅಥವಾ ಅಫೀಂ ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

16. ಸರಬರಾಯಿ ಮಾಡುವ ಅಥವಾ ಮಾರುವ ಹಕ್ಕುದಾರಿಯು ಎಕ್ಸೈಜ ಕಮಿಷನರವರ ಅಪ್ಪಣೆ ಶಿವಾಯಿ ಮಾರಲ್ಪಡಕೂಡದು. ವರ್ಗ ಮಾಡಲ್ಪಡಕೂಡದು ಮತ್ತು ಪಿಕ್ಮಿ ಇಜಾರೆಗೆ ಕೊಡಲ್ಪಡಕೂಡದು. ಮತ್ತು ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದಲ್ಲಿ ಅವರ ಅನುಮತಿ ಇಲ್ಲದೆ ಯಾವ ಹಕ್ಕಿನ ಆಡಳಿತಕ್ಕಾದರೂ ಯಾವ ಮುತಾಲೀಕನು ನೌಕರನಾಗಕೂಡದು.

---

* ಬೆಂಗಳೂರು ಸಿಟಿಯಲ್ಲಿ ರಾತ್ರಿ $9\frac{1}{2}$ ಘಂಟೆ.

* ಸಾರಾಯಿ ಬಾಂಡೆಡ ಡೆಪೋಗಳಲ್ಲಿ ರಾತ್ರಿ 8 ಘಂಟೆ.

17. ಯಾವ ಆಬ್ಕಾರಿ ಅಥವಾ ಅಫೀಂ ಲೈಸೆನ್ಸದಾರನು ಎಕ್ಸೈಜ್ ಕಮಿಷನರವರ ಬರಹಮೂಲಕವಾದ ಅಪ್ಪಣೆ ಶಿವಾಯಿ ಮೈಸೂರು ಶೀಮೆಯ ಹೊರಗಡೆ ಅಥವಾ ಬೆಂಗಳೂರು ಸಿವಿಲ ವ ಮಿಲಿಟರಿ ಸ್ಟೇಷನಿನ ಯಾವ ಆಬ್ಕಾರಿ ಮತ್ತು ಅಫೀಂ ಲೈಸೆನ್ಸಿನಲ್ಲಿ ಯಾವ ವಿಧವಾದ ಸಂಬಂಧವನ್ನು ನೇರಾಗಿಯಾಗಲಿ ಪರೋಕ್ಷವಾಗಿ ಯಾಗಲಿ ಇಟ್ಟುಕೊಳ್ಳಕೂಡದು. ಮತ್ತು ಇಟ್ಟುಕೊಂಡಿರಕೂಡದು.

18. ಮೇಲೆ ಹೇಳಿರುವ 12 ಮತ್ತು 13ನೇ ಷರತ್ತುಗಳಿಗನುಸಾರವಾಗಿ ಹಂಗಾಮಿಯಾಗಾಗಲಿ ಅಥವಾ ಖಾಯಮಾಗಾಗಲಿ ಮುಚ್ಚುವ ಸಂದರ್ಭಗಳಲ್ಲಿ ವಿನಹಾ ಡೆಪೋ ಮತ್ತು ಅಂಗಡಿಗಳು ತೆಗದಿರಬೇಕು. ಡೆಪ್ಯುಟಿ ಕಮಿಷನರವರು ಸ್ಥಳದ ಉಪಯೋಗಕ್ಕೆ ಅವಶ್ಯಕವಾಗಿರುವದೆಂದು ತಿಳಿದು ಅಪ್ಪಣೆ ಮಾಡಿರುವಷ್ಟು ಷರಾಬು ಮದಕ್ ಪದಾರ್ಥಗಳು ಮತ್ತು ಅಫೀಮನ್ನು ಅಂಗಡಿಗಳಲ್ಲಿ ಇಟ್ಟಿರಬೇಕು. ಜಾತ್ರೆ ಗುರೈಯಲ್ಲಿ ತೆರೆಯದಿರುವ ಅಂಗಡಿಗಳು ಲೈಸೆನ್ಸುದಾರರನ್ನು ಲುಕ್ಸಾನಿಗೆ ಒಳಪಡಿಸಿ ಪುನಃ ಹರಾಜು ಮಾಡಲ್ಪಡುವದು.

19. ಷರಾಬು, ಮದಕ್ ಪದಾರ್ಥ ಯಾ ಅಫಿಂ ಅಂಗಡಿಗಳಲ್ಲಿ ನಗದು ಮೊಬಲಗಿಗೆ ಶಿವಾಯಿ ಮಾರಲ್ಪಡಕೂಡದು. ನಗದು ಶಿವಾಯಿ ಬೇರೇ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಲೈಸೆನ್ಸುದಾರನು ಸಮೀಪದಲ್ಲಿರುವ ಮೇಜಸ್ಟ್ರೇಟರಿಗೆ ಯಾ ಪೋಲೀಸ ಆಫಿಸರಿಗೆ ವರ್ತಮಾನ ಕೊಡಲು ಬದ್ಧನಾಗಿರುತ್ತಾನೆ. ಈ ಷರತ್ತು ಅಂಗಡಿಯ ಹೊರಗಡೆ ಕುಡಿಯುವದಕ್ಕಾಗಿ ಅಂಗಡಿದಾರ್ರಿಂದಲೂ ಯಾ ಮಾತಬರ ಘರಂಗಳಿಂದಲೂ ವ್ಯಾಪಾರ ಮೂಲಕವಾಗಿ ಕೊಡಲ್ಪಡುವ ಪರಾಯಿ ದೇಶದ ಮತ್ತು ವಿಶೇಷ ಷರಾಬುಗಳನ್ನು ಸಾಲವಾಗಿ ಮಾರತಕ್ಕದ್ದನ್ನು ಅಡ್ಡಿಪಡಿಸುವದಿಲ್ಲ.

20. ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನುರೀತ್ಯಾ ಖಿಕರಿಮಾಡಲು ಗೊತ್ತುಮಾಡಿರುವ ಪರಮಾವಧಿ ಕನಿಷ್ಠ ಯಾ ನಿಷ್ಕರ್ಷೆಯಾದ ದರಗಳಿಗಿಂತಲೂ ಹೆಚ್ಚಾಗಿಯಾಗಲಿ, ಕಮ್ಮಿಯಾಗಿ ಯಾಗಲಿ ಯಾವ ಷರಾಬು, ಮದಕ್ ಪದಾರ್ಥ ಅಥವಾ ಅಫೀಂ ಮಾರಲ್ಪಡಕೂಡದು.

ಷರಾ—1. 20o ಷರಾಬು—1 ಡ್ರಾಂಗೆ 2 ಆಣೆ.

2. ಗಾಂಜಾ—1 ತೊಲೆಗೆ 2 ಆಣೆ.

3. ಅಫೀಂ—1 ತೊಲೆಗೆ 9 ಆಣೆ.

4. ಶೇಂದಿ—ಷೆಡ್ಯೂಲಿನಲ್ಲಿ ಖಾಯಿಷ ಮಾಡಿರುವ ಕಮ್ಮಿ ದರ.

21. ಲೈಸೆನ್ಸಿಲ್ಲದೆ ಇಟ್ಟುಕೊಳ್ಳಬಹುದಾಗಿರುವ ಮೊತ್ತಕ್ಕಿಂತಲೂ ಹೆಚ್ಚಾಗಿ ಯಾವ ಷರಾಬು ಮದಕ್ ಪದಾರ್ಥ ಯಾ ಅಫೀಮು ವಿಧಾಯಕವಾದ ಪರ್ಮಿಟ್ಟಿಲ್ಲದೆ ಲೈಸೆನ್ಸ ಪಡೆದ ಅಂಗಡಿಯಿಂದ ಒಂದೇ ಕಾಲದಲ್ಲಿ ಯಾವ ಮನುಷ್ಯನಿಂದಲಾದರೂ ತೆಗದುಕೊಂಡು ಹೋಗಲ್ಪಡಕೂಡದು.

ಷರಾ—ಸಾರಾಯಿ—1 ರೆಪ್ಯೂಟೆಡ್ ಕ್ವಾರ್ಟು.
ಶೇಂದಿ—2 ಸೇರು.
ಗಾಂಜಾ—4 ತೊಲಾ.
ಅಫೀಮು—3 ತೊಲಾ.
ಪರಾಯಿ ಷರಾಬು—2 ಗ್ಯಾಲನ್.

22. ಪ್ರತಿ ದಿನವೂ ಆಗತಕ್ಕ ಜಮಾ ಖರ್ಚನ್ನು ವಿಧಾಯಕವಾದ ನಮೂನೆಯಲ್ಲಿ ಶಾಯಿಯಲ್ಲಿ ಬರೆದಿಡಬೇಕು. ಈ ಲೆಕ್ಕದ ಪುಸ್ತಕಗಳನ್ನೂ ಮತ್ತು ಪರಮಿಟ್ ಪುಸ್ತಕಗಳನ್ನೂ ಸರ್ಕಾರೀ ಖಜಾನೆಯಲ್ಲಿ ಖರೀದಿ ಮೊಬಲಗನ್ನು ಜಮಾ ಮಾಡಿದ್ದ ರಶೀತಿಗಳನ್ನು ಹಾಜರ್ಮಾಡಿದ್ದಲ್ಲಿ ಸ್ಥಳೀಕ ಆಬ್ಕಾರಿ ನಾಕರರ್ಮಾನೇರಿಂದ ಪಡೆಯಬಹುದು. ಜಮಾ ಬಂದ ಷರಾಬು, ಮದಕ್ ಪದಾರ್ಥಗಳು ಅಥವಾ ಅಫೀಮಿನ ಪರಮಿಟ್ಟುಗಳೂ, ಖರ್ಚಾದ ಪರಮಿಟ್ಟುಗಳ ಕೌಂಟರ ಫಾಯಿಲುಗಳೂ ಎಚ್ಚರಿಕೆಯಾಗಿ ಫೈಲ್ ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರಮಿಟ್ಟುಗಳನ್ನೂ, ಕೌಂಟರ ಫಾಯಿಲುಗಳನ್ನೂ, ರುಜು ಮಾಡುವದನ್ನು ನಿಷೇಧಿಸಿದೆ. ಈ ಲೆಖ್ಖಗಳನ್ನೂ, ಪರಮಿಟ್ಟುಗಳನ್ನೂ, ಕೌಂಟರ ಫಾಯಿಲುಗಳನ್ನೂ ಲೈಸೆನ್ಸಿನಲ್ಲಿ ಕಂಡಹಾಯಿದೆಯು ಕಳೆದ ಒಂದು ವರುಷದವರೆಗೂ ಇಟ್ಟುಕೊಂಡಿರತಕ್ಕದ್ದು. ಅಸಿಸ್ಟೆಂಟು ಇನ್ಸ್‌ಪೆಕ್ಟರ ದರ್ಜೆಗೆ ಕಮ್ಮಿ ಯಾಗಿರದ ಯಾವ ಎಕ್ಸೈಜ್ ಆಫಿಸರು ಕೇಳಿದರೂ ಸದರಿ ಲೆಖ್ಖಗಳನ್ನು ಹಾಜರ್ಮಾಡಬೇಕು.

23. ಅಸಿಸ್ಟೆಂಟ ಇನ್ಸ್‌ಪೆಕ್ಟರ ದರ್ಜೆಗಿಂತಲೂ ಕಮ್ಮಿ ಇಲ್ಲದ ಎಕ್ಸೈಜ್ ಆಫಿಸರುಗಳು ಆಗಿಂದಾಗ್ಯೆ ಅಪೇಕ್ಷಿಸುವಂಥ ಯಾವ ಲೆಖ್ಖಗಳನ್ನಾಗಲಿ, ವರ್ತಮಾನಗಳನ್ನಾಗಲಿ ಲೈಸೆನ್ಸದಾರರು ತಡೆಮಾಡದೆ ಕೊಡಬೇಕು.

24. ಎಕ್ಸೈಜ್ ಕಮ್ಮಿಷನರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಪ್ರಮಾಣದ ತೂಕದ ಮತ್ತು ಅಳತೆ ಸಾಧನಗಳನ್ನು ಮಾತ್ರವೇ ಎಲ್ಲಾ ಲೈಸೆನ್ಸ ಪಡೆದ ಅಂಗಡಿಗಳಲ್ಲಿ ಇಟ್ಟುಕೊಂಡಿರಬೇಕು, ಮತ್ತು ಉಪಯೋಗಿಸಬೇಕು. ಯಾವ ಲೈಸೆನ್ಸ ಪಡೆದ ಅಂಗಡಿಗಳಲ್ಲಾದರೂ ಕರಾರ್ವಾರಿಕಾಗಿಲ್ಲದ ತೂಕದ ಮತ್ತು ಅಳತೆ ಸಾಧನೆಗಳನ್ನು ಇಟ್ಟುಕೊಂಡಿರೋಣವು ಅಥವಾ ಉಪಯೋಗಿಸೋಣವು ಲೈಸೆನ್ಸದಾರನನ್ನು ಶಿಕ್ಷೆಗೆ ಗುರಿಮಾಡುತ್ತೆ.

25. ಸಬ್ ಇನ್ಸ್‌ಪೆಕ್ಟರ ಹುದ್ದೆಗಿಂತಲೂ ಕಮ್ಮಿಯಾಗಿರದ ಯಾವ ಆಬ್ಕಾರೀ ನಾಕರನಾದರೂ ಲೈಸೆನ್ಸ ಪಡೆದ ಅಂಗಡಿಗಳನ್ನೂ ಮತ್ತು ಡಿಪೋಗಳನ್ನೂ ತನಿಖೆಮಾಡಲು ಅಧಿಕಾರವುಳ್ಳವನಾಗಿರುತ್ತಾನೆ. ಸದರಿ ಅಂಗಡಿಗಳನ್ನು ಪ್ರವೇಶಮಾಡಿ ತನಿಖೆಮಾಡುವದಕ್ಕೂ, ಉಪಯೋಗದಲ್ಲಿರುವ ತೂಕದ ಮತ್ತು ಅಳತೆ ಸಾಧನೆಗಳನ್ನೂ, ಷರಾಬು, ಮದಕ್ ಪದಾರ್ಥಗಳು, ಅಫೀಮನ್ನೂ ಅಜಮಾಯಿಷಿ ಮಾಡಲಿಕ್ಕೂ ಅಂಗಡಿಯಲ್ಲಿ ಯಾ ಡಿಪೋದಲ್ಲಿಟ್ಟಿರತಕ್ಕ ಲೆಖ್ಖಗಳನ್ನು ಕೇಳಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ. ಪೋಲೀಸ ಆಫಿಸರರುಕೂಡ ತಮ್ಮ ಕೆಲಸಕ್ಕೆ ಸಂಬಂಧಪಟ್ಟಿರುವ ಮಟ್ಟಿಗೆ ತನಿಖೆ ಮಾಡಬಹುದು.

26. ಕ್ರಮವಾಗಿ ನಂಬರು ಹಾಕಲ್ಪಟ್ಟ ಪುಟಗಳುಳ್ಳ ಇನ್ಸ್‌ಪೆಕ್ಷನ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರಿ ಪುಸ್ತಕವನ್ನು ರೇಂಜ್ ಛಾರ್ಜಿನಲ್ಲಿರುವ ಅಬಕಾರಿ ಇನ್ಸ್‌ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ನಾವ ಆಫಿಸರರೇ ಆಗಲಿ ರಶೀತಿ ಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

27. ಸ್ವತಂತ್ರ ಹಕ್ಕನ್ನು ಪಡೆದದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರೀ ಖಜಾನೆಯಲ್ಲಿ ಜುಲೈ ಮಾಹೆ ಲಾಗಾಯಿತು ಪ್ರತಿ ತಿಂಗಳಲ್ಲಿಯೂ 20ನೆ ತಾರೀಖು ಅಥವಾ ಅದರ ವಳಗೆ ಸರಿಯಾದ ತಿಂಗಳಗಟ್ಲೆ 12 ಖಿಸ್ತುಗಳಲ್ಲಿ ಪಾವತಿ ಮಾಡುತ್ತಾ ಬರತಕ್ಕದ್ದು. ಜಾತ್ರೆ ಅಂಗಡಿಯ ಲೈಸೆನ್ಸ್‌ದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೇ ಸದರಿ ಅಂಗಡಿಯ ಗುತ್ತಾ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

ಷರಾ.—ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ತಾವೇ ಲೈಸೆನ್ಸ್‌ದಾರರಲ್ಲದೆ ಇರುವ ಸಂದರ್ಭಗಳಲ್ಲಿ ಗ್ರಾಮದ ಪಟೇಲರು ಯಾವ ಮನುಷ್ಯನಿಂದಲಾಗಲೀ ಒಂದುಸಾರಿಗೆ 50 ರೂಪಾಯಿಗಳಿಗೆ ಮೀರದಂತೆ ಮೊಬಲಗನ್ನು ತೆಗದುಕೊಳ್ಳಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡಬಹುದು.

28. ಲೈಸೆನ್ಸ್‌ದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಮಾಡಬೇಕೆಂದು ಯಾ ಇಜಾರ ಮೊಬಲಗನ್ನು ಕಮ್ಮಿ ಮಾಡಲ್ಪಡಬೇಕೆಂದು ಕೇಳಲ್ಪಡಕೂಡದು.

29. ಜಮೀನ್ ಕಂದಾಯದ ಬಾಕಿ ವಸೂಲಿ ಬಗ್ಗೆ ಆಯಾ ಕಾಲದಲ್ಲಿ ಜಾರೀಲಿರುವ ಕಾನೂನು ಮೇರೆಗೆ ಲೈಸೆನ್ಸ್‌ದಾರನಿಂದ ಬರಬೇಕಾದ ಮೊಬಲಗು ಆತನ ಯಾ ಆತನ ಜಾಮೀನ್‌ದಾರನ ಸ್ವತ್ತುಗಳ ಜಫ್ತಿ ಮತ್ತು ಹರಾಜಿನಿಂದ ವಸೂಲ್ಮಾಡಲ್ಪಡುವದು. ಅಥವಾ ಇಜಾರೆಯು ಪ್ರಾರಂಭದಲ್ಲಿ ಆತನಿಂದ ಕೊಡಲ್ಪಟ್ಟ ಠೇವಣಿ ಮೊಬಲಗು ಇದ್ದಲ್ಲಿ ವಜಾ ಹಾಕಲ್ಪಡುವದು. ಅಮಲ್ದಾರರಿಂದ ಕೊಡಲ್ಪಟ್ಟ ನೋಟೀಸ್ ಜಾರಿಯಾದ 15 ದಿವಸಗಳ ವಳಗಾಗಿ ಠೇವಣಿ ಮೊಬಲಗಿನಿಂದ ವಜಾ ಮಾಡಲ್ಪಟ್ಟ ಮೊಬಲಗನ್ನು ಪುನಃ ಭರ್ತಿ ಮಾಡಲು ಬದ್ಧನಾಗಿರುತ್ತಾನೆ.

30. ವಿಧಾಯಕವಾದ ತಾರೀಖುಗಳ ವಳಗಾಗಿ ಖಿಸ್ತುಗಳನ್ನು ಅಥವಾ (ಶೇಂದಿಯ) ಮರತೆರಿಗೆಯನ್ನು ಕೊಡದೆ ತಪ್ಪಿದಲ್ಲಿ, ಲೈಸೆನ್ಸುಗಳನ್ನು ಸಸ್ಪೆಂಡ್ ಮಾಡಲು ರೆವಿನ್ಯೂ ಆಫಿಸರುಗಳಿಗೆ ಅಧಿಕಾರವನ್ನು ಉಳಿಸಿಕೊಂಡಿರುತ್ತೆ. ಷರಾಬು ಶೇಂದಿ ಮತ್ತು ಮದ್ದಿನ ಅಂಗಡಿಗಳ ವಿಷಯದಲ್ಲಿ ಈ ಅಧಿಕಾರವು ಅಮಲ್ದಾರರುಗಳಿಂದಲೂ ಇತರ ಸಂದರ್ಭಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಚಲಾಯಿಸಲ್ಪಡುತ್ತೆ.

31. ಮೇಲ್ಕಂಡ ಷರಾಬು, ಶೇಂದಿ, ಮದ್ದಿನ ಪದಾರ್ಥಗಳ ಲೈಸೆನ್ಸ್‌ದಾರನು ಖಿಸ್ತು ಬಾಕೀ ಬೀಳುವ ತಿಂಗಳ ಆಖೈರ್ ವಳಗಾಗಿ ಖಿಸ್ತು ಕೊಡದೆ ತಪ್ಪಿದಲ್ಲಿ, ಅಮಲ್ದಾರರು ಡೆಪ್ಯುಟಿ ಕಮ್ಮಿಷನರವರ ಬರಹಮೂಲಕವಾದ ಅಪ್ಪಣೆ ಪಡೆದು ಲೈಸೆನ್ಸನ್ನು ರದ್ದುಮಾಡಿ ಮುಂದಿನ ತಿಂಗಳ ಗುರ್ರೆ ತಾರೀಖಿನದಿವಸ (ರಜಾ ದಿವಸಗಳು ಶಿವಾಯಿ) ಸದರಿ ಹಕ್ಕನ್ನು ಹೊಸ ಬಿಕರೀದಾರನಿಗೆ ಲೈಸೆನ್ಸ್ ಕೊಟ್ಟ ತಾರೀಖು ಲಾಗಾಯಿತು ಬಿಕರಿಯ ಸ್ವತಂತ್ರ ಹಕ್ಕನ್ನು ಪುನಃ ಹರಾಜು ಮಾಡಬಹುದು. ಅಥವಾ ಸದರಿ ಹಕ್ಕು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರುವ ರೀತ್ಯಾ ಇತರ ವಿಧವಾಗಿ ವಿಲೇವಾರಿ ಮಾಡಬಹುದು. ಸದರಿ ಹಕ್ಕನ್ನು ರದ್ದುಮಾಡುವದರಿಂದ ಮತ್ತು ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲೇವಾರಿ ಮಾಡುವದರಿಂದ ಉಂಟಾಗುವ ಎಲ್ಲಾ ನಷ್ಟಕ್ಕೂ ತಪ್ಪಿತಸ್ಥನು ಗುರಿಯಾಗಿರುತ್ತಾನೆ. ಆದರೆ ಏನಾದರೂ ಲಾಭ ಬಂದಲ್ಲಿ ಅದಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಇಜಾರೆ ಪ್ರಾರಂಭದಲ್ಲಿ ಇಡಲ್ಪಟ್ಟ ಠೇವಣಿ ಏನಾದರೂ ಇದ್ದಲ್ಲಿ, ಇದರ ಪೂರಾ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸನ್ನು ಸಸ್ಪೆಂಡು ಮಾಡಲಿಕ್ಕೆ ಅಧಿಕಾರವುಳ್ಳ ಆಫಿಸರು ತಮಗೆ ಯುಕ್ತ ಕಂಡರೆ ಪುನಃ ಹರಾಜು ಅಥವಾ ಇತರ ವಿಲೇವಾರಿ ಆಗುವ ವರಿವಿಗೂ ಬಿಕರಿ ನಡೆಸಲು ಅವಕಾಶ ಕೊಡಬಹುದು.

32. ಬಾಕೀ ಬೀಳುವ ಎಲ್ಲಾ ಮೊಬಲಗಿನಮೇಲೂ ತಿಂಗಳು 1ಕ್ಕೆ ಅಥವಾ ಅದರ ಭಾಗಕ್ಕೆ ರೂಪಾಯಿ 1ಕ್ಕೆ 1ಪೈ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡಬೇಕು.

33. ಲೈಸೆನ್ಸ್‌ದಾರನಾಗಲಿ ಅಥವಾ ಆತನಿಂದ ನೇಮಿಸಲ್ಪಟ್ಟ ಯಾವ ಮನುಷ್ಯನಾಗಲಿ ಲೈಸೆನ್ಸಿನ ಯಾವ ಷರತ್ತುಗಳಿಗೆ ವಿರೋಧವಾಗಿ ನಡೆದರೆ, ಲೈಸೆನ್ಸ್‌ದಾರನಿಗೆ—

(a) 50 ರೂಪಾಯಿನವರಿಗೆ ಜುರ್ಮಾನೆ ಅಥವಾ (b) ಠೇವಣಿಗಳೇನಾದರೂ ಇದ್ದಲ್ಲಿ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಲೈಸೆನ್ಸು ರದ್ದುಮಾಡಲ್ಪಡುವದು ಮತ್ತು ಲೈಸೆನ್ಸ್‌ದಾರರನ್ನು ನಷ್ಟಕ್ಕೆ ಗುರಿಮಾಡಿ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಅಥವಾ ಇತರ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಈ ಮೇಲ್ಕಂಡ ಅಂಶಗಳಿಗೆ ಲೈಸೆನ್ಸ್‌ದಾರನು ಒಳಗಾಗಿರುತ್ತಾನೆ.

ಲೈಸೆನ್ಸ್‌ದಾರನು ಅಥವಾ ಆತನ ಮುತಾಲೀಕನು ಆತನು ಮಾಡಿರುವ ತಕ್ಸೀರಿಗೆ ಆಪಾದನೆ ಮಾಡಲ್ಪಡಬಹುದು. ಈ ಷರತ್ತಿನಂತೆ ಇಜಾರೆಯು ರದ್ದು ಮಾಡಲ್ಪಟ್ಟರೆ ಇಜಾರೆಯು ಪೂರಾ ಮೊಬಲಗು ಕೊಡ್ಲೆ ಬಾಕಿ ಬೀಳುವದು.

ಷರಾ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪುಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

34. ಲೈಸೆನ್ಸ್‌ದಾರನು ಎಕ್ಸೈಜ್ ರೆಗ್ಯುಲೇಷನ್ ಯಾ ಅಫೀಂ ಆಕ್ಟಿಗೆ ವಿರೋಧವಾಗಿ ಅಥವಾ ಇಂಡಿಯನ್ ಪೆನಲ್ ಕೋಡಿನಲ್ಲಿ ನಮೂದಿಸಿರುವ ಯಾವ ತಕ್ಸೀರಿಗಾದರೂ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದಲ್ಲಿ, ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸ್‌ದಾರನಾಗಿರಲು ನಾಲಾಯಖೆಂದು ಕಂಡುಬಂದಲ್ಲಿ, ಯಾವ ಲೈಸೆನ್ಸಾದರೂ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ ಅವನ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹಕ್ಕುದಾರಿಯ ಹರಾಜು ಮುಂಜೂರಾದನಂತರ ಕ್ರಮವಾದ ಲೈಸೆನ್ಸು ಕೊಡುವದಕ್ಕೆ ಮುಂಚೆಯಾದ

ರೂ ಕೂಡ ಹಕ್ಕನ್ನು ಕೊಂಡುಕೊಂಡವನು ಮೇಲೆ ನಮೂದಿಸಿರುವ ಯಾವ ತಕ್ಸೀರಿಗಾದರೂ ಸಾಬೀತು ಮಾಡಲ್ಪಟ್ಟಲ್ಲಿ ಈ ಷರತ್ತಿನಲ್ಲಿ ನಿಬಂಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರುತ್ತಾನೆ. ಈ ಷರತ್ತಿನ ಮೇರೆ ಲೈಸೆನ್ಸ್ ದಂಡವಾಗಿ ತೆಗದುಕೊಳ್ಳಲ್ಪಡೋಣವು, ಇಜಾರೆ ಷರತ್ತಿನ ಪ್ರಕಾರ ಸರ್ಕಾರಕ್ಕೆ ಪಾವತಿಯಾಗಬೇಕಾದ ಮೊಬಲಗು ಜಾತಾ ಉಳಿಯುವ ಎಲ್ಲಾ ಠೇವಣಿಗಳು ದಂಡವಾಗಿ ತೆಗೆದುಕೊಳ್ಳಲ್ಪಡುವುದಕ್ಕೂ ಲೈಸೆನ್ಸ್‌ದಾರನನ್ನು ಗುರಿಮಾಡುತ್ತದೆ.

35. ಷರಾಬು, ಮದತ್ ಪದಾರ್ಥಗಳು ಮತ್ತು ಅಫೀಮನ್ನು ಬಯ್ಯುವ, ತಯಾರ್‌ಮಾಡುವ ಅಥವಾ ಬಿಕರಿ ಮಾಡುವದರಲ್ಲಿ ತಮ್ಮಿಂದ ನೊಕರರಾಗ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಅಥವಾ ಅಫೀಂ ಕಾನೂನುಗಳಿಗೆ ಅಥವಾ ಅವರ ಒಪ್ಪಂದಗಳಿಗೆ ವಿರೋಧವಾಗಿ ನಡೆದದ್ದು ತಮಗ ತಿಳಿದುಬಂದರೆ ಲೈಸೆನ್ಸ್‌ದಾರರು ಡೆಪ್ಯುಟಿ ಕಮ್ಮಿಷನರವರಿಗೆ ಇಂಥಾ ಎಲ್ಲಾ ಸಂದರ್ಭಗಳನ್ನು ರಿಪೋರ್ಟು ಮಾಡುವದಕ್ಕೂ ಮತ್ತು ಅಂಥವರನ್ನು ಇನ್ನೂ ಕೆಲಸದಲ್ಲಿಟ್ಟುಕೊಂಡಿರುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರು ಕೊಡುವ ಹುಕುಮಿನಂತೆ ಜಾರೀಲಿ ತರುವುದಕ್ಕೂ ಬದ್ಧರಾಗಿರುತ್ತಾರೆ. ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಯಾವ ತಪ್ಪಿತಕ್ಕಾದರೂ ಸಾಬೀತಾದ ಮನುಷ್ಯರನ್ನು ಷರಾಬು, ಮದತ್ ಪದಾರ್ಥ ಮತ್ತು ಅಫೀಮನ್ನು ಬಯ್ಯುವದಕ್ಕೆ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಇಲ್ಲದೆ ನೇಮಿಸಕೂಡದು.

36. ಲೈಸೆನ್ಸ್‌ದಾರರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಯಾವ ವಿಧವಾದ ಹಣಸಂಬಂಧವಾದ ಲೇವಾದೇವಿಯನ್ನು ಖಂಡಿತವಾಗಿಯೂ ಇಟ್ಟುಕೊಳ್ಳಕೂಡದು.

37. ಎಕ್ಸೈಜ್ ಕಮ್ಮಿಷನರವರ ಅಪ್ಪಣೆ ಪಡೆದು ಲೈಸೆನ್ಸ್ ಮೋಖೂಫಿ ಬಗ್ಗೆ 15 ದಿವಸಗಳ ಮುಂಚಿನ ನೋಟೀಸ್ ಕೊಟ್ಟು ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತ್ಯಾನುಸಾರ ಯಾವ ಲೈಸೆನ್ಸನ್ನಾದರೂ ಮೋಖೂಫ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಅದಕ್ಕಾಗುವ ದಾಮಾಷಾಯಿ ಗುತ್ತಾ ಮೊಬಲಗು ವಾಪಸು ಕೊಡಲ್ಪಡಬೇಕು.

38. ಎಲ್ಲಾ ಲೈಸೆನ್ಸ್‌ದಾರರು ಸರ್ಕಾರದಿಂದ ಎಕ್ಸೈಜ್ ಅಥವಾ ಅಫೀಂ ಕಾನೂನುಗಳನ್ನನುಸರಿಸಿ ಸಾದರ್‌ಮಾಡಲ್ಪಡುವ ಜಾಸ್ತಿ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧರಾಗಿರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರವರು ಸರಿಪಡಿಸುವ ಯಾ ಹೊಸ ಲೈಸೆನ್ಸನ್ನು ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

39. ಲೈಸೆನ್ಸಿಗೆ ಸಂಬಂಧಪಡದ ಷರಾಬು ಯಾ ಮದತ್ ಪದಾರ್ಥಗಳ ವಿಷಯದಲ್ಲಿ ಯಾವದಾದರೂ ಏರ್ಪಾಡು ಮಾಡಲ್ಪಡುವ ಪಕ್ಷದಲ್ಲಿ ಲೈಸೆನ್ಸ್‌ದಾರರಿಗೆ ಪರಿಹಾರ ದ್ರವ್ಯಕ್ಕೂ ಯಾ ರಿಮಿಷನ್ ಯಾನೆ ಸೋಡಿಗೂ ಹಕ್ಕು ಇರಲಾರದು.

40. ಯಾವ ತರಹೆ ಷರಾಬು ಅಂಗಡಿಯ ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ಮಾಯಿದೆ ಒಳಗೆ ಅಲ್ಲಿಂದ 5 ಮೈಲಿ ಒಳಗೆ ಇತರ ಷರಾಬುಗಳನ್ನು ಮಾರತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು ಮತ್ತು ತನ್ನ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಅಂಥಾ ಯಾವ ಮನುಷ್ಯನನ್ನೂ ಪಾಲುಗಾರನನ್ನಾಗಲಿ ಅಥವಾ ಸಂಬಂಧವುಳ್ಳವನನ್ನಾಗಲಿ ಮಾಡಲು ಅವಕಾಶ ಕೊಡಕೂಡದು.

XX. ಶೇಂದಿ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಲೈಸೆನ್ಸ್ ಪ್ರಕಾರ ಕೊಡಲ್ಪಟ್ಟ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ಮತ್ತು ತೆಂಗಿನ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ.

(2) ಲೈಸೆನ್ಸ್‌ದಾರನು ತನ್ನ ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ, ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸ್ಸಿನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರು ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್‌ಮಾಡಿಕೊಳ್ಳುವುದಕ್ಕೆ ಸ್ವತಂತ್ರನಾಗಿರುತ್ತಾನೆ. ಆದರೆ ಅಂಥಾ ಮರಗಳು ಆತನ ಇಜಾರೆಗೆ ಸಂಬಂಧಪಡದ ಅಂಗಡಿಯ ಸಮೀಪದಲ್ಲಿ ಯಾ ಸರಹದ್ದಿನೊಳಗೆ ಇದ್ದ ಪಕ್ಷದಲ್ಲಿ ಸದರಿ ಮರಗಳನ್ನು ಉತಾರ್‌ಮಾಡಲು ದರಖಾಸ್ತು ಮಾಡುವದಕ್ಕೆ ಮುಂಚೆ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರವರ ಮಂಜೂರಾತಿಯನ್ನು ಪಡೆಯಬೇಕು. ಲೈಸೆನ್ಸದಾರನು ಇನ್ಸ್‌ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಗೆ ಅವರಿಂದ ಅಪ್ಪಣೆ ಚೀಟಿ ಪಡೆದು ಇತರ ಶೇಂದಿ ದುಕಾನ್‌ದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು, ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್‌ಪೆಕ್ಟರವರು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ.

(3) ಸರಿಯಾದ ಲೈಸೆನ್ಸ್ ಪಡೆದು, ಆ ಲೈಸೆನ್ಸುಮೇರೆ ಉತಾರ್‌ಮಾಡಿರುವ ಮರಗಳ ಶೇಂದಿ ವಿನಹಾ ಮತ್ಯಾವ ವಿಧವಾದ ಶೇಂದಿಯನ್ನು ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(4) ಉತಾರ್ ಲೈಸೆನ್ಸುಗಳ ಷರತ್ತುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಲೈಸೆನ್ಸದಾರನು, ತನ್ನ ಹೆಸರಿನಲ್ಲಿಯೂ, ಅಥವಾ ಅವನ ವಾರಸುದಾರನ ಹೆಸರಿನಲ್ಲಿಯೂ ದರಖಾಸ್ತಿನ ಮೇಲೆ ಕೊಡಲ್ಪಟ್ಟ ಉತಾರ್ ಲೈಸೆನ್ಸುಗಳಿಗಾಗಿ ಕೊಡಬೇಕಾದ ಎಲ್ಲಾ ತೆರಿಗೆಗಳ ಖಿಸ್ತುಗಳಿಗೂ ಸರ್ಕಾರಕ್ಕೆ ಜವಾಬ್ದಾರನಾಗಿರುತ್ತಾನೆ.

(5) ನಿರ್ಣಯಿಸಿದ ಕಾಲದೊಳಗಾಗಿ ಯಾವ ಖಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೆ ಸೆಕ್ಷನ್ ಮೇರೆಗೆ ಉತಾರ್ ಲೈಸೆನ್ಸ್ ರದ್ದು ಯಾ ಹಂಗಾಮಿಯಾಗಿ ಮೋಖೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(6) ಮೇಲ್ಕಂಡಂತೆ ನಡೆಯಲು ತಪ್ಪಿದಲ್ಲಿ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರವರ ಅಥವಾ ಡೆಪ್ಯುಟಿ ಕಮ್ಮಿಷನರವರಿಂದ ಇದಕ್ಕಾಗಿ ನೇಮಕಮಾಡಲ್ಪಡುವ ಇತರ ಆಫೀಸರವರ ಹುಕುಂ ಪಡೆದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವ ವರಿಗೂ ಉತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರ ನೋಟೀಸು ತನಗೆ ಬಂದಿದ್ದರಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇನೇ ಇದ್ದಲ್ಲಿ ನ್ಯಾಯವಿರುದ್ಧವಾಗಿ ಉತಾರು ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(7) ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಉತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಕಾಲದಲ್ಲಿ ಸಾಲಿಯಾನಾ ಮರ ಒಂದಕ್ಕೆ 4 ಆಣೆ 3 ಪೈ ಪ್ರಕಾರ ಮರದ ಮಾಲ್ಕಿ ಮೊಬಲಗು ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು, ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗತಕ್ಕದ್ದು.

(8) ಈಚಲು ಮರಗಳನ್ನು ಉತಾರ್ಮಾಡುವದು ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು:—

(a) ಈಚಲು ಮರಗಳು ಕಸಬುದಾರ್ರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮೂರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೆಡಿಸಕೂಡದು.

(d) ಡೆಪ್ಯುಟಿ ಕಮ್ಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು ಮತ್ತು ಅದರ ಉದ್ದವೂ 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಶೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಿಶೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ ಮಾಡಿದರೆ ಎರಡು ವರಿಶೆಗಳಿಗೆ ಕಮ್ಮಿಯಾಗಿರಕೂಡದು ; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸುದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸ್‌ದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೇ ಕಾಲದಲ್ಲಿ ಆಗಲಿ ಅಥವಾ ಗುತ್ತಿಗೆ ಪೂರೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿಹೋದ ಮರಗಳು ಆತನಿಗೆ ಸಂಖ್ಯೆಹಾಕಿ ಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕೂ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ. ಆತನು ಉತಾರಿಗಾಗಿ ತಯಾರ್ಮಾಡುವ ಪ್ರತಿ ಒಂದು ಮರಕ್ಕೂ ಅದು ಸದರಿ ತಯಾರಿಯಿಂದ ಉತಾರಾಗುವದಕ್ಕೆ ಮುಂಚೆ ನಾಶವಾದಲ್ಲಿ ಅದೇ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(j) ಜನಗಳ ಉಪಯೋಗಾರ್ಥವಾಗಿ ವಾಪಸು ತೆಗೆದುಕೊಂಡ ಯಾ ತೆಗೆದುಕೊಳ್ಳಲ್ಪಟ್ಟ ಮರಗಳೂ, ಇಂಜನಿಯರ್ ಇಲಾಖೆಯವರ ಆಡಳಿತಕೆ ಶೇರಿರುವ (ಇರಿಗೇಷನ್) ತಕಾವಿ ಕಾಂಗಾರಿಗಳಿಗೆ ಶೇರಿದ ಪ್ರದೇಶಗಳಲ್ಲಿರುವ ಮರಗಳೂ, ಇಂಜನಿಯರ್ ಇಲಾಖೆಯವರು ಸದರಿ ಮರಗಳ ಎಲೆಗಳನ್ನೂ, ಕೊಂಬೆಗಳನ್ನೂ ಕತ್ತರಿಸಬೇಕಾದ ಸಂದರ್ಭಗಳಲ್ಲಿ ಲೈಸೆನ್ಸ್‌ದಾರನಿಗೆ ಅಂಥಾ ಮರಗಳಿಗಾಗಿ ಯಾವ ಪರಿಹಾರದ್ರವ್ಯಕ್ಕೂ ಹಕ್ಕಿರುವುದಿಲ್ಲ.

(k) ಲೈಸೆನ್ಸ್‌ದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ದುಸರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(9) ಚಾಪೇ ಮಾಡುವುದಕ್ಕಾದರೂ ಹಗ್ಗ ಮಾಡುವುದಕ್ಕಾದರೂ ಗೂಡೆಗಳು ಮಾಡುವುದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸ್‌ದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(10) ಡೆಪ್ಯುಟಿ ಕಮ್ಮಿಷನರುಗಳು ಆಗಾಗ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಠಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ್ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಠಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇಗ್ರಾಮದ ಮರಗಳನ್ನು ದಾಖಲ್‌ಮಾಡಬೇಕೆಂದು ಹುಕುಂ ಮಾಡಬಹುದು.

(11) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(12) ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೊಡಲ್ಪಟ್ಟ ಪ್ಯಾಸುಗಳು ಅದಕ್ಕಾಗಿ ಅಧಿಕಾರ ಹೊಂದಿದ ಆಫಿಸರುಗಳ ಪರೀಕ್ಷೆ ವ ತನಿಖೆ ಬಗ್ಗೆ ಗುರಿಯಾಗತಕ್ಕದ್ದು.

(13) ಶೇಂದಿಯನ್ನು ಗಿಡದಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನು ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತದೆ.

(14) ಯಾವ ಲೈಸೆನ್ಸದಾರ ಯಾ ಆತನ ಚಿಕರೀದಾರರೇ ಆಗಲಿ ಮೂರು ಅಳೆಯುವ ಸೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು; ಶೇಂದಿಯು ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಮಾರಲ್ಪಡಕೂಡದು. ಒಂದು ಇಂಪೀರಿಯಲ್ ಗ್ಯಾಲನ್ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನಮಾಡಲಿಕ್ಕೆ ಶೇಂದಿಯನ್ನು ತೆಗದುಕೊಂಡು ಹೋಗಲು ಅವಕಾಶ ಕೊಡಬಹುದು.

(15) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ರೇವನ್ನು ಯಾ ಪಾಣೆಯನ್ನು ಅಜಮಾಯಿಷಿ ಮಾಡಲಿಕ್ಕೆ ಉತಾರ್‌ದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(16) ಲೈಸೆನ್ಸದಾರ್ ಶೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಗೆ ಹಿಡಿಯಲ್ಪಡಕೂಡದು.

(17) ಈ ಕೆಳಗೆ ನಮೂದಿಸಿರುವ ನಿಬಂಧನೆಗಳು 1901ನೆ ಇಸವಿಯ ಮೈಸೂರು ಎಕ್ಸೈಜ್ Vನೆ ರೆಗ್ಯುಲೇಷನಿನ 12ನೆ ಸೆಕ್ಷನ್ ಮೇರೆಗೆ ಶೇಂದಿ ಮರಗಳನ್ನು ಕಟ್ಟುವದಕ್ಕೂ, ಮತ್ತು ಶೇಂದಿಯನ್ನು ಉತಾರ್ಮಾಡುವದಕ್ಕೂ ಕೊಡಲ್ಪಡಬೇಕಾದ ಲೈಸೆನ್ಸುಗಳನ್ನು ಕ್ರಮಪಡಿಸುತ್ತೆ:—

(1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಗೆ ಲೈಸೆನ್ಸಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ.

(b) ಮದ್ರಾಸ್ ಆಧಿಪತ್ಯಕ್ಕೆ ಸೇರಿದ ಶೇಂದಿ ಅಂಗಡಿಕಾರರ ಅಥವಾ ಗುತ್ತಿಗೆದಾರರ.

(c) ಸನ 1898ನೆ ಇಸವಿ ಜೂನ್ 20ನೆ ಮಾರ್ಖಾಂ 11897—906—Ex. 485ನೆ ನಂಬರುಳ್ಳ ಗವರ್ನ್ಮೆಂಟ್ ಇಸ್ತಿಹಾರ್ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿ ತೋಟಗಳಲ್ಲಿಯೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಬಾಗಗಳಲ್ಲಿಯೂ ಇರುವ ಮರಗಳ ಮಾಲೀಕರು.—

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನು ಸಂಬಂಧಪಟ್ಟ ಎಕ್ಸೈಜ್ ಇನ್ಸ್‌ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿಂದ ಪಡೆಯಬಹುದು. ದರಖಾಸ್ತುದಾರರು ತಾವು ಅಪೇಕ್ಷಿಸುವ ಸರ್ಕಾರೀ ಮರಗಳಿಗಾಗಿ ಮೊದಲನೇ ಕಿಸ್ತಿನ ಮರ ತೆರಿಗೆಯನ್ನೂ ಮರದ ಮಾಲ್ಕಿಯನ್ನು ಮೊದಲೇ ಪಾವತಿ ಮಾಡಬೇಕು.

(3) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರ ತೆರಿಗೆಯು ಮೈಸೂರು ಸರ್ಕಾರಕ್ಕೆ ಜಮಾ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರರಿಗೆ ಒಂದೇ ಕಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ಚಲನ್ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್‌ಪೆಕ್ಟರವರಿಂದ ರವಾನೆಯ ಪರವಿಟ್ಟನ್ನು ಪಡೆಯತಕ್ಕದ್ದು.

(4) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟ್ ರೇಂಜ್ ಆಫಿಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಅಥವಾ ವಿಶೇಷ ಸಂದರ್ಭಗಳಲ್ಲಿ ಸಬ್ ಇನ್ಸ್‌ಪೆಕ್ಟರ ದರ್ಜೆಗೆ ಕಮ್ಮಿಯಾಗಿಲ್ಲದೆ ಇರತಕ್ಕ ನೌಕರನಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದು ಮಾಡತಕ್ಕದ್ದು. ಈ ಚಲು ಮರಗಳ ದರಖಾಸ್ತುದಾರರು ಮರಗಳ ಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫಿಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟಿಸ ಕೊಟ್ಟ ತರುವಾಯು ಹಾಗೆ ಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮ್ಮಿಷನರ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6). ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟಕೂಡ್ಲೆ ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗರಿಗಳನ್ನು ತೆಗೆದುಹಾಕಲಿಕ್ಕೂ, ಪಾಣೆ ಯಾ ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(7). ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಅಂದರೆ ಉತಾರ್ ಲೈಸೆನ್ಸಿಗೆ ದರಖಾಸ್ತು ಯಾವ ಕಾಲದಲ್ಲಿ ಕೊಡಲ್ಪಡಲಿ, ಜುಲೈ ಗುರ್‍ರೇ ಲಾಗಾಯಿತು ಜೂನ್ ಆಖೈರ್ ವರಿಗೆ ಆಗಿರುತ್ತೆ. ಲೈಸೆನ್ಸ್‌ದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟ ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖ್ಯೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಲೈಸೆನ್ಸ್ ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(8) ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಮರಕ್ಕು ಈ ಕೆಳಗೆ ನಮೂದು ಮಾಡಿರುವ ತೆರಿಗೆಗಳು ಪಾವತಿಯಾಗತಕ್ಕದ್ದು :—

	ಮರ ಒಂದಕ್ಕೆ ವರುಷ ಒಂದಕ್ಕೆ ಕೊಡಬೇಕಾದ ಮರತೆರಿಗೆ.		
ಮರದ ತರಹೆ—	ರೂ.	ಆ.	ಪೈ.
ಈಚಲು	1	4	0
ತೆಂಗು	2	2	0
ತಾಳೆ	1	9	6

ಟಿಪ್ಪಣಿ.—ಮೇಲೆ ನಮೂದಿಸಿರುವ 17 (1) (c)ನೆ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(9) ಎಕ್ಸೈಜ್ ಕಮಿಷ್ನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆ ಮೊಬಲಗು ಈ ಕೆಳಗೆ ನಮೂದ್ ಮಾಡಿರುವ ಖಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು :—

ಲೈಸೆನ್ಸ್‌ಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರತೆರಿಗೆ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಗುರ್‍ರೆ ತಾರೀಖಿನಲ್ಲಿ ಪಾವತಿಯಾಗಬೇಕಾದ ಮರ ತೆರಿಗೆ ದಾಮಾಷಾಯಿ.
ಜುಲೈ ಗುರ್‍ರೆ ಲಾಗಾಯಿತು ಮುಂದಿನ ಏಪ್ರಿಲ್ 30ನೆ ತಾರೀಖಿನ ಒಳಗಾಗಿ.	ಮೂರರಲ್ಲಿ ಒಂದು ಭಾಗ.	ಉಳಿದ ಮೂರರಲ್ಲಿ ಎರಡು ಭಾಗವು.
ಮೇ ಗುರ್‍ರೆ ಲಾಗಾಯಿತು ಮುಂದಿನ ಜೂನ್ 30ನೆ ತಾರೀಖಿನ ಒಳಗಾಗಿ.	ಎಲ್ಲಾ.	ಇಲ್ಲಾ.

ಹರಾಜಿನ ತಾರೀಖು.

ಡಿಸ್ಟ್ರಿಕ್ಟು.	ನಂಬರು.	ತಾಲ್ಲೂಕು.	ತಾರೀಖು.	ಷರಾ.
ಬೆಂಗಳೂರು ...	1	ಬೆಂಗಳೂರು ...	1909—26ನೆ ಏಪ್ರೆಲ್.	
ಡಿಟೋ ...	2	ದೇವನಹಳ್ಳಿ ...	ಡಿಟೋ 12ನೆ ಮೇ.	
ಕೋಲಾರ ...	3	ಶಿಡ್ಲಘಟ್ಟ ...	ಡಿಟೋ 5ನೆ ಡಿಟೋ	
ಡಿಟೋ ...	4	ಚಿಕ್ಕಬಳ್ಳಾಪುರ ...	ಡಿಟೋ 8ನೆ ಡಿಟೋ	
ತುಮಕೂರು ...	5	ಗುಬ್ಬಿ ...	ಡಿಟೋ 5ನೆ ಡಿಟೋ	
ಮೈಸೂರು ...	6	ತಿರ್ಮಕೂಡ್ಲು ನರಶೀಪುರ ...	ಡಿಟೋ 22ನೆ ಡಿಟೋ	
ಡಿಟೋ ...	7	ಮಳವಳ್ಳಿ ...	ಡಿಟೋ 20ನೆ ಡಿಟೋ	
ಹಾಸನ ...	8	ಅರ್ಕಲಗೂಡು ...	ಡಿಟೋ 8ನೆ ಡಿಟೋ	
ಡಿಟೋ ...	9	ಮಂಜರಾಬಾದು ...	ಡಿಟೋ 12ನೆ ಡಿಟೋ	
ಕಡೂರು ...	10	ಮೂಡಿಗೆರೆ ...	ಡಿಟೋ 29ನೆ ಏಪ್ರೆಲ್.	
ಶಿವಮೊಗ್ಗ ...	11	ಶಿವಮೊಗ್ಗ ...	ಡಿಟೋ 26ನೆ ಡಿಟೋ	
ಚಿತ್ರದುರ್ಗ ...	12	ಚಿತ್ರದುರ್ಗ ...	ಡಿಟೋ 28ನೆ ಡಿಟೋ	

ಹೆಚ್. ಹೆಚ್. ಸಪ್ಪರ್ಕ್ಸ್,
ಎಕ್ಸೈಜ್ ಕಮಿಷನರ್.

ಫಾರೆಸ್ಟ್ಸು ಇಲಾಖಾ.

ತಂಗಡಿ ಮತ್ತು ಕಕ್ಕೆ ಚಕ್ಕೆ, ಇಸ್ತಿಹಾರ.

ತಾರೀಖು 8ನೆ ಏಪ್ರೈಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರಸ್ಟುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು 1909ನೆ ಇಸವಿ ಮೇ ತಾರೀಖು 21ರಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಂದಲೂ ಮತ್ತು ಡೆಪ್ಯುಟಿ ಕಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರಿಂದಲೂ ಸಹ ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟ್.	ಜಮಾಯಿಸತಕ್ಕ ಕಾಲ.	ಷರಾ.
1	ಹಿರಿಯೂರು ತಾಲ್ಲೂಕು ...		ಇನಾಂ, ಜೋಡಿ, ಕಾಯಂಗುತ್ತಾ ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರ ಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.
2	ಚಳ್ಳಕೆರೆ ತಾಲ್ಲೂಕು ..		
3	ಹೊಳಲ್ಕೆರೆ ತಾಲ್ಲೂಕು ಗರ್ಗಾ ಕಾವಲು ಸಹಾ.		
4	ದಾವಣಗೆರೆ ತಾಲ್ಲೂಕು ...		
5	ಮೊಳಕಾಲ್ಮುರು ತಾ॥ ಮತ್ತು— (1) ಬಾಂಡರಾವಿ ... (2) ಕೃಷ್ಣರಾಜಪುರ ... (3) ಕಮರಾ ಕಾವಲು ... (4) ಹಿರೀ ಅಡವಿ ... ಸ್ಟೇಟ್ ಫಾರೆಸ್ಟುಗಳು ಸಹ ...		
6	ಹೊಸದುರ್ಗ ತಾಲ್ಲೂಕು ಕುದರೆಕಣಿವೆ ಸ್ಟೇಟ್ ಫಾರೆಸ್ಟು ಸಹ.	1909ನೆ ಜುಲೈ ಗುರ್ರ ಲಾಗಾಯಿತು 1911ನೆ ಜೂನ್ ಆಖೈರು ವರಿಗೆ.	
7	ಜಗಲೂರು ತಾಲ್ಲೂಕು ರಂಗೈಸದುರ್ಗ-ಅಣಬೂರು ಸ್ಟೇಟ್ ಫಾರೆಸ್ಟುಗಳು ಸಹ.		
8	ಚಿತ್ರದುರ್ಗ ತಾಲ್ಲೂಕು ...		
9	ಹರಿಹರ-ಮಲೆಬಿನ್ನೂರು ಸ್ಟೇಟ್ ಫಾರೆಸ್ಟು ಸಹ.		
10	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟು ಬೇವಿನಹಳ್ಳಿ ಸಹ.		
11	ನಿರುಥಡಿ ಡಿಟೋ ...		
12	ಜಾನಕಲ್ಲು ಡಿಟೋ ...		
13	ದೇವರಗುಡ್ಡ ಡಿಟೋ ...		
14	ಮಾರಿಕಣಿವೆ ಡಿಟೋ ...		
15	ಲಕ್ಕಿಹಳ್ಳಿ ಡಿಟೋ ...		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣೆ ಹಕ್ಕನ್ನು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕೂ ಡೆಪ್ಯುಟಿ ಕಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1909ನೆ ಸಾಲ್ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ ತಾರೀಖು 30ರ ವರಿಗಿನ 24 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣೆ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 100 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಕೈದಾದ ಮಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರ

ಖಾಸ್ತುದಾರರು ಹರಾಜು ಖೈದಾದ ಒಡನೆ ಮೊದಲು ಅವರು ಇಟ್ಟುಯಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲುಹಿಸ್ಸೆ ಹಣವನ್ನು ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟದ್ದ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾಯಿದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೆ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

7. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರೆದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ಮೂರು ದಿನಗಳ ಒಳಗಾಗಿ ಬರೆದುಕೊಡತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಮೊದಲು ಕೊಟ್ಟ ಹಣವನ್ನು ದಂಡವಾಗಿ ಸರಕಾರಕ್ಕೆ ಸೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

8. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ರವಾನೆ ತಡೆಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾಗುತ್ತೆ.

1ನೆ ಖಿಸ್ತು	...	...	30ನೆ ಸಪ್ಟಂಬರ್ 1909.
2ನೆ ಖಿಸ್ತು	...	...	31ನೆ ಮಾರ್ಚಿ 1910.
3ನೆ ಖಿಸ್ತು	...	...	30ನೆ ಸಪ್ಟಂಬರ್ 1910.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕ್ಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1911ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿ ವರಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಚಂಗಯ್ಯ ಚೆಟ್ಟಿ,
ಡೆಪ್ಯುಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮಾ, ತಾರೀಖು 15ನೆ ಏಪ್ರಿಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉದ್ಯಾರ್ಡ್.	19—5—09	ಸಾಗ್ವಾನಿ ನಾಟಾ ...	600	20,000	
			ಡಿಟೋ ಜಂತಿಗಳು ...	300	4,000	
			ಹೊನ್ನೆ ನಾಟಾ ...	100	2,500	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟಾ ...	100	3,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟಾ ...	25	1,000	
			ಕಾಡು ನಾಟಾ ...	25	500	
2	ನಂಜನಗೊಡು ...	20—5—09	ಸಾಗುವಾನಿ ನಾಟಾ ...	50	1,500	[illegible]
			ಡಿಟೋ ಜಂತಿಗಳು ...	50	500	
			ಹೊನ್ನೆ ನಾಟಾ ...	100	2,000	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟಾ ...	50	1,000	
			ಡಿಟೋ ಜಂತಿಗಳು ...	10	120	
			ಬೀಟೆ ನಾಟಾ ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟಾ ...	20	500	

ಹರಾಜು ಷರತ್ತುಗಳು.

1. ಹಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಆದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ಕಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ತಾರೀಖು 13ನೆ ಏಪ್ರೆಲ್ 1909.

ಮಂಜನಾಥ ಫಾರೆಸ್ಟು, ಬೆಂಗಳೂರು ಡಿಸ್ಟ್ರಿಕ್ಟು.

ಸೆ‍ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ನಂಬರು R. 6820—Ft. 149—08—2, 2—3—09; 4—4—09ನೆ ಇಸವಿಯ ಗೆಜೆಟಿನಲ್ಲಿ ಘಾಯಿಷ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲಿ.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕು ಬಂದಿ.
ಬೆಂಗಳೂರು	ಕಾನಕಾನಹಳ್ಳಿ	11·10 ಚದರ ಮೈಲು	ಮಂಜನಾಥ ಬ್ಲಾಕು	ಉತ್ತರಕ್ಕೆ—ಗಟ್ಟಗುಂದ-ಕೊಳಗೊಂಡಹಳ್ಳಿ ಮತ್ತು ಚನ್ನಮಾಳ (ಮದರಾಸು) ಗ್ರಾಮಗಳ ಗಡಿಗಳು ಸೇರಿರುವ ಮುಕ್ಕಪ್ಪೆ ಬಾಂದುಗಳ ಸ್ಥಳದಿಂದ ಹೊರಟು ಲೈನು ಈಶಾನ್ಯ ಮುಖವಾಗಿ ಮದರಾಸು ಅಧಿಪತ್ಯದ ಗಡಿಯನ್ನನುಸರಿಸಿ ಕೊಳಗೊಂಡಹಳ್ಳಿ ಗ್ರಾಮದ ಸರ್ವೆ 43ನೆ ನಂಬರಿನ ಅತ್ಯುತ್ತರ ಮೂಲೆಗೆ ಹೋಗಿ ಅನಂತರ ಆಗ್ನೇಯಕ್ಕೆ ತಿರುಗಿ ಅದೇ ಮದರಾಸು ಗಡಿಯನ್ನೇ ಅನುಸರಿಸಿ ಕೊಳಗೊಂಡಹಳ್ಳಿ ಗ್ರಾಮದ ಸರ್ವೆ 44ನೆ ನಂಬರಿನ ಈಶಾನ್ಯ ಮೂಲೆಯನ್ನು ಅಲ್ಲಿ ಎರಡು ಹೊಳೆಗಳು ಕಲೆತಿರುವ ಬಳಿ ತಲಪುತ್ತದೆ.

ಪೂರ್ವಕ್ಕೆ—ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಟು ಮದರಾಸು ಗಡಿಯನ್ನನುಸರಿಸಿ ಹೋಗಿ ಗಂಗನಹಳ್ಳಿ ಸರ್ವೆ 10ನೆ ನಂಬರಿನಲ್ಲಿ ಸರ್ವೆ 11ನೆ ನಂಬರಿನ ಈಶಾನ್ಯ ಮೂಲೆಯಿಂದ ಉತ್ತರಕ್ಕೆ 6 ಫರ್ಲಾಂಗು 4 ಸರಪಣಿ ದೂರದಲ್ಲಿ ಮೇಲ್ಕಂಡ ಮದರಾಸು ಗಡಿ ಒಳಕ್ಕೆ ಬಾಗಿರುವ ಸ್ಥಳವನ್ನು ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಲೈನು ವಾಯುವ್ಯಾಭಿಮುಖವಾಗಿ ಹೊರಟು ಸರ್ವೆ 10ನೆ ನಂಬರಿನಲ್ಲಿ ಹಾದು ಅದೇ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನು, ಮದರಾಸು ಗಡಿಯನ್ನು ತಾಗಿರುವ ಅದೇ ಸರ್ವೆ ನಂಬರಿನ ಉತ್ತರಮೂಲೆ ಬಾಂದಿನಿಂದ 4 ಫರ್ಲಾಂಗು 4 ಸರಪಣಿ ದೂರದಲ್ಲಿ ಮುಟ್ಟುತ್ತದೆ. ಅಲ್ಲಿಂದ ಮುಂದೆ ಲೈನು ವಾಯುವ್ಯಕ್ಕೆ ತಿರುಗಿ ಗಂಗನಹಳ್ಳಿ ಸರ್ವೆ 83ನೆ ನಂಬರಿನಲ್ಲಿ ಹಾದು ಅಲ್ಲಿನ ಒಂದು ಸಣ್ಣಹಳ್ಳದ ಬಲಧಡವನ್ನನುಸರಿಸಿ ಅದೇ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನು ಅದೇ ಗ್ರಾಮದ ಸರ್ವೆ 81ನೆ ನಂಬರಿನ ಈಶಾನ್ಯ ಮೂಲೆಯಿಂದ ಉತ್ತರಕ್ಕೆ 1 ಫರ್ಲಾಂಗು 6 ಸರಪಣಿ ದೂರದಲ್ಲಿ ಸರ್ವೆ 83ನೆ ನಂಬರಿನ ಪಶ್ಚಿಮದಲ್ಲಿ ಒಂದು ಸ್ಥಾನವನ್ನು ಸೇರುತ್ತದೆ. ಅಲ್ಲಿಂದಾಚೆಗೆ ಲೈನು ಸರ್ವೆ 82ನೆ ನಂಬರಿನಲ್ಲಿ ಹಾದು ಮೇಲ್ಕಂಡ ಹಳ್ಳದ ಬಲಧಡವನ್ನೇ ಅನುಸರಿಸಿ ಮೇಲ್ಕಂಡ ಹಳ್ಳವು ಸರ್ವೆ 82ನೆ ನಂಬರಿನಲ್ಲಿ ದಕ್ಷಿಣಕ್ಕೆ ಹರಿಯುತ್ತಿರುವ ಮತ್ತೊಂದು ಹಳ್ಳಕ್ಕೆ ಸೇರುವ ಮತ್ತು ಸರ್ವೆ 89ನೆ ನಂಬರಿನ ವಾಯುವ್ಯ ಮೂಲೆಯಿಂದ ವಾಯುವ್ಯಕ್ಕೆ 8 ಸರಪಣಿ ದೂರದಲ್ಲಿರುವ ಸ್ಥಳವನ್ನು ತಲಪುತ್ತದೆ. ನಂತರ ಈ ಹಳ್ಳವನ್ನು ದಾಟಿ ಪಶ್ಚಿಮಾಭಿಮುಖವಾಗಿ ಸರ್ವೆ 82ನೆ ನಂಬರಿನಲ್ಲಿ ಹೊರಟು ಗಂಗನಹಳ್ಳಿ ಮತ್ತು ಹುಣಸನಹಳ್ಳಿ ಗ್ರಾಮಗಳ ಸರಹದ್ದು ಗಡಿಯನ್ನು ಗಂಗನಹಳ್ಳಿ-ಹುಣಸನಹಳ್ಳಿ ಮತ್ತು ಬಸವಾಪಟ್ಣ ವೀರಸಂದ್ರ ಗ್ರಾಮಗಳ ಗಡಿಗಳು ಸೇರಿರುವ ಮುಕ್ಕಪ್ಪೆ ಬಾಂದುಗಳಿಂದ, ದಕ್ಷಿಣಕ್ಕೆ 4 ಫರ್ಲಾಂಗು 9 ಸರಪಣಿ ದೂರದಲ್ಲಿ ಒಂದು ಸಣ್ಣ ಹಳ್ಳದ ಕೊನೆಯ ಸಮೀಪದಲ್ಲಿ ಸೇರುತ್ತದೆ. ನಂತರ ಲೈನು ಪಶ್ಚಿಮಕ್ಕೆ ಹೊರಟು ಹುಣಸನಹಳ್ಳಿ ಗ್ರಾಮದ ಸರ್ವೆ 109ನೆ ನಂಬರಿನ ಉತ್ತರ ಗಡಿಯನ್ನು ಅನುಸರಿಸಿ 12 ಸರಪಣಿ ದೂರ ಹೋಗಿ ಉತ್ತರದಿಂದ ದಕ್ಷಿಣಕ್ಕೆ ಬರುವ ಒಂದು ಹಳ್ಳವನ್ನು ಸೇರುತ್ತದೆ. ನಂತರ ಲೈನು ವಾಯುವ್ಯಕ್ಕೆ ತಿರುಗಿ ಮೇಲ್ಕಂಡ ಹಳ್ಳದ ಎಡಧಡವನ್ನನುಸರಿಸಿ ಸರ್ವೆ 108ನೆ ನಂಬರಿನಲ್ಲಿ ತಿರಿಗಿ ಅದೇ ನಂಬರಿನ ಉತ್ತರ ಗಡಿಯನ್ನು ಸೇರಿ ನಂತರ ಪಶ್ಚಿಮಕ್ಕೆ ತಿರಿಗಿ ಅದೇ ಉತ್ತರ ಗಡಿಯನ್ನೇ ಅನುಸರಿಸಿಕೊಂಡು ಶೀತನಕೊಟ್ಟ ಹಳ್ಳದ ತಡಿಯನ್ನು ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಹೊರಟು ಶೀತನಕೊಟ್ಟದ ಹಳ್ಳದ ಎಡಧಡವನ್ನೇ ಅನುಸರಿಸಿ ಬಳಿದಾಳ ಗ್ರಾಮದ ಸರ್ವೆ 32ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರಿ ಅಲ್ಲಿಂದ ಪೂರ್ವಕ್ಕೆ ತಿರಿಗಿ ಸರ್ವೆ 32ನೆ ನಂಬರಿನ ದಕ್ಷಿಣ ಗಡಿಯನ್ನನುಸರಿಸಿ ಅದೇ ಗ್ರಾಮದ ಸರ್ವೆ 17ನೆ ನಂಬರಿನ ನೈರುತ್ಯಮೂಲೆಯಿಂದ ಪಶ್ಚಿಮಕ್ಕೆ 7 ಸರಪಣಿ ದೂರದಲ್ಲಿ ಸೇರುತ್ತದೆ. ಅಲ್ಲಿಂದ ಮುಂದಕ್ಕೆ ಲೈನು ಆಗ್ನೇಯಕ್ಕೆ ತಿರಿಗಿ ಬಳಿದಾಳ ಸರ್ವೆ 15ನೆ ನಂಬರಿನಲ್ಲಿ 1 ಫರ್ಲಾಂಗು 6 ಸರಪಣಿ ದೂರ ಹೋಗಿ ಸರ್ವೆ 17ನೆ ನಂಬರಿನ ಪಶ್ಚಿಮ ದಿಕ್ಕಿನಲ್ಲಿರುವ ಹಳ್ಳದ ಬಲಧಡವನ್ನು ಸೇರುತ್ತದೆ. ಅಲ್ಲಿಂದ ಲೈನ್ ಪೂರ್ವಕ್ಕೆ ತಿರಿಗಿ ಸರ್ವೆ ನಂಬರು 15ರಲ್ಲಿ ಹಾದು ಸರ್ವೆ 15ನೆ ನಂಬರಿನ ಪೂರ್ವ ದಕ್ಷಿಣ ಗಡಿಯನ್ನು, ಸರ್ವೆ 14ನೆ ನಂಬರಿನ ಆಗ್ನೇಯಮೂಲೆಯಿಂದ ದಕ್ಷಿಣಕ್ಕೆ 5 ಸರಪಣಿ ದೂರದಲ್ಲಿ ಮುಟ್ಟುತ್ತದೆ. ಅಲ್ಲಿಂದಾಚೆಗೆ ಲೈನು ಅದೇ ದಿಕ್ಕಿನಲ್ಲಿಯೇ ಹೊರಟು ಸರ್ವೆ 6ನೆ ನಂಬರಿನಲ್ಲಿ 3 ಫರ್ಲಾಂಗು ದೂರ ಹೋಗಿ ಅಲ್ಲಿರುವ ಗುಡ್ಡದ ಬುಡದಲ್ಲಿ ನಿಲ್ಲುತ್ತದೆ. ಅಲ್ಲಿಂದ ಮುಂದೆ ಲೈನು ವಾಯುವ್ಯಕ್ಕೆ ತಿರಿಗಿ 1 ಫರ್ಲಾಂಗು 4 ಸರಪಣಿದೂರ ಹೋಗಿ ಸರ್ವೆ 6ನೆ ನಂಬರಿನ ಉತ್ತರ ಗಡಿಯನ್ನು ಸರ್ವೆ 8ನೆ ನಂಬರಿನ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ 1 ಫರ್ಲಾಂಗು 4 ಸರಪಣಿ ದೂರದಲ್ಲಿ, ಮುಟ್ಟುತ್ತದೆ. ನಂತರ ಲೈನು ಸರ್ವೆ 4ನೆ ನಂಬರಿನಲ್ಲಿ ಹೊರಟು ಕೊಳಗೊಂಡಹಳ್ಳಿ-ಬಳಿದಾಳ ಗ್ರಾಮಗಳ ಸರಹದ್ದು ಗಡಿಯನ್ನು, ಕೊಳಗೊಂಡಹಳ್ಳಿ ಗ್ರಾಮದ ಸರ್ವೆ 206ನೆ ನಂಬರಿನ ಆಗ್ನೇಯ ಮೂಲೆಯಿಂದ ಪಶ್ಚಿಮಕ್ಕೆ 1 ಫರ್ಲಾಂಗು 1 ಸರಪಣಿ ದೂರದಲ್ಲಿ ಮುಟ್ಟುತ್ತ

ದೆ. ಅಲ್ಲಿಂದ ಮುಂದೆ ಲೈನು ಈಶಾನ್ಯಕ್ಕೆ ತಿರಿಗಿ ಸರ್ವೆ 201, 84 ಮತ್ತು 81ನೆ ನಂಬರಿನ ಪೂರ್ವ ಗಡಿಯಿಂದ ಪೂರ್ವಕ್ಕೆ ಸುಮಾರು 2 ಸರಪಣಿ ದೂರದಲ್ಲಿ ಸರ್ವೆ 153ನೆ ನಂಬರಿನಲ್ಲಿ ಹೊರಟು ನೇರವಾಗಿ 9 ಫರ್ಲಾಂಗು 6 ಸರಪಣಿ ದೂರ ಹೋಗಿ ಸರ್ವೆ 80ನೆ ನಂಬರಿನ ಆಗ್ನೇಯ ಮೂಲೆಯಿಂದ ಪೂರ್ವಕ್ಕೆ 5 ಸರಪಣಿ ದೂರದಲ್ಲಿ ನಿಲ್ಲುತ್ತದೆ. ಅಲ್ಲಿಂದ ಲೈನು ಸರ್ವೆ 153ನೆ ನಂಬರಿನಲ್ಲಿ ಹೊರಟು ಮೇಲ್ಕಂಡ ಸರ್ವೆ 153ನೆ ನಂಬರಿನ ಉತ್ತರ ಗಡಿಯನ್ನು, ಸರ್ವೆ 52ನೆ ನಂಬರಿನ ಆಗ್ನೇಯ ಮೂಲೆಯಿಂದ ಪೂರ್ವಕ್ಕೆ 6 ಸರಪಣಿ ದೂರದಲ್ಲಿ ಮುಟ್ಟುತ್ತದೆ. ಈಚಿಗೆ ಲೈನು ಈಶಾನ್ಯಕ್ಕೆ ತಿರಿಗಿ ಸರ್ವೆ 45ನೆ ನಂಬರಿನಲ್ಲಿ ಹೊರಟು ಅದೇ ಸರ್ವೆ ನಂಬರಿನ ಉತ್ತರ ಗಡಿಯನ್ನು, ಸರ್ವೆ 38ನೆ ನಂಬರಿನ ಈಶಾನ್ಯ ಮೂಲೆಯಿಂದ ಪೂರ್ವಕ್ಕೆ 1 ಫರ್ಲಾಂಗು ದೂರದಲ್ಲಿ ತಲಪುತ್ತದೆ. ನಂತರ ಲೈನು ವಾಯುವ್ಯಕ್ಕೆ ತಿರಿಗಿ ಸರ್ವೆ 44ನೆ ನಂಬರಿನಲ್ಲಿ ನೇರವಾಗಿ ಹೊರಟು ಅದೇ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನು, ಸರ್ವೆ 38ನೆ ನಂಬರಿನ ಈಶಾನ್ಯಮೂಲೆಯಿಂದ ಉತ್ತರಕ್ಕೆ 1 ಫರ್ಲಾಂಗು ದೂರದಲ್ಲಿ ಸೇರುತ್ತದೆ. ಅಲ್ಲಿಂದ ಮುಂದೆ ಲೈನು ಪಶ್ಚಿಮಕ್ಕೆ ತಿರಿಗಿ ಸರ್ವೆ 43ನೆ ನಂಬರಿನಲ್ಲಿ ನೇರವಾಗಿ ಹೊರಟು ಆ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನು ಅದರ ನೈರುತ್ಯಮೂಲೆಯಿಂದ ಉತ್ತರಕ್ಕೆ 1 ಫರ್ಲಾಂಗು 7 ಸರಪಣಿ ದೂರದಲ್ಲಿ ಮುಟ್ಟುತ್ತದೆ. ಅಲ್ಲಿಂದಾಚೆಗೆ ಲೈನು ಪಶ್ಚಿಮಾಭಿಮುಖವಾಗಿ ಸರ್ವೆ 42ನೆ ನಂಬರಿನಲ್ಲಿ ಕೂಡಿ ಮೊದಲು ಹೊರಟ ಸ್ಥಳವನ್ನು ತಲಪುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮೀನುಗಳಮೇಲೈ ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(*a*) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡವ್ಯಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(*a*) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(*b*) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(*c*) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(*d*) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(*e*) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(*f*) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಘಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನು ಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇಥೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರಮಟ್ಟಿಗೆ ಇಥೆಯನ್ನ ತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲಿ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 13ನೆ ಏಪ್ರೈಲ್ 1909.

ಅಚ್ಚಲ್ ಫಾರೆಸ್ಟು, ಬೆಂಗಳೂರು ಡಿಸ್ಟ್ರಿಕ್ಟು.

ಸ್ರ 1900ನೆ ಇಸವಿಯ XIನೆ ನಂಬರ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನೆಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗೆವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂಧಿಯುಳ್ಳ ಪ್ರದೇಶವು ನಂಬರು ರ. 6823—ಫಾರೆಸ್ಟ್ 150-08—2, 2—3—09; 4—4—09ನೆ ಇಸವಿಯ ಗೆಜೆಟಿನಲ್ಲಿ ಘಾಯಿಷ್ಮಾಡಲ್ಪಟ್ಟಿರುತ್ತೆ:-

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಪ್ಲಾಟಿನ ಹೆಸರು.	ಚಕ್ಕುಬಂದಿ.
ಬೆಂಗಳೂರು.	ಕಾನಕಾನಹಳ್ಳಿ.	3·05 ಚದರ ಮೈಲಿ.	ಅಚ್ಚಲು ಪ್ಲಾಟು.	ಉತ್ತರಕ್ಕೆ.—ಅಚ್ಚಲ್ ಗ್ರಾಮದ ಸರ್ವೆ 312 ಮತ್ತು 313ನೆ ನಂಬರುಗಳು ಸೇರಿರುವ ಬಾಂದುಗಳ ಬಳಿಯಿಂದ ಹೊರಟು ಲೈನು ಉತ್ತರಾಭಿಮುಖವಾಗಿ ಸರ್ವೆ 313ನೆ ನಂಬರಿನ ಪೂರ್ವ ಗಡಿ ಅನುಸರಿಸಿ ಸರ್ವೆ 313 ಮತ್ತು 269ನೆ ನಂಬರುಗಳು ಸೇರಿರುವ ಸ್ಥಳದ ವರಿಗೆ ಹೋಗುತ್ತದೆ. ನಂತರ ಈಶಾನ್ಯ ದಿಕ್ಕಿಗೆ ತಿರುಗಿ ಸರ್ವೆ 269 ಮತ್ತು 309ನೆ ನಂಬರುಗಳ ದಕ್ಷಿಣ ಗಡಿ ಅನುಸರಿಸಿ 309ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಅಚ್ಚಲ್ ಹೊರಳಗಲ್ ಗ್ರಾಮಗಳ ಎಲ್ಲೆ ಗಡಿಯನ್ನು ಸೇರುತ್ತದೆ. ಅಲ್ಲಿಂದ ಮುಂದಕ್ಕೆ ಲೈನು ಪೂರ್ವಾಭಿಮುಖವಾಗಿ ಹೊರಳಗಲ್ ಗ್ರಾಮದ ಸರ್ವೆ 22ನೆ ನಂಬರಿನಲ್ಲಿ ತೂರಿ ಸರ್ವೆ 34ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಮುಂದಕ್ಕೆ ಲೈನು ಸರ್ವೆ 34, 33 ಮತ್ತು 32ನೆ ನಂಬರುಗಳ ದಕ್ಷಿಣಕಡೆ ಹೋಗಿ ಕೊನೇ ನಂಬರಿನ ಆಗ್ನೇಯ

ಮೂಲೆಗೆ ಸೇರುತ್ತದೆ. ಅಲ್ಲಿಂದ ಮುಂದಕ್ಕೆ ಲೈನು ಆಗ್ನೇಯಾಭಿಮುಖವಾಗಿ ಸರ್ವೆ 22ನೆ ನಂಬರಿನಲ್ಲಿ ಹೊರಟು ಸರ್ವೆ 31ನೆ ನಂಬರಿನ ನೈರುತ್ಯ ಮೂಲೆಗೆ ಸೇರಿ, ಅಲ್ಲಿಂದ ಪೂರ್ವ ದಿಕ್ಕಿಗೆ ತಿರುಗಿ ಸರ್ವೆ 22ನೆ ನಂಬರಿನಲ್ಲಿ ಹೊರಟು ಸರ್ವೆ 30ನೆ ನಂಬರಿನ ನೈರುತ್ಯ ಮೂಲೆಗೆ ಸೇರಿ ಅದೇ ನಂಬರಿನ ದಕ್ಷಿಣ ಗಡಿಯನ್ನು ಅನುಸರಿಸಿ ಸರ್ವೆ 27ನೆ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ.

ಪೂರ್ವಕ್ಕೆ.—ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಳಗಲ್ ಗ್ರಾಮದ ಸರ್ವೆ 27, 26, 23ನೆ ನಂಬರುಗಳ ಪಶ್ಚಿಮ ದಿಕ್ಕಿನಲ್ಲಿ ಹೊರಟು ಸರ್ವೆ 165ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸರ್ವೆ 165ನೆ ನಂಬರಿನ ಉತ್ತರ, ಪಶ್ಚಿಮ ಮತ್ತು ದಕ್ಷಿಣ ಗಡಿಯನ್ನನುಸರಿಸಿ ಅದರ ಆಗ್ನೇಯ ಮೂಲೆ ವರಿಗೂ ಹೋಗಿ, ನಂತರ ಸರ್ವೆ 20 ಮತ್ತು 21ನೆ ನಂಬರುಗಳ ಪಶ್ಚಿಮ ಗಡಿಯನ್ನನುಸರಿಸಿ ಕೊನೇ ನಂಬರಿನ ನೈರುತ್ಯ ಮೂಲೆಗೆ ಸೇರಿ ಅಲ್ಲಿಂದ ಹೊರಳಗಲ್, ಮರಳೆ ಬೇಕುಪ್ಪೆ ಸರಹದ್ದು ಗಡಿ ವರಿಗೂ ಹೋಗುತ್ತದೆ. ಅಲ್ಲಿಂದ ಲೈನ್ ವಾಯುವ್ಯಾಭಿಮುಖವಾಗಿ ಮೇಲ್ಕಂಡ ಸರಹದ್ದು ಗಡಿಯನ್ನು ಅನುಸರಿಸಿ ಹೊರಳಗಲ್-ಅಚ್ಚಲ್ ಮತ್ತು ಮರಳೆ ಬೇಕುಪ್ಪೆ ಗಡಿಗಳು ಸೇರಿರುವ ಮುಕ್ಕೂಪ್ಪೆಗೆ ಸೇರುತ್ತದೆ ನಂತರ ಲೈನು ನೈರುತ್ಯಾಭಿಮುಖವಾಗಿ ಅಚ್ಚಲ್, ಮರಳೆ ಬೇಕುಪ್ಪೆ ಸರಹದ್ದು ಗಡಿಗಳನ್ನು ಅನುಸರಿಸಿ, ಪುರದದೊಡ್ಡಿ ಯಡಮಾರ್ನಹಳ್ಳಿ ಅಚ್ಚಲ್ ಮತ್ತು ಮರಳೆ ಬೇಕುಪ್ಪೆ ಗಡಿಗಳು ಸೇರಿರುವ ನಾಗುಪ್ಪ ಬಾಂದಿಗೆ ಸೇರುತ್ತದೆ. ಅಲ್ಲಿಂದ ಲೈನು ಆಗ್ನೇಯಾಭಿಮುಖವಾಗಿ ಪುರದದೊಡ್ಡಿ ಮರಳೆ ಬೇಕುಪ್ಪೆ ಸರಹದ್ದು ಗಡಿಯನ್ನನುಸರಿಸಿ, ಪುರದದೊಡ್ಡಿ ಗ್ರಾಮದ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ದಕ್ಷಿಣಾಭಿಮುಖವಾಗಿ ತಿರುಗಿ ಮೇಲ್ಕಂಡ ಸರಹದ್ದು ಗಡಿಯನ್ನು ಅನುಸರಿಸಿ 3 ಫರ್ಲಾಂಗು 8 ಸರಪಣಿದೂರದ ವರಿಗೂ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಲೈನು ವಾಯುವ್ಯಕ್ಕೆ ತಿರುಗಿ ಪುರದದೊಡ್ಡಿ ಸರ್ವೆ 6ನೆ ನಂಬರಿನಲ್ಲಿ ತೂರಿ 9 ಫರ್ಲಾಂಗು 7 ಸರಪಣಿದೂರ ಹೋಗಿ ಪುರದದೊಡ್ಡಿ ಯಡಮಾರ್ನಹಳ್ಳಿ ಗಡಿಯನ್ನು ಪುರದದೊಡ್ಡಿ ವಾಯುವ್ಯ ಮೂಲೆ ಬಾಂದುಗಳಿಂದ ದಕ್ಷಿಣಕ್ಕೆ 4 ಫರ್ಲಾಂಗು ದೂರದಲ್ಲಿ ಮುಟ್ಟುತ್ತದೆ. ನಂತರ ಲೈನು ಯಡಮಾರ್ನಹಳ್ಳಿ ಸರ್ವೆ 121ನೆ ನಂಬರಿನಲ್ಲಿ ತೂರಿ ಯಡಮಾರ್ನಹಳ್ಳಿ ಸರ್ವೆ 134 ಮತ್ತು 135ನೆ ನಂಬರುಗಳ ಬಾಂದುಗಳ ಉತ್ತರ ದಿಕ್ಕಿಗೆ ಸುಮಾರು 3 ಫರ್ಲಾಂಗುದೂರದಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಮುಂದಕ್ಕೆ ಲೈನು ವಾಯುವ್ಯಾಭಿಮುಖವಾಗಿ ಹೊರಟು ಯಡಮಾರ್ನಹಳ್ಳಿ ಸರ್ವೆ 122ನೆ ನಂಬರಿನಲ್ಲಿ ಹೊರಟು ಅಚ್ಚಲ್ ಗ್ರಾಮದ ಸರ್ವೆ 52ನೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಮುಂದಕ್ಕೆ ಲೈನು ಈಶಾನ್ಯಾಭಿಮುಖವಾಗಿ ಹೊರಟು ಅಚ್ಚಲ್ ಗ್ರಾಮದ ಸರ್ವೆ 52 ಮತ್ತು 39ನೆ ನಂಬರುಗಳ ಪೂರ್ವಗಡಿಯನ್ನು ಅನುಸರಿಸಿ ಹೋಗಿ ಮೇಲ್ಕಂಡ ಗ್ರಾಮದ ಸರ್ವೆ 312ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಅದೇ ಸರ್ವೆ ನಂಬರಿನ ದಕ್ಷಿಣ ಮತ್ತು ಪೂರ್ವ ಗಡಿಗಳನ್ನ ಅನುಸರಿಸಿ ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವುದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲಿ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು,

ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟು ಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. I. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ್ದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡವ್ವಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಂಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಘೋಷಿಸಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ವ್ಯಕ್ತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 14ನೆ ಏಪ್ರೆಲ್ 1909.

ಮೈಸಾವಿ ಫಾರೆಸ್ಟು, ಶಿವಮೊಗ್ಗ ಡಿಸ್ಟ್ರಿಕ್ಟು.

ಸ ೧1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 6893—Ft. 151-08-2, 4-3-09; 11-3-09ನೆ ಇಸವಿಯ ಗೆಜೆಟಿನಲ್ಲಿ ಘೋಷಿಸ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೋಕು.	ಅಂದಾಜು ವಿಸ್ತೀರ್ಣ.	ವೃಕ್ಷ ಜಾತಿ.	ಚಕ್ಕುಬಂದಿ.
ಶಿವಮೊಗ್ಗ.	ಸಾಗರ, ಸೊರಬ, ಶಿಕಾರಿಪುರ ತಾಲ್ಲೋಕುಗಳು.	ಎಕರೆ 3,897, ಗುಂಟೆ 37 6 ಚದರ ಮೈಲಿ, 57 ಎಕರೆ, 37 ಗುಂಟೆ.	ಸಾಗು.	ಉತ್ತರಕ್ಕೆ—ಸಾಗರ ತಾಲ್ಲೂಕು ಮರೂರು ಗ್ರಾಮದ ಸರ್ವೆ ನಂಬರು 30ರ ಈಶಾನ್ಯ ಮೂಲೆಯಿಂದ ಲೈನು ಹೊರಟು ಈಶಾನ್ಯಾಭಿಮುಖವಾಗಿ 3 ಫರಲಾಂಗು 2 ಸರಪಣಿ ಸೊರಬ ತಾಲ್ಲೂಕು ಕೀಸೂಡಿ ಗ್ರಾಮದ ಸರ್ವೆ ನಂಬರು 76ರ ದಕ್ಷಿಣ ಗಡಿಯನ್ನು ಅನುಸರಿಸಿ ಮೇಲೆ ನಮೂದಾದ ಕೀಸೂಡಿ, ಮರೂರು ಮತ್ತು ಮೈಸಾವಿ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಆಗ್ನೇಯಾಭಿಮುಖವಾಗಿ 2 ಫರಲಾಂಗು 3 ಸರಪಣಿ ಮೈಸಾವಿ ಸರ್ವೆ ನಂಬರು 34ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 32ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯ ದಿಕ್ಕಾಗಿ ಸುಮಾರು 7 ಫರಲಾಂಗ್ ಸರ್ವೆ ನಂಬರು 34ರಲ್ಲಿ ಹಾದು ಸರ್ವೆ ನಂಬರು 18ರ ಆಗ್ನೇಯ ಮೂಲೆಗೆ ಸೇರುತ್ತೆ. ನಂತರ ಈಶಾನ್ಯವಾಗಿ 5

ಫರಲಾಂಗು 8 ಸರಪಣಿ ಸರ್ವೆ ನಂಬರು 16ರಲ್ಲಿ ಹಾದು ಸರ್ವೆ ನಂಬರು 13ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ಸರ್ವೆ ನಂಬರಿನ ದಕ್ಷಿಣ ಗಡಿಯನ್ನು ಅನುಸರಿಸಿ, ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ ಸುಮಾರು, 3 ಫರಲಾಂಗು ಸರ್ವೆ ನಂಬರು 16ರಲ್ಲಿ ಹಾದು ಸರ್ವೆ ನಂಬರು 15ರ ದಕ್ಷಿಣ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 3 ಫರಲಾಂಗು 3 ಸರಪಣಿ ಮೈಸೂವಿ ಸರ್ವೆ ನಂಬರು 16, ಶಿಕಾರಿಪುರ ತಾಲ್ಲೂಕು ಮುಳ್ಳುಕೆರೆ ಸರ್ವೆ ನಂಬರು 18ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 8ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 5 ಫರಲಾಂಗು 2 ಸರಪಣಿ ಮುಳ್ಳುಕೆರೆ ಸರ್ವೆ ನಂಬರು 18ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 19ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ಸರ್ವೆ ನಂಬರಿನ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಿನಲ್ಲಿ 3 ಫರಲಾಂಗು 4 ಸರಪಣಿ ಸರ್ವೆ ನಂಬರು 18ರಲ್ಲಿ ಹಾದು ಶಿಕಾರಿಪುರ ತಾಲ್ಲೂಕು ತೆಪ್ಪಗೋಡು ಸರ್ವೆ ನಂಬರು 15ರ ಪಶ್ಚಿಮ ಮೂಲೆಗೆ ಸೇರುತ್ತದೆ. ನಂತರ ಸದರಿ ಸರ್ವೆ ನಂಬರಿನ ಪಶ್ಚಿಮ ಗಡಿಯನ್ನನುಸರಿಸಿ ತೆಪ್ಪಗೋಡು ಮುಳ್ಳುಕೆರೆ ಜಂಬಾನಿ ಗ್ರಾಮಗಳ ಮುಕ್ಕೂಪ್ಪೆಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಲೈನು ಹೊರಟು ನೈರುತ್ಯವಾಗಿ 3 ಫರಲಾಂಗ್ ಜಂಬಾನಿ ಸರ್ವೆ 68ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 67 (ಕೆರೆ) ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನು ಅನುಸರಿಸಿ ಸದರಿ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯುವ್ಯ ಮತ್ತು ನೈರುತ್ಯವಾಗಿ ಸುಮಾರು 6 ಫರಲಾಂಗು 8 ಸರಪಣಿ ಸದರಿ ಗ್ರಾಮದ ಸರ್ವೆ ನಂಬರು 70ರ ಉತ್ತರ ಮತ್ತು ಪಶ್ಚಿಮ ಗಡಿಯನ್ನು ಅನುಸರಿಸಿ ಸರ್ವೆ ನಂಬರು 9ರ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸದರಿ ನಂಬರಿನ ಉತ್ತರ ಗಡಿಯನ್ನು ಅನುಸರಿಸಿ ಸದರಿ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಮತ್ತು 10, 11ರ ಪಶ್ಚಿಮ ಗಡಿಯನ್ನು ಅನುಸರಿಸಿ, ಸರ್ವೆ ನಂಬರು 11ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯಾಭಿಮುಖವಾಗಿ 2 ಫರಲಾಂಗು 5 ಸರಪಣಿ, ಸರ್ವೆ ನಂಬರು 12ರಲ್ಲಿ ಹಾದು ಸರ್ವೆ ನಂಬರು 13ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು, 6 ಫರಲಾಂಗು ಸರ್ವೆ ನಂಬರು 21ರಲ್ಲಿ ಹಾದು ಸರ್ವೆ ನಂಬರು 32ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ, ನೈರುತ್ಯವಾಗಿ 1 ಮೈಲಿ, 1 ಫರಲಾಂಗ್ ಶಿಕಾರಿಪುರ ತಾಲ್ಲೂಕು ಲಾವಗೆರೆ ಸರ್ವೆ ನಂಬರು 74ರ ಉತ್ತರ ಗಡಿಯನ್ನು ಅನುಸರಿಸಿಯೂ ಮತ್ತು ಆಗ್ನೇಯವಾಗಿ ಸುಮಾರು 4 ಫರಲಾಂಗು 6 ಸರಪಣಿಯೂ ಸದರಿ ನಂಬರಿನ ಪಶ್ಚಿ ಗಡಿಯನ್ನು ಅನುಸರಿಸಿ ಮಳ್ಳದ ಸರ್ವೆ ನಂಬರು 39ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 3 ಫರಲಾಂಗ್ ಸರ್ವೆ ನಂಬರು 39ರ ಉತ್ತರ ಗಡಿಯನ್ನು ಅನುಸರಿಸಿ ಮಳ್ಳದ ಹೊಳೆಯ ಬಲದಡದಲ್ಲಿ ಸರ್ವೆ ನಂಬರು 88ರ ಈಶಾನ್ಯ ಮೂಲೆಯಿಂದ ಈಶಾನ್ಯ ದಿಕ್ಕಿಗೆ ಸುಮಾರು 5 ಸರಪಣಿದೂರದಲ್ಲಿ ಒಂದು ಸ್ಥಳಕ್ಕೆ ಹೋಗಿ ಸೇರುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಲೈನು ಹೊರಟು ವಾಯುವ್ಯವಾಗಿ 7 ಫರಲಾಂಗು ಸದರಿ ಹೊಳೆಯ ಬಲದಡವನ್ನು ಅನುಸರಿಸಿ ಸಾಗರ ತಾಲ್ಲೂಕು ಹಳವುಗೋಡು ಗ್ರಾಮದ ಸರ್ವೆ ನಂಬರು 11ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 11ರ ಪೂರ್ವ ಗಡಿಯನ್ನು ಅನುಸರಿಸಿ ಸದರಿ ನಂಬರಿನ ಪೂರ್ವ ಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯುವ್ಯವಾಗಿ ಸುಮಾರು 2 ಫರಲಾಂಗು ಸರ್ವೆ ನಂಬರು 12ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 11ರ ಉತ್ತರ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಉತ್ತರ ಗಡಿಯನ್ನು ಅನುಸರಿಸಿ ಸದರಿ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ ಒಂದು ಫರಲಾಂಗು 5 ಸರಪಣಿ ಸರ್ವೆ ನಂಬರು 12ರಲ್ಲಿ ಹಾದು ಸರ್ವೆ ನಂಬರು 11ರ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಸದರಿ ಮಳ್ಳದ ಹಳ್ಳದ ಬಲದಡವನ್ನು ಅನುಸರಿಸಿ ಬಿಳಿಕಿರಿ ಗ್ರಾಮದ ಸರ್ವೆ ನಂಬರು 38ರ ನೈರುತ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 38, 37ರ ಪೂರ್ವ ಗಡಿಯನ್ನು ಅನುಸರಿಸಿ ಸರ್ವೆ ನಂಬರು 37ರ ಈಶಾನ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಈಶಾನ್ಯವಾಗಿ ಸುಮಾರು 4 ಮೈಲಿ, 1 ಫರಲಾಂಗ್ ಸರ್ವೆ ನಂಬರು 42, 68ರಲ್ಲಿ ಹಾದು ಸರ್ವೆ ನಂಬರು 66, 67ರ ಪೂರ್ವ ಮೂಲೆಗಳನ್ನು ಹೊಂದಿ ಸರ್ವೆ ನಂಬರು 67ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಪಶ್ಚಿಮಾಭಿಮುಖವಾಗಿ 5 ಫರಲಾಂಗು 4 ಸರಪಣಿ ಸರ್ವೆ ನಂಬರು 68, 64ರಲ್ಲಿ ಹಾದು ಸರ್ವೆ ನಂಬರು 62ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 5 ಫರಲಾಂಗು 5 ಸರಪಣಿ ಸರ್ವೆ ನಂಬರು 64ರಲ್ಲಿ ಹಾದು ಸರ್ವೆ ನಂಬರು 57ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಪಶ್ಚಿಮ ಗಡಿಯನ್ನು ಅನುಸರಿಸಿ ಮರೂರು ಸರ್ವೆ ನಂಬರು 35ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಸದರಿ ನಂಬರಿನ ಉತ್ತರ ಗಡಿಯನ್ನು ಅನುಸರಿಸಿ ಮಳ್ಳದ ಹೊಳೆಯ ದಡದ ಮೇಲೆ ಸದರಿ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನು ಹೊರಟು ಉತ್ತರವಾಗಿ 1 ಫರಲಾಂಗು ಸದರಿ ಹೊಳೆಯನ್ನು ಅನುಸರಿಸಿ ಮರೂರು ಸರ್ವೆ ನಂಬರು 33ರ ದಕ್ಷಿಣ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 33ರ ದಕ್ಷಿಣ ಮತ್ತು ಪೂರ್ವ ಗಡಿಯನ್ನು ಸರ್ವೆ ನಂಬರು 32, 31ರ ಪೂರ್ವ ಗಡಿಯನ್ನನುಸರಿಸಿ ಸರ್ವೆ ನಂಬರು 31ರ ಈಶಾನ್ಯ ಮೂಲೆಯನ್ನು ಸೇರುತ್ತದೆ. ನಂತರ ಸದರಿ ನಂಬರಿನ ಉತ್ತರ ಗಡಿಯನ್ನು ಅನುಸರಿಸಿ ಸದರಿ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸುಮಾರು 3 ಫರಲಾಂಗು ಸರ್ವೆ ನಂಬರು 30ರ ಪೂರ್ವ ಗಡಿಯನ್ನು ಅನುಸರಿಸಿ ಹೊರಟ ಸ್ಥಳಕ್ಕೆ ಹೋಗಿ ಸೇರುತ್ತದೆ.

ಇದರಡಿ ಕಂಡ ಜಮೀನುಗಳನ್ನು ಮೇಲ್ಕಂಡ ತಾಕಿನ ಆವರಣಗಳನ್ನಾಗಿ ಭಾವಿಸಿ ಇದೆ.

	ಹಿಡುವಳಿಯಲ್ಲಿರುವದು.			ಹಿಡುವಳಿಯಲ್ಲಿ ಇಲ್ಲದ್ದು.		
	ಸರ್ವೆ ನಂ.	ಎ.	ಗು.	ಸರ್ವೆ ನಂ.	ಎ.	ಗು.
ಬಿಳಿಕಿರಿ ...	121	2	22	2	14	26
ಹಲವನಾಡು ...	1	7	0	3	11	11
	8	6	0	4	6	33
				9	15	20
ಮೈಸಾವಿ ...	5	3	21			

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವುದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನಾವುದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆಪಡೆಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟು ಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಘಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಘಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಜೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಘಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಘಾರೆಸ್ಟಿಗೆ ಬಾಧಕ ಉಂಟಾಗುವಹಾಗೆ ಬೆಂಕಿಯನ್ನು ವುರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗಾಗಿ ಕ್ರಮವಾಗಿ ಅಧಿಕಾರ ಹೊಂದಿದ ಘಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಘಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಬಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ನಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಘಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಘಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನುತಕ್ಕಂಥಾ ವ್ಯಾಪ್ತಿಯನ್ನು ನಮೂದುಮಾಡಿ ಬರಹಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 14ನೆ ಏಪ್ರಲ್ 1909.

ಮಸ್ಕಲ್ ಫಾರೆಸ್ಟು, ಚಿತ್ರದುರ್ಗ ಡಿಸ್ಟ್ರಿಕ್ಟು.

ಸರ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ನಂಬರು R. 7012—Ft. 155-08—2, 9—3—09; 11—3—09ನೆ ಇಸವಿಯ ಗೆಜೆಟಿನಲ್ಲಿ ಖಾಯಿಷ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಅಂದಾಜು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಚಿತ್ರದುರ್ಗ	ಹಿರಿಯೂರು	224 ಎಕರೆ 26 ಗುಂಟೆ	ಮಸ್ಕಲ್	ಉತ್ತರಕ್ಕೆ—ಹೆಮ್ಮದಾಳ್ ಗ್ರಾಮದ ಸರ್ವೆ ನಂಬರು 126ರ ಆಗ್ನೇಯ ಮೂಲೆಯಿಂದ ಹೊರಟು ಲೈನು ಈಶಾನ್ಯಮುಖವಾಗಿ ಅದೇ ಗ್ರಾಮದ ಸರ್ವೆ ನಂಬರ್ 122ರ ದಕ್ಷಿಣ ಭಾಗವಾಗಿ, ಇದೇ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ನಂತರ ಸರ್ವೆ ನಂಬರ್ 121ರ ದಕ್ಷಿಣಭಾಗವಾಗಿ ಅದೇ ಸರ್ವೆ ನಂಬರಿನ ಆಗ್ನೇಯಮೂಲೆಗೆ ಸೇರುತ್ತದೆ; ತರುವಾಯ ಆಗ್ನೇಯಾಭಿಮುಖವಾಗಿ ಬೇಡ್ರಹಳ್ಳಿ ಸರ್ವೆ ನಂಬರ್ 70ರ ದಕ್ಷಿಣ ಭಾಗವಾಗಿ ಮಸ್ಕಲ್ ಗ್ರಾಮದ ಸರ್ವೆ ನಂಬರು 26ರ ವಾಯುವ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ—ನಂತರ ನೈರುತ್ಯಾಭಿಮುಖವಾಗಿ ಮಸ್ಕಲ್ ಗ್ರಾಮದ ಸರ್ವೆ ನಂಬರು 26 ಮತ್ತು 27ರ ಪಶ್ಚಿಮಾಭಿಮುಖವಾಗಿ ಎರಡನೇ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ.

ದಕ್ಷಿಣಕ್ಕೆ—ತರುವಾಯ ಪಶ್ಚಿಮಾಭಿಮುಖವಾಗಿ ಅದೇ ಗ್ರಾಮದ ಸರ್ವೆ ನಂಬರ್ 24, 21 ಮತ್ತು 213ರ ಉತ್ತರ ಭಾಗವಾಗಿ ಆಖೈರ್ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಉತ್ತರಾಭಿಮುಖವಾಗಿ ಸದರಿ ಗ್ರಾಮದ ಸರ್ವೆ ನಂಬರು 211ರ ಪೂರ್ವ ಭಾಗವಾಗಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಖಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಖಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳಿಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡೆಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು,

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಸಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು ಮತ್ತು ತೆಗದುಕೊಂಡು ಹೋಗ್ಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಂಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧ ಪತ್ರಿಕೆ ಘಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಫಾರೆಸ್ಟು ಸೆಟಲ್‌ಮೆಂಟ್ ಆಫಿಸರ್ ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 16ನೆ ಏಪ್ರಿಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಆನೆಕಲ್ ತಾಲ್ಲೂಕಿಗೆ ಸಮ್ಮಂಧಪಟ್ಟ 1846–47ನೆ ಇಸವಿ ಲಾಗಾಯಿತು 1873–74ನೆ ಇಸವಿ ವರಿಗೆ ಕುಳವಾರ್ ಚಿಟ್ಟಾಗಳನ್ನ ಹಾಲಿ ಜಾರಿಯಲ್ಲಿರುವ ರೂಲ್ಸು ಅನುಸರಿಸಿ ಚಲಾಯಿಸಲ್ಪಡುತ್ತೆ. ಇವುಗಳ ದಾಖ್ಲೀಗಳನ್ನು ಅಪೇಕ್ಷಿಸತಕ್ಕವರು ಈ ಲಾಗಾಯಿತು ಮೂರು ತಿಂಗಳ ಒಳಗಾಗಿ ದರಖಾಸ್ತು ಕೊಟ್ಟು ಕಾಪಿಗಳನ್ನು ಪಡೆಯಬಹುದು.

ಬಿ. ಜಿ. ಕೊಮಾರಸಾಮಿ ನಾಯಿಕ್,
ಡೆಪ್ಯುಟಿ ಕಮಿಷನರಿ.

ಕೋಲಾರ ಡಿಸ್ಟ್ರಿಕ್ಟು.

ಸ್ 1909ನೆ ಇಸವಿ ಫೆಬ್ರುವರಿ 27ನೆ ತಾರೀಖಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡ್ ಮೀಟಂಗಿನ ಪ್ರೊಸೀಡಿಂಗ್ಸ್.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರವರು, ಬಿ. ಎ., ಬಿ. ಎಲ್., ಪ್ರೆಸಿಡೆಂಟ್.
2. ,, ಎ. ವೇದಾಂತದೇಸಿಗಂ ಐಯ್ಯಂಗಾರ್ರವರು, ವೈಸ್ ಪ್ರೆಸಿಡೆಂಟ್.
3. ,, ಜಿ. ಆರಾವಮುದ್ಯೆಯ್ಯಂಗಾರ್ರವರು, ಬಿ. ಎ., ಬಿ. ಎಲ್., ಸಬ್ ಡಿವಿಜನ್ ಆಫಿಸರ್, ಚಿಕ್ಕಬಳ್ಳಾಪುರ.
4. ,, ಮೀರ್ ಹಂಜಾ ಹುಸೇನ್ ಸಾಹೇಬರವರು, ಬಿ. ಎ., ಬಿ. ಎಲ್., ಸಬ್ ಡಿವಿಜನ್ ಆಫಿಸರ್, ಮಾಲೂರು.
5. ,, ವಿ. ಅಯ್ಯಾಸ್ವಾಮಿ ಅಯ್ಯರವರು, ಬಿ. ಎ., ಬಿ. ಸಿ. ಇ., ಎಗ್ಜಿಕ್ಯೂಟಿವ್ ಇಂಜನಿಯರ್, ಕೋಲಾರ.
6. ,, ಎಸ್. ಗೋಪಾಲರಾವ್, ಡೆಪ್ಯುಟಿ ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್.
7. ,, ಸಿ. ಜಿ. ಹನುಮರ್ಸಾಸಿಂಗ್, ಎಲ್. ಎಂ. ಅಂಡ್ ಎಸ್., ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್ ಕೋಲಾರ.

ಸರ್ಕಾರಿ ಉದ್ಯೋಗವಿಲ್ಲದ ಇತರ ಮೆಂಬರುಗಳು.

ಕ್ಲಾಜು (ಡಿ)

8. ಮಿ॥ ಮಂಜಲಿ ಬೈರೆಗೌಡರು, ಕೋಲಾರ.
9. ,, ಪೀರ್ ನವಾಜ್‌ಖಾನರು, ಬೌರಿಂಗ್‌ಪೇಟೆ.
10. ,, ಕಾಸ್ಟಿ ಹೈದರ್‌ಸಾಹೇಬರು, ಮುಳಬಾಗಲು.
11. ,, ವೆಂಕಟರಮಣಪ್ಪನವರು, ಮಾಲೂರು.
12. ,, ಕೆ. ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಹನುಮೇಗೌಡರು, ಶಿಡ್ಲಘಟ್ಟ.
14. ,, ಹಗ್ಗೇನಹಳ್ಳಿ ಕ್ರಿಷ್ಣಾಚಾರ್ರು, ಗೋರಿಬಿದನೂರು.
15. ,, ಶೀನಪ್ಪನವರು, ಬಾಗೇಪಲ್ಲಿ.
16. ,, ಆದಿನಾರಣಪ್ಪನವರು, ಗುಡಿಬಂಡೆ.
17. ,, ಸಿ. ನಾರಾಯಣಸಾಮಿ ಶೆಟ್ಟಿಯವರು, ಚಿಕ್ಕಬಳ್ಳಾಪುರ.

ಗೈರ ಹಾಜರು.

ಕ್ಲಾಜ (ಡಿ.)

18. ಮೆ॥ ಸಾಹುಕಾರ್ ಕಂಚಿ ಶೀತಪ್ಪಶೆಟ್ಟಿಯವರು, ಚಿಂತಾಮಣಿ.

ಹಾಜರು.

ಕ್ಲಾಸ್ (ಇ)

19. ,, ಉಮ್ಮಂಣ್ಣೈಯ್ಯನವರು, ಬವರಿಂಗಪೇಟೆ.
20. ,, ಸಾಹುಕಾರ್ ಸೈಯದ್ ಬುರ್ಹ ಸಾಹೇಬರು, ಚಿಂತಾಮಣಿ
21. ,, ಶೆಟ್ಟಿ ಚಿಕ್ಕಂಣನವರು, ಗುಡಿಬಂಡೆ.
22. ,, ನಾಗೇಗೌಡರು, ಮುಳಬಾಗಲ್.
23. ,, ಸೈಯದ್ ಫತ್ತುಲ್ಲಾ ಸಾಹೇಬರು, ಶ್ರೀನಿವಾಸಪುರ.
24. ,, ಅಮೀರ್‌ಹುಸೇನ್ ಸಾಹೇಬರು, ಕೋಲಾರ.
25. ,, ನಾರಸಿಂಹ ರೆಡ್ಡಿಯವರು, ಚಿಕ್ಕಬಳ್ಳಾಪುರ.

ಈ ಕೆಳಗೆ ನಮೂದಿಸಿರುವ ಅಮಲ್ದಾರ್ರುಗಳು ಸಹಾ ಮೀಟಿಂಗಿನಲ್ಲಿ ಹಾಜರಿದ್ದರು.

1. ಮೆ॥ ಬಿ. ಎಸ್. ವೆಂಕಟೇಶಯ್ಯನವರು, ಕೋಲಾರ.
2. ,, ಎಸ್. ಎಸ್. ರಾಘವಾಚಾರ್ರುವರು, ಚಿಂತಾಮಣಿ.
3. ,, ಮಹಮದ್ ಒಬೇದುಲ್ಲಾರವರು, ಬವರಿಂಗಪೇಟೆ.
4. ,, ವೈ. ನರಸಿಂಗರಾಯರು, ಶ್ರೀನಿವಾಸಪುರ.
5. ,, ವಿ. ಗೋಪಾಲರಾಯರು, ಬಾಗೇಪಲ್ಲಿ.
6. ,, ಸಿ. ಗೋಪಾಲಾಚಾರು, ಮಾಲೂರು.
7. ,, ಕೆ. ನಾರಾಯಣಯ್ಯರ್ ರವರು, ಚಿಕ್ಕಬಳ್ಳಾಪುರ.
8. ,, ಕೆ. ವೇದಾಂತೈಯಂಗಾರ್ರು, ಮುಳಬಾಗಲು.
9. ,, ಕೆ. ಕೇಶವಾಚಾರ್ರು, ಶಿಡ್ಲಘಟ್ಟ.
10. ,, ಕೆ. ಹನುಮಂತರಾಯರು, ಗೋರೀಬಿದನೂರು.
11. ,, ಎಂ. ಅಹೋಬಲ ಶಾಸ್ತ್ರಿಗಳು, ಗುಡಿಬಂಡೆ.

1. 1908ನೆ ಇಸವಿ ಡಿಸೆಂಬರು ಮಾಹೆಯ 19ನೆ ತಾರೀಖಿನಲ್ಲಿ ನಡೆದ ಪ್ರೊಸೀಡಿಂಗ್ಸನ್ನು ಓದಿ ನಿರ್ಧರಿಸಲ್ಪಟ್ಟಿತು.

2. ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಾಗಿ ಬಂದ 1908ನೆ ಇಸವಿ ಜುಲೈ, ಆಗಸ್ಟು, ಸೆಪ್ಟಂಬರ್ ಮಾಹೆಗಳ ಲೆಕ್ಕಗಳನ್ನ ಓದಿ ರಿಕಾರ್ಡು ಮಾಡಲಾಯಿತು.

3. 1908ನೆ ಇಸವಿ ಜೂನ್ ಆಖೈರಿಗೆ ಪೂರ್ತಿಯಾಗದೆ ಇರುವ ಡಿಸ್ಟ್ರಿಕ್ಟು ಫಂಡ್ ಕೆಲಸಗಳನ್ನು ಮಂಜೂರ್ಮಾಡಿ ಅದಕ್ಕೆ ಬೇಕಾದ 11,620 ರೂಪಾಯಿಗಳನ್ನು ಚಾಲ್ತಿ ಸಾಲ್ ಬಡ್ಜೆಟ್ಟಿನಲ್ಲಿ ಬಿ. ಪಬ್ಲಿಕ ವರ್ಕ್ಸ್ ಪೈಕಿ "ರಿಜರ್ವ್" ಮತ್ತು "ಹೊಸ ಕೆಲಸಗಳು" ಒರಿಜನಲ್ ಮತ್ತು ರಿಪೇರ್ಸಿಗಾಗಿ ಇಟ್ಟಿರುವ ಮೊಬಲಗಿನಿಂದ ಕೊಟ್ಟು ಸದರೀ ಚಾಲ್ತಿಸಾಲಿನ ಕೆಲಸಗಳನ್ನು ಸಾಧ್ಯವಾದಮಟ್ಟಿಗೂ ಈಗ ಜರಿಗಿಸದೆ ತಡೆಯಬೇಕೆಂಬದಾಗಿ ಬಂದಿರುವ 1908ನೆ ಡಿಸೆಂಬರ್ 2ನೆ ಮಕ್ರ್ಹಂನ 512'2-8—ಲೋ. ಬೋ. 160-08-2ನೆ ನಂಬರು ಗವರ್ನಮೇಂಟ್ ಪ್ರೊಸೀಡಿಂಗ್ಸು ಓದಲಾಯಿತು.

ಚಾಲ್ತಿ ಸಾಲಿನಲ್ಲಿ ಮಳೆ ಇಲ್ಲದ್ದಕ್ಕೋಸ್ಕರ ಜನಗಳು ಪಡುತ್ತಿರುವ ಪ್ರಯಾಸವನ್ನು ನೋಡಿ ಅವರಿಗೆ ತಮ್ಮ ಕೈಲಾದ ಮಟ್ಟಿಗೂ ಕೆಲಸಗಳು ದೊರೆಯುವಂತೆ ಮಾಡಬೇಕೆಂಬ ಇಚ್ಛೆಯುಳ್ಳವರಾಗಿ ಬೋರ್ಡಿನವರು ಎಲ್ಲಾ ಕಾಮಗಾರಿ ಮತ್ತು ಕೆಲಸಗಳನ್ನ ನಡಿಸಬೇಕಾಗಿರುವದರಿಂದಲೂ ಈ ಮಾರ್ಜಿನ್ನಲ್ಲಿ ನಮೂದಿಸಿರುವ ಕೆಲಸಗಳ ವಿನಹ ಮಿಕ್ಕ ಕೆಲಸಗಳು ಜರೂರಾಗಿಯೂ ಮತ್ತು ಆವಶ್ಯಕವಾದವುಗಳಾಗಿರುವದ್ದರಿಂದಲೂ ಅವುಗಳನ್ನ ನಿಲ್ಲಿಸಲು ಆಗಲಾರದು. ಆದ್ದರಿಂದ ಮಾರ್ಜಿನ್ನಲ್ಲಿ ನಮೂದಿಸಿರುವ ಕೆಲಸಗಳ ಬಾಬತು 800 ರೂಪಾಯಿಗಳು ಮತ್ತು ರಿಜರ್ವಿನಲ್ಲಿರುವ 3,000 ರೂಪಾಯಿಗಳು ಜಾತಾ, ಬಾಕಿ 7,820 ರೂಪಾಯಿಗಳು ಹೋದ ಸಾಲ್‌ನಲ್ಲಿ ಬಾಕಿ ಇರುವ ಕಾಂಗಾರಿಗಳನ್ನ ಪೂರೈಸಲು ಬೇಕಾಗಿರುತ್ತೆ. ಈ ಮೊಬಲಗನ್ನ 1908ನೆ ಜೂನ್ ಆಖೈರಿನಲ್ಲಿ ಬೋರ್ಡಿನ ಕ್ರೆಡಿಟನಲ್ಲಿರುವ ಕ್ಲೋಸಿಂಗ್ ಬ್ಯಾಲೆನ್ಸ್ 41,905 ರೂಪಾಯಿಗಳ ಪೈಕಿ ಮಂಜೂರ್ಮಾಡಬಹುದೆಂದು ಬೋರ್ಡಿನವರು ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

	I. ತಡೆಮಾಡಬಹುದಾದವುಗಳು.	
(i)	ಮುಳಬಾಗಲ್ ತಾಲ್ಲೂಕು ಕುರುಡುಮಲೆಯಲ್ಲಿ ತೆಗೆಯಬೇಕಾದ ಭಾವಿಯ ಕೆಲಸ	ರೂ. 200
(ii)	ಮಾಸ್ತಿ ರಸ್ತೆಯಲ್ಲಿ ವಿಶ್ರಾಂತಿಗೋಸ್ಕರ ಮಂಟಪವನ್ನು ಕಟ್ಟುವಿಕೆ ...	ರೂ. 180
(iii)	ವಕಲೇರಿ ರಸ್ತೆಯಲ್ಲಿ ಡಿಟ್ಟೋ ಡಿಟ್ಟೋ ...	ರೂ. 120
	II. ತ್ಯಜಿಸಬಹುದಾದವುಗಳು.	
(i)	ಮುಳಬಾಗಲು ತಾಲ್ಲೂಕು ಕಗ್ಗನಹಳ್ಳಿ ಭಾವಿಯ ಕೆಲಸ ...	ರೂ. 200
(ii)	ಗುಡಿಬಂಡೆ ಮುಸಾಫರ್‌ಖಾನೆಯ ಭಾವಿಯನ್ನು ಆಳವಾಗಿ ಇಳಿಸುವ ಕೆಲಸ	ರೂ. 100
	ಜುಮ್ಲಾ ...	800

4. ಬೌರಿಂಗ್‌ಪೇಟೆಯಿಂದ ವಕ್ಕಲೇರಿ ಮಾರ್ಗವಾಗಿ ಸೂಲಿಕುಂಟೆಯಿಂದ ಬರುವ ಭಂಡಿದಾರಿಯನ್ನು ಸೇರಿಸುವಂತೆ ಒಂದು ಹೊಸ ರಸ್ತೆಯನ್ನು 300 ರೂಪಾಯಿ ಅಂದಾಜಿಗೆ ಮಂಜೂರ್ಮಾಡಬೇಕೆಂದು ತಾಲ್ಲೂಕು ಬೋರ್ಡಿನಲ್ಲಿ ತೀರ್ಮಾನಿಸಿದಂತೆ ಈ ಕೆಲಸಕ್ಕಾಗಿ ಬೇಕಾಗಿರುವ ಹೆಚ್ಚು 100 ರೂಪಾಯಿಯನ್ನು ಈಗ ಅನಾವಶ್ಯಕವಾದ ಸರ್ವರೆಡ್ಡಿಹಳ್ಳಿಯ ಭಾವಿಕೆಲಸದ ಹಣದಿಂದ ಕೊಡಬಹುದೆಂದು ಬೌರಿಂಗ್‌ಪೇಟೆ ಅಮಲ್ದಾರ್ರ ರಿಪೋರ್ಟು ಓದಿ ಅದಕ್ಕೆ ಅನುಮತಿ ಕೊಡಲಾಯಿತು.

5. ಘಟ್ಟನಹಳ್ಳಿ ಗ್ರಾಮದ ಬಳಿ ಒಂದು ಭಾವಿಯನ್ನು ಅಗಿಯುವದಕ್ಕೆ 318 ರೂಪಾಯಿಗಳಿಗೆ ಒಂದು ಅಂದಾಜು ಮಂಜೂರ್ಮಾಡಬೇಕೆಂದು ಮತ್ತು ಆ ಕೆಲಸಕ್ಕೋಸ್ಕರ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಹಣಕ್ಕಿಂತ ಜಾಸ್ತಿಯಾಗುವ 118 ರೂಪಾಯಿಗಳನ್ನು ತಾಲ್ಲೂಕು ಬೋರ್ಡಿನಲ್ಲಿ ತೀರ್ಮಾನಿಸಿದಂತೆ ಉಕ್ಕುಂಡಹಳ್ಳಿ ಗ್ರಾಮದ ಭಾವಿಯ ಕಾಂಗಾರಿಯನ್ನು ಈಗ ನಿಲ್ಲಿಸಿ ಅದಕ್ಕೆ ಕೊಟ್ಟಿರುವ 200 ರೂಪಾಯಿಗಳ ಪೈಕಿ ಕೊಡಬೇಕೆಂಬ ಸಲಹೆಯೊಡನೆ ಬೌರಿಂಗ್‌ಪೇಟೆ ಅಮಲ್ದಾರ್ರ 1909ನೆ ಫೆಬ್ರುವರಿ 6ನೆ ಮರ್ಕುಂನ 353ನೆ ನಂಬರು ರಿಪೋರ್ಟು ಓದಿ ಅನುಮೋದಿಸಲಾಯಿತು.

6. ಬೌರಿಂಗ್‌ಪೇಟೆಯಿಂದ ತೇಕಲ್‌ಗೆ ಹೋಗುವ ಭಂಡಿ ದಾರಿಯನ್ನು ಸರಿಯಾದ ಸ್ಥಿತಿಯಲ್ಲಿಡುವದಕ್ಕೆ 100 ರೂಪಾಯಿಗಳಿಗೆ ಒಂದು ಅಂದಾಜಾವನ್ನು ಮಂಜೂರ್ಮಾಡಬೇಕೆಂದು ಅದಕ್ಕೆ ಬೇಕಾದ ಹಣವನ್ನು ತಾಲ್ಲೂಕು ಬೋರ್ಡಿನವರು ಶಿಫಾರಸ್ ಮಾಡಿದ ಮೇರೆಗೆ ಸರ್ವರೆಡ್ಡಿಹಳ್ಳಿಯ ಭಾವಿಗೆ ಕೊಟ್ಟಿರುವ ಹಣದಿಂದ ಕೊಡಬಹುದೆಂದು ಬೌರಿಂಗ್‌ಪೇಟೆ ಅಮಲ್ದಾರ್ರ 1909ನೆ ಇಸವಿ ಫೆಬ್ರುವರಿ 15ನೆ ಮರ್ಕುಂ 368ನೆ ನಂಬರು ರಿಪೋರ್ಟು ಓದಿ ಅನುಮೋದಿಸಲಾಯಿತು.

7. ಅಮೃತಮಹಲ್ ಎತ್ತುಗಳ ಸರ್ವಿಸ್‌ಗೋಸ್ಕರ ವಸೂಲ್ ಮಾಡುತ್ತಿದ್ದ ರುಸುಮಿನ ಸ್ಕೇಲನ್ನು ರಿವೈಜ್‌ಮಾಡಿ ಗವರ್ನಮೆಂಟಿನಿಂದ ಬಂದಿರುವ 1909ನೆ ಜನವರಿ 16ನೆ ಮರ್ಕುಂ 6615-53—ಲೋ. ಬೋ. 170-07-13ನೆ ನಂಬರು ಪ್ರೊಸಿಡಿಂಗ್ಸ್ ಓದಿ ರೆಕಾರ್ಡು ಮಾಡಲಾಯಿತು.

8. ತಾಲ್ಲೂಕು ಬೋರ್ಡಿನಲ್ಲಿ ತೀರ್ಮಾನಿಸಿದ ಪ್ರಕಾರ ಏರುಕಾಲ್ವೆ ಮುಸಾಫರಖಾನೆಗೆ ಸೇರಿದ ಜವಾನನ ಸಂಬಳವನ್ನು ತಿಂಗಳು ಒಂದಕ್ಕೆ 2 ರೂಪಾಯಿಯಿಂದ 3 ರೂಪಾಯಿಗೆ ಬಡ್ತಿ ಮಾಡಬೇಕೆಂದು ಶಿಫಾರಸು ಮಾಡಿ ಮಾಲೂರು ಸಬ್ ಡಿವಿಜನ್ ಆಫಿಸರವರಿಂದ ತಲಪಿದ 1909ನೆ ಇಸವಿ ಜನವರಿ 19ನೆ ಮರ್ಕುಂನ 1238ನೆ ನಂಬರು ಯಾದಿಯನ್ನು ಓದಲಾಯಿತು.

ಇದಕ್ಕೆ ಗಾರ್ವ್ನಮೆಂಟ್ ಸ್ಯಾಂಕ್ಷನ್ ಪಡೆಯಬೇಕೆಂದು ತೀರ್ಮಾನಿಸಲಾಯಿತು.

9. 1909ನೆ ಇಸವಿ ಜನವರಿ ಮಾಹೆಯ 23, 26ನೆ ಮರ್ಕುಂ 50 ಮತ್ತು 53 ಈ ನಂಬರುಗಳ ಡಾಕೆಟ್‌ಗಳೊಡನೆ ಕಾಂಟ್ರರ್ಸ್ಸೆಗೋಸ್ಕರ ಬಂದ (1) ಗೋರಿಬಿದನೂರು 3ನೆ ತರಗತಿ ಟ್ರಾವಿಲರ್ಸ್ ಬಂಗ್ಲೆ ರಿಪೇರಿಗಾಗಿ 27 ರೂಪಾಯಿನ ಅಂದಾಜು (2) ಜಂಗಂಕೋಟೆ ಟ್ರಾವಿಲರ್ಸ್‌ಬಂಗ್ಲೆ ರಿಪೇರಿಗಾಗಿ 153 ರೂಪಾಯಿನ ಅಂದಾಜು ಇವುಗಳೆರಡನ್ನು ಓದಿ ಅನುಮೋದಿಸಲಾಯಿತು.

10. ವಾಟರ್‌ವರ್ಕ್ಸ್ ಡಿಪಾರ್ಟುಮೆಂಟಿಗೋಸ್ಕರ ಬೇತಮಂಗಲದಲ್ಲಿಟ್ಟಿರುವ ಡಿಸ್ಪೆನ್ಸರಿ ಶಿಬ್ಬಂದಿಯ ಖರ್ಚು ಪೈಕಿ ಕೊಂಚಭಾಗವನ್ನು ಬೋರ್ಡಿನವರು ವಹಿಸಬೇಕೆಂಬುವ ವಿಷಯವನ್ನು ಕುರಿತು ಸೀನಿಯರ್ ಸರ್ಜನ್‌ರವರಿಂದ ಬಂದ 1908ನೆ ನವಂಬರ್ 4ನೆ ಮರ್ಕುಂ 2273ನೆ ನಂಬರು ಡಾಕೆಟ್ ಓದಲಾಯಿತು.

ಬೇತಮಂಗಲದಲ್ಲಿ ಡಿಸ್ಪೆನ್ಸರಿಯನ್ನು ಸ್ಥಿರವಾಗಿ ಇಡುವ ವಿಚಾರವು ನಿಶ್ಚಯಿಸಿದಮೇಲೆ ಇದಕ್ಕೆ ಗಮನಕೊಡಲ್ಪಡುವದೆಂದು ತೀರ್ಮಾನಿಸಲಾಯಿತು.

11. (1) 3ನೆ ತರಗತಿ ಟ್ರಾವಿಲರ್ಸ್ ಬಂಗ್ಲೆಗಳಿಗೂ ಮತ್ತು ಮುಸಾಫರಖಾನೆಗಳಿಗೂ ದಫಾ 1ಕ್ಕೆ 100 ರೂಪಾಯಿಗಳಿಗೆ ಮೀರದೆ ಇರುವಷ್ಟು ಪಾತ್ರೆಗಳನ್ನು ಮತ್ತು ಇತರ ಸಾಮಾನುಗಳನ್ನು ಕೊಂಡುಕೊಳ್ಳುವದಕ್ಕೆ ಬೋರ್ಡಿನವರಿಗೆ ಅಧಿಕಾರವನ್ನು ಕೊಟ್ಟಿರುವ ಗಾರ್ವ್ನಮೆಂಟ್ ಪ್ರೊಸಿಡಿಂಗ್ಸನ್ನೂ ಮತ್ತು (2) ಶಿವಮೊಗ್ಗೆ ತಾಲ್ಲೂಕು ಹೊಳೆಹೊನ್ನೂರಿನಲ್ಲಿ ಒಂದು ವೈದ್ಯಶಾಲೆಯನ್ನಿಡುವದಕ್ಕೆ ಒಂದು ಮನೆಗೆ ಬಾಡಿಗೆಯನ್ನು ಕೊಡಲು ಕೆಲವು ವರಾಗಳೊಡನೆ ಮಂಜೂರ್ಮಾಡುವದಿಲ್ಲವೆಂದು 1908ನೆ ಇಸವಿ ಡಿಸಂಬರ 3ನೆ ಮರ್ಕುಂನ 5331-8—ಲೋ. ಬೋ. 109-08-2ನೆ ನಂಬರು ಗಾರ್ವ್ನಮೆಂಟ್ ಪ್ರೊಸಿಡಿಂಗ್ಸ್ ಓದಿ ರೆಕಾರ್ಡು ಮಾಡಲಾಯಿತು.

12. 1909ನೆ ಇಸವಿ ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ಪ್ರೆಸಿಡೆಂಟರವರು ಮಂಜೂರ್ಮಾಡಿದ ಕೆಲಸಗಳ ಪಟ್ಟಿಯನ್ನು ಓದಿ ಅನುಮೋದಿಸಲಾಯಿತು.

13. ಬಡ್ಜೆಟ್ಟಿನಲ್ಲಿ ಕೊಟ್ಟಿರುವಂತೆ ಕ್ಯಾಸಂಬಳ್ಳಿಯಲ್ಲಿ ಒಂದು ದೊಡ್ಡಿಯನ್ನು ಕಟ್ಟುವದಕ್ಕೆ ತಾಲ್ಲೂಕು ಬೋರ್ಡಿನಲ್ಲಿ ತೀರ್ಮಾನಿಸಿದಂತೆ 100 ರೂಪಾಯಿಗಳಿಗೆ ಒಂದು ಅಂದಾಜವನ್ನು ಮಂಜೂರ್ಮಾಡಬೇಕೆಂದು ಬೌರಿಂಗ್‌ಪೇಟೆ ಅಮಲ್ದಾರ್ರ 19—2—1909ನೆ ಮರ್ಕುಂನ ರಿಪೋರ್ಟು ಓದಿ ಮಂಜೂರ್ಮಾಡಲಾಯಿತು.

14. ಕೈವಾರದಲ್ಲಿ ಒಬ್ಬ ಸ್ವೀಪರಗೆ ತಿಂಗಳು ಒಂದಕ್ಕೆ 4 ರೂಪಾಯಿಯಿಂದ 5 ರೂಪಾಯಿಗೆ ಸಂಬಳವನ್ನು ಬಡ್ತಿ ಮಾಡಬೇಕೆಂಬ ವಿಷಯದಲ್ಲಿ ತಾಲ್ಲೂಕು ಬೋರ್ಡಿನ ತೀರ್ಮಾನದೊಡನೆ ಬಂದಿರುವ ಚಿಂತಾಮಣಿ ಅಮಲ್ದಾರ್ರವರ 1909ನೆ ಇಸವಿ ಜನವರಿ 16ನೆ ಮರ್ಕುಂ 262ನೆ ನಂಬರು ರಿಪೋರ್ಟು ಓದಲಾಯಿತು.

ಆ ಗ್ರಾಮದಲ್ಲಿ 4 ರೂಪಾಯಿಗೆ ಸರಿಯಾದ ಸ್ವೀಪರ ಸಿಕ್ಕುವದು ದುರ್ಲಭವಾದುದರಿಂದ ಸಂಬಳವನ್ನು 5 ರೂಪಾಯಿಗೆ ಬಡ್ತಿ ಮಾಡಬಹುದೆಂದುನ್ನೂ ಅದಕ್ಕೆ ಗವರ್ನಮೆಂಟಿನವರ ಮಂಜೂರಿಯನ್ನು ಕೇಳಬೇಕೆಂದು ತೀರ್ಮಾನಿಸಲಾಯಿತು.

15. ಪೆರಸಂದ್ರ-ಗೋರಿಬಿದನೂರು ರಸ್ತೆಯನ್ನು ಸರಿಯಾದ ಸ್ಥಿತಿಯಲ್ಲಿಟ್ಟಿರುವದಕ್ಕೆ ಪ್ರತಿ ಸಂವತ್ಸರದ ರಿಪೇರಿಗೋಸ್ಕರ ಪೈಲೇಜು ಗ್ರಾಂಟನ್ನು 50 ರೂಪಾಯಿಯಿಂದ 60 ರೂಪಾಯಿಗೆ ಬಡ್ತಿ ಮಾಡುವ ವಿಷಯದಲ್ಲಿ ತಾಲ್ಲೂಕು ಬೋರ್ಡುಗಳ ತೀರ್ಮಾನಗಳೊಡನೆ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫಿಸರವರ 1909ನೆ ಇಸವಿ ಜನವರಿ ಮಾಹೆಯ 23ನೆ ತಾರೀಖಿನ 779ನೆ ನಂಬರು ಡಾಕೆಟ್ ಓದಲಾಯಿತು.

ಈ ರಸ್ತೆಯಲ್ಲಿ ಬಂಡಿಗಳ ಆಮದ್‌ರಫ್ತು ವಿಶೇಷವಾಗಿರುವದ್ದರಿಂದ ಗ್ರಾಂಟನ್ನು ಮೈಲಿ ಒಂದಕ್ಕೆ 60 ರೂಪಾಯಿಗೆ ಬಡ್ತಿ ಮಾಡಬಹುದೆಂದು ತೀರ್ಮಾನಿಸಲಾಯಿತು.

16. ವಿದುರಾಶ್ವತ್ಥಕ್ಕೆ ಯಾವಾಗಲೂ ಯಾತ್ರಾರ್ಥಿಗಳು ವಿಶೇಷವಾಗಿ ಹೋಗುತ್ತಿರುವದರಿಂದ ಅಲ್ಲಿ ಒಬ್ಬ ಸ್ಕ್ಯಾವೆಂಜರನ್ನು 7 ರೂಪಾಯಿ ಸಂಬಳದ ಮೇಲೆ ಇಡಬೇಕೆಂದು ಶಿಫಾರಸು ಮಾಡಿ ತಾಲ್ಲೂಕು ಬೋರ್ಡಿನ ತೀರ್ಮಾನದೊಡನೆ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫೀಸರವರಿಂದ ಬಂದ 1908ನೆ ಇಸವಿ ಡಿಸೆಂಬರ್ 30ನೆ ಮುರ್ಕ್ಕಂನ 652ನೆ ನಂಬರು ಯಾದಿ ಮತ್ತು ಕರೆಸ್ಪಾಂಡೆನ್ಸು ಓದಿ ಮಂಜೂರ್ಮಾಡುವಂತೆ ತೀರ್ಮಾನಿಸಲಾಯಿತ್ತು.

17. ವಕ್ಕಲೇರಿ ಯೂನಿಯನ್ನಲ್ಲಿ ಮತ್ತೊಬ್ಬ ಸ್ವೀಪರನ್ನು 5 ರೂಪಾಯಿ ಸಂಬಳದ ಮೇಲೆ ನೇಮಕ ಮಾಡಬೇಕೆಂಬ ಸಲಹೆಯಿಂದಲೂ ಮತ್ತು ಈಗಿರುವ ಸ್ವೀಪರಿನ ಸಂಬಳವನ್ನು ತಿಂಗಳು ಒಂದಕ್ಕೆ 4 ರೂಪಾಯಿನಿಂದ 5 ರೂಪಾಯಿಗೆ ಬಡ್ತಿ ಮಾಡಬೇಕೆಂಬ ಶಿಫಾರಸ್ಸಿನಿಂದಲೂ ತಾಲ್ಲೂಕು ಬೋರ್ಡಿನ ತೀರ್ಮಾನದೊಡನೆ ಕೋಲಾರ ತಾಲ್ಲೂಕು ಅಮಲ್ದಾರ್ರವರಿಂದ ಬಂದ 1909ನೆ ಇಸವಿ ಜನವರಿ 28ನೆ ಮುರ್ಕ್ಕಂನ 415ನೆ ನಂಬರು ರಿಪೋರ್ಟು ಓದಲಾಯಿತು.

ಈ ಶಿಫಾರಸನ್ನು ಅನುಮೋದಿಸಬಹುದೆಂದು ತೀರ್ಮಾನ ಮಾಡಲಾಯಿತು.

18. ತಾಲ್ಲೂಕು ಬೋರ್ಡಿನಲ್ಲಿ ತೀರ್ಮಾನಿಸಿದಂತೆ ಗುಟ್ಟಹಳ್ಳಿ ಮುಸಾಫರಖಾನೆಗೆ ಒಬ್ಬ ಕೇರಟೇಕರನ್ನು 2 ರೂಪಾಯಿ ಸಂಬಳದ ಮೇಲೆ ನೇಮಿಸಬೇಕೆಂಬ ಸಲಹೆಯಿಂದಲೂ ಮತ್ತು ಕಾಮಸಂದ್ರ, ಸುಂದರಪಾಳ್ಯ ಮುಸಾಫರಖಾನೆಗಳ ಕೇರಟೇಕರಗಳ ಸಂಬಳಗಳನ್ನ 2 ರೂಪಾಯಿ ಬಡ್ತಿ ಮಾಡಬೇಕೆಂಬುವ ಶಿಫಾರಸ್ಸಿನಿಂದಲೂ ಬಾರಿಂಗ್‌ಪೇಟೆ ಅಮಿಲ್ದಾರ 1909ನೆ ಇಸವಿ ಜನವರಿ 24ನೆ ಮುರ್ಕ್ಕಂನ 320ನೆ ನಂಬರು ರಿಪೋರ್ಟು ಓದಲಾಯಿತು.

ಅವುಗಳನ್ನ ಮಂಜೂರ್ಮಾಡಬಹುದೆಂದು ತೀರ್ಮಾನಿಸಲಾಯಿತು.

19. ಮುಳಬಾಗಲ್‌ನಲ್ಲಿ ಹೊಸದಾಗಿ ಕಟ್ಟಿರುವ ಮುಸಾಫರಖಾನೆಗೆ ಒಬ್ಬ ಸ್ವೀಪರನ್ನ ತಿಂಗಳು ಒಂದಕ್ಕೆ 3 ರೂಪಾಯಿ ಸಂಬಳದ ಮೇಲೆ ನೇಮಕ ಮಾಡಬೇಕೆಂದು ಶಿಫಾರಸು ಮಾಡಿ ಈ ವಿಷಯದಲ್ಲಿ ತಾಲ್ಲೂಕು ಬೋರ್ಡಿನ ತೀರ್ಮಾನದೊಡನೆ ಮುಳಬಾಗಲ್ ತಾಲ್ಲೂಕು ಅಮಲ್ದಾರ್ರಿಂದ ಬಂದ 1909ನೆ ಜನವರಿ 2ನೆ ಮುರ್ಕ್ಕಂ 334ನೆ ನಂಬರು ರಿಪೋರ್ಟು ಓದಲಾಯಿತು.

ಇದನ್ನು ಮಂಜೂರ್ಮಾಡಬಹುದೆಂದು ತೀರ್ಮಾನಿಸಲಾಯಿತು.

20. ತಾಲ್ಲೂಕು ಬೋರ್ಡಿನಲ್ಲಿ ತೀರ್ಮಾನಿಸಿದಂತೆ ನಲ್ಲಚೆರುವು ಮತ್ತು ಗೂಳೂರು ಮುಸಾಫರಖಾನೆಗಳ ಕೇರಟೇಕರಗಳ ಸಂಬಳಗಳನ್ನು ಕ್ರಮವಾಗಿ 3 ರೂಪಾಯಿ ಮತ್ತು $1\frac{1}{2}$ ರೂಪಾಯಿಗಳಂತೆ ಬಡ್ತಿ ಮಾಡಬೇಕೆಂದು ಶಿಫಾರಸ್ ಮಾಡಿ ಬಿಳ್ಳೂರು ಮತ್ತು ಗುಟ್ಟಪಾಳ್ಯ ಮುಸಾಫರಖಾನೆಗಳಿಗೆ ತಿಂಗಳಿಗೆ 2 ರೂಪಾಯಿ ಸಂಬಳದ ಮೇರಿಗೆ ಒಬ್ಬೊಬ್ಬ ಕೇರಟೇಕರಗಳನ್ನು ನೇಮಕ ಮಾಡಬೇಕೆಂಬುವ ಸಲಹೆಯೊಡನೆ ಬಾಗೇಪಲ್ಲಿ ಅಮಲ್ದಾರ್ರಿಂದ ಬಂದ 1908ನೆ ಇಸವಿ ಡಿಸೆಂಬರ 7ನೆ ಮುರ್ಕ್ಕಂನ ರಿಪೋರ್ಟು ಓದಲಾಯಿತು.

ಈ ಎರಡು ಸಲಹೆಗಳನ್ನು ಮಂಜೂರ್ಮಾಡಬಹುದೆಂದು ತೀರ್ಮಾನಿಸಲಾಯಿತು.

21. ಫೈನಾನ್ಸು ಕಮಿಟಿಯಿಂದ ಕಳುಹಿಸಲ್ಪಟ್ಟ 1909—10ನೆ ಸಾಲ್ ಬಡ್ಜೆಟ್ ಅಂದಾಜಾವನ್ನು ಓದಲಾಯಿತು. ಬಡ್ಜೆಟ್ಟನ್ನು ಸರಿಯಾದ ಬದಲಾವಣೆಗಳಿಂದಲೂ ಅದರಲ್ಲಿ ಮಾಡಿರುವ ಪ್ರಾವಿಜನ್‌ಗಳೊಡನೆ ಪ್ಯಾಸ್ ಮಾಡಬಹುದೆಂದು ಮತ್ತು ಇದರಲ್ಲಿರುವ 15ರ ಲಾಗಾಯಿತು 20ನೆ ನಂಬರ್ ವರೆಗಿನ ತೀರ್ಮಾನಗಳಿಗೆ ಗವರನ್‌ಮೆಂಟಿನವರ ಮಂಜೂರಾತಿಯನ್ನು ಪಡಿಯಬೇಕೆಂದು ತೀರ್ಮಾನಿಸಲಾಯಿತು.

22. ಈ ಕೆಳಗೆ ನಮೂದಿಸಿರುವ ತಾಲ್ಲೂಕು ಬೋರ್ಡುಗಳ ಪ್ರೊಸಿಡಿಂಗ್ಸ್‌ಗಳನ್ನು ಓದಿ ರಿಕಾರ್ಡು ಮಾಡಲಾಯಿತು.

	ತಾಲ್ಲೂಕು.	ತಾರೀಖು.
1.	ಶ್ರೀನಿವಾಸಪುರ	30—11—1908.
2.	ಗುಡಿಬಂಡೆ	8—12—1908.
3.	ಡಿಟೋ ...	23— 1—1909.
4.	ಬಾರಿಂಗ್‌ಪೇಟೆ	9—12—1908.
5.	ಗೌರಿಬಿದನೂರು	10—12—1908.
6.	ಬಾಗೇಪಲ್ಲಿ	7—12—1908.
7.	ಕೋಲಾರ	22—12—1908.
8.	ಡಿಟೋ	23— 2—1909.
9.	ಮಾಲೂರು	30—12—1908.
10.	ಶಿಡ್ಲಘಟ್ಟ	28—12—1908.
11.	ಚಿಂತಾಮಣಿ	31—12—1908.
12.	ಡಿಟೋ ...	15— 1—1909.

23. 1909ನೆ ಇಸವಿ ಮೇ ಮಾಹೆಯ 22ನೆ ತಾರೀಖು ಶನಿವಾರ ದಿವಸ ಮುಂದಿನ ಮೀಟಿಂಗ್ ನಡೆಯಬೇಕೆಂದು ತೀರ್ಮಾನಿಸಲಾಯಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರನಾಮೆ.

ತಾರೀಖು 2ನೆ ಏಪ್ರೆಲ್ 1909

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಮೇಲ್ಕೋಟೆ ಹೋಬಳಿಗೆ ಸೇರಿದ ಜೋಡಿ ರಾಮಪುರ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಚೇರಿಯಲ್ಲಿ 1909ನೆ ಮೇ ಮಾಹೆ 7ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಏಪ್ರೆಲ್ ತಾರೀಖು 8ನೆ ಮರ್ಕುಂ 14ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 175—176ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್.

ತಾರೀಖು 6ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ನಾಗಮಂಗಲ ತಾಲ್ಲೂಕು ಸಮ್ಮಂಧಪಟ್ಟ 1856ನೆ ಸಾಲ್ ಲಾಗಾಯಿತು 1883ನೆ ಸಾಲ್ ವರಿಗಿನ ಕುಳವಾರ್ ಚೀಟಿಗಳನ್ನು ಹಾಲಿ ಜಾರೀಲಿ ಇರುವ ರೂಲ್ಸು ಅನುಸರಿಸಿ ಚಲಾಯಿಸಲ್ಪಡುತ್ತೆ. ಇವುಗಳ ದಾಖಲೆಗಳನ್ನು ಅಪೇಕ್ಷಿಸತಕ್ಕವರು ಈ ಲಾಗಾಯಿತು ಮೂರು ತಿಂಗಳು ಒಳಗಾಗಿ ದರಖಾಸ್ತು ಕೊಟ್ಟು ಕಾಪಿಗಳನ್ನು ಪಡೆದುಕೊಳ್ಳಬಹುದು.

ಎಂ. ಕಾಂತರಾಜೆ ಅರಸ್,

ಡೆಪ್ಯುಟಿ ಕಮಿಷನರ್.

ತಾರೀಖು 16ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟ್ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1909ನೆ ಜುಲೈ 1ರ ಲಾಗಾಯಿತು 1910ನೆ ಜೂನ್ ಆಖೈರ್ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೊಲೀಸ್ ಸ್ಟೇಷನ್ ಬಳಿ ನಂಜನಗೂಡು ಸಬ್ ಡಿವಿಜನ್ ಆಫಿಸರವರಿಂದ 1909ನೆ ಮೇ 11ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯ ದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರ್‌ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೆ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೇರೆ ನಡೆದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮಾ ತೆಗದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಃ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತಿ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೆ ಹರಾಜಿನಿಂದ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನ ಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಸಾಮಾನು ಯಾ ಮಳಿಗೆ.	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.	
ಗುಡಾರ	ಪ್ರತಿಯೊಂದಕ್ಕೆ	4 ಆಣೆ.
ಎತ್ತಿನಗಾಡಿ	,,	2 ,,
ಒಡ್ಡರ ಗಾಡಿ	,,	1 ,,
ಎತ್ತಿನ ಬೋಜಾ	,,	6 ಪೈ.
ತಲೆ ಬೋಜಾ	,,	3 ,,

ನೋಟ್:—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ತಾರೀಖು 16ನೇ ಏಪ್ರೈಲ್ 1909.

1909ನೆ ಜುಲೈ ಮಾಹೇ ಗುರ್ರೇ ತಾರೀಖು ಲಾಗಾಯಿತು 1910ನೆ ಇಸ್ವಿ ಜೂನ್ ಮಾಹೆ 30ರ ವರಿಗೆ ಯಡತೊರೆ ಟೋಲ್ ಗೇಟಿನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1909ನೆ ಇಸವಿ ಮೇ ತಾರೀಖು 10ರಲ್ಲು ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟದಾರನು ಷೆಡ್ಯೂಲಿನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟು ಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ವೊಳಗಾಗಿ ಹಿಂದಿನ ಮಾಹೆಯ ಕಿಸ್ತು ವೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದ ಕೂಡಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಕಿಸ್ತಿಗೆ ಸಮನಾದ ವೊಬಲಗನ್ನು ಡಿಪಾಜಟ್ಟು ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ವೊಬಲಗನ್ನು ಆಖೈರು ಎರಡು ಮಾಹೆಗಳ ಕಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡಲೆ ಡಿಪಾಜಿಟ್ಟು ಬಗ್ಗೆ ವೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಕಿಸ್ತು ವೊಬಲಗನ್ನು ವಾಯಿದೆವೊಳಗೆ ಹಾಜರ್ಮಾಡಲು ತಪ್ಪಿದರೆ ಪಾವತೀ ಮಾಡುವ ತಾರೀಖಿನ ವರಿವಿಗೆ ಮಾಹೇಯಾನ ರೂಪಾಯಿಗೆ ಒಂದು ಪೈ ನಂತ ಬಡ್ಡಿ ಸೇರಿಸಿ ಕಿಸ್ತು ವೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹ ಹರಾಜು ಮಾಡಿ, ಲುಕ್ಸಾನಾದಲ್ಲಿ ಸದರಿ ವೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಒಳಪಟ್ಟು ಕಂಟ್ರಾಕ್ಟುದಾರ್ರು ಹರಾಜು ವೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತಿ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ವೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಕ್ಕವನ್ನು ಕಂಟ್ರಾಕ್ಟುದಾರ್ರು ಇಡಬೇಕು. ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಉದ್ಯೋಗಸ್ಥರು ಅಪೇಕ್ಷಿಸಿದ ಕಾಲದಲ್ಲಿ ಇನ್‌ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಕ್ಕಗಳನ್ನು ಖರಾರ್ವಾಕಾವಾಗಿ ಇಡಲು ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲೀ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನ್ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೆ ಮರ್ಕುಂ 247ನೆ ನಂಬರು ನೋಟಿಫಿಕೇಷನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರ್ರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡಬೇಕು.

12. ಸನ್ 1903ನೆ ಸೆಪ್ಟಂಬರ್ ಮಾಹೆ 9ನೆ ತಾರೀಖಿನ ಲೋಕಲ್ ಬೋರ್ಡ್ಸ್ ರೂಲ್ಸ್ 64ನೆ ಕಲಮ್ಮಿನಲ್ಲಿ ಕಂಡಂತೆ ಯಾವ ಮನುಷ್ಯನೇ ಆಗಲೀ ಒಂದು ಗೊತ್ತಾದ ವೊಬಲಗೆ ಒಡಂಬಡಿಕೆಮಾಡಿಕೊಳ್ಳುತ್ತಾನೋ, ಅಂಥಾ ಮನುಷ್ಯನ ವಳಿಯಲ್ಲಿರುವ ಗಾಡಿ–ಭಂಡಿ ಮತ್ತು ಜಾನ್ವಾರುಗಳು, ಇವುಗಳ ಮೇಲೆ ಟೋಲ್ ವಸೂಲಾಗತಕ್ಕದ್ದಲ್ಲಾ. (*Vide* Govt. Notification No. 1360-8—L. B. 393-06—2, Dated 10th August 1907).

13. ಸರ್ಕಾರದ ಕೆಲಸದ ಮೇಲೆ ಪ್ರಯಾಣ ಮಾಡುವಾಗ ಭತ್ಯಾ ಸಲ್ಲುವದಿಲ್ಲವೆಂದು ತಮ್ಮ ಹುದ್ದೇದಾರ್ರಿಂದ ರಹದಾರಿಪಡೆದಿರುವ ಸರ್ಕಾರಿ ನೌಕರರ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲಾಗುವದಿಲ್ಲಾ. (*Vide* Govt. Notification No. J. 1683—Legis.—10-07—1, Dated 10th November 1907).

ಷೆಡ್ಯೂಲ್.

ನಂಬರು.	ತಪಶೀಲು.	ಬೋಜವುಳ್ಳದ್ದು.	ಬೋಜ ಇಲ್ಲದ್ದು.
		ರೂ. ಆ. ಪೈ.	ರೂ. ಆ. ಪೈ.
1	ಪ್ರತಿ ನಾಲ್ಕು ಚಕ್ರದ ಗಾಡಿ	0 8 0	0 4 0
2	„ ಎರಡು ಡಿಟೋ	0 4 0	0 2 0
3	„ ಎಮ್ಮೆ ಅಥವಾ ಎತ್ತು	0 0 6	...
4	„ ಆನೆ	1 0 0	1 0 0
5	„ ಒಂಟೆ	0 8 0	0 8 0
6	„ ಕುದುರೆ ಸವಾರಿ ಅಥವಾ ಬೋಜ ಉಳ್ಳದ್ದು	0 1 0	...
7	„ ಡಿಟೋ ಡಿಟೋ ಇಲ್ಲದ್ದು	...	0 1 0
8	„ ಕತ್ತೆ ಸವಾರಿ ಅಥವಾ ಬೋಜ ಉಳ್ಳದ್ದು	0 0 6	...

ತಾರೀಖು 16 ಏಪ್ರಲ್ 1909.

1909ನೆ ಜುಲೈ ಮಾಹೆ ಗುರ್ರು ತಾರೀಖು ಲಾಗಾಯಿತು 1910ನೆ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದು ಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ B ಯಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದ ಕೂಡ್ಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಿಟ್ಟು ಬಗ್ಗೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ, ಮತ್ತು ಲುಕ್ಸಾನಿಗೂ ಅವನೆ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆಯೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜು ಮಾಡಿ ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವನ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಬಳಪಟ್ಟು ಕಂಟ್ರಾಕ್ಟುದಾರರು, ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತಿ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನು ತೋರಿಸುವಂತೆ ಖುಲಾಸ್ಯಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ಥರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖುಲಾಸ್ಯಾಕವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗೌರ್ನ್ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೆ ಮರುಂ 274ನೆ ನಂಬರು ನೋಟಿಫಿಕೇಷನ್ನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸ್ಕಿ ಆ ರೀತಿಯೇ ಸುಂಕ ವಸೂಲ್ಮಾಡಬೇಕು.

12. ಸ್ನ 1903ನೆ ಇಸವಿ ಸೆಪ್ಟಂಬರ್ ಮಾಹೆ 9ನೆ ತಾರೀಖಿನ ಬೋರ್ಡು ರೂಲ್ಸ್ 64ನೆ ಕಲಂನಲ್ಲಿ ಕಂಡಂತೆ ಯಾವ ಮನುಷ್ಯನೇ ಆಗಲಿ ಒಂದು ಗೊತ್ತಾದ ಮೊಬಲಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಾನೋ ಅಂಥಾ ಮನುಷ್ಯನ ಬಳಿಯಲ್ಲಿರುವ ಗಾಡಿ, ಛಡಿ ಮತ್ತು ಜಾನುವಾರುಗಳು ಇವುಗಳಮೇಲೆ ಟೋಲ್ ವಸೂಲ್ಮಾಡತಕ್ಕದ್ದಲ್ಲಾ. (*Vide* Govt. No. 1360-8—L. B. 393-06-2 dated 10th August 1907)

13. ಸರ್ಕಾರದ ಕೆಲಸದ ಮೇಲೆ ಪ್ರಯಾಣ ಮಾಡುವಾಗ ಭತ್ಯಾ ಸಲ್ಲುವದಿಲ್ಲನೆಂದು ತಮ್ಮ ಹುದ್ದೆದಾರ್ರಿಂದ ರಹದಾರಿ ಪಡೆದಿರುವ ಸರ್ಕಾರೀ ನೌಕರರ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲಾಗುವದಿಲ್ಲಾ. (*Vide* Govt. Notification No. J. 1683—Legis. 10-07-1, Dated 10th May 1907.)

ಷೆಡ್ಯೂಲ್ A.

ರಸ್ತೆಗಳು.	ಸ್ಟೇಷನ್ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು-ಮಂಗಳೂರು ರಸ್ತೆ, ಸಿದ್ಧಾಪುರದ ಬ್ರ್ಯಾಂಚು ರಸ್ತೆ.	ಪೆರ್‍ಯಾಪಟ್ಟಣದ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ.	ಹುಣಸೂರು ತಾಲ್ಲೂಕು ಕಚೇರಿ.	1909ನೆ ಮೇ ಮಾಹೆ 8ನೇ ತಾರೀಖು.
2. ಹಾಸನ-ಪೆರ್‍ಯಾಪಟ್ಟಣ-ಕನ್ನಾನೂರು ರಸ್ತೆ ...	ಪೆರ್‍ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ.		
3. ಮದರಾಸು-ಕನ್ನಾನೂರು ರಸ್ತೆ ...	ಪಂಚವಳ್ಳಿ ...		
4. ಮೈಸೂರು-ಮಾನಂದವಾಡಿ ರಸ್ತೆ ...	ಕೊಲ್ಲೇಗೌಡನಹಳ್ಳಿ	ಹೆಗ್ಗಡದೇವನ ಕೋಟೆ ತಾಲ್ಲೂಕು ಕಚೇರಿ.	1909ನೆ ಮೇ ಮಾಹೆ 6ನೇ ತಾರೀಖು.
5. ಗುಂಡ್ಲುಪೇಟೆ-ಸುಲ್ತಾನ್ ಬತೇರಿ ರಸ್ತೆ ...	ಮದೂಲೆಹೊಳೆ ...	ಗುಂಡ್ಲುಪೇಟೆ ತಾಲ್ಲೂಕು ಕಚೇರಿ.	1909ನೆ ಮೇ ಮಾಹೆ 4ನೇ ತಾರೀಖು.
6. ಬೆಂಗಳೂರು-ನೀಲಗಿರಿ ರಸ್ತೆ ...	ಬಂಡೀಪುರ ...		
7. ನಂಜನಗೂಡು-ಹಾಸನೂರು ಘಾಟಿ ರಸ್ತೆ ...	131ನೆ ಮೈಲಿ 1ನೆ ಫರ್ಲಾಂಗ್.	ಚಾಮರಾಜನಗರ ತಾಲ್ಲೂಕು ಕಚೇರಿ.	1909ನೆ ಮೇ ಮಾಹೆ 10ನೇ ತಾರೀಖು.

ಷೆಡ್ಯೂಲ್ B ರೇಟುಗಳು.

ತಪಶೀಲು	ರೇಟುಗಳು.		
	ರೂ.	ಅ.	ಪೈ.
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0
ಡಿಟೋ ಇಲ್ಲದೆ ಇರುವ ಡಿಟೋ	0	6	0
ಡಿಟೋ ಇರುವ ಎರಡು ಡಿಟೋ	0	8	0
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡು ಚಕ್ರದ ಗಾಡಿ ...	0	4	0
ಗಾಡಿ ಬೋಜಾ ಸಹಿತವಾದ್ದು	0	4	0
ಡಿಟೋ ಇಲ್ಲದ್ದು	0	2	0
ಆನೆ	1	0	0
ಒಂಟೆ	0	4	0
ಕುದುರೆ ಸವಾರನುಳ್ಳದ್ದು	0	1	6
ಡಿಟೋ ಸವಾರನಿಲ್ಲದ್ದು	0	0	9
ಕುದುರೆ ಮರಿ ಸವಾರನುಳ್ಳದ್ದು	0	0	9
ಡಿಟೋ ಸವಾರನಿಲ್ಲದ್ದು	0	0	6
ಎತ್ತು ಬೋಜಾ ವುಳ್ಳದ್ದು	0	1	0
ಡಿಟೋ ಇಲ್ಲದ್ದು	0	0	6
ಕತ್ತೆ ಬೋಜಾ ವುಳ್ಳದ್ದು	0	0	6
ಡಿಟೋ ಇಲ್ಲದ್ದು	0	0	3
ಪಲ್ಲಕ್ಕಿ	0	4	0
ಕುರಿ, ಆಡು ಯಾ ಹಂದಿ	0	0	1

ತಾ॥ಖು 16ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ತೆರಕಣಾಂಬಿ ಮಾರ್ಕೆಟ್ಟಿನಲ್ಲಿ 1909ನೆ ಜುಲೈ 1ರ ಲಾಗಾಯಿತು 1910ನೆ ಜೂನ್ ಆಖೈರ ಮವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯು ತೆರಕಣಾಂಬಿ ಪೊಲೀಸ್ ಸ್ಟೇಷನ್ ಬಳಿ ನಂಜನಗೂಡು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ 1909ನೆ ಮೇ 6ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯ ದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ರೇಟನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರಿ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟದಾರನು ಪ್ರತಿ ತಿಂಗಳ 10ನೆ ತಾರೀಖಿನ ವಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತಿನಲ್ಲಿಡಬೇಕು. ಷರತ್ತುಗಳ ಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮಾ ತೆಗದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅಸಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ವಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನ ವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅಸಲ್ ಕಂಟ್ರಾಕ್ಟದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಆಫೀಸಿನ ಹುದ್ದೇದಾರರು ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟದಾರನೇ ಆಗಲಿ ಯಾ ಅವನ ಕಡೆ ನೌಕರರೇ ಆಗಲಿ ವಿರೋಧವಾಗಿ ನಡದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.
ಎತ್ತಿನ ಗಾಡಿ	ಪ್ರತಿಯೊಂದಕ್ಕೆ 2 ಆಣೆ.
ಒಡ್ಡರ ಗಾಡಿ	,, 1 ,,
ಎತ್ತಿನ ಬೋಜಾ	,, 6 ಪೈ.
ತಲೆ ಬೋಜಾ	,, 3 ,,

ನೋಟ್ :—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಪಿಸ ಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ಎಸ್. ಪಿ. ರಾಜಗೋಪಾಲಾಚಾರ್, ಫಾರ್ ಡಿಸ್ಟ್ರಿಕ್ಟ್ ಬೋರ್ಡ್ ಪ್ರಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 11ನೆ ಮಾರ್ಚಿ 1909ನೆ ಇಸವಿ.

ಶಿವಮೊಗ್ಗ ಡಿಸ್ಟ್ರಿಕ್ಟ ಶಿಕಾರಿಪುರ ತಾಲ್ಲೂಕು ಹ[illegible]ಸೇಕೊಪ್ಪದ ಗ್ರಾಮದ ಸರಕಾರಿ ಜಮೀನಿನಲ್ಲಿ ಒಂದು ಹುಣಸೇಮರದ ಹತ್ತಿರ ಭೂಮಿಯ ಅಡಿಯಲ್ಲಿ ಸಿಕ್ಕಿದ, ಸುಮಾರು ರೂಪಾಯಿ 909—8—0 ಬೆಲೆಯುಳ್ಳ ಈ ಕೆಳಗೆ ಕಾಣಿಸಿರುವ ಬೆಳ್ಳಿ ಮತ್ತು ಭಂಗಾರದ ಮಾಲುಗಳು 1909ನೆ ಇಸವಿ ಮೇ ಮಾಹೆ 1ನೆ ತಾರೀಖು ಶನಿವಾರ ದಿವಸ ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರಿಂದಾಗಲಿ, ಅಥವಾ ಅವರ ಗೈರ್ ಹಾಜರಿಯಲ್ಲಿ ಡಿಸ್ಟ್ರಿಕ್ಟ ಟ್ರೆಜರಿ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರಿಂದಾಗಲಿ ಹರಾಜ್ ಮೂಲಕ ವಿಲೇವಾರಿ ಮಾಡಲ್ಪಡುತ್ತೆ.

ಹರಾಜು ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಸದರೀ ತಾರೀಖು ಹಗಲು 11 ಘಂಟೆಗೆ ಪ್ರಾರಂಭವಾಗುವದು. ಈ ಮಾಲುಗಳು ಪ್ರತ್ಯಪ್ರತ್ಯೇಕವಾಗಿ ಹರಾಜು ಹಾಕಿಸಲ್ಪಟ್ಟು ಅತ್ಯಧಿಕವಾದ ಮೊಬಲಗಿಗೆ ಸವಾಲು ಮಾಡುವವರಿಗೆ ಕೊಡಲ್ಪಡುವದು. ಅವುಗಳನ್ನು ಹರಾಜಿನಲ್ಲಿ ಪಡಿಯುವವರು ಹರಾಜು ಮುಗಿದಕೂಡಲೇ ಪೂರಾ ಹರಾಜು ಮೊಬಲಗನ್ನು ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಮೊದಲನೆ ಹರಾಜ್‌ದಾರನನ್ನು ನಷ್ಟಕ್ಕೆ ಗುರಿಪಡಿಸಿ ದುಸರಾ ಹರಾಜ್ ಮಾಡಿಸಲಾದೀತು.

ಮಾಲುಗಳ ವಿವರ.	ಅಂದಾಜ ಕ್ರಯ. ರೂ.	ಆ.
53 ಭಂಗಾರದ ನಾಣ್ಯಗಳು	338	0
ತಾಳಿ ಇರುವ ಕುತ್ತಿಗೆಗೆ ಹಾಕುವ ಭಂಗಾರದ ಸರಗಿ	105	0
ಒಂದು ಜೊತೆ ಬೆಳ್ಳಿಯ ಬಳೆ	48	0
ಎರಡು ಭಂಗಾರದ ಹೊನ್ನು ಹುವ್ವೆ	12	0
ಡಿಟೋ ಡಿಟೋ	9	0
ಒಂದು ಭಂಗಾರದ ಕರಡಿಗೆ	264	0
ಡಿಟೋ ಕರಡಿಗೆಯ ಖುರಡಿಗಳು	10	0
ಒಂದು ಭಂಗಾರದ ಶಾವಂತಿಗೇ ಹುವ್ವೆ	60	0
ಒಂದು ಜೊತೆ ಭಂಗಾರದ ಕಾಶೀತಾಳೀಗುಂಡು	6	0
ಒಂದು ಜೊತೆ ಭಂಗಾರದ ಚಳತುಂಬು	9	0
ಒಂದು ಜೊತೆ ಭಂಗಾರದ ಕಪ್ಪ	15	0
ಒಂದು ಭಂಗಾರದ ಚಾಕ	16	0
ಒಂದು ಭಂಗಾರದ ವಾಲೆ ಕಲಶ	16	0
ಒಂದು ಭಂಗಾರದ ಬುಗಡೀ ಕಲಶ	1	8
ಜುಮ್ಲಾ ...	909	8

ಕೆ. ಚಾಂಡಿ,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 14ನೆ ಏಪ್ರಿಲ್ 1909.

1. ಕಂದಾಯದ ಬಾಕೀದಾರನಾದ ಹಳೇಕೆರೆ ಎಸ್ಟೇಟ್ ಗ್ರಾಮದ ಮಿ|| ಚಾರಲೆಸ್ ಕಿಂಗ್ ಸಾಹೇಬರವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡಿರುವಂತೆ ಹುಕುಂ ಮಾಡಲ್ಪಟ್ಟ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟ್ ಮೂಡಿಗೆರೆ ತಾಲ್ಲೂಕು ಮೂಡಿಗೆರೆ ಗ್ರಾಮದಲ್ಲಿ 1909ನೆ ಇಸವಿ ಮೇ 26ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಕದಾರಿಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1904-05ನೆ ಲಾ|| 4 ಸಾಲಿಗೆ ಪೂರ್ತಿಯಾಗಿ ಸದರಿ ಯವರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 777—3—10 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ವಿವರ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ಅಥವಾ ಹಿಸ್ಸಾ ನಂಬರು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.	ಕಂದಾಯ.	ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಸಲ್ಲತಕ್ಕದ್ದಲ್ಲದೆ ಇತರ ಋಣಗಳು.	ಸರಕಾರಕ್ಕೆ ಬರಬೇಕಾದ ಬಾಕಿ ಮತ್ತು ಅದು ಸಂಬಂಧಿಸಿದ ವರ್ಷಗಳು.
									ರೂ.	ರೂ.	ರೂ.	ರೂ. ಆ. ಪೈ.
ಮೂಡಿಗೆರೆ	ಗೋಣೀಬೀಡು	ಹೆಸ್ಗಲ್ ಎಸ್ಟೇಟು	ಮಿ|| ಹಾರಿಸ್ ಶಿಂಗ್	...	...	1	ಕಾಫಿ	ಎ. 162 ಗು. 10	243	3,000	...	1 2 10 1904—05 258 3 0 1905—06 258 3 0 1906—07 258 3 0 1907—08 1 8 0 ನೋಟಿಸ್ ಫೀ
				ಮಂಗಳೂರು ಹೆಂಚಿನ ಬಂಗ್ಲೆ 3 ಅಂಕಣದ್ದು ಹುಲ್ಲಿನ ಬಾಬತು ಕೊಟ್ಟಿಗೆ ಸಹಾ.						500	ಜಾಮ್ತಾ	777 3 10 ಹರಾಜು ತಾರೀಖು ವರಿಗಿನ ಬಡ್ಡಿ ಸಹ ಬರಬೇಕು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಸನ್ 1909ನೆ ಇಸವಿ ಏಪ್ರಿಲ್ ತಾರೀಖು 17.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1910ನೆ ಇಸವಿ ಜೂನ್ ಆಖೈರ್ ವರೆಗೆ 1 ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇದರಡಿ ಕಾಣಿಸಿರುವ ಟೋಲು ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲು ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು	ಟೋಲ್‌ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡೆಯುವ ಸ್ಥಳ.
1	ತಡಸ (ಭದ್ರಾನದಿಯ ಸೇತುವೆ) ...	6ನೆ ಮೇ 1909.	ಎಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ.
2	ಹರಿಹರಪುರ (ತುಂಗಾನದಿ ಸೇತುವೆ) ...	4ನೆ ಡಿಟೋ.	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ.
3	ಬಾಳೆಹೊನ್ನೂರು (ಭದ್ರಾನದಿ ಸೇತುವೆ)	1ನೆ ಡಿಟೋ	ಬಾಳೆಹೊನ್ನೂರು ಮುಸಾಫರ್ ಬಂಗಲೆಯಲ್ಲಿ.

2. ಎಲ್ಲಾ ಸವಾಲುಗಳಿಗಿಂತಲೂ ಜಾಸ್ತಿಯಾದ ಛಡ ದರಖಾಸ್ತು ಸಹಾ ಕಂಡುಬಂದಲ್ಲಿ ಗವರ್ನ್ಮೆಂಟ್ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿ ಕೊಂಡಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಮೂರನೇ ಒಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಯಲ್ಪಟ್ಟ ಗವರ್ನಮೆಂಟ್ ಆಫ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಒಂದರ ಬಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನಮೆಂಟನಿಂದ ಹರಾಜು ಮಂಜೂರಾಗಿ ಬಂದಕೂಡಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ನಿಶಿ ಸದರಿ ಟೋಲ್‌ಗೇಟು ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಖಜಾನೆಗೆ 1909ನೆ ಆಗಸ್ಟ್ ತಾರೀಖು 10ರ ಲಾಗಾಯಿತು ಸಮನಾದ ಎಂಟು ಖಿಸ್ತುಗಳಾಗಿ ಪ್ರತಿ ತಿಂಗಳ 10ನೆ ತಾರೀಖಿಗೆ ಪಾವತೀ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು 9—10—11—12ನೆ ಖಿಸ್ತುಗಳಿಗೆ ಜಮೆ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು ಮೂರು ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದೇ ಇದ್ದರೆ ಅಥವಾ ಜಾಮೀನ್ ಕೊಡದೇ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ ಮತ್ತು ಸದರಿ ಕಂಟ್ರಾಕ್ಟ್ ಎರಡನೇ ಹರಾಜು ಮಾಡಲ್ಪಡುವದು. ಹೀಗೆ ಮಾಡಿದ್ದರಲ್ಲಿ ಸರ್ಕಾರಕ್ಕೆ ಲುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟದಾರನ ಅಥವಾ ಅವನ ಜಾಮೀನದಾರರ ಜೆಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಶೇಕಡ ಆರು ರೂಪಾಯಿಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸ ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನದಾರರಿಂದ ಬಾಕಿ ಮೊಬಲಗು ಬಾರದೇ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕು ಅಥವಾ ಸಬ್ ತಾಲ್ಲೂಕಿನಲ್ಲಿದೆಯೋ ಆಯಾ ತಾಲ್ಲೂಕು ಅಮಲ್ದಾರರು ಅಥವಾ ಸಬ್ ತಾಲ್ಲೂಕು ಅಮಲ್ದಾರರು ಡೆಪ್ಯುಟಿ ಅಮಲ್ದಾರರು ತನಿಖೆಗೆ ಒಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದು ಮಾಡಿಸುವದಲ್ಲದೆ ಕಂಟ್ರಾಕ್ಟದಾರನನ್ನು ಕ್ರಿಮಿಲ್ ತರ್ಫ್ ಪ್ರಾಸಿಕ್ಯೂಷನ್‌ಗೆ ಗುರಿಪಡಿಸುತ್ತೆ.

9. ದಂಡು, ಮಿಲಿಟರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿಮೇಲೆ ಪ್ರಯಾಣಮಾಡುವ ಪೋಲೀಸು ಯಾ ಇತರ ಉದ್ಯೋಗಸ್ಥರ ಸರ್ಕಾರದ ಸಾಮಾನುಗಳು ಅಂದರೆ, ಸಂಬಂಧಪಟ್ಟ ಇಲಾಖಾ ಮೊಖ್ತೇಸರರ ಸರಟಿಫಿಕೇಟ್ ನಿಶಿ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟದಾರನು ಸುಂಕ ವಸೂಲ್ಮಾಡುವ ಬಂದು ದರವಾರು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ಟೋಲ್ ಗೇಟು ಬಳಿ ಚನ್ನಾಗಿ ಕಾಣುವ ಜಾಗಾದಲ್ಲಿ ತಗಲುಹಾಕಬೇಕು.

11. ಗವರ್ನಮೆಂಟನಿಂದ ನೇಮಿಸಲ್ಪಟ್ಟ ಟೋಲ್‌ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟದಾರನು ಸುಂಕವನ್ನು ವಸೂಲ್ಮಾಡಕೂಡದು.

12. ರೆವಿನ್ಯೂ ಇಲಾಖೆಯೊಂದಿಗೆ ಸುಂಕದ ತೆರಿಗೆ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡ ಯಾವನೊಬ್ಬನಿಂದಲೂ ಕಂಟ್ರಾಕ್ಟದಾರನು ಸುಂಕವನ್ನು ವಸೂಲ್ಮಾಡಕೂಡದು. ಈ ರೀತಿ ರೆವಿನ್ಯೂ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡ ಮೊಬಲಗನ್ನು ಹೊಂದಲು ಕಂಟ್ರಾಕ್ಟದಾರನು ಸ್ವತಂತ್ರವುಳ್ಳವನಾಗುತ್ತಾನೆ.

13. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಬಾಳೆಹೊನ್ನೂರು-ತಡಸ, ಹರಿಹರಪುರದ ಸೇತುವೆಗಳ ಮೇಲೆ ಇರುವ ಟೋಲ್ ಗೇಟುಗಳ ಬಳಿ ಸುಂಕ ವಸೂಲ್ಮಾಡುವ ದರಗಳ ಪಟ್ಟಿ:—

ನಂಬರು	ತಪಶೀಲು.	ಭರ್ತಿ ಆಗಿದ್ದರೆ.			ಖಾಲಿ ಇದ್ದರೆ.		
		ರೂ.	ಆ.	ಪೈ.	ರೂ.	ಆ.	ಪೈ.
1	ನಾಲ್ಕು ಚಕ್ರದ ಗಾಡಿ 1ಕ್ಕೆ	0	8	0	0	8	0
2	ಎರಡುಚಕ್ರದ ಪೆಟ್ಟಿಗೆ ಗಾಡಿ ಅಥವಾ ಛಂಡಿ 1ಕ್ಕೆ	0	4	0	0	4	0
3	ಎಮ್ಮೆಗಳು, ಎತ್ತುಗಳು ರಾಸು 1ಕ್ಕೆ	0	0	6	0	0	3
4	ಆನೆ 1ಕ್ಕೆ	1	0	0	1	0	0
5	ಒಂಟೆ 1ಕ್ಕೆ	0	8	0	0	8	0
6	ಪ್ರತಿ ಕುದುರೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	0	...		
7	ಡಿಟ್ಟೋ ಹೊರೆ ಇಲ್ಲದ್ದು ಅಥವಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	...			0	1	0
8	ಪ್ರತಿ ಕತ್ತೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6	...		

ನೋಟು :— ನಡದುಬರುವ ಮಾರ್ಗಸ್ಥರಮೇಲೆ ಟೋಲ್ ವಸೂಲು ಮಾಡತಕ್ಕದ್ದಿಲ್ಲ.

ಜೆ. ಹನುಮಂತರಾವ್,
ಫಾರ್ ಡೆಪ್ಯುಟಿ ಕಮಿಷನರ್,

ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸಿನಿಂದ.

ನೋಟಿಫಿಕೇಷನ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಸಬ್ ಡಿವಿಜನ್ ಮಜಕೂರು ಬಾಬತು ಜೋಡಿ, ಖಾಯಂಗುತ್ತ, ಇನಾಂ, ಸರ್ವಮಾನ್ಯ ವಗೈರೆ ಗ್ರಾಮಗಳ ಕೇಂದಿ ಹಕ್ಕಿನ ವಿಷಯದಲ್ಲಿ ಕ್ಲೋಸ್‌ಪೇಟೆ ಮೊಕ್ಕಾಂನಲ್ಲಿ 1909ನೆ ಮೇ ತಾರೀಖು 25ರಲ್ಲು ವಿಚಾರಣೆ ಮಾಡಲ್ಪಡುತ್ತೆ.

ತಪಶೀಲು ಬಗ್ಗೆ 1909ನೆ ಇಸವಿ ಏಪ್ರೆಲ್ 15ನೆ ಮರ್ಕ್ಕಂ 15ನೆ ನಂಬರ್ ಮೈಸೂರು ಗೆಜೆಟ್ 2ನೆ ಭಾಗದ 209ನೆ ನಂಬರ್ ಪೇಜು ನೋಡಿ.

ಬಿ. ವೆಂಕೋಬರಾವ್,
ಸಬ್ ಡಿವಿಜನ್ ಆಫಿಸರ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 27ನೆ ಮಾರ್ಚಿ 1909.

1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 48ನೆ ಪ್ರಕರಣದ ಎರಡನೆ ಉಪಪ್ರಕರಣಕ್ಕೆ ಅನುಸಾರವಾಗಿ ಮಾಡಲ್ಪಟ್ಟ ಮ್ಯುನಿಸಿಪಲ್ ಸಭೆಯವರಿಂದ ಮಂಜೂರು ಹೊಂದಿರುವಂಥ ಕೆಳಗೆ ಕಾಣಿಸಿರುವ ಉಪನಿಬಂಧನೆಗಳನ್ನು 1909ನೆ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯಿತು ಜಾರಿಗೆ ತರುವ ವಿಷಯದಲ್ಲಿ ಯಾವವಿಧವಾದ ಆಕ್ಷೇಪಣೆಗಳು ಇದ್ದಲ್ಲಿ ಆಲೋಚಿಸಲಾಗುವುದು.

I. 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನಿನ 48ನೆ (ಸಿ) ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ರೊಟ್ಟಿ ಗಡಂಗು ಮತ್ತು ಮಿಠಾಯಿ ಅಂಗಡಿಗಳಿಗೆ ಸಂಬಂಧವಾದ ಮಸೂದೆ ಉಪನಿಬಂಧನೆಗಳು.

(1) ಪ್ರೆಸಿಡೆಂಟರವರಿಂದ ವಾರ್ಷಿಕ ಲೈಸೆನ್ಸು ಪಡಿಯದೆ ಯಾವ ಸ್ಥಳವನ್ನು ರೊಟ್ಟಿ ಗಡಂಗಿಗಾಗಲಿ ಅಥವಾ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸಲ್ಪಡಲಾಗದು.

(2) ಕಟ್ಟಡವು ವಿಸ್ತಾರವಾಗಿಯೂ ತಕ್ಕದ್ದಾಗಿಯೂ ಇದ್ದ ವಿನಹ ರೊಟ್ಟಿ ಗಡಂಗಿಗಾಗಲಿ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸುವ ಬಗ್ಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

II. (1) ವಾರ್ಷಿಕ ಲೈಸೆನ್ಸನ್ನು ಕೇಳಿಕೊಳ್ಳುವದಕ್ಕೆ ಮುಂಚಿತವಾಗಿ ಕಟ್ಟಡದಲ್ಲಿನ ಉಪಯೋಗಕ್ಕಾಗಿ ನೀರಿನ ನಲ್ಲಿಯನ್ನು ಇಡಿಸಿಕೊಳ್ಳಲು ಹಾಗೆ ಇಡಿಸಿದ ನಲ್ಲಿಯನ್ನು ಅದಕ್ಕೆ ಸಂಬಂಧಿಸಿದ ಎಲ್ಲ ಅಜಬಾಬುಗಳನ್ನು ಸರಿಯಾಗಿಯೂ ಸಾರ್ವದಾ ಉಪಯೋಗಿಸುವ ಸ್ಥಿತಿಯಲ್ಲಿಯೂ ಇಟ್ಟುಕೊಂಡಿರಬೇಕು. ಕಟ್ಟಡವನ್ನು ಚೆನ್ನಾಗಿ ತೊಳೆದು ಶುಚಿಯಾಗಿ ಇಟ್ಟುಕೊಂಡಿರುವದಕ್ಕೆ ಅವಶ್ಯವಾದಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕು.

III. (1) ಪ್ರತಿ ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯ ಗೋಡೆಗಳಿಗೆ ತ್ಯಾವ ಸೇರಕೊಡದಂತೆ ನೆಲದಮಟ್ಟದಿಂದ ನಾಲ್ಕಡಿ ಎತ್ತರದ ವರೆಗೆ ಸಿಮೆಂಟಿನಿಂದ ಗಾರೆ ಮಾಡಿಸಿರತಕ್ಕದ್ದು, ಮತ್ತು ಮಿಕ್ಕ ಭಾಗಕ್ಕೆಲ್ಲ ಸುಣ್ಣದಿಂದ ಇಲಾಯಿ ಮಾಡಿಸಿ ಸುಣ್ಣ ಬಳಿಸಬೇಕು. ಸದರಿ ಕಟ್ಟಡದ ನೆಲವು ಸಂಪೂರ್ತಿಯಾಗಿ ಸಿಮೆಂಟಿನಿಂದ ಗಾರೆ ಮಾಡಿಸಲ್ಪಟ್ಟಿರತಕ್ಕದ್ದು. ಅಥವಾ ಕಡಪ ಕಲ್ಲುಗಳು ಹಾಸಲ್ಪಟ್ಟು, ಸಿಮೆಂಟು ಗಾರೆ ಮಾಡಿಸಿರಬೇಕು.

(2) ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯು ಯಾವ ಭಾಗವೂ ಪಾಯಿಖಾನೆಗಂಡಿ ಅಥವಾ ಕಕ್ಕಸಿನ 30 ಅಡಿಗಳಿಗಿಂತ ಕಮ್ಮಿಯಾದ ಫಾಸಲೆಯಲ್ಲಾಗಲಿ ಅಥವಾ ದುರ್ವಾಸನೆ ಹೊಡಿಯತಕ್ಕ ಸಮೀಪವಾದ ಪ್ರದೇಶದಲ್ಲಿರಕೂಡದು.

IV. ರೊಟ್ಟಿ ಗಡಂಗಿನ ಬಗ್ಗಾಗ್ಲಿ ಮತ್ತು ಮಿಠಾಯಿ ಅಂಗಡಿಯ ಬಗ್ಗಾಗ್ಲಿ ಉಪಯೋಗಿಸಲ್ಪಡುವ ಸ್ಥಳವನ್ನು ಇತರ ಮತ್ತ್ಯಾವ ಉದ್ದೇಶಕ್ಕೂ ಉಪಯೋಗಿಸಕೂಡದು.

V. ಎಲ್ಲಾ ಪಾತ್ರೆಗಳು ಮತ್ತು ಇತರ ಸಾಮಾನುಗಳು ಶುಭ್ರವಾಗಿ ಇಡಲ್ಪಟ್ಟಿರಬೇಕು.

VI. ರೊಟ್ಟಿ ಮತ್ತು ಮಿಠಾಯಿ ತಯಾರಿ ಬಗ್ಗೆ ಉಪಯೋಗಿಸಲ್ಪಡುವ ಹಿಟ್ಟು, ಸಕ್ಕರೆ, ತುಪ್ಪ, ನೀರು, ಮತ್ತು ಇತರ ಪದಾರ್ಥಗಳು ಉತ್ತಮವಾದದ್ದಾಗಿಯೂ ಆರೋಗ್ಯಕರವಾಗಿಯೂ ಇರಬೇಕು. ಹಿಟ್ಟು ಮತ್ತು ಸಕ್ಕರೆ ದಾಸ್ತಾನಿನ ಬಗ್ಗೆ ಪ್ರತ್ಯೇಕವಾದ ಉಗ್ರಾಣ ಅಥವಾ ಪಾತ್ರೆ (ಆಶಯ) ಉಂಟಾಗಿರತಕ್ಕದ್ದು ಮತ್ತು ಹಿಟ್ಟನ್ನಾಗಲಿ ಅಥವಾ ಸಕ್ಕರೆಯನ್ನಾಗಲಿ ರೊಟ್ಟಿ ಗಡಂಗಿನ ಯಾ ಮಿಠಾಯಿ ಅಂಗಡಿಯ ಯಾವಭಾಗದ ನೆಲದಮೇಲೂ ಅಥವಾ ಗೋಡೆಗೆ ಸೇರಿಕೆಯಾಗಿಯೂ ಹಾಕಿರಕೂಡದು.

VII. ಸದರಿ ಆವರಣದಲ್ಲಿನ ಯಾ ಆಸ್‌ಪಾಸ್‌ನಲ್ಲಿನ ಕಸ ಮತ್ತು ಕಶ್ಮಲವು ಚನ್ನಾಗಿ ಗುಡಿಸಲ್ಪಡುತ್ತಿರಬೇಕು ಮತ್ತು ಮೋಹರಿಯನ್ನು ನೀರಿನಿಂದ ಚನ್ನಾಗಿ ಶುಭ್ರಪಡಿಸಬೇಕು. ಮತ್ತು ಸದರಿ ಆವರಣವನ್ನು ಸರ್ವಕಾಲದಲ್ಲೂ ನಿರ್ಮಲವಾದ ಮತ್ತು ಹಸನು ಯಾ ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು.

VIII. ಸಾಂಕ್ರಾಮಿಕವಾದ ಅಥವಾ ಅಸಹ್ಯಕರವಾದ ರೋಗದಿಂದ ಅನುಭವಿಸುವಂಥಾ ಅಥವಾ ಅಂಥಾ ರೋಗಿಷ್ಟನ ಹಾಜರಾತಿಯಲ್ಲಿ ಹೊಸದಾಗಿರುವ ಮನುಷ್ಯನನ್ನು ಅಥವಾ ಮೈತೊಳೆಯದೇಲೂ ಯಾ ಬೇರೆರೀತಿಯಲ್ಲಿಯೂ ಅಶುಚಿಯಾದಂಥಾ ಯಾವ ಮನುಷ್ಯನನ್ನು ರೊಟ್ಟಿ ಗಡಂಗಿನಲ್ಲಾಗಲಿ ಮಿಠಾಯಿ ಅಂಗಡಿಯಲ್ಲಾಗಲಿ ನೌಕರಿ ಬಗ್ಗೆ ಇಟ್ಟುಕೊಳ್ಳಕೂಡದು. ಮತ್ತು ಹಿಟ್ಟು ನಾದಲು ನೇಮಿಸಲ್ಪಡುವಂಥಾ ವಿಶಿಷ್ಟರು ಅವರ ಶರೀರದ ಮುಂಭಾಗವನ್ನು ಸಂಪೂರ್ಣವಾಗಿ ಮುಚ್ಚುವ ರೀತ್ಯಾ ಕುತ್ತಿಗೆಯಿಂದ ಮೊಣಕಾಲಿನ ವರೆಗೆ ಬೆಳ್ಳಗಿರುವ ಮತ್ತು ಶುಭ್ರವಾದ ನಾರು ಅಥವಾ ಅರಳೇ ಬಟ್ಟೆಯನ್ನು ಧರಿಸಿಕೊಳ್ಳಬೇಕು.

IX. ರೊಟ್ಟಿ ಗಡಂಗು ಅಥವಾ ಮಿಠಾಯಿ ಅಂಗಡಿ ಎಂಬುವದು ಬಿಕರಿಗೋಸ್ಕರ ರೊಟ್ಟಿಯನ್ನು ಸುಡುವದಕ್ಕೂ ಸೀಪದಾರ್ಥಗಳನ್ನು ತಯಾರ್ಮಾಡುವುದಕ್ಕೂ ಉಪಯೋಗಿಸಲ್ಪಡುವ ಒಂದು ಕಟ್ಟಡ ಅಥವಾ ಅಂಥಾ ಕಟ್ಟಡದ ಒಂದು ಭಾಗ ಸೇರಿಕೊಂಡಿರುತ್ತದೆ.

X. ಯಾವ ಮನುಷ್ಯನು ರೊಟ್ಟಿಯನ್ನಾಗಲಿ ಮಿಠಾಯಿಯನ್ನಾಗಲಿ ಮುಚ್ಚಲ್ಪಟ್ಟ ಗಾಡಿ ಅಥವಾ ಮುಚ್ಚಳವುಳ್ಳ ಮಕ್ಕರಿ ಟನ್ನು ಅಥವಾ ಇತರ ಆಶಯಗಳು ವಿನಹ ಒಂದು ಸ್ಥಳದಿಂದ ಇತರ ಯಾವ ಸ್ಥಳಕ್ಕೂ ಸಾಗಿಸಕೂಡದು ಅಂಥಾ ಪ್ರತಿ ಬಂಡಿಯೂ ಮಕ್ಕರಿಯೂ ಟನ್ನೂ ಅಥವಾ ಇತರ ಪಾತ್ರೆಗಳೂ ಸರ್ವದಾ ಸಂಪೂರ್ಣ ಶುಚಿಯಾಗಿ ಇಡಲ್ಪಟ್ಟಿರಬೇಕು. ಹಾಗೆ ಸಾಗಿಸಲ್ಪಡತಕ್ಕ ರೊಟ್ಟಿಯನ್ನಾಗಲಿ ಮಿಠಾಯಿಯಾಗಲಿ ಕೊಳೆ ಅಥವಾ ಅನಾರೋಗ್ಯವಾಗುವಂತೆ ಯಾವ ಕಾರ್ಯವೂ ನಡಿಸಕೂಡದು.

XI. ರೊಟ್ಟಿ-ಮಿಠಾಯಿ ವಗೈರೆ ಕಟ್ಟಲು ಉಪಯೋಗಿಸತಕ್ಕ ಕಾಗದಗಳು ಮತ್ತು ಹಚ್ಚುಟ ಎಲೆಗಳು ವಿಶಿಷ್ಟವಾದ ಶುಚಿಯಾಗಿರಬೇಕಲ್ಲದೆ ಅವುಗಳು ನಿರ್ಮಲವಾದ (ಗಡಗಂಚಿ) ಹಂದರದಲ್ಲಿ ದಾಸ್ತಾನ್ ಇಟ್ಟಿರಬೇಕು.

XII. ರೊಟ್ಟಿ, ಮಿಠಾಯಿ ವಗೈರೆಯನ್ನು ವಿಕರಿಗೋಸ್ಕರ ಗಾಜಿನ ಸಮ್ಮುಖದ ಪೆಟ್ಟಿಗೆಯಲ್ಲಿ ಸಂಗ್ರಹಿಸಿ ಇಡಲ್ಪಟ್ಟಿರಬೇಕು, ಮತ್ತು ನೊಣಗಳಿಂದಾಗಲಿ, ಧೂಳಿನಿಂದಾಗಲಿ ಮತ್ತು ಕೆಟ್ಟವಾಸನೆಯಿಂದ ಮಲೀನತ್ವ ಹೊಂದದಂತೆ ಯುಕ್ತವಾದ ವಿಶಿಷ್ಟ ಎಚ್ಚರಿಕೆಯನ್ನು ತೆಗೆದುಕೊಳ್ಳತಕ್ಕದ್ದು, ಯಾವ ಮನುಷ್ಯನೇ ಆಗಲಿ ಒಂದು ರೊಟ್ಟಿ ಗಡಂಗಿನ ಸ್ವಾಧೀನ (ವಶ)ಗಾರನಂತೆ ಕೆಲಸಮಾಡುವ ಅಥವಾ ಪ್ರವರ್ತನೆಮಾಡುವಂತೆ ಕಂಡುಬರುವ ಯಾವ ಮನುಷ್ಯನನ್ನಾದರೂ ಸದರಿ ಗಡಂಗಿನ ಯಾ ಅಂಗಡಿಯ ಮಾಲೀಕ ಅಥವಾ ಯಜಮಾನನೆಂದು ಭಾವಿಸಲ್ಪಟ್ಟು ಅದರಂತೆ ಎಣಿಸಲಾಗುತ್ತೆ.

XIII. ಅಂಥಾ ರೊಟ್ಟಿಗಡಂಗು ಅಥವಾ ಮಿಠಾಯಿ ಅಂಗಡಿ ಲೈಸೆನ್ಸು ಹೊಂದಲ್ಪಟ್ಟಿರುತ್ತೆಂಬುದನ್ನು ತೋರಿಸುವ ಬಗ್ಗೆ ಒಂದು ಬೋರ್ಡ್ (ಗುರ್ತಿನ ಹಲಿಗೆ) ನ್ನು ಹಾಕಿಸಿರಬೇಕು.

XIV. ಯಾವನಾದರೂ ಈ ಉಪನಿಬಂಧನೆಗಳಲ್ಲಿ ನಿಯಮಕವಾಗಿರುವಂತೆ ಲೈಸೆನ್ಸು ಪಡಿಯದೆ ರೊಟ್ಟಿ ಗಡಂಗಿಗೋಸ್ಕರ ಅಥವಾ ಮಿಠಾಯಿ ಅಂಗಡಿಗೋಸ್ಕರ ಯಾವ ಸ್ಥಳವನ್ನಾದರೂ ಉಪಯೋಗಿಸಿದಲ್ಲಿ ಅಂಥವನು ತಪ್ಪು ಸ್ಥಾಪನೆಯಿಂದ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆ ತೆರಲು ಗುರಿಯಾಗುವನು. ಮತ್ತು ತಪ್ಪು ಸ್ಥಾಪನೆ ಆದನಂತರ ಅಂಥಾ ಸ್ಥಳವನ್ನು ಉಪಯೋಗಿಸುವ ಪ್ರತಿದಿನಕ್ಕೂ ಐದು ರೂಪಾಯಿಗಳ ಪರಿವಿಗೆ ಹೆಚ್ಚು ಜುರ್ಮಾನೆ ತೆರಲು ಗುರಿಯಾಗುವನು.

1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ 48ನೆ (ಬಿ) ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ದೇಶೀಯ ಹೋಟಲ್ ಅಥವಾ ಭೋಜನ ಶಾಲಾಗಳಿಗೆ ಸಂಬಂಧಪಟ್ಟ ಮುಂದೆ ಉಪ ನಿಬಂಧನೆಗಳು.

I. (1) ಒಂದು ಭೋಜನಶಾಲೆ ಅಥವಾ ಹೋಟಲ್ ಎಂಬುವುದು ವಿಕರಿಬಗ್ಗೆ ತಯಾರ್ಮಾಡಿ ಇಡಲ್ಪಟ್ಟ ಪಕ್ವ ಮಾಡಿದ ಅಕ್ಕಿ ಕುರಿಮಾಂಸ, ದನದಮಾಂಸ, ಕೋಳಿ, ತರಕಾರಿಗಳು, ಬ್ರ್ಯಾಳಿ ಮತ್ತು ತಿಂಡೀ ಸಾಮಾನುಗಳು, ಅಥವಾ ಚಪಾತಿ, ದೋಸೆ, ಟೀ, ಕಾಫಿ ವಗೈರೆ ಫಲಹಾರದ ಸಾಮಾನುಗಳುಳ್ಳ ಮನೆ ಅಥವಾ ಸ್ಥಳ ಸೇರಿದ್ದಾಗಿರುತ್ತೆ.

(2) ಪ್ರೆಸಿಡೆಂಟರವರಿಂದ ವಾರ್ಷಿಕ ಲೈಸೆನ್ಸು ಪಡಿಯದೆ ಯಾವ ಸ್ಥಳವೂ ಭೋಜನಶಾಲೆ ಯಾ ಹೋಟಲ್ ಬಗ್ಗೆ ಉಪಯೋಗಿಸಲ್ಪಡಕೂಡದು.

(3) ಭೋಜನಶಾಲೆಗೆ ಉಪಯೋಗಿಸಲ್ಪಡುವ ಕಟ್ಟಡವು ವಿಸ್ತಾರವಾಗಿಯೂ ತಕ್ಕದ್ದಾಗಿಯೂ ಇದ್ದವಿನಹ ಈ ಬಗ್ಗೆ ಲೈಸೆನ್ಸು ಕೊಡಲ್ಪಡುವುದಿಲ್ಲ.

II. (1) ಮೇಲ್ಕಂಡ ವ್ಯಾಪಾರವು ಹೇರಳವಾಗಿ ನಡಿಯುತ್ತೆಂದು ಪ್ರೆಸಿಡೆಂಟರವರು ಊಹಿಸಿದ ಸ್ಥಳಕ್ಕೆ ನೀರಿನ ನಲ್ಲಿಯನ್ನು ಇಡಿಸಲು ನಿರ್ಬಂಧಪಡಿಸಲಾಗುತ್ತೆ.

(2) ಸದರೀ ಕಟ್ಟಡದಲ್ಲಿ ಪಾನಕ್ಕಾಗಿ ಉಪಯೋಗಿಸುವ ನೀರು ಪಬ್ಲಿಕ್ ನೀರಿನ ಸರಬರಾಯಿ (ಹೆಸರುಹಟ್ಟಿದ್ದ) ಯಿಂದ ತರಲ್ಪಟ್ಟಿರಬೇಕು ಮತ್ತು ಸದರೀ ನೀರು ಕುದಿಸಲ್ಪಟ್ಟು, ಮುಚ್ಚಲುವುಳ್ಳ ನಿರ್ಮಲವಾದ ಪಾತ್ರೆಯಲ್ಲಿ ತೇಲಾಡುವ ಮಲಿನ ಪದಾರ್ಥ ಇಲ್ಲದ ರೀತ್ಯಾ ಶುಭ್ರವಾಗಿಟ್ಟಿರಬೇಕು. ಅಂಥಾ ನೀರಿನ ಪಾತ್ರೆಗಳು ನೀರು ತೆಗಿಯಲು ಟ್ಯಾಪ್ (ತಿರುಪು) ಉಳ್ಳವುಗಳಾಗಿರಬೇಕು, ಮತ್ತು ಅವುಗಳು ನೆಲದ ಮಟ್ಟಕ್ಕಿಂತ ಒಂದಡಿ ಯತ್ತರದಲ್ಲಿ ಶುಚಿಯಾದ ಸ್ಥಳದಲ್ಲಿ ಇಡಲ್ಪಟ್ಟಿರಬೇಕು.

III. (1) ಪ್ರತಿ ಭೋಜನಶಾಲೆ ಗೋಡೆಗಳಿಗೆ ತ್ಯಾವ ಸೇರಗೊಡದಂತೆ ಗಾರೆ ಹಾಕಲ್ಪಟ್ಟು ನೆಲಕ್ಕೆ ಕಲ್ಲು ಹಾಸಲ್ಪಟ್ಟಿರಬೇಕು.

(2) ಅಡಿಗೆಮನೆ ಮತ್ತು ನೀರಿನ ಮನೆಗಳು ಒಳ್ಳೇ ಘಾಳಿಯಾಡುವ ಸಾಧನೆಗಳುಳ್ಳವುಗಳಾಗಿರಬೇಕು, ಮತ್ತು ಇವುಗಳ ಹೊಗೆಯು ಇತರವಾದ ಕೊಠಡಿಗಳಿಗೆ ವ್ಯಾಪಿಸದಂತೆ ಹೊಗೇದ್ವಾರ ಉಳ್ಳವುಗಳಾಗಿರಬೇಕು, ಭೋಜನಶಾಲಾ, (ಹೋಟಲ್) ಯಲ್ಲಿನ ಕೊಠಡಿಗಳೆಲ್ಲವೂ ಚೆನ್ನಾಗಿ ಬೆಳಕು ವುಳ್ಳವುಗಳಾಗಿಯೂ ಘಾಳಿಯಾಡಲು ಸಾಧನೆಗಳುಳ್ಳವುಗಳಾಗಿರಬೇಕು.

(3) ಸದರೀ ಭೋಜನಶಾಲಾ ವಶಗಾರನು ಅಥವಾ ಎಜಮಾನನು ಊಟದ ನಡುಮನೆ ವಿನಹ ಇನ್ಯಾವ ಸ್ಥಳದಲ್ಲಿಯೂ ಯಾರನ್ನೂ ಭೋಜನ ಮಾಡಗೊಳಿಸಕೂಡದು.

IV. (1) ಎಲ್ಲಾ ಪಾತ್ರೆಗಳನ್ನು ಇತರ ಸಾಮಾನುಗಳನ್ನು ಶುಭ್ರವಾಗಿಟ್ಟಿರತಕ್ಕದ್ದು, ಮತ್ತು ಪಕ್ವ ಮಾಡುವುದಕ್ಕಾಗಲಿ ಅಥವಾ ತಿನ್ನುವ ಪದಾರ್ಥಗಳಿಡುವದಕ್ಕಾಗಲಿ ಉಪಯೋಗಿಸುವ ಎಲ್ಲಾ ಲೋಹ ಪಾತ್ರೆಗಳು ಅಖಂಡ ಟಿನ್ ಕಲಾಯಿಗಳುಳ್ಳವುಗಳಾಗಿರಬೇಕು, ಮತ್ತು ಯಾವ ತರಹೆ ಸೀಸದ ಪಾತ್ರೆಗಳನ್ನು ಯಾವಬಗ್ಗೂ ಉಪಯೋಗಿಸಕೂಡದು, ಮನುಷ್ಯನ ಆಹಾರಕ್ಕೆ ನಿಯಮಿತವಾದ ಪಕ್ವಮಾಡಿದ ತಿಂಡಿ ಸಾಮಾನು, ಹಿಟ್ಟಿನ ಪದಾರ್ಥ (ಹೋಳಿಗೆ ವಗೈರೆ) ಅಥವಾ ಮಿಠಾಯಿ, ಫಲಹಾರದ ಸಾಮಾನು, ಕೆಡದಂತೆ ಭದ್ರಮಾಡಿದ ಒಣಗಿಸದ ಅಥವಾ ಕೊಯ್ದಿದ ಹಣ್ಣುಗಳು ಸಹಾ ನೊಣಗಳಿಂದಲಾಗಲೀ, ಧೂಳಿನಿಂದಾಗಲಿ ಮತ್ತು ಕೆಟ್ಟವಾಸನೆಯಿಂದಾಗಲೀ ಮಲೀನತ್ವ ಯಾ ಕೆಡದಂತೆ ಯುಕ್ತವಾದ ಎಚ್ಚರಿಕೆಯು ತೆಗೆದುಕೊಳ್ಳಲ್ಪಡತಕ್ಕದ್ದು.

(2) ಮನುಷ್ಯ ಆಹಾರಕ್ಕೆ ಯಾವವಿಧವಾಗಿ ಯೋಗ್ಯವಲ್ಲದ ಹಳೇದಾದ (ತಂಗಳು) ಅನಾರೋಗ್ಯವುಳ್ಳ ಕೆಡಕಾದ ಯಾವ ತರಹೆ ತಿಂಡಿ ಪದಾರ್ಥಗಳನ್ನೂ ಸದರಿ ವಠಾರದಲ್ಲಿ ದಾಸ್ತಾನ್ ಇಡಕೂಡದು, ಮತ್ತು ವಿಕರಿಗೆ ಹೊರಪಡಿಸಕೂಡದು.

(3) ಸದರಿ ಆವರ್ಣದಲ್ಲಿನ ಯಾ ಅಸುನಾಸಿನಲ್ಲಿನ ಕಕ್ಕಸುಲವು ಚೆನ್ನಾಗಿ ಗುಡಿಸಲ್ಪಡುತ್ತಿರಬೇಕು. ಮತ್ತು ಮೋಹರಿಯನ್ನು ನೀರಿನಿಂದ ಚೆನ್ನಾಗಿ ಶುಭ್ರಪಡಿಸಬೇಕು, ಮತ್ತು ಸದರಿ ಕಟ್ಟಡವನ್ನು ಎಲ್ಲಾ ಕಾಲದಲ್ಲೂ ನಿರ್ಮಲವಾಗಿಯೂ, ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು. ಮತ್ತು ಸದರೀ ಕಟ್ಟಡಕ್ಕೆ ಆವಶ್ಯವಾದಷ್ಟು ಮಲವಿಸರ್ಜನೇ ಸ್ಥಳದ ಅನುಕೂಲತೆ ಉಂಟಾಗಿರತಕ್ಕದ್ದು, ಮತ್ತು ಮಲವಿಸರ್ಜನೆ ಸ್ಥಳವನ್ನು ನಿರ್ಮಲವಾಗಿಟ್ಟಿರಬೇಕಲ್ಲದೆ, ಮಲವು ಬೂದಿಯಿಂದಾಗಲೀ ಮಣ್ಣಿನಿಂದಾಗಲೀ ಮುಚ್ಚಲ್ಪಟ್ಟಿರಬೇಕು.

V. ಸಾಂಕ್ರಾಮಿಕವಾದ ಅಥವಾ ಅಸಹ್ಯಕರವಾದ ರೋಗದಿಂದ ಅನುಭವಿಸುವಂಥ ಅಥವಾ ಅಂಥಾ ರೋಗಿಷ್ಟನ ಸಹವಾಸದಲ್ಲಿ ಈಚಿಗೆ ಇದ್ದಂಥಾ ಮನುಷ್ಯನನ್ನು ಅಥವಾ ಮೈ ತೊಳೆಯದೇಲೂ ಯಾ ಬೇರೇ ರೀತಿಯಲ್ಲಿ ಅಶುಚಿಯಾದಂಥ ಯಾವ ಮನುಷ್ಯನನ್ನೂ ಹೋಟಲಿನಲ್ಲಿ ನೌಕರಿ ಬಗ್ಗೆ ಇಟ್ಟುಕೊಳ್ಳಕೂಡದು.

VI. (1) ಮಠಾರ ವಿಶಿಷ್ಟವೂ ಮತ್ತು ಪಕ್ವಮಾಡಿದ ಮತ್ತು ಹಸೀದಾದ ಪದಾರ್ಥಗಳೆಲ್ಲವೂ ಮತ್ತು ಪಾತ್ರೆಗಳು ಪ್ರೆಸಿಡೆಂಟರವರಿಂದಾಗಲೀ ಹೆಲ್ತಾಫಿಸರವರಿಂದಾಗಲಿ ಅಥವಾ ಇವರಪಕ್ಷವಾಗಿ ಅಧಿಕಾರಹೊಂದಿದ ಯಾವ ಆಫಿಸರಿಂದಾಗಲಿ ಅಜಮಾಯಿಷಿ ಮಾಡಲ್ಪಡಲು ತೆರೆಯಲ್ಪಟ್ಟಿರತಕ್ಕದ್ದು.

(2) ಅಪಾಯಕರವಾದ ಸಾಂಕ್ರಾಮಿಕ ರೋಗಗಳಿಂದ (ಅಂದರೆ) ಕಲರಾ, ಪ್ಲೇಗ್ ಮತ್ತು ಬೊಬ್ಬೆಯೇಳುವ ಜ್ವರಗಳು ಅಂದರೆ ಸಿಡುಬು, ಸೀತಾಳ, ಗೊಬ್ಬರ ಮತ್ತು ಏಳು ದಿನಗಳಿಗಿಂತ ಪರಿಮಾಣವುಳ್ಳ ಜ್ವರಗಳ ವಿದ್ಯಮಾನಗಳನ್ನು ತಕ್ಷಣ ಪ್ರೆಸಿಡೆಂಟರವರಿಗೆ ತಿಳಿಸತಕ್ಕದ್ದು.

VII. (1) ಯಾವ ಮನುಷ್ಯನು ಈ ಉಪ ನಿಬಂಧನೆಗಳು ಜಾರಿಗೆ ತರಲ್ಪಟ್ಟ ತರುವಾಯ ಅಂಥಾ ಭೋಜನಶಾಲೆ ಯಾ ಹೋಟಲನ್ನು ಇಡಲು ಅಥವಾ ನಡೆಸಲು ಉಪಕ್ರಮಿಸಿದ ಏಳು ದಿನಗಳೊಳಗಾಗಿ ಲೈಸೆನ್ಸು ಪಡೆಯದೆ ಭೋಜನಶಾಲೆ ಯಾ ಹೋಟಲ್ ಇಡಕೂಡದು. ಯಾ ನಡಿಸಕೂಡದು. ಈ ಉಪ ನಿಬಂಧನೆಗಳನ್ನು ಜಾರಿಗೆ ತರುವ ಕಾಲದಲ್ಲೇ ಇಡಲ್ಪಟ್ಟಿರುವ ಯಾ ನಡಸಲ್ಪಡುತ್ತಿರುವ ಹೋಟಲ್‌ಗಳ ವಿಷಯದಲ್ಲಿ ಈ ಉಪ ನಿಬಂಧನೆಗಳು ಜಾರಿಗೆ ತರಲ್ಪಟ್ಟ ಮುವ್ವತ್ತು ದಿನಗಳೊಳಗಾಗಿ ಲೈಸೆನ್ಸು ಪಡಿಯದೆ ಇಡಕೂಡದು.

(2) ಒಂದು ಹೋಟಲ್ ಮನೆಯ ಸ್ವಾಧೀನಗಾರನಂತೆ ಕೆಲಸಮಾಡುವ ಅಥವಾ ಪ್ರವರ್ತನೆ ಮಾಡುವಂತೆ ಕಂಡುಬರುವ ಯಾವ ಮನುಷ್ಯನನ್ನಾದರೂ ಸದರಿ ಹೋಟಲಿನ ಮಾಲೀಕ ಅಥವಾ ಏಜಮಾನನೆಂದು ಭಾವಿಸಲ್ಪಟ್ಟು ಅದರಂತೆ ಎಣಿಸಲಾಗುತ್ತೆ.

VIII. ಸದರಿ ದೇಶೀಯ ಹೋಟಲ್ ಯಾ ಭೋಜನಶಾಲೆಯು ಲೈಸೆನ್ಸು ಹೊಂದಲ್ಪಟ್ಟಿರುತ್ತೆ ಎಂಬುದನ್ನ ತೋರಿಸಲು ಬೋರ್ಡು (ಗುರ್ತಿನ ಹಲಿಗೆ) ಯನ್ನ ಹಾಕಿಸಲ್ಪಟ್ಟಿರತಕ್ಕದ್ದು.

IX. ಈ ಉಪ ನಿಬಂಧನೆಗಳಲ್ಲಿ ನಿಯಾಮಕವಾಗಿರುವಂತೆ ಲೈಸೆನ್ಸು ಪಡಿಯದೆ ಯಾವ ಸ್ಥಳವನ್ನಾದರು ಹೋಟಲ್‌ಬಗ್ಗೆ ಉಪಯೋಗಿಸಿದಲ್ಲಿ ಅಂಥವನು ತಪ್ಪು ಸ್ಥಾಪನೆಯಿಂದ 50 ರೂಪಾಯಿಗಳಿಗೆ ಮೀರದ ಜುಲ್ಮಾನೆ ತೆರಲು ಗುರಿಯಾಗುವನು. ಮತ್ತು ತಪ್ಪು ಸ್ಥಾಪನೆಯಾದನಂತರ ಅಂಥಾ ಸ್ಥಳವನ್ನು ಉಪಯೋಗಿಸುವ ಪ್ರತಿ ದಿನಕ್ಕೂ 5 ರೂಪಾಯಿನ ವರಿವಿಗೆ ಹೆಚ್ಚು ಜುಲ್ಮಾನೆ ತೆರಲು ಗುರಿಯಾಗುವನು.

ಸನ್ 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನ್ 48 (c) ನೆ ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ಮಂಜಿನ ಗಡ್ಡೆ ಮತ್ತು ಸೋಡಾ ವಾಟರ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ವಿಷಯದ ಮಸೂದೆ ಉಪನಿಬಂಧನೆಗಳು.

(1) ಮಂಜಿನಗಡ್ಡೆ ಅಥವಾ ಸೋಡಾ ವಾಟರ್ಸ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ತಯಾರಿ ಯಾ ಬಿಕರಿ ಬಗ್ಯೆ ಲೈಸೆನ್ಸು ಹೊಂದಿದ ಹೊರ್ತು ಯಾವ ಸ್ಥಳವೂ ಉಪಯೋಗಿಸಲ್ಪಡಕೂಡದು.

(2) ಮೇಲ್ಕಂಡ ಬಗ್ಯಾಗಿ ಯಾವ ಮಠಾರವನ್ನಾದರು ಉಪಯೋಗಿಸಲಪೇಕ್ಷಿಸುವ ಮನುಷ್ಯನು ಲೈಸೆನ್ಸು ಹೊಂದಲು ಪ್ರೆಸಿಡೆಂಟರವರಿಗೆ ಅರ್ಜಿ ಬರೆದುಕೊಳ್ಳಬೇಕು. ಪ್ರೆಸಿಡೆಂಟರವರು ಅಂಥಾ ಲೈಸೆನ್ಸನ್ನೂ ಅವರಿಗೆ ಯುಕ್ತ ತೋರುವ ರೀತ್ಯಾ ಕೊಡಬಹುದು ಅಥವಾ ತಿರಸ್ಕರಿಸಬಹುದು.

(3) ಈ ಉಪನಿಬಂಧನೆ ಮೇರಿಗೆ ಕೊಡಲ್ಪಟ್ಟ ಲೈಸೆನ್ಸುಗಳನ್ನ ರಿನ್ಯೂ ಮಾಡಲು (ನವೀಕರಿಸಲು) ಪ್ರತಿ ಸರ್ಕಾರಿ ಸಾಲಿನ ಮೊದಲ ಮಾಹೆ ಆಖೈರ್ ಒಳಗಾಗಿ ಪ್ರೆಸಿಡೆಂಟರವರಿಗೆ ಅರ್ಜಿ ಬರೆದುಕೊಳ್ಳಬೇಕಾಗಿರುತ್ತೆ.

(4) ಈ ಉಪನಿಬಂಧನೆಗಳನುಸಾರವಾಗಿ ಕೊಡಲ್ಪಡುವ ಮಂಜಿನ ಗಡ್ಡೆಯ ಕಾರ್ಖಾನೆ ಲೈಸೆನ್ಸು ಬಗ್ಯೆ 50 ರೂಪಾಯಿನಂತೆಯೂ, ಸೋಡಾ ವಾಟರ್ಸ್ ಲೆಮನೆಡ್ ಯಾನೆ ಎರೇಟೆಡ್ ವಾಟರ್ಸ್ ಕಾರ್ಖಾನೆಯ ಬಗ್ಯೆ 100 ರೂಪಾಯಿನಂತೆಯೂ ಲೈಸೆನ್ಸು ಫೀ ದಾಖಲ್ಮಾಡಲಾಗುತ್ತೆ.

ಈ ಉಪನಿಬಂಧನೆ ಮೇರಿಗೆ ಕೆಳಗೆ ನಮೂದಿರುವ ಬಾಬುಗಳಿಗೆ ಕೊಡಲ್ಪಡುವ ಲೈಸೆನ್ಸುಗಳಿಗೆ ಇದರಡಿ ಕಂಡ ಷರತ್ತುಗಳು ಲಗಾವಾಗಿರತಕ್ಕದ್ದು.

(1) ಮಂಜಿನಗಡ್ಡೆ ಕಾರ್ಖಾನೆ ಬಗ್ಯೆ.

(a) ಮಂಜಿನ ಗಡ್ಡೆಯಾಗಿ ಮಾಡಲು ಉಪಯೋಗಿಸಲ್ಪಡುವ ನೀರನ್ನ ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡುವ ಜಾಗದಿಂದ ತರಲ್ಪಡತಕ್ಕದ್ದು.

(b) ಅಂಥಾ ನೀರನ್ನ ಪ್ರೆಸಿಡೆಂಟರವರಿಂದ ಮಂಜೂರ್ಮಾಡಲ್ಪಡದ ಪಕಾಲೆಯಲ್ಲಾಗಲಿ ಅಥವಾ ಇತರ ಇನ್ಯಾವ ಪಾತ್ರೆಯಲ್ಲಾಗಲಿ ತರಕೂಡದು.

(c) ಅಂಥಾ ನೀರನ್ನ ತರಲು ನೇಮಿಸಲ್ಪಡತಕ್ಕ ಭಂಡಿಗಳು ಆವರ್ಣದಲ್ಲಿ ಇಡಲ್ಪಟ್ಟಿರಬೇಕು. ಮತ್ತು ಅಂಥಾ ಕಾರ್ಖಾನೆಯ ವಿಳಾಸವು ನೀರಿನ ಪೀಪಾಯಿನ ಮೇಲೆ ಬಣ್ಣದಿಂದ ಬರೆಯಲ್ಪಟ್ಟಿರಬೇಕು, ಮತ್ತು ಅಂಥಾ ಬಂಡಿಗಳು ಸರ್ವ ಕಾಲದಲ್ಲೂ ಸರಿಯಾದ ಶುಚಿಯಾದ ಸ್ಥಿತಿಯಲ್ಲಿ ಇಡಲ್ಪಟ್ಟಿರತಕ್ಕದ್ದು.

(d) ಮಂಜಿನಗಡ್ಡೆ ಕಾರ್ಖಾನೆಯ ಆವರ್ಣವು ಸರಿಯಾದ ಶುಚಿಯಾದ ಸ್ಥಿತಿಯಲ್ಲಿ ಇಡಲ್ಪಟ್ಟಿರಬೇಕು. ಮತ್ತು ಕಶ್ಮಲ ನೀರು ವಿಶಿಷ್ಟವೂ ಸಂಪೂರ್ಣವಾಗಿ ಹರಿದು ಹೋಗುವಂತೆ ಮೋಹರಿವುಳ್ಳದ್ದಾಗಿರಬೇಕು.

(e) ಹೆಲ್ತ್ ಆಫಿಸರೇ ಆಗಲಿ ಅಥವಾ ಯಾವ ಮ್ಯೂನಿಸಿಪಲ್ ಸ್ಯಾನಿಟೆರಿ ಇನ್ಸ್ಪೆಕ್ಟರೇ ಆಗಲಿ ಮಂಜಿನ ಗಡ್ಡೆ ತಯಾರಿ ಅಥವಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಯಾವ ಸ್ಥಳವನ್ನೂ ಅದು ತೆರೆಯಲ್ಪಟ್ಟಿರುವಾಗ ಯಾವ ಕಾಲದಲ್ಲಾಗಲಿ ಪ್ರವೇಶಿಸುವದಕ್ಕೂ ಸದರಿ ಸ್ಥಳದಲ್ಲಿ ತಯಾರಾದಂಥ ಅಥವಾ ಬಿಕರಿ ಬಗ್ಯೆ ಇಟ್ಟಿರತಕ್ಕಂಥಾ ಮಂಜಿನಗಡ್ಡೆಯನ್ನೂ ಅಜಮಾಯಿಷಿ ಮಾಡುವದಕ್ಕೂ ಅಥವಾ ಅಂಥಾದರ ಮಾದರಿಯನ್ನ ತೆಗದುಕೊಳ್ಳುವದಕ್ಕೂ ನ್ಯಾಯವಾಗಿರತಕ್ಕದ್ದು. ಮತ್ತು ಅಂಥಾ ಮಾದರಿಯನ್ನು ತೆಗೆದುಕೊಳ್ಳುವದಕ್ಕೆ ಅಪ್ಪಣೆ ಕೊಡಲು ತಿರಸ್ಕರಿಸುವಂಥಾ ಅಂಥಾ ಸ್ಥಳದ ಸ್ವಾಧೀನಗಾರನಾಗಲಿ ಅಥವಾ ಯಜಮಾನನಾಗಲಿ ಒಂದು ಅಪರಾಧಕ್ಕೆ ಒಳಪಡುವನು (ತಪ್ಪಿತಸ್ಥನಾಗುವನು) ಅಂಥಾ ಮಾದರಿಯು ಗೌರ್ನಮೆಂಟು ಕೆಮಿಕಲ್ ಎಗ್ಜಾಮಿನರ್ ಮತ್ತು ಬ್ಯಾಕ್ಟೀರಿಯಾಲೊಗಿಸ್ಟ್ ಯವರಿಗೆ ಕಡ್ಡೆ ಕಳುಹಿಸಲ್ಪಟ್ಟು ಅಂಥಾ ಮಾದರಿಯು ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ಅವರಿಂದ ಕೊಡಲ್ಪಡುವ ಸರಟಫಿಕೇಟಿನಿಂದ ತಿಳಿಯಬಂದಲ್ಲಿ ಈ ಬಗ್ಯೆ ವಿರೋಧವನ್ನ ಸಿದ್ಧಾಂತಪಡಿಸುವವರಿಗೂ ಅದು ಹಾಗೆ ಅಯೋಗ್ಯವೆಂಬುವದಕ್ಕೆ ಅದೇ ತಕ್ಕ ರುಜುವಾತಾಗಿರತಕ್ಕದ್ದು. ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ರುಜುವಾತಾಗಿರುವ ಮಾದರಿಯು ಯಾವ ಸ್ಥಳದಿಂದ ತರಲ್ಪಟ್ಟಿತೋ ಅಂಥಾ ಮಂಜಿನ ಗಡ್ಡೆ ತಯಾರಿ ಯಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಸ್ಥಳದ ಯಜಮಾನನು ಅಥವಾ ಕಾರ್ಯನಿರ್ವಾಹಕನು ಒಂದು ಅಪರಾಧ ನಡಿಸಿದವನಾಗುವನು (ತಪ್ಪಿತಸ್ಥನಾಗುವನು).

(2) ಸೋಡಾ ವಾಟರ ಲಿಮನೇಡಯಾನ ಎರೇಟೆಡ ವಾಟರ್ಸನ ಕಾರ್ಖಾನೆ ಬಗ್ಯೆ.

(a) ಎರೇಟೆಡ ವಾಟರ್ಸ ತಯಾರಿ ಮಾಡುವ ಬಗ್ಯೆ ಉಪಯೋಗಿಸುವ ನೀರು ವಿಶಿಷ್ಟವು ಅದು ಹಾಗೆ ಉಪಯೋಗಿಸಲ್ಪಡುವದಕ್ಕೆ ಮುಂಚಿತವಾಗಿ ಕುದಿಸಲ್ಪಟ್ಟಿರಬೇಕು. ಮತ್ತು ಅಂಥಾ ನೀರು ತಣ್ಣಗಾಗುವ ವೇಳೆ ಆಗನ್ನು ಲಾಯಖಾದ ಮುಚ್ಚಳವುಳ್ಳ ಪಾತ್ರೆಯಲ್ಲಿ ಇಡಲ್ಪಟ್ಟಿರಬೇಕು.

(b) ಕುದಿಸಿದ ನಂತರ ನೀರು ಶೋಧಿಸಬೇಕಾಗಿದ್ದಲ್ಲಿ ಶೋಧಿಸುವ ಪಾತ್ರೆಗಳು ಮತ್ತು ಸಾಮಾನುಗಳು ಪ್ರೆಸಿಡೆಂಟರವರು ಅಪ್ಪಣೆ ಕೊಡುವ ಪ್ರಕಾರ ಮತ್ತು ಕಾಲಗಳಲ್ಲಿ ಕ್ರಿಮಿ ಸೇರದಂತೆ ಶುದ್ಧಿಮಾಡಬೇಕು.

(c) ಶೀಸೆ ಯಾ ಬುಡ್ಡಿಗಳನ್ನು ತೊಳೆಯಲು ಉಪಯೋಗಿಸಲ್ಪಡುವ ನೀರು ವಿಶಿಷ್ಟ ಮುಚ್ಚಲ್ಪಟ್ಟ ಕಬ್ಬಿಣ ಪಾತ್ರೆಗಳಲ್ಲಿ ದಾಸ್ತಾ ಮಾಡಲ್ಪಟ್ಟಿರಬೇಕು. ಮತ್ತು ಅಂಥಾ ನೀರೂ ಉಪಯೋಗಿಸುವದಕ್ಕೆ ಮುಂಚೆ ಪ್ರೆಸಿಡೆಂಟರವರಿಂದ ಅಪ್ಪಣೆ ಕೊಡುವ ಮೇರಿಗೆ ಪರಮಾಂಗನೇಟ್ ಆಫ್ ಪೊಟಾಶಿಯಂ ಎಂಬ ಉಪ್ಪಿನಿಂದ ಶುದ್ಧಿ ಮಾಡಲ್ಪಡತಕ್ಕದ್ದು.

(d) ಎರೇಟೆಡ ವಾಟರ್ಸ ತಯಾರ್ರ್ಮಾಡುವ ಕೋಡಿಯು ಕ್ರಮವಾದ ಛಾವಣಿವುಳ್ಳದ್ದಾಗಿರಬೇಕು, ನಿರ್ಮಲವಾಗಿಟ್ಟಿರಬೇಕು. ಮತ್ತು ಒಳ್ಳೆ ರಿಪೇರಿ ಆದ ಸ್ಥಿತಿಯಲ್ಲಿರತಕ್ಕದ್ದು ಗೋಡೆಗಳು ಗಾರೆಯಿಂದ ಗಿಲಾವ ಮಾಡಲ್ಪಟ್ಟಿರಬೇಕು. ಮತ್ತು ಮೂರು ತಿಂಗಳಿಗೊಂದಾವರ್ತಿಯಾದರು ಸುಂಣ ಬಳಿಸಲ್ಪಟ್ಟಿರತಕ್ಕದ್ದು. ನೀರು ನೆಲದಲ್ಲಿ ನಿಲ್ಲದಂತೆ ನೆಲಕ್ಕೆ ಶಿಮೆಂಟುಗಾರೆ ಅಥವಾ ಹೆಂಚು ಅಥವಾ ಕಲ್ಲೂ ಹಾಕಲ್ಪಟ್ಟಿರಬೇಕು. ಮತ್ತು ನೀರು ಕ್ರಮವಾಗಿ ಹರಿದು ಹೋಗುವಂತೆ ಏರ್ಪಡಿಸಿರಬೇಕು.

(e) ಎರೇಟೆಡ್ಡು ವಾಟರ್ಸ ತಯಾರಿ ಬಗ್ಯ್ಯೂ ಮತ್ತು ಬುಡ್ಡಿಗಳನ್ನು ತೊಳೆಯುವ ಬಗ್ಯ್ಯೂ ಉಪಯೋಗಿಸಲ್ಪಡುವ ನೀರು, ಪ್ರೆಸಿಡೆಂಟರವರಿಂದ ಮಂಜೂರ್ರ್ಮಾಡಲ್ಪಡುವ ಸಳದಿಂದಲೇ ತರಲ್ಪಡತಕ್ಕದ್ದು.

(f) ಅಂಥಾ ನೀರು, ಪ್ರೆಸಿಡೆಂಟರವರಿಂದ ಮಂಜೂರ್ರ್ಮಾಡಲ್ಪಡದ ಏಕಾಲೆಯಲ್ಲಾಗಲಿ ಅಥವಾ ಇತರ ಇನ್ಯಾವ ಪಾತ್ರೆಯಲ್ಲಾಗಲಿ ತರಲ್ಪಡಕೂಡದು.

(g) ಅಂಥಾ ನೀರನ್ನು ತರಲು ನೇಮಿಸಲ್ಪಡತಕ್ಕ ಭಂಡಿಗಳು ಆ ಆವರ್ಣದಲ್ಲಿ ಇಡಲ್ಪಟ್ಟಿರಬೇಕು. ಅಂಥಾ ಕಾರ್ಖಾನೆಯ ವಿಳಾಸವು ನೀರಿನ ಪಿಪಾಯಿ ಮೇಲೆ ಬಣ್ಣದಿಂದ ಬರೆಯಲ್ಪಟ್ಟಿರಬೇಕು. ಮತ್ತು ಅಂಥಾ ಭಂಡಿಗಳನ್ನೂ ಸರ್ವಕಾಲದಲ್ಲೂ ಸರಿಯಾದ ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು.

(h) ಕಾರ್ಖಾನೆಯ ಆವರ್ಣವು ಮತ್ತು ತಯಾರು ಮಾಡಲು ಉಪಯೋಗಿಸಲ್ಪಡುವ ಅಜಬಾಬುಗಳು ಪ್ರೆಸಿಡೆಂಟರವರಿಂದಾಗಲಿ ಹೆಲ್ತ ಆಫಿಸರವರಿಂದಾಗಲಿ ಅಥವಾ ಇನ್ಯಾವ ಮ್ಯುನಿಸಿಪಲ್ ಆಫಿಸರವರಿಂದಾಗಲಿ ನ್ಯಾಯವಾದ ಕಾಲಗಳಲ್ಲಿ ಅಜಮಾಯಿಷಿ ಮಾಡಲು ತೆರೆಯಲ್ಪಟ್ಟಿರಬೇಕು.

(i) ಕಾರ್ಖಾನೆಯ ಯಜಮಾನನ ಪೂರಾ ಹೆಸರು ಮತ್ತು ವಿಳಾಸ, ನಮೂದುಳ್ಳ ಕ್ರಮವಾದ ಲೇಬಿಲ (ಚೀಟಿ) ಯನ್ನು ಪ್ರತಿ ಬುಡ್ಡಿಯ ಮೇಲೆ ಹಚ್ಚಿಸದೆ ಯಾವ ತರಹೇ ಎರೇಟೆಡ ನೀರೂ ಕಾರ್ಖಾನೆಯಿಂದ ಕೊಡಲ್ಪಡಕೂಡದು.

ಹೆಲ್ತ ಆಫಿಸರೇ ಆಗಲಿ ಅಥವಾ ಯಾವ ಮ್ಯುನಿಸಿಪಲ್ ಸ್ಯಾನಿಟೆರಿ ಇನ್ಸ್‌ಪೆಕ್ಟರೇ ಆಗಲಿ ಎರೇಟೆಡ ವಾಟರ್ಸ ತಯಾರಿ ಅಥವಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಯಾವ ಸ್ಥಳವನ್ನೂ ಅದು ತೆರೆಯಲ್ಪಟ್ಟಿರುವಾಗ ಯಾವ ಕಾಲದಲ್ಲಾಗಲಿ ಪ್ರವೇಶಿಸುವದಕ್ಕೂ ಸದರಿ ಸ್ಥಳದಲ್ಲಿ ತಯಾರಾದಂಥಾ ಅಥವಾ ಬಿಕರಿ ಬಗ್ಯೆ ಇಟ್ಟಿರುವ ಎರೇಟಡ ವಾಟರ್ಸನ್ನು ಅಜಮಾಯಿಷಿ ಮಾಡುವದಕ್ಕೂ ಅಥವಾ ಅಂಥಾದರ ಮಾದರಿಯನ್ನು ತೆಗೆದುಕೊಳ್ಳುವದಕ್ಕೂ ನ್ಯಾಯವಾಗಿರತಕ್ಕದ್ದು. ಮತ್ತು ಅಂಥಾ ಮಾದರಿಯನ್ನು ತೆಗದುಕೊಳ್ಳಲು ಅಪ್ಪಣೆ ಕೊಡಲು ತಿರಸ್ಕರಿಸುವ ಅಂಥಾ ಸ್ಥಳದ ಸ್ವಾಧೀನಗಾರನಾಗಲಿ ಅಥವಾ ಯಜಮಾನನಾಗಲಿ ಒಂದು ಅಪರಾಧಕ್ಕೆ ಒಳಪಡುವನು (ತಪ್ಪಿತಸ್ಥನಾಗುವನು) ಅಂಥಾ ಮಾದರಿಯು ಗೌರ್ನಮೆಂಟ ಕೆಮಿಕಲ ಎಗ್ಜಾಮಿನರ ಮತ್ತು ಬ್ಯಾಕ್ಟೆರಿಯಾಲೊಗಿಸ್ಟು ಯವರಿಗೆ ಕೂಡ್ಲೆ ಕಳುಹಿಸಲ್ಪಟ್ಟು ಅಂಥಾ ಮಾದರಿಯು ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ಅವರಿಂದ ಕೊಡಲ್ಪಡುವ ಸರಟಿಫಿಕೇಟಿನಿಂದ ತಿಳಿಯಬಂದಲ್ಲಿ ಈ ಬಗ್ಯೆ ವಿರೋಧವನ್ನ ಸಿದ್ಧಾಂತಪಡಿಸುವವರಿಗೂ ಅದು ಹಾಗೆ ಅಯೋಗ್ಯವೆಂಬುವದಕ್ಕೆ ಅದೇ ತಕ್ಕ ರುಜುವಾತ್ತಾಗಿರತಕ್ಕದ್ದು. ಮನುಷ್ಯ ಆಹಾರಕ್ಕೆ ಅಯೋಗ್ಯವೆಂದು ರುಜುವಾತ್ತಾಗಿರುವ ಯಾವ ಸ್ಥಳದಿಂದ ತರಲ್ಪಟ್ಟಿತೋ ಅಂಥಾ ಎರೇಟೆಡ ವಾಟರ್ಸ ತಯಾರಿ ಯಾ ಬಿಕರಿ ಮಾಡಲು ಉಪಯೋಗಿಸಲ್ಪಡುವ ಸ್ಥಳದ ಯಜಮಾನನು ಅಥವಾ ಕಾರ್ಯ ನಿರ್ವಾಹಕನು ಒಂದು ಅಪರಾಧ ನಡಿಸಿದವನಾಗುವನು. (ತಪ್ಪಿತಸ್ಥನಾಗುವನು).

ಮುಂಜಿನಗೆಟ್ಟೆ ಕಾರ್ಖಾನೆಗಾಗಲಿ ಅಥವಾ ಎರೇಟೆಡ ವಾಟರ್ಸ ಕಾರ್ಖಾನೆಗಾಗಲಿ ಈ ಉಪನಿಬಂಧನೆ ಮೇರಿಗೆ ಕೊಡಲ್ಪಡುವ ಲೈಸೆನ್ಸಿನ ಯಾವ ಷರತ್ತಿಗಾಗಲಿ ತಪ್ಪಿ ನಡಕೊಂಡಲ್ಲಿ ಅಂಥಾ ಲೈಸೆನ್ಸು ಹೊಂದಿರುವ ಮನುಷ್ಯನು ಮತ್ತು ಲೈಸೆನ್ಸು ಕೊಡಲ್ಪಟ್ಟಿರುವಂಥಾ ಸ್ಥಳದ ಸ್ವಾಧೀನಗಾರನು ಸಹ ತಪ್ಪು ಸ್ಥಾಪನೆಯಿಂದ 20 ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಗುರಿಯಾಗುವರು ಮತ್ತು ಆಮೇಲೆ ಅದನಂತರ ಮೇಲ್ಕಂಡ ಷರತ್ತುಗಳಿಗೆ ತಪ್ಪಿ ನಡಕೊಂಡ ಪ್ರತಿದಿನಕ್ಕೂ 5 ರೂಪಾಯಿ ವರಿವಿಗೂ ಜುಲ್ಮಾನೆ ತೆರಲು ಗುರಿಯಾಗುವರು.

ಬಿ. ಕೃಷ್ಣರಾವ್,
ಹೆಲ್ತ ಆಫಿಸರ.

ನೋಟಿಸ.

ತಾರೀಖು 17ನೆ ಏಪ್ರೈಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸರ್ 1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ 64—65ನೆ ನಂಬರು ಸೆಕ್ಷನ್ ಪ್ರಕಾರ ಒಂದು ವರುಷದ ಒಳಗೆ ಊರಿನ ಅನೇಕ ಭಾಗಗಳಲ್ಲಿ ನೂತನವಾಗಿ ಕಟ್ಟಿ ಅಭಿವೃದ್ಧಿಯಾಗಿರುವ ಕಟ್ಟಡಗಳ ಪ್ರದೇಶ ಮತ್ತು ಅಂಗಡಿಗಳ ಅಂದಾಜು ಮತ್ತು ಕಂದಾಯ ನಿಷ್ಕರ್ಷೆಯು ಪೂರೈಸಿರುತ್ತೆ. ಮ್ಯುನಿಸಿಪಲ್ ಕಲೆಕ್ಟರ್ ಇಲಾಖೆಯಲ್ಲಿ ಆಸಕ್ತರಾದ ಜನಗಳಿಗೆ ನೋಡುವದಕ್ಕೋಸ್ಕರ ಕಂದಾಯ ನಿಷ್ಕರ್ಷೆ ಪುಸ್ತಕಗಳು ಕಚೇರಿ ದಿನಗಳಲ್ಲಿ ಮತ್ತು ಕಚೇರಿ ತೆರದಿರುವ ಕಾಲದಲ್ಲಿ ದೊರಿಯುತ್ತವೆ. ಈ ಕೆಳಗೆ ನಮೂದಾಗುವ ಮೇರೆ ಆಯಾದಿನ ಮತ್ತು ಕಾಲಗಳಲ್ಲಿ ಮೇಲೆ ನಮೂದಿಸಿರುವ ಅಂದಾಜ ಮತ್ತು ಕಂದಾಯ ನಿಷ್ಕರ್ಷೆಯನ್ನು ವೈಸ್ ಪ್ರೆಸಿಡೆಂಟರು ಪುನರ್ವಿಮರ್ಶೆ ಮಾಡುವರು. ಆಯಾಯ ಡಿವಿಜನ್‌ಗೆ ನಿರ್ಧರಿಸಿರುವ ತಾರೀಖಿಗೆ 3 ದಿನ ಮುಂಚಿತವಾಗಿ ಪುನರ್ವಿಮರ್ಶೆಗಾಗಿ ಬರುವ ದರಖಾಸ್ತುಗಳು ಸ್ವೀಕರಿಸಲ್ಪಡುತ್ತವೆ.

ನಂಬರ ನಂ.	ಡಿವೀಜನ್‌ಗಳ ಹೆಸರು.	ಗೊತ್ತುಮಾಡಿರುವ ತಾರೀಖು.	ಕಾಲ.
1	ಪ್ಯಾಲೆಸ್ ಡಿವೀಜನ್ ...	1909ನೆ ಮೇ 25ನೆ ಮಂಗಳವಾರ ...	$7\frac{1}{2}$ ಇಂದ $9\frac{1}{2}$ ವರಿವಿಗೆ
2	ಬಳೇಪೇಟೆ ಡಿವೀಜನ್ ...	ಡಿಟೋ 28ನೆ ಶುಕ್ರವಾರ ...	ಡಿಟೋ
3	ಮನವರ್ತಿಪೇಟೆ ಡಿವೀಜನ್ ...	ಡಿಟೋ 31ನೆ ಸೋಮವಾರ ...	ಡಿಟೋ
4	ಹಲಸೂರುಪೇಟೆ ,, ...	1909ನೆ ಜೂನ್ 2ನೆ ಬುಧವಾರ ...	ಡಿಟೋ
5	ನಗರ್ತಪೇಟೆ ,, ...	ಡಿಟೋ 4ನೆ ಶುಕ್ರವಾರ ...	ಡಿಟೋ
6	ಲಾಲ್‌ಬಾಗ್ ,, ...	ಡಿಟೋ 7ನೆ ಸೋಮವಾರ ...	ಡಿಟೋ
7	ಕೋಟೆ ಮತ್ತು ಚಾಮರಾಜಪೇಟೆ ಡಿ॥	ಡಿಟೋ 9ನೆ ಬುಧವಾರ ...	ಡಿಟೋ
8	ಬಸವನಗುಡಿ ಡಿವೀಜನ್ ...	ಡಿಟೋ 11ನೆ ಶುಕ್ರವಾರ ...	ಡಿಟೋ
9	ಮಲ್ಲೇಶ್ವರ ಡಿವೀಜನ್ ...	ಡಿಟೋ 14ನೆ ಸೋಮವಾರ ...	ಡಿಟೋ

ಎನ್. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ತಾರೀಖು 19ನೆ ಮಾರ್ಚಿ 1909.

ಪ್ರಕಟನ ಪತ್ರಿಕಾ.—ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಅರಗದ ಕಸಬಾದಲ್ಲು ಇರುವ ಶೀತವಮ್ಮ ಕೋಂ ನಾಗಾಭಟ್ಟ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನಂದರೆ :—

ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಹಿರೆಗದ್ದೆ ಮತ್ತು ಅರಗ ಈ ಎರಡು ಗ್ರಾಮಗಳಲ್ಲಿ ಶೀತವಮ್ಮ ಕೋಂ ನಾಗಾಭಟ್ಟ ಎಂತ ನನ್ನ ಹೆಸರು ಖಾತೆ ಮತ್ತು ಅನುಭವ ಇರತಕ್ಕ ಮತ್ತು ಅಗ್ರಹಾರದ ಹೋಬಳಿ ಜಂಬೆತಲೂರು ಗ್ರಾಮದ ಮಜರೆ ಕುದುರೆಗೋಡಲ್ಲು ಕೋಲಹಳ್ಳಿ ಸುಬ್ಬರಾಯನ ಖಾತೆ ಪೈಕಿ ನನ್ನ ಹಿಸ್ಸೆ ನನ್ನ ಅನುಭವದಲ್ಲಿರತಕ್ಕ ಪಿಶಿಷ್ಟ ಜಮೀನುಗಳ ಆಧಾರದಮೇಲೆ ಆಗಲಿ, ಅರಗದಪ್ಯಾಟೆಯಲ್ಲಿರುವ ನನ್ನ ಬಾಬತು ಕಾಂಪೌಂಡು ಹಿತ್ತಲು ವಗೈರೇವುಗಳಿಂದ ಕೂಡಿರುವ ಹಂಚಿನಮನೆ ನನ್ನ ಇತರ ಚರ ಆಸ್ತಿಗಳ ಆಧಾರದಮೇಲೆ ಆಗಲಿ ನನ್ನ ಕಡೆಯವನಾಗಿ ನನ್ನ ಪೋಷಣೆಯಲ್ಲಿರತಕ್ಕ ಅಕ್ರಮ ನಡವಳಿತೆಯಲ್ಲಿ ಬಹು ದಿವಸಗಳಿಂದಲೂ ಇರತಕ್ಕ ಶಾಮಭಟ್ಟ ಬಿನ್ ನಾಗಭಟ್ಟ ಹಂಣೆಗಾರಿ ಈತನು ನನ್ನ ಮರಣಾವಧಿ ನನ್ನ ಒಪ್ಪಿಗೆ ಇಲ್ಲದೆ ಈವರಿಗೂ ಮಾಡಿರುವ ಇನ್ನು ಮುಂದೆ ಮಾಡಬಹುದಾದ ಎಲ್ಲಾವಿಧವಾದ ಸಾಲ ವಗೈರೇವುಗಳು ನಾನು ಈತಗೆ ಯಾವವಿಧವಾದ ಹಕ್ಕನ್ನು ತಹಲ್‌ವರಿಗೂ ನನ್ನ ಆಸ್ತಿ ವಿಷಯದಲ್ಲಿ ಕೊಡದೇ ಇರುವದರಿಂದ ಎಷ್ಟುರಮಟ್ಟಿಗೂ ಸ್ವಲ್ಪವೂ ಲಗಾವ ಆಗತಕ್ಕದ್ದಲ್ಲವಾಗಿವೆ. ಈ ಅಕ್ರಮ ನಡವಳಿತೆಯಲ್ಲಿರುವ ಸದರಿ ಶಾಮಭಟ್ಟಗೆ ಯಾರೊಬ್ಬರೂ ನನ್ನ ಈ ಮೇಲೆ ನಮೂದಿಸಿದ ಆಸ್ತಿಗಳ ಆಧಾರದಮೇಲೆ ಸಾಲಾ ವಗೈರೆ ಕೊಡಕೂಡದೆಂದು ಶೀತವಮ್ಮ ಕೋಂ ನಾಗಾಭಟ್ಟನಾದ ನಾನು ಈ ಮೂಲಕ ಪ್ರಸಿದ್ಧಪಡಿಸಿರುತ್ತೇನೆ.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪ್ಟೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಷ ಮಾಹೇ ಯಾ ಕ್ವಾರ್ಟರಿಗೆ			ದಾಮೂಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲ್ತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಸ್ಕಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ 21ನೆ ಮರ್ಸ್ಕಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟ 21ನೆ ಮರ್ಸ್ಕಂ 2633—41 ಮಿಸ. 558ನೆ ನಂಬರ ಗವರ್ನಮೆಂಟ ಪ್ರೊಸೀಡಿಂಗ್ಸ ಅನುಸರಿಸಿ ಮೈಸೂರು ದಸರಾ ರೆಪ್ರಜೆಂಟೇಟಿವ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ ಅಥವಾ ಕನ್ನಡ ಗೆಜೆಟ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

			ರೂ.	ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು :—				
ಮೊದಲನೇ ದಫೆ ಛಾಯಿಷ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ		..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ		..	1	4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಯೆ ನೋಟಿಸಗಳಿಗೆ :—				
ಮೊದಲನೇ ಸಲಕ್ಕೆ		..	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ		..	2	8

ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರ ಚಾರ್ಜು ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—				
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,		5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜು ಮಾಡಲ್ಪಡುತ್ತೆ:—				
ಮೊದಲನೇ ದಫೆ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	..	0	8
ಎರಡನೇ ದಫೆ ಡಿಟೋ	ಡಿಟೋ		0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ			0	4

ಷರಾ.—ಗೆಜೆಟ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಆದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಕಂಪೈಲರ, ಮೈಸೂರು ಗೆಜೆಟ.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಛಾಪಾಯಿಷ್ ಆದ್ದು. [ನಂ. 17.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 29, ಸನ್ 1909.

II ನೆ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೈಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗೆದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಎಕ್ಸೈಜ್ ಇಲಾಖೆ.

ಇಸ್ತಿಹಾರನಾಮೆ.

ಅಬ್ಕಾರಿ ಮತ್ತು ಅಫೀಮಿಗೆ ಸಮ್ಮಂಧಪಟ್ಟ ಬಟ್ಟು ಸ್ವಾತಂತ್ರ್ಯದ ಹರಾಜು ನೋಟೀಸು.

ನಂಬರ್ 9011, ಬೆಂಗಳೂರು, 7ನೆ ಏಪ್ರೆಲ್ 1909.

I. ನಿಯಾಮಕವಾದ ಮತ್ತು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಅಂಗಡಿಗಳಲ್ಲಿ ಷರಾಬು, ಮದಕ ಪದಾರ್ಥಗಳು ಮತ್ತು ಅಫೀಮನ್ನು 1909ನೆ ಇಸವಿ ಜುಲೈ ಗುರ್ರೆ ಲಾಗಾಯತು 1910ನೆ ಇಸವಿ ಜೂನ್ 30 ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಬಿಕರಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಬಳಪಟ್ಟು ಡೆಪ್ಯುಟಿ ಕಮಿಷನರವರು ಯಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರವರು ಯಾ ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರು ಯಾ ಡೆಪ್ಯುಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರು ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಆ ತಃಖ್ತೆಯಲ್ಲಿ ನಮೂದುಕಂಡ ತಾಲ್ಲೂಕ್ ಯಾ ಸಬ್ ತಾಲ್ಲೂಕ್ ಕಸಬಾಗಳಲ್ಲಿ ಹರಾಜುಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿರುತ್ತೆ. ಹರಾಜುಗಳು ನೇಮಿಸಲ್ಪಟ್ಟ ತಾರೀಖುಗಳಲ್ಲಿ ಪೂರೈಸದೆಹೋದಲ್ಲಿ ಮಾರನೇ ದಿವಸಗಳಲ್ಲಿಯೂ (ರಜಾದಿವಸಗಳು ಹೊರತಾಗಿ) ಹಾಕಲ್ಪಡುವವು.

ಹರಾಜಿನ ಷರತ್ತುಗಳು.

II. ಪ್ರತಿ ಸವಾಲ್‌ದಾರನೂ ಹರಾಜಿಗೆ ಪೂರ್ವವೇ ಠೇವಣಾತಿಯನ್ನು ಕಟ್ಟತಕ್ಕದ್ದು ಮತ್ತು ಹರಾಜಿನ ತಾರೀಖಿನ ದಿವಸ ಹರಾಜು ಮಾಡುವ ಆಫಿಸರಿಂದ ಸದರಿ ಠೇವಣಿ ಮೊಬಲಗು ತೆಗದುಕೊಳ್ಳಲ್ಪಡುವದು. ಯಾವ ಮನುಷ್ಯನೂ ಮುಖ್ಯವಾದ ಅಂಗಡಿ ಯಾ ಅನೇಕ ಅಂಗಡಿಗಳಿಗಾಗಿ ಸವಾಲ್ ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅಂಥಾವನು ಸಾಧಾರಣವಾಗಿ 50 ರೂಪಾಯಿ ಠೇವಣಿಯನ್ನಿಡತಕ್ಕದ್ದು. ಸವಾಲು 2 ಯಾ 3 ಅಂಗಡಿಗಳಿಗೆ ಮೀರದೆಯೂ ಮತ್ತು ಅವುಗಳ ಮಾಹೆಯಾನ ಬಟ್ಟು ಗುತ್ತಾ ಮೊಬಲಗು 50 ರೂಪಾಯಿ ಅಥವಾ ಅದಕ್ಕೆ ಕಮ್ಮಿಯಾಗಿಯೂ ಇದ್ದಪಕ್ಷದಲ್ಲಿ ಸವಾಲುದಾರನ ಠೇವಣಿಯು 20 ರೂಪಾಯಿಗಳಿಗೆ ತಗ್ಗಿಸಲ್ಪಡುವದು ಮತ್ತು ಒಂದೊಂದು ಚಿಕ್ಕ ಅಂಗಡಿಗೆ ದರಖಾಸ್ತು ಮಾಡುವ ಸವಾಲ್‌ದಾರರ ಠೇವಣಿಯು 5 ರೂಪಾಯಿಗೆ ತಗ್ಗಿಸಲ್ಪಡುವದು. ಯಾವದಾದರೂ ಅಂಗಡಿಗಳ ಮಾಹೆಯಾನ ಸರಾಸರಿ ಗುತ್ತಾ ಮೊಬಲಗು ಕೇವಲ ಕಮ್ಮಿಯಾಗಿದ್ದಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರು ಸದರಿ ಅಂಗಡಿಗಳ ಬಗ್ಯೆ ತಮ್ಮ ಯುಕ್ತಾನುಸಾರ ಇತರ ನ್ಯಾಯವಾದ ಠೇವಣಿ ಮೊಬಲಗನ್ನು ಗೊತ್ತುಮಾಡಬಹುದು.

III. ಹರಾಜು ನಡಿಸತಕ್ಕ ಆಫಿಸರರಿಗೆ ಷೆಡ್ಯೂಲ್‌ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಕ್ರಮ ನಂಬರನ್ನು ಬದಲಾಯಿಸಲು ಕಾರಣ ತೋರುವ ಸಂದರ್ಭದಲ್ಲಿ ಹೊರತು ಆ ಪಟ್ಟಿಯಲ್ಲಿ ಕಂಡ ಕ್ರಮ ನಂಬರಿನಂತೆಯೇ ಅಂಗಡಿಗಳನ್ನು ಹರಾಜು ಮಾಡತಕ್ಕದ್ದು. ಹರಾಜು ನಡಿಸತಕ್ಕ ಆಫಿಸರರು ತಮಗೆ ಯುಕ್ತ ತೋರುವಂತೆ ಸರ್ಕಾರದ ಸವಾಲನ್ನು ಗೊತ್ತುಮಾಡತಕ್ಕದ್ದು. ಅಂಗಡಿಗಳಮೇಲೆ ಸರ್ಕಾರದಿಂದ ನಿಷ್ಕರಿಷೆ ಮಾಡಲ್ಪಟ್ಟ ಮೊಬಲಗನ್ನು ಫಾಯಿಷ್ ಮಾಡುವದಿಲ್ಲ; ಆದರೆ ಸವಾಲುದಾರರ ತಿಳುವಳಿಕೆ ಬಗ್ಯೆ ಹಿಂದಿನ ಮೂರು ಸಾಲುಗಳ ಗುತ್ತಾ ಮೊಬಲಗೂ, ಬಿಕರಿಯ ಮೊತ್ತವೂ ಫಾಯಿಷ್ ಮಾಡಲ್ಪಡುವದು.

ಷರಾ—1. ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಕೇಂದಿ ಮಾರ ಕ್ಕ ಹಕ್ಕು ಒಂದೊಂದು ಅಂಗಡಿಗೆ ವರುಷ 1ಕ್ಕೆ 12 ರೂಪಾಯಿಗೆ ಕಮ್ಮಿ ಇಲ್ಲದಂತೆ ಗೊತ್ತಾದ ಮೊಬಲಗ್ಗೆ ಕಾಫಿಪ್ಲಾಂಟರಿಗೆ ಮಾರಲ್ಪಡಬಹುದು.

ಷರಾ—2. ಕೇಂದಿ ಹುಟ್ಟುವಳಿಗೆ ಇರತಕ್ಕ ಹಕ್ಕು ಮಂಜೂರಾಗಿರುವ ಅಥವಾ ಇನ್ನೂ ತೀರ್ಮಾನವಾಗಿಲ್ಲದೆ ಇರುವ ಇನಾಂ ಗ್ರಾಮಗಳಲ್ಲಿರತಕ್ಕ ಕೇಂದಿ ಅಂಗಡಿಗಳು ಪ್ರತ್ಯೇಕವಾಗಿಯೇ ಹರಾಜ್ ಮಾಡಲ್ಪಡಬೇಕಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗನ್ನು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

IV. ಸಾಧಾರಣವಾಗಿ ಪ್ರತಿಯೊಂದು ಅಂಗಡಿಯೂ ಪ್ರತ್ಯೇಕವಾಗಿ ಹರಾಜು ಮಾಡಲ್ಪಡತಕ್ಕದ್ದು. ನಿರ್ವಾಹವಿಲ್ಲದೇ ಇರುವ ಸಂದರ್ಭದಲ್ಲಿ ಮಾತ್ರವೇ ಅಂಗಡಿಗಳನ್ನು ಗುಂಪಾಗಿ ಸೇರಿಸಬಹುದು. ಆದರೆ ಹಾಗೆ ಗುಂಪಾಗಿ ಸೇರಿಸುವಾಗಲೂ ಆಗಿನ ಸಂದರ್ಭಕ್ಕೆ ಎಷ್ಟು ಅಂಗಡಿಗಳನ್ನು ಸೇರಿಸುವದು ಆವಶ್ಯಕವಾಗಿದೆಯೋ ಅಷ್ಟನ್ನು ಮಾತ್ರವೇ ಗುಂಪು ಸೇರಿಸತಕ್ಕದ್ದು.

V. ಮೊಖ್ತ್ಯಾರನಾಮೆಯನ್ನು ಪಡೆದ ಹೊರತು ಯಾರೊಬ್ಬನೂ ಇತರರಿಗೋಸ್ಕರ ಸವಾಲು ಮಾಡಕೂಡದು.

VI. ಯಾವ ಅಂಗಡಿಯೂ ಇಬ್ಬರು ಆಸಾಮಿಗಳ ಯಾ ಇಬ್ಬರಿಗಿಂತ ಹೆಚ್ಚಾದ ಆಸಾಮಿಗಳ ಹೆಸರಿನಲ್ಲಿ (ಸದರಿಯವರು ಮೊಖ್ತ್ಯಾರನಾಮೆಯ ಮೂಲಕ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರ್ಮಿನವರೆಂದು ತೋರಿಸಿದಹೊರತು) ಛಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ನಡಿಸತಕ್ಕ ಆಫಿಸರರು ಯಾರ ಹೆಸರಿನಿಂದ ಸವಾಲ್ ಬರದಿರುವದಿಲ್ಲವೋ ಅತನನ್ನು ಕೊಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

VII. ಯಾವನಾದರೊಬ್ಬ ಮನುಷ್ಯನ ಸವಾಲು ಕೇವಲ ಕಮ್ಮಿಯಾಗಿದೆ ಎಂಬ ಕಾರಣದಮೇಲೂ, ಅಥವಾ ಕ್ರಿಮಿನೆಲ್ ಕೋರ್ಟಿನಲ್ಲಿ ದರಿಯಾಫ್ತಿಯಾಗಿ ಆತನ ಮೇಲೆ ತಪ್ಪು ಸಾಬೀತು ಆಗಿರುವದ್ದರಿಂದಲೂ, ಅಥವಾ ಒಂದು ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗೆ ಅನುಸಾರವಾಗಿ ನಡೆಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಆತನು ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ಯಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜ್ ನಡಿಸತಕ್ಕ ಆಫಿಸರು ಅವರಿಗೆ ಯುಕ್ತ ತೋರಿದಲ್ಲಿ ಅಂಥಾ ಮನುಷ್ಯನ ಸವಾಲನ್ನು ತಿರಸ್ಕರಿಸಬಹುದು. ಸದರೀ ಸ್ವಾತಂತ್ರ್ಯದ ಹಕ್ಕನ್ನು ಇತರರಿಗೆ ಬಿಕರಿಮಾಡಿ ಫಾಯಿದೆ ಪಡೆಯಬೇಕೆಂಬ ಉದ್ದೇಶದಿಂದ ಮಾತ್ರವೇ ಮಾಡಲ್ಪಟ್ಟಿತೆಂದು ತೋರುವ ಸವಾಲನ್ನು ಹರಾಜು ಆಫಿಸರು ಅದಕ್ಕೆ ಕಾರಣವನ್ನು ಬರಹಮೂಲಕವಾಗಿ ರಿಕಾರ್ಡುಮಾಡಿ ತಿರಸ್ಕರಿಸಬಹುದು.

VIII. ಸದರಿ ಅಂಗಡಿಗಳು ಛಡಸವಾಲುದಾರನಿಗೆ ಕೊಡಲ್ಪಡುವವು; ಆದರೆ ಹರಾಜು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಡೆಪ್ಯುಟಿ ಕಮಿಷನರವರು ಸದರಿ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ಮಂಜೂರು ಅಥವಾ ತಳ್ಳಿಪಡಿ ಮಾಡಲು ಸ್ವತಂತ್ರವಾಗಿರುತ್ತಾರೆ. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಯಾದರೆ ಆ ಮಂಜೂರಾತಿಯು ಗವರ್ನಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಟ್ಟಾಗ ಹೊರತು ದರಖಾಸ್ತು ಅಂಗೀಕಾರವಾದಂತೆ ಭಾವಿಸಲ್ಪಡತಕ್ಕದ್ದು. ಡೆಪ್ಯುಟಿ ಕಮಿಷನರವರು ಖುದ್ದಾಗಿಯಾಗಲೀ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರರೇ ಆಗಲೀ ಹರಾಜು ನಡಿಸಿದ್ದರೂ ಅಂಥಾ ಕ್ರಮವಾದ ಮಂಜೂರಾತಿಯು ಅವಶ್ಯಕವಾಗಿರುವದು.

IX. ಹರಾಜು ಕಾಲದಲ್ಲಿ ತಕರಾರು ಬಂದ ಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರ ತೀರ್ಮಾನವು ಆಖೈರು ತೀರ್ಮಾನವಾಗಿರತಕ್ಕದ್ದು. ಮತ್ತು ಯಾವಕಾರಣದಿಂದಲಾದರೂ ಛಡ ಸವಾಲನ್ನು ತಿರಸ್ಕರಿಸಿದ ಪಕ್ಷದಲ್ಲಿ ತದನಂತರದ ಛಡಸವಾಲ್ ಅಂಗೀಕರಿಸಲ್ಪಡುವದು, ಅಥವಾ ಅಂಗಡಿಯು ಅವರ ಯುಕ್ತಾನುಸಾರ ದುಸರೆ ಹರಾಜು ಹಾಕಲ್ಪಡುವದು.

X. ಹರಾಜು ಮುಗಿದಮೇಲೆ ದರಖಾಸ್ತು ಸಾಮಾನ್ಯವಾಗಿ ಅಂಗೀಕರಿಸಲ್ಪಡುವದಿಲ್ಲ. ಮೊದಲಿನ ಹರಾಜಿನಲ್ಲಿ ವಿಕ್ರಯವಾಗದ ಅಂಗಡಿಗಳು ಸಾಧಾರಣವಾಗಿ ಆತರುವಾಯ ದುಸರೆ ಹರಾಜಿನಲ್ಲಿ ವಿಲೇವಾರಿ ಮಾಡಲ್ಪಡುವವು. ಆದರೆ ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ತಮ್ಮ ಸೂಕ್ತಾನುಸಾರ ನಡಿಸಲು ಸ್ವತಂತ್ರರಾಗಿರುತ್ತಾರೆ.

XI. ಪ್ರತಿದಿನ ಹರಾಜು ಪೂರೈಸಿದ ಕೂಡಲೆ ನಾಮಂಜೂರಾದ ಸವಾಲುದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುವವು. ಹರಾಜು ನಡೆಯುತ್ತಿರುವಾಗ, ಯಾರ ಸವಾಲು ಅಂಗೀಕರಿಸಲ್ಪಡುತ್ತೋ ಅಂಥವನು ಹರಾಜು ನಡಿಸತಕ್ಕ ಆಫಿಸರರು ಕೇಳಿದಲ್ಲಿ ತತ್‌ಕ್ಷಣವೇ ಅಥವಾ ಆ ದಿನದ ಹರಾಜು ಖೈದಾದನಂತರ (IIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಅಲ್ಲದೆ) ಒಂದು ತಿಂಗಳ ಗುತ್ತಿಗೆ ಹಣದಲ್ಲಿ ಅರ್ಧವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು 2 ತಿಂಗಳ ಗುತ್ತಿಗೆ ಹಣಕ್ಕೆ ಸಮ ಯಾ ಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲ್ಕಂಡ IIನೆ ಷರತ್ತಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರಿ ಅಂಗಡಿಗಳು ಪುನಃ ತತ್‌ಕ್ಷಣವೇ ಹರಾಜು ಆಫಿಸರವರಿಂದ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜ್ ಮಾಡಲ್ಪಡುವದು ಅಥವಾ ಡೆಪ್ಯುಟಿ ಕಮಿಷನರವರಿಂದ ಅನ್ಯಥ ವಿಲೇವಾರಿ ಮಾಡಲ್ಪಡುವದು; ಅಲ್ಲದೆ ತಪ್ಪಿತಸ್ಥನು ಈ ಅಂಗಡಿ ಯಾ ಇತರ ಅಂಗಡಿಗಳ ಬಗ್ಗೆ ಪುನಃ ಸವಾಲು ಮಾಡಲು ನಿಷೇಧಿಸಲ್ಪಟ್ಟಿರುತ್ತಾನೆ.

XII. ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಯಾರು ಮೇಲಿನ II ವ XIನೆ ಷರತ್ತುಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನು ಕಟ್ಟಿರುತ್ತಾರೋ ಅವರು, ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರುಗಳಲ್ಲಿ ಕೊಟ್ಟುಹೋಗತಕ್ಕದ್ದು. ಮತ್ತು ಅವರು 2 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನು ಮೊದಲು ಕಟ್ಟಿರುವ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು * ಠೇವಣಿಯಾಗಿ ಇಡತಕ್ಕದ್ದು. ಡೆಪ್ಯುಟಿ ಕಮಿಷನರವರ ಮಂಜೂರಾತಿಯು ನೋಟೀಸು ಮೂಲಕ ಅವರಿಗೆ ಅಥವಾ ಸದರಿ ವಿಳಾಸದ ಸ್ಥಳದಲ್ಲಿ ಅವರ ಮನೆಗಳಲ್ಲಿರತಕ್ಕ ಇತರ ವಯಸ್ಸಾದ ಗಂಡಸಿಗೆ ಖಾವತಿಯಾಗೇ ಆಗಲೀ ಅಥವಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲೀ ಜಾರಿಯಾದ ಏಳು ದಿವಸಗಳೊಳಗಾಗಿ ತಾಲ್ಲೂಕು

* ಠೇವಣಿಗಳು ನಗದಾಗಿಯೇ ಆಗಲಿ ಅಥವಾ ಅಂಗೀಕರಿಸಲ್ಪಟ್ಟ ಇತರ ಸೆಕ್ಯೂರಿಟಿ ರೂಪದಲ್ಲಿಯಾಗಲಿ ಇರಬಹುದು.

ಖಜಾನೆಗೆ ಅಂಥಾ ಠೇವಣಾತಿಗಳನ್ನು ಪಾವತಿ ಮಾಡತಕ್ಕದ್ದು. ಅನಂತರ ಅವರು ಅನಾವಶ್ಯಕವಾಗಿ ಸಾವಕಾಶಮಾಡದೆ ಅಗತ್ಯವಾದ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಲೈಸೆನ್ಸುಗಳನ್ನು ತೆಗೆದುಕೊಳ್ಳತಕ್ಕದ್ದು. ಒಡಂಬಡಿಕೆಗಳನ್ನು ರುಜುಮಾಡಿದ ಮೇಲೆ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸದಾರರು ಯಾ ಅವನಿಂದ ಹಕ್ಕು ಪಡೆದವರು ಅದಕ್ಕೆ ಜವಾಬ್‌ದಾರರಾಗಿರತಕ್ಕದ್ದು. ಪ್ರಾರಂಭದಲ್ಲಿಟ್ಟಿರತಕ್ಕ ಠೇವಣಿ ಮೊಬಲಗು ಈ ಷರತ್ತಿನಮೇರಿಗೆ ಠೇವಣಿ ಇಡಬೇಕಾಗುವ ಮೊಬಲಗಿಗಿಂತಲು ಹೆಚ್ಚಾಗಿ ಇದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಈ ಕೆಳಗೆ ಬರುವ XIIIನೆ ಷರತ್ತಿನ ಪ್ರಕಾರ 2 ರಷ್ಟು ಹೆಚ್ಚಾಗಿಠೇವಣಿಯನ್ನು ಕಟ್ಟಬೇಕಾಗಿರುವ ಸಂದರ್ಭದಲ್ಲಿ ವಿನಾ ಖರೀದಿದಾರನಿಗೆ ವಾಪಸು ಕೊಡಲ್ಪಡುವದು.

XIII. ಹರಾಜಿನನಂತರ ವಿಚಾರಿಸಿದ್ದರಲ್ಲಿ ಖರೀದಿದಾರ್ ಜೇವಾಳಸ್ಥನೆಂಬುವದು ಅನುಮಾನಕ್ಕೆ ಗುರಿಯಾಗಿಯೂ ಅಥವಾ ಅವನು ಮೈಸೂರು ಸೀಮೆಯಲ್ಲಿ ಸಾಕಾದಷ್ಟು ಜಿಂದಿಗೆಯನ್ನು ಉಂಟುಮಾಡದೆ ಇರುವ ಅನ್ಯದೇಶದವನಾಗಿಯೂ ಕಂಡುಬಂದಲ್ಲಿ ಮೇಲಿನ XIIನೆ ಷರತ್ತಿನಲ್ಲಿ ನಮೂದಿಸಿರುವದಕ್ಕೆ 2 ರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನು ಅನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನೂ ಕ್ರಮವಾಗಿ ಪಾವತಿ ಮಾಡಲುಳ್ಳವನೆಂದು ಜಾಮೀನುಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಗಳುಳ್ಳವನಾಗಿರುವ ಒಬ್ಬ ಜಾಮೀನುದಾರನನ್ನು ಯಾ ಜಾಮೀನುದಾರರನ್ನು ಹಾಜರುಮಾಡುವದಕ್ಕಾಗಿ ಆತನನ್ನು ಕೇಳಬಹುದು. ಜಾಮೀನು ತನುಸೂಕಿಗೆ 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟಾಂಪು ರೆಗ್ಯುಲೇಷನ್ 1ನೆ ಷೆಡ್ಯೂಲ್ 32ನೆ ಆರ್ಟಿಕಲ್ ಪ್ರಕಾರ ಸ್ಟಾಂಪು ಹಾಕಲ್ಪಡಬೇಕು. ಜಾಮೀನು ಮೊಬಲಗು 1,000 ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಖರೀದಿದಾರನ ಖರ್ಚಿನಿಂದಲೇ ಅದು ರಿಜಿಸ್ಟರ್ ಮಾಡಿಸಲ್ಪಡಬೇಕು.

XIV. ಹರಾಜು ಪೂರೈಸಿದಕೂಡ್ಲೆ ಹರಾಜು ನಡಸತಕ್ಕ ಆಫೀಸರರು ಸಂಬಂಧಪಟ್ಟ ತಾಲ್ಲೂಕು ಅಮಲ್ದಾರರಿಗೆ ಹರಾಜಿನಲ್ಲಿ ಪಡದ ಸವಾಲುದಾರರ ಹೆಸರಿನ ಒಂದು ಪಟ್ಟಿಯನ್ನ ಕಳುಹಿಸತಕ್ಕದ್ದು. ಅಮಲ್ದಾರರು ಪ್ರತಿ ಖರೀದಿದಾರನೂ ಜೇವಾಳಸ್ಥನೆಂಬುವದನ್ನು ವಿಚಾರಿಸಿ ಆತನಿಂದ ಪಾವತಿಯಾಗಬೇಕಾದ ಠೇವಣೀ ಮೊಬಲಗು ಅಥವಾ ಜಾಮೀನನ್ನು ದಾಖಲ್ಮಾಡತಕ್ಕದ್ದು. ಅವರು ತಯಾರು ಮಾಡಿದ ಸದರಿ ಪಟ್ಟಿಯನ್ನು ಅವರಿಗೆ ಅದು ತಲ್ಪಿದ 5 ದಿವಸಗಳೊಳಗಾಗಿ ಹರಾಜು ನಡಿಸತಕ್ಕ ಆಫೀಸರರಿಗೆ ರವಾನಿಸತಕ್ಕದ್ದು. ಇವರು ತಾಮಸ ಮಾಡದೆ ಸದರಿ ಪಟ್ಟಿಯಲ್ಲಿ ತಮ್ಮ ಷರಾನಿಸಿ ಅದನ್ನು ಮಂಜೂರಾತಿಬಗ್ಗೆ ಡೆಪ್ಯುಟಿ ಕಮಿಷನರವರಿಗೆ ರವಾನಿಸತಕ್ಕದ್ದು.

XV. ಮೇಲ್ಕಂಡ XIIನೆ ಷರತ್ತಿನ ಪ್ರಕಾರ ಠೇವಣಿ ಇಡುವದಕ್ಕೆ ಯಾ ಮೇಲ್ಕಂಡ XIIIನೆ ಷರತ್ತಿನ ಪ್ರಕಾರ ನಡದುಕೊಳ್ಳಲಿಕ್ಕೆ ಯಾ ಏದರು ಒಡಂಬಡಿಕೆಯನ್ನು ಬರದುಕೊಡಲಿಕ್ಕೆ ಯಾ ಮೇಲ್ಕಂಡಂತೆ ಲೈಸೆನ್ಸ್ ಪಡೆಯಲಿಕ್ಕೆ ಯಾವನಾದರೂ ತಪ್ಪಿದರೆ, ಅವನು ಮೊದಲು ಪಾವತಿ ಮಾಡಿರುವ ಠೇವಣಾತಿಗಳು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು, ಡೆಪ್ಯುಟಿ ಕಮಿಷನರವರಿಗೆ ಯುಕ್ತತೋರುವಂತೆ ಅಂಗಡಿಯು ಪುನಃ ಹರಾಜು ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು.

XVI. ಮೇಲ್ಕಂಡ XVನೆ ಷರತ್ತನ್ನು ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿಯಮೇಲೆ ನಡಿಯುತ್ತವೆ. ಈ ದುಸರೆ ಹರಾಜಿನಿಂದ ಬರುವ ಆದಾಯವನ್ನೆಲ್ಲಾ ಆತನು ಕಳದುಕೊಂಡವನಾಗುತ್ತಾನೆ ಮತ್ತು ನಷ್ಟಸಂಭವಿಸುವ ಪಕ್ಷಕ್ಕೆ ಪುರೂ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೆ ಹರಾಜುದಾರರಲ್ಲಿ ಛಡಸವಾಲುದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದನ್ನು ಆತನು ಭರ್ತಿಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೆ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರಿ ಠೇವಣಿ ಮೊಬಲಗು ದುಸರೆ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿ ಇದ್ದರೆ, ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ಜಮಾ ಮಾಡಿಕೊಳ್ಳತಕ್ಕದ್ದು ಸ್ವಾತಂತ್ರ್ಯದ ಹಕ್ಕು ದುಸರಾ ಹರಾಜಿನಿಂದಲ್ಲದೆ ಅನ್ಯಥಾ ವಿಲೇವಾರಿಯಾಗಿ ಅಂಥಾ ವಿಲೇವಾರಿಯನ್ನು ಪುರೂ ಹರಾಜಿಗೆ ಹೋಲಿಸಿ ನೋಡಿದ್ದರಲ್ಲಿ ಸರ್ಕಾರಕ್ಕೆ ನಷ್ಟವಾದರೆ ತಪ್ಪಿತಸ್ಥನು ಈ ನಷ್ಟಕ್ಕೆ ಗುರಿಯಾಗಿರತಕ್ಕದ್ದು.

XVII. ಸ್ವತಂತ್ರದಹಕ್ಕನ್ನು ಕೊಂಡುಕೊಂಡವನು ಕ್ರಮವಾದ ಲೈಸೆನ್ಸು ಕೊಡಲ್ಪಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡದರೆ ಆ ಬಗ್ಗೆ ವಿಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರತಕ್ಕದ್ದು.

XVIII. XII ಅಥವಾ XIIIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತೆ. ಅಮಲ್ದಾರರು ಮತ್ತು ಲೈಸೆನ್ಸುದಾರನು ಹಾಗೆ ಒಪ್ಪಿದರೆ ಲೈಸೆನ್ಸ್‌ದಾರನು ಕೊಡತಕ್ಕ ಆಖೈರು ಕಿಸ್ತು ಮೊಬಲಗಿಗೋಸ್ಕರ ಸದರಿ ಠೇವಣಿ ಮೊಬಲಗು ಜಮಾ ಮಾಡಿಕೊಳ್ಳಲ್ಪಡತಕ್ಕದ್ದು.

XIX. ಮೇಲೆ ನಮೂದಿಸಿರುವಂತೆ ಕೊಡಲ್ಪಡುವ ಲೈಸೆನ್ಸುಗಳಲ್ಲಿ ಎಲ್ಲಾ ಅಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಮುಂದೆ ನಮೂದುಮಾಡಿರುವ ಸಾಧಾರಣ ಷರತ್ತುಗಳನ್ನೂ ಮತ್ತು ಪ್ರತಿ ಒಂದು ಮುಖ್ಯಬಾಬಿಗೆ ಈ ಕೆಳಗೆ ಗೊತ್ತುಮಾಡಿರುವ ವಿಶೇಷ ಷರತ್ತುಗಳನ್ನೂ ವಿವರಿಸಿರುತೆ :—

ಆಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಸಾಧಾರಣ ಷರತ್ತುಗಳು.

1. ಸಾರಾಯಿ ಯಾ ಇತರ ಸ್ವದೇಶ ಷರಾಬನ್ನು ತಯಾರ್‌ಮಾಡುವವರೂ, ಷರಾಬ್ ಬಾಂಡೆಡ್ ಕೋಠಿ ಲೈಸೆನ್ಸ್‌ದಾರರೂ, ಸಾರಾಯಿಯ ಚಿಲ್ಲರೆ ಮಾರಾಟದಲ್ಲಿಯೂ ಇತರ ಮದತ್ ಪದಾರ್ಥಗಳ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು. ಈ ನಿರ್ಬಂಧವು ವಿಶೇಷ ಷರಾಬು ಮತ್ತು ರೆಕ್ಟಿಫೈಡ್ ಸಾರಾಯಿಯನ್ನು ತಯಾರ್‌ಮಾಡಿ ಲೈಸೆನ್ಸ್‌ದಾರ್‌ರಿಗೆ ಒಟ್ಟೊಟ್ಟಾಗಿ ಸರಬರಾಯಿ ಮಾಡತಕ್ಕವರಿಗೆ ಅನ್ವಯಿಸುವದಿಲ್ಲ.

2. ಆಬ್ಕಾರಿ ಯಾ ಅಫೀಂ ಲೈಸೆನ್ಸುಗಳ ಷರತ್ತಿನಮೇರೆಗೆ, ಷರಾಬುವಗೈರೆ ಮದ್ಯಗಳನ್ನೂ, ಅಫೀಮನ್ನೂ ಮಾರತಕ್ಕ ಸರಹದ್ದುಗಳು ಲೈಸೆನ್ಸು ಕೊಡತಕ್ಕ ಕಾಲದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತುಮಾಡಲ್ಪಡುತ್ತೆ. ಲೈಸೆನ್ಸ್‌ದಾರ್‌ಲ್ಲದವರಿಗೆ ಲಗಾವಾಗುವ ನಿಬಂಧನೆಗಳಿಗನುಸಾರವಾಗಿ ಹೊರತು, ಷರಾಬು, ಮದತ್ ಪದಾರ್ಥಗಳು ಯಾ ಅಫೀಮನ್ನು ಡೆಪ್ಯುಟಿ ಕಮ್ಮಿಷನರವರ ವಿಶೇಷ ಅಪ್ಪಣೆ ಶಿವಾಯಿ, ಸದರಿ ಸರಹದ್ದುಗಳ ಹೊರಗಡೆ ಮಾರೋಣವೂ, ಯಾ ಇಟ್ಟುಕೊಂಡಿರೋಣವೂ ಅಡ್ಡಿಮಾಡಲ್ಪಟ್ಟಿದೆ.

3. ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ನಡೆಸಲ್ಪಡತಕ್ಕದ್ದು. ಸದರಿ ಕಟ್ಟಡದ ಪೂರಾ ಅಥವಾ ಒಂದು ಭಾಗವು ಡೆಪೋ ಅಥವಾ ಅಂಗಡಿಯ ಉಪಯೋಗಕ್ಕೋಸ್ಕರವೇ ಪ್ರತ್ಯೇಕವಾಗಿ ಬಿಡಲ್ಪಟ್ಟಿರಬೇಕು. ಡೆಪೋ ಅಥವಾ ಅಂಗಡಿಗೂ ಮತ್ತು ಪಕ್ಕದಲ್ಲಿರುವ ವಾಸದಮನೆಗೂ ಬಾಗಲು ಇದ್ದಲ್ಲಿ ರಾತ್ರೆಕಾಲದಲ್ಲಿ ಬೀಗ ಹಾಕಿರತಕ್ಕದ್ದು. 5,000 ಅಥವಾ ಹೆಚ್ಚಾಗಿ ಪ್ರಜಾಸಂಖ್ಯೆಯುಳ್ಳ ಮ್ಯುನಿಸಿಪಾಲಿಟಿಗಳು ಅಥವಾ ಪಟ್ಟಣಗಳಲ್ಲಿರುವ ಷರಾಬು ಅಂಗಡಿಗಳಿಗೆ ರಸ್ತೆಯಿಂದ ಹೊರ್ತಾಗಿ ಇನ್ಯಾವ ಕಡೆಯಿಂದಲೂ ಬಾಗಲುಗಳು ಇರಕೂಡದು. ಹಿಂಭಾಗಗಳಲ್ಲಿಯಾದರೂ, ಪಕ್ಕಗಳಲ್ಲಿಯಾದರೂ, ಕಿಟಕಿಯಾಗಲಿ, ಗಂಡಿಯಾಗಲಿ ಇರಕೂಡದು. ಇನ್ಯಾವಕಡೆಗೂ ಹೋಗಲೂ ಬರಲೂ ಪ್ರವೇಶಗಳಿರಕೂಡದು. ಬಿಕರಿ ಮಾಡುವ ಜಗಲಿಯು ಬಾಗಲಿಗೆ ಎದುರಾಗಿ ಇರತಕ್ಕದ್ದಲ್ಲದೆ ಅಂಗಡಿಯ ಒಳಗಡೆಯಿರುವ ಎಲ್ಲಾ ಜನಗಳು ಬೀದಿಯಲ್ಲಿ ತಿರುಗಾಡುವ ಜನಗಳಿಗೆ ಕಾಣುವಹಾಗಿರಬೇಕು. ಶಿವಾಯಿ, ಬೇರೇಕೋಠಡಿಯು ಬಿಕರಿಗಾಗಿ ಉಪಯೋಗಿಸಲ್ಪಡಕೂಡದು, ಅಥವಾ ಪಾನಮಾಡುವವರಿಗೆ ತೆಗದಿರಕೂಡದು. ಅಂಗಡಿಯ ಒಳಭಾಗದಲ್ಲಿ ಹಗಲಿನಲ್ಲಿ ಚನ್ನಾಗಿ ಬೆಳಕಿರಬೇಕು. ಬಿಕರಿದಾರ ಮತ್ತು ಅವನ ಮನೇ ಜನರು ಅಥವಾ ಕಾವಲುಗಾರರು ಇವರುಗಳು ಶಿವಾಯಿ ಮತ್ತ್ಯಾರಾದರೂ ಅದರಲ್ಲಿ ವಾಸವಾಗಿರಕೂಡದು.

4. ಎರಡು ಅಥವಾ ಹೆಚ್ಚು ಪರಾಯಿದೇಶದ ಮದ್ಯಗಳನ್ನು ಮಾರುವ ಲೈಸೆನ್ಸುಗಳು ಒಬ್ಬನಿಂದಲೇ ಪಡೆದಿರತಕ್ಕ ಸಂದರ್ಭ ಶಿವಾಯಿ ಪ್ರತಿ ಒಂದು ಲೈಸೆನ್ಸಿನ ಬಿಕರಿಯು ಪ್ರತ್ಯೇಕ ಕಟ್ಟಡಗಳಲ್ಲಿ ನಡೆಸಲ್ಪಡತಕ್ಕದ್ದು. (ರಸಾಯನಶಾಸ್ತ್ರಜ್ಞರು, ಮತ್ತು ಇಂಗ್ಲೀಷ್ ಔಷಧವನ್ನು ಮಾರುವವರು ಮತ್ತು ಮೆಡಿಕಲ್ ಪ್ರಾಕ್ಟಿಷನರು ಶಿವಾಯಿ) ಲೈಸೆನ್ಸ್ ಕಟ್ಟಡಗಳಲ್ಲಿ ಲೈಸೆನ್ಸಿಗೆ ಸಂಬಂಧಪಟ್ಟದ್ದು ಶಿವಾಯಿ ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನಾಗಲಿ, ಯಾ ಷರಾಬಿಗೆ ಬಣ್ಣ ಕೊಡಲು ಅಥವಾ ರುಚಿ ಹೆಚ್ಚುಮಾಡಲು ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ಯಾವ ಸಾರ ಅಥವಾ ವಸ್ತುವನ್ನಾಗಲಿ ಇಟ್ಟುಕೊಂಡಿರುವದು ಅಡ್ಡಿಮಾಡಲ್ಪಟ್ಟಿದೆ. ಅಫೀಂ ಬಿಕರಿಗಾಗಿ ಲೈಸೆನ್ಸ್‌ಕೊಟ್ಟಿರುವ ಅಂಗಡಿಗಳಲ್ಲಿ ಮಾರ್ಫಿಯ ಅಥವಾ ಹೊಗೇಸೇದಲು ಉಪಯೋಗಿಸಲ್ಪಡುವ ಪದಾರ್ಥಗಳು ಹೊರ್ತು ಅಫೀಂನಿಂದ ಮಾಡಲ್ಪಟ್ಟ ಮದತ್ ಪದಾರ್ಥಗಳು ತಯಾರ್‌ಮಾಡಲ್ಪಡಬಹುದು. ಯಾ ಮಾರಲ್ಪಡಬಹುದು.

5. ಬಿಕರಿಮಾಡಲ್ಪಡುವ ಲೈಸೆನ್ಸಿನ ತರಹೆ ಮತ್ತು ನಂಬರು, ಲೈಸೆನ್ಸ್‌ದಾರನ ಹೆಸರು ಮತ್ತು (ಪರಾಯಿದೇಶದ ಮದ್ಯ ಅಥವಾ ವಿಶೇಷ ಮದ್ಯಗಳಿಗೆ ಶಿವಾಯಿ) ಬಿಕರಿಯ ದರ ಇವುಗಳನ್ನು ನಮೂದು ಮಾಡಿರುವ ಹಲಿಗೆಯು ಪ್ರತಿ ಡೆಪೋ ಅಥವಾ ಅಂಗಡಿಯ ಮುಂಭಾಗದಲ್ಲಿ ತಗಲಿಹಾಕಲ್ಪಟ್ಟಿರಬೇಕು. ಈ ವಿವರಗಳು ಸ್ವದೇಶಭಾಷೆಯಲ್ಲಿ ಸ್ಫುಟವಾಗಿ ಬರೆಯಲ್ಪಟ್ಟಿರಬೇಕು. ಲೈಸೆನ್ಸು ಅಂಗಡಿಯ ಒಳಗಡೆ ಎಲ್ಲರಿಗೂ ಕಾಣುವಕಡೆ ತಗಲಿಹಾಕಲ್ಪಟ್ಟಿರಬೇಕು.

6. ಮಾರಲ್ಪಡುವ ಯಾ ಮಾರಲಿಕ್ಕೆ ಇಟ್ಟುಕೊಂಡಿರುವ ಎಲ್ಲಾ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಒಳ್ಳೇದಾಗಿರಬೇಕು. ಮತ್ತು ಕಲಬೆರಿಕೆಯಿಲ್ಲದೆ ಇರಬೇಕು. ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಮದತ್ ಪದಾರ್ಥಗಳನ್ನು ತಯಾರ್‌ಮಾಡುವದು ಶಿವಾಯಿ ಅವುಗಳ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವದಕ್ಕಾಗಲಿ ಅಥವಾ ಇನ್ಯಾವ ಕಾರಣಗಳಿಗಾಗಲಿ, ಅವುಗಳಿಗೆ ಏನೂ ಬೆರಿಸಕೂಡದು. ಕೋಠಿಗಳನ್ನೂ, ಅಂಗಡಿಗಳನ್ನೂ ತನಿಖೆ ಮಾಡುವದಕ್ಕೆ ಅಧಿಕಾರವುಳ್ಳ ಆಫಿಸರುಗಳು (25ನೆ ಷರತ್ತನ್ನು ನೋಡಿ) ಪಾನಮಾಡುವದಕ್ಕೂ, ಅಥವಾ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಅಥವಾ ಕೆಡಿಸಿದ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನು ಖರ್ಚುಮಾಡಕೂಡದೆಂದು ಅಪ್ಪಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಕ್ಸೈಜ್ ಕಮಿಷನರವರೂ, ಡೆಪ್ಯುಟಿ ಕಮಿಷನರವರೂ ಮತ್ತು ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರವರೂ ಈರೀತಿಯಲ್ಲಿ ಪಾನಮಾಡಲಿಕ್ಕಾಗಲಿ, ಉಪಯೋಗಿಸಲಿಕ್ಕಾಗಲಿ ನಾಲಾಯಖಾಗಿರುವದನ್ನು ನಾಶಪಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

7. 16 ವರುಷಕ್ಕೆ ಕಮ್ಮಿ ವಯಸ್ಸುಳ್ಳವರಿಂದಲೇ ಆಗಲಿ ಅಥವಾ ಕುಷ್ಟರೋಗದಿಂದ ಅಥವಾ ಇತರ ಅಂಟುರೋಗದಿಂದ ಪೀಡಿತರಾದ ಜನಗಳಿಂದ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಮಾರಲ್ಪಡಕೂಡದು. ಅಥವಾ ವಯ್ಯಲ್ಪಡಕೂಡದು. ಅಂಗಡಿ ಯಾ ಡೆಪೋಗಳಲ್ಲಿ ಬಿಕರಿ ಬಗ್ಗೆ ಅಂಥಾ ಜನಗಳನ್ನು ನೇಮಿಸೋಣವು ಅಡ್ಡಿಮಾಡಲ್ಪಟ್ಟಿದೆ. ಡೆಪೋಗಳಲ್ಲಿ ಅಥವಾ ಅಂಗಡಿಗಳಲ್ಲಿ ನೇಮಕಮಾಡಲ್ಪಟ್ಟ ಯಾ ನೇಮಕಮಾಡಲ್ಪಡಲು ಉದ್ದೇಶಿಸಲ್ಪಟ್ಟ ಜನಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರವರು ಅವಶ್ಯಕಕಂಡರೆ ತರಸಿಕೊಂಡು ಅವರು ಒಪ್ಪದೇ ಇರತಕ್ಕ ಯಾವ ಮನುಷ್ಯನಿಂದಾಗಲಿ ಷರಾಬು, ಮದತ್ ಪದಾರ್ಥಗಳು ಅಫೀಂ ಮಾರೋಣವನ್ನು ಅಡ್ಡಿಮಾಡಬಹುದು.

8. ವಿಶೇಷವಾದ ಅಪ್ಪಣೆಹೊಂದಿದ ಶಿವಾಯಿ ಸೂರ್ಯೋದಯಕ್ಕೆ ಮುಂಚೆ ಯಾವ ಡಿಪೋ ಮತ್ತು ಅಂಗಡಿಯು ತೆಗೆಯಲ್ಪಡಕೂಡದು. ಮತ್ತು ರಾತ್ರಿ *9 ಘಂಟೆನಂತರ ತೆಗೆಯಲ್ಪಟ್ಟಿರಕೂಡದು.

9. ಡಿಪೋ ಯಾ ಅಂಗಡಿಗಳಲ್ಲಿ ಯಾವ ವಿಧವಾದ ನಿಷಾ ಬಂದಿರೋಣ, ಯಾ ಗಲಾಟೆ ಯಾ ಜೂಜಾಟ ಇವುಗಳಿಗೆ ಅಸ್ಪದಕೊಡಕೂಡದು. ಡಿಪೋ ಅಥವಾ ಅಂಗಡಿಗಳಲ್ಲಿ ಯಾವ ವಿಧವಾದ ವಿನೋದಗಳು ಅಡ್ಡಿಮಾಡಲ್ಪಟ್ಟಿದೆ.

10. ಲೈಸೆನ್ಸ್‌ದಾರನು ಚೋರರು, ಕಳ್ಳರು, ಪೋಲಿ ಮನುಷ್ಯರು, ದೊಂಬಿಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು, ಫೌಜಿನಿಂದ ಪರಾರಿಯಾಗಿಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟಿದ್ದಂಥವರು ಇಂಥವರಿಗೆ ಡಿಪೋ ಅಥವಾ ಅಂಗಡಿಗಳಲ್ಲಿ ಆಶ್ರಯಕೊಡಕೂಡದು. ಅಂಥ ಜನರು ಅಲ್ಲಿಗೆ ಬಂದರ ಸಮೀಪದಲ್ಲಿರುವ ಮ್ಯಾಜಿಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರಿಗೆ ವರ್ತಮಾನಕೊಡತಕ್ಕದ್ದು.

11. ರಾತ್ರಿಕಾಲದಲ್ಲಿ ಯಾವ ಡಿಪೋ ಅಥವಾ ಅಂಗಡಿಯಲ್ಲಾಗಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು.

12. ಯೂರೋಪಿಯನ್ ಅಥವಾ ನೇಟಿವ್ ಸೈನ್ಯದ ರಿಜಮೆಂಟ್ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ, ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿಯೂ ಆ ಮಾರ್ಗದ ಸಮೀಪದಲ್ಲಿರುವ ಡಿಪೋ ಮತ್ತು ಅಂಗಡಿಗಳನ್ನು ಡೆಪ್ಯುಟಿ ಕಮಿಷನರವರು ಅಪ್ಪಣೆ ಮಾಡಿದಲ್ಲಿ ಮುಚ್ಚಿಬಿಡಬೇಕು. ಮತ ಸಂಬಂಧವಾದ ಗಲಾಟೆ ಅಥವಾ ತೊಂದರೆಕಾಲಗಳಲ್ಲಿ ಹಂಗಾಮಿಯಾಗಿ ಡೆಪ್ಯುಟಿ ಕಮಿಷನರವರು ಅಥವಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರವರು ಯಾವ ಅಂಗಡಿಗಳನ್ನಾದರೂ ಮುಚ್ಚಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. ಸಮೀಪದಲ್ಲಿ ದೊಂಬಿ ಅಥವಾ ತೊಂದರೆ ಇದ್ದಲ್ಲಿ, ಪ್ರತಿ ಡಿಪೋ ಮತ್ತು ಅಂಗಡಿಕಾರನು ತನ್ನ ಡಿಪೋ ಮತ್ತು ಅಂಗಡಿಯನ್ನು ತಾನೇ ಮುಚ್ಚಬಹುದು.

13. ಡೆಪ್ಯುಟಿ ಕಮಿಷನರವರು ಡಿಪೋ ಮತ್ತು ಅಂಗಡಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇನ್ನೂರು ಗಜಗಳ ಒಳಗಾಗಿ ವರ್ಗಾಯಿಸಬಹುದು. ಅಥವಾ ಅವುಗಳನ್ನು ಮುಚ್ಚಬೇಕೆಂದು ಹುಕುಂ ಮಾಡಬಹುದು. ಎಕ್ಸೈಸ್ ಕಮಿಷನರವರ ಮಂಜೂರಾತಿ ಶಿವಾಯಿ ಹೊಸ ಅಂಗಡಿಗಳನ್ನು ಇಡಕೂಡದು.

14. ಕ್ರಮವಾಗಿ ಲೈಸೆನ್ಸ್ ಪಡೆದ ಅಂಗಡಿಗಳು ಸಮೀಪದಲ್ಲಿಲ್ಲದೆ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಷರಾಬು, ಮದಕ ಪದಾರ್ಥಗಳು ಮತ್ತು ಅಫೀಮನ್ನು ಬಿಕರಿ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಉಳಿಸಿಕೊಂಡಿರುತ್ತೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರಿ ಪ್ರದೇಶದವರಿಗೆ ಮಾಮೂಲಾಗಿ ಸರಬರಾಯಿ ಮಾಡುವ ದುಕಾನ್‌ದಾರರಿಗೆ ಅಥವಾ ಲೈಸೆನ್ಸ್‌ದಾರನ ಪ್ರತಿನಿಧಿಗಳಿಗೇನೇ ಕೊಡತಕ್ಕದ್ದು. ಸದರಿ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು. ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮಿಷನರವರು ತೀರ್ಮಾನಿಸಬಹುದು.

15. (*a*) ಡಿವಿಜನ್ ಕಮ್ಯಾಂಡಿಂಗ್ ಆಫಿಸರವರ (ಸ್ವತಂತ್ರ ಬ್ರಿಗೇಡ್ ಕಮ್ಯಾಂಡಿಂಗ್ ಆಫಿಸರವರ) ಅಥವಾ ಕಂಟೋನ್ಮೆಂಟ್ ಅಥವಾ ಕ್ಯಾಂಪ್ ಕಮ್ಯಾಂಡಿಂಗ್ ಆಫಿಸರವರ ಅನುಮತಿ ಪಡೆದಿರುವ ಅಂಗಡಿಗಳಲ್ಲಿ ಶಿವಾಯಿ ಮತ್ತು ಲೈಸೆನ್ಸಿನಲ್ಲಿ ನಮೂದಿರುವ ಸ್ಥಳೀಕ ಅಬ್ಕಾರಿ ಇಲಾಖೆಯವರೊಂದಿಗೆ ಮೇಲೆ ಹೇಳಿರುವ ಸದರಿ ಆಫಿಸರುಗಳೂ ಒಪ್ಪಿರುವ ಷರಾಬುಗಳಿಗೆ ಶಿವಾಯಿ

(1) ನಾವಿಕರೂ, ಶಿಪಾಯಿಗಳೂ ಮತ್ತು ಅವರ ಮನೆ ಜನರು.

(2) ಬ್ಯಾರಾಕಿನಲ್ಲಿ ವಾಸ ಮಾಡುವ ಇತರ ಮನುಷ್ಯರು.

(*b*) ಕೆಲಸದ ಮೇಲಿರುವ:—

(1) ಮೊಕ್ಕಾಂಗಳೊಡನೆ ಹೋಗುವವನು, ಪೊಲೀಸಿನವನು ಅಥವಾ ಎಕ್ಸೈಜ್ ನೌಕರನು.

(2) ರೈಲ್ವೆ ಕಂಪನಿಗೆ ಸೇರಿದವನು ಅಥವಾ

(*c*) ಯಾವ ಸಂದರ್ಭದಲಾದರೂ;—

(1) ಪೊಲೀಸ್ ಮೊಹಸಲಿಯಲ್ಲಿರುವ ಯೂರೋಪಿಯನ್ ತಿರುಕನಿಗೂ

(2) 16 ವರುಷದ ಒಳಗಾಗಿರುವ ಮನುಷ್ಯನಿಗೂ

(3) ಹುಚ್ಚನಿಗೂ

(4) ನಿಷಾ ಆಗಿರುವದೆಂದು ತಿಳಿದಿರುವ ಅಥವಾ ಕಂಡು ಬರುವ ಮನುಷ್ಯನಿಗೂ, ಯಾವ ಷರಾಬು, ಮದಕ ಪದಾರ್ಥ ಅಥವಾ ಅಫೀಂ ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

16. ಸರಬರಾಯಿ ಮಾಡುವ ಅಥವಾ ಮಾರುವ ಹಕ್ಕುದಾರಿಯು ಎಕ್ಸೈಜ್ ಕಮಿಷನರವರ ಅಪ್ಪಣೆ ಶಿವಾಯಿ ಮಾರಲ್ಪಡಕೂಡದು. ವರ್ಗ ಮಾಡಲ್ಪಡಕೂಡದು ಮತ್ತು ಷಿಕ್ಮಿ ಇಜಾರೆಗೆ ಕೊಡಲ್ಪಡಕೂಡದು. ಮತ್ತು ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದಲ್ಲಿ ಅವರ ಅನುಮತಿ ಇಲ್ಲದೆ ಯಾವ ಹಕ್ಕಿನ ಆಡಳಿತಕ್ಕಾದರೂ ಯಾವ ಮುತಾಲೀಕನು ಮೊಕರ್ರರಾಗಕೂಡದು.

* ಬೆಂಗಳೂರು ಸಿಟಿಯಲ್ಲಿ ರಾತ್ರಿ 9½ ಘಂಟೆ.

* ಸಾರಾಯಿ ಬಾಂಡೆಡ್ ಡಿಪೋಗಳಲ್ಲಿ ರಾತ್ರಿ 8 ಘಂಟೆ.

17. ಯಾವ ಅಬ್ಕಾರಿ ಅಥವಾ ಅಫೀಂ ಲೈಸೆನ್ಸದಾರನು ಎಕ್ಸೈಜ್ ಕಮಿಷನರವರ ಬರಹಮೂಲಕವಾದ ಅಪ್ಪಣೆ ಶಿವಾಯಿ ಮೈಸೂರು ಶೀಮೆಯ ಹೊರಗಡೆ ಅಥವಾ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಯಾವ ಅಬ್ಕಾರಿ ಮತ್ತು ಅಫೀಂ ಲೈಸೆನ್ಸಿನಲ್ಲಿ ಯಾವ ವಿಧವಾದ ಸಂಬಂಧವನ್ನು ನೇರಾಗಿಯಾಗಲಿ ಪರೋಕ್ಷವಾಗಿ ಯಾಗಲಿ ಇಟ್ಟುಕೊಳ್ಳಕೂಡದು. ಮತ್ತು ಇಟ್ಟುಕೊಂಡಿರಕೂಡದು.

18. ಮೇಲೆ ಹೇಳಿರುವ 12 ಮತ್ತು 13ನೇ ಷರತ್ತುಗಳಿಗನುಸಾರವಾಗಿ ಹಂಗಾಮಿಯಾಗಾಗಲಿ ಅಥವಾ ಖಾಯಮಾಗಾಗಲಿ ಮುಚ್ಚುವ ಸಂದರ್ಭಗಳಲ್ಲಿ ವಿನಹಾ ಡಿಪೋ ಮತ್ತು ಅಂಗಡಿಗಳು ತೆಗದಿರಬೇಕು. ಡೆಪ್ಯುಟಿ ಕಮಿಷನರವರು ಸ್ಥಳದ ಉಪಯೋಗಕ್ಕೆ ಅವಶ್ಯಕವಾಗಿರುವದೆಂದು ತಿಳಿದು ಅಪ್ಪಣೆ ಮಾಡಿರುವಷ್ಟು ಷರಾಬು ಮದತ್ ಪದಾರ್ಥಗಳು ಮತ್ತು ಅಫೀಮನ್ನು ಅಂಗಡಿಗಳಲ್ಲಿ ಇಟ್ಟಿರಬೇಕು. ಜುಲೈ ಗುರ್ರೆಯಲ್ಲಿ ತೆರೆಯದಿರುವ ಅಂಗಡಿಗಳು ಲೈಸೆನ್ಸಾರನ್ನು ಲುಕ್ಸಾನಿಗೆ ಒಳಪಡಿಸಿ ಪುನಃ ಹರಾಜು ಮಾಡಲ್ಪಡುವದು.

19. ಷರಾಬು, ಮದತ್ ಪದಾರ್ಥ ಯಾ ಅಫಿಂ ಅಂಗಡಿಗಳಲ್ಲಿ ನಗದು ಮೊಬಲಗಿಗೆ ಶಿವಾಯಿ ಮಾರಲ್ಪಡಕೂಡದು. ನಗದು ಶಿವಾಯಿ ಬೇರೇ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಲೈಸೆನ್ಸುದಾರನು ಸಮಿಪದಲ್ಲಿರುವ ಮೇಜಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರಿಗೆ ವರ್ತಮಾನ ಕೊಡಲು ಬದ್ಧನಾಗಿರುತ್ತಾನೆ. ಈ ಷರತ್ತು ಅಂಗಡಿಯ ಹೊರಗಡೆ ಕುಡಿಯುವದಕ್ಕಾಗಿ ಅಂಗಡಿದಾರ್ರಿಂದಲೂ ಯಾ ಮಾತಬರ ಫರಂಗಳಿಂದಲೂ ವ್ಯಾಪಾರ ಮೂಲಕವಾಗಿ ಕೊಡಲ್ಪಡುವ ಪರಾಯಿ ದೇಶದ ಮತ್ತು ವಿಶೇಷ ಷರಾಬುಗಳನ್ನು ಸಾಲವಾಗಿ ಮಾರತಕ್ಕದ್ದನ್ನು ಅಡ್ಡಿ ಪಡಿಸುವದಿಲ್ಲ.

20. ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನುರೀತ್ಯಾ ಬಿಕರಿಮಾಡಲು ಗೊತ್ತುಮಾಡಿರುವ ಪರಮಾವಧಿ ಕನಿಷ್ಠ ಯಾ ನಿಷ್ಕರ್ಷೆಯಾದ ದರಗಳಿಗಿಂತಲೂ ಹೆಚ್ಚಾಗಿಯಾಗಲಿ, ಕಮ್ಮಿಯಾಗಿ ಯಾಗಲಿ ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಂ ಮಾರಲ್ಪಡಕೂಡದು.

ಷರಾ—1. 20೦ ಷರಾಬು—1 ಡ್ರಾಂಗೆ 2 ಆಣೆ.

2. ಗಾಂಜಾ—1 ತೊಲೆಗೆ 2 ಆಣೆ.

3. ಅಫೀಂ—1 ತೊಲೆಗೆ 9 ಆಣೆ.

4. ಶೇಂದಿ—ಷೆಡ್ಯೂಲಿನಲ್ಲಿ ಫಾಯಿಷ್ ಮಾಡಿರುವ ಕಮ್ಮಿ ದರ.

21. ಲೈಸೆನ್ಸಿಲ್ಲದೆ ಇಟ್ಟುಕೊಳ್ಳಬಹುದಾಗಿರುವ ಮೊತ್ತಕ್ಕಿಂತಲೂ ಹೆಚ್ಚಾಗಿ ಯಾವ ಷರಾಬು ಮದತ್ ಪದಾರ್ಥ ಯಾ ಅಫೀಮು ವಿಧಾಯಕವಾದ ಪರ್ಮಿಟ್ಟಿಲ್ಲದೆ ಲೈಸೆನ್ಸ್ ಪಡೆದ ಅಂಗಡಿಯಿಂದ ಒಂದೇ ಕಾಲದಲ್ಲಿ ಯಾವ ಮನುಷ್ಯನಿಂದಲಾದರೂ ತೆಗದುಕೊಂಡು ಹೋಗಲ್ಪಡಕೂಡದು.

ಷರಾ—ಸಾರಾಯಿ—1 ರೆಪ್ಯೂಟೆಡ್ ಕ್ವಾರ್ಟು.
ಶೇಂದಿ—2 ಸೇರು.
ಗಾಂಜಾ—4 ತೊಲಾ.
ಅಫೀಮು—3 ತೊಲಾ.
ಪರಾಯಿ ಷರಾಬು—2 ಗ್ಯಾಲನ್.

22. ಪ್ರತಿ ದಿನವೂ ಆಗತಕ್ಕ ಜಮಾ ಖರ್ಚನ್ನು ವಿಧಾಯಕವಾದ ನಮೂನೆಯಲ್ಲಿ ಶಾಯಿಯಲ್ಲಿ ಬರೆದಿಡಬೇಕು. ಈ ಲೆಕ್ಕದ ಪುಸ್ತಕಗಳನ್ನೂ ಮತ್ತು ಪರಮಿಟ್ ಪುಸ್ತಕಗಳನ್ನೂ ಸರ್ಕಾರೀ ಖಜಾನೆಯಲ್ಲಿ ಖರೀದಿ ಮೊಬಲಗನ್ನು ಜಮಾ ಮಾಡಿಸಿದ್ದ ರಶೀತಿಗಳನ್ನು ಹಾಜರ್ಮಾಡಿದ್ದಲ್ಲಿ ಸ್ಥಳೀಕ ಅಬ್ಕಾರಿ ನೌಕರಮನೇರಿಂದ ಪಡೆಯಬಹುದು. ಜಮಾ ಬಂದ ಷರಾಬು ಮದತ್ ಪದಾರ್ಥಗಳು ಅಥವಾ ಅಫೀಮಿನ ಪರಮಿಟ್ಟುಗಳೂ, ಖರ್ಚಾದ ಪರಮಿಟ್ಟುಗಳ ಕೌಂಟರ್ ಫಾಯಿಲುಗಳೂ ಎಚ್ಚರಿಕೆಯಾಗಿ ಫೈಲ್ ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ ರುಜು ಮಾಡುವದನ್ನು ನಿಷೇಧಿಸಿದೆ. ಈ ಲೆಖ್ಖಗಳನ್ನೂ, ಪರಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ ಲೈಸೆನ್ಸಿನಲ್ಲಿ ಕಂಡವಾಯಿದೆಯು ಕಳೆದ ಒಂದು ವರುಷದವರಿಗೂ ಇಟ್ಟುಕೊಂಡಿರತಕ್ಕದ್ದು. ಅಸಿಸ್ಟೆಂಟು ಇನ್ಸ್ಪೆಕ್ಟರ ದರ್ಜೆಗೆ ಕಮ್ಮಿ ಯಾಗಿರದ ಯಾವ ಎಕ್ಸೈಜ್ ಆಫಿಸರು ಕೇಳಿದರೂ ಸದರಿ ಲೆಖ್ಖಗಳನ್ನು ಹಾಜರ್ಮಾಡಬೇಕು.

23. ಅಸಿಸ್ಟೆಂಟ್ ಇನ್ಸ್ಪೆಕ್ಟರ ದರ್ಜೆಗಿಂತಲೂ ಕಮ್ಮಿ ಇಲ್ಲದ ಎಕ್ಸೈಜ್ ಆಫಿಸರುಗಳು ಆಗಿಂದಾಗ್ಯೆ ಅಪೇಕ್ಷಿಸುವಂಥ ಯಾವ ಲೆಖ್ಖಗಳನ್ನಾಗಲಿ, ವರ್ತಮಾನಗಳನ್ನಾಗಲಿ ಲೈಸೆನ್ಸದಾರರು ತಡೆಮಾಡದೆ ಕೊಡಬೇಕು.

24. ಎಕ್ಸೈಜ್ ಕಮ್ಮಿಷನರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಪ್ರಮಾಣದ ತೂಕದ ಮತ್ತು ಅಳತೆ ಸಾಧನಗಳನ್ನು ಮಾತ್ರವೇ ಎಲ್ಲಾ ಲೈಸೆನ್ಸ್ ಪಡೆದ ಅಂಗಡಿಗಳಲ್ಲಿ ಇಟ್ಟುಕೊಂಡಿರಬೇಕು, ಮತ್ತು ಉಪಯೋಗಿಸಬೇಕು. ಯಾವ ಲೈಸೆನ್ಸ್ ಪಡೆದ ಅಂಗಡಿಗಳಲ್ಲಾದರೂ ಕರಾರ್ವಾಕಾಗಿಲ್ಲದ ತೂಕದ ಮತ್ತು ಅಳತೆ ಸಾಧನೆಗಳನ್ನು ಇಟ್ಟುಕೊಂಡಿರೋಣವು ಅಥವಾ ಉಪಯೋಗಿಸೋಣವು ಲೈಸೆನ್ಸದಾರನನ್ನು ಶಿಕ್ಷೆಗೆ ಗುರಿಮಾಡುತ್ತೆ.

25. ಸಬ್ ಇನ್ಸ್ಪೆಕ್ಟರ ಹುದ್ದೆಗಿಂತಲೂ ಕಮ್ಮಿಯಾಗಿರದ ಯಾವ ಅಬ್ಕಾರೀ ನೌಕರನಾದರೂ ಲೈಸೆನ್ಸ್ ಪಡೆದ ಅಂಗಡಿಗಳನ್ನೂ ಮತ್ತು ಡೆಪೋಗಳನ್ನೂ ತನಿಖೆಮಾಡಲು ಅಧಿಕಾರವುಳ್ಳವನಾಗಿರುತ್ತಾನೆ. ಸದರಿ ಅಂಗಡಿಗಳನ್ನು ಪ್ರವೇಶಮಾಡಿ ತನಿಖೆಮಾಡುವದಕ್ಕೂ, ಉಪಯೋಗದಲ್ಲಿರುವ ತೂಕದ ಮತ್ತು ಅಳತೆ ಸಾಧನೆಗಳನ್ನೂ, ಷರಾಬು, ಮದತ್ ಪದಾರ್ಥಗಳು, ಅಫೀಮನ್ನೂ ಅಜಮಾಯಿಷಿ ಮಾಡಲಿಕ್ಕೂ ಅಂಗಡಿಯಲ್ಲಿ ಯಾ ಡೆಪೋದಲ್ಲಿಟ್ಟಿರತಕ್ಕ ಲೆಖ್ಖಗಳನ್ನು ಕೇಳಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ. ಪೊಲೀಸ್ ಆಫಿಸರರುಕೂಡ ತಮ್ಮ ಕೇಸಕ್ಕೆ ಸಂಬಂಧಪಟ್ಟಿರುವ ಮಟ್ಟಿಗೆ ತನಿಖೆ ಮಾಡಬಹುದು.

26. ಕ್ರಮವಾಗಿ ನಂಬರು ಹಾಕಲ್ಪಟ್ಟ ಪುಟಗಳುಳ್ಳ ಇನ್ಸ್ಪೆಕ್ಷನ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರಿ ಪುಸ್ತಕವನ್ನು ರೇಂಜ್ ಛಾರ್ಜಿನಲ್ಲಿರುವ ಆಬ್ಕಾರಿ ಇನ್ಸ್ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ನ್ಯಾವ ಆಫಿಸರರೇ ಆಗಲಿ ರಶೀತಿ ಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

27. ಸ್ವತಂತ್ರ ಹಕ್ಕನ್ನು ಪಡೆದದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರೀ ಖಜಾನೆಯಲ್ಲಿ ಜುಲೈ ಮಾಹೆ ಲಾಗಾಯಿತು ಪ್ರತಿ ತಿಂಗಳಲ್ಲಿಯೂ 20ನೆ ತಾರೀಖು ಅಥವಾ ಅದರ ವಳಗೆ ಸರಿಯಾದ ತಿಂಗಳಗಟ್ಲೆ 12 ಖಿಸ್ತುಗಳಲ್ಲಿ ಪಾವತಿ ಮಾಡುತ್ತಾ ಬರತಕ್ಕದ್ದು. ಜಾತ್ರೆ ಅಂಗಡಿಯ ಲೈಸೆನ್ಸದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೇ ಸದರಿ ಅಂಗಡಿಯ ಗುತ್ತಾ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

ಷರಾ.—ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ತಾವೇ ಲೈಸೆನ್ಸದಾರರಲ್ಲದೆ ಇರುವ ಸಂದರ್ಭಗಳಲ್ಲಿ ಗ್ರಾಮದ ಪಟೇಲರು ಯಾವ ಮನುಷ್ಯನಿಂದಲಾಗಲೀ ಒಂದುಸಾರಿಗೆ 50 ರೂಪಾಯಿಗಳಿಗೆ ಮೀರದಂತೆ ಮೊಬಲಗನ್ನು ತೆಗದುಕೊಳ್ಳಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡಬಹುದು.

28. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಮಾಡಬೇಕೆಂದು ಯಾ ಇಜಾರೆ ಮೊಬಲಗನ್ನು ಕಮ್ಮಿ ಮಾಡಲ್ಪಡಬೇಕೆಂದು ಕೇಳಲ್ಪಡಕೂಡದು.

29. ಜಮೀನ್ ಕಂದಾಯದ ಬಾಕಿ ವಸೂಲಿ ಬಗ್ಯೆ ಆಯಾ ಕಾಲದಲ್ಲಿ ಜಾರೀಲಿರುವ ಕಾನೂನು ಮೇರೆಗೆ ಲೈಸೆನ್ಸದಾರನಿಂದ ಬರಬೇಕಾದ ಮೊಬಲಗು ಆತನ ಯಾ ಆತನ ಜಾಮೀನ್‌ದಾರನ ಸ್ವತ್ತುಗಳ ಜಫ್ತು ಮತ್ತು ಹರಾಜಿನಿಂದ ವಸೂಲ್ಮಾಡಲ್ಪಡುವದು. ಅಥವಾ ಇಜಾರೆಯು ಪ್ರಾರಂಭದಲ್ಲಿ ಆತನಿಂದ ಕೊಡಲ್ಪಟ್ಟ ಠೇವಣಿ ಮೊಬಲಗು ಇದ್ದಲ್ಲಿ ವಜಾ ಹಾಕಲ್ಪಡುವದು. ಅಮಲ್ದಾರರಿಂದ ಕೊಡಲ್ಪಟ್ಟ ನೋಟೀಸ್ ಜಾರಿಯಾದ 15 ದಿವಸಗಳ ವಳಗಾಗಿ ಠೇವಣಿ ಮೊಬಲಗಿನಿಂದ ವಜಾ ಮಾಡಲ್ಪಟ್ಟ ಮೊಬಲಗನ್ನು ಪುನಃ ಭರ್ತಿ ಮಾಡಲು ಬದ್ಧನಾಗಿರುತ್ತಾನೆ.

30. ವಿಧಾಯಕವಾದ ತಾರೀಖುಗಳ ವಳಗಾಗಿ ಖಿಸ್ತುಗಳನ್ನು ಅಥವಾ (ಶೇಂದಿಯ) ಮರತೆರಿಗೆಯನ್ನು ಕೊಡದೆ ತಪ್ಪಿದಲ್ಲಿ, ಲೈಸೆನ್ಸುಗಳನ್ನು ಸಸ್ಪೆಂಡ್ ಮಾಡಲು ರೆವಿನ್ಯೂ ಆಫಿಸರುಗಳಿಗೆ ಅಧಿಕಾರವನ್ನು ಉಳಿಸಿಕೊಂಡಿರುತ್ತೆ. ಷರಾಬು ಶೇಂದಿ ಮತ್ತು ಮದ್ದಕ್ ಅಂಗಡಿಗಳ ವಿಷಯದಲ್ಲಿ ಈ ಅಧಿಕಾರವು ಅಮಲ್ದಾರುಗಳಿಂದಲೂ ಇತರ ಸಂದರ್ಭಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಚಲಾಯಿಸಲ್ಪಡುತ್ತೆ.

31. ಮೇಲ್ಕಂಡ ಷರಾಬು, ಶೇಂದಿ, ಮದ್ದಕ್ ಪದಾರ್ಥಗಳ ಲೈಸೆನ್ಸದಾರನು ಖಿಸ್ತು ಬಾಕೀ ಬೀಳುವ ತಿಂಗಳ ಆಖೈರ್ ವಳಗಾಗಿ ಖಿಸ್ತು ಕೊಡದೆ ತಪ್ಪಿದಲ್ಲಿ. ಅಮಲ್ದಾರರು ಡೆಪ್ಯುಟಿ ಕಮ್ಮಿಷನರವರ ಬರಹಮೂಲಕವಾದ ಅಪ್ಪಣೆ ಪಡೆದು ಲೈಸೆನ್ಸನ್ನು ರದ್ದುಮಾಡಿ ಮುಂದಿನ ತಿಂಗಳ ಗುರ್ರೆ ತಾರೀಖಿನದಿವಸ (ರಜಾ ದಿವಸಗಳು ಶಿವಾಯಿ) ಸದರಿ ಹಕ್ಕನ್ನು ಹೊಸ ಬಿಕರೀದಾರನಿಗೆ ಲೈಸೆನ್ಸ್ ಕೊಟ್ಟ ತಾರೀಖು ಲಾಗಾಯಿತು ಬಿಕರಿಯ ಸ್ವತಂತ್ರ ಹಕ್ಕನ್ನು ಪುನಃ ಹರಾಜು ಮಾಡಬಹುದು. ಅಥವಾ ಸದರಿ ಹಕ್ಕು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರುವ ರೀತ್ಯಾ ಇತರ ವಿಧವಾಗಿ ವಿಲೇವಾರಿ ಮಾಡಬಹುದು. ಸದರಿ ಹಕ್ಕನ್ನು ರದ್ದುಮಾಡುವದರಿಂದ ಮತ್ತು ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲೇವಾರಿ ಮಾಡುವದರಿಂದ ಉಂಟಾಗುವ ಎಲ್ಲಾ ನಷ್ಟಕ್ಕೂ ತಪ್ಪಿತಸ್ಥನು ಗುರಿಯಾಗಿರುತ್ತಾನೆ. ಆದರೆ ಏನಾದರೂ ಲಾಭ ಬಂದಲ್ಲಿ ಅದಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಇಜಾರೆ ಪ್ರಾರಂಭದಲ್ಲಿ ಇಡಲ್ಪಟ್ಟ ಠೇವಣಿ ಏನಾದರೂ ಇದ್ದಲ್ಲಿ, ಇದರ ಪೂರಾ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸನ್ನು ಸಸ್ಪೆಂಡು ಮಾಡಲಿಕ್ಕೆ ಅಧಿಕಾರವುಳ್ಳ ಆಫಿಸರು ತಮಗೆ ಯುಕ್ತ ಕಂಡರೆ ಪುನಃ ಹರಾಜು ಅಥವಾ ಇತರ ವಿಲೇವಾರಿ ಆಗುವ ವರಿವಿಗೂ ಬಿಕರಿ ನಡೆಸಲು ಅವಕಾಶ ಕೊಡಬಹುದು.

32. ಬಾಕೀ ಬೀಳುವ ಎಲ್ಲಾ ಮೊಬಲಗಿನಮೇಲೂ ತಿಂಗಳು 1ಕ್ಕೆ ಅಥವಾ ಅದರ ಭಾಗಕ್ಕೆ ರೂಪಾಯಿ 1ಕ್ಕೆ 1ಪೈ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡಬೇಕು.

33. ಲೈಸೆನ್ಸದಾರನಾಗಲಿ ಅಥವಾ ಆತನಿಂದ ನೇಮಿಸಲ್ಪಟ್ಟ ಯಾವ ಮನುಷ್ಯನಾಗಲಿ ಲೈಸೆನ್ಸಿನ ಯಾವ ಷರತ್ತುಗಳಿಗೆ ವಿರೋಧವಾಗಿ ನಡೆದರೆ, ಲೈಸೆನ್ಸದಾರನಿಗೆ—

(a) 50 ರೂಪಾಯಿನವರಿಗೆ ಜುರ್ಮಾನೆ ಅಥವಾ (b) ಠೇವಣಿಗಳೇನಾದರೂ ಇದ್ದಲ್ಲಿ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಲೈಸೆನ್ಸು ರದ್ದುಮಾಡಲ್ಪಡುವದು ಮತ್ತು ಲೈಸೆನ್ಸದಾರ್ರನ್ನು ನಷ್ಟಕ್ಕೆ ಗುರಿಮಾಡಿ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಅಥವಾ ಇತರ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಈ ಮೇಲ್ಕಂಡ ಅಂಶಗಳಿಗೆ ಲೈಸೆನ್ಸದಾರನು ಬಳಗಾಗಿರುತ್ತಾನೆ.

ಲೈಸೆನ್ಸದಾರನು ಅಥವಾ ಆತನ ಮುತಾಲಿಕನು ಆತನು ಮಾಡಿರುವ ತಕ್ಸೀರಿಗೆ ಆಪಾದನೆ ಮಾಡಲ್ಪಡಬಹುದು. ಈ ಷರತ್ತಿನಂತೆ ಇಜಾರೆಯು ರದ್ದು ಮಾಡಲ್ಪಟ್ಟರೆ ಇಜಾರೆಯ ಪೂರಾ ಮೊಬಲಗು ಕೂಡ್ಲೆ ಬಾಕಿ ಬೀಳುವದು.

ಷರಾ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪುಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

34. ಲೈಸೆನ್ಸದಾರನು ಎಕ್ಸೈಜ್ ರೆಗ್ಯುಲೇಷನ್ ಯಾ ಅಫೀಂ ಆಕ್ಟಿಗೆ ವಿರೋಧವಾಗಿ ಅಥವಾ ಇಂಡಿಯನ್ ಪೆನಲ್ ಕೋಡಿನಲ್ಲಿ ನಮೂದಿಸಿರುವ ಯಾವ ತಕ್ಸೀರಿಗಾದರೂ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದಲ್ಲಿ, ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸದಾರನಾಗಿರಲು ನಾಲಾಯಖೆಂದು ಕಂಡುಬಂದಲ್ಲಿ, ಯಾವ ಲೈಸೆನ್ಸಾದರೂ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ ಅವನ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹಕ್ಕುದಾರಿಯ ಹರಾಜು ಮುಂಜೂರಾದನಂತರ ಕ್ರಮವಾದ ಲೈಸೆನ್ಸು ಕೊಡುವದಕ್ಕೆ ಮುಂಚೆಯಾದ

ರೂ ಕೂಡ ಹಕ್ಕನ್ನು ಕೊಂಡುಕೊಂಡವನು ಮೇಲೆ ನಮೂದಿಸಿರುವ ಯಾವ ತಕ್ಸೀರಿಗಾದರೂ ಸಾಬೀತು ಮಾಡಲ್ಪಟ್ಟಲ್ಲಿ ಈ ಷರತ್ತಿನಲ್ಲಿ ನಿಬಂಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರುತ್ತಾನೆ. ಈ ಷರತ್ತಿನ ಮೇರೆ ಲೈಸೆನ್ಸ್ ದಂಡವಾಗಿ ತೆಗೆದುಕೊಳ್ಳಲ್ಪಡೋಣವು, ಇಜಾರೆ ಷರತ್ತಿನ ಪ್ರಕಾರ ಸರ್ಕಾರಕ್ಕೆ ಪಾವತಿಯಾಗಬೇಕಾದ ಮೊಬಲಗು ಜಾತಾ ಉಳಿಯುವ ಎಲ್ಲಾ ಠೇವಣಿಗಳು ದಂಡವಾಗಿ ತೆಗೆದುಕೊಳ್ಳಲ್ಪಡುವುದಕ್ಕೂ ಲೈಸೆನ್ಸ್‌ದಾರನನ್ನು ಗುರಿಮಾಡುತ್ತದೆ.

35. ಷರಾಬು, ಮದಕ ಪದಾರ್ಥಗಳು ಮತ್ತು ಅಫೀಮನ್ನು ಬಯ್ಯುವ, ತಯಾರ್ಮಾಡುವ ಅಥವಾ ಬಿಕರಿ ಮಾಡುವದರಲ್ಲಿ ತಮ್ಮಿಂದ ನೌಕರರ್ರಾಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಅಥವಾ ಅಫೀಂ ಕಾನೂನುಗಳಿಗೆ ಅಥವಾ ಅವರ ಒಪ್ಪಂದಗಳಿಗೆ ವಿರೋಧವಾಗಿ ನಡೆದದ್ದು ತಮಗ ತಿಳಿದುಬಂದರೆ ಲೈಸೆನ್ಸ್‌ದಾರರು ಡೆಪ್ಯುಟಿ ಕಮ್ಮಿಷನರವರಿಗೆ ಇಂಥಾ ಎಲ್ಲಾ ಸಂದರ್ಭಗಳನ್ನು ರಿಪೋರ್ಟು ಮಾಡುವದಕ್ಕೂ ಮತ್ತು ಅಂಥವರನ್ನು ಇನ್ನೂ ಕೆಲಸದಲ್ಲಿಟ್ಟುಕೊಂಡಿರುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರು ಕೊಡುವ ಹುಕುಮಿನಂತೆ ಜಾರೀಲಿ ತರುವುದಕ್ಕೂ ಬದ್ಧರಾಗಿರುತ್ತಾರೆ. ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಯಾವ ತಪ್ಪಿತಕ್ಕಾದರೂ ಸಾಬೀತಾದ ಮನುಷ್ಯರನ್ನು ಷರಾಬು, ಮದಕ ಪದಾರ್ಥ ಮತ್ತು ಅಫೀಮನ್ನು ಬಯ್ಯುವದಕ್ಕೆ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಇಲ್ಲದೆ ನೇಮಿಸಕೂಡದು.

36. ಲೈಸೆನ್ಸ್‌ದಾರರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಯಾವ ವಿಧವಾದ ಹಣಸಂಬಂಧವಾದ ಲೇವಾದೇವಿಯನ್ನು ಖಂಡಿತವಾಗಿಯೂ ಇಟ್ಟುಕೊಳ್ಳಕೂಡದು.

37. ಎಕ್ಸೈಜ್ ಕಮ್ಮಿಷನರವರ ಅಪ್ಪಣೆ ಪಡೆದು ಲೈಸೆನ್ಸ್ ಮೋಖೂಫ್‌ಬಗ್ಗೆ 15 ದಿವಸಗಳ ಮುಂಚಿನ ನೋಟೀಸ್ ಕೊಟ್ಟು ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತ್ಯಾನುಸಾರ ಯಾವ ಲೈಸೆನ್ಸನ್ನಾದರೂ ಮೋಖೂಫ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಅದಕ್ಕಾಗುವ ದಾಮಾಷಾಯ ಗುತ್ತಾ ಮೊಬಲಗು ವಾಪಸು ಕೊಡಲ್ಪಡಬೇಕು.

38. ಎಲ್ಲಾ ಲೈಸೆನ್ಸ್‌ದಾರರು ಸರ್ಕಾರದಿಂದ ಎಕ್ಸೈಜ್ ಅಥವಾ ಅಫೀಂ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ಜಾಸ್ತಿ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧರಾಗಿರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರವರು ಸರಿಪಡಿಸುವ ಯಾ ಹೊಸ ಲೈಸೆನ್ಸನ್ನು ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

39. ಲೈಸೆನ್ಸಿಗೆ ಸಂಬಂಧಪಡದ ಷರಾಬು ಯಾ ಮದಕ ಪದಾರ್ಥಗಳ ವಿಷಯದಲ್ಲಿ ಯಾವದಾದರೂ ಏರ್ಪಾಡು ಮಾಡಲ್ಪಡುವ ಪಕ್ಷದಲ್ಲಿ ಲೈಸೆನ್ಸ್‌ದಾರರಿಗೆ ಪರಿಹಾರ ದ್ರವ್ಯಕ್ಕೂ ಯಾ ರಿಮಿಷನ್ ಯಾನೆ ಸೋಡಿಗೂ ಹಕ್ಕು ಇರಲಾರದು.

40. ಯಾವ ತರಹೆ ಷರಾಬು ಅಂಗಡಿಯ ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ವಾಯಿದೆ ಒಳಗೆ ಅಲ್ಲಿಂದ 5 ಮೈಲಿ ಒಳಗೆ ಇತರ ಷರಾಬುಗಳನ್ನು ಮಾರತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು ಮತ್ತು ತನ್ನ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಅಂಥಾ ಯಾವ ಮನುಷ್ಯನನ್ನೂ ಪಾಲುಗಾರನನ್ನಾಗಲಿ ಅಥವಾ ಸಂಬಂಧವುಳ್ಳವನನ್ನಾಗಲಿ ಮಾಡಲು ಅವಕಾಶ ಕೊಡಕೂಡದು.

XX. ಸಾರಾಯಿ ಲೈಸೆನ್ಸಿಗೆ ಲಗಾವಾಗುವ ಷರತ್ತುಗಳು.

1. ಈ ಲೈಸೆನ್ಸಿಂದ ಕೊಡಲ್ಪಟ್ಟ ಹಕ್ಕು ಸಾಧಾರಣವಾಗಿ 20° ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವುದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫಿಸರರ ಅಪ್ಪಣೆಯಿಂದ 30° ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವುದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರದೇಶೀಯ ಮದ್ಯಗಳನ್ನು ಮಾರತಕ್ಕ ಅಂಗಡಿಗಳಿಲ್ಲದೇ ಇರತಕ್ಕ ಪ್ರದೇಶಗಳಲ್ಲಿಯೂ ಅಥವಾ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ವಿಶೇಷ ಮದ್ಯಗಳನ್ನೂ, ಯಾ ಪರದೇಶೀಯ ಮದ್ಯಗಳ ಅಂಗಡೀದಾರರು ಎಕ್ಸೈಜ್ ಕಮ್ಮಿಷನರವರಿಂದ ನಿರ್ಣಯಿಸಲ್ಪಟ್ಟ ಜೋರುಳ್ಳ ವಿಶೇಷ ಅಥವಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಮಾರದೇ ಇರತಕ್ಕ ಸ್ಥಳಗಳಲ್ಲಿಯೂ ಒಪ್ಪಿತವಾದ ನಡತೆಯುಳ್ಳ ಸಾರಾಯಿ ಅಂಗಡಿ ಲೈಸೆನ್ಸುದಾರನು ಎಕ್ಸೈಜ್ ಕಮ್ಮಿಷನರವರ ಮಂಜೂರು ಹುಕುಂ ಪಡದು ಸದರೀ ಮದ್ಯಗಳನ್ನು ಕ್ರಮವಾಗಿ ಬಿರಟೆ ಮೊಹರು ಆಗಿರುವ ಶೀಶೆಗಳಲ್ಲಿ ಎಕ್ಸೈಜ್ ಕಮ್ಮಿಷನರ್ ಗೊತ್ತುಮಾಡಿದ ಖರೀದಿ ದರದ ಮೇರೆಗೆ ಮತ್ತು ಸಾರಾಯಿ ಮಾರಾಟಕ್ಕೆ ಸಂಬಂಧಪಟ್ಟ ಷರತ್ತುಗಳಿಗೆ ಒಳಪಟ್ಟು ಅಂಗಡಿಯ ಆವರಣದಲ್ಲಿ ಕುಡಿಯದಂತೆ ಮಾರಲು ಅಪ್ಪಣೆ ಕೊಡಲ್ಪಡಬಹುದು. ಅದೇಮೇರೆಗೆ ಬೆಲ್ಲದ ಸಾರಾಯಿ ಅಥವಾ ವಿಶೇಷ ಮದ್ಯಗಳನ್ನು ಮಾರುವುದಕ್ಕೆ ಪ್ರತ್ಯೇಕ ಅಂಗಡಿಗಳ ಲೈಸೆನ್ಸಿಲ್ಲದೆ ಇದ್ದ ಪ್ರದೇಶಗಳಲ್ಲಿ ಷರಾಬು ಅಂಗಡಿ ಯವನು ರೆಪ್ಯುಟೆಡ್ ಪಾಯಿಂಟ್ ಅಥವಾ ಕ್ವಾರ್ಟ್ ಶೀಶೆಗಳಲ್ಲಿ ಬೆಲ್ಲದ ಸಾರಾಯಿಯನ್ನು ಮಾರಲು ಅಪ್ಪಣೆ ಕೊಡಬಹುದು.

2. ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಕೋಠಿಗಳಿಂದ ಮದ್ಯಗಳನ್ನು ಈ ಕೆಳಗೆ ನಮೂದಿಸಿರುವ ದರಗಳಂತೆ ಕೊಂಡುಕೊಳ್ಳಬಹುದು :—.

(1) ತಾಟಿಬೆಲ್ಲ ಮತ್ತು ಕಾಕಂಬಿ ಸಾರಾಯಿ 20° ಡಿಗ್ರಿಯುಳ್ಳ ಗ್ಯಾಲಾ 1ಕ್ಕೆ ರೂಪಾಯಿ 0-10-11 ಪೈ ಪ್ರಕಾರ.

(2) ಕಬ್ಬಿನಬೆಲ್ಲದ ಸಾರಾಯಿಯ ಬಿರಟೆಹಾಕಿ, ಶೀಲು ಹಾಕಿರುವ ಶೀಷೆಗಳನ್ನು 20° ಡಿಗ್ರಿಯ ಗ್ಯಾಲಾ 1ಕ್ಕೆ ರೂಪಾಯಿ 1—6—5 ಪೈ ಅಥವಾ ಆಗಿಂದಾಗ್ಯೆ ಗೊತ್ತುಮಾಡುವ ಇತರ ದರ.

(3) ಮೇಲೆ ನಮೂದಿಸಿರುವ ವಿಶೇಷ ಮದ್ಯಗಳು ತಯಾರ್ಮಾಡುವವರಿಂದ ಗೊತ್ತುಮಾಡಲ್ಪಡುವ ಖರೀದಿಗಳ ಮೇರೆಗೆ.

(4) ಬಂದೇಸಾರಿಗೆ ಕೊಂಡುಕೊಳ್ಳತಕ್ಕ ಮೊತ್ತವು ಷರಾಬಿಗೆ ಒಂದು ಗ್ಯಾಲಾಕ್ಕಿಂತಲೂ, ಇತರವಿಧವಾದ ಮದ್ಯಗಳಿಗೆ ಮೂರು ಶೀಷೆಗಳೂ ಯಾ ಆರು ಪೈಂಟುಗಳಿಗಿಂತಲೂ ಕಮ್ಮಿಯಾಗಿರಕೂಡದು.

(5) ಬಾಂಡೆಡ್ ಡಿಪೋದಿಂದ ಷರಾಬನ್ನು ಒಯ್ಯುವದಕ್ಕಿಂತಮುಂಚೆ ತಾಟಬೆಲ್ಲ, ಕಾಕಂಬಿಸಾರಾಯಿ, ಕಬ್ಬಿನಬೆಲ್ಲದ ಸಾರಾಯಿ ಮತ್ತು ವಿಶೇಷ ಮದ್ಯಗಳು ಇವುಗಳಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿಗಳು ಶಿವಾಯಿ 20ಂ ಡಿಗ್ರಿ ಅಂಡರ್ ಪ್ರೂಫ್ ಗ್ಯಾಲಂ 1ಕ್ಕೆ ವಿಧಾಯಕವಾಗಿರುವ $4\frac{3}{4}$ ರೂಪಾಯಿನ ದರದಂತೆಯೂ, ಸದರಿ ಜೋರಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಸಾರಾಯಿಗಳಿಗೆ ಅವುಗಳ ದಾಮಾಷಾಯಿ ದರದಂತೆಯೂ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗೆದುಕೊಳ್ಳುವುದಕ್ಕಾಗಿ ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನು ಇದ್ದಲ್ಲಿ ಆತನ ವಶಕ್ಕೆ, ಅಥವಾ ಡೆಪ್ಯುಟಿ ಕಮ್ಮಿಷನರ್ ಇದಕ್ಕಾಗಿ ಮೊಕರರ್ಮಾಡಿರುವ ಇನ್ಯಾವ ನೌಕರನಿಗಾದರೂ ಪಾವತೀ ಮಾಡಿ ಗೊತ್ತುಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನು ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರಿ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಮದ್ಯವನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಮದ್ಯವು ರವಾನೆ ಆದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಡೆಪ್ಯುಟಿ ಕಮ್ಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡಿಪೋದಿಂದ ಮದ್ಯವನ್ನು ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್ ಬಾಟ್ಲು ಯಾನೆ ಮಾದ್ರಿಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು 20ಂ ಡಿಗ್ರಿ ಅಂಡರ್ ಪ್ರೂಫ್ ಜೋರಿನ ತಾಟೀ ಬೆಲ್ಲದ ಮತ್ತು ಕಾಕಂಬಿ ಸಾರಾಯಿಯನ್ನು ಗ್ಯಾಲನ್ 1ಕ್ಕೆ 6-6-0 ಯಂತೆಯೂ ಅಥವಾ ಗ್ಯಾಲನ್ನಿನ 1—51ನೆ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ ಕಬ್ಬಿನ ಬೆಲ್ಲದ ಸಾರಾಯಿಯನ್ನು ಒಂದು ರೆಪ್ಯೂಟೆಡ್ ಕ್ವಾರ್ಟ್ ಶೀಶೆ 1ಕ್ಕೆ 1—3—10 ರಂತೆಯೂ ಅಥವಾ ಆಗಿಂದಾಗ್ಯೆ ಗೊತ್ತುಮಾಡುವ ಖರೀದಿ ದರದಂತೆಯೂ ಸದರಿ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

(8) ಲೈಸೆನ್ಸ್ದಾರನು 1909ನೆ ಇಸವಿ ಜುಲೈ 1ನೆ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸ್ದಾರನ ಬಾಬತು ದಾಸ್ತಾ ಮದ್ಯವನ್ನು ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(9) ಅಂಗಡಿಗಳ ಸಮುದಾಯವನ್ನು ಕೊಂಡುಕೊಂಡಿರುವವರು ಎಕ್ಸೈಜ್ ಕಮ್ಮಿಷನರವರ ವಿಶೇಷ ಅಪ್ಪಣೆಯನ್ನು ಪಡೆದು ಸರಿಯಾದ ಅಧಿಕಾರಿಗಳಿಂದ ಲೈಸೆನ್ಸ ಪಡೆದು ಕೋಠಿಯನ್ನು ಇಟ್ಟುಕೊಂಡು ಅಲ್ಲಿಗೆ ಬಾಂಡೆಡ್ ಕೋಠಿಯಲ್ಲಿ ವಿಕ್ರಯಿಸಿರುವ ಸರಕನ್ನು ತೆಗಿಸಿಕೊಂಡು ಹೋಗಿ ಅಲ್ಲಿಂದ ತಮ್ಮ ಅಂಗಡಿಗಳಿಗೆ ಅವಶ್ಯಕವಾಗಿರುವ ಸರಬರಾಯಿಯನ್ನು ಮಾಡಿಕೊಳ್ಳಬಹುದು. ಇಂಥಾ ಅಪ್ಪಣೆಯನ್ನು ತಿರಸ್ಕರಿಸಲು ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಸ್ವಾತಂತ್ರವುಳ್ಳವರಾಗಿರುತ್ತಾರೆ.

(10) ಬ್ರಿಟಿಷ್ ರಾಜ್ಯದ ದ್ವಾರಾ ಒಯ್ಯಲ್ಪಟ್ಟ ಅಂಗಡಿಗಳಿಗೆ ಬರತಕ್ಕ ಸಾರಾಯಿಯ ಮೊಹರನ್ನು ಸರ್ಕಾರದಿಂದ ಸರಕು ಮೊಖಾಬಿಲೆ ಬಗ್ಗೆ ನೇಮಿಸಲ್ಪಟ್ಟಿರುವ ನೌಕರಮಾನೇರಿಂದ ಸದರಿ ಸರಕು ಮೊಕಾಬಿಲೆ ಮಾಡಲ್ಪಡುವ ವರೆಗೂ ಒಡೆಯಕೂಡದು.

(11) ಷರಾಬ್ ಬಿಕರೀ ಆಗುವ ದುಕಾನಿನಲ್ಲಾಗಲೀ ಯಾ ಲೈಸೆನ್ಸ್ದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ ಯಾ ಅಂಥಾವನ ದುಕಾನಿನ ನೌಕರರ ಬಳಿಯಲ್ಲಾಗಲೀ, ಅಥವಾ ಅವರ ಸ್ವಾಧೀನದಲ್ಲಾಗಲೀ, ಷರಾಬ್ ಬಿನಹ ಇತರ ಯಾವ ಮದ್ಯವಾಗಲಿ ನೀರೇ ಆಗಲಿ ಯಾ ಇತರ ಪಾನವಾಗಲೀ ಎಷ್ಟುಮಟ್ಟಿಗೂ ಇರತಕ್ಕದ್ದಲ್ಲವು, ಮತ್ತು ಮಾರತಕ್ಕದ್ದಲ್ಲವು.

(12) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ವರುಷ 1ಕ್ಕೆ 180 ರೂಪಾಯಿ ದರದ ಮೇರೆಗೆ ಮುನಿಸಿಪಲ್ ಕಾನೂನ್ ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಮುಂಗಡವಾಗಿ ಕೊಡಬೇಕು. ಮತ್ತು ಆತನು ಪ್ರತಿ ತಿಂಗಳಲ್ಲಿಯೂ ಅಂಥಾ ಪ್ರತಿ ಅಂಗಡಿಯಲ್ಲೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕೆ 4 ಆಣೆ ಪ್ರಕಾರ ಸರ್ಚಾರ್ಜ್ ಫೀಯನ್ನು ಸಹ ಕೊಡಬೇಕು. ಸದರಿ ಮೊಬಲಗು ಮ್ಯುನಿಸಿಪಲ್ ಕಮ್ಮಿಟೀ ಪ್ರೆಸಿಡೆಂಟರವರಿಂದ ನೇಮಿಸಲ್ಪಡುವ ಆಫೀಸರವರಿಗೆ ಪಾವತಿ ಮಾಡಲ್ಪಡಬೇಕು.

XXI. ಶೇಂದಿ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಲೈಸೆನ್ಸ ಪ್ರಕಾರ ಕೊಡಲ್ಪಟ್ಟ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ತೆಂಗು ಮತ್ತು ಬಗನಿ ವ ದಡಸಾಲ್ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸದಾರನು, ಬಗನಿ ಮರಗಳನ್ನು ಬಗನಿ ಶೇಂದಿ ಅಂಗಡಿ ಲೈಸೆನ್ಸದಾರನು ಈಚಲು ಮರಗಳನ್ನು ಕಟ್ಟಕೂಡದು, ಆದರೆ ಈ ಉಭಯ ಲೈಸೆನ್ಸದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳನ್ನು ಕಟ್ಟಬಹುದು.

(2) ಲೈಸೆನ್ಸದಾರನು ತನ್ನ ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸಿನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವುದಕ್ಕೆ ಸ್ವತಂತ್ರನಾಗಿರುತ್ತಾನೆ. ಆದರೆ ಅಂಥಾ ಮರಗಳು ಆತನ ಇಜಾರೆಗೆ ಸಂಬಂಧಪಡದ ಅಂಗಡಿಯ ಸಮೀಪದಲ್ಲಿ ಯಾ ಸರಹದ್ದಿನೊಳಗೆ ಇದ್ದಪಕ್ಷದಲ್ಲಿ ಸದರಿ ಮರಗಳನ್ನು ಉತಾರ್ಮಾಡಲು ದರಖಾಸ್ತು ಮಾಡುವದಕ್ಕೆ ಮುಂಚೆ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರವರ ಮಂಜೂರಾತಿಯನ್ನು ಪಡೆಯಬೇಕು. ಲೈಸೆನ್ಸದಾರನು ಇನ್ಸ್‌ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಗೆ ಅವರಿಂದ ಅಪ್ಪಣೆ ಚೀಟಿ ಪಡೆದು ಇತರ ಶೇಂದಿ ದುಕಾನ್ದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು; ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್‌ಪೆಕ್ಟರವರು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ.

(3) ಸರಿಯಾದ ಲೈಸೆನ್ಸ್ ಪಡೆದು, ಆ ಲೈಸೆನ್ಸುಮೇರೆ ಉತಾರ್ಮಾಡಿರುವ ಮರಗಳ ಶೇಂದಿ ವಿನಹಾ ಮತ್ತ್ಯಾವ ವಿಧವಾದ ಶೇಂದಿಯನ್ನು ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು. ಮಾರುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(4) ಉತಾರ ಲೈಸೆನ್ಸುಗಳ ಷರತ್ತುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಲೈಸೆನ್ಸದಾರನು, ತನ್ನ ಹೆಸರಿನಲ್ಲಿಯೂ ಅಥವಾ ಅವನ ವಾರಸುದಾರನ ಹೆಸರಿನಲ್ಲಿಯೂ ದರಖಾಸ್ತಿನ ಮೇಲೆ ಕೊಡಲ್ಪಟ್ಟ ಉತಾರ ಲೈಸೆನ್ಸುಗಳಿಗಾಗಿ ಕೊಡಬೇಕಾದ ಎಲ್ಲಾ ತೆರಿಗೆಗಳ ಖಿಸ್ತುಗಳಿಗೂ ಸರ್ಕಾರಕ್ಕೆ ಜವಾಬ್ದಾರನಾಗಿರುತ್ತಾನೆ.

(5) ನಿರ್ಣಯಿಸಿದ ಕಾಲದೊಳಗಾಗಿ ಯಾವ ಬಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೆ ಸೆಕ್ಷನ್ ಮೇರೆಗೆ ಉತಾರ್ ಲೈಸೆನ್ಸ್ ರದ್ದು ಯಾ ಹಂಗಾಮಿಯಾಗಿ ಮೋಕೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(6) ಮೇಲ್ಕಂಡಂತೆ ನಡೆಯುಲು ತಪ್ಪಿದಲ್ಲಿ ಅಮಲ್ದಾರರು ಡೆಪ್ಯುಟಿ ಕಮ್ಮಿಷನರವರ ಅಥವಾ ಡೆಪ್ಯುಟಿ ಕಮ್ಮಿಷನರವರಿಂದ ಇದಕ್ಕಾಗಿ ನೇಮಕಮಾಡಲ್ಪಡುವ ಇತರ ಆಫೀಸರವರ ಹುಕುಂ ಪಡೆದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವ ವರಿಗೂ ಉತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರ ನೋಟೀಸು ತನಗೆ ಬಂದಿದ್ದರಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇನೇ ಇದ್ದಲ್ಲಿ ನ್ಯಾಯವಿರುದ್ಧವಾಗಿ ಉತಾರು ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(7) ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಉತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಕಾಲದಲ್ಲಿ ಸಾಲಿಯಾನಾ ಮರ ಒಂದಕ್ಕೆ 4 ಆಣೆ 3 ಪೈ ಪ್ರಕಾರ ಮರದ ಮಾಲ್ಕಿ ಮೊಬಲಗು ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು, ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗತಕ್ಕದ್ದು.

(8) ಈಚಲು ಮರಗಳನ್ನು ಉತಾರ್ಮಾಡುವದು ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು:—

(a) ಈಚಲು ಮರಗಳು ಕಸಬುದಾರ್ರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮಾರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೆಡಿಸಕೂಡದು.

(d) ಡೆಪ್ಯುಟಿ ಕಮ್ಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು ಮತ್ತು ಅದರ ಉದ್ದವೂ 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಸೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಿಸೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ ಮಾಡಿದರೆ ಎರಡು ವರಿಸೆಗಳಿಗೆ ಕಮ್ಮಿಯಾಗಿರಕೂಡದು; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸುದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೇ ಕಾಲದಲ್ಲಿ ಆಗಲಿ ಅಥವಾ ಗುತ್ತಿಗೆ ಪೂರೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿ

ಹೋದ ಮರಗಳು ಆತನಿಗೆ ಸಂಖ್ಯೆಹಾಕಿ ಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕೂ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ. ಆತನು ಉತಾರಿಗಾಗಿ ತಯಾರ್ಮಾಡುವ ಪ್ರತಿ ಒಂದು ಮರಕ್ಕೂ ಅದು ಸದರಿ ತಯಾರಿಯಿಂದ ಉತಾರಾಗುವದಕ್ಕೆ ಮುಂಚೆ ನಾಶವಾದಲ್ಲಿ ಅದೇ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(j) ಜನಗಳ ಉಪಯೋಗಾರ್ಥವಾಗಿ ವಾಪಸು ತೆಗೆದುಕೊಂಡ ಯಾ ತೆಗೆದುಕೊಳ್ಳಲ್ಪಟ್ಟ ಮರಗಳೂ, ಇಂಜನಿಯರ್ ಇಲಾಖೆಯವರ ಆಡಳತಕೆ ಸೇರಿರುವ (ಇರ್ರಿಗೇಷನ್) ತಕಾವಿ ಕಾಂಗಾರಿಗಳಿಗೆ ಸೇರಿದ ಪ್ರದೇಶಗಳಲ್ಲಿರುವ ಮರಗಳೂ, ಇಂಜನಿಯರ್ ಇಲಾಖೆಯವರು ಸದರಿ ಮರಗಳ ಎಲೆಗಳನ್ನೂ, ಕೊಂಬೆಗಳನ್ನೂ ಕತ್ತರಿಸಬೇಕಾದ ಸಂದರ್ಭಗಳಲ್ಲಿ ಲೈಸೆನ್ಸ್‌ದಾರನಿಗೆ ಅಂಥಾ ಮರಗಳಿಗಾಗಿ ಯಾವ ಪರಿಹಾರದ್ರವ್ಯಕ್ಕೂ ಹಕ್ಕಿರುವುದಿಲ್ಲ.

(k) ಲೈಸೆನ್ಸ್‌ದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ದುಸರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(9) ಚಾಪೇ ಮಾಡುವುದಕ್ಕಾದರೂ ಹಗ್ಗ ಮಾಡುವುದಕ್ಕಾದರೂ ಗೂಡೆಗಳು ಮಾಡುವುದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸ್‌ದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(10) ಡೆಪ್ಯುಟಿ ಕಮಿಷನರುಗಳು ಆಗಾಗ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಠಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ್ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಠಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇಗ್ರಾಮದ ಮರಗಳನ್ನು ದಾಖಲ್‌ಮಾಡಬೇಕೆಂದು ಹುಕುಂ ಮಾಡಬಹುದು.

(11) ಸೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(12) ಅಂಗಡಿಗಳ ಸಮುದಾಯದ ಲೈಸೆನ್ಸ್‌ದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಸೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಸೇಂದಿಯೊಡನೆ ಕೊಡಲ್ಪಟ್ಟ ಪ್ಯಾಸುಗಳು ಆದಕ್ಕಾಗಿ ಅಧಿಕಾರ ಹೊಂದಿದ ಆಫಿಸರುಗಳ ಪರೀಕ್ಷೆ ವ ತನಿಖೆ ಬಗ್ಗೆ ಗುರಿಯಾಗತಕ್ಕದ್ದು.

(13) ಸೇಂದಿಯನ್ನು ಗಿಡದ ಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನ್ ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತದೆ. ಪರಂತು ಬಗನೀ ಮರಗಳಿರತಕ್ಕ ಪ್ರದೇಶಗಳಲ್ಲಿ ಬಗನೀ ಸೇಂದಿಯ ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸ್‌ದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರಿ ಬಗ್ಯೂ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರಗಳನ್ನು ಉತಾರ್ಮಾಡಲು ಅಪ್ಪಣೆ ಕೊಡಬಹುದು.

(14) ಯಾವ ಲೈಸೆನ್ಸ್‌ದಾರ ಯಾ ಆತನ ಬಿಕರೀದಾರರೇ ಆಗಲಿ ಮೂರು ಅಳೆಯುವ ಸೇರಿಗಿಂತಲೂ ಹೆಚ್ಚಾಗಿ ಸೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು; ಸೇಂದಿಯು ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಮಾರಲ್ಪಡಕೂಡದು. ಒಂದು ಇಂಪೀರಿಯಲ್ ಗ್ಯಾಲಾ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನಮಾಡಲಿಕ್ಕೆ ಸೇಂದಿಯನ್ನು ತೆಗೆದುಕೊಂಡು ಹೋಗಲು ಅವಕಾಶ ಕೊಡಬಹುದು.

(15) ಸೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ಲೇವನ್ನು ಯಾ ಪಾಣೆಯನ್ನು ಅಜಮಾಯಿಷಿ ಮಾಡಲಿಕ್ಕೆ ಉತಾರ್‌ದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(16) ಲೈಸೆನ್ಸ್‌ದಾರ ಸೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಯೆ ಹಿಡಿಯಲ್ಪಡಕೂಡದು.

(17) ಈ ಕೆಳಗೆ ನಮೂದಿಸಿರುವ ನಿಬಂಧನೆಗಳು 1901ನೆ ಇಸವಿಯ ಮೈಸೂರು ಎಕ್ಸೈಜ್ Vನೆ ರಗ್ಯುಲೇಷನಿನ 12ನೆ ಸೆಕ್ಷನ್ ಮೇರೆಗೆ ಸೇಂದಿ ಮರಗಳನ್ನು ಕಟ್ಟುವದಕ್ಕೂ, ಮತ್ತು ಸೇಂದಿಯನ್ನು ಉತಾರ್ಮಾಡುವದಕ್ಕೂ ಕೊಡಲ್ಪಡಬೇಕಾದ ಲೈಸೆನ್ಸುಗಳನ್ನು ಕ್ರಮಪಡಿಸುತ್ತೆ :—

(1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಯೆ ಲೈಸೆನ್ಸುಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ್ ಕೊಡಲ್ಪಟ್ಟಿರುವ ಸೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ.

(b) ಮದ್ರಾಸ್ ಆಧಿಪತ್ಯಕ್ಕೆ ಸೇರಿದ ಸೇಂದಿ ಅಂಗಡಿಕಾರರ ಅಥವಾ ಗುತ್ತಿಗೆದಾರರ.

(c) ಸನ್ 1898ನೆ ಇಸವಿ ಜೂನ್ 20ನೆ ಮಾರ್ಕುಂ 11897—906—Ex. 485ನೆ ನಂಬರುಳ್ಳ ಗವರ್ನ್ಮೆಂಟ್ ಇಸ್ತಿಹಾರ್ನಾಮೆಯನ್ನುನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಸೇಂದಿಯನ್ನು ವಿಧಾಯುಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿ ತೋಟಗಳಲ್ಲಿನೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಖಾಗೆಗಳಲ್ಲಿಯೂ ಇರುವ ಮರಗಳ ಮಾಲೀಕರು, —

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನು ಸಂಬಂಧಪಟ್ಟ ಎಕ್ಸೈಜ್ ಇನ್ಸ್ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್ಸ್ಪೆಕ್ಟರುಗಳಿಂದ ಪಡೆಯಬಹುದು. ದರಖಾಸ್ತುದಾರರು ತಾವು ಅಪೇಕ್ಷಿಸುವ ಸರ್ಕಾರೀ ಮರಗಳಿಗಾಗಿ ಮೊದಲನೇ ಕಿಸ್ತಿನ ಮರ ತೆರಿಗೆಯನ್ನೂ ಮರದ ಮೌಲ್ಯವನ್ನು ಮೊದಲೇ ಪಾವತಿ ಮಾಡಬೇಕು.

(3) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತ್ಪನ್ನವಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರ ತೆರಿಗೆಯು ಮೈಸೂರು ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರರಿಗೆ ಒಂದೇ ಕಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ಚಲನ್ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್ಪೆಕ್ಟರವರಿಂದ ರವಾನೆಯ ಪರವಾನಿಗೆಯನ್ನು ಪಡೆಯತಕ್ಕದ್ದು.

(4) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟ್ ರೇಂಜ್ ಆಫಿಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್ಪೆಕ್ಟರವರು ಸಬ್ ಇನ್ಸ್ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಉದ್ಯೋಗಸ್ಥರಿಂದ ಅಥವಾ ವಿಶೇಷ ಸಂದರ್ಭಗಳಲ್ಲಿ ಸಬ್ ಇನ್ಸ್ಪೆಕ್ಟರ ದರ್ಜೆಗೆ ಕಮ್ಮಿಯಾಗಿಲ್ಲದ ಇರತಕ್ಕ ನೌಕರನಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದ್ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳ ಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫಿಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟಿಸ್ ಕೊಟ್ಟ ತರುವಾಯ ಹಾಗೆ ಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮೌಲ್ಯವೂ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟಕೂಡಲೆ ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗರಿಗಳನ್ನು ತೆಗೆದುಹಾಕಲಿಕ್ಕೂ, ಪಾಣೆ ಯಾ ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(7) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಟೆಯಾಗಿರತಕ್ಕದ್ದು. ಅಂದರೆ ಉತಾರ್ ಲೈಸೆನ್ಸಿಗೆ ದರಖಾಸ್ತು ಯಾವ ಕಾಲದಲ್ಲಿ ಕೊಡಲ್ಪಡಲಿ, ಜುಲೈ ಗುರ್ರೇ ಲಾಗಾಯಿತು ಜೂನ್ ಆಖೈರ್ ವರೆಗೆ ಆಗಿರುತ್ತೆ. ಲೈಸೆನ್ಸದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ ಬಗ್ಗೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖ್ಯೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಲೈಸೆನ್ಸ ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(8) ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಮರಕ್ಕು ಈ ಕೆಳಗೆ ನಮೂದು ಮಾಡಿರುವ ತೆರಿಗೆಗಳು ಪಾವತಿಯಾಗತಕ್ಕದ್ದು:—

ಮರದ ತರಹೆ—	ಮರ ಒಂದಕ್ಕೆ ವರುಷ ಒಂದಕೆ ಕೊಡಬೇಕಾದ ಮರತೆರಿಗೆ. ರೂ.	ಆ.	ಪೈ.
ಈಚಲು	1	4	0
ತೆಂಗು	2	2	0
ತಾಳೆ	1	9	6
ಬಗನಿ	2	0	0
ದಡಸಾಲು	0	8	6

ಟಿಪ್ಪಣಿ.—ಮೇಲೆ ನಮೂದಿಸಿರುವ 17 (1) (c)ನೆ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(9) ಎಕ್ಸೈಜ್ ಕಮ್ಮಿಷನರ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆ ಮೊಬಲಗು ಈ ಕೆಳಗೆ ನಮೂದ್ ಮಾಡಿರುವ ಕಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು:—

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರತೆರಿಗೆ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಗುರ್ರು ತಾರೀಖಿನಲ್ಲಿ ಪಾವತಿಯಾಗಬೇಕಾದ ಮರ ತೆರಿಗೆ ದಾಮಾಷಾಯಿ.
1909ನೆ ಇಸವಿ ಜುಲೈ ಗುರ್ರು ಲಾಗಾಯಿಯಿತು 1910ನೆ ಏಪ್ರಿಲ್ 30ನೆ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದು ಭಾಗ.	ಉಳಿದ ಮೂರರಲ್ಲಿ ಎರಡು ಭಾಗವು.
1910ನೆ ಇಸವಿ ಮೇ ಗುರ್ರು ಲಾಗಾಯಿತು 1910ನೆ ಜೂನ್ 30ನೆ ತಾರೀಖಿನ ವಳಗಾಗಿ.	ಎಲ್ಲಾ.	ಇಲ್ಲಾ.

XXII. ಗಾಂಜಾ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು:—

(1) ಗಾಂಜಾ ಲೈಸೆನ್ಸಿನಿಂದ ಗಾಂಜಾ ಮತ್ತು ಭಂಗಿ ಗಿಡದಿಂದ ತಯಾರ್ಮಾಡಲ್ಪಟ್ಟ ಇತರ ಮದಕ ಪದಾರ್ಥಗಳ ಬಿಕರಿಗೆ ಮಾತ್ರ ಹಕ್ಕು ಉಂಟಾಗುತ್ತೆ.

(2) (ಇನ್ಸ್‌ಪೆಕ್ಟರ ಅಪ್ಪಣೆ ಮೇರೆಗೆ ಬಿಕರಿದಾರನ ಜವಾಬ್ದಾರಿಮೇಲೂ ಅವನ ಉಕ್ಕಾನಿಗೂ ಬಿಳಪಟ್ಟು ಬಾಜಾರಿ ಜನಗಳಿಗೆ ವಿಕ್ರಯಿಸುವ ಬಗ್ಗೆ ಚಿಲ್ಲರೆ ಪುರೋಖುತ್ತದಾರನಲ್ಲಿರತಕ್ಕ ಪುಡಿಯಿಂದ ತಯಾರ್ಮಾಡಲ್ಪಟ್ಟ ಹಲವಾ ಶಿವಾಯಿ) ತಮಾಂ ಗಾಂಜಾ ಅಥವಾ ಅದರ ತಯಾರಿಗಳೂ ಮತ್ತು ಮಿಲಾವಣೆಗಳೂ ಸರ್ಕಾರದಿಂದ ಮಾತ್ರವೇ ಕೊಂಡುಕೊಳ್ಳಲ್ಪಡತಕ್ಕವು. ಮತ್ತು ಇದಕ್ಕೆ ವಿಧಾಯಕವಾದ ಫಾರಂನಲ್ಲಿ ಒಂದು ಪರ್ಮಿಟ್ ಇರತಕ್ಕದ್ದು.

(3) 80 ತೊಲೆಗಳುಳ್ಳ ಸೇರು 1ಕ್ಕೆ ಗಾಂಜಾವಿನ ಖರೀದಿಯು ರೂಪಾಯಿ 1—0—0 ಪ್ರಕಾರವೂ, ಮಾಜುಮಿನ ಖರೀದಿಯು ರೂ. 0—6—6 ಪ್ರಕಾರವೂ ಇರತಕ್ಕದ್ದು; ಈ ಖರೀದಿಗಳು (ಲೋಕಲ್ ಸೆಸ್ಸ್ ಸೇರಿ) ಗಾಂಜಾ ಸೇರು 1ಕ್ಕೆ ರೂ. 5—0—0 ಮತ್ತು ಮಾಜುಂ ಸೇರು 1ಕ್ಕೆ ರೂ. 1—1—0 ಪ್ರಕಾರದ ಹಾಸಲಲ್ಲದೆ ಪ್ರತ್ಯೇಕವಾಗಿ ಪಾವತಿಯಾಗತಕ್ಕದ್ದು.

(4) ಲೈಸೆನ್ಸುದಾರನು ಮೇಲ್ಕಂಡ ಹಾಸಲನ್ನೂ ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಪಾವತಿಮಾಡಿ ಗೊತ್ತುಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನು ತಾಲ್ಲೂಕು ಖಜಾನೆಯಲ್ಲಿ ಹಾಜರ್ಮಾಡಿದರೆ ಖಜಾನೆಯುವರು ಸದರಿ ರಶೀತಿಯಲ್ಲಿ ನಮೂದು ಮಾಡಿರುವ ಹಾಸಲು ಮತ್ತು ಖರೀದಿ ಮೊಬಲಗಿಗೆ ಸರಿಯಾದ ಗಾಂಜಾ ಯಾ ಮಾಜುಮನ್ನು ಸರಬರಾಯಿ ಮಾಡತಕ್ಕದ್ದು. ಮತ್ತು ಗಾಂಜಾ ಯಾ ಮಾಜುಮನ್ನು ಲೈಸೆನ್ಸ್ ಪಡೆದ ಅಂಗಡಿಗೆ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(5) ಗಾಂಜಾ 80 ತೊಲೆ ಸೇರು 1ಕ್ಕೆ 10 ರೂಪಾಯಿ ಪ್ರಕಾರವೂ ಯಾ ತೊಲೆ 1ಕ್ಕೆ ಎರಡಾಣೆ ಪ್ರಕಾರವೂ ಮಾಜುಂ ಸೇರು 1ಕ್ಕೆ ರೂ. 1—10—8 ಪ್ರಕಾರವೂ, ಲೈಸೆನ್ಸದಾರನಿಂದ ವಿಕ್ರಯಿಸಲ್ಪಡತಕ್ಕದ್ದು.

(6) ಲೈಸೆನ್ಸದಾರನು 1909ನೆ ಇಸವಿ ಜುಲೈ ಗುರ್ರೇಯಲ್ಲಿ ಹಳೇ ಲೈಸೆನ್ಸದಾರನ ಬಾಬಿತು ದಾಸ್ತಾನ್ ಇರಬಹುದಾದ ಮದಕ ಪದಾರ್ಥಗಳನ್ನು ಡೆಪ್ಯುಟಿ ಕಮ್ಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿಮಾಡಿ ತೆಗೆದುಕೊಳ್ಳಲು ಗುರಿಯಾಗತಕ್ಕದ್ದು.

(7) ಲೈಸೆನ್ಸದಾರನು ಯಾವ ಮನುಷ್ಯನಿಗೂ, ಯಾವ ನೆಪದಮೇಲೂ ಒಂದು ದಿನದಲ್ಲಿ ನಾಲ್ಕು ತೊಲೆಗಳಿಗಿಂತಲೂ ಹೆಚ್ಚಾಗಿ ಗಾಂಜಾವನ್ನು ವಿಕ್ರಯಿಸಕೂಡದು.

(8) ಅಂಗಡಿಯಲ್ಲಿ ಗಾಂಜಾವನ್ನು ಸೇವನೆ ಮಾಡುವದಕ್ಕೂ, ಹೊಗೆಬತ್ತಿ ಸೇದುವದಕ್ಕೂ, ಯಾ ಗಾಂಜಾ ಮುಂತಾದ್ದನ್ನು ಸೇವನೆ ಮಾಡುವದಕ್ಕೂ ಜನಗಳು ಸೇರುವ ಗಾಂಜಾಖಾನೆಗಳನ್ನೂ, ಅಥವಾ ಅಂತರಂಗಸ್ಥಳಗಳನ್ನೂ ಇಟ್ಟಿರುವ ಜನಗಳಿಗೆ ಗಾಂಜಾವನ್ನು ವಿಕ್ರಯಿಸುವದು ಅಡ್ಡಿಪಡಿಸಲ್ಪಟ್ಟಿದೆ.

(9) ಮದಕ ಪದಾರ್ಥಗಳನ್ನು ಮಾರಲಿಕ್ಕೆ ಯಾವ ಹೆಂಗಸನ್ನೂ ಇಡಕೂಡದು.

XXIII. ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಸರ್ಕಾರದ ಮತ್ತು ಎಕ್ಸೈಜ್ ಕಮ್ಮಿಷನರವರ ಇಸ್ತಿಹಾರ್ನಾಮೆಗಳಲ್ಲಿಯೂ ಮತ್ತು ಆಗಿಂದಾಗ್ಯೆ ಸಾದರಾಗುವ ಸಾಧಾರಣ ಯಾ ವಿಶೇಷ ಕಾನೂನುಗಳಲ್ಲಿಯೂ ಹಾಲಿ ಜಾರಿಯಲ್ಲಿರುವ ಅಫೀಂ ಆಕ್ಟು ಅಥವಾ ಇತರ ವಿಧಿಸಲ್ಪಡುವ ಇತರ ಕಾನೂನುಗಳಲ್ಲಿಯೂ ಇರುವ ನಿಬಂಧನೆಗಳನ್ನು ಅನುಸರಿಸಲು ಲೈಸೆನ್ಸದಾರನು ಬದ್ಧನಾಗಿರತಕ್ಕದ್ದು.

2. ಬಿಕರಿಗಾಗಿ ಲೈಸೆನ್ಸ ಪಡೆದಿರುವ ಅಂಗಡಿಗಳಲ್ಲಿ ಅಫೀಂ ಅಥವಾ ಯಾವ ವಿಧವಾದ ಅದರ ತಯಾರೀಯನ್ನು ಹೊಗೆ ಸೇದುವದೂ ಯಾ ಸೇವನೆ ಮಾಡುವದೂ, ಮಾರ್ಫಿಯು ಅಥವಾ ಸೇದುವದಕ್ಕೆ ತಯಾರ್ಮಾಡಲ್ಪಟ್ಟವುಗಳನ್ನು ಬಿಕರಿ ಮಾಡುವದೂ ಅಡ್ಡಿಪಡಿಸಲ್ಪಟ್ಟಿರುತ್ತೆ.

(3) ಡೆಪ್ಯುಟಿ ಕಮ್ಮಿಷನರವರಿಂದ ಲೈಸೆನ್ಸನ್ನು ಪಡೆಯದೆ ಯಾವ ಅಂಗಡಿಯೂ ಇಡಲ್ಪಡಕೂಡದು. ಲೈಸೆನ್ಸದಾರ್ರುಗಳಿಂದ ವಾಡಿಕೆಯಾದ ಎದುರು ಒಡಂಬಡಿಕೆಗಳು ಬರೆದುಕೊಡಲ್ಪಡತಕ್ಕದ್ದು.

(4) ಸ್ವಾಧೀನದಲ್ಲಿ ಇಟ್ಟುಕೊಳ್ಳಬಹುದಾದ ಮೊತ್ತಕ್ಕಿಂತಲೂ ಹೆಚ್ಚಾಗದಂತೆ ಮದಕ ಪದಾರ್ಥಗಳನ್ನು ಮತ್ತು ಸೇದುವ ತಯಾರೀ ಸಾಮಾನುಗಳನ್ನು ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಮಾತ್ರ ಖಾಸಗಿ ಯಾ ಖುಷಬಾಷ ಜನರು ತಯಾರಿ ಮಾಡಿಕೊಳ್ಳಲು ಅಪ್ಪಣೆ ಕೊಟ್ಟಿದೆ.

(5) ಅಂಗಡಿದಾರರು 80 ತೊಲೆಯ ಒಂದು ಸೇರಿಗೆ ರೂ. 37—8—0 ಪ್ರಕಾರ ಒಂದುಸಾರಿಗೆ 24 ತೊಲೆಗೆ ಕಮ್ಮಿ ಇಲ್ಲದಂತೆ ಖಜಾನೆಯಿಂದ ಅಫೀಮನ್ನು ಪಡೆದುಕೊಳ್ಳಬಹುದು. ಈ ವಿಕ್ರಯವು ವಿಧಾಯಕವಾದ ನಮೂನೆಯಲ್ಲಿ ರಹದಾರಿಯೊಂದಿಗೆ ಇರತಕ್ಕದ್ದು.

(6) ಮೇಲೆ ನಮೂದಿಸಿರುವಂತೆ ಪಡೆದ ಅಫೀಂ ಶಿವಾಯಿ ಇನ್ಯಾವ ಅಫೀಮೂ ದುಕಾನ್ದಾರ್ರಿಂದ ವಿಕ್ರಯಿಸಲ್ಪಡಕೂಡದು, ತೆಗೆದುಕೊಳ್ಳಲ್ಪಡಕೂಡದು, ಯಾ ಸ್ವಾಧೀನದಲ್ಲಿಟ್ಟುಕೊಳ್ಳಲ್ಪಡಕೂಡದು. ಯಾವ ಚಿಲ್ಲರೆ ಅಫೀಂ ಅಂಗಡಿಯಲ್ಲಿಯೂ ಆಹಾರ ಅಥವಾ ಪಾನದ ಯಾವ ಸಾಮಾನುಗಳೂ ವಿಕ್ರಯಿಸಲ್ಪಡಕೂಡದು.

(7) ಈ ಸ್ವತಂತ್ರದ ಹಕ್ಕು ಕ್ರಮವಾಗಿ ಮಂಜೂರಾದ ದುಕಾನ್‌ಗಳಲ್ಲಿ (a) ಅಫೀಮಿನ ಚಿಲ್ಲರೆ ಬಿಕರಿಗೂ ಮತ್ತು (b) ಮಾರ್ಫಿಯ ಮತ್ತು ಸೇದುವದಕ್ಕೆ ತಯಾರ್ಮಾಡಲ್ಪಟ್ಟಿರುವ ಪದಾರ್ಥ ಇವುಗಳು ಶಿವಾಯಿ ಅಫೀಂ ಅಥವಾ ಗಸಗಸೆಯಿಂದ ಮಾಡಲ್ಪಟ್ಟ ಮದಕ ಪದಾರ್ಥಗಳನ್ನೂ ತಯಾರ್ ಮಾಡುವದಕ್ಕೂ ಮತ್ತು ಚಿಲ್ಲರೆ ಬಿಕರಿ ಮಾಡುವದಕ್ಕೂ ಅನ್ವಯಿಸುತ್ತೆ.

(8) ಲೈಸೆನ್ಸುದಾರನು ಅಫೀಮನ್ನು ಜನಗಳಿಗೆ 80 ತೊಲೆಯ ಸೇರು 1ಕ್ಕೆ 45 ರೂಪಾಯಿ ಯಾ ತೊಲೆ 1ಕ್ಕೆ 9 ಆಣೆ ದರದ ಮೇರೆಗೆ ಮಾರತಕ್ಕದ್ದು.

(9) ಲೈಸೆನ್ಸ್ ದುಕಾನ್ದಾರನು ಯಾವ ಮನುಷ್ಯನಿಗೂ ಒಂದೇ ಸಾರಿಗೆ 3 ತೊಲೆಗಿಂತಲೂ ಹೆಚ್ಚಾಗಿ ಅಫೀಂ ಅಥವಾ ಮದಕ ಪದಾರ್ಥಗಳನ್ನು ಮಾರಕೂಡದು.

(10) ಲೈಸೆನ್ಸನ್ನು ಕೊಡುವ ಕಾಲದಲ್ಲಿ ಡೆಪ್ಯುಟಿ ಕಮ್ಮಿಷನರವರು ಗೊತ್ತು ಮಾಡುವ ಮೊತ್ತಕ್ಕಿಂತಲೂ ಹೆಚ್ಚಾಗಿ ಮಾರ್ಫಿಯ ಅಥವಾ ಸೇದುವದಕ್ಕೆ ತಯಾರ್ಮಾಡಲ್ಪಟ್ಟಿರುವ ಪದಾರ್ಥಗಳು ಶಿವಾಯಿ ಅಫೀಮನ್ನು ಯಾ ಮದಕ ಪದಾರ್ಥಗಳನ್ನೂ ಲೈಸೆನ್ಸುದಾರನು ಇಟ್ಟುಕೊಂಡಿರಕೂಡದು.

(11) ಲೈಸೆನ್ಸುದಾರನು 1909ನೆ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ಹಳೇ ಲೈಸೆನ್ಸದಾರನ ಬಾಬತು ದಾಸ್ತಾ ಇರಬಹುದಾದ ಅಫೀಂ ಯಾ ಅದರ ತಯಾರಿಯು ಯಾ ಅಫೀಂ ಸೇರಿದ ಪದಾರ್ಥಗಳು ಯಾ ಗಸಗಸೆಯಿಂದ ತಯಾರ್ಮಾಡಲ್ಪಟ್ಟ ಮದಕ ಪದಾರ್ಥಗಳನ್ನು ಡೆಪ್ಯುಟಿ ಕಮ್ಮಿಷನರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿ ಮಾಡಿ ತೆಗೆದುಕೊಳ್ಳಲು ಬದ್ಧನಾಗಿರತಕ್ಕದ್ದು.

1909—1910ನೆ ವರುಷಕ್ಕಾಗಿ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟೀಸ್.

ನಂ. , ತಾರೀಖು 13ನೆ ಏಪ್ರೈಲ್ 1909.

1. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರ್ಟರನ್ನು 1909ನೆ ಇಸವಿ ಜುಲೈ ಗುರ್ರೆ ತಾರೀಖಿಗೆ ಪ್ರಾರಂಭವಾಗಿ 1910ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಒಟ್ಟು ಸ್ವತಂತ್ರದ ಹಕ್ಕನ್ನು ಆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಿ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಈ ಕೆಳಗೆ ನಮೂದು ಮಾಡಿರುವ ಸ್ಥಳದಲ್ಲಿ ಮತ್ತು ತಾರೀಖಿನಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಬೌರಿಂಗ್‌ಪೇಟೆ ಮತ್ತು ಕೋಲಾರ್ ಚಿನ್ನದ ಗಣಿಗಳಲ್ಲಿನ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಮೇರೆಗೆ ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರ್ರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವುದಕ್ಕೆ ಮುಂಚಿತವಾಗಿ 250 ರೂಪಾಯಿ, ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತುಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಸೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಛಡ ಸವಾಲ್ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನು ಗವರ್ನ್ಮೆಂಟಿನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ಼್ ಮುಖ್ತಾಲೀಕರನ್ನ ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡ್ಲೆ ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುತ್ತದೆ.

6 ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ಮಂಜೂರಾದ್ದನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ ಅವರ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರ್ರವರಲ್ಲಿ ಕೊಡತಕ್ಕದ್ದು. ಮತ್ತು 7ದಿನಗಳೊಳಗಾಗಿ ಸದರೀ ನೋಟೀಸು ಅವರಿಗೆ ಖುದ್ದಾಗಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿರುವ ವಯಸ್ಸಾದ ಕುಟುಂಬಕ್ಕೆ ಸಂಬಂಧಪಟ್ಟ ಗಂಡಸಿಗೆ ಆಗಲೀ ಜಾರೀಯಾದ ನಂತರ ಯಾ ಸದರೀ ಮನೆಗೆ ಅಂಟಿಸಿದ ನಂತರ ಯಾ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿದ ತರುವಾಯ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯ ಬೆಲೆಗನುಸಾರವಾಗಿ ಡೆಪ್ಯುಟಿ ಕಮಿಷನರ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೆ ಠೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನ ಪಡಿಯತಕ್ಕದ್ದು, ಮತ್ತು ಎದರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯನ ಜವಾಬ್ದಾರೀಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

7. ಮೇಲಿನ 6ನೆ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡಿಯುತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಅಥವಾ ಇತರೇ ವಿಧವಾದ ವಿಲೇವಾರಿ ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದಲ್ಲಿ ಅಥವಾ ಇತರೇ ವಿಧವಾಗಿ ವಿಲೇವಾರಿ ಆದಲ್ಲಿ ಚಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ಅಥವಾ ಇತರೇವಿಧವಾದ ವಿಲೇವಾರಿಯಿಂದ ಆಗುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕೇನೆ ಜಮಾ ಮಾಡಿಕೊಳ್ಳತಕ್ಕದ್ದು :—

8. ಮೇಲಿನ 6ನೆ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಬ್ರೂಯರಿಗಳಲ್ಲಿಯಾಗಲಿ ಅಥವಾ ಕಿರ್ಕಿಯಲ್ಲಿ ಮಿರ್ಕಿ ಅಂಡ್ ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಏಬ್ರಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ ಕಂತ್ರಿ ಬೀರು ಯಾ ಪೋರ್ಟರನ್ನು ಮಾರುವುದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯೂ ಡೆಪ್ಯುಟಿ ಕಮಿಷನರ್ ನಿಯಮಿಸುವ ಹಾಲೀ ಜಾರೀಲಿರುವ ಅಂಗಡಿ ಮಳಿಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಪೀಪಾಯಿಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದಹಾಗೆ ಪಾವತಿ ಮಾಡಲಿಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(4) ಲೈಸೆನ್ಸದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೆ ಎರಡಾಣೆ ಒಂದುವರ ಪೈ ಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು, ಸರಕಿನೊಂದಿಗೆ ಲೆಟರ ಆಫ್ ಅಡ್ವೈಸ್ ಎಂಬ ರಹದಾರಿಯನ್ನ ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮಿಷನರ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡದ ಇತರ ಆಫಿಸರ್ರು ಸರಕನ್ನ ಲೈಸೆನ್ಸದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸದಾರನು 1909ನೆ ಇಸವಿ ಜುಲೈ ೧ನೇ ತಾರೀಖಿನಲ್ಲಿ ಹಳೇ ಲೈಸೆನ್ಸದಾರನ ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ ಸಾಹೇಬರವರು ಗೊತ್ತುಮಾಡಬಹುದಾದ ಪರಿಹಾರ ದ್ರವ್ಯಗಳನ್ನು ಹಳೇ ಲೈಸೆನ್ಸದಾರನಿಗೆ ಪಾವತಿ ಮಾಡಿ ತೆಗೆದುಕೊಳ್ಳಲು ಗುರಿಯಾಗಿರತಕ್ಕದ್ದು.

(8) ಈ ಗುತ್ತಿಗೆ ಎಕ್ಸೈಜ್ ಕಮಿಷನರ್ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ, ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(9) ದುಕಾನ್‌ದಾರನು ಲೈಸೆನ್ಸದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ, ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(10) ಅವನು ಮಂಜೂರ್ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಶೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ನಾಲ್ಕು ಶೀರುಗಳಿಗಿಂತಾ ಹೆಚ್ಚಾಗಿರಕೂಡದು.

(11) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಏಷ್ಟುಮಟ್ಟಿಗಾದರೂ ಯಾವ ಯುರೋಪಿಯನಿಗೂ ಅಥವಾ ನಾನ್ ಕಮಿಷನ್ಡ್ ಆಫಿಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾ ಹತ್ತಿ ಬೀಳುವಂತೆ ಮಾಡಕೂಡದು. ಮತ್ತು ಅವರು ಆಕ್ರಮವಾಗಿ ನಡಿಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು. ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫಿಸರ್ ಯಾ ಮೇಜಿಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ ಹುಚ್ಚರಿಗೆ ಆಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂ ಕೂಡದು.

(12) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ್ ಮತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(13) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗೆದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರಿಗೆ ನಗದಾಗಿ ಹಣ ತೆಗೆದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

(14) ಈ ಲೈಸೆನ್ಸ ಪ್ರಕಾರ ಮಾರುವ ಬೀರು ಯಾ ಪೋರ್ಟರ್ ಒಳ್ಳೆ ಸಾಮುಗ್ರಿಯುಗಳಿಂದ ಮಾಡಲ್ಪಟ್ಟದ್ದಾಗಿರಬೇಕು ಮತ್ತು ಅದರ ಗುಣವು ಎಕಸೈಜು ಕಮಿಷನರವರಿಗೆ ಸಮರ್ಪಕ ಉಂಟುಮಾಡತಕ್ಕದ್ದಾಗಿರಬೇಕು. ಮತ್ತು ಮಾಲ್ಟ್ಹಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು. ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟಿಯು 1073 ಸಂಖ್ಯೆಯನ್ನು ಮೀರಕೂಡದು, ಬೀರು ಮತ್ತು ಪೋರ್ಟರ್‌ನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನ್‌ಗೆ ಗುರಿಯಾಗಿರುವನು, ಇಂಥಾ ಬೀರ್ ಯಾ ಪೋರ್ಟರುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಆಜಮಾಯಿಷೀ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(15) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸದಾರನಿಂದಲೂ ಮ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು: ಮತ್ತು ಈ ಲೆಖ್ಖಗಳು ಸಾಫಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(16) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಿಲು ತೆಗಿಯಕೂಡದು.

(17) ಕಮ್ಮಿಸರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(18) ಸದರಿ ಅಂಗಡಿಗೆ ಒಂದೇ ಬಾಗಲಿರಬೇಕು. ಹಿಂಭಾಗದಲ್ಲ್ಯಾದರೂ ಕೊನೇಭಾಗಗಳಲ್ಲ್ಯಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

(19) ಲೈಸೆನ್ಸದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸದಾರನ ಯಾ ಆತನತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1909ನೆ ಇಸವಿ ಜುಲೈ ಗುರ್ರೀ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಷೆಡ್ಯೂಲ್ ಪ್ರಕಾರ ಹಿಂದಿನ ಮೂರು ಸಾಲು ದಾಮಾಷಾ ಮೇಲೆ ಗುತ್ತಿಗೆ ಸಾಲಿನ ಬಾಕೀ ಅವಧಿಗೆ ಆಗುವ ಬಿಕರಿ ಮೊತ್ತಕ್ಕೆ ಹರಾಜು ದರದ ಪ್ರಕಾರ ಫೀ ಮೊಬಲಗು ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್‌ಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಹರಾಜು ತಾರೀಖು.

ಬೌರಿಂಗ್‌ಪೇಟೆ ಮತ್ತು ಭಂಗಾರದ ಗಣಿ ಅಂಗಡಿಗಳು.	ಭಂಗಾರದಗಣಿ ಮಾಜಿಸ್ಟ್ರೇಟ್ ಕೋರ್ಟನಲ್ಲಿ ...	1909ನೆ ಮೇ 20.

1909–10ನೇ ಸಾಲಿಗೆ ಬೀರು ಅಂಗಡಿಗಳ ಷೆಡ್ಯೂಲ್ ಪಟ್ಟಿ.

ಅಂಗಡಿಯ ನಂಬರು ಮತ್ತು ಇರತಕ್ಕ ಸ್ಥಳ.	ಬಿಕರಿಯ ಮೊತ್ತಾ			54 ಗ್ಯಾಲಗಳುಳ್ಳ ಪ್ರತಿ ಒಂದು ಹಾಗ್ಸ ಹೆಡಗೆ ಛಡಸವಾಲು.			ಷರಾ
	1905–6	1906–7	1907–8	1906–7	1907–8	1908–9	
1	2	3	4	5	6	7	8
	ಹಾಗ್ಸಹೆಡ	ಹಾಗ್ಸಹೆಡ	ಹಾಗ್ಸಹೆಡ	ರೂ.	ರೂ.	ರೂ.	
1 ರಾಬರ್ಟ್ಸನ್‌ಪೇಟೆ (ಕೋಲಾರ ಭಂಗಾರದ ಗಣಿ) ...	207	43	64	79	52	70	
2 ಬೌರಿಂಗ್‌ಪೇಟೆ ...	21	5	12	57	35	35	

1909ರ ಲಾಗಾಯಿತು 1912ನೆ ಸಾಲಿನ ವರಿಗೂ ಅಂದರೆ 3 ವರುಷಗಳಿಗಾಗಿ ಈಚಲು ಶೇಂದಿ ಅಂಗಡಿಗಳಿಗೆ ಸಮ್ಮಂಧಪಟ್ಟ ಬಿಟ್ಟು ಸ್ವಾತಂತ್ರ್ಯದ ಹರಾಜು ನೋಟೀಸು.

ನಂಬರ್ 9012, ಬೆಂಗಳೂರು, 7ನೆ ಏಪ್ರಿಲ್ 1909.

I. ನಿಯೂಮಕವಾದ ಮತ್ತು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಅಂಗಡಿಗಳಲ್ಲಿ ಶೇಂದಿಯನ್ನು 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1912ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ ಮೂರು ವರುಷಗಳ ಕಾಲಕ್ಕಾಗಿ ಬಿಕರಿ ಮಾಡತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಡೆಪ್ಯುಟಿ ಕಮಿಷನರವರು ಯಾ ರೆವಿನ್ಯೂ ಅಸಿಸ್ಟಂಟ್ ಕಮಿಷನರವರು ಯಾ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರು ಯಾ ಡೆಪ್ಯುಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರು ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಆ ತಃಖ್ತೆಯಲ್ಲಿ ನಮೂದುಕಂಡ ತಾಲ್ಲೂಕು ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಸಲ್ಪಟ್ಟಿರುತ್ತೆ. ಹರಾಜುಗಳು ನೇಮಿಸಲ್ಪಟ್ಟ ತಾರೀಖುಗಳಲ್ಲಿ ಪೂರೈಸದೆಹೋದಲ್ಲಿ ಮಾರನೇ ದಿವಸಗಳಲ್ಲಿಯೂ (ರಜಾ ದಿವಸಗಳು ಹೊರತಾಗಿ) ಹಾಕಲ್ಪಡುವವು.

ಹರಾಜಿನ ಷರತ್ತುಗಳು.

II. ಪ್ರತಿ ಸವಾಲ್ದಾರನೂ ಹರಾಜಿಗೆ ಪೂರ್ವವೇ ಠೇವಣಾತಿಯನ್ನು ಕಟ್ಟತಕ್ಕದ್ದು ಮತ್ತು ಹರಾಜಿನ ತಾರೀಖಿನ ದಿವಸ ಹರಾಜು ಮಾಡುವ ಆಫಿಸರಿಂದ ಸದರಿ ಠೇವಣಿ ಮೊಬಲಗು ತೆಗದುಕೊಳ್ಳಲ್ಪಡುವದು. ಯಾವ ಮನುಷ್ಯನು ಮುಖ್ಯವಾದ ಅಂಗಡಿ ಯಾ ಅನೇಕ ಅಂಗಡಿಗಳಿಗಾಗಿ ಸವಾಲ್ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅಂಥಾವನು ಸಾಧಾರಣವಾಗಿ 50 ರೂಪಾಯಿ ಠೇವಣಿಯನ್ನಿಡತಕ್ಕದ್ದು. ಸವಾಲು 2 ಯಾ 3 ಅಂಗಡಿಗಳಿಗೆ ಮೀರದೆಯೂ ಮತ್ತು ಅವುಗಳ ಮಾಹೆಯಾನ ಬಿಟ್ಟು ಗುತ್ತಾ ಮೊಬಲಗು 50 ರೂಪಾಯಿ ಅಥವಾ ಅದಕ್ಕೆ ಕಮ್ಮಿಯಾಗಿಯೂ ಇದ್ದಪಕ್ಷದಲ್ಲಿ ಸವಾಲುದಾರನ ಠೇವಣಿಯು 20 ರೂಪಾಯಿಗಳಿಗೆ ತಗ್ಗಿಸಲ್ಪಡುವದು ಮತ್ತು ಒಂದೊಂದು ಚಿಕ್ಕ ಅಂಗಡಿಗೆ ದರಖಾಸ್ತು ಮಾಡುವ ಸವಾಲ್ದಾರರ ಠೇವಣಿಯು 5 ರೂಪಾಯಿಗೆ ತಗ್ಗಿಸಲ್ಪಡುವದು. ಯಾವದಾದರೂ ಅಂಗಡಿಗಳ ಮಾಹೆಯಾನ ಸರಾಸರಿ ಗುತ್ತಾ ಮೊಬಲಗು ಕೇವಲ ಕಮ್ಮಿಯಾಗಿದ್ದಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರು ಸದರಿ ಅಂಗಡಿಗಳ ಬಗ್ಗೆ ತಮ್ಮ ಯುಕ್ತಾನುಸಾರ ಇತರ ನ್ಯಾಯವಾದ ಠೇವಣಿ ಮೊಬಲಗನ್ನು ಗೊತ್ತು ಮಾಡಬಹುದು.

III. (a) ಹರಾಜು ನಡಿಸತಕ್ಕ ಆಫಿಸರರಿಗೆ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಕ್ರಮ ನಂಬರನ್ನು ಬದಲಾಯಿಸಲು ಕಾರಣತೋರುವ ಸಂದರ್ಭದಲ್ಲಿ ಹೊರತು ಆ ಪಟ್ಟಿಯಲ್ಲಿ ಕಂಡ ಕ್ರಮ ನಂಬರಿನಂತೆಯೇ ಅಂಗಡಿಗಳನ್ನು ಹರಾಜು ಮಾಡತಕ್ಕದ್ದು. ಹಿಂದಿನ ಮೂರು ಸಾಲುಗಳ ಸರಾಸರಿ ಗುತ್ತಾ ಮೊಬಲಗೇ ಹರಾಜು ಹಾಕತಕ್ಕ ಅಂಗಡಿ ಯಾ ಅಂಗಡಿಗಳ ಸರ್ಕಾರೀ ಸವಾಲಾಗಿರುತ್ತೆ. ಈ ಸವಾಲು ಮೊಬಲಗು ಕಮ್ಮಿ ಮಾಡತಕ್ಕದ್ದಿಲ್ಲವು; ಮತ್ತು ಅದಕ್ಕೆ ಸಮವಾದ ಯಾ ಹೆಚ್ಚಾದ ಸವಾಲು ಬಾರದೇ ಇದ್ದಪಕ್ಷದಲ್ಲಿ ಅಂಗಡಿ ಯಾ ಅಂಗಡಿಗಳು ಸಾಧಾರಣವಾಗಿ ಒಂದೇ ವರುಷಕ್ಕೆ ಮಾತ್ರ ಮಾರಲ್ಪಡುವವು. ಅಂಥಾ ಸಂದರ್ಭದಲ್ಲಿ ಈ ಅಂಗಡಿಗಳಿಗೆ ಒಂದು ವರುಷಕ್ಕೆ ಮಾತ್ರ ಹರಾಜು ಹಾಕಲ್ಪಡುವ ಶೇಂದಿ ಅಂಗಡಿ ಹಕ್ಕಿಗೆ ಸಲ್ಲತಕ್ಕ ಷರತ್ತುಗಳು ಲಗಾವಾಗುತ್ತೆ.

(b) ಒಂದೊಂದು ಅಂಗಡಿಗೆ ಪ್ರತ್ಯೇಕವಾಗಿ ಹಿಂದಿನ ಮೂರು ವರುಷಗಳ ಸರಾಸರಿ ಗುತ್ತಾ ಮೊಬಲಗಿಗೆ ಸಮವಾದ ಮೊಬಲಗು ಬಾರದೇ ಇದ್ದಾಗ್ಯೂ, ತಾಲ್ಲೂಕು ಬಿಟ್ಟಿಗೆ ಹಿಂದಿನ ಮೂರು ಸಾಲುಗಳ ಸರಾಸರಿ ಗುತ್ತಾ ಮೊಬಲಗಿಗೆ ಕಮ್ಮಿ ಇಲ್ಲದಂತೆ ಬಂದಪಕ್ಷದಲ್ಲಿ ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಮೂರು ವರುಷಗಳ ಹಕ್ಕನ್ನು ಹರಾಜು ಹಾಕಬಹುದು.

(c) ಸವಾಲ್ದಾರರ ತಿಳುವಳಿಕೆ ಬಗ್ಯೆ ಹಿಂದಿನ ಮೂರು ಸಾಲುಗಳ ಗುತ್ತಾ ಮೊಬಲಗೂ, ಬಿಕರಿಯ ಮೊತ್ತವೂ ಮತ್ತು ಗುತ್ತೆ, ಬಿಕರಿ ಇವುಗಳಿಗೆ ಆ ಮೂರು ವರ್ಷಗಳಿಗೆ ಆಗುವ ಸರಾಸರಿಯೂ ಫಾಮಿಷ್ ಮಾಡಲ್ಪಡುತ್ತೆ.

(d) ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಹಕ್ಕು ಒಂದೊಂದು ಅಂಗಡಿಗೆ ವರುಷ 1ಕ್ಕೆ 12 ರೂಪಾಯಿಗೆ ಕಮ್ಮಿ ಇಲ್ಲದಂತೆ ಗೊತ್ತಾದ ಮೊಬಲಗ್ಗೆ ಕಾಫಿ ಪ್ಲಾಂಟರಿಗೆ ಮಾರಲ್ಪಡಬಹುದು.

(e) ಶೇಂದಿ ಹುಟ್ಟುವಳಿಗೆ ಇರತಕ್ಕ ಹಕ್ಕು ಮಂಜೂರಾಗಿರುವ ಅಥವಾ ಇನ್ನೂ ತೀರ್ಮಾನವಾಗಿಲ್ಲದೆ ಇರುವ ಇನಾಂ ಗ್ರಾಮಗಳಲ್ಲಿರತಕ್ಕ ಶೇಂದಿ ಅಂಗಡಿಗಳು ಪ್ರತ್ಯೇಕವಾಗಿಯೇ ಹರಾಜ್ ಮಾಡಲ್ಪಡಬೇಕಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗನ್ನು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

IV. ಸಾಧಾರಣವಾಗಿ ಪ್ರತಿಯೊಂದು ಅಂಗಡಿಯೂ ಪ್ರತ್ಯೇಕವಾಗಿ ಹರಾಜು ಮಾಡಲ್ಪಡತಕ್ಕದ್ದು. ನಿರ್ವಾಹವಿಲ್ಲದೇ ಇರುವ ಸಂದರ್ಭದಲ್ಲಿ ಮಾತ್ರವೇ ಅಂಗಡಿಗಳನ್ನು ಗುಂಪಾಗಿ ಸೇರಿಸಬಹುದು. ಆದರೆ ಹಾಗೆ ಗುಂಪಾಗಿ ಸೇರಿಸುವಾಗಲೂ ಆಗಿನ ಸಂದರ್ಭಕ್ಕೆ ಎಷ್ಟು ಅಂಗಡಿಗಳನ್ನು ಸೇರಿಸುವದು ಅವಶ್ಯಕವಾಗಿದೆಯೋ ಅಷ್ಟನ್ನು ಮಾತ್ರವೇ ಗುಂಪು ಸೇರಿಸತಕ್ಕದ್ದು.

V. ಮೊಖ್ತ್ಯಾರ್‌ನಾಮೆಯನ್ನು ಪಡೆದ ಹೊರ್ತು ಯಾರೊಬ್ಬನೂ ಇತರರಿಗೋಸ್ಕರ ಸವಾಲು ಮಾಡಕೂಡದು.

VI. ಯಾವ ಅಂಗಡಿಯೂ ಇಬ್ಬರು ಆಸಾಮಿಗಳ ಯಾ ಇಬ್ಬರಿಗಿಂತ ಹೆಚ್ಚಾದ ಆಸಾಮಿಗಳ ಹೆಸರಿನಲ್ಲಿ (ಸದರಿಯವರು ಮೊಖ್ತ್ಯಾರ್‌ನಾಮೆಯ ಮೂಲಕ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪೆನಿ ಯಾ ಫರ್ಮಿನವರೆಂದು ತೋರಿಸಿದಹೊರ್ತು) ಭಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ನಡಿಸತಕ್ಕ ಆಫಿಸರರು ಯಾರ ಹೆಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

VII. ಯಾವನಾದರೊಬ್ಬ ಮನುಷ್ಯನ ಸವಾಲು ಕೇವಲ ಕಮ್ಮಿಯಾಗಿದೆ ಎಂಬ ಕಾರಣದಮೇಲೂ, ಅಥವಾ ಕ್ರಿಮಿನಲ್ ಕೋರ್ಟಿನಲ್ಲಿ ದರಿಯಾಫ್ತಿಯಾಗಿ ಆತನ ಮೇಲೆ ತಪ್ಪು ಸಾಬೀತು ಆಗಿರುವದ್ದರಿಂದಲೂ, ಅಥವಾ ಒಂದು ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗೆ ಅನುಸಾರವಾಗಿ ನಡಿಯದೇ ಇದ್ದು ತಪ್ಪಿತಸ್ಥನಾಗಿರುವ ಕಾರಣದಿಂದ ಆತನು ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರಿ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ನಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜ್ ನಡಿಸತಕ್ಕ ಆಫಿಸರು ಅವರಿಗೆ ಯುಕ್ತತೋರಿದಲ್ಲಿ ಅಂಥಾ ಮನುಷ್ಯನ ಸವಾಲನ್ನು ತಿರಸ್ಕರಿಸಬಹುದು. ಸದರೀ ಸ್ವಾತಂತ್ರ್ಯದ ಹಕ್ಕನ್ನು ಇತರರಿಗೆ ಬಿಕರಿಮಾಡಿ ಫಾಯಿದೆ ಪಡೆಯಬೇಕೆಂಬ ಉದ್ದೇಶದಿಂದ ಮಾತ್ರವೇ ಮಾಡಲ್ಪಟ್ಟಿತೆಂದು ತೋರುವ ಸವಾಲನ್ನು ಹರಾಜು ಆಫಿಸರು ಅದಕ್ಕೆ ಕಾರಣವನ್ನು ಬರಹಮೂಲಕವಾಗಿ ರಿಕಾರ್ಡುಮಾಡಿ, ತಿರಸ್ಕರಿಸಬಹುದು.

VIII. ಸದರಿ ಅಂಗಡಿಗಳು ಭಡಸವಾಲುದಾರನಿಗೆ ಕೊಡಲ್ಪಡುವವು ; ಆದರೆ ಹರಾಜು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಡೆಪ್ಯುಟಿ ಕಮಿಷನರವರು ಸದರಿ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರವಾಗಿರುತ್ತಾರೆ. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಯಾದರೆ ಆ ಮಂಜೂರಾತಿಯು ಗವರ್ನ್ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಟ್ಟಾಗ ಹೊರ್ತು ದರಖಾಸ್ತು ಅಂಗೀಕಾರವಾದಂತೆ ಭಾವಿಸಲ್ಪಡತಕ್ಕದ್ದು. ಡೆಪ್ಯುಟಿ ಕಮಿಷನರವರು ಖುದ್ದಾಗಿಯಾಗಲೀ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರರೇ ಆಗಲೀ ಹರಾಜು ನಡಿಸಿದ್ದರೂ ಅಂಥಾ ಕ್ರಮವಾದ ಮಂಜೂರಾತಿಯು ಅವಶ್ಯಕವಾಗಿರುವದು.

IX. ಹರಾಜು ಕಾಲದಲ್ಲಿ ತಕರಾರು ಬಂದ ಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರ ತೀರ್ಮಾನವು ಆಖೈರು ತೀರ್ಮಾನವಾಗಿರತಕ್ಕದ್ದು. ಮತ್ತು ಯಾವಕಾರಣದಿಂದಲಾದರೂ ಭಡ ಸವಾಲನ್ನು ತಿರಸ್ಕರಿಸಿದ ಪಕ್ಷದಲ್ಲಿ ತದನಂತರದ ಭಡಸವಾಲ್ ಅಂಗೀಕರಿಸಲ್ಪಡುವದು, ಅಥವಾ ಅಂಗಡಿಯು ಅವರ ಯುಕ್ತಾನುಸಾರ ದುಸರೆ ಹರಾಜು ಹಾಕಲ್ಪಡುವದು.—

X. ಹರಾಜು ಮುಗಿದಮೇಲೆ ದರಖಾಸ್ತು ಸಾಮಾನ್ಯವಾಗಿ ಅಂಗೀಕರಿಸಲ್ಪಡುವದಿಲ್ಲ. ಮೊದಲಿನ ಹರಾಜಿನಲ್ಲಿ ವಿಕ್ರಯವಾಗದ ಅಂಗಡಿಗಳು ಸಾಧಾರಣವಾಗಿ ಆತರುವಾಯ ದುಸರೆ ಹರಾಜಿನಲ್ಲಿ ವಿಲೇವಾರಿ ಮಾಡಲ್ಪಡುವವು. ಆದರೆ ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ತಮ್ಮ ಸೂಕ್ತಾನುಸಾರ ನಡಿಸಲು ಸ್ವತಂತ್ರರಾಗಿರುತ್ತಾರೆ.

XI. ಪ್ರತಿದಿನ ಹರಾಜು ಪೂರೈಸಿದ ಕೂಡಲೇ ನಾಮಂಜೂರಾದ ಸವಾಲುದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುವವು. ಹರಾಜು ನಡಿಯುತ್ತಿರುವಾಗ, ಯಾರ ಸವಾಲು ಅಂಗೀಕರಿಸಲ್ಪಡುತ್ತೋ ಅಂಥವನು ಹರಾಜು ನಡಿಸತಕ್ಕ ಆಫಿಸರರು ಕೇಳಿದಲ್ಲಿ ತತ್‌ಕ್ಷಣವೇ ಅಥವಾ ಆ ದಿನದ ಹರಾಜು ಖೈದಾದನಂತರ (IIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಅಲ್ಲದೆ) ಎರಡು ತಿಂಗಳ ಗುತ್ತಿಗೆ ಹಣವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು 6 ತಿಂಗಳ ಗುತ್ತಿಗೆಹಣಕ್ಕೆ ಸಮ ಯಾ ಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲ್ಕಂಡ IIನೆ ಷರತ್ತಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರಿ ಅಂಗಡಿಗಳು ಪುನಃ ತತ್‌ಕ್ಷಣವೇ ಹರಾಜು ಆಫಿಸರವರಿಂದ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜ್ ಮಾಡಲ್ಪಡುವದು ಅಥವಾ ಡೆಪ್ಯುಟಿ ಕಮಿಷನರವರಿಂದ ಅನ್ಯಥ ವಿಲೇವಾರಿ ಮಾಡಲ್ಪಡುವದು ; ಅಲ್ಲದೆ ತಪ್ಪಿತಸ್ಥನು ಈ ಅಂಗಡಿ ಯಾ ಇತರ ಅಂಗಡಿಗಳ ಬಗ್ಗೆ ಪುನಃ ಸವಾಲು ಮಾಡಲು ನಿಷೇಧಿಸಲ್ಪಟ್ಟಿರುತ್ತಾನೆ.

XII. ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಯಾರು ಮೇಲಿನ II ವ XIನೆ ಷರತ್ತುಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನು ಕಟ್ಟಿರುತ್ತಾರೋ ಅವರು, ಹರಾಜು ಮಂಜೂರಾದ ವಿಷಯವನ್ನು ನೋಟೀಸ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರುಗಳಲ್ಲಿ ಕೊಟ್ಟುಹೋಗತಕ್ಕದ್ದು. ಮತ್ತು ಅವರು 6 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನು ಮೊದಲು ಕಟ್ಟಿರುವ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು * ಠೇವಣಿಯಾಗಿ ಇಡತಕ್ಕದ್ದು. ಡೆಪ್ಯುಟಿ ಕಮಿಷನರವರ ಮಂಜೂರಾತಿಯು ನೋಟೀಸು ಮೂಲಕ ಅವರಿಗೆ ಅಥವಾ ಸದರಿ ವಿಳಾಸದ ಸ್ಥಳದಲ್ಲಿ ಅವರ ಮನೆಗಳಲ್ಲಿರತಕ್ಕ ಇತರ ವಯಸ್ಸಾದ ಗಂಡಸಿಗೆ ಪಾವತಿಯಾಗೇ ಆಗಲೀ ಅಥವಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲೀ ಜಾರಿಯಾದ ಏಳು ದಿವಸಗಳೊಳಗಾಗಿ ತಾಲ್ಲೂಕು

---

* ಠೇವಣಿಗಳು ನಗದಾಗಿಯೇ ಆಗಲಿ ಅಥವಾ ಅಂಗೀಕರಿಸಲ್ಪಟ್ಟ ಇತರ ಸೆಕ್ಯೂರಟಿ ರೂಪದಲ್ಲಿಯಾಗಲಿ ಇರಬಹುದು.

ಖಜಾನೆಗೆ ಅಂಥಾ ಠೇವಣಾತಿಗಳನ್ನು ಪಾವತಿ ಮಾಡತಕ್ಕದ್ದು. ಅನಂತರ ಅವರು ಅನಾವಶ್ಯಕವಾಗಿ ಸಾವಕಾಶಮಾಡದೆ ಅಗತ್ಯವಾದ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಲೈಸೆನ್ಸುಗಳನ್ನು ತೆಗೆದುಕೊಳ್ಳತಕ್ಕದ್ದು. ಒಡಂಬಡಿಕೆಗಳನ್ನು ರುಜುಮಾಡಿದ ಮೇಲೆ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸದಾರರು ಯಾ ಅವನಿಂದ ಹಕ್ಕು ಪಡೆದವರು ಅದಕ್ಕೆ ಜವಾಬ್‌ದಾರರಾಗಿರತಕ್ಕದ್ದು. ಪ್ರಾರಂಭದಲ್ಲಿಟ್ಟಿರತಕ್ಕ ಠೇವಣಿ ಮೊಬಲಗು ಈ ಷರತ್ತಿನಮೇರೆಗೆ ಠೇವಣಿ ಇಡಬೇಕಾಗುವ ಮೊಬಲಗಿಗಿಂತಲು ಹೆಚ್ಚಾಗಿ ಇದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಈ ಕೆಳಗೆ ಬರುವ XIIIನೆ ಷರತ್ತಿನ ಪ್ರಕಾರ 2 ರಷ್ಟು ಹೆಚ್ಚಾಗಿ ಠೇವಣಿಯನ್ನು ಕಟ್ಟಬೇಕಾಗಿರುವ ಸಂದರ್ಭದಲ್ಲಿ ವಿನಾ ಖರೀದಿದಾರನಿಗೆ ವಾಪಸು ಕೊಡಲ್ಪಡುವದು.

XIII. ಹರಾಜಿನನಂತರ ವಿಚಾರಿಸಿದ್ದರಲ್ಲಿ ಖರೀದಿದಾರ್ ಜೇವಾಳಿಸ್ಥನೆಂಬುವದು ಅನುಮಾನಕ್ಕೆ ಗುರಿಯಾಗಿಯೂ ಅಥವಾ ಅವನು ಮೈಸೂರು ಸೀಮೆಯಲ್ಲಿ ಸಾಕಾದಷ್ಟು ಜಿಂದಿಗೆಯನ್ನು ಉಂಟಾಗದೆ ಇರುವ ಅನ್ಯದೇಶದವನಾಗಿಯೂ ಕಂಡುಬಂದಲ್ಲಿ ಮೇಲಿನ XIIನೆ ಷರತ್ತಿನಲ್ಲಿ ನಮೂದಿಸಿರುವದಕ್ಕೆ 2 ರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನು ಅನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನೂ ಕ್ರಮವಾಗಿ ಪಾವತಿ ಮಾಡಲುಳ್ಳವನೆಂದು ಜಾಮೀನುಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಗಳುಳ್ಳವನಾಗಿರುವ ಒಬ್ಬ ಜಾಮೀನುದಾರನನ್ನು ಯಾ ಜಾಮೀನುದಾರರನ್ನು ಹಾಜರುಮಾಡುವದಕ್ಕಾಗಿ ಆತನನ್ನು ಕೇಳಬಹುದು. ಜಾಮೀನು ತಮಸೂಕಿಗೆ 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟಾಂಪು ರೆಗ್ಯುಲೇಷನ್ 1ನೆ ಷೆಡ್ಯೂಲ್ 32ನೆ ಆರ್ಟಿಕಲ್ ಪ್ರಕಾರ ಸ್ಟಾಂಪು ಹಾಕಲ್ಪಡಬೇಕು. ಜಾಮೀನು ಮೊಬಲಗು 1,000 ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಖರೀದಿದಾರನ ಖರ್ಚಿನಿಂದಲೇ ಅದು ರಿಜಸ್ಟರ್ ಮಾಡಿಸಲ್ಪಡಬೇಕು.

XIV. ಹರಾಜು ಪೂರೈಸಿದಕೂಡಲೇ ಹರಾಜು ನಡಸತಕ್ಕ ಆಫೀಸರರು ಸಂಬಂಧಪಟ್ಟ ತಾಲ್ಲೂಕು ಅಮಲ್ದಾರರಿಗೆ ಹರಾಜಿನಲ್ಲಿ ಪಡೆದ ಸವಾಲುದಾರರ ಹೆಸರಿನ ಒಂದು ಪಟ್ಟಿಯನ್ನು ಕಳುಹಿಸತಕ್ಕದ್ದು. ಅಮಲ್ದಾರರು ಪ್ರತಿ ಖರೀದಿದಾರನೂ ಜೇವಾಳಿಸ್ಥನೆಂಬುವದನ್ನು ವಿಚಾರಿಸಿ ಆತನಿಂದ ಪಾವತಿಯಾಗಬೇಕಾದ ಠೇವಣೀ ಮೊಬಲಗು ಅಥವಾ ಜಾಮೀನನ್ನು ದಾಖಲ್ಮಾಡತಕ್ಕದ್ದು. ಅವರು ತಯಾರು ಮಾಡಿದ ಸದರಿ ಪಟ್ಟಿಯನ್ನು ಅವರಿಗೆ ಅದು ತಲ್ಪಿದ 5 ದಿವಸಗಳೊಳಗಾಗಿ ಹರಾಜು ನಡಿಸತಕ್ಕ ಆಫೀಸರರಿಗೆ ರವಾನಿಸತಕ್ಕದ್ದು. ಇವರು ತಾಮಸ ಮಾಡದೆ ಸದರಿ ಪಟ್ಟಿಯಲ್ಲಿ ತಮ್ಮ ಷರಾನಿಸಿ ಅದನ್ನು ಮಂಜೂರಾತಿಬಗ್ಗೆ ಡೆಪ್ಯುಟಿ ಕಮೀಷನರವರಿಗೆ ರವಾನಿಸತಕ್ಕದ್ದು.

XV. ಮೇಲ್ಕಂಡ XIIನೆ ಷರತ್ತಿನ ಪ್ರಕಾರ ಠೇವಣಿ ಇಡುವದಕ್ಕೆ ಯಾ ಮೇಲ್ಕಂಡ XIIIನೆ ಷರತ್ತಿನ ಪ್ರಕಾರ ನಡದುಕೊಳ್ಳಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರದುಕೊಡಲಿಕ್ಕೆ ಯಾ ಮೇಲ್ಕಂಡಂತೆ ಲೈಸೆನ್ಸ್ ಪಡೆಯಲಿಕ್ಕೆ ಯಾವನಾದರೂ ತಪ್ಪಿದರೆ, ಅವನು ಮೊದಲು ಪಾವತಿ ಮಾಡಿರುವ ಠೇವಣಾತಿಗಳು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು, ಡೆಪ್ಯುಟಿ ಕಮೀಷನರವರಿಗೆ ಯುಕ್ತತೋರುವಂತೆ ಅಂಗಡಿಯು ಪುನಃ ಹರಾಜು ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು.

XVI. ಮೇಲ್ಕಂಡ XVನೆ ಷರತ್ತನ್ನು ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿಯಮೇಲೆ ನಡಿಯುತವೆ. ಈ ದುಸರೆ ಹರಾಜಿನಿಂದ ಬರುವ ಆದಾಯವನ್ನೆಲ್ಲಾ ಆತನು ಕಳದುಕೊಂಡವನಾಗುತ್ತಾನೆ ಮತ್ತು ನಷ್ಟಸಂಭವಿಸುವ ಪಕ್ಷಕ್ಕೆ ಪುರೂ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ಮಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೆ ಹರಾಜುದಾರರಲ್ಲಿ ಛಡಸವಾಲುದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದನ್ನು ಆತನು ಭರ್ತಿಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೆ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ಮಜಾಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರಿ ಠೇವಣಿ ಮೊಬಲಗು ದುಸರೆ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿ ಇದ್ದರೆ, ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ಜಮಾ ಮಾಡಿಕೊಳ್ಳತಕದ್ದು ಸ್ವಾತಂತ್ರ್ಯದ ಹಕ್ಕು ದುಸರಾ ಹರಾಜಿನಿಂದಲ್ಲದೆ ಅನ್ಯಥಾ ವಿಲೇವಾರಿಯಾಗಿ ಅಂಥಾ ವಿಲೇವಾರಿಯನ್ನು ಪುರೂ ಹರಾಜಿಗೆ ಹೋಲಿಸಿ ನೋಡಿದ್ದರಲ್ಲಿ ಸರ್ಕಾರಕ್ಕೆ ನಷ್ಟವಾದರೆ ತಪ್ಪಿತಸ್ಥನು ಈ ನಷ್ಟಕ್ಕೆ ಗುರಿಯಾಗಿರತಕ್ಕದ್ದು.

XVII. ಸ್ವತಂತ್ರದಹಕ್ಕನ್ನು ಕೊಂಡುಕೊಂಡವನು ಕ್ರಮವಾದ ಲೈಸೆನ್ಸು ಕೊಡಲ್ಪಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡದರೆ ಆ ಬಗ್ಗೆ ವಿಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರತಕ್ಕದ್ದು.

XVIII. XII ಅಥವಾ XIIIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತೆ. ಅಮಲ್ದಾರರು ಮತ್ತು ಲೈಸೆನ್ಸುದಾರನು ಹಾಗೆ ತಪ್ಪಿದರೆ ಲೈಸೆನ್ಸ್‌ದಾರನು ಕೊಡತಕ್ಕ ಆಖೈರು ಖಿಸ್ತು ಮೊಬಲಗಿಗೋಸ್ಕರ ಸದರಿ ಠೇವಣಿ ಮೊಬಲಗು ಜಮಾ ಮಾಡಿಕೊಳ್ಳಲ್ಪಡತಕ್ಕದ್ದು:

XIX. ಮೇಲೆ ನಮೂದಿಸಿರುವಂತೆ ಕೊಡಲ್ಪಡುವ ಲೈಸೆನ್ಸುಗಳಲ್ಲಿ ಎಲ್ಲಾ ಆಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾಮಾಗುವ ಮುಂದೆ ನಮೂದುಮಾಡಿರುವ ಸಾಧಾರಣ ಷರತ್ತುಗಳನ್ನೂ ಮತ್ತು ಶೇಂದಿ ಲೈಸೆನ್ಸುಗಳಿಗೆ ಈ ಕೆಳಗೆ ಗೊತ್ತುಮಾಡಿರುವ ವಿಶೇಷ ಷರತ್ತುಗಳನ್ನೂ ವಿವರಿಸಿರುತೆ :—

ಅಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಸಾಧಾರಣ ಷರತ್ತುಗಳು.

1. ಸಾರಾಯಿ ಯಾ ಇತರ ಸ್ವದೇಶ ಷರಾಬನ್ನು ತಯಾರ್ಮಾಡುವವರೂ, ಷರಾಬ್ ಬಾಂಡೆಡ್ ಕೋಠಿ ಲೈಸೆನ್ಸ್‌ದಾರರೂ, ಸಾರಾಯಿಯ ಚಿಲ್ಲರೆ ಮಾರಾಟದಲ್ಲಿಯೂ ಇತರ ಮದತ್ ಪದಾರ್ಥಗಳ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು. ಈ ನಿರ್ಬಂಧವು ವಿಶೇಷ ಷರಾಬು ಮತ್ತು ರೆಕ್ಟಿಫೈಡ್ ಸಾರಾಯಿಯನ್ನು ತಯಾರ್ಮಾಡಿ ಲೈಸೆನ್ಸ್‌ದಾರರಿಗೆ ಒಟ್ಟೊಟ್ಟಾಗಿ ಸರಬರಾಯಿ ಮಾಡತಕ್ಕವರಿಗೆ ಅನ್ವಯಿಸುವದಿಲ್ಲ.

2. ಅಬ್ಕಾರಿ ಯಾ ಅಫೀಂ ಲೈಸೆನ್ಸುಗಳ ಷರತ್ತಿನಮೇರೆಗೆ, ಷರಾಬುವಗೈರೆ ಮದ್ಯಗಳನ್ನೂ, ಅಫೀಮನ್ನೂ ಮಾರತಕ್ಕ ಸರಹದ್ದುಗಳು ಲೈಸೆನ್ಸು ಕೊಡತಕ್ಕ ಕಾಲದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತುಮಾಡಲ್ಪಡುತ್ತೆ. ಲೈಸೆನ್ಸ್‌ದಾರರಲ್ಲದವರಿಗೆ ಲಗಾವಾಗುವ ನಿಬಂಧನೆಗಳಿಗನುಸಾರವಾಗಿ ಹೊರತು, ಷರಾಬು, ಮದತ್ ಪದಾರ್ಥಗಳು ಯಾ ಅಫೀಮನ್ನು ಡೆಪ್ಯುಟಿ ಕಮ್ಮಿಷನರವರ ವಿಶೇಷ ಅಪ್ಪಣೆ ಶಿವಾಯಿ, ಸದರಿ ಸರಹದ್ದುಗಳ ಹೊರಗಡೆ ಮಾರೋಣವೂ, ಯಾ ಇಟ್ಟುಕೊಂಡಿರೋಣವೂ ಅಡ್ಡಿಮಾಡಲ್ಪಟ್ಟಿದೆ.

3. ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ನಡೆಸಲ್ಪಡತಕ್ಕದ್ದು. ಸದರಿ ಕಟ್ಟಡದ ಪೂರಾ ಅಥವಾ ಒಂದು ಭಾಗವು ಡೆಪೋ ಅಥವಾ ಅಂಗಡಿಯ ಉಪಯೋಗಕ್ಕೋಸ್ಕರವೇ ಪ್ರತ್ಯೇಕವಾಗಿ ಬಿಡಲ್ಪಟ್ಟಿರಬೇಕು. ಡೆಪೋ ಅಥವಾ ಅಂಗಡಿಗೂ ಮತ್ತು ಪಕ್ಕದಲ್ಲಿರುವ ವಾಸದಮನೆಗೂ ಬಾಗಲು ಇದ್ದಲ್ಲಿ ರಾತ್ರೆಕಾಲದಲ್ಲಿ ಬೀಗ ಹಾಕಿರತಕ್ಕದ್ದು. 5,000 ಅಥವಾ ಹೆಚ್ಚಾಗಿ ಪ್ರಜಾಸಂಖ್ಯೆಯುಳ್ಳ ಮ್ಯುನಿಸಿಪಾಲಿಟಿಗಳು ಅಥವಾ ಪಟ್ಟಣಗಳಲ್ಲಿರುವ ಷರಾಬು ಅಂಗಡಿಗಳಿಗೆ ರಸ್ತೆಯಿಂದ ಹೊರ್ತಾಗಿ ಇನ್ಯಾವ ಕಡೆಯಿಂದಲೂ ಬಾಗಲುಗಳು ಇರಕೂಡದು. ಹಿಂಭಾಗಗಳಲ್ಲಿಯಾದರೂ, ಪಕ್ಕಗಳಲ್ಲಿಯಾದರೂ, ಕಿಟಕಿಯಾಗಲಿ, ಗಂಡಿಯಾಗಲಿ ಇರಕೂಡದು. ಇನ್ಯಾವಕಡೆಗೂ ಹೋಗಲೂ ಬರಲೂ ಪ್ರವೇಶಗಳಿರಕೂಡದು. ಬಿಕರಿ ಮಾಡುವ ಜಗಲಿಯು ಬಾಗಲಿಗೆ ಎದುರಾಗಿ ಇರತಕ್ಕದ್ದಲ್ಲದೆ, ಅಂಗಡಿಯ ಒಳಗಡೆಯಿರುವ ಎಲ್ಲಾ ಜನಗಳು ಬೀದಿಯಲ್ಲಿ ತಿರುಗಾಡುವ ಜನಗಳಿಗೆ ಕಾಣುವಹಾಗಿರಬೇಕು. ಶಿವಾಯಿ, ಬೇರೇಕೋಠಡಿಯು ಬಿಕರಿಗಾಗಿ ಉಪಯೋಗಿಸಲ್ಪಡಕೂಡದು, ಅಥವಾ ಪಾನಮಾಡುವವರಿಗೆ ತೆಗೆದಿರಕೂಡದು. ಅಂಗಡಿಯ ಒಳಭಾಗದಲ್ಲಿ ಹಗಲಿನಲ್ಲಿ ಚನ್ನಾಗಿ ಬೆಳಕಿರಬೇಕು. ಬಿಕರಿದಾರ ಮತ್ತು ಅವನ ಮನೇ ಜನರು ಅಥವಾ ಕಾವಲುಗಾರರು ಇವರುಗಳು ಶಿವಾಯಿ ಮತ್ತ್ಯಾರಾದರೂ ಅದರಲ್ಲಿ ವಾಸವಾಗಿರಕೂಡದು.

4. ಎರಡು ಅಥವಾ ಹೆಚ್ಚು ಪರಾಯಿದೇಶದ ಮದ್ಯಗಳನ್ನು ಮಾರುವ ಲೈಸೆನ್ಸುಗಳು ಒಬ್ಬನಿಂದಲೇ ಪಡೆದಿರತಕ್ಕ ಸಂದರ್ಭ ಶಿವಾಯಿ ಪ್ರತಿ ಒಂದು ಲೈಸೆನ್ಸಿನ ಬಿಕರಿಯು ಪ್ರತ್ಯೇಕ ಕಟ್ಟಡಗಳಲ್ಲಿ ನಡೆಸಲ್ಪಡತಕ್ಕದ್ದು. (ರಸಾಯನಶಾಸ್ತ್ರಜ್ಞರು; ಮತ್ತು ಇಂಗ್ಲೀಷ್ ಔಷಧವನ್ನು ಮಾರುವವರು ಮತ್ತು ಮೆಡಿಕಲ್ ಪ್ರಾಕ್ಟೀಷನರು ಶಿವಾಯಿ) ಲೈಸೆನ್ಸ್ ಕಟ್ಟಡಗಳಲ್ಲಿ ಲೈಸೆನ್ಸಿಗೆ ಸಂಬಂಧಪಟ್ಟದ್ದು ಶಿವಾಯಿ ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನಾಗಲಿ, ಯಾ ಷರಾಬಿಗೆ ಬಣ್ಣ ಕೊಡಲು ಅಥವಾ ರುಚಿ ಹೆಚ್ಚುಮಾಡಲು ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ಯಾವ ಸಾರ ಅಥವಾ ವಸ್ತುವನ್ನಾಗಲಿ ಇಟ್ಟುಕೊಂಡಿರುವದು ಅಡ್ಡಿಮಾಡಲ್ಪಟ್ಟಿದೆ. ಅಫೀಂ ಬಿಕರಿಗಾಗಿ ಲೈಸೆನ್ಸ್‌ಕೊಟ್ಟಿರುವ ಅಂಗಡಿಗಳಲ್ಲಿ ಮಾರ್ಫಿಯ ಅಥವಾ ಹೊಗೇಸೇದಲು ಉಪಯೋಗಿಸಲ್ಪಡುವ ಪದಾರ್ಥಗಳು ಹೊರ್ತು ಅಫೀಂನಿಂದ ಮಾಡಲ್ಪಟ್ಟ ಮದತ್ ಪದಾರ್ಥಗಳು ತಯಾರ್ಮಾಡಲ್ಪಡಬಹುದು. ಯಾ ಮಾರಲ್ಪಡಬಹುದು.

5. ಬಿಕರಿಮಾಡಲ್ಪಡುವ ಲೈಸೆನ್ಸಿನ ತರಹೆ ಮತ್ತು ನಂಬರು, ಲೈಸೆನ್ಸ್‌ದಾರನ ಹೆಸರು ಮತ್ತು (ಪರಾಯಿದೇಶದ ಮದ್ಯ ಅಥವಾ ವಿಶೇಷ ಮದ್ಯಗಳಿಗೆ ಶಿವಾಯಿ, ಬಿಕರಿಯ ದರ ಇವುಗಳನ್ನು ನಮೂದು ಮಾಡಿರುವ ಹಲಿಗೆಯು ಪ್ರತಿ ಡೆಪೋ ಅಥವಾ ಅಂಗಡಿಯ ಮುಂಭಾಗದಲ್ಲಿ ತಗಲಿಹಾಕಲ್ಪಟ್ಟಿರಬೇಕು. ಈ ವಿವರಗಳು ಸ್ವದೇಶಭಾಷೆಯಲ್ಲಿ ಸ್ಫುಟವಾಗಿ ಬರೆಯಲ್ಪಟ್ಟಿರಬೇಕು. ಲೈಸೆನ್ಸು ಅಂಗಡಿಯ ಒಳಗಡೆ ಎಲ್ಲರಿಗೂ ಕಾಣುವಕಡೆ ತಗಲಿಹಾಕಲ್ಪಟ್ಟಿರಬೇಕು.

6. ಮಾರಲ್ಪಡುವ ಯಾ ಮಾರಲಿಕ್ಕೆ ಇಟ್ಟುಕೊಂಡಿರುವ ಎಲ್ಲಾ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಒಳ್ಳೇದಾಗಿರಬೇಕು ಮತ್ತು ಕಲಬೆರಿಕೆಯಿಲ್ಲದೆ ಇರಬೇಕು. ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಮದತ್ ಪದಾರ್ಥಗಳನ್ನು ತಯಾರ್ಮಾಡುವದು ಶಿವಾಯಿ ಅವುಗಳ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವದಕ್ಕಾಗಲಿ ಅಥವಾ ಇನ್ಯಾವ ಕಾರಣಗಳಿಗಾಗಲಿ, ಅವುಗಳಿಗೆ ಏನೂ ಶೇರಿಸಕೂಡದು. ಕೋಠಿಗಳನ್ನೂ, ಅಂಗಡಿಗಳನ್ನೂ ತನಿಖೆ ಮಾಡುವದಕ್ಕೆ ಅಧಿಕಾರವುಳ್ಳ ಆಫೀಸರುಗಳು (25ನೆ ಷರತ್ತನ್ನು ನೋಡಿ) ಪಾನಮಾಡುವದಕ್ಕೂ, ಅಥವಾ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಅಥವಾ ಕೆಡಿಸಿದ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನು ಖರ್ಚುಮಾಡಕೂಡದೆಂದು ಅಪ್ಪಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಕ್ಸೈಜ್ ಕಮಿಷನರವರೂ, ಡೆಪ್ಯುಟಿ ಕಮಿಷನರವರೂ ಮತ್ತು ಡಿಸ್ಟ್ರಿಕ್ಟು ಎಕ್ಸೈಜ್ ಆಫೀಸರವರೂ ಈರೀತಿಯಲ್ಲಿ ಪಾನಮಾಡಲಿಕ್ಕಾಗಲಿ, ಉಪಯೋಗಿಸಲಿಕ್ಕಾಗಲಿ ನಾಲಾಯಖಾಗಿರುವದನ್ನು ನಾಶಮಾಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

7. 16 ವರುಷಕ್ಕೆ ಕಮ್ಮಿ ವಯಸ್ಸುಳ್ಳವರಿಂದಲೇ ಆಗಲಿ ಅಥವಾ ಕುಷ್ಠರೋಗದಿಂದ ಅಥವಾ ಇತರ ಅಂಟುರೋಗದಿಂದ ಪೀಡಿತರಾದ ಜನಗಳಿಂದ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಮಾರಲ್ಪಡಕೂಡದು. ಅಥವಾ ಮಯ್ಯಲ್ಪಡಕೂಡದು. ಅಂಗಡಿ ಯಾ ಡೆಪೋಗಳಲ್ಲಿ ಬಿಕರಿ ಬಗ್ಗೆ ಅಂಥಾ ಜನಗಳನ್ನು ನೇಮಿಸೋಣವು ಅಡ್ಡಿಮಾಡಲ್ಪಟ್ಟಿದೆ. ಡೆಪೋಗಳಲ್ಲಿ ಅಥವಾ ಅಂಗಡಿಗಳಲ್ಲಿ ನೇಮಕಮಾಡಲ್ಪಟ್ಟ ಯಾ ನೇಮಕಮಾಡಲ್ಪಡಲು ಉದ್ದೇಶಿಸಲ್ಪಟ್ಟ ಜನಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರವರು ಅವಶ್ಯಕಕಂಡರೆ ತರಸಿಕೊಂಡು ಅವರು ಒಪ್ಪದೇ ಇರತಕ್ಕ ಯಾವ ಮನುಷ್ಯನಿಂದಾಗಲಿ ಷರಾಬು, ಮದತ್ ಪದಾರ್ಥಗಳು ಅಫೀಂ ಮಾರೋಣವನ್ನು ಅಡ್ಡಿಮಾಡಬಹುದು.

8. ವಿಶೇಷವಾದ ಅಪ್ಪಣೆಹೊಂದಿದ ಶಿವಾಯಿ ಸೂರ್ಯೋದಯಕ್ಕೆ ಮುಂಚೆ ಯಾವ ಡೆಪೋ ಮತ್ತು ಅಂಗಡಿಯು ತೆಗೆಯಲ್ಪಡಕೂಡದು. ಮತ್ತು ರಾತ್ರೆ *9 ಘಂಟೆನಂತರ ತೆಗಿಯಲ್ಪಟ್ಟಿರಕೂಡದು.

9. ಡೆಪೋ ಯಾ ಅಂಗಡಿಗಳಲ್ಲಿ ಯಾವ ವಿಧವಾದ ನಿಷಾ ಬಂದಿರೋಣ, ಯಾ ಗಲಾಟೆ ಯಾ ಜೂಜಾಟ ಇವುಗಳಿಗೆ ಆಸ್ಪದಕೊಡಕೂಡದು. ಡೆಪೋ ಅಥವಾ ಅಂಗಡಿಗಳಲ್ಲಿ ಯಾವ ವಿಧವಾದ ವಿನೋದಗಳು ಅಡ್ಡಿಮಾಡಲ್ಪಟ್ಟಿದೆ.

10. ಲೈಸೆನ್ಸ್‌ದಾರನು ಚೋರರು, ಕಳ್ಳರು, ಪೋಲಿ ಮನುಷ್ಯರು, ದೊಂಬಿಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳ್ಳು, ಫೌಜಿನಿಂದ ಪರಾರಿಯಾಗಿಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟಿದ್ದಂಥವರು ಇಂಥವರಿಗೆ ಡೆಪೋ ಅಥವಾ ಅಂಗಡಿಗಳಲ್ಲಿ ಆಶ್ರಯಕೊಡಕೂಡದು. ಅಂಥ ಜನರು ಅಲ್ಲಿಗೆ ಬಂದರೆ ಸಮೀಪದಲ್ಲಿರುವ ಮ್ಯಾಜಿಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರಿಗೆ ವರ್ತಮಾನಕೊಡತಕ್ಕದ್ದು.

11. ರಾತ್ರೆಕಾಲದಲ್ಲಿ ಯಾವ ಡೆಪೋ ಅಥವಾ ಅಂಗಡಿಯಲ್ಲಾಗಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು.

12. ಯೂರೋಪಿಯನ್ ಅಥವಾ ನೇಟಿವ್ ಸೈನ್ಯದ ರಿಜಮೆಂಟ್ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ, ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಯೂ ಆ ಮಾರ್ಗದ ಸಮೀಪದಲ್ಲಿರುವ ಡೆಪೋ ಮತ್ತು ಅಂಗಡಿಗಳನ್ನು ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಮಾಡಿದಲ್ಲಿ ಮುಚ್ಚಿಬಿಡಬೇಕು. ಮತ ಸಂಬಂಧವಾದ ಗಲಾಟೆ ಅಥವಾ ತೊಂದರೆಕಾಲಗಳಲ್ಲಿ ಹಂಗಾಮಿಯಾಗಿ ಡೆಪ್ಯುಟಿ ಕಮ್ಮಿಷನರವರು ಅಥವಾ ರೆವಿನ್ಯೂ ಅಸಿಸ್ಟೆಂಟ್ ಕಮ್ಮಿಷನರವರು ಯಾವ ಅಂಗಡಿಗಳನ್ನಾದರೂ ಮುಚ್ಚಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. ಸಮೀಪದಲ್ಲಿ ದೊಂಬಿ ಅಥವಾ ತೊಂದರೆ ಇದ್ದಲ್ಲಿ, ಪ್ರತಿ ಡೆಪೋ ಮತ್ತು ಅಂಗಡಿಕಾರನು ತನ್ನ ಡೆಪೋ ಮತ್ತು ಅಂಗಡಿಯನ್ನು ತಾನೇ ಮುಚ್ಚಬಹುದು.

13. ಡೆಪ್ಯುಟಿ ಕಮ್ಮಿಷನರವರು ಡೆಪೋ ಮತ್ತು ಅಂಗಡಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇನ್ನೂರು ಗಜಗಳ ಒಳಗಾಗಿ ವರ್ಗಾಯಿಸಬಹುದು. ಅಥವಾ ಅವುಗಳನ್ನು ಮುಚ್ಚಬೇಕೆಂದು ಹುಕುಂ ಮಾಡಬಹುದು. ಎಕ್ಸೈಸ್ ಕಮ್ಮಿಷನರವರ ಮಂಜೂರಾತಿ ಶಿವಾಯಿ ಹೊಸ ಅಂಗಡಿಗಳನ್ನು ಇಡಕೂಡದು.

14. ಕ್ರಮವಾಗಿ ಲೈಸೆನ್ಸ್ ಪಡೆದ ಅಂಗಡಿಗಳು ಸಮೀಪದಲ್ಲಿಲ್ಲದೆ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಷರಾಬು, ಮದತ್ ಪದಾರ್ಥಗಳು ಮತ್ತು ಅಫೀಮನ್ನು ಬಿಕರಿ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಉಳಿಸಿಕೊಂಡಿರುತ್ತೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರಿ ಪ್ರದೇಶದವರೆಗೆ ಮಾಮೂಲಾಗಿ ಸರಬರಾಯಿ ಮಾಡುವ ದುಕ್ಕಾಣದಾರರಿಗೆ ಅಥವಾ ಲೈಸೆನ್ಸ್‌ದಾರನ ಪ್ರತಿನಿಧಿಗಳಿಗೇನೇ ಕೊಡತಕ್ಕದ್ದು. ಸದರಿ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು. ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮ್ಮಿಷನರವರು ತೀರ್ಮಾನಿಸಬಹುದು.

15. (a) ಡಿವಿಜನ್ ಕಮ್ಯಾಂಡಿಂಗ್ ಆಫಿಸರವರ (ಸ್ವತಂತ್ರ ಬ್ರಿಗೆಡ್ ಕಮ್ಯಾಂಡಿಂಗ್ ಆಫಿಸರವರ) ಅಥವಾ ಕಂಟೋನ್ಮೆಂಟ್ ಅಥವಾ ಕ್ಯಾಂಪ್ ಕಮ್ಯಾಂಡಿಂಗ್ ಆಫಿಸರವರ ಅನುಮತಿ ಪಡೆದಿರುವ ಅಂಗಡಿಗಳಲ್ಲಿ ಶಿವಾಯಿ, ಮತ್ತು ಲೈಸೆನ್ಸಿನಲ್ಲಿ ನಮೂದಿರುವ ಸ್ಥಳೀಕ ಅಬ್ಕಾರಿ ಇಲಾಖೆಯವರೊಂದಿಗೆ ಮೇಲೆ ಹೇಳಿರುವ ಸದರಿ ಆಫಿಸರುಗಳೂ ಒಪ್ಪಿರುವ ಷರಾಬುಗಳಿಗೆ ಶಿವಾಯಿ

(1) ನಾವಿಕರೂ, ಶಿಪಾಯಿಗಳೂ ಮತ್ತು ಅವರ ಮನೆ ಜನರು.

(2) ಬ್ಯಾರಾಕ್‌ನಲ್ಲಿ ವಾಸ ಮಾಡುವ ಇತರ ಮನುಷ್ಯರು.

(b) ಕೆಲಸದ ಮೇಲಿರುವ :—

(1) ಮೊಕ್ಕಾಂಗಳೊಡನೆ ಹೋಗುವವನು, ಪೊಲೀಸಿನವನು ಅಥವಾ ಎಕ್ಸೈಜ್ ನೌಕರನು.

(2) ರೈಲ್ವೆ ಕಂಪೆನಿಗೆ ಸೇರಿದವನು ಅಥವಾ

(c) ಯಾವ ಸಂದರ್ಭದಲ್ಲಾದರೂ ;—

(1) ಪೊಲೀಸ್ ಮೊಹಸಲೆಯಲ್ಲಿರುವ ಯೂರೋಪಿಯನ್ ತಿರುಕನಿಗೂ

(2) 16 ವರುಷದ ಒಳಗಾಗಿರುವ ಮನುಷ್ಯನಿಗೂ

(3) ಹುಚ್ಚನಿಗೂ

(4) ನಿಷಾ ಆಗಿರುವದೆಂದು ತಿಳಿದಿರುವ ಅಥವಾ ಕಂಡು ಬರುವ ಮನುಷ್ಯನಿಗೂ, ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಂ ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

16. ಸರಬರಾಯಿ ಮಾಡುವ ಅಥವಾ ಮಾರುವ ಹಕ್ಕುದಾರಿಯು ಎಕ್ಸೈಜ್ ಕಮಿಷನರವರ ಅಪ್ಪಣೆ ಶಿವಾಯಿ ಮಾರಲ್ಪಡಕೂಡದು. ವರ್ಗ ಮಾಡಲ್ಪಡಕೂಡದು ಮತ್ತು ಪಿಕ್ಕಿ ಇಜಾರೆಗೆ ಕೊಡಲ್ಪಡಕೂಡದು. ಮತ್ತು ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದಲ್ಲಿ ಅವರ ಅನುಮತಿ ಇಲ್ಲದೆ ಯಾವ ಹಕ್ಕಿನ ಆಡಳಿತಕ್ಕಾದರೂ ಯಾವ ಮುತಾಲೀಕನು ನೌಕರರೂ ಆಗಕೂಡದು.

* ಬೆಂಗಳೂರು ಸಿಟಿಯಲ್ಲಿ ರಾತ್ರೆ 9½ ಘಂಟೆ.

* ಸಾರಾಯಿ ಬಾಂಡಂಡ್ ಡೆಪೋಗಳಲ್ಲಿ ರಾತ್ರೆ 8 ಘಂಟೆ.

17. ಯಾವ ಆಬ್ಕಾರಿ ಅಥವಾ ಅಫೀಂ ಲೈಸೆನ್ಸದಾರನು ಎಕ್ಸೈಜ್ ಕಮಿಷನರವರ ಬರಹಮೂಲಕವಾದ ಅಪ್ಪಣೆ ಶಿವಾಯಿ ಮೈಸೂರು ಶೀಮೆಯ ಹೊರಗಡೆ ಅಥವಾ ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನ ಯಾವ ಆಬ್ಕಾರಿ ಮತ್ತು ಅಫೀಂ ಲೈಸೆನ್ಸಿನಲ್ಲಿ ಯಾವ ವಿಧವಾದ ಸಂಬಂಧವನ್ನು ನೇರಾಗಿಯಾಗಲಿ ಪರೋಕ್ಷವಾಗಿ ಯಾಗಲಿ ಇಟ್ಟುಕೊಳ್ಳಕೂಡದು. ಮತ್ತು ಇಟ್ಟುಕೊಂಡಿರಕೂಡದು.

18. ಮೇಲೆ ಹೇಳಿರುವ 12 ಮತ್ತು 13ನೇ ಷರತ್ತುಗಳಿಗನುಸಾರವಾಗಿ ಹಂಗಾಮಿಯಾಗಾಗಲಿ ಅಥವಾ ಖಾಯಮಾಗಾಗಲಿ ಮುಚ್ಚುವ ಸಂದರ್ಭಗಳಲ್ಲಿ ವಿನಹಾ ಡಿಪೋ ಮತ್ತು ಅಂಗಡಿಗಳು ತೆಗೆದಿರಬೇಕು. ಡೆಪ್ಯುಟಿ ಕಮಿಷನರವರು ಸ್ಥಳದ ಉಪಯೋಗಕ್ಕೆ ಅವಶ್ಯಕವಾಗಿರುವದೆಂದು ತಿಳಿದು ಅಪ್ಪಣೆ ಮಾಡಿರುವಷ್ಟು ಷರಾಬು ಮದಕ ಪದಾರ್ಥಗಳು ಮತ್ತು ಅಫೀಮನ್ನು ಅಂಗಡಿಗಳಲ್ಲಿ ಇಟ್ಟಿರಬೇಕು. ಜುಲ್ಮೆ ಗುರೈಯಲ್ಲಿ ತೆರೆಯದಿರುವ ಅಂಗಡಿಗಳು ಲೈಸೆನ್ಸದಾರನ್ನು ಲುಕ್ಸಾನಿಗೆ ಒಳಪಡಿಸಿ ಪುನಃ ಹರಾಜು ಮಾಡಲ್ಪಡುವದು.

19. ಷರಾಬು, ಮದಕ ಪದಾರ್ಥ ಯಾ ಅಫೀಂ ಅಂಗಡಿಗಳಲ್ಲಿ ನಗದು ವೊಬಲಗಿಗೆ ಶಿವಾಯಿ ಮಾರಲ್ಪಡಕೂಡದು. ನಗದು ಶಿವಾಯಿ ಬೇರೇ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಲೈಸೆನ್ಸುದಾರನು ಸಮೀಪದಲ್ಲಿರುವ ಮೇಜಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರಿಗೆ ವರ್ತಮಾನ ಕೊಡಲು ಬದ್ಧನಾಗಿರುತ್ತಾನೆ. ಈ ಷರತ್ತು ಅಂಗಡಿಯ ಹೊರಗಡೆ ಕುಡಿಯುವದಕ್ಕಾಗಿ ಅಂಗಡಿದಾರ್ರಿಂದಲೂ ಯಾ ಮಾತಬರ ಘರಂಗಳಿಂದಲೂ ವ್ಯಾಪಾರ ಮೂಲಕವಾಗಿ ಕೊಡಲ್ಪಡುವ ಪರಾಯಿ ದೇಶದ ಮತ್ತು ವಿಶೇಷ ಷರಾಬುಗಳನ್ನು ಸಾಲವಾಗಿ ಮಾರತಕ್ಕದ್ದನ್ನು ಅಡ್ಡಿ ಪಡಿಸುವದಿಲ್ಲ.

20. ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನುರೀತ್ಯಾ ಬಿಕರಿಮಾಡಲು ಗೊತ್ತುಮಾಡಿರುವ ಪರಮಾವಧಿ ಕನಿಷ್ಠ ಯಾ ನಿಷ್ಕರ್ಷೆಯಾದ ದರಗಳಿಗಿಂತಲೂ ಹೆಚ್ಚಾಗಿಯಾಗಲಿ, ಕಮ್ಮಿಯಾಗಿ ಯಾಗಲಿ ಯಾವ ಷರಾಬು, ಮದಕ ಪದಾರ್ಥ ಅಥವಾ ಅಫೀಂ ಮಾರಲ್ಪಡಕೂಡದು.

ಷರಾ—1. 20০ ಷರಾಬು—1 ಡ್ರಾಂಗೆ 2 ಆಣೆ.
2. ಗಾಂಜಾ—1 ತೊಲೆಗೆ 2 ಆಣೆ.
3. ಅಫೀಂ—1 ತೊಲೆಗೆ 9 ಆಣೆ.
4. ಶೇಂದಿ—ಷೆಡ್ಯೂಲಿನಲ್ಲಿ ಫಾಯಿಷ್ ಮಾಡಿರುವ ಕಮ್ಮಿ ದರ.

21. ಲೈಸೆನ್ಸಿಲ್ಲದೆ ಇಟ್ಟುಕೊಳ್ಳಬಹುದಾಗಿರುವ ಮೊತ್ತಕ್ಕಿಂತಲೂ ಹೆಚ್ಚಾಗಿ ಯಾವ ಷರಾಬು ಮದಕ ಪದಾರ್ಥ ಯಾ ಅಫೀಮು ವಿಧಾಯಕವಾದ ಪರ್ಮಿಟ್ಟಿಲ್ಲದೆ ಲೈಸೆನ್ಸ ಪಡೆದ ಅಂಗಡಿಯಿಂದ ಒಂದೇ ಕಾಲದಲ್ಲಿ ಯಾವ ಮನುಷ್ಯನಿಂದಲಾದರೂ ತೆಗೆದುಕೊಂಡು ಹೋಗಲ್ಪಡಕೂಡದು.

ಷರಾ—ಸಾರಾಯಿ—1 ರೆಪ್ಯೂಟೆಡ್ ಕ್ವಾರ್ಟು.
ಶೇಂದಿ—2 ಸೇರು.
ಗಾಂಜಾ—4 ತೊಲಾ.
ಅಫೀಮು—3 ತೊಲಾ.
ಪರಾಯಿ ಷರಾಬು—2 ಗ್ಯಾಲನ್.

22. ಪ್ರತಿ ದಿನವೂ ಆಗತಕ್ಕ ಜಮಾ ಖರ್ಚನ್ನು ವಿಧಾಯಕವಾದ ನಮೂನೆಯಲ್ಲಿ ಶಾಯಿಯಲ್ಲಿ ಬರೆದಿಡಬೇಕು. ಈ ಲೆಕ್ಕದ ಪುಸ್ತಕಗಳನ್ನೂ ಮತ್ತು ಪರ್ಮಿಟ್ ಪುಸ್ತಕಗಳನ್ನೂ ಸರ್ಕಾರೀ ಖಜಾನೆಯಲ್ಲಿ ಖರೀದಿ ವೊಬಲಗನ್ನು ಜಮಾ ಮಾಡಿದ್ದ ರಶೀತಿಗಳನ್ನು ಹಾಜರ್ಮಾಡಿದ್ದಲ್ಲಿ ಸ್ಥಳೀಕ ಆಬ್ಕಾರಿ ನೌಕರರಿಂದ ಪಡೆಯಬಹುದು. ಜಮಾ ಬಂದ ಷರಾಬು, ಮದಕ ಪದಾರ್ಥಗಳು ಅಥವಾ ಅಫೀಮಿನ ಪರ್ಮಿಟ್ಟುಗಳೂ, ಖರ್ಚಾದ ಪರ್ಮಿಟ್ಟುಗಳ ಕೌಂಟರ್ ಫಾಯಿಲುಗಳೂ ಎಚ್ಚರಿಕೆಯಾಗಿ ಫೈಲ್ ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರ್ಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ, ರುಜು ಮಾಡುವದನ್ನು ನಿಷೇಧಿಸಿದೆ. ಈ ಲೆಖ್ಖಗಳನ್ನೂ, ಪರ್ಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ ಲೈಸೆನ್ಸಿನಲ್ಲಿ ಕಂಡವಾಯಿದೆಯು ಕಳೆದ ಒಂದು ವರುಷದವರಿಗೂ ಇಟ್ಟುಕೊಂಡಿರತಕ್ಕದ್ದು. ಅಸಿಸ್ಟೆಂಟು ಇನ್ಸ್ಪೆಕ್ಟರ ದರ್ಜೆಗೆ ಕಮ್ಮಿ ಯಾಗಿರದ ಯಾವ ಎಕ್ಸೈಜ್ ಆಫಿಸರು ಕೇಳಿದರೂ ಸದರಿ ಲೆಖ್ಖಗಳನ್ನು ಹಾಜರ್ಮಾಡಬೇಕು.

23. ಅಸಿಸ್ಟೆಂಟ್ ಇನ್ಸ್ಪೆಕ್ಟರ ದರ್ಜೆಗಿಂತಲೂ ಕಮ್ಮಿ ಇಲ್ಲದ ಎಕ್ಸೈಜ್ ಆಫಿಸರುಗಳು ಆಗಿಂದಾಗ್ಯೆ ಅಪೇಕ್ಷಿಸುವಂಥ ಯಾವ ಲೆಖ್ಖಗಳನ್ನಾಗಲಿ, ವರ್ತಮಾನಗಳನ್ನಾಗಲಿ ಲೈಸೆನ್ಸದಾರರು ತಡೆಮಾಡದೆ ಕೊಡಬೇಕು.

24. ಎಕ್ಸೈಜ್ ಕಮ್ಮಿಷನರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಪ್ರಮಾಣದ ತೂಕದ ಮತ್ತು ಅಳತೆ ಸಾಧನಗಳನ್ನು ಮಾತ್ರವೇ ಎಲ್ಲಾ ಲೈಸೆನ್ಸ್ ಪಡೆದ ಅಂಗಡಿಗಳಲ್ಲಿ ಇಟ್ಟುಕೊಂಡಿರಬೇಕು, ಮತ್ತು ಉಪಯೋಗಿಸಬೇಕು. ಯಾವ ಲೈಸೆನ್ಸ ಪಡೆದ ಅಂಗಡಿಗಳಲ್ಲಾದರೂ ಕರಾರ್ವಾರ್ಕಾಗಿಲ್ಲದ ತೂಕದ ಮತ್ತು ಅಳತೆ ಸಾಧನೆಗಳನ್ನು ಇಟ್ಟುಕೊಂಡಿರೋಣವು ಅಥವಾ ಉಪಯೋಗಿಸೋಣವು ಲೈಸೆನ್ಸದಾರನನ್ನು ಶಿಕ್ಷೆಗೆ ಗುರಿಮಾಡುತ್ತೆ.

25. ಸಬ್ ಇನ್ಸ್ಪೆಕ್ಟರ ಹುದ್ದೆಗಿಂತಲೂ ಕಮ್ಮಿಯಾಗಿರದ ಯಾವ ಆಬ್ಕಾರೀ ನೌಕರನಾದರೂ ಲೈಸೆನ್ಸ ಪಡೆದ ಅಂಗಡಿಗಳನ್ನೂ ಮತ್ತು ಡಿಪೋಗಳನ್ನೂ ತನಿಖೆಮಾಡಲು ಅಧಿಕಾರವುಳ್ಳವನಾಗಿರುತ್ತಾನೆ. ಸದರಿ ಅಂಗಡಿಗಳನ್ನು ಪ್ರವೇಶಮಾಡಿ ತನಿಖೆಮಾಡುವದಕ್ಕೂ, ಉಪಯೋಗದಲ್ಲಿರುವ ತೂಕದ ಮತ್ತು ಅಳತೆ ಸಾಧನೆಗಳನ್ನೂ, ಷರಾಬು, ಮದಕ ಪದಾರ್ಥಗಳು, ಅಫೀಮನ್ನೂ ಅಜಮಾಯಿಷಿ ಮಾಡಲಿಕ್ಕೂ ಅಂಗಡಿಯಲ್ಲಿ ಯಾ ಡಿಪೋದಲ್ಲಿಟ್ಟಿರತಕ್ಕ ಲೆಖ್ಖಗಳನ್ನು ಕೇಳಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ. ಪೊಲೀಸ್ ಆಫಿಸರರು ಕೂಡ ತಮ್ಮ ಕೆಲಸಕ್ಕೆ ಸಂಬಂಧಪಟ್ಟಿರುವ ಮಟ್ಟಿಗೆ ತನಿಖೆ ಮಾಡಬಹುದು.

26. ಕ್ರಮವಾಗಿ ನಂಬರು ಹಾಕಲ್ಪಟ್ಟ ಪುಟಗಳುಳ್ಳ ಇನ್ಸ್ಪೆಕ್ಷನ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರಿ ಪುಸ್ತಕವನ್ನು ರೇಂಜ್ ಛಾರ್ಜಿನಲ್ಲಿರುವ ಅಬಕಾರಿ ಇನ್ಸ್ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ಯಾವ ಆಫಿಸರರೇ ಆಗಲಿ ರಶೀತಿ ಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

27. ಸ್ವತಂತ್ರ ಹಕ್ಕನ್ನು ಪಡೆದದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರೀ ಖಜಾನೆಯಲ್ಲಿ ಜುಲೈ ಮಾಹೆ ಲಾಗಾಯಿತು ಪ್ರತಿ ತಿಂಗಳಲ್ಲಿಯೂ 20ನೆ ತಾರೀಖು ಅಥವಾ ಅದರ ವಳಗೆ ಸರಿಯಾದ ತಿಂಗಳಗಟ್ಲೆ 12 ಖಿಸ್ತುಗಳಲ್ಲಿ ಪಾವತಿ ಮಾಡುತ್ತಾ ಬರತಕ್ಕದ್ದು. ಜಾತ್ರೆ ಅಂಗಡಿಯ ಲೈಸೆನ್ಸದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೇ ಸದರಿ ಅಂಗಡಿಯ ಗುತ್ತಾ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

ಷರಾ:—ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ತಾವೇ ಲೈಸೆನ್ಸದಾರರಲ್ಲದೆ ಇರುವ ಸಂದರ್ಭಗಳಲ್ಲಿ ಗ್ರಾಮದ ಪಟೇಲರು ಯಾವ ಮನುಷ್ಯನಿಂದಲಾಗಲೀ ಒಂದುಸಾರಿಗೆ 50 ರೂಪಾಯಿಗಳಿಗೆ ಮೀರದಂತೆ ಮೊಬಲಗನ್ನು ತೆಗದುಕೊಳ್ಳಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡಬಹುದು.

28. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಮಾಡಬೇಕೆಂದು ಯಾ ಇಜಾರೆ ಮೊಬಲಗನ್ನು ಕಮ್ಮಿ ಹಲ್ಪಡಬೇಕೆಂದು ಕೇಳಲ್ಪಡಕೂಡದು.

29. ಜಮೀನ್ ಕಂದಾಯದ ಬಾಕಿ ವಸೂಲಿ ಬಗ್ಯೆ ಆಯಾ ಕಾಲದಲ್ಲಿ ಜಾರೀಲಿರುವ ಕಾನೂನು ಮೇರೆಗೆ ಲೈಸೆನ್ಸದಾರನಿಂದ ಬರಬೇಕಾದ ಮೊಬಲಗು ಆತನ ಯಾ ಆತನ ಜಾಮೀನ್‌ದಾರನ ಸ್ವತ್ತುಗಳ ಜಫ್ತು ಮತ್ತು ಹರಾಜಿನಿಂದ ವಸೂಲ್ಮಾಡಲ್ಪಡುವದು. ಅಥವಾ ಇಜಾರೆಯು ಪ್ರಾರಂಭದಲ್ಲಿ ಆತನಿಂದ ಕೊಡಲ್ಪಟ್ಟ ಠೇವಣಿ ಮೊಬಲಗು ಇದ್ದಲ್ಲಿ ವಜಾ ಹಾಕಲ್ಪಡುವದು. ಅಮಲ್ದಾರ್‌ರಿಂದ ಕೊಡಲ್ಪಟ್ಟ ನೋಟೀಸ್ ಜಾರಿಯಾದ 15 ದಿವಸಗಳ ವಳಗಾಗಿ ಠೇವಣಿ ಮೊಬಲಗಿನಿಂದ ವಜಾ ಮಾಡಲ್ಪಟ್ಟ ಮೊಬಲಗನ್ನು ಪುನಃ ಭರ್ತಿ ಮಾಡಲು ಬದ್ಧನಾಗಿರುತ್ತಾನೆ.

30. ವಿಧಾಯಕವಾದ ತಾರೀಖುಗಳ ವಳಗಾಗಿ ಖಿಸ್ತುಗಳನ್ನು ಅಥವಾ (ಶೇಂದಿಯ) ಮರತೆರಿಗೆಯನ್ನು ಕೊಡದೆ ತಪ್ಪಿದಲ್ಲಿ, ಲೈಸೆನ್ಸುಗಳನ್ನು ಸಸ್ಪೆಂಡ್ ಮಾಡಲು ರೆವಿನ್ಯೂ ಆಫಿಸರುಗಳಿಗೆ ಅಧಿಕಾರವನ್ನು ಉಳಿಸಿಕೊಂಡಿರುತ್ತೆ. ಷರಾಬು ಶೇಂದಿ ಮತ್ತು ಮದ್ದಕ್ ಅಂಗಡಿಗಳ ವಿಷಯದಲ್ಲಿ ಈ ಅಧಿಕಾರವು ಅಮಲ್ದಾರುಗಳಿಂದಲೂ ಇತರ ಸಂದರ್ಭಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಚಲಾಯಿಸಲ್ಪಡುತ್ತೆ.

31. ಮೇಲ್ಕಂಡ ಷರಾಬು, ಶೇಂದಿ, ಮದ್ದಕ್ ಪದಾರ್ಥಗಳ ಲೈಸೆನ್ಸದಾರನು ಖಿಸ್ತು ಬಾಕೀ ಬೀಳುವ ತಿಂಗಳ ಆಖೈರ ವಳಗಾಗಿ ಖಿಸ್ತು ಕೊಡದೆ ತಪ್ಪಿದಲ್ಲಿ. ಅಮಲ್ದಾರ್‌ರು ಡೆಪ್ಯುಟಿ ಕಮ್ಮಿಷನರವರ ಬರಹಮೂಲಕವಾದ ಅಪ್ಪಣೆ ಪಡೆದು ಲೈಸೆನ್ಸನ್ನು ರದ್ದುಮಾಡಿ ಮುಂದಿನ ತಿಂಗಳ ಗುರ್ರೆ ತಾರೀಖಿನದಿವಸ (ರಜಾ ದಿವಸಗಳು ಶಿವಾಯಿ) ಸದರಿ ಹಕ್ಕನ್ನು ಹೊಸ ಬಿಕರೀದಾರನಿಗೆ ಲೈಸೆನ್ಸ್ ಕೊಟ್ಟ ತಾರೀಖು ಲಾಗಾಯಿತು ಬಿಕರಿಯ ಸ್ವತಂತ್ರ ಹಕ್ಕನ್ನು ಪುನಃ ಹರಾಜು ಮಾಡಬಹುದು. ಅಥವಾ ಸದರಿ ಹಕ್ಕು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರುವ ರೀತ್ಯಾ ಇತರ ವಿಧವಾಗಿ ವಿಲೇವಾರಿ ಮಾಡಬಹುದು. ಸದರಿ ಹಕ್ಕನ್ನು ರದ್ದುಮಾಡುವದರಿಂದ ಮತ್ತು ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲೇವಾರಿ ಮಾಡುವದರಿಂದ ಉಂಟಾಗುವ ಎಲ್ಲಾ ನಷ್ಟಕ್ಕೂ ತಪ್ಪಿತಸ್ಥನು ಗುರಿಯಾಗಿರುತ್ತಾನೆ. ಆದರೆ ಏನಾದರೂ ಲಾಭ ಬಂದಲ್ಲಿ ಅದಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಇಜಾರೆ ಪ್ರಾರಂಭದಲ್ಲಿ ಇಡಲ್ಪಟ್ಟ ಠೇವಣಿ ಏನಾದರೂ ಇದ್ದಲ್ಲಿ, ಇದರ ಪೂರಾ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸನ್ನು ಸಸ್ಪೆಂಡು ಮಾಡಲಿಕ್ಕೆ ಅಧಿಕಾರವುಳ್ಳ ಆಫಿಸರು ತಮಗೆ ಯುಕ್ತ ಕಂಡರೆ ಪುನಃ ಹರಾಜು ಅಥವಾ ಇತರ ವಿಲೇವಾರಿ ಆಗುವ ವರಿವಿಗೂ ಬಿಕರಿ ನಡೆಸಲು ಅವಕಾಶ ಕೊಡಬಹುದು.

32. ಬಾಕೀ ಬೀಳುವ ಎಲ್ಲಾ ಮೊಬಲಗಿನಮೇಲೂ ತಿಂಗಳು 1ಕ್ಕೆ ಅಥವಾ ಅದರ ಭಾಗಕ್ಕೆ ರೂಪಾಯಿ 1ಕ್ಕೆ 1ಪೈ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡಬೇಕು.

33. ಲೈಸೆನ್ಸದಾರನಾಗಲಿ ಅಥವಾ ಆತನಿಂದ ನೇಮಿಸಲ್ಪಟ್ಟ ಯಾವ ಮನುಷ್ಯನಾಗಲಿ ಲೈಸೆನ್ಸಿನ ಯಾವ ಷರತ್ತುಗಳಿಗೆ ವಿರೋಧವಾಗಿ ನಡೆದರೆ, ಲೈಸೆನ್ಸದಾರನಿಗೆ—

(a) 50 ರೂಪಾಯಿನವರಿಗೆ ಜುರ್ಮಾನೆ ಅಥವಾ (b) ಠೇವಣಿಗಳೇನಾದರೂ ಇದ್ದಲ್ಲಿ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಲೈಸೆನ್ಸು ರದ್ದುಮಾಡಲ್ಪಡುವದು ಮತ್ತು ಲೈಸೆನ್ಸದಾರ್‌ರನ್ನು ನಷ್ಟಕ್ಕೆ ಗುರಿಮಾಡಿ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಅಥವಾ ಇತರ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಈ ಮೇಲ್ಕಂಡ ಅಂಶಗಳಿಗೆ ಲೈಸೆನ್ಸದಾರನು ಒಳಗಾಗಿರುತ್ತಾನೆ.

ಲೈಸೆನ್ಸದಾರನು ಅಥವಾ ಆತನ ಮುತಾಲೀಕನು ಆತನು ಮಾಡಿರುವ ತಕ್ಸೀರಿಗೆ ಅಪಾದನೆ ಮಾಡಲ್ಪಡಬಹುದು. ಈ ಷರತ್ತಿನಂತೆ ಇಜಾರೆಯು ರದ್ದು ಮಾಡಲ್ಪಟ್ಟರೆ ಇಜಾರೆಯ ಪೂರಾ ಮೊಬಲಗು ಕೂಡ್ಲೆ ಬಾಕಿ ಬೀಳುವದು.

ಷರಾ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪುಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

34. ಲೈಸೆನ್ಸದಾರನು ಎಕ್ಸೈಜ್ ರೆಗ್ಯುಲೇಷನ್ ಯಾ ಅಫೀಂ ಆಕ್ಟಿಗೆ ವಿರೋಧವಾಗಿ ಅಥವಾ ಇಂಡಿಯನ್ ಪೆನಲ್ ಕೋಡಿನಲ್ಲಿ ನಮೂದಿಸಿರುವ ಯಾವ ತಕ್ಸೀರಿಗಾದರೂ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದಲ್ಲಿ, ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸದಾರನಾಗಿರಲು ನಾಲಾಯಖೆಂದು ಕಂಡುಬಂದಲ್ಲಿ, ಯಾವ ಲೈಸೆನ್ಸಾದರೂ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೆ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ ಅವನ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹಕ್ಕಿಬಾರಿಯ ಹರಾಜು ಮುಂಜೂರಾದನಂತರ ಕ್ರಮವಾದ ಲೈಸೆನ್ಸು ಕೊಡುವದಕ್ಕೆ ಮುಂಚೆಯಾದ

ರೂ ಕೂಡ ಹಕ್ಕನ್ನು ಕೊಂಡುಕೊಂಡವನು ಮೇಲೆ ನಮೂದಿಸಿರುವ ಯಾವ ತಕ್ಸೀರಿಗಾದರೂ ಸಾಬೀತು ಮಾಡಲ್ಪಟ್ಟಲ್ಲಿ ಈ ಷರತ್ತಿನಲ್ಲಿ ನಿಬಂಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರುತ್ತಾನೆ. ಈ ಷರತ್ತಿನ ಮೇರೆ ಲೈಸೆನ್ಸ್ ದಂಡವಾಗಿ ತೆಗದುಕೊಳ್ಳಲ್ಪಡೋಣವು, ಇಜಾರೆ ಷರತ್ತಿನ ಪ್ರಕಾರ ಸರ್ಕಾರಕ್ಕೆ ಪಾವತಿಯಾಗಬೇಕಾದ ಮೊಬಲಗು ಜಾತಾ ಉಳಿಯುವ ಎಲ್ಲಾ ಠೇವಣಿಗಳು ದಂಡವಾಗಿ ತೆಗೆದುಕೊಳ್ಳಲ್ಪಡುವುದಕ್ಕೂ ಲೈಸೆನ್ಸದಾರನನ್ನು ಗುರಿಮಾಡುತ್ತದೆ.

35. ಷರಾಬು, ಮದಕ್ ಪದಾರ್ಥಗಳು ಮತ್ತು ಅಫೀಮನ್ನು ಬಯ್ಯುವ, ತಯಾರ್ಮಾಡುವ ಅಥವಾ ಬಿಕರಿ ಮಾಡುವದರಲ್ಲಿ ತಮ್ಮಿಂದ ನೌಕರರಾಗ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಅಥವಾ ಅಫೀಂ ಕಾನೂನುಗಳಿಗೆ ಅಥವಾ ಅವರ ಒಪ್ಪಂದಗಳಿಗೆ ವಿರೋಧವಾಗಿ ನಡೆದದ್ದು ತಮಗೆ ತಿಳಿದುಬಂದರೆ ಲೈಸೆನ್ಸದಾರರು ಡೆಪ್ಯುಟಿ ಕಮ್ಮಿಷನರವರಿಗೆ ಇಂಥಾ ಎಲ್ಲಾ ಸಂದರ್ಭಗಳನ್ನು ರಿಪೋರ್ಟು ಮಾಡುವದಕ್ಕೂ ಮತ್ತು ಅಂಥವರನ್ನು ಇನ್ನೂ ಕೆಲಸದಲ್ಲಿಟ್ಟುಕೊಂಡಿರುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರು ಕೊಡುವ ಹುಕುಮಿನಂತೆ ಜಾರೀಲಿ ತರುವುದಕ್ಕೂ ಬದ್ಧರಾಗಿರುತ್ತಾರೆ. ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಯಾವ ತಪ್ಪಿತಕ್ಕಾದರೂ ಸಾಬೀತಾದ ಮನುಷ್ಯರನ್ನು ಷರಾಬು, ಮದಕ್ ಪದಾರ್ಥ ಮತ್ತು ಅಫೀಮನ್ನು ಬಯ್ಯುವದಕ್ಕೆ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಇಲ್ಲದೆ ನೇಮಿಸಕೂಡದು.

36. ಲೈಸೆನ್ಸದಾರರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಯಾವ ವಿಧವಾದ ಹಣಸಂಬಂಧವಾದ ಲೇವಾದೇವಿಯನ್ನೂ ಖಂಡಿತವಾಗಿಯೂ ಇಟ್ಟುಕೊಳ್ಳಕೂಡದು.

37. ಎಕ್ಸೈಜ್ ಕಮ್ಮಿಷನರವರ ಅಪ್ಪಣೆ ಪಡೆದು ಲೈಸೆನ್ಸ್ ಮೋಖೂಫ್ ಬಗ್ಯೆ 15 ದಿವಸಗಳ ಮುಂಚಿನ ನೋಟೀಸ್ ಕೊಟ್ಟು ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತ್ಯಾನುಸಾರ ಯಾವ ಲೈಸೆನ್ಸನ್ನಾದರೂ ಮೋಖೂಫ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಅದಕ್ಕಾಗುವ ದಾಮಾಷಾಯಿ ಗುತ್ತಾ ಮೊಬಲಗು ವಾಪಸು ಕೊಡಲ್ಪಡಬೇಕು.

38. ಎಲ್ಲಾ ಲೈಸೆನ್ಸದಾರರು ಸರ್ಕಾರದಿಂದ ಎಕ್ಸೈಜ್ ಅಥವಾ ಅಫೀಂ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ಜಾಸ್ತಿ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧರಾಗಿರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರವರು ಸರಿಪಡಿಸುವ ಯಾ ಹೊಸ ಲೈಸೆನ್ಸನ್ನು ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

39. ಲೈಸೆನ್ಸಿಗೆ ಸಂಬಂಧಪಡದ ಷರಾಬು ಯಾ ಮದಕ್ ಪದಾರ್ಥಗಳ ವಿಷಯದಲ್ಲಿ ಯಾವದಾದರೂ ಏರ್ಪಾಡು ಮಾಡಲ್ಪಡುವ ಪಕ್ಷದಲ್ಲಿ ಲೈಸೆನ್ಸದಾರರಿಗೆ ಪರಿಹಾರ ದ್ರವ್ಯಕ್ಕೂ ಯಾ ರಿಮಿಷನ್ ಯಾನೆ ಸೋಡಿಗೂ ಹಕ್ಕು ಇರಲಾರದು.

40. ಯಾವ ತರಹೆ ಷರಾಬು ಅಂಗಡಿಯ ಲೈಸೆನ್ಸದಾರನು ತನ್ನ ಲೈಸೆನ್ಸಿನ ಮಾಯಿದೆ ಒಳಗೆ ಅಲ್ಲಿಂದ 5 ಮೈಲಿ ಒಳಗೆ ಇತರ ಷರಾಬುಗಳನ್ನು ಮಾರತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು ಮತ್ತು ತನ್ನ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಅಂಥಾ ಯಾವ ಮನುಷ್ಯನನ್ನೂ ಪಾಲುಗಾರನನ್ನಾಗಲಿ ಅಥವಾ ಸಂಬಂಧವುಳ್ಳವನನ್ನಾಗಲಿ ಮಾಡಲು ಅವಕಾಶ ಕೊಡಕೂಡದು.

XX. ಶೇಂದಿ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಲೈಸೆನ್ಸ್ ಪ್ರಕಾರ ಕೊಡಲ್ಪಟ್ಟ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ಮತ್ತು ತೆಂಗಿನ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ.

(2) ಲೈಸೆನ್ಸದಾರನು ತನ್ನ ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವುದಕ್ಕೆ ಸ್ವತಂತ್ರನಾಗಿರುತ್ತಾನೆ. ಆದರೆ ಅಂಥಾ ಮರಗಳು ಆತನ ಇಜಾರೆಗೆ ಸಂಬಂಧಪಡದ ಅಂಗಡಿಯ ಸಮೀಪದಲ್ಲಿ ಯಾ ಸರಹದ್ದಿನೊಳಗೆ ಇದ್ದಪಕ್ಷದಲ್ಲಿ ಸದರಿ ಮರಗಳನ್ನು ಉತಾರ್ಮಾಡಲು ದರಖಾಸ್ತು ಮಾಡುವದಕ್ಕೆ ಮುಂಚೆ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರವರ ಮಂಜೂರಾತಿಯನ್ನು ಪಡೆಯಬೇಕು. ಲೈಸೆನ್ಸದಾರನು ಇನ್ಸ್ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಯೆ ಅವರಿಂದ ಅಪ್ಪಣೆ ಚೀಟಿ ಪಡದು ಇತರ ಶೇಂದಿ ದುಕಾನ್‌ದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು, ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್ಪೆಕ್ಟರವರು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ.

(3) ಸರಿಯಾದ ಲೈಸೆನ್ಸ್ ಪಡೆದು, ಆ ಲೈಸೆನ್ಸುಮೇರೆ ಉತಾರ್ಮಾಡಿರುವ ಮರಗಳ ಶೇಂದಿ ವಿನಹಾ ಮತ್ಯಾವ ವಿಧವಾದ ಶೇಂದಿಯನ್ನು ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(4 ಉತಾರ್ ಲೈಸೆನ್ಸುಗಳ ಷರತ್ತುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಲೈಸೆನ್ಸದಾರನು, ತನ್ನ ಹೆಸರಿನಲ್ಲಿಯೂ, ಅಥವಾ ಅವನ ವಾರಸುದಾರನ ಹೆಸರಿನಲ್ಲಿಯೂ ದರಖಾಸ್ತಿನ ಮೇಲೆ ಕೊಡಲ್ಪಟ್ಟ ಉತಾರ್ ಲೈಸೆನ್ಸುಗಳಿಗಾಗಿ ಕೊಡಬೇಕಾದ ಎಲ್ಲಾ ತೆರಿಗೆಗಳ ಕಿಸ್ತುಗಳಿಗೂ ಸರ್ಕಾರಕ್ಕೆ ಜವಾಬ್ದಾರನಾಗಿರುತ್ತಾನೆ.

(5) ನಿರ್ಣಯಿಸಿದ ಕಾಲದೊಳಗಾಗಿ ಯಾವ ಕಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೆ ಸೆಕ್ಷನ್ ಮೇರೆಗೆ ಉತಾರ್ ಲೈಸೆನ್ಸ್ ರದ್ದು ಯಾ ಹಂಗಾಮಿಯಾಗಿ ಮೋಕೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(6) ಮೇಲ್ಕಂಡಂತೆ ನಡೆಯಲು ತಪ್ಪಿದಲ್ಲಿ ಅಮಲ್ದಾರರು ಡೆಪ್ಯುಟಿ ಕಮ್ಮಿಷನರವರ ಅಥವಾ ಡೆಪ್ಯುಟಿ ಕಮ್ಮಿಷನರವರಿಂದ ಇದಕ್ಕಾಗಿ ನೇಮಕವಾಡಲ್ಪಡುವ ಇತರ ಆಫಿಸರವರ ಹುಕುಂ ಪಡೆದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವ ವರಿಗೂ ಉತಾರು ಲೈಸೆನ್ಸನ್ನು ಮೋಕೂಫ ಮಾಡಬಹುದು. ಹಾಗೆ ಮೋಕೂಫ ಮಾಡಿದ್ದರ ನೋಟೀಸು ತನಗೆ ಬಂದಿದ್ದರವೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇನೇ ಇದ್ದಲ್ಲಿ ನ್ಯಾಯವಿರುದ್ಧವಾಗಿ ಉತಾರು ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(7) ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಉತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಕಾಲದಲ್ಲಿ ಸಾಲಿಯಾನಾ ಮರ ಒಂದಕ್ಕೆ 4 ಆಣೆ 3 ಪೈ ಪ್ರಕಾರ ಮರದ ಮಾಲ್ಕಿ ಮೊಬಲಗು ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು, ಇನಾಂವ ಕಾಯುಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರಕೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗತಕ್ಕದ್ದು.

(8) ಈಚಲು ಮರಗಳನ್ನು ಉತಾರ್ಮಾಡುವದು ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು:—

(a) ಈಚಲು ಮರಗಳು ಕಸಬುದಾರ್ರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮೂರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೆಡಿಸಕೂಡದು.

(d) ಡೆಪ್ಯುಟಿ ಕಮ್ಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು ಮತ್ತು ಅದರ ಉದ್ದವೂ 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮೊಳಗೆಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಸೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಿಸೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ ಮಾಡಿದರೆ ಎರಡು ವರಿಸೆಗಳಿಗೆ ಕಮ್ಮಿಯಾಗಿರಕೂಡದು ; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳಗೆಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸುದಾರನು ಲೈಸೆನ್ಸ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೇ ಕಾಲದಲ್ಲಿ ಆಗಲಿ ಅಥವಾ ಗುತ್ತಿಗೆ ಪೂರೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿಹೋದ ಮರಗಳು ಆತನಿಗೆ ಸಂಖ್ಯೆಹಾಕಿ ಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕೂ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ. ಆತನು ಉತಾರಿಗಾಗಿ ತಯಾರ್ಮಾಡುವ ಪ್ರತಿ ಒಂದು ಮರಕ್ಕೂ ಅದು ಸದರಿ ತಯಾರಿನಿಂದ ಉತಾರಾಗುವದಕ್ಕೆ ಮುಂಚೆ ನಾಶವಾದಲ್ಲಿ ಅದೇ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(j) ಜನಗಳ ಉಪಯೋಗಾರ್ಥವಾಗಿ ವಾಪಸು ತೆಗೆದುಕೊಂಡ ಯಾ ತೆಗೆದುಕೊಳ್ಳಲ್ಪಟ್ಟ ಮರಗಳೂ, ಇಂಜನಿಯರ್ ಇಲಾಖೆಯವರ ಆಡಳಿತಕೆ ಶೇರಿರುವ (ಇರ್ರಿಗೇಷನ್) ತಕಾವಿ ಕಾಂಗಾರಿಗಳಿಗೆ ಶೇರಿದ ಪ್ರದೇಶಗಳಲ್ಲಿರುವ ಮರಗಳೂ, ಇಂಜನಿಯರ್ ಇಲಾಖೆಯವರು ಸದರಿ ಮರಗಳ ಎಲೆಗಳನ್ನೂ, ಕೊಂಬೆಗಳನ್ನೂ ಕತ್ತರಿಸಬೇಕಾದ ಸಂದರ್ಭಗಳಲ್ಲಿ ಲೈಸೆನ್ಸದಾರನಿಗೆ ಅಂಥಾ ಮರಗಳಿಗಾಗಿ ಯಾವ ಪರಿಹಾರದ್ರವ್ಯಕ್ಕೂ ಹಕ್ಕಿರುವುದಿಲ್ಲ.

(k) ಲೈಸೆನ್ಸದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ದುಸರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(9) ಚಾಪೇ ಮಾಡುವುದಕ್ಕಾದರೂ ಹಗ್ಗ ಮಾಡುವುದಕ್ಕಾದರೂ ಗೂಡೆಗಳು ಮಾಡುವುದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(10) ಡೆಪ್ಯುಟಿ ಕಮ್ಮಿಷನರುಗಳು ಅಬ್ಕಾರ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಠಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಠಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇಗ್ರಾಮದ ಮರಗಳನ್ನು ದಾಖಲ್ಮಾಡಬೇಕೆಂದು ಹುಕುಂ ಮಾಡಬಹುದು.

(11) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(12) ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೊಡಲ್ಪಟ್ಟ ಪ್ಯಾಸುಗಳು ಆದಕ್ಕಾಗಿ ಅಧಿಕಾರ ಹೊಂದಿದ ಆಫೀಸರುಗಳ ಪರೀಕ್ಷೆ ವ ತನಿಖೆ ಬಗ್ಗೆ ಗುರಿಯಾಗತಕ್ಕದ್ದು.

(13) ಶೇಂದಿಯನ್ನು ಗಿಡದಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನ್ ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತದೆ.

(14) ಯಾವ ಲೈಸೆನ್ಸದಾರ ಯಾ ಆತನ ಬಿಕರೀದಾರರೇ ಆಗಲಿ ಮೂರು ಅಳೆಯುವ ಸೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು; ಶೇಂದಿಯು ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಮಾರಲ್ಪಡಕೂಡದು. ಒಂದು ಇಂಪೀರಿಯಲ್ ಗ್ಯಾಲಾ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನಮಾಡಲಿಕ್ಕೆ ಶೇಂದಿಯನ್ನು ತೆಗದುಕೊಂಡು ಹೋಗಲು ಅವಕಾಶ ಕೊಡಬಹುದು.

(15) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ರೇವನ್ನು ಯಾ ಪಾಣೆಯನ್ನು ಅಜಮಾಯಿಷಿ ಮಾಡಲಿಕ್ಕೆ ಉತಾರದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(16) ಲೈಸೆನ್ಸದಾರ್ ಶೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಗೆ ಹಿಡಿಯಲ್ಪಡಕೂಡದು.

(17) ಈ ಕೆಳಗೆ ನಮೂದಿಸಿರುವ ನಿಬಂಧನೆಗಳು 1901ನೆ ಇಸವಿಯ ಮೈಸೂರು ಎಕ್ಸೈಜ್ Vನೆ ರಗ್ಯುಲೇಷನಿನ 12ನೆ ಸೆಕ್ಷನ್ ಮೇರೆಗೆ ಶೇಂದಿ ಮರಗಳನ್ನು ಕಟ್ಟುವದಕ್ಕೂ, ಮತ್ತು ಶೇಂದಿಯನ್ನು ಉತಾರ್ಮಾಡುವದಕ್ಕೂ ಕೊಡಲ್ಪಡಬೇಕಾದ ಲೈಸೆನ್ಸುಗಳನ್ನು ಕ್ರಮಪಡಿಸುತ್ತೆ:—

(1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಗೆ ಲೈಸೆನ್ಸಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ್ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ.

(b) ಮದ್ರಾಸ್ ಆಧಿಪತ್ಯಕ್ಕೆ ಸೇರಿದ ಶೇಂದಿ ಅಂಗಡಿಕಾರರ ಅಥವಾ ಗುತ್ತಿಗೆದಾರರ.

(c) ಸನ್ 1898ನೆ ಇಸವಿ ಜೂನ್ 20ನೆ ಮುಕ್ಕಾಂ 11897—906—Ex. 485ನೆ ನಂಬರುಳ್ಳ ಗವರ್ನ್‌ಮೆಂಟ್ ಇಸ್ತಿಹಾರ್ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯಕನಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿ ತೋಟಗಳಲ್ಲಿಯೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಬಾಗ್‌ಗಳಲ್ಲಿಯೂ ಇರುವ ಮರಗಳ ಮಾಲೀಕರು.—

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನ ಸಂಬಂಧಪಟ್ಟ ಎಕ್ಸೈಜ್ ಇನ್ಸ್‌ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿಂದ ಪಡೆಯಬಹುದು. ದರಖಾಸ್ತುದಾರರು ತಾವು ಅಪೇಕ್ಷಿಸುವ ಸರ್ಬ್ಯಾರ್ಲೀ ಮರಗಳಿಗಾಗಿ ಮೊದಲನೇ ಖಿಸ್ತಿನ ಮರ ತೆರಿಗೆಯನ್ನೂ ಮರದ ಮಾಲ್ಕಿಯನ್ನು ಮೊದಲೇ ಪಾವತಿ ಮಾಡಬೇಕು.

(3) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರ ತೆರಿಗೆಯು ಮೈಸೂರು ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರ್ರಿಗೆ ಒಂದೇ ಖಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ಫಾರಂ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್‌ಪೆಕ್ಟರವರಿಂದ ರವಾನೆಯ ಪರ್ಮಿಟ್ಟನ್ನು ಪಡೆಯತಕ್ಕದ್ದು.

(4) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟ್ ರೇಂಜ್ ಆಫೀಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಅಥವಾ ವಿಶೇಷ ಸಂದರ್ಭಗಳಲ್ಲಿ ಸಬ್ ಇನ್ಸ್‌ಪೆಕ್ಟರ ದರ್ಜೆಗೆ ಕಮ್ಮಿಯಾಗಿಲ್ಲದ ಇರತಕ್ಕ ನೌಕರನಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದ್ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳ ಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫೀಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟೀಸ್ ಕೊಟ್ಟ ತರುವಾಯ ಹಾಗೆ ಮಾಡಲು ಅವರು ತಪ್ಪಿದರ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟಕೂಡಲೆ ಶೇಂದಿ ಉತಾರಿಗೋಸ್ಕರ ರೇಪು ಮಾಡಲಿಕ್ಕೆ ಗರಿಗಳನ್ನು ತೆಗೆದುಹಾಕಲಿಕ್ಕೂ, ಹಾಗೆ ಆ ಹೊಂಬಾಳೆಗಳನ್ನು ಆ ರೇಪುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(7) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಟೆಯಾಗಿರತಕ್ಕದ್ದು. ಅಂದರೆ ಉತಾರ್ ಲೈಸೆನ್ಸಿಗೆ ದರಖಾಸ್ತು ಯಾವ ಕಾಲದಲ್ಲಿ ಕೊಡಲ್ಪಡಲಿ, ಜುಲೈ ಗುರ್ರೇ ಲಾಗಾಯಿತು ಜೂನ್ ಆಖೈರ್ ವರೆಗೆ ಆಗಿರುತ್ತೆ. ಲೈಸೆನ್ಸದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ ಬಗ್ಗೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖ್ಯೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಲೈಸೆನ್ಸ ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(8) ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಮರಕ್ಕೂ ಈ ಕೆಳಗೆ ನಮೂದು ಮಾಡಿರುವ ತೆರಿಗೆಗಳು ಪಾವತಿಯಾಗತಕ್ಕದ್ದು :—

ಮರದ ತರಹೆ—	ಮರ ಒಂದಕ್ಕೆ ವರುಷ ಒಂದಕೆ ಕೊಡಬೇಕಾದ ಮರತೆರಿಗೆ. ರೂ.	ಆ.	ಪೈ.
ಈಚಲು	1	4	0
ತೆಂಗು	2	2	0
ತಾಳೆ	1	9	6

ಟಿಪ್ಪಣಿ:—ಮೇಲೆ ನಮೂದಿಸಿರುವ 17 (1) (c)ನೆ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(9) ಎಕ್ಸೈಜ್ ಕಮಿಷನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆಂಗೆ ಮೊಬಲಗು ಈ ಕೆಳಗೆ ನಮೂದ್ ಮಾಡಿರುವ ಖಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು :—

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರತೆರಿಗೆ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಗುರ್ರೆ ತಾರೀಖಿನಲ್ಲಿ ಪಾವತಿಯಾಗಬೇಕಾದ ಮರ ತೆರಿಗೆ ದಾಮಾಷಾಯಿ.
ಜುಲೈ ಗುರ್ರೆಲಾಗಾಯಿತು ಮುಂದಿನ ಏಪ್ರಿಲ್ 30ನೆ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದು ಭಾಗ.	ಉಳಿದ ಮೂರರಲ್ಲಿ ಎರಡು ಭಾಗವು.
ಮೇ ಗುರ್ರೆ ಲಾಗಾಯಿತು ಮುಂದಿನ ಜೂನ್ 30ನೆ ತಾರೀಖಿನ ವಳಗಾಗಿ.	ಎಲ್ಲಾ.	ಇಲ್ಲಾ.

ಹರಾಜಿನ ತಾರೀಖು.

ಡಿಸ್ಟ್ರಿಕ್ಟು.	ನಂಬರು.	ತಾಲ್ಲೂಕು.	ತಾರೀಖು.	ಷರಾ.
ಬೆಂಗಳೂರು	1	ಬೆಂಗಳೂರು	1909—26ನೆ ಏಪ್ರಿಲ್.	
ಡಿಟೋ	2	ದೇವನಹಳ್ಳಿ	ಡಿಟೋ 12ನೆ ಮೇ.	
ಕೋಲಾರ	3	ಶಿಡ್ಲಘಟ್ಟ	ಡಿಟೋ 5ನೆ ಡಿಟೋ	
ಡಿಟೋ	4	ಚಿಕ್ಕಬಳ್ಳಾಪುರ	ಡಿಟೋ 8ನೆ ಡಿಟೋ	
ತುಮಕೂರು	5	ಗುಬ್ಬಿ	ಡಿಟೋ 5ನೆ ಡಿಟೋ	
ಮೈಸೂರು	6	ತಿರ್ಮಕೂಡ್ಲು ನರಶೀಪುರ	ಡಿಟೋ 22ನೆ ಡಿಟೋ	
ಡಿಟೋ	7	ಮಳವಳ್ಳಿ	ಡಿಟೋ 20ನೆ ಡಿಟೋ	
ಹಾಸನ	8	ಅರ್ಕಲಗೂಡು	ಡಿಟೋ 8ನೆ ಡಿಟೋ	
ಡಿಟೋ	9	ಮಂಜರಾಬಾದು	ಡಿಟೋ 12ನೆ ಡಿಟೋ	
ಕಡೂರು	10	ಮೂಡಿಗೆರೆ	ಡಿಟೋ 29ನೆ ಏಪ್ರಿಲ್.	
ಶಿವಮೊಗ್ಗ	11	ಶಿವಮೊಗ್ಗ	ಡಿಟೋ 26ನೆ ಡಿಟೋ	
ಚಿತ್ರದುರ್ಗ	12	ಚಿತ್ರದುರ್ಗ	ಡಿಟೋ 28ನೆ ಡಿಟೋ	

ಹೆಚ್. ಹೆಚ್. ಸ್ಪಾರ್ಕ್ಸ್,
ಎಕ್ಸೈಜ್ ಕಮಿಷನರ್.

ಫಾರೆಸ್ಟು ಇಲಾಖಾ.

ತಂಗಡಿ ಮತ್ತು ಕಕ್ಕೆ ಚಕ್ಕೆ, ಇಸ್ತಿಹಾರ್.

ತಾರೀಖು 8ನೆ ಏಪ್ರೈಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರಸ್ಟುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು 1909ನೆ ಇಸವಿ ಮೇ ತಾರೀಖು 21ರಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಂದಲೂ ಮತ್ತು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಲೂ ಸಹ ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ:—

ನಂಬ್ರ	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟ್.	ಜಮಾಯಿಸತಕ್ಕ ಕಾಲ.	ಷರಾ.
1	ಹಿರಿಯೂರು ತಾಲ್ಲೂಕು ...	1909ನೆ ಜುಲೈ ಗುರ್ರ್ರಿ ಲಾಗಾಯಿತು 1911ನೆ ಜೂನ್ ಆಖೈರು ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರ ಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.
2	ಚಳ್ಳಕೆರೆ ತಾಲ್ಲೂಕು ...		
3	ಹೊಳಲ್ಕೆರೆ ತಾಲ್ಲೂಕು ಗರ್ಗ ಕಾವಲು ಸಹಾ.		
4	ದಾವಣಗೆರೆ ತಾಲ್ಲೂಕು ...		
5	ಮೊಳಕಾಲ್ಮುರು ತಾ|| ಮತ್ತು— (1) ಬಾಂಡರಾವಿ ... (2) ಕೃಷ್ಣರಾಜಪುರ ... (3) ಕಮರಾ ಕಾವಲು ... (4) ಹಿರೀ ಅಡವಿ ... ಸ್ಟೇಟ್ ಫಾರೆಸ್ಟುಗಳು ಸಹ ...		
6	ಹೊಸದುರ್ಗ ತಾಲ್ಲೂಕು ಕುದರೆಕಣಿವೆ ಸ್ಟೇಟ್ ಫಾರೆಸ್ಟು ಸಹ.		
7	ಜಗಲೂರು ತಾಲ್ಲೂಕು ರಂಗ್ಯೆನದುರ್ಗ-ಅಣಬೂರು ಸ್ಟೇಟ್ ಫಾರೆಸ್ಟುಗಳು ಸಹ.		
8	ಚಿತ್ರದುರ್ಗ ತಾಲ್ಲೂಕು ...		
9	ಹರಿಹರ-ಮಲೆಬೆನ್ನೂರು ಸ್ಟೇಟ್ ಫಾರೆಸ್ಟು ಸಹ.		
10	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟು ಜೇವಿನಹಳ್ಳಿ ಸಹ.		
11	ನಿರುಥಡಿ ಡಿಟೋ ...		
12	ಜಾನಕಲ್ಲು ಡಿಟೋ ...		
13	ದೇವರಗುಡ್ಡ ಡಿಟೋ ...		
14	ಮಾರಿಕಣಿವೆ ಡಿಟೋ ...		
15	ಲಕ್ಕಿಹಳ್ಳಿ ಡಿಟೋ ...		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನು ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1909ನೆ ಸಾಲ್ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ ತಾರೀಖು 30ರ ವರಿಗಿನ 24 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣೆ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 100 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಕೈದಾದ ಒಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರ

ಖಾಸ್ತುದಾರರು ಹರಾಜು ಖೈದಾದ ಕೂಡಲೆ ಮೊದಲು ಅವರು ಇಟ್ಟುಯಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲುಹಿಸ್ಸೆ ಹಣವನ್ನು ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಕಿ ಹರಾಜು ಮಾಡುತ್ತಾಯಿದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಯೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೆ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

7. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ಮೂರು ದಿನಗಳ ವಳಗಾಗಿ ಬರೆದುಕೊಡತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಮೊದಲು ಕೊಟ್ಟ ಹಣವನ್ನು ದಂಡವಾಗಿ ಸರಕಾರಕ್ಕೆ ಶೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

8. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣೆ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಖಿಸ್ತು	...	...	...	30ನೆ ಸೆಪ್ಟಂಬರ್ 1909.
2ನೆ ಖಿಸ್ತು	...	...	...	31ನೆ ಮಾರ್ಚಿ 1910.
3ನೆ ಖಿಸ್ತು	...	...	...	30ನೆ ಸೆಪ್ಟಂಬರ್ 1910.

ಇತರ ಷರತ್ತುಗಳು.

(I) ಇಜಾರದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಾನು ಇಜಾರೆದಾರನಿಗೆ ಶೇರಿದ್ದಾಗಿರುತೆ.

(V) ಇಜಾರೆ ಮೇರೆಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗ್ಯೆರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1911ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ಮಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿ ವರಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಚಂಗಯ್ಯ ಚೆಟ್ಟಿ,
ಡೆಪ್ಯುಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮಾ, ತಾರೀಖು 15ನೆ ಏಪ್ರಿಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಕೆಳಗೆ ಕಂಡ ಡಿಪೋಗಳಲ್ಲಿ ಚವುಬೀನಾವನ್ನು ಸದರಿ ಡಿಪೋಗಳ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ.		ಷರಾ.
				ನಂಬರ.	ಅಡಿ.	
1	ಮೈಸೂರು ಉದ್ಯಾ ರ್ಡ.	19—5—09	ಸಾಗ್ವಾನಿ ನಾಟಾ ...	600	20,000	
			ಡಿಟೋ ಜಂತಿಗಳು ...	300	4,000	
			ಹೊನ್ನೆ ನಾಟಾ ...	100	2,500	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟಾ	100	3,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟಾ ...	25	1,000	
			ಕಾಡು ನಾಟಾ ...	25	500	
2	ನಂಜನಗೂಡು ...	20—5—09	ಸಾಗುವಾನಿ ನಾಟಾ ...	50	1,500	ಬಾ|| ಲಾಟು
			ಡಿಟೋ ಜಂತಿಗಳು ...	50	500	
			ಹೊನ್ನೆ ನಾಟಾ ...	100	2,000	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟಾ ...	50	1,000	
			ಡಿಟೋ ಜಂತಿಗಳು ...	10	120	
			ಬೀಟೆ ನಾಟಾ ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟಾ ...	20	500	

ಹರಾಜು ಷರತ್ತುಗಳು.

1. ಜಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಆದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡನಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ಹಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಪ್ರಕಟನೆ.

ಬೆಂಗಳೂರು ಡಿಸ್ಟ್ರಿಕ್ಟು ಕಾನಕಾನಹಳ್ಳಿ ತಾಲ್ಲೂಕು ಮಂಜನಾಥ ರಿಜರ್ವನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ 1909ನೆ ಇಸವಿ ಏಪ್ರೈಲ್ ತಾರೀಖು 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 249—250ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಬೆಂಗಳೂರು ಡಿಸ್ಟ್ರಿಕ್ಟು ಕಾನಕಾನಹಳ್ಳಿ ತಾಲ್ಲೂಕು ಅಚ್ಚಲ್ ರಿಜರ್ವನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ 1909ನೆ ಇಸವಿ ಏಪ್ರೈಲ್ ತಾರೀಖು 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 251—252ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಶಿವಮೊಗ್ಗ ಡಿಸ್ಟ್ರಿಕ್ಟು ಸಾಗರ, ಸೊರಬ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿರುವ ಮೈಸಾವಿ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ 1909ನ ಇಸವಿ ಏಪ್ರೈಲ್ 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 252-253-254ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಚಿತ್ರದುರ್ಗ ಡಿಸ್ಟ್ರಿಕ್ಟು ಹಿರಿಯೂರು ತಾಲ್ಲೂಕು ಮಸ್ಕಲ್ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ 1909ನೆ ಇಸವಿ ಏಪ್ರೈಲ್ ತಾರೀಖು 22ನೆ ಕನ್ನಡ ಮೈಸೂರು ಗೆಜೆಟ್ 2ನೆ ಭಾಗದ 255—256ನೆ ಪುಟಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್,
ಫಾರೆಸ್ಟು ಸೆಟ್ಲಮೆಂಟ್ ಆಫಿಸರ ಇನ್ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 16ನೆ ಏಪ್ರೈಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಆನೆಕಲ್ ತಾಲ್ಲೂಕಿಗೆ ಸಮ್ಮಂಧಪಟ್ಟ 1846-47ನೆ ಇಸವಿ ಲಾಗಾಯಿತು 1873-74ನೆ ಇಸವಿ ವರಿಗೆ ಕುಳವಾರ್ ಚಿಟ್ಟಾಗಳನ್ನ ಹಾಲಿ ಜಾರಿಯಲ್ಲಿರುವ ರೂಲ್ಸು ಅನುಸರಿಸಿ ಚಲಾಯಿಸಲ್ಪಡುತ್ತೆ. ಇವುಗಳ ದಾಖ್ಲೆಗಳನ್ನು ಅಪೇಕ್ಷಿಸತಕ್ಕವರು ಈ ಲಾಗಾಯಿತು ಮೂರು ತಿಂಗಳ ಒಳಗಾಗಿ ದರಖಾಸ್ತು ಕೊಟ್ಟು ಕಾಪಿಗಳನ್ನು ಪಡೆಯಬಹುದು.

ಬಿ. ಜಿ. ಕೊಮಾರಸಾಮಿ ನಾಯಿಕ್,
ಡೆಪ್ಯುಟಿ ಕಮಿಷನರ್.

1909ನೆ ಇಸವಿ ಫೆಬ್ರವರಿ 27ನೆ ತಾರೀಖಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸಿಡಿಂಗ್ಸ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಹಾಜರು.

ಪ್ರೆಸಿಡೆಂಟರು, ಬಿ. ಜಿ. ಕುಮಾರಸಾಮಿನಾಯಿಕ್, ಎಸ್ಕ್ವಯರ್, ಬಿ. ಎ.
ವೈಸ್ ಪ್ರೆಸಿಡೆಂಟರು ಮತ್ತು ಟ್ರೆಜರಿ ಆಫಿಸರು, ಮಿ|| ಟಿ. ಚೊಕ್ಕಣ್ಣನವರು.
ಬೆಂಗಳೂರು ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು, ಮಿ|| ಸಿ. ರಾಮರಾಯರವರು.
ದೊಡ್ಡಬಳ್ಳಾಪುರ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು, ಮಿ|| ಕೆ. ಚಾಂಡಿಯವರು.
ಬೆಂಗಳೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್, ಮಿ|| ಕೃಷ್ಣಯ್ಯಂಗಾರ್ರವರು.
ಬೆಂಗಳೂರು ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು ಮಿ|| ಜಿ. ಎಸ್. ಡೇವಿಡ್‌ರವರು.
ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು ಮಿ|| ಕೆ. ವೀರಭದ್ರಯ್ಯನವರು.
ಪ್ರೆಸಿಡೆಂಟ್ ಸಾಹೇಬರವರು ಕ್ಲೋಸ್‌ಪೇಟೆ ಸಬ್ ಡಿವಿಜನ್ ಛಾರ್ಜು ವಹಿಸಿದ್ದರು.

ಗೈರ್ ಹಾಜರು.

ಇಲ್ಲಾ.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ಮಿ|| ಚಿಕ್ಕ ಗುರುವಾರಡ್ಡಿ.
,, ಶೀನಪ್ಪ.
,, ಕೋಲೂರು ರಾಮಣ್ಣ.
,, ನರಹರಯ್ಯ.
,, ಶಾಮಯ್ಯ.
,, ರಾಮಚಂದ್ರರಾವ್.
,, ಕರಿಭುಮಾ ನರಸಿಂಹ ಶೆಟ್ಟಿ.
,, ರಾಮಸಂಜೀವಯ್ಯ.

ಮಿ|| ಧಾಳಪ್ಪ.
,, ಗುಂಡೂರಾವ್.
,, ಕೆ. ಸುಬ್ಬಣ್ಣ.
,, ಎಸ್. ದಾಸಪ್ಪ.
,, ಮಸ್ತಾನ್ ಸಾಬರು.
,, ಪುಟ್ಟಪ್ಪ.
,, ಎ. ರಾಮಣ್ಣ.
,, ಚನ್ನಲಿಂಗಪ್ಪ.

ಗೈರಹಾಜರು.

ಮಿ|| ಪಿ. ಜೆ. ಹಾರ್ಡಿ ಸಾಹೇಬರವರು.

1. ಡಿಸ್ಟ್ರಿಕ್ಟು ಫಂಡು ಲೋಕಲ್ ಫಂಡು ಜನರಲ್ ಮತ್ತು ಇರಿಗೇಷನ್ ಸೆಸ್ ಫಂಡು 1909—10ನೆ ಸಾಲಿನ ಬಡ್ಜೆಟುಗಳು ಓದಲಾಯಿತು.

1909—10ನೆ ಸಾಲಿನ ಡಿಸ್ಟ್ರಿಕ್ಟು ಫಂಡು ಬಾಬಿನ ಅಂದಾಜಾಗಳು ಓದಲಾಯಿತು.

I. 1909—10ನೆ ಸಾಲಿನಲ್ಲಿ ಸಮಾರು 90,295 ರೂಪಾಯಿ ಹುಟ್ಟುವಳಿ ಆಗಬಹುದೆಂಬುವುದನ್ನು ಒಪ್ಪಲಾಯಿತು.

ಡಿ. ಪಿ. ಡಬ್ಲ್ಯೂ. ಇಲಾಖೆಯವರಿಂದ ನಡಿಯಬೇಕಾದ ಕಾಂಗಾರಿಗಳು ಮತ್ತು ರಿಪೇರಿಗೋಸ್ಕರ 50,648 ರೂಪಾಯಿ ಖರ್ಚಿಗೆ ಬೇಕೆಂಬುವದನ್ನು ಒಪ್ಪಲಾಯಿತು.

ರೆವಿನ್ಯೂ ಇಲಾಖೆಯವರಿಂದ ನಡಿಯಬೇಕಾದ ಕಾಂಗಾರಿಗಳು ಮತ್ತು ರಿಪೇರಿಗೋಸ್ಕರ 18,706 ರೂಪಾಯಿಗಳು ಖರ್ಚಿಗೆ ಬೇಕೆಂಬುದನ್ನು ಒಪ್ಪಲಾಯಿತು.

II. ಇರಿಗೇಷನ್ ಸೆಸ್ ಫಂಡ್ ಮತ್ತು ಲೋಕಲ್ ಫಂಡ್ ಜನರಲ್ ಅಂದಾಜಗಳು ಓದಿದ್ದು ಒಪ್ಪಲಾಯಿತು.

2. ಮಾಗಡಿ ತಾಲ್ಲೂಕು ಸಾವನದುರ್ಗದಿಂದ ನಾಯ್ಕನಪಾಳ್ಯಕ್ಕೆ ಹೋಗುವ ರಸ್ತೆ ಕ್ರಮಪಡಿಸತಕ್ಕ ವಿಚಾರದಲ್ಲಿ ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟುಗಳ ಸೆಕ್ರಿಟೆರಿಯವರಿಂದ ತಲಪಿದ 4—6—07ನೆ ಮುರ್ಕುಂ 11420—ಲೋ. ಬೋ. 273-06—4ನೆ ನಂಬರ್ ಡಾಕೆಟ್ ಓದಲಾಯಿತು.

ಈ ರಸ್ತೆ ಕ್ರಮಪಡಿಸತಕ್ಕ ವಿಚಾರದಲ್ಲಿ ಏನು ಸಹಾಯ ಮಾಡಲು ಹಣವಿಲ್ಲದ ಸಬಬು ಆಗಲಾರದೆಂತ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರು ಬರಿಸಿದ 17-18—12—08ನೆ ಮುರ್ಕುಂ 2382ನೆ ನಂಬರು ಡಾಕೆಟ್ ಓದಲ್ಪಟ್ಟು ಹಣವಿಲ್ಲದ ಸಬಬು ಸದ್ಯಕ್ಕೆ ಈ ಕಾಂಗಾರಿ ಹಾಗೆಯೇ ಇರಬೇಕೆಂತ ತೀರ್ಮಾನ ಮಾಡಲಾಯಿತು.

3. ಆನೇಕಲ್ ತಾಲ್ಲೂಕು ಚಂದಾಪುರದ ಸಂತೆಯ ಹುಟ್ಟುವಳಿ ಮತ್ತು ಖರ್ಚುಬಾಬಿನ ತಿದ್ದುಪಡಿ ಪ್ರಪೋಜಲ್ ಕಳುಹಿಸಬೇಕೆಂತ ಮೈಸೂರು ಗವರ್ನಮೆಂಟ್ 18—4—08ನೆ ಮುರ್ಕುಂ 10367—ಲೋ. ಬೋ. 336-07—2ನೆ ನಂಬರು ಆರ್ಡರು ಓದಲಾಯಿತು.

ತಾಲ್ಲೂಕು ಬೋರ್ಡಿನವರು ಅಭಿಪ್ರಾಯಪಟ್ಟಿರುವ ಪ್ರಕಾರ ಹಾಲಿ ಸಂತೆ ನಡೆಯುವ ಸ್ಥಳಕ್ಕೆ ಸಮೀಪದಲ್ಲಿರುವ ಗೋಮಾಳದಲ್ಲಿ ಸಂತೆ ನಡಿಯಬಹುದೆಂದು ತೀರ್ಮಾನವಾಗಿ ಈ ಕೆಳಗೆ ವಿವರಿಸಿರುವಂತೆ ಸಂತೆಗೆ ಬರುವ ಭಂಡಿಗಳಿಗೆ, ತಲೆಹೊರೆಗೆ, ಜೀವರಾಶಿಗಳಿಗೆ ತೆರಿಗೆ ವಸೂಲ್ ಮಾಡಬಹುದೆಂತ ತೀರ್ಮಾನ ಮಾಡಲಾಯಿತು.

		ರೂ.	ಆ.	ಪೈ.
1.	ತುಂಬುಗಾಡಿ 1ಕ್ಕೆ	0	4	0
2.	ಖಾಲಿಗಾಡಿ 1ಕ್ಕೆ	0	1	0
3.	ಎತ್ತು, ಹಸು, ಎಮ್ಮೆ ಮತ್ತು ಕುದುರೆ ಪ್ರತಿಯೊಂದಕ್ಕೆ ಹೊರೆ 1ಕ್ಕೆ ...	0	0	6
4.	ಕತ್ತೆ ಹೊರೆ 1ಕ್ಕೆ	0	0	3
5.	ತಲೆ ಹೊರೆ 1ಕ್ಕೆ	0	0	3
6.	ಎತ್ತುಗಳು ಹಸುಗಳು ವಗೈರೆ ಜೀವರಾಶಿಗೆ	0	1	0
7.	ಕುರಿ, ಮೇಕೆಗಳು ಡಿಟೋ	0	0	3
8.	ಅಂಗಡಿ ಬಾಡಿಗೆ ಪ್ರತಿಯೊಂದು ಷಾಪಿಗೆ	0	4	0

4. ಕ್ಲೋಸೆಪೇಟೆ ಸಬ್ ತಾಲ್ಲೂಕು ಬಿಡದಿ ಗ್ರಾಮದಲ್ಲಿ 1,467 ರೂಪಾಯಿನ ಅಂದಾಜಿನ ಬಂದು ಬಾಕ್ಸ್ ಡ್ರೈನ್ (ಪೆಟ್ಟಿಗೆಯಹಾಗೆ ಚರಂಡಿ) ಕಟ್ಟಿಸತಕ್ಕ ವಿಚಾರದಲ್ಲಿ ತಲಪಿದ 26—11—08ನೆ ಮುರ್ಕುಂ 4955-6—ಲೋ. ಬೋ. 186-08-2ನೆ ನಂಬರು ಗವರ್ನಮೆಂಟ್ ಆರ್ಡರ್ ಓದಲಾಯಿತು.

ಬೋರ್ಡಿನ ಆಡಳಿತ ಅನುಕೂಲಸ್ಥಿತಿಗೆ ಬರುವ ವರಿಗೂ ಮತ್ತು ಈ ಕಾಮಗಾರಿಗೆ ಮೊಬಲಗು ಒದಗುವ ವರಿಗೂ ಹಾಗೆಯೇ ಇರಬೇಕೆಂತ ತೀರ್ಮಾನ ಮಾಡಲಾಯಿತು.

5. ಚನ್ನಪಟ್ಟಣದಲ್ಲಿ ಹೆಂಗಸರ ಆಸ್ಪತ್ರೆ ಮಾಡುವ ವಿಚಾರದಲ್ಲಿ ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿಯವರಿಂದ ತಲಪಿದ 11—1—09ನೆ ಮುರ್ಕುಂ 6400—ಮೆಡಿಕಲ್. 148-08—2ನೆ ನಂಬರು ಡಾಕೆಟ್ ಓದಲಾಯಿತು.

ಬಂದು ಮಿಷನ್ ಆಸ್ಪತ್ರೆ ಹಾಲಿ ಅಲ್ಲಿ ಇದ್ದಾಗ್ಯೂ ಜಾಸ್ತಿಯಾಗಿ ಮುಸಲ್ಮಾನ್ ಜನರು ಇದ್ದುಕೊಂಡು ಅನೇಕ ಘೋಷಾ ಹೆಂಗಸರುಗಳು ಇರುತ್ತಾರೆಯಾಗಿ ಬಂದು ಹೆಂಗಸರ ಆಸ್ಪತ್ರೆ ಆಗಬಹುದೆಂತ ಬೋರ್ಡಿನವರು ಅಭಿಪ್ರಾಯಪಡಲಾಯಿತು.

6. ಮೆಡಿಕಲ್ ಇಲಾಖಾ ಅಧಿಕಾರಿಗಳಿಗೆ ವಾಸಕ್ಕೆ ಮನೆ ಕಟ್ಟಿಕೊಡತಕ್ಕ ವಿಚಾರದಲ್ಲಿ ತ್ಯಾಮಗೊಂಡ್ಲಿನಲ್ಲಿ ಕಟ್ಟಿಕೊಡುವುದಕ್ಕಿಂತ ಚನ್ನಪಟ್ಟಣದಲ್ಲಿ ಕಟ್ಟಿಕೊಡತಕ್ಕ ವಿಚಾರದಲ್ಲಿ ಬೋರ್ಡಿನವರ ತೀರ್ಮಾನ ಕಳುಹಿಸಬೇಕೆಂತ ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿಯವರಿಂದ ತಲಪಿದ 15—1—09ನೆ ಮುರ್ಕುಂ 6624—ಮೆಡಿಕಲ್ 76-08-14ನೆ ನಂಬರು ಡಾಕೆಟ್ ಓದಲಾಯಿತು.

ನೆಲವಂಗಲ ತಾಲ್ಲೂಕು ತ್ಯಾಮ್ಗಗೊಂಡ್ಲು ಮ್ಯುನಿಸಿಪಲ್ ಬೋರ್ಡಿನವರು ಅವರು ಕೊಡತಕ್ಕ ಭಾಗ ಕೊಡಲು ಶಕ್ತಿ ಇಲ್ಲವೆಂತ ತೀರ್ಮಾನಿಸಿರುವದರಿಂದ ಡಿಟೋ ಸ್ಥಳಕ್ಕೆ ಆಗುವುದಕ್ಕೆ ಬದಲಾಗಿ ಚನ್ನಪಟ್ಣದಲ್ಲಿ ಆಗಬಹುದೆಂತಲೂ ಮತ್ತು ಡಿಸ್ಟ್ರಿಕ್ಟು ಬೋರ್ಡಿನವರು ತಮ್ಮ ಭಾಗದ ಮೊಬಲಗನ್ನು ಕೊಡಲು ಒಪ್ಪಿರುವುದಾಗಿಯೂ ತೀರ್ಮಾನ ಮಾಡಲಾಯಿತು.

7. ಅಮೃತಮಹಲ್ ಗೂಳಿಗಳನ್ನು ಹಾರಿಸುವ ವಿಚಾರದಲ್ಲಿ ಪ್ರತಿಯೊಂದು ಹಾರಿಸುವಿಕೆಗೆ ವಸೂಲ್ ಮಾಡಬೇಕಾಗುವ ಫೀಸು ನಿರ್ಣಯಿಸಿದ 16—1—09ನೆ ಮುಕ್ಕಾಂ 6645-53—ಲೋ. ಬೋ. 170-07-13ನೆ ನಂಬರು ಗೌರ್ನಮೆಂಟು ಆರ್ಡರು ಓದಲಾಯಿತು.

ರಿಕಾರ್ಡು ಮಾಡಲಾಯಿತು.

8. ಪ್ಲೇಗ್ ಪ್ರಾಪ್ತವಾದ ಕಾಲದಲ್ಲಿ ಹೊರಗೆ ಹೋಗಲು ಜನಗಳಿಗೆ ಅನುಕೂಲಪಡಿಸುವ ವಿಚಾರದಲ್ಲಿ ಖಚಿತವಾದ ಪ್ರಪೋಜಲ್ ಕಳುಹಿಸಬೇಕೆಂತ ಮೈಸೂರು ಗೌರ್ನಮೆಂಟ್ ಸ್ಯಾನಿಟರಿ ಕಮಿಷನರವರಿಂದ ತಲಪಿದ 26—11—08ನೆ ಮುಕ್ಕಾಂ 2125-32ನೆ ನಂಬರು ಮೆಮೊ ಓದಲಾಯಿತು.

ಪ್ಲೇಗ್ ಪ್ರಾಪ್ತವಾದ ಕಾಲದಲ್ಲಿ ಹೊರಗೆ ಹೋಗಲು ಖಾಯಂ ಗುಡಿಸಲು ಕಟ್ಟಿಸುವುದು ವಿನಹ ಮಿಕ್ಕ ಎಲ್ಲಾ ಅನುಕೂಲಗಳನ್ನೂ ಬೋರ್ಡಿನಿಂದ ಮಾಡುತ್ತಿದೆಯಾಗಿ ಈ ವಿಷಯವಾಗಿ ಖಚಿತವಾದ ಪ್ರಪೋಜಲ್ ಅನಾವಶ್ಯಕವೆಂತ ತಿಳಿಯುತ್ತೆಂತ ತೀರ್ಮಾನ ಮಾಡಲಾಯಿತು.

9. ನೆಲವಂಗಲದಿಂದ ಸೊಂಡೆಕೊಪ್ಪಕ್ಕೆ ಹೊಸದಾಗಿ ರಸ್ತೆ ಮಾಡುವುದಕ್ಕಿಂತ ಹಾಲಿ ಇರತಕ್ಕ ಬಂಡಿಜಾಡೆ ರಿಪೇರಿ ಮಾಡಬಹುದೆಂಬುವ ವಿಚಾರದಲ್ಲಿ ಈಸ್ಟರ್ನ್ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನೀಯರ್‌ನಿಂದ ತಲಪಿದ 12—12—08ನೆ ಮುಕ್ಕಾಂ 5540ನೆ ನಂಬರು ಲೆಟರು ಓದಲಾಯಿತು.

ಸೂಪರಿಂಟೆಂಡಿಂಗ್ ಇಂಜನೀಯರು ಅಭಿಪ್ರಾಯಪಡುವಂತೆ ಹಾಲಿ ಇರುವ ಭಂಡಿಝಾಡಿ ರಿಪೇರಿ ಮಾಡಿಸಬೇಕೆಂತ ಡಿಟೋ ರಿಪೇರಿ ಕೆಲಸ ಡಿ. ಪಿ. ಡಬ್ಲ್ಯು. ಇಲಾಖೆಯವರಿಂದಲೇ ನಡಿಸಬೇಕೆಂತಲೂ ತೀರ್ಮಾನ ಮಾಡಲಾಯಿತು.

10. ಬೆಂಗಳೂರು ಆನೆಕಲ್ ರೋಡು 8—19ನೆ ಮೈಲೀಲಿ ಎರಡು ಕಣ್ಣ ಸೇತುವೆ ಕಟ್ಟಲು ಹಣ ಒದಗಿಸಿಕೊಳ್ಳುವ ವಿಚಾರದಲ್ಲಿ ಬೆಂಗಳೂರು ಡಿವಿಜನ್ ಎಗ್ಜಿಕ್ಯುಟಿವ್ ಇಂಜನೀಯರಿಂದ ತಲಪಿದ 17—12—08ನೆ ಮುಕ್ಕಾಂ 5350-2580ನೆ ನಂಬರಿಗೆ ಪೈದಾಗುವ ನಡವಳಿಕೆಯನ್ನು ಓದಲಾಯಿತು.

ಈ ಕಾಮಗಾರಿ ಮಂಜೂರ್ಮಾಡಿರುವುದಾಗಿಯೂ ಈ ಕೆಲಸಕ್ಕೆ ಇತರ ಬಾಬಿನಿಂದ ಹಣ ಒದಗಿಸಿಕೊಂಡು ಕಾಂಗಾರಿ ನಡಿಸಬೇಕೆಂತಲೂ ತೀರ್ಮಾನ ಮಾಡಲಾಯಿತು.

11. ದೊಡ್ಡಬಳ್ಳಾಪುರ ತಾಲ್ಲೂಕು ಅಯ್ಯನಹಳ್ಳೀಲಿರುವ ಭಾವಿ ಇಳಿಸಲು ತಯಾರಾದ ರಿವೈಜ್ ಅಂದಾಜಾ ದೊಡ್ಡಬಳ್ಳಾಪುರ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ತಲಪಿದ 26—10—08ನೆ ಮುಕ್ಕಾಂ 551ನೆ ನಂಬರು ಯಾದಿ ಓದಲಾಯಿತು.

ಈ ವಿಚಾರದಲ್ಲಿ ಡಿವಿಜನ್ ಆಫಿಸರವರ ಅಭಿಪ್ರಾಯ ತರಿಸಿಕೊಳ್ಳಬೇಕೆಂತ ತೀರ್ಮಾನ ಮಾಡಲಾಯಿತು.

12. ಆನೆಕಲ್ ತಾಲ್ಲೂಕು ಜಿಗಣಿ ಯೂನಿಯನ್‌ಗೆ ಇನ್ನೊಬ್ಬ ಝಾಡಮಾಲಿಯನ್ನು 5 ರೂಪಾಯಿ ತಲಬಿನ ಮೇಲೆ ಮೊಕರೂರು ಮಾಡಿಕೊಳ್ಳಲು ಬೆಂಗಳೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಶಿಫಾರ್ಸು ಮಾಡಿ ಬರಿಸಿದ 26-11-08ನೆ ಮುಕ್ಕಾಂ 630ನೆ ನಂಬರು ಯಾದಿ ಓದಲಾಯಿತು.

ಇನ್ನೊಬ್ಬ ಝಾಡಮಾಲಿಯನ್ನು 5—0—0 ತಲಬು ಮೇಲೆ ಇಟ್ಟುಕೊಳ್ಳಲು ಗೌರ್ನಮೆಂಟು ಸ್ಯಾಂಕ್ಷನ್ ಪಡಿಯಬೇಕೆಂತ ತೀರ್ಮಾನ ಮಾಡಲಾಯಿತು.

13. ಡಿಸ್ಟ್ರಿಕ್ಟು ಬೋರ್ಡಿನವರ ಮಂಜೂರಾತಿ ಬಗ್ಯೆ ಇಡಿಸಿದ ಡಿಸ್ಟ್ರಿಕ್ಟು ಫಂಡು ಮತ್ತು ಲೋಕಲ್ ಫಂಡು ಜನರಲ್ ಕಾಂಗಾರಿಗಳ ಅಂದಾಜಗಳು ಓದಲಾಯಿತು.

ಈ ಕೆಳಗೆ ವಿವರಿಸಿರುವ ಅಂದಾಜಾಗಳನ್ನು ಮಂಜೂರ್ಮಾಡಲಾಯಿತು.

ಡಿಸ್ಟ್ರಿಕ್ಟು ಬೋರ್ಡಿನಲ್ಲಿ ಮಂಜೂರಾಗಬೇಕಾದ ಬಜೆಟ್ಟಿನಲ್ಲಿ ಮಂಜೂರಾದ ಮತ್ತು ಮಂಜೂರಾಗದ ಕಾಮಗಾರಿಗಳ

ಅಂದಾಜಾ ಲೀಸ್ಟು.

ಡಿಸ್ಟ್ರಿಕ್ಟು ಫಂಡು ಕಾಮಗಾರಿಗಳು.

		ರೂ.
1.	ಮಾಗಡಿ ತಾಲ್ಲೂಕು ಬೆಟ್ಟಹಳ್ಳೀಲಿ ಒಂದು ಭಾವಿ ತೆಗಿಯುವದು	200
2.	ಡಿಟೋ ತಾಲ್ಲೂಕು ಮೋಟಗೊಂಡಹಳ್ಳೀಲಿ ದೊಡ್ಡಿಮನೆ ರಿಪೇರಿ ಮಾಡುವದು ...	75
3.	ಡಿಟೋ ತಾಲ್ಲೂಕು ಚಕ್ರಭಾವೀಲಿ ದೊಡ್ಡಿಮನೆ ರಿಪೇರಿ ಮಾಡುವದು	25
4.	ದೇವನಹಳ್ಳಿ ತಾಲ್ಲೂಕು ಬೆಟ್ಟಕೋಟೆ ಗ್ರಾಮದಲ್ಲಿ ಒಂದು ಭಾವಿ ತೆಗಿಯುವದು ...	350
5.	ಡಿಟೋ ತಾಲ್ಲೂಕು ರಾಜಾನುಕುಂಟೆ ರಸ್ತೆ ರಿಪೇರಿ ಮಾಡುವುದು	300
6.	ಡಿಟೋ ತಾಲ್ಲೂಕು ಯಮರೆಹಳ್ಳಿ ತಿಮ್ಮರಾಯಸ್ವಾಮಿ ರಸ್ತೆ ರಿಪೇರಿ ಮಾಡುವುದು ...	50
7.	ಡಿಟೋ ತಾಲ್ಲೂಕು ಬಿದರಹಳ್ಳೀಲಿ ಒಂದು ಭಾವಿ ತೆಗಿಯುವುದು	270
8.	ಡಿಟೋ ತಾಲ್ಲೂಕು ಬೂದಿಗೆರೆ ರಸ್ತೆ ರಿಪೇರಿ ಮಾಡುವುದು	350

ಲೋಕಲ್ ಫಂಡು ಜನರಲ ಕಾಮಗಾರಿಗಳು.

(ಬಡ್ಜೆಟ್ಟಿನಲ್ಲಿ ಮಂಜೂರಾಗಿರುವುದು.)

		ರೂ.
1.	ಸೂಲಿಬೆಲೆ ಯೂನಿಯನ್ನಲ್ಲಿ ಸಂದಿಗಳನ್ನು ರಿಪೇರಿ ಮಾಡುವುದು	150

ಡಿಸ್ಟ್ರಿಕ್ಟ್ ಫಂಡು ಬಡ್ಜೆಟ್ಟಿನಲ್ಲಿ ಮಂಜೂರಾಗದ ಕಾಮಗಾರಿಗಳು.

1.	ಕಾನಕಾನಹಳ್ಳಿ ಟ್ರಾವಲರ್ಸ್ ಬಂಗ್ಲೇಲಿರುವ ಭಾವಿಯಿಳಿ ಹೂಳು ತೆಗಿಯುವುದು ...	43
2.	ಚನ್ನಪಟ್ಣ ತಾಲ್ಲೂಕು ಕೃಷ್ಣಾಪುರ ಕೆರೆ ಪೊಡಲಿನಲ್ಲಿ ಒಂದು ಸೇದುವಭಾವಿ ತೆಗಿಯುವುದು ...	97

31—10—08ನೆ ಮರ್ಕಂ 2541-51—ಅಗ್ರಿ. 64-08-3ನೆ ನಂಬರು ಗವರ್ನಮೆಂಟ ಪ್ರೊಸೀಡಿಂಗ್ಸ ಪ್ರಕಾರ ಮಂಜೂರಾದ ಲೋಕಲ್ ಫಂಡ ಜನರಲ್ ಕಾಮಗಾರಿಗಳು.

1.	ಬೆಂಗಳೂರು ತಾಲ್ಲೂಕು ವೈಟಫೀಲ್ಡ್ ಕೆರೆ ಪೊಡಲಿನಲ್ಲಿ ಹಂಗಾಮಿಯಾಗಿ ಒಂದು ಭಾವಿ ತೆಗಿಯಲು ...	25
2.	ಕುರುಬರಕುಂಟೆಯಲ್ಲಿರುವ ಭಾವಿಯನ್ನು ಇಳಿಸಿ ಕಲ್ಲುಕಟ್ಟಿಸುವುದು ...	282
3.	ರಾಜಾನುಕುಂಟೆ ಭಾವಿ ತೆಗಿಸುವುದು	485
4.	ಚನ್ನಸಂದ್ರದಲ್ಲಿ ಭಾವಿ ತೆಗಿಸುವುದು	375
5.	ಕಕ್ಕೆಹಳ್ಳೀಲಿ ಭಾವಿ ತೆಗಿಸುವುದು	390
6.	ಚಳ್ಳಹಳ್ಳೀಲಿ ಭಾವಿ ತೆಗಿಸುವುದು	285
7.	ಬಾಂಡಹಳ್ಳೀಲಿ ಭಾವಿ ತೆಗಿಸುವುದು	325
8.	ದೊಡ್ಡನಲ್ಲಾಲಿನಲ್ಲಿ ಭಾವಿ ತೆಗಿಸುವುದು	357
9.	ದೊಡ್ಡನಹಳ್ಳೀಲಿ ಭಾವಿ ತೆಗಿಸುವುದು	283
10.	ಹುರುಳಿಹಳ್ಳೀಲಿ ಭಾವಿ ತೆಗಿಸುವುದು	340
11.	ಮಹದೇವಪುರದ ಭಾವಿ ರಿಪೇರಿ	439
12.	ಲಕ್ಕಸಂದ್ರದ ಭಾವಿ ರಿಪೇರಿ	150
13.	ಇಸುವನಹಳ್ಳೀಲಿ ಭಾವಿ ತೆಗಿಸುವುದು	340
14.	ದೊಡ್ಡಬೆಲೇಲಿ ಈಶ್ವರದೇವಸ್ಥಾನದ ಬಳಿ ಭಾವಿ ರಿಪೇರಿ	250
15.	ಚಿಕ್ಕನಹಳ್ಳಿ ಕುಡಿಯುವ ಭಾವಿ ರಿಪೇರಿ	148
16.	ತಟ್ಟೆಕೆರೆ ಭಾವಿಯನ್ನು ಅಗಲಪಡಿಸಿ ತೆಗಿಯುವುದು	227
17.	ವುಡುಕುಂಟೆ ಗ್ರಾಮದ ಹೊಲೇರ ಭಾವಿ ಇಂಪ್ರೂವ್ ಮಾಡಲು	238
18.	ಚಿಕ್ಕಹಳ್ಳೀಲಿ ಭಾವಿ ತೆಗಿಸುವುದು	360
19.	ಮಲ್ಲೇನಹಳ್ಳೀಲಿ ಭಾವಿ ತೆಗಿಸುವುದು	236
20.	ದೊಡ್ಡಮುದ್ದೇನಹಳ್ಳಿ ಭಾವಿ ತೆಗಿಸುವುದು	100
21.	ಚನ್ನವಂಡಹಳ್ಳೀಲಿ ಭಾವಿ ತೆಗಿಸುವುದು	118

ಬಡ್ಜೆಟ್ಟಿನಲ್ಲಿ ಮಂಜೂರಾಗದ ಡಿಸ್ಟ್ರಿಕ್ಟ್ ಫಂಡು ಕಾಮಗಾರಿಗಳು.

1.	ಬಿಡದಿ ಯೂನಿಯನ್ನಲ್ಲಿ ಚನ್ನಗಿರಿ ಮನೆಯಿಂದ ಕೆರೆ ವರಿಗಿನ ರೋಡು ರಿಪೇರಿ ...	64
2.	ಬಿಡದಿ ಯೂನಿಯನ್ನಲ್ಲಿ ಮದರಾಸು-ಕನ್ಯಾನೂರು ರಸ್ತೆ ಪಟೇಲ ಅಪ್ಪಾಜಿ ಮನೆವರಿಗೆ ರಿಪೇರಿ ...	35

ಲೋಕಲ ಫಂಡು ಜನರಲ ಕಾಮಗಾರಿಗಳು.

ಬಡ್ಜೆಟ್ಟಿನಲ್ಲಿ ಮಂಜೂರಾಗಿರುವದು.

1.	ದೇವರ ಹೊಸಹಳ್ಳಿ ರೋಡು ರಿಪೇರಿ	100

14\. ಈ ಡಿಸ್ಟ್ರಿಕ್ಟ್ ಆಮಳೆ ಮುಖ್ಯವಾದ ಸ್ಥಳಗಳಲ್ಲಿ ನೇಟವ ವೈದ್ಯಶಾಲೆಗಳನ್ನು ಸ್ಥಾಪಿಸಬೇಕೆಂಬುವ ವಿಚಾರದಲ್ಲಿ. ಈ ಕೆಳಗೆ ವಿವರಿಸಿರುವ ಸ್ಥಳಗಳಲ್ಲಿ ಸ್ಥಳ ವಿಶೇಷತ್ವದ ದರ್ಜೆಪ್ರಕಾರ ವೈದ್ಯಶಾಲೆಯನ್ನು ಸ್ಥಾಪಿಸಲು ಗವರ್ನಮೆಂಟಗೆ ಮಂಜೂರಿ ಬಗ್ಗೆ ಬರಿಸಬೇಕೆಂತಲೂ ಹಣ ವದಗಿದಹಾಗೆಲ್ಲಾ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬಹುದೆಂತಲೂ ತೀರ್ಮಾನ ಮಾಡಲಾಯಿತು.

1\. ಚನ್ನಪಟ್ಣ ಕಸಬಾ, 2. ಹೊಸಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, 3. ಹಾರೋಹಳ್ಳಿ, ಕಾನಕಾನಹಳ್ಳಿ ತಾಲ್ಲೂಕು, 4. ಸರ್ಜಾಪುರ, ಆನೆಕಲ್ ತಾಲ್ಲೂಕು, 5. ಬೂದಿಗೆರೆ, ದೇವನಹಳ್ಳಿ ತಾಲ್ಲೂಕು.

15\. ಬೆಂಗಳೂರು ತಾಲ್ಲೂಕು ಪೀಣ್ಯಗ್ರಾಮಕ್ಕೆ ಒಂದು ನೀರಿನ ನಲ್ಲಿ ಇಡತಕ್ಕದ್ದಕ್ಕೆ ತಗಲುವ 1,409—0—0 ರೂಪಾಯಿಗಳ ಅಂದಾಜಾ ವಾಟರ ಸಪ್ಲೈ ಮತ್ತು ಸ್ಟೋರ್ ಡಿವಿಜನ ಎಗ್ಜಿಕ್ಯುಟಿವ ಇಂಜನಿಯರಿಂದ 8—2—09ನೆ ಮರ್ಕಂ 285ನೆ ನಂಬರು ಡಾಕೆಟನೊಡನೆ ತಲಪಿದ್ದು ಓದಲಾಯಿತು.

ಹಾಲಿ ಇರತಕ್ಕ ಸ್ಥಳದಿಂದ ಹತ್ತಿರದಲ್ಲಿ ನಲ್ಲಿ ಇಡಿಸಲು ತಗಲುವ ಖರ್ಚು ಬಹಳಜಾಸ್ತಿ ಆಗುತ್ತೆಯಾಗಿ ಬೋರ್ಡಿನವರು ಮಂಜೂರ್ಮಾಡಲು ಆಗಲಾರದೆಂತ ತೀರ್ಮಾನ ಮಾಡಲಾಯಿತು.

ಂಗಳೂರು ತಾಲ್ಲೂಕು ಯಲಹಂಕದ ಡಿಸ್ಪೆನ್ಸರಿ ಕಟ್ಟಡದ ಬಾಬತು ಬಾಕಿ ಇರುವ ಬಾಡಿಗೆ ವಿಚಾರದಲ್ಲಿ ಬೆಂಗ ಅಸಿಸ್ಟೆಂಟ್ ಕಮಿಷನರವರಿಂದ ತಲಪಿದ 16-10-08ನೆ ಮರ್ಕುಂ 333ನೆ ನಂಬರು ಯಾದಿ ಓದಲಾಯಿತು.

ಟ್ಟಡವನ್ನು ಸರಿಯಾದ ಸ್ಥಿತಿಗೆ ತರುವ ಮತ್ತು ಅನುಕೂಲವಾಗಿ ಇಟ್ಟುಕೊಂಡಿರುವ ಷರತ್ತಿಗೆ ಮಾಲೀಕನನ್ನು ಒಳಪಡಿಸಿ 1897ನೆ ಇಸವಿ ಲಾಗಾಯಿತು ಆತನಿಗೆ ಸಲ್ಲಬೇಕಾಗಿರುವ ಬಾಡಿಗೆ 266 ರೂಪಾಯಿಗಳನ್ನು ಬಾವತಿ ಮಾಡಬಹುದೆಂದು ತೀರ್ಮಾನ ಮಾಡಲಾಯಿತು.

ವೈದ್ಯಶಾಲೆಗಳಲ್ಲಿ ಇಟ್ಟಿರುವ ರಿಜಿಸ್ಟರುಗಳಲ್ಲಿ ಹೆಚ್ಚು ಟ್ಯಾಕ್ಸ್ ಹಾಕುತ್ತಿದ್ದದ್ದನ್ನು ನಿಲ್ಲಿಸಿಬಿಡಬೇಕೆಂತ ತಲಪಿದ 8ನೆ ಮರ್ಕುಂ 7895-904—ಲೋಕಲ್ ಬೋರ್ಡ್ 159-07-12ನೆ ನಂಬರು ಪ್ರೊಸೀಡಿಂಗ್ಸ್ ಓದಲಾಯಿತು.

ರ್ಡು ಮಾಡಲಾಯಿತು.

3 ವರುಷಗಳ ವರಿಗೆ ಯೂನಿಯನ್‌ಗಳಲ್ಲಿ ಕಂದಾಯ ವಸೂಲ್ಮಾಡಲು ನೋಟೀಸ್ ಫೀ ವಸೂಲ್ಮಾಡಲಾಗದಂತ 9ನೆ ಮರ್ಕುಂ 8119-26—ಲೋಕಲ್ ಬೋರ್ಡ್ 30-07-14ನೆ ನಂಬರು ಆರ್ಡರು ಓದಲಾಯಿತು.

ರ್ಡು ಮಾಡಲಾಯಿತು.

ದಿನ ಮೀಟಿಂಗ್ 1909ನೆ ಇಸವಿ ಮೇ 15ನೆ ಶನಿವಾರ ನಡೆಯಬೇಕೆಂತ ತೀರ್ಮಾನ ಮಾಡಲಾಯಿತು.

ಬಿ. ಜೆ. ಕುಮಾರಸ್ವಾಮಿ ನಾಯಿಕ್,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

09ನೆ ಇಸವಿ ಏಪ್ರಿಲ್ 7ನೆ ತಾರೀಖು ಬುಧವಾರ ಪ್ರಾತಃಕಾಲ 7·30 ಘಂಟೆಯಲ್ಲಿ ರಂಗಾಚಾರ್ಲುಯವರ ಮೆಮೋರಿ ದಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಸ್ಪೆಷಲ್ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸಿನವರು (ಪ್ರೆಸಿಡೆಂಟ್).
2. ,, ಪಿ. ಎಲ್. ಮಾಂಕರ್ರವರು (ಹೆಲ್ತಾಫಿಸರ್)
3. ,, ಎಂ. ಸಿ. ರಂಗೈಯ್ಯಂಗಾರ್ರವರು
4. ,, ಎಂ. ಅನಂತರಾಜೈಯ್ಯನವರು.
5. ,, ಮಾದಪ್ಪನವರು.
6. ,, ರಹಿಮತ್ತುಲ್ಲಾ ಅಹಮ್ಮದ್ ಸೇಟರವರು.
7. ,, ವಿ. ತಿರುವೆಂಗಡ ಮೊದಲಿಯಾರ್ರವರು.
8. ,, ಎನ್. ಶ್ರೀಕಂಠೈಯ್ಯನವರು.
9. ,, ಎಂ. ನರಸುಬ್ರಹ್ಮಣ್ಯಸ್ವಾಮಿಗಳವರು.
10. ,, ರೆವರೆಂಡ್ ಎಚ್. ಗಲಿಫರ್ಡ್ ಸಾಹೇಬರವರು.
11. ,, ಅಂಬಳೆ ಅಣ್ಣಯ್ಯ ಪಂಡಿತರವರು.

ಗೈರ್ ಹಾಜರು.

1. ಮಿ॥ ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
2. ,, ಬಿ. ಸುಬ್ಬರಾಯರವರು (ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ರವರು).
3. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
4. ,, ಎಂ. ವೆಂಕಟಕೃಷ್ಣಯ್ಯನವರು.
5. ,, ಕೆ. ಚಂದ್ರಶೇಖರೈಯ್ಯನವರು.
6. ,, ಹಸೇನಲ್ಲಿಬೇಗ ಸಾಹೇಬರವರು.
7. ,, ಸೈದ್ ಮೊಹಿದೀನ್ ಸಾಹೇಬರವರು.
8. ,, ಎಂ. ಕೃಷ್ಣಪ್ಪಾಜಿ ಅರಸಿನವರು.
9. ,, ಎ. ಸುಬ್ಬಣ್ಣನವರು.

1909-10ನೆ ಸಾಲಿನ ಮೈಸೂರು ಸಿಟಿ ಮ್ಯುನಿಸಿಪಾಲಿಟಿ ಡ್ರಾಫ್ಟ್ ಬಡ್ಜೆಟ್ ಅಂದಾಜಾ ಪ್ಯಾಸ್ ಮಾಡಿದೆ.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

1909ನೆ ಇಸವಿ ಮಾರ್ಚಿ ಮಾಹೆ 27ನೆ ತಾರೀಖು ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳವರ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

1. ಮಿ|| ಎಂ. ಜಿ. ಕೃಷ್ಣಸಾಮಿರಾಯರವರು, (ವೈಸ್ ಪ್ರೆಸಿಡೆಂಟ್).
2. ,, ವಿ. ಎಲ್. ಮೂಂಕರ್ರವರು, (ಹೆಲ್ತಾಫೀಸರ್).
3. ,, ಎಂ. ವೆಂಕಟಕೃಷ್ಣಯ್ಯನವರು.
4. ,, ಎಂ. ಸಿ. ರಂಗೈಯ್ಯಂಗಾರ್ರವರು.
5. ,, ಕೆ. ಚಂದ್ರಶೇಖರೈಯ್ಯನವರು.
6. ,, ಅಂಬಳೆ ಅಂಣಾಯ್ಯಪಂಡಿತರವರು.
7. ,, ಕೃಷ್ಣಪ್ಪಾಜಿ ಅರಸಿನವರು.
8. ,, ಎಂ. ನರಸುಂಹಸ್ವಾಮಿಗಳವರು.
9. ,, ವಿ. ತಿರುವೆಂಗಡ ಮೊದಲಿಯಾರ್ರವರು.
10. ,, ಎ. ಸುಬ್ಬಂಣನವರು.
11. ,, ಅನಂತರಾಜೈಯ್ಯನವರು.
12. ,, ಮಾದಪ್ಪನವರು.
13. ,, ಎಚ್. ಶ್ರೀಕಂಠೈಯ್ಯನವರು.

ಗೈರ್ಹಾಜರು.

1. ಮಿ|| ಎಂ. ಕಾಂತರಾಜೇ ಅರಸಿನವರು, (ಪ್ರೆಸಿಡೆಂಟ್).
2. ,, ಬಿ. ಸುಬ್ಬರಾಯರವರು, (ಎಗ್ಸಿಕ್ಯೂಟಿವ್ ಇಂಜನಿಯರು).
3. ,, ಸೈಯದ್ ಯಾಕೂಬ್ ಸಾಹೇಬರವರು, (ಆಸಾಲ್ದಾರ್).
4. ,, ರಹಿಮತ್ತುಲ್ಲಾ ಅಹಮ್ಮದ್‌ಸೇಟರವರು.
5. ,, ಸೈಯದ್ ಮೊಹಿದೀನ್ ಸಾಹೇಬರವರು.
6. ,, ಹಸೇನಲ್ಲಿಬೇಗ್ ಸಾಹೇಬರವರು.

I. 1909ನೆ ಇಸವಿ ಫೆಬ್ರವರಿ ಮಾಹೆಯ ಜಮಾಖರ್ಚು ಲೆಖ್ಖ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರ ಲೆಖ್ಖಗಳು ಮತ್ತು ಕಂಟ್ರೋಲರವರಿಂದ ಆಡಿಟ್ಟಾಗಿ ಬಂದ 1908ನೆ ಇಸವಿ ಜುಲೈ ಮತ್ತು ಆಗಸ್ಟು ಮಾಹೆಯ ಲೆಖ್ಖಗಳು.

ಪ್ಯಾಸು ಮಾಡಿದೆ.

II. ಮ್ಯಾನೇಜಿಂಗ್ ಕಮಿಟಿಯ ಪ್ರೊಸೀಡಿಂಗ್ಸ್.

ಖಾಯಂ ಮಾಡಿದೆ.

III. ಅಪಾಥಿಕರಿ ಎಸ್. ವೆಂಕೋಬರಾಯರನ್ನು ಕರ್ನಾಟಕ ವೈದ್ಯಶಾಲೆಯ ಚಾರ್ಜಿನಲ್ಲಿಡತಕ್ಕ ವಿಷಯದಲ್ಲಿ ಸಿವಿಲ್ ಸರ್ಜನ್‌ರವರ ಪ್ರಪೋಜಲ್.

ಸಿವಿಲ್ ಸರ್ಜನರವರ ಪ್ರಪ್ರೋಜಲನ್ನು ಕೌನ್ಸಿಲ್ಲನವರು ಅನುಮೋದಿಸುವದಕ್ಕಾಗುವದಿಲ್ಲವೆಂದೂನು ಮತ್ತು ಈ ವಿಷಯದಲ್ಲಿ ಸಿವಿಲ್ ಸರ್ಜನರವರು 2—12—03ನೆ ಮುರ್ಕಂ 2081-3—L. F. 79-92ನೆ ನಂಬರ್ ಗವರ್ನಮೆಂಟು ಪ್ರೊಸೀಡಿಂಗ್ಸಿಗೆ ಗಮನಕೊಡಬೇಕೆಂತಲೂ ಸಹ ತೀರ್ಮಾನಿಸಿದೆ.

IV. ವಾಣೀವಿಳಾಸ ವರ್ಕ್ಸ್ ಪಂಪಿಂಗ್‌ಪ್ಲಾಂಟ್ ಎಲೆಕ್ಟ್ರಿಫಿಕೇಷನ್‌ಗೋಸ್ಕರ ಮಂಜೂರಾಗಿರುವ 50,000 ರೂಪಾಯಿನ ಅಂದಾಜಿನಲ್ಲಿ "ಎಸ್ಟಾಬ್ಲಿಷ್‌ಮೆಂಟ್" ಮತ್ತು "ಟಾಲ್ಸ್ ಮತ್ತು ಪ್ಲಾಂಟ್" ಚಾರ್ಜು ವಜಾ ಮಾಡತಕ್ಕದ್ದೆಂದು ಗೌರ್ನಮೆಂಟಿನಿಂದ ಸಾದರಾಗಿರುವ 12—2—09ನೆ ಮುರ್ಕಂ 7203-5—Ml. 421-07ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

V. ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್ಸ್‌ಪೆಕ್ಟರುಗಳ ತಾಬೇದಾರಿ ವಿಷಯದಲ್ಲಿ ಸ್ಯಾನಿಟೆರಿ ಕಮಿಷನರಿಗೂ ಮತ್ತು ಕಡೂರು, ಡಿಸ್ಟ್ರಿಕ್ಟು ಮತ್ತು ಮ್ಯುನಿಸಿಪಲ್ ಬೋರ್ಡುಗಳ ಪ್ರೆಸಿಡೆಂಟರವರಿಗೂ ಸಹ ನಡೆದಿರತಕ್ಕ ನಡವಳಿಕೆ ಕಾಪಿ ನಿಶೆ ಕೌನ್ಸಿಲ್ಲನವರ ಅಭಿಪ್ರಾಯದ ಬಗ್ಗೆ ಗೌರ್ನಮೆಂಟಿನಿಂದ ಸಾದರಾಗಿರುವ 5—12—08ನೆ ಮುರ್ಕಂ 5124-35—Ml. 425-07-3ನೆ ನಂಬರ್ ಪ್ರೊಸೀಡಿಂಗ್ಸ್.

ಕಡೂರು ಡಿಸ್ಟ್ರಿಕ್ಟು ಪ್ರೆಸಿಡೆಂಟರವರು ರಿಕಾರ್ಡು ಮಾಡಿರುವ ಅಭಿಪ್ರಾಯವನ್ನು ಕೌನ್ಸಿಲ್ಲನವರು ಅನುಮೋದಿಸಿರುವದಾಗಿಯೂ ಮತ್ತು ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್ಸ್‌ಪೆಕ್ಟರುಗಳ ತಾಬೇದಾರಿಯನ್ನು ಸ್ಯಾನಿಟೆರಿ ಕಮಿಷನರವರಿಗೆ ಕೊಡತಕ್ಕದ್ದು ಯುಕ್ತವಾಗಿಲ್ಲವೆಂತಲೂ ಸಹ ತೀರ್ಮಾನಿಸಿದೆ.

VI. ಕೆಲವು ಗೌರ್ನಮೆಂಟು ಕಟ್ಟಡಗಳಿಗೆ ಮ್ಯುನಿಸಿಪಲ್ ಕಂದಾಯ ವಜಾ ಮಾಡತಕ್ಕ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳು ಮಿ|| ರಂಗೈಯ್ಯಂಗಾರ್ರವರು ಮತ್ತು ಮಿ|| ಚಂದ್ರಶೇಖರೈಯ್ಯನವರು ಸಹ ಕೊಟ್ಟಿರುವ ಅಭಿಪ್ರಾಯ ಮತ್ತು ನಡವಳಿಕೆ.

1. ನೇಟಿವ್ ನರ್ಸಸ್ ಕ್ವಾರ್ಟರ್ಸ್ಸು. 2. ಜೈಲರ್ಸ್ ಕ್ವಾರ್ಟರ್ಸ್ಸು. 3. ವ್ಯಾಟ್ರನ್ಸ್ ಕ್ವಾರ್ಟರ್ಸ್ಸು. 4. ಡೆಪ್ಯುಟಿ ಜೈಲರ್ಸ್ ಕ್ವಾರ್ಟರ್ಸ್ ವಗೈರೆ.	ಗೌರ್ನಮೆಂಟಿನವರು ತಮ್ಮ 10—12—07ನೆ ಮುರ್ಕುಂ 5430-70—Ml. 413-06-4ನೆ ನಂಬರ್ ಪ್ರೊಸೀಡಿಂಗ್ಸಿನ 2 ಮತ್ತು 3ನೆ ಪ್ಯಾರಾಗಳಲ್ಲಿ ಚನ್ನಾಗಿ ವಿಶದಪಡಿಸಿರುವಂತೆ ಇರೇಬಿನಲ್ಲಿ ನಮೂದಿಸಿರುವ ಕಟ್ಟಡಗಳು ಮ್ಯುನಿಸಿಪಲ್ ರೆಗ್ಯುಲೇಷನ್ 59 (a)ನ ಸೆಕ್ಷನಿಗೆ ಲಗಾವಾಗುವದಿಲ್ಲವಾದ್ದರಿಂದ ಕೌನ್ಸಿಲ್ಲನವರು ಪುನರಾಲೋಚನೆ ಮಾಡಿದ್ದರಲ್ಲಿ ಸದರೀ ಕಟ್ಟಡಗಳಿಗೆ ಕಂದಾಯ ದಾಖಲಾಗಬೇಕೆಂದು ಅಭಿಪ್ರಾಯಪಡುತ್ತಾರೆ.

VII. ಮೈಸೂರು ಲಕ್ಷ್ಮಿಪುರ ಬಡಾವಣೆ ಡ್ರೈನೇಜು ಮತ್ತು ಇತರ ಕೆಲವು ಕೆಲಸಗಳಿಗೋಸ್ಕರ 17,135 ರೂಪಾಯಿಗಳ ಅಂದಾಜವನ್ನು ಕೆಲವು ರಿಮಾರ್ಕ್ಸ್‌ನೊಡನೆ ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 12-2-09ನೆ ಮುರ್ಕುಂ 7807-11—Ml. 159-08ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡ್ ಮಾಡಿ ಇದೆ.

VIII. ಸ್ವಂತ ಉಪಯೋಗಕ್ಕೋಸ್ಕರ ಮ್ಯುನಿಸಿಪಲ್ ಸರಹದ್ದಿನೊಳಕ್ಕೆ ತರತಕ್ಕ ಹಾಸಲಿಗೆ ಸಂಬಂಧಪಟ್ಟ ಸ್ವಲ್ಪ ಸಾಮಾನುಗಳಿಗೆ ಹಾಸಲು ವಜಾ ಮಾಡತಕ್ಕ ವಿಷಯದಲ್ಲಿ 1908ನೆ ಇಸವಿ ದಸರಾ ಅಸ್ಸೆಂಬ್ಲಿ 161ನೆ ನಂಬರ್ ಸಬ್ಜೆಕ್ಟಿಗೆ ಗಮನಕೊಟ್ಟು ಕೌನ್ಸಿಲ್ಲನವರ ಅಭಿಪ್ರಾಯ ತಿಳಿಸಬೇಕೆಂದು ಗೌರ್ನಮೆಂಟು ಸೆಕ್ರಟೆರಿಯವರಿಂದ ತಲುಪಿರುವ 2—3—09ನೆ ಮುರ್ಕುಂ 8510-9—Ml. 281—08—2ನೆ ನಂಬರ್ ಡಾಕೆಟ್.

ಈ ಕೆಳಗೆ ನಮೂದು ಮಾಡಿರುವ ಸಾಯರು ಹಾಸಲಿಗೆ ಸಂಬಂಧಪಟ್ಟ ಜಿನಸಿಗಳನ್ನು ಅದರ ಪಕ್ಕದಲ್ಲಿ ನಮೂದಿಸಿರುವ ಪ್ರಮಾಣ ವ ಸಂಖ್ಯೆವರಿಗೆ ವ್ಯಾಪಾರಸ್ಥರಲ್ಲದ ಇತರರು ತಮ್ಮ ಸ್ವಂತ ಉಪಯೋಗಕ್ಕೆ ಚಿಲ್ಲರೆಯಾಗಿ ಮ್ಯುನಿಸಿಪಲ್ ಸರಹದ್ದಿನೊಳಕ್ಕೆ ತಂದರೆ ಸಾಯರು ಹಾಸಲನ್ನು ವಿನಾಯಿತಿ ಮಾಡುತ್ತಾ ಇದೆ.

ಬೆಲ್ಲಾ	...	...	...	5	ಸೇರು
ಸಕ್ಕರೆ	...	...	...	5	ಸೇರು
ತುಪ್ಪ ಮತ್ತು ಬೆಣ್ಣೆ	...	...	...	5	ಸೇರು
ಹೊಗೇಸೊಪ್ಪು	...	...	...	$\frac{1}{4}$	ಸೇರು
ವೀಳ್ಯದೆಲೆ	...	...	...	100	ಎಲೆಗಳು
ತೆಂಗಿನಕಾಯಿ	...	...	...	5	

IX. 1909-10ನೆ ಸಾಲಿನ ಡ್ರಾಫ್ಟ್ ಬಡ್ಜೆಟ್ ಅಂದಾಜ ಏಪ್ರಿಲ್ ತಿಂಗಳಲ್ಲಿ ಸ್ಪೆಷಲ್ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದಕ್ಕೆ ಅಡ್ಜರ್ನ ಮಾಡಿದೆ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 19ನೆ ಏಪ್ರೆಲ್ 1909.

1. ಸನ್ 1908ನೆ ಜನವರಿ 16ನೆ ಮುರ್ಕುಂ ಗವರ್ನಮೆಂಟು ಪ್ರೊಸಿಡಿಂಗ್ಸ ನಂ. F. L. 3529-33—B. 3-07-17 ಅನುಸರಿಸಿ ಸಕಲೇಶಪುರದ ಲೇಟ್ ಅಗ್ರಿಕಲ್‌ಚರಲ್ ಬ್ಯಾಂಕಿನ ಮೆಂಬರಾದ ಲೇಟ್ ಮಿ॥ ಸುಂಡೆಕೆರೆ ಶ್ರೀಕಂಠೈಯ್ಯನವರ ಕುಟುಂಬ ಲಕ್ಷ್ಮಿದೇವಮ್ಮನವರು ಮತ್ತು ಮಗ ಗುಂಡಪ್ಪನವರು ಇವರುಗಳಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮತ್ತು ಸಾಲದ ಹಣದ ಬಾಕೀಗಾಗಿ ಇದರಡಿ ನಮೂದಾಗುವ ಕಾಫಿ ತೋಟಗಳಲ್ಲಿ ಸದರಿಯವರಿಗೆ ಇರತಕ್ಕ ಹಕ್ಕು ಬಾಧ್ಯತೆಯು ಹಾಸನದ ಡಿಸ್ಟ್ರಿಕ್ಟ್ ಮಂಜರಾಬಾದು ತಾಲ್ಲೂಕು ಸಕಲೇಶಪುರದ ತಾಲ್ಲೂಕು ಕಚೇರಿ ಬಳಿ ಬರುವ 1909ನೆ ಮೇ ಮಾಹೆ 28ನೆ ತಾರೀಖು ಶುಕ್ರವಾರ ದಿವ 11 ಘಂಟೆಗೆ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಯಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ಬಹಿರಂಗವಾದ ಹರಾಜು ಮಾಡಿಸಲ್ಪಡುತ್ತೆ.

2. ಹರಾಜು ನಿಬಂಧನೆಗಳು ಈ ಕೆಳಗೆ ನಮೂದಿಸಲ್ಪಟ್ಟಿವೆ.

(1) ಹರಾಜು ಗೌರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟಿರುತ್ತೆ.

(2) ಆಖೈರು ಸವಾಲನ್ನು ಅಂಗೀಕರಿಸುವದು ಯಾ ತಿರಸ್ಕರಿಸುವದು ಗವರ್ನಮೆಂಟಿನವರ ತೀರ್ಮಾನಕ್ಕೆ ಒಳಪಟ್ಟಿರುತ್ತೆ.

(3) ಹರಾಜು ಮಂಜೂರಾಗದೇಲೂ ಯಾ ಮಂಜೂರಾಗುವದಕ್ಕೆ ಸಾವಕಾಶವಾದರೂ ಛಡ ಸವಾಲ್‌ದಾರನಿಗೆ ಯಾವವಿಧವಾದ ತಕರಾರುಮಾಡಲೂ ರಹ ಇರುವದಿಲ್ಲ.

(4) ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

(5) ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

(6) ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

(7) ಹರಾಜು ಗವರ್ನ್ಮೆಂಟಿನವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

(8) ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಗವರ್ನ್ಮೆಂಟಿನವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು) ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈಟ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್ಮೆಂಟಿನವರು ಜವಾಬ್‌ದಾರ್‌ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

ಬಾಕೀದಾರರಿಂದ ಬರಬೇಕಾದ ಮೊಬಲಗು ಮತ್ತು ಹರಾಜುದಾರನು ಚಾಲ್ತಿ ಸಾಲಿನಲ್ಲಿ ಸರ್ಕಾರಕ್ಕೆ ಕೊಡಬೇಕಾದ ಕಂದಾಯದ ಮೊಬಲಗು ಈ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸಿರುತ್ತೆ.

ಷೆಡ್ಯೂಲ್.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡಗಳ ಸ್ವಭಾವ.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ತರಹೆ.	ವಿಸ್ತೀರ್ಣ. ಎ.	ವಿಸ್ತೀರ್ಣ. ಗು.	ಆಕಾರ. ರೂ.	ಆಕಾರ. ಆ.	ಅಂದಾಜಾ ಕಿಮ್ಮತ್ತು ಸರ್ 1904ರಲ್ಲಿ.	ಸರ್ಕಾರಕ್ಕೆ ಸಾಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂ ಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ಬಾಕಿ.
ಮಂಜರಾಬಾದು	ಸಕಲೇಶಪುರ	ಕೆಲಗಳಲೆ	ಲೇಟ್ ಮಿ॥ ಸುಂಡೆಕೆರೆ ಶ್ರೀಕಂಠೈಯನವರ ಕುಟುಂಬ ಲಕ್ಷ್ಮಿದೇವಮ್ಮನವರು ಮಗ ಗುಂಡಪ್ಪನವರು	* ಬಂಗ್ಲೆ ಮತ್ತು ಇದಕ್ಕೆ ಸೇರಿದ ಕಟ್ಟಡಗಳು.	5,812—8—0	159	ಕಾಫಿ	17	2	26	0	ರೂ. 31,096	...	1907—08ನೆ ಸಾಲ್ ಆಖೈರಿಗೆ ಬರಬೇಕಾದ ಲೋನ್ ... ರೂ. 67,440 ಆ. 0 ಪೈ. 0 ಡಿಟೋ ವರಿಗೆ ಬರಬೇಕಾದ ಬಡ್ಡಿ ... 27,845 4 10 ಜುಮ್ಲಾ ... 95,285 4 10
						160	ಡಿಟೋ	19	28	30	0			
						166	ಡಿಟೋ	28	4	41	8			
						172	ಡಿಟೋ	12	3	18	0			
						173	ಡಿಟೋ	14	20	22	0			
						181	ಡಿಟೋ	14	31	14	8			
						182	ಡಿಟೋ	24	1	36	0			
						205	ಡಿಟೋ	10	22	16	0			
						206	ಡಿಟೋ	2	19	3	12			
						198	ಡಿಟೋ	2	5	2	0			
						*175	ಡಿಟೋ	12	29	3	4			
						170	ಡಿಟೋ	18	0	27	0			
						207	ಡಿಟೋ	6	0	6	0			
							ಜುಮ್ಲಾ	182	4	246	0			
		ಕಿರಹಳ್ಳಿ				179	ಕಾಫಿ	18	10	27	0			
						196	ಡಿಟೋ	7	28	7	12			
							ಜುಮ್ಲಾ	25	38	34	12			
							ಒಟ್ಟು ಜುಮ್ಲಾ	208	2	280	12			

ಬಿ. ಆರ್. ಡಬ್ಲ್ಯೂ. ವೆದರಾಲ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಸ್ತ 1909ನೆ ಇಸವಿ ಏಪ್ರಿಲ್ ತಾರೀಖು 17.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1909ನೆ ಇಸವಿ ಜುಲೈ ಗುರ್ರಿ ಲಾಗಾಯಿತು 1910ನೆ ಇಸವಿ ಜೂನ್ ಆಖೈರ್ ವರೆಗೆ 1 ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇಡದಡಿ ಕಾಣಿಸಿರುವ ಟೋಲು ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲು ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು	ಟೋಲ್‌ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡೆಯುವ ಸ್ಥಳ.
1	ತಡಸ (ಭದ್ರಾನದಿಯ ಸೇತುವೆ) ...	6ನೆ ಮೇ 1909.	ಎಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ.
2	ಹರಿಹರಪುರ (ತುಂಗಾನದಿ ಸೇತುವೆ) ...	4ನೆ ಡಿಟೋ	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ.
3	ಬಾಳೆಹೊನ್ನೂರು (ಭದ್ರಾನದಿ ಸೇತುವೆ)	1ನೆ ಡಿಟೋ	ಬಾಳೆಹೊನ್ನೂರು ಮುಸಾಫರ್ ಬಂಗಲೆಯಲ್ಲಿ.

2. ಎಲ್ಲಾ ಸವಾಲುಗಳಿಗಿಂತಲೂ ಜಾಸ್ತಿಯಾದ ಭಡ ದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗವರ್ನ್ಮೆಂಟ್ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಭಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಭಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಮೂರನೇ ಒಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಯಲ್ಪಟ್ಟ ಗವರ್ನ್ಮೆಂಟ್ ಆಫ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಟ್ಟು ಇಡಬೇಕು. ಹಾಗೂ ರೂಪಾಯಿ ಒಂದರ ಒಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನ್ಮೆಂಟಿನಿಂದ ಹರಾಜು ಮಂಜೂರಾಗಿ ಬಂದಕೂಡಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹ ಸದರಿ ಟೋಲ್‌ಗೇಟು ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಖಜಾನೆಗೆ 1909ನೆ ಆಗಸ್ಟು ತಾರೀಖು 10ರ ಲಾಗಾಯಿತು ಸಮನಾದ ಎಂಟು ಖಿಸ್ತುಗಳಾಗಿ ಪ್ರತಿ ತಿಂಗಳ 10ನೆ ತಾರೀಖಿಗೆ ಪಾವತೀ ಮಾಡಬೇಕು. ಡಿಪಾಜಟ್ಟಿನ ಮೊಬಲಗು 9—10—11—12ನೆ ಖಿಸ್ತುಗಳಿಗೆ ಜಮೆ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೆವಾರ್ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು ಮೂರು ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದೇ ಇದ್ದರೆ ಅಥವಾ ಜಾಮೀನ್ ಕೊಡದೇ ಇದ್ದರೆ ಡಿಪಾಜಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ ಮತ್ತು ಸದರಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು. ಹೀಗೆ ಮಾಡಿದ್ದರಲ್ಲಿ ಸರ್ಕಾರಕ್ಕೆ ಲುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನ್‌ದಾರರ ಜೆಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಶೇಕಡ ಆರು ರೂಪಾಯಿಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನ್‌ದಾರ್ರಿಂದ ಬಾಕಿ ಮೊಬಲಗು ಬಾರದೇ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕು ಅಥವಾ ಸಬ್ ತಾಲ್ಲೂಕಿನಲ್ಲಿದೆಯೋ ಆಯಾ ತಾಲ್ಲೂಕು ಅಮಲ್ದಾರ್ರು ಅಥವಾ ಸಬ್ ತಾಲ್ಲೂಕು ಅಮಲ್ದಾರ್ರು ಡೆಪ್ಯುಟಿ ಅಮಲ್ದಾರ್ರು ತನಿಖೆಗೆ ಒಳಗಾಗಿ ರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದು ಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿಲ್ ತರ್ಫ್ ಪ್ರಾಸಿಕ್ಯೂಷಣಗೆ ಗುರಿಪಡಿಸುತ್ತೆ.

9. ದಂಡು, ಮಿಲಿಟೆರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿಮೇಲೆ ಪ್ರಯಾಣಮಾಡುವ ಪೋಲೀಸು ಯಾ ಇತರ ಉದ್ಯೋಗಸ್ಥರ ಸರ್ಕಾರದ ಸಾಮಾನುಗಳು ಅಂದರೆ, ಸಂಬಂಧಪಟ್ಟ ಇಲಾಖಾ ಮೊಖ್ತೇಸರರ ಸರಟಫಿಕೇಟ್ ಸಹ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ಟೋಲ್ ಗೇಟು ಬಳಿ ಚನ್ನಾಗಿ ಕಾಣುವ ಜಾಗಾದಲ್ಲಿ ತಗಲುಹಾಕಬೇಕು.

11. ಗವರ್ನಮೆಂಟನಿಂದ ನೇಮಿಸಲ್ಪಟ್ಟ ಟೋಲ್‌ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

12. ರೆವಿನ್ಯೂ ಇಲಾಖೆಯೊಂದಿಗೆ ಸುಂಕದ ತೆರಿಗೆ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡ ಯಾವನೊಬ್ಬನಿಂದಲೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು. ಈ ರೀತಿ ರೆವಿನ್ಯೂ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡ ಮೊಬಲಗನ್ನು ಹೊಂದಲು ಕಂಟ್ರಾಕ್ಟುದಾರನು ಸ್ವತಂತ್ರವುಳ್ಳವನಾಗುತ್ತಾನೆ.

13. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಬಾಳೆಹೊನ್ನೂರು-ತಡಸ್ನ, ಹರಿಹರಪುರದ ಸೇತುವೆಗಳ ಮೇಲೆ ಇರುವ ಟೋಲ್ ಗೇಟುಗಳ ಬಳಿ ಸುಂಕ ವಸೂಲ್ಮಾಡುವ ದರಗಳ ಪಟ್ಟಿ:—

ನಂಬರು.	ತಪಶೀಲು.	ಭರ್ತಿ ಆಗಿದ್ದರೆ.			ಖಾಲಿ ಇದ್ದರೆ.		
		ರೂ.	ಆ.	ಪೈ.	ರೂ.	ಆ.	ಪೈ.
1	ನಾಲ್ಕು ಚಕ್ರದ ಗಾಡಿ 1ಕ್ಕೆ	0	8	0	0	8	0
2	ಎರಡುಚಕ್ರದ ಪೆಟ್ಟಿಗೆ ಗಾಡಿ ಅಥವಾ ಭಂಡಿ 1ಕ್ಕೆ	0	4	0	0	4	0
3	ಎಮ್ಮೆಗಳು, ಎತ್ತುಗಳು ರಾಸು 1ಕ್ಕೆ	0	0	6	0	0	3
4	ಆನೆ 1ಕ್ಕೆ	1	0	0	1	0	0
5	ಒಂಟೆ 1ಕ್ಕೆ	0	8	0	0	8	0
6	ಪ್ರತಿ ಕುದುರೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	0		...	
7	ಡಿಟ್ಟೋ ಹೊರೆ ಇಲ್ಲದ್ದು ಅಥವಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...		...		0	1	0
8	ಪ್ರತಿ ಕತ್ತೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6		...	

ನೋಟು :—ನಡದುಬರುವ ಮಾರ್ಗಸ್ಥರಮೇಲೆ ಟೋಲ್ ವಸೂಲು ಮಾಡತಕ್ಕದ್ದಿಲ್ಲ.

ಜಿ. ಹನುಮಂತರಾವ್, ಫಾರ್ ಡೆಪ್ಯೂಟಿ ಕಮಿಷನರ್,

ಇಸ್ತಿಹಾರ್ನಾಮೆ.

ತಾರೀಖು 13ನೆ ಏಪ್ರಿಲ್ 1909.

ಮೂಡಗೆರೆ ತಾಲ್ಲೂಕು ಗೋಣಿಬೀಡು ಹೋಬಳಿ ಹಳೇಕೆರೆ ಎಸ್ಟೇಟ್ ಗ್ರಾಮಕ್ಕೆ ಮಿ|| ಚಾರಲಸ್ ಕಿಂಗ್ ಸಾಹೇಬರವರಿಂದ ಬರತಕ್ಕ ಬಾಕಿಗೋಸ್ಕರವಾಗಿ ಮಾರ್ಜಿನ್ನಲ್ಲಿ ಕಂಡ ತೋಟವು ಮೂಡಗೆರೆ ತಾಲ್ಲೂಕು ಕಚೇರಿಯಲ್ಲಿ 1909ನೆ ಮೇ ಮಾಹೆ 26ನೆ ತಾರೀಖು ಬುಧವಾರ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟ ಇದೆ.

ಸರ್ವೆ ನಂ. 1, ಎಕರೆ 162, ಗುಂಟೆ 10, ಆಕಾರ ರೂ. 243.

ಹೆಚ್ಚು ತಪಶೀಲ್ ಬಗ್ಗೆ 1909ನೆ ಏಪ್ರಿಲ್ 22ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 264—265ನೆ ಪೇಜುಗಳನ್ನು ನೋಡತಕ್ಕದ್ದು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯೂಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸನ್ 1909ನೆ ಇಸವಿ ಫೆಬ್ರುವರಿ ತಿಂಗಳು 19ರಲ್ಲಿ ನಡೆದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡ್ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಮ|| ರಾ|| ರಾ|| ಎಂ. ಚಂಗಯ್ಯ ಶೆಟ್ಟರವರು, (ಪ್ರೆಸಿಡೆಂಟ್).

ಅಫಿಷಿಯಲ್ ಮೆಂಬರುಗಳು.

(1) ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.
(2) ಚಿತ್ರದುರ್ಗದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(3) ಚಿತ್ರದುರ್ಗ ಡಿಸ್ಟ್ರಿಕ್ಟು ಸ್ಕೂಲ್ ಇಲಾಖಾ ಡೆಪ್ಯೂಟಿ ಇನ್ಸ್‌ಪೆಕ್ಟರವರು.
(4) ಬೋರ್ಡಿನ ವೈಸ್ ಪ್ರೆಸಿಡೆಂಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆ॥ ಪಿ. ನಂಜುಂಡಪ್ಪನವರು.
2. ,, ಮಹಮದ್ ದಸ್ತಗಿರಿ ಸಾಹೇಬರು.
3. ,, ಶಾನುಭೋಗ ಸುಬ್ಬಣ್ಣನವರು.
4. ,, ಬೆಳಗಟ್ಟೆ ಅಜ್ಜಪ್ಪನವರು.
5. ,, ಮುತ್ತುಗದೂರು ಪರ್ವತಪ್ಪನವರು.
6. ,, ಸಿ. ವಿರೂಪಾಕ್ಷಪ್ಪನವರು.
7. ,, ನಬೀ ಸಾಹೇಬರು.
8. ,, ಹೆಚ್. ಸುಬ್ಬರಾವ್.
9. ,, ಕುಬಾಜಿ ದುರ್ಗಪ್ಪನವರು.
10. ,, ಭಾರಿ ರುದ್ರಪ್ಪನವರು.
11. ,, ನಾಡಿಗ ಬಾಲಕೃಷ್ಣರಾಯರು.
12. ,, ಪಾಳ್ಯೇದಹಳ್ಳಿ ನಾಗಪ್ಪನವರು.
13. ,, ಬಿ. ವಿ. ನಾರಾಯಣರಾವ್.
14. ,, ಬಿಳಿಚೋಡು ಮೂಡ್ಲಗಿರಿಯಪ್ಪನವರು.

ಗೈರ್ ಹಾಜರು.

ಅಫಿಷಿಯಲ್ ಮೆಂಬರುಗಳು.

(1) ಚಿತ್ರದುರ್ಗದ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರು.
(2) ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆ॥ ಎಂ. ಅನಂತಶೆಟ್ಟರವರು.
2. ,, ನಾಡಿಗ ಸಿದ್ಧರಾಮಯ್ಯನವರು.
3. ,, ಯಲಿ ಬಸಪ್ಪನವರು.
4. ,, ಶಾನುಭೋಗ ಚನ್ನಗೌರಯ್ಯನವರು.

N. B. ಹೊಸದುರ್ಗ ತಾಲ್ಲೂಕು ಅಮಲ್ದಾರ್ರು ಮತ್ತು ಹರಿಹರ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ವಿನಹ ಬಾಕಿ ತಾಲ್ಲೂಕಿನ ಅಮಲ್ದಾರ್ರು ಹಾಜರ್ರಾಗಿದ್ದರು.

(1) ಫೈನಾನ್ಸ್ ಕಮಿಟಿಯಿಂದ ತಲ್ಪಿದ 1909-1910ನೆ ಸಾಲಿನ ಜಮಾಖರ್ಚು ಬಾಬತು ಡಿಸ್ಟ್ರಿಕ್ಟು ಫಂಡು ಬಡ್ಜಟ್ಟು ಓದಲ್ಪಾಯಿತು.

ಸದರಿ ಬಡ್ಜಟ್ಟು ಒಪ್ಪಿಕೆಯಿಂದ ಗವರ್ನ್ಮೆಂಟಿಗೆ ಮಂಜೂರಿ ಬಗ್ಗೆ ಸಬ್‌ಮಿಟ್ ಮಾಡಬೇಕೆಂಬದಾಗಿ ತೀರ್ಮಾನಿಸಲಾಯಿತು.

(2) 1909-1910ನೆ ಸಾಲಿನ ಜಮಾಖರ್ಚು ಬಾಬತು ಇರ್ರಿಗೇಷನ್ ಸೆಸ್ ಫಂಡು ಬಡ್ಜಟ್ಟು ಓದಲಾಯಿತು.

ಸದರಿ ಬಡ್ಜಟ್ಟು ಒಪ್ಪಿಕೆಯಿಂದ ರವಿನ್ಯೂ ಕಮಿಷನರ್ ಸಾಹೇಬರವರಿಗೆ ಸಬ್ಮಿಟ್ ಮಾಡಬೇಕೆಂಬದಾಗಿ ತೀರ್ಮಾನಿಸಲಾಯಿತು.

(3) ಹಿರಿಯೂರು ಮತ್ತು ಹರಿಹರದ ಆಸ್ಪತ್ರೆ ನೌಕರುಗಳಿಗೆ ವಾಸಕ್ಕೆ ಕಟ್ಟಡಗಳನ್ನು ಕಟ್ಟಿಸಿಕೊಡತಕ್ಕ ವಿಷಯವನ್ನು ಸದ್ಯಕ್ಕೆ ಮನ್ನಾ ಮಾಡತಕ್ಕ ಭಾಗದಲ್ಲಿ ಗವರ್ನ್ಮೆಂಟಿನಿಂದ ಸಾದರಾದ ಆರ್ಡರು ಓದಲಾಯಿತು.

ಮೇಲ್ಕಂಡ ಪ್ರೊಪೋಜಲನ್ನು ಸದರಿ ಎರಡು ಮ್ಯುನಿಸಿಪಲ್ ಬೋರ್ಡಿನಲ್ಲಿ ಹಣವು ತಕ್ಕಮಟ್ಟಿಗೆ ಅನುಕೂಲವಾಗುವವರಿವಿಗೂ ಮನ್ನಾ ಮಾಡಬೇಕೆಂಬದಾಗಿ ತೀರ್ಮಾನಿಸಲಾಯಿತು.

(4) ಈ ಕೆಳಗೆ ಕಂಡ ಗವರ್ನ್ಮೆಂಟು ಪ್ರೊಸೀಡಿಂಗ್ಸುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(a) and (b) ಇರಿಗೇಷನ್ ಸೆಸ್ ಫಂಡು ಅಡ್ಮಿನಿಸ್ಟ್ರೇಷನ್ ವಿಷಯದಲ್ಲೂ ಮತ್ತು ಅದಕ್ಕೆ ಸಂಬಂಧಪಟ್ಟ ಅಂದಾಜುಗಳ ತಯಾರಿ ವಿಷಯದಲ್ಲೂ ಸಹ ತಲ್ಪಿದ 24—9—08ನೆ ಮುರ್ಕಂ ರೆ. 2086-96—ಲ್ಯಾ. ರೆ. 585-07-11ನೆ ನಂಬರು ಮತ್ತು 16—12—08ನೆ ಮುರ್ಕಂ ರೆ. 3842-50—ಲ್ಯಾ. ರೆ. 161-08-4ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸುಗಳು.

(c) ಭರ್ತಿಯಿಸತಕ್ಕ ಬಗ್ಗೆ ಅಮೃತಮಹಲ್ ಇಲಾಖೆಯಿಂದ ಸಪ್ಲೈ ಮಾಡಿಸಿರತಕ್ಕ ಹೋರಿಗಳು ಭರ್ತಿಯಿಸಿದ ಪ್ರತಿ ದಫೆಕ್ಕು "ಫೀ" ವಸೂಲುಮಾಡತಕ್ಕ ವಿಚಾರದಲ್ಲಿ ತಲ್ಪಿದ ಗವರ್ನ್ಮೆಂಟ್ ಪ್ರೊಸೀಡಿಂಗ್ಸ್.

(d) ಸಚಿತ್ರ ಕರ್ಣಾಟಕ ವರ್ಣಮಾಲೆಯ 100 ಪ್ರತಿಗಳನ್ನು ಡಿಸ್ಟ್ರಿಕ್ಟಿನಲ್ಲಿಯಲ್ಲಾ ಇಂಡೀಜಿನಸ್ ಸ್ಕೂಲುಗಳಿಗೆ ಹಂಚತಕ್ಕ ಬಗ್ಗೆ ತರಿಸಿಕೊಳ್ಳತಕ್ಕದ್ದು ಮಂಜೂರಾಗಿ ಬಂದ ಗವರ್ನ್ಮೆಂಟ್ ಪ್ರೊಸೀಡಿಂಗ್ಸು.

(e) ಡಿಸ್ಟ್ರಿಕ್ಟು ಬೋರ್ಡುಗಳಿಂದ ತಲ್ಪಿದ "ಷೆಡ್ಯೂಲ್ ಆಫ್ ರೇಟ್ಸ್" ಗಳು ಮಂಜೂರಾಗಿ ಬಂದ ಗವರ್ನ್ಮೆಂಟ್ ಪ್ರೊಸೀಡಿಂಗ್ಸ್.

(5) ಹದಡೀಕೆರೆ ಏರಿಮೇಲೆ ಪ್ಯಾರಪೆಟ್ ಯಾನೆ ಕೈಪಿಡಿ ಗೋಡೆ ಕಟ್ಟತಕ್ಕ ಬಗ್ಗೆ ತಗಲುವ ಫಂಡ್ಸಿಗೆ ರಿ ಅಪ್ರೋಪ್ರಿಯೇಷನ್ ಸ್ಟೇಟ್‌ಮೆಂಟು ಸಹಿತ ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತಲ್ಪಿದ 13—12—08ನೆ ಮಕ್ಕಾಂ 1005ನೆ ನಂಬರು ಡಾಕೆಟ್ ವಿಷಯ ಮತ್ತು ಇದೇ ವಿಷಯದಲ್ಲಿ ಅವರಿಂದಲೇ ತಲ್ಪಿರತಕ್ಕ 21—10—08ನೆ ಮಕ್ಕಾಂ 184ನೆ ನಂಬರು ಡಾಕೆಟ್ ಸಹಾ ಓದಲಾಯಿತು.

ಮೇಲ್ಕಂಡ ಎರಡು ಡಾಕೆಟ್ಟುಗಳೊಂದಿಗೆ ತಲ್ಪಿದ "ರಿ ಅಪ್ರೋಪ್ರಿಯೇಷನ್ ಸ್ಟೇಟುಮೆಂಟ್" ಗಳನ್ನು ಅಪ್ರೂವ್ ಮಾಡಿ ಇದೆ.

(6) ಹೊಳಲಕೆರೆ ತಾಲ್ಲೂಕು ಅರೇಹಳ್ಳಿ ಹಟ್ಟಿ ಛತ್ರದ ಪಾರುಪತ್ತೇಗಾರ್ ನರಸಪ್ಪನಿಗೆ ಅಲವನ್ಸ್ ಜಾಸ್ತಿ ಮಾಡತಕ್ಕ ವಿಷಯದಲ್ಲಿ ತಲ್ಪಿದ ಗವರ್ನ್‌ಮೆಂಟ್ ಪ್ರೊಸಿಡಿಂಗ್ಸ್ ಓದಲಾಯಿತು.

ಎಲ್ಲಾ ವಿದ್ಯಮಾನಗಳನ್ನು ಯೋಚಿಸಲಾಗಿ ಈತನು ಮುಸಾಫರ್‌ಖಾನೆ ಮತ್ತು ಭಂಡಿವೋಟು ಇವುಗಳ ಉಸ್ತುವಾರಿ ನೋಡೋಣಾದ್ದರಿಂದ ಪ್ರಯಾಣೀಕರಿಗೆ ಬಹಳ ಅನುಕೂಲಸ್ಥನಾಗಿರುತ್ತಾನಲ್ಲದೇ ಕಸಬಾ ಹೊಳಲಕೆರೆಗೆ 4 ಮೈಲಿ ಫಾಸಲೆಯಲ್ಲಿರುವ ರೈಲ್ವೇ ಸ್ಟೇಷನ್‌ನಲ್ಲಿ ಸದಾ ಕಾಲದಲ್ಲಿಯೂ ವಾಸವಾಗಿರುತ್ತಾನಾದ್ದರಿಂದ ನರಸಪ್ಪನಿಗೆ 5 ರೂಪಾಯಿನಿಂದ 8 ರೂಪಾಯಿಗೆ ಬಡ್ತಿ ಮಾಡತಕ್ಕದ್ದೆಂತ ನಿರ್ಣಯಿಸಲಾಯಿತು.

(7) ಚಿತ್ರದುರ್ಗದಲ್ಲಿರತಕ್ಕ ಚಾಮರಾಜ ಮೆಮೋರಿಯಲ್ ಹಾಲಿಗೆ ಲೈಟ್ನಿಂಗ್ ಕಂಡಕ್ಟರ್ಸ್ ಇಡಿಸತಕ್ಕ ಬಗ್ಗೆ ಮಂಜೂರಾದ ಅಂದಾಜವನ್ನು ಚಿತ್ರದುರ್ಗ ಡಿಸ್ಟ್ರಿಕ್ಟು ಎಗ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಗೆ ಫಂಡ್ಸ್ ಅಖಾಟಾದ ನಂತರ ಕೆಲಸಕ್ಕೆ ಷುರು ಮಾಡಿಸಲು ರವಾನಿಸಿರುವದಾಗಿ ವಗೈರೆ ಸೂಪರಿಂಟೆಂಡಿಂಗ್ ಇಂಜನಿಯರ್ ಸಾಹೇಬರವರು ಬರೆಸಿರುವದಾದ 31—1—09ನೆ ಮಕ್ಕಾಂ 545ನೆ ನಂಬರು ಮೆಮೋ ಓದಲಾಯಿತು.

ಮೇಲ್ಕಂಡ ಕೆಲಸವನ್ನು ಚೀಫ್ ಇಂಜನಿಯರ್ ಸಾಹೇಬರವರು ಅವಶ್ಯಕವಾದ್ದಲ್ಲವೆಂಬದಾಗಿ ಅಭಿಪ್ರಾಯಪಟ್ಟಿರುವದ್ದರಿಂದ ಸದರಿ ಕೆಲಸಕ್ಕೆ ಹಣ ಮಂಜೂರ್ಮಾಡಲು ಬೋರ್ಡಿನವರು ಅನುಮತಿಸುವದಿಲ್ಲವೆಂತ ತೀರ್ಮಾನಿಸಲಾಯಿತು.

(8) ಬೋರ್ಡಿನವರ ಮಂಜೂರೀ ನಿರೀಕ್ಷಣೆಮೇಲೆ ಪ್ರೆಸಿಡೆಂಟ್ ಸಾಹೇಬರವರು ಮಂಜೂರು ಮಾಡಿರತಕ್ಕ ಕೆಲಸಗಳ ಸ್ಟೇಟ್‌ಮೆಂಟು ಓದಲಾಯಿತು.

ಒಪ್ಪಿಕೊಂಡಿದೆ.

(9) ಮುಂದಿನ ಮೀಟಿಂಗು 17—5—09ಕ್ಕೆ ನಡಿಸಬೇಕೆಂದು ತೀರ್ಮಾನಿಸಲಾಯಿತು.

ಎಂ. ಚಂಗೈಯ್ಯ ಶೆಟ್ಟಿ,
ಪ್ರೆಸಿಡೆಂಟ್.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸಿನಿಂದ.

ನೋಟಿಫಿಕೇಷನ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಸಬ್ ಡಿವಿಜನ್ ಮಜಕೂರು ಬಾಬತು ಜೋಡಿ, ಖಾಯಂಗುತ್ತ, ಇನಾಂ, ಸರ್ವಮಾನ್ಯ ವಗೈರೆ ಗ್ರಾಮಗಳ ಕೇಂದಿ ಹಕ್ಕಿನ ವಿಷಯದಲ್ಲಿ ಕ್ಲೋಸ್‌ಪೇಟೆ ಮೊಕ್ಕಾಂನಲ್ಲಿ 1909ನೆ ಮೇ ತಾರೀಖು 25ರಲ್ಲು ವಿಚಾರಣೆ ಮಾಡಲ್ಪಡುತ್ತೆ.

ತಪಶೀಲು ಬಗ್ಗೆ 1909ನೆ ಇಸವಿ ಏಪ್ರಿಲ್ 15ನೆ ಮಕ್ಕಾಂ 15ನೆ ನಂಬರ್ ಮೈಸೂರು ಗೆಜೆಟ್ 2ನೆ ಭಾಗದ 209ನೆ ನಂಬರ್ ಪೇಜು ನೋಡಿ.

ಬಿ. ವೆಂಕೋಬರಾವ್,
ಸಬ್ ಡಿವಿಜನ್ ಆಫೀಸರ್.

ತಾರೀಖು 19ನೆ ಮಾರ್ಚಿ 1909.

ಪ್ರಕಟನ ಪತ್ರಿಕಾ.—ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಅರಗದ ಕಸಬಾದಲ್ಲಿ ಇರುವ ಶೀತಮ್ಮ ಕೋಂ ನಾಗಾಭಟ್ಟ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನಂದರೆ :—

ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಹಿರೆಗದ್ದೆ ಮತ್ತು ಅರಗ ಈ ಎರಡು ಗ್ರಾಮಗಳಲ್ಲಿ ಶೀತಮ್ಮ ಕೋಂ ನಾಗಾಭಟ್ಟ ಎಂತ ನನ್ನ ಹೆಸರು ಖಾತೆ ಮತ್ತು ಅನುಭವ ಇರತಕ್ಕ ಮತ್ತು ಅಗ್ರಹಾರದ ಹೋಬಳಿ ಜಂಬೆತಲೂರು ಗ್ರಾಮದ ಮಜರೆ ಕುದುರೆಗೋಡಲ್ಲು ಕೋಲಹಳ್ಳಿ ಸುಬ್ಬರಾಯನ ಖಾತೆ ಪೈಕಿ ನನ್ನ ಹಿಸ್ಸೆ ನನ್ನ ಅನುಭವದಲ್ಲಿರತಕ್ಕ ಪೀಷ್ಕಟ್ಟ ಜಮೀನುಗಳ ಆಧಾರದಮೇಲೆ ಆಗಲಿ, ಅರಗದಪ್ಯಾಟೆಯಲ್ಲಿರುವ ನನ್ನ ಬಾಬತು ಕಾಂಪಾಂಡು ಹಿತ್ತಲು ವಗೈರೇವುಗಳಿಂದ ಕೂಡಿರುವ ಹಂಚಿನಮನೆ ನನ್ನ ಇತರ ಚರ ಆಸ್ತಿಗಳ ಆಧಾರದಮೇಲೆ ಆಗಲಿ ನನ್ನ ಕಡೆಯುವನಾಗಿ ನನ್ನ ಪೋಷಣೆಯಲ್ಲಿರತಕ್ಕ ಅಕ್ರಮ ನಡವಳಿತೆಯಲ್ಲಿ ಬಹು ದಿವಸಗಳಿಂದಲೂ ಇರತಕ್ಕ ಶಾಮಭಟ್ಟ ಬಿನ್ ನಾಗಭಟ್ಟ ಹಂಣಿಗಾರಿ ಈತನು ನನ್ನ ಮರಣಾವಧಿ ನನ್ನ ಒಪ್ಪಿಗೆ ಇಲ್ಲದೆ ಈವರಿಗೂ ಮಾಡಿರುವ ಇನ್ನು ಮುಂದೆ ಮಾಡಬಹುದಾದ ಎಲ್ಲಾವಿಧವಾದ ಸಾಲ ವಗೈರೇವುಗಳು ನಾನು ಈತಗೆ ಯಾವವಿಧವಾದ ಹಕ್ಕನ್ನು ತಹಲ್‌ವರಿಗೂ ನನ್ನ ಆಸ್ತಿ ವಿಷಯದಲ್ಲಿ ಕೊಡದೇ ಇರುವದರಿಂದ ಎಷ್ಟುರವುಟ್ಟಿಗೂ ಸ್ವಲ್ಪವೂ ಲಗಾವ್ ಆಗತಕ್ಕದ್ದಲ್ಲವಾಗಿವೆ. ಈ ಅಕ್ರಮ ನಡವಳಿತೆಯಲ್ಲಿರುವ ಸದರಿ ಶಾಮಭಟ್ಟಗೆ ಯಾರೊಬ್ಬರೂ ನನ್ನ ಈ ಮೇಲೆ ನಮೂದಿಸಿದ ಆಸ್ತಿಗಳ ಆಧಾರದಮೇಲೆ ಸಾಲಾ ವಗೈರೆ ಕೊಡಕೂಡದೆಂದು ಶೀತಮ್ಮ ಕೋಂ ನಾಗಾಭಟ್ಟನಾದ ನಾನು ಈ ಮೂಲಕ ಪ್ರಸಿದ್ಧಪಡಿಸಿರುತ್ತೇನೆ.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವಗೈರೆಗಳು ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	

	ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್ಕಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲ್ಕಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮುರ್ಕಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟ್ 21ನೆ ಮುರ್ಕಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

	ರೂ.	ಆ.
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸ್‌ಗಳು :—		
ಮೊದಲನೇ ದಫಾ ಪ್ರಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ ..	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸ್‌ಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.		
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸ್‌ಗಳಿಗೆ :—		
ಮೊದಲನೇ ಸಲಕ್ಕೆ ಪುಟ 1ಕ್ಕೆ	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,,	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜು ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗಳ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ಸಿರ್ಪಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಕಂಪೈಲರ್, ಮೈಸೂರು ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 18.

ಬೆಂಗಳೂರು, ಗುರುವಾರ, ಮೇ ತಾ|| 6, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರಿಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮಾ, ತಾರೀಖು 15ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ವೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ವೈಸೂರು ಉಡ್ಯಾರ್ಡ್.	19—5-09	ಸಾಗ್ವಾನಿ ನಾಟೂ ...	600	20,000	
			ಡಿಟೋ ಜಂತಿಗಳು ...	300	4,000	
			ಹೊನ್ನೆ ನಾಟೂ ...	100	2,500	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟೂ ...	100	3,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟೂ ...	25	1,000	
			ಕಾಡು ನಾಟೂ ...	25	500	
2	ನಂಜನಗೂಡು ...	20 – 5—09	ಸಾಗುವಾನಿ ನಾಟೂ ...	50	1,500	[illegible]
			ಡಿಟೋ ಜಂತಿಗಳು ...	50	500	
			ಹೊನ್ನೆ ನಾಟೂ ...	100	2,000	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟೂ ...	50	1,000	
			ಡಿಟೋ ಜಂತಿಗಳು ...	10	120	
			ಬೀಟೆ ನಾಟೂ ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟೂ ...	20	500	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ವೈಸೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ತಾಲ್ಲೂಕು ಮಂಜನಾಥ ರಿಜರ್ವನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ನ 1909ನೆ ಇಸವಿ ಏಪ್ರೆಲ್ ತಾರೀಖು 22ನೆ ಕನ್ನಡ ವೈಸೂರು ಗೆಜೆಟ್ 2ನೆ ಭಾಗದ 249—250ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ತಾಲ್ಲೂಕು ಅಚ್ಚಲ್ ರಿಜರ್ವನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ನ 1909ನೆ ಇಸವಿ ಏಪ್ರೆಲ್ ತಾರೀಖು 22ನೆ ಕನ್ನಡ ವೈಸೂರು ಗೆಜೆಟ್ 2ನೆ ಭಾಗದ 251—252ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರ, ಸೊರಬ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿರುವ ವೈಸಾವಿ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ನ 1909ನೆ ಇಸವಿ ಏಪ್ರೆಲ್ 22ನೆ ಕನ್ನಡ ವೈಸೂರು ಗೆಜೆಟ್ 2ನೆ ಭಾಗದ 252-253-254ನೆ ಪುಟಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕು ಮಸ್ಕಲ್ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸ್ನ 1909ನೆ ಇಸವಿ ಏಪ್ರೆಲ್ ತಾರೀಖು 22ನೆ ಕನ್ನಡ ವೈಸೂರು ಗೆಜೆಟ್ 2ನೆ ಭಾಗದ 255—256ನೆ ಪುಟಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್, ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್ ಇನ್ ವೈಸೂರ್ರು.

ಎಕ್ಸೈಜ್ ಇಲಾಖೆ.

1909ರ ಲಾಗಾಯಿತು 1912ನೆ ಸಾಲಿನ ವರಿಗೂ ಅಂದರೆ 3 ವರುಷಗಳಿಗಾಗಿ ಈಚಲು ಶೇಂದಿ ಅಂಗಡಿಗಳಿಗೆ ಸಮ್ಮಂಧಪಟ್ಟ ಬಿಟ್ಟು ಸ್ವಾತಂತ್ರ್ಯದ ಹರಾಜು ನೋಟೀಸು.

ನಂಬರ 9012, ಬೆಂಗಳೂರು, 7ನೆ ಏಪ್ರೆಲ್ 1909.

I. ನಿಯಾಮಕವಾದ ಮತ್ತು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಅಂಗಡಿಗಳಲ್ಲಿ ಶೇಂದಿಯನ್ನು 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1912ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ ಮೂರು ವರುಷಗಳ ಕಾಲಕ್ಕಾಗಿ ಬಿಕರಿ ಮಾಡತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಡೆಪ್ಯೂಟಿ ಕಮಿಷನರವರು ಯಾ ರೆವಿನ್ಯೂ ಅಸಿಸ್ಟೆಂಟ ಕಮಿಷನರವರು ಯಾ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರು ಯಾ ಡೆಪ್ಯೂಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಆಫಿಸರು ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಆ ತಃಖ್ತೆಯಲ್ಲಿ ನಮೂದುಕಂಡ ತಾಲ್ಲೂಕು ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ ಮೂಲಕ ಪ್ರಕಟಿಸಲ್ಪಟ್ಟಿರುತ್ತೆ. ಹರಾಜುಗಳು ನೇಮಿಸಲ್ಪಟ್ಟ ತಾರೀಖುಗಳಲ್ಲಿ ಪೂರೈಸದೆಹೋದಲ್ಲಿ ಮಾರನೇ ದಿವಸಗಳಲ್ಲಿಯೂ (ರಜಾ ದಿವಸಗಳು ಹೊರತಾಗಿ) ಹಾಕಲ್ಪಡುವವು.

ಹರಾಜಿನ ಷರತ್ತುಗಳು.

II. ಪ್ರತಿ ಸವಾಲ್ದಾರನೂ ಹರಾಜಿಗೆ ಪೂರ್ವವೇ ಠೇವಣಾತಿಯನ್ನು ಕಟ್ಟತಕ್ಕದ್ದು ಮತ್ತು ಹರಾಜಿನ ತಾರೀಖಿನ ದಿವಸ ಹರಾಜು ಮಾಡುವ ಆಫಿಸರಿಂದ ಸದರಿ ಠೇವಣಿ ಮೊಬಲಗು ತೆಗದುಕೊಳ್ಳಲ್ಪಡುವದು. ಯಾವ ಮನುಷ್ಯನು ಮುಖ್ಯವಾದ ಅಂಗಡಿ ಯಾ ಅನೇಕ ಅಂಗಡಿಗಳಿಗಾಗಿ ಸವಾಲ್ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅಂಥಾವನು ಸಾಧಾರಣವಾಗಿ 50 ರೂಪಾಯಿ ಠೇವಣಿಯನ್ನಿಡತಕ್ಕದ್ದು. ಸವಾಲು 2 ಯಾ 3 ಅಂಗಡಿಗಳಿಗೆ ಮೀರದೆಯೂ ಮತ್ತು ಅವುಗಳ ಮಾಹೆಯಾನ ಬಿಟ್ಟು ಗುತ್ತಾ ಮೊಬಲಗು 50 ರೂಪಾಯಿ ಅಥವಾ ಅದಕ್ಕೆ ಕಮ್ಮಿಯಾಗಿಯೂ ಇದ್ದಪಕ್ಷದಲ್ಲಿ ಸವಾಲುದಾರನ ಠೇವಣಿಯು 20 ರೂಪಾಯಿಗಳಿಗೆ ತಗ್ಗಿಸಲ್ಪಡುವದು ಮತ್ತು ಒಂದೊಂದು ಚಿಕ್ಕ ಅಂಗಡಿಗೆ ದರಖಾಸ್ತು ಮಾಡುವ ಸವಾಲ್ದಾರರ ಠೇವಣಿಯು 5 ರೂಪಾಯಿಗೆ ತಗ್ಗಿಸಲ್ಪಡುವದು. ಯಾವದಾದರೂ ಅಂಗಡಿಗಳ ಮಾಹೆಯಾನ ಸರಾಸರಿ ಗುತ್ತಾ ಮೊಬಲಗು ಕೇವಲ ಕಮ್ಮಿಯಾಗಿದ್ದಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರು ಸದರಿ ಅಂಗಡಿಗಳ ಬಗ್ಯೆ ತಮ್ಮ ಯುಕ್ತಾನುಸಾರ ಇತರ ನ್ಯಾಯವಾದ ಠೇವಣಿ ಮೊಬಲಗನ್ನು ಗೊತ್ತು ಮಾಡಬಹುದು.

III. (a) ಹರಾಜು ನಡಿಸತಕ್ಕ ಆಫಿಸರರಿಗೆ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಕ್ರಮ ನಂಬರನ್ನು ಬದಲಾಯಿಸಲು ಕಾರಣತೋರುವ ಸಂದರ್ಭದಲ್ಲಿ ಹೊರತು ಆ ಪಟ್ಟಿಯಲ್ಲಿ ಕಂಡ ಕ್ರಮ ನಂಬರಿನಂತೆಯೇ ಅಂಗಡಿಗಳನ್ನು ಹರಾಜು ಮಾಡತಕ್ಕದ್ದು. ಹಿಂದಿನ ಮೂರು ಸಾಲುಗಳ ಸರಾಸರಿ ಗುತ್ತಾ ಮೊಬಲಗೇ ಹರಾಜು ಹಾಕತಕ್ಕ ಅಂಗಡಿ ಯಾ ಅಂಗಡಿಗಳ ಸರ್ಕಾರೀ ಸವಾಲಾಗಿರುತ್ತೆ. ಈ ಸವಾಲು ಮೊಬಲಗು ಕಮ್ಮಿ ಮಾಡತಕ್ಕದ್ದಿಲ್ಲವು; ಮತ್ತು ಅದಕ್ಕೆ ಸಮವಾದ ಯಾ ಹೆಚ್ಚಾದ ಸವಾಲು ಬಾರದೇ ಇದ್ದಪಕ್ಷದಲ್ಲಿ ಅಂಗಡಿ ಯಾ ಅಂಗಡಿಗಳು ಸಾಧಾರಣವಾಗಿ ಒಂದೇ ವರುಷಕ್ಕೆ ಮಾತ್ರ ಮಾರಲ್ಪಡುವವು. ಅಂಥಾ ಸಂದರ್ಭದಲ್ಲಿ ಈ ಅಂಗಡಿಗಳಿಗೆ ಒಂದು ವರುಷಕ್ಕೆ ಮಾತ್ರ ಹರಾಜು ಹಾಕಲ್ಪಡುವ ಶೇಂದಿ ಅಂಗಡಿ ಹಕ್ಕಿಗೆ ಸಲ್ಲತಕ್ಕ ಷರತ್ತುಗಳು ಲಗಾವಾಗುತ್ತೆ.

(b) ಒಂದೊಂದು ಅಂಗಡಿಗೆ ಪ್ರತ್ಯೇಕವಾಗಿ ಹಿಂದಿನ ಮೂರು ವರುಷಗಳ ಸರಾಸರಿ ಗುತ್ತಾ ಮೊಬಲಗಿಗೆ ಸಮವಾದ ಮೊಬಲಗು ಬಾರದೇ ಇದ್ದಾಗ್ಯೂ, ತಾಲ್ಲೂಕು ಒಟ್ಟಿಗೆ ಹಿಂದಿನ ಮೂರು ಸಾಲುಗಳ ಸರಾಸರಿ ಗುತ್ತಾ ಮೊಬಲಗಿಗೆ ಕಮ್ಮಿ ಇಲ್ಲದಂತೆ ಬಂದಪಕ್ಷದಲ್ಲಿ ಡೆಪ್ಯೂಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಮೂರು ವರುಷಗಳ ಹಕ್ಕನ್ನು ಹರಾಜು ಹಾಕಬಹುದು.

(c) ಸವಾಲ್ದಾರರ ತಿಳುವಳಿಕೆ ಬಗ್ಯೆ ಹಿಂದಿನ ಮೂರು ಸಾಲುಗಳ ಗುತ್ತಾ ಮೊಬಲಗೂ, ಬಿಕರಿಯ ಮೊತ್ತವೂ ಮತ್ತು ಗುತ್ತೆ, ಬಿಕರಿ ಇವುಗಳಿಗೆ ಆ ಮೂರು ವರ್ಷಗಳಿಗೆ ಆಗುವ ಸರಾಸರಿಯೂ ಫಾಯಿಷ್ ಮಾಡಲ್ಪಡುತ್ತೆ.

(d) ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಹಕ್ಕು ಒಂದೊಂದು ಅಂಗಡಿಗೆ ವರುಷ 1ಕ್ಕೆ 12 ರೂಪಾಯಿಗೆ ಕಮ್ಮಿ ಇಲ್ಲದಂತೆ ಗೊತ್ತಾದ ಮೊಬಲಗ್ಗೆ ಕಾಫಿ ಪ್ಲಾಂಟರಿಗೆ ಮಾರಲ್ಪಡಬಹುದು.

(e) ಶೇಂದಿ ಹುಟ್ಟುವಳಿಗೆ ಇರತಕ್ಕ ಹಕ್ಕು ಮಂಜೂರಾಗಿರುವ ಅಥವಾ ಇನ್ನೂ ತೀರ್ಮಾನವಾಗಿಲ್ಲದೆ ಇರುವ ಇನಾಂ ಗ್ರಾಮಗಳಲ್ಲಿರತಕ್ಕ ಶೇಂದಿ ಅಂಗಡಿಗಳು ಪ್ರತ್ಯೇಕವಾಗಿಯೇ ಹರಾಜ್ ಮಾಡಲ್ಪಡಬೇಕಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗನ್ನು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

IV. ಸಾಧಾರಣವಾಗಿ ಪ್ರತಿಯೊಂದು ಅಂಗಡಿಯೂ ಪ್ರತ್ಯೇಕವಾಗಿ ಹರಾಜು ಮಾಡಲ್ಪಡತಕ್ಕದ್ದು. ನಿರ್ವಾಹವಿಲ್ಲದೇ ಇರುವ ಸಂದರ್ಭದಲ್ಲಿ ಮಾತ್ರವೇ ಅಂಗಡಿಗಳನ್ನು ಗುಂಪಾಗಿ ಸೇರಿಸಬಹುದು. ಆದರೆ ಹಾಗೆ ಗುಂಪಾಗಿ ಸೇರಿಸುವಾಗಲೂ ಆಗಿನ ಸಂದರ್ಭಕ್ಕೆ ಎಷ್ಟು ಅಂಗಡಿಗಳನ್ನು ಸೇರಿಸುವದು ಅವಶ್ಯಕವಾಗಿದೆಯೋ ಅಷ್ಟನ್ನು ಮಾತ್ರವೇ ಗುಂಪು ಸೇರಿಸತಕ್ಕದ್ದು.

V. ಮೊಖ್ತ್ಯಾರ್‌ನಾಮೆಯನ್ನು ಪಡೆದ ಹೊರ್ತು ಯಾರೊಬ್ಬನೂ ಇತರರಿಗೋಸ್ಕರ ಸವಾಲು ಮಾಡಕೂಡದು.

VI. ಯಾವ ಅಂಗಡಿಯೂ ಇಬ್ಬರು ಆಸಾಮಿಗಳ ಯಾ ಇಬ್ಬರಿಗಿಂತ ಹೆಚ್ಚಾದ ಆಸಾಮಿಗಳ ಹೆಸರಿನಲ್ಲಿ (ಸದರಿಯವರು ಮೊಖ್ತ್ಯಾರ್‌ನಾಮೆಯ ಮೂಲಕ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪೆನಿ ಯಾ ಫರ್ಮಿನವರೆಂದು ತೋರಿಸಿದಹೊರ್ತು) ಛಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ನಡಿಸತಕ್ಕ ಆಫಿಸರರು ಯಾರ ಹೆಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

VII. ಯಾವನಾದರೊಬ್ಬ ಮನುಷ್ಯನ ಸವಾಲು ಕೇವಲ ಕಮ್ಮಿಯಾಗಿದೆ ಎಂಬ ಕಾರಣದಮೇಲೂ, ಅಥವಾ ಕ್ರಿಮಿನಲ್ ಕೋರ್ಟಿನಲ್ಲಿ ದರಿಯಾಫ್ತಯಾಗಿ ಆತನ ಮೇಲೆ ತಪ್ಪು ಸಾಬೀತು ಆಗಿರುವದ್ದರಿಂದಲೂ, ಅಥವಾ ಒಂದು ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗೆ ಅನುಸಾರವಾಗಿ ನಡಿಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಆತನು ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರಿ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ನಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜ್ ನಡಿಸತಕ್ಕ ಆಫಿಸರು ಅವರಿಗೆ ಯುಕ್ತತೋರಿದಲ್ಲಿ ಅಂಥಾ ಮನುಷ್ಯನ ಸವಾಲನ್ನು ತಿರಸ್ಕರಿಸಬಹುದು. ಸದರೀ ಸ್ವಾತಂತ್ರ್ಯದ ಹಕ್ಕನ್ನು ಇತರರಿಗೆ ಬಿಕರಿಮಾಡಿ ಫಾಯಿದೆ ಪಡೆಯಬೇಕೆಂಬ ಉದ್ದೇಶದಿಂದ ಮಾತ್ರವೇ ಮಾಡಲ್ಪಟ್ಟಿತೆಂದು ತೋರುವ ಸವಾಲನ್ನು ಹರಾಜು ಆಫಿಸರು ಅದಕ್ಕೆ ಕಾರಣವನ್ನು ಬರಹಮೂಲಕವಾಗಿ ರಿಕಾರ್ಡುಮಾಡಿ, ತಿರಸ್ಕರಿಸಬಹುದು.

VIII. ಸದರಿ ಅಂಗಡಿಗಳು ಛಡಸವಾಲುದಾರನಿಗೆ ಕೊಡಲ್ಪಡುವವು; ಆದರೆ ಹರಾಜು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಡೆಪ್ಯುಟಿ ಕಮಿಷನರವರು ಸದರಿ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರವಾಗಿರುತ್ತಾರೆ. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಯಾದರೆ ಆ ಮಂಜೂರಾತಿಯು ಗವರ್ನ್ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಟ್ಟಾಗ ಹೊರ್ತು ದರಖಾಸ್ತು ಅಂಗೀಕಾರವಾದಂತೆ ಭಾವಿಸಲ್ಪಡತಕ್ಕದ್ದು. ಡೆಪ್ಯುಟಿ ಕಮಿಷನರವರು ಖುದ್ದಾಗಿಯಾಗಲೀ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರರೇ ಆಗಲೀ ಹರಾಜು ನಡಿಸಿದ್ದರೂ ಅಂಥಾ ಕ್ರಮವಾದ ಮಂಜೂರಾತಿಯು ಅವಶ್ಯಕವಾಗಿರುವದು.

IX. ಹರಾಜು ಕಾಲದಲ್ಲಿ ತಕರಾರು ಬಂದ ಪಕ್ಷದಲ್ಲಿ ಹರಾಜು ನಡಿಸತಕ್ಕ ಆಫಿಸರರ ತೀರ್ಮಾನವು ಆಖೈರು ತೀರ್ಮಾನವಾಗಿರತಕ್ಕದ್ದು. ಮತ್ತು ಯಾವಕಾರಣದಿಂದಲಾದರೂ ಛಡ ಸವಾಲನ್ನು ತಿರಸ್ಕರಿಸಿದ ಪಕ್ಷದಲ್ಲಿ ತದನಂತರದ ಛಡಸವಾಲ್ ಅಂಗೀಕರಿಸಲ್ಪಡುವದು, ಅಥವಾ ಅಂಗಡಿಯು ಅವರ ಯುಕ್ತಾನುಸಾರ ದುಸರೆ ಹರಾಜು ಹಾಕಲ್ಪಡುವದು.

X. ಹರಾಜು ಮುಗಿದಮೇಲೆ ದರಖಾಸ್ತು ಸಾಮಾನ್ಯವಾಗಿ ಅಂಗೀಕರಿಸಲ್ಪಡುವದಿಲ್ಲ. ಮೊದಲಿನ ಹರಾಜಿನಲ್ಲಿ ವಿಕ್ರಯವಾಗದ ಅಂಗಡಿಗಳು ಸಾಧಾರಣವಾಗಿ ಆತರುವಾಯ ದುಸರೆ ಹರಾಜಿನಲ್ಲಿ ವಿಲೇವಾರಿ ಮಾಡಲ್ಪಡುವವು. ಆದರೆ ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ತಮ್ಮ ಸೂಕ್ತಾನುಸಾರ ನಡಿಸಲು ಸ್ವತಂತ್ರರಾಗಿರುತ್ತಾರೆ.

XI. ಪ್ರತಿದಿನ ಹರಾಜು ಪೂರೈಸಿದ ಕೂಡ್ಲೆ ನಾ ಮಂಜೂರಾದ ಸವಾಲುದಾರರ ಠೇವಣಿ ಮೊಬಲಗುಗಳು ಅವರುಗಳಿಗೆ ವಾಪಸು ಮಾಡಲ್ಪಡುವವು. ಹರಾಜು ನಡಿಯುತ್ತಿರುವಾಗ, ಯಾರ ಸವಾಲು ಅಂಗೀಕರಿಸಲ್ಪಡುತ್ತೋ ಅಂಥವನು ಹರಾಜು ನಡಿಸತಕ್ಕ ಆಫಿಸರರು ಕೇಳಿದಲ್ಲಿ ತತ್‌ಕ್ಷಣವೇ ಅಥವಾ ಆ ದಿನದ ಹರಾಜು ಖೈದಾದನಂತರ (IIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಅಲ್ಲದೆ) ಎರಡು ತಿಂಗಳ ಗುತ್ತಿಗೆ ಹಣವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು 6 ತಿಂಗಳ ಗುತ್ತಿಗೆಹಣಕ್ಕೆ ಸಮ ಯಾ ಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲ್ಕಂಡ IIನೆ ಷರತ್ತಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರಿ ಅಂಗಡಿಗಳು ಪುನಃ ತತ್‌ಕ್ಷಣವೇ ಹರಾಜು ಆಫಿಸರವರಿಂದ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜ್ ಮಾಡಲ್ಪಡುವದು ಅಥವಾ ಡೆಪ್ಯುಟಿ ಕಮಿಷನರವರಿಂದ ಅನ್ಯಥ ವಿಲೇವಾರಿ ಮಾಡಲ್ಪಡುವದು ; ಅಲ್ಲದೆ ತಪ್ಪಿತಸ್ಥನು ಈ ಅಂಗಡಿ ಯಾ ಇತರ ಅಂಗಡಿಗಳ ಬಗ್ಯೆ ಪುನಃ ಸವಾಲು ಮಾಡಲು ನಿಷೇಧಿಸಲ್ಪಟ್ಟಿರುತ್ತಾನೆ.

XII. ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಯಾರು ಮೇಲಿನ II ವ XIನೆ ಷರತ್ತುಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನು ಕಟ್ಟಿರುತ್ತಾರೋ ಅವರು, ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರುಗಳಲ್ಲಿ ಕೊಟ್ಟುಹೋಗತಕ್ಕದ್ದು. ಮತ್ತು ಅವರು 6 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವಹಾಗೆ ಎಷ್ಟು ಮೊಬಲಗನ್ನು ಮೊದಲು ಕಟ್ಟಿರುವ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು * ಠೇವಣಿಯಾಗಿ ಇಡತಕ್ಕದ್ದು. ಡೆಪ್ಯುಟಿ ಕಮಿಷನರವರ ಮಂಜೂರಾತಿಯು ನೋಟೀಸು ಮೂಲಕ ಅವರಿಗೆ ಅಥವಾ ಸದರಿ ವಿಳಾಸದ ಸ್ಥಳದಲ್ಲಿ ಅವರ ಮನೆಗಳಲ್ಲಿರತಕ್ಕ ಇತರ ವಯಸ್ಸಾದ ಗಂಡಸಿಗೆ ಪಾವತಿಯಾಗೇ ಆಗಲೀ ಅಥವಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲೀ ಜಾರಿಯಾದ ಏಳು ದಿವಸಗಳೊಳಗಾಗಿ ತಾಲ್ಲೂಕು

* ಠೇವಣಿಗಳು ನಗದಾಗಿಯೇ ಆಗಲಿ ಅಥವಾ ಅಂಗೀಕರಿಸಲ್ಪಟ್ಟ ಇತರ ಸೆಕ್ಯೂರಟಿ ರೂಪದಲ್ಲಿಯಾಗಲಿ ಇರಬಹುದು.

ಖಜಾನೆಗೆ ಅಂಥಾ ಠೇವಣಾತಿಗಳನ್ನು ಪಾವತಿ ಮಾಡತಕ್ಕದ್ದು. ಅನಂತರ ಅವರು ಅನಾವಶ್ಯಕವಾಗಿ ಸಾವಕಾಶಮಾಡದೆ ಅಗತ್ಯವಾದ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಲೈಸೆನ್ಸುಗಳನ್ನು ತೆಗೆದುಕೊಳ್ಳತಕ್ಕದ್ದು. ಒಡಂಬಡಿಕೆಗಳನ್ನು ರುಜುಮಾಡಿದ ಮೇಲೆ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸದಾರರು ಯಾ ಅವನಿಂದ ಹಕ್ಕು ಪಡೆದವರು ಅದಕ್ಕೆ ಜವಾಬ್‌ದಾರರಾಗಿರತಕ್ಕದ್ದು. ಪ್ರಾರಂಭದಲ್ಲಿಟ್ಟಿರತಕ್ಕ ಠೇವಣಿ ಮೊಬಲಗು ಈ ಷರತ್ತಿನಮೇರಿಗೆ ಠೇವಣಿ ಇಡಬೇಕಾಗುವ ಮೊಬಲಗಿಗಿಂತಲು ಹೆಚ್ಚಾಗಿ ಇದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಈ ಕೆಳಗೆ ಬರುವ XIIIನೆ ಷರತ್ತಿನ ಪ್ರಕಾರ 2 ರಷ್ಟು ಹೆಚ್ಚಾಗಿ ಠೇವಣಿಯನ್ನು ಕಟ್ಟಬೇಕಾಗಿರುವ ಸಂದರ್ಭದಲ್ಲಿ ವಿನಾ ಖರೀದಿದಾರನಿಗೆ ವಾಪಸು ಕೊಡಲ್ಪಡುವದು.

XIII. ಹರಾಜಿನನಂತರ ವಿಚಾರಿಸಿದ್ದರಲ್ಲಿ ಖರೀದಿದಾರ್ ಜೇವಾಳಸ್ಥನೆಂಬುವದು ಅನುಮಾನಕ್ಕೆ ಗುರಿಯಾಗಿಯೂ ಅಥವಾ ಅವನು ಮೈಸೂರು ಸೀಮೆಯಲ್ಲಿ ಸಾಕಾದಷ್ಟು ಜೆಂದಿಗೆಯನ್ನು ಉಂಟಾಗದೆ ಇರುವ ಅನ್ಯದೇಶದವನಾಗಿಯೂ ಕಂಡುಬಂದಲ್ಲಿ ಮೇಲಿನ XIIನೆ ಷರತ್ತಿನಲ್ಲಿ ನಮೂದಿಸಿರುವದಕ್ಕೆ 2 ರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನು ಅನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನೂ ಕ್ರಮವಾಗಿ ಪಾವತಿ ಮಾಡಲುಳ್ಳವನೆಂದು ಜಾಮೀನುಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಗಳುಳ್ಳವನಾಗಿರುವ ಒಬ್ಬ ಜಾಮೀನುದಾರನನ್ನು ಯಾ ಜಾಮೀನುದಾರರನ್ನು ಹಾಜರುಮಾಡುವದಕ್ಕಾಗಿ ಆತನನ್ನು ಕೇಳಬಹುದು. ಜಾಮೀನು ತಮಸೂಕಿಗೆ 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟಾಂಪು ರೆಗ್ಯುಲೇಷನ್ 1ನೆ ಷೆಡ್ಯೂಲ್ 32ನೆ ಆರ್ಟಿಕಲ್ ಪ್ರಕಾರ ಸ್ಟಾಂಪು ಹಾಕಲ್ಪಡಬೇಕು. ಜಾಮೀನು ಮೊಬಲಗು 1,000 ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಖರೀದಿದಾರನ ಖರ್ಚಿನಿಂದಲೇ ಅದು ರಿಜಿಸ್ಟರ್ ಮಾಡಿಸಲ್ಪಡಬೇಕು.

XIV. ಹರಾಜು ಪೂರೈಸಿದಕೂಡ್ಲೆ ಹರಾಜು ನಡಸತಕ್ಕ ಆಫೀಸರರು ಸಂಬಂಧಪಟ್ಟ ತಾಲ್ಲೂಕು ಅಮಲ್‌ದಾರರಿಗೆ ಹರಾಜಿನಲ್ಲಿ ಪಡೆದ ಸವಾಲುದಾರರ ಹೆಸರಿನ ಒಂದು ಪಟ್ಟಿಯನ್ನ ಕಳುಹಿಸತಕ್ಕದ್ದು. ಅಮಲ್ದಾರರು ಪ್ರತಿ ಖರೀದಿದಾರನೂ ಜೇವಾಳಸ್ಥನೆಂಬುವದನ್ನು ವಿಚಾರಿಸಿ ಆತನಿಂದ ಪಾವತಿಯಾಗಬೇಕಾದ ಠೇವಣೀ ಮೊಬಲಗು ಅಥವಾ ಜಾಮೀನನ್ನು ದಾಖಲ್ಮಾಡತಕ್ಕದ್ದು. ಅವರು ತಯಾರು ಮಾಡಿದ ಸದರಿ ಪಟ್ಟಿಯನ್ನು ಅವರಿಗೆ ಅದು ತಲ್ಪಿದ 5 ದಿವಸಗಳೊಳಗಾಗಿ ಹರಾಜು ನಡಿಸತಕ್ಕ ಆಫೀಸರರಿಗೆ ರವಾನಿಸತಕ್ಕದ್ದು. ಇವರು ತಾಮಸ ಮಾಡದೆ ಸದರಿ ಪಟ್ಟಿಯಲ್ಲಿ ತಮ್ಮ ಷರಾನಿಸಿ ಅದನ್ನು ಮಂಜೂರಾತಿಬಗ್ಯೆ ಡೆಪ್ಯುಟಿ ಕಮಿಷನರವರಿಗೆ ರವಾನಿಸತಕ್ಕದ್ದು.

XV. ಮೇಲ್ಕಂಡ XIIನೆ ಷರತ್ತಿನ ಪ್ರಕಾರ ಠೇವಣಿ ಇಡುವದಕ್ಕೆ ಯಾ ಮೇಲ್ಕಂಡ XIIIನೆ ಷರತ್ತಿನ ಪ್ರಕಾರ ನಡದುಕೊಳ್ಳಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರದುಕೊಡಲಿಕ್ಕೆ ಯಾ ಮೇಲ್ಕಂಡಂತೆ ಲೈಸೆನ್ಸ್ ಪಡೆಯಲಿಕ್ಕೆ ಯಾವನಾದರೂ ತಪ್ಪಿದರೆ, ಅವನು ಮೊದಲು ಪಾವತಿ ಮಾಡಿರುವ ಠೇವಣಾತಿಗಳು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು, ಡೆಪ್ಯುಟಿ ಕಮಿಷನರವರಿಗೆ ಯುಕ್ತತೋರುವಂತೆ ಅಂಗಡಿಯು ಪುನಃ ಹರಾಜು ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು.

XVI. ಮೇಲ್ಕಂಡ XVನೆ ಷರತ್ತನ್ನು ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿಯಮೇಲೆ ನಡಿಯುತವೆ. ಈ ದುಸರೆ ಹರಾಜಿನಿಂದ ಬರುವ ಆದಾಯವನ್ನೆಲ್ಲಾ ಆತನು ಕಳದುಕೊಂಡವನಾಗುತ್ತಾನೆ ಮತ್ತು ನಷ್ಟಸಂಭವಿಸುವ ಪಕ್ಷಕ್ಕೆ ಷುರೂ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೆ ಹರಾಜುದಾರರಲ್ಲಿ ಛಡಸವಾಲುದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದನ್ನು ಆತನು ಭರ್ತಿಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೆ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನು ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರಿ ಠೇವಣಿ ಮೊಬಲಗು ದುಸರೆ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿ ಇದ್ದರೆ, ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ಜಮಾ ಮಾಡಿಕೊಳ್ಳತಕದ್ದು ಸ್ವಾತಂತ್ರ್ಯದ ಹಕ್ಕು ದುಸರಾ ಹರಾಜಿನಿಂದಲ್ಲದೆ ಅನ್ಯಥಾ ವಿಲೇವಾರಿಯಾಗಿ ಅಂಥಾ ವಿಲೇವಾರಿಯನ್ನು ಷುರೂ ಹರಾಜಿಗೆ ಹೋಲಿಸಿ ನೋಡಿದ್ದರಲ್ಲಿ ಸರ್ಕಾರಕ್ಕೆ ನಷ್ಟವಾದರೆ ತಪ್ಪಿತಸ್ಥನು ಈ ನಷ್ಟಕ್ಕೆ ಗುರಿಯಾಗಿರತಕ್ಕದ್ದು.

XVII. ಸ್ವತಂತ್ರದಹಕ್ಕನ್ನು ಕೊಂಡುಕೊಂಡವನು ಕ್ರಮವಾದ ಲೈಸೆನ್ಸು ಕೊಡಲ್ಪಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡದರೆ ಆ ಬಗ್ಯೆ ವಿಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರತಕ್ಕದ್ದು.

XVIII. XII ಅಥವಾ XIIIನೆ ಷರತ್ತಿನಲ್ಲಿ ನಮೂದಿಸಿರುವ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತೆ. ಅಮಲ್ದಾರರು ಮತ್ತು ಲೈಸೆನ್ಸುದಾರನು ಹಾಗೆ ಒಪ್ಪಿದರೆ ಲೈಸೆನ್ಸ್‌ದಾರನು ಕೊಡತಕ್ಕ ಆಖೈರು ಖಿಸ್ತು ಮೊಬಲಗಿಗೋಸ್ಕರ ಸದರಿ ಠೇವಣಿ ಮೊಬಲಗು ಜಮಾ ಮಾಡಿಕೊಳ್ಳಲ್ಪಡತಕ್ಕದ್ದು.

XIX. ಮೇಲೆ ನಮೂದಿಸಿರುವಂತೆ ಕೊಡಲ್ಪಡುವ ಲೈಸೆನ್ಸುಗಳಲ್ಲಿ ಎಲ್ಲಾ ಆಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಮುಂದೆ ನಮೂದುಮಾಡಿರುವ ಸಾಧಾರಣ ಷರತ್ತುಗಳನ್ನೂ, ಮತ್ತು ಶೇಂದಿ ಲೈಸೆನ್ಸುಗಳಿಗೆ ಈ ಕೆಳಗೆ ಗೊತ್ತುಮಾಡಿರುವ ವಿಶೇಷ ಷರತ್ತುಗಳನ್ನೂ ವಿವರಿಸಿರುತೆ :—

ಅಬ್ಕಾರಿ ಮತ್ತು ಅಫೀಂ ಲೈಸೆನ್ಸುಗಳಿಗೆ ಲಗಾವಾಗುವ ಸಾಧಾರಣ ಷರತ್ತುಗಳು.

1. ಸಾರಾಯಿ ಯಾ ಇತರ ಸ್ವದೇಶ ಷರಾಬನ್ನು ತಯಾರ್‍ಮಾಡುವವರೂ, ಷರಾಬ್ ಬಾಂಡೆಡ್ ಕೋಠಿ ಲೈಸೆನ್ಸದಾರರೂ, ಸಾರಾಯಿಯು ಚಿಲ್ಲರೆ ಮಾರಾಟದಲ್ಲಿಯೂ ಇತರ ಮದತ್ ಪದಾರ್ಥಗಳ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು. ಈ ನಿರ್ಬಂಧವು ವಿಶೇಷ ಷರಾಬು ಮತ್ತು ರೆಕ್ಟಿಫೈಡ್ ಸಾರಾಯಿಯನ್ನು ತಯಾರ್ಮಾಡಿ ಲೈಸೆನ್ಸದಾರ್ರಿಗೆ ಒಟ್ಟೊಟ್ಟಾಗಿ ಸರಬರಾಯಿ ಮಾಡತಕ್ಕವರಿಗೆ ಅನ್ವಯಿಸುವದಿಲ್ಲ.

2. ಅಬ್ಕಾರಿ ಯಾ ಅಫೀಂ ಲೈಸೆನ್ಸುಗಳ ಷರತ್ತಿನವೇರೆಗೆ, ಷರಾಬುವಗೈರೆ ಮದ್ಯಗಳನ್ನೂ, ಅಫೀಮನ್ನೂ ಮಾರತಕ್ಕ ಸರಹದ್ದುಗಳು ಲೈಸೆನ್ಸು ಕೊಡತಕ್ಕ ಕಾಲದಲ್ಲಿ ಡೆಪ್ಯುಟಿ ಕಮಿಷನರವರಿಂದ ಗೊತ್ತುಮಾಡಲ್ಪಡುತ್ತೆ. ಲೈಸೆನ್ಸದಾರ್ರಲ್ಲದವರಿಗೆ ಲಗಾವಾಗುವ ನಿಬಂಧನೆಗಳಿಗನುಸಾರವಾಗಿ ಹೊರತು, ಷರಾಬು, ಮದತ್ ಪದಾರ್ಥಗಳು ಯಾ ಅಫೀಮನ್ನು ಡೆಪ್ಯುಟಿ ಕಮಿಷನರವರ ವಿಶೇಷ ಅಪ್ಪಣೆ ಶಿವಾಯಿ, ಸದರಿ ಸರಹದ್ದುಗಳ ಹೊರಗಡೆ ಮಾರೋಣವೂ, ಯಾ ಇಟ್ಟುಕೊಂಡಿರೋಣವೂ ಅಡ್ಡಿಮಾಡಲ್ಪಟ್ಟಿದೆ.

3. ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ನಡೆಸಲ್ಪಡತಕ್ಕದ್ದು. ಸದರಿ ಕಟ್ಟಡದ ಪೂರಾ ಅಥವಾ ಒಂದು ಭಾಗವು ಡಿಪೋ ಅಥವಾ ಅಂಗಡಿಯ ಉಪಯೋಗಕ್ಕೋಸ್ಕರವೇ ಪ್ರತ್ಯೇಕವಾಗಿ ಬಿಡಲ್ಪಟ್ಟಿರಬೇಕು. ಡಿಪೋ ಅಥವಾ ಅಂಗಡಿಗೂ ಮತ್ತು ಪಕ್ಕದಲ್ಲಿರುವ ವಾಸದಮನೆಗೂ ಬಾಗಲು ಇದ್ದಲ್ಲಿ ರಾತ್ರಿಕಾಲದಲ್ಲಿ ಬೀಗ ಹಾಕಿರತಕ್ಕದ್ದು. 5,000 ಅಥವಾ ಹೆಚ್ಚಾಗಿ ಪ್ರಜಾಸಂಖ್ಯೆಯುಳ್ಳ ಮ್ಯುನಿಸಿಪಾಲಿಟಿಗಳು ಅಥವಾ ಪಟ್ಟಣಗಳಲ್ಲಿರುವ ಷರಾಬು ಅಂಗಡಿಗಳಿಗೆ ರಸ್ತೆಯಿಂದ ಹೊರ್ತಾಗಿ ಇನ್ನಾವ ಕಡೆಯಿಂದಲೂ ಬಾಗಲುಗಳು ಇರಕೂಡದು. ಹಿಂಭಾಗಗಳಲ್ಲಿಯಾದರೂ, ಪಕ್ಕಗಳಲ್ಲಿಯಾದರೂ, ಕಿಟಕಿಯಾಗಲಿ, ಗಂಡಿಯಾಗಲಿ ಇರಕೂಡದು. ಇನ್ನಾವಕಡೆಗೂ ಹೋಗಲೂ ಬರಲೂ ಪ್ರವೇಶಗಳಿರಕೂಡದು. ಬಿಕರಿ ಮಾಡುವ ಜಗಲಿಯು ಬಾಗಿಲಿಗೆ ಎದುರಾಗಿ ಇರತಕ್ಕದ್ದಲ್ಲದೆ, ಅಂಗಡಿಯು ಒಳಗಡೆಯಿರುವ ಎಲ್ಲಾ ಜನಗಳು ಬೀದಿಯಲ್ಲಿ ತಿರುಗಾಡುವ ಜನಗಳಿಗೆ ಕಾಣುವಹಾಗಿರಬೇಕು. ಶಿವಾಯಿ, ಬೇರೇಕೊಠಡಿಯು ಬಿಕರಿಗಾಗಿ ಉಪಯೋಗಿಸಲ್ಪಡಕೂಡದು, ಅಥವಾ ಪಾನಮಾಡುವವರಿಗೆ ತೆಗದಿರಕೂಡದು. ಅಂಗಡಿಯ ಒಳಭಾಗದಲ್ಲಿ ಹಗಲಿನಲ್ಲಿ ಚೆನ್ನಾಗಿ ಬೆಳಕಿರಬೇಕು. ಬಿಕರಿದಾರ ಮತ್ತು ಅವನ ಮನೇ ಜನರು ಅಥವಾ ಕಾವಲುಗಾರರು ಇವರುಗಳು ಶಿವಾಯಿ ಮತ್ಯಾರಾದರೂ ಅದರಲ್ಲಿ ವಾಸವಾಗಿರಕೂಡದು.

4. ಎರಡು ಅಥವಾ ಹೆಚ್ಚು ಪರಾಯಿದೇಶದ ಮದ್ಯಗಳನ್ನು ಮಾರುವ ಲೈಸೆನ್ಸುಗಳು ಒಬ್ಬನಿಂದಲೇ ಪಡೆದಿರತಕ್ಕ ಸಂದರ್ಭ ಶಿವಾಯಿ ಪ್ರತಿ ಒಂದು ಲೈಸೆನ್ಸಿನ ಬಿಕರಿಯು ಪ್ರತ್ಯೇಕ ಕಟ್ಟಡಗಳಲ್ಲಿ ನಡೆಸಲ್ಪಡತಕ್ಕದ್ದು. (ರಸಾಯನಶಾಸ್ತ್ರಜ್ಞರು, ಮತ್ತು ಇಂಗ್ಲೀಷ್ ಔಷಧವನ್ನು ಮಾರುವವರು ಮತ್ತು ಮೆಡಿಕಲ್ ಪ್ರಾಕ್ಟಿಷನರು ಶಿವಾಯಿ) ಲೈಸೆನ್ಸ ಕಟ್ಟಡಗಳಲ್ಲಿ ಲೈಸೆನ್ಸಿಗೆ ಸಂಬಂಧಪಟ್ಟದ್ದು ಶಿವಾಯಿ ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನಾಗಲಿ, ಯಾ ಷರಾಬಿಗೆ ಬಣ್ಣ ಕೊಡಲು ಅಥವಾ ರುಚಿ ಹೆಚ್ಚುಮಾಡಲು ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ಯಾವ ಸಾರ ಅಥವಾ ವಸ್ತುವನ್ನಾಗಲಿ ಇಟ್ಟುಕೊಂಡಿರುವದು ಅಡ್ಡಿ ಮಾಡಲ್ಪಟ್ಟಿದೆ. ಅಫೀಂ ಬಿಕರಿಗಾಗಿ ಲೈಸೆನ್ಸಕೊಟ್ಟಿರುವ ಅಂಗಡಿಗಳಲ್ಲಿ ಮಾರ್ಫಿಯ ಅಥವಾ ಹೊಗೇಸೇದಲು ಉಪಯೋಗಿಸಲ್ಪಡುವ ಪದಾರ್ಥಗಳು ಹೊರ್ತು ಅಫೀಂನಿಂದ ಮಾಡಲ್ಪಟ್ಟ ಮದತ್ ಪದಾರ್ಥಗಳು ತಯಾರ್ಮಾಡಲ್ಪಡಬಹುದು. ಯಾ ಮಾರಲ್ಪಡಬಹುದು.

5. ಬಿಕರಿಮಾಡಲ್ಪಡುವ ಲೈಸೆನ್ಸಿನ ತರಹೆ ಮತ್ತು ನಂಬರು, ಲೈಸೆನ್ಸದಾರನ ಹೆಸರು ಮತ್ತು (ಪರಾಯಿದೇಶದ ಮದ್ಯ ಅಥವಾ ವಿಶೇಷ ಮದ್ಯಗಳಿಗೆ ಶಿವಾಯಿ) ಬಿಕರಿಯ ದರ ಇವುಗಳನ್ನು ನಮೂದು ಮಾಡಿರುವ ಹಲಿಗೆಯು ಪ್ರತಿ ಡಿಪೋ ಅಥವಾ ಅಂಗಡಿಯ ಮುಂಭಾಗದಲ್ಲಿ ತಗಲಿಹಾಕಲ್ಪಟ್ಟಿರಬೇಕು. ಈ ವಿವರಗಳು ಸ್ವದೇಶಭಾಷೆಯಲ್ಲಿ ಸ್ಫುಟವಾಗಿ ಬರೆಯಲ್ಪಟ್ಟಿರಬೇಕು. ಲೈಸೆನ್ಸು ಅಂಗಡಿಯ ಒಳಗಡೆ ಎಲ್ಲರಿಗೂ ಕಾಣುವಕಡೆ ತಗಲಿಹಾಕಲ್ಪಟ್ಟಿರಬೇಕು.

6. ಮಾರಲ್ಪಡುವ ಯಾ ಮಾರಲಿಕ್ಕೆ ಇಟ್ಟುಕೊಂಡಿರುವ ಎಲ್ಲಾ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಒಳ್ಳೇದಾಗಿರಬೇಕು ಮತ್ತು ಕಲಬೆರಿಕೆಯಿಲ್ಲದೆ ಇರಬೇಕು. ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಮದತ್ ಪದಾರ್ಥಗಳನ್ನು ತಯಾರ್ಮಾಡುವದು ಶಿವಾಯಿ ಅವುಗಳ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವದಕ್ಕಾಗಲಿ ಅಥವಾ ಇನ್ನಾವ ಕಾರಣಗಳಿಗಾಗಲಿ, ಅವುಗಳಿಗೆ ಏನೂ ಸೇರಿಸಕೂಡದು. ಕೋಠಿಗಳನ್ನೂ, ಅಂಗಡಿಗಳನ್ನೂ ತನಿಖೆ ಮಾಡುವದಕ್ಕೆ ಅಧಿಕಾರವುಳ್ಳ ಆಫಿಸರುಗಳು (25ನೆ ಷರತ್ತನ್ನು ನೋಡಿ) ಪಾನಮಾಡುವದಕ್ಕೂ, ಅಥವಾ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಅಥವಾ ಕೆಡಿಸಿದ ಷರಾಬು, ಮದತ್ ಪದಾರ್ಥ ಅಥವಾ ಅಫೀಮನ್ನು ಖರ್ಚುಮಾಡಕೂಡದೆಂದು ಅಪ್ಪಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಕ್ಸೈಜ್ ಕಮಿಷನರವರೂ, ಡೆಪ್ಯುಟಿ ಕಮಿಷನರವರೂ ಮತ್ತು ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರವರೂ ಈರೀತಿಯಲ್ಲಿ ಪಾನಮಾಡಲಿಕ್ಕಾಗಲಿ, ಉಪಯೋಗಿಸಲಿಕ್ಕಾಗಲಿ ನಾಲಾಯಖಾಗಿರುವದನ್ನು ನಾಶಪಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

7. 16 ವರುಷಕ್ಕೆ ಕಮ್ಮಿ ವಯಸ್ಸುಳ್ಳವರಿಂದಲೇ ಆಗಲಿ ಅಥವಾ ಕುಷ್ಠರೋಗದಿಂದ ಅಥವಾ ಇತರ ಅಂಟುರೋಗದಿಂದ ಪೀಡಿತರಾದ ಜನಗಳಿಂದ ಷರಾಬು, ಮದತ್ ಪದಾರ್ಥಗಳು ಅಥವಾ ಅಫೀಂ ಮಾರಲ್ಪಡಕೂಡದು. ಅಥವಾ ವಯ್ಯಲ್ಪಡಕೂಡದು. ಅಂಗಡಿ ಯಾ ಡಿಪೋಗಳಲ್ಲಿ ಬಿಕರಿ ಬಗ್ಗೆ ಅಂಥಾ ಜನಗಳನ್ನು ನೇಮಿಸೋಣವು ಅಡ್ಡಿಮಾಡಲ್ಪಟ್ಟಿದೆ. ಡಿಪೋಗಳಲ್ಲಿ ಅಥವಾ ಅಂಗಡಿಗಳಲ್ಲಿ ನೇಮಕಮಾಡಲ್ಪಟ್ಟ ಯಾ ನೇಮಕಮಾಡಲ್ಪಡಲು ಉದ್ದೇಶಿಸಲ್ಪಟ್ಟ ಜನಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರವರು ಅವಶ್ಯಕಕಂಡರೆ ತರಿಸಿಕೊಂಡು ಅವರು ಒಪ್ಪದೇ ಇರತಕ್ಕ ಯಾವ ಮನುಷ್ಯನಿಂದಾಗಲಿ ಷರಾಬು, ಮದತ್ ಪದಾರ್ಥಗಳು ಅಫೀಂ ಮಾರೋಣವನ್ನು ಅಡ್ಡಿಮಾಡಬಹುದು.

8. ವಿಶೇಷವಾದ ಅಪ್ಪಣೆಹೊಂದಿದ ಶಿವಾಯಿ ಸೂರ್ರೋದಯಕ್ಕೆ ಮುಂಚೆ ಯಾವ ಡೆಪೋ ಮತ್ತು ಅಂಗಡಿಯು ತೆಗೆಯಲ್ಪಡಕೂಡದು. ಮತ್ತು ರಾತ್ರೆ *9 ಘಂಟೆನಂತರ ತೆಗಿಯಲ್ಪಟ್ಟರೆಕೂಡದು.

9. ಡೆಪೋ ಯಾ ಅಂಗಡಿಗಳಲ್ಲಿ ಯಾವ ವಿಧವಾದ ನಿಷಾ ಬಂದಿರೋಣ, ಯಾ ಗಲಾಟೆ ಯಾ ಜೂಜಾಟ ಇವುಗಳಿಗೆ ಆಸ್ಪದಕೊಡಕೂಡದು. ಡೆಪೋ ಅಥವಾ ಅಂಗಡಿಗಳಲ್ಲಿ ಯಾವ ವಿಧವಾದ ವಿನೋದಗಳು ಅಡ್ಡಿಮಾಡಲ್ಪಟ್ಟಿದೆ.

10. ಲೈಸೆನ್ಸದಾರನು ಚೋರರು, ಕಳ್ಳರು, ಪೋಲಿ ಮನುಷ್ಯರು, ದೊಂಬಿಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು, ಫೌಜಿನಿಂದ ಪರಾರಿಯಾಗಿಬಂದವರೆಂದು ಗೊತ್ತಿದ್ದ ಅಥವಾ ಸಂಶಯಪಟ್ಟದ್ದಂಥವರು ಇಂಥವರಿಗೆ ಡೆಪೋ ಅಥವಾ ಅಂಗಡಿಗಳಲ್ಲಿ ಆಶ್ರಯಕೊಡಕೂಡದು. ಅಂಥ ಜನರು ಅಲ್ಲಿಗೆ ಬಂದರೆ ಸಮೀಪದಲ್ಲಿರುವ ಮ್ಯಾಜಿಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರಿಗೆ ವರ್ತಮಾನಕೊಡತಕ್ಕದ್ದು.

11. ರಾತ್ರಿಕಾಲದಲ್ಲಿ ಯಾವ ಡೆಪೋ ಅಥವಾ ಅಂಗಡಿಯಲ್ಲಾಗಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು.

12. ಯೂರೋಪಿಯನ್ ಅಥವಾ ನೇಟಿವ್ ಸೈನ್ಯದ ರಿಜಮೆಂಟ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ, ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿಯೂ ಆ ಮಾರ್ಗದ ಸಮೀಪದಲ್ಲಿರುವ ಡೆಪೋ ಮತ್ತು ಅಂಗಡಿಗಳನ್ನು ಡೆಪ್ಯುಟಿ ಕಮಿಷನರವರು ಅಪ್ಪಣೆ ಮಾಡಿದಲ್ಲಿ ಮುಚ್ಚಿಬಿಡಬೇಕು. ಮತ ಸಂಬಂಧವಾದ ಗಲಾಟೆ ಅಥವಾ ತೊಂದರೆಕಾಲಗಳಲ್ಲಿ ಹಂಗಾಮಿಯಾಗಿ ಡೆಪ್ಯುಟಿ ಕಮಿಷನರವರು ಅಥವಾ ರೆವಿನ್ಯೂ ಅಸಿಸ್ಟೆಂಟ ಕಮಿಷನರವರು ಯಾವ ಅಂಗಡಿಗಳನ್ನಾದರೂ ಮುಚ್ಚಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. ಸಮೀಪದಲ್ಲಿ ದೊಂಬಿ ಅಥವಾ ತೊಂದರೆ ಇದ್ದಲ್ಲಿ, ಪ್ರತಿ ಡೆಪೋ ಮತ್ತು ಅಂಗಡಿಕಾರನು ತನ್ನ ಡೆಪೋ ಮತ್ತು ಅಂಗಡಿಯನ್ನು ತಾನೇ ಮುಚ್ಚಬಹುದು.

13. ಡೆಪ್ಯುಟಿ ಕಮಿಷನರವರು ಡೆಪೋ ಮತ್ತು ಅಂಗಡಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಇನ್ನೂರು ಗಜಗಳ ಒಳಗಾಗಿ ವರ್ಗಾಯಿಸಬಹುದು. ಅಥವಾ ಅವುಗಳನ್ನು ಮುಚ್ಚಬೇಕೆಂದು ಹುಕುಂ ಮಾಡಬಹುದು. ಎಕ್ಸೈಸ ಕಮಿಷನರವರ ಮಂಜೂರಾತಿ ಶಿವಾಯಿ ಹೊಸ ಅಂಗಡಿಗಳನ್ನು ಇಡಕೂಡದು.

14. ಕ್ರಮವಾಗಿ ಲೈಸೆನ್ಸ ಪಡೆದ ಅಂಗಡಿಗಳು ಸಮೀಪದಲ್ಲಿಲ್ಲದೆ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಷರಾಬು, ಮದತ್ ಪದಾರ್ಥಗಳು ಮತ್ತು ಅಫೀಮನ್ನು ಬಿಕರಿ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮಿಷನರವರಿಗೆ ಉಳಿಸಿಕೊಂಡಿರುತ್ತೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರಿ ಪ್ರದೇಶದವರಿಗೆ ಮಾಮೂಲಾಗಿ ಸರಬರಾಯಿ ಮಾಡುವ ದುಕಾನದಾರರಿಗೆ ಅಥವಾ ಲೈಸೆನ್ಸದಾರನ ಪ್ರತಿನಿಧಿಗಳಿಗೇನೇ ಕೊಡತಕ್ಕದ್ದು. ಸದರಿ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು. ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮಿಷನರವರು ತೀರ್ಮಾನಿಸಬಹುದು.

15. (a) ಡಿವಿಜನ್ ಕಮ್ಯಾಂಡಿಂಗ ಆಫಿಸರವರ (ಸ್ವತಂತ್ರ ಬ್ರಿಗೆಡ ಕಮ್ಯಾಂಡಿಂಗ ಆಫಿಸರವರ) ಅಥವಾ ಕಂಟೋನ್ಮೆಂಟ ಅಥವಾ ಕ್ಯಾಂಪ್ ಕಮ್ಯಾಂಡಿಂಗ ಆಫಿಸರವರ ಅನುಮತಿ ಪಡೆದಿರುವ ಅಂಗಡಿಗಳಲ್ಲಿ ಶಿವಾಯಿ ಮತ್ತು ಲೈಸೆನ್ಸಿನಲ್ಲಿ ನಮೂದಿರುವ ಸ್ಥಳೀಕ ಆಬ್ಕಾರಿ ಇಲಾಖೆಯವರೊಂದಿಗೆ ಮೇಲೆ ಹೇಳಿರುವ ಸದರಿ ಆಫಿಸರುಗಳೂ ಒಪ್ಪಿರುವ ಷರಾಬುಗಳಿಗೆ ಶಿವಾಯಿ,

(1) ನಾವಿಕರೂ, ಶಿಪಾಯಿಗಳೂ ಮತ್ತು ಅವರ ಮನೆ ಜನರು.

(2) ಬ್ಯಾರಾಕಿನಲ್ಲಿ ವಾಸ ಮಾಡುವ ಇತರ ಮನುಷ್ಯರು.

(b) ಕೆಲಸದ ಮೇಲಿರುವ :—

(1) ಮೊಕ್ಕಾಂಗಳೊಡನೆ ಹೋಗುವವನು, ಪೊಲೀಸಿನವನು ಅಥವಾ ಎಕ್ಸೈಜ ನೌಕರನು.

(2) ರೈಲ್ವೆ ಕಂಪನಿಗೆ ಸೇರಿದವನು ಅಥವಾ

(c) ಯಾವ ಸಂದರ್ಭದಲ್ಲಾದರೂ;—

(1) ಪೊಲೀಸ ಮೊಹಸಲೆಯಲ್ಲಿರುವ ಯೂರೋಪಿಯನ್ ತಿರುಕನಿಗೂ

(2) 16 ವರುಷದ ಒಳಗಾಗಿರುವ ಮನುಷ್ಯನಿಗೂ

(3) ಹುಚ್ಚನಿಗೂ

(4) ನಿಷಾ ಆಗಿರುವದೆಂದು ತಿಳಿದಿರುವ ಅಥವಾ ಕಂಡು ಬರುವ ಮನುಷ್ಯನಿಗೂ, ಯಾವ ಷರಾಬು, ಮದತ್ ಪದಾರ್ಥ ಅಥವಾ ಅಫೀಂ ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

16. ಸರಬರಾಯಿ ಮಾಡುವ ಅಥವಾ ಮಾರುವ ಹಕ್ಕುದಾರಿಯು ಎಕ್ಸೈಜ ಕಮಿಷನರವರ ಅಪ್ಪಣೆ ಶಿವಾಯಿ ಮಾರಲ್ಪಡಕೂಡದು. ವರ್ಗ ಮಾಡಲ್ಪಡಕೂಡದು ಮತ್ತು ಪಿಕ್ಕಿ ಇಜಾರೆಗೆ ಕೊಡಲ್ಪಡಕೂಡದು. ಮತ್ತು ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದಲ್ಲಿ ಅವರ ಅನುಮತಿ ಇಲ್ಲದೆ ಯಾವ ಹಕ್ಕಿನ ಆಡಳಿತಕ್ಕಾದರೂ ಯಾವ ಮುತಾಲೀಕನು ನೇಮಕರೂ ರಾಗಕೂಡದು.

---

* ಬೆಂಗಳೂರು ಸಿಟಿಯಲ್ಲಿ ರಾತ್ರೆ $9\frac{1}{2}$ ಘಂಟೆ.

* ಸಾರಾಯಿ ಬಾಂಡೆಡ ಡೆಪೋಗಳಲ್ಲಿ ರಾತ್ರೆ 8 ಘಂಟೆ.

17. ಯಾವ ಅಬ್ಕಾರಿ ಅಥವಾ ಅಫೀಂ ಲೈಸೆನ್ಸ್‌ದಾರನು ಎಕ್ಸೈಜ್ ಕಮಿಷನರವರ ಬರಹಮೂಲಕವಾದ ಅಪ್ಪಣೆ ಶಿವಾಯಿ ಮೈಸೂರು ಶೀಮೆಯ ಹೊರಗಡೆ ಅಥವಾ ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನ ಯಾವ ಅಬ್ಕಾರಿ ಮತ್ತು ಅಫೀಂ ಲೈಸೆನ್ಸಿನಲ್ಲಿ ಯಾವ ವಿಧವಾದ ಸಂಬಂಧವನ್ನು ನೇರಾಗಿಯಾಗಲಿ ಪರೋಕ್ಷವಾಗಿ ಯಾಗಲಿ ಇಟ್ಟುಕೊಳ್ಳಕೂಡದು. ಮತ್ತು ಇಟ್ಟುಕೊಂಡಿರಕೂಡದು.

18. ಮೇಲೆ ಹೇಳಿರುವ 12 ಮತ್ತು 13ನೇ ಷರತ್ತುಗಳಿಗನುಸಾರವಾಗಿ ಹಂಗಾಮಿಯಾಗಾಗಲಿ ಅಥವಾ ಖಾಯಮಾಗಾಗಲಿ ಮುಚ್ಚುವ ಸಂದರ್ಭಗಳಲ್ಲಿ ವಿನಹಾ ಡೆಪೋ ಮತ್ತು ಅಂಗಡಿಗಳು ತೆಗದಿರಬೇಕು. ಡೆಪ್ಯುಟಿ ಕಮಿಷನರವರು ಸ್ಥಳದ ಉಪಯೋಗಕ್ಕೆ ಅವಶ್ಯಕವಾಗಿರುವದೆಂದು ತಿಳಿದು ಅಪ್ಪಣೆ ಮಾಡಿರುವಷ್ಟು ಷರಾಬು ಮದಕ್ ಪದಾರ್ಥಗಳು ಮತ್ತು ಅಫೀಮನ್ನು ಅಂಗಡಿಗಳಲ್ಲಿ ಇಟ್ಟಿರಬೇಕು. ಜಾಸ್ತಿ ಗುರ್ತಿಯಲ್ಲಿ ತೆರೆಯದಿರುವ ಅಂಗಡಿಗಳು ಲೈಸೆನ್ಸ್‌ದಾರರನ್ನು ಲುಕ್ಸಾನಿಗೆ ಒಳಪಡಿಸಿ ಪುನಃ ಹರಾಜು ಮಾಡಲ್ಪಡುವದು.

19. ಷರಾಬು, ಮದಕ್ ಪದಾರ್ಥ ಯಾ ಅಫಿಂ ಅಂಗಡಿಗಳಲ್ಲಿ ನಗದು ಮೊಬಲಗಿಗೆ ಶಿವಾಯಿ ಮಾರಲ್ಪಡಕೂಡದು. ನಗದು ಶಿವಾಯಿ ಬೇರೇ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಲೈಸೆನ್ಸುದಾರನು ಸಮೀಪದಲ್ಲಿರುವ ಮೇಜಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರಿಗೆ ವರ್ತಮಾನ ಕೊಡಲು ಬದ್ಧನಾಗಿರುತ್ತಾನೆ. ಈ ಷರತ್ತು ಅಂಗಡಿಯ ಹೊರಗಡೆ ಕುಡಿಯುವದಕ್ಕಾಗಿ ಅಂಗಡಿದಾರರಿಂದಲೂ ಯಾ ಮಾತಬರ ಫರಂಗಳಿಂದಲೂ ವ್ಯಾಪಾರ ಮೂಲಕವಾಗಿ ಕೊಡಲ್ಪಡುವ ಪರಾಯಿ ದೇಶದ ಮತ್ತು ವಿಶೇಷ ಷರಾಬುಗಳನ್ನು ಸಾಲವಾಗಿ ಮಾರತಕ್ಕದ್ದನ್ನು ಅಡ್ಡಿ ಪಡಿಸುವದಿಲ್ಲ.

20. ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನುರೀತ್ಯಾ ಬಿಕರಿಮಾಡಲು ಗೊತ್ತುಮಾಡಿರುವ ಪರಮಾವಧಿ ಕನಿಷ್ಠ ಯಾ ನಿಷ್ಕರ್ಷೆಯಾದ ದರಗಳಿಗಿಂತಲೂ ಹೆಚ್ಚಾಗಿಯಾಗಲಿ, ಕಮ್ಮಿಯಾಗಿ ಯಾಗಲಿ ಯಾವ ಷರಾಬು, ಮದಕ್ ಪದಾರ್ಥ ಅಥವಾ ಅಫೀಂ ಮಾರಲ್ಪಡಕೂಡದು.

ಷರಾ—1. 20० ಷರಾಬು—1 ಡ್ರಾಂಗೆ 2 ಆಣೆ.

2. ಗಾಂಜಾ—1 ತೊಲೆಗೆ 2 ಆಣೆ.

3. ಅಫೀಂ—1 ತೊಲೆಗೆ 9 ಆಣೆ.

4. ಶೇಂದಿ—ಷೆಡ್ಯೂಲಿನಲ್ಲಿ ಫಾಯಿಷ್ ಮಾಡಿರುವ ಕಮ್ಮಿ ದರ.

21. ಲೈಸೆನ್ಸಿಲ್ಲದೆ ಇಟ್ಟುಕೊಳ್ಳಬಹುದಾಗಿರುವ ಮೊತ್ತಕ್ಕಿಂತಲೂ ಹೆಚ್ಚಾಗಿ ಯಾವ ಷರಾಬು ಮದಕ್ ಪದಾರ್ಥ ಯಾ ಅಫೀಮು ವಿಧಾಯಕವಾದ ಪರ್ಮಿಟ್ಟಿಲ್ಲದೆ ಲೈಸೆನ್ಸ್ ಪಡೆದ ಅಂಗಡಿಯಿಂದ ಬಂದೇ ಕಾಲದಲ್ಲಿ ಯಾವ ಮನುಷ್ಯನಿಂದಲಾದರೂ ತೆಗದುಕೊಂಡು ಹೋಗಲ್ಪಡಕೂಡದು.

ಷರಾ—ಸಾರಾಯಿ—1 ರೆಪ್ಯೂಟೆಡ್ ಕ್ವಾರ್ಟ್.
ಶೇಂದಿ—2 ಸೇರು.
ಗಾಂಜಾ—4 ತೊಲಾ.
ಅಫೀಮು—3 ತೊಲಾ.
ಪರಾಯಿ ಷರಾಬು—2 ಗ್ಯಾಲನ್.

22. ಪ್ರತಿ ದಿನವೂ ಆಗತಕ್ಕ ಜಮಾ ಖರ್ಚನ್ನು ವಿಧಾಯಕವಾದ ನಮೂನೆಯಲ್ಲಿ ಶಾಯಿಯಲ್ಲಿ ಬರೆದಿಡಬೇಕು. ಈ ಲೆಕ್ಕದ ಪುಸ್ತಕಗಳನ್ನೂ ಮತ್ತು ಪರಮಿಟ್ ಪುಸ್ತಕಗಳನ್ನೂ ಸರ್ಕಾರೀ ಖಜಾನೆಯಲ್ಲಿ ಖರೀದಿ ಮೊಬಲಗನ್ನು ಜಮಾ ಮಾಡಿದ್ದ ರಶೀತಿಗಳನ್ನು ಹಾಜರ್ಮಾಡಿದ್ದಲ್ಲಿ ಸ್ಥಳೀಕ ಅಬ್ಕಾರಿ ನೌಕರಮಾನೇರಿಂದ ಪಡೆಯಬಹುದು. ಜಮಾ ಬಂದ ಷರಾಬು, ಮದಕ್ ಪದಾರ್ಥಗಳು ಅಥವಾ ಅಫೀಮಿನ ಪರಮಿಟ್ಟುಗಳೂ, ಖರ್ಚಾದ ಪರಮಿಟ್ಟುಗಳ ಕೌಂಟರ್ ಫಾಯಿಲುಗಳೂ ಎಚ್ಚರಿಕೆಯಾಗಿ ಫೈಲ್ ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ, ರುಜು ಮಾಡುವದನ್ನು ನಿಷೇಧಿಸಿದೆ. ಈ ಲೆಖ್ಖಗಳನ್ನೂ, ಪರಮಿಟ್ಟುಗಳನ್ನೂ, ಕೌಂಟರ್ ಫಾಯಿಲುಗಳನ್ನೂ ಲೈಸೆನ್ಸಿನಲ್ಲಿ ಕಂಡವಾಯಿದೆಯು ಕಳೆದ ಬಂದು ವರುಷದವರಿಗೂ ಇಟ್ಟುಕೊಂಡಿರತಕ್ಕದ್ದು. ಅಸಿಸ್ಟೆಂಟು ಇನ್ಸ್ಪೆಕ್ಟರ ದರ್ಜೆಗೆ ಕಮ್ಮಿ ಯಾಗಿರದ ಯಾವ ಎಕ್ಸೈಜ್ ಆಫಿಸರು ಕೇಳಿದರೂ ಸದರಿ ಲೆಖ್ಖಗಳನ್ನು ಹಾಜರ್ಮಾಡಬೇಕು.

23. ಅಸಿಸ್ಟೆಂಟ್ ಇನ್ಸ್ಪೆಕ್ಟರ ದರ್ಜೆಗಿಂತಲೂ ಕಮ್ಮಿ ಇಲ್ಲದ ಎಕ್ಸೈಜ್ ಆಫಿಸರುಗಳು ಆಗಿಂದಾಗ್ಯೆ ಅಪೇಕ್ಷಿಸುವಂಥ ಯಾವ ಲೆಖ್ಖಗಳನ್ನಾಗಲಿ, ವರ್ತಮಾನಗಳನ್ನಾಗಲಿ ಲೈಸೆನ್ಸ್‌ದಾರರು ತಡೆಮಾಡದೆ ಕೊಡಬೇಕು.

24. ಎಕ್ಸೈಜ್ ಕಮ್ಮಿಷನರಿಂದ ಆಗಿಂದಾಗ್ಯೆ ವಿಧಿಸಲ್ಪಡುವ ಪ್ರಮಾಣದ ತೂಕದ ಮತ್ತು ಅಳತೆ ಸಾಧನಗಳನ್ನು ಮಾತ್ರವೇ ಎಲ್ಲಾ ಲೈಸೆನ್ಸ್ ಪಡೆದ ಅಂಗಡಿಗಳಲ್ಲಿ ಇಟ್ಟುಕೊಂಡಿರಬೇಕು, ಮತ್ತು ಉಪಯೋಗಿಸಬೇಕು. ಯಾವ ಲೈಸೆನ್ಸ್ ಪಡೆದ ಅಂಗಡಿಗಳಲ್ಲಾದರೂ ಕರಾರ್ವಾಕಾಗಿಲ್ಲದ ತೂಕದ ಮತ್ತು ಅಳತೆ ಸಾಧನೆಗಳನ್ನು ಇಟ್ಟುಕೊಂಡಿರೋಣವು ಅಥವಾ ಉಪಯೋಗಿಸೋಣವು ಲೈಸೆನ್ಸ್‌ದಾರನನ್ನು ಶಿಕ್ಷೆಗೆ ಗುರಿಮಾಡುತ್ತೆ.

25. ಸಬ್ ಇನ್ಸ್ಪೆಕ್ಟರ ಹುದ್ದೆಗಿಂತಲೂ ಕಮ್ಮಿಯಾಗಿರದ ಯಾವ ಅಬ್ಕಾರೀ ನೌಕರನಾದರೂ ಲೈಸೆನ್ಸ್ ಪಡೆದ ಅಂಗಡಿಗಳನ್ನೂ ಮತ್ತು ಡೆಪೋಗಳನ್ನೂ ತನಿಖೆಮಾಡಲು ಅಧಿಕಾರವುಳ್ಳವನಾಗಿರುತ್ತಾನೆ. ಸದರಿ ಅಂಗಡಿಗಳನ್ನು ಪ್ರವೇಶಮಾಡಿ ತನಿಖೆಮಾಡುವದಕ್ಕೂ, ಉಪಯೋಗದಲ್ಲಿರುವ ತೂಕದ ಮತ್ತು ಅಳತೆ ಸಾಧನೆಗಳನ್ನೂ, ಷರಾಬು, ಮದಕ್ ಪದಾರ್ಥಗಳು, ಅಫೀಮನ್ನೂ ಅಜಮಾಯಿಷಿ ಮಾಡಲಿಕ್ಕೂ ಅಂಗಡಿಯಲ್ಲಿ ಯಾ ಡೆಪೋದಲ್ಲಿಟ್ಟಿರತಕ್ಕ ಲೆಖ್ಖಗಳನ್ನು ಕೇಳಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ. ಪೊಲೀಸ್ ಆಫಿಸರರುಕೂಡ ತಮ್ಮ ಕೆಲಸಕ್ಕೆ ಸಂಬಂಧಪಟ್ಟಿರುವ ಮಟ್ಟಿಗೆ ತನಿಖೆ ಮಾಡಬಹುದು.

26. ಕ್ರಮವಾಗಿ ನಂಬರು ಹಾಕಲ್ಪಟ್ಟ ಪುಟಗಳುಳ್ಳ ಇನ್ಸ್ಪೆಕ್ಷನ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರಿ ಪುಸ್ತಕವನ್ನು ರೇಂಜ್ ಛಾರ್ಜಿನಲ್ಲಿರುವ ಅಬ್ಕಾರಿ ಇನ್ಸ್ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ಯಾವ ಆಫಿಸರರೇ ಆಗಲಿ ರಶೀತಿ ಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

27. ಸ್ವತಂತ್ರ ಹಕ್ಕನ್ನು ಪಡೆದದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರೀ ಖಜಾನೆಯಲ್ಲಿ ಜುಲೈ ಮಾಹೆ ಲಾಗಾಯಿತು ಪ್ರತಿ ತಿಂಗಳಲ್ಲಿಯೂ 20ನೆ ತಾರೀಖು ಅಥವಾ ಅದರ ವಳಗೆ ಸರಿಯಾದ ತಿಂಗಳಗಟ್ಲೆ 12 ಖಿಸ್ತುಗಳಲ್ಲಿ ಪಾವತಿ ಮಾಡುತ್ತಾ ಬರತಕ್ಕದ್ದು. ಜಾತ್ರೆ ಅಂಗಡಿಯ ಲೈಸೆನ್ಸದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೇ ಸದರಿ ಅಂಗಡಿಯ ಗುತ್ತಾ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

ಷರಾ—ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ತಾವೇ ಲೈಸೆನ್ಸದಾರರಲ್ಲದೆ ಇರುವ ಸಂದರ್ಭಗಳಲ್ಲಿ ಗ್ರಾಮದ ಪಟೇಲರು ಯಾವ ಮನುಷ್ಯನಿಂದಲಾಗಲೀ ಒಂದುಸಾರಿಗೆ 50 ರೂಪಾಯಿಗಳಿಗೆ ಮೀರದಂತೆ ಮೊಬಲಗನ್ನು ತೆಗದುಕೊಳ್ಳಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡಬಹುದು.

28. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಮಾಡಬೇಕೆಂದು ಯಾ ಇಜಾರೆ ಮೊಬಲಗನ್ನು ಕಮ್ಮಿ ಮಾಡಲ್ಪಡಬೇಕೆಂದು ಕೇಳಲ್ಪಡಕೂಡದು.

29. ಜಮೀನ್ ಕಂದಾಯದ ಬಾಕಿ ವಸೂಲಿ ಬಗ್ಗೆ ಆಯಾಕಾಲದಲ್ಲಿ ಜಾರೀಲಿರುವ ಕಾನೂನು ಮೇರೆಗೆ ಲೈಸೆನ್ಸದಾರನಿಂದ ಬರಬೇಕಾದ ಮೊಬಲಗು ಆತನ ಯಾ ಆತನ ಜಾಮೀನ್ದಾರನ ಸ್ವತ್ತುಗಳ ಜಫ್ತು ಮತ್ತು ಹರಾಜಿನಿಂದ ವಸೂಲ್ಮಾಡಲ್ಪಡುವದು. ಅಥವಾ ಇಜಾರೆಯು ಪ್ರಾರಂಭದಲ್ಲಿ ಆತನಿಂದ ಕೊಡಲ್ಪಟ್ಟ ಠೇವಣಿ ಮೊಬಲಗು ಇದ್ದಲ್ಲಿ ವಜಾ ಹಾಕಲ್ಪಡುವದು. ಅಮಲ್ದಾರಿಂದ ಕೊಡಲ್ಪಟ್ಟ ನೋಟೀಸ್ ಜಾರಿಯಾದ 15 ದಿವಸಗಳ ವಳಗಾಗಿ ಠೇವಣಿ ಮೊಬಲಗಿನಿಂದ ವಜಾ ಮಾಡಲ್ಪಟ್ಟ ಮೊಬಲಗನ್ನು ಪುನಃ ಭರ್ತಿ ಮಾಡಲು ಬದ್ಧನಾಗಿರುತ್ತಾನೆ.

30. ವಿಧಾಯಕವಾದ ತಾರೀಖುಗಳ ವಳಗಾಗಿ ಖಿಸ್ತುಗಳನ್ನು ಅಥವಾ (ಶೇಂದಿಯ) ಮರತೆರಿಗೆಯನ್ನು ಕೊಡದೆ ತಪ್ಪಿದಲ್ಲಿ, ಲೈಸೆನ್ಸುಗಳನ್ನು ಸಸ್ಪೆಂಡ್ ಮಾಡಲು ರೆವಿನ್ಯೂ ಆಫಿಸರುಗಳಿಗೆ ಅಧಿಕಾರವನ್ನು ಉಳಿಸಿಕೊಂಡಿರುತ್ತೆ. ಷರಾಬು ಶೇಂದಿ ಮತ್ತು ಮದ್ದತ್ ಅಂಗಡಿಗಳ ವಿಷಯದಲ್ಲಿ ಈ ಅಧಿಕಾರವು ಅಮಲ್ದಾರುಗಳಿಂದಲೂ ಇತರ ಸಂದರ್ಭಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಚಲಾಯಿಸಲ್ಪಡುತ್ತೆ.

31. ಮೇಲ್ಕಂಡ ಷರಾಬು, ಶೇಂದಿ, ಮದ್ದತ್ ಪದಾರ್ಥಗಳ ಲೈಸೆನ್ಸದಾರನು ಖಿಸ್ತು ಬಾಕೀ ಬೀಳುವ ತಿಂಗಳ ಆಖೈರ ವಳಗಾಗಿ ಖಿಸ್ತು ಕೊಡದೆ ತಪ್ಪಿದಲ್ಲಿ. ಅಮಲ್ದಾರು ಡೆಪ್ಯುಟಿ ಕಮ್ಮಿಷನರವರ ಬರಹಮೂಲಕವಾದ ಅಪ್ಪಣೆ ಪಡೆದು ಲೈಸೆನ್ಸನ್ನು ರದ್ದುಮಾಡಿ ಮುಂದಿನ ತಿಂಗಳ ಗುರ್ರೆ ತಾರೀಖಿನದಿವಸ (ರಜಾ ದಿವಸಗಳು ಶಿವಾಯಿ) ಸದರಿ ಹಕ್ಕನ್ನು ಹೊಸ ಬಿಕರೀದಾರನಿಗೆ ಲೈಸೆನ್ಸ್ ಕೊಟ್ಟ ತಾರೀಖು ಲಾಗಾಯಿತು ಬಿಕರಿಯ ಸ್ವತಂತ್ರ ಹಕ್ಕನ್ನು ಪುನಃ ಹರಾಜು ಮಾಡಬಹುದು. ಅಥವಾ ಸದರಿ ಹಕ್ಕು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತ ತೋರುವ ರೀತ್ಯಾ ಇತರ ವಿಧವಾಗಿ ವಿಲೇವಾರಿ ಮಾಡಬಹುದು. ಸದರಿ ಹಕ್ಕನ್ನು ರದ್ದುಮಾಡುವದರಿಂದ ಮತ್ತು ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲೇವಾರಿ ಮಾಡುವದರಿಂದ ಉಂಟಾಗುವ ಎಲ್ಲಾ ನಷ್ಟಕ್ಕೂ ತಪ್ಪಿತಸ್ಥನು ಗುರಿಯಾಗಿರುತ್ತಾನೆ. ಆದರೆ ಏನಾದರೂ ಲಾಭ ಬಂದಲ್ಲಿ ಅದಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಇಜಾರೆ ಪ್ರಾರಂಭದಲ್ಲಿ ಇಡಲ್ಪಟ್ಟ ಠೇವಣಿ ಏನಾದರೂ ಇದ್ದಲ್ಲಿ, ಇದರ ಪೂರಾ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸನ್ನು ಸಸ್ಪೆಂಡು ಮಾಡಲಿಕ್ಕೆ ಅಧಿಕಾರವುಳ್ಳ ಆಫಿಸರು ತಮಗೆ ಯುಕ್ತ ಕಂಡರೆ ಪುನಃ ಹರಾಜು ಅಥವಾ ಇತರ ವಿಲೇವಾರಿ ಆಗುವ ವರಿವಿಗೂ ಬಿಕರಿ ನಡೆಸಲು ಅವಕಾಶ ಕೊಡಬಹುದು.

32. ಬಾಕೀ ಬೀಳುವ ಎಲ್ಲಾ ಮೊಬಲಗಿನಮೇಲೂ ತಿಂಗಳು 1ಕ್ಕೆ ಅಥವಾ ಅದರ ಭಾಗಕ್ಕೆ ರೂಪಾಯಿ 1ಕ್ಕೆ 1ಪೈ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡಬೇಕು.

33. ಲೈಸೆನ್ಸದಾರನಾಗಲಿ ಅಥವಾ ಆತನಿಂದ ನೇಮಿಸಲ್ಪಟ್ಟ ಯಾವ ಮನುಷ್ಯನಾಗಲಿ ಲೈಸೆನ್ಸಿನ ಯಾವ ಷರತ್ತುಗಳಿಗೆ ವಿರೋಧವಾಗಿ ನಡೆದರೆ, ಲೈಸೆನ್ಸದಾರನಿಗೆ—

(a) 50 ರೂಪಾಯಿನವರೆಗೆ ಜುರ್ಮಾನೆ ಅಥವಾ (b) ಠೇವಣಿಗಳೇನಾದರೂ ಇದ್ದಲ್ಲಿ ದಂಡವಾಗಿ ತೆಗೆದುಕೊಳ್ಳಲ್ಪಡುವದು, ಲೈಸೆನ್ಸು ರದ್ದುಮಾಡಲ್ಪಡುವದು ಮತ್ತು ಲೈಸೆನ್ಸದಾರನನ್ನು ನಷ್ಟಕ್ಕೆ ಗುರಿಮಾಡಿ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಅಥವಾ ಇತರ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಈ ಮೇಲ್ಕಂಡ ಅಂಶಗಳಿಗೆ ಲೈಸೆನ್ಸದಾರನು ಒಳಗಾಗಿರುತ್ತಾನೆ.

ಲೈಸೆನ್ಸದಾರನು ಅಥವಾ ಆತನ ಮುತಾಲೀಕನು ಆತನು ಮಾಡಿರುವ ತಕ್ಸೀರಿಗೆ ಆಪಾದನೆ ಮಾಡಲ್ಪಡಬಹುದು. ಈ ಷರತ್ತಿನಂತೆ ಇಜಾರೆಯು ರದ್ದು ಮಾಡಲ್ಪಟ್ಟರೆ ಇಜಾರೆಯ ಪೂರಾ ಮೊಬಲಗು ಕೂಡಲೆ ಬಾಕಿ ಬೀಳುವದು.

ಷರಾ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪುಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

34. ಲೈಸೆನ್ಸದಾರನು ಎಕ್ಸೈಜ್ ರೆಗ್ಯುಲೇಷನ್ ಯಾ ಅಫೀಂ ಆಕ್ಟಿಗೆ ವಿರೋಧವಾಗಿ ಅಥವಾ ಇಂಡಿಯನ್ ಪೆನಲ್ ಕೋಡಿನಲ್ಲಿ ನಮೂದಿಸಿರುವ ಯಾವ ತಕ್ಸೀರಿಗಾದರೂ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದಲ್ಲಿ, ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸದಾರನಾಗಿರಲು ನಾಲಾಯಖೆಂದು ಕಂಡುಬಂದಲ್ಲಿ, ಯಾವ ಲೈಸೆನ್ಸಾದರೂ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೆ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ ಅವನ ಹಕ್ಕು ದುಸರಾ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹಕ್ಕುದಾರಿಯ ಹರಾಜು ಮಂಜೂರಾದನಂತರ ಕ್ರಮವಾದ ಲೈಸೆನ್ಸು ಕೊಡುವದಕ್ಕೆ ಮುಂಚೆಯಾದ

ರೂ ಕೂಡ ಹಕ್ಕನ್ನು ಕೊಂಡುಕೊಂಡವನು ಮೇಲೆ ನಮೂದಿಸಿರುವ ಯಾವ ತಕ್ಸೀರಿಗಾದರೂ ಸಾಬೀತು ಮಾಡಲ್ಪಟ್ಟಲ್ಲಿ ಈ ಷರತ್ತಿನಲ್ಲಿ ನಿಬಂಧಿಸಿರುವ ಶಿಕ್ಷೆಗಳಿಗೆ ಗುರಿಯಾಗಿರುತ್ತಾನೆ. ಈ ಷರತ್ತಿನ ಮೇರೆ ಲೈಸೆನ್ಸ್ ದಂಡವಾಗಿ ತೆಗದುಕೊಳ್ಳಲ್ಪಡೋಣವು, ಇಜಾರೆ ಷರತ್ತಿನ ಪ್ರಕಾರ ಸರ್ಕಾರಕ್ಕೆ ಪಾವತಿಯಾಗಬೇಕಾದ ಮೊಬಲಗು ಜಾತಾ ಉಳಿಯುವ ಎಲ್ಲಾ ಠೇವಣಿಗಳು ದಂಡವಾಗಿ ತೆಗೆದುಕೊಳ್ಳಲ್ಪಡುವುದಕ್ಕೂ ಲೈಸೆನ್ಸ್‌ದಾರನನ್ನು ಗುರಿಮಾಡುತ್ತದೆ.

35. ಷರಾಬು, ಮದಕ ಪದಾರ್ಥಗಳು ಮತ್ತು ಅಫೀಮನ್ನು ಒಯ್ಯುವ, ತಯಾರ್ಮಾಡುವ ಅಥವಾ ಬಿಕರಿ ಮಾಡುವದರಲ್ಲಿ ತಮ್ಮಿಂದ ನೌಕರರ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಅಥವಾ ಅಫೀಂ ಕಾನೂನುಗಳಿಗೆ ಅಥವಾ ಅವರ ಒಪ್ಪಂದಗಳಿಗೆ ವಿರೋಧವಾಗಿ ನಡೆದದ್ದು ತಮಗೆ ತಿಳಿದುಬಂದರೆ ಲೈಸೆನ್ಸ್‌ದಾರರು ಡೆಪ್ಯುಟಿ ಕಮ್ಮಿಷನರವರಿಗೆ ಇಂಥಾ ಎಲ್ಲಾ ಸಂದರ್ಭಗಳನ್ನು ರಿಪೋರ್ಟು ಮಾಡುವದಕ್ಕೂ ಮತ್ತು ಅಂಥವರನ್ನು ಇನ್ನೂ ಕೆಲಸದಲ್ಲಿಟ್ಟುಕೊಂಡಿರುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರು ಕೊಡುವ ಹುಕುಮಿನಂತೆ ಜಾರಿಲಿ ತರುವುದಕ್ಕೂ ಬದ್ಧರಾಗಿರುತ್ತಾರೆ. ಇಂಡಿಯನ್ ಪಿನಲ್ ಕೋಡಿನ ಮೇರೆಗೆ ಯಾವ ತಪ್ಪಿತಕ್ಕಾದರೂ ಸಾಬೀತಾದ ಮನುಷ್ಯರನ್ನು ಷರಾಬು, ಮದಕ ಪದಾರ್ಥ ಮತ್ತು ಅಫೀಮನ್ನು ಒಯ್ಯುವದಕೆ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಇಲ್ಲದೆ ನೇಮಿಸಕೂಡದು.

36. ಲೈಸೆನ್ಸ್‌ದಾರರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಯಾವ ವಿಧವಾದ ಹಣಸಂಬಂಧವಾದ ಲೇವಾದೇವಿಯನ್ನು ಖಂಡಿತವಾಗಿಯೂ ಇಟ್ಟುಕೊಳ್ಳಕೂಡದು.

37. ಎಕ್ಸೈಜ್ ಕಮ್ಮಿಷನರವರ ಅಪ್ಪಣೆ ಪಡೆದು ಲೈಸೆನ್ಸ್ ಮೋಖೂಫ್‌ಬಗ್ಗೆ 15 ದಿವಸಗಳ ಮುಂಚಿನ ನೋಟೀಸ್ ಕೊಟ್ಟು ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತ್ಯಾನುಸಾರ ಯಾವ ಲೈಸೆನ್ಸನ್ನಾದರೂ ಮೋಖೂಫ್ ಮಾಡಬಹುದು; ಇಂಥಾ ಸಂದರ್ಭಗಳಲ್ಲಿ ಅದಕ್ಕಾಗುವ ದಾಮಾಷಾಯಿ ಗುತ್ತಾ ಮೊಬಲಗು ವಾಪಸು ಕೊಡಲ್ಪಡಬೇಕು.

38. ಎಲ್ಲಾ ಲೈಸೆನ್ಸ್‌ದಾರರು ಸರ್ಕಾರದಿಂದ ಎಕ್ಸೈಜ್ ಅಥವಾ ಅಫೀಂ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ಜಾಸ್ತಿ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧರಾಗಿರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರವರು, ಸರಿಪಡಿಸುವ ಯಾ ಹೊಸ ಲೈಸೆನ್ಸನ್ನು ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

39. ಲೈಸೆನ್ಸಿಗೆ ಸಂಬಂಧಪಡದ ಷರಾಬು ಯಾ ಮದಕ ಪದಾರ್ಥಗಳ ವಿಷಯದಲ್ಲಿ ಯಾವದಾದರೂ ಏರ್ಪಾಡು ಮಾಡಲ್ಪಡುವ ಪಕ್ಷದಲ್ಲಿ ಲೈಸೆನ್ಸ್‌ದಾರರಿಗೆ ಪರಿಹಾರ ದ್ರವ್ಯಕ್ಕೂ ಯಾ ರಿಮಿಷನ್ ಯಾನೆ ಸೋಡಿಗೂ ಹಕ್ಕು ಇರಲಾರದು.

40. ಯಾವ ತರಹೆ ಷರಾಬು ಅಂಗಡಿಯ ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ವಾಯಿದೆ ಒಳಗೆ ಅಲ್ಲಿಂದ 5 ಮೈಲಿ ಒಳಗೆ ಇತರ ಷರಾಬುಗಳನ್ನು ಮಾರತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು ಮತ್ತು ತನ್ನ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಅಂಥಾ ಯಾವ ಮನುಷ್ಯನನ್ನೂ ಪಾಲುಗಾರನನ್ನಾಗಲಿ ಅಥವಾ ಸಂಬಂಧವುಳ್ಳವನನ್ನಾಗಲಿ ಮಾಡಲು ಅವಕಾಶ ಕೊಡಕೂಡದು.

XX. ಶೇಂದಿ ಲೈಸೆನ್ಸುಗಳಿಗೆ ಲಗಾವಾಗುವ ಷರತ್ತುಗಳು.

(1) ಲೈಸೆನ್ಸ್ ಪ್ರಕಾರ ಕೊಡಲ್ಪಟ್ಟ ಸದರೀ ಬಿಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ಮತ್ತು ತೆಂಗಿನ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ.

(2) ಲೈಸೆನ್ಸ್‌ದಾರನು ತನ್ನ-ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವುದಕ್ಕೆ ಸ್ವತಂತ್ರನಾಗಿರುತ್ತಾನೆ. ಆದರೆ ಅಂಥಾ ಮರಗಳು ಆತನ ಇಜಾರೆಗೆ ಸಂಬಂಧಪಡದ ಅಂಗಡಿಯ ಸಮೀಪದಲ್ಲಿ ಯಾ ಸರಹದ್ದಿನೊಳಗೆ ಇದ್ದಪಕ್ಷದಲ್ಲಿ ಸದರಿ ಮರಗಳನ್ನು ಉತಾರ್ಮಾಡಲು ದರಖಾಸ್ತು ಮಾಡುವದಕ್ಕೆ ಮುಂಚೆ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರವರ ಮಂಜೂರಾತಿಯನ್ನು ಪಡೆಯಬೇಕು. ಲೈಸೆನ್ಸ್‌ದಾರನು ಇನ್ಸ್ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಗೆ ಅವರಿಂದ ಅಪ್ಪಣೆ ಚೀಟಿ ಪಡೆದು ಇತರ ಶೇಂದಿ ದುಕಾನ್ದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು, ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್ಪೆಕ್ಟರವರು ಅಪ್ಪಣೆ ಚೀಟಿಯನ್ನು ಕೊಡುತ್ತಾರೆ.

(3) ಸರಿಯಾದ ಲೈಸೆನ್ಸ್ ಪಡೆದು, ಆ ಲೈಸೆನ್ಸುಮೇರೆ ಉತಾರ್ಮಾಡಿರುವ ಮರಗಳ ಶೇಂದಿ ವಿನಹಾ ಮತ್ತ್ಯಾವ ವಿಧವಾದ ಶೇಂದಿಯನ್ನು ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(4 ಉತಾರ್ ಲೈಸೆನ್ಸುಗಳ ಷರತ್ತುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಲೈಸೆನ್ಸ್‌ದಾರನು, ತನ್ನ ಹೆಸರಿನಲ್ಲಿಯೂ, ಅಥವಾ ಅವನ ವಾರಸುದಾರನ ಹೆಸರಿನಲ್ಲಿಯೂ ದರಖಾಸ್ತಿನ ಮೇಲೆ ಕೊಡಲ್ಪಟ್ಟ ಉತಾರ್ ಲೈಸೆನ್ಸುಗಳಿಗಾಗಿ ಕೊಡಬೇಕಾದ ಎಲ್ಲಾ ತೆರಿಗೆಗಳ ಕಿಸ್ತುಗಳಿಗೂ ಸರ್ಕಾರಕ್ಕೆ ಜವಾಬ್ದಾರನಾಗಿರುತ್ತಾನೆ.

(5) ನಿರ್ಣಯಿಸಿದ ಕಾಲದೊಳಗಾಗಿ ಯಾವ ಕಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೆ ಸೆಕ್ಷನ್ ಮೇರೆಗೆ ಉತಾರ್ ಲೈಸೆನ್ಸ್ ರದ್ದು ಯಾ ಹಂಗಾಮಿಯಾಗಿ ಮೋಖೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(6) ಮೇಲ್ಕಂಡಂತೆ ನಡೆಯುಲು ತಪ್ಪಿದಲ್ಲಿ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರವರ ಅಥವಾ ಡೆಪ್ಯುಟಿ ಕಮ್ಮಿಷನರವರಿಂದ ಇದಕ್ಕಾಗಿ ನೇಮಕಮಾಡಲ್ಪಡುವ ಇತರ ಆಫಿಸರವರ ಹುಕುಂ ಪಡದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವ ವರಿಗೂ ಉತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರ ನೋಟೀಸು ತನಗೆ ಬಂದಿದ್ದರಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇನೇ ಇದ್ದಲ್ಲಿ ನ್ಯಾಯವಿರುದ್ಧವಾಗಿ ಉತಾರು ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(7) ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಉತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಕಾಲದಲ್ಲಿ ಸಾಲಿಯಾನಾ ಮರ ಒಂದಕ್ಕೆ 4 ಆಣೆ 3 ಪೈ ಪ್ರಕಾರ ಮರದ ನಾಖ್ಯಿ ಮೊಬಲಗು ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು, ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗತಕ್ಕದ್ದು.

(8) ಈಚಲು ಮರಗಳನ್ನು ಉತಾರ್ಮಾಡುವದು ಈ ಕೆಳಗೆ ನಮೂದಿಸಿರುವ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು:—

(a) ಈಚಲು ಮರಗಳು ಕಸಬುದಾರ್ರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮಾರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೆಡಿಸಕೂಡದು.

(d) ಡೆಪ್ಯುಟಿ ಕಮ್ಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು ಮತ್ತು ಅದರ ಉದ್ದವೂ 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಶೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜಾದಲ್ಲಿರುವ ಗರಿಗಳ ವರಿಶೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ ಮಾಡಿದರೆ ಎರಡು ವರಿಶೆಗಳಿಗೆ ಕಮ್ಮಿಯಾಗಿರಕೂಡದು ; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸುದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೇ ಕಾಲದಲ್ಲಿ ಆಗಲಿ ಅಥವಾ ಗುತ್ತಿಗೆ ಪೂರೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿ ಹೋದ ಮರಗಳು ಆತನಿಗೆ ಸಂಖ್ಯೆಹಾಕಿ ಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕೂ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ. ಆತನು ಉತಾರಿಗಾಗಿ ತಯಾರ್ಮಾಡುವ ಪ್ರತಿ ಒಂದು ಮರಕ್ಕೂ ಅದು ಸದರಿ ತಯಾರಿಯಿಂದ ಉತಾರಾಗುವದಕ್ಕೆ ಮುಂಚೆ ನಾಶವಾದಲ್ಲಿ ಅದೇ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(j) ಜನಗಳ ಉಪಯೋಗಾರ್ಥವಾಗಿ ವಾಪಸು ತೆಗದುಕೊಂಡ ಯಾ ತೆಗದುಕೊಳ್ಳಲ್ಪಟ್ಟ ಮರಗಳೂ, ಇಂಜನಿಯರ್ ಇಲಾಖೆಯವರ ಆಡಳತಕೆ ಶೇರಿರುವ (ಇರ್ರಿಗೇಷನ್) ತಕಾವಿ ಕಾಂಗಾರಿಗಳಿಗೆ ಶೇರಿದ ಪ್ರದೇಶಗಳಲ್ಲಿರುವ ಮರಗಳೂ, ಇಂಜನಿಯರ್ ಇಲಾಖೆಯವರು ಸದರಿ ಮರಗಳ ಎಲೆಗಳನ್ನೂ, ಕೊಂಬೆಗಳನ್ನೂ ಕತ್ತರಿಸಬೇಕಾದ ಸಂದರ್ಭಗಳಲ್ಲಿ ಲೈಸೆನ್ಸದಾರನಿಗೆ ಅಂಥಾ ಮರಗಳಿಗಾಗಿ ಯಾವ ಪರಿಹಾರದ್ರವ್ಯಕ್ಕೂ ಹಕ್ಕಿರುವುದಿಲ್ಲ.

(k) ಲೈಸೆನ್ಸದ್ದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ದುಸರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(9) ಚಾಪೇ ಮಾಡುವುದಕ್ಕಾದರೂ ಹಗ್ಗ ಮಾಡುವುದಕ್ಕಾದರೂ ಗೂಡೆಗಳು ಮಾಡುವುದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(10) ಡೆಪ್ಯುಟಿ ಕಮ್ಮಿಷನರುಗಳು ಆಗಾಗ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಠಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ್ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಠಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇಗ್ರಾಮದ ಮರಗಳನ್ನು ದಾಖಲ್‌ಮಾಡಬೇಕೆಂದು ಹುಕುಂ ಮಾಡಬಹುದು.

(11) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(12) ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೊಡಲ್ಪಟ್ಟ ಪ್ಯಾಸುಗಳು ಅದಕ್ಕಾಗಿ ಅಧಿಕಾರ ಹೊಂದಿದ ಆಫೀಸರುಗಳ ಪರೀಕ್ಷೆ ವ ತನಿಖೆ ಬಗ್ಗೆ ಗುರಿಯಾಗತಕ್ಕದ್ದು.

(13) ಶೇಂದಿಯನ್ನು ಗಿಡದಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನ್ ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತದೆ.

(14) ಯಾವ ಲೈಸೆನ್ಸದಾರ ಯಾ ಆತನ ಬಿಕರೀದಾರರೇ ಆಗಲಿ ಮೂರು ಅಳೆಯುವ ಶೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು; ಶೇಂದಿಯು ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಮಾರಲ್ಪಡಕೂಡದು. ಒಂದು ಇಂಪೀರಿಯಲ್ ಗ್ಯಾಲಾ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನಮಾಡಲಿಕ್ಕೆ ಶೇಂದಿಯನ್ನು ತೆಗೆದುಕೊಂಡು ಹೋಗಲು ಅವಕಾಶ ಕೊಡಬಹುದು.

(15) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ರೇವನ್ನು ಯಾ ಪಾಣೆಯನ್ನು ಅಜಮಾಯಿಷಿ ಮಾಡಲಿಕ್ಕೆ ಉತಾರ್‌ದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(16) ಲೈಸೆನ್ಸದಾರ್ ಶೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಗೆ ಹಿಡಿಯಲ್ಪಡಕೂಡದು.

(17) ಈ ಕೆಳಗೆ ನಮೂದಿಸಿರುವ ನಿಬಂಧನೆಗಳು 1901ನೆ ಇಸವಿಯ ಮೈಸೂರು ಎಕ್ಸೈಜ್ Vನೆ ರಗ್ಯುಲೇಷನಿನ 12ನೆ ಸೆಕ್ಷನ್ ಮೇರೆಗೆ ಶೇಂದಿ ಮರಗಳನ್ನು ಕಟ್ಟುವದಕ್ಕೂ, ಮತ್ತು ಶೇಂದಿಯನ್ನು ಉತಾರ್ಮಾಡುವದಕ್ಕೂ ಕೊಡಲ್ಪಡಬೇಕಾದ ಲೈಸೆನ್ಸುಗಳನ್ನು ಕ್ರಮಪಡಿಸುತ್ತೆ:—

(1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಗೆ ಲೈಸೆನ್ಸಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ್ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ.

(b) ಮದ್ರಾಸ್ ಅಧಿಪತ್ಯಕ್ಕೆ ಶೇರಿದ ಶೇಂದಿ ಅಂಗಡಿಕಾರರ ಅಥವಾ ಗುತ್ತಿಗೆದಾರರ.

(c) ಸನ್ 1898ನೆ ಇಸವಿ ಜೂನ್ 20ನೆ ಮರ್ಕುಂ 11897—906—Ex. 485ನೆ ನಂಬರುಳ್ಳ ಗವರ್ನ್ಮೆಂಟ್ ಇಸ್ತಿಹಾರ್ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿ ತೋಟಗಳಲ್ಲಿಯೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಬಾಗಗಳಲ್ಲಿಯೂ ಇರುವ ಮರಗಳ ಮಾಲೀಕರು.—

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನ ಸಂಬಂಧಪಟ್ಟ ಎಕ್ಸೈಜ್ ಇನ್‌ಸ್ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳಿಂದ ಪಡೆಯಬಹುದು. ದರಖಾಸ್ತುದಾರರು ತಾವು ಅಪೇಕ್ಷಿಸುವ ಸರ್ಕಾರೀ ಮರಗಳಿಗಾಗಿ ಮೊದಲನೇ ಕಿಸ್ತಿನ ಮರ ತೆರಿಗೆಯನ್ನೂ ಮರದ ಮಾಲ್ಕಿಯನ್ನು ಮೊದಲೇ ಪಾವತಿ ಮಾಡಬೇಕು.

(3) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರ ತೆರಿಗೆಯು ಮೈಸೂರು ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆಂಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರ್ರಿಗೆ ಒಂದೇ ಕಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ಚಲನ್ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತಗದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್‌ಸ್ಪೆಕ್ಟರವರಿಂದ ರವಾನೆಯ ಪರವಾನ್ಗಿಯನ್ನು ಪಡೆಯತಕ್ಕದ್ದು.

(4) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರಸ್ಟುಗಳಲ್ಲಿಯೂ ಯಾ ಪ್ಲಾಂಟೇಷನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟ್ ರೇಂಜ್ ಆಫೀಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್‌ಸ್ಪೆಕ್ಟರವರು ಸಬ್ ಇನ್‌ಸ್ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಅಥವಾ ವಿಶೇಷ ಸಂದರ್ಭಗಳಲ್ಲಿ ಸಬ್ ಇನ್‌ಸ್ಪೆಕ್ಟರ ದರ್ಜೆಗೆ ಕಮ್ಮಿಯಾಗಿಲ್ಲದ ಇರತಕ್ಕ ನೌಕರನಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದಿ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳ ಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫೀಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟಿಸ್ ಕೊಟ್ಟ ತರುವಾಯ ಹಾಗೆ ಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತಗೆದುಕೊಳ್ಳಲ್ಪಡತಕ್ಕದ್ದು.

(6) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟಕೂಡಲೆ ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗರಿಗಳನ್ನು ತೆಗೆದುಹಾಕಲಿಕ್ಕೂ, ಪಾಣೆ ಯಾ ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(7) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಅಂದರೆ ಉತಾರ್ ಲೈಸೆನ್ಸಿಗೆ ದರಖಾಸ್ತು ಯಾವ ಕಾಲದಲ್ಲಿ ಕೊಡಲ್ಪಡಲಿ, ಜುಲೈ ಗುರ್ರೇಲಾಗಾಯಿತು ಜೂನ್ ಆಖೈರ್ ವರೆಗೆ ಆಗಿರುತ್ತೆ. ಲೈಸೆನ್ಸ್‌ದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟ ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 3 ದಿವಸಗಳಿಗೆ ಮುಂಚಿತವಾಗಿ ಸಂಖ್ಯೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಲೈಸೆನ್ಸ್ ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(8) ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಮರಕ್ಕು ಈ ಕೆಳಗೆ ನಮೂದು ಮಾಡಿರುವ ತೆರಿಗೆಗಳು ಪಾವತಿಯಾಗತಕ್ಕದ್ದು :—

ಮರದ ತರಹೆ—	ಮರ ಒಂದಕ್ಕೆ ವರುಷ ಒಂದಕೆ ಕೊಡಬೇಕಾದ ಮರತೆರಿಗೆ. ರೂ.	ಆ.	ಪೈ.
ಈಚಲು	1	4	0
ತೆಂಗು	2	[illegible]	0
ತಾಳೆ	1	9	6

ಟಿಪ್ಪಣಿ.—ಮೇಲೆ ನಮೂದಿಸಿರುವ 17 (1) (c)ನೆ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(9) ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆ ಮೊಬಲಗು ಈ ಕೆಳಗೆ ನಮೂದ್ ಮಾಡಿರುವ ಖಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು :—

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರತೆರಿಗೆ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಗುರ್ರೆ ತಾರೀಖಿನಲ್ಲಿ ಪಾವತಿಯಾಗಬೇಕಾದ ಮರ ತೆರಿಗೆ ದಾಮಾಷಾಯಿ.
ಜುಲೈ ಗುರ್ರೆಲಾಗಾಯಿತು ಮುಂದಿನ ಏಪ್ರಿಲ್ 30ನೆ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದು ಭಾಗ.	ಉಳಿದ ಮೂರರಲ್ಲಿ ಎರಡು ಭಾಗವು.
ಮೇ ಗುರ್ರೆ ಲಾಗಾಯಿತು ಮುಂದಿನ ಜೂನ್ 30ನೆ ತಾರೀಖಿನ ವಳಗಾಗಿ.	ಎಲ್ಲಾ.	ಇಲ್ಲಾ.

ಹರಾಜಿನ ತಾರೀಖು.

ಡಿಸ್ಟ್ರಿಕ್ಟು.	ನಂಬರು.	ತಾಲ್ಲೂಕು.	ತಾರೀಖು.	ಷರಾ.
ಬೆಂಗಳೂರು ...	1	ಬೆಂಗಳೂರು ...	1909—26ನೆ ಏಪ್ರಿಲ್.	
ಡಿಟೋ ...	2	ದೇವನಹಳ್ಳಿ ...	ಡಿಟೋ 12ನೆ ಮೇ.	
ಕೋಲಾರ ...	3	ಶಿಡ್ಲಘಟ್ಟ ...	ಡಿಟೋ 5ನೆ ಡಿಟೋ	
ಡಿಟೋ ...	4	ಚಿಕ್ಕಬಳ್ಳಾಪುರ ...	ಡಿಟೋ 8ನೆ ಡಿಟೋ	
ತುಮಕೂರು ...	5	ಗುಬ್ಬಿ ...	ಡಿಟೋ [illegible]ನೆ ಡಿಟೋ	
ಮೈಸೂರು ...	6	ತಿರ್ಮಕೂಡ್ಲು ನರಸೀಪುರ ...	ಡಿಟೋ 22ನೆ ಡಿಟೋ	
ಡಿಟೋ ...	7	ಮಳವಳ್ಳಿ ...	ಡಿಟೋ 20ನೆ ಡಿಟೋ	
ಹಾಸನ ...	8	ಅರ್ಕಲಗೂಡು ...	ಡಿಟೋ 8ನೆ ಡಿಟೋ	
ಡಿಟೋ ...	9	ಮಂಜರಾಬಾದು ...	ಡಿಟೋ 12ನೆ ಡಿಟೋ	
ಕಡೂರು ...	10	ಮೂಡಿಗೆರೆ ...	ಡಿಟೋ 29ನೆ ಏಪ್ರಿಲ್.	
ಶಿವಮೊಗ್ಗ ...	11	ಶಿವಮೊಗ್ಗ ...	ಡಿಟೋ 26ನೆ ಡಿಟೋ	
ಚಿತ್ರದುರ್ಗ ...	12	ಚಿತ್ರದುರ್ಗ ...	ಡಿಟೋ 28ನೆ ಡಿಟೋ	

ಹೆಚ್. ಹೆಚ್. ಸ್ಪಾರ್ಕ್ಸ್,
ಎಕ್ಸೈಜ್ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 16ನೆ ಏಪ್ರಿಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಆನೆಕಲ್ ತಾಲ್ಲೂಕಿಗೆ ಸಮ್ಮಂಧಪಟ್ಟ 1846–47ನೆ ಇಸವಿ ಲಾಗಾಯಿತು 1873–74ನೆ ಇಸವಿ ವರಿಗೆ ಕುಳವಾರ ಚಿಟ್ಟಾಗಳನ್ನ ಹಾಲಿ ಜಾರಿಯಲ್ಲಿರುವ ರೂಲ್ಸು ಅನುಸರಿಸಿ ಚಲಾಯಿಸಲ್ಪಡುತ್ತೆ. ಇವುಗಳ ದಾಖ್ಲೇಗಳನ್ನು ಅಪೇಕ್ಷಿಸತಕ್ಕವರು ಈ ಲಾಗಾಯಿತು ಮೂರು ತಿಂಗಳ ಒಳಗಾಗಿ ದರಖಾಸ್ತು ಕೊಟ್ಟು ಕಾಪಿಗಳನ್ನು ಪಡೆಯಬಹುದು.

ಬಿ ಜೆ. ಕೊಮಾರಸಾಮಿ ನಾಯಿಕ,
ಡೆಪ್ಯುಟಿ ಕಮಿಷನರ.

ಹಾಸನ ಡಿಸ್ಟ್ರಿಕ್ಟು.

1909ನೆ ಇಸವಿ ಫೆಬ್ರುವರಿ ಮಾಹೆ ತಾರೀಖು 25ರಲ್ಲಿ ನಡದ ಹಾಸನದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ ಪ್ರೊಸಿಡಿಂಗ್ಸ.

ಹಾಜರು.

ಪಿ. ಆರ್. ಡಬ್ಲ್ಯು. ವೆದರಾಲ್, ಯಸ್ಕ್ವಾಯರ್, ಪ್ರೆಸಿಡೆಂಟ್.
ಮಿ|| ನರಸಿಂಗರಾವ ಪೂರ್ಣಯ್ಯ, ಬಿ. ಎ. ಟ್ರೆಜರಿ ಅಸಿಸ್ಟೆಂಟ ಕಮಿಷನರ ಮತ್ತು ವೈಸ ಪ್ರೆಸಿಡೆಂಟ್.
,, ಎ. ಕೃಷ್ಣಸಾಮಿ ಅಯ್ಯಂಗಾರ್, ಬಿ. ಎ. ಸಕಲೇಶಪುರದ ಸಬ್ ಡಿವಿಜನ ಅಸಿಸ್ಟೆಂಟ ಕಮಿಷನರ.
,, ಸಿ. ರಾಜಾರಾಮರಾವ್, ಎಲ್. ಎಂ. ಎಸ್. ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು, ಹಾಸನ.
,, ಸಿ. ದೇವರಾಜ ಅರಸ್, ಜನರಲ ಅಸಿಸ್ಟೆಂಟ ಕಮಿಷನರ.
,, ಎಂ. ಕೆ. ತಿರುಮಲಾಚಾರ್, ಬಿ. ಎ. ಹಾಸನದ ಡಿಸ್ಟ್ರಿಕ್ಟು ಸ್ಕೂಲುಗಳ ಡೆಪ್ಯುಟಿ ಇನಸ್ಪೆಕ್ಟರು.

ನಾನ ಅಫಿಷಿಯಲ್ ಮೆಂಬರುಗಳು.

,, ಲಕ್ಷ್ಮೀನರಸಿಹ್ಮಾಚಾರ, ಹಾಸನ ತಾಲ್ಲೂಕು.
,, ಮಹದೇವಪ್ಪ, ಡಿಟೋ
,, ತಮ್ಮಯ್ಯ, ಬೇಲೂರು ತಾಲ್ಲೂಕು.
,, ಹಬಿಬುಲ್ಲಾಸಾಬ್, ಡಿಟೋ
,, ಹೆಚ್. ದಾಸಪ್ಪ, ಅರಸೀಕೆರೆ ತಾಲ್ಲೂಕು.
,, ಎಸ್. ಡಿ. ವೆಂಕಟರಾಮಯ್ಯ, ಹೊಳೇ ನರಸೀಪುರ ತಾಲ್ಲೂಕು.
,, ಸೂರ್ಯನಾರಾಯಣಶೆಟ್ಟಿ, ಅರ್ಕಲಗೂಡು ತಾಲ್ಲೂಕು.
,, ಅಬ್ದುಲ್ಲಾಸಾಬ್, ಡಿಟೋ
,, ಮಹಲಿಂಗಗೌಡರು, ಡಿಟೋ
,, ಜಿ. ತಿರುನಾರಾಯಣಯ್ಯಂಗಾರ್, ಚನ್ನರಾಯಪಟ್ಟಣ ತಾಲ್ಲೂಕು.
,, ಧರಣಯ್ಯಶೆಟ್ಟರು, ಡಿಟೋ
,, ನಂಜಣ್ಣ, ಡಿಟೋ

ಗೈರ್ ಹಾಜರು.

ಎಕ್ಸ ಅಫಿಷಿಯೋ ಮೆಂಬರುಗಳು.

,, ಹೆಚ್. ಜೆ. ಮೊಲಾಯಿ, ಎಗ್ಜಿಕ್ಯುಟಿವ ಇಂಜನಿಯರ್, ಹಾಸನ.

ನಾನ ಅಫಿಷಿಯಲ್ ಮೆಂಬರುಗಳು.

,, ಡಬ್ಲ್ಯು. ಎಲ್. ಕ್ರಾಫರ್ಡ್, ಮಂಜರಾಬಾದ ತಾಲ್ಲೂಕು.
,, ಅಯಿಗೂರು ಮಲ್ಲೆಗೌಡರು, ಡಿಟೋ
,, ನಂಜೇಗೌಡರು ವುರುಫ ಪುಟ್ಟೇಗೌಡರು, ಡಿಟೋ
,, ಕೆಂಚರಾಯಶೆಟ್ಟರು, ಅರಸೀಕೆರೆ ತಾಲ್ಲೂಕು.
,, ಕೆ. ರಾಮಶೆಟ್ಟರು, ಹೊಳೇನರಸೀಪುರ ತಾಲ್ಲೂಕು.

ನೋಟ—ಅರ್ಕಲಗೂಡು ತಾಲ್ಲೂಕು ಅಮಲ್ದಾರ್ರು ಹೊರ್ತು ಬಾಕಿ ತಾಲ್ಲೂಕು ಅಮಲ್ದಾರ್ರುಗಳು ಮತ್ತು ಆಲೂರು ಡೆಪ್ಯುಟಿ ಅಮಲ್ದಾರ್ರು ಸಹಾ ಹಾಜರಿದ್ದರು.

I. 1909–10ನೆ ಸಾಲ ಹಾಸನದ ಡಿಸ್ಟ್ರಿಕ್ಟು ಬೋರ್ಡ್ಡು ಬಾಬತು ಬಜೆಟ್ಟು ಅಂದಾಜಾಗಳು ಮತ್ತು ಫೈನಾನ್ಸು ಕಮಿಟಿಯವರ ರಿಪೋರ್ಟ್ಟು ಸಹಾ ಓದಲಾಯಿತು.

ತೀರ್ಮಾನ:—1909–10ನೆ ಸಾಲ ಬಜೆಟ್ಟ ಅಂದಾಜಗಳನ್ನು ಮತ್ತು ಫೈನಾನ್ಸು ಕಮಿಟಿಯವರ ರಿಪೋರ್ಟು ಸಹಾ ಗವರ್ನಮೆಂಟಿಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ಮತ್ತು ಚನ್ನರಾಯಪಟ್ಣ-ಶ್ರವಣಬೆಳಗುಳದ ರಸ್ತೆಗೆ ಪ್ರತಿ ವರ್ಷವೂ ತಪ್ಪದೆ ಮೈಲಿ ಒಂದಕ್ಕೆ 50 ರೂಪಾಯಿಗಳನ್ನು ಕೊಷಿಷ್‌ನಿಂದ ಖರ್ಚುಮಾಡಿದ್ದೇ ಆದರೆ ಸಾಕಾಗಿರುತ್ತೆಂತಲೂ ಈ ರಸ್ತೆಗೆ ಇನ್ನು ಹೆಚ್ಚು ಮೈಲೇಜು ದರ ಕೊಡತಕ್ಕದ್ದು ಅವಶ್ಯವಿಲ್ಲವೆಂದು ಬೋರ್ಡಿನವರು ಅಭಿಪ್ರಾಯಪಡುತ್ತಾರಾಗಿ ತೀರ್ಮಾನಿಸಲಾಯಿತು.

ಮತ್ತು ವ್ಯಾಕ್ಸಿನೇಷನ್ ಡೆಪ್ಯುಟಿ ಇನ್‌ಸ್ಪೆಕ್ಟರ ತಲಬು ಸ್ಯಾನಿಟರಿ ಇಲಾಖೆಯಿಂದ ಕೊಡಲ್ಪಡುತ್ತೆಯಾಗಿ ಇವರಲ್ಲಿರುವ ಜವಾನನ ತಲಬು ಮತ್ತು ಭತ್ಯ ಸಹಾ ವರ್ಷಂ ಪ್ರತಿ (ಸುಮಾರು 95 ರೂಪಾಯಿಗಳು) ಸ್ಯಾನಿಟರಿ ಇಲಾಖೆಯಿಂದಲೆ ಕೊಡಲ್ಪಡುವದು ಸಹಜವಾಗಿ ಇರುತ್ತೆಯಾಗಿ ಈ ಮೊಬಲಗನ್ನು 1909-10ನೆ ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜೆಟ್ಟಿನಲ್ಲಿ ತಗ್ಗಿಸತಕ್ಕದ್ದೆಂದು ಸಹಾ ತೀರ್ಮಾನಿಸಲಾಯಿತು.

II. ಸೋಮವಾರಪೇಟೆ-ಕೊಣನೂರು ರಸ್ತೆ ತಯಾರಿ ಬಗ್ಗೆ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನಿಂದ ಮುಂದಿನ 5 ಸಾಲುಗಳಲ್ಲಿ 8,000 ರೂಪಾಯಿಗಳು ಮಾತ್ರ ಖರ್ಚುಮಾಡಬೇಕಾಗಿ ಇರುತ್ತೆ. ಬೋರ್ಡಿನ ಜಮಾ ಖರ್ಚುಗಳನ್ನು ಪರಾಂಬರಿಸಿದ್ದರಲ್ಲಿ 1908ನೆ ಜುಲೈ ಗುರ್‍ರೆಯಲ್ಲಿ ಕ್ಲುಪ್ತವಾದ ಮಿನಿಮಮ್‌ಗಿಂತ 5,429 ರೂಪಾಯಿಗಳು ಜಾಸ್ತಿಯಾಗಿ ಓಪನಿಂಗ್ ಬ್ಯಾಲನ್ಸು ಉಳಿಯುವದಾಗಿ ತಿಳಿಯುವದರಿಂದಲೂ ಮತ್ತು ಈ ರಸ್ತೆಮೇಲೆ ಉತ್ಪತ್ತಿಯಾಗಬಹುದಾದ ಟೋಲ್ ಸಹಾ ಬೋರ್ಡಿಗೆ ಆದಾಯವಾಗುತ್ತೆಯಾಗಿ ಈ ರಸ್ತೆಗೋಸ್ಕರ ಹೆಚ್ಚು ಹಣ ಕೊಡಲು ಆಗದೆಂದು ಹೇಳಲು ಕಾರಣವೇನೆಂದು ಕೇಳಿಬಂದ ಗವರ್ನಮೆಂಟ್ ಸೆಕ್ರೆಟರಿಯವರ 21—1—09ರ ಮರ್ಸ್ಕಂ 6807—L. B. 177-08-6ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಡಿಸ್ಟ್ರಿಕ್ಟ್ ಫಂಡ್ ಹಣವೂ ಈ ರಸ್ತೆ ಕಾಮಗಾರಿಗಿಂತಲೂ ಜರೂರಾದ ಇತರೆ ಕೆಲಸಗಳಿಗೆ ಬೇಕಾಗಿರುವದರಿಂದಲು ಮತ್ತು ಈ ರಸ್ತೆ ಪೂರ್ತಿಯಾಗುವವರಿವಿಗೂ ಟೋಲ್ ಗೇಟ್ ಸ್ಥಾಪಿಸುವದಕ್ಕೆ ಅವಕಾಶವಿಲ್ಲದಿರುವದಲ್ಲದೆ ಇನ್ನು 5 ಸಾಲುಗಳ ವರಿವಿಗೂ ಈ ರಸ್ತೆಯನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳತಕ್ಕ ಭಾರ ಸಹಾ ಡಿಸ್ಟ್ರಿಕ್ಟ್ ಬೋರ್ಡಿನಮೇಲೆ ಬೀಳುವದರಿಂದ ಈ ಹೊಸ ರಸ್ತೆಗೋಸ್ಕರ ಇಷ್ಟು ಹೆಚ್ಚು ಹಣವನ್ನು ಖರ್ಚುಮಾಡುವದು ಬೋರ್ಡಿನವರಿಗೆ ಸೂಕ್ತ ಕಾಣುವದಿಲ್ಲವಾಗಿ ತೀರ್ಮಾನಿಸಲಾಯಿತು.

ಮತ್ತು ಶ್ರೀರಂಗಾಲುಬಳಿ ಹಾಲಿ ಇರತಕ್ಕ ರಸ್ತೆಯಿಂದ ಸೋಮವಾರಪೇಟೆಗೆ ಸುಮಾರು 8 ಮೈಲಿ ಫಾಸಲೆ ಒಂದು ರಸ್ತೆ ತಯಾರಾದಲ್ಲಿ ಕೊಣನೂರಿಂದ ಸೋಮವಾರಪೇಟೆ ವರಿವಿಗೂ ಗಾಡಿಗಳು ಸಂಚಾರ ಮಾಡುವದಕ್ಕೆ ಕುರ್ಗ ಡಿಸ್ಟ್ರಿಕ್ಟ್ ಬೋರ್ಡಿನವರು ಅನುಕೂಲಪಡಿಸಿಕೊಟ್ಟಂತೆ ಆಗುತ್ತೆಯಾಗಿ ಪ್ರಸಕ್ತವಾದ ರಸ್ತೆಯು ಅವಶ್ಯವಿಲ್ಲವೆಂದು ಈ ಬೋರ್ಡಿನವರು ಅಭಿಪ್ರಾಯಪಡುತ್ತಾರಾಗಿ ತೀರ್ಮಾನಿಸಲಾಯಿತು. ಆಗ್ಯೆ ಕೊಣನೂರಿಂದ ಸೋಮವಾರ ಪೇಟೆಗೆ ಸುಮಾರು 16 ಮೈಲಿ ಫಾಸಲೆ ಆಗುತ್ತೆ.

III. ಪ್ಲೇಗು ಬಜೆಟ್ಟಿನಲ್ಲಿ ಸ್ಯಾಂಕ್ಷನ್ ಆಗಿರುವ 50,000 ರೂಪಾಯಿಗಳು ಪ್ಲೇಗು ಎಸ್ಟಾಬ್ಲಿಷ್‌ಮೆಂಟ್ ವಗೈರೆ ಖರ್ಚಿಗೋಸ್ಕರ ಉಪಯೋಗಿಸಲ್ಪಡುವದಾಗಿಯು, ಈಗ್ಯೆ 1,770 ರೂಪಾಯಿಗಳು ಹಾಸನ ಡಿಸ್ಟ್ರಿಕ್ಟಿಗೋಸ್ಕರ ಹಂಚಿಕೊಡಲು ಉದ್ದೇಶಿಸಿರುತ್ತೆಂತಲು ತಿಳಿಸಿ 1—8—08ರ ಮರ್ಸ್ಕಂ 1201-10—San, 250-07-7ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸಿನಲ್ಲಿ ಕೇಳಿದ್ದ ತಪಶೀಲುಗಳನ್ನು ಬೋರ್ಡಿನ ತೀರ್ಮಾನಗಳೊಂದಿಗೆ ಕಳುಹಿಸಿಕೊಡಬೇಕೆಂದು ಕೇಳಿಬಂದ ಸೆಕ್ರೆಟರಿಯವರ 17—2—09ರ ಮರ್ಕುಂ 8094—San. 250-07-21ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಈ ವಿಚಾರದಲ್ಲಿ ಈ ಕೆಳಗೆ ಕಂಡಂತೆ ತೀರ್ಮಾನಿಸಿ ಇರುತ್ತೆ.

1ನೆ ಐಟಂ ಪ್ಲೇಗು ಎಸ್ಟಾಬ್ಲಿಷ್‌ಮೆಂಟುಗಳು—ಈ ವಿಚಾರದಲ್ಲಿ ಬೋರ್ಡಿನವರು ಈ ಮೊದಲೇ ತೀರ್ಮಾನಿಸಿ ಇರುವುದನ್ನೇ ಈಗಲೂ ಮಂಜೂರ್‌ಮಾಡಿ ಇರುತ್ತೆ. 3ನೆ ಐಟಂ ವಿಚಾರವು ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟದ್ದಾಗಿ ಇರುತ್ತೆಯಾಗಿ ಈ ಬೋರ್ಡಿನ ತೀರ್ಮಾನ ಅವಶ್ಯವಿರುವದಿಲ್ಲ.

2 ಮತ್ತು 4ನೆ ನಂಬರ್ ಐಟಂ—ಪ್ಲೇಗು ಡಿಪಾರ್ಟ್‌ಮೆಂಟಿಗೋಸ್ಕರ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿರುವ 50,000 ರೂಪಾಯಿಗಳ ಪೈಕಿ ಈ ಡಿಸ್ಟ್ರಿಕ್ಟಿಗೆ ಕೊಟ್ಟಿರುವ 1,770 ರೂಪಾಯಿಗಳು (ಸೆಕ್ರೆಟರಿಯವರ 17—2—09ರ ಮರ್ಕುಂ 8094 San—250-07-21ನೆ ನಂಬರ್ ಡಾಕೆಟ್ಟಿನಲ್ಲಿ ಹೇಳಿ ಇರುವ) ಕೆಲಸಗಳಿಗೆ ಸಾಕಾಗುವದಿಲ್ಲ, ಯಾತಕ್ಕೆಂದರೆ, ಪ್ಲೇಗ್ ಮತ್ತು ಕಾಲರಾ ಛಾರ್ಜಿಗೋಸ್ಕರ 240 ರೂಪಾಯಿಗಳಿಗಿಂತ ಹೆಚ್ಚಾಗಿ ಈ ಬೋರ್ಡಿನಿಂದ ಕೊಡಲು ಸಾಧ್ಯವಿಲ್ಲಾ.

IV. I ಮತ್ತು IIನೆ ಕ್ಲಾಸು ಟ್ರಾವಲರ್ಸ್ ಬಂಗ್ಲಾಗಳ ಸಿಬ್ಬಂದಿಯನ್ನು ಕಮ್ಮಿ ಮಾಡಿ ಇದೇ ಸಂದರ್ಭದಲ್ಲಿ 3ನೆ ಕ್ಲಾಸು ಟ್ರಾವಲರ್ಸ್ ಬಂಗ್ಲಾಗಳ ಸಿಬ್ಬಂದಿಯನ್ನು ಸಹ ಕಮ್ಮಿ ಮಾಡತಕ್ಕ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಯೋಚಿಸಬಹುದೆಂಬ 13—11—08ರ ಮರ್ಸ್ಕಂ G. 2918-35—S. M. 56-08-11ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಓದಲಾಯಿತು.

ತೀರ್ಮಾನ—3ನೆ ಕ್ಲಾಸು ಟ್ರಾವಲರ್ಸ್ ಸಿಬ್ಬಂದಿಯು ಬಹಳ ಕಮ್ಮಿಯಾಗಿರುತ್ತೆಯಾಗಿ ಮುಸಾಫರಿ ಜನಗಳಿಗೆ ಅನಾನುಕೂಲವಾಗದೆ ಈ ಸಿಬ್ಬಂದಿಯನ್ನು ಕಮ್ಮಿಮಾಡಲು ಸಾಧ್ಯವಿಲ್ಲವೆಂದು ಈ ಬೋರ್ಡಿನವರು ಅಭಿಪ್ರಾಯಪಡುತ್ತಾರಾಗಿ ತೀರ್ಮಾನಿಸಲಾಯಿತು.

V. (a) ಇರಿಗೇಷನ್ ಸೆಸ್ ಫಂಡ್ ಬಾಬತು ಬಜೆಟ್ಟು ಅಂದಾಜಗಳನ್ನು ತಯಾರ್‌ಮಾಡತಕ್ಕ ವಿಚಾರದಲ್ಲಿ ಬಂದ 24-9-08ರ ಮರ್ಸ್ಕಂ R. 2086-96—L. R. 535-07-11ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ಪುನಹಾ ಓದಲಾಯಿತು.

(b) ಇರಿಗೇಷನ್ ಸೆಸ್ಸಿನ ಜಮಾ ಮತ್ತು ಖರ್ಚು ಯಾವ ಆಧಾರದ ಮೇಲೆ ಅಂದಾಜಾ ಮಾಡಲ್ಪಟ್ಟು ಬಜೆಟ್ಟು ಅಂದಾಜಗಳು ತಯಾರಾಗಿ ಸಬ್ಮಿಟ್ ಆಗತಕ್ಕದ್ದೆಂಬ ವಿಚಾರದಲ್ಲಿ ಬಂದ 16—12—08ರ ಮರ್ಸ್ಕಂ R. 3842-50—L. R. 161-08-4ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಸಹಾ ಓದಲಾಯಿತು.

(c) ಮತ್ತು ಇರಿಗೇಷನ ಸೆಸ್ಸು ಫಂಡಿನಿಂದ 1909–10ನೆ ಸಾಲನಲ್ಲಿ ಯಾವ ಯಾವ ಕೆಲಸಗಳು ನಡಿಯಬೇಕೋ ಆ ಬಗ್ಗೆ ತಯಾರಾದ ಲಿಸ್ಟು ಸಹಾ ಓದಲಾಯಿತು.

ತೀರ್ಮಾನ—ಹಾಲಿ ತಯಾರಾಗಿರುವ ಮತ್ತು ಬೋರ್ಡಿನವರು ಅನುಮೋದಿಸಿರುವ ಲಿಸ್ಟನ್ನು 24—9—08ರ ಮರ್ಕುಂ—R. 2086-96—L. R. 585-07—11ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು ಅನುಸರಿಸಿ ರವಿನ್ಯೂ ಕಮಿಷನರ ಸಾಹೇಬರವರಿಗೆ ಕಳುಹಿಸಬೇಕೆಂಬದಾಗಿ ತೀರ್ಮಾನಿಸಲಾಯಿತು.

VI. ಅಮೃತಮಹಲ ಬೀಜದ ಹೋರಿಗಳಿಗೋಸ್ಕರ ವಸೂಲಾಗತಕ್ಕ ರುಸುಂ ಇಷ್ಟೆಂದು ನಿರ್ಧರಿಸಿ ಬಂದ 16-1-09ರ ಮರ್ಕುಂ 6645–52—L. B. 170-07-13ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು.

ತೀರ್ಮಾನ—ಓದಿ ವಿಲೆ ಇಡಿಸಲಾಯಿತು. ಮತ್ತು ಈ ಪ್ರೊಸೀಡಿಂಗ್ಸ ವಿಚಾರವನ್ನು ಹಾಸನದ ತಾಲ್ಲೂಕು ಅಮಲ್ದಾರ್ರಿಗೂ ಮತ್ತು ಇದಕ್ಕೆ ಸಂಬಂಧಪಟ್ಟ ದೊಡ್ಡ ಮನುಷ್ಯರಿಗೂ ಸಹಾ ತಿಳಿಸಬೇಕಾಗಿ ತೀರ್ಮಾನಿಸಲಾಯಿತು.

VII. ಷೆಡ್ಯೂಲ್ ಆಫ್ ರೇಟ್ಸನಲ್ಲಿ ನಮೂದಿರುವ ದರಗಳನ್ನು ಅನುಮೋದಿಸಿ ಈ ದರಗಳನ್ನೇ ಜಾರೀಲಿ ತರತಕ್ಕದ್ದೆಂತಲೂ, ಪ್ರತಿ ವರ್ಷವೂ ಡಿಸ್ಟ್ರಿಕ್ಟು ಬೋರ್ಡಿನ ಮೊದಲನೆ ಮೀಟಿಂಗಿನಲ್ಲಿ ಈ ದರಗಳನ್ನು ಪುನರಾವಲೋಕನದಿಂದ, ಅವಶ್ಯವಿದ್ದರೆ ಬದಲಾಯಿಸಬಹುದೆಂತಲೂ ಮತ್ತು ಮರಹಮ್ಮತ್ ಇಲಾಖೆಯಲ್ಲಿ ಜಾರಿಯಲ್ಲಿರುವಂತೆ ಕಮ್ಮಿ ದರದಲ್ಲಿ ಕೆಲಸ ನಡಿಸುವದಕ್ಕೆ ಪೋಟಾ ಪೋಟಿಗೆ ಅವಕಾಶ ಕೊಡಬಹುದಾಗಿ ಬಂದ 6—2—09ರ ಮರ್ಕುಂ 7397-405—L. B. 432-06ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು.

ತೀರ್ಮಾನ—ರಿಕಾರ್ಡು ಮಾಡಲಾಯಿತು ಮತ್ತು ಹಾಲಿ ಜಾರೀಲಿರುವ ದರಗಳನ್ನು ಸಂಬಂಧಪಟ್ಟ ಆಫಿಸರುಗಳಿಗೆ ತಿಳಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

VIII. 1908ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 313ನೆ ನಂಬರು ವಿಷಯವಾದ ಅರೆಹಳ್ಳಿ–ಚೀಕನಳ್ಳಿ ರಸ್ತೆಯನ್ನು ಚಿಕ್ಕಮಗಳೂರುವರಿವಿಗೂ ಬಡಾವಣೆ ಮಾಡುವ ವಿಚಾರದಲ್ಲಿ ಕಡೂರು ಡಿಸ್ಟ್ರಿಕ್ಟು ಬೋರ್ಡಿನವರೊಂದಿಗೆ ಯೋಚಿಸತಕ್ಕದ್ದೆಂದು ಬಂದ ಜನರಲ್ ಮತ್ತು ರವಿನ್ಯೂ ಸೆಕ್ರೆಟರಿಯವರ 9—2—09ರ ಮರ್ಕುಂ 7599—L. B. 262–08ನೆ ನಂಬರ ಡಾಕೆಟ್ ಓದಲಾಯಿತು.

ತೀರ್ಮಾನ—ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರು ಅಜಮಾಯಿಷಿ ಮಾಡಿದನಂತರ ಈ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಬರುವ ಮೇ ಮಾಹೆ 3ನೆ ತಾರೀಖಿನಲ್ಲಿ ನಡಿಯುವ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನಲ್ಲಿ ಈ ವಿಚಾರವು ಇದರ ಹಿಂದಿನ ನಡವಳಿಕೆಗಳೊಂದಿಗೆ ಯೋಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

IX. 14—2—08ರ ಮರ್ಕುಂನಲ್ಲಿ ನಡದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ 1ನೆ ತೀರ್ಮಾನ ಅನುಸರಿಸಿ ಅಸಲಿ ಗ್ರಾಮವಾದ ಕೆಂಕೆರೆ ಗ್ರಾಮದ ದಾಖಲೆ ಗ್ರಾಮಗಳ ಪ್ರಜಾ ಸಂಖ್ಯೆ ಮತ್ತು ಮನೆಗಳ ಸಂಖ್ಯೆ ಮುಂತಾದ ತಪ್ಸೀಲು ತಿಳಿಸುವ ಅರಸೀಕೆರೆ ತಾಲ್ಲೂಕು ಅಮಲ್ದಾರ್ರ 9—1—09ರ ಮರ್ಕುಂ 306—2579ನೆ ನಂಬರ ರಿಪೋರ್ಟು ಆಖೈರುಳ್ಳ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ಆ ಪ್ರಾಂತ್ಯ ಜಮಾಬಂದಿ ಮಾಡುವವೇಳೆ ಸ್ಥಳ ಅಜಮಾಯಿಷಿಯಿಂದ ತಮ್ಮ ಅಭಿಪ್ರಾಯ ತಿಳಿಸಲು ಈ ರಿಕಾರ್ಡು ಯಾವತ್ತು ಜನರಲ್ ಅಸಿಸ್ಟೆಂಟ್ ಕಮಿಷನರವರಿಗೆ ಕಳುಹಿಸಿಕೊಡಬೇಕಾಗಿ ತೀರ್ಮಾನಿಸಲಾಯಿತು.

X. ಅರಸೀಕೆರೆ ತಾಲ್ಲೂಕು ಸೋಮಶೆಟ್ಟಿಹಳ್ಳಿ ಗ್ರಾಮದ ಭಾವಿಯನ್ನು ಬೇಸಿಗೆ ಕಾಲದಲ್ಲೂ ನೀರು ಸಮೃದ್ಧಿಯಾಗಿರತಕ್ಕ ಬಗ್ಗೆ ಈ ಭಾವಿಯನ್ನು ಇನ್ನೂ ಮೂರು ಆಳು ವೃದ್ಧಿ ಇಳಿಸತಕ್ಕ ಬಗ್ಗೆ ತಯಾರಾದ 464 ರೂಪಾಯಿನ ರಿವೈಜ್ಡು ಅಂದಾಜ (ಪೂರ್ವದ ಅಂದಾಜ 250 ರೂಪಾಯಿಗೆ) ಮಂಜೂರಿ ಬಗ್ಗೆ ಕಳುಹಿಸಿರುತ್ತೆಂಬ ಜನರಲ್ ಅಸಿಸ್ಟೆಂಟ್ ಕಮಿಷನರವರ 11-2-09ರ ಮರ್ಕುಂ 1214—3043ನೆ ನಂಬರ ಯಾದಿ ಅಂತ್ಯವಾದ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ಈ 464 ರೂಪಾಯಿನ ರಿವೈಜ್ಡು ಅಂದಾಜ ಮಂಜೂರ್ಮಾಡಿರುತ್ತೆಂತಲು ಮತ್ತು ಹೆಚ್ಚಿಗೆಯಾದ 214 ರೂಪಾಯಿಗಳನ್ನು 1908—09ನೆ ಸಾಲು ಬಡ್ಜೆಟ್ಟನಲ್ಲಿ ಇನ್‌ಕಂಪ್ಲೀಟು ಮತ್ತು ಇತರೆ ಕೆಲಸಗಳಿಗೋಸ್ಕರ ಸ್ಯಾಂಕ್ಷನ್ ಆಗಿರುವ 1,000 ರೂಪಾಯಿ ಪೈಕಿ ಕೊಡತಕ್ಕದ್ದೆಂದು ಸಹಾ ತೀರ್ಮಾನಿಸಲಾಯಿತು.

XI. ಮಸವನಘಟ್ಟದ ಭಾವಿಯನ್ನು ಶೋಧಿಸಿ ಆಳ ಮಾಡತಕ್ಕ ಬಗ್ಗೆ 499 ರೂಪಾಯಿಗಳಿಗೆ ಬಂದು ರಿವೈಜ್ಡು ಅಂದಾಜವನ್ನು (ಪೂರ್ವದ ಅಂದಾಜ 200 ರೂಪಾಯಿಗಳಿಗೆ) ಕಳುಹಿಸಿರುತ್ತೆಂಬ ಚನ್ನರಾಯಪಟ್ಣ ತಾಲ್ಲೂಕು ಅಮಲ್ದಾರ್ರ 6—12—08ರ ಮರ್ಕುಂ 670—1231ನೆ ನಂಬರು ರಿಪೋರ್ಟು ಅಂತ್ಯವಾದ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಅಂದಾಜವನ್ನು ಡಿಸ್ಟ್ರಿಕ್ಟು ಬೋರ್ಡು ಆಫಿಸಿನಲ್ಲಿ ಚಕ್ಕು ಮಾಡಿದ್ದರಲ್ಲಿ 464 ರೂಪಾಯಿಗಳಿಗೆ ಇಳಿಸಿರುವದನ್ನು ಮಂಜೂರ್ಮಾಡಬಹುದೆಂತಲೂ ಹಾಲಿ ಹೆಚ್ಚಾಗಿ ಬೇಕಾಗಿರುವ 264 ರೂಪಾಯಿ ಹಾಲಸಾಲ ಡಿಸ್ಟ್ರಿಕ್ಟು ಫಂಡ ಬಡ್ಜೆಟ್ಟು ಬಿ. ಪಬ್ಲಿಕ್ ವರ್ಕ್ಸ್ I ಒರಿಜನಲ್ ವರ್ಕ್ಸನಲ್ಲಿ ನೀಂಕಲಾ ವಗ್ಯೆರೆ ಕಾಂಗಾರಿಗಳಿಗಾಗಿ ದಾಖಲಾಗಿರುವ 1,000 ರೂಪಾಯಿಗಳ ಪೈಕಿ ವದಗಿಸಬಹುದೆಂತ ತೀರ್ಮಾನಿಸಲಾಯಿತು.

XII. ಹಿರಿಸಾವೆ ಗ್ರಾಮಕ್ಕೆ ಸಮೀಪದಲ್ಲಿ ಲೋಕಲ್ ಫಂಡು ಡಿಸ್ಪೆನ್ಸರಿಗಳು ಯಾವದು ಇಲ್ಲವಾದ ಪ್ರಯುಕ್ತ ಈ ಗ್ರಾಮದಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಬೇಕೆಂದು ಹಿರಿಸಾವೆ ಯೂನಿಯನ್ ಪಂಚಾಯಿತರವರು ತೀರ್ಮಾನಿಸಿದ ತೀರ್ಮಾನದ ಕಾಪಿಯನ್ನು ಕಳುಹಿಸಿರುತ್ತೆಂಬ ಜನರಲ್ ಅಸಿಸ್ಟೆಂಟ್ ಕಮಿಷನರವರ 18—1—09ರ ಮರ್ಕುಂ 1033—2705ನೆ ನಂಬರು ಯಾದಿ ಆಖೈರಾದ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ಈ ಗ್ರಾಮದಲ್ಲಿ ವೈದ್ಯಶಾಲೆಗೋಸ್ಕರ ಮೊದಲು ಒಂದು ಕಟ್ಟಡ ಅವಶ್ಯವೆಂಬ ಭಾಗ ಮತ್ತು ಈ ಗ್ರಾಮಕ್ಕೆ 10 ಮೈಲಿ ಫಾಸಲೆಯಲ್ಲಿರುವ ಶ್ರವಣಬೆಳಗುಳದಲ್ಲಿ ಒಂದು ವೈದ್ಯಶಾಲೆ ಸ್ಥಾಪಿಸುವದು ಮಂಜೂರಾಗಿರುತ್ತೆಯಾಗಿ ಹಿರಿಸಾವೆ ಗ್ರಾಮಸ್ಥರು ಸದ್ಯಕ್ಕೆ ಈ ವೈದ್ಯಶಾಲೆಗೆ ಹೋಗಿ ಬರುತ್ತಿರಬಹುದಾಗಿಯು ಹಾಲಿ ಹಣವಿಲ್ಲವಾಗಿ ಒಂದೇ ತಾಲ್ಲೂಕಿನಲ್ಲಿ ಇಷ್ಟು ಕ್ಷಿಪ್ರದಲ್ಲಿ ಎರಡು ವೈದ್ಯಶಾಲೆಗಳನ್ನು ಸ್ಥಾಪಿಸತಕ್ಕದ್ದು ಸಾಧ್ಯವಲ್ಲವೆಂಬ ಭಾಗ ಸಹಾ ಯೂನಿಯನ್ ಪಂಚಾಯಿತರವರಿಗೆ ತಿಳಿಸಬೇಕಾಗಿ ತೀರ್ಮಾನಿಸಲಾಯಿತು.

XIII. ಸಿದ್ದಾಪುರಗ್ರಾಮವು ಒಂದು ಮೂಲೆಯಲ್ಲಿದ್ದರು ನದಿಯಿಂದ ಆವರಿಸಲ್ಪಟ್ಟು ಗ್ರಾಮಗಳ ಮಧ್ಯದಲ್ಲಿರುತ್ತೆಂತಲೂ, ಕುಂದೂರಿನಲ್ಲಿ ಸಂತೆ ನಡಿಯುವದಾದರೆ ಈ ಗ್ರಾಮಸ್ಥರಿಗೆ ಅನಾನುಕೂಲವಾಗುವದಾಗಿ ಸಹಾ ತಿಳಿಸುವ ಆಲೂರು ಡೆಪ್ಯುಟಿ ಅಮಲ್ದಾರರ 30—1—09ರ ಮರ್ಕುಂ 524-2241ನೆ ನಂಬರು ರಿಪೋರ್ಟು ಆಖೈರುಳ್ಳ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ಸ್ಥಳ ಅಮಲ್ ತಿಳಿದು ಅಜಮಾಯಿಷಿಮಾಡಿ ತಮ್ಮ ಅಭಿಪ್ರಾಯ ತಿಳಿಸಬೇಕಾಗಿ ಹುಜೂರು ಜಮಾಬಂದಿ ಆಫೀಸರಿಗೆ ರಿಕಾರ್ಡು ಯಾವತ್ತು ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

XIV. ಅರ್ಕಲಗೂಡು ತಾಲ್ಲೂಕು ಮುತ್ತುಗದ ಹೊಸೂರು ಗ್ರಾಮದ ಭಾವಿಯಲ್ಲಿ ಘಟ್ಟಿಕಲ್ಲು ಸಿಕ್ಕಿರುವದರಿಂದಲೂ ಮತ್ತು ಈ ಭಾವಿ ಕೆಲಸವು ಅತ್ಯವಶ್ಯಕವಾಗಿ ಇರುವದರಿಂದಲೂ 792 ರೂಪಾಯಿಗಳಿಗೆ (ಒರಿಜನಲ್ ಅಂದಾಜ ಗ್ರಾಮಸ್ಥರು ಕೊಟ್ಟಿರುವ 100 ರೂಪಾಯಿಗಳ ಕಂಟ್ರಿಬ್ಯೂಷನ್ ಸೇರಿ 451 ರೂಪಾಯಿಗಳಿಗೆ ತಯಾರಾಗಿ ಇತ್ತು.) ತಯಾರ್ಮಾಡಿಸಿ ಮಂಜೂರಿ ಬಗ್ಗೆ ಕಳುಹಿಸಿ ಇರುತ್ತೆಂಬ ಅರ್ಕಲಗೂಡು ತಾಲ್ಲೂಕು ಅಮಲ್ದಾರರ 27—1—09ರ ಮರ್ಕುಂ 677—2117ನೆ ನಂಬರು ರಿಪೋರ್ಟು ಆಖೈರಾದ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—792 ರೂಪಾಯಿನ ಈ ರಿವೈಜ್ಡ್ ಅಂದಾಜವನ್ನು ಗವರ್ನಮೆಂಟಿಗೆ ಮಂಜೂರಿ ಬಗ್ಗೆ ಕಳುಹಿಸಿಕೊಡಬೇಕೆಂತಲು ಹೆಚ್ಚಿಗೆ ಮೊಬಲಗು 341 ರೂಪಾಯಿಗಳನ್ನು ಚಾಲ್ತಿ ಸಾಲ್ ಡಿಸ್ಟ್ರಿಕ್ಟ್ ಫಂಡ ಬಡ್ಜೆಟ್ಟಿನಲ್ಲಿ ಬಿ. ಪಿ. ಡಬ್ಲ್ಯು. I ಒರಿಜನಲ್ ವರ್ಕ್ಸ್ ಇನ್ ಕಂಪ್ಲೀಟು ಮತ್ತು ಇತರ ಕೆಲಸಗಳಿಗೆ ಎಂಬ ಹೆಡ್ಡಿನಲ್ಲಿ ಮಂಜೂರಾಗಿ ಇರುವ 1,000 ರೂಪಾಯಿಗಳ ಪೈಕಿ ಕೊಡತಕ್ಕದ್ದೆಂದು ತೀರ್ಮಾನಿಸಲಾಯಿತು.

XV. ಬೇಲೂರು ತಾಲ್ಲೂಕು ರಾಜನಸಿರಿಯೂರು ಗ್ರಾಮದಲ್ಲಿ ಅಜಮಾಯಿಷಿ ತರೀಕು ಒಂದು ಭಾವಿಯನ್ನು ತೆಗಿಯುವದಕ್ಕೆ 50 ರೂಪಾಯಿಗಳಿಗೆ ಒಂದು ಅಂದಾಜ ತಯಾರ್ಮಾಡಿಸಿ ಮಂಜೂರಿ ಬಗ್ಗೆ ಕಳುಹಿಸಿ ಈ ಭಾವಿ ತೆಗದನಂತರ ಫಲಿತಾಂಶ ತಿಳಿದು ಮತ್ತೊಂದು ಅಂದಾಜ ಕಳುಹಿಸುತ್ತೆಂಬ ಸಕಲೇಶಪುರದ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರ 4—1—09ರ ಮರ್ಕುಂ 244—2510ನೆ ನಂಬರು ಯಾದಿ ಆಖೈರುಳ್ಳ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ರಾಜನಸಿರಿಯೂರು ಗ್ರಾಮವು ಕ್ಷಾಮಪೀಡಿತವಾಗಿರುವದರಿಂದ ಕೂಲಿ ಅಪೇಕ್ಷೆಯುಳ್ಳ ಜನಗಳಿಗೆ ಕೆಲಸವನ್ನು ಒದಗಿಸಿಕೊಡತಕ್ಕ ಬಗ್ಗೆ ಈ ಭಾವಿ ಕೆಲಸಕ್ಕಾಗಿ 50 ರೂಪಾಯಿಗಳನ್ನು ಮಂಜೂರ್ಮಾಡಿರುತ್ತೆಯಾಗಿ ಈ ಹಣವು ಹಾಲಿಸಾಲ ಡಿಸ್ಟ್ರಿಕ್ಟ್ ಫಂಡ ಬಡ್ಜೆಟ್ಟಿನಲ್ಲಿ ದಾಖಲಾಗಿರುವ ಬೇಲೂರು ತಾಲ್ಲೂಕು ಭಂಡಾರಿಕಟ್ಟೆಯಲ್ಲಿ ತೆಗಿಯುವ ಭಾವಿಗಾಗಿ ಇರುವ 250 ರೂಪಾಯಿ ಪೈಕಿ 50 ರೂಪಾಯಿಗಳನ್ನು ಇದಕ್ಕೆ ಉಪಯೋಗಿಸಿಕೊಳ್ಳಬಹುದೆಂತ ತೀರ್ಮಾನಿಸಲಾಯಿತು.

XVI. ಚನ್ನರಾಯಪಟ್ಟಣ ತಾಲ್ಲೂಕು ಕಬ್ಬಾಳು ಗ್ರಾಮದಲ್ಲಿ ಒಂದು ಭಾವಿಯನ್ನು ಆಳಮಾಡತಕ್ಕ ಬಗ್ಗೆ 800 ರೂಪಾಯಿಗಳಿಗೆ ಒಂದು ಅಂದಾಜ ಮಂಜೂರಿ ಬಗ್ಗೆ ಕಳುಹಿಸಿರುತ್ತೆಂತಲೂ ಈ ಕೆಲಸಕ್ಕಾಗಿ ರೈತರು 800 ರೂಪಾಯಿ ಕಂಟ್ರಿಬ್ಯೂಷನ್ ಕೊಟ್ಟಿರುತ್ತಾರೆಂತಲೂ ಈ ಮೊಬಲಗು ಡಿಸ್ಟ್ರಿಕ್ಟ್ ಫಂಡ ಡಿಪಾಜಿಟ್ಟಿನಲ್ಲಿರುತ್ತೆಯಾಗಿಯೂ ಮತ್ತು ಈ ಕೆಲಸವು ಜರೂರಾದ್ದರಿಂದ ಕೆಲಸವು ಪ್ರಾರಂಭವಾಗಿ 422 ರೂಪಾಯಿ ವರಿವಿಗೂ ಕೆಲಸ ನಡದಿರುವದರಿಂದ ಈ ಮೊಬಲಗನ್ನು ಕಂಟ್ರಾಕ್ಟದಾರರಿಗೆ ಪಾವತಿ ಬಗ್ಗೆ ಅಪ್ಪಣೆಯಾಗಬೇಕೆಂದು ಬಂದ ಚನ್ನರಾಯಪಟ್ಟಣ ತಾಲ್ಲೂಕು ಅಮಲ್ದಾರರ 10—1—09ರ ಮರ್ಕುಂ 842ನೆ ನಂಬರು ರಿಪೋರ್ಟು ಆಖೈರಾದ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ಅಮಲ್ದಾರರು ತಪ್ಪು ತಿಳುವಳಿಕೆಯಿಂದ ನಡೆದ ಕೆಲಸದ ಬಿಲ್ಲು ಮೊಬಲಗು ಈಗ ಪಾವತಿ ಮಾಡಲು ಅವಕಾಶವಿಲ್ಲವೆಂತಲೂ ಆದರೆ ಅಮಲ್ದಾರರಿಂದ ಹಾಲಿ ತಲ್ಪಿ ಇರುವ 800 ರೂಪಾಯಿನ ಅಂದಾಜವನ್ನು ಮಂಜೂರಿ ಬಗ್ಗೆ ಗವರ್ನಮೆಂಟಿಗೆ ಕಳುಹಿಸಬೇಕೆಂತಲು ಈ ಮೊಬಲಗನ್ನು ಜನಗಳಿಂದ ಕಂಟ್ರಿಬ್ಯೂಷನ್ ವಸೂಲಾಗಿ ಡಿಪಾಜಿಟ್ಟಿನಲ್ಲಿರುವ 800 ರೂಪಾಯಿನಲ್ಲಿ ಕೊಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

XVII. ಹಳೇಬೀಡು ಯೂನಿಯನ್ ರಸ್ತೆ ಮತ್ತು ಡ್ರೇನ್ ರಿಪೇರಿ ಕೆಲಸವನ್ನು ಈ ವರ್ಷ ಮುನ್ನಾಮಾಡಿ ಈ ಕೆಲಸಕ್ಕಾಗಿ ಮಂಜೂರಾಗಿ ಇರುವ 100 ರೂಪಾಯಿಗಳನ್ನು ಹಳೇಬೀಡು ಹೋಬಳಿಯಲ್ಲಿ ಕ್ಷಾಮಪೀಡಿತವಾದ ಗ್ರಾಮಗಳ ಕೂಲಿ ಜನಗಳಿಗೆ ಕೂಲಿ ದೊರೆಕತಕ್ಕ ಬಗ್ಗೆ ಪ್ರೆಸಿಡೆಂಟ್ ಸಾಹೇಬರವರು ಸ್ಯಾಂಕ್ಷನ್ ಮಾಡಿ ಇರುವ ರಾಜನಸಿರಿಯೂರಿನಿಂದ ಹಳೇಬೀಡುವರಿವಿಗಿನ ಗಾಡಿ ರಸ್ತೆಯನ್ನು ಅಭಿವೃದ್ಧಿ ಪಡಿಸತಕ್ಕ ಬಗ್ಗೆ (ಇದು ಬಡ್ಜೆಟ್ಟಿನಲ್ಲಿ ದಾಖಲಾಗದೆ ಇರುವ ಕೆಲಸ) ಉಪಯೋಗಿಸತಕ್ಕದ್ದಾಗಿರುತ್ತೆಯಾಗಿ ಈ ಕೆಲಸಕ್ಕಾಗಿ 100 ರೂಪಾಯಿಗೆ ಒಂದು ಅಂದಾಜ ತಯಾರ್ಮಾಡಿಸಿ ಸ್ಯಾಂಕ್ಷನ್ ಬಗ್ಗೆ ಕಳುಹಿಸಿ ಇರುತ್ತೆಂಬ ಸಕಲೇಶಪುರದ ಅಸಿಸ್ಟೆಂಟ ಕಮಿಷನರವರ 5—2—09ರ ಮರ್ಕುಂ 305ನೆ ನಂಬರು ಮೆಮೊ ಓದಲಾಯಿತು.

ತೀರ್ಮಾನ—ಈ ಜರೂರಾತಿ ಸಂದರ್ಭದಲ್ಲಿ ಪ್ರೆಸಿಡೆಂಟ್ ಸಾಹೇಬರು ಮಾಡಿರುವ ಏರ್ಪಾಟನ್ನು ಒಪ್ಪಿರುತ್ತೆಯಾಗಿಯೂ ಮೇಲ್ಕಂಡಂತೆ 100 ರೂಪಾಯಿಯನ್ನು ಈ ನಾನ್ ಬಡ್ಜೆಟೆಡ್ ಕೆಲಸಕ್ಕೆ ಉಪಯೋಗಿಸಲು ಗವರ್ನಮೆಂಟಿನವರ ಮಂಜೂರಾತಿ ಪಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

XVIII. ಬಾಣಾವರ, ಗಂಡಸಿ, ಕಂಕೆರೆ ಮತ್ತು ಜಾವಗಲ್ ಯೂನಿಯನ್‌ಗಳಲ್ಲಿ ರಸ್ತೆ ರಿಪೇರಿ ಬಗ್ಗೆ ಮಂಜೂರಾಗಿ ಇರುವ 200 ರೂಪಾಯಿಗಳನ್ನು ಕಣಕಟ್ಟೆ ಮತ್ತು ಕಿತ್ತನಕೆರೆ ಗ್ರಾಮಗಳಲ್ಲಿ ಕ್ಷಾಮಪೀಡಿತರಾದ ಕೂಲಿಗಳಿಗೆ ಕೂಲಿ ದೊರಕ ತಕ್ಕ ಬಗ್ಗೆ ಈ ಎರಡು ಗ್ರಾಮಗಳಲ್ಲಿ ಪಾಪಾಸುಕಳ್ಳಿ ನಿವೃತ್ತಿ ಮಾಡತಕ್ಕ ಬಗ್ಗೆ ಪ್ರತಿ ಗ್ರಾಮಕ್ಕೆ 100 ರೂಪಾಯಿಮೇರೆ ಖರ್ಚು ಮಾಡಬೇಕಾಗಿ ಪ್ರೆಸಿಡೆಂಟ್ ಸಾಹೇಬರವರು ಮಂಜೂರ್ಮಾಡಿ ಇರುವ ನಾನ್ ಬಡ್ಜೆಟ್ ಕೆಲಸದ ಲಿಸ್ಟು ಓದಲಾಯಿತು.

ತೀರ್ಮಾನ—ಈ ಜರೂರಾತಿ ಸಂದರ್ಭದಲ್ಲಿ ಪ್ರೆಸಿಡೆಂಟ್ ಸಾಹೇಬರವರ ಏರ್ಪಾಡನ್ನು ಅನುಮೋದಿಸಿರುವದಾಗಿಯೂ ಈ ಎರಡು ಕೆಲಸಗಳನ್ನು ಪ್ರತಿ ಕೆಲಸಕ್ಕು 100 ರೂಪಾಯಿನಂತೆ ಖರ್ಚು ಮಾಡಿ ನಡಿಸತಕ್ಕ ಬಗ್ಗೆ ಗವರ್ನ್ಮೆಂಟ್ ಮಂಜೂರಾತಿ ಪಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

XIX. ಹಾಸನದ ತಾಲ್ಲೂಕು ಗ್ರಾಮದ ಕಸಬಾದಲ್ಲಿ ನೀರಿನ ತುಠಾರೆಯು ಹೆಚ್ಚಾಗಿ ಇರುವದರಿಂದ ಈ ಯೂನಿಯನ್‌ನಲ್ಲಿ ಮಂಜೂರಾಗಿ ಇರುವ ರಸ್ತೆ ರಿಪೇರಿ ಕೆಲಸವನ್ನು ಈ ವರುಷದಲ್ಲಿ ಮನ್ನಾಮಾಡಿ ಇದಕ್ಕಾಗಿ ಮಂಜೂರಾಗಿ ಇರುವ 100 ರೂಪಾಯಿಗಳ ಪೈಕಿ 70 ರೂಪಾಯಿಗಳನ್ನು ಖರ್ಚುಮಾಡಿ ಗ್ರಾಮದ ಕಸಬಾದಲ್ಲಿ ಇರುವ ಸೊಪ್ಪಿನ ತೋಟದ ಕಲ್ಯಾಣಿಯನ್ನು ಶೋಧಿಸಿ ದುರಸ್ತು ಮಾಡತಕ್ಕ ಬಗ್ಗೆ ಒಂದು ಅಂದಾಜವನ್ನು ಮತ್ತು ಹಂಗಾಮಿಯಾಗಿ ತೋಡಿರತಕ್ಕ ಭಾವಿಯನ್ನು ಇನ್ನು ಆಳಮಾಡತಕ್ಕ ಬಗ್ಗೆ 9 ರೂಪಾಯಿಗೆ ಒಂದು ಅಂದಾಜವನ್ನು ಈಮೇರೆ ಈ ಎರಡು ನಾನ್ ಬಡ್ಜೆಟೆಡ್ ಕೆಲಸಗಳಿಗೆ ಅಂದಾಜಗಳನ್ನು ಮಂಜೂರಿ ಬಗ್ಗೆ ಕಳುಹಿಸಿರುತ್ತೆಂಬ ಹಾಸನ ತಾಲ್ಲೂಕು ಅಮಲ್ದಾರ್ರ 16—2—09ರ ಮರ್ಕುಂ 626—3006ನೆ ನಂಬರು ಆಖೈರಾದ ರಿಕಾರ್ಡು ಯಾವತ್ತು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಕೆಲಸಗಳು ನಡಿಸುವದು ಅತಿ ಜರೂರಾಗಿ ಇದ್ದದರಿಂದ ಪ್ರೆಸಿಡೆಂಟರವರು ಮಾಡಿರುವ ಮಂಜೂರಾತಿ ಕೆಲಸವನ್ನು ಅನುಮೋದಿಸಿದ್ದಲ್ಲದೆ ಈ ಬಡ್ಜೆಟ್ಟಿನಲ್ಲಿ ದಾಖಲಾಗದೆ ಇರುವ ಕೆಲಸಗಳನ್ನು ನಡಿಸುವದಕ್ಕೋಸ್ಕರ ಗವರ್ನ್ಮೆಂಟಿನವರ ಮಂಜೂರಾತಿ ಬಗ್ಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

XX. ಈ ಕೆಳಗೆ ಕಂಡವುಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಗೆ ಓದಲಾಯಿತು.

(1) ಆಲೂರು ಸಬ್ ತಾಲ್ಲೂಕು ಹಂಚಿಹಳ್ಳಿ ಗ್ರಾಮದಲ್ಲಿ ಬಾಳೆಗೌಡನು ತೆಗಿಸಿರುವ ಭಾವಿಯನ್ನು ವಹಿಸಿಕೊಂಡು ಈ ಭಾವಿಯನ್ನು ಇನ್ನೂ ಆಳಮಾಡತಕ್ಕ ನಾನ್ ಬಡ್ಜೆಟ್ಟು ಕೆಲಸವನ್ನು ಮಂಜೂರು ಮಾಡಿರುವದಾಗಿ ಬಂದ 27—1—09ರ ಮರ್ಕುಂ 7011-2—L. B. 224-08-2ನೆ ನಂಬರು ಗವರ್ನ್ಮೆಂಟ್ ಪ್ರೊಸಿಡಿಂಗು ಓದಲಾಯಿತು.

(2) ಸಕ್ಲೇಶಪುರದ ಇನಸ್ಪಲೇಷನ್ ಛತ್ರಕ್ಕೆ ಒಂದು ಕಕ್ಕಸ ಕಟ್ಟಿಸತಕ್ಕ ಬಗ್ಗೆ 148 ರೂಪಾಯಿಗಳನ್ನು 1909-10ನೆ ಸಾಲ ಬಡ್ಜೆಟ್ಟಿನಲ್ಲಿ ದಾಖಲ್ಮಾಡುತ್ತೆಂಬ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟ್ ಸಾಹೇಬರವರ ಲೆಟರನ್ನು ರಿಕಾರ್ಡು ಮಾಡಿರುತ್ತೆಂಬ 27—1—09ರ ಮರ್ಕುಂ 703-8-9—Ml. 39-07-4ನೆ ನಂಬರು ಗವರ್ನ್ಮೆಂಟ್ ಪ್ರೊಸಿಡಿಂಗ್ಸು.

(3) ಶ್ರೀರಾಮದೇವರ ಡ್ಯಾಮ್ ಬಳಿ ಇರತಕ್ಕ ಮುಸಾಫರಖಾನಾ ರಿಪೇರಿ ಮಾಡತಕ್ಕ ನಾನ್ ಬಡ್ಜೆಟೆಡ್ ಕೆಲಸವನ್ನು 70 ರೂಪಾಯಿಗಳು ಮುಟ್ಟಿಸಿ ನಡಿಸಬೇಕೆಂದು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರ ಶಿಫಾರ್ಸಿನಂತೆ ಮಂಜೂರ್ಮಾಡಿರುತ್ತೆಂಬ 6—2—09ರ ಮರ್ಕುಂ 7390-1—L. B. 235-08-2ನೆ ನಂಬರ್ ಗವರ್ನ್ಮೆಂಟ್ ಪ್ರೊಸಿಡಿಂಗ್ಸು.

(4) ಬರುವ ಸಾಲ ಲಾಗಾಯಿತು ಅರ್ಕಲಗೂಡು ತಾಲ್ಲೂಕು ಮಲ್ಲಿಪಟ್ಟಣದ ಮುಸಾಫರಖಾನೆಗೆ ಮಾಹೆಯಾನಾ 6 ರೂಪಾಯಿ ತಲಬಿನ ಮೇಲೆ ಒಬ್ಬ ಕೇರಟೇಕರನ್ನು ನೇಮಕಮಾಡಿಕೊಳ್ಳತಕ್ಕದ್ದು ಮಂಜೂರ್ಮಾಡಿ ಬಂದ 13—2—09ರ ಮರ್ಕುಂ 7887-8—L. B. 244-82ನೆ ನಂಬರು ಗವರ್ನ್ಮೆಂಟ್ ಪ್ರೊಸಿಡಿಂಗ್ಸ್.

(5) ಜಾವಗಲ್ಲು ಮುಸಾಫರಖಾನಾ ರಿಪೇರಿ ಬಗ್ಗೆ ಮಂಜೂರಾಗಿ ಇರುವ 50 ರೂಪಾಯಿಗಳ ಪೈಕಿ 45 ರೂಪಾಯಿಗಳು ಮುಟ್ಟಿಸಿ ಕಣಕಟ್ಟೆ ಮುಸಾಫರಖಾನಾ ದುರಸ್ತು ಮಾಡಿಸತಕ್ಕ ನಾನ್ ಬಡ್ಜೆಟ್ಟು ಕೆಲಸವನ್ನು ಮಂಜೂರ್ಮಾಡಿರುತ್ತೆಂಬ 15—2—09ರ ಮರ್ಕುಂ 7962-3—L. B. 273-08-2ನೆ ನಂಬರ್ ಗವರ್ನ್ಮೆಂಟ್ ಪ್ರೊಸಿಡಿಂಗ್ಸ್.

	24	523	ದೇವಪಾರ್ಥಿವರ ಬೀದಿ ...	,, ಕೃಷ್ಣಪ್ಪಾಜಿಯವರು
	25	541	ದಾದೇರಾಯರ ಬೀದಿ ...	,, ಪುರೋಹಿತ ಪುಟ್ಟಣ್ಣ ಶಾಸ್ತ್ರಿಗಳು
	26	534	,, ...	,, ಚಿಕ್ಕ ಲಿಂಗಪ್ಪಾಜಿಯವರು
	27	578	ಬಾಳೇಅರಸಿನವರ ಬೀದಿ ...	,, ಮನ್ನಾರು ಕೃಷ್ಣಶೆಟ್ರು
	28	490	ಮಾರಿಗುಡಿಗಲ್ಲಿ ...	,, ನಾಗಮಂಗಲದ ತಿರುಮಲಾಚಾರ್‍ರು
	29	456	ದೇವಪಾರ್ಥಿವರ ಬೀದಿ ...	,, ಅಯಾಚಿತ ನಾರಾಯಣ ದೀಕ್ಷಿತರು
	30	551	,, ...	,, ಮರಿಶೆಟ್ರು
	31	544	ದಾದೇರಾಯರ ಬೀದಿ ...	,, ಹೆಚ್. ಚಿಕ್ಕೆ ಅರಸಿನವರು
	32	581	ವಳಬಾಗಲು. ರಾಮಯ್ಯನವರಬೀದಿ.	,, ವಳಬಾಗಲು ದೇವರಾಜೇಅರಸಿನವರು
	33	560	ಬಾಳೇಅರಸಿನವರ ಬೀದಿ ...	,, ಪ್ರಿನ್ಸುಗೋಪಾಲರಾಜೇಅರಸಿನವರು
	34	395	ಮೊತೀಖಾನೆ ಬೀದಿ ...	,, A. C. ಲಿಂಗರಾಜೇಅರಸಿನವರು

ಮೊಹಲ್ಲಾ ಹೆಸರು.	ಜಂಜರ್ ನಂಬರು.	ಡೋರ್ ನಂಬರು.	ಬೀದಿಯ ಹೆಸರು.	ಹೆಸರು.
ಕಿಲ್ಲೆ ಮೊಹಲ್ಲಾ	35	394	ಮೊತೀಖಾನೆ ಬೀದಿ ...	ಮ॥ರಾ॥ ಮುದ್ದುರಾಜೇಅರಸಿನವರು
	36	343	ವೀಣೆ ವೆಂಕಟಸುಬ್ಬಯ್ಯನವರಗಲ್ಲಿ	,, ವೈಣಿಕಶಿಖಾಮಣಿ ಶೇಷಣ್ಣನವರು
	37	557–558	ಬಾಳೇಅರಸಿನವರ ಬೀದಿ ...	,, A. ಚಾಮಪ್ಪಾಜಿ ಅರಸಿನವರು
	38	544	ದಾದೇರಾಯರ ಬೀದಿ ...	,, ಹೆಚ್. ಲಿಂಗರಾಜೇಅರಸಿನವರು
	39	3–4–536	,, ...	,, ಸಿ. ರಾಮಚಂದ್ರರಾಯರು
	40	726	ಹಸುವಿನ ಕರಹಟ್ಟಿ ಬೀದಿ ...	,, ಪುಟ್ಟೂರಾಯರು
	41	990	ಪೊಲೀಸು ಸ್ಟೇಷನ್ ಬೀದಿ ...	,, ಯಂ. ಅಳಸಿಂಗರಾಚಾರ್ರು, ಬಿ. ಎ.
	42	1159	ಚಾಮರಾಜರೋಡು ...	,, ಯಂ. ನರಸಿಂಹಸ್ವಾಮಿಯವರು
	43	1174	,, ...	,, ಆರ್ಮುಗಂಶೆಟ್ರು
	44	...	,, ...	,, ಮರಿದಾಸಶೆಟ್ರು
	45	1171	,, ...	,, ಯಂ. ರಾಮಸ್ವಾಮಿಯವರು
	46	94–95–96	ಹುವ್ವಿನ ಅಂಗಡಿ ಬೀದಿ ...	,, ನಾಯಖನಾರಾಯಣರಾಯರು
	47	272	ಅಣ್ಣೂರಾಮರಾಯರ ಬೀದಿ ...	,, ಮಿರ್ಲೆ ಶ್ರೀಕಂಠಯ್ಯನವರ್ರು, ಬಿ.ಎ., ಬಿ.ಎಲ್.
	48	501	ದೇವಪಾರ್ಥಿವರ ಬೀದಿ ...	,, ಚಿ. ಕೆ. ಸುಬ್ರಾಯರು, ಬಿ.ಎ.
	49	270	ಅಣ್ಣೂರಾಮರಾಯರ ಬೀದಿ ...	,, ಬಿ. ಯಂ. ರಾಮಸ್ವಾಮಿಯವರು
ದೇವರಾಜ ಮೊಹಲ್ಲಾ	1	155	ಇಲವಾಲರಸ್ತೆ ...	,, ಸಿಂಗಶೆಟ್ಟರು
	2	163	,, ...	,, ರಾಮದಾಸೈಯ್ಯನವರು
	3	165	,, ...	,, ಮೈಲಾರಪ್ಪನವರು
	4	170–171	,, ...	,, ನಾರಾಯಣ ಪುರುಷ ಲಿಂಗೈಯ್ಯನವರು
	5	1079	ಮೇಗಳಮಿಾಸಲು ...	,, ಹೊನ್ನೈಯ್ಯನವರು
	6	1223	ಇಲವಾ ಅಡ್ಡಬೀದಿ ...	,, ಡಲಾಯಿತ ನರಸಿಂಗರಾವ್
	7	1233	,, ...	,, ನಂಜುಂಡಪ್ಪನವರು
	8	1608	ಸುಬ್ರಾಯದಾಸರ ಅಗ್ರಹಾರ ...	,, ಹನಗೂಡು ಶೀತಾರಾಮೈಯ್ಯನವರು
	9	1610	,, ...	,, ರಾಮಾಚಾರ್ರು
	10	1607	,, ...	,, ಲಕ್ಷ್ಮಂಪತೈಯ್ಯನವರು
	11	1630	ಕೃಷ್ಣವಿಳಾಸ ಅಗ್ರಹಾರ ...	,, ನರಸಿಂಹಾಚಾರ್ರು
	12	1637	,, ...	,, T. V. ನರಸಿಂಹಾಚಾರ್ರು (ಅಡ್ವೋಕೇಟ್)
	13	1620	,, ...	,, H. ಕೃಷ್ಣರಾಯರು (ಅಡ್ವೋಕೇಟ್)
	14	1645	A. ರಾಮಣ್ಣನವರ ಬೀದಿ ...	,, N. D. ಗೋವಿಂದರಾಯರು (ಅಡ್ವೋಕೇಟ್)
	15	1649	,, ...	,, ರಾಮೇಶ್ವರೈಯ್ಯನವರು B. A.
	16	1661	ಕೃಷ್ಣವಿಳಾಸ ಅಗ್ರಹಾರ ...	,, B. R. ಕೃಷ್ಣಮಾಚಾರ್ರು B.A., B.L. ಅಡ್ವೋಕೇಟ್)
	17	1686	ಲಕ್ಷ್ಮೀವಿಳಾಸ ಅಗ್ರಹಾರ ...	,, T. ರಾಘವೇಂದ್ರರಾಯರು B.A., B.L.
	18	1681	ಕೃಷ್ಣವಿಳಾಸ ಅಗ್ರಹಾರ ...	,, D. ರಾಘವಾಚಾರ್ರು
	19	1700	ಲಕ್ಷ್ಮೀವಿಳಾಸ ಅಗ್ರಹಾರ ...	,, ಕೃಷ್ಣಸ್ವಾಮಿರಾಯರು (ಪ್ಲೀಡರ್)
	20	1929	ಸಂತೆಪೇಟೆ ...	,, R. ರಾಮಯ್ಯನವರು, B.A., B.L.
	21	1942	,, ...	,, B. V. ಕೃಷ್ಣಮೂರ್ತಿರಾಯರು, B.A., B. L.
	22	1710	ಲಕ್ಷ್ಮೀವಿಳಾಸ ಅಗ್ರಹಾರ ...	,, N. D ಶ್ರೀನಿವಾಸರಾಯರು, B.A.
	23	1681	ಕೃಷ್ಣವಿಳಾಸ ಅಗ್ರಹಾರ ...	,, D. ರಂಗಸ್ವಾಮೈಯ್ಯಂಗಾರ್, B.A., B.L.
	24	1669	,, ...	,, ಕೃಷ್ಣರಾಯರು (ರಿಟೈರ್ಡ್ ಅ. ಕ)
	25	1707	ಲಕ್ಷ್ಮೀವಿಳಾಸ ಅಗ್ರಹಾರ ...	,, ಅರಮನೆ ವೆಂಕಟಸುಬ್ಬೈಯ್ಯನವರು
	26	1953	ಸಂತೆಪೇಟೆ ...	,, ಖಜ್ಜಾಂಚಿ ತಮ್ಮೈಯ್ಯನವರು
	27	194	ಇಲವಾಲ ರೋಡು ...	,, B. ವೆಂಕಟರಾಮಶೆಟ್ಟರು
	28	198	,, ...	,, H. ಸುಬ್ರಮೈಯ್ಯನವರು
	29	1412	ಭೀಮಯ್ಯನಗಲ್ಲಿ ...	,, ಶೀತಾರಾಮಮೊದಲಿಯಾರ್‌ರವರು
	30	1603	ಸುಬ್ಬರಾಯದಾಸರ ಅಗ್ರಹಾರ ...	,, B. ಸುಬ್ಬೈಯ್ಯನವರು
	31	1605	,, ...	,, H. ರಾಮರಾಯರು
	32	1611	,, ...	,, ಕುಂಭಕೋಣಂ ರಂಗೈಯ್ಯಂಗಾರ್ರು
	33	1613	ಕೃಷ್ಣವಿಳಾಸ ಅಗ್ರಹಾರ ...	,, ಕೃಷ್ಣಮೂರ್ತಿರಾಯರು (ರಿಟೈರ್ಡ್ ಅ. ಕ.
	34	1627	,, ...	,, ಮೊಳೂರು ರಾಘವಾಚಾರ್ರು
	35	1631	,, ...	,, S. K. ರಾಮೈಯ್ಯಂಗಾರ್ರು

ಮೊಹಲ್ಲಾ ಹೆಸರು.	ಅಂಕದ ನಂಬರು.	ಡೋರ್ ನಂಬರು.	ಬೀದಿಯ ಹೆಸರು.		ಹೆಸರು.
ದೇವರಾಜಮೊಹಲ್ಲಾ	36	1641	A. ರಾಮಣ್ಣನವರ ಬೀದಿ	...	ಮ॥ರಾ॥ಸುಬ್ಬಣ್ಣನವರು
	37	1642	,,	...	,, ಶ್ರೀಕಂಠ ಶಾಸ್ತ್ರಿಗಳು
	38	1662	ಕೃಷ್ಣವಿಲಾಸ ಅಗ್ರಹಾರ	...	,, ಕಾಪಿವ್ರೈಟರ್ ಕೃಷ್ಣಯ್ಯಂಗಾರ್ರು
	39	1665	,,	...	,, H. ರಂಗೈಯಂಗಾರ್ರು
	40	1666	,,	...	,, ಪದ್ಮನಾಭರಾಯರು
	41	1674	,,	...	,, ಗ್ರಾಮಣಿ ಅಳಸಿಂಗಳಾಚಾರ್ರು
	42	1694	ಲಕ್ಷ್ಮೀವಿಲಾಸ ಅಗ್ರಹಾರ	...	,, ಚೌಬೀನೆ ನೀಲಕಂಠರಾಯರು
	43	1701	,,	...	,, ಕರಿಗಿರಿರಾಯರು
	44	1717	,,	...	,, ಹಂಪಾಪುರದ ಪುಟ್ಟಾಚಾರ್ರು
	45	1721	,,	...	,, ಜಾಲಿ. ಕೃಷ್ಣಯ್ಯಂಗಾರ್ರು
	46	1731	ಸಂತೆಪೇಟೆ	...	,, ನೀಲಗಿರಿ ಮದ್ದಣ್ಣನವರು ಪುರಷ್ ಮೊಗಣ್ಣನವರು
	47	1735	,,	...	,, ಚಿಕ್ಕ ಪಾಪಣ್ಣನವರ ಮಕ್ಕಳು ನೀಲಗಿರಿ ಮದ್ದೈಯ್ಯನವರು
	48	1746	,,	...	,, ಹಳೇಪೇಟೆ ನರಸೈಯ್ಯನವರು
	49	1755	,,	...	,, ರಿಜಿಮೆಂಟ್‌ದಾರ್ H. ಕೃಷ್ಣರಾಯರು
	50	1758	,,	...	,, ಶ್ರೀನಿವಾಸಮೂರ್ತಿರಾಯರು
	51	1777	,,	...	,, ಬ್ರಹ್ಮಪ್ಪನವರು
	52	1803	,,	...	,, ರಾಜಣ್ಣನವರು
	53	1816	,,	...	,, ಬಾಲಶೆಟ್ಟರು
	54	1823-1824	,,	...	,, ವೆಂಕಟಚೆಟ್ಟಿ ಐಯ್ಯರ್
	55	1841	,,	...	,, ಬೆಜ್ವಾಡದ ಬಸಪ್ಪನವರು
	56	1843-1844	,,	...	,, ಚಿಕ್ಕಮಲ್ಲಪ್ಪನವರು
	57	1874	,,	...	,, ಸಾಹುಕಾರ್ ಬನುಮೈಯ್ಯನವರು
	58	1895	,,	...	,, K. ನರಸುಂಹೈಯ್ಯನವರು
	59	1904	,,	...	,, ಗಂಜಾ ನರಸುಂಹೈಯ್ಯನವರು
	60	1941	,,	...	,, ಗನಿ ಸೇಟರು
	61	1954	,,	...	,, ಕಮರುದ್ದೀನ್ ಸಾಹೆಬರು
	62	1956	,,	...	,, ಸಾಹುಕಾರ್ ಬಜ್ಜಣ್ಣನವರು
	63	1975	,,	...	,, ದೇವಿ ರಂಗಪ್ಪನವರು
	64	1978	,,	...	,, ಪಸಾರೆ ಸೂರಶೆಟ್ಟರು
	65	1979	,,	...	,, ವೆಂಕಟಸುಬ್ಬಶೆಟ್ಟರು
	66	D-1988	,,	...	,, P. ಕೃಷ್ಣರಾಯರು
	67	c-1443	ಮೊಹದ್ದೀನ್ ಸಾಬರ ಬೀದಿ	...	,, ಡಾಕ್ಟರ್. T. S. ಸಿದ್ದಪ್ಪನವರು
	68	1687	ಲಕ್ಷ್ಮೀವಿಲಾಸ ಅಗ್ರಹಾರ	...	,, ಶೇಷಶಾಸ್ತ್ರಿಗಳು
	69	2263	ಲ್ಯಾನ್ಸ್‌ಡೌನ್ ಬಜಾರ	...	,, ರಾಜಗೋಪಾಲಚಾರ್
	70	1913	ಸಂತೆಪೇಟೆ	...	,, ಸಾಹುಕಾರ್ ಮರಿಯಣ್ಣನವರು
	71	462	ಇಲವಾಲರೋಡು ಅಡ್ಡರಸ್ತೆ	...	,, ಶಿದ್ದೆಗೌಡರು
	72	690ರಿ693	,,	...	,, ಪಾಛಾಸಾಹೆಬರು
	73	461	,,	...	,, ಶಿದ್ದಪ್ಪನವರು
	74	562	,,	...	,, ನಂಜೆಗೌಡರು
	75	A-706	,,	...	,, ಚಿಕ್ಕಣ್ಣನವರು
	76	818	,,	...	,, ಬೋರಣ್ಣ ಪುರುಷು ಲಿಂಗಣ್ಣನವರು
	77	B-537	,,	...	,, ಬಾಳೆಲೆ ದ್ಯಾವಣ್ಣನವರು
	78	28	ಇಲವಾಲ ರೋಡು	...	,, ಚಿನ್ನಾಜಿರಾಯರು
	79	2070	,,	...	,, ತುಳಜಿರಾಯರು
	80	468	,,	...	,, M. ನರಸಿಂಗರಾಯರು
	81	2071	,,	...	,, ಮಾಧವರಾಯರು
	82	2044	,,	...	,, ಗಂಗಾಧರಪ್ಪನವರು
	83	400	,,	...	,, ರಾಮಶೆಟ್ಟರು
	84	261	,,	...	,, ಸುಂದ್ರಮೈಯ್ಯರ್‌ರವರು B. A.
	85	A-266	,,	...	,, ವೆಂಕಟ ನಂಜಪ್ಪನವರು B. A.
	86	378-379	,,	...	,, ಸುಬ್ರಮಣ್ಯಯ್ಯರ್‌ರವರು B. A.
	87	4-225	,,	...	,, ಮುದ್ದುಕೃಷ್ಣಯ್ಯನವರು B. A.
	88	465-467	,,	...	,, M. ಶಾಮಣ್ಣನವರು B. A.

ಮೊಹಲ್ಲಾ ಹೆಸರು	ಟಿಕೆಟು ನಂಬರು	ಡೋರ್ ನಂಬರು	ಬೀದಿ ಹೆಸರು	ಹೆಸರು
ದೇವರಾಜ ಮೊಹಲ್ಲಾ.	89	2007	ಹನುಮಂತರಾಯರ ಬೀದಿ ...	ಮೆ॥ ರಾ॥ ಎಂ. ಸಿ. ರಂಗೈಯ್ಯಂಗಾರ್ರು, ಬಿ. ಎ., ಬಿ. ಎಲ್.
	90	389	ಕೊತ್ತವಾಲ್ ರಾಮೈಯ್ಯನವರ ಬೀದಿ	,, ಮುಸಾಹೇಬ್ ರಾಮರಾಯರು
	91	495	,, ...	,, ಮೇಲುಕೋಟೆ ರಾಮಣ್ಣನವರು
	92	408	,, ...	,, ರಾಜಾರಾಯರು
	93	565	,, ...	,, ಸಿ. ಕೃಷ್ಣರಾಯರು
	94	819	,, ...	,, ಡಾಕ್ಟರ್ ಆಶೀರ್ವಾದಂರವರು
	95	99	,, ...	,, ಅಮೀರ್ ಅಬ್ದುಲ್‌ವಹಾಬರವರು
	96	99	,, ...	,, ಕ್ವಾರ್ಟರ್ ಮಾಸ್ಟರ್ ಗುಲಾಂ ಅಲ್ಲಿಯವರು
	97	34	ಇಲವಾಲ ರೋಡು ...	,, ರಾಂಸೂಕ್‌ರಾಂರವರು
	98	781	ಕಾಮಾಟಗೇರಿ ...	,, ಹರ್ಸ ಸಾಬರು
	99	622	ಮಾರ್ಕಟ್ಟು ಬೀದಿ ...	,, ಪೊನ್ನುಸಾಮಿಶೆಟ್ಟರು
	100	2028	ಹನುಮಂತರಾಯರ ಬೀದಿ ...	,, ಶಾಮರಾಯರು
	101	788	ಮಾರ್ಕಟ್ಟು ಬೀದಿ ...	,, ನಂಜಪಿಳ್ಳೆಯವರು
	102	780	,, ...	,, ಮಹಮ್ಮದ್‌ಪೀರ್ ಸಾಹೇಬರು
	103	2045	,, ...	,, ಮಿಷನ ಬುಕ್‌ಡಿಪೊ ಸುಂದ್ರ ಯ್ಯರ್ ರವರು
	104	2024	,, ...	,, ವಾಟರ್ಸ ಅಂಡ್‌ಕೊ., ಎಫ್. ಡಬ್ಲ್ಯು. ಜೋನ್ಸರವರು.
	105	556	,, ...	,, ವಿಶ್ವನಾಥೈಯ್ಯರ್‌ರವರು
	106	E	ಸೈಯ್ಯಾಜಿರಾವ್ ...	,, ಆಲಿರೆರಿ ಸಾಲುವರ್ಸ ಕಂಪೆನಿ, ರಂಗರಾಜುಯವರು.
	107	34	ಇಲವಾಲ ರೋಡು ...	,, ನಂಜುಂಡರಾವ್‌ರವರು
	108	367	,, ...	,, ರಾಮರಾಯರು
	109	370	,, ...	,, ನಾಮಾ ಗೋವಿಂದಶೆಟ್ಟರು
	110	388	,, ...	,, ಕೃಷ್ಣಶೆಟ್ಟರು
	111	31	,, ...	,, ಗಾಜಿ ಇಲಿಯಾಸೇಟರು
	112	380—387	,, ...	,, ಜವರಂಣನವರು
	113	375	,, ...	,, ಟಿ. ಆದಿನಾರಾಯಣಶೆಟ್ಟರು
	114	2051	,, ...	,, ಇಸ್ಮಯಿಲ್ ಅಬ್ದುಲ್ಲಾ ಸೇಟರು
ಕೃಷ್ಣರಾಜ ಮೊಹಲ್ಲಾ.	1	922	ಚಟ್ಟಹಳ್ಳಿ ರೋಡು ...	,, ಕೆಂಪಶೆಟ್ರು ಮಕ್ಕಳು ಕೊವಶರಸ್ವಾಮಿಯವರು
	2	933	,, ...	,, ದರೋಗ ನಂಜಪ್ಪನವರು
	3	934—937	,, ...	,, ರಾಮಾಚಾರ್ರ ಮೊಂಮಕ್ಕಳು ಸುಬ್ಬರಾಯರು
	4	939	,, ...	,, ಅತ್ತಿಗೋಡು ಬಸಪ್ಪನವರು
	5	940	,, ...	,, ವೆಂಕಟಸುಬ್ಬೈಯನವರು, ಬಿ. ಎ.
	6	954—955	,, ...	,, ಬೆಂಗಳೂರು ರುದ್ರಪ್ಪನವರು
	7	957	,, ...	,, ದೂರದ ಮಾದಪ್ಪನವರು
	8	958—959	,, ...	,, ಬಸಪ್ಪನವರು
	9	963	,, ...	,, ಸಿವಪ್ಪ ಪ್ರರುಫ್ ನಂಜಪ್ಪ
	10	966	,, ...	,, ಸಿದ್ಧಪ್ಪನವರು
	11	3—986	,, ...	,, ನಾರಾಯಣಶೆಟ್ಟರು
	12	989	,, ...	,, ದೊಡ್ಡಯಲ್ಲಂಣನವರು
	13	1292	,, ...	,, ದಾಸಪ್ಪನವರು
	14	1043	,, ...	,, ತುರುವೆಕೆರೆ ನಂಜಪ್ಪನವರು
	15	1052	ದೇವಸ್ಥಾನದ ಬೀದಿ ...	,, ಎಂ. ಕೆ. ಮಾಧವರಾಯರು
	16	1058	ಚಾಮರಾಜ ರೋಡು ...	,, ವಾಸುದೇವೈಯ್ಯನವರು
	17	1068	ಕತ್ವಾಡಿಪುರದ ಅಗ್ರಹಾರ ...	,, ಶ್ರೀನಿವಾಸಜೋಯಿಸರು
	18	1071	,, ...	,, ರಾಮಾಶಾಸ್ತ್ರಿಗಳು
	19	1078	,, ...	,, ದೇಶಿಕಾಚಾರ್ರು, ಬಿ. ಎ.
	20	1086	,, ...	,, ದ್ವಿವೇದಿ ಕೃಷ್ಣಶಾಸ್ತ್ರಿಗಳು.
	21	1087	,, ...	,, ದ್ವಿವೇದಿ ಸುಬ್ರಂಹಣ್ಯಶಾಸ್ತ್ರಿಗಳು
	22	1105	,, ...	,, ಶ್ರೀನಿವಾಸ ರಂಗಾಚಾರ್ರು
	23	1107	,, ...	,, ಆಜಿರಾಮಾನುಜೈಯ್ಯಂಗಾರ್ರು
	24	19—1088	ಚಾಮರಾಜ ರೋಡು ...	,, ಮುಕ್ತಕರಪಶೆಟ್ಟಿ
	25	27—1088	,,	,, ಅಂಕಪ್ಪಶೆಟ್ಟಿ
	26	1434—1435	ತೊಗರಿ ಬೀದಿ ...	,, ಮರಿಯಂಣ

ಮೊಹಲ್ಲಾ ಹೆಸರು.	ಜಂಜರ್ ನಂಬರ್	ಡೋರ್ ನಂಬರ್	ಬೀದಿಯ ಹೆಸರು.		ಕೌನ್ಸಿಲರ್ಸ್‌ಗಳವರ ಹೆಸರು.
ದೇವಸ್ಥಾನದಬೀದಿ	27	,,	ಹೆಲ್ತ ಕ್ಯಾಂಪು		ಮ|| ರಾ|| ಹೊಸಮನೆ ಮರಿಯಂಣ
	28	2–1041	ಚಟ್ಟಹಳ್ಳಿರೋಡು	...	,, ಕಾಂತಶೆಟ್ರು
	29	3–1041	,,	...	,, ಬಿ. ಮಲ್ಲಪ್ಪನವರ ಮಕ್ಕಳು ಮಲ್ಲಪ್ಪನವರು
	30				
ಕೃಷ್ಣರಾಜಮೊಹಲ್ಲಾ		57	ಬೋವಿಯ್ಯನಬೀದಿ	...	,, ಚನ್ನಬಸಪ್ಪನವರು
	31	59	,,	...	,, ದಾಶೆಟ್ಟಿಬಾಬತುಜವರಪ್ಪ
	32	167	ರಮಾವಿಳಾಸಅಗ್ರಹಾರ	...	,, ಗುಂಡಪ್ಪನವರು
	33	168	,,	..	,, ಶ್ರೀನಿವಾಸೈಯ್ಯಂಗಾರು
	34	169	,,	...	,, ಡೆಪ್ಯುಟಿ ಇನ್ಸ್‌ಪೆಕ್ಟರ್ ನಾರಾಯಣರಾಯರು
	35	194	,,	...	,, ಅಡ್ವೊಕೇಟ್ ನರಸಿಂಹಾಚಾರು
	36	194	,,	...	,, ಯಂ. ಡಿ. ಶಿಂಗಾಚಾರು ಅಡ್ವೊಕೇಟ್
	37	208	,,	..	,, ಅಡ್ವೊಕೇಟ್ ಕೃಷ್ಣಯ್ಯಂಗಾರು
	38	223	ಕೆಂಪನಜಾಂಬಾಅಗ್ರಹಾರ	...	,, ಶ್ರೀನಿವಾಸಮೂರ್ತಿಗಳು
	39	218	,,	...	,, ಮಧ್ವರಾಯರು
	40	229	,,	..	,, ಯಸ್. ರಂಗಸ್ವಾಮಿಐಯ್ಯಂಗಾರು
	41	231	,,	...	,, ಜವಳಿ ವೆಂಕಟಾಚಾರು
	42	238	,,	...	,, ತಾತೈಯ್ಯಂಗಾರು ಪೆನ್ಷನ್ ಶಿರಸ್ತೇದಾರು
	43	239	,,	...	,, ಅಳಸಿಂಗಾಚಾರು
	44	237	,,	...	,, ಯಂ. ಡಿ. ಸೂರಪಂಡಿತರು
	45	265	ದೇವಾಂಬಾ ಅಗ್ರಹಾರ	..	,, ರಾಘವಾಚಾರು
	46	306	ಚಲುವಾಂಬಾಅಗ್ರಹಾರ	...	,, ಜವಳಿಕೊಟ್ಟೂರುಶ್ರೀನಿವಾಸಾಚಾರು
	47	307	,,	...	,, ವರದಾಚಾರು
	48	311	,,	...	,, ಸುಬ್ಬಗಿರಿ ಶ್ರೀನಿವಾಸರಾಘವಾಚಾರು
	49	336	ಅಯಿ. ಲ್ ವಿಂಡರ್ ರೋಡು	...	,, ಅಡ್ವೊಕೇಟ್ ನರಸಿಂಹಯ್ಯನವರು
	50	337	,,	..	,, ವಿ. ರಾಘವೈಯ್ಯನವರು
	51	341	,,	...	,, ದೇಶಿಕಾಚಾರು
	52	343	ಸುಬ್ರಾಯನಕೆರೆರೋಡು	...	,, ಯಸ್ ವೆಂಗಟವರದ ಅಯ್ಯಂಗಾರು
	53	364	ಕಾಲೇಜ್‌ರೋಡು	...	,, ಪ್ಲೀಡರ್ ಶ್ರೀನಿವಾಸಾಚಾರು
	54	381	,,	....	,, ಯಸ್. ರಾಮಯ್ಯನವರು
	55	397	ಬಂಡಿಕೇರಿ	...	,, ಈರೈಯ್ಯನವರು
	56	363	ಕಾಲೇಜ್‌ರೋಡು	...	,, ಯಂ. ಡಿ. ನರಸಿಂಹಾಚಾರು
	57	601	ದರೋಗಮಲ್ಲೈಯನಬೀದಿ	..	,, ಪುಟ್ಟಾಚಾರು
	58	620	,,	...	,, ಮಾಗಡಿನಾರಣಾವಧಾನಿಗಳು
	59	61	ಬೊಂಮೈಯ್ಯನಬೀದಿ	...	,, ದಟ್ಟಗಳ್ಳಿ ಆಲಪ್ಪನವರು
	60	67	,,	...	,, ನಾರಾಯಣಶೆಟ್ಟರು
	61	132	,,	...	,, ಗುರುಕಾರು ಬಸವಲಿಂಗಪ್ಪನವರು
	62	141–142	,,	...	,, ದೊಡ್ಡಮುದ್ದಪ್ಪನವರು
	63	164	ರಮಾವಿಳಾಸ ಅಗ್ರಹಾರ	...	,, ನರಸಿಂಹಾಚಾರು
	64	175	,,	..	,, ಗುಂಡಪ್ಪನವರು
	65	178–197	,,	...	,, ಪ್ಲೀಡರ್ ಕೆ. ಸುಬ್ರಾಯರು
	66	179	,,	..	,, ಸುಂದರಮೈಯ್ಯರವರು
	67	187	,,	..	,, ಧರ್ಮಾಧಿಕಾರಿ ನರಸಿಂಹಶಾಸ್ತ್ರಿಗಳು
	68	188	,,	...	,, ಅಂಬಳೆಅಂಣ್ಣಯ್ಯಪಂಡಿತರವರು
	69	190	,,	...	,, ಅಡ್ವೊಕೇಟ್ ವಿ. ರಾಘವಾಚಾರು
	70	191	,,	...	,, ಬಾಳಾಜಿರಾಯರು
	71	192	,,	...	,, ಕುಂದೂರು ಶ್ರೀಕಂಠೈಯ್ಯನವರು
	72	193	,,	..	,, ಯಂ. ಸಿ. ಶ್ರೀನಿವಾಸೈಯ್ಯಂಗಾರು
	73	195	,,	..	,, ಕೊಮಾಂಡೂರು ರಾಮಸ್ವಾಮೈಯ್ಯಂಗಾರು
	74	198	,,	....	,, ಹೆಚ್. ಚಿಂತಾಮಣಿರಾಯರು
	75	206	,,	...	,, ಬಿ. ರಂಗರಾಯರು
	76	209	,,	...	,, ಅಡ್ವೊಕೇಟ್‌ಕಂಠೀರವಾಚಾರು
	77	210	,,	..	,, ಪದ್ಮರಾಜಪಂಡಿತರವರು
	78	213	,,	...	,, ಶ್ರೀನಿವಾಸರಾಯರು
	79	227	,,	...	,, ಅನಂತರಾಮೈಯ್ಯನವರು

ಮೊಹಲ್ಲಾ ಹೆಸರು	ಜಂಜರ್ ನಂಬರ್	ಡೋರ್ ನಂಬರ್	ಬೀದಿಯ ಹೆಸರು	ಹೆಸರು.
ಕೃಷ್ಣರಾಜಮೊಹಲ್ಲಾ	80	287	ದೇವಾಂಬಾಅಗ್ರಹಾರ ...	,, ಚಿಕ್ಕವೀರಪ್ಪನವರು
	81	295	ಚಲುವಾಂಬಾಅಗ್ರಹಾರ ...	,, ವೆಂಕಟನಾರಾಯಣಶಾಸ್ತ್ರಿಗಳು
	82	236	ಕೆಂಪನಂಜಾಂಬಾಅಗ್ರಹಾರ ...	,, ಚಕ್ರವರ್ತಿಅಯ್ಯಂಗಾರ್ರ ಮಕ್ಕಳು ಆರ್ ಚಕ್ರವರ್ತಿ ಐಯ್ಯಂಗಾರು)
	83	350	ಸುಬ್ರಾಯನಕೆರೆ ಬೀದಿ ...	,, ಪಾಪಯ್ಯನವರು
	84	355-56	,, ...	,, ಕಳಲೆ ಕೃಷ್ಣರಾಯರು
	85	504	ಭಂಡಿಕೇರಿ ...	,, ಡಾಕ್ಟರ್ ಟಿ. ಯಸ್. ನಂಜಪ್ಪನವರು
	86	538	,,	,, ಕರಿಯಣ್ಣನವರು
	87	632	ಆಯಲ್‌ಮಿರ್ಷರೋಡು ...	,, ಸಾ॥ ಚಿಕ್ಕಣ್ಣನವರು
	88	895	ಚಾಮರಾಜರಸ್ತೆ ...	,, ಅಂಡಾಪುರಂಕೃಷ್ಣಯ್ಯಂಗಾರು)
	89	900	,, ...	,, ನಜಮೊಹದಿನ್‌ಸಾಹೇಬರು
	90	901-203	,, ...	,, ಟಿ. ಯರ್. ಮಿರ್‌ನಿಜಾಮೊಹದಿನ್ ಅಲ್ಲಿಖಾನರವರು

N. B.—ಈ ಪಟ್ಟಿಯಲ್ಲಿ ಯಾರು ತಮ್ಮ ಹೆಸರು ದಾಖಲ್ಮಾಡಿರುವದಿಲ್ಲವೆಂದೂನು, ತಮ್ಮ ಹೆಸರನ್ನು ಅದರಲ್ಲಿ ಸೇರಿಸತಕ್ಕದ್ದಕ್ಕೆ ಅರ್ಹರಾಗಿರುತ್ತಾರೆಂದು ತಿಳಿದುಕೊಂಡಿರುತ್ತಾರೆಯೋ ಅಂಥಾವರು ಈ ಪಟ್ಟಿ ಫಾಯಿಷ್ ಆದ ಹದಿನೈದು ದಿವಸಗಳೊಳಗಾಗಿ ಈ ಕೆಳಗೆ ರುಜುಮಾಡಿರುವವರಿಗೆ ಆ ಬಗ್ಯೆ ಬರಹಮೂಲಕ ಬರದುಕೊಳ್ಳಬಹುದು.

ಯಂ. ಜಿ. ಕೃಷ್ಣಸಾಮಿರಾವ್.
ಫಾರ್ ಪ್ರಸಿಡೆಂಟ್.

ಎಕ್ಸೈಜ್ ಇಲಾಖಾ.

ನೋಟಸ್ ನಂಬರು 9898.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಸರ್ 1909—10ನೆ ಸಾಲಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಶೇಂದಿ ಉತಾರು ಮಾಡಲ್ಪಡುವ ಎಲ್ಲಾ ಮರಗಳಿಗೂ ಕೆಂಪು ಬಣ್ಣದಿಂದ ಸಂಖ್ಯೆ ಹಾಕಲ್ಪಡುತ್ತೆ.

ಎಚ್. ಎಚ್. ಸ್ಪಾರ್ಕ್ಸ್,
ಎಕ್ಸೈಜ್ ಕಮಿಷನರ್.

ತಾರೀಖು 19ನೆ ಮಾರ್ಚಿ 1909.

ಪ್ರಕಟನ ಪತ್ರಿಕಾ.—ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಅರಗದ ಕಸಬಾದಲ್ಲು ಇರುವ ಶೀತಮ್ಮ ಕೋಂ ನಾಗಾಭಟ್ಟ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—

ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಹಿರೆಗದ್ದೆ ಮತ್ತು ಅರಗ ಈ ಎರಡು ಗ್ರಾಮಗಳಲ್ಲಿ ಶೀತಮ್ಮ ಕೋಂ ನಾಗಾಭಟ್ಟ ಎಂತ ನನ್ನ ಹೆಸರು ಖಾತೆ ಮತ್ತು ಅನುಭವ ಇರತಕ್ಕ ಮತ್ತು ಅಗ್ರಹಾರದ ಹೋಬಳಿ ಜಂಬೆತಲೂರು ಗ್ರಾಮದ ಮಜರೆ ಕುದುರೆಗೋಡಲ್ಲು ಕೋಲಹಳ್ಳಿ ಸುಬ್ಬರಾಯನ ಖಾತೆ ಪೈಕಿ ನನ್ನ ಹಿಸ್ಸೆ ನನ್ನ ಅನುಭವದಲ್ಲಿರತಕ್ಕ ಪಿಶಿಷ್ಟ ಜಮೀನುಗಳ ಆಧಾರದಮೇಲೆ ಆಗಲಿ, ಅರಗದಪ್ಯಾಟೆಯಲ್ಲಿರುವ ನನ್ನ ಬಾಬತು ಕಾಂಪೌಂಡು ಹಿತ್ತಲು ವಗೈರೇವುಗಳಿಂದ ಕೂಡಿರುವ ಹಂಚಿನಮನೆ ನನ್ನ ಇತರ ಚರ ಆಸ್ತಿಗಳ ಆಧಾರದಮೇಲೆ ಆಗಲಿ ನನ್ನ ಕಡೆಯವನಾಗಿ ನನ್ನ ಪೋಷಣೆಯಲ್ಲಿರತಕ್ಕ ಅಕ್ರಮ ನಡವಳಿತೆಯಲ್ಲಿ ಬಹು ದಿವಸಗಳಿಂದಲೂ ಇರತಕ್ಕ ಶಾಮಭಟ್ಟ ಬಿನ್ ನಾಗಭಟ್ಟ ಹಂಣಿಗಾರಿ ಈತನು ನನ್ನ ಮರಣಾವಧಿ ನನ್ನ ಒಪ್ಪಿಗೆ ಇಲ್ಲದೆ ಈವರಿಗೂ ಮಾಡಿರುವ ಇನ್ನು ಮುಂದೆ ಮಾಡಬಹುದಾದ ಎಲ್ಲಾವಿಧವಾದ ಸಾಲ ವಗೈರೇವುಗಳು ನಾನು ಈತಗೆ ಯಾವವಿಧವಾದ ಹಕ್ಕನ್ನು ತಹಲ್‌ವರಿಗೂ ನನ್ನ ಆಸ್ತಿ ವಿಷಯದಲ್ಲಿ ಕೊಡದೇ ಇರುವದರಿಂದ ಎಷ್ಟುರವುಟ್ಟಿಗೂ ಸ್ವಲ್ಪವೂ ಲಗಾವ್ ಆಗತಕ್ಕದ್ದಲ್ಲವಾಗಿವೆ. ಈ ಅಕ್ರಮ ನಡವಳಿತೆಯಲ್ಲಿರುವ ಸದರಿ ಶಾಮಭಟ್ಟಗೆ ಯಾರೊಬ್ಬರೂ ನನ್ನ ಈ ಮೇಲೆ ನಮೂದಿಸಿದ ಆಸ್ತಿಗಳ ಆಧಾರದಮೇಲೆ ಸಾಲಾ ವಗೈರೆ ಕೊಡಕೂಡದೆಂದು ಶೀತಮ್ಮ ಕೋಂ ನಾಗಾಭಟ್ಟನಾದ ನಾನು ಈ ಮೂಲಕ ಪ್ರಸಿದ್ಧಪಡಿಸಿರುತ್ತೇನೆ.

ಮೈಸೂರು ಗೌರ್ನಮೆಂಟ ಸೆಂಟ್ರಲ್ ಬುಕ್ಕುಡಿಪೋ.

ಸೆ 1909ನೆ ಇಸವಿ ಮೇ ತಾರೀಖು 3.

ಬೆಂಗಳೂರು ಗೌರ್ನಮೆಂಟ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯುತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ 1877ನೆ ಇಸವಿ ರಿಜಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸೆ1879ನೆ ಇಸವಿಯ 12ನೆ ನಂಬರ ಆಕ್ಟು.	36	0	11	0	1	0
4	1871ನೆ ಇಸವಿಯ ದನಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ (1904)	258	0	12	0	4	0
8	ಸಿಟಿ ಪ್ಲೇಗ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟು ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
18	,, ಟೆಲಿಗ್ರಾಫ್ ಆಕ್ಟು	18	0	1	6	1	0
19	,, ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ ಇಂಪ್ರೂವ್‌ಮೆಂಟ ಆಕ್ಟು(ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ ಅಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್‌ವೆಗಳ ರೆಗ್ಯುಲೇಷನ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೊಲೀಸ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ Iನೆ ರೆಗ್ಯುಲೇಷನ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರ್ಯಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ. ರೂ.	ಆ.	ಪೈ.	ಪೋಸ್ಟೇಜ್ ಮತ್ತು ಪ್ಯಾಕಿಂಗ್. ಆ.	ಪೈ.
38	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಿಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗಾರ್ವರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
43	1895ನೆ ಇಸವಿ IIIನೆ ನಂ. ರೆಗ್ಯುಲೇಷನ್ ಮೈಸೂರು ಕಂಪೆನಿಗಳ ರೆಗ್ಯುಲೇಷನ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷನ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟೀಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟಿನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಗೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟೋ 1905	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟೋ 1907 ...	143	1	0	0	6	0
56	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸನ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
59	ಇಸಿ ಹಾರ್ನಾಮ್ಹ ನಂ. 692—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡುಮಾಡು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908.	203	1	0	0	6	0

ರಜಿಸ್ಟ್ರೇಷನ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3.	8
ಚಷ್ ಮಾಹೇ ಯಾ ಕ್ವಾರ್ಟರಿಗೆ			ದಾಮೂಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ, ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಛಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ಕುಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೇ ಇಸವಿ ಆಗಸ್ಟು 21ನೇ ಮರ್ಕುಂ 2633—41 ಮಿಸ್. 558ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೇ ಇಸವಿ VIIನೇ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸ್‌ಗಳು:—

	ರೂ.	ಆ.
ಮೊದಲನೇ ದಫಾ ಘಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸ್‌ಗಳಿಗೆ:—

ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಛಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ ..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಛಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	..	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜ್ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಕಂಪೈಲರ್, ಮೈಸೂರು ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಸ್ ಆದ್ದು. [ನಂ. 19.

ಬೆಂಗಳೂರು, ಗುರುವಾರ, ಮೇ ತಾ|| 13, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರ್ಫು.

ಸನ್ 1904ನೆ ಇಸವಿ ಫೆಬ್ರುವರಿ 1ನೆ ತಾರೀಖು 72ನೆ ನಂಬರು ರೂಲ್ ಆಫ್ ಪ್ರಾಕ್ಟೀಸಿಗೆ ಅನುಬಂಧನೆ.

ತಾರೀಖು 22ನೆ ಏಪ್ರೆಲ್ 1909.

ಮೇಲ್ಕಂಡ ರೂಲ್ ಆಫ್ ಪ್ರಾಕ್ಟೀಸಿಗೆ ಲಗತ್ತಿರುವ ನಮೂನೆಗಳ ಪಟ್ಟಿಗೆ ಈ ಕೆಳಗಿನ ನಮೂನೆಯನ್ನು ಸೇರಿಸಬೇಕೆಂದು ಚೀಫ್ ಕೋರ್ಟಿನವರು ಆಜ್ಞಾಪಿಸಿರುತ್ತಾರೆ.

ನಮೂನೆ ನಂಬರು.	ಕ್ರಿಮಿನಲ್ ಪ್ರೊಸೀಜರ್ ಕೋಡ್ ಸೆಕ್ಷನ್.	ನಮೂನೆ ಹೆಸರು.	ಇಂಗ್ಲೀಷಿನಲ್ಲಿಯೋ ಅಥವಾ ಕನ್ನಡದಲ್ಲಿಯೋ.
87	344ನೆ ಸೆಕ್ಷನ್ ...	ವಿಚಾರಣೆ ಮಧ್ಯಕಾಲದಲ್ಲಿ ಅಪರಾಧಿಯನ್ನು ಜೈಲಿನಲ್ಲಿ ಇಡಲು ಕಳುಹಿಸಿಕೊಡಲ್ಪಡುವ ವಾರೆಂಟು.	ಎರಡರಲ್ಲಿಯೂ.

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು,
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದು ಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$.

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಏಕ್ಸೈಜ್ ಇಲಾಖಾ.

ನೋಟಿಸ್ ನಂಬರು 9898.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಸರ್ 1909—10ನೆ ಸಾಲಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಶೇಂದಿ ಉತಾರು ಮಾಡಲ್ಪಡುವ ಎಲ್ಲಾ ಮರಗಳಿಗೂ ಕೆಂಪು ಬಣ್ಣದಿಂದ ಸಂಖ್ಯೆ ಹಾಕಲ್ಪಡುತ್ತೆ.

ಎಚ್. ಎಚ್. ಸ್ಪಾರ್ಕ್ಸ್,
ಎಕ್ಸೈಜ್ ಕಮಿಷನರ್.

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್.

ತಾರೀಖು 10ನೆ ಮೇ 1909, ಮೊಕ್ಕಾಂ ಚನ್ನಪಟ್ಣ.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಬೆಂಗಳೂರು ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕು ಗಳಲ್ಲಿರುವ ಸ್ಟೇಟ್ ಫಾರೆಸ್ಟ್ (ಕತರಾವಣೆ ಆದ ಕೂಪುಗಳು ವಿನಹ) ಮತ್ತು ಕಮಷಿರಿಯಟ್ ಕಾವಲುಗಳು ಸೇರಿಸಿಕೊಂಡು ಇತರ ಎಲ್ಲಾ ಸರ್ಕಾರ ಜಂಗಲ್ ಮತ್ತು ಬಂಜರ್ ಜಮೀನ್‌ಗಳಲ್ಲಿಯೂ (ಪ್ಲಾಂಟೇಷನ್‌ಗಳ ವಿನಹ) ಸಹಾ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1909ನೆ ಜುಲೈ 1ನೆ ತಾರೀಖು ಲಾಗಾಯತು 1911ನೆ ಇಸವಿ ಜೂನ್ ಆಖೈರ್ ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1909ನೆ ಇಸವಿ ಜೂನ್ ತಾರೀಖು 7ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರವರೊಂದಿಗೆ ಆಗಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ತಾಲ್ಲೂಕವಾರ್ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿ ಸುತ್ತಾರೆ.

1—7—1909ರ ಲಾಗಾಯತು 30—6—1911ರ ವರಿಗೆ.

(1)	ಬೆಂಗಳೂರು	(6)	ಕೋಲಸ್‌ಪೇಟೆ ಸ|| ತಾ||
(2)	ದೇವನಹಳ್ಳಿ	(7)	ಕಾನಕಾನಹಳ್ಳಿ
(3)	ಚನ್ನಪಟ್ಣ	(8)	ಮಾಗಡಿ
(4)	ಹೊಸಕೋಟೆ	(9)	ಆನೇಕಲ್
(5)	ನೆಲಮಂಗಲ	(10)	ದೊಡ್ಡಬಳ್ಳಾಪುರ

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜ್ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣೆ ಹಕ್ಕನ್ನು ಚಡದರಖಾಸ್ತುದಾರನಿಗೆ ವಿಲೇವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದ ರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನ ಡೆಪ್ಯುಟಿ ಕಮಿ ಷನರವರು ತಾವೆ ಉಳಿಸಿಕೊಂಡು ಇರುತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡದ ಏಜಂಟ್ ಯಾ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತುದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ಠೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡ ಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್‍ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಮೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಚಡದರಖಾಸ್ತುದಾರು ಹರಾಜು ಮಂಜೂರಾದ ಸಂಗತಿ ತಮಗೆ ತಿಳಿಸಿದ ಐದು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿಸಿ ಒಟ್ಟು ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫಿಸರಿಂದ ಸದರೀ ಬಾಬ್ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರ ಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳ ಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಅಲ್ಲದೆ 100 ರೂಪಾಯಿಗಳನ್ನು ಠೇವಣಿ ಇಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಏಳು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದುಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಎಂಟು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1909ನೆ ಇಸವಿ ಆಗಸ್ಟ್ 1ನೆ ತಾರೀಖು, 2ನೆ ಖಿಸ್ತು 1909ನೆ ಇಸವಿ ಅಕ್ಟೋಬರ್ 1ನೆ ತಾರೀಖು, 3ನೆ ಖಿಸ್ತು 1910ನೆ ಇಸವಿ ಜನವರಿ 2ನೆ ತಾರೀಖು, 4ನೆ ಖಿಸ್ತು 1910ನೆ ಇಸವಿ ಏಪ್ರಿಲ್ 1ನೆ ತಾರೀಖು, 5ನೆ ಖಿಸ್ತು 1910ನೆ ಇಸವಿ ಜುಲೈ 1ನೆ ತಾರೀಖು, 6ನೆ ಖಿಸ್ತು 1910ನೆ ಇಸವಿ ಅಕ್ಟೋಬರ 1ನೆ ತಾರೀಖು, 7ನೆ ಖಿಸ್ತು 1911ನೆ ಇಸವಿ ಜನವರಿ 2ನೆ ತಾರೀಖು, 8ನೆ ಖಿಸ್ತು 1911ನೆ ಏಪ್ರಿಲ್ 1ನೆ ತಾರೀಖು, ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆಗಳ ಜಮಾವಣಿ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಒಂದು ವರುಷಕ್ಕೆ ಒಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜಮಾವಣಿ ಬಗ್ಯೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರರುಗಳ ಹೆಸರಿನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನ್ ಮಾಡಿ ಇಡುವ ಜಾಗಾಗಳ ಒಂದು ಪಟ್ಟಿಯನ್ನು ಇಜಾರೆದಾರನು ಕೊಡತಕ್ಕದ್ದು.

(4) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಾನು ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟಿನಲ್ಲಿ ಚಕ್ಕೆಯನ್ನು ಜಮಾಯಿಸಬೇಕಾದರೆ ಅವುಗಳ ಛಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟ್ ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟುಗಳ ಭಾಗಗಳಲ್ಲಿ ಚಕ್ಕೆ ಜಮಾವಣಿ ಕೆಲಸ ನಡಿಸಕೂಡದು.

(7) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಆಫಿಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಪಡೆಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋಠಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಗಳನ್ನು 15-7-1911 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಒಂದು ಷರತ್ತಿಗೆ ಇಜಾರೆದಾರನು ತಪ್ಪಿ ನಡದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿವಿಗೂ ಜಮಾಯಿಸಿ ಇರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು ಮತ್ತು ಇಜಾರೆದಾರನಿಂದ ಪಾವತಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಮೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮಿಷನರವರಿಂದ ತೀರ್ಮಾನಿಸಲ್ಪಡಬಹುದಾದ ಮೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ತಿದ್ದು ಪಾಟಾದ ಇಸ್ತಿಹಾರ್ನಾಮಾ, ತಾರೀಖು 10ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉಡ್ಯಾರ್ಡ್.	31—5-09	ಸಾಗ್ವಾನಿ ನಾಟು ...	600	20,000	ತಾರೀಖು 19—20ರಲ್ಲೇ ಹರಾಜು ಆಗುವದಿಲ್ಲ ಜತ್ತು ಕಡಿತ
			ಡಿಟೋ ಜಂತಿಗಳು ...	300	4,000	
			ಹೊನ್ನೆ ನಾಟು ...	100	2,500	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟು ...	100	3,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟು ...	25	1,000	
			ಕಾಡು ನಾಟು ...	25	500	
2.	ನಂಜನಗೂಡು ...	1-6—09	ಸಾಗುವಾನಿ ನಾಟು ...	50	1,500	
			ಡಿಟೋ ಜಂತಿಗಳು ...	50	500	
			ಹೊನ್ನೆ ನಾಟು ...	100	2,000	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟು ...	50	1,000	
			ಡಿಟೋ ಜಂತಿಗಳು ...	10	120	
			ಬೀಟೆ ನಾಟು ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟು ...	20	500	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಪುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 8ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟು ಬಾಬತು ಆಯಾಯ ಡಿಪೋಗಳ ಕೆಳಗೆ ಕಂಡ ನಾಟುಗಳನ್ನು ಆಯಾಯ ಡಿಪೋಗಳ ಕೆಳಗಡೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿ

ಕ್ಟ್ ಫಾರೆಸ್ಟ್ ಆಫೀಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು.	ನಾಟುಗಳ ವಿವರ.	ಶಿವಮೊಗ್ಗ ಡಿಪೋ 27ನೆ ಮೇ 09.		ಬೆಂಕೀಪುರ ಡಿಪೋ 29ನೆ ಮೇ 09.		ತರೀಕೆರೆ ಡಿಪೋ 31ನೆ ಮೇ 09.		ಕಡೂರು ಡಿಪೋ 2ನೆ ಜೂನ್ 09.		ಷರಾ
		ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	
1	ಸಾಗುವಾನಿ ...	...	...	...		50	2,000	275	600	
2	ಹೊನ್ನೆ ...	...	...	50	1,500	20	500	20	500	
3	ಬೀಟೆ ...	...	...	20	500	80	2,000	10	200	
4	ಮತ್ತಿ ...	10	200	90	2,500	80	2,000	65	1,500	
5	ನಂದಿ ...	20	500	25	800	25	700	...	...	
6	ಹುನಾಲು ...	25	1,000	50	1,300	120	3,000	...	...	
7	ಬಿಲ್ವಾರ ...	...	...	...	...	1	10	...	...	[illegible]
8	ಯತ್ಯಾಗೆ ...	20	600	30	800	20	500	...	...	
9	ತಡಸಲು ...	2	60	...	...	10	200	...	...	
10	ಬಳಗೆ ...	...	...	...	...	...	...	...	...	
11	ಜಂಬೆ ...	15	350	15	300	60	900	...	...	
12	ಸಾಗುವಾನಿ ತೀರು ...	...	...	...	...	2,164	1,680	...	...	
13	ಡಿಟೋ ಪರೋಡೆ ...	...	...	...	...	43	30	...	...	
14	ಡಿಟೋ ರಿಪೀಸು ...	...	...	...	...	...	...	...	...	
15	ಮಸಿ ...	...	...	1	23	5	150	...	...	
16	ನೇರಲು ...	...	...	10	200	5	100	...	...	
17	ಕಿರಾಲು ಭೋಗಿ ...	...	...	...	...	31	300	...	...	

ಹರಾಜು ಷರತ್ತುಗಳು.

(1) ಖಡ ದರಖಾಸ್ತುದಾರನು ಹರಾಜು ನಡೆದ ಐದು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ಸಮೀಪದಲ್ಲಿರುವ ಖಜಾನೆಗೆ ಜಮಾ ಮಾಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಬಾಬು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಹರಾಜುದಾರರನ್ನು ಗುರಿಪಡಿಸುತ್ತೆ.

(2) ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಜಮಾ ಮಾಡಿಸಿರುವ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ನಾಟುಗಳನ್ನು 1ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ದುಸರಾ ಹರಾಜು ಮಾಡಿಸಿ ಉಂಟಾಗುವ ಲುಕ್ಸಾನು ಮೊಬಲಗನ್ನು ಅವಲ್ ಹರಾಜುದಾರನಿಂದ ವಸೂಲು ಮಾಡಲ್ಪಡುತ್ತೆ.

(3) ಹರಾಜಿನಲ್ಲಿ ಪಡೆದಿರುವ ನಾಟಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ನಾಟಾಗಳನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲು ರಫ್ತು ಮಾಡಕೂಡದು.

(4) ಹರಾಜು ತಾರೀಖು ಲಾಗಾಯಿತು (90) ತೊಂಭತ್ತು ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋದಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ 12 ರೂಪಾಯಿನಂತೆ ಡಿಪೋ ಭಾಡಾ ವಸೂಲ್ ಮಾಡಲ್ಪಡುತ್ತೆ.

ಬಿ. ಹೀರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.
ನೋಟಿಫಿಕೇಷನ್.

ತಾರೀಖು 30ನೆ ಏಪ್ರಿಲ್ 1909.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕು ರಾಮದೇವನಹಳ್ಳಿ ಗ್ರಾಮದಲ್ಲಿರುವ ಹಜಾಂ ರಾಮನೆಂಬುವನು ಖುರ್ದಸಾಬಿ ಹಿತ್ತಲಿನಲ್ಲಿ ಅಗಿಯುತ್ತಿರುವಾಗ ಒಂದು ಸಣ್ಣ ಮಣ್ಣಿನ ಮಗೆಯಲ್ಲಿ ಈ ಕೆಳಗೆ ವಿವರಿಸುವ ಭಂಗಾರದ ಆಭರಣಗಳು ಸಿಕ್ಕಿರುತ್ತವೆಂದು ಸದರಿ ರಾಮನಿಂದ ತಿಳಿಯಲ್ಪಟ್ಟಿರುತ್ತೆ. ಸದರಿ ಆಭರಣಗಳಿಗೆ ಯಾರಾದರೂ ಹಕ್ಕುದಾರ್‍ರಾಗಿದ್ದ ಪಕ್ಷದಲ್ಲಿ ಈ ನೋಟಿಫಿಕೇಷನ್ ಗೆಜೆಟ್ಟಿನಲ್ಲಿ ಪ್ರಾಯಿಷಾದ ಲಾಗಾಯಿತು ಆರು ತಿಂಗಳೊಳಗೆ ತಮ್ಮ ಹಕ್ಕನ್ನು ದೊಡ್ಡಬಳ್ಳಾಪುರ ಸಬ್ ಡಿವಿಜನ್ ಆಫೀಸರವರ ರೂಬು ರೂಬು ತಾವೇ ಆಗಲೀ ಅಥವಾ ಲಾಯರ್ ಮುಖಾಂತ್ರವೇ ಆಗಲಿ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದು. ಹಾಗೆ ತಪ್ಪಿದ ಪಕ್ಷದಲ್ಲಿ ಮೈಸೂರು ಸೀಮೆಯ "ಟ್ರೆಜರ್‌ಟ್ರೊವ್" ರೂಲ್ಸ 5ನೆ ಸೆಕ್ಷನ್ ಅನುಸರಿಸಿ ವಿಲೆ ಮಾಡಲ್ಪಡುತ್ತೆ.

ಭಂಗಾರದ ಆಭರಣಗಳ ವಿವರ.

ಸವರನ್ ಬಣ್ಣ ಭಂಗಾರದ ಬೆಂಡುವಾಲೆ ಜೊತೆ 1ಕ್ಕೆ ತೂಕ 1 ವರಹ 3 ಹಣ.
ವರಹಬಣ್ಣ ಭಂಗಾರದ ತಾಳಿಗಳು 7ಕ್ಕೆ ತೂಕ $1\frac{3}{4}$ ವರಹ.
ಹಣಬಣ್ಣ ಭಂಗಾರದ ಗಟ್ಟಿ 1ಕ್ಕೆ ತೂಕ 1 ವರಹ 11 ತೂಕ.

ಬಿ. ಜೆ. ಕೊಮಾರಸ್ವಾಮಿ ನಾಯಿಕ್, ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಾರ್ನಿಸಿಲ್ ಆಫೀಸಿನಿಂದ.

ತಾರೀಖು 7ನೆ ಮೇ 1909.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನು ಇದ ರೊಡನೆ ಜಂಟಿಸಿ ಇರುವ ಪಟ್ಟೀ ಮೇರೆಗೆ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1910ನೆ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳುವ ಬಗ್ಯೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು 1909ನೆ ಇಸವಿ ಮೇ 25ನೆ ತಾರೀಖು ಮಂಗಳ ವಾರ ದಿವಿ 2 ಘಂಟೆ ವಳಗಾಗಿ ಈ ಕೆಳಗೆ ಸೈನ್ ಮಾಡಿರುವವರಿಗೆ ಕೊಡಬಹುದು.

2. ಪ್ರತಿ ಒಂದು ದರಖಾಸ್ತು ಸಂಗಡ ಕರ್ರೆಸಿ ನೋಟ್ ಆಗಲಿ ಅಥವಾ ನಗದಾಗಲಿ (50) ಐವತ್ತು ರೂಪಾಯಿ ಠೇವಣಿ ಮೊಬಲಗು ಹಾಜರ್‌ಮಾಡಬೇಕು.

3. ದರಖಾಸ್ತುದಾರರು ತಾವು ದರಖಾಸ್ತು ಮಾಡುವ ಪ್ರತಿ ಒಂದು ಬ್ಲಾಕಿಗೂ ತಮ್ಮ ದರಖಾಸ್ತು ಮೊಬಲಗನ್ನು ನಮೂದಿಸಬೇಕು.

ಷರತ್ತುಗಳು.

1. ಆಯಾಯ ಡಿವಿಜನ್‌ಗೆ ಶೇರಿದ ರೋಡುಗಳಲ್ಲಿಯೂ, ಗಲ್ಲಿಗಳಲ್ಲಿಯೂ ಸಹ ಸ್ವೀಪರ್‌ಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮ ತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚರಾವನ್ನು, ಮಳೆಕಾಲದಲ್ಲಿಯೂ ಬೇಸಿಗೆಕಾಲದಲ್ಲಿಯೂ ಸಹ ಬೆಳಿಗ್ಯೆ 5 ಘಂಟೆ ಲಾಗಾ ಯಿತು 9 ಘಂಟೆ ವರಿಗೂ, ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರಿಗೂ ಒಂದು ದಿನವೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೀನಾ, ಪ್ರೆಸಿ ಡೆಂಟ್ ಸಾಹೇಬರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ‍್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನು ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನು ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದುಹಾಕು ವುದಕ್ಕೆ ತಗಲುವ ಲಾಗವಡು ಎಷ್ಟು ಆಗುತ್ತದೆಯೋ ಅದನ್ನು ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಭಾಗದ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರ್ಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನು ಪ್ರತಿದಿನವೂ ಸಾಗಿ ಸತಕ್ಕ ಬಗ್ಯೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನು ಪ್ರತಿ ದಿವಸವೂ ಐಯಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಅಥವಾ ಕೆಲವು ಸ್ಪೆಷಿ ಯಲ್ ಕೇಸುಗಳಲ್ಲಿ ತಲಬು ಮಾಡಿದವ್ಯಾಳೆ ಸಾಗಿಸಿಕೊಂಡು ಪಾಕ್ ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೆ ಕಲಂನಲ್ಲಿ ಗೊತ್ತುಮಾಡಿರುವ ಮೇರೆಗೆ ಜುರ‍್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಒಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿ ಮಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯದಲ್ಲಿ ಪಾಯಿಖಾನೆ ಗೊಬ್ಬರ ಭರ್ತಿಮಾಡಿ ಅದರಮೇಲೆ ಪುನಹ ಕಸ ಹಾಕಿ ಅದರ ದುರ್ಗಂಧಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚೆಲ್ಲದಂತೆಯೂ, ಮಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು. ಮತ್ತು ಮಕ್ಕರಿಯ ಕಸದಮೇಲೆ ಚಾಪೆಯಿಂದ ಕಾಣ ದಂತೆ, ಮುಚ್ಚಿ ಇರಬೇಕು.

4. ಭಂಡಿಗಳೂ ಮತ್ತು ಅವುಗಳ ಮೇಲೆ ಇರತಕ್ಕ ಭಂಡಿ ಮಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟವಂಥವಾಗಿಯೂ ಇರಬೇಕು. ಎತ್ತುಗಳು ಎಳೇ ಪ್ರಾಯವುಳ್ಳವಾಗಿ ದೃಢವಾಗಿ ಇರಬೇಕು.

5. ದರಖಾಸ್ತು ಮಂಜೂರಾದ ನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ನಾಲ್ಕು ಖಿಸ್ತಿನಲ್ಲಿ ಅಂದರೆ 1ನೆ ಖಿಸ್ತು 1909ನೆ ಇಸವಿ ಸೆಪ್ಟಂಬರ್ ಆಖೈರ್ ವರಿಗಿನದು 1909ನೆ ಜುಲೈ 1ನೆ ತಾರೀಖಿನಲ್ಲಿಯೂ, 2ನೆ ಖಿಸ್ತು 1909ನೆ ಇಸ ವಿ ಡಿಸೆಂಬರ್ ಆಖೈರ್ ವರಿಗಿನದು 1909ನೆ ಇಸವಿ ಅಕ್ಟೋಬರ್ 1ನೆ ತಾರೀಖಿನಲ್ಲಿಯೂ, 3ನೆ ಖಿಸ್ತು 1910ನೆ ಮಾರ್ಚಿ ಆಖೈರ್ ವರಿಗಿನದು 1910ನೆ ಇಸವಿ ಜನವರಿ 1ನೆ ತಾರೀಖಿನಲ್ಲಿಯೂ, 4ನೆ ಖಿಸ್ತು 1910ನೆ ಜೂನ್ ಆಖೈರು ವರಿಗಿನದು 1910ನೆ ಏಪ್ರಿಲ್ 1ನೆ ತಾರೀಖಿನಲ್ಲಿಯೂ ತಪ್ಪದೆ ಅಡ್ವಾನ್ಸಾಗಿ ಹಾಜರ್‌ಮಾಡಿ ರಸೀದಿ ಪಡದುಕೊಳ್ಳಬೇಕು. ಈ ರೀ.. ಮೊಬಲಗು ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನು ಒಂದೇ ಗಂಟಿನಲ್ಲಿ ಡಿಮ್ಯಾಂಡ್ ಮಾಡಿದ ಒಡನೇ ಬಿಲಾ ತಕರಾರ್ ಪಾವತಿ ಮಾಡಬೇಕು. ಇದಕ್ಕಾಗಿ ಸ್ಟಾಂಪು ಕಾಗದ್ದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಎಲ್ಲಾ ಷರತ್ತುಗಳನ್ನು ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡದುಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವಲ್ ಕಂ ಟ್ರಾಕ್ಟುದಾರನನ್ನು ಗುರಿಮಾಡಿ ಜಫ್ತಿ ಹರಾಜ್ ಮೂಲಕ ಹಣ ವಸೂಲ್‌ಮಾಡಿಕೊಳ್ಳಲ್ಪಡುತ್ತೆ.

6. ಕಡಿಮೆ ವಿಷಯುಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇ ರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ 1ನೆ ಷರತ್ತಿನಲ್ಲಿ ಕಂಡಂತೆ ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಅಥವಾ ಖರ್ಚುಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ಪೂರಾ ಅಥವಾ ವುಳಿದದ್ದು ವಾಪಸು ಮಾಡಲ್ಪ ಡುವದು.

8. ಬೋರ್ಡಿನವರ ಮಂಜೂರು ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಬೋ ರ್ಡಿನವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿಲಾ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

9. ಗೊಬ್ಬರದ ಭಂಡಿಗಳಿಗಾಗಿ ಮಾಫೀ ಪ್ಯಾಸುಗಳು ದೊರಿಯಲಾರವು. ಟೋಲ್ ಗೇಟುಗಳಲ್ಲಿ ಈ ಸಿಟಿಗೆ ಶೇರಿ ಲೈಸೆನ್ಸು ಪಡೆಯದೆ ಇರುವ ಭಂಡಿಗಳು ಬಂದರೆ ಅವುಗಳಿಗಾಗಿ ಟೋಲ್ ಪಾವತಿ ಮಾಡಬೇಕು.

ನಂಬರ್.	ಡಿವಿಜನ್.	ಬ್ಲಾಕ್.	ರೋಡುಗಳ ತಪಶೀಲ್ ಮತ್ತು ಚಕ್ಕುಬಂದಿ.
1	I	,,	1ನೆ ಡಿವಿಜನ್ ನಾರದರ್ನ್ ಎಕ್ಸ್ಟೆನ್ಷನ್ ಮಾಲೇನಹಳ್ಳಿ. ಪಿಂಡಾರ್‌ಚೆರಿ ಎಲ್ಲಾ ಸಬರ್ಬನ್ ರೋಡುಗಳು ಗುಟ್ಟಹಳ್ಳಿ, ಮುನಿರೆಡ್ಡಿಪಾಳ್ಯ ವಗೈರೆ ಡಿವಿಜನ್‌ಗೆ ಸೇರಿದ ಎಲ್ಲಾ ಭಾಗಗಳು ರಾತ್ರಿ ಕಾಲದಲ್ಲಿ ಹಾಲಿ ಎತ್ತುತ್ತಿರುವ ಮುಂದೆ ಎತ್ತಲ್ಪಡುವ ಬಂಗ್ಲೆಗಳ ಪಾಯಿಖಾನೆ ವಿನಹ.
2	II	1	ಕಿಚ್ಚಶೆಟ್ಟಿ ಛತ್ರದ ರೋಡು ಸೇರಿ ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕದ ವರಿಗೆ, ಅಲ್ಲಿಂದ ಗುಡುಮೈಯ್ಯನ ಪೇಟೆ ದೊಡ್ಡರೋಡ್‌ನಿಂದ ಬಳೇಪೇಟೆ ರೋಡಿನವರಿಗೆ, ಮತ್ತು ಉತ್ತರಕ್ಕೆ ಸುಬೇದಾರ್ ಛತ್ರ ರೋಡ್ ಆಖೈರು ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
3	,,	2	ಅವಿನ್ಯೂ ರೋಡ್ ಅಂಜನೇಯನ ಗುಡಿ ಚವುಕ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಜಹಗೀರ್‌ದಾರ್ ಮನೆ ಚವುಕ ಬಳೇಪೇಟೆ ಗುಡುಮೈಯ್ಯನ ಪೇಟೆ ರೋಡ್ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
4	,,	3	ತಾಲ್ಲೂಕು ಕಚೇರಿ ರೋಡ್ ಬಳೇಪೇಟೆ ಚವುಕದ ಮೊದಲು ಮದರಾಸ್ ಗೂಡ್ಸ್ ಗೇಟ್ ವರಿಗೆ ಅಲ್ಲಿಂದ ರೈಲ್ವೆ ಸ್ಟೇಷನ್ ಸ್ಟಾಫ್ ಕ್ವಾರ್ಟರ್ಸ್ ವಗೈರೆ ಕಕ್ಕಸ್‌ಗಳು ಮತ್ತು ಮನೆಗಳು ಧರ್ಮಾಂಬುಧಿಕೆರೆ ಸುತ್ತಲೂ ರೋಡ್, ಹಳೆ ಸವಾರ ಲೈನಿಗೆ ಸೇರಿದ ಪೋಲೀಸ್ ಸ್ಟೇಷನ್ ವಗೈರೆ, ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
5	III	1	ಮಾರ್ಕೆಟ್ ಚವುಕದ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಮೆಟ್ಟಿಕಲ್ ರೋಡ್‌ವರಿಗೂ, ಅಲ್ಲಿಂದ ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದಿಂದ ಮಾರ್ಕೆಟ್ ಚವುಕದವರಿಗೆ, ಈ ಮಧ್ಯೆ ಗುಂಡೋಪಂತರ ರೋಡ್, ತರಗಿನಪೇಟೆ, ಮಾಮೂಲ್‌ಪೇಟೆ ರಸ್ತೆಗಳು, ಬಳೆಗಲ್ಲಿಗಳು.
6	,,	2	ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದ ಮೊದಲು ಪೋಲೀಸ್ ರೋಡ್ ಅಕ್ಕಿ ಪೇಟೆ ರೋಡ್ ವರಿಗೂ, ಅಲ್ಲಿಂದ ಅಕ್ಕಿ ಪೇಟೆ ರೋಡ್ ಅನಾಮತ್ತು ತಾಲ್ಲೂಕು ಕಚೇರಿ ರೋಡ್ ರಾಘವಾಚಾರ್ಲು ಮನೆ ಬಳಿ ಚವುಕದಿಂದ ತಾಲ್ಲೂಕು ಕಚೇರಿ ರೋಡ್ ಮೆಟ್ಟಕಲ್ಲು ರೋಡ್ ಚವುಕದ ವರಿಗೂ, ಈ ಮಧ್ಯೆ ಇರುವ ಜಂಬಾನಪೇಟೆ, ಸುಲ್ತಾನ್‌ಪೇಟೆ, ಸಂತೂಸಾಪೇಟೆ, ಮನವಾರ್ತೆಪೇಟೆ ರೋಡ್‌ಗಳು, ಗಲ್ಲಿಗಳು.
7	,,	3	ಪೋಲೀಸ್ ರೋಡ್ ಅಕ್ಕಿ ಪೇಟೆ ಚವುಕದ ಲಾಗಾಯಿತು ತೋಟದ್ದೇವರ ಮಠದ ವರಿಗೂ, ಅಲ್ಲಿಂದಾ ಉಲ್ಲನ್‌ಮಿಲ್ ಟ್ಯಾಂಕಬಂಡ್ ರೋಡ್ ಮೈಸೂರು ರೈಲ್ವೆ ಗೂಡ್ಸ್‌ಗೇಟ್ ತಾಲ್ಲೂಕು ಕಚೇರಿ ರೋಡ್ ಅಕ್ಕಿ ಪೇಟೆ ಚವುಕದವರಿಗೆ. ಈ ಮಧ್ಯೆ ಇರುವ, ಗೌಡನಪೇಟೆ, ಅರಳೇಪೇಟೆ, ಅಕ್ಕಿ ಪೇಟೆ ಗಲ್ಲಿಗಳು, ರಸ್ತೆಗಳು.
8	,,	4	ತರಕಾರಿ ಮಾರ್ಕೆಟ್‌ಬಳಿ ಆಸ್ಪತ್ರೆ ಮೊದಲು ಮೈಸೂರು ರೋಡ್ ಬಾರ್‌ಲೈನ್‌ವರಿಗೂ, ಅಲ್ಲಿಂದ ಕೆಂಗೇರಿ ಬಾಗಲ್ ಪೋಲೀಸ್ ಸ್ಟೇಷನ್‌ವರಿಗೆ, ಸ್ಟೇಷನ್ನಿಂದ ರಾಣಾಸಿಂಗನಪೇಟೆ ಚೇಲಿ. ಈ ಮಧ್ಯೆ ಇರುವ ರಸ್ತೆಗಳು, ಗಲ್ಲಿಗಳು ಮತ್ತು ಹಳೇ ಬಾರ್ ಲೈನ್ ಬಾಜೂ ಇರುವ ಪೆನ್ಷನ್ ಲೈನ್, ಚಲವಾದಿ ಪಾಳ್ಯ ವಗೈರೆ.
9	IV	1	ಹಲಸೂರು ಗೇಟ್ ಪೋಲೀಸ್ ಸ್ಟೇಷನ್ ಮೊದಲು ತಾಲ್ಲೂಕ್ ಕಚೇರಿ ರೋಡ್ ನಗರ್ತರ ಪೇಟೆ ಅಣ್ಣೈಯ್ಯಪ್ಪ ಶೆಟ್ಟರ ಮನೆವರಿಗೂ, ಅಲ್ಲಿಂದಾ ಉತ್ತರಕ್ಕೆ ಸೈಬಶೆಟ್ಟರ ಗಲ್ಲಿಯಿಂದಾ ಜುಮ್ಮಾ ಮಸೀತಿ ಮುಂಭಾಗದಿಂದ ನಾರಾಯಣಶೆಟ್ಟಿಪೇಟೆ ರೋಡ್-ಸೇರಿ ಕಬ್ಬನ್‌ಪೇಟೆ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಅಲ್ಲಿಂದಾ ಕಬ್ಬನ್ ಸಾಬರಪೇಟೆ ರೋಡ್-ಸೇರಿ ಹಲಸೂರು ಗೇಟಿನ ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
10	,,	2	ನಗರ್ತರಪೇಟೆ ಅಣ್ಣೈಯಪ್ಪಶೆಟ್ಟರ ಮನೆ ಲಾಗಾಯಿತು ದೊಡ್ಡಪೇಟೆ ಚವುಕ ಅವಿನ್ಯೂ ರೋಡ್ ಶೇರಿ ಎಲಹಂಕದ ಬಾಗಲ್ ಪೋಲೀಸ್ ಸ್ಟೇಷನ್‌ವರಿಗೂ, ಅಲ್ಲಿಂದ ಡಿಸ್ಟ್ರಿಕ್ಟ್ ಆಫೀಸ್ ರೋಡ್ ಸಿನಬಾಫ್ ಕಬ್ಬನ್‌ರೋಡ್ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ. ಈ ಮಧ್ಯೆ ಇರುವ ಚವುಡೇಶ್ವರಿ ರೋಡ್ ಪಾಂಚಾಳದ ಪೇಟೆ, ಮಕ್ಕಳು ಬಸವಣ್ಣ ನಗುಡಿ ರೋಡ್ ಕವಾಡಿ ರೇವಣ್ಣನಪೇಟೆ, ರಸ್ತೆಗಳು, ಗಲ್ಲಿಗಳು.

ನಂಬರ.	ಡಿವೀಜ಼ರ್ಜ.	ಬ್ಲಾಕ.	ರೋಡಿಗಳ ತಪಶೀಲ ಮತ್ತು ಚಕ್ಕುಬಂದಿ.
11	V	2	5ನೆ ಡಿವಿರ್ಜ ಮಾಮೂಲ ಮೇರಿಗೆ.
12	VI	1	ಮಾರ್ಕೆಟ ಚವುಕದ ಮೊದಲು ಬೊಂಬು ಬಜಾರ ರೋಡ, ಮಿರ್ಷರೋಡ, ಲಾಲ ಬಾಗ ರೋಡ, ಬ್ಯಾಟಪ್ಪನ ತೋಪುನಿಂದ ಬಳೆಪ್ಪಭಾವಿ ಬಳಿ ಗಲ್ಲಿಯಿಂದ ಮಾವಹಳ್ಳಿ ಕೆರೆ ಕಟ್ಟೆ, ಕಲಾಸಿರೋಡ, ಹಳೇ ಪೊಲೀಸ ಸ್ಟೇಷರ್ನ ಚವುಕದ ವರಿಗೆ. ಈ ಮಧ್ಯೆ ಇರುವ ಅಮ್ಮಾ ಚವುದ್ರಿಪಾಳ್ಯ, ಗಂಗಮ್ಮಚೇರಿ ರಸ್ತೆಗಳು, ಗಲ್ಲಿಗಳು.
13	,,	2	ಕಲಾಸಿ ಲೈನು ಹಳೇ ಪೊಲೀಸ ಸ್ಟೇಷನ್ನಿಂದ ಕೊರಚರಪಾಳ್ಯದ ರೋಡ ಕಾರಂಜಿ ಕೆರೆಕಟ್ಟೆ ಬುಳ್ಳಣ್ಣನ ತೋಪುವರಿಗೂ, ಅಲ್ಲಿಂದ ಉಪ್ಪಾರಹಳ್ಳಿ, ಚಿಕ್ಕಮಾವಹಳ್ಳಿ, ದೊಡ್ಡ ಮಾವಹಳ್ಳಿ, ಕನಕನಪಾಳ್ಯ ಲಾಲಬಾಗ ರೋಡ ಗೇಟಿನ ವರಿಗೂ. ಈಮಧ್ಯೆ ಇರುವ ಬೀದಿ ಗಳು, ಗಲ್ಲಿಗಳು.
14	VII	,,	7ನೆ ಡಿವೀರ್ಜ ಕೋಟೆ ಮಾಮೂಲ ಮೇರಿಗೆ.
15	,,	,,	ಚಾಮರಾಜೇಂದ್ರಪೇಟೆ, ಹೊಸ ತರಗಿನಪೇಟೆ, ಗುಟ್ಟಹಳ್ಳಿ, ಗವಿಪುರ, ಮಾದಿಗರ ಪಾಳ್ಯ ವಗೈರೆ ಡಿವಿರ್ಜಗೆ ಸೇರಿದ ರೋಡಿಗಳು, ಗಲ್ಲಿಗಳು ಯಾವತ್ತು.
16	,,	,,	ಬಸವಣ್ಣನ ಗುಡಿ ಎಕ್ಸ್‌ಟೆರ್ಷನ.
17	,,	,,	ಮಲ್ಲೇಶ್ವರ ಎಕ್ಸ್‌ಟೆರ್ಷನ.

ತಾರೀಖು 7ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟರ್ವ ಮಜಕೂರಿನಲ್ಲಿರತಕ್ಕ ಅಂದರೆ, ಮಾಮೂಲ ಅನು ಸರಿಸಿ ಮಾಫಿ ನಡಿಯತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಸೇರಿದ ತೆಂಗಿನ ಮರಗಳ ಫಸಲ ಪೈಕಿ ಆಯಾಯ ಮನೆ ಅಥವಾ ಅಂಗಡಿ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೆ ಜಾತಾ ಉಳಿದ ಅರ್ಧಹಿಸ್ಸೆ ಫಸಲನ್ನು 1909ನೆ ಇಸವಿ ಜುಲೈ ಗುರ್ರೇ ಲಾಗಾಯತು 1910ನೆ ಇಸವಿ ಜೂರ್ನ ಆಖೈರು ವರಿವಿಗೂ ಒಂದು ಸಾಲ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈರ್ನ ಮಾಡಿರುವವರಿಗೆ 1909ನೆ ಇಸವಿ ಮೇ 25ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ ಭಾಗದಲ್ಲಿ "ಷಹರ ಮಜಕೂರಿಗೆ ಸೇರಿದ ತೆಂಗಿನ ಫಸಲು ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲೀ ಅಂಗೀಕರಿಸಬೇಕೆಂಬುವದಕ್ಕೆ ಬೋರ್ಡಿನವರು ಬದ್ಧರಾಗುವದಿಲ್ಲವು ಮತ್ತು ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಮಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಕಂಟ್ರಾಕ್ಟಿನ ವಿಶಿಷ್ಟ ಹಣವನ್ನು ಹಾಜರ್ಮಾಡಿ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತೇನೆಂಬುವದಕ್ಕೆ ಛಾಪಾಕಾಗದಲ್ಲಿ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಆಗುವ ಲುಕ್ಸಾನಿಗೆ ಅವನು ಗುರಿಯಾಗುತ್ತಾನೆ. ಈಗ ಇರತಕ್ಕ ಮರಗಳ ಪೈಕಿ ಪಬ್ಲಿಕ ಅನುಕೂಲತೆ ಬಗ್ಯೆ ಆಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಮರಗಳನ್ನು ಕಡಿಸಿದಲ್ಲಿ ಆಬಗ್ಯೆ ಯಾವ ಲುಕ್ಸಾನು ಕೇಳತಕ್ಕದ್ದಲ್ಲ.

6. ಕಡಮೆ ವಿಷಯಗಳನ್ನು ಈ ಕೆಳಗೆ ಸೈರ್ನ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಇವನು ಅಲಾಯಿದಾ ಪಾವತಿಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣವು ವಾಪಸ ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿಲಾ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

9. ಮ್ಯುನಿಸಿಪಲ ಗಾರ್ಡನ್ನುಲ್ಲಿರುವ ತೆಂಗಿನ ಮರಗಳು ಇದಕ್ಕೆ ಸೇರಿರುವದಿಲ್ಲ.

ತಾರೀಖು 7ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮುಜಕೂರು ಕಸಾಯಿ ಮಾರ್ಕಟ್ಟಿನಲ್ಲಿ ರೋಜೀನಾ ಸಾಯಂಕಾಲದವೇಳೆ ಕಟಾವು ಆಗುವ ಕುರಿ ಅಥವಾ ಮೇಕೆ ರಾಸ್ 1ಕ್ಕೆ 0—3—0 ಮೂರು ಆಣೆ ಮೇರಿಗೆ 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1910ನೆ ಇಸವಿ ಜೂನ್ ಆಖೈರ್ ಮಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಸನ್ 1909ನೆ ಇಸವಿ ಮೇ 25ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲೆ ಭಾಗದಲ್ಲಿ "ಮ್ಯುನಿಸಿಪಲ್ ಸ್ಲಾಟರ್ ಹೌಸಿನ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಬೋರ್ಡಿನವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಒಂದು ತಿಂಗಳ ಕಂಟ್ರಾಕ್ಟು ಮೊಬಲಗು ಅಮಾನತ್ತು ಇಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಹಾಗೆ ತಪ್ಪಿದರೆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಸ್ಲಾಟರ್ ಹೌಸನ್ನು ಪಾಕ್ ಮಾಡಿಸಲು ನೇಮಿಸಲ್ಪಡುವ ಎಸ್ಟಾಬ್ಲಿಷ್ಮೆಂಟ್ ಛಾರ್ಜಿಗಾಗಿ ಮಾಹೇಯಾನಾ 25 ರೂಪಾಯಿ ಮೇರಿಗೆ ಹರಯೇಕ ತಿಂಗಳು 5ನೆ ತಾರೀಖು ಒಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ್ ಹೌಸಿನಲ್ಲಿ ಬೀಳುವ ಕಚರಾ ಕಂಟ್ರಾಕ್ಟುದಾರರಿಗೆ ಸೇರತಕ್ಕದ್ದಿಲ್ಲಾ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳು 5ನೆ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮತ್ತು ಎಸ್ಟಾಬ್ಲಿಷ್ಮೆಂಟ್ ಛಾರ್ಜನ್ನು ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡಿಯಬೇಕಾಗಿದೆ.

8. ಅಮಾನತ್ತಿನಲ್ಲಿ ಇಡಲ್ಪಟ್ಟ ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರವರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಹಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸದರೀ ಸ್ಲಾಟರ್ ಹೌಸನ್ನು ಕಂಟ್ರಾಕ್ಟುಕಾಲದಲ್ಲಿ ಬೇರೇ ಸ್ಥಳಕ್ಕೆ ವರ್ಗ ಮಾಡಿದ್ದೇ ಆದರೆ ಬಿಲಾ ತಕರಾರು ಅಲ್ಲಿಗೆ ಹೋಗಬೇಕು.

11. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿಲಾ ತಕರಾರು ತೆಗದುಕೊಳ್ಳಲು ಸಲೀಸ್ ಏರ್ಪಾಡು ಇರತಕ್ಕದ್ದು.

12. ಮಾರ್ಕಟ್ ಷೋ ಎಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಅದಕ್ಕೆ ಹಿಂದಿನ ದಿನ ಸ್ಲಾಟರ್ ಹೌಸಿನಲ್ಲಿ ಮಾರ್ಕಟ್ ಷೋ ಗೋಸ್ಕರ ಕಟಾವಾಗುವ ಕುರಿಗಳು ಅಥವಾ ಮೇಕೆಗಳಮೇಲೆ ರುಸುಂ ವಸೂಲ್ಮಾಡಕೂಡದು. ಈ ನಷ್ಟಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

13. ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡೆದುಕೊಂಡರೂ ಮೇಲಿನ ರೇಟಿಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರ್ ಹೌಸ್ ವಿನಹಾ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನ್ನು ಜವಾಬ್ದಾರನನ್ನಾಗಿ ಮಾಡಿ ಅವನ ಸ್ಥಿರ, ಚರಜಿಂದಗಿ ಜಫ್ತಿ ಮೂಲಕ ವಸೂಲ್ಮಾಡಲ್ಪಡುತ್ತೆ.

ತಾರೀಖು 7ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನಾಲ್ಕನೇ ಡಿವಿಜನ್ ತಾರಾಮಂಡಲಪೇಟೆ ನಾಲ್ಕು ಭಾವಿ ಖಳಿಯಾಣ ಖಾಲಿ ಜಮೀನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ, ಜಮೀನ್ ಬಾಡಿಗೆಯನ್ನು 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1910ನೆ ಇಸವಿ ಜೂನ್ ಆಖೈರ ವರಿಗೆ ರೋಜೇನಾ ಇದರಡಿ ನಮೂದಿಸುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1909ನೆ ಮೇ 25ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು :—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್ :—

		ರೂ.	ಆ.	ಪೈ.
1.	ಕಟ್ಟಿಗೆ ಮತ್ತು ಹುಲ್ಲುಭಂಡಿ 1ಕ್ಕೆ	0	2	0
2.	ಕಟ್ಟಿಗೆ ಹೊರೆ 1ಕ್ಕೆ	0	0	1
3.	ಹುಲ್ಲು ಹೊರೆ 1ಕ್ಕೆ	0	0	2
4.	ತರಕಾರಿ ಅಂಗಡಿ ಜಾಗಾಕ್ಕೆ	0	0	2
5.	ಕುಂಬಾರ್ರ ಸಾಮಾನು ಮಂಕ್ರಿ 1ಕ್ಕೆ	0	0	2
6.	ವಿರ್ನ ವಗೈರೆ ಅಂಗಡಿ 1ಕ್ಕೆ	0	0	2

3. ದರಖಾಸ್ತುಗಳ ಮೇಲ್ಭಾಗದಲ್ಲಿ "ತಾರಾಮಂಡಲಪೇಟೆ ನಾಲ್ಕು ಭಾವಿ ಬಳಿಯಾಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು ಹುಲ್ಲುಭಂಡಿ ವಗೈರೆ ಇಟ್ಟುಕೊಂಡು ಮಾರುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಬೋರ್ಡಿನವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾ ಬರುವದಕ್ಕೆ ಖಾತರೆಯಾಗಿ ಅಮಾನತ್ತು ಉಳಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನು ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿ ಇರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು ಕಟ್ಟಿಗೆ ವಗೈರೆ ಭಂಡಿಗಳೇ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೇ ಹೊರೆಗಳೇ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರೆಯಲಾರದು.

12. ಮೇಲ್ಕಂಡ ಜಾಗಾ ವಿನಹ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೇ ಆಗಲಿ ರುಸುಂ ವಸೂಲ್ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

15. ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳುವ ತೆರಿಗೆ ಅಥವಾ ರುಸುಂಗಳಿಗೆ ಪ್ರೆಸಿಡೆಂಟರು ವಿಧಾಯಕ ಮಾಡುವ ನಮೂನೆಯಲ್ಲಿ ರಶೀತಿಯನ್ನು ಕೊಡಬೇಕು.

ತಾರೀಖು 7ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಇದರಡಿ ನಮೂದಿಸಿ ಇರುವ ಹುಲ್ಲು ಗಾವಲುಗಳನ್ನು 1909—10ನೆ ಸಾಲಿಗೆ ಅಂದರೆ 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1910ನೆ ಇಸವಿ ಜೂನ್ ಆಖೈರ್ ಮಿನಹು ರೂಢಿ ಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1909ನೆ ಇಸವಿ ಮೇ 25ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಬೋರ್ಡಿನವರು ಉಳಿಸಿಕೊಂಡಿರುತ್ತಾರೆ. ಎಲ್ಲಾ ದರಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಬೋರ್ಡಿನವರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರು ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್‍ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನು ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರ್‌ವಾರ್ ಹೇಳಿದ ಕೂಡ್ಲೆ ಬಿಲಾತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರದು ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನ ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

ತಪಶೀಲ್.

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.
1	ಧರ್ಮಾಂಬುಧಿ ಕಟೆ ಕಾಲ್ವೆ 2ಕ್ಕೆ ...	ದನಗಳನ್ನು ಮೇಯಿಸಿಕೊಳ್ಳುವದಕ್ಕೆ.
2	ಜಕ ರಾಯನ ಕೆರೆ ಕಟ್ಟೆ ಕೆಳಗೆ ...	ಡಿಟೋ
3	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು ...	ಡಿಟೋ
4	ಕೋಟೆ ರ್‍ಯಾಂಪಾರ್ಟಿನ ಹುಲ್ಲುಕಂದಕದ ಸುತ್ತು ರಸ್ತೆ ವರಿಗೆ-ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ರೋಡು ಮಾರ್ಜಿನ್-ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು ಹುಲ್ಲು ಕೊಯಿದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.
5	ಲಾಲ್‌ಬಾಗ್ ಮಾವಳ್ಳಿ ಕೆರೆ ...	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯವಿಲ್ಲದಂತೆ. ಕುಂಬಾರರು ಕೆರೆಯಲ್ಲಿ ಜೇಡಿ ಮಣ್ಣನ್ನು ಗಾಡಿಮೇಲೆ ಸಾಗಿಸಿಕೊಳ್ಳಲು ಅಟಂಕಪಡಿಸಕೂಡದು.
6	ದೊಡ್ಡ ಬೈಲ್‌ಕಾನ ...	ಡಿಟೋ

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.
7	ಆಸ್ಸಿಕುಂಟೆ ಪಕ್ಕದ ಮತ್ತು ಒಳಗಿನ ಹುಲ್ಲು ...	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವುದಕ್ಕೆ, ಒಳ ಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.
8	ಕೆಂಗೇರಿಬಾಗಲ್ ಬಾರ್‌ಕೋಸ್ ಬಳಿ ಇರುವ ಕಾವಲ್ ಜಮೀನಿನಲ್ಲಿ ನಾಟುಗಳು ಹಾಕತಕ್ಕ ಬಗ್ಗೆ ಉಪಯೋಗಿಸಿಕೊಂಡಿರುವ ಜಮೀನ್ ಶಿವಾಯಿ, ಮರ್ಕಾ ಹದ್ದುಬಸ್ತು ಮಾರ್ಕ್ ಮಾಡಿರುವ ಸ್ಥಳ ವಿನಹ, ನಿಂತ ಜಮೀನಲ್ಲಿ ಬೀಳತಕ್ಕ ಹುಲ್ಲು.	ದನಗಳನ್ನು ಬಿಟ್ಟು ಮೇಯಿಸುವದಕ್ಕೆ.
9	ಮ್ಯುನಿಸಿಪಲ್ ಲಿಮಿಟಿಗೆ ಶೇರಿದ ವೆಸ್ಟರ್ನ್ ಎಕ್ಸ್‌ಟೆನ್ಷನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳ ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನ್‌ನಲ್ಲಿಯೂ, ಭೋಗೇನಹಳ್ಳಿ ದಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನಲ್ಲಿಯೂ ಸಹ.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ, ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ. ಆಯಾಯ ಮನೆಗಳ ಮುಂಭಾಗದಲ್ಲಿರುವ ರೋಡು ಮಾರ್ಜಿನ್ನಲ್ಲಿ ಹುಲ್ಲುಗಾವಲು ಕಂಟ್ರಾಕ್ಟುದಾರನು ಪ್ರವೇಶಿಸಕೂಡದು.
10	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು ...	ಮೇಯಿಸಿಕೊಳ್ಳುವದಕ್ಕೆ.
11	ದಂಡು ಉಪ್ಪಾರಹಳ್ಳಿ ಊರುಮುಂದಿನ ಹುಲ್ಲುಗಾವಲು...	ರೈಲ್ವೆ ಕಾಂಪೌಂಡಿನ ಬೇಲಿ ಮತ್ತು ಜಮೀನ್ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.
12	ಮಿಲ್ಲರ್ ಒಳಗೆರೆ ಹುಲ್ಲು ...	ಕೊಯಿದುಕೊಳ್ಳುವದಕ್ಕೆ.
13	ಮಾಗಡಿ ರೋಡಿನಲ್ಲಿರುವ ಪ್ಲೇಗು ಕ್ಯಾಂಪು, ಎಪಿಡೆಮಿಕ್ ಡಿಸೀಸ್ ಆಸ್ಪತ್ರೆ ಕಾಪೌಂಡಿನಲ್ಲಿರುವ ಹುಲ್ಲುಗಾವಲು ಕ್ಯಾಂಪಿಗಾಗಿ ಬಗ್ಗೆ ಮುದ್ದೀನಹಳ್ಳಿ ಬಾಬತು ಅಕ್ವೈರು ಆಗಿರುವ ಸರ್ವೆ ನಂಬರುಗಳು ಸಹ.	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ.
14	ಮ್ಯುನಿಸಿಪಲ್ ಲಿಮಿಟ್ಟಿಗೆ ಸೇರಿದ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್‌ಟೆನ್ಷನ್‌ಗಳಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ರೋಡು ಮಾರ್ಜಿನ್ ಮತ್ತು ಪಬ್ಲಿಕ್ ಸ್ಕ್ವೇರುಗಳು ಪಾರ್ಕುಗಳು ಜಾತಾ ಉಳಿದ ಬೋರ್ಡಿಗೆ ಶೇರಿದ ಜಮೀನಲ್ಲಿ ಬಿಳತಕ್ಕ ಹುಲ್ಲು.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ ಮಾಡಿಸುವದಕ್ಕೆ, ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರಕಡೆ ಮೇಯಿಸಿಕೊಳ್ಳುವದಕ್ಕೆ.

ತಾರೀಖು 7ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ 1909ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ, ಮಂಜೂರಾಗಿರುವ ದರಗಳ ಮೇರಿಗೆ ರುಸುಂ ಮತ್ತು ಬಾಡಿಗೆಯನ್ನು ವಸೂಲ್ಮಾಡುವದಕ್ಕೆ ಮೊಹರ್ ನಿಶಿ ದರಖಾಸ್ತುಗಳು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1909ನೆ ಇಸವಿ ಮೇ 26ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು:—

I. ಸಿಟಿ ಮಾರ್ಕೆಟ್ಟು ಸರಹದ್ದಿನೊಳಗೆ ಒಟ್ಟಾಗಿ ಆಗಲಿ ಅಥವಾ ಚಿಲ್ಲರೆಯಾಗಿ ಆಗಲಿ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಉರುಳುಗಡ್ಡೆ, ಈರುಳ್ಳಿ, ಕಡ್ಲೇಕಾಯಿ, ತೆಂಗಿನಕಾಯಿ ಮತ್ತು ಇತರ ಜಿನಸಿಗಳ ಗೂಡೆಗಳಿಗೂ, ಗಾಡಿಗಳಿಗೂ ಮತ್ತು ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಿಗೆ ತರುವ ಮೀನು, ಕೋಳಿ, ಕೋಳಿ ಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟುಗಳು ಅನುಸರಿಸಿ ತೆರಿಗೆ ವಸೂಲ್ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ಟು ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟ್ಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ:—

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಜೈಲ್ ಮಾರ್ಕೆಟ್ಟು.	
ಉಪ್ಪಾರಪೇಟೆ	ಡಿಟ್ಟೋ
ತಿಗಳರಪೇಟೆ ಧರ್ಮರಾಯನ ಗುಡಿ ಬಳಿ ಜೈಲ್	ಡಿಟ್ಟೋ
ಕಲಾಸಿಪಾಳ್ಯ	ಡಿಟ್ಟೋ
ಅಕ್ಕಿಪೇಟೆಯಲ್ಲಿರುವ	ಡಿಟ್ಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜಮೀನಿಗೆ ಬಾಡಿಗೆ ವಸೂಲ್ಮಾಡುವದಕ್ಕೆ.

IV. ತಗರದ ಸ್ಟಾಲ್‌ಗಳಲ್ಲಿ ಹಂಗಾಮಿಯಾಗಿ ಬಿಕರಿ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ಬಾಡಿಗೆ ವಸೂಲ್ಮಾಡುವದಕೆ.

V. ಮೀನು ಮತ್ತು ಕೋಳಿ ಮಾರ ಕಟ್ಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ಜಮೀನ್ ಬಾಡಿಗೆ ವಸೂಲ್ಮಾಡುವದಕ್ಕೆ ಮೇಲ್ಕಂಡ ಮಾರ್ಕೆಟ್ಟುಗಳಲ್ಲಿ ಮ್ಯುನಿಸಿಪಾಲಿಟಿಗೆ ತಿಂಗಳುಗಟ್ಲೆ ಬಾಡಿಗೆ ಕೊಡುವವರಿಂದ ಜಮೀನು ಬಾಡಿ

ಗೆಯನ್ನು ಕಂಟ್ರಾಕ್ಟುದಾರನು ವಸೂಲ್ಮಾಡಕೂಡದು ಮತ್ತು ಹಗಲು ರಾತ್ರಿ ಸಹ ಸಾಮಾನುಗಳು ತೆಗೆಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ಸಹ ಜಮೀನ್ ಬಾಡಿಗೆಯನ್ನು ವಸೂಲ್ಮಾಡಕೂಡದು.

2. ದರಖಾಸ್ತುಗಳ ಮೇಲ್ ಭಾಗದಲ್ಲಿ "ಸಿಟಿ ಮ್ಯುನಿಸಿಪಲ್ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ತೆರಿಗೆ ಮತ್ತು ಜಮೀನ್ ಬಾಡಿಗೆ ವಸೂಲ್ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಕೂಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಬೋರ್ಡಿನವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಅವನು ಒಡನೆ ಹಾಜರ್ಮಾಡಬೇಕು. ಮತ್ತು ಅಂಥಾ ದರಖಾಸ್ತುದಾರನು ಅವನ ದರಖಾಸ್ತನ್ನು ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗ ಅವಶ್ಯಕವಾದ ಇಜಾರೆ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟುದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ ತೆರಿಗೆ ಅಥವಾ ಬಾಡಿಗೆ ವಸೂಲ್ಮಾಡಿಕೊಳ್ಳತಕ್ಕದ್ದಾಗಿದೆ:—

A. ಸಿದ್ದಿಕಟ್ಟೆಯಲ್ಲಿರುವ ಎಕ್ಸ್‌ಕ್ಲೋಜರ್ ವೆಜಿಟೆಬಲ್ ಮಾರ್ಕೆಟ್ಟಿನಲ್ಲಿ.

ಇದರ ತಪ್ಸೀಲ್ ನಮೂದಿನಿಂದ ಕಂಟ್ರಾಕ್ಟುದಾರನು ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಪ್ರತಿ ಒಂದು ಸ್ಥಳದಲ್ಲಿಯೂ ಸ್ವಂತ ಲಾಗವಡಿನಿಂದ ಒಂದು ಬೋರ್ಡು ಹಾಕಿರಬೇಕು.

		ಆ.	ಪೈ.
1.	ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0	2
2.	ಹರಿವೆ ಸೊಪ್ಪುಗಳ ಮಂಕ್ರಿ 1ಕ್ಕೆ	0	1
3.	ಭಂಡಿ ತುಂಬಾ ತರಕಾರಿ, ಹಣ್ಣುಗಳು ಒಟ್ಟು ಬಿಕರಿಗೆ ಬಂದರೆ ...	2	0
4.	ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ	1	0
5.	ಸೇವು, ಅಂಜೂರ, ದಾಳಿಂಬ, ಚಕ್ಕೋತ ಮತ್ತು ಮಾವು ವಗೈರೆ ಹಣ್ಣುಗಳ ಮಂಕ್ರಿ 1ಕ್ಕೆ	0	3
6.	ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ತರಣಿನಪೇಟೆ ವಗೈರೆ ಸ್ಥಳದಿಂದ ಬರುವ ಉರುಳಗಡ್ಡೆ, ಈರುಳ್ಳಿ, ಕಡ್ಲೆಕಾಯಿ ವಗೈರೆ ಮೂಟೆ 1ಕ್ಕೆ	0	3
7.	ರೈಲಿನಿಂದ ಬರುವ ಮೂಟೆ ಭಂಡಿ ಭರ್ತಿ ಕಡ್ಲೆಕಾಯಿ, ಉರಳಗಡ್ಡೆ, ಈರುಳ್ಳಿ, ಮಾವಿನ ಹಣ್ಣು, ಬಾಳಹಣ್ಣು ವಗೈರೆ ಒಂದೇ ವಿಧವಾದ ಬಾಬಿಗೆ.	1	0
8.	ಕೋಳಿ, ಕೋಳಿಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ	0	3
9.	5 × 5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ ...	0	3
10.	ಸದರಿ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಾಕ್ಕೆ	1	0
11.	ವೆಜಿಟೆಬಲ್ ಮಾರ್ಕೆಟ್ಟು ವಳಗಾಗಿ ಟೆಂಪರರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ	0	2
12.	ಮೀನಿನ ಸ್ಟಾಲ್ 1ಕ್ಕೆ	0	2

VII. ವೆಜಿಟೆಬಲ್ ಮಾರ್ಕೆಟ್ಟು ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ ಕಬ್ಬಿಣ ವಗೈರೆ ಸಾಮಾನುಗಳು ರಾತ್ರಿ ಹಗಲು ಸಹ ತೆಗಿಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೆಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳಬಹುದು.

VIII. ಕಂಟ್ರಾಕ್ಟುದಾರನು ಪ್ರತಿ ತಿಂಗಳ 1ನೆ ತಾರೀಖು ವಳಗಾಗಿ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡೆದುಕೊಳ್ಳಬೇಕು.

IX. ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೆಯಿರ್ ಡ್ರೈವ್ ಪಕ್ಕದ ಖಾಲಿ ಜಮೀನಿನಲ್ಲಿ ವಸೂಲಾಗತಕ್ಕದ್ದು. ವೆಜಿಟೆಬಲ್ ಮಾರ್ಕೆಟ್ಟು ಕಂಟ್ರಾಕ್ಟುದಾರರೇ ವಸೂಲ್ಮಾಡಿಕೊಂಡು ಮಾಹೆ 1ಕ್ಕೆ 2 ರೂಪಾಯಿಗಳಂತೆ ಡಿಟೋ ದೇವಸ್ಥಾನದ ಏಜಂಟರಿಗಾಗಿ ಅವರಿಗೆ ಪಾವತಿ ಬಗ್ಗೆ ಕಂಟ್ರಾಕ್ಟು ಮೊಬಲಗಿನ ಸಂಗಡ ಇರಸಾಲ್ಮಾಡಬೇಕು.

X. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

XI. ಈ ಷರತ್ತುಗಳಿಗೆ ವಿರೋಧವಾಗಿ ನಡದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟು ರದ್ದು ಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿಗೆ ತೆಗದುಕೊಂಡು ಬಾಕ್ಯಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನು ಜವಾಬ್ದಾರಿ ಮಾಡಿ ಅವನ ಜಿಂದಗಿ ಜಫ್ತಿ ಹರಾಜು ಮೂಲಕ ವಸೂಲ್ಮಾಡಲ್ಪಡುತ್ತೆ.

XII. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬೇಕು.

XIII. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿನ್ ತಕರಾರು ತೆಗದುಕೊಳ್ಳಲು ಸಲೀಸ್ ವಿಳಾಸು ಇಡತಕ್ಕದ್ದು.

XIV. ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳುವ ತೆರಿಗೆ ಅಥವಾ ರುಸುಂಗಳಿಗೆ ಪ್ರೆಸಿಡೆಂಟು ಸಾಹೇಬರು ವಿಧಾಯಕ ಮಾಡುವ ನಮೂನೆಯಲ್ಲಿ ರಶೀತಿಯನ್ನು ಕೊಡಬೇಕು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 3ನೆ ಮೇ 1909.

1. ಕಂದಾಯದ ಬಾಕೀದಾರರಾದ ಮುತ್ತೂರು ಇನಾಂ ಗ್ರಾಮದ ವೃತ್ತಿದಾರ್ ಶ್ರೀನಿವಾಸ ಅವಧಾನಿ ವಗೈರೇರಿಂದ ಬರಬೇಕಾದ ಜವಿರ್ಬ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908ನೆ ಮತ್ತು ಹಿಂದಿನ ಸಾಲುಗಳಿಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 1,193—6—7 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಲ್ಪ ವ್ಯತ್ಯಾಸಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. — ಕಟ್ಟಡಗಳು. — ಕಟ್ಟಡದ ಹೆಸರು.	ಕಟ್ಟಡಗಳು. — ಅಂದಾಜು ಕಿಮ್ಮತ್ತು.	ಜಮೀನು. — ಸರ್ವೆ ನಂಬರ್ ಅಥವಾ ಹೆಸರು.	ಜಮೀನು. — ಖುಷ್ಕಿ, ತರಿ, ಬಾಗಾಯತು ಅಥವಾ ಇತರೆ.	ಜಮೀನು. — ವಿಸ್ತೀರ್ಣ.	ಜಮೀನು. — ಆಕಾರ.	ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಸಲ್ಲಬೇಕಾದ ಚಾಲ್ತಿ ಸಾಲಿನ ಮೊಬಲಗು.	ಸರಕಾರಕ್ಕೆ ವಸೂಲ್ ಮಾಡಬೇಕಾದ ಒಟ್ಟು ಬಾಕಿ ಮೊಬಲಗು.
								ಎ. ಗು.	ರೂ. ಆ. ಪೈ.			ರೂ. ಆ. ಪೈ.
ಶಿವಮೊಗ್ಗ	ಶಿವಮೊಗ್ಗ	ಮುತ್ತೂರು (ಶ್ರೋತ್ರಿಯ ಇನಾಂ)	ಶ್ರೀನಿವಾಸ ಅವಧಾನಿ ವಗೈರೇರು	...	...	ಪೂರಾ ಗ್ರಾಮದ ಜಮೀನು	ಬಾಗಾಯತು	111 17	1054 14 5	ರೂ. 5,000	ಚಾಲ್ತಿ ರೂ. ಆ. ಪೈ. 931 0 0	ಹಿಂದಿನ ಸಾಲುಗಳ ಬಾಕಿ 58 6 1
							ಖುಷ್ಕಿ	817 32	222 15 1			1908—09ನೆ ಸಾಲಿಗೆ 1,135 0 6
							ತರಿ ...	820 17	1922 6 8			1,193 6 7
							ಪರಂಪೋಕು	1027 25	64 3 7			
							ಜುಮ್ಲಾ ...	2777 11	3264 7 9			

ಚತುರ್ಗಡಿ.

ಪೂರ್ವಕ್ಕೆ—ಸೋಗಾನೆ ಮತ್ತು ಕಡೂರು ಗ್ರಾಮದ ಗಡಿ.
ಪಶ್ಚಿಮಕ್ಕೆ—ತುಂಗಾನದಿ.
ದಕ್ಷಿಣಕ್ಕೆ—ಕಾಚಿನಕಟ್ಟೆ ಗ್ರಾಮದ ಗಡಿ.
ಉತ್ತರಕ್ಕೆ—ಸೂಳೆಬೈಲ್ ಮತ್ತು ಊರಗಡೂರು ಗ್ರಾಮದಗಡಿ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವೆ ಪ್ರಸಿದ್ಧಪತ್ರಿಕೆ.

ತಾರೀಖು 3ನೆ ಮೇ 1909.

1. ಕಂದಾಯದ ಬಾಕೀದಾರರಾದ ಹೊಸಹಳ್ಳಿ ಇನಾಂ ಗ್ರಾಮದ ವೃತ್ತಿದಾರರು ಶ್ಯಾಮ ಅವಧಾನಿ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಪೂರ್ವಾಹ್ನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09 ಮತ್ತು ಹಿಂದಿನ ಸಾಲುಗಳಿಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ಮೇರಿಗೆ ರೂಪಾಯಿ 666—11—9 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. — ಕಟ್ಟಡಗಳು. — ಕಟ್ಟಡದ ಹೆಸರು	ಕಟ್ಟಡಗಳು. — ಅಂದಾಜು ಕಿಮ್ಮತ್ತು	ಜಮೀನು. — ಸರ್ವೆ ನಂಬರ್ ಹಿಸ್ಸೆ ಹೆಸರು	ಜಮೀನು. — ಜಮೀನಿನ ಬಾಬತು	ಜಮೀನು. — ವಿಸ್ತೀರ್ಣ	ಜಮೀನು. — ಕಂದಾಯ	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲ್ಲತಕ್ಕ ಜೋಡಿ ವಗೈರೆ.	ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮೊಬಲಗು.
								ಎ. ಗು.	ರೂ. ಆ. ಪೈ.		ರೂ. ಆ. ಪೈ.	ರೂ. ಆ. ಪೈ.
ಶಿವಮೊಗ್ಗ	ಶಿವಮೊಗ್ಗ	ಹೊಸಹಳ್ಳಿ (ಬ್ರಾಹ್ಮಣರ ಇನಾಂ)	ಶ್ಯಾಮ ಅವಧಾನಿ ವಗೈರೆ		...	ಪೂರಾ ಗ್ರಾಮದ ತಪ್ಸೀಲು.	ಬಾಗಾಯಿತು	68 24	558 10 1	ರೂ. 3,000	ಜೋಡಿ 556 0 0	34 14 9 ಹಿಂದಿನಸಾಲಿನ ಬಾಬತು.
							ಖುಷ್ಕಿ ...	414 16	88 7 2			631 13 0 1908–09ನೆ ಸಾಲಿಗೆ.
							ತರಿ ...	467 10	523 3 4			
							ಪರಂಪ್ರೋಕು	683 24	42 11 7			
							ಜುಮ್ಲಾ ...	1633 34	1213 0 2		ಜುಮ್ಲಾ ...	666 11 9

ಚತುರ್ಸೀಮೆ.

ಪೂರ್ವ—ತುಂಗಾನದಿ.

ಪಶ್ಚಿಮ—ರಾಮೇನಕೊಪ್ಪ ಮತ್ತು ಹೊಸಕೊಪ್ಪ ಗ್ರಾಮ ಗಡಿ.

ದಕ್ಷಿಣ—ಮುಳ್ಳುಕೆರೆ ಮತ್ತು ಹೊನ್ನಾಪುರ ಗ್ರಾಮ ಗಡಿ.

ಉತ್ತರ—ಹರಕೆರೆ ಗ್ರಾಮ ಗಡಿ

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 3ನೆ ಮೇ 1909.

1. ಕಂದಾಯದ ಬಾಕೀದಾರರಾದ ತಟ್ಟೀಕೆರೆ ಇನಾಂ ಗ್ರಾಮದ ವೃತ್ತಿದಾರರು ಮಂಜಭಟ್ಟ ವಗೈರೇಯಿಂದ ಬರಬೇಕಾದ ಜ ಮ್ಹಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಪೂರ್ವಾಹ್ನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908–09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ 196—11—7 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್‌ಮಾಡ ಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್‌ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‌ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪ ಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟ ಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವ ನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‌ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿ ಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾ ಗಲಿ ಮಂಜೂರ್‌ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರ ವರಿಂದ ಹರಾಜು ಮಂಜೂರ್‌ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವ ತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗ ಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕ್ರಯ.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ ತರಿ ಅಥವಾ ಬಾಗಾಯಿತು.	ಜಮೀನು. ವಿಸ್ತೀರ್ಣ.	ಜಮೀನು. ಕಂದಾಯ.	ಅಂದಾಜು ಕ್ರಯ.	ಸರಾಸರಿ ಸಾಲಿನ ಬಾಕೀ	ಸರಾಸರಿ ಸಾಲಿನ ಬಾಕೀ ಮೊಬಲಗು.
								ಎ. ಗುಂ.	ರೂ. ಆ. ಪೈ.			
ಶಿವಮೊಗ್ಗ	ಶಿವಮೊಗ್ಗ	ತಟ್ಟೀಕೆರೆ (ಪ್ರತ್ಯೇಕ ಇನಾಂ)	ಮಂಜಭಟ್ಟ ವಗೈರಾ	...	ರೂ. ...	ಪೂರಾ ಗ್ರಾಮದ ಜಮೀನು	ಬಾಗಾಯಿತು	1 7	5 10 0	ರೂ. 2,000	ಜೋಡಿ ರೂ. 167 ಆ. 8	1908–09ನೆ ಸಾಲಿಗೆ ರೂ. 196 ಆ. 11 ಪೈ. 7
							ಖುಷ್ಕಿ ...	133 22	47 1 9			
							ತರಿ	236 11	411 15 1			
							ಪರಂಪೋಕು.	46 31	2 14 9			
								417 31	467 9 7			

ಚತುರ್ಗಡಿ.

ಪೂರ್ವಕ್ಕೆ—ಹೊಸಕೊಪ್ಪ ಗ್ರಾಮದ ಗಡಿ.
ಪಶ್ಚಿಮಕ್ಕೆ—ಸ್ಟೇಟ್ ಫಾರೆಸ್ಟ್ ಗಡಿ.
ದಕ್ಷಿಣಕ್ಕೆ— ಡಿಟೋ
ಉತ್ತರಕ್ಕೆ—ರಾಮೇನಕೊಪ್ಪ ಗ್ರಾಮದ ಗಡಿ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 3ನೆ ಮೇ 1909.

1. ಕಂದಾಯದ ಬಾಕೀದಾರರಾದ ಗಾಜನೂರು ಅಗ್ರಹಾರದ ವೃತ್ತಿದಾರರು ಪಲ್ಲಕ್ಕಿ ಕೃಷ್ಣಾಚಾರ್ ವಗೈರೇರಿಂದ ಬರಬೇಕಾದ ಜವಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟ ಶಿವಮೊಗ್ಗ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ ಡಿವಿಜನ್ ಅಸಿಸ್ಟೆಂಟ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಪೂರ್ವಾಹ್ನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09 ಮತ್ತು ಹಿಂದಿನ ಸಾಲುಗಳಿಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 223—0—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು.	ಜಮೀನು. ನಂಬರ ಅಥವಾ ಹೆಸರು	ಖುಷ್ಕಿ, ತರಿ ವಗೈರೆ	ವಿಸ್ತೀರ್ಣ.	ಕಂದಾಯ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲ್ಲಬೇಕಾದ ... ಮೊಬಲಗು.	ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.
								ಎ. ಗು.	ರೂ. ಆ.			ರೂ. ಆ. ಪೈ
ಶಿವಮೊಗ್ಗ	ಶಿವಮೊಗ್ಗ	ಗಾಜನೂರು ಅಗ್ರಹಾರ	ಪಲ್ಲಕ್ಕಿ ಕೃಷ್ಣಾಚಾರ್ ವಗೈರೆ	...	...	ಪೂರಾಗ್ರಾಮದ ಜಮೀನು	ಖುಷ್ಕಿ ...	123 34	27 5	ರೂ. 1,500	ರೂ. 137	68 5 1 ಹಿಂದಿನಸಾಲ್ ಬಾಬತು.
							ತರಿ ...	133 28	238 3			154 11 3 08-09ನೆ ಸಾಲಿಗೆ.
							ಪರಂಪೋಕು	282 3	17 12			
							ಜುಮ್ಲಾ ...	539 25	283 4			223 0 4 ಜುಮ್ಲಾ.

ಚತುರ್ಸೀಮೆ.
ಪೂರ್ವ—ವೀರಾಪುರ ಗ್ರಾಮ ಗಡಿ.
ಪಶ್ಚಿಮ—ಸ್ಟೇಟ್ ಫಾರೆಸ್ಟ್ ಗಡಿ.
ದಕ್ಷಿಣ—ತುಂಗಾನದಿ.
ಉತ್ತರ—ಮುಳ್ಳುಕೆರೆ ಗ್ರಾಮ ಗಡಿ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 3ನೆ ಮೇ 1909.

1. ಕಂದಾಯದ ಬಾಕೀದಾರರಾದ ಕಾಶಿಪುರ ಇನಾಂ ಗ್ರಾಮದ ವೃತ್ತಿದಾರರು ರಂಗಭಟ್ಟ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಪೂರ್ವಾಹ್ನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09 ಮತ್ತು ಹಿಂದಿನ ಸಾಲುಗಳಿಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ 209—12—1 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. — ಕಟ್ಟಡಗಳು. — ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು.	ಜಮೀನು. — ನಂಬರ್ ಹಿಸ್ಸಾ ನಂಬರು.	ಖುಷ್ಕಿ, ತರಿ, ಬಾಗಾಯತು ವಗೈರೆ.	ವಿಸ್ತೀರ್ಣ.	ಕಂದಾಯ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲ್ಲತಕ್ಕ ಜೋಡಿ ಯಾ ಇತರ ಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.	
								ಎ. ಗು.	ರೂ. ಆ		ರೂ.	ರೂ. ಆ. ಪೈ.	
ಶಿವಮೊಗ್ಗ	ಶಿವಮೊಗ್ಗ	ಕಾಶೀಪುರ (ಬ್ರಾಹ್ಮಣರು ಇನಾಂ)	ರಂಗಭಟ್ಟ ವಗೈರೆ	...	...	ಪೂರಾ ಗ್ರಾಮದ ಜಮೀನು.	ಬಾಗಾಯತು.	22 17	113 12	ರೂ. 500	ಜೋಡಿ 25	95 11 11	ಹಿಂದಿನಸಾಲ್ ಬಾಬತು
							ಖುಷ್ಕಿ ...	66 4	24 10			114 0 2	1908—09ನೆಸಾಲ್ ಬಾಬತು.
							ತರಿ ...	29 39	69 4				
							ಪರಂಪೋಕು	15 5	1 0				
							ಜುಮ್ಲಾ ...	133 25	208 10			209 12 1	ಜುಮ್ಲಾ.

ಚತುರ್ಸೀಮೆ.

ಪೂರ್ವ—ಕಲ್ಲಹಳ್ಳಿ ಗ್ರಾಮ ಗಡಿ.
ಪಶ್ಚಿಮ—ಆಲಕೊಳ್ಳ ಡಿಟೋ
ದಕ್ಷಿಣ— ಡಿಟೋ ಮತ್ತು ಕಲ್ಲಹಳ್ಳಿ ಗ್ರಾಮ ಗಡಿ.
ಉತ್ತರ—ಸೋಮೇನಕೊಪ್ಪ ಗ್ರಾಮ ಗಡಿ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 3ನೆ ಮೇ 1909.

1. ಕಂಧಾಯದ ಬಾಕೀದಾರನಾದ ಊರಗಡೂರು ಇನಾಂ ಗ್ರಾಮದ ವೃತ್ತಿದಾರರು ವಿಶ್ವೇಶ್ವರ ಆರಾಧ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಪೂರ್ವಾಹ್ನ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09 ಮತ್ತು ಹಿಂದಿನ ಸಾಲ್‌ಗಳಿಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ ರೂಪಾಯಿ 882—12—10 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ, ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪಶೀಲ್. — ಕಟ್ಟಡಗಳು. — ಕಟ್ಟಡದ ಹೆಸರು.	ಕಟ್ಟಡಗಳು. — ಅಂದಾಜಾ ಕಿಮ್ಮತು.	ಜಮೀನು. — ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. — ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. — ವಿಸ್ತೀರ್ಣ.	ಜಮೀನು. — ಆಕಾರ.	ಅಂದಾಜಾ ಕಿಮ್ಮತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೆರೆ ಸಹಿತವಾದ ಬಾಕಿ ಮೊಬಲಗು.
ಶಿವಮೊಗ್ಗ	ಶಿವಮೊಗ್ಗ	ಊರಗಡೂರು (ಬ್ರಹ್ಮಾದಾಯ ಇನಾಂ)	ವಿಶ್ವೇಶ್ವರಾರಾಧ್ಯ ವಗ್ಯೆರೇರು	...	...	ಪೂರಾ ಗ್ರಾಮದ ತಪಶೀಲು		ಎ. ಗು.	ರೂ. ಆ. ಪೈ.	ರೂ.	ಜೋಡಿ ರೂ. ಆ. ಪೈ.	ರೂ. ಆ. ಪೈ.
							ಬಾಗಾಯಿತು	24 1	131 1 8	5,000	529 0 0	ಹಿಂದಿನ ಸಾಲುಗಳ ಬಾಬತು 233 5 1
							ಖುಷ್ಕಿ ...	656 27	242 14 10			1908—09ನೆ ಸಾಲ್ ಬಾಬತು 649 7 9
							ತರಿ ..	760 33	1532 0 1			
							ಪರಂಪೋಕು	346 4	21 10 1			
								1787 25	1927 10 8			882 12 10

ಚತುರ್ಗಡಿ.
ಪೂರ್ವಕ್ಕೆ—ಇಸಲಾಪುರ ಮತ್ತು ಕೊಪ್ಪನಗಡ್ಡಿ ಗ್ರಾಮದ ಗಡಿ.
ಪಶ್ಚಿಮಕ್ಕೆ—ಸೋಳೆಬೈಲು ಗ್ರಾಮದ ಗಡಿ.
ದಕ್ಷಿಣಕ್ಕೆ—ಸಂತೆ ಕಡೂರು ಗ್ರಾಮದ ಗಡಿ.
ಉತ್ತರಕ್ಕೆ—ತುಂಗಾ ನದಿ.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 3ನೆ ಮೇ 1909.

1. ಕಂದಾಯದ ಬಾಕೀದಾರರಾದ ಕುಸ್ಕೂರು ಗ್ರಾಮದ ವೃತ್ತಿದಾರರು ಯಜಮಾನ ಕೃಷ್ಣಭಟ್ಟ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮ್ಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರಿ ಸ್ವತ್ತಿಗಾಗಿ ಹರಾಜುದಾರನು 1908—09 ಮತ್ತು ಹಿಂದಿನ ಸಾಲುಗಳಿಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ ರೂಪಾಯಿ 575—10—8 ಆಗಿರುತ್ತೆ.

3. ಹರಾಜ್ ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮ್ಮಿಷನರವರಿಂದಲಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. — ಕಟ್ಟಡಗಳು. — ಕಟ್ಟಡದ ಹೆಸರು.	ಸ್ವತ್ತಿನ ತಪ್ಸೀಲ್. — ಕಟ್ಟಡಗಳು. — ಅಂದಾಜಾ ಕಿಮ್ಮತ್ತು.	ಸ್ವತ್ತಿನ ತಪ್ಸೀಲ್. — ಜಮೀನು. — ನಂಬರ ಅಥವಾ ಜಮೀನಿನ ಹೆಸರು.	ಸ್ವತ್ತಿನ ತಪ್ಸೀಲ್. — ಜಮೀನು. — ಖುಷ್ಕೀ, ತರೀ ಅಥವಾ ಬಾಗಾಯತು.	ಸ್ವತ್ತಿನ ತಪ್ಸೀಲ್. — ಜಮೀನು. — ವಿಸ್ತೀರ್ಣ. (ಎ. ಗು.)	ಸ್ವತ್ತಿನ ತಪ್ಸೀಲ್. — ಜಮೀನು. — ಆಕಾರ. (ರೂ. ಆ. ಪೈ.)	ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. (ರೂ. ಆ. ಪೈ.)
ಶಿವಮೊಗ್ಗ	ಶಿವಮೊಗ್ಗ	ಕುಸ್ಕೂರು (ಬ್ರಹ್ಮಾದಾಯ ಇನಾಂ)	ಯಜಮಾನ ಕೃಷ್ಣಭಟ್ಟ ವಗೈರೇರು	...	...	...	ಬಾಗಾಯತು	9 24	18 2 7	ರೂ. 4,000	ಜೋಡಿ ರೂ. 278	ಹಿಂದಿನ ಸಾಲುಗಳ ಬಾಬತು 241 11 5
							ಖುಷ್ಕಿ ...	203 5	72 11 8			1908—09ನೆ ಸಾಲಿಗೆ 333 15 3
							ತರಿ ...	261 0	733 2 2			
							ಪರಂಪೋಕು	1139 24	71 3 7			
								1613 13	895 4 0			575 10 8

ಚತುರ್ಗಡಿ.

ಪೂರ್ವಕ್ಕೆ — ಯರಗನಹಾಳು ಗ್ರಾಮದ ಗಡಿ.
ಪಶ್ಚಿಮಕ್ಕೆ — ಕಡೇಕಲ್ಲು ಡಿಟೋ
ದಕ್ಷಿಣಕ್ಕೆ — ಹುರಳಿಹಳ್ಳಿ ಡಿಟೋ
ಉತ್ತರಕ್ಕೆ — ತುಂಗಾ ನದಿ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 3ನೆ ಮೇ 1909.

1 ಕಂದಾಯದ ಬಾಕೀದಾರರಾದ ಕುಡುಗಲಮನೆ ಇನಾಂ.ಗ್ರಾಮದ ವೃತ್ತಿದಾರ್ ರಂಗಭಟ್ಟ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ 1909ನೆ ಜೂನ್ 30ನೆ ತಾರೀಖಿನಲ್ಲಿ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2 ಸದರೀ ಸ್ವತ್ತಿಗಾಗಿ ಹರಾಜುದಾರನು 1908—09 ಮತ್ತು ಹಿಂದಿನ ಸಾಲುಗಳಿಗೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ಮೇರಿಗೆ ರೂಪಾಯಿ 222—3—6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್‌ಮಾಡಬೇಕಾಗಿರುತ್ತೆ ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್‌ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‌ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‌ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್‌ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್‌ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪಸೀಲ್ — ಕಟ್ಟಡಗಳು.		ಜಮೀನು.				ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಕೊಡಬೇಕಾದ ಬಾಕಿ ಮೊಬಲಗು.	ಸರಕಾರಕ್ಕೆ ಬರಬೇಕಾದ ಒಟ್ಟು ಬಾಕಿ ಮೊಬಲಗು.
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಜಮೀನಿನ ತರಹೆ	ವಿಸ್ತೀರ್ಣ.	ಕಂದಾಯ.			
								ಎ. ಗು.	ರೂ. ಆ. ಪೈ.	ರೂ.		
ಶಿವಮೊಗ್ಗ	ಶಿವಮೊಗ್ಗ	ಕುಡುಗಲ ಮನೆ	ರಂಗಭಟ್ಟ ವಗೈರೆರು	...	...	ಪೂರಾ ಗ್ರಾಮದ ಜಮೀನು.	ಬಾಗಾಯಿತು	0 6	0 3 7	1,50	ಚೌಕಿ ರೂ. 89	ರೂ. 110 9 9
							ಖುಷ್ಕಿ	12 18	4 4 6			111 9 9
							ತರಿ	73 35	127 10 6			222 3 6
							ಪರಂಪೋಕು	3416 17	213 8 5			1908—09ನೆ ಸಾಲಿಗೆ ಹಿಂದಿನ ಸಾಲುಗಳ ಬಾಬತು
								3502 36	345 11 0			

ಚತುರ್ಗಡಿ.

ಪೂರ್ವಕ್ಕೆ—ತೀರ್ಥಹಳ್ಳಿ ತಾಲ್ಲೂಕು ಗಡಿ.
ಪಶ್ಚಿಮಕ್ಕೆ—ಚಿತ್ರಕಡ್ಡಿಹಳ್ಳಿ ಗ್ರಾಮದ ಗಡಿ.
ದಕ್ಷಿಣಕ್ಕೆ—ತೀರ್ಥಹಳ್ಳಿ ತಾಲ್ಲೂಕು ಗಡಿ.
ಉತ್ತರಕ್ಕೆ— ಡಿಟೋ

ಎ. ಮೃತ್ಯುಂಜಯ ಐಯ್ಯರ್,
ಫಾರ್ ಡೆಪ್ಯುಟಿ ಕಮಿಷನರ್.

ಇಸ್ತಿಹಾರ.

ತಾರೀಖು 7ನೆ ಮೇ 1909.

1909ನೆ ಇಸವಿ ಜುಲೈ ಗುರ್ರೈ ಲಾಗಾಯಿತು 1910ನೆ ಇಸವಿ ಜೂನ್ ಅಖೈರ್ ವರೆಗೆ ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಟೋಲ್ ಗೇಟನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ತೀರ್ಥಹಳ್ಳಿ ತಾಲ್ಲೂಕು ಕಛೇರಿಯಲ್ಲಿ 19 ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನಲ್ಲಿ ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ ವರಿಂದಲೂ, ಮತ್ತು ನಗರದ ತಾಲ್ಲೂಕು ಹೈದರಗರ್ ಘಾಟಿ, ಲಕ್ಷ್ಮೀಪುರ, ಟೋಲ್ ಗೇಟುಗಳಲ್ಲಿ ಸುಂಕವನ್ನು ವಸೂಲ್ಮಾಡುವ ಬಾಬನ್ನು ಕಳೂರುಕಟ್ಟೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ 8ನೆ ತಾರೀಖಿನಲ್ಲಿ ಸಾಗರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದಲೂ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಈ ಬಾಬನ್ನು ಹರಾಜಿನಲ್ಲಿ ಪಡೆಯುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ದರದಂತೆ ಸುಂಕವನ್ನು ವಸೂಲ್ಮಾಡಬಹುದು; ಪರಂತು ಅದರಲ್ಲಿ ನಮೂದಾಗುವದಕ್ಕಿಂತ ಜಾಸ್ತಿ ದರವನ್ನು ಎಂದೂ ವಸೂಲ್ ಮಾಡಕೂಡದು. ಕಂಟ್ರಾಕ್ಟುದಾರನು ಲೇಟ್ ಚೀಫ್ ಕಮಿಷನರವರ 1876ನೆ ಇಸವಿ ನವಂಬರು 4ನೆ ಮರ್ಸ್ಕೂಂ ನಂಬರು 274ನೆ ಇಸ್ತಿಹಾರಿನಲ್ಲಿ ಪ್ರಕಟವಾಗಿರುವ ರೂಲ್ಸುಗಳಿಗೆ ಅನುಸರಿಸಿ ನಡದುಕೊಳ್ಳತಕ್ಕದ್ದು. ಸರಕಾರಿ ಸೊತ್ತು ಮತ್ತು ಸರಕಾರಿ ಕೆಲಸದಮೇಲೆ ಪ್ರಯಾಣ ಮಾಡುವ ಸರಕಾರಿ ನೌಕರರೂ ಸುಂಕದಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಛಡ ಸವಾಲನ್ನಾಗಲೀ ಯಾ ಇತರ ಸವಾಲನ್ನಾಗಲೀ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

4. ದರಖಾಸ್ತು ಅಂಗೀಕರಿಸಲ್ಪಟ್ಟವರಿಂದ ಕಂಟ್ರಾಕ್ಟು ಮೊಬಲಗು ಎಂಟು ಸಮವಾದ ಖಿಸ್ತುಗಳಾಗಿ ವಸೂಲ್ಮಾಡಲ್ಪಡುವದು. ಈ ಪೈಕಿ ಎರಡು ಖಿಸ್ತುಗಳ ಮೊಬಲಗನ್ನು ಹರಾಜು ಮುಗಿದಕೂಡಲೇ ಡಿಪಾಜಿಟ್ಟಾಗಿ ವಸೂಲು ಕೊಡತಕ್ಕದ್ದು. ಈ ಡಿಪಾಜಿಟ್ ಮೊಬಲಗು ಅಖೈರು ಎರಡು ಖಿಸ್ತುಗಳ ಬಗ್ಯೆ ಜಮಾ ಮಾಡಲ್ಪಡುತ್ತೆ. ಬಾಕಿ ಆರು ಖಿಸ್ತುಗಳನ್ನು 1909ನೆ ಡಿಸೆಂಬರ್ 20ರ ಲಾಗಾಯಿತು ಪ್ರತಿ ಮಾಹೆಯಲ್ಲೂ ಆಯಾ ಮಾಹೆ ತಾರೀಖು 20ರ ಒಳಗಾಗಿ ತಪ್ಪದೆ ವಸೂಲ್ ಕೊಡತಕ್ಕದ್ದು. ಮಾಹೆಯಾನ ಖಿಸ್ತುಗಳನ್ನು ಕ್ರಮವಾಗಿ ಪಾವತಿ ಮಾಡುತ್ತಾಬರುವ ಬಗ್ಯೆ ಕಂಟ್ರಾಕ್ಟುದಾರನು ಸರಿಯಾದ ಜಾಮಿನು ಕೊಡತಕ್ಕದ್ದು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು ಮೂರು ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರದುಕೊಡಬೇಕು.

5. ಹರಾಜು ಮುಗಿದಕೂಡಲೇ ಡಿಪಾಜಿಟ್ ಮೊಬಲಗು ವಸೂಲ್ ಕೊಡದೆಯೂ, ಜಾಮೀನ್ ಕೊಡದೆಯೂ ಇದ್ದರೆ ಅಂಗೀಕರಿಸಲ್ಪಟ್ಟ ಸವಾಲ್ದಾರನನ್ನು ನಷ್ಟಕ್ಕೆ ಗುರಿಪಡಿಸಿ, ಕಂಟ್ರಾಕ್ಟು ದುಸರಾ ಹರಾಜು ಮಾಡಲ್ಪಡುವದು. ಖಿಸ್ತು ಸಕಾಲಕ್ಕೆ ಪಾವತಿಮಾಡುವದರಲ್ಲಿ ತಪ್ಪಿದರೆ ಮಾಹೆಯಾನಾ ರೂಪಾಯಿ ಒಂದರ ಒಂದು ಪೈ ಯಂತೆ ಪಾವತಿ ತಾರೀಖು ವರೆಗೆ ಬಡ್ಡಿಯು ವಸೂಲ್ಮಾಡಲ್ಪಡುವದು. ಅಲ್ಲದೆ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರವಾಗಿ ಕಂಟ್ರಾಕ್ಟು ಎರಡನೆ ಹರಾಜಿಗೆ ಗುರಿಮಾಡಲ್ಪಟ್ಟು ಎರಡನೇ ಹರಾಜಿನಲ್ಲಿ ಕಮ್ಮಿಯಾಗುವ ಮೊಬಲಗನ್ನು ಕಂಟ್ರಾಕ್ಟುದಾರನಿಂದಾಗಲೀ ಅಥವಾ ಅವನ ಜಾಮೀನುದಾರನಿಂದಾಗಲೀ ವಸೂಲ್ಮಾಡಲ್ಪಡುವದು.

6. ಕಂಟ್ರಾಕ್ಟರಿಂದ ಅಥವಾ ಅವನ ಜಾಮೀನುದಾರನಿಂದ ಬರಬೇಕಾಗಿರುವ ಬಾಕೀ ಮೊಬಲಗು ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆಗಳಿಗೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಮೇಲೆ 4ನೆ ಮತ್ತು 5ನೆ ಪ್ಯಾರಾಗಳಲ್ಲಿ ಹೇಳಿರುವ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟುದಾರನು ಹರಾಜು ಮೊಬಲಗಿಗೆ ಸೇರಿಸಿ ಟ್ರೆಜರಿಗೆ ಪಾವತಿಯಾದ ಕಂಟ್ರಾಕ್ಟು ಮೊಬಲಗು ಮೇಲೆ ರೂಪಾಯಿ ಒಂದರ ಒಂದಾಣೆಯ ಮೇರೆ ಲೋಕಲ್ ಸೆಸ್ಸು ಕೊಡಲು ಬದ್ಧನಾಗಿರುತ್ತಾನೆ.

8. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸ್ಸದರಿ ಲೆಖ್ಖವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳ ತನಿಖೆಗೆ ಒಳಗಾಗಿರತಕ್ಕದ್ದು.

9. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ಟೋಲ್ ಗೇಟ ಬಳಿ ಬಹಿರಂಗವಾದ ಸ್ಥಳದಲ್ಲಿ ತಗಲುಹಾಕತಕ್ಕದ್ದು.

10. ಗವರ್ನಮೆಂಟನಿಂದ ನೇಮಿಸಲ್ಪಟ್ಟ ಟೋಲ್ ಗೇಟ ಬಳಿಯಲ್ಲಿ ಅಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

11. ಕಂಟ್ರಾಕ್ಟುದಾರನು ಘಾಟಿ ಸುಂಕದ ಮನೆಯನ್ನು ಮತ್ತು ಗೇಟನ್ನು ಉಪಯೋಗಿಸಿಕೊಳ್ಳಬಹುದು. ಆತನು ಅವುಗಳನ್ನು ಸರಿಯಾದ ರಿಪೇರಿಯಲ್ಲಿ ಇಟ್ಟುಕೊಂಡಿರಬೇಕು.

ದರ ತೋರಿಸುವ ಷೆಡ್ಯೂಲು.

		ರೂ.	ಆ.	ಪೈ.
1.	ನಾಲ್ಕು ಚಕ್ರದ ಗಾಡಿ 1ಕ್ಕೆ	2	0	0
2.	ಎರಡು ಚಕ್ರದ ಗಾಡಿ 1ಕ್ಕೆ	1	0	0
3.	ಯಕ್ಕ 1ಕ್ಕೆ	0	4	0
4.	ಬಿಲ್ಲು ಇರುವ ಹ್ಯಾಕ್ನಿ ಗಾಡಿ 1ಕ್ಕೆ	0	2	0

		ರೂ.	ಆ.	ಪೈ.
5.	ಬಿಲ್ಲು ಇಲ್ಲದೆ ಇರುವ ಎತ್ತುಗಳಿಂದ, ಕೋಣಗಳಿಂದ ಅಥವಾ ಕುದುರೆಗಳಿಂದ ಯಳೆಯಲ್ಪಡುವ ಗಾಡಿ ಅಥವಾ ಹ್ಯಾಕ್ನಿ 1ಕ್ಕೆ:	1	8	0
6.	ಡಿಟೋ ಡಿಟೋ ಖಾಲಿಯಾಗಿದ್ದರೆ	0	8	0
7.	ಡಿಟೋ ಡಿಟೋ ಆರು ಎತ್ತುಗಳು ವಗೈರೆಯಿಂದ ಯಳೆಯಲ್ಪಡುವ ಗಾಡಿ ಭರ್ತಿ ಇದ್ದರೆ	0	12	0
8.	ಡಿಟೋ ಡಿಟೋ ಖಾಲಿ ಇದ್ದರೆ	0	6	0
9.	ಡಿಟೋ ನಾಲ್ಕು ಎತ್ತುಗಳಿಂದ ಭರ್ತಿ ಇದ್ದರೆ	0	8	0
10.	ಡಿಟೋ ಖಾಲೀ ಇದ್ದರೆ	0	4	0
11.	ಡಿಟೋ ಎರಡು ಎತ್ತುಗಳಿಂದ ಯಳೆಯಲ್ಪಡುವ ಭರ್ತಿ ಇದ್ದರೆ ಗಾಡಿ 1ಕ್ಕೆ ...	0	4	0
12.	ಡಿಟೋ ಖಾಲಿ ಇದ್ದರೆ ಗಾಡಿ 1ಕ್ಕೆ ...	0	2	0
13.	ಡಿಟೋ ಒಂದು ಎತ್ತಿನಿಂದ ಯಳೆಯಲ್ಪಡುವ ಭರ್ತಿ ಇದ್ದರೆ ...	0	1	0
14.	ಡಿಟೋ ಖಾಲಿ ಇದ್ದರೆ ...	0	0	3
15.	ಆನೆ 1ಕ್ಕೆ	1	8	0
16.	ಒಂಟೆ 1ಕ್ಕೆ ಹೊರೆ ಇದ್ದರೆ	0	8	0
17.	ಡಿಟೋ ಹೊರೆ ಇಲ್ಲದೆ ಇದ್ದರೆ	0	4	0
18.	ಕುದುರೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡುತ್ತಿದ್ದರೆ	0	1	6
19.	ಡಿಟೋ ಹೊರೆ ಇಲ್ಲದೆ ಇದ್ದರೆ ಅಥವಾ ಹಿಡಿದುಕೊಂಡುಹೋಗುತ್ತಾ ಇದ್ದರೆ...	0	0	9
20.	ತಟ್ಟು ಅಥವಾ ಹೇಸರಕತ್ತೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡುತ್ತಾ ಇದ್ದರೆ.	0	0	9
21.	ತಟ್ಟು ಅಥವಾ ಹೇಸರಕತ್ತೆ 1ಕ್ಕೆ ಹೊರೆ ಇಲ್ಲದೆ ಇದ್ದರೆ ಅಥವಾ ಹಿಡಿದುಕೊಂಡು ಹೋಗುತ್ತಾ ಇದ್ದರೆ	0	0	6
22.	ಕತ್ತೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡಲ್ಪಡುತ್ತಾ ಇದ್ದರೆ ...	0	0	6
23.	ಡಿಟೋ ಹೊರೆ ಇಲ್ಲದೆ ಇದ್ದರೆ ಅಥವಾ ನಡಿಸಿಕೊಂಡು ಹೋಗುತ್ತಾ ಇದ್ದರೆ ...	0	0	1
24.	ಕುರಿ, ಮೇಕೆ, ಅಥವಾ ಹಂದಿ 1ಕ್ಕೆ	0	0	1
25.	ಎಂಟು ಜನರಿಂದ ಹೊರಲ್ಪಟ್ಟ ಪಲ್ಲಕ್ಕಿ, ಡೋಲಿ ಅಥವಾ ಟಾಂಜಾನ್ ...	1	0	0
26.	ಆರು ಜನರಿಂದ ಡಿಟೋ ಡಿಟೋ ...	0	12	0
27.	ನಾಲ್ಕು ಜನರಿಂದ ಡಿಟೋ ಡಿಟೋ ...	0	8	0
28.	ಎರಡು ಜನರಿಂದ ಡಿಟೋ ಡಿಟೋ ...	0	4	0

ನೋಟ್.—ಕಾಲುನಡಿಯಾಗಿ ಹೋಗುವ ಪ್ರಯಾಣೀಕರಮೇಲೆ ಸುಂಕ ವಸೂಲ್ಮಾಡಕೂಡದು.

ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪ ಹಿರೆಕರೂರು ರೋಡಿನಲ್ಲಿ ಹುಲಿಗೇನಕೊಪ್ಪದ ಬಳಿ ಏರ್ಪಡಿಸಲ್ಪಟ್ಟಿರುವ ಟೋಲ್ ಗೇಟಿನಲ್ಲಿ 1909ನೆ ಇಸವಿ ಜುಲೈ 1ನೆ ತಾರೀಖು ಲಾಗಾಯತು 1910ನೆ ಇಸವಿ ಜೂನ್ ಆಖೈರು ವರಿವಿಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಡೆಪ್ಯುಟಿ ಕಮಿಷನರವರಿಂದಾಗಲಿ ಅಥವಾ ಅವರಿಂದ ಆ ಬಗ್ಗೆ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರವರಿಂದಾಗಲಿ ಶಿಕಾರಿಪುರ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ ತಾರೀಖು 14ನೆ ದಿನ ಬಹಿರಂಗವಾಗಿ ಹರಾಜು ಹಾಕಿಸಲ್ಪಡುವದು.

(2) ಹರಾಜಿನಲ್ಲಿ ಕೊಂಡುಕೊಳ್ಳತಕ್ಕವರು ಈ ಕೆಳಗಿನ ಷೆಡ್ಯೂಲಿನಲ್ಲಿ ಕಾಣಿಸಿರುವ ದರಗಳ ಪ್ರಕಾರ ಮಾತ್ರ ಸುಂಕವನ್ನು ವಸೂಲ್ಮಾಡತಕ್ಕದ್ದು ಅದಕ್ಕಿಂತ ಹೆಚ್ಚಿನ ದರ ವಸೂಲ್ಮಾಡಕೂಡದು.

(3) 24 ಘಂಟೆಯೊಳಗೆ ಅಂದರೆ ಸೂರ್ಯೋದಯದಿಂದ ಸೂರ್ಯೋದಯದವರೆಗೆ ಸದರಿ ಟೋಲ್ ಗೇಟುಮೂಲಕವಾಗಿ ಹೋಗುವ ಬರುವ ಒಂದು ಗಾಡಿಯು (ಇತರದ ಮೇಲೆ) ಒಂದೇ ಸುಂಕವನ್ನು ವಸೂಲ್ಮಾಡತಕ್ಕದ್ದು.

(4) (1) (a) ಲೋಕಲ್ ಬೋರ್ಡುಗಳಿಗೆ ಸಮ್ಮಂಧಪಟ್ಟ.

(b) ಡಿಸ್ಟ್ರಿಕ್ಟು ಫಂಡ್ ನೌಕರರು ಡ್ಯೂಟಿಮೇಲೆ ಹೋಗುವ ಅಥವಾ ಅವರ ಸ್ವಾಧೀನದಲ್ಲಿರುವ ಸಾಮಾನುಗಳನ್ನು ಸಾಗಿಸುವ ಗಾಡಿ ವಗೈರೆಗಳ ಮೇಲೂ.

(c) ವಾಯಿದೆ ಕಂಡು ಡಿಸ್ಟ್ರಿಕ್ಟು ಬೋರ್ಡಿನವರಿಂದ ಲೈಸೆನ್ಸು ಪಡದು ಇವರ ಲೈಸೆನ್ಸು ವಾಯಿದೆಯಲ್ಲೂ.

(d) ಟಪಾಲು ಸಾಗಿಸುವ ಟಪಾಲು ಗಾಡಿಗಳ ಮೇಲೂ ಈ ಮೇಲ್ಕಂಡವುಗಳಲ್ಲಿ ನಮೂದಿಸಿರುವವುಗಳ ಉಪಯೋಗಕ್ಕಾಗಿ ಹೋಗಬಹುದಾದ ಗಾಡಿ ವಗೈರೆಗಳಮೇಲೆ ಸುಂಕ ವಸೂಲ್ಮಾಡತಕ್ಕದ್ದಲ್ಲಾ.

(4) ದಂಡು ಮತ್ತು ದಂಡಿಗೆ ಸಮ್ಮಂಧಪಟ್ಟ ಅಜಬಾಬುಗಳು ಅಥವಾ ಪೊಲೀಸು ಇಲಾಖಾ ಯಾ ಇತರ ಸರ್ಕಾರಿ ನೌಕರರುಗಳು ಡ್ಯೂಟಿಮೇಲೆ ಹೋಗುವಾಗ ಮತ್ತು ಸರ್ಕಾರಕ್ಕೆ ಸಮ್ಮಂಧಪಟ್ಟ ಅಜಬಾಬುಗಳು ಅಂದರೆ ಇಲಾಖಾ ಮುಖ್ಯಸ್ಥರಿಂದ ಪಡೆಯಲ್ಪಟ್ಟ ಸರ್ಟಿಫಿಕೇಟಿನಿಂದ ದೃಢಪಡಿಸಬಹುದಾದವುಗಳಿಗೂ ಸಹಾ ಸುಂಕ ವಸೂಲ್ಮಾಡುವದಿಲ್ಲಾ.

(5) ಟೋಲ್ ಗೇಟ್ ಸಮೀಪ ಚನ್ನಾಗಿ ಕಾಣಿಸುವ ಪ್ರದೇಶದಲ್ಲಿ ಸ್ಪಷ್ಟವಾಗಿ ಇಂಗ್ಲೀಷು ಮತ್ತು ಕನ್ನಡ ಭಾಷೆಗಳಲ್ಲಿ ಸಹಾ ಗೊತ್ತಾಗಿರುವ ಸುಂಕದ ದರಗಳನ್ನು ತೋರಿಸುವ ಒಂದು ಬೋರ್ಡು ಹಚ್ಚಿಸಿರತಕ್ಕದ್ದು.

(6) ಹರಾಜುದಾರರು 1876ನೆ ಇಸವಿ ನವಂಬರು ಮಾಹೆ 4ನೆ ತಾರೀಖಿನ ಲೇಟ್ ಚೀಫ್ ಕಮಿಷನರವರಿಂದ ಫಾಯಿಷ್ ಆದ ನೋಟಿಫಿಕೇಷನ್ನಲ್ಲಿ ಕಾಣಿಸಿ ಇರುವ ಷರತ್ತುಗಳಿಗೆ ಬಳಪಟ್ಟಿರತಕ್ಕದ್ದು.

(7) ಯಾವ ಹೆಚ್ಚಿನ ಸವಾಲ್ ಆಗಲಿ ಯಾ ಇತರ ಯಾವ ಸವಾಲ್ ಆಗಲಿ ತಿರಸ್ಕರಿಸುವ ಅಥವಾ ಅಂಗೀಕರಿಸುವ ಸ್ವತಂತ್ರವನ್ನು ಡೆಪ್ಯುಟಿ ಕಮಿಷನರವರು ಇಟ್ಟುಕೊಂಡಿರುತ್ತಾರೆ.

(8) ಹರಾಜುದಾರರಿಂದ ಹರಾಜು ಮೊಬಲಗನ್ನು ಹನ್ನೆರಡು ಸಮ ಕಂತುಗಳಿಗೆ ವಸೂಲ್ಮಾಡಲ್ಪಡುವದು. ಆ ಪೈಕಿ ಮೂರು ಕಂತುಗಳ ಹಣವನ್ನು ಹರಾಜು ಕೈದಾದ ಕೂಡ್ಲೆ ಮುಂಗಡವಾಗಿ ವಸೂಲ್ಮಾಡಬೇಕು. ಈ ಮೊಬಲಗು ಡಿಪಾಜಿಟ್ಟಿನಲ್ಲಿಡಲ್ಪಟ್ಟು ಆಖೈರು ಕಂತುಗಳಿಗೋಸ್ಕರ ಉಪಯೋಗಿಸಲ್ಪಡುವದು. ಮಿಕ್ಕ ಬಾಬತು ಕಂತುಗಳನ್ನು 1909ನೆ ಜುಲೈ ತಿಂಗಳು ತಾರೀಖು 20ರ ಲಾಗಾಯಿತು ಒಂಭತ್ತು ತಿಂಗಳಲ್ಲಿ ಪ್ರತಿ ತಿಂಗಳು ತಾರೀಖು 20ಕ್ಕೆ ಸರಿಯಾಗಿ ವಸೂಲ್ ಕೊಡತಕ್ಕದ್ದು. ಹರಾಜುದಾರನು ಪ್ರತಿ ತಿಂಗಳ ಕಂತಿನ ಹಣವನ್ನು ಕ್ರಮವಾಗಿ ವಸೂಲು ಕೊಡುವ ಬಗ್ಗೆ ಜಾಮೀನು ಕೊಡತಕ್ಕದ್ದು.

(9) ಹರಾಜು ಕೈದಾದ ಒಡನೆಯೆ ಡಿಪಾಜಟ್ ಮೊಬಲಗು ಹಾಜರ್ಮಾಡದೆ ಮತ್ತು ಜಾಮೀನ್ ಕೊಡದೆ ತಪ್ಪಿದರೆ ಮೇಲ್ಕಂಡ ಹಕ್ಕು ಪುನಃ ಹರಾಜು ಮಾಡಿಸಲ್ಪಡುವದಲ್ಲದೆ ಕಂ ಭರ್ತಿ ಹಣವಿಗೆ ಮೊದಲು ಹರಾಜುದಾರನನ್ನು ಗುರಿಪಡಿಸುತ್ತೆ. ಕಂತಿನ ಹಣ ವಾಯಿದೆ ನಿಶಿ ವಸೂಲು ಕೊಡಲು ತಪ್ಪಿದರೆ ವಸೂಲು ತಾರೀಖು ವರಿಗೆ ರೂಪಾಯಿ ಒಂದರ ಮಾಹೆಯಾನಾ ಒಂದು ಪೈ ಪ್ರಕಾರ ಬಡ್ಡಿ ವಸೂಲು ಮಾಡಲ್ಪಡುವದಲ್ಲದೆ ಮೇಲ್ಕಂಡ ಹಕ್ಕು ಡೆಪ್ಯುಟಿ ಕಮಿಷನರವರ ಮುನಾಸಬ್ ಪ್ರಕಾರ ಪುನಃ ಹರಾಜು ಮಾಡಿಸಲ್ಪಟ್ಟು ಕಂ ಭರ್ತಿ ಹಣವನ್ನು ಹರಾಜುದಾರನಿಂದಾಗಲಿ ಯಾ ಜಾಮೀನ್ದಾರನಿಂದಾಗಲಿ ವಸೂಲ್ಮಾಡಲ್ಪಡುವದು.

(10) ಹರಾಜುದಾರನು ಹರಾಜು ಮೊಬಲಗು ವಿನಹಾ ಟ್ರೆಜರಿಗೆ ಜಮಾ ಆಗುವ ಮೊಬಲಗಿನಮೇಲೆ ರೂಪಾಯಿ ಒಂದರ ಬಂದಾಣೆಯಂತೆ ಲೋಕಲ್ ಸೆಸ್ ಸಹಾ ವಸೂಲ್ ಕೊಡಲು ಬದ್ಧನಾಗಿರತಕ್ಕದ್ದು.

(11) ಹರಾಜುದಾರನು ಪ್ರತಿ ದಿನವೂ ವಸೂಲ್ಮಾಡಿದ ಮೊಬಲಗನ್ನು ತೋರಿಸುವ ಬಗ್ಗೆ ಲೆಖ್ಖವನ್ನು ಇಡಲು ಸಹಾ ಬದ್ಧನಾಗಿರುತ್ತಾನೆ. ಈ ಲೆಖ್ಖವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫಿಸರುಗಳ ತನಿಖೆಗೆ ಬಳಪಟ್ಟಿರತಕ್ಕದ್ದು.

ನಂಬರ್.	ಸುಂಕ ತೆರಲು ಪಾತ್ರವಾಗಿರುವ ಗಾಡಿಗಳ ಮತ್ತು ಜಾನುವಾರುಗಳ ತಪಸೀಲ್.	ದರ.		
		ರೂ.	ಆ.	ಪೈ.
1	ನಾಲ್ಕು ಗಾಲಿಯು ಪ್ರತಿ ಒಂದು ಗಾಡಿಯ ಬಗ್ಯೆ	0	8	0
2	ಒಂದು ಜಾನುವಾರದ 2 ಗಾಲಿಯು ಪ್ರತಿ ಒಂದು ಗಾಡಿಯ ಬಗ್ಯೆ	0	2	0
3	ಎರಡು ಜಾನುವಾರುಗಳ ಎರಡು ಗಾಡಿಯು ತುಂಬಿದ್ದರೆ ಪ್ರತಿ ಒಂದರ ಬಗ್ಯೆ ...	0	4	0
4	ಡಿಟೋ ತುಂಬಿದ್ದಲ್ಲದ ಪ್ರತಿ ಒಂದರ ಬಗ್ಯೆ ...	0	2	0
5	ನಾಲ್ಕು ಜಾನುವಾರುಗಳು ತುಂಬಿದ್ದರೆ	0	6	0
6	ಡಿಟೋ ತುಂಬಿರದಿದ್ದರೆ ...	0	3	0
7	ಆರು ಜಾನುವಾರುಗಳ 2 ಗಾಲಿಯು ಗಾಡಿಯು ತುಂಬಿದ್ದರೆ ಪ್ರತಿ ಒಂದು ಗಾಡಿಯ ಬಗ್ಯೆ ...	0	8	0
8	ಡಿಟೋ ತುಂಬಿರದಿದ್ದರೆ	0	4	0
9	ಎಂಟು ಅಥವಾ ಹೆಚ್ಚು ಡಿಟೋ ತುಂಬಿದ್ದರೆ	1	0	0
10	ಡಿಟೋ ತುಂಬಿರದಿದ್ದರೆ	0	8	0
11	ಪ್ರತಿ ಒಂದು ಆನೆಗೆ	1	0	0
12	ವಜ್ಜೆ ಹೇರಿದ ಒಂಟೆ, ಕುದುರೆ, ತಟ್ಟು, ಹೇಸರಕತ್ತೆ, ಕೋಣ ಮತ್ತು ಎತ್ತಿನ ಬಗ್ಯೆ ...	0	0	6
13	ವಜ್ಜೆ ಹೇರದೆ ಇದ್ದರೆ ಡಿಟೋ	0	0	6
14	ಡಿಟೋ ಅಥವಾ ಮನುಷ್ಯನು ಕೂತಿದ್ದ ಕತ್ತೆಯ ಬಗ್ಯೆ	0	0	3
15	ಡಿಟೋ ಕೂಳಿತಿಲ್ಲದ ಡಿಟೋ ...	0	0	3
16	ಆಡು, ಕುರಿ, ಹಂದಿ, ಈ ಪ್ರತಿ ಒಂದರ ಬಗ್ಯೆ	0	0	1
17	ಡಿಟೋ ಗುಂಪು ಅಥವಾ ತಾಂಡೆ ಇವುಗಳ ಪ್ರತಿ ಒಂದು ಜೋಡಿಯ ಬಗ್ಯೆ ...	0	0	1
18	ನಾಲ್ಕು ಅಥವಾ ಹೆಚ್ಚು ಜನರು ಹೊತ್ತ ಪ್ರತಿ ಒಂದು ಪಲ್ಲಕ್ಕಿ, ಟಾಂಗ, ಡೋಲಿ, ತೊಟ್ಟಲುಬಗ್ಯೆ	0	4	0
19	ನಾಲ್ಕು ಜನರಿಗಿಂತಲು ಕಡಿಮೆ ಜನರು ಹೊತ್ತ ಪ್ರತಿ ಒಂದು ಪಲ್ಲಕ್ಕಿ, ಟಾಂಗ, ಡೋಲಿ ಅಥವಾ ತೊಟ್ಲಿನ ಬಗ್ಯೆ.	0	2	0

ಎ. ಮೃತ್ಯುಂಜಯ ಐಯ್ಯರ್,
ಛೇರ್ ಪ್ರೆಸಿಡೆಂಟ್.

ತಾರೀಖು 1ನೆ ಮೇ 1909, ಚೆನ್ನಗಿರಿ ಕ್ಯಾಂಪ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಶಿವಮೊಗ್ಗ ಡಿಸ್ಟ್ರಿಕ್ಟು ಚೆನ್ನಗಿರಿ ತಾಲ್ಲೂಕಿಗೆ ಸೇರಿದ

ಚೆನ್ನಗಿರಿ ತಾಲ್ಲೂಕು, ಚೆನ್ನಗಿರಿ ಹೋಬಳಿ.
1. ಚೆನ್ನಗಿರಿ, 2. ಚೆನ್ನೇನಹಳ್ಳಿ,
3. ಜೋಳದಹಾಳು, 4. ಹೊಂನೆಬಾಗಿ.

ಈ ಮಾರ್ಜಿನ್ನಲ್ಲಿ ನಮೂದಿಸಿರುವ ಕೆಳಂದಿ ದುರ್ಕಾಗಳನ್ನು ಸೆ 1909—10ನೆ ಸಾಲಿಗೋಸ್ಕರವಾಗಿ ಸೆ 1909ನೆ ಇಸವಿ ಜೂನ್ ತಾರೀಖು 15ರಲ್ಲು ಚೆನ್ನಗಿರಿ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ ಇಷ್ಟವುಳ್ಳವರು ಚಡ ಸವಾಲ್ಮೂಲಕ ಪಡದುಕೊಳ್ಳಬಹುದು.

2. ಹರಾಜ್ ಷರತ್ತು ವಗೈರೆ ತಪಶೀಲುಗಳನ್ನು ಸೆ 1909ನೆ ಇಸವಿ ಏಪ್ರೈಲ್ ತಾರೀಖು 7ನೆ ಮುರ್ಕುಂ ನಂಬರು 9011ನೆ ನೋಟಿಫಿಕೇಷನ್, ಮೈಸೂರು ಗೆಜೆಟ 1909ನೆ ಇಸವಿ ಏಪ್ರೈಲ್ ತಾರೀಖು 8ನೆ ಮುರ್ಕುಂ 2ನೆ ಭಾಗದ 437ರ ಲಾಗಾಯಿತು 440ನೆ ಪೇಜುಗಳಲ್ಲಿ ಈ ಮೊದಲೇ ಪ್ರಾಯಿಷ್ ಮಾಡಲ್ಪಟ್ಟಿರುತ್ತೆ.

ಬಿ. ಭೀಮರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 19ನೆ ಏಪ್ರೈಲ್ 1909.

1908ನೆ ಜನವರಿ 16ನೆ ಮುರ್ಕುಂ ಗವರ್ನಮೆಂಟ ಪ್ರೊಸಿಡಿಂಗ್ಸು Fl. 3529-33—B. 3-07-17ನೆ ನಂಬರ್ ಅನುಸರಿಸಿ ಸಕಲೇಶಪುರದ ಲೇಟ್ ಅಗ್ರಿಕಲ್ಚರಲ್ ಬ್ಯಾಂಕಿನ ಮೆಂಬರಾದ ಲೇಟ್ ಮಿ|| ಸುಂಡೆಕೆರೆ ಶ್ರೀಕಂಠಯ್ಯನವರ ವಾರಸುದಾರರಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯ ಮತ್ತು ಸಾಲದ ಹಣದ ಬಾಕಿಗಾಗಿ 1909ನೆ ಇಸವಿ ಏಪ್ರೈಲ್ 29ನೆ ಮುರ್ಕುಂ ಮೈಸೂರು ಗೆಜೆಟ IIನೆ ಭಾಗದ 311—312ನೆ ಪುಟಗಳಲ್ಲಿ ಪ್ರಾಯಿಷಾಗಿರುವ ನೋಟಫಿಕೇಷನ್ನಲ್ಲಿ ನಮೂದಾಗಿರುವ ಕಾಫಿ ತೋಟಗಳನ್ನು ಹಾಸನದ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕು ಕಚೇರಿ ಬಳಿ ಬರುವ 1909ನೆ ಮೇ ಮಾಹೆ ತಾರೀಖು 28ನೆ ಶುಕ್ರವಾರ ದಿವಿ 11 ಘಂಟೆಗೆ ಸರಿಯಾಗಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ.

ಬಾಕಿ ತಪಶೀಲು 1909ನೆ ಏಪ್ರೈಲ್ 29ನೆ ಮುರ್ಕುಂನ ಮೈಸೂರು ಗೆಜೆಟ 2ನೆ ಭಾಗದ 311—312ನೆ ಪುಟಗಳನ್ನು ನೋಡತಕ್ಕದ್ದು.

ಪಿ. ಆರ್. ಡಬ್ಲ್ಯು. ವೆದರಾಲ್,
ಡೆಪ್ಯುಟಿ ಕಮಿಷನರ್.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸಿನಿಂದ.

ಬೆಂಗಳೂರು, ತಾರೀಖು 4—5ನೆ ಮೇ 1909.

ನೋಟಿಫಿಕೇಷನ್ ನಂಬರ್ 679—C. S. 64.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ (2)ನೆ ಬಳಿ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ.

	ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1.	ಗುಬ್ಬಿ ಶ್ರೀ ಕೃಷ್ಣರಾಜ ಪರಸ್ಪರ ಸಹಾಯಕ ಸಂಘ, ಲಿಮಿಟೆಡ್.	ಗುಬ್ಬಿ ...	14ನೆ ಏಪ್ರೈಲ್ 1909.
2.	ಮೇಲುಕೋಟೆ ವ್ಯವಸಾಯಾಭಿವರ್ಧಿನಿ ಸೊಸೈಟಿ, ಲಿಮಿಟೆಡ್.	ಮೇಲುಕೋಟೆ ...	15ನೆ ಏಪ್ರೈಲ್ 1909.
3.	ಮೇಲುಕೋಟೆ ಸಂಪತ್ಕುಮಾರ ವ್ಯಾಪಾರವರ್ಧಿನಿ ಸೊಸೈಟಿ, ಲಿಮಿಟೆಡ್.	ಡಿಟೋ ...	17ನೆ ಏಪ್ರೈಲ್ 1909.
4.	ಚಿಕ್ಕನಾಯ್ಕನಹಳ್ಳಿ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಚಿಕ್ಕನಾಯ್ಕನಹಳ್ಳಿ ...	19ನೆ ಏಪ್ರೈಲ್ 1909.
5.	ಹೆಬ್ಬೂರು ಕೋ ಆಪರೇಟಿವ ಸೊಸೈಟಿ, ಲಿಮಿಟೆಡ್.	ಹೆಬ್ಬೂರು, ತುಮಕೂರು ತಾಲ್ಲೂಕು.	28ನೆ ಏಪ್ರೈಲ್ 1909.

ಎಂ. ಶಾಮರಾವ್,
ಮೈಸೂರು ಗವರ್ನಮೆಂಟ ಕೋ ಆಪರೇಟೀವ ಸೊಸೈಟಿಗಳ ರಿಜಿಸ್ಟ್ರಾರ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಷ್ ಮಾಹೇ ಯಾ ಕ್ವಾರ್ಟರಿಂಗೆ			ದಾಮೂಷಾಯಿ ಪ್ರಕಾರ ದರಗಳು	

	ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷರ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಸ್ಯಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನ ಇಸವಿ ಜೂನ್ 21ನೆ ಮರ್ಸ್ಯಂ 24205—6—ಜಿ. 6200ನೆ ನಂಬರಿ ಗವರ್ನಮೆಂಟ್ ಆರಡರಿ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮರ್ಸ್ಯಂ 2633—41 ಮಿಸ್. 55ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸ್‌ಗಳು :—	ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫೇಕ್ಕೆ	2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.		
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರ ಕೊಡುವ ಬಗ್ಗೆ ರೆವಿನ್ಯೂ ಆಫಿಸರುಗಳು ಕೊಡುವ ನೋಟಿಸ್‌ಗಳಿಗೆ :—		
ಮೊದಲನೇ ಸಲಕ್ಕೆ ಪುಟ 1ಕ್ಕೆ ..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,, ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜ್ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಆದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಡಿ. ಬಿ. ರಾಮಚಂದ್ರ ಮೊದಲಿಯಾರ್,
ಕಂಪೈಲರ್, ಮೈಸೂರು ಗೆಜೆಟ್.

／# ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 20.

ಬೆಂಗಳೂರು, ಗುರುವಾರ, ಮೇ ತಾ|| 20, ಸನ್ 1909.

II ನೆ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಎಕ್ಸೈಜ್ ಇಲಾಖಾ.

ನೋಟಿಸ್ ನಂಬರು 9898.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಸನ್ 1909—10ನೆ ಸಾಲಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಶೇಂದಿ ಉತಾರು ಮಾಡಲ್ಪಡುವ ಎಲ್ಲಾ ಮರಗಳಿಗೂ ಕೆಂಪು ಬಣ್ಣದಿಂದ ಸಂಖ್ಯೆ ಹಾಕಲ್ಪಡುತ್ತೆ.

ಎಚ್. ಎಚ್. ಸ್ಪಾರ್ಕ್ಸ್,
ಎಕ್ಸೈಜ್ ಕಮಿಷನರ್.

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್.

ತಾರೀಖು 10ನೆ ಮೇ 1909, ಮೊಕ್ಕಾಂ ಚನ್ನಪಟ್ಟಣ.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಬೆಂಗಳೂರು ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕುಗಳಲ್ಲಿರುವ ಸ್ಟೇಟ್ ಫಾರೆಸ್ಟು (ಕತರಾವಣೆ ಆದ ಕೂಪುಗಳು ವಿನಹ) ಮತ್ತು ಕಮುಷಿಯಟ್ ಕಾವಲುಗಳು ಸೇರಿಸಿಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನುಗಳಲ್ಲಿಯೂ (ಪ್ಲಾಂಟೇಷನುಗಳ ವಿನಹ) ಸಹಾ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1909ನೆ ಜುಲೈ 1ನೆ ತಾರೀಖು ಲಾಗಾಯತು 1911ನೆ ಇಸವಿ ಜೂನ್ ಆಖೈರ್ ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1909ನೆ ಇಸವಿ ಜೂನ್ ತಾರೀಖು 7ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರವರೊಂದಿಗೆ ಆಗಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ತಾಲ್ಲೂಕವಾರ್ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುತ್ತಾರೆ.

1—7—1909ರ ಲಾಗಾಯತು 30—6—1911ರ ವರಿಗೆ.

(1)	ಬೆಂಗಳೂರು	(6)	ಕೊಳ್ಳೇಗಾಲ ಸ|| ತಾ||
(2)	ದೇವನಹಳ್ಳಿ	(7)	ಕಾನಕಾನಹಳ್ಳಿ
(3)	ಚನ್ನಪಟ್ಣ	(8)	ಮಾಗಡಿ
(4)	ಹೊಸಕೋಟೆ	(9)	ಆನೇಕಲ್
(5)	ನೆಲಮಂಗಲ	(10)	ದೊಡ್ಡಬಳ್ಳಾಪುರ

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜ್ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣೆ ಹಕ್ಕನ್ನು ಚಡದರಖಾಸ್ತುದಾರನಿಗೆ ವಿಲೇವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನ ಡೆಪ್ಯುಟಿ ಕಮಿಷನರವರು ತಾವೆ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟ್ ಯಾ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತುದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ಠೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಮೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಚಡ ದರಖಾಸ್ತುದಾರು ಹರಾಜು ಮಂಜೂರಾದ ಸಂಗತಿ ತಮಗೆ ತಿಳಿಸಿದ ಐದು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿಸಿ ಒಟ್ಟು ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫಿಸರಿಂದ ಸದರಿ ಬಾಬ್ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳ ಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಅಲ್ಲದೆ 100 ರೂಪಾಯಿಗಳನ್ನು ಠೇವಣಿ ಇಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಏಳು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದುಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಎಂಟು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1909ನೆ ಇಸವಿ ಆಗಸ್ಟ್ 1ನೆ ತಾರೀಖು, 2ನೆ ಖಿಸ್ತು 1909ನೆ ಇಸವಿ ಅಕ್ಟೋಬರ್ 1ನೆ ತಾರೀಖು, 3ನೆ ಖಿಸ್ತು 1910ನೆ ಇಸವಿ ಜನವರಿ 2ನೆ ತಾರೀಖು, 4ನೆ ಖಿಸ್ತು 1910ನೆ ಇಸವಿ ಏಪ್ರಿಲ್ 1ನೆ ತಾರೀಖು, 5ನೆ ಖಿಸ್ತು 1910ನೆ ಇಸವಿ ಜುಲೈ 1ನೆ ತಾರೀಖು, 6ನೆ ಖಿಸ್ತು 1910ನೆ ಇಸವಿ ಅಕ್ಟೋಬರ್ 1ನೆ ತಾರೀಖು, 7ನೆ ಖಿಸ್ತು 1911ನೆ ಇಸವಿ ಜನವರಿ 2ನೆ ತಾರೀಖು, 8ನೆ ಖಿಸ್ತು 1911ನೆ ಏಪ್ರಿಲ್ 1ನೆ ತಾರೀಖು; ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗ್ಗದೆ ತಪ್ಪಿದಲ್ಲಿ ಚಕ್ಕೆಗಳ ಜಮಾವಣಿ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಒಂದು ವರುಷಕ್ಕೆ ಒಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗೆಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜಮಾವಣಿ ಬಗ್ಗೆ ಬೇರೆ ಬೇರೆ ವಿಂಗಡಿಸುವ ಸರ್ಕಲಿನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರುಗಳ ಹೆಸರಿನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನುಮಾಡಿ ಇಡುವ ಜಾಗಾಗಳ ಒಂದು ಪಟ್ಟಿಯನ್ನು ಇಜಾರೆದಾರನು ಕೊಡತಕ್ಕದ್ದು.

(4) ತೊಗಟೆ ತೆಗೆದನಂತರ ವುಳಿಯುವ ಆ ಸಂಬಂಧವಾದ ವಿಶಿಷ್ಟ ಸೌದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟಿನಲ್ಲಿ ಚಕ್ಕೆಯನ್ನು ಜಮಾಯಿಸಬೇಕಾದರೆ ಅವುಗಳ ಛಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟ್ ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟುಗಳ ಭಾಗಗಳಲ್ಲಿ ಚಕ್ಕೆ ಜಮಾವಣಿ ಕೆಲಸ ನಡಿಸಕೂಡದು.

(7) ಇಜಾರ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಆಫಿಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಪಡೆಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋಠಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಗಳನ್ನು 15-7-1911 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಒಂದು ಷರತ್ತಿಗೆ ಇಜಾರೆದಾರನು ತಪ್ಪಿ ನಡದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರೆವಿಗೂ ಜಮಾಯಿಸಿ ಇರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು ಮತ್ತು ಇಜಾರೆದಾರನಿಂದ ಪಾವತಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಮೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮಿಷನರವರಿಂದ ತೀರ್ಮಾನಿಸಲ್ಪಡಬಹುದಾದ ಮೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ಟಿ. ಅಬ್ದುಲ್ ಕರೀಂ,

ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 13ನೆ ಮೇ 1909.

ತಂಗಡಿ ಮತ್ತು ಕಕೆ ಚಕ್ಕೆ, ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಜುಲೈ ತಾರೀಖು 1ರ ಲಾಗಾಯಿತು 1911ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕು 1909ನೆ ಇಸವಿ ಜೂನ್ ತಾರೀಖು 8ರಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಂದ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ:—

ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟು.	ಜಮಾಯಿಸತಕ್ಕ ಕಾಲ.	ಷರಾ.
ಮದ್ದಗಿರಿ ತಾಲ್ಲೂಕು ... ಕೊರಟಗೆರೆ ಸಬ್ ತಾಲ್ಲೂಕು ಸೇರಿ ...	1909ನೆ ಜುಲೈ ಗುರ್ರೆಲಾಗಾಯಿತು 1911ನೆ ಜೂನ್ ಆಖೈರ್ ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರಕಂಡ ಸರ್ಕಾರಿ ಬಂಜರು ಆಕಾರಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1909ನೆ

ಸಾಲ್ ಜುಲೈ ತಾರೀಖು 1ರ ಲಾಗಾಯಿತು 1911ನೆ ಇಸವಿ ಜೂನ್ ತಾರೀಖು 30ರ ವರಿಗಿನ 24 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣೆ ಬಗ್ಗೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡ ದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ ನೂರು ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಿಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜ್ ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟಿಯಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲುಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾಯಿದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡ ದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೆ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

7. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ಮೂರು ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಮೊದಲುಕೊಟ್ಟ ಹಣವನ್ನು ದಂಡವಾಗಿ ಸರಕಾರಕ್ಕೆ ಸೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

8. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಲೋಕಲ್ ಸೆಸ್ಸನ್ನೂ ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು.

1ನೆ ಖಿಸ್ತು	30ನೆ ಸೆಪ್ಟಂಬರ್ 1909
2ನೆ ಖಿಸ್ತು	31ನೆ ಮಾರ್ಚಿ 1910.
3ನೆ ಖಿಸ್ತು	30ನೆ ಸೆಪ್ಟಂಬರ್ 1910

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದ ನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಗ್ರಿಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕಿ ಬೀಳುವದರಿಂದ ಬೆಲೇಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1911ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ಮಾಮಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾ ಮಾಡಿರುವ ಎಲ್ಲಾ ಚಕ್ಕೆಯನ್ನು ತುಮಕೂರು ಡಿಸ್ಟ್ರಿಕ್ಟು ಸರಹದ್ದಿನಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿ ವರಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ನೋಟಿಫಿಕೇಷನ್.

ತುಮಕೂರು ಡಿಪೋದಲ್ಲಿ ಫಾರೆಸ್ಟು ಇಲಾಖ ಮಾರೀಫತ್ತು ಜಮಾಯಿಸಲ್ಪಟ್ಟಿರುವ ಸುಮಾರು 20 ಮಣ ಅಳಲೇಕಾಯಿ 1909ನೆ ಜೂನ್ 8ನೆ ಮಧ್ಯಾಹ್ನ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ಷರತ್ತುಗಳು.

ಹರಾಜುದಾರನು ಹರಾಜು ಖೈದಾದಕೂಡಲೆ ಕಾಲುಭಾಗ ಹರಾಜು ಮೊಬಲಗನ್ನು ತುಮಕೂರು ತಾಲ್ಲೂಕು ಟ್ರೆಜರಿಗೆ ಇರಸಾಲ್ಮಾಡಿ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಲ್ಲಿ ಟ್ರೆಜರೀ ರಶೀತಿಯನ್ನು ಹಾಜರ್ಮಾಡಬೇಕು, ತಪ್ಪಿದಲ್ಲಿ ಬಾಬು ದುಸರಾ ಹರಾಜು ಮಾಡಲ್ಪಡುತ್ತೆ, ಈ ದುಸರಾ ಹರಾಜಿನಲ್ಲಿ ಏನಾದರೂ ನಷ್ಟವಾದಲ್ಲ ಅವಲ್ ಹರಾಜುದಾರನು ಕಟ್ಟಿಕೊಡಬೇಕು, ಲಾಭಕ್ಕೆ ಬಾಧ್ಯನಲ್ಲ.

(2) ಹರಾಜಿನ ಬಾಕೀ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು ಒಂದು ವಾರದ ಒಳಗಾಗಿ ಪಾವತಿ ಮಾಡಬೇಕು. ತಪ್ಪಿದಲ್ಲಿ ಹಿಂದೆಯೇ ಕೊಡಲ್ಪಟ್ಟಿರುವ ಕಾಲುಭಾಗವೂ ಮೇಲಿನ ಷರತ್ತಿನಲ್ಲಿ ಕಂಡಂತೆ ದುಸರಾ ಹರಾಜು ಹಾಕಲ್ಪಡುತ್ತೆ.

(3) ಹರಾಜುದಾರನು ಪೂರಾ ಮೊಬಲಗು ಸಂದಾಯ ಮಾಡಿ ರಫ್ತು ಬಗ್ಗೆ ಲೈಸೆನ್ಸ್ ಪಡೆವಹೊರ್ತು ಮಾಲು ಸಾಗಿಸಕೂಡದು. ಹರಾಜು ತಾರೀಖು ನಂತರ ಏಳು ದಿನಕ್ಕಿಂತ ಹೆಚ್ಚಾಗಿ ಮಾಲು ಸಾಗಿಸದೆ ಡಿಪೋದಲ್ಲಿ ಬಿಟ್ಟರೆ ಹರಾಜುದಾರನು ಹರಾಜು ತಾರೀಖು ಲಾಗಾಯಿತು ಮಾಹೇಯಾನ ಮಣ 1ಕ್ಕೆ 6 ಪೈ ಮೇರಿಗೆ ಡಿಪೋ ಬಾಡಿಗೆಯನ್ನು ಕೊಡಬೇಕು, ಮತ್ತು ಪಾವತೀಕಾಲದಲ್ಲಿ ಮಾಲು ಯಾವರೀತಿ ಇದ್ದರೂ ತಕರಾರು ಇಲ್ಲದೆ ತೆಗದುಕೊಳ್ಳತಕ್ಕದ್ದು.

ಹೆಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ತುಮಕೂರು ಡಿಸ್ಟ್ರಿಕ್ಟು.

ತಿದ್ದುಪಾಟಾದ ಇಸ್ತಿಹಾರ್ನಾಮಾ, ತಾರೀಖು 10ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉದ್ಯಾರ್ಗ.	31—5—09	ಸಾಗ್ವಾನಿ ನಾಟಾ ...	600	20,000	[illegible] ತಾರೀಖು 19—20ರಲ್ಲಿ ಹರಾಜು ಆಗುವದು.
			ಡಿಟೋ ಜಂತಿಗಳು ...	300	4,000	
			ಹೊನ್ನೆ ನಾಟಾ ...	100	2,500	
			ಡಿಟೋ ಜಂತಿಗಳು ...	50	500	
			ಮತ್ತಿ ನಾಟಾ	100	3,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟಾ ...	25	1,000	
			ಕಾಡು ನಾಟಾ ...	25	500	
2	ನಂಜನಗೂಡು ...	1—6—09	ಸಾಗುವಾನಿ ನಾಟಾ ...	50	1,500	
			ಡಿಟೋ ಜಂತಿಗಳು ...	50	500	
			ಹೊನ್ನೆ ನಾಟಾ ...	100	2,000	
			ಡಿಟೋ ಜಂತಿಗಳು	50	500	
			ಮತ್ತಿ ನಾಟಾ ...	50	1,000	
			ಡಿಟೋ ಜಂತಿಗಳು ...	10	120	
			ಬೀಟೆ ನಾಟಾ ...	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟಾ ...	20	500	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ವುಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮಾಲುಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ಈತನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜಿ. ರಾಮರಾವ್, ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 8ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕಡೂರು ಡಿಸ್ಟ್ರಿಕ್ಟು ಬಾಬತು ಆಯಾಯ ಡಿಪೋಗಳ ಕೆಳಗೆ ಕಂಡ ನಾಟಾಗಳನ್ನು ಆಯಾಯ ಡಿಪೋಗಳ ಕೆಳಗಡೆಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂಬರು	ನಾಟಾಗಳ ವಿವರ.	ಶಿವಮೊಗ್ಗ ಡಿಪೋ 27ನೆ ಮೇ 09.		ಬೆಂಕೀಪುರ ಡಿಪೋ 29ನೆ ಮೇ 09.		ತರೀಕೆರೆ ಡಿಪೋ 31ನೆ ಮೇ 09.		ಕಡೂರು ಡಿಪೋ 2ನೆ ಜೂನ್ 09.		ಷರಾ
		ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	
1	ಸಾಗುವಾನಿ ...	...	...	...		50	2,000	275	600	
2	ಹೊನ್ನೆ ...	...	...	50	1,500	20	500	20	500	
3	ಬೀಟೆ ...	..	...	20	500	80	2,000	10	200	
4	ಮತ್ತಿ ...	10	200	90	2,500	80	2,000	65	1,500	
5	ನಂದಿ ...	20	500	25	800	25	700	...	...	
6	ಹುನಾಲು ...	25	1,000	50	1,300	120	3,000	...	...	
7	ಬಿಲ್ವಾರ ...	...	...	...	...	1	10	...	...	[illegible]
8	ಯತ್ತ್ಯಾಗ ...	20	600	30	800	20	500	...	...	
9	ತಡಸಲು ...	2	60	...	...	10	200	...	...	
10	ಬಾಗೆ ...	...	...	...	...	...	...	...	...	
11	ಜಂಬೆ ...	15	350	15	300	60	900	...	...	
12	ಸಾಗುವಾನಿ ತೀರು	...	...	...	...	2,164	1,680	...	...	
13	ಡಿಟೋ ಪರೋಡೆ ...	...	...	...	...	43	30	...	...	
14	ಡಿಟೋ ರಿಪೀಸು ...	...	...	...	...	...	...	...	...	
15	ಮಸಿ ...	...	...	1	23	5	150	...	...	
16	ನೇರಲು ...	...	...	10	200	5	100	...	...	
17	ಕಿರಾ... ಭೋಗಿ ...	...	...	...	...	31	300	...	...	

ಹರಾಜು ಷರತ್ತುಗಳು.

(1) ಛಡ ದರಖಾಸ್ತುದಾರನು ಹರಾಜು ನಡೆದ ಐದು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ಸಮೀಪದಲ್ಲಿರುವ ಖಜಾನೆಗೆ ಜಮಾ ಮಾಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಬಾಬು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಹರಾಜುದಾರರನ್ನು ಗುರಿಪಡಿಸುತ್ತೆ.

(2) ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನ ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಜಮಾ ಮಾಡಿಸಿರುವ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ನಾಟಾಗಳನ್ನು 1ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ದುಸರಾ ಹರಾಜು ಮಾಡಿಸಿ ಉಂಟಾಗುವ ಲುಕ್ಸಾನು ಮೊಬಲಗನ್ನು ಅವಲ್ ಹರಾಜುದಾರನಿಂದ ವಸೂಲು ಮಾಡಲ್ಪಡುತ್ತೆ.

(3) ಹರಾಜಿನಲ್ಲಿ ಪಡೆದಿರುವ ನಾಟಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ನಾಟಾಗಳನ್ನ ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲು ರಫ್ತು ಮಾಡಕೂಡದು.

(4) ಹರಾಜು ತಾರೀಖು ಲಾಗಾಯಿತು (90) ತೊಂಭತ್ತು ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋದಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ 12 ರೂಪಾಯಿನಂತೆ ಡಿಪೋ ಭಾಡಾ ವಸೂಲ್ ಮಾಡಲ್ಪಡುತ್ತೆ.

ಬಿ. ಹೀರಾಸಿಂಗ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟು.

ತಾರೀಖು 13ನೆ ಮೇ 1909.

ಹೆಗ್ಗವಾಡಿ ಬ್ಲಾಕ್ 1 ಫಾರೆಸ್ಟು, ಮೈಸೂರು ಡಿಸ್ಟ್ರಿಕ್ಟು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟ್ ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚೆಕ್ಕುಬಂದಿಯುಳ್ಳ ಪ್ರದೇಶವು ನಂಬರು R. 8426—Ft. 122-08-2; 13-4-09; 15-4-09ನೆ ಇಸವಿಯ ಗೆಜೆಟಿನಲ್ಲಿ ಘಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಸುಮಾರು ವಿಸ್ತೀರ್ಣ.	ಬ್ಲಾಕ ನಂಬರು.	ವಿವರಣೆ.
ಮೈಸೂರು.	ಗುಂಡ್ಲುಪೇಟೆ.	ಹಂಗಳ ಮತ್ತು ತ್ರಿಕಣಾಂಬಿ.	5,911 ಎಕರೆ, 5 ಗುಂಟೆ ಅಥವಾ 9·23 ಚದರ ಮೈಲಿ.	ಹೆಗ್ಗವಾಡಿ ಬ್ಲಾಕ್ I.	**ಚೆಕ್ಕುಬಂದಿ.** ಉತ್ತರಕ್ಕೆ—ಬಾಚಹಳ್ಳಿ ಗ್ರಾಮದ ಸರ್ವೆ 301ನೆ ನಂಬರಿನ ಆಗ್ನೇಯ ಮೂಲೆಯಿಂದ ಲೈನು ಹೊರಟು $8\frac{1}{2}$ ಫರಲಾಂಗುದೂರ ಸರ್ವೆ 241ನೆ ನಂಬರಿನಲ್ಲಿ ಹಾದು ಈಶಾನ್ಯಕ್ಕೆ ಹೋಗಿ ಅದೇ ಗ್ರಾಮದ ಸರ್ವೆ 148ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಪೂರ್ವಕ್ಕೆ ಬಾಚಹಳ್ಳಿ ಗ್ರಾಮದ ಸರ್ವೆ 145ನೆ ನಂಬರಿನಲ್ಲಿ $6\frac{1}{4}$ ಫರಲಾಂಗು ಫಾಸಲೆ ಬಾಚಹಳ್ಳಿ, ಎರಿಯೂರು ಗ್ರಾಮಗಳ ಮಧ್ಯ ಎಲ್ಲೇ ಮೇಲೆ ಸರ್ವೆ 142ನೆ ನಂಬರಿಗೆ ದಕ್ಷಿಣ ಸುಮಾರು $4\frac{3}{4}$ ಫರಲಾಂಗು ದೂರದಲ್ಲಿರುವ ಒಂದು "ಪಾಯಂಟ್" ಗೆ ಸೇರಿ, ಅದೇದಿಕ್ಕಿನಲ್ಲಿ ಎರಿಯೂರು ಗ್ರಾಮದ ಸರ್ವೆ 92ನೆ ನಂಬರಿನಲ್ಲಿ $6\frac{1}{2}$ ಫರಲಾಂಗು ಫಾಸಲೆ

ಹೆಗ್ಗವಾಡಿಗ್ರಾಮದ ಸರ್ವೆ 238 ಮತ್ತು 225ನೆ ನಂಬರುಗಳಲ್ಲಿ ಹೊಕ್ಕು ಕುಂದಕೆರೆ ಗ್ರಾಮದ ಸರ್ವೆ 125ನೆ ನಂಬರು ದಕ್ಷಿಣ ಸರಹದ್ದು ಮತ್ತು ಹೆಗ್ಗವಾಡಿ ಮತ್ತು ಕುಂದಕೆರೆ ಗ್ರಾಮಗಳ ಮಧ್ಯ ಎಲ್ಲೆಯೊಂದಿಗೆ ಸಂಧಿಸುವ ಸ್ಥಳಕ್ಕೆ ಸೇರುತ್ತದೆ.

ಪೂರ್ವಕ್ಕೆ—ಅನಂತರ $8\frac{3}{4}$ ಫರಲಾಂಗು ಫಾಸಲೆ ಕುಂದಕೆರೆ ಗ್ರಾಮದ ಸರ್ವೆ 125ನೆ ನಂಬರಿನ ದಕ್ಷಿಣ ಸರಹದ್ದು ಅನುಸರಿಸಿ ಆಗ್ನೇಯಕ್ಕೆ ಹೊರಟು ಮಾಯಾರು ಸ್ಟೇಟ್ ಫಾರೆಸ್ಟ್ ಸರಹದ್ದನ್ನು ಸಂಧಿಸುತ್ತದೆ.

ದಕ್ಷಿಣಕ್ಕೆ—ಅನಂತರ ಸ್ಟೇಟ್ ಫಾರೆಸ್ಟ್ ಸರಹದ್ದು ಅನುಸರಿಸಿ ಎಲಚಟ್ಟಿ ಗ್ರಾಮ ಮತ್ತು ಮಾಯಾರು ಸ್ಟೇಟ್ ಫಾರೆಸ್ಟ್ ಸರಹದ್ದುಗಳು ಸಂಧಿಸುವ ಪಾಯಿಂಟಿಗೆ ಹೋಗುತ್ತದೆ.

ಪಶ್ಚಿಮಕ್ಕೆ—ಅನಂತರ ಉತ್ತರಕ್ಕೆ ಹೊರಟು 6 ಫರಲಾಂಗು ಫಾಸಲೆ ಬಾಚಹಳ್ಳಿ ಗ್ರಾಮದ ಸರ್ವೆ 247ನೆ ನಂಬರು ಪೂರ್ವ ಎಲ್ಲೆ ಮಾರ್ಗವಾಗಿ ಹರಿದು ಬಾಚಹಳ್ಳಿ ಗ್ರಾಮದ ಸರ್ವೆ 267ನೆ ನಂಬರು ದಕ್ಷಿಣ ಮೂಲೆಯನ್ನು ತಲಪುತ್ತದೆ. ಅನಂತರ ಈಶಾನ್ಯಕ್ಕೆ ತಿರುಗಿ, ಬಾಚಹಳ್ಳಿ ಗ್ರಾಮದ ಸರ್ವೆ 246ನೆ ನಂಬರಿನಲ್ಲಿ ಹಾದು, 3 ಫರಲಾಂಗು ಫಾಸಲೆಯಲ್ಲಿ ಆ ಗ್ರಾಮದ ಸರ್ವೆ 271ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ ಸುಮಾರು 1 ಫರಲಾಂಗು ಹೊರಟು ಅದೇ ಗ್ರಾಮದ ಸರ್ವೆ 272ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಬಾಚಹಳ್ಳಿ ಗ್ರಾಮದ ಸರ್ವೆ 272ನೆ ನಂಬರಿನ ಪೂರ್ವ ಸರಹದ್ದು ಮಾರ್ಗವಾಗಿ ವಾಯುವ್ಯಕ್ಕೆ ಹರಿದು ಸರ್ವೆ 279ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಅದೇ ನಂಬರಿನ ಪೂರ್ವ ಸರಹದ್ದು ಅನುಸರಿಸಿ ಉತ್ತರಕ್ಕೆ ಹೋಗಿ, ವಾಯುವ್ಯ ಮಾರ್ಗವಾಗಿ 1 ಫರಲಾಂಗು ಫಾಸಲೆ ಸರ್ವೆ 286ನೆ ನಂಬರಿನ ಪೂರ್ವ ಎಲ್ಲೆ ಅನುಸರಿಸಿ ಬಾಚಹಳ್ಳಿ ಗ್ರಾಮದ ಸರ್ವೆ 289ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅನಂತರ ಬಾಚಹಳ್ಳಿ ಗ್ರಾಮದ ಸರ್ವೆ 289ನೆ ನಂಬರಿನ ಪೂರ್ವ ಸರಹದ್ದು ಮಾರ್ಗವಾಗಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮೆದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವುದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನಾವ್ಯವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆಪಡೆಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟು ಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(*a*) ಅತಿಕ್ರಮಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(*a*) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(*b*) ಜಂಗಲಿಗೆ ಬೆಂಕಿಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವಹಾಗೆ ಬೆಂಕಿಯನ್ನು ಪುರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(*c*) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(*d*) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(*e*) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಬಳಪಡಿಸುವದು, ಅಥವಾ ಸಾಗಿಸುವದು.

(*f*) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಛಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದುಮಾಡಿ ಬರಹಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 13ನೆ ಮೇ 1909.

ಹೆಗ್ಗವಾಡಿ ಬ್ಲಾಕ್ II ಫಾರೆಸ್ಟು, ಮೈಸೂರು ಡಿಸ್ಟ್ರಿಕ್ಟು.

ಸ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 8429—Ft. 122—08—2 ; 13-4-09 ; 15-4-09ನೆ ಇಸವಿಯ ಗೆಜೆಟಿನಲ್ಲಿ ಛಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಪ್ರದೇಶದ ಹೆಸರು.	ವಿವರಣೆ.
ಮೈಸೂರು.	ಗುಂಡ್ಲುಪೇಟೆ ತಾ, ಚಾಮರಾಜನಗರ.	5,011 ಎಕರೆ, 38 ಗುಂಟೆ. ಅಥವಾ 7.83 ಚದರ ಮೈಲಿ	ಹೆಗ್ಗವಾಡಿ ಬ್ಲಾಕ್ II.	**ಚಕ್ಕುಬಂದಿ.** ಉತ್ತರಕ್ಕೆ—ಕುಂದಕೆರೆ ಗ್ರಾಮದ ಮತ್ತು ಮಾಯಾರ್ ಸ್ಟೇಟ್ ಫಾರೆಸ್ಟು ಸಮಕಟ್ಟು ಎಲ್ಲೆಯಿಂದ ಲೈನ್ ಹೊರಟು ಚಿರಕನಹಳ್ಳಿ ಸರ್ವೆ 84ನೆ ನಂಬರಿನಲ್ಲಿ ಈಶಾನ್ಯಕ್ಕೆ $5\frac{1}{4}$ ಫರ್ಲಾಂಗು ಫಾಸಲೆ ಹೋಗಿ ಚಿರಕನಹಳ್ಳಿ ಮತ್ತು ಕಡಬೂರು ಮಧ್ಯ ಎಲ್ಲೆಯನ್ನು ಸಂಧಿಸುತ್ತದೆ. ಅಲ್ಲಿಂದ ಅದೇ ದಿಕ್ಕಿನಲ್ಲಿ ಹೊರಟು $13\frac{3}{4}$ ಫರ್ಲಾಂಗುದೂರ ಕಡಬೂರು ಗ್ರಾಮದ ಸರ್ವೆ 46, 44, 76ನೆ ನಂಬರುಗಳಲ್ಲಿ ಹೋಗಿ, ಕಡಬೂರು ಎರಗನಹಳ್ಳಿ ಮತ್ತು ರಾಮೈಯ್ಯನಪುರ ಗ್ರಾಮಗಳ ಗಡಿ ಬಾಂದಿಗೆ ಸೇರುತ್ತದೆ. ಪುನಃ ಅದೇ ಮಾರ್ಗವಾಗಿ ಎರಗನಹಳ್ಳಿ ಗ್ರಾಮದ ಸರ್ವೆ 17ನೆ ನಂಬರಿನ ಮೂಲಕ $10\frac{1}{4}$ ಫರ್ಲಾಂಗುದೂರ ಹೋಗಿ ಎರಗನಹಳ್ಳಿ, ಸಿಂಡನಪುರ ಮತ್ತು ಎಣಗುಂಬ ಗ್ರಾಮಗಳ ಗಡಿ ಬಾಂದುಗಳನ್ನು ಮುಟ್ಟುತ್ತದೆ.

ಪುನಃ ಅದೇದಿಕ್ಕಿನಲ್ಲಿ ವಡ್ಡರಹಳ್ಳಿ ಗ್ರಾಮದ ಸರ್ವೆ 22ನೆ ನಂಬರಿನಲ್ಲಿ $7\frac{1}{2}$ ಫರ್ಲಾಂಗುದೂರ ಹೋಗಿ ವಡ್ಡರಹಳ್ಳಿಗ್ರಾಮದ ಸರ್ವೆ 7ನೆ ನಂಬರಿನ ದಕ್ಷಿಣ ಮೂಲೆಯಲ್ಲಿ ಮದ್ರಾಸ್ ಆಧಿಪತ್ಯದ ಎಲ್ಲೆಯನ್ನು ಸೇರುತ್ತದೆ.

ಪೂರ್ವಕ್ಕೆ—ಅನಂತರ ದಕ್ಷಿಣಕ್ಕೆ ತಿರುಗಿ ಮದ್ರಾಸ್ ಆಧಿಪತ್ಯದ ಎಲ್ಲೆಯನ್ನು ಅನುಸರಿಸಿ ಮಾಯಾರ್ ಸ್ಟೇಟ್ ಫಾರೆಸ್ಟು ಮತ್ತು ಮದ್ರಾಸ್ ಆಧಿಪತ್ಯದ ಎಲ್ಲೆಗಳು ಸೇರುವ ಸ್ಥಳದ ವರಗೂ ಹೋಗುತ್ತದೆ.

ದಕ್ಷಿಣ ಮತ್ತು ಪಶ್ಚಿಮಕ್ಕೆ—ಅನಂತರ ಮಾಯಾರ್ ಸ್ಟೇಟ್ ಫಾರೆಸ್ಟು ಸರಹದ್ದು ಅನುಸರಿಸಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮೀನುಗಳಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(*a*) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡವ್ವಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(*a*) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(*b*) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(*c*) ಈ ಬಗ್ಗೆಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(*d*) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(*e*) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(*f*) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಘಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನು ಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿೀಗಾಗಲೀ ಯಾರಿಗಾದರೂ ಹಕ್ಕು ಇಥೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟುರಮಟ್ಟಿಗೆ ಇಥೆಯನ್ನು ತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲಿ, ಅಥವಾ ರೂಬರೂಬಾಗಲೀ; ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತುವೇಜುಗಳನ್ನು ಹಾಜರ್ಮಾಡಬೇಕು

ಎಂ. ಶಾಮರಾವ್,

ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್ಮೆಂಟ್ ಆಫಿಸರ್.

2 c

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 30ನೆ ಏಪ್ರಿಲ್ 1909.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕು ರಾಮದೇವನಹಳ್ಳಿ ಗ್ರಾಮದಲ್ಲಿರುವ ಹಜಾಂ ರಾಮನೆಂಬುವನು ಖುರ್ದಸಾಬಿ ಹಿತ್ತಲಿನಲ್ಲಿ ಅಗಿಯುತ್ತಿರುವಾಗ ಒಂದು ಸಣ್ಣ ಮಣ್ಣಿನ ಮಗೆಯಲ್ಲಿ ಈ ಕೆಳಗೆ ವಿವರಿಸುವ ಭಂಗಾರದ ಆಭರಣಗಳು ಸಿಕ್ಕಿರುತ್ತವೆಂದು ಸದರಿ ರಾಮನಿಂದ ತಿಳಿಯಲ್ಪಟ್ಟಿರುತ್ತೆ. ಸದರಿ ಆಭರಣಗಳಿಗೆ ಯಾರಾದರೂ ಹಕ್ಕುದಾರ್ರಾಗಿದ್ದ ಪಕ್ಷದಲ್ಲಿ ಈ ನೋಟಿಫಿಕೇಷನ್ ಗೆಜೆಟ್ಟಿನಲ್ಲಿ ಛಾಯಿಷಾದ ಲಾಗಾಯಿತು ಆರು ತಿಂಗಳೊಳಗೆ ತಮ್ಮ ಹಕ್ಕನ್ನು ದೊಡ್ಡಬಳ್ಳಾಪುರ ಸಬ್ ಡಿವಿಜನ್ ಆಫೀಸರವರ ರೂಬು ರೂಬು ತಾವೇ ಆಗಲೀ ಅಥವಾ ಲಾಯರ್ ಮುಖಾಂತ್ರವೇ ಆಗಲಿ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದು. ಹಾಗೆ ತಪ್ಪಿದ ಪಕ್ಷದಲ್ಲಿ ಮೈಸೂರು ಸೀಮೆಯ "ಟ್ರೆಜರ್‌ಟ್ರವ್" ರೂಲ್ಸ್ 5ನೆ ಸೆಕ್ಷನ್ ಅನುಸರಿಸಿ ಏಲ ಮಾಡಲ್ಪಡುತ್ತೆ.

ಭಂಗಾರದ ಆಭರಣಗಳ ವಿವರ.

ಸವರನ್ ಬಣ್ಣ ಭಂಗಾರದ ಬೆಂಡುವಾಲೆ ಜೊತೆ 1ಕ್ಕೆ ತೂಕ 1 ವರಹ 3 ಹಣ.

ವರಹಬಣ್ಣ ಭಂಗಾರದ ತಾಳಿಗಳು 7ಕ್ಕೆ ತೂಕ $1\frac{3}{4}$ ವರಹ.

ಹಣಬಣ್ಣ ಭಂಗಾರದ ಗಟ್ಟಿ 1ಕ್ಕೆ ತೂಕ 1 ವರಹ 11 ತೂಕ.

ಬಿ. ಜೆ. ಕೊಮಾರಸ್ವಾಮಿ ನಾಯಿಕ್, ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

1909ನೆ ಇಸವಿ ಏಪ್ರಿಲ್ ತಾರೀಖು 24ನೆ ಶನಿವಾರ ಪ್ರಾತಃಕಾಲ 7—30 ಘಂಟೆಯಲ್ಲಿ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸಿನವರು, (ಪ್ರೆಸಿಡೆಂಟ್).
2. „ ಎಂ. ಜಿ. ಕೃಷ್ಣಸಾಮಿರಾಯರವರು, (ವೈಸ್ ಪ್ರೆಸಿಡೆಂಟ್).
3. „ ಸೈಯದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
4. „ ಎಂ. ವೆಂಕಟಕೃಷ್ಣಯ್ಯನವರು.
5. „ ಅಂಬಳೆ ಅಣ್ಣಯ್ಯಪಂಡಿತರವರು.
6. „ ಎಂ. ನರಸಿಂಹಸ್ವಾಮಿಗಳವರು.
7. „ ಎಂ. ಕೃಷ್ಣಪ್ಪಾಜಿ ಅರಸಿನವರು.
8. „ ಎನ್. ಶ್ರೀಕಂಠೈಯ್ಯನವರು.
9. „ ಹಸೇನಲ್ಲಿಬೇಗ್ ಸಾಹೇಬರವರು.
10. „ ಮಾದಪ್ಪನವರು.
11. „ ಅನಂತರಾಜೈಯ್ಯನವರು.
12. „ ರಹಿಮತ್ತುಲ್ಲಾ ಅಹಮ್ಮದ್‌ಸೇಟರವರು.
13. „ ರೆವರೆಂಡ್ ಹೆಚ್. ಗಲಿಫರ್ಡ್ ಸಾಹೇಬರವರು.
14. „ ವಿ. ತಿರುವೆಂಗಡ ಮೊದಲಿಯಾರ್ರವರು.

ಗೈರ್ಹಾಜರು.

1. ಮಿ॥ ಬಿ. ಸುಬ್ಬರಾಯರವರು, (ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರು).
2. „ ವಿ. ಎಲ್. ಮಾಂಕರ್ರವರು, (ಮೈಸೂರು ಸಿಟಿ ಹೆಲ್ತಾಫಿಸರ್).
3. „ ಕೆ. ಚಂದ್ರಶೇಖರೈಯ್ಯನವರು.
4. „ ಎಂ. ಸಿ. ರಂಗೈಯ್ಯಂಗಾರ್ರವರು.
5. „ ಸೈದ್ ಮೊಹದೀನ್ ಸಾಹೇಬರವರು.
6. „ ಎ. ಸುಬ್ಬಣ್ಣನವರು.

1909ನೆ ಇಸವಿ ಮಾರ್ಚಿ ಮಾಹೆಯ ಜಮಾ ಖರ್ಚು ಲೆಖ್ಖ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಖ್ಖಗಳು.

ಪ್ಯಾಸು ಮಾಡಿದೆ.

ಇತಃಪರ ಟರ್ವಹಾಲು ಜಮಾ ಖರ್ಚು ಲೆಖ್ಖವನ್ನು ಮ್ಯುನಿಸಿಪಲ್ ಲೆಖ್ಖದಿಂದ ಪ್ರತ್ಯೇಕಿಸಿ ಇಡತಕ್ಕದ್ದೆಂದು ತೀರ್ಮಾನಿಸಿದೆ.

II. ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಇಂಜನಿಯರು ಲಕ್ಷ್ಮಣರಾಯರಿಂದ ಬರತಕ್ಕ ಸಾಮಾನುಗಳ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರು ಪುನರಾಲೋ

ಚೆಸಿ ಕೇಶವೈಯ್ಯಂಗಾರ್ ಅಥವಾ ಸಾಮಾನನ್ನು ತೆಗೆದುಕೊಂಡ ಸ್ಟೋರ್‌ಕೀಪರೇ ಚರ್ಚಾಸ್ಪದವಾದ ಸಾಮಾನಿನ ಬೆಲೆಯನ್ನು ಕೊಡತಕ್ಕದ್ದೆಂದು ವಿಧಾಯಕ ಮಾಡತಕ್ಕ ಬಗ್ಗೆ ಕೇಳಬೇಕೆಂದು ತೀರ್ಮಾನಿಸಿದೆ. ಬಾಕಿ ವಿಷಯು ಖಾಯಂ ಮಾಡಿದೆ.

III. ಷಹರಿನಲ್ಲಿ ಹೌಸ್ ಕನೆಕ್ಷನ್‌ಗಳ ಟ್ರ್ಯಾಂಪು ಮತ್ತು ಪೈಪು ರಿಪೇರಿ ವಿಷಯದಲ್ಲಿ ಚೀಫ್ ಇಂಜನಿಯರವರಿಂದ ತಲಪಿರತಕ್ಕ 20—3—09ನೆ ಮರ್ಕುಂ 2176ನೆ ನಂಬರ್ ಲೆಟರ್ ಮತ್ತು ನಡವಳಿಕೆ.

ರಿಕಾರ್ಡು ಮಾಡಿದೆ.

ಕೌನ್ಸಿಲ್ಲಿನವರು ಈ ವಿಷಯದಲ್ಲಿ ಹಿಂದೆ ಮಾಡಿರುವ ರಿಜಲ್ಯೂಷನ್ ಕಾಪಿಯನ್ನು ಚೀಫ್ ಇಂಜನಿಯರವರಿಗೆ ಕಳುಹಿಸತಕ್ಕದ್ದು.

IV. ಬಲೋದ್ವಂದಿಯಿಂದ ಶಿಡಬು ಹಾಕತಕ್ಕದ್ದನ್ನು ಇನ್ನು ಒಂದು ವರುಷ ಜಾಸ್ತಿಯಾಗಿ ಜಾರೀಲಿ ತರತಕ್ಕ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲ್ಲಿನವರ ಅಭಿಪ್ರಾಯ ತಿಳಿಸಬೇಕೆಂದು ಸ್ಯಾನಿಟರಿ ಕಮಿಷನರವರಿಂದ ತಲಪಿರುವ 20—3—1909ನೆ ಮರ್ಕುಂ 3895–96ನೆ ನಂಬರ್ ಡಾಕೆಟ್.

ಇನ್ನು ಒಂದು ವರುಷ ಬಡಾಯಿಸಬೇಕೆಂದು ಗೌರ್ನಮೆಂಟಿಗೆ ಬರಸುವಂತೆ ಸ್ಯಾನಿಟರಿ ಕಮಿಷನರನ್ನು ಕೇಳಿಕೊಳ್ಳತಕ್ಕದ್ದೆಂದು ತೀರ್ಮಾನಿಸಿದೆ.

V. ಗೌರ್ನಮೆಂಟ್ ಹೌಸಿಗೆ ಹೋಗಿ ಬರುವದಕ್ಕಾಗಿ ಇರುವ ರಸ್ತೆಗಳನ್ನು ಮ್ಯುನಿಸಿಪಲ್ ಕೌನ್ಸಿಲ್ಲಿನವರ ಛಾರ್ಜಿಗೆ ತೆಗೆದುಕೊಳ್ಳತಕ್ಕ ವಿಷಯದಲ್ಲಿ ಏನಾದರೂ ಆಕ್ಷೇಪಣೆ ಉಂಟೆ ಎಂದು ಗೌರ್ನಮೆಂಟ್ ಹೌಸ್ ಇನ್‌ಛಾರ್ಜ್ ಆಫೀಸರವರಿಂದ ತಲಪಿರುವ 1—4—09ನೆ ಮರ್ಕುಂ 2234—F. 6006-1908—09ನೆ ನಂಬರ್ ಲೆಟರ್.

ಈ ರೋಡುಗಳ ಸಾಲಾಬಾದು ರಿಪೇರಿಯನ್ನು ಕೌನ್ಸಿಲ್ಲಿನವರು ವಹಿಸಿಕೊಳ್ಳಲು ಆಗುವದಿಲ್ಲವೆಂದು ತೀರ್ಮಾನಿಸಿದೆ.

VI. ಮಹಾರಾಜಾಸ್ ಕಾಲೇಜ್ ಪ್ರಿನ್ಸಿಪಲ್ ಮಿ|| ಜೆ. ವಿಯರ್ ಸಾಹೇಬರವರು ರಾಜೀನಾಮ ಕೊಟ್ಟಿದ್ದರಿಂದ ಇವರಿಗೆ ಬದಲಾಗಿ ರೆವರೆಂಡ್ ಎಚ್. ಗಲಿಫರ್ಡು ಸಾಹೇಬರವರನ್ನು ಮ್ಯುನಿಸಿಪಲ್ ಕೌನ್ಸಿಲರಾಗಿ ನಿಯಾಮಕ ಮಾಡಿರುತ್ತೆಂದು ಗೌರ್ನಮೆಂಟಿನಿಂದ ಸಾದರಾಗಿರುವ 27—3—09ನೆ ಮರ್ಕುಂ 9365ನೆ ನಂಬರ್ ನೋಟಿಫಿಕೇಷನ್.

ರಿಕಾರ್ಡು ಮಾಡಿದೆ.

VII. ಕರ್ನಾಟಕ ವೈದ್ಯಶಾಲೆಯ ಕಾಂಪೌಂಡರ್ ವಿಶ್ವನಾಥೈಯ್ಯನವರಿಗೆ ಮ್ಯುನಿಸಿಪಲ್ ಕೌನ್ಸಿಲ್ಲಿನವರು ಶಿಫಾರಸ್ಸು ಮಾಡಿದ್ದ ಪ್ರಕಾರ 10 ರೂಪಾಯಿನಿಂದ 15 ರೂಪಾಯಿಗೆ ತಲಬು ಇಜಾಫೆ ಮಾಡಲು ಕಾರಣ ಕಾಣಿಸಲಿಲ್ಲವೆಂದು ಗೌರ್ನಮೆಂಟಿನಿಂದ ಸಾದರಾಗಿರುವ 10—4—09ನೆ ಮರ್ಕುಂ 9930—Ml. 383-08-2ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

VIII. ಚಿತ್ರದುರ್ಗ ಮತ್ತು ಹಾಸನ ಡಿಸ್ಟ್ರಿಕ್ಟುಗಳು ವಿನಹ ಬಾಕಿ ಕಡೆಗಳಿಗೆ ಗ್ರೈನ್ ಕಂಪನ್ ಸ್ವೇಷನ್ ಅಲೋಯನ್ಸ್ ಯಾನೆ ಮಂಗೈ ಭತ್ಯವನ್ನು 1909ನೆ ಮೇ ಆಖೈರು ವರಿಗೆ ಈಗ ಕೊಡುತ್ತಾ ಇರುವ ರೇಟಿನಂತೆಯೇ ಮಂಜೂರ್ಮಾಡಿರುತ್ತೆಂದು ಗೌರ್ನಮೆಂಟಿನಿಂದ ಸಾದರಾಗಿರುವ 10—4—09ನೆ ಮರ್ಕುಂ R. 8320-60—Agl. 31-08—31ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

IX. ಕ್ಷಾಮ ಪೀಡಿತವಾದ ಪ್ರದೇಶಗಳಲ್ಲಿ ನೇಯಿಗೆಯವರಿಗೂ ಮತ್ತು ಇತರ ಕಸಬುದಾರರುಗಳಿಗೂ ಸಹಾಯ ಮಾಡುವದಕ್ಕಾಗಿ ಮಂಜೂರಾಗಿರುವ ಹಣದ ಪೈಕಿ ಯಾವ ಭಾಗವನ್ನಾದರೂ ಸಂಬಂಧಪಟ್ಟ ಮ್ಯುನಿಸಿಪಾಲಿಟಿಗಳಿಗೆ ಸಾಲವಾಗಿ ಯೋಚಿಸಬಹುದೇ ಎಂಬ ವಿಚಾರದಲ್ಲಿ ತಮ್ಮ 30—11—08ನೆ ಮರ್ಕುಂ 59-60ನೆ ನಂಬರ್ ಮೆಮೋಗೆ ಗಮನಕೊಟ್ಟು ಜವಾಬು ಬೆಳೆಸಬೇಕೆಂದು ರೆವಿನ್ಯೂ ಕಮಿಷನರವರಿಂದ ತಲಪಿರುವ 20—4—09ನೆ ಮರ್ಕುಂ 2219—ಡಿ. ನೆ ನಂಬರ್ ಲೆಟರ್.

ಈ ವಿಷಯದಲ್ಲಿ ಯಾವ ವಿಧವಾದ ಜವಾಬ್ದಾರಿಯನ್ನು ಅಂಗೀಕರಿಸುವದಕ್ಕೆ ಮ್ಯುನಿಸಿಪಲ್ ಕೌನ್ಸಿಲ್ಲಿನವರು ಅಸಮರ್ಥರೆಂದು ವ್ಯಸನಪಡುವದಾಗಿ ಗೌರ್ನಮೆಂಟಿಗೆ ತಿಳಿಸಬೇಕೆಂತಲೂ ಮತ್ತು ಈ ವಿಷಯದಲ್ಲಿ ಹಿಂದೆ ನಡೆದಿರುವಂತೆ ಏರ್ಪಾಡು ಮಾಡಿಸಬೇಕೆಂತ ಕೇಳಿಕೊಳ್ಳಬೇಕೆಂತಲೂ ತೀರ್ಮಾನಿಸಿದೆ.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಮೈಸೂರು ಸಿಟಿ ಕೌನ್ಸಿಲರ ಆಫೀಸಿಗೆ.

ಆಡಿಟರ್ ರಿಪೋರ್ಟು.

ತಾರೀಖು 23ನೆ ಏಪ್ರೆಲ್ 1909.

1. 22—4—09ರಲ್ಲಿ ಮಾರ್ಚಿ ಮಾಹೆ ಮ್ಯುನಿಸಿಪಲ್ ಲೆಖ್ಖಗಳನ್ನು ವವಚರು ವಗೈರೆ ಆಡಿಟ್ ಮಾಡುವಲ್ಲಿ ಹೆಲ್ತಾಫೀಸಿನಿಂದ ನಜರುಬಾದು ಮೊಹಲಾ ಮತ್ತು ಚಾಮರಾಜ ಮೊಹಲಾಗಳಲ್ಲಿ ವಸೂಲು ಮಾಡಿದ ಸೆಸ್ ಬಾಬತು ಮೊಬಲಗು ಮೇಲ್ಕಂಡ ವರಿಗೂ ಮ್ಯುನಿಸಿಪಾಲಿಟಿಗೆ ಜಮಾಬಂದು ಇಲ್ಲ. ಇದುವರಿಗೂ ಇರಸಾಲು ಮಾಡದೆ ಇಟ್ಟುಕೊಂಡು ಇರಬಹುದು.

2. ಟರ್ನಹಾಲು ಉತ್ಪತ್ತಿ ವಗೈರೆ ಲೆಖ್ಖಗಳನ್ನು ಮಾತ್ರಾ ಹಾಗೆ ಬ್ಯಾರೆ ಇಡತಕ್ಕದ್ದು ಉತ್ತಮ.

3. ಮೊಹತರ್ಫಾ ವಸೂಲಾತಿ ಹೋದವರುಷಕ್ಕಿಂತ ಈ ವರುಷ ಬಹಳ ಕಮ್ಮಿಯಾಗಿರುತ್ತೆ ಸಾಲು ಅಖ್ಯೆರು ಆಗುತ್ತಾ ಬರುತ್ತಾದ್ದರಿಂದ ವಸೂಲಾತಿಗೆ ಕ್ರಮವಾದ ಏರ್ಪಾಡು ಮಾಡುವದು ಅವಶ್ಯಕವಾಗಿರುತ್ತೆ.

4. ಹಿಂದೆ ವಸೂಲಾತಿ ವಗೈರೆ ವಿಷಯದಲ್ಲಿ ಸಜಸ್ಟು ಮಾಡಿದ ಮೇರೆ ಇದುವರಿಗೂ ಯಾವ ಏರ್ಪಾಡು ಮಾಡಿದ ಹಾಗೆ ಕಂಡುಬಂದಿಲ್ಲಾ.

(ಸೈ॥ಡ್) ಎಸ್. ಶ್ರೀಕಂಠೈಯ್ಯಾ.
(ಸೈ॥ಡ್) ಕಿಷ್ಣಪ್ಪಾಜಿ ಅರಸ.

ಶಿವಮೊಗ್ಗ ಡಿಸ್ಟ್ರಿಕ್ಟು.
ಇಸ್ತಿಹಾರ.

ತಾರೀಖು 7ನೆ ಮೇ 1909.

1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1910ನೆ ಇಸವಿ ಜೂನ್ ಆಖ್ಯೆರ ವರಿಗೆ ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಟೋಲ್ ಗೇಟಿನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ತೀರ್ಥಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿಜೂನ್ ಮಾಹೆ 10ನೆ ತಾರೀಖಿನಲ್ಲಿ ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದಲೂ, ಮತ್ತು ನಗರದ ತಾಲ್ಲೂಕು ಹೈದರಗರ್‌ಘಾಟ್, ಲಕ್ಷ್ಮೀಪುರ, ಟೋಲ್ ಗೇಟುಗಳಲ್ಲಿ ಸುಂಕವನ್ನು ವಸೂಲ್ಮಾಡುವ ಬಾಬನ್ನು ಕಳಸರುಕಟ್ಟೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ 8ನೆ ತಾರೀಖಿನಲ್ಲಿ ಸಾಗರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದಲೂ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಈ ಬಾಬನ್ನು ಹರಾಜಿನಲ್ಲಿ ಪಡೆಯುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ದರದಂತೆ ಸುಂಕವನ್ನು ವಸೂಲ್ಮಾಡಬಹುದು; ಪರಂತು ಅದರಲ್ಲಿ ನಮೂದಾಗುವದಕ್ಕಿಂತ ಜಾಸ್ತಿ ದರವನ್ನು ಎಂದೂ ವಸೂಲ್ ಮಾಡಕೂಡದು. ಕಂಟ್ರಾಕ್ಟುದಾರನು ಲೇಟ್ ಚೀಫ್ ಕಮಿಷನರವರ 1876ನೆ ಇಸವಿ ನವಂಬರು 4ನೆ ಮುರ್ಕ್ಕಂ ನಂಬರು 274ನೆ ಇಸ್ತಿಹಾರಿನಲ್ಲಿ ಪ್ರಕಟವಾಗಿರುವ ರೂಲ್ಸುಗಳಿಗೆ ಅನುಸರಿಸಿ ನಡದುಕೊಳ್ಳತಕ್ಕದ್ದು. ಸರಕಾರಿ ಸೊತ್ತು ಮತ್ತು ಸರಕಾರಿ ಕೆಲಸದಮೇಲೆ ಪ್ರಯಾಣ ಮಾಡುವ ಸರಕಾರಿ ನೌಕರರೂ ಸುಂಕದಿಂದ ವಿನಾಯಿಸಲ್ಪಟ್ಟಿರುತ್ತಾರೆ.

3. ಕಡ ಸವಾಲನ್ನಾಗಲೀ ಯಾ ಇತರ ಸವಾಲನ್ನಾಗಲೀ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

4. ದರಖಾಸ್ತು ಅಂಗೀಕರಿಸಲ್ಪಟ್ಟವರಿಂದ ಕಂಟ್ರಾಕ್ಟು ಮೊಬಲಗು ಎಂಟು ಸಮವಾದ ಖಿಸ್ತುಗಳಾಗಿ ವಸೂಲ್ಮಾಡಲ್ಪಡುವದು. ಈ ಪೈಕಿ ಎರಡು ಖಿಸ್ತುಗಳ ಮೊಬಲಗನ್ನು ಹರಾಜು ಮುಗಿದಕೂಡಲೇ ಡಿಪಾಜಿಟ್ಟಾಗಿ ವಸೂಲು ಕೊಡತಕ್ಕದ್ದು. ಈ ಡಿಪಾಜಿಟ್ ಮೊಬಲಗು ಆಖ್ಯೆರು ಎರಡು ಖಿಸ್ತುಗಳ ಬಗ್ಯೆ ಜಮಾ ಮಾಡಲ್ಪಡುತ್ತೆ. ಬಾಕಿ ಆರು ಖಿಸ್ತುಗಳನ್ನು 1909ನೆ ಡಿಸೆಂಬರ್ 20ರ ಲಾಗಾಯಿತು ಪ್ರತಿ ಮಾಹೆಯಲ್ಲೂ ಆಯಾ ಮಾಹೆ ತಾರೀಖು 20ರ ಒಳಗಾಗಿ ತಪ್ಪದೆ ವಸೂಲ್ ಕೊಡತಕ್ಕದ್ದು. ಮಾಹೆಯಾನ ಖಿಸ್ತುಗಳನ್ನು ಕ್ರಮವಾಗಿ ಪಾವತಿ ಮಾಡುತ್ತಾಬರುವ ಬಗ್ಯೆ ಕಂಟ್ರಾಕ್ಟುದಾರನು ಸರಿಯಾದ ಜಾಮೀನು ಕೊಡತಕ್ಕದ್ದು. ಮತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು ಮೂರು ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರದುಕೊಡಬೇಕು.

5. ಹರಾಜು ಮುಗಿದಕೂಡಲೇ ಡಿಪಾಜಿಟ್ ಮೊಬಲಗು ವಸೂಲ್ ಕೊಡದೆಯೂ, ಜಾಮೀನ್ ಕೊಡದೆಯೂ ಇದ್ದರೆ ಅಂಗೀಕರಿಸಲ್ಪಟ್ಟ ಸವಾಲ್ದಾರನನ್ನು ನಷ್ಟಕ್ಕೆ ಗುರಿಪಡಿಸಿ, ಕಂಟ್ರಾಕ್ಟು ದುಸರಾ ಹರಾಜು ಮಾಡಲ್ಪಡುವದು. ಖಿಸ್ತು ಸಕಾಲಕ್ಕೆ ಪಾವತಿಮಾಡುವದರಲ್ಲಿ ತಪ್ಪಿದರೆ ಮಾಹೆಯಾನಾ ರೂಪಾಯಿ ಒಂದರ ಒಂದು ಪೈ ಯಂತೆ ಪಾವತಿ ತಾರೀಖು ವರೆಗೆ ಒಡ್ಡಿಯು ವಸೂಲ್ಮಾಡಲ್ಪಡುವದು. ಅಲ್ಲದೆ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರವಾಗಿ ಕಂಟ್ರಾಕ್ಟು ಎರಡನೆ ಹರಾಜಿಗೆ ಗುರಿಮಾಡಲ್ಪಟ್ಟು ಎರಡನೇ ಹರಾಜಿನಲ್ಲಿ ಕಮ್ಮಿಯಾಗುವ ಮೊಬಲಗನ್ನು ಕಂಟ್ರಾಕ್ಟುದಾರನಿಂದಾಗಲೀ ಅಥವಾ ಅವನ ಜಾಮೀನುದಾರನಿಂದಾಗಲೀ ವಸೂಲ್ಮಾಡಲ್ಪಡುವದು.

6. ಕಂಟ್ರಾಕ್ಟರಿಂದ ಅಥವಾ ಅವನ ಜಾಮೀನುದಾರನಿಂದ ಬರಬೇಕಾಗಿರುವ ಬಾಕೀ ಮೊಬಲಗು ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆಗಳಿಗೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಮೇಲೆ 4ನೆ ಮತ್ತು 5ನೆ ಪ್ಯಾರಾಗಳಲ್ಲಿ ಹೇಳಿರುವ ಷರತ್ತುಗಳಿಗೆ ಬಳಪಟ್ಟು ಕಂಟ್ರಾಕ್ಟುದಾರನು ಹರಾಜು ಮೊಬಲಗಿಗೆ ಸೇರಿಸಿ ಟ್ರೆಜರೀಗೆ ಪಾವತಿಯಾದ ಕಂಟ್ರಾಕ್ಟು ಮೊಬಲಗು ಮೇಲೆ ರೂಪಾಯಿ ಒಂದರ ಒಂದಾಣೆಯ ಮೇರೆ ಲೋಕಲ್ ಸೆಸ್ಸು ಕೊಡಲು ಬದ್ಧನಾಗಿರುತ್ತಾನೆ.

8. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳ ತನಿಖೆಗೆ ಒಳಗಾಗಿರತಕ್ಕದ್ದು.

9. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ಟೋಲ್ ಗೇಟ್ ಬಳಿ ಬಹಿರಂಗವಾದ ಸ್ಥಳದಲ್ಲಿ ತಗಲುಹಾಕತಕ್ಕದ್ದು.

10. ಗವರ್ನಮೆಂಟಿನಿಂದ ನೇಮಿಸಲ್ಪಟ್ಟ ಟೋಲ್ ಗೇಟ್ ಬಳಿಯಲ್ಲಿ ಅಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

11. ಕಂಟ್ರಾಕ್ಟುದಾರನು ಘಾಟಿ ಸುಂಕದ ಮನೆಯನ್ನು ಮತ್ತು ಗೇಟನ್ನು ಉಪಯೋಗಿಸಿಕೊಳ್ಳಬಹುದು. ಆತನು ಅವುಗಳನ್ನು ಸರಿಯಾದ ರಿಪೇರಿಯಲ್ಲಿ ಇಟ್ಟುಕೊಂಡಿರಬೇಕು.

ದರ ತೋರಿಸುವ ಷೆಡ್ಯೂಲು.

		ರೂ.	ಆ.	ಪೈ.
1.	ನಾಲ್ಕು ಚಕ್ರದ ಗಾಡಿ 1ಕ್ಕೆ	2	0	0
2.	ಎರಡು ಚಕ್ರದ ಗಾಡಿ 1ಕ್ಕೆ	1	0	0
3.	ಯಕ 1ಕ್ಕೆ	0	4	0
4.	ಬಿಲ್ಲು ಇರುವ ಹ್ಯಾಕ್ನಿ ಗಾಡಿ 1ಕ್ಕೆ	0	2	0
5.	ಬಿಲ್ಲು ಇಲ್ಲದೆ ಇರುವ ಎತ್ತುಗಳಿಂದ, ಕೋಣಗಳಿಂದ ಅಥವಾ ಕುದುರೆಗಳಿಂದ ಯಳೆಯಲ್ಪಡುವ ಗಾಡಿ ಅಥವಾ ಹ್ಯಾಕ್ನಿ 1ಕ್ಕೆ.	1	8	0
6.	ಡಿಟೋ ಡಿಟೋ ಖಾಲಿಯಾಗಿದ್ದರೆ	0	8	0
7.	ಡಿಟೋ ಡಿಟೋ ಆರು ಎತ್ತುಗಳು ವಗ್ಯೆರೆಯಿಂದ ಯಳೆಯಲ್ಪಡುವ ಗಾಡಿ ಭರ್ತಿ ಇದ್ದರೆ	0	12	0
8.	ಡಿಟೋ ಡಿಟೋ ಖಾಲಿ ಇದ್ದರೆ	0	6	0
9.	ಡಿಟೋ ನಾಲ್ಕು ಎತ್ತುಗಳಿಂದ ಭರ್ತಿ ಇದ್ದರೆ	0	8	0
10.	ಡಿಟೋ ಖಾಲೀ ಇದ್ದರೆ	0	4	0
11.	ಡಿಟೋ ಎರಡು ಎತ್ತುಗಳಿಂದ ಯಳೆಯಲ್ಪಡುವ ಭರ್ತಿ ಇದ್ದರೆ ಗಾಡಿ 1ಕ್ಕೆ ...	0	4	0
12.	ಡಿಟೋ ಖಾಲಿ ಇದ್ದರೆ ಗಾಡಿ 1ಕ್ಕೆ ...	0	2	0
13.	ಡಿಟೋ ಒಂದು ಎತ್ತಿನಿಂದ ಯಳೆಯಲ್ಪಡುವ ಭರ್ತಿ ಇದ್ದರೆ ...	0	1	0
14.	ಡಿಟೋ ಖಾಲಿ ಇದ್ದರೆ ...	0	0	3
15.	ಆನೆ 1ಕ್ಕೆ	1	8	0
16.	ಒಂಟೆ 1ಕ್ಕೆ ಹೊರೆ ಇದ್ದರೆ	0	8	0
17.	ಡಿಟೋ ಹೊರೆ ಇಲ್ಲದೆ ಇದ್ದರೆ	0	4	0
18.	ಕುದುರೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡುತ್ತಿದ್ದರೆ	0	1	6
19.	ಡಿಟೋ ಹೊರೆ ಇಲ್ಲದೆ ಇದ್ದರೆ ಅಥವಾ ಹಿಡಿದುಕೊಂಡುಹೋಗುತ್ತಾ ಇದ್ದರೆ...	0	0	9
20.	ತಟ್ಟು ಅಥವಾ ಹೇಸರಕತ್ತೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡುತ್ತಾ ಇದ್ದರೆ.	0	0	9
21.	ತಟ್ಟು ಅಥವಾ ಹೇಸರಕತ್ತೆ 1ಕ್ಕೆ ಹೊರೆ ಇಲ್ಲದೆ ಇದ್ದರೆ ಅಥವಾ ಹಿಡಿದುಕೊಂಡು ಹೋಗುತ್ತಾ ಇದ್ದರೆ	0	0	6
22.	ಕತ್ತೆ 1ಕ್ಕೆ ಹೊರೆ ಇದ್ದರೆ ಅಥವಾ ಸವಾರಿ ಮಾಡಲ್ಪಡುತ್ತಾ ಇದ್ದರೆ ...	0	0	6
23.	ಡಿಟೋ ಹೊರೆ ಇಲ್ಲದೆ ಇದ್ದರೆ ಅಥವಾ ನಡಿಸಿಕೊಂಡು ಹೋಗುತ್ತಾ ಇದ್ದರೆ ...	0	0	1
24.	ಕುರಿ, ಮೇಕೆ, ಅಥವಾ ಹಂದಿ 1ಕ್ಕೆ	0	0	1
25.	ಎಂಟು ಜನರಿಂದ ಹೊರಲ್ಪಟ್ಟ ಪಲ್ಲಕ್ಕಿ, ಡೋಲಿ ಅಥವಾ ಟಾಂಜಾ ...	1	0	0
26.	ಆರು ಜನರಿಂದ ಡಿಟೋ ಡಿಟೋ ...	0	12	0
27.	ನಾಲ್ಕು ಜನರಿಂದ ಡಿಟೋ ಡಿಟೋ ...	0	8	0
28.	ಎರಡು ಜನರಿಂದ ಡಿಟೋ ಡಿಟೋ ...	0	4	0

ನೋಟ್.—ಕಾಲುನಡೆಯಾಗಿ ಹೋಗುವ ಪ್ರಯಾಣೀಕರಮೇಲೆ ಸುಂಕ ವಸೂಲ್ಮಾಡಕೂಡದು.

ಎ. ಮೃತ್ಯುಂಜಯ ಐಯರ್, ಫಾರ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸರ್ 1909ನೆ ಮೇ ತಿಂಗಳು 14ನೆ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಸರ್ 1909ನೆ ಇಸವಿ ಜುಲೈ ಗುರ್ರ್ಲಾಗಾಯಿತು 1910ನೆ ಜೂನ್ ಆಖ್ಯೆರು ವರಿಗೆ ಹರಿಹರದ ಸೇತುವೆಮೇಲೆ ಟೋಲ್ ವಸೂಲ್ಮಾಡತಕ್ಕ ಹಕ್ಕನ್ನು ಚಾಲ್ತಿಸಾಲ್ ಜೂನ್ ತಿಂಗಳು 25ನೆ ತಾರೀಖು ಶುಕ್ರವಾರದ ದಿವಸ ಹರಿಹರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರ ಕಛೇರಿಯಲ್ಲಿ ಆ ದಿನ ಮಧ್ಯಾಹ್ನ ಮೂರು ಘಂಟೆಯಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಯವರು ಹರಾಜು ಮಾಡಿಸುತ್ತಾರೆ.

2. ಚಿಡ ಸವಾಲನ್ನು ಗವರ್ನಮೆಂಟ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಯವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲೀ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡೆಪ್ಯುಟಿ ಕಮಿಷನರ್ ಯವರ ಯಕ್ತ್ಯಾರಿಯಲ್ಲಿ ಇರುತ್ತೆ.

3. ಡೆಪ್ಯುಟಿ ಕಮಿಷನರ್ ಯವರು ಯಾರ ಸವಾಲುಗಳು ಅಂಗೀಕರಿಸುತ್ತಾರೋ ಅಂಥವರು ರೂಪಾಯಿಗೆ ಒಂದು ಆಣೆ ಯಂತೆ ಲೋಕಲ್ ಸೆಸ್ ಸಹಿತವಾಗಿ ಸವಾಲು ಮೊಬಲಗು ಪೈಕಿ ಕಾಲುಭಾಗದ ಮೊಬಲಗು ತಕ್ಷಣ ಡಿಪಾಜಿಟ್ ಇಡಬೇಕು. ಗವರ್ನಮೆಂಟಿನಿಂದ ಮಂಜೂರಾದ ಕೂಡಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹಿತವಾಗಿ 9 ಸಮವಾದ ಖಿಸ್ತುಗಳಲ್ಲಿ ದಾವಣಗೆರೆ ತಾಲ್ಲೂಕು ಟ್ರೆಜರಿಗೆ ಪಾವತಿ ಮಾಡಬೇಕು. ಒಂದನೆ ಖಿಸ್ತು ಮೊಬಲಗು 1909ನೆ ಆಗಸ್ಟ್ ತಿಂಗಳು 10ನೆ ತಾರೀಖಿಗೆ ಷುರು ಆಗುತ್ತೆ. ಬಾಕಿ ಖಿಸ್ತುಗಳು ಆಯಾಯ ತಿಂಗಳ 10ನೆ ತಾರೀಖಿನಲ್ಲಿ ಪಾವತಿಯಾಗತಕ್ಕದ್ದು. ಡಿಪಾಜಿಟ್ ಮೊಬಲಗು ಹತ್ತು, ಹನ್ನೊಂದು, ಹನ್ನೆರಡನೇ ಖಿಸ್ತುಗಳಿಗೆ ಉಪಯೋಗಿಸಿಕೊಳ್ಳಲ್ಪಡುವದು. ಹರಾಜುದಾರನು ಖಿಸ್ತು ಮೊಬಲಗು ಸಕಾಲಕ್ಕೆ ಪಾವತಿ ಮಾಡುವ ಬಗ್ಯೆ ಇಬ್ಬರು ಜಾಮೀನುದಾರರನ್ನು ಕೊಡಬೇಕು. ಮತ್ತು ಹರಾಜು ಮಂಜೂರಾದ್ದು ತಿಳಿಸಿದ ಲಾಗಾಯಿತು ಮೂರು ದಿವಸಗಳಲ್ಲಿ ಸರಿಯಾದ ಸ್ಟಾಂಪು ಕಾಗದದಮೇಲೆ ಒಂದು ಕರಾರು ಬರದುಕೊಡಬೇಕು. ಈ ಷರತ್ತುಗಳಿಗೆ ತಪ್ಪಿದ ಪಕ್ಷದಲ್ಲಿ ಡಿಪಾಜಿಟ್ ಮೊಬಲಗಿನ ಮೇಲಿನ ಹಕ್ಕು ಕಂಟ್ರಾಕ್ಟುದಾರನಿಗೆ ತಪ್ಪಿಹೋಗುವದಲ್ಲದೆ ಕಂಟ್ರಾಕ್ಟು ದುಸರೆ ಹರಾಜು ಮಾಡಿಸಿ ಅದರಿಂದ ಗವರ್ನಮೆಂಟಿಗೆ ಉಂಟಾಗಬಹುದಾದ ಲುಕ್ಸಾನು ಕಂಟ್ರಾಕ್ಟುದಾರನ ಅಥವಾ ಜಾಮೀನ್ದಾರರ ಸ್ವತ್ತು ಜಫ್ತಿ ಹರಾಜು ಮೂಲಕ ವಸೂಲ್ಮಾಡಲ್ಪಡುತ್ತೆ.

4. ವಾಯಿದೆ ತಾರೀಖಿನೊಳಗೆ ಖಿಸ್ತು ಮೊಬಲಗು ಪಾವತಿಯಾಗದೆ ನಿಂತರೆ ವರ್ಷ 1ಕ್ಕೆ ಶೇಕಡಾ ಆರು ರೂಪಾಯಿ ಪ್ರಕಾರ ಬಡ್ಡಿಯೂ ವಸೂಲ್ಮಾಡಲ್ಪಡುತ್ತೆ.

5. ಹರಾಜುದಾರನು ತನ್ನ ಕಂಟ್ರಾಕ್ಟು ಹಣದಮೇಲೆ ರೂಪಾಯಿ 1ಕ್ಕೆ 1 ಆಣೆ ಪ್ರಕಾರ ಲೋಕಲ್ ಸೆಸ್ ಕೊಡಬೇಕು.

6. ಕಂಟ್ರಾಕ್ಟುದಾರನಿಂದಲೇ ಆಗಲೀ ಅಥವಾ ಅವನ ಜಾಮೀನ್ದಾರರಿಂದಲೇ ಆಗಲೀ ಬರಬೇಕಾದ ಬಾಕಿಯನ್ನು ಜಮೀನ್ ಕಂದಾಯದ ಬಾಕಿ ವಸೂಲ್ಮಾಡುವದಕ್ಕೆ ಇರತಕ್ಕ ರೂಲ್ಸು ಪ್ರಕಾರ ವಸೂಲ್ಮಾಡಲ್ಪಡುವದು.

7. ಕಂಟ್ರಾಕ್ಟುದಾರನು ಪ್ರತಿ ದಿನವೂ ವಸೂಲ್ಮಾಡುವ ಮೊಬಲಗಿಗೆ ಒಂದು ಲೆಖ್ಖದ ಬುಕ್ಕು ಇಟ್ಟಿರಬೇಕು: ಇದು ಡೆಪ್ಯುಟಿ ಕಮಿಷನರ್ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖಿ ಮಾಡಲ್ಪಡುವದಕ್ಕೆ ಖುಲ್ಲಾ ಇರಬೇಕು.

8. ಕಂಟ್ರಾಕ್ಟುದಾರನು ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ಟೋಲ್ ಶಿವಾಯಿ ಮತ್ತ್ಯಾವದನ್ನೂ ವಸೂಲ್ ಮಾಡಕೂಡದು. ಅದರಲ್ಲಿ ನಮೂದಿಸುವ ದರದಂತೆಯೇ ವಸೂಲು ಮಾಡಬೇಕು. ಇದಕ್ಕೆ ವಿರೋಧವಾಗಿ ನಡೆದರೆ ಕ್ರಿಮಿನಲ್ ಪ್ರಾಸಿಕ್ಯೂಷನ್ಗೆ ಗುರಿಯಾಗುವದಲ್ಲದೆ ಕಂಟ್ರಾಕ್ಟು ಸಹ ರದ್ದು ಮಾಡಲ್ಪಡುವದು.

9. ಸೈನ್ಯ, ಮಿಲಿಟರಿ ಸಾಮಾನು, ಡ್ಯೂಟಿಮೇಲೆ ಇರುವ ಪೋಲೀಸು ಅಥವಾ ಇತರ ಸರ್ಕಾರದ ಆಫಿಸರು ಮತ್ತು ಸರ್ಕಾರಿ ಸಾಮಾನೆಂದು ಆ ಇಲಾಖೆಯ ಮುಖ್ಯಾಧಿಕಾರಿಯಿಂದ ಪಡೆದ ಸರ್ಟಿಫಿಕೇಟ್ ನೊಡನೆ ಇರುವ ಸರ್ಕಾರಿ ಸಾಮಾನು ಈ ಸೇತುವೆಮೇಲೆ ಹೋದರೆ ಕಂಟ್ರಾಕ್ಟುದಾರನು ಟೋಲ್ ವಸೂಲು ಮಾಡಕೂಡದು.

10. ವಸೂಲು ಮಾಡಲು ಅಧಿಕಾರ ಕೊಟ್ಟಿರುವ ಟೋಲಿನ ಒಂದು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡಭಾಷೆಯ ಸ್ಫುಟವಾದ ಅಕ್ಷರಗಳಲ್ಲಿ ಬರೆದು ಟೋಲ್ ಗೇಟ್ ಹತ್ತರ ಎಲ್ಲರಿಗೂ ಕಾಣುವಂಥ ಸ್ಥಳದಲ್ಲಿ ಹಚ್ಚಬೇಕು.

11. ಕಂಟ್ರಾಕ್ಟುದಾರನು ಟೋಲ್ ಗೇಟ್ ಹತ್ತರ ಟೋಲ್ ವಸೂಲ್ಮಾಡಬೇಕೇ ಹೊರ್ತು ಇತರ ಸ್ಥಳದಲ್ಲಿ ವಸೂಲು ಮಾಡಕೂಡದು.

12. ಇನ್ನೇನಾದರೂ ತಪಶೀಲು ಬೇಕಾದರೆ ಡೆಪ್ಯುಟಿ ಕಮಿಷನರವರಿಗೆ ಬರೆದುಕೊಂಡು ತಿಳಿದುಕೊಳ್ಳಬಹುದು.

ಹರಿಹರದ ಸೇತುವೆಮೇಲೆ ವಸೂಲಾಗತಕ್ಕ ಟೋಲಿನ ಷೆಡ್ಯೂಲ್.

		ರೂ.	ಆ.	ಪೈ.
(1)	ನಾಲ್ಕು ಚಕ್ರದ ಗಾಡಿ 1ಕ್ಕೆ ಭರ್ತಿ ಅಥವಾ ಖಾಲಿ	0	8	0
(2)	ಆನೆ 1ಕ್ಕೆ ಸಾಮಾನು ಹೇರಿದ್ದು ಅಥವಾ ಹೇರದೆ ಇರುವದು	1	0	0
(3)	ಎರಡು ಚಕ್ರದ ಗಾಡಿ 1ಕ್ಕೆ ಅಥವಾ ಎತ್ತಿನ ಗಾಡಿ ಸಾಮಾನು ಹಾಕಿದ್ದು ಅಥವಾ ಖಾಲಿ	0	4	0
(4)	ಒಂಟೆ 1ಕ್ಕೆ ಸಾಮಾನು ಹೇರಿದ್ದು, ಸವಾರಿ, ಸಾಮಾನು ಹೇರದೆ ಇದ್ದದ್ದು, ನಡಿಸಿ ಕೊಂಡುಬಂದದ್ದು	0	8	0
(5)	ಕುದುರೆ 1ಕ್ಕೆ ಸಾಮಾನು ಹೇರಿದ್ದು, ಹೇರದೆ ಇದ್ದದ್ದು, ನಡೆಸಿಕೊಂಡುಬಂದದ್ದು ...	0	1	0
(6)	ಎತ್ತು ಅಥವಾ ಕೋಣ ಸಾಮಾನು ಹೇರಿದ್ದು ಅಥವಾ ಸವಾರಿ ಮಾಡಿದ್ದು ...	0	0	6
(7)	ಎತ್ತು ಅಥವಾ ಕೋಣ 1ಕ್ಕೆ ಸಾಮಾನು ಹೇರದೆ ಇರುವದು ಅಥವಾ ನಡೆಸಿದ್ದು ...	0	0	3
(8)	ಕತ್ತೆ 1ಕ್ಕೆ ಸಾಮಾನು ಹೇರಿದ್ದು ಅಥವಾ ಸವಾರಿ ಮಾಡಿದ್ದು	0	0	6
(9)	ಹಸ ಮತ್ತು ಎಮ್ಮೆ 1ಕ್ಕೆ	0	0	3
(10)	ಕುರಿ ಮತ್ತು ಮೇಕೆ 1ಕ್ಕೆ	0	0	1

ಎಂ. ಚಂಗಯ್ಯ ಶೆಟ್ಟಿ, ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಿಟಿ ಮ್ಯೂನಿಸಿಪಲ್ ಆಫೀಸಿನಿಂದ.

ತಾರೀಖು 17ನೇ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನ್ಮೆಂಟಿನಿಂದ ಸಾದರಾದ 29—6—1901ನೇ ಮ ಕರ್ನಂ 17691-L. B. (P) 633ನೇ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಮಲ್ಲೇಶ್ವರ ಎಕ್ಸ್‌ಟೆನ್ಷನ್‌ಗೆ ಸೇರಿದ ಕಟ್ಟಡಕಟ್ಟತಕ್ಕ ಸೈಟುಗಳನ್ನ 1909ನೇ ಇಸವಿ ಮೇ ತಾರೀಖು 26ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಖಡ್ ಸವಾಲು ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಖಡ್ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಖಡ್ ಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಮಲ್ಲೇಶ್ವರ ಎಕ್ಸ್‌ಟೆನ್ಷನ್.

ಹಿಂದೂ ಬ್ಲಾಕ್	304	
,,	305	
,,	316	100 × 30
,,	317	
,,	437	
,,	438	
,,	514	70 × 30
ಮಹಮ್ಮದೀಯರ ಬ್ಲಾಕ್	141	
,,	142	
,,	143	
,,	144	100 × 30
,,	157	
,,	159	
,,	160	
ಬಂಗ್ಲೆ ಸೈಟುಗಳು	109	202 × 236
,,	110	
,,	111	201 × 235
,,	112	
,,	115	120 × 327
,,	116	
,,	117	120 × 326
,,	118	
,,	139	215 × 227

1. ಹರಾಜು ಖೈದಾದ ಕೂಡ್ಲೆ ಖಡ್ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಖಡ್ ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಖಡ್‌ಸವಾಲ್ ಮೊಬಲಗ್ನ ಭರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಖಡ್‌ಸವಾಲ್‌ದಾರ ಹಾಜರ್‌ಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಖಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನ ಖಡ್‌ಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಷುರೂ ಮಾಡತಕ್ಕದ್ದು ; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಶೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೇನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿದ ಹೊರತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಶೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹರ ದ್ರವ್ಯಕ್ಕು ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರ್‍ರಾಗುವದಿಲ್ಲ.

ಎ. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8

ಚಷ್ ಮಾಹೇ ಯಾ ಕ್ವಾರ್ಟರಿಗೆ ದಾಮಾಷಾಯಿ ಪ್ರಕಾರ ದರಗಳು

	ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುಕ್ಕಾಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನ ಇಸವಿ ಜೂನ್ 21ನೆ ಮುಕ್ಕಾಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮುಕ್ಕಾಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸಗಳು:—

		ರೂ.	ಆ.
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	..	2	0
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸಗಳಿಗೆ:—

		ರೂ.	ಆ.
ಮೊದಲನೇ ಸಲಕ್ಕೆ	.. .. ..	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	.. ..	2	5

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸಗಳಿಗೆ:—

			ರೂ.	ಆ.
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

			ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ ..	0	8
ಎರಡನೇ ದಫಾ	ಡಿಟೋ	ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ			0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜ್ ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮುಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಸಿ. ಹೆಚ್. ಪಿಟ್ಸ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಪಾಯಿಷ್ ಆದ್ದು. [ನಂ. 21.

ಬೆಂಗಳೂರು, ಗುರುವಾರ, ಮೇ ತಾ|| 27, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರಿಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು,
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3, ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 10ನೆ ಮೇ 1909, ಮೊಕ್ಕಾಂ ಚನ್ನಪಟ್ಣ.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಬೆಂಗಳೂರು ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕುಗಳಲ್ಲಿರುವ ಸ್ಟೇಟ್ ಫಾರೆಸ್ಟ್ (ಕತರಾವಣೆ ಆದ ಕೂಪುಗಳು ವಿನಹ) ಮತ್ತು ಕಮುಷಿರಿಯಟ್ ಕಾವಲುಗಳು ಸೇರಿಸಿಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನುಗಳಲ್ಲಿಯೂ (ಪ್ಲಾಂಟೇಷನುಗಳ ವಿನಹ) ಸಹಾ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1909ನೆ ಜುಲೈ 1ನೆ ತಾರೀಖು ಲಾಗಾಯತು 1911ನೆ ಇಸವಿ ಜೂನ್ ಆಖೈರ್ ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1909ನೆ ಇಸವಿ ಜೂನ್ ತಾರೀಖು 7ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರವರೊಂದಿಗೆ ಆಗಲಿ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ತಾಲ್ಲೂಕವಾರಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುತ್ತಾರೆ.

1—7—1909ರ ಲಾಗಾಯತು 30—6—1911ರ ವರಿಗೆ.

(1)	ಬೆಂಗಳೂರು	(6)	ಕೋಲಾರ್ ಸ್ಪೇಟೆ ಸ॥ ತಾ॥
(2)	ದೇವನಹಳ್ಳಿ	(7)	ಕಾನಕಾನಹಳ್ಳಿ
(3)	ಚನ್ನಪಟ್ಣ	(8)	ಮಾಗಡಿ
(4)	ಹೊಸಕೋಟೆ	(9)	ಆನೆಕಲ್
(5)	ನೆಲಮಂಗಲ	(10)	ದೊಡ್ಡಬಳ್ಳಾಪುರ

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜ್ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣೆ ಹಕ್ಕನ್ನು ಚಡದರಖಾಸ್ತುದಾರನಿಗೆ ವಿಲೇವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನ ಡೆಪ್ಯುಟಿ ಕಮಿಷನರವರು ತಾವೆ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡದ ಏಜಂಟ್ ಯಾ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತುದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ಠೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಮೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಚಡ ದರಖಾಸ್ತುದಾರು ಹರಾಜು ಮಂಜೂರಾದ ಸಂಗತಿ ತಮಗೆ ತಿಳಿಸಿದ ಐದು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿಸಿ ಒಟ್ಟು ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫಿಸರರಿಂದ ಸದರೀ ಬಾಬ್ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳ ಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಅಲ್ಲದೆ 100 ರೂಪಾಯಿಗಳನ್ನು ಠೇವಣಿ ಇಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಏಳು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದುಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಎಂಟು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1909ನೆ ಇಸವಿ ಆಗಸ್ಟ್ 1ನೆ ತಾರೀಖು, 2ನೆ ಖಿಸ್ತು 1909ನೆ ಇಸವಿ ಅಕ್ಟೋಬರ್ 1ನೆ ತಾರೀಖು, 3ನೆ ಖಿಸ್ತು 1910ನೆ ಇಸವಿ ಜನವರಿ 2ನೆ ತಾರೀಖು, 4ನೆ ಖಿಸ್ತು 1910ನೆ ಇಸವಿ ಏಪ್ರಿಲ್ 1ನೆ ತಾರೀಖು, 5ನೆ ಖಿಸ್ತು 1910ನೆ ಇಸವಿ ಜುಲೈ 1ನೆ ತಾರೀಖು, 6ನೆ ಖಿಸ್ತು 1910ನೆ ಇಸವಿ ಅಕ್ಟೋಬರ್ 1ನೆ ತಾರೀಖು, 7ನೆ ಖಿಸ್ತು 1911ನೆ ಇಸವಿ ಜನವರಿ 2ನೆ ತಾರೀಖು, 8ನೆ ಖಿಸ್ತು 1911ನೆ ಏಪ್ರಿಲ್ 1ನೆ ತಾರೀಖು, ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆಗಳ ಜಮಾವಣಿ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಒಂದು ವರುಷಕ್ಕೆ ಒಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜಮಾವಣೆ ಬಗ್ಯೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರುಗಳ ಹೆಸರಿನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನ್ ಮಾಡಿ ಇಡುವ ಜಾಗಾಗಳ ಒಂದು ಪಟ್ಟಿಯನ್ನು ಇಜಾರೆದಾರನು ಕೊಡತಕ್ಕದ್ದು.

(4) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಾನೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟಿನಲ್ಲಿ ಚಕ್ಕೆಯನ್ನು ಜಮಾಯಿಸಬೇಕಾದರೆ ಅವುಗಳ ಚಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟ್ ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟುಗಳ ಭಾಗಗಳಲ್ಲಿ ಚಕ್ಕೆ ಜಮಾವಣೆ ಕೆಲಸ ನಡಿಸಕೂಡದು.

(7) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

ನೋಟಿಫಿಕೇಷನ್.

ತಾರೀಖು 13ನೆ ಮೇ 1909.

ಸನ್ 1909ನೆ ಇಸವಿ ಮೇ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 393ನೆ ಪೇಜುಗಳಲ್ಲಿ ತುಮಕೂರು ಫಾರೆಸ್ಟು ಡಿಪೋದಲ್ಲಿರುವ ಅಳಲೆಕಾಯನ್ನು ಮತ್ತು ಮದ್ದಗಿರಿ ತಾಲ್ಲೂಕು ಮತ್ತು ಕೊರಟಗೆರೆ ಸಬ್ ತಾಲ್ಲೂಕುಗಳ ಬಾಬತು 1909—1910 ಮತ್ತು 1910—11ನೆ ಇಸವಿಗಳಲ್ಲಿ ತಂಗಡ ಮತ್ತು ಕಕ್ಕೆ ಚಕ್ಕೆ ಜವಾಯಿಸಿಕೊಳ್ಳುವ ಹಕ್ಕನ್ನು ಸಹಾ ಜೂನ್ 8ನೆ ತಾರೀಖಿನಲ್ಲಿ ಹರಾಜು ಮಾಡುವದಾಗಿ ಫಾಯಿಷಾಗಿರುತ್ತೆ.

ಹೆಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್, ತುಮಕೂರು ಡಿಸ್ಟ್ರಿಕ್ಟು.

ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲ್ಲೂಕುನಲ್ಲಿರುವ ಹೆಗ್ಗವಾಡಿ ಬ್ಲಾಕ್ Iನೆ ಜಂಗಲಿಯನ್ನು ಮುನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸನ್ 1909ನೆ ಇಸವಿ ಮೇ ತಾರೀಖು 20ನೆ ಮೈಸೂರು ಗೆಜೆಟ್ಟಿನ 2ನೆ ಭಾಗದ 395, 396ನೆ ಪೇಜಿನಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುತ್ತೆ.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕುನಲ್ಲಿರುವ ಹೆಗ್ಗವಾಡಿ ಬ್ಲಾಕ್ IIನೆ ಜಂಗಲಿಯನ್ನು ಮುನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸನ್ 1909ನೆ ಇಸವಿ ಮೇ ತಾರೀಖು 20ನೆ ಮೈಸೂರು ಗೆಜೆಟ್ 2ನೆ ಭಾಗದ 396, 397ನೆ ಪೇಜಿನಲ್ಲಿ ವಿಶದವಾಗಿ ವಿವರಿಸಲ್ಪಟ್ಟಿರುತ್ತೆ.

ತಾರೀಖು 23ನೆ ಮೇ 1909.

ತುಪ್ಪದಹಳ್ಳಿ ಫಾರೆಸ್ಟ್, ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ನಂಬರು R. 9018—Ft. 172—08—2 ; 29-4-09 ; 6-5-09ನೆ ಇಸವಿಯ ಗೆಜೆಟಿನಲ್ಲಿ ಫಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೋಕು.	ಸುಮಾರು ವಿಸ್ತೀರ್ಣ.	ಜಂಗಲಿ ಹೆಸರು.	ಚಕ್ಕು ಬಂದಿ.
ಚಿತ್ರದುರ್ಗ ಮತ್ತು ಶಿವಮೊಗ್ಗ.	ಹೊಳಲ್ಕೆರೆ ಮತ್ತು ಚನ್ನಗಿರಿ.	8,577 ಎಕರೆಗಳು ಅಥವಾ 13⅓ ಚದರ ಮೈಲಿ.	ತುಪ್ಪದಹಳ್ಳಿ ಜಂಗಲಿ.	ಉತ್ತರಕ್ಕೆ —ಶಿವಮೊಗ್ಗ ಡಿಸ್ಟ್ರಿಕ್ಟು ಚನ್ನಗಿರಿ ತಾಲ್ಲೂಕು ಮರವಂಜಿ ಗ್ರಾಮದ ಸರ್ವೆ 58ನೆ ನಂಬರಿನ ನೈರುತ್ಯ ಮೂಲೆಯಿಂದ ಲೈನ್ ಹೊರಟು ಎಲ್ಲೆ ಶುದ್ಧ ಪೂರ್ವಕ್ಕೆ ಸದರಿ ಸರ್ವೆ ನಂಬರಿನ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ. ತರುವಾಯ ಮಲಿಹಾಳ ಗ್ರಾಮದ ಸರ್ವೆ 44ನೆ ನಂಬರಿನ ಆಗ್ನೇಯ, ನೈರುತ್ಯ ಮತ್ತು ದಕ್ಷಿಣ ಮಾರ್ಗವಾಗಿ ಸರ್ವೆ 42ನೆ ನಂಬರಿನ ವಾಯುವ್ಯ ಮೂಲೆಗೆ ಶೇರುತ್ತದೆ, ನಂತರ ಸರ್ವೆ 42 ಮತ್ತು 41ನೆ ನಂಬರುಗಳ ಪಶ್ಚಿಮ ಮಾರ್ಗವಾಗಿ ಹೊರಟು 41ನೆ ಸರ್ವೆ ನಂಬರಿನ ನೈರುತ್ಯ ಮೂಲೆಯನ್ನು ಮುಟ್ಟುತ್ತದೆ. ನಂತರ ಪೂರ್ವಕ್ಕೆ ಹೊರಟು ಸದರಿ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ, ತರುವಾಯ ಸರ್ವೆ 39 ಮತ್ತು 36ನೆ ನಂಬರಿನ ಪಶ್ಚಿಮ ಮಾರ್ಗವಾಗಿ 36ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ. ನಂ

ತರ ಸದರಿ ಸರ್ವೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ, ನಂತರ ಸದರಿ 35ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಸರ್ವೆ 32ನೆ ನಂಬರಿನ ವಾಯುವ್ಯ ಮೂಲೆಯಿಂದ ಸುಮಾರು 50 ಗಜಗಳ ದೂರದಲ್ಲಿ ಅದರ ಪಶ್ಚಿಮ ದಿಕ್ಕಿನಲ್ಲಿ ಒಂದು ಸ್ಥಳಕ್ಕೆ ಸೇರುತ್ತದೆ. ತರುವಾಯ ಸದರಿ ಸರ್ವೆ ನಂಬರಿನ ಪಶ್ಚಿಮ ಮಾರ್ಗವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ. ನಂತರ ಅದರ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ. ನಂತರ ಉತ್ತರ ದಿಕ್ಕಿಗೆ ಸದರಿ ನಂಬರಿನ ಪೂರ್ವ ಮಾರ್ಗವಾಗಿ ಹೊರಟು ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಪೂರ್ವ ದಿಕ್ಕಿನಲ್ಲಿ ಹೊರಟು ಸರ್ವೆ 33ನೆ ನಂಬರಿನ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ, ತರುವಾಯ ಉತ್ತರಾಭಿಮುಖವಾಗಿ ಸದರೀ ನಂಬರಿನ ಗಡಿಯಲ್ಲಿ ಹೊರಟು ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಸರ್ವೆ 34ನೆ ನಂಬರಿನ ಪೂರ್ವ ಮಾರ್ಗವಾಗಿ ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ. ನಂತರ ಈಶಾನ್ಯ ದಿಕ್ಕಿಗೆ ಸರ್ವೆ 26ನೆ ನಂಬರಿನ ದಕ್ಷಿಣ ಮಾರ್ಗವಾಗಿ ಆಗ್ನೇಯ ಮೂಲೆಯನ್ನು ಶೇರುತ್ತದೆ, ತರುವಾಯ ಪೆನ್ನಸಮುದ್ರ ಗ್ರಾಮದ

ಸರ್ವೆ 38ನೆ ನಂಬರಿನ ಈಶಾನ್ಯ ಮಾರ್ಗವಾಗಿ ಸುಮಾರು 6 ಫರಲಾಂಗು ಹೊರಟು ಸದರಿ ಗ್ರಾಮದ ಸರ್ವೆ 39ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ನಂತರ ಅದೇ ಮಾರ್ಗವಾಗಿ ಸರ್ವೆ 37ನೆ ನಂಬರಿನಲ್ಲಿ ಸುಮಾರು 6 ಫರಲಾಂಗು ದೂರ ಪ್ರವೇಶಿಸಿ ಸರ್ವೆ 30ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ತರುವಾಯ ಉತ್ತರಾಭಿಮುಖವಾಗಿ ಸರ್ವೆ ನಂಬರ್ 36, 35 ಮತ್ತು 34ರ ಪೂರ್ವ ಸರಹದ್ದನ್ನನುಸರಿಸಿ ಆಖೈರ ಸರ್ವೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಪೂರ್ವಕ್ಕೆ ಸರ್ವೆ ನಂಬರ್ 33ರ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ, ಪುನಹ ಅದೇ ಮಾರ್ಗವಾಗಿ ಹೊರಟು ಸರ್ವೆ 37ನೆ ನಂಬರಿನಲ್ಲಿ ಪ್ರವೇಶಿಸಿ ಸುಮಾರು $2\frac{1}{2}$ ಫರಲಾಂಗು ದೂರದಲ್ಲಿ ಮೇಲೆ ನಮೂದಿಸಿರುವ ತಾಲ್ಲೂಕಿನ ಬಿಟ್ಟಕಡೂರು ಗ್ರಾಮದ ಸರ್ವೆ 22ನೆ ನಂಬರಿನ ನೈರುತ್ಯ ಮೂಲೆಯನ್ನು ಮುಟ್ಟುತ್ತದೆ, ತರುವಾಯ ಪೂರ್ವ ಮುಖವಾಗಿ ಸದರಿ ಸರ್ವೆ ನಂಬರಿನ ದಕ್ಷಿಣ ಮಾರ್ಗವಾಗಿ ಅದರ ಆಗ್ನೇಯ ಮೂಲೆಯನ್ನು ಸೇರುತ್ತದೆ.

ಪೂರ್ವಕ್ಕೆ.—ತರುವಾಯ ಸರ್ವೆ 21ನೆ ನಂಬರನ್ನು ಪ್ರವೇಶಿಸಿ ಸುಮಾರು 3 ಫರಲಾಂಗು ದೂರ ಹೋಗಿ ಸರ್ವೆ 17ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ, ನಂತರ ಅದರ ಪಶ್ಚಿಮ ಮಾರ್ಗವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಸರ್ವೆ 21ನೆ ನಂಬರಿನ ಆಗ್ನೇಯ ಮಾರ್ಗವಾಗಿ ಪ್ರವೇಶಿಸಿ ಸುಮಾರು 2 ಫರಲಾಂಗು ದೂರ ಹೋಗಿ ಚಿತ್ರದುರ್ಗದ ಡಿಸ್ಟ್ರಿಕ್ಟು ಹೊಳಲಕೆರೆ ತಾಲ್ಲೂಕು ದೇವರ ಹೊಸಹಳ್ಳಿ ಸರ್ವೆ 36ನೆ ನಂಬರು ವಾಯುವ್ಯ ಮೂಲೆಯನ್ನು ಸೇರುತ್ತದೆ, ತರುವಾಯ ದಕ್ಷಿಣಕ್ಕೆ ಸರ್ವೆ 36 ಮತ್ತು 32ನೆ ನಂಬರುಗಳ ಪಶ್ಚಿಮ ಮಾರ್ಗವಾಗಿ ಆಖೈರು ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಸರ್ವೆ 33ನೆ ನಂಬರಿನಲ್ಲಿ ಆಗ್ನೇಯ ಮಾರ್ಗವಾಗಿ ಸುಮಾರು $2\frac{1}{4}$ ಫರಲಾಂಗು ದೂರ ಹೋಗಿ ಅದೇ ತಾಲ್ಲೂಕು ತುಪ್ಪದಹಳ್ಳಿ ಸರ್ವೆ 107ನೆ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಸರ್ವೆ 107ನೆ ನಂಬರನ್ನು ಪ್ರವೇಶಿಸಿ ಸುಮಾರು 4 ಫರಲಾಂಗು ದೂರ ಹೋಗಿ ಸರ್ವೆ 10ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ಪಶ್ಚಿಮ ದಿಕ್ಕಿಗೆ ಅದರ ಉತ್ತರ ಮಾರ್ಗವಾಗಿ ಅದರ ವಾಯುವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣಕ್ಕೆ ಸದರಿ ನಂಬರಿನ ಪಶ್ಚಿಮ ಮಾರ್ಗವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ನೈರುತ್ಯಾಭಿಮುಖವಾಗಿ ಸರ್ವೆ 108ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ. ತರುವಾಯ ದಕ್ಷಿಣಕ್ಕೆ ಸರ್ವೆ 109ನೆ ನಂಬರಿನ ಪಶ್ಚಿಮ ಮಾರ್ಗವಾಗಿ ಸರ್ವೆ 98ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಪಶ್ಚಿಮ ದಿಕ್ಕಾಗಿ ಸರ್ವೆ 98 ಮತ್ತು 99ನೆ ನಂಬರಿನ ಉತ್ತರಾಭಿಮುಖವಾಗಿ ಆಖೈರಿ ಸರ್ವೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣ ದಿಕ್ಕಾಗಿ ಅದೇ ಸರ್ವೆ ನಂಬರಿನ ಪಶ್ಚಿಮಾಭಿಮುಖವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಪೂರ್ವ ದಿಕ್ಕಾಗಿ ಅದರ ದಕ್ಷಿಣದಲ್ಲಿ ಸರ್ವೆ 100ನೆ ನಂಬರು ವಾಯುವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣ ದಿಕ್ಕಾಗಿ ಸದರಿ ಸರ್ವೆ 100ನೆ ನಂಬರಿನ ಪಶ್ಚಿಮಾಭಿಮುಖವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ಪೂರ್ವ ದಿಕ್ಕಾಗಿ ಅದೇ ಸರ್ವೆ ನಂಬರಿನ ಮತ್ತು ಸರ್ವೆ 101 ಮತ್ತು 103ನೆ ನಂಬರುಗಳ ದಕ್ಷಿಣಾಭಿಮುಖವಾಗಿ ಸರ್ವೆ 88ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣ ದಿಕ್ಕಾಗಿ ಸದರಿ ಸರ್ವೆ ನಂಬರಿನ ಪಶ್ಚಿಮಾಭಿಮುಖವಾಗಿ ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ನೈರುತ್ಯಾಭಿಮುಖವಾಗಿ ಸದರಿ ಗ್ರಾಮದ ಸರ್ವೆ 33ನೆ ನಂಬರನ್ನು ಪ್ರವೇಶಿಸಿ ಸುಮಾರು 5 ಫರಲಾಂಗು ದೂರ ಹೋಗಿ ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಹರಳಹಳ್ಳಿ ಸರ್ವೆ 16ನೆ ನಂಬರಿನ ಉತ್ತರ ದಿಕ್ಕಿನ ಮೂಲೆಯನ್ನು ಸೇರುತ್ತದೆ.

ದಕ್ಷಿಣಕ್ಕೆ.—ನಂತರ ಸರ್ವೆ 15ನೆ ನಂಬರಿಗೆ ಈಶಾನ್ಯಾಭಿಮುಖವಾಗಿರುವ ಹರಳಹಳ್ಳಿ ಗ್ರಾಮದ ಪೂರ್ವ ಎಲ್ಲೆಯನ್ನನುಸರಿಸಿ ಸುಮಾರು $1\frac{1}{2}$ ಫರಲಾಂಗು ದೂರ ಉತ್ತರಾಭಿಮುಖವಾಗಿ ಹೊರಡುತ್ತದೆ, ನಂತರ ಪಶ್ಚಿಮಾಭಿಮುಖವಾಗಿ ಸದರಿ ಹರಲಹಳ್ಳಿ ಗ್ರಾಮದ ಸರ್ವೆ 15ನೆ ನಂಬರಿನ ಉತ್ತರ ದಿಕ್ಕಿನಲ್ಲಿ ಹೋಗಿ ಅದೇ ಸರ್ವೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ದಕ್ಷಿಣಾಭಿಮುಖವಾಗಿ ಸದರಿ ಸರ್ವೆ ನಂಬರಿನ ಪಶ್ಚಿಮ ಕಡೆ ಹೊರಟು ಅದರ ನೈರುತ್ಯ ಮೂಲೆಯನ್ನು ಸೇರುತ್ತದೆ, ನಂತರ ಪಶ್ಚಿಮಾಭಿಮುಖವಾಗಿ ಗೊಂದಿಹೊಸಹಳ್ಳಿ ಗ್ರಾಮದ ಸರ್ವೆ 24ನೆ ನಂಬರಿನಲ್ಲಿ $1\frac{1}{2}$ ಫರಲಾಂಗು ದೂರ ಹೋಗಿ ಸರ್ವೆ 23ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಹೊರಟು ಅದರ ವಾಯುವ್ಯ ಮೂಲೆಯನ್ನು ಸೇರುತ್ತದೆ, ನಂತರ ಆಗ್ನೇಯವಾಗಿ ಸರ್ವೆ 23, 22 ಮತ್ತು 21ನೆ ನಂಬರುಗಳ ಪಶ್ಚಿಮ ಕಡೆ ಹೊರಟು ಆಖೈರ್ ಸರ್ವೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ, ತರುವಾಯ ವಾಯುವ್ಯವಾಗಿ ಸರ್ವೆ 27ನೆ ನಂಬರಿನ ಉತ್ತರ ಕಡೆ ಹೊರಟು ಅದರ ವಾಯುವ್ಯ ಮೂಲೆಯನ್ನು ಸೇರುತ್ತದೆ, ತರುವಾಯ ವಾಯುವ್ಯಾಭಿಮುಖವಾಗಿ ಸರ್ವೆ 26ನೆ ನಂಬರಿನ ಪೂರ್ವ ಕಡೆ ಹೊರಟು ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ನಂತರ ವಾಯುವ್ಯವಾಗಿ ಸರ್ವೆ 25ನೆ ನಂಬರನ್ನು ಪ್ರವೇಶಿಸಿ ಸುಮಾರು 3 ಫರಲಾಂಗು ದೂರ ಹೋಗಿ ಸದರಿ ತಾಲ್ಲೂಕು ಗಂಗಗೊಂಡಹಳ್ಳಿ ಗ್ರಾಮದ ಗಡಿಯನ್ನು ಭೇದಿಸಿಕೊಂಡು ಅದೇ ಗ್ರಾಮದ ಸರ್ವೆ 31ನೆ ನಂಬರನ್ನು ಪ್ರವೇಶಿಸಿ ಸುಮಾರು 2 ಫರಲಾಂಗು ದೂರ ಹೋಗಿ ಸದರಿ ಸರ್ವೆ ನಂಬರಿನ ಉತ್ತರ ದಿಕ್ಕಿನಲ್ಲಿರುವ 2 ಬಾಂದುಗಳನ್ನು ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಉತ್ತರ ದಿಕ್ಕಿನಲ್ಲಿ ಹೊರಟು ಸರ್ವೆ 30ನೆ ನಂಬರು ಈಶಾನ್ಯ ಮೂಲೆಯನ್ನು ಸೇರುತ್ತದೆ.

ಪಶ್ಚಿಮಕ್ಕೆ.—ತರುವಾಯ ವಾಯುವ್ಯ ದಿಕ್ಕಿನಲ್ಲಿ ಹೊರಟು ಸರ್ವೆ 33ನೆ ನಂಬರಿನ ಪೂರ್ವ ಮಾರ್ಗವಾಗಿ ಅದರ ಈಶಾನ್ಯ ದಿಕ್ಕಿನ ಮೂಲೆಯನ್ನು ಸೇರುತ್ತದೆ, ನಂತರ ಅದೇ ಮಾರ್ಗವಾಗಿ ಬೇಡಗೊಂಡನಹಳ್ಳಿ ಸರ್ವೆ 4ನೆ ನಂಬರನ್ನು ಪ್ರವೇಶಿಸಿ ಸುಮಾರು $1\frac{1}{4}$ ಫರಲಾಂಗು ದೂರ ಹೋಗಿ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ನಂತರ ಉತ್ತರವಾಗಿ ಸರ್ವೆ 5ನೆ ನಂಬರಿನ ಪೂರ್ವಭಾಗದಲ್ಲಿ ಹೋಗಿ ಅದರ ಈಶಾನ್ಯ ಮೂಲೆಗೂ ಅಲ್ಲಿಂದ ಈಶಾನ್ಯವಾಗಿ ಹೊರಟು ಸರ್ವೆ 6ನೆ ನಂಬರಿನ ದಕ್ಷಿಣ ಭಾಗದಲ್ಲಿ ಹೋಗಿ ಅದರ ಆಗ್ನೇಯ ಮೂಲೆಗೂ ಅಲ್ಲಿಂದಾ ಸರ್ವೆ 6, 7, 8ನೆ ನಂಬರುಗಳ ಪೂರ್ವ ಕಡೆ ಹೋಗಿ ಕೊನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ. ತರುವಾಯ ವಾಯುವ್ಯವಾಗಿ ಸರ್ವೆ 8, 9ನೆ ನಂಬರುಗಳ ಉತ್ತರ ಮಾರ್ಗವಾಗಿ ಹೊರಟು 9ನೆ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ, ತರುವಾಯ ಸರ್ವೆ 10ನೆ ನಂಬರಿನ ಪೂರ್ವ ಭಾಗದಲ್ಲಿ

ಹೋಗಿ ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ಅಲ್ಲಿಂದ ಅದೇ ನಂಬರಿನ ದಕ್ಷಿಣ ಭಾಗದಲ್ಲಿ ಹೊರಟು ಅದರ ವಾಯುವ್ಯ ಮೂಲೆಯನ್ನು ಸೇರುತ್ತದೆ, ನಂತರ ಈಶಾನ್ಯ ದಿಕ್ಕಿಗಾಗಿ ಸರ್ವೆ 4ನೆ ನಂಬರನ್ನು ಪ್ರವೇಶಿಸಿ ಸುಮಾರು 3½ ಫರಲಾಂಗು ದೂರ ಹೋಗಿ ಮೋದಗೊಂಡನಹಳ್ಳಿ ಗ್ರಾಮದ ಸರ್ವೆ 63ನೆ ನಂಬರಿನ ಆಗ್ನೇಯ ದಿಕ್ಕಿಗೆ ಎದುರಾಗಿರುವ ಅದೇ ತಾಲ್ಲೂಕು ಮೋದ ಗೊಂಡನಹಳ್ಳಿ ಗಡಿಯನ್ನು ಸೇರುತ್ತದೆ, ತರುವಾಯ ಈಶಾನ್ಯ ಮಾರ್ಗವಾಗಿ ಸರ್ವೆ 6ನೆ ನಂಬರನ್ನು ಪ್ರವೇಶಿಸಿ ಸುಮಾರು 100 ಗಜಗಳ ದೂರ ಹೋಗಿ ಸರ್ವೆ 63ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ, ತರುವಾಯ ಅದೇ ಮಾರ್ಗವಾಗಿ ಹೊರ ಟು ಪೂರ್ವ ದಿಕ್ಕಿಗಾಗಿ ಅದರ ಈಶಾನ್ಯ ಮೂಲೆಯನ್ನು ಸೇರುತ್ತದೆ, ತರುವಾಯ ವಾಯುವ್ಯ ದಿಕ್ಕಿಗಾಗಿ ಸರ್ವೆ 63, 62, 61, 60, 59, 58 ಮತ್ತು 57ನೆ ನಂಬರುಗಳ ಉತ್ತರಾಭಿಮುಖವಾಗಿ ಆಖೈರ್ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ. ನಂತರ ಉತ್ತರ ದಿಕ್ಕಿಗಾಗಿ ಸರ್ವೆ 6ನೆ ನಂಬರನ್ನು ಪ್ರವೇಶಿಸಿ ಸುಮಾರು 2 ಫರಲಾಂಗು ದೂರ ಹೋಗಿ ಮರವಂಜಿ ಗ್ರಾಮದ ಸರ್ವೆ 59ನೆ ನಂಬರಿನ ದಕ್ಷಿಣ ದಿಕ್ಕಿನಲ್ಲಿರುವ ಎರಡು ಬಾಂದುಗಳ ನಡುವೆ ಸೇರುತ್ತದೆ, ನಂತರ ವಾಯುವ್ಯಾಭಿಮುಖವಾಗಿ ಸರ್ವೆ 59ನೆ ನಂಬರನ್ನು ಪ್ರವೇಶಿಸಿ ಸುಮಾರು 3½ ಫರಲಾಂಗು ದೂರ ಹೋಗಿ ಸರ್ವೆ 65ನೆ ನಂಬರಿನ ದಕ್ಷಿಣ ದಿಕ್ಕಿನ ಮೂಲೆಯನ್ನು ಸೇರುತ್ತದೆ, ನಂತರ ಈಶಾನ್ಯ ದಿಕ್ಕಿಗಾಗಿ ಪುನಃ ಸರ್ವೆ 59ನೆ ನಂಬರನ್ನು ಪ್ರವೇಶಿಸಿ ಸುಮಾರು 3 ಫರಲಾಂಗು ದೂರ ಹೋಗಿ ಮೊದಲು ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮ ತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹ ಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರ ಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡ ಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷ ನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವವನ್ನೂ ಕಡಿಯಕೂಡದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟು ಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆ ಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡವ್ಯಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗ ಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾ ಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸ ದೇ ಇರುವದು.

(c) ಈ ಬಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿ ಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥ ವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನು ಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹ ಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರಮಟ್ಟಿಗೆ ಇದೆಯನ್ನ ತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲಿ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕು ದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್ ಮೆಂಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟು.

ಅಬ್‌ಸ್ಟ್ರಾಕ್ಟ್ ನೋಟಿಫಿಕೇಷನ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನ ಡಿಸ್ಟ್ರಿಕ್ಟು ಹೊಳೇನರಶೀಪುರದ ತಾಲ್ಲೂಕು ಹೊಳೇನರಶೀಪುರದ ಸೇತುವೆ ಟೋಲು ಗೇಟಿನಲ್ಲಿ ಸನ್ 1909ನೆ ಜುಲೈ 1ನೆ ತಾರೀಖು ಲಾಗಾಯಿತು 1911ನೆ ಇಸವಿ ಜೂನ್ 30ರ ವರಿಗಿನ ಎರಡು ಸಾಲುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಸ್ವಾತಂತ್ರ್ಯವು 1909ನೆ ಇಸವಿ ಜೂನ್ ಮಾಹೆ ತಾರೀಖು 16ನೆ ಬುಧವಾರ ಹಗಲು 12 ಘಂಟೆಗೆ ಹೊಳೇನರಶೀಪುರದ ತಾಲ್ಲೂಕು ಕಛೇರಿ ಬಳಿ ಜನರಲ್ ಅಸಿಸ್ಟೆಂಟ್ ಕಮಿಷನ್ನರವರ ರೂಬರೂಬು ಅಥವಾ ಈ ಬಗ್ಯೆ ನೇಮಿಸಲ್ಪಡುವ ಇತರ ಆಫಿಸರ ರೋಬರೂಬು ಬಹಿರಂಗವಾಗಿ ಹರ್ರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ವಿಚಾರಕ್ಕೆ 1909ನೆ ಇಸವಿ ಮೇ ತಾರೀಖು 27ನೆ ಮುರ್ಕ್ಕಂ ಮೈಸೂರು ಗೆಜೆಟ್ಟಿನ 2ನೆ ಭಾಗದ 414—415ನೆ ನಂಬರ್ ಪೇಜಿನಲ್ಲಿ ಪ್ರಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬಹುದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹಾಸನ–ಅರಸೀಕೆರೆ ರಸ್ತೆಮೇಲೆ ಹಾಸನದ ತಾಲ್ಲೂಕು ದುದ್ದದ ಟೋಲ್ ಗೇಟಿನಲ್ಲಿ 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1911ನೆ ಇಸವಿ ಜೂನ್ 30ರ ವರಿಗಿನ ಎರಡು ಸಾಲುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಸ್ವಾತಂತ್ರ್ಯವು 1909ನೆ ಇಸವಿ ಜೂನ್ ಮಾಹೆ 19ನೆ ತಾರೀಖು ಶನಿವಾರ ಹಗಲು 12 ಘಂಟೆಗೆ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಆಫೀಸಿನಲ್ಲಿ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರ ರೂಬರೂಬು ಹರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ವಿಚಾರಕ್ಕೆ 1909ನೆ ಇಸವಿ ಮೇ ತಾರೀಖು 27ನೆ ಮುರ್ಕ್ಕಂ ಮೈಸೂರು ಗೆಜೆಟ್ಟಿನ 2ನೆ ಭಾಗದ 415—416ನೆ ಪೇಜುಗಳಲ್ಲಿ ಪ್ರಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬಹುದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿರುವ ಮಾರನಹಳ್ಳಿ ಟೋಲು ಗೇಟಿನಲ್ಲಿ ಸನ್ 1909ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1910ನೆ ಜೂನ್ 30ರ ವರಿಗಿನ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು 1909ನೆ ಇಸವಿ ಜೂನ್ 19ನೆ ತಾರೀಖು ಶನಿವಾರ ಹಗಲು 12 ಘಂಟೆಗೆ ಮಂಜರಾಬಾದ್ ತಾಲ್ಲೂಕು ಕಛೇರಿ ಬಳಿ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬರೂಬು ಬಹಿರಂಗವಾಗಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ಜಾಸ್ತಿ ವಿಷಯಕ್ಕೆ 1909ನೆ ಇಸವಿ ಮೇ ತಾರೀಖು 27ನೆ ಮುರ್ಕ್ಕಂ ಮೈಸೂರು ಗೆಜೆಟ್ಟಿನ 2ನೆ ಭಾಗದ 416—417ನೆ ನಂಬರ್ ಪೇಜುಗಳಲ್ಲಿನ ನೋಟಿಫಿಕೇಷನ್ ನೋಡಬಹುದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹಾಸನದ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕು ಬೇಲೂರು ಸೇತುವೆಯಮೇಲೆ 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1910ನೆ ಜೂನ್ ಆಖೈರವರಿಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ ತಾರೀಖು 14ನೆ ಸೋಮವಾರ ದಿವಿ 12 ಘಂಟೆಗೆ ಸಕಲೇಶಪುರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ರೂಬರೂಬು ಹರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ವಿಚಾರಕ್ಕೆ 1909ನೆ ಇಸವಿ ಮೇ 27ನೆ ಮುರ್ಕ್ಕ ಮೈಸೂರು ಗೆಜೆಟ್ಟಿನ 2ನೆ ಭಾಗದ 418ನೆ ಪೇಜಿನಲ್ಲಿ ಪ್ರಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬಹುದು.

ಇಸ್ತಿಹಾರ್.

ತಾರೀಖು 22ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸನ್ 1909ನೆ ಜುಲೈ ಗುರ್ರೇ ಲಾಗಾಯಿತು 1911ನೆ ಜೂನ್ ಆಖೈರುವರಿಗಾಗುವ ಎರಡು ಸಾಲುಗಳಲ್ಲಿ ಮಂಜರಾಬಾದು ತಾಲ್ಲೂಕು ಬಿಸಲೆಘಾಟು ರಸ್ತೆ ಮೇಲೆ ವಣಗೂರು ಬಳಿ ಇರುವ ಟೋಲ್ ಗೇಟಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು 1909ನೆ ಇಸವಿ ಜೂನ್ ಮಾಹೆ ತಾರೀಖು 21ನೆ ಸೋಮವಾರ ಮಧ್ಯಾಹ್ನ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಮಂಜರಾಬಾದು ತಾಲ್ಲೂಕು ಕಛೇರಿಯಲ್ಲಿ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಪ್ರಸಕ್ತವಾದ ಸುಂಕ ವಸೂಲ್ಮಾಡುವ ಹಕ್ಕನ್ನು ಹರಾಜಿನಲ್ಲಿ ಪಡದ ಕಂಟ್ರಾಕ್ಟುದಾರನು ಇದರ ಸಂಗಡವಿರುವ ಷೆಡ್ಯೂಲಿನಲ್ಲಿ ಕಂಡ ದರಗಳಂತೆ ಸದರಿ ಟೋಲ್ ಗೇಟು ಮೂಲಕ ಹೋಗತಕ್ಕ ಬರತಕ್ಕ ಗಾಡಿ ವಗ್ಯೆರೆಗಳ ಮೇಲೆ ಸುಂಕ ವಸೂಲ್ಮಾಡತಕ್ಕದ್ದು. ಈ ದರಗಳಿಗೆ ಮೀರಿದ್ದ ಹೆಚ್ಚು ದರಗಳನ್ನು ವಸೂಲ್ಮಾಡಕೂಡದು.

3. ಛಡ ದರಖಾಸ್ತನ್ನಾಗಲಿ, ಯಾ, ಇತರ ದರಖಾಸ್ತನ್ನಾಗಲಿ, ಕಾರಣ ನಮೂದಿಲ್ಲದೆ ಅಂಗೀಕಾರ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಡೆಪ್ಯುಟಿ ಕಮಿಷನರವರೇ ಉಳಿಸಿಕೊಂಡಿರುತ್ತಾರೆ. ಮತ್ತು ಸದರಿಯವರಿಂದ ಹರಾಜು ಮಂಜೂರಾದ ಹೊರತು ಹರಾಜು ಸ್ಥಿರಪಡುವದಿಲ್ಲ.

4. ಭಡ ದರಖಾಸ್ತುದಾರನು ಹರಾಜಾದ ಕೂಡಲೆ ಮೊದಲನೆ ಸಾಲಿನ ಕಂಟ್ರಾಕ್ಟು ಮೊಬಲಗು ಪೈಕಿ ಅರ್ಧ ಖಿಸ್ತು ಮೊಬಲಗನ್ನು ಕೊಡಬೇಕಲ್ಲದೆ ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರಾದ 15 ದಿವಸದೊಳಗೆ ಇನ್ನು ಒಂದುವರೆ ತಿಂಗಳ ಬಾಬತು ಖಿಸ್ತು ಮೊಬಲಗನ್ನು ಡಿಪಾಜಿಟ್ಟು ತರೀಕು ಪಾವತಿಮಾಡಿ ಕರಾರು ಅನುಸರಿಸಿ ನಡೆದುಕೊಳ್ಳತಕ್ಕ ಬಗ್ಯೆ ಕ್ರಮವಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡತಕ್ಕದ್ದು.

5. ಕಂಟ್ರಾಕ್ಟು ಮೊಬಲಗನ್ನು 24 ಖಿಸ್ತುಗಳು ಮಾಡಿಕೊಂಡು ಪ್ರತಿ ಮಾಹೆ ಖಿಸ್ತನ್ನು ಬರುವ ಮಾಹೆ 10ನೆ ತಾರೀಖಿನೊಳಗೆ ಪಾವತಿ ಮಾಡುತ್ತಾ ಬರಬೇಕು. ಹಾಗೆ ತಪ್ಪಿದಲ್ಲಿ ಮಾಹೆಯಾನಾ ರೂಪಾಯಿ ಒಂದಕ್ಕೆ ಒಂದು ಪೈನಂತೆ ಸಕಾಲದಲ್ಲಿ ಪಾವತಿ ಮಾಡದೆ ತಪ್ಪಿದ ಮೊಬಲಗಿನಮೇಲೆ ಬಡ್ಡಿ ಕೊಡಬೇಕು. ಕಂಟ್ರಾಕ್ಟು ಷರತ್ತು ಅನುಸರಿಸಿ, ಕಂಟ್ರಾಕ್ಟುದಾರನು ನಡದುಕೊಂಡಲ್ಲಿ ಮೊದಲು ಕೊಟ್ಟಿರುವ 2 ಮಾಹೆಗಳ ಬಾಬತು ಡಿಪಾಜಿಟ್ಟು ಖಿಸ್ತು ಮೊಬಲಗನ್ನು ಆಖೈರಿನ 2 ಖಿಸ್ತುಗಳಿಗೆ ಜಮಾ ಕಟ್ಟಿಕೊಳ್ಳಲ್ಪಡುತ್ತೆ.

6. 4ನೆ ಪ್ಯಾರಾದಲ್ಲಿ ಕಂಡ ಪೂರಾ ಅಥವಾ ಒಂದು ಭಾಗದಷ್ಟು ಡಿಪಾಜಿಟ್ಟು ಮೊಬಲಗು ಕೊಡದೆ ತಪ್ಪಿದ್ದಾಗಲಿ, ಅಥವಾ 5ನೆ ಪ್ಯಾರಾದಲ್ಲಿ ಕಂಡ ಮಾಹೆ ಖಿಸ್ತು ಮೊಬಲಗನ್ನು ಸಕಾಲದಲ್ಲಿ ಕೊಡದೆ ತಪ್ಪಿದಲ್ಲಿ, ಕಂಟ್ರಾಕ್ಟನ್ನು ಪುನಃ ಹರಾಜಿನಿಂದಾಗಲಿ ಅಥವಾ ಇತರ ವಿಧವಾಗಾಗಲಿ ಡೆಪ್ಯುಟಿ ಕಮಿಷನರವರಿಗೆ ಸೂಕ್ತ ಕಂಡಂತೆ ವಿಲೇವಾರಿ ಮಾಡುವದರಲ್ಲಿ ಬರುತ್ತೆ. ಈ ರೀತಿ ಮಾಡುವದರಿಂದ ನಷ್ಟವೇನಾದರೂ ಸಂಭವಿಸಿದಲ್ಲಿ ಇದನ್ನು ಹಿಂದಿನ ಕಂಟ್ರಾಕ್ಟರಿಂದ ವಸೂಲ್ಮಾಡುತ್ತೆ. ಲಾಭವೇನಾದರೂ ಬಂದಲ್ಲಿ ಇದಕ್ಕೆ ಕಂಟ್ರಾಕ್ಟರು ಭಾಗಿಯಾಗುವದಿಲ್ಲ.

7. ಸದರಿ ಟೋಲ್ ಗೇಟು ಮೂಲಕ ಸಾಗುವ ಗಾಡಿ ವಗೈರೆಗಳ ಬಾಬತು ಕರಾರ್ವಾಕ ಲೆಖ್ಖವನ್ನು ಮತ್ತು ರೋಜುವಾರು ವಸೂಲಿ ಲೆಖ್ಖವನ್ನು ಸಹಾ ಇಡಬೇಕು. ಇಂಥಾ ಲೆಖ್ಖಗಳನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ್ಯೆ ತನಿಖೆಬಗ್ಯೆ ಹಾಜರ್ಮಾಡಿಸಬೇಕು.

8. ಹಾಲಿ ಇರುವ ಟೋಲ್ ಗೇಟು ಮತ್ತು ಮನೆಯನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಉಪಯೋಗಿಸಿಕೊಳ್ಳಬಹುದು.

9. ಮೇಲ್ಕಂಡ ಷರತ್ತುಗಳಿದ್ದಾಗ್ಯೂ, ಲೋಕಲ್ ಬೋರ್ಡ್ ರೂಲ್ಸಿನ 64ನೆ ಸೆಕ್ಷನ್ ಪ್ರಕಾರ ಪ್ರೆಸಿಡೆಂಟರವರು ಯಾರ ಸಂಗಡಲಾದರೂ, ಯಾವ ತರಹಾದ ಗಾಡಿ, ಯಾ ರಾಸುಗಳಿಗೋಸ್ಕರವಾಗಿ ಒಂದು ನಿಷ್ಕರ್ಷಿಸಲ್ಪಡುವ ಮೊಬಲಗ್ಯೆ ಕಾಂಪೌಂಡು ಮಾಡಿಕೊಳ್ಳುವದಕ್ಕೆ ಅಭ್ಯಂತರವಿರುವದಿಲ್ಲ. ಇಂಥಾ ಸಂಭವಗಳಲ್ಲಿ ಸದರಿ ನಿಷ್ಕರ್ಷಿಸಲ್ಪಟ್ಟ ಮೊಬಲಗನ್ನು ಕಂಟ್ರಾಕ್ಟರು ಕೊಡುವ ಮೊಬಲಗಿಗೋಸ್ಕರ ಜಮಾ ಕೊಡಲ್ಪಡುತ್ತೆ.

ಷೆಡ್ಯೂಲು.

ತಪಶೀಲ್.	ಭರ್ತಿ.			ಖಾಲಿ.		
	ರೂ.	ಆ.	ಪೈ.	ರೂ.	ಆ.	ಪೈ.
ನಾಲ್ಕು ಚಕ್ರದ ಸಾರೋಟು ಗಾಡಿ	0	8	0	0	4	0
ಎರಡು ಡಿಟೋ	0	4	0	0	2	0
ನಾಲ್ಕು ಎತ್ತು, ಎಮ್ಮೆ, ಕುದುರೆ, ಕತ್ತೆ, ವಗೈರೆಯಿಂದ ಎಳೆಯಲ್ಪಟ್ಟ ಗಾಡಿಗೆ ...	0	8	0	0	4	0
ಎತ್ತು ಯಾ ಎಮ್ಮೆಗೆ	0	1	0	0	0	3
ಆನೆ ಒಂದಕ್ಕೆ	1	8	0	1	8	0
ಒಂಟೆ ಒಂದಕ್ಕೆ	0	8	0	0	4	0
ಕುದುರೆ (ಸವಾರಿ ಸಹಿತ ಅಂದರೆ ಭಾರ ಹೇರಿದ್ದು)	0	1	6	0	0	9
ತಟ್ಟು ಯಾ ಹೇಸರಕತ್ತೆ (ಡಿಟೋ)	0	0	9	0	0	6
ಕತ್ತೆ	0	0	6	0	0	1
ಆಡು, ಕುರಿ, ಹಂದಿ ಒಂದಕ್ಕೆ		...		0	0	1
ಎಂಟು ಜನ ಹೊತ್ತ ಪಾಲಕಿ, ಢೋಲಿ, ಮ್ಯಾನಕ್ಕೆ	1	0	0		...	
ಆರು ಜನ ಡಿಟೋ	0	12	0		...	
ನಾಲ್ಕು ಜನ ಡಿಟೋ	0	8	0		...	
ಎರಡು ಜನ ಡಿಟೋ	0	4	0		...	

ನೋಟ್ :—1. ಕಾಲ್ನಡಿಗೆ ಹೋಗುವರಿಂದ ಸುಂಕ ವಸೂಲ್ಮಾಡಕೂಡದು.

2. ಸೂರ್ಯೋದಯದಿಂದ ಸೂರ್ಯೋದಯಕ್ಕೆ ಆಗುವ 24 ಘಂಟೆಗಳೊಳಗೆ ಒಂದೇ ಸುಂಕ ವಸೂಲ್ಮಾಡತಕ್ಕದ್ದು.

3. ಲೋಕಲ್ ಬೋರ್ಡು ರೂಲ್ಸಿನಲ್ಲಿನ 64, 65, 67, 68, 69ನೆ ರೂಲುಗಳಲ್ಲಿ ಕಂಡ ಷರತ್ತುಗಳಿಗನುಸಾರವಾಗಿ ಕಂಟ್ರಾಕ್ಟರು ನಡದುಕೊಳ್ಳಬೇಕು.

4. ಟೋಲು ಗೇಟ್ ಸಮೀಪದಲ್ಲಿರುವ ಗ್ರಾಮಗಳ ವ್ಯವಸಾಯ ಮಾಡುವ ರೈತರು ತಮ್ಮ ಗಾಡಿ ವಗೈರೆಗಳನ್ನು ಗೇಟು ಮೂಲಕ ತೆಗದುಕೊಂಡು ಹೋಗತಕ್ಕ ಬಗ್ಯೆ 21—12—07ರ ಮಕೂಂ 6008-15—114-07-6ನೆ ನಂಬರ್ ಪ್ರೊಸೀಡಿಂಗ್ಸ ಪ್ರಕಾರ ಒಂದು ವರುಷದ ಛಾರ್ಜು ಪೈಕಿ $\frac{1}{16}$ ಭಾಗವನ್ನು ಕೊಟ್ಟು ಡಿಸ್ಟ್ರಿಕ್ಟು ಬೋರ್ಡಿನವರ ಸಂಗಡ ಕಾಂಪೌಂಡು ಮಾಡಿಕೊಳ್ಳಬಹುದು ಇತರರಿಗೆ $\frac{1}{8}$ ಭಾಗ ಕೊಡಬೇಕಾದದ್ದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಅರಸೀಕೆರೆ ಮ್ಯುನಿಸಿಪಾಲಿಟಿಯಲ್ಲಿ ನಡೆಯುವ ಸಂತೆಯಲ್ಲಿ 1909ನೆ ಇಸವಿ ಜುಲೈ 1ರ ಲಾಗಾಯಿತು 1910ನೆ ಇಸವಿ ಜೂನ್ 30ರ ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕನ್ನು ಹಾಸನ ಡಿಸ್ಟ್ರಿಕ್ಟು ಚನ್ನರಾಯಪಟ್ಣ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ಅರಸೀಕೆರೆ ತಾಲ್ಲೂಕು ಆಫೀಸಿನಲ್ಲಿ 1909ನೆ ಜೂನ್ 14ನೆ ಸೋಮವಾರ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ ವರು ಸಂತೆಯದಿವಸ ಮಾರ್ಕಟ್ಟಿನ ಸರಹದ್ದಿನೊಳಗೆ ತರಲ್ಪಡುವ ಗಾಡಿಗಳ ಮೇಲೆ ಇದಕ್ಕೆ ಸೇರಿಸಿರುವ ಷೆಡ್ಯೂಲಿನಲ್ಲಿ ಕಂಡ ದರದಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರಿ ದರಕ್ಕಿಂತ ಜಾಸ್ತಿ ದರ ವಸೂಲ್ಮಾಡಕೂಡದು.

3. ಈ ಹರಾಜು ಹಾಸನ ಡಿಸ್ಟ್ರಿಕ್ಟು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡು ಪ್ರಸಿಡೆಂಟರವರ ಮಂಜೂರಾತಿಗೆ ಬಿಡ ಲ್ಪಟ್ಟಿರುತ್ತೆ. ಸದರಿಯವರು ಎಲ್ಲಾ ದರಖಾಸ್ತುಗಳಿಗಿಂತ ಜಾಸ್ತಿಯಾದ, ಅಥವಾ ಇನ್ಯಾವ ದರಖಾಸ್ತುಗಳನ್ನು ಯಾವ ಸಬಬು ನ್ನು ತೋರಿಸದೆ ತಿರಸ್ಕರಿಸುವದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ.

4. ಕಂಟ್ರಾಕ್ಟುದಾರನು ಗುತ್ತಾ ಮೊಬಲಗನ್ನು ಹನ್ನೆರಡು ತಿಂಗಳು ಸಮಕಂತು ಪ್ರಕಾರ ವಸೂಲು ಕೊಡತಕ್ಕದ್ದು. ಪ್ರತಿ ಮಾಹೆ ಕಂತನ್ನು ಅದರ ಮುಂದಿನ ಮಾಹೆ ತಾರೀಖು 10ರ ವಳಗೆ ವಸೂಲ್ ಕೊಟ್ಟು ರಶೀತಿ ಪಡೆಯತಕ್ಕದ್ದು.

5. ಹರಾಜು ಖೈದಾದ ಕೂಡಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಬಾಬತು ಕಂತು ಮೊಬಲಗನ್ನು ಡಿಪಾಜಿಟ್ಟಿನಲ್ಲಿ ಇಡಬೇಕು. ಪ್ರಸಿಡೆಂಟ್ ಸಾಹೇಬರವರಿಂದ ಹರಾಜ್ ಮಂಜೂರಾದಕೂಡಲ ಹರಾಜು ಷರತ್ತುಗಳಿಗೆ ಅನುಸಾರ ವಾಗಿ ನಡದುಕೊಳ್ಳತಕ್ಕ ಬಗ್ಗೆ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡತಕ್ಕದ್ದು. ಕಂಟ್ರಾಕ್ಟು ಷರತ್ತುಗಳಮೇರೆ ಸರಿ ಯಾಗಿ ನಡದುಕೊಂಡರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನ ಆಖೈರ ಎರಡು ಮಾಹೆಗಳ ಕಂತು ಬಗ್ಗೆ ವಸೂಲು ಕೊಡುತ್ತೆ.

6. ಹರಾಜ್ ಖೈದಾದಕೂಡ್ಲೆ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡದೆ ಇದ್ದರೆ ಹರಾಜ್ ಹಕ್ಕುದಾರಿಯನ್ನ ಪುನಹ ಹರಾ ಜು ಮಾಡಲ್ಪಡುತ್ತೆ. ಎರಡನೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಷುರು ಕಂಟ್ರಾಕ್ಟುದಾರ ಯಾ ಹ ರಾಜ್‌ದಾರನನ್ನು ಗುರಿಪಡಿಸುತ್ತೆ. ಪ್ರತಿ ಮಾಹೆಯಲ್ಲು ಕೊಡತಕ್ಕ ಬಿಸ್ತು ಮೊಬಲಗನ್ನು ಗೊತ್ತುಮಾಡಲ್ಪಟ್ಟ ತಾರೀಖಿನೊಳ ಗಾಗಿ ವಸೂಲು ಕೊಡಲು ತಪ್ಪಿದರೆ ಪಾವತಿ ಮಾಡಬೇಕಾಗಿರುವ ಮೊಬಲಗಿನಮೇಲೆ ಗೊತ್ತುಮಾಡಲ್ಪಟ್ಟ ತಾರೀಖಿನ ಮಾರನೆ ದಿವ ಸದ ಲಾಗಾಯಿತು ಪಾವತಿಮಾಡುವ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿ ಒಂದಕ್ಕೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಬಿ ಸ್ತು ಮೊಬಲಗನ್ನ ವಸೂಲು ಮಾಡುತ್ತೆ, ಅಲ್ಲದೆ ಉಳಿದ ಕಾಲದ ಕಂಟ್ರಾಕ್ಟನ್ನು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡು ಗಳ ಪ್ರಸಿಡೆಂಟರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಷುರು ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಹರಾಜ್ ಮಾಡಲ್ಪಡುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರಿ ನಫೆಗೆ ಹಕ್ಕುದಾರನಾಗಿರುವದಿಲ್ಲ.

7. ಕಂಟ್ರಾಕ್ಟುದಾರನು ಯಾವ ಕಾರಣದಿಂದಲೂ ಗುತ್ತಿಗೆ ಮೊಬಲಗಿನ ಪೈಕಿ ಯಾವ ರಿಮಿಷನ್ ಅಥವಾ ಸೋಡಿಯ ನ್ನಾಗಲೀ ಅಥವಾ ಪರಿಹಾರದ್ರವ್ಯವನ್ನಾಗಲಿ ಕೇಳತಕ್ಕ ಹಕ್ಕು ಇರುವದಿಲ್ಲ.

8. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಮೊಬಲಗಿಗೆ ತಪಶೀಲಾಗಿ ತಿಳಿಯುವಂತೆ ಕರಾರುವಾಕಾ ಲೆಕ್ಕವನ್ನ ಇಡಬೇಕು. ಸದರಿ ಲೆಕ್ಕವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ ತನಿಖೆಗೆ ಹಾಜರು ಪಡಿಸಬೇಕು.

9. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ, ಯಾ ಅವನ ಕಡೆ ನೌಕರನೇ ಆಗಲಿ ವಿರೋಧವಾಗಿ ನಡದುಕೊಂಡರೆ ಕಂಟ್ರಾಕ್ಟನ್ನ ವಜಾ ಮಾಡುತ್ತೆ.

ವಸೂಲು ಮಾಡಬೇಕಾದ ಫೀ ದರಗಳು.

ಭರ್ತಿ ಯಾ ಖಾಲಿ ಗಾಡಿ ಒಂದಕ್ಕೆ ಆಣೆ ಒಂದು.

ಇಸ್ತಿಹಾರ್.

ತಾರೀಖು 22ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸನ್ 1909ನೆ ಜುಲೈ ಗುರ್ರೆ ಲಾಗಾಯಿತು 1911ನೆ ಜೂನ್ ಆಖೈರುವರಿಗಾಗುವ ಎರಡು ಸಾಲುಗಳಲ್ಲಿ ಅರ್ಕಲಗೂಡು-ಮಂಜರಾಬಾದ್-ಕೊಡಿಗ್ಲೆಪೇಟೆ ರಸ್ತೆ ಮೇಲೆ ಕ್ಯಾತೆಹೊಳೆಬಳಿ (ಮೈಸೂ ರುಕಡೆ) ಇಟ್ಟಿರುವ ಟೋಲ್ ಗೇಟಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು 1909ನೆ ಇಸವಿ ಜೂನ್ ಮಾಹೆ 21ನೆ ತಾರೀಖು ಸೋ ಮವಾರ ಮಧ್ಯಾಹ್ನ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕು ಕಚೇರಿಯಲ್ಲಿ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ ರೂಬರೂಬು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಪ್ರಸಕ್ತವಾದ ಸುಂಕ ವಸೂಲ್ಮಾಡುವ ಹಕ್ಕನ್ನು ಹರಾಜಿನಲ್ಲಿ ಪಡೆದ ಕಂಟ್ರಾಕ್ಟುದಾರನು ಷೆಡ್ಯೂಲಿನಲ್ಲಿ ಕಂಡ ದರ ಗಳಂತೆಯೆ ಸದರಿ ಟೋಲ್ ಗೇಟು ಮೂಲಕ ಹೋಗತಕ್ಕ ಬರತಕ್ಕ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡತಕ್ಕದ್ದು. ಈ ದರಗಳಿಗೆ ಮೀರಿದ ಹೆಚ್ಚು ದರಗಳನ್ನು ವಸೂಲ್ಮಾಡಕೂಡದು.

3. ಕೊಡಿಗಿನ ನಿಲವಾಗಲ್ ಟೋಲು ಗೇಟಿನಲ್ಲಿ ಸುಂಕವನ್ನು ಪಾವತಿಮಾಡಿ 24 ಘಂಟೆಗಳೊಳಗಾಗಿ ಈ ಟೋಲುಗೇಟು ಮೂಲಕ ಸಂಚರಿಸತಕ್ಕ ಗಾಡಿ ಮುಂತಾದ್ದರ ಮೇಲೆ ಯಾವ ಸುಂಕವನ್ನೂ ವಸೂಲ್ಮಾಡಲಾಗದು. 1911ನೆ ಇಸವಿ ಏಪ್ರಿಲ್ ಗುರ್ರೇ ಲಾಗಾಯಿತು ಕೊಡಿಗಿನ ಎಡಹಳ್ಳಿ ಟೋಲುಗೇಟಿನಲ್ಲಿ ಸುಂಕವನ್ನು ಪಾವತಿಮಾಡಿ ಈ ಟೋಲ್‌ಗೇಟು ಮೂಲಕ 24 ಘಂ ಟೆ ವಳಗಾಗಿ ಸಂಚರಿಸುವ ಗಾಡಿ ಮುಂತಾದ್ದರ ಮೇಲೆ ಸುಂಕ ವಸೂಲ್ಮಾಡಲಾಗದು.

4. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲೀ ಕಾರಣ ನಮೂದಿಲ್ಲದೆ ಅಂಗೀಕಾರ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಡೆಪ್ಯುಟಿ ಕಮಿಷನರವರೇ ಉಳಿಸಿಕೊಂಡಿರುತ್ತಾರೆ. ಮತ್ತು ಸದರಿಯವರಿಂದ ಹರಾಜು ಮಂಜೂರಾದ ಹೊರ್ತು ಹರಾಜು ಸ್ಥಿರಪಡುವದಿಲ್ಲ.

5. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಮೊದಲನೆ ಸಾಲಿನ ಕಂಟ್ರಾಕ್ಟು ಮೊಬಲಗು ಪೈಕಿ ಅರ್ಧ ಖಿಸ್ತು ಮೊಬಲಗನ್ನು ಕೊಡಬೇಕಲ್ಲದೆ ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರಾದ 15 ದಿವಸದೊಳಗೆ ಇನ್ನು ಒಂದುವರೆ ತಿಂಗಳ ಬಾಬತು ಖಿಸ್ತು ಮೊಬಲಗನ್ನು ಡಿಪಾಜಿಟ್ಟು ತರೀಕು ಪಾವತಿಮಾಡಿ ಕರಾರು ಅನುಸರಿಸಿ ನಡದುಕೊಳ್ಳತಕ್ಕ ಬಗ್ಯೆ ಕ್ರಮವಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡತಕ್ಕದ್ದು.

6. ಕಂಟ್ರಾಕ್ಟು ಮೊಬಲಗನ್ನು 24 ಖಿಸ್ತುಗಳು ಮಾಡಿಕ್ಕೊಂಡು ಪ್ರತಿ ಮಾಹೆ ಖಿಸ್ತನ್ನು ಬರುವ ಮಾಹೆ 10ನೆ ತಾರೀಖಿನೊಳಗೆ ಪಾವತಿಮಾಡುತ್ತಾ ಬರಬೇಕು. ಹಾಗೆ ತಪ್ಪಿದಲ್ಲಿ ಮಾಹೆಯಾನಾ ರೂಪಾಯಿ ಒಂದಕ್ಕೆ ಒಂದು ಪೈಸಂತೆ ಸಕಾಲದಲ್ಲಿ ಪಾವತಿಮಾಡದೆ ತಪ್ಪಿದ ಮೊಬಲಗಿನಮೇಲೆ ಬಡ್ಡಿ ಕೊಡಬೇಕು. ಕಂಟ್ರಾಕ್ಟು ಷರತ್ತು ಅನುಸರಿಸಿ, ಕಂಟ್ರಾಕ್ಟುದಾರನು ನಡದುಕೊಂಡಲ್ಲಿ ಮೊದಲು ಕೊಟ್ಟಿರುವ 2 ಮಾಹೆಗಳ ಬಾಬತು ಡಿಪಾಜಿಟ್ಟು ಖಿಸ್ತು ಮೊಬಲಗನ್ನು ಆಖೈರಿನ 2 ಖಿಸ್ತುಗಳಿಗೆ ಜಮಾ ಕಟ್ಟಿಕೊಳ್ಳಲ್ಪಡುತ್ತೆ.

7. 5ನೆ ಪ್ಯಾರಾದಲ್ಲಿ ಕಂಡ ಪೂರ ಅಥವಾ ಒಂದು ಭಾಗದಷ್ಟು ಡಿಪಾಜಿಟ್ಟು ಮೊಬಲಗು ಕೊಡದೆ ತಪ್ಪಿದ್ದಾಗಲಿ, ಅಥವಾ 6ನೆ ಪ್ಯಾರಾದಲ್ಲಿ ಕಂಡ ಮಾಹೆ ಖಿಸ್ತು ಮೊಬಲಗನ್ನು ಸಕಾಲದಲ್ಲಿ ಕೊಡದೆ ತಪ್ಪಿದಲ್ಲಿ ಕಂಟ್ರಾಕ್ಟನ್ನು ಪುನಃ ಹರಾಜಿನಿಂದಾಗಲಿ, ಅಥವಾ ಇತರವಿಧವಾಗಿ ಆಗಲಿ, ಡೆಪ್ಯುಟಿ ಕಮಿಷನರವರಿಗೆ ಸೂಕ್ತ ಕಂಡಂತೆ ವಿಲೇವಾರಿ ಮಾಡುವದರಲ್ಲಿ ಬರುತ್ತೆ. ಈ ರೀತಿ ಮಾಡುವದರಿಂದ ನಷ್ಟವೇನಾದರೂ ಸಂಭವಿಸಿದಲ್ಲಿ ಇದನ್ನು ಕಂಟ್ರಾಕ್ಟರಿಂದ ವಸೂಲ್ಮಾಡಲ್ಪಡುತ್ತೆ. ಲಾಭವೇನಾದರೂ ಬಂದಲ್ಲಿ ಇದಕ್ಕೆ ಕಂಟ್ರಾಕ್ಟರು ಭಾಗಿಯಾಗುವದಿಲ್ಲ.

8. ಸದರಿ ಟೋಲ್‌ಗೇಟು ಮೂಲಕ ಸಾಗುವ ಗಾಡಿ ವಗೈರೆಗಳ ಬಾಬತು ಕರಾರ್ವಾಕ ಲೆಖ್ಖವನ್ನು ಮತ್ತು ರೋಜುವಾರು ವಸೂಲಿ ಲೆಖ್ಖವನ್ನು ಸಹಾ ಇಡಬೇಕು. ಇಂಥಾ ಲೆಖ್ಖಗಳನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ್ಯೆ ತನಿಖೆ ಬಗ್ಯೆ ಹಾಜರ್ಪಡಿಸಬೇಕು.

9. ಹಾಲಿ ಇರುವ ಟೋಲ್ ಗೇಟು ಮತ್ತು ಟೋಲ್ ಮನೆಯನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಉಪಯೋಗಿಸಿಕೊಳ್ಳಬಹುದು.

10. ಮೇಲ್ಕಂಡ ಷರತ್ತುಗಳಿದ್ದಾಗ್ಯೂ, ಲೋಕಲ್ ಬೋರ್ಡ್‌ಸ ರೂಲ್ಸಿನ 64ನೆ ಸೆಕ್ಷನ ಪ್ರಕಾರ ಪ್ರೆಸಿಡೆಂಟರವರು ಯಾರ ಸಂಗಡಲಾದರೂ, ಯಾವ ತರಹದ ಗಾಡಿ, ಯಾ ರಾಸುಗಳಿಗೋಸ್ಕರವಾಗಿ ಒಂದು ನಿಷ್ಕರ್ಷಿಸಲ್ಪಡುವ ಮೊಬಲಗ್ಯೆ ಕಾಂಪೌಂಡು ಮಾಡಿಕೊಳ್ಳುವದಕ್ಕೆ ಅಭ್ಯಂತರವಿರುವದಿಲ್ಲ. ಅಂಥಾ ಸಂಭವಗಳಲ್ಲಿ ಸದರಿ ನಿಷ್ಕರ್ಷಿಸಲ್ಪಟ್ಟ ಮೊಬಲಗನ್ನು ಕಂಟ್ರಾಕ್ಟರು ಕೊಡುವ ಮೊಬಲಗಿಗೋಸ್ಕರ ಜಮಾ ಕೊಡಲ್ಪಡುತ್ತೆ.

ಷೆಡ್ಯೂಲ್.

ತಪಶೀಲು.	ಭರ್ತಿ.			ಖಾಲಿ.		
	ರೂ.	ಆ.	ಪೈ.	ರೂ.	ಆ.	ಪೈ.
ನಾಲ್ಕು ಚಕ್ರದ ಸಾರೋಟು ಗಾಡಿ	0	8	0	0	4	0
ಎರಡು ಡಿಟ್ಟೋ	0	4	0	0	2	0
ನಾಲ್ಕು ಎತ್ತು, ಎಮ್ಮೆ, ಕುದುರೆ, ಕತ್ತೆ, ವಗೈರೆಯಿಂದ ಯಳೆಯಲ್ಪಟ್ಟ ಗಾಡಿಗೆ ...	0	8	0	0	4	0
ಎತ್ತು, ಯಾ ಎಮ್ಮೆಗೆ	0	1	0	0	0	3
ಆನೆ ಒಂದಕ್ಕೆ	1	8	0	1	8	0
ಒಂಟೆ	0	8	0	0	4	0
ಕುದುರೆ (ಸವಾರಿ ಸಹಿತ ಅಂದರೆ ಭಾರ ಹೇರಿದ್ದು)	0	1	6	0	0	9
ತಟ್ಟು ಯಾ ಹೇಸರಕತ್ತೆ (ಡಿಟ್ಟೋ)	0	0	9	0	0	6
ಕತ್ತೆ	0	0	6	0	0	1
ಆಡು, ಕುರಿ, ಹಂದಿ ಒಂದಕ್ಕೆ	...			0	0	1
ಎಂಟು ಜನ ಹೊತ್ತ ಪಲ್ಲಕ್ಕಿ, ಡೋಲಿ, ಮ್ಯಾನಾಕ್ಕೆ ...	1	0	0	...		
ಆರು ಜನ ಡಿಟ್ಟೋ ಡಿಟ್ಟೋ	0	12	0	...		
ನಾಲ್ಕು ಜನ ಡಿಟ್ಟೋ ಡಿಟ್ಟೋ	0	8	0	...		
ಎರಡು ಜನ ಡಿಟ್ಟೋ ಡಿಟ್ಟೋ	0	4	0	...		

ನೋಟ್ :—1. ಕಾಲ್ನಡಿಗೆ ಹೋಗುವರಿಂದ ಸುಂಕ ವಸೂಲ್ಮಾಡಕೂಡದು.

2. ಸೂರ್ಯೋದಯದಿಂದ ಸೂರ್ಯೋದಯಕ್ಕೆ ಆಗುವ 24 ಘಂಟೆಗಳೊಳಗೆ ಒಂದೇ ಸುಂಕ ವಸೂಲ್ಮಾಡತಕ್ಕದ್ದು.

3. ಲೋಕಲ್ ಬೋರ್ಡು ರೂಲ್ಸಿನಲ್ಲಿನ 64, 65, 67, 68, 69ನೆ ರೂಲುಗಳಲ್ಲಿ ಕಂಡ ಷರತ್ತುಗಳಿಗನುಸಾರವಾಗಿ ಕಂಟ್ರಾಕ್ಟರು ನಡದುಕೊಳ್ಳಬೇಕು.

4. ಟೋಲು ಗೇಟಿ ಸಮೀಪದಲ್ಲಿರುವ ಗ್ರಾಮಗಳ ವ್ಯವಸಾಯ ಮಾಡುವ ರೈತರು ತಮ್ಮ ಗಾಡಿ ವಗೈರೆಗಳನ್ನು ಗೇಟು ಮೂಲಕ ತೆಗದುಕೊಂಡು ಹೋಗತಕ್ಕ ಬಗ್ಯೆ 21—12—07ರ ಮುಕ್ಕಾಂ 6008—15—114—07—6ನೆ ನಂಬರು ಪ್ರೊಸೀಡಿಂಗ್ಸ್ ಪ್ರಕಾರ ಒಂದು ವರುಷದ ಛಾರ್ಜು ಪೈಕಿ $\frac{1}{16}$ ಭಾಗವನ್ನು ಕೊಟ್ಟು ಡಿಸ್ಟ್ರಿಕ್ಟು ಬೋರ್ಡಿನವರ ಸಂಗಡ ಕಾಂಪೌಂಡು ಮಾಡಿಕೊಳ್ಳಬಹುದು. ಇತರರಿಗೆ $\frac{1}{8}$ ಭಾಗ ಕೊಡಬೇಕಾದದ್ದು.

ಶಿವಮೊಗ್ಗ ಡಿಸ್ಟ್ರಿಕ್ಟು

1909ನೆ ಇಸವಿ ಏಪ್ರೆಲ್ 17ನೆ ಶನಿವಾರ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್ ಯಾನೆ ನಡವಳಿಕೆಗಳು.

ಉದ್ಯೋಗತಃ ಮೆಂಬರರು.

ಹಾಜರು.

1. ಮಿ|| ಎ. ಮೃತ್ಯುಂಜಯ ಐಯ್ಯರ್, ಟ್ರೆಜರಿ ಅಸಿಸ್ಟೆಂಟ್ ಕಮಿಷನರ ಮತ್ತು ವೈಸ್ ಪ್ರೆಸಿಡೆಂಟರು.
2. ,, ಟಿ. ತಂಬೂಶೆಟ್ಟು, ಶಿವಮೊಗ್ಗ ಡಿವಿಜ಼ನ ಅಸಿಸ್ಟೆಂಟ್ ಕಮಿಷನರು.
3. ,, ಎಂ. ಶ್ರೀನಿವಾಸ ಮೂರ್ತಿಗಳು ಸಾಗರ ಡಿವಿಜ಼ನ ಅಸಿಸ್ಟೆಂಟ್ ಕಮಿಷನರವರು.
4. ,, ಆರ್. ವಿ. ಸುಂದರಂ ಐಯ್ಯರ್, ಶಿವಮೊಗ್ಗ ಡಿವಿಜ಼ನ ಎಗ್ಸಿಕ್ಯೂಟಿವ್ ಇಂಜನಿಯರವರು.
5. ,, ಮಹಮದ್ ಉಸ್ಮಾನ್ ಸಾಹೇಬರು, ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರು.

ಉದ್ಯೋಗಸ್ಥರಲ್ಲದ ಮೆಂಬರರು.

6. ಮಿ|| ನಾಡಿಗ ಶೀತಾರಾಮಪ್ಪನವರು, ಶಿವಮೊಗ್ಗ.
7. ,, ಉಬ್ರಾಣಿ ಶ್ಯಾನುಭೋಗ ಅಪ್ಪಾಜಪ್ಪನವರು, ಚೆನ್ನಗಿರಿ.
8. ,, ನಾಡಿಗ ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
9. ,, ಸಾಲೂರಿ ಭವಾನಿರಾಯರು, ಶಿಕಾರಿಪುರ ತಾಲ್ಲೂಕು.
10. ,, ನಾಡಿಗ ಭಾಸ್ಕರರಾಯರು, ಸೊರಬ ತಾಲ್ಲೂಕು.
11. ,, ಬರದವಳ್ಳಿ ಗುರಪ್ಪಗೌಡರು, ಸಾಗರ ತಾಲ್ಲೂಕು.
12. ,, ಶ್ಯಾಮಉಡುಪರು, ನಗರ ತಾಲ್ಲೂಕು.
13. ,, ಹುಮಚದಕಟ್ಟೆ ರಾಮರಾಯರು, ತೀರ್ಥಹಳ್ಳಿ ತಾಲ್ಲೂಕು.
14. ,, ಸಿ. ಸುಬ್ಬರಾಯರು, ಅಡ್ವೋಕೇಟ್, ಶಿವಮೊಗ್ಗ.
15. ,, ಖಾಜಿ ಸಯ್ಯದ್ ಮಹಮ್ಮದ್ ಸಾಹೇಬರು, ಶಿವಮೊಗ್ಗ.
16. ,, ರಟ್ಟಿಹಳ್ಳಿ ಪುಟ್ಟಪ್ಪನವರು, ಸಾಗರ.
17. ,, ಎ. ನರಸಿಂಹೈಯ್ಯಂಗಾರ್ರು, ಸಾಗರ.

ಉದ್ಯೋಗತಃ ಮೆಂಬರರು.

ಗ್ಯೆರ್ ಹಾಜರು.

1. ಮಿ|| ಎಂ. ನಾರಾಯಣರಾಯರವರು, ಡೆಪ್ಯುಟಿ ಕಮಿಷನರ ಮತ್ತು ಪ್ರೆಸಿಡೆಂಟರು.
2. ,, ತಿರುಮಲಾಚಾರ್ರು, ಸ್ಕೂಲ ಡೆಪ್ಯುಟಿ ಇನ್ಸ್ಪೆಕ್ಟರವರು.

ಉದ್ಯೋಗಸ್ಥರಲ್ಲದ ಮೆಂಬರರು.

ಗ್ಯೆರ್ ಹಾಜರು.

3. ಮಿ|| ನಾಡಿಗ ರಾಘವೇಂದ್ರಪ್ಪನವರು, ಕ್ಯಾಂಪ್ ಸಬ್ ತಾಲ್ಲೂಕು ಫವತ್ತಿ.
4. ,, ರವರೆಂಡ ಡಬ್ಲ್ಯು. ಈ. ಟಾಮ್ಲಿನ್ಸನ್ರವರು, ಶಿವಮೊಗ್ಗ.
5. ,, ಫಾದರ್. ಎಫ್. ಪೊಲ್ಸಿಯವರು, ಶಿವಮೊಗ್ಗ.
6. ,, ತಾಗರ್ತಿ ದೇವಪ್ಪನವರು, ಶಿಕಾರಿಪುರ.
7. ,, ಸಾಹುಕಾರಿ ವಾಮನರಾಯರು, ನಗರ.
8. ,, ದೇವಾಂಗಿ ರಾಮಣ್ಣಗೌಡರು, ತೀರ್ಥಹಳ್ಳಿ.

1\. ಇರಿಗೇಷನ್ ಸೆಸ್ ಫಂಡನ್ನು ಯಾವರೀತಿ ಉಪಯೋಗಿಸಬೇಕೆಂಬ ಬಗ್ಗ್ಯೂ ಮತ್ತು ಅದಕ್ಕೆ ಸಮ್ಮಂಧಪಟ್ಟ ಅಂದಾಜಾಗಳನ್ನು ಯಾವರೀತಿ ತಯಾರಿಸಬೇಕೆಂಬ ವಿಷಯದಲ್ಲಿ ತಲ್ಪಿದ ನಂಬರು 2086—ಲೋ. ಬೋ. 585-07-11ನೆ ಮುರ್ಕುಂ 24—9—08ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಗಿ ಹಾಲಿ ತಾಲ್ಲೂಕುಗಳಿಂದ ತಲ್ಪಿದ ತಃಖ್ತೆಗಳಲ್ಲಿ ಬೇಕಾದ ಎಲ್ಲಾ ವಿಷಯವೂ ನಮೂದು ಇಲ್ಲದಿರುವದರಿಂದ, ರೆವಿನ್ಯೂ ಕಮಿಷನರ ಸಾಹೇಬರವರ ನಂಬರು 9240-8ನೆ ಮುರ್ಕುಂ 11—3—09ನೆ ಯ ಹುಕುಮನ್ನು ಅನುಸರಿಸಿ ಸದರಿ ತಃಖ್ತೆಗಳನ್ನು ತಾಲ್ಲೂಕು ಚರ್ಚಿಸಿ ಆ ಪ್ರಕಾರ ಪ್ರತಿ ತಾಲ್ಲೂಕುಗಳಿಂದಲೂ ಸದರಿ ಬಜ್ಜೆಟ್ಟುಗಳನ್ನ ತರಿಸಿಕೊಳ್ಳತಕ್ಕದ್ದೆಂತ ತೀರ್ಮಾನಿಸಲಾಯಿತು.

2\. ಸುಪಾರೀ ಹಾಳತದಮೇಲೆ ವಿಧಿಸಿದ್ದ ಬಂದು ಆಣೆ ಸೆಸ್ಸಿನ ಶೇಕಡಾ 76 ಅಂಶವು ಮಜಾ ಆಗಿರುವದ್ದರಿಂದ ಉಂಟಾದ ನಷ್ಟಕ್ಕೆ ಪ್ರತಿಯಾಗಿ ನಂಬರು 1684-90—ಲ್ಯಾ. ರೆ. 490-06-3ನೆ ಮುರ್ಕುಂ 2—9—07 ಗವರ್ನಮೆಂಟ್ ಪ್ರೊಸಿಡಿಂಗ್ಸಿನಿಂದ ಅಡಿಕೆ ತೋಟಗಳಮೇಲೆ ವಿಧಿಸಿರುವ ಸ್ಪೆಷಲ್ ಸುಂಕದ ಶೇಕಡಾ 76 ಅಂಶವನ್ನ ಡಿಸ್ಟ್ರಿಕ್ಟು ಫಂಡಿಗೆ ಕೊಡುವದಕ್ಕೆ ಆಗುವದಿಲ್ಲ. ನಂಬರು 5873-81—ಲೋ. ಬೋ. 176-08-2ನೆ ಮುರ್ಕುಂ 19—12—08ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲ್ಪಟ್ಟು ರಿಕಾರ್ಡು ಮಾಡಲಾಯಿತು.

3. ಶಿವಮೊಗ್ಗ—ಎಡೆಹಳ್ಳಿ ರಸ್ತೆಗೆ ಆಗಬೇಕಾದ ಸ್ಪೆಷಲ್ ರಿಪೇರಿಗೋಸ್ಕರ ಫಾರೆಸ್ಟು ಡಿಪಾರ್ಟುಮೆಂಟನಿಂದ ಕಂ ರ್ಷ ತರೀಕು 1,500 ರೂಪಾಯಿ ಸ್ಯಾಂಕ್ಷನ್ ಮಾಡುವದಕ್ಕೆ ಆಗುವದಿಲ್ಲವಾಗಿ ಈ ಸದರಿ ಮೊಬಲಗನ್ನು ಡಿಸ್ಟ್ರಿಕ್ಟ್ ಫಂ ಲೇ ಒದಗಿಸತಕ್ಕದ್ದೆಂತ ತಲ್ಪಿದ ನಂಬರು 8663-5—ಲೋ. ಬೋ. 246 08-2ನೆ ಮುರ್ಕುಂ 5—3—09ನೆ ಮೆಂಟ್ ಪ್ರೊಸಿಡಿಂಗ್ಸು ಒದಲಾಗಿ ಅನುಕೂಲಾನುಸಾರವಾಗಿ ಡಿಸ್ಟ್ರಿಕ್ಟು ಫಂಡಿನಿಂದ ಸದರಿ ಮೊಬಲಗನ್ನು ಕೊಡತಕ್ಕದ್ದೆಂತ ನಿಸಲಾಯಿತು.

4. ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಬೋರ್ಡು ಮೀಟಿಂಗುಗಳಿಗೆ ಬರತಕ್ಕ ಸರಕಾರೀ ಉದ್ಯೋಗಸ್ಥರಲ್ಲದ ಮೆಂಬ ಟ್ರಾವಲಿಂಗ ಭತ್ತ್ಯವನ್ನು ಯಾವರೀತಿ ಪಾವತಿ ಮಾಡುವದಕ್ಕೆ ವಿಧಾನವನ್ನು ನಿರ್ಣಯಿಸಿ ಸದರಿ ವಿಧಾನದ ಅನುಸರಣೆಯಲ್ಲಿ ದರೂ ಬದಲಾವಣೆಯಾಗಬೇಕೆಂತ ಯೋಚಿಸುವ ಬೋರ್ಡುಗಳ ಅಭಿಪ್ರಾಯವನ್ನು ಗವರ್ನಮೆಂಟಿಗೆ ಕಳುಹಿಸತಕ್ಕದ್ದೆಂ ದ ನಂಬರು 8389-96—ಲೋ. ಬೋ. 216-08-1ನೆ ಮುರ್ಕುಂ 27—2—09ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಟ್ಟು ಸದರಿ ವಿಷಯದಲ್ಲಿ ಎಲ್ಲಾ ತಾಲ್ಲೂಕು ಬೋರ್ಡುಗಳ ಅಭಿಪ್ರಾಯವು ತಲ್ಪದಿರುವದರಿಂದ ಮುಂದಿನ ಮೀಟಿಂಗಿನಲ್ಲಿ ಚ ಕ್ಕದ್ದೆಂತ ತೀರ್ಮಾನಿಸಲಾಯಿತು.

5. ಯೂನಿಯನುಗಳಲ್ಲಿ ಮನೆ ತೆರಿಗೆ ಬಾಕಿ ವಸೂಲಿ ಕ್ರಮದಲ್ಲಿ ನೋಟೀಸ್ ಫೀ ವಿಧಾಯಿಸುವದನ್ನು ಇನ್ನೂ ವರುಷದ ವರಿಗೆ ಆಚರಣೆಗೆ ತರಬಾರದೆಂತಲೂ ಅನಂತರ ಈ ವಿಷಯವನ್ನು ಯೋಚಿಸತಕ್ಕದ್ದೆಂತ ತಲ್ಪಿದ ನಂಬರು 8119- ಲೋ. ಬೋ. 30-07-14ನೆ ಮುರ್ಕುಂ 19—2—09ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಒದಲ್ಪಟ್ಟು ರಿಕಾ ಮಾಡಲಾಯಿತು.

6. ಗತಿಸಿದ ಡಿಸ್ಟ್ರಿಕ್ಟು ಬೋರ್ಡು ಮೆಂಬರು ಮಿ|| ರಾಘವೇಂದ್ರಪ್ಪನವರಿಗೆ ಬದಲಾಗಿ ಮಿ|| ಚೋರಡಿ ರಾಮಚಂ ನವರನ್ನು ನೇಮಕ ಮಾಡಬಹುದೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1392 - 2-09ನೆ ಯಾದಿ ಒದಲಾಗಿ ಸದರಿ ನೇಮಕವನ್ನು ಅಂಗೀಕರಿಸಿ ಗವರ್ನಮೆಂಟನವರ ಸ್ಯಾಂಕ್ಷನ್ ಬಗ್ಯೆ ಶಿಫಾರಸು ಮಾಡತ ದ್ದೆಂತ ತೀರ್ಮಾನಿಸಲಾಯಿತು.

7. ಹೊನ್ನಾಳಿ ತಾಲ್ಲೂಕು ಚಿನಿಕಟ್ಟೆ ಹಾಲಪ್ಪನವರಿಗೆ ಅರ್ಧ ಖರೀದಿಗೆ ಒಂದು ಅಮೃತಮಹಲ್ ಹೋರಿಯನ್ನು ಕೊ ತಕ್ಕದ್ದೆಂತ ತಲ್ಪಿದ ನಂಬರು 1382—25—-09ನೆ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ಯಾದಿ ಒದಲ್ಪ ಬೋರ್ಡಿನವರಿಂದ ಅನುಮೋದಿಸಲ್ಪಟ್ಟಿತು.

8. ಶಿಕಾರಿಪುರ ತಾಲ್ಲೂಕು ಕಲ್ಲುಮನೆ ಗ್ರಾಮದಲ್ಲಿ ಒಂದು ದೊಡ್ಡಿಯನ್ನು ಸ್ಥಾಪಿಸುವ ವಿಷಯ ದಲ್ಲಿ ತಲ್ಪಿದ ಶಿವಮೊ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1300—14-2—09ನೆ ಯಾದಿ ಒದಲಾಗಿ ಅನುಮೋದಿಸಲ್ಪಟ್ಟಿತು.

9. ಶಿಕಾರಿಪುರ ತಾಲ್ಲೂಕು ಹಡೇನಂದಿಹಳ್ಳಿ ಮತ್ತು ಬೆಳಗಾವಿ ಯೂನಿಯನುಗಳಲ್ಲಿ 5 ರೂಪಾಯಿ ತಲಬಿನ 3 ಜನ ಡವಾಲಿಗಳಿಗೆ ಬದಲಾಗಿ 6 ರೂಪಾಯಿನ ಇಬ್ಬರು ಡವಾಲಿಗಳನ್ನು ನೇಮಿಸಬೇಕೆಂತ ಸದರಿ ಯೂನಿಯನ್ ಮೀಟಿಂಗುಗ ತೀರ್ಮಾನಗಳೊಂದಿಗೆ ತಲ್ಪಿದ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1091—11-1-09ನೆ ಯಾ ಒದಲ್ಪಟ್ಟು ಸದರಿ ಅಭಿಪ್ರಾಯವನ್ನು ಅನುಮೋದಿಸಿ ಗವರ್ನಮೆಂಟನವರ ಸ್ಯಾಂಕ್ಷನ್ ಬಗ್ಯೆ ಶಿಫಾರಸು ಮಾಡತಕ್ಕದ್ದೆಂತ ತೀ ರ್ಮಾನಿಸಲಾಯಿತು

10. ಶಿಕಾರಿಪುರ ತಾಲ್ಲೂಕು ಉಡಗಣಿಕೋಟೆ ಕಂದಕದಮೇಲಿನ ರಸ್ತೆಗೆ ಮರದ ಕಡಕಟ್ಟನ್ನು ಹಾಕಿಸಬೇಕೆಂಬ ವಿ ಯದಲ್ಲಿ ತಲ್ಪಿದ ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1021—3-2-09ನೆ ಯಾದಿ ಒದಲಾ ಹಾಜರಿದ್ದ ಎಗ್ಸಿಕ್ಯುಟಿವ್ ಇಂಜನಿಯರವರು ಸದರಿ ರಸ್ತೆ ತಕ್ಕಷ್ಟು ಅಗಲವಾಗಿರುವದ್ದರಿಂದ ಸದರಿ ಕಡಕಟ್ಟು ಅನವಶ್ಯಕವೆಂ ಅಭಿಪ್ರಾಯಪಟ್ಟದ್ದರಮೇಲೆ ಬೋರ್ಡಿನವರು ಅನುಮೋದಿಸಿದರು.

11. ಸೊರಬ ತಾಲ್ಲೂಕು ಛತ್ರದಹಳ್ಳಿಯಲ್ಲಿರುವ ಮುಸಾಫರ್ ಖಾನೆಯನ್ನು ಹರಾಜು ಹಾಕಿಸುವ ವಿಷಯದಲ್ಲಿ ತಲ್ಪಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1069—10-3-09ನೆ ಯಾದಿ ಒದಲ್ಪಟ್ಟು ಮುಂದಿನ ಮೀಟಿಂ ನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

12. ಸಾಗರ ತಾಲ್ಲೂಕು ಹಸನಮುಗ್ಗಿ ಹೊಳೆ ದಾಟುವದಕ್ಕೆ ದೋಣಿ ತಯಾರೀ ಬಗ್ಯೆ ಮರವನ್ನು ಮುಫತ್ತಾಗಿ ಕೊಡಿಸ ಬೇಕೆಂಬ ವಿಷಯದಲ್ಲಿ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ತಲ್ಪಿದ ನಂಬರು 785—5-1-09ನೆ ಯಾದಿ ಒದಲಾಗಿ ಡಿಸ್ಟ್ರಿಕ್ಟು ಫಂಡಿನಿಂದಲೆ ಒಂದು ದೋಣಿಯನ್ನು ತಯಾರಿಸಿ ಸಾಲಿಯಾನ ಕಂಟ್ರಾಕ್ಟುದಾರನಿಗೆ ಬಾಡಿಗೆಗೆ ಕೊಡುವದು ಯುಕ್ತವೆಂತಲೂ, ಇದಕ್ಕೋಸ್ಕರ ಒಂದು ಅಂದಾಜಾವನ್ನು ತರಿಸಿಕೊಳ್ಳತಕ್ಕದ್ದೆಂತಲೂ ತೀರ್ಮಾನಿಸಲಾಯಿತು

13. ಹುಮಚದಕಟ್ಟೆಯಲ್ಲಿ ಮಂಗಳವಾರವೂ, ತೀರ್ಥಹಳ್ಳಿಯಲ್ಲಿ ಬುಧವಾರವೂ ಸಂತೆಗಳಾಗಬೇಕೆಂತ ತಾಲ್ಲೂಕು ಮ ತ್ತು ಮ್ಯುನಿಸಿಪಲ್ ಬೋರ್ಡುಗಳ ತೀರ್ಮಾನದೊಂದಿಗೆ ತಲ್ಪಿದ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು 785—5-1-09ನೆ ಯಾದಿ ಒದಲಾಗಿ ಸದರೀ ಸ್ಥಳಗಳಲ್ಲಿ ಸಂತೆಗಳು ಅತ್ಯಾವಶ್ಯಕವಾಗಿರುವದ್ದರಿಂದ ಈ ವಿಷಯದಲ್ಲಿ ಗವ ರ್ನಮೆಂಟನವರ ಸ್ಯಾಂಕ್ಷನ್‌ಗೆ ಬರಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

14 ಈ ಕೆಳಗೆ ನಮೂದಿಸಲ್ಪಟ್ಟಿರುವ ಗ್ರಾಮಗಳಿಗೆ ಒಬ್ಬೊಬ್ಬ ಡವಾಲಿಗಳನ್ನು ನೇಮಿಸಬೇಕೆಂತ ತೀರ್ಮಾನಿಸಿದ ತಾಲ್ಲೂಕು ಬೋರ್ಡಿನವರ ಪ್ರೊಸಿಡಿಂಗ್ಸು ಕಾಪಿಯೊಡನೆ ತಲ್ಪಿದ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು 1709—23-2-09ನೆ ಯಾದಿ ಒದಲಾಗಿ ಈ ವಿಷಯ ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

15. ಶಿವಮೊಗ್ಗ ತಾಲ್ಲೂಕಿನಲ್ಲಿರುವ ಶೃಂಗೇರಿ ಮಠಕ್ಕೆ ಸೇರಿದ ಕೆಲವು ಗ್ರಾಮಗಳನ್ನು ಯೂನಿಯನ್ನಾಗಿ ಮಾಡುವ ವಿಷ ಯದಲ್ಲಿ ತಲ್ಪಿದ ಸದರೀ ಮಠದ ಅಸಿಸ್ಟೆಂಟ್ ಕಮಿಷನರವರ ನಂಬರು 613—13-1-09ನೆ ಯಾದಿ ಒದಲಾಗಿ ಮುಂದಿನ ಮೀಟಿಂಗಿನಲ್ಲಿ ಯೋಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

16. ಸ್ಯಾಂಕ್ಷನ್ ಬಗ್ಗೆ ಕಳುಹಿಸಿದ ಅಂದಾಜಾಗಳ ಪಟ್ಟಿಯನ್ನು ಓದಲಾಗಿ.

ನಂಬರು.	ತಾಲ್ಲೂಕು ಹೆಸರು.	ಕಾಮಗಾರಿಗಳು	ಮೊಬಲಗು.	ಷರಾ.
			ರೂ.	
1	ಕುಂಶಿ ...	ಲಾಂದ್ರದ ಕಂಭಗಳು ಮತ್ತು ಬರ್ನರ್ ವಗೈರೆ ಕೊಂಡು ಕೊಳ್ಳುವ ಬಗ್ಗ್ಯೂ ಮತ್ತು ಅವುಗಳನ್ನು ಆಯನೂರಿನಲ್ಲಿ ನೆಡುವ ಬಗ್ಗೆ.	45	ಅನುಮೋದಿಸಲಾಯಿತು
2	ಹೊನ್ನಾಳಿ ...	ಸಾಸ್ವೇಹಳ್ಳಿ ದೊಡ್ಡಿ ರಿಪೇರಿ	80	ಡಿಟೋ
3	ಕುಂಶಿ ...	ಆಯನೂರಿನಲ್ಲಿ ಲಂಟಾನಾ ವಗೈರೆ ತೆಗೆಯುವ ಬಗ್ಗೆ ...	50	ತಿರಸ್ಕರಿಸಲಾಯಿತು
4	ಶಿಕಾರಿಪುರ ...	ಬಡ್ಜೆಟ್ಟಿನಲ್ಲಿ ನಮೂದು ಮಾಡಿರುವ ಮೇರೆ ಶಿರಾಳಕೊಪ್ಪದ ಯೂನಿಯನ್ನಿನಲ್ಲಿ ಗಡಂಗದ ಭಾವಿ ರಿಪೇರಿಗೆ ಬದಲಾಗಿ ಬ್ರಾಹ್ಮಣರ ಕೇರಿಯಲ್ಲಿ V ಮಾದರಿ ಚರಂಡಿ ಕಟ್ಟುವ ಬಗ್ಗೆ.	260	ಅನುಮೋದಿಸಲಾಯಿತು
5	ಡಿಟೋ ...	ಶಿಕಾರಿಪುರ ಮುಸಾಫರಖಾನೆ ರಿಪೇರಿ ...	483	ಹಣವಿಲ್ಲದ್ದರ ಪ್ರಯುಕ್ತ ಅಮಾನತ್ತು.
6	ಸೊರಬ ...	ಉಳವಿ ಮುಸಾಫರಖಾನೆ ರಿಪೇರಿ ...	7	ಅನುಮೋದಿಸಲಾಯಿತು
7	ಹೊನ್ನಾಳಿ ...	ನ್ಯಾಮತಿ—ಆರುಂಡಿ ರಸ್ತೆಯ ಸಾಲೀಯಾನಾ ರಿಪೇರಿ ...	60	ಡಿಟೋ

17. ಬೋರ್ಡಿನವರ ಒಪ್ಪಿಗೆ ನಿರೀಕ್ಷಣೆಯ ಮೇಲೆ ಪ್ರೆಸಿಡೆಂಟರವರಿಂದ ಸ್ಯಾಂಕ್ಷನ್ ಮಾಡಲ್ಪಟ್ಟ ಈ ಕೆಳಗೆ ನಮೂದಿಸಿರುವ ಅಂದಾಜಾಗಳ ಮೆಮೊ ಓದಲ್ಪಟ್ಟು ಅನುಮೋದಿಸಲ್ಪಟ್ಟವು.

ನಂಬರು.	ತಾಲ್ಲೂಕು.	ಕಾಮಗಾರಿ.	ಮೊಬಲಗು.	ಷರಾ.
			ರೂ.	
1	ಚನ್ನಗಿರಿ ...	ಚನ್ನಗಿರಿ ಮುಸಾಫರಖಾನೆ ರಿಪೇರಿ ...	100	ಅನುಮೋದಿಸಲ್ಪಟ್ಟವು.
2	ತೀರ್ಥಹಳ್ಳಿ ...	ರಿವೈಜ್ಡ್ ಅಂದಾಜಾದ ಪ್ರಕಾರ ಮಾಳೂರು ಮುಸಾಫರಖಾನಾ ರಿಪೇರಿ.	359	ಡಿಟೋ

18. ಈ ಕೆಳಗೆ ನಮೂದಿಸಿರುವ ಅಂದಾಜಾಗಳು ಬೋರ್ಡಿನವರ ಸ್ಯಾಂಕ್ಷನ್ ನಿರೀಕ್ಷಣೆ ಮೇಲೆ ಪ್ರೆಸಿಡೆಂಟರವರಿಂದ ಕೌಂಟರ್ ಸೈನ್ ಮಾಡಲ್ಪಟ್ಟು ಎಗ್ಜಿಕ್ಯೂಟಿವ್ ಇಂಜನೀಯರ್ರವರಿಗೆ ವಾಪಸು ಮಾಡಲ್ಪಟ್ಟವುಗಳು ಅನುಮೋದಿಸಲ್ಪಟ್ಟವು.

ನಂಬರು.	ಕಾಮಗಾರಿ.	ಮೊಬಲಗು.	ಷರಾ.
		ರೂ.	
1	ಉಂಬಳೀ ಬೈಲು 3ನೆ ಕ್ಲಾಸು ಮುಸಾಫರಖಾನಾ ರಿಪೇರಿ. ...	144	ಅನುಮೋದಿಸಲ್ಪಟ್ಟವು.
2	ಡಿಟೋ ಹೊರಕಟ್ಟಡಗಳ ರಿಪೇರಿ	253	ಡಿಟೋ
3	ಸಾಲಗಂದ 3ನೆ ಕ್ಲಾಸು ಮುಸಾಫರಖಾನಾ ರಿಪೇರಿ	71	ಡಿಟೋ
4	ಡಿಟೋ ಶಿರಾಳಕೊಪ್ಪ	118	ಡಿಟೋ

19. ತಾಳಗುಪ್ಪೆಯಲ್ಲಿ ವೈದ್ಯಶಾಲೆಯನ್ನು ಸ್ಥಾಪಿಸಬೇಕೆಂಬ ವಿಷಯದಲ್ಲಿ ತಲ್ಪಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 477—11-3-09ನೆ ಯಾದಿ ಓದಲಾಗಿ ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

20. ಕೆಲವು ಅಬಸೀನಿಯನ್ ಟ್ಯೂಬ್‌ವೆಲ್ಸ್ ಆಪರೇಟಸ್‌ಗಳನ್ನ ತರಿಸಿಕೊಡಬೇಕೆಂತ ತಲ್ಪಿದ ಹೊನ್ನಾಳಿ ತಾಲ್ಲೂಕು ವೈಸ್ ಪ್ರೆಸಿಡೆಂಟರವರ ನಂಬರು 112—1-3-09ನೆ ರಿಪೋರ್ಟು ಓದಲಾಗಿ ಒಂದು ಸದರಿ ಆಪರೇಟಸ್ಸನ್ನು ತಾಲ್ಲೂಕು ಬೋರ್ಡಿಗೆ ತರಿಸಿಕೊಡಬಹುದೆಂತ ಅಭಿಪ್ರಾಯಪಟ್ಟರು.

21. 1909ನೆ ಫೆಬ್ರುವರಿ ಮಾಹೆಯಲ್ಲಿ ಲೋಕಲ್ ಫಂಡ್ ಜನರಲ್ ಮತ್ತು ಡಿಸ್ಟ್ರಿಕ್ಟ್ ಫಂಡಿನಿಂದ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಯವರಿಂದ ಮಾಡಲ್ಪಟ್ಟ ಖರ್ಚಿನ ತಖ್ತೆಯೊಂದಿಗೆ ತಲ್ಪಿದ ಎಗ್ಸಿಕ್ಯುಟಿವ್ ಇಂಜನಿಯರ್ ಸಾಹೇಬರವರ ನಂಬರು 333—27-3-09ನೆ ಡಾಕೆಟ್ ಓದಲಾಗಿ ರಿಕಾರ್ಡು ಮಾಡಲಾಯಿತು.

ಇಸ್ತಿಹಾರನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಸುಪಡಿಸುವದೇನೆಂದರೆ:—ಸನ್ 1909ನೆ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಜೂನ್ ಆಖೈರು ವರಿಗೆ ಒಂದು ವರ್ಷ ಪರಿಯಂತರ ಶಿವಮೊಗ್ಗಾ ಟವನ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿಗಳ ಮೇಲೆ ಟೋಲ್ ವಸೂಲ್ಮಾಡುವ ಹಕ್ಕನ್ನು 1909ನೆ ಇಸವಿ ಜೂನ್ 21ನೆ ಸೋಮವಾರ ದಿನ ಮಧ್ಯಾಹ್ನ 12 ಘಂಟೆಗೆ ಈ ಕೆಳಗೆ ಕಾಣಿಸುವ ಷರತ್ತುಗಳಿಗೆ ವಳಪಟ್ಟು ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ.

2. ಟವನ್ ಮುನಿಸಿಪಾಲಿಟಿಯ ಪ್ರೆಸಿಡೆಂಟರವರ ಆಫೀಸಿನಲ್ಲಿ:—ಪ್ರೆಸಿಡೆಂಟರವರಿಂದ ಅಥವಾ ಅವರ ಗೈರುಹಾಜರುನಲ್ಲಿ ವೈಸ್ ಪ್ರೆಸಿಡೆಂಟರವರಿಂದ ಹರಾಜು ಮಾಡಲ್ಪಡುತ್ತೆ.

3. ಸದರಿ ಹಕ್ಕಿನ ಹರಾಜನ್ನು ಆಖೈರು ಸವಾಲ್‌ದಾರ್ರ ಹೆಸರಿಗೆ ಉಳಿಸಲ್ಪಡುತ್ತೆ. ವೈಸ್ ಪ್ರೆಸಿಡೆಂಟರವರು ಸದರಿ ಹರಾಜನ್ನು ನಡಿಸುವ ಸಂದರ್ಭದಲ್ಲಿ ಹರಾಜು ಪ್ರೆಸಿಡೆಂಟರವರ ಮಂಜೂರಾತಿಗೆ ವಳಪಟ್ಟದ್ದಾಗಿ ಇರುತ್ತೆ. ಸವಾಲನ್ನು ಕಾರಣ ನಮೂದಿಲ್ಲದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸ್ವತಂತ್ರವನ್ನು ಪ್ರೆಸಿಡೆಂಟರವರು ಉಳಿಸಿಕೊಂಡಿರುತ್ತಾರೆ. ಹರಾಜಿನಲ್ಲಿ ಬರಬಹುದಾದ ದರಖಾಸ್ತು ಸಮರ್ಪಕವಾಗಿ ಇಲ್ಲವೆಂದು ತಿಳಿಯಬಂದರೆ ಸದರಿ ಹಕ್ಕನ್ನು ಟೆಂಡರ್ ಮೂಲಕ ಅಥವಾ ಅನ್ಯಾವ ರೀತಿಯಿಂದಾಗಲಿ ವಿಲೇವಾರಿಮಾಡುವ ಅಧಿಕಾರವನ್ನು ಸಹ ಪ್ರೆಸಿಡೆಂಟರವರು ಉಳಿಸಿಕೊಂಡಿರುತ್ತಾರೆ.

4. ಹರಾಜಿನಲ್ಲಿ ದರಖಾಸ್ತು ಮಾಡಬೇಕಾಗಿ ಅಪೇಕ್ಷೆಯುಳ್ಳ ಮನುಷ್ಯರು ಖುದ್ದು ಆಗಲೀ ಅಥವಾ ಏಜಂಟರ ಮೂಲಕವಾಗಲೀ ಹಾಜರಾಗಬೇಕು. ಪ್ರತಿ ಒಬ್ಬ ದರಖಾಸ್ತುದಾರನು 100—0—0 ರೂಪಾಯಿ ಠೇವಣಿಯನ್ನು ಮುಂಚಿತವಾಗಿಯೇ ಇಟ್ಟಿರಬೇಕು. ತಿರಸ್ಕರಿಸಲ್ಪಡುವ ದರಖಾಸ್ತುದಾರ್ರಿಗೆ ಈ ಮೊಬಲಗನ್ನು ಹರಾಜು ಖೈದು ಆದಕೂಡ್ಲೆ ವಾಪಸು ಮಾಡಲ್ಪಡುತ್ತೆ.

5. ಜಡ ದರಖಾಸ್ತುದಾರನು ಇನ್ನು ಮುಂದೆ ಕಂಟ್ರಾಕ್ಟರ್ ಎಂಬದಾಗಿ ಕರೆಯಲ್ಪಡುವನು. ಹರಾಜು ಸದರಿಯವರ ಹೆಸರಿಗೆ ನಿಂತ ಆದಕೂಡ್ಲೆ ಅವರು ಇಟ್ಟಿರುವ ಠೇವಣಿ ಮೊಬಲಗು ಸೇರಿ ಹರಾಜು ಮೊಬಲಗಿನ ಹನ್ನೆರಡನೇ ಒಂದುಭಾಗಕ್ಕೆ ಭರ್ತಿಯಾಗುವ ಮೊಬಲಗನ್ನು ಕೊಡತಕ್ಕದ್ದು. ಇದಲ್ಲದೆ 1909ನೆ ಜೂನ್ 28ನೆ ತಾರೀಖಿಗೆ ಅಥವಾ ಅದಕ್ಕೆ ಮುಂಚೆ ಹರಾಜು ಮೊಬಲಗಿನ ಹನ್ನೆರಡನೆ ಎರಡು ಭಾಗಕ್ಕಾಗುವಷ್ಟು ಮೊಬಲಗನ್ನು ಸಹಾ ಕೊಡತಕ್ಕದ್ದು. ಸದರಿ ತಾರೀಖಿನೊಳಗೆ ತಾನು ಮತ್ತು ತನ್ನ ವಾರಸುದಾರ್ರು ಈ ಕಳಗೆ ನಮೂದಾಗುವ ಷರತ್ತುಗಳಂತೆ ನಡದುಕೊಳ್ಳುವದಕ್ಕೆ ಬದ್ಧರಾಗಿ ಇರುವದಾಗಿ ಛಾಪಾಕಾಗದದಮೇಲೆ ಒಂದು ಒಡಂಬಡಿಕೆಯನ್ನು ಬರದುಕೊಡಬೇಕು. ಮೇಲೆ ಹೇಳಿದಂತೆ ಠೇವಣಿ ಇಡುವದರಲ್ಲಾಗಲಿ ಅಥವಾ ಒಡಂಬಡಿಕೆಯನ್ನು ಬರದುಕೊಡುವದರಲ್ಲಾಗಲೀ, ತಪ್ಪಿದಲ್ಲಿ ಪೂರ್ವಭಾವಿಯಾಗಿ ಇಟ್ಟದ್ದ ಠೇವಣೀ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕ್ಕೊಂಡು, ಮುಂದಿನ ಟೋಲ್ ವಸೂಲ್‌ಮಾಡುವ ಹಕ್ಕನ್ನು ಪ್ರೆಸಿಡೆಂಟರವರಿಂದ ಕೂಡ್ಲೆ ಪುನಹಾ ಹರಾಜು ಅಥವಾ ಇತರೇ ವಿಧವಾಗಿ ವಿಲೇವಾರಿ ಮಾಡಲ್ಪಡುತ್ತೆ.

ಷರತ್ತುಗಳು.

(1) ಹರಾಜಿನ ಮೊಬಲಗನ್ನು 1909ನೆ ಇಸವಿ ಜುಲೈ ಮೊದಲುಗೊಂಡು ಸಮವಾದ ಮಾಹೇಯಾನ ಖಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದಾಗಿರುತ್ತೆ. ಪ್ರತಿ ಒಂದು ಖಿಸ್ತು ಮೊಬಲಗು ಆ ತಿಂಗಳಿನ ಗುತ್ತಿಗೆಯಾಗಿ ಭಾವಿಸಲ್ಪಡುತ್ತೆ ಮತ್ತು ಅದನ್ನು ಆ ತಿಂಗಳಿನ 20ನೆ ತಾರೀಖು ಅಥವಾ ಅದಕ್ಕೆ ಮುಂಚಿತವಾಗಿ ಖಜಾನೆಗೆ ಜಮಾ ಮಾಡಿಸತಕ್ಕದ್ದಾಗಿರುತ್ತೆ ಇದಕ್ಕೆ ತಪ್ಪಿದರೆ ಸದರಿ ಕಂಟ್ರಾಕ್ಟದಾರನು ಟೋಲನ್ನು ವಸೂಲ್ಮಾಡುವದನ್ನು ಮನ್ನಾ ಮಾಡುವದಕ್ಕೂ ಅವನು ಠೇವಣಿ ಇಟ್ಟಿರುವ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಕ್ಕು ಉಳಿದಿರುವ ಕಾಲಗಳ ಟೋಲ್ ವಸೂಲಿ ಹಕ್ಕನ್ನು ಯುಕ್ತಾನುಸಾರವಾಗಿ ಪುನಃ ಹರಾಜ್ ಮೂಲಕ ಟೆಂಡರು ಮೂಲಕ ಅಥವಾ ಇತರೇವಿಧವಾಗಿ ವಿಲೇವಾರಿಮಾಡಲು ಪ್ರೆಸಿಡೆಂಟರವರಿಗೆ ಸ್ವತಂತ್ರವಿರುತ್ತೆ. ಸದರಿ ಎರಡನೆ ಹರಾಜು ಅಥವಾ ವಿಲೇವಾರಿಯಲ್ಲಿ ಉಂಟಾದ ನಷ್ಟಕ್ಕೆ ಷರತ್ತಿಗೆ ತಪ್ಪಿಹೋದ ಕಂಟ್ರಾಕ್ಟದ್ದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಅದರಿಂದ ಆಗುವ ಆದಾಯಕ್ಕೆ ಅವನಿಗೆ ಹಕ್ಕು ಇರುವದಿಲ್ಲ. ಆದರೆ ನಷ್ಟವಾಗುವ ಸಂದರ್ಭದಲ್ಲಿ ಅಂದರೆ ಮೊದಲು ಹರಾಜಿಗಿಂತ ಎರಡನೇ ಹರಾಜಿನಲ್ಲಿ ಕಡಮೆಯಾಗುವ ಪಕ್ಷದಲ್ಲಿ ಕಮ್ಮಿಯಾದ ಮೊಬಲಗನ್ನು ಭರ್ತಿ ಮಾಡುವದಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿರುತ್ತಾನೆ. ನಷ್ಟವಾದ ಸಂದರ್ಭದಲ್ಲಿ ದಂಡವಾಗಿ ತೆಗೆದುಕೊಂಡ ಠೇವಣಿ ಮೊಬಲಗಿನಿಂದ ಅಂಥಾ ನಷ್ಟದ ಭರ್ತಿ ಬಗ್ಗೆ ಉತ್ತಾರ ಹಾಕಲ್ಪಡುವುದು. ದಂಡವಾಗಿ ಇಟ್ಟುಕೊಂಡ ಠೇವಣಿ ಮೊಬಲಗು ನಷ್ಟಕ್ಕಿಂತ ಜಾಸ್ತಿಯಾಗಿ ಇರುವ ಸಂದರ್ಭದಲ್ಲಿ ಅಂಥಾ ಠೇವಣೀ ಮೊಬಲಗು ಪೂರಾವನ್ನೂ ಮುನಿಸಿಪಾಲಿಟಿಗೆ ಜಮಾ ಮಾಡಲ್ಪಡುತ್ತೆ.

(2) ಠೇವಣಿಯಾಗಿ ಇಟ್ಟಿರುವ ಹರಾಜು ಮೊಬಲಗಿನ 12ರ ಮೂರನೇ ಭಾಗವನ್ನು ಕಂಟ್ರಾಕ್ಟುದಾರನು ಷರತ್ತು ಪ್ರಕಾರ ನಡದುಕೊಳ್ಳುವ ಖಾತ್ರಿಗೋಸ್ಕರವಾಗಿ ಇಟ್ಟದ್ದೆಂದು ಭಾವಿಸಲ್ಪಡುತ್ತೆ. ಅದನ್ನು ದಂಡವಾಗಿ ಸೇರಿಸಿಕೊಳ್ಳದೇ ಇದ್ದ ಪಕ್ಷದಲ್ಲಿ ಆಖೈರು ತಿಂಗಳಿನಗಳ ಖಿಸ್ತಿಗೆ ಜಮಾ ಮಾಡಿಸಲ್ಪಡುತ್ತೆ.

(3) ಯಾವ ಕಾರಣದಿಂದಲೇ ಆಗಲೀ ಕಂಟ್ರಾಕ್ಟ್‌ದಾರನು ಖಿಸ್ತು ಮೊಬಲಗಿನ ರಿಮಿಷನ್ ಆಗಲೀ ಅಥವಾ ಕಡಮೆಯಾಗಿ ತೆಗದುಕೊಳ್ಳುವ ರಿಯಾಯತಿಯನ್ನಾಗಲೀ ಕೇಳಲು ಹಕ್ಕು ಇರುವದಿಲ್ಲ.

(4) ಖಿಸ್ತು ಪ್ರಕಾರ ಪಾವತೀಮಾಡದೇ ಬಾಕಿಯಲ್ಲಿ ಬಂದ ಮೊಬಲಗಿನಮೇಲೆ ಶೇಕಡಾ ಸಾಲಿಯಾನಾ 6 ರೂಪಾಯಿನಂತೆ ತಪ್ಪಿಹೋದ ತಾರೀಖು ಲಾಗಾಯಿತು ಬಡ್ಡಿಯನ್ನು ವಸೂಲಿ ಮಾಡಲ್ಪಡುವದು.

(5) ಟೋಲ್‌ಗಳು ಈ ಕೆಳಗೆ ನಮೂದು ಮಾಡಿರುವ ದರಗಳ ಪ್ರಕಾರ ವಸೂಲ್ ಮಾಡತಕ್ಕದ್ದು.

		ರೂ.	ಅ.	ಪೈ.
1.	ಒಂದು ಜೊತೆ ಅಥವಾ ಅನೇಕ ಜೊತೆ ಎತ್ತು, ಕೋಣ, ಕುದುರೆ, ಕತ್ತೆ, ಇವುಗಳಿಂದ ಎಳೆಯಲ್ಪಡುವ ಭರ್ತಿ ಗಾಡಿ 1ಕ್ಕೆ.	0	4	0
2.	ಒಂದು ಜೊತೆ ಅಥವಾ ಅನೇಕಜೊತೆ ಎತ್ತು, ಕೋಣ, ಕುದುರೆ, ಕತ್ತೆ, ಇವುಗಳಿಂದ ಎಳೆಯಲ್ಪಡುವ ಖಾಲಿ ಗಾಡಿ 1ಕ್ಕೆ.	0	2	0
3.	ಒಂದು ಎತ್ತು, ಕೋಣ, ಕುದುರೆ ಯಾ ಕತ್ತೆಯಿಂದ ಎಳೆಯಲ್ಪಡುವ ಭರ್ತಿ ಗಾಡಿ 1ಕ್ಕೆ ...	0	2	0
4.	ಡಿಟೋ ಡಿಟೋ ಖಾಲಿ ಗಾಡಿ 1ಕ್ಕೆ ...	0	1	0

(6) ಗಾಡಿಗಳ ಮೇಲೆ ವಸೂಲ್ ಮಾಡಬೇಕಾದ ಟೋಲ್ ದರಗಳನ್ನು ಸ್ಪಷ್ಟವಾಗಿ ತಿಳಿಯುವಹಾಗೆ ಕನ್ನಡದಲ್ಲಿಯೂ ಮತ್ತು ಇಂಗ್ಲೀಷಿನಲ್ಲಿಯೂ ಒಂದು ಬೋರ್ಡುಮೇಲೆ ಬರದು ಟೋಲ್‌ಗೇಟ್ ಸಮೀಪ ತಗಲುಹಾಕತಕ್ಕದ್ದು.

(7) ಒಂದು ಗಾಡಿಗೆ ಒಂದೇ ದಿವಸಕ್ಕೆ ಎರಡಾವರ್ತಿ ಟೋಲ್ ವಸೂಲು ಮಾಡಕೂಡದು, ರಾತ್ರಿ 12 ಘಂಟೆಯಿಂದ ಮರುದಿನ ರಾತ್ರಿ 12 ಘಂಟೆ ವರಿಗೆ ಒಂದು ದಿನವೆಂದು ಭಾವಿಸಲ್ಪಡುತ್ತೆ.

(8) ದಂಡಿನವರನ್ನು ಸಾಗಿಸತಕ್ಕ ಬಗ್ಗೆ ಬರುವವರ ಗಾಡಿಗಳಮೇಲೂ ಮಿಲಿಟೆರಿ ಸಾಮಾನುಗಳನ್ನೂ ಹೇರಿದ ಗಾಡಿಗಳ ಮೇಲೂ ಡ್ಯೂಟೀಮೇಲೆ ಪ್ರಯಾಣಮಾಡುವ ಪೊಲೀಸ್ ಆಫಿಸರ ಗಾಡಿಯಮೇಲೂ ಸರ್ಕಾರಿ ಗಾಡಿಗಳಮೇಲೂ ಆಯಾಯ ಅಧಿಕಾರಿಗಳಿಂದ ಟೋಲ್ ವಿನಾಯಿತೀ ಬಗ್ಗೆ ಕೊಡಲ್ಪಟ್ಟ ಬಹುದಾದ ಸರ್ಟಿಫಿಕೇಟಗಳ/ಆಧಾರಗಳಮೇಲೂ ವಿನಾಯಿತಿ ಕೇಳಿದ್ದಲ್ಲಿ ಸದರಿ ಗಾಡಿಗಳಮೇಲೂ ಟೋಲ್ ವಸೂಲ್ ಮಾಡಕೂಡದು.

(9) ಮುನಿಸಿಪಾಲಿಟಿಯಿಂದ ಮೊಹತರ್ಫಾ ಕಂದಾಯ ವಸೂಲಿ ಮಾಡಲ್ಪಟ್ಟಿರುವ ಗಾಡಿಗಳ ಮೇಲೆ ಟೋಲ್ ವಸೂಲ್ ಮಾಡಕೂಡದು. ಅಂಥಾ ಗಾಡಿಗಳಿಗೆ ವೈಸ್ ಪ್ರೆಸಿಡೆಂಟರವರು ನಂಬರ್ ಹಾಕಿಸುವದಲ್ಲದೆ ಒಂದು ಪ್ಯಾಸನ್ನೂ ಸಹ ಕೊಡುತ್ತಾರೆ.

(10) ಗಾಡಿಗಳ ಮೇಲೆ ಟೋಲ್ ವಸೂಲು ಮಾಡತಕ್ಕ ವಿಧಾನವು ಸಾಧಾರಣವಾಗಿ ಲೇಟ್ ಚೀಫ್ ಕಮಿಷನರವರ ನಂಬರ್ 274, ತಾರೀಖು 4ನೆ ನವಂಬರ್ 1876ನೆ ಇಸವಿ ನೋಟಿಫಿಕೇಷನ್ ಷರತ್ತಿಗೆ ಒಳಪಡತಕ್ಕದ್ದು.

(11) ಕಂಟ್ರಾಕ್ಟ್‌ದಾರನು ಪ್ರತಿ ಒಂದು ಗೇಟಿನಲ್ಲಿಯೂ ಪ್ರತಿ ದಿನವೂ ಕರಾರ್‌ಪಾಕ್ ವಸೂಲ್‌ಮಾಡುವ ಮೊಬಲಗು ತೋರಿಸುವ ಬಗ್ಗೆ ಕ್ರಮವಾಗಿ ಲೆಖ್ಖವನ್ನಿಡಬೇಕು. ಪ್ರತಿ ತಿಂಗಳ ಆಖ್ಯೆರಿನಲ್ಲಿಯೂ ಅದರ ಒಂದು ನಕಲನ್ನು ತನಿಖೆಬಗ್ಗೆ ವೈಸ್ ಪ್ರೆಸಿಡೆಂಟರವರ ಆಫೀಸಿಗೆ ಕಳುಹಿಸಬೇಕು. ಈ ಲೆಖ್ಖವನ್ನು ಪ್ರೆಸಿಡೆಂಟರೂ, ವೈಸ್ ಪ್ರೆಸಿಡೆಂಟರೂ, ಶಿವಮೊಗ್ಗ ತಾಲ್ಲೂಕು ಅಮಲ್ದಾರರೂ, ಮತ್ತು ಈ ಬಗ್ಗೆ ಪ್ರೆಸಿಡೆಂಟರವರಿಂದ ಅಧಿಕಾರ ಹೊಂದಿದ ಇತರೇ ಹುದ್ದೇದಾರರೂ, ಅಥವಾ ಮುನಿಸಿಪಲ್ ಕೌನ್ಸಿಲರ್, ತನಿಖೆ ಮಾಡತಕ್ಕ ಬಗ್ಗೆ ಯಾವಾಗಲೂ ಅವಕಾಶ ಇರಬೇಕು.

(12) ಪ್ರೆಸಿಡೆಂಟರವರ ಅಪ್ಪಣೇ ಶಿವಾಯಿ ಈ ಹಕ್ಕನ್ನು ಖರೀದಿ, ದಾನ, ಅಥವಾ ಇತರವಿಧವಾಗಿ ವಿಲೇವಾರಿ ಮತ್ತು ತಮ್ಮವಳಗೆ ಇತರರಿಗೆ ವಹಿಸಕೂಡದು ಈರೀತಿ ಪರಾಧೀನ ಮಾಡಲು ಕೊಡುವ ದರಖಾಸ್ತನ್ನು ಕಾರಣವನ್ನು ತಿಳಿಸದೆ ತಿರಸ್ಕರಿಸುವ ಸ್ವತಂತ್ರವನ್ನು ಪ್ರೆಸಿಡೆಂಟರವರೇ ಇಟ್ಟುಕೊಂಡಿರುತ್ತಾರೆ.

(13) ಕಂಟ್ರಾಕ್ಟುದಾರರು ಎಲ್ಲಾ ಗೇಟುಗಳಲ್ಲೂ ಟೋಲನ್ನು ವಸೂಲ್‌ಮಾಡುವದಕ್ಕೆ ನೇಮಿಸಿಕೊಳ್ಳುವ ಜನಗಳ ಹೆಸರುಗಳನ್ನು ವೈಸ್ ಪ್ರೆಸಿಡೆಂಟರವರ ಆಫೀಸಿಗೆ ರಿಪೋರ್ಟು ಮಾಡತಕ್ಕದ್ದು.

(14) ಈ ಎಲ್ಲಾ ಷರತ್ತುಗಳ ಮೇಲೆ ಸರಿಯಾಗಿ ನಡದುಕೊಳ್ಳುವದಕ್ಕೆ ಕಂಟ್ರಾಕ್ಟುದಾರನು ಜವಾಬ್ದಾರನಾಗಿರುತ್ತಾನೆ. ತಪ್ಪಿದಲ್ಲಿ ಪ್ರತಿಯೊಂದು ತಪ್ಪಿತಕ್ಕೂ 50 ರೂಪಾಯಿಗೆ ಮೀರದಂತೆ ಕಂಟ್ರಾಕ್ಟುದಾರನಮೇಲೆ ಜುಲ್ಮಾನೆಯನ್ನು ವಿಧಿಸುವದಕ್ಕೆ ಪ್ರೆಸಿಡೆಂಟರವರಿಗೆ ಅಧಿಕಾರವಿರುತ್ತೆ. ಈರೀತಿ ವಿಧಿಸಿದ ಜುಲ್ಮಾನೆಯನ್ನು ಕಂಟ್ರಾಕ್ಟುದಾರನು ಕೂಡ್ಲೇ ಪಾವತಿ ಮಾಡತಕ್ಕದ್ದು. ತಪ್ಪಿದರೆ ಇನ್ನು ಮುಂದೆ ಕಂಟ್ರಾಕ್ಟುದಾರನು ಟೋಲನ್ನು ವಸೂಲ್ಮಾಡುವದನ್ನು ಮನ್ನಾ ಮಾಡಿಸುವದಕ್ಕೂ, ಉಳಿದ ಕಾಲಗಳ ಸದರಿ ಹಕ್ಕನ್ನು ಹರಾಜ್ ಅಥವಾ ಇತರವಿಧವಾಗಿ ವಿಲೇವಾರಿ ಮಾಡುವದಕ್ಕೂ ಸಹ ಪ್ರೆಸಿಡೆಂಟರವರಿಗೆ ಅಧಿಕಾರವಿರುತ್ತೆ. ಇಂಥಾ ಎರಡನೇ ಹರಾಜ್ ಅಥವಾ ವಿಲೇವಾರಿಯ ಮೇಲೆ ಹೇಳಿರುವ ಒಂದನೇ ಷರತ್ತಿನಲ್ಲಿ ವಿವರಿಸಿರುವಂತೆ ಕಂಟ್ರಾಕ್ಟುದಾರನನ್ನು ನಷ್ಟಕ್ಕೆ ಗುರಿ ಮಾಡಲ್ಪಡುತ್ತೆ.

(15) ಮೇಲೆ ಹೇಳಿದಂತೆ ಜುಲ್ಮಾನೆ ವಿಧಿಸುವದು ಅಥವಾ ಹರಾಜನ್ನು ರದ್ದುಮಾಡುವದು ಮತ್ತು ಕಂಟ್ರಾಕ್ಟುದಾರನನ್ನು ಅಥವಾ ಅವನ ನೌಕರರನ್ನು ಯಾವದಾದರೂ ತಕ್ಸೀರಿಗಾಗಿ ಪ್ರಾಸಿಕ್ಯೂಷನ್ ಮಾಡುವದಕ್ಕೇ ಆಗಲಿ ಅಥವಾ ಅವರಮೇಲೆ ಲಾ ಅನುಸರಿಸಿ ಇನ್ನು ಯಾವವಿಧವಾದ ಕ್ರಮ ನಡಿಸುವದಕ್ಕೇ ಆಗಲೀ ಅಡ್ಡಿಯಾಗಿ ಇರುವದಿಲ್ಲ.

ಎ. ಮೃತ್ಯುಂಜಯ ಐಯ್ಯರ್,
ಫಾರ್ ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 21ನೆ ಮೇ 1909ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಚಿಕ್ಕಮಗಳೂರು, ತರೀಕೆರೆ, ಎಡೇಹಳ್ಳಿ, ಕೊಪ್ಪ ಮ್ಯುನಿಸಿಪಾಲಿಟಿಗಳಲ್ಲಿಯೂ ಮತ್ತು ಸಕ್ರೆಪಟ್ಣ ಯೂನಿಯನ್ನಲ್ಲಿಯೂ ನಡಿಯುವ ಸಂತೆಗಳಲ್ಲಿ ಸನ್ 1909ನೆ ಇಸವಿ ಜುಲೈ 1ರ ಲಾ

ಗಾಯಿತು 1910ನೆ ಇಸವಿ ಜೂನ್ 30ರ ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯನ್ನು ಪರಸ್ಪರ ಚಿಕ್ಕಮಗಳೂರು ವೈಸ್ ಪ್ರೆಸಿಡೆಂಟರವರು, ತರೀಕೆರೆ ತಾಲ್ಲೂಕು ಅಮಲ್ದಾರ್ರವರು, ಎಡೇಹಳ್ಳಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರವರು, ಕೊಪ್ಪ ತಾಲ್ಲೂಕು ಅಮಲ್ದಾರ್ರವರು ಮತ್ತು ಕಡೂರು ತಾಲ್ಲೂಕು ಅಮಲ್ದಾರ್ರವರು ತಮ್ಮ ತಮ್ಮ ಆಫೀಸುಗಳಲ್ಲಿ ಈ ಕೆಳಗೆ ಪ್ರತಿ ಒಂದು ಸ್ಥಳದ ಬಾಜೂದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಿ ಸುತ್ತಾರೆ :—

ಚಿಕ್ಕಮಗಳೂರು ...	ಹರಾಜು ತಾರೀಖು 21ನೆ ಜೂನ್ 1909ನೆ ಸೋಮವಾರ.
ತರೀಕೆರೆ ...	
ಎಡೇಹಳ್ಳಿ ...	
ಕೊಪ್ಪ ...	
ಸಕ್ರೆಪಟ್ಣ ...	

2. ಹರಾಜಿನಲ್ಲಿ ಪಡಿಯತಕ್ಕವರು ಸಂತೆಯ ದಿವಸ ಮಾರ್ಕಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ತರದಂತೆಯೇ ಗಾಡಿ ಮತ್ತು ಜಾನ್ವಾರು ವಗೈರೇಗಳ ಮೇಲೆ ಫೀ ವಸೂಲು ಮಾಡತಕ್ಕದ್ದು. ಸದರೀ ದರಕ್ಕಿಂತ ಜಾಸ್ತಿ ದರ ವಸೂಲ್ಮಾಡಕೂಡದು.

3. ಈ ಹರಾಜು ಕಡೂರು ಡಿಸ್ಟ್ರಿಕ್ಟು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಸದರೀಯವರು ಎಲ್ಲಾ ದರಖಾಸ್ತುಗಳಿಗಿಂತ ಜಾಸ್ತಿಯಾದ ಅಥವಾ ಇನ್ಯಾವ ದರಖಾಸ್ತುಗಳನ್ನ ಅಂಗೀಕರಿಸುವ ದಕ್ಕೆ ಆಗಲಿ ಅಧಿಕಾರ ಉಳ್ಳವರಾಗಿರುತ್ತಾರೆ.

4. ಕಂಟ್ರಾಕ್ಟುದಾರನು ಗುತ್ತಾ ಮೊಬಲಗನ್ನು ಹನ್ನೆರಡು ತಿಂಗಳ ಸಮಕಂತು ಪ್ರಕಾರ ವಸೂಲು ಕೊಡತಕ್ಕದ್ದು. ಪ್ರತಿ ಮಾಹೆಯ ಕಂತನ್ನು ಆ ಮಾಹೆ ಆಖೈರಾದ ತಾರೀಖು 10 ರೊಳಗೆ ವಸೂಲ್ ಕೊಟ್ಟು ರಶೀತಿ ಪಡಿಯತಕ್ಕದ್ದು.

5. ಹರಾಜ್ ಕೈದಾದಕೂಡಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಬಾಬತು ಕಂಟ್ರಾಕ್ಟು ಯಾ ಕಂತು ಮೊಬಲಗನ್ನು ಡಿಪಾಜಟ್ಟಿನಲ್ಲಿ ಇಡಬೇಕು. ಕಂಟ್ರಾಕ್ಟು ಷರತ್ತುಗಳಮೇಲೆ ಸರಿಯಾಗಿ ನಡದುಕೊಂಡರೆ ಡಿಪಾಜಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಂತು ಬಗ್ಯೆ ವಸೂಲ್ ಕೊಡುತ್ತೆ.

6. ಹರಾಜು ಖೈದಾದ ಕೂಡಲೆ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಹರಾಜ್ ಹಕ್ಕುದಾರಿಯನ್ನು ಪುನಹ ಹರಾಜ್ ಮಾಡುತ್ತೆ. ಎರಡನೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಷುರು ಕಂಟ್ರಾಕ್ಟುದಾರ್ ಯಾ ಹರಾಜುದಾರನನ್ನು ಗುರಿಪಡಿಸುತ್ತೆ. ಪ್ರತಿ ಮಾಹೆಯಲ್ಲು ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ವಸೂಲ್ ಕೊಡಲು ತಪ್ಪಿದರೆ ಪಾವತಿ ಮಾಡಬೇಕಾಗಿರುವ ಮೊಬಲಗಿನಮೇಲೆ ಪಾವತೀ ಮಾಡುವ ತಾರೀಖಿನ ವರಿಗೆ ಮಾಹೇಯಾನಾ ರೂಪಾಯಿ ಒಂದಕ್ಕೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನ ವಸೂಲ್ ಮಾಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡುಗಳ ಪ್ರೆಸಿಡೆಂಟರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಷುರು ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಹರಾಜ್ ಮಾಡಲ್ಪಡುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರಿ ನಫೆಗೆ ಹಕ್ಕುದಾರನಾಗಿರುವದಿಲ್ಲ.

7. ಕಂಟ್ರಾಕ್ಟುದಾರನು ಯಾವ ಕಾರಣದಿಂದಲೂ ಗುತ್ತಿಗೆ ಮೊಬಲಗನ್ನು ಯಾವ ರಿಮಿಷನ್ ಮಾಡೋಣವನ್ನಾಗಲೀ ಅಥವಾ ಕಮ್ಮಿ ಮಾಡೋಣವನ್ನಾಗಲಿ ಯಾ ಪರಿಹಾರ ದ್ರವ್ಯವನ್ನಾಗಲೀ ಕೇಳಕೂಡದು.

8. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಕರಾರ್ವಾಕಾ ಲೆಖ್ಖವನ್ನು ಇಡಬೇಕು. ಸದರಿ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಅಧಿಕಾರಿಗಳು ಅಪೇಕ್ಷಿಸಿದಾಗ ತನಿಖೆಗೆ ಹಾಜರ್ಪಡಿಸಬೇಕು.

9. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನ ಕಡೆ ನವುಕರರೇ ಆಗಲಿ ವಿರೋಧವಾಗಿ ನಡದುಕೊಂಡರೆ ಸದರಿ ಕಂಟ್ರಾಕ್ಟನ್ನು ವಜಾ ಮಾಡುತ್ತೆ ಮತ್ತು ಪ್ರೆಸಿಡೆಂಟ್ ಸಾಹೇಬರವರ ಮುನಾಸಬ್ 25 ರೂಪಾಯಿಗಳಿಗೆ ಮೀರದಂತೆ ಕಂಟ್ರಾಕ್ಟುದಾರ್ರಿಗೆ ಜುಲ್ಮಾನೆ ವಿಧಿಸುವದರಲ್ಲಿ ಬರುತ್ತೆ.

ವಸೂಲು ಮಾಡಬೇಕಾದ ದರಗಳು.

ನಂಬರ್.	ಬಾಬುಗಳು.	ಚಿಕ್ಕಮಗಳೂರು.	ತರೀಕೆರೆ.	ಎಡೇಹಳ್ಳಿ.	ಕೊಪ್ಪ.	ಸಕ್ರೆಪಟ್ಣ.
		ಆ. ಪೈ.	ಆ. ಪೈ.	ಆ. ಪೈ.	ಆ. ಪೈ.	ಆ. ಪೈ.
1	ಭರ್ತಿ ಗಾಡಿ 1ಕ್ಕೆ	1 0	1 0	1 0	1 0	1 0
2	ಖಾಲಿ ಡಿಟೋ	0 3	0 3	0 3	0 3	0 6
3	ಎತ್ತು, ಹಸು, ಎಮ್ಮೆ, ಕೋಣ ಮತ್ತು ಕುದುರೆ ಹೊರೆ ಪ್ರತಿ 1ಕ್ಕೆ	0 3	0 6	0 6	0 6	0 6
4	ಕತ್ತೆ ಹೊರೆ ಪ್ರತಿ 1ಕ್ಕೆ	0 1	0 3	0 3	0 3	0 3
5	ತಲೆ ಹೊರೆ ಡಿಟೋ	0 3	0 1	0 1	...	0 3
6	ಖಾಲಿ ಎತ್ತು, ಹಸು, ಎಮ್ಮೆ, ಕೋಣ, ಕುದುರೆ ಪ್ರತಿ 1ಕ್ಕೆ ...	...	0 3	...	0 3	...
7	ಆಡು, ಅಥವಾ ಕುರಿಕೆ	...	0 1	0 1	0 1	...
8	ಗುಡಾರ 1ಕ್ಕೆ	1 0	...	...	...	1 0
9	ಸಂತೆ ಕಟ್ಟಡದಲ್ಲಿ ಅಂಗಡಿ ಇಟ್ಟಿದ್ದಕ್ಕೆ ...	2 0	...	...	...	...
10	ಚಿಲ್ರೆ ಅಂಗಡಿಗೆ	...	...	...	...	0 6

ಜಿ. ಹನುಮಂತರಾವ್, ಫಾರ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಜಗಲೂರು ಟೌನ್‌ನಲ್ಲಿ ಪ್ರತಿ ಸಂತೆಗೆ ಬರತಕ್ಕ ಅಥವಾ ವಾಪಸು ಹೋಗತಕ್ಕ ಭರ್ತಿ ಗಾಡಿಮೇಲೆ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1910ನೆ ಜೂನ್ ಆಖೈರುವರಿಗೆ ಹಾಸಲು ವಸೂಲ್ಮಾಡತಕ್ಕ ಹಕ್ಕನ್ನ ಬರುವ ಜೂನ್ ತಿಂಗಳು 21ನೆ ತಾರೀಖು ಸೋಮವಾರ ಜಗಲೂರು ತಾಲ್ಲೂಕು ಕಛೇರಿಯಲ್ಲಿ ದಾವಣಗೆರೆ ಸಬ್ ಡಿವಿಜನ್ ಸಾಹೇಬರವರು ಹರಾಜು ನಡಿಸುತ್ತಾರೆ. ಇಷ್ಟವಿರತಕ್ಕವರು ಆ ದಿವಸ ಹಾಜರಾಗಿ ಚಡ ಸವಾಲಿನಲ್ಲಿ ಪಡಿಯಬಹುದು.

ಹರಾಜು ಷರತ್ತುಗಳು.

2. ಚಡ ಸವಾಲುದಾರನು ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿರುವ ದರದಂತೆ ಸಂತೆಗೆ ಮ್ಯುನಿಸಿಪಲ್ ಸರಹದ್ದಿನ ಆಚೆಯಿಂದ ಬರತಕ್ಕ ಮತ್ತು ಅಲ್ಲಿಂದ ವಾಪಸು ಹೋಗತಕ್ಕ ಭರ್ತಿಗಾಡಿಮೇಲೆ ಹಾಸಲು ವಸೂಲ್ಮಾಡಬೇಕು.

3. ಪ್ರೆಸಿಡೆಂಟ್ ಸಾಹೇಬರವರು ಏನೊಂದು ಕಾರಣವೂ ಇಲ್ಲದ್ದೇನೇ ಜಾಸ್ತಿ ಅಥವಾ ಯಾವ ಸವಾಲನ್ನು ಆಗಲಿ ಅಂಗೀಕರಿಸತಕ್ಕ ಯಾ ತಿರಸ್ಕರಿಸತಕ್ಕ ಅಧಿಕಾರವನ್ನು ಹೊಂದಿರುತ್ತಾರೆ.

4. ಕಂಟ್ರಾಕ್ಟು ಮೊಬಲಗನ್ನ ಹನ್ನೆರಡು ತಿಂಗಳಲ್ಲಿ ಸಮಭಾಗವಾಗಿ ಕೊಡತಕ್ಕದ್ದು. ಆಯಾಯ ಖಿಸ್ತಿನ ಮೊಬಲಗನ್ನ ಮಾರನೇ ತಿಂಗಳು 10ನೆ ತಾರೀಖಿನ ಒಳಗಾಗಿ ಯಾ ಅದಕ್ಕೆ ಮುಂಚಿತವಾಗಿಯೇ ಪಾವತಿ ಮಾಡಬೇಕು. ಹರಾಜು ಖೈದಾದಕೂಡ್ಲೆ ಆಖೈರು ಸವಾಲುದಾರನು ತನ್ನ ಕಂಟ್ರಾಕ್ಟನ್ನು ಕ್ರಮವಾಗಿ ನೆರವೇರಿಸತಕ್ಕ ಬಗ್ಯೆ ಎರಡು ತಿಂಗಳ ಖಿಸ್ತು ಮೊಬಲಗನ್ನ ಠೇವಣಿ ಇಡಬೇಕು ಮತ್ತು ಕಂಟ್ರಾಕ್ಟುದಾರನು ಪ್ರತಿ ತಿಂಗಳ ಖಿಸ್ತು ಮೊಬಲಗು ಸರಿಯಾಗಿ ಪಾವತಿ ಮಾಡುವದರ ಖಾತರಿಗಾಗಿ ಲಾಯಕ್ ಜಾಮೀನನ್ನ ಕೊಡಬೇಕು.

5. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆ ಇದ್ದಲ್ಲಿ ಆಗಲಿ ಮತ್ತು ಸರಿಯಾದ ಜಾಮೀನು ಕೊಡದೇ ಹೋದಲ್ಲಿ ಆಗಲಿ ಎರಡನೇ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ಉಂಟಾಗತಕ್ಕ ನಷ್ಟದ ಮೊಬಲಗ್ಯೆ ಅವಲ್ ಹರಾಜುದಾರನನ್ನ ಗುರಿಪಡಿಸುತ್ತೆ. ಕ್ರಮವಾಗಿ ಮೊಬಲಗು ಪಾವತಿಯಾಗದೇಹೋದಲ್ಲಿ ಮೊಬಲಗು ಪಾವತಿಯಾಗುವ ತಾರೀಖಿನ ವರಿಗೂ ಮಾಹೇಯಾನ ರೂಪಾಯಿ ಒಂದಕ್ಕೆ ಒಂದು ಪೈ ನಂತೆ ಬಡ್ಡಿ ವಸೂಲ್ಮಾಡಲ್ಪಡುತ್ತೆ. ನಂತರ ಬಾಕಿ ಮೊಬಲಗು ಏನಾದರೂ ಇದ್ದರೆ ಕಂಟ್ರಾಕ್ಟುದಾರನಿಂದಾಗಲೀ ಯಾ ಜಾಮೀನುದಾರನಿಂದಾಗಲಿ ವಸೂಲಾಗತಕ್ಕದ್ದು.

6. ಕಂಟ್ರಾಕ್ಟುದಾರನು ಪ್ರತಿಯೊಬ್ಬ ಗಾಡಿದಾರನಿಗೂ ಹಾಸಲು ವಸೂಲಾದ ತಾರೀಖು ನಮೂದಿನಿಂದ ಒಂದು ತೀರುವಳಿ ರಶೀತಿ ಕೊಡಬೇಕು. ಅಲ್ಲದೆ ಕಂಟ್ರಾಕ್ಟುದಾರನು ಕ್ರಮವಾಗಿ ಹಾಸಲು ವಸೂಲ್ಮಾಡತಕ್ಕ ತಪಶೀಲು ಲೆಕ್ಕವನ್ನ ಇಡಲು ಬದ್ಧನಾಗಿರತಕ್ಕದ್ದು. ಸದರಿ ಲೆಕ್ಕವು ಪ್ರೆಸಿಡೆಂಟ್-ವೈಸ್ ಪ್ರೆಸಿಡೆಂಟ್ ಸಾಹೇಬರವರುಗಳ ಮತ್ತು ಮ್ಯುನಿಸಿಪಲ್ ಮೆಂಬರುಗಳ ಇನ್ಸ್ಪೆಕ್ಷನ್‌ಗೆ ಒಳಪಟ್ಟಿರತಕ್ಕದ್ದು.

7. ಯಾವಾಗಲಾಗಲಿ ಕಂಟ್ರಾಕ್ಟುದಾರನು ವಿಧಾಯುಕವಾಗಿರುವ ದರಕ್ಕಿಂತಲು ಜಾಸ್ತಿಯಾದ ಹಾಸಲು ಕೇಳಿ ಯಾ ವಸೂಲ್ಮಾಡಿ ಯಾ ಟೌನ್ ಮಾರ್ಗವಾಗಿ ಸರಕನ್ನ ಬಿಕರಿ ಮಾಡದೆ ಹೋಗತಕ್ಕ ಭರ್ತಿಗಾಡಿಮೇಲೆ ಸುಂಕ ಕೇಳಿದ ಸಂಗತಿಗಳು ಪ್ರೆಸಿಡೆಂಟ್ ಸಾಹೇಬರವರಿಗೆ ತೃಪ್ತಿಕರವಾಗುವಂತೆ ರುಜುವಾತಾದಲ್ಲಿ ಕಂಟ್ರಾಕ್ಟುದಾರನಿಂದ ಠೇವಣಿ ಹಾಜರ್ಮಾಡಲ್ಪಟ್ಟ ಎರಡು ತಿಂಗಳ ಖಿಸ್ತು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಕೂಡ್ಲೆ ಕಂಟ್ರಾಕ್ಟು ಕ್ಯಾನ್ಸಲ್ ಮಾಡಲ್ಪಡುತ್ತೆ.

ಷೆಡ್ಯೂಲ್.

	ರೂ.	ಆ.	ಪೈ.
1. ಪ್ರತಿ ಭರ್ತಿಗಾಡಿ	0	2	0

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

1. ಚಳ್ಳಕೆರೆ ಟೌನ್‌ನಲ್ಲಿ ನಡಿಯತಕ್ಕ ಪ್ರತಿ ಸಂತೆಗೆ ಬರತಕ್ಕ ಭರ್ತಿ ಗಾಡಿ, ಎತ್ತು ಯಾ ಕತ್ತೆಗಳ ಮೇಲೆ ಈ ಮಾರ್ಜಿನ್ನಲ್ಲಿ ಕಂಡ ಬೌಂಡರಿ ಅನುಸರಿಸಿ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1910ನೆ ಜೂನ್ ಆಖೈರು ವರಿಗೆ ಹಾಸಲು ವಸೂಲ್ಮಾಡತಕ್ಕ ಹಕ್ಕನ್ನ ಜೂನ್ ತಿಂಗಳು 24ನೆ ತಾರೀಖು ಗುರುವಾರ ಚಳ್ಳಕೆರೆ ತಾಲ್ಲೂಕು ಕಛೇರಿಯಲ್ಲಿ ಚಿತ್ರದುರ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಹರಾಜು ನಡಿಸುತ್ತಾರೆ. ಇಷ್ಟವಿರತಕ್ಕವರು ಆ ದಿವಸ ಹಾಜರಾಗಿ ಚಡಸವಾಲಿನಲ್ಲಿ ಪಡಿಯಬಹುದು.

ಬೌಂಡರಿ.

ಪೂರ್ವಕ್ಕೆ—ದೊಡ್ಡೇರಿಹಳ್ಳ.
ಪಶ್ಚಿಮಕ್ಕೆ—ಚಿತ್ರದುರ್ಗದ ರೋಡು 18ನೆ ಮೈಲಿ 3ನೆ ಫರ್ಲಾಂಗು.
ಉತ್ತರಕ್ಕೆ—ಬಳ್ಳಾರಿ ರಸ್ತೆ ಕಟ್ಟೆ ಕಪಿಲೆ ಭಾವಿ.
ದಕ್ಷಿಣಕ್ಕೆ—ಬೆಂಗಳೂರು ರೋಡು ನಗರಂಗೆರೆದಾರಿ.

ಹರಾಜು ಷರತ್ತುಗಳು.

2. ಚಡ ಸವಾಲುದಾರನು ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿರುವ ದರದಂತೆ ಸಂತೆ ದಿವಸ ಸಂತೆ ಜಾಗಾದಲ್ಲಿ ಕಲಿಯುತಕ್ಕ ಭರ್ತಿ ಗಾಡಿ, ಎತ್ತು ಯಾ ಕತ್ತೆಗಳ ಮೇಲೆ ಹಾಸಲು ವಸೂಲ್ಮಾಡಬೇಕು. ಒಂದೇ ಗಾಡಿಗೆ ಎರಡು ದಫಾ ಫೀ ವಸೂಲ್ಮಾಡಕೂಡದು.

3 ಪ್ರೆಸಿಡೆಂಟ್ ಸಾಹೇಬರವರು ಏನೊಂದು ಕಾರಣವೂ ಇಲ್ಲದೇನೆ ಜಾಸ್ತಿ ಅಥವಾ ಯಾವ ಸವಾಲನ್ನಾಗಲಿ ಅಂಗೀಕರಿಸ ತಕ್ಕ ಯಾ ತಿರಸ್ಕರಿಸತಕ್ಕ ಅಧಿಕಾರವನ್ನು ಹೊಂದಿರುತ್ತಾರೆ.

4. ಕಂಟ್ರಾಕ್ಟು ಮೊಬಲಗನ್ನು ಹನ್ನೆರಡು ತಿಂಗಳಲ್ಲಿ ಸಮಭಾಗವಾಗಿ ಕೊಡತಕ್ಕದ್ದು. ಆಯಾಯ ಖಿಸ್ತಿನ ಮೊಬಲ ಗನ್ನು ಮೂರನೇ ತಿಂಗಳು 10ನೆ ತಾರೀಖಿನೊಳಗಾಗಿ ಯಾ ಅದಕ್ಕೆ ಮುಂಚಿತವಾಗಿಯೇ ಪಾವತಿ ಮಾಡಬೇಕು. ಹರಾಜು ಖೈದಾ ದಕೊಡ್ಲೆ ಆಖೈರು ಸವಾಲುದಾರನು ತನ್ನ ಕಂಟ್ರಾಕ್ಟನ್ನು ಕ್ರಮವಾಗಿ ನೆರವೇರಿಸತಕ್ಕ ಬಗ್ಗೆ ಎರಡು ತಿಂಗಳ ಖಿಸ್ತು ಮೊಬಲಗ ನ್ನು ಠೇವಣಿ ಇಡಬೇಕು, ಮತ್ತು ಕಂಟ್ರಾಕ್ಟುದಾರನು ಪ್ರತಿ ತಿಂಗಳ ಖಿಸ್ತು ಮೊಬಲಗು ಸರಿಯಾಗಿ ಪಾವತಿ ಮಾಡುವದರ ಖಾ ತ್ರಿಗಾಗಿ ಲಾಯಖು ಜಾಮೀನನ್ನು ಕೊಡಬೇಕು.

5. ಹರಾಜು ಖೈದಾದ ಕಡ್ಲೆ ಡಿಪಾಜಿಟ್ಟು ಹಾಜರ್ಮಾಡದೆ ಇದ್ದಲ್ಲಿ ಆಗಲಿ ಮತ್ತು ಸರಿಯಾದ ಜಾಮೀನು ಕೊಡದೇ ಹೋ ದಲ್ಲಿ ಆಗಲಿ ಎರಡನೇ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ಉಂಟಾಗತಕ್ಕ ನಷ್ಟದ ಮೊಬಲಗ್ಯೆ ಅವಲ್ ಹರಾಜುದಾರನ ನ್ನ ಗುರಿಪಡಿಸುತ್ತೆ. ಕ್ರಮವಾಗಿ ಮೊಬಲಗು ಪಾವತಿಯಾಗದೆ ಹೋದಲ್ಲಿ ಮೊಬಲಗು ಪಾವತಿಯಾಗುವ ತಾರೀಖಿನ ವರಿಗೂ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈ ನಂತೆ ಒಡ್ಡಿ ವಸೂಲ್ಮಾಡಲ್ಪಡುತ್ತೆ. ನಂತರ ಬಾಕಿ ಮೊಬಲಗು ಯೇನಾದರೂ ಇದ್ದರೆ ಕಂಟ್ರಾಕ್ಟುದಾರನಿಂದ ಆಗಲಿ ಯಾ ಜಾಮೀನುದಾರನಿಂದಾಗಲಿ ವಸೂಲಾಗತಕ್ಕದ್ದು.

6. ಕಂಟ್ರಾಕ್ಟುದಾರನು ಪ್ರತಿ ಒಬ್ಬ ಗಾಡಿದಾರನಿಗೂ ಯಾ ಎತ್ತಿನ ಯಾ ಕತ್ತೆಗಳ ಮಾಲೀಕನಿಗೂ ಹಾಸಲು ವಸೂಲಾ ದ ತಾರೀಖು ನಮೂದಿನಿಂದ ಒಂದು ತೀರುವಳಿ ರಸೀತಿ ಕೊಡಬೇಕು ಅಲ್ಲದೆ ಕಂಟ್ರಾಕ್ಟುದಾರನು ಕ್ರಮವಾಗಿ ಹಾಸಲು ವಸೂ ಲ್ಮಾಡತಕ್ಕ ತಪಶೀಲು ಲೆಕ್ಕವನ್ನು ಇಡಲು ಬದ್ಧನಾಗಿರತಕ್ಕದ್ದು. ಸದರಿ ಲೆಕ್ಕವು ಪ್ರೆಸಿಡೆಂಟ್ ವೈಸ್ ಪ್ರೆಸಿಡೆಂಟ್ ಸಾಹೇಬರವ ರುಗಳು ಮತ್ತು ಮ್ಯುನಿಸಿಪಲ್ ಮೆಂಬರುಗಳ ಇನ್ಸ್ಪೆಕ್ಷನ್ಗೆ ಒಳಪಟ್ಟಿರತಕ್ಕದ್ದು.

7. ಯಾವಾಗಲಾಗಲಿ ಕಂಟ್ರಾಕ್ಟುದಾರನು ವಿಧಾಯಕವಾಗಿರುವ ದರಕ್ಕಿಂತಲು ಜಾಸ್ತಿಯಾದ ಹಾಸಲು ಕೇಳಿ ಯಾ ವಸೂ ಲ್ಮಾಡಿ ಯಾ ಟಿವರ್ ಮಾರ್ಗವಾಗಿ ಸರಕನ್ನ ಬಿಕರಿ ಮಾಡದೆ ಹೋಗತಕ್ಕ ಛರ್ತಿ ಗಾಡಿ, ಎತ್ತು ಯಾ ಕತ್ತೆಗಳ ಮೇಲೆ ಸುಂಕ ಕೇಳಿದ ಸಂಗತಿಗಳು ಪ್ರೆಸಿಡೆಂಟ್ ಸಾಹೇಬರವರಿಗೆ ತೃಪ್ತಿಕರವಾಗುವಂತೆ ರುಜುವಾತಾದಲ್ಲಿ ಕಂಟ್ರಾಕ್ಟುದಾರನಿಂದ ಠೇವಣಿ ಹಾಜ ರ್ಮಾಡಲ್ಪಟ್ಟ ಎರಡು ತಿಂಗಳ ಖಿಸ್ತು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಕೂಡ್ಲೆ ಕಂಟ್ರಾಕ್ಟು ಕ್ಯಾನ ಸಲ್ ಮಾಡಲ್ಪಡುತ್ತೆ.

ಷೆಡ್ಯೂಲ್.

		ರೂ.	ಆ.	ಪೈ.
1.	ಪ್ರತಿ ಛರ್ತಿ ಗಾಡಿ	0	2	0
2.	ಡಿಟ್ಟೋ ಎತ್ತು	0	0	6
3.	ಡಿಟ್ಟೋ ಕತ್ತೆ	0	0	6

ಡಿ. ಶ್ರೀನಿವಾಸೈಯ್ಯಂಗಾರ್,
ಫಾರ್ ಪ್ರೆಸಿಡೆಂಟ್.

ಮೈಸೂರ್ ಜೈಲ್.

ತಾರೀಖು 29ನೆ ಮೇ 1909ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಮೈಸೂರು ಜೈಲನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸನ್ 1909ನೆ ಇಸವಿ ಜುಲೈ ಗುರ್ರೆ ಲಾಗಾಯತು 1910ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ (ಆ ಎರಡು ದಿನಗಳೂ ಸೇರಿ) ಕೆಳಗೆ ನಮೂದು ಮಾಡುವ ಜಿನಸು ವಗ್ಯೆರೆಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಮೊಹರ್ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ, ಸನ್ 1909ನೆ ಇಸವಿ ಜೂನ್ 19ನೆ ಶನಿವಾರ ಹಗಲು 9 ಘಂಟೆ ವರಿಗೆ ತೆಗೆದುಕೊಳ್ಳಲ್ಪಡುವದು.

(2) ಮೇಲೆ ನಮೂದು ಮಾಡುವ ತಾರೀಖಿನ ನಂತರ ಯಾವ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದಿಲ್ಲಾ.

(3) ದರಖಾಸ್ತುಗಳೊಡನೆ 500 ರೂಪಾಯಿ ಠೇವಣಾತಿ ಮೊಬಲಗನ್ನು ಹಾಜರು ಮಾಡಬೇಕು.

(4) ಈ ಮೇರಿಗೆ ನಗದಾಗಲಿ, ಕರೆನ್ಸಿ ನೋಟಾಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂ ಗೀಕರಿಸಲ್ಪಡುವದಿಲ್ಲ.

(5) ದರಖಾಸ್ತುಗಳು ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರ್ರುಗಳ ರೂಬರೂಬ್ ಮೇಲ್ಕಂಡ ತಾರೀಖಿನಲ್ಲಿ ಖುಲ್ಲಾ ಮಾಡಲ್ಪಡುವದು.

(6) ದರಖಾಸ್ತುಗಳೆಲ್ಲ ಕೆಳಗೆ ವಿವರಿಸುವ ಸರಬರಾಯಿ ಆಗುವ ಜಿನಸಿಗಳ ದರ ರೂಪಾಯಿ ಒಂದಕ್ಕೆ ಇಷ್ಟು ಪೌಂಡು ಯಂತ ನಮೂದಾಗಬೇಕು, ಮತ್ತು ಜಿನಸಿಗಳು ಒಳ್ಳೇದಾಗಿರಬೇಕು. ಹಾಲಿಗೆ ಮಾತ್ರ ರೂಪಾಯಿ ಒಂದಕ್ಕೆ ಇಷ್ಟು ಪೈಂಟ್ ಎಂದು ನಮೂದಿರಬೇಕು.

ಒಂದು ವರುಷಕ್ಕೆ ಬೇಕಾದ ಜಿನಸಿಗಳ ಪಟ್ಟಿ.

	ಸುಮಾರು ಎಷ್ಟು ಪೌಂಡು ಬೇಕಾದ್ದು.		ಸುಮಾರು ಎಷ್ಟು ಪೌಂಡು ಬೇಕಾದ್ದು.
ಅಕ್ಕಿ (ಕುಸಲಕ್ಕಿ ಮತ್ತು ಬೆಣತಕ್ಕಿ)	20,000	ತುಪ್ಪ (ಅವಲ್ ಥರಹಾ)	20
ರಾಗಿ (ಅವಲ್ ಥರಹಾ) ...	80,000	ಒಳ್ಳೆಂಣೆ ...	2,000
ತೊಗರಿಬೇಳೆ ಡಿಟ್ಟೋ ...	12,000	ತರಕಾರಿ ...	23,000
ಅವರೆಬೇಳೆ ಡಿಟ್ಟೋ ...	18,000	ಒಣಗಿದ ಸೌದೆ ...	80,000
ಖಾರದ ಸಾಮಾನು ಯಾ ಪುಡಿ (ಮೆಣಸಿನ ಪುಡಿ)	1,000	ಸಕ್ರೆ ...	600
ಉಪ್ಪು	2,000	ರವೆ ...	700
ಈರುಳ್ಳಿ	2,000	ರೊಟ್ಟಿ ...	300
ಬೆಳ್ಳುಳ್ಳಿ	20	ಹಾಲು	8,000 ಪೈಂಟುಗಳು,
ಹುಣಸೆಹಣ್ಣು	2,000	ಮೊಸರು	100 (ಪೌಂಡು)
		ಮೂಳೆ ಇಲ್ಲದ ಮಾಂಸ	100 ಪೌಂಡು.

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗೆದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

(7) ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಖೈದಿಗಳಿಗೆ ಕೊಡಲ್ಪಡುವದು, ಹಾಗೆ ಸರಬರಾಯಿ ಮಾಡಲ್ಪಟ್ಟಂಥಾ ಹಿಟ್ಟಿನ ಮೊತ್ತಕ್ಕೆ ರಾಗಿ ಬಗ್ಗೆ ದಾಖಲಾಗಿರುವ ದರದಂತೆ ಖರೀದಿ ಕೊಡೋಣಾದೀತು.

(8) ಸೂಪರಿಂಟೆಂಡೆಂಟರವರು ಅತ್ಯಂತ ಕಮ್ಮಿ ದರದ ಅಥವಾ ಇತರ ದರಖಾಸ್ತನ್ನು ಒಪ್ಪಿಕೊಳ್ಳುವದಕ್ಕೆ ಕಾರಣ ಹೇಳಲು ಬದ್ಧರಾಗಿರುವದಿಲ್ಲ.

(9) ಮಂಜೂರಾದ ದರಖಾಸ್ತುದಾರರ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಲಾದೀತು. ಆ ಲಾಗಾಯತು ಒಂದು ವಾರದೊಳಗೆ ಅವರು ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ತೋರಿಸುವ ನಮೂನೆ ಮೇರೆ ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವುದಕ್ಕೆ ತಪ್ಪಿದರೆ ಆಗಲಿ ಅಥವಾ ನಗದಾಗಲಿ ಗವರ್ನಮೆಂಟ್ ಬಾಂಡ್ ಮೂಲಕ ಆಗಲಿ 50 ರೂಪಾಯಿಗೆ ಜಾಮೀನ್ ಕೊಡುವದಕ್ಕೆ ತಪ್ಪಿದರೆ ಅಂಥಾ ಠೇವಣೀ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

(10) ಜಿನಸಿಗಳನ್ನು ಒಂದು ವರ್ಷ ಪೂರ್ತಿಯಾಗಿ ಸರಬರಾಯಿ ಮಾಡತಕ್ಕ ಷರತ್ತಿಗೆ ಈ ಕಂಟ್ರಾಕ್ಟು ಒಳಪಟ್ಟಿರುತ್ತೆ. ಸದರೀ ವರ್ಷ ಪೂರ್ತಿಯಾದಾಗಲೇನೆ ಸರಬರಾಯಿ ಆದ ಜಿನಸಿಗಳ ಕಿಮ್ಮತ್ತಿನ ಲೆಖ್ಖವನ್ನು ಫೈಸಲ್ ಆಗಿ ವ್ಯವಸ್ಥೆ ಮಾಡಲಾಗುವದು. ಈ ಮಧ್ಯೆ ತೊಂದರೆ ಇಲ್ಲದೆ ಸರಬರಾಯಿ ನಡಿಯುವ ಉದ್ದಿಶ್ಯ ಪ್ರತಿ ತಿಂಗಳ ಆಖೈರಿನಲ್ಲಿಯೂ ಆ ತಿಂಗಳಲ್ಲಿ ಸರಬರಾಯಿ ಮಾಡಿರುವ ಜಿನಸಿಗಳ ಬೆಲೆ ಬಾಳುವಷ್ಟು ಮೊಬಲಗು ಅಡ್ವಾನ್ಸಾಗಿ ಕಂಟ್ರಾಕ್ಟುದಾರನಿಗೆ ಕೊಡಲ್ಪಡುತ್ತೆಯಾದ್ದರಿಂದ ಆ ಕಾಲಕ್ಕೆ ಸರಿಯಾಗಿ ಜೈಲು ಸೂಪರಿಂಟೆಂಡೆಂಟರವರ ರೂಬರೂಬು ತಾನು ಸರಬರಾಯಿ ಮಾಡಿದ ಜಿನಸಿಗಳ ಕಿಮ್ಮತ್ತಿನ ಬಿಲ್ಲನ್ನು ವಾಚರ್‌ಗಳ ಸಮೇತ ಹಾಜರು ಮಾಡಿ ರಶೀತಿ ಕೊಟ್ಟು ಅಡ್ವಾನ್ಸನ್ನು ಪಡಿಯಬೇಕು.

(11) ಉಗ್ರಾಣದ ಕೊಠಡಿಗಳು ಕಂಟ್ರಾಕ್ಟುದಾರರ ಸ್ವಾಧೀನಕ್ಕೆ ಕೊಡಲ್ಪಡುವವು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನು ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲು ಇಟ್ಟಿರಬೇಕು. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ, ತರಕಾರಿ ಮುಂತಾದ್ದು ಪ್ರತಿದಿನವು ಬೆಳಿಗ್ಯೆ 7 ಘಂಟೆಗೆ ಸರಿಯಾಗಿ ಜೈಲ್‌ನಲ್ಲಿ ಹಾಜರ್ಮಾಡಬೇಕು.

(12) ಈ ಕಂಟ್ರಾಕ್ಟನ್ನು ಒಳಗುತ್ತಿಗೆಯಾಗಿ ಕೊಡಬಾರದು.

(13) ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಮತ್ತು ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ, ಮೈಸೂರ್ ಜೈಲ್ ಸೂಪರಿಂಟೆಂಡೆಂಟರವರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದ ಜುಲ್ಮಾನೆ ಹಾಕುವರು. ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡೆದರೆ ಆ ಕಂಟ್ರಾಕ್ಟು ರದ್ದುಮಾಡಿ ಠೇವಣೀ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟೀತು.

(14) ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡೆದ ಎಲ್ಲಾ ಪ್ರಮೇಯಗಳಲ್ಲೂ ಮೈಸೂರ್ ಜೈಲ್ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

(15) ಜೈಲ್ ತೋಟದಲ್ಲಿ ಬೆಳಿಯತಕ್ಕ ತರಕಾರಿಯನ್ನು ಖೈದಿಗಳ ಉಪಯೋಗಕ್ಕಾಗಿ ತೆಗದುಕೊಳ್ಳಬೇಕೆಂತ ಅಪೇಕ್ಷಿಸಿದ್ದ ಪಕ್ಷದಲ್ಲಿ ಕಂಟ್ರಾಕ್ಟುದಾರನು ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ತೆಗದುಕೊಳ್ಳಲು ಬದ್ಧನಾಗಿರಬೇಕು.

(16) ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

(17) ಕಂಟ್ರಾಕ್ಟುಗಳು ಮೈಸೂರು ಸಂಸ್ಥಾನದ ಜೈಲುಗಳ ಇನ್ಸ್‌ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರಬೇಕು.

(18) ಕಂಟ್ರಾಕ್ಟುದಾರನು ಈ ಕಂಟ್ರಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರುಮೇರಿಗೆ ನಡೆಯಲು ಇಷ್ಟವಿಲ್ಲದಿದ್ದರೆ, ಅವನು ಕೋನೇಪಕ್ಷ ಒಂದು ತಿಂಗಳ ಮುಂಚಿತವಾಗಿ ನೋಟೀಸು ಕೊಟ್ಟು ತನ್ನ ಠೇವಣಾತಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

(19) ಅಲ್ಲದೆ ಆಪ್ರಕಾರ ಸದರಿ ಕಂಟ್ರಾಕ್ಟುದಾರನು ತನ್ನ ಖರಾರಿಗೆ ತಪ್ಪಿದ್ದರಿಂದ ಅಥವಾ ತನ್ನ ಮುಚ್ಚಳಿಕೆಯಲ್ಲಿ ನಮೂದಾಗುವ ಪದಾರ್ಥಗಳನ್ನು ಸರ್ಕಾರದವರು, ಸ್ಥಳೀಯವಾದ ಬಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದ್ದರಿಂದ ಸರ್ಕಾರಕ್ಕೆ ಉಂಟಾಗಬಹುದಾದ ನಷ್ಟವನ್ನು ಭರ್ತಿ ಮಾಡುವದಕ್ಕೂ ಸಹ ಬದ್ಧನಾಗಿರಬೇಕು.

ಷರಾ.—ಈ ಕಂಟ್ರಾಕ್ಟಿನಲ್ಲಿ ಯಾವ ವಿಧವಾದ ರಿಯಾಯತಿಯನ್ನು ಮಾಡೋಣಾಗಲಾರದು.

ಟಿ. ಎಸ್. ನಂಜಪ್ಪ, ಸೂಪರಿಂಟೆಂಡೆಂಟ್.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸಿನಿಂದ.

ನೋಟಿಫಿಕೇಷನ್ ನಂಬರ್ 812—C. S.—24.

ಮೊಕ್ಕಾಂ ಬೆಂಗಳೂರು, ತಾರೀಖು 25—26ನೆ ಮೇ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1. ಚನ್ನಪಟ್ಣ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್.	ಚನ್ನಪಟ್ಣ ...	4ನೆ ಮೇ 1909.
2. ತುರುವೇಕೆರೆ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್.	ತುರುವೇಕೆರೆ ...	7ನೆ ಮೇ 1909.

ಎಂ. ಶಾಮರಾವ್, ಮೈಸೂರು ಗವರ್ನಮೆಂಟ್ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್.

ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋ.

ಸನ್ 1909ನೆ ಇಸವಿ ಜೂನ್ ತಾರೀಖು 1.

ಬೆಂಗಳೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯುತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸನ್1879ನೆ ಇಸವಿಯ 12ನೆ ನಂಬರ ಆಕ್ಟು.	36	0	11	0	1	0
4	1871ನೆ ಇಸವಿಯ ರಾಸುಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್ಸಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ (1904)	258	0	12	0	4	0
8	ಸಿಟಿ ಪ್ಲೇಗ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟು ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
18	,, ಟೆಲಿಗ್ರಾಫ್ ಆಕ್ಟು	18	0	1	6	1	0
19	,, ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು (ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್ವೆಗಳ ರೆಗ್ಯುಲೇಷನ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೋಲೀಸ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಿಗರ ಮ್ಯಾನ್ಯುಯಲ್ ...	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ Iನೆ ರೆಗ್ಯುಲೇಷನ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
38	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಿಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗವರ್ನ್‌ಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
43	1895ನೆ ಇಸವಿ IIIನೆ ನಂ. ರೆಗ್ಯುಲೇಷನ್ ಮೈಸೂರು ಕಂಪೆನಿಗಳ ರೆಗ್ಯುಲೇಷನ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷನ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟೀಷನರಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಶೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಗೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟೋ 1905	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟೋ 1907 ...	143	1	0	0	6	0
56	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸನ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
59	ಇಸಿ ಹಾರ್ನಾವ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ, ಪೈಕಿ 132ನೆಯ ಪ್ಯಾರಾದ ತಿದ್ದುಪಾಟು	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡಾದುದು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908.	203	1	0	0	6	0

ರೆಜಿಸ್ಟ್ರೇಷನ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸಹಾ 12 ತಿಂಗಳಿಗ	7	0	3	8
ಚಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟ್ಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್ಖಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮುರ್ಖಂ 24205—6—ಜಿ. 6200ನೆ ನಂಬರಿ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟ್ 21ನೆ ಮುರ್ಖಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

			ರೂ.	ಆ.
ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸ್‌ಗಳು :—				
ಮೊದಲನೇ ದಫಾ ಘಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ			2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ :—				
ಮೊದಲನೇ ಸಲಕ್ಕೆ			5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರುಗಳು ಕೊಡುವ ನೋಟಿಸ್‌ಗಳಿಗೆ :—				
ಮೊದಲನೇ ಸಲಕ್ಕೆ	ಪುಟ 1ಕ್ಕೆ		10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,		5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ	0	8
ಎರಡನೇ ದಫಾ	ಡಿಟೋ	ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ			0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ: ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಸಿ. ಹೆಚ್. ಪಿಟ್ಸ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಷ್ ಆದ್ದು. [ಸಂ. 23.

ಬೆಂಗಳೂರು, ಗುರುವಾರ, ಜೂನ್ ತಾ|| 10, ಸನ್ 1909.

II ನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರ್ಫ್.

ಸನ್ 1909ನೆ ಇಸವಿ ಮೇ ತಿಂಗಳು 19ನೆ ತಾರೀಖಿನ 82ನೆ ನಂಬರು ರೂಲ್ ಆಫ್ ಪ್ರಾಕ್ಟಿಸ್.

ಗೌರ್ನಮೆಂಟಿನವರ ಅನುಮತಿಯಿಂದ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ 554ನೆ ಸೆಕ್ಷನ್ ಪ್ರಕಾರ ಜಡ್ಜಿಮೆಂಟುಗಳನ್ನು ಬರಿಯತಕ್ಕ ವಿಚಾರದಲ್ಲಿ ಕ್ರಿಮಿನಲ್ ಕೋರ್ಟುಗಳ ಪದ್ಧತಿಯನ್ನು ಸರಿಪಡಿಸುವ ಬಗ್ಗೆ ಚೀಫ್ ಕೋರ್ಟಿನವರು ಈ ಕೆಳಗಿನ ರೂಲ್ಸುಗಳನ್ನು ಏರ್ಪಡಿಸಿರುತ್ತಾರೆ.

ವಿಚಾರಣೆ ಆದ ಸಾಕ್ಷಿಗಳ ಹೆಸರುಗಳನ್ನೂ, ಹಾಜರಾದ ಎಗ್ಜಿಬಿಟ್ಟುಗಳ ಮತ್ತು ಅಜಬಾಬುಗಳ ತಪ್ಸೀಲನ್ನು ಮತ್ತು ಅಪರಾಧಿಗಳ ಹೇಳಿಕೆಗಳನ್ನೂ ಒಂದು ಬೇರೆ ಫಾರಂನಲ್ಲಿ ಗುಮಾಸ್ತೆಯು ಬರಿಯತಕ್ಕದ್ದು. ಈ ಫಾರಂ ಜಡ್ಜಿಮೆಂಟಿನ ಒಂದು ಭಾಗವೆನ್ನಿಸಿಕೊಳ್ಳದೆ ಜಡ್ಜಿಮೆಂಟಿನ ಜೊತೇಲಿ ಬೇರೆಯಾಗಿ ಸೇರಿಸತಕ್ಕದ್ದು.

2. ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 367ನೆ ಸೆಕ್ಷನ್ ಪ್ರಕಾರ ಜಡ್ಜಿಮೆಂಟು ಪೂರ್ತಿಯಾಗಿ ಮ್ಯಾಜಿಸ್ಟ್ರೇಟು ಅಥವಾ ಜಡ್ಜಿಯು ಸ್ವಂತ ಅಕ್ಷರದಲ್ಲಿರತಕ್ಕದ್ದು.

3. ಸನ್ 1884ನೆ ಇಸವಿ ಆಗಸ್ಟು ತಿಂಗಳು 22ನೆ ತಾರೀಖಿನ 33ನೆ ರೂಲ್ ಆಫ್ ಪ್ರಾಕ್ಟಿಸನ್ನು ಮತ್ತು ಈ ಮಾರ್ಜಿನ್ನಲ್ಲಿ ನಮೂದಿಸಿರುವ ಈ ಕೋರ್ಟಿನ ಸರ್ಕ್ಯುಲರ್

(1) ಸನ್ 1881ನೆ ನವಂಬರು 10ನೆ ತಾರೀಖಿನ 28ನೆ ನಂಬರು ಸರ್ಕ್ಯೂಲರ್ ಲೆಟರ್.
(2) ಸನ್ 1887ನೆ ಅಕ್ಟೋಬರ್ 15ನೆ ತಾರೀಖಿನ 71ನೆ ನಂಬರು ಸರ್ಕ್ಯೂಲರ್ ಲೆಟರ್.
(3) ಸನ್ 1885ನೆ ಫೆಬ್ರುವರಿ 16ನೆ ತಾರೀಖಿನ 53ನೆ ನಂಬರು ಸರ್ಕ್ಯೂಲರ್ ಲೆಟರ್.
(4) ಸನ್ 1889ನೆ ಜನವರಿ 28ನೆ ತಾರೀಖಿನ 81ನೆ ನಂಬರು ಸರ್ಕ್ಯೂಲರ್ ಲೆಟರ್.
(5) ಸನ್ 1894ನೆ ನವಂಬರು 26ನೆ ತಾರೀಖಿನ 119ನೆ ನಂಬರು ಸರ್ಕ್ಯೂಲರ್ ಲೆಟರ್.
(6) ಸನ್ 1899ನೆ ನವಂಬರು 15ನೆ ತಾರೀಖಿನ 143ನೆ ನಂಬರು ಸರ್ಕ್ಯೂಲರ್ ಲೆಟರ್.
(7) ಸನ್ 1885ನೆ ಫೆಬ್ರುವರಿ 5ನೆ ತಾರೀಖಿನ 4122-3163ನೆ ನಂಬರ್ ಚೀಫ್ ಕೋರ್ಟ್ ಪ್ರೊಸೀಡಿಂಗ್ಸ್.
(8) ಸನ್ 1893ನೆ ಮಾರ್ಚಿ 24ನೆ ತಾರೀಖಿನ ಚೀಫ್ ಕೋರ್ಟ್ ಪ್ರೊಸೀಡಿಂಗ್ಸ್.

ಲೆಟರುಗಳನ್ನು ಮತ್ತು ಪ್ರೊಸೀಡಿಂಗ್ಸ್‌ಗಳನ್ನು ಸಹ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರೈಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‍ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‍ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.

2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟ್ ಇಲಾಖಾ.

ತಂಗಡಿ ಮತ್ತು ಕಕ್ಕೆ ಚಕ್ಕೆ—ಇಸ್ತಿಹಾರು, ತಾರೀಖು 16ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ತಾಲ್ಲೂಕುಗಳಲ್ಲಿನ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡೆಯಲು 1909ನೆ ಇಸವಿ ಜೂನ್ ತಾರೀಖು 19ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ಜಮಾಯಿಸತಕ್ಕ ಕಾಲ.	ಷರಾ.
1909ನೆ ಜುಲೈ 15ರ ಲಾಗಾಯಿತು 1910ನೆ ಜೂನ್ ಆಖೈರು ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ, ಸ್ಟೇಟ್ ಫಾರೆಸ್ಟು ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ ಪ್ರತಿ ತಾಲ್ಲೂಕು ಸವಾಲಿಗೋಸ್ಕರ (50) ರೂಪಾಯಿನ ಕರೆನ್ಸಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಫೇ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಮೈಸೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ 1909ನೇ ಜೂನ್ 21ನೇ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡೆಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನ ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(6A) ಪ್ರತಿ ದರಖಾಸ್ತುದಾರನು ದರಖಾಸ್ತಿನಲ್ಲಿ ತನ್ನ ಸರಿಯಾದ ಮೇಲು ವಿಳಾಸವನ್ನು ಬರೆಯಬೇಕು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಕೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದುಮಾಡಿ ಅದುವರಿಗೆ ಕೊಟ್ಟದ್ದ ಕೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನ ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೇ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆ ಮಂಜೂರಾದ 15 ದಿವಸಗಳಲ್ಲಿ ಇಜಾರೆದಾರನು ಇದರಲ್ಲಿ ನಮೂದಿರುವ ಷರತ್ತುಗಳಂತೆ ನಡೆಯಲು ಬದ್ಧನಾಗಿರುತ್ತೇನೆಂತ ಒಂದು ಮುಚ್ಚಳಿಕೆ ಬರದು ಕೊಡಬೇಕು. ತಪ್ಪಿದಲ್ಲಿ ಮೊದಲೇ ಕೊಟ್ಟ ಹಣವನ್ನು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

(11) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಈ ಕೆಳಗೆ ಕಂಡ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು. ಇದರಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣೆ ಮತ್ತು ರವಾನೆ ತಡೆಯಲ್ಪಡುತ್ತಲ್ಲದೆ ಇಜಾರೆಯನ್ನ ರದ್ದುಮಾಡಲಾಗುತ್ತದೆ. ಮತ್ತು ಅದುವರಿಗೆ ಕೊಟ್ಟ ಹಣವು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತದೆ. ಮತ್ತು ಬಾಬನ್ನು ದುಸರಾ ಹರಾಜು ಮಾಡಲಾಗುತ್ತೆ.

15ನೇ ಜುಲೈ 1909ರಲ್ಲಿ ಅಥವಾ ಅದಕ್ಕೆ ಮುಂಚೆ.

ಇತರ ಷರತ್ತುಗಳು.

(I) ಇಜಾರೆದಾರನ ಮತ್ತು ಆತನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಒಂದು ವರುಷದೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದ ನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸಾಧೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗ್ಯೆರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1910ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜಮಾವಣೇ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಮೈಸೂರು ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು 1,000 ರೂಪಾಯಿ ವರಿವಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಜಿ. ರಾಮರಾವ್,

ಫಾರ್ ಡೆಪ್ಯುಟಿ ಕಮಿಷನರ್, ಮೈಸೂರು ಡಿಸ್ಟ್ರಿಕ್ಟು.

ತಂಗಡಿ ಮತ್ತು ಕಕ್ಕೆ ಚಕ್ಕೆ ಇಸ್ತಿಹಾರ್.

ತಾರೀಖು 20ನೇ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು 1909ನೆ ಇಸವಿ ಜೂನ್ ತಾರೀಖು 21ರಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಂದ ಅರಸೀಕೆರೆ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು	ತಾಲ್ಲೂಕು ಹೆಸರು.	ಜಮಾಯಿಸತಕ್ಕ ಕಾಲ.	ಷರಾ.
1	ಅರಸೀಕೆರೆ ...	1909ನೆ ಜುಲೈ ಗುರ್ರು ಲಾಗಾಯಿತು 1911ನೆ ಜೂನ್ ಆಖೈರು ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರ ಕಂಡ ಸರ್ಕಾರಿ ಬಂಜರು, ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ವಳಪಟ್ಟು ಇರುತ್ತೆ.
2	ಚನ್ನರಾಯಪಟ್ಟಣ ...		
3	ಹೊಳೇನರಸೀಪುರ ...		
4	ಅರಕಲಗೂಡು ...		
5	ಬೇಲೂರು ...		
6	ಹಾಸನ ...		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಹಜರತ್ ಕನ್‌ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನು ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಹಜರತ್ ಕನ್‌ಸರ್ವೇಟರ್ ಸಾಹೇಬರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1909ನೆ ಸಾಲ್ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ ತಾರೀಖು 30ರ ವರಿಗಿನ 24 ತಿಂಗಳುಗಳಲ್ಲಿ ತಂಗಡಿ ಚಕೆ ಜಮಾವಣಿ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 100 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟಿಯಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಅರ್ಧಹಿಸ್ಸೆ ಹಣವನ್ನ ಸರ್ಕಾರಿ ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾಯಿದ್ದ ಆಫೀಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ ಕಂಡ ಸ್ಟ್ಯಾರುದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ದರಖಾಸ್ತುದಾರನು ಮಂಜೂರಾದ ಇಜಾರೆ ಹಕ್ಕನ್ನು ತಾವೆ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

7. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ಮೂರು ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಮೊದಲು ಕೊಟ್ಟ ಹಣವನ್ನು ದಂಡವಾಗಿ ಸರಕಾರಕ್ಕೆ ಶೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

8. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ

ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಖಿಸ್ತು	30ನೆ ಸೆಪ್ಟಂಬರ್ 1909.
2ನೆ ಖಿಸ್ತು	31ನೆ ಮಾರ್ಚಿ 1910.
3ನೆ ಖಿಸ್ತು	30ನೆ ಸೆಪ್ಟಂಬರ್ 1910.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗೆದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸೌದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1911ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಹಾಸನ ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದ್ದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿ ವರಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಬಿ. ಐ. ಶಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ಹಾಸನ.

ಇಸ್ತಿಹಾರ್ನಾಮಾ, ತಾರೀಖು 17ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ಡಿಪೋಗಳಲ್ಲಿ ಕೆಳಗೆ ನಮೂದಿರುವ ನಾಟಾಗಳನ್ನು ಸದರಿ ಡಿಪೋಗಳ ಬಾಜೂದಲ್ಲಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರಿಂದಾಗಲೀ ಹರಾಜು ಮಾಡಲ್ಪಡುತ್ತವೆ.

ಡಿಪೋ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಮೊತ್ತ.	ಷರಾ.
			ನಂಬರು.	
ಶಿವಮೊಗ್ಗ ...	9ನೆ ಜೂನ್ 1909 ...	(1) ಸಾಗುವಾನಿ ನಾಟಾ ...	80	ಹೆಚ್ಚು ಕಡಿಮೆ.
		(2) ಮುಸ್ಸಾಜಾತಿ ನಾಟಾ ...	100	
		(3) ಮತ್ತಿ ನಾಟಾ ...	100	
		(4) ಕಾಡುಜಾತಿ ನಾಟಾ ...	100	
		(5) ಸಾಗುವಾನಿ ಬೆಲಗು ...	100	
		(6) ಕಾಡುಜಾತಿ ಬೆಲಗು ...	100	
		(7) ಬೀಟೆ ...	[illegible]	
		(8) ನಂದಿ ...	100	
			ಸಲೆ ಅಡಿ	
ಬೆಂಕಿಪುರ ...	7ನೆ ಜೂನ್ 1909 ...	(1) ಮತ್ತಿ ...	1,500	ಹೆಚ್ಚು ಕಡಿಮೆ.
		(2) ಹೊನ್ನೆ ...	1,500	
		(3) ಸಾಗುವಾನಿ ...	500	
		(4) ಯತ್ತಿಗ ...	500	
		(5) ಹುನಾಲ್ ...	500	
		(6) ಬೀಟೆ ...	300	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜ್ ಆದ 5 (ಐದು) ದಿವಸಗಳೊಳಗಾಗಿ ಹರಾಜ್ ಮೊಬಲಗು ಪೈಕಿ ಶೇಕಡ 25ರಂತೆ ಆಗುವ ಮೊಬಲಗನ್ನು ಹತ್ತಿರಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜ್ ಮಾಡಿ ಅದರಿಂದ ದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಜೂನ್ ತಾರೀಖು 25ರ ಒಳಗಾಗಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಮೊದಲು ಕಟ್ಟಿರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತ್ತು ಪೂರಾ ಪಾವತಿ ಮಾಡದೆಯೂ ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜ್ ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನಮೇರೆ ಡಿಪೋ ಬಾಡ ವಸೂಲ್ಮಾಡಲಾಗುತ್ತೆ.

ಎ. ಪೊನ್ನುಸಾಮಿ ಮೊದಲಿಯಾರ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ಶಿವಮೊಗ್ಗ ಡಿಸ್ಟ್ರಿಕ್ಟು.

ಪ್ರಕಟನೆ.

ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಚನ್ನಗಿರಿ ಮತ್ತು ಹೊಳಲಕೆರೆ ತಾಲ್ಲೂಕುಗಳಲ್ಲಿರುವ ತುಪ್ಪದಹಳ್ಳಿ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸನ್ 1909ನೆ ಇಸವಿ ಜೂನ್ ತಾರೀಖು 3ನೆ ಕನ್ನಡ ಮೈಸೂರು ಗೆಜೆಟ್ಟಿನ 2ನೆ ಭಾಗದ 473, 474, 475ನೆ ಪೇಜಿನಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಎಂ. ಶ್ಯಾಮರಾವ್, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ್ ಇನ್ ಮೈಸೂರು.

ಬೌರಿಂಗ್‌ಪೇಟೆ ಮ್ಯುನಿಸಿಪಾಲಿಟಿ.

ತಾರೀಖು 31ನೆ ಮೇ 1909ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬವರಿಂಗ್‌ಪೇಟೆ ಹಳೆ ಸಂತೆ ಜಮೀನಿನಲ್ಲಿರುವ ಸ್ಲಾಟರ್ ಹೌಸಿನಲ್ಲಿ ಕುರಿ ಮತ್ತು ಮ್ಯಾಕೆ ಇವುಗಳ ಕತರಾವಣಿ ಮೇಲಣ ತೆರಿಗೆ ವಸೂಲ್‌ಮಾಡುವ ಕಂಟ್ರಾಕ್ಟು ಹಕ್ಕನ್ನು ಬವರಿಂಗ್ ಪ್ಯಾಟೆ ತಾಲ್ಲೂಕು ಕಛೇರಿಯಲ್ಲಿ 1909ನೆ ಜೂನ್ ತಾರೀಖು 15ನೆ ಮಂಗಳವಾರ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ.

ಚಡ ಸವಾಲ್‌ದಾರನು ತಕ್ಷಣ ಒಟ್ಟು ಮೊಬಲಗಿನ ಚಾಥಾಯಿ ಮೊಬಲಗನ್ನು ಹಾಜರ್ಪಡಿಸತಕ್ಕದ್ದು. ತಪ್ಪಿದರೆ ಅಂಥಾ ಚಡ ಸವಾಲ್‌ದಾರನ ಸವಾಲ್ ತಿರಸ್ಕರಿಸಲ್ಪಟ್ಟು ದುಸರಾ ಹರಾಜ್ ಮಾಡಲ್ಪಡುತ್ತೆ. ಅದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲಿನ ಚಡ ಸವಾಲ್‌ದಾರನನ್ನು ಗುರಿಮಾಡುತ್ತೆ. ಆರೀತಿ ಚಾಥಾಯಿ ಮೊಬಲಗು ಕೊಟ್ಟ ನಂತರ ಬಾಕಿಯಾಗುವ ಪೂರಾ ಮೊತ್ತವನ್ನು 1—8—09ರ ಲಾಗಾಯಿತು 11 ತಿಂಗಳ ಕ್ರಮವಾದ ಕಂತುಗಳಲ್ಲಿ ತಪ್ಪದೆ ಪಾವತಿ ಮಾಡತಕ್ಕದ್ದು.

ಈ ಕೆಳಗೆ ಕಂಡ ಷರತ್ತುಗಳಿಗೆ ಚಡ ಸವಾಲ್‌ದಾರನು ವೈಸ್ ಪ್ರಸಿಡೆಂಟರೊಂದಿಗೆ ಮುಚ್ಚಳಿಕೆ ಬರದುಕೊಡಬೇಕಾಗಿ ಇರುತ್ತೆ :—

(1) ಗೊತ್ತಾದ ಸ್ಲಾಟರ್‌ಹೌಸಿನಲ್ಲಿ ಅಥವಾ ಆಗಿಂದಾಗ್ಯೆ ಮ್ಯುನಿಸಿಪಲ್ ಬೋರ್ಡಿನವರು ಗೊತ್ತುಮಾಡುವ ಸ್ಥಳದಲ್ಲಿ ಕತರಾವಣಿ ಕೆಲಸ ನಡಿಸುವದಕ್ಕೂ,

(2) ಮ್ಯುನಿಸಿಪಲ್ ಬೋರ್ಡಿನ ಸ್ಯಾನಿಟರಿ ಇನ್ಸ್‌ಪೆಕ್ಟರವರು ಅಥವಾ ಬೋರ್ಡಿನವರು ನೇಮಕಮಾಡುವ ಇತರ ಯಾರಾದರೊಬ್ಬ ಆಫಿಸರವರಿಗೆ ತೃಪ್ತಿಕರವಾಗಿರುವಂತೆ ಸ್ಲಾಟರ್‌ಹೌಸಿನ ಆಸ್‌ಪಾಸ್ ಜಾಗವನ್ನು ನಿರ್ಮಲವಾಗಿಯೂ, ಶುಚಿಯಾಗಿಯೂ ಇಟ್ಟುಕೊಂಡಿರಲಿಕ್ಕೂ,

(3) ಚರ್ಮಗಳನ್ನೂ ಮತ್ತು ಕತರಾಯಿಸಲ್ಪಟ್ಟ ಜಾನವರ್‌ಗಳ ದೆಟ್ಟಗಳನ್ನೂ ತಕ್ಷಣ ಸ್ಲಾಟರ್‌ಹೌಸಿನಿಂದ ಆಚೆ ಸಾಗಿಸಲಿಕ್ಕೂ,

(4) ಕೊಂಬುಗಳು, ಎಲುಬುಗಳು ವಗ್ಯೆರೆ ಗಲೀಜು ಪದಾರ್ಥಗಳನ್ನು ತಕ್ಷಣ ಸ್ಲಾಟರ್‌ಹೌಸಿನಿಂದ ಆಚೆ ಸಾಗಿಸಲಿಕ್ಕೂ, ಮತ್ತು ಸ್ಯಾನಿಟರಿ ಇನ್ಸ್‌ಪೆಕ್ಟರವರು ತೋರಿಸುವ ಸ್ಥಳದಲ್ಲಿ ಅವುಗಳನ್ನು ಹೂಳಿಡಲಿಕ್ಕೂ,

(5) ಸ್ಲಾಟರ್ ಹೌಸ್ ಮತ್ತು ಅದರ ಆಸ್‌ಪಾಸ್ ಜಾಗಗಳನ್ನ 1909ನೆ ಜೂನ್ 30ನೆ ತಾರೀಖಿನಲ್ಲಿ ತನ್ನ ವಶಕ್ಕೆ ತೆಗದುಕೊಳ್ಳಲಿಕ್ಕೂ, ಮತ್ತು ಕಂಟ್ರಾಕ್ಟು ವಾಯಿದೆ ಮುಗಿದ ಕೂಡ್ಲೆ ಒಳ್ಳೇ ಸ್ಥಿತಿಯಲ್ಲಿ ಸದರಿ ಕಟ್ಟಡ ವಗ್ಯೆರೆಯನ್ನ ವೈಸ್ ಪ್ರಸಿಡೆಂಟರಿಗಾಗಲಿ, ಅವರಿಂದ ನೇಮಿಸಲ್ಪಟ್ಟ ಯಾರಾದರೊಬ್ಬ ಆಫಿಸರ ವಶಕ್ಕಾಗಲೀ ಒಪ್ಪಿಸುವದಕ್ಕೂ, ಸಹಾ.

ಯಾವ ಸಬಬನ್ನೂ ನಮೂದಿಸದೇನೆ ದರಖಾಸು ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರ ಪ್ರೆಸಿಡೆಂಟರವರ ಯಖ್ತ್ಯಾರಿಗೆ ವಳಪಟ್ಟದ್ದಾಗಿರುತ್ತೆ.

ನೋಟಿಸ.

ತಾರೀಖು 31ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬವರಿಂಗ್‌ಪ್ಯಾಟೆ ಮ್ಯುನಿಸಿಪಾಲಿಟಿಯಲ್ಲಿ ಪ್ರತಿ ಶುಕ್ರವಾರವೂ ಜಮಾಯಿಸತಕ್ಕ ಸಂತೆಯಲ್ಲಿ ಧಾನ್ಯ, ಎತ್ತು, ಕುರಿ, ಮ್ಯಾಕೆ, ತರಕಾರಿ ವಗ್ಯೆರೆಗಳ ಮೇಲೆ 1909ನೆ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಜೂನ್ 30ರ ವರಗೆ ತೆರಿಗೆ ವಸೂಲ್ಮಾಡುವ ಹಕ್ಕನ್ನು ವಿಲೇವಾರಿ ಮಾಡುವ ಉದ್ದಿಶ್ಯ ಟೆಂಡರುಗಳು ಬೇಕಾಗುತ್ತವೆ. ಬವರಿಂಗ್‌ಪ್ಯಾಟೆ ವೈಸ್ ಪ್ರಸಿಡೆಂಟರವರ ಆಫೀಸಿನಲ್ಲಿ 1909ನೆ ಜೂನ್ 15ನೆ ತಾರೀಖು ಮಂಗಳವಾರ ದಿವಸ ದಿವಿ 11 ಘಂಟೆ ವರಿಗೂ ಸೀಲು ಹಾಕಿದ ಟೆಂಡರುಗಳು ಬರಮಾಡಿಕೊಳ್ಳಲ್ಪಡುತ್ತವೆ.

ಈ ವಿಚಾರದಲ್ಲಿ ತಪಸೀಲ್ ಅಪೇಕ್ಷಿಸತಕ್ಕವರು ಬವರಿಂಗ್‌ಪ್ಯಾಟೆ ವೈಸ್ ಪ್ರೆಸಿಡೆಂಟರವರಲ್ಲಿಗೆ ಬರದುಕೊಂಡು ತಿಳಿದುಕೊಳ್ಳಬಹುದು.

ಯಾವ ಸಬಬನ್ನೂ ನಮೂದಿಸದೇನೆ ಟೆಂಡರುಗಳನ್ನು ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರವು ಪ್ರೆಸಿಡೆಂಟರವರ ಯಖ್ತ್ಯಾರಿಗೆ ವಳಪಟ್ಟದ್ದಾಗಿ ಇರುತ್ತೆ.

ಎಸ್. ಶ್ಯಾಮಣ್ಣ, ಛಾರ್ ಪ್ರೆಸಿಡೆಂಟ್.

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಸನ್ 1909ನೆ ಇಸವಿ ಮೇ 6ನೆ ತಾರೀಖಿನಲ್ಲಿ ನಡೆಸಿದ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

ಕೆ. ಧೊರೆಸ್ವಾಮಿ ಐಯ್ಯರ್, ಎಸ್ಕ್ವಯರ್, ಪ್ರೆಸಿಡೆಂಟರು.

ನಂಬರ್.	ಹೆಸರು.	ಹಾಜರ್.	ಗೈರ್‌ಹಾಜರ್.
	ಎಕ್ಸ್ ಅಫಿಷಿಯೋ ಮೆಂಬರುಗಳು.		
1	ಮಿ॥ ಎಚ್. ಮಾಧವರಾಯರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ಮತ್ತು ಬೋರ್ಡ್ ವೈಸ್ ಪ್ರೆಸಿಡೆಂಟರವರು.	ಹಾಜರ್.	...
2	,, ಸಿ. ವೆಂಕಟರಾಯರು, ತುಮಕೂರು ಸಬ್ ಡಿವಿಜನ್ ಆಫಿಸರವರು	ಡಿಟೋ	...
3	,, ಕೆ. ಶ್ರೀನಿವಾಸರಾಯರು, ಗುಬ್ಬಿ ಸಬ್ ಡಿವಿಜನ್ ಆಫಿಸರವರು.	ಡಿಟೋ	...
4	,, ಎಂ. ಎ. ನಾರಾಯಣ ಅಯ್ಯಂಗಾರ್ರವರು, ಮದ್ದಗಿರಿ ಸಬ್ ಡಿವಿಜನ್ ಆಫಿಸರವರು.	ಡಿಟೋ	...
5	,, ಕೆ. ಪ್ರಹ್ಲಾದರಾಯರವರು, ತುಮಕೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಯವರು.	ಡಿಟೋ	...
6	,, ಎಸ್. ರಂಗಾಚಾರ್ಯರವರು, ತುಮಕೂರು ಡಿಸ್ಟ್ರಿಕ್ಟ್, ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು.	...	ಗೈರ ಹಾಜರ್.
7	,, ಸಿ. ಅಪ್ಪಾಧೊರೆ ಮೊದಲಿಯಾರ್ರವರು, ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರವರು.	...	ಡಿಟೋ
	ನಾನ್ ಅಫಿಷಿಯಲ್ ಮೆಂಬರುಗಳು.		
1	,, ಕೆ. ರಾಮಾನುಜೈಯ್ಯಂಗಾರು, ಗುಬ್ಬಿ	ಹಾಜರ್.	...
2	,, ವೀರಶೆಟ್ಟರು, ತುರುವೇಕೆರೆ	ಡಿಟೋ	...
3	,, ಕೆ. ಬಿ. ಶ್ರೀನಿವಾಸರಾಯರು, ಮದ್ದಗಿರಿ	ಡಿಟೋ	...
4	,, ಅಬಿದಲ್ಲಿ ಸಾಹೇಬರು, ಕೊರಟಗೆರೆ	ಡಿಟೋ	...
5	,, ಅಗಳೀ ವೆಂಕಟರಾಮೈಯ್ಯನವರು, ಶಿರಾ	ಡಿಟೋ	...
6	,, ಸಿ. ಶ್ರೀನಿವಾಸರಾಯರು, ಪಾವಗಡ	ಡಿಟೋ	...
7	,, ಆದೆಪ್ಪ ಬಿನ್ ಅಪ್ಪಣ್ಣಶೆಟ್ರು, ತುಮಕೂರು	ಡಿಟೋ	...
8	,, ಸೂರ್ಯನಾರಾಯಣರಾವ್ ಬಿನ್ ಮಲ್ಲಪ್ಪನವರು, ತುಮಕೂರು ...	ಡಿಟೋ	...
9	,, ಹೊನ್ನಲಿಗೆ ಗೌಡರು, ಗುಬ್ಬಿ	ಡಿಟೋ	...
10	,, ಶಿಂಗ್ರಾಚಾರ್ರು, ಕುಣಿಗಲ್	ಡಿಟೋ	...
11	,, ಮೈಲಾರಪ್ಪ ಬಿನ್ ಕೆಂಚಪ್ಪನವರು, ತುಮಕೂರು ...	ಡಿಟೋ	...
12	,, ಜಿ. ಶಿವರಾಮೈಯ್ಯನವರು, ಮದ್ದಗಿರಿ	ಡಿಟೋ	...
13	,, ಗಂಗೆಗೌಡರು, ಚಿಕ್ಕನಾಯಕನಹಳ್ಳಿ	ಡಿಟೋ	...
14	,, ಶಂಭುಲಿಂಗ ಶೆಟ್ಟರು, ಗುಬ್ಬಿ	ಡಿಟೋ	...
15	,, ಶಿಂಗ್ರಿ ನಂಜಪ್ಪನವರು, ತಿಪಟೂರು	...	ಗೈರ್ ಹಾಜರ್.
16	,, ಹೆರೂರು ಗುಂಡಪ್ಪನವರು, ಕುಣಿಗಲ್	...	ಡಿಟೋ
17	,, ಹೊನ್ನವಳ್ಳಿ ಕಂದಾಚಾರ್ ಸುಬ್ಬರಾಯರು, ತಿಪಟೂರು ...	...	ಡಿಟೋ
18	,, ಆಂಜನೇಯ ಶೆಟ್ಟರು, ಪಾವಗಡ	...	ಡಿಟೋ

ಈ ಕೆಳಗೆ ನಮೂದಿಸಿರುವ ತಾಲ್ಲೂಕು ಸಬ್ ತಾಲ್ಲೂಕುಗಳ ಅಮಲ್‌ದಾರ್ರು ಮತ್ತು ಡೆಪ್ಯುಟಿ ಅಮಲ್ದಾರ್ರುಗಳು ಸಹಾ ಹಾಜರಿದ್ದರು.

(1) ತುಮಕೂರು ತಾಲ್ಲೂಕು ಅಮಲ್ದಾರ್ರು.
(2) ಮದ್ದಗಿರಿ ಡಿಟೋ
(3) ಚಿಕ್ಕನಾಯ್ಕನಹಳ್ಳಿ ಡಿಟೋ
(4) ಶಿರಾ ಡಿಟೋ
(5) ಪಾವಗಡ ಡಿಟೋ
(6) ತಿಪಟೂರು ಡಿಟೋ
(7) ಗುಬ್ಬಿ ಡಿಟೋ
(8) ಕುಣಿಗಲ್ ಡಿಟೋ
(9) ಕೊರ್ಟಗೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ರು.
(10) ತುರ್ವೇಕೆರೆ ಡಿಟೋ

I. ಕಂಟ್ರೋಲರ್ ಯವರಿಂದ ಆಡಿಟ್ಟಾದ ಸನ್ 1908ನೆ ಇಸವಿ ಸೆಪ್ಟಂಬರ್, ಅಕ್ಟೋಬರ್, ನವಂಬರ್ ಮಾಹೆಗಳ ಡಿಸ್ಟ್ರಿಕ್ಟು ಫಂಡ್ ಜಮಾಖರ್ಚು ಲೆಖ್ಖಗಳನ್ನು ಓದಿ ಪಾಸ್ ಮಾಡಲಾಯಿತು.

II. ಡಿಸ್ಟ್ರಿಕ್ಟು ಫಂಡ್ ವಸೂಲ್ ಬಾಕಿ ಲೆಖ್ಖದ ವಿಚಾರದಲ್ಲಿ ಹಾಲಿ ಜರಗುತ್ತಲಿರುವ ಅನಾವಶ್ಯಕವಾದ ನಡವಳಿಕೆ ತಪ್ಪಿಸುವದಕ್ಕೋಸ್ಕರಲೂ ಸದರೀ ಲೆಖ್ಖವನ್ನು ತನಿಖೆ ಮಾಡಲು ಸೌಲಭ್ಯವನ್ನು ಉಂಟುಮಾಡುವದಕ್ಕಾಗಿಯೂ ಆ ಲೆಖ್ಖಗಳು ತಯಾರಾಗತಕ್ಕ ಬಗ್ಯೆ ಕೆಲವು ಇನ್‌ಸ್ಟ್ರಕ್ಷನ್ ಜಾರೀಗೆ ಕೊಡತಕ್ಕದ್ದಕ್ಕೆ ಮುಂಚಿತವಾಗಿ ಆ ವಿಚಾರದಲ್ಲಿ ಪ್ರೆಸಿಡೆಂಟರುಗಳ ಅಭಿಪ್ರಾಯ ಮತ್ತು ಸಲಹೆಗಳನ್ನು ಬರೆಸಿ ಕಳುಹಿಸಬೇಕಾಗಿ ನಮೂದಿರುವ 15—2—09ನೆ ಮರ್ಕುಂ 7998-8006—ಲೋ. ಬೋ. 284-08-2ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸ್ ಓದಲಾಯಿತು.

ವಸೂಲ್ ಬಾಕಿ ಲೆಖ್ಖವನ್ನು ತಯಾರ್ಮಾಡಿಸತಕ್ಕ ವಿಚಾರದಲ್ಲಿ ಕೊಡಿಸಬೇಕಾಗಿ ನಮೂದಿರುವ ಇನ್‌ಸ್ಟ್ರಕ್ಷನ್ಸ್ ಜಾರೀಗೆ ತರಬಹುದೆಂತ ತೀರ್ಮಾನಿಸಲಾಯಿತು.

III. ನಾನ್ ಅಫಿಷಿಯಲ್ ಮೆಂಬರುಗಳ ಭತ್ಯಾ ಬಿಲ್ಲುಗಳು ತಯಾರಾಗತಕ್ಕ ಬಾಬಿನಲ್ಲಿಯೂ ಅವುಗಳಲ್ಲಿ ಕಂಡ ಮೊಬಲಗು ಡ್ರಾ ಆಗಿ ಬಟವಾಡೆ ಆಗತಕ್ಕ ವಿಚಾರದಲ್ಲೂ ಕೆಲವು ವಿಧಾನಗಳನ್ನು ಏರ್ಪಡಿಸತಕ್ಕ ಬಾಬೆ ಬೋರ್ಡಿನವರ ತೀರ್ಮಾನ ಕಳುಹಿಸಿಕೊಡಬೇಕಾಗಿ ವಗೈರೆ ನಮೂದಿರುವ 27—2—09ನೆ ಮರ್ಕುಂ 8389-96—ಲೋ. ಬೋ. 216-08ನೆ ನಂಬರು ಪ್ರೊಸೀಡಿಂಗ್ಸನ್ನು ಓದಲಾಯಿತು.

ತೀರ್ಮಾನ—ಬಿಲ್ಲುಗಳಮೇಲೆ ಅವುಗಳಲ್ಲಿ ಕಂಡ ಮೊಬಲಗು ನ್ಯಾಯವಾಗಿಯೂ, ಅವಶ್ಯಕವಾಗಿಯೂ ಪಬ್ಲಿಕ್ ಸರ್ವಿಸ್ ಗಾಗಿ ಖರ್ಚಾಯಿತೆಂಬ ಬಗ್ಯೆ ಸರ್ಟಿಫಿಕೇಟ್ ಮಾಡತಕ್ಕದ್ದನ್ನು ವಿಧಿಸಬಹುದು. ಹಾಲಿ ಜಾರೀಲಿರುವ ಪದ್ಧತಿ ಅನುಸರಿಸಿ ಪ್ರತಿ ಒಬ್ಬ ಮೆಂಬರು ಅವರವರ ಬಿಲ್ಲನ್ನು ತಯಾರ್ಮಾಡಿ ಕಳುಹಿಸುವುದು. ಅದು ಕಂಟ್ರೋಲರ್ ಯವರಿಂದ ಆಡಿಟ್ಟಾಗಿ ಬಂದನಂತರ ಮೊಬಲಗು ಪಾವತಿ ಆಗುವುದು ಸಲೀಸಾದ್ದಾಗಿಯೂ ನಿರಾತಂಕವಾಗಿಯೂ ಇರುತ್ತೆ. ಬೋರ್ಡಿನ ಮೆಂಬರುಗಳ ಬಾಬತು ಒಟ್ಟು ಬಿಲ್ಲು ತಯಾರಾಗೋಣದರಿಂದ, ಗೈರ್ ಹಾಜರಾದ ಮೆಂಬರುಗಳನ್ನು ಬಿಲ್ಲಿನಲ್ಲಿ ಸೇರಿಸುವದೇ ಮೊದಲಾದ ಕೆಟ್ಟ ನಡವಳಿಕೆಗಳಿಗೆ ಅವಕಾಶ ಉಂಟಾಗಬಹುದಾಗಿದೆ. ಅದು ಅಲ್ಲದೆ ಒಂದು ಮೀಟಿಂಗಿಗೆ ಹಾಜರಿದ್ದ ಮೆಂಬರು ಬಾಬತು ಟ್ರಾವಲಿಂಗ್ ಅಲೋವೆನ್ಸು ಮೊಬಲಗು ಡ್ರಾ ಆದದ್ದು ಸದರೀ ಮೆಂಬರು ಆ ಮೊಬಲಗನ್ನು ತೆಗದುಕೊಳ್ಳಲು ಆ ಮುಂದಿನ ಮೀಟಿಂಗಿಗೆ ಗೈರ್ ಹಾಜರಾದ ಪಕ್ಷದಲ್ಲಿ ಡ್ರಾ ಆದ ಮೊಬಲಗು ಪಾವತೀ ಆಗದೇ ಬಹಳಕಾಲ ನಿಲ್ಲುತ್ತೆ. ಮತ್ತು ಎರಡು ಮೀಟಿಂಗುಗಳು ನಡೆಯುವ ಮಧ್ಯ ಕಾಲದಲ್ಲಿಯೇ ಸದರೀ ಮೆಂಬರು ಬೋರ್ಡಿನಿಂದ ವಜಾ ಆಗುವ ಪಕ್ಷದಲ್ಲಿ ಮೊಬಲಗು ಪಾವತಿ ಆಗುವದಕ್ಕೇನೆ ಅವಕಾಶವಿಲ್ಲದಂತೆ ಆಗುತ್ತೆ. ಈ ರೀತಿ ಮೊಬಲಗು ಡ್ರಾ ಆಗುವದಕ್ಕೂ ಮೊಬಲಗು ಪಾವತಿ ಆಗುವದಕ್ಕೂ ಉಂಟಾಗುವ ಸುಸ್ತಿಯಿಂದ ಸದರೀ ಮೊಬಲಗನ್ನು ಇಟ್ಟುಕೊಳ್ಳಲು ನೇಮಿಸುವ ನೌಕರರು ಮೊಬಲಗನ್ನು ದುರುಪಯೋಗಿಸಲು ಆಸ್ಪದವಾಗುತ್ತೆ. ಈ ವಿಚಾರದಲ್ಲಿ ಜಾರೀಗೆ ತರಬೇಕೆಂಬ ಪದ್ಧತಿಯೇ ಇಲ್ಲಿ ಜಾರೀಲಿತ್ತು. ಆದರೆ ಅದು ಖಂಡಿತವಾಗಿಯೂ ಗಲಾಟೆಗೆ ಆಸ್ಪದ ಕೊಡುತ್ತೆಂದು ತಿಳಿದು ಈಗ್ಯೆ ಕೆಲವು ತಿಂಗಳುಗಳ ಕೆಳಗೆ ನಿಲ್ಲಿಸಲ್ಪಟ್ಟಿತು. ಈ ಕಾರಣಗಳಿಂದ ನಾನ್ ಅಫಿಷಿಯಲ್ ಮೆಂಬರುಗಳ ಟ್ರಾವಲಿಂಗ್ ಅಲೋವೆನ್ಸನ್ನು ಒಟ್ಟು ಬಿಲ್ಲುಗಳಮೇಲೆ ಡ್ರಾ ಮಾಡಿ ಪಾವತಿ ಮಾಡತಕ್ಕ ಪದ್ಧತಿಯನ್ನು ಅವಲಂಬಿಸುವ ವಿಚಾರದಲ್ಲಿ ಅಭಿಮತರಾಗಿಲ್ಲವೆಂತ ಬೋರ್ಡಿನವರು ತಿಳಿಸುತ್ತಾರಲ್ಲದೆ ಪ್ರತಿ ಒಬ್ಬ ಮೆಂಬರೂ ಅವರವರ ಟ್ರಾವಲಿಂಗ್ ಅಲೋವೆನ್ಸು ಅವರವರು ತಯಾರ್ಮಾಡಿ ಕಳುಹಿಸುವ ಬಿಲ್ಲುಮೇಲೆ ಡ್ರಾ ಮಾಡುವದು ಉತ್ತಮವಾದ್ದೆಂತಲೂ ಅಭಿಪ್ರಾಯಪಡುತ್ತಾರೆ.

IV. ಬಡ್ಜೆಟ್ಟಿನಲ್ಲಿ ದಾಖಲಾಗಿರುವ ಕಾಂಗಾರಿಗಳನ್ನು ನಿಲ್ಲಿಸಿ ಅವಕ್ಕೆ ಬದಲಾಗಿ ಬಡ್ಜೆಟ್ಟಿನಲ್ಲಿ ದಾಖಲಾಗದ 20—4—09ನೆ ಮರ್ಕುಂ 677ನೆ ನಂಬರು ಲೆಟರು ಒಡನೆ ಕಳುಹಿಸಿದ ತಖ್ತೇಲಿ ನಮೂದಾದ ಕಾಂಗಾರಿಗಳನ್ನು ಜರಗಿಸತಕ್ಕ ವಿಚಾರದಲ್ಲಿ ಬೋರ್ಡಿನವರು ಒಪ್ಪಿರುತ್ತಾರೆಯೋ ಎಂತ ನಮೂದಾದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 30—4—09ನೆ ಮರ್ಕುಂ 10786—ಲೋ. ಬೋ. 221-08-4ನೆ ನಂಬರು ಡಾಕೆಟ್ ಮತ್ತು ಈ ಸಂಬಂಧವಾದ ವಿಶಿಷ್ಟ ರಿಕಾರ್ಡು ಓದಲಾಯಿತು.

ನಿಲ್ಲಿಸಬೇಕೆಂತ ಪ್ರಪೋಜ್ ಮಾಡಲ್ಪಟ್ಟ ಬಡ್ಜೆಟ್ಟಿನಲ್ಲಿ ದಾಖಲಾಗಿದ್ದ ಕಾಂಗಾರಿಗಳಿಗೆ ಬದಲಾಗಿ ಮೇಲೆ ನಮೂದಾದ ತಖ್ತೇಲಿ ಸೇರಿದ ಬಡ್ಜೆಟ್ಟಿನಲ್ಲಿ ದಾಖಲಾಗದ ಕಾಂಗಾರಿಗಳನ್ನು ಮಾಡಿಸಬಹುದೆಂತ ತೀರ್ಮಾನಿಸಲಾಯಿತು.

V. ಸನ್ 1909—10ನೆ ಸಾಲ್ ಈ ಡಿಸ್ಟ್ರಿಕ್ಟ್ ಬ್ಬಾಬತು ಡಿಸ್ಟ್ರಿಕ್ಟ್ ಫಂಡ್ ಬಜ್ಜಟ ಎಸ್ಟಿಮೇಟ್ಸ್ ಮಂಜೂರ್ಮಾಡಿರುವದಾಗಿ ನಮೂದಿರುವ 1—5—09ನೆ ಮುರ್ಕುಂ 10837-49—ಲೋ. ಜೋ. 217-08-4ನೆ ನಂಬರು ಗವರ್ನಮೆಂಟ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

VI. ರೆವಿನ್ಯೂ ಕಮಿಷನರ ಸಾಹೇಬರವರಿಂದ ಹೊಸದಾಗಿ ಭಾವಿಗಳನ್ನು ತೆಗಿಸತಕ್ಕ ಬಗ್ಯೆ ಮತ್ತು ಜನೋಪಯುಕ್ತವಾದ ಇತರ ಕಾಂಗಾರಿಗಳಿಗಾಗಿಯೂ ಅಲಾಟಾದ 24,000 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಫಂಡ್ಸಿಗೆ ಕಂಟ್ರಿಬ್ಯೂಷನ್ ತರೀಕ ಜಮ ಕಟ್ಟಿಕೊಳ್ಳಬೇಕೆಂತಲೂ ಈ ಕಾಂಗಾರಿಗಳ ವಿಚಾರದಲ್ಲೂ ಸಹಾ ಡಿಸ್ಟ್ರಿಕ್ಟ್ ಫಂಡ್ಸ್ ಕಾಂಗಾರಿಗಳಿಗಾಗಿ ಮೊಬಲಗು ಡ್ರಾ ಮಾಡಿ ಖಾವತೀ ಮಾಡತಕ್ಕ ಪದ್ಧತಿಯೇ ಜಾರೀಲಿಡಬೇಕಾಗಿ ವಗೈರೆ ನಮೂದಾದ ಕಂಟ್ರೋಲರ ಯವರ 30—3—09ನೆ ಮುರ್ಕುಂ 5661-42ನೆ ನಂಬರು ಡಾಕೆಟನ್ನು ಓದಿ ರಿಕಾರ್ಡು ಮಾಡಲಾಯಿತು.

VII. ಈ ಕೆಳಗೆ ನಮೂದಾದ ಕಾಂಗಾರಿಗಳ ಅಂದಾಜುಗಳನ್ನು ಕೌಂಟರ್ ಸೈನ್ ಬಗ್ಯೆ ಕಳುಹಿಸಿರುವದಾಗಿ ನಮೂದಾದ ತುಮಕೂರು ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಯವರ ಈರೇಖೆನಲ್ಲಿ ಕಂಡ ಡಾಕೆಟಗಳನ್ನು ಓದಲಾಯಿತು.

9—2—09ನೆ ಮುರ್ಕುಂ 58ನೆ ನಂಬರು.
19—3—09ನೆ ಮುರ್ಕುಂ 89ನೆ ನಂಬರು.
30—4—09ನೆ ಮುರ್ಕುಂ 130ನೆ ನಂಬರು.

(1) ಮದ್ದಗಿರಿ ಟ್ರಾವಲರ್ಸ್ ಬಂಗ್ಲಾ ಬಳೀಲಿರುವ ಮಂಟಪವನ್ನು ರಿಪೇರಿ ಮಾಡುವದಕ್ಕೂ ಮತ್ತು ಭಾವಿಯನ್ನು ಆಳ ಪಡಿಸುವದಕ್ಕೂ ಸಹಾ ತಯಾರಾದ 63 ರೂಪಾಯಿಗಳ ಅಂದಾಜು.

(2) ಅಂಕಸಂದ್ರದ ಟ್ರಾವಲರ್ಸ್ ಬಂಗ್ಲಾ ರಿಪೇರಿಗಾಗಿ ತಯಾರಾದ 392 ರೂಪಾಯಿನ ಅಂದಾಜು.

(3) ಮಾಯಿಸಂದ್ರದ ಟ್ರಾವಲರ್ಸ್ ಬಂಗ್ಲಾ ಕಾಂಪೌಂಡಿನಲ್ಲಿ ಒಂದು ಭಾವಿ ತೆಗಿಸಲು ತಯಾರಾದ 160 ರೂಪಾಯಿನ ಅಂದಾಜು

ತೀರ್ಮಾನ—ಪ್ಯಾಸ್ ಮಾಡಲಾಯಿತು.

VIII. ಬಾಣಾವಾರ—ಶಿರಾ ರಸ್ತೇಲಿ ಆಗಬೇಕಾಗಿರುವ ಸ್ಪೆಷಲ್ ಕಾಂಗಾರಿಗಳ ಬಾಬ ತಯಾರಾದ 474 ರೂಪಾಯಿಗಳ ಅಂದಾಜು ಕೌಂಟರ್ ಸೈನ್ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ, ತುಮಕೂರು ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಯವರ 27—4—09ನೆ ಮುರ್ಕುಂ 129ನೆ ನಂಬರು ಡಾಕೆಟನ್ನು ಓದಲಾಯಿತು.

ತೀರ್ಮಾನ—ಪ್ಯಾಸ್ ಮಾಡಲಾಯಿತು.

IX. ಪಾವಗಡ ತಾಲ್ಲೂಕು ಹೊಸಕೋಟೆ ಗ್ರಾಮದಲ್ಲಿ ಮಾಹೆಯಾನಾ 20 ರೂಪಾಯಿಗಳ ಲಾಗೋಡಿನಲ್ಲಿ (ವೈದ್ಯನ ಸಂಬಳ 15 ರೂಪಾಯಿ ಔಷಧ ವಗೈರೆ ಸಾದಿಲ್ವಾರ್ ಖರ್ಚಿಗಾಗಿ 5 ರೂಪಾಯಿ) ಒಂದು ಹಿಂದೂ ವೈದ್ಯಶಾಲೆಯನ್ನು ಇಡಬೇಕೆಂತ ನಮೂದಾದ ಮದ್ದಗಿರಿ ಸಬ್ ಡಿವಿಜನ್ ಆಫಿಸರವರ 12—4—09ನೆ ಮುರ್ಕುಂ 873ನೆ ನಂಬರು ಯಾದಿಯನ್ನು ಓದಲಾಯಿತು.

ಮುಂದಿನ ಸಾಲ್ ಷುರು ಲಾಗಾಯಿತು ಸದರೀ ವೈದ್ಯಶಾಲಾವನ್ನು ಸ್ಥಾಪಿಸಲು ಮಂಜೂರಾತಿಗಾಗಿ ಗವರ್ನಮೆಂಟಿಗೆ ಬರಿಸಬೇಕೆಂತಲೂ, ಆ ವೈದ್ಯಶಾಲೆಗಾಗಿ ಬೇಕಾಗಿರುವ 240 ರೂಪಾಯಿಗಳನ್ನು ಮುಂದಿನಸಾಲ್ ಬಜ್ಜಟ ಗ್ರಾಂಟುಗಳ ಪೈಕಿ ರಿ-ಅಪ್ರೊಪ್ರಿಯೇಷನ್ ಮೂಲಕ ಹಣ ಒದಗಿಸಬಹುದೆಂತಲೂ ತೀರ್ಮಾನಿಸಲಾಯಿತು.

X. ಡಿಸ್ಟ್ರಿಕ್ಟ್ ಬೋರ್ಡು ಮೆಂಬರು ಮಿ|| ಶಂಭುಲಿಂಗಶೆಟ್ರು 3 ಮೀಟಿಂಗುಗಳಿಗೆ ಮೇಲ್ಪಟ್ಟು ಗೈರ ಹಾಜರಾದ್ದಕ್ಕೆ ಅವರಿಂದ ಪಡೆದ ಸಮಜಾಯಿಷಿಯನ್ನು ಕಳುಹಿಸಿರುವದಾಗಿ ನಮೂದಾದ ಗುಬ್ಬಿ ತಾಲ್ಲೂಕು ಅಮಲ್ದಾರ್) 3—5—09ನೆ ಮುರ್ಕುಂ 503ನೆ ನಂಬರು ರಿಪೋರ್ಟನ್ನು ಓದಲಾಯಿತು.

ಸದರೀ ಮೆಂಬರು ತಾವು ಸಖ್ತ ಕಾಯಿಲೆ ಇದ್ದ ಸಬಬು ಗೈರ ಹಾಜರಾದಂತೆಯೂ, ಮೀಟಿಂಗಗಳು ನಡೆದ ಕಾಲ ಸಹಾ ಲದಲ್ಲಿ ತಿಳಿಯಬರಲಿಲ್ಲವೆಂತಲೂ, ಈ ಕಾರಣಗಳಿಂದ ಗೈರ ಹಾಜರಾದಂತೆಯೂ, ನಮೂದಿರುತ್ತಾದಪ್ರಯುಕ್ತ ಇವರ ಸಮಜಾಯಿಷಿಯನ್ನು ಅಂಗೀಕರಿಸಿಕ್ಕೊಂಡು ಇವರ ಗೈರ ಹಾಜರಿಯನ್ನು ಕಂಡೋನ್ ಮಾಡತಕ್ಕ ವಿಚಾರದಲ್ಲಿ ಗವರ್ನಮೆಂಟಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

XI. ಮುಂದಿನ ಬೋರ್ಡ್ ಮೀಟಿಂಗ್ ಸನ್ 1909ನೆ ಜುಲೈ 29ನೆ ತಾರೀಖು ಮಧ್ಯಾಹ್ನ 3 ಘಂಟೆಗೆ ನಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಕೆ. ದೊರೆಸ್ವಾಮಿ ಐಯ್ಯರ್,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟ್.

ಇಸ್ತಿಹಾರ್ ಗೋಷ್ವಾರೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಅರಶೀಕೆರೆ ಮ್ಯುನಿಸಿಪಾಲಿಟಿಯಲ್ಲಿ ನಡೆಯುವ ಸಂತೆಯಲ್ಲಿ 1909ನೆ ಜುಲೈ 1ರ ಲಾಗಾಯಿತು 1910ನೆ ಜೂನ್ 30ರ ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕನ್ನು ಹಾಸನದ ಡಿಸ್ಟ್ರಿಕ್ಟ್ ಚನ್ನರಾಯಪಟ್ಣ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ ಸಾಹೇಬರವರಿಂದ ಅರಶೀಕೆರೆ ತಾಲ್ಲೂಕು ಆಫೀಸಿನಲ್ಲಿ 1909ನೆ ಜೂನ್ 14ನೆ ತಾರೀಖು ಸೋಮವಾರ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಹೆಚ್ಚು ವಿಚಾರಕ್ಕೆ 1909ನೆ ಇಸವಿ ಜೂನ್ ಮಾಹೆ 3ನೆ ತಾರೀಖು ಮೈಸೂರು ಗೆಜೆಟ್ಟಿನ 2ನೆ ಭಾಗದ 478ನೆ ಪುಟದಲ್ಲಿ ಛಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬಹುದು.

ಅಬ್‌ಸ್ಟ್ರಾಕ್ಟ್ ನೋಟಿಫಿಕೇಷನ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನ ಡಿಸ್ಟ್ರಿಕ್ಟು ಹೊಳೇನರಶೀಪುರದ ತಾಲ್ಲೂಕು ಹೊಳೇ ನರಶೀಪುರದ ಸೇತುವೆ ಟೋಲು ಗೇಟನಲ್ಲಿ ಸನ್ 1909ನೆ ಜುಲೈ 1ನೆ ತಾರೀಖು ಲಾಗಾಯಿತು 1911ನೆ ಇಸವಿ ಜೂನ್ 30ರ ವರಿಗಿನ ಎರಡು ಸಾಲುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಸ್ವಾತಂತ್ರ್ಯವು 1909ನೆ ಇಸವಿ ಜೂನ್ ಮಾಹೆ ತಾರೀಖು 16ನೆ ಬುಧವಾರ ಹಗಲು 12 ಘಂಟೆಗೆ ಹೊಳೇನರಶೀಪುರದ ತಾಲ್ಲೂಕು ಕಛೇರಿ ಬಳಿ ಜನರಲ್ ಅಸಿಸ್ಟೆಂಟ್ ಕಮಿಷನರವರ ರೂಬರೂಬು ಅಥವಾ ಈ ಬಗ್ಗೆ ನೇಮಿಸಲ್ಪಡುವ ಇತರ ಆಫಿಸರ ರೂಬರೂಬು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ವಿಚಾರಕ್ಕೆ 1909ನೆ ಇಸವಿ ಮೇ ತಾರೀಖು 27ನೆ ಮರ್ಕ್ಯುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 414—415ನೆ ನಂಬರ್ ಪೇಜಿನಲ್ಲಿ ಘಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬಹುದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹಾಸನ-ಅರಸೀಕೆರೆ ರಸ್ತೆಮೇಲೆ ಹಾಸನದ ತಾಲ್ಲೂಕು ದುದ್ದದ ಟೋಲ್ ಗೇಟನಲ್ಲಿ 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1911ನೆ ಇಸವಿ ಜೂನ್ 30ರ ವರಿಗಿನ ಎರಡು ಸಾಲುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಸ್ವಾತಂತ್ರ್ಯವು 1909ನೆ ಇಸವಿ ಜೂನ್ ಮಾಹೆ 19ನೆ ತಾರೀಖು ಶನಿವಾರ ಹಗಲು 12 ಘಂಟೆಗೆ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಆಫೀಸಿನಲ್ಲಿ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರ ರೂಬರೂಬು ಹರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ವಿಚಾರಕ್ಕೆ 1909ನೆ ಇಸವಿ ಮೇ ತಾರೀಖು 27ನೆ ಮರ್ಕ್ಯುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 415—416ನೆ ಪೇಜಗಳಲ್ಲಿ ಘಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬಹುದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದ್ ತಾಲ್ಲೂಕಿನಲ್ಲಿರುವ ಮೂರನಹಳ್ಳಿ ಟೋಲು ಗೇಟನಲ್ಲಿ ಸನ್ 1909ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1910ನೆ ಜೂನ್ 30ರ ವರಿಗಿನ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು 1909ನೆ ಇಸವಿ ಜೂನ್ 19ನೆ ತಾರೀಖು ಶನಿವಾರ ಹಗಲು 12 ಘಂಟೆಗೆ ಮಂಜರಾಬಾದ್ ತಾಲ್ಲೂಕು ಕಛೇರಿ ಬಳಿ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬರೂಬು ಬಹಿರಂಗವಾಗಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ಜಾಸ್ತಿ ವಿಷಯಕ್ಕೆ 1909ನೆ ಇಸವಿ ಮೇ ತಾರೀಖು 27ನೆ ಮರ್ಕ್ಯುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 416—417ನೆ ನಂಬರ್ ಪೇಜುಗಳಲ್ಲಿನ ನೋಟಿಫಿಕೇಷನ್ ನೋಡಬಹುದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹಾಸನದ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕು ಬೇಲೂರು ಸೇತುವೆಯಮೇಲೆ 1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1910ನೆ ಜೂನ್ ಆಖೈರವರಿಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ ತಾರೀಖು 14ನೆ ಸೋಮವಾರ ದಿವಿ 12 ಘಂಟೆಗೆ ಸಕಲೇಶಪುರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ರೂಬುರೂಬು ಹರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ವಿಚಾರಕ್ಕೆ 1909ನೆ ಇಸವಿ ಮೇ 27ನೆ ಮರು ಮೈಸೂರು ಗೆಜೆಟ್ಟಿನ 2ನೆ ಭಾಗದ 418ನೆ ಪೇಜಿನಲ್ಲಿ ಘಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬಹುದು.

ನರಸಿಂಗರಾವ್ಪ್ರೊಫೆಸರಯ್ಯ,
ಫಾರ್ ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ :—ಸನ್ 1909ನೆ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಜೂನ್ ಆಖೈರು ವರಿಗೆ ಬಂದು ವರ್ಷ ಪರ್ಯಂತರ ಶಿವಮೊಗ್ಗ ಟವನ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿಗಳ ಮೇಲೆ ಟೋಲ್ ವಸೂಲುಮಾಡುವ ಹಕ್ಕನ್ನು 1909ನೆ ಇಸವಿ ಜೂನ್ 21ನೆ ತಾರೀಖು ಸೋಮವಾರ ಮಧ್ಯಾಹ್ನ 12 ಘಂಟೆಗೆ ಶಿವಮೊಗ್ಗ ಟವನ್ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರವರ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚಿನ ಸಂಗತಿಗಳಿಗೆ 27ನೆ ಮರ್ಕುಂ ಮೈಸೂರು ಗೆಜೆಟ್ಟು IIನೆ ಭಾಗದ 483, 484ನೆ ಪುಟವನ್ನು ನೋಡತಕ್ಕದ್ದು.

ಎ. ಮೃತ್ಯುಂಜಯ ಅಯ್ಯರ್,
ಫಾರ್ ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 21ನೆ ಮೇ 1909ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಚಿಕ್ಕಮಗಳೂರು, ತರೀಕೆರೆ, ಎಡೇಹಳ್ಳಿ, ಕೊಪ್ಪ ಮ್ಯುನಿಸಿಪಾಲಿಟಿಗಳಲ್ಲಿಯೂ ಮತ್ತು ಸಕ್ರೆಪಟ್ಣ ಯೂನಿಯನ್ನಲ್ಲಿಯೂ ನಡಿಯುವ ಸಂತೆಗಳಲ್ಲಿ ಸನ್ 1909ನೆ ಇಸವಿ ಜುಲೈ 1ರ ಲಾಗಾಯಿತು 1910ನೆ ಇಸವಿ ಜೂನ್ 30ರ ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯನ್ನು ಪರಸ್ಪರ ಚಿಕ್ಕಮಗಳೂರು ವೈಸ ಪ್ರಿಸಿಡೆಂಟರವರು, ತರೀಕೆರೆ ತಾಲ್ಲೂಕು ಅಮಲ್ದಾರ್ರವರು, ಎಡೇಹಳ್ಳಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರವರು, ಕೊಪ್ಪ ತಾಲ್ಲೂಕು ಅಮಲ್ದಾರ್ರವರು ಮತ್ತು ಕಡೂರು ತಾಲ್ಲೂಕು ಅಮಲ್ದಾರ್ರವರು ತಮ್ಮ ತಮ್ಮ ಆಫೀಸುಗಳಲ್ಲಿ ಈ ಕೆಳಗೆ ಪ್ರತಿ ಒಂದು ಸ್ಥಳದ ಬಾಜೂದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಿಸುತ್ತಾರೆ :—

ಚಿಕ್ಕಮಗಳೂರು	...	ಹರಾಜು ತಾರೀಖು 21ನೆ ಜೂನ್ 1909ನೆ ಸೋಮವಾರ.
ತರೀಕೆರೆ	...	
ಎಡೇಹಳ್ಳಿ	...	
ಕೊಪ್ಪ	...	
ಸಕ್ರೆಪಟ್ಣ	...	

2. ಹರಾಜಿನಲ್ಲಿ ಪಡಿಯತಕ್ಕವರು ಸಂತೆಯ ದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ದರದಂತೆಯೇ ಗಾಡಿ ಮತ್ತು ಜಾನ್ವಾರು ವಗೈರೇಗಳ ಮೇಲೆ ಫೀ ವಸೂಲು ಮಾಡತಕ್ಕದ್ದು. ಸದರೀ ದರಕ್ಕಿಂತ ಜಾಸ್ತಿ ದರ ವಸೂಲ್ಮಾಡಕೂಡದು.

3. ಈ ಹರಾಜು ಕಡೂರು ಡಿಸ್ಟ್ರಿಕ್ಟು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡ್ ಪ್ರೆಸಿಡೆಂಟರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಸದರೀಯವರು ಎಲ್ಲಾ ದರಖಾಸ್ತುಗಳಿಗಿಂತ ಜಾಸ್ತಿಯಾದ ಅಥವಾ ಇನ್ನ್ಯಾವ ದರಖಾಸ್ತುಗಳನ್ನ ಅಂಗೀಕರಿಸುವದಕ್ಕೆ ಆಗಲಿ ಅಧಿಕಾರ ಉಳ್ಳವರಾಗಿರುತ್ತಾರೆ.

4. ಕಂಟ್ರ್ಯಾಕ್ಟುದಾರನು ಗುತ್ತಾ ಮೊಬಲಗನ್ನು ಹನ್ನೆರಡು ತಿಂಗಳ ಸಮಕಂತು ಪ್ರಕಾರ ವಸೂಲು ಕೊಡತಕ್ಕದ್ದು. ಪ್ರತಿ ಮಾಹೆಯ ಕಂತನ್ನು ಆ ಮಾಹೆ ಆಖೈರಾದ ತಾರೀಖು 10 ರೊಳಗೆ ವಸೂಲ್ ಕೊಟ್ಟು ರಶೀತಿ ಪಡಿಯತಕ್ಕದ್ದು.

5. ಹರಾಜ್ ಕೈದಾದಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಬಾಬತು ಕಂಟ್ರ್ಯಾಕ್ಟು ಯಾ ಕಂತು ಮೊಬಲಗನ್ನ ಡಿಪಾಜಟ್ಟಿನಲ್ಲಿ ಇಡಬೇಕು. ಕಂಟ್ರ್ಯಾಕ್ಟು ಷರತ್ತುಗಳಮೇರೆ ಸರಿಯಾಗಿ ನಡದುಕೊಂಡರೆ ಡಿಪಾಜಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಂತು ಬಗ್ಯೆ ವಸೂಲ್ ಕೊಡುತೆ.

6. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಹರಾಜ್ ಹಕ್ಕುದಾರಿಯನ್ನು ಪುನಹ ಹರಾಜ್ ಮಾಡುತ್ತೆ. ಎರಡನೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಷುರು ಕಂಟ್ರ್ಯಾಕ್ಟದಾರ್ ಯಾ ಹರಾಜುದಾರನನ್ನು ಗುರಿಪಡಿಸುತ್ತೆ. ಪ್ರತಿ ಮಾಹೆಯಲ್ಲು ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ವಸೂಲ್ ಕೊಡಲು ತಪ್ಪಿದರೆ ಪಾವತಿ ಮಾಡಬೇಕಾಗಿರುವ ಮೊಬಲಗಿನಮೇಲೆ ಪಾವತೀ ಮಾಡುವ ತಾರೀಖಿನ ವರಿಗೆ ಮಾಹೇಯಾನಾ ರೂಪಾಯಿ ಒಂದಕ್ಕೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನ ವಸೂಲ್ ಮಾಡುತ್ತೆ. ಅಲ್ಲದೆ ಉಳಿದ ಕಂಟ್ರ್ಯಾಕ್ಟನ್ನು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡುಗಳ ಪ್ರೆಸಿಡೆಂಟರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಷುರು ಕಂಟ್ರ್ಯಾಕ್ಟುದಾರನನ್ನು ಗುರಿಪಡಿಸಿ ಹರಾಜ್ ಮಾಡಲ್ಪಡುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರ್ಯಾಕ್ಟುದಾರನು ಸದರಿ ನಫೆಗೆ ಹಕ್ಕುದಾರನಾಗಿರುವದಿಲ್ಲ.

7. ಕಂಟ್ರ್ಯಾಕ್ಟುದಾರನು ಯಾವ ಕಾರಣದಿಂದಲೂ ಗುತ್ತಿಗೆ ಮೊಬಲಗನ್ನು ಯಾವ ರಿಮಿಷನ್ ಮಾಡೋಣವನ್ನಾಗಲೀ ಅಥವಾ ಕಮ್ಮಿ ಮಾಡೋಣವನ್ನಾಗಲಿ ಯಾ ಪರಿಹಾರ ದ್ರವ್ಯವನ್ನಾಗಲೀ ಕೇಳಕೂಡದು.

8. ಕಂಟ್ರ್ಯಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಕರಾರ್ವಾಕಾ ಲೆಖ್ಖವನ್ನು ಇಡಬೇಕು. ಸದರಿ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ ತನಿಖೆಗೆ ಹಾಜರ್ಪಡಿಸಬೇಕು.

9. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರ್ಯಾಕ್ಟುದಾರನೇ ಆಗಲಿ ಯಾ ಅವನ ಕಡೆ ನವುಕರರೇ ಆಗಲಿ ವಿರೋಧವಾಗಿ ನಡದುಕೊಂಡರೆ ಸದರಿ ಕಂಟ್ರ್ಯಾಕ್ಟನ್ನು ವಜಾ ಮಾಡುತ್ತೆ. ಮತ್ತು ಪ್ರೆಸಿಡೆಂಟ್ ಸಾಹೇಬರವರ ಮುನಾಸಬ್ 25 ರೂಪಾಯಿಗಳಿಗೆ ಮೀರದಂತೆ ಕಂಟ್ರ್ಯಾಕ್ಟುದಾರ್ರಿಗೆ ಜುಲ್ಮಾನೆ ವಿಧಿಸುವದರಲ್ಲಿ ಬರುತ್ತೆ.

ವಸೂಲು ಮಾಡಬೇಕಾದ ದರಗಳು.

ನಂಬರ.	ಬಾಬುಗಳು.	ಚಿಕ್ಕಮಗಳೂರು.		ತರೀಕೆರೆ.		ಎಡೇಹಳ್ಳಿ.		ಕೊಪ್ಪ.		ಸಕ್ರೆಪಟ್ಣ.	
		ಆ.	ಪೈ.	ಆ.	ಪೈ.	ಆ.	ಪೈ.	ಆ.	ಪೈ	ಆ.	ಪೈ.
1	ಭರ್ತಿ ಗಾಡಿ 1ಕ್ಕೆ	1	0	1	0	1	0	1	0	1	0
2	ಖಾಲಿ ಡಿಟೋ	0	3	0	3	0	3	0	3	0	6
3	ಎತ್ತು, ಹಸು, ಎಮ್ಮೆ, ಕೋಣ ಮತ್ತು ಕುದುರೆ ಹೊರೆ ಪ್ರತಿ 1ಕ್ಕೆ.	0	3	0	6	0	6	0	6	0	6
4	ಕತ್ತೆ ಹೊರೆ ಪ್ರತಿ 1ಕ್ಕೆ	0	1	0	3	0	3	0	3	0	3
5	ತಲೆ ಹೊರೆ ಡಿಟೋ	0	3	0	1	0	1	...		0	3
6	ಖಾಲಿ ಎತ್ತು, ಹಸ, ಎಮ್ಮೆ, ಕೋಣ, ಕುದುರೆ ಪ್ರತಿ 1ಕ್ಕೆ ...	...		0	3	...		0	3	...	
7	ಆಡು, ಅಥವಾ ಮೇಕೆ	...		0	1	0	1	0	1	...	
8	ಗುಡಾರ 1ಕ್ಕೆ	1	0	...		...		...		1	0
9	ಸಂತೆ ಕಟ್ಟಡದಲ್ಲಿ ಅಂಗಡಿ ಇಟ್ಟಿದ್ದಕ್ಕೆ ...	2	0	...		...		...		...	
10	ಚಿಲ್ರೆ ಅಂಗಡಿಗೆ	...		...		...		...		0	6

ಜಿ. ಹನುಮಂತರಾವ್, ಫಾರ್ ಪ್ರೆಸಿಡೆಂಟ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆಫೀಸಿನಿಂದ.

ತಾರೀಖು 7ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮ ರ್ಕಂ 17691–L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಮಲ್ಲೇಶ್ವರ ಎಕ್ಸ್‌ಟೆನ್ಷನ್‌ಗೆ ಸೇರಿದ ಕಟ್ಟಡಕಟ್ಟತಕ್ಕ ಸೈಟುಗಳನ್ನ 1909ನೆ ಇಸವಿ ಜೂನ್ ತಾರೀಖು 21ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡ್ ಸವಾಲು ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆ ದಸಾಯು ಸೈಟುಗಳ ಬಳಿ ಹಾಜರಿದ್ದು ಛಡ್ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ವಳಪಟ್ಟು ಛಡ್ ಸವಾಲಿನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಮಲ್ಲೇಶ್ವರ ಎಕ್ಸ್‌ಟೆನ್ಷನ್.

ಬಂಗ್ಲೆ ಸೈಟುಗಳು	109	202 × 236
,,	110	
,,	111	201 × 235
,,	112	
,,	115	120 × 327
,,	116	120 × 326
,,	117	
,,	118	
,,	119	215 × 227
,,	29	150 × 187
,,	20	150 × 235
ಹಿಂದೂ ಬ್ಲಾಕ್	304	100 × 30
,,	305	
,,	316	
,,	317	
,,	437	
,,	438	
,,	439	
,,	57	120 × 30
,,	58	
,,	59	
,,	514	70 × 30
ಮಹಮ್ಮದೀಯರ ಬ್ಲಾಕ್	141	100 × 30
,,	142	
,,	143	
,,	144	
,,	157	
,,	159	
,,	160	
ಬ್ರಾಹ್ಮಣರ ಬ್ಲಾಕ್	307	100 × 30
,,	308	
,,	309	
,,	310	
,,	52	
,,	53	
,,	54	
,,	327	
,,	328	

1. ಹರಾಜು ಖೈದಾದ ಕೂಡ್ಲೆ ಛಡ್ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡ್ ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡ್‌ಸವಾಲ್ ಮೊಬಲಗ್ಗೆ ಭರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್‌ಸವಾಲ್‌ದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನ ಛಡ್‌ಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟೆರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಪಟ್ಟವು ರೋಜೇನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡುವ ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿದ ಹೊರತು ಇತರ ಮತ, ಪಣ ಯಾ ಜಾತಿಯವರು ವಾಸ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗೆಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನು ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡೆದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನು ಹಿಡುವಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲುಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನು ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡೆದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕೂ ಯಾ ಆ ನಿವೇಶನದ ಮೇಲೆ ಖರ್ಚು ಮಾಡುವ ಬಾಗವಡಿಗೂ ಹಕು ದಾರರಾಗುವದಿಲ್ಲ.

ಇಸ್ತಿಹಾರ್.

ತಾರೀಖು 7ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಇದರಡಿ ನಮೂದಿಸಿ ಇರುವ ಹುಲ್ಲು ಗಾವಲುಗಳನ್ನು 1909ನೆ ಇಸವಿ ಜುಲೈ ಗುರ್ರೇಲಾಗಾಯಿತು 1910ನೆ ಇಸವಿ ಜೂನ್ ಆಖ್ಯೆರ್ ಮಿನಹು ಒಂದು ಸಾಲ್ ಪೂರ್ತಿ ರೂಢಿಸಿಕೊಳ್ಳಲು ಕೆಳಗೆ ಆಯಾ ಹುಲ್ಲುಗಾವಲು ಹೆಸರುಗಳ ಪಕ್ಕದಲ್ಲಿ ನಮೂದಿಸಿ ಇರುವ ತಾರೀಖುಗಳಲ್ಲಿ ಪ್ರಾತಃಕಾಲ 8 ಘಂಟೆಗೆ ಬಹಿರಂಗವಾಗಿ ಆಯಾ ಸ್ಥಳದ ಬಳಿಯಲ್ಲೇ ಪ್ರತ್ಯೇಕ ಪ್ರತ್ಯೇಕಗಳಾಗಿ ಹರಾಜು ಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಆ ಕಾಲಕ್ಕೆ ಹಾಜರಿದ್ದು ಸವಾಲ್‌ಮಾಡಿ ಪಡೆದುಕೊಳ್ಳಬಹುದು.

2. ಸವಾಲ್ ಖೈದಾದ ಕೂಡಲೆ ಥಡ ಸವಾಲ್‌ದಾರನು ಸವಾಲ್ ಮೊಬಲಗಿನಲ್ಲಿ ಶೇಕಡ 25 ರೂಪಾಯಿ ಮೇರಿಗೆ ಆಗುವ ಮೊಬಲಗನ್ನು ಡಿಪಾಜಟ್ಟು ಹಾಜರ್ಮಾಡಬೇಕು. ತಪ್ಪಿದಲ್ಲಿ ಕೂಡಲೆ ಬಾಬು ದುಸರಾ ಹರಾಜು ಮಾಡಿಸಲ್ಪಟ್ಟು ಅದರಲ್ಲಿ ಉಂಟಾಗುವ ಲುಕ್ಸಾನಿಗೆ ಥಡ ಸವಾಲ್‌ದಾರನನ್ನು ಗುರಿಮಾಡಲ್ಪಡುತ್ತೆ. ಫಾಯಿದೆಗೆ ಈತನು ಅರ್ಹನಲ್ಲಾ.

3. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತನ್ನು ಅಂಗೀಕರಿಸಿದ ಕೂಡಲೆ ದರಖಾಸ್ತಿನ ಬಾಕಿ ಪೂರಾ ಮೊಬಲಗನ್ನು ಪಾವತಿ ಮಾಡಿದ ನಂತರ ಬಾಬು ಸುಪರ್ದು ಮಾಡಿಕೊಳ್ಳಬೇಕು ತಪ್ಪಿದಲ್ಲಿ ಡಿಪಾಜಟ್ಟು ಮೊಬಲಗನ್ನ ದಂಡವಾಗಿ ದಾಖಲ್ಮಾಡಿಕೊಳ್ಳುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಸದರೀಯವನನ್ನು ಗುರಿಮಾಡಲ್ಪಡುತ್ತೆ. ಫಾಯಿದೆಗೆ ಈತನು ಅರ್ಹನಲ್ಲಾ.

4. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

5. ಕೋಟೆಯ ಹುಲ್ಲುಗಾವಲನ್ನು ಪಡೆದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರು ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್‍ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನು ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

6. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

7. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರ್‌ವಾರ್ ಹೇಳಿದ ಕೂಡಲೆ ಬಿಲಾತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ಹರಾಜು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

8. ಯಾವ ಸವಾಲನ್ನೇ ಆಗಲಿ ಅಂಗೀಕರಿಸುವ ಯಾ ಸಬಬಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ.

ತಪಶೀಲ್.

ನಂಬರು	ಹುಲ್ಲುಗಾವಲುಗಳ ಹೆಸರು.	ತಪಶೀಲ್.	ಹರಾಜ್ ತಾರೀಖು
1	ಧರ್ಮಾಂಬುಧಿ ಕಟೆ ಕಾಲ್ವೆ 2ಕ್ಕೆ	ದನಗಳನ್ನು ಮೇಯಿಸಿಕೊಳ್ಳುವದಕ್ಕೆ.	16—6—09
2	ಚಿಕ್ಕರಾಯನ ಕೆರೆ ಕಟ್ಟೆ ಕೆಳಗೆ	ಡಿಟೋ	17—6—09
3	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು	ಡಿಟೋ	”
4	ಕೋಟೆ ರ್‍ಯಾಂಪಾರ್ಟಿನ ಹುಲ್ಲುಕಂದಕದ ಸುತ್ತು ರಸ್ತೆ ವರಿಗೆ. ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ರೋಡು ಮಾರ್ಜಿನ್ ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು ಹುಲ್ಲು ಕೊಯಿದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.	19—6—09
5	ಲಾಲ್‌ಬಾಗ ಮಾವಳ್ಳಿ ಕೆರೆ	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯವಿಲ್ಲದಂತೆ ಕುಂಬಾರರು ಕೆರೆಯಲ್ಲಿ ಜೇಡಿ ಮಣ್ಣನ್ನು ಗಾಡಿಮೇಲೆ ಸಾಗಿಸಿಕೊಳ್ಳಲು ಆಟಂಕಪಡಿಸಕೂಡದು.	18—6—09

ತಪಶೀಲ್.

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.	ಹರಾಜ್ ತಾರೀಖು.
6	ಸುಂಣಕಲ್ಲು ಕೆರೆ ಸ್ಮಶಾನದ ಹುಲ್ಲು ...	ಮೇಯಿಸಿಕೊಳ್ಳುವದಕ್ಕೆ	18—6—09
7	ದೊಡ್ಡ ಬೈಲ್‌ಕಾನೆ ...	ಡಿಟೋ	,,
8	ಆರ್ಸಿಕುಂಟೆ ಪಕ್ಕದ ಮತ್ತು ಒಳಗಿನ ಹುಲ್ಲು ...	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವುದಕ್ಕೆ, ಒಳ ಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.	22—6—09
9	ಕೆಂಗೇರಿಬಾಗಲ್ ಬಾರ್‌ಕೋಸ್ ಬಳಿ ಇರುವ ಕಾವಲ್ ಜಮೀನಿನಲ್ಲಿ ನಾಟುಗಳು ಹಾಕತಕ್ಕ ಬಗ್ಗೆ ಉಪಯೋಗಿಸಿಕೊಂಡಿರುವ ಜಮೀನ್ ಶಿವಾಯಿ, ಮಾರ್ಕ್ ಹದ್ದುಬಸ್ತು ಮಾರ್ಕ್ ಮಾಡಿರುವ ಸ್ಥಳ ವಿನಹ, ನಿಂತ ಜಮೀನ್‌ನಲ್ಲಿ ಬೀಳತಕ್ಕ ಹುಲ್ಲು.	ದನಗಳನ್ನು ಬಿಟ್ಟು ಮೇಯಿಸುವದಕ್ಕೆ.	23—6—09
10	ಮ್ಯುನಿಸಿಪಲ್ ಲಿಮಿಟಿಗೆ ಶೇರಿದ ವೆಸ್ಟ್ರನ್ ಎಕ್ಸ್‌ಟೆನ್ಶನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳ ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನ್‌ನಲ್ಲಿಯೂ, ಭೋಗೇನಹಳ್ಳಿ, ದಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನ್‌ನಲ್ಲಿಯೂ ಸಹ.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ, ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ, ಆಯಾಯ ಮನೆಗಳ ಬಾಗಲು ಮುಂಭಾಗದಲ್ಲಿರುವ ರೋಡು ಮಾರ್ಜಿನ್ನಲ್ಲಿ ಹುಲ್ಲುಗಾವಲು ಕಂಟ್ರಾಕ್ಟುದಾರನು ಪ್ರವೇಶಿಸಕೂಡದು.	19—6—09
11	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು ...	ಮೇಯಿಸಿಕೊಳ್ಳುವದಕ್ಕೆ.	23—6—09
12	ದಂಡು ಉಪ್ಪಾರಹಳ್ಳಿ ಊರುಮುಂದಿನ ಹುಲ್ಲುಗಾವಲು.	ರೈಲ್ವೆ ಕಾಂಪಾಂಡಿನ ಬೇಲಿ ಮತ್ತು ಜಮೀನ್ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.	24—6—09
13	ಮಿಲ್ಲರ್ ಒಳಗೆರೆ ಹುಲ್ಲು ...	ಕೊಯಿದುಕೊಳ್ಳುವದಕ್ಕೆ.	,,
14	ಮಾಗಡಿ ರೋಡಿನಲ್ಲಿರುವ ಪ್ಲೇಗು ಕ್ಯಾಂಪು ಎಪಿಡೆಮಿಕ್ ಡಿಸೀಸ್ ಆಸ್ಪತ್ರೆ ಕಾಪೌಂಡಿನಲ್ಲಿರುವ ಹುಲ್ಲುಗಾವಲು ಕ್ಯಾಂಪಿಗಾಗಿ ಬಗೆ ಮುದ್ದೇನಹಳ್ಳಿ ಬಾಬತು ಅಕ್ವೈರು ಆಗಿರುವ ಸರ್ವೆ ನಂಬರುಗಳು ಸಹ.	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ.	23—6—09
15	ಮ್ಯುನಿಸಿಪಲ್ ಲಿಮಿಟ್ಟಿಗೆ ಸೇರಿದ ಬಸವನಗುಡಿ ಎಕ್ಸ್‌ಟೆನ್ಶನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ರೋಡು ಮಾರ್ಜನ್ ಮತ್ತು ಪಬ್ಲಿಕ್ ಸ್ಕ್ವೇರುಗಳು ಪಾರ್ಕುಗಳು ಜಾತಾ ಉಳಿದ ಬೋರ್ಡಿಗೆ ಶೇರಿದ ಜಮೀನ್‌ನಲ್ಲಿ ಬೀಳತಕ್ಕ ಹುಲ್ಲು.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ ಮಾಡಿಸುವದಕ್ಕೆ, ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರಕಡೆ ಮೇಯಿಸಿಕೊಳ್ಳುವದಕ್ಕೆ.	21—6—09
16	ಮಲ್ಲೇಶ್ವರ ಎಕ್ಸ್‌ಟೆನ್ಶನ್ ಹುಲ್ಲು ...	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.	17—6—09
17	ಧರ್ಮಾಂಬುಧಿ ಕೆರೆ ಹುಲ್ಲು ...	ಮೇಯಿಸಿಕೊಳ್ಳುವದಕ್ಕೆ	16—6—09
18	ಶಂಕರಪುರದ ಎಕ್ಸ್‌ಟೆನ್ಶನ್ ಹುಲ್ಲು ...	ಮಠಕ್ಕೆ ಶೇರಿದ ಆವರಣ ಮತ್ತು ಮನೆಗಳಿಗೆ ಸಾಗುವಳಿಯಾಗಿರುವ ಸೈಟುಗಳ ವಿನಹ ಮಿಕ್ಕ ಮ್ಯುನಿಸಿಪಲ್ ಜಮೀನ್ನಲ್ಲಿ ಬೆಳೆಯುವ ಹುಲ್ಲು ಮೇಯಿಸಿಕೊಳ್ಳುವದಕ್ಕೆ.	21—6—09
19	ಸಂಪಿಗೆಹಳ್ಳಿ ಕೆರೆ ಹುಲ್ಲು ...	ಬ್ರೋಸಾಹೇಬರಿಗೆ ಸೇರಿದ ಸರಹದ್ದು ವಿನಹಾ ಮೇಯಿಸಿಕೊಳ್ಳಲು.	22—6—09
20	ಮ್ಯುನಿಸಿಪಲ್ ಗಾರಡನ್ ಹುಲ್ಲು ...	ಅಲ್ಲಿನ ಗಿಡಗಳಿಗೆ ಅಪಾಯವಿಲ್ಲದಂತೆ ಕೊಯಿದುಕೊಳ್ಳುವದಕ್ಕೆ.	16—6—09

ಎನ್. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ನೋಟಿಸ.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ.

ತಾರೀಖು 5ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸನ್ 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1910ನೆ ಇಸವಿ ಜೂನ್ ಆಖೈರಿನ ವರಿಗೆ ಅಂದರೆ ಒಂದು ವರುಷಕ್ಕೆ ಮೈಸೂರು ಷಹರಿನಲ್ಲಿರತಕ್ಕ ಮ್ಯುನಸಿಪಲ್ ದೀಪಗಳಿಗೆ ಬೇಕಾಗುವ ಈ ಕೆಳಗೆ ನಮೂದು ಮಾಡುವ ಕೆರೋಸಿನ್ ಎಂಣೆ ಟಿನ್‌ಗಳನ್ನು ಸರಫರಾಜು ಮಾಡಲು ಇಚ್ಛೆಯುಳ್ಳವರು ಡಿಟೋ ಎಂಣೆ ಟಿನ್ 1ಕೆ ಯಾವ ದರದ ಮೇರೆಗೆ ಖರೀದಿಗೆ ಕೊಡುವರೆಂಬುವದಕ್ಕೆ ದರಖಾಸ್ತು ಕೊಡಬಹುದು.

ದರಖಾಸ್ತುಗಳನ್ನ ಲಕ್ಕೋಟಗಳಲ್ಲಿ ಗರ್ಭೀಕರಿಸಿ ಮೊಹರ್ ಮಾಡಬೇಕು. ಡಿಪಾಜೆಟ್ಟುಗಾಗಿ 50 ಐವತ್ತು ರೂಪಾಯಿಗಳನ್ನು ನಗದೇ ಆಗಲಿ ಅಥವಾ ಮದ್ರಾಸ್ ಕರೆನ್ಸಿ ನೋಟು ಮೂಲಕವೇ ಆಗಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿಗೆ 1909ನೆ ಇಸವಿ ಜೂನ್ 22ನೆ ತಾರೀಖು ಮಂಗಳವಾರ ಮಧ್ಯಾನ್ಹಾತ್ಪರ 2 ಘಂಟೆ ಒಳಗಾಗಿ ಡಿಟೋ ದರಖಾಸು ಗಳಕೂಡ ಕಳುಹಿಸಬೇಕು.

1909ನೆ ಇಸವಿ ಜೂನ್ 22ನೆ ಮಂಗಳವಾರ ಮಧ್ಯಾಹ್ನಾತ್ಪರ 2 ಘಂಟೆ ವರಿಗೂ ಮೇಲ್ಕಂಡ ದರಖಾಸ್ತುಗಳನ್ನ ತೆಗದುಕೊಳ್ಳುತ್ತೆ.

1909ನೆ ಇಸವಿ ಜೂನ್ 22ನೆ ತಾರೀಖು ಮಂಗಳವಾರ ಮಧ್ಯಾಹ್ನ 2 ಘಂಟೆಗೆ ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿ ಪ್ರೆಸಿಡೆಂಟ್ ಸಾಹೇಬರವರಿಂದ ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರಿಂದ ಹಾಜರು ಇರತಕ್ಕ ದರಖಾಸ್ತುದಾರುಗಳ ರೂಬರೂಬು ಸದರಿ ದರಖಾಸ್ತುಗಳು ತೆರೆಯಲ್ಪಡುವವು.

ಪ್ರೆಸಿಡೆಂಟ್ ಸಾಹೇಬರವರು ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರು ಯಾವದೊಂದು ಕಾರಣವನ್ನು ಹೇಳದೆ ಕಮ್ಮಿ ದರಕ್ಕೆ ಕೇಳುವ ದರಖಾಸ್ತುಗಳನ್ನೇ ಆಗಲಿ ಅಥವಾ ಇತರ ಯಾವ ದರಖಾಸ್ತುಗಳನ್ನೇ ಆಗಲಿ ವಜಾಮಾಡಲು ಅಧಿಕಾರವುಳ್ಳವರಾಗಿರುತ್ತಾರೆ.

ಮಂಜೂರಾದ ದರಖಾಸ್ತುದಾರರು ಡಿಟೋ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 5 ಐದು ದಿವಸದೊಳಗಾಗಿ ಮೊದಲು ಹಾಜರ್ಮಾಡಿದ 50 ಐವತ್ತು ರೂಪಾಯಿಗಳು ಡಿಪಾಜೆಟ್ಟು ಅಲ್ಲದೆ ಜಾಸ್ತಿ 150 ಒಂದುನೂರು ಐವತ್ತು ರೂಪಾಯಿಗಳನ್ನು ಡಿಪಾಜೆಟ್ಟುಗಾಗಿ ಪಾವತಿಮಾಡಿ ರೂಲ್ಸು ಪ್ರಕಾರ ಮುಚ್ಚಳಿಕೆಯನ್ನು ಬರದುಕೊಡಬೇಕು ಹಾಗೆ ಮಾಡಲು ತಪ್ಪಿದರೆ ಮೊದಲು ಹಾಜರ್ಮಾಡಿದ ಡಿಪಾಜೆಟ್ಟು ಮೊಬಲಗನ್ನು ಕಳದುಕೊಳ್ಳುವರು.

ಬರದುಕೊಡತಕ್ಕ ಮುಚ್ಚಳಿಕೆಯ ಷರತ್ತುಗಳನ್ನು ಮತ್ತು ಇತರ ತಪಶೀಲ್‌ಗಳನ್ನು ಮ್ಯುನಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(1) ಛಸ್ಟರ್ ಮಾರ್ಕು ಶೀಮೆಯಂಣೆ ಟಿನ್‌ಗಳು 100 ಮಾಹೇಯಾನಾ ಬೇಕಾಗಬಹುದು ಅಥವಾ ಕಮ್ಮಿಯಾಗಿಯೇ ಆಗಲಿ ಜಾಸ್ತಿಯಾಗಿಯೇ ಆಗಲಿ ಬೇಕಾದರು ಬೇಕಾಗಬಹುದು.

(2) ರಷ್ಯನ್ ಎಂಣೆ ಟಿನ್‌ಗಳೇ ಆಗಲಿ ಅಥವಾ ಇನ್ನು ಯಾವದಾದರು ಕಮ್ಮಿ ರಕಂಮಿನ ಎಂಣೆ ಟಿನ್‌ಗಳೇ ಆಗಲಿ ವರುಷ 1ಕ್ಕೆ ಸುಮಾರು 25 ಬೇಕಾಗಬಹುದು.

ಎಂ. ಜೆ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಸ್ ಆದ್ದು. [ಸಂ. 24.

ಬೆಂಗಳೂರು, ಗುರುವಾರ, ಜೂನ್ ತಾ॥ 17, ಸನ್ 1909.

II ನೆ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೈಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫೀಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದ ಮೇರೆ ಕಮಿಷನನ್ನೂ ತೆಗದು ಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟ್ ಇಲಾಖಾ.

ತಂಗಡಿ ಮತ್ತು ಕಕ್ಕೆ ಚಕ್ಕೆ, ಇಸ್ತಿಹಾರ್.

ತಾರೀಖು 20ನೆ ಮೇ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು 1909ನೆ ಇಸವಿ ಜೂನ್ ತಾರೀಖು 21ರಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಂದ ಅರಶೀಕೆರೆ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು	ತಾಲ್ಲೂಕು ಹೆಸರು.	ಜಮಾಯಿಸತಕ್ಕ ಕಾಲ.	ಷರಾ.
1	ಅರಸೀಕೆರೆ ...	1909ನೆ ಜುಲೈ ಗುರ್ರೆ ಲಾಗಾಯಿತು 1911ನೆ ಜೂನ್ ಆಖೈರು ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರುವದಿಲ್ಲ. ಆದರೆ ಅಮೃತಮಹಲ್ ಕಾವಲು ಮತ್ತು ಆಕಾರ ಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.
2	ಚನ್ನರಾಯಪಟ್ಣ ...		
3	ಹೊಳೇನರಶೀಪುರ ...		
4	ಅರಕಲಗೂಡು ...		
5	ಬೇಲೂರು ...		
6	ಹಾಸನ ...		

2. ಹರಾಜ್ ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಹಜರತ್ ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಹಜರತ್ ಕನ್ಸರ್ವೇಟರ್ ಸಾಹೇಬರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1909ನೆ ಸಾಲ್ ಜುಲೈ ತಾರೀಖು 1ರ ಲಾಗಾಯತು 1911ನೆ ಇಸವಿ ಜೂನ್ ತಾರೀಖು 30ರ ವರಿಗಿನ 24 ತಿಂಗಳುಗಳಲ್ಲಿ ತಂಗಡಿ ಚಕೆ ಜಮಾವಣಿ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 100 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್ದಾರನಲ್ಲದ ಇತರ ಡಿಪಾಜಿಟ್ದಾರರ ಮೊಬಲಗನ್ನ ಹರಾಜು ಖೈದಾದ ಮಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ಮಡನೆ ಮೊದಲು ಅವರು ಇಟ್ಟಿಯಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಅರ್ಧಹಿಸ್ಸೆ ಹಣವನ್ನ ಸರ್ಕಾರಿ ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವವಲ್ಲದೆ ಬಾಬು ಹರಾಜು ಮಾಡುತ್ತಾಯಿದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಸ್ಕ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಯೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸು ದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೆ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

7. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ಮೂರು ದಿನಗಳ ಒಳಗಾಗಿ ಬರೆದುಕೊಡತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಮೊದಲು ಕೊಟ್ಟ ಹಣವನ್ನು ದಂಡವಾಗಿ ಸರಕಾರಕ್ಕೆ ಶೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

8. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ

ಖಾತರಿಯು ಕೊಡಬೇಕು. ಯಾವ ಬಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣೆ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಬಿಸ್ತು	...	...	30ನೆ ಸೆಪ್ಟಂಬರ್ 1909.
2ನೆ ಬಿಸ್ತು	...	...	31ನೆ ಮಾರ್ಚಿ 1910.
3ನೆ ಬಿಸ್ತು	...	...	30ನೆ ಸೆಪ್ಟಂಬರ್ 1910.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸೌದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲವೆ; ಬೆಂಕಿ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1911ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಹಾಸನ ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿ ವರಿಗೂ ಜುರ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಬಿ. ಐ. ಶಾಮರಾವ್
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ಹಾಸನ.

ನೋಟಿಫಿಕೇಷನ್, ತಾರೀಖು 11ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ಶಿವಮೊಗ್ಗಾ ಡಿಸ್ಟ್ರಿಕ್ಟಿನ ಶಿವಮೊಗ್ಗ (ಕುಂಸಿ ಸಬ್ ತಾಲ್ಲೂಕು ಸೇರಿ) ಹೊನ್ನಾಳಿ, ಚೆನ್ನಗಿರಿ, ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್ ವಿನಹ ಸರಕಾರಿ ಜಮೀನುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1909ನೆ ಇಸವಿ ಜುಲೈ ಗುರ್ರ್ರು ಲಾಗಾಯಿತು 1910ನೆ ಜೂನ್ ಆಖೈರು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕು ಬಹಿರಂಗವಾಗಿ ತಾಲ್ಲೂಕುವಾರ್ ಡಿಸ್ಟ್ರಿಕ್ಟು ಫಾರೆಸ್ಟಾಫಿಸರವರು ಅಥವಾ ಡೆಪ್ಯುಟಿ ಕಮಿಷನರವರಿಂದ ನೇಮಿಸಲ್ಪಟ್ಟ ಇತರೆ ಆಫಿಸರವರಿಂದ 1909ನೆ ಇಸವಿ ಜುಲೈ ತಾರೀಖು 26ರಲ್ಲು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟಾಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ.

2. ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವುದು. ಅವಶ್ಯವಿದ್ದಲ್ಲಿ ಮಾರನೇ ದಿವಸ ಅದೇ ಹೊತ್ತಿಗೆ ಹರಾಜು ಕ್ರಮ ಜರಿಗಿಸಲ್ಪಟ್ಟೀತು.

3. ಯಾವ ಕಾರಣವನ್ನು ನಮೂದಿಸದೇ ಈ ಹರಾಜನ್ನು ಅಂಗೀಕರಿಸಲಿಕ್ಕೂ ತಿರಸ್ಕರಿಸಲಿಕ್ಕೂ ಡೆಪ್ಯುಟಿ ಕಮಿಷನರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

4. ಹರಾಜು ಮಾಡತಕ್ಕವರು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಮೊಖ್ತ್ಯಾರಿ ಹೊಂದಿದ ಏಜಂಟರ ಮೂಲಕವಾಗಲಿ ಹಾಜರಾಗಿ ದರಖಾಸ್ತು ಮಾಡಬೇಕು. ಒಂದು ನೂರು ರೂಪಾಯಿ ಠೇವಣಿ ಇಟ್ಟ ಹೊರತಾಗಿ ತನಿಗೋಸ್ಕರವೇಯಾಗಲಿ ಅಥವಾ ಎರಡನೇಯವರಿಗೋಸ್ಕರವಾಗಿ ಯಾಗಲಿ ದರಖಾಸ್ತು ಮಾಡಲು ಯಾವನೊಬ್ಬ ಮನುಷ್ಯನಿಗೆ ಅಪ್ಪಣೆ ಕೊಡಲಾಗಲಾರದು. ಹರಾಜಾದ ಕೂಡ್ಲೇನೆ ಮಂಜೂರಾಗದೆ ಇರುವ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಅವರಿಗೆ ವಾಪಸ್ ಮಾಡಲಾದೀತು.

5. ಹರಾಜು ಮಂಜೂರಾದ ಸಂಗತಿ ದರಖಾಸ್ತು ದಾರನಿಗೆ ಆಗಲಿ ಅವರ ಏಜಂಟರಿಗೆ ಆಗಲಿ ತಿಳಿಸಿದ ತಾರೀಖು ಲಾಗಾಯಿತು ಮೂರುದಿವಸಗಳೊಳಗಾಗಿ ಡಿಪಾಜಿಟ ಹಣ ಸೇರಿಸಿಕೊಂಡು ಬಿಟ್ಟು ಗೊತ್ತಾದ ಮೊಬಲಗನ್ನು ಮತ್ತು ಅದರಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಸೆಸ್ಸನ್ನೂ ಶಿವಮೊಗ್ಗ ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಜಮಾ ಮಾಡಿಸಬೇಕು. ಅದರಂತೆ ಮಾಡಲು ತಪ್ಪಿದಲ್ಲಿ ಸದರಿ 100 ರೂಪಾಯಿ ಡಿಪಾಜಿಟ ಮೊಬಲಗನ್ನ ಸರ್ಕಾರಕ್ಕೆ ಸೇರಿಸಿಕೊಂಡು ಮೇಲ್ಕಂಡ ಹಕ್ಕನ್ನು ಹರಾಜು ಮಾಡಿಸುವ ಆಫಿಸರಿಂದ ತಪ್ಪಿಹೋದ ದರಖಾಸ್ತು ದಾರರನ್ನು ನಷ್ಟಕ್ಕೆ ಗುರಿಮಾಡಿಸಿ ಹರಾಜು ಮಾಡಲಾದೀತು. ಈ ಹರಾಜಿನಲ್ಲಿ ಏನಾದರೂ ಫಾಯಿದೆ ಬಂದರೆ ತಪ್ಪಿಹೋದ ದರಖಾಸ್ತುದಾರನಿಗೆ ಏನು ಹಕ್ಕು ಇರಲಾರದು.

5. ಇದಲ್ಲದೆ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಅನುಸರಿಸಿ ನಡಿಯಲು ಬದ್ಧನಾಗಿರತಕ್ಕ ಬಗ್ಯೆ ಇಜಾರೆದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಗೆ ಛಾಪಾಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

ಷರತ್ತುಗಳು.

1. ಒಂದು ವರುಷಕ್ಕೆ ಕಮ್ಮಿ ಇರುವ ಎಳೇ ಬುಡಗಳಲ್ಲಿ ಚಕ್ಕೆ ತೆಗಿಯದಂತೆಯು, ಕಡಿಯದಂತೆಯು ನೋಡಿಕೊಳ್ಳತಕ್ಕದ್ದು. ಚಕ್ಕೆ ತೆಗಿಯಲ್ಪಟ್ಟ ಗಿಡಗಳು ಹರಾಜುದಾರನದೆ ಆಗಿರುತ್ತೆ.
2. ಬೇರೆಬೇರೆ ಸ್ಥಳಗಳಲ್ಲಿ ಚಕ್ಕೆಯನ್ನು ಜಮಾಯಿಸಲು ನೇಮಿಸಲ್ಪಡುವ ಮೇಸ್ತ್ರಿ ಮತ್ತು ಷಿಕ್ಮಿ ಕಂಟ್ರಾಕ್ಟುದಾರರುಗಳ ಹೆಸರುಗಳನ್ನು ನಮೂದಿನಿಂದ ಒಂದು ಪಟ್ಟಿಯನ್ನು ಕೊಡಬೇಕು.
3. ಡಿಸ್ಟ್ರಿಕ್ಟು ಫಾರೆಸ್ಟಾಫಿಸರು ಕೊಡುವ ನಮೂನೆಯಂತೆ ಸಾಗಿಸಿದ ಚಕ್ಕೆಯ ಮೊತ್ತವನ್ನು ತೋರಿಸುವ ಲೆಖವನ್ನು ಇಡತಕ್ಕದ್ದು. ಫಾರೆಸ್ಟ ರೇಂಜರ ಮತ್ತು ಅಮಲ್ದಾರರು ಯಾ ಪೋಲೀಸು ಇನಸ್ಪೆಕ್ಟರು ಯಾ ಇವರ ದರ್ಜೆಗೆ ಮೇಲ್ಪಟ್ಟ ಇತರೇ ಆಫಿಸರ ಅಜಮಾಯಿಷಿಗೆ ಸದರೀ ಲೆಖ್ಖಗಳು ಒಳಪಟ್ಟದ್ದಾಗಿರುತ್ತೆ.
4. ಡಿಸ್ಟ್ರಿಕ್ಟು ಫಾರೆಸ್ಟಾಫಿಸರವರಿಂದ ಏರ್ಪಡಿಸಲ್ಪಡುವ ಮೇರೆಗೆ ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಚಕ್ಕೆಗೆ ಪ್ಯಾಸ ಪಡಿಯತಕ್ಕದ್ದು.
5. ವಾಯಿದೆಯು ಪೂರೈಸಿದ ನಂತರ ಜಮಾಯಿಸಿಕೊಂಡು ಶಿವಮೊಗ್ಗ ಡಿಸ್ಟ್ರಿಕ್ಟಿನ ಗಡಿ ಒಳಗಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರತಕ್ಕ ರೈಲ್ವೆ ಸ್ಟೇಷನುಗಳೊಳಗಾಗಲಿ ಬಾಕಿ ಇರತಕ್ಕ ಎಲ್ಲಾ ಚಕ್ಕೆ ಮೇಲಿನ ಹಕ್ಕನ್ನು ರದ್ದು ಪಡಿಸತಕ್ಕದ್ದು.
6. ಮೇಲ್ಕಂಡ ಷರತ್ತಿನ ಮೇರಿಗೆ ನಡಿಯಲು ತಪ್ಪಿಹೋದಲ್ಲಿ ಇಜಾರೆ ರದ್ದು ಮಾಡುವದಲ್ಲದೆ ಆದುವರಿಗೂ ಜಮಾಯಿಸಿ ಹಾಜರು ಇಟ್ಟುಕೊಂಡು ಇರತಕ್ಕ ವಿಶಿಷ್ಟ ಚಕ್ಕೆಯನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ. ಡೆಪ್ಯುಟಿ ಕಮಿಷನರ ಸಾಹೇಬರವರು ನಿಷ್ಕರ್ಷಿಸುವ ಮೇರೆ ಇಜಾರೆದಾರನಿಂದ ವಸೂಲಾದ ಪೂರಾ ಮೊಬಲಗಾಗಲಿ ಅಥವಾ ಆದ್ಯಕೆ ಕೆಲವು ಮೊಬಲಗಾಗಲಿ ಸೇರಿಸಲ್ಪಡಬಾದೀತು. ಅಂಥಾ ತಪ್ಪಿದ ಕಾಲದಲ್ಲಿ ಇಜಾರೆದಾರನಿಂದ ಬಾಕಿ ಇರತಕ್ಕ ಮೊಬಲಗು ರವಿನ್ಯೂ ಕಂದಾಯದರೀತಿ ವಸೂಲ್ಮಾಡತಕ್ಕದ್ದು.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ಪ್ರಕಟನೆ.

ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಚನ್ನಗಿರಿ ಮತ್ತು ಹೊಳಲಕೆರೆ ತಾಲ್ಲೂಕುಗಳಲ್ಲಿರುವ ತುಪ್ಪದಹಳ್ಳಿ ಫಾರೆಸ್ಟನ್ನು ಮುನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಸನ 1909ನೆ ಇಸವಿ ಜೂನ ತಾರೀಖು 3ನೆ ಕನ್ನಡ ಮೈಸೂರು ಗೆಜೆಟ್ಟಿನ 2ನೆ ಭಾಗದ 473, 474, 475ನೆ ಪೇಜಿನಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಎಂ. ಶ್ಯಾಮರಾವ್, ಫಾರೆಸ್ಟ ಸೆಟಲ್‌ಮೆಂಟ ಆಫಿಸರ ಇನ ಮೈಸೂರು.

ತುಮಕೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ಜೂನ 1909.

ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಚಿಕ್ಕನಾಯಿಕನಹಳ್ಳಿ ಹೋಬಳಿ ಜೋಡಿ ಹೊಸಹಳ್ಳಿ ಗ್ರಾಮವನ್ನು 1909ನೆ ಇಸವಿ ಜುಲೈ 19ನೆ ತಾರೀಖಿನಲ್ಲಿ ಸದರಿ ಜೋಡಿ ಗ್ರಾಮವನ್ನು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಗ್ರಾಮವು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿರುವ ಸಂದರ್ಭದಲ್ಲಿ ಮದ್ದುಗಿರಿ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರು ಇಷ್ಟಾನುಸಾರವಾಗಿ ಗ್ರಾಮವನ್ನು ಪೂರ್ತಿಯಾಗಿ ಅಥವಾ ವೃತ್ತಿಗಳನ್ನು ಪ್ರತ್ಯೇಕವಾಗಿ ಆಗಲಿ ಹರಾಜು ಮಾಡಬಹುದು.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೇ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಗೆ ಸದರಿ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೇ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಖಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರು ಸದರಿ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸರ್ವೆ ನಂಬರು.	ಭೂಮಿಯ ಸ್ವಭಾವ, ಆಕಾರ.			ಆಕಾರ.	ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಬರಬೇಕಾದ ಬಾಕೀ ಮೊಬಲಗು.				ಹರಾಜು ಆಗುವ ತಾರೀಖು.	ಹರಾಜು ಆಗುವ ಸ್ಥಳ.
						ಎ.	ಗು.	ರೂ. ಅ. ಪೈ.	ರೂ. ಅ. ಪೈ.		ರೂ.	ಅ.	ಪೈ.		
ಚಿಕ್ಕನಾಯಿಕನಹಳ್ಳಿ	ಚಿಕ್ಕನಾಯಿಕನಹಳ್ಳಿ	ಜೋಡಿ ಹೊಸಹಳ್ಳಿ	ತಿಮ್ಮಾಜೋಸಿಯರ ರಾಮಾಜೋಯಿಸ ಮತ್ತು ವಗೈರೇರು	ಪೂರ್ತಿ ಗ್ರಾಮ	ಸಾಗುವಳಿಗೆ ನಾಲಾಯಕ್ ಖುಷ್ಕೀ ...	1,058	2	548 6 6	1,000 0 0	1907-08ನೆ ಸಾಲಿಗೆ ಬರಬೇಕಾದ ಬಾಕಿ ಜೋಡಿ ಮೊಬಲಗು.	150	4	9	19—7—1909	ಚಿಕ್ಕನಾಯಿಕನಹಳ್ಳಿ ತಾಲ್ಲೂಕ್ ಕಚೇರಿ
					ಸಾಗು ...	183	10			ನೋಟಿಸ್ ಫೀ ವಗೈರೆ ...	5	10	2		
					ಬಂಜರು ...	295	38			ಜುಮ್ಲಾ ...	155	14	11		
					ಬಾಗಾಯಿತು ...	59	31								
					ಸಾಗು ಲಾಯಕ್ ಬಂಜರು. ...	46	8								
					ಜುಮ್ಲಾ ...	1,643	9								

ಗ್ರಾಮಕ್ಕೆ ಚಕ್ಕುಬಂದಿ.

ಪೂರ್ವಕ್ಕೆ—ಹೊಂಬಳಕಟ್ಟೆ ಮತ್ತು ಕಾತ್ರಿಕೆಹಾಳ್ ಗ್ರಾಮಗಳು.

ಪಶ್ಚಿಮಕ್ಕೆ—ಚನ್ನೇನಹಳ್ಳಿ ಮತ್ತು ಬಾಗಾಯಿತು ಗ್ರಾಮ.

ಉತ್ತರಕ್ಕೆ—ಚನ್ನೇನಹಳ್ಳಿ ಮತ್ತು ಕೋಡಿಹಳ್ಳಿ.

ದಕ್ಷಿಣಕ್ಕೆ—ಭಾವನಹಳ್ಳಿ ಮತ್ತು ಗೊಲ್ಲರಹಳ್ಳಿ ಬಾಗಾಯಿತು.

ಎಲ್. ಮಾಧವರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ ಗೋಷ್ವಾರೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ-1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1911ನೆ ಇಸವಿ ಜೂನ್ 30ರ ವರಿಗಿನ 2 ಸಾಲುಗಳಲ್ಲಿ ಮಣಗೂರು ಬಳಿ ಬಿಸಲೆ ಘಾಟಿ ರಸ್ತೆಮೇಲೆ ಸುಂಕ ವಸೂಲ್ಮಾಡತಕ್ಕ ಹಕ್ಕು ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ ರೂಬರೂಬು ಸಕಲೇಶಪುರದ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ 21ನೆ ತಾರೀಖು ಸೋಮವಾರ ಹಗಲು 12 ಘಂಟೆಗೆ ಹರಾಜು ಮಾಡಲ್ಪಡುತ್ತೆ.

ಹೆಚ್ಚು ವಿಚಾರಕ್ಕೆ 1909ನೆ ಇಸವಿ ಜೂನ್ ಮಾಹೆ 3ರ ಮರ್ಕುಂ ಮೈಸೂರು ಗೆಜೆಟ್ಟಿನ IIನೆ ಭಾಗದ 476—477ನೆ ಪುಟಗಳಲ್ಲಿ ಘಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬೇಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಅರ್ಕಲಗೂಡು-ಮಂಜರಾಬಾದ್-ಕೊಡ್ಲಿಪೇಟೆ ರಸ್ತೆಮೇಲೆ (ಮೈಸೂರು ಕಡೆ) 1909ನೆ ಜುಲೈ ಗುರ್ರೆ ಲಾಗಾಯಿತು 1911ನೆ ಜೂನ್ 30ರ ವರಿಗಿನ 2 ಸಾಲುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಸ್ವಾತಂತ್ರ್ಯವು ಸಕಲೇಶಪುರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ರೂಬರೂಬು ಸಕಲೇಶಪುರದ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ 21ನೆ ತಾರೀಖು ಸೋಮವಾರ 12 ಘಂಟೆಗೆ ಹರಾಜು ಮಾಡಲ್ಪಡುತ್ತೆ.

ಹೆಚ್ಚು ವಿಷಯಕ್ಕೆ 1909ನೆ ಜೂನ್ 3ನೆ ಮರ್ಕುಂ ಮೈಸೂರು ಗೆಜೆಟ್ಟಿನ IIನೆ ಭಾಗದಲ್ಲಿ 478–479ನೆ ಪುಟಗಳಲ್ಲಿ ಘಾಯಿಷಾಗಿರುವ ಅಸಲು ಇಸ್ತಿಹಾರನ್ನು ನೋಡಬೇಕು.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾನಾಮೆ.

ತಾರೀಖು 7ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—ಡಿಸ್ಟ್ರಿಕ್ಟು ಮಜಕೂರು ನಗರ ತಾಲ್ಲೂಕು ರಿಕಾರ್ಡಿನಲ್ಲಿ ತಹಲ್ ವರಿಗೂ ಭದ್ರಪಡಿಸಲ್ಪಟ್ಟು ಇಟ್ಟು ಇರುವ ಸನ 1833—34ನೆ ಸಾಲ್ ಲಾಗಾಯಿತು 1877—78 ಸಾಲ್ ವರಿಗಿನ ಕುಳುವಾರು ಚಿಟ್ಟಿಗೆಳನ್ನು ಈ ತಾರೀಖು ಲಾಗಾಯಿತು ಮೂರು ತಿಂಗಳು ಕಳೆದ ನಂತರ, ರೂಲ್ಸು ಪ್ರಕಾರ ಜಲಾಯಿಸಲ್ಪಡುತ್ತೆ. ಆದ್ದರಿಂದ ಅಪೇಕ್ಷೆಯುಳ್ಳವರು ಸದರಿ ವಾಯಿದೆ ಒಳಗೆ ಅರ್ಜಿ ಕೊಟ್ಟು ನಕಲ್ ಪಡಿಯಬಹುದು.

ಎ. ಮೃತ್ಯುಂಜಯ ಐಯ್ಯರ್,
ಫಾರ್ ಡೆಪ್ಯುಟಿ ಕಮಿಷನರ.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ :—ಸನ್ 1909ನೆ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಜೂನ್ ಆಖ್ಯೆರು ವರಿಗೆ ಒಂದು ವರ್ಷ ಪರ್ಯಂತರ ಶಿವಮೊಗ್ಗ ಟವನ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿಗಳ ಮೇಲೆ ಟೋಲ್ ವಸೂಲುಮಾಡುವ ಹಕ್ಕನ್ನು 1909ನೆ ಇಸವಿ ಜೂನ್ 21ನೆ ತಾರೀಖು ಸೋಮವಾರ ಮಧ್ಯಾಹ್ನ 12 ಘಂಟೆಗೆ ಶಿವಮೊಗ್ಗ ಟವನ್ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರವರ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚಿನ ಸಂಗತಿಗಳಿಗೆ 27ನೆ ಮರ್ಕುಂ ಮೈಸೂರು ಗೆಜೆಟ್ಟು IIನೆ ಭಾಗದ 483, 484ನೆ ಪುಟವನ್ನು ನೋಡತಕ್ಕದ್ದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸನ್ 1909ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು ಸನ್ 1910ನೆ ಇಸವಿ ಜೂನ್ ಆಖ್ಯೆರ ವರಗೆ ಶಿಕಾರಿಪುರ ಟವನ್ ಮುನಿಸಿಪಲ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿ ವಗ್ಯೆರೆಗಳ ಮೇಲೆ ಟೋಲ್ ವಸೂಲ್ಮಾಡತಕ್ಕ ಹಕ್ಕನ್ನು 1909ನೆ ಜೂನ್ ಮಾಹೆ ತಾರೀಖು 25ನೆ ಮಧ್ಯಾಹ್ನದಲ್ಲಿ ಶಿಕಾರಿಪುರ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ ಮತ್ತು ಶಿಕಾರಿಪುರದ ಟವನ್ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಟೋಲುಗಳು ಈ ಕೆಳಗೆ ನಮೂದಾಗುವ ದರಗಳ ಪ್ರಕಾರ ವಸೂಲ್ಮಾಡತಕ್ಕದ್ದು.

(1)	ಭರ್ತಿ ಗಾಡಿ ಒಂದಕ್ಕೆ	0	4	0
(2)	ಖಾಲಿ ಗಾಡಿ ಒಂದಕ್ಕೆ	0	1	0
(3)	ಹೇರು ಹೇರಿದ ಎತ್ತು ಅಥವಾ ಕುದುರೆ ಒಂದಕ್ಕೆ	0	0	6
(4)	ಬಿಟೋ ಕತ್ತೆ ಒಂದಕ್ಕೆ	0	0	3

ಸನ್ 1909ನೆ ಜುಲೈ ಗುರ್ರೆ ಲಾಗಾಯಿತು 1910ನೆ ಇಸವಿ ಜೂನ್ ಆಖೈರ ವರೆಗೆ ಈ ದರಗಳ ಪ್ರಕಾರ ಟೋಲ್ ವಸೂಲ್ ಮಾಡತಕ್ಕದು.

2. ದರಖಾಸ್ತುದಾರರು ಮಾಡುವ ಯಾವ ಸವಾಲನ್ನೇ ಆಗಲಿ ಕಾರಣ ನಮೂದಿಲ್ಲದೆ ಅಂಗೀಕಾರ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪ್ರೆಸಿಡೆಂಟರವರೇ ಉಳಿಸಿಕೊಂಡಿರುತ್ತಾರೆ.

3. ಪ್ರತಿ ಒಬ್ಬ ದರಖಾಸ್ತುದಾರನು ಒಂದು ನೂರು ರೂಪಾಯಿಗಳ ಠೇವಣಿ ಹಣವನ್ನು ಪೂರ್ವಭಾವಿಯಾಗಿ ಇಟ್ಟಿರಬೇಕು. ಈ ಮೊಬಲಗು ಹರಾಜು ಖೈದಾದ ಕೂಡ್ಲೆ ತಿರಸ್ಕರಿಸಲ್ಪಡುವ ದರಖಾಸ್ತುದಾರರಿಗೆ ಮತ್ತು ಸವಾಲ್ಮಾಡದೆ ಇರುವವರಿಗೆ ವಾಪಸು ಮಾಡಲ್ಪಡುತ್ತೆ.

4. ಚಡ ದರಖಾಸ್ತುದಾರನು ಹರಾಜಾದ ಕೂಡ್ಲೆ ಹರಾಜ್ ಮೊಬಲಗಿನ ಹನ್ನೆರಡನೆ ಒಂದು ಭಾಗಕ್ಕೆ ಭರ್ತಿ ಆಗುವಷ್ಟು ಮೊಬಲಗನ್ನು ಕೊಡತಕ್ಕದ್ದು. ಹನ್ನೆರಡನೆ ಎರಡು ಭಾಗವನ್ನು 1909ನೆ ಜೂನ್ ಮಾಹೆ ತಾರೀಖು 28ರ ವಳಗೆ ಕೊಡತಕ್ಕದ್ದು. ಬಾಕಿ ವುಳಿಯುವ ನಾಲ್ಕರಲ್ಲಿ ಮೂರು ಭಾಗವನ್ನು 1909ನೆ ಜುಲೈ ಮೊದಲುಗೊಂಡು ಒಂಬತ್ತು ಸಮ ಖಿಸ್ತಿನಲ್ಲಿ ಪ್ರತಿ ತಿಂಗಳ 20ನೆ ತಾರೀಖು ಒಳಗಾಗಿ ಪಾವತಿ ಮಾಡತಕ್ಕದ್ದು.

5. ಹರಾಜು ಮೊಬಲಗಿನ ನಾಲ್ಕನೆ ಒಂದು ಭಾಗವನ್ನು ಮೇಲೆ ನಮೂದಿಸಿರುವ ಕಾಲಗಳಲ್ಲಿ ಚಡ ದರಖಾಸ್ತುದಾರನು ಕೊಡುವದಕ್ಕೆ ತಪ್ಪಿದರೆ ಹರಾಜು ರದ್ದು ಮಾಡಲ್ಪಡುವದಲ್ಲದೆ ಸದರಿ ದರಖಾಸ್ತುದಾರನು ಪೂರ್ವಭಾವಿಯಾಗಿ ಇಟ್ಟಿದ್ದ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಹರಾಜು ಮೊಬಲಗಿನ ನಾಲ್ಕನೇ ಒಂದು ಭಾಗವನ್ನು ಕೊಟ್ಟು ಆಮೇಲೆ ಕೊಡಬೇಕಾದ ಮೊಬಲಗನ್ನು ಕೊಡದೆ ಇದ್ದರೆ ಅದುವರೆಗೆ ಚಡ ದರಖಾಸ್ತುದಾರನಿಂದ ಪಾವತಿ ಆಗಿರುವ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಅತಃಪರ ಉಳಿದಿರುವ ಕಾಲದ ಟೋಲ್ ವಸೂಲಿ ಹಕ್ಕನ್ನು ವಿಲೇವಾರಿಮಾಡಲು ಹೊಸದಾಗಿ ಟೆಂಡರುಗಳನ್ನು ಬರಮಾಡಿಕೊಳ್ಳುವದಕ್ಕೆ ಆಗಲಿ, ಈ ಬಗ್ಗೆ ಬಹಿರಂಗವಾಗಿ ಹರಾಜ್ ಮಾಡಿಸುವದಕ್ಕೆ ಆಗಲಿ ಅಥವಾ ಈ ಭಾಗದಲ್ಲಿ ಸೂಕ್ತಾನುಸಾರ ಇತರೆ ಏರ್ಪಾಡು ಮಾಡುವದಕ್ಕೆ ಆಗಲಿ ಪ್ರೆಸಿಡೆಂಟರವರು ಸ್ವತಂತ್ರರಾಗಿರುತ್ತಾರೆ. ಅಂಥಾ ಎರಡನೇ ಹರಾಜಿನಿಂದ ಸಂಭವಿಸುವ ಲುಕ್ಸಾನು ಮೊಬಲಗನ್ನು ಷುರು ಹರಾಜ್‌ದಾರನಿಂದ ವಸೂಲು ಮಾಡಲ್ಪಡುತ್ತೆ.

6. ಗೊತ್ತಾದ ವಾಯಿದೆವಳಗೆ ಪಾವತಿ ಆಗದ ಖಿಸ್ತಿನಮೇಲೆ ಸಾಲಿಯಾನಾ ಶೇಕಡಾ ಆರು ರೂಪಾಯಿನಂತೆ ಬಡ್ಡಿ ವಸೂಲ್ಮಾಡಲ್ಪಡುತ್ತೆ.

7. ಕಂಟ್ರಾಕ್ಟುದಾರನು ಪ್ರತಿ ದಿನವೂ ಕರಾರ್ವಾಕಾ ವಸೂಲ್ಮಾಡಿದ ಮೊಬಲಗು ತೋರಿಸುವ ಬಗ್ಗೆ ಲೆಖ್ಖ ಇಡಬೇಕು. ಈ ಲೆಖ್ಖವನ್ನು ಬೋರ್ಡಿನ ವೈಸ್ ಪ್ರೆಸಿಡೆಂಟರವರು ಶಿಕಾರಿಪುರದ ತಾಲ್ಲೂಕು ಅಮಲ್ದಾರರು ಮತ್ತು ಈ ಬಗ್ಗೆ ಬೋರ್ಡಿನ ಪ್ರೆಸಿಡೆಂಟರವರಿಂದ ಅಧಿಕಾರ ಹೊಂದಿದ ಇತರ ಹುದ್ದೇದಾರರು ಯಾರೇ ಆಗಲಿ ತನಿಖೆ ಮಾಡತಕ್ಕ ಬಗ್ಗೆ ಯಾವಾಗಲೂ ಅವಕಾಶವಿರಬೇಕು. ಪ್ರತಿ ಮಾಹೆ ಆಖೈರಿಗೆ ಈ ಲೆಖ್ಖವನ್ನು ತನಿಖೆ ಬಗ್ಗೆ ವೈಸ್ ಪ್ರೆಸಿಡೆಂಟರವರಲ್ಲಿಗೆ ಕಳುಹಿಸಬೇಕು.

8. ಮ್ಯುನಿಸಿಪಾಲಿಟಿಯಿಂದ ಕ್ರಮವಾಗಿ ಕಂದಾಯ ದಾಖಲಾದ ಗಾಡಿಗಳಿಗೆಲ್ಲಾ ಒಂದು ಪ್ಯಾಸ್ ಕೊಡಲ್ಪಡುತ್ತೆ. ಈ ಪ್ಯಾಸ್ ಈ ತರಹ ಗಾಡಿಗಳಿಗೂ ಮತ್ತು ಇತರ ಗಾಡಿಗಳಿಗೂ ವ್ಯತ್ಯಾಸ ತೋರಿಸಲು ಉಪಯೋಗವಾಗುತ್ತೆ. ಈ ರೀತಿ ಪ್ಯಾಸ್ ಹೊಂದಿದ ಗಾಡಿಗಳಮೇಲೆ ಟೋಲ್ ವಸೂಲ್ಮಾಡತಕ್ಕದ್ದಿಲ್ಲಾ.

9. ಒಂದು ಗಾಡಿಗೆ 24 ಘಂಟೆ ಕಾಲದೊಳಗಾಗಿ ಎರಡಾವರ್ತಿ ಟೋಲ್ ವಸೂಲ್ಮಾಡಕೂಡದು.

10. ದಂಡಿನವರನ್ನು ಸಾಗಿಸುವ ಬಗ್ಗೆ ಬರುವ ಗಾಡಿಗಳಮೇಲೂ, ಮಿಲಿಟರಿ ಸಾಮಾನುಗಳು ಹೇರಿದ ಗಾಡಿಗಳಮೇಲೂ, ಡ್ಯೂಟಿಮೇಲೆ ಪ್ರಯಾಣ ಮಾಡುವ ಪೋಲೀಸ್ ಆಫಿಸರರ ಗಾಡಿಗಳಮೇಲೂ, ಸರ್ಕಾರಿ ಗಾಡಿಗಳಮೇಲೂ ಆಯಾಯ ಇಲಾಖಾ ಅಧಿಕಾರಿಗಳಿಂದ ಟೋಲ್ ವಿನಾಯಿತಿ ಬಗ್ಗೆ ಕೊಡಲ್ಪಟ್ಟಿರಬಹುದಾದ ಸರ್ಟಿಫಿಕೇಟುಗಳ ಆಧಾರದಮೇಲೆ ವಿನಾಯಿತಿ ಕೇಳಿದಲ್ಲಿ ಸದರಿ ಗಾಡಿಗಳಮೇಲೆ ಟೋಲ್ ವಸೂಲ್ಮಾಡಕೂಡದು.

11. ಅಕ್ಬಾರಿಯಿ ಹಾಸಲಿಗೆ ಒಳಪಟ್ಟಿರುವ ಸಾಮಾನುಗಳನ್ನು ಹೇರಿಕೊಂಡುಬರುವ ಗಾಡಿಗಳಮೇಲೂ ಮತ್ತು ಜಾನುವಾರುಗಳಮೇಲೂ ಟೋಲ್ ವಸೂಲ್ಮಾಡಕೂಡದು.

12. ಗಾಡಿಗಳಮೇಲೆ ವಸೂಲ್ಮಾಡಬೇಕಾದ ಟೋಲ್ ಪಟ್ಟಿಯನ್ನು ಸ್ಪಷ್ಟವಾಗಿ ತಿಳಿಯುವಹಾಗೆ ಕನ್ನಡದಲ್ಲಿಯೂ ಮತ್ತು ಇಂಗ್ಲಿಷಿನಲ್ಲಿಯೂ ಬರದು ಟೋಲ್ ಗೇಟಿನ ಸಮೀಪ ಎಲ್ಲರಿಗೂ ಕಾಣುವಹಾಗೆ ಬಹಿರಂಗವಾದ ಸ್ಥಳದಲ್ಲಿ ಕಂಟ್ರಾಕ್ಟುದಾರನು ತಗಲುಹಾಕತಕ್ಕದ್ದು.

13. ಗಾಡಿಗಳಮೇಲೆ ಟೋಲ್ ವಸೂಲ್ಮಾಡತಕ್ಕ ವಿಧಾನವು ಲೇಟ್ ಚೀಫ್ ಕಮಿಷನರವರ ನಂಬರು 274, ತಾರೀಖು 4ನೆ ನವಂಬರು 1876ನೆ ನೋಟಿಫಿಕೇಷನ್ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

ಎ. ಮೃತ್ಯುಂಜಯ ಐಯ್ಯರ್,
ಫಾರ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದ್ಧಾ 12 ತಿಂಗಳಿಗೆ	7	0	3	8
ಚಷ್ ಮಾಹೇ ಯಾ ಕ್ವಾರ್ಟರಿಗೆ			ದಾಮೂಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ತಾರ್‍ಖು 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ತಾರ್‍ಖು 24205—6—ಜೆ. 6200ನೆ ನಂಬರ್ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟ್ 21ನೆ ತಾರ್‍ಖು 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸ್‌ಗಳು:—

	ರೂ.	ಆ.
ಮೊದಲನೇ ದಫಾ ಧಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 317ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸ್‌ಗಳಿಗೆ:—

ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ಕ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ	ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಸಿ. ಹೆಚ್. ಪಿಟ್ಸ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಬ್ಲಿಷ್ ಆದ್ದು. [ಸಂ. 25.

ಬೆಂಗಳೂರು, ಗುರುವಾರ, ಜೂನ್ ತಾ|| 24, ಸನ್ 1909.

II ನ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

ತಾರೀಖು 26ನೆ ಫೆಬ್ರುವರಿ 1909.

1909ನೆ ಇಸವಿ ಏಪ್ರೈಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರೆಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷನ್‌ಗಳನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್‌ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು,
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇಷನ್ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇಷನ್ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದುಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿಷನ್ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.

ಫಾರೆಸ್ಟು ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 15ನೆ ಜೂನ 1909.

ತೀರ್ಥಹಳ್ಳಿಯಲ್ಲಿರುವ ವೆಂಕಟಸುಬ್ಬಣ್ಣಾಚಾರ್ರ ಮನೆ ಹಿತ್ತಲಲ್ಲಿ ಈ ಕೆಳಗೆ ಕಂಡ ಗಂಧದ ತುಂಡು ಸಿಕ್ಕಿರುತ್ತದೆ. ಇದಕ್ಕೆ ತರೀಕೆರೆ ಕೋಠಿ ಸೋಲ್ಡು ಸ್ಟಾಂಪು ಬಿದ್ದಿರುತ್ತೆ. ಇದರ ಮಾಲೀಕರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳು ಒಳಗಾಗಿ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ರೂಬರೂಬು ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಟ್ಟು ಮಾಲು ತೆಗದುಕೊಂಡು ಹೋಗಬಹುದಾಗಿರುತ್ತೆ. ತಪ್ಪಿದಲ್ಲಿ ನಂತರ ಯಾವ ಹಕ್ಕೂ ಅಂಗೀಕರಿಸಲ್ಪಡಲಾರದು ಮತ್ತು ಮಾಲು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು. ಇದರ ತೂಕ 41 ಪೌಂಡ್ ಇರುತ್ತೆ ಮತ್ತು ಇದು ತೀರ್ಥಹಳ್ಳಿ ಕೋಠಿ ಫಾರೆಸ್ಟರಲ್ಲಿ ಇಡಿಸಿರುತ್ತೆ. ಬೇಕಾದವರು ನೋಡಬಹುದು.

ನೋಟಿಫಿಕೇಷನ.

ತಾರೀಖು 15ನೆ ಜೂನ 1909.

1900ನೆ ಮೈಸೂರು ಫಾರೆಸ್ಟು ರೆಗ್ಯುಲೇಷನ 40ನೆ ಸೆಕ್ಷನ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಿಸಿರುವ ತಪಶೀಲನಂತೆ ತ್ಯಾಗದ ಬೆಲಗುಗಳು ಚೆನ್ನಗಿರಿ ತಾಲ್ಲೂಕು ಕೆಂಚಾಪುರದ ಬಳಿ ಲಂಬಾಣಿ ಗಂಗನಾಯಕನೆಂಬುವನು ವ್ಯವಸಾಯ ಮಾಡಿದ ಹೊಲದಲ್ಲಿ ಸಿಕ್ಕಿದವು. ಇವುಗಳಿಗೆ ಹಕ್ಕು ಸ್ಥಾಪನೆ ಮಾಡತಕ್ಕವರು ಖುದ್ದಾಗಿ ಆಗಲೀ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಏಜಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇಷನ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ರೂಬರೂಬು ಹಾಜರಾಗಿ ಅವರ ಹಕ್ಕನ್ನ ನಿರ್ಧರಪಡಿಸಿಕೊಳ್ಳಬೇಕು. ತಪ್ಪಿದರೆ ಸದರಿ ಬೆಲಗುಗಳನ್ನ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ.

ನಂಬರು.	ಜಾತಿ.	ಲಾಂಬಿ.		ಸುತ್ತಳತೆ.		ಷರಾ.
		ಅಡಿ.	ಅಂಗಲ	ಅಡಿ.	ಅಂಗಲ.	
1	ಸಾಗುವಾನಿ ...	15	0	2	0	ಕೆಂಚಾಪುರದ ಪಟೇಲ್ ಮುರಗೆಪ್ಪನ ಬಳಿ ಇದೆ.
	ಡಿಟೋ ...	15	2	1	11	
	ಡಿಟೋ ...	13	9	1	11	

ಇಸ್ತಿಹಾರ.

ತಾರೀಖು ಜೂನ 1909.

ಸನ 1909ನೆ ಇಸವಿ ಜೂನ ಮಾಹೆ 17ನೆ ತಾರೀಖಿನ ಮೈಸೂರು ಗೆಜೆಟ್ಟಿನ IIನೆ ಭಾಗದ 509, 510ನೆ ಪುಟದಲ್ಲಿ ಫಾಯಿಷಾಗಿರುವ ಶಿವಮೊಗ್ಗ ಡಿಸ್ಟ್ರಿಕ್ಟಿನ ತಾಲ್ಲೂಕುಗಳಲ್ಲಿ ತಂಗಡಿ ಮತ್ತು ಕಕ್ಕೆ ಚಕ್ಕೆ 1909—10ನೆ ಸಾಲಿನಲ್ಲಿ ಜಮಾಯಿಸಿಕೊಳ್ಳುವ ಹಕ್ಕುದಾರಿ ಹರಾಜು ಹಾಕಲ್ಪಡುವ ವಿಷಯ ಫಾಯಿಷಾಗಿರುತ್ತೆ. ಈ ಸಂಗತಿ ಸಕಲರ ಗಮನಕ್ಕೂ ತಂದಿದೆ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 9ನೆ ಜೂನ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ:—ಸನ 1909ನೆ ಜುಲೈ ಒಂದನೆ ತಾರೀಖು ಲಾಗಾಯಿತು 1910ನೆ ಜೂನ ಆಖೈರ ವರಿಗೆ ಶಿಕಾರಿಪುರ ಟವುನ ಮ್ಯುನಿಸಿಪಲ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿ ವಗೈರೆಗಳಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು 1909ನೆ ಜೂನ ಮಾಹೆ ತಾರೀಖು 23ನೆ ಮಧ್ಯಾಹ್ನದಲ್ಲಿ ಶಿಕಾರಿಪುರ ತಾಲ್ಲೂಕ್ ಕಛೇರಿಯಲ್ಲಿ ಅಮಲ್ದಾರ್ ಮತ್ತು ಶಿಕಾರಿಪುರ ಟವುನ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಿಂದ ಬಹಿರಂಗವಾಗಿ ಹರಾಜು ಹಾಕಿಸಲ್ಪಡುತ್ತೆ.

ಹೆಚ್ಚಿನ ಸಂಗತಿಗಳಿಗೆ ತಾರೀಖು 17ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 512, 513ನೆ ಪೇಜಿನಲ್ಲಿ ಫಾಯಿಷ್ ಆಗಿರುವದನ್ನು ನೋಡಬೇಕು.

ಸೊರಬದ ತಾಲ್ಲೂಕು ಸೊರಬ—ಸಿದ್ದಾಪುರ ರೋಡಿನಲ್ಲಿ ಬಾಡದಬೈಲು ಬಳಿ ಏರ್ಪಡಿಸಲ್ಪಟ್ಟಿರುವ ಟೋಲ್ ಗೇಟಿನಲ್ಲಿ 1909ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಇಸವಿ ಜೂನ ಆಖೈರು ವರಿಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಡೆಪ್ಯುಟಿ ಕಮಿಷನರವರಿಂದಾಗಲೀ ಅಥವಾ ಅವರಿಂದ ಆ ಬಗ್ಯೆ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರವರಿಂದಾಗಲೀ ಸೊರಬ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ ತಾರೀಖು 28ನೆ ದಿನ ಬಹಿರಂಗವಾಗಿ ಹರಾಜು ಹಾಕಿಸಲ್ಪಡುವದು.

2. ಹರಾಜಿನಲ್ಲಿ ಕೊಂಡುಕೊಳ್ಳತಕ್ಕವರು ಈ ಕೆಳಗಿನ ಷೆಡ್ಯೂಲಿನಲ್ಲಿ ಕಾಣಿಸಿರುವ ದರಗಳ ಪ್ರಕಾರ ಮಾತ್ರ ಸುಂಕವನ್ನು ವಸೂಲು ಮಾಡತಕ್ಕದ್ದು. ಅದಕ್ಕಿಂತ ಹೆಚ್ಚಿನ ದರ ವಸೂಲು ಮಾಡಕೂಡದು.

3. 24 ಘಂಟೆಯೊಳಗೆ ಅಂದರೆ ಸೂರ್ಯೋದಯದಿಂದ ಸೂರ್ಯೋದಯದ ವರಿಗೆ ಸದರಿ ಟೋಲು ಗೇಟುಗಳ ಮೂಲಕವಾಗಿ ಹೋಗುವ ಬರುವ ಬಂದುಗಾಡಿಯು (ಇತರದಮೇಲೆ) ಬಂದೇ ಸುಂಕವನ್ನು ವಸೂಲು ಮಾಡತಕ್ಕದ್ದು.

4. (1) (a) ಲೋಕಲ್ ಬೋರ್ಡುಗಳಿಗೆ ಸಮ್ಮಂಧಪಟ್ಟ.

(b) ಡಿಸ್ಟ್ರಿಕ್ಟು ಫಂಡು ನೌಕರರು ಡ್ಯೂಟಿಯಮೇಲೆ ಹೋಗುವ ಅಥವಾ ಅವರ ಸುಪರ್ದಿನಲ್ಲಿರುವ ಸಾಮಾನುಗಳನ್ನು ಸಾಗಿಸುವ ಗಾಡಿ ವಗ್ಯೆರೆಗಳಮೇಲೂ.

(c) ವಾಯಿದೆ ಕಂಡು ಡಿಸ್ಟ್ರಿಕ್ಟು ಬೋರ್ಡಿನವರಿಂದ ಲೈಸೆನ್ಸು ಪಡದು ಇವರ ಲೈಸೆನ್ಸು ವಾಯಿದೆಯಲ್ಲೂ.

(d) ಟಪಾಲು ಸಾಗಿಸುವ ಟಪಾಲು ಗಾಡಿಗಳಮೇಲೂ ಈ ಮೇಲ್ಕಂಡವುಗಳಲ್ಲಿ ನಮೂದಿಸಿರುವವುಗಳ ಉಪಯೋಗಕ್ಕಾಗಿ ಹೋಗಬಹುದಾದ ಗಾಡಿ ವಗ್ಯೆರೆಗಳಮೇಲೆ ಸುಂಕ ವಸೂಲ್ಮಾಡತಕ್ಕದ್ದಲ್ಲ.

5. ದಂಡು ಮತ್ತು ದಂಡಿಗೆ ಸಮ್ಮಂಧಪಟ್ಟ ಅಜಬಾಬುಗಳು ಅಥವಾ ಪೋಲೀಸು ಇಲಾಖಾ ಯಾ ಇತರ ಸರ್ಕಾರಿ ನೌಕರರುಗಳು ಡ್ಯೂಟಿಯಮೇಲೆ ಹೋಗುವಾಗ ಮತ್ತು ಸರ್ಕಾರಕ್ಕೆ ಸಮ್ಮಂಧಪಟ್ಟ ಅಜಬಾಬುಗಳು ಅಂದರೆ ಇಲಾಖಾ ಮುಖ್ಯಸ್ಥರಿಂದ ಪಡೆಯಲ್ಪಟ್ಟ ಸರಟಿಫಿಕೇಟಿನಿಂದ ದೃಢಪಡಿಸಬಹುದಾದವುಗಳಿಗೂ ಸಹ ಸ್ಸುಂಕ ವಸೂಲ್ಮಾಡುವದಿಲ್ಲ.

6. ಟೋಲ್ ಗೇಟ್ ಸಮೀಪ ಚನ್ನಾಗಿ ಕಾಣಿಸುವ ಪ್ರದೇಶದಲ್ಲಿ ಸ್ಪಷ್ಟವಾಗಿ ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಸಹಾ ಗೊತ್ತಾಗಿರುವ ಸುಂಕ ದರಗಳನ್ನು ತೋರಿಸುವ ಬಂದು ಬೋರ್ಡು ಹಚ್ಚಿಸಿರತಕ್ಕದ್ದು.

7. ಹರಾಜುದಾರ್ರು 1876ನೇ ಇಸವಿ ನವಂಬರ್ ಮಾಹೆ ನಾಲ್ಕನೇ (4) ತಾರೀಖಿನ ಲೇಟ್ ಚೀಫ್ ಕಮಿಷನರವರಿಂದ ಫಾಯಿಷ್ ಆದ ನೋಟಿಫಿಕೇಷನ್ನಲ್ಲಿ ಕಾಣಿಸಿರುವ ಷರತ್ತುಗಳಿಗೆ ಬಳಪಟ್ಟಿರತಕ್ಕದ್ದು.

8. ಯಾವ ಹೆಚ್ಚಿನ ಸವಾಲ್ ಆಗಲೀ ಯಾ ಇತರ ಸವಾಲ್ ಆಗಲಿ ತಿರಸ್ಕರಿಸುವ ಅಥವಾ ಅಂಗೀಕರಿಸಿರುವ ಸ್ವತಂತ್ರವನ್ನು ಡೆಪ್ಯುಟಿ ಕಮಿಷನರವರು ಇಟ್ಟುಕೊಂಡಿರುತ್ತಾರೆ.

9. ಹರಾಜ್‌ದಾರ್ರಿಂದ ಹರಾಜ್ ಮೊಬಲಗನ್ನು (12) ಹನ್ನೆರಡು ಸಮ ಕಂತುಗಳಿಗೆ ವಸೂಲ್ಮಾಡಲ್ಪಡುವುದು. ಆ ಪೈಕಿ (3) ಮೂರು ಕಂತುಗಳ ಹಣವನ್ನು ಹರಾಜ್ ಖೈದಾದ ಕೂಡ್ಲೆ ಮುಂಗಡವಾಗಿ ವಸೂಲ್ಮಾಡಬೇಕು. ಈ ಮೊಬಲಗು ಡಿಪಾಜಟ್ನಲ್ಲಿ ಇಡಲ್ಪಟ್ಟು ಆಖೈರಿ ಕಂತುಗಳಿಗೋಸ್ಕರ ಉಪಯೋಗಿಸಲ್ಪಡುವುದು. ಮಿಕ್ಕ ಬಾಬತು ಕಂತುಗಳನ್ನು 1909ನೆ ಜುಲೈ ತಿಂಗಳು ತಾರೀಖು (20) ಇಪ್ಪತ್ತರ ಲಾಗಾಯಿತು (9) ಒಂಭತ್ತು ತಿಂಗಳಲ್ಲಿ ಪ್ರತಿ ತಿಂಗಳು ತಾರೀಖು 20ಕ್ಕೆ ಸರಿಯಾಗಿ ವಸೂಲ್ ಕೊಡತಕ್ಕದ್ದು. ಹರಾಜ್‌ದಾರನು ಪ್ರತಿ ತಿಂಗಳ ಕಂತಿನ ಹಣವನ್ನು ಕ್ರಮವಾಗಿ ವಸೂಲು ಕೊಡುವ ಬಗ್ಯೆ ಜಾಮೀನು ಕೊಡತಕ್ಕದ್ದು.

10. ಹರಾಜ್ ಖೈದಾದ ಒಡನೆಯೇ ಡಿಪಾಜಟ್ ಮೊಬಲಗು ಹಾಜರ್ಮಾಡದೆ ಮತ್ತು ಜಾಮೀನು ಕೊಡದೆ ತಪ್ಪಿದರೆ ಮೇಲ್ಕಂಡ ಹಕ್ಕು ಪುನಹ ಹರಾಜ್ ಮಾಡಿಸಲ್ಪಡುವದಲ್ಲದೆ ಮೇಲ್ಕಂಡ ಹಕ್ಕು ಡೆಪ್ಯುಟಿ ಕಮಿಷನರವರ ಮುನಾಸಬ್ ಪ್ರಕಾರ ಪುನಃ ಹರಾಜ್ ಮಾಡಿಸಲ್ಪಟ್ಟು ಕಂ ಭರ್ತಿ ಹಣವನ್ನ ಹರಾಜ್‌ದಾರನಿಂದಾಗಲೀ ಯಾ ಜಾಮೀನುದಾರನಿಂದಾಗಲೀ ವಸೂಲು ಮಾಡಲ್ಪಡುವುದು.

11. ಹರಾಜ್‌ದಾರನು ಹರಾಜ್ ಮೊಬಲಗು ವಿನಹಾ ಟ್ರೆಜರೀಗೆ ಜಮಾ ಆಗುವ ಮೊಬಲಗಿನಮೇಲೆ ರೂಪಾಯಿ ಬಂದರ ಬಂದಾಣೆಯಂತೆ ಲೋಕಲ್ ಸೆಸ್ಸು ಸಹಾ ವಸೂಲ್ ಕೊಡಲು ಬದ್ಧನಾಗಿರತಕ್ಕದ್ದು.

12. ಹರಾಜ್‌ದಾರನು ಪ್ರತಿ ದಿನವು ವಸೂಲ್ ಮಾಡಿದ ಮೊಬಲಗನ್ನ ತೋರಿಸುವ ಬಗ್ಯೆ ಲೆಖ್ಖವನ್ನು ಇಡಲು ಸಹಾ ಬದ್ಧನಾಗಿರುತ್ತಾನೆ. ಈ ಲೆಖ್ಖವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫಿಸರುಗಳ ತನಿಖೆಗೆ ಬಳಪಟ್ಟಿರತಕ್ಕದ್ದು.

ನಂಬರ್.	ಸುಂಕ ತೆರಲು ಪಾತ್ರವಾಗಿರುವ ಗಾಡಿಗಳ ಮತ್ತು ಜಾನುವಾರುಗಳ ತಪಶೀಲ್.	ದರ.		
		ರೂ.	ಆ.	ಪೈ.
1	ನಾಲ್ಕು ಗಾಲಿಯ ಪ್ರತಿ ಬಂದು ಗಾಡಿಯು ಬಗ್ಯೆ	0	8	0
2	ಬಂದು ಜಾನುವಾರದ ಎರಡು ಗಾಲಿಯು ಪ್ರತಿ ಬಂದು ಗಾಡಿಯು ಬಗ್ಯೆ.	0	2	0
3	ಎರಡು ಜಾನುವಾರುಗಳ ಎರಡು ಗಾಲಿಯ ಗಾಡಿಯು ತುಂಬಿದ್ದರೆ ಪ್ರತಿ ಬಂದರ ಬಗ್ಯೆ ...	0	4	0
4	ಡಿಟೋ ಡಿಟೋ ತುಂಬಿಲ್ಲದ ಪ್ರತಿ ಬಂದರ ಬಗ್ಯೆ ...	0	2	0
5	(4) ನಾಲ್ಕು ಡಿಟೋ ಡಿಟೋ ತುಂಬಿದ್ದರೆ	0	6	0
6	ಡಿಟೋ ತುಂಬಿರದಿದ್ದರೆ ...	0	3	0
7	(6) ಆರು ಡಿಟೋ ಎರಡು ಗಾಲಿಯ ಗಾಡಿಯು ತುಂಬಿದ್ದರೆ ಪ್ರತಿ ಬಂದು ಗಾಡಿಯುಬಗ್ಯೆ...	0	8	0
8	ಡಿಟೋ ಡಿಟೋ ತುಂಬಿರದಿದ್ದರೆ ...	0	4	0
9	(8) ಎಂಟು ಅಥವಾ ಹೆಚ್ಚು ಡಿಟೋ ತುಂಬಿದ್ದರೆ	1	0	0
10	ಡಿಟೋ ತುಂಬಿರದಿದ್ದರೆ ...	0	8	0
11	ಪ್ರತಿ ಬಂದು ಆನೆಗೆ	1	0	0
12	ವಜ್ಜೆ ಹೇರಿದ ಯಾ ಹೇರದ ಬಂಟೆ, ಕುದುರೆ, ತಟ್ಟು, ಹೇಸರಕತ್ತೆ, ಕೋಣ, ಆಕಳು ಮತ್ತು ಎತ್ತಿನ ಬಗ್ಯೆ.	0	0	6
13	ವಜ್ಜೆ ಹೇರಿದ ಕತ್ತೆಯ ಬಗ್ಯೆ	0	0	3
14	ಆಡು, ಕುರಿ, ಹಂದಿ, ಈ ಪ್ರತಿ ಬಂದರ ಬಗ್ಯೆ	0	0	1
15	ನಾಲ್ಕು ಅಥವಾ ಹೆಚ್ಚು ಜನರು ಹೊತ್ತ ಪ್ರತಿ ಬಂದು ಪಲ್ಲಕ್ಕಿ, ಟಾಂಜಾನ್, ಡೋಲಿ, ತೊಟ್ಟಿಲು ಬಗ್ಯೆ.	0	4	0
16	ನಾಲ್ಕು ಚಕ್ರದ ಮೋಟಾರ್‌ಕಾರ್ ಬಂದಕ್ಕೆ	0	8	0

ಷರಾ:—ಕಾಲಾಳುಗಳಮೇಲೆ ಹಾಸಲು ವಸೂಲು ಮಾಡತಕ್ಕದ್ದಿರುವದಿಲ್ಲ.

ಎ. ಮೃತ್ಯುಂಜಯ ಐಯ್ಯರ್, ಫಾರ್ ಪ್ರೆಸಿಡೆಂಟ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ.

ನಂ. 2282, ತಾರೀಖು 15ನೆ ಜೂನ್ 1909.

1909ನೆ ಮೇ 27ನೆ ಮುಕ್ಕಂ ಮೈಸೂರು ಗೆಜೆಟ್ 2ನೆ ಭಾಗದ 711ರ ಲಾಗಾಯಿತು 748ನೆ ವರಿಗಿನ ಪುಟಗಳಲ್ಲಿ ಛಾಪಿಸಲ್ಪಟ್ಟಿರುವ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲರ್ ಆಗುವದಕ್ಕೆ ಅರ್ಹರಾದವರ ಮತ್ತು ಓಟರ್ಸ್ ಯಾನೆ ಚುನಾಯಿಸುವ ಜನರ ಪಟ್ಟಿಯನ್ನು ಪ್ರಸಿದ್ಧಪಡಿಸಿರುವ ಈ ಆಫೀಸು ನೋಟೀಸನ್ನು ರದ್ದುಪಡಿಸಿ ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಗೌರ್ನಮೆಂಟ್ 1909ನೆ ಇಸವಿ ಜೂನ್ 14ನೆ ಮುಕ್ಕಂ 12566-75—ಮ್ಯು. 436-08-7ನೆ ನಂಬರ ಪ್ರೊಸೀಡಿಂಗ್ಸನಲ್ಲಿ ಮಂಜೂರಾಗಿರುವಂತೆ ಬೆಂಗಳೂರು ಸಿಟಿಯಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳ ಬರುವ ಜನರಲ್ ಎಲೆಕ್ಷನ್ ಯಾನೆ ಸಮುದಾಯದ ಚುನಾವಣೆಯು 1909ನೆ ಸೆಪ್ಟಂಬರ್ ಮಧ್ಯಭಾಗಕ್ಕೆ ಬದಲಾಯಿಸಲ್ಪಟ್ಟಿರುತ್ತೆ. ಅದರಂತೆ ತಿದ್ದುಪಾಟಾದ ಓಟರ್ಸ್ ಮತ್ತು ಕ್ಯಾಂಡಿಡೇಟರುಗಳ ಪಟ್ಟಿಯನ್ನು ಕೂಡ್ಲೆ ಅಂದರೆ ಬರುವ ಜುಲೈ ತಿಂಗಳ ಆದಿ ಭಾಗದಲ್ಲಿ ಪ್ರಸಿದ್ಧಪಡಿಸಲ್ಪಡುತ್ತೆ.

2. 1908—09ನೆ ಸಾಲಿನ ಮ್ಯುನಿಸಿಪಲ್ ತೆರಿಗೆಯನ್ನು ಕೊಟ್ಟು ಇರುವ ರೇಟ್‌ಪೇಯರುಗಳನ್ನು ಮಾತ್ರ ಓಟರ್ಸ್ ಮತ್ತು ಕ್ಯಾಂಡಿಡೇಟ್‌ಗಳ ತಿದ್ದುಪಾಟಾದ ಪಟ್ಟಿಯಲ್ಲಿ ಸೇರಿಸುತ್ತೆ. ತೆರಿಗೆಯನ್ನು 1909ನೆ ಜೂನ್ 30ನೆ ತಾರೀಖಿನ ಒಳಗಾಗಿ ಪಾವತಿ ಮಾಡದೇ ತಪ್ಪಿಹೋಗುವವರ ಹೆಸರನ್ನು ಸದರಿ ಪಟ್ಟಿಯಲ್ಲಿ ಸೇರಿಸದೇ ಬಿಟ್ಟುಬಿಡುವದಲ್ಲದೆ ಅವರು ಓಟರಾಗಿ ಅಥವಾ ಕ್ಯಾಂಡಿಡೇಟಾಗಿ ನಿಲ್ಲುವದಕ್ಕೆ ಇರುವ ಅರ್ಹತೆಯನ್ನು ಸಹಾ ಕಳೆದುಕೊಳ್ಳುತ್ತಾರೆ.

3. ಆದ್ದರಿಂದ 1908—09ನೆ ಸಾಲ್ ತೆರಿಗೆಯನ್ನು ಪೂರ್ತಿಯಾಗಿ ಈ ಮಾಹೆಯ ಆಖೈರ್ ಒಳಗಾಗಿ ಪಾವತಿ ಮಾಡಬೇಕಾದ ಆವಶ್ಯಕತೆಯನ್ನು ಸಮ್ಬಂಧಪಟ್ಟ ತೆರಿಗೆದಾರರಿಗೆ ಈ ಮೂಲಕ ಮುಖ್ಯವಾಗಿ ಸೂಚಿಸಿ ಇದೆ.

ಎನ್. ಸುಬ್ಬರಾವ್,
ಫಾರ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಛಾಪಿಸಿದ್ದು. [ನಂ. 26.

ಬೆಂಗಳೂರು, ಗುರುವಾರ, ಜುಲೈ ತಾ|| 1, ಸೆ 1909.

II ನೆ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯರಿಂದ ಕೊಡಲ್ಪಟ್ಟ ಇಸ್ತಿಹಾರ್ನಾಮೆಗಳು.

ಫಾರೆಸ್ಟು ಇಲಾಖಾ.

ತಂಗಡಿ ಮತ್ತು ಕಕ್ಕೆ ಚಕ್ಕೆಗಳ ಇಸ್ತಿಹಾರ್.

ತಾರೀಖು 26ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ತಂಗಡಿ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1909ನೆ ಜುಲೈ ತಿಂಗಳು ತಾರೀಖು 19 ವರಿಗೆ ಹಾಸನ ಡಿಸ್ಟ್ರಿಕ್ಟು ಫಾರೆಸ್ಟಾಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು.

ನಂಬರು	ತಾಲ್ಲೂಕು.	ಜಮಾಯಿಸತಕ್ಕ ಕಾಲ.	ಷರಾ.
1	ಅರಸೀಕೆರೆ ...	1909ನೆ ಜುಲೈ ತಾರೀಖು 25ರ ಲಾಗಾಯಿತು 1911ನೆ ಜೂನ್ ತಾರೀಖು 30ರ ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿ ಇರುವ ಇತರ ಭೂಮಿಗಳಲ್ಲಿನ ಫಸಲು ಈ ಹರಾಜಿಗೆ ಸೇರಿರುವದಿಲ್ಲ.
2	ಚನ್ನರಾಯಪಟ್ನ ...		
3	ಹಾಸನ-ಆಲೂರು ಸಬ್-ತಾ|| ಸೇರಿ ...		
4	ಬೇಲೂರು ...		
5	ಮಂಜರಾಬಾದ್ ...		
6	ಅರಕಲಗೂಡು ...		
7	ಹೊಳೇನರಸೀಪುರ ...		

2. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿ ಒಂದು ದರಖಾಸ್ತಿನೊಡನೆ (200) ರೂಪಾಯಿನ ಕರೆನ್ಸಿ ನೋಟು ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರ್ ಮಾಡಿ ಲಕ್ಕೋಟೆಮೇಲೆ "ತಂಗಡಿ ಚಕ್ಕೆಯ ದರಖಾಸ್ತು" ಎಂದು ಬರದು ಮತ್ತು ಹಾಸನ ಡಿಸ್ಟ್ರಿಕ್ಟು ಫಾರೆಸ್ಟಾಫಿಸರವರ ವಿಳಾಸಕ್ಕೆ ಬರದು ರವಾನಿಸಬೇಕು.

4. ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜುಲೈ ತಾರೀಖು 21ರಲ್ಲು ಬಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಹಾಜರಿರುವ ದರಖಾಸ್ತುದಾರರ ರೂಬರೂಬು ದರಖಾಸ್ತುಗಳನ್ನು ಒಡಿಯುವರು.

5. ಮೇಲ್ಕಂಡ ಆಫೀಸರು ಯಾವ ಅಥವಾ ಎಲ್ಲಾ ದರಖಾಸ್ತುಗಳನ್ನು ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ವುಳಿಸಿಕೊಂಡಿರುತ್ತಾರೆ. ದರಖಾಸ್ತು ಅಂಗೀಕರಿಸೋಣವು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಡುತ್ತೆ.

6. ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರಿ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

7. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೇ ಮಾಡಬೇಕು. ಮತ್ತು ಈ 3 ದಿನಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಯೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡಲ್ಪಡುವದು.

8. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

9. ದರಖಾಸ್ತುದಾರು ತಮಗೋಸ್ಕರ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಸಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡೆಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

10. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಸಮನಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲಿ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣೇ ಮತ್ತು ರವಾನೆ ತಡೆಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು.

1ನೆ ಖಿಸ್ತು—1ನೆ ಅಕ್ಟೋಬರ್ 1909.
2ನೆ ಖಿಸ್ತು—1ನೆ ಏಪ್ರಲ್ 1910.
3ನೆ ಖಿಸ್ತು 5ನೆ ಜನವರಿ 1911.

ಇತರ ಷರತ್ತುಗಳು.

(i) ಇಜಾರೆದಾರನ ನೌಕರನೆ ಆಗಲಿ ಷಿಕ್ಮಿ ಕಂಟ್ರಾಕ್ಟರೆ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(ii) ಚಕ್ಕೆ ಜಮಾವಣೆ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದುನಿಂದ ಒಂದು ತಖ್ತೆಯನ್ನು ಕೊಡಬೇಕು.

(iii) ಕಕ್ಕೆ ಗಿಡಗಳನ್ನು ನೆಲಸಮನಾಗಿ ಕಡಿಯತಕ್ಕದ್ದು.

(iv) ಇಜಾರೆ ಮೇರೆ ರಫ್ತು ಮಾಡಲ್ಪಡುವ ತೊಗಟೆ ಅಥವಾ ತೊಗಟೆ ರಹಿತವಾದ ಮರದ ಪ್ರಮಾಣ ವಗೈರೆ ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರಾಗಲಿ ಅವರುಗಳಿಂದ ನೇಮಿಸಲ್ಪಟ್ಟ ಇತರ ಆಫಿಸರಾಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಪಡಿಸತಕ್ಕದ್ದು.

(v) ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜಾ ತೊಗಟೆಗೂ ಕಂಟ್ರಾಕ್ಟರು ಯಾ ಏಜಂಟದಾರನಿಂದ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ ಮೊಹರಸಿಹಿ ಪಡದ ಪ್ರಿಂಟ್ ಫಾರಂ ಬುಕ್ಕಿನಲ್ಲಿ ಪ್ಯಾಸ್ ಕೊಡಲ್ಪಡತಕ್ಕದ್ದು. ಅಂಥಾ ಬುಕ್ಕು ಮುಗಿದುಹೋದನಂತರ ಸದರಿ ಆಫಿಸರಿಗೆ ವಾಪಸು ಮಾಡಬೇಕು.

(vi) ಕಂಟ್ರಾಕ್ಟರು ಅಥವಾ ಆತನ ಕಡೆ ಜನಗಳ ಅಶ್ರದ್ಧೆಯಿಂದ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು. ಮತ್ತು ಅದರಿಂದ ಉಂಟಾಗುವ ನಷ್ಟಕ್ಕೆ ಜವಾಬ್ದಾರನಾಗತಕ್ಕದ್ದು.

(vii) 1911ನೆ ಇಸವಿ ಜುಲೈ ತಾರೀಖು 15 ರೊಳಗಾಗಿ (ಅಂದರೆ ರಿಯಾಯತಿ 15 ದಿನಗಳು ಶೇರಿ) ಇಜಾರೆ ಮೇರೆ ವಾಯಿದೆಯಲ್ಲಿ ಕಡದು ಜಮಾವಣೆ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಹಾಸನ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(viii) ಮೇಲೆ ನಮೂದಾಗುವ ಎಲ್ಲಾ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡುವದಲ್ಲದೆ ಅದುವರಿಗೆ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಂಡು ಡೆಪ್ಯುಟಿ ಕಮಿಷನರವರು ವಿಧಿಸಬಹುದಾದ 1,000 ರೂಪಾಯಿ ವರಿಗಿನ ಜುರ್ಮಾನೆಗೆ ಇಜಾರೆದಾರ ಗುರಿಯಾಗಬೇಕು.

(ix) ತೊಗಟೆ ತೆಗೆವ ಸಾದೆ ಇಜಾರೆದಾರನದಾಗಿರುತ್ತೆ.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 15ನೆ ಜೂನ್ 1909.

ತೀರ್ಥಹಳ್ಳಿಯಲ್ಲಿರುವ ವೆಂಕಟಸುಬ್ಬಣ್ಣಾಚಾರ್ರ ಮನೆ ಹಿತ್ತಲಲ್ಲಿ ಈ ಕೆಳಗೆ ಕಂಡ ಗಂಧದ ತುಂಡು ಸಿಕ್ಕಿರುತ್ತದೆ. ಇದಕ್ಕೆ ತರೀಕೆರೆ ಕೋಠಿ ಸೋಲ್ಡು ಸ್ಟಾಂಪು ಬಿದ್ದಿರುತ್ತೆ. ಇದರ ಮಾಲೀಕರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳು ಒಳಗಾಗಿ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ರೂಬರೂಬು ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಟ್ಟು ಮಾಲು ತೆಗದುಕೊಂಡು ಹೋಗಬಹುದಾಗಿರುತ್ತೆ. ತಪ್ಪಿದಲ್ಲಿ ನಂತರ ಯಾವ ಹಕ್ಕೂ ಅಂಗೀಕರಿಸಲ್ಪಡಲಾರದು ಮತ್ತು ಮಾಲು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು. ಇದರ ತೂಕ 41 ಪೌಂಡ್ ಇರುತ್ತೆ ಮತ್ತು ಇದು ತೀರ್ಥಹಳ್ಳಿ ಕೋಠಿ ಫಾರೆಸ್ಟರಲ್ಲಿ ಇಡಿಸಿರುತ್ತೆ. ಬೇಕಾದವರು ನೋಡಬಹುದು.

ನೋಟಿಫಿಕೇಷನ್.

ತಾರೀಖು 15ನೆ ಜೂನ್ 1909.

1900ನೆ ಮೈಸೂರು ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಿಸಿರುವ ತಪಶೀಲ್‌ನಂತೆ ತ್ಯಾಗದ ಬೆಲಗುಗಳು ಚನ್ನಗಿರಿ ತಾಲ್ಲೂಕು ಕೆಂಚಾಪುರದ ಬಳಿ ಲಂಬಾಣಿ ಗಂಗನಾಯಕನೆಂಬುವನು ವ್ಯವಸಾಯ ಮಾಡಿದ ಹೊಲದಲ್ಲಿ ಸಿಕ್ಕಿದವು. ಇವುಗಳಿಗೆ ಹಕ್ಕು ಸ್ಥಾಪನೆ ಮಾಡತಕ್ಕವರು ಖುದ್ದಾಗಿ ಆಗಲೀ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಏಜಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರ ರೂಬರೂಬು ಹಾಜರಾಗಿ ಅವರ ಹಕ್ಕನ್ನ ನಿರ್ಧರಪಡಿಸಿಕೊಳ್ಳಬೇಕು. ತಪ್ಪಿದರೆ ಸದರಿ ಬೆಲಗುಗಳನ್ನ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ.

ನಂಬರು.	ಜಾತಿ.	ಲಾಂಬಿ.		ಸುತ್ತಳತೆ.		ಷರಾ.
		ಅಡಿ.	ಅಂಗಲ	ಅಡಿ	ಅಂಗಲ.	
1	ಸಾಗುವಾನಿ ...	15	0	2	0	ಕೆಂಚಾಪುರದ ಪಟೇಲ್ ಮುರಗೆಪ್ಪನ ಬಳಿ ಇದೆ.
2	ಡಿಟೋ ...	15	2	1	11	
3	ಡಿಟೋ ...	13	9	1	11	

ಇಸ್ತಿಹಾರ್.

ತಾರೀಖು ಜೂನ್ 1909.

ಸರ್ 1909ನೆ ಇಸವಿ ಜೂನ್ ಮಾಹೆ 17ನೆ ತಾರೀಖಿನ ಮೈಸೂರು ಗೆಜೆಟ್ಟಿನ IIನೆ ಭಾಗದ 509, 510ನೆ ಪುಟದಲ್ಲಿ ಪ್ರಾಯಿಷಾಗಿರುವ ಶಿವಮೊಗ್ಗ ಡಿಸ್ಟ್ರಿಕ್ಟಿನ ತಾಲ್ಲೂಕುಗಳಲ್ಲಿ ತಂಗಡಿ ಮತ್ತು ಕಕ್ಕೆ ಚಕ್ಕೆ 1909—10ನೆ ಸಾಲಿನಲ್ಲಿ ಜಮಾಯಿಸಿಕೊಳ್ಳುವ ಹಕ್ಕುದಾರಿ ಹರಾಜ್ ಹಾಕಲ್ಪಡುವ ವಿಷಯ ಘಾಯಿಷಾಗಿರುತ್ತೆ. ಈ ಸಂಗತಿ ಸಕಲರ ಗಮನಕ್ಕೂ ತಂದಿದೆ.

ನೋಟಿಫಿಕೇಷನ್ ತಾರೀಖು 18ನೆ ಜೂನ್ 1909.

ಸರ್ 1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಾಣಿಸಿರುವ ತಪ್ಸೀಲ್‌ನಂತೆ ನಾಟಾಗಳು ಚನ್ನಗಿರಿ ರೇಂಜು ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿ ಸಿಕ್ಕಿರುತ್ತವೆ.

ಈ ನಾಟಾಗಳಿಗೆ ಹಕ್ಕು ಸ್ಥಾಪನೆ ಮಾಡತಕ್ಕವರು ಖುದ್ದಾಗಿಯಾಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಏಜಂಟರ ಮೂಲಕವಾಗಿಯಾಗಲೀ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು ಒಂದು ತಿಂಗಳವಳಗೆ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ರೂಬರೂ ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಳ್ಳಬೇಕು. ತಪ್ಪಿದರೆ ಸದರಿ ನಾಟಾಗಳನ್ನು ಸರ್ಕಾರಕ್ಕೆ ಸೇರಿಸಿಕೊಂಡು ಹರಾಜ್ ಮಾಡಿಸಲಾಗುತ್ತೆ :—

ಜಿಲ್ಲೆ	ಜಾತಿ.	ಸಲೆ ಅಡಿ.	ಎಲ್ಲಿ ದೊರೆತದ್ದು.	ಷರಾ.
2	ಸಾಗವಾನಿ.	15	ಮಲ್ಲಿಗೆರೆ ಡಿಸ್ಟ್ರಿಕ್ಟ್ ಜಂಗಲಿನಲ್ಲಿ.	ಮಲ್ಲಿಗೆರೆ ಪಟೇಲ್ ವೀರಪ್ಪನ ವಶದಲ್ಲಿದೆ.
1	,, ...	$4\frac{3}{4}$	ಜೋಳದಹಾಳ್ ಡಿಸ್ಟ್ರಿಕ್ಟ್ ಜಂಗಲಿನಲ್ಲಿ.	ಜೋಳದಹಾಳ್ ಫಾರೆಸ್ಟರಲ್ಲಿ.
2	,, ...	11	ಗಾಣದಕಟ್ಟೆ ಡಿಸ್ಟ್ರಿಕ್ಟ್ ಜಂಗಲಿನಲ್ಲಿ.	ಗಾಣದಕಟ್ಟೆ ಪಟೇಲ್ ಊಬಪ್ಪನಲ್ಲಿ.
4	,, ...	$10\frac{3}{4}$	ಕೊಮಾರ್ನಹಳ್ಳಿ ಡಿಸ್ಟ್ರಿಕ್ಟ್ ಜಂಗಲಿನಲ್ಲಿ	ಕೊಮಾರ್ನಹಳ್ಳಿ ಪಟೇಲ್ ಕರಿಯಪ್ಪ.

ಎ. ಪೊನ್ನಸ್ವಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು ನೆ ಜೂನ 1909.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳು ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕೆ ಚಕ್ಕೆಯನ್ನು 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1911ನೆ ಇಸವಿ ಜೂನ 30ನೆ ತಾರೀಖು ವರಿಗೆ ಜಮಾಯಿಸಿ ತೆಗದು ಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕು ಅಮಲ್ದಾರ್ರು ಮತ್ತು ಫಾರೆಸ್ಟು ಆಫಿಸರುಗಳಿಂದ ಹರಾಜು ಮಾಡಿಸುತ್ತೆ:—

ನಂಬರ.	ತಾಲ್ಲೂಕು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.	ಹರಾಜು ಮಾಡಿಸುವ ಆಫಿಸರ ಹೆಸರು
1	ತರೀಕೆರೆ ...	26—7—1909	ತಾಲ್ಲೂಕ ಕಛೇರಿಯಲ್ಲಿ.	ಅಮಲ್ದಾರ್ರು ಮತ್ತು ಲಕ್ಕವಳ್ಳಿ ರೇಂಜಾಫಿಸರು.
2	ಕಡೂರು ...	28—7—1909	ಡಿಟೋ	ಅಮಲ್ದಾರ್ರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು.
3	ಚಿಕ್ಕಮಗಳೂರು ...	31—7—1909	ಡಿಟೋ	ಅಮಲ್ದಾರ್ರು ಮತ್ತು ಮೂಡಿಗೆರೆ ರೇಂಜಾಫಿಸರು.

ನೋಟ—ಹರಾಜು ಅವಶ್ಯಕ ಕಂಡರೆ ಸಂಮತುವಾರಾಗಿ ಮಾಡಿಸಲ್ಪಡುತ್ತೆ.

2\. ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸಲ್ಪಡುತ್ತೆ.

3\. ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4\. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ವಹಿಸಿದ ಏಜಂಟರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5\. ಹರಾಜು ಕೈದಾದ ಕೂಡಲೆ ಛಡ ಸವಾಲ್‌ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ ರೂಪಾಯಿ ಒಂದಕ್ಕೆ ಒಂದಾಣೆ ಮೇರಿಗೆ ಸೇರಿಸಿ ಒಟ್ಟು ಹಣದಲ್ಲಿ ¼ ಹಿಸ್ಸೆಯನ್ನು ಡಿಪಾಜಟ್ ಹಾಜರ್ಮಾಡಬೇಕು. ಆ ಪ್ರಕಾರ ಹಾಜರ್ಮಾಡದೆ ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನ ಪುನಃ ಹರಾಜು ಮಾಡಲ್ಪಡುತ್ತೆ.

6\. ಮೇಲೆ ಹೇಳಿದಂತೆ ದುಸರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಅವನಿಗೇನೂ ಹಕ್ಕು ಇರುವದಿಲ್ಲ. ನಷ್ಟಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಹಣಕ್ಕೂ ಕಮ್ಮಿ ಬೀಳುವ ಹಣವನ್ನ ಅವ್ವಲ್ ಹರಾಜುದಾರ್ರಿಂದ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

7\. ಛಡ ಸವಾಲ್‌ದಾರನು ಬಾಕಿ ¾ ಹಿಸ್ಸೆ ಹಣವನ್ನು ಮತ್ತು ಅದರ ಲೋಕಲ್ ಸೆಸ್ ಸಹಿತ ಹರಾಜು ತಾರೀಖು ಲಾಗಾಯಿತು ಒಂದು ತಿಂಗಳವಳಗೆ ಪಾವತೀ ಮಾಡಬೇಕು, ತಪ್ಪಿದರೆ ಮೊದಲು ಇಟ್ಟ ಡಿಪಾಜಟ್ ಮೊಬಲಗು ಸರ್ಕಾರಕ್ಕೆ ಶೇರಿಸಲ್ಪಡುತ್ತೆ. ಇದಲ್ಲದೆ ಮುಂದೆ ಜಮಾಯಿಸಿಕೊಳ್ಳುವದಕ್ಕೆ ಅವಕಾಶಕೊಡದೆ ಇಜಾರೆ ಹಕ್ಕು ತಪ್ಪಿಸುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

8\. ಹರಾಜು ಮಂಜೂರಿಯ ಸಂಗತಿಯನ್ನ ಹರಾಜುದಾರ್ರಿಗೆ ತಿಳಿಸಿದ (3) ಮೂರುದಿವಸಗಳಲ್ಲಿ ಸರಿಯಾದ ಛಾಪಾ ಕಾಗದ್ದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತ್ತುಗಳ ಮೇರಿಗೆ ನಡದುಕೊಳ್ಳಲು ಬದ್ಧನಾಗಿ ಇರುವಂತೆ ಹರಾಜುದಾರನು ಮುಚ್ಚಳಿಕೆ ಬರದುಕೊಡಬೇಕು.

9\. ಈ ಕೆಳಗೆ ನಮೂದಾಗುವ ಷರತ್ತುಗಳ ಮೇರ ಹರಾಜುದಾರ್ರು ನಡದುಕೊಳ್ಳಬೇಕು.

(1) ಒಂದು ವರುಷಕ್ಕೆ ಒಳಪಟ್ಟ ಗಿಡಗಳನ್ನ ಕಡಿಯಕೂಡದು.

(2) ತೊಬಟೆ ತೆಗೆವ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

(3) ಇಜಾರೆ ಮೇರೆ ಸಾಗಿಸಿಕೊಂಡ ಚಕ್ಕೆ ಮೊತ್ತದ ತಪಶೀಲ್ ಲೆಖ್ಖ ಇಡಬೇಕು. ತಾಲ್ಲೂಕ ಅಮಲ್ದಾರ್ರು ಅಥವಾ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಖ್ಖ ತನಿಖೇ ಮಾಡಲು ಬಂದಾಗ ಲೆಕ್ಕ ತೋರಿಸಬೇಕು.

(4) ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸ್ ಪಡಿಯಬೇಕು.

(5) 1911ನೆ ಇಸವಿ ಜೂನ ಆಖೈರು ವಳಗಾಗಿ ಕಡದು ಜಮಾಯಿಸಿಕೊಂಡು ಇರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ಸರಹದ್ದಿನ ಹೊರಕ್ಕೆ ಸಾಗಿಸಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪಿ ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೆ ಸಾಗಿಸದೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಶೇರಿಸಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸೌದೇ ಬಗ್ಯಾಗಲೀ ಅಥವಾ ಇನ್ಯಾವದಕ್ಕಾಗಲೀ ಕಡಿಯಕೂಡದು.

ಬಿ. ಹಿರಾಸಿಂಗ್,
ಫಾರ ಡೆಪ್ಯುಟಿ ಕಮ್ಮಿಷನರ್, ಕಡೂರು ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟ್.

1909ನೆ ಇಸವಿ ಮೇ ಮಾಹೆ 22ನೆ ತಾರೀಖಿನಲ್ಲಿ ನಡೆದ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ಪ್ರೊಸಿಡಿಂಗ್ಸ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಹಾಜರು.

ಬಿ. ಜೆ. ಕುಮಾರಸ್ವಾಮಿನಾಯಿಕ್, ಎಸ್ಕ್ವಯರ್, ಪ್ರೆಸಿಡೆಂಟರು.

ಮಿ|| ಟಿ. ಚೊಕ್ಕಣ್ಣನವರು, ಟ್ರೆಜರಿ ಆಫೀಸರು ಮತ್ತು ವೈಸ್ ಪ್ರೆಸಿಡೆಂಟರು.
,, ಕೆ. ಚಾಂಡಿಯವರು, ದೊಡ್ಡಬಳ್ಳಾಪುರದ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು.
,, ಬಿ. ವೆಂಕೋಬರಾವ್, ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.
,, ಜೆ. ಎಸ್. ಡೇವಿಡ್, ಬೆಂಗಳೂರು ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೇರಿ ಆಫೀಸರು.
,, ಕೆ. ವೀರಭದ್ರಯ್ಯ, ಬೆಂಗಳೂರು ಡಿಸ್ಟ್ರಿಕ್ಟು ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರು.

ಗೈರ್ ಹಾಜರು.

,, ಕೆ. ಕೃಷ್ಣಯ್ಯಂಗಾರ್, ಬೆಂಗಳೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್.
,, ಸಿ. ರಾಮರಾವ್, ಬೆಂಗಳೂರು ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್, (ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆಯಲ್ಲಿದ್ದರು).

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ಮಿ|| ಚಿಕ್ಕಗುರುವಾರೆಡ್ಡಿ, ಬೆಂಗಳೂರು ತಾಲ್ಲೂಕು.
,, ಕೆ. ಸುಬ್ಬಣ್ಣ, ಬೆಂಗಳೂರು ತಾಲ್ಲೂಕು
,, ಶೀನಪ್ಪ, ಹೊಸಕೋಟೆ.
,, ಎ. ರಾಮಣ್ಣ, ಹೊಸಕೋಟೆ
,, ಗುಂಡೂರಾವ್, ದೇವನಹಳ್ಳಿ.
,, ಕೋಲೂರು ರಾಮಣ್ಣ, ದೊಡ್ಡಬಳ್ಳಾಪುರ
,, ನರಹರಯ್ಯ, ನೆಲಮಂಗಲ.
,, ಎಸ್. ದಾಸಪ್ಪ, ನೆಲಮಂಗಲ.
,, ಚನ್ನಲಿಂಗಪ್ಪ, ನೆಲಮಂಗಲ.

ಮಿ|| ರಾಮಸಂಜೀವಯ್ಯ, ಚನ್ನಪಟ್ಣ.
,, ಶಾಮಯ್ಯ, ಕಾನಕಾನಹಳ್ಳಿ.
,, ಪುಟ್ಟಪ್ಪ, ಆನೆಕಲ್.
,, ಧಾಳಪ್ಪ, ಆನೆಕಲ್.
,, ರಾಮಚಂದ್ರರಾವ್, ಮಾಗಡಿ.
,, ಕರೆಭಾಮಾ ನರಸಿಂಹ ಶೆಟ್ಟಿ, ಕ್ಲೋಸ್‌ಪೇಟೆ.
,, ಸಿ. ಜೆ. ಹಾರ್ಡಿ, ಯುರೇಷಿಯನ್ ಮತ್ತು ಆಂಗ್ಲೊ ಇಂಡಿಯನ್ ಅಸೋಸಿಯೇಷನ್‌ಗಾಗಿ

ಗೈರ್ಹಾಜರು.

,, ಮಸ್ತಾನ್‌ಖಾನ್, ಚನ್ನಪಟ, (ಖಾಯಿಲೆ ಸಬಬು.)

1. ಬೆಂಗಳೂರು ತಾಲ್ಲೂಕು ಕಾಕೋಳು ಗ್ರಾಮದ ಬಳಿ ಸಂತೆ ನಡೆಯಲು ಬೆಂಗಳೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರಿಂದ ಬಂದ 25—3—09ನೆ ಮರ್ಕುಂ 1093ನೆ ನಂಬರು ಯಾದಿ ಓದಲಾಯಿತು.

ಕಾಕೋಳು ಬಳಿ ಸಂತೆ ಕೂಡಬಹುದೆಂದು ಬೋರ್ಡಿನವರು ಅಭಿಪ್ರಾಯ ಪಡುತ್ತಾರೆ.

2. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡು ನಾನ್ ಅಫಿಷಿಯಲ್ ಮೆಂಬರುಗಳು ಬೋರ್ಡು ಮೀಟಿಂಗಿಗಾಗಿ ಪ್ರಯಾಣ ಮಾಡಿದ್ದಕ್ಕೆ ಭತ್ತೆ ಯಾನೆ ಟ್ರಾವಲಿಂಗ್ ಅಲೋವೆನ್ಸು ಯಾವರೀತಿ ಡ್ರಾ ಮಾಡಬಹುದೆಂದು ಬೋರ್ಡಿನ ಅಭಿಪ್ರಾಯ ಕೇಳಿಬಂದ 27—2—09ನೆ ಮರ್ಕುಂ 8389 96—ಲೋ. ಬೋ. 216-08-1ನೆ ನಂಬರು ಗವರ್ನಮೆಂಟ್ ಆರ್ಡರು ಓದಲಾಯಿತು.

ಈ ಭತ್ತೆ ಪಡೆಯಲು ಗವರ್ನಮೆಂಟನವರ ಸಲಹೆ ಅನುಸರಿಸಬಹುದೆಂದು ತೀರ್ಮಾನ ಮಾಡಲಾಯಿತು.

3. ವೈಟ್‌ಫೀಲ್ಡಿನಲ್ಲಿರುವ ಆಸ್ಪತ್ರೆಗೆ ಹಂಗಾಮಿ ತರೀಕ್ ಜಾಸ್ತಿ ಯಾಗಿ ಬಾಡಿಗೆ ಅಂದರೆ 5 ರೂಪಾಯಿನಂತೆ ಕೊಡಲು ಮಂಜೂರಾದ 5—4—09ನೆ ಮರ್ಕುಂ 9742-4—ಲೋ. ಬೋ. 223-08-4ನೆ ನಂಬರು ಗವರ್ನಮೆಂಟ್ ಆರ್ಡರು ಓದಲಾಯಿತು.

ರೆಕಾರ್ಡು ಮಾಡಲಾಯಿತು.

4. ಈ ಕೆಳಗೆ ನಮೂದಾಗುವ ಭಾವಿಗಳನ್ನು ತೆಗೆಸುವ ವಿಷಯದಲ್ಲಿ ಮಂಜೂರ್ಮಾಡಲ್ಪಟ್ಟ 17—4—09ನೆ ಮರ್ಕುಂ 10240-1—ಲೋ. ಬೋ. 196-08-14ನೆ ನಂಬರು ಗವರ್ನಮೆಂಟ್ ಆರ್ಡರು ಓದಲಾಯಿತು.

			ರೂ.
1.	ಸೀಲವಂತನ ಕೆರೆ ಅಂಗಳದಲ್ಲಿ ಒಂದು ಭಾವಿ ತೆಗೆಯುವದಕ್ಕೆ	...	42
2.	ನಲ್ಲೂರುಹಳ್ಳಿ ಕೆರೆ ಅಂಗಳದಲ್ಲಿ ಒಂದು ಭಾವಿ ತೆಗೆಯುವದಕ್ಕೆ	...	35
3.	ದೊಡ್ಡತಾತಮಂಗಲದಲ್ಲಿ ಭಾವಿ ಆಳಪಡಿಸತಕ್ಕದ್ದಕ್ಕೆ ...	...	205
			282

ಅವುಗಳನ್ನು ಒಪ್ಪಲಾಯಿತು.

5. ತ್ಯಾಮಗೊಂಡ್ಲು ಮತ್ತು ಕ್ಲೋಸ್‌ಪೇಟೆ ಆಸ್ಪತ್ರೆಗಳಿಗೆ ನೀರು ಸರಬರಾಯಿಮಾಡುವ ಹೆಣ್ಣು ಆಳುಗಳಿಗೆ ತಲಾ 2 ರಿಂದ 4 ರೂಪಾಯಿಗೆ ಬಡ್ತಿ ಮಾಡಬೇಕೆಂಬ ವಿಷಯದಲ್ಲಿ ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೇರಿ ಆಫೀಸರವರ 15—4—09ನೆ ಮರ್ಕುಂ 3729ನೆ ನಂಬರು ಡಾಕೆಟ್ ಓದಲಾಯಿತು.

ಮುಂದಿನಸಾಲ್ ಬಡ್ಜಟ್ ಚರ್ಚಿಸುವ ಮೀಟಿಂಗಿನಲ್ಲಿ ಇದನ್ನು ಆಲೋಚಿಸಬಹುದೆಂದು ತೀರ್ಮಾನಿಸಲಾಯಿತು.

6. ಎಲಹಂಕ ಮತ್ತು ಕೆಂಗೇರಿ ಯೂನಿಯನ್‌ಗಳಲ್ಲಿ ಮನೆ ಕಂದಾಯವನ್ನು ರಿವೈಜ್ ಮಾಡತಕ್ಕ ವಿಷಯದಲ್ಲಿ ಬೆಂಗಳೂರು ತಾಲ್ಲೂಕು ಅಮಲ್ದಾರ್ರ 2—2—09ನೆ ಮರ್ಕುಂ 104ನೆ ನಂಬರು ಇತ್ತಲ್ಲೆ ಓದಲಾಯಿತು.

ಆಯಾಯ ಯೂನಿಯನ್‌ಗಳಲ್ಲಿ ಮನೆ ಕಂದಾಯ ರಿವೈಜ್ ಮಾಡಬಹುದೆಂದು ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

7. ಚನ್ನಪಟ್ಣ ತಾಲ್ಲೂಕು ತಗಚಗೆರೆ ಮಹದೇಶ್ವರಸ್ವಾಮಿ ಜಾತ್ರೆ ಕಾಲದಲ್ಲಿ "ಫೀಸ್" ಯಾನೆ ತೆರಿಗೆ ವಸೂಲ್ಮಾಡತಕ್ಕ ವಿಷಯದಲ್ಲಿ ಕ್ಲೋಸ್‌ಪೇಟೆ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ 21—4—09ನೆ ಮರ್ಕುಂ 1563ನೆ ನಂಬರು ಯಾದಿ ಓದಲಾಯಿತು.

ಈ ದನದ ಪರಿಷೆ ನೆರೆಯಲು ಗವರ್ನಮೆಂಟನವರು ಈಚೆಗೆ ಮಂಜೂರ್ಮಾಡಿರೋಣದರಿಂದ ಜಾತ್ರೆ ಕಾಲದಲ್ಲಿ ಬರತಕ್ಕ ದನಗಳಮೇಲೆ "ಫೀಸ್" ಇಷ್ಟು ಕ್ಷಿಪ್ರದಲ್ಲೆ ವಿಧಿಸಲಾಗದೆಂದು ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

8. ಕೆಲವು ಕಾಮಗಾರಿಗಳಿಗಾಗಿ ಬೆಂಗಳೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜನೀರ್ರ 7—5—09ನೆ ಮರ್ಸ್ಕಂ 135ನೆ ನಂಬರು ಡಾಕೆಟ್ ಜಡನೆ ಬಂದ ರಿ.ಅಪ್ರೋಪ್ರಿಯೇಷನ್ ತಃಖ್ತೆ ಓದಲಾಯಿತು.

ಸದರಿ ತಃಖ್ತೆಯಲ್ಲಿ ಕಂಡ ರಿ.ಅಪ್ರೋಪ್ರಿಯೇಷನ್ ಮಂಜೂರ್ಮಾಡಲಾಯಿತು.

9. ಚನ್ನಪಟ್ಣ ತಾಲ್ಲೂಕು ಹೊಂಗನೂರು ಯೂನಿಯನ್ ವಜಾಯಿಸತಕ್ಕ ವಿಷಯದಲ್ಲಿ ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫಿಸರವರಿಂದ ಬಂದ 20—[illegible]—09ನೆ ಮರ್ಸ್ಕಂ 108[illegible]ನೆ ನಂಬರು ಯಾದಿ ಓದಲಾಯಿತು.

ಒಂದುಸಲ ಗವರ್ನ್ಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟ ಯೂನಿಯನ್ ವಜಾಯಿಸುವದು ಯುಕ್ತವಲ್ಲವೆಂತಲು ಮತ್ತು ದೊಡ್ಡ ಗ್ರಾಮಗಳು ಯೂನಿಯನ್‌ಗಳಾಗಿ ಮಾಡತಕ್ಕದ್ದು ಜನಗಳ ಅನುಕೂಲಕ್ಕೆಂದು ಬೋರ್ಡಿನವರು ಏಕೀಭವಿಸಿ ಅಭಿಪ್ರಾಯಪಟ್ಟಿರುತ್ತಾರೆ.

10. ಬಿಡದಿ ಯೂನಿಯನ್ನಲ್ಲಿ "ಡ್ರೇಯಿನೇಜ್" ಯಾನೆ ಮೋಹರಿ ಕಾಮಗಾರಿ ಅಂದಾಜಾ ಮಂಜೂರ್ಮಾಡಿ ಹಣ ಒದಗಿದಾಗ ಕೆಲಸ ನಡೆಸಬಹುದೆಂಬ 20—4—09ನೆ ಮರ್ಸ್ಕಂ 10382-3—ಲೋ. ಬೋ 186-08-4ನೆ ಗವರ್ನ್ಮೆಂಟು ಆರ್ಡರು ಓದಲಾಯಿತು.

ರೆಕಾರ್ಡು ಮಾಡಲಾಯಿತು.

11. ವೈಟ್‌ಫೀಲ್ಡಿನಲ್ಲಿ "ಸಿಮೆಟ್ರಿ" ಯಾನೆ ಸ್ಮಶಾನದ ಗೋಡೆಯನ್ನು ಪೂರೈಸುವದಕ್ಕಾಗಿ ಡಿಸ್ಟ್ರಿಕ್ಟು ಫಂಡಿನಿಂದ ಸಹಾಯದ್ರವ್ಯವನ್ನು ಕೋರಿದ ವಿಷಯದಲ್ಲಿ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ 29—3—09ನೆ ಮರ್ಸ್ಕಂ 9390ನೆ ನಂಬರು ಡಾಕೆಟ್ ಓದಲಾಯಿತು.

ಇದಕ್ಕಾಗಿ ಒಂದು ಅಂದಾಜಾ ಮತ್ತು ಪ್ಲಾನು ಬರವಮಾಡಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

12. ಹೆಸರುಘಟ್ಟ ಹುಲ್ಲುಗಾವಲ್‌ನಲ್ಲಿ ದೊಡ್ಡಿ ಕಟ್ಟತಕ್ಕ ವಿಚಾರದಲ್ಲಿ ಡಿಸ್ಟ್ರಿಕ್ಟು ಬೋರ್ಡು ತೀರ್ಮಾನವನ್ನು ರೆಕಾರ್ಡುಮಾಡಿ ಬಂದ 12—5—09ನೆ ಮರ್ಸ್ಕಂ 11258 ಲೋ. ಬೋ 277-0[illegible]-4ನೆ ನಂಬರು ಗವರ್ನಮೆಂಟ್ ಆರ್ಡರು ಓದಲಾಯಿತು.

ರೆಕಾರ್ಡು ಮಾಡಲಾಯಿತು.

13. ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲನಲ್ಲಿ ಆಸ್ಪತ್ರೆ ಅಸಿಸ್ಟೆಂಟರಿಗೆ ವಾಸಕ್ಕೆ ಸ್ಥಳ ಏರ್ಪಡಿಸಬೇಕೆಂಬ ವಿಷಯದಲ್ಲಿ ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರ 13—5—09ನೆ ಮರ್ಸ್ಕಂ 5993ನೆ ನಂಬರು ಡಾಕೆಟ್ ಓದಲಾಯಿತು.

ಫಂಡ್ಸು ಒದಗಿದಾಗ ಇದನ್ನು ಯೋಚಿಸಬಹುದೆಂದು ತೀರ್ಮಾನ ಮಾಡಲಾಯಿತು.

14. ಬೋರ್ಡಿನ ಮಂಜೂರಾತಿಗಾಗಿ ತಯಾರ್ಮಾಡಲ್ಪಟ್ಟ ನಾನ್ ಬಡ್ಜೆಟ್ ಕಾಮ ಗಾರಿಗಳ ತಃಖ್ತೆ ಓದಲಾಯಿತು.

ಮಂಜೂರ್ಮಾಡಲಾಯಿತು.

15. ತಮ್ಮ ತಮ್ಮ ಚಾರ್ಜಿನಲ್ಲಿರುವ ಗ್ರಾಮಗಳನ್ನು ತೃಪ್ತಿಕರವಾದ ಸ್ಥಿತಿಯಲ್ಲಿ ಇಟ್ಟ ಪಟೇಲರುಗಳಿಗೆ ಹಂಗಾಮಿಯಾಗಿ ಬಹುಮಾನ ಕೊಟ್ಟು ಒಂದುಸಾಲು ಕಳೆದ ನಂತರ ಈ ಏರ್ಪಾಡು ಹ್ಯಾಗೆ ನಡೆಯುತ್ತೊ ರಿಪೋರ್ಟು ಮಾಡಬೇಕೆಂಬ 6—[illegible]—07ನೆ ಮರ್ಸ್ಕಂ 7626-36—ಲೋ. ಬೋ. 275-05-13ನೆ ನಂಬರು ಗವರ್ನಮೆಂಟ್ ಆರ್ಡರ್ ಓದಲಾಯಿತು.

ಈ ಕೆಳಗೆ ನಮೂದು ಮಾಡಲ್ಪಟ್ಟ ಪಟೇಲರುಗಳಿಗೆ ತಮ್ಮ ಗ್ರಾಮಗಳನ್ನು ಪಾಕಾಗಿ ಇಟ್ಟದ್ದಕ್ಕಾಗಿ ರೂಪಾಯಿ 3 ರಂತೆ ಬಹುಮಾನ ಕೊಡಬಹುದೆಂತಲೂ ಮತ್ತು ಬೋರ್ಡಿನವರು ಈ ಏರ್ಪಾಡು ಹ್ಯಾಗೆ ನಡೆಯುತ್ತೆಂಬುವದನ್ನು ನಿರ್ಧರಿಸಲು ಕೆಲವುಕಾಲ ಅವಕಾಶ ಕೊಡತಕ್ಕ ವಿಷಯದಲ್ಲಿ ಗವರ್ನಮೆಂಟಿಗೆ ಬರೆಸಬೇಕೆಂದು ತೀರ್ಮಾನಿಸಲಾಯಿತು.

ದೊಡ್ಡಬಳ್ಳಾಪುರ ತಾಲ್ಲೂಕು.

ದೊಡ್ಡಹೆಜ್ಜಾಜಿ ಪಟೇಲ್ ರೂ. 3

ಮಾಗಡಿ ತಾಲ್ಲೂಕು.

ಬಗನಿಗೆರೆ ಪಟೇಲ್ ರೂ. 3	ಸೋಲೂರು ಪಟೇಲ್ ರೂ. 3
ಮಾಡಬಾಳು ಪಟೇಲ್ ರೂ. 3	

ಕಾನಕಾನಹಳ್ಳಿ ತಾಲ್ಲೂಕು

ಚಿಕ್ಕಮುಗವಾಡಿ ಪಟೇಲ್ ರೂ. 3	ಮಣಿಯಂಬಾಳು ಪಟೇಲ್ ರೂ. 3
ನಾಗರಸನಕೋಟೆ ಪಟೇಲ್ ರೂ. 3	ತುರುಕರಹೊಸಹಳ್ಳಿ ಪಟೇಲ್ ರೂ. 3
ಮುಲ್ಲಹಳ್ಳಿ ಪಟೇಲ್ ರೂ. 3	ಸೋಮನಹಳ್ಳಿ ಪಟೇಲ್ ರೂ. 3
ತಟ್ಟೆಕೆರೆ ಪಟೇಲ್ ರೂ. 3	

ಚನ್ನಪಟ್ಣ ತಾಲ್ಲೂಕು.

ಮತ್ತಿಕೆರೆ ಪಟೇಲ್ ರೂ. 3	ಗರಳೂರು ಪಟೇಲ್ ರೂ. 3
ಬೇವೂರು ಪಟೇಲ್ ರೂ. 3	

ಕ್ಲೋಸ್‌ಪೇಟೆ ಸಬ್ ತಾಲ್ಲೂಕು.

ಅಂಕನಹಳ್ಳಿ ಪಟೇಲ್ ರೂ. 3	ಬೈರಮಂಗಲ ಪಟೇಲ್ ರೂ. 3
ಅವರಗೆರೆ ಪಟೇಲ್ ರೂ. 3	ಹೆಗ್ಗಡಗೆರೆ ಪಟೇಲ್ ರೂ. 3
ಹರಿಸಂದ್ರ ಪಟೇಲ್ ರೂ. 3	ಎರಹಳ್ಳಿ ಪಟೇಲ್ ರೂ. 3
ಕ್ಯಾಸಾಪುರ ಪಟೇಲ್ ರೂ. 3	ಮಾಯಗಾನಹಳ್ಳಿ ಪಟೇಲ್ ರೂ. 3

ಆನೆಕಲ್ ತಾಲ್ಲೂಕು.

ಮಾಯಸಂದ್ರ ಪಟೇಲ್ ರೂ. 3	ಬಸ್ತಮಾನಹಳ್ಳಿ ಪಟೇಲ್ ರೂ. 3

ಹೊಸಕೋಟೆ ತಾಲ್ಲೂಕು.

ನೆಲವಾಗಿಲ್ ಪಟೇಲ್ ರೂ. 3

ಬೆಂಗಳೂರು ತಾಲ್ಲೂಕು.

ಹುಡಿ ಪಟೇಲ್ ರೂ. 3

16. ಬೆಂಗಳೂರು ತಾಲ್ಲೂಕು ರಾಜಾನುಕುಂಟೆಯಲ್ಲಿ ಒಂದು ಸಂತೆ ನಡೆಸಲು ಬೆಂಗಳೂರು ಡಿವಿಜನ್ ಆಫಿಸರವರ 18—5—09ನೆ ಮರ್ಸ್ಕಂ 1311ನೆ ನಂಬರು ಯಾದಿ ಓದಲಾಯಿತು.

ಇದು ಅವಶ್ಯ ಕಾಣುವದಿಲ್ಲವೆಂದು ತೀರ್ಮಾನಿಸಲಾಯಿತು.

17. ಬೆಂಗಳೂರು-ತುಮಕೂರು ರೋಡ್ 13ನೆ ಮೈಲಿಯಿಂದ ನೆಲಮಂಗಲ ತಾಲ್ಲೂಕು ರಾವುತನಹಳ್ಳಿಗೆ ರಸ್ತೆ ಮಾಡಿಸಬೇಕೆಂಬ ವಿಷಯದಲ್ಲಿ ದೊಡ್ಡಬಳ್ಳಾಪುರ ಸಬ್ ಡಿವಿಜನ್ ಆಫಿಸರವರಿಂದ ಬಂದ 18—5—09ನೆ ಮರ್ಕ್ಕಂ 1471ನೆ ನಂಬರು ಯಾದಿ ಓದಲಾಯಿತು.

ರಸ್ತೆ ಮಾಡಲು ಮಂಜೂರ್ಮಾಡಲಾಯಿತು. ಆದರೆ ಇದಕ್ಕಾಗಿ ತಗಲಬಹುದಾದ ಲಾಗವಡಿಗೆ ಬೆಂಗಳೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಯವರಿಂದ ಒಂದು ಅಂದಾಜು ತರಿಸಬೇಕೆಂದು ತೀರ್ಮಾನಿಸಲಾಯಿತು.

ಮುಂದಿನ ಡಿಸ್ಟ್ರಿಕ್ಟು ಬೋರ್ಡ್ ಮೀಟಿಂಗ್ ಆಗಸ್ಟು ಮಾಹೆ 7ನೆ ತಾರೀಖಿನಲ್ಲಿ ನಡೆಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ಟಿನಲ್ಲಿ ಮಂಜೂರಾಗದ ಕಾಮಗಾರಿಗೆ ಅಂದಾಜು ಲೀಷ್ಟು.

ಡಿಸ್ಟ್ರಿಕ್ಟು ಫಂಡು ಕಾಮಗಾರಿಗಳು.

	ರೂ.	ಆ.	ಪೈ.
ನೆಲಮಂಗಲ ತಾಲ್ಲೂಕು ಬೇಗೂರು ರೋಡು ರಿಪೇರಿ ಮಾಡುವದಕ್ಕೆ	86	0	0
ಬೆಂಗಳೂರು ತಾಲ್ಲೂಕು ವೈಟ್‌ಫೀಲ್ಡ್ ಸೆಟ್ಲರ್ಸ್‌ಗಾಗಿ ಹಂಗಾಮಿ ಭಾವಿ ತೆಗಿಯುವದು ...	50	0	0
ಕೋಲಾರ್‌ಪೇಟೆ ಸಬ್ ತಾ|| ಚನ್ನೇನಹಳ್ಳಿ ನೀರು ಬಾವಿ ಕಾಮಗಾರಿ ಮಾಡುವದಕ್ಕೆ ...	394	0	0

31—10—08ನೆ ಮರ್ಕ್ಕಂ 2541-51—Agri. 64-08-3ನೆ ನಂಬರು ಪ್ರೊ|| ಪ್ರಕಾರ ಮಂಜೂರಾದ ಲೋಕಲ್ ಫಂಡ್ ಜನರಲ್ ಸ್ಪೆಷಿಯಲ್ ಗ್ರ್ಯಾಂಟ್ ಕಾಮಗಾರಿಗಳು.

		ರೂ.	ಆ.	ಪೈ.
1.	ಕಾಕೋಳುಕೆರೆ ಅಂಗಳದಲ್ಲಿರುವ ಮರಳಿ ಭಾವಿ ಆಳಪಡಿಸುವ ಅಂದಾಜ ...	21	1	6
2.	ದೊಡ್ಡಬಳ್ಳಾಪುರ ತಾಲ್ಲೂಕು ಮಾರಸಂದ್ರದಲ್ಲಿ ಭಾವಿ ತೆಗಿಸುವದು ...	55	0	0
3.	ಡಿಟೋ　ರಾಮದೇವನಹಳ್ಳಿಯಲ್ಲಿ ಭಾವಿ ತೆಗಿಸುವದು ...	64	0	0
4.	ಬೆಂಗಳೂರು ತಾಲ್ಲೂಕು ಚಲ್ಲಹಳ್ಳಿಯಲ್ಲಿ ಭಾವಿ ತೆಗಿಸಲು ರಿವೈಜ್ ಅಂದಾಜ (ಒರಿಜನಲ್ ಅಂದಾಜ 285)	450	0	0
5.	ದೇವನಹಳ್ಳಿ ತಾ|| ಕಾಯಂಗುತ್ತಾ ಬ್ಯಾಲಹಳ್ಳಿ ಚಾಕಭಾವಿಯಿಂದ ಹೂಳು ತೆಗಿಯುವದಕ್ಕೆ ...	15	0	0
6.	ಡಿಟೋ　ಬ್ಯಾಡರಹಳ್ಳಿ ಹೊಲೇರಿಗಾಗಿ ಹಂಗಾಮಿ ಭಾವಿ ತೆಗಿಸುವದಕ್ಕೆ ...	10	0	0
7.	ಡಿಟೋ　ಗೊಲ್ಲಹಳ್ಳಿ　ಡಿಟೋ ...	10	0	0
8.	ಡಿಟೋ　ಬ್ಯಾಡರಹಳ್ಳಿ ಮಾದಿಗರಿಗಾಗಿ　ಡಿಟೋ ...	10	0	0
9.	ಡಿಟೋ　ಗೋಕರೆ ಗ್ರಾಮದಲ್ಲಿ　ಡಿಟೋ ...	9	15	7
10.	ಡಿಟೋ　ಗಾರೆಹೊಸಹಳ್ಳಿ　ಡಿಟೋ ...	9	12	5
11.	ಡಿಟೋ　ಭೂವನಹಳ್ಳಿ ರಾಜಭಾವಿ ರಿಪೇರಿಗಾಗಿ ...	15	0	0
12.	ನೆಲಮಂಗಲ ತಾ|| ದೊಡ್ಡಬೆಲೆ ಈಶ್ವರ ದೇವಸ್ಥಾನದ ಬಳಿ ಭಾವಿ ರಿಪೇರಿಗಾಗಿ ರಿವೈಜ್ ಅಂದಾಜ (ಒರಿಜನಲ್ ಅಂದಾಜ 250)	411	0	0

ಬಿ. ಜೆ. ಕುಮಾರಸಾಮಿ ನಾಯಿಕ್, ಪ್ರೆಸಿಡೆಂಟ್.

ತುಮಕೂರು ಡಿಸ್ಟ್ರಿಕ್ಟು ಬೋರ್ಡ್ ಪ್ರೆಸಿಡೆಂಟ್ ಸಾಹೇಬರವರ ಆಫೀಸ್.

ನೋಟಿಸ್.

ತಾರೀಖು 23ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ತುರುವೇಕೆರೆ 3ನೆ ಕ್ಲಾಸು ಟ್ರಾವಲರ್ಸ್ ಬಂಗ್ಲಾ ಹಾಲಿ ರಿಪೇರಿ ಆಗುತ್ತಲಿರುವದರಿಂದ ಮತ್ತೊಂದು ನೋಟಿಸ್ ಕೊಡುವವರಿಗೂ ಪ್ರಯಾಣಸ್ಥರಿಗೆ ಅಲ್ಲಿ ಇಳಿದುಕೊಳ್ಳಲು ಅವಕಾಶವಿಲ್ಲಾ.

ಸಿ. ವೆಂಕಟರಾವ್, ಫಾರ್ ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 9ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ :—ಸನ್ 1909ನೆ ಜುಲೈ ಒಂದನೆ ತಾರೀಖು ಲಾಗಾಯಿತು 1910ನೆ ಜೂನ್ ಆಖೈರ್ ವರಿವಿಗೆ ಶಿಕಾರಿಪುರ ಟೌನ್ ಮ್ಯುನಿಸಿಪಲ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿ ವಗೈರೆಗಳಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು 1909ನೆ ಜೂನ್ ಮಾಹೆ ತಾರೀಖು 23ನೆ ಮಧ್ಯಾಹ್ನದಲ್ಲಿ ಶಿಕಾರಿಪುರ ತಾಲ್ಲೂಕ್ ಕಛೇರಿಯಲ್ಲಿ ಅಮಲ್ದಾರ್ ಮತ್ತು ಶಿಕಾರಿಪುರ ಟೌನ್ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಿಂದ ಬಹಿರಂಗವಾಗಿ ಹರಾಜು ಹಾಕಿಸಲ್ಪಡುತ್ತೆ.

ಹೆಚ್ಚಿನ ಸಂಗತಿಗಳಿಗೆ ತಾರೀಖು 17ನೆ ಮರ್ಕ್ಕಂ ಮೈಸೂರು ಗೆಜೆಟ್ಟಿನ 2ನೆ ಭಾಗದ 512, 513ನೆ ಪೇಜಿನಲ್ಲಿ ಛಾಪಿಸಿಷ್ಟ ಆಗಿರುವದನ್ನು ನೋಡಬೇಕು.

ಎ. ಮೃತ್ಯುಂಜಯ ಅಯ್ಯರ್,
ಫಾರ್ ಪ್ರೆಸಿಡೆಂಟ್.

ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕುಡಿಪೋ.

ಸರ್ 1909ನೆ ಇಸವಿ ಜುಲೈ ತಾರೀಖು 1.

ಬೆಂಗಳೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯತಕ್ಕ ಮೈಸೂರು ಸರ್ಕಾರಿ ಲಾ ಪುಸ್ತುಕಗಳ ಪಟ್ಟಿ.

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾಹಾಯಿಯು ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸರ್ 1879ನೆ ಇಸವಿಯ 12ನೆ ನಂಬರ್ ಆಕ್ಟು.	36	0	11	0	1	6
4	1871ನೆ ಇಸವಿಯ ದನುಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ (1904)	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟ್ ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
18	,, ಟೆಲಿಗ್ರಾಫ್ ಆಕ್ಟು	18	0	1	6	1	0
19	,, ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು(ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಸಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್‌ವೆಗಳ ರೆಗ್ಯುಲೇಷನ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೋಲೀಸ್ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ Iನೆ ರೆಗ್ಯುಲೇಷನ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
38	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಿಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗೌರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
43	1895ನೆ ಇಸವಿ IIIನೆ ನಂ. ರೆಗ್ಯುಲೇಷನ್ ಮೈಸೂರು ಕಂಪೆನಿಗಳ ರೆಗ್ಯುಲೇಷನ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷನ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನ್‌ನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಹೀಜಾ ಬಗ್ಗೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟ್ಟೋ 1905 ...	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟ್ಟೋ 1907 ...	143	1	0	0	6	0
56	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸನ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
59	ಇಸಿ ಹಾರ್ನ್ನಾಮ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 24ನೆ ಜುಲೈ 1908.- ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ರಕಾರದ ತಿದ್ದುಪಾಟು	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡುಮಾಡು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908..	203	1	0	0	6	0
62	ಮೈಸೂರು ಕೋಡು ಸಂಪುಟ I.	637	4	0	0	6	0

ರೆಜಿಸ್ಟ್ರೇಷನ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ನೋಟಿಸ್.

ಚಿತ್ರದುರ್ಗ ಡಿಸ್ಟ್ರಿಕ್ಟ್ ಹೊಳಲ್ಕೆರೆ ತಾಲ್ಲೂಕು ಹೊಳಲ್ಕೆರೆ ಕಸಬಾದಲ್ಲಿ ಇರುವ ಲೋಕದಹೊಳಲು ಸಂಗನ ಬಸಪ್ಪನವರ ಮಕ್ಕಳು ಕಲ್ಲಪ್ಪನವರು ಸರ್ವೇ ಸಮಸ್ತರಿಗು ಮೈಸೂರು ಗವರ್ನಮೆಂಟ್ ಗೆಜೆಟ್ಟಿನ ಮೂಲಕ ಪ್ರಸಿದ್ಧಪಡಿಸುವದೇನೆಂದರೆ— ನನ್ನ ಖಾಸಾ ಮಗ ಸುಮಾರು 18-19 ವರುಷ ವಯಸ್ಸಿನ ಮಹೇಶ್ವರಪ್ಪನೆಂಬುವ ಹುಡುಗನು ಈಗ ಸುಮಾರು 2-3 ವರುಷದ ಲಾಗಾಯಿತು ಕೆಟ್ಟ ಜನಗಳ ಸಹವಾಸಕ್ಕೆ ಬಿದ್ದು ಸುಮಾರು ಎರಡು, ಮೂರು ನೂರು ರೂಪಾಯಿಗಳ ಸಾಲ ಮಾಡಿಕೊಂಡು ಕೆಟ್ಟ ಕೆಲಸಗಳಿಗೆ ಪ್ರವರ್ತಿಸಿ ಇರುತ್ತಾನೆ. ಸದರಿ ಮಹೇಶ್ವರಪ್ಪನಿಗೆ ಯಾರಾದರೂ ಸಾಲ ವಗೈರೆ ಕೊಡಕೂಡದು ಹಾಗೇನಾದರೂ ಹಿಂದೆ ಕೊಟ್ಟಿದ್ದೆ ಆದರೆ ಮುಂದೆ ಕೊಡುವದೆ ಆದರೆ ಮತ್ತು ಹಿಂದೆ ಕೊಟ್ಟಿರುವ ಸುಮಾರು ಇನ್ನೂರು ಮುನ್ನೂರು ರೂಪಾಯಿಗಳ ಸಾಲಕ್ಕು ಕೂಡ ನಾನು ಜವಾಬ್ದಾರನಾಗುವದಿಲ್ಲ. ಮತ್ತು ನನ್ನ ಸ್ವಯಾರ್ಜಿತದ ಆಸ್ತಿ ವಗೈರೆಗೆ ನನ್ನ ಮಗ ಮತ್ತು ಇತರೆ ಸಾಲ ವಗೈರೆ ಕೊಟ್ಟಿರುವ ಯಾರಾದರೂ ಕೂಡ ನನ್ನ ಸ್ವಯಾರ್ಜಿತ ಆಸ್ತಿ ಮೇಲೆ ದಾವಾ ನಡಿಸುವದಕ್ಕೆ ಯಾರಿಗೂ ಹಕ್ಕು ಇರುವದಿಲ್ಲವಾಗಿ ಎಲ್ಲರಿಗೂ ಈ ನೋಟಿಸ್ ಮೂಲಕ ಎಚ್ಚರಿಸಲ್ಪಟ್ಟಿದೆ.

ತಾರೀಖು 14ನೆ ಜೂನ್ 1909.

ಕಲ್ಲಪ್ಪ ರುಜು.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಸಿದ್ಧಿಸಲ್ಪಟ್ಟದ್ದು. [ಸಂ. 27.

ಬೆಂಗಳೂರು, ಗುರುವಾರ, ಜುಲೈ ತಾ॥ 8, ಸನ್ 1909.

II ನೆ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟು ಇಲಾಖಾ.

ತಂಗಡಿ ಮತ್ತು ಕಕ್ಕೆ ಚಕ್ಕೆಗಳ ಇಸ್ತಿಹಾರ್.

ತಾರೀಖು 26ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ತಂಗಡಿ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕನ್ನು ಪಡಿಯಲು 1909ನೆ ಜುಲೈ ತಿಂಗಳು ತಾರೀಖು 19 ವರಿಗೆ ಹಾಸನ ಡಿಸ್ಟ್ರಿಕ್ಟು ಫಾರೆಸ್ಟಾಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು.

ನಂಬರು.	ತಾಲ್ಲೂಕು.	ಜಮಾಯಿಸತಕ್ಕ ಕಾಲ.	ಷರಾ.
1	ಅರಸೀಕೆರೆ ...	1909ನೆ ಜುಲೈ ತಾರೀಖು 25ರ ಲಾಗಾಯಿತು 1911ನೆ ಜೂನ್ ತಾರೀಖು 30ರ ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿ ಇರುವ ಇತರ ಭೂಮಿಗಳಲ್ಲಿನ ಫಸಲು ಈ ಹರಾಜಿಗೆ ಸೇರಿರುವದಿಲ್ಲ.
2	ಚನ್ನರಾಯಪಟ್ಣ ...		
3	ಹಾಸನ-ಆಲೂರು ಸಬ್ ತಾ॥ ಸೇರಿ ...		
4	ಬೇಲೂರು ...		
5	ಮಂಜರಾಬಾದ್ ...		
6	ಅರಕಲಗೂಡು ...		
7	ಹೊಳೇನರಶೀಪುರ ...		

2. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿ ಒಂದು ದರಖಾಸ್ತಿನೊಡನೆ (200) ರೂಪಾಯಿನ ಕರ್ರೆನ್ಸಿ ನೋಟ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಫೆಮೇಲೆ "ತಂಗಡಿ ಚಕ್ಕೆಯ ದರಖಾಸ್ತು" ಎಂದು ಬರೆದು ಮತ್ತು ಹಾಸನ ಡಿಸ್ಟ್ರಿಕ್ಟು ಫಾರೆಸ್ಟಾಫಿಸರವರ ವಿಳಾಸಕ್ಕೆ ಬರೆದು ರವಾನಿಸಬೇಕು.

4. ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜುಲೈ ತಾರೀಖು 21ರಲ್ಲು ರವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ದರಖಾಸ್ತುಗಳನ್ನು ಒಡಿಯುವರು.

5. ಮೇಲ್ಕಂಡ ಆಫೀಸರು ಯಾವ ಅಥವಾ ಎಲ್ಲಾ ದರಖಾಸ್ತುಗಳನ್ನು ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಪುಳಿಸಿಕೊಂಡಿರುತ್ತಾರೆ. ದರಖಾಸ್ತು ಅಂಗೀಕರಿಸೋಣವು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಡುತ್ತೆ.

6. ದರಖಾಸ್ತು ಮಂಜೂರಾತಿ ಸಂಗತಿಯನ್ನ ಸದರಿ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

7. ದರಖಾಸ್ತು ಮಂಜೂರಾತಿ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನಿಗೆ ಜಮಾಖಾವಣೆ ಮಾಡಬೇಕು. ಮತ್ತು ಈ 3 ದಿನಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಯೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದು ಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡಲ್ಪಡುವದು.

8. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

9. ದರಖಾಸ್ತುದಾರು ತಮಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಸಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡೆಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ಶೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

10. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಸಮನಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲಿ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣೇ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಖಿಸ್ತು—1ನೆ ಅಕ್ಟೋಬರ್ 1909.
2ನೆ ಖಿಸ್ತು—1ನೆ ಏಪ್ರಿಲ್ 1910.
3ನೆ ಖಿಸ್ತು 5ನೆ ಜನವರಿ 1911.

ಇತರ ಷರತ್ತುಗಳು.

(i) ಇಜಾರೆದಾರನ ನೌಕರನೆ ಆಗಲಿ ಷಿಕ್ಮಿ ಕಂಟ್ರಾಕ್ಟರೆ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್‌ದಾರನಾಗಿರಬೇಕು.

(ii) ಚಕ್ಕೆ ಜಮಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದುನಿಂದ ಒಂದು ತಖ್ತೆಯನ್ನು ಕೊಡಬೇಕು.

(iii) ಚಕ್ಕೆ ಗಿಡಗಳನ್ನು ನೆಲಸಮನಾಗಿ ಕಡಿಯತಕ್ಕದ್ದು.

(iv) ಇಜಾರೆ ಮೇರೆ ರಫ್ತು ಮಾಡಲ್ಪಡುವ ತೊಗಟೆ ಅಥವಾ ತೊಗಟೆ ರಹಿತವಾದ ಮರದ ಪ್ರಮಾಣ ವಗ್ಯೆರೆ ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರಾಗಲಿ ಅವರುಗಳಿಂದ ನೇಮಿಸಲ್ಪಟ್ಟ ಇತರ ಆಫೀಸರಾಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಪಡಿಸತಕ್ಕದ್ದು.

(v) ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜಾ ತೊಗಟೆಗೂ ಕಂಟ್ರಾಕ್ಟರು ಯಾ ಏಜಂಟದಾರನಿಂದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ ಮೊಹರನಿಶಿ ಪಡದ ಪ್ರಿಂಟ್ ಫಾರಂ ಬುಕ್ಕಿನಲ್ಲಿ ಪ್ಯಾಸ್ ಕೊಡಲ್ಪಡತಕ್ಕದ್ದು. ಅಂಥಾ ಬುಕ್ಕು ಮುಗಿದುಹೋದನಂತರ ಸದರಿ ಆಫೀಸರಿಗೆ ವಾಪಸು ಮಾಡಬೇಕು.

(vi) ಕಂಟ್ರಾಕ್ಟರು ಅಥವಾ ಆತನ ಕಡೆ ಜನಗಳ ಅಶ್ರದ್ಧೆಯಿಂದ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್‌ದಾರನಾಗಿರಬೇಕು. ಮತ್ತು ಅದರಿಂದ ಉಂಟಾಗುವ ನಷ್ಟಕ್ಕೆ ಜವಾಬ್‌ದಾರನಾಗತಕ್ಕದ್ದು.

(vii) 1911ನೆ ಇಸವಿ ಜುಲೈ ತಾರೀಖು 15 ರೊಳಗಾಗಿ (ಅಂದರೆ ರಿಯಾಯತಿ 15 ದಿನಗಳು ಶೇರಿ) ಇಜಾರೆ ಮೇರೆ ಮಾಯಿದೇಲಿ ಕಡದು ಜಮಾವಣಿ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಹಾಸನ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(viii) ಮೇಲೆ ನಮೂದಾಗುವ ಎಲ್ಲಾ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡುವದಲ್ಲದೆ ಅದುವರಿಗೆ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಂಡು ಡೆಪ್ಯುಟಿ ಕಮಿಷನರವರು ವಿಧಿಸಬಹುದಾದ 1,00) ರೂಪಾಯಿ ವರಿಗಿನ ಜುರ್ಮಾನೆಗೆ ಇಜಾರೆದಾರ ಗುರಿಯಾಗಬೇಕು.

(ix) ತೊಗಟೆ ತೆಗದ ಸೌದೆ ಇಜಾರೆದಾರನದಾಗಿರುತ್ತೆ.

ಇಸ್ತಿಹಾರ್.

ತಾರೀಖು 3ನೆ ಜುಲೈ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಎಲ್ಲಾ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟು ಡಿಸ್ಟ್ರಿಕ್ಟು ಜಂಗಲ್‌ಗಳು ಮತ್ತು ಎಲ್ಲಾ ಸರ್ಕಾರಿ ಬಂಜರು ಜಮೀನುಗಳಲ್ಲಿ ದೊರೆಯುವ ಫಾರೆಸ್ಟು ಪಸಾರೆ ಜಿನಸಿಗಳನ್ನು 1909-1910ನೆ ಸಾಲಿಗೆ ಜಮಾಯಿಸಿ ತೆಗದುಕೊಂಡು ಹೋಗುವ ಹಕ್ಕನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಬಹಿರಂಗವಾಗಿ ತಾಲ್ಲೂಕುವಾರಾಗಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರು ಅಥವಾ ರೇಂಜಾಫೀಸರವರು ಮತ್ತು ಆಯಾಯ ತಾಲ್ಲೂಕು ಅಮಲ್ದಾರ್ರವರೊಂದಿಗೆ ಈ ಕೆಳಗೆ ವಿವರಿಸಿ ಇರುವ ಮೇರೆ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿ ಹರಾಜು ಮಾಡಿಸಲಾಗುತ್ತೆ:—

ನಂಬರು.	ತಾಲ್ಲೂಕು.	ಹರಾಜು ತಾರೀಖು.
1	ಮಂಜರಾಬಾದ್	26—7—1909
2	ಬೇಲೂರು	24—7—1909
3	ಅರಶೀಕೆರೆ	22—7—1909
4	ಚನ್ನರಾಯಪಟ್ನ	25—7—1909
5	ಹೊಳೇನರಶೀಪುರ	2—8—1909
6	ಅರಕಲಗೂಡ್	4—8—1909
7	ಹಾಸನ ಆಲೂರು ಸಬ್ ತಾಲ್ಲೂಕು ಶೇರಿ	28—7—1909

2. ಛಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆಯೇ ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಠೇವಣಿಯಾಗಿ ಹಾಜರ್ಮಾಡಬೇಕು. ಹಾಗೆ ಕೊಡಲು ತಪ್ಪಿದಲ್ಲಿ ಬಾಬು ಪುನಹ ಹರಾಜು ಮಾಡಲ್ಪಡುವದು. ಮೇಲ್ಕಂಡಂತೆ ನಡಿಸುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಅವಲ್ ಛಡ ದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರೇ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಛಡ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ.

3. ಹರಾಜು ಮೊಬಲಗಿಗೆ ರೂಪಾಯಿಗೆ ಬಂದಾಣೆಯಂತೆ ಲೋಕಲ್ ಸೆಸ್ ಸಹಾ ಕೊಡಬೇಕು.

4. ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 15 ದಿವಸದಲ್ಲಿ ಕೊಡಬೇಕು. ಹಾಗೆ ಕೊಡುವದರಲ್ಲಿ ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದರಲ್ಲಿ ಬರುತ್ತೆಯಲ್ಲದೆ ಮೇಲ್ಕಂಡ 2ನೆ ಪ್ಯಾರಾದಲ್ಲಿ ಕಂಡಂತೆ ಕ್ರಮ ಜರಿಗಿಸಲ್ಪಡುವದು.

5. ಕಂಟ್ರಾಕ್ಟುದಾರನು ಇನಾಂದಾರ್‌ಗಳಿಗೆ ಇರುವ ಯಾವದೊಂದು ಹಕ್ಕಿಗೂ ಕುಂದಕ ಉಂಟುಮಾಡಕೂಡದು.

6. (a) 1ನೆ ಪ್ಯಾರಾದಲ್ಲಿ ಕಂಡ ಇಜಾರೆಯು ಜಂಗಲ್‌ವಾರ್ ಅಥವಾ ಹೋಬಳಿವಾರ್ ಗುತ್ತಿಗೆ ಕೊಡುವದಕ್ಕೆ ಸಾಕಾದಷ್ಟು ಮುಖ್ಯ ಕಾರಣವಿದ್ದು ಹೆಚ್ಚು ದರಖಾಸ್ತುದಾರರು ಅಪೇಕ್ಷಿಸಿದ ವಿನಹ ತಾಲ್ಲೂಕುವಾರಾಗಿಯೇ ಗುತ್ತಿಗೆ ಕೊಡಲಾಗುತ್ತೆ. ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ ಲಿಖಿತಮೂಲಕವಾದ ಅಪ್ಪಣೆ ವಿನಹ ಶಿಕಮಿ ಇಜಾರೆ ಮಾಡಕೂಡದು.

(b) ಜಮಾವಣೇ ಕೆಲಸದಲ್ಲಿ ಏಜಂಟರು ಅಥವಾ ನೌಕರರು ನಡೆಸುವ ಕೃತ್ಯಗಳಿಗೆ ಇಜಾರೆದಾರ್ರೇ ಖುದ್ದು ಜವಾಬ್ದಾರರಾಗಿರುತ್ತಾರೆ.

ಹರಾಜು ಆಗುವ ಪಸಾರೆ ಜಿನಸಿಗಳ ಪಟ್ಟಿ.

ಸಂಖ್ಯೆ.	ಜಿನಸಿ ಹೆಸರು.	ಸಂಖ್ಯೆ.	ಜಿನಸಿ ಹೆಸರು.
1	ಜೇನುಮೇಣ	15	ಬೇಲದ ಹಣ್ಣು
2	ಸೀಗೇಕಾಯಿ	16	ವಾಟೆ ಹುಳಿ
3	ಗೇರುಬೀಜ	17	ದಾಲಚಿನ್ನಿ
4	ಗೋಂದು	18	ಬೆಂಡೇನಾರು
5	ಹೊಂಗೇಬೀಜ	19	ಕಾಡಹಿಪ್ಪೇಬೀಜ
6	ಕಾಡಕಗಚೆಬೀಜ	20	ಬೂರಗದಹತ್ತಿ
7	ಅಂಟವಾಳದಕಾಯಿ	21	ತಾರೇಕಾಯಿ
8	ಕಕ್ಕೇಕಾಯಿ	22	ಕಪಿಲಾರಂಗು
9	ಹುಣಸೇಹಣ್ಣು	23	ಚೆಂಡು
10	ಕಾಡುಹರಳು	24	ಬಳಾಪಿನ ಕಲ್ಲು
11	ನಸ್ರಾಣಿ ಮೊಗ್ಗು	25	ರಾಮಪತ್ರೆ ರಾಮಗೋಟು
12	ಹಾಲುಮಡ್ಡಿ	26	ಪಪ್ಪಳೀಚಕ್ಕೆ
13	ಬಿಳಿಲಾರ್‌ಬೊಬ್ಬಡಿ	27	ಸೋಮೆಚಕ್ಕೆ
14	ಹುರುಗಲಬೀಜ		

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ ಆಫೀಸರ್, ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 15ನೆ ಜೂನ್ 1909.

ತೀರ್ಥಹಳ್ಳಿಯಲ್ಲಿರುವ ವೆಂಕಟಸುಬ್ಬಣಾಚಾರ್ರ ಮನೆ ಹಿತ್ತಲಲ್ಲಿ ಈ ಕೆಳಗೆ ಕಂಡ ಗಂಧದ ತುಂಡು ಸಿಕ್ಕಿರುತ್ತದೆ. ಇದಕ್ಕೆ ತರೀಕೆರೆ ಕೋಠಿ ಸೋಲ್ಡು ಸ್ಟಾಂಪು ಬಿದ್ದಿರುತ್ತೆ. ಇದರ ಮಾಲೀಕರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳು ಒಳಗಾಗಿ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ರೂಬುರೂಬು ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಟ್ಟು ಮಾಲು ತೆಗದುಕೊಂಡು ಹೋಗಬಹುದಾಗಿರುತ್ತೆ. ತಪ್ಪಿದಲ್ಲಿ ನಂತರ ಯಾವ ಹಕ್ಕೂ ಅಂಗೀಕರಿಸಲ್ಪಡಲಾರದು ಮತ್ತು ಮಾಲು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು. ಇದರ ತೂಕ 41 ಪೌಂಡ್ ಇರುತ್ತೆ ಮತ್ತು ಇದು ತೀರ್ಥಹಳ್ಳಿ ಕೋಠಿ ಫಾರೆಸ್ಟರಲ್ಲಿ ಇಡಿಸಿರುತ್ತೆ. ಬೇಕಾದವರು ನೋಡಬಹುದು.

ನೋಟಿಫಿಕೇಷನ್.

ತಾರೀಖು 15ನೆ ಜೂನ್ 1909.

1900ನೆ ಮೈಸೂರು ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಿಸಿರುವ ತಪಶೀಲಿನಂತೆ ತ್ಯಾಗದ ದಿಲಗುಗಳು ಚನ್ನಗಿರಿ ತಾಲ್ಲೂಕು ಕೆಂಚಾಪುರದ ಬಳಿ ಲಂಬಾಣಿ ಗಂಗನಾಯಕನೆಂಬುವನು ವ್ಯವಸಾಯ ಮಾಡಿದ ಹೊಲದಲ್ಲಿ ಸಿಕ್ಕಿದವು. ಇವುಗಳಿಗೆ ಹಕ್ಕು ಸ್ಥಾಪನೆ ಮಾಡತಕ್ಕವರು ಖುದ್ದಾಗಿ ಆಗಲೀ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಏಜಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ರೂಬುರೂಬು ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಳ್ಳಬೇಕು. ತಪ್ಪಿದರೆ ಸದರಿ ದಿಲಗುಗಳನ್ನು ಸರಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ.

ನಂಬರು.	ಜಾತಿ.	ಲಾಂಬಿ.		ಸುತ್ತಳತೆ.		ಷರಾ.
		ಅಡಿ.	ಅಂಗಲ	ಅಡಿ.	ಅಂಗಲ.	
1	ಸಾಗುವಾನಿ ...	15	0	2	0	ಕೆಂಚಾಪುರದ ಪಟೇಲ್ ಮುರಗೆಪ್ಪನ ಬಳಿ ಇದೆ.
2	ಡಿಟೋ ...	15	2	1	11	
3	ಡಿಟೋ ...	13	9	1	11	

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು ನೆ ಜೂನ್ 1909.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ-ಈ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳು ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕ್ಕೆ ಚಕ್ಕೆಯನ್ನು 1909ನೆ ಇಸವಿ ಜುಲ್ಯೈ ಗುರ್ರೇ ಲಾಗಾಯಿತು 1911ನೆ ಇಸವಿ ಜೂನ್ 30ನೆ ತಾರೀಖು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕು ಅಮಲ್ದಾರು ಮತ್ತು ಫಾರೆಸ್ಟು ಆಫಿಸರುಗಳಿಂದ ಹರಾಜು ಮಾಡಿಸುತ್ತೆ:—

ನಂಬರ್.	ತಾಲ್ಲೂಕು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.	ಹರಾಜು ಮಾಡಿಸುವ ಆಫಿಸರ ಹೆಸರು.
1	ತರೀಕೆರೆ ...	26—7—1909	ತಾಲ್ಲೂಕ ಕಛೇರಿಯಲ್ಲಿ.	ಅಮಲ್ದಾರ್ರು ಮತ್ತು ಲಕ್ಕವಳ್ಳಿ ರೇಂಜಾಫಿಸರು.
2	ಕಡೂರು ...	28—7—1909	ಡಿಟೋ	ಅಮಲ್ದಾರ್ರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು.
3	ಚಿಕ್ಕಮಗಳೂರು ...	31—7—1909	ಡಿಟೋ	ಅಮಲ್ದಾರ್ರು ಮತ್ತು ಮೂಡಿಗೆರೆ ರೇಂಜಾಫಿಸರು.

ನೋಟ—ಹರಾಜು ಅವಶ್ಯಕ ಕಂಡರೆ ಸಂಮತುವಾರಾಗಿ ಮಾಡಿಸಲ್ಪಡುತ್ತೆ.

2. ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸಲ್ಪಡುತ್ತೆ.

3. ಹರಾಜು-ಡೆಪ್ಯುಟಿ ಕಮ್ಮಿಷನರ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ವಹಿಸಿದ ಏಜಂಟರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡಲೆ ಛಡ ಸವಾಲ್‌ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ ರೂಪಾಯಿ ಒಂದಕ್ಕೆ ಒಂದಾಣೆ ಮೇರಿಗೆ ಸೇರಿಸಿ ಒಟ್ಟು ಹಣದಲ್ಲಿ ¼ ಹಿಸ್ಸೆಯನ್ನು ಡಿಪಾಜಟ್ ಹಾಜರ್‍ಮಾಡಬೇಕು. ಆ ಪ್ರಕಾರ ಹಾಜರ್‍ಮಾಡದೆ ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನ ಪುನಃ ಹರಾಜು ಮಾಡಲ್ಪಡುತ್ತೆ.

6. ಮೇಲೆ ಹೇಳಿದಂತೆ ದುಸರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಅವನಿಗೇನೂ ಹಕ್ಕು ಇರುವದಿಲ್ಲ. ನಷ್ಟಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಹಣಕ್ಕೂ ಕಮ್ಮಿ ಬೀಳುವ ಹಣವನ್ನ ಅವ್ವಲ್ ಹರಾಜುದಾರನಿಂದ ರೆವಿನ್ಯೂ ಬಾಕೀಯಂತೆ ವಸೂಲ್‍ಮಾಡಲ್ಪಡುತ್ತೆ.

7. ಛಡ ಸವಾಲ್‌ದಾರನು ಬಾಕಿ ¾ ಹಿಸ್ಸೆ ಹಣವನ್ನು ಮತ್ತು ಅದರ ಲೋಕಲ್ ಸೆಸ್ ಸಹಿತ ಹರಾಜು ತಾರೀಖು ಲಾಗಾಯಿತ್ತು ಒಂದು ತಿಂಗಳವಳಗೆ ಪಾವತೀ ಮಾಡಬೇಕು, ತಪ್ಪಿದರೆ ಮೊದಲು ಇಟ್ಟ ಡಿಪಾಜಟ್ ಮೊಬಲಗು ಸರ್ಕಾರಕ್ಕೆ ಸೇರಿಸಲ್ಪಡುತ್ತೆ. ಇದಲ್ಲದೆ ಮುಂದೆ ಜಮಾಯಿಸಿಕೊಳ್ಳುವದಕ್ಕೆ ಅವಕಾಶಕೊಡದೆ ಇಜಾರೆ ಹಕ್ಕು ತಪ್ಪಿಸುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್‍ಮಾಡಲ್ಪಡುತ್ತೆ.

8. ಹರಾಜು ಮಂಜೂರಿಯ ಸಂಗತಿಯನ್ನ ಹರಾಜುದಾರನಿಗೆ ತಿಳಿಸಿದ (3) ಮೂರುದಿವಸಗಳಲ್ಲಿ ಸರಿಯಾದ ಛಾಪಾ ಕಾಗದ್ದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತ್ತುಗಳ ಮೇರಿಗೆ ನಡದುಕೊಳ್ಳಲು ಬದ್ಧನಾಗಿ ಇರುವಂತೆ ಹರಾಜುದಾರನು ಮುಚ್ಚಳಿಕೆ ಬರದುಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳ ಮೇರ ಹರಾಜುದಾರನು ನಡದುಕೊಳ್ಳಬೇಕು.

(1) ಒಂದು ವರುಷಕ್ಕೆ ಒಳಪಟ್ಟ ಗಿಡಗಳನ್ನ ಕಡಿಯಕೂಡದು.

(2) ತೊಬಟೆ ತೆಗದ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

(3) ಇಜಾರೆ ಮೇರೆ ಸಾಗಿಸಿಕೊಂಡ ಚಕ್ಕೆ ಮೊತ್ತದ ತಪಶೀಲ್ ಲೆಖ್ಖ ಇಡಬೇಕು. ತಾಲ್ಲೂಕ ಅಮಲ್‌ದಾರು, ಅಥವಾ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಖ್ಖ ತನಿಖೀ ಮಾಡಲು ಬಂದಾಗ ಲೆಕ್ಕ ತೋರಿಸಬೇಕು.

(4) ಡೆಪ್ಯುಟಿ ಕಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಯೆ ಪ್ಯಾಸ್ ಪಡಿಯಬೇಕು.

(5) 1911ನೆ ಇಸವಿ ಜೂನ್ ಆಖೈರು ವಳಗಾಗಿ ಕಡದು ಜಮಾಯಿಸಿಕೊಂಡು ಇರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪಿನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೆ ಸಾಗಿಸದೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಸೇರಿಸಲ್ಪಡುತ್ತೆ.

(7 ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸಾದೇ ಬಗ್ಯಾಗಲೀ ಅಥವಾ ಇನ್ಯಾವದಕಾಗಲೀ ಕಡಿಯಕೂಡದು.

ಬಿ. ಹಿರಾಸಿಂಗ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಕಡೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸರ್ 1909ನೆ ಇಸವಿ ಮೇ 22ನೆ ತಾರೀಖಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡ್ ಮೀಟಂಗಿನ ಪ್ರೊಸೀಡಿಂಗ್ಸ್.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ|| ಸಿ. ಶ್ರೀಕಂಠೇಶ್ವರ ಐಯ್ಯರವರು, ಬಿ. ಎ., ಬಿ. ಎಲ್., ಪ್ರೆಸಿಡೆಂಟ್.
2. ,, ಎ. ವೇದಾಂತದೇಸಿಗಂ ಐಯ್ಯಂಗಾರ್‍ರವರು, ವೈಸ್ ಪ್ರೆಸಿಡೆಂಟ್.
3. ,, ಮಿರ್ ಹಂಜಾ ಹುಸೇನ್ ಸಾಹೇಬರವರು, ಬಿ.ಎ. ಬಿ.ಎಲ್., ಸಬ್ ಡಿವಿಜನ್ ಆಫಿಸರ್, ಮಾಲೂರು ಡಿವಿಜನ್.
4. ,, ಜೆ. ಆರಾವಮುದೈಯ್ಯಂಗಾರ್‍ರವರು, ಬಿ ಎ., ಬಿ. ಎಲ್., ಸಬ್ ಡಿವಿಜನ್ ಆಫಿಸರ್, ಚಿಕ್ಕಬಳ್ಳಾಪುರ.
5. ,, ಬಿ. ಬಿ. ಗರುಡಾಚಾರ್, ಎಲ್. ಸಿ. ಇ., ಎಗ್ಜಿಕ್ಯೂಟಿವ್ ಇಂಜನಿಯರ್, ಕೋಲಾರ.
6. ,, ಸಿ. ಜೆ. ಹನುಮಾನ್‌ಸಿಂಗ್, ಎಲ್. ಎಂ. ಅಂಡ್ ಎಸ್., ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್, ಕೋಲಾರ.

ಸರ್ಕಾರಿ ಉದ್ಯೋಗವಿಲ್ಲದ ಇತರ ಮೆಂಬರುಗಳು.

ಕ್ಲಾಜ್ (ಡಿ)

1. ಮಿ|| ಮಂಜಲಿ ಬೈರೆಗೌಡರು, ಕೋಲಾರ.
2. ,, ಪೀರಿ ನವಾಜ್‌ಖಾನರು, ಬೌರಿಂಗ್‌ಪೇಟೆ.
3. ,, ಕಾಸ್ಮಿ ಹೈದರ್‌ಸಾಹೇಬರು, ಮುಳಬಾಗಲು.
4. ,, ವೆಂಕಟರಮಣಪ್ಪನವರು, ಮಾಲೂರು.
5. ,, ವೆಂಕಟಸ್ವಾಮಿರಡ್ಡಿಯವರು, ಶ್ರೀನಿವಾಸಪುರ.
6. ,, ಹನುಮೇಗೌಡರು, ಶಿಡ್ಲಘಟ್ಟ.
7. ,, ಹಗ್ಗೇನಹಳ್ಳಿ ಕ್ರಿಷ್ಣಾಚಾರ್ರು, ಗೋರಿಬಿದನೂರು.
8. ,, ಶೀನಪ್ಪನವರು, ಬಾಗೇಪಲ್ಲಿ.
9. ,, ಆದಿನಾರಾಣಪ್ಪನವರು, ಗುಡಿಬಂಡೆ.
10. ,, ಸಾಹುಕಾರ್ ಶೀತಪ್ಪಶೆಟ್ಟಿಯವರು, ಚಿಂತಾಮಣಿ.

ಕ್ಲಾಸ್ (ಇ)

1. ,, ಉಮ್ಮಣ್ಣಯ್ಯನವರು, ಬವರಿಂಗ್‌ಪೇಟೆ.
2. ,, ಸಾಹುಕಾರ್ ಸೈಯದ್ ಬುರ್ಹ ಸಾಹೇಬರು, ಚಿಂತಾಮಣಿ.
3. ,, ಶೆಟ್ಟಿ ಚಿಕ್ಕಣ್ಣನವರು, ಗುಡಿಬಂಡೆ.
4. ,, ನಾಗೇಗೌಡರು, ಮುಳಬಾಗಲ್.
5. ,, ಸೈಯದ್ ಫತ್ತುಲ್ಲಾ ಸಾಹೇಬರು, ಶ್ರೀನಿವಾಸಪುರ.
6. ,, ಅಮೀರ್‌ಹುಸೇನ್ ಸಾಹೇಬರು, ಕೋಲಾರ.
7. ,, ನಾರಸಿಂಹ ರೆಡ್ಡಿಯವರು, ಚಿಕ್ಕಬಳ್ಳಾಪುರ.

ಗೈರ್ ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ,, ಎಸ್. ಗೋಪಾಲರಾವ್, ಡೆಪ್ಯುಟಿ ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್, ಕೋಲಾರ.

ಸರ್ಕಾರಿ ಉದ್ಯೋಗವಿಲ್ಲದ ಇತರ ಮೆಂಬರುಗಳು.

ಕ್ಲಾಜ್ (ಡಿ.)

1. ,, ಸಿ. ನಾರಾಯಣಸಾಮಿ ಶೆಟ್ಟಿಯವರು, ಚಿಕ್ಕಬಳ್ಳಾಪುರ.

ಕೆಳಗೆ ನಮೂದಿಸಿರುವ ಅಮಲ್ದಾರ್ರುಗಳು ಸಹಾ ಮೀಟಿಂಗಿನಲ್ಲಿ ಹಾಜರಿದ್ದರು.

1. ಮೆ|| ಬಿ. ಎಸ್. ವೆಂಕಟೇಶಯ್ಯನವರು, ಕೋಲಾರ.
2. ,, ಎಫ್. ಎಸ್. ರಾಘವಾಚಾರ್ರ್ಯರು, ಚಿಂತಾಮಣಿ.
3. ,, ಮಹಮದ್ ಒಬೇದುಲ್ಲಾರವರು, ಬವರಿಂಗ್‌ಪೇಟೆ.
4. ,, ವೈ. ನರಸಿಂಗರಾಯರು, ಶ್ರೀನಿವಾಸಪುರ.
5. ,, ವಿ. ಗೋಪಾಲರಾಯರು, ಬಾಗೇಪಲ್ಲಿ.
6. ,, ಸಿ. ಗೋಪಾಲಾಚಾರ್ರು, ಮಾಲೂರು.
7. ,, ಸಿ. ನಾರಾಯಣಯ್ಯರವರು, ಚಿಕ್ಕಬಳ್ಳಾಪುರ.
8. ,, ಕೆ. ವೇದಾಂತೈಯಂಗಾರ್ರು, ಮುಳಬಾಗಲು.
9. ,, ಕೆ. ಕೇಶವಾಚಾರ್ರು, ಶಿಡ್ಲಘಟ್ಟ.
10. ,, ಕೆ. ಹನುಮಂತರಾಯರು, ಗೋರೀಬಿದನೂರು.
11. ,, ಎಂ. ಅಹೋಬಲ ಶಾಸ್ತ್ರಿಗಳು, ಗುಡಿಬಂಡೆ.

1. 1909ನೆ ಇಸವಿ ಫೆಬ್ರುವರಿ 27ನೆ ತಾರೀಖಿನಲ್ಲಿ ನಡೆದ ಪ್ರೊಸೀಡಿಂಗ್ಸನ್ನು ಓದಿ ನಿರ್ಧರಿಸಲ್ಪಟ್ಟಿತು.

2. ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಾಗಿ ಬಂದ 1908ನೆ ಇಸವಿ, ಅಕ್ಟೋಬರ್, ನವಂಬರ್, ಡಿಸೆಂಬರ್ ಮತ್ತು 1909ನೆ ಇಸವಿ ಜನವರಿ ಮಾಹೇಗಳ ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು.

3. ಮೈಸೂರು ವಿದ್ಯಾಭ್ಯಾಸದ ಇಲಾಖೆಯ 1907–08ನೆ ಸಾಲಿನ ರಿಪೋರ್ಟಿನಮೇಲೆ ಆದ 1909ನೆ ಇಸವಿ ಜನವರಿ ಮಾಹೆ 30ನೆ ತಾರೀಖಿನ 7113–22—Edn. 123–08–5ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

4. ಮೆಡಿಕಲ್ ಮತ್ತು ವೆಟರನರಿ ಇಲಾಖೆಯ ಆಫಿಸರುಗಳಿಂದ ಸತ್ತುಹೋದ ಪ್ರಾಣಿಗಳ ದೇಹವನ್ನು ಅಜಮಾಯಿಷಿ ಮಾಡಿ ಅಂಥಾ ಅಜಮಾಯಿಷಿ ಬಗ್ಗೆ ಕೊಡತಕ್ಕ ರುಸುಂಗಳ ವಿಚಾರದಲ್ಲಿ ಆದ 1909ನೆ ಇಸವಿ ಫೆಬ್ರುವರಿ 9ನೆ ತಾರೀಖಿನ 7533–73—Med. 86–08–19ನೆ ಗವರ್ನ್ಮೆಂಟ್ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

5. ಇನ್ನು ಮುಂದೆ ತಯಾರಾಗತಕ್ಕ ಡಿಸ್ಟ್ರಿಕ್ಟು ಫಂಡು ಅಡ್ಮಿನಿಸ್ಟ್ರೇಷನ್ ರಿಪೋರ್ಟುಗಳಲ್ಲಿ ಕೆಲವು ಹೆಚ್ಚು ತಖ್ತೆಗಳನ್ನು ಕೊಡಬೇಕೆಂದು 1909ನೆ ಇಸವಿ ಫೆಬ್ರುವರಿ 9ನೆ ತಾರೀಖಿನ 7604-13—L. B. 86-08-19ನೆ ನಂಬರು ಗವರ್ನಮೆಂಟು ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

6. ವೈದ್ಯಶಾಲೆಗಳಿಗೆ ಬರತಕ್ಕ ಬಾಯಿಲೆ ಮನುಷ್ಯರ ಹೆಬ್ಬೆಟ್ಟಿನ ಗುರ್ತುಗಳು ತೆಗೆದುಕೊಳ್ಳುವದು ನಿಲ್ಲಿಸಿಬಿಡಬೇಕೆಂತಲೂ, ವೈದ್ಯಶಾಲೆಯಲ್ಲಿಟ್ಟಿರತಕ್ಕ ಬಾಯಿಲೆ ಜನಗಳ ಹೆಸರು ದಾಖಲಾಗತಕ್ಕ ರೋಜು ಖುಕ್ಕಿನ 11ನೆ ಕಲಂನ ತೆಗೆದುಹಾಕಿ ಆಖೈರು ಕಾಲಂ "ರಿಮಾರ್ಕ್ಸ್" 11 ಸಂಖ್ಯೆ ಹಾಕತಕ್ಕದ್ದೆಂದು ವಗೈರೆ 1909ನೆ ಫೆಬ್ರುವರಿ ಮಾಹೆಯ 13ನೆ ತಾರೀಖಿನ 7895-904—L. B. 159-07ನೆ ನಂಬರು ಗವರ್ನಮೆಂಟು ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

7. ಕರೆಸ್‌ಪಾಂಡೆನ್ಸ್ ಕಮ್ಮಿ ಆಗುವಂತೆ ಮತ್ತು ಚೆಕ್ಕು ಮಾಡುವದಕ್ಕೆ ಅನುಕೂಲವಾಗುವಂತೆ ಡಿಸ್ಟ್ರಿಕ್ಟು ಫಂಡಿನ ಜಮಾಖಂದಿ ವಸೂಲ್ ಬಾಕಿ ತಃಖ್ತೆ ತಯಾರಾ ಡಲು ಪ್ರೊಪೋಸ್ ಮಾಡಿರುವ ತರಹೆ ವಿಚಾರದಲ್ಲ ಅಭಿಪ್ರಾಯ ಕೊಡಬೇಕೆಂದು ಬಂದಿರುವ 1909ನೆ ಫೆಬ್ರುವರಿ ಮಾಹೆಯ 15ನೆ ತಾರೀಖಿನ 7898-8006—L. B. 284-08-2ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸು ಓದಿ ಹಾಲಿ ಪ್ರೊಪೋಸ್ ಮಾಡಿರುವ ತರಹೆಯನ್ನು ಅನುಕೂಲವಾಗಿ ಅನುಸರಿಸಬಹುದೆಂದು ನಿರ್ಧರಪಡಿಸಲಾಯಿತು.

8. ಧಾನ್ಯಗಳು ಬಹಳ ತುಟ್ಟಿಯಾಗಿ ಮಾರುವದ್ದರಿಂದ ಸರ್ಕಾರಿ ನೌಕರಮಾನೇರುಗಳಿಗೆ ಸಲ್ಲತಕ್ಕ ಧಾನ್ಯದ ಅಲೋಯನ್ಸ್ ಕೊಡತಕ್ಕ ವಿಚಾರದಲ್ಲಿ ಚಾಲ್ತಿ ಸಾಲಿನ ಬಡ್ಜೆಟ್ಟಿನಲ್ಲಿ ಯಾವ ಬಾಬಿನಿಂದ ಕೊಡಬಹುದೆಂದು ರಿಪೋರ್ಟು ಮಾಡಬೇಕೆಂತ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟಿನ ಸೆಕ್ರೆಟರಿ ಸಾಹೇಬರವರಿಂದ ತಲಪಿದ 1909ನೆ ಫೆಬ್ರುವರಿ ಮಾಹೆಯ 24ನೆ ತಾರೀಖಿನ 8316-24—L. B. 188-08-4ನೆ ನಂಬರ್ ಡಾಕೆಟ್ ಓದಲಾಯಿತು.

ಧಾನ್ಯದ ಅಲೋಯನ್ಸ್‌ಗಾಗಿ 1,225 ರೂಪಾಯಿಗಳನ್ನು ಖರ್ಚು ಮಾಡುವದಕ್ಕಾಗಿ IX ಮಿಸಲೇನಿಯಸ್ ಬಾಬಿನ (4), (7) ಮತ್ತು (9), V ಮೂರನೆ ಕ್ಲಾಸ್ ಟ್ರಾವಿಲರ್ಸ್ ಬಂಗಲೆಗಳಿಗೂ ಮತ್ತು ಮುಸಾಫರ್‌ಖಾನೆಗಳಿಗೂ ಸಾಮಾನು ಕೊಂಡುಕೊಳ್ಳತಕ್ಕದ್ದರಲ್ಲಿಯೂ ಮತ್ತು VI ಜಾತ್ರೆಗಳಲ್ಲಿ ಸ್ಯಾನಿಟೇಷನ್‌ಗೋಸ್ಕರ ಪ್ರೊವೈಡಾಗಿರುವ ಮೊಬಲಗುನಲ್ಲಿಯೂ ಈ ಬಾಬುಗಳಲ್ಲಿ ಉಳಿದಿರುವ ಮೊಬಲಗಿನಿಂದ ಕೊಡಬಹುದೆಂದು ತೀರ್ಮಾನಿಸಲಾಯಿತು.

9. ಪ್ರತಿ ಡಿಸ್ಟ್ರಿಕ್ಟು ತಾಲ್ಲೂಕುಗಳಲ್ಲಿರತಕ್ಕ ಡಿಸ್ಟ್ರಿಕ್ಟು ಫಂಡು ನೌಕರುಮಾನೇರುಗಳಿಗೆ ತಲಬು ಕೊಡತಕ್ಕ ವಿಚಾರದಲ್ಲಿ ಹಾಲಿ ಇರತಕ್ಕ ನಡವಳಿಕೆಯನ್ನು ತಿದ್ದುಪಾಟು ಮಾಡತಕ್ಕ ವಿಚಾರದಲ್ಲಿ ಗವರ್ನಮೆಂಟುನಿಂದ ತಲಪಿದ 1909ನೆ ಫೆಬ್ರುವರಿ 25ನೆ ತಾರೀಖಿನ 8355-63—L. B. 278-06-11ನೆ ನಂಬರು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

10. ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಬೋರ್ಡುಗಳ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ಸಲ್ಲತಕ್ಕ ಭತ್ತಾ ಬಿಲ್ಲುಗಳ ಮೊಬಲಗುಗಳನ್ನು ಪಾವತಿ ಮಾಡುವದಕ್ಕೆ ಕೆಲವು ನಡವಳಿಕೆಗಳನ್ನು ಏರ್ಪಾಟು ಮಾಡಬೇಕೆಂಬದರ ವಿಷಯದಲ್ಲಿ ತಾಲ್ಲೂಕು ಮತು ಡಿಸ್ಟ್ರಿಕ್ಟು ಬೋರ್ಡುಗಳವರ ಅಭಿಪ್ರಾಯ ತೆಗೆದು ಕಳುಹಿಸಬೇಕೆಂದು ಗವರ್ನಮೆಂಟಿನಿಂದ ಸಾದರಾದ 1909ನೆ ಫೆಬ್ರುವರಿ ಮಾಹೆಯ 27ನೆ ತಾರೀಖಿನ 8389—L. B. 216-08-1ನೆ ನಂಬರ್ ಪ್ರೊಸಿಡಿಂಗ್ಸು ಓದಲಾಯಿತು.

ತಾಲ್ಲೂಕು ಬೋರ್ಡುಗಳ ಅಭಿಪ್ರಾಯ ಬಂದವಡನೆ ಮುಂದಿನ ಬೋರ್ಡು ಮೀಟಿಂಗಿನಲ್ಲಿ ಚರ್ಚಿಸಬೇಕೆಂದು ತೀರ್ಮಾನಿಸಲಾಯಿತು.

11. ವೈದ್ಯಶಾಲೆಗಳಲ್ಲಿಟ್ಟಿರತಕ್ಕ ಹೊರಗಿನ ಬಾಯಿಲೆ ಜನಗಳ ಹೆಸರು ದಾಖಲ್ಮಾಡತಕ್ಕ ರೋಜುಖುಕ್ಕಿನ ನಮೂನೆ ಬದಲಾವಣೆ ವಿಚಾರದಲ್ಲಿ 1909ನೆ ಮಾರ್ಚಿ ಮಾಹೆಯ 11ನೆ ತಾರೀಖಿನ 8816-24—L. B. 159-07-13ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

12. ಪೋಸ್ಟು ಮಾರ್ಟಂ ಅಜಮಾಯಿಷಿಗೆ ಬರತಕ್ಕ ದನಕರುಗಳನ್ನ ಕೊಯ್ಯತಕ್ಕ ವಿಚಾರದಲ್ಲಿ ಇದನ್ನು ಕೊಯ್ಯತಕ್ಕ ಚಂಬಾರನಿಗಾದರೂ ಅಥವಾ ಇನ್ಯಾವ ಈ ಕೆಲಸವನ್ನು ಮಾಡತಕ್ಕ ಮನುಷ್ಯನಿಗಾದರೂ ಪ್ರತಿ ಒಂದು ಕೇಸಿಗೂ ಎಂಟಾಣೆ ಇನಾಂ ಕೊಡಬೇಕೆಂತಲೂ ಇದಕ್ಕಾಗಿ ತಗಲುವ ಖರ್ಚು ಯಾರ ಮುಖಾಂತರ ಈ ಅಜಮಾಯಿಷಿ ನಡಿಸಲ್ಪಡುತ್ತೋ ಅಂಥಾವರ ಅಥವಾ ಅಂಥಾ ಇಲಾಖೆಯಿಂದ ಈ ಬಾಬತು ಖರ್ಚು ಕೊಡಿಸಬೇಕೆಂಬ ಸೀನಿಯರ್ ಸರ್ಜನ್ ಸಾಹೇಬರವರ ಅಭಿಪ್ರಾಯ ಒಪ್ಪಿ ಗವರ್ನಮೆಂಟಿನಿಂದ ಸಾದರಾದ 1909ನೆ ಏಪ್ರಿಲ್ 1ನೆ ಮುಕ್ಕಾಮಿನ 9517-57—Med. 86-08-7ನೆ ನಂಬರ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

13. ಕೂಲಿ ಜನಗಳಿಗೆ ಕೆಲಸವನ್ನುಂಟುಮಾಡಲಿಕ್ಕೋಸ್ಕರ ತಿಪಟೂರು-ಚನ್ನರಾಯಪಟ್ಟಣದ ರಸ್ತೆ ರಿಪೇರಿ ವಿಚಾರದಲ್ಲಿ 5,000 ರೂಪಾಯಿ ಸ್ಯಾಂಕ್ಷನ್ ಮಾಡಿ ಖರ್ಚಾದ ಮೊಬಲಗು ಅನುಕೂಲವಿದ್ದರೆ ಈ ಸಾಲ್ ಆಖೈರಿನಲ್ಲಿ ರಿ ಅಪ್ರೊಪ್ರಿಯೇಷನ್ ಮೂಲಕ ಅಡ್ಜೆಸ್ಟು ಮಾಡಬೇಕೆಂದು ಗವರ್ನಮೆಂಟಿನಿಂದ ಸಾದರಾದ 1909ನೆ ಇಸವಿ ಏಪ್ರಿಲ್ 3ನೆ ತಾರೀಖಿನ 7948-58—Agri. 164-08-7ನೆ ನಂಬರು ಪ್ರೊಸಿಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

14. ವೆಟರಿನರಿ ಆಸ್ಪತ್ರೆಗಳ ಮೇಂಟಿನೆನ್ಸ್ ಛಾರ್ಜುಗಳು ಡಿಸ್ಟ್ರಿಕ್ಟು ಫಂಡ್ಸಿನಿಂದ ಕೊಡಬೇಕೆಂತಲೂ ಮುನಿಸಿಪಲ್ ಟೌನ್‌ನಲ್ಲಿ ಇರತಕ್ಕ ಡಿಸ್ಪೆನ್ಸರಿಗಳ ವಿಚಾರದಲ್ಲಿ ಮುನಿಸಿಪಲ್ ಕೌನ್ಸಿಲ್ ಡಿಸ್ಟ್ರಿಕ್ಟು ಫಂಡುಗಳಿಗೆ ಮೂರರಲ್ಲಿ ಒಂದು ಭಾಗವನ್ನು ಕಂಟ್ರಿಬ್ಯೂಟ್ ಮಾಡಬೇಕೆಂತ ತಲಪಿದ 1909ನೆ ಏಪ್ರಿಲ್ ಮಾಹೆಯ [illegible]ನೆ ತಾರೀಖಿನ 9731-40—L. B. 455-07-35ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

15. 1908ನೆ ಸೆಪ್ಟಂಬರ 30ನೆ ತಾರೀಖಿನ ಕ್ವಾರ್ಟರನಲ್ಲಿ ಜಾನವರಗಳು ನಷ್ಟಹೊಂದಿದ ತಃಖ್ತೆಯ ಮೇಲೆ ರೆವಿನ್ಯೂ ಕಮಿಷನರ ಸಾಹೇಬರವರ ರಿವ್ಯೂ ಅನುಸರಿಸಿ ಗೌರ್ನಮೆಂಟನಿಂದ ಸಾದರಾದ 1909ನೆ ಏಪ್ರೆಲ್ 8ನೆ ತಾರೀಖಿನ 8185-93—Agri. 64-08-6ನೆ ನಂಬರು ಪ್ರೊಸಿಡಿಂಗ್ಸ್ ಓದಿ ರಿಕಾರ್ಡ್ ಮಾಡಲಾಯಿತು.

16. ಜರೂರಿಯಾತಿಯಾಗಿ ಆಗಬೇಕಾಗುವ ಲೋಕಲ ಬೋರ್ಡಿಗೆ ಸಂಬಂಧಪಟ್ಟ ಕೆಲಸಗಳನ್ನು ನಡಿಸಲು ಸಾಧ್ಯವಾದ ಮಟ್ಟಿಗೂ ಸಾಧಾರಣವಾದ ಕೆಲಸಗಳಿಗೆ ಆಗಬಹುದಾದ ಖರ್ಚುಗಳನ್ನು ಖೊಷೀಪ್ ಮಾಡಬೇಕೆಂದು 1909ನೆ ಇಸವಿ ಏಪ್ರೆಲ್ 10ನೆ ತಾರೀಖಿನ R. 8361-71—Agri. 153-08-5ನೆ ನಂಬರು ಗವರ್ನಮೆಂಟು ಪ್ರೊಸಿಡಿಂಗ್ಸ್ ಓದಿ ರಿಕಾರ್ಡ್ ಮಾಡಲಾಯಿತು.

17. ಮುಳಬಾಗಲ-ಗೋರೀಬಿದನೂರು ರಸ್ತೆಯ 5-12 ಮೈಲಿಯಲ್ಲಿರತಕ್ಕ ಮೋಹರಿಗೆ ಕಟ್ಟೆ ಕಟ್ಟುವದಕ್ಕೋಸ್ಕರ 203 ರೂಪಾಯಿನ ಅಂದಾಜಾ ಕಾಂಟರ ಸ್ಟೈನ್ನಿಂದ ವಾಪಸು ಮಾಡಬೇಕೆಂದು ಕಳುಹಿಸಿಕೊಟ್ಟ ಕೋಲಾರ ಎಗ್ಸಿಕ್ಯೂಟಿವ ಇಂಜೆನಿಯರ ಸಾಹೇಬರವರ 1909ನೆ ಇಸವಿ ಏಪ್ರೆಲ್ 11ನೆ ತಾರೀಖಿನ 211ನೆ ನಂಬರು ಡಾಕೆಟ ಓದಿ ಮಂಜೂರ್ಮಾಡಲಾಯಿತು.

18. ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ ಸಾಹೇಬರವರು ಅವರು ಕೇಳಿಕೊಂಡ ಪ್ರಕಾರ ಅವರ ಆಫೀಸಿನ ಎಸ್ಟಾಬ್ಲಿಷಮೆಂಟಿಗೆ ಮತ್ತೊಂದು ಇಸಮುನ್ನು ಹೆಚ್ಚಿಸಲು ಕಾರಣವಿಲ್ಲವೆಂದು ಕೊಟ್ಟ ಕಂಟ್ರೋಲರ ಸಾಹೇಬರವರ ಅಭಿಪ್ರಾಯವನ್ನು ನಿರ್ಧರಪಡಿಸಿ 1909ನೆ ಇಸವಿ ಏಪ್ರೆಲ್ ಮಾಹೆಯ 17ನೆ ತಾರೀಖಿನ 10259-67—L. B. 199-08-4ನೆ ನಂಬರು ಗವರ್ನಮೆಂಟ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

19. ಇರಿಗೇಷನ ಸೆಸ ಫಂಡು ಬಡ್ಜೆಟ ಅಂದಾಜಾ ತಯಾರ್ಮಾಡತಕ್ಕ ವಿಚಾರದಲ್ಲಿ ತಲಪಿದ ರೆವಿನ್ಯೂ ಕಮಿಷನರ ಸಾಹೇಬರವರ 1909ನೆ ಇಸವಿ ಏಪ್ರೆಲ್ 27-30ನೆ ತಾರೀಖಿನ 11167-9ನೆ ನಂಬರ ಸರ್ಕ್ಯುಲರ ಮತ್ತು 1909-1 ನೆ ಸಾಲಿಗೆ ಈ ಫಂಡಿನಿಂದ ಮಾಡಿಸಬೇಕಾದ ಕೆಲಸಗಳ ತಃಖ್ತೆಯನ್ನು ಕೋಲಾರ ಎಗ್ಸಿಕ್ಯೂಟಿವ ಇಂಜೆನಿಯರ ಸಾಹೇಬರವರಿಂದ ತಲಪಿದ್ದು ಓದಲಾಯಿತು.

ಈ ಡಿಸ್ಟ್ರಿಕ್ಟಿನ ಪ್ರತಿ ತಾಲ್ಲೂಕುನಲ್ಲಿ ಜರೂರಿಯಾತಿ ಕೆಲಸ ನಡೆಸುವದಕ್ಕೋಸ್ಕರ ಇದನ್ನು 1909-10ನೆ ಸಾಲಿನ ಬಡ್ಜೆಟ ಅಂದಾಜಾನಂತೆ ಭಾವಿಸಿ ಮಂಜೂರ್ಮಾಡಲಾಯಿತು.

20. ಚಾಲ್ತಿ ಸಾಲಿನಲ್ಲಿ ನಡೆಯುವ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಬೋರ್ಡಿನ ಪರವಾಗಿ ಇಬ್ಬರು ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳನ್ನು ಲೋಕಲ ಬೋರ್ಡಿನಿಂದ ಚುನಾಯಿಸಬೇಕೆಂದು ಕೋಲಾರ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರಿಂದ ತಲಪಿದ 1909ನೆ ಇಸವಿ ಮೇ ಮಾಹೆಯ 4ನೆ ತಾರೀಖಿನ 8748ನೆ ನಂಬರು ಲೆಟರ ಓದಲಾಯಿತು.

ಸರ್ಕಾರಿ ಉದ್ಯೋಗವಿಲ್ಲದೆ ಹಾಜರಿರುವ ಮೆಂಬರುಗಳ ಪೈಕಿ ಈ ಕೆಳಗೆ ಕಂಡ ಮೆಂಬರುಗಳನ್ನು ಚುನಾಯಿಸಲ್ಪಟ್ಟಿತು.

(1) ಮ॥ ಶೆಟ್ಟಿ ಚಿಕ್ಕಣ್ಣನವರು.

(2) ,, ಶಿಡ್ಲಘಟ್ಟದ ಹನುಮೇಗೌಡರು.

21. (i) ಮುಳಬಾಗಲು ತಾಲ್ಲೂಕು ಗಂಗದಲಕುಂಟೆ ಕಟ್ಟೆಮೇಲೆ 5, 6 ಮತ್ತು 7-4ನೆ ಮೈಲಿಯಲ್ಲಿರುವ ಮುಳಬಾಗಲ-ಗೋರೀಬಿದನೂರು ರಸ್ತೆಯನ್ನು ಬಡಾವಣೆ ಮಾಡಲು 564 ರೂಪಾಯಿನ ಒಂದು ಅಂದಾಜಾ ಕಳುಹಿಸಿ ಚಾಲ್ತಿ ಸಾಲಿನ ಡಿಸ್ಟ್ರಿಕ್ಟ ಫಂಡು ಬಡ್ಜೆಟನಲ್ಲಿ ಚಿಲ್ಲರೆ ಕೆಲಸಗಳಿಗಾಗಿ ಯಾವ ಮೊಬಲಗೂ ಇರುವದಿಲ್ಲವಾದ್ದರಿಂದ ಎಸ್ಟಾಬ್ಲಿಷಮೆಂಟು ಮತ್ತು ಸಾಮಾನುಗಳ ಮಾಮೂಲು ಖರ್ಚುಗಳೊಡನೆ ಈ ಮೊಬಲಗು ಡಿ. ಪಿ. ಡಬ್ಲ್ಯು. ಗೆ ವರ್ಗಮಾಡಿ ಕಾಂಟರ ಸ್ಟೈನಿಂದ ಮೇಲ್ಕಂಡ ಅಂದಾಜಾ ಕಳುಹಿಸಬೇಕೆಂದು, ಕೋಲಾರ ಡಿವಿಜನ ಎಗ್ಸಿಕ್ಯೂಟಿವ ಇಂಜೆನಿಯರ ಸಾಹೇಬರವರ 1909ನೆ ಇಸವಿ ಫೆಬ್ರುವರಿ 22ನೆ ತಾರೀಖಿನ 97ನೆ ನಂಬರು ಡಾಕೆಟ.

(ii) ಶ್ರೀನಿವಾಸಪುರ ತಾಲ್ಲೂಕು 72ನೆ ರಿಜಿಸ್ಟರು ನಂಬರಾದ ಕಲ್ಲೂರುಕೆರೆಯ ಕಟ್ಟೆಯಮೇಲೆ ಹೋಗತಕ್ಕ ಮುಳಬಾಗಲ-ಗೋರೀಬಿದನೂರು ರಸ್ತೆಯನ್ನು 3ರ ಲಾಗಾಯಿತು 7-23ನೆ ಮೈಲಿ ವರೆಗೆ ಅಗಲಮಾಡುವದಕ್ಕೆ 3,348 ರೂಪಾಯಿನ ಒಂದು ಅಂದಾಜಾ ಕಳುಹಿಸಿ ಚಾಲ್ತಿ ಸಾಲಿನ ಡಿಸ್ಟ್ರಿಕ್ಟ ಫಂಡು ಬಡ್ಜೆಟ್ಟನಲ್ಲಿ ಮೊಬಲಗು ಇರುವದಿಲ್ಲವಾದ್ದರಿಂದ ಎಸ್ಟಾಬ್ಲಿಷಮೆಂಟ ಮತ್ತು ಸಾಮಾನುಗಳ ಮಾಮೂಲು ಖರ್ಚುಗಳೊಡನೆ ಈ ಮೊಬಲಗು ಡಿ. ಪಿ. ಡಬ್ಲ್ಯು. ಗೆ ವರ್ಗಮಾಡಿ ಸದರಿ ಅಂದಾಜಾ ಕಾಂಟರಸ್ಟೈನ್ನಿಂದ ಕಳುಹಿಸಿಕೊಡಬೇಕೆಂದು ಮೇಲ್ಕಂಡ ಆಫಿಸರವರಿಂದ ತಲಪಿದ 1909ನೆ ಇಸವಿ ಫೆಬ್ರುವರಿ 24ನೆ ತಾರೀಖಿನ 107ನೆ ನಂಬರ ಡಾಕೆಟ.

(iii) ಚಾಲ್ತಿ ಸಾಲಿನ ಖರ್ಚಿಗೋಸ್ಕರ ಪ್ರೊವಿಂಷಿಯಲ ಫಂಡಿನಿಂದ 1,000 ರೂಪಾಯಿಯನ್ನು ಸೂಪರಿಂಟೆಂಡಿಂಗ ಇಂಜೆನಿಯರ ಸಾಹೇಬರವರು ಮಂಜೂರ್ಮಾಡಿರುವದ್ದರಿಂದ ಬಾಗೇಪಲ್ಲಿ ತಾಲ್ಲೂಕು 131ನೆ ರಿ. ನಂಬರ ಪುಲಿಗಲ ಡಿಬ್ಬಮ್ಮನಕೆರೆಯ ಕಟ್ಟೆಯನ್ನು ಅಗಲಪಡಿಸುವ ಉದ್ದೇಶ್ಯ 1,396 ರೂಪಾಯಿಗಳನ್ನ ತಮ್ಮ ಸ್ವಾಧೀನದಲ್ಲಿ ಇಡಿಸಬೇಕೆಂದು ಮೇಲ್ಕಂಡ ಆಫಿಸರವರಿಂದ ತಲಪಿದ 1909ನೆ ಇಸವಿ ಮಾರ್ಚಿ ಮಾಹೆ 3ನೆ ತಾರೀಖಿನ 118ನೆ ನಂಬರ ಡಾಕೆಟ.

ಇವುಗಳನ್ನು ಓದಿ ಪ್ರಕೃತದಲ್ಲಿ ಈ ಕೆಲಸಗಳನ್ನ ಮಾಡಿಸುವದು ಮುನ್ನಾ ಮಾಡಬಹುದೆಂದು ತೀರ್ಮಾನಿಸಲಾಯಿತು.

22. ಮಳೆ ಸುತರಾಂ ಇಲ್ಲದೆ ಇರುವ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜನಗಳ ಉಪಯೋಗಕ್ಕೋಸ್ಕರ ಈ ಕೆಳಗೆ ಕಂಡ ಕೆಲಸಗಳು ಮಾಡಿಸುವ ಉದ್ದೇಶ್ಯ ಕೆಲವು ಮೊಬಲಗು ಕೊಡಬೇಕೆಂದು ಕೋಲಾರ ಎಗ್ಸಿಕ್ಯೂಟಿವ ಇಂಜೆನಿಯರ ಸಾಹೇಬರವರಿಂದ ತಲಪಿದ 1909ನೆ ಮಾರ್ಚಿ 11ನೆ ತಾರೀಖಿನ 138ನೆ ನಂಬರು ಡಾಕೆಟ ಓದಲಾಯಿತು.

(1) ಬಾಗೇಪಲ್ಲಿ ತಾಲ್ಲೂಕು 527ನೆ ನಂಬರು ರಿಜಿಸ್ಟರಾದ ಎಲ್ಲಂಪಲ್ಲಿ ಕೆರೆಯ ಕಟ್ಟೆಯನ್ನು ಅಗಲಪಡಿಸೋಣದರ ಅಂದಾಜಾ 1,112 ರೂಪಾಯಿಗಳಿಗೆ.

(2) 402ನೆ ನಂಬರ್ ರಿಜಿಸ್ಟರಿನ ವಿಟ್ಟೆವುರ್ರಿ ಮತ್ತು ಪೂವ್ವಾಂಡಮ್ಮನ ಕೆರೆಕಟ್ಟೆಯನ್ನ ಅಗಲಪಡಿಸೋಣದರ ಅಂದಾಜಾ 1,504 ರೂಪಾಯಿಗಳಿಗೆ.

ಈ ಕೆರೆಗಳನ್ನ ಅಗಲಪಡಿಸುವದಕ್ಕೆ ತಗಲಬಹುದಾದ ಖರ್ಚುಗಳನ್ನು ಕೊಡಲು ಬೋರ್ಡಿನವರಿಗೆ ಶಕ್ತಿ ಸಾಲದ್ದರಿಂದ ತುರ್ತು ಈ ಕೆಲಸಗಳು ನಿಲ್ಲಿಸಬಹುದೆಂದು ತೀರ್ಮಾನಿಸಲಾಯಿತು.

23. 1909ನೆ ಇಸವಿ ಜನವರಿ ಮಾಹೆಯ 28ನೆ ತಾರೀಖಿನ ದಿವಸ ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ನಡೆದ ಪಶುಪ್ರದರ್ಶನಶಾಲೆಯ ರಿಪೋರ್ಟನ್ನ ರಿಕಾರ್ಡುಮಾಡಿದ 1909ನೆ ಇಸವಿ 16ನೆ ತಾರೀಖಿನ 10184–93—L. B. 355–08–2ನೆ ನಂಬರು ಗವರ್ನ್ಮೆಂಟು ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

24. ಗೋರೀಬಿದನೂರು ತಾಲ್ಲೂಕಿನಲ್ಲಿ ಯಾತ್ರಾರ್ಥಿಗಳಿಗೆ ಸ್ಥಳವಾಗಿರುವ ವಿದುರಾಶ್ವತ್ಥ ಗ್ರಾಮವನ್ನ ಪಾಕ್ ಆಗಿ ಇಟ್ಟುಕೊಂಡಿರಲು ಮಾಹೆಯಾನಾ 7 ರೂಪಾಯಿನ ತಲಬಿನಮೇಲೆ ಒಬ್ಬ ಸ್ಕ್ಯಾವೆಂಜರನ್ನ ಇಟ್ಟುಕೊಳ್ಳಲು ಮಂಜೂರ್ಮಾಡಿರುವದಾಗಿ 1909ನೆ ಮೇ 4ನೆ ತಾರೀಖಿನ 10911–3—L. B. 358—08—2ನೆ ನಂಬರ್ ಗವರ್ನ್ಮೆಂಟ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

25. ಮುನಿಸಿಪಲ್ ಮತ್ತು ಲೋಕಲ್ ಬೋರ್ಡು ಮೆಂಬರುಗಳಿಗೆ ಕಿಮ್ಮತ್ತಿಲ್ಲದೆ ಕೊಡತಕ್ಕ ಬಗ್ಗೆಯಾಗಿ ಆರೋಗ್ಯಬೋಧಿನಿ ಬುಕ್ಕುಗಳನ್ನು ಕಳುಹಿಸಿಕೊಟ್ಟ ಮೈಸೂರು ಸರ್ಕಾರದ ಸ್ಯಾನಿಟರಿ ಕಮಿಷನರ್ ಸಾಹೇಬರವರ 1909ನೆ ಇಸವಿ ಮೇ 5ನೆ ತಾರೀಖಿನ 4744–51ನೆ ನಂಬರ್ ಲೆಟರ್ ಓದಲಾಯಿತು.

ಡಿಸ್ಟ್ರಿಕ್ಟ್ ಮತ್ತು ಮುನಿಸಿಪಲ್ ಮೆಂಬರುಗಳಿಗೆಲ್ಲಾ ಕಳುಹಿಸಿಕೊಡಬೇಕೆಂದು ತೀರ್ಮಾನಿಸಲಾಯಿತು.

26. ಕೆಲವು ಬದಲಾವಣೆಗಳಿಂದ 1909-10ನೆ ಸಾಲಿನ ಕೋಲಾರ ಡಿಸ್ಟ್ರಿಕ್ಟ್ ಬೋರ್ಡು ಬಡ್ಜೆಟ್ ಎಸ್ಟಿಮೇಟ್ ಮಂಜೂರ್ಮಾಡಿರುವದಾಗಿ 1909ನೆ ಇಸವಿ ಮೇ 10ನೆ ತಾರೀಖು 1157–69—L. B. 309–08–3ನೆ ನಂಬರ್ ಗವರ್ನ್ಮೆಂಟ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

27. ಪಬ್ಲಿಕ್ ರಸ್ತೆಗಳ ಮತ್ತು ಸೇತುವೆಗಳ ವಸೂಲ್ಮಾಡತಕ್ಕ ಸುಂಕದ ವಿಚಾರ ಬದಲಾವಣೆ ಮಾಡತಕ್ಕ ವಿಚಾರದಲ್ಲಿ ರೆವಿನ್ಯೂ ಕಮಿಷನರ್ ಸಾಹೇಬರವರಿಂದ ತಲಪಿದ 1909ನೆ ಇಸವಿ ಮೇ 8ನೆ ತಾರೀಖಿನ 11558–65ನೆ ನಂಬರ್ ಸರ್ಕ್ಯುಲರ್ ಓದಲಾಯಿತು.

ತಾಲ್ಲೂಕು ಬೋರ್ಡುಗಳಿಂದ ಜವಾಬ್ ಬಂದನಂತರ ಈ ಅಂಶ ಆಖೈರ್ ಆಗಿ ಚರ್ಚಿಸಬೇಕೆಂದು ತೀರ್ಮಾನಿಸಲಾಯಿತು.

28. ಬೌರಿಂಗ್‌ಪೇಟೆ ಲೋಕಲ್ ಫಂಡು ಡಿಸ್ಪೆನ್ಸರಿಯ ಭಾವಿಯನ್ನು ಆಳಪಡಿಸುವ ಉದ್ದೇಶ್ಯಕ್ಕೂ ಮತ್ತು ಮುಂಭಾಗದ ಕೈಸಾಲೆಯಲ್ಲಿ ಒಂದು ಡ್ರೆಸ್ಸಿಂಗ್ ರೂಂ ಕಟ್ಟುವದಕ್ಕೂ ನಕ್ಷೆ ಸಹಿತ ಕೌಂಟರ್‌ಸೈನ್ ಬಗ್ಗೆ 296 ರೂಪಾಯಿಗಳಿಗೆ ಅಂದಾಜಾ ಕಳುಹಿಸಿ ಇದಕ್ಕೆ ಬೇಕಾಗುವ ಮೊಬಲಿಗ್ಗೆ ಸೀನಿಯರ್ ಸರ್ಜನ್ ಸಾಹೇಬರವರಿಗೆ ಬರೆಸಬೇಕೆಂದು ಕೋಲಾರ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 1909ನೆ ಮೇ ಮಾಹೆಯ 14ನೆ ತಾರೀಖಿನ 295ನೆ ನಂಬರು ಡಾಕೆಟ್ ಓದಿ ಮಂಜೂರ್ಮಾಡಲಾಯಿತು.

29. ಕರ್ನೂಲ್ ದೇಶದ ಪದ್ಧತಿ ಅನುಸರಿಸಿ ದೇವೀ ಹಾಕತಕ್ಕ ಕೆಲಸಕ್ಕೆ ಹಾಲಿ ಇರುವ ಫಾರಂಗಳ ಪೈಕಿ ಪ್ರತ್ಯೇಕ, "D" ಫಾರಂ ಇರತಕ್ಕದ್ದೆಂಬ ಸ್ಯಾನಿಟರಿ ಕಮಿಷನರವರ ಅಭಿಪ್ರಾಯಕ್ಕೆ ಒಪ್ಪಿ ಗವರ್ನ್ಮೆಂಟಿನಿಂದ ಸಾದರಾದ 1909ನೆ ಇಸವಿ ಮಾರ್ಚಿ ಮಾಹೆಯ 27ನೆ ತಾರೀಖಿನ 9341–60—Med. 185–08–9ನೆ ನಂಬರ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

30. ಸ್ಥಳದ ವಿದ್ಯಮಾನ ಅನುಸರಿಸಿ ಪ್ರತಿ ಒಂದು ದೊಡ್ಡಿ ವಿಷಯದಲ್ಲಿ ದೊಡ್ಡಿಗೆ ದಾಖಲಾಗತಕ್ಕ ರಾಸುಗಳಿಗೆ ಚಾರಾ ಖರ್ಚಿನ ದರ ವಿಚಾರದಲ್ಲಿ ಗವರ್ನ್ಮೆಂಟಿನಿಂದ ಸಾದರಾದ 1909ನೆ ಇಸವಿ ಮೇ 19ನೆ ತಾರೀಖಿನ 1156–75–L. B. 377-08ನೆ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

31. ಪ್ಲೇಗ್ ಸಿಡಬು ಹಾಕಿಸಿಕೊಳ್ಳತಕ್ಕ ಕೂಲಿ ಜನಗಳಿಗೆ ಇನಾಂ ಕೊಡತಕ್ಕ ವಿಚಾರದಲ್ಲಿ ಮತ್ತೊಂದು 6 ತಿಂಗಳು ಕಾಲ ಕೊಟ್ಟಿರುವದಾಗಿ ಗವರ್ನ್ಮೆಂಟಿನಿಂದ ಸಾದರಾದ 1909ನೆ ಮೇ ಮಾಹೆಯ 20ನೆ ತಾರೀಖಿನ 1160–17—San. 63—08—5ನೆ ನಂಬರು ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

32. ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಪಶುಗಳ ಪ್ರದರ್ಶನಶಾಲೆಗೆ ಇನಾಂ ಕೊಡತಕ್ಕದ್ದರಲ್ಲಿ 152 ರೂಪಾಯಿಗಳು ಖರ್ಚಾದಂತೆಯೂ ಇದಕ್ಕಾಗಿ ಚಾಲ್ತಿ ಸಾಲಿನ ಬಡ್ಜೆಟಿನಲ್ಲಿ 100 ರೂಪಾಯಿ ಇರುವಂತೆಯೂ ಜಾಸ್ತಿ ಖರ್ಚಾಗಿರುವ 52 ರೂಪಾಯಿ ಮಂಜೂರ್ಮಾಡಬೇಕೆಂದು ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸರವರ 1909ನೆ ಇಸವಿ ಏಪ್ರೆಲ್ 4ನೆ ತಾರೀಖಿನ 921ನೆ ನಂಬರ್ ಯಾದಿಯೂ ಓದಲಾಯಿತು.

ಖರ್ಚಾಗದೆ ಬಾಕಿಲಿ ಇರುವ C. VI (c) ಐಟಂನಲ್ಲಿ ಸೇವಿಂಗ್ಸ್‌ನಿಂದ ಮಂಜೂರ್ಮಾಡಿರುತ್ತೆ.

33. ಶ್ರೀನಿವಾಸಪುರ ತಾಲ್ಲೂಕು ಜೆಲ್ಲಿಪಲ್ಲಿ ಗ್ರಾಮದಲ್ಲಿ ಒಂದು ಭಾವಿ ಆಗತಕ್ಕ ಪ್ರಯುಕ್ತ 80 ರೂಪಾಯಿನ ಒಂದು ಅಂದಾಜಾ ಕಳುಹಿಸಿ, ತೂರಲವಾರಿಪಲ್ಲಿ ಗ್ರಾಮಕ್ಕೆ ಚಾಲ್ತಿ ಸಾಲಿನ ಬಡ್ಜೆಟಿನಲ್ಲಿ ಒಂದು ಭಾವಿ ತೆಗೆಯತಕ್ಕ ಉದ್ದೇಶ್ಯ ಪ್ರೊವೈಡ್ ಆಗಿರುವದರಲ್ಲಿ 124 ರೂಪಾಯಿಗಳು ಮಂಜೂರ್ಮಾಡಿರುವುದು ಜಾತಾ 176 ರೂಪಾಯಿಗಳು ಮಿಗುತ್ತೆ ಎಂದುನ್ನೂ ಈ ಮೊಬಲಗಿನಲ್ಲಿ ಮೇಲ್ಕಂಡ ಭಾವಿ ಕೆಲಸ ನಡಿಸಬಹುದೆಂದು ಮಾಲೂರು ಸಬ್ ಡಿವಿಜನ್ ಆಫೀಸರವರ 1909ನೆ ಮೇ 15ನೆ ತಾರೀಖಿನ 1795ನೆ ನಂಬರ್‌ಯಾದಿ ಓದಿ ಮಂಜೂರ್ಮಾಡಲಾಯಿತು.

34. ಪಾನದ ಭಾವಿಗಳು ತೆಗಿಸುವದಕ್ಕೂ ಮತ್ತು ಜನಗಳಿಗೆ ಉಪಯೋಗವಾಗುವ ಇತರ ಕೆಲಸಗಳಿಗೂ ಈ ಡಿಸ್ಟ್ರಿಕ್ಟಿಗೆ ಆಗಾಗ್ಗೆ ಗವರ್ನ್ಮೆಂಟಿನವರು ಮಂಜೂರ್ಮಾಡುತ್ತಿರುವ ಸ್ಪೆಷಲ್ ಗ್ರಾಂಟಿನಿಂದ ಸ್ಯಾಂಕ್ಷನ್ ಮಾಡಿದ ಕಾಮುಗಾರಿಗಳ ಲಿಸ್ಟು ಓದಿ ರಿಕಾರ್ಡು ಮಾಡಲಾಯಿತು.

35 1909 ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಸ್ಯಾಂಗ್ಷನ್ ಆದ ಕೆಲಸಗಳ ಪಟ್ಟಿಯನ್ನು ಓದಿ ಮಂಜೂರ್ಮಾಡಲಾಯಿತು.

36. ಈ ಕೆಳಗೆ ಕಂಡ ತಾಲ್ಲೂಕು ಬೋರ್ಡು ಪ್ರೊಸಿಡಿಂಗ್ಸ್‌ಗಳು ಓದಿ ರಿಕಾರ್ಡು ಮಾಡಲಾಯಿತು.

ಕೋಲಾರ	...	...	...	20—4—1909
ಶ್ರೀನಿವಾಸಪುರ	...	...	...	20—4—1909
ಚಿಂತಾಮಣಿ	...	...	...	24—4—1909
ಬಾಗೇಪಲ್ಲಿ	...	...	...	24—3—1909
ಡಿಟೋ	...	...	...	26—4—1909
ಚಿಕ್ಕಬಳ್ಳಾಪುರ	...	...	...	23—4—1909
ಗುಡಿಬಂಡೆ	...	...	...	31—3—1909
ಸಿಡ್ಲಘಟ್ಟ	...	...	...	5—3—1909
ಗೋರೀಬಿದನೂರು	...	...	...	20—2—1909
ಮಾಲೂರು	...	...	...	30—3—1909
ಡಿಟೋ	...	...	...	27—4—1909
ಬಾರಿಂಗ್‌ಪೇಟೆ	...	...	...	15—5—1909

37. 1909ನೆ ಆಗಸ್ಟು ಮಾಹೆಯ 21ನೆ ತಾರೀಖು ಶನಿವಾರದ ದಿವಸ ಮುಂದಿನ ಮೀಟಿಂಗ್ ನಡೆಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿಡೆಂಟ್.

ತುಮಕೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟ ಸಾಹೇಬರವರ ಆಫೀಸ್.

ನೋಟಿಸ್.

ತಾರೀಖು 23ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ತುರುವೇಕೆರೆ 3ನೆ ಕ್ಲಾಸು ಟ್ರಾವಲರ್ಸ್ ಬಂಗ್ಲಾ ಹಾಲಿ ರಿಪೇರಿ ಆಗುತ್ತಲಿರುವದರಿಂದ ಮತ್ತೊಂದು ನೋಟಿಸ್ ಕೊಡುವವರಿಗೂ ಪ್ರಯಾಣಸ್ಥರಿಗೆ ಅಲ್ಲಿ ಇಳಿದುಕೊಳ್ಳಲು ಅವಕಾಶವಿಲ್ಲಾ.

ಸಿ. ವೆಂಕಟರಾವ್, ಫಾರ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 21ನೆ ಜೂನ್ 1909.

1. ಕಂದಾಯದ ಬಾಕೀದಾರರಾದ ಜೋಡಿ ಹುಲ್ಲೆಕೆರೆ ಗ್ರಾಮದ 1. ನರಸಿಹ್ಮ ಘನಪಾಟಿ, 2. ಶ್ಯಾಮಾಜೋಯಿಸ, 3. ಶಿಂದಘಟ್ಟದ ರಾಮಣ್ಣ, 4. ಬೆಳ್ಳೂರು ಶ್ರೀಕಂಠೈಯ್ಯ 5. ನಾಗಮಂಗಲದ ಗುರಪ್ಪ, 6. ಭುವನೇಶ್ವರ ದೇವರು ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಆಗಸ್ಟು 7ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1909ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ಚಾಲ್ತಿ ಸಾಲ್‌ಗೆ ರೂಪಾಯಿ 140—14—3 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ ಹರಾಜುದಾರು) ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್.						ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
				ಕಟ್ಟಡಗಳು.		ಜಮೀನು.						
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರೀ ಯಾ ಬಾಗಾಯತು.	ವಿಸ್ತೀರ್ಣ.	ಆಕಾರ.			
								ಎ. ಗು.	ರೂ. ಆ.			ರೂ. ಆ. ಪೈ.
ನಾಗಮಂಗಲ	ನಾಗಮಂಗಲ	ಜೋಡಿ ಹುಲ್ಲೆಕೆರೆ	1. ನರಸಿಹ್ಮ ಘನಪಾಟ, 2. ಶಾಮಾ ಜೋಯಿಸ, 3. ರಾಮಣ್ಣ, 4. ಶ್ರೀಕಂಠಯ್ಯ, 5. ಸೂರಪ್ಪ, 6. ಭುವನೇಶ್ವರ ದೇವರು	...	...	...	ಖುಷ್ಕಿ ... ಬಾಗಾಯಿತು ಪರಂಪೋಕು	304 3 1 9 212 26 517 38	337 4 4 0 3 4 344 8	ರೂ. 5,000	ರೂ. 119	142 6 3 ವಸೂಲ್ ತಾರೀಖು ವರಿಗೆ ಬಡ್ಡಿ ಬರಬೇಕು.
											ಚಾಲ್ತಿ ಕೀ ಲಕ ಸಾಲ್ ಬಾಕಿ.	140 14 3 283 4 6

ಎಸ್. ಪಿ. ರಾಜಗೋಪಾಲಾಚಾರ್,
ಫಾರ್ ಡೆಪ್ಯುಟಿ ಕಮಿಷನರ್.

1909ನೆ ಇಸವಿ ಮೇ ಮಾಹೆ 29ನೆ ಶನಿವಾರ ಪ್ರಾತಃಕಾಲ 7—30 ಘಂಟೆಯಲ್ಲಿ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸಿನವರು, (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು, (ವೈಸ್ ಪ್ರೆಸಿಡೆಂಟ್).
3. ,, ಬಿ. ಸುಬ್ಬರಾಯರವರು, (ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್.
4. ,, ವಿ. ಎಲ್. ಮಾಂಕರ್ರವರು, (ಮೈಸೂರು ಸಿಟಿ ಹೆಲ್ತ್ ಆಫಿಸರ್).
5. ,, ಸೈಯದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
6. ,, ಎಂ. ಸಿ. ರಂಗೈಯ್ಯಂಗಾರ್ರವರು.
7. ,, ಎ. ಸುಬ್ಬಣ್ಣನವರು.
8. ,, ಅಂಬಳೆ ಅಣ್ಣಯ್ಯಪಂಡಿತರವರು.
9. ,, ಎನ್. ಶ್ರೀಕಂಠೈಯ್ಯನವರು.
10. ,, ಎಂ. ನರಸಿಂಹಸ್ವಾಮಿಗಳವರು.
11. ,, ಎಂ. ಕೃಷ್ಣಪ್ಪಾಜಿ ಅರಸಿನವರು.
12. ,, ವಿ. ತಿರುವೆಂಗಡ ಮೊದಲಿಯಾರ್ರವರು.
13. ,, ಎಂ ಸೈದ್ ಮೊಹಿದೀನ್ ಸಾಹೇಬರವರು.
14. ,, ಎಂ. ಅನಂತರಾಜೈಯ್ಯನವರು.
15. ,, ರಹಿಮತ್ತುಲ್ಲಾ ಅಹಮ್ಮದ್ಸೇಟರವರು.
16. ,, ಮಾದಪ್ಪನವರು
17. ರೆವರೆಂಡ್ ಹೆಚ್. ಗಲಿಫರ್ಡ್ ಸಾಹೇಬರವರು.

ಗೈರ್ಹಾಜರು.

1. ಮಿ॥ ಎಂ. ವೆಂಕಟಕೃಷ್ಣಯ್ಯನವರು.
2. ,, ಕೆ. ಚಂದ್ರಶೇಖರೈಯ್ಯನವರು.
3. ,, ಹಸೇನಲ್ಲಿಬೇಗ್ ಸಾಹೇಬರವರು.

I. 1909ನೆ ಇಸವಿ ಏಪ್ರೆಲ್ ಮಾಹೆಯ ಜಮಾಖರ್ಚು ಲೆಖ್ಖ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ಲೆಖ್ಖಗಳು ಮತ್ತು ಕಂಟ್ರೋಲರವರಿಂದ ಆಡಿಟ್ಟಾಗಿ ಬಂದ 1908ನೆ ಇಸವಿ ಸೆಪ್ಟಂಬರ್, ಆಕ್ಟೋಬರ್, ನವಂಬರ ಮತ್ತು ಡಿಸೆಂಬರ ಮಾಹೆಯ ಲೆಖ್ಖಗಳು.

ಪ್ಯಾಸು ಮಾಡಿದೆ.

II. ಮ್ಯಾನೇಜಿಂಗ್ ಮತ್ತು ಹೆಲ್ತ್ ಕಮಿಟಿಗಳ ಪ್ರೊಸೀಡಿಂಗ್ಸ್.

ಖಾಯಂ ಮಾಡಿ ಇದೆ.

III. ಅಪಾಯಕರವಾದ ಖಾಯಿಲೆ ಅಡ್ಡಿ ಮಾಡತಕ್ಕ ವಿಷಯದಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ್ 144ನೆ ಸೆಕ್ಷನ್ 2ನೆ ಸಬ್ ಸೆಕ್ಷನ್‌ನಲ್ಲಿ ವಿಧಿಸಿರುವ ಅಧಿಕಾರಗಳನ್ನು ಕೌನ್ಸಿಲ್ಲನವರಿಗೆ ಕೊಡತಕ್ಕ ವಿಚಾರದಲ್ಲಿ ಕೌನ್ಸಿಲ್ಲನವರು ಪುನರಾಲೋಚನೆ ಮಾಡತಕ್ಕದ್ದೆಂದು ಗವರ್ನ್ಮೆಂಟಿನಿಂದ ಸಾದರಾಗಿರುವ 17—4—09ನೆ ಮುರ್ಕಂ 10222-4—San. 106-07-15ನೆ ನಂಬರ್ ಪ್ರೊಸೀಡಿಂಗ್ಸ್.

ಈ ವಿಷಯವನ್ನು ಕೌನ್ಸಿಲ್ಲನವರು ಪುನರಾಲೋಚಿಸಿದ್ದರಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ 144ನೆ ಸೆಕ್ಷನಿನ 2ನೆ ಸಬ್ ಸೆಕ್ಷನ್‌ನಲ್ಲಿ ಕಂಡ ಎಲ್ಲಾ ವಿವರನ್ನು ಕೌನ್ಸಿಲ್ಗೆ ಕೊಡತಕ್ಕದ್ದೆ ಅತ್ಯವಶ್ಯಕವೆಂತ ಅಭಿಪ್ರಾಯಪಟ್ಟಿರುವದಲ್ಲದೆ 4ನೆ ಸಬ್ ಸೆಕ್ಷನ್‌ನಲ್ಲಿ ಈ ವಿಷಯದಲ್ಲಿ ಕೌನ್ಸಿಲ್ಲನವರಿಂದ ಅಧಿಕಾರಹೊಂದಿದ ಆಫಿಸರ ಫಿರ್ಯಾದಿನಮೇಲೆ ಯಂ ತಾತಿದ್ದುಪಡಿಮಾಡಬೇಕೆಂತ ಗವರ್ನ್ಮೆಂಟಿಗೆ ಬರೆಯಬೇಕೆಂದು ತೀರ್ಮಾನಮಾಡಿ ಇದೆ.

IV. ಡ್ರೈವರ್ ಜೋಸಫ್ ಸಾಹೇಬರವರನ್ನು ಹಂಗಾಮಿಯಾಗಿ ಬಳಗೊಳ ಪಂಪಿಂಗ್ ಸ್ಟಾಫಿಗೆ ವರ್ಗಾಯಿಸಿರುವದಾಗಿಯೂ ಇವರು ಬಳಗೊಳದಲ್ಲಿರುವ ವರಿಗೂ ಬೇತಮಂಗಲದಲ್ಲಿ ಇವರು ಡ್ರಾ ಮಾಡುತ್ತಿದ್ದ ಲೋಕಲ್ ಅಲೋಯನ್ಸನ್ನು ಡೆಪ್ಯುಟೇಷನ್ ಅಲೋಯನ್ಸ್ ಎಂಬದಾಗಿ ಭಾವಿಸತಕ್ಕದ್ದೆಂತಲೂ ಸಹ ಗವರ್ನ್ಮೆಂಟಿನಿಂದ ಸಾದರಾಗಿರುವ 14—4—09ನೆ ಮುರ್ಕಂ 454-8—2858-62ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿ ಇದೆ.

V. ಮನೆ ಮಾಲೀಕರುಗಳ ಅನುಕೂಲಕ್ಕಾಗಿ ಹೌಸ್ ಸರ್ವಿಸ್ ಕನೆಕ್ಷನ್‌ಗಳನಲ್ಲಿ ಮತ್ತು ಟ್ಯಾಪು ರಿಪೇರಿ ವಿಷಯದಲ್ಲಿ ಹಾಲಿ ಇರತಕ್ಕ ರೂಲ್ಸು ತಿದ್ದುಪಡಿ ಮಾಡತಕ್ಕದ್ದು ಅವಶ್ಯಕವಿಲ್ಲವೆಂದು ಗವರ್ನ್ಮೆಂಟಿನಿಂದ ಸಾದರಾಗಿರುವ 15—5—09ನೆ ಮುರ್ಕಂ 11465—Ml. 304-08-6ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

VI. ಮೈಸೂರು ಷಹರಿನ ವಾಟರ್ ಸಪ್ಲೈ ಹಂಗಾಮಿ ಅಭಿವೃದ್ಧಿಗೋಸ್ಕರ ಸಪ್ಲಿಮೆಂಟರಿ ಸ್ಟೀಂ ಪ್ಲಾಂಟ್ ಖರ್ಚಿಗೆ ಅಡ್ವಾನ್ಸ್ ಕೊಟ್ಟಿದ್ದ ಸಾಲದ ಮೊಬಲಗನ್ನು ತೀರಿಸತಕ್ಕ ವಿಷಯದಲ್ಲಿ ಕೌನ್ಸಿಲ್ಲನವರ ಅಭಿಪ್ರಾಯ ತಿಳಿಸಬೇಕೆಂದು ಗವರ್ನ್ಮೆಂಟಿನಿಂದ ಸಾದರಾಗಿರುವ 19—2—09ನೆ ಮುರ್ಕಂ 8144-6ನೆ ನಂಬರ ಪ್ರೊಸೀಡಿಂಗ್ಸ್.

ಅಡ್ಜರ್ನ ಮಾಡಿದೆ.

VII. ಪಬ್ಲಿಕ್ ವರ್ಕ್ಸ್ ಚಾಲ್ತಿ ಸಾಲ್ ಬಡ್ಜೆಟ್ಟಿನಲ್ಲಿ ವಾಣೀವಿಲಾಸ ವಾಟರ್‌ವರ್ಕ್ಸ್ ಸಾಲಾಬಾದ್ ಖರ್ಚಿಗಾಗಿ 15,000 ರೂಪಾಯಿಗಳನ್ನು ಮ್ಯುನಿಸಿಪಲ್ ಭಾಗಕ್ಕೆ ಜಾಸ್ತಿ ಮಾಡಿಕೊಳ್ಳಲು ಚೀಫ್ ಇಂಜನಿಯರವರಿಗೆ ಅಧಿಕಾರ ಕೊಟ್ಟಿರುತ್ತೆಂತಲೂ ಮತ್ತು ಸದರೀ ಮೊಬಲಗು ಮ್ಯುನಿಸಿಪಲ್ ಫಂಡಿಗೆ ಖರ್ಚು ಬೀಳಬೇಕೆಂತಲೂ ಸಹ ಗವರ್ನ್ಮೆಂಟಿನಿಂದ ಸಾದರಾಗಿರುವ 23—4—09ನೆ ಮುರ್ಕಂ 10502-4—Ml. 40-08-8ನೆ ನಂಬರ್ ಪ್ರೊಸೀಡಿಂಗ್ಸ್

ಅಡ್ಜರ್ನ ಮಾಡಿದೆ.

VIII. ಗವರ್ನ್ಮೆಂಟ್ ಹೌಸ್ ರಸ್ತೆಗಳ ಕಾಮಗಾರಿಯನ್ನು ತಮ್ಮ ಡಿಪಾರ್ಟುಮೆಂಟಿನಿಂದ ಮಾಡಿದ ಪಕ್ಷದಲ್ಲಿ ಸದರಿ ರಸ್ತೆಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕುವ ಖರ್ಚು ಮ್ಯುನಿಸಿಪಲ್ ಕೌನ್ಸಿಲ್ಲನವರು ವಹಿಸುತ್ತಾರೆಯೇ ತಿಳಿಸಬೇಕೆಂದು ಗವರ್ನ್ಮೆಂಟ್ ಹೌಸ್ ಇನ್‌ಚಾರ್ಜು ಆಫಿಸರವರಿಂದ ತಲಪಿರುವ 3—5—09ನೆ ಮುರ್ಕಂ 2419-F. 60-08-09ನೆ ನಂಬರ್ ಲೆಟರ್.

ಅಡ್ಜರ್ನ ಮಾಡಿದೆ.

IX. ಈಚೆಗೆ ಬಂದ ಭಾರೀ ಮಳೆಗಳಿಂದ ಚರಂಡಿಗಳಲ್ಲಿ ಜಮಾಯಿಸಿರುವ ಖದಿ ತೆಗೆಯತಕ್ಕ ಬಗ್ಗೆ ಜಾಸ್ತಿಯಾಗಿ 10 ಗಾಡಿಗಳನ್ನು ಇಟ್ಟುಕೊಳ್ಳಲು ಸ್ಯಾಂಕ್ಷನ್ ಬೇಡಿ ಹೆಲ್ತಾಫಿಸರವರಿಂದ ತಲಪಿರುವ 20—4—09ನೆ ಮುರ್ಕಂ 1977ನೆ ನಂಬರ್ ಡಾಕೆಟ್.

ಮಂಜೂರ್ಮಾಡಿದೆ.

X. 1908ನೆ ನವಂಬರ್, ಡಿಸೆಂಬರ ಮತ್ತು 1909ನೆ ಜನವರಿ ಮಾಹೆಗಳ ಬಾಬತು ಹೆಲ್ತ್ ಡಿಪಾರ್ಟುಮೆಂಟಿನ ಮಂಗೈಯಾನೆ ಗ್ರೈನ್ ಕಂಪೆನ್ಸೇಷನ್ ಬಾಬತು 1067-4-6ರ ಬಿಲ್ಲು.

ಈ ಖರ್ಚು ಸ್ಯಾಂಕ್ಷನ್ ಬಡ್ಜೆಟ್ಟಿನ ಕನ್‌ಸರ್ವೆನ್ಸಿ ಲವಾಜಮಾ ಛಾರ್ಜಿನಿಂದ ಕೊಡತಕ್ಕದ್ದೆಂದು ತೀರ್ಮಾನಮಾಡಿ ಇದೆ.

XI. ಓಟರ್ರ್ಸು ಮತ್ತು ಕೌನ್ಸಿಲರ ಕೆಲಸಕ್ಕೆ ಅರ್ಹರಾದವರ ಪಟ್ಟಿಯು ಮೈಸೂರು ಗೆಜೆಟ್ಟಿನಲ್ಲಿ ಛಾಯಿಷಾಗುವದಕ್ಕೆ ಮುಂಚೆ 2 ತಿಂಗಳ ಕಾಲ ವ್ಯವಧಾನವಿರಬೇಕೆಂಬುವದು 1909ನೆ ಇಸವಿ ಜುಲೈ 10ನೆ ತಾರೀಖಿಗೆ ಆಗುತ್ತೆಂದು ಗವರ್ನ್ಮೆಂಟಿನಿಂದ ಸಾದರಾಗಿರುವ 15—5—09ನೆ ಮುಕ್ಕಾಂ 11466—Ml. 322-08-10ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

XII. ಗೆಜೆಟ್ಟಿನಲ್ಲಿ ಛಾಯಿಷಾಗಿರುವ ಓಟರ್ರ್ಸು ಮತ್ತು ಕೌನ್ಸಿಲರ ಕೆಲಸಕ್ಕೆ ಅರ್ಹರಾದವರ ಪಟ್ಟಿಯಲ್ಲಿ ತಮ್ಮ ಹೆಸರುಗಳು ಬಿಟ್ಟುಹೋಗಿರುತ್ತೆಂದು ಮಿ॥ ಲಕ್ಷ್ಮಣರಾಯರು, ರಾಮಾನುಜೈಯ್ಯಂಗಾರ್ರು ಮತ್ತು ರಾಮರಾಯರವರು ಸಹ ಬರೆದುಕೊಂಡಿರುವ ಲೆಟರುಗಳು.

ಮಿ॥ ರಾಮಾನುಜೈಯ್ಯಂಗಾರ್ರು ಮತ್ತು ಮಿ॥ ರಾಮರಾಯರು ಅರ್ಹರಾದ್ದರಿಂದ ಇವರ ಹೆಸರುಗಳನ್ನು ಲೀಸ್ಟುಗಳಲ್ಲಿ ಸೇರಿಸಬೇಕೆಂತ ತೀರ್ಮಾನ ಮಾಡಿದೆ.

XIII. ಮನೆ ಕಾಮಗಾರಿಗೂ ಮತ್ತು ಹೊಸದಾಗಿ ಕಟ್ಟತಕ್ಕದ್ದಕ್ಕು ಸಹ ಬರುವ ಅಪ್ಲಿಕೇಷನ್ ಗಳನ್ನು ಮ್ಯುನಿಸಿಪಲ್ ಇಂಜನಿಯರು, ಮ್ಯುನಿಸಿಪಲ್ ಕಲೆಕ್ಟರು, ಮೊಹಲ್ಲಾ ಕೌನ್ಸಿಲರುಗಳು ಮತ್ತು ಹೆಲ್ತಾಫಿಸರವರು ಸಹ ಸ್ಥಳ ಅಜಮಾಯಿಷಿ ಮಾಡಿದ ನಂತರ ಫೈಸಲ್ಮಾಡಬೇಕೆಂದು ಮಿ॥ ಶ್ರೀಕಂಠೈಯ್ಯನವರು ಮತ್ತು ಅಂಬಳೆ ಅಣ್ಣಯ್ಯ ಪಂಡಿತರವರು ಸಹ ಕೊಟ್ಟಿರುವ ಪ್ರಪೋಜಿಷನ್.

ಅಡ್ಜರ್ನ್ ಮಾಡಿದೆ.

XIV. ಈ ಕೆಳಗೆ ನಮೂದು ಮಾಡಿರುವ ಐಟಂಗಳ ಮೇಲೆ ಅವುಗಳ ಎದುರು ಭಾಗದಲ್ಲಿ ನೋಟ್ ಮಾಡಿರುವ ರೇಟ್ ಪ್ರಕಾರ ಟೋಲ್ ವಸೂಲ್ಮಾಡಲು ಅಪ್ಪಣೆ ಬೇಡಿ ವೈಸ್ ಪ್ರೆಸಿಡೆಂಟರವರು ಕೊಟ್ಟಿರುವ ಮೆಮೋ:—

		ರೂ.	ಆ.	ಪೈ.
(1)	ಬೈಸಿಕಲ್ ಅಥವಾ ಟ್ರೈಸಿಕಲ್	0	1	0
(2)	ಮೋಟಾರ್‌ಕಾರ್	0	4	0
(3)	ಮೋಟಾರ್ ಸೈಕಲ್	0	2	0
(4)	ರಿಕ್ಷ	0	2	0

ಅಂಗೀಕಾರ ಮಾಡಿದೆ.

XV. ಇಂಡೀಜನಸ್ ಆಸ್ಪತ್ರೆ ಯುನಾನಿ ಹಕೀಂರಿಗೆ ತಲಬು ಇಜಾಫೆ ಮಾಡತಕ್ಕ ವಿಷಯವನ್ನು ಮತ್ತೊಂದು ದಫಾ ಕೌನ್ಸಿಲ್ಲಿನಲ್ಲಿಡಬೇಕೆಂದು ವಗ್ಯೆರೆ ಗೌರ್ನಮೆಂಟ್ ಸೆಕ್ರೆಟೆರಿಯವರಿಂದ ತಲಪಿರುವ 1909ನೆ ಇಸವಿ ಮೇ 11ನೆ ಮುಕ್ಕಾಂ 11229ನೆ ನಂಬರ್ ಡಾಕೆಟ್.

ಅಡ್ಜರ್ನ್ ಮಾಡಿದೆ.

ಸ್ಟ 1909ನೆ ಇಸವಿ ಮೇ 29ನೆ ತಾರೀಖಿನಲ್ಲಿ ನಡೆದ ಮೈಸೂರು ಡಿಸ್ಟ್ರಿಕ್ಟು ಬೋರ್ಡು ಪ್ರೊಸೀಡಿಂಗ್ಸ್.

I. ಕೆಳಗೆ ಉದಹರಿಸಿರುವ ಗೌರ್ನಮೆಂಟ್ ಪ್ರೊಸೀಡಿಂಗ್ಸುಗಳನ್ನು ರಿಕಾರ್ಡು ಮಾಡಲಾಯಿತು:—

(1) 1907—08ನೆ ಸಾಲು ಬಾಬತು ಡಿಸ್ಟ್ರಿಕ್ಟ್ ಫಂಡು ಲೆಖ್ಖಗಳ ಮತ್ತು ರಿಪೋರ್ಟುಗಳ ವಿಷಯವಾಗಿ ಸಾದರಾಗಿರುವ 1909ನೆ ಇಸವಿ ಫೆಬ್ರುವರಿ 20ನೆ ಮುಕ್ಕಾಂ ಗೌರ್ನಮೆಂಟ್ ಹುಕುಂ ನಂಬರು 8181-94—L. B. 86-08-17.

(2) ಸಂಯುಕ್ತ ಪ್ರಾಂತ್ಯದ ಗೌರ್ನಮೆಂಟಿನಿಂದ ಸಾದರಾದ ಪ್ಲೇಗುಜಾಡ್ಯ ನಿವಾರಣೆಯಾಗತಕ್ಕ ವಿಚಾರದ ಪ್ರತಿಯು 1909ನೆ ಇಸವಿ ಮಾರ್ಚಿ 4ನೆ ಮುಕ್ಕಾಂ ಗೌರ್ನಮೆಂಟು ಹುಕುಂ ನಂಬರು 8643-52—San. 144-08.

(3) ವೈದ್ಯಶಾಲೆಗಳಲ್ಲಿಟ್ಟಿರುವ ಹೊರಗಿನ ರೋಗಿಗಳ ದಿನಚರಿ ರಿಜಿಸ್ಟರು ಬದಲಾವಣೆಯ ವಿಷಯವಾಗಿ ಸಾದರಾಗಿರುವ 1909ನೆ ಇಸವಿ ಮಾರ್ಚಿ 11ನೆ ಮುಕ್ಕಾಂ ಗೌರ್ನಮೆಂಟ್ ಪ್ರೊಸೀಡಿಂಗ್ಸು ನಂಬರು 8816-24—L. B. 157-07—13.

(4) ಬಹಳವಾಗಿ ನೀರಿನ ಕ್ಷಾಮವಿಲ್ಲದ ಪ್ರಾಂತ್ಯಗಳಲ್ಲಿಯೂ ಮತ್ತು ಸರ್ಕಾರದವರು ಕ್ಷಾಮ ನಿವಾರಣೆಗೆ ಅವಶ್ಯಕರವೆಂದು ಸೂಕ್ತ ತೋರುವ ಪ್ರಾಂತ್ಯಗಳಲ್ಲಿಯೂ ಡಿಸ್ಟ್ರಿಕ್ಟು ಬೋರ್ಡಿನವರು ನೀರು ಸರಬರಾಯಿಗೆ ಸಲಕರಣಗಳನ್ನು ಮಾಡತಕ್ಕ ವಿಷಯದಲ್ಲಿ ಸಾದರಾಗಿರುವ 1909ನೆ ಇಸವಿ ಮಾರ್ಚಿ 15ನೆ ಮುಕ್ಕಾಂ ಗೌರ್ನಮೆಂಟ್ ಹುಕುಂ ನಂಬರು 8960-8—L. B. 82-08-9.

(5) ಮೈಸೂರು ಕಸಬಾ ಈರಣ್ಣನಗೆರೆ ಮತ್ತು ನಜರಬಾದಿನಲ್ಲಿ ಒಂದೊಂದು ವೈದ್ಯಶಾಲೆಯನ್ನು ಏರ್ಪಡಿಸತಕ್ಕ ವಿಚಾರದಲ್ಲಿ 1909ನೆ ಇಸವಿ 16ನೆ ಮಾರ್ಚಿ ಮತ್ತು 15ನೆ ಮೇ ಮುಕ್ಕಾಂಗಳ ಬಾಬತು ಗೌರ್ನಮೆಂಟು ಹುಕುಂಗಳು 8975-8—Med. 167-07-6 ಮತ್ತು 11458-61—Med. 167-08-8.

(6) ಮಳವಳ್ಳಿ ತಾಲ್ಲೂಕು ದೊಡ್ಡಕಟ್ಟೆ ಗ್ರಾಮದಲ್ಲಿ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳ ಶಿಫಾರಸ್ಸಿನಮೇಲೆ ಒಂದು ಸಂತೆ ನಡಿಯಲು ಏರ್ಪಡಿಸಬೇಕಾದ ವಿಷಯದಲ್ಲಿ 1909ನೆ ಇಸವಿ ಮಾರ್ಚಿ ಮಾಹೆ 20ನೆ ಮುಕ್ಕಾಂ ಬಾಬತು ಗೌರ್ನಮೆಂಟು ಹುಕುಂ ನಂಬರು 9211-3—L. B. 182-08-4.

(7) ಕರ್ನೂಲು ಡಿಸ್ಟ್ರಿಕ್ಟಿನಲ್ಲಿ ಆಚರಣೆಯಲ್ಲಿರುವ ಸಿಡಬು ಹಾಕುವ ಕ್ರಮವನ್ನು ಜಾರೀಗೆ ತರುವ ವಿಷಯದಲ್ಲಿ 1909ನೆ ಇಸವಿ ಮಾರ್ಚಿ 2 ನೆ ಮುಕ್ಕಾಂ ಬಾಬತು ಗೌರ್ನಮೆಂಟು ಹುಕ್ಕುಂ ನಂಬರು 9341-61—Med. 185-08-2.

(8) ಪಶುವೈದ್ಯಶಾಲೆಗಳ ಖರ್ಚನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕೆಂದು ಅಂದರೆ ಪಶುವೈದ್ಯಶಾಲೆಗಳು ಮ್ಯುನಿಸಿಪಲ್ ಸರಹದ್ದಿನಲ್ಲಿದ್ದರೆ ಮ್ಯುನಿಸಿಪಲ್ ಕೌನ್ಸಿಲ್‌ನವರು ಮೂರರಲ್ಲಿ ಒಂದು ಹಿಸ್ಸೆಯ ಖರ್ಚನ್ನು ಕೊಡಬೇಕೆಂಬ ವಿಷಯದಲ್ಲಿ 1909ನೆ ಇಸವಿ ಮಾರ್ಚಿ ಮಾಹೆ 5ನೆ ಮುರ್ರಂ ಗೌರ್ನಮೆಂಟು ನಂಬರು 9731–40—L. B. 455–07–35.

(9) ಲೋಕಲ್ ಬೋರ್ಡಿನವರು ಕೈಲಾದಮಟ್ಟಿಗೆ ಅತ್ಯವಶ್ಯಕವಾದ ಕೆಲಸಗಳನ್ನು ನಡಿಸುವ ಉದ್ದೇಶ್ಯ ಮಿತವ್ಯಯ ಮಾಡಬೇಕೆಂದು 1909ನೆ ಇಸವಿ ಏಪ್ರಿಲ್ 10ನೆ ಮುರ್ರಂ ಗೌರ್ನಮೆಂಟು ಹುಕುಂ ನಂಬರು 8361–71—153–08–5.

(10) ಹೇಮಗಿರಿಯಲ್ಲಿ ನಡೆದ ದನಗಳ ಪ್ರದರ್ಶನದ ವಿಷಯವಾದ 1909ನೆ ಇಸವಿ 28ನೆ ಫೆಬ್ರವರಿ ಮುರ್ಕಂ ಬಾಬತು ಗೌರ್ನಮೆಂಟು ಹುಕುಂ ನಂಬರು 10184–93—L. B. 355–08–2.

(11) ಯೂನಿಯನ್‌ಗಳಲ್ಲಿ ನೋಟೀಸ್ ಫೀಜು ಹಾಕಲು ಈ ಲಾಗಾಯಿತು ಮೂರು ವರ್ಷಗಳ ಮೇಲೆ ಪುನಃ ಚರ್ಚಿಸಬೇಕೆಂಬ 1909ನೆ ಇಸವಿ ಫೆಬ್ರವರಿ 19ನೆ ಮುರ್ಕಂ ಗೌರ್ನಮೆಂಟು ಹುಕುಂ ನಂಬರು 8119–26—L. B. 30–07–4.

(12) ಹೆಚ್ಚಿಗೆ ಕೆಲಸಗಳಿಗೆ ಹೆಚ್ಚಿಗೆ ಹಣಕ್ಕೆ ಕೇಳತಕ್ಕದ್ದು ವಿರುದ್ಧವೆಂದು 1909ನೆ ಇಸವಿ ಮೇ ತಾರೀಖು 8ನೆ ಮುರ್ಕಂ ಗೌರ್ನಮೆಂಟ್ ಹುಕ್ಕುಂ ನಂಬರು 11105–16—L. B. 160–08–7.

(13) 1909ನೆ ಇಸವಿ ಫೆಬ್ರವರಿ ಮಾಹೆಯಲ್ಲಿ ಡಿಸ್ಟ್ರಿಕ್ಟು ಫಂಡಿನಿಂದ ನಡಿಸಿದ ಕಾರ್ಯಗಳ ಅಭಿವೃದ್ಧಿ ವಿಚಾರವು ಅದಕ್ಕೆ ಸಮ್ಮಂಧಪಟ್ಟ ಇತರ ವಿಷಯಗಳ 1909ನೆ ಇಸವಿ ಏಪ್ರಿಲ್ ಮಾಹೆ 28ನೆ ಮುರ್ಕಂ ಬಾಬತು ಗೌರ್ನಮೆಂಟು ಹುಕುಂ ನಂಬರು 10695–6—L. B. 28–08–27.

(14) 1909–1910ನೆ ಸಾಲಿನ ಡಿಸ್ಟ್ರಿಕ್ಟ್ ಫಂಡು ಬಡ್ಜೆಟ್ ಅಂದಾಜಗಳ ಸ್ಯಾಂಕ್ಷನ್ ವಿಷಯವಾದ 1909ನೆ ಇಸವಿ 6ನೆ ಮೇ ಬಾಬತು ಗೌರ್ನಮೆಂಟು ಹುಕುಂ ನಂಬರು 10983–10996—L. B. 311–08–2.

II. ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟು ಫಂಡು ಶಿಬ್ಬಂದಿಗಳ ತಲಬು ಪಾವತಿ ಮಾಡುವ ಕ್ರಮದ ವಿಷಯದಲ್ಲಿ 1909ನೆ ಇಸವಿ ಫೆಬ್ರವರಿ 25ನೆ ಮುರ್ಕಂ ಗೌರ್ನಮೆಂಟ್ ಹುಕ್ಕುಂ ನಂಬರು 8355–63—L. B. 278–06–11 ಪ್ರಕಾರ ಬೋರ್ಡಿನವರು ಪ್ರತಿ ತಾಲ್ಲೂಕು ಬೋರ್ಡಿನವರಲ್ಲಿಯೂ ಮತ್ತು ಯೂನಿಯನ್ ಪಂಚಾಯಿತದಾರರಲ್ಲಿ 50 ರೂಪಾಯಿ ಮತ್ತು ಇಂಪ್ರೆಸ್ಟು ಇಡತಕ್ಕದ್ದು ಅವಶ್ಯವೆಂದು ತಿರ್ಮಾನಿಸಲಾಯಿತು.

III. 1909ನೆ ಇಸವಿ ಫೆಬ್ರವರಿ 27ನೆ ತಾರೀಖಿನ ಗೌರ್ನಮೆಂಟ್ ಹುಕುಂ ನಂಬರು 5389–96—L. B. 216–08–1ರಲ್ಲಿ ಕೇಳುವ ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಬೋರ್ಡಿನವರು ಸರ್ಕಾರಿ ನೌಕರಲ್ಲದ ಪ್ರತಿ ಬೋರ್ಡಿನ ಮೆಂಬರುಗಳಿಗೆ ಪ್ರಯಾಣ ಭತ್ಯದ ವಿಷಯದಲ್ಲಿ ಯಾವ ಕ್ರಮವನ್ನು ನಡಿಸಬೇಕೆಂಬ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು (ಬೋರ್ಡಿನವರ) ಮತ್ತು 1909ನೆ ಇಸವಿ 19ನೆ ಮೇ ಮಾಹೆ 750–C. ಕಂಟ್ರೋಲರ್ ಹುಕುಂ ಪ್ರಕಾರ ಸರ್ಕಾರದ ನೌಕರರಲ್ಲದ ಮೆಂಬರುಗಳು ಪ್ರಯಾಣ ಭತ್ಯದ ಬಿಲ್ಲುಗಳಲ್ಲಿ ಇಷ್ಟೇ ತಗಲಿದ ಖರ್ಚೆಂದು ಸರ್ಟಿಫಿಕೇಟು ಮಾಡಬೇಕೆಂಬ ವಿಚಾರಗಳಲ್ಲಿ ಕಂಟ್ರೋಲರ್ ಸಾಹೇಬರು ಅನುಮೋದಿಸುವ ಪ್ರಕಾರ ಸಂಮಂಧಪಟ್ಟ ಮೆಂಬರುಗಳಿಗೆ ತಿಳಿಸಬೇಕೆಂದು ತೀರ್ಮಾನಿಸಲಾಯಿತು.

IV. ಬೆಂಗಳೂರು, ಕೋಲಾರ, ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಮ್ಯುನಿಸಿಪಾಲಿಟಿಗಳು ಇರುವ ಕೆಲವು ಪ್ರದೇಶಗಳಲ್ಲಿ 1909ನೆ ಇಸವಿ ಜುಲೈ ಗುರ್‍ರೆ ಲಾಗಾಯಿತು ಎರಡು ವರುಷಗಳವರೆಗೆ ನಿರ್ಬಂಧವಾಗಿ ದೇವಿ ಹಾಕತಕ್ಕ ಕ್ರಮವನ್ನು ಜರುಗಿಸಬೇಕೆಂಬ ವಿಷಯದಲ್ಲಿ 1909ನೆ ಇಸವಿ ಏಪ್ರಿಲ್ 10ನೆ ಮುರ್ಕಂ ಗೌರ್ನಮೆಂಟು ಹುಕುಂ ನಂಬರು 9905–15—Med. 163–08–7 ಪ್ರಕಾರ ಮೈಸೂರು ಡಿಸ್ಟ್ರಿಕ್ಟು ಪ್ರತಿ ಹೆಡ್ ಕ್ವಾರ್ಟರು ಪ್ರದೇಶಗಳಲ್ಲಿ ಈ ಕ್ರಮವನ್ನು ಜಾರಿಗೆ ತರಬೇಕೆಂದು ಗೌರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂದು ತಿರ್ಮಾನಿಸಲಾಯಿತು.

V. ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ಜನವರಿ ಮಾಹೆಯಲ್ಲಿ ನಡೆದ ದನಗಳ ಪ್ರದರ್ಶನದ ವಿಷಯದಲ್ಲಿ ಬಹುಮಾನಗಳನ್ನು ಕೊಡುವದರಲ್ಲಿ ಉತ್ತಮವಾದ ಕ್ರಮವನ್ನೂ ಮತ್ತು ಬಹುಮಾನ ಸಂಖ್ಯೆಗಳನ್ನೂ ಹೆಚ್ಚಿಸಬೇಕೆಂಬ (ತಾಲ್ಲೂಕು ಬೋರ್ಡಿನವರ ಅಭಿಪ್ರಾಯದಂತೆ) ವಿಷಯದಲ್ಲಿ 1909ನೆ ಇಸವಿ ಏಪ್ರಿಲ್ 23ನೆ ಮುರ್ಕಂ ಗೌರ್ನಮೆಂಟು ಹುಕುಂ ನಂಬರು 10481–90—L. B. 347–08ರ ಪ್ರಕಾರ ತಾಲ್ಲೂಕು ಬೋರ್ಡಿನವರ ಅಭಿಪ್ರಾಯದಂತೆ ಅನುಮೋದಿಸಬೇಕೆಂದು ತೀರ್ಮಾನಿಸಲಾಯಿತು.

VI. ಮೈಸೂರು ಮೀವರ್ಸ್ ಲೈನಿನಲ್ಲಿರುವ ಆಸ್ಪತ್ರೆಯನ್ನು ಗೌರ್ನಮೆಂಟು ಕಟ್ಟಡದಿಂದ ಬಾಡಿಗೆ ಮನೆಗೆ ಸಾಗಿಸಬೇಕೆಂಬ ವಿಚಾರದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯವೇನೆಂದು ಕೇಳಿರುವ 1909ನೆ ಇಸವಿ 13ನೆ ಮೇ ಮುರ್ಕಂ ಗೌರ್ನಮೆಂಟು ಹುಕುಂ ನಂಬರು 11309—Med. 112-08–5, ವಿಚಾರದಲ್ಲಿ ಸದರಿ ಆಸ್ಪತ್ರೆಯಲ್ಲಿರುವ ಗೌರ್ನಮೆಂಟು ಕಟ್ಟಡವನ್ನು ಈಚೆಗೆ ಮ್ಯುನಿಸಿಪಾಲಿಟಿಯಿಂದ ದುರಸ್ತು ಆಗಿರುವದರಿಂದ ಈ ಕಟ್ಟಡದಲ್ಲೇ ಇಟ್ಟು ಫಲಿತಾಂಶವನ್ನು ನೋಡಬೇಕೆಂದು ತೀರ್ಮಾನಿಸಲಾಯಿತು.

VII. ಹೆಗ್ಗಡದೇವನಕೋಟೆ ತಾಲ್ಲೂಕು ಮೇಲುಕೊಪ್ಪ ಭಾವಿಯನ್ನು ದುರಸ್ತು ಮಾಡತಕ್ಕದ್ದನ್ನು ಬಿಟ್ಟುಬಿಡಬೇಕೆಂದು ಗೌರ್ನಮೆಂಟು ಹುಕ್ಕುಂ 1909ನೆ ಇಸವಿ ಏಪ್ರಿಲ್ 30ನೆ ಮುರ್ಕಂ 11052–3—L. B. 112-07-7 ಪ್ರಕಾರ ಪ್ರೆಸಿಡೆಂಟರು ಅನುಮೋದಿಸುವ ಪ್ರಕಾರ ಒಪ್ಪಬೇಕೆಂದು ತೀರ್ಮಾನಿಸಲಾಯಿತು.

VIII. ದೊಡ್ಡಿಗೆ ಕೂಡಿದ ರಾಸುಗಳ ಮೇವು ನೀರಿನ ವಿಷಯದಲ್ಲಿ ಡಿಸ್ಟ್ರಿಕ್ಟು ಮತ್ತು ಮ್ಯುನಿಸಿಪಲ್ ಬೋರ್ಡಿನವರು ನಿಷ್ಕರ್ಷೆ ಮಾಡಬೇಕೆಂದು ವಿಧಿಸುವ 1909ನೆ ಇಸವಿ 19ನೆ ಮೇ ಮುರ್ಕಂ ಗೌರ್ನಮೆಂಟು ಹುಕುಂ ನಂಬರು 11658-75-L. B. 377–08 ವಿಷಯದಲ್ಲಿ ತಾಲ್ಲೂಕು ಬೋರ್ಡಿನವರ ಅಭಿಪ್ರಾಯವನ್ನು ಕೇಳಿದ್ದು ಬಂದನಂತರ ಯೋಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

IX. ಹುಣಸೂರು-ಹನಗೋಡೆ ರಸ್ತೆ ರಿಪೇರಿ ವಿಷಯದ ಅಂದಾಜದ ಮೇಲೆ ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯವೇನೆಂದು 1909ನೆ ಇಸವಿ ಮೇ 20ನೆ ಮುರ್ಸ್ಕಂ ಗೌರ್ನಮೆಂಟು ಡಾಕೆಟ್ಟು ನಂಬರು 11625—L. B. 116-08-4. ಓದಿದ್ದರ ಮೇಲೆ ಈ ಕೆಲಸಕ್ಕೆ ಹೆಚ್ಚಾದ ಆತುರವಿಲ್ಲವೆಂದು ಸದರಿ ಕೆಲಸವನ್ನು ಸದ್ಯಕ್ಕೆ ನಿಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

X. ತುಮಕೂರು ಡಿಸ್ಟ್ರಿಕ್ಟು ಬೋರ್ಡಿನವರು 3ನೆ ಕ್ಲಾಸು ಟ್ರಾವಲರ್ಸ್ ಬಂಗ್ಲೆಗಳಲ್ಲಿ ಒಬ್ಬ ಹಲಾಲಕೋರನನ್ನು ಇಡಬೇಕೆಂಬ ವಿಚಾರದಲ್ಲಿ ಗೌರ್ನಮೆಂಟಿನವರು ಆಗುವದಿಲ್ಲವೆಂದು ಅಪ್ಪಣೆಯಾಗಿರುವ 1909ನೆ ಇಸವಿ 25ನೆ ಮೇ ಮುರ್ಸ್ಕಂ ಗೌರ್ನಮೆಂಟು ಹುಕುಂ ನಂಬರು 11734-41—L. B. 315-08-4 ರಿಕಾರ್ಡ್ಸ ಮಾಡಬೇಕೆಂದು ತೀರ್ಮಾನಿಸಲಾಯಿತು.

XI. ಮೇಲ್ಕೋಟೆಯಲ್ಲಿ ಆಸ್ಪತ್ರೆಯನ್ನು ಇಡಬೇಕೆಂಬ ವಿಷಯದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರು ಅದರ ಖರ್ಚಿನ ಬಗ್ಗಾಗಿ ಏನಾದರು ಹಣ ಸಹಾಯ ಮಾಡಲು ಒಪ್ಪುತ್ತಾರೆಯೇ ಎಂಬ ವಿಷಯದ 1909ನೆ ಇಸವಿ 27ನೆ ಮೇ ಮುರ್ಸ್ಕಂ ಗೌರ್ನಮೆಂಟು ಡಾಕೆಟ್ಟು ನಂಬರು 11860—Med. 162-08-4, ಓದಿದ್ದರ ಮೇಲೆ ಡಿಸ್ಟ್ರಿಕ್ಟು ಬೋರ್ಡಿನವರು ಬಾಡಿಗೆ ಮಾತ್ರ ಬಾಕಿ ಖರ್ಚನ್ನೆಲ್ಲಾ ವಹಿಸಿಕೊಳ್ಳುತ್ತೇವೆಂದು (ಬಾಡಿಗೆಯನ್ನು ಲೋಕಲ್ ಮ್ಯುನಿಸಿಪಲ್ ಬೋರ್ಡಿನವರು ವಹಿಸತಕ್ಕದ್ದೆಂದು) ಮತ್ತು ಹಾಸ್ಪಿಟಲ್ ಅಸಿಸ್ಟೆಂಟರ ಸಂಬಳ ಮತ್ತು ಔಷದ ಖರ್ಚನ್ನು ಮೆಡಿಕಲ್ ಬಜೆಟ್ಟಿಗೆ ಸೇರಿಸಬೇಕೆಂದು ತೀರ್ಮಾನಿಸಲಾಯಿತು. ಮೈಸೂರು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರು ವರುಷಕ್ಕೆ 372 ರೂಪಾಯಿಗಳು ಈ ಕೆಳಗೆ ತೋರಿಸುವ ಪ್ರಕಾರ ತಗಲುತ್ತೆಂದು ತಿಳಿಸಿದರು.

ಒಬ್ಬ ಕಾಂಪೌಂಡರ್	8	ರೂಪಾಯಿ ತಲಬಿನ ಮೇಲೆ (ತಿಂಗಳಿಗೆ)
ನೀರಿನವನು	2	ಡಿಟೋ
ತೋಟಿ	6	ಡಿಟೋ
ಹಾಸ್ಪಿಟಲ್ ಅಸಿಸ್ಟೆಂಟರ ಚಾರ್ಜು ಅಲೋಯನ್ಸ್ ...	10	ಡಿಟೋ
ಸ್ವದೇಶಿ ಔಷಧಿ ಮತ್ತು ಕಂಟಿಂಜನ್ಸಿ ...	5	ಡಿಟೋ

ಜುಮ್ಲಾ 31 ರೂಪಾಯಿಗಳು ಒಂದು ತಿಂಗಳಿಗೆ.
ಅಥವಾ 372 ವರ್ಷ ಒಂದಕ್ಕೆ.

XII. 1908ನೆ ಇಸವಿ ನವೆಂಬರ ತಿಂಗಳಲ್ಲಿ ತಲಕಾಡಿನಲ್ಲಿ ನಡೆದ ಪಂಚಲಿಂಗ ದರ್ಶನದ ಜಾತ್ರೆಯಿಂದ ಶ್ರೀರಂಗಪಟ್ಣ, ಸೋಸಲೆ ಮತ್ತು ಶಿವನಸಮುದ್ರದ ರಸ್ತೆ ಶಿಥಿಲವಾದದ್ದಕ್ಕಾಗಿ ರಿಪೇರಿ ಮಾಡತಕ್ಕ ಬಗ್ಗೆ ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ 137—8-3-1909ನೆ ಮುರ್ಸ್ಕಂ ಡಾಕೆಟ್ಟನೊಡನೆ ಬಂದ 482 ರೂಪಾಯಿನ ಅಂದಾಜವನ್ನು ಒಪ್ಪಬೇಕೆಂದು ತೀರ್ಮಾನಿಸಲಾಯಿತು.

XIII. ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ 213—23-4-09ನೆ ಮುರ್ಸ್ಕಂ ಡಾಕೆಟ್ಟನೊಡನೆ ಕೆಳಗೆ ನಮೂದಿಸುವ ಟಿ. ನರಸೀಪುರ ತಾಲ್ಲೂಕು ಮುಡುಕತೊರೆ ಹತ್ತಿರ ನಡೆಸಿದ ಕೆಲಸಗಳ ಅಂದಾಜಗಳನ್ನೂ ಬಿಲ್ಲುಗಳನ್ನೂ ಡಿ. ಪಿ. ಡಬ್ಲ್ಯೂ. ಸಬ್ ಡಿವಿಜನ್ ಆಫಿಸರು ತಿದ್ದುಪಾಟು ಮಾಡಿರುವ ಪ್ರಕಾರ ಸದರಿ ಬಿಲ್ಲುಗಳನ್ನು ಸರಿಪಡಿಸಿ ಹಣ ಕೊಟ್ಟುಬಿಡಬೇಕೆಂದು ತೀರ್ಮಾನಿಸಲಾಯಿತು.

(1) ಮುಡುಕತೊರೆ ಲಾಡ್ಜು ಕಾಂಪೌಂಡಿನ ಹೊರಗಿನ ರಸ್ತೆ (ಅಂದಾಜ 175 ರೂಪಾಯಿ).
(2) ವಿಜಯಪುರದ ರಸ್ತೆಯ ಮರಗಳನ್ನೂ ಕರಿಮಣ್ಣನ್ನೂ ತೆಗದ (ಅಂದಾಜ 175).
(3) ಅಡಿಗೆ ಮನೆ ಊಟದ ಮನೆ ಮುಡುಕತೊರೆ ಲಾಡ್ಜಿಗೆ ಕಟ್ಟಿಸಿದ್ದು (ಅಂದಾಜ 490 ರೂಪಾಯಿ).
(4) ತಲ್ಕಾಡಿನಿಂದ ವಿಜಯಪುರಕ್ಕೆ ಹೋಗುವ ರಸ್ತೆ (473 ರೂಪಾಯಿನ ಅಂದಾಜ ಪೈಕಿ 250 ರೂಪಾಯಿ ಅಂದಾಜ 1908ನೆ ನವಂಬರನಲ್ಲಿ ಸ್ಯಾಂಕ್ಷನ್ ಆಗಿರುತ್ತೆ.)

XIV. ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರು 194—5-2-09ನೆ ಮುರ್ಸ್ಕಂ ಡಾಕೆಟ್ಟೊಂದಿಗೆ ಕಳುಹಿಸಿದ ನಂಜನಗೂಡು-ನರಸೀಪುರದ ರಸ್ತೆಯ ಕಲ್ಲು ಚಾವಣಿ 920 ರೂಪಾಯಿ ಅಂದಾಜದ ವಿಷಯದಲ್ಲಿ ಇದಕ್ಕಿಂತ ಮುಖ್ಯವಾದಂಥ ನರಸೀಪುರ-ಚಾಮರಾಜನಗರ-ಗುಂಡ್ಲುಪೇಟೆ ಚಾಮರಾಜನಗರ ರಸ್ತೆಗಳಲ್ಲಿ ಶಿಥಿಲವಾದ ಕಡೆಗೆ ಕಲ್ಲು ಚಾವಣಿ ಹಾಕತಕ್ಕ ಬಗ್ಗೆ ಅಂದಾಜ ತಯಾರ್ಮಾಡಿ ಕಳುಹಿಸತಕ್ಕದ್ದು ಅವಶ್ಯಕವಿರುವದೆಂದು ತಿಳಿಸಬೇಕೆಂದು ತೀರ್ಮಾನಿಸಲಾಯಿತು.

(5) ಗ್ರಾಮದಲ್ಲಿ ನೀರಿನ ವಸತಿಗೋಸ್ಕರ 70 ರೂಪಾಯಿ ಮುಟ್ಟಿಸಿ ಕಲ್ಯಾಣಿಯ ಹೂಳು ತೆಗಿಸತಕ್ಕ ಮತ್ತು 9 ರೂಪಾಯಿ ಮುಟ್ಟಿಸಿ ಒಂದು ಭಾವಿಯನ್ನು ಆಳಮಾಡಿಸತಕ್ಕ ಈ ಎರಡು ಭಾವಿ ಕಾಂಗಾರಿಗಳನ್ನು ಮಂಜೂರ್ಮಾಡಿರುತ್ತೆಂಬ 17—4—09ರ ಮುರ್ಕಂ 10248-9—ಲೋ. ಬೋ. 154-08-12ನೆ ನಂಬರ್ ಪ್ರೊಸೀಡಿಂಗ್ಸು.

(6) ಕಣಕಟ್ಟೆ ಮತ್ತು ಕಿತ್ತನಕೆರೆ ಗ್ರಾಮಗಳಲ್ಲಿ 100 ರೂ. ಲಾಗೋಡು ಮುಟ್ಟಿಸಿ ಪಾಪಾಸುಕಳ್ಳಿಯನ್ನು ತೆಗಿಯತಕ್ಕದ್ದನ್ನು (ಬಡ್ಜೆಟ್ಟಿನಲ್ಲಿ ದಾಖಲಾಗದಿರತಕ್ಕ ಕೆಲಸಗಳು) ಮಂಜೂರ್ಮಾಡಿರುತ್ತೆಂಬ 17—4—09ರ ಮುರ್ಕಂ 10252-4—ಲೋ. ಬೋ. 154-08-13ನೆ ನಂಬರ್ ಗವರ್ನ್ಮೆಂಟ್ ಪ್ರೊಸೀಡಿಂಗ್ಸು.

(7) ಹಾಸನದ ಮುಸಾಫರಖಾನೆಯಲ್ಲಿ 250 ರೂಪಾಯಿನಲ್ಲಿ ಒಂದು ಭಾವಿ ತೆಗಿಸುವವನ್ನು ಪ್ರೆಸಿಡೆಂಟರು ಮಂಜೂರ್ಮಾಡಿರುವದನ್ನು ಅನುಮೋದಿಸಿರುವ ಬಾಗಿ ಬಂದ 17—4—09ರ ಮುರ್ಕಂ 10255-8—ಲೋ. ಬೋ. 345-08-2ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು.

ತೀರ್ಮಾನ:—ಓದಿ ವಿಲೆ ಇಡಿಸಲಾಯಿತು.

XI. ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರು ಸೂಚಿಸಿದಂತೆ ಪ್ರೆಸಿಡೆಂಟರ ಆಫೀಸು ಸಿಬ್ಬಂದಿಯನ್ನು ಇನ್ನೊಬ್ಬ ನವುಕರನನ್ನು ಕೊಡುವದರ ಮೂಲಕ ಹೆಚ್ಚು ಮಾಡುವದು ಅವಶ್ಯವಿಲ್ಲವೆಂಬ 19—4—09ರ ಮುರ್ಕಂ 10259-67-ಲೋ. ಬೋ. 199-08-4ನೆ ನಂಬರು ಗವರ್ನ್ಮೆಂಟ್ ಪ್ರೊಸೀಡಿಂಗ್ಸು.

ತೀರ್ಮಾನ—ಡಿಸ್ಟ್ರಿಕ್ಟು ಆಫೀಸಿನ ಲೋಕಲ್ ಫಂಡು ಮತ್ತು ಮುನಿಸಿಪಲ್ ಇಲಾಖೆಯಲ್ಲಿ ನಡಿಯತಕ್ಕ ಕೆಲಸವು ಬಹಳ ಹೆಚ್ಚಾಗಿರುವದರಿಂದಲು ಮತ್ತು ಜವಾಬ್ದಾರಿ ಕೆಲಸವಾದ್ದರಿಂದಲು ಹೆಡ್ ಕ್ಲಾರ್ಕಿಗೆ ಹಾಲಿ ಇರತಕ್ಕ ತಲಬು 30—1—35 ಇತರ ಇಲಾಖಾ ಹೆಡ್ ಕ್ಲಾರ್ಕುಗಳಿಗೆ ಇರತಕ್ಕ ತಲಬು ನೋಡಿದರೆ ಇದು ಬಹಳ ಕಮ್ಮಿಯೆಂತಲೂ ಬೋರ್ಡಿನವರು ಅಭಿಪ್ರಾಯಪಡುತ್ತಾರಾಗಿಯೂ ಈ ನವುಕರಿ ತಲಬು 40-2-50 ರೂಪಾಯಿಗು ಇದು ಅನುಸರಿಸಿ ಬಾಕಿ ನಾಲ್ಕು ಕ್ಲಾರ್ಕುಗಳ ತಲಬನ್ನು ಸಹಾ ಹೆಚ್ಚು ಮಾಡಬಹುದಾಗಿ ಗವರ್ನ್ಮೆಂಟಿಗೆ ಬರಿಸಬಹುದಾಗಿ ತೀರ್ಮಾನಿಸಲಾಯಿತು.

XII. ಹಂದ್ರಾಳು ಗ್ರಾಮಸ್ಥರು ತಮ್ಮ ಗ್ರಾಮದಲ್ಲಿ ಸೇದುವ ಭಾವಿಯನ್ನು ತೆಗಿಸತಕ್ಕದ್ದು ಅವಶ್ಯವಿಲ್ಲವೆಂತಲೂ ಹಾಲಿ ಇರತಕ್ಕ ಹಳೆ ಇಳಿಯುವ ಭಾವಿಯನ್ನು ರಿಪೇರಿ ಮಾಡಿಸಿಕೊಡಬೇಕಾಗಿ ಮುಷ್ಕರ ಮಾಡುತಾರಾಗಿ ಈ ಗ್ರಾಮದಲ್ಲಿ ಒಂದು ಸೇದೋಭಾವಿ ತೆಗಿಯುವದಕ್ಕೆ ಈ ಮೊದಲೆ ಮಂಜೂರಾಗಿರುವ 330 ರೂಪಾಯಿ (ರೈತರು ಕೊಟ್ಟಿರುವ 150 ರೂಪಾಯಿ ಕಂಟ್ರಿಬ್ಯೂಷನ್)ನ ಅಂದಾಜನ್ನು ಕ್ಯಾನ್ಸಲ್‌ಮಾಡಿ ಈ 330 ರೂಪಾಯಿಯನ್ನು ಜಾವಗಲ್ಲಿನಲ್ಲಿ ಒಂದು ಸೇದೋ ಭಾವಿ ಮತ್ತು ಇನ್ನೊಂದು ಇಳಿಯುವ ಭಾವಿ ಸಹಾ ತೆಗಿಸುವದಕ್ಕೆ ಉಪಯೋಗ ಮಾಡಿಕೊಳ್ಳಬಹುದೆಂಬ ಅರಸೀಕೆರೆ ತಾಲ್ಲೂಕು ಅಮಲ್ದಾರ್ರ 17—4—09ರ ಮುರ್ಕಂ 465-3870ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಜಾವಗಲ್ಲಿನಲ್ಲಿ ಒಂದು ಸೇದೋಭಾವಿಯನ್ನು ತೆಗಿಯತಕ್ಕ ಬಗ್ಗೆ 200 ರೂಪಾಯಿ ಮಂಜೂರ್ಮಾಡಿರುವದಾಗಿಯೂ ಮತ್ತು ಉಳಿದ 130 ರೂಪಾಯಿಗಳು ರೈತರು ಕೊಟ್ಟಿರುವ ಕಂಟ್ರಿಬ್ಯೂಷನ್ ಮೊಬಲಗು 150 ರೂಪಾಯಿ ಸಹಾ ಹಾಲಿ ಹಂದ್ರಾಳು ಗ್ರಾಮದಲ್ಲಿರತಕ್ಕ ಇಳಿಯುವ ಭಾವಿಯನ್ನೇ ಸರಿಪಡಿಸತಕ್ಕ ಬಗ್ಗೆ ಉಪಯೋಗಿಸಬೇಕೆಂತ ಸಹಾ ತೀರ್ಮಾನಿಸಲಾಯಿತು ಮತ್ತು ಈ ಬಡ್ಜೆಟ್ಟಿನಲ್ಲಿ ದಾಖಲ್ಮಾಡದೆ ಇರತಕ್ಕ ಕೆಲಸಕ್ಕೆ ಗವರ್ನ್ಮೆಂಟ್ ಮಂಜೂರಾತಿ ಪಡಿಯಬೇಕೆಂದು ಸಹಾ ತೀರ್ಮಾನಿಸಲಾಯಿತು.

XIII. ಮಾದಿಹಳ್ಳಿ ಹೋಬಳಿ ಚಿಲ್ಕೂರು ಗ್ರಾಮದಲ್ಲಿ ಒಂದು ಭಾವಿ ತೆಗಿಯತಕ್ಕ ಬಗ್ಗೆ 408 ರೂಪಾಯಿಗೆ ಒಂದು ಅಂದಾಜನಿಸಿ ಬಂದ ಬೇಲೂರು ತಾಲ್ಲೂಕು ಅಮಲ್ದಾರ್ರ ರಿಪೋರ್ಟನ್ನು ಕಳುಹಿಸಿರುತ್ತೆಂತಲೂ ಮತ್ತು ನೀರಿನ ತುತ್ತಾರೆಯು ಹೆಚ್ಚಾಗಿರುವದರಿಂದ ಈ ಅಂದಾಜವನ್ನು ಮಂಜೂರ್ಮಾಡಬಹುದೆಂತಲೂ ಬಂದ ಸಕ್ಲೇಶಪುರದ ಅಸಿಸ್ಟೆಂಟ್ ಕಮಿಷನರವರ 31-3-17—4—09ರ ಮುರ್ಕಂ 394—3917ನೆ ನಂಬರು ಯಾದಾಸ್ತು ಓದಲಾಯಿತು.

ತೀರ್ಮಾನ—ಈ ಚಿಲ್ಕೂರು ಗ್ರಾಮವು ಕ್ಷಾಮ ಪೀಡಿತವಾದ ಪ್ರದೇಶದಲ್ಲಿಲ್ಲದಿರುವದರಿಂದಲೂ ಮತ್ತು ಹಣವಿಲ್ಲದಿರುವದರಿಂದ ಈ ಭಾವಿ ಕಾಂಗಾರಿಯನ್ನು ಮಂಜೂರ್ಮಾಡಲು ಆಗಲಾರದೆಂದು ತೀರ್ಮಾನಿಸಲಾಯಿತು.

XIV. ಅರಸೀಕೆರೆ ತಾಲ್ಲೂಕು ಮಹಮ್ಮದಪುರದ ಭಾವಿಯನ್ನು ಆಳಪಡಿಸುವದಕ್ಕೆ 100 ರೂಪಾಯಿಗೆ ಒಂದು ಅಂದಾಜನ್ನು ಮಂಜೂರಿ ಬಗ್ಗೆ ಕಳುಹಿಸಿರುತ್ತೇಂತಲು ಮತ್ತು ಈ ಕೆಲಸಕ್ಕಾಗಿ ಗ್ರಾಮಸ್ಥರು 50 ರೂಪಾಯಿ ಕಂಟ್ರಿಬ್ಯೂಷನ್ ಕೊಟ್ಟಿರುವದಾಗಿ ಸಹಾ ತಿಳಿಸುವ ಜನರಲ್ ಅಸಿಸ್ಟೆಂಟ್ ಕಮಿಷನರವರ 5—4—09ರ ಮುರ್ಸಲಂ 1420—3659ನೆ ನಂಬರ ಯಾದಾಸ್ತು ಆಖೈರಾದ ನಡವಳಿಕೆ ಓದಲಾಯಿತು.

ತೀರ್ಮಾನ—ಹಣವಿಲ್ಲದೆ ಇರುವದರಿಂದಲು ಮತ್ತು ಈ ಗ್ರಾಮ ಕ್ಷಾಮಪೀಡಿತವಾದ ಪ್ರದೇಶವಲ್ಲಿಲ್ಲವಾಗಿಯು ಈ ಭಾವಿ ಕೆಲಸವನ್ನು ಮಂಜೂರ್ಮಾಡಲಿಕ್ಕೆ ಆಗಲಾರದೆಂದು ತೀರ್ಮಾನಿಸಲಾಯಿತು.

XV. ಅರಸೀಕೆರೆ ತಾಲ್ಲೂಕು ಕಸಬಾ ಹೋಬಳಿ ಭಂಡಿಹಳ್ಳಿ ಗ್ರಾಮದಲ್ಲಿ ಭಾವಿಯನ್ನು ಆಳಪಡಿಸತಕ್ಕ ಬಗ್ಗೆ 65 ರೂಪಾಯಿಗಳಿಗೆ ಒಂದು ಅಂದಾಜವನ್ನು ಕಳುಹಿಸಿ ಈ ಕೆಲಸವು ಅತ್ಯಾವಶ್ಯಕವಾಗಿರುವದರಿಂದ ಅಂದಾಜ ಮಂಜೂರ್ಮಾಡಬಹುದೆಂಬ ಅರಸೀಕೆರೆ ತಾಲ್ಲೂಕು ಅಮಲ್ದಾರ್ರ 4—4—09ರ ಮುರ್ಸಲಂ 450-3654ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಭಂಡಿಹಳ್ಳಿ ಗ್ರಾಮವು ಕ್ಷಾಮ ಪೀಡಿತವಾದ ಗ್ರಾಮವಾಗಿರುತ್ತೆಯಾಗಿ ಪ್ರಸಕ್ತವಾದ ಅಂದಾಜವನ್ನು ಮಂಜೂರ್ಮಾಡಿರುತ್ತೇಂತಲು ಈ ಅಂದಾಜ ಮೊಬಲಗು 65 ರೂಪಾಯಿಗಳನ್ನು ರೆವಿನ್ಯೂ ಕಮಿಷನರ್ ಸಾಹೇಬರವರಿಂದ ಮಂಜೂರಾದ 1,000 ರೂಪಾಯಿಗಳ ಸ್ಪೆಷಲ್ ಅಲಾಟ್‌ಮೆಂಟ್ ಪೈಕಿ ಖರ್ಚು ಹಾಕತಕ್ಕದ್ದೆಂದು ತೀರ್ಮಾನಿಸಲಾಯಿತು.

XVI. ಕೆರೋಡಿಬಳಿ ಇರತಕ್ಕ ಟೋಲು ಷಡ್ಡುಗಳ ರಿಪೇರಿಗಾಗಿ 17 ರೂಪಾಯಿಗಳಿಗೆ ಒಂದು ಅಂದಾಜ ತಯಾರ್ಮಾಡಿಸಿ ಕಳುಹಿಸಿರುವದಾಗಿಯು ಈ ಖರ್ಚನ್ನು ಚಾಲ್ತಿಸಾಲು ಡಿಸ್ಟ್ರಿಕ್ಟ್ ಫಂಡು ಬಡ್ಜೆಟ್ಟಿನಲ್ಲಿ X ಮಿಸ್ಲೇನಿಯಸ್ (11) ಟೋಲುಗೇಟು ಖರ್ಚು ಎಂಬ ಹೆಡ್ಡಿನಲ್ಲಿ ದಾಖಲ್ಮಾಡಿರುವ 400 ರೂಪಾಯಿಗಳ ಪೈಕಿ ಕೊಡಬಹುದೆಂದು ಬಂದ ಮಂಜರಾಬಾದು ತಾಲ್ಲೂಕು ಅಮಲ್ದಾರ್ರ 21—4—09ರ ಮುರ್ಸಲಂ 793-3960ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ—ಈ 17 ರೂಪಾಯಿನ ಅಂದಾಜಾವನ್ನು ಮಂಜೂರ್ಮಾಡಿರುವದಾಗಿಯು ಈ ಮೊಬಲಗನ್ನು ಚಾಲ್ತಿ ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್ಟಿನಲ್ಲಿ X ಮಿಸಲೇನಿಯಸ್ (11) ಟೋಲು ಗೇಟ್ ಖರ್ಚು ಎಂಬ ಹೆಡ್ಡಿನಲ್ಲಿರುವ 400 ರೂಪಾಯಿಗಳ ಪೈಕಿ ಕೊಡಬೇಕಾಗಿ ಸಹ ತೀರ್ಮಾನಿಸಲಾಯಿತು.

XVII. ಇರಿಗೇಷನ್ ಸೆಸ್ ಫಂಡ್ ಬಡ್ಜೆಟ್ ಅಂದಾಜಾಗಳನ್ನು ತಯಾರ್ಮಾಡತಕ್ಕ ವಿಚಾರದಲ್ಲಿ ಇನ್ಸ್‌ಪೆಕ್ಷನ್ ಇನ್‌ಸ್ಟ್ರಕ್ಷನ್ ಕೊಟ್ಟು ಬಂದ ರೆವಿನ್ಯೂ ಕಮಿಷನರ್ ಸಾಹೇಬರವರ 27-30—4—09ನೆ ಮುರ್ಸಲಂ 11162-9ನೆ ನಂಬರು ಸರ್ಕ್ಯುಲರ್ ಓದಲಾಯಿತು.

ತೀರ್ಮಾನ—ಒದಿ ವಿಲೆ ಇಡಿಸಲಾಯಿತು ಮತ್ತು ಪ್ರಸಕ್ತವಾದ ಬಡ್ಜೆಟ್ ಅಂದಾಜಗಳು ರೆವಿನ್ಯೂ ಕಮಿಷನರ್ ಸಾಹೇಬರವರ ಸರ್ಕ್ಯುಲರ್ ಅನುಸರಿಸಿ ರಿವೈಜಾಗಿ ಬರಲು ಈ ಅಂದಾಜಗಳನ್ನು ರೆವಿನ್ಯೂ ಕಮಿಷನರವರ ಸರ್ಕ್ಯುಲರ್ ಕಾಪಿ ನಿಶಿ ಹಾಸನದ ಎಗ್ಜಿಕ್ಯುಟಿವ್ ಇಂಜನಿಯರವರಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

XVIII. ಡಿಸ್ಟ್ರಿಕ್ಟ್ ಫಂಡ್ ಕಟ್ಟಡಗಳಿಗೆ ಚಾಟು ಕಾಮಗಾರಿ ಮಾಡಿಸತಕ್ಕ ಬಗ್ಗೆ ಬಂದ ಈ ಕೆಳಗೆ ಕಾಣಿಸಿರುವ ಅಂದಾಜಗಳನ್ನು ಓದಲಾಯಿತು.

ತಾಲ್ಲೂಕು ಮತ್ತು ಕೆಲಸದ ಹೆಸರು.	ಅಂದಾಜಾ ಮೊಬಲಗು.
ಮಂಜರಾಬಾದ್ ತಾಲ್ಲೂಕು.	ರೂ.
ಚಾಟು ಕಾಮಗಾರಿ ಹಾನಬಾಳ್ ದೊಡ್ಡಿ	5
ಡಿಟೋ ಹಾನಬಾಳ್ ಮುಸಾಫರಖಾನಾ	11
ಡಿಟೋ ಕೆಂಚಮ್ಮನಹೊಸಕೋಟೆ ಡಿಟೋ	14
ಡಿಟೋ ಹೆತ್ತೂರು ಡಿಟೋ	34
ಡಿಟೋ ಸಕಲೇಶಪುರ ಡಿಟೋ	23
ಡಿಟೋ ಮಾರ್ನಹಳ್ಳಿ ಡಿಟೋ	10
ಡಿಟೋ ಯಸಳೂರು ದೊಡ್ಡಿ	4
ಡಿಟೋ ಶುಕ್ರವಾರಸಂತೆ ಮುಸಾಫರಖಾನಾ	6
ಡಿಟೋ ಡಿಟೋ ಛತ್ರ	7
ಡಿಟೋ ಕೆಂಚಮ್ಮನಹೊಸಕೋಟೆ ದೊಡ್ಡಿಗೆ	6
ಆಲೂರು ಸಬ್ ತಾಲ್ಲೂಕು	
ಡಿಟೋ ಪಾಳ್ಯದ ದೊಡ್ಡಿಗೆ	6
	126

ತೀರ್ಮಾನ – ಮಂಜೂರ್ಮಾಡಿ ಇರುತ್ತೆ.

XIX. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳ ನಾನ್ ಅಫಿಷಿಯಲ್ ಮೆಂಬರುಗಳಿಗೋಸ್ಕರ ಟ್ರಾವಲಿಂಗ್ ಅಲೋವೆನ್ಸು ಡ್ರಾ ಮಾಡತಕ್ಕ ಮತ್ತು ಪಾವತಿ ಮಾಡತಕ್ಕ ವಿಚಾರದಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿ ಈ ವಿಚಾರದಲ್ಲಿ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳ ಅಭಿಪ್ರಾಯ ತಿಳಿಸಬೇಕಾಗಿ ಬಂದ 27—2—09ರ ಮುರ್ಕ್ಕಂ 8389-96—ಲೋ. ಬೋ. 216-08ನೆ ನಂಬರು ಗವರ್ನರ್ಮೆಂಟ್ ಪ್ರೊಸಿಡಿಂಗ್ಸು ಓದಲಾಯಿತು.

ಬೇಲೂರು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳ ಹೊರ್ತು ಇತರ ತಾಲ್ಲೂಕುಗಳಿಂದ ಬಂದ ಇದೇ ವಿಚಾರದಲ್ಲಿನ ತೀರ್ಮಾನಗಳನ್ನು ಸಹಾ ಓದಲಾಯಿತು.

ತೀರ್ಮಾನ—ಗವರ್ನರ್ಮೆಂಟ್ ಪ್ರೊಸಿಡಿಂಗ್ಸು ಓದಿದಲ್ಲಿ ಪ್ರಸಕ್ತವಾದ ಭತ್ಯಾ ಬಿಲ್ಲುಗಳು ಕಂಟ್ರೋಲರವರಿಂದ ಪ್ರಿ ಆಡಿಟ್ಟಾಗಿ ಬರತಕ್ಕದ್ದು ಅವಶ್ಯವಿಲ್ಲವೆಂತ ತಿಳಿಯಬರುತ್ತೆ. ಈ ಕ್ರಮವು ಅನುಕೂಲವಾಗಿರುತ್ತೆಂತ ಬೋರ್ಡಿನವರು ಅಭಿಪ್ರಾಯಪಟ್ಟುತ್ತಾರಾಗಿ ತೀರ್ಮಾನಿಸಲಾಯಿತು.

XX. (a) ಕುಡಿಯುವ ನೀರಿಗೆ ಬಹಳ ತೊಂದರೆಯಾಗಿರುವದರಿಂದ ಬಂದು ಭಾವಿ ತೆಗಿಸಿಕೊಡಬೇಕಾಗಿ ಮಂಜರಾಬಾದ್ ತಾಲ್ಲೂಕು ಬೆಳ್ಳೂರು ಗ್ರಾಮಸ್ಥರು ಗುಜರಾಯಿಸಿಕೊಂಡಿರುವ 26—4—09ರ ಮುರ್ಕ್ಕಂ ಅರ್ಜಿ ಓದಲಾಯಿತು.

(b) ಚೆಂಗಡಿಹಳ್ಳಿ ಗ್ರಾಮದಲ್ಲಿ ಪ್ರತ್ಯೇಕ ಭಾವಿ ತೆಗಿಸತಕ್ಕದ್ದು ಅವಶ್ಯವಿಲ್ಲವಾಗಿ ಇದಕ್ಕಾಗಿ ಮಂಜೂರಾಗಿದ್ದ 250 ರೂಪಾಯಿಗಳ ಅಂದಾಜವನ್ನು ವಜಾ ಮಾಡಿ ಈ ಮೊಬಲಗನ್ನ ಬೆಳ್ಳೂರು ಗ್ರಾಮದಲ್ಲಿ ಭಾವಿ ತೆಗಿಸತಕ್ಕ ಬಗ್ಯೆ ಉಪಯೋಗಿಸಿಕೊಳ್ಳಬಹುದೆಂದು ಬಂದ ಮಂಜರಾಬಾದ್ ತಾಲ್ಲೂಕು ಅಮಲ್ದಾರ್ರ 29—4—09ರ ಮುರ್ಕ್ಕಂ 824ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಬೆಳ್ಳೂರು ಗ್ರಾಮಸ್ಥರು ಮಟ್ಟಿ ಕಾಮಗಾರಿಯನ್ನು ಷುರು ಮಾಡಿಲ್ಲವಾಗಿ ತಿಳಿಯಬರುವದರಿಂದ ಹಾಲಿ ವರುಷದ ಅಂತ್ಯಭಾಗದಲ್ಲಿ ಇಂಥಾ ಭಾವಿಗೆ ರಿವೆಟ್ಮೇಂಟ್ ಬಗ್ಯೆ ಅಂದಾಜ ಮಂಜೂರ್ಮಾಡಲಿಕ್ಕೆ ಆಗುವದಿಲ್ಲವೆಂತಲೂ ಸಕಾಲದಲ್ಲಿ ಮಟ್ಟಿ ಕಾಮಗಾರಿ ಪೂರೈಸಿ ನಂತರ ರಿವೆಟ್ಮೆಂಟ್ ಬಗ್ಯೆ ಕೇಳಿಕೊಳ್ಳಬೇಕಾಗಿ ಗ್ರಾಮಸ್ಥರಿಗೆ ತಿಳಿಸಬೇಕಾಗಿ ಸಹಾ ತೀರ್ಮಾನಿಸಲಾಯಿತು ಮತ್ತು ಹಾನಬಾಳನಲ್ಲಿರತಕ್ಕ ಲೋಕಲ್ ಫಂಡ್ ಭಾವಿ ಒಣಗಿ ಹೋಗಿರುವದರಿಂದಲೂ ಈ ಗ್ರಾಮದಲ್ಲಿ ಟ್ರಾವಲರ್ಸ್ ಬಂಗ್ಲಾ, ಮುಸಾಫರ್ಖಾನೆ, ಪೊಲೀಸ್ ಸ್ಟೇಷನ್ ಮತ್ತು ಆಸ್ಪತ್ರೆ ಸಹಾ ಇರುವದರಿಂದ ಇಲ್ಲಿ ನೀರಿಗೆ ವಸತಿ ಉಂಟುಮಾಡತಕ್ಕದ್ದು ಅವಶ್ಯವಾದ್ದರಿಂದ ಮೇಲ್ಕಂಡ ಮೊಬಲಗು ಪೈಕಿ ಕೋಚ ಮೊಬಲಗನ್ನು ಈ ಭಾವಿಯನ್ನು ಆಳ ಪಡಿಸುವದಕ್ಕು ಮತ್ತು ರಿಪೇರಿ ಮಾಡುವದಕ್ಕು ಉಪಯೋಗಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

XXI. 1909-10ನೆ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಜ್ಜೆಟ್ ಅಂದಾಜಗಳನ್ನು ಮಂಜೂರ್ಮಾಡಿ ಇರುತ್ತೆಂದು ಬಂದ 28—4—09ರ ಮುರ್ಕ್ಕಂ 10681-94—ಲೋ. ಬೋ. 313-08ನೆ ನಂಬರು ಗವರ್ನರ್ಮೆಂಟ್ ಪ್ರೊಸಿಡಿಂಗ್ಸ್ ಓದಲಾಯಿತು.

ತೀರ್ಮಾನ—ಓದಿ ವಿಲೆ ಇಡಿಸಲಾಯಿತು ಮತ್ತು ಪ್ರಸಕ್ತವಾದ ಬಜ್ಜೆಟ್ಟನಲ್ಲಿ X ಮಿಸಲೇನಿಯಸ್ ಅರ್ಫ್ರೋರ್ಸೀ ಎಕ್ಸ್ಪೆಂಡಿಚರ್ ಮತ್ತು A. P. W. II ರಿಪೇರಿ ಮತ್ತು ರಿಸರ್ವ್ ಎಂಬ ಹೆಡ್ಡುಗಳಲ್ಲಿ ದಾಖಲ್ಮಾಡಿದ್ದ ಮೊಬಲಗುಗಳನ್ನು ವಜಾ ಮಾಡಿರುವದನ್ನು ಈ ಮೊಬಲಗು ಅತ್ಯವಶ್ಯಕವಾಗಿರುವದರಿಂದ ಪುನಹ ಮಂಜೂರ್ಮಾಡಬೇಕಾಗಿ ಕಾರಣ ನಿಶಿ ಗವರ್ನರ್ಮೆಂಟಗೆ ಜಾಹಿರ್ಮಾಡಿಕೊಳ್ಳಬೇಕಾಗಿ ತೀರ್ಮಾನಿಸಲಾಯಿತು.

XXII. ಬರುವ ಸಾಲಿನಲ್ಲಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಕ್ಯಾತೆಹೊಳೆ ಮತ್ತು ವಣಗೂರು ಟೋಲು ಗೇಟು ವಿಚಾರದಲ್ಲಿ ಯಾವರೀತಿ ನಡಿಸಬೇಕೆಂಬ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 2—5—09ರ ಮುರ್ಕ್ಕಂ 399ನೆ ನಂಬರು ಯಾದಾಸ್ತು ಓದಲಾಯಿತು.

ಬರುವ ಸಾಲ್ ಲಾಗಾಯಿತು ಇದರಡಿ ನಮೂದಿಸಿರುವ ಡಿಸ್ಟ್ರಿಕ್ಟು ಬೋರ್ಡು ಬಾಬತು ರಸ್ತೆಗಳಮೇಲೆ ಮತ್ತು ಸೇತುವೆಯ ಬಳಿ ಇರುವ ಟೋಲು ಗೇಟನ್ನು 2 ವರುಷಗಳಿಗೆ ಹರಾಜು ಮಾಡಿಸತಕ್ಕದ್ದು ತುಂಬಾ ಅನುಕೂಲವೆಂಬದಾಗಿ ಪ್ರೆಸಿಡೆಂಟರವರು ಸೂಚಿಸಿದರು.

ಡಿಸ್ಟ್ರಿಕ್ಟು ಫಂಡ್ ರಸ್ತೆಗಳಮೇಲಿನ ಟೋಲು ಗೇಟ—ದುದ್ದ—ಕ್ಯಾತೆಹೊಳೆ—ವಣಗೂರು.

ಡಿಟೋ ಸೇತುವೆ—ಹೊಳೇನರಸೀಪುರ.

ತೀರ್ಮಾನ—2 ವರುಷಕ್ಕೊಂದಾವರ್ತಿ ಈ ಗೇಟುಗಳನ್ನು ಹರಾಜ್ ಮಾಡುವದು ಅನುಕೂಲವಾದ್ದರಿಂದ ಈ ದಫಾಕ್ಕೆ ಆ ರೀತಿ ಮಾಡಬೇಕೆಂತಲೂ ಇದಕ್ಕೆ ಗವರ್ನರ್ಮೆಂಟನವರ ಒಪ್ಪಿಗೆಯನ್ನು ಪಡಿಯಬೇಕೆಂತ ತೀರ್ಮಾನಿಸಲಾಯಿತು.

XXIII. ಹಾಸನ ತಾಲ್ಲೂಕು ಕಲ್ಲದೇವರಹಳ್ಳಿ ಗ್ರಾಮಸ್ಥರು ಸದರಿ ಗ್ರಾಮದಲ್ಲಿ ಬಂದು ಭಾವಿ ತೆಗಿಯುವದಾಗಿಯೂ ಇದಕ್ಕೆ ಕೂಡ್ಲೆ ಕಲ್ಲುಕಟ್ಟಿಸುವದು ಅವಶ್ಯಕವಾಗಿರುತ್ತೆ ಹಾಗಿಲ್ಲದಪಕ್ಷ ಬರುವ ಮಳೆಗಾಲದಲ್ಲಿ ಭಾವಿ ಬೀಳಬಹುದಾದ್ದರಿಂದ ಇದಕ್ಕಾಗಿ 300 ರೂಪಾಯಿ ಮಂಜೂರ್ಮಾಡಿಸಿ ಕೊಡಬೇಕೆಂಬ ಬಗ್ಯೆ ಹಾಸನ ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ 2-509ರ ಮುರ್ಕ್ಕಂ 886ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಹಾಲಿಸಾಲ್ ಬಜ್ಜೆಟ್ಟನಲ್ಲಿ ಹಣವಿಲ್ಲದಿರುವದರಿಂದ ಈ ಸಾಲಿನಲ್ಲಿ ಈ ಕೆಲಸವನ್ನು ಮಂಜೂರ್ಮಾಡಲು ಅವಕಾಶವಿಲ್ಲವೆಂತ ತೀರ್ಮಾನಿಸಲಾಯಿತು.

XXIV. ಆಲೂರು ಸಬ್ ತಾಲ್ಲೂಕು ಭರ್ತೂರು ಕಡುವಿಗೆ ಬಂದು ಹರಿಗೋಲು ಅವಶ್ಯಕವಾಗಿರುತ್ತೆ ಇದಕ್ಕಾಗಿ 60 ರೂಪಾಯಿಗಳನ್ನು ಮಂಜೂರ್ಮಾಡಬೇಕೆಂತ ಆಲೂರು ಡೆಪ್ಯುಟಿ ಅಮಲ್ದಾರ್ರಿಂದ ತಲ್ಪಿದ 1—5—09ರ ಮುರ್ಕ್ಕಂ 692ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಹರಿಗೋಲಿಗೋಸ್ಕರ ಹಾಲಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್ X ಮಿಸಲೇನಿಯಸ್ (o) ದೋಣಿಗಳಿಗೋಸ್ಕರ ದಾಖಲಾಗಿರುವ 150 ರೂಪಾಯಿಗಳ ಪೈಕಿ 60 ರೂಪಾಯಿ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XXV. ಹಾಸನ ತಾಲ್ಲೂಕು ಗ್ರಾಮದಲ್ಲಿ ಇರುವ ವೈದ್ಯಶಾಲಾ ಉಪಯೋಗಕ್ಕೋಸ್ಕರ ಅವಶ್ಯಕವಾಗಿರುವ ಸಾಮಾನುಗಳಿಗೋಸ್ಕರ 29 ರೂಪಾಯಿಗಳು ಬೇಕೆಂಬ ಹಾಸನ ತಾಲ್ಲೂಕು ಅಮಲ್ದಾರ್ರ 3—5—09ರ ಮರ್ಸ್ಯಂ 888ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಅತ್ಯವಶ್ಯಕವಾದ ಸಾಮಾನು ಕೊಂಡುಕೊಳ್ಳುವದಕ್ಕೋಸ್ಕರ ಹಾಲಸಾಲ್ ಬಡ್ಜೆಟ್ಟನಲ್ಲಿ II ವೈದ್ಯಶಾಲೆಗಳಿಗೋಸ್ಕರ ದಾಖಲಾಗಿರುವ 1,164 ರೂಪಾಯಿಗಳ ಪೈಕಿ 12—4—0 ರೂಪಾಯಿ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XXVI. ಇದರಡಿ ಕಾಣಿಸಿರುವ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ಮೀಟಿಂಗಿಗೆ ಹಾಜರಾಗಲು ಅನುಕೂಲವಿಲ್ಲವೆಂಬ ಬಗ್ಯೆ ಬರಿಸಿದ ಖತ್ತುಗಳನ್ನು ಓದಲಾಯಿತು.

ಮಿ|| ವೆಂಕಟರಾಮಯ್ಯನವರು.
,, ರಾಮಶೆಟ್ಟಿ.
,, ಕ್ರಾಫರ್ಡ್ ಸಾಹೇಬರು.
,, ಐಗೂರು ಮಲ್ಲೆಗೌಡರು.
ಮಿ|| ಹಬೀಬುಲ್ಲಾ ಸಾಹೇಬರು.
,, ಕೆಂಚರಾಯ ಶೆಟ್ಟರು.
,, ಧರಣಯ್ಯ ಶೆಟ್ಟರು.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

XXVII. ಬರುವ ಮೀಟಿಂಗನ್ನು 1909ನೆ ಇಸವಿ ಆಗಸ್ಟ್ ಮಾಹೆ 9ನೆ ತಾರೀಖು ಸೋಮವಾರ ಮಧ್ಯಾಹ್ನತ್ಸರ 1 ಘಂಟೆಗೆಂತ ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯು. ವೆದರಾಲ್,
ಪ್ರೆಸಿಡೆಂಟ್.

ಇಸ್ತಿಹಾರ್.

ತಾರೀಖು 26ನೆ ಜೂನ್ 1909ನೆ ಇಸವಿ.

ಹಾಸನ ತಾಲ್ಲೂಕು ಕಸಬಾ ಹೋಬಳಿ ಜೋಡಿ ಹಂದಿನಕೆರೆ ಗ್ರಾಮವು ಜೋಡಿದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ 1909ನೆ ಇಸವಿ ಆಗಸ್ಟ್ 23ನೆ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ ಮಾಹೆ 8ನೆ ಮರ್ಸ್ಯಂ ಮೈಸೂರು ಗೆಜೆಟ್ಟಿನ IIನೆ ಭಾಗದ 545—546ನೆ ಪುಟಗಳನ್ನು ನೋಡತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ, ಛಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 29ನೆ ಜೂನ್ 1909.

ಲೇಟ್ ಚಿಕ್ಕಮಗಳೂರು ಅಗ್ರಿಕಲ್ಚರಲ್ ಬ್ಯಾಂಕಿನ ಬಗೆ ಮೈಸೂರು ಸರಕಾರಕ್ಕೆ ಸದರಿ ಬ್ಯಾಂಕಿನ ಮೆಂಬರುಗಳಾದ—

1. ಮಿ|| ಅಣ್ಣಿಗಿರಿ ವಸ್ತ್ರದ ಶಾನುರಾಯರು.
2. ,, ವಿ. ಜಗನ್ನಾಥರಾಯರು, ಲೇಟ್.
3. ,, ಮಂಕಾಲಗಣೇಶರಾಯರ ಕುಟುಂಬ ಸರಸ್ವತಮ್ಮ.
4. ,, ಜಿ. ಅಬ್ದುಲ್ ಖಲೀಕ ಸಾಬರು.
5. ,, ಟಿ. ರಾಘವೇಂದ್ರಪ್ಪನವರು.
6. ,, ಕರ್ಕಿಪೇಟೆ ಶಿವಪ್ಪಶೆಟ್ಟರು.
7. ,, ಶಿವಾಜಿ ರಾಮಚಂದ್ರರು.
8. ,, ಸಿ. ಬಸವೇಗೌಡರು, ಚಿಕ್ಕಮಗಳೂರು.

ಇವರುಗಳಿಂದ ಸಲ್ಲಬೇಕಾಗಿದ್ದು ಹಾಲಿ ಬಾಕೀಲಿ ನಿಂತಿರುವ ಸಾಲದ ಮೊಬಲಗುಗಳನ್ನು ಬರಮಾಡಿಕೊಳ್ಳಲು ನಾಳೆ ಬರುವ ಸರ್ 1909ನೆ ಇಸವಿ ಸೆಪಟಂಬರು ತಾರೀಖು 10ನೆ ದಿವ 11 ಘಂಟೆಗೆ ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಕಚೇರಿ ಬಳಿ, ಸದರಿಯವರುಗಳಿಂದ ಸದರಿ ಬ್ಯಾಂಕಿಗೆ ಹೊಣೆ ಮಾಡಲ್ಪಟ್ಟ ಸ್ಥಿರಸ್ವತ್ತುಗಳು ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿ ಸಾಹೇಬರವರಿಂದಲಾಗಲಿ ವ ಆ ಬಗ್ಯೆ ಕಳುಹಿಸಲ್ಪಡುವ ಅಸಿಸ್ಟೆಂಟ್ ಕಮಿಷನರವರಿಂದಲಾಗಲಿ, ಸರ್ 1908ನೆ ಇಸವಿ ಜನವರಿ ತಾರೀಖು 16ನೆ ಗವರ್ನಮೆಂಟ ಪ್ರೊಸೀಡಿಂಗ್ಸ ನಂ. Fl. 3526-28-B,—07-15ನ್ನನುಸರಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತವೆ.

2. ಸಾಲದಬಾಕಿ, ಸ್ವತ್ತುಗಳು, ಹರಾಜ್ ಷರತ್ತುಗಳು, ಈ ತಪಶೀಲುಗಳ ಬಗ್ಯೆ ಸರ್ 1909ನೆ ಜುಲೈ ತಾರೀಖು 15ನೆ ಮೈಸೂರ ಗೆಜೆಟ 2ನೆ ಭಾಗದ 555, 556, 557, 558, 559, 560, 561, 562ನೆ ನಂ. ಪುಟಗಳನ್ನು ನೋಡುವದು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಸನ್ 1909ನೆ ಇಸವಿ ಮೇ ತಾರೀಖು 22ನೆ ಶನಿವಾರ ನಡದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ನಡವಳಿಕೆಗಳು.

ಹಾಜರು.

1. ಕೆ. ಆರ್. ಶ್ರೀನಿವಾಸೈಯ್ಯಂಗಾರ್ರು, ಎಸ್‌ಕ್ವೈಯರ್, ಎಂ. ಎ., ಪ್ರೆಸಿಡೆಂಟರು.

ಉದ್ಯೋಗ ಪ್ರಯುಕ್ತರಾದ ಮೆಂಬರುಗಳು.

ಹಾಜರು.

2. ಮಿ॥ ಸಿ. ರಂಗನಾಥರಾವ್ ಸಾಹೇಬ್, ಡಿವಿಜನಲ್ ಅಸಿಸ್ಟೆಂಟ್ ಕಮಿಷನರು.
3. ,, ಜಿ. ಹನುಮಂತರಾವ್, ಟ್ರೆಜರಿ ಅಸಿಸ್ಟೆಂಟ್ ಕಮಿಷನರು.
4. ,, ವಿ. ಮುತ್ತುಸಾಮಿದಾಸ್, ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರು.
5. ,, ಎಂ. ರಾಮರಾವ್, ಎಗ್ಜಿಕ್ಯೂಟಿವ್ ಇಂಜಿನಿಯರವರು.

ಗೈರ್ ಹಾಜರು.

6. ,, ಹೆಚ್. ಟಿ. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು.

ಉದ್ಯೋಗ ಪ್ರಯುಕ್ತರಲ್ಲದ ಮೆಂಬರುಗಳು.

ಹಾಜರು.

7. ಮಿ॥ ಬಾಬಾಸಾಹೇಬರು.
8. ,, ಜಿ. ಜಿ. ಹ್ಯಾಮಿಲ್ಟನ್ ಸಾಹೇಬರು.
9. ,, ಹೆಚ್. ಕೇಶವಾಚಾರ್ರು.
10. ,, ಬಿ. ರಂಗಣ್ಣನವರು.
11. ,, ಸಿ. ಶ್ರೀನಿವಾಸರಾವ್.
12. ,, ಯಜಮಾನ ರಾಂಭಟ್ಟರು.
13. ,, ನಾಗಿಗ ಭಿಷ್ಟಪ್ಪನವರು.
14. ,, ಆನವಟ್ಟಿ ರಂಗರಾಯರು.
15. ,, ಪುಟ್ಟದಪ್ಪನವರು.
16. ,, ಶಾಂತಪ್ಪ ಶೆಟ್ಟರು.
17. ,, ಟಿ. ನರಸಿಂಹೈಯ್ಯಂಗಾರ್ರು.

ಗೈರ್ ಹಾಜರು.

18. ಮಿ॥ ಎ. ರಾಮರಾವ್.
19. ,, ಹೆಚ್. ವಾಟ್ಸನ್ ಸಾಹೇಬರು.
20. ,, ಎಚ್. ಪಿಲ್‌ಕಿಂಗ್‌ಟನ್ ಸಾಹೇಬರು.
21. ,, ಜಾವಳಿ ಗಣೇಶರಾಯರು.
22. ,, ಪಟ್ಟಗೆರೆ ರಂಗಣ್ಣನವರು.
23. ,, ಟಿ. ಶ್ರೀನಿವಾಸಯ್ಯಂಗಾರ್ರು.
24. ,, ಚನ್ನ ಕೇಶವರಾಯರು.
25. ಖಾಲಿ.

ಎಲ್ಲಾ ತಾಲ್ಲೂಕು ಅಮಲ್ದಾರರುಗಳು ಮತ್ತು ಎಡೇಹಳ್ಳಿ ಡೆಪ್ಯುಟಿ ಅಮಲ್ದಾರ್ರು ಸಹ ಮೀಟಿಂಗಿಗೆ ಹಾಜರಾಗಿದ್ದರು.

1. ಕಂಟ್ರೋಲರವರಿಂದ ಆಡಿಟ್ಟಾಗಿ ಬಂದ 1908ನೆ ಜುಲೈ ಗುರ್‍ರೇ ಲಾಗಾಯಿತು 1909ನೆ ಜನವರಿ ಆಖೈರು ವರಿಗಿನ ಈ ಕೆಳಗೆ ನಮೂದಿಸಿರುವ ಗೋಷ್ವಾರೆ ಪ್ರಕಾರ ಡಿಸ್ಟ್ರಿಕ್ಟು ಫಂಡು ಜಮಾ ಖರ್ಚು ಲೆಕ್ಕಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

		ರೂ.	ಆ.	ಪೈ.
1908ನೆ ಜುಲೈ ಗುರ್‍ರೇ ಶಿಲ್ಕು	... ...	924	2	9
1909ನೆ ಜನವರಿ ಆಖೈರು ವರಿಗಿನ ಜಮಾ	... ...	21,746	10	10
ಜುಮ್ಲಾ	...	22,670	13	7
1909ನೆ ಜನವರಿ ಆಖೈರ್ ವರಿಗಿನ ಖರ್ಚು	... ...	23,254	9	0
ಬಾಕಿ	...	583	11	5

2. 1908ನೆ ಜುಲೈ ಗುರ್‍ರೇ ಲಾಗಾಯಿತು 1909ನೆ ಏಪ್ರೆಲ್ ಆಖೈರ್ ವರಿಗಿನ ಚಿಕ್ಕಮಗಳೂರು, ತರೀಕೆರೆ ಮತ್ತು ಬೀರೂರು ವೈದ್ಯಶಾಲೆಗಳಲ್ಲಿ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಗಳನ್ನು ತೋರಿಸತಕ್ಕ ಲೆಕ್ಕಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

ಸದರಿ ಲೆಕ್ಕಗಳ ಪ್ರಕಾರ ರೋಗಿಗಳ ಸಂಖ್ಯೆ 12,214, 9,825 ಮತ್ತು 9,144 ಆಗಿತ್ತು. ಹಿಂದಿನ ಸಾಲಿನಲ್ಲಿ ಪರಸ್ಪರ 14,664, 9,091 ಮತ್ತು 9,835 ಇತ್ತು.

3. ಚಿಕ್ಕಮಗಳೂರು ಪಶುವೈದ್ಯಶಾಲೆಯಲ್ಲಿ ಚಿಕಿತ್ಸೆ ಮಾಡಲ್ಪಟ್ಟ ಪ್ರಾಣಿಗಳ ಸಂಖ್ಯೆಯನ್ನು ತೋರಿಸುವ ಈ ಕೆಳಗೆ ನಮೂದಿಸುವ ಮಾಹೇವಾರಿ ಲೆಕ್ಕವನ್ನು ಓದಿ ರಿಕಾರ್ಡು ಮಾಡಲಾಯಿತು.

1909ನೆ ಮಾರ್ಚಿಯಲ್ಲಿ ... 446, 1909ನೆ ಏಪ್ರೆಲನಲ್ಲಿ ... 762

4. ಜೊಕ್ಕಂಣನವರ ತೋಟದ ರಸ್ತೆ ಮತ್ತು ದೂಬಳ ಎಸ್ಟೇಟು ರಸ್ತೆ ಈ ಎರಡರ ಕಾಮಗಾರಿಯನ್ನು ಡಿಸ್ಟ್ರಿಕ್ಟು ಫಂಡು ಹಣದಿಂದ ನಡಿಸುವ ವಿಚಾರದಲ್ಲಿ ಗೌರ್ನಮೆಂಟನಿಂದ ಬಂದ 13—2—1909ನೆ ನಂಬರು 7892—ಲೋ. ಬೋ. 200-06-16ನೆ ಡಾಕೆಟ ಮತ್ತು ಅದಕ್ಕೆ ಪ್ರೆಸಿಡೆಂಟರು ಬರೆದ ಜವಾಬು ಸಹ ಇರುವ ಲೆಟರು ಓದಲಾಗಿ, ಡೆಪ್ಯುಟಿ ಕಮಿಷನರ್ ಮತ್ತು ಜನರಲ್ ಅಸಿಸ್ಟೆಂಟ್ ಕಮಿಷನರವರು ಸಹ ಈ ಎರಡು ರಸ್ತೆಗಳನ್ನು ಅಜಮಾಯಿಷಿಮಾಡಿ ಜನಗಳ ಉಪಯೋಗಕ್ಕಾಗಿ ಡಿಸ್ಟ್ರಿಕ್ಟು ಫಂಡು ಹಣದಿಂದಲೇ ಇವುಗಳ ಕಾಮಗಾರಿ ವಗೈರೆ ನಡಿಸುವದು ಸೂಕ್ತವಾಗಿದೆಯಂತ ಅಭಿಪ್ರಾಯಪಟ್ಟಿರುವದರಿಂದ ಇದುವರಿವಿಗೂ ಇದ್ದಂತೆ ಇವುಗಳ ರಿಪೇರಿ ವಗೈರೆ ಲಾಗವಾಡನ್ನು ಡಿಸ್ಟ್ರಿಕ್ಟು ಫಂಡು ಹಣದಿಂದಲೇ ನಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

5. ಕಡದಾಳು ಗ್ರಾಮದಲ್ಲಿ ಗ್ರಾಮಸ್ಥರ ಉಪಯೋಗದ ಬಗ್ಯೆ ಒಂದು ದೊಡ್ಡಿ ಸ್ಥಾಪಿಸುವ ವಿಚಾರದಲ್ಲಿ ಮೂಡಿಗೆರೆ ಅಮಲ್ದಾರ್ರಿಂದ ಬಂದ 2—4—09ನೆ ನಂಬ್ರು 185ನೆ ಇತ್ತಲ್ಲಿಗೆ ಆಖೈರಾಗುವ ಪ್ರಕರಣ ಓದಲಾಗಿ ಮೂಡಿಗೆರೆ ತಾಲ್ಲೂಕು ಬೋರ್ಡಿನವರು ಅಭಿಪ್ರಾಯಪಟ್ಟ ಪ್ರಕಾರ ಕಡದಾಳು ಗ್ರಾಮದಲ್ಲಿ ಒಂದು ದೊಡ್ಡಿ ಸ್ಥಾಪಿಸಬಹುದಾಗಿ ನಿರ್ಧರಿಸಲಾಯಿತು. ಪಟ್ಟದೂರು ಎಸ್ಟೇಟಿನ ದೊಡ್ಡಿಯಲ್ಲಿ ಕೆಲವು ಕಾಲದಿಂದ ಕೆಲಸವಿಲ್ಲದಿರುವದರಿಂದ ಅದನ್ನು ಮೋಕೂಫ಼ು ಮಾಡಬಹುದಾಗಿ ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

6. ಯಳ್ಳಂಬಳಸೆ ಕೆರೆಯ ಏರಿಯ ಮೇಲಿನ ದಾರಿಯನ್ನು ಗಾಡಿಗಳು ತಿರಗಲು ಅನುಕೂಲಿಸುವಂತೆ ವಿಶಾಲಪಡಿಸುವ ವಿಚಾರದಲ್ಲಿ ಡಿವಿಜನಲ್ ಅಸಿಸ್ಟೆಂಟ್ ಕಮಿಷನರವರ 10—4—09ನೆ ನಂಬ್ರು 870ನೆ ಇದಾದಿಗೆ ಆಖೈರಾದ ಪ್ರಕರಣವನ್ನು ಓದಲಾಗಿ ಡಿಸ್ಟ್ರಿಕ್ಟು ಫಂಡಿನ ಬಡತನದ ದೆಸೆಯಿಂದ ಸದರಿ ಕಾಮಗಾರಿಗೆ ತಗಲುವ ಲಾಗುವಾಡು ಪೈಕಿ ರೈತ ಹಿಸ್ಸೆ ಚಂದಾ ವಜಾ ಜಾತಾ ಮೊಬಲಗನ್ನು ಡಿ. ಪಿ. ಡಬ್ಲ್ಯೂ. ಬಡ್ಜೆಟ್ಟಿನಿಂದ ಕೊಡಿಸಿಕೊಡಲು ಗೌರ್ನಮೆಂಟಿಗೆ ಬರೆಸಬಹುದಾಗಿ ತೀರ್ಮಾನಿಸಲಾಯಿತು.

7. ಡಿಸ್ಟ್ರಿಕ್ಟು ಫಂಡಿನ ದ್ರವ್ಯದ ಸ್ಥಿತಿಯನ್ನು ಉತ್ತಮಸ್ಥಿತಿಗೆ ತರುವ ಬಗ್ಯೆ ನಾರ್ತ್ ಮೈಸೂರು ಸಂಘದ ಪ್ರೆಸಿಡೆಂಟರಿಂದ ಬಂದ 5—5—09ನೆ ನಂಬ್ರು ಕಾಗದ ಓದಲಾಯಿತು. ಡಿಸ್ಟ್ರಿಕ್ಟು ಫಂಡನ್ನು ಅಭಿವೃದ್ಧಿಗೊಳಿಸುವ ಅಂಶದಲ್ಲಿ ಆಲೋಚಿಸತಕ್ಕ ಭಾಗಗಳನ್ನೆಲ್ಲಾ ಚರ್ಚಿಸಿ ಆಖೈರಿಗೆ ಲೋಕಲ್ ಸೆಸ್ ದರವನ್ನು ಹೆಚ್ಚು ಮಾಡುವದು ಒಂದೇ ಮಾರ್ಗವೆಂತ ತೋರಿ ಜಮೀನ್ ಕಂದಾಯದ ಮೇಲೆ ರೂಪಾಯಿ ಒಂದರ 3 ಪೈಗಳಿಗೆ ಮೀರದಂತೆ ಒಂದು ಸೆಸ್ ದಾಖಲ್ಮಾಡುವದಕ್ಕು ಮತ್ತು ಹಾಗೆ ವಸೂಲಾಗತಕ್ಕ ಮೊಬಲಗುಗಳನ್ನು ಡಿಸ್ಟ್ರಿಕ್ಟ್ ಫಂಡಿಗೆ ಕೊಡತಕ್ಕದ್ದೆಂತಾ ಗೌರ್ನಮೆಂಟನವರನ್ನು ಕೇಳತಕ್ಕದ್ದೆಂದು ನಿರ್ಧರಿಸಲಾಯಿತು. ಮಿ|| ಶಾಂತಪ್ಪ ಶೆಟ್ಟರಿಂದ ಸೂಚಿಸಲ್ಪಟ್ಟ ಮಿ|| ಶ್ರೀನಿವಾಸರಾಯರಿಂದ ಅನುಮೋದಿಸಲ್ಪಟ್ಟ ಮತ್ತು ಇತರ ಹಾಜರಾದ ಮೆಂಬರುಗಳಿಂದ ಅನುಮೋದಿಸಲ್ಪಟ್ಟ ಡಿಸ್ಟ್ರಿಕ್ಟಾಮಳೆ ಬರತಕ್ಕ ಗಾಡಿ ತೆರಿಗೆಯನ್ನು ಡಿಸ್ಟ್ರಿಕ್ಟ್ ಫಂಡಿಗೆ ಕೊಡಿಸಲು ಗೌರ್ನಮೆಂಟಿಗೆ ಶಿಫಾರ್ಸ್ ಮಾಡಬಹುದಾಗಿಯೂ ಮತ್ತು ಬೋರ್ಡಿನವರೂ ಗಾಡಿ ತೆರಿಗೆಯನ್ನು, 'ಯಾ' ಅದರ ಅರ್ಧಭಾಗವನ್ನಾಗಲಿ ಡಿಸ್ಟ್ರಿಕ್ಟು ಫಂಡಿಗೆ ಕೊಡಲು ಕೇಳತಕ್ಕದ್ದು ವಿಧಾಯಕವಾದ್ದೆಂತ ಸಹ ತಿರ್ಮಾನಿಸಲಾಯಿತು.

8. ಅಂಬಳೆ ಮತ್ತು ಮಿರ್ಲೆ ಯೂನಿಯನ್ಗಳಲ್ಲಿನ ಝಾಡಮಾಲಿಗಳ ತಲಬನ್ನು 5 ರೂಪಾಯಿನಿಂದ 6 ರೂಪಾಯಿಗೆ ಹೆಚ್ಚಿಸಲು ಆಗಲಾರದೆಂತ ಬಂದ 19—4—09ನೆ ನಂಬ್ರು 10324-7—ಲೋ. ಬೋ. 299-08-4ನೆ ಗೌರ್ನಮೆಂಟ್ ಆರ್ಡರು ಓದಲಾಯಿತು. 5 ರೂಪಾಯಿಗಳ ತಲಬಿಗೆ ಝಾಡಮಾಲಿಗಳನ್ನು ಈ ಯೂನಿಯನ್ಗಳಿಗೆ ದೊರಕಿಸುವದು ಬಹಳ ಪ್ರಯಾಸವೆಂತ ಅಮಲ್ದಾರ್ರು ರಿಪೋರ್ಟು ಮಾಡುವದರಿಂದಲೂ ಈ ಯೂನಿಯನ್ ವಾಸಸ್ಥರು ಕೊಡತಕ್ಕ ಮೊಹತರ್ಫಾ ಕಂದಾಯಕ್ಕೆ ಪ್ರತಿಯಾಗಿ ಈ ಯೂನಿಯನ್ಗಳ ಪಾಕೀಜಾ ವಿಚಾರದಲ್ಲಿ ಏರ್ಪಾಡು ಮಾಡುವದು ಸೂಕ್ತವಾಗಿರುವದರಿಂದಲೂ ಸಹ ಗೌರ್ನಮೆಂಟನವರ ಮೇಲಿನ ಆರ್ಡರು ಪುನರ್ವಿಮರ್ಶೆಯಿಂದ 1909ನೆ ಜುಲೈ ಗುರ್ರೇ ಲಾಗಾಯಿತಿನಿಂದ 6 ರೂಪಾಯಿನ ದರ ಮಂಜೂರ್ಮಾಡಲು ಗೌರ್ನಮೆಂಟಿಗೆ ಬರೆಸಬಹುದಾಗಿ ತೀರ್ಮಾನಿಸಲಾಯಿತು.

9. 1908—09ನೆ ಸಾಲ್ ಡಿಸ್ಟ್ರಿಕ್ಟ್ ಫಂಡು ಸಪ್ಲಿಮೆಂಟಲ್ ಬಡ್ಜೆಟ್ಟು ಗೌರ್ನಮೆಂಟನಿಂದ ಮಂಜೂರಾಗಿ ಬಂದದ್ದನ್ನು ಓದಿ ರಿಕಾರ್ಡು ಮಾಡಲಾಯಿತು.

10. 1909—10ನೆ ಸಾಲ್ ಡಿಸ್ಟ್ರಿಕ್ಟು ಫಂಡು ಬಡ್ಜೆಟ್ ತಾರೀಖು 11—5—09ನೆ ನಂಬ್ರು 11210-23—ಲೋ. ಬೋ. 318-08ನೆ ಗೌರ್ನಮೆಂಟ್ ಆರ್ಡರಿನಲ್ಲಿ ಮಂಜೂರಾಗಿ ಬಂದದ್ದನ್ನ ಓದಿ ರಿಕಾರ್ಡು ಮಾಡಲಾಯಿತು.

11. ಇರ್ರಿಗೇಷನ್ ಸೆಸ್ ಫಂಡು ಬಡ್ಜೆಟ್ಟು ತಯಾರ್ಮಾಡುವ ವಿಚಾರದಲ್ಲಿ 24—9—08ನೆ ನಂಬ್ರು ರೆ. 2086-96—ಲೋ. ಬೋ. 585-07-11ನೆ ಗೌರ್ನಮೆಂಟ್ ಆರ್ಡರು ಮತ್ತು ರೆವಿನ್ಯೂ ಕಮಿಷನರ 30—4—09ನೆ ನಂಬ್ರು 11162-9ನೆ ಸರ್ಕಿಲರ್ ಸಹ ಓದಲಾಗಿ ಎಕ್ಸಿಕ್ಯೂಟಿವ್ ಇಂಜಿನಿಯರವರು ಡೆಪ್ಯುಟಿ ಕಮಿಷನರೊಡನೆ ಆಲೋಚನೆಯಿಂದ ತಯಾರಿಸಿರುವ ಬಡ್ಜೆಟ್ಟನ್ನು ಬೋರ್ಡಿನವರು ಒಪ್ಪಿರುತ್ತಾರೆ.

12. ಈ ಕೆಳಗೆ ನಮೂದಾಗುವ ಗೌರ್ನ್ಮೆಂಟ್ ಆರ್ಡರು ಓದಿ ರಿಕಾರ್ಡು ಮಾಡಲಾಯಿತು.

(1) ಪಶುವೈದ್ಯಶಾಲೆಗಳ ಬಾಬತು ಖರ್ಚನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಸಹಿಸತಕ್ಕದ್ದಾಗಿಯೂ ಮ್ಯುನಿಸಿಪಾಲಿಟಿಯೊಳಗೆ ಇರತಕ್ಕ ಅಂಥಾ ವೈದ್ಯಶಾಲೆಗಳ ಬಾಬತು ಖರ್ಚು ಬಗ್ಯೆ ಮುನಿಸಿಪಾಲಿಟಿಯಿಂದ $\frac{1}{3}$ ಭಾಗ ಖರ್ಚು ವೊಬಲಗನ್ನು ಕೊಡತಕ್ಕದ್ದಾಗಿ ನಮೂದಾಗುವ 5—4—09ನೆ ಮುರ್ಕ್ಕಂ 9731-40—ಲೋ. ಬೋ. 455-07-35ನೆ ಗೌರ್ನ್ಮೆಂಟ್ ಆರ್ಡರ್.

(2) ದೊಡ್ಡಿಯಲ್ಲಿ ಕೂಡಿದ ಜಾನುವಾರುಗಳಿಗೆ ಚಾರಾ ಖರ್ಚು ದರವನ್ನು ನಿರಖು ಮಾಡುವ ವಿಚಾರದಲ್ಲಿ ತಲಪಿದ 19—5—09ನೆ ಮುರ್ಕ್ಕಂ 11568-75—ಲೋ. ಬೋ. 377-08ನೆ ಗೌರ್ನ್ಮೆಂಟ್ ಆರ್ಡರು.

13. ಪ್ರೆಸಿಡೆಂಟರವರಿಂದ ಮಂಜೂರಾದ ಈ ಕೆಳಗೆ ನಮೂದಾಗುವ ಅಂದಾಜಾಗಳನ್ನು ಬೋರ್ಡಿನಲ್ಲಿ ಓದಿ ಒಪ್ಪಲಾಯಿತು.

(1) ರಾಮನಹಳ್ಳಿಯಲ್ಲಿ ಹಂಗಾಮಿ ಭಾವಿ ತೆಗಿಯಲು 10 ರೂಪಾಯಿಗೆ ಮಂಜೂರಾದ ಅಂದಾಜಾ.

(2) ಅಜ್ಜಂಪುರದ ಟ್ರಾವಲರ್ಸ್ ಬಂಗ್ಲೆ ಕಾಂಪೌಂಡಿನಲ್ಲಿನ ಭಾವಿ ಆಳಪಡಿಸಲು 47 ರೂಪಾಯಿನ ಅಂದಾಜಾ.

(3) ರಾಮನಹಳ್ಳಿಯಲ್ಲಿ ಹೊಲೆಯರಿಗೆ ಭಾವಿ ಕಟ್ಟಿಲು 158 ರೂಪಾಯಿನ ಅಂದಾಜಾ.

(4) ಮುಗಳವಳ್ಳಿ ಭಾವಿ ಆಳಪಡಿಸಲು 20 ರೂಪಾಯಿನ ಅಂದಾಜಾ.

14. ಮುಂದಿನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ 1909ನೆ ಆಗಸ್ಟ್ 12 ತಾರೀಖು ಗುರುವಾರ ನಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸಯ್ಯಂಗಾರ್,
ಪ್ರೆಸಿಡೆಂಟ್.

ಮೈಸೂರು ಗವರ್ನ್ಮೆಂಟ್ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ್ ನಂಬರ 106—C. S. 14, ಮೊಕ್ಕಾಂ ಬೆಂಗಳೂರು.

ತಾರೀಖು 14–15ನೆ ಜುಲೈ 1909.

ಈ ಕೆಳಗೆ ನಮೂದಿಸಿರುವ ಕೋಆಪರೇಟಿವ್ ಸೊಸೈಟಿಯು, 1905ನೆ ಇಸವಿಯ ಮೈಸೂರು ಕೋಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತೆ:—

ಹೆಸರು	ಸ್ಥಳ.	ರಿಜಿಸ್ಟರು ಆದ ತಾರೀಖು.
ಕಡಕೊಳದ ಶ್ರೀ ಸೋಮೇಶ್ವರ ಸಹಾಯ ಸಂಘ ಲಿಮಿಟೆಡ್.	ಕಡಕೊಳ-ಮೈಸೂರು ತಾಲ್ಲೂಕು.	12ನೆ ಜುಲೈ 1909ನೆ ಇಸವಿ.

ಎಂ. ಶ್ಯಾಮರಾವ್,
ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 831.

ಅರ್ಜೀದಾರ್ ಕೋಲಾರ ತಾಲ್ಲೂಕು ತ್ಯಾಕಲ ಹೋಬಳಿ ನಿದರಮಂಗಲದಲ್ಲಿರುವ ಸೊಣಪ್ಪನ ಮಗ ಪಾಪಣ್ಣ, ಮೈನರಾದ 1ನೆ ಮುನಿಶಾಮಿ, 2ನೆ ಹನುಮ ಬೆಂಗಳೂರು ಸ್ಥಳದ ಮೈನರ್ ಮುನಿಶಾಮಿ ವಗೈರೇರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಮುನಿಶ್ಯಾಮಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1909ನೆ ಇಸವಿ ಜುಲೈ ತಾರೀಖು 23ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸರ್ 1909ನೆ ಇಸವಿ ಜುಲೈ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1908—09ನೆ ಇಸವಿ ಮಿ॥ ನಂಬರು 948.

ಮಾಗಡಿ ವಗೈರೆ ಸ್ಥಳದಲ್ಲಿದ್ದು ಬಳ್ಳಾರಿಯಲ್ಲಿ ಮೃತಪಟ್ಟ ಬಿ. ತಿರುವೆಂಗಡ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಕಲಾಶಿಪಾಳ್ಯದಲ್ಲಿರುವ ರಂಗಸ್ವಾಮಿ ಮೊದಲಿಯಾರ್ರ ಮಗಳು ತಾಯಮ್ಮನಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಬಿ. ತಿರುವೆಂಗಡ ಮೊದಲಿಯಾರ್ರ ಜೆಂದಗಿ ಬಗ್ಯಾಗಿ ಬರತಕ್ಕ 271 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಾಯಮ್ಮನ ಅರ್ಜಿಯನ್ನು ಸರ್ 1909ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುವೆಂಗಡಂ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಜುಲೈ 7ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ್ಟ 1908—09ನೆ ಇಸವಿ ಮಿ॥ ನಂಬರ್ 965

ಬೆಂಗಳೂರು ತಾಲ್ಲೂಕು ಹೊರವಮಾವು ಅಗರದಲ್ಲಿದ್ದು ಫವತಿಪಟ್ಟ ಶಂಕರರಡ್ಡಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಸದರಿ ವೂರಿನಲ್ಲಿರುವ ಸಂಜೀವರೆಡ್ಡಿ ಹೆಂಡತಿ ಸಂಜೀವಮ್ಮನಿಗೆ ಮೃತಪಟ್ಟ ಶಂಕರರಡ್ಡಿಗೆ ಮುಖ್ಯ ವಾರಸ್ ದಾರಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊರವಮಾವು ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ಶಂಕರರೆಡ್ಡಿ ಜೆಂದಗಿ ಬಗ್ಗ್ಯಾಗಿ ಬರತಕ್ಕ 390 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಜೀವಮ್ಮನ ಅರ್ಜಿಯನ್ನು 1909ನೆ ಇಸವಿ ಜುಲೈ 30ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಂಕರರಡ್ಡಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಟ 1909ನೆ ಇಸವಿ ಜುಲೈ 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ್ಟ 1908—09ನೆ ಇಸವಿ ಮಿ॥ ನಂಬರ್ 971.

ಬೆಂಗಳೂರು ಚಿಕ್ಕಮಾವಹಳ್ಳಿಲಿದ್ದು ಫವತಿಪಟ್ಟ ವೆಂಕಟಶಾಮಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಿಕ್ಕಮಾವಹಳ್ಳಿಲಿರುವ 1ನೆ ಮುನಿಶಾಮಪ್ಪನ ಹೆಂಡತಿ ಮುನಿಹನುಮಕ್ಕ, 2ನೆ ಮುನಿಯಮ್ಮ 3ನೆ ರಾಮಸ್ವಾಮಪ್ಪ ಮೈನರ್, ಗಾರ್ಡಿಯನ್ 1ನೆ ಮುನಿಹನುಮಕ್ಕನು ಸದರಿ ಮೃತಪಟ್ಟ ವೆಂಕಟಶಾಮಪ್ಪನಿಗೆ ಮುಖ್ಯ ವಾರಸ್ ದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಾವಹಳ್ಳಿಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟಶಾಮಪ್ಪನಿಗೆ ಬರತಕ್ಕ 924 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳಲು ವಾರಸ್ ಸರ್ಟಿಫಿಕೇಟ್ ಬಗ್ಗೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮುನಿಹನುಮಕ್ಕ ವಗೈರೇರ ಅರ್ಜಿಯನ್ನು 1909ನೆ ಇಸವಿ ಜುಲೈ 30ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಶಾಮಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಟ 1909ನೆ ಇಸವಿ ಜುಲೈ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ್ಟ 1908—09ನೆ ಇಸವಿ ಮಿ॥ ನಂಬರ್ 984.

ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿ ಕ್ಲರ್ಕ್ ಆಗಿದ್ದು ಫವತಿಪಟ್ಟ ಕೃಷ್ಣರಾವು ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತರೀಕೆರೆ ತಾಲ್ಲೂಕು ಅಜ್ಜಂಪುರದ ಶ್ಯಾನುಭಾಗ ವೆಂಕಟಕೃಷ್ಣಪ್ಪನವರ ಮನೇಲಿರುವ ಲಕ್ಷ್ಮಿದೇವಮ್ಮನು ಮೃತಪಟ್ಟ ಸದರೀ ಕೃಷ್ಣರಾವ್‌ಗೆ ಮುಖ್ಯ ವಾರಸುದಾರಳು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣರಾವ್ ಜೆಂದಗಿ ಬಗ್ಗ್ಯಾಗಿ ಬರತಕ್ಕ 739—0—0 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳಲು ವಾರಸ್ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಿದೇವಮ್ಮನ ಅರ್ಜಿಯನ್ನು ಸ್ಟ 1909ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣರಾವ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಟ 1909ನೆ ಇಸವಿ ಜುಲೈ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯ್ಯರ್,
ಸಬ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರ್ಸ್ ಆಫೀಸಿನಿಂದ.

ನೋಟಿಸ್.

ತಾರೀಖು 5ನೆ ಜುಲೈ 1909ನೆ ಇಸವಿ.

ಸಿಟಿ ಮಜಕೂರಿನಲ್ಲಿ ಇರುವ ಸೌದೆ, ಇದ್ದಲು, ವಗೈರೆ ಮಾರ್ಜಿನ್ನಲ್ಲಿ ಕಂಡ ಲೈಸೆನ್ಸ್ ಬಾಬಿನ ಅಂಗಡಿಗಳು ಇಟ್ಟಿರುವವರಿಗೆ ತಿಳಿಯಪಡಿಸುವದೇನಂದರೆ :—

1. ಸವುದೇ ಅಂಗಡಿ.
2. ಇದ್ದಲು ಅಂಗಡಿ.
3. ಬಾಣದ ಅಂಗಡಿ.
4. ಕಸಾಯಿ ಅಂಗಡಿ.
5. ಶೀಮೆ ಎಣ್ಣೆ ಅಂಗಡಿ.
6. ಕರ್ಪೂರದ ಬಟ್ಟಿ.
7. ನೀಲಿ ಕಾರ್ಖಾನೆ.

ಸ್ಟ 1909-1910ನೆ ಸಾಲಿಗೆ ಆಯಾ ಬಾಬಿನ ಅಂಗಡಿ ಇಟ್ಟಿರತಕ್ಕವರು ಈ ಲಾಗಾಯಿತು 8 ದಿನಗಳೊಳಗಾಗಿ ಗೊತ್ತಾಗಿ ಇರುವ ಫೀಜನ್ನು ಮ್ಯುನಿಸಿಪಲ್ ಆಫೀಸಿಗೆ ಪಾವತಿಮಾಡಿ ಲೈಸೆನ್ಸ್ ಪಡಿಯಬೇಕು. ಫೀಜನ್ನು ವಸೂಲ್ ಮಾಡುವುದಕ್ಕಾಗಿ ಅಲಾಯಿದಾ ಇಂಟಿಮೇಷನ್ ನೋಟೀಸ್ ವಗೈರೆ ಕೊಡುವುದಿಲ್ಲ. ಮೇಲ್ಕಂಡಂತೆ ವಾಯಿದೆ ಒಳಗೆ ಫೀಸ್ ಪಾವತಿಮಾಡಿ ಲೈಸೆನ್ಸ್ ಪಡಿಯದೆ ತಪ್ಪಿದ ದುಕಾನ್‌ದಾರನನ್ನು ಮತ್ಯಾವ ತಿಳುವಳಿಕೆಯನ್ನೂ ಕೊಡದೆ ರೂಲ್ಸು ಪ್ರಕಾರ ಪ್ರಾಸಿಕ್ಯೂಷನ್ ಮಾಡಲ್ಪಡುತ್ತೆ.

2. ಪ್ರತಿ ಒಂದು ಅಂಗಡೀದಾರರು ಅಂಗಡಿ ಇಟ್ಟು ಇರುವ ಬೀದಿ ಡೋರು ನಂಬರು ಮತ್ತು ಅವರ ಹೆಸರು ಸಹಾ ಚೆನ್ನಾಗಿ ತಿಳಿಯುವಂತೆ ಬರಹಮೂಲಕವಾದ ಒಂದು ಬೋರ್ಡು ಅಂಗಡಿ ಮುಂಭಾಗದಲ್ಲಿ ಹಾಕಬೇಕು. ಸವುದೆ ಅಂಗಡಿಯವರು ಲೈಸೆನ್ಸ್ ಷರತ್ತು ಪ್ರಕಾರ ಪಬ್ಲಿಕ್ ರಸ್ತೆಯಲ್ಲಿ ಜನಗಳಿಗೆ ತೊಂದರೆಯಾಗುವಂತೆ ಸವುದೆ ಹಾಕದೇಲೂ ಲೈಸೆನ್ಸ್ ಪಡಿಯದೇಲೂ ಮತ್ತು ಭಂಡಿಗಳನ್ನು ನಿಲ್ಲಿಸದೇಲೂ ಸಹಾ ಇರಬೇಕು. ಇದಕ್ಕೆ ವಿರೋಧವಾಗಿ ನಡಿಯುತ್ತಾರೆಂದು ತಿಳಿದುಬಂದಲ್ಲಿ ಆ ಕೂಡ್ಲೆ ಸಂಬಂಧಪಟ್ಟ ದುಕಾನುಗಳ ಲೈಸೆನ್ಸುಗಳನ್ನು ರದ್ದುಮಾಡುತ್ತೆ.

3. ಆಜೂಬಾಜೂ ಮನೆಗಳ ವಾಸಸ್ಥರಿಗೆ ಅಪಾಯವಿಲ್ಲದಂತೆಯೂ ಅಂಗಡೀವೊಳಗೇನೆ ಸವುದೆ ಜಮಾಯಿಸುವುದಕ್ಕೂ ಹೊಡೆಯುವುದಕ್ಕೂ ವಿಸ್ತಾರವಾದ ಖಾಲೀಜಾಗಾ ಇರತಕ್ಕ ಅಂಗಡಿಗಳನ್ನು ಮಾತ್ರವೇ ಬಹಲು' ಇಡುತ್ತೆ ಮಿಕ್ಕವುಗಳನ್ನು ವಜಾ ಮಾಡುತ್ತೆ.

4. ಹೊಸದಾಗಿ ಮೇಲ್ಕಂಡ ಬಾಬಿನ ಅಂಗಡಿಗಳನ್ನು ಇಡತಕ್ಕವರು ಕ್ರಮವಾಗಿ ಅರ್ಜಿಯನ್ನು ಹಾಜರ್ಮಾಡಿ ಮಂಜೂರ್ ಆರ್ಡರ್ ಪಡದ ಮೇಲೆಯೇ ಅಂಗಡಿಗಳನ್ನು ಇಟ್ಟುಕೊಳ್ಳಬೇಕೇ ಹೊರ್ತು ಬಗರ್ ಹುಕುಂ ಬಿಲ್‌ಖುಲ್ ಅಂಗಡಿ ಇಡಕೂಡದು. ಹಾಗೆ ಲೈಸೆನ್ಸ್ ಪಡೆಯುವುದಕ್ಕೆ ಮುಂಚೆ ಅಂಗಡಿ ಇಟ್ಟಲ್ಲಿ ರೂಲ್ಸ್ ಪ್ರಕಾರ ಅಂಗಡಿ ಮುಚ್ಚಿಸಿ ಅಂಗಡೀದಾರನನ್ನು ಪ್ರಾಸಿಕ್ಯೂಷನ್ ಮಾಡುತ್ತೆ.

ಎ. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ನೋಟೀಸ್.

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಳಲ್ಕೆರೆ ತಾಲ್ಲೂಕು ಹೊಳಲ್ಕೆರೆ ಕಸಬಾದಲ್ಲಿ ಇರುವ ಲೋಕದಹೊಳಲು ಸಂಗನ ಬಸಪ್ಪನವರ ಮಕ್ಕಳು ಕಲ್ಲಪ್ಪನವರು ಸರ್ವೇ ಸಮಸ್ತರಿಗು ಮೈಸೂರು ಗವರ್ನಮೆಂಟ್ ಗೆಜೆಟ್ಟಿನ ಮೂಲಕ ಪ್ರಸಿದ್ಧಪಡಿಸುವದೇನೆಂದರೆ— ನನ್ನ ಖಾಸಾ ಮಗ ಸುಮಾರು 18, 19 ವರುಷ ವಯಸ್ಸಿನ ಮಹೇಶ್ವರಪ್ಪನೆಂಬುವ ಹುಡುಗನು ಈಗ ಸುಮಾರು 2-3 ವರುಷದ ಲಾಗಾಯಿತು ಕೆಟ್ಟ ಜನಗಳ ಸಹವಾಸಕ್ಕೆ ಬಿದ್ದು ಸುಮಾರು ಎರಡು, ಮೂರು ನೂರು ರೂಪಾಯಿಗಳ ಸಾಲ ಮಾಡಿಕೊಂಡು ಕೆಟ್ಟ ಕೆಲಸಗಳಿಗೆ ಪ್ರವರ್ತಿಸಿ ಇರುತ್ತಾನೆ. ಸದರಿ ಮಹೇಶ್ವರಪ್ಪನಿಗೆ ಯಾರಾದರೂ ಸಾಲ ವಗೈರೆ ಕೊಡಕೂಡದು ಹಾಗೇನಾದರೂ ಹಿಂದೆ ಕೊಟ್ಟಿದ್ದೆ ಆದರೆ ಮುಂದೆ ಕೊಡುವದೆ ಆದರೆ ಮತ್ತು ಹಿಂದೆ ಕೊಟ್ಟಿರುವ ಸುಮಾರು ಇನ್ನೂರು ಮುನ್ನೂರು ರೂಪಾಯಿಗಳ ಸಾಲಕ್ಕು ಕೂಡ ನಾನು ಜವಾಬ್ದಾರನಾಗುವದಿಲ್ಲ. ಮತ್ತು ನನ್ನ ಸ್ವಯಾರ್ಜಿತದ ಆಸ್ತಿ ವಗೈರೆಗೆ ನನ್ನ ಮಗ ಮತ್ತು ಇತರೆ ಸಾಲ ವಗೈರೆ ಕೊಟ್ಟಿರುವ ಯಾರಾದರೂ ಕೂಡ ನನ್ನ ಸ್ವಯಾರ್ಜಿತ ಆಸ್ತಿ ಮೇಲೆ ದಾವಾ ನಡಿಸುವದಕ್ಕೆ ಯಾರಿಗೂ ಹಕ್ಕು ಇರುವದಿಲ್ಲವಾಗಿ ಎಲ್ಲರಿಗೂ ಈ ನೋಟಿಸ್ ಮೂಲಕ ಎಚ್ಚರಿಸಲ್ಪಟ್ಟಿದೆ.

ತಾರೀಖು 14ನೆ ಜೂನ್ 1909.

ಕಲ್ಲಪ್ಪ ರುಜು.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಂಯಿಷ್ ಆದ್ದು. [ಸಂ. 30.

ಬೆಂಗಳೂರು, ಗುರುವಾರ, ಜುಲೈ ತಾ|| 29, ಸ್ 1909.

II ನೆ ಬಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟು ಇಲಾಖಾ.

ನೋಟಫಿಕೇಷ್ನ, ತಾರೀಖು 20ನೆ ಜುಲೈ 1909—ಮೊಕ್ಕಾಂ ರಾಮಗೊಂಡಹಳ್ಳಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ: —1909—1910ನೆ ಇಸವಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ ಫಾರೆಸ್ಟುಗಳ ವಣಬಿದರು ಗಳುಗಳು ಪಸಾರೆ ಜಿನಸಿಯ ಹಕ್ಕುದಾರಿಯನ್ನು ರೇಂಜ್ ಫಾರೆಸ್ಟು ಆಫಿಸರುಗಳು ಈ ಕೆಳಗೆ ಕಾಣಿಸಿ ಇರುವ ಸ್ಥಳಗಳಲ್ಲಿಯು ಆಯಾಯ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ.

ಈ ಹರಾಜು ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಹರಾಜು ಆಯಾಯ ತಾರೀಖಿನ ಮಧ್ಯಾನ್ಹ 2 ಘಂಟೆಗೆ ಷುರು ಮಾಡಲ್ಪಡುವದು.

ಬಾಬ ನಂಬರು.	ರೇಂಜಿನ ಹೆಸರು.	ಫಾರೆಸ್ಟಿನ ಹೆಸರು.	ಹರಾಜಾಗತಕ್ಕ ಜಾಗ ಮತ್ತು ತಾರೀಖು.	
			ಜಾಗ.	ತಾರೀಖು.
1	ಬೆಂಗಳೂರು ರೇಂಜ್ ...	ದೊಡ್ಡಬಳ್ಳಾಪುರ (ಉಜನಿ, ಹುಲ್ಕುಡಿ, ಮಾಕಳಿ, ಹಾರೋಹಳ್ಳಿ ಬ್ಲಾಕು).	ದೊಡ್ಡಬಳ್ಳಾಪುರ.	13—9—1909.
	,, ...	ದೇವರಪಟ್ಟ ಸ್ಟೇಟ ಫಾರಸ್ಟು ...		
	,, ...	ವೇಂಟನಾಯ್ಕನಹಳ್ಳಿ ಸ್ಟೇಟ ಫಾರೆಸ್ಟು ...		
	,, ...	ರಾಗಿಹಳ್ಳಿ "ಎ" ಮತ್ತು "ಬಿ" ಬ್ಲಾಕುಗಳು.	ಕಗ್ಗಲಿಪುರ ...	24—9—1909
	,, ...	ಬಿಳ್ಳನಗುಪ್ಪೆ ರಿಜರ್ವ್ ...		
	,, ...	ತಮ್ಮನಾಯ್ಕನಹಳ್ಳಿ ರಿಜರ್ವ್ ...		
	,, ...	ಮಹದೇಶ್ವರ ರಿಜರ್ವ್ ...		
	,, ...	ಗುಳ್ಳಕಟ್ಟ ಕಾವಲ್ ...		
	,, ...	ಬನ್ನೇರಘಟ್ಟ ಕಾವಲ್ ...		
	,, ...	ಜೆಟ್ಟಹಳ್ಳಿ ಡಿಟೋ ...		
	,, ...	ಗಬ್ಬಾಡಿ ಡಿಟೋ ...		
	,, ...	ಜಾಲಗೆರೆ ಡಿಟೋ ...		
	,, ...	ರಾಮಪುರ ಡಿಟೋ ...		
	,, ...	ಜತ್ರಾಲ್ ಡಿಟೋ ...		

ಅಂಕಿ ಸಂಖ್ಯೆ	ರೇಂಜಿನ ಹೆಸರು.	ಫಾರೆಸ್ಟಿನ ಹೆಸರು.	ಹರಾಜಾಗತಕ್ಕ ಜಾಗ ಮತ್ತು ತಾರೀಖು.	
			ಜಾಗ.	ತಾರೀಖು.
1	ಬೆಂಗಳೂರು ರೇಂಜು ...	ಪೀಣ್ಯ ಪ್ಲಾಂಟೇಷನ್ ...	ಪೀಣ್ಯ ಲಾಡ್ಜು...	10—9—1909
	,, ...	ಗಂಟಿಗಾನಹಳ್ಳಿ ಪ್ಲಾಂಟೇಷನ್ ...		
	,, ...	ಅಪ್ಪಸಂದ್ರ ಪ್ಲಾಂಟೇಷನ್ ...	ಜಡಿಗೇನಹಳ್ಳಿ ...	19—9—1909
	,, ...	ಬಳ್ಳಗೆರೆ ಪ್ಲಾಂಟೇಷನ್ ...		
	,, ...	ಹುಲಿಕುಂಟೆ ಡಿಸ್ಟ್ರಿಕ್ಟು ಜಂಗಲು ...		
	,, ...	ಸೋಲದೇವನಹಳ್ಳಿ ಫಾರೆಸ್ಟು ...	ನೆಲಮಂಗಲ ...	20—9—1909
	,, ...	ನಿಜಗಲ್ ಫಾರೆಸ್ಟು ...		
2	ಕ್ಲೋಸ್‌ಪೇಟೆ ರೇಂಜ್ ...	ಕುಂಬಳಗೋಡು ಸ್ಟೇಟ್ ಫಾರೆಸ್ಟು ...		
	,, ...	ಹುಲ್ತಾರು ಡಿಟೋ ...		
	,, ...	ಹಂದಿಗುಂದಿ ಡಿಟೋ ...		
	,, ...	ಮಾಕಳಿ ಡಿಟೋ ...	ಕ್ಲೋಸ್‌ಪೇಟೆ ರೇಂಜಾಫೀಸು.	12—9—1909
	,, ...	ತೆಂಗಿನಕಲ್ ಡಿಟೋ ...		
	,, ...	ಚಿಕ್ಕ ಮಣ್ಣುಗುಡ್ಡೆ ಡಿಟೋ ...		
	,, ...	ದೊಡ್ಡ ಮಣ್ಣುಗುಡ್ಡೆ ಡಿಟೋ ...		
	,, ...	ಅಚ್ಚಲ್ ಡಿಟೋ ...		
	,, ...	ಸಾವನದುರ್ಗ ಡಿಟೋ ...		
	,, ...	ಸಿದ್ಧೇದೇವರಪಟ್ಟ ಡಿಟೋ ...		
	,, ...	ಅದರಂಗಿ ನಾರ್ತ್ ಡಿಟೋ ...	ನಾಯ್ಡು ನವಾಳ್ಯ ಲಾಡ್ಜು.	9—9—1909
	,, ...	ಡಿಟೋ ಸೌತ್ ರಿಜರ್ವ್ ...		
	,, ...	ಕೂರನಗೆರೆ ಸ್ಟೇಟ್ ಫಾರೆಸ್ಟು ...		
	,, ...	ಅತ್ತಿಂಗೆರೆ ರಿಜರ್ವ್ ...		
3	ಕಾನಕಾನಹಳ್ಳಿ ರೇಂಜ್ ...	ಬಿಳೀಕಲ್ ಸ್ಟೇಟ್ ಫಾರೆಸ್ಟು ...	ಕಾನಕಾನಹಳ್ಳಿ ರೇಂಜಾಫೀಸ.	21—9—1909
	,, ...	ಮುಗ್ಗೂರು ಡಿಟೋ ...		
	,, ...	ಮಂಜನತ್ತ ರಿಜರ್ವ್ ...	ಕೋಡಿಹಳ್ಳಿ ಮುಸಾಫರ್‌ಖಾನೆ.	19—9—1909
	,, ...	ರಾಮದೇವರಬೆಟ್ಟ ರಿಜರ್ವ್ ...		
	,, ...	ಮುನೇಶ್ವರನಬೆಟ್ಟ ರಿಜರ್ವ್ ...		
4	ಸಾತನೂರು ರೇಂಜ್ ...	ಬಾಣಂತಮಾರಿ ಸ್ಟೇಟ್ ಫಾರೆಸ್ಟು ...	ಕಾನಕಾನಹಳ್ಳಿ ರೇಂಜಾಫೀಸು.	21—9—1909
	,, ...	ಚೀಲಂದಾಡಿ ಡಿಟೋ ...		
	,, ...	ಕಬ್ಬಾಳ್ ಡಿಟೋ ...		
	,, ...	ಬಸವನಬೆಟ್ಟ ಡಿಟೋ ...	ಸಾತನೂರು ಮುಸಾಫರ್‌ಖಾನೆ.	15—9—1909
	,, ...	ಅಚ್ಚಲ್ ರಿಜರ್ವ್ ...		
	,, ...	ತೈಲೂರು ರಿಜರ್ವ್ ...		

ಜಿನಸಿಯ ತಪಶೀಲ್.

1. ಹುಣಸೇಹಣ್ಣು, 2. ಹೊಂಗೇಬೀಜ, 3. ಶೀಗೇಕಾಯಿ, 4. ಗೋಂದು, 5. ಜೇನುತುಪ್ಪ, 6. ಜೇನುಮೇಣ, 7. ಕಪಿಲಾರಂಗು, 8. ಗೇರುಬೀಜ, 9. ಬ್ಯಾಲದಹಣ್ಣು, 10. ಕಲ್ಲುಹುವ್ವು, 11. ಚಾರಪೊಪ್ಪು, 12. ತಾರೇಕಾಯಿ, 13. ಚಗಚೇಬೀಜ, 14. ಅಂಟವಾಳದಕಾಯಿ, 15. ಕಾಡಹರಳು, 16. ಬೂರಗದಹತ್ತಿ, 17. ಕಿರಿ ಈಚಲು, 18. ಮಾಗಳಿ ಬೇರು, 19. ಸೊಗದೇಬೇರು, 20. ಹಿಪ್ಪೆಬೀಜ, 21. ಕೊಂಬುಗಳು, 22. ಅಳಲೆಕಾಯಿ, 23. ಸೀತಾಫಲದಹಣ್ಣು.

2. ಆಡ ದರಖಾಸ್ತುದಾರನು ಹರಾಜು ಖೈದಾದ ಕೂಡಲೆ ಒಟ್ಟು ಮೊಬಲಗಿನ ಪೈಕಿ ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಷುರು ದರಖಾಸ್ತುದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಫಾಯಿದೆ ಉಂಟಾದಲ್ಲಿ ಈತನು ಭಾಗಿಯಾಗುವದಿಲ್ಲ.

3. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲುಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ಉಳಿಯುವ ಹಣವನ್ನು ರವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ.

4. ರೇಂಜು ಫಾರೆಸ್ಟು ಆಫಿಸರು ಯಾವದೊಂದು ಕಾರಣವನ್ನು ತಿಳಿಸದೇ ದರಖಾಸ್ತು ಮಂಜೂರ್ಮಾಡುವದಕ್ಕೆ ಆಗಲೀ ತಿರಸ್ಕರಿಸುವದಕ್ಕಾಗಲೀ ಸ್ವತಂತ್ರರಾಗಿ ಇರುತ್ತಾರೆ.

5. ದರಖಾಸು ದಾರನು ಇನಾಂದಾರರಿಗೆ ಗೊತ್ತಾದ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

6. ದರಖಾಸ್ತುದಾರನಾಗಲಿ ಅಥವಾ ಅವನ ಆಳುಗಳೇ ಆಗಲಿ ಪಸಾರೆ ಜಿನಸಿ ಜಮಾವಣೆ ನೆಪದಮೇಲೆ ಯಾವ ಗಿಡಗಳನ್ನಾಗಲೀ ನಾಶಪಡಿಸಕೂಡದು.

7. ದರಖಾಸ್ತುದಾರನು ತಾನು ಖರೀದಿಗೆ ಪಡೆಯುವ ಜಿನಸಿ ವಿನಾ ಇತರ ಯಾವ ಜಿನಸಿಯನ್ನೂ ಜಮಾಯಿಸಕೂಡದು.

8. ದರಖಾಸ್ತು ದಾರನ ಏಜಂಟರುಗಳಾಗಲೀ ಅಥವಾ ಆಳುಗಳಾಗಲೀ ಪಸಾರೆ ಜಿನಸಿ ಜಮಾವಣೇ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ದರಖಾಸ್ತು ದಾರನನ್ನೇ ಗುರಿಪಡಿಸಲಾಗುತ್ತೆ.

9. ದರಖಾಸ್ತು ದಾರನು 1910ನೆ ಜೂನ್ ಆಖೈರು ವಳಗಾಗಿ ಎಲ್ಲಾ ಪಸಾರೆ ಜಿನಸೀಯನ್ನು ಸ್ಟೇಟ್ ಫಾರೆಸ್ಟು ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

10. ಸ್ಟೇಟ್ ಫಾರೆಸ್ಟಿಗೆ ದರಖಾಸ್ತು ದಾರನ ಅಶ್ರದ್ಧೆಯಿಂದಲಾಗಲೀ ಅಥವಾ ಈತನ ಆಳುಗಳಿಂದಲಾಗಲೀ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯಬಂದಲ್ಲಿ ಈ ಅಕೃತ್ಯಕ್ಕೆ ದರಖಾಸ್ತು ದಾರನನ್ನು ಗುರಿಪಡಿಸಲಾಗುತ್ತೆ.

11. ದರಖಾಸ್ತು ದಾರನೇ ಆಗಲೀ ಅಥವಾ ಈತನ ನೌಕರರೇ ಆಗಲೀ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಯಾನಂತರ ಸ್ಟೇಟ್ ಫಾರೆಸ್ಟಿನಲ್ಲಿ ಪ್ರವೇಶ ಮಾಡಕೂಡದು.

12. ಹರಾಜ ದರಖಾಸ್ತು ದಾರನು ತನ್ನ ಕಂಟ್ರಾಕ್ಟು ಷರತ್ತುಗಳಿಗೆ ಬದ್ಧನಾಗಿರಲು ಖಾತರೀ ಬಗ್ಯೆ 25 ರೂಪಾಯಿಗಳನ್ನು ನಗದಾಗಿ ಠೇವಣಿ ಇಡಬೇಕು. ಷರತ್ತುಗಳ ಪೈಕಿ ಯಾವ ಭಾಗದಲ್ಲಿಯಾದರೂ ವಿರೋಧವಾಗಿ ನಡದದ್ದೇ ಆದರೆ ಖಾತರೀ ಬಗ್ಯೆ ಠೇವಣಿ ಇಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ರೂಢಿಸಿಕೊಳ್ಳುವ ಹಕ್ಕು ಸಹ ರದ್ದುಪಡಿಸಲಾಗುತ್ತೆ.

ನೋಟಿಫಿಕೇಷನ್, ತಾರೀಖು 20ನೆ ಜುಲೈ 1909, ಮೊಕ್ಕಾಂ ರಾಮಗೊಂಡಹಳ್ಳಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಇದರಡಿ ನಮೂದಾಗಿರುವ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಮತ್ತು ರೆವಿನ್ಯೂ ಪ್ಲಾಂಟೇಷನ್‌ಗಳ ಹುಲ್ಲನ್ನು 1910ನೆ ಇಸವಿ ಜನವರಿ 31ನೆ ತಾರೀಖು ವರಿವಿಗೆ ಕುಯಿದು ಸಾಗಿಸಿಕೊಳ್ಳುವ ಹಕ್ಕನ್ನು ಸದರೀ ಪ್ಲಾಂಟೇಷನ್‌ಗಳ ಬಾಜೂದಲ್ಲಿ ನಮೂದಾಗಿ ಇರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದಲಾಗಲೀ ಅಥವಾ ರೇಂಜ್ ಫಾರೆಸ್ಟ್ ಆಫಿಸರವರಿಂದಲಾಗಲೀ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.
ಬೆಂಗಳೂರು ...	ಬಟ್ಟೆಸು ಹೆಬ್ಬಾಳ ...	100	16—8—09	ಬೆಂಗಳೂರು.
,, ...	ಬ್ರಹ್ಮಸಂದ್ರ ಪ್ಲಾಂಟೇಷನ್ ...	48	16—8—09	,,
,, ...	ಗಂಟಿಗಾನಹಳ್ಳಿ ಡಿಟೋ ...	300	16—8—09	,,
,, ...	ಸೂಲಿಕೆರೆ ಡಿಟೋ ...	200	16—8—09	,,
ನೆಲಮಂಗಲ ...	ಬಳ್ಳಗೆರೆ ಡಿಟೋ ...	400	18—8—09	ನೆಲಮಂಗಲ.
,, ...	ಬೈರಶೆಟ್ಟಿಹಳ್ಳಿ "ಗೊಲ್ಲಹಳ್ಳಿ" ಡಿಟೋ ...	86	18—8—09	,,
,, ...	ಬೊಮ್ಮನಹಳ್ಳಿ ಡಿಟೋ ...	174	18—8—09	,,
,, ...	ಮಾವಿನಕೋಮನಹಳ್ಳಿ ಡಿಟೋ ...	435	18—8—09	,,
,, ...	ಚಿಕ್ಕಸಂದ್ರ ಡಿಟೋ ...	330	18—8—09	,,
ಹೊಸಕೋಟೆ ...	ಕಾಡಗೋಡಿ ಪ್ಲಾಂಟೇಷನ್ ಸಾದರಮಂಗಲದ ನರಸರಿ ಪ್ಲಾಂಟೇಷನ್.	...	20—8—09	ಕಾಡಗೋಡಿ.
ದೇವನಹಳ್ಳಿ ...	ಸಾವಕನಹಳ್ಳಿ ಸಂದಲ್ ಪ್ಲಾಂಟೇಷನ್ ...	65	24—8—09	ದೇವನಹಳ್ಳಿ.
,, ...	ತಾಲ್ಲೂಕು ಕಚೇರಿಮುಂದಿನ ಪ್ಲಾಂಟೇಷನ್ ...	5	24—8—09	,,
,, ...	ನವಾಬ್ ಬಂಗಲೆ ಡಿಟೋ ...	7 ಗುಂಟೆ	24—8—09	,,
,, ...	ಸೊಣ್ಣಪ್ಪನಹಳ್ಳಿ ಡಿಟೋ ...	4 ಎಕರೆ	24—8—09	,,
,, ...	ಖೂವನಹಳ್ಳಿ ಡಿಟೋ ...	47	24—8—09	,,
,, ...	ಯರತಿಗಾನಹಳ್ಳಿ ಡಿಟೋ ...	210	24—8—09	,,
,, ...	ಚಿಟ್ಟಕೋಟ ಡಿಟೋ ...	300	24—8—09	,,
,, ...	ರಾಯಸಂದ್ರ ಡಿಟೋ ...	250	24—8—09	,,
,, ...	ಮಂಡಿಬಲೆ ಡಿಟೋ ...	200	24—8—09	,,
,, ...	ಅಕ್ಕುಂಪೇಟೆ ಅಥವಾ ಖಾಸೀಬಾಗ್ ಪ್ಲಾಂಟೇಷನ್.	101	24—8—09	,,
ದೊಡ್ಡಬಳ್ಳಾಪುರ ...	ಪಾಲ್ಜೋಗಿಹಳ್ಳಿ ಡಿಟೋ ...	29	26—8—09	ದೊಡ್ಡಬಳ್ಳಾಪುರ.
,, ...	ಮುದ್ದೇನಹಳ್ಳಿ ಡಿಟೋ ...	25	26—8—09	,,
,, ...	ಕೋಲೂರ ಡಿಟೋ ...	100	26—8—09	,,

ಷರಾ—2. ಹರಾಜು ಖೈದಾದ ಕೂಡ್ಲೆ ಖರೀದಿದಾರನು $\frac{1}{4}$ ಹಿಸ್ಸೆ ಮೊಬಲಗನ್ನು ಕಟ್ಟಬೇಕು. ಉಳಿದ ಮುಕ್ಕಾಲು ಹಿಸ್ಸೆಯನ್ನು ಖರೀದಿ ತಾರೀಖು ಲಾಗಾಯಿತು 7 ದಿವಸಗಳ ಒಳಗಾಗಿ ಕಟ್ಟಬೇಕು. ಇದಕ್ಕೆ ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾ

ರಕ್ಕೆ ಸೇರಿಸಿಕೊಳ್ಳುವದಲ್ಲದೆ ಹುಲ್ಲನ್ನು ದುಬಾರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಖರೀದಿದಾರನನ್ನು ಗುರಿಮಾಡಲಾಗುತ್ತೆ. ಏನಾದರೂ ಹೆಚ್ಚು ಉತ್ಪತ್ತಿ ಆದಲ್ಲಿ ಅವಲ್ ಖರೀದಿದಾರನು ಯಾವ ವಿಧದಲ್ಲು ಭಾಗಿಯಾಗುವದಿಲ್ಲ. ಪೂರ್ತ ಹಣ ಪಾವತಿ ಮಾಡಿದ ಕೂಡಲೆ ಹುಲ್ಲು ಕೊಯ್ಯುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

3. ಪ್ಲಾಂಟೇಷನ್ನಲ್ಲಿ ಹರಾಜುದಾರನ ಅಜಾಗ್ರತೆಯಿಂದ ಬೆಂಕಿ ವಗೈರೆ ಸಂಭವಿಸಿದಲ್ಲಿ ಖರೀದಿದಾರನು ಜವಾಬ್ದಾರನಾಗಿರುತ್ತಾನೆ. ಖರೀದಿದಾರನಿಂದಲಾಗಲಿ ಅವನ ಕಡೆ ಜನಗಳಿಂದಲಾಗಲೀ ಏನಾದರೂ ಫಾರೆಸ್ಟು ತಕಸೀರು ನಡದಲ್ಲಿ ಫಾರೆಸ್ಟು ರಗ್ಯುಲೇಷನ್ ರೀತ್ಯಾ ಶಿಕ್ಷೆಗೆ ಗುರಿಮಾಡಲ್ಪಡುವನು.

4. ಮೇಲಿನ ಪ್ಲಾಂಟೇಷನ್‌ಗಳ ಹುಲ್ಲನ್ನು ಹಗಲಿನಲ್ಲಿ ಹರಾಜು ಮಂಜೂರಾದ ಅಂದರೆ ಲೈಸೆನ್ಸು ಕೊಟ್ಟ ತಾರೀಖು ಲಾಗಾಯಿತು 1910ನೆ ಜನವರಿ 31ನೆ ತಾರೀಖು ವರಿವಿಗೂ ತೆಗದುಕೊಳ್ಳಬಹುದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ಸನ್ 1913ನೆ ಇಸವಿ ಜೂನ್ ಆಖೈರುವರಿವಿಗೆ ಸುಮಾರು ನಾಲ್ಕು ವರುಷಗಳ ಕಾಲ ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ತಾಲ್ಲೂಕುಗಳಿಗೆ ಸೇರಿದ ಸ್ಟೇಟ್ ಫಾರೆಸ್ಟು ಮತ್ತು ಡಿಸ್ಟ್ರಿಕ್ಟು ಜಂಗಲುಗಳಲ್ಲಿನ ಅರಗು ಫಸಲನ್ನು ರೂಢಿಸಿಕೊಳ್ಳುವ ಷರತ್ತಿನ ಮೇಲೆ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1909ನೆ ಆಗಸ್ಟು 2ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚು ಅಂಶ ತಿಳಿಯಬೇಕಾಗಿದ್ದಲ್ಲಿ 1909ನೆ ಇಸವಿ ಜುಲೈ ಮಾಹೆ 22ನೆ ಮುರ್ರಕ್ಕಂ ಮೈಸೂರು ಗೆಜೆಟ್ಟಿನ IIನೆ ಭಾಗದ 567—568ನೆ ಪುಟಗಳಲ್ಲಿ ಪ್ರಾಯಿಷಾಗಿರುವ ಇಸ್ತಿಹಾರ್ನಾಮೆಗೆ ಸರ್ವರು ನಿಗಾ ಕೊಡತಕ್ಕದ್ದು.

ಸನ್ 1909ನೆ ಇಸವಿ ಆಗಸ್ಟು ತಾರೀಖು 2ಲ್ಲು ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಕಾಮಸಂದ್ರದ ಫಾರೆಸ್ಟಿನ ಕೂಪುಗಳಲ್ಲಿ ಕಟ್ಟಿಗೆಯನ್ನು 1910ನೆ ಇಸವಿ ಜೂನ್ ಆಖೈರು ವರಿವಿಗೆ ಕಡಿದು ಸಾಗಿಸಿಕೊಂಡುಹೋಗುವ ಷರತ್ತಿನಮೇಲೆ ಹರಾಜು ಮಾಡಲ್ಪಡುತ್ತೆ.

ಇನ್ನು ಹೆಚ್ಚು ಅಂಶ ತಿಳಿಯಬೇಕಾಗಿದ್ದಲ್ಲಿ 1909ನೆ ಇಸವಿ ಜುಲೈ ತಾರೀಖು 22ನೆ ಮುರ್ರಕ್ಕಂ ಮೈಸೂರು ಗೆಜೆಟ್ಟಿನ IIನೆ ಭಾಗದ 566—567ನೆ ಪುಟಗಳಲ್ಲಿ ಪ್ರಾಯಿಷಾಗಿರುವ ಇಸ್ತಿಹಾರ್ನಾಮೆಯನ್ನು ಸರ್ವರ ಗಮನಕ್ಕೆ ತಂದಿದೆ.

ಹೆಚ್. ರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ತಾರೀಖು 15ನೆ ಜುಲೈ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸನ್ 1909ನೆ ಇಸವಿ ಹರಾಜು ತಾರೀಖು ಲಾಗಾಯಿತು ಸನ್ 1910ನೆ ಇಸವಿ ಜೂನ್ 30ನೆ ತಾರೀಖುವರಿಗೆ ಸ್ಟೇಟು ಫಾರೆಸ್ಟುಗಳಲ್ಲಿಯೂ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಸಾದೆಗೋಸ್ಕರ ರಿಜರ್ವು ಮಾಡಿರುವ ಸ್ಥಳಗಳಲ್ಲಿಯೂ ಮತ್ತು ಅಮೃತ ಮಹಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸಿಗಳನ್ನು ಬಾಬುವಾರು ತುಮಕೂರು ಡಿಸ್ಟ್ರಿಕ್ಟು ಎಲ್ಲಾ ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಲ್ಲಿ ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನು ಆಯಾಯ ತಾಲ್ಲೂಕು ಅಮಲ್ದಾರ್ರು ರೂಬರೂಖು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಅಥವಾ ಆಯಾ ರೇಂಜು ಆಫಿಸರುಗಳ ಸಹಾಯದೊಂದಿಗೆ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾಹ್ನ 12 ಘಂಟೆಗೆ ಷುರೂ ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜಾಗುವ ಸ್ಥಳ.
1	ಕೊರಟಗೆರೆ ಸಬ್ ತಾಲ್ಲೂಕು	16—8—09	ಕೊರಟಗೆರೆ
2	ಮದ್ದುಗಿರಿ	18—8—09	ಮದ್ದುಗಿರಿ
3	ಶಿರಾ	21—8—09	ಶಿರಾ
4	ಪಾವಗಡ	23—8—09	ಪಾವಗಡ
5	ತುರ್ವೇಕೆರೆ ಸಬ್ ತಾಲ್ಲೂಕು	25—8—09	ತುರ್ವೇಕೆರೆ
6	ತಿಪ್ಟೂರು	28—8—09	ತಿಪ್ಟೂರು
7	ಗುಬ್ಬಿ	31—8—09	ಗುಬ್ಬಿ
8	ಚಿಕ್ಕನಾಯಕನಹಳ್ಳಿ	3—9—09	ಚಿಕ್ಕನಾಯಕನಹಳ್ಳಿ
9	ತುಮಕೂರು	4—9—09	ತುಮಕೂರು

ಪಸಾರೆ ಜಿನಸಿಗಳ ಹೆಸರುಗಳ ತಪಶೀಲ.

2. (1) ಅಳಲೆಕಾಯಿ. (2) ತಾರೆಕಾಯಿ. (3) ಹೊಂಗೆಕಾಯಿ. (4) ಶೀಗೆಕಾಯಿ. (5) ಹುಣಸೆಹಣ್ಣು. (6) ಬ್ಯಾಲದಹಣ್ಣು. (7) ಶಿತಾಫಲದಹಣ್ಣು. (8) ಗೇರುಬೀಜ. (9) ಪಪ್ಲಿಚಕ್ಕೆ. (10) ಸಾವೆಚಕ್ಕೆ. (11) ಮಡ್ಡಿಚಕ್ಕೆ. (12) ದೊಡ್ಡ ಅಗಸೆ. (13) ದಿಂಡಗದ ಗೋಂದು. (14) ಕಾಡು ಅರಸಿನ. (15) ಮರಡಿಪಪ್ಪು. (16) ಕಪಿಲಾರಂಗು. (17) ಕಲ್ಲುಹುವ್ವು. (18) ಜೇನುತುಪ್ಪ. (19) ಮೇಣ. (20) ತಗರಸಿಬೀಜ.

3. ಛಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಛಡ ಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ ಮಾಡಲ್ಪಡುವದು. ಮೇಲೆ ನಮೂದು ಮಾಡಿರುವಂತೆ ಛಡ ದರಖಾಸ್ತುದಾರನು ಡಿಪಾಜಟ್ಟು ಮೊಬಲಗು ಹಾಜರು ಮಾಡದಿದ್ದರೆ ಹಕ್ಕನ್ನು ಆ ಕೂಡ್ಲೆ ದುಸರಾ ಹರಾಜು ಮಾಡಿಸಿ ಲುಕ್ಸಾನಿಗೆ ಅವ್ವಲ್ ದರಖಾಸ್ತುದಾರನನ್ನು ಗುರಿಮಾಡಲ್ಪಡುವದು.

4. ಕ್ಲಿಪ್ತಕಾಲದ ವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರ್ರು ಠೇವಣಿ ಇಟ್ಟ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವ್ವಲ್ ಸವಾಲುದಾರನ ಲುಕ್ಸಾನಿಗೆ ವಳಪಡಿಸಿ ದುಸರಾ ಹರಾಜು ಮಾಡಲ್ಪಡುವದು. ಆದರೆ ದುಸರೆ ಹರಾಜಿನಲ್ಲಿ ಉಂಟಾಗುವ ಫಾಯಿದೆಗೆ ಅವ್ವಲ್ ಛಡ ದರಖಾಸ್ತುದಾರನು ಅರ್ಹನಾಗುವದಿಲ್ಲ.

5. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿಯೂ ಮತ್ತು ಗುಂಡು ತೋಪುಗಳಲ್ಲಿಯೂ ಇರುವ ಮರಗಳ ಅಮಾಯಿ ಫಸಲನ್ನು ರೂಢಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಫಸಾರೆ ಜಿನಸಿಗಳಲ್ಲಿ ಸೇರಿ ಇರುವದಿಲ್ಲ.

7. ಹರಾಜು ಮಂಜೂರಾದ ಸಂಗತಿ ತಿಳಿಸಿದ ಇಪ್ಪತ್ತು ದಿನಗಳೊಳಗಾಗಿ ಛಡ ದರಖಾಸ್ತುದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹೇಳುವ ಷರತ್ತುಗಳನ್ನನುಸರಿಸಿ ಬಾಬು ರೂಢಿಸುವದಾಗಿ ಅವರಲ್ಲಿ ಹಾಜರಾಗಿ ಮುಚ್ಚಳಿಕೆ ಬರದು ಕೊಡಬೇಕು.

ತಾರೀಖು 15ನೆ ಜುಲೈ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸ್ 1909—10ನೆ ಸಾಲಿನಲ್ಲಿ ತುಮಕೂರು ಡಿಸ್ಟ್ರಿಕ್ಟಿನ ಇದರಡೀಲಿ ಕಂಡ ಸರ್ಕಾರಿ ಪ್ಲಾಂಟೇಷರ್ನಗಳಲ್ಲಿ ಕ್ಯಾಸರೀನಾ ಸಸಿದೆಯನ್ನು ಕಡಿದು ಸಾಗಿಸಿಕೊಂಡು ಹೋಗುವ ಹಕ್ಕುದಾರಿಯು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1909ನೆ ಆಗಸ್ಟ 9ನೆ ಮಧ್ಯಾಹ್ನ 2 ಘಂಟೆಯಲ್ಲಿ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಹರಾಜು ಮಾಡಲ್ಪಡುತ್ತೆ. ಈ ಹರಾಜು ಮೈಸೂರು ಸೀಮೆಯ ಫಾರೆಸ್ಟು ಕನ್ಸರವೇಟರ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ಕ್ರಮ ನಂ.	ಪ್ಲಾಂಟೇಷನ್ ಹೆಸರು.	ಕ್ಯಾಸರೀನಾ ಸವುದೆ ಮೊತ್ತ ಸುಮಾರು.
1	ಅಡಗೂರು	500 ಟನ್.
2	ಚನ್ನಶೆಟ್ಟಿಹಳ್ಳಿ	
3	ಹೊನ್ನವಳ್ಳಿ	
4	ನಿಟಗುಂಟೆ	
5	ಅಮ್ಮನಗಟ್ಟ	
6	ಗೊರವೀಪುರ	
7	ಉದಿ ಹೊಸಕೆರೆ	
8	ಅಂಕಾಪುರ	
9	ಮಾರಶೆಟ್ಟಿಹಳ್ಳಿ	
10	ಹರೇನಹಳ್ಳಿ	
1	ಲಿಂಗನಹಳ್ಳಿ	200 ಟನ್.
2	ಬಳ್ಳಾಪುರ	
3	ಗೊಲ್ಲಹಳ್ಳಿ	
4	ಮಲ್ಲಸಂದ್ರ	
5	ದಾಸರಹಳ್ಳಿ	
6	ಪಂಡಿತನಹಳ್ಳಿ	

ಷರತ್ತುಗಳು.

ಛಡ ದರಖಾಸ್ತುದಾರನು ತನ್ನ ಸವಾಲ್ ಮಂಜೂರಾದ ಒಂದು ವಾರದ ವಳಗಾಗಿ ಈ ಕೆಳಗೆ ಕಾಣಿಸುವ ಷರತ್ತುಗಳ ಪ್ರಕಾರ ನಡಿಯಲು ಬದ್ಧನಾಗಿ ಛಾಪಾಕಾಗದ ಮುಚ್ಚಳಿಕೆ ಬರಕೊಡಬೇಕು. ಷರತ್ತು ಮೇರೆ ನಡಿಯಲು ಸೆಕ್ಯೂರ್ಟಿಗಾಗಿ 200 ರೂಪಾಯಿಗಳನ್ನು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ ಹೆಸರಿನಲ್ಲಿ ಸೇವಿಂಗ್ಸ ಬ್ಯಾಂಕಿನಲ್ಲಿ ಡಿಪಾಜಟ್ ಇಟ್ಟುಕೊಳ್ಳಲ್ಪಡುತ್ತೆ.

(a) ಕಡಿಯತಕ್ಕ ಗಿಡಗಳಿಗೆ ಮುಂಚಿತವಾಗಿ ರೇಂಜ್ ಆಫಿಸರು ಚುನಾಯಿಸಲ್ಪಟ್ಟ ಕಂಪಾರ್ಟುಮೆಂಟುಗಳಲ್ಲಿ ಮಾತ್ರ ಗುರ್ತುಹಾಕಿ ಕೊಡುತ್ತಾರೆ. ಕಡಿಯುವದರಲ್ಲಿ ಬಂದು ಕಂಪಾರ್ಟುಮೆಂಟ್ ಪೂರೈಸಿದ ನಂತರ ಇನ್ನೊಂದು ಕಂಪಾರ್ಟುಮೆಂಟ್ ಈ ಮೇರೆ ಕ್ರಮವಾಗಿ ಕತ್ತ್ರಾವಣಿ ಕೆಲಸ ಮಾಡಬೇಕು.

(b) ಕಡಿಯುವದಕ್ಕೆ ಕೊಡ್ಲಿಗಳನ್ನು ಉಪಯೋಗಿಸಕೂಡದು. ಆದರೆ ಸಾಧ್ಯವಾದ ಮಟ್ಟಿಗೂ ಮರಗಳನ್ನು ಭೂಮಿ ಮಟ್ಟಕ್ಕೆ ಗರಗಸದಿಂದ ಕೊಯಿದುಕೊಳ್ಳಬೇಕು. ಬೇಕಾದಷ್ಟು ಉಸ್ತಕ್ಕೆ ಅಂದರೆ, ಮೂರು ಅಡಿ ಉದ್ದಕ್ಕೆ ಮೀರದ ತುಕ್ಕಡೆಗಳನ್ನು ಗರಗಸದಿಂದ ಕೊಯ್ಯಬೇಕು.

(c) ಕಂಪಾರ್ಟುಮೆಂಟ್ ಲೈನಿನಲ್ಲಿ ಆಗಲಿ ಅಥವಾ ಡಿ॥ ಫಾರೆಸ್ಟ್ ಆಫಿಸರು ಒಪ್ಪುವ ಜಾಗಾದಲ್ಲಿ ಹುಷಾರಿಯಿಂದ ಸವುದೆಯನ್ನು ಬೇರೆಬೇರೆ ವಿಂಗಡಿಸಿ ಸ್ಟ್ಯಾಕ್ ಕಟ್ಟತಕ್ಕದ್ದು. ಸ್ಟ್ಯಾಕುಗಳು ಚೌಕ ನೀಳವಾಗಿ ಕಟ್ಟಬೇಕಲ್ಲದೆ ಅಳತೇಲಿ 68 ಸಲೆ ಅಡಿ ಬರುವಂತೆ ಕಟ್ಟಿರಬೇಕು.

(d) ಥಪ್ಪದಲ್ಲಿ ಒಂದುವರೆ ಇಂಚಿಗಿಂತ ಜಾಸ್ತಿ ಇರುವ ಸವುದೆ ತುಂಡುಗಳೆಲ್ಲವನ್ನು ಮಂಜೂರಾದ ದರದಂತೆ ಮೊಬಲಗು ಕೊಟ್ಟು ಸಾಗಿಸಿಕೊಳ್ಳಲು ಕಂಟ್ರಾಕ್ಟರನು ಬದ್ಧನಾಗಿರತಕ್ಕದ್ದು. ಅದರಂತೆ ಕಮ್ಮಿ ಅಳತೆವುಳ್ಳ ಸವುದೆಯು ಬೇಕಾದರೆ ತಾನೆ ಗಾಡಿ ಬೋಜಾ 1ಕ್ಕೆ 8 ಆಣೆ ಮೇರೆ ಕೊಟ್ಟು ತೆಗದುಕೊಳ್ಳತಕ್ಕದ್ದು. ಹಾಗೆ ತೆಗದುಕೊಳ್ಳದಿದ್ದರೆ ಸ್ಥಳದಲ್ಲಿ ಬಿಕರಿಗೆ ವುಳಸಲ್ಪಡುತ್ತೆ.

(e) ಮಂಜೂರಾದ ದರದ ಮೇಲೆ ಸಾಗಿಸಿಕೊಳ್ಳುವ ಎಲ್ಲಾ ಸವುದೆಗೂ ಮೊಬಲಗನ್ನು ಪಾವತಿ ಮಾಡಿ ಸಾಗಿಸಿಕೊಳ್ಳಬೇಕು. ಪ್ಲಾಂಟೇಷನ್ ಹೊರಗೆ ಸಾಗಿಸಿಕೊಳ್ಳುವದಕ್ಕೆ ಮೊದಲೇ ರೇಂಜ್ ಆಫಿಸರಿಂದ ಪ್ಯಾಸ್ ಪಡಿಯಬೇಕು.

(f) ಸೂರ್ಯೋದಯಕ್ಕೆ ಮುಂಚೆ ಸೂರ್ಯಾಸ್ತಮಾನ ಆದನಂತರ ಸವುದೆ ಸಾಗಿಸಿಕೊಳ್ಳಕೂಡದು.

(g) ಕಂಟ್ರಾಕ್ಟರನು ಈ ಕಂಟ್ರಾಕ್ಟ್ ಮೇರೆ ಕೆಲಸ ಮಾಡುತ್ತಿರುವಾಗ ಅಜುಬಾಜು ಇರುವ ಜನರ ಸ್ವಂತ ಪ್ಲಾಂಟೇಷನ್‌ಗಳ ಸವುದೆಯನ್ನು ಖರೀದಿಗೆ ತೆಗದುಕೊಳ್ಳಕೂಡದು ಅಲ್ಲದೆ ಸರಕಾರ ಪ್ಲಾಂಟೇಷನ್‌ಗೆ ಲಗತ್ತು ಇರುವ ತನ್ನ ಸ್ವಂತ ಪ್ಲಾಂಟೇಷನ್ ಇದ್ದರೆ ಅದರಲ್ಲಿಯೂ ಕೆಲಸ ನಡಸಕೂಡದು.

(h) 1909ನೆ ಜೂನ್ ಮಾಹೆ ಆಖೈರು ವಳಗಾಗಿ ಕತ್ತ್ರಾವಣಿ ಮತ್ತು ಗಾಡಿಗಳ ಮೇಲೆ ಸಾಗಿಸಿಕೊಳ್ಳತಕ್ಕದ್ದೆಲ್ಲ ಪೂರೈಸಬೇಕು.

(i) ಗುರ್ತುಮಾಡಿಕೊಟ್ಟ ಮರ ಕಡಿಯುವಾಗ ಸಮೀಪದಲ್ಲಿರುವ ಸಂದಲ್ ಅಥವಾ ಇತರ ಮರಕ್ಕೆ ಏನೂ ಇಜಾ ಆಗದಂತೆ ಹುಷಾರಾಗಿ ಇರಬೇಕು. ಹಾಗೆ ಏನಾದರೂ ಅಜುಬಾಜು ಇರುವ ಬೆಳಿಯತಕ್ಕ ಮರಗಳಿಗೆ ಕಂಟ್ರಾಕ್ಟರನಿಂದಲೆ ಆಗಲಿ ಅಥವಾ ಆತನ ಕಡೆ ಜನರಿಂದಲೇ ಆಗಲಿ ಮನಃಪೂರ್ವಕವಾಗಿ ಅಥವಾ ಉದಾಸೀನದಿಂದಾಗಲಿ ಇಜಾ ಸಂಭವಿಸಿದರೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಗೊತ್ತುಮಾಡುವಷ್ಟು ನಷ್ಟದ ಮೊಬಲಗನ್ನು ಸರಕಾರಕ್ಕೆ ಕಂಟ್ರಾಕ್ಟರನು ಕೊಡಲು ಬದ್ಧನಾಗಿರುತ್ತಾನೆ.

(j) ಯಾವ ಸಂದರ್ಭದಲ್ಲಿಯೂ ಪ್ಲಾಂಟೇಷನ್‌ನಲ್ಲಿ ಬೆಂಕಿ ಹಚ್ಚಕೂಡದು.

(k) ಕಂಟ್ರಾಕ್ಟರನು ರೈಲುಮೇಲೆ ಸಾಗಿಸುವ ಸವುದೆ ಮೊತ್ತಾ ಅಂದರೆ, ವಾಗಿನ್ ಸಂಖ್ಯೆ, ಎಲ್ಲಿಗೆ ಸಾಗಿಸತಕ್ಕದ್ದು, ತೂಕ, ಈ ತಪಶೀಲ್‌ಗಳನ್ನು ಆಗಾಗ್ಯೆ ರೇಂಜ್ ಆಫಿಸರಿಗೆ ರಿಪೋರ್ಟು ಮಾಡುತ್ತಾ ಬರಬೇಕು.

(l) ಕಂಟ್ರಾಕ್ಟರನೆ ಆಗಲಿ ಆವನ ಕಡೆ ಜನರೆ ಆಗಲಿ ಮೇಲೆ ಕಂಡ ಷರತ್ತುಗಳಲ್ಲಿ ಯಾವ ಷರತ್ತಿಗಾದರೂ ತಪ್ಪಿ ನಡದರೆ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳುತ್ತೆ. ಅಲ್ಲದೆ 1906ನೆ ಇಸವಿ ಫಾರೆಸ್ಟ್ ರೂಲ್ಸು 84ನೆ ಸೆಕ್ಷನ್ ಮೇರೆ ಕಂಟ್ರಾಕ್ಟನ್ನೇ ರದ್ದುಮಾಡಿ ಅದುವರಿಗೆ ಶೀನಿರೇಜ್ ಪಾವತಿ ಮಾಡಿ ಸಾಗಿಸಿಕೊಳ್ಳದೆ ಬಿಟ್ಟಿರುವ ಎಲ್ಲಾ ಸವುದೆಯು ಸರಕಾರಕ್ಕೆ ಸೇರಿಹೋಗುತ್ತೆ.

ಎಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ತುಮಕೂರು ಡಿಸ್ಟ್ರಿಕ್ಟ್.

ತಾರೀಖು 10ನೆ ಜುಲೈ 1909.

1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಬರುವ ತಪಶೀಲು ಉಳ್ಳ ಒಂದು ಸಾಗುವಾನಿ ನಾಟಾ ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಹೋಬಳಿ ಬೆಳತ್ತೂರು ಗ್ರಾಮದ ಬಳಿ ಕಬ್ಬಿನಿ ನದಿಯಲ್ಲಿ ತೇಲಿಕೊಂಡು ದಡಕ್ಕೆ ಬಂದದ್ದನ್ನು ಸದರಿ ಗ್ರಾಮದ ಪಟೇಲನ ಜುಮ್ಮೆ ವಹಿಸಿರುವದು ಬೇವಾರ್ಸ್ಸಾಗಿ ಬಿದ್ದಿರುತ್ತೆ. ವಾರಸುದಾರರುಗಳು ಈ ನೋಟೀಸು ತಾರೀಖು ಲಾಗಾಯಿತು ಮೂವತ್ತು ದಿವಸಗಳ ವಳಗಾಗಿ ನಮ್ಮಲ್ಲಿ ಅವರುಗಳ ಹಕ್ಕನ್ನು ಹಾಜರ್ಪಡಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ನಾಟಾವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಜಾತಿ.	ಲಾಂಬಿ.	ಸುತ್ತು.	ಗುರ್ತು.	ಷರಾ.
ಸಾಗುವಾನಿ (ದುಂಡು) ...	18′—6″	1′—9″	M. J.	ಚೆನ್ನಾಗಿ ಕಾಣುವದಿಲ್ಲ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟು.

1909ನೆ ಇಸವಿ ಜೂನ್ ಮಾಹೆ 26ನೆ ತಾರೀಖು ಶನಿವಾರ ಪ್ರಾತಃಕಾಲ 7—30 ಘಂಟೆಯಲ್ಲಿ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ|| ಎಂ. ಕಾಂತರಾಜೇ ಅರಸಿನವರು, ಬಿ. ಎ. (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸಾಮಿರಾಯರವರು, ಬಿ. ಎ. (ವೈಸ್ ಪ್ರೆಸಿಡೆಂಟ್).
3. ,, ವಿ. ಎಲ್. ಮಾಂಕರ್ರವರು, ಎಲ್. ಆರ್. ಸಿ. ಪಿ. ಎಸ್. ಮತ್ತು ಡಿ. ಪಿ. ಎಚ್. (ಹೆಲ್ತಾಫಿಸರ್).
4. ,, ಎಂ. ಸೈಯದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
5. ,, ಎಂ. ವೆಂಕಟಕೃಷ್ಣಯ್ಯನವರು.
6. ,, ಅಂಬಳೆ ಅಣ್ಣಯ್ಯಪಂಡಿತರವರು.
7. ,, ಎಣ್. ಶ್ರೀಕಂಠೈಯ್ಯನವರು.
8. ,, ಎಂ. ಸಿ. ರಂಗೈಯ್ಯಂಗಾರ್ರವರು.
9. ,, ಎ. ಸುಬ್ಬಣ್ಣನವರು.
10. ,, ಎಂ. ನರಸಿಂಹಸ್ವಾಮಿಗಳವರು.
11. ,, ಎಂ. ಕೃಷ್ಣಪ್ಪಾಜಿ ಅರಸಿನವರು.
12. ,, ಎಂ. ಅನಂತರಾಜೈಯ್ಯನವರು.
13. ,, ರಹಿಮತ್ತುಲ್ಲಾ ಅಹಮ್ಮದಸೇಟರವರು.
14. ,, ಮಾದಪ್ಪನವರು.
15. ,, ಹಸೇನಲ್ಲಿಬೇಗ್ ಸಾಹೇಬರವರು.
16. ,, ವಿ. ತಿರುವೆಂಗಡ ಮೊದಲಿಯಾರ್ರವರು.
17. ,, ಸೈದ್ ಮೊಹದೀನ್ ಸಾಹೇಬರವರು.
18. ರೆವರೆಂಡ್ ಹೆಚ್. ಗಲಿಫರ್ಡ್ಸಾಹೇಬರವರು.

ಗೈರುಹಾಜರು.

1. ಮಿ|| ಬಿ. ಸುಬ್ಬರಾಯರವರು, (ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್).
2. ,, ಕೆ. ಚಂದ್ರಶೇಖರೈಯ್ಯನವರು.

I. ಸರ್ 1909ನೆ ಇಸವಿ ಮೇ ಮಾಹೆ ಜಮಾ ಖರ್ಚಿನ ಲೆಕ್ಕ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಕ್ಕಗಳು.

ಪ್ಯಾಸು ಮಾಡಿದೆ.

II. ಮ್ಯಾನೇಜಿಂಗ್ ಮತ್ತು ಹೆಲ್ತ್ ಕಮಿಟಿ ಮೀಟಂಗುಗಳ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

III. ಮೈಸೂರು ಷಹರಿನ ವಾಟರ್ ಸಪ್ಲೈ ಹಂಗಾಮಿ ಅಭಿವೃದ್ಧಿಗೋಸ್ಕರ ಸಪ್ಲಿಮೆಂಟರಿ ಸ್ಟೀಂಪ್ಲಾಂಟ್ ಲಾಗೋಡು ಬಗ್ಗೆ ಅಡ್ವಾನ್ಸ್ ಕೊಟ್ಟಿದ್ದ ಸಾಲದ ಮೊಬಲಗನ್ನು ತೀರಿಸುವ ವಿಷಯದಲ್ಲಿ ಕೌನ್ಸಿಲ್ಲಿನವರ ಅಭಿಪ್ರಾಯ ತಿಳಿಸಬೇಕೆಂದು ಗವರ್ನಮೆಂಟನಿಂದ ಸಾದರಾಗಿರುವ 19—2—09ನೆ ಮುರ್ಕುಂ 8144-6ನೆ ನಂಬರ್ ಪ್ರೊಸೀಡಿಂಗ್ಸು.

IV. ಪಬ್ಲಿಕ್ ವರ್ಕ್ಸ್ ಜಾಸ್ತಿ ಸಾಲಿನ ಬಜೆಟ್ಟಿನಲ್ಲಿ ವಾಣಿವಿಳಾಸ ವಾಟರ್ ವರ್ಕ್ಸ್ ಸಾಲಾಬಾದ್ ಖರ್ಚಿಗಾಗಿ 15,000 ರೂಪಾಯಿಗಳನ್ನು ಮ್ಯುನಿಸಿಪಲ್ ಭಾಗಕ್ಕೆ ಜಾಸ್ತಿ ಮಾಡಿಕೊಳ್ಳಲು ಚೀಫ್ ಇಂಜನಿಯರವರಿಗೆ ಅಧಿಕಾರ ಕೊಟ್ಟಿರುತ್ತೆಂತಲೂ ಮತ್ತು ಸದರಿ ಮೊಬಲಗು ಮ್ಯುನಿಸಿಫಲ್ ಫಂಡಿಗೆ ಖರ್ಚು ಬೀಳಬೇಕೆಂತಲೂ ಸಹ ಗೌರ್ನಮೆಂಟಿನಿಂದ ಸಾದರಾಗಿರುವ 23—4—09ನೆ ಮುರ್ಕುಂ 10502-4—ಮ್ಯು. 42-08-8ನೆ ನಂಬರ್ ಪ್ರೊಸೀಡಿಂಗ್ಸು.

1906ನೆ ಇಸವಿ ಆಗಸ್ಟು 11ನೆ ಮುರ್ಕುಂ 1369-73—ಮ್ಯು. (478-05)—6ನೆ ನಂಬರ್ ಪ್ರೊಸೀಡಿಂಗ್ಸ್ ಮತ್ತು ಪ್ರೆಸಿಡೆಂಟರವರ 1906ನೆ ಡಿಸೆಂಬರ್ 5ನೆ ಮುರ್ಕುಂ ಲೆಟರ್ ಸಂಗಡ ಕಳುಹಿಸಿರುವ ನವಂಬರ್ 24ನೆ ಮುರ್ಕುಂ 10ನೆ ನಂಬರ್ ರಿಜಲ್ಯೂಷನ್ಗೆ ಸಹ ಗೌರ್ನಮೆಂಟಿನವರ ಗಮನವನ್ನು ಕೋರಿರುವುದರೊಂದಿಗೆ 3-4ನೆ ಪ್ರಾಪೋಜಿಷನ್ನಲ್ಲಿ ಕಂಡ ಮೈಸೂರು ಷಹರಿನ ವಾಟರ್ ಸಪ್ಲೈ ಹಂಗಾಮಿ ಅಭಿವೃದ್ಧಿಗೋಸ್ಕರವಾಗಿ ಖರ್ಚಾದ ಮೊಬಲಗಿನ ಛಾರ್ಜು 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನ್ 176ನೆ ಸೆಕ್ಷನ್ 1ನೆ ಸಬ್ ಸೆಕ್ಷನ್ (ಎ) ಕ್ಲಾಜಿನಲ್ಲಿ ವಿಶದವಾಗಿರುವ ಹಾಗೆ ಮ್ಯುನಿಸಿಪಾಲಿಟಿಗೆ ಲಗಾವಾಗತಕ್ಕದ್ದಲ್ಲವೆಂಬ ಸಂಗತಿಯನ್ನು ಪುನಹ ಗೌರ್ನಮೆಂಟನವರಿಗೆ ತಿಳಿಸತಕ್ಕದ್ದೆಂತಲೂ ಅಂಥಾ ಚಾರ್ಜು ಮ್ಯುನಿಸಿಪಲ್ ಕೌನ್ಸಿಲ್ನವರ ಅಭಿಪ್ರಾಯದಲ್ಲಿ ಇದು ನ್ಯಾಯವಾಗಿ ಮ್ಯುನಿಸಿಪಾಲಿಟಿಗೆ ಲಗಾವಾಗತಕ್ಕ ಚಾರ್ಜಲ್ಲವೆಂತ ತೋರಿ ಪ್ರಥಮತಃ ಸಜಸ್ಟು ಮಾಡಿರುವಂತೆ ವಾಟರ್ ಸಪ್ಲೈ ಹಂಗಾಮಿ ಅಭಿವೃದ್ಧಿಗಾಗಿ ಖರ್ಚಾಗಿರತಕ್ಕ ಮೊಬಲಗನ್ನು ಪ್ರೊವಿನ್ಷಿಯಲ್ ಫಂಡಿಗೆ ಡೆಬಿಟ್ ಮಾಡತಕ್ಕದ್ದೆಂದು ಪ್ರಾರ್ಥಿಸಿದೆ.

V. ಮನೆ ಕಾಮಗಾರಿಗೂ ಮತ್ತು ಹೊಸದಾಗಿ ಕಟ್ಟತಕ್ಕದ್ದಕ್ಕೂ ಬರುವ ಅಪ್ಲಿಕೇಶನ್‌ಗಳನ್ನು ಮ್ಯುನಿಸಿಪಲ್ ಇಂಜನಿಯರು, ಮ್ಯುನಿಸಿಪಲ್ ಟ್ಯಾಕ್ಸು ಕಲೆಕ್ಟರು, ಮೊಹಲ್ಲಾ ಕೌನ್ಸಿಲರುಗಳು ಮತ್ತು ಹೆಲ್ತಾಫಿಸರವರು ಸಹ ಸ್ಥಳ ಅಜಮಾಯಿಷಿ ಮಾಡಿ ನಂತರ ಫೈಸಲ್ ಮಾಡಬೇಕೆಂದು ಮಿ|| ಅಂಬಳೆ ಅಣ್ಣಯ್ಯ ಪಂಡಿತರವರು ಮತ್ತು ಮಿ|| ಎನ್. ಶ್ರೀಕಂಠಯ್ಯನವರು ಸಹ ಕೊಟ್ಟಿರುವ ಪ್ರಾಪೋಜಿಷನ್.

ಮ್ಯುನಿಸಿಪಲ್ ಇಂಜನಿಯರು ಮತ್ತು ಟ್ಯಾಕ್ಸು ಕಲೆಕ್ಟರನ್ನು ವಜಾ ಮಾಡಿ ಪ್ರಾಪೋಜಿಷನ್ ತಿದ್ದುಪಡಿ ಮಾಡಲಾಯಿತು. ಇತಃಪರ ಷಹರಿನಲ್ಲಿ ಕಟ್ಟಡ ಕಟ್ಟುವದಕ್ಕೂ ಮತ್ತು ರಿಪೇರಿಗೂ ಸಹ ಲೈಸೆನ್ಸ್ ಅಪೇಕ್ಷಿಸಿ ಬರತಕ್ಕ ಅಪ್ಲಿಕೇಶನ್‌ಗಳನ್ನು ಹೆಲ್ತಾಫಿಸರವರು ಆಯಾಯ ಮೊಹಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳ ಅಭಿಪ್ರಾಯ ಪಡೆದು ನಂತರ ಫೈಸಲ್ಮಾಡತಕ್ಕದ್ದೆಂದು ತೀರ್ಮಾನಿಸಿದೆ.

VI. ಇಂಡೀಜನಸ್ ಆಸ್ಪತ್ರೆ ಯುನಾನಿ ಹಕೀಂರಿಗೆ ತಲಬು ಇಜಾಫೆ ಮಾಡತಕ್ಕ ವಿಷಯವನ್ನು ಮತ್ತೊಂದು ದಫಾ ಕೌನ್ಸಿಲ್ಲಿನಲ್ಲಿ ಇಡಬೇಕೆಂದು ವಗೈರೆ ಗೌರ್ನಮೆಂಟ್ ಸೆಕ್ರೆಟೆರಿಯವರಿಂದ ತಲಪಿರುವ 1909ನೆ ಇಸವಿ ಮೇ 11ನೆ ಮಕ್ರುಂ 11229ನೆ ನಂಬರ್ ಡಾಕೆಟ್.

ಈಚೆಗೆ ಫೌತಿಯಾದ ಖಾಜಿಸಾಹೇಬರ ಅಲೋಯನ್ಸ್ ಉಳಿಕೆಯಿಂದ ಹಕೀಂರಿಗೆ 15 ರೂಪಾಯಿ ಬಡ್ತಿಯನ್ನು ಮಂಜೂರ್ಮಾಡಬೇಕೆಂದು ಗೌರ್ನಮೆಂಟಿನವರನ್ನು ಪ್ರಾರ್ಥಿಸತಕ್ಕದ್ದೆಂದು ತೀರ್ಮಾನಿಸಿದೆ.

VII. ಷಹರಿನಲ್ಲಿ ಯಾರ ಮನೆಗೆ ನೀರಿನ ಖರ್ಚು ಜಾಸ್ತಿಯಾಗಿರುತ್ತೋ ಅಂಥವರ ಮನೆಗೆ ಮೀಟರ್ ಇಡತಕ್ಕ ವಿಷಯದಲ್ಲೂ ಮತ್ತು ಜಾಸ್ತಿ ನೀರು ತೆಗೆದುಕೊಂಡದ್ದಕ್ಕಾಗಿ ವಸೂಲಾದ ಹಣವನ್ನು ಗೌರ್ನಮೆಂಟಿಗೆ ಜಮಾ ತೆಗೆದುಕೊಳ್ಳುವ ವಿಷಯದಲ್ಲೂ ಮತ್ತು ಈ ಸಂಬಂಧವಾದ ಬಿಲ್ಲುವನ್ನು ಮತ್ತು ಬಿಲ್ಲು ವಗೈರೆ ತಯಾರು ಮಾಡತಕ್ಕದ್ದಕ್ಕು ಸಹ ವಾಟರ್ ವರ್ಕ್ಸ್ ಸೂಪರಿಂಟೆಂಡೆಂಟರವರಿಗೆ 25 ರೂಪಾಯಿ ತಲಬಿನಲ್ಲಿ ಒಬ್ಬ ರೈಟರ್ ಕೊಟ್ಟು ಆ ಖರ್ಚನ್ನು ಮ್ಯುನಿಸಿಪಾಲಿಟಿಗೆ ಚಾರ್ಜು ಮಾಡತಕ್ಕ ವಿಷಯದಲ್ಲೂ ಸಹ ಮ್ಯುನಿಸಿಪಲ್ ಕೌನ್ಸಿಲ್ಲಿನವರ ಅಭಿಪ್ರಾಯವನ್ನು ತಿಳಿಸಬೇಕೆಂದು ಚೀಫ್ ಇಂಜನಿಯರವರಿಂದ ತಲಪಿರುವ 6—5—09ನೆ ಮಕ್ರುಂ 3547ನೆ ನಂಬರ್ ಲೆಟರ್.

ಅಡ್ಜರನ್ ಮಾಡಿ ಇದೆ.

VIII. ಕನ್‌ಸರವೆನ್ಸಿ ಇಲಾಖಾ ಗಾಡಿಯವರು ಚಾರಾ ಮತ್ತು ಹುರಳಿ ಖರೀದಿ ಬಹಳ ಪ್ರಿಯವಾಗಿರುವದರಿಂದ ತಮ್ಮ ಬಾಡಾವನ್ನು 15 ರೂಪಾಯಿಯಿಂದ 18 ರೂಪಾಯಿನ ವರಿಗೆ ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸಿ ಬರೆದುಕೊಂಡಿರುವ ಅಪ್ಲಿಕೇಷನ್.

ಗಾಡಿಯವರ ಪ್ರಾರ್ಥನೆಯನ್ನು ನಡಿಸಿಕೊಡಲು ಆಗಲಾರದೆಂದು ತೀರ್ಮಾನಿಸಿದೆ.

IX. ಕೋಟೆ ಬತೇರಿ ಗೋಡೆ ರಸ್ತೆಯಿಂದ ಹಿಡಿದು ಉತ್ತರ ಭಾಗದ ಅಡ್ಡಕಟ್ಟೆ ವರಿಗೆ ಪೂರ್ಣೈಯ್ಯನ ನಾಲಾ ಮುಚ್ಚತಕ್ಕದ್ದಕ್ಕೆ 4,078 ರೂಪಾಯಿನ ಅಂದಾಜವನ್ನು ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 31-5-1909ನೆ ಮಕ್ರುಂ 12016-20—ಮ್ಯು. 92-08-8ನೆ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

X. 1909—10ನೆ ಸಾಲು ಷಹರ್ ಟೋಲ್ ಗೇಟುಗಳ ಫೀಜು ವಸೂಲು ಮಾಡುವ ಹಕ್ಕನ್ನು ಹರಾಜು ಮಾಡಿದ ಲಿಸ್ಟ್.

ಖಾಯಂ ಮಾಡಿದೆ.

XI. 1908—09ನೆ ಸಾಲ್ ಮ್ಯುನಿಸಿಪಲ್ ಬಡ್ಜಟ್ ಗ್ರಾಂಟ್ ರಿ ಅಪ್ರೊಪ್ರಿಯೇಷನ್ ಸ್ಟೇಟ್‌ಮೆಂಟ್ ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 12—6—09ನೆ ಮಕ್ರುಂ 12484-5—ಮ್ಯು. 160-08-21ನೆ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

XII. ಮೈಸೂರು ಷಹರಿನ ವಾಟರ್ ಸಪ್ಲೈ ಕ್ರಮಪಡಿಸತಕ್ಕ ವಿಷಯದಲ್ಲಿ ತಯಾರಾಗಿರುವ ಡ್ರಾಫ್ಟು ರೂಲ್ಸುಗಳು.

ಡ್ರಾಫ್ಟು ರೂಲ್ಸುಗಳನ್ನು ಅನುಮೋದಿಸತಕ್ಕದ್ದೆಂದು ತೀರ್ಮಾನಿಸಿದೆ.

XIII. ಪಬ್ಲಿಕ್ ಹೆಲ್ತ್ ಮತ್ತು ಇತರ ಇಲಾಖೆಯ ಖರ್ಚಿಗೋಸ್ಕರವಾಗಿ ವಿಧಾಯಕವಾಗಿರುವ ಮೊಬಲಗನ್ನು ಪ್ರತ್ಯೇಕಿಸುವ ವಿಷಯದಲ್ಲಿ ಗೌರ್ನಮೆಂಟಿನಿಂದ ಸಾದರಾಗಿರುವ 12—1—09ನೆ ಮಕ್ರುಂ 6483-61—Gl. 127-07-13ನೆ ನಂಬರು ಪ್ರೊಸೀಡಿಂಗ್ಸು 5ನೆ ಪ್ಯಾರಾ.

ಹೆಲ್ತಾಫಿಸರವರು ಕೇಳುವಂತೆ ಬಡ್ಜೆಟ್ಟಿನಲ್ಲಿ ಸ್ಯಾಂಕ್ಷನ್ ಆಗಿರುವ ಐಟಂಗಳ ಮೊಬಲಗನ್ನು ಪ್ರತ್ಯೇಕಿಸಿ ಸದರೀ ಮೊಬಲಗನ್ನು ಖರ್ಚು ಬಗ್ಗೆ ಹೆಲ್ತಾಫಿಸರವರ ಡಿಸ್‌ಪೋಜಲ್‌ನಲ್ಲಿ ಇಡತಕ್ಕದ್ದೆಂದು ತೀರ್ಮಾನಿಸಿದೆ.

XIV. ಗೌರ್ನಮೆಂಟಿನಿಂದ ಸಾದರಾಗಿರುವ 29—10—1908ನೆ ಮಕ್ರುಂ 3963-4—ಮ್ಯು. 6-08-4ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ನಮೂದಾಗಿರುವ ಬುಕ್ಕುಗಳಿಗೆ ಬದಲಾಗಿ ಬೇರೆ ಬುಕ್ಕುಗಳನ್ನು ತೆಗೆದುಕೊಳ್ಳಲು ಅಪ್ಪಣೆಯನ್ನು ಕೇಳಿ ಹೆಲ್ತಾಫಿಸರವರಿಂದ ತಲಪಿರುವ ಎಕ್ಸ್‌ಪ್ಲೆನೇಟರಿ ಮೆಮೋ.

ಗೌರ್ನಮೆಂಟಿನವರ ತಿಳುವಳಿಕೆಗೋಸ್ಕರವಾಗಿ ಹೊಸ ಪಟ್ಟಿಯನ್ನು ಗೌರ್ನಮೆಂಟಿಗೆ ಕಳುಹಿಸಬೇಕೆಂದು ತೀರ್ಮಾನಿಸಿದೆ.

XV. ಸಿಟಿ ಕಕ್ಕಸುಗಳನ್ನು ಅಭಿವೃದ್ಧಿ ಮಾಡತಕ್ಕದ್ದಕ್ಕೆ ತಯಾರ್ಮಾಡಿರುವ ಸ್ಕೀಂ.

ಹೆಲ್ತಾಫಿಸರವರು ತಯಾರು ಮಾಡಿರುವ ಲ್ಯಾಟ್ರಿನ್ ನಮೂನೆಗಳನ್ನು ಅಂಗೀಕರಿಸಿರುವದಲ್ಲದೆ ಯಾವ ಯಾವ ಸ್ಥಳದಲ್ಲಿ ಡೈಲಿ ಕನ್‌ಸರವೆನ್ಸಿ ಕೆಲಸ ನಡಿಸುವದಕ್ಕೆ ಸಾಧ್ಯವೋ ಅಂಥಾ ಸ್ಥಳದಲ್ಲಿ ಬೈಲಾಗಳನ್ನು ಜಾರಿಯಲ್ಲಿ ತರತಕ್ಕ ಬಗ್ಗೆ ಹೆಲ್ತಾಫಿಸರವರಿಗೆ ಬರಿಯತಕ್ಕದ್ದೆಂದು ತೀರ್ಮಾನಿಸಿದೆ.

XVI. 1906ನೆ ಇಸವಿ ವ್ಯಾಕ್ಸಿನೇಷನ್ ರೆಗ್ಯುಲೇಷನ್ ಮೇರೆ ತಯಾರಾದ ರೂಲ್ಸಿನ 25ನೆ ಕ್ಲಾಸ್ ಪ್ರಕಾರ ತಯಾರಾದ ವ್ಯಾಕ್ಸಿನೇಷನ್ ಬೈಲಾಗಳು.

ಕೌನ್‌ಸಿಲ್ಲಿನವರಿಂದ ಮಾಡಲ್ಪಟ್ಟ 2 ತಿದ್ದುಪಡಿಗಳೊಡನೆ ಬೈಲಾವನ್ನು ಮಂಜೂರ್ಮಾಡಿದೆ.

XVII. ಷಹರಿನಲ್ಲಿರುವ ನೇಟಿವ್ ಹೋಟಲ್‌ಗಳು, ಮಿಠಾಯಿ ಅಂಗಡಿಗಳು ಮತ್ತು ರೊಟ್ಟಿ ಗಡಂಗುಗಳು ಇವುಗಳ ವಿಷಯದಲ್ಲಿ ತಯಾರಾಗಿರುವ ಬೈಲಾಗಳು.

ಐಸ್ ಮತ್ತು ಷರಾಬ್ ದುಕಾನ್‌ಗಳಿಗೆ ಲೈಸೆನ್ಸ್ ಫೀ ಹಾಕಬೇಕೆಂಬ ಸೆಕ್ಷನ್ ವಿನಾಯಿಸಿ ಮಂಜೂರ್ಮಾಡಿದೆ. ಈ ಲೈಸೆನ್ಸು ಫೀಜು ಸ್ವಲ್ಪ ಜಾಸ್ತಿಯೆಂದು ಕೌನ್‌ಸಿಲ್ಲಿನವರೊಳಗೂಡ ಅಭಿಪ್ರಾಯ ಪಡುವದ್ದರಿಂದ ಹೆಲ್ತ್ ಕಮಿಟಿಯವರ ಪುನರಾಲೋಚನೆ ಬಗ್ಯೆ ರಿಫರ್ ಮಾಡಬೇಕೆಂದು ತೀರ್ಮಾನಿಸಿದೆ.

ಎಂ. ಕಾಂತರಾಜೇ ಅರಸ್,
ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ರವರ ಆಫೀಸಿಗೆ.

ಆಡಿಟರ ರಿಪೋರ್ಟು.

ತಾರೀಖು 24ನೆ ಜೂನ್ 1909.

24—6—09ರಲ್ಲಿ ಮೇ ಮಾಹೆ ಬಾಬತು ಮ್ಯುನಿಸಿಪಲ್ ಲೆಖ್ಖಗಳನ್ನು ಮತ್ತು ವವಚರುಗಳನ್ನು ಆಡಿಟ್ ಮಾಡುವಲ್ಲಿ ಸರಿಯಾಗಿರುತ್ತೆ—

1. 1908ನೆ ಸಾಲಿನ ಮೇ ಮಾಹೆಯಲ್ಲಿ ಆಕ್ಟ್ರಾಯಿ ಉತ್ಪತ್ತಿ ಸುಮಾರು 6,751—0—0, 1909ನೆ ಮೇ ಸಾಲಿನಲ್ಲಿ ಸುಮಾರು 5,423—0—0 ಕಳೆದ ಸಾಲಿಗೂ ಮತ್ತು ಈ ಸಾಲಿಗೂ 1,328—0—0 ವ್ಯತ್ಯಾಸ.

2. ಮನೆ ತೆರಿಗೆ 1908ನೆ ಮೇ ಸಾಲಿನಲ್ಲಿ 2,739—0—0, 1909ನೆ ಮೇ ಸಾಲಿನಲ್ಲಿ 1,845—0—0 ಕಳೆದ ಸಾಲಿಗೂ ಈ ಸಾಲಿಗೂ 894—0—0 ವ್ಯತ್ಯಾಸ ಆದ್ದರಿಂದ ಸರಿಯಾದ ಸೂಪ್ರವಿಜನ್ ಮತ್ತು ಚಕ್ಕಿಂಗು ಮಾಡಬೇಕಾದ್ದು ಅವಶ್ಯಕವಾಗಿರುತ್ತೆ.

(ಸೈನ್ಡ್) ಎಸ್. ಶ್ರೀಕಂಠಯ್ಯ.

ಇಸ್ತಿಹಾರ್‌ನಾಮೆ.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಣದ ಹೋಬಳಿಗೆ ಸೇರಿದ ಜೋಡಿ ಭೂತನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಭೂತನಹಳ್ಳಿ ಗ್ರಾಮದಲ್ಲಿ 1909ನೆ ಸೆಪ್ಟಂಬರ್ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ 22ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 574ನೆ ನಂಬರ್ ಪೇಜನ್ನು ನೋಡತಕ್ಕದ್ದು.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಣದ ಹೋಬಳಿಗೆ ಸೇರಿದ ಜೋಡಿ ಹಿಟ್ಟನೆ ಹೆಬ್ಬಾಗಿಲು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಹಿಟ್ಟನೆ ಹೆಬ್ಬಾಗಿಲು ಗ್ರಾಮದಲ್ಲಿ 1909ನೆ ಆಗಸ್ಟು ಮಾಹೆ 28ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ 22ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 575ನೆ ನಂಬರ್ ಪೇಜನ್ನು ನೋಡತಕ್ಕದ್ದು.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಣದ ಹೋಬಳಿಗೆ ಸೇರಿದ ಬಾಯಿಂಗುತ್ತಾ ಬಿಮ್ಮತ್ತಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಬಾಯಿಂಗುತ್ತಾ ಬಿಮ್ಮತ್ತಿ ಗ್ರಾಮದಲ್ಲಿ 1909ನೆ ಸೆಪ್ಟಂಬರ್ ಮಾಹೆ 7ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ 22ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 573ನೆ ನಂಬರ್ ಪೇಜನ್ನು ನೋಡತಕ್ಕದ್ದು.

ತಾರೀಖು 7ನೆ ಜುಲೈ 1909.

ಹುಣಸೂರು ತಾಲ್ಲೂಕು ಪಿರಿಯಾಪಟ್ಣದ ಹೋಬಳಿಗೆ ಸೇರಿದ ಬಾಯಿಂಗುತ್ತಾ ಐಲಾಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಬಾಯಿಂಗುತ್ತಾ ಐಲಾಪುರ ಗ್ರಾಮದಲ್ಲಿ 1909ನೆ ಸೆಪ್ಟಂಬರ್ ಮಾಹೆ 6ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ಜುಲೈ ತಾರೀಖು 22ನೆ ಮರ್ಕುಂ ಮೈಸೂರ ಗೆಜೆಟ್ಟಿನ 2ನೆ ಭಾಗದ 572ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 29ನೆ ಜೂನ 1909.

ಲೇಟ್ ಚಿಕ್ಕಮಗಳೂರು ಅಗ್ರಿಕಲ್ಚರಲ್ ಬ್ಯಾಂಕಿನ ಬಗೆ ಮೈಸೂರು ಸರಕಾರಕ್ಕೆ ಸದರಿ ಬಾಂಕಿನ ಮೆಂಬರುಗಳಾದ—

1. ಮಿ|| ಅಣ್ಣಿಗಿರಿ ವಸ್ತಾರೆದ ಶಾನುರಾಯರು.
2. ,, ವಿ. ಜಗನ್ನಾಥರಾಯರು, ಲೇಟ್.
3. ,, ಮೆಂಗಾಲಗಣೇಶರಾಮಪುರ ಕುಟುಂಬಿ ಸರಸ್ವತಮ್ಮ.
4. ,, ಜಿ. ಅಬ್ದುಲ್ ಖಲೀಕ್ ಸಾಬರು.
5. ,, ಟಿ. ರಾಘವೇಂದ್ರಪ್ಪನವರು.
6. ,, ಕರ್ಕಿಪೇಟೆ ಶಿವಪ್ಪಶೆಟ್ಟರು.
7. ,, ಶಿವಾಜಿ ರಾಮಚಂದ್ರರು.
8. ,, ಸಿ. ಬಸವೇಗೌಡರು, ಚಿಕ್ಕಮಗಳೂರು.

ಇವರುಗಳಿಂದ ಸಲ್ಲಬೇಕಾಗಿದ್ದು ಹಾಲಿ ಬಾಕೀಲಿ ನಿಂತಿರುವ ಸಾಲದ ಮೊಬಲಗುಗಳನ್ನು ಬರವಾಡಿಕೊಳ್ಳಲು ನಾಳೆ ಬರುವ ಸ|| 1909ನೆ ಇಸವಿ ಸೆಪಟಂಬರು ತಾರೀಖು 10ನೆ ದಿವಿ 11 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿ ಬಳಿ, ಸದರಿಯವರುಗಳಿಂದ ಸದರಿ ಬ್ಯಾಂಕಿಗೆ ಹೊಣೆ ಮಾಡಲ್ಪಟ್ಟ ಸ್ಥಿರಸ್ವತ್ತುಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿ ಸಾಹೇಬರವರಿಂದಲಾಗಲಿ ಆ ಬಗ್ಯೆ ಕಳುಹಿಸಲ್ಪಡುವ ಅಸಿಸ್ಟೆಂಟ್ ಕಮಿಷನರವರಿಂದಲಾಗಲಿ, ಸ|| 1908ನೆ ಇಸವಿ ಜನವರಿ ತಾರೀಖು 16ನೆ ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಂ. Fl. 3526-28-B,—07-15ನ್ನನುಸರಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತವೆ.

2. ಸಾಲದಬಾಕಿ, ಸ್ವತ್ತುಗಳು, ಹರಾಜ್ ಷರತ್ತುಗಳು, ಈ ತಪಶೀಲುಗಳ ಬಗ್ಯೆ ಸ|| 1909ನೆ ಜುಲೈ ತಾರೀಖು 15ನೆ ಮೈಸೂರ ಗೆಜೆಟ 2ನೆ ಭಾಗದ 555, 556, 557, 558, 559, 560, 561, 562ನೆ ನಂ. ಪುಟಗಳನ್ನು ನೋಡುವದು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಡೆಪ್ಯುಟಿ ಕಮಿಷನರ್.

ಕ್ಲೋಸೆಪೇಟೆ ಸಬ್ ಡಿವಿಜನ್ ಆಫೀಸಿನಿಂದ.

ಇಸ್ತಿಹಾರ್ನಾಮೆ.

ತಾರೀಖು 21ನೆ ಜುಲೈ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುದೇನಂದರೆ—

ಈ ಸಬ್ ಡಿವಿಜನ್ ಮಜಕೂರು ಬಾಬತು ಜೋಡಿ ಖಾಯಂಗುತ್ತಾ ಇನಾಂ ಸರ್ವಮಾನ್ಯ ವಗೈರೆ ಗ್ರಾಮಗಳ ಬಾಬತು ಆಯಾಯ ಇನಾಂದಾರ್ರಿಗೆ ಸಲ್ಲತಕ್ಕ ಟಾಡಿ ಹುಟ್ಟುವ ಹಕೀಯತ್ತನ್ನ ಕೆಳಗೆ ನಮೂದಿಸಿರುವ ತಾರೀಖಿನಲ್ಲಿ ವಿಚಾರಣೆ ಮಾಡಲ್ಪಡುತ್ತೆ. ಆಯಾಯ ಗ್ರಾಮಗಳಿಗೆ ಸಮ್ಮಂಧಪಟ್ಟ ಇನಾಂದಾರುಗಳು ಸಾಕ್ಷ್ಯ ಮತ್ತು ತಮ್ಮಲ್ಲಿರತಕ್ಕ ದಾಖಲಾತುಗಳೊಡನೆ ಕ್ಲೋಸೆಪೇಟೆ ಮೊಕ್ಕಾಂಗೆ ದಿವಿ 11 ಘಂಟೆಗೆ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸುಮೇರೆ ಕ್ರಮ ಜರಗಿಸಲ್ಪಡುತ್ತೆ ನಂತರ ಬರುವ ಯಾವ ತಕರಾರನ್ನು ಅಂಗೀಕರಿಸಲು ಆಗಲಾರದು ತಿಳಿಯುವದು.

ತಾಲ್ಲೂಕು.	ಗ್ರಾಮ.	ಹಿಯರಿಂಗ್ ತಾರೀಖು.	ಇನಾಂದಾರ್ರ ಹೆಸರು.
ಕ್ಲೋಸೆಪೇಟೆ ...	ತಾಳೆವಾಡಿ ಇನಾಂ ...	1909ನೆ ಸೆಪ್ಟಂಬರು 21 ರಲ್ಲು.	ಕೆಂಪನಂಜಮ್ಮಣಿಯವರು.
ಮಾಗಡಿ ...	ಹುಲುವೇನಹಳ್ಳಿ ...		ಚಂದ್ರಶೇಖರಶಾಸ್ತ್ರಿ.
ಮಾಗಡಿ ...	ಬಸವಾಪಟ್ಣ ...		ರಾಮಸ್ವಾಮಿಶಾಸ್ತ್ರಿ, ಸುಬ್ಬಮ್ಮ.
ಕಾನಕಾನಹಳ್ಳಿ ...	ಮರ್ಲಬೇಕುಪ್ಪ ...		ಗುರುಬಸವಮ್ಮ.

ಬಿ ವೆಂಕೋಬರಾವ್, ಸಬ್ ಡಿವಿಜನ್ ಆಫೀಸರ.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸಿನಿಂದ.

ನೋಟಿಫಿಕೇಷನ್ ನಂಬರ್ 167—C. S.–24.

ಮೊಕ್ಕಾಂ ಬೆಂಗಳೂರು, ತಾರೀಖು 23—24ನೆ ಜುಲೈ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟಿವ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

	ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1.	ಕೊರಟಗೆರೆ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಕೊರಟಗೆರೆ, ತುಮಕೂರು ಡಿಸ್ಟ್ರಿಕ್ಟು.	20ನೆ ಜುಲೈ 1909.
2.	ಮಳವಳ್ಳಿ ಶ್ರೀ ಲಕ್ಷ್ಮೀ ನರಸಿಂಹ ಪರಸ್ಪರ ಸಹಾಯಸಂಘ, ಲಿಮಿಟೆಡ್	ಮಳವಳ್ಳಿ, ಮೈಸೂರು ಡಿಸ್ಟ್ರಿಕ್ಟು.	20ನೆ ಜುಲೈ 1909.

ತಿರಮಕೂಡ್ಲು ನರಸೀಪುರದ ಶ್ರೀ ಕೃಷ್ಣರಾಜ ಒಡೆಯರ್ ರೇಷ್ಮೆ ಕೈಗಾರಿಕೆ ಕೋ ಆಪರೇಟೀವ್ ಸೊಸೈಟಿ, ಲಿಮಿಟೆಡ್ ಆಫೀಸು.

ತಾರೀಖು 30ನೆ ಜೂನ್ 1909, ಟಿ. ನರಸೀಪುರ.

1908ನೆ ಜೂನ್ ಗುರ್ರೆ ಲಾಗಾಯಿತು 1909ನೆ ಇಸವಿ ಜೂನ್ 30ನೆ ತಾರೀಖಿನ ವರಿಗಿನ ರಿಪೋರ್ಟು:—

1908ನೆ ಇಸವಿ ಏಪ್ರೈಲ್ ಮಾಹೆ 5ನೆ ತಾರೀಖಿನಲ್ಲಿ ಮೀಟಿಂಗು ನಡದು ಈ ಸಂಘವನ್ನು ಏರ್ಪಡಿಸಿ ನಮ್ಮ ಪ್ರಾವಂದರವರಾದ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ಯವರಿಗೆ ನಮ್ಮ ಕೃತಜ್ಞತೆಯನ್ನು ನಮ್ಮ ಹೃದಯ ಪೂರ್ವಕವಾದ ರಾಜಭಕ್ತಿ ವಿಶ್ವಾಸವನ್ನು ಸಮರ್ಪಿಸಲು, ನಮ್ಮ ಮಹಾ ಪ್ರಭುಗಳ ಅಪ್ಪಣೆ ಪಡದು, ಈ ಸಂಘಕ್ಕೆ ಶ್ರೀ ಕೃಷ್ಣರಾಜ ಒಡೆಯರ್ ರೇಷ್ಮೆ ಕೈಗಾರಿಕೆ ಕೋ ಆಪರೇಟೀವ್ ಸೊಸೈಟಿ ಎಂದು ಕರೆಯಲ್ಪಟ್ಟಿತು.

ಇದನ್ನು ಕೋ ಆಪರೇಟೀವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಕ್ಲಾಸಿನ ಮೇರೆಗೆ ಮೈಸೂರು ಗವರ್ನಮೆಂಟ್ ಕೋ ಆಪರೇಟೀವ್ ಸೊಸೈಟಿಗಳ ರಿಜಸ್ಟ್ರಾರ್ರವರಿಂದ 1908ನೆ ಇಸವಿ ಮೇ ತಾರೀಖು 15ರಲ್ಲು ರಿಜಸ್ಟರ್ ಮಾಡಲ್ಪಟ್ಟಿತು.

ಈ ಸಮಾಜವು ರಿಜಸ್ಟರಾದ ನಂತರ, ಮ್ಯಾನೇಜಿಂಗ್ ಕಮಿಟಿಯವರು 7 ವೇಳೆ ಮೀಟಿಂಗುಗಳನ್ನು ನಡಿಸಿರುತ್ತಾರೆ. ಸಮಾಜದ ಕಾರ್ಯನಿರ್ವಾಹಕ್ಕಾಗಿ ಮೊದಲನೇ ಜನರಲ್ ಮೀಟಿಂಗಿನಲ್ಲಿ ಪ್ಯಾಸಾಗಿ ರಿಜಸ್ಟ್ರಾರ್ರವರಿಂದ ಮಂಜೂರಾದ ಬೈಲಾವನ್ನು ಅಚ್ಚು ಹಾಕಿಸಿ ಸದರಿ ರೂಲ್ಸುಗಳನ್ನು ಸಮಾಜದ ಎಲ್ಲಾ ಮೆಂಬರುಗಳಿಗೂ ಪಾವತಿ ಮಾಡಿರುತ್ತೆ.

ಮೆಂಬರುಗಳ ಸಂಖ್ಯೆ—

ಈ ಸಂಘವು ಪ್ರಾರಂಭವಾದಾಗ 185 ಜನರು ಮೆಂಬರಾಗಿ ಸೇರಿದರು, ಈ ಪೈಕಿ 114 ಜನ ಮೆಂಬರುಗಳು ತಮ್ಮ ಬಾಬತು ಷೇರುಗಳು ಕೊಟ್ಟಿರುತ್ತಾರೆ.

ಇದುವರಿಗೂ ಕೊಡದೇ ಇರತಕ್ಕವರ ಸಂಖ್ಯೆ 71, ಈ ಪೈಕಿ—

27 ಜನ ಮೆಂಬರುಗಳು 1 ಕಂತು ಪಾವತಿ ಮಾಡಿರುತ್ತಾರೆ.
20 ಜನ ಮೆಂಬರುಗಳು 2 ಕಂತು ಪಾವತಿ ಮಾಡಿರುತ್ತಾರೆ.
24 ಜನ ಮೆಂಬರುಗಳು 3 ಕಂತು ಪಾವತಿ ಮಾಡಿರುತ್ತಾರೆ.
24 ಜನ ಮೆಂಬರುಗಳು 4 ಕಂತು ಪಾವತಿ ಮಾಡಿರುತ್ತಾರೆ.
19 ಜನ ಮೆಂಬರುಗಳು 5 ಕಂತು ಪಾವತಿ ಮಾಡಿರುತ್ತಾರೆ.

114 ಜಮ್ಲಾ.

ಈ ಸಂಘವು ಪ್ರಾರಂಭವಾದಾರಭ್ಯ 6 ತಿಂಗಳು ಕೆಲಸ ನಡದಿರುತ್ತೆ. ಆ ಕೂಡ್ಲೆ ತಯಾರಾದ ಸರಕುಗಳನ್ನು ಬಿಕರಿ ಮಾಡಿ ಹೊಸ ಸರಕುಗಳ ತಯಾರ್ ಮಾಡಿಸಲು ಮಾರ್ಕೆಟ್ಟು ರೇಟು ಕಮ್ಮಿ ಆದ್ದರಿಂದಲು, ಮುಂದೆ ಧಾರಣೆ ಹೆಚ್ಚಬಹುದಾದ ಸಂಭವ ತೋರಿಬಂದದ್ದರಿಂದಲೂ, ಸ್ಟಾಕಿನಲ್ಲಿ ರೇಷ್ಮೆಯನ್ನು ಇಡಲಾಯಿತು. ಹಾಗೂ ಕೆಲಸ ನಡಸಲು ಮೆಂಬರುಗಳಿಂದ ವಸೂಲಾಗುವ ಷೇರ್ ಮೊಬಲಗು ರೇಷ್ಮೆ ಗೂಡು ಕೊಳ್ಳಲು ಸಾಕಾದಷ್ಟು ಒದಗದೇಹೋದ್ದರಿಂದ 1,793—0—0 ರೂಪಾಯಿಗಳ ವರಿಗೆ ಡಿಪಾಜಿಟ್ಟು ತೆಗದು ಕೊಂಚಕಾಲ ಕೆಲಸ ನಡಿಸಲ್ಪಟ್ಟಿತು.

ಸೊಸೈಟೀಲಿ ಈ ಕೆಲಸ ನಡಸುವ ಅಂದರೆ ರೇಷ್ಮೆಯಳೆ ತೆಗಿಯುವವರಿಗೆ 430—8—6 ರೂಪಾಯಿಗಳು ಅಡ್ವಾನ್ಸು ಕೊಟ್ಟಿರುತ್ತೆ. ಇದಕ್ಕಾಗಿ ಸದರಿಯವರಿಂದ 186—3—0 ವಾಪಸು ಜಮಾ ಬಂದು ಬಾಕಿ 244—5—6 ಪೈ ಅಡ್ವಾನ್ಸು ಬಾಕಿ ಇರುತ್ತೆ.

ಇದಕ್ಕಾಗಿ ಬೇಕಾಗುವ ಸವದೆ ಮರಗಳು ಈ ಸಾಲಿನಲ್ಲಿ 282—9—0 ರೂಪಾಯಿಗೆ ಕೊಂಡುಕೊಳ್ಳಲ್ಪಟ್ಟಿತು. ಅಲ್ಲದೆ ನದೀ ಆಚೆ ದಡದಲ್ಲಿರುವ ಶ್ರೀಮನ್ ಮಹಾರಾಜಾ ರಾಜಾಸಾಹೇಬ್ ಬಹದ್ದೂರ್ರವರ ತೋಪಿನಲ್ಲಿರುವ ಮರಗಳನ್ನು ಈ ಕೆಲಸಕ್ಕಾಗಿ ಉಪಯೋಗಿಸಿಕೊಳ್ಳಲು ನಮ್ಮ ಹಾತಲಾಗೋಡಿನಿಂದ ಕತರಾಯಿಸಿ ಗಾಡೀಭಾರ್ಕೆ 1ಕ್ಕೆ 0—8—0 ಆಣೆ ಮೇರೆ ಬೆಲೆ ಕಟ್ಟಿ ತೆಗದುಕೊಳ್ಳಲು ಅಪ್ಪಣೆ ಸಹಾ ದಯಪಾಲಿಸಿರುತ್ತಾರೆ.

ಈ ಸೊಸೈಟಿಯಲ್ಲಿ ಹಮೇಷಾ 20 ರಾಟೇ ಕೆಲಸ ನಡಸುತ್ತಾ ಬಂದರೆ 10 ರಾಟೆ ಉತ್ಪತ್ತಿ ಖರ್ಚಿಗು, 10 ರಾಟೆ ಉತ್ಪತ್ತಿ ನಫೆಗೂ ಕೂಡಬರುತ್ತೆಂದು ಈಗಿನ ಅನುಭವದಲ್ಲಿ ಧಾರಾಳವಾಗಿ ಹೇಳಬಹುದಾಗಿದೆ.

ಈ ವರ್ಷದಲ್ಲಿ ರೇಷ್ಮೆ ಗೂಡು ಕೊಂಡದ್ದು 345 ಮಣ, 8½ ಸೇರಿಗೆ 3,343—10—11 ರೂಪಾಯಿಗಳು, ಅದರಿಂದ ಉಂಟಾದ ರೇಷ್ಮೆ ಮಣ 27, ಸೇರು 6, ತೊಲ 13ಕ್ಕೆ ಹಾಜರಿರುವ ಸೇರು 17, ತೊಲಾ 2½ ಜೂತಾ ಬಿಕರಿ ಮಾಡಿದ ರೇಷ್ಮೆ 25 ಮಣ 5½ ಸೇರಿಗೆ 3,235—14—9 ಪೈ ಉತ್ಪತ್ತಿ ಆಗಿರುತ್ತೆ. ನಷ್ಟಿಯಿಂದ 222—2—0 ರೂಪಾಯಿಗಳು ಉತ್ಪತ್ತಿ ಆಗಿರುತ್ತೆ. ಜುಮ್ಲಾ 3,458—0—9 ಪೈ ಉತ್ಪತ್ತಿ ಬಂದಿರುತ್ತೆ. ಇದೇ ಮೊದಲು ವರ್ಷವಾದ್ದರಿಂದ ಇದಕ್ಕೆ ಬೇಕಾದ ಉಪಕರಣವನ್ನು ಒದಗಿಸಿಕೊಳ್ಳಲು ಪ್ರತಿ ಒಂದು ಕೊಳ್ಳಬೇಕಾದ್ದರಿಂದಲು ಇದಕ್ಕಾಗಿ 444 ರೂಪಾಯಿಗೆ ಕಟ್ಟಡ ಕಟ್ಟಿಸಿದ್ದರಿಂದಲು, ಮಾರ್ಕೆಟ್ಟು ವ್ಯಾಲ್ಯು ಕಳದಸಾಲಿಗಿಂತಲು ಬಹಳ ಇಳಿದಿದ್ದರಿಂದಲು, ಸ್ವಲ್ಪ ನಷ್ಟ ಕಾಣುತ್ತೆಯಾವರು ಯಾವ ಕೆಲಸದಲ್ಲಿ ಲಾಭ ಉಂಟಾಗಬಹುದಾಗಿರುತ್ತೊ ಆದೇ ಕೆಲಸದಲ್ಲಿ ಸಂದರ್ಭಾನುಸಾರ ನಷ್ಟವಾದರೂ ಆಗಬಹುದಾಗಿರುತ್ತೆ. ಆದರೆ ಈ ಸಮಾಜವು ಇನ್ನೂ ಪೂರ್ವವಯಸ್ಸಿನಲ್ಲಿರುವದ್ದರಿಂದ ಕ್ರಮೇಣ ನಮ್ಮ ಉದ್ದೇಶಗಳು ನೆರವೇರುವದರಲ್ಲಿ ಸಂದೇಹವಿರುವದಿಲ್ಲವೆಂದು ತೋರುತ್ತದೆ.

1909ನೆ ಫೆಬ್ರುವರಿ ಮಾಹೆಯಲ್ಲಿ ಸೊಸೈಟಿ ಇನ್ಸ್‌ಪೆಕ್ಷನ್‌ಗಾಗಿ ನಮ್ಮ ಸಂಸ್ಥಾನದ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್ ಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದವೇಳೆ ಇಲ್ಲಿನ ಲೆಖ್ಖಗಳನ್ನೆಲ್ಲಾ ಚೆಕ್ಕು ಮಾಡಿ, ನಮ್ಮಲ್ಲಿ ಸ್ಟಾಕಿನಲ್ಲಿದ್ದ ರೇಷ್ಮೆಯನ್ನು ವಿಕರಿ ಆಗುವ ಉದ್ದಿಶ್ಯ ಬ್ರಿಟಿಷ್ ಇಂಡಿಯಾದಲ್ಲಿನ ರಿಜಿಸ್ಟ್ರಾರ್ರುಗಳಿಗೆಲ್ಲಾ ಬರಿಸಿ ಅವರುಗಳಿಂದ ಜವಾಬು ತರಿಸಿ ಇಲ್ಲಿಗೆ ಬರಿಸಿದ್ದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿರುವ ಕೋ ಆಪರೇಟೀವ್ ಸೊಸೈಟಿಗಳಿಗೆಲ್ಲಾ ಇಲ್ಲಿಂದ ನಾವು ಬರಸಿರುತ್ತೇವೆ. ಅಲ್ಲದೆ ಬೊಂಬಾಯಿ ಪ್ರೆಸಿಡೆನ್ಸಿ ರಿಜಿಸ್ಟ್ರಾರ್ ಸಾಹೇಬರವರು ಅಲ್ಲಿನ ಮಾದ್ರಿ ರೇಷ್ಮೆಯನ್ನು ಇಲ್ಲಿಗೆ ಕಳುಹಿಸಿದ್ದರು, ಅವರ ಮಾದ್ರಿ ರೇಷ್ಮೆಗೆ ಅನುಸಾರವಾಗಿರುವ ನಮ್ಮಲ್ಲಿ ತಯಾರಾದ ರೇಷ್ಮೆಯನ್ನು ಅವರ ಲೆಟರಿನಂತೆ ನಾವು ಕಳುಹಿಸಿರುತ್ತೇವೆ.

ರೇಷ್ಮೆ ಗೂಡನ್ನು ಮತ್ತು ಆಫೀಸನ್ನು ಈಗಿರತಕ್ಕ ಕಟ್ಟಡದಲ್ಲಿಯೇ ಇಟ್ಟುಕೊಂಡು ಚರಿ ಕೆಲಸಕ್ಕಾಗಿ ಅಲಾಹಿದಾ ಷೆಡ್ಡು ಹಾಕಿಸಿ ಕೆಲಸ ನಡಿಸುತ್ತಾಬಂದರೆ ಕೆಲಸಕ್ಕೆ ಸಲಕರಣೆಯಾಗಿಯೂ, ಅಲಾಹಿದಾ ಮನೆಗೆ ಬಾಡಿಗೆ ಕೊಡತಕ್ಕ ಸಂಭವ ಇಲ್ಲದ್ದರಿಂದಲೂ, ಈಗಿದ್ದ ಸ್ಟೋರ್ ಮನೆಯನ್ನು 1909ನೆ ಏಪ್ರಿಲ್ ಮಾಹೆಯಲ್ಲಿ ಬಿಡಲ್ಪಟ್ಟಿತು.

ಹಾಲಿ ಕಟ್ಟುರತಕ್ಕ ಕಾರ್ಖಾನೆ ಕಟ್ಟಡವನ್ನ ಜರೀಬು ಮಾಡಿಸಿದ್ದರಲ್ಲಿ 444 ರೂಪಾಯಿಗಳಿಗೆ ಕಂಪ್ಲೀಷನ್ ಬಿಲ್ಲು ಆಗಿರುತ್ತೆ. ಇದಕ್ಕಾಗಿ ಇದುವರಿಗೆ ಇದರ ಕಂಟ್ರಾಕ್ಟುದಾರ್ರಿಗೆ 325 ರೂಪಾಯಿಗಳು ಅಡ್ವಾನ್ಸಾಗಿ ಪಾವತಿ ಆಗಿರುತ್ತೆ. ಕಂಟ್ರಾಕ್ಟು ಮುಚ್ಚಳಿಕೆಯಂತೆ ಶೇಕಡಾ 10 ರೂಪಾಯಿನ ಮೇರೆ 44 ರೂಪಾಯಿ ಜಾತಾ ಬಾಕಿ ಆಗುವ ಮೊಬಲಗಿನಲ್ಲಿ ಅಡ್ವಾನ್ಸು ಕೊಟ್ಟಿರತಕ್ಕದ್ದು ಅಡ್ಜಸ್ಟು ಮಾಡಿಕೊಂಡು ಬಾಕಿ ಪಾವತಿ ಆಗಬೇಕಾಗಿರುತ್ತೆ.

ಈ ಸಂಘದಲ್ಲಿ ಹಾಲಿ ನಡಸುತ್ತಿರುವ ಕೈಗಾರಿಕೆಯಲ್ಲಿ ಪ್ರಥಮವಾದ ಈ ಸಾರಿಯೇ ನಫೆ ಗಿಟ್ಟದೆ ಲುಕ್ಸಾನು ಬರಬಹುದೆಂಬ ಯೋಚನೆಯಿಂದ 1909ನೆ ಫೆಬ್ರುವರಿ ಮಾಹೆಯಲ್ಲಿ ರಿಜಿಸ್ಟ್ರಾರ್ ಸಾಹೇಬರವರು ಇನ್ಸ್‌ಪೆಕ್ಷನ್‌ಗೆ ದಯಮಾಡಿಸಿದವೇಳೆ, ಈ ಸಂಗತಿಯಲ್ಲವನ್ನು ಅರಿಕೆಮಾಡಿಕೊಳ್ಳಲಾಗಿ ಇದು ಪ್ರಥಮ ವರ್ಷದ ಕೆಲಸವಾದ್ದರಿಂದಲೂ, ಮಾರ್ಕೆಟ್ಟು ರೇಟು ಕಮ್ಮಿ ಇದ್ದದ್ದರಿಂದಲು, ಈ ರೀತಿ ಕಾಣುತ್ತಾದರೂ, ಇದಕ್ಕೆ ಅಧೈರ್ಯ ಪಡದೆ ಕೆಲಸ ನಡಸುತ್ತಾಬಂದರೆ ಉದ್ದೇಶವು ನೆರವೇರುತ್ತೆ. ಅಲ್ಲದೆ ಇದಕ್ಕೆ ಬ್ರಾಂಚಾಗಿ ಇತರ ತರಹಾ ವ್ಯಾಪಾರವನ್ನು ಏರ್ಪಾಡಿಸಿ ನಡಸುತ್ತಾಬಂದರೆ ನಷ್ಟಕ್ಕೆ ಖಂಡಿತ ಕಾರಣವಾಗುವದಿಲ್ಲವೆಂದು ಅಪ್ಪಣೆ ಕೊಟ್ಟಿರುತ್ತಾರೆ. ಹಾಲಿ ಅನುಭವದಲ್ಲಿರತಕ್ಕ ವಿದ್ಯಮಾನವೆಲ್ಲಾ ಶೃತಪಡಿಸಿರುತ್ತೇನೆ.

ಸಂಘದ ಮೆಂಬರುಗಳೆಲ್ಲರೂ ಸೊಸೈಟಿ ಅಭಿವೃದ್ಧಿ ವಿಚಾರದಲ್ಲಿ ನಡಸಬೇಕಾದ ಪ್ರಯತ್ನಕ್ಕೆ ಪ್ರೋತ್ಸಾಹಪಡಿಸಿ ಏರ್ಪಾಡು ಮಾಡಬೇಕಾಗಿ ಕೋರುತ್ತೇನೆ.

ಪ್ರಾರಂಭದಲ್ಲಿ ಕಷ್ಟತೋರಿದಮಾತ್ರದಿಂದಲೆ ಅಥವಾ ಆಕಸ್ಮಿಕದಿಂದೊದಗಿದ ಮತ್ತು ಮುಂಜಾಗರೂಕತೆಯಿಂದ ಊಹಿಸಲಾಗದಿದ್ದ ಸಂದರ್ಭಗಳಿಂದ ನಷ್ಟ ಕಂಡಮಾತ್ರದಿಂದಲೆ ವಿವೇಕವುಳ್ಳ ಪುರುಷರು ತಮ್ಮ ಉದ್ದೇಶವನ್ನು ಬಿಡಲಾರರು, ಹೀಗೆ ಹಿಡಿದ ಕೆಲಸಗಳನ್ನು ಅಲ್ಪಕಾರಣಗಳಿಗಾಗಿ ಬಿಡುವಂಥ ಆರಂಭಶೂರರು ಯಾವ ದೊಡ್ಡಕಾರ್ಯವನ್ನುತಾನೆ ನೆರವೇರಿಸಬಲ್ಲರು.

ನಮ್ಮ ಖಾವಂದರವರ ಅನುಜ್ಞೆ ಪಡೆದು ಅವರ ಹೆಸರನ್ನು ನಾವು ನಮ್ಮ ಸಂಘಕ್ಕೆ ಇಟ್ಟಿರುವದನ್ನ ಸಾರ್ಥಕಗೊಳಿಸಲು ನಾವು ಈ ವರ್ಷದಲ್ಲಿ ಬುದ್ಧಿ ಸಾಹಸಗಳನ್ನು ತೋರಿ ನಮ್ಮ ಸಂಘವನ್ನು ಅಭಿವೃದ್ಧಿಗೊಳಿಸಿ, ಪರಸ್ಪರಸಹಾಯದಿಂದುಂಟಾಗೆಬಹುದಾದ ಪ್ರಯೋಜನಗಳನ್ನು ಜನಗಳಿಗೆ ದೃಷ್ಟಾಂತರಗೊಳಿಸುವ ಸನ್ನಾಹವನ್ನ ಮಾಡಬೇಕು. ಭಗವಂತನ ಕೃಪೆಯಿಂದ ಈ ವರ್ಷದ ಕಾಲಸ್ಥಿತಿಯು ಗತ ಸಾಲಿನ ಕಾಲಸ್ಥಿತಿಗಿಂತಲೂ ಚೆನ್ನಾಗಿರುವಂತೆ ಕಾಣುತ್ತಿದೆ.

ಆದ್ದರಿಂದ ಮೆಂಬರುಗಳು ಪರಸ್ಪರ ಸಹಾಯ ಮತ್ತು ಪ್ರೋತ್ಸಾಹದೊಡನೆ ಕೆಲಸ ನಿಶ್ಚಯಿಸಬೇಕಾಗಿ ಕೋರುತ್ತೇನೆ.

(ಸೈನ್ಡ್) ತ. ಕೃಷ್ಣರಾವ್,
ಸೆಕ್ರೆಟರಿ.

“ ಕಾಪಿ ”

ಎಂ. ಶ್ಯಾಮರಾವ್,
ರಿಜಿಸ್ಟ್ರಾರ್, ಕೋ ಆಪರೇಟೀವ್ ಸೊಸೈಟೀಸ್ ಇನ್ ಮೈಸೂರು.

ನೋಟಿಸ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ—ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿ ಹೋಬಳಿ ಜೋಡಿ ಮಂಗಸಂದ್ರ ಗ್ರಾಮದಲ್ಲಿ ಜೋಡೀದಾರ್ರಾದ ನಮ್ಮ ಪೂರ್ವೀಕರಿಂದ ಮೂಲವಾಡಿ ನರಸಿಹ್ಮಯ್ಯನವರು ಧರ್ಮಕಾರ್ಯಕ್ಕಾಗಿ ಕೆಲವು ಜಮೀನನ್ನು ಪಡೆದು ಪ್ರಯಾಣಿಕರ ಮತ್ತು ಊರಿನವರ ಉಪಯೋಗಕ್ಕಾಗಿ ಕೋಲಾರ ಮತ್ತು ಸೋಂಪುರದ ರಸ್ತೆಯ ಎಡ ಕಡೆ ಛತ್ರ ಮತ್ತು ಕೊಳವನ್ನು ಕಟ್ಟಿಸಿ ಹೂ ತೋಟವನ್ನು ನಿರ್ಮಿಸಿ ಧರ್ಮಾರ್ಥವಾಗಿ ಸರ್ವರ ಉಪಯೋಗಕ್ಕೆ ಬಿಟ್ಟಿದ್ದಂತೆ ಇಂದಿನವರಿಗೂ ನಡೆದುಬರುತ್ತಿದೆ. ಈಗ ಸದರಿ ನರಸಿಹ್ಮಯ್ಯನವರ ಮೊಮ್ಮಕ್ಕಳಾದ ನರಸಿಹ್ಮಯ್ಯ ಎಂಬುವರು ಸದರಿ ಛತ್ರ, ಕೊಳ, ತೋಟವನ್ನು ಸ್ವಪ್ರಯೋಜನಾಪೇಕ್ಷೆಯಿಂದ ಪರಭಾರೆ ಮಾಡುವಂತೆ ತಿಳಿದುಬರುವುದು. ಯಾವಹಕ್ಕು ಇಲ್ಲದ ಇವರ ಪ್ರಯತ್ನವು ಇವರ ಹಿರಿಯರ ಮತ್ತು ಸ್ಥಳವನ್ನು ಕೊಟ್ಟ ಜೋಡಿದಾರ್ರಾದ ನಮ್ಮಗಳ ಧರ್ಮಕಾರ್ಯದ ಉದ್ದೇಶಕ್ಕೆ ವಿರೋಧವಾಗಿ ಜನರಿಗೆ ಅನಾನುಕೂಲವನ್ನೂ ತೊಂದರೆಯನ್ನೂ ಉಂಟುಮಾಡುವದಾಗಿದೆ. ಈ ಯೋಚನೆ ಪ್ರಯತ್ನಿಸಿರುವ ನರಸಿಹ್ಮಯ್ಯನವರಿಗೆ ಸದರಿ ಛತ್ರ, ಕೊಳ, ಜಮೀನು ಮುಂತಾದ ಯಾವುದನ್ನೇ ಆಗಲಿ ಯಾವರೂಪವಾಗಿಯೂ ಪರಭಾರೆ ಮಾಡಲು ಅಥವಾ ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ಯಾವಹಕ್ಕೂ ಇರುವುದಿಲ್ಲ. ಇವರಿಂದ ಇವುಗಳನ್ನು ಪಡೆಯತಕ್ಕವರಿಗೆ ಯಾವ ಹಕ್ಕೂ ಇರುವುದಿಲ್ಲವೆಂದು ಮುಂಚಿತವಾಗಿಯೇ ಪ್ರಸಿದ್ಧಪಡಿಸಿದೆ.

ಜೋಡೀದಾರ್ ಅಪ್ಪಯ್ಯಂಗಾ ಮತ್ತು ಲಕ್ಷ್ಮೀನರಸಿಹ್ಮಪಂಡಿತ ವಗೈರೆ.

706

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಬ್ಲಿಷ್ ಆದ್ದು. [ಸಂ 35.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ|| 2, ಸನ್ 1909.

II ನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ವಿದ್ಯಾಭ್ಯಾಸದ ಇಲಾಖೆ:

ಪ್ರಕಟನ ಪತ್ರಿಕೆ.

ಸನ್ 1909ನೆಯ ಇಸವಿ ಆಗಸ್ಟು 14ನೆಯ ತಾರೀಖಿನ ೩. ನಂಬರು 5.

ಹೊಲಿಗೆಯಲ್ಲಿ ಉಪಾಧ್ಯಾಯಿ ಪ್ರಾವೀಣ್ಯ ನಿರ್ಣಯಕ ಪರೀಕ್ಷೆ.

1. ಹೊಲಿಗೆಯಲ್ಲಿ ಉಪಾಧ್ಯಾಯಿ ಪ್ರಾವೀಣ್ಯ ನಿರ್ಣಯಕ ಪರೀಕ್ಷೆಯು ಬರುವ ನವೆಂಬರ್ ತಿಂಗಳ ಕಡೆಯ ವಾರದೊಳಗೆ ಮೊದಲೇ ತಿಳಿಯಪಡಿಸುವ ಸ್ಥಲಗಳಲ್ಲಿ ನಡೆಯುವುದು.

2. ಪರೀಕ್ಷೆಯಲ್ಲಿ ಎರಡು ಭಾಗಗಳು : (1) ಹೊಲಿಗೆಯಲ್ಲಿ ಪರೀಕ್ಷೆ, (2) ಹೊಲಿಗೆಯನ್ನು ಪ್ರತ್ಯಕ್ಷವಾಗಿ ಕಲಿಸುವದರಲ್ಲಿ ಪರೀಕ್ಷೆ, ಈ ಎರಡೂ ದೇಶಭಾಷೆಯಲ್ಲಿ ನಡಿಸಲ್ಪಡುವುವು.

3. ದೇಶಭಾಷೆಯ ಪುಸ್ತಕವನ್ನು ಓದುವದರಲ್ಲಿಯೂ ಬರವಣಿಗೆಯಲ್ಲಿಯೂ IIIನೆಯ ಕನ್ನಡ ತರಗತಿಯ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾಗಿರುವರೆಂದು ಇನ್ಸ್ಪೆಕ್ಟಿಂಗ್ ಆಫಿಸರಿಂದ ಯೋಗ್ಯತಾ ಪತ್ರಿಕೆಯನ್ನು ಪಡೆದ ಸಕಲ ವಿದ್ಯಾರ್ಥಿನಿಗಳೂ, ಅಥವಾ ಸರ್ಕಾರದವರಿಂದ ಪರಿಗ್ರಹಿಸಲ್ಪಟ್ಟಿರುವ ಯಾವುದಾದರೊಂದು ಪ್ರೈವೆಟ್ ಸ್ಕೂಲಿನಲ್ಲಿ ಕಡೆಗೆ ಒಂದು ವರುಷದವರೆಗಾದರೂ ಉಪಾಧ್ಯಾಯಿಯರಾಗಿದ್ದುಕೊಂಡು ತಮ್ಮ ಕೆಲಸವನ್ನು ತೃಪ್ತಿಕರವಾಗಿ ಮಾಡಿರುವರೆಂದು ಇನ್ಸ್ಪೆಕ್ಟಿಂಗ್ ಆಫಿಸರಿಂದ ಯೋಗ್ಯತಾ ಪತ್ರವನ್ನು ಪಡೆದಿರತಕ್ಕವರೂ ಮೇಲ್ಕಂಡ ಪರೀಕ್ಷೆಯನ್ನು ಕೊಡಬಹುದು.

4. ಪರೀಕ್ಷೆ ಕೊಡಲಪೇಕ್ಷಿಸುವ ವಿದ್ಯಾರ್ಥಿನಿಗಳು ತಾವು ಹದಿನೈದು ವರ್ಷ ವಯಸ್ಸಿಗೆ ಮೇಲ್ಪಟ್ಟವರಾಗಿಯೂ ಮೂವತ್ತೈದು ವರ್ಷ ವಯಸ್ಸಿಗೆ ಒಳಪಟ್ಟವರಾಗಿಯೂ ಇರುವರೆಂದು ಗೌರವವುಳ್ಳ ಒಬ್ಬ ದೊಡ್ಡ ಮನುಷ್ಯರಿಂದ ಒಂದು ನಿರ್ಣಯ ಪತ್ರಿಕೆಯನ್ನು ಪಡೆದು ಕಳುಹಿಸಬೇಕು.

5. ಈ ಪರೀಕ್ಷೆಯು ಮೊದಲೇ ತಿಳಿಯಪಡಿಸುವ ಸ್ಥಳಗಳಲ್ಲಿ ನಡೆಯುವುದು.

6. ಹೊಲಿಗೆಯ ಪರೀಕ್ಷೆಯು ಇಲ್ಲಿ ತಿಳಿಸುವ ಕ್ರಮದಲ್ಲಿ ನಡೆಯಿಸಲ್ಪಡುವುದು :—

I.

1. ಹಳೆಯ ಬಟ್ಟೆಗೆ ತೇಪೆ ಹಾಕುವುದು.
2. ಹಳೆಯ ಬಟ್ಟೆಯನ್ನು ಅಥವಾ ಕಾಲ್ಚೀಲವನ್ನು ರಫ್ಫು ಮಾಡುವುದು.
3. ಫೆದರ್ ಸ್ಟಿಚ್ (ರೆಕ್ಕೆ ಹೊಲಿಗೆ) ಹೆರಿಂಗ್ ಬೋನ್ (ಬುಗಡಿ ಹೊಲಿಗೆ) ಎಂಬ ಹೊಲಿಗೆಗಳನ್ನು ಹಾಕುವುದು ಮತ್ತು ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ಅಕ್ಷರಗಳನ್ನು ಗುರುತು ಹಾಕುವುದು.
4. ಹೆಣಿಗೆ, ಕ್ರೋಷೆ, ಕಸೂತಿ ಎಂಬ ಮೂರು ಕುಶಲ ವಿದ್ಯೆಗಳಲ್ಲಿ ಮೂರಕ್ಕೆ ಕಡಮೆ ಇಲ್ಲದಷ್ಟು ಮಾದರಿಗಳನ್ನು ರಚಿಸುವುದು.

5. ಚೀಲ, ಕಾಲ್ಚೀಲ ಮುಂತಾದವುಗಳಂತಹ ಮೂರು ಸಾಮಾನುಗಳನ್ನು ಚೆನ್ನಾಗಿ ಮಾಡಿ ಪೂರೈಸಿಕೊಡುವುದು.

6. ಮುಂದೆ ತಿಳಿಸುವುವುಗಳನ್ನು ಕತ್ತರಿಸಿ ಮಾಡುವುದಕ್ಕೆ ಶಕ್ತಿಯುಂಟೆಂದು ತೋರಿಸುವುದು:

(1) ಆರರಿಂದ ಹನ್ನೆರಡು ವರ್ಷ ವಯಸ್ಸಿನೊಳಗಿರುವ ಬಾಲೆಗೆ ಪೂರ್ಣ ಪ್ರಮಾಣದ ಒಂದು ಜಾಕೆಟ್ಟೆಂಬ ಅಂಗಿ ಮತ್ತು ಪೆಟಿಕೋಟೆಂಬ ಪಾವುಡೆ.

(2) ಆರರಿಂದ ಹನ್ನೆರಡು ವರುಷ ವಯಸ್ಸಿನೊಳಗಿರುವ ಬಾಲಕನಿಗೆ ಕತ್ತಿನಪಟ್ಟಿಯನ್ನೂ, ಜೋಬನ್ನೂ ಗುಂಡಿಯ ಕಾಜಾಗಳನ್ನೂ ಜೋಡಿಸುವ ಸನ್ನಿವೇಶವನ್ನು ತೋರಿಸುವಂತೆ ಒಂದು ಜಾಕೆಟ್ಟೆಂಬ ಅಂಗಿ ಮತ್ತು ಒಂದು ಟೋಪಿ.

(3) ನೇಟಿವ್ ಮನುಷ್ಯನ ಚಿಕ್ಕ ಜಾಕೆಟ್.

(4) ನೇಟಿವ್ ಮನುಷ್ಯನು ಒಳಗಡೆ ಹಾಕುವ ಜಾಕೆಟ್.

II

ಹೊಲಿಗೆಯನ್ನು ಕಲಿಸುವುದಕ್ಕೂ ಅರ್ಧ ಘಂಟೆಯ ಕಾಲ ಪಾಠಹೇಳುತ್ತಾ ಆ ಕಾಲದಲ್ಲಿ ತರಗತಿಯನ್ನು ಅಂಕೆಯಲ್ಲಿಟ್ಟುಕೊಂಡಿರುವುದಕ್ಕೂ ಶಕ್ತಿಯುಂಟೆಂಬುದನ್ನು ತೋರಿಸುವುದು (ಯಾವ ವಿಧವಾದ ಪಾಠವನ್ನು ಹೇಳಬೇಕು, ಅದನ್ನು ಯಾವ ತರಗತಿಗೆ ಹೇಳಬೇಕು ಎಂಬ ವಿಷಯವನ್ನು ಪರೀಕ್ಷಕರು ಗೊತ್ತುಮಾಡುವರು.)

7. ವಿದ್ಯಾರ್ಥಿಗಳು ಪರೀಕ್ಷಕರ ಎದಿರಿನಲ್ಲಿ ಕಡೆಗೆ ಹತ್ತು ಮಂದಿ ಬಾಲೆಯರಿಗೆ ಕಡಮೆ ಇಲ್ಲದ ತರಗತಿಗೆ ಹೊಲಿಗೆಯ ಪಾಠವನ್ನು ಪ್ರತ್ಯಕ್ಷವಾಗಿ ಹೇಳಿ ತೋರಿಸಬೇಕಾಗುವುದು.

8. ಅದಕ್ಕಾಗಿ ಗೊತ್ತುಮಾಡಿರುವ ಒಟ್ಟು ಸಂಖ್ಯೆಯಲ್ಲಿ ಸೇಕಡ ಐವತ್ತು ನಂಬರನ್ನು ಪಡೆದ ಹೊರತು ಯಾವ ವಿದ್ಯಾರ್ಥಿನಿಯೂ ಹೊಲಿಗೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಳೆಂದು ಎಣಿಸಲ್ಪಡಲಾಗದು. ಪರೀಕ್ಷೆಯಲ್ಲಿ ತೇರ್ಗಡೆಯಾದವರೊಳಗೆ, ಒಟ್ಟು ಸಂಖ್ಯೆಯಲ್ಲಿ ಸೇಕಡ ಎಪ್ಪತ್ತೈದು ನಂಬರನ್ನು ಪಡೆದವರು ಮೊದಲನೆಯ ತರಗತಿಯಲ್ಲಿಯೂ, ಉಳಿದವರು ಎರಡನೆಯ ತರಗತಿಯಲ್ಲಿಯೂ ತೇರ್ಗಡೆಯಾದಂತೆ ಎಣಿಸಲ್ಪಡತಕ್ಕದು.

9. ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರು "ಹೊಲಿಗೆಯಲ್ಲಿ ಉಪಾಧ್ಯಾಯಿ. ಪ್ರಾವೀಣ್ಯ ನಿರ್ಣಾಯಕ ಪರೀಕ್ಷೆಯನ್ನು ಕೊಟ್ಟಿರುವರು" ಎಂದು ಯೋಗ್ಯತಾ ಪತ್ರಿಕೆಯನ್ನು ಪಡೆಯುವರಲ್ಲದೆ ಈ ಸಂಸ್ಥಾನದ ಬಾಲಿಕಾ ಪಾಠಶಾಲೆಗಳಲ್ಲಿ ಹೊಲಿಗೆಯನ್ನು ಹೇಳಿಕೊಡುವ ಉಪಾಧ್ಯಾಯಿನಿಯರಾಗಿರಲು ಯೋಗ್ಯರೆಂದು ಎಣಿಸಲ್ಪಡುವರು.

10. ಹೊಲಿಗೆಯ ಪ್ರಾವೀಣ್ಯ ಪರೀಕ್ಷೆಗೆ ಸೇರಿಸಿಕೊಳ್ಳಬೇಕೆಂದು ಬರೆದುಕೊಳ್ಳುವ ದರಖಾಸ್ತುಗಳು, ಪರೀಕ್ಷೆ ನಡೆಯುವುದಕ್ಕೆ ಹಿಂದಣ ಆಗಸ್ಟು 15ನೆ ತಾರೀಖಿಗೆ ಮೀರದೆ ಮೈಸೂರು ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ ತಲಪಬೇಕು. [ಈ ಸಂವತ್ಸರಕ್ಕೆ 30ನೆಯ ಸೆಪ್ಟಂಬರೇ ದರಖಾಸ್ತು ಕಳುಹಿಸುವ ಕಡೆಯ ದಿವಸವಾಗಿರುವುದು.]

11. ಪರೀಕ್ಷೆಗೆ ಸೇರಿಸಿಕೊಳ್ಳುವದಕ್ಕೆ ಫಿ 3 ರೂಪಾಯಿ.

12. ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದಿರುವ ವಿದ್ಯಾರ್ಥಿನಿಯು ಪೂರಾ ಫೀಯನ್ನು ಕೊಟ್ಟಮೇಲೆ ಮುಂದಣ ಪರೀಕ್ಷೆಗಳಿಗೆ ಸೇರಿಸಿಕೊಳ್ಳಲ್ಪಡುವಳು.

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟು ಇಲಾಖಾ

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೀಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವೆಂಬರ್ ತಾರೀಖು 18	200	
2	ಡಿಟೋ ...	ಸಾಗರ .	ಡಿಟೋ 22	100	
3	ಡಿಟೋ ...	ಶಿವಮೊಗ್ಗ ...	ಡಿಟೋ 25	500	
4	ಕಡೂರು ...	ತರೀಕೆರೆ ...	ಡಿಟೋ 29	(a)200	(a) ಚಿತ್ರದುರ್ಗದ 10 ಟನ್‌ಗಳು ಸೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್ ತಾರೀಖು 2	400	
6	ಹಾಸನ ...	ಹಾಸನ ...	ಡಿಟೋ 6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ 9	(b)100	(b) ತುಮಕೂರು 30 ಟನ್‌ಗಳು ಕೋಲಾರದ 5 ಟನ್‌ಗಳು ಸೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ 13	250	
9	ಡಿಟೋ ...	ಹುಣಸೂರು ...	ಡಿಟೋ 16	450	
			ಜುಮ್ಲಾ ...	2,400	

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಎಲ್ಲಾ ತಾಲ್ಲೂಕುಗಳಲ್ಲಿ ದೊರಿಯುಬಹುದಾದ ಪಸಾರೆ ಬಾಬನ್ನು ಆಗಸ್ಟು 26ನೆ ತಾರೀಖಿನ ನೋಟಿಫಿಕೇಷನ್ನಲ್ಲಿ ಕಂಡ ತಾರೀಖುಗಳಲ್ಲಿ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚು ಅಂಶ ತಿಳಿಯಬೇಕಾದರೆ 1909ನೆ ಇಸವಿ ಆಗಸ್ಟು 26ನೆ ತಾರೀಖಿನ ಮೈಸೂರು ಗೆಜೆಟ್ಟಿನ IIನೆ ಭಾಗದ 690—691ನೆ ಪುಟಗಳಲ್ಲಿ ಛಾಯಿಷಾಗಿರುವ ನೋಟಿಫಿಕೇಷನ್ಗೆ ನಿಗಾ ಕೊಡತಕ್ಕದ್ದು.

ಹೆಚ್. ರಾಮೈಯ್ಯ,

ಫಾರ್ ಡೆಪ್ಯುಟಿ ಕಮಿಷನರ್, ಕೋಲಾರ ಡಿಸ್ಟ್ರಿಕ್ಟು.

ತಾರೀಖು ನೆ ಜೂನ್ 1909.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳು ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕೆ ಚಕ್ಕೆಯನ್ನು 1909ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1911ನೆ ಇಸವಿ ಜೂನ್ 30ನೆ ತಾರೀಖು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಿಸಿರುವ ತಾರೀಖಿನಲ್ಲಿ ಮತ್ತು ಸ್ಥಳದಲ್ಲಿ ಆಯಾಯ ತಾಲ್ಲೂಕು ಅಮಲ್ದಾರು ಮತ್ತು ಫಾರೆಸ್ಟು ಆಫಿಸರುಗಳಿಂದ ಹರಾಜು ಮಾಡಿಸುತ್ತೆ:—

ನಂಬರ್.	ತಾಲ್ಲೂಕು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.	ಹರಾಜು ಮಾಡಿಸುವ ಆಫಿಸರ ಹೆಸರು.
1	ತರೀಕೆರೆ ...	15—9—09	ತಾಲ್ಲೂಕು ಕಛೇರಿಯಲ್ಲಿ.	ಅಮಲ್ದಾರು ಮತ್ತು ಲಕ್ವಳ್ಳಿ ರೇಂಜಾಫಿಸರು.

ನೋಟ್—ಹರಾಜು ಅವಶ್ಯಕ ಕಂಡರೆ ಸಂಮತುವಾರಾಗಿ ಮಾಡಿಸಲ್ಪಡುತ್ತೆ.

2. ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸಲ್ಪಡುತ್ತೆ.

3. ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ಪಡಿಸಿದ ಏಜಂಟರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡಲೆ ಛಡ ಸವಾಲ್‌ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ ರೂಪಾಯಿ ಒಂದಕ್ಕೆ ಒಂದಾಣೆ ಮೇರಿಗೆ ಶೇರಿಸಿ ಬಿಟ್ಟು ಹಣದಲ್ಲಿ $\frac{1}{4}$ ಹಿಸ್ಸೆಯನ್ನು ಡಿಪಾಜಟ್ ಹಾಜರ್ಮಾಡಬೇಕು. ಆ ಪ್ರಕಾರ ಹಾಜರ್ಮಾಡದೆ ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನ ಪುನಃ ಹರಾಜು ಮಾಡಲ್ಪಡುತ್ತೆ.

6. ಮೇಲೆ ಹೇಳಿದಂತೆ ದುಸ್ತರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಅವನಿಗೇನೂ ಹಕ್ಕು ಇರುವದಿಲ್ಲ. ನಷ್ಟಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಹಣಕ್ಕೂ ಕಮ್ಮಿ ಬೀಳುವ ಹಣವನ್ನ ಅವ್ವಲ್ ಹರಾಜುದಾರ್ರಿಂದ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

7. ಛಡ ಸವಾಲ್‌ದಾರನು ಬಾಕಿ $\frac{3}{4}$ ಹಿಸ್ಸೆ ಹಣವನ್ನು ಮತ್ತು ಅದರ ಲೋಕಲ್ ಸೆಸ್ ಸಹಿತ ಹರಾಜು ತಾರೀಖು ಲಾಗಾಯಿತು ಒಂದು ತಿಂಗಳವಳಗೆ ಪಾವತೀ ಮಾಡಬೇಕು, ತಪ್ಪಿದರೆ ಮೊದಲು ಇಟ್ಟ ಡಿಪಾಜಟ್ ಮೊಬಲಗು ಸರ್ಕಾರಕ್ಕೆ ಶೇರಿಸಲ್ಪಡುತ್ತೆ. ಇದಲ್ಲದೆ ಮುಂದೆ ಜಮಾಯಿಸಿಕೊಳ್ಳುವದಕೆ ಅವಕಾಶಕೊಡದೆ ಇಜಾರೆ ಹಕ್ಕು ತಪ್ಪಿಸುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

8. ಹರಾಜು ಮಂಜೂರಿಯ ಸಂಗತಿಯನ್ನ ಹರಾಜುದಾರ್ರಿಗೆ ತಿಳಿಸಿದ (3) ಮೂರುದಿವಸಗಳಲ್ಲಿ ಸರಿಯಾದ ಛಾಪಾ ಕಾಗದ್ದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತ್ತುಗಳ ಮೇರಿಗೆ ನಡದುಕೊಳ್ಳಲು ಬದ್ಧನಾಗಿ ಇರುವಂತೆ ಹರಾಜುದಾರನು ಮುಚ್ಚಳಿಕೆ ಬರದುಕೊಡಬೇಕು.

ಈ ಕೆಳಗೆ ನಮೂದಾಗುವ ಷರತ್ತುಗಳ ಮೇರೆ ಹರಾಜುದಾರ್ರು ನಡದುಕೊಳ್ಳಬೇಕು:

(1) ಒಂದು ವರುಷಕ್ಕೆ ಒಳಪಟ್ಟ ಗಿಡಗಳನ್ನ ಕಡಿಯುಕೊಡದು

(2) ತೊಬಟೆ ತೆಗದ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

( ) ಇಜಾರೆ ಮೇರೆ ಸಾಗಿಸಿಕೊಂಡ ಚಕ್ಕೆ ಮೊತ್ತದ ತಪಶೀಲ್ ಲೆಕ್ಕ ಇಡಬೇಕು. ತಾಲ್ಲೂಕ್ ಅಮಲ್ದಾರ್ರು ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಕ್ಕ ತನಿಖೇ ಮಾಡಲು ಬಂದಾಗ ಲೆಖ ತೋರಿಸಬೇಕು.

(4) ಡೆಪ್ಯುಟಿ ಕಮಿಷನರ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸ್ ಪಡಿಯಬೇಕು.

(5) 1911ನೆ ಇಸವಿ ಜೂನ್ ಆಖೈರು ವಳಗಾಗಿ ಕಡದು ಜಮಾಯಿಸಿಕೊಂಡು ಇರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪಿ ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೆ ಸಾಗಿಸದೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಸೇರಿಸಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸೌದೇ ಬಗ್ಯಾಗಲೀ ಅಥವಾ ಇನ್ಯಾವದಕ್ಕಾಗಲೀ ಕಡಿಯಕೂಡದು.

ಬಿ. ಹಿರಾಸಿಂಗ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಕಡೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾ|ಖು 10ನೆ ಆಗಸ್ಟು 1909.

ನಾಗಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಹುಲ್ಲೇಕೆರೆ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ನಾಗಮಂಗಲ ತಾಲ್ಲೂಕು ಕಚೇರಿಯಲ್ಲಿ 1909ನೆ ಸೆಪ್ಟಂಬರ ಮಾಹೆ 20ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪ್ಸೀಲ್ ಬಗ್ಗೆ 19—8—1909ನೆ ಮುರ್ಕುಂ 3?ನೆ ನಂಬರ ಮೈಸೂರು ಗೆಜೆಟ್ಟಿನ 2ನೆ ಭಾಗದ 678-679ನೆ ನಂಬರ ಪೇಜು ನೋಡತಕ್ಕದ್ದು.

ತಾ|ಖು 16ನೆ ಆಗಸ್ಟು 1909.

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಮೇಲ್ಕೋಟೆ ಹೋಬಳಿಗೆ ಸೇರಿದ ಜೋಡಿ ರಾಮಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಚೇರಿಯಲ್ಲಿ 1909ನೆ ಸೆಪ್ಟಂಬರ ಮಾಹೆ 30ನೆ ತಾರೀಖು ದಿವಸ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಸೀಲ್ ಬಗ್ಗೆ 1909ನೆ ಇಸವಿ ಆಗಸ್ಟ್ 26ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 698ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ 1909ನೆ ಆಗಸ್ಟು 7ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಅಫಿಷಿಯಲ್ ಮೆಂಬರುಗಳು.

(1) ಮ|| ರಾ|| ರಾ|| ಕೆ. ಶ್ರೀನಿವಾಸರಾಯರು, (ಪ್ರೆಸಿಡೆಂಟ್).
(2) ಚಿತ್ರದುರ್ಗದ ಡಿಸ್ಟ್ರಿಕ್ಟು ಎಗ್ಸಿಕ್ಯೂಟಿವ್ ಇಂಜನಿಯರ ಸಾಹೇಬರವರು.
(3) ಚಿತ್ರದುರ್ಗ ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು.
(4) ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(5) ಚಿತ್ರದುರ್ಗದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು, (ಗೈರ್ ಹಾಜರು)
(6) ಚಿತ್ರದುರ್ಗ ಡಿಸ್ಟ್ರಿಕ್ಟು ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರವರು.
(7) ಬೋರ್ಡಿನ ವೈಸ್ ಪ್ರೆಸಿಡೆಂಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮ|| ರಾ|| ಪಿ. ನಂಜುಂಡಪ್ಪನವರು.
2. ,, ಮಹಮದ್ ದಸ್ತಗಿರಿ ಸಾಹೇಬರು, (ಗೈರ್ ಹಾಜರು)
3. ,, ಎಂ. ಅನಂತಶೆಟ್ಟರು.
4. ,, ಶಾನುಭೋಗ ಸುಬ್ಬಣ್ಣನವರು.
5. ,, ಜೆಳಗಟ್ಟೆ ಅಜ್ಜಪ್ಪನವರು.
6. ,, ನಾಡಿಗ ಸಿದ್ದರಾಮಯ್ಯನವರು.
7. ,, ಮುತ್ತುಗದೂರು ಪರ್ವತಪ್ಪನವರು.

8. ಮ|| ರಾ|| ಯಲೆ ಬಸಪ್ಪನವರು.
9. ,, ಶಾನುಭೋಗ ಚನ್ನಗಾರಯ್ಯನವರು, (ಗೈರ್ ಹಾಜರು)
10. ,, ಸಿ. ವಿರೂಪಾಕ್ಷಪ್ಪನವರು.
11. ,, ನಬೀ ಸಾಹೇಬರು.
12. ,, ಹೆಚ್. ಸುಬ್ಬರಾವ್.
13. ,, ಕುಬಾಜಿ ದುರ್ಗಪ್ಪನವರು.
14. ,, ಭಾರಿ ರುದ್ರಪ್ಪನವರು.
15. ,, ನಾಡಿಗ ಬಾಲಕೃಷ್ಣರಾವ್.
16. ,, ಪಾಳೇದಹಳ್ಳಿ ನಾಗಪ್ಪನವರು.
17. ,, ಬಿ. ವಿ. ನಾರಾಯಣರಾವ್.
18. ,, ಬಿಳಿಚೋಡು ಮೂಡ್ಲಗಿರಿಯಪ್ಪನವರು.

(N. B.) ದಾವಣಗೆರೆ, ಹೊಳಲ್ಕೆರೆ, ಚಿತ್ರದುರ್ಗ, ಹಿರಿಯೂರು, ಜಗಲೂರು, ಮೊಳಕಾಲ್ಮುರು ಮತ್ತು ಹೊಸದುರ್ಗ ತಾಲ್ಲೂಕು ಅಮಲ್ದಾರ್ರುಗಳು ಮತ್ತು ಹರಿಹರ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ಸಹಾ ಹಾಜರಿದ್ದರು.

I. ಸೆ 1909ನೆ ಇಸವಿ ಮೇ ಮಾಹೇ ತಾರೀಖು 17ರಲ್ಲು ನಡದ ಮೀಟಂಗಿನ ಪ್ರೊಸಿಡಿಂಗ್ಸಿನ ನಕಲನ್ನು ಓದಿ ಖಾಯಂ ಮಾಡಲಾಯಿತು.

II. ಗತ ಸಾಲಿನ ನೇಮಕಲಾ ಕಾಮಗಾರಿಗಳ ಬಾಬತು ಲೀಸ್ಟು ಓದಲಾಯಿತು.

ಬಡ್ಜೆಟ್ಟನಲ್ಲಿ ಮಂಜೂರಾಗಿರುವ ಹೊಸಕಾಮಗಾರಿಗಳಿಗಿಂತಲೂ ನೇಮಕಲಾ ಕಾಮಗಾರಿಗಳು ಜರಿಗಿಸತಕ್ಕದ್ದು ಅವಶ್ಯವಿರುವದ್ದರಿಂದ ಈಗಿನ ಕಾಲಸ್ಥಿತಿ ಬದಲಾವಣೆ ಆಗಿರುವದರನ್ನನುಸರಿಸಿ ಈ ಲೀಸ್ಟನ್ನು ಪರಿಶೋಧಿಸಿ ರಿವೈಜ್ ಮಾಡಬೇಕಾಗಿ ತೀರ್ಮಾನಿಸಲಾಯಿತು.

III. ಚಿತ್ರದುರ್ಗದ ಟೌನ್ ಹಾಲಿನ ಕೆಲವು ಭಾಗವು ಸ್ಟೂಡೆಂಟ್ಸ್ ಹೋಮಿಗೋಸ್ಕರ ಆಕ್ರಮಿಸಲ್ಪಟ್ಟಿರುವ ಕಾರಣ ಇದಕ್ಕೋಸ್ಕರ ವಿದ್ಯಾಭ್ಯಾಸದ ಇಲಾಖೆಯವರಿಂದ ಮಾಹೇಯಾನಾ ಬಾಡಿಗೆ ವಸೂಲು ಮಾಡತಕ್ಕದ್ದರವಿಷಯದಲ್ಲಿ ಗವರ್ನ್ಮೆಂಟಿನವರಿಂದ ಸಾದರಾದ 10—6—09ನೆ ಮರ್ಸ್ಕಂ 12372—ಎಡ್ಯು. ನೆ ನಂಬರು ಡಾಕೆಟ್ ಮತ್ತು ಇದೇ ವಿಷಯದಲ್ಲಿ ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಂದ ತಲ್ಪಿದ 26—6—09ನೆ ಮರ್ಸ್ಕಂ 11987–2267ನೆ ನಂಬರು ಡಾಕೆಟ್ ಕರೆಸ್ಪಾಂಡೆನ್ಸ್ ಸಹಾ ಓದಲಾಯಿತು.

ಗವರ್ನಮೆಂಟ್ ನೋಟಿಫಿಕೇಷನ್ 5ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ಈ ವಿಷಯವನ್ನು ಪ್ರೆಸಿಡೆಂಟ್ ಸಾಹೇಬರವರು ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಲೋಚನೆಯಿಂದ ಫೈಸಲ್ಮಾಡತಕ್ಕದ್ದಾಗಿದೆ ಎಂದು ತೀರ್ಮಾನಿಸಲಾಯಿತು.

IV. ಹರಿಹರದಲ್ಲಿ ಆಸ್ಪತ್ರೆ ಕಟ್ಟತಕ್ಕದ್ದನ್ನು ಅಲ್ಲಿಯ ಲೋಕಲ್ ಬೋರ್ಡಿನವರು ಈ ಬಗ್ಯಾಗಿ ಹಣ ಕೊಡುವವರಿವಿಗೂ ಕಾಮಗಾರಿ ಕೈಕೊಳ್ಳಲು ಆಗಲಾರದೆಂಬದಾಗಿ ಗವರ್ನಮೆಂಟನವರಿಂದ ಸಾದರಾದ 23—7—09ನೆ ಮರ್ಸ್ಕಂ 869-70-ಮೆಡಿ. ನೆ ನಂಬರು ಪ್ರೊಸಿಡಿಂಗ್ಸ್ ಓದಲಾಯಿತು.

15—5—08ನೆ ಮರ್ಸ್ಕಂ 7388-90—ಲೋ. ಎಫ್. 127-07ನೆ ನಂಬರು ಗವರ್ನಮೆಂಟ್ ಪ್ರೊಸಿಡಿಂಗ್ಸಿನಲ್ಲಿ ಹಳೇ ತಾಲ್ಲೂಕು ಕಛೇರಿಯನ್ನು ಹಂಗಾಮಿಯಾಗಿ ಡೆಪ್ಯುಟಿ ಅಮಲ್ದಾರ್ರ ವಾಸಕ್ಕಾಗಿ ಉಪಯೋಗಿಸಿಕೊಳ್ಳಬಹುದು ಎಂದಿದೆ. ಮೇಲ್ಕಂಡಂತೆ ಹಣ ಕೊಡಲು ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಬೋರ್ಡಿನವರಲ್ಲಿ ಹಣ ಇಲ್ಲಾ, ಆದರೆ ಆಸ್ಪತ್ರೆಯನ್ನು ಇನ್ನೂ ವಿಶಾಲವಾದ ಮತ್ತು ಹೆಚ್ಚಿಗೆ ಗಾಳಿ ಬೆಳಕಿನಿಂದ ಕೂಡಿದ ಕಟ್ಟಡಕ್ಕೆ 'ರಿಮೂವ್' ಮಾಡುವುದೇನೋ ಅವಶ್ಯಕ, ಪ್ರಯುಕ್ತ ಗವರ್ನಮೆಂಟನವರ ಆಲೋಚನೆ ಬಳ್ಳೆ ಸದರಿ ಹಳೇ ತಾಲ್ಲೂಕು ಕಛೇರಿಯನ್ನು ಹಂಗಾಮಿಯಾಗಿ ಅಂದರೆ ಹೊಸ ಕಟ್ಟಡಕ್ಕೆ ಹಣ ಒದಗುವ ಪರ್ಯಂತರ ಆಸ್ಪತ್ರೆಗೋಸ್ಕರ ಉಪಯೋಗಿಸಿಕೊಳ್ಳಬಹುದಾಗಿದೆಯೆಂಬುದು ಬೋರ್ಡಿನವರ ಸಲಹೆಯಾಗಿದೆಯೆಂದು ತೀರ್ಮಾನಿಸಲಾಯಿತು.

V. ಹೊಳಲ್ಕೆರೆ ತಾಲ್ಲೂಕು ಅರೇಹಳ್ಳಿಹಟ್ಟಿ ಛತ್ರದ ಪಾರುಪತ್ತೆಗಾರ್ ಸರಸಪ್ಪನವರಿಗೆ 3 ರೂಪಾಯಿಗಳ ಬಡ್ತಿ ತಲಬು ಕೊಡತಕ್ಕದ್ದನ್ನು ಗವರ್ನಮೆಂಟನವರಿಂದ ತಿರಸ್ಕರಿಸಲ್ಪಟ್ಟು ಸಾದರಾದ 27—5—09ನೆ ಮರ್ಸ್ಕಂ 1868-9—ಲೋ. ಬೋ. 59-08ನೆ ನಂಬರು ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

VI. ಡಿಸ್ಟ್ರಿಕ್ಟಾಮಳೆ ಸದ್ಯದಲ್ಲಿ ನಡಿಯಬೇಕಾದ ಸ್ಯಾನಿಟರಿ ಕಾಮಗಾರಿಗಳ ಪ್ರೋಗ್ರಾಂ ಮತ್ತು ಈ ವಿಷಯದಲ್ಲಿ ಗವರ್ನಮೆಂಟಿನಿಂದ ಸಾದರಾದ 24—1—08ನೆ ಮರ್ಸ್ಕಂ 7101-20—ಮೆಡಿ. ನೆ ನಂಬರು ಪ್ರೊಸಿಡಿಂಗ್ಸ್ ಸಹಾ ಓದಲಾಯಿತು.

ಮ್ಯುನಿಸಿಪಾಲಿಟಿ ಹದ್ದಿನಲ್ಲಿ ನಡಿಯಬೇಕಾದ ಸ್ಯಾನಿಟರಿ ಕಾಮಗಾರಿಗಳನ್ನು ನಿರ್ಧರಿಸುವದಕ್ಕೆ ಮೊದಲು ಕ್ರಮವಾದ ಸ್ಯಾನಿಟರಿ ಸರ್ವೇ ಆಗತಕ್ಕದ್ದು ಅವಶ್ಯಕ. ಇತರ ಗ್ರಾಮಗಳಲ್ಲಿ ನಡಿಯಬೇಕಾದ ಕಾಮಗಾರಿಗಳ ಲೀಸ್ಟನ್ನು ಯೂನಿಯನ್ ಪಂಚಾಯಿತರು ಮತ್ತು ತಾಲ್ಲೂಕು ಬೋರ್ಡಿನವರೂ ಸಹಾ ಡಿಸ್ಟ್ರಿಕ್ಟ್ ಸ್ಯಾನಿಟರಿ ಅಧಿಕಾರಸ್ಥರ ಆಲೋಚನೆಯಿಂದ ದುರಸ್ತು ಪಡಿಸಬೇಕೆಂದು ತೀರ್ಮಾನಿಸಲಾಯಿತು.

VII. ಹಿರಿಯೂರು ಕಸಬೆಯಲ್ಲಿ ರೆವಿನ್ಯೂ ನೌಕರರಿಗೆ ಕೊಡುತ್ತಿರುವ "ಸ್ಪೆಷಲ್ ಲೋಕಲ್ ಅಲೋಯನ್ಸ್" ಅಲ್ಲಿನ ಲೋಕಲ್ ಫಂಡ್ ಡಿಪಾರ್ಟುಮೆಂಟಿನ ನೌಕರರಿಗೂ ಕೊಡತಕ್ಕ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯ ಕೊಡಬೇಕಾಗಿ ಗವರ್ನಮೆಂಟಿನಿಂದ ಸಾದರಾದ 11—6—09ನೆ ಮರ್ಕುಂ 12440—ಲೋ. ಬೋ. ನೆ ನಂಬರು ಡಾಕೆಟ್ ಓದಲಾಯಿತು.

ಬೋರ್ಡಿನವರು ಈ ಬಾಬತು ಖರ್ಚನ್ನು ವಹಿಸಿಕೊಂಡು ಚಾಲ್ತಿ ಸಾಲಿನ ಬಡ್ಜಟ್ಟಿನಲ್ಲಿ (Unforeseen expenses) ಹೆಡ್ಡಿನಲ್ಲಿ ಮಂಜೂರಾಗಿರತಕ್ಕ 500 ರೂಪಾಯಿಗಳ ಪೈಕಿ ಖಿಲಾಪ್ ಮಾಡಬಹುದಾಗಿ ತೀರ್ಮಾನಿಸಲಾಯಿತು.

VIII. ವಿಷ ಜಂತುಗಳಿಂದ ಕಡಿಯಲ್ಪಟ್ಟು ಕೂನೂರು ಆಸ್ಪತ್ರೆಗೆ ಹೋಗತಕ್ಕವರ ಖರ್ಚು ಡಿಸ್ಟ್ರಿಕ್ಟು ಬೋರ್ಡಿನವರು ವಹಿಸತಕ್ಕ ವಿಷಯದಲ್ಲಿ ಅವರ ಅಭಿಪ್ರಾಯ ತಿಳಿಸಬೇಕಾಗಿ ಗವರ್ನಮೆಂಟಿನಿಂದ ಸಾದರಾದ 10—6—09ನೆ ಮರ್ಕುಂ 12402-12—ಮೆಡಿ. ನೆ ನಂಬರು ಡಾಕೆಟ್ ಓದಲಾಯಿತು.

ಬೋರ್ಡಿನವರು ಈ ಖರ್ಚನ್ನು ತಮ್ಮ ಹಣದಿಂದ ಖಿಲಾಪ್ ಮಾಡಬಹುದೆಂದು ತೀರ್ಮಾನಿಸಲಾಯಿತು.

IX. ಡಿಸ್ಟ್ರಿಕ್ಟಾವಳಿ ಎಲ್ಲಾ ಆಸ್ಪತ್ರೆಗೂ ಸಪ್ಲೈ ಮಾಡತಕ್ಕ ಸಾಮಾನುಗಳ ಖರೀದಿ ಮೊಬಲಗು ಅಡ್ಜಸ್ಟಮೆಂಟು ವಿಷಯದಲ್ಲಿ ಕಂಟ್ರೋಲರ್ರವರಿಂದ ತಲ್ಪಿದ 23—7—09ನೆ ಮರ್ಕುಂ 34ನೆ ನಂಬರು ಡಾಕೆಟ್ ಓದಲಾಯಿತು.

ಇದು ಚಾಲ್ತಿ ಸಾಲಿನ ಬಡ್ಜಟ್ಟಿನ X ಇತರೆ (5) ಮೆಂಬರುಗಳ ಭತ್ಯಾ ಎಂಬ ಹೆಡ್ಡಿನಲ್ಲಿ ಮಂಜೂರಾಗಿರುವ ಹಣದಪೈಕಿ ಖಿಲಾಪ್ ಮಾಡಲ್ಪಡತಕ್ಕದ್ದೆಂದು ತೀರ್ಮಾನಿಸಲಾಯಿತು.

X. ಚಳ್ಳಕೆರೆ ತಾಲ್ಲೂಕು ಹಿರೇಹಳ್ಳಿ ಯೂನಿಯನ್ನಲ್ಲಿ ಕೆಲಸ ಹಾಗೂ ಹುಟ್ಟುವಳೀ ಸಹಾ ಕಮ್ಮಿಯಾಗಿರುವದ್ದರಿಂದ ಮುತ್ಸದ್ದೀ ನೌಕರೀ ವಜಾ ಮಾಡಬೇಕೆಂಬ ಯೂನಿಯನ್ ಪಂಚಾಯಿತರ ಅಭಿಪ್ರಾಯವನ್ನೇ ಅನುಮೋದಿಸಿರುವ ಚಳ್ಳಕೆರೆ ತಾಲ್ಲೂಕು ಬೋರ್ಡಿನವರ ರೆಜಲ್ಯೂಷನ್ ನಿಶಿ ತಲ್ಪಿರುವ ಚಿತ್ರದುರ್ಗದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ 26—7—09ನೆ ಮರ್ಕುಂ 95ನೆ ನಂಬರು ಯಾದಾಸ್ತು ಓದಲಾಯಿತು.

ಯೂನಿಯನ್ ಮುತ್ಸದ್ದಿ ನೌಕರಿ ವಜಾ ಮಾಡಬೇಕೆಂತಲೂ, ಆ ಗ್ರಾಮದ ಕಂದಾಯ ವಸೂಲೀ ಕ್ರಮ ಮತ್ತು ಪಾಕೀಜಾ ಉಸ್ತುವಾರೀ ಸಹಾ ನಡಿಸತಕ್ಕ ಬಗ್ಯೆ ಪಟೇಲ್ ಶಾನುಭೋಗರಿಗೆ ತಕ್ಕಷ್ಟು ಅಲೋಯನ್ಸ್ (Small honorarium) ಕೊಡಬೇಕೆಂತಲೂ ಸಹಾ ತೀರ್ಮಾನಿಸಲಾಯಿತು.

XI. ಚಾಲ್ತಿ ಸಾಲಿಗೆ ಕೋಲಾರದ ಡಿಸ್ಟ್ರಿಕ್ಟು ಫಂಡು ಬಡ್ಜಟ್ಟಿನಲ್ಲಿ ಸ್ಯಾಂಕ್ಷನ್ ಮಾಡಿರುವ ಹಣದ ಪೈಕಿ ಆ ಡಿಸ್ಟ್ರಿಕ್ಟಿನಲ್ಲಿ ಗತ ಸಾಲಿಗೆ ನೀಮಕಲು ನಿಂತ ಕಾಮಗಾರಿಗಳನ್ನು ಪೂರೈಸತಕ್ಕ ಖರ್ಚನ್ನು ಮಂಜೂರು ಮಾಡಿರುವದಾಗಿ ಸಾದರಾದ 8—5—09ನೆ ಮರ್ಕುಂ 11105-16—ಲೋ. ಬೋ. 160-08-7ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

XII. ಹಿರೇಹಳ್ಳಿ ಯೂನಿಯನ್ನಿನಲ್ಲಿ ರಸ್ತೆ ತೆಗಿಸತಕ್ಕ ಬಗ್ಯೆ ಚಳ್ಳಕೆರೆ ತಾಲ್ಲೂಕು ಅಮಲ್ದಾರಿಂದ 164 ರೂಪಾಯಿಗಳ ಅಂದಾಜಾ ನಿಶಿ ತಲ್ಪಿದ 28—24-7-09ನೆ ನಂಬರು ಕರೆಸ್ಪಾಂಡೆನ್ಸ್ ಓದಲಾಯಿತು.

ಸದರಿ ಯೂನಿಯನ್ ಫಂಡ್ಸಿನಿಂದ ಈ ಕಾಮಗಾರಿಯನ್ನು ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.

XIII. ಹೊಸದುರ್ಗ ತಾಲ್ಲೂಕು ಕೆಲ್ಲೋಡು ಗ್ರಾಮದ ಹತ್ತಿರ ನದೀ ದಾಟಲು "ಪ್ಲಾಟ್‌ಫಾರಂ" ದೋಣಿ ತಯಾರು ಮಾಡಿಸುವದಕ್ಕಾಗಿ ಮಾರೀಕಣಿವೆ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರವರಿಂದ 300 ರೂಪಾಯಿಗಳ ಅಂದಾಜಾ ನಿಶಿ ತಲ್ಪಿರುವ 18—7—09ನೆ ಮರ್ಕುಂ 575ನೆ ನಂಬರು ಡಾಕೆಟ್ ಓದಲಾಯಿತು.

ಚಾಲ್ತಿ ಸಾಲಿ ಬಡ್ಜಟ್ಟಿನಲ್ಲಿ "Unforeseen expenses" ಹೆಡ್ಡಿನಲ್ಲಿ ಮಂಜೂರಾಗಿರುವ 500 ರೂಪಾಯಿಗಳ ಪೈಕಿ ಈ ಅಂದಾಜಾ ಮಂಜೂರು ಮಾಡಿರುವದಾಗಿ ತೀರ್ಮಾನಿಸಲಾಯಿತು.

XIV. ದಾವಣಗೆರೆ ತಾಲ್ಲೂಕು ಲೋಕೀಕೆರೆ ಗ್ರಾಮದಲ್ಲಿ ಒಂದು ಭಾವೀ ತೆಗಿಸುವದಕ್ಕೋಸ್ಕರ 1,008 ರೂಪಾಯಿಗಳ ಅಂದಾಜಾ ನಿಶಿ ಚಿತ್ರದುರ್ಗದ ಡಿಸ್ಟ್ರಿಕ್ಟು ಸ್ಪೆಷಲ್‌ಡ್ಯೂಟಿ ಅಸಿಸ್ಟೆಂಟು ಇಂಜನಿಯರವರಿಂದ ತಲ್ಪಿದ 16—7—09ನೆ ಮರ್ಕುಂ 216ನೆ ನಂಬರು ಯಾದಾಸ್ತು ರಿಕಾರ್ಡು ಓದಲಾಯಿತು.

ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ಅಭಿಪ್ರಾಯದ ಬಗ್ಯೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

XV. ಹಿರಿಯೂರು ಕಸಬೆಯಲ್ಲಿ ರೆವಿನ್ಯೂ ನೌಕರರಿಗೆ ಕೊಡುತ್ತಿರುವ "ಸ್ಪೆಷಲ್ ಲೋಕಲ್ ಅಲೋಯನ್ಸ್"ನ್ನು ಅಲ್ಲಿನ ಲೋಕಲ್ ಫಂಡು ಆಸ್ಪತ್ರೆಗೆ ಸೇರಿದ (1) ಸೂಲಗಿತ್ತಿ, (2) ಕಾಂಪೌಂಡರ್, (3) ಝಾಡಮಾಲಿ, (4) ನೀರಿನವ ಇವರುಗಳ ಖರ್ಚು ತರೀಕು ಹಾಗೆ ಕೊಡಲು ಬೋರ್ಡಿನವರ ಇಷ್ಟತೆ ತಿಳಿಸಲು ಗವರ್ನಮೆಂಟಿನಿಂದ ಸಾದರಾದ 29—7—09ನೆ ಮರ್ಕುಂ 1097—ಮೆಡಿ. 240—08—4ನೆ ನಂಬರು ಡಾಕೆಟ್ ಓದಲಾಯಿತು.

ಈ ಅಲೋಯನ್ಸಿಗಾಗಿ ತಗಲುವ ಖರ್ಚನ್ನು ಬೋರ್ಡಿನವರು ವಹಿಸಿಕೊಂಡು ಚಾಲ್ತಿ ಸಾಲಿನ ಬಡ್ಜಟ್ಟಿನಲ್ಲಿ ಅನ್ಯ ತಮಹಲ್ ಹೋರಿಗಳನ್ನು ಕೊಂಡುಕೊಳ್ಳುವದಕ್ಕೋಸ್ಕರವೆಂದು ಮಂಜೂರಾಗಿರುವ 150 ರೂಪಾಯಿಗಳ ಪೈಕಿ ಖಿಲಾಪ್ ಮಾಡುವರೆಂದು ತೀರ್ಮಾನಿಸಲಾಯಿತು.

XVI. ಬೋರ್ಡಿನವರ ಮಂಜೂರೀ ನಿರೀಕ್ಷಣೆ ಮೇಲೆ ಪ್ರೆಸಿಡೆಂಟರವರು ಮಂಜೂರುಮಾಡಿದ ಡಿಸ್ಟ್ರಿಕ್ಟು ಫಂಡು ಕಾಮಗಾರಿಗಳ ಲೀಸ್ಟು ಓದಿ ಅನುಮೋದಿಸಲಾಯಿತು.

XVII. ಮುಂದಿನ ಮೀಟಿಂಗು 1909ನೆ ಸೆಪ್ಟಂಬರು 20ನೆ ತಾರೀಖಿನ ದಿವಸ ನಡಿಸಬೇಕಾಗಿ ನಿಶ್ಚಯಿಸಿರುತ್ತೆ.

ಮುಹಮ್ಮದ್‌ರಜಾ,
ಫಾರ್ ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

ನೋಟೀಸ್.

ತಾರೀಖು 19ನೆ ಆಗಸ್ಟು 1909.

ಎರಡು ವರುಷಗಳಿಗಿಂತಲು ಅಧಿಕಕಾಲದಿಂದ ಬೇವಾರ್ಸಿಗಿರುವ ಇದರಡಿ ಕಂಡ ದಸ್ತಾವೇಜುಗಳನ್ನು ಹಾಜರು ಮಾಡಿದವರೆ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುತಾಲೀಕರೆ ಆಗಲಿ ಗೆಜೆಟ್ಟಿನಲ್ಲಿ ಮೊದಲು ಪ್ರಕಟಿಸಲ್ಪಟ್ಟ ತಾರೀಖು ಲಾಗಾಯಿತು ಒಂದು ತಿಂಗಳು ಒಳಗಾಗಿ ಆಯಾಯ ಸಬ್ ರಿಜಿಸ್ಟ್ರಾರ್ ರೂಬರೂಬ್ ಹಾಜರಾಗಿ ತೆಗದುಕೊಳ್ಳದೆ ಇದ್ದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂಬರು 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗಿರುವ ದಸ್ತಾವೇಜುಗಳನ್ನು ನಾಶಪಡಿಸುತ್ತೆ.

ನಂಬರು.	ಸಬ್ ರಿಜಿಸ್ಟ್ರಾರ್ ಆಫೀಸಿನ ಹೆಸರು.	ಪುಸ್ತಕದ ನಂಬರು	ದಸ್ತಾವೇಜಿನ ನಂಬರು	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಬೇಲೂರು ...	I	125 / 1906—07	28-9-1898	15—9—06	ಬೇಲೂರು ತಾಲ್ಲೂಕು ಅರೆಹಳ್ಳಿ ಹೋಬಳಿ ಕಡೇಗರ್ಜೆ ಗ್ರಾಮದಲ್ಲಿರುವ ಅನಂತ ಶಿಂಗಪ್ಪನವರ ಮಗ ದೇವಿಶಿಂಗು.	ಮಂಜರಾಬಾದು ತಾಲ್ಲೂಕು ಬೆಳಗೋಡು ಹೋಬಳಿ ಬಾಳೇಹಳ್ಳಿ ಚೌಡೆಗೌಡರ ಮಕ್ಕಳು ಪುಟ್ಟಶಾಮೇ ಗೌಡರು.	ಡೀಡ್ ಆಫ್ ಟ್ರಸ್ಟು 3, 53 ರೂಪಾಯಿಗಳಿಗೆ.
2	ಅರ್ಕಲ್‌ಗೂಡು ...	I	308 / 1906—07	13—8—06	14—8—06	ಅರ್ಕಲ್‌ಗೂಡು ಕಸಬಾದಲ್ಲಿರುವ ವಕೀಲ ವೆಂಕಟದಾಸಪ್ಪನವರ ಮಕ್ಕಳು ಸುಬ್ಬರಾಯರು.	ಅರ್ಕಲ್‌ಗೂಡು ಕಸಬಾದಲ್ಲಿರುವ ಶೆಟ್ಟಿಗೌಡರ ಮಕ್ಕಳು 1ನೆ ಕಾಳೈಯ್ಯ, 2ನೆ ಸುಬ್ಬ.	75 ರೂಪಾಯಿಗಳಿಗೆ ಕ್ರಯ ಪತ್ರ
3	ಡಿಟೋ ...	I	777 / 1906—07	24—8—06	14—12—06	ಹೆಗ್ಗತ್ತೂರು ಗ್ರಾಮದಲ್ಲಿರುವ ಮಾವನೂರು ವೀರರಾಜೆ ಅರಸುನವರ ಮಗ ಶೀಗೋಡು ಬಸವರಾಜೆ ಅರಸು.	(1) ಕೊಣನೂರು ಗ್ರಾಮದಲ್ಲಿರುವ ಅಗಸಾಲೆ ಪುಟ್ಟಾಚಾರಿ ಮಗ ಚೌಡಾಚಾರಿ, (2) ಕೆರೇಕೋಡಿ ಕಾಳಾಚಾರಿ ಮಗ ನರಸಾಚಾರಿ.	10 ರೂಪಾಯಿಗಳ ಕ್ರಯ ಪತ್ರ
4	ಡಿಟೋ ...	I	192 / 1906—07	3—6—07	10—6—07	ಮುಂಡಗೋಡು ಗ್ರಾಮದಲ್ಲಿರುವ ಹೊನ್ನಗಿರಿ ಗೌಡನ ಮಕ್ಕಳು 1ನೆ ಹೊನ್ನಗಿರಿ ಹೆಂಡತಿ ದ್ಯಾವಮ್ಮ, 2ನೆ ವೆಂಕಟನ ಹೆಂಡತಿ ಬಿಂದಿಗಮ್ಮ, 3ನೆ ರಾಮಣ್ಣ.	ಕಾಕೋಡನಹಳ್ಳಿ ಕೆಂಪನಾಯಕನ ಮಗ ಹನುಮನಾಯಿಕ.	50 ರೂಪಾಯಿಗಳ ಕ್ರಯ ಪತ್ರ

ಪಿ. ಆರ್. ಡಬ್ಲ್ಯೂ. ವೇದರಾಲ್,
ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಸ್ಯಾನಿಟೆರಿ ಬೋರ್ಡ್, ಕೋಲಾರ ಗೋಲ್ಡ್ ಫೀಲ್ಡ್.

ನೋಟಸ್, ತಾರೀಖು 19ನೆ ಆಗಸ್ಟು 1909.

ಕಂಟ್ರಾಕ್ಟರ್ ಕಂದಸಾಮಿ ಮೊದಲಿಯಾರ್ ಎಂಬುವರು ಸ್ಯಾನಿಟೆರಿ ಬೋರ್ಡಿನಲ್ಲಿ ಕೆಲವು ಕೆಲಸಗಳನ್ನು ನಡೆಸಿದ್ದಕ್ಕಾಗಿ ರೂಪಾಯಿ 201—6—0 ಅವರಿಗೆ ಸಲ್ಲಬೇಕಾಗಿರುವದನ್ನು ಈ ನೋಟಸ್ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಸದರಿಯವರಾಗಲಿ ಅಥವಾ ಅವರ ನ್ಯಾಯವಾದ ವಾರಸುದಾರರಾಗಲೀ ಬಂದು ತೆಗೆದುಕೊಂಡು ಹೋಗದಪಕ್ಷದಲ್ಲಿ ಮೇಲ್ಕಂಡ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಹೆಚ್ಚು ತಪಶೀಲಿಗೆ 1909ನೆ ಇಸವಿ ಆಗಸ್ಟು 26ನೆ ತಾರೀಖು IIನೆ ಭಾಗದ 702–703ನೆ ಪುಟಗಳನ್ನು ನೋಡಿಕೊಳ್ಳ ತಕ್ಕದ್ದು.

ಪಿ. ಎಫ್. ಬೌರಿಂಗ್,
ವೈಸ್ ಪ್ರಸಿಡೆಂಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫ಼ಾಯಿಷ್ ಆದ್ದು. [ಸಂ. 36.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 9, ಸ್ಥ 1909.

II ನೆ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

1909ನೆಯ ಇಸವಿ ಸೆಪ್ಟಂಬರು 6ನೆಯ ತಾರೀಖಿನ ಡಿ. ನಂಬರು 8.

1. 1909ನೆಯ ಇಸವಿ ಆಗಸ್ಟು 14ನೆಯ ತಾರೀಖಿನ ಡಿ. ನಂಬರು 5ನೆಯ ಪ್ರಕಟನಪತ್ರಿಕೆಯನ್ನು ಅನುಸರಿಸಿ, ಹೊಲಿಗೆಯಲ್ಲಿ ಉಪಾಧ್ಯಾಯಿ ಪ್ರಾವೀಣ್ಯ ನಿರ್ಣಯಕ ಪರೀಕ್ಷೆಯು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ನಡೆಯಿಸಲ್ಪಡುವುದು.

2. ಸದರಿ ಡಿ. ನಂಬರು 5ನೆಯ ಪ್ರಕಟನ ಪತ್ರಿಕೆಯ 6ನೆಯ ಆರ್ಟಿಕಲ್ 6ನೆಯ ಪ್ಯಾರಾದಲ್ಲಿ "ಕತ್ತರಿಸಿ" ಎಂಬ ಮಾತಿನ ಹಿಂದೆ "ಕೊಡಲ್ಪಡುವ ಮಾದಿರಿ ಅಥವಾ ಅಳತೆಯಂತೆ." ಎಂಬ ಮಾತುಗಳನ್ನು ಸೇರಿಸಿಕೊಳ್ಳಬೇಕು.

1909ನೆಯ ಇಸವಿ ಆಗಸ್ಟು 25ನೆಯ ತಾರೀಖಿನ ಡಿ. ನಂಬರ್ 7.

ವ್ಯವಸಾಯಾನುಭವದ ಪರೀಕ್ಷೆ.

ಕೆಳಗೆ ತಿಳಿಸಿರುವ ವ್ಯವಸಾಯಾನುಭವದ ಪರೀಕ್ಷೆಯ ನಿಯಮಗಳು 1909ನೆಯ ಇಸವಿ ನವಂಬರು ತಿಂಗಳಿಂದ ಜಾರಿಯಲ್ಲಿ ಬರತಕ್ಕದ್ದು :—

1. ವ್ಯವಸಾಯಾನುಭವ ಪರೀಕ್ಷೆಯು ಮೈಸೂರಲ್ಲಿರುವ ನಾರ್ಮಲ್ ಸ್ಕೂಲಿನಲ್ಲಿ ಪ್ರತಿ ವರ್ಷವೂ ದೇಶಭಾಷೆಯಲ್ಲಿ ನವಂಬರು ತಿಂಗಳಿನ ಕೊನೆಯ ವಾರದಲ್ಲಿ ನಡೆಯಿಸಲ್ಪಡುತ್ತದೆ.

2. ಈ ಪರೀಕ್ಷೆಯಲ್ಲಿ ಎರಡು ಭಾಗಗಳುಂಟು :—

(1) ಬರಹದ ಪರೀಕ್ಷೆ—3 ಗಂಟೆ ಕಾಲದ ಒಂದು ಪತ್ರಿಕೆಯಿಂದ ನಡೆಯುತ್ತದೆ—40 ಅಂಕಗಳು.

(2) ಮುಖತಃ ಪರೀಕ್ಷೆ ಮತ್ತು ವ್ಯಾವಹಾರಿಕಪರೀಕ್ಷೆ—60 ಅಂಕಗಳು.

3. ಮೈಸೂರು ನಾರ್ಮಲ್ ಸ್ಕೂಲಿನ ಅಪ್ಪರ್ ಸೆಕಂಡರಿ ಟ್ರೈನಿಂಗ್ ತರಗತಿಯಲ್ಲಿ ಒಂದು ವರ್ಷದ ವರೆಗೆ ವ್ಯವಸಾಯಾನುಭವದಲ್ಲಿ ಸಂಪೂರ್ಣವಾಗಿ ಶಿಕ್ಷಣವನ್ನು ಹೊಂದಿರುವ ವಿದ್ಯಾರ್ಥಿಗಳೆಲ್ಲರೂ ಈ ಪರೀಕ್ಷೆಗೆ ಸೇರಬಹುದು. ಮತ್ತು ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರು ಇತರ ಯಾವ ವಿದ್ಯಾರ್ಥಿಗಳನ್ನಾಗಲಿ ಅವರ ಸಾಮಾನ್ಯ ಮತ್ತು ಇತರ ವಿಶೇಷ ಯೋಗ್ಯತೆಗಳನ್ನು ನೋಡಿ ಒಪ್ಪಿದ ಪಕ್ಷದಲ್ಲಿ ಅವರೂ ಸೇರಬಹುದು.

4. ಪರೀಕ್ಷೆ ಯಾವ ಭಾಗಗಳಲ್ಲಿ ನಡೆಯುತ್ತದೆ ಎಂಬುವದನ್ನು ಮುಂದೆ ತಿಳಿಸಿದೆ :—

I. ವ್ಯವಸಾಯದ ಕ್ರಮಗಳು.

ಕೆಳಗೆ ಬರೆದಿರುವ ಪೈರುಗಳನ್ನು ವ್ಯವಸಾಯ ಮಾಡುವ ಕ್ರಮಗಳು :—

ಧಾನ್ಯಗಳು :—ರಾಗಿ, ಜೋಳ, ಭತ್ತ, ಮುಸುಕಿನಜೋಳ, ಗೋಧಿ ಮತ್ತು ಇತರ ಕೀಳು ಧಾನ್ಯಗಳು.

ದ್ವಿದಳಗಳು :—ತೊಗರಿ, ಅವರೆ, ಹುರಳಿ, ಕಡಲೆ, ಅಲಸಂದಿ.

ಎಣ್ಣೆಯ ಕಾಳುಗಳು :—ನೆಲಗಡಲೆ, ಹರಳು, ಎಳ್ಳು ಮತ್ತು ಉಚ್ಚೆಳ್ಳು.

ಮೇವು ಪೈರುಗಳು :—ಜೋಳಗಳು ಮತ್ತು ಮುಸಾಲೆಸೊಪ್ಪು.

ನಾರು ಪೈರುಗಳು :—ಹತ್ತಿ, ಸೆಣಬು, ಪುಂಡಿ.

ಕೈಗಾರಿಕೆ ಮತ್ತು ಇತರ ಪೈರುಗಳು :—ಕಬ್ಬು, ಹೊಗೇಸೊಪ್ಪು, ಆಲೂಗೆಡ್ಡೆ, ಗೆಣಸು, ಮೆಣಸಿನಕಾಯಿ, ನೀರುಳ್ಳಿ, ತೆಂಗು, ಅಡಿಕೆ, ಶುಂಠಿ, ಅರಿಸಿನ.

II. ಹುಳುಗಳ ವ್ಯಾಧಿಗಳು ಮತ್ತು ಪೈರಿನ ರೋಗಗಳು.

ಅತ್ಯಂತ ಬಳಕೆಯಾದ ಹುಳುಗಳ ಜೀವಮಾನದ ಚರಿತ್ರೆಯು ವಿವರವಾಗಿ ಸಾಮಾನ್ಯಾಂಶಗಳು ಮತ್ತು ಅವುಗಳ ಸ್ವಭಾವ, ಸಾಮಾನ್ಯರಚನೆ ಮತ್ತು ಆಹಾರ. ಕೆಳಗೆ ಬರೆದಿರುವ ಏಳು ಮುಖ್ಯವಾದ ಹುಳುಗಳ ಕ್ರಮಗಳಲ್ಲಿ ಒಂದೊಂದು ಕ್ರಮದ ಹುಳುಗಳನ್ನೂ ಗುರ್ತು ಹಿಡಿಯುವುದಕ್ಕೆ ಅನುಕೂಲವಾದ ಲಕ್ಷಣಗಳು ಮತ್ತು ಪ್ರತಿ ಒಂದಕ್ಕೂ ಬಳಿಕೆಯಾದ ಉದಾಹರಣೆಗಳು :—

(1) ಆರ್ಥಾಪ್ಟೇರ, (2) ನ್ಯೂರಾಪ್ಟೇರ, (3) ಹೈಮನಾಪ್ಟೇರ, (4) ಕಾಲಿಯಾಪ್ಟೇರ, (5) ಲೆಪಿಡೋಪ್ಟೆರಾ, (6) ಹೆಮಿಪ್ಟೇರ, (7) ಡಿಪ್ಟೇರ.

ಹುಳುಗಳ ಮೂಲಕವಾಗಿಯೂ ಫಂಜೈ (Fungi) ಎಂಬ ಸೂಕ್ಷ್ಮ ಸಸಿಗಳ ಮೂಲಕವಾಗಿಯೂ ಪೈರಿಗೆ ಬರುವುದೆಂದು ತಿಳಿದಿರುವ ರೋಗಗಳು; ಮತ್ತು ಆ ವ್ಯಾಧಿಗಳು ಬಾರದಹಾಗೆ ಮಾಡತಕ್ಕ ಕ್ರಮಗಳು. ಬಂದಾಗ ಮಾಡಬೇಕಾದ ಪರಿಹಾರಗಳು. ಈ ವಿಷಯಗಳಲ್ಲಿ ಪ್ರಾಮಾಣಿಕರ ಅಭಿಪ್ರಾಯ. ಉಪಯೋಗವಾದ ಹುಳುಗಳನ್ನೂ ಮತ್ತು ಸೂಕ್ಷ್ಮ ಸಸಿಗಳನ್ನೂ ಕೊಲ್ಲುವ ಪದಾರ್ಥಗಳು. ಅವುಗಳನ್ನು ಸಿದ್ಧಪಡಿಸುವ ವಿಧಾನ ಮತ್ತು ಅವುಗಳ ಉಪಯೋಗ.

5. ಬರಹದ ಪರೀಕ್ಷೆಯನ್ನು ಮಾಡುವುದರ ಉದ್ದೇಶವು ವಿದ್ಯಾರ್ಥಿಯ ಯೋಗ್ಯತೆಯನ್ನು ಯಾವ ಯಾವ ಭಾಗದಲ್ಲಿ ತಿಳಿಯುವದಕ್ಕೆಂದರೆ :—(1) ಪೈರುಗಳನ್ನು ಬೆಳೆಯತಕ್ಕ ವಿಧವಿಧವಾದ ಕ್ರಮಗಳು. (2) ಪೈರುಗಳಿಗೆ ಸಾಮಾನ್ಯವಾಗಿ ತಗಲುವ ಹುಳುಗಳನ್ನು ಗುರ್ತು ಹಿಡಿಯುವುದಕ್ಕೆ ಅನುಕೂಲವಾದ ಅವುಗಳ ಲಕ್ಷಣಗಳು. (3) ಪೈರಿಗೆ ತಗಲುವ ಅತ್ಯಂತ ಸಾಮಾನ್ಯವಾದ ಹುಳುಗಳ ಮತ್ತು ಇತರ ವ್ಯಾಧಿಗಳ ಸ್ವರೂಪ. ಪರೀಕ್ಷೆ ನಡೆಯುವ ವರ್ಷದಲ್ಲಿ ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ವ್ಯವಸಾಯದ ಜಮೀನಿನಲ್ಲಿ ಬೆಳೆದ ಪೈರುಗಳ ವಿಷಯದಲ್ಲೇ ಪ್ರಶ್ನೆಗಳನ್ನು ಪತ್ರಿಕೆಯಲ್ಲಿ ಮುಖ್ಯವಾಗಿ ಕೊಡಬೇಕೆಂಬುದು ಅಭಿಪ್ರಾಯ. ಮುಖತಃ ಪರೀಕ್ಷೆ ಮತ್ತು ವ್ಯಾವಹಾರಿಕ ಪರೀಕ್ಷೆ ಇವುಗಳ ಉದ್ದೇಶವೇನೆಂದರೆ :—ಸ್ವದೇಶದ ಮತ್ತು ಅನ್ಯದೇಶದ ಯಾನಗಳನ್ನೂ, ಯಂತ್ರಗಳನ್ನೂ ಉಪಯೋಗಿಸುವುದಕ್ಕೆ ವಿದ್ಯಾರ್ಥಿಗೆ ಇರುವ ಯೋಗ್ಯತೆಯನ್ನೂ ಮತ್ತು ಮುಖ್ಯವಾದ ಕಾಳುಗಳ ಬಗೆಗಳಲ್ಲಿಯೂ ಸಾಮಾನ್ಯವಾದ ಹುಳುಗಳಲ್ಲಿಯೂ ಮತ್ತು ಆ ಹುಳುಗಳನ್ನು ಕೊಲ್ಲುವ ಪದಾರ್ಥಗಳಲ್ಲಿಯೂ ಆತನಿಗೆ ಎಷ್ಟುಮಟ್ಟಿಗೆ ಬಳಕೆಯು ಇದೆ ಎಂಬುದನ್ನು ತಿಳಿಯುವುದು.

6. ಒಟ್ಟು ವಿಷಯಕ್ಕಿರುವ ಪೂರ್ಣಾಂಕದಲ್ಲಿ 40 ಅಂಕಗಳನ್ನು ಪಡೆದರೆ ವಿನಾ ಯಾರೂ ಪರೀಕ್ಷೆಯಲ್ಲಿ ತೇರ್ಗಡೆಯಾದಹಾಗೆ ಎಣಿಸಲ್ಪಡುವುದಿಲ್ಲ. ಮುಖತಃ ಪರೀಕ್ಷೆ, ವ್ಯಾವಹಾರಿಕ ಪರೀಕ್ಷೆಗಳಿಗಿರುವ ಅಂಕಗಳಲ್ಲಿ ಸೇಕಡಾ 30ನ್ನು ಪಡೆಯಬೇಕು. ತೇರ್ಗಡೆಯಾದವರಲ್ಲಿ ಒಟ್ಟು ಅಂಕಸಂಖ್ಯೆಯಲ್ಲಿ ಸೇಕಡಾ 60ನ್ನು ಪಡೆದವರು ಮೊದಲನೆಯ ವರ್ಗದಲ್ಲೂ ಉಳಿದವರು ಎರಡನೆಯ ವರ್ಗದಲ್ಲಿಯೂ ಸೇರಿಸಲ್ಪಡುವರು.

7. ಈ ಪರೀಕ್ಷೆಯನ್ನು ನಡೆಯಿಸುವುದಕ್ಕೆ ತಿಳಿದವರಾದ ಇಬ್ಬರು ಪರೀಕ್ಷಕರ ಒಂದು ಸಂಘವು ಗೊತ್ತುಮಾಡಲ್ಪಡುತ್ತದೆ.

8. ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್‌ರವರು ರುಜು ಮಾಡಿರುವ ಯೋಗ್ಯತಾಪತ್ರಿಕೆಯು ಕೊಡಲ್ಪಡುವುದು. ಮತ್ತು ಅಂಥವರು ಉತ್ತಮವಾದ ವ್ಯವಸಾಯ ಕ್ರಮಗಳನ್ನು ಪ್ರಕಟಿಸುವುದಕ್ಕೂ ಅಥವಾ ಸಂಸ್ಥಾನದ ಪಾಠಶಾಲೆಗಳಲ್ಲಿ ವ್ಯವಸಾಯಾನುಭವವನ್ನು ಕಲಿಸುವುದಕ್ಕೂ ಅರ್ಹರಾಗುವರು.

9. ವ್ಯವಸಾಯಾನುಭವದ ಪರೀಕ್ಷೆಗೆ ಸೇರಬೇಕೆಂಬುವರು ಮೈಸೂರು ದೇಶೀಯ ಪರೀಕ್ಷೆಗಳ ಮ್ಯಾನೇಜರಲ್ಲಿಗೆ ಆಯಾ ವರ್ಷದ ಆಗಸ್ಟು 15ನೆಯ ತಾರೀಖನ್ನು ಅತಿಕ್ರಮಿಸದೆ ತಲಪುವಂತೆ ದರಖಾಸ್ತುಗಳನ್ನು ಕಳುಹಿಸಬೇಕು.

[ಈ ವರ್ಷದಲ್ಲಿ ಮಾತ್ರ ದರಖಾಸ್ತು ಸೇರಬಹುದಾದ ಕೊನೆಯ ತಾರೀಖು ಸೆಪ್ಟೆಂಬರು 30].

10. ಈ ಪರೀಕ್ಷೆಗೆ ಸೇರಿಸಿಕೊಳ್ಳುವುದಕ್ಕೆ ಕೊಡಬೇಕಾದ ಫೀಜು 3 ರೂಪಾಯಿಗಳು.

11. ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಗೊತ್ತಾದ ಫೀಜನ್ನು ಕೊಟ್ಟು ಪುನಃ ಪರೀಕ್ಷೆಗೆ ಸೇರಬಹುದು.

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಫಾರೆಸ್ಟು ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೀಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಪ್ಯುಟಿಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಹರಾಜಿಗಿಡುವ ಅಂದಾಜು ಟನ್ನುಗಳು.	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್ ತಾರೀಖು 18	200	
2	ಡಿಟೋ ...	ಸಾಗರ .	ಡಿಟೋ 22	100	
3	ಡಿಟೋ ...	ಶಿವಮೊಗ್ಗ ...	ಡಿಟೋ 25	500	
4	ಕಡೂರು ...	ತರೀಕೆರೆ ...	ಡಿಟೋ 29	(a)200	(a) ಚಿತ್ರದುರ್ಗದ 10 ಟನ್‌ಗಳು ಸೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು...	1909ನೆ ಡಿಸೆಂಬರ್ ತಾರೀಖು 2	400	
6	ಹಾಸನ ...	ಹಾಸನ ...	ಡಿಟೋ 6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ 9	(b)100	(b) ತುಮಕೂರು 30 ಟನ್‌ಗಳು ಕೋಲಾರದ 5 ಟನ್‌ಗಳು ಸೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ 13	250	
9	ಡಿಟೋ ...	ಹುಣಸೂರು ...	ಡಿಟೋ 16	450	
			ಜುಮ್ಲಾ ...	2,400	

ಎಂ. ಮುತ್ತಣ್ಣ,

ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ತಾರೀಖು 28ನೆ ಆಗಸ್ಟ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟ್ ಮತ್ತು ಡಿಸ್ಟ್ರಿಕ್ಟು ಜಂಗಲಿಗಳಲ್ಲಿಯೂ ಹಿಸುವಳಿ ಅಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ದೊರೆಯುವ ಪಸಾರ ಜಿನಸುಗಳನ್ನು 1909ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1910ನೆ ಸೆಪ್ಟಂಬರು 30ನೆ ತಾರೀಖಿನ ವರಿಗೆ ಜಮಾಯಿಸುವ ಹಕ್ಕನ್ನು ಪಡೆಯುಲು 1909ನೆ ಇಸವಿ ಸೆಪ್ಟಂಬರ್ ತಾರೀಖು 29ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತು ತೆಗದುಕೊಳ್ಳಲ್ಪಡುವದು. ಆದರ ಸ್ಟೇಟ್ ಫಾರೆಸ್ಟುಗಳಲ್ಲೂ ಮತ್ತು ಅಮೃತಮಹಲ್ ಕಾವಲುಗಳಲ್ಲೂ 1910ನೆ ಫೆಬ್ರುವರಿ ತಾರೀಖು 28ರ ನಂತರ ಅಳಲೇಕಾಯಿ ಜಮಾವಣೆಗೆ ಅವಕಾಶ ಕೊಡುವದಿಲ್ಲ.

"ಜಿನಸುಗಳ ತಪಸೀಲು" ಎಂದು ಷರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕಬಹುದಾದ ಜಿನಸುಗಳನ್ನು ಜಮಾಯಿಸತಕ್ಕ ಹಕ್ಕಿಗೇನೇ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1. ಮೈಸೂರು
2. ಶ್ರೀರಂಗಪಟ್ಟಣ
3. ನಾಗಮಂಗಲ
4. ಕೃಷ್ಣರಾಜಪೇಟೆ
5. ಮಂಡ್ಯ
6. ಮಳವಳ್ಳಿ
7. ಟಿ. ನರಸೀಪುರ
8. ನಂಜನಗೂಡು
9. ಚಾಮರಾಜನಗರ
10. ಗುಂಡ್ಲುಪೇಟೆ
11. ಹೆಗ್ಗಡದೇವನಕೋಟೆ
12. ಹುಣಸೂರು
13. ಯಡತೊರೆ

ಜಿನಸುಗಳ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮುಷ್ಟಿ, 11. ಚಿಲ್ಲವೀಜ, 12. ಚಗಚೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮುಷ್ಟಿ, 16. ಉದರಂದ ಸಾರಗದಕೊಂಬು, 17. ಗುಗ್ಗಳ, 18. ಬೇಲದಹಣ್ಣು, 19. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟು ವಿನಹಾ) 20. ಸೀತಾಫಲದಹಣ್ಣು, 21. ಚಂಡೆನಾರು, 22. ಬೇವಿನಬೀಜ, 23. ಇ

ಪೈಬೀಜ, 24. ಅಳಲೇಕಾಯಿ ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ್ ಫಾರೆಸ್ಟ್ ಸುತ್ತು ಇರುವ ಹಳ್ಳಿಗಳ ಅಳಲೆ ಕಾಯಿ ಸೇರಿ ಇಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಡಗಳ್ಳಿ, 6. ನಾಗಣಾಪುರ, 7. ಮಾದನಹಳ್ಳಿ, 8. ಕರ್ಲ್ಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟುಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8. ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಬಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಒಂದು ತಾಲ್ಲೂಕಿಗೂ ಬೇರೆಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಒಂದು ದರಖಾಸ್ತಿನೊಂದಿಗೆ (100) ಒಂದು ನೂರು ರೂಪಾಯಿನ ಕರೆನ್ಸಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರ್ ಮಾಡಿ ಲಕೋಟೆ ಮೇಲೆ "ಪಸಾರೆ ದರಖಾಸ್ತು" ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸಿನಲ್ಲಿ 1909ನೆ ಇಸವಿ ಸೆಪ್ಟೆಂಬರ್ ತಾರೀಖು 30ರಲ್ಲಿ ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ದರಖಾಸ್ತುಗಳನ್ನು ಒಡೆಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯು ಸದರಿ ದರಖಾಸ್ತುದಾರನಿಗೆ ಕೂಡಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗು ಕೂಡಲೆ ವಾಪಸ್ ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರರಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಖಜಾನೆಗೆ ಪಾರಖಾವಣೆ ಮಾಡಬೇಕು. ತಪ್ಪಿದಲ್ಲಿ ಮೊದಲು ದರಖಾಸ್ತು ಸಂಗಡ ಕಳುಹಿಸಿದ ಹಣವನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಂಡು ಬಾಬನ್ನು ಕೂಡಲೆ ದುಸರೇ ಹರಾಜು ಮಾಡಿಸಲಾಗುವದು.

9. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ನಷ್ಟದ ಮೊಬಲಗು ರವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಷರತ್ತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 15 ದಿವಸಗಳೊಳಗಾಗಿ ಮುಚ್ಚಳಿಕೆ ಬರೆದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ದುಸರಾ ಹರಾಜು ಮಾಡಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು 15 ದಿವಸಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರ ಅವನ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು. ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಪೂರಾ ಹಣ ಪಾವತಿ ಮಾಡಿದನಂತರ ಬಾಬು ಸುಪರ್ದು ಕೊಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರರೆ ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡೆಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಗ್ರಾಮ ಅಮೃತ್ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ. ಮತ್ತು ಬಾವಲಿ ಕೇತುವೆಯಲ್ಲಿರುವ ಜೇನಿಗೂ ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ವಗೈರೆ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

16. ಇಜಾರೆದಾರರ ಕಡೆ ಕೂಲಿ ಆಳುಗಳು ಬಾಬು ಜವಾವಣೆ ಬಗ್ಗೆ ಸ್ಟೇಟು ಫಾರೆಸ್ಟುಗಳು ಮತ್ತು ಅಮೃತಮಹಲ್ ಕಾವಲುಗಳಿಗೆ ಪ್ರವೇಶಿಸಲು ರೇಂಜು ಆಫೀಸರುಗಳಿಂದ ಚೀಟಿಗಳನ್ನು ಪಡದುಕೊಳ್ಳಬೇಕು.

ನೋಟಿಸ್.

ತಾರೀಖು 4ನೆ ಸೆಪ್ಟಂಬರ್ 1909.

ಈರೇಬಿನಲ್ಲಿ ನಮೂದಿರತಕ್ಕ ತರಹೇದ ಮರಗಳು ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕು ಬೆಳತೂರು ಸ್ನಾನಘಟ್ಟದಬಳಿ ಬಿದ್ದಿರುತ್ತವೆ. ಇದಕ್ಕೆ ವಾರಸುದಾರ್ರ್ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಲ್ಲಿ ವಾರಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರಗಳು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

	ತರಹೆ.	ಲಾಂಬಿ.		ಸುತ್ತು.		ಗುರ್ತು.
		ಅಡಿ.	ಅಂ.	ಅಡಿ.	ಅಂ.	
1.	ಸಾಗುವಾನಿ	10	0	3	0	ಎಂ. ಜಿ. ಎರ್.
2.	ಹತ್ತಿ	... 10	6	7	6	ಇಲ್ಲ
3.	ಡಿಟೋ	... 14	6	3	4	ಇಲ್ಲ
4.	ಡಿಟೋ	... 14	6	3	4	ಇಲ್ಲ
5.	ಡಿಟೋ	... 15	0	3	4	ಇಲ್ಲ

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರ್, ಮೈಸೂರು ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಸರ್ 1909ನೆ ಇಸವಿ ಆಗಸ್ಟು 7ನೆ ತಾರೀಖಿನಲ್ಲಿ ನಡೆದ ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್.

ಎಕ್ಸ್ ಅಫೀಷಿಯೋ ಮೆಂಬರುಗಳು.

ಹಾಜರು.

ಪ್ರೆಸಿಡೆಂಟ್, ಬಿ. ಜೆ. ಕುಮಾರಸ್ವಾಮಿನಾಯಿಕ್, ಎಸ್ಕ್ವಯರ್, ಬಿ.ಎ.

1. ವೈಸ್ ಪ್ರೆಸಿಡೆಂಟ್ ಮತ್ತು ಟ್ರೆಜರಿ ಆಫೀಸರ್ ಮಿ॥ ಟಿ. ಚೊಕ್ಕಣ್ಣನವರು, ಬಿ.ಎ.
2. ಬೆಂಗಳೂರು ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ವಿ. ಆರ್. ತ್ಯಾಗರಾಜ ಅಯ್ಯರ್, ಎಂ.ಎ.
3. ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ಕೆ. ಚಾಂಡಿ ಸಾಹೇಬರು, ಬಿ.ಎ.
4. ಬೆಂಗಳೂರು ಡಿಸ್ಟ್ರಿಕ್ಟು ಎಗ್ಜಿಕ್ಯೂಟಿವ್ ಇಂಜನಿಯರ್ ಮಿ॥ ಕೆ. ಕೃಷ್ಣಯ್ಯಂಗಾರ್ರವರು.
5. ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮಿ॥ ಕೆ. ವೀರಭದ್ರಯ್ಯನವರು.
6. ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮಿ॥ ಬಿ. ವೆಂಕೋಬರಾಯರು.

ಗೈರ್ ಹಾಜರು.

7. ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಮಿ॥ ಜೆ. ಎಸ್. ಡೇವಿಡ್.

ನಾನ್ ಅಫೀಷಿಯಲ್ ಮೆಂಬರುಗಳು

ಹಾಜರು.

1. ಮಿ॥ ಚಿಕ್ಕಗುರುವಾರೆಡ್ಡಿ, ಬೆಂಗಳೂರು ತಾಲ್ಲೂಕು.
2. ,, ಶೀನಪ್ಪ, ಹೊಸಕೋಟೆ ತಾಲ್ಲೂಕು.
3. ,, ಕೋಲೂರು ರಾಮಣ್ಣ, ದೊಡ್ಡಬಳ್ಳಾಪುರ ತಾಲ್ಲೂಕು.
4. ,, ನರಹರಯ್ಯ, ನೆಲಮಂಗಲ ತಾಲ್ಲೂಕು.
5. ,, ಶಾಮಯ್ಯ, ಕಾನಕಾನಹಳ್ಳಿ ತಾಲ್ಲೂಕು.
6. ,, ರಾಮಚಂದ್ರರಾವ್, ಮಾಗಡಿ ತಾಲ್ಲೂಕು.
7. ,, ಕರೆಭಾವಾ ನರಸಿಂಹ ಶೆಟ್ಟರು, ಕ್ಲೋಸ್‌ಪೇಟೆ ಸಬ್ ತಾಲ್ಲೂಕು.
8. ,, ರಾಮಸಂಜೀವಯ್ಯ, ಚನ್ನಪಟ್ಣ ತಾಲ್ಲೂಕು.
9. ,, ಧಾಳಪ್ಪ, ಆನೇಕಲ್ ತಾಲ್ಲೂಕು.
10. ,, ಗುಂಡೂರಾವ್, ದೇವನಹಳ್ಳಿ ತಾಲ್ಲೂಕು.
11. ,, ಕೆ. ಸುಬ್ಬಣ್ಣ, ಬೆಂಗಳೂರು ತಾಲ್ಲೂಕು.
12. ,, ಎಸ್. ದಾಸಪ್ಪ, ನೆಲಮಂಗಲ ತಾಲ್ಲೂಕು.
13. ,, ಕೆ. ಪುಟ್ಟಪ್ಪ, ಆನೇಕಲ್ ತಾಲ್ಲೂಕು.
14. ,, ಎ. ರಾಮಣ್ಣ, ಹೊಸಕೋಟೆ ತಾಲ್ಲೂಕು.
15. ,, ಚನ್ನಲಿಂಗಪ್ಪ, ನೆಲಮಂಗಲ ತಾಲ್ಲೂಕು.

ಗೈರ್ಹಾಜರು.

1. ಮಿ॥ ಸಿ. ಜೆ. ಹಾರ್ಡಿ ಸಾಹೇಬರು.
2. ,, ಮಸ್ತಾನ್‌ಸಾಬ್, ಚನ್ನಪಟ್ಣ ತಾಲ್ಲೂಕು (ಖಾಯಿಲೆ ಸಬಬು.)

ನೆಲಮಂಗಲ, ಚನ್ನಪಟ್ಟಣ, ಕಾರ್ಕಾರಹಳ್ಳಿ, ತಾಲ್ಲೂಕು ಆಮಿಲ್ದಾರುಗಳ ವಿನಹ ಮಿಕ್ಕ ಅಮಲ್ದಾರ್ರುಗಳು ಹಾಜರಿದ್ದರು.

1. ಈ ಸಾಲಿನ ಪ್ರಜಾ ಪ್ರತಿನಿಧಿ ಸಭೆಗಾಗಿ ಡಿಸ್ಟ್ರಿಕ್ಟ್ ಬೋರ್ಡಿನಿಂದ ಚುನಾಯಿಸಲ್ಪಡಬೇಕಾದ ಮೆಂಬರುಗಳು.

ದೇವನಹಳ್ಳಿ ತಾಲ್ಲೂಕು ಮಿಸ್ಟರ್ ಬಿ. ಗುಂಡೂರಾವ್ ಮತ್ತು ನೆಲಮಂಗಲ ತಾಲ್ಲೂಕು ಮಿಸ್ಟರ್ ದಾಸಪ್ಪ ಇವರಿಬ್ಬರು ಬೋರ್ಡಿನಿಂದ ಚುನಾಯಿಸಲ್ಪಟ್ಟಿರುತ್ತಾರೆ.

2. ಸನ್ 1909—10ನೆ ಸಾಲಿನಲ್ಲಿ ನಡೆಸಬೇಕಾದ ಡಿಸ್ಟ್ರಿಕ್ಟ್ ಫಂಡ್ಸ್ ಬಾಬತು ನೀಂಕಲಾ. ಕಾಮಗಾರಿಗಳ ತಖ್ತೆ.

ಓದಿ ಮಂಜೂರು ಮಾಡಲಾಯಿತು. ಗುಜಸ್ತೆ ಸಾಲಿನಲ್ಲಿ ಈ ನೀಂಕಲಾ ಕಾಮಗಾರಿಗಳ ಪೈಕಿ ಅನೇಕವನ್ನು ಪೂರೈಸದೆ ಹೋದದ್ದಕ್ಕಾಗಿಯೂ ಮತ್ತು ಇವುಗಳನ್ನು ಪೂರೈಸುವದಕ್ಕಾಗಿ ಅಮಲ್ದಾರ್ರುಗಳು ಶ್ರದ್ಧೆ ತೆಗೆದುಕೊಳ್ಳದೇಹೋದದ್ದಕ್ಕಾಗಿಯೂ ಬೋರ್ಡಿನವರು ವಿಷಾದಪಡುತ್ತಾರೆ. ಚಾಲ್ತಿ ಸಾಲಿಗೆ ಅವುಗಳನ್ನು ಪೂರೈಸುವಂತೆ ಡಿವಿಜನ್ ಆಫೀಸರವರು ನಿಗಾ ಕೊಡಬೇಕೆಂದು ಕೋರಿದೆ.

3. 1909ನೆ ಜೂನ್ ಮಾಹೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಂದ ಮಂಜೂರು ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಫಂಡ್ಸು ಕಾಮಗಾರಿ.

ಬೆಂಗಳೂರು ತಾಲ್ಲೂಕು ಯಲಹಂಕದ ಸ್ಟೇಷನ್ ರೈಲ್ವೆ ಲೈನ್ ಬಳಿ ಇರತಕ್ಕ ಕಾಲ್ವೆಗೆ ನಡೆಸತಕ್ಕ ಮಣ್ಣು ಕಾಮಗಾರಿಬಗೆ 115 ರೂಪಾಯಿ ಅಂದಾಜು ಒಪ್ಪಲಾಯಿತು.

4. ಚನ್ನಪಟ್ಟಣದ ತಾಲ್ಲೂಕು ಕೋಡಂಬಳ್ಳಿಯಿಂದ ಶಿಂಗರಾಜಪುರಕ್ಕೆ ಹೋಗುವ ರಸ್ತೆಯನ್ನು ಅಣಮಂಚೆಗೌಡನು ದುರಸ್ತಿನಲ್ಲಿಟ್ಟುಕೊಳ್ಳತಕ್ಕ ಬಾಬೆ ಡಿಸ್ಟ್ರಿಕ್ಟ್ ಬೋರ್ಡು ತೀರ್ಮಾನದ ನಿತ್ಯ ರಿಪೋರ್ಟು ಕೇಳಿಬಂದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 9—1—08ನೆ ಮುರ್ಸಲಂ 6469—ಲೋ. ಬೋ. 367–06 ಡಾಕೆಟ್ ಓದಲಾಯಿತು.

ಅಣಮಂಚೆಗೌಡನು ಕೋಡಂಬಳ್ಳಿಯಿಂದ ಶಿಂಗರಾಜಪುರಕ್ಕೆ ಹೋಗುವ ರಸ್ತೆಯನ್ನು ಪಬ್ಲಿಕ್ಕಿಗೆ ಬಿಟ್ಟುಕೊಟ್ಟು ಅದರ ಸಾಲ್ ಆಬಾದು ಕಾಮಗಾರಿಯನ್ನು ವಹಿಸತಕ್ಕ ಷರತ್ತುಗಳಿಗೆ ಒಳಪಟ್ಟು ಸದರೀ ರಸ್ತೆಯನ್ನು ತನ್ನ ಹಾತಲಾಗವಡುನಿಂದ ಮಾಡಲು ಅಪ್ಪಣೆ ಕೊಡಬಹುದೆಂದು ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

5. 2ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆಗೆ ಒಬ್ಬ ತೋಟಿಯನ್ನು ನೇಮಿಸತಕ್ಕ ವಿಷಯದಲ್ಲಿ ತುಮಕೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಸಲಹೆಯನ್ನು ತಿರಸ್ಕರಿಸಿದ 25—5—09ನೆ ಮುರ್ಸಲಂ 11734-41—ಲೋ. ಬೋ. 315-08-4ನೆ ನಂಬರ್ ಗವರ್ನಮೆಂಟ್ ಆರ್ಡರು.

ರಿಕಾರ್ಡು ಮಾಡಲಾಯಿತು.

6. ಚನ್ನಪಟ್ಟಣ-ಹಲಗೂರು ರಸ್ತೆಗಾಗಿ ಮಂಜೂರು ಮಾಡಲ್ಪಟ್ಟ ಮೊಬಲಗು ಪೈಕಿ ಒಂದು ಭಾಗವನ್ನು ಬೆಂಗಳೂರು ಸಬರ್ಬನ್ನು (Suburban) ರಸ್ತೆಗಳ ಅಭಿವೃದ್ಧಿಗೋಸ್ಕರ ಸ್ಪೆಷಲ್ ಜಮಾವಣೆಗಾಗಿ ಉಪಯೋಗಿಸಲು ಮಂಜೂರಿಕೇಳಿದ ಬೆಂಗಳೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರ 30-6-09—2-7-09ನೆ ಮುರ್ಸಲಂ 120ನೆ ನಂಬರ್ ಡಾಕೆಟ್,

ಮಂಜೂರ್ಮಾಡಲಾಯಿತು.

7. ಕನಕನಹಳ್ಳಿ ತಾಲ್ಲೂಕು ಹಾರೋಹಳ್ಳಿಯಲ್ಲಿ ಮುಸಾಫರ್‌ಖಾನೆ ಕಟ್ಟತಕ್ಕದ್ದಕ್ಕೆ ಬೇಕಾಗುವ ಜಮೀನ್ ಅಕ್ವೈರ್ ಮಾಡತಕ್ಕ ಭಾಗದಲ್ಲಿ ಬೋರ್ಡಿನ ತೀರ್ಮಾನವನ್ನು ಕೇಳಿದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 27—7—09ನೆ ಮುರ್ಸಲಂ 1000—ಲೋ. ಬೋ 26–09–2ನೆ ಡಾಕೆಟ್ ಓದಲಾಯಿತು.

ಹೈರೋಡಿಗೆ ಬಾಜೂದಲ್ಲಿರುವ ಶ್ಯಾನುಭೋಗ ರಾಮಶೇಷಯ್ಯನ ಹೊಲದಲ್ಲಿ ಚುನಾಯಿಸಿರುವ ನಿವೇಶನವನ್ನು ಮುಸಾಫರ್‌ಖಾನೆಗೆ ಅಕ್ವೈರ್ ಮಾಡಬಹುದೆಂದು ತೀರ್ಮಾನಿಸಲಾಯಿತು.

8. ಬೆಂಗಳೂರು ತಾಲ್ಲೂಕು ವೈಟ್‌ಫೀಲ್ಡಿನಲ್ಲಿರುವ ಖಬರಸ್ತಾನಿಗೆ ಕಾಂಪೌಂಡುಗೋಡೆ ಹಾಕತಕ್ಕ ಬಾಬೆ ಸೆಟ್ಲರಸ್ ಸೆಕ್ರೆಟರಿಯವರಿಂದ ತಲ್ಪಿದ 27—7—09ನೆ ಮುರ್ಸಲಂ 24ನೆ ನಂಬರು ಲೆಟರು ಓದಲಾಯಿತು.

ವೈಟ್‌ಫೀಲ್ಡ್ ಖಬರಸ್ತಾನಕ್ಕೆ ಕಾಂಪೌಂಡುಗೋಡೆಗಾಗಿ 400 ಕಂಟ್ರಿಬ್ಯೂಷನ್ ಕೊಡಬಹುದೆಂದು ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

9. ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರದ ಹೋಬಳಿ ಅಂಬಹಳ್ಳಿ ದೊಡ್ಡಿಯಲ್ಲಿ 200 ರೂಪಾಯಿನ ಅಂದಾಜಿನಮೇಲೆ ಒಂದು ಭಾವಿ ತೆಗಿಸತಕ್ಕ ವಿಷಯದಲ್ಲಿ ಅಮಲ್ದಾರ್ರ 21—7—09ನೆ ಮುರ್ಸಲಂ 14ನೆ ನಂಬರು ರಿಪೋರ್ಟು ಓದಲಾಯಿತು.

ಸದರಿ ತಾಲ್ಲೂಕು ಸಿದ್ದನಹಳ್ಳಿಯಲ್ಲಿ ಭಾವಿಗಾಗಿ ಮಂಜೂರಾಗಿರುವ ಗ್ರಾಂಟನ್ನು ಇದಕ್ಕೆ ಉಪಯೋಗಿಸಲು ಮಂಜೂರ್ಮಾಡಲ್ಪಟ್ಟಿರುತ್ತೆ.

10. ಚನ್ನಪಟ್ಟಣದಲ್ಲಿ ವೈದ್ಯಶಾಲೆ ಸ್ಥಾಪಿಸಲು ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನಿಂದ ಬಂದ ಸಲಹೆಯನ್ನು ಮಂಜೂರ್ಮಾಡಲು ಆಗಲಾರದೆಂದು ಬಂದ 2—8—09ನೆ ಮುರ್ಸಲಂ 1239—ಮೆಡಿ. 12–09ನೆ ನಂಬರು ಗವರ್ನಮೆಂಟ್ ಆರ್ಡರು ಓದಲಾಯಿತು.

ರಿಕಾರ್ಡು ಮಾಡಲಾಯಿತು.

11. ಬೆಂಗಳೂರು ತಾಲ್ಲೂಕು ವೈಟ್‌ಫೀಲ್ಡಿನಲ್ಲಿ 250 ಮತ್ತು 105 ರೂಪಾಯಿಗಳ ಅಂದಾಜುಗಳಮೇಲೆ ಎರಡು ಕಾಯಂ ಭಾವಿಗಳು ತೆಗಿಸತಕ್ಕ ವಿಷಯದಲ್ಲಿ ಬೆಂಗಳೂರು ತಾಲ್ಲೂಕು ಅಮಲ್ದಾರ್ರಿಂದ ಬಂದ 27—7—09ನೆ ಮುರ್ಸಲಂ 28ನೆ ನಂಬರು ಇತ್ತಿಲ್ಲೆ ಓದಲಾಯಿತು.

ಅದೇ ವೈಟ್‌ಫೀಲ್ಡಿನಲ್ಲಿ ಮೊದಲಿಗೆ ಮಂಜೂರಾಗಿದ್ದ ಭಾವಿ ಮೊಬಲಗನ್ನು ಇವುಗಳಿಗೆ ಉಪಯೋಗಿಸಿ ಸಾಲದ ಮೊಬಲಗ್ಗೆ ರೀ ಅಪ್ರೊಪ್ರಿಯೇಷನ್ ನಿಂದ ಮಂಜೂರು ಮಾಡಲಾಯಿತು.

12. ಸನ್ 1909-10ನೆ ಸಾಲಿಗೆ ಮಂಜೂರಾದ ಡಿಸ್ಟ್ರಿಕ್ಟು ಫಂಡ್ಸು ಕಾಮಗಾರಿಗಳ ಅಂದಾಜಗಳು.

ಡಿಸ್ಟ್ರಿಕ್ಟು ಬೋರ್ಡಿನ ಮತ್ತೊಂದು ಮೀಟಿಂಗಿನ ಪರಿಯಂತರ ಈ ಅಂದಾಜುಗಳು ನಿಲ್ಲಬಹುದೆಂದು ತೀರ್ಮಾನಿಸಲಾಯಿತು.

13. ಬೆಂಗಳೂರು ತಾಲ್ಲೂಕು ಚಿಕ್ಕಬಾಣಾವಾರದಲ್ಲಿರುವ ರೆವಿನ್ಯೂ ಚಾವಡಿಯನ್ನು 25 ರೂಪಾಯಿಗೆ ರಿಪೇರಿ ಮಾಡಲು ಬೆಂಗಳೂರು ತಾಲ್ಲೂಕು ಅಮಲ್ದಾರ್ರು 30—6—09ನೆ ಮುರ್ಕುಂ 233ನೆ ನಂಬರು ಇತ್ತಿಲ್ಲೆಯೊಡನೆ ಬಂದ ಅಂದಾಜು ಓದಲಾಯಿತು.

ಮಂಜೂರ್ಮಾಡಲಾಯಿತು.

14. ಬೆಂಗಳೂರು ತಾಲ್ಲೂಕು ಸಾರಕ್ಕಿ ರಸ್ತೆಗೆ ಅಡ್ಡವಾಗಿ ಬರುವ ಮೋಹರಿಯನ್ನು ಕಟ್ಟತಕ್ಕ ವಿಷಯದಲ್ಲಿ ಅಮಲ್ದಾರ್ರು 30—6—09ನೆ ಮುರ್ಕುಂ 220ನೆ ನಂಬರು ರಿಪೋರ್ಟನೊಡನೆ ಬಂದ ರಿವೈಜ್ ಅಂದಾಜು.

ರಿವೈಜ್ ಅಂದಾಜು ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.

15. ಹೆಸರುಘಟ್ಟ ಹುಲ್ಲುಕಾವಲಿನಲ್ಲಿ ತೊಂಡು ದೊಡ್ಡಿಗಳನ್ನು ಕಟ್ಟತಕ್ಕ ವಿಷಯದಲ್ಲಿ ಬೋರ್ಡಿನ ತೀರ್ಮಾನ ಕೇಳಿ ಬಂದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ 3—8—09ನೆ ಮುರ್ಕುಂ 1283—29-09-2ನೆ ನಂಬರು ಡಾಕೆಟ್ ಓದಲಾಯಿತು.

ಜಾಸ್ತಿಯಾಗಿ ಎರಡು ತೊಂಡು ದೊಡ್ಡಿಗಳನ್ನು ಮಂಜೂರ್ಮಾಡಬಹುದೆಂದು ತೀರ್ಮಾನಿಸಲಾಯಿತು.

16. ಆನೆಕಲ್ ತಾಲ್ಲೂಕು ಚಂಡಾಪುರದ ಸಂತೆಗೆ ಖರತಕ್ಕ ಜಿನಸಿ ವಗೈರೆ ಮೇಲೆ ಕಮ್ಮಿ ದರದ ರುಸುಂ ವಸೂಲು ಮಾಡತಕ್ಕ ಬಾಬಿ ಜನರಲ್ ಮತ್ತು ರೆವಿನ್ಯು ಸೆಕ್ರೆಟರಿ ಸಾಹೇಬರವರ 27—5—09ನೆ ಮುರ್ಕುಂ 11862—ಲೋ. ಬೋ. 336-07-4ನೆ ಡಾಕೆಟ್ಟಿನಲ್ಲಿ ಕಂಡ ದರ ವಸೂಲು ಮಾಡಬಹುದೆಂದು ಬರೆದುಬಂದ ಡಿವಿಜನ್ ಆಫಿಸರವರ 6—8—09ನೆ ಮುರ್ಕುಂ 184ನೆ ನಂಬರು ಯಾದಿ ಓದಲಾಯಿತು.

ಗೌರ್ನಮೆಂಟು ಆರ್ಡರಿನಲ್ಲಿ ನಮೂದುಮಾಡುವ ದರದಂತೆ ಚಂದಾಪುರದ ಸಂತೆಯಲ್ಲೂ ವಸೂಲು ಮಾಡಬಹುದೆಂದು ತೀರ್ಮಾನಿಸಲಾಯಿತು.

17. ಬೆಂಗಳೂರು, ಮಾಗಡಿ, ಹುಲಿಯೂರುದುರ್ಗದ ರಸ್ತೆಯ 7ನೆ ಮೈಲಿಯಲ್ಲಿ ಬೇರೆ ಮಾರ್ಗವನ್ನು ಹಾಕಲು (Deviation) ಬೆಂಗಳೂರು ಡಿವಿಜನ್ ಎಗ್ಸಿಕ್ಯುಟಿವ್ ಇಂಜನೀರವರ 2—8—09ನೆ ಮುರ್ಕುಂ 212ನೆ ಲೆಟರ ಒಡನೆ ಬಂದ 2,009 ರೂಪಾಯಿನ ಅಂದಾಜು.

ಈ ಹೊಸರಸ್ತೆಯು (ಪಬ್ಲಿಕ್) ಜನ ಮತ್ತು ಬಂಡಿಗಳ ತಿರುಗಾಟಕ್ಕೆ ಅನುಕೂಲಗಳನ್ನು ಕಲ್ಪಿಸುವ ಉದ್ದಿಶ್ಯ ಅವಶ್ಯಕವೆಂದು ತೀರ್ಮಾನಿಸಲಾಯಿತು. ಆದರೆ ಡಿಸ್ಟ್ರಿಕ್ಟು ಫಂಡಿನಿಂದ ಹಣ ಒದಗದ ಸಬಬು ಲೋಕಲ್ ಫಂಡ್ಸು ಜನರಲ್ಲಿಂದ ಈ ಅಂದಾಜು ಮಂಜೂರ್ಮಾಡಲು ಗೌರ್ನಮೆಂಟಿಗೆ ಬರಸಬೇಕೆಂದು ತೀರ್ಮಾನಿಸಲಾಯಿತು.

18. ಸ್ಯಾನಿಟೆರಿ ಕಮಿಷನರ ಮತ್ತು ಅವರ ಡೆಪ್ಯುಟಿಯವರು ತಮ್ಮತಮ್ಮ ಸಂಚರಣೆ ಕಾಲದಲ್ಲಿ "ಸ್ಯಾನಿಟೆರಿ ಸ್ಟಾಫ್" ಯಾನೆ ಸ್ಯಾನಿಟೆರಿ ಸಿಬ್ಬಂದಿಯನ್ನು ಮತ್ತು "ಎಕ್ವಿಪ್ಮೆಂಟು" ಯಾನೆ ಸಲಕರಣೆಯನ್ನು ಅಜಮಾಯಿಷಿಮಾಡಿ ಗೌರ್ನಮೆಂಟಿಗೆ ರಿಪೋರ್ಟು ಕಳುಹಿಸುವ ಬಾಬಿ ಗೌರ್ನಮೆಂಟಿನಿಂದ ಬಂದ 2—8—09ನೆ ಮುರ್ಕುಂ 1227-35—ಸ್ಯಾ. 190-08-4ನೆ ನಂಬರು ಆರ್ಡರು ಓದಲಾಯಿತು.

ರೆಕಾರ್ಡು ಮಾಡಲಾಯಿತು.

ಡಿಸ್ಟ್ರಿಕ್ಟು ಬೋರ್ಡಿನ ಮುಂದಿನ ಮೀಟಿಂಗ್ ಅಕ್ಟೋಬರ್ ಮಾಹೆ 11ನೆ ತಾರೀಖಿನ ದಿನ ನಡೆಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಟಿ. ರಾಯಲು ಚೆಟ್ಟಿ,
ಫಾರ್ ಪ್ರೆಸಿಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೆ ಮಾಹೆ ಆಗಸ್ಟು 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರ್ಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ತತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರಿ ಹರಾಜಿನಿಂದ ನುಕ್ಸಾನಪಟ್ಟೆಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 90 ದಿನಗಳೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಜಮೆ ಬೆಲೆ.	ಸಾಲಿಯಾನಾ ಜೋಡಿ ಕಂದಾಯ.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜಿನ ತಾರೀಖು ಸ್ಥಳ.
ಕೋಲಾರ	ಕೋಲಾರ	ವೇಮಗಲ್	ತಾಯಲೂರು ಜೋಡಿ ಗ್ರಾಮ	ನರಸಿಂಹಯ್ಯ ವಗೈರೆ	ಎ. ಗು. ಖುಷ್ಕಿ ... 215 12 ತರಿ ... 5 6 ಬಾಗಾಯಿತು. 1 31 ಪರಂಪೋಕು. 139 39 ಜುಮ್ಲಾ ... 362 8	ರೂ. 332	ರೂ. 109 ಆ. 1 ಪೈ. 5	ರೂ. 110 ಆ. 1 ಪೈ. 5	ಕೋಲಾರ ತಾಲ್ಲೂಕು ಕಚೇರಿ ಮುಂದೆ 1909ನೇ ಅಕ್ಟೋಬರ್ ತಾರೀಖು 4ನೇ ಸೋಮವಾರ

ಚಕ್ಕು ಬಂದಿ.
ಪೂರ್ವಕ್ಕೆ—ಶೀವೂರು ಸರಹದ್ದು.
ಪಶ್ಚಿಮಕ್ಕೆ—ತಲಗೊಂದ ಮತ್ತು ಪುರಗ್ರಾಮಗಳ ಸರಹದ್ದು.
ಉತ್ತರಕ್ಕೆ—ಬೈಯಪಲ್ಲಿ ಸರಹದ್ದು.
ದಕ್ಷಿಣಕ್ಕೆ—ಗರುಡನಹಳ್ಳಿ ಸರಹದ್ದು.

ತಾರೀಖು 17ನೆ ಆಗಸ್ಟು 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದ್ದಾರನ ಖರ್ಚಿನಲ್ಲಿ ವ ನುಕ್ಸಾನ್ದಲ್ಲಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್‌ಪಟ್ಟೆವೆಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನಮೆಂಟಿಗೆ ಅಪ್ಪೀಲ್‌ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರುಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀ ದಾರರ ಹೆಸರು.	ಅಂದಾಜಾ ಬೀಜವರಿ	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಜಮಾನ ವಗೈರೆಯವರ ಗ್ರಾಮದ ಮೇಲಿನ ಅಂತಾ ಹಿಂದಿನ ಕಂದಾಯದ ಬಾಕಿ.	ಹರಾಜು ತಾರೀಖು ಸ್ಥಳ.
ಕೋಲಾರ	ಬಾಗೇಪಲ್ಲಿ	ಚೇಳೂರು	ಚೇಳೂರು ಜಿನಗಾನಹಳ್ಳಿ	1. ಡಿ. ರಾಮಪ್ಪ 2. ಡಿ. ವೆಂಕಟರಮಣಪ್ಪ 3. ಡಿ. ರಾಮಪ್ಪ	ಎ. ಗು. ಖುಷ್ಕಿ ... 422 7 ತರಿ ... 25 21 ಬಾಗಾಯಿತು 10 36 ಪರಂಬೋಕು 705 6 1163 30	ರೂ. ಆ. ಪೈ. 608 14 0	ಶ್ರೀ 4 ಖಿ. 7 ಚಿ. 265	ರೂ. ಆ. ಪೈ. 850 8 11	ಬಾಗೇಪಲ್ಲಿ ತಾಲ್ಲೂಕು ಅಮಲ್ದಾರರ ಕಚೇರಿಯಲ್ಲಿ 4ನೇ ತಾರೀಖು

ಚಕ್ಕುಬಂದಿ.
ಪೂರ್ವಕ್ಕೆ—ಗೊಲ್ಲಹಳ್ಳಿ ಮತ್ತು ಐಸಂದ್ರ ಸರಹದ್ದು.
ಪಶ್ಚಿಮಕ್ಕೆ—ಪಟ್ಟಣ ಮತ್ತು ಹುನುಕುಂದ ಗ್ರಾಮಗಳ ಸರಹದ್ದು.
ಉತ್ತರಕ್ಕೆ—ಪಿಚ್ಚಗುಂಟ್ರಹಳ್ಳಿ ಸರಹದ್ದು.
ದಕ್ಷಿಣಕ್ಕೆ—ಹುನುಕುಂದ ಮತ್ತು ಕದಿರೇಗೌಡನಕೋಟೆ ಸರಹದ್ದು.

ತಾರೀಖು 25ನೆ ಮಾಹೆ ಆಗಸ್ಟು 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಜೋಡಿದಾರ್ರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರು ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಲ್ತವೀ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೇಜವರಿ ವಿಷಯದಲ್ಲಾಗಲಿ ಇರುವ ಗಲ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲಿನಲ್ಲಿ ಆಗುವ ಆಖ್ಯೆರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಜಿಲ್ಲೆ	ತಾಲ್ಲೂಕು	ಹೋಬಳಿ	ಗ್ರಾಮ	ಜೋಡಿದಾರರ ಹೆಸರು	ಅಂದಾಜಾ ಬೇಜವರಿ	ಅಂದಾಜಾ ಹುಟ್ಟುವಳಿ ಯಾ ಬೇರೀಜು	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್	ಯಾವ ಬಾಕಿಗೋಸ್ಕರ ಗ್ರಾಮವು ಹರಾಜು ಆಗುತ್ತೋ ಅಂಥಾ ಕಂದಾಯದ ಬಾಕಿ	ಹರಾಜು ತಾರೀಖು ಜಗ್ಗೆ
ಕೋಲಾರ	ಮುಳಬಾಗಲ್	ಆವಣಿ	ಜೋಡಿ ದೇವರಾಯಸಮುದ್ರ	ಬದರಿನಾರಾಯಣ ಶೆಟ್ಟಿ ಇತರರು	ಎ. ಗುಂ. ಖುಷ್ಕಿ ... 384 2 ತರಿ ... 604 31 ಬಾಗಾಯತು ... 10 20 ಖರಾಬು 2,882 5 4,133 26	ರೂ. ಆ. ಪೈ. 2624 2 0	ರೂ. 1,451	ರೂ. ಆ. ಪೈ. 297 9 8	ಮಾಲೂರು ಸಬ್ ಡಿವಿಜನ್ ನಾಡೆಬಂದರ ಮೂಲಕವಾಗಿ ಮುಳಬಾಗಲ್ ತಾಲ್ಲೂಕು ಕಚೇರಿಯಲ್ಲಿ 1909ನೆ ಅಕ್ಟೋಬರ್ 4ನೆ ತಾರೀಖಿನಲ್ಲಿ ನಡಿಯುತ್ತೆ.

ಚಕ್ಕು ಬಂದಿ.

ಪೂರ್ವಕ್ಕೆ—ಜಮ್ಮನಹಳ್ಳಿ ಮತ್ತು ವರದಗಾನಹಳ್ಳಿ, ಸರಹದ್ದು.
ಪಶ್ಚಿಮಕ್ಕೆ—ದೊಡ್ಡಗಾನಹಳ್ಳಿ ಮತ್ತು ಕಾಮನೂರು ಸರಹದ್ದು.
ಉತ್ತರಕ್ಕೆ—ಕುರುಬರಹಳ್ಳಿ ಮತ್ತು ಅನಂತಪುರ ಸರಹದ್ದು.
ದಕ್ಷಿಣಕ್ಕೆ—ಕಾಲಹಳ್ಳಿ, ಹೊಸಕೆರೆ ಮತ್ತು ಚೋಳಂಗಟ್ಟ ಸರಹದ್ದು.

ಎಸ್. ಶ್ಯಾಮಣ್ಣ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 16ನೆ ಆಗಸ್ಟು 1909.

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಮೇಲ್ಕೋಟೆ ಹೋಬಳಿಗೆ ಸೇರಿದ ಜೋಡಿ ರಾಮಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಚೇರಿಯಲ್ಲಿ 1909ನೆ ಸೆಪ್ಟಂಬರ್ ಮಾಹೆ 30ನೆ ತಾರೀಖು ದಿವಸ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ಆಗಸ್ಟ 26ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 698ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 28ನೆ ಆಗಸ್ಟು 1909.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರಿನ ಪ್ರಸಿದ್ಧಪತ್ರಿಕೆ

1. ಕಂದಾಯದ ಬಾಕೀದಾರರಾದ ಮೈಸೂರಿನಲ್ಲಿರುವ ವಿ॥ ಬಾದಾಮಿ ಭೀಮರಾಯರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಸರಕಾರಕ್ಕೆ ಫಾರ್ಫೀಚರಮಾಡಿಕೊಳ್ಳಲ್ಪಟ್ಟ ಅದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಮೈಸೂರು ತಾಲ್ಲೂಕು ಕಛೇರಿಯಲ್ಲಿ 1909ನೆ ಅಕ್ಟೋಬರ 18ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಟಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1909ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಶೀಲ್ ಮೇರಿಗೆ ರೂಪಾಯಿ 686-13-4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜೆಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಬೇಕಾದ ಹೋದಲ್ಲಿ ಮೇಲೆ ಹೇಳಿದ ಡಿಪಾಜೆಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜೆಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. — ಕಟ್ಟಡಗಳು. — ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. — ಸರ್ವೆ ನಂಬರು ಅಥವಾ ಹಿಸ್ಸೆ ನಂಬರು.	ಜಮೀನಿನ ವರ್ಗ.	ವಿಸ್ತೀರ್ಣ.	ಕಂದಾಯ.	ಅಂದಾಜು ಕಿಮ್ಮತ್ತು.	ಬಾಕಿ ಕಂದಾಯ.	ಖರ್ಚು ಬಡ್ಡಿ ಸಹ ಬಾಕಿ ಮೊಬಲಗು.
								ಎ. ಗು.	ರೂ. ಆ.			
ಮೈಸೂರು	ವರುಣ	ಚಿಕ್ಕ ಕಾಟೂರು	ಶಾನುಬೋಗ ವಿ॥ ಬಾದಾಮಿ ಭೀಮರಾಯರು.	...	...	...	ಪರಂಪೋಕು.	403 10	12 0	ರೂ. 3,000	ರೂ. 632 ಆ. 0 ಪೈ. 0 ಜಾರಿ	ರೂ. 53 ಆ. 8 ಪೈ. 0 ಬಡ್ಡಿ; ರೂ. 1 ಆ. 5 ಪೈ. 4 ಖರ್ಚು
							ಖುಷ್ಕಿ ...	687 39	561 15			
							ತರಿ ...	2 29	92 4			
							ಬಾಗಾಯಿತು	41 13	152 4			
							ಜುಮ್ಲಾ ...	1154 11	818 7			686 13 4

ಕೆ. ಚಾಂಡಿ,

ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ಮೈಸೂರು ಗವರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋ.

ಸರ್ 1909ನೆ ಇಸವಿ ಸೆಪ್ಟೆಂಬರ ತಾರೀಖು 2.

ಬೆಂಗಳೂರು ಗೌರ್ನವೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು	ಪುಟಗಳ ಸಂಖ್ಯೆ	ಖರೀದಿ			ಪೋಸ್ಟೇಜ್ ಮತ್ತು ಪ್ಯಾಕಿಂಗ್	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷರ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷರ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸರ್1879ನೆ ಇಸವಿಯ 12ನೆ ನಂಬರ್ ಆಕ್ಟು.	36	0	11	0	1	6
4	1871ನೆ ಇಸವಿಯ ದನಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ (1904)	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷರ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು. ಕೋರ್ಟ್ ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟು...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	„ ಲಿಮಿಟೇಷರ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	„ ರಿಜಿಸ್ಟ್ರೇಷರ್ ಆಕ್ಟು	37	0	4	0	2	0
18	„ ಟೆಲಿಗ್ರಾಫ್ ಆಕ್ಟು	18	0	1	6	1	0
19	„ ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು(ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	[illegible]	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್‌ವೆಗಳ ರೆಗ್ಯುಲೇಷರ್	50.	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೊಲೀಸ್ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷರ್ (1883ನೆ ಇಸವಿಯ Iನೆ ರೆಗ್ಯುಲೇಷರ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟೀಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷರ್.	6	0	0	6	0	6
25	1894ನೆ ಇಸವಿಯ Iನೆ ನಂ. ರೆಗ್ಯುಲೇಷರ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷರ್. ಮತ್ತು IIನೇ ನಂ. ರೆಗ್ಯುಲೇಷರ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷರ್.	4	0	0	6	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷರ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಗೆ ವಿಧಿಸಲು ಹುಟ್ಟಿದ ರೆಗ್ಯುಲೇಷರ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷರ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷರ್.	1	0	0	3	0	6
38	1894ನೆ ಇಸವಿಯ Vನೆ ನಂ. ರೆಗ್ಯುಲೇಷರ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷರ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷರ್ ರಿಜಿಸ್ಟ್ರೇಷರ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷರ್ ಗೌರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷರ್ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷರ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷರ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷರ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್.	3	0	0	6	0	6
43	1895ನೆ ಇಸವಿ IIIನೆ ನಂ. ರೆಗ್ಯುಲೇಷರ್ ಮೈಸೂರು ಕಂಪೆನಿಗಳ ರೆಗ್ಯುಲೇಷರ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷರ್ ಮೈಸೂರು ಅರಳಿ ಸುಂಕಗಳ ರೆಗ್ಯುಲೇಷರ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷರ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟಿನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷರನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್, ಮತ್ತು IIನೆ ನಂ. ರೆಗ್ಯುಲೇಷರ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷರ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷರ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷರ್ ಮೈಸೂರು ಶೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಗೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷರ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷರ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷರ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷರ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷರ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷರ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷರ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷರ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರಿನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟೋ 1905	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರಿನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟೋ 1907 ...	143	1	0	0	6	0
56	ಇಂಡಿಯನ್ ಲಿಮಿಟೇಷರ್ ಆಕ್ಟು	86	0	5	6	1	0

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ ಮತ್ತು ಪ್ಯಾಕಿಂಗ್.	
			ರೂ	ಆ.	ಪೈ.	ಆ.	ಪೈ.
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸರ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
59	ಇಸ್ತಿಹಾರ್ನಾಮೆ ನಂ 69—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908. ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡುಮಾಡಿದ್ದು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908.	203	1	0	0	6	0
62	ಮೈಸೂರು ಕೋಡು ಸಂಪುಟ 1.	637	4	0	0	6	0
63	1909ನೆ ಇಸವಿಯ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳು ...	13	0	1	0	1	0
64	1908ನೆ ಇಸವಿಯ Vನೆ ರೆಗ್ಯುಲೇಷರ್ – ಮೈಸೂರು ಪೋಲೀಸ್ ರೆಗ್ಯುಲೇಷನ್.	93	0	4	0	1	6
65	1908ನೆ ಇಸವಿಯ IVನೆ ರೆಗ್ಯುಲೇಷರ್—ಮೈಸೂರು ಸೀಮೆಯ ಗ್ರಾಮ ನೌಕರಿಗಳ ರೆಗ್ಯುಲೇಷನ್.	30	0	1	0	1	0

ರೆಜಿಸ್ಟ್ರೇಷನ್ ಫೀ ಅಲಾಯಿದ.

ಎಸ್ ಅಬ್ದುಲ್ ಹೈ, ಕ್ಯೂರೇಟರ್.

ಸ್ಯಾನಿಟೆರಿ ಬೋರ್ಡು, ಕೋಲಾರ ಗೋಲ್ಡ್ ಫೀಲ್ಡ್ಸ್.

ನೋಟಿಸ್, ತಾರೀಖು 19ನೆ ಆಗಸ್ಟು 1909.

ಕಂಟ್ರಾಕ್ಟರ್ ಕಂದಸಾಮಿ ಮೊದಲಿಯಾರ್ ಎಂಬುವರು ಸ್ಯಾನಿಟೆರಿ ಬೋರ್ಡಿನಲ್ಲಿ ಕೆಲವು ಕೆಲಸಗಳನ್ನು ನಡೆಸಿದ್ದಕ್ಕಾಗಿ ರೂಪಾಯಿ 2 1—6—0 ಅವರಿಗೆ ಸಲ್ಲಬೇಕಾಗಿರುವದನ್ನು ಈ ನೋಟಿಸ್ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಸದರಿಯವರಾಗಲಿ ಅಥವಾ ಅವರ ನ್ಯಾಯವಾದ ವಾರಸ್‌ದಾರರಾಗಲೀ ಬಂದು ತೆಗೆದುಕೊಂಡು ಹೋಗದಪಕ್ಷದಲ್ಲಿ ಮೇಲ್ಕಂಡ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಹೆಚ್ಚು ತಪಶೀಲಿಗೆ 1909ನೆ ಇಸವಿ ಆಗಸ್ಟು 26ನೆ ತಾರೀಖು IIನೆ ಭಾಗದ 702–703ನೆ ಪುಟಗಳನ್ನು ನೋಡಿಕೊಳ್ಳತಕ್ಕದ್ದು.

ಪಿ. ಎಫ್. ಬೌರಿಂಗ್,
ವೈಸ್ ಪ್ರೆಸಿಡೆಂಟ್.

ತಿಳುವಳಿಕೆ ನೋಟಿಸ್.

ಕೋಲಾರ ಡಿಸ್ಟ್ರಿಕ್ಟು ಮುಳುಬಾಗಲ್ ತಾಲ್ಲೂಕು ಆವನಿ ಸಮ್ಮತು ಕಾಯಂಗುತ್ತಾ ಹೊನಗಾನಹಳ್ಳಿ ಇದಕ್ಕೆ ಮಜರ ರಾಮಾಪುರ-ಜೋಡಿ ಕುರುಬರಹಳ್ಳಿ ಮತ್ತು ಜೋಡಿ ದೇವರಾಯಸಮುದ್ರ ವಗೈರೆ ಗ್ರಾಮಗಳ ಕಾಯಂಗುತ್ತಾದಾರ್ ಮತ್ತು ಜೋಡಿದಾರ್ರಾದ ಸದರಿ ಹೊನಗಾನಹಳ್ಳಿಯಲ್ಲಿರುವ ವೆಂಕಟ್ರಾಮಯ್ಯನವರ ಮಕ್ಕಳಾದ 1ನೆ ವೆಂಕಟೇಶಯ್ಯ, 2ನೆ ರಾಮಸ್ವಾಮಯ್ಯ ಆದ ನಾವುಗಳು ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ವೆಂಕಟ್ರಾಮಯ್ಯನವರ 3ನೆ ಮಗನಾದ ಕ್ರಿಷ್ಣಯ್ಯನೆಂಬುವನು ನಮ್ಮಗಳ ಅವಿಭಕ್ತಕುಟುಂಬಕ್ಕೆ ಸೇರಿದವನಾಗಿ ಅವಿಭಕ್ತಕುಟುಂಬದಲ್ಲಿ ಇದ್ದುಕೊಂಡೂ ಕೂಡ ಸ್ವೇಚ್ಛೆಯಾಗಿ ಸಂಸೃಷ್ಟಕ್ಕೆ ಸೇರಿದ ಆಸ್ತಿಗಳನ್ನೂ ಮತ್ತು ನಮ್ಮ ಇತರ ಸ್ವಾರ್ಜಿತ ಸ್ವತ್ತುಗಳನ್ನೂ ಕೂಡ ಅಂದರೆ ಮೇಲೆ ವಿವರಿಸಿರುವ ಸ್ವತ್ತುಗಳನ್ನು ಕ್ರಯ, ಭೋಗ್ಯ, ಆಧಾರಾದಿಗಳು ವಗೈರೆ ಪರಭಾರೆ ಮಾಡುತ್ತಿರುವದಾಗಿ ಕಂಡುಬಂದು ಇರುತ್ತೆ. ಮೇಲ್ಕಂಡ ಸ್ವತ್ತುಗಳಲ್ಲಿ ನಮ್ಮಗಳಿಗೆ ಇರತಕ್ಕ ಹಕ್ಕು ಬಾಧ್ಯತೆಯು ಮೇಲ್ಕಂಡ ಕ್ರಿಷ್ಣಯ್ಯನಿಂದ ಪಡೆದವರಿಗೆ ಲೇಶವೂ ಸಲ್ಲಲಾರದು ತಿಳಿಯುವದು.

ತಾರೀಖು 25ನೆ ಆಗಸ್ಟು 1909.

ವೆಂಕಟೇಶಯ್ಯ.
ರಾಮಸ್ವಾಮಯ್ಯ.

ಮೈಸೂರ ಗೆಜೆಟ್.

ಸಾ. 44.] ಸರ್ಕಾರದಿಂದ ಛಾಪಿಸಿ ಆದ್ದು. [ಸಂ. 37.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 16, ಸನ್ 1909.

II ನೆ ಭಾಗ.

[ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟು ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರೆ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.		[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವೆಂಬರ್ ತಾರೀಖು	18	200	
2	ಡಿಟೋ ...	ಸಾಗರ .	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟನ್‌ಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್ ತಾರೀಖು	2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟನ್‌ಗಳು ಕೋಲಾರದ 5 ಟನ್‌ಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ ...		2,400	

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ತಾರೀಖು 28ನೆ ಆಗಸ್ಟ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟ್ ಮತ್ತು ಡಿಸ್ಟ್ರಿಕ್ಟು ಜಂಗಲ್‌ಗಳಲ್ಲಿಯೂ ಹಿಡುವಳಿ ಅಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು 1909ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1910ನೆ ಸೆಪ್ಟಂಬರು 30ನೆ ತಾರೀಖಿನ ವರಿಗೆ ಜಮಾಯಿಸುವ ಹಕ್ಕನ್ನು ಪಡೆಯಲು 1909ನೆ ಇಸವಿ ಸೆಪ್ಟಂಬರ್ ತಾರೀಖು 29ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತು ತೆಗದುಕೊಳ್ಳಲ್ಪಡುವದು. ಆದರೆ ಸ್ಟೇಟ್ ಫಾರೆಸ್ಟುಗಳಲ್ಲೂ ಮತ್ತು ಅಮೃತಮಹಲ್ ಕಾವಲುಗಳಲ್ಲೂ 1910ನೆ ಫೆಬ್ರವರಿ ತಾರೀಖು 28ರ ನಂತರ ಅಳಲೇಕಾಯಿ ಜಮಾವಣೆಗೆ ಅವಕಾಶ ಕೊಡುವದಿಲ್ಲ.

"ಜಿನಸುಗಳ ತಪಸೀಲು" ಎಂದು ಷರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕಬಹುದಾದ ಜಿನಸುಗಳನ್ನು ಜಮಾಯಿಸತಕ್ಕ ಹಕ್ಕಿಗೋಸ್ಕರ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1. ಮೈಸೂರು
2. ಶ್ರೀರಂಗಪಟ್ಟಣ
3. ನಾಗಮಂಗಲ
4. ಕೃಷ್ಣರಾಜಪೇಟೆ
5. ಮಂಡ್ಯ
6. ಮಳವಳ್ಳಿ
7. ಟಿ. ನರಸೀಪುರ
8. ನಂಜನಗೂಡು
9. ಚಾಮರಾಜನಗರ
10. ಗುಂಡ್ಲುಪೇಟೆ
11. ಹೆಗ್ಗಡದೇವನಕೋಟೆ
12. ಹುಣಸೂರು
13. ಯಡತೊರೆ

ಜಿನಸುಗಳ ತಪಶೀಲು.

1. ತಾರೇಕಾಯಿ, 2. ಸೀಗೇಕಾಯಿ, 3. ಅಂಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲಬೀಜ, 12. ಚಗಚೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮಡ್ಡಿ, 16. ಉದರಿದ ಸಾರಗದಕೊಂಬು, 17. ಗುಗ್ಗಳ, 18. ಬೇಲದಹಣ್ಣು, 19. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟ್ ವಿನಹಾ) 20. ಸೀತಾಫಲದಹಣ್ಣು, 21. ಬೆಂಡೆನಾರು, 22. ಬೇವಿನಬೀಜ, 23. ಇಪ್ಪೇಬೀಜ, 24. ಅಳಲೇಕಾಯಿ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ್ ಫಾರೆಸ್ಟ್ ಸುತ್ತು ಇರುವ ಹಳ್ಳಿಗಳ ಅಳಲೆಕಾಯಿ ಸೇರಿ ಇಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಡಗಳ್ಳಿ, 6. ನಾರಣಾಪುರ, 7. ಮಾದನಹಳ್ಳಿ, 8. ಕರ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ಮಸಂಕಪುರ, 8. ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಒಂದು ತಾಲ್ಲೂಕಿಗೂ ಬೇರೆಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಒಂದು ದರಖಾಸ್ತಿನೊಡನೆ (100) ಒಂದು ನೂರು ರೂಪಾಯಿನ ಕರೆನ್ಸಿ ನೋಟ ಠೇವಣಿ ಬಗ್ಗೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಸ್ಟರ್ ಮತ್ತು ಇನ್‌ಷೂರ್ ಮಾಡಿ ಲಕೋಟೆ ಮೇಲೆ "ಪಸಾರೆ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1909ನೆ ಇಸವಿ ಸೆಪ್ಟಂಬರ್ ತಾರೀಖು 30ರಲ್ಲಿ ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ದರಖಾಸ್ತುಗಳನ್ನು ಒಡಿಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯು ಸದರಿ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗು ಕೂಡ್ಲೆ ವಾಪಸ್ ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರರಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಖಜಾನೆಗೆ ಪಾರಖಾವಣೆ ಮಾಡಬೇಕು. ತಪ್ಪಿದಲ್ಲಿ ಮೊದಲು ದರಖಾಸ್ತು ಸಂಗಡ ಕಳುಹಿಸಿದ ಹಣವನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಂಡು ಬಾಬನ್ನು ಒಡನೆ ದುಸರೇ ಹರಾಜು ಮಾಡಿಸಲಾಗುವದು.

9. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ನಷ್ಟದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಷರತ್ತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 15 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ದುಸರಾ ಹರಾಜು ಮಾಡಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು 15 ದಿವಸಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರೆ ಅವನ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು. ಇಜಾರೆ ಮೊಬಲಗಿನ ಬಾಕಿಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಪೂರಾ ಹಣ ಪಾವತಿ ಮಾಡಿದನಂತರ ಬಾಬು ಸುಫರ್ದು ಕೊಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರ್ರೆ ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಗ್ರಾಮ ಅಮೃತ್ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ. ಮತ್ತು ಬಾವಲಿ ಕ್ಷೇತ್ರುವೆಯಲ್ಲಿರುವ ಜೇನಿಗೂ ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ವಗ್ಯೆರೆ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

16. ಇಜಾರೆದಾರರ ಕಡೆ ಕೂಲಿ ಆಳುಗಳು ಬಾಬು ಜಮಾವಣೆ ಬಗ್ಯೆ ಸ್ಟೇಟು ಫಾರೆಸ್ಟುಗಳು ಮತ್ತು ಅಮೃತಮಹಲ್ ಕಾವಲುಗಳಿಗೆ ಪ್ರವೇಶಿಸಲು ರೇಂಜ್ ಆಫೀಸರಗಳಿಂದ ಚೀಟಿಗಳನ್ನು ಪಡದುಕೊಳ್ಳಬೇಕು.

ಎಂ. ಜಿ. ರಾಮರಾವ್,

ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 6ನೆ ಸೆಪ್ಟಂಬರ್ 1909.

1900ನೆ ಮೈಸೂರು ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಿಸಿರುವ ತಪ್ಸೀಲಿನಂತೆ ನಾಟಾಗಳು ಶಿವಮೊಗ್ಗ ಡಿಸ್ಟ್ರಿಕ್ಟು ಚನ್ನಗಿರಿ ರೇಂಜು ಮ್ಯಾಳನಾಯಕನಕಟ್ಟೆ ಡಿಸ್ಟ್ರಿಕ್ಟು ಜಂಗ್ಲಿಯಲ್ಲಿ ಶಿಕ್ಕಿದವು.

ಇವುಗಳಿಗೆ ಹಕ್ಕುದಾರರು ಯಾರಾದರೂ ಇದ್ದಲ್ಲಿ ಅವರು ಖುದ್ದಾಗಿ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಏಜೆಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ರೂಬರೂಬು ಹಾಜರಾಗಿ ಅವರ ಹಕ್ಕನ್ನ ನಿರ್ಧರಪಡಿಸಿಕೊಟ್ಟು ಮಾಲು ತೆಗದುಕೊಂಡು ಹೋಗಬಹುದು. ತಪ್ಪಿದರೆ ಸದರಿ ಬಲ್ಲುಗಳನ್ನ ಸರ್ಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ. ಮತ್ತು ಯಾವಹಕ್ಕೂ ನಂತರ ಅಂಗೀಕರಿಸಲ್ಪಡಲಾರದು.

ಜಾತಿ.	ಸಂಖ್ಯೆ.	ಸಲೆ ಅಡಿ.	ದೊರತ ಸ್ಥಳ.	ಷರಾ.
ಸಾಗುವಾನಿ ...	17	33½	ಮ್ಯಾಳನಾಯಕನಕಟ್ಟೆ ಡಿಸ್ಟ್ರಿಕ್ಟು ಜಂಗಲ್.	ತಿಳಿನೀರುಕಟ್ಟೆ ಪಟೇಲ್ ಶೇಷೈಯ್ಯಂಗಾರ್ ವಶದಲ್ಲಿ ಇದೆ.

ಎ. ಪೊನ್ನುಸಾಮಿ ಮೊದಲಿಯಾರ್,

ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 28ನೆ ಆಗಸ್ಟು 1909.

ಮೈಸೂರು ತಾಲ್ಲೂಕು ವರುಣಾದ ಹೋಬಳಿಗೆ ಸೇರಿದ ಜೋಡಿ ಹೊಸಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮೈಸೂರು ತಾಲ್ಲೂಕು ಕಛೇರಿಯಲ್ಲಿ 1909ನೆ ಅಕ್ಟೋಬರು ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪ್ಸೀಲ್ ಬಗ್ಗೆ ಸನ 1909ನೆ ಇಸವಿ ಸೆಪ್ಟಂಬರ್ ತಾರೀಖು 9ನೆ ಮರ್ಕೂಂ 36ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 724ನೆ ನಂಬರ್ ಪೇಜು ನೋಡತಕ್ಕದ್ದು.

ಕೆ. ಚಾಂಡಿ,

ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ಸರ್ 1909ನೆ ಇಸವಿ ಆಗಸ್ಟ 21ನೆ ತಾರೀಖಿನಲ್ಲಿ ನಡೆದ ಮೈಸೂರು ಡಿಸ್ಟ್ರಿಕ್ಟ ಬೋರ್ಡು ಪ್ರೊಸೀಡಿಂಗ್ಸ್.

ಹಾಜರು.

1. ಕೆ. ಚಾಂಡಿ, ಎಸ್ಕ್ವಯರ್, ಬಿ.ಎ., ಪ್ರೆಸಿಡೆಂಟರು.

ಎಕ್ಸ್ ಅಫಿಷಿಯೋ ಮೆಂಬರುಗಳು.

2. ಟಿ. ಕೆ. ಸುಂದರರಾಜೈಯ್ಯಂಗಾರ್, ಎಸ್ಕ್ವಯರ್, ನಂಜನಗೂಡು ಸಬ್ ಡಿವಿಜನ್ ಆಫೀಸರು.
3. ಜಿ. ಬಿ. ಹೆಬ್ಲಿಕಾರ್, ಎಸ್ಕ್ವಯರ್, ಬಿ.ಎ. ಎಲ್.ಎಲ್.ಬಿ., ಮೈಸೂರು ಸಬ್-ಡಿವಿಜನ್ ಆಫೀಸರು.
4. ಸಿ. ನಾರಾಯಣರಾವ್, ಎಸ್ಕ್ವಯರ್, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರು.
5. ಎಸ್. ವೆಂಕಟರಂಗಂ, ಎಸ್ಕ್ವಯರ್, ಬಿ.ಎ.,ಬಿ.ಎಲ್., ಡಿಸ್ಟ್ರಿಕ್ಟ ಟ್ರೆಜರಿ ಆಫೀಸರು ಮತ್ತು ವೈಸ್ ಪ್ರೆಸಿಡೆಂಟರು.
6. ಟಿ. ಎಸ್. ಶೇಷಯ್ಯಂಗಾರ್, ಎಸ್ಕ್ವಯರ್, ಮೈಸೂರು ಡಿವಿಜನ್ ಅಫಿಷಿಯೇಟಿಂಗ್ ಎಕ್ಸಿಕ್ಯುಟಿವ್ ಇಂಜಿನಿಯರ್.
7. ಟಿ. ಎಸ್. ನಂಜಪ್ಪ, ಎಸ್ಕ್ವಯರ್, ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರು.

ಗೈರ್ ಹಾಜರು.

8. ಎಂ. ರಾಮಸ್ವಾಮಯ್ಯ, ಎಸ್ಕ್ವಯರ್, ಬಿ. ಎ. ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್.

ನಾನ್ ಅಫಿಷಿಯಲ್ ಮೆಂಬರುಗಳು.

I. ಲೋಕಲ್ ಬೋರ್ಡು ರೂಲ್ಸ್ 8ನೆ ಪ್ಯಾರಾದ (d) ಕ್ಲಾಸ್ ಮೇರೆ—

ಹಾಜರು.

9. ಮಿ|| ಲಿಂಗೇಗೌಡರು, ಮೈಸೂರು.
10. ,, ಉಂಡವಾಡಿ ನರಸಿಂಗರಾಯರು, ಹುಣಸೂರು.
11. ,, ಪಡುವಕೋಟೆ ಸುಬ್ಬರಾಯರು, ಹೆಗ್ಗಡದೇವನಕೋಟೆ.
12. ,, ಗುರುಕಾರ್ ನಂಜಪ್ಪನವರು, ಗುಂಡ್ಲುಪೇಟೆ.
13. ,, ಶಾಮೈಯ್ಯಂಗಾರು, ಚಾಮರಾಜನಗರ.
14. ,, ಟಿ. ಎಸ್. ಕೃಷ್ಣರಾಯರು, ನಂಜನಗೂಡು.
15. ,, ಬಿ. ನರಸಿಂಗರಾಯರು, ಶ್ರೀರಂಗಪಟ್ಣ.
16. ,, ಶಂಕರಯ್ಯನವರು, ಮಳವಳ್ಳಿ.
17. ,, ಚಂದ್ರಶೇಖರೈಯ್ಯನವರು, ನಾಗಮಂಗಲ.
18. ,, ಎಂ. ಜಿ. ಶಾಮೈಯ್ಯಂಗಾರು, ಫ್ರೆಂಚ್‌ರಾಕ್ಸ್.
19. ,, ಗಂಜಾಂ ವೆಂಕಟರವಣಶೆಟ್ಟರು, ಟಿ. ನರಸೀಪುರ.
20. ,, ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ.

ಗೈರ್ ಹಾಜರ್.

21. ,, ಬಸರಾಳ್ ಲಿಂಗಯ್ಯನವರು, ಮಂಡ್ಯ.
22. ಖಾಲಿ ಎಡತೊರೆ.

ಹಾಜರು.

II. ಲೋಕಲ್ ಬೋರ್ಡು ರೂಲ್ಸ್ 8ನೆ ಪ್ಯಾರಾದ (e) ಕ್ಲಾಸ್ ಮೇರೆ—

23. ಮಿ|| ವಿ. ರಾಘವಾಚಾರ್ರು, ಅಡ್ವೋಕೇಟ್, ಮೈಸೂರು.
24. ,, ಬಳೆ ಬಸವಣ್ಣನವರು, ಜಹಗೀರ್ದಾರು, ಮೈಸೂರು.
25. ,, ಅಂಬಳೆ ಅಣ್ಣೈಯ್ಯಪಂಡಿತರು, ಮೈಸೂರು.
26. ,, ಹಾರ್ನಹಳ್ಳಿ ಚಿಕ್ಕಸುಬ್ಬರಾಯರು, ಹುಣಸೂರು.
27. ,, ವೆಂಕಟಶಾಮೈಯ್ಯನವರು, ಚಾಮರಾಜನಗರ.
28. ,, ಕೃಷ್ಣಮಾಚಾರ್ಯರು, ಅಹೋಬಲಮಠದ ಏಜಂಟರು, ಟಿ. ನರಸೀಪುರ ತಾಲ್ಲೂಕು.
29. ,, ಟಿ. ಎ. ವಿಾರ್‌ಕಮರುದ್ದೀನ್ ಅಲ್ಲೀಖಾನ್ ಸಾಹೇಬರು, ಅರಮನೆ ಮುಸಾಹೇಬ್, ಮೈಸೂರು.
30. ,, ರೆವರೆಂಡ್ ಡಿ. ಎಫ್. ಲಾರೆಂಟ್ ಸಾಹೇಬರು, ಕ್ಯಾತಲಿಕ್ ಪ್ರೀಸ್ಟ್, ಗಂಜಾಂ.

ಟಿ. ನರಸೀಪುರ, ಮಳವಳ್ಳಿ ತಾಲ್ಲೂಕುಗಳ ಅಮಲ್ದಾರರುಗಳು ಹೊರತು ಬಾಕೀ ತಾಲ್ಲೂಕುಗಳ ಅಮಲ್ದಾರರುಗಳೆಲ್ಲರೂ ಹಾಜರಿದ್ದರು.

I. ಕೆಳಗೆ ಉದಹರಿಸಿರುವ ಗವರ್ನಮೆಂಟ್ ಪ್ರೊಸೀಡಿಂಗ್ಸ್‌ಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1) ಮಿಡ್‌ವೈಫ್ ಗಳಿಗೆ ಮಾಹೆಯಾನಾ 15 ರೂಪಾಯಿನಂತೆ ತಲಬು ನಿಷ್ಕರ್ಷೆಯಿಂದ ಸಾದರಾಗಿರುವ 1909ನೆ ಇಸವಿ ಜೂನ್ 21ನೆ ದುರ್ರುಂ ಗವರ್ನಮೆಂಟು ಹುಕುಂ ನಂಬರು 12819-29—ಎಲ್. ಬಿ. 55-93.

(2) ಬೋರ್ಡಿನವರ ಅಭಿಪ್ರಾಯದಂತೆ ಮೇಲುಕೋಟೆಯಲ್ಲಿ ಲೋಕಲ್ ಫಂಡ್ ಡಿಸ್ಪೆನ್ಸರಿ ಇಡಲು ಹಣ ಒದಗುವ ವರಿಗೂ ಒಪ್ಪುವದಕ್ಕಾಗುವದಿಲ್ಲವೆಂದು ಸಾದರಾಗಿರುವ 1909ನೆ ಇಸವಿ ಜುಲೈ 9ನೆ ಮರ್ಸ್ಕಂ ಗವರ್ನ್ಮೆಂಟ ಹುಕುಂ ನಂಬರು 322-4—ಮೆಡಿ. 162—08-8.

(3) ಹುಣಸೂರು ತಾಲ್ಲೂಕು ಗಾವಡಗೆರೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯದಂತೆ ಪ್ರತಿ ವಾರವೂ ಸಂತೆ ನಡೆಯಲು ಮಂಜೂರ್ಮಾಡಿರುತ್ತೇವೆಂದು ಸಾದರಾಗಿರುವ 1909ನೆ ಜುಲೈ 10ನೆ ಮರ್ಸ್ಕಂ ಗವರ್ನ್ಮೆಂಟ ಹುಕುಂ ನಂಬರು 352-4—ಲೋ. ಬೋ. 417-08-2.

(4) ಮಂಡ್ಯ ತಾಲ್ಲೂಕು ಬಸರಾಳು ಗ್ರಾಮದಲ್ಲಿ ಒಬ್ಬ ನೇಟೀವ್ ಪಂಡಿತನನ್ನು ಇಡಲು ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯವನ್ನು ಮಂಜೂರ್ಮಾಡಲು ಆಗಲಾರದೆಂದು ಸಾದರಾಗಿರುವ 1909ನೆ ಜುಲೈ 12ನೆ ಮರ್ಸ್ಕಂ ಗವರ್ನ್ಮೆಂಟು ಹುಕುಂ ನಂಬರು 428—ಮೆಡಿ. 263-08-2.

(5) ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ದನಗಳ ಪ್ರದರ್ಶನ ಕಾಲದಲ್ಲಿ ದನಗಳ ರಖಂವಾರು ಮತ್ತು ಬಹು ಮಾನದ ಸ್ಕೇಲನ್ನು ತಿದ್ದುಪಡಿಮಾಡಿ ಸಾದರಾಗಿರುವ 1909ನೆ ಜುಲೈ 4ನೆ ಮರ್ಸ್ಕಂ ಗವರ್ನ್ಮೆಂಟು ಹುಕುಂ ನಂಬರು 511-3—ಲೋ. ಬೋ. 347-08-4.

(6) ಟಿ. ನರಸೀಪುರ ತಾಲ್ಲೂಕು ಬನ್ನೂರು ಗ್ರಾಮದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯದಂತೆ ಒಬ್ಬಳು ಮಿಡ್ ವೈಫನ್ನು ಇಟ್ಟುಕೊಳ್ಳುವದಕ್ಕೆ ಮಂಜೂರ್ಮಾಡಲು ಆಗುವದಿಲ್ಲವೆಂದು ಸಾದರಾಗಿರುವ 1909ನೆ ಜುಲೈ 20ನೆ ಮರ್ಸ್ಕಂ ಗವರ್ನ್ಮೆಂಟು ಹುಕುಂ ನಂಬರು 748-9—ಮೆಡಿ. 274-08-2.

II. ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಲೋಕಲ್ ಫಂಡು ಬ್ರ್ಯಾಂಚಿಗೆ ಟೈಪ್ ರೈಟರ್ ಮೆಷೀನನ್ನು ಕೊಂಡುಕೊಳ್ಳಲು ಡಿಸ್ಟ್ರಿಕ್ಟ್ ಬೋರ್ಡಿನವರು ಅಭಿಪ್ರಾಯಪಡುತ್ತಾರೆಯೇ ಎಂದು ಗವರ್ನ್ಮೆಂಟಿನಿಂದ ಸಾದರಾದ 1909ನೆ ಮಾರ್ಚಿ 5ನೆ ಮರ್ಸ್ಕಂ 8662—ಲೋ. ಬೋ. 255-08-4ನೆ ನಂಬರು ಡಾಕೆಟ್ ಓದಲಾಯಿತು.

ಟೈಪ್ ರೈಟರ್ ಮೇಷೀನ್ ಅತ್ಯವಶ್ಯಕವಾದ್ದರಿಂದ ಅದರ ಖರ್ಚನ್ನು ಬೋರ್ಡಿನವರು ವಹಿಸುವಂತೆ ತೀರ್ಮಾನವಾಯಿತು.

III. ಹುಚ್ಚು ಹಿಡಿದ ಪ್ರಾಣಿಗಳಿಂದ ಕಚ್ಚಲ್ಪಟ್ಟ ಬಡವರನ್ನು ಕೂನೂರಿನಲ್ಲಿರುವ ಪ್ಯಾಸ್ಟರ್ ಇನ್ಸ್ಟಿಟ್ಯೂಟಿಗೆ ಕಳುಹಿಸಲು ತಗಲುವ ಖರ್ಚನ್ನು ಬೋರ್ಡಿನವರು ವಹಿಸುತ್ತಾರೆಯೇ? ಅದನ್ನು ತಿಳಿಸಬೇಕೆಂದು ಗವರ್ನ್ಮೆಂಟಿನಿಂದ ಸಾದರಾಗಿರುವ 1909ನೆ ಜೂನ್ 10ನೆ ಮರ್ಸ್ಕಂ 12402-12—ಮೆಡಿ. 2-08ನೆ ನಂಬರು ಆರ್ಡರ್ ಬಂದಿದ್ದರಮೇಲೆ ಸದರೀ ಖರ್ಚನ್ನು ಬೋರ್ಡಿನವರು ವಹಿಸುವಂತೆ ತೀರ್ಮಾನವಾಯಿತು.

IV. ಹುಣಸೂರು-ಎಡತೊರೆ ರಸ್ತೆ ರಿಪೇರಿ ಕಾಮಗಾರಿ ಬಗ್ಯೆ 1,053 ರೂಪಾಯಿಗೆ ಅಂದಾಜಾ ತಯಾರಾಗಿ ಕಳುಹಿಸಿರುವ ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನೀಯರ್‌ರವರ 1909ನೆ ಜುಲೈ 30ನೆ ಮರ್ಸ್ಕಂ 867ನೆ ನಂಬರು ಡಾಕೆಟ್ ಓದಲಾಯಿತು.

ಅಂದಾಜಾ ಮಂಜೂರು ಮಾಡಲಾಯಿತು.

V. ಚಾಮುಂಡೀ ಬೆಟ್ಟದ ರಸ್ತೆ ಪಕ್ಕದಲ್ಲಿರುವ ಕುರುಬಾರಹಳ್ಳಿ ಕೆರೆ ಏರಿಯನ್ನು ಎತ್ತರಿಸಲು 1,938 ರೂಪಾಯಿಗೆ ತಯಾರಾದ ಅಂದಾಜಾದಂತೆ ಬೋರ್ಡಿನವರು ಫಂಡಿನಿಂದ ಗ್ರಾಂಟು ಕೊಡಲು ಆಗುತ್ತದೆಯೇ ಎಂದು ಕೇಳಿರುವ ಮೈಸೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನೀಯರವರ 1909ನೆ ಆಗಸ್ಟ್ 7ನೆ ಮರ್ಸ್ಕಂ 894ನೆ ನಂಬರು ಡಾಕೆಟ್ ಓದಲಾಯಿತು.

ಸದರೀ ಖರ್ಚಿನ ಯಾವ ಭಾಗವನ್ನು ಬೋರ್ಡಿನವರು ವಹಿಸಲಾಗಲಾರದೆಂದು ತೀರ್ಮಾನವಾಯಿತು.

VI. ಮೈಸೂರು ತಾಲ್ಲೂಕು ಚಟ್ಟನಹಳ್ಳಿಗೂ ಹೆಗ್ಗಡದೇವನಕೋಟೆ ತಾಲ್ಲೂಕು ಭೀಮನಹಳ್ಳಿಗೂ ಬಂಡಿದಾರಿ ತಯಾರಾಗಬೇಕೆಂದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ 1909ನೆ ಆಗಸ್ಟು 3ನೆ ಮರ್ಸ್ಕಂ 115ನೆ ನಂಬರು ಡಾಕೆಟ್ ಓದಲಾಯಿತು.

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಅಂದಾಜಾ ಪಟ್ಟಿ ತಯಾರುಮಾಡಿ ಬೋರ್ಡಿನವರ ಆಲೋಚನೆಗೆ ಕಳುಹಿಸಬೇಕೆಂದು ತೀರ್ಮಾನವಾಯಿತು.

VII. ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ಒಂದು ರೆಸ್ಟ್‌ಹೌಸ್ ತಯಾರೀ ಬಗ್ಯೆ ತಗಲುವ ಖರ್ಚಿನ ವಿಷಯವಾಗಿ 1909ನೆ ಮೇ 25ನೆ ಮರ್ಸ್ಕಂನ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರ 286ನೆ ನಂಬರು ಯಾದಿ ಓದಲಾಯಿತು.

ಅಂದಾಜಾವಿನ ಅರ್ಧ ಖರ್ಚನ್ನು ಮುಜರಾಯಿ ಫಂಡಿನಿಂದ ಕೊಡಲು ಬೋರ್ಡಿನವರ ಅಭಿಪ್ರಾಯಕ್ಕೆ ಇಷ್ಟಪಟ್ಟಲ್ಲಿ ಬಾಕೀ ಅರ್ಧಮೊಬಲಗನ್ನು ಬೋರ್ಡಿನವರು ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ವಹಿಸುವದಾಗಿ ತೀರ್ಮಾನವಾಯಿತು.

VIII. ಕೃಷ್ಣರಾಜಪೇಟೆ ತಾಲ್ಲೂಕು ಶಿಂದಘಟ್ಟದಲ್ಲಿ ಹಕೀಂಗೆ ಮಾಹೇಯಾನಾ ಅಲೋವೆನ್ಸ್ 5 ರೂಪಾಯಿನಿಂದ 10 ರೂಪಾಯಿಗೆ ಜಾಸ್ತಿ ಮಾಡಬೇಕೆಂದು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫಿಸರವರ 1909ನೆ ಮೇ 26ನೆ ಮರ್ಸ್ಕಂನ 289ನೆ ನಂಬರು ಯಾದಿ ಓದಲಾಯಿತು.

ಬೋರ್ಡಿನವರು ಅವರ ಅಭಿಪ್ರಾಯವನ್ನು ಸದ್ಯಕ್ಕೆ ಮನ್ನಾ ಮಾಡತಕ್ಕದ್ದೆಂದು ತೀರ್ಮಾನವಾಯಿತು.

IX. ಹೆಗ್ಗಡದೇವನಕೋಟೆ ತಾಲ್ಲೂಕು ಮಗ್ಗೆ ಗ್ರಾಮದಲ್ಲಿ ಒಬ್ಬ ನೇಟಿವ್ ಪಂಡಿತನನ್ನು ಇಡಲು ಶಿಫಾರಸ್ಸಾಗಿ ಬಂದ 1909ನೆ ಮೇ 10ನೆ ಮರ್ಸ್ಕಂನ ಹೆಗ್ಗಡದೇವನಕೋಟೆ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಓದಲಾಯಿತು.

ಹಣ ಸಾಲದ್ದರಿಂದ ಶಿಫಾರಸ್ಸಿಗೆ ಅವಕಾಶವಿಲ್ಲವೆಂದು ತೀರ್ಮಾನವಾಯಿತು.

X. ಯಡತೊರೆ ತಾಲ್ಲೂಕು ಮಿರಲೆ ಗ್ರಾಮದಲ್ಲಿರುವ ಕೆರೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಸೇರಿಸಿಕೊಳ್ಳಬೇಕೆಂಬ ಮೈಸೂರು ಸಬ್ ಡಿವಿಜನ್ ಆಫಿಸರವರ 1909ನೆ ಮೇ 31ನೆ ಮರ್ಸ್ಕಂನ 263ನೆ ನಂಬರು ಯಾದಿ ಓದಲಾಯಿತು.

ಬೋರ್ಡಿನವರು ಕೆರೆಯನ್ನು ಸುಫರ್ದು ತೆಗದುಕೊಳ್ಳುವಂತೆ ತೀರ್ಮಾನವಾಯಿತು.

XI. ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ಒಬ್ಬ ಹಕೀಂನನ್ನು ಇಡಬೇಕೆಂಬ ಮೈಸೂರು ಸಬ್ ಡಿವಿಜನ್ ಆಫಿಸರವರ 1909ನೆ ಮೇ 1ನೆ ಮುರ್ಕುಂನ 1035ನೆ ನಂಬರು ಯಾದಿ ಓದಲಾಯಿತು.

ಚುಂಚನಕಟ್ಟೆಯ ಸುತ್ತಮುತ್ತ ಗ್ರಾಮಗಳು ಬಹಳ ಅನಾರೋಗ್ಯಸ್ಥಿತಿಯಲ್ಲಿರುವದ್ದರಿಂದ ಅಲ್ಲಿ ಒಬ್ಬ ಹಕೀಂನನ್ನು ಇಟ್ಟುಕೊಳ್ಳುವಂತೆಯೂ ಹಕೀಂನ ಅಲೋವೆನ್ಸ್ ಮಾಹೆಯಾನಾ 15 ರೂಪಾಯಿನಂತೆ ನಿಷ್ಕರ್ಷೆಮಾಡಿ ಮುಜರಾಯಿ ಡಿಪಾರ್ಟುಮೆಂಟನವರು 5 ರೂಪಾಯಿ ಕೊಡಲು ಇಷ್ಟಪಟ್ಟಲ್ಲ ಬೋರ್ಡಿನವರು 10 ರೂಪಾಯಿ ಕೊಡುವದಾಗಿಯೂ ತೀರ್ಮಾನವಾಯಿತು.

XII. ಶ್ರೀರಂಗಪಟ್ಟಣದ ಆಸ್ಪತ್ರೆ ಕಟ್ಟಡವನ್ನು ಬಿಡಾವಣೆ ಮಾಡಲು 1909ನೆ ಆಗಸ್ಟ 7ನೆ ಮುರ್ಕ್ಕುಂನ ಮಿ॥ ಬಿ. ನರಸಿಂಗರಾಯರ ಅಭಿಪ್ರಾಯ ಓದಲಾಯಿತು.

ಹಾಲಿ ಕಟ್ಟಡವು ಸಾಕಾಗುವದಿಲ್ಲವೆಂದು ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು ತಿಳಿಯಪಡಿಸಿದರ ಮೇಲೆ ಅವರಅಭಿಪ್ರಾಯದಂತೆ ಒಂದು ವರಾಂಡವೂ ಎರಡು ಕೋಣೆಗಳೂ ಸಹಾ ಜಾಸ್ತಿ ಮಾಡಲು ತೀರ್ಮಾನವಾಯಿತು. ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರವರು ಅಂದಾಜಾ ಮತ್ತು ನಕ್ಷೆಯನ್ನು ಎಗ್ಜಿಕ್ಯೂಟಿವ್ ಇಂಜನೀಯರ್‌ರವರಿಂದಲೇ ತಯಾರ್ಮಾಡಿಸಲು ಒಪ್ಪಿರುತ್ತಾರೆ.

XIII. ಮಂಡ್ಯ ತಾಲ್ಲೂಕು ಲಿಂಗರಾಜ ಛತ್ರದ ಭಾವಿ ಕಾಮಗಾರಿಗೆ ಕಲ್ಲುಗಳನ್ನು ಉಪಯೋಗಿಸಿದ ಕಂಟ್ರಾಕ್ಟುದಾರನಿಗೆ ಮುವ್ವತ್ತು ರೂಪಾಯಿನ ಬಹುಮಾನಕೊಡಲು ಶಿಫಾರಸ್ಸುಮಾಡಿರುವ 1909ನೆ ಆಗಸ್ಟ ಮಾಹೆ ೩ ಮಂಡ್ಯ ತಾಲ್ಲೂಕು ಬೋರ್ಡಿನವರ ತೀರ್ಮಾನ ಓದಲಾಯಿತು.

ಶಿಫಾರಸ್ಸು ಮಂಜೂರ್ಮಾಡತಕ್ಕದ್ದೆಂದು ತೀರ್ಮಾನವಾಯಿತು.

XIV. ಮಂಡ್ಯ ತಾಲ್ಲೂಕು ಮದ್ದೂರು ಗ್ರಾಮದಲ್ಲಿರುವ ನೇಟಿವ್ ಪಂಡಿತನಿಗೆ ಮಾಹೆಯಾನಾ 5 ರೂಪಾಯಿನಿಂದ 10 ರೂಪಾಯಿನಂತೆ ಜಾಸ್ತಿ ಅಲೋವೆನ್ಸಿಗೆ ಶಿಫಾರಸ್ಸು ಮಾಡಿರುವ 1909ನೆ ಆಗಸ್ಟ ಮಾಹೆ ಬಾಬತು ಮಂಡ್ಯ ತಾಲ್ಲೂಕು ಬೋರ್ಡಿನವರ ತಿರ್ಮಾನವನ್ನು ಓದಲಾಯಿತು.

ಶಿಫಾರಸ್ಸಿನಂತೆ ಜಾಸ್ತಿ ಅಲೋವೆನ್ಸ್ 1910ನೆ ಜುಲೈ 1 ರಿಂದ ಮಂಜೂರ್ಮಾಡತಕ್ಕದ್ದೆಂದು ತೀರ್ಮಾನವಾಯಿತು.

XV. ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದಲ್ಲಿ ಮುಸಾಫರ್ ಬಂಗ್ಲಾ ರಿಪೇರಿ ಬಗ್ಗೆ 650 ರೂಪಾಯಿನ ಅಂದಾಜಾವನ್ನು ಓದಲಾಯಿತು.

ಅಂದಾಜಾ ಸ್ಯಾಂಕ್ಷನ್ ಮಾಡತಕ್ಕದ್ದೆಂದು ತೀರ್ಮಾನವಾಯಿತು.

XVI. ಕಳೆದಸಾಲಿನಲ್ಲಿ ನೀಮುಕಲಾವಾಗಿ ನಿಂತು ಚಾಲ್ತಿ ಸಾಲಿನಲ್ಲಿ ರೆವಿನ್ಯೂ ಡಿಪಾರ್ಟುಮೆಂಟನವರಿಂದ ನಡಿಯಬೇಕಾದ ಕಾಮಗಾರಿಗಳ ಪಟ್ಟಿಯನ್ನು ಓದಲಾಯಿತು.

ಕಾಮಗಾರಿಗಳನ್ನು ಪೂರೈಸಬೇಕೆಂತಲೂ ಸದರೀ ಕಾಮಗಾರಿಗಳಿಗೆ ತಕ್ಕ ಫಂಡನ್ನು ಮಂಜೂರ್ಮಾಡಲು ಗವರ್ನಮೆಂಟನವರ ಅಪ್ಪಣೆಯನ್ನು ಪಡೆಯಬೇಕೆಂತಲೂ ತೀರ್ಮಾನವಾಯಿತು.

XVII. ಮಲಪೂರು ಲೀಸ್ಸಿನಲ್ಲಿ ಕಂಡ ಅಂದಾಜಾಗಳನ್ನು ಸಮ್ಮಂಧಪಟ್ಟ ತಾಲ್ಲೂಕು ಬೋರ್ಡಿನವರ ಒಪ್ಪಿಗೆಯಂತೆ ಮಂಜೂರು ಮಾಡಲಾಯಿತು.

XVIII. 1909ನೆ ಫೆಬ್ರವರಿ 18ರ ಲಾಗಾಯಿತು ಚಾಲ್ತೀ ವರಿಗಿನ ತಾಲ್ಲೂಕು ಬೋರ್ಡಿನವರ ಪ್ರೊಸೀಡಿಂಗ್ಸ್‌ಗಳನ್ನು ಓದಿ ರಿಕಾರ್ಡು ಮಾಡಲಾಯಿತು.

XIX. 1909ನೆ ಇಸವಿ ದಸರಾ ರಿಪ್ರಸೆಂಟೇಟೀವ್ ಸಮಾಜಕ್ಕೆ ಮೆಸ್ಸರ್ಸ್॥ ಅಂಬಳೆ ಅಣ್ಣಯ್ಯ ಪಂಡಿತರು, ಲಿಂಗೇಗವುಡರುಸಹಾ ಚುನಾಯಿಸಲ್ಪಟ್ಟರು.

XX. 1909ನೆ ಇಸವಿ ಡಿಸೆಂಬರು 11ನೆ ಶನಿವಾರ ಮಧ್ಯಾಹ್ನ 2 ಘಂಟೆಗೆ ಬರುವ ಮೀಟಿಂಗನ್ನು ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಚಾಂಡಿ,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

1909ನೆ ಇಸವಿ ಆಗಸ್ಟು ಮಾಹೆ 9ನೆ ತಾರೀಖಿನಲ್ಲಿ ನಡದ ಹಾಸನ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್.

ಹಾಜರು.

ಪಿ. ಆರ್. ಡಬ್ಲ್ಯು. ವೆದರಾಲ್, ಎಸ್ಕ್ವೈಯರ್, ಪ್ರೆಸಿಡೆಂಟ್.

ನರಸಿಂಗರಾವ್ ಪೂರ್ಣಯ್ಯ, ಎಸ್ಕ್ವೈಯರ್, ಬಿ.ಎ., ಟ್ರೆಜರಿ ಅಸಿಸ್ಟೆಂಟ ಕಮಿಷನರ್ ಮತ್ತು ವೈಸ್ ಪ್ರೆಸಿಡೆಂಟ್.

ಸಿ. ದೇವರಾಜ ಅರಸ್, ಎಸ್ಕ್ವೈಯರ್, ಜನರಲ್ ಅಸಿಸ್ಟೆಂಟ್ ಕಮಿಷನರವರು.

ಎ. ಕೃಷ್ಣಸ್ವಾಮಿ ಐಯ್ಯಂಗಾರ್, ಎಸ್ಕ್ವೈಯರ್, ಬಿ.ಎ., ಅಸಿಸ್ಟೆಂಟ್ ಕಮಿಷನರವರು, ಸಕಲೇಶಪುರ.

ವಿ. ಅಯ್ಯಾಸ್ವಾಮಿ ಅಯ್ಯರ್, ಎಸ್ಕ್ವೈಯರ್, ಬಿ.ಎ., ಬಿ.ಸಿ.ಇ., ಹಾಸನ ಡಿವಿಜನ್ ಎಗ್ಜಿಕ್ಯೂಟಿವ್ ಇಂಜಿನಿಯರವರು

ಸಿ. ರಾಜಾರಾಮರಾವ್, ಎಸ್ಕ್ವೈಯರ್, ಎಲ್.ಎಂ.ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.

ಎಂ. ಕೆ. ತಿರುಮಲಾಚಾರ್ಯರು, ಎಸ್ಕ್ವೈಯರ್, ಬಿ.ಎ., ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರವರು, ಹಾಸನ ಡಿಸ್ಟ್ರಿಕ್ಟು.

ನಾನ್ ಅಫಿಷಿಯಲ್ ಮೆಂಬರುಗಳು.

ಮಿ|| ಲಕ್ಷ್ಮೀನರಸಿಹ್ಮಾಚಾರ್ಯರು, ಹಾಸನ.
,, ಕೇಣಿ ಮಹದೇವಪ್ಪನವರು, ಹಾಸನ.
,, ಡಬ್ಲ್ಯು. ಎಲ್. ಕ್ರಾಫರ್ಡ್ ಸಾಹೇಬರು, ಮಂಜರಾಬಾದ್.
,, ಪುಟ್ಟೇಗೌಡ ಉರುಫ್ ನಂಜೇಗೌಡರು, ಮಂಜರಾಬಾದು.
,, ಕ. ತಮ್ಮಯ್ಯನವರು, ಬೇಲೂರು.
,, ಹಬೀಬುಲ್ಲಾಸಾಬರು, ಬೇಲೂರು.
,, ಹ. ದಾಸಪ್ಪನವರು, ಅರಸೀಕೆರೆ.
,, ಕೆಂಚರಾಯಶೆಟ್ಟರು, ಅರಸೀಕೆರೆ.
,, ಧರಣಯ್ಯಶೆಟ್ಟರು, ಚನ್ನರಾಯಪಟ್ಣ.
,, ನಂಜಣ್ಣನವರು, ಚನ್ನರಾಯಪಟ್ಣ.
,, ವೆಂಕಟರಾಮಯ್ಯನವರು, ಹೊಳೇನರಸೀಪುರ.
,, ಸೂರ್ಯನಾರಾಯಣಶೆಟ್ಟರು, ಅರಕಲಗೂಡು.
,, ಅಬ್ದುಲ್ಲಾಸಾಬರು, ಅರಕಲಗೂಡು.
,, ಮಹಲಿಂಗೆಗೌಡರು, ಅರಕಲಗೂಡು.

ಗೈರ್ ಹಾಜರು

,, ಕೊ. ರಾಮಶೆಟ್ಟರು, ಹೊಳೇನರಶೀಪುರ.
,, ತಿರುನಾರಣೈಯ್ಯಂಗಾರ್ಯರು, ಚನ್ನರಾಯಪಟ್ಣ.

ಅರಕಲಗೂಡು ತಾಲ್ಲೂಕು ಅಮಲ್ದಾರು ಹೊರ್ತು ಬಾಕಿ ಅಮಲ್ದಾರುಗಳು ಡೆ|| ಅಮಲ್ದಾರು ಸಹಾ ಬಂದಿದ್ದರು.

I. 1909ನೆ ಸಾಲ್ ದಸರಾ ಕ್ಯಾಲೆಂಡರ್ ಓದಲಾಯಿತು. ಮೈಸೂರಿನಲ್ಲಿ ನಡಿಯಬೇಕಾಗಿರುವ ದಸರಾ ಪ್ರಜಾಪ್ರತಿನಿಧಿ ಸಭೆಗೆ ಈ ಡಿಸ್ಟ್ರಿಕ್ಟು ಬೋರ್ಡಿನ ಪರವಾಗಿ ಇಬ್ಬರು ನಾನ್ ಅಫಿಷಿಯಲ್ ಮೆಂಬರುಗಳನ್ನು ಚುನಾವಣೆಮಾಡಿದ್ದು.

ತೀರ್ಮಾನ—ಹಾಲಿ ಕ್ರಮವಾಗಿ ಚುನಾಯಿಸಲ್ಪಟ್ಟದ್ದರಲ್ಲಿ ಮ|| ರಾ|| ಕ. ತಮ್ಮಯ್ಯನವರು ಮತ್ತು ಸೂರ್ಯನಾರಾಯಣ ಶೆಟ್ಟರು ಈ ಬೋರ್ಡಿನ ಪರವಾಗಿ ಬರುವ ದಸರಾ ಸಭೆಗೆ ಹೋಗತಕ್ಕದ್ದೆಂದು ತೀರ್ಮಾನಿಸಲಾಯಿತು.

II. ಹುಚ್ಚುನಾಯಿ ಮುಂತಾದ ಮೃಗಗಳಿಂದ ಕಡಿಯಲ್ಪಟ್ಟವರನ್ನು ಇಲಾಜು ಬಗ್ಯೆ ಕೂನೂರಿಗೆ ಕಳುಹಿಸಲು ತಗಲುವ ಲಾಗೋಡನ್ನು ಇಂಥಾವರು ಮ್ಯುನಿಸಿಪಾಲಿಟಿಗಳಲ್ಲಿದ್ದರೆ, ಮ್ಯುನಿಸಿಪಾಲಿಟಿ ಹಣದಿಂದಲೂ, ಬೇರೆ ಕಡೆಗಳಲ್ಲಿ ಇದ್ದರೆ, ಡಿಸ್ಟ್ರಿಕ್ಟು ಫಂಡ್ಸಿನಿಂದಲೂ ಕೊಡತಕ್ಕ ವಿಚಾರದಲ್ಲಿ ಸದರಿ ಬೋರ್ಡುಗಳ ಅಭಿಪ್ರಾಯದೊಂದಿಗೆ ಜವಾಬು ಬೆಳಸಬೇಕೆಂತ ಮೈಸೂರು ಗವರ್ನ್ಮೆಂಟು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಂದ ತಲ್ಪಿದ 10—6—09ರ ಮರ್ಕುಂ 12402–12—ಮೆ. 2-08ನೆ ನಂಬರು ಲೆಟರ್ ಓದಲಾಯಿತು.

ಇದೇ ವಿಚಾರದಲ್ಲಿ ಹಾಸನ ಮ್ಯುನಿಸಿಪಲ್ ಕೌನ್ಸಿಲಿನ 30-7-09ರ ಮರ್ಕುಂ IIIನೆ ನಂಬರು ತೀರ್ಮಾನವನ್ನು ಓದಲಾಯಿತು.

ತೀರ್ಮಾನ—ಕೂನೂರಿಗೆ ಇಲಾಜು ಬಗ್ಯೆ ಕಳುಹಿಸಲ್ಪಡುವ ಪ್ರತಿಯೊಬ್ಬ ಬಾಯಿಲೆಯವನಿಗೂ ಮತ್ತು ಇವನ ಶುಶ್ರೂಷೆಯವನ ಖರ್ಚೆಷ್ಟಾಗಬಹುದೆಂಬದನ್ನು ತಿಳಿಸಬೇಕೆಂತ ಮ್ಯುನಿಸಿಪಲ್ ಕೌನ್ಸಿಲರವರು ಅಭಿಪ್ರಾಯಪಟ್ಟಿರುವಂತೆ ಗವರ್ನ್ಮೆಂಟಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

III. ಅರಶೀಕೆರೆಯಲ್ಲಿ ನೀರಿನ ಸರಬರಾಯಿಗೋಸ್ಕರ ತೆಗಿಯಲ್ಪಟ್ಟ ಎರಡು ಭಾವಿಗಳಿಗೆ 10,625 ರೂಪಾಯಿ ಲಾಗವಡು ತಗಲಿರುವದಾಗಿಯೂ ಈ ಮೊಬಲಗನ್ನು ಅರಸೀಕೆರೆ ಮ್ಯುನಿಸಿಪಾಲಿಟಿಯು ಕ್ಲೋಸಿಂಗ್ ಬ್ಯಾಲೆನ್ಸು ಪೈಕಿ ಕೊಡತಕ್ಕದ್ದೆಂತಲೂ ಆದರೆ, ಸದರಿ ಭಾವಿ ತೆಗಿಸತಕ್ಕ ಬಗ್ಯೆ ರೆವಿನ್ಯೂ ಕಮಿಷನರ್ ಸಾಹೇಬರವರಿಂದ ಕೊಡಲ್ಪಟ್ಟ 2,785 ರೂಪಾಯಿಗಳನ್ನು ಅರಸಿಕೆರೆ ಮ್ಯುನಿಸಿಪಾಲಿಟಿಗೆ ಜಮಾ ಕೊಡಬೇಕಾಗಿ ಕಂಟ್ರೋಲರ್ ಸಾಹೇಬರವರಿಗೆ ತಿಳಿಸಿರುವದರಿಂದ ಬಾಕಿ ಉಳಿಯುವ 7,840 ರೂಪಾಯಿಗಳನ್ನು ಮ್ಯುನಿಸಿಪಾಲಿಟಿಗೂ ಮತ್ತು ಡಿಸ್ಟ್ರಿಕ್ಟು ಬೋರ್ಡಿಗೂ ಸಹಾ ಹಂಚುವದು ಯುಕ್ತವಾಗಿ ಕಾಣುತ್ತೆಯಾಗಿ ಈ ವಿಚಾರವನ್ನು ಡಿಸ್ಟ್ರಿಕ್ಟು ಬೋರ್ಡಿನಲ್ಲಿ ಚರ್ಚಿಸಿ ಬೋರ್ಡಿನ ತೀರ್ಮಾನ ಸಹ ಡಿಸ್ಟ್ರಿಕ್ಟ ಫಂಡ್ಸಿನಿಂದ ಕೊಡಬೇಕಾಗುವ 3,920 ರೂಪಾಯಿಗಳನ್ನು ಯಾವ ಹೆಡ್ಡಿನಿಂದ ಖರ್ಚು ಹಾಕಬಹುದೆಂಬ ಬಗ್ಯೆ ರಿಪೋರ್ಟು ಅಪೇಕ್ಷಿಸಿ ಬಂದ 24-6-09ರ ಮರ್ಕುಂ 12982–4—ಮ್ಯು. 182–09-9ನೆ ನಂಬರು ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—ಅರ್ಧ ಲಾಗೋಡೆಂದರೆ 3,920 ರೂಪಾಯಿಗಳನ್ನು ಡಿಸ್ಟ್ರಿಕ್ಟು ಫಂಡ್ಸಿಗೆ ಸ್ಪೆಷಲ್ ಡಿಸ್ಟ್ರೆಸ್ ಕಾಂಟ್ರಿಬ್ಯೂಷನ್ ತರೀಕು ಕೊಡಲ್ಪಟ್ಟ ಮೊಬಲಗು ಪೈಕಿ ಉಪಯೋಗಿಸಲ್ಪಡದೆ ಇರುವ 4,208 ರೂಪಾಯಿಗಳಲ್ಲಿ ಮೇಲ್ಕಂಡ ಮೊಬಲಗನ್ನು ಕೊಡಬಹುದೆಂತ ತೀರ್ಮಾನಿಸಲಾಯಿತು.

IV. ಈ ಡಿಸ್ಟ್ರಿಕ್ಟುಗಳಲ್ಲಿರತಕ್ಕ ಡಿಸ್ಟ್ರಿಕ್ಟು ಫಂಡ ಬಾಬತು ಟೋಲ್ ಗೇಟುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಹಕ್ಕನ್ನು ಪ್ರತಿವರುಷವು ಹರಾಜು ಮಾಡಿಸುವದಕ್ಕೆ ಬದಲಾಗಿ ಅಜಮಾಯಿಷಿ ತರೀಕ್ 2 ವರ್ಷಕ್ಕೆ ಬಂದಾವರ್ತಿ ಹರಾಜು ಮಾಡಿಸಬೇಕೆಂಬದಾಗಿ ಡಿಸ್ಟ್ರಿಕ್ಟು ಬೋರ್ಡಿನವರು ಮಾಡಿದ ಶಿಫಾರ್ಸಿನಂತೆ ಮಂಜೂರ್ಮಾಡಿರುವದಾಗಿಯೂ 1909—10 ಮತ್ತು 1910-11ನೆ ಸಾಲುಗಳಿಗೆ ನಡಿಯತಕ್ಕ ಹರಾಜುಗಳ ಫಲಿತಾಂಶವನ್ನು ಮತ್ತು ಸದರಿ ಟೋಲ್‌ಗೇಟುಗಳು ಸ್ಥಾಪಿತವಾದ ತಾರೀ

ಖು ಲಾಗಾಯಿತು ಆದ ಹುಟು ವಳಿ ತೋರಿಸತಕ್ಕ ಸ್ಟೇಟ್ಮೆಂಟು ನಿಶಿ ಜವಾಬು ಅಪೇಕ್ಷಿಸಿ ಬಂದ 17-6-09ರ ಮರ್ಕುಂ 12731-2—ಎಲ್. ಬಿ. 395-08-2ನೆ ನಂಬರ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—1909-10 ಮತ್ತು 1910-11ನೆ ಸಾಲುಗಳಿಗೆ ನಡದ ಟೋಲ್ ಗೇಟುಗಳ ಹರಾಜು ಫಲಿತಾಂಶವನ್ನು ಮೇಲೆ ಕೇಳಿರುವ ತಪ್ಸೀಲ ಸ್ಟೇಟಮೆಂಟನೊಂದಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

V. ಸಕಲೇಶಪುರದಲ್ಲಿ ಡಿಸ್ಪೆನ್ಸರಿಗೋಸ್ಕರ ಪ್ರತ್ಯೇಕ ಒಂದು ಕಟ್ಟಡವನ್ನು ಕಟ್ಟಿಸತಕ್ಕ ವಿಚಾರದಲ್ಲಿ ಸೀನಿಯರ್ ಸರ್ಜ್ಞ ಸಾಹೇಬರವರಿಂದ ಬಂದ 19—1—09ರ ಮರ್ಕುಂ ಜಿ 42 ನೆ ನಂಬರು ಲೆಟರಿನ ಕಾಪಿಯನ್ನು ಮತ್ತು ಹಾಸನದ ಎಗ್ಸಿಕ್ಯೂಟಿವ್ ಇಂಜನಿಯರುರವರು ಸೂಪರ್ರಿಟೆಂಡಿಂಗ್ ಇಂಜನಿಯರರವರಿಗೆ ಬರಸಿರುವ 25—5—09ರ ಮರ್ಕ್ಕುಂ 388ನೆ ನಂಬರು ಡಾಕೆಟ್ ಕಾಪಿಯನ್ನು ಸಹಾ ಕಳುಹಿಸಿರುತ್ತೆಂತಲೂ ಪ್ರಸಕ್ತವಾದ ಸೀನಿಯರ್ ಸರ್ಜ್ಞ ಸಾಹೇಬರವರ ಲೆಟರಿನಲ್ಲಿ ನಮೂದಿರತಕ್ಕ ಕಟ್ಟಡಗಳಿಗೆಲ್ಲಾ ಡಿಸ್ಟ್ರಿಕ್ಟು ಫಂಡ್ಸ್ ಮತ್ತು ಮ್ಯುನಿಸಿಪಲ್ ಫಂಡ್ಸಿನಿಂದ ಕೊಡಬಹುದಾದ ಕಂಟ್ರಿಬ್ಯೂಷ್ಞ ಎಷ್ಟು ಮೊಬಲಗನ್ನು ಡಿ. ಪಿ. ಡಬ್ಲ್ಯೂ. ಇಲಾಖೆಗೆ ಚಾಲ್ತಿ ಸಾಲಿನಲ್ಲಿ ಕೊಡಲು ಸಾಧ್ಯವಿರುತ್ತೆಂಬುದನ್ನು ತಿಳಿಸಬೇಕಾಗಿ ತಪ್ಪಿದ ಜನರಲ ಮತ್ತು ರೆವಿನ್ಯೂ ಸೆಕ್ರೆಟರಿ ಸಾಹೇಬರವರಿಂದ ತಲ್ಪಿದ 29-7-09ರ ಮರ್ಕುಂ 1·98—ಪೆ. 141-07-6ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಹಾಲಿ ನಡಿಯಬೇಕೆಂದು ಸೂಚಿಸಿರುವ ಹೊಸ ಕೆಲಸಗಳನ್ನೆಲ್ಲಾ ಪ್ರೊವಿನ್ಷಿಯಲ್ ಫಂಡ್ಸಿನಿಂದ ಹಣ ಕೊಡಬೇಕಾಗಿಯೂ ರಿಪೇರಿಗಾಗಿ ಬೇಕಾಗಿರುವ 420 ರೂಪಾಯಿಗಳ ಪೈಕಿ ⅓ ಭಾಗವನ್ನು ಅಂದರ 140 ರೂಪಾಯಿಗಳನ್ನು ಹಾಲಸಾಲ ಡಿಸ್ಟ್ರಿಕ್ಟು ಫಂಡು ಬಡ್ಜೆಟ್ಟಿನಲ್ಲಿ "IX ಕಂಟ್ರಿಬ್ಯೂಷ್ಞ ಡಿಸ್ಪೆನ್ಸರಿ ರಿಪೇರಿಗಾಗಿ ದಾಖಲಾಗಿರುವ 1,000 ರೂಪಾಯಿಗಳ ಪೈಕಿ ಕೊಡಬಹುದಾಗಿ ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

VI. (1) ಗ್ರಾಮಗಳನ್ನು ಒಳ್ಳೆ ಪಾಕೀಜಾಸ್ಥಿತಿಯಲ್ಲಿಟ್ಟುಕೊಂಡಿರತಕ್ಕ ಪಟೇಲರುಗಳಿಗೆ ಇನಾಂ ಕೊಡತಕ್ಕ ವಿಚಾರದಲ್ಲಿ ಏನು ಕ್ರಮ ಜರಿಗಿರುತ್ತೆಂಬ ಬಗ್ಗೆ ರಿಪೋರ್ಟು ಅಪೇಕ್ಷಿಸಿ ತಲ್ಪಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಸಾಹೇಬರವರ 12-7-09ರ ಮರ್ಕುಂ 411-4—ಎಲ್. ಬಿ. 105-08ನೆ ನಂಬರು ಡಾಕೆಟ್ ಓದಲಾಯಿತು.

(2) ಈ ವಿಚಾರದಲ್ಲಿ ತಾಲ್ಲೂಕ ಅಮಲ್ದಾರ್ರುಗಳಿಂದ ತಲಪಿದ ರಿಪೋರ್ಟುಗಳನ್ನು ಸಹಾ ಓದಲಾಯಿತು.

ತೀರ್ಮಾನ—ಕೆಲವು ಗ್ರಾಮಗಳಲ್ಲಿ ಹೆಚ್ಚಾಗಿ ಮನೆಗಳಿದ್ದು ಇನ್ನು ಕೆಲವು ಗ್ರಾಮಗಳಲ್ಲಿ ಕಮ್ಮಿಯಾಗಿ ಮನೆಗಳಿರುವದು. ಈ ಪ್ರಕಾರ ಗ್ರಾಮ ಗ್ರಾಮಗಳಿಗೆ ವ್ಯತ್ಯಾಸವಿರುತ್ತೆಯಾಗಿ ಪ್ರಸಕ್ತವಾದ ಪದ್ಧತಿಯನ್ನು ಜಾರಿಲಿರತಕ್ಕದ್ದು ಕಷ್ಟವಾಗಿರುತ್ತೆಂತಲೂ ಆದ್ದರಿಂದ ಗ್ರಾಮಗಳನ್ನು ಅವುಗಳ ಸೈಜ್ ಅನುಸರಿಸಿ 3 ಪಂಗಡಗಳಾಗಿ ವಿಂಗಡಿಸಿ ಇವುಗಳ ಪಾಕೀಜಾ ಸ್ಥಿತಿಯನ್ನು ಕಂಡು ಕೇವಲ ಉತ್ತಮವಾಗಿರುವ ಗ್ರಾಮಗಳ ಪಟೇಲರುಗಳಿಗೆ ಇನಾಂ ಕೊಡತಕ್ಕ ಅಂಶವನ್ನು ಹಾಲಸಾಲನಲ್ಲಿ ಅಜಮಾಯಿಷಿ ಮಾಡತಕ್ಕ ಬಗ್ಯೆ ಗವರ್ನಮೆಂಟಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

VII. (1) ಹಾಸನ ತಾಲ್ಲೂಕ ಮುಗಳೂರು ದೊಡ್ಡಕೆರೆ ಸರಿಪಡಿಸುವದಕ್ಕೋಸ್ಕರ 8,200 ರೂಪಾಯಿಗಳಿಗೆ ತಯಾರಾದ ಪ್ರಾಜೆಕ್ಟನ್ನು ಕೌಂಟರ ಸಿಗ್ನೇಚರು ಬಗ್ಯೆ ಕಳುಹಿಸಿರುವದರೊಂದಿಗೆ ಸದರಿ ಕೆರೆ ಏರಿಮೇಲೆ ಬೈಲಹಳ್ಳಿಯಿಂದ ಹಾಸನಕ್ಕೆ ಹೋಗುವ ಗಾಡಿಜಾಡು ಇರುತ್ತೆಂತಲು ಸದರಿ ಕೆರೆ ರೆಸ್ಟೋರು ಆದನಂತರ ಮೇಲ್ಕಂಡ ಜಾಡನ್ನು ಸರಿಪಡಿಸುವದಕ್ಕೆ 454 ರೂಪಾಯಿಗಳು ಡಿಸ್ಟ್ರಿಕ್ಟ್ ಫಂಡ್ಸಿನಿಂದ ಕೊಡಬೇಕೆಂತಲೂ ವಗ್ಯೆರೆ ಹಾಸನ ಡಿವಿಜ್ಞ ಎಗ್ಸಿಕ್ಯುಟಿವ್ ಇಂಜನಿಯರ ಸಾಹೇಬರವರಿಂದ ತಲ್ಪಿದ 8-3-09ರ ಮರ್ಕ್ಕುಂ 63ನೆ ನಂಬರ ಡಾಕೆಟ್ ಓದಲಾಯಿತು.

(2) ಸದರಿ ಗ್ರಾಮಸ್ಥರು ಈ ಕೆಲಸಕ್ಕೋಸ್ಕರ ಕಂಟ್ರಿಬ್ಯೂಷ್ಞ ಕೊಡಲು ಲಾಚಾರಿರುತ್ತೇವೆಂತಲೂ, ಆದರೆ ದಾರಿಯನ್ನು ಸರಿಪಡಿಸಿಕೊಡಬೇಕೆಂದು ಬೇಡುತ್ತಾರೆಂಬದಾಗಿ ವಗ್ಯೆರೆ ನಮೂದುಳ್ಳ ಹಾಸನ ತಾಲ್ಲೂಕು ಅಮಲ್ದಾರ 3-7-09ರ ಮರ್ಕ್ಕುಂ 3ನೆ ನಂಬರು ರಿಪೋರ್ಟುಖೈರಾಗುಳ್ಳ ರಿಕಾರ್ಡು ಓದಲಾಯಿತು.

ತೀರ್ಮಾನ—ಏರಿಯಮೇಲೆ ಗಾಡಿಗಳು ಸಂಚರಿಸುವದಕ್ಕೆ ಸಾಕಾಗುವಷ್ಟು ಏರಿಯನ್ನು ಅಗಲಮಾಡುವದಕ್ಕೋಸ್ಕರ ಬೇಕಾಗುವ ಮೊಬಲಗನ್ನು ಈ ಬೋರ್ಡಿನಿಂದ ಕೊಡಲು ಸಾಧ್ಯವಿಲ್ಲವೆಂತಲು, ಏರಿ ಕೆಳಗೆ ಇರಬೇಕಾದ 10 ಅಡಿ ರಿಜರ್ವ್ ಜಾಗಾ ಖುಲ್ಲಾ ಬಿಡಬೇಕಾಗಿ ನಿರ್ಬಂಧಪಡಿಸಿದರೆ ಏರಿ ಕೆಳಗಡೆ ಗಾಡಿಗಳು ಸಂಚರಿಸುವದಕ್ಕೆ ಸಾಕಾಗುವಷ್ಟು ಜಾಗ ಇರುತ್ತೆಂತ ತೀರ್ಮಾನಿಸಲಾಯಿತು.

VIII. ಅರ್ಕಲಗೂಡು ತಾಲ್ಲೂಕ ಬೂದನೂರು ಕೆರೆ ಏರಿಮೇಲೆ ಹೋಗತಕ್ಕ ರಸ್ತೆಯನ್ನು ಬಂದುಕಡೆ ಹೋಗುವಂತೆ ಬದಲಾಯಿಸುವ ವಿಚಾರದಲ್ಲಿ ಅಸಿಸ್ಟೆಂಟ ಇಂಜನಿಯರರವರಿಂದ ತಲ್ಪಿದ 26-10-07ರ ಮರ್ಕ್ಕುಂ 406ನೆ ನಂಬರು ಡಾಕೆಟ್ ಕಾಪಿಯನ್ನು ಕಳುಹಿಸಿರುತ್ತೆಯೆಂಬ ಹಾಸನ ಡಿವಿಜ್ಞ ಎಗ್ಸಿಕ್ಯುಟಿವ್ ಇಂಜನಿಯರವರ 10-5-09ರ ಮರ್ಕ್ಕುಂ 173ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಇದೇ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟ ಬೋರ್ಡಿನವರು ಮಾಡಿರುವ ತೀರ್ಮಾನದ ಕಾಪಿಯನ್ನು ಹಿಂದೆಯೆ ಎಗ್ಸಿಕ್ಯುಟಿವ್ ಇಂಜನಿಯರವರಿಗೆ ಕಳುಹಿಸಿರುತ್ತೆಯಾಗಿ ಇದನ್ನು ಪುನರಾವಲೋಕನದಿಂದ ಈ ವಿಚಾರದಲ್ಲಿ ಜಾಗ್ರತೆ ಜವಾಬು ಬೆಳಸಬೇಕಾಗಿ ಎಗ್ಸಿಕ್ಯುಟಿವ್ ಇಂಜನಿಯರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

IX ಗತಸಾಲಿನಲ್ಲಿ ರಾಮನಾಥಪುರ ಮತ್ತು ಗೊರೂರು ಕಡವುಗಳಿಗೆ ಹೊಸ ದೋಣಿಗಳನ್ನು ಸರಬರಾಜು ಮಾಡಲಾಗಲಿಲ್ಲವೆಂತಲೂ ಇದಕ್ಕಾಗಿ ಇದ್ದ 650 ರೂಪಾಯಿಗಳು ಲಾಪ್ಸಾಗಿರುತ್ತೆಯಾಗಿ ಚಾಲ್ತಿ ಸಾಲಿನಲ್ಲಿ 3 ದೋಣಿಗಳು ಮತ್ತು ಹೊಸ ಪ್ಲಾಟಫಾರಂ ಆಗತಕ್ಕ ಬಗ್ಯೆ ತಲ್ಪಿರುವ ಅಂದಾಜುಗಳನ್ನು ಕೌಂಟರ ಸೈನ್ ಮಾಡಿ ಮೊಬಲಗು ತಮ್ಮ ಸ್ವಾಧೀನಕ್ಕೆ ಕೊಡಿಸಬೇ

ಕೆಂಬದಾಗಿ ಹಾಸನ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರಿಂದ ತಲ್ಪಿದ 29—7—09ರ ಮುರ್ಸ್ಕಂ 274ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಮೇಲ್ಕಂಡ ಅಂದಾಜಗಳ ಪೈಕಿ ಹರಿಗೋಲು ವಗೈರೆ ಬಾಬತ್ತು 150 ರೂಪಾಯಿ ಅಂದಾಜ ಅಪ್ರಕೃತವಾಗಿ ಬಾಕಿ 773 ರೂಪಾಯಿ ಅಂದಾಜಕ್ಕೆ ಒಪ್ಪಿ ಕಳುಹಿಸಬೇಕೆಂತಲೂ ಈ ಬಾಬತ್ತು ಮೊಬಲಗನ್ನು ಹಾಲಿಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್ಟು "ಎ. ಪಬ್ಲಿಕ್ ವರ್ಕ್ಸ್ I ವರಿಜನಲ್" ಎಂಬ ಹೆಡ್ಡಿನಲ್ಲಿ ದಾಖಲಾಗಿರುವ 1,000 ರೂಪಾಯಿಗಳಿಂದ ಉಪಯೋಗಿಸಬಹುದೆಂತ ತೀರ್ಮಾನಿಸಲಾಯಿತು.

X. ಸಕಲೇಶಪುರದಲ್ಲಿರುವ ಲೋಕಲ್ ಫಂಡು ಡಿಸ್ಪೆನ್ಸರಿ ಮುಂದಿನ ಪೋರ್ಟಿಕೊ ಕೆಲಸವನ್ನು ಕಂಪ್ಲಿಟ್ಮಾಡಲು 160 ರೂಪಾಯಿಗಳ ಬಾಬತ್ತು ಅಂದಾಜವನ್ನು ಕಳುಹಿಸಿ ಇದಕ್ಕೆ ಅವಶ್ಯಕವಾದ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಫಂಡು ಬಾಬತ್ತು ಕಂಟ್ರಿಬ್ಯೂಷನ್ ಕೊಡಿಸಬೇಕೆಂಬ ಹಾಸನ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರ 19—7—09ರ ಮುರ್ಸ್ಕಂ 264ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಮೇಲೆ ನಮೂದಿರುವ Vನೆ ನಂಬರು ತೀರ್ಮಾನವನ್ನು ನೋಡಿ.

XI. ಚನ್ನರಾಯಪಟ್ಟಣ ತಾಲ್ಲೂಕು ಗನ್ನಿಕಡುವಿನಲ್ಲಿರುವ ಜಂಜಾಲು ರಿಪೇರಿ ಬಗ್ಯೆ 99 ರೂಪಾಯಿಗಳ ಬಾಬತ್ತು ಅಂದಾಜಕ್ಕೆ ಕೌಂಟರ್ ಸೈನ್ ಮಾಡಿ ಕಳುಹಿಸಬೇಕೆಂತ ಹಾಸನ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರಿಂದ ತಲ್ಪಿದ 28-7-09ರ ಮುರ್ಸ್ಕಂ 275ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ಅಂದಾಜವನ್ನು ಕೌಂಟರ್ ಸೈನ್ ಮಾಡಿ ವಾಪಸು ಕಳುಹಿಸಬೇಕೆಂತಲೂ ಈ ಬಾಬತ್ತು ಖರ್ಚನ್ನು ಹಾಲಿಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್ಟಿನಲ್ಲಿ "ಎ. ಪಬ್ಲಿಕ್ ವರ್ಕ್ಸ್ II. ರಿಪೇರ್ಸ್ ರಿಜರ್ವ್" ಹೆಡ್ಡಿನಲ್ಲಿ ದಾಖಲಾಗಿರುವ 410 ರೂಪಾಯಿಗಳ ಪೈಕಿ ಕೊಡಬಹುದೆಂತ ತೀರ್ಮಾನಿಸಲಾಯಿತು.

XII. ಬಿಸಲೆ, ಶುಕ್ರವಾರಸಂತೆ, ಕೆಂಪಕಲ್ಲು ಮತ್ತು ಮಾರನಹಳ್ಳಿ ಟ್ರಾವಲರ್ಸ್ ಬಂಗ್ಲಾಗಳಿಗೆ ಹಾಲಿಸಾಲಿನಲ್ಲಿ ಚಾಟು ಕಾಮಗಾರಿ ಬಗ್ಯೆ ಕಳುಹಿಸಿರುವ ಅಂದಾಜಗಳನ್ನು ಕೌಂಟರ್ ಸೈನಿಂದ ವಾಪಸ್ಮಾಡಬೇಕೆಂಬ ಹಾಸನ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರ 26—6—09ರ ಮುರ್ಸ್ಕಂ 239, 240, 241 ಮತ್ತು 242ನೆ ನಂಬರ್ ಡಾಕೆಟುಗಳನ್ನು ಓದಲಾಯಿತು.

ತೀರ್ಮಾನ—ಈ ನಾಲ್ಕು ಅಂದಾಜಗಳಲ್ಲಿ ಒಟ್ಟು 108 ರೂಪಾಯಿಗಳಿಗೆ ಕೌಂಟರ್ ಸೈನಿಸಿ ಕಳುಹಿಸಬಹುದೆಂತ ತೀರ್ಮಾನಿಸಲಾಯಿತು.

XIII. ಮಂಜರಾಬಾದ್ ತಾಲ್ಲೂಕು ಸಕಲೇಶಪುರ ಮತ್ತು ಹಾನಬಾಳಿನಲ್ಲಿರತಕ್ಕ ಲೋಕಲ್ ಫಂಡು ಡಿಸ್ಪೆನ್ಸರಿಗಳಿಗೆ ಚಾಟು ಕಾಮಗಾರಿಗಾಗಿ ತಲ್ಪಿರುವ ಅಂದಾಜಗಳನ್ನು ಕೌಂಟರ್ ಸೈನಿಸಿ ಕಳುಹಿಸಿಕೊಡಬೇಕೆಂತಲು ಇವಕ್ಕಾಗಿ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕಾಗುವ ಕಂಟ್ರಿಬ್ಯೂಷನ್ ಮೊಬಲಗನ್ನು ಪಾವತಿ ಮಾಡಿಸಬೇಕೆಂಬ ಎಗ್ಸಿಕ್ಯೂಟಿವ್ ಇಂಜನಿಯರವರ 26—6—09ರ ಮುರ್ಸ್ಕಂ 243 ಮತ್ತು 244ನೆ ನಂಬರ್ ಡಾಕೆಟುಗಳನ್ನು ಓದಲಾಯಿತು.

ತೀರ್ಮಾನ—ಈ 2 ಕೆಲಸಗಳಿಗೂ ಡಿಸ್ಟ್ರಿಕ್ಟು ಫಂಡು ಕಂಟ್ರಿಬ್ಯೂಷನ್ 25 ರೂಪಾಯಿಗಳನ್ನು ಹಾಲಿ ಸಾಲ್ ಬಡ್ಜೆಟ್ಟಿನಲ್ಲಿನ "IX ಕಂಟ್ರಿಬ್ಯೂಷನ್ (3) ಡಿಸ್ಪೆನ್ಸರಿಗಳ ರಿಪೇರಿಗೆ" ದಾಖಲಾಗಿರುವ 1,000 ರೂಪಾಯಿಗಳ ಪೈಕಿ ಕೊಡಬೇಕೆಂದು ತೀರ್ಮಾನಿಸಲಾಯಿತು.

XIV. (1) ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಡಿಸ್ಪೆನ್ಸರಿ ಕಟ್ಟಡಗಳಿಗೆ ಕಾಂಪೌಂಡು ಗೋಡೆಗಳನ್ನು ಹಾಕತಕ್ಕ ಬಗ್ಯೆ ತಗಲುವ ಲಾಗೋಡು 28,145 ರೂಪಾಯಿಗಳ ಪೈಕಿ ಡಿಸ್ಟ್ರಿಕ್ಟು ಫಂಡು ಕಾಂಟ್ರಿಬ್ಯೂಷನ್ ಮೊಬಲಗು 11,729 ರೂಪಾಯಿಗಳನ್ನು ಮರಕಮ್ಮತ್ತು ಇಲಾಖಾ ಸ್ವಾಧೀನಕ್ಕೆ ಕೊಡತಕ್ಕ ಬಗ್ಯೆ ಅವಶ್ಯಕವಾದ ಏರ್ಪಾಡಿಡಿಸಬೇಕಾಗಿ ವಗೈರೆ ಸೀನಿಯರ್ ಸರ್ಜನ್ ಸಾಹೇಬರಿಂದ ತಲ್ಪಿದ (28—6—09ರ ಮುರ್ಸ್ಕಂ 3176ನೆ ನಂಬರು ಡಾಕೆಟ್ ಕಾಪಿಯನ್ನು ಸೂ|| ಇಂಜನಿಯರ ಡಾಕೆಟ್ ಕಾಪಿ) 6—7—09ರ ಮುರ್ಸ್ಕಂ 90ನೆ ನಂಬರ್ ಮೆಮೊ ಓದಲಾಯಿತು.

ತೀರ್ಮಾನ—ಡಿಸ್ಟ್ರಿಕ್ಟು ಫಂಡಿನ ಈಗಿನ ಸ್ಥಿತಿಯಲ್ಲಿ ಕಾಂಪೌಂಡು ಗೋಡೆಗಳಿಗೆ ಹಣ ಒದಗಿಸಲು ಸಾಧ್ಯವಿಲ್ಲವೆಂತಲೂ ಡಿಸ್ಟ್ರಿಕ್ಟು ಫಂಡಿನಲ್ಲಿ ಹಣ ಶೇಖರವಾಗುವ ವರಿವಿಗೂ, ಈ ವಿಚಾರದಲ್ಲಿ ಹಿಂದೆ ಸೀನಿಯರ್ ಸರ್ಜನ್ ಸಾಹೇಬರು ಅಭಿಪ್ರಾಯಪಟ್ಟಿದ್ದಂತೆ ಬೇಲಿಗಳನ್ನು ಡಿಸ್ಪೆನ್ಸರಿ ನೌಕರರಿಂದ ಹಾಕಿಸಬಹುದಾಗಿ ತೀರ್ಮಾನಿಸಲಾಯಿತು.

XV. ಅರಕಲಗೂಡು ತಾಲ್ಲೂಕಿನಲ್ಲಿ ಮಲ್ಲರಾಜಪಟ್ಟಣದಿಂದ ಕೃಷ್ಣರಾಜಕಟ್ಟೆಗೆ ಹೋಗುವ ಬಂಡಿ ಜಾಡನ್ನು ಸರಿಯಾಗಿ ಇಟ್ಟುಕೊಳ್ಳಲು ಸಾಲೀಯಾನ 80 ರೂಪಾಯಿಗಳು ಅವಶ್ಯಕವೆಂತಲೂ ಈ ಮೊಬಲಗನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡುವದಕ್ಕೆ ಏರ್ಪಾಡಿಡಿಸಬೇಕೆಂದು ವಗೈರೆ ಛಾನಲ್ ಕನ್ಸರ್ವೆನ್ಸಿ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರಿಂದ ತಲ್ಪಿದ 24-7-09ರ ಮುರ್ಸ್ಕಂ 539ನೆ ನಂಬರ್ ಮೆಮೊ ಓದಲಾಯಿತು.

ತೀರ್ಮಾನ—$2\frac{1}{2}$ ಮೈಲಿಗಳಿರುವ ಪ್ರಸಕ್ತವಾದ ರಸ್ತೆಯನ್ನು ಡಿಸ್ಟ್ರಿಕ್ಟು ಫಂಡು ರಸ್ತೆಯಾಗಿ ಭಾವಿಸಿ ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಖರುವ ಸಾಲ್ ಲಾಗಾಯಿತು ವರ್ಷಂ ಪ್ರತಿ 80 ರೂಪಾಯಿ ಕೊಡತಕ್ಕ ಬಗ್ಯೆ ಬಡ್ಜೆಟ್ಟಿನಲ್ಲಿ ದಾಖಲ್ಮಾಡುತ್ತಾ ಬರಬೇಕಾಗಿ ತೀರ್ಮಾನಿಸಲಾಯಿತು.

XVI. ಪ್ರತಿ ವರ್ಷದ ಸಾಲ್ ಷುರುವಿನಲ್ಲಿ ಷೆಡ್ಯೂಲ್ ಆಫ್ ರೇಟ್ಸನ್ನು ಡಿಸ್ಟ್ರಿಕ್ಟು ಬೋರ್ಡಿನ ಮೀಟಿಂಗಿನವೇಳೆ ರಿವೈಜ್ ಮಾಡಿ ಅದರ ಕಾಪಿ ಒಂದನ್ನು ಗೌರ್ನಮೆಂಟಿಗೆ ಕಳುಹಿಸಬೇಕೆಂತ ತಲ್ಪಿದ್ದ ಗೌರ್ನಮೆಂಟ್ 6—2—09ರ ಮುರ್ಸ್ಕಂ 7397-405—ಎಲ್. ಬಿ. 432-06ನೆ ನಂಬರು ಪ್ರೊಸೀಡಿಂಗ್ಸ್ ಪುನಹ ಓದಲಾಯಿತು.

(2) ಇದೇ ವಿಚಾರದಲ್ಲಿ ಕೆಲವು ತಾಲ್ಲೂಕುಗಳಿಂದ ತಲ್ಪಿದ ರಿಪೋರ್ಟುಗಳನ್ನು ಓದಲಾಯಿತು.

ತೀರ್ಮಾನ—ಡಿಸ್ಟ್ರಿಕ್ಟು ಬೋರ್ಡಿನ ಷೆಡ್ಯೂಲ್ ಆಫ್ ರೇಟ್ಸನೊಂದಿಗೆ ಡಿ. ಪಿ. ಡಬ್ಲ್ಯೂ. ಇಲಾಖೆಯಲ್ಲಿರತಕ್ಕ ರೇಟ್ಸ ನೋಡಿ ಸರಿಪಡಿಸಲು ಆ ಇಲಾಖೆಯಿಂದ ಸದರಿ ಷೆಡ್ಯೂಲ್ ಬಂದಿಲ್ಲವಾಗಿ ಜಾಗ್ರತೆಯಲ್ಲಿ ಕಳುಹಿಸಿಕೊಡಲು ಬರ ಸಬೇಕೆಂತ ತೀರ್ಮಾನಿಸಲಾಯಿತು.

XVII. ಆಲೂರು ಸಬ್ ತಾಲ್ಲೂಕು ಸಿದ್ದಾಪುರದಲ್ಲಿ ಪ್ರತಿ ಮಂಗಳವಾರವು ಒಂದು ಸಂತೆ ನಡಿಯಬೇಕೆಂಬದಾಗಿ ಶಿಫಾರಸ ಮಾಡಿರುವ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 24—5—09ರ ಮರ್ಕಂ 904ನೆ ನಂಬರು ಲೆಟರು ಓದ ಲಾಯಿತು.

(2) ಇದೇ ವಿಚಾರದಲ್ಲಿ 25—2—09ರಲ್ಲಿ ನಡೆದಿದ್ದ ಡಿಸ್ಟ್ರಿಕ್ಟು ಬೋರ್ಡಿನ ತೀರ್ಮಾನವನ್ನು ಸಹಾ ಓದಲಾಯಿತು.

ತೀರ್ಮಾನ—ಈ ಸಿದ್ದಾಪುರ ಗ್ರಾಮವು ರಸ್ತೆಗಳಿಗೆ ಅವಕಾಶವಿಲ್ಲದೇಲೂ ಮತ್ತು ಗೋರೂರು ಸಂತೆಗೆ 2 ಮೈಲಿ ಫಾಸಲೆಯಲ್ಲಿರುವದರಿಂದಲು ಸಂತೆ ನೆರಿಯುವದಕ್ಕೆ ಇದು ಸರಿಯಾದ ಜಾಗವಲ್ಲವೆಂತ ತೀರ್ಮಾನಿಸಲಾಯಿತು.

ಆದರೆ ಹೋಬಳಿ ಹೆಡ್‌ಕ್ವಾರ್ಟರಾಗಿಯೂ, ರಸ್ತೆಗಳುಳ್ಳದ್ದಾಗಿಯೂ ಇರುವ ಮತ್ತು ಪೋಲೀಸ್ ಸ್ಟೇಷನ್ ಸಹ ವುಳ್ಳ ಕುಂದೂರಿನಲ್ಲಿ ಒಂದು ಸಂತೆ ನಡಿಯತಕ್ಕ ಬಗ್ಗೆ ಶಿಫಾರಸ್ಸು ಮಾಡಬೇಕೆಂತ ತೀರ್ಮಾನಿಸಲಾಯಿತು.

XVIII. ಅರ್ಕಲಗೂಡು ತಾಲ್ಲೂಕು ಮುತ್ತುಗದ ಹೊಸೂರು ಗ್ರಾಮದಲ್ಲಿನ ಭಾವಿ ಆಳಪಡಿಸುವದಕ್ಕೆ ತಯಾರಾಗಿರುವ ರಿವೈಜ್ಡ್ ಅಂದಾಜ ವಿಚಾರದಲ್ಲಿ 25—2—09ರ ಮರ್ಕಂನಲ್ಲಿ ನಡೆದ XIVನೆ ನಂಬರು ಡಿಸ್ಟ್ರಿಕ್ಟು ಬೋರ್ಡು ತೀರ್ಮಾನವನ್ನು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಭಾವಿಯ 6 ಮತ್ತು 7ನೆ ಮಟ್ಟಗಳಲ್ಲಿ ಬಹಳ ಘಟ್ಟಿ ಅರೆ ಸಿಕ್ಕಿರುವದರಿಂದ ಸುರಂಗ ಹಾಕುವದಕ್ಕೋಸ್ಕರ 16, 17 ಮತ್ತು 18 ರೂಪಾಯಿಗಳ ದರದಂತೆ ಮಂಜೂರ್ಮಾಡಬಹುದಾಗಿ ಪ್ರಸಕ್ತವಾದ 792 ರೂಪಾಯಿಗಳ ಅಂದಾಜನಿಸಿ ಗೌರ್ನಮೆಂಟಿಗೆ ಶಿಫಾರಸ್ ಮಾಡಬೇಕಾಗಿ ತೀರ್ಮಾನಿಸಲಾಯಿತು.

XIX. (1) ಮಸವನಘಟ್ಟ ಮತ್ತು ಸೋಮಶೆಟ್ಟಿಹಳ್ಳಿ ಗ್ರಾಮಗಳಲ್ಲಿನ ಭಾವಿಗಳ ಬಾಬತು ರಿವೈಜ್ಡ್ ಅಂದಾಜ ಅನುಸರಿಸಿ ಪೂರೈಸುವದನ್ನು ಮಂಜೂರ್ಮಾಡಿ ಹೆಚ್ಚಿಗೆ ಲಾಗೋಡಿಗೆ ಬಜೆಟ್ಟಿನಲ್ಲಾಗಲಿ ಅಥವಾ ಇನ್‌ಕಂಪ್ಲೀಟ್ ವರ್ಕ್ಸ ಲಿಸ್ಟಿನಲ್ಲಾಗಲಿ ಇಲ್ಲದ ಸಂಭವಗಳಲ್ಲಿ ಗೌರ್ನಮೆಂಟು ಮಂಜೂರಾತಿ ಪಡಿಯಬೇಕಾಗಿ ತಲ್ಪಿದ 12—5—09ರ ಮರ್ಕಂ 12505-6—ಎಲ್. ಬಿ. 154-08-18ನೆ ನಂಬರ್ ಗವರ್ನ್‌ಮೆಂಟ್ ಪ್ರೊಸೀಡಿಂಗ್ಸ್.

(2) ಕುಡಿಯುವ ನೀರಿಗಾಗಿ ಭಾವಿಗಳನ್ನು ತೋಡಿಸತಕ್ಕ ಬಗ್ಗೆ ಪ್ರತ್ಯೇಕ ಮೊಬಲಗು ಒದಗಿಸಿಕೊಟ್ಟದ್ದಕ್ಕಾಗಿ ಬೋರ್ಡಿನವರ ವಂದನೆಗಳನ್ನು ರಿಕಾರ್ಡು ಮಾಡಿರುತ್ತೆಂಬ 14—6—09ನೆ ಮರ್ಕಂ ರೆ. 10547—ಅಗ್ರಿ. 67-08-87ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸು.

(3) 1909-10ನೆ ಸಾಲ್ ಡಿಸ್ಟ್ರಿಕ್ಟ್ ಫಂಡ ಬಜೆಟ್ಟಿನಲ್ಲಿ "ಲೋಕಲ್ ಫಂಡ ಡಿಸ್‌ಪೆನ್ಸರಿ ಕಟ್ಟಡಗಳ ರಿಪೇರಿಗಾಗಿ ಕಂಟ್ರಿಬ್ಯೂಷನ್" ಮೊಬಲಗು ಹೆಚ್ಚಾಗಿ ದಾಖಲ್ಮಾಡಿರುವದನ್ನು ಗವರ್ನಮೆಂಟಿನವರ ಪ್ರತ್ಯೇಕ ಮಂಜೂರಿ ಪಡಿಯದೆ ಉಪಯೋಗಿಸಕೂಡದೆಂಬ 17—6—09ರ ಮರ್ಕಂ 12733-5—ಎಲ್. ಬಿ. 372-08-6ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್.

(4) ರಾಮನಾಥಪುರ ಮತ್ತು ಗೊರೂರು ಕಡುವುಗಳಿಗೆ ಹೊಸ ದೋಣಿಗಳನ್ನು ಸಪ್ಲೈ ಮಾಡತಕ್ಕ ಬಗ್ಗೆ 650 ರೂಪಾಯಿಗಳನ್ನು ರಿ-ಅಪ್ರೊಪ್ರಿಯೇಟ್ ಮಾಡಿದ್ದನ್ನು ಮಂಜೂರ್ಮಾಡಿರುತ್ತೆಂಬ 21—6—09ರ ಮರ್ಕಂ 12816-7—ಎಲ್. ಬಿ. 183-08-6ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸು.

(5) ಸಾಲಗಿತ್ತಿಯರಿಗೆ ಸಲ್ಲಬೇಕಾಗಿದ್ದ ಹಿಂದಿನ ಕೆಲವು ತಲಬು ವಿಚಾರದಲ್ಲಿ ಹುಕುಂಮಾಡಿ ಇವರುಗಳ ತಲಬು ಮಾಹೆಯಾನ 15 ರೂಪಾಯಿನಂತೆ ಒಂದೇಸರ ಇನ್ನುಮುಂದೆ ಇರಬೇಕೆಂತಲೂ, ಈ ತಲಬಿನೊಂದಿಗೆ ನಿಯಾಮಕವಾಗಿರುವ ಲೋಕಲ್ ಅಲೋಯನ್ಸ್ ಕೊಡಬಹುದೆಂಬ 21—6—09ರ ಮರ್ಕಂ 12819-29—ಎಲ್. ಬಿ. 55-93ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸು.

(6) ಪ್ರೈವೆಟ್ ಯಸ್ಟೇಟುಗಳಿಗೆ ಹೋಗತಕ್ಕ ರಸ್ತೆಗಳನ್ನು ಡಿಸ್ಟ್ರಿಕ್ಟು ಫಂಡಿನಿಂದ ಹಣ ಮುಟ್ಟಿಸಿ ಸರಿಯಾಗಿ ಇಟ್ಟುಕೊಳ್ಳತಕ್ಕದ್ದನ್ನು ಮನ್ನಾಮಾಡತಕ್ಕ ವಿಚಾರದಲ್ಲಿ ಬಂದ ಚೀಫ್ ಇಂಜನಿಯರವರ ಮತ್ತು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟ್ ರವರುಗಳ ಲೆಟರುಗಳನ್ನು ರಿಕಾರ್ಡು ಮಾಡಿರುವದಾಗಿ ತಲ್ಪಿರುವ 5—7—09ರ ಮರ್ಕಂ 111-20—ಎಲ್. ಬಿ. 2000ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್.

(7) ಕಬ್ಬಾಳು ಗ್ರಾಮಸ್ಥರು ಒಂದುಭಾವಿ ತೆಗಿಸತಕ್ಕ ಬಗ್ಗೆ 800 ರೂಪಾಯಿ ಕಂಟ್ರಿಬ್ಯೂಷನ್ ಕೊಟ್ಟದ್ದರಮೇಲೆ ಈ ಭಾವಿ ಕೆಲಸಕ್ಕಾಗಿ ತಯಾರಾದ 800 ರೂಪಾಯಿಗಳ ಅಂದಾಜವನ್ನು ಮಂಜೂರ್ಮಾಡಿರುತ್ತೆಂತಲೂ ಈ ಬಾಬತು ಮೊಬಲಗನ್ನು 1909-10ನೆ ಸಾಲ್ ಡಿಸ್ಟ್ರಿಕ್ಟ್ ಫಂಡ ಬಜೆಟ್ಟಿನಲ್ಲಿ ಬಿ. ಪಬ್ಲಿಕ್ ವರ್ಕ್ಸಗೋಸ್ಕರ ಇರತಕ್ಕ ಹಣದ ಪೈಕಿ ಕೊಡಬೇಕಾಗಿಯೂ, ಇನ್ನು ಹಣ ಬೇಕಾದಲ್ಲಿ ಮುಂದೆ ಬೇಡಬಹುದೆಂತ ಸಹಾ ತಲ್ಪಿದ 29—6—09ರ ಮರ್ಕಂ 13147-8—ಎಲ್. ಬಿ. 350-08-5ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್.

(8) ತಿಪ್ಟೂರು-ಚೆನ್ನರಾಯಪಟ್ಣದ ರಸ್ತೆಗೆ ನಡೆದ ಸ್ಪೆಷಲ್ ರಿಪೇರಿ ಕೆಲಸಕ್ಕಾಗಿ ಇತರ ಫಂಡ್ಸಿನಿಂದ ಗ್ರಾಂಟ್ ಕೊಡಲು ಅವಶ್ಯಕವಿಲ್ಲವೆಂತಲು ಈ ಬಾಬತು ಖರ್ಚನ್ನು ಡಿಸ್ಟ್ರಿಕ್ಟು ಫಂಡಿಗೆ ದಾಖಲ್ಮಾಡಬೇಕೆಂಬದಾಗಿ ಕಂಟ್ರೋಲರ್ ಸಾಹೇಬರಿಗೆ ತಿಳಿಯಪಡಿಸಿರುತ್ತೆಂಬ 4—7—09ರ ಮರ್ಕಂ 514-7—ಎಲ್. ಬಿ. 169-08-15ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್.

ಮೇಲ್ಕಂಡವುಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಗೆ ಓದಲಾಯಿತು.

XX. (1) ತಿಪ್ಟೂರು-ಚನ್ನರಾಯಪಟ್ಟಣದ ರಸ್ತೆಗೆ ಸ್ಪೆಷಲ್ ರಿಪೇರಿ ಕೆಲಸ ನಡಿಸುತ್ತಿರುವದನ್ನು ಸದ್ಯಕ್ಕೆ ನಿಲ್ಲಿಸಬೇಕೆಂದು ಚನ್ನರಾಯಪಟ್ಟಣದ ಡಿ. ಪಿ. ಡಬ್ಲ್ಯು. ಸೂಪರ್‌ವೈಜರಿಗೆ ಅಪ್ಪಣೆ ಮಾಡಿರುತ್ತೆಂಬ ವಗೈರೆ ಹಾಸನ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತಲ್ಪಿದ 22—7—09ರ ಮುರ್ಸಲೆ 266ನೆ ನಂಬರ ಡಾಕೆಟ್ ಓದಲಾಯಿತು.

(2) ಹಾಲಿ ಕಾಲಸ್ಥಿತಿ ಅನುಕೂಲವಾಗಿರುತ್ತಾದ್ದರಿಂದ ಮೇಲ್ಕಂಡ ಸ್ಪೆಷಲ್ ಕೆಲಸವನ್ನು ಇನ್ನು ಮುಂದೆ ಮಾಡಿಸುವದು ಅವಶ್ಯಕವಿಲ್ಲವೆಂಬಬಗ್ಗೆ ಜಿ॥ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿದ 29—7—09ರ ಮುರ್ಸಲೆ 14ನೆ ನಂಬರ್ ಯಾದಿ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ರಿಪೇರಿ ಕೆಲಸವನ್ನು ಮುಂದೆ ಮಾಡಿಸತಕ್ಕದ್ದು ಅನಾವಶ್ಯಕವೆಂತಲೂ ಹಾಲಿ ಎಗ್ಜಿಕ್ಯೂಟಿವ್ ಇಂಜನಿಯರವರು ಹೇಳಿದಂತೆ ಹಿಂದೆ ಖರ್ಚಾಗಿರುವ ಹಣವೆಲ್ಲ ಮೆಟೀರಿಯಲ್ಸ್ ಜಮಾವಣೆಗೋಸ್ಕರ ಆಗಿರುವದರಿಂದ ಮೈಲೇಜು ಅಲಾಟ್‌ಮೆಂಟಿನಿಂದ ಸಾಧ್ಯವಾದಷ್ಟು ದೂರ ಬಿಚಾವಣೆ ಕೆಲಸ ನಡಿಸಬಹುದೆಂಬ ಬಗ್ಗೆ ಎಗ್ಜಿಕ್ಯೂಟಿವ್ ಇಂಜನಿಯರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

XXI. (1) ಹೊಳೇನರಸೀಪುರ ತಾಲ್ಲೂಕಿನಲ್ಲಿನ ಕಿಕ್ಕೇರಿ-ಹಿಪ್ಪೆ ರಸ್ತೆಯ ಬಾಬತು ಸ್ಪೆಷಲ್ ಕೆಲಸವನ್ನು ರಿಲೀಫ್‌ಗೋಸ್ಕರವಿರುವ ಇತರ ಕೆಲಸಗಳೆಲ್ಲಾ ಪೂರೈಸಿದ ನಂತರ ನಡಿಸಬಹುದೆಂತಲು ಇದಕ್ಕೆ ಆಗುವ ಖರ್ಚನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡತಕ್ಕ ವಿಚಾರದಲ್ಲಿ ಬೋರ್ಡಿನವರ ತೀರ್ಮಾನ ನಿಶಿ ಜವಾಬು ಬೆಳಿಸಬೇಕೆಂಬ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 5—5—09ರ ಮುರ್ಸಲೆ 10965—ಎಲ್. ಬಿ. 169-08-12ನೆ ನಂಬರ್ ಡಾಕೆಟ್ ಓದಲಾಯಿತು.

(2) ತಾಲ್ಲೂಕು ಆಮುಳೆ ಎಲ್ಲಾ ಕಡೆಯಲ್ಲೂ ಮಳೆಯಾಗಿರುವದರಿಂದ ಕೂಲಿಗಳು ವ್ಯವಸಾಯದ ಕೆಲಸಗಳಲ್ಲಿ ನಿರುತರಾಗಿರುತ್ತಾರೆ. ಆದ್ದರಿಂದ ಈ ಕೆಲಸ ಅವಶ್ಯಕವಿಲ್ಲವೆಂಬದಾಗಿ ವಗೈರೆ ತಲ್ಪಿದ ಹೊಳೇನರಸೀಪುರ ತಾಲ್ಲೂಕು ಅ॥ ಕ॥ 11—5—09ರ ಮುರ್ಸಲೆ 453ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಕೆಲಸವನ್ನು ನಡಿಸುವ ಅವಶ್ಯಕತೆ ವುಂಟಾಗಲಿಲ್ಲವಾಗಿ ಇದಕ್ಕೆ ಯಾವ ಖರ್ಚು ಆಗಿಲ್ಲವೆಂತ ತೀರ್ಮಾನಿಸಲಾಯಿತು.

XXII. ಮಿ॥ ಮುದ್ದಪ್ಪನವರು ಕೇಳುತ್ತಿರುವ ಭಕ್ತರವಳ್ಳಿಯಿಂದ ಕಟ್ಟಾಯಹಳ್ಳಿ ಬೈಲು ರಸ್ತೆಗೆ ಸೇರುವಂತೆ ಒಂದು ಬಂಡಿಜಾಡು ಮಾಡಿಸಿಕೊಡುವಲ್ಲಿ ಕೆಲವು ಹಳ್ಳಿಗಳಿಗೆ ಅನುಕೂಲವಾಗುತ್ತೆಂತಲೂ ಈ ಕೆಲಸಕ್ಕಾಗಿ ಇವರು 150 ರೂಪಾಯಿ ಕಂಟ್ರಿಬ್ಯೂಷನ್ ಕೊಡುವದಾಗಿ ಒಪ್ಪಿರುತ್ತಾರೆಂದು ವಗೈರೆ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರಿಂದ ತಲ್ಪಿದ 5-21-7-09ರ ಮುರ್ಸಲೆ 25ನೆ ಲೆಟರಿನ 4ನೆ ಪ್ಯಾರಾ ಎಕ್ಸ್‌ಟ್ರಾಕ್ಟು ಓದಲಾಯಿತು.

ತೀರ್ಮಾನ—ಈ ರಸ್ತೆ ಹಾಕಿಸುವ ವಿಚಾರದಲ್ಲೂ ಮತ್ತು ಇದಕ್ಕಾಗಿ ಕಂಟ್ರಿಬ್ಯೂಷನ್ ಕೊಡತಕ್ಕ ವಿಚಾರದಲ್ಲೂ ಮಿ॥ ಮುದ್ದಪ್ಪನವರಿಗೆ ಪ್ರೆಸಿಡೆಂಟರ ಆಫೀಸಿನಿಂದ ಬರೆಸಬೇಕೆಂತಲೂ ಈ ರಸ್ತೆ ಯಾವಮಾರ್ಗವಾಗಿ ಹೋಗುತ್ತೆ ಮತ್ತು ಇದಕ್ಕೆ ತಗಲಬಹುದಾದ ಲಾಗೋಡನ್ನು ತಿಳಿಸಬೇಕಾಗಿಯೂ, ಈ ವಿಚಾರದಲ್ಲಿ ಆಲೂರು ತಾಲ್ಲೂಕು ಬೋರ್ಡಿನ ತೀರ್ಮಾನ ಸಹಾ ಕಳುಹಿಸಿಕೊಡಬೇಕಾಗಿ ತೀರ್ಮಾನಿಸಲಾಯಿತು.

XXIII. ಹಾಸನ ತಾಲ್ಲೂಕು ಕಟ್ಟಾಯದಲ್ಲಿನ ಭಾವಿಯನ್ನು ಆಳಪಡಿಸುವದಕ್ಕೋಸ್ಕರ 1905ನೆ ಆಗಸ್ಟು ಮಾಹೆಯಲ್ಲಿ 70 ರೂಪಾಯಿಗಳಿಗೊಂದು ಅಂದಾಜ ಮಾಡಿದ್ದರನುಸಾರವಾಗಿ ಕೆಲಸ ನಡಿಸಿ 56—0—3 ಪೈಗೆ ಬಿಲ್‌ನಿಶಿ ಕಳುಹಿಸಿರುವ ಅಸಿಸ್ಟೆಂಟ್ ಕಮಿಷನರವರ 30—6—09ರ ಮುರ್ಸಲೆ 1053ನೆ ನಂಬರ ರಿಪೋರ್ಟು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಅಂದಾಜವನ್ನು ಹಿಂದೆ ಮಂಜೂರ್ಮಾಡಿ ನಾಲ್ಕು ವರುಷಗಳಾಗಿದ್ದು ಈಗ ಕೆಲಸ ನಡದಿರುತ್ತೆಯಾಗಿ ಲೋಕಲ್ ಬೋರ್ಡ್ಸ್ ರೂಲ್ಸು 94ನೆ ರೂಲ್ ಪ್ರಕಾರ 67 ರೂಪಾಯಿಗಳಿಗೆ ಒಂದು ಹೊಸ ಅಂದಾಜವನ್ನು ಮಂಜೂರ್ಮಾಡಿರುತ್ತೆಂತಲೂ ಇದಕ್ಕಾಗಿ ಹಾಲ್‌ಸಾಲ್ ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ಟಿನಲ್ಲಿ ಬಿ. ಪಬ್ಲಿಕ್ ವರ್ಕ್ಸ್ Iನೆ ಹೆಡ್ಡಿನಲ್ಲಿ ಹಾಸನ ತಾಲ್ಲೂಕಿಗಾಗಿರುವ 775 ರೂಪಾಯಿಗಳ ಪೈಕಿ ಉಪಯೋಗಿಸಿಕೊಳ್ಳಬಹುದೆಂತ ತೀರ್ಮಾನಿಸಲಾಯಿತು.

XXIV. (1) ಚನ್ನರಾಯಪಟ್ಟಣ ತಾಲ್ಲೂಕು ಕಾರೆಹಳ್ಳಿ ಬಳಿ ಟೋಲ್‌ಗೇಟು ಸ್ಥಾಪನೆ ಮಾಡತಕ್ಕ ವಿಚಾರದಲ್ಲಿ ಇನ್ನು ಕೆಲವು ತಪಶೀಲ್ ಅಪೇಕ್ಷಿಸಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರಿಂದ ತಲ್ಪಿರುವ 1—7—09ರ ಮುರ್ಸಲೆ 407—ಎಲ್. ಬಿ. 405-03-2ನೆ ನಂಬರ್ ಡಾಕೆಟ್ ಓದಲಾಯಿತು.

(2) ಈ ವಿಚಾರದಲ್ಲಿ ಸ್ಟ್ರಾಜ್‌ನಿಶಿ ತಲ್ಪಿರುವ ಚನ್ನರಾಯಪಟ್ಟಣ ತಾಲ್ಲೂಕು ಅಸಿಸ್ಟೆಂಟರ ರಿಪೋರ್ಟು (8—8—09ರ ಮುರ್ಸಲೆ 22ನೆ ನಂಬರ್ ರಿಪೋರ್ಟು) ಓದಲಾಯಿತು.

ತೀರ್ಮಾನ—ಗವರ್ನಮೆಂಟಿನವರು ಕೇಳಿರುವ ಅಂಶಗಳಿಗೆ ಅಮಲ್ದಾರ್ರ ರಿಪೋರ್ಟಿನಮೇಲೆ ಜವಾಬು ಬೆಳಸಬೇಕೆಂತ ತೀರ್ಮಾನಿಸಲಾಯಿತು. ಸಿಬ್ಬಂದಿ ವಗೈರೆ ಖರ್ಚಿಗಾಗಿ ಬೇಕಾಗಿರುವ ಮೊಬಲಗಿಗೆ ಬಡ್ಜೆಟ್ಟಿನಲ್ಲಿ ರಹವಿಲ್ಲವಾದ್ದರಿಂದ ಅವಶ್ಯಕವಾದ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ ಕ್ಲೋಜಿಂಗ್ ಬ್ಯಾಲೆನ್ಸಿನಿಂದ ಕೊಡಿಸಿಕೊಡಬೇಕೆಂತ ಬರಸಬೇಕಾಗಿ ತೀರ್ಮಾನ ಮಾಡಲಾಯಿತು.

XXV. ಈ ಮೀಟಿಂಗಿಗೆ ಹಾಜರಾಗಲು ಅನಿವಾರ್ಯದೆಸೆಯಿಂದ ಅವಕಾಶವಿಲ್ಲವೆಂಬ ಬಗ್ಗೆ ತಲ್ಪಿದ ಇದರಡಿ ನಮೂದಿಸಿರುವ ಮೆಂಬರುಗಳ ಖತ್ತುಗಳನ್ನು ಓದಲಾಯಿತು.

ಮಿ॥ ಕೊ. ರಾಮಶೆಟ್ಟಿ, ಹೊಳೇನರಸೀಪುರ.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

XXVI. ಮಂಜರಾಬಾದ್ ತಾಲ್ಲೂಕು ಯಸಳೂರು ಯೂನಿಯನ್ನಲ್ಲಿ ನಡೆಯಬೇಕೆಂಬ ರಸ್ತೆ ರಿಪೇರಿಗೋಸ್ಕರ ದಾಖಲಾಗಿರುವ 100 ರೂಪಾಯಿಗಳನ್ನು ಈ ವೂರಲ್ಲಿ ದೀಪ ಹಚ್ಚಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳತಕ್ಕ ಬಗ್ಗೆ ಅಪ್ಪಣೆ ಅಪೇಕ್ಷಿಸಿರುವ ತಾಲ್ಲೂಕು ಬೋರ್ಡು ತೀರ್ಮಾನದೊಂದಿಗೆ ತಲ್ಪಿರುವ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 5—3—09ರ ಮುರ್ಸಲೆ 27-414ನೆ ನಂಬರ್ ಯಾದಿ ಓದಲಾಯಿತು.

ತೀರ್ಮಾನ—ಈಗ ರಸ್ತೆಗಳು ಒಳ್ಳೇ ಸ್ಥಿತಿಯಲ್ಲಿರುತ್ತೆಂತ ತಿಳಿಯುವದರಿಂದ ಮೇಲ್ಕಂಡ ಮೊಬಲಗನ್ನು ಯಸಳೂರು ಯೂನಿಯನ್ನಲ್ಲಿ ದೀಪ ಹಚ್ಚಿಸತಕ್ಕ ಬಗ್ಗೆ ಉಪಯೋಗಿಸಿಕೊಳ್ಳಲು ಗವರ್ನಮೆಂಟ್ ಮಂಜೂರಾತಿ ಪಡಿಯಬೇಕೆಂತ ತೀರ್ಮಾನಿಸಲಾಯಿತು.

XXVII. ಇದಕ್ಕೆ ಸೇರಿಸಿರುವ ಲೀಸ್ಟಿನಲ್ಲಿ ಕಂಡ ತಾಲ್ಲೂಕುಗಳಿಂದ ತಪ್ಪಿರುವ ಬಡ್ಜಟ್ಟಿನಲ್ಲಿ ದಾಖಲಾಗಿರುವ ಕೆಲಸಗಳ ಬಾಬತು ಅಂದಾಜಗಳನ್ನು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಲೀಸ್ಟಿನಲ್ಲಿ ಕಂಡ 22 ಕೆಲಸಗಳು (ಬಡ್ಜಟ್ಟಿನಲ್ಲಿ ದಾಖಲಾದವುಗಳು) ಮಂಜೂರ್ಮಾಡಿ ಕೆಲಸ ನಡಿಸತಕ್ಕ ಬಗ್ಗೆ ತಾಲ್ಲೂಕಿಗೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

XXVIII. ಬರುವ ಮೀಟಿಂಗನ್ನು 1909ನೆ ಇಸವಿ ಸೆಪ್ಟಂಬರ್ ಮಾಹೆ 27ನೆ ಸೋಮವಾರ ಮಧ್ಯಾಹ್ನಾತ್ಪರ 1 ಘಂಟೆಗೆ ನಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಬಡ್ಜೆಟಿನಲ್ಲಿ ನಮೂದಿರತಕ್ಕ ಕೆಲಸಗಳಿಗೆ ತಾಲ್ಲೂಕುಗಳಿಂದ ಬಂದ ಅಂದಾಜಾಗಳ ಲಿಸ್ಟು.

ಕೆಲಸದ ಹೆಸರು.	ಅಂದಾಜಾ ನೊಬಲಗು.	ಷರಾ.
ಮಂಜರಾಬಾದ್ ತಾಲ್ಲೂಕು.	ರೂ.	
1. ಸಕಲೇಶಪುರದ ಮುಸಾಫರಖಾನಾ ರಿಪೇರಿ ...	125	ಮಂಜೂರ್ಮಾಡಿರುತ್ತೆ. } ಸಕಲೇಶಪುರದ ಮುಸಾಫರಖಾನೆಗಾಗಿ ಬಡ್ಜೆಟ್ಟಿನಲ್ಲಿ 50 ರೂಪಾಯಿ ಮಾತ್ರ ಇದೆ. ಬಾಕಿ 75 ರೂಪಾಯಿಗಳು ಹಾನ್ಬಾಳ್ ಮುಸಾಫರ್ಖಾನೆಗೆ ಇರುವ 100 ರೂಪಾಯಿಗಳ ಪೈಕಿ ಕೊಡತಕ್ಕದ್ದು.
2. ಹಾನ್ಬಾಳ್ ಮುಸಾಫರ್ಖಾನಾ ರಿಪೇರಿ ...	25	ಡಿಟೋ }
3. ಸಕಲೇಶಪುರದ ಇ. ಸ್ಟೇಷನ್ ಹತ್ತಿರದ ಕಾಂಪೌಂಡಿನಲ್ಲಿ ಒಂದು ಕಕ್ಕಸು ಕಟ್ಟಿಸುವದಕ್ಕೆ.	169	ಮಂಜೂರ್ಮಾಡಿರುತ್ತೆ.
4. ಅಬ್ಬನಬನವಾಸೆ ರಸ್ತೆ ರಿಪೇರಿ ...	32	ಡಿಟೋ
5. ಯಸಲೂರು ಪೇಟೆಯಲ್ಲಿ ಒಂದು ದೊಡ್ಡಿ ಕಟ್ಟಿಸುವದಕ್ಕೆ ...	432	ಡಿಟೋ
6. ಹಣಸೆ ಶನಿವಾರಸಂತೆ ರಸ್ತೆ ರಿಪೇರಿ ...	40	ಡಿಟೋ
7. ಹೊಸಕೋಟೆ ಈಚಲಬೀಡು ರಸ್ತೆ ರಿಪೇರಿ ...	40	ಡಿಟೋ
8. ಕೆಂಚಮ್ಮನ ಹೊಸಕೋಟೆ ಮುಸಾಫರಖಾನಾ ರಿಪೇರಿ ...	50	ಡಿಟೋ
9. ಕಾಡಮನೆ ಮಾರ್ನಹಳ್ಳಿ ರಸ್ತೆ ರಿಪೇರಿ ...	80	ಡಿಟೋ
10. ಹೆತ್ತೂರು ಕೆರೋಡಿ ರಸ್ತೆಗೆ ಸ್ಪೆಷಲ್ ರಿಪೇರಿ ...	150	ಡಿಟೋ
ಚನ್ನರಾಯಪಟ್ಣ ತಾಲ್ಲೂಕು.		
11. ಶ್ರವಣಬೆಳಗುಳದಲ್ಲಿ ಜೈನರ ಬೀದಿ ರಸ್ತೆ ರಿಪೇರಿ ...	50	ಮಂಜೂರ್ಮಾಡಿರುತ್ತೆ.
12. ಬಾಗೂರು ಯೂನಿಯನ್ನಲ್ಲಿ ಪೋಲೀಸ್ ಸ್ಟೇಷನ್ ಬಳಿ ಇರತಕ್ಕ ರಸ್ತೆ ರಿಪೇರಿ.	50	ಡಿಟೋ
13. ಹಿರಿಸಾವೆ ಯೂನಿಯನ್ನಲ್ಲಿ ಪೇಟೆ ರಸ್ತೆ ರಿಪೇರಿ ...	50	ಡಿಟೋ
14. ಚನ್ನರಾಯಪಟ್ಣದ ರಸ್ತೆಯಿಂದ ನುಗ್ಗಿಹಳ್ಳಿ ಯೂನಿಯನ್ನಲ್ಲಿರುವ ಕೋಟೆಗೆ ಹೋಗತಕ್ಕ ರಸ್ತೆ ರಿಪೇರಿ.	50	ಡಿಟೋ
ಬೇಲೂರು ತಾಲ್ಲೂಕು.		
15. ಯಕ್ಸೆಟ್ಟಿಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ತೆಗೆದಿರತಕ್ಕ ಭಾವಿಗೆ ಕಲ್ಲು ಕಟ್ಟಿಸತಕ್ಕ ಬಗ್ಯೆ.	200	ಡಿಟೋ
16. ಬಿಕ್ಕೋಡಿನಿಂದ ಆಲೂರು ಎಲ್ಲೆಯ ವರಿಗೂ ಹೋಗತಕ್ಕ ರಸ್ತೆ ರಿಪೇರಿ.	150	ಡಿಟೋ
17. ಹಗರೆ ಹಳೇಬೀಡು ರಸ್ತೆಯನ್ನು ಉತ್ತಮಸ್ಥಿತಿಗೆ ತರತಕ್ಕ ಬಗ್ಯೆ.	200	ಡಿಟೋ
18. ಅರೆಹಳ್ಳಿ ಗ್ರಾಮದಲ್ಲಿ ಒಂದು ದೊಡ್ಡಿ ಕಟ್ಟಿಸತಕ್ಕ ಬಗ್ಗೆ ...	400	ಡಿಟೋ.
19. ಹಳೇಬೀಡು ಯೂನಿಯನ್ನಲ್ಲಿ ರಸ್ತೆ ರಿಪೇರಿಗಾಗಿ ...	124	ಡಿಟೋ
ಅರ್ಕಲಗೂಡು ತಾಲ್ಲೂಕು.		
20. ರುದ್ರಪಟ್ಣದಲ್ಲಿ ನದಿಯ ಬಳಿ ಒಂದು ಮಂಟಪ ಕಟ್ಟಿಸತಕ್ಕ ಬಗ್ಯೆ.	250	ಡಿಟೋ
21. ಕೆರಳಾಪುರದ ಯೂನಿಯನ್ ದೊಡ್ಡಿಯನ್ನು ಉತ್ತಮಸ್ಥಿತಿಗೆ ತರತಕ್ಕ ಬಗ್ಯೆ.	110	ಡಿಟೋ
ಅರಸೀಕೆರೆ ತಾಲ್ಲೂಕು.		
22. ಅರಸೀಕೆರೆ ರಂಗಾಚಾರ್ಲು ಛತ್ರದ ರಿಪೇರಿ ...	250	ಡಿಟೋ

ಪಿ. ಆರ್. ಡಬ್ಲ್ಯು. ವೆದರಾಲ್,

ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

1909ನೆ ಸೆಪ್ಟಂಬರ್ ತಾರೀಖು 4.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—1909ನೆ ಇಸವಿ ನವಂಬರು ಗುರ್ರೇ ಲಾಗಾಯಿತು 1910ನೆ ಇಸವಿ ಜೂನ್ ಆಖೈರ ವರೆಗೆ ಆಗುವ 8 ತಿಂಗಳಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಮೂಡಗೆರೆ ತಾಲ್ಲೂಕು ಕೊಟ್ಟಿಗೆಹಾರ (ಬೂದು ಘಾಟಿ) ಟೋಲ್ ಗೇಟಿನಲ್ಲಿ ಟೋಲಿಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಮೂಡಗೆರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ಶನಿವಾರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಎಲ್ಲಾ ಸವಾಲ್‌ಗಳಿಗಿಂತಲೂ ಜಾಸ್ತಿಯಾದ ಭಡ ದರಖಾಸ್ತು ಸರಿಯಾಗಿ ಕಂಡ್ರುಬಂದಲ್ಲಿ ಗವರ್ನ್ಮೆಂಟ್ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಭಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನು ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಭಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ನಾಲ್ಕನೆ ಒಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಯಲ್ಪಟ್ಟ ಗವರ್ನ್ಮೆಂಟ್ ಆಫ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಒಂದರ ಒಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನ್ಮೆಂಟಿನಿಂದ ಹರಾಜು ಮಂಜೂರಾಗಿ ಬಂದ ಕೂಡ್ಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹ ಸದರಿ ಮೊಬಲಗನ್ನು ಮೂಡಿಗೆರೆ ತಾಲ್ಲೂಕು ಖಜಾನೆಗೆ 1909ನೆ ಡಿಸೆಂಬರ್ ತಾರೀಖು 15ರ ಲಾಗಾಯಿತು ಸಮನಾದ 6 ಖಿಸ್ತುಗಳಾಗಿ ಪ್ರತಿ ತಿಂಗಳ 15ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು ಆಖೈರು 2 ಖಿಸ್ತುಗಳಿಗೆ ಜಮ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೇವಾರ್ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು 8 ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದೆ ಇದ್ದರೆ ಅಥವಾ ಜಾಮೀನ್ ಕೊಡದೆ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಸದರಿ ಕಂಟ್ರಾಕ್ಟು 2ನೆ ಹರಾಜು ಮಾಡಲ್ಪಡುವುದು. ಹೀಗೆ ಮಾಡಿದ್ದರಲ್ಲಿ ಸರಕಾರಕ್ಕೆ ನುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನ್‌ದಾರರ ಜೆಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತುಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಶೇಕಡಾ ಆರು ರೂಪಾಯಿ ಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನ್‌ದಾರ್ರಿಂದ ಬಾಕಿ ಮೊಬಲಗು ಬಾರದೆ ಇದ್ದಲ್ಲಿ ಲ್ಯಾಂಡ್ ರವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲ್ ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ್ ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಅಮಲ್‌ದಾರ್ರ ತನಿಖೆಗೆ ಒಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದುಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತರಫು ಪ್ರಾಸಿಕ್ಯೂಷನ್‌ಗೆ ಗುರಿಪಡಿಸುತ್ತೆ.

9. ದಂಡು ಮಿಲಿಟರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿ ಮೇಲೆ ಪ್ರಯಾಣ ಮಾಡುವ ಪೊಲೀಸ್ ಯಾ ಇತರ ಉದ್ಯೋಗಸ್ಥರ ಸರಕಾರದ ಸಾಮಾನುಗಳು ಅಂದರೆ ಸಂಬಂಧಪಟ್ಟ ಇಲಾಖಾ ಮೊಖ್ತೇಸರರ ಸರಟಿಫಿಕೇಟಿನಿಂದ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ಟೋಲ್‌ಗೇಟ್ ಬಳಿ ಚನ್ನಾಗಿ ಕಾಣುವ ಜಾಗಾದಲ್ಲಿ ತಗಲುಹಾಕಬೇಕು.

11. ಗವರ್ನ್ಮೆಂಟಿನಿಂದ ನೇಮಿಸಲ್ಪಟ್ಟ ಟೋಲ್‌ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

12. ರವಿನ್ಯೂ ಇಲಾಖೆಯೊಂದಿಗೆ ಸುಂಕದ ತೆಂಗೆ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡ ಯಾವನೊಬ್ಬ ಸಿಂದಲು ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು. ಈರೀತಿ ರೆವಿನ್ಯೂ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡ ಮೊಬಲಗನ್ನು ಹೊಂದಲು ಕಂಟ್ರಾಕ್ಟುದಾರನು ಸ್ವತಂತ್ರವುಳ್ಳವನಾಗುತ್ತಾನೆ.

13. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಕೊಟ್ಟಿಗೆಹಾರು ಟೋಲಗೇಟು ಮೇಲೆ ವಸೂಲು ಮಾಡಬೇಕಾದ ದರಗಳ ಪಟ್ಟಿ.

ನಂಬರು.	ವಿವರ.	ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಬಂಡಿಗೆ	2	0	0
2	ಪ್ರತಿ ಎರಡು ಡಿಟೋ	1	0	0
3	ಪ್ರತಿ ಯಕ್ಕಾ ಮೇಲೂ	0	4	0
4	ಸ್ಪ್ರಿಂಗ್ ಯಾನೆ ಬಿಲ್ಲಿನಮೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ	0	2	0
5	ಎಂಟು ಎತ್ತುಗಳಿಂದ ಯಾ ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರುಕತ್ತೆಗಳಿಂದ ಯಳೆಯಲ್ಪಡುವ ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	1	8	0
6	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಯಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ...	0	12	0
8	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಹೇಸರುಕತ್ತೆಗಳಿಂದ ಯಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	0	8	0
10	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	4	0
11	2 ಎತ್ತುಗಳು ವಗೈರೆಯಿಂದ ಯಳೆಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ..	0	4	0
12	ಡಿಟೋ ಡಿಟೋ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರೆ ಹೊರಿಸಲ್ಪಟ್ಟಿದ್ದರೆ	0	1	0
14	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದೆ ಇದ್ದರೆ	0	4	0
18	ಪ್ರತಿ ಕುದುರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದುರೆಗೂ ...	0	0	9
20	ಪ್ರತಿ ತಟ್ಟು ಯಾ ಹೇಸರುಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6
23	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿಗೂ	0	0	1
25	ಎಂಟು ಬೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಗೂ	1	0	0
26	ಆರು ಬೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ, ಯಾ ಟಾಂಜಾನಿಗೂ	0	12	0
27	ನಾಲ್ಕು ಬೋಯಿಗಳೊಡನೆ ಡಿಟೋ	0	8	0
28	ಇಬ್ಬರು ಬೋಯಿಗಳೊಡನೆ ಡಿಟೋ	0	4	0

ನೋಟು :—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ಸುಂಕ ವಸೂಲ್ ಮಾಡತಕ್ಕದ್ದಲ್ಲಾ.

ಜಿ. ಹನುಮಂತರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1909—10ನೆ ಇಸವಿ ಮಿ॥ ನಂಬರ್ 88.

ಹೊಸಕೋಟೆ ತಾಲ್ಲೂಕು ವಾಗಟದ ಅಗ್ರಹಾರದಲ್ಲಿದ್ದು ಮೃತಪಟ್ಟ ನಾರಣೈಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೃಷ್ಣಸಾಮೈಯ್ಯಂಗಾರ್ರು, ಮೃತಪಟ್ಟ ಸದರಿ ನಾರಣೈಯ್ಯಂಗಾರ್ರಿಗೆ ಮುಖ್ಯ ವಾರಸ್‌ದಾರರಾಗಬೇಕೆಂಬ ಹಕ್ಕುದಾರಿ ಮೇಲೆ ವಾಗಟದ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಾರಣೈಯ್ಯಂಗಾರ್ರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಸಾಮೈಯ್ಯಂಗಾರ್ರ ಅರ್ಜಿಯನ್ನು ಸರ್1909ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟವರ ಆಸ್ತಿಗೆ ಹಕ್ಕುದ್ದಾರರಾದ ಶಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಸೆಪ್ಟಂಬರ್ ತಿಂಗಳು 3ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ 1909—10ನೆ ಇಸವಿ ಮಿ|| ಅರ್ಜೀ ನಂಬರ 125.

ಬೆಂಗಳೂರು ಸರ್ವೆ ಇಲಾಖೆಲಿ ಕಾರಕೂನ ಮಾಡುತ್ತಾ ಇದ್ದು ಮೃತಪಟ್ಟ ಅಂಣಾಜಿ ರಾಮಚಂದ್ರ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಲಕ್ಷ್ಮೀಬಾಯಿ ಉರಫ ಕೃಷ್ಣಬಾಯಿ, ಮೃತಪಟ್ಟ ಸದರಿ ಅಂಣಾಜಿ ರಾಮಚಂದ್ರ ಯವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಅಂಣಾಜಿ ರಾಮಚಂದ್ರಯವರ ಜಿಂದಗಿ ಬಗ್ಯೆಗಿ ಒಂಭತ್ತು (900) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾರ.

ಸದರಿ ದರಖಾಸ್ತುದಾರರಾದ ನಂಜನಗೂಡಿನಲ್ಲಿ ಇಂಜನೀಯರ್ ಇಲಾಖೆ ಮುನಷಿ ಕೆ. ವೆಂಕೋಬರಾಯರ ಮಗಳು ಲಕ್ಷ್ಮೀಬಾಯಿ ಉರಫ ಕೃಷ್ಣಬಾಯಿ ಮೈನರ್, ಗಾರ್ಡಿಯನ ವೆಂಕೋಬರಾಯರ ಅರ್ಜಿಯನ್ನು 1909ನೆ ಇಸವಿ ಸೆಪ್ಟಂಬರ ತಿಂಗಳು ತಾರೀಖು 17 ರಲ್ಲು ಕೇಳಿ ಸರ್ಟಿಫಿಕೇಟ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ 1909ನೆ ಇಸವಿ ಆಗಸ್ಟು ತಿಂಗಳು 26ನೆ ತಾರೀಖಿನಲ್ಲಿ ಕೋರ್ಟು ಮೊಹರಿ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯ್ಯರ್,
ಸಬ ಜಡ್ಜ.

ಇಸ್ತಿಹಾರ.

ತಾರೀಖು 9ನೆ ಸೆಪ್ಟಂಬರ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—

ಮೈಸೂರು ಗವರ್ನಮೆಂಟ ಕುಣಿಗಲ್ ಎಕ್ಸಪೆರಿಮೆಂಟಲ್ ಫಾರಂಗೆ ಸೇರಿದ ರಂಗಸ್ವಾಮಿಬೆಟ್ಟ, ಬಡಗಿಡ ಮತ್ತು ದೊಡ್ಡ ಮಧುರೆ ಅಮೃತಮಹಲ್ ಕಾವಲುಗಳಲ್ಲಿನ ಹುಲ್ಲು, ತಂಗಡಿ ಮತ್ತು ಕಕ್ಕೆಚಕ್ಕೆ ಸಹ 1909-10ನೆ ಸಾಲಿಗೆ ರೂಢಿಸಿಕೊಳ್ಳಲು ಇದರಡಿ ನಮೂದಿಸಿರುವ ಷರತ್ತುಗಳಿಗೊಳಪಡಿಸಿ 1909ನೆ ಸೆಪ್ಟಂಬರು ಮಾಹೆ 23ನೆ ಗುರುವಾರ ಮಧ್ಯಾಹ್ನ 12 ಘಂಟೆಗೆ ಎಡೆಯೂರು ಸಮ್ಮತು ದಾಸನಪುರ ಗ್ರಾಮದ ಬಳಿ ಹೆಸರಘಟ್ಟ ಫಾರಂ ಅಸಿಸ್ಟೆಂಟರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ತೇದಿನಲ್ಲಿ ಹಾಜರಾಗಿ ಭಡ ಸವಾಲ್ಮಾಡಿ ಪಡೆಯಬಹುದು.

ಷರತ್ತುಗಳ ವಿವರ.

1. ಹರಾಜುದಾರನು ಕಾವಲುಗಳಲ್ಲಿರುವ ಗಿಡ, ಮರ, ಮೆಳೆ ಮತ್ತು ಈಚಲು ವಗೈರೆ ಯಾವದನ್ನೂ ನಾಶಪಡಿಸಕೂಡದು.

2. ಹರಾಜುದಾರನ ವಾಯಿದೆ ಒಳಗಾಗಿ ಅಂದರೆ 1910ನೆ ಏಪ್ರಲ್ ಆಖೈರಿನೊಳಗಾಗಿ ಕಾವಲುಗಳಲ್ಲಿ ವ್ಯವಸಾಯಕ್ಕೆ ಪೋಡಾಗಿರುವ ಯಾವ ಭಾಗದ ಜಮೀನುಗಳನ್ನಾದರು ಸರ್ಕಾರದವರು ರೈತರಿಗೆ ಹುರಳಿಸಾಗಿಗೆ ಕೊಡುತ್ತಾ ಬಂದಲ್ಲಿ ಆಯಾ ರೈತರ ಸಾಗಿಗಾಗಲಿ ಸದರಿ ಜಮೀನುಗಳಲ್ಲಿನ ದನಕರುಗಳ ಮೇವಿಗಾಗಲಿ ಹರಾಜುದಾರನು ಯಾವವಿಧವಾದ ತೊಂದರೆಯನ್ನು ಪಡಿಸಕೂಡದು. ಮತ್ತು ಅದಕ್ಕಾಗಿ ಹರಾಜುದಾರನಿಗೆ ಸರ್ಕಾರ್ದವರಿಂದ ಯಾವವಿಧವಾದ ಪರಿಹಾರವೂ ಸಹ ದೊರೆಯಲಾರದು.

3. ಹರಾಜುದಾರನು ಮೇಲ್ಕಂಡ ಕಾವಲುಗಳಲ್ಲಿ ಕಾವಲುಗಾರನ ತಲಬ ಕಾವಲಿಗೆ ಪ್ರವೇಶ ಮಾಡಕೂಡದು.

4. ಹರಾಜುದಾರನು ದನ, ಎಮ್ಮೆ ವಗೈರೆ ರಾಸುಗಳು ಹೊರ್ತು ಆಡುಗಳನ್ನು ಕಾವಲಿಗೆ ಬಿಟ್ಟು ಮೇಯಿಸಕೂಡದು, ಅಲ್ಲದೆ ಕಾವಲಿನೊಳಗೆ ಬೀಳುವ ಸಗಣಿ ಆರಿಸಕೂಡದು.

5. ಹರಾಜುದಾರನ ವಾಯಿದೆ (1910ನೆ ಏಪ್ರೆಲ್ ಆಖೈರಿನೊಳಗಾಗಿ) ಸರ್ಕಾರಿ ರಾಸುಗಳು ಪಯಣದಮೇಲೆ ಬಂದಲ್ಲಿ ಕಾವಲಿನಲ್ಲಿ 1—2 ದಿನಗಳು ಇದ್ದು ಮುಂದಕ್ಕೆ ಹೋಗಲು ಅಡ್ಡಿಪಡಿಸಕೂಡದು.

6. ಹರಾಜುದಾರನು ಹರಾಜು ಖೈದಾದಕೂಡ್ಲೆ ನಾಲ್ಕರಲ್ಲಿ ಒಂದುಭಾಗ ಮೊಬಲಗನ್ನು ಡಿಪಾಜಟ್ಟುಬಗ್ಯೆ ಹಾಜರ್ಮಾಡಬೇಕಲ್ಲದೆ ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳಲ್ಲಿ ಪಾವತಿಮಾಡಿ ರಶೀತಿ ಪಡೆಯತಕ್ಕದ್ದು.

7. ವಾಯಿದೆ ಅಂದರ್‌ವಾರ್ ಡಿಪಾಜಟ್ ಮೊಬಲಗು ಜಾತಾಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಲ್ಲಿ ಹರಾಜುದಾರನು ಮೇಲ್ಕಂಡ ಡಿಪಾಜಟ್ ಮೊಬಲಗು ಕಳೆದುಕೊಳ್ಳುವದಲ್ಲದೆ ದುಸರೆ ಹರಾಜು ಮಾಡಲ್ಪಡುವದರಿಂದ ಸರ್ಕಾರಕ್ಕೆ ಸಂಭವಿಸುವ ನಷ್ಟಗಳಿಗೆ ಮೊದಲು ಹರಾಜುದಾರನು ಗುರಿಯಾಗುತ್ತಾನೆ.

8. ಹರಾಜುದಾರನು ಮೊಬಲಗನ್ನು ವಾಯಿದೆಯಲ್ಲಿ ಪೂರ್ತಿ ಪಾವತಿ ಮಾಡಿದನಂತರ ಹಜರತ್ ಮಿಲಿಟೆರಿ ಸೆಕ್ರೆಟೆರಿ ಸಾಹೇಬರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ ಹರಾಜುದಾರನು ಕಾವಲಿನೊಳಗೆ ಪ್ರವೇಶಮಾಡಲು ಅಧಿಕಾರವನ್ನು ಹೊಂದುವನು.

ಷರಾ :—ರಂಗಸ್ವಾಮಿಬೆಟ್ಟದಲ್ಲಿ ಹಾಡೋನಹಳ್ಳಿ ಜೋಡೀದಾರ್‌ರಿಗೆ ಹಾಡೋನಹಳ್ಳಿ ಗ್ರಾಮದ ಕಡೆಗೆ ಮೊದಲೇ ಹರಾಜು ಮೂಲಕ ಕೊಟ್ಟಿರುವ ಒಂದು ನೂರು ಎಕರೆ ಜಮೀನು ವಿನಾ ಬಾಕಿ ಕಾವಲು ಹರಾಜು ಮಾಡಲ್ಪಡುತ್ತೆ.

ಹೆಚ್. ಡಾ,
ಫಾರ ಮಿಲಿಟೆರಿ ಸೆಕ್ರೆಟೆರಿ.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರಫ್.

1909ನೆ ಇಸವಿ ಸೆಪ್ಟಂಬರ 1ನೆ ತಾರೀಖಿನ 83ನೇ ನಂಬರು ರೂಲ್ ಆಫ್ ಪ್ರಾಕ್ಟೀಸ್.

1892ನೆ ಇಸವಿ ಸೆಪ್ಟಂಬರ 1ನೆ ತಾರೀಖಿನ 58ನೆ ನಂಬ್ರರ ರೂಲ್ ಆಫ್ ಪ್ರಾಕ್ಟೀಸ್, 1899ನೆ ಇಸವಿ ಜನವರಿ 12ನೆ ತಾರೀಖಿನ 6 ನೈ ನಂಬರ ರೂಲ್ ಆಫ್ ಪ್ರಾಕ್ಟೀಸ್, 1891ನೆ ಇಸವಿ ಮಾರ್ಚಿ 10ನೆ ತಾರೀಖಿನ 94ನೆ ನಂಬರ ಸರ್ಕ್ಯುಲರ್ ಲೆಟ್ ಇವುಗಳನ್ನು ರದ್ದುಮಾಡಿ ಚೀಫ್ ಕೋರ್ಟಿನವರು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 554ನೆ ಸೆಕ್ಷರ್ನ ಮೇರೆಗೆ ಗವರ್ನ್ ಮೆಂಟಿನ ಅನುಮತಿಹೊಂದಿ ಕ್ಯಾಲೆಂಡರ್‌ಗಳನ್ನು ಕಳುಹಿಸುವ ವಿಷಯದಲ್ಲಿ ಈ ಕೆಳಗಿನ ರೂಲ್ಸುಗಳನ್ನು ವಿಧಿಸಿರುತ್ತಾರೆ.

ಒರಿಜಿನಲ್ ಜ್ಯೂರಿಸ್‌ಡಿಕ್ಷನ್.

1. ಸೆಷನ್ಸ್ ಜಡ್ಜಿಗಳು—

ಸೆರ್ಷನ್ ಜಡ್ಜಿಗಳ ಕೋರ್ಟಿನವರು ಎಲ್ಲಾ ಜಡ್ಜಮೆಂಟ್‌ಗಳ ಮತ್ತು ಆರ್ಡರುಗಳ ನಕಲುಗಳನ್ನು ಇದಕ್ಕೆ ಲಗತ್ತಿರುವ ನಮೂನೆಯ ಪ್ರಕಾರ ಒಂದು ತಪಶೀಲ್‌ವಾರ್ ತಖ್ತೆ (Tabular Statemeu) ಯೊಂದಿಗೆ ಪ್ರತಿಯೊಂದು ಮೊಖದ್ದಮೆಯಲ್ಲಿಯೂ ಜಡ್ಜಿಮೆಂಟ್ ಅಥವಾ ಆರ್ಡರನ್ನು ಹೇಳಿದ 48 ಘಂಟೆಗಳೊಳಗಾಗಿ ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು.

2. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರುಗಳು—

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು ತಾವು ವಿಚಾರಣೆ ಮಾಡಿದ ಎಲ್ಲಾ ಕೇಸುಗಳಲ್ಲಿಯೂ ಅಂದರೆ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 8, 10, 11, 12 ಮತ್ತು 36ನೆ ಅಧ್ಯಾಯಗಳ ಮೇರೆಗೆ ನಡಿಸಿದ ನಡವಳಿಕೆಗಳಲ್ಲಿಯೂ ಸಹಾ ಜಡ್ಜಿಮೆಂಟ್ ಅಥವಾ ಆರ್ಡರುಗಳನ್ನು ಹೇಳಿದ 24 ಘಂಟೆಗಳೊಳಗಾಗಿ ಇವುಗಳ ನಕಲುಗಳನ್ನು ತಪಶೀಲವಾರ್ ತಖ್ತೆಯೊಂದಿಗೆ ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು.

3. ಸಬ್ ಡಿವಿಜರ್ನ ಮ್ಯಾಜಿಸ್ಟ್ರೇಟರುಗಳು ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರುಗಳು—

ಸಬ್ ಡಿವಿಜರ್ನ ಮ್ಯಾಜಿಸ್ಟ್ರೇಟರುಗಳು ಮತ್ತು ಎಲ್ಲಾ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರುಗಳು ತಾವು ವಿಚಾರಣೆ ಮಾಡಿದ ಎಲ್ಲಾ ಮೊಖದ್ದಮೆಗಳಲ್ಲಿಯೂ ಅಂದರೆ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 8, 10, 11, 12 ಮತ್ತು 36ನೆ ಅಧ್ಯಾಯಗಳ ಮೇರೆ ನಡಿಸಿದ ನಡವಳಿಕೆಗಳಲ್ಲಿಯೂ ಸಹ ಜಡ್ಜಮೆಂಟ್ ಮತ್ತು ಆರ್ಡರುಗಳ ನಕಲುಗಳನ್ನು ತಪಶೀಲವಾರ್ ತಖ್ತೆಯೊಡನೆ ವಿಚಾರಣೆ ಪೂರೈಸಿದ 24 ಘಂಟೆಗಳೊಳಗಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕಳುಹಿಸತಕ್ಕದ್ದು.

4. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರುಗಳು ಮೇಲ್ಕಂಡವುಗಳನ್ನು ಪರಾಂಬರಿಸಿ ಅವುಗಳನ್ನು ಆ ವಿಷಯವಾಗಿ ತಾವು ಏನಾದರೂ ಅಮಲ್ ನಡಿಸಿದ್ದಪಕ್ಷದಲ್ಲಿ ಅಂಥಾದ್ದನ್ನು ತೋರಿಸುವ ಒಂದು ಷರಾನಿಶಿ, ಸೆರ್ಷನ್ ಜಡ್ಜಿಯವರಿಗೆ ಸಾವಕಾಶಮಾಡದೆ ಕಳುಹಿಸತಕ್ಕದ್ದು.

5. ಎಲ್ಲಾ ಸೆಕೆಂಡ್ ಮತ್ತು ಥರ್ಡ್ ಕ್ಲಾಸ್ ಮ್ಯಾಜಿಸ್ಟ್ರೇಟರುಗಳು ಅವರು ಹೇಳಿದ ಎಲ್ಲಾ ಜಡ್ಜಮೆಂಟ್ ಮತ್ತು ಆರ್ಡರುಗಳ ನಕಲುಗಳನ್ನು ವಿಧಾಯಕವಾದ ತಖ್ತೆಗಳೊಂದಿಗೆ ವಿಚಾರಣೆ ಪೂರೈಸಿದ 24 ಘಂಟೆಗಳೊಳಗಾಗಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರುಗಳಿಗೆ ಕಳುಹಿಸತಕ್ಕದ್ದು. ಸಬ್ ಡಿವಿಜರ್ನ ಮ್ಯಾಜಿಸ್ಟ್ರೇಟರು ಇರುವಪಕ್ಷದಲ್ಲಿ ಇವರಮೂಲಕ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕಳುಹಿಸತಕ್ಕದ್ದು. ಸಬ್ ಡಿವಿಜರ್ನ ಮ್ಯಾಜಿಸ್ಟ್ರೇಟರಿಗೆ ತಲಪಿದ ಜಡ್ಜಮೆಂಟ್, ಆರ್ಡರ್ ಮತ್ತು ತಖ್ತೆಗಳನ್ನು ಅವರು ಪರೀಕ್ಷಿಸಿ ನೋಡಿ, ಕೆಳಗಣ ಮ್ಯಾಜಿಸ್ಟ್ರೇಟರುಗಳ ನಡವಡಿಕೆಗಳಲ್ಲಿ ತಪ್ಪುಗಳು ಅಥವಾ ಅಕ್ರಮಗಳು ಕಂಡುಬಂದಲ್ಲಿ ಅಂಥಾವುಗಳನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಗಮನಕ್ಕೆ ತಂದು ಮೇಲ್ಕಂಡ ನಕಲುಗಳನ್ನು ಡಿಟೋ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು.

6. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 209ನೆ ಸೆಕ್ಷರ್ನ ಮೇರೆ ಡಿಸ್‌ಚಾರ್ಜ್ ಹುಕುಂ ಮಾಡಿದ್ದಲ್ಲಿ ಇಂಥಾ ಆರ್ಡರಿನ ನಕಲನ್ನು ಮೊದಲು ಸೆರ್ಷನ್ ಜಡ್ಜಿಗಳಿಗೆ ರವಾನಿಸತಕ್ಕದ್ದು. ಮೇಲ್ಕಂಡ ಆರ್ಡರು ಬೇರೆ ಇನ್ಯಾವ ಮ್ಯಾಜಿಸ್ಟ್ರೇಟರವರು ಮಾಡಿದ್ದಲ್ಲಿ ಅವರು ಅಂಥಾ ಆರ್ಡರಿನ ನಕುಲನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಅದನ್ನು ಅನವಶ್ಯಕವಾಗಿ ಸಾವಕಾಶ ಮಾಡದೆ ಸೆರ್ಷನ್ ಜಡ್ಜಿಯವರಿಗೆ ಕಳುಹಿಸತಕ್ಕದ್ದು. ಸೆರ್ಷನ್ ಜಡ್ಜಿಗಳು ಈ ನಕುಲುಗಳನ್ನು ಪರಾಂಬರಿಸಿದನಂತರ ಚೀಫ್ ಕೋರ್ಟಿಗೆ ಕಳುಹಿಸತಕ್ಕದ್ದು.

7. ಕಕ್ಷಿಗಾರರು ರಾಜಿಮಾಡಿಕೊಂಡ ಮೊಖದ್ದಮೆಗಳಲ್ಲಿಯೂ ಅಥವಾ ವಾಪಸು ತೆಗೆದುಕೊಳ್ಳಲು ಅಪ್ಪಣೆ ಕೊಡಲ್ಪಟ್ಟ ಮೊಖದ್ದಮೆಗಳಲ್ಲಿಯೂ ಅಥವಾ ಫಿರ್ಯಾದಿ ಹಾಜರಾಗದ ಸಬಬು ಡಿಸ್‌ಮಿಸ್ ಮಾಡಲ್ಪಟ್ಟ ಮೊಖದ್ದಮೆಗಳಲ್ಲಿಯೂ ಆದ ಜಡ್ಜಮೆಂಟ್ ಅಥವಾ ಆರ್ಡರ್ ನಕಲುಗಳ ಸಂಗಡ ತಖ್ತೆಗಳನ್ನು ಕಳುಹಿಸಲವಶ್ಯಕವಿಲ್ಲ.

8. ತಮಗೆ ರವಾನಿಸಲ್ಪಟ್ಟ ಜಡ್ಜಮೆಂಟ್‌ಗಳ ನಕುಲುಗಳನ್ನು ಸೆರ್ಷನ್ ಜಡ್ಜಿಯವರು ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು ಚೆನ್ನಾಗಿ ಪರಿಶೀಲನೆ ಮಾಡಿ ಮೊಖದ್ದಮೆ ರಿವಿಜರ್ನಗೆ ಅರ್ಹವಾದ್ದೆಂದು ತೋರಿಬಂದಲ್ಲಿ ಅಂಥಾ ಮೊಖದ್ದಮೆಗಳನ್ನು ತಕ್ಷಣವೇ ಚೀಫ್ ಕೋರ್ಟಿಗೆ ರಿಪೋರ್ಟ್ ಮಾಡತಕ್ಕದ್ದು.

ಅಪೆಲೆಟ್ ಜ್ಯೂರಿಸ್‌ಡಿಕ್ಷರ್ನ.

ಸೆಷನ್ಸ್ ಜಡ್ಜಿಗಳು ತಮ್ಮ ಅಪೀಲ್ ಅಧಿಕಾರವನ್ನು ಚಲಾಯಿಸೋಣದರಲ್ಲಿ ಮಾಡಿದ ಪ್ರತಿಯೊಂದು ಜಡ್ಜಮೆಂಟ್ ಅಥವಾ ಆರ್ಡರಿನ ನಕಲನ್ನು ಮತ್ತು ಕ್ರಿಮಿನಲ್ ಪ್ರೊಸೀಡ್ಯೂರು ಕೋಡಿನಲ್ಲಿ ವಿಧಾಯಿಸಿರುವ ಮೇರೆಗೆ ವಿಚಾರಣೆಯಲ್ಲಿರುವ ಯಾವ ವಿಷಯವನ್ನು ಆಖೈರಾಗಿ ತೀರ್ಮಾನ ಮಾಡುವ ಪ್ರತಿಯೊಂದು ಮಿಸಲೇನಿಯಸ್ ಆರ್ಡರಿನ ನಕುಲನ್ನು ಸಹ ಅಂಥಾ ಹುಕ್ಕುಂ ಆದ 48 ಘಂಟೆಗಳೊಳಗಾಗಿ ಚೀಫ್ ಕೋರ್ಟಿಗೆ ರವಾನಿಸತಕ್ಕದ್ದು.

10. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು ತಮ್ಮ ಅಪೀಲ ಅಧಿಕಾರವನ್ನು ಚಲಾಯಿಸೋಣದರಲ್ಲಿ ಮಾಡಿದ ಪ್ರತಿಯೊಂದು ಜಡ್ಜ್‌ಮೆಂಟ್ ಅಥವಾ ಆರ್ಡ್ಡರಿನ ನಕಲನ್ನು ಮತ್ತು ಕ್ರಿಮಿನಲ್ ಪ್ರೊಸೀಡ್ಯುರ ಕೋಡಿನಲ್ಲಿ ವಿಧಾಯಿಸಿರುವ ಮೇರಿಗೆ ವಿಚಾರಣೆಯಲ್ಲಿರುವ ಯಾವ ವಿಷಯವನ್ನು ಆಖೈರಾಗಿ ತೀರ್ಮಾನ ಮಾಡುವ ಪ್ರತಿಯೊಂದು ಮಿಸಲೇನಿಯಸ್ ಆರ್ಡರಿನ ನಕಲನ್ನು ಸಹ ಅಂಥಾ ಹುಕ್ಕುಂ ಆದ 48 ಘಂಟೆಗಳೊಳಗಾಗಿ ಚೀಫ್ ಕೋರ್ಟಿಗೆ ರವಾನಿಸತಕ್ಕದ್ದು.

11. ಮೇಲೆ 10ನೆ ಪ್ಯಾರಾದಲ್ಲಿ ನಮೂದಿಸಿರುವಂಥ ಮಿಸಲೇನಿಯಸ್ ಆರ್ಡ್ಡರುಗಳನ್ನು ಮತ್ತು ಅಪೀಲ ಜಡ್ಜ್‌ಮೆಂಟುಗಳನ್ನು ಸಬ್ ಡಿವೀಜನ್ ಮ್ಯಾಜಿಸ್ಟ್ರೇಟರುಗಳೇ ಆಗಲಿ ಅಥವಾ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರುಗಳೇ ಆಗಲಿ, ಕೊಟ್ಟಿದ್ದ ಪಕ್ಷದಲ್ಲಿ, ಅಂಥವುಗಳ ನಕಲುಗಳನ್ನು 48 ಘಂಟೆಗಳೊಳಗಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಗೆ ಕಳುಹಿಸತಕ್ಕದ್ದು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳು ಅವುಗಳನ್ನು ನೋಡಿ ಸಾವಕಾಶಮಾಡದೆ ಸೆಷನ್ಸ್ ಜಡ್ಜಿಗಳಿಗೆ ರವಾನೆ ಮಾಡತಕ್ಕದ್ದು.

12 ಚೀಫ್ ಕೋರ್ಟಿಗೆ ಅಥವಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ 9, 10, 11ನೆ ಪ್ಯಾರಾಗಳ ಮೇರೆಗೆ ಅಪೀಲ ಜಡ್ಜ್‌ಮೆಂಟ್ ನಕಲು ಕಳುಹಿಸುವಾಗ್ಯೆ ಅಂಥಾ ಜಡ್ಜ್‌ಮೆಂಟ್ ಯಾ ಆರ್ಡರ ಸಂಗಡ ಕೆಳಕೋರ್ಟಿನ ಜಡ್ಜ್‌ಮೆಂಟ್ ಯಾ ಆರ್ಡ್ಡರು ಅದರ ಸಂಗಡ ಕಳುಹಿಸಬೇಕಾದ ತಖ್ತೆಯನ್ನೂ ಸಹ ತಪ್ಪದೇ ಕಳುಹಿಸತಕ್ಕದ್ದು.

13. ಸೆಷನ್ಸ್ ಜಡ್ಜಿಗಳು ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು ಮೇಲ್ವಿಚಾರಣೆ ಅಧಿಕಾರವನ್ನು ಚಲಾಯಿಸುವಾಗ ಇದರಡಿ ನಮೂದಿಸುವ ಕೆಲವು ಅಂಶಗಳಿಗೆ ಮುಖ್ಯವಾಗಿ ನಿಗಾ ಕೊಡತಕ್ಕದ್ದು.

(a) ಅನವಶ್ಯಕವಾಗಿ ಆಗಲಿ ಅಥವಾ ದುಡುಕಾಗಿ ಆಗಲಿ ಪ್ರೋಸೆಸ್ ಕೊಡೋಣ.

(b) ಅಕ್ರಮಪ್ರವೇಶ ಅಥವಾ ಕೆಡಕು ತಕ್ಸೀರುಗಳೆಂಬ ನೆವದಮೇಲೆ ತಕರಾರ ಆಸ್ಪದವಾದ ಹಕ್ಕುದಾರಿಗಳ ವಿಚಾರದಲ್ಲಿ ಕ್ರಮಜರಗಿಸೋಣ ಮತ್ತು ಕ್ರಿಮಿನಲ್ ಉದ್ದೇಶ ಇತ್ತೇ ಎಂಬ ವಿಷಯವನ್ನು ತೀರ್ಮಾನಿಸದೆ ಈ ತಕ್ಸೀರುಗಳಿಗೆ ಶಿಕ್ಷಿಸೋಣ.

(c) ತಪ್ಪಿತಸ್ಥರಾದ ಪೂರ್ವವಯಸ್ಕರಿಗೆ ವಿಧಿಸಿರುವ ಶಿಕ್ಷೆಯ ಔಚಿತ್ಯಾನೌಚಿತ್ಯದ ವಿಚಾರ.

(d) ಕ್ರಿಮಿನಲ್ ಪ್ರೊಸೀಡ್ಯುರ ಕೋಡಿನ 250 ಮತ್ತು 562ನ ಸೆಕ್ಷನ್‌ಗಳಲ್ಲಿ ಕಂಡ ಅಧಿಕಾರಗಳನ್ನು ವಿಚಕ್ಷಣೆಯಿಂದ ಚಲಾಯಿಸಲ್ಪಟ್ಟಿದೆಯೋ ಇಲ್ಲವೇ ಎಂಬ ವಿಚಾರ.

(e) ತಪ್ಪಿತಸ್ಥರ ಚೈತನ್ಯಕ್ಕೆ ಮೀರಿ ವಿಚಕ್ಷಣೆಯಿಲ್ಲದೆ ವಿಧಿಸಲ್ಪಟ್ಟ ಜರಿಮಾನೆಗಳ ವಿಷಯ.

(f) ಹೆಚ್ಚು ಶಿಕ್ಷೆ ಕೊಡಬೇಕಾದ ತಪ್ಪಿತಗಳಿಗೆ ಕೆಳಕೋರ್ಟಿನವರು ಮೇಲ್ಪಟ್ಟ ಕೋರ್ಟಿಗೆ ಜಾಸ್ತಿ ಶಿಕ್ಷೆ ಕೊಡಿಸುವ ಬಗ್ಯೆ ಮೊಖದ್ದಮೆಗಳನ್ನು ಕಳುಹಿಸದೆ ತಾವೇ ಅಲ್ಪಶಿಕ್ಷೆ ಕೊಡುವ ವಿಚಾರ.

(g). ಮ್ಯಾಜಿಸ್ಟ್ರೇಟರು ತಮಗೆ ಇರುವ ಸಾಧಾರಣವಾದ ಅಧಿಕಾರಕ್ಕಿಂತ ಹೆಚ್ಚಾದ ಶಿಕ್ಷೆಯನ್ನು ಕೊಡಬೇಕೆಂಬ ಉದ್ದೇಶ್ಯದಿಂದ ಸಜಾ ಜೊತೆಗೆ ಭಾರಿ ಜರಿಮಾನೆ ವಿಧಿಸಿ ಜರಿಮಾನೆ ಕೊಡದೆಹೋದ ಪಕ್ಷದಲ್ಲಿ ಜಾಸ್ತಿ ಸಜಾ ಅನುಭವಿಸಬೇಕೆಂದು ಮಾಡಿರುವ ವಿಚಾರ.

(h) ನೆಮ್ಮದಿಗೆ ಭಂಗಬಾರದಂತೆ ಇರುವ ಬಗ್ಯಾಗಲಿ ಅಥವಾ ಒಳ್ಳೇ ನಡತೇಲಿರುವದಕ್ಕಾಗಲಿ ಮಿತಿಮೀರಿದ ಜಾಮೀನನ್ನು ತೆಗದುಕೊಂಡ ವಿಚಾರ.

(i) ಮೊಖದ್ದಮೆ ತೀರ್ಮಾನಿಸುವ ವಿಷಯದಲ್ಲಿ ಅನಾವಶ್ಯವಾಗಿ ಸಾವಕಾಶ ಮಾಡಿದ ವಿಚಾರ.

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

....ನೆ ಕೋರ್ಟ ರೂಬರೂ ದರ್ಯಾಫ್ತು ಆದವರ ಕ್ಯಾಲೆಂಡರ್.

(1) ಜಂಜರ ನಂಬರು
(2) ಫಿರ್ಯಾದಿ ಹೆಸರು
(3) ಅಪರಾಧಿ ಹೆಸರು
(4) ತಂದೆ ಹೆಸರು
(5) ಜಾತಿ
(6) ಕಸಬು
(7) ವಯಸ್ಸು
(8) ವಾಸಸ್ಥಳ
(9) ಫಿರ್ಯಾದಾದ ತಪ್ಪಿತ
(10) ಕೃತ್ಯ ನಡದ ತಾರೀಖು
(11) ಫಿರ್ಯಾದು ಅಥವಾ ರಿಪೋರ್ಟಿನ ತಾರೀಖು
(12) ಪೊಲೀಸುನವರಿಂದ ದಸ್ತಗಿರಿ ಆದ ತಾರೀಖು
(13) ಕೋರ್ಟಿನ ಮುಂದೆ ಮೊದಲು ಹಾಜರಾದ ತಾರೀಖು
(14) ವಿಚಾರಣೆ ಷುರುವಾದ ತಾರೀಖು
(15) ವಿಚಾರಣೆ ಆಖೈರಾದ ತಾರೀಖು
(16) ವಿಚಾರಣೆ ಫಲಿತಾಂಶ
(17) ಅಡ್ಜರ್ನಮೆಂಟುಗಳ ಸಂಖ್ಯೆ
(18) ಸಾವಕಾಶಕ್ಕೆ ಕಾರಣ ಮತ್ತು ಷರಾ

ಮ್ಯಾಜಿಸ್ಟ್ರೇಟ್.

1. ಅಪರಾಧಿಗಳ ಸಂಖ್ಯೆಯು ಜಾಸ್ತಿಯಾಗಿದ್ದು, (3) ಅಪರಾಧಿ ಹೆಸರು, (4) ತಂದೆ ಹೆಸರು, (6) ಕಸಬು ಮತ್ತು (8) ವಾಸಸ್ಥಳ ಇವುಗಳನ್ನು ನಮೂದಿಸುವದಕ್ಕೆ ಸ್ಥಳ ಸಾಲದೆ ಹೋದರೆ ಈ ತಪ್ಸೀಲನ್ನು ಬೇರೆ ಒಂದು ಕಾಗದದಲ್ಲಿ ಬರದು ಅದನ್ನು ಇದಕ್ಕೆ ಲಗತ್ತು ಮಾಡುವದು.

2. ಅಪರಾಧಿಯ ಹಾಜರಾತಿ ತಾರೀಖಿಗೂ ಮತ್ತು ಜಡ್ಜಿಮೆಂಟ್ ಅಥವಾ ಸೆನ್‌ಟೆನ್ಸ್ ತಾರೀಖಿಗೂ ಎರಡು ವಾರಗಳಿಗಿಂತ ಹೆಚ್ಚಾದ ಕಾಲವಿಳಂಬವಿದ್ದಲ್ಲಿ ಸುಸ್ತಿಯಾದ್ದಕ್ಕೆ ಕಾರಣವನ್ನು ತಪ್ಪದೆ ತಿಳಿಸಬೇಕು.

3. ಬೇರೆ ಕೋರ್ಟಿನಿಂದ ವರ್ಗವಾಗಿ ಬಂದ ಮೊಖದ್ದಮೆಗಳಲ್ಲಿ ಅಪರಾಧಿಯು ಮೊದಲು ಹಾಜರಾದ ತಾರೀಖನ್ನು ಮತ್ತು ಆ ಕೋರ್ಟಿನಲ್ಲಿ ಆದ ಅಡ್ಜರ್ನಮೆಂಟುಗಳ ಸಂಖ್ಯೆಯನ್ನು ಮತ್ತು ಹಿಂದಿನ ಸಜಾ ತಪ್ಸೀಲುಗಳನ್ನು ಸಹ 16ನೆ ಕಲಂನಲ್ಲಿ (ಕಾರಣ ಮತ್ತು ಷರಾ) ನಮೂದಿಸಬೇಕು.

4. ದಸ್ತಗಿರಿ ಮಾಡುವ ಸಂದರ್ಭದಲ್ಲಿ ಅಪರಾಧಿಯನ್ನು ಸೆರೆಯಲ್ಲಿ ಇಟ್ಟಿದ್ದರೆ ಅಥವಾ ಜಾಮೀನ್ ಮೇಲೆ ಬಿಟ್ಟಿದ್ದರೇ ಎಂಬ ಸಂಗತಿಯನ್ನು ಷರಾ ಕಲಂನಲ್ಲಿ ನಮೂದಿಸತಕ್ಕದ್ದು. ಜಾಮೀನುಮೇಲೆ ಬಿಟ್ಟಿದ್ದರೇ ಹಾಗೆ ಬಿಟ್ಟ ತಾರೀಖನ್ನೂ ಸಹಾ ನಮೂದಿಸತಕ್ಕದ್ದು.

5. ವಿಚಾರಣೆ ಫಲಿತಾಂಶ ಅಂದರೆ 16ನೆ ಕಲಂನಲ್ಲಿ...... ನೆ ಸೆಕ್ಷನ್ ಪ್ರಕಾರ ಡಿಸ್‌ಚಾರ್ಜು ಆದ್ದು ನೆ ಸೆಕ್ಷನ್ ಪ್ರಕಾರ ಅಕ್ವಿಟ್ ಆದ್ದು ಅಥವಾ ನೆ ಸೆಕ್ಷನ್ ಪ್ರಕಾರ ಶಿಕ್ಷಿಸಲ್ಪಟ್ಟದ್ದು ಮತ್ತು ಸೆನ್‌ಟೆನ್ಸ್ ಆದ್ದು ಈ ವಿಷಯಗಳನ್ನು ನಮೂದಿಸುವದು.

ತಿಳುವಳಿಕೆ ನೋಟಿಸ್.

ಕೋಲಾರ ಡಿಸ್ಟ್ರಿಕ್ಟು ಮುಳುಬಾಗಲ್ ತಾಲ್ಲೂಕು ಆವನಿ ಸಮ್ಮತು ಕಾಯಂಗುತ್ತಾ ಹೊನಗಾನಹಳ್ಳಿ ಇದಕ್ಕೆ ಮಜರ ರಾಮಾಪುರ ಜೋಡಿ ಕುರುಬರಹಳ್ಳಿ ಮತ್ತು ಜೋಡಿ ದೇವರಾಯಸಮುದ್ರ ವಗೈರೆ ಗ್ರಾಮಗಳ ಕಾಯಂಗುತ್ತಾದಾರ್ ಮತ್ತು ಜೋಡಿದಾರ್ರಾದ ಸದರಿ ಹೊನಗಾನಹಳ್ಳಿಯಲ್ಲಿರುವ ವೆಂಕಟ್ರಾಮಯ್ಯನವರ ಮಕ್ಕಳಾದ 1ನೆ ವೆಂಕಟೇಶಯ್ಯ, 2ನೆ ರಾಮಸ್ವಾಮಯ್ಯ ಆದ ನಾವುಗಳು ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ವೆಂಕಟ್ರಾಮಯ್ಯನವರ 3ನೆ ಮಗನಾದ ಕ್ರಿಷ್ಣಯ್ಯನೆಂಬುವನು ನಮ್ಮಗಳ ಅವಿಭಕ್ತ ಕುಟುಂಬಕ್ಕೆ ಸೇರಿದವನಾಗಿ ಅವಿಭಕ್ತ ಕುಟುಂಬದಲ್ಲಿ ಇದ್ದುಕೊಂಡೂ ಕೂಡ ಸ್ವೇಚ್ಛೆಯಾಗಿ ಸಂಸೃಷ್ಟಕ್ಕೆ ಸೇರಿದ ಆಸ್ತಿಗಳನ್ನೂ ಮತ್ತು ನಮ್ಮ ಇತರ ಸ್ವಾರ್ಜಿತ ಸ್ವತ್ತುಗಳನ್ನೂ ಕೂಡ ಅಂದರೆ ಮೇಲೆ ವಿವರಿಸಿರುವ ಸ್ವತ್ತುಗಳನ್ನು ಕ್ರಯ, ಭೋಗ್ಯ, ಆಧಾರಾದಿಗಳು ವಗೈರೆಪರಭಾರೆ ಮಾಡುತ್ತಿರುವದಾಗಿ ಕಂಡುಬಂದು ಇರುತ್ತೆ. ಮೇಲ್ಕಂಡ ಸ್ವತ್ತುಗಳಲ್ಲಿ ನಮ್ಮಗಳಿಗೆ ಇರತಕ್ಕ ಹಕ್ಕು ಬಾಧ್ಯತೆಯು ಮೇಲ್ಕಂಡ ಕ್ರಿಷ್ಣಯ್ಯನಿಂದ ಪಡದವರಿಗೆ ಲೇಶವೂ ಸಲ್ಲಲಾರದು ತಿಳಿಯುವದು.

ತಾರೀಖು 25ನೆ ಆಗಸ್ಟು 1909.

ವೆಂಕಟೇಶಯ್ಯ.
ರಾಮಸ್ವಾಮಯ್ಯ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 38.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 23, ಸನ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟು ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.		[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ ತಾರೀಖು	18	200	
2	ಡಿಟೋ ...	ಸಾಗರ ...	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟನ್ನುಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು...	1909ನೆ ಡಿಸೆಂಬರ್ ತಾರೀಖು	2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟನ್ನುಗಳು ಕೋಲಾರದ 5 ಟನ್ನುಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ	...	2,400	

ಎಂ. ಮುತ್ತಣ್ಣಾ,
ಕನ್ಸರ್ವೇಟರ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ತಾರೀಖು 28ನೆ ಆಗಸ್ಟ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟ ಮತ್ತು ಡಿಸ್ಟ್ರಿಕ್ಟು ಜಂಗಲಿಗಳಲ್ಲಿಯೂ ಹಿಸುವಳಿ ಅಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ ಮತ್ತು ಪಬ್ಲಿಕ ಕ್ಯಾಟಲ ಕಾವಲುಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು 1909ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1910ನೆ ಸೆಪ್ಟಂಬರು 30ನೆ ತಾರೀಖಿನ ವರಿಗೆ ಜಮಾಯಿಸುವ ಹಕ್ಕನ್ನು ಪಡೆಯಲು 1909ನೆ ಇಸವಿ ಸೆಪ್ಟಂಬರ ತಾರೀಖು 29ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತು ತೆಗದುಕೊಳ್ಳಲ್ಪಡುವದು. ಆದರೆ ಸ್ಟೇಟ ಫಾರೆಸ್ಟುಗಳಲ್ಲೂ ಮತ್ತು ಅಮೃತಮಹಲ ಕಾವಲುಗಳಲ್ಲೂ 1910ನೆ ಫೆಬ್ರವರಿ ತಾರೀಖು 28ರ ನಂತರ ಅಳಲೇಕಾಯಿ ಜಮಾವಣೆಗೆ ಅವಕಾಶ ಕೊಡುವದಿಲ್ಲ.

“ ಜಿನಸುಗಳ ತಪಸೀಲು ” ಎಂದು ಷರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕಬಹುದಾದ ಜಿನಸುಗಳನ್ನು ಜಮಾಯಿಸತಕ್ಕ ಹಕ್ಕಿಗೇನೇ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1. ಮೈಸೂರು	8. ನಂಜನಗೂಡು
2. ಶ್ರೀರಂಗಪಟ್ಟಣ	9. ಚಾಮರಾಜನಗರ
3. ನಾಗಮಂಗಲ	10. ಗುಂಡ್ಲು ಪೇಟೆ
4. ಕೃಷ್ಣರಾಜಪೇಟೆ	11. ಹೆಗ್ಗಡದೇವನಕೋಟೆ
5. ಮಂಡ್ಯ	12. ಹುಣಸೂರು
6. ಮಳವಳ್ಳಿ	13. ಯಡತೊರೆ
7. ಟಿ. ನರಸೀಪುರ	

ಜಿನಸುಗಳ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟುವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲೀರಂಗು, 9. ಪತಂಗ, 10. ಮುಷ್ಠಿ, 11. ಚಿಲ್ಲಬೀಜ, 12. ಚಿಗಚೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮುಷ್ಠಿ, 16. ಉದರಿದ ಸಾರಗ್ಗದಕೊಂಬು, 17. ಗುಗ್ಗಳ, 18. ಬೇಲದಹಣ್ಣು, 19. ಆರಗು, (ನಾರಾಯಣದುರ್ಗ ಸ್ಟೇಟ ಫಾರೆಸ್ಟ ವಿನಹಾ) 20. ಸೀತಾಫಲದಹಣ್ಣು, 21. ಬೆಂಡೆನಾರು, 22. ಬೇವಿನಬೀಜ, 23. ಇಪ್ಪೇಬೀಜ, 24. ಅಳಲೇಕಾಯಿ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ ಫಾರೆಸ್ಟ ಸುತ್ತು ಇರುವ ಹಳ್ಳಿಗಳ ಅಳಲೆಕಾಯಿ ಸೇರಿ ಇಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಡಗಳ್ಳಿ, 6. ನಾರಣಾಪುರ, 7. ಮಾದನಹಳ್ಳಿ, 8. ಕರ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಿಟಂಗೆರೆ, 5. ಕಂಚಹಳ್ಳಿ, 6. ಸಿಂಗಾಪುರ, 7. ಮಸಂಕಪುರ, 8. ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಒಂದು ತಾಲ್ಲೂಕಿಗೂ ಬೇರೆಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಒಂದು ದರಖಾಸ್ತಿನೊಡನೆ (100) ಒಂದು ನೂರು ರೂಪಾಯಿನ ಕರೆನ್ಸಿ ನೋಟ ಠೇವಣಿ ಬಗ್ಯೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ ಮತ್ತು ಇನ್‌ಷೂರ ಮಾಡಿ ಲಿಫಾಪೆ ಮೇಲೆ “ ಪಸಾರೆ ದರಖಾಸ್ತು ” ಎಂದು ಬರದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1909ನೆ ಇಸವಿ ಸೆಪ್ಟಂಬರ ತಾರೀಖು 30ರಲ್ಲಿ ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ದರಖಾಸ್ತುಗಳನ್ನು ಒಡಿಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯು ಸದರಿ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗು ಕೂಡ್ಲೆ ವಾಪಸ ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಶೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ ಸೆಸ ಸಹಿತ ಖಜಾನೆಗೆ ಪಾರಖಾವಣಿ ಮಾಡಬೇಕು. ತಪ್ಪಿದಲ್ಲಿ ಮೊದಲು ದರಖಾಸ್ತು ಸಂಗಡ ಕಳುಹಿಸಿದ ಹಣವನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಂಡು ಬಾಬನ್ನು ಒಡನೆ ದುಸರೇ ಹರಾಜ ಮಾಡಿಸಲಾಗುವದು.

9. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ನಷ್ಟದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಷರತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 15 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ದುಸರಾ ಹರಾಜು ಮಾಡಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು 15 ದಿವಸಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರೆ ಅವನ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು. ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಪೂರಾ ಹಣ ಪಾವತಿ ಮಾಡಿದನಂತರ ಬಾಬು ಸುಪರ್ದು ಕೊಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರ್ರೆ ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಗ್ರಾಮ ಅಮರ್ಸೆ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ. ಮತ್ತು ಬಾವಲಿ ಕೀತುವೆಯಲ್ಲಿರುವ ಜೇನಿಗೂ ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ವಗೈರೆ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

16. ಇಜಾರೆದಾರರ ಕಡೆ ಕೂಲಿ ಆಳುಗಳು ಬಾಬು ಜಮಾವಣೆ ಬಗ್ಗೆ ಸ್ಟೇಟು ಫಾರೆಸ್ಟುಗಳು ಮತ್ತು ಅಮೃತಮಹಲ್ ಕಾವಲುಗಳಿಗೆ ಪ್ರವೇಶಿಸಲು ರೇಂಜು ಆಫೀಸರುಗಳಿಂದ ಚೀಟಿಗಳನ್ನು ಪಡದುಕೊಳ್ಳಬೇಕು.

ನೋಟಿಸ್.

ತಾರೀಖು 4ನೆ ಸೆಪ್ಟಂಬರ್ 1909.

ಈ ಕೆಳಗಿನಲ್ಲಿ ನಮೂದಿರತಕ್ಕ ತರಹೇದ ಮರಗಳು ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕು ಬೆಳತೂರು ಸ್ಟಾನಫಟ್ಟದಬಳಿ ಬಿದ್ದಿರುತ್ತವೆ. ಇದಕ್ಕೆ ವಾರಸುದಾರ್ರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ವಾರಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರಗಳು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

ತರಹೆ.	ಲಾಂಬಿ. ಅಡಿ.	ಅಂ.	ಸುತ್ತು. ಅಡಿ.	ಅಂ.	ಗುರ್ತು.
1. ಸಾಗುವಾನಿ	10	0	3	0	ಎಂ. ಜಿ. ಆರ್.
2. ಹತ್ತಿ ...	10	6	7	6	ಇಲ್ಲ.
3. ಡಿಟೋ ...	14	6	3	4	ಇಲ್ಲ.
4. ಡಿಟೋ ...	14	6	3	4	ಇಲ್ಲ.
5. ಡಿಟೋ ...	15	0	3	4	ಇಲ್ಲ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಅರಗು ಇಸ್ತಿಹಾರ್ ತಾರೀಖು 16ನೆ ಸೆಪ್ಟಂಬರ್ 1909.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟು ಈ ಕೆಳಗೆ ಕಂಡ ತಾಲ್ಲೂಕು ಸ್ಟೇಟ್ ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಮತ್ತು ಅಮೃತಮಹಲ್ ಕಾವಲುಗಳಲ್ಲಿ 1914ನೆ ಇಸವಿ ಜೂನ್ ಆಖೈರಿಗೆ ಖೈದಾಗುವ 5 ವರುಷಗಳ ವರಿಗೆ ಅರಗಿನ ಪಸಲ್ ಇಟ್ಟು ರೂಢಿಸಿಕೊಳ್ಳುವ ಹಕ್ಕನ್ನು ಸದರಿ ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ ಬಹಿರಂಗವಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ಹರಾಜ್ ಮಾಡಿಸಲಾಗುತ್ತೆ.

ನಂಬರ್.	ತಾಲ್ಲೂಕು ಹೆಸರು.	ಹರಾಜ್ ತಾರೀಖು.	ಷರಾ.
1	ಅರಸೀಕೆರೆ	9 10 1909	1914ನೆ ಇಸವಿ ಜೂನ್ ಆಖೈರಿಗೆ ಖೈದಾಗುವ 5 ವರುಷಗಳ ವರಿಗೆ.

2. ಖುಷ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆಯೇ ಹರಾಜು ಮೊಬಲಗಿನ ಕಾಲುಹಿಸ್ಸೆ ಮೊಬಲಗನ್ನು ಅದರ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಲೋಕಲ್ ಸೆಸ್ ಸೇರಿಸಿ ಸಮೀಪವಾದ ಖಜಾನೆಯಲ್ಲಿ ಜಮ್ಮಾ ಮಾಡಿಸಬೇಕು. ಅಲ್ಲದೆ ಬಾಕಿ ಉಳಿಯುವ ಮೊಬಲಗನ್ನು ಅದರ ಮೇಲಿನ ಸೆಸ್ ಸಹಾ 5 ಸಮನಾದ ಖಿಸ್ತುಗಳಲ್ಲಿ ಪಾವತಿ ಮಾಡುವದಾಗಿಯೂ ಹಾಗೆ ಮಾಡುವದರಲ್ಲಿ ಮೊದಲನೆ ಖಿಸ್ತು ಹರಾಜು ತಾರೀಖು ಲಾಗಾಯಿತು 15 ದಿವಸಗಳೊಳಗೇನೆ ಪಾವತಿ ಮಾಡುವದಾಗಿಯೂ ಬಾಕಿ 4

ಖಿಸ್ತುಗಳ ಮೊಬಲಗನ್ನು ಆಯಾಯ ಸಾಲ್ ಜುಲೈ ಗುರ್ರೇ ತಾರೀಖಿಗೆ ಅಂಥಾ ತಾರೀಖು ರಜಾ ದಿವಸವಾಗಿದ್ದಲ್ಲಿ ನಂತರ ಬರುವ ಕಚೇರಿ ದಿವಸದಲ್ಲಿ ಅಡ್ವಾನ್ಸಾಗಿ ಕೊಡುತ್ತಾ ಬರುವದಾಗಿಯೂ ಮತ್ತು ಸಕಾಲದಲ್ಲಿ ಮೊಬಲಗು ಪಾವತಿ ಮಾಡುವ ಬಗ್ಗೆ ಪಳ್ಳಿ ಜಾಮೀನ್ ಕೊಡಲು ಮುಚ್ಚಳಿಕೆ ಬರದುಕೊಡಬೇಕು. ಮೇಲ್ಕಂಡಂತೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ಪುನಃ ಹರಾಜು ಮಾಡಲ್ಪಡುವದು ಅಂಥಾ ದುಸರಾ ಹರಾಜಿನಿಂದ ಉಂಟಾಗುವ ಫಾಯಿದೆಗೆ ಅವಲ್ ಛಡ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ನಷ್ಟ ವುಂಟಾದಲ್ಲಿ ಅವಲ್ ಛಡ ದರಖಾಸ್ತುದಾರನಿಂದ ವಸೂಲ್ ಮಾಡುತ್ತೆ. ಅಂಥಾ ನಷ್ಟದ ಮೊಬಲಗನ್ನು ಕೇಳಿದ ಕೂಡ್ಲೆ ಕೊಡದೆ ಇದ್ದಲ್ಲಿ ಕಂದಾಯದ ಬಾಕಿಯಂತೆ ವಸೂಲ್ ಮಾಡುತ್ತೆ.

3. ಕಂಟ್ರಾಕ್ಟುದಾರನು ದೊಡ್ಡದಾದ ಮತ್ತು ಸುಮಾರು ದೊಡ್ಡದಾದ ರೆಂಬೆಗಳನ್ನು ಕಡಿಯಕೂಡದು ಅಥವಾ ಇನ್ಯಾವ ನಷ್ಟವೂ ಮರಗಳಿಗೆ ಆಗುವಂತೆ ಮಾಡಕೂಡದು. ಜಂಗಲ್‌ಗಳ ಸಂರಕ್ಷಣೆ ವಿಚಾರದಲ್ಲಿ ಜಾರೀಲಿರತಕ್ಕ ರೂಲ್ಸು ಮೇರೆ ನಡದುಕೊಳ್ಳಬೇಕು.

4. ಹರಾಜನ್ನು ಮಾಮೂಲ್ ಮೇರೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದಲಾಗಲಿ, ಡೆಪ್ಯುಟಿ ಕಮಿಷನರ್ ಸಾಹೇಬರವರಿಂದಲಾಗಲೀ ಅಥವಾ ಕನ್ಸರ್ವೇಟರ್ ಸಾಹೇಬರವರಿಂದಲಾಗಲಿ ರೂಲ್ಸು ಅನುಸರಿಸಿ ಮಂಜೂರ್ಮಾಡಲ್ಪಡುವದು.

ಬಿ. ಐ ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ, ತಾರೀಖು 17ನೆ ಸೆಪ್ಟಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ಡಿಪೋಗಳಲ್ಲಿ ಕೆಳಗೆ ನಮೂದಿರುವ ನಾಟಾಗಳನ್ನು ಸದರಿ ಡಿಪೋಗಳ ಬಾಜಾದಲ್ಲಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದಲಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರಿಂದಾಗಲೀ ಹರಾಜು ಮಾಡಲ್ಪಡುತ್ತವೆ.

ಡಿಪೋ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಮೊತ್ತ.	ಷರಾ.
			ನಂಬರು.	
ಶಿವಮೊಗ್ಗ ...	11ನೆ ಅಕ್ಟೋಬರ್ ...	(1) ಸಾಗುವಾನಿ ನಾಟಾ ...	35	[illegible]
		(2) ಮನ್ನಾಜಾತಿ ನಾಟಾ ...	50	
		(3) ಮತ್ತಿ ನಾಟಾ ...	100	
		(4) ಕಾಡುಜಾತಿ ನಾಟಾ ...	100	
		(5) ಕಾಡುಜಾತಿ ಜಿಲಗು ...	100	
		(6) ಬೀಟೆ ...	80	
		(7) ಹನಾಲ್ ...	300	

ಹರಾಜು ಷರತ್ತುಗಳು.

ಛಡ ದರಖಾಸ್ತುದಾರನು ಹರಾಜ್ ಆದ 5 (ಐದು) ದಿವಸಗಳೊಳಗಾಗಿ ಹರಾಜ್ ಮೊಬಲಗು ಪೈಕಿ ಶೇಕಡ 25ರಂತೆ ಆಗುವ ಮೊಬಲಗನ್ನು ಹತ್ತರಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜ್ ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ನವಂಬರು ತಾರೀಖು 25ರ ಒಳಗಾಗಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಮೊದಲು ಕಟ್ಟಿರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತ್ತು ಪೂರಾ ಪಾವತಿ ಮಾಡದೆಯೂ ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜ್ ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನಮ್ಯೇರೆ ಡಿಪೋ ಬಾಡಿಗೆ ವಸೂಲ್ಮಾಡಲಾಗುತ್ತೆ.

ಎ. ಪೊನ್ನುಸ್ವಾಮಿ ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 10ನೆ ಮಾಹೆ ಸೆಪ್ಟಂಬರ 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಇಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುಹಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ, ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲೀ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್‌ಪಟ್ಟೆವೆಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 90 ದಿನಗಳೊಳಗಾಗಿ ಗವರ್ನ್‌ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೆಲೆ.	ಸಾಲಿಯಾನಾ ಸರಕಾರಕ್ಕೆ ಕೊಡತಕ್ಕ ಜೋಡಿ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಜಾಗ.
ಕೋಲಾರ	ಕೋಲಾರ	ಹಕ್ಕ ಲೀ.	ಜೋಡಿ ಪಾರ್ಗಾನಹಳ್ಳಿ	1. ರಾಮಸುಬ್ಬಶಾಸ್ತ್ರಿ, 2. ಗಂಗಾಧರಶಾಸ್ತ್ರಿ, 3. ತ್ರ್ಯಂಬಕಶಾಸ್ತ್ರಿ, 4. ರಾಮಶಾಸ್ತ್ರಿ, 5. ಚಿನ್ನಪ್ಪ.	ಎ. ಗು. ಖುಷ್ಕಿ ... 182 30 ತರಿ ... 20 8 ಬಾಗಾಯತು ... 19 37 ಬಂಜರು ... 462 30 685 25 ಚಕ್ಕುಬಂದಿ. ಪೂರ್ವಕ್ಕೆ—ವಡಿಗೆರೆ ಸರಹದ್ದು. ಪಶ್ಚಿಮಕ್ಕೆ—ದಂಡಿಗಾನಹಳ್ಳಿ, ಸರಹದ್ದು. ಉತ್ತರಕ್ಕೆ—ಮುದವತಿ. ಸರಹದ್ದು. ದಕ್ಷಿಣಕ್ಕೆ—ಮಾರಾಪುರ ಸರಹದ್ದು.	ರೂ. ಆ. 495 0	ರೂ. ಆ. ಪೈ. 212 3 11	ರೂ. ಆ. ಪೈ. 68 14 6	ಕೋಲಾರ ತಾಲ್ಲೂಕು ಕಚೇರಿ ದರ್ವಾಜ ರಲ್ಲಿ 1909ನೇ ಇಸವಿ ನವೆಂಬರ್ 4ನೇ ತಾರೀಖು

ತಾರೀಖು 10ನೆ ಮಾಹೆ ಸೆಪ್ಟೆಂಬರ್ 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂಧಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂಧಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ್ದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಹೆಚ್ಚುದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಲುಕ್ಸಾನಪಟ್ಟೆಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲಿನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು	ಅಂದಾಜಾ ಬೀಜವರಿ.	ಅಂದಾಜು ಉತ್ಪನ್ನ ಬೆಲೆ.	ಜೋಡಿಯಾಗಿ ಸರಕಾರಕ್ಕೆ ಸಲ್ಲತಕ್ಕ ಕಂದಾಯ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಜಾಗ.
ಕೋಲಾರ.	ಕೋಲಾರ	ವಕ್ಕಲೇರಿ.	ಚಿಕ್ಕ ಅಂಕನಹಳ್ಳಿ.	1. ಮುನಿಸ್ವಾಮಪ್ಪ, 2. ರಾಮಪ್ಪ, 3. ಗಂಗಪ್ಪ, 4. ಸುಬ್ಬರಾಯಪ್ಪ	ಎ. ಗು. ಖುಷ್ಕಿ ... 198 2 ತರಿ ... 18 28 ಬಾಗಾಯತು. 12 17 ಪರಂಪೋಕು. 188 31 ಜುಮ್ಲಾ ... 417 38 ಚಕ್ಕುಬಂದಿ. ಪೂರ್ವಕ್ಕೆ—ನೆರ್ನಹಳ್ಳಿ ಸರಹದ್ದು. ಪಶ್ಚಿಮಕ್ಕೆ—ಚೆನ್ನಪುರ ಸರಹದ್ದು. ಉತ್ತರಕ್ಕೆ—ಶೆಟ್ಟಿಗಾನಹಳ್ಳಿ—ನೆರ್ನಹಳ್ಳಿ ಸರಹದ್ದು. ದಕ್ಷಿಣಕ್ಕೆ—ಲಿಂಗಧೀರನಹಳ್ಳಿ ಸರಹದ್ದು.	ರೂ. 325 ಆ. 2 ಪೈ 0	ರೂ. 143 ಆ. 11 ಪೈ 7	ರೂ. 116 ಆ. 7 ಪೈ 5	ಕೋಲಾರ ತಾಲ್ಲೂಕು ಕಚೇರಿ ಹತ್ತಿರ 1909ನೇ ಇಸವಿ ನವಂಬರ್ 5ನೇ ತಾರೀಖು

ಎ ವೇದಾಂತದೇಶಿಗಂ ಐಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 28ನೆ ಆಗಸ್ಟು 1909.

ಮೈಸೂರು ತಾಲ್ಲೂಕು ವರುಣಾದ ಹೋಬಳಿಗೆ ಸೇರಿದ ಜೋಡಿ ಹೊಸಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮೈಸೂರು ತಾಲ್ಲೂಕು ಕಛೇರಿಯಲ್ಲಿ 1909ನೆ ಅಕ್ಟೋಬರು ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಶೀಲ್ ಬಗ್ಗೆ ಸ‍ 1909ನೆ ಇಸವಿ ಸೆಪ್ಟಂಬರ ತಾರೀಖು 9ನೆ ಮುರ್ಕುಂ 36ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 724ನೆ ನಂಬರ ಪೇಜು ನೋಡತಕ್ಕದ್ದು.

ಕೆ. ಚಾಂಡಿ,
ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರ.

1909ನೆ ಇಸವಿ ಆಗಸ್ಟು ಮಾಹೆ 28ನೆ ತಾರೀಖು ಶನಿವಾರ ಪ್ರಾತಃಕಾಲ 7—30 ಘಂಟೆಗೆ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಕೆ. ಚಾಂಡಿ ಸಾಹೇಬರವರು, (ಪ್ರೆಸಿಡೆಂಟ್).
2. ,, ಎಂ. ಜಿ ಕೃಷ್ಣಸಾಮಿರಾಯರವರು, (ವೈಸ್ ಪ್ರೆಸಿಡೆಂಟ್).
3. ,, ವಿ. ಎಲ್. ಮಾಂಕರ್ರವರು, (ಮೈಸೂರು ಸಿಟಿ ಹೆಲ್ತಾಫಿಸರ್).
4. ,, ಸೈಯದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
5. ,, ಎಂ. ವೆಂಕಟಕೃಷ್ಣಯ್ಯನವರು.
6. ,, ಬಿ ವೆಂಕಟಾಚಾರ್ರವರು.
7. ,, ಎಚ್. ಶ್ರೀಕಂಠೈಯ್ಯನವರು.
8. ,, ಎಂ. ನರಸುಂಹಸ್ವಾಮಿಗಳವರು.
9. ,, ಅನಂತರಾಜೈಯ್ಯನವರು.
10. ,, ರಹಿಮುತ್ತುಲ್ಲಾ ಅಹಮ್ಮದ್‌ಸೇಟರವರು.
11. ,, ಎ. ಸುಬ್ಬಣ್ಣನವರು.
12. ,, ವಿ. ತಿರುವೆಂಗಡ ಮೊದಲಿಯಾರ್ರವರು
13. ,, ಸೈದ್ ಮೊಹರ್ದೀ ಸಾಹೇಬರವರು.
14. ,, ಮಾದಪ್ಪನವರು
15. ,, ಜಹಗೀರ್ದಾರ್ ಮಾದಪ್ಪನವರು.
16. ,, ಹಸೇನಲ್ಲಿಬೇಗ್ ಸಾಹೇಬರವರು.
17. ರೆವರೆಂಡ್ ಗಲಿಫರ್ಡ್ ಸಾಹೇಬರವರು.

ಗೈರ್‌ಹಾಜರು.

1. ಮಿ॥ ಟಿ ಎಸ್. ಶೇಷಯ್ಯಂಗಾರ್ರವರು, (ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್).
2. ,, ಎಂ. ಸಿ. ರಂಗೈಯ್ಯಂಗಾರ್ರವರು.
3. ,, ಅಂಬಳೆ ಅಣ್ಣಯ್ಯಪಂಡಿತರವರು

I. 1909ನೆ ಇಸವಿ ಜುಲೈ ಮಾಹೆಯ ಜಮಾ ಖರ್ಚು ಲೆಕ್ಕ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರ ಲೆಕ್ಕಗಳು ಮತ್ತು ಕಂಟ್ರೋಲರಿಂದ ಆಡಿಟ್ಟಾಗಿ ಬಂದ 1909ನೆ ಇಸವಿ ಜನವರಿ, ಫೆಬ್ರುವರಿ ಮತ್ತು ಮಾರ್ಚಿ ಮಾಹೆಯ ಲೆಕ್ಕಗಳು.

ರಿಕಾರ್ಡು ಮಾಡಿದೆ. ಹೆಲ್ತ್ ಇಲಾಖಾ ಏರ್ಪಾಡಾದ ಮೇಲೆ ಷಹರಿನ ಸ್ಯಾನಿಟೇಷನ್ ಖಿಲವಾಯಿತೆಂದು ಅನೇಕ ಮ್ಯುನಿಸಿಪಲ್ ಕೌನ್ಸಿಲರುಗಳು ಹೇಳುತ್ತಾರಾದಕಾರಣ ಆರೋಗ್ಯಾಭಿವೃದ್ಧಿಪಡಿಸುವ ಭಾಗದಲ್ಲಿ ಯಾವ ಪದ್ಧತಿ ಅನುಸರಿಸಬೇಕೆಂಬ ಭಾಗದಲ್ಲಿ ಹೆಲ್ತ್ ಕಮಿಟಿಯವರ ರಿಪೋರ್ಟು ಕೇಳಬೇಕೆಂದು ತೀರ್ಮಾನ ಮಾಡಿ ಇದೆ.

ಮಿ॥ ಹಸೇನಲ್ಲಿ ಬೇಗರವರು ಮತ್ತು ಮಿ॥ ಜಹಗೀರ್ದಾರ್ ಮಾದಪ್ಪನವರು ಸಹ ಆಡಿಟರಾಗಿರಬೇಕೆಂದು ತೀರ್ಮಾನಿಸಿದೆ. ಮಿ॥ ವೆಂಕಟಾಚಾರ್ರು, ಮಿ॥ ಅಂಬಳೆ ಅಣ್ಣಯ್ಯ ಪಂಡಿತರು, ಮಿ॥ ಮಾದಪ್ಪನವರು, ಮಿ॥ ನರಸುಹ್ಮಸ್ವಾಮಿಗಳು ಮತ್ತು ರಹಿಮುತ್ತುಲ್ಲಾ ಅಹಮ್ಮದ್‌ಶೇಟರು ಸಹ ಸೇರಿ ಹೆಲ್ತ್ ಕಮಿಟಿಯಾಗಬೇಕೆಂದು ತೀರ್ಮಾನಿಸಿದೆ. ಮಿ॥ ಕೃಷ್ಣಸಾಮಿರಾಯರು ಮಿ॥ ರಂಗೈಯಂಗಾರ್ರು, ಮಿ॥ ಹಸೇನಲ್ಲಿಬೇಗ್ ಸಾಹೇಬರು, ಮಿ॥ ಶ್ರೀಕಂಠೈಯ್ಯನವರು, ಮಿ॥ ತಿರುವೆಂಗಡ ಮೊದಲಿಯಾರ್ರವರು ಸೇರಿ ಮ್ಯಾನೇಜಿಂಗ್ ಕಮಿಟಿಯಾಗಬೇಕೆಂತಲೂ, ರೆವರೆಂಡ್ ಮಿ॥ ಗಲಿಫರ್ಡ್ ಸಾಹೇಬರು, ಮಿ॥ ವೆಂಕಟಕೃಷ್ಣಯ್ಯನವರು, ವಿ॥ ಮೊಹರ್ದಿಸಾಬರು, ಮಿ॥ ವೆಂಕಟಾಚಾರ್ರು, ಮಿ॥ ಜಹಗೀರ್ದಾರ್ ಮಾದಪ್ಪನವರು ಸಹ ಸೇರಿ ಸ್ಕೂಲ್ ಕಮಿಟಿಯಾಗಬೇಕೆಂತಲೂ ಇದಕ್ಕೆ ಮಿ॥ ವೆಂಕಟಕೃಷ್ಣಯ್ಯನವರು ಇದರ ಪ್ರೆಸಿಡೆಂಟರಾಗಿ ಇರಬೇಕೆಂತಲೂ ತೀರ್ಮಾನಿಸಿದೆ.

II. ಮ್ಯಾನೇಜಿಂಗ್ ಮತ್ತು ಹೆಲ್ತ್ ಕಮಿಟಿಗಳ ಪ್ರೊಸೀಡಿಂಗ್ಸು.

ರಿಕಾರ್ಡುಮಾಡಿ ಖಾಯಂ ಮಾಡಿ ಇದೆ.

III. ತಮ್ಮ ಮನೆಗಳ ಮುಂದೆ ಇರುವ ಖಾಲಿ ಜಾಗಗಳಿಗೆ ಕೌನ್ಸಿಲ್ಲಿನವರು ವಿಧಾಯಕ ಮಾಡುವ ಟೈಪ್ ಪ್ಲಾನ್ ಪ್ರಕಾರ ಕಾಂಪೌಂಡು ಗೋಡೆ ಹಾಕಿಕೊಳ್ಳುವದಕ್ಕೆ ಅಪ್ಪಣೆ ಬೇಡಿ ಮೈಸೂರು ಲಕ್ಷ್ಮೀವಿಳಾಸ ಅಗ್ರಹಾರದ ನಿವಾಸಿಗಳು ಬರೆದುಕೊಂಡಿರುವ ಅಪ್ಲಿಕೇಷನ್.

ಮುಂದಲ ಮೀಟಿಂಗಿಗೆ ಅಡ್ಜರ್ನ್ ಮಾಡಿ ಇದೆ.

IV. ಚಟ್ನಹಳ್ಳಿ ರೋಡು ಎಕ್ಸ್ಟೆನ್ಷನ್‌ನಲ್ಲಿ ಕ್ಯಾಟ್ಲ್‌ಟ್ರಫ್ ವಾಟರ್ ಸಪ್ಲೈ ಸ್ಕೀಂನನ್ನು ಏಡಾಯಿಸಲು 1,100 ರೂಪಾಯಿನ ಅಂದಾಜವನ್ನು ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 28—7—09ನೆ ಮರ್ಕುಂ 1065-8-ಮ್ಯು 12-08ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

V. ಹಂಗಾಮಿ ವ್ಯಾಕ್ಸಿನೇಟರುಗಳನ್ನು ಈ ಸಾಲು ಅಕ್ಟೋಬರ್ ವರಿಗೂ ಇಟ್ಟುಕೊಳ್ಳಲು ಅಪ್ಪಣೆ ಕೇಳಿ ಹೆಲ್ತಾಫಿಸರವರಿಂದ ತಲಪಿರುವ 19—7—09ನೆ ಮರ್ಕುಂ 119ನೆ ನಂಬರ್ ಡಾಕೆಟ್.

ಜುಲೈ ತಿಂಗಳಲ್ಲಿ ಈ 4 ಜನ ವ್ಯಾಕ್ಸಿನೇಟರುಗಳಿಂದ 63 ಜನಗಳು ಶಿಡಬು ಹಾಕಲ್ಪಟ್ಟು ಇದಾರೆ, ಇದು ತುಂಬಾ ಅತೃಪ್ತಿಕರವಾಗಿ ಇದೆ. ಎಷ್ಟು ಜನ ವ್ಯಾಕ್ಸಿನೇಟರು ಬೇಕೆಂಬ ವಿಷಯ ಅವರು ಮಾಡತಕ್ಕ ಕೆಲಸದ ವಿಧಾನವನ್ನು ಸಹ ಹೆಲ್ತ್ ಕಮಿಟಿಯವರು ಚರ್ಚೆ ಮಾಡಬೇಕೆಂತಲೂ ಮತ್ತು ಹಾಲಿ ಕೌನ್ಸಿಲ್ಲಿನವರು ಪ್ಲೇಗ್ ನಿವಾರಣೆ ಏರ್ಪಾಡಿನಲ್ಲಿ ಇರುವದ್ದರಿಂದಲೂ ಈ ಹಂಗಾಮಿ ಜನಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಾ ಇರುವದಿಲ್ಲವಾದ್ದರಿಂದಲೂ, ಹೆಲ್ತ್ ಕಮಿಟಿಯವರಿಂದ ಬರುವ ರಿಪೋರ್ಟು ನಿರೀಕ್ಷಣೆಯಿಂದ ಇವರ ಸರವಿಸ್ಸನ್ನು ವಜಾ ಮಾಡಬೇಕೆಂತಲೂ ಸಹ ತೀರ್ಮಾನ ಮಾಡಿ ಇದೆ.

VI. ಇಪ್ಪತ್ತು ರೂಪಾಯಿಗಳಿಗಿಂತ ಹೆಚ್ಚಾಗಿ ಮನೆ ಕಂದಾಯ ಕೊಡತಕ್ಕ ಮನೆಗಳಿಗೆ ವಾಟರ್ ಇಡತಕ್ಕ ವಿಷಯದಲ್ಲಿ ವಾಟರ್ ಸಪ್ಲೈ ಮತ್ತು ಸ್ಯೂಯರ್ಸ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರಿಂದ ತಲಪಿರುವ 29—7—09ನೆ ಮರ್ಕುಂ 1686ನೆ ನಂಬರ್ ಡಾಕೆಟ್ ಮತ್ತು ಇದೇ ವಿಷಯದಲ್ಲಿ ಚೀಫ್ ಇಂಜನಿಯರವರಿಂದ ತಲಪಿರುವ ಲೆಟರ್.

ರಿಕಾರ್ಡು ಮಾಡಿ ಇದೆ.

ಟ್ರಸ್ಟು ಬೋರ್ಡಿನವರು ಇರಾದೆ ಕೊಟ್ಟಿರುವಂತೆ ಷಹರಿನ ನೀರು ಸರಬರಾಯಿ ವಿಚಾರಣೆ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಕೊಡಬೇಕೆಂತಲೂ ಮ್ಯುನಿಸಿಪಲ್ ಇಲಾಖಾದವರು ಈ ಖರ್ಚು ಭಾರು ವಹಿಸಬೇಕೆಂಬ ವಿಚಾರವನ್ನು ಬಹಳ ಚನ್ನಾಗಿ ಪರಿಶೋಧಿಸತಕ್ಕದ್ದೆಂತಲೂ ಇದಕ್ಕಾಗಿ ಇಂಜನಿಯರ್ ಇಲಾಖಾ ಒಬ್ಬ ಆಫಿಸರು, ಪ್ರಸಿಡೆಂಟರು, ವೈಸ್ ಪ್ರಸಿಡೆಂಟರು, ಮಿ॥ ರಂಗೈಯ್ಯಂಗಾರು ಮತ್ತು ಮಿ॥ ವೆಂಕಟಕೃಷ್ಣಯ್ಯನವರು ಸಹ ಸೇರಿ ಇರುವ ಮ್ಯುನಿಸಿಪಲ್ ಕಮಿಟಿಯನ್ನು ಸಂಧಿಸಬೇಕೆಂದು ಕೇಳಿಕೊಳ್ಳಬೇಕೆಂತಲೂ ತೀರ್ಮಾನ ಮಾಡಿ ಇದೆ.

VII. ರಾಗಿ ಧಾರಣೆ ಭಡಾವಾಗಿರತಕ್ಕ ಸ್ಥಳಗಳಲ್ಲಿ ಗ್ರೈನ್ ಕಂಪೆನ್ಸೇಷನ್ ಅಲೋಯೆನ್ಸ್ ಯಾನೆ ಮಂಗ್ಯೆ ಭತ್ಯವನ್ನು 1909ನೆ ಇಸವಿ ಜುಲೈ ಮಾಹೆಗೆ ಖಾಯಮ್ ಮಾಡಬಹುದೆಂದು ಗವರ್ನ್ಮೆಂಟಿನಿಂದ ಸಾದರಾಗಿರುವ 14—8—09ನೆ ಮರ್ಕುಂ ರೆ. 1420-61—ಅಗ್ರಿ. 25—08—1ನೆ ನಂಬರ್ ಪ್ರೊಸೀಡಿಂಗ್ಸ್.

ಮ್ಯುನಿಸಿಪಲ್ ನವುಕರನೋನೇರಿಗೆ ಜುಲೈ ತಿಂಗಳು ಅಲೋಯೆನ್ಸ್ ಕೊಡತಕ್ಕದ್ದೆಂದು ತೀರ್ಮಾನಿಸಿ ರಿಕಾರ್ಡು ಮಾಡಿ ಇದೆ.

VIII. ಡೆಪ್ಯುಟಿ ಅಮಲ್ದಾರರ ತಲಬು ಮತ್ತು ದರ್ಜಾದಮೇಲೆ ಮಿ॥ ಟಿ. ಹನುಮಂತರಾಯರನ್ನು ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಸ್ಪೆಷಲ್ ಡ್ಯೂಟಿಮೇಲೆ ನೇಮಿಸಿರುತ್ತೆಂದು ಗವರ್ನ್ಮೆಂಟಿನಿಂದ ಸಾದರಾಗಿರುವ 26—7—09ನೆ ಮತ್ತು 984-8—ಮ್ಯು. 330—08ನೆ ನಂಬರು ಪ್ರೊಸೀಡಿಂಗ್ಸು ಮತ್ತು 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನ್ 82, 83 ಮತ್ತು 84ನೆ ಸೆಕ್ಷನ್‌ಗಳಲ್ಲಿ ವಳಗೊಂಡಿರುವ ಅಧಿಕಾರಗಳನ್ನು ತಮಗೆ ಕೊಡಿಸಬೇಕೆಂಬ ವಿಷಯದಲ್ಲಿ ಡೆಪ್ಯುಟಿ ಅಮಲ್ದಾರ್ರವರು ಬರೆದುಕೊಂಡಿರುವ 22—8—09ನೆ ಮರ್ಕುಂ ಲೆಟರ್.

ರಿಕಾರ್ಡು ಮಾಡಿ ಇದೆ. ಮ್ಯುನಿಸಿಪಲ್ ರೆಗ್ಯುಲೇಷನ್ 37ನೆ ಸೆಕ್ಷನ್ ಪ್ರಕಾರ, 82, 83 ಮತ್ತು 84ನೆ ಸೆಕ್ಷನ್‌ಗಳಲ್ಲಿ ಕಂಡ ಅಧಿಕಾರಗಳನ್ನು ಸ್ಪೆಷಲ್‌ಡ್ಯೂಟಿ ಆಫೀಸರಿಗೆ ಕೊಡತಕ್ಕದ್ದೆಂದು ತೀರ್ಮಾನ ಮಾಡಿ ಇದೆ.

IX. ಜೀವಣರಾಯನ ಕೆರೆ ವಳಗೆರೆಯನ್ನು ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ಮಿ॥ ಶ್ರೀಕಂಠೈಯ್ಯನವರಿಗೆ ಕೊಡತಕ್ಕ ವಿಷಯದಲ್ಲಿ ಗವರ್ನ್ಮೆಂಟಿನಿಂದ ಸಾದರಾಗಿರುವ 16—8—09ನೆ ಮರ್ಕುಂ 1711—2—ಮ್ಯು. 506—08—5ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

X. ಮೈಸೂರು ಷಹರ ಮೊಹಲ್ಲೆಗಳಿಗೆ ಚುನಾವಣೆಯಾದ ಮ್ಯುನಿಸಿಪಲ್ ಕೌನ್ಸಿಲರುಗಳ ಹೆಸರುಗಳನ್ನು ಘಾಯಿಷ್ ಮಾಡಿ ಗವರ್ನ್ಮೆಂಟಿನಿಂದ ಸಾದರಾಗಿರುವ 31—.—09ನೆ ಮರ್ಕುಂ 1291—ಮ್ಯು. 54—09—3ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

XI. ಮೂರು ವರುಷ ಪರಿಯಂತರವಾಗಿ ಮೈಸೂರು ಷಹರಿಗೆ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ಗವರ್ನ್ಮೆಂಟಿನವರು ನೊಕರರೂರ್ ಮಾಡಿರುವ ದೊಡ್ಡ ಮನುಷ್ಯರುಗಳ ಹೆಸರುಗಳು ಘಾಯಿಷ್ಟಿನಿಂದ ಸಾದರಾಗಿರುವ 16—8—09ನೆ ಮರ್ಕುಂ 1713—ಮ್ಯು. 51—09—4ನೆ ನಂಬರ್ ಗವರ್ನ್ಮೆಂಟ್ ಆರ್ಡರ್.

ರಿಕಾರ್ಡು ಮಾಡಿ ಇದೆ.

XII. ಷಹರಿನ ರೋಡು ಸ್ಪೆಷಲ್ ರಿಪೇರಿಗಾಗಿ ಅರ್ಧ ಖರ್ಚು 5,313 ರೂಪಾಯಿಗೆ ಮೀರದಷ್ಟು ಮೊಬಲಗನ್ನು ಸ್ಟೇಟ್ ಕಂಟ್ರಿಬ್ಯೂಷನ್ ಆಗಿ ಮ್ಯುನಿಸಿಪಾಲಿಟಿಗೆ ಕೊಡತಕ್ಕದ್ದೆಂದು ಮಂಜೂರ್ಮಾಡಿ ಗವರ್ನ್ಮೆಂಟಿನಿಂದ ಸಾದರಾಗಿರುವ 26—8—09ನೆ ಮರ್ಕುಂ 2007—8—ಮ್ಯು. 204—09ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

ಕೆ. ಚಾಂಡಿ, ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರ ಆಫೀಸಿಗೆ.

ತಾರೀಖು 26ನೆ ಆಗಸ್ಟು 1909.

ಆಡಿಟರ ರಿಪೋರ್ಟು.

ಸನ್ 1909ನೆ ಇಸವಿ ಆಗಸ್ಟ ತಿಂಗಳು 25ರಲ್ಲಿ ಜುಲೈ ಮಾಹೆ ಲೆಕ್ಕ ಮತ್ತು ವವಚರುಗಳನ್ನು ಆಡಿಟ್ ಮಾಡಲಾಯಿತು.

1. ಫೇರ್ಸ್ ಮತ್ತು ಫೆಸ್ಟಿವಲ್‌ಗಳಲ್ಲಿ ಕೆಲಸ ಮುಂತಾದ್ದು ನಡೆಯಬೇಕಾದ ಕಾಲಕ್ಕೆ ಟೆಂಡರು ಕಾಲ್ ಮಾಡುವದು ಅವಶ್ಯಕ.

2. ಹೆಲ್ತ್ ಫೀಸಿನಿಂದ ಸೆಸ ಚಾಮರಾಜಮೊಹಲ್ಲಾ ಮತ್ತು ನಜರುಬಾದು ಮೊಹಲಾಕ್ಕೆ 27-5-6 ಮಾತ್ರ ವಸೂಲಾಗಿದೆ. ವಸೂಲಿ ಕ್ರಮ ಸರಿಯಾಗಿ ಮಾಡುವಹಾಗೆ ಕಾಣುವದಿಲ್ಲ.

3. ಮ್ಯುನಿಸಿಪಲ್ ಮೊಹತರ್ಫಾ ವಗೈರೆ.

	ರೂ.	ಆ.	ಪೈ.
1908ರಲ್ಲಿ	5,321	14	0
1909ರಲ್ಲಿ	5,278	1	10
ಜಮಾ ವ್ಯತ್ಯಾಸ ...	43	12	2

ಹೆಚ್ಚಾಗಿ ಸಿಬ್ಬಂದಿ ಇದ್ದರೂ ವಸೂಲಿ ಕ್ರಮ ಬಹಳ ಸುಸ್ತಿಯಲ್ಲೇ ಬರುತ್ತಾ ಇದೆ.

4. ಹಾರಸು ಅಲೋಯನ್ಸ್ ವಗೈರೆ ತೆಗೆದುಕೊಳ್ಳುವದು ಹಾರಸು ವಗೈರೆ ಇಟ್ಟು ಉಪಯೋಗಿಸುವದಕ್ಕೆ ಅಥವಾ ಹ್ಯಾಗೆ? ಒಂದು ವ್ಯಾಳೆ ಉಪಯೋಗಿಸದೆ ಇದ್ದರೆ ಅಲೋಯನ್ಸನ್ನು ಯಾತಕ್ಕೆ ನಿಲ್ಲಿಸಬಾರದು.

(ಸೈನ್ಡ್) ಎನ್. ಶ್ರೀಕಂಠೈಯ್ಯ.

ಕಡೂರು ಡಿಸ್ಟ್ರಿಕ್ಟು.

1909ನೆ ಸೆಪ್ಟಂಬರ್ ತಾರೀಖು 4.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—1909ನೆ ಇಸವಿ ನವಂಬರು ಗುರ್ರೇ ಲಾಗಾಯಿತು 1910ನೆ ಇಸವಿ ಜೂನ್ ಆಖೈರಿ ವರೆಗೆ ಆಗುವ 8 ತಿಂಗಳಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಮೂಡಗೆರೆ ತಾಲ್ಲೂಕು ಕೊಟ್ಟಿಗೆಹಾರ್ (ಬೂಂದು ಘಾಟ್) ಟೋಲ್ ಗೇಟಿನಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಮೂಡಗೆರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ಶನಿವಾರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಎಲ್ಲಾ ಸವಾಲ್‌ಗಳಿಗಿಂತಲೂ ಜಾಸ್ತಿಯಾದ ಛಡ ದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗವರ್ನ್‌ಮೆಂಟ್ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನು ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ನಾಲ್ಕನೆ ಒಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರೆಯಲ್ಪಟ್ಟ ಗವರ್ನಮೆಂಟ್ ಆಫ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಒಂದರ ಒಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನಮೆಂಟಿನಿಂದ ಹರಾಜು ಮಂಜೂರಾಗಿ ಬಂದ ಕೂಡ್ಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹಿ ಸದರಿ ಮೊಬಲಗನ್ನು ಮೂಡಿಗೆರೆ ತಾಲ್ಲೂಕು ಖಜಾನೆಗೆ 1909ನೆ ಡಿಸೆಂಬರ್ ತಾರೀಖು 15ರ ಲಾಗಾಯಿತು ಸಮನಾದ 6 ಖಿಸ್ತುಗಳಾಗಿ ಪ್ರತಿ ತಿಂಗಳ 15ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು ಆಖೈರು 2 ಖಿಸ್ತುಗಳಿಗೆ ಜಮ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೇವಾರ್ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನ ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು 8 ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದೆ ಇದ್ದರೆ ಅಥವಾ ಜಾಮೀನ್ ಕೊಡದೆ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಸದರಿ ಕಂಟ್ರಾಕ್ಟು 2ನೆ ಹರಾಜು ಮಾಡಲ್ಪಡುವುದು. ಹೀಗೆ ಮಾಡಿದ್ದರಲ್ಲಿ ಸರ್ಕಾರಕ್ಕೆ ನುಕ್ಸಾನು ಸಂಭವಿಸಿದ್ದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನ್‌ದಾರರ ಜೆಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತುಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಶೇಕಡಾ ಆರು ರೂಪಾಯಿ ಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನ್‌ದಾರರಿಂದ ಬಾಕಿ ಮೊಬಲಗು ಬಾರದೆ ಇದ್ದಲ್ಲಿ ಲ್ಯಾಂಡ್ ರವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲ್ ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ್ ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಅಮಲ್‌ದಾರ್ರು ತನಿಖೆಗೆ ಒಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರ ಕೆಳಗಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದುಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತಪ್ಪು ಪ್ರಾಸಿಕ್ಯೂಷನ್‌ಗೆ ಗುರಿಪಡಿಸುತ್ತೆ.

9. ದಂಡು ಮಿಲಟೆರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿ ಮೇಲೆ ಪ್ರಯಾಣ ಮಾಡುವ ಪೋಲೀಸ್ ಯಾ ಇತರ ಉದ್ಯೋಗಸ್ಥರ ಸರಕಾರದ ಸಾಮಾನುಗಳು ಅಂದರೆ ಸಂಬಂಧಪಟ್ಟ ಇಲಾಖಾ ಮೊಖ್ತೇಸರರ ಸರಟಫಿಕೇಟನಿ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರದು ಟೋಲ್‌ಗೇಟ್ ಬಳಿ ಚನ್ನಾಗಿ ಕಾಣುವ ಜಾಗಾದಲ್ಲಿ ತಗಲುಹಾಕಬೇಕು.

11. ಗವರ್ನಮೆಂಟಿನಿಂದ ನೇಮಿಸಲ್ಪಟ್ಟ ಟೋಲ್‌ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

12. ರವಿನ್ಯೂ ಇಲಾಖೆಯೊಂದಿಗೆ ಸುಂಕದ ತೆರಿಗೆ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡ ಯಾವನೊಬ್ಬನಿಂದಲೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು. ಈರೀತಿ ರವಿನ್ಯೂ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡ ಮೊಬಲಗನ್ನು ಹೊಂದಲು ಕಂಟ್ರಾಕ್ಟುದಾರನು ಸ್ವತಂತ್ರವುಳ್ಳವನಾಗುತ್ತಾನೆ.

13. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಕೊಟ್ಟಿಗೆಹಾರು ಟೋಲಗೇಟು ಮೇಲೆ ವಸೂಲು ಮಾಡಬೇಕಾದ ದರಗಳ ಪಟ್ಟಿ.

ನಂಬರು.	ವಿವರ	ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಪ್ರತಿ ಎರಡು ಡಿಟೋ	1	0	0
3	ಪ್ರತಿ ಯಕ್ಕಾ ಮೇಲೂ	0	4	0
4	ಸ್ಪ್ರಿಂಗ್ ಯಾನೆ ಬಿಲ್ಲಿನಮೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ	0	2	0
5	ಎಂಟು ಎತ್ತುಗಳಿಂದ ಯಾ ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರುಕತ್ತೆಗಳಿಂದ ಯಳಿಯಲ್ಪಡುವ ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	1	8	0
6	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರಗಳಿಂದ ಯಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕ ಭರ್ತಿ ಆಗಿದ್ದರೆ...	0	12	0
8	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಹೇಸರುಕತ್ತೆಗಳಿಂದ ಯಳಿಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	0	8	0
10	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	4	0
11	2 ಎತ್ತುಗಳು ವಗೈರೆಯಿಂದ ಯಳಿಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	0	4	0
12	ಡಿಟೋ ಡಿಟೋ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರೆ ಹೊರಿಸಲ್ಪಟ್ಟಿದ್ದರೆ	0	1	0
14	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದೆ ಇದ್ದರೆ	0	4	0
18	ಪ್ರತಿ ಕುದುರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದುರೆಗೂ	0	0	9
20	ಪ್ರತಿ ತಟ್ಟು ಯಾ ಹೇಸರುಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6
23	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿಗೂ	0	0	1
25	ಎಂಟು ಬೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಗೂ	1	0	0
26	ಆರು ಬೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ, ಯಾ ಟಾಂಜಾನಿಗೂ	0	12	0
27	ನಾಲ್ಕು ಬೋಯಿಗಳೊಡನೆ ಡಿಟೋ	0	8	0
28	ಇಬ್ಬರು ಬೋಯಿಗಳೊಡನೆ ಡಿಟೋ	0	4	0

ನೋಟು :—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ಸುಂಕ ವಸೂಲ್ ಮಾಡತಕ್ಕದ್ದಲ್ಲಾ.

ಜಿ. ಹನುಮಂತರಾವ್,
ಫಾರ್ ಡೆಪ್ಯುಟಿ ಕಮಿಷನರ್.

ತಿಳುವಳಿಕೆ ನೋಟಿಸ್.

ಕೋಲಾರ ಡಿಸ್ಟ್ರಿಕ್ಟು ಮುಳುಬಾಗಲ್ ತಾಲ್ಲೂಕು ಆವನಿ ಸಮ್ಮತು ಕಾಯಂಗುತ್ತಾ ಹೊನಗಾನಹಳ್ಳಿ ಇದಕ್ಕೆ ಮಜರ ರಾಮಾಪುರ-ಜೋಡಿ ಕುರುಬರಹಳ್ಳಿ ಮತ್ತು ಜೋಡಿ ದೇವರಾಯಸಮುದ್ರ ವಗ್ಯೆರೆ ಗ್ರಾಮಗಳ ಕಾಯಂಗುತ್ತಾದಾರ್ ಮತ್ತು ಜೋಡಿದಾರ್‍ರಾದ ಸದರಿ ಹೊನಗಾನಹಳ್ಳಿಯಲ್ಲಿರುವ ವೆಂಕಟ್ರಾಮಯ್ಯನವರ ಮಕ್ಕಳಾದ 1ನೆ ವೆಂಕಟೇಶಯ್ಯ, 2ನೆ ರಾಮಸ್ವಾಮಯ್ಯ ಆದ ನಾವುಗಳು ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—

ಮೇಲ್ಕಂಡ ವೆಂಕಟ್ರಾಮಯ್ಯನವರ 3ನೆ ಮಗನಾದ ಕ್ರಿಷ್ಣಯ್ಯನೆಂಬುವನು ನಮ್ಮಗಳ ಅವಿಭಕ್ತಕುಟುಂಬಕ್ಕೆ ಸೇರಿದವನಾಗಿ ಅವಿಭಕ್ತಕುಟುಂಬದಲ್ಲಿ ಇದ್ದುಕೊಂಡೂ ಕೂಡ ಸ್ವೇಚ್ಛೆಯಾಗಿ ಸಂಸೃಷ್ಟಕ್ಕೆ ಸೇರಿದ ಆಸ್ತಿಗಳನ್ನೂ ಮತ್ತು ನಮ್ಮ ಇತರ ಸ್ವಾರ್ಜಿತ ಸ್ವತ್ತುಗಳನ್ನೂ ಕೂಡ ಅಂದರೆ ಮೇಲೆ ವಿವರಿಸಿರುವ ಸ್ವತ್ತುಗಳನ್ನು ಕ್ರಯ, ಭೋಗ್ಯ, ಆಧಾರಾದಿಗಳು ವಗ್ಯೆರೆಪರಭಾರೆ ಮಾಡುತ್ತಿರುವದಾಗಿ ಕಂಡುಬಂದು ಇರುತ್ತೆ. ಮೇಲ್ಕಂಡ ಸ್ವತ್ತುಗಳಲ್ಲಿ ನಮ್ಮಗಳಿಗೆ ಇರತಕ್ಕ ಹಕ್ಕು ಬಾಧ್ಯತೆಯು ಮೇಲ್ಕಂಡ ಕ್ರಿಷ್ಣಯ್ಯನಿಂದ ಪಡದವರಿಗೆ ಲೇಶವೂ ಸಲ್ಲಲಾರದು ತಿಳಿಯುವದು.

ತಾರೀಖು 25ನೆ ಆಗಸ್ಟು 1909.

ವೆಂಕಟೇಶಯ್ಯ.
ರಾಮಸ್ವಾಮಯ್ಯ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಸ್ ಆದ್ದು. [ಸಂ. 39.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 30, ಸ್ 1909.

II ನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ	ಡಿಸ್ಟ್ರಿಕ್ಟ.	ಕೋಠಿ.	ಹರಾಜು ತಾರೀಖು.	[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್ ತಾರೀಖು 18	200	
2	ಡಿಟೋ ...	ಸಾಗರ ...	ಡಿಟೋ 22	100	
3	ಡಿಟೋ ...	ಶಿವಮೊಗ್ಗ ...	ಡಿಟೋ 25	500	
4	ಕಡೂರು ...	ತರೀಕೆರೆ ...	ಡಿಟೋ 29	(a)200	(a) ಚಿತ್ರದುರ್ಗದ 10 ಟನ್‌ಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್ ತಾರೀಖು 2	400	
6	ಹಾಸನ ...	ಹಾಸನ ...	ಡಿಟೋ 6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ 9	(b)100	(b) ತುಮಕೂರು 30 ಟನ್‌ಗಳು ಕೋಲಾರದ 5 ಟನ್‌ಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ 13	250	
9	ಡಿಟೋ ...	ಹುಣಸೂರು ...	ಡಿಟೋ 16	450	
			ಜುಮ್ಲಾ ...	2,400	

ಎಂ. ಮುತ್ತಣ್ಣ,

ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 10ನೆ ಮಾಹೆ ಸೆಪ್ಟಂಬರ್ 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ಸಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಖ್ತೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲೀ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಉಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 90 ದಿನಗಳೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಜಮಾಬಂದಿ ಯಾ ಬೆರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಜೋಡಿ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಜಾಗ.
ಕೋಲಾರ	ಕೋಲಾರ	ವಕ್ಕಲೇರಿ.	ಜೋಡಿ ಮಾರ್ಗ ನಹಳ್ಳಿ	1. ರಾಮಸ್ವಾಮಿರಾವ್, 2. ಗಂಗಾಧರರಾವ್, 3. ಶ್ರೀಕಂಠಯ್ಯ, 4. ರಾಮರಾವ್, 5. ಜಾನಕಮ್ಮ	ಎ. ಗು. ಖುಷ್ಕಿ ... 182 30 ತರಿ ... 20 8 ಬಾಗಾಯತು ... 19 37 ಬಂಜರು ... 462 30 685 25 ಚಕ್ಕುಬಂದಿ. ಪೂರ್ವಕ್ಕೆ—ವಡಿಗೆರೆ ಸರಹದ್ದು. ಪಶ್ಚಿಮಕ್ಕೆ—ದಂಡಿಗಾನಹಳ್ಳಿ ಸರಹದ್ದು. ಉತ್ತರಕ್ಕೆ—ಮುದವತಿ ಸರಹದ್ದು. ದಕ್ಷಿಣಕ್ಕೆ—ಮಾರಂಪ್ರತಿ ಸರಹದ್ದು.	ರೂ. ಆ. 495 0	ರೂ. 212 ಆ. 8 ಪೈ. 11	ರೂ. ಆ. ಪೈ. 68 14 6	ಕೋಲಾರ ತಾಲ್ಲೂಕು ಕಛೇರಿ ರಲ್ಲಿ ತಾ॥ 1909ನೇ ನವೆಂಬರ್ 4ನೇ.

ತಾರೀಖು 10ನೆ ಮಾಹೆ ಸೆಪ್ಟೆಂಬರ 1909.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಪಡಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸವಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಕಡೆಧರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಿನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಖ್ತಾಲೀಕರ ತರಫ್ ದರಖಾಸ್ತು ಮಾಡುತ್ತಾರೆಯೋ ಎಂಬುದನ್ನು ನಮೂದಿಸತಕ್ಕದ್ದು. ಮುಖ್ತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷರ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ, ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಲುಕ್ಸಾನ್ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 90 ದಿನಗಳೊಳಗಾಗಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲಿನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೆಲೆ.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಜೋಡಿ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಸ್ಥಳ.
ಕೋಲಾರ	ಕೋಲಾರ	ವಕ್ಕಲೇರಿ.	ಚೀಕೂಟಿ ದಂಡಿಗಾನಹಳ್ಳಿ.	1. ಶ್ರೀಕಂಠಯ್ಯ, 2. ರಾಮಯ್ಯ, 3. ಗಂಗಾಧರಯ್ಯ, 4. ಸುಬ್ಬರಾಯಪ್ಪ ಇವರುಗಳು.	ಎ. ಗು. ಖುಷ್ಕಿ ... 198 2 ತರಿ ... 18 28 ಬಾಗಾಯತು. 12 17 ಖರಾಬ್ಪೋಕು. 188 31 ಜಮ್ಮಾ ... 417 38 ಚಕ್ಕುಬಂದಿ. ಪೂರ್ವಕ್ಕೆ—ನೆರ್ನಹಳ್ಳಿ ಸರಹದ್ದು. ಪಶ್ಚಿಮಕ್ಕೆ—ಚಿನ್ನಪುರ ಸರಹದ್ದು. ಉತ್ತರಕ್ಕೆ—ಶೆಟ್ಟಿಗಾನಹಳ್ಳಿ—ನೆರ್ನಹಳ್ಳಿ ಸರಹದ್ದು. ದಕ್ಷಿಣಕ್ಕೆ—ಲಿಂಗಧೀರನಹಳ್ಳಿ ಸರಹದ್ದು.	ಸ್ಟಾಂ 0 ಪೈ ೧ ರೂ. 325	ಸ್ಟಾಂ 7 ಪೈ 11 ರೂ. 143	ಸ್ಟಾಂ [illegible] ಪೈ [illegible] ರೂ. 116	ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ನವಂಬರ [illegible] ರೂ

ಎ. ವೇದಾಂತದೇಶಿಗಂ ಐಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಇಸ್ತಿಹಾರ್ನಾಮೆ.

ತಾರೀಖು 20ನೆ ಸೆಪ್ಟಂಬರ್ 1909.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಕಾಯಂಗುತ್ತಾ ಚಿಕ್ಕನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರವರ ರೂಬರೂಬು 1909ನೆ ಅಕ್ಟೋಬರ್ ಮಾಹೆ 4ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 9—9—09ನೆ ಮರ್ಕಂ 36ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 720—721ನೆ ಪೇಜುಗಳು ನೋಡತಕ್ಕದ್ದು.

ತಾರೀಖು 20ನೆ ಸೆಪ್ಟಂಬರ್ 1909.

ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ಹೋಬಳಿಗೆ ಸೇರಿದ ಜೋಡಿ ಬಡಮಾಕನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಬವರಿಂಗಪೇಟೆ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರವರ ರೂಬರೂಬು 1909ನೆ ಅಕ್ಟೋಬರ್ ಮಾಹೆ 4ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 9—9—09ನೆ ಮರ್ಕಂ 36ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 721—722ನೆ ಪೇಜುಗಳು ನೋಡತಕ್ಕದ್ದು.

ತಾರೀಖು 20ನೆ ಸೆಪ್ಟಂಬರ್ 1909.

ಮುಳಬಾಗಲ್ ತಾಲ್ಲೂಕು ಆವನಿ ಹೋಬಳಿಗೆ ಸೇರಿದ ಜೋಡಿ ದೇವರಾಯಸಂದ್ರ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮುಳಬಾಗಲ್ ತಾಲ್ಲೂಕು ಕಛೇರಿಯಲ್ಲಿ ಮಾಲೂರ ಸಬ್ ಡಿವಿಜನ್ ಆಫೀಸರವರ ರೂಬರೂಬು 1909ನೆ ಅಕ್ಟೋಬರ್ ಮಾಹೆ 4ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 9—9—09ನೆ ಮರ್ಕಂ 36ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 722—723ನೆ ಪೇಜುಗಳು ನೋಡತಕ್ಕದ್ದು.

ಎಸ್. ಶಾಮಣ್ಣ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

1909ನೆ ಸೆಪ್ಟಂಬರ್ ತಾರೀಖು 4.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—1909ನೆ ಇಸವಿ ನವಂಬರು ಗುರ್ರೇ ಲಾಗಾಯಿತು 1910ನೆ ಇಸವಿ ಜೂನ್ ಆಖೈರ್ ವರೆಗೆ ಆಗುವ 8 ತಿಂಗಳಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಮೂಡಗೆರೆ ತಾಲ್ಲೂಕು ಕೊಟ್ಟಿಗೆಹಾರ (ಖೋದು ಫೋಟ್) ಟೋಲ್ ಗೇಟಿನಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಮೂಡಗೆರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ಶನಿವಾರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಎಲ್ಲಾ ಸವಾಲ್‌ಗಳಿಗಿಂತಲೂ ಜಾಸ್ತಿಯಾದ ಥಡ ದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗವರ್ನಮೆಂಟ್ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಥಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನು ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಥಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ನಾಲ್ಕನೆ ಒಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಯಲ್ಪಟ್ಟ ಗವರ್ನಮೆಂಟ್ ಆಫ್ ಇಂಡಿಯಾ ಪ್ರಾಮಿಸರಿ ನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಒಂದರ ಒಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನಮೆಂಟಿನಿಂದ ಹರಾಜು ಮಂಜೂರಾಗಿ ಬಂದ ಕೂಡ್ಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹ ಸದರಿ ಮೊಬಲಗನ್ನು ಮೂಡಿಗೆರೆ ತಾಲ್ಲೂಕು ಖಜಾನೆಗೆ 1909ನೆ ಡಿಸೆಂಬರ್ ತಾರೀಖು 15ರ ಲಾಗಾಯಿತು ಸಮನಾದ 6 ಖಿಸ್ತುಗಳಾಗಿ ಪ್ರತಿ ತಿಂಗಳ 15ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು ಆಖೈರು 2 ಖಿಸ್ತುಗಳಿಗೆ ಜಮ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೇವಾರ್ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು 8 ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾ ಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದೆ ಇದ್ದರೆ ಅಥವಾ ಜಾಮೀನು ಕೊಡದೆ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಸದರಿ ಕಂಟ್ರಾಕ್ಟು 2ನೆ ಹರಾಜು ಮಾಡಲ್ಪಡುವುದು. ಹೀಗೆ ಮಾಡಿದ್ದರಲ್ಲಿ ಸರಕಾರಕ್ಕೆ ಲುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನುದಾರರ ಜೆಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತುಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಶೇಕಡಾ ಆರು ರೂಪಾಯಿ ಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನ್‌ದಾರ್ರಿಂದ ಬಾಕಿ ಮೊಬಲಗು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲ್ ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ್ ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಅಮಲ್‌ದಾರ್ರ ತನಿಖೆಗೆ ಒಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದುಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತರಫು ಪ್ರಾಸಿಕ್ಯೂಷನ್‌ಗೆ ಗುರಿಪಡಿಸುತ್ತೆ.

9. ದಂಡು ಮಿಲಿಟರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿ ಮೇಲೆ ಪ್ರಯಾಣ ಮಾಡುವ ಪೊಲೀಸ್ ಯಾ ಇತರ ಉದ್ಯೋಗಸ್ಥರ ಸರಕಾರದ ಸಾಮಾನುಗಳು ಅಂದರೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ಸರ್ಟಿಫಿಕೇಟಿನಿಂದ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರದು ಟೋಲ್‌ಗೇಟ್ ಬಳಿ ಚೆನ್ನಾಗಿ ಕಾಣುವ ಜಾಗಾದಲ್ಲಿ ತಗಲುಹಾಕಬೇಕು.

11. ಗವರ್ನಮೆಂಟಿನಿಂದ ನೇಮಿಸಲ್ಪಟ್ಟ ಟೋಲ್‌ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

12. ರೆವಿನ್ಯೂ ಇಲಾಖೆಯೊಂದಿಗೆ ಸುಂಕದ ತೆಂಗ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡ ಯಾವನೊಬ್ಬನಿಂದಲೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು. ಆರೀತಿ ರೆವಿನ್ಯೂ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡ ಮೊಬಲಗನ್ನು ಹೊಂದಲು ಕಂಟ್ರಾಕ್ಟುದಾರನು ಸ್ವತಂತ್ರವುಳ್ಳವನಾಗುತ್ತಾನೆ.

13. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಕೊಟ್ಟಿಗೆಹಾರು ಟೋಲ್‌ಗೇಟು ಮೇಲೆ ವಸೂಲು ಮಾಡಬೇಕಾದ ದರಗಳ ಪಟ್ಟಿ.

ನಂಬರು.	ವಿವರ.	ರೂ.	ಅ.	ಪೈ.
1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಪ್ರತಿ ಎರಡು ಡಿಟೋ	1	0	0
3	ಪ್ರತಿ ಯಕ್ಕಾ ಮೇಲೂ	0	4	0
4	ಸ್ಪ್ರಿಂಗ್ ಯಾನೆ ಬಿಲ್ಲಿನಮೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ	0	2	0
5	ಎಂಟು ಎತ್ತುಗಳಿಂದ ಯಾ ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರುಕತ್ತೆಗಳಿಂದ ಯಳಿಯಲ್ಪಡುವ ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	1	8	0
6	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಯಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ...	0	12	0
8	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಹೇಸರುಕತ್ತೆಗಳಿಂದ ಯಳಿಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	0	8	0
10	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ ...	0	4	0
11	2 ಎತ್ತುಗಳು ವಗೈರೆಯಿಂದ ಯಳಿಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ..	0	4	0
12	ಡಿಟೋ ಡಿಟೋ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರೆ ಹೊರಿಸಲ್ಪಟ್ಟಿದ್ದರೆ	0	1	0
14	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದೆ ಇದ್ದರೆ	0	4	0
18	ಪ್ರತಿ ಕುದುರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದುರೆಗೂ ...	0	0	9
20	ಪ್ರತಿ ತಟ್ಟು ಯಾ ಹೇಸರುಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6
23	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿಗೂ	0	0	1
25	ಎಂಟು ಬೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಗೂ ...	1	0	0
26	ಆರು ಬೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ, ಯಾ ಟಾಂಜಾನಿಗೂ ...	0	12	0
27	ನಾಲ್ಕು ಬೋಯಿಗಳೊಡನೆ ಡಿಟೋ	0	8	0
28	ಇಬ್ಬರು ಬೋಯಿಗಳೊಡನೆ ಡಿಟೋ	0	4	0

ನೋಟು :—ನಡೆದು ಬರುವ ಮನುಷ್ಯನ ಮೇಲೆ ಟೋಲ್ ಸುಂಕ ವಸೂಲ್ ಮಾಡತಕ್ಕದ್ದಲ್ಲಾ.

ಜಿ. ಹನುಮಂತರಾವ್
ಫಾರ್ ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ.

ತಾರೀಖು 23ನೆ ಸೆಪ್ಟಂಬರ್ 1909ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ:—ಈ ಕೆಳಗೆ ವಿವರಿಸಿರುವ ರಿಜಿಸ್ಟ್ರಿದ ದಸ್ತೈವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸುಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರಿ ದಸ್ತೈವಜು ಹಾಜರು ಮಾಡಿದವರಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ ಅಥವಾ ಅವುಗಳಿಗೆ ಬಾಧ್ಯತೆವುಳ್ಳವರಾಗಲಿ ಅಲ್ಲಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸು ಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ದಸ್ತಾವೇಜುಗಳನ್ನು ನಾಶಪಡಿಸಲ್ಪಡುತ್ತವೆ. 1908—09ನೆ ಸಾಲಿನ ಬಗ್ಗೆ.

ಸಬ್ ರಿಜಿಸ್ಟ್ರಿ ಆಫೀಸ್ ಹೆಸರು.	ಬುಕ್ಕು ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತಾವೇಜು ಬರಿಯಲ್ಪಟ್ಟ ತಾರೀಖು.	ದಸ್ತಾವೇಜು ರಿಜಿಸ್ಟ್ರು ಮಾಡಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ತುಮಕೂರು ...	IV	15 / 1906—07	10—2—07	12—2—07	ತುಮಕೂರಲ್ಲಿರುವ ಅಪ್ಪಣ್ಣ ಶೆಟ್ಟಿ ...	ತುಮಕೂರಲ್ಲಿರುವ ಭಾವಿಕಟ್ಟೆ ಚನ್ನಬಸ್ವೈಯ್ಯ ಇವರ ತಮ್ಮ ಸದಾಶಿವೈಯ್ಯ.	ಪಾಲುಗಾರಿಕೆ ಖುಲಾಸೆ ಕಿಮ್ಮತ್ತು ನಮೂದಿಲ್ಲ.
	I	986 / 1906—07	25—2—07	2—3—07	ಕ್ಯಾತಸಂದ್ರದಲ್ಲಿರುವ ಅಕ್ಕಸಾಲೆ ಕುಟ್ಟೀರೈಯ್ಯನ ಮಗ ಗಂಗಣ್ಣ.	ಕ್ಯಾತಸಂದ್ರದ ಅಕ್ಕಸಾಲೆ ಕುಟ್ಟೀರೈಯ್ಯನ ಮಗ ಚಂನಪ್ಪ.	ಸ್ವತ್ತು ಹಕ್ಕು ಖುಲಾಸೆ 100 ರೂಪಾಯಿ.
	I	1205 / 1906—07	27—4—07	27—4—07	ಬೆಳ್ಳಾವಿ ಸಮ್ಮತು ಮುದಿಗೆರೆಯಲ್ಲಿರುವ ಕಪಂಮ್ಮನ ಮಕ್ಕಳು 1ನೆ ನರಸಿಂಹ್ಮ, 2ನೆ ತಿಂಮ.	ತುಮಕೂರಲ್ಲಿರುವ ಭಾವಿಕಟ್ಟೆ ಶಿವಂಣನವರ ಮಕ್ಕಳು ಸದಾಶಿವೈಯ್ಯನವರು.	ಕ್ರಯ 00 ರೂಪಾಯಿ.
	I	1228 / 1906—07	28—2—07	4—5—07	ದೊಳ್ಳೇನಹಳ್ಳಿ ಪಾಳ್ಯದಲ್ಲಿರುವ ರೋಷನ್ ಖಾನ್ ಸಾಬರ ಮಕ್ಕಳು ರಾಜಾಖಾನ್ ಸಾಬಿ.	ದೊಳ್ಳೇನಹಳ್ಳಿ ಪಾಳ್ಯದಲ್ಲಿರುವ ಹುಸೇನ್ ಖಾನ್ ಸಾಬರ ಮಕ್ಕಳು ಖುದಿಬೋದ್ದೀನ್ ಖಾನ್ ಸಾಬರು.	ಆಧಾರ 00 ಡಿಟೋ
ಮದ್ದಗಿರಿ ...	IV	6 / 1906—07	27—6—07	28—6—07	ವೀರನಾಗೇನಹಳ್ಳಿ ಗ್ರಾಮದ ಘೌತಿ ಪೋಲುಶೆಟ್ಟಿ ರಾಮೈಯ್ಯನ ಹೆಂಡತಿ ಸಾವಿತ್ರಮ್ಮ.	ವೀರನಾಗೇನಹಳ್ಳಿ ಗ್ರಾಮದ ಘೌತಿ ರಾಮೈಯ್ಯನ ಮಗ ಸುಬ್ಬಯ್ಯ.	ರಸೀದಿ 150 ಡಿಟೋ
ಚಿಕ್ಕನಾಯಕನಹಳ್ಳಿ.	IV	7 / 1906—07	3—4—07	9—4—07	(1) ಮಧುರೇನಹಳ್ಳಿ ಚನ್ನಪ್ಪ, (2) ಹುಚ್ಚವೀರಪ್ಪ, (3) ಮಹಮ್ಮದ್ ಅಬ್ದುಲ್ ಖಾದರ್, (4) ಎಂ. ಡಿ. ಮಹಮದಲ್ಲಿ.	ಡಿಟೋ ...	ಪಾಲುಗಾರಿಕೆ ದಸ್ತೈವಜು ಕಿಮ್ಮತ್ತು ನಮೂದಿಲ್ಲ.
ಶಿರಾ ...	I	354 / 1906—07	12—1—07	12—1—07	ನೇರಲಹಳ್ಳಿ ಭೀಮಂಣನ ಮಗ ಸಂಣ ಹನುಮಂತಪ್ಪ.	ಪಟ್ಟನಾಯಕನಹಳ್ಳಿ ಲಿಂಗಪ್ಪ ...	ಆಧಾರ ಪತ್ರ 100 ರೂಪಾಯಿ.
	I	425 / 1906—07	10—7—07	16—3—07	ದೊಡ್ಡಗೂಳದ ಚಿಕ್ಕನಾಯಕ ...	1ನೆ ಹೆಗ್ಗನಹಳ್ಳಿ ತಳವಾರ ರಂಗನಾಯಕನ ಮಗ ರಂಗನಾಯಕ, 2ನೆ ಹೆಗ್ಗನಹಳ್ಳಿ ಬೇಗಾರ ಚಿಗರಂಗ.	ಕ್ರಯ ಪತ್ರ 80 ರೂಪಾಯಿ.

ಗುಬ್ಬಿ ...	II	5 / 1905—06	3—9—05	30—11—05	ಬಿಳಿನಂದಿ ಬೋರೇಗೌಡ ...	ಕಲ್ಲೂರು ತಿಮ್ಮಯ್ಯ ...	ಕ್ರಯ ಮತ್ತು ಕರಾರು 318 ರೂಪಾಯಿ ತಿರಸ್ಕಾರವಾಗಿದೆ.
	I	572 / 1906—07	30—10—06	5—12—06	ಲಾಳನಕಟ್ಟೆ ಚನ್ನಯ್ಯನ ಮಗ ದಾಸ.	ಕೊಪ್ಪದ ಚನ್ನವೆಂಕಟೇಗೌಡ ...	ಕ್ರಯ 20 ರೂಪಾಯಿ.
	I	573 / 1906—07	4—12—06	6—12—06	ಚಿಟ್ಟನಹಳ್ಳಿ ನಾಗಶಾಸ್ತ್ರಿ ...	ಚಿಟ್ಟನಹಳ್ಳಿ ಕೃಷ್ಣಶಾಸ್ತ್ರಿ ...	ಕ್ರಯ 150 ರೂಪಾಯಿ.
	I	715 / 1906—07	8—10—06	29—1—07	ಕುರುಬರಹಳ್ಳಿ ಜೋಡಿ ಗ್ರಾಮದಲ್ಲಿರುವ ಕದರು.	ಕುರುಬರಹಳ್ಳಿ ಜೋಡಿದಾರ ಶೀತಾರಾಮಯ್ಯ.	ಗೇಣಿ 10 ರೂಪಾಯಿ, 10 ಆಣೆ.
	I	716 / 1906—07	30—12—06	29—1—07	ಡಿಟೋ ಗ್ರಾಮದಲ್ಲಿರುವ ಉಗ್ರಯ್ಯ ...	ಡಿಟೋ ...	ಗೇಣಿ 3 ರೂಪಾಯಿ, 6 ಪೈ.
ಕುಣಿಗಲು ...	I	646 / 1906—07	3—11—06	8—2—07	ಬೋರಲಿಂಗನಪಾಳ್ಯ ಗ್ರಾಮದಲ್ಲಿರುವ ಗಂಟೆಗೌಡನ ಮಗ ಗೌಡಯ್ಯ.	ಕುಣಿಗಲ್‌ನಲ್ಲಿರುವ ಜವಳಿ ಅಂಗಡಿ ಮುಲ್ಲಂಗಿ ಸಿದ್ಧರಾಮಯ್ಯ.	ಗೇಣಿ 28 ರೂಪಾಯಿ, ವಾಯಿದೆ 3 ವರುಷ.
	I	647 / 1906—07	15—10—06	8—2—07	ಹೇರೂರಲ್ಲಿರುವ ಹುಚ್ಚೆಗೌಡನ ಮಗ ಚಿಕ್ಕರಂಗ.	ಡಿಟೋ ...	ಡಿಟೋ
ತುರ್ವೇಕೆರೆ ...	I	236 / 1906—07	17—12—06	9—2—07	ಹೆಡಗಿಹಳ್ಳಿ ಗ್ರಾಮದಲ್ಲಿರುವ ಮೂಡ್ಲಿಗೌಡನ ಮಗ ತಿಮ್ಮೆಗೌಡ.	ಹೆಡಗಿಹಳ್ಳಿ ಗ್ರಾಮದಲ್ಲಿರುವ ನಂಜುಂಡಯ್ಯನ ಹೆಂಡತಿ ದೇವೀರಮ್ಮ.	ಕ್ರಯಪತ್ರ 50 ರೂಪಾಯಿ.
ಕೊರಟಗೆರೆ ...	I	59 / 1906—07	23—6—06	17—9—06	ಗೌರಮ್ಮ	ದೊಡ್ಡನರಸೈಯ್ಯ ವೆಂಕಟಪ್ಪ ...	ಕ್ರಯ 200 ರೂಪಾಯಿ.
	I	74 / 1906—07	25—9—06	25—9—06	ಸಿದ್ದಪ್ಪ	ಮಲ್ಲಮ್ಮ	ಕ್ರಯ 20 ರೂಪಾಯಿ.
	I	131 / 1906—07	10—1—07	10—1—07	ನಂಜುಂಡಪ್ಪ	ವೆಂಕಟ	ಆಧಾರ 50 ರೂಪಾಯಿ.
	I	169 / 1906—07	15—5—05	15—5—07	ತಿಮ್ಮಪ್ಪ	ರಾಮಾಚಾರ	ಗೇಣಿ ವಾಯಿದೆ 10 ವರುಷ ಕಿಮ್ಮತ್ತು ನಮೂದಿಲ್ಲ.

ಸಿ. ವೆಂಕಟರಾವ್,
ಛಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 14ನೆ ಸೆಪ್ಟಂಬರ್ 1909.

1. ಕಂದಾಯದ ಬಾಕೀದಾರರಾದ ಜೋಡಿ ಚಾಮಲಾಪುರದ ಕೃಷ್ಣಪ್ಪ, ನಾರಣಪ್ಪನಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಎಡತೊರೆ ತಾಲ್ಲೂಕು ಜೋಡಿ ಚಾಮಲಾಪುರ ಗ್ರಾಮದಲ್ಲಿ 17—11—1909ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಓವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಪಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908-09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ ರೂಪಾಯಿ 3,985—1—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಲ್ಪಲೋಪಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

9. ಭೂಷ ಸವಾಲ್‌ದಾರನು 1909–10ನೆ ಸೌಮ್ಯ ಸಂವತ್ಸರದ ಕಂದಾಯ ಕೊಡಲು ಬದ್ಧನಾಗಿರಬೇಕು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಜಮೀನು. ಖುಷ್ಕೀ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎ.	ಗುಂ.	ಜಮೀನು. ಅಕಾರ. ರೂ.	ಆ.	ಪೈ.	ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಎಡತೊರೆ	ಕಸಬಾ	ಜೋಡಿ ಚಾಮಲಾಪುರ	ಕೃಷ್ಣಪ್ಪ, ನಾರಣಪ್ಪ	...	...	ಪರಂಪೋಕು	...	40	33	0	12	0	ರೂ. 4,000	ರೂ. ಆ. ಪೈ. 1,120 4 3	ರೂ. ಆ. ಪೈ. 3,985 1 0 ಪಾವತಿ ತಾರೀಖಿನ ವರೆಗೆ ಬಡ್ಡಿ ಸಹಾ.
						ಬಾಗಾಯಿತು	..	2	6	6	0	0			
						ಖುಷ್ಕಿ	...	400	2	267	12	0			
						ತರಿ	...	2	21	15	0	0			
								445	22	289	8	0			

ಇದಕ್ಕೆ ಬೇರೀಜು—

ಪೂರ್ವಕ್ಕೆ—ಜೋಡಿ ಸುಬ್ಬಾಪಂಡಿತರ ಕೊಪ್ಪಲ್ ಗಡಿ ಮತ್ತು ತಿಪ್ಪೂರು ಗಡಿ.
ಪಶ್ಚಿಮಕ್ಕೆ—ಕಗ್ಗೆರೆ ಗಡಿ ಮತ್ತು ತಿಪ್ಪೂರು ಗಡಿ.
ದಕ್ಷಿಣಕ್ಕೆ—ಬನ್ನಿಕುಪ್ಪೆ ಗಡಿ ಮತ್ತು ಕಾವಳಹಳ್ಳ ಗಡಿ.
ಉತ್ತರಕ್ಕೆ—ತಿಪ್ಪೂರುಗಡಿ ಮತ್ತು ಜೋಡಿ ಸುಬ್ಬಾಪಂಡಿತರ ಕೊಪ್ಪಲು ಗಡಿ. ಈ ಮಧ್ಯೆ ಇರುವ ಜೋಡಿ ಚಾಮಲಾಪುರ ಗ್ರಾಮಪೂರಾ.

ಕೆ. ಚಾಂಡಿ,
ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ಇಸ್ತಿಹಾರ್.

ತಾರೀಖು 14—22ನೆ ಸೆಪ್ಟಂಬರ್ 1909.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಬೇವಾರ್ಸಾಗಿ ಇರುವ ಇದರಡೀ ಕಂಡ ದಸ್ತಾವೇಜುಗಳನ್ನು ಹಾಜರು ಮಾಡಿದವರೇ ಆಗಲೀ ಅಥವಾ ಇವರಿಂದ ಅಧಿಕಾರ ಹೊಂದಿದ ಮುತ್ತಾಲೀಕರೇ ಆಗಲೀ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳ ಒಳಗಾಗಿ ಆಯಾಯ ರಿಜಿಸ್ಟ್ರೇಷನ್ ಆಫೀಸಗಳಲ್ಲಿ ಹಾಜರಾಗಿ ತೆಗದುಕೊಳ್ಳದಿದ್ದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂಬರ್ 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತಾವೇಜುಗಳನ್ನು ನಾಶಪಡಿಸುತ್ತೆ.

1908—1909.

ಖಾನೆ ನಂಬರ್.	ರಿಜಿಸ್ಟ್ರೇಷನ್ ಆಫೀಸುಗಳ ಹೆಸರು.	ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಯಳಂದೂರು ...	1	26	4— 7—1906	6— 7—1906	ಯಳಂದೂರು ತಾಲ್ಲೂಕು ಗುಂಭಳ್ಳಿ ಗ್ರಾಮದಲ್ಲಿರುವ ಬಲಗೈ ಜಾತಿ ಚಿಕ್ಕನ ಮಗಳು ಕೆಂಪಿ	ಯಳಂದೂರು ತಾಲ್ಲೂಕು ಗುಂಭಳ್ಳಿ ಗ್ರಾಮದಲ್ಲಿರುವ ಬಲಗೈ ಜಾತಿ ದೇವಿಲಿಂಗನ ಹೊನ್ನನ ಮಗ ಜಿರಾಯಿತಿ ಕಸಬಿನ ಹೊನ್ನ.	16 ರೂಪಾಯಿ ಕ್ರಯ.
2	ಡಿಟೋ. ...	1	55	7— 7—1906	9— 7—1906	ಯಳಂದೂರು ತಾಲ್ಲೂಕು ಯರಗಂಬಳ್ಳಿ ಗ್ರಾಮದಲ್ಲಿರುವ ಯಡಗೈ ಜಾತಿ ದೊಡ್ಡಪುಟ್ಟನ ಸಿದ್ದನ ಮಗ ಜಿರಾಯಿತಿ ಕಸಬಿನ ಚಿಕ್ಕಸಿದ್ದ ಒಂದು, ಸದರಿ ಅಡಿಷನ್‌ವುಳ್ಳ ಚಿಕ್ಕಸಿದ್ದನಮಗ ಲಿಂಗ ಒಂದು.	ಯಳಂದೂರು ತಾಲ್ಲೂಕು ಯರಗಂಬಳ್ಳಿ ಗ್ರಾಮದಲ್ಲಿರುವ ಯಡಗೈ ಜಾತಿ ದೊಡ್ಡಪುಟ್ಟನ ದ್ಯಾವರಗುಡ್ಡನ ಮಗ ಜಿರಾಯಿತಿ ಕಸಬುವುಳ್ಳ ಕೆಂಪಸಿದ್ದ.	50 ರೂಪಾಯಿ ಕ್ರಯ.
3	ಡಿಟೋ ...	1	118	5— 7—1906	24— 8—1906	ಯಳಂದೂರು ತಾಲ್ಲೂಕು ಗಣಿಗನೂರು ಗ್ರಾಮದಲ್ಲಿರುವ ವುಪ್ಪಲಿಗರ ಸಿದ್ದನದಾಶೆಟ್ಟಿಮಗ ಕೂಲಿ ಕಸಬಿನ ಕೃಷ್ಣ.	ಯಳಂದೂರು ತಾಲ್ಲೂಕು ಗಣಿಗನೂರು ಗ್ರಾಮದಲ್ಲಿರುವ ವುಪ್ಪಲಿಗರ ಸಿದ್ದನೆ ದಾಸನಮಗ ಜಮೀನ್ ಜೀವನದ ಹುಚ್ಚ.	100 ರೂಪಾಯಿ ಕ್ರಯ.
4	ಶ್ರೀರಂಗಪಟ್ಟಣ ...	1	641	29— 8—1906	17—12—1906	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಹಿರೋಡೆಯಲ್ಲಿರುವ ಮಹಾರಾಷ್ಟ್ರ ಜಾತಿ ರಾಮಚಂದ್ರರಾಯರ ಮಗ ರಾಂಜಿರಾವು.	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಹಿರೋಡೆ ಹೋಬಳಿ ಬೀರಶೆಟ್ಟಿಹಳ್ಳಿಯಲ್ಲಿರುವ ಸಿದ್ದೆಗೌಡನ ಮಗ ಕಾಳಯ್ಯ.	50 ರೂಪಾಯಿ ಕ್ರಯ.

ಅಂಕದ ನಂಬರು.	ರಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರುದ ಅಥವಾ ತಿರಸ್ಕರಿಸಿದ ತಾರೀಖು	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಿಸಿಕೊಂಡವರ ಹೆಸರು.	ದಸ್ತಾವೇಜು ಸ್ವಭಾವ ಮತ್ತು ಕಿಮ್ಮತ್ತು.
5	ಶ್ರೀರಂಗಪಟ್ಟ ...	1	1111	6— 4—1907	10— 4—1907	ಕೃಷ್ಣರಾಜಪೇಟೆ ತಾಲ್ಲೂಕು ಚಿನ್ನುರಳಿ ಹೋಬಳಿ ಶೆಟ್ಟಿಹಳ್ಳಿಗ್ರಾಮದಲ್ಲಿರುವ ಮೂಕನಕೊಪ್ಪಲು ನರಸಿಹ್ಮೆಗೌಡನ ಮಕ್ಕಳು ತಿಂಮ್ಮೆಗೌಡ ಮತ್ತು ಚನ್ನೆಗೌಡ.	ಮೈಸೂರು ಚಾಮರಾಜಪೇಟೆ ಬೊಬ್ಬ್ಚಣನವರ ಲೈನಲ್ಲಿರುವ ಮಳೂರು ಅಳಸಿಂಗ್ರಯ್ಯಂಗಾರ್ರ ಮಕ್ಕಳು ವೆಂಕಟಾಚಲಯ್ಯಂಗಾರ್ರು.	3 ಸಾಲ್ ಗುತ್ತಿಗೆ ಸಾಲಿಯಾನಾ 22 ಖಂಡಗ ಕೃಷ್ಣರಾಜಖಂಡಿ ಭತ್ತ, 22 ಹೊರೆ ಹುಲ್ಲು, 2ರೂಪಾಯಿ ಕಾಳು ಕೊಡುವದಾಗಿ.
6	ಡಿಟೋ ...	4	16	6— 4—1907	16— 4—1907	ಡಿಟೋ	ಡಿಟೋ ...	100 ರೂಪಾಯಿ ಮೈಸಾಲ ಪತ್ರ.
7	ಡಿಟೋ ...	1	1412	15— 5—1907	31— 5—1907	ಶ್ರೀರಂಗಪಟ್ಟ ತಾಲ್ಲೂಕು ದರಸಗುಪ್ಪೆಯಲ್ಲಿರುವ ಫವತಿ ಪಟೇಲ್ ಚಿಕ್ಕೆಗೌಡನ ಮಗ ಬವನಾಶಿಗೌಡ ಪುರುಫ್ ಪುಟ್ಟೆಗೌಡ.	ಶ್ರೀರಂಗಪಟ್ಟ ತಾಲ್ಲೂಕು ದರಸಗುಪ್ಪೆಯಲ್ಲಿರುವ ಫವತಿ ಪಟೇಲ್ ಚಿಕ್ಕೆಗೌಡನ ಹೆಂಡತಿ ನಂಜಮ್ಮ.	225 ರೂಪಾಯಿ ಮೋಖೋರುಪತ್ರ.
8	ಚಾಮರಾಜನಗರ ...	1	91	10— 4—1907	9— 7—1907	ಯರಗಂಬಳ್ಳಿಯಲ್ಲಿರುವ ಚಿಕ್ಕಬೆಳಗಿರಿ ಹನುಮನ ಮಗ ಹನುಮ.	ಸುತ್ತೂರು ಗ್ರಾಮದಲ್ಲಿರುವ ಮೂದೆಗೌಡನ ಮಗ ಮಾದೆಗೌಡ.	30 ರೂಪಾಯಿ ಕ್ರಯ ಪತ್ರ.
9	ಡಿಟೋ ...	1	92	15— 6 1907	9— 7—1907	ಸುತ್ತೂರು ಗ್ರಾಮದಲ್ಲಿರುವ ನಂಜನ ಮಗ ನಂಜ.	ಡಿಟೋ ಗ್ರಾಮದಲ್ಲಿರುವ ಮಾದೆಗೌಡನ ಮಗ ಮಾದೆಗೌಡ.	50 ರೂಪಾಯಿ ಕ್ರಯ ಪತ್ರ.
10	ಹುಣಸೂರು ...	1	36	6— 7—1906	9— 7—1906	ಸರ್ವಮಾನ್ಯ ದೊಡ್ಡಬೆಲಾಳು ದಾಖಲೆ ವೆಂಕಟೇಗೌಡನ ಕೊಪ್ಪಲು ಕೊಡಿಗೌಡನ ಮಕ್ಕಳು 1ನೆ ಮಲ್ಲೆಗೌಡ, 2ನೆ ಸುಬ್ಬೆಗೌಡ.	ಸದರಿ ವೆಂಕಟೆಗೌಡನ ಕೊಪ್ಪಲು ನಂಜೆಗೌಡ, ನಿಂಗೆಗೌಡನ ಮಗ ನಂಜೆಗೌಡ.	300 ರೂಪಾಯಿ ಕ್ರಯ ಪತ.
11	ಡಿಟೋ ...	1	521	28—12—1906	5— 1—1907	ಗಂಗನಕುಪ್ಪೆಯಲ್ಲಿರುವ ರಹಿಮಾನ್ ಸಾಬರ ಹೆಂಡತಿ ಕತ್ತಿಜಾಬೀ ಮತ್ತು ಖಾದರ್‌ಸಾಬಿ ಮೈನರ್ ಗಾರ್ಡಿಯನ್ ಕತ್ತಿಜಾಬೀ.	ಗಂಗನಕುಪ್ಪೆಯಲ್ಲಿರುವ ಹೈದರ್‌ಸಾಬಿ ಮಗ ಯಾಕೂಬ್‌ಸಾಬಿ.	150 ರೂಪಾಯಿ ಕ್ರಯ ಪತ್ರ.
12	ಡಿಟೋ ...	1	547	8— 1—1907	17— 1—1907	ಹರಳಹಳ್ಳಿ ಮೇಗಳ ಮನೆ ಲಿಂಗಶೆಟ್ಟರ ಮಗ ಲಿಂಗಶೆಟ್ಟಿ.	ಹರಳಹಳ್ಳಿ ನಿರಾಳಶೆಟ್ಟಿ ಮಗ ಬಸೆಟ್ಟಿ.	100 ರೂಪಾಯಿ ಭೋಗ್ಯ.
13	ಮೈಸೂರು ...	1	131	23— [illegible]—1906	20— 7—1906	ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಪಂಚಾಳದ ಮುದ್ದಂಣಾಚಾರಿ ಮಗ ನಾಗಪ್ಪಾಚಾರಿ.	ಮೈಸೂರು ಮಂಡಿಮೊಹಲ್ಲಾದಲ್ಲಿರುವ ಪಾಂಚಾಳದ ಜಾತಿ ಚಿಂಣಾಚಾರಿ.	50 ರೂಪಾಯಿ ಕ್ರಯ ಪತ್ರ.

14	ಮೈಸೂರು	1	362	28— 8—1906	3— 9—1906	ತಿ. ನರಶೀಪುರ ತಾಲ್ಲೂಕು ಸೋಸಲೆ ಕೃಷ್ಣರಾಜಪುರದ ಅಗ್ರಹಾರದಿಂದ ಮೈಸೂರಿಗೆ ಬಂದಿರುವ ಸಾಹುಕಾರ್ ಹುಂಡಿ ಕೃಷ್ಣಮಾಚಾರ್ರು ಮಕ್ಕಳು ಶೇಷಾದ್ರಿ ನರಸಿಂಹಾಚಾರ್ ಮೈನರ್ ಗಾರ್ಡಿಯನ್ ಶ್ರೀನಿವಾಸ ರಂಗಾಚಾರ್.	ತಿ|| ನರಶೀಪುರ ತಾಲ್ಲೂಕು ಕಸಬಾ ನರಶೀಪುರದಲ್ಲಿರುವ ರಂಗೈಯಂಗಾರ್ರು ಮಕ್ಕಳು ಟಿ. ಆರ್. ಶ್ರೀನಿವಾಸ ರಂಗಾಚಾರ್.	600 ರೂಪಾಯಿ ಕ್ರಯ ಪತ್ರ.
15	ಡಿಟೋ	1	668	23— 9—1906	8—11—1906	ಮೈಸೂರು ನಜರ್‌ಬಾದು ಮೊಹಲ್ಲಾ ಇಟ್ಟಿಗೆ ಗೂಡಿನಲ್ಲಿರುವ ಕಮ್ಮಾಳದ ನಾರಣಾಚಾರಿ ಮಗ ಮರ ಕೆಲಸದ ಮಾಣಿಕ್ಯಾಚಾರಿ ಡಿಟೋ ಮೊಹಲ್ಲಾದಲ್ಲಿರುವ ಡಿಟೋ ಜಾತಿ ಲಕ್ಷ್ಮಣಾಚಾರಿ ಹೆಂಡತಿ ಕಾಮಾಕ್ಷಮ್ಮ ಸಹ.	ಮೈಸೂರು ನಜರ್‌ಬಾದು ಮೊಹಲ್ಲಾ ಇಟ್ಟಿಗೆ ಗೂಡಿನಲ್ಲಿರುವ ಕಮ್ಮಾಳದ ಜಾತಿ ಲಕ್ಷ್ಮಣಾಚಾರಿ ಮಗಳು ಪಾಪಾತಿಯಮ್ಮ.	100 ರೂಪಾಯಿ ದಾನ ಪತ್ರ.
16	ಡಿಟೋ	1	669	31—10—1906	6—11—1906	ಮೈಸೂರು ತಾಲ್ಲೂಕು ಕಲಸನಾಥಪುರದಲ್ಲಿರುವ ಗಂಗಡಿಕಾರ ಸುಬ್ಬೇಗೌಡನ ಮಗ ಕೆಂಪ.	ಮೈಸೂರು ತಾಲ್ಲೂಕು ಕಲಸನಾಥಪುರದಲ್ಲಿರುವ ಕುರುಬರ ಕುಳ್ಳೇಗೌಡನ ಮಗ ದೊಡ್ಡೇಗೌಡ.	22 ರೂಪಾಯಿ ಕ್ರಯ ಪತ್ರ.
17	ಡಿಟೋ	1	696	5—11—1906	13—11—1906	ಮೈಸೂರು ಕೃಷ್ಣರಾಜ ಮೊಹಲ್ಲಾ ಸುಣ್ಣದ ಕೇರಿ ಕಂಚುಗಾರ ಖುರ್ದಸಾಬಿ ಮಕ್ಕಳು ಪೀರ್‌ಸಾಬಿ ಅಬ್ದುಲ್‌ನಬಿಸಾಬಿ ಸಹ.	ಮೈಸೂರು ಕೃಷ್ಣರಾಜಮೊಹಲ್ಲಾ ಸುಣ್ಣದಕೇರಿಯಲ್ಲಿರುವ ಕಂಚುಗಾರ ಖುರ್ದಸಾಬಿ ಮಕ್ಕಳು ಪೀರ್‌ಸಾಬಿ-ಅಬ್ದುಲ್‌ನಬಿಸಾಬಿ ಸಹ.	600 ರೂಪಾಯಿ ವಿಭಾಗ ಪತ್ರ.
18	ಡಿಟೋ	1	721	6—11—1906	15—11—1906	ಮೈಸೂರು ಮಂಡಿಮೊಹಲ್ಲಾ ತೊಗರಿಬೀದಿಯಲ್ಲಿರುವ ಲೇಟ್ ಮೀರ್ ಫಜಲೆ ಅಲ್ಲಿಸಾಬರ ಮಕ್ಕಳು ಮಹಮ್ಮದ್ ತಕ್ಕಿ ಇವರ ಖಾಸಾ ಅಕ್ಕ ಷಹರ್‌ಖಾನೂಬೇಗಂ ಸಹ.	ಡಿಟೋ	100 ಡಿಟೋ
19	ಡಿಟೋ	1	764	3—11—1906	21—11—1906	ಮೈಸೂರು ಮಂಡಿಮೊಹಲ್ಲಾದಲ್ಲಿ ಒಕ್ಕಲಿಗರ ವಾಲೇಕಾರ್ ತಿಂಮಣ್ಣನವರ ಮಗ ಜವಳಿ ಅಂಗಡಿ ತಿಂಮೈಯ್ಯ.	ಮೈಸೂರು ಲಷ್ಕರ್‌ಮೊಹಲ್ಲಾ ಹಳ್ಳದಬೀದೀಲಿರುವ ಕಿರಗಾಣಿಗರ ಲಕ್ಷ್ಮಣನ ಮಗ ನಂಜಪ್ಪ.	75 ರೂಪಾಯಿ ಕ್ರಯ ಪತ್ರ.
20	ಡಿಟೋ	1	1092	16— 1—1907	31— 1—1907	ಮೈಸೂರು ಹಳೆ ಅಗ್ರಹಾರದಲ್ಲಿರುವ ಸ್ಮಾರ್ತಬ್ರಾಹ್ಮಣ ಶ್ರೀನಿವಾಸೈಯ್ಯನವರ ಹೆಂಡತಿ ಸೀತಮ್ಮ.	ಮೈಸೂರು ತಾಲ್ಲೂಕು ಇಲವಾಲದ ಹೋಬಳಿ ಚಿಕ್ಕನಹಳ್ಳಿ ದಾಖಲೆ ಮಲ್ಲೇಗವುಡನ ಕೊಪ್ಪಲುನಲ್ಲಿರುವ ಗಂಗಡಿಕಾರ ಮಂಚೇಗವುಡನ ಮಗ ಮರಿನಿಂಗ.	12 ಡಿಟೋ

ಕ್ರಮ ಸಂಖ್ಯೆ.	ರಿಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕದ ಸಂಖ್ಯೆ.	ದಸ್ತಾವೇಜು ಸಂಖ್ಯೆ.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
21	ಮೈಸೂರು ...	1	1903	15—6—1907	21—6—1907	ಕೃಷ್ಣರಾಜಮೊಹಲ್ಲಾ ಗೊಲ್ಲರಬೀದಿಯಲ್ಲಿರುವ ದೊಡ್ಡಮ್ಮನಸ್ವಂತ ಮಗಳುಮಗ ರಾಜ ಮೈನರ್ ಗಾರ್ಡಿಯನ್ ಚಿಕ್ಕಅಜ್ಜಿ ವೆಂಕಟಮ್ಮ.	ಮೈಸೂರು ಕೃಷ್ಣರಾಜಮೊಹಲ್ಲಾ ಜಟ್ಟಿಗಳ ಬೀದೀಲಿ ಗೊಲ್ಲರ ಈರತ್ತೆಯ್ಯನ ಮಗ ಪುಟ್ಟಣ್ಣ.	50 ರೂಪಾಯಿ ಭೋಗ್ಯದ ಅನ್ವಾದಿ ಪತ್ರ.
22	ಡಿಟೋ ...	1	3	9—3—1905	10—7—1905	ಮದರಾಸಿನಿಂದ ಮೈಸೂರಿಗೆ ಬಂದಿರುವ ಸಿ. ರಾಮಸ್ವಾಮಿನಾಯಿಡು ಮಗ ಸಿ. ರಾಜಗೋಪಾಲನಾಯಿಡು.	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಅರಮನೇಲಿ ಇಸ್ತ್ರಿ ಕೆಲಸ ಮಾಡುವ ಮರಿಪಿಳ್ಳೆ ಮಗ ರಾಮಲಿಂಗಂಪಿಳ್ಳೆ.	ಕರಾರು ಒಂಬತ್ತು ನಮೂದಿಲ್ಲ.
23	ಮಂಡ್ಯ ...	2	2	18—4—1906	30—8—1906	ಬೋರೇಗವುಡ, ಮಳವಳ್ಳಿ ತಾಲ್ಲೂಕು ಚಿಕ್ಕರಸಿನಕೆರೆ ಕ್ಯಾತಗಲ್ಲಿರ ದಾಖಲೆ ವಡ್ಡರದೊಡ್ಡಿ ಗ್ರಾಮದ ಬೋರೇಗವುಡನ ಮಗ	ಕೆರಿ ಸುಬ್ಬೈಯ್ಯ, ಮಳವಳ್ಳಿ ತಾಲ್ಲೂಕು ಚಿಕ್ಕರಸಿನಕೆರೆ ಸರ್ವಮಾನ್ಯ ಅರುವನಹಳ್ಳಿ ಗ್ರಾಮದಲ್ಲಿರುವ ಕೆಂಪೈಯ್ಯನ ಮಗ.	90 ರೂಪಾಯಿ ಕ್ರಯ ಪತ್ರ.
24	ಡಿಟೋ ...	2	5	12—5—1906	30—10—1906	ಧಾಟಿ ತಿರುವೆಂಕಟಾಚಾರ್ ಪುರುಷೋತ್ತಮ ಇವರ ತಮ್ಮ ನರಸಿಂಹಾಚಾರ್, ಬೆಂಗಳೂರಲ್ಲಿರುವ ಧಾಟಿ ಶ್ರೀನಿವಾಸೈಯ್ಯಂಗಾರ್ರ ಮಕ್ಕಳು.	ಶ್ರೀರಂಗಪಟ್ಟಣದಲ್ಲಿರುವ ವೀರಾಂಬುದಿ ಶ್ರೀರಂಗರಾಜರ ಮಗ ವೀರಾಂಬುದಿ ಶ್ರೀನಿವಾಸೈಯ್ಯಂಗಾರ್.	ಗುತ್ತಿಗೆ ಪತ್ರ
25	ಡಿಟೋ ...	2	9	15—3—1906	29—11—1906	ಮಂಡ್ಯ ತಾಲ್ಲೂಕು ಕೊಪ್ಪದ ಗ್ರಾಮದಲ್ಲಿರುವ ಕೆರೆಗೋಡು ವೆಂಕಟಪ್ಪನವರ ಮಗ ದಾಸಪ್ಪ.	ಕೊಪ್ಪದ ಹೋಬಳಿ ಖಾಯಂಗುತ್ತ ಆಬಲವಾಡಿಯಲ್ಲಿರುವ ಕೆಂಚೇಗವುಡನಮಗಚಿಕ್ಕ ತಿಮ್ಮೇಗವುಡ.	175 ರೂಪಾಯಿ ಕ್ರಯ.
26	ಡಿಟೋ ...	1	1471	2—4—1907	3—4—1907	ಮಂಡ್ಯ ತಾಲ್ಲೂಕು ತೈಲೂರಿನಲ್ಲಿರುವ ವೆಂಕಟಬೋಡೇಗವುಡನ ಮಗ ದಾಸೇಗವುಡ.	ಡಿಟೋ ಸ್ಥಳದಲ್ಲಿರುವ ಕಾಡೇಗವುಡನ ತಿಮ್ಮಯ್ಯನವರ ಮಗ ಗಿರಿಗಡವು.	100 ಡಿಟೋ
27	ಮಳವಳ್ಳಿ ...	1	190	1—7—1906	26—7—1906	ಕಾಗೇಪುರದಲ್ಲಿರುವ ಬೆಟ್ಟಸಿದ್ದೆಗವುಡನ ಮಗ ಮರಲಿಂಗೇಗವುಡ.	ಮಿಕ್ಕೆರೆ ಗ್ರಾಮದ ದಾಖಲೆ ಕಾಗೆಪುರದಲ್ಲಿರುವ ಗಂಗಡಿಕಾರ ಚಿಕ್ಕಬೋರನ ಹೆಂಡತಿ ಸಿದ್ದಿ.	100 ರೂಪಾಯಿ ದಾನ

28	ಡಿಟೋ ...	1	638	15—10—1906	20—10—1906	ಚಿಕ್ಕ ಅಬ್ಬಾಗಲು ಗ್ರಾಮದಲ್ಲಿರುವ ನಂಜಪ್ಪನ ಮಗ ಮಲ್ಲಪ್ಪ ವಗೈರೆ.	ರಾಗಿಬೊಮ್ಮನಹಳ್ಳಿ ಮಹಂತವಡೇರ ವೀರಪ್ಪನ ಮಗ ಮರಿದೇವರು.	100 ರೂಪಾಯಿ ಆಧಾರ.
29	ಡಿಟೋ ...	4	18	20— 5—1907	23— 5—1907	ರಾಗಿಬೊಮ್ಮನಹಳ್ಳಿ ಸಿದ್ದೇಗವುಡನ ಮಲ್ಲಪ್ಪನ ಮಗಳು ಈರಮ್ಮ.	ರಾಗಿಬೊಮ್ಮನಹಳ್ಳಿ ಸೇರ್ವೆಗಾರ ಮಾದಪ್ಪನ ಮಗ ಚೆನ್ನಬಸಪ್ಪ ಉರುಫ್ ಮರಿದೇವರು.	150 ರೂಪಾಯಿ ಜೀವನಾಂಶ ಪತ್ರ
30	ನಂಜನಗೂಡು ...	1	1016	5—12—1905	5—12—1905	ಮೊಯಿದೀನ್ ಸಾಬಿ ಉರುಫ್ ಚಿಂಣು ಸಾಬಿ.	ವೀರಮ್ಮ ...	50 ರೂಪಾಯಿ ಕ್ರಯ.
31	ಡಿಟೋ ...	1	1762	27—11—1905	16— 3—1906	ಬಸವ ಉರುಫ್ ಗುಂಡ ...	ರಾಜಶೆಟ್ಟಿ ...	30 ಡಿಟೋ
32	ಡಿಟೋ ...	1	625	8—10—1906	15—10—1906	ಗೋಪಾಲಚಕ್ರವರ್ತ್ಯಾಚಾರ್ರು ...	ವೆಂಕಟಸುಬ್ಬಯ್ಯ ...	50 ರೂಪಾಯಿ ಆಧಾರ.
33	ಯಡತೊರೆ ...	1	1881	4— 5—1907	18— 5—1907	ಸಾಲಿಗ್ರಾಮದಲ್ಲಿರುವ ಆದಿರಾಜಯ್ಯನವರ ಮಗ ಬ್ರಹ್ಮಯ್ಯ, ನೇಮೈಯ್ಯ.	ಸಾಲಿಗ್ರಾಮದಲ್ಲಿರುವ ಬ್ರಂಹಯ್ಯ, ನೇಮಯ್ಯ.	500 ರೂಪಾಯಿ ಪರಿವರ್ತನೆ ಮತ್ತು ಜೀವನಾಂಶದ ದಸ್ತಾವೇಜು.
34	ಡಿಟೋ ...	1	1723	13— 2—1907	4— 5—1907	ಎಡತೊರೆ ತಾಲ್ಲೂಕು ಶಾಬಾಳು ಗ್ರಾಮದಲ್ಲಿರುವ ಮರಿಯ, ಆನಿಗವುಡ.	ಎಡತೊರೆ ತಾಲ್ಲೂಕು ಮಿರ್ಲೆ ಹೋಬಳಿ ಶಾಬಾಳು ಗ್ರಾಮದಲ್ಲಿ ಮಕತುಂಸಾಬಿ ಉರಫ್ ಜಂನಾಸಾಬಿ.	200 ರೂಪಾಯಿ ಕ್ರಯ.
35	ಡಿಟೋ ...	1	826	15— 1—1907	22— 1—1907	ಎಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿರುವ ಚಲುವರಾಯ.	ಎಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿರುವ ಮಹಮುದ್ ಷರೀಫ್.	ಗುತ್ತಿಗೆ ಕರಾರು ಕಿಮ್ಮತ್ತು ನಮೂದಿಲ್ಲ.
36	ಡಿಟೋ ...	1	1177	10— 3—1907	12— 3—1907	ಎಡತೊರೆ ತಾಲ್ಲೂಕು ಹಂಪಾಪುರದಲ್ಲಿರುವ ಸವಡಿ ಸಪ್ಪನಾಯಿಕ.	ಮೈಸೂರು ರಾಮಸ್ವಾಮೈಯ್ಯಂಗಾರ್ರ ಮಕ್ಕಳು ರಂಗೈಯ್ಯಂಗಾರ್.	50 ರೂಪಾಯಿ ಆಧಾರ.
37	ಡಿಟೋ ...	1	1063	22— 2—1907	26— 2—1907	ಎಡತೊರೆ ತಾಲ್ಲೂಕು ಅರ್ಜಿನಹಳ್ಳಿಯಲ್ಲಿರುವ ಜವರನ ಹೆಂಡತಿ ಸಿದ್ದಿ, ಮಂಚ ಸಹ.	ಡಿಟೋ ...	150 ರೂಪಾಯಿ ಆಧಾರ.
38	ಡಿಟೋ ...	1	722	17— 6—1906	12—12—1906	ಎಡತೊರೆ ತಾಲ್ಲೂಕು ಚಂದಗಾಲು ಗ್ರಾಮದಲ್ಲಿರುವ ಚನ್ನೈಯ್ಯ.	ಮೈಸೂರಲ್ಲಿರುವ ಅಶ್ವತ್ಥ ಕೃಷ್ಣಶಾಸ್ತ್ರಿ.	20 ರೂಪಾಯಿ ಭೋಗ್ಯ.

ಎಸ್. ಪಿ. ರಾಜಗೋಪಾಲಾಚಾರ್, ಫರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟು.

1909ನೆ ಇಸ್ವಿ ಜುಲೈ 28ನೆ ಬುಧವಾರ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್ ಯಾನೆ ನಡವಳಿಕೆಗಳು.

ಉದ್ಯೋಗತಃ ಮೆಂಬರರು.

ಹಾಜರು.

1. ಮಿ|| ಎಂ. ನಾರಾಯಣರಾವರವರು, ಡೆಪ್ಯುಟಿ ಕಮಿಷನರ ಮತ್ತು ಪ್ರೆಸಿಡೆಂಟರು.
2. ,, ಆರ್. ಟಿ. ಮಹದೇವರಾಯರು, ಟ್ರಜರಿ ಅಸಿಸ್ಟೆಂಟ ಕಮಿಷನರ ಮತ್ತು ವೈಸ್ ಪ್ರೆಸಿಡೆಂಟರು.
3. ,, ಟಿ. ತಿಂಬಾ ಶೆಟ್ಟರು, ಶಿವಮೊಗ್ಗ ಡಿವಿಜನ್ ಅಸಿಸ್ಟೆಂಟ ಕಮಿಷನರು.
4. ,, ಆರ್. ವಿ. ಸುಂದರಂ ಐಯ್ಯರ್, ಶಿವಮೊಗ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರು.
5. ,, ಮಹಮದ್ ಉಸ್ಮಾನ್ ಸಾಹೇಬರವರು, ಡಿಸ್ಟ್ರಿಕ್ಟು ಮೆಡಿಕಲ್ ಆಫಿಸರು.
6. ,, ತಿರುಮಲಾಚಾರ್ರು, ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರವರು.

ಉದ್ಯೋಗಸ್ಥರಲ್ಲದ ಮೆಂಬರರು.

7. ಮಿ|| ನಾಡಿಗ ಶಂಕರಪ್ಪನವರು, ಶಿವಮೊಗ್ಗ ತಾಲ್ಲೂಕು.
8. ,, ಉಬ್ರಾಣಿ ಶ್ಯಾನುಭೋಗ ಅಪ್ಪಾಜಪ್ಪನವರು, ಚನ್ನಗಿರಿ ತಾಲ್ಲೂಕು.
9. ,, ನಾಡಿಗ ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
10. ,, ಸಾಲೂರ ಭವಾನಿರಾಯರು, ಶಿಕಾರಿಪುರ ತಾಲ್ಲೂಕು
11. ,, ಶ್ಯಾಮಣ್ಣ ಉಡುಪರು, ನಗರ ತಾಲ್ಲೂಕು.
12. ,, ಹುಲಿಚಿದಕಟ್ಟೆ ರಾಮರಾಯರು, ತೀರ್ಥಹಳ್ಳಿ ತಾಲ್ಲೂಕು.
13. ,, ಸಿ. ಸುಬ್ಬರಾಯರು, ಅಡ್ವೋಕೇಟರು, ಶಿವಮೊಗ್ಗ.
14. ,, ಖಾಜಿ ಸಯ್ಯದ್ ಮಹಮ್ಮದ್ ಸಾಹೇಬರು, ಶಿವಮೊಗ್ಗ.
15. ,, ರೆವರೆಂಡ್ ಫಾದರ್ ಎಫ್. ಪೊಲ್ಲೆಯವರು, ಶಿವಮೊಗ್ಗ.
16. ,, ತಾಗರ್ತಿ ದೇವಪ್ಪನವರು, ಶಿಕಾರಿಪುರ.
17. ,, ರಟ್ಟೆಹಳ್ಳಿ ಪುಟ್ಟಪ್ಪನವರು, ಸಾಗರ.
18. ,, ಸಾಹುಕಾರ ವಾಮನರಾಯರು, ನಗರ.
19. ,, ಎ. ನರಸಿಂಹೈಯ್ಯಂಗಾರ್ರು, ಸಾಗರ.

ಉದ್ಯೋಗತಃ ಮೆಂಬರರು.

ಗೈರ್ ಹಾಜರು.

20. ಮಿ|| ಎಂ. ಶ್ರೀನಿವಾಸ ಮೂರ್ತಿಗಳು ಸಾಗರ ಡಿವಿಜನ್ ಅಸಿಸ್ಟೆಂಟ ಕಮಿಷನರವರು.

ಉದ್ಯೋಗಸ್ಥರಲ್ಲದ ಮೆಂಬರರು.

21. ಮಿ|| ನಾಡಿಗ ಭಾಸ್ಕರರಾಯರು, ಸೊರಬ ತಾಲ್ಲೂಕು.
22. ,, ಬರದವಳ್ಳಿ ಗುರಪ್ಪಗೌಡರು, ಸಾಗರ ತಾಲ್ಲೂಕು.
23. ,, ನಾಡಿಗ ರಾಘವೇಂದ್ರಪ್ಪನವರು, ಕುಂಸಿ ಸಬ್ ತಾಲ್ಲೂಕು ಫನತಿ.
24. ,, ರೆವರೆಂಡ ಮಿ|| ಎ. ಬ್ರಾಕ್‌ಬ್ಯಾಂಕರವರು, ಶಿವಮೊಗ್ಗ.
25. ,, ದೇವಂಗಿ ರಾಮಣ್ಣಗೌಡರು, ತೀರ್ಥಹಳ್ಳಿ ತಾಲ್ಲೂಕು.

1. ಶಿವಮೊಗ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರಿಂದ ತಲ್ಪಿರುವ ಫೈ. 3725ಕ್ಕೆ ತಲ್ಪಿದ 1909–10ನೆ ಸಾಲಿನ ಇರಿಗೇಷನ್ ಬಜೆಟ್ ಅಂದಾಜುಗಳು ಓದಲಾಗಿ ಅನುಮೋದಿಸಲ್ಪಟ್ಟಿತು.

2. ಸಾಗರ-ಶಿರಾಳಕೊಪ್ಪ ರಸ್ತೆಯ ಸ್ಪೆಷಲ್ ರಿಪೇರಿಗೋಸ್ಕರ 5,716 ರೂಪಾಯಿಗೆಳಿಗೆ ತಯಾರಿಸಿದ ಅಂದಾಜಾದೊಡನೆ ಸದರಿ ಅಂದಾಜಾ ಸ್ಯಾಂಕ್ಷನ್ನು ಬಗ್ಯೆ ಮತ್ತು ಹಣ ವದಗಿಸುವ ಬಗ್ಯೆ ತಲ್ಪಿದ ಶಿವಮೊಗ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನೀಯರವರ ನಂಬರ 723–9—7—09ನೆ ಡಾಕೆಟ್ ಓದಲ್ಪಟ್ಟು, ಈ ಸಾಲಿನಲ್ಲಿ ಹಣವಿಲ್ಲದಿರುವದರಿಂದ ಸದರಿ ಅಂದಾಜವನ್ನು ಸ್ಯಾಂಕ್ಷನ್ ಮಾಡುವದಕ್ಕಾಗುವದಿಲ್ಲವೆಂತಲೂ, 1910—11ನೆ ಸಾಲಿನ ಡಿಸ್ಟ್ರಿಕ್ಟು ಫಂಡು ಬಡ್ಜೆಟನ್ನು ಚರ್ಚಿಸುವಾಗ್ಯೆ ಇದರ ವಿಷಯವಾಗಿ ಆಲೋಚಿಸತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

3. 1908ನೆ ಸಾಲಿನ ದಸರಾ ಪ್ರಜಾಪ್ರತಿನಿಧಿ ಸಭೆಯ ನಂಬರ 368ನೆ ವಿಷಯವನ್ನು ಅನುಸರಿಸಿ ನಗರದಲ್ಲಿರುವ ಹಿಲಕುಂಜಿ ಹಳ್ಳದ ಸೇತುವೆ ರಿಪೇರಿಗೋಸ್ಕರವಾಗಿ ತಯಾರಿಸಲ್ಪಟ್ಟ 748 ರೂಪಾಯಿ ಅಂದಾಜಾ ಮತ್ತು ಪ್ಲಾನು ಸಮೇತ ತಲ್ಪಿದ ಶಿವಮೊಗ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನೀಯರವರ ನಂಬರು 497-11—5—09ನೆ ಡಾಕೆಟ್ ಓದಲಾಗಿ ಈ ಕಾಮಗಾರಿಯು ನ್ಯಾಯವಾಗಿ ಡಿಸ್ಟ್ರಿಕ್ಟು ಫಂಡಿನಿಂದ ಮಾಡಿಸತಕ್ಕದ್ದಲ್ಲವೆಂತ ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ. ಹಿಲಕುಂಜಿ ಹಳ್ಳೀ ಸೇತುವೆಯಿಂದ ಕಲ್ಲುಗಳನ್ನು ಪ್ರೊವಿನ್ಷಿಯಲ್ ರೋಡಿನಲ್ಲಿ ಸೇತುವೆಗಳನ್ನು ಕಟ್ಟುವದಕ್ಕೆ ಡಿ. ಪಿ. ಡಬ್ಲ್ಯು. ಡಿಪಾರ್ಟುಮೆಂಟಿನವರು ಉಪಯೋಗಿಸಿದ್ದರೆಂಬದು ಸದರಿ ಎಗ್ಜಿಕ್ಯೂಟಿವ್ ಇಂಜನೀಯರವರ ರಿಪೋರ್ಟಿನಿಂದ ವ್ಯಕ್ತಪಡುವದರಿಂದ ಸದರಿ ವಾಪಸ ವದಗಿಸತಕ್ಕ ಖರ್ಚು ಪ್ರೊವಿನ್ಷಿಯಲ್ ರೆವಿನ್ಯೂ ಕೊಡಲ್ಪಡತಕ್ಕದ್ದೆಂತ ತೀರ್ಮಾನಿಸಲಾಯಿತು.

4. ಸೊರಬ ತಾಲ್ಲೂಕು ಹಳೇ ಸೊರಬ ಗ್ರಾಮದ ಕೆರೆಯ ದಂಡೆಯನ್ನು ಅಗಲಪಡಿಸುವದಕ್ಕೆ ತಯಾರಿಸಲ್ಪಟ್ಟ 1,073 ರೂಪಾಯಿನ ಅಂದಾಜಾವೊಡನೆ ಸದರಿ ಅಂದಾಜಾ ಮಂಜೂರಿ ಮತ್ತು ಹಣ ವದಗಿಸತಕ್ಕ ಬಗ್ಯೆ ತಲ್ಪಿದ ಶಿವಮೊಗ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನೀಯರವರ ನಂಬರು 476-8—5—09ನೆ ಡಾಕೆಟ್ ಓದಲಾಗಿ ಡಿಸ್ಟ್ರಿಕ್ಟು ಫಂಡ್ ಹಣವಿದ್ದಾಗ ಈ ಕಾಮಗಾರಿ ಷುರು ಮಾಡಬಹುದೆಂತ ತೀರ್ಮಾನಿಸಲಾಯಿತು.

5. ತುಮಕೂರು ಡಿಸ್ಟ್ರಿಕ್ಟಿನಲ್ಲಿ 3ನೆ ಕ್ಲಾಸ್ ಮುಸಾಫರ ಬಂಗ್ಲೆ ಗಳಿಗೆ ಒಬ್ಬೊಬ್ಬ ಹಲಾಲುಕೋರನನ್ನ ನೇಮಕ ಮಾಡುವ ವಿಷಯದಲ್ಲಿ ಆ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರ ಅಭಿಪ್ರಾಯವನ್ನು ಮಂಜೂರ್ಮಾಡುವದಕ್ಕಾಗುವದಿಲ್ಲವಾಗಿ ತಲ್ಪಿದ ನಂಬರು 11734-41—ಲೋ. ಬೋ. 315-08-04ನೆ ಮುರ್ಕ್ಕಂ 25—5—09ನೆ ಗೌರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ರಿಕಾರ್ಡು ಮಾಡಲಾಯಿತು.

6. ಕೂನೂರು ಪ್ಯಾಸ್ಚರ್ ಇನ್ಸ್ಟಿಟ್ಯೂಷನಿನಲ್ಲಿ ಹುಚ್ಚು ಪ್ರಾಣಿಗಳಿಂದ ಕಡಿಯಲ್ಪಟ್ಟ ಕಾಹಿಲೆ ಜನಗಳ ಚಿಕಿತ್ಸೆ ಖರ್ಚನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡುವ ವಿಷಯದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯವನ್ನ ತಿಳಿಸಬೇಕಾಗಿ ತಲ್ಪಿದ ನಂಬರು 12402-12—ಮೆಡಿ. 2-08ನೆ ಮುರ್ಕ್ಕಂ 10—6—09ನೆ ಗೌರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ಮ್ಯುನಿಸಿಪಲ್ ಎಲ್ಲೆ ಗಳ ಹೊರಗಡೆಯಿಂದ ಕೂನೂರಿಗೆ ಕಳುಹಿಸಲ್ಪಟ್ಟ ಜನಗಳ ಅಂಥಾ ಖರ್ಚು ಡಿಸ್ಟ್ರಿಕ್ಟು ಬೋರ್ಡಿನವರು ಸಂತೋಷದಿಂದ ಕೊಡುತ್ತೇವೆಂದು ತೀರ್ಮಾನಿಸಲಾಯಿತು.

7. ಹೊನ್ನಾಳಿ-ನ್ಯಾಮತಿ ಗ್ರಾಮದಲ್ಲಿ ಒಂದು ಆಸ್ಪತ್ರೆ ಅಡಿಗೆ ಮನೆ ಮುಂತಾದ್ದಕ್ಕೆ 5,303 ರೂಪಾಯಿ ಮತ್ತು ಆಸ್ಪತ್ರೆ ಅಸಿಸ್ಟೆಂಟರವರಿಗೆ ವಾಸದ ಬಗ್ಯೆ ಕಟ್ಟಡಗಳನ್ನ ಕಟ್ಟುವ ಬಗ್ಯೆ 2,000 ರೂಪಾಯಿ ಮತ್ತು ಮಿಡ್‌ವೈಫ್ ವಾಸದ ಬಗ್ಯೆ 1,000 ರೂಪಾಯಿಗಳ ಅಂದಾಜಾ ಆಗಿರುವದು ಸರಿಯಷ್ಟೇ, ಡಿಸ್ಟ್ರಿಕ್ಟು ಫಂಡಿನಿಂದ ಸದರಿ ಮೊಬಲಗುಗಳ 3ನೆಯ 1 ಅಂಶವನ್ನ ಕೊಡುತ್ತಾರೆಯೋ ಎಂಬ ವಿಷಯದಲ್ಲಿ ತಲ್ಪಿದ ಸೀನಿಯರ್ ಸರ್ಜನ್ನರವರ ನಂಬರು 6731-27—5—09ನೆ ಡಾಕೆಟ್ ಓದಲಾಗಿ ಡಿಸ್ಟ್ರಿಕ್ಟು ಫಂಡಿನವರ ಹಿಸ್ಸೆ ಮೊಬಲಗು 2,786 ರೂಪಾಯಿ ಆಗುತ್ತದೆ. ಸದರಿ ಬೋರ್ಡು ಈಗಿನ ಸ್ಥಿತಿಯಲ್ಲಿ ಹಣ ವದಗಿಸುವದಕ್ಕಾಗುವದಿಲ್ಲ. ಈ ಕಟ್ಟಡಗಳನ್ನ ಶಿರಾಳಕೊಪ್ಪದ ಆಸ್ಪತ್ರೆಯ ಕಟ್ಟಡ ಪೂರೈಸಿದ ನಂತರ ಪ್ರಾರಂಭಿಸತಕ್ಕದ್ದೆಂತಲೂ ಈ ಮೊದಲೆ ತೀರ್ಮಾನಿಸಿದ್ದೆಂತಲೂ ನಿಶ್ಚೈಸಿದರು.

8. ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡಿನವರು ಸಾಗರದಲ್ಲಿ ಸ್ಥಾಪಿಸಬೇಕೆಂತಲಿರುವ ಹೆಂಗಸರ ಆಸ್ಪತ್ರೆಯ ಶಿಬ್ಬಂದಿ ಖರ್ಚನ್ನು ಕೊಡುವದಕ್ಕೆ ಒಪ್ಪುತ್ತಾರೆಯೋ ಎಂಬ ವಿಷಯದಲ್ಲಿ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ನಂಬರು 7532-ಮೆಡಿ. 166-08-1 ಮುರ್ಕ್ಕಂ 9—2—09ನೆ ಡಾಕೆಟ್ ಕಾಪಿಯೊಡನೆ ತಲ್ಪಿದ ಸೀನಿಯರ್ ಸರ್ಜನ್ನರವರ ನಂಬರ್ 4327-19—2—09ನೆ ಲೆಟರ್ ಓದಲಾಗಿ ಬೋರ್ಡಿನವರ ಹಿಸ್ಸೆಯ ಮೊಬಲಗು ಮಾಹೆಯಾನಾ 36 ರೂಪಾಯಿಯನ್ನು ಸದರಿ ಆಸ್ಪತ್ರೆಯಗೋಸ್ಕರ ಕೊಡುತ್ತೇವೆಂತ ತೀರ್ಮಾನಿಸಿದರು.

9. ತೀರ್ಥಹಳ್ಳಿ ಆಸ್ಪತ್ರೆಯ ಕಾಂಪೌಂಡಿನಲ್ಲಿ ತೆಗೆಸಿರುವ ಭಾವಿ ಮತ್ತು ಕಾಂಪೌಂಡು ಗೋಡೆಗೆ ತಗಲಿರುವ ಖರ್ಚಿನ ಪೈಕಿ ಸದರಿ ಮ್ಯುನಿಸಿಪಾಲಿಟಿ ಹಿಸ್ಸೆ ಮೊಬಲಗು 132 ರೂಪಾಯಿ ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡಿನವರು ಕೊಡಲು ಒಪ್ಪುತ್ತಾರೆಯೋ ಎಂಬ ವಿಷಯದಲ್ಲಿ ತಲ್ಪಿದ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ನಂಬರು 12974—ಮ್ಯುನಿಸಿಪಲ್ 476-08-2ನೆ ಮುರ್ಕ್ಕಂ 24—5—09ನೆ ಡಾಕೆಟ್ ಓದಲಾಗಿ ಈಗಿನ ಸ್ಥಿತಿಯಲ್ಲಿ ಬೋರ್ಡಿನವರು ಸದರಿ ಮ್ಯುನಿಸಿಪಾಲಿಟಿಯ ಹಿಸ್ಸೆಯನ್ನ ಕೊಡುವದಕಾಗುವದಿಲ್ಲವೆಂತಲೂ, ಡಿಸ್ಟ್ರಿಕ್ಟು ಬೋರ್ಡಿನ ಹಿಸ್ಸೆಯನ್ನ ಮಾತ್ರ ಕೊಡುತ್ತೇವೆಂತಲೂ ತೀರ್ಮಾನಿಸಿದರು.

10. ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಬೋರ್ಡು ಮೀಟಿಂಗುಗಳಿಗೆ ಬರತಕ್ಕ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ಟ್ರಾವಲಿಂಗ್ ಅಲೋವೆನ್ಸನ್ನು ಯಾವರೀತಿ ಪಾವತಿ ಮಾಡಬೇಕೆಂಬ ವಿಧಾನವನ್ನು ನಿರ್ಣಯಿಸಿ ಸದರಿ ವಿಧಾನದ ಅನುಸರಣೆಯಲ್ಲಿ ಏನಾದರೂ ಬದಲಾವಣೆಯಾಗಬೇಕೆಂತ ಯೋಚಿಸುವ ಬೋರ್ಡುಗಳ ಅಭಿಪ್ರಾಯವನ್ನು ಗೌರ್ನ್ಮೆಂಟಿಗೆ ಕಳುಹಿಸತಕ್ಕದ್ದೆಂತ ತಲ್ಪಿರುವ ನಂಬರು 8389-96—ಲೋ. ಬೋ. 216-08-1ನೆ ಮುರ್ಕ್ಕಂ 27—2—09ನೆ ಗೌರ್ನ್ಮೆಂಟ್ ಪ್ರೊಸೀಡಿಂಗ್ಸು ಓದಲ್ಪಟ್ಟು ಈಗಿನಂತೆಯೇ ಪ್ರತಿ ಒಬ್ಬ ಮೆಂಬರು ತಮ್ಮ ಬಿಲ್ಲನ್ನು ಪ್ರೆಸಿಡೆಂಟರಿಗೆ ಕಳುಹಿಸತಕ್ಕದ್ದು. ಆದರೆ ಗೌರ್ನ್ಮೆಂಟಿನವರು ಸೂಚಿಸಿರುವ ಸರಟಫಿಕೇಟನ್ನು ಆ ಬಿಲ್ಲಿಗೆ ಲಗತ್ತು ಇಟ್ಟಿರಬೇಕು. ಪ್ರೆಸಿಡೆಂಟರು ಎಲ್ಲಾ ಮೆಂಬರುಗಳ ಬಗ್ಯೆ ಒಂದು ಬಿಲ್ಲನ್ನು ತಯಾರಿಸಿ ಸರಟಫಿಕೇಟುಳ್ಳ ಸದರಿ ಮೆಂಬರುಗಳ ಬಿಲ್ಲಿನೊಡನೆ ಆಡಿಟ್ ಬಗ್ಯೆ ಕಂಟ್ರೋಲರವರಿಗೆ ಕಳುಹಿಸತಕ್ಕದ್ದು. ಅವರಿಂದ ಆಡಿಟ್ಟಾಗಿ ಬಂದ ನಂತರ ಮೊಬಲಗು ಪಾವತಿ ಬಗ್ಯೆ ಆಯಾಯ ತಾಲ್ಲೂಕು ಅಮಲ್ದಾರ್ರುಗಳಿಗೆ ಪ್ರೆಸಿಡೆಂಟರು ಚಕ್ಕುಗಳನ್ನ ಕಳುಹಿಸಬೇಕೆಂತಲೂ ಮತ್ತು ಒಂದು ಮೀಟಿಂಗ್ ಕಾಲದಲ್ಲಿಯೇ ಮೇಲೆ ನಮೂದಿಸಿರುವ ಸರಟಫಿಕೇಟನ್ನ ಮೆಂಬರುಗಳಿಂದ ಪಡೆಯತಕ್ಕ ಅವರು ವಾಪಸು ಪ್ರಯಾಣವು ಆಗಮಾಡದೇ ಇರುವದರಿಂದಲೂ ಸದರಿ ಮೀಟಿಂಗಿನಲ್ಲಿಯೇ ಹಣ ಪಾವತಿ ಮಾಡುವದಕ್ಕೆ ಒಂದು ಮೀಟಿಂಗಿನಲ್ಲಿ ಹಾಜರಿದ್ದ ಮೆಂಬರು ಮುಂದಿನ ಮೀಟಿಂಗಿನಲ್ಲಿ ಹಾಜರಾಗದಿರಬಹುದಾದ್ದರಿಂದಲೂ ಸಾಧ್ಯವಿಲ್ಲವಾಗಿ ತೀರ್ಮಾನಿಸಲಾಯಿತು.

11. ಸಾಗರ ತಾಲ್ಲೂಕು ತಾಳಗುಪ್ಪೆಯಲ್ಲಿ ಒಂದು ವೈದ್ಯಶಾಲೆ ಸ್ಥಾಪಿಸಬೇಕೆಂಬ ವಿಷಯದಲ್ಲಿ ತಲ್ಪಿದ ಸದರಿ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 477-11—3—09ನೆ ಡಾಕೆಟ್ಟು ಓದಲಾಗಿ ಸದ್ಯಕ್ಕೆ ಹಣವಿಲ್ಲದಿರುವದಾಗಿ ತೀರ್ಮಾನಿಸಲಾಯಿತು.

12. ಶಿವಮೊಗ್ಗ ತಾಲ್ಲೂಕು ವಡ್ಡರಹಟ್ಟಿ ಕಂಟ್ರಾಕ್ಟುದಾರಿ ಮಿ|| ಅಂಬಳೆ ಶ್ಯಾಮಣ್ಣನವರಿಗೆ ರಿವೈಜ್ಡ್ ದರದಂತೆ ಹಣ ಕೊಡುವ ವಿಷಯದಲ್ಲಿ ಶಿವಮೊಗ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ರವರ ನಂಬರು 584-10—6—09ನೆ ಡಾಕೆಟ್ ಓದಲಾಗಿ 503 ರೂಪಾಯಿನ ಅಂದಾಜಾ ಪೈಕಿ ವುಳದಿರುವ ಮೊಬಲಗು 32 ರೂಪಾಯನ್ನು ಪಾವತಿ ಮಾಡೋಣದರಿಂದ ತಮಗೆ ಬರತಕ್ಕದ್ದೆಲ್ಲಾ ಬಂತೆಂತ ಸದರಿ ಶ್ಯಾಮಣ್ಣನವರು ಒಪ್ಪಿಕೊಳ್ಳುವದಾದರೆ ಆರೀತಿ ಕೊಡಬಹುದೆಂತ ತೀರ್ಮಾನಿಸಲಾಯಿತು.

13. ಶಿಕಾರಿಪುರ ತಾಲ್ಲೂಕು ಉಗಣಿ ಭಾವಿಗೋಸ್ಕರ ರಿವೈಜ್ಡ್ ಅಂದಾಜಾ ಸ್ಯಾಂಕ್ಷರ್ಣ ಮಾಡುವ ವಿಷಯದಲ್ಲಿ ಬೋರ್ಡಿನವರ ತೀರ್ಮಾನವನ್ನು ತಿಳಿಸಬೇಕೆಂತ ತಲ್ಪಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ನಂಬರು 6816—ಲೋ. ಬೋ. 233-08-2ನೆ ಡಾಕೆಟ್ ಒದಲಾಗಿ ತಾಲ್ಲೂಕು ಅಮಲ್ದಾರು ಅದಕ್ಕೆ ತಗಲಿರುವ ಬಾಬುವಾರು ಮೊಬಲಗಿಗೆ ಜವಾಬುದಾರರಾಗುವ ಪಕ್ಷಕ್ಕೆ ಸ್ಯಾಂಕ್ಷರ್ಣ ಮಾಡಬಹುದೆಂತಲೂ ಮತ್ತು ರೈತರು ಬರಕೊಟ್ಟ ಮುಚ್ಚಳಿಕೆಯ ಪ್ರಕಾರ ಅವರು ಎಷ್ಟು ಮೊಬಲಗಿನ ಕೆಲಸವನ್ನು ಮಾಡಿರುತ್ತಾರೆಂಬದನ್ನು ರಿಪೋರ್ಟು ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

14. ಮಂಡ್ಲಿ, ಹರಕೆರೆ ಮತ್ತು ಗೋಪಶೆಟ್ಟಿಕೊಪ್ಪ ಗ್ರಾಮಗಳನ್ನ ಸೇರಿಸಿ ಒಂದು ಯೂನಿಯನ್ನಾಗಿ ಮಾಡುವ ವಿಷಯದಲ್ಲಿ ಶೃಂಗೇರಿ ಜಹಗೀರ್ ಅಸಿಸ್ಟೆಂಟ್ ಕಮಿಷನರವರಿಂದ ತಲ್ಪಿದ ನಂಬರು 613—13-1-09ನೆ ಯಾದಿ ಒದಲಾಗಿ, ಈ ಮೂರು ಗ್ರಾಮಗಳ ಪೈಕಿ ಮಂಡ್ಲಿ ಗ್ರಾಮವು ಶಿವಮೊಗ್ಗಾ ಟವರ್ಣ ಮ್ಯುನಿಸಿಪಾಲಿಟಿ ವಳಗೆ ಸೇರಿರುವದ್ದರಿಂದ, ಬಾಕಿ 2 ಗ್ರಾಮಗಳ ಒಟ್ಟು ಪ್ರಜಾ ಸಂಖ್ಯೆ 343 ಮಾತ್ರಾ ಆರುವದ್ದರಿಂದ ಯೂನಿಯನ್ನಾಗಿ ಮಾಡುವದಕ್ಕೆ ಸಾಧ್ಯವಿಲ್ಲವಾಗಿ ತೀರ್ಮಾನಿಸಲಾಯಿತು.

15. 1909ನೆ ಇಸವಿಯ ದಸರಾ ಪ್ರಜಾ ಪ್ರತಿನಿಧಿ ಸಭೆಗೋಸ್ಕರ ಡಿಸ್ಟ್ರಿಕ್ಟು ಬೋರ್ಡಿನಿಂದ ಮಿ॥ ಸಿ. ಸುಬ್ಬರಾಯರನ್ನು, ತಾಗರ್ತಿ ದೇವಪ್ಪನವರನ್ನು ಚುನಾಯಿಸಲಾಯಿತು.

16. ಚನ್ನಗಿರಿ ಮತ್ತು ಉಬ್ರಾಣಿಯ ಕಾಲುದಾರಿಯನ್ನ ರಸ್ತೆಯಾಗಿ ಮಾಡಿಸಬೇಕೆಂಬ ವಿಷಯದಲ್ಲಿ ತಲ್ಪಿದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ನಂಬರು 9567—ಲೋ. ಬೋ. 340-08-2ನೆ ಮಕ್ಕಾಂ 1—4—09ನೆ ಡಾಕೆಟ್ಟು ಒದಲಾಗಿ ಸದರಿ ರಸ್ತೆಯ ಅಂದಾಜಾ ಪಿ. ಡಬ್ಲ್ಯು. ಡಿ. ಯಲ್ಲಿ ತಯಾರಾಗಿರುವದಾಗಿಯೂ ತಯಾರಾಗಿ ಬಂದನಂತರ ಈ ವಿಷಯವನ್ನ ಯೋಚಿಸತಕ್ಕದ್ದೆಂತಲೂ ತೀರ್ಮಾನಿಸಿದರು.

17. ಶಿರಾಳಕೊಪ್ಪ ಮುಸಾಫರ್ ಬಂಗ್ಲೆಯ ಝಾಡಮಾಲಿಗೆ 1 ರೂಪಾಯಿ ಸಂಬಳ ಜಾಸ್ತಿ ಮಾಡಬೇಕೆಂತ ತಲ್ಪಿದ ಶಿವಮೊಗ್ಗ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1023-3-2-09ನೆ ಯಾದಿ ಒದಲಾಗಿ ಸದ್ಯಕ್ಕೆ ಆಗುವದಿಲ್ಲವೆಂತ ತೀರ್ಮಾನಿಸಲಾಯಿತು.

18. ಚನ್ನಗಿರಿ ತಾಲ್ಲೂಕು ಬಗ್ಗಿ ಗ್ರಾಮದಲ್ಲಿರುವ ದೊಡ್ಡಿ ವಜಾ ಮಾಡಬೇಕೆಂತ ತಲ್ಪಿದ ಶಿವಮೊಗ್ಗ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1592-30-3-09ನೆ ಯಾದಿ ಒದಲಾಗಿ ಸ್ಯಾಂಕ್ಷರ್ಣ ಮಾಡಲಾಯಿತು.

19. ಆಯನೂರು ಸಂತೆ ನೆರೆಯುವ ಜಾಗದಲ್ಲಿ ಮರಗಳನ್ನ ಹಾಕಿಸುವದಕ್ಕೆ ಹಣ ಒದಗಿರುವದಕ್ಕೋಸ್ಕರ ಸದರಿ ಸಂತೆಗೆ ಬರತಕ್ಕ ಗಾಡಿಗಳಮೇಲೆ ಸುಂಕ ವಸೂಲು ಮಾಡಬೇಕೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1733—17-4-09ನೆ ಯಾದಿ ಒದಲಾಗಿ ಇದು ಸದ್ಯಕ್ಕೆ ಆಗುವದಿಲ್ಲವಾಗಿ ತೀರ್ಮಾನಿಸಲಾಯಿತು.

20. ಹೊನ್ನಾಳಿಯ ನದಿಯು ಈ ವರುಷ ಹಿಂದಿನ ವರುಷಕ್ಕಿಂತಲೂ ಮುಂಚಿತವಾಗಿ ದೋಣಿ ಸಹಾಯವಿಲ್ಲದೆ ದಾಟಬಹುದಾದ್ದರಿಂದ ಈ ವರುಷದ ಕಂಟ್ರಾಕ್ಟಿನ ಮೊಬಲಗಿನಲ್ಲಿ $\frac{1}{7}$ ಅಂಶವನ್ನು ಮಾಫ್ ಮಾಡಬಹುದೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1747—20-4-09ನೆ ಯಾದಿ ಒದಲಾಗಿ ಸದರಿ ಕಂಟ್ರಾಕ್ಟು 5 ವರುಷಗಳವರೆಗೆ ಇರುವದರಿಂದಲೂ ಒಂದು ವರುಷದ ನಷ್ಟವನ್ನು ಮತ್ತೊಂದು ವರುಷದ ಫಾಯಿದೆಯು ಸಹಿಸಬಹುದಾದ್ದರಿಂದ ಸದರಿ ಕಂಟ್ರಾಕ್ಟುದಾರನಿಗೆ $\frac{1}{7}$ ಅಂಶದ ಮೊಬಲಗನ್ನು ಕಂಟ್ರಾಕ್ಟು ಮೊಬಲಗಿನಲ್ಲಿ ವಜಾ ಮಾಡಲಾಗುವದಿಲ್ಲವಾಗಿ ತೀರ್ಮಾನಿಸಲಾಯಿತು.

21. ಚನ್ನಗಿರಿ ತಾಲ್ಲೂಕು ಗೊಪ್ಪೇನಹಳ್ಳಿಯಲ್ಲಿ ಒಂದು ಹಂಗಾಮಿ ದೊಡ್ಡಿ ಸ್ಥಾಪಿಸಬಹುದೆಂತ ಶಿವಮೊಗ್ಗ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1321—8-5-09ನೆ ಯಾದಿ ಒದಲಾಗಿ ಸ್ಯಾಂಕ್ಷರ್ಣ ಮಾಡಲಾಯಿತು.

22. ಶಿಕಾರಿಪುರದ ಮುಸಾಫರ್ ಖಾನೆ ರಿಪೇರಿ ಬಗ್ಗೆ 483 ರೂಪಾಯಿ ಅಂದಾಜಾ ನಿಶಿ ತಲ್ಪಿದ ಶಿವಮೊಗ್ಗ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1467—20-5-09ನೆ ಯಾದಿ ಒದಲಾಗಿ ಸದರಿ ಕಟ್ಟಡ ಬಹಳ ಅಪಾಯಸ್ಥಿತಿಯಲ್ಲಿರುವದರಿಂದ ಸ್ಪೆಷಲ್ ಸ್ಯಾಂಕ್ಷರ್ಣ ಬಗ್ಗೆ ಗವರ್ನಮೆಂಟಗೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

23. ಚನ್ನಗಿರಿ ತಾಲ್ಲೂಕಿನಲ್ಲಿರುವ ತ್ಯಾವಣಿಗಿ, ದಾಗಿನಕಟ್ಟೆ, ಸೋಮಲಾಪುರ, ಅಗರಬನ್ನಿಹಟ್ಟಿ ಗ್ರಾಮಗಳನ್ನು ಒಂದು ಯೂನಿಯನ್ನಾಗಿ ಮಾಡಬೇಕೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1401—22-5-09ನೆ ಯಾದಿ ಒದಲಾಗಿ ಬೋರ್ಡಿನವರು ಅನುಮೋದಿಸಿದರು.

24 ಶಿಕಾರಿಪುರ ತಾಲ್ಲೂಕು ಸುರಗೀಹಳ್ಳಿ ಗ್ರಾಮದ ದೊಡ್ಡಿಯು ಅವಶ್ಯಕವಿಲ್ಲವೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1506—8-6-09ನೆ ಯಾದಿ ಒದಲಾಗಿ ಸದರಿ ದೊಡ್ಡಿ ವಜಾ ಮಾಡಬಹುದೆಂತ ತೀರ್ಮಾನಿಸಲಾಯಿತು.

25. ಬೇಕೀಪುರ ಯೂನಿಯನ್ನಿನಲ್ಲಿರುವ 5 ಜನ ಹೆಣ್ಣು ಝಾಡಮಾಲಿಗಳ ಬದಲಾಗಿ 4 ಜನ ಗಂಡು ಝಾಡಮಾಲಿಗಳನ್ನು ಮಾಹೆಯಾನಾ 6 ರೂಪಾಯಿ ತಲಬಿನಮೇಲೆ ನೇಮಕ ಮಾಡಬೇಕೆಂಬ ವಿಷಯದಲ್ಲಿ ತಲ್ಪಿದ ಶಿವಮೊಗ್ಗ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1574—15-6-09ನೆ ಯಾದಿ ಒದಲಾಗಿ ಸದರಿ ವಿಷಯದಲ್ಲಿ ಸ್ಯಾಂಕ್ಷರ್ಣ ಬಗ್ಗೆ ಗವರ್ನಮೆಂಟಿಗೆ ಬರಿಸತಕ್ಕದ್ದೆಂತಲೂ ಮುಂದಿನ ಸಾಲ್ ಬಡ್ಜೆಟ್ಟಿನಲ್ಲಿ ಹಣ ವದಗಿಸಬಹುದೆಂತಲೂ ತೀರ್ಮಾನಿಸಲಾಯಿತು.

26. ಸೊರಬದ ಆಸ್ಪತ್ರೆಯ ನೀರು ಮಾಲಿಗೆ 2 ರೂಪಾಯಿನಿಂದ 3 ರೂಪಾಯಿ ತಲಬು ಜಾಸ್ತಿಯಾಗಬೇಕೆಂತ ತಲ್ಪಿದ ಸಾಗರ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1198—14-4-09ನೆ ಯಾದಿ ಒದಲಾಗಿ ಅನುಮೋದಿಸಲ್ಪಟ್ಟಿತು.

27. ಸಾಗರ ತಾಲ್ಲೂಕು ಹತ್ರಿಗ್ರಾಮದ ರೈತರು ಮಾಡುತ್ತಿರುವ ರಸ್ತೆಯ ಸಾಲಿ ಕಾಮಗಾರಿಯನ್ನ ಡಿಸ್ಟ್ರಿಕ್ಟು ಬೋರ್ಡಿನಿಂದ ಮಾಡಿಸಬೇಕೆಂಬ ವಿಷಯದಲ್ಲಿ ತಲ್ಪಿದ ಸಾಗರ ಸಬ್ ಡಿವಿಜರ್ಣ ಅಸಿಸ್ಟೆಂಟ್ ಕಮಿಷನರವರ ನಂಬರು 1244-29-4-09ನೆ ಯಾದಿ ಒದಲಾಗಿ ಸದರಿ ರಸ್ತೆ ಪೂರೈಸಿದನಂತರ ಯೋಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

28. ತೀರ್ಥಹಳ್ಳಿ ತಾಲ್ಲೂಕು ಬೋರ್ಡು ವೈಸ ಪ್ರೆಸಿಡೆಂಟರಾಗಿ ಅಲ್ಲಿನ ಸಬ ರಿಜಿಸ್ಟ್ರಾರ್ ಮಿ|| ನಾರಾಯಣರಾಯರನ್ನು ಚುನಾಯಿಸಿದ್ದ ವಿಷಯದಲ್ಲಿ: ತಲ್ಪಿದ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು 2237—30-4-09ನೆ ಯಾದಿ ಒದಲಾಗಿ ಸದರಿ ನಾರಾಯಣರಾಯರು ಈಚಿಗೆ ವರ್ಗಾಪಟ್ಟಿರುವದ್ದರಿಂದ ಬೇರೆ ಚುನಾವಣೆ ಮಾಡಬೇಕೆಂತ ತೀರ್ಮಾನಿಸಲಾಯಿತು.

29. ಹುಮಚದಕಟ್ಟೆ, ಮೇಗರವಳ್ಳಿ, ಆಗುಂಬೆ ಮತ್ತು ಮಂಡಗದ್ದೆ ಗ್ರಾಮಗಳಿಗೆ ಒಬೊಬ್ಬ ಝಾಡಮಾಲಿಯನ್ನು ಮಾಹೆ ಖಾನಾ 6 ರೂಪಾಯಿ ತಲಬಿನಮೇಲೆ ನೇಮಿಸಬೇಕೆಂತ ತಲ್ಪಿದ ಸದರಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು 1709—23-2-09ನೆ ಯಾದಿ ಒದಲಾಗಿ 1910—11ನೆ ಸಾಲಿನ ಬಡ್ಜಟ ತಯಾರಿಸುವಾಗ್ಯೆ ಯೋಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

30. ಹೊಸದಾಗಿ ತಯಾರಾಗಿರುವ ತವನಂದಿ, ಆನವಟ್ಟಿ ರಸ್ತೆಯ ಕೊನೆ $7\frac{1}{4}$ ಮೈಲಿಗಳ ಸಾಲಾಬಾದ ಕಾಮಗಾರಿಗೋಸ್ಕರ ರೂಪಾಯಿ 362—8—0 ಕೊಡಬೇಕೆಂತ ತಲ್ಪಿದ ಶಿವಮೊಗ್ಗ ಡಿವಿಜನ ಎಗ್ಜಿಕ್ಯುಟಿವ ಇಂಜನಿಯರವರ ನಂಬರು 746—20-7-09ನೆ ಡಾಕೆಟ ಒದಲಾಗಿ ರಿ-ಅಪ್ರೋಪ್ರಿಯೇಷನಿಂದ ಸದರಿ ಹಣ ಒದಗಿಸುವದಕ್ಕಾಗುವದಿಲ್ಲವಾದ್ದರಿಂದ ಸದರಿ ರಸ್ತೆಯ ಕಾಮಗಾರಿಗೋಸ್ಕರ ಇರುವ ಮೊಬಲಗಿನಲ್ಲಿಯೇ ಈ ಭಾಗ ರಿಪೇರಿ ಮಾಡಬೇಕೆಂತ ತೀರ್ಮಾನಿಸಲಾಯಿತು.

31. ಶಿವಮೊಗ್ಗ ಡಿವಿಜನ ಎಗ್ಜಿಕ್ಯುಟಿವ ಇಂಜನಿಯರವರ ನಂಬರು 749—24-7-09ನೆ ಡಾಕೆಟ ಸೊಡನೆ ತಲ್ಪಿದ ಡಿ. ಪಿ. ಡಬ್ಲ್ಯು. ಮೂಲಕ 09ನೆ ಜೂನ ತಿಂಗಳಿನಲ್ಲಿ ಮಾಡಿದ ಖರ್ಚು ಸ್ಟೇಟಮೆಂಟ ಒದಲಾಗಿ ರಿಕಾರ್ಡು ಮಾಡಲಾಯಿತು.

32. ಪ್ರತಿ ವರುಷ ಪ್ರಾರಂಭದಲ್ಲಿ Schedule of rates ನ್ನು ರಿವೈಜ ಮಾಡಿ ಅದರ ಪ್ರತಿಯನ್ನು ಗವರ್ನಮೆಂಟಿಗೆ ಡಿಸ್ಟ್ರಿಕ್ಟು ಬೋರ್ಡಿನವರು ಕಳುಹಿಸಬೇಕೆಂತ ತಲ್ಪಿದ ನಂಬರು 73907-405—ಲೋ. ಬೋ. 432-06 ಮುಕ್ಕಾಂ 6-2-09ನೆ ಗವರ್ನಮೆಂಟ ಪ್ರೊಸಿಡಿಂಗ್ಸು ಒದಲಾಗಿ, ಈ ವಿಷಯವು ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತಲೂ, ಎಗ್ಜಿಕ್ಯುಟಿವ ಇಂಜನಿಯರವರ ಅಭಿಪ್ರಾಯವನ್ನು ತರಿಸಿಕೊಳ್ಳಬೇಕೆಂತಲೂ ತೀರ್ಮಾನಿಸಲಾಯಿತು.

33. ಬೋರ್ಡಿನವರ ಒಪ್ಪಿಗೆಯ ನಿರೀಕ್ಷಣೆಮೇಲೆ ಪ್ರೆಸಿಡೆಂಟರವರಿಂದ ಸ್ಯಾಂಕ್ಷನ ಮಾಡಲ್ಪಟ್ಟು ಈ ಕೆಳಗೆ ನಮೂದಿಸಿರುವ ಅಂದಾಜುಗಳು ಒದಲ್ಪಟ್ಟು ಅನುಮೋದಿಸಲ್ಪಟ್ಟವು.

ನಂಬ	ತಾಲ್ಲೂಕು.	ಕಾಮಗಾರಿ.	ಮೊಬಲಗು.
			ರೂ.
1	ಹೊನ್ನಾಳಿ ...	ಚಿನ್ನಮಂಬಾಪುರ ಭಾವಿಯ ರಿವೈಜ್ಡು ಅಂದಾಜ ...	400
2	ಕುಂಸಿ ಸಬ ತಾಲ್ಲೂಕು ...	ಅರೇರಕೊಪ್ಪದ ಭಾವಿ ...	475
3	ಶಿವಮೊಗ ...	ನರಸಪ್ಪನಾಯಿಕನ ಕೇರಿ ರಸ್ತೆ ಕಾಮಗಾರಿ (ಹೊಳೇಹೊನ್ನೂರು).	19
4	ಡಿಟೋ ...	ಕೊಟ್ಟಗರ ಕೇರಿಯಿಂದ ಅಗಸರ ಕೇರಿಗೆ ಹೋಗುವ ರಸ್ತೆ ಕಾಮಗಾರಿ (ಹೊಳೆಹೊನ್ನೂರು).	73
5	ಡಿಟೋ ...	ಬೆಂಕಿಪುರ ಯೂನಿಯನ್ನಿನಲ್ಲಿ ದೊಡ್ಡಕುರುಬರ ಕೇರಿಯ ರಸ್ತೆ ಚರಂಡಿ ಕಾಮಗಾರಿ.	179
6	ಡಿಟೋ ...	ಬೆಂಕಿಪುರ ಯೂನಿಯನ್ನಲ್ಲಿ ಅಗಸರ ಕೇರಿಯಿಂದ ದೊಡ್ಡಕುರುಬರ ಕೇರಿಗೆ ಹೋಗುವ ರಸ್ತೆ ಮತ್ತು ಚಿರಂಡಿ ಕಾಮಗಾರಿ.	21
7	ಡಿಟೋ ...	ಹೊಳೆಹೊನ್ನೂರು ಯೂನಿಯನ್ನಿನಲ್ಲಿ ಧೊಂಡುರಾಯರ ಮನೆ ಎದುರಿನ ರಸ್ತೆ ರಿಪೇರಿ.	7

34. ಈ ಕೆಳಗೆ ನಮೂದಿಸಿರುವ ಅಂದಾಜುಗಳು ಬೋರ್ಡಿನವರ ಒಪ್ಪಿಗೆಯ ನಿರೀಕ್ಷಣೆಮೇಲೆ ಪ್ರೆಸಿಡೆಂಟರವರಿಂದ ಕೌಂಟರ ಸೈನ ಮಾಡಲ್ಪಟ್ಟು ಎಗ್ಜಿಕ್ಯುಟಿವ ಇಂಜನಿಯರವರಿಗೆ ವಾಪಸ ಮಾಡಲ್ಪಟ್ಟವು.

1. ಸಕ್ರೆಬೈಲ 3ನೆ ಕ್ಲಾಸ ಮುಸಾಫರ ಬಂಗ್ಲೆಯ ರಿಪೇರಿಯ ಅಂದಾಜಾ ರೂಪಾಯಿ ... 106

35. ಮುಂದಿನ ಮೀಟಿಂಗ ಸೆಪ್ಟಂಬರ ತಾರೀಖು 30 ರಲ್ಲಿ ನಡಿಯತಕ್ಕದ್ದೆಂತ ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ.

ಬೆಂಗಳೂರು ಸಬ ಜಡ್ಜರವರ ಕೋರ್ಟಿನಲ್ಲಿ.

ಸರ್ 1909—10ನೆ ಇಸವಿ ಮಿ|| ನಂಬರ 170.

ಅರ್ಜೀದಾರ ದೇವನಹಳ್ಳಿಲಿರುವ ಶೆಟ್ಟಿ ಚನ್ನಪ್ಪನವರ ಮಗ ನಂಜುಂಡಪ್ಪ, ಬೆಂಗಳೂರು ಸ್ಥಳದ ಮೈನರಾದ ಅಡಿವಿಯಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರ ಅಡಿವಿಯಪ್ಪನಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಸದರೀ ಮೈನರಿನ ಆಸ್ತೀ ಕಾಪಾಡುವುದಕ್ಕೆ ಸರ್ಟಿಫಿಕೇಟ ಬಗ್ಗೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ ಬಗ್ಯೆ 1909ನೆ ಇಸವಿ ಅಕ್ಟೋಬರ 8ನೆ ತಾರೀಖಿನಲ್ಲಿ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ ಕೊಡೋಣಾಗಿದೆ.

ಸರ್ 1909ನೆ ಇಸವಿ ಸೆಪ್ಟಂಬರ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟಿನ ಮೊಹರ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1909—10ನೆ ಇಸವಿ ಮಿ॥ ನಂಬರ್ 171.

ಬೆಂಗಳೂರಲ್ಲಿದ್ದು ಮೃತಪಟ್ಟ ಶಿದ್ದಂಣನವರ ಮುನಿಯಪ್ಪನ ಮಗ ನಂಜುಂಡಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವನಹಳ್ಳಿಲಿರುವ ಅಡಿವಿಯಪ್ಪ ಮೈನರ್, ಗಾರ್ಡಿಯರ್ ನಂಜುಂಡಪ್ಪ ಮೃತಪಟ್ಟ ಸದರೀ ನಂಜುಂಡಪ್ಪನ ವರಿಗೆ ಮುಖ್ಯವಾರಸ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಂಜುಂಡಪ್ಪನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ರೂಪಾಯಿ 2,37—10—9 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ನಂಜುಂಡಪ್ಪನವರ ಅರ್ಜಿಯನ್ನು ಸರ್ 1909ನೆ ಇಸವಿ ಅಕ್ಟೋಬರ ತಿಂಗಳು 8ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಸೆಪ್ಟಂಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1909—10ನೆ ಇಸವಿ ಮಿ॥ ನಂಬರ್ 173

ಮದರಾಸು ಮತ್ತು ಸದರ್ನ ಮರಾಟಾ ರೈಲ್ವೆಯಲ್ಲಿ ಗೂಡ್ಸು ರೈಟರಾಗಿದ್ದು ಮೃತಪಟ್ಟ ಕ್ರಿಷ್ಣಸಿಂಗ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಾಡುಗೋಡಿಲಿರುವ ಬಾಗೂಬಾಯಮ್ಮಾಳ್ ಮೃತಪಟ್ಟ ಸದರೀ ಕ್ರಿಷ್ಣಸಿಂಗರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕ್ರಿಷ್ಣಸಿಂಗ ಜಿಂದಗಿ ಬಗ್ಗ್ಯಾಗಿ ಬರತಕ್ಕ 250 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಾಗುಬಾಯಮ್ಮಾಳ್ ಅರ್ಜಿಯನ್ನ 1909ನೆ ಇಸವಿ ಅಕ್ಟೋಬರ ತಿಂಗಳು 8ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕ್ರಿಷ್ಣಸಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಸೆಪ್ಟಂಬರ್ 20ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1909—10ನೆ ಇಸವಿ ಮಿ॥ ಅರ್ಜೀ ನಂಬರ್ 194.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಶ್ಯಾನುಭೋಗ ಕೆಲಸ ಮಾಡುತ್ತಾ ಇದ್ದು ಮೃತಪಟ್ಟ ಹೊನ್ನಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಅಮ್ಮಂಣಮ್ಮ, ಮೃತಪಟ್ಟ ಸದರಿ ಹೊನ್ನಪ್ಪನವರಿಗೆ ಖಾಸಾ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಹೊನ್ನಪ್ಪನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ (300) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಅಮ್ಮಂಣಮ್ಮನ ಅರ್ಜಿಯನ್ನು 1909ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 8 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹೊನ್ನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಸೆಪ್ಟಂಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1909—10ನೆ ಇಸವಿ ಮಿ॥ ನಂಬರ್ 211.

ಗುಬ್ಬಿಯಲ್ಲಿದ್ದು ಮೃತಪಟ್ಟ ಡಿ. ಗುಂಡುರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ವಾಸುದೇವರಾವ್, 2ನೆ ರಾಮರಾವ್, ಮೈನರ್, ಗಾರ್ಡಿಯರ್ ಲಕ್ಷ್ಮಂಬಾಯಿ, ಮೃತಪಟ್ಟ ಸದರಿ ಡಿ. ಗುಂಡುರಾಯರಿಗೆ ಖಾಸಾ ಹೆಂಡತಿ ಮತ್ತು ಮಕ್ಕಳು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಡಿ. ಗುಂಡುರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ (7,324—1—6) ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಡಿ. ವಾಸುದೇವರಾವ್, 2ನೆ ರಾಮರಾವ್, 3ನೆ ಕ್ರಿಷ್ಣರಾವ್, 2—3ನೆ ಯುವರು ಮೈನರ್, ಗಾರ್ಡಿಯರ್ ತಾಯಿ ಲಕ್ಷ್ಮಂಬಾಯಿಯವರ ಅರ್ಜಿಯನ್ನು ಸರ್ 1909ನೆ ಇಸವಿ ಅಕ್ಟೋಬರ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಡಿ. ಗುಂಡುರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಸೆಪ್ಟಂಬರ್ ತಿಂಗಳು 20 ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮೈಯ್ಯರ್,
ಸಬ್ ಜಡ್ಜ್.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 7, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀಯರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟು ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೀಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.		[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವೆಂಬರ ತಾರೀಖು	18	200	
2	ಡಿಟೋ ...	ಸಾಗರ ...	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟನ್‌ಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್ ತಾರೀಖು	2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟನ್‌ಗಳು ಕೋಲಾರದ 5 ಟನ್‌ಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ ...		2,400	

ಎಂ. ಮುತ್ತಣ್ಣ,

ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ತಾರೀಖು 28ನೆ ಸೆಪ್ಟಂಬರ್ 1909.

ಸೂಳೆಕೆರೆ, ಶಿವಮೊಗ್ಗ.

ಸನ್ 1900ನೆ ಇಸವಿಯ X ನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 1864—Ft. 4-09-3, 28-8-09, 2-9-09ನೆ ಇಸವಿಯ ಗೆಜೆಟಿನಲ್ಲಿ ಘಾಯಿಷ್ಮಾಡಲ್ಪಟ್ಟರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ, ಗ್ರಾಮ.	ಅಂದಾಜು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳ, ಚಕ್ಕುಬಂದಿ.
ಶಿವಮೊಗ್ಗ.	ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳು.	12,522 ಎಕರೆ. ಅಥವಾ 19 ಸ್ಕ್ವೇರ್ ಮೈಲು, 362 ಎಕರೆ.	ಸೂಳೆಕೆರೆ ಪಾರೆಸ್ಟ್.	ಚನ್ನಗಿರಿ-ಮುಳೇಪನ್ನೂರು ರಸ್ತೆಯ ವಾಯುವ್ಯದಲ್ಲಿರುವ ಡಿಸ್ಟ್ರಿಕ್ಟು ಜಂಗಲಿ. ಉತ್ತರಕ್ಕೆ—ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 9ರ ಈಶಾನ್ಯ ಮೂಲೆಯಿಂದ ಲೈನ್ ಹೊರಟು ಪೂರ್ವದಿಕ್ಕಾಗಿ 4 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ ದಕ್ಷಿಣಗಡಿಯನ್ನು ಅನುಸರಿಸಿ ದಾಗಿನಕಟ್ಟೆ, ಬುಳ್ಳನಾಯ್ಕನಹಳ್ಳಿ, ಶೃಂಗಾರಬಾಗ್ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಉತ್ತರದಿಕ್ಕಾಗಿ 2 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ, ಶೃಂಗಾರಬಾಗ್, ಗಡಿಯನ್ನು ಅನುಸರಿಸಿ, ಶೃಂಗಾರಬಾಗಿನ ಸರ್ವೆ ನಂಬರು 17ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 3 ಫರ್ಲಾಂಗುಗಳು ಶೃಂಗಾರಬಾಗ್ ಸರ್ವೆ ನಂಬರು 16ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 25ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ

ದಿಕ್ಕಾಗಿ 1 ಫರ್ಲಾಂಗು 8 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರು 16ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 24ರ ನೈರುತ್ಯಮೂಲೆಗೆ ಸೇರುತ್ತದೆ. ಪುನಃ ಅದೇ ದಿಕ್ಕಾಗಿ 4 ಫರ್ಲಾಂಗು 5 ಸರಪಣಿಗಳು ಸದರಿ ಸರ್ವೆ ನಂಬರು 16ರಲ್ಲಿ ಹಾದು, ಸರ್ವೆ ನಂಬರು 31ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 2 ಫರ್ಲಾಂಗು 7 ಸರಪಣಿಗಳು ಶೃಂಗಾರಬಾಗ್ ಸರ್ವೆ ನಂಬರು 16-15ರಲ್ಲಿ ಹಾದು, ಮೈಲಪುರದ ಸರ್ವೆ ನಂಬರು 35ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಮೈಲಿ, 1 ಫರ್ಲಾಂಗು, 5 ಸರಪಣಿಗಳು ಮೈಲಪುರದ ಸರ್ವೆ ನಂಬರು 28ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 26ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 3 ಫರ್ಲಾಂಗು 5 ಸರಪಣಿಗಳು, ಸದರಿ ಗ್ರಾಮದ ಸರ್ವೆ ನಂಬರು 25ರ ಪಶ್ಚಿಮಗಡಿಯನ್ನು ಅನುಸರಿಸಿ ಮೈಲಿಪುರ, ಜಿನಕನಹಳ್ಳಿ, ಮೊಹರ್ದಿಪುರ ಕಾವಲ್ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಈಶಾನ್ಯವಾಗಿ 6 ಫರ್ಲಾಂಗು 3 ಸರಪಣಿಗಳು ಮೈಲಿಪುರ ಸರ್ವೆ ನಂಬರು 25ರ ದಕ್ಷಿಣಗಡಿಯನ್ನು ಅನುಸರಿಸಿ ಮೈಲಿಪುರ, ಮೊಹರ್ದಿಪುರ, ಹೊಸಹಳ್ಳಿ, ಗ್ರಾಮಗಳ ಮುಕುಪ್ಪೆ ಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಲೈನ್ ಹೊರಟು ಆಗ್ನೇಯವಾಗಿ 3 ಫರ್ಲಾಂಗು 3 ಸರಪಣಿಗಳು ದಕ್ಷಿಣವಾಗಿ 3 ಫರ್ಲಾಂಗು 2 ಸರಪಣಿಗಳು ಪುನಃ ಆಗ್ನೇಯವಾಗಿ 1 ಮೈಲಿ, 7 ಫರ್ಲಾಂಗು ಸೂಳೆಕೆರೆಯ ಪಶ್ಚಿಮಗಡಿಯನ್ನು ಅನುಸರಿಸಿ ಮೊಹರ್ದಿಪುರ ಕಾವಲ್, ರುದ್ರಾಪುರ ಕಾವಲ್, ಮತ್ತು ಸೂಳೆಕೆರೆ, ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 6 ಫರ್ಲಾಂಗು ಸೂಳೆಕೆರೆ ಪಶ್ಚಿಮಗಡಿಯನ್ನು ಅನುಸರಿಸಿಯೂ, ನೈರುತ್ಯವಾಗಿ 4 ಫರ್ಲಾಂಗು ದಕ್ಷಿಣವಾಗಿ 3 ಫರ್ಲಾಂಗು ಅರಶಿನಗಟ್ಟ ಗ್ರಾಮದ ಉತ್ತರ ಮತ್ತು ಪಶ್ಚಿಮಗಡಿಯನ್ನು ಅನುಸರಿಸಿ ಅರಶಿನಗಟ್ಟ, ರುದ್ರಾಪುರ ಕಾವಲ್, ಸಿದ್ಧಾಪುರ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಪೂರ್ವವಾಗಿ 2 ಫರ್ಲಾಂಗು, 5 ಸರಪಣಿಗಳು ಅರಶಿನಗಟ್ಟ ಗ್ರಾಮದ ದಕ್ಷಿಣ ಗಡಿಯನ್ನು ಅನುಸರಿಸಿ, ಸಿದ್ಧಾಪುರ, ಅರಶಿನಗಟ್ಟ, ಸೋಮಶೆಟ್ಟಿಹಳ್ಳಿ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ಅಲ್ಲಿಂದ ನೈರುತ್ಯ ಮತ್ತು ಆಗ್ನೇಯವಾಗಿ ಸುಮಾರು 1 ಮೈಲಿ 2 ಫರ್ಲಾಂಗುಗಳು ಸೋಮಶೆಟ್ಟಿಹಳ್ಳಿ ಪಶ್ಚಿಮಗಡಿಯನ್ನು ಅನುಸರಿಸಿ, ಸಿದ್ಧಾಪುರ, ಸೋಮಶೆಟ್ಟಿಹಳ್ಳಿ, ಲಿಂಗದಹಳ್ಳಿ ಗ್ರಾಮಗಳ ಮುಕ್ಕಪ್ಪೆ ಬಾಂದಿನ (ವಾಯುವ್ಯ 26 ಸರಪಣಿಗಳ ದೂರದಲ್ಲಿ ಸಿದ್ಧಾಪುರ ಸೋಮಶೆಟ್ಟಿಹಳ್ಳಿ ಗಡಿಯಲ್ಲಿನ ಬಂಟು ಕೋಣಕ್ಕೆ ಸೇರುತ್ತದೆ.)

ದಕ್ಷಿಣಕ್ಕೆ—ಅಲ್ಲಿಂದ ಲೈನ್ ಹೊರಟು ವಾಯುವ್ಯವಾಗಿ 7 ಫರ್ಲಾಂಗು ಸಿದ್ಧಾಪುರದ ಸರ್ವೆ ನಂಬರು 32ರಲ್ಲಿ ಹಾದು, ಸಿದ್ಧಾಪುರ, ಲಿಂಗದಹಳ್ಳಿ, ಮದರನಾಯ್ಕನಹಳ್ಳಿ, ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 1 ಮೈಲಿ ಮದರನಾಯ್ಕನಹಳ್ಳಿ ಸರ್ವೆ ನಂಬರು 16ರಲ್ಲಿ ಹಾದು, ನಂತರ ಪಶ್ಚಿಮವಾಗಿ 3 ಫರ್ಲಾಂಗು, 7 ಸರಪಣಿಗಳು, ನೈರುತ್ಯವಾಗಿ 3 ಫರ್ಲಾಂಗು, 2 ಸರಪಣಿಗಳು ವಾಯುವ್ಯವಾಗಿ 2 ಫರ್ಲಾಂಗು ಮದರನಾಯ್ಕನಹಳ್ಳಿ ಸರ್ವೆ ನಂಬರು 16ರ ಉತ್ತರ ಗಡಿಯನ್ನು ಅನುಸರಿಸಿ ಸದರಿ ನಂಬರಿನ ವಾಯುವ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಶುದ್ಧಪಶ್ಚಿಮವಾಗಿ 1 ಮೈಲಿ, 1 ಫರ್ಲಾಂಗು, 7 ಸರಪಣಿಗಳು ಕೊಮಾರನಹಳ್ಳಿ ಸರ್ವೆ ನಂಬರು 29ರಲ್ಲಿ ಹಾದು, ಸದರಿ ಗ್ರಾಮದ 28ನೆ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು, 7 ಸರಪಣಿಗಳು ಕೊಮಾರನಹಳ್ಳಿ ಸರ್ವೆ ನಂಬರು 28ರಲ್ಲಿ ಹಾದು, ಸರ್ವೆ ನಂಬರು 41ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರ್ಲಾಂಗು 5 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರುಗಳು 41,

40, 38ರ ಪಶ್ಚಿಮಗಡಿಯನ್ನನುಸರಿಸಿ, ಸರ್ವೆ ನಂಬರು 38ರ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಫರ್ಲಾಂಗು ಕೊಮಾರನಹಳ್ಳಿ ಸರ್ವೆ ನಂಬರು 37ರ ಪಶ್ಚಿಮಗಡಿಯನ್ನು ಅನುಸರಿಸಿ ಸದರಿ ನಂಬರಿನ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇದಿಕ್ಕಾಗಿ 1 ಮೈಲಿ ಕೊಮಾರನಹಳ್ಳಿ, ಸರ್ವೆ ನಂಬರು 28 ಮಲಿಗೇನಹಳ್ಳಿ ಸರ್ವೆ ನಂಬರು 16ರಲ್ಲಿ ಹಾದು, ಮಲಿಗೇನಹಳ್ಳಿ ಸರ್ವೆ ನಂಬರು 30ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರ್ಲಾಂಗು 5 ಸರಪಣಿಗಳು ಮಲಿಗೇನಹಳ್ಳಿ ಸರ್ವೆ ನಂಬರು 16-9ಗಳಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 28ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 5 ಫರ್ಲಾಂಗು ಸದರಿ ಗ್ರಾಮದ ಸರ್ವೆ ನಂಬರು 9ರಲ್ಲಿ ಹಾದು ಗುಣದಕಟ್ಟೆಯ ಉತ್ತರಗಡಿಯಲ್ಲಿ ಬಂದು ಕೋಣಕ್ಕೆ ಸೇರುತ್ತದೆ. ಅಲ್ಲಿಂದ ನೈರುತ್ಯವಾಗಿಯೂ, ದಕ್ಷಿಣವಾಗಿಯೂ, ಸುಮಾರು 3 ಮೈಲಿ, 3 ಫರ್ಲಾಂಗು ಸೈದನಕಲ್ಲಹಳ್ಳಿ ಉತ್ತರಗಡಿಯನ್ನು ಅನುಸರಿಸಿ ತ್ಯಾಗದಕಟ್ಟೆ ಸರ್ವೆ ನಂಬರು 6ರ ಆಗ್ನೇಯಮೂಲೆಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನ್ ಹೊರಟು ಈಶಾನ್ಯವಾಗಿ 6 ಫರಲಾಂಗು 3 ಸರಪಣಿಗಳು ತ್ಯಾಗದಕಟ್ಟೆ ಸರ್ವೆ ನಂಬರು 22ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 20ರ(ಕೆರೆ) ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 1 ಫರ್ಲಾಂಗು, 8 ಸರಪಣಿಗಳು ಸದರಿ ಸರ್ವೆ ನಂಬರಿನ ಪೂರ್ವಗಡಿಯನ್ನು ಅನುಸರಿಸಿ ಸದರಿ ನಂಬರಿನ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 4 ಫರ್ಲಾಂಗುಗಳು ಸರ್ವೆ ನಂಬರು 22ರಲ್ಲಿ ಹಾದು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಪೂರ್ವ ಉತ್ತರ, ಪಶ್ಚಿಮವಾಗಿ ಸುಮಾರು 2 ಮೈಲಿ, 3 ಫರ್ಲಾಂಗು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ದಕ್ಷಿಣ, ಪೂರ್ವ ಮತ್ತು ಉತ್ತರಗಡಿಗಳನ್ನು ಅನುಸರಿಸಿ ಸದರಿ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರದಲ್ಲಿರುವ ಸ್ಥಳಕ್ಕೆ ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ 4 ಫರ್ಲಾಂಗುಗಳು ಚೀಲಾಪುರದ ಸರ್ವೆ ನಂಬರು 8ರಲ್ಲಿ ಹಾದು ಸದರಿ ಗ್ರಾಮದ ಉತ್ತರಗಡಿಯಲ್ಲಿ ಸರ್ವೆ ನಂಬರು 10ರ ಈಶಾನ್ಯಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರವಿರುವ ಸ್ಥಳಕ್ಕೆ ಸೇರುತ್ತದೆ. ನಂತರ ವಾಯುವ್ಯವಾಗಿ ಸುಮಾರು ಒಂದು ಮೈಲಿ ಘಾಸಲೆ ಬೈರನಹಳ್ಳಿ ಸರ್ವೆ ನಂಬರು 7ರಲ್ಲಿ ಹಾದು ಬೈರನಹಳ್ಳಿ ಸರ್ವೆ ನಂಬರು 8ರ ಈಶಾನ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಉತ್ತರವಾಗಿ 6 ಫರ್ಲಾಂಗು 8 ಸರಪಣಿಗಳು ಬೈರನಹಳ್ಳಿ ಸರ್ವೆ ನಂಬರು 7, ಚನ್ನೇನಹಳ್ಳಿ ಸರ್ವೆ ನಂಬರು 23ರಲ್ಲಿ ಹಾದು ಚನ್ನೇನಹಳ್ಳಿ, ಕುಳಗಟ್ಟೆ, ನಿಲುವಗಲ್ಲು ಮತ್ತು ಕಂಚುಗಾರನಹಳ್ಳಿ ಗ್ರಾಮಗಳ ನಾಗುಪ್ಪೆ ಬಾಂದಿಗೆ ಸೇರುತ್ತದೆ. ನಂತರ ವಾಯುವ್ಯವಾಗಿ 1 ಮೈಲಿ, 3 ಫರ್ಲಾಂಗು, 5 ಸರಪಣಿಗಳು, ಕುಳಗಟ್ಟೆ, ಕಂಚುಗಾರನಹಳ್ಳಿ ಗಡಿಯನ್ನು ಅನುಸರಿಸಿ ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ವಾಯುವ್ಯವಾಗಿ 1 ಫರ್ಲಾಂಗು, 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಪೂರ್ವ ಗಡಿಯನ್ನು ಅನುಸರಿಸಿ 143ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 7 ಫರ್ಲಾಂಗುಗಳು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಮೈಲಿ, 3 ಫರ್ಲಾಂಗು, 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 36, ನಿಲುವಗಲ್ಲು ಸರ್ವೆ ನಂಬರು 15 ಇವುಗಳಲ್ಲಿ ಹಾದು ನಿಲುವಗಲ್ಲು ಸರ್ವೆ ನಂಬರು 14ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 14-13ರ ದಕ್ಷಿಣಗಡಿಯನ್ನು ಅನುಸರಿಸಿ 13ನೆ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಈಶಾನ್ಯವಾಗಿ 5 ಫರ್ಲಾಂಗು, 5 ಸರಪಣಿಗಳು, ನಿಲುವಗಲ್ಲು ಸರ್ವೆ ನಂಬರು 15ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 48ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 5 ಸರಪಣಿಗಳು ಸರ್ವೆ ನಂಬರು 48ರ ದಕ್ಷಿಣ ಗಡಿಯನ್ನು ಅನುಸರಿಸಿ ಸದರಿ ನಂಬರಿನ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 7 ಸರಪಣಿಗಳು ನಿಲುವಗಲ್ಲು ಸರ್ವೆ ನಂಬರು 36ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 47ರ ಆಗ್ನೇಯಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯುವ್ಯವಾಗಿ 7 ಫರ್ಲಾಂಗು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 39ರ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ ಸುಮಾರು 7 ಫರ್ಲಾಂಗು ನಿಲುವಗಲ್ಲು ಸರ್ವೆ ನಂಬರು 36 ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 11ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 19ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು, 3 ಸರಪಣಿಗಳು, ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರಿನ 11ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 10ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 3 ಫರ್ಲಾಂಗು, 3 ಸರಪಣಿಗಳು ಸರ್ವೆ ನಂಬರು 10 ಮತ್ತು 9ರ ಪೂರ್ವಗಡಿಯನ್ನು ಅನುಸರಿಸಿ ಹೊರಟ ಸ್ಥಳಕ್ಕೆ ಹೋಗಿ ಸೇರುತ್ತದೆ.

ಬೆಂಕೀನಹಳ್ಳಿ ಗ್ರಾಮದ ಇದರಡಿ ಕಂಡ ಜಮೀನುಗಳನ್ನು ಈ ಫಾರೆಸ್ಟ್ ತಾಕಿಗೆ ಆವರಣಗಳಾಗಿ ಎಣಿಸತಕ್ಕದ್ದು :—

ಸರ್ವೆ ನಂ.	ವಿಸ್ತೀರ್ಣ.	ತರಗತಿ.
1	26·4	ಖುಷ್ಕಿ
2	29·22	ಡಿಟ್ಟೋ
3	25·28	ಇದರಪೈಕಿ 1·15 ತರಿ
4	10·1	ಖುಷ್ಕಿ
6	20·1	ಡಿಟ್ಟೋ
7	32·38	ಡಿಟ್ಟೋ
8	8·16	ಡಿಟ್ಟೋ
9	5·28	ಡಿಟ್ಟೋ
10	19·30	ಡಿಟ್ಟೋ
11	20·27	ಡಿಟ್ಟೋ
12	25·20	ಡಿಟ್ಟೋ
15	6·3	ಡಿಟ್ಟೋ
16	15·17	ಡಿಟ್ಟೋ
17	12·20	ಡಿಟ್ಟೋ
18	336·6	ಡಿಟ್ಟೋ

ಸರ್ವೆ ನಂ.		ವಿಸ್ತೀರ್ಣ.		ತರಗತಿ.
19	...	5·37	...	(ಗೋಮಾಳ)
20	...	10·7	...	ಡಿಟೋ
21	...	12·15	...	ಡಿಟೋ
22	...	8·25	...	ಡಿಟೋ
23	...	14·11	...	ಡಿಟೋ
24	...	32·1	...	ಡಿಟೋ
25	...	15·15	...	ಡಿಟೋ
26	...	13·10	...	ಡಿಟೋ
28	...	16·15	...	ಡಿಟೋ
29	...	·26	...	ಡಿಟೋ

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು. ಸದರ್ರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. I. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

3. II. (a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗೆಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಘಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನು ಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇಧೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರಮಟ್ಟಿಗೆ ಇಧೆಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲಿ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,

ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರ್.

ಇಸ್ತಿಹಾರ.

ನೋಟಿಫಿಕೇಷನ, ತಾರೀಖು 30ನೆ ಸೆಪ್ಟಂಬರ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—1909-1910ನೆ ಇಸವಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಇದರಡಿ ಕಂಡ ಸ್ಟೇಟ ಫಾರೆಸ್ಟು ಮತ್ತು ರಿಜರ್ವ್ ಫಾರೆಸ್ಟು ಪಸೂರೆ ಜಿನಸಿ ಜಮಾವಣೆಯ ಹಕ್ಕುದಾರಿಯನ್ನು ರೇಂಜು ಫಾರೆಸ್ಟು ಆಫಿಸರುಗಳು ಯಾ ಸಬ್ ಡಿವಿಜನ ಫಾರೆಸ್ಟು ಆಫಿಸರುಗಳು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಯಾ ಆಯಾಯ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ.

ಈ ಹರಾಜು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಆಯಾಯು ತಾರೀಖಿನ ಮಧ್ಯಾಹ್ನ 12 ಘಂಟೆಗೆ ಷುರು ಮಾಡಲ್ಪಡುವದು.

ನಂಬರು.	ರೇಂಜ.	ಸ್ಟೇಟ ಫಾರೆಸ್ಟು ಮತ್ತು ರಿಜರ್ವ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಶಿವಮೊಗ್ಗ ...	ಹನಗೆರೆ ...	ಆಯನೂರು ರೇಂಜು ಆಫೀಸು.	14—10—1909
		ಬೀರನಕೆರೆ ...		
		ಹರಮಗಟ್ಟೆ ...		
		ದೇವಬಾಳ ಬ್ಲಾಕು I ...		
		ಡಿಟೋ II ...		
		ಕುಂಶಿ ...		
		ಕುಂಚಿನಹಳ್ಳಿ ...		
		ಮಸರೂರು ...		
		ಪುರದಾಳು ...		
		ಸಕ್ರೇಬೈಲ ...		
		ಶಂಕರ ...		
2	ಚನ್ನಗಿರಿ ...	ಕುಕ್ಕವಾಡ ಉಬ್ರಾಣಿ ...	ಚನ್ನಗಿರಿ ರೇಂಜು ಆಫೀಸು.	18—10—1909
		ರಂಗನಗಿರಿ ...		
3	ಉಂಬಳೆಬೈಲ ...	ಆಲದಹರಾ ...	ಬೆಂಕಿಪುರ ರೇಂಜು ಆಫೀಸು.	16—10—1909
		ಜೋರನಡೆ ಹಳ್ಳಿ ...		
		ಉಂಬಳೆಬೈಲ ...		
		ಕಾಕನಹೊಸೂಡಿ ...		
		ಸಿದ್ದಾಪುರ ರಿಜರ್ವ ...		
		ಜಾಕಟಿಕಲ ರಿಜರ್ವ ...		

ಜಿನಸಿಯ ತಪಶೀಲ.

1. ಹುಣಿಸೆಹಣ್ಣು.
2. ಹೊಂಗೇಬೀಜ.
3. ಶೀಗೆಕಾಯಿ.
4. ಗೋಂದು.
5. ಜೇನುತುಪ್ಪ.
6. ಜೇನುಮೇಣ.
7. ಕಪಿಲಾರಂಗು.
8. ಗೇರು.
9. ಬ್ಯಾಲದಹಣ್ಣು.
10. ಕಲ್ಲುಹುವ್ವು.
11. ಮರಡಿಬೀಜ ಅಥವಾ ಚಾರುಪಪ್ಪು
12. ತಾರೇಕಾಯಿ.
13. ಅಳಲೆಕಾಯಿ.
14. ಕಾಡುಚಗಚೆಬೀಜ.
15. ಅಂಟುವಾಳದಕಾಯಿ.
16. ಗುರಿಗೆಹರಳು.
17. ಕಾಡುಹರಳು.
18. ಕಾನಮೆಣಸು.
19. ಕಾನಯಾಲಕ್ಕಿ.
20. ನಸರಿಜೇನು
21. ಹಾಲುಮಡ್ಡಿ.
22. ಹುಳಗಲಬೀಜ.
23. ವಾಟೆಹುಳಿ.
24. ದಾಲಚಿನ್ನಿಮಗ್ಗು.
25. ಬೆಂಡೇನಾರು.
26. ಕಾಡುಹಿಪ್ಪೆ.
27. ಬೂರಗದಹತ್ತಿ.
28. ಕಿರಿ ಈಚಲು.
29. ಬೆಂಡು.
30. ಅಗಸೇಬೀಜ.
31. ಜೋಲಾರಬಾರಕು.
32. ಬಳಾಪುಕಲ್ಲು.
33. ರಾಮಪತ್ರೆ-ಕಾನಪತ್ರೆ.
34. ಚರ್ಮಗಳು.
35. ಕೊಂಬುಗಳು.

2. ಚಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲುಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈರೀತಿ ಪಾವತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರಕಾರಕ್ಕೆ ವುಂಟಾಗುವ ನಷ್ಟಕ್ಕೆ ಪುರೂ ದರಖಾಸ್ತುದಾರನನ್ನು ಗುರಿಮಾಡಲಾಗುತ್ತೆ. ಲಾಭವೇನಾದರೂ ಬಂದಲ್ಲಿ ಅದಕ್ಕೆ ಯಾವ ಹಕ್ಕೂ ಇರುವದಿಲ್ಲ.

3. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲುಹಿಸ್ಸೆ ಹಣವನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುತ್ತಲ್ಲದೆ ಇನ್ನು ಬಾಕಿ ವುಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ ಮಾಡಲಾಗುತ್ತೆ.

4. ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ ಸೆಸ್ಸು ಕೊಡತಕ್ಕದ್ದು.

5. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಯಾವದೊಂದು ಕಾರಣವನ್ನು ತಿಳಿಸದೆ ದರಖಾಸ್ತು ಅಂಗೀಕರಿಸುವದಕ್ಕೆ ಆಗಲೀ ತಿರಸ್ಕರಿಸಲಿಕ್ಕೆ ಆಗಲೀ ಸ್ವತಂತ್ರರಾಗಿರುತ್ತಾರೆ.

6. ದರಖಾಸ್ತುದಾರನು ಇನಾಂದಾರರಿಗೆ ಗೊತ್ತಾದ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

7. ದರಖಾಸ್ತುದಾರನೇ ಆಗಲೀ ಅಥವಾ ಅವನ ಆಳುಗಳೇ ಆಗಲೀ ಪಸಾರೆ ಜಿನಸಿ ಜಮಾವಣೆ ನೆಪದಮೇಲೆ ಯಾವ ಗಿಡಗಳನ್ನಾಗಲಿ ನಾಶಪಡಿಸಕೂಡದು.

8. ದರಖಾಸ್ತುದಾರನು ತಾನು ಖರೀದಿಗೆ ಪಡದಿರುವ ಜಿನಸಿ ವಿನಹಾ ಇತರ ಯಾವ ಜಿನಸಿಯನ್ನೂ ಜಮಾಯಿಸಕೂಡದು.

9. ದರಖಾಸ್ತುದಾರನ ಏಜಂಟರುಗಳಾಗಲಿ ಅಥವಾ ಆಳುಗಳಾಗಲೀ ಪಸಾರೆ ಜಿನಸಿ ಜಮಾವಣೆ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ದರಖಾಸ್ತುದಾರನನ್ನೇ ಗುರಿಪಡಿಸಲಾಗುತ್ತೆ.

10. ದರಖಾಸ್ತುದಾರನು 1910ನೆ ಇಸವಿ ಏಪ್ರೆಲ್ ಆಖ್ಯೆರ ಒಳಗಾಗಿ ಎಲ್ಲಾ ಪಸಾರೆ ಜಿನಸಿಯನ್ನು ಸ್ಟೇಟ್ ಫಾರೆಸ್ಟು ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

11. ಸ್ಟೇಟ ಫಾರೆಸ್ಟಿಗೆ ದರಖಾಸ್ತುದಾರನ ಅಶ್ರದ್ಧೆಯಿಂದಾಗಲೀ ಅಥವಾ ಈತನ ಅಶ್ರದ್ಧೆಯಿಂದಾಗಲೀ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯಬಂದಲ್ಲಿ ಈ ಕೃತ್ಯಕ್ಕೆ ದರಖಾಸ್ತುದಾರನನ್ನು ಗುರಿಪಡಿಸಲಾಗುತ್ತೆ.

12. ದರಖಾಸ್ತುದಾರನೆ ಆಗಲಿ ಅಥವಾ ಈತನ ನವುಕರರೇ ಆಗಲಿ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತವಾದ ನಂತರ ಸ್ಟೇಟ ಫಾರೆಸ್ಟಿನಲ್ಲಿ ಪ್ರವೇಶ ಮಾಡಕೂಡದು.

13. ಈ ಮೇಲ್ಕಂಡ ಷರತ್ತುಗಳಿಗೆ ವ್ಯತಿರಿಕ್ತವಾಗಿ ನಡದಲ್ಲಿ ದರಖಾಸ್ತು ರದ್ದುಪಡಿಸುವದಲ್ಲದೆ ಜಮಾಯಿಸಿದ ಎಲ್ಲಾ ಪಸಾರೆ ಜಿನಸಿಯನ್ನು ಸರ್ಕಾರಕೆ ದಂಡವಾಗಿ ಸೇರಿಸಿಕೊಂಡು ಒಂದು ನೂರು ರೂಪಾಯಿಗಳ ವರಿವಿಗೆ ಜುರ್ಮಾನೆ ವಿಧಿಸುವದಕ್ಕೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಸ್ವತಂತ್ರರಾಗಿರುತ್ತಾರೆ.

ನೋಟಿಫಿಕೇಷನ್, ತಾರೀಖು 30ನೆ ಸೆಪ್ಟಂಬರ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಕೆಳಗೆ ನಮೂದಾಗುವ ತಪಸೀಲ್ ಮೇರಿಗೆ ಚನ್ನಗಿರಿ ರೇಂಜಿಗೆ ಸೇರಿದ ಡಿಪೋಗಳಲ್ಲಿನ ಚೌಬೀನೆಗಳನ್ನು ಬಾಜೂದಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಆಫಿಸರವರಿಂದಾಗಲೀ ಹರಾಜ ಮಾಡಿಸಲ್ಪಡುತ್ತೆ. ಈ ಹರಾಜು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ ಮಂಜೂರಾತಿಗೆ ವಳಪಟ್ಟಿರುತ್ತೆ.

ಡಿಪೋದ ಹೆಸರು.		ಸಾಗುವಾನಿ ಬೆಲಗುಗಳು.		ಹಂಬುಗಳು.	ಬಿದರುಗಳು.	ಹರಾಜು ತಾರೀಖು.	ಷರಾ
		ನಂಬರ.	ಸಲಿ ಅಡಿ				
ಚನ್ನಗಿರಿ ಡಿಪೋ	...	100	300	1,500	250	1—11—09	
ಜೋಳದಾಳ ಕೂಪು 4	..	2502	4,721¼	...	...	3—11—09	
ದಾನವಾಡಿ I	...	100	300	...	...	5—11—09	
ಉಬ್ರಾಣಿ ಡಿಪೋ	...	22	141¾	880	...	10—11—09	ಡಿಪೋಗಳಲ್ಲಿ
ಬೀಟೆ: ಅತ್ತಿಗುಂದ ಗ್ರಾಮ	...	8	60¼	...	...	20—10—09	
ಬೀಟೆ: ಲಿಂಗನಹಳ್ಳಿ, ಗಾಣದಕಟ್ಟೆ ವಗೈರೆ.	...	5	30¼	...	...	27—10—09	
ಬೀಟೆ: ಕೋಮಾರನಹಳ್ಳಿ ಗ್ರಾಮ	...	4	10¾	...	...	ಡಿಟೋ	
ಬೀಟೆ: ಕೆಂಚಾಪುರ ಗ್ರಾಮ	...	3	10¾	...	...	24—10—09	

ಹರಾಜು ಷರತ್ತುಗಳು.

ಪ್ರತಿ ಲಾಟು ತೆಗೆದುಕೊಂಡ ಹರಾಜುದಾರನು ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಹಣವನ್ನು ಹರಾಜು ಖೈದಾದ ವಡನೆ ಡಿಪಾಜಿಟ್ಟು ಇಡಬೇಕು. ತಪ್ಪಿದಲ್ಲಿ 2ನೆ ಹರಾಜು ಮಾಡಿಸಿ ನಷ್ಟದ ಮೊಬಲಗಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಷುರು ಹರಾಜಿನ ಹಣಕ್ಕಿಂತ ಜಾಸ್ತಿ ಬಂದಲ್ಲಿ ಅಂಥಾ ಹಣಕ್ಕೆ ಅವಲ್ ಹರಾಜುದಾರನು ಅರ್ಹನಲ್ಲಾ.

2. ಬಾಕೀ ಹಣವನ್ನು ಹರಾಜು ತಾರೀಖು ಲಾಗಾಯಿತು 7 ದಿವಸಗಳೊಳಗಾಗಿ ಪಾವತಿ ಮಾಡಬೇಕು. ತಪ್ಪಿದಲ್ಲಿ ಷುರು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳುತ್ತೆ. ಅಲ್ಲದೆ ಮೇಲೆ ನಮೂದಿಸಿದಂತೆ ದುಸರಾ ಹರಾಜು ಮಾಡಿಸುತ್ತೆ.

3. ಪೂರಾ ಹಣ ಪಾವತಿ ಮಾಡಿ ಲೈಸೆನ್ಸ್ ಪಡದ ವಿನಹ ಯಾವ ಚೌಬೀನೆಯನ್ನಾಗಲಿ ರಫ್ತು ಮಾಡಿಕೊಳ್ಳಕೂಡದು.

4. ಹರಾಜಾದ ಚೌಬೀನೆಯನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳೊಳಗೆ ರಫ್ತು ಮಾಡದೆ ಬಿಟ್ಟಲ್ಲಿ ಹರಾಜುದಾರನಿಂದ ಡಿಪೋ ಬಾಡಿಗೆಯನ್ನು ಹರಾಜು ಮೊಬಲಗಿನ ಮೇಲೆ ಸಾಲಿಯಾನ 12 ರೂಪಾಯಿನಂತೆ ಹರಾಜು ತಾರೀಖು ಲಾಗಾಯಿತು ವಸೂಲ್ ಮಾಡಲ್ಪಡುತ್ತೆ.

5. ಹರಾಜು ಮಂಜೂರಾದ ತಾರೀಖು ಲಾಗಾಯಿತು ಮಾಲಿನ ನಿಗಾವಣೆ ಹರಾಜುದಾರನದಾಗಿರುತ್ತೆ.

ಎ. ಪೊನ್ನುಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 30ನೆ ಸೆಪ್ಟಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕಡೂರು ಡಿಸ್ಟ್ರಿಕ್ಟ್ ಬಾಬತು ಆಯಾಯ ಡಿಪೋಗಳ ಕೆಳಗಡೆ ಕಂಡ ತಾರೀಖುಗಳಲ್ಲಿ ಬಹಿರಂಗವಾಗಿ ನಾಟಾಗಳನ್ನು ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ:—

ಸಂಖ್ಯೆ.	ನಾಟಾಗಳ ವಿವರ.	ಶಿವಮೊಗ್ಗ 24-11-1909.		ಬೆಂಕೀಪುರ 25-11-1909.		ತರೀಕೆರೆ 27-11-1909.		ಕಡೂರು 1-12-1909.		ಷರಾ.
1	ಸಾಗುವಾನಿ ...	20	600	10	300	100	3,000	...	...	ಸ್ವಲ್ಪ ಹೆಚ್ಚು ಕಡಿಮೆ.
2	ಸಾಗುವಾನಿ ತೀರು ...	...	...	...	...	600	700	...	...	
3	ಸಾಗುವಾನಿ ಬೆಲಗು ...	...	...	...	...	200	2,000	250	1,000	
4	ಬೀಟೆ ನಾಟಾ ...	10	350	20	600	50	1,500	10	300	
5	ಹೊನ್ನೆ ನಾಟಾ ...	20	600	15	450	30	600	75	2,250	
6	ಮತ್ತಿ ನಾಟಾ ...	50	1,500	60	1,500	100	3,000	76	2,000	
7	ನಂದಿ ನಾಟಾಗಳು ...	60	1,800	50	1,000	80	2,400	...	...	
8	ಯತ್ಯಾಗೆ ...	50	1,500	20	600	50	1,500	...	...	
9	ಹುನಾಲು ...	60	1,750	50	1,200	80	2,000	...	...	
10	ಮಸಿ ...	20	500	10	300	30	900	...	...	
11	ಜಂಬೆ ...	100	1,800	30	450	40	1,200	...	...	
12	ಜಾಲಾರಿ ...	...	...	20	400	20	400	50	1,000	

ಹರಾಜು ಷರತ್ತುಗಳು.

(1) ಛಡ ದರಖಾಸ್ತುದಾರನು ಹರಾಜು ನಡೆದ ಐದು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕಾಲುಹಿಸ್ಸೆ ಮೊಬಲಗು ಸಮೀಪದಲ್ಲಿರುವ ಖಜಾನೆಗೆ ಜಮಾ ಮಾಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಬಾಬು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಹರಾಜುದಾರರನ್ನು ಗುರಿಪಡಿಸುತ್ತೆ.

(2) ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನ ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿನಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಜಮಾ ಮಾಡಿಸಿರುವ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ನಾಟಾಗಳನ್ನು 1ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ದುಸರಾ ಹರಾಜು ಮಾಡಿಸಿ ಉಂಟಾಗುವ ಲುಕ್ಸಾನು ಮೊಬಲಗನ್ನು ಅವಲ್ ಹರಾಜುದಾರನಿಂದ ವಸೂಲು ಮಾಡಲ್ಪಡುತ್ತೆ.

(3) ಹರಾಜಿನಲ್ಲಿ ಪಡೆದಿರುವ ನಾಟಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ನಾಟಾಗಳನ್ನ ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲು ರಫ್ತು ಮಾಡಕೂಡದು.

(4) ಹರಾಜು ತಾರೀಖು ಲಾಗಾಯಿತು (90) ತೊಂಭತ್ತು ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋದಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ 12 ರೂಪಾಯಿ ನಂತೆ ಡಿಪೋ ಭಾಡಾ ವಸೂಲ್ ಮಾಡಲ್ಪಡುತ್ತೆ.

ಬಿ. ಹೀರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಕಟನೆ.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಚನ್ನಪಟ್ಟಣದ ಊರನ್ನು 1906ನೆ ಇಸವಿಯ 7ನೆ ನಂಬರ್ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ ಮೇರ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರಿ ರೆಗ್ಯುಲೇಷನ್ 8ನೆ ಪ್ರಕರಣದಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

2. ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರು ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖು ಲಾಗಾಯಿತು ಎರಡು ತಿಂಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ಚನ್ನಪಟ್ಟಣದ ಟೌನ್ ಎಲ್ಲೆಯು ಚನ್ನಪಟ್ಟಣದ ಖಿಲ್ಲೆಯ 2ನೆ ಸರ್ವೆ ನಂಬರಿನ ನೈರುತ್ಯಮೂಲೆಯಲ್ಲಿ ಪ್ರಾರಂಭಿಸಿ ಪೂರ್ವಮಾರ್ಗವಾಗಿ ಹೊರಟು ಖಿಲ್ಲೆಯ ಸರ್ವೆ 2 ಮತ್ತು 3ನೆ ನಂಬರಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಇಲ್ಲಿಂ

ದ ಎಲ್ಲೆಯು ಉತ್ತರಕ್ಕೆ ತಿರುಗಿ ಖಿಲ್ಲೆಯು ಸರ್ವೆ 3ನೆ ನಂಬರ ಮತ್ತು ಗೆಂಡವುಡು ಗ್ರಾಮದ ಸರ್ವೆ 33ನೆ ನಂಬರುಗಳ ಪೂರ್ವಎಲ್ಲೆ ಮಾರ್ಗವಾಗಿ ಹೋಗಿ ಗೆಂಡವುಡು ಗ್ರಾಮದ ಸರ್ವೆ 33ನೆ ನಂಬರಿನ ಈಶಾನ್ಯಮೂಲೆಯನ್ನು ಸಂಧಿಸುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರುಗಿ ಗೆಂಡವುಡುವಿನ ಸರ್ವೆ 32, 31, 30 ಮತ್ತು 29ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 32 ಮತ್ತು 31ನೆ ನಂಬರುಗಳ ಮಧ್ಯೆ ಹೋಗುವ ಕಾಲುದಾರಿಯನ್ನು ದಾಟಿ ಸರ್ವೆ 29ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸಿ ಇಲ್ಲಿಂದ ದಕ್ಷಿಣಕ್ಕೆ ತಿರುಗಿ ಗೆಂಡವುಡು 28ನೆ ನಂಬರನ್ನು ಬಳಸಿಕೊಂಡು ಗೆಂಡವುಡು 27ನೆ ನಂಬರಿನ ವಾಯುವ್ಯ ಮೂಲೆಬಳಿ ಸದರ್ನ ಮರಾಠಾ ರೈಲ್ವೆ ಹಾದಿಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಪೂರ್ವಮಾರ್ಗವಾಗಿ ಗೆಂಡವುಡುವಿನ ಸರ್ವೆ 27–26 ಮತ್ತು 25ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ರೈಲ್ವೆದಾರಿಯನ್ನು ಹಾದು ಗೆಂಡವುಡುವಿನ ಸರ್ವೆ 24 ಮತ್ತು 23ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣಕ್ಕೆ ಇಳಿದು ಸರ್ವೆ 23ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಗೆಂಡವುಡು 21ನೆ ನಂಬರಿನ ನೈರುತ್ಯಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಪೂರ್ವವಾಗಿ ಗೆಂಡವುಡು ಸರ್ವೆ 21ನೆ ನಂಬರಿನ ದಕ್ಷಿಣಕ್ಕೆ ಲಕ್ಷ್ಮಿಕಟ್ಟೆ ರಸ್ತೆಯ ಎಡಬಾಜುದಲ್ಲಿ ಹೊರಟು, ಮೇಲ್ಕಂಡ ನಂಬರಿನ ಆಗ್ನೇಯಮೂಲೆಯಲ್ಲಿರುವ ಸರಹದ್ದು ಕಲ್ಲಿನ ವರಿವಿಗೆ ಹೋಗಿ, ದಕ್ಷಿಣಕ್ಕೆ ತಿರುಗಿ ಗೆಂಡವುಡು ಸರ್ವೆ 20ನೆ ನಂಬರು ಮತ್ತು ಶುಕ್ರವಾರಪ್ಯಾಟೆಯ ಸರ್ವೆ 3ನೆ ನಂಬರುಗಳನ್ನು ಬಳಸಿಕೊಂಡು ಉತ್ತರಕ್ಕೆ ತಿರುಗಿ ಗೆಂಡವುಡು ಸರ್ವೆ 19ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಶುಕ್ರವಾರಪೇಟೆಯ ಸರ್ವೆ 4ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಕಡೆಯಲ್ಲಿ ಕಂಡ ನಂಬರನ್ನು ಬಳಸಿಕೊಂಡು ಗೆಂಡವುಡುವಿನ ಸರ್ವೆ 18ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ರೈಲ್ವೆ ಹಾದಿಯನ್ನು ಹಾದು ಸರ್ವೆ 17ನೆ ನಂಬರಿನ ಆಗ್ನೇಯಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಗೆಂಡವುಡುವಿನ ಸರ್ವೆ 17ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಗೆಂಡವುಡು ಸರ್ವೆ 16ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತೆ. ಇಲ್ಲಿಂದ ಎಲ್ಲೆಯು ಉತ್ತರಕ್ಕೆ ತಿರುಗಿ ಗೆಂಡವುಡು ಸರ್ವೆ 16, 15 ಮತ್ತು 14ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಒಂದು ಓಣಿಯನ್ನು ದಾಟಿ ಗೆಂಡವುಡು ಸರ್ವೆ 1ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಇಲ್ಲಿಂದ ಎಲ್ಲೆಯು ಪೂರ್ವಾಭಿಮುಖವಾಗಿ ಗೆಂಡವುಡು ಸರ್ವೆ 192, 191, 190 ಮತ್ತು 177ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೋಗಿ ದೇವರಹೊಸಹಳ್ಳಿ ರಸ್ತೆಯನ್ನು ದಾಟಿ ಗೆಂಡವುಡು ಸರ್ವೆ 162ನೆ ನಂಬರಿನ ನೈರುತ್ಯಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣಕ್ಕೆ ಇಳಿದು ಗೆಂಡವುಡು ಸರ್ವೆ 162 ಮತ್ತು 161ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಪೂರ್ವಕ್ಕೆ ತಿರುಗಿ ಗೆಂಡವುಡು ಸರ್ವೆ 161, 160 ಮತ್ತು 159ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೋಗಿ ರೈಲ್ವೆ ಹಾದಿಯನ್ನು ಸಂಧಿಸಿ ಸದರಿ ರೈಲ್ವೆ ದಾರಿಯನ್ನು ಪುನಃ ದಾಟುತ್ತೆ. ಅಲ್ಲಿಂದ ಎಲ್ಲೆಯು ಆಗ್ನೇಯಮಾರ್ಗವಾಗಿ ಹೊರಟು ಗೆಂಡವುಡು ಸರ್ವೆ 158ನೆ ನಂಬರನ್ನು ಹಾದು ಗೆಂಡವುಡು ಸರ್ವೆ 157ನೆ ನಂಬರಿನ ವಾಯುವ್ಯ ಮೂಲೆಯಲ್ಲಿರುವ ಪಹಣಿಕಲ್ಲನ್ನು ಸಂಧಿಸಿ ಅಲ್ಲಿಂದ ಸದರಿ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯೂ, ಶುಕ್ರವಾರಪೇಟೆ ಸರ್ವೆ 5ನೆ ನಂಬರಿನ ಉತ್ತರ ಮತ್ತು ಪೂರ್ವ ಎಲ್ಲೆಗಳ ಮಾರ್ಗವಾಗಿ ಹೋಗಿ ಮದರಾಸ್-ಕನ್ನಾನೂರು ರಸ್ತೆಯನ್ನು ಸದರಿ ರಸ್ತೆಯ 36ನೆ ಮೈಲ್ ಕಲ್ಲಿನಬಳಿ ದಾಟುತ್ತೆ. ಇಲ್ಲಿಂದ ಎಲ್ಲೆಯು ಪೂರ್ವಮಾರ್ಗವಾಗಿ ಕುಡಿನೀರಕಟ್ಟೆ (ಸರ್ವೆ 77ನೆ ನಂಬರು) ಯ ಉತ್ತರಕಟ್ಟೆ ಮಾರ್ಗವಾಗಿಯು ತಟ್ಟೆಕೆರೆ ಸರ್ವೆ 76ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿಯೂ ಹೋಗಿ ಸದರಿ 76ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸುತ್ತೆ.

II. ಅಲ್ಲಿಂದ ಎಲ್ಲೆಯು ದಕ್ಷಿಣಾಭಿಮುಖವಾಗಿ ತಟ್ಟೆಕೆರೆ 76ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಪಶ್ಚಿಮಕ್ಕೆ ತಿರುಗಿ 76ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 76ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣಕ್ಕೆ ಮೇಲ್ಕಂಡ ಕಟ್ಟೆ ಮಾರ್ಗವಾಗಿ ಹೋಗಿ ಒಂದು ಹಳ್ಳವನ್ನು ದಾಟಿ ಸರ್ವೆ 37ನೆ ನಂಬರಿನ ಪಶ್ಚಿಮ ಮಾರ್ಗವಾಗಿ ಹೋಗಿ ಕಾನಕಾನಹಳ್ಳಿಗೆ ಹೋಗುವ ಭಂಡಿ ಜಾಡಿಯನ್ನು ಹಾದು ಸರ್ವೆ 82ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿಯೂ 83ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಎಲ್ಲೆ ಮಾರ್ಗವಾಗಿಯೂ ಹೋಗುತ್ತೆ. ಇಲ್ಲಿಂದ ಎಲ್ಲೆಯು ತಟ್ಟೆಕೆರೆ ಸರ್ವೆ 81ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಕೊತ್ತನಹಳ್ಳಿ, ಸರ್ವೆ 19ನೆ ನಂಬರಿನ ಈಶಾನ್ಯಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಪಶ್ಚಿಮಕ್ಕೆ ತಿರುಗಿ ಸರ್ವೆ 19, 18, 17, 16 ಒಂದು ದೊಡ್ಡಿ 15 ಮತ್ತು 14ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಕಡೆಯಲ್ಲಿ ನಮೂದಿಸಿರುವ ಎರಡು ನಂಬರುಗಳ ಮಧ್ಯೆ ಇರುವ ಓಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣಕ್ಕೆ ತಿರುಗಿ ಸರ್ವೆ 14, 13, 3, 2, 1ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿಯೂ ಮತ್ತು ಸರ್ವೆ 1ನೆ ನಂಬರಿನ ದಕ್ಷಿಣ ಎಲ್ಲೆಯ ಸ್ವಲ್ಪ ದೂರದವರೆಗೆ ಹೋಗಿ ಸರ್ವೆ 93ನೆ ನಂಬರಿನ ವಾಯುವ್ಯಮೂಲೆಯನ್ನು ಸಂಧಿಸುತ್ತೆ. ಅಲ್ಲಿಂದ ಎಲ್ಲೆಯು ಸರ್ವೆ 93, 94ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಎಲ್ಲೆಯು ಪಶ್ಚಿಮಕ್ಕೆ ತಿರುಗಿ ಸರ್ವೆ 98 ಮತ್ತು 97ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಪುನಃ ದಕ್ಷಿಣಕ್ಕೆ ತಿರುಗಿ ಸರ್ವೆ 97 ಮತ್ತು 99ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 100ನೆ ನಂಬರಿನ ವಾಯುವ್ಯಮೂಲೆಯನ್ನು ಸಂಧಿಸುತ್ತೆ.

III. ಇಲ್ಲಿಂದ ಎಲ್ಲೆಯು ಕೊತ್ತನಹಳ್ಳಿ ರಸ್ತೆಯನ್ನು ದಾಟಿಕೊಂಡು ಸರ್ವೆ 103ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಸಾತನೂರು ರಸ್ತೆಯನ್ನು ಸಂಧಿಸಿ ಈ ಬಳಿ ಎಲ್ಲೆಯು ಉತ್ತರಕ್ಕೆ ಹತ್ತಿ ಸದರೀ ರಸ್ತೆಯ ಪೂರ್ವಬಾಜಾ ಮಾರ್ಗವಾಗಿ ಹೋಗಿ, ಕೊತ್ತನಹಳ್ಳಿ ಸರ್ವೆ 118ನೆ ನಂಬರಿನ ಆಗ್ನೇಯಮೂಲೆಯನ್ನು ಸಂಧಿಸಿ, ಸದರೀ 118ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ, ಸಾತನೂರು ರಸ್ತೆಯನ್ನು ದಾಟಿ ಸರ್ವೆ 117ನೆ ನಂಬರಿನ ವಾಯುವ್ಯ ಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 117 ಮತ್ತು 527ನೆ ನಂಬರುಗಳ ಪಶ್ಚಿಮ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯೂ ಮಂಗಳವಾರಪೇಟೆ ಸರ್ವೆ 528ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿಯೂ ಹೋಗುತ್ತೆ.

ಇಲ್ಲಿಂದ ಸರ್ವೆ 530ನೆ ನಂಬರಿನ ಈಶಾನ್ಯ ಎಲ್ಲೆ ಮಾರ್ಗವಾಗಿ ಹೋಗಿ ಮದರಾಸ್-ಕನ್ನಾನೂರು ರಸ್ತೆಯನ್ನು ದಾಟಿ ಸರ್ವೆ 524ನೆ ನಂಬರನ್ನು ಬಳಸಿಕೊಂಡು ಸರ್ವೆ 523ನೆ ನಂಬರಿನ ಉತ್ತರ ಎಲ್ಲೆಯನ್ನು ಸಂಧಿಸುತ್ತೆ. ಇಲ್ಲಿಂದ ಪಶ್ಚಿಮಾಭಿಮುಖವಾಗಿ ಮಂಗಳವಾರಪೇಟೆ ಸರ್ವೆ 523, 522, 521, 518, 517 ಮತ್ತು 516ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ, ದಕ್ಷಿಣಕ್ಕೆ ಇಳಿದು ಮಂಗಳವಾರಪೇಟೆ ಸರ್ವೆ 516ನೆ ನಂಬರು ಮತ್ತು ಚಿಕ್ಕಮಗಳೂರು ಸರ್ವೆ 67ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಮದರಾಸು-ಕನ್ನಾನೂರ್ ರಸ್ತೆಯನ್ನು ದಾಟಿ ಚಿಕ್ಕಮಗಳೂರು ಗ್ರಾಮದ ಸರ್ವೆ 65 ಮತ್ತು 60ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೊರಟು ಪೂರ್ವಕ್ಕೆ ತಿರುಗಿ ಮೇಲ್ಕಂಡ 60ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಹೋಗಿ ದಕ್ಷಿಣಕ್ಕೆ ಇಳಿದು ಮಂಗಳವಾರಪೇಟೆ ಸರ್ವೆ 543ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಇಲ್ಲಿಂದ ಎಲ್ಲೆಯು ಪಶ್ಚಿಮಕ್ಕೆ ತಿರುಗಿ ಚಿಕ್ಕಮಗಳೂರು ಗ್ರಾಮದ ಸರ್ವೆ 59ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ದಕ್ಷಿಣಕ್ಕೆ ಇಳಿದು ಮೇಲ್ಕಂಡ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ನೀಲಕಂಠನಹಳ್ಳಿಗೆ ಹೋಗುವ ಬಂಡಿ ಜಾಡೆಯನ್ನು ಹಾದು ಪಶ್ಚಿಮಕ್ಕೆ ತಿರುಗಿ ಮಂಗಳವಾರಪೇಟೆ ಸರ್ವೆ 1ನೆ ನಂಬರು ಮತ್ತು ಚಿಕ್ಕಮಗಳೂರು ಸರ್ವೆ 58ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಇಲ್ಲಿ ಎಲ್ಲೆಯು ವಾಯುವ್ಯ ದಿಕ್ಕಿಗೆ ತಿರುಗಿ ಮಂಗಳವಾರಪೇಟೆ ಸರ್ವೆ 172 ಮತ್ತು 173ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ 173ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತೆ.

IV. ಇಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರುಗಿ ಮಂಗಳವಾರಪೇಟೆ ಸರ್ವೆ 183ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿಯೂ ಚಿಕ್ಕಮಳೂರ್ ಸರ್ವೆ 76, 75 ಮತ್ತು 74ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿಯೂ ಹೋಗಿ ಮಂಗಳವಾರಪೇಟೆ ಸರ್ವೆ 548, 547 ಮತ್ತು 546ನೆ ನಂಬರುಗಳನ್ನು ಬಳಸಿಕೊಂಡು ಉತ್ತರಕ್ಕೆ ತಿರುಗಿ ಚಿಕ್ಕಮಳೂರು ಸರ್ವೆ 74ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಮಂಗಳವಾರಪೇಟೆ ರಸ್ತೆಯನ್ನು ದಾಟಿ ದಕ್ಷಿಣಕ್ಕೆ ಇಳಿದು ಚಿಕ್ಕಮಳೂರು ಸರ್ವೆ 63, 62 ಮತ್ತು 61ನೆ ನಂಬರುಗಳನ್ನು ಬಳಸಿಕೊಂಡು ಮದರಾಸು-ಕನ್ನಾನೂರು ರಸ್ತೆಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಉತ್ತರಕ್ಕೆ ಚಿಕ್ಕಮಳೂರು ಸರ್ವೆ 68ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಮಂಗಳವಾರಪೇಟೆ ಸರ್ವೆ 515ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯೂ ಚನ್ನಪಟ್ಣದ ಖಿಲ್ಲೆಯ ಪಶ್ಚಿಮ ಎಲ್ಲೆಯ ಮಾರ್ಗವಾಗಿಯೂ ಹೋಗಿ ಚನ್ನಪಟ್ಣದ ಖಿಲ್ಲೆಯ ಸರ್ವೆ 2ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತೆ.

3. ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ಚನ್ನಪಟ್ಣದ ಟವರ್ ಸರಹದ್ದಿನೊಳಗೆ ಸೇರಿರುತ್ತೆ.

ಚನ್ನಪಟ್ಣದ ಖಿಲ್ಲೆಯ ಸರ್ವೆ ನಂಬರು 1 ಮತ್ತು 4.
ಗೆಂಡಮಡು ಸರ್ವೆ ನಂಬರು 22, 23, 24, 25, 26 ಮತ್ತು 27.
ಶುಕ್ರವಾರ ಪೇಟೆಯ ಸರ್ವೆ ನಂಬರು 1, 2 ಮತ್ತು 5.
ತಟ್ಟೆಕೆರೆಯ ಸರ್ವೆ ನಂಬರು 76, 77 (ಕುಡಿನೀರು ಕಟ್ಟೆ) 78, 79 ಮತ್ತು 82.
ಮಂಗಳವಾರಪೇಟೆಯ ಸರ್ವೆ ನಂಬರು 525, 526 ಮತ್ತು 529.

ಟಿ. ರಾಯಲು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 22ನೆ ಸೆಪ್ಟಂಬರ್ 1909.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಈ ರೇಖಿನಲ್ಲಿ ಕಂಡ ಜೋಡಿ ಗ್ರಾಮಗಳು ಸರಕಾರಕ್ಕೆ ಖರಬೇಕಾದ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ನವಂಬರ್ ಮಾಹೆ 4 ಮತ್ತು 5ನೆ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ಪಾರ್ಶಗಾನಹಳ್ಳಿ.
2. ,, ದಂಡಿಗಾನಹಳ್ಳಿ.

ಹೆಚ್ಚು ತಪಶೀಲುಗಳ ಬಗ್ಯೆ 1909ನೆ ಇಸವಿ ಸೆಪ್ಟಂಬರ್ ತಾರೀಖು 30ನೆ ಮರ್ಕುಂ 39ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 758—759ನೆ ನಂಬರು ಪೇಜು ನೋಡತಕ್ಕದ್ದು.

ಎ. ವೇದಾಂತದೇಶಿಗಂ ಐಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 27ನೆ ಮಾಹೆ ಸೆಪ್ಟಂಬರ್ 1909.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಕಡೆ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾ[ಗಿರು]ತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದ[ರೆ] ಡಿಪಾಜಿಟ್ ಮೊಬಲಗು ದಂಡವಾಗಿ ತಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದ[ರೆ] ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕ[ರಾಗಿ] ತಕ್ಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯ[ಸ್ಥರಿಂ]ದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅ[ಂಥ]ವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನ[ಲ್ಲಿ] ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವವಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳ ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವ[ತಿ]ಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ[ಿನ] ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜ್ ಮುವ್ಕೂಫ಼್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾ[ಮ]ವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾ[ಗ]ಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟೆಂತ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗ[ಳ]ೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.	ಎ.	ಗು.	ಅಂದಾಜಾ ಹುಟ್ಟುವಳಿ ರೂ.	ಅ.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟು. ರೂ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ. ರೂ.	ಅ.	ಪೈ.	ಹರಾಜು ತಾರೀಖು ವಗೈರೆ.
ಕೋಲಾರ	ಚಿಕ್ಕಬಳ್ಳಾಪುರ	ಕಸಬಾ	ಜೋಡಿ ರಾಮೇನಹಳ್ಳಿ	ಸವುಳಿ ಪುಟ್ಟಾಚಾರ್ಯ ವಗೈರೆ	ಖರಾಬು ...	78	20	1	4	ಕ್ವಿಟರೆಂಟ್ 136	4,227	12	1	1909ನೆ ಇಸವಿ ನವಂಬರ 8ನೆ ತಾರೀಖು ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಸಾಹೇಬರವರ ರೂಬರೂ.
					ಖುಷ್ಕಿ ...	299	11	324	0	ಪೇಷ್ಕಷ್ 575				
					ತರಿ ...	20	13	112	0					
					ಬಾಗಾಯಿತು ...	38	26	159	0					
						436	30	596	4					

ಚಕ್ಕುಬಂದಿ.
ಪೂರ್ವಕ್ಕೆ—ರಾಗಿಮಾಕಲಹಳ್ಳಿ ಸರಹದ್ದು.
ಪಶ್ಚಿಮಕ್ಕೆ—ಅದ್ದೆಕೊಪ್ಪ ಮತ್ತು ಶ್ಯಾನಪುರದ ಸರಹದ್ದು.
ಉತ್ತರಕ್ಕೆ—ಕನಗನಕೊಪ್ಪದ ಸರಹದ್ದು.
ದಕ್ಷಿಣಕ್ಕೆ—ಪೂಶೆಟ್ಟಿಹಳ್ಳಿ ಸರಹದ್ದು.

ಎಸ್. ಶಾಮಣ್ಣ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.
ಇಸ್ತಿಹಾರ್‌ನಾಮೆ.

ತಾರೀಖು 22ನೆ ಸೆಪ್ಟಂಬರ್ 1909.

ಎಡತೊರೆ ತಾಲ್ಲೂಕು ಕಸಬಾ ಹೋಬಳಿ ಜೋಡಿ ಚಾಮುಲಾಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಜೋಡಿ ಚಾಮುಲಾಪುರ ಗ್ರಾಮದಲ್ಲಿ 1909ನೆ ಇಸವಿ ನವಂಬರು ಮಾಹೆ 17ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಸೀಲ್ ಬಗ್ಗೆ ಸ್ 1909ನೆ ಇಸವಿ ಸೆಪ್ಟಂಬರ್ ತಾರೀಖು 30ನೆ ಮರ್ಕೂಂ 39ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 764ನೆ ನಂಬರ್ ಪೇಜು ನೋಡತಕ್ಕದ್ದು.

ಕೆ ಚಾಂಡಿ,
ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ಇಸ್ತಿಹಾರ್.

ತಾರೀಖು 11—22ನೆ ಸೆಪ್ಟಂಬರ್ 1909.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಜೇವಾರ್ಸಾಗಿ ಇರುವ ಇದರಡೀ ಕಂಡ ದಸ್ತಾವೇಜುಗಳನ್ನ ಹಾಜರು ಮಾಡಿದವರೇ ಆಗಲೀ ಅಥವಾ ಇವರಿಂದ ಅಧಿಕಾರ ಹೊಂದಿದ ಮುತಾಲೀಕರೇ ಆಗಲೀ ಈ ನೋಟೀಸಿ ತಾರೀಖು ಲಾಗಾಯಿತು ಒಂದು ತಿಂಗಳ ಒಳಗಾಗಿ ಆಯಾಯ ರಿಜಿಸ್ಟ್ರೇಷನ್ ಆಫೀಸ್‌ಗಳಲ್ಲಿ ಹಾಜರಾಗಿ ತೆಗದುಕೊಳ್ಳದಿದ್ದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂಬರ್ 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತಾವೇಜುಗಳನ್ನ ನಾಶಪಡಿಸುತ್ತೆ.

1908—1909.

ಜಂಬರಿ ನಂಬರ್.	ರಿಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕದ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಯಳಂದೂರು ...	1	26	4—7—1906	6—7—1906	ಯಳಂದೂರು ತಾಲ್ಲೂಕು ಗುಂಭಳ್ಳಿ ಗ್ರಾಮದಲ್ಲಿರುವ ಬಲಗೈ ಜಾತಿ ಚಿಕ್ಕನ ಮಗಳು ಕೆಂಪಿ.	ಯಳಂದೂರು ತಾಲ್ಲೂಕು ಗುಂಭಳ್ಳಿ ಗ್ರಾಮದಲ್ಲಿರುವ ಬಲಗೈ ಜಾತಿ ದೇವಿಲಿಂಗನ ಹೊನ್ನನ ಮಗ ಜೆರಾಯಿತಿ ಕಸಬಿನ ಹೊನ್ನ.	16 ರೂಪಾಯಿ ಕ್ರಯ.
2	ಡಿಟೋ ...	1	55	7—7—1906	9—7—1906	ಯಳಂದೂರು ತಾಲ್ಲೂಕು ಯರಗಂಬಳ್ಳಿ ಗ್ರಾಮದಲ್ಲಿರುವ ಯಡಗೈ ಜಾತಿ ದೊಡ್ಡಪುಟ್ಟನ ಸಿದ್ದನ ಮಗ ಜೆರಾಯಿತಿ ಕಸಬಿನ ಚಿಕ್ಕಸಿದ್ದ ಒಂದು, ಸದರಿ ಅಡಿಷನ್ನುಳ್ಳ ಚಿಕ್ಕಸಿದ್ದನಮಗ ಲಿಂಗ ಒಂದು.	ಯಳಂದೂರು ತಾಲ್ಲೂಕು ಯರಗಂಬಳ್ಳಿ ಗ್ರಾಮದಲ್ಲಿರುವ ಯಡಗೈ ಜಾತಿ ದೊಡ್ಡಪುಟ್ಟನ ದ್ಯಾವರಗುಡ್ಡನ ಮಗ ಜೆರಾಯಿತಿ ಕಸಬುವುಳ್ಳ ಕೆಂಪಸಿದ್ದ.	50 ರೂಪಾಯಿ ಕ್ರಯ.
3	ಡಿಟೋ ...	1	118	5—7—1906	24—8—1906	ಯಳಂದೂರು ತಾಲ್ಲೂಕು ಗಣಿಗನೂರು ಗ್ರಾಮದಲ್ಲಿರುವ ಪುಷ್ಪಲಿಗರ ಸಿದ್ದನದಾಸಿಟ್ಟುಮಗ ಕೂಲಿ ಕಸಬಿನ ಕೃಷ್ಣ.	ಯಳಂದೂರು ತಾಲ್ಲೂಕು ಗಣಿಗನೂರು ಗ್ರಾಮದಲ್ಲಿರುವ ಪುಷ್ಪಲಿಗರ ಸಿದ್ದನ ದಾಸನಮಗ ಜಮೀನ್ ಜೀವನದ ಪುಟ್ಟ.	100 ರೂಪಾಯಿ ಕ್ರಯ.
4	ಶ್ರೀರಂಗಪಟ್ಟಣ ...	1	641	29—8—1906	17—12—1906	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಹಿರೋಡೆಯಲ್ಲಿರುವ ಮಹಾರಾಷ್ಟ್ರ ಜಾತಿ ರಾಮಚಂದ್ರರಾಯರ ಮಗ ರಾಂಜಿರಾವು.	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಹಿರೋಡೆ ಹೋಬಳಿ ಬೀರಶೆಟ್ಟಿಹಳ್ಳಿಯಲ್ಲಿರುವ ಸಿದ್ದೇಗೌಡನ ಮಗ ಕಾಳಯ್ಯ.	50 ರೂಪಾಯಿ ಕ್ರಯ.

ಜಂಬರ್ ನಂಬರ್.	ರಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕದ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಿಯಾದ ಅಥವಾ ತಿರಸ್ಕರಿಸಿದ್ದ ತಾರೀಖು	ದಸ್ತಾವೇಜು ಬರೆದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜು ಸ್ವಭಾವ ಮತ್ತು ಕಿಮ್ಮತ್ತು.
5	ಶ್ರೀರಂಗಪಟ್ಟಣ	1	1111	6—4—1907	10—4—1907	ಕೃಷ್ಣರಾಜಪೇಟೆ ತಾಲ್ಲೂಕು ಚಿನ್ನರಳಿ ಹೋಬಳಿ ಶೆಟ್ಟಿಹಳ್ಳಿಗ್ರಾಮದಲ್ಲಿರುವ ವಮೂಕನಕೊಪ್ಪಲು ನರಸಿಂಹೇಗೌಡನ ಮಕ್ಕಳು ತಿಂಮೇಗೌಡ ಮತ್ತು ಚನ್ನೇಗೌಡ.	ಮೈಸೂರು ಚಾಮರಾಜಪೇಟೆ ಚೊಣ್ಣನವರ ಲೈನಲ್ಲಿರುವ ಮಹೂರು ಆಳಸಿಂಗ್ರಯ್ಯಂಗಾರ್ರ ಮಕ್ಕಳು ವೆಂಕಟಾಚಲಯ್ಯಂಗಾರ್ರು.	3 ಸಾಲ್ ಗುತ್ತಿಗೆ ಸಾಲಿಯಾನಾ 22 ಖಂಡಗ ಕೃಷ್ಣರಾಜಖಂಡಿ ಭತ್ತ, 22 ಹೊರೆ ಹುಲ್ಲು, 2ರೂಪಾಯಿ ಕಾಳು ಕೊಡುವುದು.
6	ಡಿಟ್ಟೋ ...	4	16	6—4—1907	16—4—1907	ಡಿಟ್ಟೋ ...	ಡಿಟ್ಟೋ ...	100 ರೂಪಾಯಿ ಮೈಸಾಲ ಪತ್ರ.
7	ಡಿಟ್ಟೋ ...	1	1412	15—5—1907	31—5—1907	ಶ್ರೀರಂಗಪಟ್ಟಣ ತಾಲ್ಲೂಕು ದರಸಗುಪ್ಪೆಯಲ್ಲಿರುವ ಪವತಿ ಪಟೇಲ್ ಚಿಕ್ಕೇಗೌಡನ ಮಗ ಬವನಾಶಿಗೌಡ ಪುರುಷ ಪುಟ್ಟೇಗೌಡ.	ಶ್ರೀರಂಗಪಟ್ಟಣ ತಾಲ್ಲೂಕು ದರಸಗುಪ್ಪೆಯಲ್ಲಿರುವ ಪವತಿ ಪಟೇಲ್ ಚಿಕ್ಕೇಗೌಡನ ಹೆಂಡತಿ ನಂಜಮ್ಮ.	225 ರೂಪಾಯಿ ಮೋಡೋರುಪತ್ರ.
8	ಚಾಮರಾಜನಗರ ...	1	91	10—4—1907	9—7—1907	ಯರಗಂಬಳ್ಳಿಯಲ್ಲಿರುವ ಚಿಕ್ಕಬೆಳಗಿರಿ ಹನುಮನ ಮಗ ಹನುಮ.	ಸುತ್ತೂರು ಗ್ರಾಮದಲ್ಲಿರುವ ಮಾದೆಗೌಡನ ಮಗ ಮಾದೆಗೌಡ.	30 ರೂಪಾಯಿ ಕ್ರಯ ಪತ್ರ.
9	ಡಿಟ್ಟೋ ...	1	92	15—6—1907	9—7—1907	ಸುತ್ತೂರು ಗ್ರಾಮದಲ್ಲಿರುವ ನಂಜನ ಮಗ ನಂಜ.	ಡಿಟ್ಟೋ ಗ್ರಾಮದಲ್ಲಿರುವ ಮಾದೆಗೌಡನ ಮಗ ಮಾದೆಗೌಡ.	50 ರೂಪಾಯಿ ಕ್ರಯ ಪತ್ರ.
10	ಹುಣಸೂರು ...	1	36	6—7—1906	9—7—1906	ಸರ್ವಮಾನ್ಯ ದೊಡ್ಡಬೆಲಾಳು ದಾಖ್ಲೆ ವೆಂಕಟೇಗೌಡನ ಕೊಪ್ಪಲು ಕೊಡಿಗೌಡನ ಮಕ್ಕಳು 1ನೆ ಮಲ್ಲೆಗೌಡ, 2ನೆ ಸುಬ್ಬೆಗೌಡ.	ಸದರಿ ವೆಂಕಟೆಗೌಡನ ಕೊಪ್ಪಲು ನಂಜೆಗೌಡ, ನಿಂಗೆಗೌಡನ ಮಗ ನಂಜೆಗೌಡ.	300 ರೂಪಾಯಿ ಕ್ರಯ ಪತ್ರ.
11	ಡಿಟ್ಟೋ ...	1	521	28—12—1906	5—1—1907	ಗಂಗನಕುಪ್ಪೆಯಲ್ಲಿರುವ ರಹಿಮಾನ್ ಸಾಬರ ಹೆಂಡತಿ ಕತ್ತಿಜಾಬೀ ಮತ್ತು ಖಾದರ್‌ಸಾಬಿ ಮೈನರ್ ಗಾರ್ಡಿಯನ್ ಕತ್ತಿಜಾಬೀ.	ಗಂಗನಕುಪ್ಪೆಯಲ್ಲಿರುವ ಹೈದರ್‌ಸಾಬಿ ಮಗ ಯಾಕೂಬ್‌ಸಾಬಿ.	150 ರೂಪಾಯಿ ಕ್ರಯ ಪತ್ರ.
12	ಡಿಟ್ಟೋ	1	547	8—1—1907	17—1—1907	ಹರಳಹಳ್ಳಿ ಮೋಗಳ ಮನೆ ಲಿಂಗಶೆಟ್ಟರ ಮಗ ಲಿಂಗಶೆಟ್ಟಿ.	ಹರಳಹಳ್ಳಿ ನಿರಾಳಶೆಟ್ಟಿ ಮಗ ಬಸಶೆಟ್ಟಿ.	100 ರೂಪಾಯಿ ಭೋಗ್ಯ.
13	ಮೈಸೂರು ..	1	131	23—5—1906	20—7—1906	ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಪಂಚಾಳದ ಮುದ್ದಣಾಚಾರಿ ಮಗ ನಾಗಪ್ಪಾಚಾರಿ.	ಮೈಸೂರು ಮಂಡಿಮೊಹಲ್ಲಾದಲ್ಲಿರುವ ಪಾಂಚಾಳದ ಜಾತಿ ಚಿಂಣಾಚಾರಿ.	50 ರೂಪಾಯಿ ಕ್ರಯ ಪತ್ರ.

14	ಮೈಸೂರು	..	1	362	28— 8—1906	3— 9—1906	ತಿ. ನರಶೀಪುರ ತಾಲ್ಲೂಕು ಸೋಸಲೆ ಕೃಷ್ಣರಾಜಪುರದ ಅಗ್ರಹಾರದಿಂದ ಮೈಸೂರಿಗೆ ಬಂದಿರುವ ಸಾಹುಕಾರ್ ಹುಂಡಿ ಕೃಷ್ಣಮಾಚಾರ್ರು ಮಕ್ಕಳು ಶೇಷಾದ್ರಿ ನರಸಿಂಹಾಚಾರ್ ಮೈನರ್ ಗಾರ್ಡಿಯನ್ ಶ್ರೀನಿವಾಸ ರಂಗಾಚಾರ್.	ತಿ|| ನರಶೀಪುರ ತಾಲ್ಲೂಕು ಕಸಬಾ ನರಶೀಪುರದಲ್ಲಿರುವ ರಂಗೈಯಂಗಾರ್ರು ಮಕ್ಕಳು ಟಿ. ಆರ್. ಶ್ರೀನಿವಾಸ ರಂಗಾಚಾರ್.	600 ರೂಪಾಯಿ ಕ್ರಯ ಪತ್ರ.
15	ಡಿಟೋ	...	1	668	23— 9—1906	8—11—1906	ಮೈಸೂರು ನಜರ್‌ಬಾದು ಮೊಹಲ್ಲಾ ಇಟ್ಟಿಗೆ ಗೂಡಿನಲ್ಲಿರುವ ಕಮ್ಮಾಳದ ನಾರಣಾಚಾರಿ ಮಗ ಮರಕೆಲಸದ ಮಾಣಿಕ್ಯಾಚಾರಿ ಡಿಟೋ ಮೊಹಲ್ಲಾದಲ್ಲಿರುವ ಡಿಟೋ ಜಾತಿ ಲಕ್ಷ್ಮಣಾಚಾರಿ ಹೆಂಡತಿ ಕಾಮಾಕ್ಷಮ್ಮ ಸಹ.	ಮೈಸೂರು ನಜರ್‌ಬಾದು ಮೊಹಲ್ಲಾ ಇಟ್ಟಿಗೆ ಗೂಡಿನಲ್ಲಿರುವ ಕಮ್ಮಾಳದ ಜಾತಿ ಲಕ್ಷ್ಮಣಾಚಾರಿ ಮಗಳು ಪಾಪಾತಿಯಮ್ಮ.	100 ರೂಪಾಯಿ ದಾನ ಪತ್ರ.
16	ಡಿಟೋ	...	1	669	31—10—1906	6—11—1906	ಮೈಸೂರು ತಾಲ್ಲೂಕು ಕಲಸನಾಥಪುರದಲ್ಲಿರುವ ಗಂಗಡಿಕಾರ ಸುಬ್ಬೆಗೌಡನ ಮಗ ಕೆಂಪ.	ಮೈಸೂರು ತಾಲ್ಲೂಕು ಕಲಸನಾಥಪುರದಲ್ಲಿರುವ ಕುರುಬರ ಕುಳ್ಳೇಗೌಡನ ಮಗ ದೊಡ್ಡೇಗೌಡ.	22 ರೂಪಾಯಿ ಕ್ರಯ ಪತ್ರ.
17	ಡಿಟೋ	...	1	696	5—11—1906	13—11—1906	ಮೈಸೂರು ಕೃಷ್ಣರಾಜ ಮೊಹಲ್ಲಾ ಸುಣ್ಣದ ಕೇರಿ ಕಂಚುಗಾರ ಖುರ್ದ‌ಸಾಬಿ ಮಕ್ಕಳು ಪೀರ್‌ಸಾಬಿ, ಅಬ್ದುಲ್‌ನಬಿಸಾಬಿ ಸಹ.	ಮೈಸೂರು ಕೃಷ್ಣರಾಜಮೊಹಲ್ಲಾ ಸುಣ್ಣದಕೇರಿಯಲ್ಲಿರುವ ಕಂಚುಗಾರ ಖುರ್ದ‌ಸಾಬಿ ಮಕ್ಕಳು ಪೀರ್‌ಸಾಬಿ-ಅಬ್ದುಲ್‌ನಬಿಸಾಬಿ ಸಹ.	600 ರೂಪಾಯಿ ವಿಭಾಗ ಪತ್ರ.
18	ಡಿಟೋ	...	1	721	6—11—1906	15—11—1906	ಮೈಸೂರು ಮಂಡಿಮೊಹಲ್ಲಾ ತೊಗರಿಬೀದಿಯಲ್ಲಿರುವ ,ಲೇಟ್ ಮೀರ್ ಫಜಲೆ ಅಲ್ಲಿಸಾಬರ ಮಕ್ಕಳು ಮಹಮ್ಮದ್ ತಕ್ಕಿ ಇವರ ಖಾಸಾ ಅಕ್ಕ ಷಹರ್‌ಖಾನೊಬೇಗಂ ಸಹ.	ಡಿಟೋ	100 ಡಿಟೋ
19	ಡಿಟೋ	...	1	764	3—11—1906	21—11—1906	ಮೈಸೂರು ಮಂಡಿಮೊಹಲ್ಲಾದಲ್ಲಿ ಒಕ್ಕಲಿಗರ ವಾಲೇಕಾರ್ ತಿಂಮಣ್ಣನವರ ಮಗ ಜವಳಿ ಅಂಗಡಿ ತಿಂಮೈಯ್ಯ.	ಮೈಸೂರು ಲಷ್ಕರ್‌ಮೊಹಲ್ಲಾ ಹಳ್ಳದಬೀದೀಲಿರುವ ಕಿರಗಾಣಿಗರ ಲಕ್ಷಂಮನ ಮಗ ನಂಜಪ್ಪ.	75 ರೂಪಾಯಿ ಕ್ರಯ ಪತ್ರ.
20	ಡಿಟೋ	....	1	1092	16— 1—1907	31— 1—1907	ಮೈಸೂರು ಹಳೆ ಅಗ್ರಹಾರದಲ್ಲಿರುವ ಸ್ಮಾರ್ತಬ್ರಾಹ್ಮಣ ಶ್ರೀನಿವಾಸೈಯ್ಯನವರ ಹೆಂಡತಿ ಶೀತಮ್ಮ.	ಮೈಸೂರು ತಾಲ್ಲೂಕು ಇಲವಾಲದ ಹೋಬಳಿ ಚಿಕ್ಕನಹಳ್ಳಿ ದಾಖಲೆ ಮಲ್ಲೇಗವುಡನ ಕೊಪ್ಪಲುನಲ್ಲಿರುವ ಗಂಗಡಿಕಾರ ಮಂಚೇಗವುಡನ ಮಗ ಮರಿನಿಂಗ.	12 ಡಿಟೋ

ಕ್ರಮ ಸಂಖ್ಯೆ	ರಿಜಿಸ್ಟ್ರೇಷನ್ ಆಫೀಸುಗಳ ಹೆಸರು.	ಪುಸ್ತಕ ನಂಬರು	ದಸ್ತಾವೇಜಿನ ನಂಬರು	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
21	ಮೈಸೂರು ...	1	1903	15—6—1907	21—6—1907	ಕೃಷ್ಣರಾಜಮೊಹಲ್ಲಾ ಗೊಲ್ಲರಬೀದಿಯಲ್ಲಿರುವ ದೊಡ್ಡಮ್ಮನಸ್ವಂತ ಮಗಳ ಮಗ ರಾಚ, ಮೈನರ್ ಗಾರ್ಡಿಯನ್ ಚಿಕ್ಕಅಜ್ಜಿ ವೆಂಕಟಮ್ಮ.	ಮೈಸೂರು ಕೃಷ್ಣರಾಜಮೊಹಲ್ಲಾ ಜಟ್ಟಿಗಳ ಬೀದೀಲಿ ಗೊಲ್ಲರ ಈರತ್ತೈಯ್ಯನ ಮಗ ಪುಟ್ಟಣ್ಣ.	50 ರೂಪಾಯಿ ಭೋಗ್ಯದ ಅನ್ವಾದಿ ಪತ್ರ.
22	ಡಿಟೋ ...	1	3	9—3—1905	10—7—1905	ಮದರಾಸಿನಿಂದ ಮೈಸೂರಿಗೆ ಬಂದಿರುವ ಸಿ. ರಾಮಸ್ವಾಮಿನಾಯಿಡು ಮಗ ಸಿ. ರಾಜಗೋಪಾಲನಾಯಿಡು.	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಅರಮನೇಲಿ ಇಸ್ತ್ರಿ ಕೆಲಸ ಮಾಡುವ ಮರಿಪಿಳ್ಳೆ ಮಗ ರಾಮಲಿಂಗಂಪಿಳ್ಳೆ.	ಕರಾರು ಕಿಂಮತ್ತು ನಮೂದಿಲ್ಲ.
23	ಮಂಡ್ಯ ...	2	2	18—4—1906	30—8—1906	ಬೋರೇಗವುಡ, ಮಳವಳ್ಳಿ ತಾಲ್ಲೂಕು ಚಿಕ್ಕರಸಿನಕೆರೆ ಕ್ಯಾತಗಲ್ವಿರ ದಾಖಲೆ ವಡ್ಡರದೊಡ್ಡಿ ಗ್ರಾಮದ ಬೋರೇಗವುಡನ ಮಗ	ಕೆರಿ ಸುಬ್ಬೈಯ್ಯ, ಮಳವಳ್ಳಿ ತಾಲ್ಲೂಕು ಚಿಕ್ಕರಸಿನಕೆರೆ ಸರ್ವಮಾನ್ಯ ಅರುವನಹಳ್ಳಿ ಗ್ರಾಮದಲ್ಲಿರುವ ಕೆಂಪೈಯ್ಯನ ಮಗ.	90 ರೂಪಾಯಿ ಕ್ರಯ ಪತ್ರ.
24	ಡಿಟೋ ...	2	5	12—5—1906	30—10—1906	ಧಾಟಿ ತಿರುವೆಂಕಟಾಚಾರ್ ಪುರುಷೋತ್ತಮಂಣ ಇವರ ತಮ್ಮ ನರಸಿಹ್ಮಾಚಾರ್, ಬೆಂಗಳೂರಲ್ಲಿರುವ ಧಾಟಿ ಶ್ರೀನಿವಾಸೈಯ್ಯಂಗಾರ್ರು ಮಕ್ಕಳು.	ಶ್ರೀರಂಗಪಟ್ಟಣದಲ್ಲಿರುವ ವೀರಾಂಬುದಿ ಶ್ರೀರಂಗರಾಜರ ಮಗ ವೀರಾಂಬುದಿ ಶ್ರೀನಿವಾಸೈಯ್ಯಂಗಾರ.	ಗುತ್ತಿಗೆ ಪತ್ರ.
25	ಡಿಟೋ ...	2	9	15—3—1906	29—11—1906	ಮಂಡ್ಯ ತಾಲ್ಲೂಕು ಕೊಪ್ಪದ ಗ್ರಾಮದಲ್ಲಿರುವ ಕೆರೆಗೋಡು ವೆಂಕಟಪ್ಪನವರ ಮಗ ದಾಸಪ್ಪ.	ಕೊಪ್ಪದ ಹೋಬಳಿ ಖಾಯಂಗುತ್ತ ಆಬಲವಾಡಿಯಲ್ಲಿರುವ ಕೆಂಚೇಗವುಡನಮಗಚಿಕ್ಕತಿಮ್ಮೇಗವುಡ.	175 ರೂಪಾಯಿ ಕ್ರಯ.
26	ಡಿಟೋ ...	1	1471	2—4—1907	3—4—1907	ಮಂಡ್ಯ ತಾಲ್ಲೂಕು ತೈಲೂರಿನಲ್ಲಿರುವ ವೆಂಕಟಬೋಡೇಗವುಡನ ಮಗ ದಾಸೇಗವುಡ.	ಡಿಟೋ ಸ್ಥಳದಲ್ಲಿರುವ ಕಾಡೇಗವುಡನ ತಿಮ್ಮಯ್ಯನವರ ಮಗ ಗಿರಿಗಡವು.	100 ಡಿಟೋ
27	ಮಳವಳ್ಳಿ ...	1	190	15—7—1906	26—7—1906	ಕಾಗೇಪುರದಲ್ಲಿರುವ ಬೆಟ್ಟೆಸಿದ್ದೆಗವುಡನ ಮಗ ಮರಲಿಂಗೇಗವುಡ.	ಮಿಕ್ಕೆರೆ ಗ್ರಾಮದ ದಾಖಲೆ ಕಾಗೆಪುರದಲ್ಲಿರುವ ಗಂಗಡಿಕಾರ ಚಿಕ್ಕಬೋರನ ಹೆಂಡತಿ ಸಿದ್ದಿ.	100 ರೂಪಾಯಿ ದಾನ

28	ಡಿಟೋ	...	1	638	15—10—190	20—10—1906	ಚಿಕ್ಕ ಅಬ್ಬಾಗಲು ಗ್ರಾಮದಲ್ಲಿರುವ ನಂಜಪ್ಪನ ಮಗ ಮಲ್ಲಪ್ಪ ವಗೈರೆ.	ರಾಗಿಬೊಮ್ಮನಹಳ್ಳಿ ಮಹಂತವಡೇರ ವೀರಪ್ಪನ ಮಗ ಮರಿದೇವರು.	100 ರೂಪಾಯಿ ಆಧಾರ.
29	ಡಿಟೋ	...	4	18	20—5—1907	23—5—1907	ರಾಗಿಬೊಮ್ಮನಹಳ್ಳಿ ಸಿದ್ದೇಗವುಡನ ಮಲ್ಲಪ್ಪನ ಮಗಳು ಈರಮ್ಮ.	ರಾಗಿಬೊಮ್ಮನಹಳ್ಳಿ ಸೆರ್ವೆಗಾರ ಮಾದಪ್ಪನ ಮಗ ಚನ್ನಬಸಪ್ಪ ಉರುಫ್ ಮರಿದೇವರು.	150 ರೂಪಾಯಿ ಜೀವನಾಂಶ ಪತ್ರ
30	ನಂಜನಗೂಡು	...	1	1016	5—12—1905	5—12—1905	ಮೊಹದೀನ್‌ಸಾಬಿ ಉರುಫ್ ಚಿಂಣಾಸಾಬಿ.	ವೀರಮ್ಮ ...	50 ರೂಪಾಯಿ ಕ್ರಯ.
31	ಡಿಟೋ	...	1	1762	27—11—1905	16—3—1906	ಬಸವ ಉರುಫ್ ಗುಂಡ ...	ರಾಚಶೆಟ್ಟಿ ...	30 ಡಿಟೋ
32	ಡಿಟೋ	...	1	625	8—10—1906	15—10—1906	ಗೋಪಾಲಚಕ್ರವರ್ತ್ಯಾಚಾರ್ರು...	ವೆಂಕಟಸುಬ್ಬಯ್ಯ ...	50 ರೂಪಾಯಿ ಆಧಾರ.
33	ಯಡತೊರೆ	..	1	1881	4—5—1907	13—5—1907	ಸಾಲಿಗ್ರಾಮದಲ್ಲಿರುವ ಆದಿರಾಜಯ್ಯನವರ ಮಗ ಬ್ರಹ್ಮಯ್ಯ, ನೇಮೈಯ್ಯ.	ಸಾಲಿಗ್ರಾಮದಲ್ಲಿರುವ ಬ್ರಂಹಯ್ಯ, ನೇಮಯ್ಯ.	500 ರೂಪಾಯಿ ಪರಿವರ್ತನೆ ಮತ್ತು ಜೀವನಾಂಶದ ದಸ್ತಾವೇಜು.
34	ಡಿಟೋ	...	1	1723	13—2—1907	4—5—1907	ಎಡತೊರೆ ತಾಲ್ಲೂಕು ಶಾಬಾಳು ಗ್ರಾಮದಲ್ಲಿರುವ ಮರಿಯ, ಆನಿಗವುಡ.	ಎರತೊರೆ ತಾಲ್ಲೂಕು ಮಿರ್ಲೆ ಹೋಬಳಿ ಶಾಬಾಳು ಗ್ರಾಮದಲ್ಲಿ ಮುಕ್ತುಂಸಾಬಿ ಉರಫ್ ಜಂನಾಸಾಬಿ.	200 ರೂಪಾಯಿ ಕ್ರಯ.
35	ಡಿಟೋ	...	1	826	15—1—1907	22—1—1907	ಎಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿರುವ ಚಲುವರಾಯ.	ಎಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿರುವ ಮಹಮದ್ ಷರೀಫ್.	ಗುತ್ತಿಗೆ ಕರಾರು ಕಿಮ್ಮತ್ತು ನಮೂದಿಲ್ಲ.
36	ಡಿಟೋ	...	1	1177	10—3—1907	12—3—1907	ಎಡತೊರೆ ತಾಲ್ಲೂಕು ಹಂಪಾಪುರದಲ್ಲಿರುವ ಸವಡಿ ಸಪ್ಪನಾಯಿಕ.	ಮೈಸೂರು ರಾಮಸ್ವಾಮೈಯ್ಯಂಗಾರ್ರ ಮಕ್ಕಳು ರಂಗೈಯ್ಯಂಗಾರ್.	50 ರೂಪಾಯಿ ಆಧಾರ.
37	ಡಿಟೋ	...	1	1063	22—2—1907	26—2—1907	ಎಡತೊರೆ ತಾಲ್ಲೂಕು ಅರ್ಜನಹಳ್ಳಿಯಲ್ಲಿರುವ ಜವರನ ಹೆಂಡತಿ ಸಿದ್ದಿ, ಮಂಚ ಸಹ	ಡಿಟೋ	150 ರೂಪಾಯಿ ಆಧಾರ.
38	ಡಿಟೋ	...	1	722	17—6—1906	12—12—1906	ಎಡತೊರೆ ತಾಲ್ಲೂಕು ಚಂದಗಾಲು ಗ್ರಾಮದಲ್ಲಿರುವ ಚನ್ನೈಯ್ಯ.	ಮೈಸೂರಲ್ಲಿರುವ ಅಶ್ವತ್ಥ ಕೃಷ್ಣಶಾಸ್ತ್ರಿ.	20 ರೂಪಾಯಿ ಭೋಗ್ಯ.

ಎಸ್. ಪಿ. ರಾಜಗೋಪಾಲಾಚಾರ್, ಛಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆಫೀಸಿನಿಂದ.

ತಾರೀಖು 2ನೆ ಅಕ್ಟೋಬರು 1909.

ಆದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನ್ಮೆಂಟಿನಿಂದ ಸಾದರಾದ 29—6—1901ನೆ ಮ ಕರ್ನಂ 17691-L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್ಟೆನ್ಷನ್ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1909ನೆ ಇಸವಿ ಅಕ್ಟೋಬರು ತಾರೀಖು 11 ಮತ್ತು 12 ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡ್ ಸವಾಲು ಮೂಲಕ ಪಡೆದುಕೊಳ್ಳಲು ಇಷ್ಟವುಳ್ಳವರ್ರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡ್ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಬಳಪಟ್ಟು ಛಡ್ ಸವಾಲಿನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮಾರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಬಸವನಗುಡಿ ಎಕ್ಸ್ಟೆನ್ಷನ್.		
4ನೆ ಬ್ಲಾಕ್	23	100 × 30
,,	87	
,,	89	
,,	90	
,,	91	
,,	100	
,,	136	
,,	137	
,,	138	
ಮಲ್ಲೇಶ್ವರ ಎಕ್ಸ್ಟೆನ್ಷನ್.		
ಹಿಂದೂ ಬ್ಲಾಕ್	521	150 × 30
,,	525	
,,	526	
,,	349	100 × 30
,,	350	
,,	357	
,,	358	
,,	434	
,,	435	
,,	436	
,,	57	
ಸಂಪಿಗೆ ರಸ್ತೆ	282	120 × 30
,,	283	
,,	284	
,,	285	
ಮಹಮ್ಮದೀಯರ ಬ್ಲಾಕ್	146	100 × 30
,,	187	
,,	188	
,,	189	
,,	190	
,,	169	
ಕಾಟೇಜ್ ಸೈಟ್	29	150 × 187
,,	113–114	214 × 160
ಬ್ರಾಹ್ಮಣರಬ್ಲಾಕ್ ಮನೆಸೈಟ್	309–310–311–312	100 × 30

1. ಹರಾಜು ಖೈದಾದ ಕೂಡಲೆ ಛಡ್ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡಲೆ ದುಸರಾ ಹರಾಜು ಮಾಡಿಸಿ ಬರುವ ನುಕ್ಸಾನಿಗೆ ಮೊದಲು ಛಡ್ ಸವಾಲ್ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡ್ಸವಾಲ್ ಮೊಬಲಗು ಭರ್ತಿಯಾಗಿ ಕೂಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್ಸವಾಲ್ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ತೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್ಸವಾಲ್ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡಲೆ ಸೈಟನ್ನ ಛಡ್ಸವಾಲ್ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮೊಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೇನಾ ಪಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡುವ ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ನಿರ್ಮಾಣಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿಗೆಯ ಮೇಲೆ ಡೆಪ್ಯುಟಿ ಕಮೀಷನರವರು ಮಂಜೂರ್ಮಾಡಿದ ಹೊರ್ತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳಿದಾರನು ಮತ್ತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳಿದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕೆ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರ್ರಾಗುವದಿಲ್ಲ.

ಎಲ್. ಸುಬ್ಬರಾವ್, ವೈಸ್ ಪ್ರೆಸಿಡೆಂಟ್.

ಮೈಸೂರು ಗವರ್ನಮೆಂಟ ಸೆಂಟ್ರಲ್ ಬುಕ್ಕು ಡಿಪ್ಪೋ.

ಸ್ 1909ನೆ ಇಸವಿ ಅಕ್ಟೋಬರ ತಾರೀಖು 4.

ಬೆಂಗಳೂರು ಗೌರ್ನಮೆಂಟ ಸೆಂಟ್ರಲ್ ಬುಕ್ಕು ಡಿಪ್ಪೋವಿನಲ್ಲಿ ದೊರಿಯತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು	ಪುಟಗಳ ಸಂಖ್ಯೆ	ಖರೀದಿ			ಪೋಸ್ಟೇಜ್ ಮತ್ತು ಪ್ಯಾಕಿಂಗ್	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ 1877ನೆ ಇಸವಿ ರಿಜಸ್ಟ್ರೇಷ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸ್1879ನೆ ಇಸವಿಯ 12ನೆ ನಂಬರ ಆಕ್ಟು.	36	0	11	0	1	0
4	1871ನೆ ಇಸವಿಯ ದನಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು)	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ (1904)	258	0	12	0	4	0
8	ಸಿಟಿ ಪ್ಲೇಗ ರೆಗ್ಯುಲೇಷ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟು ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟು...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	,, ಲಿಮಿಟೇಷ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	,, ರಿಜಿಸ್ಟ್ರೇಷ್ ಆಕ್ಟು	37	0	4	0	2	0
18	,, ಟೆಲಿಗ್ರಾಫ್ ಆಕ್ಟು	18	0	1	6	1	0
19	,, ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ್ ಇಂಪ್ರೂವ್ಮೆಂಟ್ ಆಕ್ಟು (ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಜಿಷ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್ವೆಗಳ ರೆಗ್ಯುಲೇಷ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೋಲೀಸ ರೂಲ್ಸು	15	0	1	0	0	6
32	ಗ್ರಾಮ ಲಿಖಿತಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷ್ 1883ನೆ ಇಸವಿಯ Iನೆ ರೆಗ್ಯುಲೇಷ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷ್, ಛಾಪಖಾನೆಗಳನ್ನು, ನ್ಯೂಸಪೇಪರಗಳನ್ನು ಕ್ರಮಪಡಿಸತಕ್ಕ ಬಗ್ಗೆ ಉಂಟಾದ ರೆಗ್ಯುಲೇಷ್. ಮತ್ತು IIನೇ ನಂ. ರೆಗ್ಯುಲೇಷ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷ್.	4	0	0	6	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6
38	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗೌರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
43	1895ನೆ ಇಸವಿ IIIನೆ ನಂ ರೆಗ್ಯುಲೇಷನ್ ಮೈಸೂರು ಕಂಪನಿಗಳ ರೆಗ್ಯುಲೇಷನ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷನ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟಿನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಶೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಯೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್, ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟೋ 1905 ...	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 19' 6ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟೋ 1907	143	1	0	0	6	0
56	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸರ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟ್ಯಾಂಪು ರೆಗ್ಯುಲೇಷರ್.	103	0	10	0	2	0
59	ಇಸ್ತಿಹಾರ್ನಾಮೆ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.— ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡಾದುದು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908.	203	1	0	0	6	0
62	ಮೈಸೂರು ಕೋಡು ಸಂಪುಟ I.	637	4	0	0	6	0
63	1909ನೆ ಇಸವಿಯ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳು ...	13	0	1	0	1	0
64	1908ನೆ ಇಸವಿಯ Vನೆ ರೆಗ್ಯುಲೇಷರ್—ಮೈಸೂರು ಪೋಲೀಸ್ ರೆಗ್ಯುಲೇಷರ್.	93	0	4	0	1	6
65	1908ನೆ ಇಸವಿಯ IVನೆ ರೆಗ್ಯುಲೇಷರ್—ಮೈಸೂರು ಸೀಮೆಯ ಗ್ರಾಮ ನೌಕರಿಗಳ ರೆಗ್ಯುಲೇಷರ್.	30	0	1	0	1	0

ರೆಜಿಸ್ಟ್ರೇಷರ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 21, ಸನ್ 1909.

II ನೇ ಭಾಗ.

ಇಂಡ್ಯಾ ಗವರ್ನ್ಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಡಿಪಾರ್ಟ್ಮೆಂಟ್.

ಇಸ್ತಿಹಾರ್ನಾಮೆ.

ನಂ. 250, ತಾರೀಖು 11ನೆ ಅಕ್ಟೋಬರ್ 1909ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳಲ್ಲಿ ರೀ ಸರ್ವೆ ಕೆಲಸಗಳು ಸನ್ 1909ನೆ ಇಸವಿ ನವಂಬರು ತಾರೀಖು 15 ಅಥವಾ ಆ ಸುಮಾರಿಗೆ ಪ್ರಾರಂಭವಾಗುವ ಫೀಲ್ಡ್ ಸೀಜನ್ನ ಕಾಲದಲ್ಲಿ ನಡಿಸಲ್ಪಡುವವು.

ನಂಬರ್.	ತಾಲ್ಲೂಕುಗಳು	ಡಿಸ್ಟ್ರಿಕ್ಟು.
	ರೀ ಸರ್ವೆ.	
1	ಕೊಪ್ಪ ತಾಲ್ಲೂಕು	ಕಡೂರು
2	ಲೇಟ್ ಬಾಣಾವರದ ತಾಲ್ಲೂಕು ಪೈಕಿ ಉಳದಿರುವ ಭಾಗ	ಡಿಟೋ
3	ತರೀಕೆರೆ ತಾಲ್ಲೂಕಿನಲ್ಲಿ ಬಾಕಿ ಇರುವ ಪ್ರದೇಶ	ಡಿಟೋ
4	ತೀರ್ಥಹಳ್ಳಿ ತಾಲ್ಲೂಕು ಡಿಟೋ	ಶಿವಮೊಗ್ಗ
5	ಲೇಟ್ ಚಿಕ್ಕನಾಯಿಕನಹಳ್ಳಿ ತಾಲ್ಲೂಕಿನಲ್ಲಿ ಉಳದಿರುವ ಪ್ರದೇಶ	ತುಮಕೂರು
6	ಅರಶೀಕೆರೆ ತಾಲ್ಲೂಕು (ಲೇಟ್ ಹಾರನಹಳ್ಳಿ)	ಹಾಸನ
	ವಾಟರ್ ರೀ ಕ್ಲಾಶಿಫಿಕೇಷನ್.	
1	ಮದ್ದಗಿರಿ ತಾಲ್ಲೂಕಿನಲ್ಲಿ ಬಾಕಿ ಇರುವ ಪ್ರದೇಶ	ತುಮಕೂರು
2	ಲೇಟ್ ಗುಡಿಬಂಡೆ ತಾಲ್ಲೂಕು	ಕೋಲಾರ
3	ಬೇಲೂರು ತಾಲ್ಲೂಕು	ಹಾಸನ

ಡಿ. ಶ್ಯಾಮರಾವ್,

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂಟ್ ಸೂಪರಿಂಟೆಂಡೆಂಟ್

ಫಾರೆಸ್ಟು ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟು.	ಕೋಠಿ.	ಹರಾಜು-ತಾರೀಖು		ಹರಾಜು ಮಾಡತಕ್ಕ ಟನ್ನುಗಳು.	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್ ತಾರೀಖು	18	200	
2	ಡಿಟೋ ...	ಸಾಗರ ...	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟನ್ನುಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್ ತಾರೀಖು	2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟನ್ನುಗಳು ಕೋಲಾರದ 5 ಟನ್ನುಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ ...		2,400	

ಎಂ. ಮುತ್ತಣ್ಣ,
ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ತಾರೀಖು 28ನೆ ಸೆಪ್ಟಂಬರ್ 1909.

ಸೂಳೆಕೆರೆ, ಶಿವಮೊಗ್ಗ.

ಸನ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 1864—Ft. 4-09-3, 28-8-09, 2-9-09ನೆ ಇಸವಿಯ ಗೆಜೆಟಿನಲ್ಲಿ ಫಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ, ಗ್ರಾಮ.	ಅಂದಾಜು ವಿಸ್ತೀರ್ಣ.	[illegible] ಹೆಸರು.	ಸ್ಥಳ, ಚಕ್ಕುಬಂದಿ.
ಶಿವಮೊಗ್ಗ.	ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳು.	12,522 ಎಕರೆ. ಅಥವಾ 19 ಚ. ಮೈ. 362 ಎಕರೆ.	ಸೂಳೆಕೆರೆ ಪ್ಲಾಂ.	ಚನ್ನಗಿರಿ-ಮಳೇಬೆನ್ನೂರು ರಸ್ತೆಯ ವಾಯುವ್ಯದಲ್ಲಿರುವ ಡಿಸ್ಟ್ರಿಕ್ಟು ಜಂಗಲಿ. ಉತ್ತರಕ್ಕೆ— ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 9ರ ಈಶಾನ್ಯ ಮೂಲೆಯಿಂದ ಲೈನ್ ಹೊರಟು ಪೂರ್ವದಿಕ್ಕಾಗಿ 4 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ ದಕ್ಷಿಣಗಡಿಯನ್ನು ಅನುಸರಿಸಿ ದಾಗಿನಕಟ್ಟೆ, ಬುಳ್ಳನಾಯ್ಕನಹಳ್ಳಿ, ಶೃಂಗಾರಬಾಗ್ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ನಂತರ ಉತ್ತರದಿಕ್ಕಾಗಿ 2 ಫರ್ಲಾಂಗು 3 ಸರಪಣಿಗಳು ದಾಗಿನಕಟ್ಟೆ, ಶೃಂಗಾರಬಾಗ್, ಗಡಿಯನ್ನು ಅನುಸರಿಸಿ, ಶೃಂಗಾರಬಾಗಿನ ಸರ್ವೆ ನಂಬರು 17ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 3 ಫರ್ಲಾಂಗುಗಳು ಶೃಂಗಾರಬಾಗ್ ಸರ್ವೆ ನಂಬರು 16ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 25ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ

ದಿಕ್ಕಾಗಿ 1 ಫರ್ಲಾಂಗು 8 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರು 16ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 24ರ ನೈರುತ್ಯಮೂಲೆಗೆ ಸೇರುತ್ತದೆ. ಪುನಃ ಅದೇ ದಿಕ್ಕಾಗಿ 4 ಫರ್ಲಾಂಗು 5 ಸರಪಣಿಗಳು ಸದರಿ ಸರ್ವೆ ನಂಬರು 16ರಲ್ಲಿ ಹಾದು, ಸರ್ವೆ ನಂಬರು 31ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 2 ಫರ್ಲಾಂಗು 7 ಸರಪಣಿಗಳು ಶ್ರಿಂಗಾರಬಾಗ್ ಸರ್ವೆ ನಂಬರು 16–15ರಲ್ಲಿ ಹಾದು, ವೈಲಪುರದ ಸರ್ವೆ ನಂಬರು 35ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಮೈಲಿ, 1 ಫರ್ಲಾಂಗು, 5 ಸರಪಣಿಗಳು ವೈಲಪುರದ ಸರ್ವೆ ನಂಬರು 28ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 26ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 3 ಫರ್ಲಾಂಗು 5 ಸರಪಣಿಗಳು, ಸದರಿ ಗ್ರಾಮದ ಸರ್ವೆ ನಂಬರು 25ರ ಪಶ್ಚಿಮಗಡಿಯನ್ನು ಅನುಸರಿಸಿ ವೈಲಿಪುರ, ಜನಕನಹಳ್ಳಿ, ಮೊಹರ್ದಿಪುರ ಕಾವಲ್ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಈಶಾನ್ಯವಾಗಿ 6 ಫರ್ಲಾಂಗು 3 ಸರಪಣಿಗಳು ವೈಲಿಪುರ ಸರ್ವೆ ನಂಬರು 25ರ ದಕ್ಷಿಣಗಡಿಯನ್ನು ಅನುಸರಿಸಿ ವೈಲಿಪುರ, ಮೊಹರ್ದಿಪುರ, ಹೊಸಹಳ್ಳಿ, ಗ್ರಾಮಗಳ ಮುಕುಪ್ಪೆ ಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ಲೈನ್ ಹೊರಟು ಆಗ್ನೇಯವಾಗಿ 3 ಫರ್ಲಾಂಗು 3 ಸರಪಣಿಗಳು ದಕ್ಷಿಣವಾಗಿ 3 ಫರ್ಲಾಂಗು 2 ಸರಪಣಿಗಳು ಪುನಃ ಆಗ್ನೇಯವಾಗಿ 1 ಮೈಲಿ, 7 ಫರ್ಲಾಂಗು ಸೂಳೆಕೆರೆಯ ಪಶ್ಚಿಮಗಡಿಯನ್ನು ಅನುಸರಿಸಿ ಮೊಹರ್ದಿಪುರ ಕಾವಲ್, ರುದ್ರಪುರ ಕಾವಲ್, ಮತ್ತು ಸೂಳೆಕೆರೆ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಆಗ್ನೇಯವಾಗಿ ಸುಮಾರು 6 ಫರ್ಲಾಂಗು ಸೂಳೆಕೆರೆ ಪಶ್ಚಿಮಗಡಿಯನ್ನು ಅನುಸರಿಸಿಯೂ, ನೈರುತ್ಯವಾಗಿ 4 ಫರ್ಲಾಂಗು ದಕ್ಷಿಣವಾಗಿ 3 ಫರ್ಲಾಂಗು ಅರಶಿನಗಟ್ಟ ಗ್ರಾಮದ ಉತ್ತರ ಮತ್ತು ಪಶ್ಚಿಮಗಡಿಯನ್ನು ಅನುಸರಿಸಿ ಅರಶಿನಗಟ್ಟ, ರುದ್ರಾಪುರ ಕಾವಲ್, ಸಿದ್ದಾಪುರ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಪೂರ್ವವಾಗಿ 2 ಫರ್ಲಾಂಗು, 5 ಸರಪಣಿಗಳು ಅರ್ಶಿನಗಟ್ಟ ಗ್ರಾಮದ ದಕ್ಷಿಣ ಗಡಿಯನ್ನು ಅನುಸರಿಸಿ, ಸಿದ್ದಾಪುರ, ಅರಶಿನಗಟ್ಟ, ಸೋಮಶೆಟ್ಟಿಹಳ್ಳಿ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ಅಲ್ಲಿಂದ ನೈರುತ್ಯ ಮತ್ತು ಆಗ್ನೇಯವಾಗಿ ಸುಮಾರು 1 ಮೈಲಿ 2 ಫರ್ಲಾಂಗುಗಳು ಸೋಮಶೆಟ್ಟಿಹಳ್ಳಿ ಪಶ್ಚಿಮಗಡಿಯನ್ನು ಅನುಸರಿಸಿ, ಸಿದ್ದಾಪುರ, ಸೋಮಶೆಟ್ಟಿಹಳ್ಳಿ, ಲಿಂಗದಹಳ್ಳಿ ಗ್ರಾಮಗಳ ಮುಕ್ಕಪ್ಪೆ ಬಾಂದಿನ (ವಾಯುವ್ಯ 26 ಸರಪಣಿಗಳ ದೂರದಲ್ಲಿ ಸಿದ್ದಾಪುರ ಸೋಮಶೆಟ್ಟಿಹಳ್ಳಿ ಗಡಿಯಲ್ಲಿನ ಒಂದು ಕೋಣಕ್ಕೆ ಸೇರುತ್ತದೆ.)

ದಕ್ಷಿಣಕ್ಕೆ—ಅಲ್ಲಿಂದ ಲೈನ್ ಹೊರಟು ವಾಯುವ್ಯವಾಗಿ 7 ಫರ್ಲಾಂಗು ಸಿದ್ದಾಪುರದ ಸರ್ವೆ ನಂಬರು 32ರಲ್ಲಿ ಹಾದು, ಸಿದ್ದಾಪುರ, ಲಿಂಗದಹಳ್ಳಿ, ಮದರನಾಯ್ಕನಹಳ್ಳಿ, ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 1 ಮೈಲಿ ಮದರನಾಯ್ಕನಹಳ್ಳಿ, ಸರ್ವೆ ನಂಬರು 16ರಲ್ಲಿ ಹಾದು, ನಂತರ ಪಶ್ಚಿಮವಾಗಿ 3 ಫರ್ಲಾಂಗು, 7 ಸರಪಣಿಗಳು, ನೈರುತ್ಯವಾಗಿ 3 ಫರ್ಲಾಂಗು, 2 ಸರಪಣಿಗಳು ವಾಯುವ್ಯವಾಗಿ 2 ಫರಲಾಂಗು ಮದರನಾಯ್ಕನಹಳ್ಳಿ, ಸರ್ವೆ ನಂಬರು 16ರ ಉತ್ತರ ಗಡಿಯನ್ನು ಅನುಸರಿಸಿ ಸದರಿ ನಂಬರಿನ ವಾಯುವ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಶುದ್ಧಪಶ್ಚಿಮವಾಗಿ 1 ಮೈಲಿ, 1 ಫರ್ಲಾಂಗು, 7 ಸರಪಣಿಗಳು ಕೊಮಾರನಹಳ್ಳಿ, ಸರ್ವೆ ನಂಬರು 29ರಲ್ಲಿ ಹಾದು, ಸದರಿ ಗ್ರಾಮದ 28ನೆ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು, 7 ಸರಪಣಿಗಳು ಕೊಮಾರನಹಳ್ಳಿ, ಸರ್ವೆ ನಂಬರು 28ರಲ್ಲಿ ಹಾದು, ಸರ್ವೆ ನಂಬರು 41ರ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ನೈರುತ್ಯವಾಗಿ 2 ಫರ್ಲಾಂಗು 5 ಸರಪಣಿಗಳು ಸದರಿ ಗ್ರಾಮದ ಸರ್ವೆ ನಂಬರುಗಳು 41, 40, 38ರ ಪಶ್ಚಿಮಗಡಿಯನ್ನನುಸರಿಸಿ, ಸರ್ವೆ ನಂಬರು 38ರ ನೈರುತ್ಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಫರ್ಲಾಂಗು ಕೊಮಾರನಹಳ್ಳಿ ಸರ್ವೆ ನಂಬರು 37ರ ಪಶ್ಚಿಮಗಡಿಯನ್ನು ಅನುಸರಿಸಿ ಸದರಿ ನಂಬರಿನ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಅದೇದಿಕ್ಕಾಗಿ 1 ಮೈಲಿ ಕೊಮಾರನಹಳ್ಳಿ, ಸರ್ವೆ ನಂಬರು 28 ಮಲಿಗೇನಹಳ್ಳಿ ಸರ್ವೆ ನಂಬರು 16ರಲ್ಲಿ ಹಾದು, ಮಲಿಗೇನಹಳ್ಳಿ ಸರ್ವೆ ನಂಬರು 30ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 1 ಫರ್ಲಾಂಗು 5 ಸರಪಣಿಗಳು ಮಲಿಗೇನಹಳ್ಳಿ ಸರ್ವೆ ನಂಬರು 16–9ಗಳಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 28ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಆಗ್ನೇಯವಾಗಿ 5 ಫರ್ಲಾಂಗು ಸದರಿ ಗ್ರಾಮದ ಸರ್ವೆ ನಂಬರು 9ರಲ್ಲಿ ಹಾದು ಗೂಣದಕಟ್ಟೆಯ ಉತ್ತರಗಡಿಯಲ್ಲಿ ಒಂದು ಕೋಣಕ್ಕೆ ಸೇರುತ್ತದೆ. ಅಲ್ಲಿಂದ ನೈರುತ್ಯವಾಗಿಯೂ, ದಕ್ಷಿಣವಾಗಿಯೂ, ಸುಮಾರು 3 ಮೈಲಿ, 3 ಫರ್ಲಾಂಗು ನೈದನಕಲ್ಲಹಳ್ಳಿ ಉತ್ತರಗಡಿಯನ್ನು ಅನುಸರಿಸಿ ತ್ಯಾಗದಕಟ್ಟೆ ಸರ್ವೆ ನಂಬರು 6ರ ಆಗ್ನೇಯಮೂಲೆಗೆ ಸೇರುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಲೈನ್ ಹೊರಟು ಈಶಾನ್ಯವಾಗಿ 6 ಫರಲಾಂಗು 3 ಸರಪಣಿಗಳು ತ್ಯಾಗದಕಟ್ಟೆ ಸರ್ವೆ ನಂಬರು 22ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 20ರ(ಕೆರೆ) ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 1 ಫರ್ಲಾಂಗು, 8 ಸರಪಣಿಗಳು ಸದರಿ ಸರ್ವೆ ನಂಬರಿನ ಪೂರ್ವಗಡಿಯನ್ನು ಅನುಸರಿಸಿ ಸದರಿ ನಂಬರಿನ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 4 ಫರ್ಲಾಂಗುಗಳು ಸರ್ವೆ ನಂಬರು 22ರಲ್ಲಿ ಹಾದು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಪೂರ್ವ ಉತ್ತರ, ಪಶ್ಚಿಮವಾಗಿ ಸುಮಾರು 2 ಮೈಲಿ, 3 ಫರ್ಲಾಂಗು ಹಟ್ಟಿಹಾಳ್ ಗ್ರಾಮದ ಸರ್ವೆ ನಂಬರು 34ರ ದಕ್ಷಿಣ, ಪೂರ್ವ ಮತ್ತು ಉತ್ತರಗಡಿಗಳನ್ನು ಅನುಸರಿಸಿ ಸದರಿ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರದಲ್ಲಿರುವ ಸ್ಥಳಕ್ಕೆ ಸೇರುತ್ತದೆ. ಅಲ್ಲಿಂದ ಉತ್ತರಕ್ಕೆ 4 ಫರ್ಲಾಂಗುಗಳು ಚೀಲಾಪುರದ ಸರ್ವೆ ನಂಬರು 8ರಲ್ಲಿ ಹಾದು ಸದರಿ ಗ್ರಾಮದ ಉತ್ತರಗಡಿಯಲ್ಲಿ ಸರ್ವೆ ನಂಬರು 10ರ ಈಶಾನ್ಯಮೂಲೆಗೆ ಪೂರ್ವಕ್ಕೆ 1 ಫರ್ಲಾಂಗು ದೂರವಿರುವ ಸ್ಥಳಕ್ಕೆ ಸೇರುತ್ತದೆ. ನಂತರ ವಾಯುವ್ಯವಾಗಿ ಸುಮಾರು ಒಂದು ಮೈಲಿ ಫಾಸಲೆ ಬೈರನಹಳ್ಳಿ ಸರ್ವೆ ನಂಬರು 7ರಲ್ಲಿ ಹಾದು ಬೈರನಹಳ್ಳಿ ಸರ್ವೆ ನಂಬರು 8ರ ಈಶಾನ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಉತ್ತರವಾಗಿ 6 ಫರ್ಲಾಂಗು 8 ಸರಪಣಿಗಳು ಬೈರನಹಳ್ಳಿ ಸರ್ವೆ ನಂಬರು 7, ಚನ್ನೇನಹಳ್ಳಿ ಸರ್ವೆ ನಂಬರು 23ರಲ್ಲಿ ಹಾದು ಚನ್ನೇನಹಳ್ಳಿ, ಕುಳಗಟ್ಟ, ನಿಲುವಗಲ್ಲು ಮತ್ತು ಕಂಚುಗಾರನಹಳ್ಳಿ ಗ್ರಾಮಗಳ ನಾಗುಪ್ಪೆ ಬಾಂದಿಗೆ ಸೇರುತ್ತದೆ. ನಂತರ ವಾಯುವ್ಯವಾಗಿ 1 ಮೈಲಿ, 3 ಫರ್ಲಾಂಗು, 5 ಸರಪಣಿಗಳು, ಕುಳಗೆಟ್ಟ, ಕಂಚುಗಾರನಹಳ್ಳಿ ಗಡಿಯನ್ನು ಅನುಸರಿಸಿ ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ವಾಯುವ್ಯವಾಗಿ 1 ಫರ್ಲಾಂಗು, 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 44ರ ಪೂರ್ವ ಗಡಿಯನ್ನು ಅನುಸರಿಸಿ 143ರ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 7 ಫರ್ಲಾಂಗುಗಳು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 34ರ ನೈರುತ್ಯಮೂಲೆಗೆ ಸೇರುತ್ತದೆ. ಅಲ್ಲಿಂದ ಆಗ್ನೇಯವಾಗಿ 1 ಮೈಲಿ, 3 ಫರ್ಲಾಂಗು, 5 ಸರಪಣಿಗಳು ಕಂಚುಗಾರನಹಳ್ಳಿ ಸರ್ವೆ ನಂಬರು 33, ನಿಲುವಗಲ್ಲು ಸರ್ವೆ ನಂಬರು 15 ಇವುಗಳಲ್ಲಿ ಹಾದು ನಿಲುವಗಲ್ಲು ಸರ್ವೆ ನಂಬರು 14ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂಬರು 14–13ರ ದಕ್ಷಿಣಗಡಿಯನ್ನು ಅನುಸರಿಸಿ 13ನೆ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅಲ್ಲಿಂದ ಈಶಾನ್ಯವಾಗಿ 5 ಫರ್ಲಾಂಗು, 5 ಸರಪಣಿಗಳು, ನಿಲುವಗಲ್ಲು ಸರ್ವೆ ನಂಬರು 15ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 46ರ ನೈರುತ್ಯಮೂಲೆಗೆ ಸೇರುತ್ತದೆ. ನಂತರ ಈಶಾನ್ಯವಾಗಿ 5 ಸರಪಣಿಗಳು ಸರ್ವೆ ನಂಬರು 48ರ ದಕ್ಷಿಣಗಡಿಯನ್ನು ಅನುಸರಿಸಿ ಸದರಿ ನಂಬರಿನ ಆಗ್ನೇಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 7 ಸರಪಣಿಗಳು ನಿಲುವಗಲ್ಲು ಸರ್ವೆ ನಂಬರು 36ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 47ರ ಆಗ್ನೇಯಮೂಲೆಗೆ ಸೇರುತ್ತದೆ. ಅಲ್ಲಿಂದ ವಾಯುವ್ಯವಾಗಿ 7 ಫರ್ಲಾಂಗು ಸರ್ವೆ ನಂಬರು 36ರಲ್ಲಿ ಹಾದು ಸರ್ವೆ ನಂಬರು 39ರ ಈಶಾನ್ಯಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ ಸುಮಾರು 7 ಫರ್ಲಾಂಗು ನಿಲುವಗಲ್ಲು ಸರ್ವೆ ನಂಬರು 36 ಬುಳ್ಳನಾಯ್ಕನಹಳ್ಳಿ ಸರ್ವೆ ನಂಬರು 11ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 19ರ ಈಶಾನ್ಯ ಮೂಲೆಗೆ ಸೇರುತ್ತದೆ. ನಂತರ ಅದೇ ದಿಕ್ಕಾಗಿ 3 ಫರ್ಲಾಂಗು, 5 ಸರಪಣಿಗಳು, ಬು

ಳನಾಯ್ಕನಹಳ್ಳಿ ಸರ್ವೆ ನಂಬರಿನ 11ರಲ್ಲಿ ಹಾದು, ಸದರಿ ಗ್ರಾಮದ ಸರ್ವೆ ನಂಬರು 10ರ ಆಗ್ನೇಯ ಮೂಲೆಗೆ ಸೇರುತ್ತದೆ. ನಂತರ ಉತ್ತರವಾಗಿ 3 ಫರ್ಲಾಂಗು, 3 ಸರಪಣಿಗಳು ಸರ್ವೆ ನಂಬರು 10 ಮತ್ತು 9ರ ಪೂರ್ವಗಡಿಯನ್ನು ಅನುಸರಿಸಿ ಹೊರಟ ಸ್ಥಳಕ್ಕೆ ಹೋಗಿ ಸೇರುತ್ತದೆ.

ಬೆಂಕೇನಹಳ್ಳಿ ಗ್ರಾಮದ ಇದರಡಿ ಕಂಡ ಜಮೀನುಗಳನ್ನು ಈ ಫಾರೆಸ್ಟು ತಾಕಿಗೆ ಆವರಣಗಳಾಗಿ ಎಣಿಸತಕ್ಕದ್ದು :—

ಸರ್ವೆ ನಂ.	ವಿಸ್ತೀರ್ಣ.	ತರಗತಿ.	ಸರ್ವೆ ನಂ.	ವಿಸ್ತೀರ್ಣ.	ತರಗತಿ.
1	26·4	ಖುಷ್ಕಿ	17	12·20	ಖುಷ್ಕಿ
2	29·22	ಡಿಟೋ	18	336·6	ಡಿಟೋ
3	25·28	ಇದರಪೈಕಿ 1·15 ತರಿ	19	5·37	(ಗೋಮಾಳ)
4	10·1	ಖುಷ್ಕಿ	20	10·7	ಡಿಟೋ
6	20·1	ಡಿಟೋ	21	12·15	ಡಿಟೋ
7	32·38	ಡಿಟೋ	22	5·25	ಡಿಟೋ
8	8·16	ಡಿಟೋ	23	14·11	ಡಿಟೋ
9	5·23	ಡಿಟೋ	24	32·1	ಡಿಟೋ
10	19·30	ಡಿಟೋ	25	15·15	ಡಿಟೋ
11	20·27	ಡಿಟೋ	26	13·10	ಡಿಟೋ
12	25·20	ಡಿಟೋ	28	16·15	ಡಿಟೋ
15	6·3	ಡಿಟೋ	29	·26	ಡಿಟೋ
16	15·17	ಡಿಟೋ			

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮು ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮೆಯಲ್ಲಿ ನಮೂದಿಸಿರುವ ಜಮೀನುಗಳಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. I. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(*a*) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ(ರ) ಹೆಸರು.	ಸ್ವತ್ತಿನ ತಪಶೀಲು. ಸರ್ವೆ ನಂಬರು ಮತ್ತು ಹಿಸ್ಸೆ ನಂಬರು.	ಖುಷ್ಕಿ, ತರಿ, ಬಾಗಾಯಿತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಅ.	ಸರ್ಕಾರಕ್ಕೆ (ಬ್ಯಾಂಕಿಗೆ) ಬರಬೇಕಾದ ಮೊಬಲಗು.
ಕಡೂರು.	ತರೀಕೆರೆ.	...	ಶಿವಗಂಗೆ.	ವಿ|| ಟಿ. ರಾಘವೇಂದ್ರಯ್ಯನವರು.	21	ತರಿ ...	10	25	44	7	ಅಸಲು ... ರೂ. 32,771 ಮತ್ತು ಶೇಕಡ 4 ರೂಪಾಯಿನಂತೆ ಬಡ್ಡಿ ಬರಬೇಕಾಗುತ್ತೆ.
						ಖುಷ್ಕಿ ...	2	21	2	9	
					22	ತರಿ ...	2	26	8	8	
						ಖುಷ್ಕಿ ...	1	29	1	8	
			ಮಾಚೇನಹಳ್ಳಿ.		37	ಡಿಟೋ ...	0	9	0	4	
						ಬಾಗಾಯಿತು	10	30	64	12	
					39	ಖುಷ್ಕಿ ...	4	20	5	0	
						ಬಾಗಾಯಿತು	1	16	5	0	
					38	ತರಿ ...	5	15	18	12	
						ಖುಷ್ಕಿ ...	2	0	2	4	
					41	ಡಿಟೋ ...	35	0	34	0	
					40	ಡಿಟೋ ...	36	0	37	0	

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ವೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ಮೊಕ್ಕಾಂ ಬೆಂಗಳೂರು, 16-18ನೆ ಅಕ್ಟೋಬರು 1909ನೆ ಇಸವಿ.

ನೋಟಿಫಿಕೇಷನ್ ನಂಬರು 558—C. S. 24.

ವೈಸೂರು ಗವರ್ನಮೆಂಟಿನವರು 14—10—1909ನೆ ಮುರ್ಕು FI. 2051-60—B. 19-09-2ನೆ ನಂಬರ್ ಹುಕುಂನಲ್ಲಿ ರಿಟೈರ್ಡ್ ಅವಮಲ್ದಾರ್ ವಿ|| ಟಿ. ವೆಂಕಟರಾಮೈಯ್ಯನವರನ್ನು ಕೋ ಆಪರೇಟಿವ್ ಸೊಸೈಟಿಗಳು ಅಂದರೆ ಪರಸ್ಪರ ಸಹಾಯ ಸಂಘಗಳ ಆನರರಿ ಆರ್ಗನೈಸರ್ ಆಗಿ ನೇಮಿಸಿರುತ್ತಾರೆ.

ಎಂ. ಶ್ಯಾಮರಾವ್,
ವೈಸೂರು ಗವರ್ನಮೆಂಟ್ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಪಿಸಿ ಆದ್ದು. [ಸಂ. 43

ಬೆಂಗಳೂರು, ಗುರುವಾರ, ನವೆಂಬರ್ ತಾ|| 4, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಡಿಪಾರ್ಟಮೆಂಟು.

ಇಸ್ತಿಹಾರ್ನಾಮೆ.

ನಂ. 250, ತಾರೀಖು 11ನೆ ಅಕ್ಟೋಬರ್ 1909ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳಲ್ಲಿ ರೀ ಸರ್ವೆ ಖಲಸಗಳು ಸನ್ 1909ನೆ ಇಸವಿ ನವಂಬರು ತಾರೀಖು 15 ಅಥವಾ ಆ ಸುಮಾರಿಗೆ ಪ್ರಾರಂಭವಾಗುವ ಫೀಲ್ಡ್ ಸೀಜನ್ನು ಕಾಲದಲ್ಲಿ ನಡಿಸಲ್ಪಡುವವು.

ನಂಬರ್.	ತಾಲ್ಲೂಕುಗಳು	ಡಿಸ್ಟ್ರಿಕ್ಟು.
	ರೀ ಸರ್ವೆ.	
1	ಕೊಪ್ಪ ತಾಲ್ಲೂಕು	ಕಡೂರು
2	ಲೇಟ್ ಬಾಣಾವರದ ತಾಲ್ಲೂಕು ಪೈಕಿ ವುಳದಿರುವ ಭಾಗ	ಡಿಟೋ
3	ತರೀಕೆರೆ ತಾಲ್ಲೂಕಿನಲ್ಲಿ ಬಾಕಿ ಇರುವ ಪ್ರದೇಶ	ಡಿಟೋ
4	ತೀರ್ಥಹಳ್ಳಿ ತಾಲ್ಲೂಕು ಡಿಟೋ	ಶಿವಮೊಗ
5	ಲೇಟ್ ಚಿಕ್ಕನಾಯಿಕನಹಳ್ಳಿ ತಾಲ್ಲೂಕಿನಲ್ಲಿ ವುಳದಿರುವ ಪ್ರದೇಶ	ತುಮುಕೂರು
6	ಅರಶೀಕೆರೆ ತಾಲ್ಲೂಕು (ಲೇಟ್ ಹಾರನಹಳ್ಳಿ)	ಹಾಸನ
	ವಾಟರ್ ರೀ ಕ್ಲಾಶಿಫಿಕೇಷನ್.	
1	ಮದ್ದಗಿರಿ ತಾಲ್ಲೂಕಿನಲ್ಲಿ ಬಾಕಿ ಇರುವ ಪ್ರದೇಶ	ತುಮುಕೂರು
2	ಲೇಟ್ ಗುಡಿಬಂಡೆ ತಾಲ್ಲೂಕು	ಕೋಲಾರ
3	ಬೇಲೂರು ತಾಲ್ಲೂಕು	ಹಾಸನ

ಡಿ. ಶ್ಯಾಮರಾವ್,
ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಸೂಪರಿಂಟೆಂಡೆಂಟ್.

ವಿದ್ಯಾಭ್ಯಾಸದ ಇಲಾಖೆ.

1909ನೆಯ ಇಸವಿ ಅಕ್ಟೋಬರ 18ನೆಯ ತಾರೀಖಿನ ಡಿ. ನಂಬರು 12.

ವ್ಯವಸಾಯಾನುಭವದ ಪರೀಕ್ಷೆ.

1909ನೆಯ ಇಸವಿ ಆಗಸ್ಟು 23ನೆಯ ತಾರೀಖು ಡಿ. ನಂಬರು 21ನೆಯ ಪ್ರಕಟನ ಪತ್ರಿಕೆಯನ್ನನುಸರಿಸಿ, ವ್ಯವಸಾಯಾನುಭವದ ಬರಹದ ಪರೀಕ್ಷೆಯು ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಡಿಸೆಂಬರ 4ನೆ ತಾರೀಖಿನಲ್ಲಿಯೂ, ವ್ಯಾವಹಾರಿಕ ಪರೀಕ್ಷೆಯು ನಾರ್ಮಲ್ ಸ್ಕೂಲಿಗೆ ಸೇರಿದ ಸರ್ಕಾರಿ ಫಾರಂನಲ್ಲಿ ಡಿಸೆಂಬರ 11ನೆಯ ತಾರೀಖಿನಲ್ಲಿಯೂ ನಡೆಯಿಸಲ್ಪಡುತ್ತದೆ.

1909ನೆಯ ಇಸವಿ ಅಕ್ಟೋಬರ 18ನೆಯ ತಾರೀಖಿನ ಡಿ. ನಂಬರು 13.

ಹೊಲಿಗೆಯಲ್ಲಿ ಉಪಾಧ್ಯಾಯಿ ಪ್ರಾವೀಣ್ಯ ನಿರ್ಣಾಯಕ ಪರೀಕ್ಷೆ.

1909ನೆಯ ಇಸವಿ ಆಗಸ್ಟು 14ನೆಯ ತಾರೀಖು ಡಿ. ನಂಬರು 5ನೆಯ ಪ್ರಕಟನ ಪತ್ರಿಕೆಯನ್ನನುಸರಿಸಿ, ಹೊಲಿಗೆಯಲ್ಲಿ ಉಪಾಧ್ಯಾಯಿಪ್ರಾವೀಣ್ಯ ನಿರ್ಣಾಯಕ ಪರೀಕ್ಷೆಯು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ನವೆಂಬರ 29ನೆಯ ತಾರೀಖು ಸೋಮವಾರದ ಲಾಗಾಯಿತು ನಡೆಯಿಸಲ್ಪಡುತ್ತದೆ.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟು ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು		[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವೆಂಬರ ತಾರೀಖು	18	[illegible]	
2	ಡಿಟ್ಟೋ ...	ಸಾಗರ .	ಡಿಟ್ಟೋ	22	100	
3	ಡಿಟ್ಟೋ ...	ಶಿವಮೊಗ್ಗ ...	ಡಿಟ್ಟೋ	25	500	
4	ಕಡೂರು ...	ತರೀಕೆರೆ ...	ಡಿಟ್ಟೋ	29	(a)200	(a) ಚಿತ್ರದುರ್ಗದ 10 ಟನ್‌ಗಳು ಸೇರಿರುತ್ತೆ.
5	ಡಿಟ್ಟೋ ...	ಚಿಕ್ಕಮಗಳೂರು...	1909ನೆ ಡಿಸೆಂಬರ ತಾರೀಖು	2	400	
6	ಹಾಸನ ...	ಹಾಸನ ...	ಡಿಟ್ಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟ್ಟೋ	9	(b)100	(b) ತುಮಕೂರು 30 ಟನ್‌ಗಳು ಕೋಲಾರದ 5 ಟನ್‌ಗಳು ಸೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟ್ಟೋ	13	250	
9	ಡಿಟ್ಟೋ ...	ಹುಣಸೂರು ...	ಡಿಟ್ಟೋ	16	450	
			ಜುಮ್ಲಾ	...	2,400	

ಎಂ. ಮುತ್ತಣ್ಣ,
ಕನ್ಸರ್ವೇಟರ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಇಸ್ತಿಹಾರ್ನಾಮಾ.

ಸನ್ 1909ನೆ ಇಸವಿ ಸೆಪ್ಟಂಬರು 23ರಲ್ಲಿ ಛಾಯಿಷ್ ಆದ ನಂಬರು R. 2550-1—Ft. 41-09-2ನೆ ನೋಟಿಫಿಕೇಷನ್ ಅನುಸರಿಸಿ ಈ ಕೆಳಗೆ ನಮೂದಿಸಿರುವ ಸ್ಟೇಟ ಫಾರೆಸ್ಟುಗಳಲ್ಲಿ ಪಬ್ಲಿಕಿಗೆ ಉಪಯೋಗಕ್ಕೋಸ್ಕರ ದಾರಿಗಳನ್ನು ಬಿಟ್ಟು ಕೊಟ್ಟಿರುತ್ತೆ.

ನರಸಿಂಹದೇವರ ಬೆಟ್ಟದ IIನೆ ಬ್ಲಾಕ.

1. ಚಿಕ್ಕಬಳ್ಳಾಪುರದಿಂದ ಬಿಸಗ್ನಿ ಗುಡಿಗೆ ಸದಾಕಾಲದಲ್ಲಿಯೂ ಜನಗಳು ಮತ್ತು ದನಗಳು ಧಾರಾಳವಾಗಿ ಹೋಗಿ ಬರತಕ್ಕ ಬಗ್ಗೆ 3 ಗಜ ಅಗಲ ಮತ್ತು 3 ಫರ್ಲಾಂಗು ಉದ್ದವುಳ್ಳ ಕಾಲುದಾರಿ. ಈ ದಾರಿಯು ಸ್ಟೇಟ್‌ಫಾರೆಸ್ಟಿನ ಡಿಮಾರ್ಕೇಷನ್ ಲೈನಿನ 2ನೆ ಮೈಲಿಯ 5ನೆ ಫರ್ಲಾಂಗು ಕಲ್ಲಿನ ದಕ್ಷಿಣಕ್ಕೆ 4 ಸರಪಣಿ ದೂರದಲ್ಲಿ ಸ್ಟೇಟ ಫಾರೆಸ್ಟಿನಲ್ಲಿ ಪ್ರಾರಂಭವಾಗಿ ಪಶ್ಚಿಮಕ್ಕೆ ಮತ್ತು ವಾಯವ್ಯಕ್ಕೆ ಹರದು ಫಾರೆಸ್ಟಿನಲ್ಲಿ ಸೇರಿಹೋಗಿರುವ ದೇವಸ್ಥಾನವನ್ನು ಸೇರುತೆ.

2. ಚಿಕ್ಕಬಳ್ಳಾಪುರದಿಂದ ಕಳವರದ ಬೆಟ್ಟಕ್ಕೆ ಸದಾಕಾಲದಲ್ಲಿಯೂ ಜನಗಳು ಮಾತ್ರ ಹೋಗತಕ್ಕ 3 ಗಜ ಅಗಲ ಮತ್ತು 6 ಫರ್ಲಾಂಗು ಉದ್ದವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟ್ ಡಿಮಾರ್ಕೇಷ 4ನೆ ಮೈಲಿಯ 6ನೆ ಫರ್ಲಾಂಗಿನ ದಕ್ಷಿಣಕ್ಕೆ 2 ಸರಪಣಿಯುಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಪಶ್ಚಿಮಕ್ಕೆ ಹರಿದು ಫಾರೆಸ್ಟಿನಲ್ಲಿರುವ ಬೆಟ್ಟದಮೇಲಿರುವ ಗುಡಿಯನ್ನು ಸೇರುತ್ತೆ.

3. ನೊಸಿಕುಂಟೆ ಹೊಸೂರಿನಿಂದ ಮಂಚೇನಹಳ್ಳಿಗೆ ಸದಾಕಾಲದಲ್ಲಿಯೂ ಜನಗಳು ಮತ್ತು ದನಗಳು ತಿರಗಬಹುದಾದ 3 ಗಜ ಅಗಲ ಮತ್ತು ಒಂದುಮೈಲಿ ಉದ್ದವುಳ್ಳ ಕಾಲುದಾರಿ. ಈ ದಾರಿಯು ಡಿಮಾರ್ಕೇಷ ಲೈನು 11ನೆ ಮೈಲಿಯ 1ನೆ ಫರ್ಲಾಂಗು ಕಲ್ಲಿನ ಪಶ್ಚಿಮದಲ್ಲಿ 5ನೆ ಸರಪಣಿಯ ಹತ್ತಿರ ಫಾರೆಸ್ಟನ್ನು ಪ್ರವೇಶಿಸಿ ಉತ್ತರಕ್ಕೆ ಹರದು ಡಿಮಾರ್ಕೇಷ ಲೈನಿನ 16ನೆ ಮೈಲಿಯ 7ನೆ ಫರ್ಲಾಂಗು ಕಲ್ಲಿನ ಪಶ್ಚಿಮದಲ್ಲಿ 4ನೆ ಸರಪಣಿ ಹತ್ತಿರ ಫಾರೆಸ್ಟನ್ನು ಬಿಡುತ್ತೆ.

4. ಕನಗಾನಹಳ್ಳಿಯಿಂದ ಮುತ್ತರಾಯನಗುಡಿಗೆ ಸದಾಕಾಲದಲ್ಲಿಯೂ ಜನಗಳು ಮತ್ತು ದನಗಳು ಹೋಗಬಹುದಾದ 3 ಗಜ ಅಗಲ ಮತ್ತು 1 ಮೈಲಿ ಉದ್ದವುಳ್ಳ ಕಾಲುದಾರಿ. ಈ ದಾರಿಯು ಸ್ಟೇಟ ಫಾರೆಸ್ಟಿನ ಡಿಮಾರ್ಕೇಷ ಲೈನಿನ 11ನೆ ಮೈಲಿ 4ನೆ ಫರ್ಲಾಂಗುಕಲ್ಲಿನ ದಕ್ಷಿಣಕ್ಕೆ 4ನೆ ಸರಪಣಿಯ ಹತ್ತಿರ ಪ್ರವೇಶಿಸಿ ವಾಯುವ್ಯ ದಿಕ್ಕಿನಲ್ಲಿ ಹರದು ಡಿಮಾರ್ಕೇಷ ಲೈನಿನ 15ನೆ ಮೈಲಿಯ ಉತ್ತರದಲ್ಲಿ 4ನೆ ಸರಪಣಿಯ ಹತ್ತಿರ ಫಾರೆಸ್ಟನ್ನು ಬಿಡುತ್ತೆ.

5. ಕಾರ್ಲಹಳ್ಳಿಯಿಂದ ಮಂಚೇನಹಳ್ಳಿಗೆ ಯಾವಾಗಲೂ ಜನಗಳು, ದನಗಳು, ಮತ್ತು ಭಂಡಿಗಳು ತಿರಗಬಹುದಾದ 5 ಗಜ ಅಗಲ ಮತ್ತು 1 ಮೈಲಿ 1 ಫರ್ಲಾಂಗು ಉದ್ದವುಳ್ಳ ಭಂಡಿಜಾಡು. ಈ ಜಾಡು ಸ್ಟೇಟ ಫಾರೆಸ್ಟನ್ನು ಡಿಮಾರ್ಕೇಷ 13ನೆ ಮೈಲಿಯ 4ನೆ ಫರ್ಲಾಂಗು ಕಲ್ಲಿನ ಪೂರ್ವಕ್ಕೆ 2ನೆ ಸರಪಣಿಯ ಹತ್ತಿರ ಪ್ರವೇಶಿಸಿ ಉತ್ತರಕ್ಕೆ ಹರದು ಅದೇ ಡಿಮಾರ್ಕೇಷ ಲೈನಿನ 15ನೆ ಮೈಲಿಯ 1ನೆ ಫರ್ಲಾಂಗಿನ ಪೂರ್ವಕ್ಕೆ 5ನೆ ಸರಪಣಿಯ ಹತ್ತಿರ ಫಾರೆಸ್ಟನ್ನು ಬಿಡುತ್ತೆ.

ನರಸಿಂಹದೇವರ ಬೆಟ್ಟದ IIIನೆ ಬ್ಲಾಕ.

1. ಪಾವಂಡಹಳ್ಳಿಯಿಂದ ದಂಡಿಗ್ಯಾನಹಳ್ಳಿಗೆ ಯಾವಾಗಲೂ ಜನಗಳು ಮತ್ತು ದನಗಳು ತಿರಗಬಹುದಾದ 3 ಗಜ ಅಗಲ ಮತ್ತು 4 ಮೈಲಿ 3 ಫರ್ಲಾಂಗು ಉದ್ದವುಳ್ಳ ಕಾಲುದಾರಿ. ಇದು ಸ್ಟೇಟ ಫಾರೆಸ್ಟನ್ನು ಡಿಮಾರ್ಕೇಷ ಲೈನಿನ 4ನೆ ಮೈಲಿಯ 6ನೆ ಫರ್ಲಾಂಗು ಕಲ್ಲಿನ ದಕ್ಷಿಣದಲ್ಲಿ 4ನೆ ಸರಪಣಿಯ ಹತ್ತಿರ ಪ್ರವೇಶಿಸಿ ಪಶ್ಚಿಮಕ್ಕು ಮತ್ತು ವಾಯುವ್ಯಕ್ಕು ಹರದು ಅದೇ ಡಿಮಾರ್ಕೇಷ ಲೈನಿನ 16ನೆ ಮೈಲಿಯ 1ನೆ ಫರ್ಲಾಂಗಿನ ಪೂರ್ವಕ್ಕೆ 5ನೆ ಸರಪಣಿಯ ಹತ್ತಿರ ಫಾರೆಸ್ಟನ್ನು ಬಿಡುತ್ತೆ.

ಹೆಚ್. ರಾಮೈಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ, ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 4ನೆ ಅಕ್ಟೋಬರ 1909.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ ಮತ್ತು ಸ್ಟೇಟ ಫಾರೆಸ್ಟುಗಳಲ್ಲಿಯೂ, ಆಕಾರ ಕಂಡ ಬಂಜರು ಜಮೀನುಗಳಲ್ಲಿಯೂ, ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿಯೂ, ಅಮೃತಮಹಲ ಕಾವಲಗಳಲ್ಲಿಯೂ, ದೊರಿಯುವ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳನ್ನು 1909—10ನೆ ಸಾಲಿಗೆ ಜಮಾಯಿಸುವ ಹಕ್ಕನ್ನ ಬಹಿರಂಗವಾಗಿ ಈ ಕೆಳಗಿನ ತಪಶೀಲ ಪಟ್ಟಿಯಲ್ಲಿ ಕಾಣುವ ಆಫೀಸರಿಂದ ತಾಲ್ಲೂಕವಾರ ಯಾ ಹೋಬಳಿವಾರ ಹರಾಜು ಹಾಕಿಸಲ್ಪಡುತ್ತೆ :—

ನಂಬರ.	ತಾಲ್ಲೂಕುಗಳ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಲ್ಪಡುವ ಆಫೀಸರರ ಹೆಸರು.
1	ಮೂಡಿಗೆರೆ	15—11—09	ಆಯಾ ತಾಲ್ಲೂಕು ಕಛೇರಿಯಬಳಿ ನಡೆಯುತ್ತದೆ.	ತಾಲ್ಲೂಕು ಅಮಲ್ದಾರರುಗಳು ಮತ್ತು ಆಯಾ ತಾಲ್ಲೂಕು ರೇಂಜ ಆಫೀಸರುಗಳು.
2	ಚಿಕ್ಕಮಗಳೂರು	17—11—09		
3	ಕಡೂರು	19—11—09		
4	ತರೀಕೆರೆ	20—11—09		
5	ಯಡೇಹಳ್ಳಿ ಸಬ ತಾಲ್ಲೂಕು ..	22—11—09		
6	ಕೊಪ್ಪ	2[illegible]—11—09		

ಪಸಾರೆ ಜಿನಸಿಗಳ ತಪಶೀಲ.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟವಾಳದಕಾಯಿ, 4. ದಿಂಡಗದ ಗೋಂದು, 5. ಕಾಡು ಅರಿಶಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಚಗಚೆ ಬೀಜ, 13. ಹೊಂಗೇಬೀಜ 14. ಗೇರುಬೀಜ, 15. ಹಾಲುಮಡ್ಡಿ, 16. ಸಾರಗದಕೊಂಬು, 17. ಗುಗ್ಗಳ, 18. ಬ್ಯಾಲದ ಹಂಣು, 19. ಸೀತಾಫಲದಹಂಣು, 20. ಅಳಲೇಕಾಯಿ, 21. ಹುಣಸೇಹಂಣು, 22. ಕಿರಿ ಈಚಲು, 23. ಗೇರು, 24. ಕಲ್ಲುಹುವ್ವು, 25. ಕಲನಾರು, 26. ಕಾಡು ಯಾಲಕ್ಕಿ.

2. ಈಡ ದರಖಾಸ್ತುದಾರನು ಹರಾಜು ಮಂಜೂರಾದ ಕೂಡ್ಲೇ ಶೇಕಡಾ 25 ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಅಲ್ಲದೇ ಕಂಟ್ರ್ಯಾಕ್ಟ ಷರತ್ತು ಮೇರೆ ನಡೆಯಲು ತಕ್ಕ ಖಾತರಿ ಜಾಮೀನ ಸಹಾ ಕೊಡಬೇಕು. ಹಾಗೆ ಮಾಡ ದೇ ತಪ್ಪಿದಲ್ಲಿ ಕೂಡ್ಲೇ ಬಾಬು 2ನೆ ದಫಾ ಹರಾಜು ಮಾಡಲ್ಪಟ್ಟು ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ ಮಾಡಲ್ಪಡುತ್ತೆ.

3. ದರಖಾಸ್ತುದಾರನಿಗೆ ಹರಾಜು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ತಿಂಗಳ ವಳಗಾಗಿ ಬಾಕಿ ಮೊಬಲಗನ್ನೆಲ್ಲಾ ಪಾವತೀ ಮಾಡಬೇಕು. ತಪ್ಪಿದರೆ ಮೊದಲು ಕೊಟ್ಟದ್ದ $\frac{1}{4}$ ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಬಾಕೀ ಆಗುವ ಹಣವನ್ನು ರೆವಿನ್ಯೂ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡುತ್ತೆ.

4. ಹರಾಜು ಮೊಬಲಗ್ಯೆ ರೂಪಾಯಿ 1ಕ್ಕೆ ಒಂದಾಣೆ ಲೋಕಲ್ ಸೆಸ್ಸು ಕೊಡಬೇಕು.

5. ಹಿಡುವಳೀ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಸಲನ್ನು ರೂಢಿ ಸಲು ಹಕ್ಕು ಇರುವದಿಲ್ಲ.

6. ಇನಾಂದಾರರು ಸ್ಥಿರಪಟ್ಟ ಹಕ್ಕುದಾರಿ ವಿಷಯದಲ್ಲಿ ಇಜಾರೆದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲದ ಉತ್ಪತ್ತಿ ಮೇಲ್ಕಂಡ ಹರಾಜಿಗೆ ಸೇರುವದಿಲ್ಲ.

8. ಹರಾಜು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

ಬಿ. ಹೀರಾಸಿಂಗ್,
ಫಾರ್ ಡೆಪ್ಯುಟಿ ಕಮಿಷನರ್, ಕಡೂರು ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 14ನೆ ಅಕ್ಟೋಬರ್ 1909.

ಈ ದೇವನಹಳ್ಳಿ ತಾಲ್ಲೂಕು ಸರ್ವೆ ಸೆಟ್ಲುಮೆಂಟಾಗಿ 12 ವರುಷಕ್ಕೆ ಮೇಲ್ಪಟ್ಟು ಇರುವದ್ದರಿಂದ ತಾಲ್ಲೂಕು ರಿಕಾರ್ಡಿನಲ್ಲಿ ರತಕ್ಕ ಕುಳವಾರು ಜಮಾಬಂದಿ ಚಿಠ್ಠಿಗಳು ರೂಲ್ಸ್ ಅನುಸರಿಸಿ ಜಲಾಯಿಸಲ್ಪಡುತ್ತೆ. ಇವುಗಳ ಕಾಪಿ ಅಪೇಕ್ಷೆ ಇರತಕ್ಕವರು ಈ ಲಾಗಾಯತು 3 ತಿಂಗಳವಳಗಾಗಿ ಕಾಪಿ ಫಿಯಿಷ್ಟಾಡಿ ತಾಲ್ಲೂಕಿಗೆ ದರಖಾಸ್ತು ಕೊಟ್ಟು ಕಾಪಿ ಪಡದುಕೊಳ್ಳಬಹುದು ವಾ ಯಿದೆ ಗತಿಸಿದ ನಂತರ ದೊರಿಯಲಾರದು.

ನೋಟಿಸ್.

ತಾರೀಖು 14ನೆ ಅಕ್ಟೋಬರು 1909.

ಹೊಸಕೋಟೆ ತಾಲ್ಲೂಕಿನ ಡಿಟ್ಟಂ ಚಿಟ್ಟೆಗಳು ಮತ್ತು ಕುಳವಾರ ಚಿಟ್ಟೆಗಳು ಅಂದರೆ ಅವ್ವಲ ಮತ್ತು ದುಯ್ಯಂ ನಂಬರ ಗಳೂ ಸಹಾ ಈ ನೋಟೀಸ್ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷಾದ ಮೂರುತಿಂಗಳ ನಂತರ ನಾಶಪಡಿಸಲ್ಪಡುತ್ತೆ. ಇದನ್ನು ಸನ್ 1895ನೆ ಇಸವಿ ಮಾರ್ಚಿ 11ನೆ ತಾರೀಖು ಗವರ್ನಮೆಂಟ್ ಪ್ರೊಶೀಡಿಂಗ್ಸ್ ನಂಬರ್ 14523-30—R. F. 157-93 ಹು ಕುಂ ಪ್ರಕಾರ ನಾಶಪಡಿಸಲ್ಪಡುತ್ತೆ.

ರಿಕಾರ್ಡಿಗೋಸ್ಕರವಾಗಲಿ ಅಥವಾ ಉಪಯೋಗಕಾಗಲಿ ಸ್ಯೆರ ಮೊಹರಾದ ಕಾಪಿಗಳನ್ನು ಯಾರಾದರೂ ಅಪೇಕ್ಷಿಸಿದರೆ ಮೇಲೆ ನಮೂದಿಸಿರುವ 2 ತಿಂಗಳು ಮಾಯಿದೆ ವಳಗಾಗಿ ಹೊಸಕೋಟೆ ತಾಲ್ಲೂಕ್ ಅಮಲ್ದಾರರಿಗೆ ಬರದುಕೊಳ್ಳಬಹುದು.

ಟಿ. ರಾಯುಲು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ಮಾಲೂರು ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ದೊಡ್ಡ ಸಬ್ಬೇನಹಳ್ಳಿ ಮತ್ತು ನಂಬಿಗನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಮಾಲೂರು ಸಬ್ ಡಿವಿಜನ್ ಆಫಿಸರವರ ರೂ ಬರೂಬ್ 1909ನೆ ನವೆಂಬರು ಮಾಹೆ 8 ಮತ್ತು 9ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಸೀಲು ಬಗ್ಯೆ 1909ನೆ ಇಸವಿ ಅಕ್ಟೋಬರು ತಾರೀಖು 14ನೆ ಮರ್ಕುಂ 41ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 802, 803ನೆ ಪೇಜು ನೋಡತಕ್ಕದ್ದು.

ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿಗೆ ಸೇರಿದ ಜೋಡಿ ಮಿಣಸಂದ್ರ ಮತ್ತು ಗೊಣೂರು ಗ್ರಾಮಗಳು ಸರ್ಕಾರ ಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಾಲೂರ ತಾಲ್ಲೂಕು ಕಛೇರಿಯಲ್ಲಿ ಸಬ್ ಡಿವಿಜನ್ ಸಾಹೇಬರವರ ರೂಬರೂಬು 1909ನೆ ಇಸವಿ ನವೆಂಬರು ಮಾಹೆ 15 ಮತ್ತು 16ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದ ರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ ಬಗ್ಯೆ 1909ನೆ ಇಸವಿ ಅಕ್ಟೋಬರು ತಾರೀಖು 21ನೆ ಮರ್ಕುಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 820ನೆ ನಂಬರ್ ಪೇಜು ನೋಡತಕ್ಕದ್ದು.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಶೇರಿದ ಜೋಡಿ ಕುತಾಂಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ನವಂಬರು ಮಾಹೆ 16ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪ್ಸೀಲ್ ಬಗ್ಗೆ ಸರ್ 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮರ್ಕುಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 821ನೆ ನಂಬರ್ ಪೇಜು ನೋಡತಕ್ಕದ್ದು.

ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿಗೆ ಶೇರಿದ ಜೋಡಿ ದೊಂಮಲೂರು ಮತ್ತು ಪುರ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಸಬ್ ಡಿವಿಜನ್ ಆಫಿಸರವರ ರೂಬರೂಬು 1909ನೆ ಇಸವಿ ನವಂಬರು 17 ಮತ್ತು 18ನೆ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮರ್ಕುಂ 42ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 822—823ನೆ ನಂಬರು ಪೇಜು ನೋಡತಕ್ಕದ್ದು.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಕಾಯಂಗುತ್ತಾ ಶೆಟ್ಟಿಗಾನಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1909ನೆ ನವಂಬರ್ ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲುಗಳ ಬಗ್ಯೆ 1909ನೆ ಇಸವಿ ಅಕ್ಟೋಬರ್ ತಾರೀಖು 21ನೆ ಮರ್ಕುಂ 42ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 823—824ನೆ ನಂಬರು ಪೇಜು ನೋಡತಕ್ಕದ್ದು.

ಎಸ್. ಶ್ಯಾಮಣ್ಣ,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ ಸೂಪರ್ರಿಂಟೆಂಡೆಂಟರವರ ಆಫೀಸುನಿಂದ—

ಪ್ರಕಟನೆ.

ತಾರೀಖು 20ನೆ ಅಕ್ಟೋಬರ್ 1909.

ಪೊಲೀಸ್ ಇನ್ಸ್ಪೆಕ್ಟರಾಗಿ ಇದ್ದು ಹಾಲೀ ಮೃತಪಟ್ಟು ಇರುವ ಮಹಮ್ಮದ್‌ಹುಸೇನ್ ಎಂಬುವರಿಂದ ಸದರಿಯವರ ಬಾಬತು ಸಾಲಗಳಿಗಾಗಿ ವಸೂಲಾದ ಮೊಬಲಗು ಹನ್ನೆರಡು ರೂಪಾಯಿ ನಾಲ್ಕು ಆಣೆ (12—4—0) ಗಳು ನಮ್ಮ ಆಫೀಸಿನಲ್ಲಿ ಸಿಂತು ಇರುತ್ತೆ. ಆದ್ದರಿಂದ ಈ ಪ್ರಕಟನೆಯ ತಾರೀಖು ಲಾಗಾಯಿತು ಆರು ತಿಂಗಳೊಳಗಾಗಿ ಸದ್ಲಿಂಡ ಮಾಜಿ ಪೊಲೀಸ್ ಇನ್ಸ್ಪೆಕ್ಟರ್ ಮಹಮ್ಮದ್ ಹುಸೇನರ ವಾರಸದಾರುಗಳಾಗಲೀ, ಅಥವಾ ಸಾಲಗಾರರೇ ಆಗಲೀ ಹಕ್ಕು ಸ್ಥಿರಪಡಿಸದೇ ಹೋದರೆ, ಸದರಿ ಮೊಬಲಗನ್ನು ಗೌರ್ನಮೆಂಟ್ ಜಮೆಗೆ ತೆಗದುಕೊಳ್ಳಲ್ಪಡುತ್ತೆಂತಾ ಇದರ ಮೂಲಕ ಎಲ್ಲರಿಗೂ ತಿಳಿಯಪಡಿಸಿ ಇದೆ.

ಎಂ. ಪಿ. ವಿಶ್ವನಾಥರಾವ್,
ಪೊಲೀಸ್ ಅಸಿಸ್ಟೆಂಟ್ ಸೂಪರ್ರಿಂಟೆಂಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಸಾಗರ ತಾಲ್ಲೂಕಿನಲ್ಲಿ ಗೆರಸಪ್ಪಾ ಫಾಲ್ಸ್ ಬಳಿ ಇರುವ ಜೋಗಿನ ಟ್ರಾವಲರ್ಸ್ ಬಂಗ್ಲೆಯು ಸರ್ 1909ನೆ ನವಂಬರು 1ರ ಲಾಗಾಯಿತು 27ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಿರುತ್ತಾಗಿ ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ್ 1909.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ:—ಸಾಗರ ತಾಲ್ಲೂಕಿಗೆ ಸೇರಿದ ಸಾಗರ ಮತ್ತು ಅನಂತಪುರದಲ್ಲಿರುವ ಟ್ರಾವಲರ್ಸ್ ಬಂಗಲೆಗಳನ್ನು ಸರ್ 1909ನೆ ಇಸವಿ ನವಂಬರು 13ರ ಲಾಗಾಯಿತು 25ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಲ್ಪಟ್ಟಿರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಸರ್ 1909ನೇ ಇಸವಿ ಸೆಪ್ಟಂಬರ ತಾರೀಖು 24ರಲ್ಲು ತುಮಕೂರು ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳು ನಡೆಸಿದ ಮೀಟಿಂಗ ಪ್ರೊಸೀಡಿಂಗ್ಸ್.

ಹಾಜರು.

ಕೆ. ಧೊರೆಸ್ವಾಮಿ ಐಯ್ಯರ ಯವರು, ಎಸ್ಕ್ವಯರ್, ಪ್ರೆಸಿಡೆಂಟರವರು.

ನಂಬರ್.	ಮೆಂಬರುಗಳ ಹೆಸರು.	ಹಾಜರ್.	ಗೈರಹಾಜರ್.
	ಎಕ್ಸ್ ಅಫಿಷಿಯೋ ಮೆಂಬರುಗಳು.		
	ಮಿ॥ ಎ. ಮಾಧವರಾಯರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ಮತ್ತು ಬೋರ್ಡಿನ ವೈಸ್ ಪ್ರೆಸಿಡೆಂಟರವರು.	ಹಾಜರ್.	...
2	,, ಸಿ. ವೆಂಕಟರಾಯರು, ತುಮಕೂರು ಮತ್ತು ಗುಬ್ಬಿ ಸಬ್ ಡಿವಿಜನ್ ಆಫಿಸರವರು.	ಡಿಟೋ	...
3	,, ಎಂ. ಎ. ನಾರಾಯಣ ಅಯ್ಯಂಗಾರ್ರು, ಮದ್ದಗಿರಿ ಸಬ್ ಡಿವಿಜನ್ ಆಫಿಸರವರು.	ಡಿಟೋ	...
4	,, ಬಿ. ರಾಮಯ್ಯನವರು, ತುಮಕೂರು ಡಿಸ್ಟ್ರಿಕ್ಟು ಅಫಿಷಿಯೇಟಿಂಗ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರವರು.	ಡಿಟೋ	...
5	,, ಸಿ. ಅಪ್ಪಾಧೊರ ಮೊದಲಿಯಾರ್ರವರು, ತುಮಕೂರು ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರು.	...	ಗೈರ ಹಾಜರ್.
6	,, ಕೆ. ಪ್ರಹ್ಲಾದರಾಯರವರು, ತುಮಕೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರರವರು.	...	ಡಿಟೋ
	ನಾನ್ ಅಫಿಷಿಯಲ್ ಮೆಂಬರುಗಳು.		
1	,, ಆದೆಪ್ಪ ಬಿನ್ ಅಪ್ಪಣಶೆಟ್ಟಿ, ತುಮಕೂರು	ಹಾಜರ್	...
2	,, ಮೈಲಾರಪ್ಪ ಬಿನ್ ಕೆಂಚಪ್ಪನವರು, ತುಮಕೂರು ...		ಗೈರ ಹಾಜರ್.
3	,, ಸೂರ್ಯನಾರಾಯಣರಾವ್ ಬಿನ್ ಮಲ್ಲಪ್ಪನವರು, ತುಮಕೂರು ...	ಹಾಜರ್.	...
4	,, ಜಿ. ಶಿವರಾಮಯ್ಯನವರು, ಮದ್ದಗಿರಿ	ಡಿಟೋ	
5	,, ಕೆ. ಬಿ. ಶ್ರೀನಿವಾಸರಾಯರು, ಮದ್ದಗಿರಿ	ಡಿಟೋ	
6	,, ಗಂಗೆಗೌಡರು, ಚಿಕ್ಕನಾಯಕನಹಳ್ಳಿ ...	ಡಿಟೋ	...
7	,, ಅಗಳೀ ವೆಂಕಟರಾಮಯ್ಯನವರು, ಶಿರಾ	ಡಿಟೋ	...
8	,, ಕೆ. ರಾಮಾನುಜೈಯ್ಯಂಗಾರ್ರು, ಗುಬ್ಬಿ	ಡಿಟೋ	...
9	,, ಹೊನ್ನಲಿಗೆ ಗೌಡರು, ಗುಬ್ಬಿ	ಡಿಟೋ	...
10	,, ಶಂಭುಲಿಂಗ ಶೆಟ್ಟರು, ಗುಬ್ಬಿ	...	ಗೈರ ಹಾಜರ್.
11	,, ಸಿ. ಶ್ರೀನಿವಾಸರಾಯರು, ಪಾವಗಡ	ಹಾಜರ್.	...
12	,, ಆಂಜನೇಯ ಶೆಟ್ಟರು, ಪಾವಗಡ	ಡಿಟೋ	...
13	,, ಶಿಂಗ್ರಾಚಾರ್ಯರು, ಕುಣಿಗಲ್	ಡಿಟೋ	...
14	,, ಹೆರೂರು ಗುಂಡಪ್ಪನವರು, ಕುಣಿಗಲ್	ಡಿಟೋ	...
15	,, ಆಬಿದಲ್ಲಿ ಸಾಹೇಬರು, ಕೊರಟಗೆರೆ	ಡಿಟೋ	...
16	,, ವೀರಶೆಟ್ಟರು, ತುರುವೇಕೆರೆ	ಡಿಟೋ	...
17	,, ಶಿಂಗ್ರಿ ನಂಜಪ್ಪನವರು, ತಿಪಟೂರು (ಫವತಿ) ...	...	
18	,, ಹೊನ್ನವಳ್ಳಿ, ಕಂದಾಚಾರ್ ಸುಬ್ಬರಾಯರು, ತಿಪಟೂರು (ಫವತಿ) ...	...	

I. ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಾದ 1909ನೆ ಮಾರ್ಚಿ, ಏಪ್ರೆಲ್ ಮತ್ತು ಮೇ ಮಾಹೆಗಳ ಡಿಸ್ಟ್ರಿಕ್ಟು ಫಂಡು ಜಮಾ ಖರ್ಚು ಲೆಖ್ಖಗಳನ್ನು ಓದಿ ಪ್ಯಾಸ್ಮಾಡಲಾಯಿತು.

II. ಸರ್ 1908—09ನೆ ಸಾಲಿನ ತುಮಕೂರು ಡಿಸ್ಟ್ರಿಕ್ಟು ಡಿಸ್ಟ್ರಿಕ್ಟ್ ಫಂಡ್‌ಸ್ ಅಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ಓದಿ ಪ್ಯಾಸ್ಮಾಡಲಾಯಿತು.

III. ಲೋಕಲ್ ಬೋರ್ಡು ರೆಗ್ಯುಲೇಷನ್ ಅನುಸರಿಸಿ ಛಾಯಿಷಾದ ರೂಲ್ಸ್‌ಗಳ 132ನೆ ರೂಲ್ ಎಫ್. ಕ್ಲಾಜಿನಲ್ಲಿ ಯೂನಿಯನ್‌ನಿನ ಕೆಲವು ಬಾಬಿನ ಹುಟ್ಟುವಳೀ ವೊಬಲಗನ್ನು ಆಯಾ ಯೂನಿಯನ್‌ಗಾಗಿಯೆ ಉಪಯೋಗಿಸಲ್ಪಡತಕ್ಕದ್ದೆಂದು ವಿಧಾಯಕವಾಗಿರುತ್ತೆಂತಲೂ, ಗತ ಮೂರು ಸಾಲಗಳಲ್ಲಿ ಡಿಸ್ಟ್ರಿಕ್ಟು ಅಮಳಿ ಯೂನಿಯನ್‌ಗಳಲ್ಲಿ ಆದ ಹುಟ್ಟುವಳೀ ಮತ್ತು ಖರ್ಚು ತೋರಿಸುವ ತಃಖ್ತೆಯನ್ನು ಕಳುಹಿಸಬೇಕಾಗಿ ವಗೈರೆ ನಮೂದಾದ 10—8—09ನೆ ಮುರ್‍ಕಂ 1432-9—ಲೋ. ಬೋ. 52-09-1ನೆ ನಂಬರ್ ಗೌರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು.

ತೀರ್ಮಾನ—ಕೆಲವು ತಾಲ್ಲೂಕುಗಳಿಂದ ಈ ವಿಚಾರದಲ್ಲಿ ಅಪೇಕ್ಷಿತವಾದ ಎಲ್ಲಾ ತಪಶೀಲುಗಳು ತಲ್ಪಿರುವದಿಲ್ಲವಾಗಿ ಈ ವಿಚಾರವನ್ನು ಬೋರ್ಡಿನವರ ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

IV. ಮೀಟಿಂಗಗಳನ್ನು ನಡಿಸಲು ತಾರೀಖು ನಿಷ್ಕರ್ಷಿಸತಕ್ಕ ಮತ್ತು ಮೆಂಬರುಗಳಿಗೆ ನೋಟಿಸ್ ಕೊಡತಕ್ಕ ವಗೈರೆ ನಡವಳಿಕೆ ವಿಚಾರದಲ್ಲಿ ಲೋಕಲ್ ಬೋರ್ಡು ರೆಗ್ಯುಲೇಷನ್ 17ನೆ ಸೆಕ್‌ಷನ್ ಅನುಸಾರವಾಗಿ ರೂಲ್ಸ್‌ಗಳನ್ನು ಏರ್ಪಡಿಸತಕ್ಕ ಅವಶ್ಯಕತೇ ಕುರಿತು ಆಲೋಚಿಸಬಹುದೆಂತ ವಗೈರೆ ನಮೂದಿರುವ 12—8—09ನೆ ಮುರ್‍ಕಂ 1577-84—ಲೋ. ಬೋ. 394-08-4ನೆ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಲಾಯಿತು.

ತೀರ್ಮಾನ—ಈ ವಿಚಾರದಲ್ಲಿ ಯಾವ ರೂಲ್ಸ್‌ಗಳು ಅನಾವಶ್ಯಕವಾದ್ದಾಗಿರುತ್ತೆ. ಪ್ರತಿ ಮೀಟಿಂಗ್ ಆಖೈರ್ ಆಗುತ್ತಲೇ ಮುಂದಿನ ಮೀಟಿಂಗ್ ನಡಿಸುವ ತಾರೀಖನ್ನು ನಿಷ್ಕರ್ಷಿಸಿ ಆ ತಾರೀಖನ್ನು ಪ್ರೊಸೀಡಿಂಗ್ಸಿನಲ್ಲಿ ನಮೂದಿಸಲ್ಪಡುತ್ತೆ. ಇಲ್ಲಿಗೆ ಈ ಪ್ರೊಸೀಡಿಂಗ್ಸ್‌ಗಳ ಅಚ್ಚಿನ ಪ್ರತಿಗಳು ಗೌರ್ನಮೆಂಟ್ ಪ್ರೆಸ್ಸಿನಿಂದ ತಲ್ಪುತ್ತಲಿವೆ. ಮತ್ತು ಮೀಟಿಂಗಿನಲ್ಲಿ ಹಾಜರಾಗಿದ್ದ ಮತ್ತು ಗೈರ್ ಹಾಜರಾದ ಬೋರ್ಡಿನ ಪ್ರತಿ ಮೆಂಬರಿಗೂ ಒಂದೊಂದು ಸದರೀ ಪ್ರತಿಯನ್ನು ಕ್ರಮವಾಗಿ ಕಳುಹಿಸಲ್ಪಡುತ್ತಲಿದೆ. ಹೀಗಿರುತ್ತಾ ಮತ್ತೂ ಒಂದು ನೋಟಿಸ್ ಈ ಬಾಬಿ ಕೊಡುವುದರಿಂದ ಯಾವ ಪ್ರಯೋಜನವೂ ಕಂಡುಬರುವದಿಲ್ಲ.

V. ಮದ್ದುಗಿರೀಲಿರುವ ಟ್ರಾವಿಲರ್ಸ್ ಬಂಗ್ಲಾ ರಿಪೇರಿ ಬಗ್ಯೆ 61 ರೂಪಾಯಿಗಳ ಅಂದಾಜವನ್ನು ಕಾಂಟರ್ ಸೈನ್ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ ತುಮಕೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್‌ಯವರ 2—9—09ನೆ ಮುರ್‍ಕಂ 362ನೆ ನಂಬರು ಡಾಕೆಟನ್ನು ಓದಲಾಯಿತು.

ತೀರ್ಮಾನ—ಆಗಬಹುದು.

VI. ತುಮಕೂರು-ಮದ್ದೂರೂ ರಸ್ತೆಲಿರುವ ಕೆಲವು ಮೊಹರಿಗಳನ್ನು ಜರೂರಾಗಿ ರಿಪೇರಿ ಮಾಡಿಸಲು ತಯಾರಾದ 495 ರೂಪಾಯಿಗಳ ಅಂದಾಜವನ್ನು ಕಾಂಟರ್ ಸೈನ್ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ ತುಮಕೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರ 16—9—09ನೆ ಮುರ್‍ಕಂ 367ನೆ ನಂಬರು ಡಾಕೇಟನ್ನು ಓದಲಾಯಿತು.

ತೀರ್ಮಾನ—ಆಗಬಹುದು.

VII. 1909ನೆ ಇಸವಿ ಸೆಪ್ಟಂಬರ್ 2ನೆ ತಾರೀಖಿನಲ್ಲಿ ಮತ್ತು ಆ ಮುಂದಿನ ದಿವಸಗಳಲ್ಲಿ ನಡೆಸಿದ ದಸರಾ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪ್ರಿಲಿಮಿನರಿ ಮೀಟಿಂಗಿನಲ್ಲಿ ಚರ್ಚಿಸಿದ ಈ ಕೆಳಗೆ ಕಂಡ ವಿಷಯಗಳು ಡಿಸ್ಟ್ರಿಕ್ಟು ಬೋರ್ಡಿಗೆ ರಿಫರ್ ಮಾಡಲ್ಪಟ್ಟವು :—

(1) ಮದ್ದುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಗ್ರಾಮದಲ್ಲಿ ಒಂದು ಮುಸಾಫರಖಾನೆಯನ್ನು ಕಟ್ಟಿಸತಕ್ಕ ಬಾಬಿ.

ತೀರ್ಮಾನ—ಈ ವಿಚಾರವು ಈ ಬಗ್ಯೆ ಹಣ ಒದಗುವ ಪರಿಯಂತ ನಿರೀಕ್ಷಿಸಬೇಕಾಗಿರುತ್ತೆ.

(2) ಮದ್ದುಗಿರಿ-ಹಿಂದೂಪುರದ ಭಂಡಿ ಜಾಡು ರಿಪೇರಿ ಬಾಬಿ.

ತೀರ್ಮಾನ—ಈ ವಿಚಾರವನ್ನು ತಾಲ್ಲೂಕು ಬೋರ್ಡಿಗೆ ರಿಫರ್ ಮಾಡಬಹುದು.

(3) ಮಾಯಿಸಂದ್ರದ ಹೊಸ ಗ್ರಾಮ ಠಾಣಾದಲ್ಲಿ ಒಂದು ಮುಸಾಫರಖಾನೆಯನ್ನು ಕಟ್ಟತಕ್ಕ ಬಾಬಿ.

ತೀರ್ಮಾನ—ಹೊಸದಾಗಿ ಗ್ರಾಮವನ್ನು ಕಟ್ಟಿದ ಬಳಿಕ ಈ ವಿಚಾರವನ್ನು ನಿಷ್ಕರ್ಷೆ ಮಾಡಬೇಕಾಗಿರುತ್ತೆ.

(4) ರಂಗನಾಥಪುರದ ಗ್ರಾಮದ ಮಾರ್ಗವಾಗಿ ಕಳ್ಳಂಬೆಳ್ಳದಿಂದ ಬುಕ್ಕಾಪಟ್ಣಕ್ಕೆ ರಸ್ತೆ ಹಾಕತಕ್ಕ ಬಾಬಿ.

ತೀರ್ಮಾನ—ಈ ರಸ್ತೆ ಅನಾವಶ್ಯಕವಾದ್ದಾಗಿರುತ್ತೆ.

(5) ಒಡದುಹೋದ ಅಂಕಸಂದ್ರದ ಕೆರೇಬಳಿ ಇರುವ ಹಳ್ಳಕ್ಕೆ ಬೇವಿನಹಳ್ಳಿ ಅಥವಾ ವೋಟಿಕೆರೆ ಹತ್ತಿರ ಒಂದು ಸೇತುವೆ ಕಟ್ಟಿಸತಕ್ಕ ಬಾಬಿ.

ತೀರ್ಮಾನ—ಇಲ್ಲಿ ರಸ್ತೆಯೇ ಇಲ್ಲದೇ ಇರುವಲ್ಲಿ ಸೇತುವೆ ಅನಾವಶ್ಯಕವಾದ್ದಾಗಿರುತ್ತೆ.

VIII. ಸರ್ 1909ನೆ ಇಸವಿ ಡಿಸೆಂಬರ್ 20ನೆ ತಾರೀಖು ಮಧ್ಯಾಹ್ನ 3 ಘಂಟೆಗೆ ಬೋರ್ಡಿನವರು ಮುಂದಿನ ಮೀಟಿಂಗನ್ನು ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಥೊರೆಸ್ವಾಮಿ ಐಯ್ಯರ್,
ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಗೋಣಿಬೀಡು ಅಗ್ರಹಾರದ ವೆಂಕಟರಮಣಯ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟ್ ಮೂಡಿಗೆರೆ ತಾಲ್ಲೂಕು ಆಫೀಸಿನಲ್ಲಿ 30—11—09ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಈ ಹರಾಜು 30—11—09ನೆ ಬವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 190 ನೆ ಸಾಲಿಗೆ ಪೂರ್ತಿಯಾಗಿ ಸದರೀಯವರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ ಮೇರೆಗೆ, ರೂ. 840—1—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಖಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರ ದಸ್ತಖತ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎ.	ಗುಂ.	ಜಮೀನು. ಆಕಾರ. ರೂ.	ಆ.	ಪೈ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರ ಸಹಿತವಾದ ಬಾಕೀ ಮೊಬಲಗು.
ಮೂಡಿಗೆರೆ	ಗೋಣಿಬೀಡು	ಜೋಡಿ ಗೋಣಿಬೀಡು ಅಗ್ರಹಾರ ಮತ್ತು ದಾಖ್ಲಾ ಗ್ರಾಮಗಳು.	ವೆಂಕಟರಮಣಯ್ಯ ವಗೈರೇರು	...	...	...	ಖುಷ್ಕಿ ...	962	19	78	5	6	ರೂ. 4,560	ರೂ. ಆ. ಪೈ. 999 0 0	ಜೋಡಿ ... ರೂ. ಆ. ಪೈ. 828 13 4
							ತರಿ ...	1,188	2	4,105	12	7			ನೋಟಿಸ್ ಫೀ ... 11 4 0
							ಬಾಗಾಯಿತು ...	2	23	10	1	0			
							ಖರಾಬು ...	1,456	39	91	0	0			
							ಜಮ್ಲಾ ...	3,610	3	4,285	3	1			ಜುಮ್ಲಾ ... 840 1 4

ಚೆಕ್ಕುಬಂದಿ.

ಪೂರ್ವಕ್ಕೆ—ಹೊಸಹಳ್ಳಿ.
ಪಶ್ಚಿಮಕ್ಕೆ—ಚಿನ್ನಗದ ಗ್ರಾಮ.
ದಕ್ಷಿಣಕ್ಕೆ—ಮುದಸೆ ಗ್ರಾಮ.
ಉತ್ತರಕ್ಕೆ—ಚೆನ್ನಾಪುರ.

ಇಸ್ತಿಹಾರ್‍ನಾಮೆ.

ತಾರೀಖು 14ನೆ ಅಕ್ಟೋಬರು 1909.

ಚಿಕ್ಕಮಗಳೂರು ತಾಲ್ಲೂಕು ಲಕ್ಯಾ ಹೋಬಳಿಗೆ ಸೇರಿದ ಜೋಡಿ ಮಾಚೇನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ಚಿಕ್ಕಮಗಳೂರು ತಾಲ್ಲೂಕು ಕಛೇರಿಯಲ್ಲಿ 1909ನೆ ನವಂಬರು ಮಾಹೆ 29ನೆ ತಾರೀಖು ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲು ಬಗ್ಯೆ 1909ನೆ ಇಸವಿ ಅಕ್ಟೋಬರು ತಾರೀಖು 21ನೆ ಮರ್ಕುಂ 42ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 828ನೆ ನಂಬರು ಪುಟವನ್ನು ನೋಡತಕ್ಕದ್ದು).

ಕೆ. ಆರ್. ಶ್ರೀನಿವಾಸೈಯ್ಯಂಗಾರಿ,
ಡೆಪ್ಯುಟಿ ಕಮಿಷನರ.

ನೋಟಿಸ್.

ಹೊಳೇನರಸೀಪುರದ ಸಬ್ ಡಿವಿಜನ್ ಮುನ್ಸೀಫ್ ಕೋರ್ಟಿನಲ್ಲಿ.

1908—1909ನೆ ಇಸವಿ ಅಸಲ್ ನಂಬರ್ 457.

ವಾದಿ.	ಪ್ರತಿವಾದಿಗಳು.
ಅರ್ಕಲಗೂಡು ತಾಲ್ಲೂಕ ಕೊಣನೂರು ಕಸಬಾದಲ್ಲಿ ಇರುವ ಕಸಬಾ ಶಾನುಭೋಗ ಸುಬ್ಬರಾಯರು.	ಸದರಿ ತಾಲ್ಲೂಕು ಕೊಣನೂರು ಹೋಬಳಿ ಅಕ್ಕಲವಾಡಿ ಗ್ರಾಮದಲ್ಲಿ ಇರುವ ಪಟೇಲ್ ಅಪ್ಪಣ್ಣಿ ಗೌಡನ ಮಗ ಚಿಕ್ಕೆ ಗೌಡ ವಗೈರೆ.

ಈ ಕೆಳಗಿನ ಷೆಡ್ಯೂಲ್ ಜಮೀನ ಮೇಲೆ ಪ್ರತಿವಾದೀರು ಮತ್ತು ಇತರರು ಪ್ರವೇಶ ಮಾಡಕೂಡದೆಂತಲೂ ಮತ್ತು ಸದರಿ ಜಮೀನಿನಲ್ಲಿ ಇರತಕ್ಕ ಕಲ್ಲುಭಾವಿಯಿಂದ ನೀರು ತೆಗೆದುಕೊಂಡು ಹೋಗಕೂಡದೆಂತಲೂ ಖಾಯಂ ಇಂಜಂಕ್ಷನ್ ಕೊಡಿಸುವದರ ಮೂಲಕ ನಿರ್ಬಂಧಪಡಿಸಬೇಕೆಂದು ವಾದಿ ದಾವಾ ಮಾಡಿರುತ್ತಾರೆ. ಸದರಿ ಮೊಕದ್ದಮೆಯನ್ನು ಹೀರಿಂಗ್ ಬಗ್ಯೆ 1909ನೆ ಇಸವಿ ನವಂಬರ್ ತಾರೀಖು 1-ನೆ ಗುರುವಾರಕ್ಕೆ ಇಟ್ಟಿರುತ್ತೆ. ಮೇಲೆ ಕಂಡಂತೆ ಇಂಜಂಕ್ಷನ್ ಆರ್ಡರು ಕೊಡಕೂಡದೆಂಬ ಮತ್ತು ಸದರಿ ಸ್ವತ್ತಿನಲ್ಲಿ ಹಕ್ಕುಬಾಧ್ಯತೆ ಸಂಬಂಧವುಳ್ಳವರು ಮತ್ತು ಕಕ್ಷಿಗಾರ್‍ರಾಗಿ ಸೇರಲು ಇಷ್ಟವುಳ್ಳವರು ಸಹಾ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನ ರೂಬರೂ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ರೂಲ್ಸು ಮೇರೆ ನಡಿಸಲ್ಪಡುತ್ತೆ.

ಬ ತಾರೀಖು 19ನೆ ಅಕ್ಟೋಬರು ಸ 1909ನೆ ಇಸವಿ.

ಷೆಡ್ಯೂಲ್.

ಅರಕಲಗೂಡು ತಾಲ್ಲೂಕು ಕೊಣನೂರು ಹೋಬಳಿ ಅಕ್ಕಲವಾಡಿ ಗ್ರಾಮದಲ್ಲಿ ಪೂರ್ವಕ್ಕೆ-31ನೆ ನಂಬರು ಜಮೀನ, ಪಶ್ಚಿಮಕ್ಕೆ-33ನೆ ನಂಬರು ಜಮೀನ, ದಕ್ಷಿಣಕ್ಕೆ-30ನೆ ನಂಬರು ಜಮೀನ, ಉತ್ತರಕ್ಕೆ ಕೆರೆ, ಈ ಮಧ್ಯೆ ಇರುವ ತರಿ ಎರಡು ಎಕರೆ ಐದುಗುಂಟೆ, ಖುಷ್ಕಿ ಎರಡು ಎಕರೆ ನಾಲ್ಕು ಗುಂಟೆ, ಆಕಾರ ಒಂಭತ್ತು ರೂಪಾಯಿವುಳ್ಳ ಈ ನಂಬರಿನಲ್ಲಿ ಬಾಗಾಯಿತು ಆಗಿರುತ್ತೆ.

ಪಿ. ಮಹದೇವಯ್ಯ,
ಮುನ್ಸೀಫ್.

ಪ್ರಸಿದ್ಧಪತ್ರಿಕೆ.

ಬಳ್ಳೀ ಸಮಯ!

ಶ್ರೀಮನ್ ಮಹಾರಾಜರವರ ಗೌರ್ನಮೆಂಟಿನವರು ಈ ರೈಲ್ವೆಗಾಗಿ ಖರ್ಚಾದ ಮೊಬಲಗಿನ ಮೇಲೆ ಶೇಕಡ 4 ರಂತೆ ಬಡ್ಡಿಯನ್ನು ಕೊಡುವಹಾಗೆ ಭರವಸಯನ್ನು ದಯಪಾಲಿಸಿರುತ್ತಾರೆ; ಮತ್ತು ಇದಕ್ಕಿಂತಲೂ ಹೆಚ್ಚಾದ ಲಾಭವು ದೊರೆಯುವ ಸಂದರ್ಭವೂ ಉಂಟು.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

1895ನೆ ಇಸವಿಯ 5ನೆ ಮೈಸೂರು ಕಂಪೆನಿ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ ಮಾಡಿಥೆ.

ಮುಖ್ಯ ಆಫೀಸು :—ಬೆಂಗಳೂರು ಚಾಮರಾಜಪೇಟೆ ; ಬ್ರಾಂಚ್ ಆಫೀಸು :—ಬೊಂಬಾಯಿ ಕೋಟೆ.

ಮೂಲಧನ 12,00,000 ರೂಪಾಯಿಗಳು.

ಷೇರುಗಳು :—

ಷೇರು 1ಕ್ಕೆ 25 ರೂಪಾಯಿ ಉಳ್ಳ 48,000 ಷೇರುಗಳಾಗಿ ಮೇಲ್ಕಂಡ ಮೂಲಧನವು ಭಾಗಿಸಲ್ಪಟ್ಟಿಥೆ. ಇದರ ಪೈಕಿ ಆಗಲೇ 35,000 ಷೇರುಗಳು ಬಿಕರಿಯಾಗಿಥೆ. ಉಳಿದ 13,000 ಷೇರುಗಳನ್ನು ಈಗ ಜನಗಳು ತೆಗೆದುಕೊಳ್ಳಬಹುದು.

ಷೇರುಗಳನ್ನು ತೆಗೆದುಕೊಳ್ಳತಕ್ಕವರು ಪಾವತಿ ಮಾಡತಕ್ಕ ಮೊಬಲಗಿನ ವಿವರ :—ಅಪ್ಲಿಕೇಷನ್ನೊಂದಿಗೆ ಷೇರು 1ಕ್ಕೆ 1 ರೂಪಾಯಿಯೂ, ಹಂಚಿಗೆಯ ಕಾಲದಲ್ಲಿ ಷೇರು 1ಕ್ಕೆ 4 ರೂಪಾಯಿಯೂ, ಉಳಿದ 20 ರೂಪಾಯಿಗಳು 4 ಕಂತುಗಳಲ್ಲಿ ಕಂತು 1ಕ್ಕೆ 5 ರೂಪಾಯಿನಂತೆ ನೋಟಿಸ್ ಬಂದ ಕಾಲದಲ್ಲಿ ಕೊಡತಕ್ಕದ್ದು. ಒಂದೊಂದು ಕಂತಿಗೂ 2 ತಿಂಗಳಿಗೆ ಕಡಮೆ ಇಲ್ಲದಂತೆ ವ್ಯವಧಾನ ಕೊಡಲ್ಪಡುವದು.

ಷೇರುಗಳಿಗಾಗಿ ದರಖಾಸ್ತುಗಳನ್ನು ಮೇಲೆ ಹೇಳಿದ ಆಫೀಸುಗಳಲ್ಲಿ ಡೈರೆಕ್ಟರುಗಳಿಗಾದರೂ, ಅಥವಾ ಕಂಪನಿಯ ಬ್ಯಾಂಕುಗಳಿಗಾದರೂ ಬರೆದುಕೊಳ್ಳಬೇಕು.

ಡೈರೆಕ್ಟರುಗಳ ಸಭೆ.

1. ಮ॥ ರಾ॥ ರಾಜಮಂತ್ರಪ್ರವೀಣ ಸಿ. ಶ್ರೀನಿವಾಸಯ್ಯಂಗಾರ್ರವರು, ರಿಟೈರ್ಡ್ ಕೌನ್ಸಿಲರ್, ಛೇರ್ಮನ್.

ಮ॥ ಗಳಾದ

2. ,, ರಾಯಬಹದ್ದೂರ್ ಎ. ವೈಗಂಡದೇವ ಮೊದಲಿಯಾರ್ರವರು.
3. ,, ಹಾಜಿ ಇಸ್ಮೇಲ್ ಸೇಟರವರು.
4. ,, ಬಿ. ನಾಗಪ್ಪನವರು, ಬ್ಯಾರಿಸ್ಟರ್.
5. ,, ಎ. ಮಾಣಿಕ್ಯಮಣಿ ಶೆಟ್ಟರವರು.
6. ,, ಬಿ. ವೆಂಕಟಪತಯ್ಯಂಗಾರ್ರವರು.
7. ,, ಎ. ಸುಬ್ಬರಾಯರು.
8. ,, ಸಾಹುಕಾರ್ ಗುಬ್ಬಿ ತೋಟದಪ್ಪನವರು.

ಮ॥ ಗಳಾದ

9. ,, ಸರ್ ವಿಠಲದಾಸ್ ದಾಮೋದರಥ್ಯಾಕರ್ಸೆಯವರು.
10. ,, ಚುನಿಲಾಲ್ ಚಿ. ಸರಯಾಯವರು.
11. ,, ಲಾಲುಬಾಯಿಸಾಮಲ್ದಾಸರವರು.
12. ,, ವರದರಾಜಯ್ಯಂಗಾರ್ರವರು.
13. ,, ಸಾಹುಕಾರ್ ಹರಿಯಣ್ಣನವರು.
14. ,, ವಿ. ಎಚ್. ಕರ್ವೆಯವರು.
15. ,, ರಾಮಚಂದ್ರರಾವ್ ಸಿಂಧಿಯಾಯವರು.

ಬ್ಯಾಂಕುಗಳು.

1. ಬೆಂಗಳೂರಲ್ಲಿರುವ ಮದರಾಸು ಬ್ಯಾಂಕು. 2. ಬೊಂಬಾಯಿಯಲ್ಲಿ ಇಂಡಿಯನ್ ಸ್ಪೆಷಿ ಬ್ಯಾಂಕು.

ಸೂಚನೆ ಪತ್ರ.

1. ಈಗ ಬೆಂಗಳೂರಿಂದ ಚಿಕ್ಕಬಳ್ಳಾಪುರದವರೆಗೂ ಸುಮಾರು 38 ಮೈಲಿಗಳ ದೂರ ಎರಡೂವರೆ ಅಡಿ ಅಗಲವುಳ್ಳ ರೈಲು ಮಾರ್ಗವನ್ನು ಹಾಕಿ, ಅದಕ್ಕೆ ಬೇಕಾದ ಗಾಡಿಗಳು ಮುಂತಾದವುಗಳನ್ನ ತರಿಸಿ, ರೈಲು ಗಾಡಿಯನ್ನು ನಡೆಸುವ ಹಾಗೆಯೂ, ಮುಂದಕ್ಕೆ ಇದೇ ರೈಲು ಮಾರ್ಗವನ್ನು ಸಿಡ್ಲಘಟ್ಟ ಚಿಂತಾಮಣಿ ಮಾರ್ಗವಾಗಿ ಮದನಪಲ್ಲಿ ಕಡೆಯೂ ಮತ್ತು ಆನೆಕಲ್ ಮಾರ್ಗವಾಗಿ ಹೊಸೂರು ಕಡೆಯೂ ಬೆಳೆಸುವದೂ, ಈ ಕಂಪನಿಯ ಮುಖ್ಯ ಉದ್ದೇಶವು.

2. ಈಗ ಉದ್ದೇಶಮಾಡಿರುವ ರೈಲು ದಾರಿ ಹೋಗುವ ಕಡೆಯಲ್ಲೆಲ್ಲವೂ ಜನಗಳು ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳಲ್ಲಿ ಆಸಕ್ತಿ ಉಳ್ಳವರಾದ್ದರಿಂದ, ಪ್ರಯಾಣೀಕರ ಸಂಚಾರವೂ ಮತ್ತು ಪದಾರ್ಥಗಳ ಆಮದು—ರಫ್ತು ವ್ಯಾಪಾರವೂ ವಿಶೇಷವಾಗಿ ನಡೆಯುತ್ತಿರುವುದಲ್ಲದೆ, ಹೊಳೆಗಳು ಇಲ್ಲವಾದಕಾರಣ ದೊಡ್ಡ ಸೇತುವೆ ಮುಂತಾದವುಗಳು ಕಟ್ಟುವದು ಅನಾವಶ್ಯಕವಾದ್ದರಿಂದ, ಈ ರೈಲು ಮಾರ್ಗ ಹಾಕುವದಕ್ಕೆ ಹೆಚ್ಚಾದ ಪ್ರಯಾಸವಿರುವುದಿಲ್ಲವು; ಮತ್ತು ಕಾಂಗಾರಿಗೆ ಬೇಕಾದ ಕಲ್ಲು, ಸುಣ್ಣ, ಮರಗಳು ಮುಂತಾದ ಪದಾರ್ಥಗಳ್ಯಾವತ್ತೂ ಬಹಳ ಸಮೀಪದಲ್ಲಿಯೇ ದೊರೆಯುತ್ತವೆ.

3. ಈ ಕಂಪೆನಿಯಲ್ಲಿ ಷೇರುಗಳು ಪಡೆಯತಕ್ಕವರು ಮುಖ್ಯವಾಗಿ ಗಮನಿಸಬೇಕಾದ ಅಂಶವು ಏನಂದರೆ :—ಶ್ರೀಮನ್ ಮಹಾರಾಜರವರ ಸರ್ಕಾರದವರು ಶೇಕಡ 4 ರಂತೆ ಬಡ್ಡಿ ಕೊಡುವ ಹಾಗೆ ದಯಪಾಲಿಸಿರುವ ಭರವಸೆಯಿಂದ ಷೇರುದಾರುಗಳಿಗೆ ಶೇಕಡ 4 ಕ್ಕಿಂತಲೂ ಹುಟ್ಟುವಳಿ ಅಂದರೆ, ದೊರೆಯುವ ಬಡ್ಡಿ, ಎಂದಿಗೂ ಕಡಮೆಯಾಗಲಾರದೆಂಬುವದೇ. ಈ ಲೈನಿನ ಕಾಂಗಾರಿಗೋಸ್ಕರ ತಯಾರ್ಮಾಡಿ ಕಳುಹಿಸಿದ್ದ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ಇಂಡಿಯಾ ಗೌರ್ನಮೆಂಟಿನವರು ಸಹಾ ಮಂಜೂರ್ಮಾಡಿರುತ್ತಾರೆ. ಇದೂ ಅಲ್ಲದೆ, ಸರ್ಕಾರದವರು ನಮ್ಮ ಕೆಲಸಕ್ಕೆ ಬೇಕಾದ ಜಮೀನುಗಳನ್ನು ಕೊಡಿಸುವಂತೆಯೂ ಮತ್ತು ರೈಲಿಗೋಸ್ಕರ ನಮಗೆ ಅನುಕೂಲಪಡುವದಾದರೆ, ತತ್ಕಾಲದಲ್ಲಿ ಇರುವ ರೋಡುಗಳನ್ನು ಬೇಕಾದಮಟ್ಟಿಗೆ ಉಪಯೋಗಿಸಬಹುದೆಂತಲೂ, ಅಪ್ಪಣೆಯನ್ನು ಕೊಟ್ಟಿರುವದ್ದರಿಂದ, ಕಾಂಗಾರಿಯನ್ನು ಬಹಳ ಮಟ್ಟಿಗೆ ಸುಲಭವಾಗಿ ನಡೆಸಲು ಅನುಕೂಲಿಸುವದು; ಮತ್ತು ಕಾಂಗಾರಿ ಷುರು ಆದಲಾಗಾಯಿತು ಷೇರುದಾರುಗಳ ಹಣಕ್ಕೆ ಬಡ್ಡಿಯನ್ನು ಕೊಡಲು ಸರ್ಕಾರದವರು ಅಪ್ಪಣೆಯನ್ನು ಕೊಟ್ಟಿರುತ್ತಾರೆ.

4. ಮೈಸೂರು ಸರ್ಕಾರದವರು ಇಷ್ಟಪಟ್ಟರೆ 20 ವರುಷಗಳ ನಂತರ ಈ ಲೈನನ್ನು ಇತರ ಕಡೆಗಳಲ್ಲಿ ಇರುವ ಪದ್ಧತಿಯನ್ನನುಸರಿಸಿ ತಕ್ಕ ಕ್ರಯವನ್ನು ಕೊಟ್ಟು ನಮ್ಮಿಂದ ತೆಗೆದುಕೊಳ್ಳಬಹುದಾಗಿದೆ.

5. ರೈಲ್ವೆ ಹಾಕುವದಕ್ಕೆ ತಗಲುವ ಖರ್ಚು :—ಕಂಬಿ, ಗಾಡಿ, ಇಂಜನ್ ಮುಂತಾದವುಗಳೆಲ್ಲಾ ಸೇರಿ 13,73,278 ರೂಪಾಯಿಗಳು ಆಗಬಹುದೆಂದು ಕಂಪೆನಿ ಇಂಜನಿಯರಿಂದ ಮಾಡಿಸಲ್ಪಟ್ಟ ಅಂದಾಜನ್ನು ಗೌರ್ನಮೆಂಟನವರು ಸಹಾ ಒಪ್ಪಿರುತ್ತಾರೆ

6. ಹುಟ್ಟುವಳಿಯ ಅಂದಾಜು :—ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದಲ್ಲಿ ಕೌನ್ಸಿಲರ್ ಆಗಿರುವ ಮ॥ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು 1906ನೆ ಇಸವಿಯಲ್ಲಿ ಬರೆದ ಕಾಗದದಲ್ಲಿ ನಮೂದಿಸಿರುವದೇನಂದರೆ :— ಈ ರೈಲ್ವೆಯಲ್ಲಿ ನಡೆಯಬಹುದಾದ ಆಮದು ರಫ್ತುಗಳ ಅಂದಾಜನ್ನು ಬಹಳಮಟ್ಟಿಗೆ ಕಡಮೆಯಾಗಿಯೇ ಮಾಡಿರುತ್ತದೆ. ಇದಕ್ಕಿಂತಲೂ ಕಡಮೆಯಾಗಲಾರದೆಂಬುವದಕ್ಕೆ ಸಂಶಯವಿಲ್ಲ. ರೈಲ್ವೆ ದೆಸೆಯಿಂದ ಪ್ರಜೆಗಳಿಗೆ ಉಂಟಾಗುವ ಸೌಕರ್ಯಗಳನ್ನನುಸರಿಸಿ, ಈ ರೈಲ್ವೆ ಆದಾಯವು ಮುಂದೆ ಈಗ ಮಾಡಿರುವ ಅಂದಾಜಿಗಿಂತಲೂ ಶೇಕಡ 10 ರಂತೆ ಹೆಚ್ಚಾಗಬಹುದೆಂದು ನಂಬಬಹುದು.

ಮೇಲ್ಕಂಡ ಅಂದಾಜಿನ ವಿವರ.

ಪ್ರಯಾಣೀಕರಿಂದ	...	...	...	ರೂ.	40,000
ಸಾಮಾನುಗಳಿಂದ	...	...	...	,,	47,000
ಟಪಾಲ್, ಪಾರ್ಸೆಲ್ ಮುಂತಾದವುಗಳಿಂದ		...	...	,,	5,000
		ಜಮಾ	...	,,	92,000

ಮೇಲ್ಕಂಡ ಅಂದಾಜು ಮಾಡಿದ ತರುವಾಯ ಅಂದರೆ, ಈಚಿಗೆ ಸದರ್ರ ಮಹರಾಟ ರೈಲ್ವೆ ಕಂಪನಿಯವರ ಆಫೀಸರುಗಳಿಂದ ಮಾಡಲ್ಪಟ್ಟ ತನಿಖೆಯ ಪ್ರಕಾರ, ಪ್ರಯಾಣೀಕರುಗಳಿಂದ 43,344 ರೂಪಾಯಿಗಳು, ಸಾಮಾನುಗಳಿಂದ 65,738 ರೂಪಾಯಿಗಳು, ಟಪಾಲು ವಗ್ಗೈರೆಯಿಂದ 5,000 ರೂಪಾಯಿಗಳು, ಜುಮ್ಲಾ 1,14,082 ರೂಪಾಯಿಗಳು ಹುಟ್ಟುವಳಿ ಅಂದಾಜಾಗಿರುತ್ತದೆ. ಇಷ್ಟು ಕ್ಷಿಪ್ರದಲ್ಲಿಯೇ ಹುಟ್ಟುವಳಿಯ ಅಂದಾಜಿನಲ್ಲಿ ಸುಮಾರು 22,000 ರೂಪಾಯಿಗಳು ಹೆಚ್ಚಾಗಿಯೇ ಕಾಣಬರುವುದರಿಂದ, ಮುಂದಕ್ಕೆ ದೇಶಾಭಿವೃದ್ಧಿಯು ಅತಿ ಸುಲಭವಾಗಿ ಆಗಬಹುದೆಂಬುವ ಭರವಸೆ ಉಂಟಾಗಿರುತ್ತದೆ.

7. ಮೇಲ್ಕಂಡ 1,14,082 ರೂಪಾಯಿ ಹುಟ್ಟುವಳಿಯಲ್ಲಿ ಚಾಲ್ತಿ ಖರ್ಚು ಜಾತಾ ಉಳಿಯುವ 56,000 ರೂಪಾಯಿಗಳಿಂದ ಲೈನಿಗೋಸ್ಕರ ವೆಚ್ಚ ಮಾಡುವ ಹಣಕ್ಕೆ ಶೇಕಡ 4 ಕ್ಕಿಂತಲೂ ಹೆಚ್ಚಾಗಿ ಲಾಭವೂ ಹಂಚಬಹುದು.

8. ಮೇಲ್ಕಂಡ ಈ ಅಂದಾಜುಗಳಲ್ಲಿ ಹುಟ್ಟುವಳಿಯು ಕನಿಷ್ಠಪಕ್ಷವಾಗಿಯೂ ಖರ್ಚು ವೆಚ್ಚಗಳು ಹೆಚ್ಚಾಗಿಯೂ ಗಣಿಸಿಧೆ ಎಂಬ ವಿಷಯವನ್ನು ಜ್ಞಾಪಕದಲ್ಲಿಡತಕ್ಕದ್ದಾಗಿದೆ. ಮೆ॥ ಕೌನ್ಸಿಲರ್ ಪುಟ್ಟಣಶೆಟ್ಟರವರು ಹೇಳಿರುವದರ ಜೊತೆಗೆ ಆಮದು ರಫ್ತು ತನಿಖೆಯನ್ನು ಮಾಡಲಿಕ್ಕೆ ಮೆ॥ ಪುಟ್ಟಣ್ಣ ಶೆಟ್ಟರವರಿಗೆ ಸಹಾಯವಾಗಿ ನೇಮಿಸಲ್ಪಟ್ಟಿದ್ದ ಮೆ॥ ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಎಂ. ಎ. ಯವರು ಸರ್ಕಾರಿ ರಿಪೋರ್ಟಿನಲ್ಲಿ ಬರೆದಿರುವುದನ್ನು ಗಮನಿಸಬೇಕಾಗಿದೆ. ಅದೇನಂದರೆ:—ಈ ಅಂದಾಜಾ ಪಟ್ಟಿಯನ್ನು ಬರೆಯುವದರಲ್ಲಿ ನಾನು ಬಹಳ ಜಾಗರೂಕನಾಗಿದ್ದೆನಾದಕಾರಣ ನಿಜವಾಗಿ ಹುಟ್ಟುವಳಿ ಆಗುವುದಕ್ಕಿಂತಲೂ ಕಡಮೆಯಾಗಿಯೇ ಗಣಿಸಿ ಬರೆದಿರುವ ಆಮದು ರಫ್ತುಗಳ ಸಂಖ್ಯೆಗಳು ಕನಿಷ್ಠಪಕ್ಷವೆಂದು ತಿಳಿಯತಕ್ಕದ್ದು.

9. ಮೇಲ್ಕಂಡ ರಿಪೋರ್ಟುಗಳು ಮತ್ತು ಸಂಖ್ಯೆಗಳಿಂದಲೇ ಎಲ್ಲವೂ ವೇದ್ಯವಾಗಬಹುದು. ರೈಲ್ವೆ ಬರುವುದರಿಂದ ಆಯಾ ದೇಶದಲ್ಲಿ ಕೃಷಿವಾಣಿಜ್ಯಗಳು ಅಭಿವೃದ್ಧಿಯನ್ನು ಹೊಂದುವವು ಎಂಬ ಸಂಗತಿ ಎಲ್ಲರಿಗೂ ತಿಳಿದೇ ಇಧೆ. ಅಂಥಾ ಅಭಿವೃದ್ಧಿಯಿಂದ ರೈಲ್ವೆಯ ನಫೆಯು ಸಂದೇಹವಿಲ್ಲದೆ ಅಭಿವೃದ್ಧಿ ಆಗುವುದರಿಂದ ಗೌರ್ನಮೆಂಟಿನವರು ಭರವಸೆ ಕೊಟ್ಟಿರುವ ಶೇಕಡಾ 4 ಕ್ಕಿಂತಲೂ ಹೆಚ್ಚಾದ ನಫೆ ಉಂಟಾಗಬಹುದೆಂದು ನಿಸ್ಸಂದೇಹವಾಗಿ ಊಹಿಸಬಹುದು.

10. ಬೊಂಬಾಯಿಯಲ್ಲಿ ಘನತೆಯುಳ್ಳ ಮೆ॥ ವಿಠಲದಾಸ್ ದಾಮೋದರ ಥ್ಯಾಕರ್ಸೆ ಯವರು ಈ ಕಂಪೆನಿಗೆ ಮಾಡಿರುವ ಸಹಾಯಕ್ಕೋಸ್ಕರವಾಗಿ ಅವರು (ಎಕ್ಸ್ ಅಫಿಷಿಯೋ) ಮ್ಯಾನೇಜಿಂಗ್ ಡೈರೆಕ್ಟರಾಗಿ ನೇಮಿಸಲ್ಪಟ್ಟು, ಅವರಿಗೆ ಕೊಡತಕ್ಕ ರುಸುಂಗಳನ್ನು ಈ ಕಂಪೆನಿಯ ನಿಬಂಧನೆಗಳಲ್ಲಿ ನಮೂದು ಮಾಡಿರುತ್ತೆ. ಇಷ್ಟವಿದ್ದವರು ಕಂಪನಿಯ ಆಫೀಸುಗಳಿಂದ ವಿಚಾರಿಸಿ ತಿಳಿದುಕೊಳ್ಳಬಹುದು.

11. ಕಂಪೆನಿಯ ಪ್ರಸಿದ್ಧ ಪತ್ರಿಕೆಗಳು ಮತ್ತು ಅಪ್ಲಿಕೇಷನ್ ಫಾರಂಗಳು ಬೆಂಗಳೂರು ಚಾಮರಾಜಪೇಟೆಯಲ್ಲಿ ಇರುವ ಹೆಡ್ಡಾಫೀಸಿನಲ್ಲಿಯೂ ಮತ್ತು ಬೊಂಬಾಯಿಯಲ್ಲಿರುವ ಆಫೀಸಿನಲ್ಲಿಯೂ ಮತ್ತು ಕಂಪೆನಿಯ ಬ್ಯಾಂಕರುಗಳಿಂದಲೂ ಪಡೆಯಬಹುದು. ಕಂಪೆನಿಯ ನಿಬಂಧನೆಗಳನ್ನು ಮೇಲ್ಕಂಡ ಆಫೀಸುಗಳಲ್ಲಿ, ಪ್ರತಿಗೆ 2 ಆಣೆಯಂತೆ ಕ್ರಯಕ್ಕೆ ಪಡೆಯಬಹುದು.

ಬೆಂಗಳೂರು,
8ನೆ ಅಕ್ಟೋಬರ್ 1909.

ಸಿ. ಶ್ರೀನಿವಾಸೈಯ್ಯಂಗಾರ್,
ಜೋಯಿಂಟ್.

ಷೇರುಗಳಿಗಾಗಿ ಬರೆದುಕೊಳ್ಳಬೇಕಾದ ದರಖಾಸ್ತು ನಮೂನೆ.

ಡೈರೆಕ್ಟರುಗಳಿಗೆ,

ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ, ಲಿಮಿಟೆಡ್

ಮಂಡಿ ಕಟ್ಟಡಗಳು, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಯ್ಯಾ,

ಮೇಲೆ ನಮೂದಾಗಿರುವ ರೈಲ್ವೆ ಕಂಪೆನಿಯ ______ ಷೇರುಗಳಿಗಾಗಿ, ಷೇರು 1ಕ್ಕೆ ರೂ. 1 ರಂತೆ ಆಗುವ ಡಿಪಾಜಿಟ್ ಮೊಬಲಗು ರೂ. ______ ಗಳನ್ನು ಇದರ ಜೊತೆಯಲ್ಲಿ ರವಾನಿಸಿರುತ್ತೇನೆ; ಅಷ್ಟು ಸಂಖ್ಯೆಯ ಷೇರುಗಳನ್ನು ರೈಲ್ವೆ ಸೂಚನಪತ್ರದ ನಿಬಂಧನೆಗಳನ್ನನುಸರಿಸಿ ನನಗೆ ಕೊಡಬೇಕೆಂದು ಕೋರುತ್ತೇನೆ. ನಾನು ಅಷ್ಟು ಷೇರುಗಳನ್ನು ತೆಗೆದುಕೊಳ್ಳಲು ಒಪ್ಪಿರುತ್ತೇನೆ; ಮತ್ತು ಅವುಗಳು ನನಗೆ ಕೊಡಲ್ಪಟ್ಟ ನಂತರ ಬಾಕಿಯಾಗುವ ಮೊಬಲಗನ್ನು ಸೂಚನಪತ್ರದಲ್ಲಿ ವಿಧಿಸಿರುವ ಮೇರಿಗೆ ಪಾವತಿ ಮಾಡಲು ಬದ್ಧನಾಗಿರುತ್ತೇನೆ. ಸದರೀ ಸಂಖ್ಯೆಯ ಷೇರುಗಳನ್ನು ನಾನು ಹೊಂದಿದವನೆಂದು ನನ್ನನ್ನು ನೀವು ರಿಜಿಸ್ಟರ್ ಮಾಡಿಕೊಳ್ಳಬಹುದು; ಮತ್ತು ಕಂಪೆನಿಯ ಮೆಮೊರಾಂಡಂ ಮತ್ತು ನಿಬಂಧನೆಗಳಂತೆ ಸದರೀ ಷೇರುಗಳನ್ನು ನಾನು ಇಟ್ಟುಕೊಳ್ಳಲು ಈ ಮೂಲಕ ಒಪ್ಪಿರುತ್ತೇನೆ.

ತಮ್ಮ ವಿಧೇಯ,

ಸಂಪೂರ್ಣವಾದ ಹೆಸರು ______

ವಿಳಾಸ, ಉದ್ಯೋಗ ______

ತಾರೀಖು ______

ರುಜು ______

ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪ್ಪೋ.

ಸನ್ 1909ನೆ ಇಸವಿ ನವೆಂಬರ್ ತಾರೀಖು 1.

ಬೆಂಗಳೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪ್ಪೋವಿನಲ್ಲಿ ದೊರೆಯುತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು	ಪುಟಗಳ ಸಂಖ್ಯೆ	ಖರೀದಿ			ಪೋಸ್ಟೇಜ್ ಮತ್ತು ಪ್ಯಾಕಿಂಗ್	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸನ್ 1879ನೆ ಇಸವಿಯ 12ನೆ ನಂಬರ್ ಆಕ್ಟು.	36	0	11	0	1	0
4	1871ನೆ ಇಸವಿಯ ರಾಸುಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ (1904)	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟು ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)	87	1	3	0	3	0
17	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
18	,, ಟೆಲಿಗ್ರಾಫ್ ಆಕ್ಟು	8	0	1	6	1	0
19	,, ರೈಲ್ವೆ ಆಕ್ಟು	10	0	1	9	1	0
20	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು (ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್‌ವೆಗಳ ರೆಗ್ಯುಲೇಷನ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೊಲೀಸ್ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ 1ನೆ ರೆಗ್ಯುಲೇಷನ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರ್‌ಗಳನ್ನು ಕ್ರಮಪಡಿಸತಕ್ಕ ಬಗ್ಗೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಅ.	ಪೈ.	ಅ.	ಪೈ.
36	1894ನೆ ಇಸವಿಯ IIIನೆ ನಂ. ರೆಗ್ಯುಲೇಷನ್ ಪೋಸ್ಟಾಫಿಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಗೆ ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷನ್, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.	1	0	0	3	0	6
38	1894ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಕೈದಿಗಳ ಸಾಕ್ಷ್ಯದ ರೆಗ್ಯುಲೇಷನ್.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷನ್ ರಿಜಿಸ್ಟ್ರೇಷನ್ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷನ್ ಗೌರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷನ್	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷನ್ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷನ್.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	3	0	0	6	0	6
43	1895ನೆ ಇಸವಿ IIIನೆ ನಂ ರೆಗ್ಯುಲೇಷನ್ ಮೈಸೂರು ಕಂಪೆನಿಗಳ ರೆಗ್ಯುಲೇಷನ್.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷನ್ ಮೈಸೂರು ಅರಳಿ ಸುಂಕಗಳ ರೆಗ್ಯುಲೇಷನ್.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷನ್ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್, ಮತ್ತು IIನೆ ನಂ. ರೆಗ್ಯುಲೇಷನ್, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷನ್ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷನ್.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಗೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷನ್.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷನ್, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷನ್‌ಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷನ್.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷನ್.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷನ್ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	29	1	4	0	8	0
53	ಡಿಟೋ 1905	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	17[illegible]	1	0	0	6	0
55	ಡಿಟೋ 1907	143	1	0	0	6	0
56	ಇಂಡಿಯನ್ ಲಿಮಿಟೇಷನ್ ಆಕ್ಟು	86	0	5	6	1	0

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
57	ಜಾರೀ ಇಲಾಖೆಯ ವಿಧಾನ	55	0	8	0	1	6
58	ಸರ್ 1900ನೆ ಇಸವಿಯ ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷನ್.	103	0	10	0	2	0
59	ಇಸ್ತಿಹಾರ್ನಾಮೆ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು.	1	0	0	6	0	6
60	ಕ್ರಿಮಿನಲ್ ಪ್ರೊಸೀಜರ್ ಕೋಡ್ (1904) ಬೈಂಡುದು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು—1908.	203	1	0	0	6	0
62	ಮೈಸೂರು ಕೋಡು ಸಂಪುಟ I.	637	4	0	0	6	0
63	1909ನೆ ಇಸವಿಯ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳು ...	13	0	1	0	1	0
64	1908ನೆ ಇಸವಿಯ Vನೆ ರೆಗ್ಯುಲೇಷನ್—ಮೈಸೂರು ಪೊಲೀಸ್ ರೆಗ್ಯುಲೇಷನ್.	93	0	4	0	1	6
65	1902ನೆ ಇಸವಿಯ IVನೆ ರೆಗ್ಯುಲೇಷನ್—ಮೈಸೂರು ಸೀಮೆಯ ಗ್ರಾಮ ನೌಕರಿಗಳ ರೆಗ್ಯುಲೇಷನ್.	30	0	1	0	1	0

ರೆಜಿಸ್ಟ್ರೇಷನ್ ಫೀ ಅಲಾಯಿದ.

ಎಸ್. ಅಬುಲ್ ಹೈ, ಕ್ಯೂರೇಟು.

ಪ್ರಕಟನೆ.

ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ ವಿ. ಇ. ಸ್ಕೂಲ್ ಅ॥ ಮಾ॥ ರಾಗಿರುವ ಪಿ. ಕೃಷ್ಣರಾವ್ ಆದ ನಾನು ಪಿ. ಕೃಷ್ಣಾಚಾರ್ಯ ಎಂಬದಾಗಿ ರುಜುವನ್ನು ತಿದ್ದಿಕೊಂಡಿರುತ್ತೇನೆ.

ಪಿ. ಕೃಷ್ಣಾಚಾರ್ಯ.

ಸ್ವಂತ ಪ್ರಕಟನೆ-ಚಿತ್ರದುರ್ಗ ಜಿ॥ ದಾವಣಗೆರೆ ತಾ॥ ಕಸಬಾ ದಾವಣಗೆರೆಯಲ್ಲಿರುವ ಬಳ್ಳಾರಿ ಸಂಗಪ್ಪನವರ ಕುಮಾರ ಚನ್ನವೀರಪ್ಪನಾದ ನಾನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :-ದಾವಣಗೆರೆ ತಾ ಪೈಕಿ ಕಸಬಾ ಮತ್ತು ಗ್ರಾಮಾಂತರಗಳಲ್ಲಿರುವ ವಿಶಿಷ್ಟಸ್ವತ್ತುಗಳು ನನ್ನ ಖಾಸಾ ಮಾವಂದರಾದ ಬಳ್ಳಾರಿಜಿಲ್ಲಾ ಹರಪನಹಳ್ಳಿ ತಾ ಚಿಗಟೇರಿ ಗ್ರಾಮದಲ್ಲಿ ವಾಸವಾಗಿದ್ದ ಜವಳಿ ಸಾಹುಕಾರ್ ವೀರಪ್ಪನವರ ಕುಮಾರು ಸಿದ್ಧವೀರಪ್ಪನವರಿಂದ ಸರ್ 1882ನೆ ಇಸವಿ ಡಿಸೆಂಬರ್ ತಾರೀಖು 21ನೆ ಮರ್ಕುಮಿನವಿಲ್ ಮೂಲಕವಾಗಿಯೂ ಮತ್ತು ನನ್ನ ಸ್ವಯಾರ್ಜಿತವಾಗಿಯೂ ಬಂದು ಆಲಾಗಾಯಿತು ನನ್ನ ಸ್ವಾಧೀನಾನುಭವದಲ್ಲಿರುತ್ತವೆ. ಸದರಹು ಸ್ವತ್ತುಗಳಮೇಲೆ ನನ್ನ ವಿಭಕ್ತ ಸಹೋದರರಾದ ನಂಜಣ್ಣ, ಮಲ್ಲಪ್ಪ, ಮಹದೇವಪ್ಪ ಇವರುಗಳಿಗೆ ಆಗಲಿ ಮತ್ಯಾರಿಗೆ ಆಗಲಿ ಯಾವವಿಧವಾದ ಹಕ್ಕು ಬಾಧ್ಯತೆಯೂ ಇರುವದಿಲ್ಲ. ಡಿಟೋ ಸ್ವತ್ತುಗಳನ್ನು ಮೇಲ್ಕಂಡ ನನ್ನ ಸಹೋದರರು ವಗೈರೇರು ಪರಾಧೀನ ವಗೈರೆ ಮಾಡಲು ಪ್ರಯತ್ನಪಟ್ಟಿರುವಂತೆ ವರ್ತಮಾನ ತಿಳದುಬಂದಿರುವದರಿಂದ ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ-ಡಿಟೋ ಸ್ವತ್ತುಗಳನ್ನು ನನ್ನ ತಿಳವಳಿಕೆ ಮತ್ತು ಅನುಮತಿಯಿಲ್ಲದೆ ಯಾರಾದರು ಕ್ರಯ, ಭೋಗ್ಯ, ಆಧಾರ ವಗೈರೆ ಮೂಲಕ ಪಡದುಕೊಂಡದ್ದೆ ಆದರೆ ಅದು ಲಾ ಮೇರಿಗೆ ಊರ್ಜಿತವಾಗತಕ್ಕದ್ದಲ್ಲವೆಂಬ ಅಂಶವು ಈ ಮೂಲಕ ತಿಳಿಸಿದೆ. ರುಜು ಬಳ್ಳಾರಿ ಚನ್ನವೀರಪ್ಪ

ಮೈಸೂರ ಗೆಜೆಟ್.

ಭಾ 44.] ಸರ್ಕಾರದಿಂದ ಪ್ರಕಟಿಸಲ್ಪಟ್ಟುದು. [ಸಂ. 45.

ಬೆಂಗಳೂರು, ಗುರುವಾರ, ನವಂಬರ್ ತಾ॥ 18, ಸನ್ 1909.

IIನೆ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ ಡಿಪಾರ್ಟಮೆಂಟ.

ಇಸ್ತಿಹಾರ್ನಾಮೆ.

ನಂ. 317, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕಿನ 228 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಶಿರಾ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 10ನೆ ಶುಕ್ರವಾರ ಅಥವಾ ಆ ಸುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ತ್ರ್ಯಂಬಕರಾವ್.

ಸೂಪರ್ಇಂಟೆಂಡೆಂಟ್, ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್.

ಫಾರೆಸ್ಟ್ ಇಲಾಖಾ.

ಸಂಡಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೀಯಾನ ನಡಿಯುತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕನ್ಸರ್ವೇಟರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ	ಡಿಸ್ಟ್ರಿಕ್ಟ.	ಕೋಠಿ.	ಹರಾಜು ತಾರೀಖು		[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್ ತಾರೀಖು	18	200	
2	ಡಿಟ್ಟೋ ...	ಸಾಗರ .	ಡಿಟ್ಟೋ	22	100	
3	ಡಿಟ್ಟೋ ...	ಶಿವಮೊಗ್ಗ ...	ಡಿಟ್ಟೋ	25	500	
4	ಕಡೂರು ...	ತರೀಕೆರೆ ...	ಡಿಟ್ಟೋ	29	(a)200	(a) ಚಿತ್ರದುರ್ಗದ 10 ಟನ್‌ಗಳು ಸೇರಿರುತ್ತೆ.
5	ಡಿಟ್ಟೋ ...	ಚಿಕ್ಕಮಗಳೂರು ...	1909ನೆ ಡಿಸಂಬರ್ ತಾರೀಖು	2	400	
6	ಹಾಸನ ..	ಹಾಸನ ...	ಡಿಟ್ಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟ್ಟೋ	9	(b)100	(b) ತುಮಕೂರು 30 ಟನ್ ಗಳು ಕೋಲಾರದ 5 ಟನ್‌ಗಳು ಸೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟ್ಟೋ	13	250	
9	ಡಿಟ್ಟೋ ...	ಹುಣಸೂರು ...	ಡಿಟ್ಟೋ	16	450	
			ಜಾಮಾ ...		2,400	

ಎಂ. ಮುತ್ತಣ್ಣ, ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಅಮೃತಮಹಲ್ ಇಲಾಖಾ.

ನೋಟಿಫಿಕೇಷನ್.

ಕ್ಯಾಂಪ್ ಮೈಸೂರು, ತಾರೀಖು 14ನೆ ನವಂಬರು 1909.

ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳನ್ನು 6—12—1909ರ ಲಾಗಾಯಿತು ಮಾಗಡಿ ತಾಲ್ಲೂಕು "ಬಗನಗೆರೆ" ಕಾವಲಿನಲ್ಲಿಯು (ಅಂದರೆ ಕುಣಿಗಲ್-ಬೆಂಗಳೂರು ರಸ್ತೆಯು 35ನೆ ಮೈಲಿಯು ಸಮೀಪ) ಮತ್ತು 12—12—09ರ ಲಾಗಾಯಿತು ಅರಸೀಕೆರೆ ತಾಲ್ಲೂಕು "ಗಂಡಸಿ" ಬಂಗ್ಲಾ ಬಳಿಯಲ್ಲಿಯೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ, ಇಷ್ಟವುಳ್ಳವರು ಹಾಜರಾಗಿ ಛಡಸವಾಲಿನಲ್ಲಿ ರಾಸುಗಳನ್ನು ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್, ಸೂಪರ್ರಿಂಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 6ನೆ ಮಾಹೆ ನವಂಬರ್ 1909.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಕಡೆದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರಫ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೇಜವರಿ ವಿಷಯದಲ್ಲಾಗಲಿ ಇರುವ ಗಲ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲಿನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೇಜವರಿ.	ಎ.	ಗು.	ಅಂದಾಜಾ ಹುಟ್ಟುವಳಿ ಯಾ ಬೇರೀಜು. ರೂ.	ಆ.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್. ರೂ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ. ರೂ.	ಆ.	ಪೈ.	ಹರಾಜು ತಾರೀಖು ವಗೈರೆ.
ಕೋಲಾರ	ಚಿಕ್ಕಬಳ್ಳಾಪುರ	ಕಸಬಾ	ಜೋಡಿ ಜಡ್ಲತಿಮ್ಮನಹಳ್ಳಿ	ಕರಗದ ರಂಗಪ್ಪ	ಪರಂಪೋಕು ...	43	13	0	12	19	98	7	0	1909ನೆ ಇಸವಿ ಡಿಸೆಂಬರು 13ನೆ ತಾ॥ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸರವರ ರೂಬರೂಬ್.
					ಖುಷ್ಕಿ ...	28	7	38	0					
					ತರಿ ...	7	32	40	0					
					ಬಾಗಾಯಿತು ...	1	18	7	0					
						80	35	85	12					

ಚಕ್ಕುಬಂದಿ.

ಚೌತರ್ಫಿನಲ್ಲೂ ಕಳವರ ಗ್ರಾಮದ ಗಡಿ.

ಎ. ವೇದಾಂತದೇಸಿಗಂ ಐಯಂಗಾರ್, ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರ ಆಫೀಸುನಿಂದ—

ಪ್ರಕಟನೆ.

ತಾರೀಖು 20ನೆ ಅಕ್ಟೋಬರ 1909.

ಪೊಲೀಸ್ ಇನ್ಸ್‌ಪೆಕ್ಟರಾಗಿ ಇದ್ದು ಹಾಲೀ ಮೃತಪಟ್ಟು ಇರುವ ಮುಹಮ್ಮದ್‌ಹುಸೇನ್ ಎಂಬುವರಿಂದ ಸದರಿಯುವರ ಬಾಬತು ಸಾಲಗಳಿಗಾಗಿ ವಸೂಲಾದ ಮೊಬಲಗು ಹನ್ನೆರಡು ರೂಪಾಯಿ ನಾಲ್ಕು ಆಣೆ (12—4—0) ಗಳು ನಮ್ಮ ಆಫೀಸಿನಲ್ಲಿ ನಿಂತು ಇರುತ್ತೆ. ಆದ್ದರಿಂದ ಈ ಪ್ರಕಟನೆಯು ತಾರೀಖು ಲಾಗಾಯಿತು ಆರು ತಿಂಗಳೊಳಗಾಗಿ ಮೇಲ್ಕಂಡ ಮಾಜಿ ಪೊಲೀಸ್ ಇನ್ಸ್‌ಪೆಕ್ಟರ್ ಮುಹಮ್ಮದ್ ಹುಸೇನರ ವಾರಸ್‌ದಾರುಗಳಾಗಲೀ, ಅಥವಾ ಸಾಲಗಾರರೇ ಆಗಲೀ ಹಕ್ಕು ಸ್ಥಿರಪಡಿಸದೇ ಹೋದರೆ, ಸದರಿ ಮೊಬಲಗನ್ನು ಗೌರ್ನಮೆಂಟ್ ಜಮೆಗೆ ತೆಗದುಕೊಳ್ಳಲ್ಪಡುತ್ತೆಂತಾ ಇದರ ಮೂಲಕ ಎಲ್ಲರಿಗೂ ತಿಳಿಯಪಡಿಸಿ ಇದೆ.

ಎಂ. ಪಿ. ವಿಶ್ವನಾಥರಾವ್,
ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ 1909.

ಸಾಗರ ತಾಲ್ಲೂಕಿನಲ್ಲಿ ಗೆರಸಪ್ಪಾ ಫಾಲ್ಸ್ ಬಳಿ ಇರುವ ಜೋಗಿನ ಟ್ರಾವಲರ್ಸ್ ಬಂಗ್ಲೆಯು ಸನ್ 1909ನೆ ನವಂಬರು 1ರ ಲಾಗಾಯಿತು 27ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಿರುತ್ತಾಗಿ ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 27ನೆ ಅಕ್ಟೋಬರ 1909.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ :—ಸಾಗರ ತಾಲ್ಲೂಕಿಗೆ ಸೇರಿದ ಸಾಗರ ಮತ್ತು ಅನಂತಪುರದಲ್ಲಿರುವ ಟ್ರಾವಲರ್ಸ್ ಬಂಗಲೆಗಳನ್ನು ಸನ್ 1909ನೆ ಇಸವಿ ನವಂಬರು 13ರ ಲಾಗಾಯಿತು 25ನೆ ತಾರೀಖಿನ ವರಿಗೆ ಪ್ರಯಾಣೀಕರ ಉಪಯೋಗಕ್ಕೆ ಅವಕಾಶವಿಲ್ಲದಂತೆ ಬಂದ್ ಮಾಡಲ್ಪಟ್ಟಿರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ತಾರೀಖು 12ನೆ ನವಂಬರು 1909, ಶಿವಮೊಗ್ಗಾ.

ಶಿವಮೊಗ್ಗಾ ಟವನ್ನಲ್ಲಿರುವ ಟ್ರಾವಲರ್ಸ್ ಬಂಗ್ಲೆಯಲ್ಲಿ ಪ್ರಯಾಣೀಕರು 1909ನೆ ನವಂಬರ 15ರ ಲಾಗಾಯಿತು 25ರ ವರಿಗೆ ಇಳಿಯುವದಕ್ಕೆ ಅವಕಾಶವಿರುವದಿಲ್ಲಾ.

ಬಿ. ಭೀಮರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ಮೂಡಿಗೆರೆ ತಾಲ್ಲೂಕು ಜೋಡಿ ಗೋಣಿಬೀಡು ಅಗ್ರಹಾರವು ಸರ್ಕಾರಕ್ಕೆ ಬರತಕ್ಕ ಬಾಕಿಗೋಸ್ಕರವಾಗಿ ಮೂಡಿಗೆರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ನವಂಬರ ಮಾಹೆ 30ನೆ ತಾರೀಖು ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಿರುತ್ತೆ.

(ಹೆಚ್ಚು ತಪಶೀಲು ಬಗ್ಗೆ 1909ನೆ ಇಸವಿ ನವಂಬರ್ 4ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 838ನೆ ಪುಟವನ್ನು ನೋಡತಕ್ಕದ್ದು).

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 5ನೆ ನವಂಬರು 1909ನೆ ಇಸವಿ, ಚಿತ್ರದುರ್ಗ.

ಇದರಿಂದ ಸಮಸ್ತರಿಗೆ ತಿಳಿಯಪಡಿಸುವದೇನಂದರೆ—ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಆಫೀಸ್ ರಿಕಾರ್ಡಿನಲ್ಲಿ ವಿಲೆ ಇರತಕ್ಕ 1834—35ನೆ ಸಾಲ್ ಲಾಗಾಯಿತು 1860—61ನೆ ಸಾಲ್ ವರಿಗೆ ಇರುವ ಕುಳವಾರ್ ಚಿಟ್ಟೆಗಳು ಈ ತಾರೀಖು ಲಾಗಾಯಿತು ಮೂರು ತಿಂಗಳು ಕಳೆದನಂತರ ನಾಶಪಡಿಸಲ್ಪಡುತ್ತೆ ಆದಪ್ರಯುಕ್ತ ಸದರಿ ಕುಳವಾರು ಚಿಟ್ಟೆಗಳು ದಾಖಲೆ ಬಗ್ಗೆ ಬೇಕಾಗಿದ್ದಲ್ಲಿ ಮೇಲ್ಕಂಡ ವಾಯಿದೆ ಒಳಗೆ ಹಾಜರಾಗಿ ದರಖಾಸ್ತು ಮೂಲಕ ನಕಲ್ ತೆಗೆದುಕೊಳ್ಳಬಹುದು.

ಡಿ. ಶ್ರೀನಿವಾಸೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1909—10ನೆ ಇಸವಿ ವಿ॥ ಅರ್ಜೀ ನಂಬರ್ 184.

ಕಲ್ಕತ್ತಾದಲ್ಲಿ ಮೃತಪಟ್ಟ ಚಿಂತಲಪಲ್ಲಿ ವೆಂಕಟರತ್ನಂ ಆಸ್ತೀ ವಿಷಯದಲ್ಲಿ—.

ಅರ್ಜೀದಾರರು 1ನೆ ಗುಂಡೂರಾವ್, 2ನೆ ರಾಮಚಂದ್ರರಾವ್, ಮೃತಪಟ್ಟ ಸದರಿ ವೆಂಕಟರತ್ನಂ ಯವರಿಗೆ ಮುಖ್ಯವಾರಸದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಕಲ್ಕತ್ತಾ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸದರಿ ವೆಂಕಟರತ್ನಂಯವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರೆಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ದಾಯಿಸ್ಸು ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಗುಂಡೂರಾವ್, ರಾಮಚಂದ್ರರಾವ್ ಇವರುಗಳ ಅರ್ಜಿಯನ್ನು 1909ನೆ ಇಸವಿ ನವಂಬರ ತಿಂಗಳು ತಾರೀಖು 26 ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರತ್ನಂ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1909ನೆ ಇಸವಿ ನವಂಬರ್ ತಿಂಗಳು 3ನೆ ತಾರೀಖಿನಲ್ಲಿ ಕೋರ್ಟು ಮೊಹರಿ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ ಐಯ್ಯರ್,
ಸಬ್ ಜಡ್ಜಿ.

ಪ್ರಸಿದ್ಧ ಪತ್ರಿಕೆ.

ಒಳ್ಳೇ ಸಮಯ!

ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು ಈ ರೈಲ್ವೆಗಾಗಿ ಖರ್ಚಾದ ಮೊಬಲಗಿನ ಮೇಲೆ ಶೇಕಡ 4 ರಂತೆ ಬಡ್ಡಿಯನ್ನು ಕೊಡುವಹಾಗೆ ಭರವಸೆಯನ್ನು ದಯಪಾಲಿಸಿರುತ್ತಾರೆ; ಮತ್ತು ಇದಕ್ಕಿಂತಲೂ ಹೆಚ್ಚಾದ ಲಾಭವು ದೊರೆಯುವ ಸಂದರ್ಭವೂ ಉಂಟು.

ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

1895ನೆ ಇಸವಿಯ 3ನೆ ಮೈಸೂರು ಕಂಪೆನಿ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ ಮಾಡಿಧೆ.

ಮುಖ್ಯ ಆಫೀಸು:—ಬೆಂಗಳೂರು ಚಾಮರಾಜಪೇಟೆ; ಬ್ರಾಂಚ್ ಆಫೀಸು:—ಬೊಂಬಾಯಿ ಕೋಟೆ.

ಮೂಲಧನ 12,00,000 ರೂಪಾಯಿಗಳು.

ಷೇರುಗಳು:—

ಷೇರು 1ಕ್ಕೆ 25 ರೂಪಾಯಿ ಉಳ್ಳ 48,000 ಷೇರುಗಳಾಗಿ ಮೇಲ್ಕಂಡ ಮೂಲಧನವು ಭಾಗಿಸಲ್ಪಟ್ಟಿಧೆ. ಇದರ ಪೈಕಿ ಆಗಲೇ 35,000 ಷೇರುಗಳು ವಿಕರಿಯಾಗಿಧೆ. ಉಳಿದ 13,000 ಷೇರುಗಳನ್ನು ಈಗ ಜನಗಳು ತೆಗೆದುಕೊಳ್ಳಬಹುದು.

ಷೇರುಗಳನ್ನು ತೆಗೆದುಕೊಳ್ಳತಕ್ಕವರು ಪಾವತಿ ಮಾಡತಕ್ಕ ಮೊಬಲಗಿನ ವಿವರ:—ಅಪ್ಲಿಕೇಷನ್ನೊಂದಿಗೆ ಷೇರು 1ಕ್ಕೆ 1 ರೂಪಾಯಿಯೂ, ಹಂಚಿಗೆಯ ಕಾಲದಲ್ಲಿ ಷೇರು 1ಕ್ಕೆ 4 ರೂಪಾಯಿಯೂ, ಉಳಿದ 20 ರೂಪಾಯಿಗಳು 4 ಕಂತುಗಳಲ್ಲಿ ಕಂತು 1ಕ್ಕೆ 5 ರೂಪಾಯಿನಂತೆ ನೋಟಿಸ್ ಬಂದ ಕಾಲದಲ್ಲಿ ಕೊಡತಕ್ಕದ್ದು. ಒಂದೊಂದು ಕಂತಿಗೂ 2 ತಿಂಗಳಿಗೆ ಕಡಮೆ ಇಲ್ಲದಂತೆ ವ್ಯವಧಾನ ಕೊಡಲ್ಪಡುವದು.

ಷೇರುಗಳಿಗಾಗಿ ದರಖಾಸ್ತುಗಳನ್ನು ಮೇಲೆ ಹೇಳಿದ ಆಫೀಸುಗಳಲ್ಲಿ ಡೈರೆಕ್ಟರುಗಳಿಗಾದರೂ, ಅಥವಾ ಕಂಪನಿಯ ಬ್ಯಾಂಕುಗಳಿಗಾದರೂ ಬರೆದುಕೊಳ್ಳಬೇಕು.

ಡೈರೆಕ್ಟರುಗಳ ಸಭೆ.

1. ಮ॥ ರಾ॥ ರಾಜಮಂತ್ರಪ್ರವೀಣ ಸಿ. ಶ್ರೀನಿವಾಸಯ್ಯಂಗಾರ್ರವರು, ರಿಟೈರ್ಡ್ ಕೌನ್ಸಿಲರ್, ಛೇರ್ಮನ್.

ಮೊ॥ ಗಳಾದ

2. ,, ರಾಯಬಹದ್ದೂರ್ ಎ ಮೈಗಂಡದೇವ ಮೊದಲಿಯಾರ್ರವರು.
3. ,, ಹಾಜಿ ಇಸ್ಮೇಲ್ ಸೇಟರವರು.
4. ,, ಬಿ. ನಾಗಪ್ಪನವರು, ಬ್ಯಾರಿಸ್ಟರ್.
5. ,, ಎ. ಮಾಸಿಲಾಮಣಿ ಶೆಟ್ಟರವರು.
6. ,, ಬಿ. ವೆಂಕಟಪತಯ್ಯಂಗಾರ್ರವರು.
7. ,, ಎ. ಸುಬ್ಬರಾಯರು.
8. ,, ಸಾಹುಕಾರ ಗುಬ್ಬಿ ತೋಟದಪ್ಪನವರು.

ಮೊ॥ ಗಳಾದ

9. ,, ಸರ್ ವಿಠಲ್‌ದಾಸ್ ದಾಮೋದರಥ್ಯಾಕರ್ಸೆಯವರು.
10. ,, ಚುನಿಲಾಲ್ ಚಿ. ಸರಯಾಯವರು.
11. ,, ಲಾಲುಬಾಯಿಸಾಮಲ್ದಾಸರವರು.
12. ,, ವರದರಾಜಯ್ಯಂಗಾರ್ರವರು.
13. ,, ಸಾಹುಕಾರ್ ಹರಿಯಣ್ಣನವರು.
14. ,, ವಿ. ಎಚ್. ಕರ್ವೆಯವರು.
15. ,, ರಾಮಚಂದ್ರರಾವ್ ಸಿಂಧಿಯಾಯವರು

ಬ್ಯಾಂಕುಗಳು.

1. ಬೆಂಗಳೂರಲ್ಲಿರುವ ಮದರಾಸು ಬ್ಯಾಂಕು.
2. ಬೊಂಬಾಯಿಯಲ್ಲಿ ಇಂಡಿಯನ್ ಸ್ಪೇಶಿ ಬ್ಯಾಂಕು.

ಸೂಚನೆ ಪತ್ರ.

1. ಈಗ ಬೆಂಗಳೂರಿಂದ ಚಿಕ್ಕಬಳ್ಳಾಪುರದವರೆಗೂ ಸುಮಾರು 38 ಮೈಲಿಗಳ ದೂರ ಎರಡೂವರೆ ಅಡಿ ಅಗಲವುಳ್ಳ ರೈಲುಮಾರ್ಗವನ್ನು ಹಾಕಿ, ಅದಕ್ಕೆ ಬೇಕಾದ ಗಾಡಿಗಳು ಮುಂತಾದವುಗಳನ್ನ ತರಿಸಿ, ರೈಲು ಗಾಡಿಯನ್ನು ನಡೆಸುವ ಹಾಗೆಯೂ, ಮುಂದಕ್ಕೆ ಇದೇ ರೈಲು ಮಾರ್ಗವನ್ನು ಸಿಡ್ಲಘಟ್ಟ ಚಿಂತಾಮಣಿ ಮಾರ್ಗವಾಗಿ ಮದನಪಲ್ಲಿ ಕಡೆಯೂ ಮತ್ತು ಆನೇಕಲ್ ಮಾರ್ಗವಾಗಿ ಹೊಸೂರು ಕಡೆಯೂ ಬೆಳೆಸುವದೂ, ಈ ಕಂಪೆನಿಯ ಮುಖ್ಯ ಉದ್ದೇಶವು.

2. ಈಗ ಉದ್ದೇಶಮಾಡಿರುವ ರೈಲು ದಾರಿ ಹೋಗುವ ಕಡೆಯಲ್ಲೆಲ್ಲವೂ ಜನಗಳು ಕೈಗಾರಿಕೆ ಮತ್ತು ವ್ಯವಸಾಯ ಕೆಲಸಗಳಲ್ಲಿ ಆಸಕ್ತಿ ಉಳ್ಳವರಾದ್ದರಿಂದ, ಪ್ರಯಾಣಿಕರ ಸಂಚಾರವೂ ಮತ್ತು ಪದಾರ್ಥಗಳ ಆಮದು ರಫ್ತು ವ್ಯಾಪಾರವೂ ವಿಶೇಷವಾಗಿ ನಡೆಯುತ್ತಿರುವುದಲ್ಲದೆ, ಹೊಳೆಗಳು ಇಲ್ಲವಾದಕಾರಣ ದೊಡ್ಡ ಸೇತುವೆ ಮುಂತಾದವುಗಳು ಕಟ್ಟುವದು ಅನಾವಶ್ಯಕವಾದ್ದರಿಂದ, ಈ ರೈಲು ಮಾರ್ಗ ಹಾಕುವದಕ್ಕೆ ಹೆಚ್ಚಾದ ಪ್ರಯಾಸವಿರುವುದಿಲ್ಲವು; ಮತ್ತು ಕಾಂಗಾರಿಗೆ ಬೇಕಾದ ಕಲ್ಲು, ಸುಣ್ಣ, ಮರಳು ಮುಂತಾದ ಪದಾರ್ಥಗಳ್ಯಾವತ್ತೂ ಬಹಳ ಸಮೀಪದಲ್ಲಿಯೇ ದೊರೆಯುತ್ತವೆ.

3. ಈ ಕಂಪೆನಿಯಲ್ಲಿ ಷೇರುಗಳು ಪಡೆಯತಕ್ಕವರು ಮುಖ್ಯವಾಗಿ ಗಮನಿಸಬೇಕಾದ ಅಂಶವು ಏನೆಂದರೆ:—ಶ್ರೀಮನ್ಮಹಾರಾಜರವರ ಸರ್ಕಾರದವರು ಶೇಕಡ 4 ರಂತೆ ಬಡ್ಡಿ ಕೊಡುವ ಹಾಗೆ ದಯಪಾಲಿಸಿರುವ ಭರವಸೆಯಿಂದ ಷೇರುದಾರರುಗಳಿಗೆ ಶೇಕಡ 4 ಕ್ಕಿಂತಲೂ ಹುಟ್ಟುವಳಿ ಅಂದರೆ, ದೊರೆಯುವ ಬಡ್ಡಿ, ಎಂದಿಗೂ ಕಡಮೆಯಾಗಲಾರದೆಂಬುವದೇ. ಈ ಲೈನಿನ ಕಾಂಗಾರಿಗೋಸ್ಕರ ತಯಾರ್ಮಾಡಿ ಕಳುಹಿಸಿದ್ದ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ಇಂಡಿಯಾ ಗೌರ್ನಮೆಂಟಿನವರು ಸಹಾ ಮಂಜೂರ್ಮಾಡಿರುತ್ತಾರೆ. ಇದೂ ಅಲ್ಲದೆ, ಸರ್ಕಾರದವರು ನಮ್ಮ ಕೆಲಸಕ್ಕೆ ಬೇಕಾದ ಜಮೀನುಗಳನ್ನು ಕೊಡಿಸುವಂತೆಯೂ ಮತ್ತು ರೈಲಿಗೋಸ್ಕರ ನಮಗೆ ಅನುಕೂಲಪಡುವದಾದರೆ, ತತ್ಕಾಲದಲ್ಲಿ ಇರುವ ರೋಡುಗಳನ್ನು ಬೇಕಾದಮಟ್ಟಿಗೆ ಉಪಯೋಗಿಸಬಹುದೆಂತಲೂ, ಅಪ್ಪಣೆಯನ್ನು ಕೊಟ್ಟಿರುವದ್ದರಿಂದ, ಕಾಂಗಾರಿಯನ್ನು ಬಹಳ ಮಟ್ಟಿಗೆ ಸುಲಭವಾಗಿ ನಡೆಸಲು ಅನುಕೂಲಿಸುವದು; ಮತ್ತು ಕಾಂಗಾರಿ ಶುರು ಆದಲಾಗಾಯಿತು ಷೇರುದಾರರುಗಳ ಹಣಕ್ಕೆ ಬಡ್ಡಿಯನ್ನು ಕೊಡಲು ಸರ್ಕಾರದವರು ಅಪ್ಪಣೆಯನ್ನು ಕೊಟ್ಟಿರುತ್ತಾರೆ.

4. ಮೈಸೂರು ಸರ್ಕಾರದವರು ಇಷ್ಟಪಟ್ಟರೆ 20 ವರುಷಗಳ ನಂತರ ಈ ಲೈನನ್ನು ಇತರ ಕಡೆಗಳಲ್ಲಿ ಇರುವ ಪದ್ಧತಿಯನ್ನನುಸರಿಸಿ ತಕ್ಕ ಕ್ರಯವನ್ನು ಕೊಟ್ಟು ನಮ್ಮಿಂದ ತೆಗೆದುಕೊಳ್ಳಬಹುದಾಗಿದೆ.

5. ರೈಲ್ವೆ ಹಾಕುವದಕ್ಕೆ ತಗಲುವ ಖರ್ಚು:—ಕಂಬಿ, ಗಾಡಿ, ಇಂಜಿನ್ ಮುಂತಾದವುಗಳೆಲ್ಲಾ ಸೇರಿ 13,73,278 ರೂಪಾಯಿಗಳು ಆಗಬಹುದೆಂದು ಕಂಪೆನಿ ಇಂಜನಿಯರಿಂದ ಮಾಡಿಸಲ್ಪಟ್ಟ ಅಂದಾಜನ್ನು ಗೌರ್ನಮೆಂಟಿನವರು ಸಹಾ ಒಪ್ಪಿರುತ್ತಾರೆ.

6. ಹುಟ್ಟುವಳಿಯ ಅಂದಾಜು:—ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದಲ್ಲಿ ಕೌನ್ಸಿಲರ್ ಆಗಿರುವ ಮೆ॥ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು 1906ನೇ ಸನೆ ರಲ್ಲಿ ಬರೆದ ಕಾಗದದಲ್ಲಿ ನಮೂದಿಸಿರುವದೇನಂದರೆ:—ಈ ರೈಲ್ವೆಯಲ್ಲಿ ನಡೆಯಬಹುದಾದ ಆಮದು ರಫ್ತುಗಳ ಅಂದಾಜನ್ನು ಬಹಳಮಟ್ಟಿಗೆ ಕಡಮೆಯಾಗಿಯೇ ಮಾಡಿರುತ್ತದೆ. ಇದಕ್ಕಿಂತಲೂ ಕಡಮೆಯಾಗಲಾರದೆಂಬುವದಕ್ಕೆ ಸಂಶಯವಿಲ್ಲ. ರೈಲ್ವೆ ದೆಸೆಯಿಂದ ಪ್ರಜೆಗಳಿಗೆ ಉಂಟಾಗುವ ಸೌಕರ್ಯಗಳನ್ನನುಸರಿಸಿ, ಈ ರೈಲ್ವೆ ಆದಾಯವು ಮುಂದೆ ಈಗ ಮಾಡಿರುವ ಅಂದಾಜಿಗಿಂತಲೂ ಶೇಕಡ 10 ರಂತೆ ಹೆಚ್ಚಾಗಬಹುದೆಂದು ನಂಬಬಹುದು.

ಮೇಲ್ಕಂಡ ಅಂದಾಜಿನ ವಿವರ.

ಪ್ರಯಾಣಿಕರಿಂದ	ರೂ	40,000
ಸಾಮಾನುಗಳಿಂದ	,,	47,000
ಟಪಾಲ್, ಪಾರ್ಸಲ್ ಮುಂತಾದವುಗಳಿಂದ	,,	5,000
ಜುಮ್ಲಾ ...	,,	92,000

ಮೇಲ್ಕಂಡ ಅಂದಾಜು ಮಾಡಿದ ತರುವಾಯ ಅಂದರೆ, ಈಚೆಗೆ ಸದರ್ ಮಹರಾಟ ರೈಲ್ವೆ ಕಂಪೆನಿಯವರ ಆಫೀಸರುಗಳಿಂದ ಮಾಡಲ್ಪಟ್ಟ ತನಿಖೆಯ ಪ್ರಕಾರ, ಪ್ರಯಾಣಿಕರುಗಳಿಂದ 43,344 ರೂಪಾಯಿಗಳು, ಸಾಮಾನುಗಳಿಂದ 65,738 ರೂಪಾಯಿಗಳು, ಟಪಾಲು ವಗೈರೆಯಿಂದ 5,000 ರೂಪಾಯಿಗಳು, ಜುಮ್ಲಾ 1,14,0 2 ರೂಪಾಯಿಗಳು ಹುಟ್ಟುವಳಿ ಅಂದಾಜಾಗಿರುತ್ತದೆ. ಇಷ್ಟು ಕ್ಷಿಪ್ರದಲ್ಲಿಯೇ ಹುಟ್ಟುವಳಿಯ ಅಂದಾಜಿನಲ್ಲಿ ಸುಮಾರು 22,000 ರೂಪಾಯಿಗಳು ಹೆಚ್ಚಾಗಿಯೇ ಕಾಣಬರುವುದರಿಂದ, ಮುಂದಕ್ಕೆ ದೇಶಾಭಿವೃದ್ಧಿಯು ಅತಿ ಸುಲಭವಾಗಿ ಆಗಬಹುದೆಂಬುವ ಭರವಸೆ ಉಂಟಾಗಿರುತ್ತದೆ.

7. ಮೇಲ್ಕಂಡ 1,14,082 ರೂಪಾಯಿ ಹುಟ್ಟುವಳಿಯಲ್ಲಿ ಚಾಲ್ತಿ ಖರ್ಚು ಜಾತಾ ಉಳಿಯುವ 56,000 ರೂಪಾಯಿಗಳಿಂದ ಲೈನಿಗೋಸ್ಕರ ವೆಚ್ಚಮಾಡುವ ಹಣಕ್ಕೆ ಶೇಕಡ 4 ಕ್ಕಿಂತಲೂ ಹೆಚ್ಚಾಗಿ ಲಾಭವೂ ಹಂಚಬಹುದು.

8. ಮೇಲ್ಕಂಡ ಈ ಅಂದಾಜುಗಳಲ್ಲಿ ಹುಟ್ಟುವಳಿಯು ಕನಿಷ್ಟಪಕ್ಷವಾಗಿಯೂ ಖರ್ಚು ವೆಚ್ಚಗಳು ಹೆಚ್ಚಾಗಿಯೂ ಗಣಿಸಿದೆ ಎಂಬ ವಿಷಯವನ್ನು ಜ್ಞಾಪಕದಲ್ಲಿಡತಕ್ಕದ್ದಾಗಿದೆ. ಮೆ॥ ಕೌನ್ಸಿಲರ್ ಪುಟ್ಟಣ್ಣಶೆಟ್ಟರವರು ಹೇಳಿರುವವರ ಜೊತೆಗೆ ಆಮದುರಫ್ತು ತನಿಖೆಯನ್ನು ಮಾಡಲಿಕ್ಕೆ ಮೆ॥ ಪುಟ್ಟಣ್ಣ ಶೆಟ್ಟರವರಿಗೆ ಸಹಾಯವಾಗಿ ನೇಮಿಸಲ್ಪಟ್ಟಿದ್ದ ಮೆ॥ ಕೆ. ಆರ್. ಶ್ರೀನಿವಾಸ್ಯಯ್ಯಂಗಾರ್, ಎಂ. ಎ. ಯವರು ಸರ್ಕಾರಿ ರಿಪೋರ್ಟಿನಲ್ಲಿ ಬರೆದಿರುವುದನ್ನು ಗಮನಿಸಬೇಕಾಗಿದೆ. ಅದೇನಂದರೆ:—ಈ ಅಂದಾಜಾಪಟ್ಟಿಯನ್ನು ಬರೆಯುವದರಲ್ಲಿ ನಾನು ಬಹಳ ಜಾಗರೂಕನಾಗಿದ್ದೆನಾದಕಾರಣ ನಿಜವಾಗಿ ಹುಟ್ಟುವಳಿ ಆಗುವುದಕ್ಕಿಂತಲೂ ಕಡಮೆಯಾಗಿಯೇ ಗಣಿಸಿ ಬರೆದಿರುವ ಆಮದು ರಫ್ತುಗಳ ಸಂಖ್ಯೆಗಳು ಕನಿಷ್ಟಪಕ್ಷವೆಂದು ತಿಳಿಯತಕ್ಕದ್ದು.

9. ಮೇಲ್ಕಂಡ ರಿಪೋರ್ಟುಗಳು ಮತ್ತು ಸಂಖ್ಯೆಗಳಿಂದಲೇ ಎಲ್ಲವೂ ವೇದ್ಯವಾಗಬಹುದು. ರೈಲ್ವೆ ಬರುವುದರಿಂದ ಆಯಾ ದೇಶದಲ್ಲಿ ಕೃಷಿವಾಣಿಜ್ಯಗಳು ಅಭಿವೃದ್ಧಿಯನ್ನು ಹೊಂದುವವು ಎಂಬ ಸಂಗತಿ ಎಲ್ಲರಿಗೂ ತಿಳಿದೇ ಇದೆ. ಅಂಥಾ ಅಭಿವೃದ್ಧಿಯಿಂದ ರೈಲ್ವೆಯ ನಫೆಯು ಸಂದೇಹವಿಲ್ಲದೆ ಅಭಿವೃದ್ಧಿ ಆಗುವುದರಿಂದ ಗೌರ್ನಮೆಂಟನವರು ಭರವಸೆ ಕೊಟ್ಟಿರುವ ಶೇಕಡಾ 4 ಕಿಂತಲೂ ಹೆಚ್ಚಾದ ನಫೆ ಉಂಟಾಗಬಹುದೆಂದು ನಿಸ್ಸಂದೇಹವಾಗಿ ಊಹಿಸಬಹುದು.

10. ಬೊಂಬಾಯಿಯಲ್ಲಿ ಘನತೆಯುಳ್ಳ ಮೆ|| ವಿಠಲದಾಸ ದಾಮೋದರ ಥಾಕರಸೆ ಯವರು ಈ ಕಂಪನಿಗೆ ಮಾಡಿರುವ ಸಹಾಯಕ್ಕೋಸ್ಕರವಾಗಿ ಅವರು (ಎಕ್ಸ್ ಅಫಿಷಿಯೋ) ಮ್ಯಾನೇಜಿಂಗ್ ಡೈರೆಕ್ಟರಾಗಿ ನೇಮಿಸಲ್ಪಟ್ಟು, ಅವರಿಗೆ ಕೊಡತಕ್ಕ ರುಸುಂಗಳನ್ನು ಈ ಕಂಪೆನಿ ನಿಬಂಧನೆಗಳಲ್ಲಿ ನಮೂದು ಮಾಡಿರುತ್ತೆ. ಇಷ್ಟವಿದ್ದವರು ಕಂಪನಿಯ ಆಫೀಸುಗಳಿಂದ ವಿಚಾರಿಸಿ ತಿಳಿದುಕೊಳ್ಳಬಹುದು.

11. ಕಂಪನಿಯ ಪ್ರಸಿದ್ಧ ಪತ್ರಿಕೆಗಳು ಮತ್ತು ಅಪ್ಲಿಕೇಷನ್ ಫಾರಂಗಳು ಬೆಂಗಳೂರು ಚಾಮರಾಜಪೇಟೆಯಲ್ಲಿ ಇರುವ ಹೆಡ್ಡಾಫೀಸಿನಲ್ಲಿಯೂ ಮತ್ತು ಬೊಂಬಾಯಿಯಲ್ಲಿರುವ ಆಫೀಸಿನಲ್ಲಿಯೂ ಮತ್ತು ಕಂಪೆನಿಯ ಬ್ಯಾಂಕರುಗಳಿಂದಲೂ ಪಡೆಯಬಹುದು. ಕಂಪೆನಿಯ ನಿಬಂಧನೆಗಳನ್ನು ಮೇಲ್ಕಂಡ ಆಫೀಸುಗಳಲ್ಲಿ, ಪ್ರತಿಗೆ 2 ಆಣೆಯಂತೆ ಕ್ರಯಕ್ಕೆ ಪಡೆಯಬಹುದು.

ಬೆಂಗಳೂರು,
8ನೆ ಅಕ್ಟೋಬರ 1909.

ಸಿ. ಶ್ರೀನಿವಾಸೈಯ್ಯಂಗಾರ್,
ಚೇರ್ಮನ್.

ಷೇರುಗಳಿಗಾಗಿ ಬರೆದುಕೊಳ್ಳಬೇಕಾದ ದರಖಾಸ್ತು ನಮೂನೆ.

ಡೈರೆಕ್ಟರುಗಳಿಗೆ,

ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ, ಲಿಮಿಟೆಡ್

ಮಂಡಿ ಕಟ್ಟಡಗಳು, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಯ್ಯಾ,

ಮೇಲೆ ನಮೂದಾಗಿರುವ ರೈಲ್ವೆ ಕಂಪೆನಿಯ   ಷೇರುಗಳಿಗಾಗಿ, ಷೇರು 1ಕ್ಕೆ ರೂ. 1 ರಂತೆ ಆಗುವ ಡಿಪಾಜಿಟ್ ಮೊಬಲಗು ರೂ.   ಗಳನ್ನು ಇದರ ಜೊತೆಯಲ್ಲಿ ರವಾನಿಸಿರುತ್ತೇನೆ; ಅಷ್ಟು ಸಂಖ್ಯೆಯ ಷೇರುಗಳನ್ನು ರೈಲ್ವೆ ಸೂಚನಪತ್ರದ ನಿಬಂಧನೆಗಳನ್ನನುಸರಿಸಿ ನನಗೆ ಕೊಡಬೇಕೆಂದು ಕೋರುತ್ತೇನೆ. ನಾನು ಅಷ್ಟು ಷೇರುಗಳನ್ನು ತೆಗೆದುಕೊಳ್ಳಲು ಒಪ್ಪಿರುತ್ತೇನೆ; ಮತ್ತು ಅವುಗಳು ನನಗೆ ಕೊಡಲ್ಪಟ್ಟ ನಂತರ ಬಾಕಿಯಾಗುವ ಮೊಬಲಗನ್ನು ಸೂಚನಪತ್ರದಲ್ಲಿ ವಿಧಿಸಿರುವ ಮೇರಿಗೆ ಪಾವತಿ ಮಾಡಲು ಬದ್ಧನಾಗಿರುತ್ತೇನೆ. ಸದರೀ ಸಂಖ್ಯೆಯ ಷೇರುಗಳನ್ನು ನಾನು ಹೊಂದಿದವನೆಂದು ನನ್ನನ್ನು ನೀವು ರಿಜಿಸ್ಟರ್ ಮಾಡಿಕೊಳ್ಳಬಹುದು; ಮತ್ತು ಕಂಪೆನಿಯ ಮೆಮೊರಾಂಡಂ ಮತ್ತು ನಿಬಂಧನೆಗಳಂತೆ ಸದರೀ ಷೇರುಗಳನ್ನು ನಾನು ಇಟ್ಟುಕೊಳ್ಳಲು ಈ ಮೂಲಕ ಒಪ್ಪಿರುತ್ತೇನೆ.

ತಮ್ಮ ವಿಧೇಯ,

ಸಂಪೂರ್ಣವಾದ ಹೆಸರು ______________________

ವಿಳಾಸ, ಉದ್ಯೋಗ ______________________

ತಾರೀಖು ______________________

ರುಜು ______________________

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಖಾಯಿಷ್ ಆದ್ದು. [ಸಂ. 46.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 25, ಸ॥ 1909.

II ನ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಡಿಪಾರ್ಟಮೆಂಟ್.

ಇಸ್ತಿಹಾರ್ನಾಮೆ.

ನಂ. 317, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕಿನ 228 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಶಿರಾ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 10ನೆ ಶುಕ್ರವಾರ ಅಥವಾ ಆ ಷುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ನಂ. 323, ತಾರೀಖು 20ನೆ ನವಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟ್ ಪಾವಗಡ ತಾಲ್ಲೂಕಿನ 140 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಪಾವಗಡದ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 6ನೆ ತಾರೀಖು ಸೋಮವಾರ ಅಥವಾ ಆ ಷುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ಶ್ಯಾಮರಾವ್,

ಸೂಪರಿಂಟೆಂಡೆಂಟ್, ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್.

ಅಮೃತಮಹಲ್ ಇಲಾಖಾ.

ನೋಟಿಫಿಕೇಷನ್.

ಕ್ಯಾಂಪ್ ಮೈಸೂರು, ತಾರೀಖು 14ನೆ ನವಂಬರು 1909.

ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳನ್ನ 6—12—1909ರ ಲಾಗಾಯಿತು ಮಾಗಡಿ ತಾಲ್ಲೂಕು "ಬಗನಗೆರೆ" ಕಾವಲಿನಲ್ಲಿಯು (ಅಂದರೆ ಕುಣಿಗಲ್-ಬೆಂಗಳೂರು ರಸ್ತೆಯ 38ನೆ ಮೈಲಿಯ ಸಮೀಪ) ಮತ್ತು 12—12—09ರ ಲಾಗಾಯಿತು ಅರಸೀಕೆರೆ ತಾಲ್ಲೂಕು "ಗಂಡಸಿ" ಬಂಗ್ಲಾ ಬಳಿಯಲ್ಲಿಯೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ, ಇಷ್ಟವುಳ್ಳವರು ಹಾಜರಾಗಿ ಥಡಸವಾಲಿನಲ್ಲಿ ರಾಸುಗಳನ್ನ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್, ಸೂಪರಿಂಟೆಂಡೆಂಟ್.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ	ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.		ಕ್ರಯಕ್ಕೆ ಇಡುವ ಟನ್ನುಗಳು.	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವೆಂಬರ ತಾರೀಖು	18	200	
2	ಡಿಟೋ ...	ಸಾಗರ .	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟನ್ನುಗಳು ಸೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು...	1909ನೆ ಡಿಸೆಂಬರ ತಾರೀಖು	2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟನ್ನುಗಳು ಕೋಲಾರದ 5 ಟನ್ನುಗಳು ಸೇರಿರುತ್ತೆ.
8	ಮೈಸೂರ್ರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ	...	2,400	

ಎಂ. ಮುತ್ತಣ್ಣ, ಕನ್ಸರ್ವೇಟರ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರನ್ನಾಮೆ.

ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಜಡ್ಲತಿಮ್ಮನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಸಾಹೇಬರವರ ರೂಬರೂಬು 1909ನೆ ಇಸವಿ ಡಿಸೆಂಬರು 13ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ನವೆಂಬರ 18ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 863ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 17ನೆ ಮಾಹೆ ನವೆಂಬರು 1909.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಬಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ತತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟೆವೆಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು	ತಾಲ್ಲೋಕು	ಹೋಬಳಿ	ಗ್ರಾಮ	ಕಾಯಂಗುತ್ತೆದಾರರ ಹೆಸರು	ಅಂದಾಜಾ ಬೀಜವರಿ	ಅಂದಾಜಾ ಹುಟ್ಟುವಳಿ ಯಾ ಬೇರೀಜು	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್	ಯಾವ ಬಾಕಿಗೋಸ್ಕರ ಗ್ರಾಮವು ಹರಾಜಿಗೆ ಬಂದಿದೆ ಆ ಹರಾಜು ಕಾಲದವರೆಗೂ ಬಾಕಿ	ಹರಾಜು ತಾರೀಖು ಸ್ಥಳ
					ಎ. ಗು.	ರೂ.	ರೂ.	ರೂ. ಆ. ಪೈ.	
ಕೋಲಾರ	ಚಿಕ್ಕಬಳ್ಳಾಪುರ	ಮಂಡಿಕಲ್ಲು	ಕಾಯಂಗುತ್ತೆ ಬೀರಗಾನಹಳ್ಳಿ	1. ಪಿ. ನರಸಿಂಹಾಚಾರ್ರು, 2. ಶ್ರೀರಂಗಾಚಾರ್ರು, 3. ಪಿ. ಕೃಷ್ಣಾಚಾರ್ರು.	ಪರಂಬೋಕು... 490 3 ಖುಷ್ಕಿ ... 495 9 ತರಿ ... 115 1 ಬಾಗಾಯಿತು ... 27 35 1,128 8 ಚಕ್ಕುಬಂದಿ. ಪೂರ್ವಕ್ಕೆ—ಜೋಡಿ ತಮ್ಮಗಟ್ಟಹಳ್ಳಿ. ಪಶ್ಚಿಮಕ್ಕೆ—ಬಟ್ಲಬೈರಪ್ಪನ ದಿನ್ನೆ ಉತ್ತರಕ್ಕೆ—ಎಲಕರಾಳ್ಳಹಳ್ಳಿ, ಚೊಕ್ಕನಹಳ್ಳಿ ಮತ್ತು ಜೋಡಿ ನಾರೇನಹಳ್ಳಿ. ದಕ್ಷಿಣಕ್ಕೆ—ಮಂಡಿಕಲ್ಲು ಮತ್ತು ಕಾಲ್ವೆ.	1,500	585	836 7 4	1909ನೆ ಇಸವಿ ನವೆಂಬರ್ 20ನೆ ತಾರೀಖು ಚಿಕ್ಕಬಳ್ಳಾಪುರ ನವ ತಾಲ್ಲೂಕು ಕಚೇರಿ.

ಎ. ವೇದಾಂತದೇಸಿಗಂ ಐಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಸನ್ 1909ನೆ ಇಸವಿ ಸೆಪ್ಟಂಬರ್ ತಾರೀಖು 27ರಲ್ಲಿ ನಡದ ಹಾಸನ ಡಿಸ್ಟ್ರಿಕ್ಟು ಬೋರ್ಡು ಪ್ರೊಸೀಡಿಂಗ್ಸ್‌ಯಾನೆ ತೀರ್ಮಾನಗಳು.

ಹಾಜರು.

ಪಿ. ಆರ್. ಡಬ್ಲ್ಯೂ. ವೆದರಾಲ್, ಎಸ್ಕ್ವಯರ್, ಪ್ರೆಸಿಡೆಂಟ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ನರಸಿಂಗರಾವ್ ಪೂರ್ಣಯ್ಯ, ಎಸ್ಕ್ವಯರ್, ಬಿ.ಎ., ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮತ್ತು ಡಿಸ್ಟ್ರಿಕ್ಟು ಬೋರ್ಡು ವೈಸ್ ಪ್ರೆಸಿಡೆಂಟ್.

ಸಿ. ದೇವರಾಜ ಅರಸ್, ಎಸ್ಕ್ವೈಯರ್, ಜನರಲ್ ಅಸಿಸ್ಟೆಂಟ್ ಕಮಿಷನರವರು, ಹಾಸನ.

ಎ. ಕೃಷ್ಣಸ್ವಾಮೈಯ್ಯಂಗಾರ್, ಎಸ್ಕ್ವೈಯರ್, ಬಿ.ಎ., ಅಸಿಸ್ಟೆಂಟ್ ಕಮಿಷನರವರು, ಸಕಲೇಶಪುರದ ಡಿವಿಜನ್.

ವಿ. ಅಯ್ಯಾಸ್ವಾಮಿ ಅಯ್ಯರ್, ಎಸ್ಕ್ವೈಯರ್, ಬಿ.ಎ., ಬಿ.ಸಿ.ಇ., ಎಗ್ಸಿಕ್ಯೂಟಿವ್ ಇಂಜಿನಿಯರವರು, ಹಾಸನ ಡಿವಿಜನ್.

ಸಿ. ರಾಜಾರಾಮರಾವ್, ಎಸ್ಕ್ವೈಯರ್, ಎಲ್.ಎಂ.ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು, ಹಾಸನ.

ನಾನ್ ಅಫಿಷಿಯಲ್ ಮೆಂಬರುಗಳು.

ಮಿ|| ಲಕ್ಷ್ಮೀನರಸಿಹ್ಮಾಚಾರ್ಯರು, ಹಾಸನ.

„ ಪುಟ್ಟೇಗೌಡ ಉರುಫ್ ನಂಜೇಗೌಡರು, ಮಂಜರಾಬಾದು.

„ ಹ. ದಾಸಪ್ಪನವರು, ಅರಸೀಕೆರೆ.

„ ಕೆಂಚರಾಯಶೆಟ್ಟರು, ಅರಸೀಕೆರೆ.

„ ನಂಜಣ್ಣನವರು, ಚನ್ನರಾಯಪಟ್ಣ.

„ ಸೂರ್ಯನಾರಾಯಣಶೆಟ್ಟರು, ಅರಕಲಗೂಡು.

„ ಮಹಲಿಂಗೇಗೌಡರು, ಅರಕಲಗೂಡು.

„ ಅಬ್ದುಲ್ಲಾಸಾಬರು, ಅರಕಲಗೂಡು.

ಗೈರ್ ಹಾಜರು.

ಮಿ|| ಎಂ. ಕೆ. ತಿರುಮಲಾಚಾರ್ಯರು, ಬಿ.ಎ., ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರವರು.

„ ಕೇಣಿ ಮಹದೇವಪ್ಪನವರು, ಹಾಸನ.

„ ಡಬ್ಳ್ಯು. ಎಲ್. ಕ್ರಾಫರ್ಡ್ ಸಾಹೇಬರು, ಮಂಜರಾಬಾದ್.

„ ಕ. ತಮ್ಮೈಯ್ಯನವರು, ಬೇಲೂರು.

„ ಹಬೀಬುಲ್ಲಾಸಾಬರು, ಬೇಲೂರು.

„ ವೆಂಕಟರಾಮೈಯ್ಯನವರು, ಹೊಳೇನರಸೀಪುರ.

„ ಕೊ. ರಾಮಶೆಟ್ಟರು, ಹೊಳೇನರಸೀಪುರ.

„ ಜೆ.ತಿರುನಾರಣೈಯ್ಯಂಗಾರ್ಯರು, ಚನ್ನರಾಯಪಟ್ಣ.

„ ಜೆ. ಧರಣೈಯ್ಯಶೆಟ್ಟರು, ಚನ್ನರಾಯಪಟ್ಣ.

I. ಫೈನಾನ್ಸ್ ಕಮಿಟಿಯವರಿಂದ ತಯಾರಿಸಲ್ಪಟ್ಟ 1908-09ನೆ ಸಾಲಿನ ಬಾಬತು ಡಿಸ್ಟ್ರಿಕ್ಟ್ ಫಂಡ್ ಸಾಲ್ ರ್ಯೂಡ ಲೆಕ್ಕಗಳನ್ನು ಮತ್ತು ಅಡ್ಮಿನಿಸ್ಟ್ರೇಷನ್ ರಿಪೋರ್ಟು ಸಹಾ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಲೆಕ್ಕಗಳನ್ನು ಮತ್ತು ರಿಪೋರ್ಟನ್ನು ಗೌರ್ನಮೆಂಟಿಗೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

II. ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನವರು ಸೋಮವಾರಪೇಟೆಯಿಂದ ಬಾಣಾವಾರದ ವರಿವಿಗೆ ಹಾಕುತ್ತಿರುವ ರಸ್ತೆಯನ್ನು ಮುಂದಕ್ಕೆ ಅಲ್ಲಿಂದ ಕೊಣನೂರು ವರಿವಿಗೆ ಬಡಾಯಿಸತಕ್ಕ ವಿಚಾರದಲ್ಲಿ ಕೊಡಗು ಚೀಫ್ ಕಮಿಷನರವರ ಸೆಕ್ರಿಟೆರಿಯವರು ಹೇಳಿರುವಂತೆ ರಸ್ತೆ ಹಾಕಿದಲ್ಲಿ ಇದರ ಫಾಸಲೆಯು 16 ಮೈಲಿ ಮಾತ್ರವಾಗುತ್ತೆಂತಲೂ ಶ್ರೀರಂಗಾಲ್ ಮಾರ್ಗವಾಗಿ 29 ಮೈಲಿ ಯಾಗುವದರಿಂದ ಕಮ್ಮಿ ಫಾಸಲೆ ರಸ್ತೆಯು ಸಂಚಾರ ಮತು ಆಮದು ರಫ್ತಿಗೆ ಅನುಕೂಲವೆಂಬ ವಿಷಯವನ್ನು ಪುನಃ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿಟ್ಟು ಚರ್ಚಿಸಿ ಫಲಿತಾಂಶಕ್ಕೆ ರಿಪೋರ್ಟು ಮಾಡಬೇಕಾಗಿ ಬಂದ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ 8—9—09ರ ಮರ್ಕುಂ 2298—ಎಲ್. ಬಿ. 50-09-2ನೆ ನಂಬರ್ ಲೆಟರು ಓದಲಾಯಿತು.

ತೀರ್ಮಾನ—ಹಾಲಿ ಕೊಣನೂರಿಂದ ಉಲ್ಲೇನಹಳ್ಳಿ, ಶ್ರೀರಂಗಾಲ್ ಮತ್ತು ಮಣಜೂರು ಮಾರ್ಗವಾಗಿ ಸೋಮವಾರಪೇಟೆ ರಸ್ತೆಗೆ ಸೇರತಕ್ಕ ಒಂದು ಡಿಸ್ಟ್ರಿಕ್ಟ್ ಫಂಡ್ ರಸ್ತೆ ಇರುತ್ತೆಯಾಗಿ ಮೇಲೆ ಸೂಚಿಸಿರುವಂತೆ ಹೊಸದಾಗಿ ರಸ್ತೆ ಹಾಕತಕ್ಕದ್ದಕ್ಕೆ ಮತ್ತು ಇದನ್ನು ಸರಿಯಾಗಿ ಇಟ್ಟುಕೊಳ್ಳುವದಕ್ಕೆ ತಕ್ಕಷ್ಟು ಹಣ ವ್ಯಯ ಮಾಡತಕ್ಕದ್ದು ಅನಾವಶ್ಯಕವೆಂದು ಬೋರ್ಡಿನವರು ಈಗಲೂ ಅಭಿಪ್ರಾಯಪಡುತ್ತಾರಾಗಿ ತೀರ್ಮಾನಿಸಲಾಯಿತು.

III. ಹುಚ್ಚುನಾಯಿ ವಗೈರೆ ಮೃಗಗಳಿಂದ ಕಡಿಯಲ್ಪಟ್ಟ ಬಾಯಿಲೆಯವರನ್ನು ಇಲಾಜು ಬಗ್ಯೆ ಕೂನೂರು ಪ್ಯಾಸ್ಟರ್ ಇನ್ಸ್ಟಿಟ್ಯೂಟಿಗೆ ಹೋಗುವವರಿಗೆ ಹೋಗುವದಕ್ಕೂ ಮತ್ತು ವಾಪಸು ಬರುವದಕ್ಕೂ ರೈಲ್ ಛಾರ್ಜು ಮತ್ತು ಸರ್ಕಾರಿ ನೌಕರರಿಗೆ ಅವರಿಗೆ ಕೊಡಬಹುದಾದ ತಲಬು ಅಡ್ವಾನ್ಸು ವಿನಹಾ ಬಾಕಿ ಖರ್ಚುಗಳು ಅಂದರೆ ಠರಾಯಿಸಿರುವದರ ಅನುಸರಿಸಿ ರೋಗಿಗಳಿಗೂ ಮತ್ತು ಇವರ ಉಪಚಾರಕ್ಕಾಗಿ ಯಾರಾದರೂ ಇದ್ದರೆ ಅವರಿಗೂ ಸಹಾ ಕೊಡಬೇಕಾಗುವ ತಿಂಡಿ ಖರ್ಚು ರಸ್ತೆಮೇಲೆ ಪ್ರಯಾಣ ಮಾಡುವದಕ್ಕೆ ತಗಲುವ ಖರ್ಚು ಇವೇ ಮುಂತಾದವುಗಳನ್ನು ಡಿಸ್ಟ್ರಿಕ್ಟ್ ಮತ್ತು ಮ್ಯುನಿಸಿಪಲ್ ಬೋರ್ಡುಗಳೇ ವಹಿಸಬೇಕಾಗುವದಾಗಿಯೂ ಮತ್ತು ಇಲಾಜು ಕಾಲ 15 ದಿವಸಗಳಿಗಿಂತ ಜಾಸ್ತಿಯಾಗುವದಿಲ್ಲವೆಂದು ವಗೈರೆ ತಿಳಿಸಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ 16—9—09ರ ಮರ್ಕುಂ 2653—ಮೆಡಿ: 2-08-67ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಖರ್ಚುಗಳನ್ನು ಲೋಕಲ್ ಫಂಡ್ಸ್ ಜನರಲ್ ಹಣದಿಂದ ಆಗತಕ್ಕದ್ದು ನ್ಯಾಯವಾಗಿರುತ್ತೆಯಾಗಿ ಆ ಬಗ್ಯೆ ಅಪ್ಪಣೆ ಆಗಲು ಗೌರ್ನಮೆಂಟಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

IV. 1909—10ನೆ ಸಾಲ್ ಬಾಬತು ಲೋಕಲ್ ಫಂಡ್ಸ್ ಜನರಲ್ ಬಜ್ಜೆಟ್ಟು ಮಂಜೂರಾಗಿರುವದನ್ನು ಓದಲಾಯಿತು.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

V. 1909ನೆ ಸಾಲಿನ ಬಾಬತು ಫ್ಯಾಮಿನ್ ರಿಲೀಫ್ ಪ್ರೋಗ್ರಾಂ ರಿವ್ಯೂ ಆಗಿರುವದನ್ನು ಓದಲಾಯಿತು.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

VI. ಪ್ರೊವಿಂಷಿಯಲ್ ರಸ್ತೆಗಳ ಮೇಲೆ ಇರತಕ್ಕ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟು ಕೊಳ್ಳತಕ್ಕ ಬಗ್ಗೆ ತಗಲುವ ಖರ್ಚನ್ನು ಪ್ರೊವಿಂಷಿಯಲ್ ಫಂಡ್ಸಿನಿಂದ ಕೊಡಬೇಕೆಂಬ ವಿಚಾರದಲ್ಲಿ ಬೋರ್ಡಿನವರು ಮಾಡಿ ರತಕ್ಕ ಸಿಫಾರ್ಸ್ ಅನುಮೋದಿಸಲಾಗದೆಂಬ ಬಗ್ಗೆ ಗೌರ್ನಮೆಂಟನಿಂದ ತಲ್ಪಿದ 27—8—09ರ ಮುರ್ಕುಂ 2039-40—ಎಲ್. ಬಿ. 407-08-2ನೆ ನಂಬರ ಪ್ರೊಸಿಡಿಂಗ್ಸ್ ಓದಲಾಯಿತು.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು. ಈ ವಿಚಾರದಲ್ಲಿ ಡಿಸ್ಟ್ರಿಕ್ಟ್ ಫಂಡ್ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನ 17ನೆ ಪ್ಯಾರಾ ಪರಾಂಬರಿಸಬೇಕಾಗಿಯೂ ಮತ್ತು ಹಾಲಿ ಬಹಳ ಹೀನಸ್ಥಿತಿಯಲ್ಲಿರತಕ್ಕ ಕೆಲವು 3ನೆ ಕ್ಲಾಸ್ ಟ್ರಾವ ಲರ್ಸ್ ಬಂಗ್ಲಾಗಳನ್ನು ರಿಪೇರಿ ಮಾಡತಕ್ಕದ್ದು ಅತಿ ಅವಶ್ಯಕವಾಗಿರುವದರಿಂದ ಹಣ ಕೊಡಿಸಿಕೊಡಬೇಕೆಂತ ಎಗ್ಜಿಕ್ಯುಟಿವ್ ಇಂಜನಿಯರವರು ಅಪೇಕ್ಷಿಸಿರುವದರಿಂದ ಹಾಲ್ ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನಲ್ಲಿ ದಾಖಲಾ ಗಿದ್ದು ವಜಾ ಆಗಿರುವ 1,110 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಫಂಡ್ ಕ್ಲೋಸಿಂಗ್ ಬ್ಯಾಲೆನ್ಸಿನಿಂದ ಕೊಡಿಸ ಲು ಅಪ್ಪಣೆ ಆಗಬೇಕೆಂತ ಗೌರ್ನಮೆಂಟಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

VII. ಮೀಟಿಂಗ್ ನಡಿಯುವದಕ್ಕೆ ತಾರೀಖು ನಿಷ್ಕರ್ಷೆ ಮಾಡತಕ್ಕ ವಿಚಾರದಲ್ಲಿ ಲೋಕಲ್ ಬೋರ್ಡ್ಸ್ ರಗ್ಯುಲೇಷನ್ 17ನೆ ಸೆಕ್ಷನ್ ಅನುಸರಿಸಿ ನಿಬಂಧನೆಗಳನ್ನು ಮಾಡತಕ್ಕ ವಿಚಾರದಲ್ಲಿ ಗೌರ್ನಮೆಂಟನಿಂದ ತಲ್ಪಿದ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—ಮೇಲ್ಕಂಡಂತೆ ನಿಬಂಧನೆಗಳನ್ನು ಮಾಡತಕ್ಕ ಕಾರ್ಯವನ್ನು ಈ ಕೆಳಗೆ ನಮೂದಿಸಿರುವ ಮೆಂಬರುಗ ಳೊಂದಿಗೆ ಒಂದು ಸಬ್ ಕಮಿಟಿಗೆ ವಹಿಸಬೇಕೆಂತಲು ಅದುವರಿಗೆ ಹಾಲಿ ಚಾಲ್ತಿಯಲ್ಲಿರುವಂತೆ ಮೀಟಿಂಗ್ ನಡಿ ಯತಕ್ಕ ತಾರೀಖಿಗೆ 15 ದಿವಸಗಳ ಮುಂಚೆಯೆ ಮೆಂಬರುಗಳಿಗೆ ನೋಟೀಸನ್ನು ಅಮಲ್ದಾರ್ರುಗಳ ಮೂಲಕ ಕಳುಹಿಸುತ್ತಿರಬೇಕೆಂತ ತೀರ್ಮಾನಿಸಲಾಯಿತು.

1. ವೈಸ್ ಪ್ರೆಸಿಡೆಂಟರವರು.
2. ಜನರಲ್ ಅಸಿಸ್ಟೆಂಟ್ ಕಮಿಷನರವರು.
3. ಸಕ್ಲೇಶಪುರದ ಅಸಿಸ್ಟೆಂಟ್ ಕಮಿಷನರವರು.
4. ಮಿ|| ಲಕ್ಷ್ಮೀನರಸಿಂಹಾಚಾರ್ಯರವರು.
5. ,, ಕೇಣಿ ಮಹದೇವಪ್ಪನವರು.

VIII. ಕಳೆದ 3 ಸಾಲಿಗಳಲ್ಲಿ ಯೂನಿಯನ್ನುಗಳಲ್ಲಿ ಆದ ಹುಟ್ಟುವಳಿ ತಪಸೀಲ್ ತೋರಿಸತಕ್ಕ ಒಂದು ತಃಖ್ತೆ ತಯಾರ್ಮಾ ಡಿಸಿ ಕಳುಹಿಸಿಕೊಡಬೇಕಾಗಿಯೂ, ಯೂನಿಯನ್ ಕಾರ್ಯಗಳನ್ನು ಇನ್ನು ಉತ್ತಮರೀತಿಯಲ್ಲಿ ನಿರ್ವಹಿಸತಕ್ಕದ್ದಕ್ಕೆ ಏನಾ ದರುಗಳೇನಾದರೂ ಅವಶ್ಯಕವಿದ್ದಲ್ಲಿ ಅದನ್ನು ತಿಳಿಸಬೇಕೆಂತ ತಲ್ಪಿದ ಗೌರ್ನಮೆಂಟನವರ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಪ್ರೊಸೀಡಿಂಗ್ಸ್ ಕಾಪಿಯನ್ನು ಎಲ್ಲಾ ತಾಲ್ಲೂಕುಗಳಿಗೂ ಕಳುಹಿಸಿ ಯೂನಿಯನ್ ಪಂಚಾಯಿತ ರುಗಳ ತೀರ್ಮಾನವನ್ನು ಮತ್ತು ತಾಲ್ಲೂಕು ಬೋರ್ಡುಗಳ ತೀರ್ಮಾನಗಳೊಂದಿಗೆ ಕಳುಹಿಸಿಕೊಡಬೇಕೆಂತ ತೀ ರ್ಮಾನಿಸಲಾಯಿತು.

IX. ಜಂಗಲ್ ಉತ್ಪತ್ತಿ ದಿನಸುಗಳನ್ನು ಸಾಗಿಸತಕ್ಕ ಗಾಡಿಗಳಿಗೆ ಟೋಲ್ ಗೇಟುಗಳಲ್ಲಿ ಸುಂಕ ಕೊಡತಕ್ಕದ್ದನ್ನು ಮ ನ್ನಾ ಮಾಡತಕ್ಕ ವಿಚಾರದಲ್ಲಿಯೂ ಮತ್ತು ಚೀಫ್ ಕಮಿಷನರ್ ಸಾಹೇಬರವರ ಹಿಂದಿನ ರೂಲ್ಸಿನಲ್ಲಿ 3ನೆ ರೂಲಿನಲ್ಲಿ ಕೆಲವು ಭಾಗ ವನ್ನು ಬಿಡತಕ್ಕ ವಿಚಾರದಲ್ಲಿ ಅಭಿಪ್ರಾಯ ಅಪೇಕ್ಷಿಸಿ ತಲ್ಪಿರುವ ರೆವಿನ್ಯೂ ಕಮಿಷನರವರ ಮೆಮೋ ಓದಲಾಯಿತು.

ತೀರ್ಮಾನ—4-11-1876ರ ಮುರ್ಕುಂ ಬಾಬತು ಚೀಫ್ ಕಮಿಷನರವರ 274ನೆ ನಂಬರು ನೋಟಿಫಿಕೇಷನ್ನಲ್ಲಿ ಕೊನೆ ಭಾಗವನ್ನು ವಜಾ ಮಾಡಬಹುದೆಂತ ತೀರ್ಮಾನಿಸಲಾಯಿತು.

X. 1909—10ನೆ ಸಾಲ್ ಬಾಬತು ಇರಿಗೇಷನ್ ಸೆಸ್ಸ್ ಫಂಡ್ಸ್ ಬಜ್ಜೆಟ್ಟನ್ನು ಮಂಜೂರ್ಮಾಡಿರುತ್ತೆಂಬ ರೆವಿನ್ಯೂ ಕ ಮಿಷನರವರ ಅಫಿಷಿಯಲ್ ಮೆಮೋರಾಂಡಂ ಓದಲಾಯಿತು.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

XI. ಎ. ಪಬ್ಲಿಕ್ ವರ್ಕ್ಸ್ ಮತ್ತು ಬಿ. ಪಬ್ಲಿಕ್ ವರ್ಕ್ಸ್‌ಗಳ ಬಾಬತು 1909ನೆ ಜೂನ್ ಆಖೈರಿನಲ್ಲಿ ನಿಂತ ನೀಂಕಲಾ ಕಾಂ ಗಾರಿಗಳ ಬಾಬತು ಲಿಸ್ಟುಗಳನ್ನು ಓದಲಾಯಿತು.

ತೀರ್ಮಾನ—ಈ ತಃಖ್ತೆಗಳ ಕಾಪಿಗಳನ್ನು ಗೌರ್ನಮೆಂಟಿಗೆ ಕಳುಹಿಸಿಕೊಡಬೇಕಾಗಿ ತೀರ್ಮಾನಿಸಲಾಯಿತು.

XII. 9—8—09ರಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಪ್ರೊಸಿಡಿಂಗ್ಸ್ ಪೈಕಿ XVIನೆ ವಿಷಯದಲ್ಲಿ ಕಂಡ ಷೆಡ್ಯೂಲ್ ಆಫ್ ರೇಟ್ಸ್ ಬಾಬತು ತೀರ್ಮಾನವನ್ನು ಮತ್ತು ಹಾಸನ ಡಿ|| ಎಗ್ಜಿಕ್ಯುಟಿವ್ ಇಂಜನಿಯರವರಿಂದ ತಲ್ಪಿದ ದರಗಳ ಪಟ್ಟಿ ಯನ್ನು ಸಹಾ ಓದಲಾಯಿತು.

ತೀರ್ಮಾನ—ಎಗ್ಜಿಕ್ಯುಟಿವ್ ಇಂಜನಿಯರಿಂದ ಕರೆಕ್ಟರ್ ಸೈನ್ ಆಗಿ ಬಂದಿರುವ ಪಟ್ಟಿಯನ್ನು ಒಪ್ಪಿಕೊಂಡು ಇದರ ಬಾಬತು ನಕಲನ್ನು ಗೌರ್ನಮೆಂಟಿಗೆ ಕಳುಹಿಸಬಹುದೆಂತ ತೀರ್ಮಾನಿಸಲಾಯಿತು.

XIII. ಈ ಡಿಸ್ಟ್ರಿಕ್ಟಿನಲ್ಲಿ ಇರತಕ್ಕ ಡಿಸ್ಪೆನ್ಸರಿಗಳಲ್ಲೆಲ್ಲಾ ಸೂಲಗಿತ್ತಿಯರಿಲ್ಲದಪ್ರಯುಕ್ತ ಇಲ್ಲದ ಸ್ಥಳಗಳಲ್ಲಿ ಇವರನ್ನು ನೇಮಿಸತಕ್ಕದ್ದು ಅವಶ್ಯಕವಿದ್ದಲ್ಲಿ ಇವರುಗಳ ತಲಬು ವಗೈರೆ ಖರ್ಚನ್ನು ಹಾಲ್‌ಸಾಲ್‌ನಲ್ಲಿ ವದಗಿಸಲಾದೀತೇ ಎಂಬ ಬಗ್ಗೆ ಸೀನಿಯರ್ ಸರ್ಜನ್ ಸಾಹೇಬರವರಿಂದ ತಲ್ಪಿದ ಡಾಕೆಟ್ ಓದಲಾಯಿತು.

ತೀರ್ಮಾನ—ಅರ್ಕಲಗೂಡು, ಅರೆಹಳ್ಳಿ, ಕೊಣನೂರು ಮತ್ತು ಬಾಣಾವಾರ ಈ ನಾಲ್ಕು ಸ್ಥಳಗಳಲ್ಲಿಯೂ ಸೂಲಗಿತ್ತಿಯರು ಇರತಕ್ಕದ್ದು ಅವಶ್ಯಕವೆಂತಲೂ ಇವರುಗಳ ತಲಬಿಗಾಗಿ 1910—11ನೆ ಸಾಲ್ ಬಜೆಟ್ಟಿನಲ್ಲಿ ಪ್ರೊವಿಷನ್ ಮಾಡಬೇಕಾಗಿಯೂ ತೀರ್ಮಾನಿಸಲಾಯಿತು.

XIV. ಮೈಸೂರಿನಲ್ಲಿ ನಡೆಯುವ ಆರೋಗ್ಯ ಪ್ರದರ್ಶನವನ್ನು ಸ್ಯಾನಿಟೆರಿ ಇನ್ಸ್‌ಪೆಕ್ಟರುಗಳು ನೋಡತಕ್ಕದ್ದು ಯುಕ್ತವೆಂತಲೂ ಆದ್ದರಿಂದ ಒಬ್ಬರ ತರುವಾಯ ಮತ್ತೊಬ್ಬರನ್ನು 3 ದಿವಸಗಳವರೆಗೆ ಮೈಸೂರಿಗೆ ಕಳುಹಿಸಿಕೊಡಬೇಕೆಂತ ಸ್ಯಾನಿಟೆರಿ ಕಮಿಷನರವರಿಂದ ತಲ್ಪಿದ ಡಾಕೆಟ್ ಓದಲಾಯಿತು.

ತೀರ್ಮಾನ—ಅರಸೀಕೆರೆ ತಾಲ್ಲೂಕು ಸ್ಯಾನಿಟರಿ ಇನ್ಸ್‌ಪೆಕ್ಟರನ್ನು ಆರೋಗ್ಯ ಪ್ರದರ್ಶನವನ್ನು ನೋಡುವದಕ್ಕೆ ಮೈಸೂರಿಗೆ 3 ದಿವಸಗಳವರೆಗೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಲಾಯಿತು.

XV. ಲೋಕಲ್ ಫಂಡ್ ಡಿಸ್ಪೆನ್ಸರಿಗಳ ಬಾಬತು ಕಾಂಪೌಂಡು ಗೋಡೆಗಳಿಗೆ ಬದಲಾಗಿ ಕೊರಕುಪಿಳ್ಳೆ ಬೇಲಿಗಳನ್ನು ಪ್ರೆಸಿಡೆಂಟರವರು ಹಾಕಿಸಲು ಏರ್ಪಾಡಿದ್ದಲ್ಲಿ ಇದನ್ನು ಸರಿಯಾಗಿ ನೋಡಿಕೊಳ್ಳತಕ್ಕ ವಿಚಾರದಲ್ಲಿ ಸೀನಿಯರ್ ಸರ್ಜನರವರು ಏರ್ಪಾಡು ಮಾಡುವದಾಗಿ ತಲ್ಪಿದ ಅವರ ಜವಾಬು ಓದಲಾಯಿತು.

ತೀರ್ಮಾನ—ಮೇಲ್ಕಂಡಂತೆ ಬೇಲಿಗಳನ್ನು ಹಾಕಿ ನಂತರ ಇವುಗಳನ್ನು ಡಿಸ್ಪೆನ್ಸರಿಗಳ ನೌಕರರಿಗೆ ವಹಿಸಿ ಆ ಬಗ್ಗೆ ರಿಪೋರ್ಟು ಮಾಡತಕ್ಕ ಬಗ್ಗೆ ಅಮಲ್ದಾರರುಗಳಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು ಮತ್ತು ಪ್ರಸಕ್ತವಾದ ಡಾಕೆಟ್ ಕಾಪಿ ಒಂದನ್ನು ಹಾಸನ ಡಿ॥ ಎಗ್ಜಿಕ್ಯುಟಿವ್ ಇಂಜನಿಯರವರಿಗೆ ಕಳುಹಿಸಿಕೊಡಬೇಕೆಂತ ತೀರ್ಮಾನಿಸಲಾಯಿತು.

XVI. ಮಂಜರಾಬಾದು ತಾಲ್ಲೂಕು ಮಾರ್ನಹಳ್ಳಿ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆಕ್ಕೆ ಅವಶ್ಯಕವಾಗಿ ಆಗಬೇಕಾಗಿರುವ ರಿಪೇರಿಗಾಗಿ ತಯಾರಾಗಿರುವ 539 ರೂಪಾಯಿಗಳ ಬಾಬತು ಅಂದಾಜಾವನ್ನು ಕೌಂಟರ್ ಸೈನ್ ಬಗ್ಗೆ ಕಳುಹಿಸಿರುತ್ತೇವೆಂಬ ಎಗ್ಜಿಕ್ಯುಟಿವ್ ಇಂಜನಿಯರವರ ಡಾಕೆಟ್ ಓದಲಾಯಿತು.

ತೀರ್ಮಾನ—ಈ ದಿವಸದ ಮೀಟಿಂಗಿನ VIನೆ ವಿಷಯಕ್ಕನುಸಾರವಾಗಿ ಪ್ರಸಕ್ತವಾದ ಅಂದಾಜವನ್ನು ಮತ್ತು ಇನ್ನು ಕೆಲವು ಜರೂರಾದ ಅಂದಾಜಗಳನ್ನು ಗೌರ್ನಮೆಂಟಿನಿಂದ ಹಣ ಮಂಜೂರಾಗತಕ್ಕ ಬಗ್ಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

XVII. ಚೀಕನಹಳ್ಳಿ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆ ರಿಪೇರಿಗಾಗಿ ಎಗ್ಜಿಕ್ಯುಟಿವ್ ಇಂಜನಿಯರ್ ಸಾಹೇಬರವರಿಂದ ತಲ್ಪಿರುವ 237 ರೂಪಾಯಿಗಳ ಬಾಬತು ಅಂದಾಜಾವನ್ನು ಓದಲಾಯಿತು.

ತೀರ್ಮಾನ—ಸದ್ಯಕ್ಕೆ ಈ ಬಂಗ್ಲೆಕ್ಕೆ ರಿಪೇರಿಯು ಜರೂರಿಲ್ಲವಾಗಿ ಮೇಲ್ಕಂಡ VI ಮತ್ತು XVIನೆ ವಿಷಯಗಳಿಗೆ ಗೌರ್ನಮೆಂಟಿನಿಂದ ತಲ್ಪುವ ಹುಕುಂ ನಿರೀಕ್ಷಿಸಬೇಕೆಂತ ತೀರ್ಮಾನಿಸಲಾಯಿತು.

XVIII. ಗೆಂಡೆಹಳ್ಳಿ, ಅರೆಹಳ್ಳಿ ಮತ್ತು ಚೀಕನಹಳ್ಳಿ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆಗಳಿಗೆ ಚಾಟು ಕಾಮಗಾರಿ ಆಗತಕ್ಕ ಬಗ್ಗೆ ತಯಾರಾದ 8, 11 ಮತ್ತು 12 ರೂಪಾಯಿಗಳ ಬಾಬತು ಅಂದಾಜಗಳನ್ನು ಕೌಂಟರ್ ಸೈನ್ ಆಗಿ ವಾಪಸಾಗಲು ಕಳುಹಿಸಿರುತ್ತೇವೆಂಬ ಎಗ್ಜಿಕ್ಯುಟಿವ್ ಇಂಜನಿಯರವರ ಡಾಕೆಟ್ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಅಂದಾಜಗಳನ್ನು ಕೌಂಟರ್ ಸೈನ್ ಮಾಡಿಸಿ ವಾಪಸ್ ಮಾಡಬೇಕೆಂತಲೂ ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕಾಗುವ 25 ರೂಪಾಯಿಗಳನ್ನು ಹಾಲ್‌ಸಾಲ್ ಬಜೆಟ್ಟು ಎ. ಪಬ್ಲಿಕ್ ವರ್ಕ್ಸ್ "II ರಿಪೇರಿ ರಿಸರ್ವ್" ಹೆಡ್ಡಿನಲ್ಲಿರುವ ಹಣದ ಪೈಕಿ ಕೊಡಬಹುದೆಂತ ತೀರ್ಮಾನಿಸಲಾಯಿತು.

XIX. ಚನ್ನರಾಯಪಟ್ನ—ತಿಪ್ಟೂರು ರಸ್ತೆ ಸ್ಪೆಷಲ್ ರಿಪೇರಿಗೆ ಈ ವರುಷ 3,000 ರೂಪಾಯಿಗಳನ್ನಾದರೂ ವದಗಿಸಿಕೊಡಬೇಕೆಂದು ಎಗ್ಜಿಕ್ಯುಟಿವ್ ಇಂಜನಿಯರವರಿಂದ ಬಂದ ಡಾಕೆಟ್ ಓದಲಾಯಿತು.

ತೀರ್ಮಾನ—1909ನೆ ಜೂನ್ ಮಾಹೆ ಬಾಬತು ಆಡಿಟ್ಟಾದ ಲೆಕ್ಕವು ಕಂಟ್ರೋಲರ್ ಸಾಹೇಬರವರಿಂದ ತಲ್ಪಿದ ನಂತರ ಗತಸಾಲ್ ಆಖೈರಿನಲ್ಲಿ ಕರಾರ್ಬಾಕಿವಾಗಿ ಹಣ ಎಷ್ಟಿತ್ತೆಂಬುದನ್ನು ಕಂಡನಂತರ ಈ ವಿಚಾರ ಆಲೋಚಿಸಬೇಕೆಂತ ತೀರ್ಮಾನಿಸಲಾಯಿತು.

XX. 11—5—08ರಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು XIನೆ ವಿಷಯವಾದ ದುದ್ದದಬಳಿ ದನಗಳ ಪ್ರದರ್ಶನವನ್ನು 1909ನೆ ಮಾರ್ಚಿ ಮಾಹೆಯಲ್ಲಿ ನಡೆಸಬೇಕೆಂದಿದ್ದ ತೀರ್ಮಾನವನ್ನು ಓದಲಾಯಿತು. ಆಗ್ಯೆ ಕಾಲಸ್ಥಿತಿ ಚೆನ್ನಾಗಿರಲಿಲ್ಲವಾಗಿ ಪ್ರದರ್ಶನವು ನಡಿಯಲು ಅವಕಾಶವಾಗಲಿಲ್ಲಾ. ಹಾಲಿ ಪ್ರದರ್ಶನವನ್ನು ಯಾವಾಗ ನಡಿಸಬೇಕೆಂಬುದನ್ನು ಯೋಚಿಸಬೇಕಾಗಿದೆ.

ತೀರ್ಮಾನ—ಹಾಸನದಲ್ಲಿ ದನಗಳನ್ನು ಪ್ರದರ್ಶನಕ್ಕೆ ತಂದು ನಂತರ ಚುಂಚನಕಟ್ಟೆ ಜಾತ್ರೆಗೆ ತೆಗೆದುಕೊಂಡುಹೋಗುವದಕ್ಕೆ ಅನುಕೂಲಿಸುವಂತೆ ಚುಂಚನಕಟ್ಟೆ ಜಾತ್ರೆಗೆ ಬಂದುವಾರ ಮುಂಚೆ ಅಂದರೆ 1910ನೆ ಇಸವಿ ಜನವರಿ ಮಾಹೆ ಮೊದಲನೆ ವಾರದಲ್ಲಿ ಹಾಸನದಲ್ಲಿ ಪ್ರದರ್ಶನವನ್ನು ನಡಿಸಬೇಕೆಂತ ತೀರ್ಮಾನಿಸಲಾಯಿತು.

XXI. ಬೋರ್ಡಿನವರ ತಿಳುವಳಿಕೆ ಬಗ್ಗೆ ಈ ಕೆಳಗೆ ನಮೂದಿಸಿರುವವುಗಳನ್ನು ಓದಲಾಯಿತು.

(1) ಸ್ಯಾನಿಟೆರಿ ಕಮಿಷನರವರಲ್ಲಿರತಕ್ಕ ಪಟ್ಟಿಯಲ್ಲಿ ನಮೂದಿರುವ ಇಸಂಗಳ ಪೈಕಿ ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್ಸ್‌ಪೆಕ್ಟರ್ ಕೆಲಸಕ್ಕೆ ಚುನಾಯಿಸಬೇಕೆಂತಲೂ ಇವರುಗಳನ್ನು ಪ್ರೆಸಿಡೆಂಟರವರೇ ನೇಮಕ ಮಾಡಬೇಕೆಂತ ತಲ್ಪಿದ ಗೌರ್ನಮೆಂಟ್ ಪ್ರೊಸೀಡಿಂಗ್ಸು.

(2) ಮೇಲ್ಕಂಡ ಪಟ್ಟಿಯಲ್ಲಿ ನಮೂದಿಲ್ಲದ ಐಸಂಗಳನ್ನು ನೇಮಕಮಾಡಿಕೊಳ್ಳತಕ್ಕ ಭಾಗದಲ್ಲಿ ಪೂರ್ವಭಾವಿ ಸ್ಯಾನಿಟರಿ ಕಮಿಷನರವರ ಅನುಮತಿ ಪಡೆಯಬೇಕೆಂತ ತಲ್ಪಿದ ಗೌರ್ನಮೆಂಟ್ ಆರ್ಡರು.

(3) ಕಿಕ್ಕೇರಿ-ಯಿಪ್ಪೆ ರಸ್ತೆ ರಿಪೇರಿಗಾಗಿ ಮೊಬಲಗೇನು ಖರ್ಚು ಮಾಡಿಲ್ಲವೆಂಬ ಹಾಸನ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರ ಲೆಟರು ರಿಕಾರ್ಡು ಮಾಡಿರುತ್ತೆಂಬ ಗೌರ್ನಮೆಂಟ್ ಆರ್ಡರು.

(4) ಗ್ರಾಮಾಂತರಗಳಲ್ಲಿ ಕೋ ಆಪರೇಟಿವ್ ಸೊಸೈಟಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕ ಬಗ್ಗೆ ರಿಟೈರ್ಡ್ ಆಫೀಷಿಯಲಿಗಳ ಸಹಾಯ ಪಡೆಯಬಹುದೆಂತಲೂ ಇವರುಗಳಿಗೆ ದಿನ ಒಂದಕ್ಕೆ ಒಂದು ರೂಪಾಯಿಗೆ ಮೀರದಂತೆ ಖರ್ಚಿಗೋಸ್ಕರ ಕೊಡಬಹುದಾಗಿ ಮಂಜೂರ್ಮಾಡಿರುವ ಗವರ್ನಮೆಂಟ್ ಪ್ರೊಸೀಡಿಂಗ್ಸು.

ತೀರ್ಮಾನ—ಕೇಳಿ ಮೇಲೆ ಇಡಿಸಲಾಯಿತು.

XXII. ಹಣಗೂರು ಬಳಿ ಇರತಕ್ಕ ಟೋಲ್ ಗೇಟನ್ನು ಬಿಸಲೆ ಟ್ರಾವೆಲರ್ಸ್ ಬಂಗ್ಲಾ ಸಮೀಪಕ್ಕೆ ಬದಲಾಯಿಸತಕ್ಕ ವಿಚಾರದಲ್ಲಿ ಜರಗಿದ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ ಯಾವ ಅಭ್ಯರಾಗುಳ್ಳ ರಿಕಾರ್ಡು ಓದಲಾಯಿತು.

ತೀರ್ಮಾನ—ಅದರಂತೆ ಟೋಲ್ ಗೇಟನ್ನು ಬಿಸಲೆ ಟ್ರಾವೆಲರ್ಸ್ ಬಂಗ್ಲಾಕ್ಕೆ ಹೋಗುವ ರಸ್ತೆ ಹತ್ತಿರ ಇಡಲು ಗೌರ್ನಮೆಂಟ್ ಮಂಜೂರಾತಿ ಬಗ್ಗೆ ಬರೆಸಬಹುದಾಗಿ ತೀರ್ಮಾನಿಸಲಾಯಿತು.

XXIII. ಹಾಸನ ಡಿ|| ಎಗ್ಸಿಕ್ಯೂಟಿವ್ ಇಂಜನಿಯರ್ ಮತ್ತು ಡಿ|| ಮ|| ಸ್ಯಾ|| ಆಫೀಸರವರಿಂದ ಕ್ವಾರ್ಟರ್ ಸೈರ್ ಆಗಲ್ಪಟ್ಟಿರುವ ಮತ್ತು ಬಡ್ಜೆಟ್ಟಿನಲ್ಲಿ ದಾಖಲಾಗಿರುವ ಚನ್ನರಾಯಪಟ್ಣ ತಾಲ್ಲೂಕು ಬಾಬತು ಇದರಡಿ ನಮೂದಿಸಿರುವ ಸ್ಯಾನಿಟರಿ ಕೆಲಸಗಳ ಅಂದಾಜವನ್ನು ಓದಲಾಯಿತು.

			ರೂ.
ಹಿರಿಸಾವೆ ಯೂನಿಯನ್ನಲ್ಲಿ V ಡ್ರೇನ್ ಕಟ್ಟತಕ್ಕದ್ದು	...	...	79
ಶ್ರವಣಬೆಳಗುಳದ ಯೂನಿಯನ್ನಲ್ಲಿ V ಡ್ರೇನ್ ಕಟ್ಟತಕ್ಕದ್ದು	...	...	102
ನುಗ್ಗಿಹಳ್ಳಿ ಯೂನಿಯನ್ನಲ್ಲಿ ಡಿಟೋ	...	...	100
ಬಾಗೂರು ಯೂನಿಯನ್ ಸಂತೆ ಮಾಳದಲ್ಲಿ ಡಿಟೋ	...	...	50

ತೀರ್ಮಾನ—ಮಂಜೂರ್ಮಾಡಿರುತ್ತೆಂದು ತೀರ್ಮಾನಿಸಲಾಯಿತು.

XXIV. ಈ ಕೆಳಗೆ ನಮೂದಿಸಿರತಕ್ಕ ಮೊಬಲಗುಗಳನ್ನು ಉಪಯೋಗಿಸಿಕೊಂಡು ಬಡ್ಜೆಟ್ಟಿನಲ್ಲಿ ನಮೂದಿಲ್ಲದಿರತಕ್ಕ ಹಾಸನ ತಾಲ್ಲೂಕು ಗ್ರಾಮದಲ್ಲಿ ಒಂದು ದೊಡ್ಡಿ ಕಟ್ಟಿಸತಕ್ಕ ಕೆಲಸಕ್ಕೆ 250 ರೂಪಾಯಿಗಳ ಅಂದಾಜವನ್ನು ಮಂಜೂರಿ ಬಗ್ಗೆ ಕಳುಹಿಸಿಕೊಡಬೇಕೆಂತ ಹಾಸನ ತಾಲ್ಲೂಕು ಬೋರ್ಡಿನ ತೀರ್ಮಾನ ನಿ೩ ಹಾಸನ ತಾಲ್ಲೂಕು ಅಮಲ್ದಾರ್ರಿಂದ ಬಂದ ರಿಪೋರ್ಟು ಓದಲಾಯಿತು.

			ರೂ.
ಗ್ರಾಮದ ಯೂನಿಯನ್ನಲ್ಲಿ ಚರಂಡಿ ಮತ್ತು ರೋಡು ರಿಪೇರಿಗೋಸ್ಕರ ಇರುವ		...	150
ತಾಲ್ಲೂಕು ಮ|| ನಲ್ಲಿನ ದೊಡ್ಡಿ ರಿಪೇರಿಗಾಗಿ ದಾಖಲಾಗಿರುವ	...	...	50
ಕಂಚಿಕದಿಂದ ಹಾಸನ-ಯಲವಾಲ್ ರಸ್ತೆ ರಿಪೇರಿಗಾಗಿರುವ	...	...	50

ತೀರ್ಮಾನ—ಪ್ರಸಕ್ತವಾದ ಕೆಲಸ ನಡಿಸತಕ್ಕ ಬಗ್ಗೆ ಗೌರ್ನಮೆಂಟ್ ಮಂಜೂರಾತಿ ಪಡೆಯಬೇಕೆಂದು ತೀರ್ಮಾನಿಸಲಾಯಿತು.

XXV. ಅರ್ಕಲಗೂಡು ತಾಲ್ಲೂಕು ಮರತಿ ಹನುಮೇಗೌಡನಿಂದ ವಸೂಲಾಗಬೇಕಾಗಿರುವ ಠೋಕರಾಗುತ್ತಾ ಬಾಕಿ ಮೊಬಲಗನ್ನು ರಿಮಿಷನ್ ಮಾಡಕೂಡದೆಂಬ ಬಗ್ಗೆ ಆ ಗ್ರಾಮದ ನಾರಾಯಣಗೌಡ ನೆಂಬುವನು ಬರೆದುಕೊಂಡಿರುವ ಅರ್ಜಿ ಮೇಲೆ ನಡೆದಿರುವ ರಿಕಾರ್ಡು ಓದಲಾಯಿತು.

ತೀರ್ಮಾನ—ಈ ವಿಚಾರದಲ್ಲಿ ನಾರಾಯಣಗೌಡನ ಹಾಜರ್ಮಾಡಿಕೊಂಡು ಅವನ ಹೇಳಿಕೆಯನ್ನು ಪ್ರೆಸಿಡೆಂಟರು ತೆಗೆಯತಕ್ಕ ಬಗ್ಗೆ ಸದರಿ ಇಸಮಿಗೆ ತಾಲ್ಲೂಕು ಮೂಲಕ ಇನ್ನೊಂದಾವರ್ತಿ ನೋಟಿಸ್ ಕೊಟ್ಟ ಅನಂತರ ಫೈಸಲಿಗೆ ತರಬೇಕೆಂತ ತೀರ್ಮಾನಿಸಲಾಯಿತು.

XXVI. ಬೇಲೂರು ತಾಲ್ಲೂಕು ಪ್ರಜಾಪ್ರತಿನಿಧಿ ಸಭೆ ಮೆಂಬರು ಮಿ|| ಪಾಯಣ್ಣನವರು ಹಳೆಬೀಡು ಅಥವಾ ಅಡಗೂರಿನಲ್ಲಿ ಒಂದು ವೈದ್ಯಶಾಲೆಯನ್ನು ಇಡಿಸಿಕೊಡಬೇಕೆಂದು ಅಪೇಕ್ಷಿಸಿದ ವಿಚಾರವನ್ನು ದಸರಾ ಸಬ್‌ಜಕ್ಟಿನಿಂದ ವಜಾಮಾಡಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯದ ಬಗ್ಗೆ ಓದಲಾಯಿತು.

ತೀರ್ಮಾನ—ಈ ವಿಚಾರದಲ್ಲಿ ತಾಲ್ಲೂಕು ಬೋರ್ಡಿನವರ ತೀರ್ಮಾನ ನಿ೩ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

XXVII. ಹಾರ್ನಬಾಳು ದೇವರುಂದ ರಸ್ತೆಗೆ ಹಾಲಿ ಕೊಡುತ್ತಿರುವ 70 ರೂಪಾಯಿಗಳ ಮೈಲೇಜು ಅಲಾಟ್‌ಮೆಂಟು ಹೆಚ್ಚಾಗಿರುವದರಿಂದ ಇದಕ್ಕಾಗಿ ಮಂಜೂರಾಗಿರುವ 800 ರೂಪಾಯಿಗಳ ಪೈಕಿ 240 ರೂಪಾಯಿ ಆನೆಮಹಲ್ ಮೂಡಿಗೆರೆ ರಸ್ತೆಗೆ ಉಪಯೋಗಿಸಿಕೊಳ್ಳತಕ್ಕ ಭಾಗದಲ್ಲಿ ಬೋರ್ಡಿನವರ ಅನುಮತಿ ತಿಳಿಸಬೇಕೆಂಬದಾಗಿ ವೆಸ್ಟರ್ನ್ ಸರ್ಕಲ್ ಸೂ|| ಇಂಜನಿಯರವರಿಂದ ತಲ್ಪಿದ ಡಾಕೆಟ್ ಓದಲಾಯಿತು.

ತೀರ್ಮಾನ—ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳಿಗೆ ಕೊಡತಕ್ಕ ಮೈಲೇಜ್ ಅಲಾಟ್‌ಮೆಂಟುಗಳನ್ನು ರಿವೈಜ್ ಮಾಡತಕ್ಕ ಬಗ್ಗೆ ಈ ಕೆಳಗೆ ನಮೂದಿಸಿರುವ ಮೆಂಬರುಗಳುಳ್ಳ ಸಬ್ ಕಮಿಟಿ ಏರ್ಪಡಿಸಿ ಈ ವಿಚಾರವು ಚರ್ಚಿಸಲ್ಪಡಬೇಕಾಗಿ ತೀರ್ಮಾನಿಸಲಾಯಿತು.

ವೈಸ್ ಪ್ರೆಸಿಡೆಂಟರವರು.	ಹಾಸನ ಡಿ|| ಎಗ್ಸಿಕ್ಯೂಟಿವ್ ಇಂಜನಿಯರವರು.
ಜ|| ಅಸಿಸ್ಟೆಂಟ್ ಕಮಿಷನರವರು.	ಮಿ|| ಲಕ್ಷ್ಮೀನರಸಿಹ್ಮಾಚಾರ್ಯರು.
ಸಕಲೇಶಪುರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.	

XXVIII. ಹಾರ್ನಬಾಳು ಮತ್ತು ಅರೆಹಳ್ಳಿಯಲ್ಲಿನ ಹಾಸ್ಪಿಟಲ್ ಅಸಿಸ್ಟೆಂಟ್ ಇವರುಗಳಿಗೆ ಕ್ವಾರ್ಟರ್ಸ್ ಕಟ್ಟಿಸತಕ್ಕ ಬಗ್ಗೆ ಡಿ|| ಮತ್ತು ಮ್ಯುನಿಸಿಪಲ್ ಫಂಡ್ಸಿನಿಂದ ಕೊಡಬೇಕಾಗಿರುವ ಮೊಬಲಗನ್ನು ಡಿ. ಪಿ. ಡಬ್ಲ್ಯು. ಇಲಾಖೆಗೆ ಜಮಾ ಕೊಡಬೇಕೆಂಬದಾಗಿ ಗೌರ್ನಮೆಂಟಿನಿಂದ ತಲ್ಪಿದ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—ಈ ಬಗ್ಗೆ ಹಾಲ್‌ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್ಟಿನಲ್ಲಿ ದಾಖಲಾಗಿರುವ 2,000 ರೂಪಾಯಿಗಳನ್ನು ಡಿ. ಪಿ. ಡಬ್ಲ್ಯು. ಇಲಾಖೆಗೆ ಜಮಾ ಕೊಡಿಸಬಹುದೆಂತ ತೀರ್ಮಾನಿಸಲಾಯಿತು.

XXIX. ಚೀಕನಹಳ್ಳಿ ಟ್ರಾವಲರ್ಸ್ ಬಂಗ್ಲಾ ಕಾಂಪೌಂಡಿನಲ್ಲಿ ಒಂದು ಭಾವಿಯನ್ನು ತೆಗಿಸತಕ್ಕ ಬಗ್ಯೆ ತಗಲುವ ಲಾಗೋಡನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕೆಂತ ವೆಸ್ಟರ್ನ ಸರ್ಕಲ್ ಸೂ॥ ಇಂಜನಿಯರವರು ಬರಿಸಿರುವ ಡಾಕೆಟ್ ಕಾಪಿ ಸಿಹಿ ಹಾಸನ ಡಿ॥ ಎಗ್ಜಿಕ್ಯುಟಿವ್ ಇಂಜನಿಯರವರು ಬರಿಸಿದ ಡಾಕೆಟಿ ಓದಲಾಯಿತು.

ತೀರ್ಮಾನ—ಪ್ರಸಕ್ತ ಬಂಗ್ಲಾ 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾ ಆದಾಗ್ಯೂ ಟ್ರಾವಲರ್ಸ್ ಬಂಗ್ಲಾಗಳಿಗೆ ಆಗಬೇಕಾದ ಒರಿಜನಲ್ ಕೆಲಸಗಳ ಬಾಬತು ಲಾಗೋಡನ್ನು ಪ್ರೊವಿನ್ಷಿಯಲ್ ಫಂಡ್ಡಿನಿಂದ ಕೊಡಬೇಕಾಗಿರುವದರಿಂದ ಮೇಲ್ಕಂಡ ಭಾವಿ ಕಾಮಗಾರಿ ಬಾಬತು ಖರ್ಚನ್ನು ಆ ಫಂಡ್ಡಿನಿಂದಲೆ ಕೊಡಿಸಬೇಕೆಂಬ ಬಗ್ಯೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

XXX. ತಾಲ್ಲೂಕುಗಳಿಂದ ತಲ್ಪಿರುವ ಇದರಡಿ ಕಾಣಿಸಿರುವ ಹಾಲ್‌ಸಾಲ್ ಬಡ್ಜೆಟ್ಟನಲ್ಲಿ ದಾಖಲಾಗಿರುವ ಕಾಮಗಾರಿಗಳ ಬಾಬತು ಅಂದಾಜಗಳನ್ನು ಓದಲಾಯಿತು.

ತೀರ್ಮಾನ—ಮಂಜೂರಾಗಿರುವ ಅಂದಾಜಗಳ ಬಾಬತು ಕೆಲಸಗಳನ್ನು ನಡಿಸತಕ್ಕ ಬಗ್ಯೆ ತಾಲ್ಲೂಕುಗಳಿಗೆ ಅಂದಾಜಾ ವಾಪಸ್ ಮಾಡಬೇಕಾಗಿ ತೀರ್ಮಾನಿಸಲಾಯಿತು.

ತಾಲ್ಲೂಕಿನ ಮತ್ತು ಕೆಲಸದ ಹೆಸರು.	ಅಂದಾಜ ಮೊತ್ತ.	ಷರಾ.
ಹಾಸನ ತಾಲ್ಲೂಕು.		
ಚಟ್ಟನಹಳ್ಳಿ ಭಾವಿಗೆ ಪತ್ತರಿ ಕೆಲಸ	193	ನಿಲ್ಲಿಸಿರುತ್ತೆ.
ಗಾಡೇನಹಳ್ಳಿ ಡಿಟೋ	162	ಮಂಜೂರ್ಮಾಡಿದೆ.
ಚಿಕ್ಕಗೇಣಿಗೆರೆ ಡಿಟೋ	270	
ಹೊನ್ನಮ್ಮನಹಳ್ಳಿ ಡಿಟೋ	150	
ಕೌಶಿಕದಿಂದ ಹಾರ್ಸ ಇಲವಾಲ್ ರಸ್ತೆಗೆ ಹೋಗುವದಕ್ಕಾಗಿರುವ ಬಂಡಿ ಜಾಡು ರಿಪೇರಿ ಬಗ್ಯೆ	50	ನಿಲ್ಲಿಸಿರುತ್ತೆ.
ಚನ್ನರಾಯಪಟ್ಟಣ ತಾಲ್ಲೂಕು.		
ನಾಗೇನಹಳ್ಳಿ ಭಾವಿಗೆ ಪತ್ತರ್ ಕಾಮಗಾರಿ	390	ಮಂಜೂರ್ಮಾಡಿದೆ.
ನಾಗೈಯ್ಯನ ಕೊಪ್ಪಲು ಭಾವಿ ಆಳಮಾಡಿ ಪತ್ತರ್ ಕಾಮಗಾರಿ	292	
ಬೀಜಗೊಂಡನಹಳ್ಳಿಲಿ ಭಾವಿ ಆಳಪಡಿಸತಕ್ಕದ್ದು	359	
ಹೊಳೆನರಶೀಪುರ ತಾಲ್ಲೂಕು.		
ವಡಗಟ್ಟೆಯಲ್ಲಿನ ಭಾವಿಗೋಸ್ಕರ	150	ನಿಲ್ಲಿಸಿರುತ್ತೆ.
ತಾತ್ನಹಳ್ಳಿ ದೊಡ್ಡ ಕೆರೆ ಬಗ್ಯೆ	50	ಮಂಜೂರ್ಮಾಡಿದೆ.
ಮಾವಿನಕೆರೆಯಿಂದ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆ ರಿಪೇರಿ ಬಗ್ಯೆ	50	ಡಿಟೋ
ಹೊಳೆ ನರಶೀಪುರದಿಂದ ಹಳ್ಳಿ ಮೈಸೂರಿಗೆ ಹೋಗುವ ರಸ್ತೆ ರಿಪೇರಿ ಬಗ್ಯೆ ...	50	ನಿಲ್ಲಿಸಿರುತ್ತೆ.
ಗೆಜ್ಜನಹಳ್ಳಿ ಬಳಿ ಇರುವ ಚಾನಲ್ ರಿಪೇರಿ ಬಗ್ಯೆ	318	ಡಿಟೋ
ದೊಡ್ಡಕಾಡನೂರಿನಲ್ಲಿ ಒಂದು ಭಾವಿಗೋಸ್ಕರ	400	ಮಂಜೂರ್ಮಾಡಿದೆ.
ಆಲೂರು ಸಬ್ ತಾಲ್ಲೂಕು.		
ಪಾಳ್ಯದ ದೊಡ್ಡಿ ರಿಪೇರಿ ಬಗ್ಯೆ	50	ಡಿಟೋ
ಆಲೂರಿಂದ ಕುಂದೂರಿಗೆ ಹೋಗುವ ರಸ್ತೆ 1ನೆ ಸೆಕ್ಷನ್ ರಿಪೇರಿ ಬಗ್ಯೆ... ...	100	
ಡಿಟೋ 2ನೆ ಸೆಕ್ಷನ್ ರಿಪೇರಿ ಬಗ್ಯೆ ಅಂಕಿಹಳ್ಳಿ ರಸ್ತೆಗೆ ಬದಲಾಗಿ	150	
ಕೊಮಾರ್ನಹಳ್ಳಿ ಭಾವಿ ರಿಪೇರಿ ಬಗ್ಯೆ	50	
ಆಲೂರಿಂದ ಅಂಕಿಹಳ್ಳಿಗೆ ಹೋಗುವ ರಸ್ತೆ ರಿಪೇರಿ	150	

XXXI. ಮೀಟಿಂಗಿಗೆ ಹಾಜರಾಗಲು ಸಾಧ್ಯವಾಗಿಲ್ಲವೆಂದು ಈ ಕೆಳಗೆ ಕಂಡ ಮೆಂಬರುಗಳು ಬರೆದುಕೊಂಡ ಲೆಟರುಗಳನ್ನು ಓದಲಾಯಿತು.

ಮಿ॥ ಕೇಣಿ ಮಹದೇವಪ್ಪನವರು.
,, ಡಬ್ಲ್ಯು. ಎಲ್. ಕ್ರಾಫರ್ಡ್ ಸಾಹೇಬರು.
,, ಕೆ ತಮ್ಮಯ್ಯನವರು.
,, ಜ. ತಿರುನಾರಣೈಯ್ಯಂಗಾರ್ರು.
,, ಧರಣೈಯ್ಯ ಶೆಟ್ಟರು.
,, ವೆಂಕಟಸುಬ್ಬಯ್ಯನವರು.
,, ರಾಮಶೆಟ್ಟರು.

ತೀರ್ಮಾನ—ಕೇಳಿ ಮಿಸಿ ಇಡಲಾಯಿತು.

XXXII. 1909ನೆ ಇಸವಿ ಡಿಸೆಂಬರ್ ಮಾಹೆ ತಾರೀಖು 13ನೆ ಸೋಮವಾರ ಮಧ್ಯಾಹ್ನಾತ್ಪರ 1 ಘಂಟೆಗೆ ಬರುವ ಮೀಟಿಂಗ್ ನಡೆಸಬೇಕೆಂತ ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯು. ವೆದರಾಲ್, ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ನ 1909—10ನೆ ಇಸವಿ ಮಿ|| ಅರ್ಜೀ ನಂಬರ್ 240.

ಬೆಂಗಳೂರು ಕೋಟೇಲಿ ರಿಜರ್ವ್ ಪೊಲೀಸಿನಲ್ಲಿ ಫಸ್ಟ್‌ಕ್ಲಾಸ್ ಕಾನಿಸ್ಟೇಬಿಲ್ ಆಗಿದ್ದು ಮೃತಪಟ್ಟ ಷೇಕ್‌ಜಾಫರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಜಾಹೀರಬಿ ಮೃತಪಟ್ಟ ಸದರಿ ಷೇಕ್ ಜಾಫರಿಗೆ ಮುಖ್ಯ ವಾರಸದಾರು) ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಷೇಕ್‌ಜಾಫರ್‌ರ ಜಿಂದಗಿ ಬಗ್ಯಾಗಿ ಬರತಕ್ಕ 153 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಜಾಹೀರಬಿ ಅರ್ಜಿಯನ್ನು ಸ್ನ 1909ನೆ ಇಸವಿ ನವಂಬರು ತಿಂಗಳು ತಾರೀಖು 26 ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಷೇಕ್‌ಜಾಫರ್ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ನ 1909ನೆ ಇಸವಿ ನವಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟಿ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ನ 1909—10ನೆ ಇಸವಿ ಮಿ|| ನಂಬರ್ 270

ಎಡತೊರೇಲಿ ಸಬ್ ಅಸಿಸ್ಟೆಂಟ್ ಇಂಜನಿಯರಾಗಿದ್ದು ಮೃತಪಟ್ಟ ಕೆ. ವಾಸುದೇವರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಶ್ರೀನಿವಾಸರಾವ್ ಮೈನರ್ ಗಾರ್ಡಿಯನ್ ಪುಟ್ಟವಮ್ಮ ಮೃತಪಟ್ಟ ಸದರೀ ವಾಸುದೇವರಾವ್‌ಗೆ ಮುಖ್ಯ ವಾರಸುದಾರು) ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ, ಕೆ. ವಾಸುದೇವರಾವ್ ಜಿಂದಗಿ ಬಗ್ಯಾಗಿ ಬರತಕ್ಕ (3,087) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಶ್ರೀನಿವಾಸರಾವ್, 2ನೆ ವೆಂಕಟರಾವ್, 3ನೆ ಕೇಶವರಾವ್ ಮೈನರ್, ಗಾರ್ಡಿಯನ್ ಪುಟ್ಟವು ನವರ ಅರ್ಜಿಯನ್ನ 1901ನೆ ಇಸವಿ ನವಂಬರ್ ತಿಂಗಳು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಾಸುದೇವರಾವ್ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ನ 1909ನೆ ಇಸವಿ ನವಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟಿ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ನ 1909—10ನೆ ಇಸವಿ ಮಿ|| ಅರ್ಜೀ ನಂಬರ್ 28[illegible].

ಬೆಂಗಳೂರು ದೊಡ್ಡ ಮಾವಹಳ್ಳೀಲಿದ್ದು ಮೃತಪಟ್ಟ ಬಿ. ಲಕ್ಷ್ಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬಿ. ವೆಂಕಟಪ್ಪ ಮೃತಪಟ್ಟ ಸದರೀ ಬಿ. ಲಕ್ಷ್ಮಯ್ಯನಿಗೆ ಮುಖ್ಯ ವಾರಸದಾರು) ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಬಿ. ಲಕ್ಷ್ಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ (2,599) ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಬೆಂಗಳೂರು ದೊಡ್ಡ ಮಾವಹಳ್ಳೀಲಿರುವ ಚಿಕ್ಕ ಬೈಯ್ಯಣ್ಣನ ಮಗ ವೆಂಕಟಪ್ಪನವರ ಅರ್ಜಿಯನ್ನು ಸ್ನ 1909ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿ. ಲಕ್ಷ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ನ 1909ನೆ ಇಸವಿ ನವಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟಿ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ,
ಸಬ್ ಜಡ್ಜಿ.

ನೋಟೀಸ.

ಮೈಸೂರು ಸ್ವದೇಶಿ ಶ್ರೀ. ಶ್ರೀನಿವಾಸಧರ್ಮ ಅಭಿವೃದ್ಧಿ ಕಂಪನಿ ಲಿಮಿಟೆಡ್ ಆಫೀಸ್, ಮೈಸೂರು.

ಈ ಮೇಲ್ಕಂಡ ಕಂಪನಿಯ ಮೆಂಬರುಗಳು 19—9—1909 ಮತ್ತು 10—10—1909ರಲ್ಲು ಸಭೆ ಸೇರಿ ನಡಸಿದ ಎಕ್ಸ್‌ಟ್ರಾರ್ಡನೇರಿ ಜನರಲ್ ಮೀಟಿಂಗ್ ಮತ್ತು ಕನ್‌ಫರಂ ಮೀಟಿಂಗಿನಲ್ಲಿ ಈ ಕಂಪನಿಯನ್ನು ವೈಂಡಪ್ ಮಾಡಬೇಕೆಂತಲೂ ಮತ್ತು ಈ ಪ್ರೊಸೀಡಿಂಗ್ಸನಲ್ಲಿ ಗೊತ್ತುಮಾಡಿರುವ ಲಿಕ್ವಿಡೇಟರುಗಳು ಕಂಪನಿಯಲ್ಲಿ ಹಾಲಿ ಉಳಿದಿರತಕ್ಕ ಹಣದಲ್ಲಿ ಪ್ರೊಸೀಡಿಂಗ್ಸನಲ್ಲಿ ನಮೂದಿಸಿರುವ ಜನಗಳಿಗೆ ಕಂಪನಿಯಿಂದ ಕೊಡಬೇಕಾದ ಹಣವನ್ನು ಪಾವತಿಮಾಡಿ ಉಳಿಯತಕ್ಕ ಹಣವನ್ನು ಮತ್ತು ಕಂಪನಿಯಲ್ಲಿರತಕ್ಕ ಕಂಪನಿಯ ವಿಶಿಷ್ಟ ಸ್ವತ್ತನ್ನು ವಿಕ್ರಯಿಸಿ ಅದರಿಂದ ಬರತಕ್ಕ ಹಣವನ್ನು ಸಹ ಕಂಪನಿಯ ಮೆಂಬರುಗಳಿಗೆ ದಾಮಾಷಾಯಿ ಪ್ರಕಾರ ಹಂಚಿಕೊಡಬೇಕೆಂದು ವಗೈರೆ ಪ್ರೊಸೀಡಿಂಗ್ಸ್ ಮಾಡಿದ್ದನ್ನು ಮೈಸೂರು ಗವರ್ನ್‌ಮೆಂಟ್ ಜಾಯಿಂಟ್ ಸ್ಟಾಕ್ ಕಂಪನಿ ರಿಜಿಸ್ಟ್ರಾರವರು ರಿಜಿಸ್ಟರ್ ಮಾಡಿಕೊಂಡು ಈ ಕಂಪೆನಿಯನ್ನು ವಾಲಂಟರಿ ವೈಂಡಪ್ ಮಾಡತಕದ್ದೆಂಬದಾಗಿ 9—11—1909ನೆ ಮರ್ಕುಂ 428ನೆ ನಂಬರು ಸರ್ಟಿಫಿಕೇಟ್ ಕೊಟ್ಟು ಇರುತ್ತಾರಾಗಿ ಈ ಕಂಪನಿಯು ಈ ಲಾಗಾಯಿತು ವಾಲಂಟರಿ ವೈಂಡಪ್ ಮಾಡಲ್ಪಟ್ಟಿರುತ್ತೆಂಬದಾಗಿಯೂ ಪ್ರೊಸೀಡಿಂಗ್ಸನಂತೆ ಕ್ರಮಗಳ ನಡಸಲು ಲಿಕ್ವಿಡೇಟರುಗಳಿಗೆ ಕೂಡ್ಲೆ ಸುಫರ್ದು ಮಾಡಲಾಗುತ್ತೆಂಬದಾಗಿಯು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸಿ ಇರುತ್ತೆ.

ತಾರೀಖು 15ನೆ ಮಾಹೆ ನವಂಬರು ಸ್ನ 1909ನೆ ಇಸವಿ.

ಪ. ಸಾ. ವೆಂಗಟಸಾಮಿಯಾರ್,
ಎಂದು ಅರವದಲ್ಲಿ ರುಜು ಇಡ್ಡೆ,
ಸೆಕ್ರಟೆರಿ ಮತ್ತು ಟ್ರೆಜರರ್.

ಮೈಸೂರ ಗೆಜೆಟ್.

[ಸಂ. 44.] ಸರ್ಕಾರದಿಂದ ಛಾಪಿಸಿ ಆದ್ದು. [ಸಂ. 47.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 2, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟ್.

ಇಸ್ತಿಹಾರ್ನಾಮೆ.

ನಂ. 317, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕಿನ 228 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲ್‌ಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಶಿರಾ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 10ನೆ ಶುಕ್ರವಾರ ಅಥವಾ ಆ ಮುಹೂರಿನಲ್ಲಿ ಪ್ರಾರಂಭಿಸಲ್ಪಡುವದು.

ನಂ. 323, ತಾರೀಖು 20ನೆ ನವಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟ್ ಪಾವಗಡ ತಾಲ್ಲೂಕಿನ 140 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲ್‌ಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಪಾವಗಡದ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 6ನೆ ತಾರೀಖು ಸೋಮವಾರ ಅಥವಾ ಆ ಮುಹೂರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ಶ್ಯಾಮರಾವ್,
ಸೂಪರ್ಇಂಟೆಂಡೆಂಟ್, ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್.

ಅಮೃತಮಹಲ್ ಇಲಾಖಾ.

ನೋಟಿಫಿಕೇಷನ್.

ಕ್ಯಾಂಪ್ ಮೈಸೂರು, ತಾರೀಖು 14ನೆ ನವಂಬರು 1909.

ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳನ್ನ 6—12—1909ರ ಲಾಗಾಯಿತು ಮಾಗಡಿ ತಾಲ್ಲೂಕು "ಬಗೆನಗೆರೆ" ಕಾವಲಿನಲ್ಲಿಯು (ಅಂದರೆ ಕುಣಿಗಲ್-ಬೆಂಗಳೂರು ರಸ್ತೆಯ 38ನೆ ಮೈಲಿಯ ಸಮೀಪ) ಮತ್ತು 12—12—09ರ ಲಾಗಾಯಿತು ಅರಶೀಕೆರೆ ತಾಲ್ಲೂಕು "ಗಂಡಶಿ" ಬಂಗ್ಲಾ ಬಳಿಯಲ್ಲಿಯೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ, ಇಷ್ಟವುಳ್ಳವರು ಹಾಜರಾಗಿ ಛಡಸವಾಲಿನಲ್ಲಿ ರಾಸುಗಳನ್ನ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್, ಸೂಪರ್ಇಂಟೆಂಡೆಂಟ್.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ.

ತಾರೀಖು 21ನೆ ಅಗಸ್ಟ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ವೈಸೂರು ಸರಕಾರದ ಶ್ರೀಗಂಧದ ಸಾಲೀನಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟ.	ಕೋಠಿ.	ಹರಾಜು ತಾರೀಖು.		[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ ತಾರೀಖು	18	200	
2	ಡಿಟೋ ...	ಸಾಗರ ...	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟನ್ನುಗಳು ಸೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ ತಾರೀಖು	2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟನ್ನುಗಳು ಕೋಲಾರದ 5 ಟನ್ನುಗಳು ಸೇರಿರುತ್ತೆ.
8	ವೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ	...	2,400	

ಎಂ. ಮುತ್ತಣ್ಣ, ಕನ್ಸರ್ವೇಟರ ಆಫ್ ಫಾರೆಸ್ಟ್ಸ್, ಇನ್ ವೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 24ನೆ ನವಂಬರ್ 1909.

1. ಕಂದಾಯದ ಬಾಕೀದಾರರಾದ ಜೋಡಿ ಕಂಸಂದ್ರದ ರಾಮಸ್ವಾಮಿ ಅಯ್ಯಂಗಾರರಿಂದ ಬರಬೇಕಾದ ಜಮೀನ್ ಜೋಡಿ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ್ ನೆಲಮಂಗಲ ತಾಲ್ಲೂಕು ಆಫೀಸಿನಲ್ಲಿ 1910ನೆ ಇಸವಿ ಜನವರಿ 7ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚೆಕಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಶೀಲ್ ಮೇರಿಗೆ ರೂಪಾಯಿ 115-6-2 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸಹಿ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪ

ಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಯಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
								ಎ. ಗು.	ರೂ. ಆ. ಪೈ.			ರೂ. ಆ. ಪೈ.
ನೆಲಮಂಗಲ	ದಾಸನಪುರ	ಜೋಡಿ ಕಂಸಂದ್ರ	ರಾಮಸ್ವಾಮಿ ಅಯ್ಯಂಗಾರ್ರು	ಪೂರಾಗ್ರಾಮ	...	ಪರಂಪೋಕು ...		89 24	11 0 0	ರೂ. 863	ರೂ. ಅ. ಪೈ. 115 7 2	114 6 2 ಬಾಕಿ
						ಖುಷ್ಕಿ ...		469 32	315 1 6			0 8 0 ನೋಟಿಸ್
						ತರಿ ...		6 23	28 1 9			0 8 0 ಹರಾಜ್ ಫೀ
						ಬಾಗಾಯಿತು ...		0 5	0 4 0			
						ಜುಮ್ಲಾ ...		566 4	354 7 3			115 6 2 ಮತ್ತು ಬಡ್ಡಿ ಸಹ ಬರಬೇಕು..
						ಗ್ರಾಮದ ಅಂದಾಜು ...			600 0 0			
						ಇದರಲ್ಲಿ ಕಟ್ಟಡಗಳ ಅಂದಾಜು. ...			263 0 0			
									863 0 0			

ಟಿ. ರಾಯುಲು ಚೆಟ್ಟಿ, ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಜಡ್ಲತಿಮ್ಮನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಸಾಹೇಬರವರ ರೂಬರೂಬು 1909ನೆ ಇಸವಿ ಡಿಸೆಂಬರು 13ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ನವಂಬರ್ 18ನೆ ಮಕ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 863ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 17ನೆ ನವಂಬರ್ 1909.

ಚಿಕ್ಕಬಳ್ಳಾಪುರ ತಾಲ್ಲೂಕು ಮಂಡಿಕಲ್ಲು ಹೋಬಳಿಗೆ ಸೇರಿದ ಕಾಯಂಗುತ್ತಾ ಚೀಗಾನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫಿಸರವರ ರೂಬರೂಬು 1909ನೆ ಡಿಸೆಂಬರ್ ಮಾಹೆ 20ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ನವಂಬರ್ 25ನೆ ಮಕ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 869–870ನೆ ಪೇಜುಗಳನ್ನು ನೋಡತಕ್ಕದ್ದು.

ಎ. ವೇದಾಂತದೇಶಿಗಂ ಅಯ್ಯಂಗಾರ್, ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ 1909–10ನೆ ಇಸವಿ ಮಿ॥ ಅರ್ಜೀ ನಂಬರ್ 281.

ಬೆಂಗಳೂರಲ್ಲಿ ಬಹಳವಾಗಿ ವ್ಯಾಪಾರ ಮಾಡುತ್ತಿದ್ದ ತಿರುಚನಾಪಲ್ಲೀಲಿ ಮೃತಪಟ್ಟ ಕೊಮಾರಸ್ವಾಮಿ ನಾಯಿಡು ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಲಕ್ಷ್ಮೀನಾರಾಯಣಸ್ವಾಮಿನಾಯಿಡು ವಗೈರೇರು ಮೃತಪಟ್ಟ ಸದರಿ ಕೊಮಾರಸ್ವಾಮಿ ನಾಯಿಡುಯವರಿಗೆ ಮುಖ್ಯವಾರಸದಾರ್ರು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೊಮಾರಸ್ವಾಮಿ ನಾಯಿಡರಿಂದಗಿ ಬಗ್ಗಾಗಿ ಬರತಕ್ಕ ರೂಪಾಯಿ (1,930—8—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಿಪಿದ 1ನೆ ಲಕ್ಷ್ಮೀನಾರಾಯಣಸ್ವಾಮಿ ನಾಯಿಡು, 2ನೆ ವೀರರಾಘವಲು ನಾಯಿಡು, 3ನೆ ಗೋವಿಂದರಾಜುಲು ನಾಯಿಡು 2–3ನೆ ಮೈನರ್, ಗಾರ್ಡಿಯನ್ 1ನೆ ಅರ್ಜೆದಾರ್ರು ಅರ್ಜಿಯನ್ನು ಸ್ 1909ನೆ ಇಸವಿ ಡಿಸೆಂಬರು ತಿಂಗ

ಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೊಮಾರಸ್ವಾಮಿ ನಾಯಿಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ನವಂಬರ್ ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1909-10ನೆ ಇಸವಿ ಮಿಸ್ ಅರ್ಜೀ ನಂಬರ್ 290.

ನೆಲವಂಗಲದಲ್ಲಿದ್ದ ಮೃತಪಟ್ಟ ರಾಮೈಯ್ಯ ಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸಾವಿತ್ರಮ್ಮ ಮೈನರ್, ಗಾರ್ಡಿಯನ್ ಮುನಿಯಪ್ಪಶೆಟ್ಟಿ, ಮೃತಪಟ್ಟ ಸದರೀ ರಾಮೈಯ್ಯ ಶೆಟ್ಟರಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕುದಾರಿಮೇಲೆ ನೆಲವಂಗಲದ ವಾಸಸ್ಥರಾಗಿ ಮೃತಪಟ್ಟ ರಾಮೈಯ್ಯ ಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 1,446—10—6 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1909ನೆ ಇಸವಿ ಡಿಸೆಂಬರು ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮೈಯ್ಯ ಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ನವಂಬರು ತಿಂಗಳು 29ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

1909—10ನೆ ಇಸವಿ ಮಿ|| ಅರ್ಜೀ ನಂಬರ್ 304.

ಪೂನೆಯಲ್ಲಿ ಮೃತಪಟ್ಟ ಕರಿಗಿರಿಯಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೆ ನರಸಿಹ್ಮಾಚಾರ್, 2ನೆ ಆನಂದತೀರ್ಥ ಮೈನರ್, ಗಾರ್ಡಿಯನ್ ನರಶಿಂಗರಾವ್, ಮೃತಪಟ್ಟ ಸದರೀ ಕರಿಗಿರಿಯಾಚಾರ್ರಿಗೆ ಮುಖ್ಯವಾರಸದಾರ್ರು ಆಗಬೇಕೆಂಭ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕರಿಗಿರಿಯಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ 1,668—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಬೆಂಗಳೂರು ಬಸವಾಪುರದಲ್ಲಿರುವ ನಿಜಗಲ್ ಕರಿಗಿರಿಯಾಚಾರ್ರ ಮಕ್ಕಳು 1ನೆ ನರಸಿಹ್ಮಾಚಾರ್, 2ನೆ ಆನಂದತೀರ್ಥ ಮೈನರ್, ಗಾರ್ಡಿಯನ್ ಚಿಕ್ಕಪ್ಪ ನರಶಿಂಗರಾವ್ ಯವರ ಅರ್ಜಿಯನ್ನು ಸರ್ 1909ನೆ ಇಸವಿ ಡಿಸೆಂಬರು ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಿಗಿರಿಯಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ನವಂಬರು ತಿಂಗಳು 27ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

1909—10ನೆ ಇಸವಿ ಮಿ|| ನಂಬರ್ 329.

ಅರ್ಜಿದಾರ್ರು ಆನೆಕಲ್ ಕಸಬಾದಲ್ಲಿರುವ ಮರಾಟಿ ನೀಲಕಂಠರಾವ್ ಮಗ ಶ್ಯಾಮರಾವ್ ಮೈನರ್ ಗಾರ್ಡಿಯನ್, ಚಿಕ್ಕಪ್ಪ ರಿಟೈರ್ಡ್ ಪೊಲೀಸ್ ಇನ್ಸ್‌ಪೆಕ್ಟರ್ ಎಂ. ಹನುಮಂತರಾವ್ ಬೆಂಗಳೂರು ಶಿವಲ್ ಅಂಡ್ ಮಿಲಟೇರಿ ಸ್ಟೇಷನ್ ಕರೆತುರಪಿನಲ್ಲಿರುತ್ತಾರೆ. ಮೈನರಾದ ಶ್ಯಾಮರಾವ್ ಆನೆಕಲ್ ಸ್ಥಳದ ನೀಲಕಂಠರಾವ್ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ ಶಾಮರಾವ್‌ಗೆ ಮುಖ್ಯ ವಾರಸದಾರ್ರಾಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಎಂ. ಹನುಮಂತರಾವ್ ಎಂಬುವರು ಸದರೀ ಮೈನರ್ ಶ್ಯಾಮರಾವ್ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1909ನೆ ಇಸವಿ ಡಿಸೆಂಬರ್ 17ನೆ ತಾರೀಖಿನಲ್ಲಿ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

ಸರ್ 1909ನೆ ಇಸವಿ ನವಂಬರ್ 29ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ, ಸಬ್ ಜಡ್ಜ್.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ರವರ ಆಫೀಸ್.

ನೋಟಿಫಿಕೇಷನ್ ನಂಬರ್ 655—C. S. 24; ಮೊಕ್ಕಾಂ ಬೆಂಗಳೂರು.

ತಾರೀಖು 29-30ನೆ ನವಂಬರ್ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಗಳು, 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯೂಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ:—

ಹೆಸರು	ಸ್ಥಳ.	ರಿಜಿಸ್ಟರು ಆದ ತಾರೀಖು.
(1) ತಿಪಟೂರು ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ತಿಪಟೂರು, ತುಮಕೂರು ಡಿಸ್ಟ್ರಿಕ್ಟು ...	15ನೆ ನವಂಬರು 1909.
(2) ನೊಣವಿನಕೆರೆ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ನೊಣವಿನಕೆರೆ, ತಿಪಟೂರು ತಾಲ್ಲೂಕು	ಡಿಟೋ
(3) ಪಾವಗಡ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಪಾವಗಡ, ತುಮಕೂರು ಡಿಸ್ಟ್ರಿಕ್ಟು ...	ಡಿಟೋ
(4) ಯಲಹಂಕ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.	ಯಲಹಂಕ, ಬೆಂಗಳೂರು ತಾಲ್ಲೂಕು...	ಡಿಟೋ

ಎಂ. ಶ್ಯಾಮರಾವ್, ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ಮೈಸೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋ.

ಸರ್ 1909ನೆ ಇಸವಿ ಡಿಸೆಂಬರ್ ತಾರೀಖು 2.

ಬೆಂಗಳೂರು ಗೌರ್ನಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರೆಯತಕ್ಕ ಮೈಸೂರು ಸರ್ಕಾರಿ ಲಾ ಪುಸ್ತಕಗಳ ಪಟ್ಟಿ.

ನಂ.	ಹೆಸರು	ಪುಟಗಳ ಸಂಖ್ಯೆ	ಖರೀದಿ			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
1	ಸಾರಾಯಿಯ ರೂಲ್ಸು	45	0	4	0	1	6
2	ಶೇಂದಿ ರೂಲ್ಸು	19	0	2	0	0	6
3	ಸಿವಿಲ್ ಪ್ರೊಸಿಡ್ಯೂರ್ ಕೋಡ್ 1877ನೆ ಇಸವಿ ರಿಜಿಸ್ಟ್ರೇಷನ್ ಆಕ್ಟು ಮತ್ತು 1877ನೆ ಇಸವಿ ಲಿಮಿಟೇಷನ್ ಆಕ್ಟು ಇವುಗಳನ್ನು ದುರಸ್ತು ಮಾಡಲಿಕ್ಕೆ ಹುಟ್ಟಿದ ಆಕ್ಟೆಂಬ ಸರ್1879ನೆ ಇಸವಿಯ 12ನೆ ನಂಬರ ಆಕ್ಟು.	36	0	11	0	1	0
4	1871ನೆ ಇಸವಿಯ ದನಗಳ ಅತಿಕ್ರಮಪ್ರವೇಶದ ಆಕ್ಟು. (1871ನೆ ಇಸವಿಯ 1ನೆ ನಂ. ಆಕ್ಟು).	22	0	1	0	1	0
5	1892ನೆ ಇಸವಿಯ VIIIನೆ ನಂ. ರೆಗ್ಯುಲೇಷನ್ನಿಂದ ತಿದ್ದುಪಡಿಯಾದ 1871ನೆ ಇಸವಿಯ 1ನೆ ನಂ. ಆಕ್ಟು.	10	0	2	0	0	6
6	ಸಿವಿಲ್ ಪ್ರೋಸೆಸ್‌ಗಳ ರೂಲ್ಸು	10	0	1	3	0	6
7	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ (1904).	258	0	12	0	4	0
8	ಸಿಟಿ ಪ್ಲೇಗ್ ರೆಗ್ಯುಲೇಷನ್	4	0	1	0	0	6
9	1870ನೆ ಇಸವಿಯ VIIನೆ ನಂ. ಆಕ್ಟು, ಕೋರ್ಟ್ ರುಸುಮುಗಳ ಆಕ್ಟು.	43	0	2	0	1	6
10	ಎಕ್ಸೈಜ್ ಆಕ್ಟು	46	0	2	0	1	6
11	ಎಕ್ಸೈಜ್ ರೂಲ್ಸು	3	0	0	6	0	6
12	ಗಾಂಜಾ ರೂಲ್ಸು	26	0	1	9	0	6
13	ಬೇಟೆ ಮೃಗಗಳ ಮತ್ತು ಮೀನಿನ ಪೋಷಣೆಗೆ ಸಂಬಂಧಪಟ್ಟ ಚಟ್ಟ...	3	0	0	6	0	6
14	ಇಂಡಿಯದ ನಾಣ್ಯ ಸಂಬಂಧವಾದ ಆಕ್ಟು	10	0	0	3	0	6
15	ಇಂಡಿಯನ್ ಕಂಟ್ರಾಕ್ಟು ಆಕ್ಟು	213	1	5	0	3	6
16	,, ಲಿಮಿಟೇಷನ್ ಆಕ್ಟು (ಹಳೇ ಛಾಪಾ)... ...	87	1	3	0	3	0
17	,, ರಿಜಿಸ್ಟ್ರೇಷನ್ ಆಕ್ಟು	37	0	4	0	2	0
18	,, ಟೆಲಿಗ್ರಾಫ್ ಆಕ್ಟು	18	0	1	6	1	0
19	,, ರೈಲ್ವೆ ಆಕ್ಟು	20	0	1	9	1	0
20	ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು(ಎಂಬ ಜಮೀನ್ ಅಭಿವೃದ್ಧಿಯ ಆಕ್ಟು)	14	0	4	0	1	0
21	ಲ್ಯಾಂಡ್ ಅಕ್ವಿಜಿಷನ್ ಯಾನೆ ಭೂಸಂಪಾದನೆ ವಿಷಯದ ಆಕ್ಟು ...	43	0	4	6	1	6
22	ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸು	33	0	2	0	1	0
23	ಡಿಟೋ (ಹಳೇ ಛಾಪಾ)	206	2	8	0	5	0
24	ಡಿಟೋ ತಿದ್ದುಪಾಟಾದ ಕಾನೂನುಗಳು ...	48	0	4	0	2	0
25	ಮೈಸೂರು ಸಂಸ್ಥಾನದ ನೌಕರೀ ಕಾನೂನುಗಳು (1ನೆ ಛಾಪಾ) ...	250	1	4	0	4	6
26	ಮೈಸೂರು ರೈಲ್‌ವೇಗಳ ರೆಗ್ಯುಲೇಷನ್	50	0	6	0	2	0
27	ಪಟೇಲ್ ರೂಲ್ಸು	1	0	0	3	0	6
28	ತಿದ್ದುಪಾಟಾದ ಶೇಂದಿ ರೂಲ್ಸು	18	0	2	0	1	0
29	ಸ್ಪೆಸಿಫಿಕ್ ರಿಲೀಫ್ ಆಕ್ಟು	46	0	13	0	2	0
30	ತಾಲಿಂಖಾನಾ ರೂಲ್ಸು	1	0	0	3	0	6
31	ಗ್ರಾಮ ಪೋಲೀಸ್ ರೂಲ್ಸು	15	0	1	0	0	6
32	ಗ್ರಾಮ ಲೆಖ್ಖಗಳ ಮ್ಯಾನ್ಯುಯಲ್	99	0	4	0	2	6
33	ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ (1883ನೆ ಇಸವಿಯ Iನೆ ರೆಗ್ಯುಲೇಷನ್).	6	0	0	6	0	6
34	ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರಿಗೆ ಸಮ್ಮಂಧಪಟ್ಟ ಕಾನೂನನ್ನು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ 1884ನೆ ಇಸವಿಯ IIIನೆ ರೆಗ್ಯುಲೇಷನ್.	6	0	0	6	0	6
35	1894ನೆ ಇಸವಿಯ Iನೆ ನಂ. ರೆಗ್ಯುಲೇಷನ್, ಛಾಪಖಾನೆಗಳನ್ನು, ನ್ಯೂಸ್‌ಪೇಪರಗಳನ್ನು ಕ್ರಮಪಡಿಸತಕ್ಕ ಬಗ್ಯೆ ಉಂಟಾದ ರೆಗ್ಯುಲೇಷನ್. ಮತ್ತು IIನೇ ನಂ. ರೆಗ್ಯುಲೇಷನ್, ಇಂಡಿಯನ್ ಪಿನಲ್ ಕೋಡು ತಿದ್ದುಪಾಟು ಮಾಡುವದಕ್ಕೆ ಹುಟ್ಟಿದ ರೆಗ್ಯುಲೇಷನ್.	4	0	0	6	0	6

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
36	1894ನೆ ಇಸವಿಯ IIನೆ ನಂ. ರೆಗ್ಯುಲೇಷರ್ಷ ಪೋಸ್ಟಾಫೀಸ್ ಕಾನೂನಿಗೆ ವಿರೋಧವಾಗಿ ನಡಿಯುವ ತಕಸೀರುಗಳ ವಿಚಾರಣೆ ಬಗ್ಯೆ ವಿಧಿಸಲು ಹುಟ್ಟಿದ ರೆಗ್ಯುಲೇಷರ್ಷ.	1	0	0	3	0	6
37	1894ನೆ ಇಸವಿಯ VIನೆ ನಂ. ರೆಗ್ಯುಲೇಷರ್ಷ, ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷರ್ಷ.	1	0	0	3	0	6
38	1894ನೆ ಇಸವಿಯ Vನೆ ನಂ. ರೆಗ್ಯುಲೇಷರ್ಷ ಕೈದಿಗಳ ಸಾಕ್ಷ್ಯದ ರೆಗ್ಯುಲೇಷರ್ಷ.	5	0	1	0	0	6
39	1894ನೆ ಇಸವಿ VIIIನೆ ನಂ. ರೆಗ್ಯುಲೇಷರ್ಷ ರಿಜಿಸ್ಟ್ರೇಷರ್ಷ ಆಕ್ಟು ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್ಷ.	1	0	0	3	0	6
40	1894ನೆ ಇಸವಿ IXನೆ ನಂ. ರೆಗ್ಯುಲೇಷರ್ಷ ಗೌರ್ನಮೆಂಟ್ ಭದ್ರತೆ ಪತ್ರಗಳನ್ನು ಕುರಿತ ರೆಗ್ಯುಲೇಷರ್ಷ ...	5	0	1	0	0	6
41	1894ನೆ ಇಸವಿಯ XIನೆ ನಂ. ರೆಗ್ಯುಲೇಷರ್ಷ ನಿರ್ಮಾಣಗಳ ಮತ್ತು ನಕ್ಷೆಗಳ ರಕ್ಷಣೆಯನ್ನು ಕುರಿತು ಉಂಟಾದ ರೆಗ್ಯುಲೇಷರ್ಷ.	20	0	3	0	1	0
42	1895ನೆ ಇಸವಿಯ Iನೆ ನಂ. ರೆಗ್ಯುಲೇಷರ್ಷ ಪ್ರಾಣಿಗಳನ್ನು ಹಿಂಸಿಸುವದನ್ನು ಅಡ್ಡಿಪಡಿಸುವದಕೋಸ್ಕರ ಹುಟ್ಟಿದ ರೆಗ್ಯುಲೇಷರ್ಷ.	3	0	0	6	0	6
43	1895ನೆ ಇಸವಿ IIIನೆ ನಂ. ರೆಗ್ಯುಲೇಷರ್ಷ ಮೈಸೂರು ಕಂಪೆನಿಗಳ ರೆಗ್ಯುಲೇಷರ್ಷ.	105	1	0	0	3	0
44	1896ನೆ ಇಸವಿ IIನೆ ನಂ. ರೆಗ್ಯುಲೇಷರ್ಷ ಮೈಸೂರು ಅರಳೆ ಸುಂಕಗಳ ರೆಗ್ಯುಲೇಷರ್ಷ.	8	0	1	3	0	6
45	1897ನೆ ಇಸವಿಯ Iನೆ ನಂ. ರೆಗ್ಯುಲೇಷರ್ಷ (ಮೈಸೂರು ದೇಶದ ಕೋರ್ಟುಗಳಲ್ಲಿ ವಕಾಲತ್ತು ಮಾಡುವ ಲೀಗಲ್ ಪ್ರಾಕ್ಟಿಷನರ್‌ಗಳಿಗೆ ಅಂದರೆ ಲಾಯರುಗಳಿಗೆ ಸಂಬಂಧಪಟ್ಟ ಕಾನೂನಿನ ತಿದ್ದುಪಾಟಿನದಾದ) 1884ನೆ ಇಸವಿಯ IIIನೆ ನಂ. ರೆಗ್ಯುಲೇಷರ್ಷನನ್ನು ತಿದ್ದುಪಡಿಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್ಷ, ಮತ್ತು IIನೆ ನಂ. ರೆಗ್ಯುಲೇಷರ್ಷ, ಅಂಟುರೋಗದ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು.	4	0	0	6	0	6
46	1897ನೆ ಇಸವಿಯ IVನೆ ನಂ. ರೆಗ್ಯುಲೇಷರ್ಷ ಶೃಂಗೇರಿ ಜಹಗೀರ್ ಇನಾಂ ಫೈಸಲ್ ರೆಗ್ಯುಲೇಷರ್ಷ.	2	0	0	6	0	6
47	1898ನೆ ಇಸವಿಯ Iನೆ ನಂ. ರೆಗ್ಯುಲೇಷರ್ಷ ಮೈಸೂರು ಸೀಮೆಯಲ್ಲಿರುವ ಗ್ರಾಮಗಳಲ್ಲಿ ಪಾಕೀಜಾ ಬಗ್ಯೆ ಈಗಿನಕಿಂತ ಉತ್ತಮವಾದ ಕಾನೂನನ್ನು ವಿಧಿಸಲು ಹುಟ್ಟಿದ ರೆಗ್ಯುಲೇಷರ್ಷ.	1	0	0	3	0	6
48	1898ನೆ ಇಸವಿಯ IIನೆ ನಂ. ರೆಗ್ಯುಲೇಷರ್ಷ, 1892ನೆ ಇಸವಿಯ Vನೆ ನಂ. ಮತ್ತು 1894ನೆ ಇಸವಿಯ VIನೆ ನಂ. ರೆಗ್ಯುಲೇಷರ್ಷಗಳಿಂದ ತಿದ್ದುಪಡಿಯಾಗಿರುವ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೋಸ್ಕರ ಹುಟ್ಟಿದ ರೆಗ್ಯುಲೇಷರ್ಷ.	1	0	0	3	0	6
49	1901ನೆ ಇಸವಿಯ Vನೆ ನಂ. ರೆಗ್ಯುಲೇಷರ್ಷ ಮೈಸೂರು ಸೀಮೆಯ ಎಕ್ಸೈಜ್ ರೆಗ್ಯುಲೇಷರ್ಷ.	26	0	4	0	1	6
50	1902ನೆ ಇಸವಿಯ IIನೆ ನಂ. ರೆಗ್ಯುಲೇಷರ್ಷ ಮೈಸೂರು ಸೀಮೆಯ ಲೋಕಲ್ ಬೋರ್ಡುಗಳ ಚಟ್ಟವು.	14	0	0	9	1	0
51	1906ನೆ ಇಸವಿಯ VIIನೆ ನಂ. ರೆಗ್ಯುಲೇಷರ್ಷ ಮೈಸೂರು ಸೀಮೆಯಲ್ಲಿ ಮುನಿಸಿಪಲ್ ಆಡಳಿತಗಳನ್ನು ಉತ್ತಮವಾಗಿ ನಡಿಸುವ ಬಗ್ಯೆ ಹುಟ್ಟಿದ ರೆಗ್ಯುಲೇಷರ್ಷ.	106	1	2	0	4	0
52	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಿಂದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1893ನೆ ಇಸವಿಯಲ್ಲಿ ಸಭೆ ಸೇರಿ ನಡೆಸಿದ ನಡವಳಿಕೆಗಳು.	229	1	4	0	8	0
53	ಡಿಟ್ಟೋ 1905	185	0	14	0	6	0
54	ಮೈಸೂರು ಸೀಮೆಯ ಪ್ರಜಾ ಪ್ರತಿನಿಧಿಗಳಾದ ರೈತರೂ ವರ್ತಕರೂ ಮೊದಲಾದವರೂ ಮೈಸೂರುನಲ್ಲಿ 1906ನೆ ಇಸವಿಯಲ್ಲಿ ಸಭೆಸೇರಿ ನಡೆಸಿದ ನಡವಳಿಕೆಗಳು.	178	1	0	0	6	0
55	ಡಿಟ್ಟೋ 1907 ...	143	1	0	0	6	0
56	ಇಂಡಿಯರ್ಷ ಲಿಮಿಟೇಷರ್ಷ ಆಕ್ಟು	86	0	5	6	1	0

ನಂ.	ಹೆಸರು.	ಪುಟಗಳ ಸಂಖ್ಯೆ.	ಖರೀದಿ.			ಪೋಸ್ಟೇಜ್ ಮತ್ತು ಪ್ಯಾಕಿಂಗ್.	
			ರೂ.	ಆ.	ಪೈ.	ಆ.	ಪೈ.
57	ಜಾರೀ ಇಲಾಖೆಯು ವಿಧಾನ	55	0	8	0	1	6
58	ಸರ್ 1900ನೆ ಇಸವಿಯು ಮೈಸೂರು ಸೀಮೆಯ ಸ್ಟಾಂಪು ರೆಗ್ಯುಲೇಷರ್.	103	0	10	0	2	0
59	ಇಸ್ತಿಹಾರ್ನಾಮೆ ನಂ. 698—ಲೋಕಲ್ ಬೋರ್ಡ್ 195-16-12, ತಾರೀಖು 22ನೆ ಜುಲೈ 1908.—ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನನ್ನು ಅನುಸರಿಸಿ ವಿಧಿಸೋಣವಾದ ನಿಬಂಧನೆಗಳ ಪೈಕಿ 132ನೆಯ ಪ್ಯಾರಾದ ತಿದ್ದುಪಾಟು.	1	0	0	6	0	6
60	ಕ್ರಿಮಿನಲ್ ಪ್ರೊಸೀಜರ ಕೋಡ್ (1904) ಬೈಂಡಾದುದು ...	475	2	0	0	4	6
61	ಮೈಸೂರು ಪ್ರಜಾ ಪ್ರತಿನಿಧಿ ಸಭೆಯು ನಡವಳಿಕೆಗಳು—1908.	203	1	0	0	6	0
62	ಮೈಸೂರು ಕೋಡು ಸಂಪುಟ I.	637	4	0	0	6	0
63	1909ನೆ ಇಸವಿಯ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳು ...	13	0	1	0	1	0
64	1908ನೆ ಇಸವಿಯು Vನೆ ರೆಗ್ಯುಲೇಷರ್—ಮೈಸೂರು ಪೊಲೀಸ ರೆಗ್ಯುಲೇಷರ್.	93	0	4	0	1	6
65	1908ನೆ ಇಸವಿಯು IVನೆ ರೆಗ್ಯುಲೇಷರ್—ಮೈಸೂರು ಸೀಮೆಯು ಗ್ರಾಮ ನೌಕರಿಗಳ ರೆಗ್ಯುಲೇಷರ್.	30	0	1	0	1	0

ರೆಜಿಸ್ಟ್ರೇಷರ್ ಫೀ ಅಲಾಯಿದ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಮೈಸೂರ ಗೆಜೆಟ್.

ಪು. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ಸಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 9, ಸ್ 1909.

II ನ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಗಳಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೀಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.		[illegible]	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವೆಂಬರ ತಾರೀಖು	18	200	
2	ಡಿಟೋ ...	ಸಾಗರ .	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟನ್ನುಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ ತಾರೀಖು	2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟನ್ನುಗಳು ಕೋಲಾರದ 5 ಟನ್ನುಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ ...		2,400	

ಎಂ. ಮುತ್ತಣ್ಣಾ, ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಡಿಪಾರ್ಟಮೆಂಟ.

ಇಸ್ತಿಹಾರ್ನಾಮೆ.

ನಂ. 323, ತಾರೀಖು 20ನೆ ನವಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟು ಪಾವಗಡ ತಾಲ್ಲೂಕಿನ 140 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಸೆಟ್ಲಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಪಾವಗಡದ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 6ನೆ ತಾರೀಖು ಸೋಮವಾರ ಅಥವಾ ಆ ಷುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ಶ್ಯಾಮರಾವ್,
ಸೂಪರಿಂಟೆಂಡೆಂಟ್, ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ.

ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ ನೆಲಮಂಗಲ ತಾಲ್ಲೂಕು ದಾಸನಪುರದ ಹೋಬಳಿ ಜೋಡಿ ಕಂಸಂದ್ರ ಗ್ರಾಮವು 1909ನೆ ಇಸವಿ ಡಿಸೆಂಬರು 29ನೆ ತಾರೀಖಿನಲ್ಲಿ ನೆಲಮಂಗಲ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

(ಷರಾ—ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಡಿಸೆಂಬರ್ 2ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 878–879ನೆ ಪುಟದಲ್ಲಿ ಛಾಯಿಷ್ ಆಗಿರುವ ಇಸ್ತಿಹಾರನಾಮೆಯನ್ನು ನೋಡಬಹುದು.

ಟಿ. ರಾಯಲು ಚೆಟ್ಟಿ,
ಛಾರ್ ಡೆಪ್ಯುಟಿ ಕಮಿಷನರ.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 17ನೆ ನವಂಬರ 1909.

ಚಿಕ್ಕಬಳ್ಳಾಪುರ ತಾಲ್ಲೂಕು ಮಂಡಿಕಲ್ಲು ಹೋಬಳಿಗೆ ಸೇರಿದ ಕಾಯಂಗುತ್ತಾ ಚೀಗಾನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫಿಸರವರ ರೂಬರೂಬು 1909ನೆ ಡಿಸೆಂಬರ್ ಮಾಹೆ 20ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ನವಂಬರ್ 25ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 869–870ನೆ ಪೇಜುಗಳನ್ನು ನೋಡತಕ್ಕದ್ದು.

ಎ. ವೇದಾಂತದೇಶಿಗಂ ಐಯ್ಯಂಗಾರ್, ಛಾರ್ ಡೆಪ್ಯುಟಿ ಕಮಿಷನರ.

ಹಾಸನ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 29ನೆ ನವಂಬರ್ 1909.

1. ಕಂದಾಯದ ಬಾಕೀದಾರರಾದ ರಾಮಕ್ಕಮ್ಮ ಕೋಂ ಚನ್ನ ಸುಬ್ಬಶೆಟ್ಟಿಯಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಹಾಸನ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕು ಶಿರಗೂರ ಗ್ರಾಮದಲ್ಲಿ ಬೇಲೂರು ತಾಲ್ಲೂಕು ಅಮಲ್ದಾರ್ರಿಂದ 1910ನೆ ಜನವರಿ 31ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಕಸದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 803—0—8 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ವಿವರ. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು	ಜಮೀನು. ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಅಂದಾಜಾ ಕಿಮ್ಮತ್ತು. ರೂ.	ಸರಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಖಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. ರೂ. ಆ. ಪೈ.	
ಬೇಲೂರು	ಅರೆಹಳ್ಳಿ	ಶಿರಗುರ	ರಾಮಕ್ಕ ಕೋಂ ಚನ್ನಸುಬ್ಬಶೆಟ್ಟಿ	...	...	85	ಕಾಫಿ ..	77	6	77	4	300		100 2 3	1901—2
							ರಸ್ತೆಗೋಸ್ಕರ ತೆಗೆದುಕೊಂಡ ಜಮೀನು ವಜಾ.	2	20	2	8	...		100 2 3	1902—3
														100 2 3	1903—4
														100 2 3	1904—5
														100 2 3	1905—6
														100 2 3	1906—7
							ಜಾತಾ ...	74	26	74	12		...	100 2 3	1907—8
						86	ತರಿ ...	1	30	6	0	...		100 2 3	1908—9
						130	ಕಾಫಿ ...	10	24	11	0	10		801 2 0	ಜುಮ್ಲಾ
														0 6 8	ಬಾಂದು ಮೊಬಲಗು.
														1 8 0	ನೋಟಿಸ್ ಫೀ
														803 0 8	ಜುಮ್ಲಾ ಬಾಕೀಮೇಲಿನ ಬಡ್ಡಿಸಹ ಬರಬೇಕು.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 22ನೆ ನವಂಬರ್ 1909.

1. ಸರ್ 1908ನೆ ಇಸವಿ ಜನವರಿ 16ನೆ ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಂಬರು Fl. 3526-28—B. 3-07-15 ಅನುಸರಿಸಿ, ಚಿಕ್ಕಮಗಳೂರು ಲೇಟ್ ಅಗ್ರಿಕಲ್ಚರಲ್ ಬ್ಯಾಂಕಿಗೆ ಮಿ|| ಟಿ. ರಾಘವೇಂದ್ರಪ್ಪನವರಿಂದ ಬರಬೇಕಾಗಿರುವ ಸಾಲದ ಹಣದ ಬಾಕಿಗಾಗಿ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ತಾರೀಖು 14—10—09ನೆ ಮುರ್ಸಲಂ ನಂಬರು 493ನೆ ಲೆಟರ್ ಮೇರೆಗೆ ಇದರಡಿ ನಮೂದಾಗುವ ಸ್ಥಿರಸ್ವತ್ತುಗಳಲ್ಲಿ ಸದರಿಯವರಿಗಿರುವ ಹಕ್ಕು ಬಾಧ್ಯತೆಯು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಚೇರಿ ಬಳಿ ಬರುವ 1910ನೆ ಇಸವಿ ಜನವರಿ ಮಾಹೆ 18ನೆ ತಾರೀಖಿನ ದಿವಿ 11 ಘಂಟೆ ಲಾಗಾಯಿತು ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

2. ಸದರಿ ಬಾಕೀದಾರರಿಂದ ಬರಬೇಕಾದ ಮೊಬಲಗನ್ನು ಇದರಡಿ ಕಾಣಿಸಿರುವ ತಃಖ್ತೆಯಲ್ಲಿ ನಮೂದಿಸಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ, ಬಾಕಿಯಲ್ಲಿಬಂದಿರುವ ಪೂರಾ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಸರ್ಕಾರದಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನಲ್ಲಿನ ಹಕ್ಕು ಬಾಧ್ಯತೆಯು ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಇದರಡಿ ಇರುವ ತಃಖ್ತೆಯಲ್ಲಿ ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲ.

ಷೆಡ್ಯೂಲ್.

2. ಪೋಟಾಪೋಟಿ ಮಾಡತಕ್ಕವರು ತಮ್ಮ ಸ್ವಂತ ಸಾಮಾನುಗಳನ್ನು ವಿಂಗಡಿಸಿಕೊಳ್ಳಬೇಕು ಮತ್ತು 1910ನೆ ಇಸವಿ ಜನವರಿ 12ನೆ ತಾರೀಖಿನ ಮಧ್ಯರಾತ್ರಿಯೊಳಗಾಗಿ ಅವುಗಳನ್ನು ಗೊತ್ತುಮಾಡಿದ ಸ್ಥಳದಲ್ಲಿ ಇಡಬೇಕು.

3. ಯಾವ ಬಹುಮಾನ ದೊರಿಯಬೇಕಾದರೂ ಅದಕ್ಕೆ ಪೋಟಾಪೋಟಿ ಮಾಡುವವರು ಕೊನೇಪಕ್ಷ ಇಬ್ಬರಾದರು ಇರಬೇಕು. ಇಲ್ಲದಿದ್ದರೆ ಅಂಥಾ ಬಹುಮಾನ ದೊರೆಯಲಾರದು. ಆದರೆ ಅತ್ಯಂತ ಉತ್ತಮವಾದ ಸಾಮಾನುಗಳೆಂದು ಜಡ್ಜಿಗಳಿಗೆ ತೋರಿದ ಸಂದರ್ಭಗಳಲ್ಲಿ ಅವರು ತಮ್ಮ ಸ್ವಂತ ವಿವೇಚನೆಯಿಂದ ಬಹುಮಾನಗಳನ್ನು ಕೊಡುವರು.

4. ಪ್ರದರ್ಶನಶಾಲೆಗೆ ತರತಕ್ಕ ಸಾಮಾನುಗಳೆಲ್ಲಾ ತರತಕ್ಕವರಿಂದ ಸ್ವಂತವಾಗಿ ತಯಾರ್ಮಾಡಲ್ಪಟ್ಟು ಅಥವಾ ಬೆಳೆದವುಗಳಾಗಿರಬೇಕು. ಮತ್ತು ಬೆಂಗಳೂರು ಪ್ರಾಂತ್ಯ ಬೆಳೆದವುಗಳಾಗಿರಬೇಕು. ಮೇಲೆ ನಮೂದಿಸಿರುವ ಷರತ್ತುಗಳ ಸರಿಯಾದ ರುಜುವಾತು ಕೊಡುವವರಿವಿಗೂ ಜಡ್ಜಿಗಳು ಯಾವ ಬಹುಮಾನವನ್ನಾದರೂ ಕೊಡದೇ ನಿಲ್ಲಿಸಬಹುದು.

5. ಸಾಮಾನು ತರತಕ್ಕವರುಗಳಿಗೆ ಮಾಫೀ ಟಿಕೆಟ್ಟುಗಳು ಸಾಕಾದಷ್ಟು ವಿಚಾರಾನಂತರ ಕೊಡಲ್ಪಡುವವು! ಮತ್ತು 12ನೆ ತಾರೀಖಿನ ಮಧ್ಯಾಹ್ನಾತ್ಪರದಲ್ಲಿ ಅಂಥಾ ಟಿಕೆಟ್ಟುಗಳು ದೊರಿಯಲಾರವು.

6. ತರಲ್ಪಟ್ಟ ಸಾಮಾನುಗಳು ಆಯಾಯ ಬಹುಮಾನಕ್ಕೆ ನಿಷ್ಕರ್ಷೆಯಾಗಿರುವ ಮೊಬಲಗನ್ನ ಪೂರ್ತಿಯಾಗಿ ಪಡೆಯಲು ಸಾಕಾದಷ್ಟು ಉತ್ತಮವಾದವುಗಳಲ್ಲವೆಂದು ಜಡ್ಜಿಯುವರು ಅಭಿಪ್ರಾಯಪಟ್ಟರೆ ಅಂಥಾ ಜಡ್ಜಿಗಳು ಆಯಾ ಬಹುಮಾನದ ಮೊಬಲಗನ್ನು ಕಮ್ಮಿ ಮಾಡಬಹುದು ಅಥವಾ ಕೊಡದೇನೆ ನಿಲ್ಲಿಸಲೂಬಹುದು.

7. ಪ್ರದರ್ಶನವು ಅದೇ ದಿವಸ ಸಾಯಂಕಾಲ 6 ಘಂಟೆಗೆ ಮುಗಿಯುವದು. ನಂತರ ಸಾಮಾನು ತಂದಿರುವವರು ತಮ್ಮ ಸಾಮಾನುಗಳನ್ನು ತೆಗೆದುಕೊಂಡು ಹೋಗಬಹುದು.

8. ಪೋಟಾಪೋಟೀಗೆ ಕಳುಹಿಸಲ್ಪಟ್ಟ ಸಾಮಾನುಗಳು ಪ್ರದರ್ಶನದ ದಿವಸ ಪ್ರಾತಃಕಾಲ 10 ಘಂಟೆಗಿಂತ ಮುಂಚೆ ಮಾರಲ್ಪಡಕೂಡದು.

ಬಿ. ಜೆ. ಕೊಮಾರಸ್ವಾಮಿ ನಾಯಿಕ್,
ಪ್ರೆಸಿಡೆಂಟ್, ಸಿಟಿ ಮ್ಯುನಿಸಿಪಲ್ ಕೌನ್ಸಿಲ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆಫೀಸಿನಿಂದ.

ತಾರೀಖು 13ನೆ ಡಿಸೆಂಬರ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮು ಕ್ರಂ 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್ಟೆನ್ಷನ್‌ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1909ನೆ ಇಸವಿ ಡಿಸೆಂಬರು ತಾರೀಖು 20-21-22 ರಲ್ಲು ಹರಾಜು ಮೂಲಕ ವಿಕ್ರಯಿಸ ತಕ್ಕದ್ದೆಂತ ನಿಶ್ಚಯಿಸಿರುತ್ತಾಗಿ ಹರಾಜಿನಲ್ಲಿ ಛಡ ಸವಾಲು ಮೂಲಕ ಪಡೆದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡ್ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಛಡ್ ಸವಾಲ್‌ನಲ್ಲಿ ಪಡೆದುಕೊಳ್ಳ ಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಬಸವನಗುಡಿ ಎಕ್ಸ್ಟೆನ್ಷನ್.

			ಹರಾಜು ತಾರೀಖು.
4ನೆ ಬ್ಲಾಕು	139	100 × 30	20—12—09
,,	140		
,,	141		
,,	142		
,,	143		
,,	171	120 × 30	
,,	172		
,,	173		
,,	174		
,,	175		
7ನೆ ಬ್ಲಾಕು	276	100 × 30	
,,	277		
,,	278		
,,	279		
,,	280		
,,	281		
,,	282		
8ನೆ ಬ್ಲಾಕು	15	110 × 30	
,,	16		
,,	17		
,,	18		

ಮಲ್ಲೇಶ್ವರ ಎಕ್ಸ್ಟೆನ್ಷನ್.

5ನೆ ಕ್ರಾಸ್ ರೋಡ್	70	100 × 30	21—12—09
,,	73		
,,	74		
2ನೆ ಮೈನ್ ರೋಡ್	527	150 × 30	
,,	343	100 × 30	
,,	344		
6ನೆ ಮೈನ್ ರೋಡ್	577	100 × 30	
,,	578		
,,	579		
5ನೆ ಮೈನ್ ರೋಡ್	479	100 × 30	
,,	480		
ಮುಹಮ್ಮದೀಯರ ಬ್ಲಾಕ್	553	100 × 30	
,,	554		
,,	191		
,,	192		
,,	158		
ಬಂಗಲೆ ಸೈಟ್	62	280 × 218	
,,	63		
1ನೆ ಮತ್ತು 2ನೆ ಕ್ರಾಸ್ ರೋಡುಗಳ ಮಧ್ಯೆ 199ರ ಲಾ॥ 208, 561ರ ಲಾ॥ 576.		100 × 30	22—12—09
ಬಂಗಲೆ ಸೈಟ್	127	238 × 214	
,,	118	326 × 126	
ಮನೆ	138	100 × 30	

1. ಹರಾಜು ಖೈರಾದ ಕೂಡ್ಲೆ ಛಡ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡ್ ಸವಾಲುದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗಂದರೆ ಛಡ್‌ಸವಾಲ್ ಮೊಬಲಗ್ಗೆ ಭರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್‌ಸವಾಲ್‌ದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನ ಛಡ್‌ಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಷುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟೆರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮೂಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿದ ಹೊರತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮಕ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹರ ದ್ರವ್ಯಕ್ಕು ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರ್ರಾಗುವದಿಲ್ಲ.

ಎನ್. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಘಾಂಯಿಸ್ ಆದ್ದು. [ಸಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 23, ಸನ್ 1909.

II ನೆ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಮೈಸೂರು ಚೀಫ್ ಕೋರ್ಟು, ಸನ್ 1909ನೇ ಇಸವಿ ಡಿಸೆಂಬರ್ ತಾರೀಖು 8.

ಚಿಕ್ಕಬಳ್ಳಾಪುರದ ಕಲ್ಯಾಣಾಭಿವೃದ್ಧಿ ಕಂಪೆನಿ ಮೈಂಡಪ್ ಆಗಿ ಡಿಟೋ ಸ್ಥಳದಲ್ಲಿರುವ ಲಿಕ್ವಿಡೇಟರ್ ವೀರಶೆಟ್ಟಿ ಚೆನ್ನಣ್ಣನವರು ಮೊಬಲಗು ಬಟವಾಡೆ ಮಾಡುತ್ತಲಿಧಾರೆ. ಈ ಕೆಳಗೆ ಕಂಡವರು ಅವರಲ್ಲಿಗೆ ಹಾಜರಾಗಿ ತಮ್ಮಗೆ ಸಲ್ಲತಕ್ಕ ಮೊಬಲಗನ್ನು ಈ ಲಾಗಾಯಿತು 2 ತಿಂಗಳಲ್ಲಿ ಪಡಿಯತಕ್ಕದ್ದಿದೆ, ತಪ್ಪಿದಲ್ಲಿ ಡಿಟೋ ಮೊಬಲಗನ್ನು ಕಂಪೆನೀ, ಶಿವಾಯಿಜಮಾಕ್ಕೆ ದಾಖಲ್ ಮಾಡಲ್ಪಡುತ್ತೆ.

ಮೆಂಬರುಗಳ ಹೆಸರು.	ಪಾವತಿ ಆಗಬೇಕಾದ ಮೊಬಲಗು. ರೂ.	ಅ.	ಪೈ.
ಚಿಕ್ಕಬಳ್ಳಾಪುರದಲ್ಲಿದ್ದ ತಿರುಪತ್ತೂರು ಸುಬ್ರಹ್ಮಣ್ಯ ಶಾಸ್ತ್ರಿ	20	5	0
ಡಿಟೋ ಸ್ಥಳದಲ್ಲಿದ್ದ ರಾಘವಪ್ಪನ ಹೆಂಡತಿ ವೆಂಕಟಮ್ಮ	10	2	6
ಡಿಟೋ ಶೇಕದಾರ್ ದಾಸಪ್ಪನ ಮಗ ಗುಂಡಪ್ಪ	12	3	0
ಕ್ಯಾಲನೂರಿನಲ್ಲಿದ್ದ ಅನ್ನಪೂರ್ಣಮ್ಮ	10	2	6
ದೇವಂಡಹಳ್ಳಿಯಲ್ಲಿದ್ದ ಪಾಪಕ್ಕ	5	1	3
ಚಿಕ್ಕಬಳ್ಳಾಪುರದಲ್ಲಿದ್ದ ಶಂಕರ ಶಾಸ್ತ್ರಿ	3	0	9

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

ಫಾರೆಸ್ಟು ಇಲಾಖಾ.

ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲಪೇಟೆ ತಾಲ್ಲೂಕಿನಲ್ಲಿರುವ ಕಣಿಯುನಪುರ ಬ್ಲಾಕ I ನ್ನು ಮನ್ನಾಜಂಗಲು ಮಾಡುವ ವಿಷಯದಲ್ಲಿ ಸರ್ 1909ನೆ ಇಸವಿ ಡಿಸೆಂಬರ ತಾರೀಖು 16ನೆ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 892—893ನೆ ಪೇಜುಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಮೈಸೂರು ಡಿಸ್ಟ್ರಿಕ್ಟು ಗುಂಡ್ಲಪೇಟೆ ತಾಲ್ಲೂಕಿನಲ್ಲಿರುವ ಕಣಿಯನಪುರ ಬ್ಲಾಕ II ನ್ನು ಮನ್ನಾಜಂಗಲು ಮಾಡುವ ವಿಷಯದಲ್ಲಿ ಸರ್ 1909ನೆ ಇಸವಿ ಡಿಸೆಂಬರ ತಾರೀಖು 16ನೆ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 894—895ನೆ ಪೇಜುಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಶಿವಮೊಗ್ಗಾ ಡಿಸ್ಟ್ರಿಕ್ಟು ನಗರ ತಾಲ್ಲೂಕು ಚಕ್ರ ಬ್ಲಾಕನ್ನು ಮನ್ನಾಜಂಗಲು ಮಾಡುವ ವಿಷಯದಲ್ಲಿ ಸರ್ 1909ನೆ ಇಸವಿ ಡಿಸೆಂಬರ ತಾರೀಖು 16ನೆ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 895—896—897ನೆ ಪೇಜುಗಳಲ್ಲಿ ವಿಶದವಾಗಿ ತಿಳಿದುಕೊಳ್ಳಬಹುದು.

ಎಂ. ಶ್ಯಾಮರಾವ್,
ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ ಇನ್ ಮೈಸೂರು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿಗೆ ಸೇರಿದ ಜೋಡಿ ತಲಗೊಂದಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1910ನೆ ಜನವರಿ 10ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಡಿಸೆಂಬರ 16ನೆ ಮರ್ಸ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 900ನೆ ಪೇಜು ನೋಡತಕ್ಕದ್ದು.

ಎ. ವೇದಾಂತದೇಶಿಗಂ ಐಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 8ನೆ ಡಿಸೆಂಬರ್ 1909ನೆ ಇಸವಿ.

ಮಳವಳ್ಳಿ ತಾಲ್ಲೂಕು ಕಿರಗಾವಲ್ ಹೋಬಳಿಗೆ ಸೇರಿದ ಜೋಡಿ ಹಣಕೊಳಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ 1910ನೆ ಇಸವಿ ಜನವರಿ ಮಾಹೆ 31ನೆ ತಾರೀಖಿನ ದಿವಸ ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಡಿಸೆಂಬರ 16ನೆ ಮರ್ಸ್ಕುಂ ಮೈಸೂರು ಗೆಜೆಟ್ಟಿನ-2ನೆ ಭಾಗದ 901ನೆ ಪೇಜು ನೋಡತಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಪ್ರಕಟನೆ.

ತಾರೀಖು 18ನೆ ಡಿಸೆಂಬರ 1909.

ಸರ್1907ನೆ ಸೆಪ್ಟಂಬರ ಮಾಹೆ 17ನೆ ಮರ್ಸ್ಕುಂ 2585-95—ಲೋ. ಬೋ. 462-06-3ನೆ ನಂಬರು ಗವರ್ನ್ಮೆಂಟ್ ಆರ್ಡರು ಅನುಸರಿಸಿ ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ಬರುವ ಜನವರಿ 14ನೆ ತಾರೀಖು ಲಾಗಾಯಿತು ಬಂದು ವಾರದ ವರಿವಿಗೂ ಶ್ರೀ ರಾಮದೇವರ ರಥೋತ್ಸವ ನಡೆಯುವ ಕಾಲದಲ್ಲಿ ಒಂದು ದನಗಳ ಪ್ರದರ್ಶನವು ನಡೆಯುವದು.

2. ಸದರಿ ಪ್ರದರ್ಶನವು ಚುಂಚನಕಟ್ಟೆ ಬಂಗ್ಲಾ ಕಾಂಪಾಂಡಿನಲ್ಲಿ ನಡೆಯುತ್ತೆ.

3. ಪ್ರದರ್ಶನಕ್ಕೆ ಬರುವ ದನಗಳಮೇಲೆ ಈ ಕೆಳಗೆ ಕಂಡಮ್ರೇರೆ ಫೀಸ ವಸೂಲ್ಮಾಡಲ್ಪಡುತ್ತೆ.

			ರೂ.	ಆ.	ಪೈ.
(1) ದೊಡ್ಡ ಒಂದು ಜೊತೆ ಹೋರಿಗಳಿಗೆ	...	...	0	8	0
(2) ಒಂದು ಸಣ್ಣ ಜೊತೆ ಹೋರಿಗಳಿಗೆ	...	...	0	4	0
(3) ಹೋರಿ ಒಂಟಿ ಒಂದಕ್ಕೆ	...	...	0	4	0

4. 4-7-1909ನೆ ಮುಕ್ಕಾಂ 511-3—ಲೋ. ಬೋ. 47-08-4ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸ್‌ನಲ್ಲಿ ಮಂಜೂರಾಗಿರುವ ಮೇರೆ ಯೋಗ್ಯತಾ ಪ್ರತಿಗಳೊಂದಿಗೆ ಈ ಕೆಳಗೆ ನಮೂದಿಸ್ಮಡುವ ಮೇರೆ ಬಹುಮಾನಗಳು ಕೊಡಲ್ಪಡುತ್ತವೆ:—

ಬಹುಮಾನಗಳ ಸಂಖ್ಯೆ.	ತಪ್ಸೀಲುಗಳು.	ಪ್ರತಿ ಬಹುಮಾನದ ಮೊಬಲಗು.		
	I ಹಳ್ಳೀಕಾರ್.	1ನೆ ರೂ.	2ನೆ ರೂ.	3ನೆ ರೂ.
3	(a) ಗೂಳಿಗಳು ನಾಲ್ಕು ವರುಷ ವಯಸ್ಸಿಗೆ ಮೀರಿದ್ದು	15	10	5
3	(b) ಡಿಟೋ ಡಿಟೋ ಕಮ್ಮಿಯಾದ್ದು	15	10	5
3	(c) ಹೋರಿಗಳು ನಾಲ್ಕು ವರುಷ ಮತ್ತು ಅದಕ್ಕೆ ಮೀರಿದವು	10	5	5
3	(d) ಡಿಟೋ ಡಿಟೋ ಕಮ್ಮಿಯಾದವು	10	5	5
3	(e) ಹಸು ಮತ್ತು ಅದರ ಕರು ಸಹ	10	5	5
	II ಜಿಟ್ಟದಪುರ.			
2	(a) ಗೂಳಿಗಳು ನಾಲ್ಕು ವರುಷ ಮತ್ತು ಅದಕ್ಕೆ ಮೀರಿದ್ದು	10	5	0
2	(b) ಹೋರಿಗಳು ಡಿಟೋ ಕಮ್ಮಿಯಾದವು	10	5	0
	III ನಾಡು.			
2	(a) ಗೂಳಿಗಳು ನಾಲ್ಕು ವರುಷಕ್ಕೆ ಕಮ್ಮಿಯಾದವು	10	5	0
2	(b) ಹೋರಿಗಳು ನಾಲ್ಕು ವರುಷ ಮತ್ತು ಅದಕ್ಕೆ ಮೀರಿದವು	10	5	0
3	(c) ಹಸು ಮತ್ತು ಅದರ ಕರು ಸಹ	10	5	5
26	ಜುಮ್ಲಾ ...	ರೂ. 200		

5. ಬಹುಮಾನಗಳನ್ನು ಹೊಂದಲು ಯೋಗ್ಯವಾದ ದನಗಳನ್ನು ಸದರಿ ಕಾರ್ಯಕ್ಕೆ ನೇಮಕಮಾಡಲ್ಪಟ್ಟಿರುವ ಒಂದು ಕಮಿಟಿಯವರು ಚುನಾಯಿಸುತ್ತಾರೆ. ಪ್ರದರ್ಶನದ ಕೊನೆಯಲ್ಲಿ ಬಹುಮಾನಗಳು ಕೊಡಲ್ಪಡುತ್ತವೆ.

6. ಬಹುಮಾನವನ್ನು ಪಡೆಯಲು ಸರಿಯಾದ ಯೋಗ್ಯತೆಯನ್ನು ಹೊಂದಿರತಕ್ಕ ರಾಸು ಇಲ್ಲದಿರುವ ಸಂದರ್ಭದಲ್ಲಿ ಬಹುಮಾನವನ್ನು ಕೊಡದೆ ಇರುವದಕ್ಕೂ, ಸದರಿ ಬಹುಮಾನವನ್ನು ಮತ್ಯಾವದಾದರೂ ತಕ್ಕಷ್ಟು ಯೋಗ್ಯತೆಯನ್ನು ಹೊಂದಿರುವ, ಇನ್ನೊಂದು ರಾಸಿಗೆ ಅದೇ ಬಹುಮಾನವನ್ನು ಕೊಡುವದಕ್ಕೂ ಮೇಲ್ಕಂಡ ಕಮಿಟಿಯವರು ಶಕ್ತರಾಗಿರುತ್ತಾರೆ.

7. ಪ್ರದರ್ಶನಕ್ಕೆ ರಾಸುಗಳನ್ನು ಕಳುಹಿಸತಕ್ಕವರು ಪ್ರದರ್ಶನವು ಮೊದಲಾಗುವದಕ್ಕೆ ಎರಡುದಿವಸ ಮುಂಚಿತವಾಗಿಯೇ ಎಡತೊರೆ ತಾಲ್ಲೂಕು ಅಮಿಲ್ದಾರಿಗೆ ಆಗಲಿ ಅಥವಾ ಅವರಿಂದ ನೇಮಿತರಾದ ಇನ್ಯಾವ ಆಫೀಸರಿಗೆ ಆಗಲಿ ಅಪ್ಲಿಕೇಷನ್ ಬರೆದು ತಮ್ಮ ಹೆಸರು ಮತ್ತು ರಾಸುಗಳ ತಪ್ಸೀಲ್‌ಗಳನ್ನು ರಿಜಿಸ್ಟರ್ ಮಾಡಿಸಬೇಕು.

8. ರಾಸುಗಳ ಮಾಲೀಕರು ತಮ್ಮ ತಮ್ಮ ರಾಸುಗಳ ವಿಷಯದಲ್ಲಿ ತಾವೇ ತಕ್ಕ ನಿಗಾವಣೆಯಿಂದ ನೋಡಿಕೊಳ್ಳಬೇಕಲ್ಲದೆ ಅವುಗಳಿಗೆ ಯಾವ ಅಪಾಯವೂ ಸಂಭವಿಸದಂತೆಯೂ ತಾವುಗಳೇ ನೋಡಿಕೊಳ್ಳಬೇಕು.

9. ಸ್ಥಳ ಸರಬರಾಜು ತಕ್ಕಷ್ಟು ಆಗಲಾರದೆಂಬುವ ಕಾರಣದಿಂದ ರಾಸುಗಳ ಮಾಲೀಕರೇನೆ ರಾಸುಗಳ ಮೇವಿನ ವಿಚಾರದಲ್ಲಿ ಅವರವರ ಸ್ವಂತ ಏರ್ಪಾಡು ಮಾಡಿಕೊಳ್ಳಬೇಕು.

10. ಜಾತ್ರೆ ಕಾಲದಲ್ಲಿ ಹೇರಳವಾಗಿ ಜನಗಳು ಸೇರುವ ಕಾರಣ ದನದ ವ್ಯಾಪಾರಸ್ಥರಿಗೆ ಒಳ್ಳೇ ವ್ಯಾಪಾರ ದೊರೆಯುವದು.

11. ಹಿಂದಿನ ವರುಷಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಬಹುಮಾನವನ್ನು ಪಡೆದಿರತಕ್ಕ ರಾಸುಗಳಿಗೆ ಈ ವರುಷವು ಬಹುಮಾನವು ದೊರೆಯಲಾರದು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 29ನೆ ನವಂಬರ್ 1909.

ಚನ್ನಸುಬ್ಬಸೆಟ್ಟರ ಹೆಂಡತಿ ರಾಮಕ್ಕಮ್ಮನಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿಗಾಗಿ ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಶಿರಗುರ ಗ್ರಾಮದ ಕಾಫಿ ಮತ್ತು ಇತರ ಜಮೀನುಗಳು ಸದರಿ ಶಿರಗುರ ಗ್ರಾಮದಲ್ಲಿ 31-1-1910ರಲ್ಲು ದಿವಾ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ಡಿಸೆಂಬರ್ 9ನೆ ಮುಕ್ಕಾಂ ಮೈಸೂರು ಗೆಜೆಟ್ಟಿನ 2ನೆ ಭಾಗದ 885—886ನೆ ಪುಟಗಳನ್ನು ನೋಡತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಡೆಪ್ಯುಟಿ ಕಮಿಷನರ್.

ನೋಟಿಸ್.

ತಾರೀಖು 14ನೆ ಡಿಸೆಂಬರ್ 1909.

ಹಾಸನ ಟೌನಿನಲ್ಲಿ ಜಾಜಿನ ಮೈದಾನದಲ್ಲಿ ದನಗಳ ಪ್ರದರ್ಶನವು ನಡಿಯಬೇಕೆಂದು ಇತ್ಯರ್ಥವಾಗಿರುತ್ತೆಂಬ ಅಂಶ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿರುತ್ತೆ. ಪ್ರದರ್ಶನವು 1910ನೆ ಇಸವಿ ಜನವರಿ ಮಾಹೆ ತಾರೀಖು 6ನೆ ಗುರುವಾರ ಪ್ರಾರಂಭವಾಗಿ ಮಾರನೇ ದಿವಸ ಅಂದರೆ ತಾರೀಖು 7ನೆ ಶುಕ್ರವಾರ ಸಾಯಂಕಾಲಕ್ಕೆ ಸಂಪೂರ್ತಿಯಾಗುತ್ತೆ.

ಈ ಡಿಸ್ಟ್ರಿಕ್ಟಿನ ರೈತಾಪಿಜನಗಳಿಗೆ ನಮ್ಮ ಮೈಸೂರು ಸೀಮೆಯ ವಿಧವಿಧವಾದ ರಾಸುಗಳ ಪರಿಚಯವನ್ನುಂಟುಮಾಡುವದರ ಮೂಲಕ ಉತ್ತಮತರವಾದ ರಾಸುಗಳನ್ನು ಪಡಿಯುವದಕ್ಕೆ ಅನುಕೂಲಪಡಿಸಿಕೊಡಬೇಕೆಂಬುದೇ ಈ ಪ್ರದರ್ಶನದ ಉದ್ದೇಶವಾಗಿರುತ್ತೆ.

2. ಎಂಥಾ ರಾಸುಗಳು ಪ್ರದರ್ಶಿಸಲ್ಪಡಬಹುದೆಂಬುದು ಅಪೆಂಡಿಕ್ಸಿನಲ್ಲಿ ನಮೂದಿರುತ್ತೆ. ಈ ರಾಸುಗಳ ಪ್ರದರ್ಶನಕ್ಕೆ ಮತ್ತು ಮಾರಾಟಕ್ಕೆ ಮತ್ತು ಪ್ರದರ್ಶನಕ್ಕೆ ಸಹಾ ಎಂಬದಾಗಿ ಎರಡು ಪಂಗಡವಾಗಿ ವಿಭಾಗ ಮಾಡಲ್ಪಡುತ್ತೆ.

3. ರಾಸುಗಳ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡುವದರ ಮೂಲಕ ಪೈಪೋಟಿ ಹೆಚ್ಚಿಸಿ ರಾಸುಗಳ ಮಾಲೀಕರು ಉತ್ತಮತರವಾದ ರಾಸುಗಳನ್ನು ಪ್ರದರ್ಶನಕ್ಕೆ ತರುವದಕ್ಕೆ ಸೌಕರ್ಯವನ್ನುಂಟುಮಾಡುತ್ತೆ. ಪ್ರದರ್ಶನಾಲಯಕ್ಕೆ ತರಲ್ಪಡುವ ಯಾವ ತರಹಾ ರಾಸುಗಳಮೇಲೂ ಯಾವ ಸುಂಕವೂ ವಸೂಲ್ಮಾಡುವದಿಲ್ಲಾ. ರಾಸುಗಳ ಮಾರಾಟಕ್ಕೆ ವಿಶೇಷ ಸೌಕರ್ಯಗಳನ್ನು ಅಪೇಕ್ಷಿಸತಕ್ಕಂಥಾವರು ಪ್ರದರ್ಶನದ ಆನರರಿ ಸೆಕ್ರಿಟೆರಿಯವರಿಗೆ ಪ್ರದರ್ಶನವು ಪ್ರಾರಂಭವಾಗುವದಕ್ಕೆ ಮೊದಲೆ ಬರೆದುಕೊಳ್ಳಬೇಕು.

4. ಪ್ರದರ್ಶನಕ್ಕೆ ಬರುವ ರಾಸುಗಳ ಉಪಯೋಗಕ್ಕೆ ಅವಶ್ಯವಾದ ಹುಲ್ಲನ್ನು ಪ್ರದರ್ಶನದ ಸ್ಥಳದಲ್ಲಿ ಒದಗಿಸಲ್ಪಡುತ್ತೆ.

5. ಪ್ರದರ್ಶನಾಲಯಕ್ಕೆ ಬಿಡಲ್ಪಡುವ ಪ್ರತಿ ರಾಸಿನ ಜೊತೆಯಲ್ಲೂ ಆ ರಾಸಿನ ನಿಗೇವಾಣಿಬಗ್ಯೆ ಸಾಕಾದಷ್ಟು ಜನಗಳಿರಬೇಕು.

6. ರಾಸುಗಳ ಯೋಗ್ಯತಾನುಸಾರ ಅವುಗಳು ಬಹುಮಾನವನ್ನು ಹೊಂದಲು ಪ್ರದರ್ಶನಕ್ಕೆ ಬಿಡಲ್ಪಡುತ್ತೆ.

7. ಒಂದು ಬಹುಮಾನವನ್ನು ಹೊಂದಿದರಾಸು ಸ್ಪೆಷಲ್ ಬಹುಮಾನಹೊರ್ತು ಮತ್ತೊಂದು ಬಹುಮಾನವನ್ನು ಪಡೆಯುವದಕ್ಕೆ ಅವಕಾಶವಾಗುವದಿಲ್ಲ.

8. ಪ್ರದರ್ಶನದ ದಿವಸಗಳಲ್ಲಿ ಕೆಲಸಕ್ಕೆ ಅರ್ಹವಾದ ರಾಸುಗಳು ಪ್ರದರ್ಶನ ಸಂಘದವರ ಇಷ್ಟಾನುಸಾರ ಅಜಮಾಯಿಷಿಗೆ ಗುರಿಪಡಿಸಲ್ಪಡಬಹುದಾಗಿರುತ್ತೆ.

9. 1910ನೆ ಇಸವಿ ಜನವರಿ ಮಾಹೆ 5ನೆ ತಾರೀಖು ಮಧ್ಯಾಹ್ನ ಪ್ರದರ್ಶನಾಲಯಕ್ಕೆ ರಾಸುಗಳನ್ನು ಬಿಡುವದನ್ನು ಮನ್ನಾಮಾಡುತ್ತೆ.

10. ಮೇಲ್ಕಂಡ ಷರತ್ತುಗಳಿಗೂ ಮತ್ತು ಪ್ರದರ್ಶನ ಸಂಘದವರು ಇನ್ನುಮುಂದೆ ವಿಧಾಯಕಮಾಡಬಹುದಾದ ಷರತ್ತುಗಳಿಗೂ ರಾಸುಗಳನ್ನು ಪ್ರದರ್ಶನ ಮಾಡತಕ್ಕವರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ಧಾರೆಂದು ಭಾವಿಸಿರುತ್ತೆ.

ಅಪೆಂಡಿಕ್ಸ್.

I. ಗೂಳಿಗಳು.—1ನೆ ಇನಾಂ ರೂಪಾಯಿ 30, 2ನೆ ಇನಾಂ ರೂಪಾಯಿ 15.

II. ಎತ್ತುಗಳು.—(ಜೋಡಿ).

(a) ಉಳುವ ಎತ್ತಿನ ಜೋಡಿ 1ನೆ ಇನಾಂ ರೂಪಾಯಿ 20, 2ನೆ ಇನಾಂ ರೂಪಾಯಿ 10.
(b) ಭಾರ ಯಳೆಯುವ ಎತ್ತಿನ ಜೋಡಿ 1ನೆ ಇನಾಂ ರೂಪಾಯಿ 20, 2ನೆ ಇನಾಂ ರೂಪಾಯಿ 10.
(c) ಟಪ್ಪಾಲು ಎತ್ತಿನ ಜೋಡಿ 1ನೆ ಇನಾಂ ರೂಪಾಯಿ 30, 2ನೆ ಇನಾಂ ರೂಪಾಯಿ 15.

III. ಹೇರಿನ ಎತ್ತು ಒಂಟಿ.—1ನೆ ಇನಾಂ ರೂಪಾಯಿ 10, 2ನೆ ಇನಾಂ ರೂಪಾಯಿ 5.

IV. ಹಸುಗಳು.—1ನೆ ಇನಾಂ ರೂಪಾಯಿ 20, 2ನೆ ಇನಾಂ ರೂಪಾಯಿ 10.

V. ಕರುಗಳು.—1ನೆ ಇನಾಂ ರೂಪಾಯಿ 10, 2ನೆ ಇನಾಂ ರೂಪಾಯಿ 5.

VI. (a) ಎಮ್ಮೆಗಳು.—1ನೆ ಇನಾಂ ರೂಪಾಯಿ 15, 2ನೆ ಇನಾಂ ರೂಪಾಯಿ 8.
(b) ಕೋಣಗಳು.—1ನೆ ಇನಾಂ ರೂಪಾಯಿ 10, 2ನೆ ಇನಾಂ ರೂಪಾಯಿ 5.

VII. (a) ಟಗರು.—1ನೆ ಇನಾಂ ರೂಪಾಯಿ 5, 2ನೆ ಇನಾಂ ರೂಪಾಯಿ 3.
(b) ಹೆಣ್ಣು ಕುರಿ.—1ನೆ ಇನಾಂ ರೂಪಾಯಿ 5, 2ನೆ ಇನಾಂ ರೂಪಾಯಿ 3.

VIII. (a) ಹೋತ (ಗಂಡಾಡು).—1ನೆ ಇನಾಂ ರೂಪಾಯಿ 5, 2ನೆ ಇನಾಂ ರೂಪಾಯಿ 3.
(b) ಹೆಣ್ಣಾಡು.—1ನೆ ಇನಾಂ ರೂಪಾಯಿ 5, 2ನೆ ಇನಾಂ ರೂಪಾಯಿ 3.

ಸ್ಪೆಷಲ್ ತರಗತಿಗಳು.

ಅಮೃತಮಹಲ್ ಎತ್ತುಗಳ ಜೊತೆ.—1ನೆ ಇನಾಂ ರೂಪಾಯಿ 30, 2ನೆ ಇನಾಂ ರೂಪಾಯಿ 15.
ಹಳ್ಳಿಕಾರ ಎತ್ತಿನ ಜೊತೆ.—1ನೆ ಇನಾಂ ರೂಪಾಯಿ 30, 2ನೆ ಇನಾಂ ರೂಪಾಯಿ 15.
ಮಲ್ನಾಡು ಎತ್ತಿನ ಜೊತೆ.—1ನೆ ಇನಾಂ ರೂಪಾಯಿ 20, 2ನೆ ಇನಾಂ ರೂಪಾಯಿ 10.

ನೋಟ್:—ಮೇಲಿನ ಸ್ಪೆಷಲ್ ಇನಾಂಗಳಲ್ಲದೆ ಇತರ ಸ್ಪೆಷಲ್ ಇನಾಂಗಳನ್ನು ಕೊಡುವದು ಅವಶ್ಯಕ ಕಂಡುಬಂದಲ್ಲಿ ಕಮಿಟಿಯವರು ಆರೀತಿ ಮಾಡಬಹುದು.

ಪಿ. ಆರ್. ಡಬ್ಲ್ಯು. ವೆದರಾಲ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 22ನೆ ನವಂಬರ್ 1909.

1. ಸನ್ 1908ನೆ ಇಸವಿ ಜನವರಿ 16ನೆ ಗವರ್ನ್ಮೆಂಟ್ ಪ್ರೊಸೀಡಿಂಗ್ಸ್ ನಂಬರು Fl. 3526-28—B. 3-07-15 ಅನುಸರಿಸಿ, ಚಿಕ್ಕಮಗಳೂರು ಲೇಟ್ ಅಗ್ರಿಕಲ್ಚರಲ್ ಬ್ಯಾಂಕಿಗೆ ಮಿ॥ ಟಿ. ರಾಘವೇಂದ್ರಪ್ಪನವರಿಂದ ಬರಬೇಕಾಗಿರುವ ಸಾಲದ ಹಣದ ಬಾಕಿಗಾಗಿ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ತಾರೀಖು 14—10—09ನೆ ಮರ್ಕುಂ ನಂಬರು 493ನೆ ಲೆಟರ್ ಮೇರಿಗೆ ಇದರಡಿ-ನಮೂದಾಗುವ ಸ್ಥಿರಸ್ವತ್ತುಗಳಲ್ಲಿ ಸದರಿಯವರಿಗಿರುವ ಹಕ್ಕು ಬಾಧ್ಯತೆಯು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಚೇರಿ ಬಳಿ ಬರುವ 1910ನೆ ಇಸವಿ ಜನವರಿ ಮಾಹೆ 18ನೆ ತಾರೀಖಿನ ದಿವಿ 11 ಘಂಟೆ ಲಾಗಾಯಿತು ಶಿವಮೊಗ್ಗ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

2. ಸದರಿ ಬಾಕೀದಾರ್ರಿಂದ ಬರಬೇಕಾದ ಮೊಬಲಗನ್ನು ಇದರಡಿ ಕಾಣಿಸಿರುವ ತಃಖ್ತೆಯಲ್ಲಿ ನಮೂದಿಸಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ-ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ, ಬಾಕಿಯಲ್ಲಿಬಂದಿರುವ ಪೂರಾ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಸರ್ಕಾರದಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜ್‌ದಾರ್ರು ಸದರೀ ಸ್ವತ್ತಿನಲ್ಲಿನ ಹಕ್ಕುಬಾಧ್ಯತೆಯ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಇದರಡಿ ಇರುವ ತಃಖ್ತೆಯಲ್ಲಿ ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪಶೀಲು.				ಸರ್ಕಾರಕ್ಕೆ (ಬ್ಯಾಂಕಿಗೆ) ಬರಬೇಕಾದ ಮೊಬಲಗು.
					ಸರ್ವೆ ನಂಬರು ವ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯಿತು, ಕಾಫಿ.	ವಿಸ್ತೀರ್ಣ.	ಆಕಾರ.	
							ಎ. ಗು.	ರೂ. ಆ.	
ಶಿವಮೊಗ್ಗ.	ಶಿವಮೊಗ್ಗ.	ಶಿವಮೊಗ್ಗಾ ಕಸಬಾ ಹೋಬಳಿ.	ನಾಲೆ ಗ್ರಾಮ.	ಮಿ॥ ಟಿ. ರಾಘವೇಂದ್ರಪ್ಪನವರು.	14	ಖುಷ್ಕಿ	5 14	1 12	ಅಸಲು ರೂಪಾಯಿಗಳು 32,771 ಬಡ್ಡಿ ಶೇಕಡಾ 4 ರೂಪಾಯಿನಂತೆ ಬೇರೆ ಬರಬೇಕಾಗುತ್ತೆ.
					24	ತರಿ	2 39	9 0	
						ಖುಷ್ಕಿ	1 11	0 8	
					27	ಡಿಟೋ	27 19	8 8	
					23	ತರೀಭಾಗ	1 32	4 10	
					30	ಖುಷ್ಕಿ	17 36	5 8	
					35	ತರಿ	11 4	37 0	
						ಖುಷ್ಕಿ	6 31	2 0	
					37	ಡಿಟೋ	25 7	7 0	
					43	ಡಿಟೋ	6 18	1 12	
					48	ಡಿಟೋ	18 31	5 8	
					72	ಡಿಟೋ	11 19	3 8	

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪಶೀಲು.						ಸರ್ಕಾರಕ್ಕೆ (ಬ್ಯಾಂಕಿಗೆ) ಬರಬೇಕಾದ ಮೊಬಲಗು.
					ಸರ್ವೆ ನಂಬರು ವ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯಿತು, ಕಾಫಿ.	ವಿಸ್ತೀರ್ಣ.		ಆಕಾರ.		
							ಎ.	ಗು.	ರೂ.	ಅ.	
ಶಿವಮೊಗ್ಗ.	ಶಿವಮೊಗ್ಗ.	ಶಿವಮೊಗಾ ಕಸಬಾ ಹೋಬಳಿ.	ನೌಲೆ ಗ್ರಾಮ.	ಮಾ|| ಟಿ. ರಾಘವೇಂದ್ರಪ್ಪನವರು.	74	ಖುಷ್ಕಿ	9	39	2	12	ಅಸಲು ರೂಪಾಯಿಗಳು 32,771 ಬಡ್ಡಿ ಶೇಕಡಾ 4 ರೂಪಾಯಿನಂತೆ ಜೇರೆ ಬರಬೇಕಾಗುತ್ತೆ.
					84	ಡಿಟ್ಟೋ	5	29	1	8	
					87	ತರಿ	0	8	0	8	
						ಖುಷ್ಕಿ	21	10	7	8	
					93	ಡಿಟ್ಟೋ	10	10	3	0	
					94	ಡಿಟ್ಟೋ	5	32	1	12	
					96	ಡಿಟ್ಟೋ	17	30	5	0	
					99	ತರಿ	11	25	44	12	
						ಖುಷ್ಕಿ	0	22	0	4	
					100	ಡಿಟ್ಟೋ	6	5	2	4	
					101	ತರಿ	12	1	39	12	
						ಖುಷ್ಕಿ	0	10	0	4	
					102	ಡಿಟ್ಟೋ	1	11	0	4	
					104	ತರಿ	7	6	21	8	
						ಖುಷ್ಕಿ	4	6	1	8	
					105	ತರಿ	11	18	47	0	
					108	ಡಿಟ್ಟೋ	1	2	4	8	
					133	ಡಿಟ್ಟೋ	3	32	9	0	
						ಖುಷ್ಕಿ	2	13	1	0	
					130	ಡಿಟ್ಟೋ	2	6	1	12	
						ತರಿ	0	28	2	0	
						ಬಾಗಾಯಿತು	0	13	0	12	
					136	ತರಿ	11	37	37	0	
					137	ಡಿಟ್ಟೋ	11	24	46	0	
						ಬಾಗಾಯಿತು	1	39	9	0	
					2	ತರಿ	6	10	20	8	
						ಖುಷ್ಕಿ	1	29	0	8	
					3	ತರಿ	0	24	2	0	
						ಬಾಗಾಯಿತು	0	29	3	12	
						ಖುಷ್ಕಿ	3	2	2	4	
					11	ಡಿಟ್ಟೋ	8	29	6	0	
					132	ತರಿ	1	24	4	8	
						ಖುಷ್ಕಿ	3	39	1	0	
					134	ತರಿ	1	11	3	8	
					142	ಖುಷ್ಕಿ	4	30	1	8	
					143	ಡಿಟ್ಟೋ	2	16	0	12	
					144	ಡಿಟ್ಟೋ	30	22	8	8	
					145	ಡಿಟ್ಟೋ	4	1	1	4	
					135	ತರಿ	4	0	11	0	

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಸನ 1910ನೆ ಇಸವಿ ಫೆಬ್ರುವರಿ ಮಾಹೆ 26ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳವರಿಗೂ ಹೊನ್ನಾಳಿ ತಾಲ್ಲೂಕು ರಾಮಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಗೌರ್ನ್ಮೆಂಟಿನಿಂದ ತಲ್ಪಿರುವ 22—12—00ನೆ ಮರ್ಕುಂ 5540-1—ಲೋ. ಫಂ. 495-05-4ನೆ ನಂಬರು ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ಜಾತ್ರೆ ನಡಿಯುವ ರಾಮಪುರ ಗ್ರಾಮದ ಸಮೀಪದಲ್ಲಿ ಸಾಸವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ ಮೈದಾನದಲ್ಲಿ ಪ್ರದರ್ಶನವು ನಡಿಯಲು ಏರ್ಪಡಿಸಿರುತ್ತದೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, 2ನೆ ಬಹುಮಾನ 10 ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಹಸು 1ಕ್ಕೆ ಒಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಎಮ್ಮೆ 1ಕ್ಕೆ ಒಂದನೆ ಬಹುಮಾನ 10 ರೂಪಾಯಿ ಈರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳು ಕೊಡಲು ಉತ್ತಮ ಜಾನುವಾರುಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರೆಯುತ್ತದೆ.

6. ಇನಾಂ ಪಡಿಯಲು ಲಾಯಖಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲೀ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲೀ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು ಹೊನ್ನಾಳಿ ತಾಲ್ಲೂಕು ಅಮಲ್ದಾರ್ರವರಿಗೆ ಆಗಲೀ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೇ ಆಗಲೀ ಪ್ರದರ್ಶನ ಶುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ ಬರೆದು ತಮ್ಮ ಹೆಸರು ಜಾನುವಾರು ತಪಶೀಲು ದಾಖಲ್ಮಾಡಿಸಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲೀ ಅಥವಾ ಅವುಗಳಿಂದ ಜನಗಳಿಗೇ ಆಗಲೀ ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಬಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೇ ನೋಡಿಕೊಳ್ಳುವದು ಒಳ್ಳೆಯದು.

10. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರುಗಳು ಸೇರುವದರಿಂದ ವ್ಯಾಪಾರದ ಬಹಳ ಚನ್ನಾಗಿ ನಡಿಯುತ್ತದೆ.

11. 1909ನೆ ಮಾರ್ಚಿ ತಿಂಗಳಲ್ಲಿ ಕೂಡ್ಲಿ ಜಾತ್ರೆ ಕಾಲದಲ್ಲಿ ನಡೆದ ಪ್ರದರ್ಶನ ಕಾಲದಲ್ಲಿ ಬಹುಮಾನ ಕೊಡಲ್ಪಟ್ಟದ್ದರ ತಪಸೀಲ್ ಈ ಕೆಳಗೆ ನಮೂದಿಸಿರುತ್ತದೆ :—

ನಂಬರು.	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲು		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಮೊಬಲಗು	ಬಹುಮಾನದ ತರಗತಿ.
1	ಶೆಟ್ಟಿಗೌಡ ಬಿನ್ ಉಳ್ಳಿಗೌಡ.	ಹೆತ್ತಿಗೇನಹಳ್ಳಿ ...	ಕೃಷ್ಣರಾಜಪೇಟೆ	ಗಾಡಿ ಎತ್ತುಗಳ ಜೊತೆಗೆ.	ರೂ. 20	1ನೆ ಬಹುಮಾನ
2	ಮಾದಪ್ಪ ಬಿನ್ ಗುರುಶಿದ್ದಪ್ಪ.	ಬೆಳಗುತ್ತಿ ...	ಹೊನ್ನಾಳಿ ...	ಡಿಟ್ಟೋ ...	10	2ನೆ ಡಿಟ್ಟೋ
3	ಏಡಿ ಮುದ್ವೀರಪ್ಪ.	ಡಿಟ್ಟೋ ...	ಡಿಟ್ಟೋ ...	ಉಳುವ ಎತ್ತಿನ ಜೊತೆಗೆ.	20	1ನೆ ಡಿಟ್ಟೋ
4	ಕಪನಿಗೌಡ ...	ಜೋಗಿನಕೆರೆ ...	ಕೃಷ್ಣರಾಜಪೇಟೆ	ಡಿಟ್ಟೋ ...	10	2ನೆ ಡಿಟ್ಟೋ
5	ಕದಂ ರಾಮರಾವ್.	ಶಿದ್ಲಿಪುರ ...	ಶಿವಮೊಗ್ಗ ...	ಬೀಜದ ಹೋರಿ ಒಂದಕ್ಕೆ.	15	1ನೆ ಡಿಟ್ಟೋ
6	ಪುರಾಣ ಮಠದ ನಂಜುಂಡಪ್ಪ.	ಹೊಳೆಹೊನ್ನೂರು.	ಡಿಟ್ಟೋ ...	ಎಮ್ಮೆ 1ಕ್ಕೆ ...	5	2ನೆ ಡಿಟ್ಟೋ

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಪ್ರಹ್ಲಾದಾಚಾರ್ಯರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಆಫೀಸಿನಲ್ಲಿ 1910ನೆ ಜನವರಿ 27ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಪ್ರಾರಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ್ತಿದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1908—09ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ಪಟ್ಟಿಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 58—11—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ವಿವರ. ಕಟ್ಟಡಗಳು. ಸ್ವತ್ತಿನ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಬಾಗಿಲಿನ ಹೆಸರು.	ಜಮೀನು. ಸರ್ವೆ ನಂಬರ್ ಅಥವಾ ಭಾಗದ ಗುರ್ತು.	ಹಿಸ್ಸೆ.	ಆಕಾರ.	ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಸಲ್ಲತಕ್ಕ ಬಾಕಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.
ತರೀಕೆರೆ	ಶಿವನೆ	ಯುಕ್ಕೆಗೊಂಡ ಹೊಸ ಗ್ರಾಮ	ಪ್ರಹ್ಲಾದಾಚಾರ್	...	...	...	...	...	ರೂ. 130 ಆ. 15 ಪೈ 2	ರೂ. 500	ರೂ. ಆ. ಜೋಡಿ 49 8; ಲೋಕಲ್ ಸೆಸ್ 8 3	ರೂ. ಆ. ಪೈ. 57 11 0; 0 8 0; 0 8 0; ... ; 58 11 0

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1909—10ನೆ ಇಸವಿ ಮಿ|| ಅರ್ಜೀ ನಂಬರ್ 316.

ಬೆಂಗಳೂರು ಹಳೆ ಸವಾರ್‌ಲೈನ್ನಲ್ಲಿದ್ದು ಫವತಿಪಟ್ಟ ಸೈದುಹಾಫೀಜ್ ಬಹದ್ದೂರ್ ರಿಜಮೆಂಟದಾರ)
ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಹಳೇಸವಾರ್‌ಲೈನ್ನಲ್ಲಿರುವ ಮಹಬೂಬಿ ಎಂಬುವರು, ಮೃತಪಟ್ಟ ಸದರೀ ಸೈದುಹಾಫೀಜ್ ಬಹದ್ದೂರ್‌ರವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸೈದುಹಾಫೀಜ್ ಬಹದ್ದೂರ್‌ರವರ ಜೆಂದಗಿ ಬಗ್ಯಾಗಿ ಬರತಕ್ಕ ರೂಪಾಯಿ (2,870—14—7)ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮಹಬೂಬಿ ಅರ್ಜಿಯನ್ನು ಸರ್ 1910ನೆ ಇಸವಿ ಜನವರಿ 7ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈದುಹಾಫೀಜ್ ಬಹದ್ದೂರ್‌ರವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಡಿಸೆಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1909—10ನೆ ಇಸವಿ ಮಿ|| ನಂಬರ್ 320.

ಬೆಂಗಳೂರು ಚಿಕ್ಕಮಾವಹಳ್ಳಿಯಲ್ಲಿದ್ದು ಮೃತಪಟ್ಟ ಮುನಿವೆಂಕಟಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕಮಾವಹಳ್ಳಿಲಿರುವ ಮಡಿವಾಳಿ ಲಿಂಗಣ್ಣನ ಮಗಳು ಮುನಿಯಮ್ಮನ ಮಗ ತಿಮ್ಮಕ್ಕ ಸಿಗ ಮೃತಪಟ್ಟ ಸದರೀ ಮುನಿವೆಂಕಟಮ್ಮನು ಮುಖ್ಯ ವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ, ವೆಂಕಟಮ್ಮನ ಜೆಂದಗಿ ಬಗ್ಯಾಗಿ ಬರತಕ್ಕ ರೂಪಾಯಿ (296—12—0) ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಡಿವಾಳಿ ತಿಮ್ಮಕ್ಕನ ಅರ್ಜಿಯನ್ನ 1910ನೆ ಇಸವಿ ಜನವರಿ ತಿಂಗಳು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯುಪಡಿಸಿ ಇದೆ.

ಸರ್ 1909ನೆ ಇಸವಿ ಡಿಸೆಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1909—10ನೆ ಇಸವಿ ಮಿ|| ಅರ್ಜೀ ನಂಬರ್ 327.

ಬೆಂಗಳೂರು ಜನರಲ್ ಮತ್ತು ರೆವಿನ್ಯೂ ಸೆಕ್ರಿಟೇರಿಯಟ್ಟಿನಲ್ಲಿ ಕ್ಲಾರ್ಕ್ ಆಗಿದ್ದು ಮೃತಪಟ್ಟ ಎಚ್. ವೆಂಕಟಾಚಾರ್ರ
ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀನಿವಾಸಕೃಷ್ಣಮಾಚಾರ ವಗೈರೆ, ಮೃತಪಟ್ಟ ಸದರಿ ಎಚ್. ವೆಂಕಟಾಚಾರ್‍ರಿಗೆ ಮುಖ್ಯ ವಾರಸದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಎಚ್. ವೆಂಕಟಾಚಾರ್ರ ಜೆಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 3,141—5—1 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ 1ನೆ ಶ್ರೀನಿವಾಸಕೃಷ್ಣಾಚಾರ್ರ ಹೆಂಡತಿ ಶ್ರೀರಂಗಮ್ಮಾಳ್, 2ನೆ ಕೃಷ್ಣಯ್ಯಂಗಾರ್ರ ಹೆಂಡತಿ ಅಲಮೇಲಮ್ಮಾಳ್, 3ನೆ ಲಕ್ಷಮ್ಮಾಳ್, 4ನೆ ಅಮ್ಮಣ್ಣಿಮ್ಮಾಳ್ ಇವರುಗಳ ಅರ್ಜಿಯನ್ನು ಸರ್ 1909ನೆ ಇಸವಿ ಡಿಸೆಂಬರು ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಚ್. ವೆಂಕಟಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1909ನೆ ಇಸವಿ ಡಿಸೆಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ,
ಸಬ್ ಜಡ್ಜಿ.

2 c

ಮೈಸೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಮೈಸೂರು ಕಿಲ್ಲೆಯಲ್ಲಿರುವ ದಿವಾಳಿಯಾದ ಡಿಕ್ರೀ ದೇಣೇದಾರ ವೆಂಕಟಸ್ವಾಮಿಶಾಸ್ತ್ರಿ ಉರಫ್ ಪುಟ್ಟಶಾಸ್ತ್ರಿ ಎಂಬುವರ ವಿಷಯದಲ್ಲಿ—.

ಸರ್ 1908—09ನೆ ಇಸವಿ ದಿವಾಳಿ ಕೇಸ್ ನಂಬರ್ 115.

ಹುಕ್ಕುಂ

ಮೇಲ್ಕಂಡ ವೆಂಕಟಸ್ವಾಮಿಶಾಸ್ತ್ರಿ ಉರಫ್ ಪುಟ್ಟಶಾಸ್ತ್ರಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟಿನ ರೂಬರೂಬ್ ಅರ್ಜೀದಾರರಾದ ವೆಂಕಟಸ್ವಾಮಿ ಶಾಸ್ತ್ರಿ ಉರಫ್ ಪುಟ್ಟಶಾಸ್ತ್ರೀರ ಪರವಾಗಿ ಅಡ್ವೊಕೇಟ್ ಮಿ॥ ಕಂಠೀರವಾಚಾರ್ರನ್ನು ಮತ್ತು ಸದರೀಯವರ ಲೇಣೇದಾರರಾದ 1ನೆ ಲಕ್ಷ್ಮಿನಾರಾಯಣಶೆಟ್ಟರ ತರಫ್ ಮಿ॥ ಎಂ. ಎಸ್. ಕೃಷ್ಣಸ್ವಾಮಿ ರಾವ್, 3ನೆ ಚಟ್ಟಾಚಾರಿ ತರಫ್ ಬಿ. ಆರ್. ಕೃಷ್ಣಮಾಚಾರ್ರು, 5ನೆ ನಾರಾಯಣಸ್ವಾಮ್ಯೆಯ್ಯಂಗಾರ್ರ ತರಫ್ ಮಿ॥ ಹೆಚ್. ನರಸಿಂಗರಾಯರು 6–7–12–14 ಮತ್ತು 20ನೆ ಕ್ರಿಡಿಟರುಗಳು ಖುದ್ದು ಹಾಜರಿಯಲ್ಲಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿ ಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ 2ನೆ ಕೃಷ್ಣಪ್ಪ, 4ನೆ ವೆಂಕಟರಾವ್, 8ನೆ ರಾಮನರಸೈಯ್ಯ, 9ನೆ ಶ್ರೀನಿವಾಸೈಯ್ಯಂಗಾರ್ರು, 10ನೆ ಅಬ್ದುಲ್ ಅಜೀಜ್, 11ನೆ ಮರಿಪುಟ್ಟಣ್ಣ, 13ನೆ ಅಳಶಿಂಗ್ರಾಚಾರ್, 15ನೆ ದಕ್ಷಿಣಾಮೂರ್ತ್ಯಾಚಾರ್, 16ನೆ ಸುಬ್ರಾವ್, 17ನೆ ಮಲ್ಲಮ್ಮ, 18ನೆ ತಿಮ್ಮಮ್ಮ, 19ನೆ ಚಲುವೈಯ್ಯ, 21ನೆ ಪಿಟರ್‌ಹೇಸ್, 22ನೆ ವೆಂಕಟರಂಗೈಯ್ಯ ಉರಫ್ ಕೃಷ್ಣರಾವ್, 23ನೆ ರುಕ್ಮಾಜಿ 24ನೆ ರಾಜಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ವೆಂಕಟಸ್ವಾಮಿ ಶಾಸ್ತ್ರಿ ಉರಫ್ ಪುಟ್ಟಶಾಸ್ತ್ರಿಯವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತದಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲ ಕ್ಲೇಮ್ಸ್ ಕರಾರಿಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಎಂದು ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸರ್ 1909ನೆ ಇಸವಿ ನವೆಂಬರ್ 10ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತ್‌ನಿಂದ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ಹಕ್ಕುದಾರರ ಹಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು. ರೂ. ಆ. ಪೈ.	ಬಡ್ಡಿ [illegible]	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
1	ಮೈಸೂರು ಕಿಲ್ಲೆಯಲ್ಲಿರುವ ಮನ್ನಾರ್ ಕೃಷ್ಣಶೆಟ್ಟರ ಲಕ್ಷ್ಮಿನಾರಾಯಣಶೆಟ್ಟರು.	246 2 8	...	ಡಿಕ್ರಿ ಬಾಬತು.	
3	ಡಿಟೋ ಸ್ಥಳದಲ್ಲಿರುವ ಚಿನ್ನ ಕೆಲಸದ ಕೃಷ್ಣಾಚಾರಿ ಮಗ ಚಟ್ಟಾಚಾರಿ 1 ಮೈಸೂರು ಅಡಿಷನಲ್ ಮುನ್ಸಿಫ್ ಕೋರ್ಟು ಸಿವಿಲ್ 142-07-8ನೆ ನಂಬರು ಡಿಕ್ರಿ ಬಾಬತು.	1,856 0 9	...	ಡಿಟೋ.	
[illegible]	2 ಮೈಸೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟು ಸಿವಿಲ್ 16–08–9ನೆ ನಂಬರು ಡಿಕ್ರಿ ಬಾಬತು.	3,526 7 2	...	ಡಿಟೋ	
5	ಮೈಸೂರು ಸುಬ್ರಾಯನ ಕೆರೆಬಳಿ ಇರುವ ಕುಂಭಕೋಣಂ ಜವಳಿ ನಾರಾಯಣಸ್ವಾಮೈಯಂಗಾರ್ರು ಮೈಸೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟು ಸಿವಿಲ್ 469–06–07ನೆ ಡಿಕ್ರಿ ಮೊಬಲಗು ಕೋರ್ಟು ಖರ್ಚು ವಗ್ಯೆರೆ ವಸೂಲ್ 101 ರೂಪಾಯಿ ಜಾತಾ ಬಾ.	540 7 10	...	ಡಿಟೋ	
6	ಮೈಸೂರು ಅಟ್ಟಿಗೆಗೂಡಿನಲ್ಲಿ ಇರುವ ಜವಳಿ ವ್ಯಾಪಾರದ ಈಶ್ವರಪ್ಪ ಮೊದಲಿ ಮತ್ತು ಆತ್ಮಲಿಂಗಂ ಮೊದಲಿಯಾರ್ರಿಗೆ.	2,600 0 0	...	ಲೆಕ್ಕದ ಬಾಬತು.	

ನಂಬರು	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಉಂಟಾದ ತಾರೀಖು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.			
7	ಮೈಸೂರು ದೇವಾಂಬಾ ಅಗ್ರಹಾರದಲ್ಲಿರುವ ನಾಟಂಪಳ್ಳಿ, ಶ್ರೀನಿವಾಸ್ಯಯ್ಯಂಗಾರಿಗೆ ಈ ಕೋರ್ಟಿನ ಮಿಸ್. 105 09-10ನೆ ನಂಬರು ಆರ್ಡರ್ ಮೇರಿಗೆ.	30 0 0	17-6-07	ಪ್ರಾಮಿಸರಿ ಬಾಬತು.	
12	ಮೈಸೂರು ಮಂಡಿಮೊಹಲ್ಲಾ ಹುಚ್ಚಗಿರಿಯಪ್ಪನ ಗರಡಿಬಳಿ ಇರುವ ಕಂಟ್ರಾಕ್ಟರು ದೊರಸಾಮಿಪಿಳ್ಳೆ.	133 0 0	...	ಪತ್ರದ ಬಾಬತು.	
14	ಮೈಸೂರು ಲಕ್ಷ್ಮೀವಿಲಾಸ ಅಗ್ರಹಾರದಲ್ಲಿರುವ ಪ್ಲೀಡರ್ ಕೃಷ್ಣಸ್ವಾಮಿರಾಯರ ಗುಮಾಸ್ತೆ ನಂಜುಂಡಯ್ಯ.	100 0 0	...	ಪ್ರಾಮಿಸರಿ ಬಾಬತು.	
20	ಮೈಸೂರು ದೊಡ್ಡಪೇಟೇಲಿರುವ ಬೂದಗುಂಟೆ ರಾಮಶೆಟ್ಟರ ಮಕ್ಕಳು ವೆಂಕಟ್ರಮಣಶೆಟ್ಟರು, ಮೈಸೂರು ಸಬ್ ಕೋರ್ಟಿನ ಜಾರಿ 197-09-10ನೆ ನಂಬರು ಆರ್ಡರು ಮೇರಿಗೆ ಸದರೀ ಕೋರ್ಟಿನ ಸ್ಮಾಲ್‌ಕಾಜ್ 255-08-9ನೆ ಡಿಕ್ರಿ ಬಾಬತು.	73 2 0	12-7-09	ಡಿಕ್ರಿ ಬಾಬತು.	

ಬಿ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್,
ಸಬ್ ಜಡ್ಜ್.

ಮೈಸೂರು ಗವರ್ನಮೆಂಟ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸಿನಿಂದ.

ನೋಟಿಫಿಕೇಷನ್ ನಂಬರ್ 714—C. S.-24.

ಮೊಕ್ಕಾಂ ಬೆಂಗಳೂರು, ತಾರೀಖು 17—18ನೆ ಡಿಸೆಂಬರ್ 1909.

ಮೈಸೂರು ಗವರ್ನಮೆಂಟ 6—8—09ನೆ ಮುಕ್ಕಾಂ Fl. 1290-9—B. 55-09-2ನೆ ನಂಬರು ಆರ್ಡರು ಅನುಸರಿಸಿ ಈ ಕೆಳಗೆ ನಮೂದಿಸಿರುವ ರಿಟೈರ್ಡ್ ತಾಲ್ಲೂಕು ಶಿರಸ್ತೇದಾರ್ರುಗಳನ್ನು ಅವರ ಹೆಸರುಗಳ ಎದುರಿಗೆ ನಮೂದಿಸಿರುವ ತಾಲ್ಲೂಕುನಲ್ಲಿರುವ ಕೋ-ಆಪರೇಟಿವ ಸೊಸೈಟಿಗಳನ್ನು ಮೇಲ್ವಿಚಾರಣೆ ಮಾಡಲು ನೇಮಿಸಲ್ಪಟ್ಟಿರುತ್ತಾರೆ.

ಹೆಸರು	ತಾಲ್ಲೂಕು.
1. ಮಿ॥ ಕೃಷ್ಣಯ್ಯಂಗಾರ್ರು	ಮೈಸೂರು
2. ,, ಡಿ. ಬಿ. ಲಕ್ಷ್ಮಣರಾವ	ತುಮಕೂರು
3. ,, ಶ್ರೀನಿವಾಸರಾವ ಉರುಫ್ ಗುಂಡೂರಾವ	ಬೆಂಗಳೂರು
4. ,, ಎಚ್. ಡಿ. ನಾರಣಪ್ಪ	ಹಾಸನ ಮತ್ತು ಆಲೂರು ಸಬ್ ತಾಲ್ಲೂಕು.

ಎಂ. ಶಾಮರಾವ್,
ಮೈಸೂರು ಗವರ್ನಮೆಂಟ ಕೋ-ಆಪರೇಟೀವ ಸೊಸೈಟಿಗಳ ರಿಜಿಸ್ಟ್ರಾರ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 5ನೆ ಡಿಸೆಂಬರು 1909.

ಸರ್ 1910ನೆ ಇಸವಿ ಫೆಬ್ರವರಿ 1ರ ಲಾಗಾಯತು ಸರ್ 1911ನೆ ಇಸವಿ ಜನವರಿ 31ರ ವರಿವಿಗೆ, ಆ ಎರಡು ದಿವಸಗಳೂ ಸೇರಿ, 12 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವದಕ್ಕಾಗಿ ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸರ್ 1910ನೆ ಇಸವಿ ಜನವರಿ 15ನೆ ಶನಿವಾರ ಬೆಳಿಗ್ಯೆ 10 ಘಂಟೆ ವರಿಗೂ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಟೇಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿದೆ.

2. ದರಖಾಸ್ತು ಕವರಿನ ಮೇಲ್‌ಭಾಗದಲ್ಲಿ ಬರದಿರಬೇಕಾದ ಮೇಲ್ವಿಳಾಸವೇನಂದರೆ :—

" ಸವದೆ ಸರಬರಾಯಿ ದರಖಾಸ್ತು "

3. ಸವದೇ ಸರಬರಾಯಿಗೆ 50 ರೂಪಾಯಿ, ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವದಿಲ್ಲ.

4. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂಬ್ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಡೆಯುವರು.

5. ಈ ಕೆಳಗೆ ನಮೂದಿಸುವ ಪದಾರ್ಥವನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡತಕ್ಕ ಪದಾರ್ಥ ಒಳ್ಳೇದಾಗಿಯೂ ಸೂಪರ್ರಿಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

ಒಣಗಿದ ಸವದೆ—ಕೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಒಂದು ಮಳ ಉದ್ದವೂ 1½ ಲಾಗಾಯತು 3 ಇಂಚು ಘಾತ್ರವಾಗಿಯೂ ಇರತಕ್ಕದ್ದು 300,000 ಪೌಂಡುಗಳು.

ಸವದೆಯು ಮೇಲೆ ಕಂಡ ಪರಿಮಾಣದ ಮೇಲೆ ಇಷ್ಟೇ ಇಷ್ಟು ಆಗಬೇಕೆಂದು ಖಾತರಿ ಯಾವುದೂ ದೊರೆಯುವುದಿಲ್ಲ.

6. ಸೂಪರ್ರಿಟೆಂಡೆಂಟರವರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ಉಳಿಸಿಕೊಂಡಿಧಾರೆ.

7. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಠೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾಗಿಧೆ ಯೆಂದು ಅವರಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಅವರ ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವಾ 100 ರೂಪಾಯಿ, ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣೀ ಮೊಬಲಗು ಶಿವಾಯಿ ಜಮೆಯಾಗಿ ತೆಗೆದುಕೊಳ್ಳಲಾದೀತು.

8. ಸವುದೆಯನ್ನು ಒಂದು ವರುಷ ಪೂರ್ತಿಯಾಗಿ ಸರಬರಾಯಿ ಮಾಡತಕ್ಕ ಷರತ್ತಿಗೆ ಈ ಕಂಟ್ರಾಕ್ಟು ಒಳಪಟ್ಟಿರುತ್ತೆ. ಸದರೀ ವರುಷ ಪೂರ್ತಿಯಾದಾಗಲೇನೆ ಸರಬರಾಯಿ ಆದ ಸವುದೆಯ ಕಿಮ್ಮತಿನ ಲೆಕ್ಕವನ್ನು ಝೂಡೆಯಾಗಿ ವ್ಯವಸ್ಥೆ ಮಾಡಲಾಗುವದು. ಈ ಮಧ್ಯೆ ತೊಂದರೆ ಇಲ್ಲದೆ ಸರಬರಾಯಿ ನಡಿಯುವ ಉದ್ದಿಶ್ಯ ಪ್ರತಿ ತಿಂಗಳ ಆಖೈರಿನಲ್ಲಿಯೂ, ಆ ತಿಂಗಳಲ್ಲಿ ಸರಬರಾಯಿ ಮಾಡಿರುವ ಸವುದೆಯ ಬೆಲೆ ಬಾಳುವಷ್ಟು ಮೊಬಲಗು ಅಡ್ವಾನ್ಸಾಗಿ ಕಂಟ್ರಾಕ್ಟುದಾರನಿಗೆ ಕೊಡಲ್ಪಡುತ್ತೆಯಾದ್ದರಿಂದ ಆ ಕಾಲಕ್ಕೆ ಸರಿಯಾಗಿ ಜೈಲ್ ಸೂಪರ್ರಿಟೆಂಡೆಂಟರವರ ರೂಬರೂಬ್ ತಾನು ಸರಬರಾಯಿ ಮಾಡಿದ ಸವುದೆಯ ಕಿಮ್ಮತಿನ ಬಿಲ್ಲನ್ನು ಓಚರುಗಳ ಸಮೇತ ಹಾಜರ್ಮಾಡಿ ರಶೀತಿ ಕೊಟ್ಟು ಅಡ್ವಾನ್ಸನ್ನು ಪಡೆಯಬೇಕು. ಪ್ರತಿ ತಿಂಗಳಲ್ಲಿಯೂ ಈರೀತಿ ಅಡ್ವಾನಸು ಮಾಡುವ ಮೊಬಲಗನ್ನು ಒಂದು ವರುಷ ಪೂರ್ತಿಯಾಗಿ ಸರಬರಾಯಿ ಮಾಡಿದ್ದಕ್ಕೆ ಸಾಲ್ ಆಖೈರಿನಲ್ಲಿ ಲೆಕ್ಕಾಚಾರದ ಪ್ರಕಾರ ಕಂಟ್ರಾಕ್ಟುದಾರನಿಗೆ ಸಲ್ಲಬೇಕಾಗುವ ಮೊಬಲಗಿನಲ್ಲಿ ವಜಾ ಮಾಡಲ್ಪಡುತ್ತೆ. ಮೇಲ್ಕಂಡಂತೆ ಪ್ರತಿ ತಿಂಗಳಲ್ಲಿಯೂ ಅಡ್ವಾನಸು ಮಾಡುವ ಮೊಬಲಗು ಶಿವಲ್ ಕೋರ್ಟುಗಳ ಜಪ್ತಿ ಮುಂತಾದ ಕ್ರಮಗಳಿಗೆ ಒಳಪಡುವದಿಲ್ಲ.

9. ಸ್ಟೋರ್ ರೂಂ ಎಂಬ ಒಂದು ಉಗ್ರಾಣವನ್ನು ಸವದೇ ಇಜಾರೆದಾರರ ವಶಕ್ಕೆ ಕೊಡಲಾದೀತು ; ಆತನು ಅದರಲ್ಲಿ ಸವುದೆಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಅದರಲ್ಲಿ ಯಾವಾಗ್ಯೂ ಒಂದು ತಿಂಗಳಿಗೆ ಕಡಮೆ ಇಲ್ಲದಂತೆ ಸರಬರಾಯಿಯನ್ನು ಇಟ್ಟಿರಬೇಕು. ಹೀಗೆ ಆಗಾಗ್ಯೆ ಜೈಲ್ ಸ್ಟೋರ್ ರೂಂನಲ್ಲಿ ಕಂಟ್ರಾಕ್ಟುದಾರನಿಂದ ಜಮಾಯಿಸಲ್ಪಡುವ ಜಿನಸುಗಳ ಮೇಲೆ ಸರ್ಕಾರದವರಿಗೆ ಹಕ್ಕು ಇರುತ್ತೆ.

10. ಕಂಟ್ರಾಕ್ಟು ಷರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗಳಿಗೆ ಹೆಚ್ಚದೆ ಜುರ್ಮಾನೆಯನ್ನು ವಸೂಲ್ಮಾಡಬಹುದು ; ಪದೇ ಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದುಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ತೆಗದುಕೊಳ್ಳಬಹುದು.

11. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರ ಫೈಸಲೆ ಆಖೈರ್ ಫೈಸಲಾಗಿರತಕ್ಕದ್ದು.

12. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್ರಿಟೆಂಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

13. ಈ ಕಂಟ್ರಾಕ್ಟು ಮೈಸೂರು ಜೈಲ್ ಇನ್ಸ್‌ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವದು.

14. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡಿಯಲು ಇಷ್ಟಪಡದಿದ್ದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು. ಇಜಾರೆದಾರರು ತಪ್ಪಿಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಸವದೆಯನ್ನು ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕೆ ಭರ್ತಿಮಾಡಿ ಕೊಡಬೇಕು.

ಷರಾ—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯಿತಿಯನ್ನೂ ಮಾಡೋಣಾಗಲಾರದು.

ತಾರೀಖು 5ನೆ ಡಿಸೆಂಬರು 1909.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಗೆ ಸರ್ 1910ನೆ ಇಸವಿ ಫೆಬ್ರುವರಿ ಗುರ್ರ್ತೆ ಲಾಗಾಯಿತು 1911ನೆ ಇಸವಿ ಜನವರಿ 31ನೆ ತಾರೀಖಿನ ವರಿಗೂ ಆ ಎರಡು ದಿನಗಳೂ ಸೇರಿ ಕೆಳಗೆ ನಮೂದು ಮಾಡುವ ದಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರವರಿಂದ ಸರ್ 1910ನೆ ಇಸವಿ ಜನವರಿ 15ನೆ ತಾರೀಖು ಶನಿವಾರ ಹಗಲು 10 ಘಂಟೆ ವರಿಗೂ ತೆಗೆದುಕೊಳ್ಳಲ್ಪಡುವವು.

2. ಟೆಂಡರರುಗಳಿಗೆ ಈ ಕೆಳಗೆ ನಮೂದುಮಾಡಿ ಇರುವಂತೆ ಬೇರೆ ಬೇರೆ ಮೇಲ್ ವಿಳಾಸ ಬರದು ಇರತಕ್ಕದ್ದು.

1ನೆ ಧಾನ್ಯಕ್ಕೆ	...	ದರಖಾಸ್ತು
2ನೆ ಮಸಾಲೆ ಜಿನಸುಗಳಿಗೆ	...	ಡಿಟೋ
3ನೆ ಇತರ ಅವಶ್ಯಕವಾದ ಪದಾರ್ಥಗಳ ಬಗ್ಗೆ	...	ಡಿಟೋ

3.

ಧಾನ್ಯಕ್ಕೆ	...	ರೂಪಾಯಿ 200
ಮಸಾಲೆ ಜಿನಸುಗಳಿಗೆ	...	,, 50
ಮತ್ತು ಇತರ ಅವಶ್ಯಕವಾದ ಪದಾರ್ಥಗಳಿಗೆ	...	,, 150

ಈ ಮೇರಿಗೆ ನಗದಾಗಲಿ, ಕರ್ರೆನ್ಸಿ ನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

4. ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಆ ಕಾಲದೊಳು ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

5. ಕೆಳಗೆ ವಿವರಿಸುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತುಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೆ ಧಾನ್ಯ.

		ಸುಮಾರು ಬೇಕಾದ್ದು.
ಅಕ್ಕಿ	...	56,000 ಪೌಂಡು.
ರಾಗಿ	...	240,000 ,,
ತೊಗರೀಬೇಳೆ	...	11,000 ,,
ಅವರೇ ಬೇಳೆ	...	19,000 ,,

2ನೆ ಮಸಾಲೆ ಜಿನಸುಗಳು.

ಖಾರದ ಸಾಮಾನಿಗೆ ಬೇಕಾದ ಜಿನಸುಗಳು	
1 ಪೌಂಡ್	ಮೆಣಸಿನಕಾಯಿ
12 ಔನ್ಸ್	ಧನಿಯ (ಕೊತ್ತಂಬರೀ ಬೀಜ)
2 ,,	ಅರಿಸಿನ
1 ,,	ಜೀರಿಗೆ
6 ,,	ಮೆಣಸು
3 ,,	ಪೋಸ್ತುಕಾಯಿ
1 ,,	ಮೆಂಥ್ಯೆ
1 ,,	ಸಾಸಿವೆ
1 ,,	ಕರಬೇವು ಸೊಪ್ಪು

ಖಾರದ ಸಾಮಾನು ಯಾ ಪುಡಿ		4,200 ಪೌಂಡು
ಈರುಳ್ಳಿ	...	6,000 ,,
ಬೆಳ್ಳುಳ್ಳಿ	...	600 ,,
ಹುಣಸೇಹಣ್ಣು	...	6,000 ,,
ಉಪ್ಪು	...	8,400 ,,
ಮೆಣಸು	...	100 ,,
ರೊಟ್ಟಿ	...	1,000 ,,

3ನೆ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು	...	24,000 ಪೌಂಡ್.
ಒಳ್ಳೆಂಣೆ	...	2,400 ,,
ತುಪ್ಪಾ	...	1,200 ,,
ತರಕಾರಿ	...	72,000 ,,
ರವೆ	...	200 ,,
ಸಕ್ರೆ	...	300 ,,
ಕಾಫಿ	...	50 ,,
ಟೀ	...	10 ,,

ಹಾಲು	...	3,600 ಇಂಪೀರಿಯಲ್ ಪೈಂಟುಗಳು
ಶೀಗೇಕಾಯಿ	...	400 ಪೌಂಡು.
ಗೇರುಬೀಜ	...	300 ,,
ದೀಪದ ಎಂಣೆ	...	350 ,,
ಹಂಚಿಕಡ್ಡಿ ಪರಕೆಗಳು		1,500
ತೆಂಗಿನ ಪರಕೆಗಳು	...	1,000
ಕೊಬ್ಬರಿ ಎಂಣೆ	...	100 ಪೌಂಡು

ಮೇಲೆ ನಮೂದು ಮಾಡಿ ಇರುವ ಜಿನಸಿನ ಮೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

6. ಕಂಟ್ರಾಕ್ಟದಾರನು ಕೈದಿಗಳಿಂದ ಬೀಸಲ್ಪಡುವುದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಕೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂದು ಲೆಖ್ಖ ಮಾಡಿ ಆ ರಾಗಿ ದರದ ಮೇಲೆ ಹಣ ಪಾವತಿಯಾದೀತು.

7. ಸೂಪರ್ರಿಟೆಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳದೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

8. ಮಂಜೂರಾದ ದರಖಾಸ್ತುದಾರನ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರೆದುಕೊಡುವುದಕ್ಕೆ ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ನಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 1,500 ರೂಪಾಯಿ, ಮಸಾಲೆ ಜಿನಸುಗಳಿಗೆ 100 ರೂಪಾಯಿ ಮತ್ತು ಇತರ ಅವಶ್ಯಕವಾದ ಪದಾರ್ಥಗಳಿಗೆ 400 ರೂಪಾಯಿ. ಈ ಮೇರೆ ಜಾಮೀನ್ ಕೊಡಲು ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

9. ಜಿನಸಿಗಳನ್ನು ಒಂದು ವರುಷ ಪೂರ್ತಿಯಾಗಿ ಸರಬರಾಯಿ ಮಾಡತಕ್ಕ ಷರತ್ತಿಗೆ ಈ ಕಂಟ್ರಾಕ್ಟು ಒಳಪಟ್ಟಿರುತ್ತೆ. ಸದರಿ ವರುಷ ಪೂರ್ತಿಯಾದಾಗಲೇನೆ ಸರಬರಾಯಿ ಆದ ಜಿನಸಿಗಳ ಕಿಮ್ಮತ್ತಿನ ಲೆಕ್ಕವನ್ನು ಝಾಡೆಯಾಗಿ ವ್ಯವಸ್ಥೆ ಮಾಡಲಾಗುವದು. ಈ ಮಧ್ಯೆ ತೊಂದರೆ ಇಲ್ಲದೆ ಸರಬರಾಯಿ ನಡಿಯುವ ಉದ್ದೇಶ್ಯ ಪ್ರತಿ ತಿಂಗಳ ಆಖೈರಿನಲ್ಲಿಯೂ ಆ ತಿಂಗಳಲ್ಲಿ ಸರಬರಾಯಿ ಮಾಡಿರುವ ಜಿನಸಿಗಳ ಬೆಲೆ ಬಾಳುವಷ್ಟು ಮೊಬಲಗು ಅಡ್ವಾನ್ಸಾಗಿ ಕಂಟ್ರಾಕ್ಟುದಾರನಿಗೆ ಕೊಡಲ್ಪಡುತ್ತೆಯಾದ್ದರಿಂದ ಆ ಕಾಲಕ್ಕೆ ಸರಿಯಾಗಿ ಜೈಲ್ ಸೂಪರ್ರಿಟೆಂಡೆಂಟರವರ ರೂಬರೂಬ್ ತಾನು ಸರಬರಾಯಿಮಾಡಿದ ಜಿನಸಿಗಳ ಕಿಮ್ಮತ್ತಿನ ಬಿಲ್ಲನ್ನು ಓಚರುಗಳ ಸಮೇತ ಹಾಜರ್ಮಾಡಿ ರಶೀತಿ ಕೊಟ್ಟು ಅಡ್ವಾನ್ಸನ್ನು ಪಡೆಯಬೇಕು. ಪ್ರತಿ ತಿಂಗಳಲ್ಲಿಯೂ ಈ ರೀತಿ ಅಡ್ವಾನ್ಸು ಮಾಡುವ ಮೊಬಲಗನ್ನು ಒಂದು ವರುಷ ಪೂರ್ತಿಯಾಗಿ ಸರಬರಾಯಿ ಮಾಡ್ದಕ್ಕೆ ಸಾಲ್ ಆಖೈರಿನಲ್ಲಿ ಲೆಕ್ಕಾಚಾರದ ಪ್ರಕಾರ ಕಂಟ್ರಾಕ್ಟುದಾರನಿಗೆ ಸಲ್ಲಬೇಕಾಗುವ ಮೊಬಲಗಿನಲ್ಲಿ ವಜಾ ಮಾಡಲ್ಪಡುತ್ತೆ. ಮೇಲ್ಕಂಡಂತೆ ಪ್ರತಿ ತಿಂಗಳಲ್ಲಿಯೂ ಅಡ್ವಾನ್ಸು ಮಾಡುವ ಮೊಬಲಗು ಶಿವಿಲ್ ಕೋರ್ಟುಗಳ ಜಫ್ತಿ ಮುಂತಾದ ಕ್ರಮಗಳಿಗೆ ಒಳಪಡುವದಿಲ್ಲ.

10. ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಹೀಗೆ ಆಗಾಗ್ಯೆ ಜೈಲ್ ಸ್ಟೋರ್ ರೂಂನಲ್ಲಿ ಕಂಟ್ರಾಕ್ಟುದಾರನಿಂದ ಜಮಾಯಿಸಲ್ಪಡುವ ಜಿನಸುಗಳ ಮೇಲೆ ಸರ್ಕಾರದವರಿಗೆ ಹಕ್ಕು ಇರುತ್ತೆ. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ, ಮಾಂಸ ಮುಂತಾದ್ದು ಪ್ರತಿದಿನವೂ ಬೆಳಗಿನ 7 ಘಂಟೆಗೆ ಜೈಲ್‌ನಲ್ಲಿ ಹಾಜರಾಗಿರಬೇಕು.

11. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನ ಸರಬರಾಯಿ ಮಾಡಿದರೂ ಜೈಲ್ ಸೂಪರ್ರಿಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದ ಜುರ್ಮಾನೆ ಹಾಕುವರು ಮತ್ತು ಪದೇಪದೇ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದುಮಾಡಿ ಠೇವಣಾತಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತಕ್ಕೊಳ್ಳಲ್ಪಟ್ಟೀತು.

12. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರ್ರಿಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

13. ಕಂಟ್ರಾಕ್ಟುದಾರನು ಕೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ತರಕಾರಿಯನ್ನೂ ಮತ್ತು ತೋಟದ ಬೆಳಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲ್‌ನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

14. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರ್ರಿಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

15. ಅಂಗೀಕರಿಸಿದ ದರಖಾಸ್ತು ಮೈಸೂರು ದೇಶದ ಜೈಲುಗಳ ಇನ್‌ಸ್ಪೆಕ್ಟರ್ ಜನರಲರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನ ಇಟ್ಟುಕೊಂಡಿಧಾರೆ.

16. ಕಂಟ್ರಾಕ್ಟುದಾರರು ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅಥವಾ ಶಕ್ತಿ ಇಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳು ಮುಂಚಿತವಾಗಿ ನೋಟಿಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನು ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

17. ಆ ಪ್ರಕಾರ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತಿ ಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ನೋಟಿಸ.

1909ನೆ ಇಸವಿ ಡಿಸೆಂಬರ್ ತಾರೀಖು 5

ನೋಟಿಸ್ ಮೂಲಕ ತಿಳಿಯಪಡಿಸುವದೇನಂದರೆ:—1910ನೆ ಇಸವಿ ಫೆಬ್ರುವರಿ ಗುರ್‍ರೆ ತಾರೀಖು ಲಾಗಾಯಿತು 1911ನೆ
ಇಸವಿ ಜನವರಿ 31ನೆ ತಾರೀಖು ವರಿವಿಗೂ ಜ್ಯೆಲಿನಲ್ಲಿ ತಯಾರಾಗತಕ್ಕ ಸಾಮಾನುಗಳು ಮತ್ತು ಇತರ ತರಹ ಉಪಯೋಗಕ್ಕಾಗಿ
ಯು ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನೂ ಹಾಜರು ಮಾಡಲು ಕಂಟ್ರಾಕ್ಟು ಪಡೆಯಲು
ಇಷ್ಟವುಳ್ಳವರಿಂದ ಹಾಜರು ಮಾಡಲ್ಪಡುವ ಸೀಲ್ಡ್ ಕವರುನಿಸಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜ್ಯೆಲ್ ಸೂಪರ್‌ಟೆಂಡೆಂಟ
ರವರು 1910ನೆ ಇಸವಿ ಜನವರಿ 14ನೆ ಶುಕ್ರವಾರ ದಿವಿ 10 ಘಂಟೆ ವರಿವಿಗೂ ಅಂಗೀಕರಿಸುವರು.

2. ನಗದಾಗಿ 250 ರೂಪಾಯಿಗಳೇ ಆಗಲಿ ಅಥವಾ 250 ರೂಪಾಯಿಗಳಿಗೆ ತಕ್ಕ ನಡವಳಿಕೆಯಲ್ಲಿರುವ ನೋಟುಗಳ
ನ್ನು ಆಗಲಿ ಡಿಪಾಜಿಟ್ ತರೀಖು ಹಾಜರು ಮಾಡದೇ ಇರುವಂಥಾ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

3. ದರಖಾಸ್ತುದಾರರಿಂದ ಹಾಜರು ಮಾಡಲ್ಪಡುವ ದರಖಾಸ್ತುಗಳ ಮೇಲ್ಭಾಗದಲ್ಲಿ ಬೆಂಗಳೂರು ಸೆಂಟ್ರಲ್ ಜ್ಯೆಲಿನಲ್ಲಿ
"ಸಾಮಾನುಗಳು ತಯಾರಾಗತಕ್ಕ ಬಗ್ಯೆ ಮತ್ತು ಇತರ ತರಹ ಉಪಯೋಗಕ್ಕಾಗಿಯೂ ಬೇಕಾಗಿರುವ ಸಾಮಾನುಗಳನ್ನು
ಸಪ್ಲೈ ಮಾಡತಕ್ಕ ಬಗ್ಯೆ ಕೊಟ್ಟ ದರಖಾಸ್ತು" ಎಂದು ನಮೂದಿಸಬೇಕು.

4. ಮೇಲ್ಕಂಡ ದಿನದಲ್ಲಿ ಸೆಂಟ್ರಲ್ ಜ್ಯೆಲ್ ಸೂಪರ್‌ಟೆಂಡೆಂಟರವರು ತಮ್ಮ ಆಫೀಸಿನಲ್ಲಿ ಹಾಜರಿರುವ ದರಖಾಸ್ತುದಾರು
ಯಾ ಅವರುಗಳ ಏಜಂಟುಗಳ ರೂಬರೂಬ್ ದರಖಾಸ್ತುಗಳನ್ನು ಖುಲ್ಲಾ ಮಾಡುವರು.

5. ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೆ ತಿರಸ್ಕರಿಸುವ ಅಧಿಕಾರವನ್ನು ಸೂಪರ್‌ಟೆಂಡೆಂಟರವರು ವಹಿ
ಸಿದ್ದಾರೆ.

6. ಎಲ್ಲಾ ದರಖಾಸ್ತುದಾರರೂ ಇದಕ್ಕೆ ಜಂಟಿಸಿರುವ ಫಾರಮಿನಲ್ಲಿ ಕಂಡಂತೆ ಬಳ್ಳಿ ಸರಕುಗಳನ್ನು ಯಾವ ರೇಟನಲ್ಲಿ
ಕೊಡುತ್ತಾರೋ ಅವುಗಳನ್ನು ತಮ್ಮ ದರಖಾಸ್ತಿನಲ್ಲಿ ನಮೂದಿಸಬೇಕು.

7. ಕಂಟ್ರಾಕ್ಟು ಯಾರ ಹೆಸರಿಗೆ ಮಂಜೂರಾಗುತ್ತೋ ಅವರಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ್ ಮೊಬಲಗನ್ನು ವಾಪಸು
ಕೊಡುವದಿಲ್ಲ ಮತ್ತು ಸದರೀ ಯವರ ಕಂಟ್ರಾಕ್ಟು ಮಂಜೂರು ಮಾಡಲ್ಪಟ್ಟಿದೆ ಎಂದು ಅವರಿಗೆ ತಿಳಿಸಿದ ಒಂದು ವಾರದೊಳಗಾಗಿ
ಕಂಟ್ರಾಕ್ಟು ಬಾಂಡು ಬರದುಕೊಡದೇ ಹೋದರೂ ಅಥವಾ ಜಾಮೀನ್ ತರೀಕ ನಗದು 500 ರೂಪಾಯಿ ಅಥವಾ ಅದಕ್ಕೆ ತಕ್ಕ
ಸರಕಾರದ ಬಾಂಡುಗಳನ್ನೇ ಆಗಲಿ ಹಾಜರು ಮಾಡದೇ ಹೋದರೂ ಡಿಟೋ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳ
ಲ್ಪಡುತ್ತೆ.

8. ಜಿನಸಿಗಳನ್ನು ಒಂದು ವರುಷ ಪೂರ್ತಿಯಾಗಿ ಸರಬರಾಯಿ ಮಾಡತಕ್ಕ ಷರತ್ತಿಗೆ ಈ ಕಂಟ್ರಾಕ್ಟು ಒಳಪಟ್ಟಿರು
ತ್ತೆ. ಸದರೀ ವರುಷ ಪೂರ್ತಿಯಾದಾಗಲೇನೆ ಸರಬರಾಯಿ ಆದ ಜಿನಸಿಗಳ ಕಿಮ್ಮತಿನ ಲೆಕ್ಕವನ್ನು ಝಾಡೆಯಾಗಿ ವ್ಯವಸ್ಥೆ ಮಾಡ
ಲಾಗುವದು. ಈ ಮಧ್ಯೆ ತೊಂದರೆ ಇಲ್ಲದೆ ಸರಬರಾಯಿ ನಡೆಯುವ ಉದ್ದಿಶ್ಯ ಪ್ರತಿ ತಿಂಗಳ ಆಖೈರಿನಲ್ಲಿಯೂ ಆ ತಿಂಗಳಲ್ಲಿ ಸರ
ಬರಾಯಿ ಮಾಡಿರುವ ಜಿನಸಿಗಳ ಬೆಲೆ ಬಾಳುವಷ್ಟು ಮೊಬಲಗು ಅಡ್ವಾನ್ಸಾಗಿ ಕಂಟ್ರಾಕ್ಟುದಾರನಿಗೆ ಕೊಡಲ್ಪಡುತ್ತೆಯಾದ್ದರಿಂದ
ಆ ಕಾಲಕ್ಕೆ ಸರಿಯಾಗಿ ಜ್ಯೆಲ್ ಸೂಪರ್‌ಟೆಂಡೆಂಟರವರ ರೂಬರೂಬ್ ತಾನು ಸರಬರಾಯಿ ಮಾಡಿದ ಜಿನಸಿಗಳ ಕಿಮ್ಮತಿನ ಬಿಲ್ಲನ್ನು
ಓಚರುಗಳ ಸಮೇತ ಹಾಜರ್ಮಾಡಿ ರಶೀತಿ ಕೊಟ್ಟು ಅಡ್ವಾನ್ಸನ್ನು ಪಡೆಯಬೇಕು. ಇಂಥಾ ಅಡ್ವಾನ್ಸ ಮೊಬಲಗುಗಳು ವರುಷ
ಪೂರ್ತಿಯಾದನಂತರ ಸರಬರಾಯಿ ಮಾಡಿದ ಪದಾರ್ಥಗಳಿಗಾಗಿ ಕಂಟ್ರಾಕ್ಟುದಾರನಿಗೆ ಕೊಡಬೇಕಾದ ಮೊಬಲಗಿನಿಂದ ವಜಾ ಮಾಡ
ಲ್ಪಡುವವು ಮತ್ತು ಅವುಗಳು ಶಿವಿಲ್ ಕೋರ್ಟನವರ ಅಟಾಚ್‌ಮೆಂಟಿಗೆ ಒಳಪಟ್ಟಿರುವದಿಲ್ಲ.

9. ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಷರತ್ತು ಮೇರೆ ನಡಿಯದೇ ತಪ್ಪಿದರೂ ಅಥವಾ ಕಮ್ಮಿ ರಖಂ ಸಾಮಾ
ನುಗಳನ್ನು ಹಾಜರು ಮಾಡಿದರೂ, ಜ್ಯೆಲ್ ಸೂಪರ್‌ಟೆಂಡೆಂಟರವರು ಮುನಾಸಬ್ ಮೇರೆ 30 ರೂಪಾಯಿಗಳ ವರಿಗೂ ಜುರ್ಮಾನೆ
ವಿಧಿಸಬಹುದು. ಹೀಗೆ ಪದೇ ಪದೇ ಮಾಡಿದರೆ ಕಂಟ್ರಾಕ್ಟನ್ನು ವಜಾ ಮಾಡಿ ಜಾಮೀನ್ ತರೀಕ ಕೊಟ್ಟ ಮೊಬಲಗನ್ನು ಸರಕಾರ
ಕ್ಕೆ ತೆಗದುಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನು ಷರತ್ತಿಗೆ ವಿರೋಧವಾಗಿ ನಡದುಕೊಂಡರೆ ಆ ವಿಷಯದಲ್ಲಿ ಜ್ಯೆಲ್ ಸೂಪರ್‌ಟೆಂಡೆಂಟರು ಮಾ
ಡುವ ಹುಕುಮೇ ಆಖೈರು ಹುಕುಂ ಆಗಿ ಇಧೆ.

11. ಕಂಟ್ರಾಕ್ಟುದಾರನು ಅಪೇಕ್ಷಿಸಿದ ಪಕ್ಷದಲ್ಲಿ ನಾಶಪಡದೇ ಇರುವಂಥಾ ಪದಾರ್ಥಗಳನ್ನು ಇಟ್ಟುಕೊಳ್ಳಲು ಒಂದು ಕೊ
ಠಡಿ ಕೊಡಲ್ಪಡಬಹುದು. ಅಲ್ಲಿ ಸಾಮಾನು ಇಟ್ಟುಕೊಂಡು ಕೇಳಿದವೇಳೆ ಕೊಡಬಹುದು. ಹಾಗೆ ಸ್ಟೋರ್ ಮಾಡಿದ ಪದಾರ್ಥ
ಗಳ ಮೇಲೆ ಸರ್ಕಾರದವರಿಗೆ ಹಕ್ಕಿರುತ್ತೆ.

12. ಇನ್ನೂ ಇತರ ಸಂಗತಿಗಳು ವಿಚಾರಿಸಬೇಕಾಗಿದ್ದರೆ ಸೂಪರ್‌ಟೆಂಡೆಂಟರವರ ಆಫೀಸಿನಲ್ಲಿ ಕೇಳಿಕೊಳ್ಳಬಹುದು.

13. ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ಕಂಡ * ಮಾರ್ಕು ಮಾಡಿರುವ ಸಾಮಾನುಗಳ ನಮೂನೇ ಸಹ ದರಖಾಸ್ತು ಜೊ
ತೆಯಲ್ಲಿ ಹಾಜರ್ಮಾಡಬೇಕು.

14. ಮೇಲೆ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು 100 ರೂಪಾಯಿ ಡಿಪಾಜಿಟ್ ಕಟ್ಟಿದ್ದರೆ ಮೇಲ್ಕಂಡ ತಾ
ರೀಖಿನಲ್ಲಿ ತುಪಟಗಳು ಹಾಜರು ಯಾ ಸಪ್ಲೈ ಮಾಡತಕ್ಕ ಬಗ್ಯೆ ಕೊಡುವ ಅಲಾಹಿದಾ ದರಖಾಸ್ತುಗಳನ್ನು ಅಂಗೀಕರಿಸಲ್ಪಡು
ವದು

15. 25 ಪೌಂಡು ತೂಕವುಳ್ಳ ಮಣದ ಮೇಲೆ ದರ ನಮೂದಿಸಬೇಕು.

16. ಈ ಅಂಗೀಕರಿಸಿದ ದರಖಾಸ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಜನ್ಸ್ ಯವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

17. ಸುಮಾರು ಬೇಕಾಗಬಹುದಾದ ಸಾಮಾನುಗಳ ಮೊತ್ತಗಳು ಕೆಳಗೆ ನಮೂದಿಸಲ್ಪಟ್ಟಿದೆ. ಆದರೆ ಇಷ್ಟೇ ಖರ್ಚಾ
ದೀತೆಂಬುವದನ್ನು ಗೊತ್ತಾಗಿ ಹೇಳಲು ಆಗುವದಿಲ್ಲ

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
ಸ್ಟಿಕ್ಕ್ ಗ್ಲೂ ಯಾನೆ ವಜ್ರ 25 ಪವನಿನ ಮಣುಕ್ಕೆ	200
ಅಳಲೆಕಾಯಿ ಡಿಟೋ	275
*ಚಾಳು (ಬಿಲ್ಲೆಯಾಗಿ) ಡಿಟೋ	1,200
ಅಡಿಕೆ ಡಿಟೋ	50
ಕಾಂಚು ಡಿಟೋ	50
ಹುಣಸೇಬೀಜ (ರೂಪಾಯಿಗೆ ಇಷ್ಟು ಸೇರೆಂದು)	300 ಸೇರು
ಹರಿದ್ರೆ 25 ಪವನಿನ ಮಣುಕ್ಕೆ	200 ಪವನು
ತಾಂಬ್ರದ ತಗಡು ನಾನಾತರ ದಪ್ಪದ್ದು	600
ಹಿತ್ತಾಳೀ ತಗಡು ಡಿಟೋ	50
ಪಟಿಕಾರವು 25 ಪವನಿನ ಮಣುಕ್ಕೆ	250
*ಅರಗು ಪೆಸ್ಸರ ಅಥವಾ ರಂಗೂನದು ಕಡ್ಡಿಯಿಲ್ಲದ್ದು	700 ಪವನು
*ಕೆಂಪುಮರ ಸಣ್ಣಗೆ ಸೀಳಿದ್ದು	200 ಪವನು
ಬಿಳೀ ಸೀಮೆ ಸುಣ್ಣ	20 ಪವನು
*ಅವಲ್ ನೀಲಿ ಅವಲ್, ದುಯ್ಯಂ ಮತ್ತು ಸಿಯ್ಯಂ ರಖಂ	150 ಪವನು
ಅವಲ್ ಟಾರು	6 ಪೀಪಾಯಿ
ಮರದೆಣ್ಣೆ	3 ಮಣ
ಗೋಪಿ	200 ಪವನು
ಅವಲ್ ಕೊಬರಿ ಎಣ್ಣೆ	56 ಪವನು
ಅವಲ್ ಅಚ್ಚಳ್ಳೆಣ್ಣೆ	50 ಪವನು
ಅವಲ್-ದೀಪದ ಎಣ್ಣೆ	75 ಪವನು
*ಅವಲ್ ಬಿಳೀ ಚೆತ್ತ 1ನೆ ಕ್ಲಾಸು	350 ಪವನು
ತೊಳದ ದಪ್ಪ ಮತ್ತು ಅಗಲವುಳ್ಳ ಮಲ್‌ಮಲ್	30 ಗಜ
ಅಗಲವಾದ ಮತ್ತು ದಪ್ಪವಾದ ಟರಕಿ ಕೆಂಪು ಬಟ್ಟೆ	30 ಗಜ
ಒಂದು ಅಡಿ ಅಗಲವುಳ್ಳ ಟೆಂಟುಗನಿ (ಚೀಲಕ್ಕೆ) ಗಜಕ್ಕೆ	100 ಗಜ
ನೇವಿ ಕ್ಯಾನ್‌ವಸ್ ನಂ. 1 ಗಜಕ್ಕೆ	30 ಗಜ
ಡಿಟೋ ನಂ. 2 ಡಿಟೋ	5 ಗಜ
ಡಿಟೋ ನಂ. 3 ಡಿಟೋ	5 ಗಜ
*ಬಾರ್ ಐರನು ಯಾನೆ ಕಬ್ಬಿಣ 25 ಪವನು ಮಣುಕ್ಕೆ	200 ಪವನು
ಹೂಪು ಐರನು ಡಿಟೋ	200 ಪವನು
ಅರ ಒಂದಕ್ಕೆ	50
ಹಳೇ ಹಿತ್ತಾಳೆ 25 ಪವನು ಮಣುಕ್ಕೆ	200 ಪವನು
*ಸರ್ವೋತ್ಕೃಷ್ಟವಾದ ಸ್ಪೆಷೆಲ್ ಕ್ಲಾಸ್ ಬಿಳೀ ತುಪಟ	5,000 ಪವನು
ಡಿಟೋ ಕ್ಲಾಸಿನ ಕಪ್ಪು ತುಪಟ	5,000 ಪವನು
*ಕತ್ತರಿಸಿದ ಮಂಡ್ಯದ ಬಿಳೀ ತುಪಟ 25 ಪವನು ಮಣುಕ್ಕೆ 1ನೆ ರಖಂ	500 ಪವನು
*2ನೆ ರಖಂ ಕತ್ತರಿಸಿದ ಚಿತ್ರದುರ್ಗದ ತುಪಟ	1,000 ಪವನು
*ಕುರಿಮರಿ ತುಪಟ ಚಿತ್ರದುರ್ಗದ್ದು (ಬ್ಲಾಕು ಕ್ರಿಮ್ಮಿ)	2,500 ಪವನು
*ಡಿಟೋ ಬಿಳೀ ತುಪಟ	3,000 ಪವನು
*ಡಿಟೋ ಮರಿ ತುಪಟ	1,000 ಪವನು
*ಡಿಟೋ ಗ್ರೇಯಾನೆ ಬಿಳೀ ತುಪಟ	3,000 ಪವನು
ಕಾರ್ಟ್ ರೀಲ್ ಯಾವತರಹದ್ದೇ ಆಗಲಿ, ನಂ. 20—30—40 ಮತ್ತು ಡಜ಼ನ್ ಒಂದಕ್ಕೆ ...	252
*ಹತ್ತಿ ಮಣ ಒಂದಕ್ಕೆ 25 ಪವನು	250 ಪವನು
ಜೇನುಮೇಣ (ಹಳದಿ)	30 ಪವನು
ಹುಣಸೇಹಣ್ಣು (ಕೊಳೆ ಕಲ್ಲು ವಗೈರೆ ಇಲ್ಲದ್ದು) 25 ಪವನಿನ ಮಣುಕ್ಕೆ ...	2,000 ಪವನು
*ಹಳದಿ ಹೂ ಡಿಟೋ	1,500 ಪವನು
ಬಿಳೀ ಗೋಂದು (ಕೊಳೆ ಇಲ್ಲದ್ದು) ಡಿಟೋ	25 ಪವನು
ದೋಬಿಸ್ವಾಂಡು ಯಾನೆ ಮರಳು ಡಿಟೋ	200 ಮಣ
ಚೆಸಿಯತಕ್ಕ ಸೀಸ ಡಿಟೋ	75 ಪವನು
ಟಂಕವು (ಬಿಳಿಗಾರ) ಡಿಟೋ	75 ಪವನು
ಸಾಲಿಮೋನಿಯಾಕ್ ಡಿಟೋ	75 ಪವನು
ಆಸ್ಫಾಲ್ಟ್ ಡಿಟೋ	10 ಮಣ
ಭತ್ತದ ಹೊಟ್ಟು ಡಿಟೋ	100 ಮಣ
ನೀಲೀಬೀಜ ಡಿಟೋ	600 ಪವನು
ಅವಲ್ ಇದ್ದಲು (ಚೀಲಗಳಲ್ಲಿ) ಚೀಲಕ್ಕೆ ದರ (50 ಪವನುಗಳಿಗೆ ಕಮ್ಮಿ ತೂಗದೆ ಇರತಕ್ಕ ಚೀಲ) ...	150 ಚೀಲ
ಸೆಣಬಿನದಾರ ಒಂದು ಡಜ಼ನ್ ವುಂಡೆಗೆ	100 ವುಂಡೆ
ತೆಂಗಿನ ನಾರು (ಅವಲ್ ಕಳ್ಳಿಕೋಟೇದು) 25 ಪವನಿನ ಮಣುಕ್ಕೆ	3,000 ಪ॥
ಸವುದೆ (ಸಣ್ಣಗೆ ಸೀಳಿದ್ದು)	1,200 ಮಣ
ಪುಂಡೀನಾರು (ಬಿಳೀದು) 25 ಪವನು ಮಣುಕ್ಕೆ	800 ಪವನು

ಜಿನಸಿ.	ಈ ವರುಷಕ್ಕೆ ಬೇಕಾಗಿ ರುವ ಸುಮಾರು ನಿಬಂಧನೆ.
*ತೂತು ಇಲ್ಲದ ಅವಲ್ ಕೋಣನ ಚಕ್ಕಳ	10
ಡಿಟೋ ಹದಮಾಡಿದ ಎತ್ತಿನ ಚಕ್ಕಳ	10
ತೂತು ಇಲ್ಲದ ಅವಲ್ ಹದಮಾಡಿದ ಎತ್ತಿನ ಚಕ್ಕಳ ಸಾಧಾರಣದ್ದು	5
ದೊಡ್ಡ ಕುರಿ ಚಕ್ಕಳ ಡಿಟೋ	10
ಬೇಯಿಸಿದ ಅಗಸೇಬೀಜದ ಎಣ್ಣೆ 2½ ಸೇರಿನ ಸೀಸೇಕ್ಕೆ	50 ಸೀಸೆ
ಟರ್ಪೆಂಟೈನ್ ಎಣ್ಣೆ ಡಿಟೋ	30 ಸೀಸೆ
ಗೋಪಾಲ್ ವಾರ್ನಿಷ್ ಡಿಟೋ	10 ಸೀಸೆ
ಬ್ಲಾಕ್ ಜಪಾನ್ ಡಿಟೋ	10 ಸೀಸೆ
ಆಸ್ಪಿನಲ್ಸ್ ಯನಾಮಲ್ (ಪೈನ್ ಆಪಲ್) ಟಿನ್‌ಗಳಲ್ಲಿ	25 ಟಿನ್‌ಗಳು
ಒಣಗಿದ ಕರ್ಪೂರ ಪವನಿಗೆ	20 ಪವನು
ಷೀಟು ಐರನು ಎಂಬ ಕಬ್ಬಿಣ 25 ಪೌನು ಮಣಕ್ಕೆ	200 ಪವನು
ಸತ್ತು 25 ಪವನು ಮಣಕ್ಕೆ	200 ಪವನು
*ಹಾಸಿಗೆ ಗೌಸ್ ಹಾಕುವ ಬಟ್ಟೆ ಗಜಕ್ಕೆ	30 ಗಜ
*ಕತ್ತರಿಸಿದ ಬಿಳಿ ಬಂಡ (ಮಂಡ್ಯದ್ದು) ದುಯುಂ ತರಹ 25 ಪೌಂಡಿನ ಮಣ 1ಕ್ಕೆ	1,500 ಪೌಂಡುಗಳು
*ಡಿಟೋ ಕರಿ ಬಂಡ (ಚಿತ್ರದುರ್ಗದ್ದು) ಡಿಟೋ	1,000 ಡಿಟೋ
*ಕುರಿಮರಿ ಬಂಡ (ಚಿತ್ರದುರ್ಗದ್ದು) ಡಿಟೋ	2,500 ಡಿಟೋ
*ಸುಣ್ಣದ ಬಂಡ ಕರೀದು ಡಿಟೋ	5,000 ಡಿಟೋ
*ಡಿಟೋ ಬಿಳೀದು ಡಿಟೋ	3,000 ಡಿಟೋ
*ಡಿಟೋ ಕುರಿಮರೀದು ಡಿಟೋ	1,000 ಡಿಟೋ
*ಡಿಟೋ ಗ್ರೇಯಾನೆ ಬಿಳಿ ತುಪಟ ಡಿಟೋ	3,000 ಡಿಟೋ
ಬಂಡ ಉಪಯೋಗಿಸುವದಕ್ಕೆ ಮುಂಚೆ ಆರಿಶಿ ಕಮಾನು ಹೊಡಿಯಲ್ಪಡುತ್ತೆ.	
ಮರದ ದಿಮ್ಮಿಗಳು ಮೈಸೂರು 1ನೆ ಕ್ಲಾಸು ತ್ಯಾಗ, ಹೊನ್ನೆ ಕರೀದು ಮತ್ತು ರೋಸ್‌ವುಡ್ ಅಡಿ 1ಕ್ಕೆ.	
ಸ್ಕ್ರೂಗಳು ¼ ಅಂಗುಲ ಮೊದಲು 3 ಅಂಗುಲದ ವರಿಗೆ ಗ್ರೋಸ್ 1ಕ್ಕೆ	20 ಗ್ರೋಸ್ ಅಳತೆವಾರು
ಸ್ಯಾಂಡ್ ಪೇಪರು ಡಜನ್ 1ಕ್ಕೆ	60 ಡಜನ್‌ಗಳು
ಪುಲೀಗಳು ¼ ಅಂಗುಲದ ಲಾಗಾಯಿತು 2 ಅಂಗುಲದ ವರಿಗೆ ಬಂದಕ್ಕೆ	6 ತರಹೆವಾರು
ಒಳ್ಳೆ ಎಳ್ಳು ರೂಪಾಯಿ 1ಕ್ಕೆ ಸೇರುಗಳು	1,000 ಸೇರುಗಳು
30ನೆ ನಂ. ನೂಲು ಕಟ್ಟು 1ಕ್ಕೆ ಬಿಳೀದು (5 ಪೌನಿನ ಕಟ್ಟು)	150
40ನೆ ಡಿಟೋ ,, ,, ,,	100
60ನೆ ಡಿಟೋ ,, ,, ,,	50
4ನೆ ಡಿಟೋ ,, ,, (10 ಪೌನಿನ ಕಟ್ಟು)	30
ಸನ್‌ಲೈಟ್ ಸೋಪು ಮೂರು ಸ್ಟಿಕ್ಕು ಇರುವ ಪೆಟ್ಟಿಗೆ 1ಕ್ಕೆ	30
ಸ್ಟಾರ್ಚ್ ಪೆಟ್ಟಿಗೆ 1ಕ್ಕೆ	30
ತರಹೆವಾರು ಬಿದರು ಬೊಂಬುಗಳು ಕಟ್ಟು 1ಕ್ಕೆ	200
10ನೆ ನಂಬರ್ ಬಿಳೀ ನೂಲು (ಪಾಂಡುಚೆರಿ ದೇಶದ್ದು) 10 ಪೌನಿನ ಕಟ್ಟು ದರ ಕಟ್ಟು 1ಕ್ಕೆ	7,200 ಪೌಂಡುಗಳು
ಗೇರು ಬೀಜ 25 ಪೌನಿನ ಮಣ 1ಕ್ಕೆ	100 ,,
ತರಹಾವಾರಿ ರಂಗಿನ ಯನಾಮಲ್ ಟಿನ್‌ಗಳು ದರ ಟಿನ್ 1ಕ್ಕೆ	20 ಟಿನ್‌ಗಳು
ವೈಟ್‌ಲೆಡ್ ಪೌನ್ 1ಕ್ಕೆ	5 ಪೌಂಡುಗಳು
ಫರನೀಚರ್‌ಗಳಿಗೆ ಉಪಯೋಗಿಸತಕ್ಕ ಹಿತ್ತಾಳೆ ಮತ್ತು ಕಬ್ಬಿಣದ ಹುಕ್ಕುಗಳು ರಖಂವಾರಿ ದರ ಡಜನ್ 1ಕ್ಕೆ.	6 ಡಜನ್
ಡಿಟೋ ಡಿಟೋ ಹಿತ್ತಾಳೆ ಮತ್ತು ಕಬ್ಬಿಣದ ಕೈಪಿಡಿ ರಖಂವಾರ್, ದರ ಜೋಡಿ 1ಕ್ಕೆ	25 ಜೋಡಿ
ಗ್ರೀನ್ ಮಲ್ಲು ಗಜ 1ಕ್ಕೆ	75 ಗಜ
ಸ್ಟೇಜ್‌ವಾರ್ ಬೊಂಬುಗಳು 100ಕ್ಕೆ	500
ಡಿಟೋ ವೇಲೂರು ಬೊಂಬುಗಳು 100ಕ್ಕೆ	200
ಸೂಸಿ ಪಟ್ಟೆ 25 ಪೌನಿನ ಮಣ 1ಕ್ಕೆ	20 ಮಣ
ಬೆಂಗಾಲ್ ಟ್ವೈನ್ ಪೌನು ಬಂದಕ್ಕೆ	15 ಪೌನ್
ನಾಪ್ತಲೈನ್ ಗುಳಿಗೆಗಳು ಪೌನು 1ಕ್ಕೆ	10 ಪೌನ್
ವೈರ್ ನೆಟ್ಟಿಂಗ್ (ತಂತಿ ಝಾಲಿ) ಗಜ 1ಕ್ಕೆ	50 ಗಜ
ರಖಂವಾರ್ ತಂತಿ ಮತ್ತು ಗುಲ್ ಮಳೆಗಳು ಪೌನ್ 1ಕ್ಕೆ	20 ಪೌನ್
ಯಮರಿ ಪೇಪರ್ ಡಜನ್ 1ಕ್ಕೆ	2 ಡಜನ್
ತಾಂಬ್ರ ಮತ್ತು ಕಬ್ಬಿಣದ ರಿವೆಟ್ ಮಳೆಗಳು ಪೌನ್ 1ಕ್ಕೆ	30 ಪೌನ್
1ರಿಂದ 4 ಅಂಗುಲದ ವರಿಗಿನ ಹಿತ್ತಾಳೆ ಮತ್ತು ಕಬ್ಬಿಣದ ಕೀಲುಗಳು ದರ ಜೋಡಿ 1ಕ್ಕೆ	250 ಜೋಡಿ
ರಖಂವಾರ್ ಹಿತ್ತಾಳೆ, ಕಬ್ಬಿಣ ಮತ್ತು ತಾಂಬ್ರದ ತಂತಿ ಪೌನ್ 1ಕ್ಕೆ	50 ಪೌನ್
ಸುಣ್ಣ ಸೇರು 1ಕ್ಕೆ	450 ಸೇರು
40ನೆ ನಂಬರ್ ಕೆಂಪುಕಟ್ಟು ನೂಲು 5 ಪೌನಿನ ಕಟ್ಟು 1ಕ್ಕೆ	125 ಪೌನ್
ಬೇವು ಕಿಂಬಿಗಳು ದರ ಪೌನ್ 1ಕ್ಕೆ	150 ಪೌನ್

ಜಿನಸು.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ
ದರಾಗಳಿಗೆ ಹಾಕತಕ್ಕ ಹಿತ್ತಾಳೆ ಬೀಗಗಳು 2ರಿಂದ 4 ಅಂಗುಲದ ವರಿವಿಗೆ 1 ರಿಂದ 4 ಲಿವರ್ ಇರತಕ್ಕದ್ದು ದರ ಬೀಗ 1ಕ್ಕೆ.	100
ಡಿಟೋ ಡಿಟೋ ಕಬ್ಬಿಣದ್ದು ಡಿಟೋ ಡಿಟೋ ಡಿಟೋ ...	50
ಪೆಟ್ಟಿಗೆಗೆ ಹಾಕತಕ್ಕ ಹಿತ್ತಾಳೆ ಬೀಗಗಳು 2 ರಿಂದ 4 ಅಂಗುಲದ ವರಿವಿಗೆ 1 ರಿಂದ 4 ಲಿವರ ಇರತಕ್ಕದ್ದು ದರ ಬೀಗ 1ಕ್ಕೆ.	25
ಡಿಟೋ ಕಬ್ಬಿಣದ್ದು ಡಿಟೋ ಡಿಟೋ ಡಿಟೋ ...	25
ಆಲ್ಮೈರಾಗಳಿಗೆ ಹಾಕತಕ್ಕದ್ದು ಹಿತ್ತಾಳೆ ಬೀಗಗಳು ಡಿಟೋ ಡಿಟೋ ..	25
ಡಿಟೋ ಕಬ್ಬಿಣದ್ದು ಡಿಟೋ ಡಿಟೋ ...	25
ದಾಮರ್ ಪೌಂ 1ಕ್ಕೆ	10 ಪೌಂ
ಬೀರುಗಳಿಗೆ ಹಾಕತಕ್ಕ ಕನ್ನಡಿಗಳು 18 ಅಂಗುಲ × 14 ಅಂಗುಲ ವುಳ್ಳವುಗಳು ಮತ್ತು 12 ಅಂಗುಲ × 10 ಅಂಗುಲ ವುಳ್ಳವುಗಳು ಕನ್ನಡಿ 1ಕ್ಕೆ.	50 ಕನ್ನಡಿಗಳು
ಹಿತ್ತಾಳೆ ಮತ್ತು ಕಬ್ಬಿಣದ ತಾರಾಳಗಳು 2ರಿಂದ 4 ಅಂಗುಲಗಳ ವರಿವಿಗೆ ..	100
ಲಪ್ಪ ಪೌಂ 1ಕ್ಕೆ	50 ಪೌಂ
2ನೆ ತರಹ ಬಿಳಿ ಜತ್ತ (ನಾಟ ಚೆತ್ತ) 25 ಪೌನಿನ ಮಣ 1ಕ್ಕೆ	100 ಪೌಂ
ಹಸರು ಬಣ್ಣದ 40ನೆ ನಂಬರು ನೂಲು ಐದುಪವನಿನ ಕಟ್ಟು 1ಕ್ಕೆ	10 ಕಟ್ಟುಗಳು.
ಹಳದಿ ಬಣ್ಣದ 40ನೆ ನಂಬರು ನೂಲು ಡಿಟೋ	10 ಡಿಟೋ
ಬಣ್ಣಗಳು.	
ಕೆಂಪು 1 ಪೌಂ ಟಿನ್ನಗಳು ದರ ಟಿನ್ 1ಕ್ಕೆ	50 ಟಿನ್ನಗಳು
ಕಿತ್ತಳೆ ಡಿಟೋ ... ಡಿಟೋ	30 ,,
ಕುಸುಂಬ ಡಿಟೋ ಡಿಟೋ	50 ,,
ಹಳದಿ ಡಿಟೋ ಡಿಟೋ	25 ,,
ಗ್ರೀನ್ (ಹಸರು) ಡಿಟೋ ಡಿಟೋ	25 ,,
ಮೆಜೆಂಟ ಡಿಟೋ ಡಿಟೋ	20 ,,
ನಾಫರ್ಮಾನಿ ಡಿಟೋ ಡಿಟೋ	20 ,,
ಬ್ಲ್ಯೂ (ನೀಲಿ) ಡಿಟೋ ಡಿಟೋ	15 ,,
ನಂದಿ ಮರ ಸಲೆ ಅಡಿ 1ಕ್ಕೆ	500 ಅಡಿಗಳು
ವೇಲೂರು ಅರಗು 25 ಪೌನಿನ ಮಣ 1ಕ್ಕೆ	100 ಪೌಂ

N. B.—ಜೈಲ್ ಮ್ಯಾನುಫ್ಯಾಕ್ಚರಿಗೆ ಬೇಕಾಗುವ ಇನ್ನೂ ಇತರ ಸಾಮಾನುಗಳು ಸೂಪರಿಂಟೆಂಡೆಂಟುಗವರು ಅಪೇಕ್ಷಿಸಿದಲ್ಲಿ ಬಾಜಾರಿನಲ್ಲಿ ಮಾರುವ ದರದ ಮೇರಿಗೆ ಕಂಟ್ರಾಕ್ಟುದಾರನು ಸರಬರಾಯಿ ಮಾಡತಕ್ಕದ್ದು.

ಪಿ. ಎಸ್. ಅಚ್ಯುತರಾವ್,
ಸೂಪರಿಂಟೆಂಡೆಂಟ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರು, ತಾರೀಖು 13ನೆ ಡಿಸೆಂಬರ್ 1909.

ಪ್ರತಿ ಸಂವತ್ಸರದಲ್ಲೂ ನಡಿಯತಕ್ಕ ಮಾರ್ಕಟ್ ಷೋ
ಮತ್ತು
ಕೈಗಾರಿಕೆ ವಸ್ತುಪ್ರದರ್ಶನ 1910ನೆ ಇಸವಿ.

ಸನ್ 1910ನೆ ಇಸವಿ ಜನವರಿ ತಿಂಗಳು 13ನೆ ತಾರೀಖು ಗುರುವಾರದ ದಿನ ಜನೋಪಕಾರಿ ಮಿ|| ದೊಡ್ಡಣ್ಣ ಶೆಟ್ಟರವರ ಸ್ಕೂಲ್ ಕಟ್ಟಡದಲ್ಲಿ ನಡಿಯುವ ಸಿಟಿ ಮಾರ್ಕಟ್ ಷೋ ಪೋಟಾಪೋಟಿಯ ಬಗ್ಗೆ ಕೊಡಲ್ಪಡುವ ಇನಾಂಗಳ ಪಟ್ಟಿಯು ಸಕಲ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

1ನೆ ತರಗತಿ.—ನೇಟಿವ್ ತರ್ಕಾರಿಗಳು.

			ರೂ.
1	ನಾನಾವಿಧ ತರ್ಕಾರಿಗಳುಳ್ಳ ಉತ್ತಮವಾದ ತರ್ಕಾರಿ ಅಂಗಡಿಗೆ	....	10
2	ಡಿಟೋ ... 2ನೆ ತರಹೆ	....	6
3	ಡಿಟೋ .... 3ನೆ ತರಹೆ	....	4
4	ಬೆಂಡೇಕಾಯಿ ... ಉತ್ತಮವಾದ ಮಂಕರಿಗೆ	....	3
5	ನೆಲ್ಲವರೇಕಾಯಿ ... ಡಿಟೋ	....	3
6	ಅವರೇಕಾಯಿ ... ಡಿಟೋ	....	3

1ನೆ ತರಗತಿ—ನೇಟಿವ್ ತರಕಾರಿಗಳು.

			ರೂ.
7.	ಗೋರೀಕಾಯಿ	ಉತ್ತಮವಾದ ಮಂಕರೀಗೆ.	2
8.	ಹುರಳೀಕಾಯಿ	ಡಿಟ್ಟೋ	3
9.	ಹಾಗಲಕಾಯಿ	ಡಿಟ್ಟೋ	3
10.	ಪಡವಲಕಾಯಿ	ಡಿಟ್ಟೋ	3
11.	ಸೌತೇಕಾಯಿ	ಡಿಟ್ಟೋ	3
12.	ಬದನೇಕಾಯಿ	ಡಿಟ್ಟೋ	3
13.	ಬೂದಕುಂಬಳಕಾಯಿ	ಡಿಟ್ಟೋ	3
14.	ಕುಂಬಳಕಾಯಿ	ಡಿಟ್ಟೋ	3
15.	ತೊಗರೀಕಾಯಿ	ಡಿಟ್ಟೋ	3
16.	ಹಸೀಮೆಣಸಿನಕಾಯಿ	ಡಿಟ್ಟೋ	2
17.	ಬಾಳೇಕಾಯಿ	ಡಿಟ್ಟೋ	3
18.	ಉರಳಗಡ್ಡೆ	ಡಿಟ್ಟೋ	8
19.	ಡಿಟ್ಟೋ	2ನೆ ತರಹೆ	6
20.	ಡಿಟ್ಟೋ	3ನೆ ತರಹೆ	4
21.	ಗೆಣಸುಗಡ್ಡೆ	ಉತ್ತಮವಾದ ಮಂಕರೀಗೆ	3
22.	ಮುಲ್ಲಂಗಿ	ಡಿಟ್ಟೋ	2
23.	ಮೆಂತ್ಯಸೊಪ್ಪು	ಡಿಟ್ಟೋ	2
24.	ಈರುಳ್ಳಿ	ಡಿಟ್ಟೋ	3
25.	ಕೊತ್ತುಂಬರಿ ಸೊಪ್ಪು	ಡಿಟ್ಟೋ	2
26.	ಕೋಸುಗಡ್ಡೆ (ಕ್ಯಾಬೇಜ್)	ಉತ್ತಮ ತರಹೆ	4
27.	ಡಿಟ್ಟೋ	2ನೆ ತರಹೆ	2
28.	ಕಾಲೀಫ್ಲವರ್	ಉತ್ತಮ ತರಹೆ	4
29.	ಡಿಟ್ಟೋ	2ನೆ ತರಹೆ	2
30.	ಕಬ್ಬು	ಉತ್ತಮ ತರಹೆ	5
31.	ಡಿಟ್ಟೋ	2ನೆ ತರಹೆ	3
32.	ಔಷಧಸೊಪ್ಪು	ಉತ್ತಮವಾದ ಮಂಕರೀಗೆ	5
33.	ಡಿಟ್ಟೋ	2ನೆ ತರಹೆ	3
34.	ಆರು ವಿಧಗಳಿಗೆ ಕಮ್ಮಿ ಇಲ್ಲದಂಥ ವಿಶೇಷವಾದ ಉತ್ತಮ ತರಹೆ ಇಂಗ್ಲಿಷ್ ತರಕಾರಿ ಸಮುದಾಯಕ್ಕೆ.		6
35.	ಡಿಟ್ಟೋ ಡಿಟ್ಟೋ	2ನೆ ತರಹೆ	4
		ಜುಮ್ಲಾ	128

2ನೆ ತರಗತಿ—ಹಂಣುಗಳು.

1.	ಸೇವು	ಉತ್ತಮವಾದ ಮಂಕರೀಗೆ	10
2.	ಡಿಟ್ಟೋ	2ನೆ ತರಹೆ	8
3.	ಪೀಚಸ್	ಉತ್ತಮವಾದ ಮಂಕರೀಗೆ	5
4.	ಡಿಟ್ಟೋ	2ನೆ ತರಹೆ.	3
5.	ರಾಸ್‌ಬೆರಿ	ಉತ್ತಮವಾದ ಮಂಕರೀಗೆ	3
6.	ಅಂಜೂರ್	ಡಿಟ್ಟೋ	5
7.	ಡಿಟ್ಟೋ	2ನೆ ತರಹೆ	2
8.	ಸ್ಟ್ರಾಬೆರಿ	ಉತ್ತಮವಾದ ಮಂಕರೀಗೆ	3
9.	ದ್ರಾಕ್ಷಿಹಂಣು	ಡಿಟ್ಟೋ (2 ವಿಧ ಪ್ರತಿ ಒಂದಕ್ಕೆ 4—0—0 ಯಂತೆ).	8
10.	ಕಿತ್ತಲೆಹಂಣು	ಡಿಟ್ಟೋ	4
11.	ಡಿಟ್ಟೋ	2ನೆ ತರಹೆ ಕಂಟ್ರಿ	2
12.	ಬಾಳೆಹಂಣು (ರಸಬಾಳೆ)	ಉತ್ತಮವಾದ ಮಂಕರೀಗೆ	4
13.	ಡಿಟ್ಟೋ (ರಾಜಬಾಳೆ)	ಡಿಟ್ಟೋ	3

2ನೆ ತರಗತಿ—ಹಣ್ಣುಗಳು.

			ರೂ.
14	ಸೀಬೆಹಣ್ಣು	.... ಉತ್ತಮವಾದ ಮಂಕರೀಗೆ	... 2
15	ದಾಳಿಂಬರೆಹಣ್ಣು	... ಡಿಟ್ಟೋ	... 3
16	ನಿಂಬೇಹಣ್ಣು	... ಡಿಟ್ಟೋ	 2
17	ಎಲ್ಲಾ ತರಹೆ ಹಣ್ಣುಗಳ	... ಉತ್ತಮ ತರಹೆ ಸಮುದಾಯಕ್ಕೆ	... 7
18	ಡಿಟ್ಟೋ	.... 2ನೆ ತರಹೆ ಡಿಟ್ಟೋ	 5
		ಜುಮ್ಲಾ	... 79

3ನೆ ತರಗತಿ—ಮಾಂಸದ ಅಂಗಡಿ.

1	ಉತ್ತಮವಾದ	... ಮಾಂಸಕ್ಕೆ	... 12
2	2ನೆ ತರಹೆ	.... ಡಿಟ್ಟೋ	... 10
3	3ನೆ ತರಹೆ	.... ಡಿಟ್ಟೋ	... 8
		ಜುಮ್ಲಾ	 30

4ನೆ ತರಗತಿ—ಕೋಳಿಗಳು.

1	ಉತ್ತಮವಾದ	... ಕೋಳಿಗಳಿಗೆ	... 5
2	ಡಿಟ್ಟೋ	... 2ನೆ ತರಹೆ	 4
		ಜುಮ್ಲಾ	... 9

5ನೆ ತರಗತಿ—ಮೀನು.

1	ಉತ್ತಮವಾದ ಸೀನೀರಿನ ಮೀನಿಗೆ ...	....	... 4

6ನೆ ತರಗತಿ—ಮೊಟ್ಟೆಗಳು.

1	ಮೊಟ್ಟೆ ಗೂಡುಗಳಿಗೆ ಬಂದು ದರ್ಜೆಗೆ ಕಮ್ಮಿ ಇಲ್ಲದೆ ಇರುವದಕ್ಕೆ	...	... 3
2	2ನೆ ತರಹೆ	ಡಿಟ್ಟೋ ...	... 2
		ಜುಮ್ಲಾ	... 5

7ನೆ ತರಗತಿ.

1	ಉತ್ತಮವಾದ ಹೂವಿನ ಬೊಕೆಗೆ	...	... 3
2	ಉತ್ತಮವಾದ ಹೂವಿನ ಹಾರಕ್ಕೆ	...	... 5
		ಜುಮ್ಲಾ	... 8

8ನೆ ತರಗತಿ.

1	ಉತ್ತಮವಾದ ಮಿಠಾಯಿ ಅಂಗಡಿಗೆ	....	... 5
2	2ನೆ ತರಹೆ ಡಿಟ್ಟೋ	....	... 3
		ಜುಮ್ಲಾ	 8

9ನೆ ತರಗತಿ.

1	ಉತ್ತಮವಾದ ಊದುಬಡ್ಡಿಗೆ	....	 5
2	2ನೆ ತರಹೆ ಡಿಟ್ಟೋ	... .	 3
		ಜುಮ್ಲಾ	 8

10ನೆ ತರಗತಿ.

1	ಉತ್ತಮ ತರಹೆ ಜರಿ ಮತ್ತು ರೇಷ್ಮೆ ಬಟ್ಟೆಗಳು ಬೆಂಗಳೂರಿನಲ್ಲಿ ತಯಾರ್ಮಾಡಲ್ಪಟ್ಟದ್ದು		 10
2	2ನೆ ತರಹೆ	ಡಿಟ್ಟೋ ಡಿಟ್ಟೋ	 5
		ಜುಮ್ಲಾ	 15
		ಒಟ್ಟು ಜುಮ್ಲಾ	 294

ವಿಶೇಷವಾದ ಇನಾಮುಗಳು.

ಮಾರ್ಕೆಟ್ಟಿಗೋಸ್ಕರ ಬೆಳೆಯುವ ಪದಾರ್ಥಗಳಲ್ಲಿ ಅಪೂರ್ವವಾದ ಅಥವಾ ವಿಜಾತೀಯವಾದ ತರಹೆಗಳಿಗೂ ಮತ್ತು ಕೈಗಾರಿಕೆ ವಸ್ತುಗಳಿಗೂ ವಿಶೇಷವಾದ ಇನಾಂಗಳು ಕೊಡುವುದಕ್ಕೆ ಕಮಿಟಿಯವರು ಸಿದ್ಧರಾಗಿರುತ್ತಾರೆ.

ಆಚರಿಸಬೇಕಾದ ಕ್ರಮಗಳು.

ಅಂಗಡಿಗಳನ್ನು ಇಡಿಸಲು ಕೆಲವು ಏರ್ಪಾಡುಗಳನ್ನು ಮುಂದಾಗಿಯೇ ಮಾಡಬೇಕಾಗಿರುವದ್ದರಿಂದ ಸಾಮಾನು ತರಲು ಇಷ್ಟವಿರುವವರು ತಾವು ತರತಕ್ಕ ಸಾಮಾನುಗಳನ್ನು ಮತ್ತು ತಾವು ಪೋಟಾಪೋಟಿ ಮಾಡತಕ್ಕ ಬಹುಮಾನಗಳನ್ನು ಸಹ ಕೆಳಗೆ ರುಜು ಮಾಡಿರುವವರಿಗೆ ಪ್ರದರ್ಶನ ದಿವಸಕ್ಕಿಂತ ನಾಲ್ಕು ದಿವಸ ಮುಂಚಿತವಾಗಿಯೆ ತಿಳಿಸಬೇಕು.

2. ಪೋಟಾಪೋಟಿ ಮಾಡತಕ್ಕವರು ತಮ್ಮ ಸ್ವಂತ ಸಾಮಾನುಗಳನ್ನು ವಿಂಗಡಿಸಿಕೊಳ್ಳಬೇಕು ಮತ್ತು 1910ನೆ ಇಸವಿ ಜನವರಿ 12ನೆ ತಾರೀಖಿನ ಮಧ್ಯರಾತ್ರಿಯೊಳಗಾಗಿ ಅವುಗಳನ್ನು ಗೊತ್ತುಮಾಡಿದ ಸ್ಥಳದಲ್ಲಿ ಇಡಬೇಕು.

3. ಯಾವ ಬಹುಮಾನ ದೊರಿಯಬೇಕಾದರೂ ಅದಕ್ಕೆ ಪೋಟಾಪೋಟಿ ಮಾಡುವವರು ಕೊನೇಪಕ್ಷ ಇಬ್ಬರಾದರು ಇರಬೇಕು. ಇಲ್ಲದಿದ್ದರೆ ಅಂಥಾ ಬಹುಮಾನ ದೊರಿಯಲಾರದು. ಆದರೆ ಅತ್ಯಂತ ಉತ್ತಮವಾದ ಸಾಮಾನುಗಳೆಂದು ಜಡಿಗಳಿಗೆ ತೋರಿದ ಸಂದರ್ಭಗಳಲ್ಲಿ ಅವರು ತಮ್ಮ ಸ್ವಂತ ವಿವೇಚನೆಯಿಂದ ಬಹುಮಾನಗಳನ್ನು ಕೊಡುವರು.

4. ಪ್ರದರ್ಶನಶಾಲೆಗೆ ತರತಕ್ಕ ಸಾಮಾನುಗಳೆಲ್ಲಾ ತರತಕ್ಕವರಿಂದ ಸ್ವಂತವಾಗಿ ತಯಾರ್ಮಾಡಲ್ಪಟ್ಟು ಅಥವಾ ಬೆಳದವುಗಳಾಗಿರಬೇಕು. ಮತ್ತು ಬೆಂಗಳೂರು ಪ್ರಾಂತ್ಯ ಬೆಳೆದವುಗಳಾಗಿರಬೇಕು. ಮೇಲೆ ನಮೂದಿಸಿರುವ ಷರತ್ತುಗಳ ಸರಿಯಾದ ರುಜುವಾತು ಕೊಡುವವರಿವಿಗೂ ಜಡ್ಜಿಗಳು ಯಾವ ಬಹುಮಾನವನ್ನಾದರೂ ಕೊಡದೇ ನಿಲ್ಲಿಸಬಹುದು.

5. ಸಾಮಾನು ತರತಕ್ಕವರುಗಳಿಗೆ ಮಾಫೀ ಟಿಕೆಟ್ಟುಗಳು ಸಾಕಾದಷ್ಟು ವಿಚಾರಾನಂತರ ಕೊಡಲ್ಪಡುವವು. ಮತ್ತು 12ನೆ ತಾರೀಖಿನ ಮಧ್ಯಾಹ್ನಾತ್ಪರದಲ್ಲಿ ಅಂಥಾ ಟಿಕೆಟ್ಟುಗಳು ದೊರಿಯಲಾರವು.

6. ತರಲ್ಪಟ್ಟ ಸಾಮಾನುಗಳು ಆಯಾಯ ಬಹುಮಾನಕ್ಕೆ ನಿಷ್ಕರ್ಷೆಯಾಗಿರುವ ಮೊಬಲಗನ್ನ ಪೂರ್ತಿಯಾಗಿ ಪಡೆಯಲು ಸಾಕಾದಷ್ಟು ಉತ್ತಮವಾದವುಗಳಲ್ಲವೆಂದು ಜಡ್ಜಿಯವರು ಅಭಿಪ್ರಾಯಪಟ್ಟರೆ ಅಂಥಾ ಜಡ್ಜಿಗಳು ಆಯಾ ಬಹುಮಾನದ ಮೊಬಲಗನ್ನು ಕಮ್ಮಿ ಮಾಡಬಹುದು ಅಥವಾ ಕೊಡದೇನೆ ನಿಲ್ಲಿಸಲೂಬಹುದು.

7. ಪ್ರದರ್ಶನವು ಅದೇ ದಿವಸ ಸಾಯಂಕಾಲ 6 ಘಂಟೆಗೆ ಮುಗಿಯುವದು. ನಂತರ ಸಾಮಾನು ತಂದಿರುವವರು ತಮ್ಮ ಸಾಮಾನುಗಳನ್ನು ತೆಗದುಕೊಂಡು ಹೋಗಬಹುದು.

8. ಪೋಟಾಪೋಟೀಗೆ ಕಳುಹಿಸಲ್ಪಟ್ಟ ಸಾಮಾನುಗಳು ಪ್ರದರ್ಶನದ ದಿವಸ ಪ್ರಾತಃಕಾಲ 10 ಘಂಟೆಗಿಂತ ಮುಂಚೆ ಮಾರಲ್ಪಡಕೂಡದು.

ಬಿ. ಜೆ. ಕೊಮಾರಸ್ವಾಮಿ ನಾಯಿಕ್,
ಪ್ರೆಸಿಡೆಂಟ್, ಸಿಟಿ ಮ್ಯುನಿಸಿಪಲ್ ಕೌನ್ಸಿಲ್.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಖಾಯಿಷ್ ಆದ್ದು [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ|| 14, ಸನ್ 1909.

IIIನೆ ಭಾಗ.

ಲೆಜಿಸ್ಲೆಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ಮೈಸೂರು ನ್ಯಾಯವಿಧಾಯಕ ಸಭೆಯ ನಡವಳಿಕೆಗಳ ಸಾರಾಂಶ.

ಸನ್ 1908ನೆ ಇಸವಿಯ ಡಿಸೆಂಬರ್ 16ನೆ ಬುಧವಾರದ ದಿನ ಮಧ್ಯಾಹ್ನಾತ್ಪರ 3 ಘಂಟೆಯ ಸಮಯದಲ್ಲಿ ಬೆಂಗಳೂರು ಪಬ್ಲಿಕ್ ಆಫೀಸೆಸ್ ಯಾ ಅಠಾರಾ ಕಛೇರಿಯಲ್ಲಿರುವ ಸಭಾ ಮಂದಿರದಲ್ಲಿ ಸಭೆಯು ಸೇರಿತ್ತು.

ಹಾಜರಿದ್ದವರು.

ಶ್ರೀಮಾನ್ ವಿ. ಪಿ. ಮಾಧವರಾಯರವರು, ಸಿ. ಐ. ಇ., ದಿವಾನರವರು, (ಸಭಾಧ್ಯಕ್ಷರು).

ಉದ್ಯೋಗಪ್ರಯುಕ್ತ ಮೆಂಬರುಗಳಾದವರು.

ಶ್ರೀಮಾನ್ ಟಿ. ಆನಂದರಾಯರವರು, ಬಿ. ಎ., (ಮೊದಲನೆ ಕೌನ್ಸಿಲರವರು).
,, ಕೆ. ಪಿ. ಪುಟ್ಟಣ್ಣ ಶೆಟ್ಟರವರು, (ಎರಡನೆ ಕೌನ್ಸಿಲರವರು).

ಹೆಚ್ಚಾಗಿ ಸೇರಿಸಿಕೊಳ್ಳಲ್ಪಟ್ಟ ಮೆಂಬರುಗಳು.

ಸರ್ಕಾರಿ ಉದ್ಯೋಗಸ್ಥರಾದವರು.

ಶ್ರೀಮಾನ್ ರಾಜಕಾರ್ಯ ಪ್ರವೀಣ ಎ. ರಂಗಸ್ವಾಮಿ ಅಯ್ಯಂಗಾರ್ರವರು, ಬಿ. ಎ., ಬಿ. ಎಲ್.
,, ರಾವ್ ಬಹದ್ದೂರ್ ಎಂ. ಮುತ್ತಣ್ಣನವರು.
,, ಎಸ್. ನಾರಾಯಣರಾಯರವರು.
,, ಕೆ. ಎಸ್. ಚಂದ್ರಶೇಖರ ಐಯರವರು, ಬಿ. ಎ., ಬಿ. ಎಲ್.

ಸರ್ಕಾರಿ ಉದ್ಯೋಗಸ್ಥರಲ್ಲದವರು.

ಶ್ರೀಮಾನ್ ರಾಜಮಂತ್ರ ಪ್ರವೀಣ ಸಿ. ಶ್ರೀನಿವಾಸಯ್ಯಂಗಾರ್ರವರು.
,, ವಿ. ಎನ್. ನರಸಿಂಹಯ್ಯಂಗಾರ್ರವರು.
,, ಎಂ. ಸಿ. ರಂಗಯ್ಯಂಗಾರ್ರವರು, ಬಿ. ಎ.
,, ಬಿ. ನಾಗಪ್ಪನವರು, ಬ್ಯಾರಿಸ್ಟರ್ ಅಟ್-ಲಾ.
,, ಸೈಯದ್ ಅಮೀರ್ ಹಸನ್‌ರವರು.

ಶ್ರೀಮಾನ್ ಸಿ. ಎಸ್. ಬಾಲಸುಂದರಂ ಐಯ್ಯರವರು, ಬಿ. ಎ. (ಸೆಕ್ರೆಟೆರಿ).

ಗೈರುಹಾಜರಾದವರು.

ಸರ್ಕಾರಿ.

ಶ್ರೀಮಾನ್ ಎಚ್. ಜೆ. ಭಾಭಾ ಯವರು, ಎಂ. ಎ.
,, ಎಂ. ಕಾಂತರಾಜ ಅರಸಿನವರು, ಬಿ. ಎ.

ಗ್ರಾಮ ನೌಕರಿ ಬಿಲ್ಲನ್ನು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರು 1908ನೆ ಇಸವಿಯ ಅಕ್ಟೋಬರು 16ನೆ ತಾರೀಖಿನಲ್ಲಿ ಮಂಜೂರ್ಮಾಡಿದರೆಂದು ಸೆಕ್ರೆಟರಿಯವರು ಸಭೆಗೆ ತಿಳಿಸಿದರು.

ಮೈಸೂರು ಸಂಸ್ಥಾನದಲ್ಲಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯ ವಿಲೇವಾರಿ ವಿಷಯದಲ್ಲಿ ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವುಂಟೆಂದು ಅಂಗೀಕರಿಸುವ ಬಗ್ಗೆ ಹುಟ್ಟಿದ ಬಿಲ್ಲು.

ಮಿ|| ಕೆ. ಎಸ್. ಚಂದ್ರಶೇಖರ ಐಯರವರು ಮೇಲ್ಕಂಡ ಬಿಲ್ಲನ್ನು ಪ್ರಸ್ತಾಪಿಸುವುದಕ್ಕೆ ಅಪ್ಪಣೆ ಕೇಳುವಲ್ಲಿ ಹೇಳಿದುದೇನೆಂದರೆ :—

ಮೈಸೂರು ಸಂಸ್ಥಾನದಲ್ಲಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯನ್ನು ವಿಲೆಮಾಡುವುದಕ್ಕೆ ಮದರಾಸಿನ ಅಡ್ಮಿನಿಸ್ಟ್ರೇಟರ ಜನರಲ್‌ರವರಿಗೆ ಅಧಿಕಾರವುಂಟೆಂದು ಸಂಪೂರ್ಣವಾಗಿ ಅಂಗೀಕರಿಸುವ ಬಗ್ಗೆ ಒಂದು ಬಿಲ್ ಯಾನೆ ಮಸೂದೆ ಕಾನೂನನ್ನು ಪ್ರಸ್ತಾಪಿಸಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಈ ಬಿಲ್ಲನ್ನು ಕುರಿತು ಮಾತನಾಡುವುದಕ್ಕೆ ಮೊದಲು ಮೇಲ್ಕಂಡ ವಿಷಯದಲ್ಲಿ ಮೈಸೂರು ಸರ್ಕಾರದವರಿಗೂ ಬ್ರಿಟಿಷ್ ಸರ್ಕಾರದವರಿಗೂ 1902ನೆ ಇಸವಿಯ ಲಾಗಾಯಿತು ಚರ್ಚೆ ನಡೆಯುತ್ತಿದ್ದು ಈಚೆಗೆ ತೀರ್ಮಾನವಾಗಿದೆಯೆಂದು ತಿಳಿಸಬೇಕಾಗಿದೆ. ಈ ತೀರ್ಮಾನವನ್ನು ಜಾರಿಗೆ ತರಬೇಕೆಂಬುವುದೇ ಈ ಬಿಲ್ಲಿನ ಉದ್ದೇಶವು. ಆದುದರಿಂದ ಈ ಕಾನೂನು ಸ್ವಲ್ಪ ಹೆಚ್ಚು ಕಡಮೆ ಔಪಚಾರಿಕವೇ ಹೊರತು ಮತ್ತೆ ಬೇರೆ ಅಲ್ಲ.

ಮುಂದೆ ಈ ಬಿಲ್ಲಿನ ಉದ್ದೇಶವನ್ನು ಕುರಿತು ಮಾತನಾಡುತ್ತೇವೆ. 1874ನೆ ಇಸವಿಯ 2ನೆ ಆಕ್ಟಾದ ಅಡ್ಮಿನಿಸ್ಟ್ರೇಟರ್ ಜನರಲ್ ಆಕ್ಟು ಬ್ರಿಟಿಷ್ ಇಂಡಿಯಾ ದೇಶಕ್ಕೆಲ್ಲಾ ಅನ್ವಯಿಸುತ್ತದೆಯಲ್ಲದೆ ಶ್ರೀಮದಿಂಡಿಯಾ ಚಕ್ರವರ್ತಿಯವರ ಬ್ರಿಟಿಷ್ ಪ್ರಜೆಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಶ್ರೀಮದಿಂಡಿಯಾ ಚಕ್ರವರ್ತಿಯವರೊಡನೆ ಸ್ನೇಹಭಾವದಲ್ಲಿರುವ ಇಂಡಿಯಾ ದೇಶದ ಅರಸರುಗಳ ಮತ್ತು ಸಂಸ್ಥಾನಾಧಿಪತಿಗಳ ರಾಜ್ಯಗಳಿಗೂ ಅನ್ವಯಿಸುತ್ತದೆ. "ಮದರಾಸು ಆಧಿಪತ್ಯ" ಎಂಬುವುದರ ಅರ್ಥವನ್ನು ವಿವರಿಸುವಾಗ, ಆಡಳಿತದ ಅನುಕೂಲತೆಗಾಗಿ, ಮೈಸೂರು ಸಂಸ್ಥಾನವನ್ನೂ ಸದರೀ ಆಧಿಪತ್ಯದಲ್ಲಿ ಸೇರಿಸಿ ಇದೆ; ಮತ್ತು ಮೃತಪಟ್ಟ ಒಬ್ಬ ಬ್ರಿಟಿಷ್ ಪ್ರಜೆಯ ಆಸ್ತಿಯನ್ನು ಕುರಿತು ಮದರಾಸು ಆಧಿಪತ್ಯದ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಮದರಾಸು ಹೈಕೋರ್ಟಿನವರು ಕೊಡುವ ಪ್ರೊಬೇಟುಗಳೂ, ಅಡ್ಮಿನಿಸ್ಟ್ರೇಷನ್ ಲೆಟರುಗಳೂ, ಮೈಸೂರು ಸಂಸ್ಥಾನ ದೇಖೀಲು ಬಿಟ್ಟು ಮದರಾಸು ಆಧಿಪತ್ಯದೊಳಗಾಗಿ ಸದರೀ ಬ್ರಿಟಿಷ್ ಪ್ರಜೆಗೆ ಇರುವ ಎಲ್ಲಾ ಆಸ್ತಿಗೂ ಅನ್ವಯಿಸಬೇಕೆಂದು 23A ಪ್ರಕರಣದಲ್ಲಿ ವಿಧಿಸಿ ಇದೆ.

ಪರಂತು, ಈ ಸಂಸ್ಥಾನವನ್ನು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರಿಗೆ ವಹಿಸುವ ಬಗ್ಗೆ ಹುಟ್ಟಿದ ದಸ್ತಾವೇಜಿಗೆ ಒಂದು ಷಡ್ಯೂಲ್ ಪಟ್ಟಿಯನ್ನು ಲಗತ್ತು ಮಾಡಿ ಆ ಕಾಲದಲ್ಲಿ ಇಲ್ಲಿ ಜಾರಿಯಲ್ಲಿದ್ದ ಕಾನೂನುಗಳನ್ನೆಲ್ಲಾ ಸದರೀ ಪಟ್ಟಿಯಲ್ಲಿ ನಮೂದಿಸಲಾಯಿತಷ್ಟೆ. ಸದರೀ ಪಟ್ಟಿಯಲ್ಲಿ ಈ ಕಾನೂನು ನಮೂದಾಗಿಲ್ಲವಾದುದರಿಂದಲೂ, ಅಲ್ಲಿಂದೀಚೆಗೆ ಇದನ್ನು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರು ಮೈಸೂರು ಸೀಮೆಯಲ್ಲಿ ಜಾರಿಗೆ ತರಲಿಲ್ಲವಾದುದರಿಂದಲೂ ಸಹಾ ಈ ಕಾನೂನು ಈ ಸಂಸ್ಥಾನದಲ್ಲಿ ವಾಸಮಾಡುವ ಬ್ರಿಟಿಷ್ ಪ್ರಜೆಗಳಿಗೆ ಪ್ರತ್ಯೇಕವಾಗಿ ಅನ್ವಯಿಸಿದಾಗ್ಯೂ, ಸಂಸ್ಥಾನದ ಕಾನೂನಾಗಿ ಈ ವರೆಗೆ ಏರ್ಪಟ್ಟಿಲ್ಲ. ಆದುದರಿಂದ, ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಅಧಿಕಾರವನ್ನು ಅಂಗೀಕರಿಸಬೇಕೆಂಬುದಾಗಿ ಸ್ಥಳಿಕ ಕಾನೂನ್ ಮೂಲಕ ಮೈಸೂರು ಸಂಸ್ಥಾನದ ಕೋರ್ಟುಗಳಿಗೆ ಹೊಸದಾಗಿ ಅಧಿಕಾರ ಕೊಟ್ಟರೆ ಹೊರತು, ಮದರಾಸು ಹೈಕೋರ್ಟಿನವರು ಕೊಡುವ ಅಧಿಕಾರವೇ ಎಲ್ಲಾ ಸಂದರ್ಭಗಳಲ್ಲೂ ಸಾಕಾಗುತ್ತದೆಂದು ಮೇಲೆ ನಮೂದಿಸಿದ 23A ಪ್ರಕರಣದ ವಿಧಿಗಳಿಂದ ಸ್ಪಷ್ಟಪಡುವುದಿಲ್ಲ.

ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕಾನೂನ್ ಮೇರೆಗೆ ಇಲ್ಲಿಯೂ ಅಧಿಕಾರವುಂಟೆಂಬುವುದನ್ನು ಮೈಸೂರು ಸರ್ಕಾರದವರು ಸ್ವಲ್ಪ ಮಟ್ಟಿಗೆ ಅಂಗೀಕರಿಸಿರುವ ಸಂಗತಿಯು ಈ ಸಭೆಯ ಮೆಂಬರುಗಳಿಗೆ ತಿಳಿಯದೆ ಇರಲಾರದು. ಯಾಕೆಂದರೆ, ಮೃತಪಟ್ಟವನಿಗೆ ಯಾರಿಂದ ಸಾಲ ಬರಬೇಕೋ ಅವನ ಮೇಲೆ ಡಿಕ್ರಿಯನ್ನು ಕೊಡಬೇಕೆಂದಾಗಲೀ, ಅಥವಾ ಡಿಕ್ರಿಯನ್ನು ಅಥವಾ, ವಸೂಲಿಯ ಹುಕುಮನ್ನು ಜಾರಿ ಮಾಡಬೇಕೆಂದಾಗಲೀ ಕೋರುವ ಮನುಷ್ಯನಿಗೆ ಆ ರೀತಿ ಕೋರಲು ಹಕ್ಕುಂಟೆ ಎಂಬ ಬಗ್ಗೆ ಇತರ ಸಂಗತಿಗಳಿಲ್ಲದೆ, 1874ನೆ ಇಸವಿಯ ಅಡ್ಮಿನಿಸ್ಟ್ರೇಟರ್ ಜನರಲ್ ಆಕ್ಟಿನ 36ನೆ ಅಥವಾ 37ನೆ ಪ್ರಕರಣದ ಮೇರೆಗೆ ಕೊಡಲ್ಪಟ್ಟ ಸರ್ಟಫಿಕೇಟನ್ನು ಮೈಸೂರು ಸಂಸ್ಥಾನದ ಕೋರ್ಟಿನವರು ರುಜುವಾತಾಗಿ ಅಂಗೀಕರಿಸಬೇಕೆಂದು, 1901ನೆ ಇಸವಿಯ 7ನೆ ರೆಗ್ಯುಲೇಷನಾದ ಸಕ್ಸೆಷನ್ ಸರ್ಟಫಿಕೇಟ್ ರೆಗ್ಯುಲೇಷನಿನ 4ನೆ ಪ್ರಕರಣದ (ii)ನೆ ಕಲಮಿನಲ್ಲಿ ವಿಧಿಸಿ ಇದೆ.

ಮೇಲ್ಕಂಡ ಪ್ರಕಾರ ಸ್ವಲ್ಪ ಮಟ್ಟಿಗೆ ಅಂಗೀಕರಿಸಿರುವ ಅಧಿಕಾರವನ್ನೇ ಇನ್ನೂ ಚೆನ್ನಾಗಿ ಎಂದರೆ, (ಮದರಾಸು ಹೈಕೋರ್ಟಿನವರು ಕೊಡುವ ಪ್ರೊಬೇಟುಗಳು ಮತ್ತು ಅಡ್ಮಿನಿಸ್ಟ್ರೇಷನ್ ಲೆಟರುಗಳ ಪ್ರಕಾರ) ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ, ಈ ಸಂಸ್ಥಾನದಲ್ಲಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳಿಗೆ ಸಾಲ ಕೊಡಬೇಕಾದವರಿಂದಲೂ, ಸದರೀ ಪ್ರಜೆಗಳ ಸ್ವತ್ತನ್ನು ಇಟ್ಟುಕೊಂಡಿರುವವರಿಂದಲೂ, ಸದರೀ ಸಾಲವನ್ನೂ ಸ್ವತ್ತುಗಳನ್ನೂ ವಸೂಲ್ಮಾಡಿಕೊಳ್ಳಲು ಹಕ್ಕುಂಟೆಂದು ಅಂಗೀಕರಿಸಬೇಕೆಂಬದಾಗಿ ಈಗ ಉದ್ದೇಶಿಸೋಣಾಗಿದೆ. ಇದಕ್ಕಾಗಿ ಸದರೀ ಬ್ರಿಟಿಷ್ ಆಕ್ಟನ್ನೇ ಒಟ್ಟಾಗಿ ಈ ಸಂಸ್ಥಾನಕ್ಕೆ ಅನ್ವಯಿಸಬೇಕಾದ ಅವಶ್ಯಕವಿಲ್ಲ. 1905ನೆ ಇಸವಿಯ ಸೆಪ್ಟಂಬರು 15ನೆ ತಾರೀಖಿನಲ್ಲಿ ಹುಟ್ಟಿದ ಇಂಡಿಯಾ ಸರ್ಕಾರದ ಇಸ್ತಿಹಾರ್ನಾಮೆಯಲ್ಲಿ ಈ ಬಗ್ಗೆ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಯಾನೆ ದಂಡಿಗೆ ಏರ್ಪಡಿಸಲ್ಪಟ್ಟಿರುವ ನಿಬಂಧನೆಗಳ ಪ್ರಕಾರ ಒಂದು ಚಿಕ್ಕ ರೆಗ್ಯುಲೇಷನನ್ನು ಮಂಜೂರ್ಮಾಡಿದರೆ ಸಾಕಾಗಿರುತ್ತದೆ.

ಮೇಲೆ ಸೂಚಿಸಿರುವ ಮೇರೆಗೆ ಕಾನೂನನ್ನು ಏರ್ಪಡಿಸಿದಲ್ಲಿ ಈ ಸಂಸ್ಥಾನದ ಸ್ಟಾಂಪು ಹುಟ್ಟುವಳಿಯು ಸ್ವಲ್ಪವೂ ಕಮ್ಮಿಯಾಗುವುದಿಲ್ಲವೆಂತ ಸಭಿಕರು ದೃಢವಾಗಿ ನಂಬಬಹುದು. ಯಾಕೆಂದರೆ, ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕೊಡಲ್ಪಟ್ಟ ಪ್ರೊಬೇಟ್ ಅಥವಾ ಅಡ್ಮಿನಿಸ್ಟ್ರೇಷನ್ ಲೆಟರುಗಳ ಬಾಬತು 1870ನೆ ಇಸವಿಯ ಕೋರ್ಟು ರುಸುಂ ಆಕ್ಟಿನ 1ನೆ ಷೆಡ್ಯೂಲ್ 11ನೆ ಆರ್ಟಿಕಲ್ ಮೇರೆಗೆ ಫೀಜು ಪಾವತಿಯಾಗಬೇಕಷ್ಟೆ; ಈ ಪೈಕಿ, ಮೃತಪಟ್ಟ ಬ್ರಿಟಿಷ್ ಪ್ರಜೆಯ ಸ್ವತ್ತಿನಲ್ಲಿ ಯಾವ ಯಾವ ಸ್ವತ್ತು ಮೈಸೂರು ಸಂಸ್ಥಾನದಲ್ಲಿದೆಯೋ ಆ ಸ್ವತ್ತಿಗೆ ಸಂಬಂಧಪಟ್ಟ ಫೀಜೆಲ್ಲಾ ಬ್ರಿಟಿಷ್ ಖಜಾನೆಯಿಂದ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರಕ್ಕೆ ಪಾವತಿಯಾಗಬೇಕೆಂದು ತೀರ್ಮಾನವಾಗಿದೆ. ಪರಂತು, ಇದು ಆಯಾ ಸರ್ಕಾರದವರು ತಮ್ಮ ತಮ್ಮಲ್ಲಿ ಎಗ್ಜಿಕ್ಯೂಟಿವ್ ಹುಕುಂ ಮೂಲಕ ವ್ಯವಸ್ಥೆ ಮಾಡಿಕೊಳ್ಳತಕ್ಕ ವಿಷಯವಾಗಿರುವುದರಿಂದ ಈ ಬಗ್ಗೆ ಬಿಲ್ಲಿನಲ್ಲಿ ನಿಯಮವನ್ನೇರ್ಪಡಿಸುವುದಿಲ್ಲ.

ಇಷ್ಟು ಮಾತ್ರ ಹೇಳಿ ಸದರೀ ಬಿಲ್ಲನ್ನು ಸಭೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ರಾಜಮಂತ್ರ ಪ್ರವೀಣ ಮಿ॥ ಸಿ. ಶ್ರೀನಿವಾಸೈಯಂಗಾರ್ಯರು ಈ ವಿಜ್ಞಾಪನೆಯನ್ನು ಅನುಮೋದಿಸಿದರು.

ಇದನ್ನು ಕುರಿತು ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಎಲ್ಲರೂ ಅದನ್ನು ಅನುಮೋದಿಸಿದರು.

1903ನೆ ಇಸವಿಯ ಮೈಸೂರು ನಗರಾಭಿವೃದ್ಧಿಯ III ನೆ ನಂಬರ್ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿಮಾಡತಕ್ಕ ಬಗ್ಗೆ ಹುಟ್ಟಿದ ಬಿಲ್ಲು.

ಮಿ॥ ಟಿ. ಅನಂದರಾಯರವರು ಈ ಬಿಲ್ಲನ್ನು ಸಭೆಯಲ್ಲಿ ಓದಬೇಕೆಂದು ಹೇಳಿ ತಿಳಿಸಿದುದೇನೆಂದರೆ:—ಮೈಸೂರು ನಗರಾಭಿವೃದ್ಧಿಯ 1903ನೆ ಇಸವಿ III ನೆ ನಂಬರ್ ರೆಗ್ಯುಲೇಷನನ್ನು ಪುನಹಾ ತಿದ್ದುಪಡಿ ಮಾಡುವದಕ್ಕೆ ಒಂದು ಬಿಲ್ಲನ್ನು ಈ ಸಭೆಯಲ್ಲಿ ಪ್ರಸ್ತಾಪಿಸಬೇಕೆಂದು ಸಭೆಯವರು ಕಳೆದ ಮೀಟಿಂಗಿನಲ್ಲಿ ನಮಗೆ ಅಪ್ಪಣೆ ಕೊಟ್ಟರು.

ಕಳೆದ ಅಕ್ಟೋಬರ್ 31ನೆ ತಾರೀಖಿನ 121ನೆ ನಂಬರ್ ಇಸ್ತಿಹಾರ್ನಾಮೆಯೊಂದಿಗೆ ಸದರಿ ಬಿಲ್ ಛಾಪಿಸಲ್ಪಟ್ಟು ಪ್ರಕಟಿಸಲ್ಪಟ್ಟಿರುತ್ತದೆ; ಅಲ್ಲದೆ ಇದರ ಮುಖ್ಯ ಉದ್ದೇಶವನ್ನೂ ಅಭಿಪ್ರಾಯವನ್ನೂ ಸಹಾ ಮೊದಲೇ ನಾವು ವಿಶದವಾಗಿ ತಿಳಿಸಿರುವೆವು. ನ್ಯಾಯವಿಧಾಯಕ ಸಭೆಯ ಈ ಮೀಟಿಂಗಿನಲ್ಲಿ ಆ ಬಿಲ್ಲನ್ನು ಪ್ರಸ್ತಾಪಿಸುವುದಕ್ಕೂ ಓದುವುದಕ್ಕೂ ಸಹಾ ಸಭೆಯವರು ಅಪ್ಪಣೆ ಕೊಡಬೇಕೆಂದು ಕೋರುವೆವು.

ಹಾಲಿ ಉದ್ದೇಶದಲ್ಲಿರುವ ಕಾನೂನು ನಿರಾಕ್ಷೇಪಣೀಯವಾಗಿರುವುದರಿಂದಲೂ, ಈ ಬಿಲ್ಲಿನ ಪ್ರಕರಣಗಳನ್ನು ಜಾಗ್ರತೆಯಾಗಿ ಜಾರಿಗೆ ತರಬೇಕಾದುದು ಅವಶ್ಯಕವಾಗಿರುವದರಿಂದಲೂ ಈ ಬಿಲ್ಲನ್ನು 45ನೆ ನಿಬಂಧನೆಯ ಮೇರೆಗೆ ನಿಯುಕ್ತ ಸಮಾಜದವರಿಗೆ ಕಳುಹಿಸಬೇಕಾದ ಅವಶ್ಯಕವಿರುವುದಿಲ್ಲವೆಂದು ನಮಗೆ ತೋರುತ್ತದೆ.

ಮಿ॥ ಕೆ. ಎಸ್. ಚಂದ್ರಶೇಖರ ಅಯ್ಯರವರು ಈ ಸಲಹೆಯನ್ನು ಅನುಮೋದಿಸಿದರು.

ಅನಂತರ ಸೆಕ್ರೆಟರಿಯವರು ಈ ಬಿಲ್ಲನ್ನು ಓದಿದರು.

ಮಿ॥ ಎಂ. ಸಿ. ರಂಗೈಯಂಗಾರ್ಯರು ಈ ಸಲಹೆಯನ್ನು ಅನುಮೋದಿಸಿ ಹೇಳಿದುದೇನೆಂದರೆ,—

ಈ ಸಂದರ್ಭದಲ್ಲಿ, ಮೈಸೂರು ನಗರಾಭಿವೃದ್ಧಿಯ ಟ್ರಸ್ಟ್‌ಬೋರ್ಡ್ ಮೆಂಬರಾದ ನಾವು ಹೇಳುವುದೇನೆಂದರೆ; ಈ ಬಿಲ್ಲಿನಲ್ಲಿ ನಮೂದಾಗುವ ಮೇರೆಗೇನೆ ಟ್ರಸ್ಟು ರೆಗ್ಯುಲೇಷನನ್ನು ತಿದ್ದುಪಾಟು ಮಾಡಬೇಕೆಂದು ಟ್ರಸ್ಟು ಬೋರ್ಡಿನವರು ಸರ್ಕಾರದವರಿಗೆ ಶಿಫಾರ್ಸ್‌ಮಾಡಿ ಸುಮಾರು ಮೂರುವರುಷಗಳಮೇಲೆ ಆಯಿತು. ಅವಶ್ಯಕವಾದ ಕೆಲಸಗಳನ್ನು ನಡೆಸುವದಕ್ಕೆ ಮ್ಯುನಿಸಿಪಾಲಿಟಿಯವರಿಗೆ ಬೇಕಾದಷ್ಟು ಅಧಿಕಾರವಿರುತ್ತದೆಂತಲೂ, ಈ ಅಧಿಕಾರಗಳನ್ನು ಟ್ರಸ್ಟು ಬೋರ್ಡಿನವರಿಗೆ ವಹಿಸಿಕೊಡುವ ಅವಶ್ಯಕವಿಲ್ಲವೆಂತಲೂ ಆಗ್ಯೆ ತಿಳಿದುಕೊಂಡು ಇದ್ದರು. ಆದರೆ ಈ ಅಧಿಕಾರಗಳು ಬೋರ್ಡಿನವರಿಗೆ ಇಲ್ಲದೆ ಇದ್ದ ಪ್ರಯುಕ್ತ ಗತಿಸಿದ ಮೂರುವರುಷಗಳಲ್ಲಿ ಮಾಡಬಹುದಾಗಿ ಇದ್ದ ಅಭಿವೃದ್ಧಿಗೆ ಸಂಬಂಧಪಟ್ಟ ಬಹಳ ಕೆಲಸಗಳನ್ನು ಮಾಡದೆ ಬಿಟ್ಟುಬಿಡಬೇಕಾಯಿತು. ಈ ಕಾರಣಗಳಿಂದ ಪ್ರಸಕ್ತ ಬಿಲ್ಲಿನ ವಿಷಯದಲ್ಲಿ ಈಗಾಗಲೇ ಕಾಲ ವಿಳಂಬವಾಗಿರುತ್ತದೆ. ಇನ್ನು ಹೆಚ್ಚಾಗಿ ಕಾಲವಿಳಂಬಮಾಡಲಾಗದು. ಆದುದರಿಂದ ಈ ಸಲಹೆಯನ್ನು ನಾವು ಅನುಮೋದಿಸುತ್ತೇವೆ.

ಈ ಸಲಹೆಯನ್ನು ಸಭೆಯವರ ಅಭಿಪ್ರಾಯಕ್ಕೆ ಬಿಡಲಾಗಿ ಎಲ್ಲರೂ ಅದನ್ನು ಅನುಮೋದಿಸಿದರು.

ಮಿ॥ ಟಿ. ಆನಂದರಾಯರವರು ಈ ಸಭೆಯ ನಡವಳಿಕೆಯ ವಿಷಯವಾಗಿ ಏರ್ಪಡಿಸಿರುವ ನಿಬಂಧನೆಗಳನ್ನು ಸದ್ಯಕ್ಕೆ ಅನುಸರಣೆಗೆ ತಾರದೆ ಈ ದಿನದ ಸಭೆಯಲ್ಲಿಯೇ ಅದನ್ನು ಪರ್ಯಾಲೋಚಿಸಿ ಮಂಜೂರ್ಮಾಡಬೇಕೆಂದು ತಿಳಿಸಿದರು. ಇದನ್ನು ಮಿ॥ ನಾಗಪ್ಪನವರು ಅನುಮೋದಿಸಿದರು. ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಅಂಗೀಕೃತವಾಯಿತು. ಬಿಲ್ಲನ್ನು ಆಖೈರಾಗಿ ಸಭೆಯವರು ಪರ್ಯಾಲೋಚಿಸಿ ಮಂಜೂರ್ಮಾಡಿದರು.

ಮೈಸೂರು ಸೀಮೆಯಲ್ಲಿ ಸಿಕ್ಕುವ ನಿಕ್ಷೇಪಗಳ ವಿಚಾರವಾಗಿ ಒಂದು ಕಾನೂನನ್ನು ಏರ್ಪಡಿಸುವ ಬಗ್ಗೆ ಹುಟ್ಟಿದ ಬಿಲ್ಲು.

ರಾಜಕಾರ್ಯಪ್ರವೀಣ ಮಿ॥ ಎ. ರಂಗಸ್ವಾಮಿ ಅಯ್ಯಂಗಾರ್ಯರು ಮೈಸೂರು ಸೀಮೆಯಲ್ಲಿ ಸಿಕ್ಕುವ ನಿಕ್ಷೇಪಗಳ ವಿಚಾರವಾಗಿ ಒಂದು ಕಾನೂನನ್ನು ಏರ್ಪಡಿಸುವ ಬಗ್ಗೆ ಹುಟ್ಟಿರುವ ಬಿಲ್ಲನ್ನು ಪ್ರಸ್ತಾಪಿಸುವುದಕ್ಕೂ, ಅದನ್ನು ಸಭೆಯಲ್ಲಿ ಓದಬೇಕೆಂದು ಸೂಚಿಸುವುದಕ್ಕೂ ಅಪ್ಪಣೆ ಬೇಡುತ್ತೇವೆ. ಅದರ ನಿಯಮಗಳನ್ನು ಪ್ರಸ್ತಾಪಿಸುವುದಕ್ಕೆ ಮುಂಚೆ ಈ ವಿಚಾರವಾಗಿ ಮೈಸೂರು ಸೀಮೆಯಲ್ಲಿ ಹಾಲಿ ಜಾರಿಯಲ್ಲಿರುವ ಕಾನೂನನ್ನು ಸ್ವಲ್ಪಮಟ್ಟಿಗೆ ತಿಳಿಸಲಪೇಕ್ಷಿಸುತ್ತೇವೆ. ಸದರೀ ಕಾನೂನೆಲ್ಲವೂ ಹಿಂದಣ ಚೀಫ್

ಕಮಿಷನರವರ 1867ನೆ ಇಸವಿಯ 6ನೆ ನಂಬರ್ ಇಸ್ತಿಹಾರ್ನಾಮೆಯಮೂಲಕ ಪ್ರಚುರಪಡಿಸೋಣವಾದ ನಿಬಂಧನೆಗಳಲ್ಲಿ ಅಡಗಿರುತ್ತದೆ; ಇವುಗಳೆಲ್ಲವೂ ಮದರಾಸಿನ 1832ನೆ ಇಸವಿಯ 11ನೆ ನಂಬರ್ ರೆಗ್ಯುಲೇಷನನ್ನು ಅನುಸರಿಸಿ ಏರ್ಪಡಿಸಲ್ಪಟ್ಟವು. ಆದರೆ ಸದರೀ ನಿಬಂಧನೆಗಳನ್ನು ಇಂಡಿಯಾ ಸರ್ಕಾರದವರ ಮಂಜೂರಾತಿಯನ್ನು ಪಡೆಯದೆಯೇ ಏರ್ಪಡಿಸಿದ ಪ್ರಯುಕ್ತ ಅವುಗಳನ್ನು ಈಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್ ಎಂದರೆ ಮೈಸೂರು ರಾಜ್ಯವು ಕುಂಪಣಿಯವರ ಆಳ್ವಿಕೆಯಿಂದ ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟಾಗ ಹುಟ್ಟಿದ ಕರಾರಿನ ಷೆಡ್ಯೂಲಿನಲ್ಲಿ ಸೇರಿಸಲಿಲ್ಲ. ಈ ನಿಬಂಧನೆಗಳನ್ನು ಕಾನೂನಿನಂತೆ ಭಾವಿಸಬಹುದೇ ಎಂಬ ವಿಚಾರವೂ ನಿಕ್ಷೇಪದ ವಿಷಯದಲ್ಲಿ ಒಂದು ಆಕ್ಟನ್ನು ಜಾರಿಯಲ್ಲಿ ತರುವ ವಿಚಾರವೂ ಈಗ್ಯೆ ಬಹಳದಿವಸಗಳಿಗೆ ಮುಂಚೆ ಅಂದರೆ 1886ನೆ ಇಸವಿಯಲ್ಲಿಯೇ ಚರ್ಚೆಗೆ ಬಂದಿದ್ದವು. ಆಗ 1878ನೆ ಇಸವಿಯ 6ನೆ ನಂಬರ್ ಇಂಡಿಯಾ ಗೌರನ್ಮೆಂಟ್ ಆಕ್ಟಿನ ಆಧಾರದಮೇಲೆ ಒಂದು ಮಸೂದಾ ರೆಗ್ಯುಲೇಷನ್ ತಯಾರಾಯಿತಲ್ಲದೆ ಅದು ಆಗಿಂದಾಗ ಚೆನ್ನಾಗಿ ಚರ್ಚಿಸಲ್ಪಟ್ಟು ತಿದ್ದುಪಾಟಾಗಿ 1894 ರಲ್ಲಿ ಆಖೈರ್ ಮಸೂದೆಯು ತಯಾರಾಯಿತು. ಆದರೆ ಒಂದಾನೊಂದು ದೇವಸ್ಥಾನದಲ್ಲಿ ಸಿಕ್ಕಿದ ಕೆಲವು ನಾಣ್ಯಗಳ ವಿಷಯವಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಕೊಟ್ಟ ಹುಕುಮಿನಮೇಲೆ ಚೀಫ್ ಕಮಿಷನರವರ ನಿಬಂಧನೆಗಳ ಮೇರೆಗೆ ಅಪೀಲ್ ಬರಲಾಗಿ ಆಗ ಸದರೀ ನಿಬಂಧನೆಗಳಲ್ಲಿ ಮಾತುಗಳ ಜೋಡಣೆ ವಿಷಯದಲ್ಲಿಯೂ ನಡವಳಿಕೆ ವಿಷಯದಲ್ಲಿಯೂ ಕೆಲವು ಸಣ್ಣ ಬದಲಾವಣೆಗಳನ್ನುಮಾಡಿ ಅವುಗಳನ್ನೇ ಜಾರಿಯಲ್ಲಿ ತರಬೇಕೆಂದು ಸಲಹೆಯಾಯಿತು. ಆದರೆ ಈ ಸಲಹೆಯಮೇಲೆಯೂ ಆಖೈರ್ ಅಮಲನ್ನೇನೂ ನಡೆಸಲಿಲ್ಲ. ಕೊನೆಗೆ ಹಾಲಿ ಜಾರಿಯಲ್ಲಿದ್ದ ನಿಬಂಧನೆಗಳನ್ನು ಕಾನೂನಿನಂತೆ ಭಾವಿಸಬಹುದೇ ಕೂಡದೇ ಎಂಬ ವಿಷಯದಲ್ಲಿ ಸಂಶಯಗಳೇನಾದರೂ ಇದ್ದರೆ ಅವುಗಳನ್ನು ನಿವೃತ್ತಿಮಾಡುವ ಉದ್ದೇಶದಿಂದ 1878ನೆ ಇಸವಿಯ 6ನೆ ನಂಬರ್ ಬ್ರಿಟಿಷ್ ಇಂಡಿಯಾ ಆಕ್ಟಿನ ಆಧಾರದಮೇಲೆ ಒಂದು ರೆಗ್ಯುಲೇಷನನ್ನು ಜಾರಿಯಲ್ಲಿ ತರಬೇಕೆಂತ ತೀರ್ಮಾನವಾಯಿತು.

ನಿಕ್ಷೇಪವು ಯಾ ಭೂಮಿಯಲ್ಲಿ ಅಂತರ್ಹಿತವಾದ ಸ್ವತ್ತು ಸಿಕ್ಕಿದಲ್ಲಿ ಅದರಲ್ಲಿ ಸರ್ಕಾರದವರಿಗೆ ಎಷ್ಟರಮಟ್ಟಿಗೆ, ಖಾಸಗಿ ಜನರಿಗೆ ಎಷ್ಟರಮಟ್ಟಿಗೆ ಹಕ್ಕು ಇರುವುದೆಂಬ ವಿಚಾರವಾಗಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ನ್ಯಾಯಶಾಸ್ತ್ರ ವಿಧಿಗಳು ಬೇರೆ ಬೇರೆ ವಿಧವಾಗಿರುತ್ತವೆ. ಈ ವಿಧಿಗಳನ್ನು ಇಲ್ಲಿ ವಿವರಿಸಬೇಕಾದ ಅವಶ್ಯಕವಿಲ್ಲ. ಈ ವಿಚಾರವಾದ ಬಿಲ್ಲನ್ನು ಇಂಡಿಯಾ ಗೌರ್ನಮೆಂಟಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಪ್ರಸ್ತಾಪಿಸಿದ ಮೆಂಬರು ಕೊಟ್ಟ ಉಪನ್ಯಾಸಗಳಲ್ಲಿ ಸದರೀ ವಿಧಿಗಳನ್ನೆಲ್ಲಾ ವಿವರಿಸಿಯೇ ಇರುತ್ತಾರೆ. ಈಗ ತಯಾರ್ ಮಾಡಿರುವ ಮಸೂದಾ ಬಿಲ್ಲಿಗೂ ಅನೇಕ ವರ್ಷಗಳಿಂದಲೂ ಈ ಸಂಸ್ಥಾನದಲ್ಲಿ ಜಾರಿಯಲ್ಲಿರುವ ಚೀಫ್ ಕಮಿಷನರವರ ನಿಬಂಧನೆಗಳಿಗೂ ಮುಖ್ಯ ವ್ಯತ್ಯಾಸಗಳು ಯಾವವೂ ಇಲ್ಲವೆಂದುಮಾತ್ರ ಇಲ್ಲಿ ತಿಳಿಸಿದರೆ ಸಾಕು. ಪ್ರಪಂಚದಲ್ಲಿ ನಾಗರೀಕತೆಯುಳ್ಳ ದೇಶಗಳಲ್ಲೆಲ್ಲಾ ಈ ವಿಚಾರವಾಗಿ ಜಾರಿಯಲ್ಲಿರುವ ಕಾನೂನುಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿದ ನಂತರ ಇಂಡಿಯಾ ಗೌರ್ನಮೆಂಟಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಮಂಜೂರಾದ 1878ನೆ ಇಸವಿಯ 6ನೆ ನಂಬರಿನ ನಿಕ್ಷೇಪದ ಆಕ್ಟಿಗನುಸಾರವಾಗಿ ನಿಯಮಿಸೋಣವಾಗಿರುವ ಈ ಬಿಲ್ಲನ್ನು ತಾವುಗಳು ಅನುಮೋದಿಸುವ ಬಗ್ಗೆ ವಿಶೇಷವಾಗಿ ತರ್ಕ ಮಾಡಬೇಕಾಗಿಲ್ಲ. ನಮ್ಮ ಕಾನೂನುಗಳನ್ನು ಬ್ರಿಟಿಷ್ ಇಂಡಿಯಾದಲ್ಲಿರುವ ಕಾನೂನುಗಳನ್ನನುಸರಿಸಿ ಏರ್ಪಡಿಸುವುದೇ ನಮ್ಮ ಉದ್ದೇಶವಾಗಿರುವುದರಿಂದ ಈ ಬಿಲ್ಲಿನ ವಿಚಾರದಲ್ಲಿಯೂ ಬ್ರಿಟಿಷ್ ಇಂಡಿಯಾ ಆಕ್ಟಿನ ಷರತ್ತುಗಳನ್ನೇ ನಾವು ಅನುಸರಿಸಿದರೆ ಯಾವ ಅಪಾಯವೂ ಇಲ್ಲದಂತೆ ಆಗುವುದು. ಈ ಬಿಲ್ಲನ್ನು ಇಂಡಿಯಾ ಆಕ್ಟಿನ ಮಾದರಿಯಂತೆಯೇ ಏರ್ಪಡಿಸಿರುವೆವಾದರೂ ಕೆಲವು ಮುಖ್ಯ ವ್ಯತ್ಯಾಸಗಳಿರುವುವು. ಅವುಗಳನ್ನು ಕ್ಷಿಪ್ರದಲ್ಲಿಯೇ ವಿವರಿಸುವೆವು. ಈ ರೆಗ್ಯುಲೇಷನಿನ ಮುಖ್ಯೋದ್ದೇಶಗಳು ಯಾವುವೆಂದರೆ :—ನಿಕ್ಷೇಪವು ಯಾರಿಗಾದರೂ ಸಿಕ್ಕಿದರೆ ಅದನ್ನು ಬಚ್ಚಿಡದಂತೆ ತಪ್ಪಿಸುವುದು ; ಅಲ್ಲದೆ ಅದು ಯಾರಿಗೆ ಸಿಕ್ಕಿತೋ ಆತನು ಅದಕ್ಕೆ ಹಕ್ಕುಳ್ಳವರಿಗೆ ಪ್ರತಿಯಾಗಿ ತಾನೇ ಅದನ್ನು ಅಪಹರಿಸುವುದನ್ನು ತಪ್ಪಿಸುವುದು ; ಮತ್ತು ಇವೆಲ್ಲಕ್ಕಿಂತ ಮುಖ್ಯವಾಗಿ ಚರಿತ್ರೆಯಲ್ಲಿ ಪ್ರಸಿದ್ಧವಾಗಿದ್ದು ಅಥವಾ ನೋಟಕ್ಕೆ ಅಪರೂಪವಾಗಿ ರಮ್ಯವಾಗಿದ್ದು ಪ್ರಜೋಪಯೋಗಕ್ಕಾಗಿ ಇರಿಸಿಕೊಳ್ಳಲು ಯೋಗ್ಯವಾಗಿರುವ ವಸ್ತುಗಳನ್ನು ಸರ್ಕಾರದವರು ಪಡೆಯುವಂತೆ ಅನುಕೂಲ ಪಡಿಸುವುದು.

ಈ ಕಾರಣದಿಂದಲೇ ಯಾರಿಗಾಗಲೀ ಯಾವುದಾದರೂ ನಿಕ್ಷೇಪವು ಸಿಕ್ಕಿದರೆ ಆ ಸಂಗತಿಯನ್ನು ತಿಳಿಸಬೇಕೆಂತಲೂ, ಹಾಗೆ ತಿಳಿಸದೆ ತಪ್ಪಿದಲ್ಲಿ ಕೆಲವು ದಂಡನೆಗಳನ್ನು ವಿಧಿಸಬೇಕೆಂತಲೂ ಈ ಬಿಲ್ಲಿನಲ್ಲಿ ವಿಧಿಸಿ ಇರುತ್ತದೆ. ಸದರೀ ನಿಕ್ಷೇಪವು ಪೂರ್ವದಲ್ಲಿ ತಮಗೆ ಸೇರಿತ್ತೆಂದು ಯಾರಾದರೂ ರುಜುವಾತ್ ಕೊಟ್ಟರೆ ಅಂಥಾವರ ಹಕ್ಕು ಬಾಧ್ಯತೆಗಳನ್ನು ಕಾಪಾಡಿರುತ್ತದೆ. ಪರಂತು ಹಾಗೆ ರುಜುವಾತು ಕೊಡಬೇಕಾಗಿದ್ದರೆ ಸದರೀ ನಿಕ್ಷೇಪವು ನೂರು ವರ್ಷಗಳೊಳಗಾಗಿ ಬಚ್ಚಿಡಲ್ಪಟ್ಟಿತೆಂದು ಊಹಿಸುವುದಕ್ಕೆ ಕಾರಣವು ಇದ್ದೇ ತೀರಬೇಕು. ಹಾಗೆ ನಿಕ್ಷೇಪವು ಯಾರಿಗಾದರೂ ಸೇರಿತ್ತೆಂಬ ಬಗ್ಗೆ ರುಜುವಾತು ಆಗದೆ ಹೋದಲ್ಲಿ ನಿಕ್ಷೇಪವು ಯಾರಿಗೆ ಸಿಕ್ಕಿತೋ ಆತನಿಗೂ, ನಿಕ್ಷೇಪವು ಯಾವ ಜಮೀನಿನಲ್ಲಿ ಸಿಕ್ಕಿತೋ ಆ ಜಮೀನಿನ ಮಾಲೀಕನಿಗೂ ಎಷ್ಟರಮಟ್ಟಿಗೆ ಹಕ್ಕು ಬಾಧ್ಯತೆಗಳುಂಟೆಂಬ ಬಗ್ಗೆ ಈ ಬಿಲ್ಲಿನಲ್ಲಿ ನಿಯಮವನ್ನು ಮಾಡಿ ಇದೆ. ಸದರೀ ನಿಕ್ಷೇಪದ ವಿಚಾರವಾಗಿ ಹಕ್ಕು ಬಾಧ್ಯತೆಗಳನ್ನೂ, ಜಮೀನು ಯಾರಿಗೆ ಸೇರಿದ್ದೆಂಬ ಬಗ್ಗೆ ವಿವಾದಗಳನ್ನೂ ಸಿವಿಲ್ ಕೋರ್ಟುಗಳಲ್ಲಿ ವ್ಯವಸ್ಥೆ ಮಾಡಿಸಿಕೊಳ್ಳಬೇಕು. ಈ ಬಿಲ್ಲಿನ ಉಳಿದ ಭಾಗದಲ್ಲೆಲ್ಲಾ ಮೇಲ್ಕಂಡ ನಿಯಮಗಳನ್ನು ಚಲಾಯಿಸಬೇಕಾದರೆ ಅನುಸರಿಸಬೇಕಾದ ಕ್ರಮಗಳನ್ನು ವಿಧಿಸಿ ಇರುತ್ತದೆ.

ಈ ಬಿಲ್ಲಿಗೂ 1878ನೆ ಇಸವಿಯ 6ನೆ ನಂಬರ್ ಬ್ರಿಟಿಷ್ ಇಂಡಿಯಾ ಆಕ್ಟಿಗೂ ಇರುವ ಮುಖ್ಯ ವ್ಯತ್ಯಾಸಗಳು ಯಾವುವೆಂದರೆ :—

(a) ನಿಕ್ಷೇಪವು ಯಾರಿಗೆ ಸಿಕ್ಕಿತೋ ಆತನ ಹೊರತು ಬೇರೆ ಯಾರೂ ಸದರೀ ನಿಕ್ಷೇಪದಲ್ಲಿ ಭಾಗ ಬರಬೇಕೆಂದು ಸ್ಥಿರಪಡಿಸದೆ ಇರುವ ಸಂದರ್ಭದಲ್ಲಿ ಒಂದು ಲಕ್ಷಕ್ಕೆ ಮೇಲ್ಪಟ್ಟ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳುವ ಅಧಿಕಾರ. (17ನೆ ಕಲಂ). ಇದನ್ನು ಚೀಫ್ ಕಮಿಷನರವರ ನಿಬಂಧನೆಗಳಿಂದ ತೆಗೆದುಕೊಂಡಿದೆ. ಇಂಡಿಯಾ ಆಕ್ಟಿನಲ್ಲಿ ಈ ತರಹೆಯ ವಿಧಿಯು ಇಲ್ಲ.

(b) ಇಂಡಿಯಾ ಆಕ್ಟಿನ ಮೇರೆಗೆ ನಿಕ್ಷೇಪವು ಯಾರಿಗೆ ಸಿಕ್ಕಿತೋ ಆತನಿಗೆ ಮುಕ್ಕಾಲು ಭಾಗವೂ ಅದರ ಮಾಲೀಕನಿಗೆ ಕಾಲು ಭಾಗವೂ ಸೇರುತ್ತದೆ. ಇದಕ್ಕೆ ಬದಲಾಗಿ ಈ ಉಭಯತ್ರರಿಗೆ ಸಮಭಾಗವಾಗಿ ಹಂಚುವುದು ನ್ಯಾಯವಾಗಿ ತೋರಬರುವುದರಿಂದ ನಮ್ಮ ಬಿಲ್ಲಿನಲ್ಲಿ ಈ ರೀತಿ ವಿಧಿಸಿರುತ್ತದೆ. (ಕಲಂ 12)

(c) 12ನೆ ಕಲಮಿನ ಮೇರೆಗೆ ಡೆಪ್ಯುಟಿ ಕಮಿಷನರವರು ನಿಕ್ಷೇಪವನ್ನು ಹರಾಜು ಮಾಡಬೇಕಾದರೆ ಹರಾಜಿನ ವಿವರಗಳ ಬಗ್ಗೆ ಸರ್ಕಾರದವರ ಹುಕುಮನ್ನು ಪಡೆಯಬೇಕೆಂದು ವಿಧಿಸಿ ಇದೆ.

(d) ನಿಕ್ಷೇಪಕ್ಕೆ ಸಂಬಂಧಪಟ್ಟು ಈ ಬಿಲ್ಲಿನಲ್ಲಿ ನಿಯಮವೇರ್ಪಡಿಸದೆ ಇರುವ ಸಂದರ್ಭಗಳಲ್ಲೆಲ್ಲಾ ಯುಕ್ತ ನಿಬಂಧನೆಗಳನ್ನು ಏರ್ಪಡಿಸುವುದಕ್ಕೆ ಸರ್ಕಾರದವರಿಗೆ ಅಧಿಕಾರವನ್ನು ಉಳಿಸಿಕೊಂಡಿರುತ್ತದೆ.

ಈ ಬಿಲ್ಲನ್ನು ಆಖೈರಾಗಿ ಮಂಜೂರ್ ಮಾಡುವುದಕ್ಕೆ ಮುಂಚೆ ಅದರ ನಿಯಮಗಳನ್ನು ಒಂದು ನಿಯುಕ್ತ ಸಮಾಜದವರು ಪರ್ಯಾಲೋಚಿಸಿ ಈ ಸಭೆಯಲ್ಲಿ ಚರ್ಚೆಯಾಗಿ ಮಂಜೂರಾಗಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ವ್ಯತ್ಯಾಸಗಳನ್ನು ಮಾಡುವುದಕ್ಕೆ ಕಾರಣಗಳನ್ನು ಈಗ ನಾವು ಚರ್ಚಿಸಬೇಕಾದ ಅಗತ್ಯವಿಲ್ಲ. ಈ ಬಿಲ್ಲನ್ನು ಸಭೆಯಲ್ಲಿ ಓದಬೇಕೆಂದು ಸೂಚಿಸುತ್ತೇನೆ.

ಮಿ|| ಎಸ್. ನಾರಾಯಣರಾಯರವರು ಮೇಲ್ಕಂಡ ಸೂಚನೆಯನ್ನು ಅನುಮೋದಿಸಿದರು. ಈ ವಿಚಾರವಾಗಿ ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಅನುಮೋದಿತವಾಯಿತು.

ಅನಂತರ ಮಿ|| ಆನಂದರಾಯರವರು, ರಾಜಮಂತ್ರಪ್ರವೀಣ ಮಿ|| ಪಿ. ಶ್ರೀನಿವಾಸೈಯ್ಯಂಗಾರ್ರವರು, ಮಿ|| ನಾಗಪ್ಪನವರು, ಮಿ|| ನಾರಾಯಣರಾಯರು, ಪ್ರಸ್ತಾಪಕರು—ಇವರುಗಳನ್ನೊಳಗೊಂಡ ಒಂದು ಸೆಲೆಕ್ಟ್ ಕಮಿಟಿಯವರು ಈ ಬಿಲ್ಲನ್ನು ಪರ್ಯಾಲೋಚಿಸಬೇಕೆಂದು ರಾಜಕಾರ್ಯಪ್ರವೀಣ ಮಿ|| ಎ. ರಂಗಸ್ವಾಮೈಯಂಗಾರ್ರವರು ಸೂಚಿಸಿದರು.

ಈ ಸೂಚನೆಯ ವಿಚಾರವಾಗಿ ಸಭೆಯವರ ಅಭಿಪ್ರಾಯವನ್ನು ಕೇಳಲಾಗಿ ಅನುಮೋದಿತವಾಯಿತು.

ಮೈಸೂರು ಸೀಮೆಯಲ್ಲಿ ವಿಷಪದಾರ್ಥಗಳನ್ನು ಇಟ್ಟುಕೊಳ್ಳೋಣ ಮತ್ತು ಬಿಕರಿ ಮಾಡೋಣ ಇವುಗಳನ್ನು ಕ್ರಮಪಡಿಸುವುದಕ್ಕೋಸ್ಕರ ಬಿಲ್ಲು.

ಮೈಸೂರು ಸೀಮೆಯಲ್ಲಿ ವಿಷಪದಾರ್ಥಗಳನ್ನು ಇಟ್ಟುಕೊಳ್ಳೋಣ ಮತ್ತು ಬಿಕರಿ ಮಾಡೋಣ ಇವುಗಳನ್ನು ಕ್ರಮಪಡಿಸುವುದಕ್ಕೋಸ್ಕರ ಬಿಲ್ಲನ್ನು ಸಭೆಯಲ್ಲಿ ಓದಬಹುದೆಂದು ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರು ಸಲಹೆ ಕೊಟ್ಟರು. ಇದನ್ನು ಮಿ|| ಕೆ. ಎಸ್. ಚಂದ್ರಶೇಖರೈಯ್ಯರವರು ಅನುಮೋದಿಸಿದರು. ಸಭೆಯವರ ಅಭಿಪ್ರಾಯ ಕೇಳಲಾಗಿ ಅಂಗೀಕೃತವಾಯಿತು.

ಅನಂತರ ಸದರಿ ಬಿಲ್ಲನ್ನು ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರೂ, ಮಿ|| ರಂಗೈಯ್ಯಂಗಾರ್ರವರೂ, ಮಿ|| ಎಸ್. ನಾರಾಯಣರಾಯರವರೂ ಸೇರಿದ ಒಂದು ಸೆಲೆಕ್ಟ್ ಕಮಿಟಿ ಯಾ ನಿಯುಕ್ತ ಸಮಾಜವು ಪರ್ಯಾಲೋಚಿಸಬೇಕೆಂದು ನಿರ್ಧರವಾಯಿತು.

ಪೊಲೀಸ್ ಬಿಲ್ಲು.

ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರು ಪೊಲೀಸು ಬಿಲ್ಲಿನಲ್ಲಿ ಈ ಕೆಳಗಣ ತಿದ್ದುಪಾಟುಗಳನ್ನು ಪರ್ಯಾಲೋಚಿಸಬೇಕೆಂದು ಸಲಹೆ ಕೊಟ್ಟರು.

(1) 26 (1)ನೆ ಕಲಮಿಗೆ ಬದಲಾಗಿ ಈ ಕೆಳಗಣ ಕಲಮನ್ನು ಇಟ್ಟುಕೊಳ್ಳಬೇಕು :—

26 (1) ನೇ ಕಲಂ—3ನೆ ಒಳಪ್ರಕರಣದ ಮೇರೆಗೆ ಅಧಿಕಾರ ಹೊಂದಿರುವ ಯಾವ ಆಫಿಸರಾಗಲಿ—

(a) ಅಸಿಸ್ಟೆಂಟು ಸೂಪರಿಂಟೆಂಡೆಂಟರ ದರ್ಜೆಗಿಂತ ಕಮ್ಮಿ ದರ್ಜೆಯ ಯಾವ ಪೊಲೀಸ್ ಆಫಿಸರನ್ನಾಗಲಿ ಕೆಲಸದಿಂದ ಕೆಲವುಕಾಲ ಸಸ್ಪೆಂಡು ಮಾಡಬಹುದು ಯಾ ತಪ್ಪಿಸಬಹುದು, ಕಂಪರಾ ಮಾಡಬಹುದು ಅಥವಾ ಕೆಲಸದಿಂದ ಬರತರಫು ಮಾಡಬಹುದು.

(b) ಸಸ್ಪೆಂಡು, ಕಂಪರಾ ಯಾ ಬರತರಫು ಮಾಡಬೇಕಾದ ಅಗತ್ಯವಿಲ್ಲದಂಥಾ ಸುಶಿಕ್ಷೋಲ್ಲಂಘನೆ, ಕೆಟ್ಟ ನಡತೆ ಯಾ ಕೆಲಸದಲ್ಲಿ ಅಶ್ರದ್ಧೆ ಈ ತಪ್ಪುಗಳು ನಡೆಸಿದ್ದ ಅಥವಾ ತನ್ನ ಸ್ವಂತ ಕೃತ್ಯದಿಂದ ತನ್ನ ಕೆಲಸವನ್ನು ನಡೆಸಲು ಅಯೋಗ್ಯನಾದ ಯಾವ ಪೊಲೀಸು ಆಫಿಸರಿಗಾಗಲಿ ಈ ಕೆಳಗಿನ ಶಿಕ್ಷೆಗಳ ಪೈಕಿ ಒಂದನ್ನಾಗಲಿ, ಅನೇಕವನ್ನಾಗಲಿ ವಿಧಿಸಬಹುದು :—

(1) ಒಂದು ತಿಂಗಳಿನ ಸಂಬಳಕ್ಕಿಂತ ಹೆಚ್ಚದಿರುವ ಜುರ್ಮಾನೆ.

(2) ಒಳ್ಳೇ ಮೆಹನತ್ತಿಗಾಗಿ ಕೊಟ್ಟ ಸಂಬಳವನ್ನು ಕಿತ್ತು ಹಾಕುವುದು.

(3) ಯಾವುದಾದರೂ ಗೌರವವುಳ್ಳ ಪದವಿ ನಿಂದ ತಪ್ಪಿಸುವುದು ಅಥವಾ ಯಾವುದಾದರೂ ವಿಶೇಷವಾದ ವೇತನ ಕೊಡುತ್ತಿದ್ದರೆ ಅದನ್ನು ಕಿತ್ತು ಹಾಕುವುದು.

(4) ಬ್ಲಾಕ್ ಮಾರ್ಕ್ ಎಂದರೆ ತಪ್ಪಿತಕ್ಕಾಗಿ ಶಿಕ್ಷಾರೂಪವಾಗಿ ಕೊಡತಕ್ಕ ಗುರ್ತಿನ ವಿಚಾರವಾಗಿ ಮಾಡಿರುವ ನಿಬಂಧನೆಗಳಲ್ಲಿ ವಿಧಾಯಕವಾಗಿರುವಂತೆ ಆತನ ಹೆಸರಿಗೆ ಒಂದು ಬ್ಲಾಕ್ ಮಾರ್ಕನ್ನು ಕೊಡೋಣ.

(5) ರಜಾ ಹಕ್ಕನ್ನು ತೆಗೆದುಹಾಕೋಣ.

(6) ಶಿಕ್ಷಾರೂಪವಾಗಿ ಡ್ರಿಲ್ ಮಾಡಿಸೋಣ.

(7) ಹೆಚ್ಚುಗಟ್ಲೆ ಪಹರೆ, ಆಯಾಸ ವುಂಟುಮಾಡತಕ್ಕ ಅಥವಾ ಇತರ ಕೆಲಸ.

ಪರಂತು (4), (6), (7)ನೆ ಕಲಮುಗಳಲ್ಲಿ ನಮೂದಿಸಿರುವ ಶಿಕ್ಷೆಗಳನ್ನು ಜಮೇದಾರ್ ಹುದ್ದೆಯ ಯಾ ಅದಕ್ಕಿಂತ ಹೆಚ್ಚು ದರ್ಜೆಯ ಯಾವ ಆಫಿಸರುಗಳಿಗಾದರೂ ವಿಧಿಸಕೂಡದು.

ಮಿ|| ಆನಂದರಾಯರವರು ಮೇಲ್ಕಂಡ ಸಲಹೆಯನ್ನು ಅನುಮೋದಿಸಿದರು.

ಈ ಸಲಹೆಯನ್ನು ಸಭೆಯವರ ಪರ್ಯಾಲೋಚನೆಗೆ ಹಾಕಲು ಅದು ಎಲ್ಲರಿಂದಲೂ ಅಂಗೀಕೃತವಾಯಿತು.

(2) ಕಲಂ 46; ಒಳಕಲಂ (1) (b)—ಮೇಲ್ಕಂಡ ಒಳ ಕಲಮಿನಲ್ಲಿ ಬರುವ "ಮ್ಯಾಜಿಸ್ಟ್ರೇಟರಿಂದ" ಮತ್ತು "ಮಾಡಲ್ಪಟ್ಟ" ಎಂಬ ಮಾತುಗಳ ಮಧ್ಯೆ "ಅಥವಾ ಲಾಯಖ್ ಅಧಿಕಾರಿಯಿಂದ" ಎಂಬ ಮಾತುಗಳನ್ನು ಸೇರಿಸಬೇಕು.

ಈ ಸಲಹೆಯನ್ನು ಮಿ|| ಆನಂದರಾಯರವರು ಅನುಮೋದಿಸಿ, ಸಭೆಯವರು ಅಂಗೀಕರಿಸಿದರು.

(3) ಕಲಂ 46, ಒಳಕಲಂ (3).

[ಇದನ್ನು ಕನ್ನಡದಲ್ಲಿ ಮಾಡಿಯೇ ಇದೆ].

ಮೇಲ್ಕಂಡ ತಿದ್ದುಪಾಟುಗಳನ್ನು ಸಭಿಕರು ಅಂಗೀಕರಿಸಿದುದರಿಂದ ಮೆ|| ಕೆ. ಪಿ. ಪುಟ್ಟಣ್ಣ ಶೆಟ್ಟರವರು ಸದರಿ ಬಿಲ್ಲನ್ನು ತಿದ್ದುಪಾಟಾದ ಪ್ರಕಾರ ಸಭೆಯವರು ಮಂಜೂರ್ಮಾಡಬೇಕೆಂದು ವಿಜ್ಞಾಪಿಸಿ ಕೊಂಡರು.

ಮೆ|| ಕೆ. ಎಸ್. ಚಂದ್ರಶೇಖರ ಅಯ್ಯರವರು ಈ ಸಲಹೆಯನ್ನು ಅನುಮೋದಿಸಿದರು.

ಮೆ|| ಎಂ. ಸಿ. ರಂಗೈಯ್ಯಂಗಾರ್ರವರು ಇದನ್ನು ಅನುಮೋದಿಸಿ ಹೇಳಿದುದೇನೆಂದರೆ—

ಇದು ತುಂಬಾ ಮುಖ್ಯವಾದ ಬಿಲ್ಲಾದುದರಿಂದ ಅದರ ವಿಚಾರವಾಗಿ ನಾವು ಕೆಲವು ಮಾತುಗಳನ್ನಾಡಲು ಅಪ್ಪಣೆ ಕೊಡಬೇಕಾಗಿ ಕೋರುತ್ತೇವೆ.

ಶ್ರೀಮತ್ ಮಹಾರಾಜಾ ಸಾಹೇಬ್ರು ಹುಜೂರ್ರವರು "ಗ್ರಾಮ ನೌಕರಿ ಬಿಲ್ಲು" ಎಂಬದೊಂದು ಬಹಳ ಮುಖ್ಯವಾದ ಬಿಲ್ಲಿಗೆ ಅನುಮತಿ ದಯಪಾಲಿಸಿರುತ್ತಾರೆಂದು ಈ ದಿವಸ ಸೆಕ್ರಿಟೆರಿಯವರು ತಿಳಿಸಿದರು. ಗ್ರಾಮ ನೌಕರರ ಪ್ರಾಮುಖ್ಯತೆಯನ್ನು ಲಕ್ಷೀಕರಿಸದೆ ಇರುವ ಪೊಲೀಸ್ ಏರ್ಪಾಟ್ಯಾವುದೂ ತೃಪ್ತಿಕರವಾಗಿ ನಡೆಯಲಾರದು. ಆದುದರಿಂದಲೇ ಗ್ರಾಮ ನೌಕರಿ ಬಿಲ್ಲು ಅಂಗೀಕೃತವಾದ ತಕ್ಷಣವೇ ಈ ಪೊಲೀಸ್ ಬಿಲ್ಲು ಅಂಗೀಕರಿಸಲ್ಪಡತಕ್ಕದ್ದು ಸಹಜವೇ ಸರಿ. ಗ್ರಾಮ ನೌಕರಿ ಬಿಲ್ಲು ಈಚೆಗೆ ಮಂಜೂರ್ಮಾಡಲ್ಪಟ್ಟುದರಿಂದ ಈಗ ಪೊಲೀಸು ಬಿಲ್ಲನ್ನು ಮಂಜೂರ್ಮಾಡಲು ಸರಿಯಾದ ಸಮಯವು ಒದಗಿರುತ್ತದೆ.

ಗ್ರಾಮ ನೌಕರರಿಗೂ ಸರ್ಕಾರಿ ಪೊಲೀಸ್ ಶಿಬ್ಬಂದಿಗೂ ಸಂಬಂಧವನ್ನು ಕಲ್ಪಿಸುವುದೇ ಈ ಪೊಲೀಸ್ ಬಿಲ್ಲಿನ ಮುಖ್ಯ ಉದ್ದೇಶವಾಗಿದೆ. ಬ್ರಿಟಿಷ್ ಇಂಡ್ಯಾದಲ್ಲಿಯೂ ಇದೇ ಪ್ರಯತ್ನವನ್ನೇ ಮಾಡುತ್ತಲಿರುವುದಲ್ಲದೆ ಇದರ ಫಲಿತಾಂಶವನ್ನು ತುಂಬಾ ಆಸಕ್ತಿಯಿಂದ ಎದುರು ನೋಡುತ್ತಲಿದೆ. ಕಳೆದ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಿಂದ ಇದು ಅಷ್ಟು ತೃಪ್ತಿಕರವಾಗಿ ಪರಿಣಮಿಸಿರುವುದಿಲ್ಲವೆಂದು ತಿಳಿದುಬರುತ್ತದೆ. ಆದರೆ ಕಾಲಕ್ರಮದಲ್ಲಿ ಇದರಿಂದ ಪ್ರಯೋಜನವುಂಟಾಗಬಹುದೆಂದು ನಿರೀಕ್ಷಣೆ ಏನೋ ಇದೆ. ಮೈಸೂರು ಸೀಮೆಯಲ್ಲಾದರೋ ಸ್ಥಿತಿಗತಿಗಳು ಅಲ್ಲಿಗಿಂತ ಸ್ವಲ್ಪ ವ್ಯತ್ಯಾಸವಾಗಿವೆ. ಗ್ರಾಮ ನೌಕರರಿಗೂ ಸರ್ಕಾರಿ ಪೊಲೀಸು ಶಿಬ್ಬಂದಿಗೂ ಸಂಬಂಧವನ್ನು ಕಲ್ಪಿಸತಕ್ಕ ಏರ್ಪಾಟು ಈ ಸೀಮೆಯಲ್ಲಿ ಫಲಕಾರಿಯಾಗುವುದಕ್ಕೆ ಒಂದು ಕಾರಣವುಂಟು; ಅದು ಯಾವುದೆಂದರೆ—ಇಲ್ಲಿ ಬ್ರಿಟಿಷ್ ಇಂಡ್ಯಾದಲ್ಲಿದ್ದಂತೆ ಗ್ರಾಮ ನೌಕರರು ಎರಡುತರಹ ತನಿಖೆಯಲ್ಲಿರುವುದಿಲ್ಲ. ಗ್ರಾಮ ನೌಕರರು ಅಮಲ್ದಾರರ ತನಿಖೆಯಲ್ಲಿರುತ್ತಾರೆ; ಅಮಲ್ದಾರರು ಪೊಲೀಸ್ ಇಲಾಖೆಯ ವಿಷಯವಾಗಿ ಎಷ್ಟುಮಟ್ಟಿನ ಅಧಿಕಾರವನ್ನೂ ಸಂಬಂಧವನ್ನೂ ಹೊಂದಿರುತ್ತಾರೆಂಬುವುದನ್ನು ಈ ಬಿಲ್ಲಿನಲ್ಲಿ ಚೆನ್ನಾಗಿ ವಿವರಿಸಿದೆ. ಅಮಲ್ದಾರರು ತಮ್ಮ ತಾಲ್ಲೂಕಿನಲ್ಲಿ ಪೊಲೀಸು ಇಲಾಖಾ ಮೊಖ್ತೇಸರಾಗಿಯೂ ರೆವಿನ್ಯೂ ಆಡಳಿತದಲ್ಲಿ ಮೇಲ್ಪಟ್ಟ ಅಧಿಕಾರಿಯಾಗಿಯೂ ಇರುವುದರಿಂದ ಪೊಲೀಸಿನವರೊಂದಿಗೆ ಗ್ರಾಮ ನೌಕರರನ್ನು ಕೆಲಸ ಮಾಡಿಸುವುದು ಸಾಧ್ಯವೆಂದು ನಮಗೆ ತೋರುತ್ತದೆ. ಈ ಕಾರಣದಿಂದ ಇತರ ಕಡೆಗಳಿಗಿಂತ ಮೈಸೂರು ಸೀಮೆಯಲ್ಲಿ ಈ ಏರ್ಪಾಟು ತೃಪ್ತಿಕರವಾಗಿ ನಡೆಯುವುದರಲ್ಲಿ ಸಂದೇಹವೇ ಇಲ್ಲವೆಂದು ಹೇಳಬಹುದು.

ಈ ಬಿಲ್ಲಿನ ವಿಧಿಗಳ ವಿಚಾರದಲ್ಲಾದರೋ ಈ ಸಭೆಯವರಿಗೆ ನಾವು ತಿಳಿಸತಕ್ಕದ್ದೇನೂ ಇರುವುದಿಲ್ಲ. ಯಾಕೆಂದರೆ ಈ ಬಿಲ್ಲನ್ನು ಸಭೆಯಲ್ಲಿ ಪ್ರಸ್ತಾಪಿಸುವುದಕ್ಕೆ ಮುಂಚೆ ಈಗಿನ ರೆವಿನ್ಯೂ ಕಮಿಷನರವರೂ, ಈಗಿನ 2ನೆ ಕೌನ್ಸಿಲರವರೂ, ಮತ್ತು ಇತರ ದೊಡ್ಡ ದೊಡ್ಡ ಸರ್ಕಾರಿ ಅಧಿಕಾರಸ್ಥರೂ ಸೇರಿದ ಒಂದು ಬಲವಾದ ಇಲಾಖ ಮಜಕೂರು ಕಮಿಟಿಯವರು ಪರ್ಯಾಲೋಚಿಸಿರುತ್ತಾರೆ. ಇವರು ಸದರಿ ಬಿಲ್ಲನ್ನು ಆಮೂಲಾಗ್ರವಾಗಿ ಚರ್ಚಿಸಿದ್ದುದರಿಂದ ಅದು ಈ ಸಭೆಗೆ ಬಂದಾಗ ಅದರ ವಿಚಾರದಲ್ಲಿ ನಿಯುಕ್ತ ಸಮಾಜದವರನ್ನು ವಿಚಾರಿಸಬೇಕಾದುದೂ ಕೂಡ ಅವಶ್ಯಕವಿರಲಿಲ್ಲ. ಅನಂತರ ಏರ್ಪಡಿಸಿದ ನಿಯುಕ್ತ ಸಮಾಜದವರು ಅದರಲ್ಲಿ ಬಹು ಸ್ವಲ್ಪ ಬದಲಾವಣೆಗಳನ್ನು ಮಟ್ಟಿಗೆ ಮಾಡಿದ್ದಾರೆ. ಇವುಗಳು ಈ ಸಭೆಯ ಮುಂದೆ ಬಂದಾಗ ಪೂರ್ವದ ಕಮಿಟಿಯವರ ಸಲಹೆಗಳನ್ನೇ ಮಂಜೂರ್ಮಾಡುವುದು ಉತ್ತಮವೆಂದು ಭಾವಿಸಿ ಹಾಗೆಯೇ ಮಾಡಿದರು. ಬಹಳ ಮುಖ್ಯವಾದ ಕೆಲವು ಬದಲಾವಣೆಗಳನ್ನು ಮಟ್ಟಿಗೆ ಮಾಡಲಾಯಿತು. ಇವುಗಳನ್ನು ಸಭಿಕರು ಅಂಗೀಕರಿಸಿರುತ್ತಾರೆ.

ಪೊಲೀಸು ಸಿಬ್ಬಂದಿಯನ್ನು ಎಗ್ಸಿಕ್ಯೂಟಿವ್ ಅಧಿಕಾರಿಗಳು ಕೂಡಿದಷ್ಟು ಉತ್ತಮಸ್ಥಿತಿಗೆ ತರಲು ಅನುಕೂಲಿಸುವಂತೆ ಮಾಡಬೇಕೆಂಬುವುದೇ ಈ ಬಿಲ್ಲಿನ ಮುಖ್ಯ ಉದ್ದೇಶವು ಈ ಬಗ್ಗೆ ಒಂದು ಕಾನೂನು ಏರ್ಪಟ್ಟ ಮಾತ್ರಕ್ಕೇನೇ ಪೊಲೀಸು ಸಿಬ್ಬಂದಿಯು ಉತ್ತಮಸ್ಥಿತಿಗೆ ಬರುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಪೊಲೀಸು ರೆಗ್ಯುಲೇಷನ್ ಮೇರೆಗೆ ಸರ್ಕಾರದವರು ಏರ್ಪಡಿಸುವ ನಿಬಂಧನೆಗಳೂ, ಈ ರೆಗ್ಯುಲೇಷನ್ ಮತ್ತು ನಿಬಂಧನೆಗಳ ವಿಧಿಗಳನ್ನು ಜಾರಿಮಾಡುವ ರೀತಿಯೂ ಸಹಾ ಮೇಲ್ಕಂಡ ವಿಷಯದಲ್ಲಿ ಬಹು ಮುಖ್ಯವಾಗಿವೆ. ಪರಂತು, ಈ ಬಿಲ್ಲಿನಿಂದ ಪೊಲೀಸು ಸಿಬ್ಬಂದಿಗೆ ಬಹಳ ಅಧಿಕಾರಗಳನ್ನು ಕೊಡೋಣಾಗಿದೆ ಎಂಬುವುದನ್ನೂ ಈ ಅಧಿಕಾರಗಳನ್ನು ಅಯೋಗ್ಯರಾದ ಅಧಿಕಾರಿಗಳು ದುರುಪಯೋಗಪಡಿಸಲು ಅವಕಾಶವುಂಟೆಂಬುವುದನ್ನೂ ಎಲ್ಲರೂ ಒಪ್ಪಬೇಕಾಗಿದೆ. ಇಂಥಾ ದೊಡ್ಡ ಅಧಿಕಾರಗಳನ್ನು ಪೊಲೀಸು ಸಿಬ್ಬಂದಿಗೆ ಸೇರಿದವರು ದುರುಪಯೋಗಪಡಿಸದಂತೆ ಸರ್ಕಾರದವರು ಜಾಗರೂಕತೆಯಿಂದ ನೋಡಿಕೊಳ್ಳಬೇಕಾಗಿದೆ. ಒಳ್ಳೇ ನಡತೆಪರರಾಗಿಯೂ, ಬುದ್ಧಿವಂತರಾಗಿಯೂ, ಸಮರ್ಥರಾಗಿಯೂ ಇರುವ ಜನಗಳು ಸದರೀ ಸಿಬ್ಬಂದಿಗೆ ಬಂದು ಸೇರುವಂತೆ ಪ್ರೋತ್ಸಾಹ ಕೊಡಬೇಕು. ಆದರೆ ಈ ವಿಷಯಗಳು ಸರ್ಕಾರಿ ಆಡಳಿತ ನಡೆಸುವಾಗ ಆಲೋಚಿಸತಕ್ಕಂಥಾವುಗಳೇ ಹೊರತು ಈ ಸಭೆಯಲ್ಲಿ ಪರ್ಯಾಲೋಚಿಸತಕ್ಕವಲ್ಲ. ಆದಾಗ್ಯೂ ಪೊಲೀಸು ಸಿಬ್ಬಂದಿಯನ್ನು ಉತ್ತಮಸ್ಥಿತಿಗೆ ತರುವುದು ಅತ್ಯಾವಶ್ಯವೆಂಬ ಸಂಗತಿಯನ್ನು ಸರ್ಕಾರದವರಿಗೆ ಸ್ಪಷ್ಟವಾಗಿ ತಿಳಿಯಪಡಿಸುವ ಉದ್ದೇಶದಿಂದ ಈರೀತಿ ವಿನಯಪೂರ್ವಕವಾಗಿ ಸಲಹೆ ಕೊಟ್ಟಿದೇವೆ. ಸದರೀ ಸಿಬ್ಬಂದಿಯನ್ನು ಉತ್ತಮಸ್ಥಿತಿಗೆ ತರಲು ತುಂಬಾ ಅವಕಾಶವುಂಟೆಂಬ ಭಾಗದಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈ ಉದ್ದೇಶವು ನೆರವೇರುವುದಕ್ಕಾಗಿ ಈ ಸಭೆಯವರು ಎಲ್ಲರಿಗೂ ಸಮರ್ಪಕವಾದ ಕಾನೂನನ್ನು ಏರ್ಪಡಿಸಲು ಸರ್ವಪ್ರಯತ್ನವನ್ನೂ ಮಾಡಿರುತ್ತಾರೆಂದು ಅರಿಕೆ ಮಾಡುತ್ತೇವಲ್ಲದೆ ಈ ಬಿಲ್ಲನ್ನು ಕಾನೂನಾಗಿ ಮಂಜೂರ್ಮಾಡಬೇಕೆಂಬ ಸಲಹೆಯನ್ನು ಮನಃಪೂರ್ವಕವಾಗಿ ಅನುಮೋದಿಸುತ್ತೇವೆ.

ಈ ಸಲಹೆಯನ್ನು ಕುರಿತು ಸಭೆಯವರ ಅಭಿಪ್ರಾಯವನ್ನು ಕೇಳಲು ಎಲ್ಲರೂ ಅನುಮೋದಿಸಿದರು.

ಅನಂತರ ಸಭೆಯು ಬರಖಾಸ್ತಾಯಿತು.

ವಿ. ಪಿ. ಮಾಧವರಾವ್,

ಅಧ್ಯಕ್ಷರು.

1

ಮೈಸೂರ ಗೆಜೆಟ್.

ಸಂ. 44] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 21, ಸನ್ 1909.

IIIನೆ ಭಾಗ.

ಲೆಜಿಸ್ಲೆಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನ್‌ಮೆಂಟು.

ಲೆಜಿಸ್ಲೆಟಿವು ಇಲಾಖಾ.

1909ನೆ ಇಸವಿಯ 1ನೆ ನಂಬರು ರೆಗ್ಯುಲೇಷನ್.

(1909ನೆ ಇಸವಿ ಜನವರಿ 11ನೆ ತಾರೀಖಿನ ದಿವಸ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ರವರು ತಮ್ಮ ಅನುಮತಿಯನ್ನು ದಯಪಾಲಿಸಿರುತ್ತಾರೆ.)

1888ನೆ ಇಸವಿಯ IVನೆ ನಂಬರು ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ಪುನಃ ತಿದ್ದುಪಾಟು ಮಾಡತಕ್ಕ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಸನ್ 1888ನೆ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ರವರು ಇದರಡಿ ಕಂಡಂತೆ ವಿಧಿಸಲು ಹುಕುಂ ದಯಪಾಲಿಸಿರುತ್ತಾರೆ.

1888ನೆ ಇಸವಿಯ IVನೆ ನಂಬರು ರೆಗ್ಯುಲೇಷನಿನಲ್ಲಿ 210 A ಎಂಬ ಹೊಸ ಪ್ರಕರಣವನ್ನು ಸೇರಿಸುವದು.

1. ಸನ್ 1888ನೆ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 210ನೆ ಪ್ರಕರಣದ ನಂತರ ಇದರಡಿ ಕಂಡ ಪ್ರಕರಣವನ್ನು ಹೊಸದಾಗಿ ಸೇರಿಸತಕ್ಕದ್ದು:—

ರೆವಿನ್ಯೂ ಕಮಿಷನರವರಿಂದ ಅಪೀಲುಗಳನ್ನು ಸರ್ಕಾರದವರು ವಾಪಸು ತೆಗದುಕೊಳ್ಳುವದಕ್ಕೆ ಅಧಿಕಾರ.

"210 A. ಈ ರೆಗ್ಯುಲೇಷನಿನಲ್ಲಿ ಅನ್ಯಥಾ ವಿಧಿಸಿದ್ದಾಗ್ಯೂ ಕೂಡಾ, ರೆವಿನ್ಯೂ ಕಮಿಷನರವರಲ್ಲಿ ಫೈಸಲಾಗದೆ ಬಾಕಿ ನಿಂತಿರುವ ಯಾವ ಅಪೀಲನ್ನಾಗಲಿ ಅಥವಾ ಯಾವ ತರಗತಿಗೆ ಸೇರಿದ ಅಪೀಲುಗಳನ್ನಾಗಲಿ, ಅಂಥಾ ಅಪೀಲುಗಳ ಫೈಸಲಾತಿಯ ಬಗ್ಗೆ ಎಷ್ಟುಮಟ್ಟಿಗೆ ಕ್ರಮ ಜರುಗಿದ್ದರೂ ಸರಿಯೆ, ಸರ್ಕಾರದವರು ವಾಪಸು ತರಿಸಿಕೊಂಡು ಅವುಗಳನ್ನು ಫೈಸಲ್ಮಾಡಬಹುದು, ಅಥವಾ ಅವುಗಳನ್ನು ರೆವಿನ್ಯೂ ಕಮಿಷನರವರಿಗೆ ಫೈಸಲ್ ಬಗ್ಗೆ ಪುನಹ ವರ್ಗಾಯಿಸಬಹುದು."

ವಿ. ಪಿ. ಮಾಧವರಾವ್,
ದಿವಾನರವರು.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ರೆವಿನ್ಯೂ ಕಮಿಷನರವರ ಫೈಲಿಗೆ ಸೇರಿದ ಯಾವ ಅಪೀಲನ್ನಾಗಲಿ ಅಥವಾ ಯಾವ ತರಹೆಯ ಅಪೀಲುಗಳನ್ನಾಗಲಿ ಸರ್ಕಾರದವರು ಆಗಿಂದಾಗ್ಯೆ ವಾಪಸು ತರಿಸಿಕೊಂಡು ಅವುಗಳನ್ನು ತಾವೇ ಅಂದರೆ (ಎಕ್ಸಿಕ್ಯುಟಿವ್ ಸಭೆಯ ಕಮಿಟಿಯವರೆ) ಫೈಸಲ್ಮಾಡುವದಕ್ಕಾಗಲಿ ಅಥವಾ ಅಂಥಾ ಅಪೀಲನ್ನು ಅವಶ್ಯಕಬಿದ್ದರೆ ಪುನಹ ರೆವಿನ್ಯೂ ಕಮಿಷನರವರಿಗೆ ವರ್ಗಾಯಿಸುವದಕ್ಕೂ ಸಹಾ ಸರ್ಕಾರದವರಿಗೆ ಅಧಿಕಾರ ಕೊಡಬೇಕೆಂಬುವದೇ ಈ ತಿದ್ದುಪಾಟಿನ ಉದ್ದೇಶವಾಗಿರುತ್ತೆ. ಬ್ರಿಟಿಷ್ ಇಂಡ್ಯಾದಲ್ಲಿ ಜಾರೀಲಿರುವ ಹೊಸ ಸಿವಿಲ್ ಪ್ರೊಸೀಜರ್ ಕೋಡು 24ನೆ ಪ್ರಕರಣಾನುಸಾರ ಎಲ್ಲಾ ಹೈ ಕೋರ್ಟುಗಳಿಗೂ, ಚೀಫ್ ಕೋರ್ಟುಗಳಿಗೂ ಮತ್ತು ಡಿಸ್ಟ್ರಿಕ್ಟು ಕೋರ್ಟುಗಳಿಗೂ ಸಹಾ ಕೊಟ್ಟು ಇರುವ ಇಂಥಾ ಅಧಿಕಾರವನ್ನು ಈ ಸಂಸ್ಥಾನದ ಸಾಧಾರಣ ರೆವಿನ್ಯೂ ಬಾಬಿನ ಆಡಳಿತಗಳಿಗೂ ಅವಶ್ಯಕವಾಗಿ ಕೊಡಬೇಕಾಗಿ ಬಂದಿರುತ್ತೆ. ಅಲ್ಲದೆ ಪ್ರಕೃತದಲ್ಲಿ ರೆವಿನ್ಯೂ ಕಮಿಷನರವರಿಗೆ ವಾಡಿಕೆಯಾದ ಕೆಲಸಗಳೇ ವಿಶೇಷವಾಗಿರುವದರಿಂದ ಅವುಗಳನ್ನು ತಕ್ಕಮಟ್ಟಿಗೆ ಕಮ್ಮಿಮಾಡಿ ಗ್ರಾಮ ಸಂಬಂಧವಾದ ಕೆಲಸಗಳು ಹೆಚ್ಚುತ್ತಾ ಇರುವುದರಿಂದ ಈ ಕೆಲಸಕ್ಕೆ ಇವರು ವಿಶೇಷ ಕಾಲವನ್ನು ಮತ್ತು ಗಮನವನ್ನು ಕೊಡಬೇಕಾಗಿರುತ್ತದೆ ಆದುದರಿಂದ ತಿದ್ದುಪಾಟನ್ನು ಮಾಡುವದು ಈಗ ಅತ್ಯವಶ್ಯಕವಾಗಿ ಇರುತ್ತೆ.

ನಂ. 208—ಲೆ ಕಾಸ್—ತಾರೀಖು 12ನೆ ಜನವರಿ 1909.

ಮೈಸೂರು ನ್ಯಾಯವಿಧಾಯಕ ಸಭೆಯು ಕಾರ್ಯ ನಿರ್ವಾಹದ ಬಗ್ಗೆ ಏರ್ಪಟ್ಟಿರುವ ನಿಬಂಧನೆಗಳ ಪೈಕಿ 31ನೆ ನಿಬಂಧನೆಯ ಮೇರೆಗೆ, ಈ ಕೆಳಗಣ ಬಿಲ್ಲೂ ಮತ್ತು ಅದಕ್ಕೆ ಸಂಬಂಧಪಟ್ಟ ಉದ್ದೇಶ ಮತ್ತು ಕಾರಣಗಳ ವಿವರವೂ ಇವುಗಳನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸಿರುತ್ತದೆ.

1884ನೆ ಇಸವಿಯ ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನ್ನು ಪುನಃ ತಿದ್ದುಪಾಟು ಮಾಡಲು ಹುಟ್ಟಿದ ಬಿಲ್ಲು.

1884ನೆ ಇಸವಿಯ ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನ್ನು ಪುನಃ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಶ್ರೀಮತ್ ಮಹಾರಾಜಾ ಸಾಹೇಬ್ ಬಹದ್ದೂರ್ರವರು ಇದರಡಿ ಕಂಡಂತೆ ಹುಕುಂ ದಯಪಾಲಿಸಿರುತ್ತಾರೆ :—

3ನೆ ಪ್ರಕರಣದ ಕೊನೇ ಪ್ಯಾರಾಗೆ ಬದಲಾಗಿ ಈ ಕೆಳಗೆ ಬರುವುದನ್ನು ಸೇರಿಸಿಕೊಳ್ಳಬೇಕು :—

"ಫುಲ್‌ಬೆಂಚು" ಅಂದರೆ ಚೀಫ್ ಕೋರ್ಟಿನ ಮೂವರು ಜಡ್ಜಿಗಳಿಗೆ ಕಮ್ಮಿ ಇಲ್ಲದೆ ಇರತಕ್ಕ ಬೆಂಚು.

ಉದ್ದೇಶಗಳ ಮತ್ತು ಕಾರಣಗಳ ವಿವರ.

1908ನೆ ಇಸವಿ ನವಂಬರು 18ನೆ ತಾರೀಖಿನ ಜ್ಯು. 1408—ಕೋರ್ಟ್ಸ್ 114-08-1ನೆ ನಂಬರು ನೋಟಿಫಿಕೇಷನ್ನಲ್ಲಿ ಸಾದರಾಗಿರುವ ಸರ್ಕಾರಿ ಹುಕುಂನಂತೆ ಚೀಫ್ ಕೋರ್ಟಿನಲ್ಲಿ ಸ್ವಲ್ಪಕಾಲದ ವರಿವಿಗೆ 4 ಜನ ಜಡ್ಜಿಗಳಿರುವರು. 1884ನೆ ಇಸವಿಯ ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನ್ನ 3ನೆ ಪ್ರಕರಣದಲ್ಲಿ "ಫುಲ್‌ಬೆಂಚು" ಎಂಬುವುದು ಚೀಫ್ ಕೋರ್ಟಿನ ಜಡ್ಜಿಗಳನ್ನೆಲ್ಲಾ ಒಳಗೊಂಡಿರುವ ಬೆಂಚು ಎಂದು ವಿವರಿಸಿದೆ. ಈ ವಿವರಣೆಯನ್ನಿಟ್ಟುಕೊಂಡರೆ ಜಾರಿ ಕ್ರಮ ನಡಿಸುವಲ್ಲಿ ತೊಂದರೆಗೆ ಕಾರಣವಾಗುತ್ತದೆ; ಹ್ಯಾಗಂದರೆ 4 ಜಡ್ಜಿಗಳುಳ್ಳ ಫುಲ್‌ಬೆಂಚಿನಲ್ಲಿ ಸೇರುವ ಜಡ್ಜಿಗಳಲ್ಲಿ ಯಾವ ವಿಷಯದಲ್ಲಿಯಾಗಲಿ ಭಿನ್ನಾಭಿಪ್ರಾಯ ವುಂಟಾದರೆ ಅದನ್ನು ನಿರ್ಧರಿಸಲು ಹೆಚ್ಚು ಸಂಖ್ಯೆ (ಅಂದರೆ "ಮೆಜಾರಟಿ") ಇರದೆ ಹೋಗಬಹುದು.

ಇಂಡ್ಯಾ ದೇಶದ ಹೈ ಕೋರ್ಟುಗಳಲ್ಲಾದರೂ—ಫುಲ್‌ಬೆಂಚು ಅಂದರೆ ಆಯಾ ಕೋರ್ಟುಗಳ ಜಡ್ಜಿಗಳೆಲ್ಲಾ ಸೇರಬೇಕಾದ ಅವಶ್ಯಕವಿರುವದಿಲ್ಲಾ. ಕಲ್ಕತ್ತೆಯ ಫುಲ್‌ಬೆಂಚಿನಲ್ಲಿ 5 ಜನ ಜಡ್ಜಿಗಳು ಇತರ ಹೈ ಕೋರ್ಟುಗಳಲ್ಲಿ 3 ಜನ ಜಡ್ಜಿಗಳಿಗೆ ಕಮ್ಮಿ ಇಲ್ಲದಂತೆಯೂ ಇರುತ್ತಾರೆ. ಆದುದರಿಂದ ಫುಲ್ ಬೆಂಚನ್ನು 3 ಜಡ್ಜಿಗಳುಳ್ಳ ಬೆಂಚು ಎಂದು ವಿವರಿಸುವುದರಿಂದ ಸದರಿ ಪ್ರಕರಣವನ್ನು ತಿದ್ದುಪಾಟು ಮಾಡಬೇಕೆಂದು ಉದ್ದೇಶಿಸಿರುತ್ತದೆ.

1908ನೆ ಇಸವಿಯ VIನೆ ನಂಬರು ರೆಗ್ಯುಲೇಷನ್.

(1908ನೆ ಇಸವಿ ಡಿಸೆಂಬರು 26ನೆ ತಾರೀಖಿನ ದಿವಸ ಶ್ರೀಮತ್ ಮಹಾರಾಜಾ ಸಾಹೇಬ್ ಬಹದ್ದೂರ್ರವರು ಇದಕ್ಕೆ ಅನುಮತಿಯನ್ನು ದಯಪಾಲಿಸಿರುತ್ತಾರೆ).

1903ನೆ ಇಸವಿಯ 1ನೆ ನಂಬರು ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನ್ನು ತಿದ್ದುಪಾಟು ಮಾಡಲು ಹುಟ್ಟಿದ ಒಂದು ರೆಗ್ಯುಲೇಷನ್.

ಪೀಠಿಕೆ.

1903ನೆ ಇಸವಿ 1ನೆ ನಂಬರು ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಶ್ರೀಮತ್ ಮಹಾರಾಜಾ ಸಾಹೇಬ್ ಬಹದ್ದೂರ್ರವರು ಇದರಡಿ ಕಂಡಂತೆ ಕಾನೂನು ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ.

ರೆಜಿಸ್ಟ್ರೇಷನ್ ರೆಗ್ಯುಲೇಷನ್ನು 88ನೆ ಪ್ರಕರಣದ ತಿದ್ದುಪಾಟು.

(1) 88ನೆ ಪ್ರಕರಣದ 1ನೆ ಪ್ಯಾರಾದಲ್ಲಿ "ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳ ನಂತರ "ಅಥವಾ ಡೆಪ್ಯುಟಿ ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳನ್ನು ಸೇರಿಸಿಕೊಳ್ಳಬೇಕು.

(2) ಇದೇ ಪ್ರಕರಣದ 2ನೆ ಪ್ಯಾರಾದಲ್ಲಿ "ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳ ನಂತರ "ಅಥವಾ ಡೆಪ್ಯುಟಿ ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳನ್ನು ಸೇರಿಸಿಕೊಳ್ಳಬೇಕು.

ವಿ. ಪಿ. ಮಾಧವರಾವ್,

ದಿವಾನರವರು.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಷ್ ಆದ್ದು [ನಂ. 4.

ಬೆಂಗಳೂರು, ಗುರುವಾರ, ಜನವರಿ ತಾ|| 28, ಸನ್ 1909.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವು ಇಲಾಖಾ.

ಇಸ್ತಿಹಾರ್ ನಾಮೆ.

ನಂಬರು 6859—ಮ್ಯುನಿಸಿಪಲ್ 322-08-1.

ತಾರೀಖು 25ನೆ ಜನವರಿ 1909.

1906ನೆ ಇಸವಿಯ VIIನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ನಿನ 11 (c)ನೆ ಪ್ರಕರಣದಿಂದ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಇದೇ ವಿಷಯದಲ್ಲಿ ಜಾರಿಯಲ್ಲಿರುವ ನಿಬಂಧನೆಗಳನ್ನು ರದ್ದುಮಾಡಿ ಶ್ರೀಮತ್ ಮೈಸೂರು ಮಹಾರಾಜಾಸಾಹೇಬ್ಬ ಹದ್ದೂರ್ರವರ ಸರ್ಕಾರದವರು ಚುನಾವಣೆ ಪದ್ಧತಿಯು ಜಾರಿಯಲ್ಲಿ ತರಲ್ಪಟ್ಟಿರುವ ಪ್ರತಿ ಮ್ಯುನಿಸಿಪಾಲಿಟಿಯಲ್ಲಿಯೂ ಮ್ಯುನಿಸಿಪಲ್ ಕೌನ್ಸಿಲರುಗಳನ್ನು ಚುನಾಯಿಸುವ ಕಾಲದಲ್ಲಿ ಓಟರ್ಸ್ ಯಾ ಸಮ್ಮತಿ ಕೊಡುವವರಿಗೂ ಮತ್ತು ಸದರಿ ಕೌನ್ಸಿಲರ್ ಕೆಲಸಕ್ಕೆ ಉಮೇದುವಾರರಿಗೂ ಫಲಾನಾ ಯೋಗ್ಯತಾಪಕ್ಷಗಳಿರಬೇಕೆಂದು ವಿಧಾಯಕ ಮಾಡುವುದಕ್ಕೂ ಮತ್ತು ಅಂಥಾ ಚುನಾವಣೆಗಳ ನಡವಳಿಕೆಗಳನ್ನು ಕ್ರಮಪಡಿಸುವುದಕ್ಕೂ ಈ ಕೆಳಗಣ ನಿಬಂಧನೆಗಳನ್ನು ಮಂಜೂರ್ಮಾಡಲು ಹುಕುಂ ದಯಪಾಲಿಸಿರುತ್ತಾರೆ.

ಅವತರಣಿಕೆ.

ಈ ನಿಬಂಧನೆಗಳ ಹೆಸರು.

1. ಈ ನಿಬಂಧನೆಗಳನ್ನು "1909ನೆ ಇಸವಿಯ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳು," ಎಂದು ನಮೂದಿಸಬೇಕು.

ವಿವರಣೆಗಳು.

2. ಈ ನಿಬಂಧನೆಗಳಲ್ಲಿ (i) "ಒಂದು ಹೊಸ ಮ್ಯುನಿಸಿಪಾಲಿಟಿ" ಎಂದರೆ ಶ್ರೀಮತ್ ಮೈಸೂರು ಮಹಾರಾಜಾಸಾಹೇಬ್ಬ ಹದ್ದೂರ್ರವರ ಸರ್ಕಾರದವರಿಂದ ಹೊಸದಾಗಿ ಸ್ಥಾಪಿಸಲ್ಪಟ್ಟು ಪ್ರಥಮ ಮ್ಯುನಿಸಿಪಲ್ ಕೌನ್ಸಿಲರುಗಳು ಅವರ ಕೆಲಸಗಳನ್ನು ಇನ್ನೂ ಪ್ರಾರಂಭಿಸದೆ ಇರುವ ಮ್ಯುನಿಸಿಪಾಲಿಟಿ.

(ii) "ಡೆಪ್ಯುಟಿ ಕಮಿಷನರು" ಎಂದರೆ, ಷಹರು ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ಯಾವ ಡಿಸ್ಟ್ರಿಕ್ಟಿನಲ್ಲಿ ಆಯಾ ಮ್ಯುನಿಸಿಪಾಲಿಟಿ ಸ್ಥಾಪಿಸಲ್ಪಟ್ಟಿರುತ್ತದೆಯೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರು; ಮತ್ತು ಇತರ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ಈ ಮಾತುಗಳು ಡೆಪ್ಯುಟಿ ಕಮಿಷನರು ಈ ನಿಬಂಧನೆಗಳಿಗನುಸಾರವಾಗಿ ತಮಗೆ ಇರುವಂಥಾ ಅಧಿಕಾರಗಳ ಅಥವಾ ಕೆಲಸಗಳ ಪೈಕಿ ಯಾವುದನ್ನಾದರೂ ಇದೇ ನಿಬಂಧನೆಗಳ ಮೇರೆಗೆ ಅಧಿಕಾರ ಹೊಂದಿರುವಂತೆ ಯಾವ ಅಸಿಸ್ಟೆಂಟು ಕಮಿಷನರಿಗೆ ವಹಿಸಿ ಕೊಟ್ಟಿರುತ್ತಾರೆಯೋ ಅಂಥಾ ಅಸಿಸ್ಟೆಂಟು ಕಮ್ಮಿಷನರನ್ನು ಒಳಗೊಂಡಿರುತ್ತವೆ.

(iii) "ರೆಗ್ಯುಲೇಷನ" ಅಂದರೆ 1906ನೆ ಇಸವಿಯ VIIನೇ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ.

ಡಿವಿಜನಗಳು.

ಮ್ಯುನಿಸಿಪಾಲಿಟಿಗಳನ್ನು ಡಿವಿಜನಗಳಾಗಿ ಭಾಗಿಸಿ ಅವುಗಳಿಗೆ ಇಷ್ಟುಜನ ಕೌನ್ಸಿಲರುಗಳನ್ನು ಚುನಾಯಿಸಬೇಕೆಂದು ನಿರ್ಧರಿಸುವುದು.

3. (i) ಕೊನೇ ಖಾನೇಷುಮಾರಿಯಲ್ಲಿ ಗೊತ್ತುಮಾಡಿರುವಂತೆ ಒಂದು ಮ್ಯುನಿಸಿಪಾಲಿಟಿಯ ಜನ ಸಂಖ್ಯೆಯು 6,000 ಕ್ಕಿಂತ ಕಮ್ಮಿಯಾಗದೆ ಇದ್ದರೆ, ಒಂದು ಹೊಸ ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರೂ, ಮತ್ತು ಇತರ ಪ್ರತಿ ವಿಷಯದಲ್ಲಿಯೂ ಮ್ಯುನಿಸಿಪಲ್ ಕೌನ್ಸಿಲೂ, ಚುನಾವಣೆ ಉದ್ದಿಶ್ಯ ಸದರಿ ಮ್ಯುನಿಸಿಪಾಲಿಟಿಯನ್ನು 2 ಅಥವಾ ಹೆಚ್ಚು ಡಿವಿಜನಗಳಾಗಿ ವಿಭಾಗಿಸಬಹುದು; ಆ ಡಿವಿಜನಗಳ ಎಲ್ಲೆಗಳನ್ನು ಸ್ಪಷ್ಟವಾಗಿ ವಿವರಿಸಬೇಕು; ಮತ್ತು ಹಾಗೆ ವಿಭಾಗಿಸಿದ ಮೇಲೆ, ಆಯಾ ಡಿವಿಜನ್ನಿನ ಜನಸಂಖ್ಯೆ ಯಾ ಅಂದಾಜಾ ಜನಸಂಖ್ಯೆಗೂ ಆ ಒಟ್ಟು ಮ್ಯುನಿಸಿಪಾಲಿಟಿಯ ಜನಸಂಖ್ಯೆಗೂ ಎಷ್ಟು ದಾಮಾಷಾ ಇರುತ್ತೋ ಸಾಧ್ಯವಾದಷ್ಟು ಅದೇ ದಾಮಾಷಾ ಮೇರೆಗೆ ಚುನಾಯಿಸಲ್ಪಟ್ಟ ಕೌನ್ಸಿಲರುಗಳ ಪೈಕಿ ಆಯಾ ಡಿವಿಜನಗೆ ಇಷ್ಟಿಷ್ಟು ಜನ ಕೌನ್ಸಿಲರುಗಳಿರಬೇಕೆಂದು ನಿರ್ಧರಿಸಬಹುದು.

(ii) ಚುನಾವಣೆ ಬಗ್ಯಾಗಿ ಈಗ ಬೆಂಗಳೂರು ಮತ್ತು ಮೈಸೂರು ಷಹರುಗಳು ವಿಭಾಗಿಸಲ್ಪಟ್ಟ ಡಿವಿಜನಗಳನ್ನೂ ಆಯಾ ಡಿವಿಜನಗೆ ಈಗ ನಿರ್ಧರಿಸಿರುವ ಕೌನ್ಸಿಲರುಗಳ ಸಂಖ್ಯೆಯನ್ನೂ 1ನೇ ಕಲಂನಂತೆ ನಿರ್ಧರಿಸಿರುವಂತೆ ಭಾವಿಸಬೇಕು.

(iii) ಮ್ಯುನಿಸಿಪಲ್ ಕೌನ್ಸಿಲು ಆಗಿಂದಾಗ್ಯೆ ಡಿವಿಜನಗಳ ಸಂಖ್ಯೆಯನ್ನೂ ಮತ್ತು ಅವುಗಳ ಎಲ್ಲೆಗಳನ್ನೂ ಬದಲಾಯಿಸಬಹುದು, ಮತ್ತು ಆಯಾ ಡಿವಿಜನಗಳಿಗಿರುವ ಕೌನ್ಸಿಲರುಗಳ ಸಂಖ್ಯೆಯನ್ನೂ ಬದಲಾಯಿಸಿ ಬೇರೆ ವಿಧವಾಗಿ ವಿಧಿಸಬಹುದು. ಪರಂತು, ಸರ್ಕಾರದವರ ಮಂಜೂರಾತಿ ಇಲ್ಲದೆ ಅಂಥಾ ಯಾವ ಬದಲಾವಣೆಯೂ, ಅದು ಮಾಡಲ್ಪಟ್ಟ ತಾರೀಖಿನ ಲಾಗಾಯಿತು 6 ತಿಂಗಳುಗಳೊಳಗಾಗಿ ಜಾರಿಯಲ್ಲಿ ಬರಕೂಡದು; ಮತ್ತು ಕೌನ್ಸಿಲರುಗಳ ಸಂಖ್ಯೆಯನ್ನು ಬದಲಾಯಿಸಿ ಬೇರೆ ಸಂಖ್ಯೆಯನ್ನು ವಿಧಿಸುವುದು ಮೇಲ್ಕಂಡ ದಾಮಾಷಾ ಮೇರೆಗೆ ಮಾಡಲ್ಪಡಬೇಕು.

ಸಮ್ಮತಿ ಕೊಡುವವರ ಮತ್ತು ಉಮೇದುವಾರರ ಯೋಗ್ಯತಾಪಕ್ಷಗಳು.

ಸಮ್ಮತಿ ಕೊಡುವವರ ಯೋಗ್ಯತಾ ಪಕ್ಷಗಳು.

4. ರೆಗ್ಯುಲೇಷನಿನ 21ನೆ ಪ್ರಕರಣದ ಮೇರೆಗೆ 21 ವರುಷಗಳಿಗೆ ಕಮ್ಮಿ ಇದ್ದ ಸಬಬು ಯೋಗ್ಯರಲ್ಲದ ಹೊರ್ತು, ರೆಗ್ಯುಲೇಷನಿನ 12 (a) ಮತ್ತು (b) ಪ್ರಕರಣದ ಮೇರೆಗೆ ಸಮ್ಮತಿಕೊಡಲು ಯೋಗ್ಯರಾಗಿರುವವರೆಲ್ಲರೂ ಮತ್ತು ಈ ಕೆಳಗೆ ಕಂಡವರೂ ಗಂಡಸರಾಗಿದ್ದಲ್ಲಿ ಸಮ್ಮತಿ ಕೊಡುವವರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ದಾಖಲ್ ಮಾಡಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

(i) ಮೈಸೂರು ಚೀಫ್ ಕೋರ್ಟಿನಿಂದ ಸನ್ನದುಗಳನ್ನು ಹೊಂದಿರುವ ಮೊದಲನೇ ಮತ್ತು ಎರಡನೇ ಗ್ರೇಡ್ ಪ್ಲೀಡರುಗಳು.

(ii) ಇಂಡಿಯಾ ಸರ್ಕಾರದವರಿಂದಲೂ ಅಥವಾ ಶ್ರೀಮನ್ ಮೈಸೂರು ಮಹಾರಾಜಾ ಸಾಹೇಬ್ ಬಹದ್ದೂರ್ರವರಿಂದಲೂ ಬಿರುದುಗಳನ್ನು ಹೊಂದಿರುವವರು.

(iii) ಬೆಂಗಳೂರು ಮತ್ತು ಮೈಸೂರು ಷಹರುಗಳ ವಿಷಯದಲ್ಲಿ ಮಾಹೆಯಾನಾ 50 ರೂಪಾಯಿಗೆ ಕಮ್ಮಿ ಇಲ್ಲದ ತಲಬುಳ್ಳ ಸರ್ಕಾರಿ ನೌಕರರು, ಮತ್ತು 1895ನೆ ಇಸವಿಯ IIIನೆ ರೆಗ್ಯುಲೇಷನ ಪ್ರಕಾರ ರಿಜಸ್ಟರ್ಮಾಡಲ್ಪಟ್ಟ ಒಂದು ಪ್ರಸಿದ್ಧವಾದ ಸಮಾಜದಲ್ಲಿ, ಯಾ ಸಂಘದಲ್ಲಿ ಯಾ ಕಂಪೆನಿಯಲ್ಲಿ ಮಾಹೆಯಾನಾ 50 ರೂಪಾಯಿಗೆ ಕಮ್ಮಿಯಿಲ್ಲದ ತಲಬುಳ್ಳ ನೌಕರರು; ಮತ್ತು ಇತರ ಷಹರುಗಳ ವಿಷಯದಲ್ಲಿ 15 ರೂಪಾಯಿಗೆ ಕಮ್ಮಿ ಇಲ್ಲದ ತಲಬುಳ್ಳ ನೌಕರರು.

(iv) ಪಟೇಲಿ ಮತ್ತು ಶ್ಯಾನುಭೋಗಿ ಕೆಲಸಗಳನ್ನು ಚಲಾಯಿಸುತ್ತಿರುವ ಪಟೇಲರು ಮತ್ತು ಶಾನುಭೋಗರು.

ಮತ್ತು

(v) ಸರ್ಕಾರದಿಂದ ಅಥವಾ ಮೇಲ್ಕಂಡಂತೆ ರಿಜಿಸ್ಟರ್ಮಾಡಲ್ಪಟ್ಟ ಒಂದು ಪ್ರಸಿದ್ಧವಾದ ಸಮಾಜ, ಯಾ ಸಂಘ, ಯಾ ಕಂಪೆನಿಯಿಂದ ಮಾಹೆಯಾನಾ 15 ರೂಪಾಯಿಗೆ ಕಮ್ಮಿ ಇಲ್ಲದ ಪಿಂಚಿನ್ನು ಪಡೆಯುತ್ತಿರುವವರು. ಇವರುಗಳೆಲ್ಲರೂ ಸಮ್ಮತಿ ಕೊಡುವವರ ಪಟ್ಟಿಯನ್ನು ಪ್ರಸಿದ್ಧಪಡಿಸಿದ ತಾರೀಖಿಗೆ ಹಿಂದೆ 6 ತಿಂಗಳಿಗೆ ಕಮ್ಮಿಯಿಲ್ಲದೆ ಅವಿಚ್ಛಿನ್ನವಾಗಿ ಸದರಿ ಮ್ಯುನಿಸಿಪಾಲಿಟಿಯಲ್ಲಿ ವಾಸವಾಗಿರಬೇಕು.

(vi) ರೆಗ್ಯುಲೇಷನಿನ 12 (c)ನೆ ಪ್ರಕರಣದ ಮೇರೆಗೆ ಪ್ರತಿ ಮ್ಯುನಿಸಿಪಾಲಿಟಿಯ ವಿಷಯದಲ್ಲಿಯೂ ಒಂದು ಇಸ್ತಿಹಾರಿನ ಮೂಲಕ ಸರ್ಕಾರದವರು ವಿಧಾಯಕಮಾಡುವ ಮೊಬಲಗಿಗೆ ಕಮ್ಮಿ ಇಲ್ಲದ ಅಕ್ಟ್ರಾಯಿ ಯಾ ಟೋಲ್ ಎಂಬ ಸುಂಕಗಳ ಹೊರ್ತು ಇತರ ಮ್ಯುನಿಸಿಪಲ್ ತೆರಿಗೆಗಳನ್ನು ಸಮ್ಮತಿ ಕೊಡುವವರ ಪಟ್ಟಿಯನ್ನು ಪ್ರಸಿದ್ಧಪಡಿಸಿರುವ ತಾರೀಖಿಗೆ ಹಿಂದೆ 6 ತಿಂಗಳುಗಳ ವರೆಗಾದರೂ ಪಾವತಿ ಮಾಡಿರುವವರು.

(vii) ಒಂದು ಹೊಸ ಮ್ಯುನಿಸಿಪಾಲಿಟಿಯ ವಿಷದಲ್ಲಿ,

(a) ಸದರಿ ಮ್ಯುನಿಸಿಪಾಲಿಟಿಯಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರು ಈ ಬಗ್ಗೆ ನೇಮಕ ಮಾಡುವ ಇತರ ಆಫಿಸರು 250 ರೂಪಾಯಿ ಯಾ ಅದಕ್ಕಿಂತ ಹೆಚ್ಚಾಗಿ ಬಾಳತಕ್ಕದ್ದೆಂದು ಬೆಲೆ ಕಟ್ಟಿರತಕ್ಕ ಸ್ಥಿರಸ್ವತ್ತನ್ನು ಉಂಟಾಗಿರುವವರು;

(b) ಚುನಾವಣೆಗೆ ಹಿಂದಿನ ಸಾಲಿಗಾಗಿ 4 ರೂಪಾಯಿಗೆ ಕಮ್ಮಿ ಇಲ್ಲದ ಮೊಹತರ್ಫಾ ತೆರಿಗೆಯನ್ನು ಕೊಟ್ಟಿರುವವರೂ;

(c) ಸಮ್ಮತಿ ಕೊಡುವವರ ಪಟ್ಟಿಯನ್ನು ಪ್ರಸಿದ್ಧಪಡಿಸಿದ ತಾರೀಖಿಗೆ 6 ತಿಂಗಳುಗಳ ವರೆವಿಗಾದರೂ ಸದರಿ ಮ್ಯುನಿಸಿಪಾಲಿಟಿಯಲ್ಲಿ ಅವಿಚ್ಛಿನ್ನವಾಗಿ ವಾಸವಾಗಿದ್ದು ಸದರಿ ತಾರೀಖಿನ ಹಿಂದಿನ ರೆವಿನ್ಯೂ ಸಾಲಿಗೆ ಸರ್ಕಾರಕ್ಕಾಗಲಿ ಅಥವಾ ಒಬ್ಬ ಇನಾಮುದಾರರಿಗಾಗಲಿ 30 ರೂಪಾಯಿಗೆ ಕಮ್ಮಿ ಇಲ್ಲದ ಜಮಿಾನು ಕಂದಾಯ ಯಾ ತೆರಿಗೆಯನ್ನು ಕೊಟ್ಟಿರುವವರು.

ಪರಂತು—

(a) ಈ ನಿಬಂಧನೆಯಿಂದ ವಿಧಾಯಕವಾದ ಯಾವ ಯೋಗ್ಯತಾಪಕ್ಷವನ್ನಾದರೂ ಒಂದು ಅವಿಭಕ್ತ ಕುಟುಂಬವಾಗಲಿ, ಒಂದು ಕಂಪೆನಿ ಅಥವಾ ಅಂಗಡಿಯನ್ನು ಇಟ್ಟಿರುವ ಕೆಲವು ಜನಗಳ ಸಮುದಾಯವಲ್ಲದೆ, ಇತರ ಸಂಘ ಯಾ ಜನಸಮೂಹವಾಗಲಿ ಯಾವದಾದರೂ ಒಂದು ಕಟ್ಟಡ ಯಾ ಜಮಿಾನಿನ ಇಬ್ಬರು ಯಾ ಹೆಚ್ಚು ಜನ ಟ್ರಸ್ಟೀಗಳಾಗಲಿ ಹೊಂದಿದ್ದೇ ಆದರೆ, ಅಂಥಾ ಕುಟುಂಬಕ್ಕೆ, ಸಂಘಕ್ಕೆ, ಸಮೂಹಕ್ಕೆ ಅಥವಾ ಟ್ರಸ್ಟೀಗಳಿಗೆ ಸೇರಿದ ಜನಗಳಿಂದ ಕ್ರಮವಾಗಿ ಅಧಿಕಾರ ಹೊಂದಿರುವ ಯಾರಾದರೂ ಒಬ್ಬರೂ, ಮತ್ತು ಅಂಥಾ ಯೋಗ್ಯತಾಪಕ್ಷವನ್ನು ಒಂದು ಕಂಪೆನಿ ಯಾ ಅಂಗಡಿಯನ್ನು ಇಟ್ಟಿರುವ ಕೆಲವು ಜನರ ಸಮುದಾಯವು ಹೊಂದಿದ್ದರೆ, ಅದರ ಸ್ಥಳಿಕ ಮೆಂಬರು, ಮ್ಯಾನೇಜರು, ಅಥವಾ ಏಜೆಂಟರೂ ರೆಗ್ಯುಲೇಷನಿನ 21ನೆ ಪ್ರಕರಣದಮೇರೆಗೆ 21 ವರುಷಕ್ಕೆ ಕಮ್ಮಿ ವಯಸ್ಕನಾಗಿರುವ ಸಬಬು ಯೋಗ್ಯನಲ್ಲದವನಾದ ಹೊರ್ತು, ಅಂಥಾ ಕುಟುಂಬ, ಯಾ ಸಂಘ, ಯಾ ಸಮುದಾಯ, ಯಾ ಟ್ರಸ್ಟಿಗಳ, ಕಂಪೆನಿಯ ಯಾ ಅಂಗಡಿಯನ್ನು ಇಟ್ಟಿರುವ ಜನ ಸಮುದಾಯದ ತರಫು ಸಮ್ಮತಿ ಕೊಡುವವರ ಪಟ್ಟಿಯಲ್ಲು ತನ್ನ ಹೆಸರನ್ನು ದಾಖಲ್ಮಾಡಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

(b) ಯಾರ ಹೆಸರು (a) ನಿಯಮದ ಮೇರೆಗೆ ಸದರೀ ಪಟ್ಟಿಯಲ್ಲಿ ದಾಖಲಾಗಿರುತ್ತದೆಯೋ ಅಂಥಾವನು ಮೇಲೆ ಸೂಚಿಸಿರುವಂತೆ ವಿಧಾಯಕವಾದ ಯಾವುದಾದರೊಂದು ಯೋಗ್ಯತೆಯನ್ನು ಸ್ವಂತವಾಗಿ ಪಡೆದಿದ್ದಲ್ಲಿ ಆತನು ಸದರೀ ಪಟ್ಟಿಯಲ್ಲಿ ತನ್ನ ಹೆಸರನ್ನು ಪ್ರತ್ಯೇಕವಾಗಿ ದಾಖಲ್ ಮಾಡಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(c), (b) ನಿಯಮದಲ್ಲಿ ಹೇಳಿರುವ ಸಂದರ್ಭದಲ್ಲಿ ವಿನಾ ಯಾವ ಮನುಷ್ಯನೇ ಆಗಲಿ ಈ ನಿಬಂಧನೆಯಲ್ಲಿ ಯಾ ರೆಗ್ಯುಲೇಷನಿನ 12ನೆ ಪ್ರಕರಣದಲ್ಲಿ ವಿಧಿಸೋಣವಾಗಿರುವ ಎರಡು ಅಥವಾ ಹೆಚ್ಚು ತರಹೆಯ ಯೋಗ್ಯತೆಗಳನ್ನು ಪಡೆದಿದ್ದರೂಕೂಡ ಒಂದಕ್ಕಿಂತ ಹೆಚ್ಚು ಸಮ್ಮತಿಯನ್ನು ಕೊಡಲು ಹಕ್ಕುಳ್ಳವನಾಗಿರಕೂಡದು.

ಸಮ್ಮತಿ ಕೊಡುವವರು ಒಂದು ಡಿವಿಜನ್ನಿನಲ್ಲಿ ಮಾತ್ರ ಸಮ್ಮತಿ ಕೊಡಲು ಹಕ್ಕುಳ್ಳವರಾಗಿರತಕ್ಕದ್ದು.

5. ಯಾವುದೊಂದು ಮ್ಯುನಿಸಿಪಾಲಿಟಿಯಾಗಲೀ ಮೆಂಬರುಗಳ ಚುನಾವಣೆಯ ಬಗ್ಗೆ ಡಿವಿಜನ್‌ಗಳಾಗಿ ವಿಭಾಗಿಸಲ್ಪಟ್ಟದ್ದಲ್ಲಿ ಪ್ರತಿಯೊಬ್ಬ ಸಮ್ಮತಿ ಕೊಡುವವರೂ ತಾನು ವಾಸವಾಗಿರುವ ಡಿವಿಜನ್ನಿನಲ್ಲಿ ಸಮ್ಮತಿ ಕೊಡಲು ಹಕ್ಕುಳ್ಳವರಾಗಿರತಕ್ಕದ್ದು; ಅಥವಾ ಮ್ಯುನಿಸಿಪಲ್ ತೆರಿಗೆಯನ್ನು ಪಾವತಿ ಮಾಡುವ ಕಾರಣದಿಂದ ಸಮ್ಮತಿ ಕೊಡುವ ಯೋಗ್ಯತೆಯು ಉಂಟಾಗಿದ್ದರೆ ಯಾವ ಡಿವಿಜನ್ನಿನಲ್ಲಿ ಆತನು ತೆರಿಗೆಯನ್ನು ಕೊಡಬೇಕಾಗಿದೆಯೋ ಆ ಡಿವಿಜನ್ನಿನಲ್ಲಿ ಸಮ್ಮತಿ ಕೊಡಲು ಹಕ್ಕುಳ್ಳವನಾಗಿರತಕ್ಕದ್ದು: ಪರಂತು.

(a) ಯಾವನೊಬ್ಬನಾಗಲೀ ಒಂದಕ್ಕಿಂತ ಹೆಚ್ಚು ಡಿವಿಜನ್‌ಗಳಲ್ಲಿ ಸಮ್ಮತಿ ಕೊಡಲು ಹಕ್ಕುಳ್ಳವನಾಗಿರಕೂಡದು;

(b) ಒಂದಕ್ಕಿಂತ ಹೆಚ್ಚು ಡಿವಿಜನ್ನುಗಳ ವಿಷಯದಲ್ಲಿ ಓಟರ್ ಯಾ ಸಮ್ಮತಿ ಕೊಡುವವನು ಆಗಲು ಯೋಗ್ಯತೆಗಳನ್ನು ಪಡೆದಿರುವ ಯಾವನೊಬ್ಬನಾಗಲೀ ಸದರೀ ಡಿವಿಜನ್‌ಗಳ ಪೈಕಿ ಯಾವುದಕ್ಕಾಗಿ ತಾನು ಓಟ್ ಯಾ ಸಮ್ಮತಿ ಕೊಡಲು ಹಕ್ಕುಳ್ಳವನಾಗಿರತಕ್ಕದ್ದೆಂದು ತಾನೇ ನಿರ್ಧರಿಸಬಹುದು. ಅಂಥಾವರೆಲ್ಲರೂ ತಮ್ಮ ಇಷ್ಟಬಂದಂತೆ ನಿರ್ಧರಿಸಬೇಕೆಂದು ಬಹಿರಂಗವಾದ ಪ್ರಕಟನೆಯ ಮೂಲಕ ಫಾಯಿಷ್ ಮಾಡಿದ ಒಂದು ವಾರದೊಳಗಾಗಿ ಆತನು ನಿರ್ಧರಿಸದೆ ತಪ್ಪಿದಲ್ಲಿ ಮ್ಯುನಿಸಿಪಲ್ ಕೌನ್ಸಿಲಿನವರಾಗಲೀ ಅಥವಾ ಹೊಸ ಮ್ಯುನಿಸಿಪಾಲಿಟಿಯಾಗಿದ್ದಲ್ಲಿ ಡೆಪ್ಯುಟಿ ಕಮಿಷನರವರಾಗಲೀ ನಿರ್ಧರಿಸಬಹುದಾದ ಡಿವಿಜನ್ನಿನಲ್ಲಿ ಓಟ್‌ಕೊಡಲು ಹಕ್ಕುಳ್ಳವನಾಗಿರತಕ್ಕದ್ದು.

ಮ್ಯುನಿಸಿಪಲ್ ಮೆಂಬರುಗಳಾಗಿ ಚುನಾಯಿಸಲ್ಪಡಲು ಯಾರು ಯಾರು ಉಮೇದುವಾರರಾಗಿರಬಹುದು?

6. i) ಈ ಕೆಳಗೆ ವಿವರಿಸಿರುವ ತರಗತಿಗಳಿಗೆ ಸೇರಿದ ಓಟರುಗಳು ಅನಕ್ಷರಸ್ಥರಾಗಿ ಯಾ ಈ ರೆಗ್ಯುಲೇಷನಿನ 15ನೆ ಪ್ರಕರಣಾನುಸಾರ ಯೋಗ್ಯತೆಯನ್ನು ಪಡೆಯದವರಾಗಿ ಇದ್ದರೆ ಹೊರತು ಚುನಾವಣೆಯ ಕಾಲದಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ಚುನಾಯಿಸಲ್ಪಡಲಿಕ್ಕೆ ಉಮೇದುವಾರರಾಗಿರಲು ಅರ್ಹರಾಗಿರತಕ್ಕದ್ದು :—

(a) ರೆಗ್ಯುಲೇಷನಿನ ಪ್ರಕರಣ 12(a), (b) ಯಲ್ಲಿ ಸೂಚಿಸಲ್ಪಟ್ಟಿರುವಂಥಾವರು ;

(b) ಹಿಂದೆ ನಾಲ್ಕನೆ ನಿಬಂಧನೆಯ (i), (ii), (iv)ನೆ ಪ್ಯಾರಾಗಳಲ್ಲಿ ಸೂಚಿಸಲ್ಪಟ್ಟಿರುವಂಥಾವರು ;

(c) ಮೇಲೆ ಹೇಳಿದ ನಿಬಂಧನೆಯ (iii)ನೆ ಪ್ಯಾರಾದಲ್ಲಿ ವಿವರಿಸಲ್ಪಟ್ಟಿರುವಂಥಾವರು ; ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ಇವರುಗಳ ತಲಬು 100 ರೂಪಾಯಿಗಳಿಗಿಂತಲೂ, ಇತರ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ 40 ರೂಪಾಯಿಗಳಿಗಿಂತಲೂ ಕಡಮೆಯಾಗಿರಕೂಡದು ;

(d) ಹಿಂದೆ 4ನೆ ನಿಬಂಧನೆಯ (v)ನೆ ಪ್ಯಾರಾದಲ್ಲಿ ವಿವರಿಸಿರುವ ತರಹೆಯ ಪಿಂಚನ್‌ದಾರರು ; ಪರಂತು ಇವರುಗಳ ಪಿಂಚನ್ ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ 50 ರೂಪಾಯಿಗಿಂತಲೂ, ಇತರ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ 15 ರೂಪಾಯಿಗಿಂತಲೂ ಕಡಮೆಯಾಗಿರಕೂಡದು ;

(e) ಪ್ರತಿಯೊಂದು ಮ್ಯುನಿಸಿಪಾಲಿಟಿಯ ವಿಷಯದಲ್ಲಿಯೂ ಸರ್ಕಾರದವರು ನಿರ್ಣಯಿಸಬಹುದಾದಷ್ಟಕ್ಕಿಂತ ಕಡಮೆ ಇಲ್ಲದಷ್ಟು ಮ್ಯುನಿಸಿಪಲ್ ತೆರಿಗೆಗಳನ್ನು ಪಾವತಿ ಮಾಡುತ್ತಿರುವಂಥಾವರು ;

(f) ಹೊಸ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ—

(1) (a), (b), (c), (d) ಕಲಮುಗಳಲ್ಲಿ ವಿವರಿಸಲ್ಪಟ್ಟಿರುವವರೆಲ್ಲರೂ ;

(2) 600 ರೂಪಾಯಿಗಿಂತ ಕಡಮೆ ಇಲ್ಲದ ಬೆಲೆಯುಳ್ಳದ್ದೆಂದು ಅಂದಾಜಾಗಿರುವ ಸ್ಥಿರ ಸ್ವತ್ತಿನ ಮಾಲೀಕರಾಗಿರುವಂಥಾವರು ;

(3) ಚುನಾವಣೆಯ ಹಿಂದಣ ವರ್ಷಕ್ಕಾಗಿ 8 ರೂಪಾಯಿಗೆ ಕಡಮೆ ಇಲ್ಲದಷ್ಟು ಮೊಹತರ್ಫಾ ತೆರಿಗೆಯನ್ನು ಕೊಟ್ಟಿರತಕ್ಕವರು ; ಮತ್ತು

(4) ಓಟರುಗಳ ಪಟ್ಟಿಯು ಖಾಯಿಷ್ ಆದ ಹಿಂದಣ ರೆವಿನ್ಯೂ ಸಾಲಿಗಾಗಿ 60 ರೂಪಾಯಿಗೆ ಕಡಮೆ ಇಲ್ಲದ ಮೊಬಲಗನ್ನು ಜಮೀನು ಕಂದಾಯವಾಗಿ ಅಥವಾ ತೆರಿಗೆಯಾಗಿ ಪಾವತಿ ಮಾಡಿರತಕ್ಕವರು.

(ii) ಚುನಾವಣೆಯ ಉದ್ದೇಶಕ್ಕಾಗಿ ಮ್ಯುನಿಸಿಪಾಲಿಟಿಯನ್ನು ಡಿವಿಜನ್ನುಗಳಾಗಿ ವಿಭಾಗಿಸಿದ್ದಲ್ಲಿ ಒಂದು ಡಿವಿಜನ್ನಿನಲ್ಲಿ ಓಟ್ ಕೊಡಲು ಅರ್ಹತೆಯುಂಟೆಂಬ ಬಗ್ಗೆ ಯಾರ ಹೆಸರನ್ನು ಓಟರುಗಳ ಪಟ್ಟಿಯಲ್ಲಿ ದಾಖಲ್ ಮಾಡಿರುತ್ತದೆಯೋ ಅಥವಾ ಯಾನು ಯಾವ ಡಿವಿಜನ್ನಿಗಾಗಿ ತನ್ನ ಹೆಸರು ದಾಖಲಾಗಿರುತ್ತದೆಯೋ ಆ ಡಿವಿಜನ್ನಿನಲ್ಲಿಯಾಗಲೀ ಬೇರೊಂದು ಡಿವಿಜನ್ನಿನಲ್ಲಿಯಾಗಲೀ ಚುನಾವಣೆಯ ಬಗ್ಗೆ ಉಮೇದುವಾರನಾಗಬಹುದು.

ಓಟರುಗಳ ಮತ್ತು ಉಮೇದುವಾರರ ಪಟ್ಟಿ.

ಯಾರಿಂದ, ಹೇಗೆ ಮತ್ತು ಯಾವ ಕಾಲಗಳಲ್ಲಿ ಓಟರುಗಳ ಮತ್ತು ಉಮೇದುವಾರರ ಪಟ್ಟಿಯು ತಯಾರಾಗಬೇಕು?

7. (i) ಡೆಪ್ಯುಟಿ ಕಮಿಷನರವರು ಆಗಿಂದಾಗ ಮ್ಯುನಿಸಿಪಲ್ ಕೌನ್ಸಿಲಿನ ಒಬ್ಬ ಆಫಿಸರನ್ನಾಗಲೀ ಅಥವಾ ಹೊಸ ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಅವರಿಗೆ ಅರ್ಹರೆಂದು ತೋರುವ ಯಾರನ್ನಾಗಲೀ ಓಟರುಗಳ ಪಟ್ಟಿಯನ್ನು ತಯಾರ್ಮಾಡುವುದಕ್ಕಾಗಿ ಮೊಕರರ್ಮಾಡಬಹುದು. ಈ ಪಟ್ಟಿಯಲ್ಲಿ ನಮೂದಿರುವವರ ಪೈಕಿ ಯಾರ್ಯಾರು ಚುನಾವಣೆ ಕಾಲದಲ್ಲಿ ಉಮೇದುವಾರರಾಗಲು ಲಾಯಖ್ ಆಗಿರುತ್ತಾರೆಂಬುವುದನ್ನು ತೋರಿಸಬೇಕು.

(ii) ಚುನಾವಣೆಯ ಬಗ್ಗೆ ಮ್ಯುನಿಸಿಪಾಲಿಟಿಯನ್ನು ಡಿವಿಜನ್ನುಗಳಾಗಿ ವಿಭಾಗಿಸಿದ್ದಲ್ಲಿ ಮೇಲ್ಕಂಡ ಪಟ್ಟಿಯಲ್ಲಿ ಪ್ರತಿ ಡಿವಿಜನ್ನಿನಲ್ಲಿಯೂ ಓಟ್ ಕೊಡಲು ಅರ್ಹರಾದವರ ಹೆಸರುಗಳನ್ನು ನಮೂದಿಸತಕ್ಕದ್ದು.

(iii) ಯಾವುದಾದರೊಂದು ಮ್ಯುನಿಸಿಪಾಲಿಟಿಯು ಹೊಸ ಮ್ಯುನಿಸಿಪಾಲಿಟಿಯಾಗಿರಲಿ ಇಲ್ಲದಿರಲಿ ಅದಕ್ಕೆ ಈ ನಿಬಂಧನೆಗಳು ಜಾರಿಗೆ ಬಂದನಂತರ ಕೌನ್ಸಿಲರುಗಳನ್ನು ಮೊದಲನೇಸಾರಿ ಚುನಾಯಿಸಿ ಮೊಕರರ್ಮಾಡಬೇಕಾಗಿರುವ ಸಂದರ್ಭದಲ್ಲಿ ಸದರೀ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಅಂಥಾ ಕೌನ್ಸಿಲರುಗಳೆಲ್ಲರು ಅಥವಾ ಅವರಪೈಕಿ ಕೆಲವರು ಸೇರಿರಬೇಕೆಂದು ಸರ್ಕಾರದವರು ಫಾಯಿಷ್ ಮಾಡಿದನಂತರ ಸಾಧ್ಯವಾದಷ್ಟು ಜಾಗ್ರತೆಯಾಗಿ ಮೇಲ್ಕಂಡ ಪಟ್ಟಿಯನ್ನು ತಯಾರ್ಮಾಡಿಸಬೇಕು.

(iv) ಇದರಂತೆಯೇ ವರ್ಷೇವರ್ಷೇ ಹೊಸಹೊಸ ಪಟ್ಟಿಗಳನ್ನು ಮೇಲೆ ಹೇಳಿದಂತೆ ಮ್ಯುನಿಸಿಪಾಲಿಟಿಯ ಒಬ್ಬ ಆಫಿಸರರಿಂದ ತಯಾರ್ಮಾಡಿಸಬೇಕು. ಈ ನಿಯಮವು ಬೆಂಗಳೂರು ಮೈಸೂರುಗಳ ಸಿಟಿ ಮ್ಯುನಿಸಿಪಲ್ ಕೌನ್ಸಿಲುಗಳಿಗೂ ಅನ್ವಯಿಸತಕ್ಕದ್ದು.

ಪಟ್ಟಿಗಳನ್ನು ಪ್ರಸಿದ್ಧಪಡಿಸೋಣ.

8 (i) 4ನೆ ನಿಬಂಧನೆಯ ಮೇರೆಗೆ ತಯಾರಾದ ಯಾವುದೊಂದು ಪಟ್ಟಿಯನ್ನಾಗಲೀ ಪ್ರಸಿದ್ಧಪಡಿಸುವ ಕ್ರಮ ಹೇಗೆಂದರೆ—

ಸದರೀ ಪಟ್ಟಿಯ ನಕಲನ್ನು ಸಿಟಿ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ಕನ್ನಡ, ಇಂಗ್ಲಿಷ್—ಈ ಎರಡು ಭಾಷೆಗಳಲ್ಲಿಯೂ, ಇತರ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ಸಾಮಾನ್ಯವಾಗಿ ಕನ್ನಡದಲ್ಲಿ ಮಾತ್ರವೂ, ಡೆಪ್ಯುಟಿ ಕಮಿಷನರಾಗಲೀ ಮ್ಯುನಿಸಿಪಲ್

ಕೌನ್ಸಿಲಿನವರಾಗಲೀ ಅಗತ್ಯವೆಂದು ಭಾವಿಸುವಪಕ್ಷ ಇಂಗ್ಲೀಷಿನಲ್ಲಿಯೂ ಸಹ ತಯಾರುಮಾಡಿಸಿ ಆ ನಕಲನ್ನು ಮ್ಯುನಿಸಿಪಲ್ ಆಫೀಸಿನಲ್ಲಿ ಅಥವಾ ಹೊಸ ಮ್ಯುನಿಸಿಪಾಲಿಟಿಯಾದರೆ ಚಾವಡಿಯಲ್ಲಿಯೂ ಮತ್ತು ಮ್ಯುನಿಸಿಪಾಲಿಟಿಯವರಾಗಲೀ ಅಥವಾ (ಹೊಸ ಮ್ಯುನಿಸಿಪಾಲಿಟಿಯಾದರೆ) ಡೆಪ್ಯುಟಿ ಕಮಿಷನರವರಾಗಲೀ ಈ ಕೆಳಗೆ ವಿಧಾಯಕವಾಗಿರುವ ತಾರೀಖಿಗಿಂತ ಕನಿಷ್ಠಪಕ್ಷ 2 ತಿಂಗಳು ಮುಂಚೆ ನಿರ್ಧರಿಸಬಹುದಾದ ಮ್ಯುನಿಸಿಪಲ್ ಸರಹದ್ದಿನೊಳಗಾಗಿ ಇರುವ ಬೇರೆ ಯಾವುದಾದರೂ ಪ್ರದೇಶಗಳಲ್ಲಿ ಚಿಕಟಾಯಿಸಬೇಕು. ಅಂಥಾ ತಾರೀಖು ಯಾವುದೆಂದರೆ :—

(a) ಹಾಲಿ ಮ್ಯುನಿಸಿಪಾಲಿಟಿಯಾಗಿದ್ದು ಅದರ ವಿಚಾರವಾಗಿ ಸರ್ಕಾರದವರು ರೆಗ್ಯುಲೇಷನಿನ 11ನೆ ಪ್ರಕರಣಾನುಸಾರ ಹೊಸ ಏರ್ಪಾಡನ್ನು ಪ್ರಕಟಿಸಿದ್ದರೆ ಅಂಥಾ ಮ್ಯುನಿಸಿಪಾಲಿಟಿಯ ಹೊಸ ಏರ್ಪಾಡು ಜಾರಿಗೆ ಬರುವುದಕ್ಕಾಗಿ ಸರ್ಕಾರದವರು ನಿರ್ಧರಿಸಿರುವ ತಾರೀಖು ;

(b) ಹೊಸ ಮ್ಯುನಿಸಿಪಾಲಿಟಿಯಾದರೆ ಪ್ರಥಮ ಮ್ಯುನಿಸಿಪಲ್ ಕೌನ್ಸಿಲರುಗಳ ಕೆಲಸವು ಯಾವ ತಾರೀಖಿನ ಲಾಗಾಯಿತು ಆರಂಭವಾಗಬೇಕೆಂದು ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದಂತೆ ನಿರ್ಧರಿಸುವರೋ ಆ ತಾರೀಖು ; ಮತ್ತು

(c) ಮೊದಲಿನ ಅನಂತರ ತಯಾರುಮಾಡಲ್ಪಡುವ ಓಟರುಗಳ ಪಟ್ಟಿಗಳ ವಿಚಾರವಾಗಿ ಜರ್ನಲ್ ಗುರ್ರೇ ತಾರೀಖಿನ ನಂತರ ; ಅಥವಾ ಸರ್ಕಾರದವರು ಯಾವ ತಾರೀಖನ್ನು ನಿರ್ಧರಿಸಿ ಆಬಗ್ಗೆ ನೋಟೀಸು ಕೊಟ್ಟು ಮ್ಯುನಿಸಿಪಲ್ ಆಫೀಸಿನಲ್ಲಿ ಸದರಿ ನೋಟೀಸನ್ನು ಚಿಕಟಾಯಿಸುತ್ತಾರೆಯೋ ಆ ತಾರೀಖು.

(ii) ಷಹರು ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ 4ನೆ ನಿಬಂಧನೆಯ ಮೇರೆಗೆ ತಯಾರುಮಾಡಿಸಲ್ಪಟ್ಟ ಪಟ್ಟಿಯನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಸಿದ್ಧಪಡಿಸಬೇಕು.

ಪಟ್ಟಿಗಳನ್ನು ಪುನರ್ವಿಮರ್ಶೆ ಮಾಡುವದು.

9 (i) ಮೇಲ್ಕಂಡಮೇರೆಗೆ ಪ್ರಕಟಿಸಲ್ಪಟ್ಟ ಓಟರ್ಸ್‌ಯಾನೆ ಸಮ್ಮತಿ ಕೊಡುವವರ ಹೆಸರುಗಳು ದಾಖಲಾಗಿರುವ ಪಟ್ಟಿಯಲ್ಲಿ ತನ್ನ ಹೆಸರು ದಾಖಲ್ಮಾಡಿ ಇರುವದಿಲ್ಲವೆಂದೂ ತಿಳಿದು ಸದರೀ ಪಟ್ಟಿಗೆ ಸೇರತಕ್ಕದ್ದಕ್ಕೆ ತಾನು ಅರ್ಹನಾದ್ದರಿಂದ ತನ್ನ ಹೆಸರನ್ನು ಅದರಲ್ಲಿ ಸೇರಿಸಿಕೊಳ್ಳಬೇಕೆಂದೂ ಅಪೇಕ್ಷಿಸುವ ಯಾವ ಮನುಷ್ಯನಾದರೂ, ಸದರೀ ಪಟ್ಟಿಯಲ್ಲಿ ಹೆಸರು ದಾಖಲಾಗಿದ್ದು ತನ್ನ ಹೆಸರನ್ನು ಚುನಾಯಿಸಲ್ಪಡತಕ್ಕ ಉಮೇದವಾರರಂತೆ ದಾಖಲ್ಮಾಡಿಕೊಳ್ಳುವದಕ್ಕೆ ಅರ್ಹನಾಗಿದ್ದಾಗ್ಯೂ ಅದರಂತೆ ದಾಖಲ್ಮಾಡಿಕೊಂಡಿಲ್ಲವೆಂದು ತಿಳಿದ ಯಾವ ಮನುಷ್ಯನಾದರೂ, ಮತ್ತು ಸದರಿ ಪಟ್ಟಿಯಲ್ಲಿ ದಾಖಲಾಗಿರುವ ಯಾರಾದರೂ ಸರಿಯೆ ಅದರಲ್ಲಿ ಇತರ ಯಾವ ಮನುಷ್ಯನ ಹೆಸರನ್ನಾಗಲಿ ಸಮ್ಮತಿ ಕೊಡತಕ್ಕದ್ದಕ್ಕೆ ಅರ್ಹನಾದವನೆಂತಲೂ ಅಥವಾ ಸಮ್ಮತಿಕೊಡುವದಕ್ಕೂ ಮತ್ತು ಚುನಾವಣಿಗೂ ಅರ್ಹನಾದವನೆಂತಲೂ, ತಪ್ಪಾಗಿ ದಾಖಲ್ಮಾಡಿರುತ್ತೆಂದು ತನಗೆ ತಿಳಿದರೆ ಆತನು ಸದರಿ ಪಟ್ಟಿ ಘಾಯಿಷ್ಮಾಡಲ್ಪಟ್ಟ ತಾರೀಖು ಲಾಗಾಯಿತು 14 ದಿವಸಗಳೊಳಗಾಗಿ ಸದರಿ ಪಟ್ಟಿಯನ್ನು ತಯಾರುಮಾಡುವದಕ್ಕಾಗಿ 4ನೆ ನಿಬಂಧನೆ ಪ್ರಕಾರ ನೇಮಿಸಲ್ಪಟ್ಟ ಆಫೀಸರುಗಳಾಗಲಿ ಅಥವಾ ಇತರ ಮನುಷ್ಯರಿಗಾಗಲಿ ಸದರಿ ಪಟ್ಟಿಯನ್ನು ಸರಿಪಡಿಸಬೇಕೆಂದು ಲಿಖಿತ ಮೂಲಕವಾಗಿ ಅರ್ಜಿಯನ್ನು ಬರೆದುಕೊಳ್ಳತಕ್ಕದ್ದು.

(ii) ಮೇಲ್ಕಂಡ ರೀತಿಯಲ್ಲಿ ನೇಮಿಸಲ್ಪಟ್ಟ ಆಫೀಸರರು ಅಥವಾ ಇತರರು ತಕ್ಷಣವೇ ಇಂಥಾ ಅರ್ಜಿಯನ್ನು ತಮ್ಮ ರಿಪೋರ್ಟಿನ ಸಹಿತಾ ಮ್ಯುನಿಸಿಪಲ್ ಕೌನ್ಸಿಲ್ ಫೈಸಲ್ ಬಗ್ಯೆ ಕಳುಹಿಸಿಕೊಡಬೇಕು. ಅಥವಾ ಅದು ಹೊಸ ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟದ್ದಾಗಿದ್ದರೆ, ಅದನ್ನು ಡೆಪ್ಯುಟಿ ಕಮಿಷನರವರ ಫೈಸಲ್ ಬಗ್ಯೆ ಕಳುಹಿಸಬೇಕು.

(iii) ಈ ಪಟ್ಟಿಯನ್ನು ತಯಾರುಮಾಡುವದಕ್ಕಾಗಿ ನೇಮಕವಾದ ಆಫೀಸರರು ಅಥವಾ ಇತರರು ಸಹಾ ಸದರಿ ಪಟ್ಟಿ ಘಾಯಿಷಾದ ತಾರೀಖು ಲಾಗಾಯಿತು 14 ದಿವಸಗಳೊಳಗಾಗಿ ಸಂಬಂಧಪಟ್ಟವರು ಈ ವಿಷಯದಲ್ಲಿ ಅರ್ಜಿ ಕೊಡದೆ ಇದ್ದಾಗ್ಯೂ ತಾವೇನೇ ಸದರೀ ಪಟ್ಟಿಯಲ್ಲಿ ಅವಶ್ಯಕವೆಂದು ತಮಗೆ ತೋರುವ ಹೆಚ್ಚು ಅಂಶಗಳನ್ನು ಅಥವಾ ತಿದ್ದುಪಾಟುಗಳನ್ನು ಮ್ಯುನಿಸಿಪಲ್ ಕೌನ್ಸಿಲಿನ ತಿಳುವಳಿಕೆಗಾಗಲಿ, ಅಥವಾ ಹೊಸ ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟದ್ದರೆ ಡೆಪ್ಯುಟಿ ಕಮಿಷನರವರ ತಿಳುವಳಿಕೆಗಾಗಲಿ ತರಬಹುದು.

(iv) (i) ನೆ ಉಪಪ್ರಕರಣದ ಮೇರೆಗೆ ಬಂದ ಅರ್ಜಿವಿಷಯದಲ್ಲಿಯೂ ಮತ್ತು (iii)ನೆ ಉಪಪ್ರಕರಣ ಪ್ರಕಾರ ಬಂದ ಸೂಚನೆ ವಿಷಯದಲ್ಲಿಯೂ ಸಹಾ ಮುನಿಸಿಪಲ್ ಕೌನ್ಸಿಲರವರಾಗಲಿ ಅಥವಾ ಡೆಪ್ಯುಟಿ ಕಮಿಷನರವರಾಗಲಿ ಸಂಬಂಧಪಟ್ಟ ಜನಗಳಿಗೆ ನೋಟೀಸು ಮೂಲಕ ಸದರಿ ಸಂಗತಿಯನ್ನು ತಿಳಿಯಪಡಿಸಬೇಕು. ಮತ್ತು ಇಂಥಾ ಅರ್ಜಿ ವಿಷಯವನ್ನು ಅಥವಾ ಸೂಚನೆ ವಿಷಯವನ್ನು ಮ್ಯುನಿಸಿಪಲ್ ಕೌನ್ಸಿಲ್‌ನವರು ಮುಂದಿನ ಮೀಟಿಂಗಿನಲ್ಲಿಯೂ, ಡೆಪ್ಯುಟಿ ಕಮ್ಮಿಷನರವರು ತಮ್ಮಿಂದ ಕೊಡಲ್ಪಟ್ಟ ನೋಟೀಸಿನಲ್ಲಿ ನಮೂದಾದ ಸಾಧ್ಯವಾದಷ್ಟು ಜಾಗ್ರತೆಯಾಗಿ ಒಂದು ತಾರೀಖಿನಲ್ಲಿಯೂ, ಆಲೋಚನೆಯಿಂದ ಫೈಸಲ್ಮಾಡಬೇಕು. ಈ ರೀತಿ ಫೈಸಲಾದ ಪ್ರತಿ ಹುಕುಮಿನ ನಕಲನ್ನು ಅರ್ಜಿ ಬರದುಕೊಂಡವನಿಗೆ ಸಾವಕಾಶ ಮಾಡದೆ ಕಳುಹಿಸಿಕೊಡಬೇಕು ; ಮತ್ತು ಅರ್ಜಿ ಬಂದದ್ದರ ಮೇಲಾಗಲಿ ಅಥವಾ ಸೂಚನೆ ಹೇಳಲ್ಪಟ್ಟ ಮೇಲಾಗಲಿ ಆದ ಪ್ರತಿ ಒಂದು ಆರಡರ್ ನಕಲನ್ನೂ ಸಾವಕಾಶ ಮಾಡದೆ, ಸಮ್ಮತಿಕೊಡತಕ್ಕವರ ಪಟ್ಟಿಯಿಂದ ಯಾರ ಹೆಸರು ವಜಾಮಾಡಬೇಕೆಂದು ಹುಕುಮಾಗಿರತ್ತೋ ಅಂಥಾ ಪ್ರತಿ ಒಬ್ಬರಿಗೂ ಅಥವಾ ಚುನಾವಣಿಕಾಲದಲ್ಲಿ ಉಮೇದವಾರರಾಗುವದಕ್ಕೆ ಅನರ್ಹರೆಂದು ಹೇಳಲ್ಪಡುವವರಿಗೂ ಸಹಾ ಕಳುಹಿಸಿಕೊಡಬೇಕು.

(v) ಇಂಥಾ ಅರ್ಜಿಮೇಲೆಯೂ ಅಥವಾ ಸೂಚನೆಮೇಲೆಯೂ ಮ್ಯುನಿಸಿಪಲ್ ಕೌನ್ಸಿಲ್‌ನವರು ಮಾಡುವ ತೀರ್ಮಾನದ ಮೇಲೆ ಡೆಪ್ಯುಟಿ ಕಮ್ಮಿಷನರಿಗೆ ಅಪೀಲು ದಾಖಲ್ಮಾಡಬಹುದು. ಆದರೆ ಅಪೀಲು ವಾದಿಗೆ ಕೌನ್ಸಿಲ್‌ನವರು

ಮಾಡಿದ ತೀರ್ಮಾನದ ಸಂಗತಿ, ತಿಳಿದ 10 ದಿನಗಳನಂತರ ಅಪೀಲು ದಾಖಲ್ಮಾಡಿದಗೆ ಅಂಥಾ ಅಪೀಲನ್ನು ಡೆಪ್ಯುಟಿ ಕಮ್ಮಿಷನರವರು ಹಿಡಿಯದೆ ನಿರಾಕರಿಸಬಹುದು.

(vi) ಈ ನಿಬಂಧನೆ ಮೇರಿಗೆ ಡೆಪ್ಯುಟಿ ಕಮ್ಮಿಷನರವರು ಕೊಡುವ ಪ್ರತಿ ಒಂದು ಹುಕುಮು ಆಖೈರು ತೀರ್ಮಾನವಾಗಿರುತ್ತೆ.

ಪಟ್ಟಿ ಪುನರ್ವಿಮರ್ಶೆ ಆದಮೇಲೆ ಅದಕ್ಕೆ ಹೆಚ್ಚಾಗಿ ದಾಖಲ್ಮಾಡಿದ್ದನ್ನು ಪ್ರಸಿದ್ಧಪಡಿಸುವದು.

10. (i) ಮ್ಯುನಿಸಿಪಲ್ ಕೌನ್ಸಿಲ್‌ನವರು ಅಪೀಲಿನಲ್ಲಾಗಲಿ ಅಥವಾ ಇತರವಿಧವಾಗಿಯಾಗಲಿ ಡೆಪ್ಯುಟಿ ಕಮಿಷನರವರು ಮಾಡುವ ಆಜ್ಞಾನುಸಾರ ಸಂಮತಿ ಕೊಡತಕ್ಕವರ ಮತ್ತು ಉಮೇದವಾರರ ಪಟ್ಟಿಗಳಲ್ಲಿ ಸೇರಿಸಲ್ಪಡತಕ್ಕ ಹೆಚ್ಚು ಬದಲಾವಣೆಗಳು ಅಥವಾ ತಿದ್ದುಪಾಟುಗಳು, 8ನೆ ನಿಬಂಧನೆಯಲ್ಲಿ ವಿಧಿಸಲ್ಪಟ್ಟಮೇರಿಗೆ ಅದರಲ್ಲಿ ನಮೂದಾಗುವ ತಾರೀಖಿಗಿಂತಲೂ ಕನಿಷ್ಟ ಪಕ್ಷ 14 ದಿವಸಗಳಿಗೆ ಮುಂಚಿತವಾಗಿ ಪ್ರಸಿದ್ಧಪಡಿಸತಕ್ಕದ್ದು.

ಪಟ್ಟಿ ಯಾರಸ್ವಾಧೀನದಲ್ಲಿರತಕ್ಕದ್ದು

(ii) ಈ ನಿಬಂಧನೆಗಳಮೇರಿಗೆ ತಯಾರ್ಮಾಡಲ್ಪಟ್ಟ ಸಂಮತಿ ಕೊಡುವವರ ಪ್ರತಿ ಒಂದು ಪಟ್ಟಿಯನ್ನೂ ಅದರಮೇಲೆ ಆದ್ದ ಹೆಚ್ಚು ಬದಲಾವಣೆಯೂ ತಿದ್ದುಪಾಟುಗಳನ್ನೂ ಸಹ ಒಂದು ಪುಸ್ತಕದಲ್ಲಿ ದಾಖಲ್ಮಾಡಬೇಕು. ಈ ಪುಸ್ತಕದ ಪ್ರತಿ ಒಂದು ಪುಟಕ್ಕೂ ಮುನಿಸಿಪಲ್ ಕೌನ್ಸಿಲಿನ ಮೊಹರನ್ನು ಒತ್ತಿರಬೇಕು, ಮತ್ತು ಸದರಿ ಪುಸ್ತಕವನ್ನು ಮ್ಯುನಿಸಿಪಲ್ ಚೆಸ್ಟಿನಲ್ಲಾಗಲಿ ಅಥವಾ ಕಬ್ಬಿಣದ ಪೆಟ್ಟಿಗೆಯಲ್ಲಾಗಲಿ ಭದ್ರಪಡಿಸಿ ಬೀಗಾ ಹಾಕಬೇಕು. ಸದರಿ ಚೆಸ್ಟಿನ ಅಥವಾ ಕಬ್ಬಿಣದ ಪೆಟ್ಟಿಗೆಯ ಬೀಗದಕೈ ಯಾರವಶದಲ್ಲಿರಬೇಕೆಂದು ವಿಧಾಯಕವಾಗಿರುತ್ತೊ, ಅಂಥಾ ಅಫಿಸರರು ಸದರಿ ಪುಸ್ತಕವನ್ನು ಭದ್ರವಾಗಿ ಇಟ್ಟುಕೊಂಡಿರಲು ಜವಾಬ್ದಾರರಾಗಿರುತ್ತಾರೆ.

ಚುನಾವಣೆ ನಡಿಯತಕ್ಕ ಸ್ಥಳ ಮತ್ತು ಕಾಲ.

ಚುನಾವಣೆ ನಡಿಯತಕ್ಕ ಸ್ಥಳ ಮತ್ತು ಕಾಲವನ್ನು ಡೆಪ್ಯುಟಿ ಕಮಿಷನರವರು ಗೊತ್ತುಮಾಡಿ ಪ್ರಸಿದ್ಧಪಡಿಸಬೇಕು.

11. ಫಲಾನಾ ಸ್ಥಳಗಳಲ್ಲಿ ಫಲಾನೆ ತಾರೀಖುಗಳಲ್ಲಿ ಫಲಾನೆ ಕಾಲದಲ್ಲಿ ಮ್ಯುನಿಸಿಪಲ್ ಚುನಾವಣೆಗಳು ನಡಿಸಲ್ಪಡುತ್ತೆಂಬದನ್ನು ಡೆಪ್ಯುಟಿ ಕಮಿಷನರವರು ನಿಷ್ಕರಷೆಮಾಡಿ ಬರಹಮೂಲಕವಾದ ನೋಟೀಸನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಸದರಿ ನೋಟೀಸಿನಲ್ಲಿ ವಿಧಿಸಲ್ಪಟ್ಟ ತಾರೀಖುಗಳಪೈಕಿ ಅತ್ಯಂತ ಮುಂಚಿತವಾದ ತಾರೀಖಿಗೆ ಕೊನೇಪಕ್ಷ 15 ದಿವಸದ ಮುಂಚಿತವಾಗಿ ಪ್ರಸಿದ್ಧಪಡಿಸಬೇಕು. ಮತ್ತು ಈ ನೋಟೀಸು ನಕಲುಗಳನ್ನು ಮ್ಯುನಿಸಿಪಲ್ ಅಫೀಸಿನಲ್ಲಿ ಚಿಕಟಾಯಿಸಬೇಕು, ಅಥವಾ ಹೊಸ ಮ್ಯುನಿಸಿಪಾಲಟಿಯ ವಿಷಯದಲ್ಲಿ, ಚಾವಡಿಯಲ್ಲಿಯೂ ಮತ್ತು ಮ್ಯುನಿಸಿಪಲ್ ಕೌನ್ಸಿಲನವರಾಗಲಿ ಅಥವಾ ಹೊಸ ಮ್ಯುನಿಸಿಪಾಲಟಿಯಾಗಿದ್ದ ಪಕ್ಷದಲ್ಲಿ ಡೆಪ್ಯುಟಿ ಕಮಿಷನರವರಾಗಲಿ ಈ ಬಗ್ಯೆ ಗೊತ್ತುಮಾಡುವ ಮ್ಯುನಿಸಿಪಾಲಿಟಿಯಲ್ಲಿನ ಇತರ ಬಹಿರಂಗವಾದ ಸ್ಥಳ ಅಥವಾ ಸ್ಥಳಗಳಲ್ಲಿಯೂ ಚಿಕಟಾಯಿಸತಕ್ಕದ್ದು.

ಚುನಾವಣೆ ಕಾಲದಲ್ಲಿ ಸಮ್ಮತಿ ಕೊಡುವವರು.

ಮ್ಯುನಿಸಿಪಲ್ ಚುನಾವಣೆಯಲ್ಲಿ ಯಾರ್ಯಾರು ಸಮ್ಮತಿ ಕೊಡಬಹುದು.

12. (i) ಚುನಾವಣೆ ತಾರೀಖಿಗೆ ಮುಂಚೆ ಪ್ರಸಿದ್ಧಪಡಿಸಲ್ಪಟ್ಟ ಇಂಥಾ ಚುನಾವಣೆಯು ಯಾವ ಮ್ಯುನಿಸಿಪಾಲಿಟಿ ವಿಷಯವಾಗಿ ನಡಿಸಲ್ಪಡುತ್ತೊ ಅಂಥಾ ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟಂಥಾ ಓಟರ್ಸ್ ಯಾ ಸಮ್ಮತಿ ಕೊಡುವವರ ಮತ್ತು ಉಮೇದುವಾರರುಗಳ ಪುನರ್ವಿಮರ್ಶೆಯಾದ ಪಟ್ಟಿಯಲ್ಲಿ ಹೆಸರುಗಳು ದಾಖಲಾಗಿರುವವರು ಮಾತ್ರಾ ಸದರಿ ಮ್ಯುನಿಸಿಪಲ್ ಚುನಾವಣೆಯಲ್ಲಿ ತಮ್ಮ ಸಮ್ಮತಿಯನ್ನು ಕೊಡುವದಕ್ಕೆ ಅರ್ಹರಾಗಿರುತ್ತಾರೆ.

(ii) ಚುನಾವಣೆ ಕೆಲಸಕ್ಕಾಗಿ ಮ್ಯುನಿಸಿಪಾಲಿಟಿಯು ಡಿವಿಜನ್‌ಗಳಾಗಿ ವಿಭಾಗಿಸಲ್ಪಟ್ಟದ್ದಲ್ಲಿ, ಮೇಲ್ಕಂಡವರು, ಸದರಿ ಪಟ್ಟಿಯಲ್ಲಿ ತಮ್ಮತಮ್ಮ ಹೆಸರುಗಳನ್ನು ಯಾವ ಡಿವಿಜನ್‌ಗೆ ದಾಖಲ್ಮಾಡಿರುತ್ತಾರೋ ಅಂಥಾ ಡಿವಿಜನ್ ವಿಷಯದಲ್ಲಿ ಮಾತ್ರ ತಮ್ಮ ಸಮ್ಮತಿಯನ್ನು ಕೊಡಲು ಅರ್ಹರಾಗಿರುತ್ತಾರೆ.

ಕ್ಯಾಂಡಿಡೇಟ್ ಯಾ ಉಮೇದವಾರರ ನಾಮಿನೇಷನ್ ಯಾ ಹೆಸರು ನಮೂದ್ಮಾಡುವದು.

ಯಾರಿಂದ ಯಾವಕಾಲದಲ್ಲಿ ನಾಮಿನೇಷನ್ ನಡಿಯತಕ್ಕದ್ದು ಅಂದರೆ ಉಮೇದುವಾರರ ಹೆಸರು ನಮೂದು ಮಾಡತಕ್ಕದ್ದು.

13. (i) ಮ್ಯುನಿಸಿಪಲ್ ಕೌನ್ಸಿಲರ ಕೆಲಸಕ್ಕೆ ಬರುವದಕ್ಕೆ ಅಪೇಕ್ಷೆಯುಳ್ಳವರಾಗಿ ಅಥವಾ ಸಮ್ಮತಿಪಡತಕ್ಕವರಾಗಿಯೂ ಮತ್ತು ಸಮ್ಮತಿ ಕೊಡತಕ್ಕವರ ಮತ್ತು ಉಮೇದುವಾರರ ಪಟ್ಟಿಯಲ್ಲಿ ತಮ್ಮ ಹೆಸರು ದಾಖಲಾಗಿರತಕ್ಕವರಾಗಿಯೂ ಇರುವ ಪ್ರತಿಯೊಬ್ಬರೂ ಕೌನ್ಸಿಲರಾಗಬೇಕಾಗಿದ್ದರೆ ಚುನಾವಣೆ ಕಾಲದಲ್ಲಿ ಅಂಥಾ ಮ್ಯುನಿಸಿಪಲ್ ಕೌನ್ಸಿಲರನ್ನು ಚುನಾಯಿಸುವದಕ್ಕೆ ಅರ್ಹರಾದ ಇಬ್ಬರು ಸದರಿ ಉಮೇದುವಾರರನ್ನು ಮ್ಯುನಿಸಿಪಲ್ ಕೌನ್ಸಿಲರ ಕೆಲಸಕ್ಕೆ ನೌಕರರೂರು ಮಾಡಬೇಕೆಂದು ಅವರ ಹೆಸರನ್ನು ಬರಹಮೂಲಕ ನಮೂದು ಮಾಡಬೇಕು, ಮತ್ತು ಈರೀತಿ ಹೆಸರು ನಮೂದು ಮಾಡಲ್ಪಟ್ಟ ಕಾಗದದಲ್ಲಿ ಚುನಾವಣೆಯಾದ ಪಕ್ಷದಲ್ಲಿ ತಾವು ಕೌನ್ಸಿಲರಾಗಿ ಕೆಲಸಮಾಡಲು ಇಷ್ಟವುಳ್ಳವರಾಗಿದೇವೆಂದು ಷರಾ ಬರೆಯಲ್ಪಟ್ಟು ಸದರಿ ಹೆಸರಿನವರಿಂದ ರುಜುವಾಗಿರಬೇಕು ಮತ್ತು ಇದನ್ನು ಈ ಕೆಲಸಕ್ಕಾಗಿ ಡೆಪ್ಯುಟಿ ಕಮಿಷನರವರಿಂದ ನೇಮಿಸಲ್ಪಟ್ಟ ಆಫಿಸರಿಗೆ ಚುನಾವಣೆಗಾಗಿ ನಿಷ್ಕರ್ಷೆಯಾದ ತಾರೀಖಿಗೆ ಕನಿಷ್ಟಪಕ್ಷ ಹತ್ತು ದಿನಗಳಿಗೆ ಮುಂಚಿತವಾಗಿ ಕೊಡಬೇಕು.

(ii) (i)ನೆ ಒಳಪ್ರಕರಣದ ಪ್ರಕಾರ ಯಾವುದಾದರೂ ಹೆಸರು ನಮೂದಿನ ಪಟ್ಟಿಯು ತಯಾರಾಗಿ ಅಂಥಾ ಆಫಿಸರಿಗೆ ಕೊಡಲ್ಪಟ್ಟರೆ ಮತ್ತು ಹೆಸರು ನಮೂದಿಸುವವರು—ಚುನಾವಣೆಕಾಲದಲ್ಲಿ ಸಮ್ಮತಿಕೊಡಲು ತಮಗೆ ಹಕ್ಕುಂಟೆಂತಲೂ, ಹೆಸರು ನಮೂದು ಮಾಡಲ್ಪಟ್ಟವರು ಉಮೇದುವಾರರಾಗಿರಲು ಲಾಯಖಾಗಿರುತ್ತಾರೆಂತಲೂ ಅಂಥಾ ಆಫಿಸರಿಗೆ ತೃಪ್ತಿಕರವಾಗಿ ರುಜುವಾತು ಮಾಡಿಕೊಟ್ಟರೆ ಸದರೀ ಆಫೀಸರು ತಮ್ಮ ದಸ್ತಖತ್ತುನಿಸಿ ತಯಾರ್ಮಾಡಿಸಬೇಕಾದ ಉಮೇದುವಾರರ ಪಟ್ಟಿಯಲ್ಲಿ ಹಾಗೆ ನಮೂದಿಸಲ್ಪಟ್ಟವರ ಹೆಸರನ್ನೂ ಸೇರಿಸಿ ಮ್ಯುನಿಸಿಪಲ್ ಕಛೇರಿಯಲ್ಲೂ ಅಥವಾ ಹೊಸ ಮ್ಯುನಿಸಿಪಾಲಿಟಿಯಾಗಿದ್ದರೆ ಚಾವಡಿಯಲ್ಲಿ ಅಥವಾ ಈ ಬಗ್ಗೆ ಡೆಪ್ಯುಟಿ ಕಮಿಷನರವರು ನಮೂದಿಸುವ ಇತರ ಸ್ಥಳದಲ್ಲೂ, ಮತ್ತು ಚುನಾವಣೆನಡೆಯಬೇಕಾದ ಸ್ಥಳದಲ್ಲೂ, ಎಲ್ಲರಿಗೂ ತಿಳಿಯುವಂಥಾ ಇತರ ಸ್ಥಳಗಳಲ್ಲೂ, ಚುನಾವಣೆಗೆ ಗೊತ್ತಾಗಿರುವ ದಿವಸಕ್ಕೆ ಕಡೇಪಕ್ಷ ಐದು ದಿವಸಗಳು ಮುಂಚಿತವಾಗಿ ಪ್ರಕಟಾಯಿಸಬೇಕು.

(iii) ಚುನಾವಣೆಯ ಅನುಕೂಲತೆಗಾಗಿ ಬೇರೆಬೇರೆ ಡಿವಿಜನ್‌ಗಳಾಗಿ ಭಾಗಿಸಲ್ಪಟ್ಟಿರುವ ಮ್ಯುನಿಸಿಪಾಲಿಟಿಯಲ್ಲಿ ಎರಡು ಅಥವಾ ಹೆಚ್ಚು ಡಿವಿಜನ್‌ಗಳಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸಬೇಕಾಗಿರುವಾಗ ಎಲ್ಲಾ ಡಿವಿಜನ್‌ಗಳಲ್ಲಿಯೂ ಆಗಲಿ ಅಥವಾ ಆ ಪೈಕಿ ಎಷ್ಟು ಡಿವಿಜನ್‌ಗಳಲ್ಲಾಗಲಿ ಚುನಾಯಿಸಲ್ಪಡುವ ಬಗ್ಗೆ ಒಬ್ಬನೇ ಒಬ್ಬ ಮನುಷ್ಯನ ಹೆಸರನ್ನು ನಮೂದಿಸಬಹುದು.

ಚುನಾವಣೆ ನಡೆಸುವದರಲ್ಲಿ ಅನುಸರಿಸಬೇಕಾದ ಕ್ರಮ.

ಸಮ್ಮತಿಗಳನ್ನು ತೆಗೆದುಕೊಳ್ಳುವ ಆಫಿಸರ ನೇಮಕ.

14. ಚುನಾವಣೆ ನಡೆಯಬೇಕಾಗಿರುವ ಪ್ರತಿ ಸ್ಥಳದಲ್ಲೂ ಅಧ್ಯಕ್ಷರಾಗಿದ್ದು ಸಮ್ಮತಿಗಳನ್ನು ತೆಗೆದುಕೊಳ್ಳುವುದಕ್ಕೆ ಒಬ್ಬ ಆಫಿಸರನ್ನು ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾಗಲೀ ಅಥವಾ ಹೊಸ ಮ್ಯುನಿಸಿಪಾಲಿಟಿಯಲ್ಲಿ, ಡೆಪ್ಯುಟಿ ಕಮಿಷನರವರಾಗಲೀ, ನೇಮಿಸಬೇಕು. ಸಾಧ್ಯವಾದಲ್ಲಿ, ಸದರೀ ಸಮ್ಮತಿ ತೆಗೆದುಕೊಳ್ಳುವ ಆಫಿಸರು ಸಮ್ಮತಿಕೊಡುವವರ ಅಥವಾ ಅವರ ಪೈಕಿ ಬಹುಮಂದಿಗಳ ಪರಿಚಯವುಳ್ಳವರಾಗಿ ಅವರನ್ನು ಗುರ್ತಿಸಬಲ್ಲವರಾಗಿರಬೇಕು.

ಎಷ್ಟುಮಂದಿಗಳ ಮತ್ತು ಯಾರ್ಯಾರ ವಿಷಯದಲ್ಲಿ ನೋಟ್ ಯಾನೆ ಸಮ್ಮತಿ ಕೊಡಬಹುದು.

15. ಸಂದರ್ಭಾನುಸಾರವಾಗಿ ಮ್ಯುನಿಸಿಪಾಲಿಟಿಗೆ ಅಥವಾ ಡಿವಿಜನ್‌ಗೆ ಎಷ್ಟು ಜನ ಕೌನ್ಸಿಲರ್ ಯಾನೆ ಸಭಿಕರನ್ನು ಚುನಾಯಿಸಬೇಕೋ ಅಷ್ಟು ಮಂದಿ ಉಮೇದುವಾರರ ವಿಷಯದಲ್ಲಿ ಪ್ರತಿ ಓಟರೂ ಸಮ್ಮತಿಕೊಡಬಹುದು. 13ನೆ ನಿಬಂಧನೆಯ ಮೇರೆಗೆ ಪ್ರಕಟಿಸಿದ ಉಮೇದುವಾರರ ಪಟ್ಟಿಯಲ್ಲಿ ಹೆಸರು ನಮೂದಿಲ್ಲದೆ ಇರುವ ಯಾವ ಮನುಷ್ಯನ ವಿಷಯದಲ್ಲಾದರೂ ಸಮ್ಮತಿ ಕೊಡಲ್ಪಟ್ಟರೆ ಅದನ್ನು ತೆಗೆದುಕೊಳ್ಳಕೂಡದು.

ಸಮ್ಮತಿ ಕೊಡುವವರು ಖುದ್ದಾಗಿ ಬಂದು ಸಮ್ಮತಿಯನ್ನು ಕೊಡಬೇಕು.

16. ಸಮ್ಮತಿ ಕೊಡುವವರು ಖುದ್ದಾಗಿ ಬಂದು ಸಮ್ಮತಿಯನ್ನು ಕೊಡಬೇಕು.

ಸಮ್ಮತಿಯನ್ನು ಚೀಟಿಗಳ ಮೂಲಕ ಕೊಡುವುದು.

17. ಸಮ್ಮತಿಗಳನ್ನು ಚೀಟಿಗಳ ಮೂಲಕ ಕೊಡಬೇಕು.

ಸಮ್ಮತಿ ಚೀಟಿಯ ವಿವರ.

18. ಸಮ್ಮತಿಗಳನ್ನು ಎಲ್ಲಿ ತೆಗೆದುಕೊಳ್ಳಲಾಗುತ್ತದೆಯೋ ಆ ಕಛೇರಿಯಲ್ಲಿ ಸಮ್ಮತಿ ಕೊಡುವ ಪ್ರತಿ ಮನುಷ್ಯನಿಗೂ ಸಮ್ಮತೀ ಚೀಟಿಯನ್ನು ಕೊಡಲಾಗುವುದು. ಈ ಚೀಟಿಯು ಲಕೋಟೆ ಯಾನೆ ಲಿಫಾಫೆಯ ನಮೂನೆಯಲ್ಲಿರಬೇಕಲ್ಲದೆ ಅದರ ಮುಂಭಾಗದಲ್ಲಿ ಎಷ್ಟು ಜನ ಕೌನ್ಸಿಲರುಗಳನ್ನು ಮೊಕರರ್ಮಾಡಬೇಕೋ ಅವರ ಸಂಖ್ಯೆಯನ್ನೂ, ಹೆಸರು ನಮೂದು ಮಾಡಲ್ಪಟ್ಟ ಯಾವ್ಯಾವ ಮನುಷ್ಯರ ಹೆಸರನ್ನು 13ನೆ ನಿಬಂಧನೆಯ ಮೇರೆಗೆ ತಯಾರಾಗುವ ಉಮೇದುವಾರರ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆಯೋ ಆ ಉಮೇದುವಾರರ ಹೆಸರುಗಳನ್ನೂ, ಛಾಪಿಸಿರಬೇಕು ಅಥವಾ ಸುಲಭವಾಗಿ ಓದಲಾಗುವಂತೆ ಬರೆದಿರಬೇಕು; ಪರಂತು ಉಮೇದುವಾರರ ಪಟ್ಟಿಯಲ್ಲಿ ಹೆಸರು ದಾಖಲಾದ ನಂತರ ಯಾರಾದರೂ ಉಮೇದುವಾರರು ತಮ್ಮ ಹೆಸರನ್ನು ವಜಾ ಮಾಡಬೇಕೆಂದು ಕೇಳಿಕೊಂಡಿದ್ದಲ್ಲಿ ಅವರ ಹೆಸರನ್ನು ಮ್ಯುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರಾಗಲಿ, ಅಥವಾ ಹೊಸ ಮ್ಯುನಿಸಿಪಾಲಿಟಿಯಾಗಿದ್ದಲ್ಲಿ ಡೆಪ್ಯುಟಿ ಕಮ್ಮಿಷನರಾಗಲೀ, ಅಥವಾ ಸಂದರ್ಭಾನುಸಾರವಾಗಿ ಅಧ್ಯಕ್ಷರ ಅಥವಾ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆಯ ಪ್ರಕಾರ ಸಮ್ಮತಿ ತೆಗೆದುಕೊಳ್ಳುವ ಆಫಿಸರಾಗಲಿ, ಪಟ್ಟಿಯಿಂದ ಹೊಡೆದು ಹಾಕಬೇಕು. ಸಮ್ಮತಿ ಕೊಡುವಂಥಾವರು ತಮ್ಮ ಹೆಸರನ್ನೂ ನಂಬರ್ ಯಾನೆ ಸಂಖ್ಯೆಯನ್ನೂ ಲಕೋಟೆಯ ಒಳಗಡೆ ಬರೆದು ಅದನ್ನು ಸಮ್ಮತಿ ತೆಗೆದುಕೊಳ್ಳುವ ಆಫೀಸರ ಕೈಗೆ ಕೊಡಬೇಕು. ಅವರು, ಸದರೀ ಸಮ್ಮತಿಕೊಡುವವರ ಹೆಸರೂ ಸಂಖ್ಯೆಯೂ ಸುಲಭವಾಗಿ ಓದಲಿಕ್ಕಾಗುವಂತೆ ಬರೆಯಲ್ಪಟ್ಟಿವೆಯೋ ಎಂದು ನೋಡಿ, ತರುವಾಯ ಲಕೋಟೆಗೆ ಅಂಟುಹಾಕಿ ಆ ಅಂಟುಹಾಕಿರುವ ಭಾಗಕ್ಕೆ ಅಡ್ಡವಾಗಿ ಮುದ್ರೆಹಾಕಿ ತಮ್ಮ ದಸ್ತಖತ್ತು ಹಾಕಿ ಅದನ್ನು ಸಮ್ಮತಿಕೊಡುವವರ ಕೈಗೆ ಕೊಡಬೇಕು. ಸಮ್ಮತಿಕೊಡುವಂಥವರು ಅಕ್ಷರಸ್ಥರಲ್ಲದೆ ಇದ್ದಲ್ಲಿ ಸಮ್ಮತಿ ತೆಗೆದುಕೊಳ್ಳುವ ಆಫೀಸರೇ ಅವರ ಹೆಸರನ್ನೂ ಸಂಖ್ಯೆಯನ್ನೂ ಲಕೋಟೆಯ ಒಳಗಡೆ ಬರೆಯಬೇಕು.

ಸಮ್ಮತಿ ಕೊಡುವಲ್ಲಿ ಅನುಸರಿಸಬೇಕಾದ ಕ್ರಮ.

19. (i) ಆ ಬಳಿಕ ಸಮ್ಮತಿ ಕೊಡುವವರು, ಸಮ್ಮತಿ ತೆಗೆದುಕೊಳ್ಳುವ ಸ್ಥಳದಲ್ಲೇ ಕಟ್ಟಿರುವ ಪ್ರತ್ಯೇಕವಾದ ಏಕಾಂತಸ್ಥಳಕ್ಕೆ ಹೋಗಿ ತಾವು ಯಾವ ಯಾವ ಉಮೇದುವಾರರ ಪರವಾಗಿ ಸಮ್ಮತಿಕೊಡುವುದಿಲ್ಲವೋ ಅವರ ಹೆಸರನ್ನು ಅಥವಾ ಹೆಸರುಗಳನ್ನು ಹೊಡೆದುಹಾಕಿ, ಎಷ್ಟು ಜನರನ್ನು ಚುನಾಯಿಸಬೇಕೋ ಆ ಸಂಖ್ಯೆಗೆ ಮೀರದ ಹಾಗೆ, ತಾವು ಸಮ್ಮತಿ ಕೊಡುವ ಉಮೇದುವಾರ ಅಥವಾ ಉಮೇದುವಾರರ ಹೆಸರುಗಳನ್ನು ಹೊಡೆಯದೆ

ಸಿಲ್ಲಿಸಿಟ್ಟು ತಾವು ಯಾರ ಪರವಾಗಿ ಸಮ್ಮತಿ ಕೊಟ್ಟಿರುತ್ತಾರೆಂಬುವುದು ಸಮ್ಮತಿ ತಗದುಕೊಳ್ಳುವ ಆಫೀಸರಿಗೆ ತಿಳಿಯದಂತೆ, ತಾವೇ ಆ ಲಕೋಟೆಯನ್ನು ಸಮ್ಮತಿ ಚೀಟಿ ಹಾಕುವ ಪೆಟ್ಟಿಗೆಯೊಳಕ್ಕೆ ಹಾಕಬೇಕು.

ಸಮ್ಮತಿ ಚೀಟಿಗಳನ್ನು ಹಾಕುವ ಪೆಟ್ಟಿಗೆಯ ಏರ್ಪಾಡು.

(ii) ಸಮ್ಮತಿ ಚೀಟಿಗಳ ಪೆಟ್ಟಿಗೆಯು ಯಾವ ರೀತಿ ತಯಾರಾಗಿರಬೇಕೆಂದರೆ: ಸಮ್ಮತಿ ಚೀಟಿಯನ್ನು ಪೆಟ್ಟಿಗೆಯಲ್ಲಿ ಹಾಕಲು ಅವಕಾಶವಿರಬೇಕು, ಪರಂತು ಪೆಟ್ಟಿಗೆಯ ಬೀಗವನ್ನು ತೆಗೆದ ಹೊರತು ಸದರೀ ಚೀಟಿಯನ್ನು ಹೊರಗೆ ತೆಗೆಯಲು ಆಸ್ಪದವಿರಕೂಡದು. ಇದಕ್ಕೆ ಮ್ಯುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರು ಮ್ಯುನಿಸಿಪಲ್ ಮೊಹರಿನಿಂದಾಗಲೀ, ಅಥವಾ ಹೊಸ ಮ್ಯುನಿಸಿಪಾಲಿಟಿಯಲ್ಲಿ, ಡೆಪ್ಯುಟಿ ಕಮ್ಮಿಷನರವರು ತಮ್ಮ ಮೊಹರಿನಿಂದಾಗಲೀ ಭದ್ರವಾಗಿ, ಮೊಹರ್ಮಾಡಿರಬೇಕು. ಚುನಾವಣೆಯ ದಿನದಲ್ಲಿ ಸಂದರ್ಭಾನುಸಾರವಾಗಿ ಅಧ್ಯಕ್ಷರಾಗಲಿ, ಡೆಪ್ಯುಟಿ ಕಮ್ಮಿಷನರವರಾಗಲಿ ಸದರೀ ಪೆಟ್ಟಿಗೆಯು ಖಾಲಿಯಾಗಿದೆಯೆಂದು ಬರಹ ಮೂಲಕವಾಗಿ ಸರ್ಟಿಫೈಮಾಡಿ ಅದನ್ನು ಸಮ್ಮತಿ ತೆಗೆದುಕೊಳ್ಳುವ ಆಫೀಸರಿಗೆ, ಸಮ್ಮತಿ ತೆಗೆದುಕೊಳ್ಳುವ ಕಚೇರಿಯ ಬಳಿ, ತಾವೇ ಒಪ್ಪಿಸಿಕೊಡಬೇಕು.

(iii) ಸಮ್ಮತಿ ಚೀಟಿಗಳನ್ನು ತೆಗೆದುಕೊಳ್ಳಬೇಕಾದ ಪ್ರತಿ ಸ್ಥಳಕ್ಕೂ, ಅಂಥಾ ಒಂದು ಅಥವಾ ಜಾಸ್ತಿ ಪೆಟ್ಟಿಗೆಗಳನ್ನು ಮ್ಯುನಿಸಿಪಲ್ ಕೌನ್ಸಿಲಿನವರಾಗಲಿ, ಅಥವಾ, ಹೊಸ ಮ್ಯುನಿಸಿಪಾಲಿಟಿಯಲ್ಲಿ ಡೆಪ್ಯುಟಿ ಕಮ್ಮಿಷನರವರಾಗಲೀ ಅಥವಾ ಈ ಬಗ್ಗೆ ಅವರು ನೇಮಿಸುವ ಇತರ ಆಫೀಸರಾಗಲೀ ಮಾಡಿಸಿ ಇಡಬೇಕು. ಹೊಸ ಮ್ಯುನಿಸಿಪಾಲಿಟಿಗೋಸ್ಕರ ಹೀಗೆ ಮಾಡಿಸಿದ ಪೆಟ್ಟಿಗೆಗಳ ಕ್ರಯವನ್ನು ಸದರೀ ಮ್ಯುನಿಸಿಪಾಲಿಟಿಯವರು, ಆ ಮ್ಯುನಿಸಿಪಾಲಿಟಿಗೆ ಕೌನ್ಸಿಲರುಗಳನ್ನು ಮೊದಲು ದಫೆ ನೌಕರರ್ಮಾಡಿದ ತರುವಾಯ ಕೂಡಿದಷ್ಟು ತ್ವರೆಯಾಗಿ ಪಾವತಿಮಾಡಬೇಕು.

ಸಮ್ಮತಿ ತೆಗೆದುಕೊಳ್ಳುವ ಆಫೀಸರು ಯಾರ ಸಮ್ಮತಿಗಳನ್ನು ಅಂಗೀಕರಿಸಬೇಕು.

20. 12ನೆ ನಿಬಂಧನೆಯ ಮೇರೆ, ಯಾರಿಗೆ ಸಮ್ಮತಿ ಕೊಡಲು ಹಕ್ಕಿರುವುದಿಲ್ಲವೋ ಅಂಥಾ ಯಾವ ಮನುಷ್ಯರಿಂದಲೂ ಸಮ್ಮತಿ ತಗೆದುಕೊಳ್ಳುವ ಆಫೀಸರು, ಯಾವ ಸಮ್ಮತಿಯನ್ನೂ ಅಂಗೀಕರಿಸಕೂಡದು.

ಸರಿಯಾದ ಮನುಷ್ಯರೇ ಸಮ್ಮತಿ ಕೊಡುತ್ತಾರೆಯೆ, ಎ ಬ ವಗ್ಯೆರೆ ವಿಷಯಗಳನ್ನು ಸಮ್ಮತಿ ತೆಗೆದು ಕೊಳ್ಳುವ ಆಫಿಸರು ಖುದ್ದು ನೋಡಿಕೊಳ್ಳಬೇಕು.

21. ಸರಿಯಾದ ಮನುಷ್ಯರೇ ಸಮ್ಮತಿ ಕೊಡುತ್ತಾರೆಯೇ, ಎಂಬುವುದನ್ನು ಸಮ್ಮತಿ ತೆಗೆದುಕೊಳ್ಳುವ ಆಫಿಸರು ಖಂಡಿತವಾಗಿ ನೋಡಿಕೊಳ್ಳಬೇಕು. ಅಲ್ಲದೆ, ಇದನ್ನು ತಿಳಿದುಕೊಳ್ಳುವ ಬಗ್ಯೆ ಕೇಳಲ್ಪಟ್ಟ ನ್ಯಾಯವಾದ ಯಾವ ಪ್ರಶ್ನೆಗಾದರೂ ಉತ್ತರ ಕೊಡಲು ನಿರಾಕರಿಸುವ ಅಥವಾ ಯಾರು ಸರಿಯಾದ ಮನುಷ್ಯನೆಂಬ ಬಗ್ಯೆ ತಮ್ಮ ಮನಸ್ಸಿಗೆ ಸಮರ್ಪಕವಾಗಿ ರುಜುವಾತು ಬರುವುದಿಲ್ಲವೋ ಅಂಥಾ ಯಾವ ಮನುಷ್ಯನ ಸಮ್ಮತಿಯನ್ನೂ ತೆಗೆದು ಕೊಳ್ಳುವುದಿಲ್ಲವೆಂದು ನಿರಾಕರಿಸಬಹುದು. ಇದೂ ಅಲ್ಲದೆ, ಸಮ್ಮತಿ ಚೀಟಿಗಳನ್ನು ರಹಸ್ಯವಾಗಿ ಬರೆಸುವ ಭಾಗದಲ್ಲಿಯೂ, ಸಮ್ಮತಿ ಕೊಡಲು ಹಕ್ಕಿಲ್ಲದೆ ಇರುವ ಮನುಷ್ಯನನ್ನು ಸಮ್ಮತಿ ತಗೆದುಕೊಳ್ಳುವ ಸ್ಥಳಕ್ಕೆ ಸೇರಿಸದೆ ಇರುವ ಭಾಗದಲ್ಲೂ, ಸಮ್ಮತಿ ಚೀಟಿಗಳನ್ನು ಬರೆದು ಕೊಟ್ಟವರು ಆ ಕೂಡಲೇ ಸದರೀ ಸ್ಥಳವನ್ನು ಬಿಟ್ಟು ಹೋಗುವ ಭಾಗದಲ್ಲೂ ಸದರೀ ಆಫಿಸರೇ ಜವಾಬ್ದಾರರಾಗಿರಬೇಕು.

ಸಮ್ಮತಿ ತೆಗೆದುಕೊಳ್ಳುವ ಆಫೀಸರು ಸಮ್ಮತಿ ಚೀಟಿ ಪೆಟ್ಟಿಗೆಗಳ ವಿಷಯದಲ್ಲಿ ಅನುಸರಿಸಬೇಕಾದ ಕ್ರಮ.

22. ಸಮ್ಮತಿ ತೆಗೆದುಕೊಳ್ಳುವ ಕೆಲಸವು ಪೂರೈಸಿದ ತರುವಾಯ, ಸಮ್ಮತಿ ತೆಗೆದುಕೊಳ್ಳುವ ಆಫಿಸರು ಆ ಕೂಡಲೇ ಚೀಟಿಯ ಪೆಟ್ಟಿಗೆಯನ್ನು ಅಥವಾ ಪೆಟ್ಟಿಗೆಗಳನ್ನು, ಆಯಾ ಪೆಟ್ಟಿಗೆಯ ಮೊಹರನ್ನು ಇದ್ದಹಾಗೆಯೇ ಇಟ್ಟು, ಮ್ಯುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರಿಗಾಗಲೀ ಅಥವಾ ಈ ಬಗ್ಯೆ ಅಧ್ಯಕ್ಷರು ನೇಮಿಸುವ ಮ್ಯುನಿಸಿಪಲ್ ಕೌನ್ಸಿಲರ್ ಅಥವಾ ಆಫಿಸರಿಗಾಗಲೀ ಅಥವಾ ಹೊಸ ಮ್ಯುನಿಸಿಪಾಲಿಟಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಗಾಗಲಿ ಅಥವಾ ಈ ಬಗ್ಯೆ ಡೆಪ್ಯುಟಿ ಕಮ್ಮಿಷನರವರು ನೇಮಿಸುವ ಆಫಿಸರಿಗಾಗಲೀ ಕಳುಹಿಸಬೇಕು.

ಚುನಾವಣೆಯ ಫಲಿತಾಂಶಗಳನ್ನು ನಿಶ್ಚಯಿಸುವುದು.

ಸಮ್ಮತಿ ಚೀಟಿಗಳನ್ನು ಪರಿಶೋಧಿಸಿ ಚುನಾವಣೆಯ ಫಲಿತಾಂಶಗಳನ್ನು ಪ್ರಕಟಿಸುವುದು.

23. (i) ಮೇಲ್ಕಂಡ ಪೆಟ್ಟಿಗೆಗಳನ್ನು, ಇದಕ್ಕಾಗಿಯೇ ಪ್ರತ್ಯೇಕವಾಗಿ ಸೇರಿಸಲ್ಪಟ್ಟ ಸಾಮಾನ್ಯ ಮೀಟಿಂಗಿನಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳ ಸಮಕ್ಷಮದಲ್ಲಾಗಲೀ ಅಥವಾ ಹೊಸ ಮ್ಯುನಿಸಿಪಾಲಿಟಿಯಲ್ಲಿ, ಡೆಪ್ಯುಟಿ ಕಮ್ಮಿಷನರವರ ಅಥವಾ ಡೆಪ್ಯುಟಿ ಕಮ್ಮಿಷನರವರು ಇದಕ್ಕಾಗಿ ನೇಮಿಸುವ ಆಫೀಸರ ಸಮಕ್ಷಮದಲ್ಲಾಗಲೀ ತೆರೆಯಬೇಕು.

(ii) ಆಗ್ಯೆ ಸದರೀ ಓಟ್ಸ್ ಯಾ ಸಮ್ಮತಿಗಳನ್ನು ಪರಿಶೋಧನೆ ಮಾಡತಕ್ಕದ್ದು, ಮತ್ತು ಅಂಗೀಕರಿಸಬಹುದಾದ ಓಟುಗಳನ್ನು ಲೆಕ್ಕಮಾಡುವ ಬಗ್ಯಾಗಿ ಸಭೆಯವರಾಗಲಿ, ಡೆಪ್ಯುಟಿ ಕಮಿಷನರವರಾಗಲಿ ಅಥವಾ ಹಿಂದೆ ಹೇಳಲ್ಪಟ್ಟ ಇತರ ಆಫಿಸರಾಗಲೀ ನೌಕರರ್ಮಾಡಿದಂಥಾ ಮನುಷ್ಯರು ಅವುಗಳನ್ನು ಲೆಕ್ಕ ಮಾಡತಕ್ಕದ್ದು. ಚುನಾಯಿಸಲ್ಪಡತಕ್ಕ ಮನುಷ್ಯರು ಎಷ್ಟುಮಂದಿ ಇರುತ್ತಾರೆಯೋ ಅದಕ್ಕಿಂತ ಹೆಚ್ಚು ಜನ ಉಮೇದುವಾರರ ಹೆಸರನ್ನು ಯಾವ ಸಮ್ಮತಿಚೀಟಿಯ ಮೇಲೆ ಹೊಡೆಯದೆ ಇಟ್ಟಿರುತ್ತದೆಯೋ ಅಂಥಾ ಯಾವ ಸಮ್ಮತಿ ಚೀಟಿಯೂ ಅಂಗೀಕಾರವಾಗತಕ್ಕದ್ದಲ್ಲ.

(iii) ಚುನಾವಣೆಯ ಫಲಿತಾಂಶಗಳು, ಮ್ಯುನಿಸಿಪಲ್ ಕೌನ್ಸಿಲರುಗಳು ಇದಕ್ಕಾಗಿ ಸೇರಿದ ಜನರಲ್ ಮೀಟಿಂಗಿನಲ್ಲಿ ತಿಳಿದ ತರುವಾಯ, ಸದರೀ ಮೀಟಿಂಗಿನ ಅಧ್ಯಕ್ಷರಿಂದ ಪ್ರಕಟಿಸಲ್ಪಡತಕ್ಕದ್ದಲ್ಲದೆ, ಸಭೆಯ ಪ್ರೊಸೀಡಿಂಗ್ಸಿನ

ಮಿನಿಟ್ ಬುಕ್ಕಿನಲ್ಲಿ ರಿಕಾರ್ಡು ಮಾಡಲ್ಪಡತಕ್ಕದ್ದು. ಇತರ ಇನ್ಯಾವ ಸಂಧರ್ಭದಲ್ಲಿಯೇ ಆಗಲಿ ಫಲಿತಾಂಶಗಳನ್ನು ಡೆಪ್ಯುಟಿಕಮಿಷನರಾಗಲಿ ಹಿಂದೆ ಹೇಳಿದ ಪ್ರಕಾರ ಅವರಿಂದ ನೌಕರರ್ರ್ಮಾಡಲ್ಪಟ್ಟ ಆಫಿಸರಾಗಲೀ, ಪ್ರಕಟಿಸತಕ್ಕದ್ದು. ಪರಂತು ಸಮ್ಮತಿಕೊಡಲು ಅರ್ಹರಾದ ಜನಗಳ ಒಟ್ಟುಸಂಖ್ಯೆಯಲ್ಲಿ ಕೋನೇಪಕ್ಷ ಎಂಟರಲ್ಲಿ ಒಂದು ಭಾಗದ ಜನಗಳಿಂದಲಾದರೂ, ಸಮ್ಮತಿಗಳನ್ನು ಹೊಂದಿದ ಹೊರತು, ಯಾವ ಉಮೇದುವಾರನೂ ಚುನಾಯಿಸಲ್ಪಟ್ಟನೆಂತ ಭಾವಿಸಲ್ಪಡಕೂಡದು.

ಇಬ್ಬರು ಅಥವಾ ಹೆಚ್ಚು ಮಂದಿ ಉಮೇದುವಾರರಿಗೆ ಒಂದೇ ಸಮವಾಗಿ ಸಮ್ಮತಿ ಚೀಟಿಗಳು ವಗೈರೆ ಬಂದರೆ ಆಗ್ಯೆ ನಡೆಸತಕ್ಕ ಕ್ರಮ.

24. (i) ಒಬ್ಬ ಮ್ಯುನಿಸಿಪಲ್ ಕೌನ್ಸಿಲರ ಸ್ಥಾನಕ್ಕೆ ಉಮೇದುವಾರರಾದ ಇಬ್ಬರು ಅಥವಾ ಹೆಚ್ಚು ಮಂದಿಗಳ ಪೈಕಿ ಪ್ರತಿಯೊಬ್ಬನಿಗೂ ಒಂದೇಸಮವಾದ ಸಂಖ್ಯೆಯ ಸಮ್ಮತಿಚೀಟಿಗಳು ಬರುವ ಭಾಗದಲ್ಲಿ, ಆ ಪೈಕಿ ಒಬ್ಬರು ಮ್ಯುನಿಸಿಪಲ್ ಸಭೆಯವರು ಗೊತ್ತುಮಾಡುವ ರೀತಿಯಲ್ಲಿ, ಸದರಿ ಮೀಟಿಂಗಿನ ಅಧ್ಯಕ್ಷರಿಂದಲಾಗಲಿ, ಅಥವಾ, ಮ್ಯುನಿಸಿಪಾಲಿಟಿಯು ಹೊಸದಾಗಿದ್ದರೆ, ಡೆಪ್ಯುಟಿ ಕಮಿಷನರಾಗಲಿ ಮೇಲೆ ಹೇಳಿದ ಪ್ರಕಾರ ಡೆಪ್ಯುಟಿ ಕಮಿಷನರಿಂದ ನೌಕರ್ರ್ಮಾಡಲ್ಪಟ್ಟ ಆಫಿಸರಾಗಲೀ ತೀರ್ಮಾನಮಾಡುವ ಮೇರೆಗೆ, ಡೆಪ್ಯುಟಿ ಕಮಿಷನರಿಂದಲಾಗಲಿ ಅಥವಾ ಸದರಿ ಆಫಿಸರಿಂದಲಾಗಲಿ, ಲಾಟರೀಯ ಮೂಲಕ ಚುನಾಯಿಸಲ್ಪಡತಕ್ಕದ್ದು.

(ii) ಒಬ್ಬ ಮನುಷ್ಯನು ಎರಡು ಅಥವಾ ಹೆಚ್ಚು ಡಿವಿಜನ್‌ಗಳಿಗೆ ಚುನಾಯಿಸಲ್ಪಟ್ಟರೆ, ಅಂಥಾ ಮನುಷ್ಯನು ಯಾವ ಡಿವಿಜನ್ನಿಗೆ ಪ್ರತಿನಿಧಿಯಾಗಿರಲು ಅಪೇಕ್ಷಿಸುತ್ತಾನೆಯೋ ಆ ಡಿವಿಜನನ್ನು ತಾನೆ ಆರಿಸಿಕೊಳ್ಳಬಹುದು. ಚುನಾವಣೆಯ ಫಲಿತಾಂಶವನ್ನು ಪ್ರಕಟಿಸಿದ ತರುವಾಯ ನಾಲ್ವತ್ತೆಂಟು ಗಂಟೆಗಳ ಒಳಗಾಗಿ ಆತನು ಆರಿಸಿಕೊಳ್ಳದೇ ಹೋದರೆ ಆ ಪೈಕಿ ಡೆಪ್ಯುಟಿ ಕಮಿಷನರು ತೀರ್ಮಾನಿಸುವಂಥಾ ಡಿವಿಜನ್ನಿಗೆ ಪ್ರತಿ ನಿಧಿಯಾಗತಕ್ಕದ್ದು. ತಾನು ಪ್ರತಿನಿಧಿಯಾಗಿರುತ್ತೇನೆಂದು ತಾನೆ ಆರಿಸಿಕೊಂಡಂಥಾ ಅಥವಾ ಆತನು ಪ್ರತಿನಿಧಿಯಾಗಿರತಕ್ಕದ್ದೆಂದು ಮೇಲೆ ಹೇಳಿದ ಪ್ರಕಾರ ಗೊತ್ತುಮಾಡಿದಂಥಾ ಡಿವಿಜನ್ ಶಿವಾಯಿ, ಆತನಿಗೆ ಓಟ್ಸುಕೊಟ್ಟು ಚುನಾಯಿಸಿ ಕಳುಹಿಸಿದಂಥಾ ಇತರ ಪ್ರತಿಯೊಂದು ಡಿವಿಜನಿನಲ್ಲಿಯೂ ಆತನಿಗೆ ಓಟುಗಳೇ ಬರದೇಇದ್ದರೆ ಹೇಗೋ ಹಾಗೆ ಚುನಾವಣೆಯ ಫಲಿತಾಂಶವನ್ನು ಗೊತ್ತುಮಾಡತಕ್ಕದ್ದು.

ಓಟ್ಸ್ ಯಾ ಸಮ್ಮತಿಚೀಟಿಗಳನ್ನು ವಶದಲ್ಲಿಟ್ಟುಕೊಂಡಿರುವುದು, ಮತ್ತು ಅವುಗಳನ್ನು ನಾಶ ಪಡಿಸುವುದು.

ಸಮ್ಮತಿ ಚೀಟಿಗಳನ್ನೂ ಸಮ್ಮತಿತೆಗೆದುಕೊಳ್ಳುವ ಆಫಿಸರ ಮೆಮೊರ್ಯಾಂಡವನ್ನೂ ಭದ್ರವಾಗಿ ಇಟ್ಟುಕೊಂಡಿರುವುದು.

25. ಸಮ್ಮತಿ ಚೀಟಿಗಳನ್ನು ಪರಿಶೋಧನೆ ಮಾಡಿದ ತರುವಾಯ, ಅವುಗಳನ್ನು ಯಾವ ಪೆಟ್ಟಿಗೆಯಿಂದ ತೆಗೆದುಕೊಂಡಿತೋ ಅದೇ ಪೆಟ್ಟಿಕೆಯಲ್ಲಿ ಪುನಃ ಇಟ್ಟು ಆ ಪೆಟ್ಟಿಗೆಗೆ ಬೀಗ ಹಾಕಿ, ಮ್ಯುನಿಸಿಪಲ್ ಮುದ್ರೆಯಿಂದಲಾಗಲಿ, ಅಥವಾ, ಮ್ಯುನಿಸಿಪಾಲಿಟಿಯು ಹೊಸದಾಗಿದ್ದರೆ, ಡೆಪ್ಯುಟಿಕಮಿಷನರ ಮುದ್ರೆಯಿಂದಲಾಗಲಿ ಮೊಹರುಮಾಡಿ, ಅದನ್ನು ಚುನಾವಣೆಯ ಫಲಿತಾಂಶವನ್ನೂ ಪ್ರಕಟಿಸಿದಲಾಗಾಯಿತು 15 ದಿವಸಗಳವರೆಗೆ ಮ್ಯುನಿಸಿಪಲ್ ಪ್ರೆಸಿಡೆಂಟಿನವಶದಲ್ಲಿ ಯಾಗಲಿ ಮ್ಯುನಿಸಿಪಾಲಿಟಿಯು ಹೊಸದಾಗಿದ್ದ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರ ವಶದಲ್ಲಿಯಾಗಲಿ ಅಥವಾ ಅವರ ಅಪ್ಪಣೆಯ ಮೇರೆಗೆಯಾಗಲಿ ಭದ್ರವಾಗಿ ಇಟ್ಟಿರತಕ್ಕದ್ದು.

ಸಮ್ಮತಿ ಚೀಟಿಗಳನ್ನೂ ಸಮ್ಮತಿತೆಗೆದುಕೊಳ್ಳುವ ಆಫೀಸರ ಮೆಮೊರ್ಯಾಂಡವನ್ನೂ ಆಖೈರಿನಲ್ಲಿ ನಾಶಪಡಿಸೋಣ.

26. (1) ಸದರೀ ತಾರೀಖಿನಿಂದ 15 ದಿವಸಗಳು ಕಳೆದತರುವಾಯ, ಅಥವಾ, ಈ ರೆಗ್ಯುಲೇಷನಿನ 22ನೆ ಪ್ರಕರಣದ ಮೇರೆಗೆ ಡಿಸ್ಟ್ರಿಕ್ಟು ಜಡ್ಜಿಯವರಿಗೆ ಚುನಾವಣೆಯ ವಿಚಾರವಾಗಿ ಅರ್ಜಿಕೊಟ್ಟಿದ್ದು ಸದರಿ ಅರ್ಜಿಯು ಸದರಿ ತಾರೀಖಿನಿಂದ 15 ದಿವಸಗಳು ಪೂರೈಸುವುದರೊಳಗಾಗಿ ಆಖೈರಾಗಿ ಫೈಸಲಾಗದೆ ಇದ್ದರೆ, ಯಾವಾಗ ಸದರಿ ಅರ್ಜಿ ಆಖೈರಾಗಿ ಫೈಸಲ್ಲಾಗುತ್ತದೆಯೋ ಆಗ್ಯೆ, ಸಮ್ಮತಿ ಚೀಟಿಗಳನ್ನು ನಾಶಪಡಿಸುವುದಕ್ಕಾಗಿ ಮ್ಯುನಿಸಿಪಲ್‌ಸಭೆಯವರು ನೌಕರರ್ರ್ಮಾಡುವಂಥಾ ಮ್ಯುನಿಸಿಪಲ್ ಕೌನ್ಸಿಲರ ಅಥವಾ ಆಫಿಸರ ರೂಬರೂಬ್ ಅಥವಾ ಮ್ಯುನಿಸಿಪಾಲಿಟಿಯು ಹೊಸದಾಗಿದ್ದರೆ, ಡೆಪ್ಯುಟಿಕಮಿಷನರ ಸಮಕ್ಷಮದಲ್ಲಿ ಅಥವಾ ಡೆಪ್ಯುಟಿ ಕಮಿಷನರು ಈ ಬಗ್ಯೆ ನೌಕರರ್ರ್ಮಾಡುವ ಆಫಿಸರ ಸಮಕ್ಷಮದಲ್ಲಿ ಸದರಿ ಸಮ್ಮತಿ ಚೀಟಿಗಳನ್ನು ನಾಶ ಪಡಿಸತಕ್ಕದ್ದು.

(ii) ಹಿಂದೆ ಹೇಳಿದ ಪ್ರಕಾರ ಚುನಾವಣೆಯ ವಿಚಾರವಾಗಿ ಅರ್ಜಿ ಕೊಟ್ಟಿದ್ದೇನೆಂದು ಯಾರಾದರೂ ಬರಹಮೂಲಕವಾಗಿ ತಿಳಿಸಿದ ತರುವಾಯ ಮ್ಯುನಿಸಿಪಲ್ ಕೌನ್ಸಿಲರಾಗಲೀ, ಅಥವಾ, ಮ್ಯುನಿಸಿಪಾಲಿಟಿಯು ಹೊಸದಾಗಿದ್ದರೆ, ಡೆಪ್ಯುಟಿ ಕಮಿಷನರಾಗಲಿ ಅವರು ನೌಕರರ್ರ್ಮಾಡಿದ ಇತರ ಆಫಿಸರಾಗಲಿ ಸದರಿ ಸಮ್ಮತಿ ಚೀಟಿಗಳನ್ನು ಆ ಅರ್ಜಿ ಆಖೈರಾಗಿ ಫೈಸಲಾಗುವ ವರೆಗೆ ಅಮಾನತ್ತಿನಲ್ಲಿಡಿಸಬೇಕು.

ಚುನಾವಣೆಯ ಫಲಿತಾಂಶಗಳನ್ನು ಗೆಜೆಟ್ಟಿನಲ್ಲಿ ಛಾಯಿಷ್ ಮಾಡೋಣ.

ಚುನಾವಣೆಗಳ ಫಲಿತಾಂಶಗಳನ್ನು ಮೈಸೂರು ಗೆಜೆಟ್ಟಿನಲ್ಲಿ ಛಾಯಿಷ್ ಮಾಡೋಣ.

27. 23ನೆ ನಿಬಂಧನೆಯ ಪ್ರಕಾರ ಒಂದು ಪ್ರತ್ಯೇಕವಾದ ಜನರಲ್ ಮೀಟಿಂಗಿನಲ್ಲಿ ಪ್ರಕಟಿಸಲ್ಪಟ್ಟ ಪ್ರತಿಯೊಂದು ಚುನಾವಣೆಯ ಫಲಿತಾಂಶವನ್ನೂ ಸದರಿ ಮೀಟಿಂಗಿನ ಅಧ್ಯಕ್ಷರು ಸರ್ಟಿಫೈ ಮಾಡಿ ಡೆಪ್ಯುಟಿ ಕಮಿಷನರಿಗೆ ಕಳುಹಿಸತಕ್ಕದ್ದು, ಡೆಪ್ಯುಟಿ ಕಮಿಷನರು ಅದನ್ನು ಮೈಸೂರು ಗೆಜೆಟಿನಲ್ಲಿ ಛಾಯಿಷ್ ಮಾಡುವ ಬಗ್ಯೆಗಿ ಸರ್ಕಾರಕ್ಕೆ ರಿಪೋರ್ಟು ಮಾಡತಕ್ಕದ್ದು. ಸದರಿ ನಿಬಂಧನೆಯ ಮೇರೆಗೆ ಡೆಪ್ಯುಟಿ ಕಮಿಷನರು ತಾವೇ ಪ್ರಕಟಿಸಿ

ದಂಥಾ ಅಥವಾ ತನ್ನಿಂದ ನೇಮಕಮಾಡಲ್ಪಟ್ಟ ಆಫಿಸರಿಂದ ಪ್ರಕಟಿಸಲ್ಪಟ್ಟಂಥಾ ಪ್ರತಿ ಚುನಾವಣೆಯ ಫಲಿತಾಂಶವನ್ನೂ ಸಹ ಗೆಜೆಟಿನಲ್ಲಿ ಪ್ರಚುರಿಸುವ ಬಗ್ಗೆ ಡೆಪ್ಯುಟಿ ಕಮಿಷನರು ಸರ್ಕಾರಕ್ಕೆ ರಿಪೋರ್ಟು ಮಾಡತಕ್ಕದ್ದು.

ಸಾಮಾನ್ಯ ಚುನಾವಣೆಯಲ್ಲದೆ ಇತರ ಕಾಲದಲ್ಲಿ ನಡೆಯತಕ್ಕ ಚುನಾವಣೆ.

28. ಸಾಮಾನ್ಯವಾದ ಎರಡು ಚುನಾವಣೆಗಳ ಮಧ್ಯಕಾಲದಲ್ಲಿ ಮ್ಯುನಿಸಿಪಾಲಿಟಿಯಲ್ಲಿ ಒಂದು ಸ್ಥಾನವು ಖಾಲಿಬಿದ್ದರೆ ಅದನ್ನು ಕುರಿತು ಮ್ಯುನಿಸಿಪಲ್ ಪ್ರಸಿಡೆಂಟರು ಡೆಪ್ಯುಟಿ ಕಮಿಷನರಿಗೆ ರಿಪೋರ್ಟು ಮಾಡಬೇಕು, ತರುವಾಯ ಡೆಪ್ಯುಟಿ ಕಮಿಷನರು ಅದನ್ನು ಸರ್ಕಾರಕ್ಕೆ ರಿಪೋರ್ಟು ಮಾಡಬೇಕು ; 9, ಮತ್ತು 10ನೆ ನಿಬಂಧನೆಗಳು ಶಿವಾಯಿ ಮೇಲ್ಕಂಡ ನಿಬಂಧನೆಗಳು ಇಂಥಾ ಚುನಾವಣೆಗಳಿಗೆ ಅನ್ವಯಿಸುತ್ತವೆ. ಆಖೈರಿನಲ್ಲಿ ಪುನರ್ವಿಮರ್ಶೆಮಾಡಿದ ಸಮ್ಮತಿ ಕೊಡುವವರ ಮತ್ತು ಉಮೇದುವಾರರ ಪಟ್ಟಿಯನ್ನು ಪ್ರಚುರಿಸ್ ಮಾಡತಕ್ಕದ್ದು ; ಸದರಿ ಪಟ್ಟಿಯಲ್ಲಿ ನಮೂದಾದ ಜನಗಳೇ ಆ ತಾರೀಖಿಗೆ ಅನರ್ಹರಾಗದೆ ಇರುವ ಭಾಗದಲ್ಲಿ, ಸಮ್ಮತಿ ಕೊಡುವುದಕ್ಕಾಗಲಿ ಚುನಾಯಿಸಲ್ಪಡುವುದಕ್ಕಾಗಲಿ ಅರ್ಹರಾದವರೆಂದು ಭಾವಿಸಲ್ಪಡತಕ್ಕದ್ದು. ಪರಂತು, ಅಂಥಾ ಯಾವ ಚುನಾವಣೆಯನ್ನೂ, ಸರ್ಕಾರದವರ ಮಂಜೂರಾತಿಯಿಲ್ಲದೆ, ಸದರಿ ಸ್ಥಾನವು ಖಾಲಿಯಾದ ಸಂಗತಿ ರಿಪೋರ್ಟಾದ ಒಂದು ತಿಂಗಳು ಕಳೆದ ತರುವಾಯ ನಡೆಸಕೂಡದು.

ಹುಕುಂ ಬಮೋಜಬ್.

ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರೆಟರಿ.

1909ನೆ ಇಸವಿಯ IIನೆ ನಂಬರ್ ರೆಗ್ಯುಲೇಷನ್.

1909ನೆ ಇಸವಿ ಜನವರಿ 11ನೆ ತಾರೀಖಿನಲ್ಲಿ ಶ್ರೀಮನ್ ಮೈಸೂರು ಮಹಾರಾಜಾ ಸಾಹೇಬ್ಬಹದ್ದೂರ್ರವರ ಮಂಜೂರಾತಿಯನ್ನು ಹೊಂದಿರುತ್ತದೆ.

1903ನೆ ಇಸವಿಯ ಮೈಸೂರು ನಗರಾಭಿವೃದ್ಧಿ ರೆಗ್ಯುಲೇಷನನ್ನು ಪುನಃ ತಿದ್ದುಪಡಿ ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

1903ನೆ ಇಸವಿಯ ಮೈಸೂರು ನಗರಾಭಿವೃದ್ಧಿ ರೆಗ್ಯುಲೇಷನನ್ನು ಪುನಃ ತಿದ್ದುಪಡಿ ಮಾಡಬೇಕಾದುದು ಯುಕ್ತವಾಗಿರುವದರಿಂದ, ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್ರವರು ಇದರಡಿ ಕಂಡಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

1871ನೆ ಇಸವಿಯ ರೆಗ್ಯುಲೇಷನುಗಳಿಗೆ ಬದಲಾಗಿ 1906ನೆ ಇಸವಿಯ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿಗೆ ದಾಖಲೆ ಕೊಡುವುದು.

1. 1871ನೆ ಇಸವಿಯ ಮ್ಯುನಿಸಿಪಲ್ ರೆಗ್ಯುಲೇಷನುಗಳಿಗೆ ಬದಲಾಗಿ 1906ನೆ ಇಸವಿಯ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿಗೆ ದಾಖಲೆ ಕೊಡತಕ್ಕದ್ದು.

"ಮ್ಯುನಿಸಿಪಲ್ ಕಮಿಷನ್" ವಗೈರೆಗೆ ಬದಲಾಗಿ "ಮ್ಯುನಿಸಿಪಲ್ ಕೌನ್ಸಿಲ್" ವಗೈರೆ ಎಂದು ಓದಿಕೊಳ್ಳತಕ್ಕದ್ದು.

2. 4, 5, 7, 16, 19, 21, 24, 26, 30, 31, 33, 37, ಮತ್ತು 38ನೆ ಪ್ರಕರಣಗಳಲ್ಲಿ ಇರುವ "ಮ್ಯುನಿಸಿಪಲ್ ಕಮಿಷನ್," "ಮ್ಯುನಿಸಿಪಲ್ ಕಮಿಷನರ್" ಮತ್ತು "ಮ್ಯುನಿಸಿಪಲ್ ಕಮಿಷನರುಗಳು" ಎಂಬ ಪದಗಳಿಗೆ ಬದಲಾಗಿ "ಮ್ಯುನಿಸಿಪಲ್ ಕೌನ್ಸಿಲ್" "ಮ್ಯುನಿಸಿಪಲ್ ಕೌನ್ಸಿಲರ್" ಮತ್ತು "ಮ್ಯುನಿಸಿಪಲ್ ಕೌನ್ಸಿಲರುಗಳು" ಎಂಬ ಪದಗಳನ್ನು ಓದಿಕೊಳ್ಳತಕ್ಕದ್ದು.

4ನೆ ಪ್ರಕರಣದ ತಿದ್ದುಪಾಟು.

3. ಬೋರ್ಡಿನ ಏರ್ಪಾಟನ್ನು ವಿವರಿಸಿ ಹೇಳುವ 4ನೆ ಪ್ರಕರಣದಲ್ಲಿ "ಎಂಟು" ಎಂಬ ಪದಕ್ಕೆ ಬದಲಾಗಿ "ಒಂಭತ್ತು" ಎಂಬ ಪದವನ್ನೂ, "ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದಲ್ಲಿರುವ ಸಿವಿಲ್ ಸರ್ಜನ್" ಎಂಬ ಪದಗಳಿಗೆ ಬದಲಾಗಿ "ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರು; ಸರ್ಕಾರದ ಡೆಪ್ಯುಟಿ ಸ್ಯಾನಿಟರಿ ಕಮಿಷನರವರು" ಎಂಬ ಪದಗಳನ್ನು ಉಪಯೋಗಿಸತಕ್ಕದ್ದು.

20ನೆ ಪ್ರಕರಣಕ್ಕೆ ಬದಲಾಗಿ ಹೊಸ ಪ್ರಕರಣವನ್ನು ಸೇರಿಸುವುದು.

4. 20ನೆ ಪ್ರಕರಣಕ್ಕೆ ಬದಲಾಗಿ ಇದರಡಿ ಕಂಡುದನ್ನು ಸೇರಿಸತಕ್ಕದ್ದು.

ಬೀದಿಗಳು, ಚರಂಡಿಗಳು, ಪಾಯಿಖಾನೆಗಳು, ಬಚ್ಚಲುಗಳು ವಗೈರೆಗಳ ವಿಷಯದಲ್ಲಿಯೂ, ನೋಟೀಸುಗಳನ್ನು ಜಾರಿಮಾಡುವದು ವಗೈರೆ ವಿಷಯದಲ್ಲಿಯೂ, ಕೆಲವು ಕಾಮಗಾರಿಗಳನ್ನು ಮಾಡಿಸಿ ಲಾಗವಡು ವಸೂಲ್ಮಾಡುವ ವಿಷಯದಲ್ಲಿಯೂ ಮ್ಯುನಿಸಿಪಲ್ ಕೌನ್ಸಿಲರುಗಳು ಚಲಾಯಿಸುತ್ತಿರುವ ಕೆಲವು ಅಧಿಕಾರಗಳನ್ನು ಬೋರ್ಡಿನವರು ಚಲಾಯಿಸುವುದು.

"20. 1906ನೆ ವರುಷದ VIIನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನಲ್ಲಿ ಬೀದಿಗಳ ವಿಚಾರವಾಗಿ 41, 50, 90ರಿಂದ 93, 113, 116, 118, 119, ಮತ್ತು 121ರಿಂದ 125ರ ವರೆಗಿನ ಪ್ರಕರಣಗಳಲ್ಲಿ ಮಾಡಿರುವ ನಿಯಮಗಳು; ಚರಂಡಿಗಳು, ಪಾಯಿಖಾನೆಗಳು, ಬಚ್ಚಲುಗಳು ವಗೈರೆ ವಿಷಯವಾಗಿ 99ರಿಂದ 105, 107 (1), 108, 109, 111, ಮತ್ತು 112ನೆ ಪ್ರಕರಣಗಳಲ್ಲಿ ಮಾಡಿರುವ ನಿಯಮಗಳೂ; ನೋಟೀಸು ಜಾರಿ ವಗೈರೆ ವಿಷಯವಾಗಿ 154ನೆ ಪ್ರಕರಣದಲ್ಲಿ ಮಾಡಿರುವ ನಿಯಮಗಳೂ; ಮತ್ತು ಮನೆ ಮಾಲೀಕರು ಅಥವಾ ವಾಸಸ್ಥರು ಯಾವ್ಯಾವ ಕೆಲಸವನ್ನು ಮಾಡದೆ ತಪ್ಪುತ್ತಾರೆಯೋ ಅಂಥಾ ಕೆಲಸವನ್ನು ಮಾಡಿಸಿ ಅದಕ್ಕಾಗಿ ತಗಲಿದ ಖರ್ಚನ್ನು ವಸೂಲ್ಮಾಡುವ ವಿಷಯವಾಗಿ 156ನೆ ಪ್ರಕರಣದಲ್ಲಿ ಮಾಡಿರುವ ನಿಯಮಗಳೂ, ಈ ರೆಗ್ಯುಲೇಷನಿನ ಅಭಿಪ್ರಾಯಕ್ಕೆ ಅನುಗುಣವಾಗಿರುವ ಮಟ್ಟಿಗೆ,

(a) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿನ ಏಖ್ತ್ಯಾರಿಗೆ ಕೊಟ್ಟಿರುವ ಬೀದಿಗಳಿಗಾಗಲಿ, ಚರಂಡಿಗಳಿಗಾಗಲಿ, ಪಾಯಿಖಾನೆಗಳಿಗಾಗಲಿ, ಬಚ್ಚಲು ವಗೈರೆಗಳಿಗಾಗಲಿ ಅಥವಾ ಅವುಗಳ ಭಾಗಗಳಿಗಾಗಲಿ, ಮತ್ತು

(b) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿನವರು ನೋಟೀಸುಗಳನ್ನು ಜಾರಿಮಾಡುವುದಕ್ಕಾಗಲೀ, ಕೆಲಸಗಳನ್ನು ನಡೆಸುವದಕ್ಕಾಗಲಿ, ಅವುಗಳ ಖರ್ಚನ್ನು ವಸೂಲ್ಮಾಡುವದಕ್ಕಾಗಲಿ—

ಅನ್ವಯಿಸತಕ್ಕದ್ದು; ಮತ್ತು ಸದರೀ ನಿಯಮಗಳಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳು ಅಥವಾ ಇತರ ಮ್ಯುನಿಸಿಪಲ್ ಅಧಿಕಾರಿಗಳು ಎಂದು ಇರುವ ಸ್ಥಳದಲ್ಲಿ ಬೋರ್ಡ್ ಎಂದು ಅನ್ವಯಿಸಿ ಕೊಳ್ಳತಕ್ಕದ್ದು.

ತಾರೀಖು 20ನೆ ಜನವರಿ 1909, ಇಸ್ತಹಾರ್ನಾಮೆ ನಂ. ಜೆ. 4196—ಜೆ. ಎಂ. 229-08-1.

1906ನೆ ಇಸವಿ ಆಗಸ್ಟು 20ನೆ ಮಾರ್ಚ್ಯಂ ಜೆ. 1456ನೆ ನಂಬರ್ ಇಸ್ತಹಾರ್ನಾಮೆಯ IIನೆ ಪ್ಯಾರಾದಲ್ಲಿ ಶ್ರೀಮನ್ ಮಹಾರಾಜರವರ ಮಂತ್ರಾಲೋಚನಾ ಸಭೆಯಲ್ಲಿ ಕೆಲಸ ನಡೆಸತಕ್ಕ ಬಗ್ಗೆ ವಿಧಿಸೋಣವಾಗಿರುವ ನಿಬಂಧನೆಗಳ ಪೈಕಿ 12 (1)ನೆ ನಿಬಂಧನೆಯಲ್ಲಿ—

"ಗವರ್ನಮೆಂಟಿಗೆ ಬರುವ ಅಪೀಲುಗಳು" ಎಂಬ ಮಾತುಗಳಿಗೆ ಬದಲಾಗಿ "ಗವರ್ನಮೆಂಟಿಗೆ ಬರುವ ಅಪೀಲುಗಳೂ ಮತ್ತು ಅದೇ ಕೋಡಿನ 210 A ಪ್ರಕರಣದ ಮೇರೆಗೆ ರೆವಿನ್ಯೂ ಕಮಿಷನರವರಿಂದ ವಾಪಸ್ ತರಿಸಿಕೊಳ್ಳಲ್ಪಡುವ ಅಪೀಲುಗಳು" ಎಂಬ ಮಾತುಗಳನ್ನು ಸೇರಿಸತಕ್ಕದ್ದು

ಎಂದು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್ರವರು ಅಪ್ಪಣೆ ದಯಪಾಲಿಸಿರುತ್ತಾರೆ.

ವಿ. ಪಿ. ಮಾಧವರಾವ್,
ದಿವಾನರವರು.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಸ್ಪ ಆದ್ದು [ನಂ 6.

ಬೆಂಗಳೂರು, ಗುರುವಾರ, ಫೆಬ್ರವರಿ ತಾ|| 11, 1909.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ಮೈಸೂರು ನ್ಯಾಯವಿಧಾಯಕ ಸಭೆಯ ನಡವಳಿಕೆಗಳ ಸಾರಾಂಶ.

ಸನ್ 1909ನೆ ಇಸವಿಯ ಜನವರಿ 8ನೆ ಶುಕ್ರವಾರದ ದಿನ ಮಧ್ಯಾಹ್ನಾತ್ಪರ 3 ಘಂಟೆಯ ಸಮಯದಲ್ಲಿ ಬೆಂಗಳೂರು ಪಬ್ಲಿಕ್ ಆಫೀಸಸ್ ಯಾ ಅಠಾರಾ ಕಛೇರಿಯಲ್ಲಿರುವ ಸಭಾ ಮಂದಿರದಲ್ಲಿ ಸಭೆಯು ಸೇರಿತ್ತು.

ಹಾಜರಿದ್ದವರು.

ಶ್ರೀಮಾನ್ ವಿ. ಪಿ. ಮಾಧವರಾಯರವರು, ಬಿ. ಏ., ಸಿ. ಐ. ಇ., ದಿವಾನರವರು, (ಸಭಾಧ್ಯಕ್ಷರು).

ಉದ್ಯೋಗಪ್ರಯುಕ್ತ ಮೆಂಬರುಗಳಾದವರು.

ಶ್ರೀಮಾನ್ ಟಿ. ಆನಂದರಾಯರವರು, ಬಿ. ಎ., (ಮೊದಲನೆ ಕೌನ್ಸಿಲರವರು).

„ ಕೆ. ಪಿ. ಪುಟ್ಟಣ್ಣಶೆಟ್ಟರವರು, (ಎರಡನೆ ಕೌನ್ಸಿಲರವರು).

ಹೆಚ್ಚಾಗಿ ಸೇರಿಸಿಕೊಳ್ಳಲ್ಪಟ್ಟ ಮೆಂಬರುಗಳು.

ಸರ್ಕಾರಿ ಉದ್ಯೋಗಸ್ಥರಾದವರು.

ಶ್ರೀಮಾನ್ ಎಚ್. ಜೆ. ಭಾಭಾ ಯವರು, ಎಂ. ಎ.

„ ರಾವ್ ಬಹದ್ದೂರ್ ಎಂ. ಮುತ್ತಣ್ಣನವರು.

„ ಎಸ್. ನಾರಾಯಣರಾಯರವರು.

„ ಕೆ. ಎಸ್. ಚಂದ್ರಶೇಖರ ಐಯರವರು, ಬಿ. ಎ., ಬಿ. ಎಲ್.

ಸರ್ಕಾರಿ ಉದ್ಯೋಗಸ್ಥರಲ್ಲದವರು.

ಶ್ರೀಮಾನ್ ರಾಜಮಂತ್ರ ಪ್ರವೀಣ ಸಿ. ಶ್ರೀನಿವಾಸೈಯಂಗಾರ್ರವರು.

„ ಎಂ. ಸಿ. ರಂಗಯ್ಯಂಗಾರ್ರವರು, ಬಿ. ಎ.

„ ಸೈಯದ್ ಅಮೀರ್ ಹಸನ್‌ರವರು.

ಗೈರ್ಹಾಜರಾದವರು.

ಸರ್ಕಾರಿ ಉದ್ಯೋಗಸ್ಥರು.

ಶ್ರೀಮಾನ್ ರಾಜಕಾರ್ಯ ಪ್ರವೀಣ ಏ. ರಂಗಸ್ವಾಮಿ ಅಯ್ಯಂಗಾರ್ರವರು, ಬಿ. ಎ., ಬಿ. ಎಲ್.
,, ಎಂ. ಕಾಂತರಾಜ ಅರಸಿನವರು, ಬಿ. ಎ.

ಸರ್ಕಾರಿ ಉದ್ಯೋಗಸ್ಥರಲ್ಲದವರು.

ಶ್ರೀಮಾನ್ ವಿ. ಎನ್. ನರಸಿಂಹೈಯಂಗಾರ್ರವರು.
,, ಬಿ. ನಾಗಪ್ಪನವರು, ಬ್ಯಾರಿಸ್ಟರ್ ಅಟ್-ಲಾ.

ಶ್ರೀಮಾನ್ ಎಸ್. ಹಿರಿಯಣ್ಣೈಯ್ಯನವರು, ಎಂ. ಎ. ಬಿ. ಎಲ್. (ಸೆಕ್ರಿಟರಿ).

ಮೈಸೂರು ಪೊಲೀಸು ಬಿಲ್ಲಿಗೆ 1908ನೆ ಡಿಸೆಂಬರ್ 23ನೆ ತಾರೀಖಿನ ದಿವಸವೂ, ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನ್ ಎಂದರೆ 1903ನೆ ಇಸವಿಯ 1ನೆ ರೆಗ್ಯುಲೇಷನ್ನು ತಿದ್ದುಪಾಟು ಮಾಡಲು ಹುಟ್ಟಿದ ಬಿಲ್ಲಿಗೆ ಡಿಸೆಂಬರ್ 26ನೆ ತಾರೀಖಿನ ದಿವಸವೂ ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್ರವರು ಅನುಮತಿಯನ್ನು ದಯಪಾಲಿಸಿರುತ್ತಾರೆಂದು ಸೆಕ್ರಿಟೆರಿಯವರು ಸಭೆಗೆ ತಿಳಿಸಿದರು.

1884ನೆ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನನ್ನು ಪುನಃ ತಿದ್ದುಪಾಟು ಮಾಡಲು ಹುಟ್ಟಿದ ಬಿಲ್ಲು.

ಮಿ॥ ಟಿ. ಆನಂದರಾಯರವರು ಈ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಕೇಳುವಲ್ಲಿ ಹೇಳಿದ್ದೇನೆಂದರೆ—ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನಿನಲ್ಲಿ ಒಂದು ಸಣ್ಣ ತಿದ್ದುಪಾಟು ಮಾಡುವ ಬಗ್ಗೆ ಒಂದು ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಬೇಡುತ್ತೇನೆ. ಈಗಿರುವಂತೆ ಸದರಿ ರೆಗ್ಯುಲೇಷನಿನ 4ನೆ ಪ್ರಕರಣದಲ್ಲಿ ಮೈಸೂರು ಚೀಫ್ ಕೋರ್ಟಿನಲ್ಲಿ 3 ಅಥವಾ ಹೆಚ್ಚು ಜನ ಜಡ್ಜಿಗಳಿರಬೇಕೆಂದು ಹೇಳಿದೆ. 3ನೆ ಪ್ರಕರಣದಲ್ಲಿ "ಫುಲ್‌ಬೆಂಚು" ಎಂಬುವುದಕ್ಕೆ "ಚೀಫ್ ಕೋರ್ಟಿನ ಎಲ್ಲಾ ಜಡ್ಜಿಗಳೂ ಸೇರಿರತಕ್ಕ ಒಂದು ನ್ಯಾಯಸ್ಥಾನ" ಎಂದು ಅರ್ಥ ಕೊಟ್ಟಿದೆ. 15ನೆ ಪ್ರಕರಣದ 3ನೆ ಕಲಮಿನಲ್ಲಿ ಫುಲ್‌ಬೆಂಚಿಗೆ ಸೇರಿದ ಜಡ್ಜಿಗಳ ಪೈಕಿ ಅಧಿಕ ಸಂಖ್ಯೆಯವರ ತೀರ್ಪೇ ಚೀಫ್ ಕೋರ್ಟಿನ ತೀರ್ಮಾನಗಿರುವುದೆಂದು ಹೇಳಿದೆ. ಚೀಫ್ ಕೋರ್ಟಿನಲ್ಲಿ ವಿಷಮ ಸಂಖ್ಯೆಯ ಜಡ್ಜಿಗಳಿದ್ದರೆ ಈ ವಿಧಿಗಳಂತೆ ಸರಿಯಾಗಿ ಕೆಲಸ ನಡೆಯುವುದು. ಆದರೆ ಈಗಿನಂತೆ ಚೀಫ್ ಕೋರ್ಟಿನಲ್ಲಿ 4 ಅಥವಾ ಇನ್ಯಾವುದಾದರೂ ಸಮಸಂಖ್ಯೆಯ ಜಡ್ಜಿಗಳಿದ್ದರೆ ತೊಂದರೆಯುಂಟಾಗುವುದು. ಹೀಗಿರುವಲ್ಲಿ ಫುಲ್‌ಬೆಂಚಿನ ಜಡ್ಜಿಗಳು ಭಿನ್ನಾಭಿಪ್ರಾಯಪಟ್ಟು ಎರಡು ಪಕ್ಷದಲ್ಲಿಯೂ ಸಮಸಂಖ್ಯೆ ಜಡ್ಜಿಗಳು ಇರುವಾಗ ಯಾರ ಅಭಿಪ್ರಾಯದಂತೆ ತೀರ್ಪುಕೊಡಬೇಕೆಂಬುವುದನ್ನು ವಿಶದಪಡಿಸಲು ರೆಗ್ಯುಲೇಷನಿನಲ್ಲಿ ಯಾವ ವಿಧಿಯೂ ಇರುವುದಿಲ್ಲ. ಆದುದರಿಂದ ಒಂದು ಫುಲ್ ಬೆಂಚಿನಲ್ಲಿ ಚೀಫ್ ಕೋರ್ಟಿನ ಜಡ್ಜಿಗಳೆಲ್ಲಾ ಸೇರಬೇಕಾದ ಅವಶ್ಯಕತೆ ಇಲ್ಲ; ಅವರುಗಳ ಪೈಕಿ 3 ಜನರಿಗೆ ಕಮ್ಮಿ ಇಲ್ಲದಷ್ಟು ಜಡ್ಜಿಗಳು ಸೇರಬೇಕೆಂದು ಕಾನೂನು ಮಾಡಿದರೆ ಈ ಮೇಲ್ಕಂಡ ತೊಂದರೆಯು ನಿವಾರಣೆಯಾಗಬಹುದಾಗಿದೆ. ಆದುದರಿಂದ ಇದಕ್ಕಾಗಿ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಕೇಳುತ್ತೇನೆ.

ಮಿ॥ ಎಂ. ಸಿ. ರಂಗೈಯ್ಯಂಗಾರ್ರವರು ಈ ಸಲಹೆಯನ್ನು ಅನುಮೋದಿಸಿದರು. ಸದರಿ ಸಲಹೆಯನ್ನು ಸಭೆಯವರ ಅನುಮತಿಗೆ ಹಾಕಲು ಅದನ್ನು ಅಂಗೀಕರಿಸಲಾಯಿತು.

1888ನೆ ಇಸವಿಯ IVನೆ ನಂಬರ್ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ಪುನಃ ತಿದ್ದುಪಾಟು ಮಾಡಲು ಹುಟ್ಟಿದ ಬಿಲ್ಲು.

ಮಿ॥ ಕೆ. ಎಸ್. ಚಂದ್ರಶೇಖರ ಅಯ್ಯರವರು ಈ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆ ಕೇಳುವಲ್ಲಿ ಹೇಳಿದ್ದೇನೆಂದರೆ-1888ನೆ ಇಸವಿಯ ಮೈಸೂರು ಲ್ಯಾಂಡು ರೆವಿನ್ಯೂ ಕೋಡನ್ನು ಪುನಃ ತಿದ್ದುಪಾಟು ಮಾಡಲು ಒಂದು ಬಿಲ್ಲನ್ನು ಪ್ರಸ್ತಾಪ ಮಾಡಬೇಕಾಗಿದೆ.

ಈ ಬಿಲ್ಲು ಚಿಕ್ಕದು ಇದರಲ್ಲಿ ಒಂದೇ ಒಂದು ಕಲಮಿರುವುದು. ರೆವಿನ್ಯೂ ಕಮಿಷನರವರ ಫೈಲಿನಿಂದ ಯಾವುದಾದರೂ ಅಪೀಲನ್ನಾಗಲಿ ಅಥವಾ ಯಾವ ತರಹೆಯ ಅಪೀಲುಗಳನ್ನಾಗಲಿ ಸರ್ಕಾರದವರು ತೆಗೆಸಿಕೊಂಡು ಅವುಗಳನ್ನು ತಾವೇ ವ್ಯವಸ್ಥೆ ಮಾಡುವುದಕ್ಕೂ ಅಥವಾ ಬೇಕಾದಾಗ ಅಂಥಾ ಅಪೀಲನ್ನು ರೆವಿನ್ಯೂ ಕಮಿಷನರಿಗೆ ಪುನಃ ವರ್ಗಾಯಿಸುವುದಕ್ಕೂ ಸರ್ಕಾರದವರಿಗೆ ಅಧಿಕಾರ ಕೊಡುವಂತೆ ಒಂದು ಹೊಸ ಪ್ರಕರಣವನ್ನು 210 ಎ ಪ್ರಕರಣವೆಂದು ಕೋಡಿನಲ್ಲಿ ಸೇರಿಸಬೇಕೆಂದು ಈ ಕಲಮಿನಲ್ಲಿ ವಿಧಿಸಿ ಇದೆ.

1906ನೆ ಇಸವಿಯಲ್ಲಿ ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದುಪಾಟು ಮಾಡಿದಾಗ ಡೆಪ್ಯುಟಿ ಕಮಿಷನರುಗಳು ರೆವಿನ್ಯೂ ಕಮಿಷನರಿಗೆ ತಾಬೇದಾರರಾಗಿರುತ್ತಾರೆಂದು ತಿಳಿಸೋಣವಾಯಿತಷ್ಟೆ. ಆದುದರಿಂದ ಡೆಪ್ಯುಟಿ ಕಮಿಷನರುಗಳ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ಕಡಿಯುವ ಅಧಿಕಾರವು 210ನೆ ಪ್ರಕರಣದ ಮೇರೆಗೆ ರೆವಿನ್ಯೂ ಕಮಿಷನರಿಗೆ ಬಂತು. ಕಾನೂನಿನ ಯಾ ಕಾನೂನಿನ ಬಲಿಯವುಳ್ಳ ಪದ್ಧತಿಯ ವಿಚಾರವಾಗಿ ವಿವಾದವು ಬಂದಹೊರತು ರೆವಿನ್ಯೂ ಕಮಿಷನರವರು ಅಪೀಲುಗಳ ಮೇಲೆ ಕೊಡುವ ಹುಕುಮುಗಳೇ ಆಖೈರು ಹುಕುಮುಗಳಾಗಿರತಕ್ಕದ್ದೆಂದು ಆಗಲೇ ನಿರ್ಧರಿಸೋಣವಾಯಿತು.

ರೆವಿನ್ಯು ಕಮಿಷನರವರ ಫೈಲಿನಿಂದ ಯಾವುದಾದರೂ ಒಂದು ಅಪೀಲನ್ನು ತರಿಸಿಕೊಳ್ಳುವುದು ಅವಶ್ಯಕವೆಂದು ಸರ್ಕಾರದವರಿಗೆ ಕಂಡುಬಂದರೆ ಹಾಗೆ ನಡೆಸುವ ಬಗ್ಗೆ ಅಧಿಕಾರವನ್ನು ಕೊಡುವ ವಿಧಿಯನ್ನು ಆಗ ಕಲ್ಪಿಸಲಿಲ್ಲ. ಕೆಳಕೋರ್ಟುಗಳ ಫೈಲುಗಳಿಂದ ಮೊಕದ್ದಮೆಗಳನ್ನು ತರಿಸಿಕೊಳ್ಳುವ ಅಧಿಕಾರವು ಹೊಸ ಸಿವಿಲ್ ಪ್ರೊಸೀಜರ್ ಕೋಡಿನ ಪ್ರಕಾರ ಬ್ರಿಟಿಷ್ ಇಂಡಿಯಾದಲ್ಲಿಯೂ, ಮೈಸೂರಿನಲ್ಲಿಯೂ ಇರುವ ಹೈ ಕೋರ್ಟು ಯಾ ಚೀಫ್ ಕೋರ್ಟುಗಳಿಗೂ ಮತ್ತು ಎಲ್ಲಾ ಡಿಸ್ಟ್ರಿಕ್ಟು ಕೋರ್ಟುಗಳಿಗೂ ಇರುತ್ತದೆ. ರೆವಿನ್ಯೂ ನಡವಳಿಕೆಗಳಲ್ಲಿ ರೆವಿನ್ಯೂ ಅಪೀಲುಗಳ ವಿಷಯದಲ್ಲಿ ಸರ್ಕಾರಕ್ಕೆ ಇದೇ ತರಹ ಅಧಿಕಾರವನ್ನು ಉಳಿಸಿಕೊಳ್ಳುವುದು ಅಪೇಕ್ಷಣೀಯವಾಗಿರುತ್ತದೆ. ಇದೂ ಅಲ್ಲದೆ ಈಗ ಸದ್ಯಕ್ಕೆ ಕ್ಷಾಮಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳು ಹೆಚ್ಚಾಗುತ್ತಾ ಬರುತ್ತಿರುವುದರಿಂದ ಈ ಕೆಲಸಗಳಿಗೆ ರೆವಿನ್ಯೂ ಕಮಿಷನರವರು ಹೆಚ್ಚು ವ್ಯವಧಾನವನ್ನೂ ನಿಗೆಯನ್ನೂ ಕೊಡಬೇಕಾದ ಪ್ರಯುಕ್ತ ಈಗ ಅವರಿಗೆ ಇರತಕ್ಕ ಭಾರಿ ರೆವಿನ್ಯೂ ಕೆಲಸಗಳಿಂದ ಸ್ವಲ್ಪ ಪುರಸತ್ತು ಕೊಡಲು ಈ ವಿಧಿಯನ್ನು ತುಂಬಾ ಜರೂರಾಗಿ ಏರ್ಪಡಿಸಬೇಕಾಗಿದೆ.

ಈ ಹೊಸ ಪ್ರಕರಣದ ಮೇರೆಗೆ ಸರ್ಕಾರದವರು ತರಿಸಿಕೊಂಡ ಅಪೀಲುಗಳಲ್ಲಿ ಕೌನ್ಸಿಲ್ ಕಮಿಟಿಯವರು ವಿಚಾರಣೆ ನಡೆಸಿ ವ್ಯವಸ್ಥೆ ಮಾಡುವರು; ಇದರಿಂದ ಕೌನ್ಸಿಲ್ ನಿಬಂಧನೆಗಳಲ್ಲಿ ಅಗತ್ಯವಾಗಿ ಮಾಡಬೇಕಾದ ತಿದ್ದುಪಾಟನ್ನು ಕಾಲಕ್ರಮದಲ್ಲಿ, ಪ್ರಸಿದ್ಧಪಡಿಸಲಾಗುವುದು.

ಸದರೀ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆಯನ್ನು ಕೇಳುತ್ತೇವೆ.

ಮಿ|| ಸೈಯದ್ ಅಮೀರ್ ಹಸ್ಸನರವರು ಮೇಲ್ಕಂಡ ವಿಜ್ಞಾಪನೆಯನ್ನು ಅನುಮೋದಿಸಿದರು. ಸಭಿಕರ ಅನುಮತಿ ಕೇಳಲಾಗಿ ಅಂಗೀಕೃತವಾಯಿತು.

ಸಭಾಧ್ಯಕ್ಷರವರು.—ಸಭೆಯ ಕಾರ್ಯ ನಿರ್ವಾಹದ ನಿಬಂಧನೆಗಳನ್ನು ಸದ್ಯದಲ್ಲಿ ತಡೆದಿಟ್ಟು ಸದರಿ ಬಿಲ್ಲನ್ನು ಓದಿ ಕೂಡಲೇ ಅದನ್ನು ಆಲೋಚನೆಗೆ ತೆಗೆದುಕೊಂಡು ಸಭೆಯವರು ಅದನ್ನು ಅಂಗೀಕರಿಸಬೇಕೆಂದು ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರು ಸಲಹೆ ಮಾಡಿರುತ್ತಾರೆ. ಅದನ್ನು ಈಗ ನಾವು ಪರ್ಯಾಲೋಚಿಸಬೇಕಾಗಿದೆ.

ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರು.—ಈ ಏರ್ಪಾಟು ಎಷ್ಟು ಜರೂರಾಗಿದೆ ಎಂಬುದನ್ನು ನಾವು ಮೊದಲೇ ತಿಳಿಸಿರುತ್ತೇವೆ. ಆದುದರಿಂದ ನ್ಯಾಯವಿಧಾಯಕ ಸಭೆಯ ಕಾರ್ಯನಿರ್ವಾಹದ ನಿಬಂಧನೆಗಳನ್ನು ಸದ್ಯಕ್ಕೆ ತಡೆದಿಟ್ಟು ಈ ಬಿಲ್ಲನ್ನು ಓದಿ ಕೂಡಲೇ ಅದನ್ನು ಪರ್ಯಾಲೋಚಿಸಿ ಸಭೆಯಲ್ಲಿ ಅಂಗೀಕರಿಸಬೇಕೆಂದು ಸಲಹೆ ಕೊಡುತ್ತೇವೆ.

ಮಿ|| ಟಿ. ಆನಂದರಾಯರವರು.—ಈ ಸಲಹೆಯನ್ನು ಅನುಮೋದಿಸಿದರು. ಸಲಹೆಯು ವಿಚಾರವಾಗಿ ಸಭೆಯವರ ಅಭಿಪ್ರಾಯ ಕೇಳಲಾಗಿ ಎಲ್ಲರೂ ಅನುಮೋದಿಸಿದರು.

ಆ ಬಳಿಕ ಪ್ರಸ್ತಾಪಕರು ಸದರೀ ಬಿಲ್ಲನ್ನು ಓದಿದರು. ಆನಂತರ, "ರೆವಿನ್ಯೂ ಕಮಿಷನರವರು ವಿಚಾರಣೆ ಮಾಡುವ ಮೊಕದ್ದಮೆಗಳಲ್ಲಿ ವಿದ್ಯಮಾನಗಳ ವಿಷಯದಲ್ಲಿಯೂ ಕೂಡ ಹೇಗೆ ತನಿಖೆ ನಡೆಸುತ್ತಾರೆಯೋ ಹಾಗೆಯೇ ರೆವಿನ್ಯೂ ಕಮಿಷನರವರ ಫೈಲಿನಿಂದ ತರಿಸಿಕೊಳ್ಳೋಣವಾದ ಮೊಕದ್ದಮೆಗಳಲ್ಲಿ ಸರ್ಕಾರದವರು ಅಮಲು ನಡೆಸುತ್ತಾರೆಯೋ?" ಎಂದು ಮಿ|| ಎಂ. ಸಿ. ರಂಗೈಯ್ಯಂಗಾರ್ರವರು ವಿಚಾರಿಸಿದರು 1906ನೆ ಇಸವಿಯ VIನೆ ರೆಗ್ಯುಲೇಷನಿಂದ ತಿದ್ದುಪಾಟಾದ ಲ್ಯಾಂಡು ರೆವಿನ್ಯೂ ಕೋಡಿನ 210ನೆ ಪ್ರಕರಣದ ಮೇರೆಗೆ ಖಾನೂನಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಯಾ ಖಾನೂನಿನ ಬಲಿಯವುಳ್ಳ ಪದ್ಧತಿಯ ಸಂಗತಿಗಳಲ್ಲಿ ಮಾತ್ರಗೆ ಸರ್ಕಾರಕ್ಕೆ ಅಪೀಲು ಮಾಡಬಹುದಾಗಿದೆ ಯಾದುದರಿಂದ ಈ ಬಿಲ್ಲನ್ನು ಸಭೆಯಲ್ಲಿ ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಈ ವಿಚಾರವನ್ನು ಸ್ಪಷ್ಟಪಡಿಸಬೇಕೆಂದು ಅವರು ಕೇಳಿದರು.

ಇದಕ್ಕೆ ಜವಾಬಾಗಿ, "ರೆವಿನ್ಯೂ ಕಮಿಷನರವರ ತೀರ್ಪುಗಳ ಮೇಲೆ ಬಂದ ಅಪೀಲುಗಳಲ್ಲಿ ಮಾತ್ರ ಸರ್ಕಾರದವರ ಮೊಕದ್ದಮೆಯ ವಿದ್ಯಮಾನಗಳ ವಿಚಾರವಾಗಿ ತನಿಖೆ ನಡೆಸಕೂಡದೇ ಹೊರತು ರೆವಿನ್ಯೂ ಕಮಿಷನರವರ ಫೈಲಿನಿಂದ ತರಿಸಿಕೊಂಡ ಮೊಕದ್ದಮೆಗಳಲ್ಲಿ ರೆವಿನ್ಯೂ ಕಮಿಷನರು ಅವುಗಳನ್ನು ವ್ಯವಸ್ಥೆ ಮಾಡಲು ಯಾವ್ಯಾವ ಅಧಿಕಾರಗಳನ್ನು ಹೊಂದಿರುತ್ತಾರೆಯೋ ಆಯಾ ಅಧಿಕಾರಗಳೆಲ್ಲಾ ಸರ್ಕಾರದವರಿಗೂ ಇರುತ್ತವೆ." ಎಂದು ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರು ತಿಳಿಸಿದರು.

ಅನಂತರ ಮಿ|| ಕೆ. ಎಸ್. ಚಂದ್ರಶೇಖರ ಅಯ್ಯರವರು ಈ ಬಿಲ್ಲನ್ನು ಪರ್ಯಾಲೋಚಿಸಿ ಮಂಜೂರ್ಮಾಡಬೇಕೆಂದು ಸಲಹೆ ಕೊಟ್ಟರು.

ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರು ಈ ಸಲಹೆಯನ್ನು ಅನುಮೋದಿಸಿದರು.

ಸಭೆಯವರ ಅಭಿಪ್ರಾಯ ಕೇಳಲಾಗಿ ಈ ಸಲಹೆಯು ಅಂಗೀಕೃತವಾಯಿತು.

ಬಿಲ್ಲನ್ನು ಐಕ್ಯಮತ್ಯರಾಗಿ ಸಭೆಯಲ್ಲಿ ಪರ್ಯಾಲೋಚಿಸಿ ಮಂಜೂರ್ಮಾಡಲಾಯಿತು. ಅನಂತರ ಸಭೆಯು ಬರಖಾಸ್ತಾಯಿತು.

ವಿ. ಪಿ. ಮಾಧವರಾವ್,
ಸಭಾಧ್ಯಕ್ಷರು.

ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಾಯಿಸ್ ಆದ್ದು. [ನಂ. 7.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ॥ 18, 1909.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂಬರು 177—ಲೆಜಿಸ್ಲೇಟಿವ್ ಕೌನ್ಸಿಲ್, ತಾರೀಖು 26ನೆ ಡಿಸೆಂಬರು 1908.

ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯನಿರ್ವಾಹದ ಬಗ್ಗೆ ಏರ್ಪಟ್ಟಿರುವ ನಿಬಂಧನೆಗಳ ಪೈಕಿ 31ನೆ ನಿಬಂಧನೆಯ ಮೇರೆಗೆ ಇದರಡಿ ಕಂಡ ಬಿಲ್ಲನ್ನೂ, ಅದರ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯನ್ನೂ ಸಹಾ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸೋಣಾಗಿದೆ.

ಹುಕುಂ ಬಮೋಜೀಬ್,
ಎಸ್. ಹಿರಿಯಣ್ಣೈಯ,
ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ಮೈಸೂರು ಸಂಸ್ಥಾನದಲ್ಲಿ ಆಸ್ತಿಯುಳ್ಳವರಾಗಿದ್ದು ಮೃತಪಡುವ ಬ್ರಿಟಿಷ್-ಪ್ರಜೆಗಳ ಆಸ್ತಿಯ ವಿಲೇವಾರಿ ವಿಷಯದಲ್ಲಿ ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವುಂಟೆಂದು ಅಂಗೀಕರಿಸುವ ಬಗ್ಗೆ ಹುಟ್ಟಿದ ಬಿಲ್ಲು.

ಪೀಠಿಕೆ.

ಸಭಾಸಮೇತರಾದ ಇಂಡಿಯಾ ಗವರ್ನರ್ ಜನರಲ್‌ರವರು 1874ನೆ ಇಸವಿಯಲ್ಲಿ ಮಂಜೂರ್ಮಾಡಿದ (1874ನೆ ಇಸವಿಯ 2ನೆ ಆಕ್ಟಾದ) ಅಡ್ಮಿನಿಸ್ಟ್ರೇಟರ್ ಜನರಲ್ ಆಕ್ಟಿನ ನಿಯಮಗಳು, ಮೈಸೂರು ಸಂಸ್ಥಾನದಲ್ಲಿ ಇರುವ ಬ್ರಿಟಿಷ್ ಪ್ರಜೆಗಳಿಗೆ ಅವರು ಬ್ರಿಟಿಷ್ ಪ್ರಜೆಗಳಾಗಿರುವ ಕಾರಣದಿಂದ ಮಾತ್ರವೇ ಅನ್ವಯಿಸುತ್ತವೆಯಲ್ಲದೆ ಈ ಸಂಸ್ಥಾನದ ಕಾನೂನಾಗಿ ಏರ್ಪಟ್ಟಿಲ್ಲವಾದುದರಿಂದಲೂ, ಮತ್ತು ಮೃತಪಟ್ಟ ಬ್ರಿಟಿಷ್ ಪ್ರಜೆಗಳಿಗೆ ಈ ಸಂಸ್ಥಾನದಲ್ಲಿ ಸಾಲ ಕೊಡಬೇಕಾದವರೆಲ್ಲರಿಂದಲೂ ಮತ್ತು ಅಂಥಾ ಬ್ರಿಟಿಷ್ ಪ್ರಜೆಗಳಿಗೆ ಸೇರಿದ ಸ್ವತ್ತನ್ನು ಈ ಸಂಸ್ಥಾನದಲ್ಲಿ ಇಟ್ಟುಕೊಂಡಿರುವವರಿಂದಲೂ, ಆ ಸಾಲ ಯಾ ಸ್ವತ್ತನ್ನು ಸದರೀ ಬ್ರಿಟಿಷ್ ಪ್ರಜೆಗಳ ಪರವಾಗಿ ವಸೂಲ್ಮಾಡಲು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಅಧಿಕಾರವುಳ್ಳವರೆಂಬುವುದನ್ನು ಈ ಸಂಸ್ಥಾನದಲ್ಲಿ ಈಗ ಅಂಗೀಕರಿಸಿರುವದಕ್ಕಿಂತ ಇನ್ನೂ ಸಂಪೂರ್ಣವಾಗಿ ಅಂಗೀಕರಿಸುವ ಬಗ್ಗೆ ಕಾನೂನ್ ಏರ್ಪಡಿಸುವುದು ಯುಕ್ತವಾಗಿರುವುದರಿಂದಲೂ ಸಹಾ, ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರು ಮುಂದೆ ನಮೂದಿಸಿರುವಂತೆ ಕಾನೂನ್ ಏರ್ಪಡಿಸಬೇಕೆಂತ ಅಪ್ಪಣೆ ದಯಪಾಲಿಸಿರುತ್ತಾರೆ :—

ಮೃತಪಟ್ಟ ಬ್ರಿಟಿಷ್ ಪ್ರಜೆಗಳ ಪರವಾಗಿ ಅಮಲ್ ನಡೆಸಲು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವಿರುವಿಕೆ ಮತ್ತು ಅಡ್ಮಿನಿಸ್ಟ್ರೇಷನ್ ಲೆಟರುಗಳನ್ನು ಪಡೆಯಲು ಸದರೀಯವರಿಗೆ ಪ್ರಥಮ ಬಾಧ್ಯತೆ ಇರುವಿಕೆ.

1. 1874ನೆ ಇಸವಿಯ 2ನೆ ಆಕ್ಟಾದ ಅಡ್ಮಿನಿಸ್ಟ್ರೇಟರ್ ಜನರಲ್ ಆಕ್ಟಿನಲ್ಲಿ ಅರ್ಥ ವಿವರಿಸಿರುವ ಮೇರೆಗೆ ಅಧಿಕಾರವುಳ್ಳ ಮದರಾಸು ಆಧಿಪತ್ಯದ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ, ಮೈಸೂರು ಸಂಸ್ಥಾನದಲ್ಲಿ ಆಸ್ತಿಯನ್ನು ಬಿಟ್ಟು ಮೃತಪಡುವ ಬ್ರಿಟಿಷ್ ಪ್ರಜೆಯ ಪರವಾಗಿ ಅಮಲ್ ನಡೆಸಲು ಅಧಿಕಾರವಿರತಕ್ಕದ್ದಲ್ಲದೆ ಅಂಥಾ ಬ್ರಿಟಿಷ್ ಪ್ರಜೆಯ ಲೇಣೇದಾರನೆಂಬ ಕಾರಣ ಮಾತ್ರದಿಂದಲೇ ಆಗಲೀ, ಅಥವಾ ಸದರೀ ಪ್ರಜೆಯ ಯೂನಿವರ್ಸಲ್ ಲೆಗಟಿ (ಎಂದರೆ, ಮರಣಶಾಸನದ ಪ್ರಕಾರ ಆತನ ಎಲ್ಲಾ ಸ್ವತ್ತನ್ನೂ ಬರಮಾಡಿಕೊಳ್ಳಲು ಹಕ್ಕುಳ್ಳವರು) ಅಲ್ಲದ ಇತರ ಲೆಗಟಿ (ಲೆಗಟಿ ಎಂದರೆ, ಮರಣ ಶಾಸನದ ಪ್ರಕಾರ ಆಸ್ತಿಯನ್ನು ಬರಮಾಡಿಕೊಳ್ಳತಕ್ಕವರು) ಎಂಬ ಕಾರಣ ಮಾತ್ರದಿಂದಲೇ ಆಗಲೀ, ಅಥವಾ ಮೃತಪಟ್ಟ ಸದರೀ ಬ್ರಿಟಿಷ್ ಪ್ರಜೆಯ (ಫ್ರೆಂಡ್) "ಸ್ನೇಹಿತ" ನಾಗಿದ್ದುದರಿಂದ ಆತನ ಸ್ವತ್ತನ್ನು ಬರಮಾಡಿಕೊಳ್ಳಲು ಅರ್ಹರಾದವರು ಎಂಬ ಕಾರಣಮಾತ್ರದಿಂದಲೇ ಆಗಲೀ ಇರತಕ್ಕ ಹಕ್ಕುಗಳುಳ್ಳಂಥಾವರಿಗಿಂತ ಮದರಾಸು ಆಧಿಪತ್ಯದ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೇನೇ ಸದರೀ ಬ್ರಿಟಿಷ್ ಪ್ರಜೆಯ ಸ್ವತ್ತಿನ ಆಡಳಿತದ ಬಗ್ಗೆ ಕೋರ್ಟಿನಿಂದ (ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್) ಸ್ವತ್ತಿನ ಆಡಳಿತದ ಸನ್ನದನ್ನು ಪಡೆಯಲು ಪ್ರಥಮ ಬಾಧ್ಯತೆ ಎಂದರೆ, ಹೆಚ್ಚು ಬಾಧ್ಯತೆಯುಂಟೆಂದು ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಕೋರ್ಟುಗಳವರೂ ಭಾವಿಸಬೇಕು.

ಮದರಾಸು ಹೈಕೋರ್ಟಿನವರು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಪ್ರೊಬೇಟನ್ನಾಗಲೀ ಸ್ವತ್ತಿನ ಆಡಳಿತದ ಬಗ್ಗೆ ಸನ್ನದನ್ನಾಗಲೀ ಕೊಡುವುದರ ಫಲ.

2. ಮದರಾಸು ಹೈಕೋರ್ಟಿನವರು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕೊಟ್ಟ ಪ್ರೊಬೇಟು ಅಥವಾ ಸ್ವತ್ತಿನ ಆಡಳಿತದ ಸನ್ನದ್ದು, ಮೃತಪಟ್ಟ ಬ್ರಿಟಿಷ್ ಪ್ರಜೆಗೆ ಮೈಸೂರು ಸಂಸ್ಥಾನದಲ್ಲಿರುವ ಚರಸ್ವತ್ತು ಅಥವಾ ಸ್ಥಿರಸ್ವತ್ತು ಎಂಬ ಎಲ್ಲಾ ಸ್ವತ್ತಿಗೂ ಅನ್ವಯಿಸುತ್ತದಲ್ಲದೆ ಮೃತಪಟ್ಟ ಬ್ರಿಟಿಷ್ ಪ್ರಜೆಗೆ ಸದರೀ ಸಂಸ್ಥಾನದಲ್ಲಿ ಹಣ ಕೊಡಬೇಕಾದವರೆಲ್ಲರಿಂದಲೂ ಮತ್ತು ಅಂಥಾ ಬ್ರಿಟಿಷ್ ಪ್ರಜೆಗೆ ಸೇರಿದ ಸ್ವತ್ತನ್ನು ಸದರೀ ಸಂಸ್ಥಾನದಲ್ಲಿ ಇಟ್ಟುಕೊಂಡಿರುವವರಿಂದಲೂ ಆ ಹಣ ಯಾ ಸ್ವತ್ತನ್ನು ಸದರೀ ಬ್ರಿಟಿಷ್ ಪ್ರಜೆಗಳ ಪರವಾಗಿ ವಸೂಲ್ಮಾಡಲು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಅಧಿಕಾರವುಳ್ಳವರೆಂಬ ಬಗ್ಗೆ ಪರಿಷ್ಕಾರವಾದ ಸಾಕ್ಷ್ಯವಾಗಿರತಕ್ಕದ್ದು, ಮತ್ತು ಸದರೀ ಪ್ರೊಬೇಟ್ ಯಾ ಆಡಳಿತದ ಸನ್ನದ್ದಿನ ನಿಮಿತ್ತ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಂಥಾ ಹಣಗಳನು ಸಂದಾಯ ಮಾಡುವ ಎಲ್ಲಾ ದೇಣೇದಾರರೂ ಮತ್ತು ಅಂಥಾ ಸ್ವತ್ತನ್ನು ಒಪ್ಪಿಸಿಬಿಡುವ ಎಲ್ಲಾ ಸ್ವತ್ತಿನ ಸ್ವಾಧೀನಕರ್ತರೂ ಆ ಮುಂದೆ ಸದರೀ ಹಣ ಯಾ ಸ್ವತ್ತಿನ ಬಗ್ಗೆ ಜವಾಬ್ದಾರಿಯಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಬೇಕು.

ಮದರಾಸು ಹೈಕೋರ್ಟು, ಇಂಡಿಯನ್ ಸಕ್ಸೆಷನ್ ಆಕ್ಟಿನ 187 ಮತ್ತು 190ನೆ ಪ್ರಕರಣಗಳಲ್ಲಿ ವಿವರಿಸಿರುವಂಥಾ ಎಖ್ತಿಯಾರಿಯುಳ್ಳ ಲಾಯುಖ್ ಕೋರ್ಟೆಂದು ಭಾವಿಸಲ್ಪಡುವುದು.

3. ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಸಂಬಂಧಪಡುವ ವಿಷಯಗಳಲ್ಲಿ ಮಾತ್ರ ಮದರಾಸು ಹೈಕೋರ್ಟು—1868ನೆ ಇಸವಿಯ ಜುಲೈ 23 ನೆತಾರೀಖಿನ 203ನೆ ನಂಬರುಳ್ಳ ಘೋರಿನ್ ಆಲಾಖಾ ಇಸ್ತಿಹಾರ್ನಾಮೆಯಿಂದ ಮೈಸೂರು ಸೀಮೆಯಲ್ಲಿ ಜಾರಿಗೆ ತರಲ್ಪಟ್ಟ 1865ನೆ ಇಸವಿಯ 10ನೆ ಆಕ್ಟಾದ ಇಂಡಿಯನ್ ಸಕ್ಸೆಷನ್ ಆಕ್ಟಿನ 187 ಮತ್ತು 190ನೆ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಎಖ್ತಿಯಾರಿಯುಳ್ಳ ಲಾಯುಖ್ ಕೋರ್ಟೆಂತ ಭಾವಿಸಲ್ಪಡತಕ್ಕದ್ದು.

ಮದರಾಸು ಹೈಕೋರ್ಟಿನವರು ಕೊಟ್ಟ ಪ್ರೊಬೇಟ್ ಅಥವಾ ಸ್ವತ್ತಿನ ಆಡಳಿತದ ಸನ್ನದ್ದು, ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿನಲ್ಲಿ ವಿವರಿಸಲ್ಪಟ್ಟಿರುವಂಥಾ ಪ್ರೊಬೇಟ್ ಯಾ ಸನ್ನದ್ದಾಗಿರುವಂತೆ ಭಾವಿಸಲ್ಪಡತಕ್ಕದ್ದು.

4. ಮದರಾಸು ಹೈಕೋರ್ಟಿನವರು ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕೊಟ್ಟ ಪ್ರೊಬೇಟು ಅಥವಾ ಸ್ವತ್ತಿನ ಆಡಳಿತದ ಸನ್ನದುಗಳು 1901ನೆ ಇಸವಿಯ 7ನೆ ರೆಗ್ಯುಲೇಷನಾದ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿನ 4ನೆ ಪ್ರಕರಣದ (b) ಒಳ ಪ್ರಕರಣದ (i)ನೆ ಕಲಮಿನಲ್ಲಿ ವಿವರಿಸಿರುವಂಥಾ ಪ್ರೊಬೇಟು ಯಾ ಸ್ವತ್ತಿನ ಆಡಳಿತದ ಸನ್ನದ್ದುಗಳಾಗಿವೆಯೆಂದು ಭಾವಿಸಲ್ಪಡತಕ್ಕದ್ದು.

ಮೃತಪಟ್ಟ ಬ್ರಿಟಿಷ್ ಪ್ರಜೆಯ ಪರವಾಗಿ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ವ್ಯಾಜ್ಯ ದಾಖಲ್ ಮಾಡಬಹುದು ಅಥವಾ ಅವರ ಮೇಲೆ ವಾಜ್ಯ ದಾಖಲ್ಮಾಡಲ್ಪಡಬಹುದು.

5. ಮೃತಪಟ್ಟ ಒಬ್ಬ ಬ್ರಿಟಿಷ್ ಪ್ರಜೆಗೆ ಮೈಸೂರು ಸಂಸ್ಥಾನದಲ್ಲಿ ಇರುವ ಸ್ವತ್ತಿನ ವಿಚಾರದಲ್ಲಿ ಸದರೀ ಪ್ರಜೆಯ ಪರವಾಗಿ ಅಮಲ್ ನಡೆಸುವಂಥಾ ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಂದ ಅಥವಾ ಅವರಮೇಲೆ ದಾಖಲ್ಮಾಡಲ್ಪಟ್ಟ ಎಲ್ಲಾ ವ್ಯಾಜ್ಯಗಳೂ ಇತರ ವ್ಯವಹರಣೆಗಳೂ ಸದರೀ ಸಂಸ್ಥಾನದ ಕೋರ್ಟುಗಳಲ್ಲಿ ಸದರೀ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಂದ ಅಥವಾ ಅವರಮೇಲೆ ಅವರ ಉದ್ಯೋಗದ ಹೆಸರಿನಲ್ಲಿ ದಾಖಲ್ಮಾಡಲ್ಪಡಬಹುದು; ಮತ್ತು ಈ ಮೊದಲೇ ಅಥವಾ ಇನ್ನುಮೇಲೆ ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಒಬ್ಬರೇ ಆಗಿ ಅಥವಾ ಇನ್ನ್ಯಾರೊಡನೆಯಾದರೂ ಜಂಟಿಯಾಗಿ ಯಾರಮೇಲಾದರೂ ದಾಖಲ್ಮಾಡಿದ ಯಾವ ವ್ಯಾಜ್ಯವಾಗಲೀ ಇತರ ವ್ಯವಹರಣೆಯಾಗಲೀ, ಅಥವಾ ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಮೇಲೆ ಅಥವಾ ಅವರನ್ನು ಇತರರೊಡನೆ ಜಂಟಿಮಾಡಿ ಅವರಮೇಲೆ ಯಾರಿಂದಲಾದರೂ ದಾಖಲ್ಮಾಡಲ್ಪಟ್ಟ ಯಾವ ವ್ಯಾಜ್ಯವಾಗಲೀ ಇತರ ವ್ಯವಹರಣೆಯಾಗಲೀ ಸದರೀ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಮೃತಪಟ್ಟ, ಕೆಲಸಕ್ಕೆ ರಾಜೀನಾಮೆಕೊಟ್ಟ, ಅಥವಾ ಕೆಲಸದಿಂದ ತೆಗೆದುಹಾಕಲ್ಪಟ್ಟ ನಿಮಿತ್ತದಿಂದ ನಿಂತುಹೋಗತಕ್ಕದ್ದಲ್ಲ; ಪರಂತು ಅವರ ಉದ್ಯೋಗಕ್ಕೆ ಇನ್ನೊಬ್ಬರು ನೇಮಿಸಲ್ಪಟ್ಟ ಕೂಡಲೇ ಇವರಿಂದ ಅಥವಾ ಇವರ ಮೇಲೆ, ಸದರೀ ಕೋರ್ಟುಗಳ ಅಪ್ಪಣೆಯ ಪ್ರಕಾರ ಮತ್ತು, ನೋಟೀಸ್ ವಗೈರೆಗಳ ಜಾರಿ ಬಗ್ಗೆ ಸದರೀ ಕೋರ್ಟಿನವರು ವಿಧಿಸುವ ಷರತ್ತುಗಳಿಗೆ ಅಥವಾ ಅವರು ಕೊಡುವಂಥಾ ಇತರ ಹುಕುಮಿಗೆ ಅನುಸಾರವಾಗಿ ಸದರೀ ವ್ಯಾಜ್ಯ ಯಾ ವ್ಯವಹರಣೆಯು ಸದರೀ ಮರಣವಾಗಲೀ, ರಾಜೀನಾಮೆಯಾಗಲೀ, ಕೆಲಸದಿಂದ ತೆಗೆಯೋಣವಾಗಲೀ, ನಡೆಯದೇ ಇದ್ದರೆ ಹೇಗೋ ಹಾಗೆಯೇ ಮುಂದುವರಿಸಲ್ಪಡತಕ್ಕದ್ದು.

ಪರಂತು ಇದರಲ್ಲಿ ಮೇಲೆ ನಮೂದಿಸಲ್ಪಟ್ಟ ಯಾವುದರ ದೆಸೆಯಿಂದಲಾಗಲೀ, ಅಂಥಾ ಯಾರಾದರೂ ಅನಂತರ ನೇಮಿಸಲ್ಪಟ್ಟ ಅಧಿಕಾರಿಯು, ತನ್ಮಮೇಲೆ ವ್ಯಾಜ್ಯವು ಮುಂದುವರಿಸಲ್ಪಡುವ ಬಗ್ಯೆ ಹುಕುಂ ಹುಟ್ಟುವುದಕ್ಕೆ ಮುಂಚಿತವಾಗಿ, ವ್ಯಾಜ್ಯಕ್ಕೋಸ್ಕರ ಖರ್ಚಾದ ಮೊಬಲಗುಗಳ ಬಗ್ಯೆ, ಖುದ್ದು ಜವಾಬ್ದಾರರಾಗುವುದಿಲ್ಲ.

ನಿಯಮ.

6. ಮೃತಪಟ್ಟ ಬ್ರಿಟಿಷ್ ಪ್ರಜೆಯ ಲೇಣೇದಾರನಿಂದ ಸದರೀ ಪ್ರಜೆಯ ಪರವಾಗಿ ಅಮಲ್ ನಡೆಸುವಂಥಾ ಅಡ್ಮಿನಿಸ್ಟ್ರೇಟರ್ ಜನರಲ್ ರವರ ಮೇಲೆ ಮೈಸೂರು ಸಂಸ್ಥಾನದ ಕೋರ್ಟುಗಳಲ್ಲಿ ವ್ಯಾಜ್ಯ ತರಲ್ಪಟ್ಟರೆ, ವಾದಿಯು ಡಿಕ್ರೀ ದೇಖಲು ಆ ವ್ಯಾಜ್ಯದ ಖರ್ಚನ್ನು ಸಂದಾಯ ಮಾಡಲು ಜವಾಬ್ದಾರನಾಗಿರತಕ್ಕದ್ದು; ಆದರೆ, ವಾದಿಯು ಸದರೀ ವ್ಯಾಜ್ಯವನ್ನು ದಾಖಲ್ಮಾಡುವುದಕ್ಕೆ ಒಂದು ತಿಂಗಳಿಗಿಂತ ಕಡಮೆಯಿಲ್ಲದಷ್ಟು ಕಾಲ ಮುಂಚಿತವಾಗಿ ಸದರೀ ಅಡ್ಮಿನಿಸ್ಟ್ರೇಟರ್ ಜನರಲ್ ರವರಿಗೆ ಬರಹಮೂಲಕವಾಗಿ ಅರ್ಜಿ ಕೊಟ್ಟು ಅದರಲ್ಲಿ ತಾನು ಎಷ್ಟು ಮೊಬಲಗಿಗೆ ಹಕ್ಕುದಾರನೆಂಬುವುದನ್ನೂ ಇತರ ತಪಶೀಲುಗಳನ್ನೂ ನಮೂದಿಸಿದುದಲ್ಲದೆ ಸದರೀ ಮೊಕದ್ದಮೆಯ ಸಂದರ್ಭಗಳಲ್ಲಿ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ನ್ಯಾಯವಾಗಿ ಕೇಳಬಹುದಾದ ಸಾಕ್ಷ್ಯವನ್ನೂ ಕೂಡಾ ಅದಕ್ಕೆ ರುಜುವಾತಾಗಿ ಕೊಟ್ಟಿದ್ದೆನೆಂತಲೂ ಅಡ್ಮಿನಿಸ್ಟ್ರೇಟರ್ ಜನರಲ್ ರವರು ತನ್ನ ಬಾಧ್ಯತೆಯನ್ನು ಅವರ ಆಫೀಸಿನ ಮಾಮೂಲ್ ಪ್ರಕಾರ ರಿಜಿಸ್ಟರ್ಮಾಡಿಕೊಳ್ಳಲು ನಿರಾಕರಿಸಿದರು ಅಥವಾ ಅಸಡ್ಡೆ ಮಾಡಿದರೆಂತಲೂ ಅಫಿದಾವಿತ್ ಯಾನೆ ಪ್ರಮಾಣ ಪತ್ರಿಕೆಯ ಮೂಲಕ ಅಥವಾ ಅನ್ಯಥಾ ರುಜುವಾತು ಕೊಟ್ಟರೆ ಹಾಗೆ ವ್ಯಾಜ್ಯದ ಖರ್ಚುಗಳನ್ನು ಪಾವತಿಮಾಡಲು ಗುರಿಯಾಗತಕ್ಕದ್ದಿಲ್ಲ.

ಮೃತಪಟ್ಟ ಬ್ರಿಟಿಷ್ ಪ್ರಜೆಯ ಲೇಣೇದಾರನು ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಮೇಲೆ ವ್ಯಾಜ್ಯ ದಾಖಲ್ಮಾಡುವುದು.

ಅಂಥಾ ಯಾವುದಾದರೂ ವ್ಯಾಜ್ಯದಲ್ಲಿ ವಾದಿಯ ಪರವಾಗಿ ತೀರ್ಪು ಕೊಡಲ್ಪಟ್ಟಾಗ್ಯೂ ಕೂಡ, ಆತನು ಸದರೀ ಮೃತಪಟ್ಟ ಬ್ರಿಟಿಷ್ ಪ್ರಜೆಯ ಆಸ್ತಿಯಲ್ಲಿ ಇತರ ಲೇಣೇದಾರರೊಂದಿಗೆ ಸಮನಾಗಿಯೂ, ದಾವಾಷಾಯಿ ಪ್ರಕಾರವೂ ಮಾತ್ರವೇ ಹಣವನ್ನು ಹೊಂದಲು ಹಕ್ಕುಳ್ಳವನಾಗಿರತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ವಿವರ.

ಮೃತಪಟ್ಟ ಕೆಲವರು ಬ್ರಿಟಿಷ್ ಪ್ರಜೆಗಳ ಹೆಸರಿನಲ್ಲಿ ಬೆಂಗಳೂರು ಮತ್ತು ಮೈಸೂರು ಸರ್ಕಾರೀ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇದ್ದ ಕೆಲವು ಮೊಬಲಗುಗಳನ್ನು ಅವರ ಪರವಾಗಿ ತಾವು ಪಡೆದುಕೊಳ್ಳಲು ಬಾಧ್ಯತೆಯುಂಟೆಂದು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್ ರವರು 1902ನೆ ಇಸವಿಯಲ್ಲಿ ತಿಳಿಯಪಡಿಸಿದಾಗಿಬ್ಬ ಮೈಸೂರು ಸಂಸ್ಥಾನದಲ್ಲಿ ಆಸ್ತಿಯುಳ್ಳವರಾಗಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯನ್ನು ವಿಲೇ ಮಾಡುವುದಕ್ಕೆ ಸದರಿ ಅಡ್ಮಿನಿಸ್ಟ್ರೇಟರ್ ಜನರಲ್ ರವರಿಗೆ ಅಧಿಕಾರ ವುಂಟೆಂದು ಅಂಗೀಕರಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ.

ಮೇಲ್ಕಂಡಂತೆ ಬಾಧ್ಯತೆಯುಂಟೆಂದು 1874ನೆ ಇಸವಿಯ IIನೆ ನಂಬರ್ ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಆಕ್ಟಿನಮೇರೆಗೆ ಅವರು ತಿಳಿಯಪಡಿಸಿದರು; ಸದರೀ ಆಕ್ಟು ಶ್ರೀಮಂದಿಂಡಿಯಾ ಚಕ್ರವರ್ತಿಯವರೊಡನೆ ಸ್ನೇಹಭಾವದಲ್ಲಿರುವ ಇಂಡಿಯಾದೇಶದ ಅರಸರುಗಳ ಮತ್ತು ಸಂಸ್ಥಾನಾಧಿಪತಿಗಳ ರಾಜ್ಯಗಳಲ್ಲಿರುವ ಬ್ರಿಟಿಷ್ ಪ್ರಜೆಗಳಿಗೂ ಅನ್ವಯಿಸತಕ್ಕದ್ದೆಂದು ಸದರೀ ಆಕ್ಟಿನ 1ನೆ ಪ್ರಕರಣದಲ್ಲಿ ವಿಧಿಸಿದೆ. ಆದರೂ ಸದರೀ ಆಕ್ಟು ಬ್ರಿಟಿಷ್ ಇಂಡಿಯಾದಲ್ಲಿ ಮಾತ್ರವೇ ಹುಟ್ಟಿದ ಕಾನೂನಾದುದರಿಂದಲೂ, ಅದು ಮೈಸೂರು ಸೀಮೆಗೂ ಅನ್ವಯಿಸತಕ್ಕದ್ದೆಂದು ಲಾಯಖಾದ ಅಧಿಕಾರಿಗಳಿಂದ ಅಪ್ಪಣೆಯಾಗಿಲ್ಲವಾದುದರಿಂದಲೂ ಈ ಆಕ್ಟನ್ನು ಈ ಸಂಸ್ಥಾನದ ಕಾನೂನಾಗಿ ಭಾವಿಸಲು ಆಗಲಾರದು. ಆದುದರಿಂದ ಇದು ಈ ಸಂಸ್ಥಾನದ ಮೂಲಕವಾಗಿ ಅಲ್ಲದೆ ಬ್ರಿಟಿಷ್ ಪ್ರಜೆಗಳಾಗಿದ್ದಮಾತ್ರಕ್ಕೇನೇ ಅವರುಗಳಿಗೆ ಲಗಾವಾಗಬಹುದಾಗಿದ್ದರೂ, ಅಂಥಾ ಪ್ರಜೆಗೆ ಬರಬೇಕಾಗಿರುವ ಸಾಲಗಳನ್ನು ಕಾನೂನುಮೇರೆಗೆ ವಸೂಲ್ಮಾಡಿಕೊಳ್ಳಬೇಕಾದರೆ, ಅಥವಾ ದೇಣೇದಾರರು ಅಂಥಾ ಸಾಲಗಳನ್ನು ಪಾವತಿಮಾಡಿ ಸಾಲದ ಜವಾಬ್ದಾರಿಯಿಂದ ವಿಮುಕ್ತರಾಗಬೇಕಾದರೆ ಸಂಸ್ಥಾನದ ಕಾನೂನಿನಿಂದ ಆ ಬಗ್ಯೆ ಅಧಿಕಾರ ಕೊಡಲ್ಪಟ್ಟಿರಬೇಕು. ಇಷ್ಟೇ ಅಲ್ಲದೆ 1874ನೆ ಇಸವಿಯ 5ನೆ ನಂಬರಿನ ಸೇವಿಂಗ್ಸ್ ಬ್ಯಾಂಕು ಆಕ್ಟಿನ 4ನೆ ಪ್ರಕರಣದ ಪ್ರಕಾರ ಯಾವುದೊಂದು ಬ್ಯಾಂಕಿನ ಸಕ್ರಿಟೆರಿಯಾಗಲೀ ಈ ಸಂಸ್ಥಾನದ ಕೋರ್ಟುಗಳಿಂದ ಸಕ್ಸೆಷನ್ ಯಾ ಉತ್ತರಾಧಿಕಾರದ ಬಗ್ಗೆ ಕೊಡಲ್ಪಟ್ಟ ಸರ್ಟಿಫಿಕೇಟ್, ಯಾ ಪ್ರೊಬೇಟು ಯಾ ಆಸ್ತಿಯ ವಿಲೇ ಬಗ್ಗೆ ಕೊಡಲ್ಪಟ್ಟ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್ ಎಂಬ ಸನ್ನದುಗಳು ಇವುಗಳನ್ನು ಹಾಜರ್ಪಡಿಸಿದಲ್ಲದೆ 1,000 ರೂಪಾಯಿಗೆ ಮೇಲ್ಪಟ್ಟ ಡಿಪಾಜಿಟ್ಟು ಮೊಬಲಗುಗಳನ್ನು ಕೊಡಲು ಅಧಿಕಾರವುಳ್ಳವನಾಗಿಲ್ಲವೆಂದು ವಿಧಿಸಿ ಇದೆ. ಪರಂತು ಅಡ್ಮಿನಿಸ್ಟ್ರೇಟರ್ ಜನರಲ್ ರವರ ಅಧಿಕಾರವನ್ನು 1901ನೆ ಇಸವಿಯ VIIನೆ ನಂಬರಿನ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿನ 1ನೆ ಪ್ರಕರಣದಲ್ಲಿ ಸ್ವಲ್ಪಮಟ್ಟಿಗೆ ಅಂಗೀಕರಿಸಿ ಇದೆ. ಈಗ ಮೈಸೂರು ಸಂಸ್ಥಾನದಲ್ಲಿ ಆಸ್ತಿಯುಳ್ಳವರಾಗಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳಿಗೆ ಸಾಲ ಕೊಡಬೇಕಾದವರೆಲ್ಲರಿಂದಲೂ ಮತ್ತು ಅಂಥಾ ಬ್ರಿಟಿಷ್ ಪ್ರಜೆಗಳಿಗೆ ಸೇರಿದ ಸ್ವತ್ತನ್ನು ಇಟ್ಟುಕೊಂಡಿರುವವರಿಂದಲೂ ಆ ಸಾಲ ಯಾ ಸ್ವತ್ತನ್ನು ಸದರೀ ಬ್ರಿಟಿಷ್ ಪ್ರಜೆಗಳಪರವಾಗಿ ವಸೂಲ್ಮಾಡಲು ಅಡ್ಮಿನಿಸ್ಟ್ರೇಟರ್ ಜನರಲ್ ರವರು ಅಧಿಕಾರವುಳ್ಳವರೆಂಬುದನ್ನು ಇನ್ನೂ ಚೆನ್ನಾಗಿ ಅಂಗೀಕರಿಸುವ ಬಗ್ಗೆ ಒಂದು ರೆಗ್ಯುಲೇಷನನ್ನು ಜಾರಿಯಲ್ಲಿ ತರಬೇಕಾಗುದೂ ಈ ಉದ್ದೇಶಕ್ಕಾಗಿ 1874ನೆ ಇಸವಿಯ IIನೆ ನಂಬರ್ ಆಕ್ಟನ್ನು ಪೂರ್ತಿಯಾಗಿ ಇಲ್ಲಿ ಜಾರಿಯಲ್ಲಿ ತರುವುದಕ್ಕೆ ಬದಲಾಗಿ ಈ ಬಗ್ಗೆ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿಗಾಗಿ ಇಂಡಿಯಾ ಸರ್ಕಾರದವರಿಂದ ಏರ್ಪಡಿಸಲ್ಪಟ್ಟಿರುವ ನಿಬಂಧನೆಗಳನ್ನನುಸರಿಸಿ ಒಂದು ಕಾನೂನನ್ನು ಏರ್ಪಡಿಸಬೇಕಾದುದೂ ಯುಕ್ತವೆಂದು ತೋರುತ್ತದೆ.

ಮೈಸೂರು ಸಂಸ್ಥಾನದಲ್ಲಿ ಆಸ್ತಿಯನ್ನು ಬಿಟ್ಟು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯ ವಿಚಾರವಾಗಿ ಮದರಾಸು ಹೈ ಕೋರ್ಟಿನಿಂದ ಕೊಡಲ್ಪಟ್ಟ ಪ್ರೊಬೇಟ್ ಯಾ ಅಡ್ಮಿನಿಸ್ಟ್ರೇಷರ್ ಲೆಟರುಗಳ ಆಧಾರದಮೇಲೆ ಅಮಲ್ ನಡೆಸಲು ಅಡ್ಮಿನಿಸ್ಟ್ರೇಟರ್ ಜನರಲ್ ರವರು ಅಧಿಕಾರವುಳ್ಳವರಾಗಿರುತ್ತಾರೆಂತಲೂ, ಅಡ್ಮಿನಿಸ್ಟ್ರೇಷರ್ ಲೆಟರುಗಳನ್ನು ಪಡೆಯಲು ಇತರರಿಗಿಂತ ಇವರಿಗೆ ಹೆಚ್ಚು ಬಾಧ್ಯತೆಯುಂಟೆಂದು ಈ ಸಂಸ್ಥಾನದ ಕೋರ್ಟುಗಳವರು ಅಂಗೀಕರಿಸಬೇಕೆಂತಲೂ ಈ ಬಿಲ್ಲಿನ 1, 3ನೆ ಕಲಮುಗಳಲ್ಲಿ ವಿಧಿಸಿ ಇದೆ. ಸದರೀ ಹೈ ಕೋರ್ಟಿನಿಂದ ಅಡ್ಮಿನಿಸ್ಟ್ರೇಟರ್ ಜನರಲ್ ರವರಿಗೆ ಕೊಡಲ್ಪಟ್ಟಿರುವ ಪ್ರೊಬೇಟ್ ಯಾ ಅಡ್ಮಿನಿಸ್ಟ್ರೇಷರ್ ಲೆಟರುಗಳನ್ನು 1901ನೆ ಇಸವಿಯ 7ನೆ ನಂಬರಿನ ಸಕ್ಸೆಷರ್ ಸರ್ಟಿಫಿಕೇಟ್ ರೆಗ್ಯುಲೇಷನಿಗನುಸಾರವಾಗಿ ಕೊಟ್ಟ ಪ್ರೊಬೇಟ್ ಯಾ ಅಡ್ಮಿನಿಸ್ಟ್ರೇಷರ್ ಲೆಟರುಗಳಂತೆ ಭಾವಿಸತಕ್ಕದ್ದೆಂತಲೂ ಅವುಗಳು ಮೃತಪಟ್ಟವನ ಚರ ಮತ್ತು ಸ್ಥಿರ ಸ್ವತ್ತುಗಳೆಲ್ಲಕ್ಕೂ ಅನ್ವಯಿಸತಕ್ಕದ್ದೆಂತಲೂ, ಅವುಗಳನ್ನು ಪಡೆದುಕೊಂಡ ಕಾರಣದಿಂದ ಸದರಿ ಮೃತಪಟ್ಟವನ ದೇಣೇದಾರರಿಂದಲೂ, ಆತನಿಗೆ ಸೇರಿದ ಸ್ವತ್ತನ್ನು ಇಟ್ಟುಕೊಂಡಿರುವವರಿಂದಲೂ ಆ ಸಾಲ ಯಾ ಸ್ವತ್ತನ್ನು ಅವನ ಪರವಾಗಿ ವಸೂಲ್ಮಾಡಲು ಅಡ್ಮಿನಿಸ್ಟ್ರೇಟರ್ ಜನರಲ್ ರವರಿಗೆ ಪರಿಷ್ಕಾರವಾದ ಅಧಿಕಾರವಿರತಕ್ಕದ್ದೆಂತಲೂ, ಅವನಿಗೆ ಕೊಡಬೇಕಾದ ಸಾಲಗಳನ್ನು ಅವರಿಗೆ ಪಾವತಿ ಮಾಡುವ ದೇಣೇದಾರರಿಗೂ, ಆತನಿಗೆ ಸೇರಿದ ಸ್ವತ್ತುಗಳನ್ನು ಅವರ ವಶಕ್ಕೆ ಒಪ್ಪಿಸುವ ಜನರಿಗೂ ಎಲ್ಲಾ ಜವಾಬ್ದಾರಿಯಿಂದಲೂ ಖುಲಾಸೆಯಾಗತಕ್ಕದ್ದೆಂತಲೂ ಈ ಬಿಲ್ಲಿನ 4ನೆ ಮತ್ತು 2ನೆ ಕಲಮುಗಳಲ್ಲಿ ವಿಧಿಸಿದೆ.

ಮೃತಪಟ್ಟ ಬ್ರಿಟಿಷ್ ಪ್ರಜೆಯ ಪರವಾಗಿ ಅಡ್ಮಿನಿಸ್ಟ್ರೇಟರ್ ಜನರಲ್ ರವರು ವ್ಯಾಜ್ಯ ದಾಖಲ್ಮಾಡಬಹುದು ಅಥವಾ ಅವರ ಮೇಲೆ ವ್ಯಾಜ್ಯ ದಾಖಲ್ಮಾಡಲ್ಪಡಬಹುದು ಎಂದು 5ನೆ ಕಲಮಿನಲ್ಲಿ ವಿಧಿಸಿದೆ. ಮೃತಪಟ್ಟ ಬ್ರಿಟಿಷ್ ಪ್ರಜೆಯ ಲೇಣೇದಾರರು ತಮ್ಮ ಹಕ್ಕನ್ನು ಸಿವಿಲ್ ಕೋರ್ಟು ಮೂಲಕ ಜಾರಿ ಮಾಡುವುದಕ್ಕೆ ಪ್ರಯತ್ನಿಸುವುದಕ್ಕಿಂತ ಮುಂಚೆ ಅಡ್ಮಿನಿಸ್ಟ್ರೇಟರ್ ಜನರಲ್ ರವರಿಗೆ ಆ ವಿಚಾರವಾಗಿ ಬರಹ ಮೂಲಕವಾದ ಒಂದು ಅರ್ಜಿಯನ್ನು ಹಾಕಿಕೊಳ್ಳಬೇಕೆಂದು 6ನೆ ಕಲಮಿನಲ್ಲಿ ವಿಧಿಸಿ ಇದೆ.

69.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಸ್ಪ್ ಆದ್ದು. [ಸಂ. 12.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 25, 1909.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೆಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನ್‌ಮೆಂಟು.

ಲೆಜಿಸ್ಲೆಟಿವ್ ಇಲಾಖಾ.

ಇಸ್ತಿಹಾರ್ನಾಮೆ.

ನಂಬರ್ 246, ಎಲ್. ಸಿ. ತಾರೀಖು 3ನೆ ಮಾರ್ಚಿ 1909.

ಮೈಸೂರು ನ್ಯಾಯವಿಧಾಯಕಸಭೆಯ ಕಾರ್ಯನಿರ್ವಾಹದ ಬಗ್ಗೆ ಏರ್ಪಟ್ಟಿರುವ ನಿಬಂಧನೆಗಳ ಪೈಕಿ 32ನೆ ನಿಬಂಧನೆಯನ್ನನುಸರಿಸಿ ಇದರಡಿ ಕಂಡ ಬಿಲ್ಲನ್ನು ಉದ್ದೇಶಗಳ ಮತ್ತು ಕಾರಣಗಳ ಸಮೇತ ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇರುತ್ತದೆ.

ಹುಕುಂ ಖಮೋಜೀಬ್,

ಎಸ್. ಹಿರಿಯಣ್ಣಯ್ಯ,

ಮೈಸೂರು ನ್ಯಾಯವಿಧಾಯಕಸಭೆ ಸೆಕ್ರೆಟರಿ.

ಮೈಸೂರು ಸೀಮೆಯಲ್ಲಿ ಸ್ಮಾಲ್‌ಕಾಜ್ ಕೋರ್ಟುಗಳಿಗೆ ಸಂಬಂಧಿಸುವ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವಬಗ್ಗೆ ಹುಟ್ಟಿದ ಬಿಲ್ಲು.

ಮೈಸೂರು ಸೀಮೆಯಲ್ಲಿ ಸ್ಮಾಲ್‌ಕಾಜ್ ಕೋರ್ಟುಗಳಿಗೆ ಸಂಬಂಧಿಸುವ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಘನವನ್ನು ಹೊಂದಿದ ಶ್ರೀಮನ್ಮಹಾರಾಜಾಸಾಹೇಬ್ಬಹದುರವರು ಇದರಡಿ ಕಂಡಂತೆ ಕಾನೂನ್ ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

1ನೇ ಅಧ್ಯಾಯ.

ಅವತರಣಿಕೆ.

ಹೆಸರು, ವ್ಯಾಪ್ತಿ ಮತ್ತು ಆರಂಭ. [1887ನೆ ಇಸವಿಯ 9ನೆ ಆಕ್ಟಿನ 1ನೇ ಪ್ರಕರಣ.]

1. (1) ಈ ರೆಗ್ಯುಲೇಷನನ್ನು "190 ನೇ ಇಸವಿಯ ಮೈಸೂರು ಸೀಮೆಯ ಸ್ಮಾಲ್‌ಕಾಜು ಕೋರ್ಟುಗಳ ರೆಗ್ಯುಲೇಷನ್" ಎಂದು ಕರೆಯಬಹುದು.

(2) ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸುತ್ತದೆ.

(3) ಇದು 190 ನೆ ಇಸವಿ ಗುರ್‍ತೀ ತಾರೀಖಿನಿಂದ ಜಾರಿಗೆ ಬರತಕ್ಕದ್ದು.

1865ನೆ ಇಸವಿಯ 11ನೆ ಆಕ್ಟಿಗೆ ದಾಖಲೆ ಕೊಟ್ಟಿರುವುದಕ್ಕೆ ಅನ್ವಯ. [1877ನೆ ಇಸವಿಯ 9ನೆ ಆಕ್ಟಿನ ಪ್ರಕರಣ 2, ಒಳಪ್ರಕರಣ (3).]

2. ಯಾವುದಾದರೂ ಕಾನೂನಿನಲ್ಲಿ ಅಥವಾ ದಸ್ತಾವೇಜಿನಲ್ಲಿ 1865ನೆ ಇಸವಿಯ 11ನೆ ಆಕ್ಟನ್ನು ಕುರಿತು ಪ್ರಸ್ತಾಪಬಂದರೆ ಅದು ಸಾಧ್ಯವಾದಮಟ್ಟಿಗೆ ಈ ರೆಗ್ಯುಲೇಷನಿಗೆ ಅಥವಾ ಇದರ ಪೈಕಿ ಸಂಬಂಧಪಟ್ಟ ಭಾಗಕ್ಕೆ ಅನ್ವಯಿಸುತ್ತದೆಂದು ಭಾವಿಸತಕ್ಕದ್ದು.

ವಿನಾಯಿತಿಗಳು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 3.]

3. ಈ ರೆಗ್ಯುಲೇಷನಿನಲ್ಲಿ ಕಂಡ ಯಾವುದರಿಂದಲಾಗಲೀ—

(a) ಈ ರೆಗ್ಯುಲೇಷನು ಜಾರಿಯಲ್ಲಿ ಬರುವುದಕ್ಕೆ ಮುಂಚೆ ದಾಖಲಾದ ಮೊಕದ್ದಮೆಯಲ್ಲಿ ಡಿಕ್ರಿ ಹುಟ್ಟುವುದಕ್ಕೆ ಮುಂಚಿತವಾಗಿ ಅಥವಾ ಹುಟ್ಟಿದನಂತರ ಅನುಸರಿಸಬೇಕಾದ ನಡವಳಿಕೆಗಳಿಗಾಗಲಿ; ಅಥವಾ

(b) ಸಾಲಗಳ ಅಥವಾ ಸಿವಿಲ್ ಸ್ವಭಾವದ ಇತರ ಬಾಧ್ಯತೆಗಳ ವಿಷಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಕಾನೂನಿನ ಪ್ರಕಾರ ಒಬ್ಬ ಮ್ಯಾಜಿಸ್ಟ್ರೇಟರಿಗೆ ಇರುವ ಅಧಿಕಾರಕ್ಕಾಗಲೀ; ಅಥವಾ

(c) ಸಿವಿಲ್ ಪ್ರೊಸಿಡ್ಯೂರ್ ಕೋಡ್ ಅಲ್ಲದ ಇತರ ಯಾವುದಾದರೂ ಸ್ಥಳಿಕ ಅಥವಾ ವಿಶೇಷವಾದ ಕಾನೂನಿಗಾಗಲೀ

ಬಾಧಕವುಂಟೆಂದು ಭಾವಿಸಕೂಡದು.

ಅರ್ಥವಿವರಣೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 4]

4. ಈ ರೆಗ್ಯುಲೇಷನಿನಲ್ಲಿ "ಸ್ಮಾಲ್ ಕಾಜು ಕೋರ್ಟು" ಎಂಬ ಮಾತುಗಳಿಗೆ ಪೂರ್ವಾಪರಸಂದರ್ಭದಿಂದ ಅಥವಾ ಪ್ರಸಕ್ತವಿಷಯದಿಂದ ಬೇರೆ ಅರ್ಥ ತೋರಬಂದಾಗ ಹೊರತು ಉಳಿದ ಸಂಧರ್ಭಗಳಲ್ಲೆಲ್ಲಾ ಈ ರೆಗ್ಯುಲೇಷನಿನಂತೆ ಏರ್ಪಟ್ಟ ಸ್ಮಾಲ್ ಕಾಜು ಕೋರ್ಟು ಎಂದು ಅರ್ಥವಾಗತಕ್ಕದ್ದಲ್ಲದೆ, ಈ ರೆಗ್ಯುಲೇಷನಿನ ಪ್ರಕಾರ ಅಂಥಾ ಯಾವ ಕೋರ್ಟಿನಲ್ಲಾದರೂ ನ್ಯಾಯಾಧಿಕಾರವನ್ನು ಚಲಾಯಿಸುವ ಯಾವ ಮನುಷ್ಯನಿಗಾದರೂ ಸದರೀ ಮಾತುಗಳು ಅನ್ವಯಿಸತಕ್ಕದ್ದು.

2ನೆ ಅಧ್ಯಾಯ.

ಸ್ಮಾಲ್ ಕಾಜು ಕೋರ್ಟುಗಳ ಏರ್ಪಾಡು.

ಸ್ಮಾಲ್‌ಕಾಜು ಕೋರ್ಟುಗಳ ಸ್ಥಾಪನೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 5]

5. (1) ಸರ್ಕಾರದವರು ಬರಹಮೂಲಕವಾದ ಅಪ್ಪಣೆಯದ್ವಾರಾ ಮೈಸೂರು ಸಂಸ್ಥಾನದಲ್ಲಿ ಯಾವ ಸ್ಥಳದಲ್ಲಾಗಲೀ ಸ್ಮಾಲ್ ಕಾಜು ಕೋರ್ಟನ್ನು ಸ್ಥಾಪಿಸಬಹುದು.

(2) ಪ್ರತಿ ಸ್ಮಾಲ್ ಕಾಜು ಕೋರ್ಟಿಗೂ ಯಾವ ಸರಹದ್ದಿನೊಳಗೆ ಅಧಿಕಾರವಿರತಕ್ಕದ್ದೆಂಬುವುದನ್ನು ಸರ್ಕಾರದವರು ಗೊತ್ತುಮಾಡಬಹುದು; ಸದರೀ ಕೋರ್ಟು ಆ ಸರಹದ್ದಿನೊಳಗಾಗಿ ಸರ್ಕಾರದವರು ನೇಮಿಸಬಹುದಾದ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ನಡೆಸಲ್ಪಡಬಹುದು.

ಜಡ್ಜಿಯವರು.
[1887ನೇ ಇಸವಿಯ 9ನೇ ಆಕ್ಟಿನ ಪ್ರಕರಣ 6, ಒಳಪ್ರಕರಣ(1).]

6. ಸ್ಮಾಲ್ ಕಾಜು ಕೋರ್ಟನ್ನು ಸ್ಥಾಪಿಸಿದನಂತರ ಸರ್ಕಾರದವರು ಬರಹಮೂಲಕವಾದ ಅಪ್ಪಣೆಯ ದ್ವಾರಾ ಆ ಕೋರ್ಟಿಗೆ ಒಬ್ಬ ಜಡ್ಜಿಯವರನ್ನು ನೊಕರರೂರ್ಮಾಡತಕ್ಕದ್ದು.

ಜಡ್ಜಿಗಳನ್ನು ಕೆಲಸದಿಂದ ಸಸ್ಪೆಂಡ್ ಮಾಡುವುದು ಮತ್ತು ತೆಗೆದು ಹಾಕುವುದು.
[1887ನೇ ಇಸವಿಯ 9ನೇ ಆಕ್ಟಿನ ಪ್ರಕರಣ 9.]

7. ಸ್ಮಾಲ್ ಕಾಜು ಕೋರ್ಟಿನ ಜಡ್ಜಿಯವರನ್ನು ಸರ್ಕಾರದವರು ಕೆಲಸದಿಂದ ಸಸ್ಪೆಂಡ್ ಮಾಡಬಹುದು ಅಥವಾ ತೆಗೆದು ಹಾಕಬಹುದು.

ಸಿಬ್ಬಂದಿ.
[1887ನೇ ಇಸವಿಯ 9ನೇ ಆಕ್ಟಿನ 13ನೇ ಪ್ರಕರಣಕ್ಕೆ ಬದಲಾಗಿ ಸೇರಿಸಿದ ಹೊಸ ಪ್ರಕರಣ.]

8. ಒಂದು ಸ್ಮಾಲ್ ಕಾಜು ಕೋರ್ಟಿಗೆ ಅವಶ್ಯಕವಾಗಿರುವಷ್ಟು ಸಿಬ್ಬಂದಿಯನ್ನು ಸರ್ಕಾರದವರು ಮಂಜೂರ್ಮಾಡಬೇಕು; ಅಲ್ಲದೆ ಈ ಬಗ್ಯೆ ಸರ್ಕಾರದವರು ಕೊಟ್ಟಿರುವ ಹುಕುಮುಗಳಿಗೆ ಒಳಪಟ್ಟು ಸ್ಮಾಲ್ ಕಾಜು ಕೋರ್ಟಿನ ಜಡ್ಜಿಯವರು ತಮ್ಮ ಕೋರ್ಟಿನ ಸಿಬ್ಬಂದಿಯನ್ನು ನೌಕರರೂರ್ಮಾಡಿಕೊಳ್ಳಬಹುದು; ಮತ್ತು ಅವರಿಗೆ ಜುರ್ಮಾನೆ ವಿಧಿಸಬಹುದು, ಅವರನ್ನು ಸಸ್ಪೆಂಡ್ ಅಥವಾ ಬರ್ತರಫ್ ಮಾಡಬಹುದು.

ಸಿಬ್ಬಂದಿ ಯಾ ತಾಬೇದಾರೀ ನೌಕರರ ಕೆಲಸಗಳು.
[1887ನೇ ಇಸವಿಯ 9ನೇ ಆಕ್ಟಿನ ಪ್ರಕರಣ 14]

9. (1) ಸ್ಮಾಲ್‌ಕಾಜು ಕೋರ್ಟಿನ ಸಿಬ್ಬಂದಿ ಯಾ ತಾಬೇದಾರೀ ನೌಕರರು ಈ ರೆಗ್ಯುಲೇಷನಿನಲ್ಲಿ ಅಥವಾ ಆಯಾಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದಾದರೂ ಕಾನೂನಿನಲ್ಲಿಅವರಿಗೆ ವಿಧಾಯಕವಾಗಿರುವ ಅಥವಾ ವಿಧಾಯಕವಾಗಬಹುದೆಂದು ನಮೂದಿರುವ ಕೆಲಸಗಳನ್ನಲ್ಲದೆ ಜಡ್ಜಿಯವರು ನೇಮಿಸಬಹುದಾದಂಥಾ ಬರವಣಿಗೆಯ ಸ್ವಭಾವದ ಕೆಲಸಗಳನ್ನೂ ಸಹ ಮಾಡಬೇಕು.

(2) ಸ್ಮಾಲ್ ಕಾಜು ಕೋರ್ಟಿನ ತಾಬೇದಾರೀ ನೌಕರರಿಗೆ ಚೀಫ್ ಕೋರ್ಟಿನವರು ತಮಗೆ ಯುಕ್ತವೆಂದು ತೋರುವಂಥಾ ಅಧಿಕಾರಗಳನ್ನು ಕೊಡುವ ಮತ್ತು ಕೆಲಸಗಳನ್ನು ನೇಮಿಸುವ ಬಗ್ಯೆ, ಹಾಗೆ ಕೊಟ್ಟ ಅಧಿಕಾರಗಳನ್ನು ಚಲಾಯಿಸಬೇಕಾದ ಮತ್ತು ನೇಮಿಸಿದ ಕೆಲಸಗಳನ್ನು ಮಾಡಬೇಕಾದ ವಿಧಾನವನ್ನು ಕ್ರಮಪಡಿಸುವ ಬಗ್ಯೆ ಈ ರೆಗ್ಯುಲೇಷನಿಗೂ ಆಯಾಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿಗೂ ವಿರೋಧವಿಲ್ಲದಂತೆ ಚೀಫ್ ಕೋರ್ಟಿನವರು ನಿಬಂಧನೆಗಳನ್ನು ಏರ್ಪಡಿಸಬಹುದು.

3ನೇ ಅಧ್ಯಾಯ.

ಸ್ಮಾಲ್ ಕಾಜು ಕೋರ್ಟುಗಳ ಖ್ಯಾರಿ.

ಸ್ಮಾಲ್‌ಕಾಜು ಕೋರ್ಟುಗಳಲ್ಲಿ ಯಾವ ತರಹೆ ದಾವೆಗಳನ್ನು ದಾಖಲ್ಮಾಡಿಕೊಳ್ಳಬಹುದು.
[ಹೊಸಪ್ರಕರಣ]

10. ಈ ರೆಗ್ಯುಲೇಷನಿನ ಕೊನೆಯಲ್ಲಿ ಕೊಟ್ಟಿರುವ ಷೆಡ್ಯೂಲಿನಲ್ಲಿ ನಮೂದಿರುವ ತರಹಾ ದಾವೆಗಳ ಪೈಕಿ ಯಾವ ದಾವೆಗಳ ಮೊಬಲಗು 500 ರೂಪಾಯಿಗೆ ಮೀರದಂತೆ ಸರ್ಕಾರದವರು ಆಯಾ ತರಹಾ ದಾವೆಗಳಿಗೆ ವಿಧಿಸಬಹುದಾದ್ದಂಥಾ ಮೊಬಲಗಿಗೆ ಜಾಸ್ತಿಯಾಗಿರುವುದಿಲ್ಲವೋ ಅಂಥಾ ದಾವೆಗಳನ್ನು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲ್‌ಮಾಡಿಕೊಳ್ಳಬಹುದು. ಇತರ ಯಾವ ದಾವೆಗಳನ್ನೂ ಆ ರೀತಿ ದಾಖಲ್ಮಾಡಿಕೊಳ್ಳಕೂಡದು. ಪರಂತು ಸರ್ಕಾರದವರು ಗೆಜೆಟ್ಟಿನಲ್ಲಿ ಒಂದು ಇಷ್ತಿಹಾರ್ನಾಮೆಯನ್ನು ಪ್ರಕಟಿಸುವುದರ ಮೂಲಕ ಯಾವಾಗಲಾದರೂ ಸದರೀ ಷೆಡ್ಯೂಲಿಗೆ ಜಾಸ್ತಿ ತರಹೆ ದಾವೆಗಳನ್ನು ಸೇರಿಸಬಹುದು ಅಥವಾ ಅದರಲ್ಲಿ ಈಗ ನಮೂದಿರುವ ದಾವೆಗಳನ್ನು ವ್ಯತ್ಯಾಸಪಡಿಸಬಹುದು.

ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದಾಖಲಾಗಬೇಕಾದ ದಾವೆಗಳನ್ನು ಇತರ ಕೋರ್ಟುಗಳಲ್ಲಿ ದಾಖಲ್ಮಾಡಿಕೊಳ್ಳಕೂಡದು.
[188 ನೇ ಇಸವಿಯ 9ನೇ ಆಕ್ಟಿನ ಪ್ರಕರಣ 16]

11. ಈ ರೆಗ್ಯುಲೇಷನಿನಲ್ಲಿ ಅಥವಾ ಆಯಾಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಇತರ ಕಾನೂನಿನಲ್ಲಿ ಕ್ರಂತೋಕ್ತವಾಗಿ ವಿಧಿಸಿರುವ ಸಂದರ್ಭಗಳಲ್ಲಿ ಹೊರತು ಒಂದು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಬೇಕಾದ ದಾವೆಯನ್ನು ಸದರೀ ಕೋರ್ಟಿನ ಅಧಿಕಾರ ಸರಹದ್ದಿನೊಳಗೆ ಖ್ಯಾರಿಯುಳ್ಳ ಇತರ ಯಾವ ಕೋರ್ಟಿನವರೂ ಹಿಡಿಯಕೂಡದು.

4ನೆ ಅಧ್ಯಾಯ.

ನಡವಳಿಕೆಯ ಕ್ರಮ.

12. ಸಿವಿಲ್ ಪ್ರೊಸೀಡ್ಯೂರ್ ಕೋಡಿನ ಎರಡನೆ ಷೆಡ್ಯೂಲಿನಲ್ಲಿ ನಮೂದು ಕಂಡ ಅಧ್ಯಾಯಗಳಲ್ಲಿಯೂ ಪ್ರಕರಣಗಳಲ್ಲಿಯೂ ವಿಧಾಯಕವಾಗಿರುವ ಕ್ರಮವನ್ನೇ ಸದರೀ ಅಧ್ಯಾಯಗಳೂ ಪ್ರಕರಣಗಳೂ ಸ್ಮಾಲ್‌ಕಾಜು ಕೋರ್ಟುಗಳಿಗೆ ಅನ್ವಯಿಸುವಷ್ಟರ ಮಟ್ಟಿಗೆ ಸದರೀ ಕೋರ್ಟುಗಳಲ್ಲಿ ದಾಖಲಾಗತಕ್ಕ ಎಲ್ಲಾ ದಾವೆಗಳಲ್ಲಿಯೂ ಅಂಥಾ ದಾವೆಗಳ ಸಂಬಂಧದಲ್ಲಿ ನಡೆಯುವ ಎಲ್ಲಾ ವ್ಯವಹರಣೆಗಳಲ್ಲಿಯೂ ಅನುಸರಿಸಬೇಕು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಕೆಲವು ಭಾಗಗಳು ಸ್ಮಾಲ್‌ಕಾಜು ಕೋರ್ಟುಗಳಿಗೂ ಅನ್ವಯಿಸುತ್ತವೆ.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 17]

13. ಯಾವುದಾದರೂ ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರ ಗೈರ್‌ಹಾಜರಿಯಲ್ಲಿ ಸದರಿ ಕೋರ್ಟಿನ ತಾಬೇದಾರೀ ಆಫಿಸರುಗಳ ಪೈಕಿ ಮುಖ್ಯಸ್ಥರು ಯಾವುದೊಂದು ದಾವೆ ಯಾ ವ್ಯವಹರಣೆಯ ಹಿಯರಿಂಗನ್ನು ಅಡ್ಜರ್ನ್ ಮಾಡುವ ಬಗ್ಯೆ ಕೋರ್ಟಿಗಿರುವ ಅಧಿಕಾರವನ್ನು ಆಗಿಂದಾಗ್ಯೆ ಚಲಾಯಿಸಬಹುದಲ್ಲದೆ ಅವುಗಳ ಹಿಯರಿಂಗ್ ಬಗ್ಯೆ ಮುಂದೆ ಒಂದು ದಿನವನ್ನು ಗೊತ್ತುಮಾಡಬಹುದು.

ತಾಬೇದಾರೀ ಆಫಿಸರುಗಳ ಪೈಕಿ ಮುಖ್ಯಸ್ಥರು ದಾವೆಗಳನ್ನು ಅಡ್ಜರ್ನ್ ಮಾಡಬಹುದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 22]

14. (1) ಇದಕ್ಕೆ ವಿರೋಧವಾಗಿ ಈ ರೆಗ್ಯುಲೇಷನಿನ ಹಿಂದಿನ ಪ್ರಕರಣಗಳಲ್ಲಿ ಏನು ಅಡಗಿದ್ದರೂ ಸರಿಯೇ, ವಾದಿಯ ಹಕ್ಕನ್ನು ಸ್ಮಾಲ್‌ಕಾಜು ಕೋರ್ಟಿನವರು ಅಂಗೀಕರಿಸುವುದಕ್ಕಾಗಲೀ ಅವನು ಕೇಳುವ ಪರಿಹಾರವನ್ನು ಕೊಡಿಸುವುದಕ್ಕಾಗಲೀ ಮುಂಚಿತವಾಗಿ ಯಾರಿಗಾದರೂ ಸ್ಥಿರಸ್ವತ್ತಿನ ಬಾಧ್ಯತೆಯುಂಟು ಅಥವಾ ಇಲ್ಲ ಎಂದು ರುಜುವಾತು ಮಾಡುವುದು ಅವಶ್ಯಕವಾಗಿರುವ ಪಕ್ಷದಲ್ಲಿ ಆ ದಾವೆಯ ವಿಚಾರಣೆಯು ಎಷ್ಟರಪರ್ಯಂತ ಸಾಗಿದ್ದರೂ ಸರಿಯೇ ಸದರೀ ಬಾಧ್ಯತೆಯನ್ನು ವ್ಯವಸ್ಥೆಮಾಡಲು ಅಧಿಕಾರವುಳ್ಳ ಕೋರ್ಟಿನಲ್ಲಿ ಹಾಜರ್‌ಮಾಡುವ ಬಗ್ಯೆ ದಾವಾ ಅರ್ಜಿಯನ್ನು ಸ್ಮಾಲ್‌ಕಾಜು ಕೋರ್ಟಿನವರು ವಾಪಸ್ ಮಾಡಬಹುದು.

ಯಾವ ದಾವೆಯಲ್ಲಾದರೂ ಸ್ಥಿರಸ್ವತ್ತಿನ ಹಕ್ಕುದಾರಿಯ ವಿವಾದಗಳು ತೋರಬಂದರೆ ದಾವಾಅರ್ಜಿಗಳನ್ನು ವಾಪಸ್‌ಮಾಡೋಣ.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 23]

(2) (1)ನೆ ಒಳಪ್ರಕರಣದ ಮೇರೆಗೆ ಕೋರ್ಟಿನವರು ದಾವಾ ಅರ್ಜಿಯನ್ನು ವಾಪಸ್‌ಮಾಡುವ ಕಾಲದಲ್ಲಿ ಸಿವಿಲ್ ಪ್ರೊಸೀಡ್ಯೂರ್ ಕೋಡಿನ 57ನೆ ಪ್ರಕರಣದ 2ನೆ ಪ್ಯಾರಾದಲ್ಲಿ ಕಂಡ ನಿಯಮಗಳ ಮೇರೆಗೆ ನಡೆಸತಕ್ಕದ್ದಲ್ಲದೆ ಕೋರ್ಟ್ ಖರ್ಚುಗಳ ವಿಷಯದಲ್ಲಿ ತಮಗೆ ಯುಕ್ತಕಂಡಂತೆ ಹುಕುಂ ಮಾಡಬಹುದು; ಮತ್ತು 1877ನೆ ಇಸವಿಯ ಇಂಡಿಯನ್ ಲಿಮಿಟೇಷನ್ ಆಕ್ಟಿನ ಉದ್ದೇಶಗಳಿಗಾಗಿ ಸದರಿ ಕೋರ್ಟಿನವರಿಗೆ ಅಧಿಕಾರವಿಲ್ಲದೆ ಇದ್ದ ಕಾರಣದಿಂದ ಅಥವಾ ಆ ತರಹೆಯ ಬೇರೆ ಕಾರಣದಿಂದ ಸದರೀ ದಾವೆಯನ್ನು ದಾಖಲ್‌ಮಾಡಿಕೊಳ್ಳಲು ಆಗದೆ ಹೋಯಿತೆಂದು ಭಾವಿಸತಕ್ಕದ್ದು.

15. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 588ನೆ ಪ್ರಕರಣದ (29)ನೆ ಕಲಮಿನಲ್ಲಿ ನಮೂದಿರುವ ಹುಕುಮನ್ನು ಸ್ಮಾಲ್‌ಕಾಜು ಕೋರ್ಟಿನವರು ಕೊಟ್ಟರೆ ಅದರ ಮೇಲೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳಬಹುದು.

ಸ್ಮಾಲ್‌ಕಾಜು ಕೋರ್ಟುಗಳ ಕೆಲವು ಹುಕುಮುಗಳ ಮೇಲೆ ಅಪೀಲು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 24]

16. ಸ್ಮಾಲ್‌ಕಾಜು ಕೋರ್ಟಿನಲ್ಲಿ ಫೈಸಲಾದ ಯಾವ ದಾವೆಯಲ್ಲಾಗಲಿ ಹುಟ್ಟಿದ ಡಿಕ್ರಿ ಅಥವಾ ಹುಕುಮು ಕಾನೂನಿಗನುಸಾರವಾಗಿದೆಯೆಂದು ದೃಢಪಡಿಸಿಕೊಳ್ಳುವ ಬಗ್ಯೆ ಚೀಫ್ ಕೋರ್ಟಿನವರು ಸದರೀ ದಾವೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿಕೊಂಡು ಅದರಮೇಲೆ ತಮಗೆ ಯುಕ್ತ ತೋರುವ ಹುಕುಮನ್ನು ಕೊಡಬಹುದು.

ಸ್ಮಾಲ್‌ಕಾಜು ಕೋರ್ಟುಗಳ ಡಿಕ್ರಿಗಳ ಮತ್ತು ಹುಕುಮುಗಳ ಪುನರ್ವಿಮರ್ಶೆ.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 25]

17. ಈ ರೆಗ್ಯುಲೇಷನಿನಲ್ಲಿ ಅಪೀಲ್ ಇರತಕ್ಕದ್ದೆಂದು ವಿಧಿಸಿರುವ ಸಂದರ್ಭಗಳಲ್ಲಿ ಹೊರತು ಮೇಲ್ಕಂಡ ನಿಯಮಗಳಮೇರೆಗೆ ಸ್ಮಾಲ್‌ಕಾಜು ಕೋರ್ಟಿನವರು ಕೊಡುವ ಡಿಕ್ರಿ ಅಥವಾ ಹುಕುಮು ಆಖೈರು ಡಿಕ್ರಿಯೂ ಹುಕ್ಕುಂ ಆಗಿರತಕ್ಕದ್ದು.

ಸ್ಮಾಲ್‌ಕಾಜು ಕೋರ್ಟಿನ ಡಿಕ್ರಿಗಳೂ ಹುಕುಮುಗಳೂ ಆಖೈರಿನವಾಗಿರತಕ್ಕದ್ದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 27]

5ನೆ ಅಧ್ಯಾಯ.

ಇತರ ನಿಯಮಗಳು.

ಸ್ಮಾಲ್‌ಕಾಜು ಕೋರ್ಟುಗಳು ಯಾವ ಕೋರ್ಟುಗಳ ತಾಬೆಯಲ್ಲಿ ರತಕ್ಕದ್ದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 28]

18. ಸ್ಮಾಲ್‌ಕಾಜು ಕೋರ್ಟುಗಳು ಕಾರ್ಯನಿರ್ವಾಹದ ವಿಷಯದಲ್ಲಿ ಡಿಸ್ಟ್ರಿಕ್ಟ ಕೋರ್ಟಿನ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದಲ್ಲದೆ ಚೀಫ್‌ಕೋರ್ಟಿನ ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದು ; ಮತ್ತು

(a) ಚೀಫ್ ಕೋರ್ಟಿನವರು ಆಗಿಂದಾಗ್ಯೆ ನೇಮಿಸಬಹುದಾದ ರಿಜಿಸ್ಟರುಗಳನ್ನೂ, ಪುಸ್ತಕಗಳನ್ನೂ, ಲೆಕ್ಕಗಳನ್ನೂ ಇಡತಕ್ಕದ್ದು; ಮತ್ತು

(b) ಡಿಸ್ಟ್ರಿಕ್ಟ ಕೋರ್ಟಿನವರು, ಚೀಫ್ ಕೋರ್ಟಿನವರು, ಅಥವಾ ಸರ್ಕಾರದವರು ಯಾವುದಾದರೂ ರಿಕಾರ್ಡುಗಳನ್ನು, ಲೆಕ್ಕಗಳನ್ನು, ಅಥವಾ ತಃಖ್ತೆಗಳನ್ನು ಅಪೇಕ್ಷಿಸಿದಲ್ಲಿ ಸದರಿಯವರು ಅಪ್ಪಣೆ ಮಾಡುವ ನಮೂನೆ ಮತ್ತು ವಿಧಾನಗಳಲ್ಲಿ ಅವುಗಳನ್ನು ರವಾನಿಸತಕ್ಕದ್ದು.

ಮೊಹರು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 29]

19. ಸ್ಮಾಲ್‌ಕಾಜು ಕೋರ್ಟಿನವರು ಸರ್ಕಾರದವರಿಂದ ವಿಧಾಯಕವಾಗುವ ನಮೂನೆಯಂತಿರುವ ಮತ್ತು ಪರಿಮಾಣವುಳ್ಳ ಮೊಹರನ್ನು ಉಪಯೋಗಿಸತಕ್ಕದ್ದು.

ಸ್ಮಾಲ್‌ಕಾಜು ಕೋರ್ಟುಗಳನ್ನು ವಜಾಮಾಡೋಣ.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 30]

20. ಸರ್ಕಾರದವರು ಬರಹಮೂಲಕವಾದ ಅಪ್ಪಣೆಯದ್ವಾರಾ ಯಾವ ಸ್ಮಾಲ್‌ಕಾಜುಕೋರ್ಟನ್ನಾಗಲಿ ವಜಾ ಮಾಡಬಹುದು.

ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರನ್ನು ಸರ್ಕಾರದವರು ಬೇರೆ ಕೆಲಸಗಳಿಗೆ ನೇಮಿಸಬಹುದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 31]

21. (1) ಸ್ಮಾಲ್‌ಕಾಜು ಕೋರ್ಟಿನಲ್ಲಿ ಜಡ್ಜಿಯಾಗಿರುವವರು ತಮ್ಮ ಕೆಲಸದ ಜತೆಗೆ ಬೇರೊಂದು ಸಿವಿಲ್ ಕೋರ್ಟಿನ ಜಡ್ಜಿಯಾಗಿರಬೇಕೆಂದು ಅಥವಾ ಯಾವುದಾದರೊಂದು ತರಗತಿಯ ಮ್ಯಾಜಿಸ್ಟ್ರೇಟರಾಗಿರಬೇಕೆಂದು ಅಥವಾ ಇತರ ಸರ್ಕಾರಿ ನೌಕರರಾಗಿರಬೇಕೆಂದು ಸರ್ಕಾರದವರು ಮೊಕರರ್‌ಮಾಡುವ ವಿಷಯದಲ್ಲಿ ಈ ರೆಗ್ಯುಲೇಷನಿನಲ್ಲಿ ಇರುವ ಯಾವ ವಿಧಿಯಿಂದಲಾಗಲಿ ಬಾಧಕವುಂಟೆಂದು ಭಾವಿಸಲ್ಪಡಕೂಡದು.

(2.) ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರನ್ನು ಮೇಲ್ಕಂಡ ಮೇರೆಗೆ ನೇಮಿಸಿದಾಗ ಈ ವಿಷಯದಲ್ಲಿ ಸರ್ಕಾರದವರು ಏರ್ಪಡಿಸಬಹುದಾದ ನಿಬಂಧನೆಗಳಿಗೆ ಒಳಪಟ್ಟು ಸದರಿ ಕೋರ್ಟಿನ ತಾಬೇದಾರೀ ನೌಕರರೇ ಮೇಲ್ಕಂಡ ಇತರ ಕೆಲಸವನ್ನು ಮಾಡುವುದರಲ್ಲಿಯೂ ಕೂಡ ಜಡ್ಜಿಯವರಿಗೆ ಸಹಾಯ ಮಾಡತಕ್ಕದ್ದು.

ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಕೋರ್ಟುಗಳಿಗೂ ಈ ರಗ್ಯುಲೇಷನು ಅನ್ವಯಿಸೋಣ.
[1887ನೇ ಇಸವಿ 9ನೆ ಆಕ್ಟಿನ ಪ್ರಕರಣ 32.]

22. (1) 3ನೆ ಮತ್ತು 4ನೆ ಅಧ್ಯಾಯಗಳ ಪೈಕಿ ಇಡರಡಿ ಕಂಡ ಭಾಗಗಳಿಗೆ ಸಂಬಂಧಿಸುವ ನಿಯಮಗಳೆಲ್ಲವೂ ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಿಂದ ಅಥವಾ ಅದರ ಮೇರೆಗೆ ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಕೋರ್ಟುಗಳಿಗೆಲ್ಲಾ ಸದರಿ ಸ್ಮಾಲ್‌ಕಾಜು ಅಧಿಕಾರದ ಚಲಾವಣೆಗೆ ಸಂಬಂಧಿಸುವಷ್ಟರಮಟ್ಟಿಗೆ ಅನ್ವಯಿಸತಕ್ಕದ್ದು :—

(*a*) ಸ್ಮಾಲ್‌ಕಾಜು ಕೋರ್ಟಿನವರು ಫಲಾನೆ ತರಹೆ ದಾವೆಗಳನ್ನು ದಾಖಲ್ ಮಾಡಿಕೊಳ್ಳಬಹುದೆಂದು ವಿಧಿಸುವ ಭಾಗ ;

(*b*) ಸದರೀ ದಾವೆಗಳನ್ನು ಇತರ ಕೋರ್ಟಿನವರು ದಾಖಲ್ ಮಾಡಿಕೊಳ್ಳಕೂಡದೆಂದು ವಿಧಿಸುವ ಭಾಗ ;

(*c*) ಸ್ಮಾಲ್‌ಕಾಜು ಕೋರ್ಟುಗಳಲ್ಲಿ ಅನುಸರಿಸಬೇಕಾದ ಪದ್ಧತಿ ಮತ್ತು ನಡವಳಿಕೆಗಳನ್ನು ಕುರಿತ ಭಾಗ ;

(d) ಆ ಕೋರ್ಟುಗಳಲ್ಲಿ ಹುಟ್ಟಿದ ಕೆಲವು ಹುಕುಮುಗಳಮೇಲೆ ಅಪೀಲ್ ಮಾಡುವುದನ್ನೂ ಸದರೀ ಕೋರ್ಟಿನವರು ದಾವೆಗಳನ್ನು ಪುನರ್ವಿಮರ್ಶೆ ಮಾಡುವುದನ್ನೂ ಕುರಿತ ಭಾಗ; ಮತ್ತು

(e) ಈ ರೆಗ್ಯುಲೇಷನಿನಲ್ಲಿ ವಿಧಾಯಕವಾಗಿರುವ ಅಪೀಲ್ ಮತ್ತು ಪುನರ್ವಿಮರ್ಶೆಗೆ ಒಳಪಟ್ಟು ಸದರೀ ಕೋರ್ಟುಗಳಲ್ಲಿ ಹುಟ್ಟಿದ ಡಿಕ್ರಿಗಳೂ ಹುಕುಮುಗಳೂ ಅಖೈರಿನವಾಗಿರತಕ್ಕದ್ದೆಂದು ವಿಧಿಸುವ ಭಾಗ.

(2) ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟ ಕೋರ್ಟುಗಳನ್ನು ಕುರಿತು (1) ನೆ ಒಳಪ್ರಕರಣದಲ್ಲಿ ಕಂಡ ಯಾವ ನಿಯಮವೂ ಆ ಕೋರ್ಟುಗಳಿಗೆ ಸದರಿ ಅಧಿಕಾರ ಕೊಡಲ್ಪಟ್ಟ ತಾರೀಖಿಗೆ ಮುಂಚೆ ಅವುಗಳಲ್ಲಿ ದಾಖಲಾಗಿದ್ದ ದಾವೆಗಳಿಗೂ ಷುರು ಆಗಿದ್ದ ನಡವಳಿಕೆಗಳಿಗೂ ಅನ್ವಯಿಸ ಕೂಡದು.

ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಕೋರ್ಟಿಗೆ ಈ ರೆಗ್ಯುಲೇಷನೂ ಸಿವಿಲ್ ಪ್ರೊಸಿಡ್ಯೂರ್ ಕೋಡೂ ಹೇಗೆ ಅನ್ವಯಿಸಬೇಕು ? [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 33.]

23. ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಒಂದು ಕೋರ್ಟು ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಸದರೀ ಸ್ಮಾಲ್‌ಕಾಜು ಅಧಿಕಾರವನ್ನು ಚಲಾಯಿಸುವಾಗಲೇ ಬೇರೇ ಕೋರ್ಟಾಗಿದೆ ಎಂತಲೂ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಉದ್ದೇಶಗಳಿಗಾಗಿ ಸ್ಮಾಲ್ ಕಾಜ್ ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರ ಚಲಾಯಿಸುವಾಗಲೇ ಬೇರೆ ಕೋರ್ಟಾಗಿದೆ ಎಂತಲೂ ಭಾವಿಸಲ್ಪಡತಕ್ಕದ್ದು.

ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಕೋರ್ಟಿಗೆ ಸಿವಿಲ್ ಪ್ರೊಸಿಡ್ಯೂರ್ ಕೋಡನ್ನು ಅನ್ವಯಿಸುವ ವಿಷಯದಲ್ಲಿ ತಿದ್ದುಪಾಟು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 34.]

24. ಹಿಂದಿನ 22—23ನೆ ಪ್ರಕರಣಗಳಲ್ಲಿ ವಿರೋಧಾಂಶವು ಏನಿದ್ದರೂ ಸರಿಯೇ—

(a) ಸ್ಮಾಲ್‌ಕಾಜು ಅಧಿಕಾರವುಳ್ಳ ಒಂದು ಕೋರ್ಟಿನವರು ಸದರೀ ಅಧಿಕಾರವನ್ನು ಚಲಾಯಿಸುವಲ್ಲಿ ಡಿಕ್ರಿಯನ್ನು ಕೊಟ್ಟು ಸದರೀ ಡಿಕ್ರಿಯನ್ನು ಜಾರಿಯ ಬಗ್ಯೆ, ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರವುಳ್ಳ ಕೋರ್ಟಾಗಿರುವ ತರೀಖ, ತಮ್ಮಲ್ಲಿಗೇನೇ ಕಳುಹಿಸಿಕೊಡುವ ಸಂದರ್ಭದಲ್ಲಿ ; ಅಥವಾ

(b) ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರವುಳ್ಳ ಒಂದು ಕೋರ್ಟಿನವರು ಡಿಕ್ರಿಯನ್ನು ಕೊಟ್ಟು ಸದರಿ ಡಿಕ್ರಿಯನ್ನು ಜಾರಿಯ ಬಗ್ಯೆ ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟಿರುವ ಕೋರ್ಟಾದ ತಮ್ಮಲ್ಲಿಗೇನೇ ಕಳುಹಿಸಿಕೊಡುವ ಸಂದರ್ಭದಲ್ಲಿ ;—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 224ನೆ ಪ್ರಕರಣದಲ್ಲಿ ನಮೂದಿರುವ ಕಾಗದಪತ್ರಗಳನ್ನು ಡಿಕ್ರಿಯ ಜತೆಯಲ್ಲಿ ಕಳುಹಿಸಬೇಕೆಂದು ಆ ಕೋರ್ಟಿನವರು ಬರಹಮೂಲಕವಾಗಿ ಹುಕುಂ ಮಾಡಿದಾಗ ಹೊರತು ಅವುಗಳನ್ನು ಕಳುಹಿಸಬೇಕಾದುದಿಲ್ಲ.

ರದ್ದಾದ ಕೋರ್ಟುಗಳಲ್ಲಿ ಜರುಗುತ್ತಿದ್ದ ನಡವಳಿಕೆಗಳನ್ನು ಕೊನೆಯುವರೆಗೂ ನಡೆಸುವುದು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 35.]

25. (1) ಒಂದು ಸ್ಮಾಲ್‌ಕಾಜು ಕೋರ್ಟಿಗಾಗಲೀ ಅಥವಾ ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಇತರ ಕೋರ್ಟಿಗಾಗಲೀ ಯಾವ ಕಾರಣದಿಂದಾದರೂ ಯಾವುದಾದರೂ ದಾವೆಯ ವಿಚಾರಣೆಯ ವಿಷಯದಲ್ಲಿ ಅಧಿಕಾರವು ತಪ್ಪಿಹೋದರೆ ಆ ದಾವೆಯ ವಿಚಾರದಲ್ಲಿ ಡಿಕ್ರಿ ಹುಟ್ಟುವುದಕ್ಕೆ ಮುಂಚೆ ಅಥವಾ ಹುಟ್ಟಿದನಂತರ ಆ ಕೋರ್ಟಿನಲ್ಲಿ ನಡೆಯಬೇಕಾಗಿದ್ದ ನಡವಳಿಕೆಗಳೆಲ್ಲಾ ಅವುಗಳಿಗೆ ಸಂಬಂಧಪಟ್ಟ ದಾವೆಯನ್ನು ಹಿಡಿಯಲು ಅಧಿಕಾರವುಳ್ಳ ಇತರ ಕೋರ್ಟಿನಲ್ಲಿ ಕೊನೆಯವರೆಗೂ ನಡೆಸಲ್ಪಡಬಹುದು.

(2) ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಪೈಕಿ ಸ್ಮಾಲ್‌ಕಾಜು ಕೋರ್ಟುಗಳಿಗೆ ಅನ್ವಯಿಸುವಂಥಾ ಭಾಗದಲ್ಲಿ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಇತರ ಕಾನೂನಿನಲ್ಲಿ ಯಾವ ದಾವೆಗಳ ಬಗ್ಯೆ

ವಿಶೇಷ ನಿಯಮಗಳನ್ನು ನಿರ್ಣಯಿಸಿದೆಯೋ ಆ ದಾವೆಗಳಿಗೆ ಈ ಪ್ರಕರಣದಲ್ಲಿ ಇರುವುದು ಯಾವುದೂ ಅನ್ವಯಿಸುವುದಿಲ್ಲ.

ಕೆಲವು ಹುಕುಮುಗಳನ್ನು ಪ್ರಕಟಿಸುವುದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 37.]

26. ಯಾವ ಯಾವ ಹುಕುಮುಗಳನ್ನು ಸರ್ಕಾರದವರು ಬರಹಮೂಲಕವಾಗಿ ಕೊಡಬೇಕೆಂದು ಈ ರೆಗ್ಯುಲೇಷನಿನಲ್ಲಿ ವಿಧಿಸಲಾಗಿದೆಯೋ ಆ ಹುಕುಮುಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಷೆಡ್ಯೂಲ್.

ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದಾಖಲಾಗಬಹುದಾದ ದಾವೆಗಳು.

(10ನೆ ಪ್ರಕರಣವನ್ನು ನೋಡಿ.)

(1) ಸಾಲದ ಮೊಬಲಗನ್ನು ವಸೂಲ್‌ಮಾಡುವ ಬಗ್ಗೆ ದಾವೆ;

(2) ಒಬ್ಬ ಜಾಮೀನುದಾರನಿಂದ ಅಥವಾ ಅವನಮೇಲೆ ಹಣಕ್ಕಾಗಿ ದಾವೆ;

(3) ಬಿಕರಿಮಾಡಿದ ಸಾಮಾನಿನ ಬೆಲೆಗಾಗಿ ದಾವೆ;

(4) ಕೆಲಸಮಾಡುವ ಬಗ್ಗೆ ಅಥವಾ ಕೂಲಿ ಜನರನ್ನು ಸರಬರಾಜ್ ಮಾಡುವಬಗ್ಗೆ ಹುಟ್ಟಿದ ಕರಾರಿನ ಮೇಲಿನ ದಾವೆ;

(5) ಬಾಡಿಗೆಗೆ ಕೊಡುವ ಅಥವಾ ತೆಗೆದುಕೊಳ್ಳುವ ಮತ್ತು ನೌಕರಿಗೆ ಇಟ್ಟುಕೊಳ್ಳುವ ಅಥವಾ ನೌಕರಿ ಮಾಡುವ ಕರಾರಿನ ಮೇಲಿನ ದಾವೆ;

(6) ಬಾಡಿಗೆ ಪಾವತಿಮಾಡುವುದಾಗಿ ಕಂಠೋಕ್ತವಾದ ಕರಾರು ಹುಟ್ಟಿದ್ದರೆ ಸದರೀ ಬಾಡಿಗೆಯ ಬಗ್ಗೆ ದಾವೆ;

(7) ಊಟದ ಮತ್ತು ವಾಸದ ಬಗ್ಗೆ ಖರ್ಚು ವಸೂಲ್ ಮಾಡುವ ವಿಷಯದಲ್ಲಿ ದಾವೆ;

(8) ವಾದಿಯ ಪರವಾಗಿ ಪ್ರತಿವಾದಿಯು ವಸೂಲ್ ಮಾಡಿಕೊಂಡ ಹಣಕ್ಕೋಸ್ಕರ ದಾವೆ;

(9) ಪ್ರತಿವಾದಿಗೆ ತಪ್ಪು ತಿಳುವಳಿಕೆಯಿಂದ ಕೊಟ್ಟ ಅಥವಾ ಕೊಡಬೇಕಾದುದಕ್ಕಿಂತ ಹೆಚ್ಚಾಗಿ ಕೊಟ್ಟ ಹಣಕ್ಕೋಸ್ಕರ ದಾವೆ;

(10) ಪ್ರತಿವಾದಿಯು ಕೋರಿಕೆಯಮೇರೆಗೆ ಕೊಟ್ಟ ಹಣಕ್ಕಾಗಿ ಅಥವಾ ಸಾಮಾನುಗಳಿಗಾಗಿ ದಾವೆ;

(11) ಸಾಮಾನು ಬಿಕರಿಗೆ ಸಂಬಂಧಪಟ್ಟ ಕರಾರನ್ನು ಉಲ್ಲಂಘಿಸಿದುದಕ್ಕಾಗಿ ಪರಿಹಾರ ದ್ರವ್ಯವನ್ನು ಪಡೆಯುವ ಬಗ್ಗೆ ದಾವೆ;

(12) ಠೇವಣಿ ಇಟ್ಟ ಮೊಬಲಗಿನ ಬಗ್ಗೆ ದಾವೆ; (ಕೋರ್ಟಿನವರಿಗೆ ಯಾವ ಮೊಬಲಗಿನೊಳಗಾಗಿ ದಾವೆಗಳನ್ನು ದಾಖಲ್ ಮಾಡಿಕೊಳ್ಳಲು ಅಧಿಕಾರವಿದೆಯೋ ಆ ಮೊಬಲಗಿಗಿಂತ ಸದರೀ ಠೇವಣಾತಿಯ ಒಟ್ಟು ಮೊಬಲಗು ಜಾಸ್ತಿಯಾಗಿರಕೂಡದು.)

(13) ಪ್ರತಿವಾದಿಯ ಬಳಿ ಒತ್ತೆ ಅಥವಾ ಠೇವಣಾತಿ ಇಟ್ಟಿರುವ ಯಾವುದಾದರೂ ಚರಸ್ವತ್ತನ್ನು ಅಥವಾ ಅದರ ಖರೀದಿಯನ್ನು ವಸೂಲ್ ಮಾಡಿಕೊಳ್ಳುವುದಕ್ಕೋಸ್ಕರ ದಾವೆ.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

1865ನೆ ಇಸವಿಯ 11ನೆ ಆಕ್ಟ್ ಆದ ಸ್ಮಾಲ್‌ಕಾಜು ಕೋರ್ಟುಗಳ ಆಕ್ಟನ್ನು ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಕ್ರಮವಾಗಿ ಜಾರಿಗೆ ತಂದಿಲ್ಲ. ಆದರೂ 1880ನೆ ಜನವರಿ 28ನೆ ಮುರ್ಕ್ಕಂ ಐ. ಜೆ. 31ನೆ ನಂಬರ್ ಇಂಡಿಯಾ ಸರ್ಕಾರದ ಫಾರೆನ್ ಇಲಾಖಾ ಇಸ್ತಿಹಾರ್ನಾಮೆಯ ಆಧಾರದಿಂದ ಮಾತ್ರವೇ ಸದರೀ ಆಕ್ಟು ಈ ಸಂಸ್ಥಾನದಲ್ಲಿ ಜಾರಿಯಲ್ಲಿದೆ. ಈ ಇಸ್ತಿಹಾರ್ನಾಮೆಯ ಮೂಲಕ ಇದಕ್ಕೆ ಹಿಂದೆ ಇದೇ ವಿಚಾರವಾಗಿ ಹುಟ್ಟಿದ್ದ 1879ನೆ

ಇಸವಿಯ ಆಗಸ್ಟ್ 27ನೆ ಮರ್ಕ್ಯುರಿ ಐ. ಜಿ. 235ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟವಾಗಿದ್ದ ನಿಬಂಧನೆಗಳ ಪೈಕಿ 8ನೆ ನಿಬಂಧನೆಗೆ ಕೆಲವು ಮಾತುಗಳನ್ನು ಹೆಚ್ಚಾಗಿ ಸೇರಿಸಲಾಯಿತು.

ಸದರೀ ತಿದ್ದುಪಾಟಾದ 8ನೆ ನಿಬಂಧನೆಯನ್ನು ಈ ಕೆಳಗೆ ಕೊಟ್ಟಿದೆ; ಆ ಪೈಕಿ ಹೆಚ್ಚಾಗಿ ಸೇರಿಸಿರುವ ಮಾತುಗಳನ್ನು ಕೆಳಗೆ ಗೀಟುಹಾಕಿ ಸೂಚಿಸಿ ಇದೆ:—

"ಸ್ಮಾಲ್‌ಕಾಜು ಕೋರ್ಟುಗಳಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟುಮಾಡುವುದಕ್ಕೆ ಹುಟ್ಟಿದ 1865ನೆ ಇಸವಿಯ 11ನೆ ಆಕ್ಟನ್ನನುಸರಿಸಿ ಚೀಫ್ ಕಮಿಷನರವರು ಆಗಿಂದಾಗ್ಯೆ ಗೊತ್ತು ಮಾಡಬಹುದಾದ ಸ್ಥಳೀಕ ಸರಹದ್ದುಗಳೊಳಗೆ ಯಾವ ಸಬಾರ್ಡಿನೇಟ್ ಜಡ್ಜಿಯವರಿಗಾಗಲೀ ಸ್ಮಾಲ್‌ಕಾಜು ಅಧಿಕಾರವನ್ನು ಕೊಟ್ಟು 500 ರೂಪಾಯಿಗಳಿಗೆ ಮೀರದಂತೆ ಚೀಫ್ ಕಮಿಷನರವರಿಗೆ ಯುಕ್ತತೋರುವ ಮೊಬಲಗಿಗೆ ಸಂಬಂಧಪಟ್ಟ ಸ್ಮಾಲ್‌ಕಾಜು ದಾವೆಗಳನ್ನು ವಿಚಾರಣೆ ಮಾಡಬಹುದೆಂತಲೂ, ಯಾವ ಮುನ್ಸೀಫರಿಗಾಗಲೀ ಅದೇರೀತಿ ಅಧಿಕಾರ ಕೊಟ್ಟು 50 ರೂಪಾಯಿಗಳಿಗೆ ಮೀರದಂತೆ ಚೀಫ್ ಕಮಿಷನರವರಿಗೆ ಯುಕ್ತತೋರುವ ಮೊಬಲಗಿಗೆ ಸಂಬಂಧಪಟ್ಟ ಸ್ಮಾಲ್‌ಕಾಜು ದಾವೆಗಳನ್ನು ವಿಚಾರಣೆ ಮಾಡಬಹುದೆಂತಲೂ ಚೀಫ್ ಕಮಿಷನರವರು ಅಪ್ಪಣೆ ಮಾಡಬಹುದು."

"ಸದರೀ 1865ನೆ ಇಸವಿಯ 11ನೆ ಆಕ್ಟಿನ ನಿಯಮಗಳೆಲ್ಲವೂ ಈ ನಿಬಂಧನೆಗೆ ಅನುಸಾರವಾಗಿರುವಷ್ಟರಮಟ್ಟಿಗೆ ಮೇಲ್ಕಂಡಂತೆ ಪಡೆದ ಅಧಿಕಾರವನ್ನು ಸಬಾರ್ಡಿನೇಟ್ ಜಡ್ಜಿ ಅಥವಾ ಮುನ್ಸೀಫ್‌ಯವರು ಅವರವರ ಕೋರ್ಟುಗಳಲ್ಲಿ ಚಲಾಯಿಸುವಾಗ ಅವರುಗಳಿಗೆ ಅನ್ವಯಿಸತಕ್ಕದ್ದು."

"ಮೇಲ್ಕಂಡಂತೆ ಸಬಾರ್ಡಿನೇಟ್ ಜಡ್ಜಿಯವರಿಗೆ ಅಥವಾ ಮುನ್ಸೀಫರಿಗೆ ಕೊಡೋಣಾದ ಅಧಿಕಾರವನ್ನು ಚೀಫ್ ಕಮಿಷನರವರು ತಮಗೆ ಯುಕ್ತ ತೋರಿದಾಗ ರದ್ದುಮಾಡಬಹುದು."

ಪರಂತು 1879ನೆ ಆಗಸ್ಟ್ 27ನೆ ತಾರೀಖಿನ ಇಸ್ತಿಹಾರ್ನಾಮೆಯನ್ನೆಲ್ಲಾ 1883ನೆ ಇಸವಿ 1ನೆ ನಂಬರಿನ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 2ನೆ ಪ್ರಕರಣದ ಮೂಲಕ ರದ್ದುಮಾಡಲಾಗಿದೆ. ಅಲ್ಲಿಂದೀಚೆಗೆ ಯಾವ ಜಡ್ಜಿಗಳಿಗಾಗಲಿ ಸ್ಮಾಲ್‌ಕಾಜು ಅಧಿಕಾರವನ್ನು ಕೊಡಬೇಕಾದರೆ ಮೇಲ್ಕಂಡ 1883ನೆ ಇಸವಿಯ 1ನೆ ರೆಗ್ಯುಲೇಷನಿಗನುಸಾರವಾಗಿ ಕೊಡುತ್ತಿದೆ. ಆದರೆ 1879ನೆ ಇಸವಿಯ ಇಸ್ತಿಹಾರ್ನಾಮೆಯನ್ನು ರದ್ದುಮಾಡಿದ ಕಾಲದಲ್ಲಿ 1880ನೆ ಇಸವಿಯ ಜನವರಿ 28ನೆ ತಾರೀಖಿನ ತಿದ್ದುಪಾಟು ಇಸ್ತಿಹಾರನ್ನು ಕಂಠೋಕ್ತವಾಗಿ ರದ್ದುಮಾಡಲಿಲ್ಲ. ಆದಕಾರಣ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ಸ್ಮಾಲ್‌ಕಾಜು ಕಾನೂನಿನ ವಿಷಯದಲ್ಲಿ ಕೆಲವರಿಗೆ ಸಂದೇಹಗಳುಂಟಾಗಲು ಅವಕಾಶವಾಗಿದೆ.

2. ಈ ಸಂದೇಹಗಳನ್ನು ಪರಿಹರಿಸುವುದು ಮಾತ್ರವೇ ಅಲ್ಲದೆ 1887ನೆ ಇಸವಿಯ 9ನೆ ಆಕ್ಟಾದ ಬ್ರಿಟಿಷ್ ಇಂಡಿಯಾ ಪ್ರೊವಿನ್ಷಿಯಲ್ ಸ್ಮಾಲ್‌ಕಾಜು ಕೋರ್ಟುಗಳ ಆಕ್ಟು ಇಲ್ಲಿನ ಸ್ಥಳ ವಿದ್ಯಮಾನಗಳಿಗೆ ಸರಿಹೋಗುವಷ್ಟರಮಟ್ಟಿಗೆ ಅದಕ್ಕನುಸಾರವಾಗಿಯೇ ಮೈಸೂರು ಕಾನೂನನ್ನೂ ಏರ್ಪಡಿಸಬೇಕೆಂಬುವುದೂ ಸಹ ಈ ಬಿಲ್ಲಿನ ಉದ್ದೇಶವಾಗಿದೆ. ಈ ಮಸೂದೆಯಿಂದ ಸಿವಿಲ್ ಕೋರ್ಟು ರೆಗ್ಯುಲೇಷನಿನ 16ನೆ ಪ್ರಕರಣವು ರದ್ದಾಗಬೇಕೆಂದು ಉದ್ದೇಶಿಸಿಲ್ಲವೆಂಬ ಅಂಶವನ್ನು ಇಲ್ಲಿ ಸೂಚಿಸಬಹುದು. ಈ ಮಸೂದೆಯಲ್ಲಿ ಸರ್ಕಾರದವರು ಪ್ರತ್ಯೇಕವಾದ ಸ್ಮಾಲ್‌ಕಾಜು ಕೋರ್ಟುಗಳನ್ನು ಸ್ಥಾಪಿಸಬಹುದೆಂದು ವಗೈರೆ ನಿಯಮಮಾಡಿದೆ; ಸಿವಿಲ್ ಕೋರ್ಟು ರೆಗ್ಯುಲೇಷನಿನಲ್ಲಿಯಾದರೋ ಕೇವು ಜಡ್ಜಿಗಳಿಗೆ ಸ್ಮಾಲ್‌ಕಾಜು ಅಧಿಕಾರವನ್ನು ಕೊಡಬಹುದೆಂದು ನಿಯಮ ಮಾಡಿ ಇದೆ. ಅವರುಗಳು ಸದರೀ ಅಧಿಕಾರವನ್ನು ಈ ಬಿಲ್ಲಿನ 22ನೆ ಪ್ರಕರಣದಲ್ಲಿ ವಿಧಿಸಿರುವ ಮೇರೆಗೆ ಚಲಾಯಿಸತಕ್ಕದ್ದು.

3. ಅನೇಕ ಸ್ಮಾಲ್‌ಕಾಜು ಕೋರ್ಟುಗಳಿಗೆ ಒಬ್ಬರೇ ಜಡ್ಜಿಯವರನ್ನು ನೇಮಿಸುವುದು, ಒಂದೇ ಕೋರ್ಟಿಗೆ ಒಬ್ಬರಿಗಿಂತ ಜಾಸ್ತಿ ಜಡ್ಜಿಗಳನ್ನು ನೇಮಿಸುವುದು, ರಿಜಿಸ್ಟ್ರಾರರುಗಳನ್ನು ನೇಮಿಸುವುದು ವಗೈರೆ ಅಂಶಗಳನ್ನು ಕುರಿತು ಸದ್ಯದಲ್ಲಿ ಈ ಬಿಲ್ಲಿನಲ್ಲಿ ನಿಯಮ ಮಾಡಬೇಕಾಗಿಲ್ಲವೆಂದು ಯೋಚಿಸಲಾಗಿದೆ.

4. ಸಿಬ್ಬಂದಿ ಏರ್ಪಾಡನ್ನು ಕುರಿತು 8ನೆ ಪ್ರಕರಣವನ್ನು ಹೊಸದಾಗಿ ಸೇರಿಸಿ ಇದೆ. ಇದು 1887ನೆ ಇಸವಿಯ 9ನೆ ಆಕ್ಟಿನ 13ನೆ ಪ್ರಕರಣಕ್ಕೆ ಅನುಸಾರವಾಗಿದೆ; ಪರಂತು ಸದರಿ ಪ್ರಕರಣವಷ್ಟು ತೊಡಕಾಗಿಲ್ಲ.

5. 1887ನೆ ಇಸವಿಯ 9ನೆ ಆಕ್ಟಿನ ಷೆಡ್ಯೂಲಿನಲ್ಲಿ ಯಾವ ಯಾವ ದಾವೆಗಳು ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದಾಖಲಾಗಕೂಡದೆಂಬುವುದನ್ನು 44 ಕಲಮುಗಳಲ್ಲಿ ನಮೂದಿಸಿರುವುದಲ್ಲದೆ ಅವು ಹೊರತು ನಿಷ್ಕರ್ಷೆ

ಯಾದ ಒಂದು ಮೊಬಲಗಿಗೆ ಮೀರದೆ ಇರುವ ಇತರ ಎಲ್ಲಾ ಸಿವಿಲ್ ದಾವೆಗಳನ್ನೂ ಸದರಿ ಕೋರ್ಟುಗಳಲ್ಲಿ ದಾಖಲ್ ಮಾಡಿಕೊಳ್ಳಬಹುದೆಂದು ವಿಧಿಸಿ ಇದೆ.

ಕಾನೂನ್ ಯಾ ವಿದ್ಯಮಾನಗಳನ್ನು ಕುರಿತ ತೊಡಕಾದ ಅಂಶಗಳಿಲ್ಲದೆ ಇರುವ ಜುಜುವಿ ದಾವೆಗಳನ್ನು ಮಾತ್ರ ಹಿಡಿಯಲು ಸ್ಮಾಲ್‌ಕಾಜು ಕೋರ್ಟುಗಳಿಗೆ ಅಧಿಕಾರ ಕೊಡುವುದೇ ಇಂಡಿಯನ್ ಆಕ್ಟಿನ ಷೆಡ್ಯೂಲಿನಲ್ಲಿ ಈರೀತಿ ದಾವೆಗಳ ತರಗತಿ ವಿಭಾಗಮಾಡಿದುದರ ಉದ್ದೇಶವಾಗಿದೆ. ಪರಂತು ನಿಜಾಂಶವನ್ನು ಪರೀಕ್ಷಿಸಿದರೆ ಸದರೀ ಆಕ್ಟುಮೇರೆಗೆ ಯಾವ ಯಾವ ದಾವೆಗಳನ್ನು ಕಷ್ಟವಾಗಿರುವ ಸಬಬು ಅಂಥಾ ಕೋರ್ಟುಗಳಲ್ಲಿ ದಾಖಲ್ ಮಾಡಿಕೊಳ್ಳಕೂಡದೆಂದು ನಿಷೇಧಿಸಿದೆಯೋ ಅಷ್ಟೇ ಕಠಿಣವಾದ ದಾವೆಗಳು ದಾಖಲಾಗುವುದಕ್ಕೂ ಸಹ ಅವಕಾಶ ವಿದೆ ಎಂಬ ಅಂಶವನ್ನು ಮಿ॥ ಜಸ್ಟಿಸ್ ಎ. ರಾಮಚಂದ್ರ ಅಯ್ಯರವರು 1890ನೆ ಏಪ್ರಿಲ್ ಮತ್ತು 1893ನೆ ಮೇ ತಿಂಗಳುಗಳಲ್ಲಿ ಬರೆದ ಯಾದಾಸ್ತುಗಳಲ್ಲಿ ಸ್ಪಷ್ಟಪಡಿಸಿರುತ್ತಾರೆ. ಹ್ಯಾಗೆಂದರೆ, ಮೋಸ ಅಥವಾ ಅಸಡ್ಡೆಗೆ ಸಂಬಂಧಪಟ್ಟ ಹಣವನ್ನು ಠೇವಣಿ ಇಟ್ಟುಕೊಳ್ಳುವುದು ಅಥವಾ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ದಾವೆಗಳನ್ನೂ, ಜಮೀನ್ ಬಿಕರಿ ಕರಾರಿನಂತೆ ನಡೆಯದೆ ಹೋದುದಕ್ಕೋಸ್ಕರ ಪರಿಹಾರದ್ರವ್ಯವನ್ನು ಪಡೆಯುವುದಕ್ಕೆ ಸಂಬಂಧಪಟ್ಟ ದಾವೆಗಳನ್ನೂ ಹಿಡಿಯಕೂಡದೆಂದು ಸದರೀ ಷೆಡ್ಯೂಲಿನಲ್ಲಿ ನಮೂದಿಸಿಲ್ಲ. ಆದರೂ ಈ ತರಹ ದಾವೆಗಳೂ ಕೂಡ ಯಾವ ಯಾವ ತರಹ ದಾವೆಗಳನ್ನು ಹಿಡಿಯಕೂಡದೆಂದು ಸದರೀ ಷೆಡ್ಯೂಲಿನಲ್ಲಿ ನಮೂದಿ ದೆಯೋ ಅವುಗಳಷ್ಟೇ ಕಠಿಣವಾಗಿವೆ. ಇದೂ ಅಲ್ಲದೆ ಒಂದೇ ಕೃತ್ಯದಿಂದ ಒಬ್ಬ ಮನುಷ್ಯನ ಶರೀರಕ್ಕೂ ಸ್ವತ್ತಿಗೂ ಕೂಡ ಹಾನಿಯಾಗಬಹುದಾದ ಸಂಭವವೂ ಉಂಟು ; ಆದರೆ ಈ ಉಭಯ ಸಂದರ್ಭಗಳಲ್ಲಿಯೂ ಪ್ರತಿವಾದಿಯು ಪರಿಹಾರಕೊಡಲು ಗುರಿಯಾಗುವಷ್ಟರಮಟ್ಟಿಗೆ ಕಾನೂನಿನ ಮತ್ತು ವಿದ್ಯಮಾನದ ಅಂಶಗಳು ಒಂದೇ ತರಹ ಆಗಿರಬಹುದಾದರೂ ಸ್ವತ್ತಿಗೆ ನಷ್ಟವುಂಟಾದ ಬಗ್ಗೆ ಕೊಡಬೇಕಾದ ಪರಿಹಾರಕ್ಕೆ ಸಂಬಂಧಪಟ್ಟ ದಾವೆಗಳನ್ನು ಹಿಡಿಯಲು ಸ್ಮಾಲ್‌ಕಾಜು ಕೋರ್ಟಿಗೆ ಅಧಿಕಾರವುಂಟೆಂತಲೂ ಶರೀರಸಂಬಂಧವಾದ ಹಾನಿಯನ್ನು ಕುರಿತ ದಾವೆಗಳನ್ನು ಹಿಡಿಯಲು ಅಧಿಕಾರವಿಲ್ಲವೆಂತಲೂ ಭಾವಿಸೋಣಾಗಿದೆ. ಅಲ್ಲದೆ ಮಾನನಷ್ಟ ಅಥವಾ ಸುಳ್ಳು ಕ್ರಿಮಿನಲ್ ಫಿರ್ಯಾದನ್ನು ಕುರಿತ ದಾವೆಗಳನ್ನು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲ್ ಮಾಡಿಕೊಳ್ಳಕೂಡ ದೆಂದು ನಿಷೇಧಿಸಿದ್ದಾಗ್ಯೂ ಈ ದಾವೆಗಳಿಗಿಂತಲೂ ಕಠಿಣತರವಾದ ದಾವೆಗಳನ್ನು ಎಂಥರೆ ಕುದುರೆ, ಒಡವೆ ವಗೈರೆಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಕುರಿತ ದಾವೆಗಳನ್ನು ಸದರೀ ಕೋರ್ಟಿನಲ್ಲಿ ದಾಖಲ್ ಮಾಡಿಕೊಳ್ಳಬಹುದೆಂತ ವಿಧಿಸಿ ಇದೆ.

ಇವೇ ಮುಂತಾದ ದೃಷ್ಟಾಂತಗಳನ್ನು ಪರ್ಯಾಲೋಚಿಸಿದರೆ ಇಂಡಿಯನ್ ಆಕ್ಟಿನಲ್ಲಿ ದಾವೆಗಳನ್ನು ತರಗತಿ ವಿಂಗಡಿಸಿರುವುದು ಸಮರ್ಪಕವಾಗಿಲ್ಲವೆಂತಲೂ, ಸ್ಮಾಲ್ ಕಾಜು ಕೋರ್ಟುಗಳಲ್ಲಿ ಇನ್ನೂ ಅನೇಕ ತರಹ ದಾವೆ ಗಳನ್ನು ಹಿಡಿಯಕೂಡದೆಂದು ವಿಧಿಸಬೇಕೆಂತಲೂ ತೋರುವುದು.

ಮೈಸೂರು ಸೀಮೆಯಲ್ಲಿ ಸಿವಿಲ್ ನ್ಯಾಯವಿಮರ್ಶೆಯನ್ನು ಕುರಿತ ಹಿಂದಿನ ರಿಪೋರ್ಟುಗಳನ್ನು ನೋಡ ಲಾಗಿ ಸಾಲಕೊಟ್ಟ ಹಣ, ಸರಫರಾಜ್ ಮಾಡಿದ ಸಾಮಾನು, ಕೂಲಿ, ಬಾಡಿಗೆ ವಗೈರೆಗೆ ಸಂಬಂಧಪಟ್ಟ ದಾವೆಗಳೇ ಸ್ಮಾಲ್‌ಕಾಜು ಕೋರ್ಟುಗಳಲ್ಲಿ ವಿಶೇಷವಾಗಿ ದಾಖಲಾಗಿವೆ ಎಂದು ವಿದಶವಾಗುವುದು. ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದರ್ಯಾಪ್ತು ಆಗತಕ್ಕ ದಾವೆಗಳನ್ನೆಲ್ಲಾ ಕೆಲವು ಸಾಧಾರಣ ತರಗತಿಗಳಾಗಿ ವಿಂಗಡಿಸಬಹುದಾಗಿದೆ. ಆದು ದರಿಂದ ಇಂಡಿಯನ್ ಆಕ್ಟಿನಲ್ಲಿರುವ ಷೆಡ್ಯೂಲನ್ನು ಬಿಟ್ಟುಬಿಟ್ಟು ಅದಕ್ಕೆ ಬದಲಾಗಿ ಒಂದು ಹೊಸ ಷೆಡ್ಯೂಲಿನಲ್ಲಿ ಮೇಲ್ಕಂಡ ತರಗತಿಗಳನ್ನು ನಮೂದಿಸಿ ಹಾಗೆ ನಮೂದಾಗದೆ ಇರುವ ತರಗತಿಗೆ ಸೇರಿದ ದಾವೆಗಳನ್ನು ಸ್ಮಾಲ್ ಕಾಜು ಕೋರ್ಟಿನವರು ಹಿಡಿಯಕೂಡದೆಂದು ವಿಧಿಸುವುದೇ ಸರ್ವೋತ್ತಮವೆಂತ ತೋರುತ್ತದೆ. ಈ ಮಸೂದೆ ಯ 10ನೆ ಕಲಮಿನಲ್ಲಿ ಈ ರೀತಿ ನಿಯಮವನ್ನೇರ್ಪಡಿಸಿದೆಯಲ್ಲದೆ ಸರ್ಕಾರದವರು ಗೆಜೆಟ್ಟಿನಲ್ಲಿ ಇಸ್ತಿಹಾರನ್ನು ಪ್ರಕಟಿಸುವುದರ ಮೂಲಕ ಸದರೀ ಷೆಡ್ಯೂಲಿಗೆ ಜಾಸ್ತಿ ತರಹ ದಾವೆಗಳನ್ನು ಸೇರಿಸಬಹುದು ಅಥವಾ ಅದರಲ್ಲಿ ಈಗ ನಮೂದಿರುವ ದಾವೆಗಳನ್ನು ವ್ಯತ್ಯಾಸ ಪಡಿಸಬಹುದು ಎಂಬದಾಗಿ ವಿಧಿಸಿದೆ.

ಈ ಮಸೂದೆಯ ವಿಷಯದಲ್ಲಿ ಚೀಫ್ ಕೋರ್ಟಿನವರ ಅಭಿಪ್ರಾಯವನ್ನೂ ಸಹ ಕೇಳಲಾಯಿತು. ಈ ಮಸೂದೆಯಲ್ಲಿ ಹೊಸದಾಗಿ ಸೇರಿಸಿರುವ ಷೆಡ್ಯೂಲು ಇಂಡಿಯನ್ ಆಕ್ಟಿನ ಷೆಡ್ಯೂಲಿಗಿಂತ ಉತ್ತಮವಾಗಿದೆಯೆಂತಲೂ, ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದರ್ಯಾಫ್ತಾಗಬಹುದಾದ ದಾವೆಗಳನ್ನು ಈ ಮಸೂದೆಯಲ್ಲಿ ತರಗತಿಗಳಾಗಿ ವಿಂಗಡಿಸಿರುವುದು ಬಹಳ ಸುಲಭವಾಗಿಯೂ ಸ್ಪಷ್ಟವಾಗಿಯೂ ಇದೆಯೆಂತಲೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಇಸ್ತಿಹಾರ್‌ನಾಮೆ.

ತಾರೀಖು 24ನೆ ಮಾರ್ಚಿ 1909.

ನಂ. 9283—ಮ್ಯು. 322-08-3, 1909ನೆ ಇಸವಿ ಜನವರಿ 25ನೆ ತಾರೀಖಿನ 6859 ಮ್ಯು. 322-08-1ನೆ ನಂಬರಿನ ಇಸ್ತಿಹಾರ್ನಾಮೆಯ ಮೂಲಕ ಪ್ರಸಿದ್ಧಪಡಿಸಿರುವ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳಲ್ಲಿ ಇದರಡಿ ಕಂಡ ಬದಲಾವಣೆಗಳನ್ನು ಮಾಡಿ ಹೆಚ್ಚು ಅಂಶಗಳನ್ನು ಸೇರಿಸಬೇಕು.

1. 4ನೆ ನಿಬಂಧನೆಯಲ್ಲಿ :—

(*a*) (vi) ಮತ್ತು (vii)ನೆ ಪ್ರ್ಯಾರಾಗಳನ್ನು ಕ್ರಮವಾಗಿ (vii) (a) ಮತ್ತು (viii)ನೆ ಪ್ರ್ಯಾರಾಗಳನ್ನಾಗಿ ಮಾಡಿಕೊಳ್ಳಬೇಕು, ಮತ್ತು (v)ನೆ ಪ್ರ್ಯಾರಾವಿನ 2ನೆ ಪಙ್ತಿಯ ನಂತರ ಇದರಡಿ ಕಂಡ ಪ್ರ್ಯಾರಾವನ್ನು ಹೊಸದಾಗಿ ದಾಖಲ್ಮಾಡಿಕೊಳ್ಳಬೇಕು.

"(vi) ಪ್ರತಿ ಮ್ಯುನಿಸಿಪಾಲಿಟಿಯ ವಿಷಯದಲ್ಲಿಯೂ ಸರ್ಕಾರದವರು ವಿಧಾಯಕ ಮಾಡುವ ಮೊಬಲಗಿಗೆ ಕಮ್ಮಿ ಇಲ್ಲದ ಜಮೀನು ಕಂದಾಯವನ್ನು (ಅಥವಾ ಪರಭಾರೆ ಮಾಡಲ್ಪಟ್ಟ ಜಮೀನಾಗಿದ್ದಲ್ಲಿ, ಹಾಗೆ ಪರಭಾರೆಯಾಗದಿದ್ದರೆ ಎಷ್ಟು ಕಂದಾಯ ಕೊಡಬೇಕಾಗುತ್ತಿತ್ತೋ ಅಷ್ಟು ಕಂದಾಯವನ್ನು) ಕೊಡುವಂಥಾ ಹಿಡುವಳಿಯುಳ್ಳ ರಿಜಿಸ್ಟರಾದ ಜಮೀನುದಾರರುಗಳು."

(*b*) ತಿದ್ದುಪಡಿಯಾದ (vii) (a) ಪ್ರ್ಯಾರಾನಂತರ ಇದರಡಿ ಕಂಡ ಉಪ ಪ್ರ್ಯಾರಾವನ್ನು ಹೊಸದಾಗಿ ಸೇರಿಸಿಕೊಳ್ಳಬೇಕು.

"(b) ಮೇಲೆ ನಮೂದಿಸಿರುವ ಕಾಲದಲ್ಲಿ ಕಟ್ಟಡಗಳ ಮಾಲೀಕರಾಗಿ, ಭೋಗ್ಯದಾರರುಗಳಾಗಿ ಅಥವಾ ಬಾಡಿಗೆ ಕೊಡತಕ್ಕವರಾಗಿ ಇದ್ದುಕೊಂಡು ಅವುಗಳಿಗಾಗಿ ಮೇಲ್ಕಂಡ ಪ್ರ್ಯಾರಾವಿನಲ್ಲಿ ವಿಧಾಯಿಸಿರುವ ಮೊಬಲಗಿಗೆ ಕಮ್ಮಿ ಇಲ್ಲದ ತೆರಿಗೆಯನ್ನು ಸದರಿ ಕಟ್ಟಡಕ್ಕಾಗಿ ಪಾವತಿ ಮಾಡಿರುವ ಜನಗಳು."

2. 6ನೆ ನಿಬಂಧನೆಯಲ್ಲಿ :—

(a) (i)ನೆ ಪ್ರ್ಯಾರಾವಿನ (e) ಮತ್ತು (f) ಎಂಬ ಉಪ ಪ್ರ್ಯಾರಾಗಳನ್ನು (f) (i) ಮತ್ತು (g) ಎಂಬದಾಗಿ ಗುರ್ತು ಮಾಡಿಕೊಂಡು (d) ಉಪ ಪ್ರ್ಯಾರಾನಂತರ ಇದರಡಿ ಕಾಣಿಸಿರುವದನ್ನು ಸೇರಿಸಿಕೊಳ್ಳಬೇಕು.

"(e) ಪ್ರತಿ ಮ್ಯುನಿಸಿಪಾಲಿಟಿಯ ವಿಷಯದಲ್ಲಿಯೂ ಸರ್ಕಾರದವರು ವಿಧಾಯಕ ಮಾಡುವ ಮೊಬಲಗಿಗೆ ಕಮ್ಮಿ ಇಲ್ಲದ ಕಂದಾಯವನ್ನು (ಅಥವಾ ಪರಭಾರೆಯಾದ ಜಮೀನಾಗಿದ್ದಲ್ಲಿ, ಹಾಗೆ ಪರಭಾರೆಯಾಗದಿದ್ದರೆ ಎಷ್ಟು ಕಂದಾಯ ಕೊಡಬೇಕಾಗುತ್ತಿತ್ತೋ ಅಷ್ಟು ಕಂದಾಯವನ್ನು) ಕೊಡುವಂಥಾ ಹಿಡುವಳಿಯುಳ್ಳ ರಿಜಿಸ್ಟರಾದ ಜಮೀನುದಾರರುಗಳು."

(b) ತಿದ್ದುಪಡಿಯಾದ f (i)ನೆ ಉಪಪ್ರ್ಯಾರಾನಂತರ ಇದರಡಿ ನಮೂದಿಸಿರುವುದನ್ನು ಸೇರಿಸಿಕೊಳ್ಳಬೇಕು :—

"(2) ಮಾಲೀಕರಾಗಿ, ಭೋಗ್ಯದಾರರಾಗಿ ಅಥವಾ ಬಾಡಿಗೆದಾರರಾಗಿ ಕಟ್ಟಡಗಳಲ್ಲಿದ್ದುಕೊಂಡು ಅವುಗಳಿಗಾಗಿ ಮೇಲ್ಕಂಡ ಉಪ ಪ್ರ್ಯಾರಾವರೆಗೆ ವಿಧಾಯಕವಾದ ಮೊಬಲಗಿಗೆ ಕಮ್ಮಿ ಇಲ್ಲದ ತೆರಿಗೆಯನ್ನು ಪಾವತಿ ಮಾಡಿರುವ ಜನಗಳು."

ತಾರೀಖು 24ನೆ ಮಾರ್ಚಿ 1909.

ನಂ. 9284—ಮ್ಯು. 322-08-4, ಸ್ 1909ನೆ ಇಸವಿಯ ಜನವರಿ 25ನೆ ತಾರೀಖಿನ 6839 ಮ್ಯು. 322-08-1ನೆ ನಂಬರಿನ ಸರ್ಕಾರಿ ಇಸ್ತಿಹಾರನಾಮೆಯಲ್ಲಿ ಪ್ರಕಟಿಸಲ್ಪಟ್ಟು ನೆ ಮರ್ಕಂ ನೆ ನಂಬರಿನ ಇಸ್ತಿಹಾರ್‌ನಾಮೆಯಮೂಲಕ ತಿದ್ದುಪಾಟಾದ ಮ್ಯುನಿಸಿಪಲ್ ಚುನಾವಣೆಯ ನಿಬಂಧನೆಗಳ 4ನೆ ನಿಬಂಧನೆಯ VI ಮತ್ತು VII (a)ನೆ ಪ್ರ್ಯಾರಾಗಳನ್ನೂ 6ನೆ ನಿಬಂಧನೆಯ 1ನೆ ಪ್ರ್ಯಾರಾವಿನ (e) ಮತ್ತು (f) (1) ಉಪ ಪ್ರ್ಯಾರಾಗಳನ್ನು ಅನುಸರಿಸಿ, ಮ್ಯುನಿಸಿಪಲ್ ಮೆಂಬರುಗಳಿಗಾಗಿ ವೋಟ್ ಯಾ ಸಮ್ಮತಿ ಕೊಡುವವರಾಗಿಯೂ ಮೆಂಬರುಗಳಾಗಿರಲು ಉಮೇದುವಾರರಾಗಿಯೂ, ಇರುವವರ ಪಟ್ಟಿಯಲ್ಲಿ ದಾಖಲಾಗಲು ಅರ್ಹರಾಗುವುದಕ್ಕೆ ಕನಿಷ್ಟಪಕ್ಷ ಕೊಡಬೇಕಾಗುವ ತೆರಿಗೆಯನ್ನು ಈ ಕೆಳಗೆ ಕಾಣಿಸಿರುವಂತೆ ನಿಷ್ಕರ್ಷೆ ಮಾಡಿ, ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬ ಹದ್ದೂರ್ರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ :—

ಬಾಬುಗಳು	4ನೇ ನಿಬಂಧನೆಯ ಉದ್ದೇಶಕ್ಕಾಗಿ ಕೊಡಬೇಕಾದ ಮೊಬಲಗು	6ನೇ ನಿಬಂಧನೆಯ ಉದ್ದೇಶಕ್ಕಾಗಿ ಕೊಡಬೇಕಾದ ಮೊಬಲಗು
ಜಮೀನ್ ಕಂದಾಯ	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ 5ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ $2\frac{1}{2}$ರೂ.	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ 10ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ 5ರೂ.
ಮ್ಯುನಿಸಿಪಲ್ ತೆರಿಗೆ (ಮೊಹತರ್ಫಾ ದೇಖೀಲು)	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ $2\frac{1}{2}$ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ 1ರೂ.	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ 5ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ $2\frac{1}{2}$ರೂ.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಅಯ್ಯರ್,
ಜನರಲ್ ಮತ್ತು ರೆವಿನ್ಯು ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಸ್ಪ್ ಆದ್ದು. [ನಂ. 13.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 1, 1909.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ಇಸ್ತಿಹಾರ್ನಾಮೆ.

ನಂಬರ್ 246, ಎಲ್. ಸಿ. ತಾರೀಖು 3ನೆ ಮಾರ್ಚಿ 1909.

ಮೈಸೂರು ನ್ಯಾಯವಿಧಾಯಕಸಭೆಯ ಕಾರ್ಯನಿರ್ವಾಹದ ಬಗ್ಯೆ ಏರ್ಪಟ್ಟಿರುವ ನಿಬಂಧನೆಗಳ ಪೈಕಿ 32ನೆ ನಿಬಂಧನೆಯನ್ನನುಸರಿಸಿ ಇದರಡಿ ಕಂಡ ಬಿಲ್ಲನ್ನು ಉದ್ದೇಶಗಳ ಮತ್ತು ಕಾರಣಗಳ ಸಮೇತ ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇರುತ್ತದೆ.

ಹುಕುಂ ಖಮೋಜಿಬ್,

ಎಸ್. ಹಿರಿಯಣ್ಣಯ್ಯ,

ಮೈಸೂರು ನ್ಯಾಯವಿಧಾಯಕಸಭೆ ಸೆಕ್ರೆಟರಿ.

ಮೈಸೂರು ಸೀಮೆಯಲ್ಲಿ ಸ್ಮಾಲ್‌ಕಾಜ್ ಕೋರ್ಟುಗಳಿಗೆ ಸಂಬಂಧಿಸುವ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವಬಗ್ಯೆ ಹುಟ್ಟಿದ ಬಿಲ್ಲು.

ಮೈಸೂರು ಸೀಮೆಯಲ್ಲಿ ಸ್ಮಾಲ್‌ಕಾಜ್ ಕೋರ್ಟುಗಳಿಗೆ ಸಂಬಂಧಿಸುವ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಘನವನ್ನು ಹೊಂದಿದ ಶ್ರೀಮನ್ಮಹಾರಾಜಾಸಾಹೇಬರವರು ಇದರಡಿ ಕಂಡಂತೆ ಕಾನೂನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

1 ನೇ ಅಧ್ಯಾಯ.

ಅ ವ ತ ರ ಣಿ ಕೆ.

ಹೆಸರು, ವ್ಯಾಪ್ತಿ ಮತ್ತು ಆರಂಭ [1887ನೆ ಇಸವಿಯ 9ನೆ ಆಕ್ಟಿನ 1ನೇ ಪ್ರಕರಣ.]

1. (1) ಈ ರೆಗ್ಯುಲೇಷನನ್ನು "190 ನೇ ಇಸವಿಯ ಮೈಸೂರು ಸೀಮೆಯ ಸ್ಮಾಲ್‌ಕಾಜು ಕೋರ್ಟುಗಳ ರೆಗ್ಯುಲೇಷರ್ಣ" ಎಂದು ಕರೆಯಬಹುದು.

(2) ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸುತ್ತದೆ.

(3) ಇದು 190 ನೆ ಇಸವಿ ಗುರ್ರೀ ತಾರೀಖಿನಿಂದ ಜಾರಿಗೆ ಬರತಕ್ಕದ್ದು.

1865ನೆ ಇಸವಿಯ 11ನೆ ಆಕ್ಟಿಗೆ ದಾಖಲೆ ಕೊಟ್ಟಿರುವುದಕ್ಕೆ ಅನ್ವಯ. [1877ನೆ ಇಸವಿಯ 9ನೆ ಆಕ್ಟಿನ ಪ್ರಕರಣ 2, ಒಳಪ್ರಕರಣ (3).]

2. ಯಾವುದಾದರೂ ಕಾನೂನಿನಲ್ಲಿ ಅಥವಾ ದಸ್ತಾವೇಜಿನಲ್ಲಿ 1865ನೆ ಇಸವಿಯ 11ನೆ ಆಕ್ಟನ್ನು ಕುರಿತು ಪ್ರಸ್ತಾಪಬಂದರೆ ಅದು ಸಾಧ್ಯವಾದಮಟ್ಟಿಗೆ ಈ ರೆಗ್ಯುಲೇಷನಿಗೆ ಅಥವಾ ಇದರ ಪೈಕಿ ಸಂಬಂಧಪಟ್ಟ ಭಾಗಕ್ಕೆ ಅನ್ವಯಿಸುತ್ತದೆಂದು ಭಾವಿಸತಕ್ಕದ್ದು.

ವಿನಾಯಿತಿಗಳು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 3.]

3. ಈ ರೆಗ್ಯುಲೇಷನಿನಲ್ಲಿ ಕಂಡ ಯಾವುದರಿಂದಲಾಗಲೀ—

(*a*) ಈ ರೆಗ್ಯುಲೇಷನು ಜಾರಿಯಲ್ಲಿ ಬರುವುದಕ್ಕೆ ಮುಂಚೆ ದಾಖಲಾದ ಮೊಕದ್ದಮೆಯಲ್ಲಿ ಡಿಕ್ರಿ ಹುಟ್ಟುವುದಕ್ಕೆ ಮುಂಚಿತವಾಗಿ ಅಥವಾ ಹುಟ್ಟಿದನಂತರ ಅನುಸರಿಸಬೇಕಾದ ನಡವಳಿಕೆಗಳಿಗಾಗಲಿ; ಅಥವಾ

(*b*) ಸಾಲಗಳ ಅಥವಾ ಸಿವಿಲ್ ಸ್ವಭಾವದ ಇತರ ಬಾಧ್ಯತೆಗಳ ವಿಷಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಕಾನೂನಿನ ಪ್ರಕಾರ ಬಬ್ಬ ಮ್ಯಾಜಿಸ್ಟ್ರೇಟರಿಗೆ ಇರುವ ಅಧಿಕಾರಕ್ಕಾಗಲೀ; ಅಥವಾ

(*c*) ಸಿವಿಲ್ ಪ್ರೊಸಿಡ್ಯೂರ್ ಕೋಡ್ ಅಲ್ಲದ ಇತರ ಯಾವುದಾದರೂ ಸ್ಥಳಿಕ ಅಥವಾ ವಿಶೇಷವಾದ ಕಾನೂನಿಗಾಗಲೀ

ಬಾಧಕವುಂಟೆಂದು ಭಾವಿಸಕೂಡದು.

ಅರ್ಥವಿವರಣೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 4]

4. ಈ ರೆಗ್ಯುಲೇಷನಿನಲ್ಲಿ "ಸ್ಮಾಲ್ ಕಾಜು ಕೋರ್ಟು" ಎಂಬ ಮಾತುಗಳಿಗೆ ಪೂರ್ವಾಪರಸಂದರ್ಭದಿಂದ ಅಥವಾ ಪ್ರಸಕ್ತವಿಷಯದಿಂದ ಬೇರೆ ಅರ್ಥ ತೋರಬಂದಾಗ ಹೊರತು ಉಳಿದ ಸಂಧರ್ಭಗಳಲ್ಲೆಲ್ಲಾ ಈ ರೆಗ್ಯುಲೇಷನಿನಂತೆ ಏರ್ಪಟ್ಟ ಸ್ಮಾಲ್ ಕಾಜು ಕೋರ್ಟು ಎಂದು ಅರ್ಥವಾಗತಕ್ಕದ್ದಲ್ಲದೆ, ಈ ರೆಗ್ಯುಲೇಷನಿನ ಪ್ರಕಾರ ಅಂಥಾ ಯಾವ ಕೋರ್ಟಿನಲ್ಲಾದರೂ ನ್ಯಾಯಾಧಿಕಾರವನ್ನು ಚಲಾಯಿಸುವ ಯಾವ ಮನುಷ್ಯನಿಗಾದರೂ ಸದರೀ ಮಾತುಗಳು ಅನ್ವಯಿಸತಕ್ಕದ್ದು.

2ನೆ ಅಧ್ಯಾಯ.

ಸ್ಮಾ ಲ್ ಕಾ ಜು ಕೋ ರ್ಟು ಗ ಳ ಏ ರ್ಪಾ ಡು.

ಸ್ಮಾಲ್‌ಕಾಜು ಕೋರ್ಟುಗಳ ಸ್ಥಾಪನೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 5]

5. (1) ಸರ್ಕಾರದವರು ಬರಹಮೂಲಕವಾದ ಅಪ್ಪಣೆಯದ್ವಾರಾ ಮೈಸೂರು ಸಂಸ್ಥಾನದಲ್ಲಿ ಯಾವ ಸ್ಥಳದಲ್ಲಾಗಲೀ ಸ್ಮಾಲ್ ಕಾಜು ಕೋರ್ಟನ್ನು ಸ್ಥಾಪಿಸಬಹುದು.

(2) ಪ್ರತಿ ಸ್ಮಾಲ್ ಕಾಜು ಕೋರ್ಟಿಗೂ ಯಾವ ಸರಹದ್ದಿನೊಳಗೆ ಅಧಿಕಾರವಿರತಕ್ಕದ್ದೆಂಬುವುದನ್ನು ಸರ್ಕಾರದವರು ಗೊತ್ತುಮಾಡಬಹುದು; ಸದರೀ ಕೋರ್ಟು ಆ ಸರಹದ್ದಿನೊಳಗಾಗಿ ಸರ್ಕಾರದವರು ನೇಮಿಸಬಹುದಾದ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ನಡೆಸಲ್ಪಡಬಹುದು.

ಜಡ್ಜಿಯವರು.
[1887ನೆ ಇಸವಿಯು 9ನೆ ಆಕ್ಟಿನ ಪ್ರಕರಣ 6, ಒಳಪ್ರಕರಣ (1).]

6. ಸ್ಮಾಲ್ ಕಾಜು ಕೋರ್ಟನ್ನು ಸ್ಥಾಪಿಸಿದನಂತರ ಸರ್ಕಾರದವರು ಬರಹಮೂಲಕವಾದ ಅಪ್ಪಣೆಯ ದ್ವಾರಾ ಆ ಕೋರ್ಟಿಗೆ ಒಬ್ಬ ಜಡ್ಜಿಯವರನ್ನು ನೌಕರರಾಗ್ಮಾಡತಕ್ಕದ್ದು.

ಜಡ್ಜಿಗಳನ್ನು ಕೆಲಸದಿಂದ ಸಸ್ಪೆಂಡ್ ಮಾಡುವುದು ಮತ್ತು ತೆಗೆದು ಹಾಕುವುದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 9.]

7. ಸ್ಮಾಲ್ ಕಾಜು ಕೋರ್ಟಿನ ಜಡ್ಜಿಯವರನ್ನು ಸರ್ಕಾರದವರು ಕೆಲಸದಿಂದ ಸಸ್ಪೆಂಡ್ ಮಾಡಬಹುದು ಅಥವಾ ತೆಗೆದು ಹಾಕಬಹುದು.

ಸಿಬ್ಬಂದಿ.
[1887ನೆ ಇಸವಿಯ 9ನೆ ಆಕ್ಟಿನ 13ನೆ ಪ್ರಕರಣಕ್ಕೆ ಬದಲಾಗಿ ಸೇರಿಸಿದ ಹೊಸ ಪ್ರಕರಣ.]

8. ಒಂದು ಸ್ಮಾಲ್ ಕಾಜು ಕೋರ್ಟಿಗೆ ಅವಶ್ಯಕವಾಗಿರುವಷ್ಟು ಸಿಬ್ಬಂದಿಯನ್ನು ಸರ್ಕಾರದವರು ಮಂಜೂರ್ಮಾಡಬೇಕು; ಅಲ್ಲದೆ ಈ ಬಗ್ಗೆ ಸರ್ಕಾರದವರು ಕೊಟ್ಟಿರುವ ಹುಕುಮುಗಳಿಗೆ ಒಳಪಟ್ಟು ಸ್ಮಾಲ್ ಕಾಜು ಕೋರ್ಟಿನ ಜಡ್ಜಿಯವರು ತಮ್ಮ ಕೋರ್ಟಿನ ಸಿಬ್ಬಂದಿಯನ್ನು ನೌಕರರಾಗ್ಮಾಡಿಕೊಳ್ಳಬಹುದು; ಮತ್ತು ಅವರಿಗೆ ಜುಲ್ಮಾನೆ ವಿಧಿಸಬಹುದು, ಅವರನ್ನು ಸಸ್ಪೆಂಡ್ ಅಥವಾ ಬರ್ತರಫ್ ಮಾಡಬಹುದು.

ಸಿಬ್ಬಂದಿ ಯಾ ತಾಬೇದಾರೀ ನೌಕರರ ಕೆಲಸಗಳು.
[1887ನೆ ಇಸವಿಯು 9ನೆ ಆಕ್ಟಿನ ಪ್ರಕರಣ 14]

9. (1) ಸ್ಮಾಲ್‌ಕಾಜು ಕೋರ್ಟಿನ ಸಿಬ್ಬಂದಿ ಯಾ ತಾಬೇದಾರೀ ನೌಕರರು ಈ ರೆಗ್ಯುಲೇಷನಿನಲ್ಲಿ ಅಥವಾ ಆಯಾಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದಾದರೂ ಕಾನೂನಿನಲ್ಲಿಅವರಿಗೆ ವಿಧಾಯಕವಾಗಿರುವ ಅಥವಾ ವಿಧಾಯಕವಾಗಬಹುದೆಂದು ನಮೂದಿರುವ ಕೆಲಸಗಳನ್ನಲ್ಲದೆ ಜಡ್ಜಿಯವರು ನೇಮಿಸಬಹುದಾದಂಥಾ ಬರವಣಿಗೆಯ ಸ್ವಭಾವದ ಕೆಲಸಗಳನ್ನೂ ಸಹ ಮಾಡಬೇಕು.

(2) ಸ್ಮಾಲ್ ಕಾಜು ಕೋರ್ಟಿನ ತಾಬೇದಾರೀ ನೌಕರರಿಗೆ ಚೀಫ್ ಕೋರ್ಟಿನವರು ತಮಗೆ ಯುಕ್ತವೆಂದು ತೋರುವಂಥಾ ಅಧಿಕಾರಗಳನ್ನು ಕೊಡುವ ಮತ್ತು ಕೆಲಸಗಳನ್ನು ನೇಮಿಸುವ ಬಗ್ಗೆ, ಹಾಗೆ ಕೊಟ್ಟ ಅಧಿಕಾರಗಳನ್ನು ಚಲಾಯಿಸಬೇಕಾದ ಮತ್ತು ನೇಮಿಸಿದ ಕೆಲಸಗಳನ್ನು ಮಾಡಬೇಕಾದ ವಿಧಾನವನ್ನು ಕ್ರಮಪಡಿಸುವ ಬಗ್ಗೆ ಈ ರೆಗ್ಯುಲೇಷನಿಗೂ ಆಯಾಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿಗೂ ವಿರೋಧವಿಲ್ಲದಂತೆ ಚೀಫ್ ಕೋರ್ಟಿನವರು ನಿಬಂಧನೆಗಳನ್ನು ಏರ್ಪಡಿಸಬಹುದು.

3ನೆ ಅಧ್ಯಾಯ.

ಸ್ಮಾಲ್ ಕಾಜು ಕೋರ್ಟುಗಳ ಯಃಖ್ತ್ಯಾರಿ.

ಸ್ಮಾಲ್‌ಕಾಜು ಕೋರ್ಟುಗಳಲ್ಲಿ ಯಾವ ತರಹೆ ದಾವೆಗಳನ್ನು ದಾಖಲ್‌ಮಾಡಿಕೊಳ್ಳಬಹುದು.
[ಹೊಸಪ್ರಕರಣ]

10. ಈ ರೆಗ್ಯುಲೇಷನಿನ ಕೊನೆಯಲ್ಲಿ ಕೊಟ್ಟಿರುವ ಷೆಡ್ಯೂಲಿನಲ್ಲಿ ನಮೂದಿರುವ ತರಹಾ ದಾವೆಗಳ ಪೈಕಿ ಯಾವ ದಾವೆಗಳ ಮೊಬಲಗು 500 ರೂಪಾಯಿಗೆ ಮೀರದಂತೆ ಸರ್ಕಾರದವರು ಆಯಾ ತರಹಾ ದಾವೆಗಳಿಗೆ ವಿಧಿಸಬಹುದಾದಂಥಾ ಮೊಬಲಗಿಗೆ ಜಾಸ್ತಿಯಾಗಿರುವುದಿಲ್ಲವೋ ಅಂಥಾ ದಾವೆಗಳನ್ನು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲ್‌ಮಾಡಿಕೊಳ್ಳಬಹುದು. ಇತರ ಯಾವ ದಾವೆಗಳನ್ನೂ ಆ ರೀತಿ ದಾಖಲ್‌ಮಾಡಿಕೊಳ್ಳಕೂಡದು. ಪರಂತು ಸರ್ಕಾರದವರು ಗೆಜೆಟ್ಟಿನಲ್ಲಿ ಒಂದು ಇಸ್ತಿಹಾರ್ನಾಮೆಯನ್ನು ಪ್ರಕಟಿಸುವುದರ ಮೂಲಕ ಯಾವಾಗಲಾದರೂ ಸದರೀ ಷೆಡ್ಯೂಲಿಗೆ ಜಾಸ್ತಿತರಹೆ ದಾವೆಗಳನ್ನು ಸೇರಿಸಬಹುದು ಅಥವಾ ಅದರಲ್ಲಿ ಈಗ ನಮೂದಿರುವ ದಾವೆಗಳನ್ನು ವ್ಯತ್ಯಾಸಪಡಿಸಬಹುದು.

ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದಾಖಲಾಗಬೇಕಾದ ದಾವೆಗಳನ್ನು ಇತರ ಕೋರ್ಟುಗಳಲ್ಲಿ ದಾಖಲ್‌ಮಾಡಿಕೊಳ್ಳಕೂಡದು.
[188. ನೆ ಇಸವಿಯು 9ನೆ ಆಕ್ಟಿನ ಪ್ರಕರಣ 16]

11. ಈ ರೆಗ್ಯುಲೇಷನಿನಲ್ಲಿ ಅಥವಾ ಆಯಾಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಇತರ ಕಾನೂನಿನಲ್ಲಿ ಕಂಠೋಕ್ತವಾಗಿ ವಿಧಿಸಿರುವ ಸಂದರ್ಭಗಳಲ್ಲಿ ಹೊರತು ಒಂದು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಬೇಕಾದ ದಾವೆಯನ್ನು ಸದರೀ ಕೋರ್ಟಿನ ಅಧಿಕಾರ ಸರಹದ್ದಿನೊಳಗೆ ಎಃಖ್ತ್ಯಾರಿಯನ್ನುಳ್ಳ ಇತರ ಯಾವ ಕೋರ್ಟಿನವರೂ ಹಿಡಿಯಕೂಡದು.

4ನೆ ಅಧ್ಯಾಯ.

ನಡವಳಿಕೆಯ ಕ್ರಮ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಕೆಲವು ಭಾಗಗಳು ಸ್ಮಾಲ್‌ಕಾಜು ಕೋರ್ಟುಗಳಿಗೂ ಅನ್ವಯಿಸುತ್ತವೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 17]

12 ಸಿವಿಲ್ ಪ್ರೊಸೀಡ್ಯೂರ್ ಕೋಡಿನ ಎರಡನೆ ಷೆಡ್ಯೂಲಿನಲ್ಲಿ ನಮೂದು ಕಂಡ ಅಧ್ಯಾಯಗಳಲ್ಲಿಯೂ ಪ್ರಕರಣಗಳಲ್ಲಿಯೂ ವಿಧಾಯಕವಾಗಿರುವ ಕ್ರಮವನ್ನೇ ಸದರೀ ಅಧ್ಯಾಯಗಳೂ ಪ್ರಕರಣಗಳೂ ಸ್ಮಾಲ್‌ಕಾಜು ಕೋರ್ಟುಗಳಿಗೆ ಅನ್ವಯಿಸುವಷ್ಟರ ಮಟ್ಟಿಗೆ ಸದರೀ ಕೋರ್ಟುಗಳಲ್ಲಿ ದಾಖಲಾಗತಕ್ಕ ಎಲ್ಲಾ ದಾವೆಗಳಲ್ಲಿಯೂ ಅಂಥಾ ದಾವೆಗಳ ಸಂಬಂಧದಲ್ಲಿ ನಡೆಯುವ ಎಲ್ಲಾ ವ್ಯವಹರಣೆಗಳಲ್ಲಿಯೂ ಅನುಸರಿಸಬೇಕು.

ತಾಬೇದಾರೀ ಆಫಿಸರುಗಳ ಪೈಕಿ ಮುಖ್ಯಸ್ಥರು ದಾವೆಗಳನ್ನು ಅಡ್ಜರ್ನ್ ಮಾಡಬಹುದು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 22]

13. ಯಾವುದಾದರೂ ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರ ಗೈರ್‌ಹಾಜರಿಯಲ್ಲಿ ಸದರಿ ಕೋರ್ಟಿನ ತಾಬೇದಾರೀ ಆಫಿಸರುಗಳ ಪೈಕಿ ಮುಖ್ಯಸ್ಥರು ಯಾವುದೊಂದು ದಾವೆ ಯಾ ವ್ಯವಹರಣೆಯ ಹಿಯರಿಂಗನ್ನು ಅಡ್ಜರ್ನ್ ಮಾಡುವ ಬಗ್ಯೆ ಕೋರ್ಟಿಗಿರುವ ಅಧಿಕಾರವನ್ನು ಆಗಿಂದಾಗ್ಯೆ ಚಲಾಯಿಸಬಹುದಲ್ಲದೆ ಅವುಗಳ ಹಿಯರಿಂಗ್ ಬಗ್ಯೆ ಮುಂದೆ ಒಂದು ದಿನವನ್ನು ಗೊತ್ತುಮಾಡಬಹುದು.

ಯಾವ ದಾವೆಯಲ್ಲಾದರೂ ಸ್ಥಿರಸ್ವತ್ತಿನ ಹಕ್ಕುದಾರಿಯ ವಿವಾದಗಳು ತೋರಬಂದರೆ ದಾವಾಅರ್ಜಿಗಳನ್ನು ವಾಪಸಮಾಡೋಣ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 23]

14. (1) ಇದಕ್ಕೆ ವಿರೋಧವಾಗಿ ಈ ರೆಗ್ಯುಲೇಷನಿನ ಹಿಂದಿನ ಪ್ರಕರಣಗಳಲ್ಲಿ ಏನು ಅಡಗಿದ್ದರೂ ಸರಿಯೇ, ವಾದಿಯ ಹಕ್ಕನ್ನು ಸ್ಮಾಲ್‌ಕಾಜು ಕೋರ್ಟಿನವರು ಅಂಗೀಕರಿಸುವುದಕ್ಕಾಗಲೀ ಅವನು ಕೇಳುವ ಪರಿಹಾರವನ್ನು ಕೊಡಿಸುವುದಕ್ಕಾಗಲೀ ಮುಂಚಿತವಾಗಿ ಯಾರಿಗಾದರೂ ಸ್ಥಿರಸ್ವತ್ತಿನ ಬಾಧ್ಯತೆಯುಂಟು ಅಥವಾ ಇಲ್ಲ ಎಂದು ಜುಜುವಾತು ಮಾಡುವುದು ಅವಶ್ಯಕವಾಗಿರುವ ಪಕ್ಷದಲ್ಲಿ ಆ ದಾವೆಯು ವಿಚಾರಣೆಯು ಎಷ್ಟರಪರ್ಯಂತ ಸಾಗಿದ್ದರೂ ಸರಿಯೇ ಸದರೀ ಬಾಧ್ಯತೆಯನ್ನು ವ್ಯವಸ್ಥೆಮಾಡಲು ಅಧಿಕಾರವುಳ್ಳ ಕೋರ್ಟಿನಲ್ಲಿ ಹಾಜರ್‌ಮಾಡುವ ಬಗ್ಯೆ ದಾವಾ ಅರ್ಜಿಯನ್ನು ಸ್ಮಾಲ್‌ಕಾಜು ಕೋರ್ಟಿನವರು ವಾಪಸ್ ಮಾಡಬಹುದು.

(2) (1)ನೆ ಒಳಪ್ರಕರಣದ ಮೇರೆಗೆ ಕೋರ್ಟಿನವರು ದಾವಾ ಅರ್ಜಿಯನ್ನು ವಾಪಸ್‌ಮಾಡುವ ಕಾಲದಲ್ಲಿ ಸಿವಿಲ್ ಪ್ರೊಸೀಡ್ಯೂರ್ ಕೋಡಿನ 57ನೆ ಪ್ರಕರಣದ 2ನೆ ಪ್ಯಾರಾದಲ್ಲಿ ಕಂಡ ನಿಯಮಗಳ ಮೇರೆಗೆ ನಡೆಸತಕ್ಕದ್ದಲ್ಲದೆ ಕೋರ್ಟ್ ಖರ್ಚುಗಳ ವಿಷಯದಲ್ಲಿ ತಮಗೆ ಯುಕ್ತ ಕಂಡಂತೆ ಹುಕುಂ ಮಾಡಬಹುದು; ಮತ್ತು 1877ನೆ ಇಸವಿಯ ಇಂಡಿಯನ್ ಲಿಮಿಟೇಷನ್ ಆಕ್ಟಿನ ಉದ್ದೇಶಗಳಿಗಾಗಿ ಸದರಿ ಕೋರ್ಟಿನವರಿಗೆ ಅಧಿಕಾರವಿಲ್ಲದೆ ಇದ್ದ ಕಾರಣದಿಂದ ಅಥವಾ ಆ ತರಹೆಯ ಬೇರೆ ಕಾರಣದಿಂದ ಸದರೀ ದಾವೆಯನ್ನು ದಾಖಲ್‌ಮಾಡಿಕೊಳ್ಳಲು ಆಗದೆ ಹೋಯಿತೆಂದು ಭಾವಿಸತಕ್ಕದ್ದು.

ಸ್ಮಾಲ್‌ಕಾಜು ಕೋರ್ಟುಗಳ ಕೆಲವು ಹುಕುಮುಗಳ ಮೇಲೆ ಅಪೀಲು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 24]

15. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 588ನೆ ಪ್ರಕರಣದ (29)ನೆ ಕಲಮಿನಲ್ಲಿ ನಮೂದಿರುವ ಹುಕುಮನ್ನು ಸ್ಮಾಲ್‌ಕಾಜು ಕೋರ್ಟಿನವರು ಕೊಟ್ಟರೆ ಅದರ ಮೇಲೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳಬಹುದು.

ಸ್ಮಾಲ್‌ಕಾಜು ಕೋರ್ಟುಗಳ ಡಿಕ್ರಿಗಳ ಮತ್ತು ಹುಕುಮುಗಳ ಪುನರ್ವಿಮರ್ಶೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 25]

16. ಸ್ಮಾಲ್‌ಕಾಜು ಕೋರ್ಟಿನಲ್ಲಿ ಫೈಸಲಾದ ಯಾವ ದಾವೆಯಲ್ಲಾಗಲಿ ಹುಟ್ಟಿದ ಡಿಕ್ರಿ ಅಥವಾ ಹುಕುಮು ಕಾನೂನಿಗನುಸಾರವಾಗಿದೆಯೆಂದು ದೃಢಪಡಿಸಿಕೊಳ್ಳುವ ಬಗ್ಯೆ ಚೀಫ್ ಕೋರ್ಟಿನವರು ಸದರೀ ದಾವೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿಕೊಂಡು ಅದರಮೇಲೆ ತಮಗೆ ಯುಕ್ತ ತೋರುವ ಹುಕುಮನ್ನು ಕೊಡಬಹುದು.

ಸ್ಮಾಲ್‌ಕಾಜು ಕೋರ್ಟಿನ ಡಿಕ್ರಿಗಳೂ ಹುಕುಮುಗಳೂ ಆಖೈರಿನವಾಗಿರತಕ್ಕದ್ದು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 27]

17. ಈ ರೆಗ್ಯುಲೇಷನಿನಲ್ಲಿ ಅಪೀಲ್ ಇರತಕ್ಕದ್ದೆಂದು ವಿಧಿಸಿರುವ ಸಂದರ್ಭಗಳಲ್ಲಿ ಹೊರತು ಮೇಲ್ಕಂಡ ನಿಯಮಗಳಮೇರೆಗೆ ಸ್ಮಾಲ್‌ಕಾಜು ಕೋರ್ಟಿನವರು ಕೊಡುವ ಡಿಕ್ರಿ ಅಥವಾ ಹುಕುಮು ಆಖೈರು ಡಿಕ್ರಿಯೂ ಹುಕುಂ ಆಗಿರತಕ್ಕದ್ದು.

5ನೆ ಅಧ್ಯಾಯ.

ಇತರ ನಿಯಮಗಳು.

ಸ್ಮಾಲ್‌ಕಾಜು ಕೋರ್ಟುಗಳು ಯಾವ ಕೋರ್ಟುಗಳ ತಾಬೆಯಲ್ಲಿ ರತಕ್ಕದ್ದು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 28]

18. ಸ್ಮಾಲ್‌ಕಾಜು ಕೋರ್ಟುಗಳು ಕಾರ್ಯನಿರ್ವಾಹದ ವಿಷಯದಲ್ಲಿ ಡಿಸ್ಟ್ರಿಕ್ಟ ಕೋರ್ಟಿನ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದಲ್ಲದೆ ಚೀಫ್‌ಕೋರ್ಟಿನ ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದು ; ಮತ್ತು

(a) ಚೀಫ್ ಕೋರ್ಟಿನವರು ಆಗಿಂದಾಗ್ಯೆ ನೇಮಿಸಬಹುದಾದ ರಿಜಿಸ್ಟರುಗಳನ್ನೂ, ಪುಸ್ತಕಗಳನ್ನೂ, ಲೆಕ್ಕಗಳನ್ನೂ ಇಡತಕ್ಕದ್ದು; ಮತ್ತು

(b) ಡಿಸ್ಟ್ರಿಕ್ಟ ಕೋರ್ಟಿನವರು, ಚೀಫ್ ಕೋರ್ಟಿನವರು, ಅಥವಾ ಸರ್ಕಾರದವರು ಯಾವುದಾದರೂ ರಿಕಾರ್ಡುಗಳನ್ನು, ಲೆಕ್ಕಗಳನ್ನು, ಅಥವಾ ತಃಖ್ತೆಗಳನ್ನು ಅಪೇಕ್ಷಿಸಿದಲ್ಲಿ ಸದರಿಯವರು ಅಪ್ಪಣೆ ಮಾಡುವ ನಮೂನೆ ಮತ್ತು ವಿಧಾನಗಳಲ್ಲಿ ಅವುಗಳನ್ನು ರವಾನಿಸತಕ್ಕದ್ದು.

ಮೊಹರು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 29]

19. ಸ್ಮಾಲ್‌ಕಾಜು ಕೋರ್ಟಿನವರು ಸರ್ಕಾರದವರಿಂದ ವಿಧಾಯಕವಾಗುವ ನಮೂನೆಯಂತಿರುವ ಮತ್ತು ಪರಿಮಾಣವುಳ್ಳ ಮೊಹರನ್ನು ಉಪಯೋಗಿಸತಕ್ಕದ್ದು.

ಸ್ಮಾಲ್‌ಕಾಜು ಕೋರ್ಟುಗಳನ್ನು ವಜಾಮಾಡೋಣ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 30]

20. ಸರ್ಕಾರದವರು ಬರಹಮೂಲಕವಾದ ಅಪ್ಪಣೆಯದ್ವಾರಾ ಯಾವ ಸ್ಮಾಲ್‌ಕಾಜುಕೋರ್ಟನ್ನಾಗಲಿ ವಜಾ ಮಾಡಬಹುದು.

ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರನ್ನು ಸರ್ಕಾರದವರು ಬೇರೆ ಕೆಲಸಗಳಿಗೆ ನೇಮಿಸಬಹುದು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 31]

21. (1) ಸ್ಮಾಲ್‌ಕಾಜು ಕೋರ್ಟಿನಲ್ಲಿ ಜಡ್ಜಿಯಾಗಿರುವವರು ತಮ್ಮ ಕೆಲಸದ ಜತೆಗೆ ಬೇರೊಂದು ಸಿವಿಲ್ ಕೋರ್ಟಿನ ಜಡ್ಜಿಯಾಗಿರಬೇಕೆಂದು ಅಥವಾ ಯಾವುದಾದರೊಂದು ತರಗತಿಯ ಮ್ಯಾಜಿಸ್ಟ್ರೇಟರಾಗಿರಬೇಕೆಂದು ಅಥವಾ ಇತರ ಸರ್ಕಾರಿ ನೌಕರರಾಗಿರಬೇಕೆಂದು ಸರ್ಕಾರದವರು ಮೊಕರರ್‌ಮಾಡುವ ವಿಷಯದಲ್ಲಿ ಈ ರೆಗ್ಯುಲೇಷನಿನಲ್ಲಿ ಇರುವ ಯಾವ ವಿಧಿಯಿಂದಲಾಗಲಿ ಬಾಧಕವುಂಟೆಂದು ಭಾವಿಸಲ್ಪಡಕೂಡದು.

(2) ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರನ್ನು ಮೇಲ್ಕಂಡ ಮೇರೆಗೆ ನೇಮಿಸಿದಾಗ ಈ ವಿಷಯದಲ್ಲಿ ಸರ್ಕಾರದವರು ಏರ್ಪಡಿಸಬಹುದಾದ ನಿಬಂಧನೆಗಳಿಗೆ ಒಳಪಟ್ಟು ಸದರಿ ಕೋರ್ಟಿನ ತಾಬೇದಾರೀ ನೌಕರರೇ ಮೇಲ್ಕಂಡ ಇತರ ಕೆಲಸವನ್ನು ಮಾಡುವುದರಲ್ಲಿಯೂ ಕೂಡ ಜಡ್ಜಿಯವರಿಗೆ ಸಹಾಯ ಮಾಡತಕ್ಕದ್ದು.

ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಕೋರ್ಟುಗಳಿಗೂ ಈ ರೆಗ್ಯುಲೇಷನು ಅನ್ವಯಿಸೋಣ. [1887ನೇ ಇಸವಿ 9ನೆ ಆಕ್ಟಿನ ಪ್ರಕರಣ 32.]

22. (1) 3ನೆ ಮತ್ತು 4ನೆ ಅಧ್ಯಾಯಗಳ ಪೈಕಿ ಇದರಡಿ ಕಂಡ ಭಾಗಗಳಿಗೆ ಸಂಬಂಧಿಸುವ ನಿಯಮಗಳೆಲ್ಲವೂ ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಿಂದ ಅಥವಾ ಅದರ ಮೇರೆಗೆ ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಕೋರ್ಟುಗಳಿಗೆಲ್ಲಾ ಸದರಿ ಸ್ಮಾಲ್‌ಕಾಜು ಅಧಿಕಾರದ ಚಲಾವಣೆಗೆ ಸಂಬಂಧಿಸುವಷ್ಟರಮಟ್ಟಿಗೆ ಅನ್ವಯಿಸತಕ್ಕದ್ದು :—

(*a*) ಸ್ಮಾಲ್‌ಕಾಜು ಕೋರ್ಟಿನವರು ಫಲಾನೆ ತರಹೆ ದಾವೆಗಳನ್ನು ದಾಖಲ್ ಮಾಡಿಕೊಳ್ಳಬಹುದೆಂದು ವಿಧಿಸುವ ಭಾಗ ;

(*b*) ಸದರೀ ದಾವೆಗಳನ್ನು ಇತರ ಕೋರ್ಟನವರು ದಾಖಲ್ ಮಾಡಿಕೊಳ್ಳಕೂಡದೆಂದು ವಿಧಿಸುವ ಭಾಗ ;

(*c*) ಸ್ಮಾಲ್‌ಕಾಜು ಕೋರ್ಟುಗಳಲ್ಲಿ ಅನುಸರಿಸಬೇಕಾದ ಪದ್ಧತಿ ಮತ್ತು ನಡವಳಿಕೆಗಳನ್ನು ಕುರಿತ ಭಾಗ ;

(*d*) ಆ ಕೋರ್ಟುಗಳಲ್ಲಿ ಹುಟ್ಟಿದ ಕೆಲವು ಹುಕುಮುಗಳಮೇಲೆ ಅಪೀಲ್ ಮಾಡುವುದನ್ನೂ ಸದರೀ ಕೋರ್ಟಿನವರು ದಾವೆಗಳನ್ನು ಪುನರ್ವಿಮರ್ಶೆ ಮಾಡುವುದನ್ನೂ ಕುರಿತ ಭಾಗ; ಮತ್ತು

(*e*) ಈ ರೆಗ್ಯುಲೇಷನಿನಲ್ಲಿ ವಿಧಾಯಕವಾಗಿರುವ ಅಪೀಲ್ ಮತ್ತು ಪುನರ್ವಿಮರ್ಶೆಗೆ ಒಳಪಟ್ಟು ಸದರೀ ಕೋರ್ಟುಗಳಲ್ಲಿ ಹುಟ್ಟಿದ ಡಿಕ್ರಿಗಳೂ ಹುಕುಮುಗಳೂ ಆಖೈರಿನವಾಗಿರತಕ್ಕದ್ದೆಂದು ವಿಧಿಸುವ ಭಾಗ.

(2) ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟ ಕೋರ್ಟುಗಳನ್ನು ಕುರಿತು (1) ನೆ ಒಳಪ್ರಕರಣವಲ್ಲಿ ಕಂಡ ಯಾವ ನಿಯಮವೂ ಆ ಕೋರ್ಟುಗಳಿಗೆ ಸದರಿ ಅಧಿಕಾರ ಕೊಡಲ್ಪಟ್ಟ ತಾರೀಖಿಗೆ ಮುಂಚೆ ಅವುಗಳಲ್ಲಿ ದಾಖಲಾಗಿದ್ದ ದಾವೆಗಳಿಗೂ ಷುರು ಆಗಿದ್ದ ನಡವಳಿಕೆಗಳಿಗೂ ಅನ್ವಯಿಸಕೂಡದು.

ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಕೋರ್ಟಿಗೆ ಈ ರೆಗ್ಯುಲೇಷನೂ ಸಿವಿಲ್ ಪ್ರೊಸಿಡ್ಯೂರ್ ಕೋಡೂ ಹೇಗೆ ಅನ್ವಯಿಸಬೇಕು?
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 33.]

23. ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಒಂದು ಕೋರ್ಟು ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಸದರೀ ಸ್ಮಾಲ್‌ಕಾಜು ಅಧಿಕಾರವನ್ನು ಚಲಾಯಿಸುವಾಗಲೇ ಬೇರೇ ಕೋರ್ಟಾಗಿದೆ ಎಂತಲೂ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಉದ್ದೇಶಗಳಿಗಾಗಿ ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರ ಚಲಾಯಿಸುವಾಗಲೇ ಬೇರೆ ಕೋರ್ಟಾಗಿದೆ ಎಂತಲೂ ಭಾವಿಸಲ್ಪಡತಕ್ಕದ್ದು.

ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಕೋರ್ಟಿಗೆ ಸಿವಿಲ್ ಪ್ರೊಸಿಡ್ಯೂರ್ ಕೋಡನ್ನು ಅನ್ವಯಿಸುವ ವಿಷಯದಲ್ಲಿ ತಿದ್ದುಪಾಟು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 34.]

24. ಹಿಂದಿನ 22—23ನೆ ಪ್ರಕರಣಗಳಲ್ಲಿ ವಿರೋಧಾಂಶವು ಏನಿದ್ದರೂ ಸರಿಯೇ—

(*a*) ಸ್ಮಾಲ್‌ಕಾಜು ಅಧಿಕಾರವುಳ್ಳ ಒಂದು ಕೋರ್ಟಿನವರು ಸದರೀ ಅಧಿಕಾರವನ್ನು ಚಲಾಯಿಸುವಲ್ಲಿ ಡಿಕ್ರಿಯನ್ನು ಕೊಟ್ಟು ಸದರೀ ಡಿಕ್ರಿಯನ್ನು ಜಾರಿಯ ಬಗ್ಯೆ, ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರವುಳ್ಳ ಕೋರ್ಟಾಗಿರುವ ತರೀಖ, ತಮ್ಮಲ್ಲಿಗೇನೇ ಕಳುಹಿಸಿಕೊಡುವ ಸಂದರ್ಭದಲ್ಲಿ; ಅಥವಾ

(*b*) ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರವುಳ್ಳ ಒಂದು ಕೋರ್ಟಿನವರು ಡಿಕ್ರಿಯನ್ನು ಕೊಟ್ಟು ಸದರಿ ಡಿಕ್ರಿಯನ್ನು ಜಾರಿಯ ಬಗ್ಯೆ ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟಿರುವ ಕೋರ್ಟಾದ ತಮ್ಮಲ್ಲಿಗೇನೇ ಕಳುಹಿಸಿಕೊಡುವ ಸಂದರ್ಭದಲ್ಲಿ:—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 224ನೆ ಪ್ರಕರಣದಲ್ಲಿ ನಮೂದಿರುವ ಕಾಗದಪತ್ರಗಳನ್ನು ಡಿಕ್ರಿಯ ಜತೆಯಲ್ಲಿ ಕಳುಹಿಸಬೇಕೆಂದು ಆ ಕೋರ್ಟಿನವರು ಬರಹಮೂಲಕವಾಗಿ ಹುಕುಂ ಮಾಡಿದಾಗ ಹೊರತು ಅವುಗಳನ್ನು ಕಳುಹಿಸಬೇಕಾದುದಿಲ್ಲ.

ರದ್ದಾದ ಕೋರ್ಟುಗಳಲ್ಲಿ ಜರುಗುತ್ತಿದ್ದ ನಡವಳಿಕೆಗಳನ್ನು ಕೊನೆಯವರೆಗೂ ನಡೆಸುವುದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 35.]

25. (1) ಒಂದು ಸ್ಮಾಲ್‌ಕಾಜು ಕೋರ್ಟಿಗಾಗಲೀ ಅಥವಾ ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಇತರ ಕೋರ್ಟಿಗಾಗಲೀ ಯಾವ ಕಾರಣದಿಂದಾದರೂ ಯಾವುದಾದರೂ ದಾವೆಯ ವಿಚಾರಣೆಯ ವಿಷಯದಲ್ಲಿ ಅಧಿಕಾರವು ತಪ್ಪಿಹೋದರೆ ಆ ದಾವೆಯ ವಿಚಾರದಲ್ಲಿ ಡಿಕ್ರಿ ಹುಟ್ಟುವುದಕ್ಕೆ ಮುಂಚೆ ಅಥವಾ ಹುಟ್ಟಿದನಂತರ ಆ ಕೋರ್ಟಿನಲ್ಲಿ ನಡೆಯಬೇಕಾಗಿದ್ದ ನಡವಳಿಕೆಗಳೆಲ್ಲಾ ಅವುಗಳಿಗೆ ಸಂಬಂಧಪಟ್ಟ ದಾವೆಯನ್ನು ಹಿಡಿಯಲು ಅಧಿಕಾರವುಳ್ಳ ಇತರ ಕೋರ್ಟಿನಲ್ಲಿ ಕೊನೆಯವರೆಗೂ ನಡೆಸಲ್ಪಡಬಹುದು.

(2) ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಪೈಕಿ ಸ್ಮಾಲ್‌ಕಾಜು ಕೋರ್ಟುಗಳಿಗೆ ಅನ್ವಯಿಸುವಂಥಾ ಭಾಗದಲ್ಲಿ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಇತರ ಕಾನೂನಿನಲ್ಲಿ ಯಾವ ದಾವೆಗಳ ಬಗ್ಯೆ

ವಿಶೇಷ ನಿಯಮಗಳನ್ನು ಏರ್ಪಡಿಸಿದೆಯೋ ಆ ದಾವೆಗಳಿಗೆ ಈ ಪ್ರಕರಣದಲ್ಲಿ ಇರುವುದು ಯಾವುದೂ ಅನ್ವಯಿಸುವುದಿಲ್ಲ.

ಕೆಲವು ಹುಕುಮುಗಳನ್ನು ಪ್ರಕಟಿಸುವುದು.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 37.]

26. ಯಾವ ಯಾವ ಹುಕುಮುಗಳನ್ನು ಸರ್ಕಾರದವರು ಬರಹಮೂಲಕವಾಗಿ ಕೊಡಬೇಕೆಂದು ಈ ರೆಗ್ಯುಲೇಷನಿನಲ್ಲಿ ವಿಧಿಸೋಣಾಗಿದೆಯೋ ಆ ಹುಕುಮುಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಷೆಡ್ಯೂಲ್.

ಸ್ಮಾಲ್‌ಕಾಜ್ ಕೋರ್ಟುಗಳಲ್ಲಿ ದಾಖಲಾಗಬಹುದಾದ ದಾವೆಗಳು.

(10ನೆ ಪ್ರಕರಣವನ್ನು ನೋಡಿ.)

(1) ಸಾಲದ ಮೊಬಲಗನ್ನು ವಸೂಲ್‌ಮಾಡುವ ಬಗ್ಗೆ ದಾವೆ;

(2) ಒಬ್ಬ ಜಾಮೀನ್‌ದಾರನಿಂದ ಅಥವಾ ಅವನಮೇಲೆ ಹಣಕ್ಕಾಗಿ ದಾವೆ;

(3) ಬಿಕರಿಮಾಡಿದ ಸಾಮಾನಿನ ಬೆಲೆಗಾಗಿ ದಾವೆ;

(4) ಕೆಲಸಮಾಡುವ ಬಗ್ಗೆ ಅಥವಾ ಕೂಲಿ ಜನರನ್ನು ಸರಬರಾಜ್ ಮಾಡುವಬಗ್ಗೆ ಹುಟ್ಟಿದ ಕರಾರಿನ ಮೇಲಿನ ದಾವೆ;

(5) ಬಾಡಿಗೆಗೆ ಕೊಡುವ ಅಥವಾ ತೆಗೆದುಕೊಳ್ಳುವ ಮತ್ತು ನೌಕರಿಗೆ ಇಟ್ಟುಕೊಳ್ಳುವ ಅಥವಾ ನೌಕರಿ ಮಾಡುವ ಕರಾರಿನ ಮೇಲಿನ ದಾವೆ;

(6) ಬಾಡಿಗೆ ಪಾವತಿಮಾಡುವುದಾಗಿ ಕಂಠೋಕ್ತವಾದ ಕರಾರು ಹುಟ್ಟಿದ್ದರೆ ಸದರೀ ಬಾಡಿಗೆಯ ಬಗ್ಗೆ ದಾವೆ;

(7) ಊಟದ ಮತ್ತು ವಾಸದ ಬಗ್ಗೆ ಖರ್ಚು ವಸೂಲ್ ಮಾಡುವ ವಿಷಯದಲ್ಲಿ ದಾವೆ;

(8) ವಾದಿಯ ಪರವಾಗಿ ಪ್ರತಿವಾದಿಯು ವಸೂಲ್ ಮಾಡಿಕೊಂಡ ಹಣಕ್ಕೋಸ್ಕರ ದಾವೆ;

(9) ಪ್ರತಿವಾದಿಗೆ ತಪ್ಪು ತಿಳುವಳಿಕೆಯಿಂದ ಕೊಟ್ಟ ಅಥವಾ ಕೊಡಬೇಕಾದುದಕ್ಕಿಂತ ಹೆಚ್ಚಾಗಿ ಕೊಟ್ಟ ಹಣಕ್ಕೋಸ್ಕರ ದಾವೆ;

(10) ಪ್ರತಿವಾದಿಯ ಕೋರಿಕೆಯಮೇರೆಗೆ ಕೊಟ್ಟ ಹಣಕ್ಕಾಗಿ ಅಥವಾ ಸಾಮಾನುಗಳಿಗಾಗಿ ದಾವೆ;

(11) ಸಾಮಾನು ಬಿಕರಿಗೆ ಸಂಬಂಧಪಟ್ಟ ಕರಾರನ್ನು ಉಲ್ಲಂಘಿಸಿದುದಕ್ಕಾಗಿ ಪರಿಹಾರ ದ್ರವ್ಯವನ್ನು ಪಡೆಯುವ ಬಗ್ಗೆ ದಾವೆ;

(12) ಠೇವಣಿ ಇಟ್ಟ ಮೊಬಲಗಿನ ಬಗ್ಗೆ ದಾವೆ; (ಕೋರ್ಟಿನವರಿಗೆ ಯಾವ ಮೊಬಲಗಿನೊಳಗಾಗಿ ದಾವೆಗಳನ್ನು ದಾಖಲ್ ಮಾಡಿಕೊಳ್ಳಲು ಅಧಿಕಾರವಿದೆಯೋ ಆ ಮೊಬಲಗಿಗಿಂತ ಸದರೀ ಠೇವಣಾತಿಯ ಒಟ್ಟು ಮೊಬಲಗು ಜಾಸ್ತಿಯಾಗಿರಕೂಡದು.)

(13) ಪ್ರತಿವಾದಿಯ ಬಳಿ ಒತ್ತೆ ಅಥವಾ ಠೇವಣಾತಿ ಇಟ್ಟಿರುವ ಯಾವುದಾದರೂ ಚರಸ್ವತ್ತನ್ನು ಅಥವಾ ಅದರ ಖರೀದಿಯನ್ನು ವಸೂಲ್ ಮಾಡಿಕೊಳ್ಳುವುದಕ್ಕೋಸ್ಕರ ದಾವೆ.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

1865ನೆ ಇಸವಿಯ 11ನೆ ಆಕ್ಟ್ ಆದ ಸ್ಮಾಲ್‌ಕಾಜ್ ಕೋರ್ಟುಗಳ ಆಕ್ಟನ್ನು ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಕ್ರಮವಾಗಿ ಜಾರಿಗೆ ತಂದಿಲ್ಲ. ಆದರೂ 1880ನೆ ಜನವರಿ 28ನೆ ಮರ್ಕುಂ ಐ. ಜೆ. 31ನೆ ನಂಬರ್ ಇಂಡಿಯಾ ಸರ್ಕಾರದ ಫಾರೀನ್ ಇಲಾಖಾ ಇಸ್ತಿಹಾರ್ನಾಮೆಯು ಆಧಾರದಿಂದ ಮಾತ್ರವೇ ಸದರೀ ಆಕ್ಟು ಈ ಸಂಸ್ಥಾನದಲ್ಲಿ ಜಾರಿಯಲ್ಲಿದೆ. ಈ ಇಸ್ತಿಹಾರ್ನಾಮೆಯು ಮೂಲಕ ಇದಕ್ಕೆ ಹಿಂದೆ ಇದೇ ವಿಚಾರವಾಗಿ ಹುಟ್ಟಿದ್ದ 1879ನೆ

ಇಸವಿಯ ಆಗಸ್ಟ್ 27ನೆ ಮರ್ಕುಂ ಐ. ಜಿ. 235ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟವಾಗಿದ್ದ ನಿಬಂಧನೆಗಳ ಪೈಕಿ 8ನೆ ನಿಬಂಧನೆಗೆ ಕೆಲವು ಮಾತುಗಳನ್ನು ಹೆಚ್ಚಾಗಿ ಸೇರಿಸಲಾಯಿತು.

ಸದರೀ ತಿದ್ದುಪಾಟಾದ 8ನೆ ನಿಬಂಧನೆಯನ್ನು ಈ ಕೆಳಗೆ ಕೊಟ್ಟಿದೆ; ಆ ಪೈಕಿ ಹೆಚ್ಚಾಗಿ ಸೇರಿಸಿರುವ ಮಾತುಗಳನ್ನು ಕೆಳಗೆ ಗೀಟುಹಾಕಿ ಸೂಚಿಸಿ ಇದೆ:—

"ಸ್ಮಾಲ್‌ಕಾಜ್ ಕೋರ್ಟುಗಳಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟುಮಾಡುವುದಕ್ಕೆ ಹುಟ್ಟಿದ 1865ನೆ ಇಸವಿಯ 11ನೆ ಆಕ್ಟನ್ನನುಸರಿಸಿ ಚೀಫ್ ಕಮಿಷನವರು ಆಗಿಂದಾಗ್ಯೆ ಗೊತ್ತು ಮಾಡಬಹುದಾದ ಸ್ಥಳಿಕ ಸರಹದ್ದುಗಳೊಳಗೆ ಯಾವ ಸಬಾರ್ಡಿನೇಟ್ ಜಡ್ಜಿಯವರಿಗಾಗಲೀ ಸ್ಮಾಲ್‌ಕಾಜ್ ಅಧಿಕಾರವನ್ನು ಕೊಟ್ಟು 500 ರೂಪಾಯಿಗಳಿಗೆ ಮೀರದಂತೆ ಚೀಫ್ ಕಮಿಷನವರಿಗೆ ಯುಕ್ತತೋರುವ ಮೊಬಲಗಿಗೆ ಸಂಬಂಧಪಟ್ಟ ಸ್ಮಾಲ್‌ಕಾಜ್ ದಾವೆಗಳನ್ನು ವಿಚಾರಣೆ ಮಾಡಬಹುದೆಂತಲೂ, ಯಾವ ಮುನ್ಸೀಫರಿಗಾಗಲೀ ಅದೇರೀತಿ ಅಧಿಕಾರ ಕೊಟ್ಟು 50 ರೂಪಾಯಿಗಳಿಗೆ ಮೀರದಂತೆ ಚೀಫ್ ಕಮಿಷನರವರಿಗೆ ಯುಕ್ತತೋರುವ ಮೊಬಲಗಿಗೆ ಸಂಬಂಧಪಟ್ಟ ಸ್ಮಾಲ್‌ಕಾಜ್ ದಾವೆಗಳನ್ನು ವಿಚಾರಣೆ ಮಾಡಬಹುದೆಂತಲೂ ಚೀಫ್ ಕಮಿಷನರವರು ಅಪ್ಪಣೆ ಮಾಡಬಹುದು."

"ಸದರೀ 1865ನೆ ಇಸವಿಯ 11ನೆ ಆಕ್ಟಿನ ನಿಯಮಗಳೆಲ್ಲವೂ ಈ ನಿಬಂಧನೆಗೆ ಅನುಸಾರವಾಗಿರುವಷ್ಟರಮಟ್ಟಿಗೆ ಮೇಲ್ಕಂಡಂತೆ ಪಡೆದ ಅಧಿಕಾರವನ್ನು ಸಬಾರ್ಡಿನೇಟ್ ಜಡ್ಜಿ ಅಥವಾ ಮುನ್ಸೀಫ್‌ಯವರು ಅವರವರ ಕೋರ್ಟುಗಳಲ್ಲಿ ಚಲಾಯಿಸುವಾಗ ಅವರುಗಳಿಗೆ ಅನ್ವಯಿಸತಕ್ಕದ್ದು."

"ಮೇಲ್ಕಂಡಂತೆ ಸಬಾರ್ಡಿನೇಟ್ ಜಡ್ಜಿಯವರಿಗೆ ಅಥವಾ ಮುನ್ಸೀಫರಿಗೆ ಕೊಡೋಣಾದ ಅಧಿಕಾರವನ್ನು ಚೀಫ್ ಕಮಿಷನರವರು ತಮಗೆ ಯುಕ್ತ ತೋರಿದಾಗ ರದ್ದು ಮಾಡಬಹುದು."

ಪರಂತು 1879ನೆ ಆಗಸ್ಟ್ 27ನೆ ತಾರೀಖಿನ ಇಸ್ತಿಹಾರ್ನಾಮೆಯನ್ನೆಲ್ಲಾ 1883ನೆ ಇಸವಿ 1ನೆ ನಂಬರಿನ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 2ನೆ ಪ್ರಕರಣದ ಮೂಲಕ ರದ್ದುಮಾಡಲಾಗಿದೆ. ಅಲ್ಲಿಂದೀಚೆಗೆ ಯಾವ ಜಡ್ಜಿಗಳಿಗಾಗಲಿ ಸ್ಮಾಲ್‌ಕಾಜ್ ಅಧಿಕಾರವನ್ನು ಕೊಡಬೇಕಾದರೆ ಮೇಲ್ಕಂಡ 1883ನೆ ಇಸವಿಯ 1ನೆ ರೆಗ್ಯುಲೇಷನಿಗನುಸಾರವಾಗಿ ಕೊಡುತ್ತಿದೆ. ಆದರೆ 1879ನೆ ಇಸವಿಯ ಇಸ್ತಿಹಾರ್ನಾಮೆಯನ್ನು ರದ್ದುಮಾಡಿದ ಕಾಲದಲ್ಲಿ 1880ನೆ ಇಸವಿಯ ಜನವರಿ 28ನೆ ತಾರೀಖಿನ ತಿದ್ದುಪಾಟು ಇಸ್ತಿಹಾರನ್ನು ಕಂಠೋಕ್ತವಾಗಿ ರದ್ದುಮಾಡಲಿಲ್ಲ. ಆದಕಾರಣ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ಸ್ಮಾಲ್‌ಕಾಜ್ ಕಾನೂನಿನ ವಿಷಯದಲ್ಲಿ ಕೆಲವರಿಗೆ ಸಂದೇಹಗಳುಂಟಾಗಲು ಅವಕಾಶವಾಗಿದೆ.

2. ಈ ಸಂದೇಹಗಳನ್ನು ಪರಿಹರಿಸುವುದು ಮಾತ್ರವೇ ಅಲ್ಲದೆ 1887ನೆ ಇಸವಿಯ 9ನೆ ಆಕ್ಟಾದ ಬ್ರಿಟಿಷ್ ಇಂಡಿಯಾ ಪ್ರೊವಿನ್ಷಿಯಲ್ ಸ್ಮಾಲ್‌ಕಾಜ್ ಕೋರ್ಟುಗಳ ಆಕ್ಟು ಇಲ್ಲಿನ ಸ್ಥಳ ವಿದ್ಯಮಾನಗಳಿಗೆ ಸರಿಹೋಗುವಷ್ಟರಮಟ್ಟಿಗೆ ಅದಕ್ಕನುಸಾರವಾಗಿಯೇ ಮೈಸೂರು ಕಾನೂನನ್ನೂ ಏರ್ಪಡಿಸಬೇಕೆಂಬುವುದೂ ಸಹ ಈ ಬಿಲ್ಲಿನ ಉದ್ದೇಶವಾಗಿದೆ. ಈ ಮಸೂದೆಯಿಂದ ಸಿವಿಲ್ ಕೋರ್ಟು ರೆಗ್ಯುಲೇಷನಿನ 16ನೆ ಪ್ರಕರಣವು ರದ್ದಾಗಬೇಕೆಂದು ಉದ್ದೇಶಿಸಿಲ್ಲವೆಂಬ ಅಂಶವನ್ನು ಇಲ್ಲಿ ಸೂಚಿಸಬಹುದು. ಈ ಮಸೂದೆಯಲ್ಲಿ ಸರ್ಕಾರದವರು ಪ್ರತ್ಯೇಕವಾದ ಸ್ಮಾಲ್‌ಕಾಜ್ ಕೋರ್ಟುಗಳನ್ನು ಸ್ಥಾಪಿಸಬಹುದೆಂದು ವಗೈರೆ ನಿಯಮಮಾಡಿದೆ; ಸಿವಿಲ್ ಕೋರ್ಟು ರೆಗ್ಯುಲೇಷನಿನಲ್ಲಿಯಾದರೋ ಕೆಲವು ಜಡ್ಜಿಗಳಿಗೆ ಸ್ಮಾಲ್‌ಕಾಜ್ ಅಧಿಕಾರವನ್ನು ಕೊಡಬಹುದೆಂದು ನಿಯಮ ಮಾಡಿ ಇದೆ. ಅವರಗಳು ಸದರೀ ಅಧಿಕಾರವನ್ನು ಈ ಬಿಲ್ಲಿನ 22ನೆ ಪ್ರಕರಣದಲ್ಲಿ ವಿಧಿಸಿರುವ ಮೇರೆಗೆ ಚಲಾಯಿಸತಕ್ಕದ್ದು.

3. ಅನೇಕ ಸ್ಮಾಲ್‌ಕಾಜ್ ಕೋರ್ಟುಗಳಿಗೆ ಒಬ್ಬರೇ ಜಡ್ಜಿಯವರನ್ನು ನೇಮಿಸುವುದು, ಒಂದೇ ಕೋರ್ಟಿಗೆ ಒಬ್ಬರಿಗಿಂತ ಜಾಸ್ತಿ ಜಡ್ಜಿಗಳನ್ನು ನೇಮಿಸುವುದು, ರಿಜಿಸ್ಟ್ರಾರರುಗಳನ್ನು ನೇಮಿಸುವುದು ವಗೈರೆ ಅಂಶಗಳನ್ನು ಕುರಿತು ಸದ್ಯದಲ್ಲಿ ಈ ಬಿಲ್ಲಿನಲ್ಲಿ ನಿಯಮ ಮಾಡಬೇಕಾಗಿಲ್ಲವೆಂದು ಯೋಚಿಸಲಾಗಿದೆ.

4. ಸಿಬ್ಬಂದಿ ಏರ್ಪಾಡನ್ನು ಕುರಿತು 8ನೆ ಪ್ರಕರಣವನ್ನು ಹೊಸದಾಗಿ ಸೇರಿಸಿ ಇದೆ. ಇದು 1887ನೆ ಇಸವಿಯ 9ನೆ ಆಕ್ಟಿನ 13ನೆ ಪ್ರಕರಣಕ್ಕೆ ಅನುಸಾರವಾಗಿದೆ; ಪರಂತು ಸದರಿ ಪ್ರಕರಣದಷ್ಟು ತೊಡಕಾಗಿಲ್ಲ.

5. 1887ನೆ ಇಸವಿಯ 9ನೆ ಆಕ್ಟಿನ ಷೆಡ್ಯೂಲಿನಲ್ಲಿ ಯಾವ ಯಾವ ದಾವೆಗಳು ಸ್ಮಾಲ್‌ಕಾಜ್ ಕೋರ್ಟುಗಳಲ್ಲಿ ದಾಖಲಾಗಕೂಡದೆಂಬುವುದನ್ನು 44 ಕಲಮುಗಳಲ್ಲಿ ನಮೂದಿಸಿರುವುದಲ್ಲದೆ ಅವು ಹೊರತು ನಿಷ್ಕರ್ಷೆ

ಯಾದ ಒಂದು ಮೊಬಲಗಿಗೆ ಮೀರದೆ ಇರುವ ಇತರ ಎಲ್ಲಾ ಸಿವಿಲ್ ದಾವೆಗಳನ್ನೂ ಸದರಿ ಕೋರ್ಟುಗಳಲ್ಲಿ ದಾಖಲ್ ಮಾಡಿಕೊಳ್ಳಬಹುದೆಂದು ವಿಧಿಸಿ ಇದೆ.

ಕಾನೂನು ಯಾ ವಿದ್ಯಮಾನಗಳನ್ನು ಕುರಿತ ತೊಡಕಾದ ಅಂಶಗಳಿಲ್ಲದೆ ಇರುವ ಜುಜುವಿ ದಾವೆಗಳನ್ನು ಮಾತ್ರ ಹಿಡಿಯಲು ಸ್ಮಾಲ್‌ಕಾಜು ಕೋರ್ಟುಗಳಿಗೆ ಅಧಿಕಾರ ಕೊಡುವುದೇ ಇಂಡಿಯನ್ ಆಕ್ಟಿನ ಷೆಡ್ಯೂಲಿನಲ್ಲಿ ಈರೀತಿ ದಾವೆಗಳ ತರಗತಿ ವಿಭಾಗಮಾಡಿದುದರ ಉದ್ದೇಶವಾಗಿದೆ. ಪರಂತು ನಿಜಾಂಶವನ್ನು ಪರೀಕ್ಷಿಸಿದರೆ ಸದರೀ ಆಕ್ಟಿನೋರೆಗೆ ಯಾವ ಯಾವ ದಾವೆಗಳನ್ನು ಕಷ್ಟವಾಗಿರುವ ಸಬಬು ಅಂಥಾ ಕೋರ್ಟುಗಳಲ್ಲಿ ದಾಖಲ್ ಮಾಡಿಕೊಳ್ಳಕೂಡದೆಂದು ನಿಷೇಧಿಸಿದೆಯೋ ಅಷ್ಟೇ ಕಠಿಣವಾದ ದಾವೆಗಳು ದಾಖಲಾಗುವುದಕ್ಕೂ ಸಹ ಅವಕಾಶ ವಿದೆ ಎಂಬ ಅಂಶವನ್ನು ಮಿ॥ ಜಸ್ಟಿಸ್ ಎ. ರಾಮಚಂದ್ರ ಅಯ್ಯರವರು 1890ನೆ ಏಪ್ರಿಲ್ ಮತ್ತು 1893ನೆ ಮೇ ತಿಂಗಳುಗಳಲ್ಲಿ ಬರೆದ ಯಾದಾಸ್ತುಗಳಲ್ಲಿ ಸ್ಪಷ್ಟಪಡಿಸಿರುತ್ತಾರೆ. ಹ್ಯಾಗೆಂದರೆ, ಮೋಸ ಅಥವಾ ಅಸಡ್ಡೆಗೆ ಸಂಬಂಧಪಟ್ಟ ಹಣವನ್ನು ಠೇವಣಿ ಇಟ್ಟುಕೊಳ್ಳುವುದು ಅಥವಾ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ದಾವೆಗಳನ್ನೂ, ಜಮೀನು ಬಿಕರಿ ಕರಾರಿನಂತೆ ನಡೆಯದೆ ಹೋದುದಕ್ಕೋಸ್ಕರ ಪರಿಹಾರದ್ರವ್ಯವನ್ನು ಪಡೆಯುವುದಕ್ಕೆ ಸಂಬಂಧಪಟ್ಟ ದಾವೆಗಳನ್ನೂ ಹಿಡಿಯಕೂಡದೆಂದು ಸದರೀ ಷೆಡ್ಯೂಲಿನಲ್ಲಿ ನಮೂದಿಸಿಲ್ಲ. ಆದರೂ ಈ ತರಹೆ ದಾವೆಗಳೂ ಕೂಡ ಯಾವ ಯಾವ ತರಹೆ ದಾವೆಗಳನ್ನು ಹಿಡಿಯಕೂಡದೆಂದು ಸದರೀ ಷೆಡ್ಯೂಲಿನಲ್ಲಿ ನಮೂದಿದೆಯೋ ಅವುಗಳಷ್ಟೇ ಕಠಿಣವಾಗಿವೆ. ಇದೂ ಅಲ್ಲದೆ ಒಂದೇ ಕೃತ್ಯದಿಂದ ಒಬ್ಬ ಮನುಷ್ಯನ ಶರೀರಕ್ಕೂ ಸ್ವತ್ತಿಗೂ ಕೂಡ ಹಾನಿಯಾಗಬಹುದಾದ ಸಂಭವವೂ ಉಂಟು ; ಆದರೆ ಈ ಉಭಯ ಸಂದರ್ಭಗಳಲ್ಲಿಯೂ ಪ್ರತಿವಾದಿಯು ಪರಿಹಾರಕೊಡಲು ಗುರಿಯಾಗುವಷ್ಟರಮಟ್ಟಿಗೆ ಕಾನೂನಿನ ಮತ್ತು ವಿದ್ಯಮಾನದ ಅಂಶಗಳು ಒಂದೇ ತರಹೆ ಆಗಿರಬಹುದಾದರೂ ಸ್ವತ್ತಿಗೆ ನಷ್ಟವುಂಟಾದ ಬಗ್ಗೆ ಕೊಡಬೇಕಾದ ಪರಿಹಾರಕ್ಕೆ ಸಂಬಂಧಪಟ್ಟ ದಾವೆಗಳನ್ನು ಹಿಡಿಯಲು ಸ್ಮಾಲ್‌ಕಾಜು ಕೋರ್ಟಿಗೆ ಅಧಿಕಾರವುಂಟೆಂತಲೂ ಶರೀರಸಂಬಂಧವಾದ ಹಾನಿಯನ್ನು ಕುರಿತ ದಾವೆಗಳನ್ನು ಹಿಡಿಯಲು ಅಧಿಕಾರವಿಲ್ಲವೆಂತಲೂ ಭಾವಿಸೋಣಾಗಿದೆ. ಅಲ್ಲದೆ ಮಾನನಷ್ಟ ಅಥವಾ ಸುಳ್ಳು ಕ್ರಿಮಿನಲ್ ಫಿರ್ಯಾದನ್ನು ಕುರಿತ ದಾವೆಗಳನ್ನು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲ್ ಮಾಡಿಕೊಳ್ಳಕೂಡದೆಂದು ನಿಷೇಧಿಸಿದ್ದಾಗ್ಯೂ ಈ ದಾವೆಗಳಿಗಿಂತಲೂ ಕಠಿಣತರವಾದ ದಾವೆಗಳನ್ನು ಎಂದರೆ ಕುದುರೆ, ಒಡವೆ ವಗೈರೆಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಕುರಿತ ದಾವೆಗಳನ್ನು ಸದರೀ ಕೋರ್ಟಿನಲ್ಲಿ ದಾಖಲ್ ಮಾಡಿಕೊಳ್ಳಬಹುದೆಂತ ವಿಧಿಸಿ ಇದೆ.

ಇವೇ ಮುಂತಾದ ದೃಷ್ಟಾಂತಗಳನ್ನು ಪರ್ಯಾಲೋಚಿಸಿದರೆ ಇಂಡಿಯನ್ ಆಕ್ಟಿನಲ್ಲಿ ದಾವೆಗಳನ್ನು ತರಗತಿ ವಿಂಗಡಿಸಿರುವುದು ಸಮರ್ಪಕವಾಗಿಲ್ಲವೆಂತಲೂ, ಸ್ಮಾಲ್ ಕಾಜು ಕೋರ್ಟುಗಳಲ್ಲಿ ಇನ್ನೂ ಅನೇಕ ತರಹೆ ದಾವೆಗಳನ್ನು ಹಿಡಿಯಕೂಡದೆಂದು ವಿಧಿಸಬೇಕೆಂತಲೂ ತೋರುವುದು.

ಮೈಸೂರು ಸೀಮೆಯಲ್ಲಿ ಸಿವಿಲ್ ನ್ಯಾಯವಿಮರ್ಶೆಯನ್ನು ಕುರಿತ ಹಿಂದಿನ ರಿಪೋರ್ಟುಗಳನ್ನು ನೋಡಲಾಗಿ ಸಾಲಕೊಟ್ಟ ಹಣ, ಸರಫರಾಜ್ ಮಾಡಿದ ಸಾಮಾನು, ಕೂಲಿ, ಬಾಡಿಗೆ ವಗೈರೆಗೆ ಸಂಬಂಧಪಟ್ಟ ದಾವೆಗಳೇ ಸ್ಮಾಲ್‌ಕಾಜು ಕೋರ್ಟುಗಳಲ್ಲಿ ವಿಶೇಷವಾಗಿ ದಾಖಲಾಗಿವೆ ಎಂದು ವಿದಶವಾಗುವುದು. ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದರ್ಯಾಫ್ತು ಆಗತಕ್ಕ ದಾವೆಗಳನ್ನೆಲ್ಲಾ ಕೆಲವು ಸಾಧಾರಣ ತರಗತಿಗಳಾಗಿ ವಿಂಗಡಿಸಬಹುದಾಗಿದೆ. ಆದುದರಿಂದ ಇಂಡಿಯನ್ ಆಕ್ಟಿನಲ್ಲಿರುವ ಷೆಡ್ಯೂಲನ್ನು ಬಿಟ್ಟುಬಿಟ್ಟು ಅದಕ್ಕೆ ಬದಲಾಗಿ ಒಂದು ಹೊಸ ಷೆಡ್ಯೂಲಿನಲ್ಲಿ ಮೇಲ್ಕಂಡ ತರಗತಿಗಳನ್ನು ನಮೂದಿಸಿ ಹಾಗೆ ನಮೂದಾಗದೆ ಇರುವ ತರಗತಿಗೆ ಸೇರಿದ ದಾವೆಗಳನ್ನು ಸ್ಮಾಲ್ ಕಾಜು ಕೋರ್ಟಿನವರು ಹಿಡಿಯಕೂಡದೆಂದು ವಿಧಿಸುವುದೇ ಸರ್ವೋತ್ತಮವೆಂತ ತೋರುತ್ತದೆ. ಈ ಮಸೂದೆಯ 10ನೆ ಕಲಮಿನಲ್ಲಿ ಈ ರೀತಿ ನಿಯಮವನ್ನೇರ್ಪಡಿಸಿದೆಯಲ್ಲದೆ ಸರ್ಕಾರದವರು ಗೆಜೆಟ್ಟಿನಲ್ಲಿ ಇಸ್ತಿಹಾರನ್ನು ಪ್ರಕಟಿಸುವುದರ ಮೂಲಕ ಸದರೀ ಷೆಡ್ಯೂಲಿಗೆ ಜಾಸ್ತಿ ತರಹೆ ದಾವೆಗಳನ್ನು ಸೇರಿಸಬಹುದು ಅಥವಾ ಅದರಲ್ಲಿ ಈಗ ನಮೂದಿರುವ ದಾವೆಗಳನ್ನು ವ್ಯತ್ಯಾಸ ಪಡಿಸಬಹುದು ಎಂಬದಾಗಿ ವಿಧಿಸಿದೆ.

ಈ ಮಸೂದೆಯ ವಿಷಯದಲ್ಲಿ ಚೀಫ್ ಕೋರ್ಟಿನವರ ಅಭಿಪ್ರಾಯವನ್ನೂ ಸಹ ಕೇಳಲಾಯಿತು. ಈ ಮಸೂದೆಯಲ್ಲಿ ಹೊಸದಾಗಿ ಸೇರಿಸಿರುವ ಷೆಡ್ಯೂಲು ಇಂಡಿಯನ್ ಆಕ್ಟಿನ ಷೆಡ್ಯೂಲಿಗಿಂತ ಉತ್ತಮವಾಗಿದೆಯೆಂತಲೂ, ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದರ್ಯಾಫ್ತಾಗಬಹುದಾದ ದಾವೆಗಳನ್ನು ಈ ಮಸೂದೆಯಲ್ಲಿ ತರಗತಿಗಳಾಗಿ ವಿಂಗಡಿಸಿರುವುದು ಬಹಳ ಸುಲಭವಾಗಿಯೂ ಸ್ಪಷ್ಟವಾಗಿಯೂ ಇದೆಯೆಂತಲೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ನಂ. ಫೈ. 4224—ಜನರಲ್ ಫೈ. 50-07-2.
ಬೆಂಗಳೂರು, ತಾರೀಖು 20ನೆ ಮಾರ್ಚಿ 1909.

ಇಸ್ತಿಹಾರ್‌ನಾಮೆ.

1894ನೆ ಇಸವಿಯ 9ನೆ ನಂಬರ್ ವೈಸೂರು ಗವರ್ನಮೆಂಟು ಸೆಕ್ಯೂರಿಟಿ ಯಾ ಸರ್ಕಾರಿ ಆಧಾರಪತ್ರಗಳ ರೆಗ್ಯುಲೇಷನನ್ನನುಸರಿಸಿ ಸಾದರ್ಮಾಡಬೇಕೆಂದಿರುವ ಇದರಡಿ ಕಂಡ ನಿಬಂಧನೆಗಳ ಮಸೂದೆಯನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಪ್ರಸಿದ್ಧಪಡಿಸಿರುತ್ತದೆ.

2. ಈ ಮಸೂದಾ ನಿಬಂಧನೆಗಳನ್ನು ಗೆಜೆಟ್ಟಿನಲ್ಲಿ ಛಾಯಿಷ್ಮಾಡಿದ ಲಾಗಾಯಿತು ಮೂರು ತಿಂಗಳ ಕಾಲ ಕಳೆದನಂತರ ಆಲೋಚನೆಗೆ ತೆಗೆದುಕೊಂಡು ಸದರಿ ಕಾಲದೊಳಗಾಗಿ ಈ ವಿಷಯದಲ್ಲಿ ಬರತಕ್ಕಂಥಾ ಎಲ್ಲಾ ಸಲಹೆಗಳನ್ನೂ ಗುಣದೋಷ ನಿರೂಪಣೆಗಳನ್ನೂ ಕ್ರಮವಾಗಿ ಪರ್ಯಾಲೋಚಿಸಲಾಗುವುದು.

ಹುಕುಂ ಬಮೋಜೀಬ್,
ಜಿ. ಎಸ್. ಚಕ್ರವರ್ತಿ,
ಫೈನಾನ್ಷಿಯಲ್ ಸೆಕ್ರೆಟರಿ.

1894ನೆ ಇಸವಿಯ 9ನೆ ನಂಬರ್ ವೈಸೂರು ಗವರ್ನಮೆಂಟು ಸೆಕ್ಯೂರಿಟಿ ಯಾ ಸರ್ಕಾರೀ ಆಧಾರಪತ್ರಗಳ ರೆಗ್ಯುಲೇಷನ್ ಮೇರೆಗೆ ಮಾಡಿದ ನಿಬಂಧನೆಗಳು.

1894ನೆ ಇಸವಿ 9ನೆ ನಂಬರು ವೈಸೂರು ಗವರ್ನಮೆಂಟು ಸೆಕ್ಯೂರಿಟಿ ರೆಗ್ಯುಲೇಷನಿನ 13ನೆ ಪ್ರಕರಣದಿಂದ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ವೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದರವರ ಸರ್ಕಾರದವರು ಇದರಡಿ ಕಂಡ ನಿಬಂಧನೆಗಳನ್ನು ಏರ್ಪಡಿಸಬೇಕೆಂದು ಹುಕುಂ ದಯಪಾಲಿಸಿರುತ್ತಾರೆ :—

ಬಡ್ಡೀಮುದ್ದೆಗಳನ್ನು ಅಚ್ಚು ಹಾಕಿ ಪಾವತಿಯಾದ ಬಡ್ಡಿಯನ್ನು ಅವುಗಳಲ್ಲಿ ದಾಖಲ್ಮಾಡುವುದು.

1. ಚಲಾವಣೆಗೆ ಕೊಟ್ಟ ಆಧಾರಪತ್ರದ ಹಿಂಭಾಗದಲ್ಲಿ ಛಷ್ಮಾಹೆಗೊಂದಾವರ್ತಿ ಪಾವತಿಯಾಗಬೇಕಾದ ಬಡ್ಡಿಯನ್ನು ನಮೂದಿಸುವ ಬಗ್ಗೆ ಮುದ್ದೆಗಳನ್ನು ಅಚ್ಚು ಹಾಕಿಸಿ ಸಂಬಂಧಪಟ್ಟ ಛಷ್ಮಾಹೆಗೆ ಬಿಟ್ಟಿರುವ ಸ್ಥಳದಲ್ಲಿ ಬಡ್ಡಿ ಪಾವತಿ ಮಾಡುವ ಆಫೀಸಿನ ಮುದ್ರೆಯನ್ನು ಒತ್ತುವದರಿಂದಲಾಗಲಿ, ಅಥವಾ ಬರಹಮೂಲಕ ದಾಖಲ್ಮಾಡುವುದರಿಂದಲಾಗಲಿ ಬಡ್ಡಿಯ ಪಾವತಿಯನ್ನು ನಮೂದು ಮಾಡಬೇಕು. ಅಲ್ಲದೆ ಖಜಾನೆಯ ಹೆಸರು, ಪಾವತಿ ವೋಚರಿಗೆ ಕೊಟ್ಟ ನಂಬರು, ಪಾವತಿಯಾದ ತಾರೀಖು ಇವುಗಳನ್ನೂ ಸಹಾ ಬರೆಯಬೇಕು ; ಈ ಖತಾಯಿತಿಗೆ ಟ್ರೆಷರಿ ಆಫೀಸರ ಚಿಕ್ಕ ದಸ್ತಖತ್ತು ಆಗಬೇಕು ; ಪಾವತಿ ವೋಚರಿನ ಮುಂಭಾಗದಲ್ಲಿ ಆಧಾರಪತ್ರದ ಮಾಲೀಕನ ರಶೀತಿಯನ್ನು ಪಡೆಯಬೇಕು.

ಇಂಡಿಯಾದೇಶದ ಸ್ತ್ರೀಯಿಂದ ಬರೆಯಲ್ಪಡುವ ಇಂಡಾರ್ಸ್ಮೆಂಟು.

2. ಇಂಡಿಯಾ ದೇಶದ ಸ್ತ್ರೀಯಿಂದ ಬರೆಯಲ್ಪಟ್ಟ ಒಂದು ಇಂಡಾರ್ಸ್ಮೆಂಟಿಗೆ ಅಥವಾ ರಶೀತಿಗೆ ಕನಿಷ್ಠಪಕ್ಷ ಇಬ್ಬರು ಮಾತಬರೆ ಸಾಕ್ಷಿಗಳಿಂದ ದಸ್ತಖತ್ ಆಗಬೇಕು; ಈ ಉಭಯ ಸಾಕ್ಷಿಗಳೂ ಬಡ್ಡಿ ಪಾವತಿಯಾಗುವಂಥಾ ಖಜಾನಾ ಚಾರ್ಜ್ ವಹಿಸಿರುವ ಆಫೀಸರವರ ಸಮಕ್ಷಮ ಹಾಜರಾಗಿ ಇಂಡಾರ್ಸ್ಮೆಂಟ್ ಅಥವಾ ರಶೀತಿಯು ನಿಜವಾದದ್ದೆಂದು ಸರ್ಟಿಫೈ ಮಾಡಬೇಕು.

ಖಾಸಗಿ ಟ್ರಸ್ಟಿನ ಇಂಡಾರ್ಸ್ಮೆಂಟು ಅಂಗೀಕಾರಕ್ಕೆ ಅರ್ಹವಲ್ಲ.

3. ಇಂಡಾರ್ಸ್ಮೆಂಟಿನಲ್ಲಾಗಲಿ ಅಥವಾ ಬಡ್ಡಿಗೋಸ್ಕರ ಕೊಟ್ಟ ರಶೀತಿಯಲ್ಲಾಗಲಿ "ಮಾಲೀಕರ ಪರವಾಗಿ" ಎಂದು ನಮೂದಿಸಿ ಯಾರಾದರೂ ದಸ್ತಖತ್ ಮಾಡಿದ್ದರೆ ಆ ಅಂಶಕ್ಕೆ ಸರ್ಕಾರದವರು ಗಮನ ಕೊಡುವದಿಲ್ಲ. ಟ್ರಸ್ಟೀ ಎಂಬ ಹಕ್ಕುಬಾಧ್ಯತೆಯಿಂದಲಾಗಲಿ ಅಥವಾ ಇತರ ಪ್ರತಿನಿಧಿ ಎಂಬ ಬಾಧ್ಯತೆಯಿಂದಲಾಗಲಿ ಯಾವ ಮನುಷ್ಯನಾದರೂ ಒಂದು ಆಧಾರಪತ್ರದಲ್ಲಿ ಇಂಡಾರ್ಸ್ಮೆಂಟು ಬರೆದಿದ್ದರೂ ಅಥವಾ ರಶೀತಿ ಕೊಟ್ಟಿದ್ದರೂ ಅಂಥಾವನನ್ನು ಎಲ್ಲಾ ಭಾಗದಲ್ಲಿಯೂ ಆಧಾರಪತ್ರದ ನಿಜವಾದ ಮಾಲೀಕನಂತೆ ಭಾವಿಸಬೇಕು.

ಯಾರಿಗೆ ವರ್ಗಮಾಡಬೇಕೋ ಅವರ ಹೆಸರು ನಮೂದಿಲ್ಲದೆ ನೋಟ್ ಮಾಲೀಕನು ದಸ್ತಖತ್ ಮಾತ್ರ ಮಾಡಿದ್ದರೆ ಅದನ್ನು ಅಂಗೀಕರಿಸುವುದಿಲ್ಲ.

4. ಪತ್ರವನ್ನು ಫಲಾನೆಯವರಿಗೆ ವರ್ಗಮಾಡಿದೆಯೆಂದು ನಮೂದು ಮಾಡದೇನೇ ಆಧಾರ ಪತ್ರದ ಮಾಲೀಕನು ದಸ್ತಖತ್ ಮಾತ್ರ ಮಾಡಿದ್ದರೆ ಆ ಆಧಾರಪತ್ರವನ್ನು ಸರ್ಕಾರಿ ಖಜಾನೆಗಳಲ್ಲೂ ಕಂಟ್ರೋಲರವರ ಆಫೀಸಿನಲ್ಲೂ ಅಂಗೀಕರಿಸಕೂಡದ ದುದರಿಂದ ಆಧಾರಪತ್ರದ ಮಾಲೀಕನು ಬಡ್ಡೀ ಪಾವತಿಗಾಗಿ ಆಧಾರಪತ್ರವನ್ನು ಕಳುಹಿಸುವುದಕ್ಕೆ ಮುಂಚೆ ಅದು ಯಾರಿಗೆ ಪಾವತಿಯಾಗಬೇಕೋ ಅವರ ಹೆಸರು ನಮೂದಿನಿಂದ ಇಂಡಾರ್ಸ್ ಮಾಡಿಯೇ ಕಳುಹಿಸಬೇಕೆಂದು ಆತನಿಗೆ ತಿಳಿಸಬೇಕು.

ಯಾವ ಯಾವ ಸಂದರ್ಭಗಳಲ್ಲಿ ಸರ್ಕಾರಿ ಸೆಕ್ಯೂರಿಟಿ ಪತ್ರಗಳನ್ನು ವಾಪಸ್ ಕೊಟ್ಟು ಹೊಸಪತ್ರಗಳನ್ನು ಪಡೆಯುವುದು ಆವಶ್ಯಕ?

5. ಇದರಡಿ ಕಂಡ ಯಾವುದೊಂದು ಸಂದರ್ಭದಲ್ಲಾಗಲಿ ಅಥವಾ ಎಲ್ಲಾ ಸಂದರ್ಭಗಳಲ್ಲಾಗಲಿ ಯಾವ ಆಧಾರಪತ್ರದ ಮಾಲೀಕನಾಗಲಿ ಆ ಪತ್ರಕ್ಕೆ ಬದಲಾಗಿ ಹೊಸಪತ್ರವು ತನಗೆ ಸಂದಿದೆಯೆಂದು ಅದರಮೇಲೆ ಷರಾ ಬರೆದು ಹೊಸಪತ್ರವನ್ನು ಪಡೆಯುವ ಬಗ್ಗೆ ಅದನ್ನು ವಾಪಸ್ ಕೊಡಬೇಕೆಂದು ಅಪೇಕ್ಷಿಸಲ್ಪಡಬಹುದು :—

(1) ಆಧಾರಪತ್ರದ ಹಿಂದುಗಡೆ ಒಂದು ಇಂಡಾರ್ಸ್ಮೆಂಟಿಗೆ ಮಾತ್ರವೇ ತಕ್ಕಷ್ಟು ಜಾಗಾ ಉಳಿದಿದ್ದರೆ ಅಥವಾ ಅಡ್ಡಲಾಗಿ ಬರೆಯತಕ್ಕ ಎಲ್ಲಾ ಇಂಡಾರ್ಸ್ಮೆಂಟುಗಳನ್ನೂ ಕಂಪ್ಲೀಟ್ಆಗಿ ನಿರೋಧಿಸಿರುವುದರಿಂದ ಆಧಾರಪತ್ರದಲ್ಲಿ ಹಾಲಿ ಇರತಕ್ಕ ಇಂಡಾರ್ಸ್ಮೆಂಟು ಅಥವಾ ಇಂಡಾರ್ಸ್ಮೆಂಟುಗಳ ಮೇಲೆ ಅಡ್ಡಲಾಗಿ ಯಾವ ಮಾತನ್ನಾಗಲಿ ಅಥವಾ ಮಾತುಗಳನ್ನಾಗಲಿ ಬರೆದಿದ್ದರೆ ;

(2) ಪತ್ರವು ಹರಿದುಹೋಗಿ ಇದ್ದರೆ, ಅಥವಾ ಯಾವ ರೀತಿಯಲ್ಲಾಗಲಿ ಕೆಟ್ಟುಹೋಗಿದ್ದರೆ, ಅಥವಾ ತುಂಬಾ ಒತ್ತಾಗಿ ಅದರಮೇಲೆ ಬರೆದಿದ್ದರೆ, ಅಥವಾ ಬಡ್ಡಿ ಪಾವತಿಗಾಗಿ ಯಾವ ಆಫೀಸರ ರೂಬರೂಬ್ ಅದನ್ನು ಹಾಜರ್ಮಾಡಲಾಯಿತೋ ಅಂಥಾ ಆಫೀಸರವರ ಅಭಿಪ್ರಾಯದ ಮೇರೆಗೆ ಇಂಡಾರ್ಸ್ಮೆಂಟು ಮಾಡುವುದಕ್ಕೆ ಅನರ್ಹವಾಗಿದ್ದರೆ ;

(3) ಇದರಡಿ ನಮೂದಿಸಿರುವ ಸಂದರ್ಭಗಳ ಶಿವಾಯಿ ಇತರ ಸಂದರ್ಭಗಳಲ್ಲಿ- ಒಂದು ಆಧಾರಪತ್ರವನ್ನು ಇಂಡಾರ್ಸ್ಮೆಂಟ್ ಮೂಲಕ ಯಾವ ಮನುಷ್ಯನಿಗೆ ವರ್ಗಮಾಡಿಕೊಡಲಾಗುತ್ತದೆಯೋ ಆತನಿಗೆ ಅವನ ಸ್ವಂತಕ್ಕಲ್ಲದೆ ಇತರರ ಪರವಾಗಿ ವರ್ಗಮಾಡಿಕೊಟ್ಟಿದ್ದರೆ, ಅಥವಾ ಸದರೀ ಇಂಡಾರ್ಸ್ಮೆಂಟಿಗೆ ದಸ್ತಖತ್ ಮಾಡುವವನು ತನ್ನ ಸ್ವಂತ ಅಧಿಕಾರದಿಂದಲ್ಲದೆ ಇತರರ ಪರವಾಗಿ ದಸ್ತಖತ್ ಮಾಡಿದ್ದರೆ,

(a) ಪ್ರಸಿದ್ಧಿ ಹೊಂದಿದ ಒಂದು ಕೋಠಿ (ಫರ್ಮ್), ಸಂಘ ಅಥವಾ ಬ್ಯಾಂಕಿಗೆ ಆಧಾರ ಪತ್ರವು ವರ್ಗವಾಗಿದ್ದರೆ, ಅಥವಾ ಇಂಡಾರ್ಸ್ಮೆಂಟಿಗೆ ಹಾಕಿರುವ ರುಜುವು ಅಂಥಾ ಕೋಠಿಯ ವಾಡಿಕೆಯಾದ ಹೆಸರಾಗಿಯೂ ಅಥವಾ ರುಜುವಾಗಿಯೂ ಇದ್ದರೆ, ಅಥವಾ ಸದರೀ ಇಂಡಾರ್ಸ್ಮೆಂಟಿಗೆ ಪಾರಂಪರ್ಯವಾಗಿ ನಡೆಯಬಹುದಾದ ಒಂದು ಸಂಘದ ಮೊಹರು ಹಾಕಿದ್ದರೆ, ಅಥವಾ ಒಂದು ಬ್ಯಾಂಕಿನ ಅಥವಾ ಸಂಘದ ಸೆಕ್ರಿಟರಿ, ಡೆಪ್ಯುಟಿ ಸೆಕ್ರಿಟರಿ, ಮ್ಯಾನೇಜರ್ ಅಥವಾ ಏಜಂಟರ ರುಜುವಾಗಿದ್ದರೆ ;

(b) 1894ನೆ ಇಸವಿಯ ೪ನೆ ನಂಬರಿನ ಮೈಸೂರು ಸರ್ಕಾರಿ ಆಧಾರಪತ್ರಗಳ ರೆಗ್ಯುಲೇಷನಿನ 6ನೆ ಪ್ರಕರಣದ 1ನೆ ಉಪಪ್ರಕರಣವು ಯಾವ ಉದ್ಯೋಗಗಳಿಗೆ ಲಗಾವಾಗುತ್ತದೆಂದು ಮೈಸೂರು ಸರ್ಕಾರದವರು ಇಸ್ತಿಹಾರ್ನಾಮೆಯ ಮೂಲಕ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಪಡಿಸಿರುತ್ತಾರೆಯೋ ಅಂಥಾ ಉದ್ಯೋಗಗಳ ಪೈಕಿ ಒಂದರಲ್ಲಿ ತತ್ಕಾಲದಲ್ಲಿ ಇರುವ ಉದ್ಯೋಗಸ್ಥರಿಂದ ಸದರೀ ಉದ್ಯೋಗದ ತರೀಖ್ ಒಂದು ಇಂಡಾರ್ಸ್ಮೆಂಟು ಮಾಡಲ್ಪಟ್ಟು ಇದ್ದರೆ ;

(c) (190| ನೆ ಇಸವಿಯ 7ನೆ ನಂಬರ್) ಸಕ್ಸೆಷನ್ ಯಾ ವಾರಸ್ಸು ಸರ್ಟಿಫಿಕೇಟ್ ರೆಗ್ಯುಲೇಷನನ್ನನುಸರಿಸಿ, ಅಥವಾ (1865ನೆ ಇಸವಿಯ 10ನೆ ನಂಬರ್) ಇಂಡಿಯನ್ ಸಕ್ಸೆಷನ್ ಆಕ್ಟು ಅನುಸರಿಸಿ ಪ್ರೊಬೇಟು ಅಥವಾ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್ ಎಂಬ ಸನ್ನದುಗಳು ಯಾರ ಪರವಾಗಿ ಲಾಯಖ್ ಯಖ್ತ್ಯಾರಿಯುಳ್ಳ ಕೋರ್ಟಿನಿಂದ ಕೊಡಲ್ಪಟ್ಟು ಇರುತ್ತವೆಯೋ ಅಂಥಾ ಮನುಷ್ಯನಿಗೆ ವರ್ಗ ಮಾಡಿದ್ದರೆ, ಅಥವಾ ಅಂಥಾ ಮನುಷ್ಯನಿಂದ ವರ್ಗಮಾಡಲ್ಪಟ್ಟು ಇದ್ದರೆ ;

(d) ಸದರಿ ಆಧಾರಪತ್ರದಲ್ಲಿ ಒಂದು ಎಸ್ಟೇಟ್ ಯಾ ಆಸ್ತಿಯ ಎಗ್ಜಿಕ್ಯೂಟರ್ ಅಥವಾ ಅಡ್ಮಿನಿಸ್ಟ್ರೇಟರ್ ಎಂಬದಾಗಿ ವಿವರಿಸಲ್ಪಟ್ಟು, ಮತ್ತು ಆ ನೋಟಿನ ಮತ್ತು ಅದರ ಹಿಂದಿನ ಇಂಡಾರ್ಸ್ಮೆಂಟುಗಳ ತಾತ್ಪರ್ಯದಿಂದ ಮಾಲೀಕ ಎಂಬದಾಗಿ ತಿಳಿಯಬರುವ ಅಂಥಾ ಎಗ್ಜಿಕ್ಯೂಟರ್ ಅಥವಾ ಅಡ್ಮಿನಿಸ್ಟ್ರೇಟರಿಗೆ ವರ್ಗವಾಗಿ ಇದ್ದರೆ, ಅಥವಾ ಸದರಿ ಎಗ್ಜಿಕ್ಯೂಟರ್, ಅಥವಾ ಅಡ್ಮಿನಿಸ್ಟ್ರೇಟರಿಂದ ವರ್ಗ ಮಾಡಲ್ಪಟ್ಟು ಇದ್ದರೆ ;

(4) ಇಂಡಾರ್ಸ್ಮೆಂಟು ಸ್ಪಷ್ಟವಾಗಿ ಇಲ್ಲದಿದ್ದರೆ, ಅಥವಾ ಗವರನ್ಮೆಂಟು ಪ್ರಾಮಿಸರಿ ನೋಟ್ (ಯಾ ಆಧಾರಪತ್ರಕ್ಕೆ) ಅಂಟಿಸಿದ ಕಾಗದದಲ್ಲಿ ಇಂಡಾರ್ಸ್ಮೆಂಟು ಮಾಡಿದ್ದರೆ ;

(5) ಬಡ್ಡಿ ಪಾವತಿಗಾಗಿ ಆಧಾರಪತ್ರವು ಯಾರಿಂದ ಬಬ್ಬ ಆಫೀಸರವರ ಸಮಕ್ಷಮ ಹಾಜರ್ಮಾಡಲ್ಪಡುತ್ತದೆಯೋ ಆತನು ಕ್ರಮವಾದ ಹಕ್ಕುದಾರನಲ್ಲವೆಂದಾಗಲಿ ಅಥವಾ ಆತನ ಹಕ್ಕು ಸಂಪೂರ್ಣವಾಗಿ ಅಂಗೀಕೃತವಾಗಿಲ್ಲವೆಂದಾಗಲಿ ಸದರಿ ಆಫೀಸರವರು ಅಭಿಪ್ರಾಯಪಟ್ಟರೆ ;

(6) ಸದರಿ ಆಧಾರಪತ್ರವು 6ನೆ ನಿಬಂಧನೆಯ ನಿಯಮಗಳ ಮೇರೆಗೆ ಬಬ್ಬ ಮೈನರಿಗೆ ಕೊಡಲ್ಪಟ್ಟಂಥಾ ಎದುರುವಳಿ ಪತ್ರವಾಗಿದ್ದು ಈಚೆಗೆ ಅಂಥಾ ಮೈನರಿನ ಸ್ವತ್ತಲ್ಲದೆ ಇದ್ದರೆ, ಅಥವಾ ಬಡ್ಡಿಯ ವಿಷಯದಲ್ಲಿ ಮಾತ್ರ ಆಡಳಿತ ನಡೆಸತಕ್ಕದ್ದೆಂದು ಕ್ಲುಪ್ತಪಡಿಸಲ್ಪಟ್ಟ ಸ್ವತ್ತಿಗೆ ಸೇರಿದಂಥಾ ಎದುರುವಳಿ ಪತ್ರವಾಗಿದ್ದು ಈಚೆಗೆ ಹಾಗಿರೋಣವು ತಪ್ಪಿದ್ದರೆ ;

ಹಿಂದೆ ನಮೂದಿಸಲ್ಪಟ್ಟ ಎಲ್ಲಾ ಸಂದರ್ಭಗಳಲ್ಲಾಗಲಿ ಅಥವಾ ಯಾವುದಾದರೂ ಒಂದು ಸಂದರ್ಭದಲ್ಲಾಗಲಿ ಸದರೀ ಪತ್ರಕ್ಕೆ ಬದಲಾಗಿ ಹೊಸಪತ್ರವು ಸಂದಿದೆಯೆಂದು ಷರಾ ಬರೆದು ಅದನ್ನು ವಾಪಸುಕೊಟ್ಟು ಹೊಸ ಪತ್ರವನ್ನು ಪಡೆದುಕೊಳ್ಳುವ ವರೆಗೂ ಸದರೀ ಪತ್ರದ ಮೇಲೆ ಮುಂದೆ ಬಡ್ಡಿ ಸಲ್ಲಿಸಲು ಆಗಲಾರದೆಂದು ತಿರಸ್ಕರಿಸಬಹುದು.

ಎದುರುವಳಿ ಪತ್ರವನ್ನು ಕೊಡುವುದು ಮತ್ತು ವಾಪಸು ತೆಗೆದುಕೊಳ್ಳುವುದು.

6. ಬಬ್ಬ ಮೈನರಿನ ಸ್ವತ್ತಾದಂಥಾ ಅಥವಾ ಬಡ್ಡೀ ವಿಷಯವಾಗಿ ಮಾತ್ರ ಆಡಳಿತ ನಡೆಸಬೇಕೆಂದು ಕ್ಲುಪ್ತಪಡಿಸಲ್ಪಟ್ಟ ಒಂದು ಸ್ವತ್ತಿಗೆ ಸೇರಿದಂಥಾ ಆಧಾರಪತ್ರವನ್ನು ಕಂಟ್ರೋಲರವರಲ್ಲಿ ಡಿಪಾಜಿಟ್ ಇಟ್ಟಲ್ಲಿ ಅವರು ಆ ಪತ್ರದ ಮಾಲೀಕನಿಗೆ ಸದರೀ ಪತ್ರದ ಎದುರುವಳಿಯನ್ನು ಕೊಡಬೇಕು ಮತ್ತು ಅದರ ಮುಂಭಾಗದಲ್ಲಿ ಅಡ್ಡವಾಗಿ "ಈ ಎದುರುವಳಿಯು ಪರಾಧೀನವಾಗತಕ್ಕದ್ದಲ್ಲ" ಎಂಬ ಮಾತುಗಳುಳ್ಳ ಮೊಹರನ್ನು ಒತ್ತಬೇಕು; ಮತ್ತು ಮುಂದೆ ಪಾವತಿ ಯಾಗತಕ್ಕ ಬಡ್ಡಿಯನ್ನು ಈ ಎದುರುವಳಿಯಲ್ಲಿ ದಾಖಲ್ಮಾಡುತ್ತಾ ಬರಬೇಕು. ಇಂಥಾ ಆಧಾರಪ

ತ್ರವು ಒಬ್ಬ ಮೈನರಿಗೆ ಕೊಡಲ್ಪಟ್ಟಿದ್ದು ಈಚೆಗೆ ಅವನ ಸ್ವತ್ತಲ್ಲದೇ ಹೋಗಿದ್ದರೆ ಅಥವಾ ಬಡ್ಡೀ ವಿಷಯದಲ್ಲಿ ಮಾತ್ರ ಆಡಳಿತ ನಡೆಸತಕ್ಕದ್ದೆಂದು ಕ್ಲುಪ್ತಪಡಿಸಲ್ಪಟ್ಟ ಸ್ವತ್ತಿಗೆ ಸೇರಿದ್ದು ಈಚೆಗೆ ತಪ್ಪಿಹೋಗಿದ್ದರೆ, ಸದರೀ ಪತ್ರದ ಬಗ್ಯೆ ಕೊಟ್ಟ ಮೊದಲನೆ ಯಾ ಸಂದರ್ಭಾನುಸಾರವಾಗಿ ಅನಂತರದ ಎದುರುವಳಿಗೆ ಬದಲಾಗಿ ಹೊಸಪತ್ರವು ಸಂದಿದೆಯೆಂದು ಷರಾ ಬರೆದು ಅದನ್ನು ವಾಪಸುಕೊಟ್ಟು ಹೊಸ ಪತ್ರವನ್ನು ಪಡೆದುಕೊಳ್ಳುವವರೆಗೂ ಬಡ್ಡಿ ಸಲ್ಲಿಸಲು ಆಗಲಾರದೆಂದು ತಿರಸ್ಕರಿಸಬಹುದು. ಮೇಲೆ ಹೇಳಲ್ಪಟ್ಟ ಮೇರೆಗೆ ಅಂಥಾ ಎದುರುವಳಿ ಪತ್ರವು ಷರಾನಿಸಿ ವಾಪಸ್ ಆಗಿ ಹೊಸ ಪತ್ರವು ಕೊಡಲ್ಪಟ್ಟನಂತರ ಅಂಥಾ ಎದುರುವಳಿಯನ್ನೂ, ಅಸಲ್ ಪತ್ರವನ್ನೂ, ಇದಕ್ಕೆ ಹಿಂದೆ ಕೊಡಲ್ಪಟ್ಟ ಎದುರುವಳಿ ಪತ್ರವನ್ನೂ ಸಹಾ ರದ್ದು ಮಾಡತಕ್ಕದ್ದು.

7. ಬಡ್ಡಿ ಪಾವತಿ ಮಾಡಿದ್ದರಿಂದಲಾಗಲೀ, ಬಡ್ಡಿ ಪಾವತಿಯಾಗಿರುವುದನ್ನು ದಾಖಲ್ಮಾಡಿದ್ದರಿಂದಲಾಗಲೀ ಅಥವಾ ರಶೀತಿ ಕೊಟ್ಟದರಿಂದಲಾಗಲೀ ಹಿಂದಿನ ನಿಬಂಧನೆಗಳ ಮೇರೆಗೆ ಎದುರುವಳಿ ನೋಟನ್ನು ಕೊಟ್ಟಿರುವುದರಿಂದಲಾಗಲೀ ಆ ಪತ್ರದ ಮಾಲೀಕನ ಹಕ್ಕನ್ನು ಅಂಗೀಕರಿಸಿದಂತೆ ಭಾವಿಸತಕ್ಕದ್ದಲ್ಲ.

ಹಳೇ ಪತ್ರಗಳಿಗೆ ಬದಲಾಗಿ ಹೊಸ ಪತ್ರಗಳನ್ನು ಪಡೆಯುವ ಬಗ್ಯೆ ಅಥವಾ ದ್ವಿಪ್ರತಿಗಳನ್ನು ಪಡೆಯುವ ಬಗ್ಯೆ ಬರುವ ಅರ್ಜಿಗಳಿಗೆ ರುಸುಂ.

8. 1894ನೆ ಇಸವಿಯ 9ನೆ ನಂಬರು ಮೈಸೂರು ಸರ್ಕಾರದ ಆಧಾರ ಪತ್ರಗಳ ರೆಗ್ಯುಲೇಷನಿನ 10 ಮತ್ತು 11ನೆ ಪ್ರಕರಣಗಳ ಮೇರೆಗೆ ಬರುವ ಅರ್ಜಿಗಳ ವಿಷಯದಲ್ಲಿ ಇದರಡಿ ಕಂಡ ರುಸುಮು ಪಾವತಿಯಾಗಬೇಕು ;—

ಹಳೆಯಪತ್ರಕ್ಕೆ ಬದಲಾಗಿ ಕೊಡಲ್ಪಟ್ಟ ಅಥವಾ ದ್ವಿಪ್ರತಿಯಾಗಿ ಕೊಡಲ್ಪಟ್ಟ ಪ್ರತಿ ಒಂದು ಆಧಾರಪತ್ರಕ್ಕೂ—ಒಂದು ರೂಪಾಯಿ.

9. ಹೊಸ ಪತ್ರವನ್ನು ಪಡೆಯುವ ಬಗ್ಯೆ ವಾಪಸ್ ಮಾಡಲ್ಪಡುವ ಆಧಾರ ಪತ್ರದ ಹಿಂದುಗಡೆಯಲ್ಲಿ ಇದರಡಿ ಕಂಡ ಮೇರೆಗೆ ಷರಾ ಬರೆಯಬೇಕು :—

"ಈ ಪತ್ರಕ್ಕೆ ಬದಲಾಗಿ..................................(ಮಾಲೀಕನ ಹೆಸರು) ಎಂಬುವರಿಗೆ ಸಲ್ಲಬೇಕಾದ ಮತ್ತು..............................ಖಜಾನೆಯಲ್ಲಿ ಬಡ್ಡಿ ಪಾವತಿಯಾಗಬಹುದಾದ ಒಂದು ಹೊಸ ಆಧಾರ ಪತ್ರವನ್ನು ತೆಗೆದುಕೊಂಡಿರುತ್ತೇನೆ."

ಮಾಲೀಕನ ಅಥವಾ ಈ ಪತ್ರದ ಮಾಲೀಕರಾದ......................ಎಂಬುವರಿಂದ ಕ್ರಮವಾಗಿ ಅಧಿಕಾರ ಪಡೆದ ಪ್ರತಿನಿಧಿಯ ದಸ್ತಖತ್ತು.

10. ಒಬ್ಬ ಮನುಷ್ಯನು ಹಳೇ ಪತ್ರವನ್ನು ವಾಪಸ್‌ಮಾಡಿ ಅದಕ್ಕೆ ಪ್ರತಿಯಾಗಿ ಒಂದಕ್ಕಿಂತಲೂ ಹೆಚ್ಚಾದ ಹೊಸ ಪತ್ರಗಳು ಬೇಕೆಂದು ಅಪೇಕ್ಷಿಸಿದರೆ, ಸದರಿ ಪತ್ರದ ಹಿಂದುಗಡೆಯಲ್ಲಿ ಇದರಡಿ ಕಂಡ ನಮೂನೆಯಂತೆಯಾಗಲಿ, ಅಥವಾ ಸಾಧ್ಯವಾದಷ್ಟು ಮಟ್ಟಿಗೂ ಈ ನಮೂನೆಯಂತೆ ಇರುವ ನಮೂನೆಯಲ್ಲಿಯಾಗಲಿ ಷರಾ ಬರೆಯಬೇಕು :—

"ಈ ಪತ್ರಕ್ಕೆ ಬದಲಾಗಿ..................................(ಮಾಲೀಕನ ಹೆಸರು) ಎಂಬುವರಿಗೆ ಸಲ್ಲಬೇಕಾದ ಮತ್ತು..................................ಖಜಾನೆಯಲ್ಲಿ ಬಡ್ಡಿ ಪಾವತಿಯಾಗಬಹುದಾದ......................ರೂಪಾಯಿಗಳ ಎರಡು (ಅಥವಾ ಹೆಚ್ಚು) ಹೊಸ ಆಧಾರಪತ್ರಗಳನ್ನು ತೆಗೆದುಕೊಂಡಿರುತ್ತೇನೆ."

ಮಾಲೀಕನ ಅಥವಾ ಈ ಪತ್ರದ ಮಾಲೀಕರಾದ......................ಎಂಬುವರಿಂದ ಕ್ರಮವಾಗಿ ಅಧಿಕಾರ ಪಡೆದ ಪ್ರತಿನಿಧಿಯ ದಸ್ತಖತ್ತು.

11. ಒಬ್ಬ ಮನುಷ್ಯನು ಒಂದಕ್ಕಿಂತಲೂ ಹೆಚ್ಚು ಆಧಾರಪತ್ರಗಳನ್ನು ವಾಪಸ್‌ಮಾಡಿ ಅವುಗಳೆಲ್ಲಕ್ಕೂ ಪ್ರತಿಯಾಗಿ ಒಟ್ಟು ಮೊಬಲಗಿಗೆ ಒಂದೇ ಪತ್ರವನ್ನು ಕೊಡಬೇಕೆಂದು ಕೇಳಿದರೆ, ವಾಪಸ್ ಮಾಡಿದ ಪತ್ರಗಳ ಹಿಂಭಾಗದಲ್ಲಿ ಇದರಡಿ ಕಂಡ ನಮೂನೆಯಲ್ಲಾಗಲಿ ಅಥವಾ ಸಾಧ್ಯವಾದ ಮಟ್ಟಿಗೂ ಈ ನಮೂನೆಯಂತೆ ಇರುವ ನಮೂನೆಯಲ್ಲಾಗಲಿ ಷರಾ ಬರೆಯಬೇಕು :—

ಈ ಪತ್ರಕ್ಕೆ ಪ್ರತಿಯಾಗಿ ಇದರ ಮತ್ತು..................................(ನಂಬರ್ ಮತ್ತು ಮೊಬಲಗುಗಳ) ಇತರ ಪತ್ರಗಳ ಒಟ್ಟು ಮೊಬಲಗಿಗೆ......................(ಮಾಲೀಕರ ಹೆಸರು) ಎಂಬುವರಿಗೆ ಸಲ್ಲಬೇಕಾದ ಮತ್ತು......................ಖಜಾನೆಯಲ್ಲಿ ಬಡ್ಡಿ ಪಾವತಿಯಾಗಬಹುದಾದ ಒಂದೇ ಹೊಸ ಪತ್ರವನ್ನು ತೆಗೆದುಕೊಂಡಿರುತ್ತೇನೆ.

ಮಾಲೀಕನ ಅಥವಾ ಈ ಪತ್ರದ ಮಾಲೀಕರಾದ......................ಎಂಬುವರಿಂದ ಕ್ರಮವಾಗಿ ಅಧಿಕಾರ ಪಡೆದ ಪ್ರತಿನಿಧಿಯ ದಸ್ತಖತ್ತು.

12. ಮೇಲ್ಕಂಡ ನಿಬಂಧನೆಗಳಲ್ಲಿ ನಮೂದಿಸಿರುವ ಷರಾ ನಮೂನೆಯನ್ನು ಸ್ಪಷ್ಟವಾಗಿಯೂ ಕರಾರ್ವಾಕಾವಾಗಿಯೂ ಬರೆಯಬೇಕು ; ಮತ್ತು ಹೊಸ ಪತ್ರದ ಮೊಬಲಗು ಯಾರಿಗೆ ಪಾವತಿಯಾಗಬೇಕೋ ಅಂಥಾವರ ಹೆಸರಿನ ವಿಷಯದಲ್ಲಿ ಸಂದೇಹಕ್ಕೆ ಅವಕಾಶವೇ ಇರಕೂಡದು. ಮಾಲೀಕನೇ ದಸ್ತಖತ್ತು ಮಾಡಿದಾಗಲೂ, ಕ್ರಮವಾಗಿ ಅಧಿಕಾರ ಪಡೆದ ಪ್ರತಿನಿಧಿಯು ತನ್ನ ದಸ್ತಖತ್ತಿನ ಕೆಳಗೆ ಮಾಲೀಕನ ಹೆಸರನ್ನು ಬರೆದಾಗಲೂ ಅಂಥಾ ಮಾಲೀಕನ ದಸ್ತಖತ್ತಿನ ಯಾ ಹೆಸರಿನ ಅಕ್ಷರಸಂಯೋಜನಕ್ರ

ಮವೂ ಪತ್ರದಲ್ಲಿ ಅಥವಾ (ಸಂದರ್ಭಾನುಸಾರ) ವರ್ಗಾಯಿಸುವ ಇಂಡಾರ್ಸ್ಮೆಂಟಿನಲ್ಲಿ ನಮೂದಿಸಿರುವ ಹೆಸರಿನ ಯಾ ದಸ್ತುಖತ್ತಿನ ಅಕ್ಷರಸಂಯೋಜನಕ್ರಮವೂ ಒಂದೇ ಆಗಿರಬೇಕು. ಮಾಲೀಕನೇ ಸ್ವಂತವಾಗಿ ಷರಾಕ್ಕೆ ದಸ್ತುಖತ್ತು ಮಾಡಿದ ಪಕ್ಷದಲ್ಲಿ ಸದರೀ ದಸ್ತುಖತ್ತಿನ ಕೆಳಗೆ ತನ್ನ ವಾಡಿಕೆಯಾದ ದಸ್ತುಖತ್ತನ್ನೂ ಹಾಕಬಹುದು.

ಸರ್ಕಾರಿ ಆಧಾರಪತ್ರಗಳಿಗೆ ಪ್ರತಿಯಾಗಿ ಹೊಸ ಪತ್ರಗಳನ್ನು ಹೇಗೆ ಮತ್ತು ಎಲ್ಲಿ ಪಡೆಯಬಹುದು ?

13. ತಮ್ಮ ಪತ್ರಕ್ಕೆ ಬದಲಾಗಿ ಹೊಸ ಪತ್ರವನ್ನು ಅಪೇಕ್ಷಿಸುವ ಮಾಲೀಕರು ಮುಂದೆ ಹೇಳುವ ಎರಡು ವಿಧಗಳ ಪೈಕಿ ಯಾವುದಾದರೂ ಒಂದು ವಿಧದಲ್ಲಿ ಹೊಸಪತ್ರವನ್ನು ಪಡೆಯಬಹುದು. ಅವು ಯಾವುವೆಂದರೆ :—ಮಾಲೀಕನು ಪತ್ರದಲ್ಲಿ ಕ್ರಮವಾದ ಷರಾ ಬರೆದು ಅದನ್ನು ತಾನೇ ಖುದ್ದಾಗಿಯಾಗಲಿ ಅಥವಾ ಒಬ್ಬ ಪ್ರತಿನಿಧಿಯ ಮೂಲಕವಾಗಿಯಾಗಲಿ (1) ಕಂಟ್ರೋಲರವರ ಆಫೀಸಿನಲ್ಲಿ ಹಾಜರ್ಮಾಡಬಹುದು ; ಅಥವಾ (2) ಕಂಟ್ರೋಲರವರ ಆಫೀಸಿಗೆ ಕಳುಹಿಸುವ ಬಗ್ಗೆ ಒಂದು ಸರ್ಕಾರಿ ಖಜಾನೆಯಲ್ಲಿ ಅದನ್ನು ಹಾಜರ್ಮಾಡಬಹುದು. ಕಂಟ್ರೋಲರವರು 1894ನೆ ಇಸವಿಯ 9ನೆ ನಂಬರ ಮೈಸೂರು ಸರ್ಕಾರಿ ಆಧಾರಪತ್ರಗಳ ರೆಗ್ಯುಲೇಷನಿನ 10ನೆ ಪ್ರಕರಣದಲ್ಲಿ ಅದಕ್ಕಾಗಿ ನೇಮಿಸಲ್ಪಟ್ಟದ್ದಾಗಿ ನಮೂದಿಸಿರುವ ಆಫೀಸರರಾಗಿರುತ್ತಾರೆ.

14. ತತ್ಕಾಲದ ಕಂಟ್ರೋಲರವರೇ ಮೈಸೂರು ಸರ್ಕಾರಿ ಆಧಾರ ಪತ್ರಗಳ ರೆಗ್ಯುಲೇಷನಿನ 11ನೆ ಪ್ರಕರಣದಲ್ಲಿ ನಮೂದಿಸಿರುವ ಆಫೀಸರರಾಗಿರುತ್ತಾರೆ.

15. ಬಡ್ಡಿ ಪಾವತಿ ವಾರಂಟಿನ ನಮೂನೆಯು ಹೇಗಿರಬೇಕೆಂಬುದನ್ನು ವಿಧಾಯಿಸುವುದಕ್ಕೂ, ಸಂಬಂಧಪಟ್ಟ ಆಫೀಸರುಗಳ ನಡವಳಿಕೆ ಬಗ್ಗೆ ಬೇಕಾಗುವ ಉಪ ನಿಬಂಧನೆಗಳನ್ನು ಅಥವಾ ಅನುಜ್ಞೆಗಳನ್ನು ಮೇಲ್ಕಂಡ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಮಾಡುವುದಕ್ಕೂ ಕಂಟ್ರೋಲರ್ರವರಿಗೆ ಅಧಿಕಾರ ಕೊಟ್ಟಿದೆ.

ಮೈಸೂರು ಸರ್ಕಾರಿ ಆಧಾರಪತ್ರ (ಪ್ರಾಮಿಸರಿ ನೋಟ) ಗಳನ್ನು ಕಳೆದುಕೊಂಡಾಗ ಅನುಸರಿಸಬೇಕಾದ ಕ್ರಮ.

16. ಮೈಸೂರು ಸರ್ಕಾರಿ ಪ್ರಾಮಿಸರಿ ನೋಟನ್ನು ಕಳೆದುಕೊಂಡ ಅಥವಾ ಅದು ನಾಶವಾದ ವಿಷಯವನ್ನು ಪ್ರಥಮತಃ ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದರವರ ಸರ್ಕಾರದ ಕಂಟ್ರೋಲರವರಿಗೆ ಲೆಟರು ಬರೆದುಕೊಳ್ಳುವುದರ ಮೂಲಕ ತಿಳಿಯಪಡಿಸಬೇಕು ;

ಈ ಲೆಟರಿನಲ್ಲಿ ಇದರಡಿ ಕಂಡ ಅಂಶಗಳನ್ನು ನಮೂದಿಸಬೇಕು :—

(1) ಇದರಡಿ-ಕಂಡ ನಮೂನೆಯಂತೆ ನೋಟಿನ ತಪಶೀಲು :—

ಶೇಕಡಾ..........ರೂಪಾಯಿನ..............ನೆ ಸಾಲಿನ ಮೈಸೂರು ಸ್ಟೇಟು ಲೋನಿನ ....ನೆ ನಂಬರಿನ..............ರೂಪಾಯಿಗಳ ಪ್ರಾಮಿಸರಿ ನೋಟು.

(2) ಕಳೆದ ಯಾವ ಛಮ್ಮಾಹೆಗೆ ಸಂಬಂಧಪಟ್ಟ ಬಡ್ಡಿ ಪಾವತಿಯಾಗಿರುತ್ತದೆ ?

(3) ಯಾರಿಗೆ ಪಾವತಿಯಾಗಿರುತ್ತದೆ ?

(4) ಯಾರ ಹೆಸರಿಗೆ ನೋಟು ಹುಟ್ಟಿತೋ ಅಂಥಾವರ ಹೆಸರು (ತಿಳಿದಿದ್ದರೆ).

(5) ಹಾಲಿ ಯಾವ ಖಜಾನೆಯಲ್ಲಿ ಪ್ರೋನೋಟಿನ ಬಾಬತು ಬಡ್ಡಿಯು ಪಾವತಿಯಾಗಬೇಕೆಂದು ನಮೂದಾಗಿತ್ತು ?

(6) ಯಾವ ಸಂದರ್ಭಗಳಲ್ಲಿ ಸದರೀ ಪ್ರೋನೋಟನ್ನು ಕಳೆದುಕೊಳ್ಳಲಾಯಿತು ?

(7) ಕಳೆದುಕೊಂಡ ಸಂಗತಿಯನ್ನು ಪೊಲೀಸಿಗೆ ತಿಳಿಸಿ ಇರುತ್ತದೆಯೇ ?

ಮೇಲ್ಕಂಡ ಲೆಟರಿನ ಜತೆಯಲ್ಲಿ ಇದರಡಿ ಕಂಡವುಗಳನ್ನು ಕಳುಹಿಸತಕ್ಕದ್ದು :—

(*a*) ಟಪ್ಪಾಲುಮೇಲೆ ಕಳುಹಿಸಿದಾಗ ಪ್ರೋನೋಟು ಕಳೆದುಹೋಗಿದ್ದರೆ, ನೋಟು ನಿಶಿ ರವಾನಿಸಿದ ಲೆಟರಿಗೆ ಪೋಸ್ಟು ಆಫೀಸಿನಿಂದ ಪಡೆದ ರಿಜಿಸ್ಟರ್ ದಾಖಲೆ.

(*b*) ಪೊಲೀಸು ರಿಪೋರ್ಟು (ದೊರೆಯುವುದಾಗಿ ಇದ್ದರೆ).

(*c*) ಯಾವ ಖಜಾನೆಯಲ್ಲಿ ಆಖೈರು ಬಡ್ಡಿ ಪಾವತಿಯಾಯಿತೋ ಅಂಥಾ ಖಜಾನೆ ಆಫಸರರಿಂದ ಸೈನಾದ ಲೆಟರು ; (ಇದರಲ್ಲಿ ಪ್ರೋನೋಟಿನ ಬಗ್ಗೆ ಕೊನೇಸಾರಿ ಪಾವತಿಯಾದ ಬಡ್ಡಿಯನ್ನೂ, ಬಡ್ಡಿ ಯಾರಿಗೆ ಪಾವತಿಯಾಯಿತೆಂಬದನ್ನೂ ಸರ್ಟಿಫೈ ಮಾಡಿರಬೇಕು).

(*d*) ಅರ್ಜೀದಾರನು ಆಖೈರ್ ಮಾಲೀಕನಲ್ಲದೆ ಇದ್ದಪಕ್ಷದಲ್ಲಿ, ಅಂಥಾ ಆಖೈರು ಮಾಲೀಕನಿಂದ ಅರ್ಜೀದಾರನಿಗೆ ಪ್ರೋನೋಟು ಹೇಗೆ ಬಂತೆಂಬುದನ್ನು ಕಂಡುಹಿಡಿಯುವ ಬಗ್ಗೆ ಅವಶ್ಯಕವಾದ ದಸ್ತಾವೇಜುಗಳು.

(*e*) ಕಳೆದುಹೋದ ಅಥವಾ ನಾಶವಾದ ಪ್ರೋನೋಟ್ ಪೈಕಿ ಉಳಿದಿರುವಂಥಾ ಯಾವುದ್ದಾದರೂ ಭಾಗ ಅಥವಾ ಚೂರು.

ಕಂಟ್ರೋಲರವರಿಗೆ ಬರೆದ ಲೆಟರಿನ ಒಂದು ದ್ವಿಪ್ರತಿಯನ್ನು ಬಡ್ಡಿ ಪಾವತಿಯಾಗುವ ಖಜಾನೆಗೆ ಸಹಾ ಕಳುಹಿಸತಕ್ಕದ್ದು.

17. ಕಳೆದುಹೋದ ಅಥವಾ ನಾಶವಾದ ಪ್ರಾಮಿಸರಿ ನೋಟಿನ ದ್ವಿಪ್ರತಿಯನ್ನು ಅಪೇಕ್ಷಿಸುವ ಅರ್ಜೀದಾರನು ಸದರೀ ಸಂಗತಿಯನ್ನು ಕ್ರಮವಾಗಿ ಮೈಸೂರು ಗೆಜೆಟ್ಟಿನ ಮೂರು ವಾರಗಳ ಸಂಚಿಕೆಗಳಲ್ಲಿ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಛಾಪಿಸಿ ಪ್ರಸಿದ್ಧಪಡಿಸಬೇಕು. ಇಂಥಾ ಪ್ರಕಟನೆಯು ಇದರಡಿ ಕಂಡ ನಮೂನೆಯಲ್ಲಾಗಲಿ ಅಥವಾ ಸಾಧ್ಯವಾದಮಟ್ಟಿಗೆ ಅದಕ್ಕನುಸಾರವಾದ ನಮೂನೆಯಲ್ಲಾಗಲಿ ಇರಬೇಕು :—

ಕಳೆದುಹೋಗಿದೆ (ಅಥವಾ ನಾಶವಾಗಿದೆ).

ಮೊದಲು..............................ಎಂಬವರ ಹೆಸರಿನಲ್ಲಿದ್ದು ಆಖೈರಿಗೆ..............................ಎಂಬ ಸ್ವತ್ತು ಕರ್ತರ ಹೆಸರಿಗೆ ಇಂಡಾರ್ಸು ಮಾಡಲ್ಪಟ್ಟು ಇವರಿಂದ ಮತ್ಯಾರಿಗೂ ಇಂಡಾರ್ಸು ಮಾಡಲ್ಪಡದೆ ಇರುವ.........ನೆ ಸಾಲಿನ ಶೇಕಡಾ.........ಬಡ್ಡಿಯ.............ರೂಪಾಯಿಗಳ............ನೆ ನಂಬರಿನ ಮೈಸೂರು ಸರ್ಕಾರಿ ಪ್ರಾಮಿಸರಿ ನೋಟು ಕಳೆದುಹೋಗಿರುವುದರಿಂದ (ಅಥವಾ ನಾಶವಾಗಿರುವುದರಿಂದ) ಈ ನೋಟೀಸು ಮೂಲಕ ತಿಳಿಯಪಡಿಸುವುದೇನಂದರೆ—ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದುರವರ ಸರ್ಕಾರದ ಕಂಟ್ರೋಲರವರು ಮೇಲ್ಕಂಡ ನೋಟಿನ ಮೊಬಲಗನ್ನೂ, ಅದರಮೇಲೆ ಆಗುವ ಬಡ್ಡಿಯನ್ನೂ ಪಾವತಿಮಾಡದೆ ನಿಲ್ಲಿಸಿ ಇರುತ್ತಾರೆ. ನಾನು, ಸ್ವತ್ತು ಕರ್ತನ ಪರವಾಗಿ ದ್ವಿಪ್ರತಿ ನೋಟನ್ನು ಪಡೆಯುವ ಬಗ್ಯೆ ಅರ್ಜಿ ಕೊಡಬೇಕೆಂದು ಯೋಚಿಸಿದ್ದೇನಲ್ಲದೆ ಮೇಲ್ಕಂಡ ನೋಟನ್ನು ಖರೀದಿಗೆ ತೆಗೆದುಕೊಳ್ಳಕೂಡದೆಂದೂ, ಅದರ ವಿಷಯದಲ್ಲಿ ಇತರವಿಧವಾದ ಅಮಲ್ ನಡೆಸಕೂಡದೆಂದೂ ಸಮಸ್ತ ಜನಗಳಿಗೂ ಈ ಮೂಲಕ ಎಚ್ಚರಿಕೆ ಕೊಟ್ಟು ಇರುತ್ತೇನೆ.

ಈ ಪ್ರಕಟನೆಯನ್ನು ಹಾಕಿಸಿದವರ ಹೆಸರು..............................ಅವರ ವಾಸಸ್ಥಳ....................

18. ಆಖೈರು ಪ್ರಕಟನೆಯು ಛಾಪಿಸಲ್ಪಟ್ಟ ತಾರೀಖು ಲಾಗಾಯಿತು ಆರುತಿಂಗಳು ಕಳೆದನಂತರ, ನೋಟಿನ ಒಂದು ಭಾಗವು ಕಳೆದುಹೋಗಿರುವ ಅಥವಾ ನಾಶವಾಗಿರುವ ಸಂಗತಿಯೂ ಮತ್ತು ಅರ್ಜೀದಾರನಿಗೆ ನೋಟಿನಲ್ಲಿರುವ ಹಕ್ಕೂ ಸಹಾ ವಾಸ್ತವವೆಂಬುವುದು ಕಂಟ್ರೋಲರವರಿಗೆ ದೃಢವಾಗಿ ಕಂಡುಬಂದು, ಆ ರೀತಿ ಕಳೆದುಹೋದ ಅಥವಾ ನಾಶವಾದ ನೋಟನ್ನು ಗುರ್ತಿಸುವುದಕ್ಕೆ ನೋಟ್ ಪೈಕಿ ತಕ್ಕಷ್ಟು ಭಾಗವು ಹಾಜರ್‍ಮಾಡಲ್ಪಟ್ಟಿದ್ದಲ್ಲಿ ಕಂಟ್ರೋಲರವರು ಮುಂದೆ ನಮೂದಿಸಿರುವ ಮೇರೆಗೆ (ಜಾಮಿನ್ ಸಹಿತ ಅಥವಾ ಜಾಮಿನ್ ಇಲ್ಲದೇನೇ) ತಕ್ಕ ಇಂಡೆಮ್ನಿಟಿ ಬಾಂಡ್ (ಪತ್ರವನ್ನು) ಬರೆಸಿಕೊಂಡು ಮೇಲೆ ಹೇಳಿದ ಪ್ರಕಾರ ಕಳೆದುಹೋದ ಅಥವಾ ನಾಶವಾದ ನೋಟಿಗೆ ಬದಲಾಗಿ ದ್ವಿಪ್ರತಿ ನೋಟನ್ನು ಅರ್ಜೀದಾರನಿಗೆ ಕೊಡತಕ್ಕದ್ದು. ಆದರೆ ಕಳೆದುಹೋದ ಅಥವಾ ನಾಶವಾದ ನೋಟಿನ ಒಂದು ಭಾಗವು ಅಥವಾ ಆ ನೋಟ್ ಪೈಕಿ ತಕ್ಕಷ್ಟು ಭಾಗವು ಮೇಲ್ಕಂಡ ಮೇರೆಗೆ ಹಾಜರ್‍ಮಾಡಲ್ಪಡದೆ ಹೋದಾಗ ಅಂಥಾ ಆಖೈರ್ ಪ್ರಕಟನೆಯು ಛಾಪಿಸಲ್ಪಟ್ಟ ತಾರೀಖು ಲಾಗಾಯಿತು ಎರಡು ವರ್ಷಗಳು ಗತಿಸಿದನಂತರ ಕಂಟ್ರೋಲರವರಿಗೆ ಮೇಲ್ಕಂಡ ಸಂಗತಿಗಳು ತೃಪ್ತಿಕರವಾಗಿರುವುವೆಂತ ತೋರಿದಲ್ಲಿ, ಮುಂದೆ ನಮೂದಾಗುವ ಮೇರೆಗೆ ಇಂಡೆಮ್ನಿಟಿ ಬಾಂಡ್ ಬರೆಸಿಕೊಂಡು ಯಾವ ಖಜಾನೆಯಲ್ಲಿ ಬಡ್ಡಿ ಬಟವಾಡೆ ಆಗಬೇಕಾಗಿದೆಯೋ ಅಂಥಾ ಖಜಾನೆಗೆ ಹಾಗೆ ಕಳೆದುಹೋದ ಅಥವಾ ನಾಶವಾದ ನೋಟಿನ ವಿಷಯದಲ್ಲಿ, ದ್ವಿಪ್ರತಿ ನೋಟು ಕೊಡಲ್ಪಡುವ ನಿರೀಕ್ಷಣೆ ಮೇಲೆ ಅರ್ಜೀದಾರನಿಗೆ ಬಡ್ಡಿ ಪಾವತಿ ಮಾಡಬೇಕೆಂದು ಕಂಟ್ರೋಲರವರು ಹುಕುಂ ಕೊಡಬಹುದು; ಇದೂ ಅಲ್ಲದೆ, ಕಳೆದುಹೋದ ಅಥವಾ ನಾಶವಾದ ಪ್ರೋನೋಟಿನ ವಿಷಯವನ್ನು ಯಾವ ಪಟ್ಟಿಯಲ್ಲಿ ಪ್ರಥಮತಃ ನಮೂದಿಸಿ ಪ್ರಕಟಪಡಿಸೋಣಾಗಿರುತ್ತದೆಯೋ ಆ ಪ್ರಕಟನೆಯ ತಾರೀಖು ಲಾಗಾಯಿತು ಆರು ವರುಷಗಳು ಗತಿಸಿದನಂತರ ಇದಕ್ಕೆ ವಿರೋಧವಾದ ಸಂಗತಿ ಹೊರಪಡದೆ ಇದ್ದರೆ, (ಮುಂದೆ ನಮೂದಾಗುವ ಮೇರೆಗೆ ಅರ್ಜೀದಾರನಿಂದ ಒಂದು ಇಂಡೆಮ್ನಿಟಿ ಬಾಂಡನ್ನೂ ಕಂಟ್ರೋಲರವರಿಗೆ ಅಗತ್ಯ ಕಂಡುಬಂದರೆ ಇಬ್ಬರು ಜಾಮಿನ್‍ದಾರರಿಂದ ಮತ್ತೊಂದು ಇಂಡೆಮ್ನಿಟಿ ಬಾಂಡನ್ನೂ ಬರೆಸಿಕೊಂಡು) ಮೇಲ್ಕಂಡಂತೆ ಕಳೆದುಹೋದ ಅಥವಾ ನಾಶವಾದ ನೋಟಿಗೆ ಬದಲಾಗಿ ದ್ವಿಪ್ರತಿ ನೋಟನ್ನು ಕೊಡತಕ್ಕದ್ದು.

19. ಹಿಂದಿನ ನಿಬಂಧನೆಯ ಮೇರೆಗೆ ಕಂಟ್ರೋಲರವರಿಂದ ಕೊಡಲ್ಪಟ್ಟ ಹುಕುಮಿನ ತಾರೀಖು ಲಾಗಾಯಿತು ಆರು ವರುಷಗಳೊಳಗಾಗಿ ತಕ್ಕ ಕಾರಣಗಳು ಅವರಿಗೆ ಕಂಡುಬಂದರೆ ಅಂಥಾ ಹುಕುಮನ್ನು ಅವರು ಬದಲಾಯಿಸಬಹುದು ಅಥವಾ ರದ್ದುಪಡಿಸಬಹುದು; ಮತ್ತು ದ್ವಿಪ್ರತಿ ನೋಟು ಕೊಡುವುದಕ್ಕೆ ಕಾಲಾವಧಿಯನ್ನು ತಮಗೆ ಯುಕ್ತ ತೋರುವಂತೆ ಹನ್ನೆರಡು ವರುಷಗಳಿಗಾಗಲಿ ಅಥವಾ ಆರು ವರುಷಗಳಿಗೆ ಕಮ್ಮಿ ಇಲ್ಲದಂತೆಯಾಗಲಿ ಒಡಾಯಿಸಬಹುದು.

20. ಪ್ರೋನೋಟು ಯಾ ನೋಟುಗಳ ದ್ವಿಪ್ರತಿಗಳನ್ನು ಕೊಡುವಾಗ ಬರೆಸಿಕೊಳ್ಳಲ್ಪಡುವ ಇಂಡೆಮ್ನಿಟಿ ಪತ್ರಗಳನ್ನು ಅಂಥಾ ನೋಟು ಯಾ ನೋಟುಗಳ ದ್ವಿಗುಣ ಮೊಬಲಗಿಗೆ ಬರೆಸಿಕೊಳ್ಳಬೇಕಾಗಿರುತ್ತದೆ; ಮತ್ತು ಬಡ್ಡಿ ಪಾವತಿ ಬಗ್ಯೆ ಹುಕುಂ ಕೊಡುವ ಕಾಲದಲ್ಲಿ ಬರೆಸಿಕೊಳ್ಳಲ್ಪಡುವ ಪತ್ರಗಳನ್ನು ಆ ಬಗ್ಯೆ ಪಾವತಿ ಯಾಗಬೇಕಾದ ಬಡ್ಡಿಯ ದ್ವಿಗುಣ ಮೊಬಲಗು ಎಂದರೆ ಸದರಿ ನೋಟಿನ ಮೇಲೆ ಅದುವರೆಗೆ ಪಾವತಿಯಾಗಬೇಕಾಗಿರುವ ಹಿಂದಿನ ಬಡ್ಡಿಯ ದ್ವಿಗುಣ ಮೊಬಲಗನ್ನೂ, ದ್ವಿಪ್ರತಿ ನೋಟು ಹುಟ್ಟುವುದಕ್ಕೆ ಮುಂಚೆ ಗತಿಸಬೇಕಾದ ಆರು ವರುಷಗಳ ಅವಧಿಯಲ್ಲಿ ಮುಂದೆ ಬರಬೇಕಾಗುವ ಬಡ್ಡಿಯ ದ್ವಿಗುಣ ಮೊಬಲಗನ್ನೂ ಸೇರಿಸಿಕೊಳ್ಳುವುದರಿಂದ ಆಗುವ ಒಟ್ಟು ಮೊಬಲಗಿಗೆ ಬರೆಸಿಕೊಳ್ಳಬೇಕು. ಸಾಧಾರಣವಾದ ಸಂದರ್ಭಗಳಲ್ಲಿ, ಸರ್ಕಾರದವರು ವಿಧಿಸಿರುವ ಅಚ್ಚಾದ ನಮೂನೆಯಲ್ಲಿ ಸದರಿ ಪತ್ರಗಳನ್ನು ಕಂಟ್ರೋಲರವರು ಬರೆಸಿಕೊಳ್ಳಬಹುದು. ಇಂಥಾ ಪತ್ರದ ಮೊಬಲಗು 500 ರೂಪಾಯಿಗಳಿಗೆ ಮೀರದೆ ಇದ್ದರೆ ಅದರಮೇಲೆ ಯಾವ ರುಸುಮನ್ನೂ ವಸೂಲ್‍ಮಾಡತಕ್ಕದ್ದಿಲ್ಲ; ಆದರೆ ಇದಕ್ಕಿಂತಲೂ ಹೆಚ್ಚಾದ ಮೊಬಲಗಿನ ಪತ್ರಗಳ ಮೇಲೆ ಪ್ರತಿ 1,000 ರೂಪಾಯಿಗೂ ಅಥವಾ 1,000 ರೂಪಾಯಿನ ಭಿನ್ನಾಂಶಕ್ಕೂ 5 ರೂಪಾಯಿ ಮೇರೆಗೆ ರುಸುಮನ್ನು ವಸೂಲ್‍ಮಾಡಬೇಕು; ಪರಂತು ಯಾವುದೊಂದು ಪತ್ರದಮೇಲೂ 30 ರೂಪಾಯಿಗಳಿಗಿಂತಲೂ ಹೆಚ್ಚು ರುಸುಮನ್ನು ವಸೂಲ್‍ಮಾಡತಕ್ಕದ್ದಲ್ಲ. ಆದರೆ ಯಾವುದಾದರೂ ಸಂದರ್ಭದಲ್ಲಿ ಗವರ್ನಮೆಂಟು ಅಡ್ವೋಕೇಟರಿಂದಲೇ ಖುದ್ದಾಗಿ ಪತ್ರವನ್ನು ತಯಾರ್‍ಮಾಡಿಸಬೇಕೆಂದು ಕಂಟ್ರೋಲರವರಿಗೆ ತೋರಿದರೆ ಸದರಿ ಆಫೀಸರವರಿಗೆ 32 ರೂಪಾಯಿಗಳ ರುಸುಮನ್ನು ಕೊಡತಕ್ಕದ್ದು.

21. ಆಧಾರಪತ್ರಗಳ ದ್ವಿಪ್ರತಿಗಳು ಕೊಡಲ್ಪಡುವ ನಿರೀಕ್ಷಣೆಯಮೇಲೆ ಬಡ್ಡಿ ಪಾವತಿ ಮಾಡಬೇಕೆಂತಾ ಯಾವ ಕಳೆದುಹೋದ ಅಥವಾ ನಾಶವಾದ ಪತ್ರಗಳ ವಿಷಯದಲ್ಲಿ ಹುಕುಂ ಮಾಡೋಣಾಗಿರುತ್ತದೆಯೋ ಅಂಥಾ ಆಧಾರಪತ್ರಗಳ ಪಟ್ಟಿಯನ್ನು 11ನೆ ಪ್ರಕರಣದಲ್ಲಿ ನಮೂದಾಗಿರುವಂತೆ ಆರು ತಿಂಗಳಿಗೆ ಒಂದಾವರ್ತಿ ಎಂದರೆ ಪ್ರತಿ ಜನವರಿ ಮತ್ತು ಜುಲೈ ಮಾಹೆಗಳಲ್ಲಿ ಅಥವಾ ಅನಂತರ ಸಾಧ್ಯವಾದಷ್ಟು ಜಾಗ್ರತೆಯಲಿ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ಮಾಡಬೇಕು. ಯಾವ ಯಾವ ಆಧಾರ ಪತ್ರಗಳ ವಿಷಯದಲ್ಲಿ ಮೇಲ್ಕಂಡಮೇರೆಗೆ ಹುಕುಂ ಕೊಡೋಣಾಗಿರುತ್ತದೆಯೋ ಅಂಥಾ ಎಲ್ಲಾ ಪತ್ರಗಳನ್ನೂ ಅಂಥಾ ಹುಕುಂ ಕೊಟ್ಟನಂತರ ಪ್ರಥಮತಃ ಫಾಯಿಷ್ ಆಗುವ ಪಟ್ಟಿಯಲ್ಲಿ ಸೇರಿಸಬೇಕಲ್ಲದೆ, ಪ್ರಥಮತಃ ಫಾಯಿಷ್ ಆದ ತಾರೀಖು ಲಾಗಾಯಿತು ಅಥವಾ ಪ್ರಥಮತಃ ಕೊಡಲ್ಪಟ್ಟ ಪತ್ರಗಳಮೇಲೆ ಆಖೈರಿನಲ್ಲಿ ಬಡ್ಡಿ ಪಾವತಿ ಮಾಡಿದ ತಾರೀಖು ಲಾಗಾಯಿತು ಎಂದರೆ, ಈ ಉಭಯ ತಾರೀಖುಗಳ ಪೈಕಿ ಯಾವ ತಾರೀಖು ಅನಂತರ ಬರುತ್ತದೆಯೋ ಆ ತಾರೀಖು ಲಾಗಾಯಿತು 6 ವರ್ಷಗಳು ಪೂರೈಸುವವರೆಗೆ ಪ್ರತಿ ಛಮ್ಮಾಹೆಯಲ್ಲಿಯೂ ಸದರಿ ಪಟ್ಟಿಯನ್ನು ಪ್ರಕಟಿಸುತ್ತಾ ಬರಬೇಕು. ಈ ಪಟ್ಟಿಯಲ್ಲಿ ಇದರಡಿ ಕಂಡ ತಪಶೀಲುಗಳನ್ನು ನಮೂದಿಸಬೇಕು ; ಯಾವುವೆಂದರೆ—ಸಾಲದ ಹೆಸರು, ಕಳೆದುಹೋದ ನೋಟಿನ ನಂಬರು, ಅದರ ಮೊಬಲಗು, ಅದು ಯಾರ ಹೆಸರಿಗೆ ಹುಟ್ಟಿತ್ತು, ಯಾವ ತಾರೀಖಿನಿಂದ ಅದಕ್ಕೆ ಬಡ್ಡಿ ಬರುತ್ತಾ ಇದೆ, ದ್ವಿಪ್ರತಿ ಅಪೇಕ್ಷಿಸುವ ಹಕ್ಕುದಾರನ ಹೆಸರು, ಬಡ್ಡಿ ಪಾವತಿ ವಿಷಯದಲ್ಲಾಗಲಿ ಅಥವಾ ದ್ವಿಪ್ರತಿಯನ್ನು ಕೊಡುವ ವಿಷಯದಲ್ಲಾಗಲಿ ಕಂಟ್ರೋಲರವರು ಕೊಟ್ಟ ಹುಕುಮಿನ ನಂಬರು ಮತ್ತು ತಾರೀಖು, ಮತ್ತು ಇಂಥಾ ನೋಟನ್ನು ಮೊದಲು ಯಾವ ಪಟ್ಟಿಯಲ್ಲಿ ಸೇರಿಸಲಾಯಿತೋ ಆ ಪಟ್ಟಿಯನ್ನು ಪ್ರಕಟಿಸಿದ ತಾರೀಖು.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜಾಸ್ಸಾಹೇಬ್ಬಹದ್ದರವರ ಸರ್ಕಾರಿ ಹುಕ್ಕುಂ.

ಮಲೆನಾಡಿನ ರೈತರು ಅನುಭವಿಸುವ ಹಕ್ಕುಗಳನ್ನು ಕ್ರಮಪಡಿಸುವ ಬಗ್ಯೆ ಮುಸೋದಾ ನಿಬಂಧನೆಗಳನ್ನು ಫಾರೆಸ್ಟು ಕನ್ಸರ್ವೇಟರವರು ಸರಿಯಾಗಿ ತಿದ್ದುಪಡಿಮಾಡಿ ರವಾನಿಸಿ ಬರಿಸಿದ 1908ನೆ ಆಗಸ್ಟು 14ನೆ ತಾರೀಖಿನ 1247ನೆ ನಂಬರು ಲೇಖನದಿಂದ ಆಖೈರಾಗುವ ಕಾಗದ ಪತ್ರಗಳನ್ನು ಪರಾಮರ್ಶಿಸಲಾಯಿತು.

ನಂ. ರೆ. 7365-74—ಫಾ. 164-04-8.

ತಾರೀಖು 17ನೆ ಮಾರ್ಚಿ 1909.

ಹುಕುಂ—ಸದರಿ ನಿಬಂಧನೆಗಳನ್ನು ಸರ್ಕಾರದವರು ಮಂಜೂರ್ಮಾಡಿರುವುದಲ್ಲದೆ ಮೈಸೂರು ಗೆಜೆಟ್ಟಿನಲ್ಲಿ ಇದರಡಿ ಕಂಡ ಇಸ್ತಿಹಾರನ್ನು ಇಂಗ್ಲಿಷಿನಲ್ಲಿಯೂ, ಕನ್ನಡದಲ್ಲಿಯೂ ಪ್ರಾಯಿಷ್ ಮಾಡಬೇಕೆಂದು ಹುಕುಂ ದಯಪಾಲಿಸಿರುತ್ತಾರೆ.

ಕೆ. ಎಸ್. ಚಂದ್ರಶೇಖರ ಐಯ್ಯರ್,
ಮೈಸೂರು ಸರ್ಕಾರದ ಸೆಕ್ರೆಟೆರಿ.

ಇಸ್ತಿಹಾರುನಾಮೆ.

ನಂ. ರೆ. 7375—ಫಾ. 164-04-9.

ತಾರೀಖು 17ನೆ ಮಾರ್ಚಿ 1909.

ಮಲೆನಾಡು ರೈತರ ವಿಶೇಷ ಹಕ್ಕುಗಳಿಗೆ ಸಂಬಂಧಪಟ್ಟ ನಿಬಂಧನೆಗಳು.

1896ನೆ ಇಸವಿ ಜನವರಿ 8ನೆ ತಾರೀಖಿನ 6084—ಫಾ. 105-95ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಪ್ರಾಯಿಷಾದ ನಿಬಂಧನೆಗಳನ್ನು ರದ್ದುಮಾಡಿ, ಶ್ರೀಮನ್ಮೈಸೂರು ಮಹಾರಾಜಾ ಸಾಹೇಬ್ಬಹದ್ದೂರ್ರವರ ಸರ್ಕಾರದವರು ಗ್ರಾಮ ಮತ್ತು ಡಿಸ್ಟ್ರಿಕ್ಟು ಜಂಗಲಿಗಳಿಂದಲೂ ಸರ್ವೆ ಸೆಟಲ್‌ಮೆಂಟಿನಲ್ಲಿ ದನಗಳು ಮುಫತ್ತಾಗಿ ಹುಲ್ಲು ಮೇಯಲು ಬಿಟ್ಟಿರುವ ಜಮೀನುಗಳಿಂದಲೂ ಜಂಗಲಿ ಉತ್ಪತ್ತಿಯನ್ನು ಉಪಯೋಗಿಸುವ ವಿಚಾರವಾಗಿ ಮಲೆನಾಡಿನಲ್ಲಿ ರೈತರಿಗಿರುವ ಹಕ್ಕುಗಳನ್ನು ಗೊತ್ತುಮಾಡಿರುವ 1900ನೆ ಇಸವಿಯ 11ನೆ ನಂಬರು ಮೈಸೂರು ಫಾರೆಸ್ಟು ರೆಗ್ಯುಲೇಷನಿನ 34 ಮತ್ತು 35ನೆ ಪ್ರಕರಣಗಳ ಮೇರೆಗೆ ಈ ಕೆಳಗಣ ನಿಬಂಧನೆಗಳನ್ನು ಸಾದರ್ಮಾಡಲು ಹುಕುಂ ದಯಪಾಲಿಸಿರುತ್ತಾರೆ.

1. ಈ ನಿಬಂಧನೆಗಳು ಪರಿಶಿಷ್ಟದಲ್ಲಿ 'ಮಲೆನಾಡು' ಎಂದು ಗೊತ್ತುಮಾಡಿರುವ ತಾಲ್ಲೂಕುಗಳಿಗೂ ಮತ್ತು ತಾಲ್ಲೂಕುಗಳ ಭಾಗಗಳಿಗೂ ಅನ್ವಯಿಸುತ್ತವೆ. ಇವುಗಳಿಂದ ರೈತರಿಗೆ ಕೊಟ್ಟಿರುವ ಹಕ್ಕುಗಳನ್ನು ಗ್ರಾಮ ಜಂಗಲಿಗಳು ಎಲ್ಲಿಲ್ಲಿ ಗೊತ್ತಾಗಿವೆಯೊ ಅಂಥಾ ಜಂಗಲಿಗಳ ಎಲ್ಲೆಗಳೊಳಗೂ, ಮತ್ತು ಅಂಥಾ ಗ್ರಾಮ ಜಂಗಲಿಗಳನ್ನು ಗೊತ್ತುಮಾಡದೆ ಇರುವಾಗ ಡಿಸ್ಟ್ರಿಕ್ಟು ಜಂಗಲಿಗಳ ಅಥವಾ ಇದಕ್ಕೋಸ್ಕರವಾಗಿಯೇ ಗೊತ್ತುಮಾಡಲ್ಪಟ್ಟಿರುವಂಥಾ ಅವುಗಳ ಭಾಗಗಳ ಎಲ್ಲೆಗಳೊಳಗೆ ಅವರು ಅನುಭವಿಸಬೇಕು. ಪರಂತು, ಈ ನಿಬಂಧನೆಗಳು ಕಾಫಿ ಪ್ಲಾಂಟರುಗಳಿಗೆ ಲಗಾವಾಗುವುದಿಲ್ಲ.

2. ಡಿಸ್ಟ್ರಿಕ್ಟು ಜಂಗಲಿಗಳಲ್ಲಿ ಹುಲ್ಲುಮೇಯಿಸಲು ಹಾಲಿ ಇರುವ ಹಕ್ಕನ್ನಾಗಲಿ ಅಥವಾ ಬಾಗಾಯಿತು ಜಮೀನುಗಳ ಮಾಲೀಕರಿಗೆ ತಮ್ಮ ಸೊಪ್ಪಿನ ಬೆಟ್ಟಗಳಲ್ಲಿ ಅವರಿಗೆ ಹಾಲಿ ಇರುವ ಹಕ್ಕುಗಳನ್ನಾಗಲಿ, ಅಥವಾ ಮಲೆನಾಡಿನಲ್ಲಿರುವ ಕಾನೆಗಳಲ್ಲಿ ಅವರಿಗಿರುವ ಹಕ್ಕುಗಳನ್ನಾಗಲಿ ಈ ನಿಬಂಧನೆಗಳು ಬದಲಾಯಿಸುವುದಿಲ್ಲ. ಆದರೆ ಒಂದು ಡಿಸ್ಟ್ರಿಕ್ಟು ಜಂಗಲಿಯನ್ನು 1900ನೆ ಇಸವಿಯ 11ನೆ ನಂಬರು ಫಾರೆಸ್ಟು ರೆಗ್ಯುಲೇಷನ್ 35 (iii) ನೆ ಪ್ರಕರಣದ ವಿಧಿಗಳ ಮೇರೆಗೆ ಮುಖ್ಯವಾಗಿ ರಕ್ಷಿಸಬೇಕೆಂದು ವಿಧಿಸಲು ಇದರಿಂದ ಬಾಧಕವಾಗಲಾರದು.

3. "ವ್ಯವಸಾಯಕ ಮುಟ್ಟುಗಳು" ಎಂಬ ಮಾತುಗಳು, ನೇಗಲುಗಳು ಗುಂಟೆ ಹೊಡಿಯುವ ನೇಗಲುಗಳು, ಹಂಟೆ ಹೊಡಿಯುವ ಸಾಮಾನುಗಳು, ಮರಾರ ಯಾ ಹುಲ್ಲುಚಿಕ್ಕುವ ದೋಕರಬಾರೆಗಳು, ಕೂರಿಗೆಗಳು, ಮಮ್ಮಟಿಹಿಡಿಗಳು, ಗುದ್ದಲಿ ಹಿಡಿಗಳು ಮತ್ತು ಎಲ್ಲಾ ಇತರ ವ್ಯವಸಾಯಕ ಮುಟ್ಟುಗಳು ಎಂದು ಅರ್ಥವಾಗುತ್ತವೆಯಲ್ಲದೆ ಅವುಗಳನ್ನು ಒಳಗೊಳ್ಳುತ್ತವೆ.

ವಿವರಣೆಗಳು.

"ಮಲ್ನಾಡು" ಅಂದರೆ ಪರಿಶಿಷ್ಟದಲ್ಲಿ ನಮೂದು ಮಾಡಿರುವ ತಾಲ್ಲೂಕುಗಳು ಮತ್ತು ತಾಲ್ಲೂಕುಗಳ ಭಾಗಗಳು.

"ರೈತ" ಅಂದರೆ ಸರ್ಕಾರಿ ಜಮೀನಿನ ಪಟ್ಟೇದಾರ, ಖಾತೇದಾರ, ಅಥವಾ ರಿಜಿಸ್ಟರು ಹಿಡುವಳಿದಾರ, ಅಥವಾ ಮೈನರ್ ಇನಾಂದಾರ; ಮತ್ತು ಈ ಮಾತು ಮೇಲ್ಕಂಡ ತರಹ ಜಮೀನುದಾರರ ಒಬ್ಬ ಅಥವಾ ಅನೇಕ ಶಿಕ್ಮಿ ರೈತರುಗಳನ್ನು ಒಳಗೊಂಡಿರುತ್ತದೆ.

4. ಈ ನಿಬಂಧನೆಗಳ ಮೇರೆಗೆ ದಾಲ್ಚಿನ್ನಿ, ಹೂಣಸೆ, ಅಳಲೇಕಾಯಿ, ಕಾಚು, ಗೇರು, ಗಾಂಬೋಜೆ, ಅಂಟವಾಳ ಮತ್ತು ಹಾಲುಮಡ್ಡಿ ಮುಂತಾದ ಚಿಲ್ಲರೆ ಜಂಗಲಿ ಉತ್ಪತ್ತಿ ಕೊಡುವ ಯಾವ ಮರಗಳನ್ನೂ ಕಡಿಯಕೂಡದು, ಕೊಂಬೆ ಮುರಿಯಕೂಡದು, ಅಥವಾ ಇತರ ವಿಧದಲ್ಲಿ ನಷ್ಟಪಡಿಸಕೂಡದು. ಮತ್ತು ಫಾರೆಸ್ಟು ಇಲಾಖೆಯ ಯಾಖ್ಯಾರಿಯಲ್ಲಿಯೇ ಉಳಿಸಿಕೊಂಡಿರುವ ಇದರಡಿ ಕಂಡ ತಖ್ತೆಯಲ್ಲಿ ಕಾಣಿಸಿರುವ ಮರಗಳ್ಯಾವುದನ್ನೂ ಹಾಗೆ ನಷ್ಟಪಡಿಸಕೂಡದು.

ಜಂಬರ್ ನಂಬರ್.	ಸಸ್ಯಶಾಸ್ತ್ರದ ಹೆಸರು.	ಇಂಗ್ಲಿಷ್ ಯಾ ಜನಸಾಮಾನ್ಯಕ್ಕೆ ತಿಳಿಯುವ ಹೆಸರು.	ಕನ್ನಡದಲ್ಲಿ ಹೆಸರು.
1	ಸ್ಯಾಂಟಾಲಂ ಆಲ್ಬಂ	ಸ್ಯಾಂಡಲ್ ...	ಗಂಧ
2	ಟೆಕ್ಟೋನಗ್ರಾಂಡಿಸ್	ಟೀಕ್ ...	ಸಾಗವಾನಿ
3	ಡಾಲ್ಬರ್ಗಿಯಾ ಲಾಟಿಫೋಲಿಯಾ ...	ಬ್ಲಾಕ್‌ವುಡ್ ...	ಬೀಟೆ
4	ಷೋರಿಯಾಟಲೂರ	...	ಜಾಲಾರಿ
5	ಡೈಯಾಸ್ಪಿರಾಸ್‌ಎಬೀನಂ ಅಂಡ್ ಮೆಲನೋಕ್ಸಿಲಾನ್ ..	ಎಬನಿ ...	ಕರೀಮರ ಅಥವಾ ಬಾಲೆ
6	ಜೈಲಿಯಾಡೋಲಾಬ್ರಿಫಾರ್ಮಿಸ್	ಐರನ್‌ವುಡ್ ...	ಜಂಬೆ
7	ಕ್ಯಾಲೊಫಿಲ್ಲಂಇಲೀಟಂ	ಪೂನ್‌ಸ್ಪಾರ್ ...	ಶ್ರೀಹೊನ್ನೆ
8	ಹೋಪಿಯಾಪಾರ್ವಿಫ್ಲೋರಾ	...	ಕಿರಲಬೋಗಿ ಯಾ ಬೋಗಿ
9	ಡೈಸೋಕ್ಸಿಲಂಮಲಬಾರಿಕಂ	ವೈಟ್‌ಸೀಡಾರ್ ...	ದೇವಗಾರ್ಗೆ
10	ಟೆರೋಕಾರ್ಪಸ್‌ಮಾರ್ಸುಪಿಯಂ ...		ಹೊನ್ನೆ
11	ಚಿಕ್ರಾಸಿಯಟ್ಯಾಬ್ಯುಲ್ಯಾರಿಸ್	ಚಿಟ್ಟಗಾಂಗವುಡ್ ...	ಕಲ್‌ಗಾರ್ಗೆ

5. ಡೆಪ್ಯುಟಿ ಕಮಿಷನರಾಗಲಿ, ಅಥವಾ ಕ್ರಮವಾಗಿ ಅಧಿಕಾರ ಹೊಂದಿರುವ ಇತರ ಆಫಿಸರಾಗಲಿ ಬರಹಮೂಲಕ ಅಪ್ಪಣೆ ಕೊಟ್ಟ ಹೊರತು ಯಾವ ಮರವನ್ನಾಗಲಿ, ಪೊದೆಯನ್ನಾಗಲಿ, ಬಿದುರನ್ನಾಗಲಿ ಕಡಿಯಕೂಡದು ಅಥವಾ ಸುಡಕೂಡದು ; ಮತ್ತು (*a*) ಸದಾ ಹರಿಯುತ್ತಿರುವ ಜರಿಯ ಯಾ ಅದಕ್ಕೆ ನೀರು ಸರಬರಾಯಿ ಮಾಡುವ ಪ್ರವಾಹದ ದಡಕ್ಕೆ 50 ಗಜಗಳೊಳಗೆ; (*b*) ನೀರಿನ ಬುಗ್ಗೆಯ ಸುತ್ತಲೂ 50 ಗಜಗಳೊಳಗೆ; ಅಥವಾ (*c*) ಸರ್ಕಾರಿ ರಸ್ತೆಗೆ 50 ಗಜಗಳೊಳಗೆ ಹುಲ್ಲನ್ನಾಗಲಿ ಅಥವಾ ಇತರ ಜಂಗ್ಲಿ ಉತ್ಪತ್ತಿಯನ್ನಾಗಲಿ ಸುಡಕೂಡದು.

6. ಒಂದು ಡಿಸ್ಟ್ರಿಕ್ಟ ಜಂಗ್ಲಿಯಲ್ಲಿ ಯಾವ ಮರಕ್ಕಾಗಲಿ, ನಾಟಾಗಾಗಲಿ, ಹುಲ್ಲಿಗಾಗಲಿ, ಅಥವಾ ಇತರ ಜಂಗ್ಲಿ ಉತ್ಪತ್ತಿಗಾಗಲಿ ಬೆಂಕಿಹಚ್ಚಿ ಉರಿಸಕೂಡದು.

7. ಈ ನಿಬಂಧನೆಗಳ ಉದ್ದೇಶಗಳಿಗಾಗಿ, 4ನೆ ನಿಬಂಧನೆಯಲ್ಲಿ ನಮೂದಿಸಿರುವ ಮರಗಳಲ್ಲದ ಇತರ ಮರಗಳನ್ನು ಈ ಕೆಳಗೆ ತೋರಿಸಿರುವಂತೆ 3 ತರಗತಿಗಳಾಗಿ ವಿಂಗಡಿಸಿರುತ್ತದೆ.

ನಂಬರು.	ವ್ಯವಸಾಯಶಾಸ್ತ್ರರೀತ್ಯಾ ಹೆಸರು.	ಕನ್ನಡದಲ್ಲಿ ಹೆಸರು.
	Iನೆ ತರಗತಿ.	
1	ಆರ್ಟೋಕಾರ್ಪಸ್ ಇಂಟೆಗ್ರಿಫೋಲಿಯ	ಹಲಸು.
2	ಡಿಟೋ ಹಿರ್ಸುಟ	ಹೆಬ್ಬಲಸು.
3	ಟರ್ಮಿನೇಲಿಯಾ ಅರ್ಜುನ	ಬಿಳಿಮತ್ತಿ.
4	ಡಿಟೋ ಟೊಮೆಂಟೋಸ	ಕರೀಮತ್ತಿ.
5	ಲಾಗರ್‌ಸ್ಟ್ರೀಮಿಯಾ ಲ್ಯಾನ್ಸಿಯೊಲಾಟ	ನಂದಿ.
6	ಮೆಸೂವಾ ಫೆರ್ರಿಯಾ	ನಾಗಸಂಪಿಗೆ.
	IIನೆ ತರಗತಿ.	
1	ಟರ್ಮಿನೇಲಿಯಾ ಪ್ಯಾನಿಕ್ಯುಲಾಟಾ	ಹುಣಲು ಅಥವಾ ಹುಲ್ಲೆ.
2	ಸ್ಟೆರ್ಕ್ಯುಲಿಯಾ ವಿಲ್ಲೋಸಾ	ಮುಸ್ಸಿ.
3	ಅಡೀನಾ ಕಾರ್ಡಿಫೋಲಿಯ	ಎಟ್ಟೆಗ ಯಾ ಅರಸಿನಾಟೆಗ.
4	ಅಲಿಬಿಸ್ಸಿಯಾ ಒಡೋರೆಟಿಸ್ಸಿಮಾ	ಬಿಲ್ವಾರಾ.
5	ಗ್ರೀವಿಯಾ ಟಿಲೀಫೋಲಿಯಾ	ತಡಸಾಲ್.
6	ಷಿಲ್ಲೀಚೆರಾ ಟ್ರಿಜೂಗಾ	ಕೆಂಡಲ ಯಾ ಸಾಗಡೆ.
7	ಅಲ್ಬಿಸ್ಸಿಯಾ ಲೆಬ್ಬೆಕ	ಬಾಗೆ ಯಾ ತಿರ್ಕಲು.
8	ಕಾರ್ನಸ್ ಮೇಕ್ರೊಫಿಲ್ಲ	ಹಾಡಗ.
9	ವಿಮ್ಯುಸಾಪ್ಸ್ ಎಲೆಂಗಿ	ನಂಜ ಯಾ ಬಕುಳ.
10	ಮಿಚೇಲಿಯ ಚಂಪಕ	ಸಂಪಿಗೆ.
11	ಪೀಸಿಲ್‌ನ್ಯೂರಾನ್ ಇಂಡಿಕಂ	ಖಲ್ಲಗಿ.
12	ಆರ್ಟೋಕಾರ್ಪಸ್ ಲಾಕೂಚ	ವಾಟೆ.

IIIನೆ ತರಗತಿ.

ಮೇಲ್ಕಂಡ I ಮತ್ತು IIನೆ ತರಗತಿಗಳಲ್ಲಿ ಸೇರಿದ ಇತರ ತರಹೆಯ "ಜಂಗ್ಲಿ ಮರ" ಈ ತರಗತಿಗೆ ಸೇರುತ್ತದೆ.

8. ಡಿಸ್ಟ್ರಿಕ್ಟ್ ಜಂಗಲಿಗಳಿಂದ ಅಡಿಯಲ್ಲಿ ಕಂಡ ಜಂಗಲಿ ಉತ್ಪತ್ತಿಯನ್ನು ತೆರಿಗೆ ಅಥವಾ ಪರವಿಟ್ ಇಲ್ಲದೆ, 1 ಮತ್ತು 4ನೆ ನಿಬಂಧನೆಗಳಿಗೆ ಒಳಪಟ್ಟು, ಮಲೆನಾಡಿನಲ್ಲಿರುವ ರೈತರು ಸಾಗಿಸಿಕೊಂಡು ಹೋಗುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ:—

(1) ವ್ಯವಸಾಯ ಮುಟ್ಟುಗಳಿಗಾಗಿ ಜಂಗಲಿ ಮರ. ಆದರೆ ಪಟೇಲನ ಬರಹಮೂಲಕವಾದ ಅಪ್ಪಣೆಯನ್ನು ಪಡೆದು ಈ ಕೆಲಸಗಳಿಗೆ IIನೆ ತರಗತಿಗೆ ಸಂಬಂಧಪಟ್ಟ ಮರವನ್ನು ತೆಗೆದುಕೊಂಡು ಹೋಗಬಹುದು. ನಾಟಾಕ್ಕೆ ಸಾಲಾಯುಖಾದ ಬಲಿತ ಮತ್ತು ಗಂಟಿನ ಮರಗಳನ್ನು ಮಾತ್ರ ಕಡಿಯಬೇಕು, ಕಬ್ಬಿನ ಗಾಣಗಳಿಗೂ, ಛತ್ತವನ್ನು ಕಟ್ಟುವ ಯಾತಗಳಿಗೂ, ದನಗಳ ತೊಟ್ಟಿಗಳಿಗೂ ಜಂಗಲಿಮರ ಬೇಕಾದರೆ, ಮಾಫಿ ಪರವಿಟು ಯಾ ರಹದಾರಿಗಳನ್ನು ಅಮಲ್ದಾರ್ರಿಂದ ಪಡೆದು, ಅದರ ಪ್ರಕಾರ, ಯಾವ ಗ್ರಾಮದಲ್ಲಿ ಎಷ್ಟು ಮರವನ್ನು ಕಡಿದು ಸಾಗಿಸಿಕೊಂಡು ಹೋಗಿರುತ್ತೋ ಆ ಅಂಶವನ್ನು ಆ ಪರವಿಟನಲ್ಲಿ ಸದರಿ ಗ್ರಾಮದ ಪಟೇಲನಿಂದ ಇಂಡಾರ್ಸು ಮಾಡಿಸಿ ಅದನ್ನು ವಾಯಿದೆಯೊಳಗಾಗಿ ತಾಲ್ಲೂಕಿಗೆ ವಾಪಸು ಕಳುಹಿಸಬೇಕಾಗಿರುತ್ತದೆ; ಆದರೆ ಇರೇಬಿಯಲ್ಲಿ ಕಂಡ ಮಾಗಣಿಗಳಲ್ಲಿ ಪರವಿಟುಗಳನ್ನು ಪಡಿಯಬೇಕಾದ ಅವಶ್ಯಕವಿರುವದಿಲ್ಲಾ.

ಸಾಗರ ತಾಲ್ಲೂಕು.
ಮರಬಾಡಿ.
ಕರೂರು.
ಸಾಲನಾಡು.
ಸಾವಂತನಕಟ್ಟೆ.
ಸಾರಲಹೊಳೆ.
ಮಳಲಿ.
ಇಡವಾಣಿ.
ಅವಿನಹಳ್ಳಿ.
ಬ್ರಹಮನ್ನಾಡು.
ನೆಡವಾಡು.
ನಗರ ತಾಲ್ಲೂಕು.
ಮೂಗನಾಡು.
ಕಬನಾಡು.

(2) ಬೇಲಿಗಾಗಿಯೂ ಅಡ್ಡಕಟ್ಟೆಗಳಿಗಾಗಿಯೂ ಮತ್ತು ಸವುದೆಗಾಗಿಯೂ, ಜಂಗಲಿಮರ, ಕಡ್ಡಿಗಳು, ಪೊದೆಗಳು, ಮತ್ತು ಬಿದುರು ಮುಳ್ಳುಗಳು.

(3) ದನಗಳ ದೊಡ್ಡಿಗಳಿಗೂ, ಷೆಡ್ಡುಗಳಿಗೂ, ಚಪ್ಪರಗಳಿಗೂ, ಸಣ್ಣ ಗುಡಿಸಲುಗಳಿಗೂ ಮತ್ತು ಹೊಲಗಳಲ್ಲಿ ಕಟ್ಟಲ್ಪಡುವ "ಮಾರ್ಚ" ಗಳಿಗೂ ಮತ್ತು ಹುಲ್ಲು ಮಾಮೆಗಳ ತಳಕ್ಕೂ ಬೇಕಾಗುವ ಜಂಗಲೀಮರ, ವಾಟೆ ಬೊಂಬುಗಳು.

(4) ಗೊಬ್ಬರಕ್ಕೂ ಮತ್ತು ಜೋಲಿಗೂ ಬೇಕಾಗುವ ಜಂಗಲಿ ಮರಗಳ ರೆಂಬೆಗಳು.

(5) ಗುಡಿಸಲುಗಳ ಮೇಲೆ ಹೊಚ್ಚತಕ್ಕದ್ದಕ್ಕೆ, ಅಥವಾ ದನಗಳ ಮೇವಿಗೆ ಹುಲ್ಲು.

(6) ಬೇಲಿಗಳಿಗಾಗಿ ಮುಳ್ಳು ಬಿದಿರು.

(7) ವ್ಯವಸಾಯದ ಮುಟ್ಟುಗಳಿಗಾಗಿಯೂ, ಕಬ್ಬಿನ ತೋಟದ ಬೇಲಿಗಾಗಿಯೂ, ನೀರಿನ ಕಾಲುವೆಗಳಿಗಾಗಿಯೂ ಬೇಕಾಗುವ ಒಣ ಈಚಲು, ಬಗಣಿ ಅಥವಾ ತಾಳೆಮರಗಳು, ಮತ್ತು ವ್ಯವಸಾಯದ ಕೆಲಸಗಳಿಗಾಗಿ ಬೆತ್ತಗಳು.

(8) 4ನೆ ನಿಬಂಧನೆಯಲ್ಲಿ ನಮೂದಾಗದೆ ಇರುವ ಇತರ ಎಲ್ಲಾ ತರಹೆಯ ಒಣಮರವನ್ನು ಸವುದೆಗಾಗಿ ತೆಗದುಕೊಳ್ಳಬಹುದು.

ಟಿಪ್ಪಣಿ—ಮೇಲೆ ಹೇಳಿರುವುದಲ್ಲದೆ, ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ ಅಪ್ಪಣೆ ಪಡೆದು ರೈತರು ಮುಫತ್ತಾಗಿ ಮನ್ನಾ ಜಂಗಲಿಗಳಿಂದ ಹುಲ್ಲನ್ನು ಕೊಯಿದು ತೆಗೆದುಕೊಂಡು ಹೋಗಬಹುದು.

9. ಮಲೆನಾಡಿನಲ್ಲಿರುವ ರೈತರು ಕಟ್ಟಡಗಳಿಗಾಗಿಯೂ ಮತ್ತು ವ್ಯವಸಾಯ ಸಂಬಂಧ ಕೆಲಸಗಳಿಗಾಗಿಯೂ ಮರ ಮತ್ತು ಬೊಂಬುಗಳನ್ನು, ಲೈಸೆನ್ಸಿನಮೇಲೆ ಪಡೆಯಬಹುದು, ಇದರಡಿ ಕಂಡ ಸುಲಭವಾದ ಸೀನಿಯರೇಜು ದರಗಳನ್ನು ಪಾವತಿಮಾಡಿದರೆ ಈ ಲೈಸೆನ್ಸುಗಳನ್ನು ಕೊಡಲಾಗುವದು: ಪರಂತು ಈರೀತಿ ಪಡೆದ ಮರ ಅಥವಾ ಬೊಂಬುಗಳನ್ನು, ಸದರಿ ಜಂಗಲಿಯನ್ನು ಯಾವ ಗ್ರಾಮಕ್ಕೆ ಲಗತ್ತಾಗಿರುತ್ತದೆಯೋ ಅಥವಾ ಸೇರಿಸಲ್ಪಟ್ಟು ಇರುತ್ತೋ ಅಂಥಾ ಗ್ರಾಮದಲ್ಲಿರುವ ತಮ್ಮ ಕಂದಾಯದ ಭೂಮಿಯಲ್ಲಿನ ಕಟ್ಟಡಗಳನ್ನು ಮತ್ತು ತಾವು ವಾಸಮಾಡುವ ಕಟ್ಟಡಗಳನ್ನು ಕಟ್ಟುವುದಕ್ಕೂ ಮತ್ತು ರಿಪೇರಿ ಮಾಡುವುದಕ್ಕೂ ಉಪಯೋಗಿಸಿಕೊಳ್ಳತಕ್ಕದ್ದಾಗಿರುತ್ತದೆ. ಮತ್ತು ಮಲೆನಾಡಿನ ಕಾನುಗಳಲ್ಲಿ ಮರ ಅಥವಾ ಬಿದಿರನ್ನು ಕಡಿಯುವುದಕ್ಕೆ ಲೈಸೆನ್ಸು ಕೊಡಕೂಡದು.

			ರೂ.	ಅ.	ಪೈ.
Iನೆ ತರಗತಿಗೆ ಸೇರಿದ ಮರದಕಟ್ಟಿಗೆ ಭರ್ತಿ ಭಂಡಿ ಒಂದಕ್ಕೆ	...	...	3	0	0
ಹೊನ್ನೆ ಮತ್ತು ಕಿರಾಲ್ ಭೋಗಿ ಭರ್ತಿ ಭಂಡಿ ಒಂದಕ್ಕೆ	...	...	5	0	0
IIನೆ ತರಗತಿಗೆ ಸೇರಿದ ಮರಕ್ಕೆ ಭರ್ತಿ ಭಂಡಿ ಒಂದಕ್ಕೆ	...	...	1	0	0
ಜಂಗಲಿ ಕಟ್ಟಿಗೆ ಭಂಡಿ 1ಕ್ಕೆ ಮತ್ತು 100 ಕಂಬಿದರುಗಳಿಗೆ	...	...	0	8	0
ಜಂಗಲಿ ಮರದ ಕಂಭಗಳು ಅಥವಾ ಮರ ಗಳಗಳು ಭರ್ತಿ ಭಂಡಿ ಒಂದಕ್ಕೆ	...	...	0	8	0
ಗರಟ ಅಥವಾ ಸಣ್ಣ ಸಣ್ಣ ಗಟ್ಟಿ ಬೊಂಬುಗಳು 100ಕ್ಕೆ	...	...	0	4	0
ಹೆಬ್ಬಿದರು 100ಕ್ಕೆ	...	...	2	0	0

ಗುರು—ರಂಪದಿಂದ ಕೊಯ್ದ ನಾಟಾವಿಗಾಗಿ ಮೇಲ್ಕಂಡ ರುಸುಮಿಗಿಂತ ಶೇಕಡಾ 50ರಷ್ಟು ಜಾಸ್ತಿ ರುಸುಂಕೊಡಬೇಕು.

ಟಿಪ್ಪಣಿ.—ಭರ್ತಿ ಭಂಡಿ ಅಂದರೆ ಎರಡು ಎತ್ತುಗಳಿಂದ ಅಥವಾ ಎಮ್ಮೆಗಳಿಂದ ಎಳೆಯಲ್ಪಡುವ ಹಳ್ಳಿ ಗಾಡಿ ಎಂತ ಅರ್ಥ. ನಾಲ್ಕು ಎತ್ತುಗಳಿಂದ ಅಥವಾ ಎಮ್ಮೆಗಳಿಂದ ಎಳೆಯಲ್ಪಟ್ಟ ಭರ್ತಿ ಭಂಡಿ ಒಂದಕ್ಕೆ ಎರಡು ಎತ್ತುಗಳಿಂದ ಅಥವಾ ಎಮ್ಮೆಗಳಿಂದ ಎಳೆಯಲ್ಪಡುವ ಭರ್ತಿ ಗಾಡಿಗೆ ಕೊಡುವ ತೆರಿಗೆಗೆ ಎರಡರಷ್ಟು ತೆರಿಗೆಯನ್ನು ಕೊಡಬೇಕು. ಇದಕ್ಕಿಂತಲೂ ಹೆಚ್ಚು ಜತೆ ಎತ್ತು ಅಥವಾ ಎಮ್ಮೆಗಳಿಂದ ಎಳೆಯಲ್ಪಡುವ ಗಾಡಿಗೆ ಈ ದಾಮಾಷಾಯಿ ಮೇರಿಗೆ ಹೆಚ್ಚು ತೆರಿಗೆ ಕೊಡಬೇಕು.

10. 8 ಮತ್ತು 9ನೆ ನಿಬಂಧನೆಗಳಲ್ಲಿ ರೈತರಿಗೆ ಕೊಟ್ಟಿರುವ ರಿಯಾಯಿತಿಗಳನ್ನು ಪ್ರಾಮಾಣಿಕವಾಗಿ ಅವರ ಸ್ವಂತ ಉಪಯೋಗಕ್ಕಾಗಿಯೇ ಉದ್ದೇಶಿಸಿ ಕೊಡೋಣಾಗಿದೆ. ಮೇಲ್ಕಂಡ ನಿಬಂಧನೆಗಳ ಪ್ರಕಾರ ಪಡೆದ ಯಾವ ಸಾಮಾನುಗಳನ್ನಾಗಲಿ ವ್ಯಾಪಾರದ ಕೆಲಸಗಳಿಗಾಗಿ ಅವರು ವರ್ಗಾಯಿಸಕೂಡದು, ಮಾರಕೂಡದು ಅಥವಾ ಬದಲಾಬದಲಿ ಮಾಡಕೂಡದು. ಪರಂತು ಆ ನಿಬಂಧನೆಗಳ ಪ್ರಕಾರ ಪಡೆದ ಲೈಸೆನ್ಸು ಮತ್ತು ಸಾಮಾನುಗಳನ್ನು ಲೈಸೆನ್ಸದಾರನ ಸಂಸಾರಕ್ಕೆ ಸೇರಿದ ಯಾವನಿಗಾಗಲಿ ಅಥವಾ ಯಾವ ಮಲೆನಾಡು ರೈತನಿಗಾಗಲಿ ವರ್ಗಾಯಿಸಬಹುದು.

11. ಮೇಲ್ಕಂಡ ನಿಬಂಧನೆಗಳ ಪ್ರಕಾರ ಮೊಬಲಗು ತೆಗೆದುಕೊಂಡು ಪರವಾನಿಯಾನೆ ರಹದಾರಿಗಳನ್ನು ಕೊಡುವುದಕ್ಕೂ ಮತ್ತು ಸದರೀ ಪರ್ಮಿಟ್ಟುಗಳನ್ನು ವಾಪಸ್ ಪಡೆಯುವುದಕ್ಕೂ, ಡೆಪ್ಯುಟಿ ಕಮಿಷನರವರು, ಮೈಸೂರು ಗೆಜೆಟ್ಟಿನಲ್ಲಿ ಇಸ್ತಿಹಾರ್ನಾಮೆ ಪ್ರಕಟಿಸುವುದರ ಮೂಲಕ, ಯಾವ ಮನುಷ್ಯನನ್ನಾದರೂ ಅಥವಾ ಯಾವ ತರಗತಿಗೆ ಸೇರಿದ ಮನುಷ್ಯರನ್ನಾದರೂ, ಅವರ ಹೆಸರು ಯಾ ಹುದ್ದೆಯು ನಮೂದಿನಿಂದ ನೇಮಕ ಮಾಡಬಹುದು, ಮತ್ತು ಸಾಮಾನು ಅಥವಾ ಜಂಗಲಿಯ ಇತರ ಪದಾರ್ಥಗಳ ಅಪವ್ಯಾಯಿಷಿಗಾಗಿ ಅವುಗಳನ್ನು ತತ್ತಕ್ಕ ವಿಷಯದಲ್ಲಿಯೂ, ಪರವಾನಿಗಳನ್ನು (ಅಂದರೆ ಅಪ್ಪಣೆ ಚೀಟಿಗಳನ್ನು) ತನಿಖೆ ಅಥವಾ ವಾಪಸು ಪಡೆಯತಕ್ಕ ವಿಷಯದಲ್ಲಿಯೂ, ದಾರಿ ಪರಮಿಟ್ಟುಗಳನ್ನು ಕೊಡತಕ್ಕ ವಿಷಯದಲ್ಲಿಯೂ, ಟಾಣಾಗಳನ್ನು ಅಥವಾ ಸ್ಥಳಗಳನ್ನು ಸಹಾ ಡೆಪ್ಯುಟಿ ಕಮಿಷನರವರು ಗೊತ್ತು ಮಾಡಬಹುದು. 8ನೆ ನಿಬಂಧನೆಯಲ್ಲಿ ಹೇಳಿರುವ ಸಂದರ್ಭದಲ್ಲಿ ವಿನಾ, ಮಿಕ್ಕ ಎಲ್ಲಾ ಸಂದರ್ಭಗಳಲ್ಲಿಯೂ, ಗಿಡಗಳನ್ನು ಕಡಿಯುವುದನ್ನು ಕೊಯ್ಯುವುದನ್ನು ಜಮಾಯಿಸುವದನ್ನು ಅಥವಾ ಸಾಗಿಸುವುದನ್ನು ಪ್ರಾರಂಭಿಸುವದಕ್ಕೆ ಮುಂಚಿತವಾಗಿಯೇ ಪರಮಿಟ್ಟುಗಳನ್ನು ಪಡಿಯಬೇಕು. ಪರವಾನಿ ಹೊಂದಿರತಕ್ಕವರು, ಫಾರೆಸ್ಟು ಇಲಾಖೆಯ ರೆಗ್ಯುಲೇಷನುಗಳಿಗನುಸಾರವಾಗಿಯೂ, ಪರಮಿಟ್ಟಿನಲ್ಲಿ ನಮೂದಿಸಿರುವ ನಿಬಂಧನೆಗಳ ಮೇರೆಗೂ ನಡೆದುಕೊಳ್ಳಬೇಕು.

12. 8ನೆ ನಿಬಂಧನೆಯಲ್ಲಿ ವಿಧಾಯಿಸಿರುವ ಮಾಫಿ ಪರವಾನಿಗಳನ್ನು, ಫಾರೆಸ್ಟು, ರೆವಿನ್ಯೂ ಮತ್ತು ಪೊಲೀಸ್ ಆಫೀಸರುಗಳು ತನಿಖೆ ಮಾಡಬೇಕಾಗಿ ಇರುತ್ತದೆ, ಲೈಸೆನ್ಸಿನ ಷರತ್ತುಗಳಿಗೆ ಮಾರಿ ನಡೆದಿರುತ್ತಾರೆ ಅಥವಾ ಸದರಿ ಷರತ್ತುಗಳಿಗೆ ತಪ್ಪಿ ಇರುತ್ತಾರೆಂಬ ಅಂಶವನ್ನು ಇವರುಗಳು ನೋಡಬೇಕಾಗಿ ಇರುತ್ತದೆ.

13. 4, 5, 6, 8, 9ನೆ ನಿಬಂಧನೆಗಳಿಗೆ ತಪ್ಪಿ ನಡೆದರೆ ಅಥವಾ ವಿರೋಧವಾಗಿ ನಡೆದರೇ, ಅಂಥಾ ತಪ್ಪಿತಸ್ಥನೂ, ಇಂಡಿಯನ್ ಪೆನಲ್ ಕೋಡಿನಲ್ಲಿ ವಿವರಿಸಿರುವ ಒಂದು ತಿಂಗಳಿಗೆ ಮೀರದ ಯಾವದಾದರೂ ಒಂದು ತರಹೆ, ಖೈದಿಗೂ, ಅಥವಾ 200 ರೂಪಾಯಿಗಳಿಗೆ ಮೀರದ ಜುರ್ಮಾನೆಗೂ ಅಥವಾ ಇವೆರಡು ಶಿಕ್ಷೆಗೂ ಗುರಿಯಾಗಿರುವುದಲ್ಲದೆ, ಈ ಶಿಕ್ಷೆಯ ಜತೆಗೆ ಮೇಲ್ಕಂಡ ನಿಬಂಧನೆಗಳಲ್ಲಿ ಆತನಿಗೆ ಕೊಟ್ಟಿರುವ ರಿಯಾಯಿತಿಗಳನ್ನು ಕಳೆದುಕೊಳ್ಳುವುದಕ್ಕೂ ಸಹಾ ಗುರಿಯಾಗಿರುತ್ತಾನೆ.

ಪರಿಶಿಷ್ಟ.

ಶಿವಮೊಗ್ಗ ಡಿಸ್ಟ್ರಿಕ್ಟು—ತೀರ್ಥಹಳ್ಳಿ, ಸಾಗರ ಮತ್ತು ನಗರ ತಾಲ್ಲೂಕುಗಳು, ಸೊರಬ, ಕ್ಯಾಸನೂರು, ಚಂದ್ರಗುತ್ತಿ, ಚಿತ್ತೂರು, ಷಿಗ್ಗಾ ಮತ್ತು 1891ನ ಇಸವಿ ಅಕ್ಟೋಬರ್ 6ನೆ ಮರ್ಕಂನ 281ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಸೇರಿಸಲ್ಪಟ್ಟ ಅಂಡಿಗೆ, ತಾವನಾಂಡಿ, ಮತ್ತು ಉದ್ರಿ ಮಾಗಣಿಗಳು. ಸೊರಬ ತಾಲ್ಲೂಕಿನ ಹೆಚ್ಚೆ, ಮತ್ತು ಷಿಕಾರಿಪುರ ತಾಲ್ಲೂಕಿನ ಬೆಳಂದೂರು ಮತ್ತು ಬರೂರು ಮಾಗಣಿಗಳು, ಮತ್ತು ದ್ಯಾಣಂದೂರು ಮಾಗಣಿಯ ದಾಣಂದೂರು ಗ್ರಾಮ, ಮತ್ತು 1891ನೆ ಇಸವಿ ಸೆಪ್ಟಂಬರ್ 30ನೆ ಮರ್ಕಂನ 280ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಸೇರಿಸಲ್ಪಟ್ಟ ದಾನಿವಾಸ, ಕೋನನಾಡು, ಗಾಜನೂರು, ಲಕ್ಕವಳ್ಳಿ, ಕುಂಸಿ, ಚೋರಡಿ, ಮತ್ತು ಐಯ್ಯನೂರು ಮಾಗಣಿಗಳಿಗೆ ಸೇರಿದ ಗ್ರಾಮಗಳು.

ಕಡೂರು ಡಿಸ್ಟ್ರಿಕ್ಟು—ಕೊಪ್ಪ ಮತ್ತು ಮೂಡಗೆರೆ ತಾಲ್ಲೂಕುಗಳು, ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ, ಮತ್ತು ಲಕ್ಕವಳ್ಳಿ ಮಾಗಣಿಗಳು, ಚಿಕ್ಕಮಗಳೂರು ತಾಲ್ಲೂಕಿನ, ವಸ್ತಾರಾ, ಅಯ್ಯನೂರು ಕಾಡಗಾಲನಾಡು, ತಾಳದಾರನಾಡು, ಆಲ್ದೂರು, ಜಾಗೂರು, ಸಿರವಾಸಿ ಮತ್ತು ಲಿಂಗನಹಳ್ಳಿ ಮಾಗಣಿಗಳು ಮತ್ತು ಚಿಕ್ಕಮಗಳೂರು ಮಾಗಣಿಯ ಹಿರೆಕೊಳಲೆ, ಚಿಕ್ಕಕೊಳಲೆ, ಮತ್ತು ಅರಳಗುಪ್ಪೆ ಗ್ರಾಮಗಳು.

ಹಾಸನ ಡಿಸ್ಟ್ರಿಕ್ಟು—ಮಂಜರಾಬಾದು ತಾಲ್ಲೂಕಿನ ಬ್ಯಾಗಡಹಳ್ಳಿ, ಮಾರನಹಳ್ಳಿ, ಮತ್ತು ಹೆಣಬಲ್ ಹೋಬಳಿಗಳು.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಸ್ಪ್ ಆದ್ದು.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 8, 1909.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖಾ.

ಇಸ್ತಿಹಾರ್ನಾಮೆ.

ನಂಬರ್ 246, ಎಲ್. ಸಿ. ತಾರೀಖು 3ನೆ ಮಾರ್ಚಿ 1909.

ಮೈಸೂರು ನ್ಯಾಯವಿಧಾಯಕಸಭೆಯು ಕಾರ್ಯನಿರ್ವಾಹದ ಬಗ್ಗೆ ಏರ್ಪಟ್ಟಿರುವ ನಿಬಂಧನೆಗಳ ಪೈಕಿ 32ನೆ ನಿಬಂಧನೆಯನ್ನನುಸರಿಸಿ ಇದರಡಿ ಕಂಡ ಬಿಲ್ಲನ್ನು ಉದ್ದೇಶಗಳ ಮತ್ತು ಕಾರಣಗಳ ಸಮೇತ ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇರುತ್ತದೆ.

ಹುಕುಂ ಬಮೋಜೀಬ್,

ಎಸ್. ಹಿರಿಯಣ್ಣಯ್ಯ,

ಮೈಸೂರು ನ್ಯಾಯವಿಧಾಯಕಸಭೆ ಸೆಕ್ರಿಟೆರಿ.

ಮೈಸೂರು ಸೀಮೆಯಲ್ಲಿ ಸ್ಮಾಲ್‌ಕಾಜು ಕೋರ್ಟುಗಳಿಗೆ ಸಂಬಂಧಿಸುವ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವಬಗ್ಗೆ ಹುಟ್ಟಿದ ಬಿಲ್ಲು.

ಮೈಸೂರು ಸೀಮೆಯಲ್ಲಿ ಸ್ಮಾಲ್‌ಕಾಜು ಕೋರ್ಟುಗಳಿಗೆ ಸಂಬಂಧಿಸುವ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಘನವನ್ನು ಹೊಂದಿದ ಶ್ರೀಮನ್ಮಹಾರಾಜಾಸಾಹೇಬ್ಬಹದುರವರು ಇದರಡಿ ಕಂಡಂತೆ ಕಾನೂನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

1ನೇ ಅಧ್ಯಾಯ.

ಅವತರಣಿಕೆ.

ಹೆಸರು, ವ್ಯಾಪ್ತಿ ಮತ್ತು ಆರಂಭ [1887ನೆ ಇಸವಿಯ 9ನೆ ಆಕ್ಟಿನ 1ನೇ ಪ್ರಕರಣ.]

1. (1) ಈ ರೆಗ್ಯುಲೇಷನನ್ನು "190   ನೇ ಇಸವಿಯ ಮೈಸೂರು ಸೀಮೆಯ ಸ್ಮಾಲ್‌ಕಾಜ್ ಕೋರ್ಟುಗಳ ರೆಗ್ಯುಲೇಷನ್." ಎಂದು ಕರೆಯಬಹುದು.

(2) ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸುತ್ತದೆ.

(3) ಇದು 190   ನೆ ಇಸವಿ   ಗುರ್‍ರೇ ತಾರೀಖಿನಿಂದ ಜಾರಿಗೆ ಬರತಕ್ಕದ್ದು.

1865ನೆ ಇಸವಿಯ 11ನೆ ಆಕ್ಟಿಗೆ ದಾಖಲೆ ಕೊಟ್ಟಿರುವುದಕ್ಕೆ ಅನ್ವಯ. [1877ನೆ ಇಸವಿಯ 9ನೆ ಆಕ್ಟಿನ ಪ್ರಕರಣ 2, ಒಳಪ್ರಕರಣ (3).]

2. ಯಾವುದಾದರೂ ಕಾನೂನಿನಲ್ಲಿ ಅಥವಾ ದಸ್ತಾವೇಜಿನಲ್ಲಿ 1865ನೆ ಇಸವಿಯ 11ನೆ ಆಕ್ಟನ್ನು ಕುರಿತು ಪ್ರಸ್ತಾಪಬಂದರೆ ಅದು ಸಾಧ್ಯವಾದಮಟ್ಟಿಗೆ ಈ ರೆಗ್ಯುಲೇಷನಿಗೆ ಅಥವಾ ಇದರ ಪೈಕಿ ಸಂಬಂಧಪಟ್ಟ ಭಾಗಕ್ಕೆ ಅನ್ವಯಿಸುತ್ತದೆಂದು ಭಾವಿಸತಕ್ಕದ್ದು.

ವಿನಾಯಿತಿಗಳು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 3.]

3. ಈ ರೆಗ್ಯುಲೇಷನಿನಲ್ಲಿ ಕಂಡ ಯಾವುದರಿಂದಲಾಗಲೀ—

(*a*) ಈ ರೆಗ್ಯುಲೇಷನು ಜಾರಿಯಲ್ಲಿ ಬರುವುದಕ್ಕೆ ಮುಂಚೆ ದಾಖಲಾದ ಮೊಕದ್ದಮೆಯಲ್ಲಿ ಡಿಕ್ರಿ ಹುಟ್ಟುವುದಕ್ಕೆ ಮುಂಚಿತವಾಗಿ ಅಥವಾ ಹುಟ್ಟಿದನಂತರ ಅನುಸರಿಸಬೇಕಾದ ನಡವಳಿಕೆಗಳಿಗಾಗಲಿ; ಅಥವಾ

(*b*) ಸಾಲಗಳ ಅಥವಾ ಸಿವಿಲ್ ಸ್ವಭಾವದ ಇತರ ಬಾಧ್ಯತೆಗಳ ವಿಷಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಕಾನೂನಿನ ಪ್ರಕಾರ ಒಬ್ಬ ಮ್ಯಾಜಿಸ್ಟ್ರೇಟರಿಗೆ ಇರುವ ಅಧಿಕಾರಕ್ಕಾಗಲೀ; ಅಥವಾ

(*c*) ಸಿವಿಲ್ ಪ್ರೊಸಿಡ್ಯೂರ್ ಕೋಡ್ ಅಲ್ಲದ ಇತರ ಯಾವುದಾದರೂ ಸ್ಥಳಿಕ ಅಥವಾ ವಿಶೇಷವಾದ ಕಾನೂನಿಗಾಗಲೀ

ಬಾಧಕವುಂಟೆಂದು ಭಾವಿಸಕೂಡದು.

ಅರ್ಥವಿವರಣೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 4]

4. ಈ ರೆಗ್ಯುಲೇಷನಿನಲ್ಲಿ "ಸ್ಮಾಲ್ ಕಾಜ್ ಕೋರ್ಟು" ಎಂಬ ಮಾತುಗಳಿಗೆ ಪೂರ್ವಾಪರಸಂದರ್ಭದಿಂದ ಅಥವಾ ಪ್ರಸಕ್ತವಿಷಯದಿಂದ ಬೇರೆ ಅರ್ಥ ತೋರಬಂದಾಗ ಹೊರತು ಉಳಿದ ಸಂಧರ್ಭಗಳಲ್ಲೆಲ್ಲಾ ಈ ರೆಗ್ಯುಲೇಷನಿನಂತೆ ಏರ್ಪಟ್ಟ ಸ್ಮಾಲ್ ಕಾಜ್ ಕೋರ್ಟು ಎಂದು ಅರ್ಥವಾಗತಕ್ಕದ್ದಲ್ಲದೆ, ಈ ರೆಗ್ಯುಲೇಷನಿನ ಪ್ರಕಾರ ಅಂಥಾ ಯಾವ ಕೋರ್ಟಿನಲ್ಲಾದರೂ ನ್ಯಾಯಾಧಿಕಾರವನ್ನು ಚಲಾಯಿಸುವ ಯಾವ ಮನುಷ್ಯನಿಗಾದರೂ ಸದರೀ ಮಾತುಗಳು ಅನ್ವಯಿಸತಕ್ಕದ್ದು.

2ನೆ ಅಧ್ಯಾಯ.

ಸ್ಮಾಲ್ ಕಾಜ್ ಕೋರ್ಟುಗಳ ಏರ್ಪಾಡು.

ಸ್ಮಾಲ್‌ಕಾಜ್ ಕೋರ್ಟುಗಳ ಸ್ಥಾಪನೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 5]

5. (1) ಸರ್ಕಾರದವರು ಬರಹಮೂಲಕವಾದ ಅಪ್ಪಣೆಯದ್ವಾರಾ ಮೈಸೂರು ಸಂಸ್ಥಾನದಲ್ಲಿ ಯಾವ ಸ್ಥಳದಲ್ಲಾಗಲೀ ಸ್ಮಾಲ್ ಕಾಜ್ ಕೋರ್ಟನ್ನು ಸ್ಥಾಪಿಸಬಹುದು.

(2) ಪ್ರತಿ ಸ್ಮಾಲ್ ಕಾಜ್ ಕೋರ್ಟಿಗೂ ಯಾವ ಸರಹದ್ದಿನೊಳಗೆ ಅಧಿಕಾರವಿರತಕ್ಕದ್ದೆಂಬುವುದನ್ನು ಸರ್ಕಾರದವರು ಗೊತ್ತುಮಾಡಬಹುದು; ಸದರೀ ಕೋರ್ಟು ಆ ಸರಹದ್ದಿನೊಳಗಾಗಿ ಸರ್ಕಾರದವರು

ಜಡ್ಜಿಯವರು.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 6, ಒಳಪ್ರಕರಣ(1).]

6. ಸ್ಮಾಲ್ ಕಾಜು ಕೋರ್ಟನ್ನು ಸ್ಥಾಪಿಸಿದನಂತರ ಸರ್ಕಾರದವರು ಬರಹಮೂಲಕವಾದ ಅಪ್ಪಣೆಯ ದ್ವಾರಾ ಆ ಕೋರ್ಟಿಗೆ ಒಬ್ಬ ಜಡ್ಜಿಯವರನ್ನು ನೌಕರರೂರ್ಮಾಡತಕ್ಕದ್ದು.

ಜಡ್ಜಿಗಳನ್ನು ಕೆಲಸದಿಂದ ಸಸ್ಪೆಂಡ್ ಮಾಡುವುದು ಮತ್ತು ತೆಗೆದು ಹಾಕುವುದು.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 9.]

7. ಸ್ಮಾಲ್ ಕಾಜು ಕೋರ್ಟಿನ ಜಡ್ಜಿಯವರನ್ನು ಸರ್ಕಾರದವರು ಕೆಲಸದಿಂದ ಸಸ್ಪೆಂಡ್ ಮಾಡಬಹುದು ಅಥವಾ ತೆಗೆದು ಹಾಕಬಹುದು.

ಸಿಬ್ಬಂದಿ.

[1887ನೆ ಇಸವಿಯ 9ನೆ ಆಕ್ಟಿನ 13ನೆ ಪ್ರಕರಣಕ್ಕೆ ಬದಲಾಗಿ ಸೇರಿಸಿದ ಹೊಸ ಪ್ರಕರಣ]

8. ಒಂದು ಸ್ಮಾಲ್ ಕಾಜು ಕೋರ್ಟಿಗೆ ಅವಶ್ಯಕವಾಗಿರುವಷ್ಟು ಸಿಬ್ಬಂದಿಯನ್ನು ಸರ್ಕಾರದವರು ಮಂಜೂರ್ಮಾಡಬೇಕು; ಅಲ್ಲದೆ ಈ ಬಗ್ಗೆ ಸರ್ಕಾರದವರು ಕೊಟ್ಟಿರುವ ಹುಕುಮುಗಳಿಗೆ ಒಳಪಟ್ಟು ಸ್ಮಾಲ್ ಕಾಜು ಕೋರ್ಟಿನ ಜಡ್ಜಿಯವರು ತಮ್ಮ ಕೋರ್ಟಿನ ಸಿಬ್ಬಂದಿಯನ್ನು ನೌಕರರೂರ್ಮಾಡಿಕೊಳ್ಳಬಹುದು; ಮತ್ತು ಅವರಿಗೆ ಜುರ್ಮಾನೆ ವಿಧಿಸಬಹುದು, ಅವರನ್ನು ಸಸ್ಪೆಂಡ್ ಅಥವಾ ಬರ್ತರಫ್ ಮಾಡಬಹುದು.

ಸಿಬ್ಬಂದಿ ಯಾ ತಾಬೇದಾರೀ ನೌಕರರ ಕೆಲಸಗಳು.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 14]

9. (1) ಸ್ಮಾಲ್‌ಕಾಜು ಕೋರ್ಟಿನ ಸಿಬ್ಬಂದಿ ಯಾ ತಾಬೇದಾರೀ ನೌಕರರು ಈ ರೆಗ್ಯುಲೇಷನಿನಲ್ಲಿ ಅಥವಾ ಆಯಾಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದಾದರೂ ಕಾನೂನಿನಲ್ಲಿಅವರಿಗೆ ವಿಧಾಯಕವಾಗಿರುವ ಅಥವಾ ವಿಧಾಯಕವಾಗಬಹುದೆಂದು ನಮೂದಿರುವ ಕೆಲಸಗಳನ್ನಲ್ಲದೆ ಜಡ್ಜಿಯವರು ನೇಮಿಸಬಹುದಾದಂಥಾ ಬರವಣಿಗೆಯ ಸ್ವಭಾವದ ಕೆಲಸಗಳನ್ನೂ ಸಹ ಮಾಡಬೇಕು.

(2) ಸ್ಮಾಲ್ ಕಾಜು ಕೋರ್ಟಿನ ತಾಬೇದಾರೀ ನೌಕರರಿಗೆ ಚೀಫ್ ಕೋರ್ಟಿನವರು ತಮಗೆ ಯುಕ್ತವೆಂದು ತೋರುವಂಥಾ ಅಧಿಕಾರಗಳನ್ನು ಕೊಡುವ ಮತ್ತು ಕೆಲಸಗಳನ್ನು ನೇಮಿಸುವ ಬಗ್ಯೂ, ಹಾಗೆ ಕೊಟ್ಟ ಅಧಿಕಾರಗಳನ್ನು ಚಲಾಯಿಸಬೇಕಾದ ಮತ್ತು ನೇಮಿಸಿದ ಕೆಲಸಗಳನ್ನು ಮಾಡಬೇಕಾದ ವಿಧಾನವನ್ನು ಕ್ರಮಪಡಿಸುವ ಬಗ್ಯೂ ಈ ರೆಗ್ಯುಲೇಷನಿಗೂ ಆಯಾಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿಗೂ ವಿರೋಧವಿಲ್ಲದಂತೆ ಚೀಫ್ ಕೋರ್ಟಿನವರು ನಿಬಂಧನೆಗಳನ್ನು ಏರ್ಪಡಿಸಬಹುದು.

3ನೆ ಅಧ್ಯಾಯ.

ಸ್ಮಾಲ್ ಕಾಜು ಕೋರ್ಟುಗಳ ಯಃಖ್ತ್ಯಾರಿ.

ಸ್ಮಾಲ್‌ಕಾಜು ಕೋರ್ಟುಗಳಲ್ಲಿ ಯಾವ ತರಹೆ ದಾವೆಗಳನ್ನು ದಾಖಲ್‌ಮಾಡಿಕೊಳ್ಳಬಹುದು.

[ಹೊಸಪ್ರಕರಣ.]

10. ಈ ರೆಗ್ಯುಲೇಷನಿನ ಕೊನೆಯಲ್ಲಿ ಕೊಟ್ಟಿರುವ ಷೆಡ್ಯೂಲಿನಲ್ಲಿ ನಮೂದಿರುವ ತರಹಾ ದಾವೆಗಳ ಪೈಕಿ ಯಾವ ದಾವೆಗಳ ಮೊಬಲಗು 500 ರೂಪಾಯಿಗೆ ಮೀರದಂತೆ ಸರ್ಕಾರದವರು ಆಯಾ ತರಹಾ ದಾವೆಗಳಿಗೆ ವಿಧಿಸಬಹುದಾದಂಥಾ ಮೊಬಲಗಿಗೆ ಜಾಸ್ತಿಯಾಗಿರುವುದಿಲ್ಲವೋ ಅಂಥಾ ದಾವೆಗಳನ್ನು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲ್‌ಮಾಡಿಕೊಳ್ಳಬಹುದು. ಇತರ ಯಾವ ದಾವೆಗಳನ್ನೂ ಆ ರೀತಿ ದಾಖಲ್‌ಮಾಡಿಕೊಳ್ಳಕೂಡದು. ಪರಂತು ಸರ್ಕಾರದವರು ಗೆಜೆಟ್ಟಿನಲ್ಲಿ ಒಂದು ಇಸ್ತಿಹಾರ್ನಾಮೆಯನ್ನು ಪ್ರಕಟಿಸುವುದರ ಮೂಲಕ ಯಾವಾಗಲಾದರೂ ಸದರೀ ಷೆಡ್ಯೂಲಿಗೆ ಜಾಸ್ತಿತರಹೆ ದಾವೆಗಳನ್ನು ಸೇರಿಸಬಹುದು ಅಥವಾ ಅದರಲ್ಲಿ ಈಗ ನಮೂದಿರುವ ದಾವೆಗಳನ್ನು ವ್ಯತ್ಯಾಸಪಡಿಸಬಹುದು.

ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದಾಖಲಾಗಬೇಕಾದ ದಾವೆಗಳನ್ನು ಇತರ ಕೋರ್ಟುಗಳಲ್ಲಿ ದಾಖಲ್‌ಮಾಡಿಕೊಳ್ಳಕೂಡದು.

[188 ನೆ ಇಸವಿಯ 9ನೆ ಆಕ್ಟಿನ ಪ್ರಕರಣ 16]

11. ಈ ರೆಗ್ಯುಲೇಷನಿನಲ್ಲಿ ಅಥವಾ ಆಯಾಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಇತರ ಕಾನೂನಿನಲ್ಲಿ ಕಂಠೋಕ್ತವಾಗಿ ವಿಧಿಸಿರುವ ಸಂದರ್ಭಗಳಲ್ಲಿ ಹೊರತು ಒಂದು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಬೇಕಾದ ದಾವೆಯನ್ನು ಸದರೀ ಕೋರ್ಟಿನ ಅಧಿಕಾರ ಸರಹದ್ದಿನೊಳಗೆ ಎಃಖ್ತ್ಯಾರಿಯನ್ನುಳ್ಳ ಇತರ ಯಾವ ಕೋರ್ಟಿನವರೂ ಹಿಡಿಯಕೂಡದು.

4ನೆ ಅಧ್ಯಾಯು.

ನಡವಳಿಕೆಯ ಕ್ರಮ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಕೆಲವು ಭಾಗಗಳು ಸ್ಮಾಲ್‌ಕಾಜು ಕೋರ್ಟುಗಳಿಗೂ ಅನ್ವಯಿಸುತ್ತವೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 17.]

12 ಸಿವಿಲ್ ಪ್ರೊಸೀಡ್ಯೂರ್ ಕೋಡಿನ ಎರಡನೆ ಷೆಡ್ಯೂಲಿನಲ್ಲಿ ನಮೂದು ಕಂಡ ಅಧ್ಯಾಯಗಳಲ್ಲಿಯೂ ಪ್ರಕರಣಗಳಲ್ಲಿಯೂ ವಿಧಾಯಕವಾಗಿರುವ ಕ್ರಮವನ್ನೇ ಸದರೀ ಅಧ್ಯಾಯಗಳೂ ಪ್ರಕರಣಗಳೂ ಸ್ಮಾಲ್‌ಕಾಜು ಕೋರ್ಟುಗಳಿಗೆ ಅನ್ವಯಿಸುವಷ್ಟರ ಮಟ್ಟಿಗೆ ಸದರೀ ಕೋರ್ಟುಗಳಲ್ಲಿ ದಾಖಲಾಗತಕ್ಕ ಎಲ್ಲಾ ದಾವೆಗಳಲ್ಲಿಯೂ ಅಂಥಾ ದಾವೆಗಳ ಸಂಬಂಧದಲ್ಲಿ ನಡೆಯುವ ಎಲ್ಲಾ ವ್ಯವಹರಣೆಗಳಲ್ಲಿಯೂ ಅನುಸರಿಸಬೇಕು.

ತಾಬೇದಾರೀ ಆಫಿಸರುಗಳ ಪೈಕಿ ಮುಖ್ಯಸ್ಥರು ದಾವೆಗಳನ್ನು ಅಡ್ಜರ್ನ್ ಮಾಡಬಹುದು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 22]

13. ಯಾವುದಾದರೂ ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರ ಗೈರ್‌ಹಾಜರಿಯಲ್ಲಿ ಸದರಿ ಕೋರ್ಟಿನ ತಾಬೇದಾರೀ ಆಫಿಸರುಗಳ ಪೈಕಿ ಮುಖ್ಯಸ್ಥರು ಯಾವುದೊಂದು ದಾವೆ ಯಾ ವ್ಯವಹರಣೆಯ ಹಿಯರಿಂಗನ್ನು ಅಡ್ಜರ್ನ್ ಮಾಡುವ ಬಗ್ಗೆ ಕೋರ್ಟಿಗಿರುವ ಅಧಿಕಾರವನ್ನು ಆಗಿಂದಾಗ್ಯೆ ಚಲಾಯಿಸಬಹುದಲ್ಲದೆ ಅವುಗಳ ಹಿಯರಿಂಗ್ ಬಗ್ಯೆ ಮುಂದೆ ಒಂದು ದಿನವನ್ನು ಗೊತ್ತುಮಾಡಬಹುದು.

ಯಾವ ದಾವೆಯಲ್ಲಾದರೂ ಸ್ಥಿರ ಸ್ವತ್ತಿನ ಹಕ್ಕುದಾರಿಯ ವಿವಾದಗಳು ತೋರಬಂದರೆ ದಾವಾಅರ್ಜಿಗಳನ್ನು ವಾಪಸುಮಾಡೋಣ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 23]

14. (1) ಇದಕ್ಕೆ ವಿರೋಧವಾಗಿ ಈ ರೆಗ್ಯುಲೇಷನಿನ ಹಿಂದಿನ ಪ್ರಕರಣಗಳಲ್ಲಿ ಏನು ಅಡಗಿದ್ದರೂ ಸರಿಯೇ, ವಾದಿಯ ಹಕ್ಕನ್ನು ಸ್ಮಾಲ್‌ಕಾಜು ಕೋರ್ಟಿನವರು ಅಂಗೀಕರಿಸುವುದಕ್ಕಾಗಲೀ ಅವನು ಕೇಳುವ ಪರಿಹಾರವನ್ನು ಕೊಡಿಸುವುದಕ್ಕಾಗಲೀ ಮುಂಚಿತವಾಗಿ ಯಾರಿಗಾದರೂ ಸ್ಥಿರಸ್ವತ್ತಿನ ಬಾಧ್ಯತೆಯುಂಟು ಅಥವಾ ಇಲ್ಲ ಎಂದು ರುಜುವಾತು ಮಾಡುವುದು ಅವಶ್ಯಕವಾಗಿರುವ ಪಕ್ಷದಲ್ಲಿ ಆ ದಾವೆಯ ವಿಚಾರಣೆಯು ಎಷ್ಟರಪರ್ಯಂತ ಸಾಗಿದ್ದರೂ ಸರಿಯೇ ಸದರೀ ಬಾಧ್ಯತೆಯನ್ನು ವ್ಯವಸ್ಥೆಮಾಡಲು ಅಧಿಕಾರವುಳ್ಳ ಕೋರ್ಟಿನಲ್ಲಿ ಹಾಜರ್‌ಮಾಡುವ ಬಗ್ಯೆ ದಾವಾ ಅರ್ಜಿಯನ್ನು ಸ್ಮಾಲ್‌ಕಾಜು ಕೋರ್ಟಿನವರು ವಾಪಸ್ ಮಾಡಬಹುದು.

(2) (1)ನೆ ಒಳಪ್ರಕರಣದ ಮೇರೆಗೆ ಕೋರ್ಟಿನವರು ದಾವಾ ಅರ್ಜಿಯನ್ನು ವಾಪಸ್‌ಮಾಡುವ ಕಾಲದಲ್ಲಿ ಸಿವಿಲ್ ಪ್ರೊಸೀಡ್ಯೂರ್ ಕೋಡಿನ 57ನೆ ಪ್ರಕರಣದ 2ನೆ ಪ್ಯಾರಾದಲ್ಲಿ ಕಂಡ ನಿಯಮಗಳ ಮೇರೆಗೆ ನಡೆಸತಕ್ಕದ್ದಲ್ಲದೆ ಕೋರ್ಟ್ ಖರ್ಚುಗಳ ವಿಷಯದಲ್ಲಿ ತಮಗೆ ಯುಕ್ತಕಂಡಂತೆ ಹುಕುಂ ಮಾಡಬಹುದು; ಮತ್ತು 1877ನೆ ಇಸವಿಯ ಇಂಡಿಯನ್ ಲಿಮಿಟೇಷನ್ ಆಕ್ಟಿನ ಉದ್ದೇಶಗಳಿಗಾಗಿ ಸದರಿ ಕೋರ್ಟಿನವರಿಗೆ ಅಧಿಕಾರವಿಲ್ಲದೆ ಇದ್ದ ಕಾರಣದಿಂದ ಅಥವಾ ಆ ತರಹೆಯ ಬೇರೆ ಕಾರಣದಿಂದ ಸದರೀ ದಾವೆಯನ್ನು ದಾಖಲ್‌ಮಾಡಿಕೊಳ್ಳಲು ಆಗದೆ ಹೋಯಿತೆಂದು ಭಾವಿಸತಕ್ಕದ್ದು.

ಸ್ಮಾಲ್‌ಕಾಜು ಕೋರ್ಟುಗಳ ಕೆಲವು ಹುಕುಮುಗಳ ಮೇಲೆ ಅಪೀಲು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 24]

15. ಸಿವಿಲ್ ಪ್ರೊಸೀಡ್ಯೂರ್ ಕೋಡಿನ 588ನ ಪ್ರಕರಣದ (29)ನೆ ಕಲಮಿನಲ್ಲಿ ನಮೂದಿರುವ ಹುಕುಮನ್ನು ಸ್ಮಾಲ್‌ಕಾಜು ಕೋರ್ಟಿನವರು ಕೊಟ್ಟ ಅದರ ಮೇಲೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳಬಹುದು.

ಸ್ಮಾಲ್‌ಕಾಜು ಕೋರ್ಟುಗಳ ಡಿಕ್ರಿಗಳ ಮತ್ತು ಹುಕುಮುಗಳ ಪುನರ್ವಿಮರ್ಶೆ. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 25]

16. ಸ್ಮಾಲ್‌ಕಾಜು ಕೋರ್ಟಿನಲ್ಲಿ ಫೈಸಲಾದ ಯಾವ ದಾವೆಯಲ್ಲಾಗಲಿ ಹುಟ್ಟಿದ ಡಿಕ್ರಿ ಅಥವಾ ಹುಕುಮು ಕಾನೂನಿಗನುಸಾರವಾಗಿದೆಯೆಂದು ದೃಢಪಡಿಸಿಕೊಳ್ಳುವ ಬಗ್ಯೆ ಚೀಫ್ ಕೋರ್ಟಿನವರು ಸದರೀ ದಾವೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿಕೊಂಡು ಅದರಮೇಲೆ ತಮಗೆ ಯುಕ್ತ ತೋರುವ ಹುಕುಮನ್ನು ಕೊಡಬಹುದು.

ಸ್ಮಾಲ್‌ಕಾಜು ಕೋರ್ಟಿನ ಡಿಕ್ರಿಗಳೂ ಹುಕುಮುಗಳೂ ಆಖೈರಿನವಾಗಿರತಕ್ಕದ್ದು. [1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 27]

17. ಈ ರೆಗ್ಯುಲೇಷನಿನಲ್ಲಿ ಅಪೀಲ್ ಇರತಕ್ಕದ್ದೆಂದು ವಿಧಿಸಿರುವ ಸಂದರ್ಭಗಳಲ್ಲಿ ಹೊರತು ಮೇಲ್ಕಂಡ ನಿಯಮಗಳಮೇರೆಗೆ ಸ್ಮಾಲ್‌ಕಾಜು ಕೋರ್ಟಿನವರು ಕೊಡುವ ಡಿಕ್ರಿ ಅಥವಾ ಹುಕುಮು ಆಖೈರು ಡಿಕ್ರಿಯಾ ಹುಕುಂ ಆಗಿರತಕ್ಕದ್ದು.

5ನೆ ಅಧ್ಯಾಯ.

ಇತರ ನಿಯಮಗಳು.

ಸ್ಮಾಲ್‌ಕಾಜು ಕೋರ್ಟುಗಳು ಯಾವ ಕೋರ್ಟುಗಳ ತಾಬೆಯಲ್ಲಿ ರತಕ್ಕದ್ದು.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 28]

18. ಸ್ಮಾಲ್‌ಕಾಜು ಕೋರ್ಟುಗಳು ಕಾರ್ಯನಿರ್ವಾಹದ ವಿಷಯದಲ್ಲಿ ಡಿಸ್ಟ್ರಿಕ್ಟ ಕೋರ್ಟಿನ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದಲ್ಲದೆ ಚೀಫ್‌ಕೋರ್ಟಿನ ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದು ; ಮತ್ತು

(a) ಚೀಫ್ ಕೋರ್ಟಿನವರು ಆಗಿಂದಾಗ್ಯೆ ನೇಮಿಸಬಹುದಾದ ರಿಜಿಸ್ಟರುಗಳನ್ನೂ, ಪುಸ್ತಕಗಳನ್ನೂ, ಲೆಕ್ಕಗಳನ್ನೂ ಇಡತಕ್ಕದ್ದು ; ಮತ್ತು

(b) ಡಿಸ್ಟ್ರಿಕ್ಟ ಕೋರ್ಟಿನವರು, ಚೀಫ್ ಕೋರ್ಟಿನವರು, ಅಥವಾ ಸರ್ಕಾರದವರು ಯಾವುದಾದರೂ ರಿಕಾರ್ಡುಗಳನ್ನು, ಲೆಕ್ಕಗಳನ್ನು, ಅಥವಾ ತಃಖ್ತೆಗಳನ್ನು ಅಪೇಕ್ಷಿಸಿದಲ್ಲಿ ಸದರಿಯವರು ಅಪ್ಪಣೆ ಮಾಡುವ ನಮೂನೆ ಮತ್ತು ವಿಧಾನಗಳಲ್ಲಿ ಅವುಗಳನ್ನು ರವಾನಿಸತಕ್ಕದ್ದು.

ಮೊಹರು.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 29]

19. ಸ್ಮಾಲ್‌ಕಾಜು ಕೋರ್ಟಿನವರು ಸರ್ಕಾರದವರಿಂದ ವಿಧಾಯಕವಾಗುವ ನಮೂನೆಯಂತಿರುವ ಮತ್ತು ಪರಿಮಾಣವುಳ್ಳ ಮೊಹರನ್ನು ಉಪಯೋಗಿಸತಕ್ಕದ್ದು.

ಸ್ಮಾಲ್‌ಕಾಜು ಕೋರ್ಟುಗಳನ್ನು ವಜಾಮಾಡೋಣ.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 30]

20. ಸರ್ಕಾರದವರು ಬರಹಮೂಲಕವಾದ ಅಪ್ಪಣೆಯದ್ವಾರಾ ಯಾವ ಸ್ಮಾಲ್‌ಕಾಜುಕೋರ್ಟನ್ನಾಗಲಿ ವಜಾ ಮಾಡಬಹುದು.

ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರನ್ನು ಸರ್ಕಾರದವರು ಬೇರೆ ಕೆಲಸಗಳಿಗೆ ನೇಮಿಸಬಹುದು.

[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 31].

21. (1) ಸ್ಮಾಲ್‌ಕಾಜು ಕೋರ್ಟಿನಲ್ಲಿ ಜಡ್ಜಿಯಾಗಿರುವವರು ತಮ್ಮ ಕೆಲಸದ ಜತೆಗೆ ಬೇರೊಂದು ಸಿವಿಲ್ ಕೋರ್ಟಿನ ಜಡ್ಜಿಯಾಗಿರಬೇಕೆಂದು ಅಥವಾ ಯಾವುದಾದರೊಂದು ತರಗತಿಯ ಮ್ಯಾಜಿಸ್ಟ್ರೇಟರಾಗಿರಬೇಕೆಂದು ಅಥವಾ ಇತರ ಸರ್ಕಾರಿ ನೌಕರರಾಗಿರಬೇಕೆಂದು ಸರ್ಕಾರದವರು ಮೊಕರರ್‌ಮಾಡುವ ವಿಷಯದಲ್ಲಿ ಈ ರೆಗ್ಯುಲೇಷನಿನಲ್ಲಿ ಇರುವ ಯಾವ ವಿಧಿಯಿಂದಲಾಗಲಿ ಬಾಧಕವುಂಟೆಂದು ಭಾವಿಸಲ್ಪಡಕೂಡದು.

(2) ಸ್ಮಾಲ್‌ಕಾಜು ಕೋರ್ಟಿನ ಜಡ್ಜಿಯವರನ್ನು ಮೇಲ್ಕಂಡ ಮೇರೆಗೆ ನೇಮಿಸಿದಾಗ ಈ ವಿಷಯದಲ್ಲಿ ಸರ್ಕಾರದವರು ಏರ್ಪಡಿಸಬಹುದಾದ ನಿಬಂಧನೆಗಳಿಗೆ ಒಳಪಟ್ಟು ಸದರಿ ಕೋರ್ಟಿನ ತಾಬೇದಾರೀ ನೌಕರರೇ, ಮೇಲ್ಕಂಡ ಇತರ ಕೆಲಸವನ್ನು ಮಾಡುವುದರಲ್ಲಿಯೂ ಕೂಡ ಜಡ್ಜಿಯವರಿಗೆ ಸಹಾಯ ಮಾಡತಕ್ಕದ್ದು.

ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಕೋರ್ಟುಗಳಿಗೂ ಈ ರೆಗ್ಯುಲೇಷನು ಅನ್ವಯಿಸೋಣ.

[1887ನೇ ಇಸವಿ 9ನೆ ಆಕ್ಟಿನ ಪ್ರಕರಣ 32.]

22. (1) 3ನೆ ಮತ್ತು 4ನೆ ಅಧ್ಯಾಯಗಳ ಪೈಕಿ ಇದರಡಿ ಕಂಡ ಭಾಗಗಳಿಗೆ ಸಂಬಂಧಿಸುವ ನಿಯಮಗಳೆಲ್ಲವೂ ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಿಂದ ಅಥವಾ ಅದರ ಮೇರೆಗೆ ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಕೋರ್ಟುಗಳಿಗೆಲ್ಲಾ ಸದರಿ ಸ್ಮಾಲ್‌ಕಾಜು ಅಧಿಕಾರದ ಚಲಾವಣೆಗೆ ಸಂಬಂಧಿಸುವಷ್ಟರಮಟ್ಟಿಗೆ ಅನ್ವಯಿಸತಕ್ಕದ್ದು :—

(a) ಸ್ಮಾಲ್‌ಕಾಜು ಕೋರ್ಟಿನವರು ಫಲಾನೆ ತರಹೆ ದಾವೆಗಳನ್ನು ದಾಖಲ್ ಮಾಡಿಕೊಳ್ಳಬಹುದೆಂದು ವಿಧಿಸುವ ಭಾಗ ;

(b) ಸದರೀ ದಾವೆಗಳನ್ನು ಇತರ ಕೋರ್ಟಿನವರು ದಾಖಲ್ ಮಾಡಿಕೊಳ್ಳಕೂಡದೆಂದು ವಿಧಿಸುವ ಭಾಗ ;

(c) ಸ್ಮಾಲ್‌ಕಾಜು ಕೋರ್ಟುಗಳಲ್ಲಿ ಅನುಸರಿಸಬೇಕಾದ ಪದ್ಧತಿ ಮತ್ತು ನಡವಳಿಕೆಗಳನ್ನು ಕುರಿತ ಭಾಗ ;

(*d*) ಆ ಕೋರ್ಟುಗಳಲ್ಲಿ ಹುಟ್ಟಿದ ಕೆಲವು ಹುಕುಮುಗಳಮೇಲೆ ಅಪೀಲ್ ಮಾಡುವುದನ್ನೂ ಸದರೀ ಕೋರ್ಟಿನವರು ದಾವೆಗಳನ್ನು ಪುನರ್ವಿಮರ್ಶೆ ಮಾಡುವುದನ್ನೂ ಕುರಿತ ಭಾಗ; ಮತ್ತು

(*e*) ಈ ರೆಗ್ಯುಲೇಷನಿನಲ್ಲಿ ವಿಧಾಯಕವಾಗಿರುವ ಅಪೀಲ್ ಮತ್ತು ಪುನರ್ವಿಮರ್ಶೆಗೆ ಒಳಪಟ್ಟು ಸದರೀ ಕೋರ್ಟುಗಳಲ್ಲಿ ಹುಟ್ಟಿದ ಡಿಕ್ರಿಗಳೂ ಹುಕುಮುಗಳೂ ಆಖೈರಿನವಾಗಿರತಕ್ಕದ್ದೆಂದು ವಿಧಿಸುವ ಭಾಗ.

(2) ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟ ಕೋರ್ಟುಗಳನ್ನು ಕುರಿತು (1) ನೆ ಒಳಪ್ರಕರಣದಲ್ಲಿ ಕಂಡ ಯಾವ ನಿಯಮವೂ ಆ ಕೋರ್ಟುಗಳಿಗೆ ಸದರಿ ಅಧಿಕಾರ ಕೊಡಲ್ಪಟ್ಟ ತಾರೀಖಿಗೆ ಮುಂಚೆ ಅವುಗಳಲ್ಲಿ ದಾಖಲಾಗಿದ್ದ ದಾವೆಗಳಿಗೂ ಷುರು ಆಗಿದ್ದ ನಡವಳಿಕೆಗಳಿಗೂ ಅನ್ವಯಿಸಕೂಡದು.

ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಕೋರ್ಟಿಗೆ ಈ ರೆಗ್ಯುಲೇಷನೂ ಸಿವಿಲ್ ಪ್ರೊಸಿಡ್ಯೂರ್ ಕೋಡೂ ಹೇಗೆ ಅನ್ವಯಿಸಬೇಕು ?
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 33.]

23. ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಒಂದು ಕೋರ್ಟು ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಸದರೀ ಸ್ಮಾಲ್‌ಕಾಜು ಅಧಿಕಾರವನ್ನು ಚಲಾಯಿಸುವಾಗಲೇ ಬೇರೇ ಕೋರ್ಟಾಗಿದೆ ಎಂತಲೂ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಉದ್ದೇಶಗಳಿಗಾಗಿ ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರ ಚಲಾಯಿಸುವಾಗಲೇ ಬೇರೆ ಕೋರ್ಟಾಗಿದೆ ಎಂತಲೂ ಭಾವಿಸಲ್ಪಡತಕ್ಕದ್ದು.

ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟ ಕೋರ್ಟಿಗೆ ಸಿವಿಲ್ ಪ್ರೊಸಿಡ್ಯೂರ್ ಕೋಡನ್ನು ಅನ್ವಯಿಸುವ ವಿಷಯದಲ್ಲಿ ತಿದ್ದುಪಾಟು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 34.]

24. ಹಿಂದಿನ 22—23ನೆ ಪ್ರಕರಣಗಳಲ್ಲಿ ವಿರೋಧಾಂಶವು ಏನಿದ್ದರೂ ಸರಿಯೇ—

(*a*) ಸ್ಮಾಲ್‌ಕಾಜು ಅಧಿಕಾರವುಳ್ಳ ಒಂದು ಕೋರ್ಟಿನವರು ಸದರೀ ಅಧಿಕಾರವನ್ನು ಚಲಾಯಿಸುವಲ್ಲಿ ಡಿಕ್ರಿಯನ್ನು ಕೊಟ್ಟು ಸದರೀ ಡಿಕ್ರಿಯನ್ನು ಜಾರಿಯ ಬಗ್ಯೆ, ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರವುಳ್ಳ ಕೋರ್ಟಾಗಿರುವ ತರೀಖ್, ತಮ್ಮಲ್ಲಿಗೇನೇ ಕಳುಹಿಸಿಕೊಡುವ ಸಂದರ್ಭದಲ್ಲಿ; ಅಥವಾ

(*b*) ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲಾಗಕೂಡದಾದ ಸಿವಿಲ್ ಸ್ವಭಾವದ ದಾವೆಗಳ ವಿಷಯದಲ್ಲಿ ಅಧಿಕಾರವುಳ್ಳ ಒಂದು ಕೋರ್ಟಿನವರು ಡಿಕ್ರಿಯನ್ನು ಕೊಟ್ಟು ಸದರಿ ಡಿಕ್ರಿಯನ್ನು ಜಾರಿಯ ಬಗ್ಯೆ ಸ್ಮಾಲ್‌ಕಾಜು ಅಧಿಕಾರ ಕೊಡಲ್ಪಟ್ಟಿರುವ ಕೋರ್ಟಾದ ತಮ್ಮಲ್ಲಿಗೇನೇ ಕಳುಹಿಸಿಕೊಡುವ ಸಂದರ್ಭದಲ್ಲಿ;—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 224ನೆ ಪ್ರಕರಣದಲ್ಲಿ ನಮೂದಿರುವ ಕಾಗದಪತ್ರಗಳನ್ನು ಡಿಕ್ರಿಯ ಜತೆಯಲ್ಲಿ ಕಳುಹಿಸಬೇಕೆಂದು ಆ ಕೋರ್ಟಿನವರು ಬರಹಮೂಲಕವಾಗಿ ಹುಕುಂ ಮಾಡಿದಾಗ ಹೊರತು ಅವುಗಳನ್ನು ಕಳುಹಿಸಬೇಕಾದುದಿಲ್ಲ.

ರದ್ದಾದ ಕೋರ್ಟುಗಳಲ್ಲಿ ಜರುಗುತ್ತಿದ್ದ ನಡವಳಿಕೆಗಳನ್ನು ಕೊನೆಯವರೆಗೂ ನಡೆಸುವುದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 35.]

25. (1) ಒಂದು ಸ್ಮಾಲ್‌ಕಾಜು ಕೋರ್ಟಿಗಾಗಲೀ ಅಥವಾ ಸ್ಮಾಲ್‌ಕಾಜು ಕೋರ್ಟಿನ ಅಧಿಕಾರ ಕೊಡಲ್ಪಟ್ಟಿರುವ ಇತರ ಕೋರ್ಟಿಗಾಗಲೀ ಯಾವ ಕಾರಣದಿಂದಾದರೂ ಯಾವುದಾದರೂ ದಾವೆಯ ವಿಚಾರಣೆಯ ವಿಷಯದಲ್ಲಿ ಅಧಿಕಾರವು ತಪ್ಪಿಹೋದರೆ ಆ ದಾವೆಯ ವಿಚಾರದಲ್ಲಿ ಡಿಕ್ರಿ ಹುಟ್ಟುವುದಕ್ಕೆ ಮುಂಚೆ ಅಥವಾ ಹುಟ್ಟಿದನಂತರ ಆ ಕೋರ್ಟಿನಲ್ಲಿ ನಡೆಯಬೇಕಾಗಿದ್ದ ನಡವಳಿಕೆಗಳೆಲ್ಲಾ ಅವುಗಳಿಗೆ ಸಂಬಂಧಪಟ್ಟ ದಾವೆಯನ್ನು ಹಿಡಿಯಲು ಅಧಿಕಾರವುಳ್ಳ ಇತರ ಕೋರ್ಟಿನಲ್ಲಿ ಕೊನೆಯವರೆಗೂ ನಡೆಸಲ್ಪಡಬಹುದು.

(2) ಸಿವಿಲ್ ಪ್ರೊಸಿಡ್ಯೂರ್ ಕೋರ್ಟಿನ ಪೈಕಿ ಸ್ಮಾಲ್‌ಕಾಜು ಕೋರ್ಟುಗಳಿಗೆ ಅನ್ವಯಿಸುವಂಥಾ ಭಾಗದಲ್ಲಿ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಇತರ ಕಾನೂನಿನಲ್ಲಿ ಯಾವ ದಾವೆಗಳ ಬಗ್ಯೆ

ವಿಶೇಷ ನಿಯಮಗಳನ್ನು ಏರ್ಪಡಿಸಿದೆಯೋ ಆ ದಾವೆಗಳಿಗೆ ಈ ಪ್ರಕರಣದಲ್ಲಿ ಇರುವುದು ಯಾವುದೂ ಅನ್ವಯಿಸುವುದಿಲ್ಲ.

ಕೆಲವು ಹುಕುಮುಗಳನ್ನು ಪ್ರಕಟಿಸುವುದು.
[1887ನೆ ಇಸವಿಯ 9ನೆ ಆಕ್ಟಿನ ಪ್ರಕರಣ 37.]

26. ಯಾವ ಯಾವ ಹುಕುಮುಗಳನ್ನು ಸರ್ಕಾರದವರು ಬರಹಮೂಲಕವಾಗಿ ಕೊಡಬೇಕೆಂದು ಈ ರೆಗ್ಯುಲೇಷನಿನಲ್ಲಿ ವಿಧಿಸೋಣಾಗಿದೆಯೋ ಆ ಹುಕುಮುಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಷೆಡ್ಯೂಲ್.

ಸ್ಮಾಲ್ ಕಾಜು ಕೋರ್ಟುಗಳಲ್ಲಿ ದಾಖಲಾಗಬಹುದಾದ ದಾವೆಗಳು.

(10ನೆ ಪ್ರಕರಣವನ್ನು ನೋಡಿ.)

(1) ಸಾಲದ ಮೊಬಲಗನ್ನು ವಸೂಲ್‌ಮಾಡುವ ಬಗ್ಗೆ ದಾವೆ ;

(2) ಬಬ್ಬ ಜಾಮೀನ್ದಾರನಿಂದ ಅಥವಾ ಅವನಮೇಲೆ ಹಣಕ್ಕಾಗಿ ದಾವೆ ;

(3) ಬಿಕರಿಮಾಡಿದ ಸಾಮಾನಿನ ಬೆಲೆಗಾಗಿ ದಾವೆ ;

(4) ಕೆಲಸಮಾಡುವ ಬಗ್ಗೆ ಅಥವಾ ಕೂಲಿ ಜನರನ್ನು ಸರಫರಾಜ್ ಮಾಡುವಬಗ್ಗೆ ಹುಟ್ಟಿದ ಕರಾರಿನ ಮೇಲಿನ ದಾವೆ ;

(5) ಬಾಡಿಗೆಗೆ ಕೊಡುವ ಅಥವಾ ತೆಗೆದುಕೊಳ್ಳುವ ಮತ್ತು ನೌಕರಿಗೆ ಇಟ್ಟುಕೊಳ್ಳುವ ಅಥವಾ ನೌಕರಿ ಮಾಡುವ ಕರಾರಿನ ಮೇಲಿನ ದಾವೆ ;

(6) ಬಾಡಿಗೆ ಪಾವತಿಮಾಡುವುದಾಗಿ ಕಂಠೋಕ್ತವಾದ ಕರಾರು ಹುಟ್ಟಿದ್ದರೆ ಸದರೀ ಬಾಡಿಗೆಯ ಬಗ್ಗೆ ದಾವೆ ;

(7) ಊಟದ ಮತ್ತು ವಾಸದ ಬಗ್ಗೆ ಖರ್ಚು ವಸೂಲ್ ಮಾಡುವ ವಿಷಯದಲ್ಲಿ ದಾವೆ ;

(8) ವಾದಿಯ ಪರವಾಗಿ ಪ್ರತಿವಾದಿಯು ವಸೂಲ್ ಮಾಡಿಕೊಂಡ ಹಣಕ್ಕೋಸ್ಕರ ದಾವೆ ;

(9) ಪ್ರತಿವಾದಿಗೆ ತಪ್ಪು ತಿಳುವಳಿಕೆಯಿಂದ ಕೊಟ್ಟ ಅಥವಾ ಕೊಡಬೇಕಾದುದಕ್ಕಿಂತ ಹೆಚ್ಚಾಗಿ ಕೊಟ್ಟ ಹಣಕ್ಕೋಸ್ಕರ ದಾವೆ ;

(10) ಪ್ರತಿವಾದಿಯು ಕೋರಿಕೆಯಮೇರೆಗೆ ಕೊಟ್ಟ ಹಣಕ್ಕಾಗಿ ಅಥವಾ ಸಾಮಾನುಗಳಿಗಾಗಿ ದಾವೆ ;

(11) ಸಾಮಾನ್ ಬಿಕರಿಗೆ ಸಂಬಂಧಪಟ್ಟ ಕರಾರನ್ನು ಉಲ್ಲಂಘಿಸಿದುದಕ್ಕಾಗಿ ಪರಿಹಾರ ದ್ರವ್ಯವನ್ನು ಪಡೆಯುವ ಬಗ್ಗೆ ದಾವೆ ;

(12) ಠೇವಣಿ ಇಟ್ಟ ಮೊಬಲಗಿನ ಬಗ್ಗೆ ದಾವೆ ; (ಕೋರ್ಟಿನವರಿಗೆ ಯಾವ ಮೊಬಲಗಿನೊಳಗಾಗಿ ದಾವೆಗಳನ್ನು ದಾಖಲ್ ಮಾಡಿಕೊಳ್ಳಲು ಅಧಿಕಾರವಿದೆಯೋ ಆ ಮೊಬಲಗಿಗಿಂತ ಸದರೀ ಠೇವಣಾತಿಯ ಒಟ್ಟು ಮೊಬಲಗು ಜಾಸ್ತಿಯಾಗಿರಕೂಡದು.)

(13) ಪ್ರತಿವಾದಿಯ ಬಳಿ ಒತ್ತೆ ಅಥವಾ ಠೇವಣಾತಿ ಇಟ್ಟಿರುವ ಯಾವುದಾದರೂ ಚರಸ್ವತ್ತನ್ನು ಅಥವಾ ಅದರ ಖರೀದಿಯನ್ನು ವಸೂಲ್ ಮಾಡಿಕೊಳ್ಳುವುದಕ್ಕೋಸ್ಕರ ದಾವೆ.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

1865ನೆ ಇಸವಿಯ 11ನೆ ಆಕ್ಟ್ ಆದ ಸ್ಮಾಲ್‌ಕಾಜ್ ಕೋರ್ಟುಗಳ ಆಕ್ಟನ್ನು ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಕ್ರಮವಾಗಿ ಜಾರಿಗೆ ತಂದಿಲ್ಲ. ಆದರೂ 1880ನೆ ಜನವರಿ 28ನೆ ಮರ್ಕ್ಯಂ ಐ. ಜೆ. 31ನೆ ನಂಬರ್ ಇಂಡಿಯಾ ಸರ್ಕಾರದ ಫಾರೆನ್ ಇಲಾಖಾ ಇಸ್ತಿಹಾರ್ನಾಮೆಯ ಆಧಾರದಿಂದ ಮಾತ್ರವೇ ಸದರೀ ಆಕ್ಟು ಈ ಸಂಸ್ಥಾನದಲ್ಲಿ ಜಾರಿಯಲ್ಲಿದೆ. ಈ ಇಸ್ತಿಹಾರ್ನಾಮೆಯ ಮೂಲಕ ಇದಕ್ಕೆ ಹಿಂದೆ ಇದೇ ವಿಚಾರವಾಗಿ ಹುಟ್ಟಿದ್ದ 1879ನೆ

ಇಸವಿಯ ಆಗಸ್ಟ್ 27ನೆ ಮೆರ್‍ಕಂ ಐ. ಜೆ. 235ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟವಾಗಿದ್ದ ನಿಬಂಧನೆಗಳ ಪೈಕಿ 8ನೆ ನಿಬಂಧನೆಗೆ ಕೆಲವು ಮಾತುಗಳನ್ನು ಹೆಚ್ಚಾಗಿ ಸೇರಿಸಲಾಯಿತು.

ಸದರೀ ತಿದ್ದುಪಾಟಾದ 8ನೆ ನಿಬಂಧನೆಯನ್ನು ಈ ಕೆಳಗೆ ಕೊಟ್ಟಿದೆ; ಆ ಪೈಕಿ ಹೆಚ್ಚಾಗಿ ಸೇರಿಸಿರುವ ಮಾತುಗಳನ್ನು ಕೆಳಗೆ ಗೀಟುಹಾಕಿ ಸೂಚಿಸಿ ಇದೆ:—

"ಸ್ಮಾಲ್‌ಕಾಜ಼ು ಕೋರ್ಟುಗಳಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಗೂಡಿಸಿ ತಿದ್ದುಪಾಟುಮಾಡುವುದಕ್ಕೆ ಹುಟ್ಟಿದ 1865ನೆ ಇಸವಿಯ 11ನೆ ಆಕ್ಟನ್ನನುಸರಿಸಿ ಚೀಫ್ ಕಮಿಷನವರು ಆಗಿಂದಾಗ್ಯೆ ಗೊತ್ತು ಮಾಡಬಹುದಾದ ಸ್ಥಳಿಕ ಸರಹದ್ದುಗಳೊಳಗೆ ಯಾವ ಸಬಾರ್ಡಿನೇಟ್ ಜಡ್ಜಿಯವರಿಗಾಗಲೀ ಸ್ಮಾಲ್‌ಕಾಜು ಅಧಿಕಾರವನ್ನು ಕೊಟ್ಟು 500 ರೂಪಾಯಿಗಳಿಗೆ ಮೀರದಂತೆ ಚೀಫ್ ಕಮಿಷನವರಿಗೆ ಯುಕ್ತತೋರುವ ಮೊಬಲಗಿಗೆ ಸಂಬಂಧಪಟ್ಟ ಸ್ಮಾಲ್‌ಕಾಜು ದಾವೆಗಳನ್ನು ವಿಚಾರಣೆ ಮಾಡಬಹುದೆಂತಲೂ, ಯಾವ ಮುನ್ಸೀಫರಿಗಾಗಲೀ ಅದೇರೀತಿ ಅಧಿಕಾರ ಕೊಟ್ಟು 50 ರೂಪಾಯಿಗಳಿಗೆ ಮೀರದಂತೆ ಚೀಫ್ ಕಮಿಷನರವರಿಗೆ ಯುಕ್ತತೋರುವ ಮೊಬಲಗಿಗೆ ಸಂಬಂಧಪಟ್ಟ ಸ್ಮಾಲ್‌ಕಾಜು ದಾವೆಗಳನ್ನು ವಿಚಾರಣೆ ಮಾಡಬಹುದೆಂತಲೂ ಚೀಫ್ ಕಮಿಷನರವರು ಅಪ್ಪಣೆ ಮಾಡಬಹುದು."

"ಸದರೀ 1865ನೆ ಇಸವಿಯ 11ನೆ ಆಕ್ಟಿನ ನಿಯಮಗಳೆಲ್ಲವೂ ಈ ನಿಬಂಧನೆಗೆ ಅನುಸಾರವಾಗಿರುವಷ್ಟರಮಟ್ಟಿಗೆ ಮೇಲ್ಕಂಡಂತೆ ಪಡೆದ ಅಧಿಕಾರವನ್ನು ಸಬಾರ್ಡಿನೇಟ್ ಜಡ್ಜಿ ಅಥವಾ ಮುನ್ಸೀಫ್‌ಯವರು ಅವರವರ ಕೋರ್ಟುಗಳಲ್ಲಿ ಚಲಾಯಿಸುವಾಗ ಅವರುಗಳಿಗೆ ಅನ್ವಯಿಸತಕ್ಕದ್ದು."

"ಮೇಲ್ಕಂಡಂತೆ ಸಬಾರ್ಡಿನೇಟ್ ಜಡ್ಜಿಯವರಿಗೆ ಅಥವಾ ಮುನ್ಸೀಫರಿಗೆ ಕೊಡೋಣಾದ ಅಧಿಕಾರವನ್ನು ಚೀಫ್ ಕಮಿಷನರವರು ತಮಗೆ ಯುಕ್ತ ತೋರಿದಾಗ ರದ್ದು ಮಾಡಬಹುದು."

ಪರಂತು 1879ನೆ ಆಗಸ್ಟ್ 27ನೆ ತಾರೀಖಿನ ಇಸ್ತಿಹಾರ್ನಾಮೆಯನ್ನೆಲ್ಲಾ 1883ನೆ ಇಸವಿ 1ನೆ ನಂಬರಿನ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 2ನೆ ಪ್ರಕರಣದ ಮೂಲಕ ರದ್ದುಮಾಡಲಾಗಿದೆ. ಅಲ್ಲಿಂದೀಚೆಗೆ ಯಾವ ಜಡ್ಜಿಗಳಿಗಾಗಲಿ ಸ್ಮಾಲ್‌ಕಾಜು ಅಧಿಕಾರವನ್ನು ಕೊಡಬೇಕಾದರೆ ಮೇಲ್ಕಂಡ 1883ನೆ ಇಸವಿಯ 1ನೆ ರೆಗ್ಯುಲೇಷನಿಗನುಸಾರವಾಗಿ ಕೊಡುತ್ತಿದೆ. ಆದರೆ 1879ನೆ ಇಸವಿಯ ಇಸ್ತಿಹಾರ್ನಾಮೆಯನ್ನು ರದ್ದುಮಾಡಿದ ಕಾಲದಲ್ಲಿ 1880ನೆ ಇಸವಿಯ ಜನವರಿ 28ನೆ ತಾರೀಖಿನ ತಿದ್ದುಪಾಟು ಇಸ್ತಿಹಾರನ್ನು ಕಂಠೋಕ್ತವಾಗಿ ರದ್ದುಮಾಡಲಿಲ್ಲ. ಆದಕಾರಣ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ಸ್ಮಾಲ್‌ಕಾಜು ಕಾನೂನಿನ ವಿಷಯದಲ್ಲಿ ಕೆಲವರಿಗೆ ಸಂದೇಹಗಳುಂಟಾಗಲು ಅವಕಾಶವಾಗಿದೆ.

2. ಈ ಸಂದೇಹಗಳನ್ನು ಪರಿಹರಿಸುವುದು ಮಾತ್ರವೇ ಅಲ್ಲದೆ 1887ನೆ ಇಸವಿಯ 9ನೆ ಆಕ್ಟಾದ ಬ್ರಿಟಿಷ್ ಇಂಡಿಯಾ ಪ್ರೊವಿನ್ಷಿಯಲ್ ಸ್ಮಾಲ್‌ಕಾಜು ಕೋರ್ಟುಗಳ ಆಕ್ಟು ಇಲ್ಲಿನ ಸ್ಥಳ ವಿದ್ಯಮಾನಗಳಿಗೆ ಸರಿಹೋಗುವಷ್ಟರಮಟ್ಟಿಗೆ ಅದಕ್ಕನುಸಾರವಾಗಿಯೇ ಮೈಸೂರು ಕಾನೂನನ್ನೂ ಏರ್ಪಡಿಸಬೇಕೆಂಬುವುದೂ ಸಹ ಈ ಬಿಲ್ಲಿನ ಉದ್ದೇಶವಾಗಿದೆ. ಈ ಮಸೂದೆಯಿಂದ ಸಿವಿಲ್ ಕೋರ್ಟು ರೆಗ್ಯುಲೇಷನಿನ 16ನೆ ಪ್ರಕರಣವು ರದ್ದಾಗಬೇಕೆಂದು ಉದ್ದೇಶಿಸಿಲ್ಲವೆಂಬ ಅಂಶವನ್ನು ಇಲ್ಲಿ ಸೂಚಿಸಬಹುದು. ಈ ಮಸೂದೆಯಲ್ಲಿ ಸರ್ಕಾರದವರು ಪ್ರತ್ಯೇಕವಾದ ಸ್ಮಾಲ್‌ಕಾಜು ಕೋರ್ಟುಗಳನ್ನು ಸ್ಥಾಪಿಸಬಹುದೆಂದು ವಗೈರೆ ನಿಯಮಮಾಡಿದೆ; ಸಿವಿಲ್‌ಕೋರ್ಟು ರೆಗ್ಯುಲೇಷನಿನಲ್ಲಿಯಾದರೋ ಕೆಲವು ಜಡ್ಜಿಗಳಿಗೆ ಸ್ಮಾಲ್‌ಕಾಜು ಅಧಿಕಾರವನ್ನು ಕೊಡಬಹುದೆಂದು ನಿಯಮ ಮಾಡಿ ಇದೆ. ಅವರಗಳು ಸದರೀ ಅಧಿಕಾರವನ್ನು ಈ ಬಿಲ್ಲಿನ 22ನೆ ಪ್ರಕರಣದಲ್ಲಿ ವಿಧಿಸಿರುವ ಮೇರೆಗೆ ಚಲಾಯಿಸತಕ್ಕದ್ದು.

3. ಅನೇಕ ಸ್ಮಾಲ್‌ಕಾಜು ಕೋರ್ಟುಗಳಿಗೆ ಒಬ್ಬರೇ ಜಡ್ಜಿಯವರನ್ನು ನೇಮಿಸುವುದು, ಒಂದೇ ಕೋರ್ಟಿಗೆ ಒಬ್ಬರಿಗಿಂತ ಜಾಸ್ತಿ ಜಡ್ಜಿಗಳನ್ನು ನೇಮಿಸುವುದು, ರಿಜಿಸ್ಟ್ರಾರರುಗಳನ್ನು ನೇಮಿಸುವುದು ವಗೈರೆ ಅಂಶಗಳನ್ನು ಕುರಿತು ಸದ್ಯದಲ್ಲಿ ಈ ಬಿಲ್ಲಿನಲ್ಲಿ ನಿಯಮ ಮಾಡಬೇಕಾಗಿಲ್ಲವೆಂದು ಯೋಚಿಸಲಾಗಿದೆ.

4. ಸಿಬ್ಬಂದಿ ಏರ್ಪಾಡನ್ನು ಕುರಿತು 8ನೆ ಪ್ರಕರಣವನ್ನು ಹೊಸದಾಗಿ ಸೇರಿಸಿ ಇದೆ. ಇದು 1887ನೆ ಇಸವಿಯ 9ನೆ ಆಕ್ಟಿನ 13ನೆ ಪ್ರಕರಣಕ್ಕೆ ಅನುಸಾರವಾಗಿ; ಪರಂತು ಸದರಿ ಪ್ರಕರಣದಷ್ಟು ತೊಡಕಾಗಿಲ್ಲ.

5. 1887ನೆ ಇಸವಿಯ 9ನೆ ಆಕ್ಟಿನ ಷೆಡ್ಯೂಲಿನಲ್ಲಿ ಯಾವ ಯಾವ ದಾವೆಗಳು ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದಾಖಲಾಗಕೂಡದೆಂಬುವುದನ್ನು 44 ಕಲಮುಗಳಲ್ಲಿ ನಮೂದಿಸಿರುವುದಲ್ಲದೆ ಅವು ಹೊರತು ನಿಷ್ಕರ್ಷೆ

ಯಾದ ಒಂದು ಮೊಬಲಗಿಗೆ ಮೀರದೆ ಇರುವ ಇತರ ಎಲ್ಲಾ ಸಿವಿಲ್ ದಾವೆಗಳನ್ನೂ ಸದರಿ ಕೋರ್ಟುಗಳಲ್ಲಿ ದಾಖಲ್ ಮಾಡಿಕೊಳ್ಳಬಹುದೆಂದು ವಿಧಿಸಿ ಇದೆ.

ಕಾನೂನ್ ಯಾ ವಿದ್ಯಮಾನಗಳನ್ನು ಕುರಿತ ತೊಡಕಾದ ಅಂಶಗಳಿಲ್ಲದೆ ಇರುವ ಚಿಲ್ಲರೆ ದಾವೆಗಳನ್ನು ಮಾತ್ರ ಹಿಡಿಯುವ ಸ್ಮಾಲ್‌ಕಾಜ್ ಕೋರ್ಟುಗಳಿಗೆ ಅಧಿಕಾರ ಕೊಡುವುದೇ ಇಂಡಿಯನ್ ಆಕ್ಟಿನ ಷೆಡ್ಯೂಲಿನಲ್ಲಿ ಈರೀತಿ ದಾವೆಗಳ ತರಗತಿ ವಿಭಾಗಮಾಡಿದುದರ ಉದ್ದೇಶವಾಗಿದೆ. ಪರಂತು ನಿಜಾಂಶವನ್ನು ಪರೀಕ್ಷಿಸಿದರೆ ಸದರೀ ಆಕ್ಟಿನಮೇರೆಗೆ ಯಾವ ಯಾವ ದಾವೆಗಳನ್ನು ಕಷ್ಟವಾಗಿರುವ ಸಬಬು ಅಂಥಾ ಕೋರ್ಟುಗಳಲ್ಲಿ ದಾಖಲ್ ಮಾಡಿಕೊಳ್ಳಕೂಡದೆಂದು ನಿಷೇಧಿಸಿದೆಯೋ ಅಷ್ಟೇ ಕಠಿಣವಾದ ದಾವೆಗಳು ದಾಖಲಾಗುವುದಕ್ಕೂ ಸಹ ಅವಕಾಶ ಇದೆ ಎಂಬ ಅಂಶವನ್ನು ಮಿ॥ ಜಸ್ಟಿಸ್ ಎ. ರಾಮಚಂದ್ರ ಅಯ್ಯರವರು 1890ನೆ ಏಪ್ರಿಲ್ ಮತ್ತು 1893ನೆ ಮೇ ತಿಂಗಳುಗಳಲ್ಲಿ ಬರೆದ ಯಾದಾಸ್ತುಗಳಲ್ಲಿ ಸ್ಪಷ್ಟಪಡಿಸಿರುತ್ತಾರೆ. ಹ್ಯಾಗೆಂದರೆ, ಮೋಸ ಅಥವಾ ಅಸಡ್ಡೆಗೆ ಸಂಬಂಧಪಟ್ಟ ಹಣವನ್ನು ಠೇವಣಿ ಇಟ್ಟುಕೊಳ್ಳುವುದು ಅಥವಾ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ದಾವೆಗಳನ್ನೂ, ಜಮೀನ್ ಬಿಕರಿ ಕರಾರಿನಂತೆ ನಡೆಯದೆ ಹೋದುದಕ್ಕೋಸ್ಕರ ಪರಿಹಾರದ್ರವ್ಯವನ್ನು ಪಡೆಯುವುದಕ್ಕೆ ಸಂಬಂಧಪಟ್ಟ ದಾವೆಗಳನ್ನೂ ಹಿಡಿಯಕೂಡದೆಂದು ಸದರೀ ಷೆಡ್ಯೂಲಿನಲ್ಲಿ ನಮೂದಿಸಿಲ್ಲ. ಆದರೂ ಈ ತರಹೆ ದಾವೆಗಳೂ ಕೂಡ ಯಾವ ಯಾವ ತರಹೆ ದಾವೆಗಳನ್ನು ಹಿಡಿಯಕೂಡದೆಂದು ಸದರೀ ಷೆಡ್ಯೂಲಿನಲ್ಲಿ ನಮೂದಿದೆಯೋ ಅವುಗಳಷ್ಟೇ ಕಠಿಣವಾಗಿವೆ. ಇದೂ ಅಲ್ಲದೆ ಒಂದೇ ಕೃತ್ಯದಿಂದ ಒಬ್ಬ ಮನುಷ್ಯನ ಶರೀರಕ್ಕೂ ಸ್ವತ್ತಿಗೂ ಕೂಡ ಹಾನಿಯಾಗಬಹುದಾದ ಸಂಭವವೂ ಉಂಟು ; ಆದರೆ ಈ ಉಭಯ ಸಂದರ್ಭಗಳಲ್ಲಿಯೂ ಪ್ರತಿವಾದಿಯು ಪರಿಹಾರಕೊಡಲು ಗುರಿಯಾಗುವಷ್ಟರಮಟ್ಟಿಗೆ ಕಾನೂನಿನ ಮತ್ತು ವಿದ್ಯಮಾನದ ಅಂಶಗಳು ಒಂದೇ ತರಹೆ ಆಗಿರಬಹುದಾದರೂ ಸ್ವತ್ತಿಗೆ ನಷ್ಟವುಂಟಾದ ಬಗ್ಗೆ ಕೊಡಬೇಕಾದ ಪರಿಹಾರಕ್ಕೆ ಸಂಬಂಧಪಟ್ಟ ದಾವೆಗಳನ್ನು ಹಿಡಿಯಲು ಸ್ಮಾಲ್‌ಕಾಜು ಕೋರ್ಟಿಗೆ ಅಧಿಕಾರವುಂಟೆಂತಲೂ ಶರೀರಸಂಬಂಧವಾದ ಹಾನಿಯನ್ನು ಕುರಿತ ದಾವೆಗಳನ್ನು ಹಿಡಿಯಲು ಅಧಿಕಾರವಿಲ್ಲವೆಂತಲೂ ಭಾವಿಸೋಣಾಗಿದೆ. ಅಲ್ಲದೆ ಮಾನನಷ್ಟ ಅಥವಾ ಸುಳ್ಳು ಕ್ರಿಮಿನಲ್ ಫಿರ್ಯಾದನ್ನು ಕುರಿತ ದಾವೆಗಳನ್ನು ಸ್ಮಾಲ್‌ಕಾಜು ಕೋರ್ಟಿನಲ್ಲಿ ದಾಖಲ್ ಮಾಡಿಕೊಳ್ಳಕೂಡದೆಂದು ನಿಷೇಧಿಸಿದ್ದಾಗ್ಯೂ ಈ ದಾವೆಗಳಿಗಿಂತಲೂ ಕಠಿಣತರವಾದ ದಾವೆಗಳನ್ನು ಎಂದರೆ ಕುದುರೆ, ಒಡವೆ ವಗೈರೆಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಕುರಿತ ದಾವೆಗಳನ್ನು ಸದರೀ ಕೋರ್ಟಿನಲ್ಲಿ ದಾಖಲ್ ಮಾಡಿಕೊಳ್ಳಬಹುದೆಂತ ವಿಧಿಸಿ ಇದೆ.

ಇವೇ ಮುಂತಾದ ದೃಷ್ಟಾಂತಗಳನ್ನು ಪರ್ಯಾಲೋಚಿಸಿದರೆ ಇಂಡಿಯನ್ ಆಕ್ಟಿನಲ್ಲಿ ದಾವೆಗಳನ್ನು ತರಗತಿ ವಿಂಗಡಿಸಿರುವುದು ಸಮರ್ಪಕವಾಗಿಲ್ಲವೆಂತಲೂ, ಸ್ಮಾಲ್ ಕಾಜು ಕೋರ್ಟುಗಳಲ್ಲಿ ಇನ್ನೂ ಅನೇಕ ತರಹೆ ದಾವೆಗಳನ್ನು ಹಿಡಿಯಕೂಡದೆಂದು ವಿಧಿಸಬೇಕೆಂತಲೂ ತೋರುವುದು.

ಮೈಸೂರು ಸೀಮೆಯಲ್ಲಿ ಸಿವಿಲ್ ನ್ಯಾಯವಿಮರ್ಶೆಯನ್ನು ಕುರಿತ ಹಿಂದಿನ ರಿಪೋರ್ಟುಗಳನ್ನು ನೋಡಲಾಗಿ ಸಾಲಕೊಟ್ಟ ಹಣ, ಸರಫರಾಜ್ ಮಾಡಿದ ಸಾಮಾನು, ಕೂಲಿ, ಬಾಡಿಗೆ ವಗೈರೆಗೆ ಸಂಬಂಧಪಟ್ಟ ದಾವೆಗಳೇ ಸ್ಮಾಲ್‌ಕಾಜು ಕೋರ್ಟುಗಳಲ್ಲಿ ವಿಶೇಷವಾಗಿ ದಾಖಲಾಗಿವೆ ಎಂದು ವಿದಿತವಾಗುವುದು. ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದರ್ಯಾಪ್ತಿ ಆಗತಕ್ಕ ದಾವೆಗಳನ್ನೆಲ್ಲಾ ಕೆಲವು ಸಾಧಾರಣ ತರಗತಿಗಳಾಗಿ ವಿಂಗಡಿಸಬಹುದಾಗಿದೆ. ಆದುದರಿಂದ ಇಂಡಿಯನ್ ಆಕ್ಟಿನಲ್ಲಿರುವ ಷೆಡ್ಯೂಲನ್ನು ಬಿಟ್ಟುಬಿಟ್ಟು ಅದಕ್ಕೆ ಬದಲಾಗಿ ಒಂದು ಹೊಸ ಷೆಡ್ಯೂಲಿನಲ್ಲಿ ಮೇಲ್ಕಂಡ ತರಗತಿಗಳನ್ನು ನಮೂದಿಸಿ ಹಾಗೆ ನಮೂದಾಗದೆ ಇರುವ ತರಗತಿಗೆ ಸೇರಿದ ದಾವೆಗಳನ್ನು ಸ್ಮಾಲ್ ಕಾಜು ಕೋರ್ಟಿನವರು ಹಿಡಿಯಕೂಡದೆಂದು ವಿಧಿಸುವುದೇ ಸರ್ವೋತ್ತಮವೆಂತ ತೋರುತ್ತದೆ. ಈ ಮಸೂದೆಯ 10ನೆ ಕಲಮಿನಲ್ಲಿ ಈ ರೀತಿ ನಿಯಮವನ್ನೇರ್ಪಡಿಸಿದೆಯಲ್ಲದೆ ಸರ್ಕಾರದವರು ಗೆಜೆಟ್ಟಿನಲ್ಲಿ ಇಸ್ತಿಹಾರನ್ನು ಪ್ರಕಟಿಸುವುದರ ಮೂಲಕ ಸದರೀ ಷೆಡ್ಯೂಲಿಗೆ ಜಾಸ್ತಿ ತರಹೆ ದಾವೆಗಳನ್ನು ಸೇರಿಸಬಹುದು ಅಥವಾ ಅದರಲ್ಲಿ ಈಗ ನಮೂದಿರುವ ದಾವೆಗಳನ್ನು ವ್ಯತ್ಯಾಸ ಪಡಿಸಬಹುದು ಎಂಬದಾಗಿ ವಿಧಿಸಿದೆ.

ಈ ಮಸೂದೆಯ ವಿಷಯದಲ್ಲಿ ಚೀಫ್ ಕೋರ್ಟಿನವರ ಅಭಿಪ್ರಾಯವನ್ನೂ ಸಹ ಕೇಳಲಾಯಿತು. ಈ ಮಸೂದೆಯಲ್ಲಿ ಹೊಸದಾಗಿ ಸೇರಿಸಿರುವ ಷೆಡ್ಯೂಲು ಇಂಡಿಯನ್ ಆಕ್ಟಿನ ಷೆಡ್ಯೂಲಿಗಿಂತ ಉತ್ತಮವಾಗಿದೆಯೆಂತಲೂ, ಸ್ಮಾಲ್‌ಕಾಜು ಕೋರ್ಟುಗಳಲ್ಲಿ ದರ್ಯಾಫ್ತಾಗಬಹುದಾದ ದಾವೆಗಳನ್ನು ಈ ಮಸೂದೆಯಲ್ಲಿ ತರಗತಿಗಳಾಗಿ ವಿಂಗಡಿಸಿರುವುದು ಬಹಳ ಸುಲಭವಾಗಿಯೂ ಸ್ಪಷ್ಟವಾಗಿಯೂ ಇದೆಯೆಂತಲೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಷ್ ಆದ್ದು.

ಸಂ. 44.] ಬೆಂಗಳೂರು, ಗುರುವಾರ, ಮೇ ತಾ॥ 6, ಸನ 1909. [ನಂ. 18

III ನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ತಾರೀಖು 28ನೆ ಏಪ್ರೆಲ್ 1909.

ನಂ ಜು. 3355—ಲೆಜಿಸ್ 11-14, ಸನ 1909ನೆ ಇಸವಿ ಫೆಬ್ರುವರಿ 25ನೆ ಮಾರ್ಕ್ವಿನ ಮೈಸೂರು ಗೆಜೆಟ್ಟನಲ್ಲಿ ಪ್ರಕಟಿತವಾದ ಪೋಲೀಸ ರೆಗ್ಯುಲೇಷನಿಗೆ ಸಂಬಂಧಪಟ್ಟ ಇದರಡಿ ಕಂಡ ಶುದ್ಧಾಶುದ್ಧ ಪತ್ರಿಕೆಯನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಪ್ರಕಟಿಸಲಾಗಿದೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಅಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ.

ಮೈಸೂರು ಪೋಲೀಸು ರೆಗ್ಯುಲೇಷನಿಗೆ ಸಂಬಂಧಪಟ್ಟ ಶುದ್ಧಾಶುದ್ಧ ಪತ್ರಿಕೆ.

ಪುಟ	ಪ್ರಕರಣ.	ಪ್ರಕರಣದ ಪಜ್ತಿ.	ಎಂಬುವುದಕ್ಕೆ ಬದಲಾಗಿ.	ಎಂದು ಓದಿಕೊಳ್ಳತಕ್ಕದ್ದು.
33	3 (1) (iii)	2	ಅಸಹಜವಾದ ಮರಣಗಳು ಮೊದಲಾದುವುಗಳ ಸಂಭವ.	ಅಸಹಜವಾದ ಮರಣಗಳು ಮೊದಲಾದವುಗಳ ಸಂಭವ ಇವುಗಳನ್ನು ಕುರಿತು ವರ್ತಮಾನವನ್ನು ಸಂಗ್ರಹಿಸುವುದರ ಮತ್ತು ತಿಳಿಸುವುದರ ವಿಚಾರವಾಗಿಯೂ.
34	,,	7—8	ಇವುಗಳನ್ನು ಕುರಿತು ವರ್ತಮಾನವನ್ನು ಸಂಗ್ರಹಿಸುವುದರ ಮತ್ತು ತಿಳಿಸುವುದರ ವಿಷಯದಲ್ಲಿ.	ಇವುಗಳ ವಿಚಾರವಾಗಿಯೂ.
34	3 (1) (iv)	1	ದರೋಡೆ ...	ಚೋರಿ.
37	11 (2)	4	ಕೊಂಚಕಾಲದ ಮಟ್ಟಿಗೆ ...	ಆ ಕಾಲದ ಮಟ್ಟಿಗೆ.
39	17 (1)	12	ಗಂಡಸರು ...	ಗಂಡಸರಲ್ಲಿ.
41	22 (4)	4—5	ಈ ಪ್ರಕರಣದಂತೆ ಅವನಿಂದ ವಸೂಲಿಯನ್ನು ಮಾಡಕೂಡದು ಮತ್ತು ಅವನಿಗೆ ಪರಿಹಾರದ್ರವ್ಯವೂ ಸಲ್ಲಲಾಗದು	ಈ ಪ್ರಕರಣದಂತೆ ಪರಿಹಾರದ್ರವ್ಯವನ್ನು ವಸೂಲ್ ಮಾಡಲೂಕೂಡದು ಪಾವತಿ ಮಾಡಲೂಕೂಡದು.

ಪುಟ	ಪ್ರಕರಣ.	ಪ್ರಕರಣದ ಪಙ್ತಿ.	ಎಂಬುವುದಕ್ಕೆ ಬದಲಾಗಿ.	ಎಂದು ಓದಿಕೊಳ್ಳತಕ್ಕದ್ದು.
42	24 (b)	1	ಮಾಡುವ ಪೊಲೀಸಿನ ಪರೀಕ್ಷೆಯನ್ನು	ಪೊಲೀಸಿನವರಮೇಲೆ ತನಿಖೆ ಮಾಡುವುದನ್ನು.
43	25	9	ಹೇಳಿಕೆಗಳು ...	ತಃಖೆ ಗಳು.
,,	26(1)(b)(3)	1—2	ಯಾವುದಾದರೂ ಗಾರವವುಳ್ಳ ಪದವಿಯಿಂದ ತಪ್ಪಿಸುವುದು ಅಥವಾ ಯಾವುದಾದರೂ ವಿಶೇಷವಾದ ವೇತನವನ್ನು ಕೊಡುತ್ತಿದ್ದರೆ ಅದನ್ನು ಕಿತ್ತು ಹಾಕುವುದು.	ಯಾವುದಾದರೂ ಗಾರವವುಳ್ಳ ಅಥವಾ ವಿಶೇಷವಾದ ವೇತನವುಳ್ಳ ಪದವಿಯಿಂದ ತಪ್ಪಿಸುವುದು.
44	30 (1)	2—4	ಯಾವ ಪೊಲೀಸು ಆಫಿಸರೂ ಎಲ್ಲಿ ಆತನು ನಾಕರಿಯಮೇಲೆ ಇದ್ದಾನೆಯೋ ಆ ಡಿಸ್ಟ್ರಿಕ್ಟಿನಲ್ಲಿ ಮುಖಂಡನಾಗಿ ಆಗಲಿ ಮತ್ತೊಬ್ಬರ ಕಡೆಯುವನಾಗಿ ಆಗಲಿ ವ್ಯಾಪಾರದಲ್ಲಿ ಉದ್ಯುಕ್ತನಾಗಕೂಡದು; ಅಥವಾ	ಯಾವ ಪೊಲೀಸು ಆಫಿಸರೂ ವ್ಯಾಪಾರದಲ್ಲಿ ಉದ್ಯುಕ್ತನಾಗಕೂಡದು ಅಥವಾ ಎಲ್ಲಿ ಆತನು ನಾಕರಿಯಮೇಲೆ ಇದ್ದಾನೆಯೋ ಆ ಡಿಸ್ಟ್ರಿಕ್ಟಿನಲ್ಲಿ ಮುಖಂಡನಾಗಿ ಆಗಲಿ, ಮತ್ತೊಬ್ಬರಕಡೆಯುವನಾಗಿಆಗಲಿ.
49	3	6-8	ಆಗತ್ಯ ಕಂಡುಬರಬಹುದಾದಂಥಾ ಸಹಾಯದೊಂದಿಗೆ ಹಗಲಾಗಲಿ ರಾತ್ರಿಯಾಗಲಿ ಮತ್ತು ಅವಶ್ಯಕವಿದ್ದರೆ ಬಲವಂತದಿಂದ ತಾವೇ ಪ್ರವೇಶಿಸಬಹುದು ಅಥವಾ	ತಾವೇ ಪ್ರವೇಶಿಸಬಹುದು ಅಥವಾ ಅಗತ್ಯ ಕಂಡುಬರಬಹುದಾದಂಥಾ ಸಹಾಯದೊಂದಿಗೆ ಹಗಲಾಗಲಿ ರಾತ್ರಿಯಾಗಲಿ ಮತ್ತು ಅವಶ್ಯಕವಿದ್ದರೆ ಬಲವಂತದಿಂದ.
50	39 (1)	7	ಅಂಥಾ ಪಟ್ಟಣದಲ್ಲಿ ...	ಅಂಥಾ ಪಟ್ಟಣದಲ್ಲಿ, ಗ್ರಾಮದಲ್ಲಿ.
51	41 (2)	2	ಆಜ್ಞೆ ...	ಆಜ್ಞೆ (ಇರ್ಜಕ್ಷನ್)
	,,	4	ಆಜ್ಞೆಗೆ ...	ಆಜ್ಞೆಗೆ (ಇರ್ಜಕ್ಷನಿಗೆ)
54	48 (2)	3—7	ವಾರಂಟಿಲ್ಲದೆ ಜನಗಳು ಸುಳಿದಾಡುವ .... ಪ್ರವೇಶಿಸಬಹುದು.	ಜನಗಳು ಸುಳಿದಾಡುವ ಯಾವ ಸ್ಥಳವನ್ನಾಗಲಿ, ಪಾನಮಾಡುವ ಅಂಗಡಿಯಾಗಿ ಅಥವಾ ಮತ್ತಿನ ಪದಾರ್ಥಗಳ ವಿಕ್ರಯಕ್ಕೋಸ್ಕರವಾಗಿ ಅಥವಾ ಸೂಳೆಯರು ಮತ್ತು ಪುಂಡಜನರು ಸುಳಿದಾಡುವ ಸ್ಥಳವಾಗಿ ಉಪಯೋಗಿಸಲ್ಪಡುತ್ತದೆಂದು ನಂಬಲು ಕಾರಣವಿರುವ ಯಾವ ಸ್ಥಳವನ್ನಾಗಲಿ ಪ್ರತಿ ಪೊಲೀಸುಆಫಿಸರೂ ವಾರಂಟಿಲ್ಲದೆ ಪ್ರವೇಶಿಸಬಹುದು.
54	48 (3)	3	ಒಬ್ಬ ಮನುಷ್ಯನ ಸ್ವಾಧೀನದಲ್ಲಿ ಇರುವುದಾಗಿ	ಒಬ್ಬ ಮನುಷ್ಯನ ಸ್ವಾಧೀನದಲ್ಲಿ ಇರುವುದಾಗಿ ಅಥವಾ ಸ್ವಾಧೀನದಲ್ಲಿರುವಹಾಗೆ ತೋರುವುದಾಗಿ.
55	50 (1) (a) ಡಿಟೋ ಇರೇಬಿ	1	ವ್ಯಾಪಾರವನ್ನು	ಜನ, ಗಾಡಿ ವಗ್ಯೆರೆಗಳ ಸಂಚಾರವನ್ನು.
57	56 (d) ಇರೇಬಿ	...	ಆಗಲೀಸೋಣ	ಆಗಮಾಡಿಸೋಣ.
65	80	1	ಖಂಡಿತವಾಗಿ ...	ಬಹುಮಟ್ಟಿಗೆ.
66	81 (3)	9	ಫಿರ್ಯಾದನ್ನು ಅಥವಾ ದಾವೆಯು ...	ಫಿರ್ಯಾದು ಅಥವಾ ದಾವೆಯು.
67	B ಪಟ್ಟಿ	...	ಒಬ್ಬ ಪೊಲೀಸು ಇನ್ಸ್ಪೆಕ್ಟರ ...	ಒಬ್ಬ ಪೊಲೀಸು ಆಫಿಸರ.
68	...	...	ವಂಶ ...	ಜನಾಂಗ.
,,	IIನೆ ನಮೂನೆ	...	ವಂಶ ...	ಜನಾಂಗ.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಸಿದ್ಧ ಆದ್ದು.

ಸಂ. 44.] ಬೆಂಗಳೂರು, ಗುರುವಾರ, ಜೂನ್ ತಾ|| 24, ಸನ್ 1909. [ನಂ. 25.

III ನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನ್‌ಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ತಾರೀಖು 16ನೆ ಜೂನ್ 1909.

ನಂ. ಜ. 3926—ಪೋಲೀಸ್ 152-08-3, ಸನ್ 1890ನೆ ಇಸವಿಯ 6ನೆ ರೆಗ್ಯುಲೇಷನ್ ಆದ ಮೈಸೂರು ಆಯುಧಗಳ ರೆಗ್ಯುಲೇಷನಿನ 22ನೆ ಪ್ರಕರಣದಿಂದ ತಮಗೆ ಕೊಡೋಣಾದ ಅಧಿಕಾರವನ್ನು ಚಲಾಯಿಸುವುದರಲ್ಲಿ, ಘನವನ್ನು ಹೊಂದಿದ ಶ್ರೀಮನ್ ಮೈಸೂರು ಮಹಾರಾಜಾ ಸಾಹೇಬ್ಬಹದರವರ ಸರ್ಕಾರದವರು 1905ನೆ ಇಸವಿ ಡಿಸೆಂಬರ್ 26ನೆ ತಾರೀಖಿನ ಜ. 1782—ಪೋಲೀಸ್ ಮಿಸ್. 6ನೆ ನಂಬರ್ ಇಸ್ತಿಹಾರ್ನಾಮೆಯೊಂದಿಗೆ ಕೊಡೋಣಾದ ನಿಬಂಧನೆಗಳ ಪೈಕಿ Iನೆ ಪ್ಯಾರಾವಿನ 3ನೆ ಕಲಮಿಗೆ ಇದರಡಿ ಕಂಡ ಹೆಚ್ಚು ಅಂಶಗಳನ್ನು ಸೇರಿಸಿಕೊಳ್ಳತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ :—

“ ಪರಂತು ಮೈಸೂರು ಸಂಸ್ಥಾನದ ಸೈನ್ಯಗಳಿಗಾಗಲಿ ಅಥವಾ ಬ್ರಿಟಿಷ್ ಇಂಡಿಯಾವಿನ ಸೈನ್ಯಕ್ಕಾಗಲಿ ಸೇರಿದ ಒಬ್ಬ ದೇಶೀಯ ಸಿಪಾಯಿಯು ತನ್ನ ರಿಜಿಮೆಂಟಿನಿಂದ ರಜಾದಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ತನ್ನ ಕಮ್ಯಾಂಡಿಂಗ್ ಆಫಿಸರಿಂದ ಕೊಡಲ್ಪಡುವ ಪ್ಯಾಸಿನಲ್ಲಿ ನಮೂದಿರುವ ಆಯುಧಗಳ ಮತ್ತು ಮದ್ದು ಗುಂಡುಗಳ ವಿಷಯದಲ್ಲಿ ಮಾತ್ರ ವಿನಾಯಿಸಲ್ಪಡತಕ್ಕದ್ದು.”

“ ವಿವರಣೆ.—ಈ ಕಲಮಿನಲ್ಲಿ ಉಪಯೋಗಿಸಿರುವ “ ಸಿಪಾಯಿಗಳು ” ಎಂಬ ಮಾತಿನಲ್ಲಿ “ ರಿಜರ್ವಿಸ್ಟುಗಳು ” ಸೇರುವದಿಲ್ಲ.”

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಆಫಿಷಿಯೇಟಿಂಗ್ ಸೆಕ್ರಿಟೆರಿ.

ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿಯವರ ಆಫೀಸು.

ಬೆಂಗಳೂರು, ತಾರೀಖು 16ನೆ ಜೂನ್ 1909.

ನಂಬರ್ 317—ಲೆ. ಕೌ.

ಇಸ್ತಿಹಾರ್ನಾಮೆ.

ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯ ನಿರ್ವಾಹದ ಬಗ್ಗೆ ಏರ್ಪಡಿಸಿರುವ ನಿಬಂಧನೆಗಳ ಪೈಕಿ 40ನೆ ನಿಬಂಧನೆಯನ್ನನುಸರಿಸಿ, ಮೈಸೂರು ವಿಷಪದಾರ್ಥಗಳ ಬಿಲ್ಲಿನ ಆಲೋಚನೆಯ ಬಗ್ಗೆ ನಿಯಮಿಸಲ್ಪಟ್ಟ ನಿಯುಕ್ತ ಸಮಾಜದ (Select Committee) ಇದರಡಿ ಕಂಡ ರಿಪೋರ್ಟನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಕಟಿಸಿ ಇರುತ್ತದೆ.

ಹುಕುಂ ಬಮೋಜಿಬ್,

ಎಸ್. ಹಿರಿಯಣ್ಣಯ್ಯ, ಸೆಕ್ರೆಟರಿ,

ಮೈಸೂರು ನ್ಯಾಯವಿಧಾಯಕ ಸಭೆ.

ಮೈಸೂರು ವಿಷಪದಾರ್ಥಗಳ ಬಿಲ್ಲಿನ ವಿಷಯವಾಗಿ ನಿಯುಕ್ತ ಸಮಾಜದವರು ಬರೆಸಿರುವ ರಿಪೋರ್ಟು.

ಎಲ್ಲಾ ತರಹೆಯ ವಿಷ ಪದಾರ್ಥಗಳನ್ನೂ ಕೆಲವು ಸ್ಥಳಗಳಲ್ಲಿ ಸ್ವಾಧೀನದಲ್ಲಿಟ್ಟುಕೊಂಡಿರುವುದು, ಬಿಕರಿ ಮಾಡುವುದು; ಮುಖ್ಯವಾಗಿ ಇಲೀ ಪಾಷಾಣವನ್ನು ಆಮದುಮಾಡಿಕೊಳ್ಳುವುದು, ಸ್ವಾಧೀನದಲ್ಲಿಟ್ಟುಕೊಂಡಿರುವುದು ಮತ್ತು ಬಿಕರಿಮಾಡುವುದು—ಇವುಗಳನ್ನು ಕ್ರಮಪಡಿಸುವ ಬಗ್ಗೆ ಹುಟ್ಟಿದ ಬಿಲ್ಲನ್ನು ಪರ್ಯಾಲೋಚನೆಯ ಬಗ್ಗೆ ನಿಯುಕ್ತ ಸಮಾಜದ ಮೆಂಬರುಗಳಾದ ನಮ್ಮಗಳಿಗೆ ವಹಿಸೋಣವಾಗಿತ್ತಷ್ಟೆ. ಸದರಿ ಬಿಲ್ಲಿನ ವಿಚಾರವಾಗಿ ನಾವುಗಳು ರಿಪೋರ್ಟು ಮಾಡುವದೇನಂದರೆ:—

ಈ ಬಿಲ್ಲಿನಲ್ಲಿ ಅಡಗಿರುವ ವಿಧಿಗಳೆಲ್ಲವನ್ನೂ ಈ ವಿಚಾರವಾಗಿ ಹೊರಗಣಿಂದ ಬಂದ ಸಲಹೆಗಳನ್ನೂ ಪರ್ಯಾಲೋಚಿಸಲಾಗಿ ನ್ಯಾಯವಿಧಾಯಕಸಭೆಯವರು ಈ ಬಿಲ್ಲನ್ನು ಇದರಡಿ ಕಂಡ ತಿದ್ದುಪಾಟುಗಳ ಸಮೇತ ಅಂಗೀಕರಿಸಬಹುದಾಗಿದೆ ಎಂದು ನಾವುಗಳು ಅಭಿಪ್ರಾಯಪಡುತ್ತೇವೆ.

1. ಕಲಂ 4, ಒಳ ಕಲಂ (2).

ಈ ವಿಚಾರವಾದ ತಿದ್ದುಪಾಟನ್ನು ಕನ್ನಡದಲ್ಲಿ ಮೊದಲೇ ಮಾಡಿರುತ್ತದೆ.

2. ಕಲಂ 10, ಒಳ ಕಲಂ (1) (b).

ಈ ಒಳಕಲಮಿನಲ್ಲಿರುವ "ಮೈಸೂರು ಸೀಮೆಯಲ್ಲಿ" ಎಂಬ ಮಾತುಗಳಿಗೆ ಬದಲಾಗಿ ಬ್ರಿಟಿಷ್ ಇಂಡಿಯಾ ಆಕ್ಟಿನಲ್ಲಿರುವಂತೆ "ಯುನೈಟೆಡ್ ಕಿಂಗಡಂ ಎಂದರೆ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್‌ಗಳಲ್ಲಿ" ಎಂಬ ಮಾತುಗಳನ್ನು ಸೇರಿಸಬೇಕು. ಯಾಕೆಂದರೆ ರಸಾಯನ ಶಾಸ್ತ್ರಜ್ಞರ ಕೆಲಸ ಮಾಡುವದಕ್ಕಾಗಲಿ, ಔಷಧ ವಿಕ್ರಯಿಸುವವರ ಕೆಲಸ ಮಾಡುವುದಕ್ಕಾಗಲಿ ಫಲಾನಾ ಯೋಗ್ಯತೆಗಳು ಇರಬೇಕೆಂಬ ವಿಚಾರವಾಗಿ ಮೈಸೂರು ಸೀಮೆಯಲ್ಲಿಯಾಗಲಿ, ಬ್ರಿಟಿಷ್ ಇಂಡಿಯಾದಲ್ಲಿಯಾಗಲಿ ಯಾವುದೊಂದು ಕಾನೂನೂ ಜಾರಿಯಲ್ಲಿಲ್ಲವೆಂದು ನಮಗೆ ತಿಳಿಯಬಂದಿದೆ.

3. ಕಲಂ 10, ಒಳ ಕಲಂ (2).

ಈ ಒಳಕಲಮನ್ನು ಇದರಡಿ ಕಂಡ ರೀತಿಯಲ್ಲಿ ಬದಲಾಯಿಸಬೇಕೆಂದು ನಾವು ಅಭಿಪ್ರಾಯಪಡುತ್ತೇವೆ:—

"(2). ಸರ್ಕಾರದವರು ನಮೂದಿಸಬಹುದಾದ ಔಷಧ ಸಂಬಂಧ ವಿಷ ಪದಾರ್ಥಗಳನ್ನು ಬಿಕರಿ ಮಾಡುವ ಸಾಮಾನ್ಯ ವೈದ್ಯರ ಅಥವಾ ಪಶುವೈದ್ಯರ ಅಥವಾ ಕೆಮಿಸ್ಟು ಅಥವಾ ಡ್ರಗ್ಗಿಸ್ಟುಗಳ ವಿಷಯದಲ್ಲಿ

(i) ಅವರುಗಳು ಬಿಕರಿಮಾಡಿದ ಪದಾರ್ಥಗಳ ರಿಜಿಸ್ಟರುಗಳನ್ನು ಇಡುವ ಬಗ್ಗೆಯೂ, ಸದರಿ ರಿಜಿಸ್ಟರುಗಳಲ್ಲಿ ದಾಖಲ್ಮಾಡಬೇಕಾದ ತಪಶೀಲುಗಳ ವಿಷಯದಲ್ಲಿಯೂ, ಮತ್ತು ಸದರಿ ರಿಜಿಸ್ಟರುಗಳ ಅಜಮಾಯಿಷಿಯ ಬಗ್ಗೆಯೂ;

(ii) ಅಂಥಾ ಪದಾರ್ಥಗಳನ್ನು ಬಂದೋಬಸ್ತಾಗಿ ಇಡುವ ಬಗ್ಗೆಯೂ, ಅವುಗಳನ್ನು ಬಿಕರಿಮಾಡುವ ಅಥವಾ ಬಿಕರಿ ಮಾಡುವುದಕ್ಕಾಗಿ ಸದರೀ ಪದಾರ್ಥಗಳನ್ನು ಇಟ್ಟಿರುವ ಪಾತ್ರೆಗಳು, ಬಸ್ತುಗಳು ಅಥವಾ ಪೊಟ್ಲಗಳು ಇವುಗಳ ಮೇಲೆ ಚೀಟಿಗಳನ್ನು ಅಂಟಿಸುವ ಬಗ್ಗೆಯೂ;

(iii) ಮೇಲೆ ಹೇಳಿದ ಯಾವನಾದರೊಬ್ಬ ಮನುಷ್ಯನು ಸದರೀ ಔಷಧ ವಿಷಪದಾರ್ಥಗಳನ್ನು ಬಿಕರಿಯ ಬಗ್ಗೆ ಇಟ್ಟುಕೊಂಡಿರುವ ಸಂದರ್ಭದಲ್ಲಿ ಅವುಗಳನ್ನು ಅಜಮಾಯಿಷಿಮಾಡಿ ಪರೀಕ್ಷಿಸುವ ಬಗ್ಗೆ—

ಸರ್ಕಾರದವರು ನಿಬಂಧನೆಗಳನ್ನು ಏರ್ಪಡಿಸಬಹುದು"

ಮೇಲ್ಕಂಡ ಒಳಕಲಮಿನ ರೀತ್ಯಾ ಸರ್ಕಾರದವರಿಂದ ವಿಧಿಸಲ್ಪಡಬಹುದಾದ ನಿಬಂಧನೆಗಳ ಮೇರೆಗೆ ನಡೆಯದೆ ತಪ್ಪಿದರೆ ದಂಡನೆಯನ್ನು ವಿಧಿಸಬಹುದೆಂಬ ಬಗ್ಗೆ ಮುಸೂದಾ ಬಿಲ್ಲಿನಲ್ಲಿ ಯಾವುದೊಂದು ನಿಯಮವನ್ನೂ ನಮೂದಿಸಿಲ್ಲ. ಆದಕಾರಣ 7ನೆ ಕಲಮಿನ 1 (a) ಒಳ ಕಲಮಿನಲ್ಲಿ "4ನೆ ಪ್ರಕರಣದ ಮೇರೆಗಾಗಲಿ" ಎಂಬ ಮಾತುಗಳ ನಂತರ "ಅಥವಾ 10ನೆ ಪ್ರಕರಣದ (2)ನೆ ಒಳ ಪ್ರಕರಣದ ಮೇರೆಗಾಗಲಿ" ಎಂಬ ಮಾತುಗಳನ್ನು ಸೇರಿಸತಕ್ಕದ್ದು ಆವಶ್ಯಕವೆಂದು ನಾವು ಅಭಿಪ್ರಾಯಪಡುತ್ತೇವೆ.

ಈ ಬಿಲ್ಲಿನಲ್ಲಿ ಅಷ್ಟೇನೂ ವ್ಯತ್ಯಾಸಗಳನ್ನು ಮಾಡಿಲ್ಲವಾದ ಪ್ರಯುಕ್ತ ಈಗ ನಾವು ಸೂಚಿಸಿರುವ ತಿದ್ದುಪಾಟುಗಳನ್ನು ಸೇರಿಸಿ ಪುನಃ ಈ ಬಿಲ್ಲನ್ನು ಶಾಯಿಷ್ ಮಾಡಬೇಕಾದ ಅಗತ್ಯವಿಲ್ಲವೆಂದು ನಮಗೆ ತೋರುತ್ತದೆ.

ನಮ್ಮ ಸಮಾಜದಲ್ಲಿ ವಿಷಯಗಳನ್ನು ಚರ್ಚಿಸಿದ ಕಾಲದಲ್ಲಿ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಕರ್ನಲ್ ಸ್ಮಿತ್, ಐ. ಎಂ. ಎಸ್. ಯವರೂ ಮತ್ತು ಪಶುವೈದ್ಯರಾದ ಮಿ|| ಎಂ. ನರಸಿಹ್ಮಯ್ಯಂಗಾರ್ರವರೂ ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದುದರಿಂದ ತುಂಬಾ ಪ್ರಯೋಜನವಾಯಿತೆಂದು ಇಲ್ಲಿ ಸೂಚಿಸುತ್ತೇವೆ.

ಕೆ. ಪಿ. ಪುಟ್ಟಣ್ಣಸೆಟ್ಟಿ;

9ನೆ ಜೂನ್ 1909. ಎಸ್. ನಾರಾಯಣರಾವ್;

ಎಂ. ಸಿ. ರಂಗಯ್ಯಂಗಾರ್.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಛಾಯಿಪ್ ಆದ್ದು. [ನಂ. 40

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 7, ಸನ 1909.

III ನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ಇಸ್ತಿಹಾರ್ನಾಮೆ.

ನಂಬರ್ ಜ. 794—ಲೆಜಿಸ್ಲೇಷನ್, ತಾರೀಖು 15ನೆ ಸೆಪ್ಟಂಬರ್ 1909.

ಮೈಸೂರು ನ್ಯಾಯವಿಧಾಯಕ ಸಭೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಇಬ್ಬರು ಮೆಂಬರುಗಳನ್ನು ಚುನಾಯಿಸುವ ವಿಷಯದಲ್ಲಿ 1903ನೆ ಇಸವಿ ಜೂನ್ 10ನೆ ಮರ್ಕೂಂ 102ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಸಾದರಾದ ನಿಬಂಧನೆಗಳನ್ನು ಈ ಮೂಲಕ ರದ್ದುಮಾಡಿ ಶ್ರೀಮನ್ ಮಹಾರಾಜ ರಾಜಾಸಾಹೇಬ್ಬಹದ್ದುರವರು 1907ನೆ ಇಸವಿಯ 1ನೆ ನಂಬರ್ ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 5ನೆ ಪ್ರಕರಣದಲ್ಲಿ ತಮಗೆ ಕೊಡಲ್ಪಟ್ಟಿರುವ ಅಧಿಕಾರಾನುಗುಣವಾಗಿ ಇದರಡಿ ಕಂಡ ನಿಬಂಧನೆಗಳನ್ನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

I. ಸರ್ಕಾರದವರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪೈಕಿ ಇಬ್ಬರನ್ನು ನ್ಯಾಯವಿಧಾಯಕ ಸಭಾ ಮೆಂಬರುಗಳಾಗಿ ನೇಮಿಸಬಹುದು. ಹಾಗೆ ನೇಮಿಸಲ್ಪಡತಕ್ಕವರು ಮುಂದಿನ ನಿಬಂಧನೆಗಳಲ್ಲಿ ವಿಧಿಸಿರುವ ರೀತ್ಯಾ ಚುನಾಯಿಸಲ್ಪಟ್ಟಿರಬೇಕು.

II. ಈ ಚುನಾವಣೆಯ ಬಗ್ಗೆ ಪ್ರತಿನಿಧಿ ಸಭೆಯ ಮೆಂಬರುಗಳ ಪೈಕಿ ಸಂಸ್ಥಾನದ ಪಶ್ಚಿಮ ಡಿವಿಜನ್ನಿನಿಂದ ಎಂದರೆ ಮೈಸೂರು ಹಾಸನ, ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಿಂದ ಚುನಾಯಿಸಲ್ಪಟ್ಟಿರುವ ಮೆಂಬರುಗಳನ್ನು ಒಂದು ಗುಂಪಾಗಿಯೂ, ಪೂರ್ವ ಡಿವಿಜನ್ನಿನಿಂದ ಎಂದರೆ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಂದ ಚುನಾಯಿಸಲ್ಪಟ್ಟಿರುವ ಮೆಂಬರುಗಳನ್ನು ಎರಡನೆ ಗುಂಪಾಗಿಯೂ ಏರ್ಪಡಿಸಲಾಗುವುದು.

III. (1) ವರ್ಷೇವರ್ಷೇ ಪ್ರಜಾಪ್ರತಿನಿಧಿ ಸಭೆಯು ನಡೆಯುತ್ತಿರುವಾಗ ಸರ್ಕಾರದವರು ಗೊತ್ತುಮಾಡುವ ಕಾಲ ಮತ್ತು ಸ್ಥಳಗಳಲ್ಲಿ ಪ್ರತಿನಿಧಿಗಳ ಮೀಟಿಂಗ್ ಸೇರಿಸಿ ಮೇಲ್ಕಂಡ IIನೆ ನಿಬಂಧನೆಯಲ್ಲಿ ನಮೂದಿಸಲ್ಪಟ್ಟ ಎರಡು ಗುಂಪುಗಳ ಪೈಕಿ ಪ್ರತಿಯೊಂದು ಗುಂಪಿನವರೂ ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ನೇಮಿಸಲ್ಪಡುವ ಬಗ್ಗೆ ತಮ್ಮ ತಮ್ಮ ಗುಂಪಿನ ಪೈಕಿ ಒಬ್ಬ ಮೆಂಬರನ್ನು ಚುನಾಯಿಸಬೇಕೆಂದು ಕೇಳಲಾಗುವುದು.

(2) ಒಂದು ಡಿವಿಜನ್ನಿನಿಂದ ಚುನಾಯಿಸಲ್ಪಡಲು ಇಷ್ಟಪಡುವ ಪ್ರತಿನಿಧಿಗಳು ತಮ್ಮ ಇಷ್ಟವನ್ನು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖಾ ಸೆಕ್ರೆಟರಿಯವರಿಗೆ ವಿಜಯದಶಮಿಯೊಳಗಾಗಿ ಬರಹಮೂಲಕವಾಗಿ ತಿಳಿಯಪಡಿಸಬೇಕು.

(3) ಉಮೇದುವಾರರಾಗಲು ಇಷ್ಟವಿರುವುದೆಂದು ತಿಳಿಯಪಡಿಸಿರುವವರ ಪೈಕಿ ಆಯಾ ಡಿವಿಜನ್ನಿಗೆ ಸರ್ಕಾರದವರು ಯಾರ್ಯಾರನ್ನು ಅನುಮೋದಿಸಬಹುದೋ ಅಂಥಾವರ ಹೆಸರುಗಳ ಪಟ್ಟಿಯನ್ನು ಚುನಾವಣೆ ಬಗ್ಯೆ ನಿಷ್ಕರ್ಷೆಯಾದ ದಿನಕ್ಕೆ ಕಡೇ ಪಕ್ಷ ಎರಡುದಿವಸ ಮುಂಚಿತವಾಗಿ ಪ್ರತಿನಿಧಿ ಸಭಾ ಮಂದಿರದಲ್ಲಿ ಬಹಿರಂಗವಾದ ಕಡೆ ಚಿಕಟ್ಟಾಯಿಸಲಾಗುವುದು. ಪ್ರತಿನಿಧಿಗಳು ಆ ಪೈಕಿ ತಮ್ಮ ತಮ್ಮ ಡಿವಿಜನ್ನಿಗೆ ಸೇರಿದ ಒಬ್ಬರಿಗೆ ಮಾತ್ರವೇ ವೋಟ್ ಮಾಡಬೇಕು

(4) ವೋಟುಗಳನ್ನು ಬ್ಯಾಲಟ್ ಮೂಲಕ ಕೊಡತಕ್ಕದ್ದು.

(5) ಸರ್ಕಾರದವರಿಂದ ನೇಮಿಸಲ್ಪಟ್ಟ ಒಬ್ಬ ಆಫೀಸರು ಸದರೀ ಮೀಟಂಗಿನಲ್ಲಿ ಹಾಜರಿದ್ದು ಪ್ರತಿನಿಧಿಗಳು ಕೊಟ್ಟಿರುವ ವೋಟುಗಳನ್ನು ಲೆಕ್ಕ ಮಾಡುವರು.

(6) ಮೀಟಂಗ್ ಪೂರೈಸಿದ ತರುವಾಯ ಪ್ರತಿ ಗುಂಪಿನವರಿಂದಲೂ ವೋಟುಗಳನ್ನು ಪಡೆದ ಉಮೇದುವಾರರುಗಳ ಹೆಸರುಗಳನ್ನೂ ಮತ್ತು ಪ್ರತಿ ಉಮೇದುವಾರರಿಗೂ ಎಷ್ಟೆಷ್ಟು ವೋಟುಗಳು ಬಂದುವು ಎಂಬ ವಿವರಗಳನ್ನೂ ತೋರಿಸುವ ರಿಪೋರ್ಟುನಿಶೀ ಸದರೀ ಆಫೀಸರು ವೋಟಿನ ಚೀಟಿಗಳನ್ನು ಸರ್ಕಾರದವರಿಗೆ ಕಳುಹಿಸಿಕೊಡಬೇಕು.

(7) ಅಂಥಾ ಮೀಟಂಗಿನ ಕಾರ್ಯ ನಿರ್ವಾಹದ ಬಗ್ಯೆ ಅವಶ್ಯಕವಾದ ಹೆಚ್ಚು ನಿಬಂಧನೆಗಳನ್ನು ಸರ್ಕಾರದವರು ಏರ್ಪಡಿಸಬಹುದು.

IV. ಆಯಾ ಗುಂಪಿಗೆ ಸೇರಿದ ಮೆಂಬರುಗಳಿಂದ ಅತ್ಯಂತ ಹೆಚ್ಚು ಸಂಖ್ಯೆಯ ವೋಟುಗಳನ್ನು ಪಡೆದಿರುವ ಇಬ್ಬರು ಉಮೇದುವಾರರುಗಳನ್ನು ಸರ್ಕಾರದವರು ನ್ಯಾಯವಿಧಾಯಕ ಸಭೆಯ ಮೆಂಬರುಗಳಾಗಿ ನೇಮಿಸಿಕೊಳ್ಳಬಹುದು.

V. ಮೇಲ್ಕಂಡ IIನೆ ನಿಬಂಧನೆಯಲ್ಲಿ ಸೂಚಿಸಿರುವ ಎರಡು ಗುಂಪುಗಳ ಪೈಕಿ ಯಾವುದಾದರೊಂದು ಗುಂಪಿನಿಂದ ಈ ನಿಬಂಧನೆಗಳ ಮೇರೆಗೆ ನ್ಯಾಯವಿಧಾಯಕ ಸಭೆಗೆ ನೇಮಿಸಲ್ಪಟ್ಟ ಮೆಂಬರಿನ ಸ್ಥಾನವು ಖಾಲಿ ಬಿದ್ದಲ್ಲಿ ಮಾರನೆ ವರ್ಷದ ಪ್ರತಿನಿಧಿ ಸಭೆಯಲ್ಲಿ ಸದರೀ ಗುಂಪಿಗೆ ಸೇರಿದ ಪ್ರತಿನಿಧಿಗಳ ವೋಟುಗಳನ್ನು ತೆಗೆದುಕೊಂಡನಂತರವೇ ಸದರೀ ಸ್ಥಾನಕ್ಕೆ ಇನ್ನೊಬ್ಬ ಮೆಂಬರು ನೇಮಿಸಲ್ಪಡತಕ್ಕದ್ದು.

ಹುಕುಂ ಬಮೋಜೆಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸೆಕ್ರಿಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 21, ಸನ್ 1909.

III ನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖಾ.

ಇಸ್ತಿಹಾರ್ನಾಮೆ.

ನಂಬರ್ ಜು. 794—ಲೆಜಿಸ್ಲೇಷನ್, ತಾರೀಖು 15ನೆ ಸೆಪ್ಟಂಬರ್ 1909.

ಮೈಸೂರು ನ್ಯಾಯವಿಧಾಯಕ ಸಭೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಇಬ್ಬರು ಮೆಂಬರುಗಳನ್ನು ಚುನಾಯಿಸುವ ವಿಷಯದಲ್ಲಿ 1908ನೆ ಇಸವಿ ಜೂನ್ 10ನೆ ಮಕ್ಕಾಂ 102ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಸಾದರಾದ ನಿಬಂಧನೆಗಳನ್ನು ಈ ಮೂಲಕ ರದ್ದುಮಾಡಿ ಶ್ರೀಮನ್ ಮಹಾರಾಜ ರಾಜಾಸಾಹೇಬ್ಬಹದುರವರು 1907ನೆ ಇಸವಿಯ 1ನೆ ನಂಬರ್ ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 5ನೆ ಪ್ರಕರಣದಲ್ಲಿ ತಮಗೆ ಕೊಡಲ್ಪಟ್ಟಿರುವ ಅಧಿಕಾರಾನುಗುಣವಾಗಿ ಇದರಡಿ ಕಂಡ ನಿಬಂಧನೆಗಳನ್ನು ಏರ್ಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

I. ಸರ್ಕಾರದವರು ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪೈಕಿ ಇಬ್ಬರನ್ನು ನ್ಯಾಯವಿಧಾಯಕ ಸಭಾ ಮೆಂಬರುಗಳಾಗಿ ನೇಮಿಸಬಹುದು. ಹಾಗೆ ನೇಮಿಸಲ್ಪಡತಕ್ಕವರು ಮುಂದಿನ ನಿಬಂಧನೆಗಳಲ್ಲಿ ವಿಧಿಸಿರುವ ರೀತ್ಯಾ ಚುನಾಯಿಸಲ್ಪಟ್ಟಿರಬೇಕು.

II. ಈ ಚುನಾವಣೆಯ ಬಗ್ಗೆ ಪ್ರತಿನಿಧಿ ಸಭೆಯ ಮೆಂಬರುಗಳ ಪೈಕಿ ಸಂಸ್ಥಾನದ ಪಶ್ಚಿಮ ಡಿವಿಜನ್ನಿನಿಂದ ಎಂದರೆ ಮೈಸೂರು ಹಾಸನ, ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಿಂದ ಚುನಾಯಿಸಲ್ಪಟ್ಟಿರುವ ಮೆಂಬರುಗಳನ್ನು ಒಂದು ಗುಂಪಾಗಿಯೂ, ಪೂರ್ವ ಡಿವಿಜನ್ನಿನಿಂದ ಎಂದರೆ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಂದ ಚುನಾಯಿಸಲ್ಪಟ್ಟಿರುವ ಮೆಂಬರುಗಳನ್ನು ಎರಡನೆ ಗುಂಪಾಗಿಯೂ ಏರ್ಪಡಿಸಲಾಗುವುದು.

III. (1) ವರ್ಷೇವರ್ಷೇ ಪ್ರಜಾಪ್ರತಿನಿಧಿ ಸಭೆಯು ನಡೆಯುತ್ತಿರುವಾಗ ಸರ್ಕಾರದವರು ಗೊತ್ತುಮಾಡುವ ಕಾಲ ಮತ್ತು ಸ್ಥಳಗಳಲ್ಲಿ ಪ್ರತಿನಿಧಿಗಳ ಮೀಟಿಂಗ್ ಸೇರಿಸಿ ಮೇಲ್ಕಂಡ IIನೆ ನಿಬಂಧನೆಯಲ್ಲಿ ನಮೂದಿಸಲ್ಪಟ್ಟ ಎರಡು ಗುಂಪುಗಳ ಪೈಕಿ ಪ್ರತಿಯೊಂದು ಗುಂಪಿನವರೂ ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ನೇಮಿಸಲ್ಪಡುವ ಬಗ್ಗೆ ತಮ್ಮ ತಮ್ಮ ಗುಂಪಿನ ಪೈಕಿ ಒಬ್ಬ ಮೆಂಬರನ್ನು ಚುನಾಯಿಸಬೇಕೆಂದು ಕೇಳಲಾಗುವುದು.

(2) ಒಂದು ಡಿವಿಜನ್ನಿನಿಂದ ಚುನಾಯಿಸಲ್ಪಡಲು ಇಷ್ಟಪಡುವ ಪ್ರತಿನಿಧಿಗಳು ತಮ್ಮ ಇಷ್ಟವನ್ನು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖಾ ಸೆಕ್ರೆಟೆರಿಯವರಿಗೆ ವಿಜಯದಶಮಿಯೊಳಗಾಗಿ ಬರಹಮೂಲಕವಾಗಿ ತಿಳಿಯಪಡಿಸಬೇಕು.

(3) ಉಮೇದುವಾರರುಗಳು ಇಷ್ಟವಿರುವುದೆಂದು ತಿಳಿಯಪಡಿಸಿರುವವರ ಪೈಕಿ ಆಯಾ ಡಿವಿಜನ್ನಿಗೆ ಸರ್ಕಾರದವರು ಯಾರ್‍ಯಾರನ್ನು ಅನುಮೋದಿಸಬಹುದೋ ಅಂಥಾವರ ಹೆಸರುಗಳ ಪಟ್ಟಿಯನ್ನು ಚುನಾವಣೆ ಬಗ್ಗೆ ನಿಷ್ಕರ್ಷೆಯಾದ ದಿನಕ್ಕೆ ಕಡೇ ಪಕ್ಷ ಎರಡುದಿವಸ ಮುಂಚಿತವಾಗಿ ಪ್ರತಿನಿಧಿ ಸಭಾ ಮಂದಿರದಲ್ಲಿ ಬಹಿರಂಗವಾದ ಕಡೆ ಚಿಕಟಾಯಿಸಲಾಗುವುದು. ಪ್ರತಿನಿಧಿಗಳು ಆ ಪೈಕಿ ತಮ್ಮ ತಮ್ಮ ಡಿವಿಜನ್ನಿಗೆ ಸೇರಿದ ಒಬ್ಬರಿಗೆ ಮಾತ್ರವೇ ವೋಟ ಮಾಡಬೇಕು.

(4) ವೋಟುಗಳನ್ನು ಬ್ಯಾಲಟ ಮೂಲಕ ಕೊಡತಕ್ಕದ್ದು.

(5) ಸರ್ಕಾರದವರಿಂದ ನೇಮಿಸಲ್ಪಟ್ಟ ಒಬ್ಬ ಆಫೀಸರು ಸದರೀ ಮೀಟಿಂಗಿನಲ್ಲಿ ಹಾಜರಿದ್ದ ಪ್ರತಿನಿಧಿಗಳು ಕೊಟ್ಟಿರುವ ವೋಟುಗಳನ್ನು ಲೆಕ್ಕ ಮಾಡುವರು.

(6) ಮೀಟಿಂಗ್ ಪೂರೈಸಿದ ತರುವಾಯ ಪ್ರತಿ ಗುಂಪಿನವರಿಂದಲೂ ವೋಟುಗಳನ್ನು ಪಡೆದ ಉಮೇದುವಾರರುಗಳ ಹೆಸರುಗಳನ್ನೂ ಮತ್ತು ಪ್ರತಿ ಉಮೇದುವಾರರಿಗೂ ಎಷ್ಟೆಷ್ಟು ವೋಟುಗಳು ಬಂದುವು ಎಂಬ ವಿವರಗಳನ್ನೂ ತೋರಿಸುವ ರಿಪೋರ್ಟುನಿಶೀ ಸದರೀ ಆಫೀಸರು ವೋಟಿನ ಚೀಟಿಗಳನ್ನು ಸರ್ಕಾರದವರಿಗೆ ಕಳುಹಿಸಿಕೊಡಬೇಕು.

(7) ಅಂಥಾ ಮೀಟಿಂಗಿನ ಕಾರ್ಯ ನಿರ್ವಾಹದ ಬಗ್ಗೆ ಅವಶ್ಯಕವಾದ ಹೆಚ್ಚು ನಿಬಂಧನೆಗಳನ್ನು ಸರ್ಕಾರದವರು ಏರ್ಪಡಿಸಬಹುದು.

IV. ಆಯಾ ಗುಂಪಿಗೆ ಸೇರಿದ ಮೆಂಬರುಗಳಿಂದ ಅತ್ಯಂತ ಹೆಚ್ಚು ಸಂಖ್ಯೆಯ ವೋಟುಗಳನ್ನು ಪಡೆದಿರುವ ಇಬ್ಬರು ಉಮೇದುವಾರರುಗಳನ್ನು ಸರ್ಕಾರದವರು ನ್ಯಾಯವಿಧಾಯಕ ಸಭೆಯ ಮೆಂಬರುಗಳಾಗಿ ನೇಮಿಸಿಕೊಳ್ಳಬಹುದು.

V. ಮೇಲ್ಕಂಡ IIನೆ ನಿಬಂಧನೆಯಲ್ಲಿ ಸೂಚಿಸಿರುವ ಎರಡು ಗುಂಪುಗಳ ಪೈಕಿ ಯಾವುದಾದರೊಂದು ಗುಂಪಿನಿಂದ ಈ ನಿಬಂಧನೆಗಳ ಮೇರೆಗೆ ನ್ಯಾಯವಿಧಾಯಕ ಸಭೆಗೆ ನೇಮಿಸಲ್ಪಟ್ಟ ಮೆಂಬರಿನ ಸ್ಥಾನವು ಖಾಲಿ ಬಿದ್ದಲ್ಲಿ ಮೂರನೆ ವರ್ಷದ ಪ್ರತಿನಿಧಿ ಸಭೆಯಲ್ಲಿ ಸದರೀ ಗುಂಪಿಗೆ ಸೇರಿದ ಪ್ರತಿನಿಧಿಗಳ ವೋಟುಗಳನ್ನು ತೆಗೆದುಕೊಂಡನಂತರವೇ ಸದರೀ ಸ್ಥಾನಕ್ಕೆ ಇನ್ನೊಬ್ಬ ಮೆಂಬರು ನೇಮಿಸಲ್ಪಡತಕ್ಕದ್ದು.

ಹುಕುಂ ಬಮೋಜಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 9, ಸನ್ 1909.

III ನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವು ಇಲಾಖಾ.

ಇಸ್ತಿಹಾರ್ನಾಮೆ.

ನಂ. 131—ಲೆ. ಕೌ. ತಾರೀಖು 20ನೆ ನವಂಬರ್ 1909.

ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯನಿರ್ವಾಹದ ಬಗ್ಯೆ ಜಾರಿಯಲ್ಲಿರುವ ನಿಬಂಧನೆಗಳ ಪೈಕಿ 40ನೆ ನಿಬಂಧನೆಯ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಆಸ್ತಿಯುಳ್ಳವರಾಗಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯ ವಿಲೇವಾರಿ ವಿಷಯದಲ್ಲಿ ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವುಂಟೆಂದು ಅಂಗೀಕರಿಸುವ ಬಗ್ಯೆ ಹುಟ್ಟಿದ ಬಿಲ್ಲಿಗೆ ಸಂಬಂಧಪಟ್ಟ ನಿಯುಕ್ತ ಸಮಾಜದವರ ರಿಪೋರ್ಟನ್ನೂ ಅವರು ತಿದ್ದುಪಡಿಮಾಡಿರುವ ಬಿಲ್ಲನ್ನೂ ಸಹ ಇದರ ಅಮರಹ ಸಮಸ್ತ ಜನಗಳ ತಿಳಿವಳಿಕೆ ಬಗ್ಯೆ ಪ್ರಸಿದ್ಧಪಡಿಸಿರುತ್ತದೆ.

ಹುಕುಂ ಬಮೋಜೀಬ್,

ಎಸ್. ಹಿರಿಯಣ್ಣೈಯ,

ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ಮೈಸೂರು ಸಂಸ್ಥಾನದಲ್ಲಿ ಆಸ್ತಿಯುಳ್ಳವರಾಗಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯ ವಿಲೇವಾರಿ ವಿಷಯದಲ್ಲಿ ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವುಂಟೆಂದು ಅಂಗೀಕರಿಸುವ ಬಗ್ಯೆ ಹುಟ್ಟಿದ ಬಿಲ್ಲಿನಮೇಲೆ ನಿಯುಕ್ತ ಸಮಾಜದವರ ರಿಪೋರ್ಟು.

ಮೇಲ್ಕಂಡ ಬಿಲ್ಲನ್ನು ಪರ್ಯಾಲೋಚಿಸುವುದಕ್ಕೋಸ್ಕರ ನೇಮಿಸಲ್ಪಟ್ಟ ನಿಯುಕ್ತ ಸಮಾಜದ ಮೆಂಬರುಗಳಾದ ನಾವುಗಳು ಇದರಡಿ ಕಂಡ ರಿಪೋರ್ಟನ್ನು ಸಭೆಯವರ ಪರಾಮರಿಕೆ ಬಗ್ಯೆ ಜಾಹಿರ್ಮಾಡಿರುತ್ತೇವೆ :—

ಸದರಿ ಬಿಲ್ಲನ್ನು ನಾವುಗಳು ಚೆನ್ನಾಗಿ ಪರ್ಯಾಲೋಚಿಸಿದ್ದೇವೆ ಈ ಬಿಲ್ಲಿನ 1ನೆ ಕಲಮಿನ 2ನೆ ವಾಕ್ಯದಲ್ಲಿ ಹೊರತು ಮತ್ತೆಲ್ಲಿಯೂ ಬದಲಾವಣೆ ಅವಶ್ಯಕವಿಲ್ಲ. ಈ ವಾಕ್ಯವನ್ನು ಆ ಕಲಮಿನಿಂದ ಪ್ರತ್ಯೇಕಿಸಿ ಬೇರೆ ಕಲಮನ್ನಾಗಿ ಮಾಡಬೇಕಲ್ಲದೆ ಅರ್ಥವನ್ನು ಸ್ಪಷ್ಟಪಡಿಸುವುದಕ್ಕೋಸ್ಕರ ಅದರ ಮಾತುಗಳನ್ನು ಈ ಕೆಳಗೆ ನಮೂದಿಸಿರುವಂತೆ ಬದಲಾಯಿಸಬೇಕು :—

"ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಪ್ರೊಬೇಟನ್ನು ಅಥವಾ ಸ್ವತ್ತಿನ ಆಡಳಿತದ ಸನ್ನದನ್ನು ಕೊಟ್ಟ ನಿಮಿತ್ತದಿಂದ ಇತರ ಕೆಲವು ಜನರಿಗೆ ಕೊಟ್ಟಿದ್ದ ಸ್ವತ್ತಿನ ಆಡಳಿತದ ಸನ್ನದುಗಳು ರದ್ದಾಗುವಿಕೆ"

"2. ಅಂಥಾ ಯಾರಾದರೂ ಒಬ್ಬ ಮೃತಪಟ್ಟ ಬ್ರಿಟಿಷ್ ಪ್ರಜೆಯ ಪ್ರೊಬೇಟನ್ನು ಅಥವಾ ಸ್ವತ್ತಿನ ಆಡಳಿತದ ಸನ್ನದನ್ನು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕ್ರಮವಾಗಿ ಕೊಟ್ಟಿದ್ದರೆ, ಸದರಿ ಬ್ರಿಟಿಷ್ ಪ್ರಜೆಯ ಲೇಣೇದಾರನೆಂಬ ಕಾರಣಮಾತ್ರದಿಂದಲೇ ಆಗಲಿ, ಅವನ ಯೂನಿವರ್ಸಲ್ ಲಿಗೆಟಿ (ಎಂದರೆ, ಮರಣಶಾಸನದ ಪ್ರಕಾರ ಆತನ ಸ್ವತ್ತುಗಳೆಲ್ಲವನ್ನೂ ಬರಮಾಡಿಕೊಳ್ಳಲು ಹಕ್ಕುಳ್ಳವನು) ಅಲ್ಲದ ಇತರ ಲಿಗೆಟಿ (ಲಿಗೆಟಿ ಎಂದರೆ ಮರಣ ಶಾಸನದ ಪ್ರಕಾರ ಆಸ್ತಿಯನ್ನು ಬರಮಾಡಿಕೊಳ್ಳುವವನು) ಎಂಬ ಕಾರಣಮಾತ್ರದಿಂದಲೆ ಆಗಲಿ, ಅಥವಾ ಮೃತಪಟ್ಟ ಸದರಿ ಬ್ರಿಟಿಷ್ ಪ್ರಜೆಯ ಫ್ರೆಂಡ್ ಯಾ "ಸ್ನೇಹಿತ"ನಾಗಿದ್ದ ಮಾತ್ರದಿಂದಲೇ ಆಗಲಿ ಯಾರೊಬ್ಬರೂ ಸದರಿ ಮೃತ

ಪಟ್ಟವನ ಸ್ವತ್ತಿನ ಆಡಳಿತದ ಸನ್ನದನ್ನು ಪಡೆಯಲು ಹಕ್ಕುಳ್ಳವರಾಗಿರುವುದಿಲ್ಲ; ಮತ್ತು ಅಂಥಾ ಯಾರಿಗಾದರೂ ಈ ಮುಂಚೆಯೇ ಅಂಥಾ ಸನ್ನದನ್ನು ಕೊಟ್ಟಿದ್ದರೆ, ಅದು ಸದರಿ ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಕೋರಿಕೆಯಮೇಲೆ ವಾಪಸ್ ತೆಗೆದುಕೊಳ್ಳಲ್ಪಟ್ಟು ರದ್ದುಮಾಡಲ್ಪಡುವುದಕ್ಕೆ ಗುರಿಯಾಗತಕ್ಕದ್ದು.''

2. ಮೇಲ್ಕಂಡ ಬದಲಾವಣೆಯ ನಿಮಿತ್ತ ಮುಂದಿನ ಕಲಮುಗಳ ಸಂಖ್ಯೆಯನ್ನು ಬದಲಾಯಿಸಬೇಕಾಗುತ್ತದೆ.

3. ಮೇಲ್ಕಂಡಂತೆ ತಿದ್ದುಪಾಟು ಮಾಡಲ್ಪಟ್ಟ ಬಿಲ್ಲನ್ನು ಸಭೆಯವರು ಮಂಜೂರ್ಮಾಡಬೇಕೆಂತ ನಾವು ಶಿಫಾರ್ಸು ಮಾಡುತ್ತೇವೆ.

ಎಚ್. ವಿ. ನಂಜುಂಡಯ್ಯ.
ಕೆ. ಎಸ್. ಚಂದ್ರಶೇಖರ ಐಯ್ಯರ್.
ಎಸ್. ನಾರಾಯಣರಾವ್.
ಸಿ. ಶ್ರೀನಿವಾಸೈಯ್ಯಂಗಾರ್.
ಬಿ. ನಾಗಪ್ಪ.

ತಾರೀಖು 7ನೆ ಅಕ್ಟೋಬರ್ 1909.

ಮೈಸೂರು ಸಂಸ್ಥಾನದಲ್ಲಿ ಆಸ್ತಿಯುಳ್ಳವರಾಗಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಆಸ್ತಿಯ ವಿಲೇವಾರೀ ವಿಷಯದಲ್ಲಿ ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವುಂಟೆಂದು ಅಂಗೀಕರಿಸುವ ಬಗ್ಗೆ ಹುಟ್ಟಿದ ಬಿಲ್ಲು (ನಿಯುಕ್ತ ಸಮಾಜದವರು ತಿದ್ದುಪಾಟು ಮಾಡಿರುವ ಮೇರೆಗೆ.)*

ಪೀಠಿಕೆ.

ಸಭಾಸಮೇತರಾದ ಇಂಡಿಯಾ ಗವರ್ನರ್ ಜನರಲ್‌ರವರು 1874ನೆ ಇಸವಿಯಲ್ಲಿ ಮಂಜೂರ್ಮಾಡಿದ (1874ನೆ ಇಸವಿಯ 2ನೆ ಆಕ್ಟಾದ) ಅಡ್ಮಿನಿಸ್ಟ್ರೇಟರ್ ಜನರಲ್ ಆಕ್ಟಿನ ನಿಯಮಗಳು, ಮೈಸೂರು ಸಂಸ್ಥಾನದಲ್ಲಿ ಇರುವ ಬ್ರಿಟಿಷ್ ಪ್ರಜೆಗಳಿಗೆ ಅವರು ಬ್ರಿಟಿಷ್ ಪ್ರಜೆಗಳಾಗಿರುವ ಕಾರಣದಿಂದ ಮಾತ್ರವೇ ಅನ್ವಯಿಸುತ್ತವೆಯಲ್ಲದೆ ಈ ಸಂಸ್ಥಾನದ ಕಾನೂನಾಗಿ ಏರ್ಪಟ್ಟಿಲ್ಲವಾದುದರಿಂದಲೂ, ಮತ್ತು ಮೃತಪಟ್ಟ ಬ್ರಿಟಿಷ್ ಪ್ರಜೆಗಳಿಗೆ ಈ ಸಂಸ್ಥಾನದಲ್ಲಿ ಸಾಲ ಕೊಡಬೇಕಾದವರೆಲ್ಲರಿಂದಲೂ ಮತ್ತು ಅಂಥಾ ಬ್ರಿಟಿಷ್ ಪ್ರಜೆಗಳಿಗೆ ಸೇರಿದ ಸ್ವತ್ತನ್ನು ಈ ಸಂಸ್ಥಾನದಲ್ಲಿ ಇಟ್ಟುಕೊಂಡಿರುವವರಿಂದಲೂ, ಆ ಸಾಲ ಯಾ ಸ್ವತ್ತನ್ನು ಸದರೀ ಬ್ರಿಟಿಷ್ ಪ್ರಜೆಗಳ ಪರವಾಗಿ ವಸೂಲ್ಮಾಡಲು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಅಧಿಕಾರವುಳ್ಳವರೆಂಬುವುದನ್ನು ಈ ಸಂಸ್ಥಾನದಲ್ಲಿ ಈಗ ಅಂಗೀಕರಿಸಿರುವುದಕ್ಕಿಂತ ಇನ್ನೂ ಸಂಪೂರ್ಣವಾಗಿ ಅಂಗೀಕರಿಸುವ ಬಗ್ಗೆ ಕಾನೂನು ಏರ್ಪಡಿಸುವುದು ಯುಕ್ತವಾಗಿರುವುದರಿಂದಲೂ ಸಹಾ, ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರು ಮುಂದೆ ನಮೂದಿಸಿರುವಂತೆ ಕಾನೂನು ಏರ್ಪಡಿಸಬೇಕೆಂತ ಅಪ್ಪಣೆ ದಯಪಾಲಿಸಿರುತ್ತಾರೆ:—

ಮೈಸೂರಿನಲ್ಲಿದ್ದು ಮೃತಪಡುವ ಬ್ರಿಟಿಷ್ ಪ್ರಜೆಗಳ ಪರವಾಗಿ ಅಮಲ್ ನಡೆಸಲು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಧಿಕಾರವಿರುವಿಕೆ. [ಮತ್ತು ಅಡ್ಮಿನಿಸ್ಟ್ರೇಷನ್ ಲೆಟರುಗಳನ್ನು ಪಡೆಯಲು ಸದರೀಯವರಿಗೆ ಪ್ರಥಮಬಾಧ್ಯತೆ ಇರುವಿಕೆ.]

1. 1874ನೆ ಇಸವಿಯ 2ನೆ ಆಕ್ಟಾದ ಅಡ್ಮಿನಿಸ್ಟ್ರೇಟರ್ ಜನರಲ್ ಆಕ್ಟಿನಲ್ಲಿ ಅರ್ಥ ವಿವರಿಸಿರುವ ಮೇರೆಗೆ ಅಧಿಕಾರವುಳ್ಳ ಮದರಾಸು ಅಧಿಪತ್ಯದ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ, ಮೈಸೂರು ಸಂಸ್ಥಾನದಲ್ಲಿ ಆಸ್ತಿಯನ್ನು ಬಿಟ್ಟು ಮೃತಪಡುವ ಬ್ರಿಟಿಷ್ ಪ್ರಜೆಯ ಪರವಾಗಿ ಅಮಲ್ ನಡೆಸಲು ಅಧಿಕಾರವಿರತಕ್ಕದ್ದು. [ಮತ್ತು ಅಂಥಾ ಬ್ರಿಟಿಷ್ ಪ್ರಜೆಯ ಲೇಣೇದಾರನೆಂಬ ಕಾರಣ ಮಾತ್ರದಿಂದಲೇ ಆಗಲೀ, ಅಥವಾ ಸದರೀ ಪ್ರಜೆಯ ಯೂನಿವರ್ಸಲ್ ಲೆಗಟಿ (ಎಂದರೆ, ಮರಣಶಾಸನದ ಪ್ರಕಾರ ಆತನ ಎಲ್ಲಾ ಸ್ವತ್ತನ್ನೂ ಬರಮಾಡಿಕೊಳ್ಳಲು ಹಕ್ಕುಳ್ಳವರು) ಅಲ್ಲದ ಇತರ ಲೆಗಟಿ (ಲೆಗಟಿ ಎಂದರೆ, ಮರಣ ಶಾಸನದ ಪ್ರಕಾರ ಆಸ್ತಿಯನ್ನು ಬರಮಾಡಿಕೊಳ್ಳತಕ್ಕವರು) ಎಂಬ ಕಾರಣಮಾತ್ರದಿಂದಲೇ ಆಗಲೀ, ಅಥವಾ ಮೃತಪಟ್ಟ ಸದರೀ ಬ್ರಿಟಿಷ್ ಪ್ರಜೆಯ (ಫ್ರೆಂಡ್) ''ಸ್ನೇಹಿತ'' ನಾಗಿದ್ದುದರಿಂದ ಆತನ ಸ್ವತ್ತನ್ನು ಬರಮಾಡಿಕೊಳ್ಳಲು ಅರ್ಹನಾದವನು ಎಂಬ ಕಾರಣಮಾತ್ರದಿಂದಲೇ ಆಗಲೀ ಇರತಕ್ಕ ಹಕ್ಕುಗಳುಳ್ಳಂಥಾವರಿಗಿಂತ ಮದರಾಸು ಅಧಿಪತ್ಯದ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೇನೇ ಸದರೀ ಬ್ರಿಟಿಷ್ ಪ್ರಜೆಯ ಸ್ವತ್ತಿನ ಆಡಳಿತದ ಬಗ್ಗೆ ಕೋರ್ಟಿನಿಂದ (ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್) ಸ್ವತ್ತಿನ ಆಡಳಿತದ ಸನ್ನದನ್ನು ಪಡೆಯಲು ಪ್ರಥಮ ಬಾಧ್ಯತೆ ಎಂದರೆ, ಹೆಚ್ಚು ಬಾಧ್ಯತೆಯುಂಟೆಂದು ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಕೋರ್ಟುಗಳವರೂ ಭಾವಿಸಬೇಕು.]

ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಪ್ರೊಬೇಟನ್ನು ಅಥವಾ ಸ್ವತ್ತಿನ ಆಡಳಿತದ ಸನ್ನದನ್ನು ಕೊಟ್ಟನಿಮಿತ್ತದಿಂದ ಇತರ ಕೆಲವು ಜನರಿಗೆ ಕೊಟ್ಟಿದ್ದ ಸ್ವತ್ತಿನ ಆಡಳಿತದ ಸನ್ನದುಗಳು ರದ್ದಾಗುವಿಕೆ.

2. ಅಂಥಾ ಯಾರಾದರು ಒಬ್ಬ ಮೃತಪಟ್ಟ ಬ್ರಿಟಿಷ್ ಪ್ರಜೆಯ ಪ್ರೊಬೇಟನ್ನು ಅಥವಾ ಸ್ವತ್ತಿನ ಆಡಳಿತದ ಸನ್ನದನ್ನು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕ್ರಮವಾಗಿ ಕೊಟ್ಟಿದ್ದರೆ, ಸದರಿ ಬ್ರಿಟಿಷ್ ಪ್ರಜೆಯ ಲೇಣೇದಾರನೆಂಬ ಕಾರಣ ಮಾತ್ರದಿಂದಲೇ ಆಗಲಿ, ಅವನ ಯೂನಿವರ್ಸಲ್ ಲೆಗಟಿ (ಎಂದರೆ, ಮರಣ ಶಾಸನದ ಪ್ರಕಾರ ಆತನ ಸ್ವತ್ತುಗಳೆಲ್ಲವನ್ನೂ ಬರಮಾಡಿಕೊಳ್ಳಲು ಹಕ್ಕುಳ್ಳವನು) ಅಲ್ಲದ ಇತರ ಲೆಗಟಿ (ಲೆಗಟಿ ಎಂದರೆ ಮರಣ ಶಾಸನದ ಪ್ರಕಾರ ಆಸ್ತಿಯನ್ನು ಬರಮಾಡಿಕೊಳ್ಳುವವನು) ಎಂಬ ಕಾರಣ ಮಾತ್ರದಿಂದಲೇ ಆಗಲಿ, ಅಥವಾ ಮೃತಪಟ್ಟ ಸದರಿ ಬ್ರಿಟಿಷ್ ಪ್ರಜೆಯ ಫ್ರೆಂಡ್ ಯಾ ''ಸ್ನೇಹಿತ'' ನಾಗಿದ್ದಮಾತ್ರದಿಂದಲೇ ಆಗಲಿ, ಯಾರೊಬ್ಬರೂ ಸದರಿ ಮೃತಪಟ್ಟವನ ಸ್ವತ್ತಿನ ಆಡಳಿತದ ಸನ್ನದನ್ನು ಪಡೆಯಲು ಹಕ್ಕುಳ್ಳವರಾಗಿರುವುದಿಲ್ಲ; ಮತ್ತು ಅಂಥಾ ಯಾರಿಗಾದರೂ ಈ ಮುಂಚೆಯೇ ಅಂಥಾ ಸನ್ನದನ್ನು ಕೊಟ್ಟಿದ್ದರೆ, ಅದು ಸದರಿ ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಕೋರಿಕೆಯಮೇಲೆ ವಾಪಸ್ ತೆಗೆದುಕೊಳ್ಳಲ್ಪಟ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

---

* ಈ ಬಿಲ್ಲಿನ ಪೈಕಿ ಆವರಣದ ಚಿಹ್ನೆಗಳಲ್ಲಿರುವ ಭಾಗಗಳನ್ನು ಬಿಟ್ಟುಬಿಡಬೇಕೆಂತಲೂ ಕೆಳಗೆ ಗೀಟು ಹಾಕಿರುವ ಭಾಗಗಳನ್ನು ಹೊಸದಾಗಿ ಸೇರಿಸಿಕೊಳ್ಳಬೇಕೆಂತಲೂ ನಿಯುಕ್ತ ಸಮಾಜದವರು ಸಲಹೆ ಕೊಟ್ಟಿರುತ್ತಾರೆ.

ಮದರಾಸು ಹೈಕೋರ್ಟಿನವರು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಪ್ರೊಬೇಟನ್ನಾಗಲೀ ಸ್ವತ್ತಿನ ಆಡಳಿತದ ಬಗ್ಗೆ ಸನ್ನದನ್ನಾಗಲೀ ಕೊಡುವುದರ ಫಲ.

3. ಮದರಾಸು ಹೈ ಕೋರ್ಟಿನವರು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕೊಟ್ಟ ಪ್ರೊಬೇಟು ಅಥವಾ ಸ್ವತ್ತಿನ ಆಡಳಿತದ ಸನ್ನದ್ದು, ಮೃತಪಟ್ಟ ಬ್ರಿಟಿಷ್ ಪ್ರಜೆಗೆ ಮೈಸೂರು ಸಂಸ್ಥಾನದಲ್ಲಿರುವ ಚರಸ್ವತ್ತು ಅಥವಾ ಸ್ಥಿರಸ್ವತ್ತು ಎಂಬ ಎಲ್ಲಾ ಸ್ವತ್ತಿಗೂ ಅನ್ವಯಿಸುತ್ತದಲ್ಲದೆ ಮೃತಪಟ್ಟ ಬ್ರಿಟಿಷ್ ಪ್ರಜೆಗೆ ಸದರೀ ಸಂಸ್ಥಾನದಲ್ಲಿ ಹಣ ಕೊಡಬೇಕಾದವರೆಲ್ಲರಿಂದಲೂ ಮತ್ತು ಅಂಥಾ ಬ್ರಿಟಿಷ್ ಪ್ರಜೆಗೆ ಸೇರಿದ ಸ್ವತ್ತನ್ನು ಸದರೀ ಸಂಸ್ಥಾನದಲ್ಲಿ ಇಟ್ಟುಕೊಂಡಿರುವವರಿಂದಲೂ ಆ ಹಣ ಯಾ ಸ್ವತ್ತನ್ನು ಸದರೀ ಬ್ರಿಟಿಷ್ ಪ್ರಜೆಗಳಪರವಾಗಿ ವಸೂಲ್ಮಾಡಲು ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಅಧಿಕಾರವುಳ್ಳವರೆಂಬ ಬಗ್ಗೆ ಪರಿಷ್ಕಾರವಾದ ಸಾಕ್ಷ್ಯವಾಗಿರತಕ್ಕದ್ದು, ಮತ್ತು ಸದರೀ ಪ್ರೊಬೇಟ್ ಯಾ ಆಡಳಿತದ ಸನ್ನದ್ದಿನ ನಿಮಿತ್ತ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಅಂಥಾ ಹಣಗಳನ್ನು ಸಂದಾಯಮಾಡುವ ಎಲ್ಲಾ ದೇಣೇದಾರರೂ ಮತ್ತು ಅಂಥಾ ಸ್ವತ್ತನ್ನು ಒಪ್ಪಿಸಿಬಿಡುವ ಎಲ್ಲಾ ಸ್ವತ್ತಿನ ಸ್ವಾಧೀನಕರ್ತರೂ ಆ ಮುಂದೆ ಸದರೀ ಹಣ ಯಾ ಸ್ವತ್ತಿನ ಬಗ್ಗೆ ಜವಾಬ್ದಾರಿಯಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಬೇಕು.

ಮದರಾಸು ಹೈಕೋರ್ಟು, ಇಂಡಿಯನ್ ಸಕ್ಸೆಷನ್ ಆಕ್ಟಿನ 187 ಮತ್ತು 190ನೆ ಪ್ರಕರಣಗಳಲ್ಲಿ ವಿವರಿಸಿರುವಂಥಾ ಎಖ್ತಿಯಾರಿಯುಳ್ಳ ಲಾಯಖ್ ಕೋರ್ಟೆಂದು ಭಾವಿಸಲ್ಪಡುವುದು.

4. ಮದರಾಸಿನ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಸಂಬಂಧಪಡುವ ವಿಷಯಗಳಲ್ಲಿ ಮಾತ್ರ ಮದರಾಸು ಹೈಕೋರ್ಟು— 1868ನೆ ಇಸವಿಯ ಜುಲೈ 23ನೆ ತಾರೀಖಿನ 203ನೆ ನಂಬರುಳ್ಳ ಫಾರಿನ್ ಇಲಾಖಾ ಇಸ್ತಿಹಾರ್ನಾಮೆಯಿಂದ ಮೈಸೂರು ಸೀಮೆಯಲ್ಲಿ ಜಾರಿಗೆ ತರಲ್ಪಟ್ಟ 1865ನೆ ಇಸವಿಯ 10ನೆ ಆಕ್ಟಾದ ಇಂಡಿಯನ್ ಸಕ್ಸೆಷನ್ ಆಕ್ಟಿನ 187 ಮತ್ತು 190ನೆ ಪ್ರಕರಣಗಳಲ್ಲಿ ವಿವರಿಸಿರುವ ಮೇರೆಗೆ ಎಖ್ತಿಯಾರಿಯುಳ್ಳ ಲಾಯಖ್ ಕೋರ್ಟೆಂತ ಭಾವಿಸಲ್ಪಡತಕ್ಕದ್ದು.

ಮದರಾಸು ಹೈಕೋರ್ಟಿನವರು ಕೊಟ್ಟ ಪ್ರೊಬೇಟ್ ಅಥವಾ ಸ್ವತ್ತಿನ ಆಡಳಿತದ ಸನ್ನದ್ದು, ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿನಲ್ಲಿ ವಿವರಿಸಲ್ಪಟ್ಟಿರುವಂಥಾ ಪ್ರೊಬೇಟ್ ಯಾ ಸನ್ನದ್ದಾಗಿರುವಂತೆ ಭಾವಿಸಲ್ಪಡತಕ್ಕದ್ದು.

5. ಮದರಾಸು ಹೈಕೋರ್ಟಿನವರು ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಕೊಟ್ಟ ಪ್ರೊಬೇಟು ಅಥವಾ ಸ್ವತ್ತಿನ ಆಡಳಿತದ ಸನ್ನದುಗಳು 1901ನೆ ಇಸವಿಯ 7ನೆ ರೆಗ್ಯುಲೇಷನಾದ ಸಕ್ಸೆಷನ್ ಸರ್ಟಿಟಫಿಕೇಟ್ ರೆಗ್ಯುಲೇಷನಿನ 4ನೆ ಪ್ರಕರಣದ (h) ಒಳ ಪ್ರಕರಣದ (i) ನೆ ಕಲಮಿನಲ್ಲಿ ವಿವರಿಸಿರುವಂಥಾ ಪ್ರೊಬೇಟು ಯಾ ಸ್ವತ್ತಿನ ಆಡಳಿತದ ಸನ್ನದ್ದುಗಳಾಗಿವೆಯೆಂದು ಭಾವಿಸಲ್ಪಡತಕ್ಕದ್ದು.

ಮೃತಪಟ್ಟ ಬ್ರಿಟಿಷ್ ಪ್ರಜೆಯು ಪರವಾಗಿ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ವ್ಯಾಜ್ಯ ದಾಖಲ್ ಮಾಡಬಹುದು ಅಥವಾ ಅವರಮೇಲೆ ವ್ಯಾಜ್ಯ ದಾಖಲ್ಮಾಡಲ್ಪಡಬಹುದು.

6. ಮೃತಪಟ್ಟ ಒಬ್ಬ ಬ್ರಿಟಿಷ್ ಪ್ರಜೆಗೆ ಮೈಸೂರು ಸಂಸ್ಥಾನದಲ್ಲಿ ಇರುವ ಸ್ವತ್ತಿನ ವಿಚಾರದಲ್ಲಿ ಸದರೀ ಪ್ರಜೆಯ ಪರವಾಗಿ ಅಮಲ್ ನಡೆಸುವಂಥಾ ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಂದ ಅಥವಾ ಅವರಮೇಲೆ ದಾಖಲ್ಮಾಡಲ್ಪಟ್ಟ ಎಲ್ಲಾ ವ್ಯಾಜ್ಯಗಳೂ ಇತರ ವ್ಯವಹರಣೆಗಳೂ ಸದರೀ ಸಂಸ್ಥಾನದ ಕೋರ್ಟುಗಳಲ್ಲಿ ಸದರೀ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಂದ ಅಥವಾ ಅವರಮೇಲೆ ಅವರ ಉದ್ಯೋಗದ ಹೆಸರಿನಲ್ಲಿ ದಾಖಲ್ಮಾಡಲ್ಪಡಬಹುದು; ಮತ್ತು ಈ ಮೊದಲೇ ಅಥವಾ ಇನ್ನುಮೇಲೆ ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಒಬ್ಬರೇ ಆಗಿ ಅಥವಾ ಇನ್ಯಾರೊಡನೆಯಾದರೂ ಜಂಟಿಯಾಗಿ ಯಾರಮೇಲಾದರೂ ದಾಖಲ್ಮಾಡಿದ ಯಾವ ವ್ಯಾಜ್ಯವಾಗಲೀ ಇತರ ವ್ಯವಹರಣೆಯಾಗಲೀ, ಅಥವಾ ಮದರಾಸು ಅಡ್ಮಿನಿಸ್ಟ್ರೇಟರ್ ಜನರಲ್‌ರವರಮೇಲೆ ಅಥವಾ ಅವರನ್ನು ಇತರರೊಡನೆ ಜಂಟಿಮಾಡಿ ಅವರುಗಳಮೇಲೆ ಯಾರಿಂದಲಾದರೂ ದಾಖಲ್ಮಾಡಲ್ಪಟ್ಟ ಯಾವ ವ್ಯಾಜ್ಯವಾಗಲೀ ಇತರ ವ್ಯವಹರಣೆಯಾಗಲೀ ಸದರೀ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ಮೃತಪಟ್ಟ, ಕೆಲಸಕ್ಕೆ ರಾಜೀನಾಮೆಕೊಟ್ಟ, ಅಥವಾ ಕೆಲಸದಿಂದ ತೆಗೆದುಹಾಕಲ್ಪಟ್ಟನಿಮಿತ್ತದಿಂದ ನಿಂತುಹೋಗತಕ್ಕದ್ದಲ್ಲ; ಪರಂತು ಅವರ ಉದ್ಯೋಗಕ್ಕೆ ಇನ್ನೊಬ್ಬರು ನೇಮಿಸಲ್ಪಟ್ಟಕೂಡಲೇ ಇವರಿಂದ ಅಥವಾ ಇವರಮೇಲೆ, ಸದರೀ ಕೋರ್ಟುಗಳ ಅಪ್ಪಣೆಯ ಪ್ರಕಾರ ಮತ್ತು, ನೋಟೀಸ್ ವಗೈರೆಗಳ ಜಾರಿ ಬಗ್ಗೆ ಸದರೀ ಕೋರ್ಟಿನವರು ವಿಧಿಸುವ ಷರತ್ತುಗಳಿಗೆ ಅಥವಾ ಅವರು ಕೊಡತಕ್ಕಂಥಾ ಇತರ ಹುಕುಮಿಗೆ ಅನುಸಾರವಾಗಿ ಸದರೀ ವ್ಯಾಜ್ಯ ಯಾ ವ್ಯವಹರಣೆಯು ಸದರೀ ಮರಣವಾಗಲೀ, ರಾಜೀನಾಮೆಯಾಗಲೀ, ಕೆಲಸದಿಂದ ತೆಗೆಯೋಣವಾಗಲೀ, ನಡೆಯದೇ ಇದ್ದರೆ ಹೇಗೋಹಾಗೆಯೇ ಮುಂದುವರಿಸಲ್ಪಡತಕ್ಕದ್ದು.

ನಿಯಮ.

ಪರಂತು ಇದರಲ್ಲಿ ಮೇಲೆ ನಮೂದಿಸಲ್ಪಟ್ಟ ಯಾವುದರ ದೆಸೆಯಿಂದಲಾಗಲೀ ಅನಂತರ ನೇಮಿಸಲ್ಪಟ್ಟ ಅಂಥಾ ಯಾರಾದರೂ ಅಧಿಕಾರಿಯು, ತಮ್ಮಮೇಲೆ ವ್ಯಾಜ್ಯವು ಮುಂದುವರಿಸಲ್ಪಡುವ ಬಗ್ಗೆ ಹುಕುಂ ಹುಟ್ಟುವುದಕ್ಕೆ ಮುಂಚಿತವಾಗಿ, ವ್ಯಾಜ್ಯಕ್ಕೋಸ್ಕರ ಖರ್ಚಾದ ಮೊಬಲಗುಗಳ ಬಗ್ಗೆ ಖುದ್ದು ಜವಾಬ್ದಾರರಾಗುವುದಿಲ್ಲ.

ಮೃತಪಟ್ಟ ಬ್ರಿಟಿಷ್ ಪ್ರಜೆಯ ಲೇಣೇದಾರನು ಅಡ್ಮಿನಿಸ್ಟ್ರೇಟರ್ ಜನರಲ್‌ರವರಮೇಲೆ ವ್ಯಾಜ್ಯ ದಾಖಲ್ಮಾಡುವುದು.

7. ಮೃತಪಟ್ಟ ಬ್ರಿಟಿಷ್ ಪ್ರಜೆಯ ಲೇಣೇದಾರನಿಂದ ಸದರೀ ಪ್ರಜೆಯ ಪರವಾಗಿ ಅಮಲ್ ನಡೆಸುವಂಥಾ ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಮೇಲೆ ಮೈಸೂರು ಸಂಸ್ಥಾನದ ಕೋರ್ಟುಗಳಲ್ಲಿ ವ್ಯಾಜ್ಯ ತರಲ್ಪಟ್ಟರೆ, ವಾದಿಯು ಡಿಕ್ರೀ ದೇಖೀಲು ಆ ವ್ಯಾಜ್ಯದ ಖರ್ಚನ್ನು ಸಂದಾಯಮಾಡಲು ಜವಾಬ್ದಾರನಾಗಿರತಕ್ಕದ್ದು; ಆದರೆ, ವಾದಿಯು ಸದರೀ ವ್ಯಾಜ್ಯವನ್ನು ದಾಖಲ್ಮಾಡುವುದಕ್ಕೆ ಒಂದು ತಿಂಗಳಿಗಿಂತ ಕಡಮೆಯಲ್ಲದಷ್ಟುಕಾಲ ಮುಂಚಿತವಾಗಿ ಸದರೀ ಅಡ್ಮಿನಿಸ್ಟ್ರೇಟರ್ ಜನರಲ್‌ರವರಿಗೆ ಬರಹಮೂಲಕವಾಗಿ ಅರ್ಜಿಕೊಟ್ಟು ಅದರಲ್ಲಿ ತಾನು ಎಷ್ಟು ಮೊಬಲಗಿಗೆ ಹಕ್ಕುದಾರನೆಂಬುವುದನ್ನೂ ಇತರ ತಪಶೀಲುಗಳನ್ನೂ ನಮೂದಿಸಿದ್ದುದಲ್ಲದೆ ಸದರೀ ಮೊಕದ್ದಮೆಯ ಸಂದರ್ಭಗಳಲ್ಲಿ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ನ್ಯಾಯವಾಗಿ ಕೇಳಬಹುದಾದ ಸಾಕ್ಷ್ಯವನ್ನೂ ಕೂಡಾ ಅದಕ್ಕೆ ರುಜುವಾತಾಗಿ ಕೊಟ್ಟಿದ್ದೆನೆಂತಲೂ ಅಡ್ಮಿನಿಸ್ಟ್ರೇಟರ್ ಜನರಲ್‌ರವರು ತನ್ನ ಬಾಧ್ಯತೆಯನ್ನು ಅವರ ಆಫೀಸಿನ ಮಾಮೂಲ್ ಪ್ರಕಾರ ರಿಜಿಸ್ಟರ್ಮಾಡಿಕೊಳ್ಳಲು ನಿರಾಕರಿಸಿದರು ಅಥವಾ ಅಸಡ್ಡೆ ಮಾಡಿದರು ಎಂತಲೂ ಅಫಿದಾವಿತ್ ಯಾನೆ ಪ್ರಮಾಣ ಪತ್ರಿಕೆಯ ಮೂಲಕ ಅಥವಾ ಅನ್ಯಥಾ ರುಜುವಾತುಕೊಟ್ಟರೆ ಹಾಗೆ ವ್ಯಾಜ್ಯದ ಖರ್ಚುಗಳನ್ನು ಪಾವತಿಮಾಡಲು ಗುರಿಯಾಗತಕ್ಕದ್ದಿಲ್ಲ.

ಅಂಥಾ ಯಾವುದಾದರೂ ವ್ಯಾಜ್ಯದಲ್ಲಿ ವಾದಿಯ ಪರವಾಗಿ ತೀರ್ಪು ಕೊಡಲ್ಪಟ್ಟಾಗ್ಯೂ ಕೂಡ, ಆತನು ಸದರೀ ಮೃತಪಟ್ಟ ಬ್ರಿಟಿಷ್ ಪ್ರಜೆಯ ಆಸ್ತಿಯಲ್ಲಿ ಇತರ ಲೇಣೇದಾರರೊಂದಿಗೆ ಸಮನಾಗಿಯೂ, ದಾಮಾಷಾಯಿ ಪ್ರಕಾರವೂ ಮಾತ್ರವೇ ಹಣವನ್ನು ಹೊಂದಲು ಹಕ್ಕುಳ್ಳವನಾಗಿರತಕ್ಕದ್ದು.